ಶಂಬಾ ಕೃತಿ ಸಂಪುಟ

೪

ಭಾರತೀಯ - ಸಂಸ್ಕೃತಿ



ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ
ಬೆಂಗಳೂರು ೫೬೦ ೦೧೮

ಜನಪ್ರಿಯ ಪುಸ್ತಕ ಮಾಲೆ

ಶಂಬಾ ಕೃತಿಸಂಪುಟ

೪

ಭಾರತೀಯ ಸಂಸ್ಕೃತಿ

ಮಲ್ಲೇಪುರಂ ಜಿ. ವೆಂಕಟೇಶ
ಸಂಪಾದಕ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

SHAMBA KRUTI SAMPUTA : VOL. 4

BHARATEEYA SAMSKRUTI

Complete Works of Dr. Shamba Joshi
Edited by : Prof. Mallepuram G. Venkatesha
Kannada University, Hampi

Published by The Administrative Officer
Kannada Pustaka Pradhikara
(Kannada Book Authourity)
Pampa Mahakavi Road, Chamarajpet
Bangalore - 560 018

First Edition : 1999

Page : XL + viii + 662

ISBN 81-7713-009-9

ಈ ಆವೃತ್ತಿಯ ಹಕ್ಕುಗಳು : **ಕನ್ನಡ ಪುಸ್ತಕ ಪ್ರಾಧಿಕಾರ**

ಮುಖಪುಟ ವಿನ್ಯಾಸ : **ಟಿ. ಎಫ್. ಹಾದಿಮನಿ**

ಬೆಲೆ : **125/-**

ಅಕ್ಷರ ಜೋಡಣೆ

ಲಕ್ಷ್ಮೀ ಮುದ್ರಣಾಲಯ

ಮುದ್ರಣ:

ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
ಬೆಂಗಳೂರು
ಫೋನ್ : 6682802

ಸಂಪಾದಕ ಸಲಹಾ ಸಮಿತಿ

Man is precipitate of his past & present environment

thinking evolutions — succession of occasions.


ಋಗ್ವೇದ ಸಾರ:

ನಾಗಪ್ರತಿಮಾ


ವಿಚಾರ




ಶಂ. ಬಾ. ಜೋಶಿ



ಬರೆಹ






ಶಂಬಾ ಅವರ ಒಂದು ಅಪರೂಪ ಭಂಗಿ



ಜೆ. ಎಸ್. ಎಸ್. ಬನಶಂಕರಿ ಆರ್ಟ್ಸ್ ಕಾಲೇಜು ಧಾರವಾಡ
ಕನ್ನಡ ಸಂಘದ ಉದ್ಘಾಟನೆ




ಪಾ.ವೆಂ. ಆಚಾರ್ಯರೊಡನೆ ಸಂವಾದ




ಅಖಿಲಭಾರತ 54ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಪು.ತಿ. ನರಸಿಂಹಾಚಾರ್,

ಮಾಜಿ ಮುಖ್ಯಮಂತ್ರಿ ಗುಂಡೂರಾವ್, ಶಂಬಾ ಮತ್ತು ಪಾರ್ವತಿಬಾಯಿ ಜೋಶಿ ಮತ್ತಿತರರು



ಯೋಚನಾ ಮಗ್ನ



ಆಶ್ಚರ್ಯವತ್ ಪಶ್ಯತಿ

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರಿ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಆತ್ಮಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸತಿ ಸಂಪನ್ನವೂ, ಬುದ್ಧಿ ಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲಬೇಕು. ಕನ್ನಡದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸ್ತುತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹು ಬೇಡಿಕೆಯ, ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡುವುದೇ ಈ 'ಜನಪ್ರಿಯ ಪುಸ್ತಕಮಾಲೆ'ಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಕನ್ನಡದ ಅತ್ಯಂತ ಪ್ರಸಿದ್ಧ ಹಾಗೂ ಸ್ವೋಪಜ್ಞಶೀಲ ವಿದ್ವಾಂಸರಾದ, ಡಾ. ಶಂಬಾ ಜೋಶಿ ಅವರ ಸಮಗ್ರ ಕೃತಿಗಳನ್ನು ಒಟ್ಟು ಆರು ಸಂಪುಟಗಳಲ್ಲಿ ಪುಸ್ತಕ ಪ್ರಾಧಿಕಾರವು ಇದೀಗ ಪ್ರಕಟಿಸುತ್ತಿದೆ. ಲೇಖಕರೊಬ್ಬರ ಸಮಗ್ರ ಕೃತಿಗಳ ಸಂಪುಟಗಳನ್ನು ಹೊರತರುವಲ್ಲಿ ಇದು ಪ್ರಾಧಿಕಾರದ ಯೋಜನೆಯ ಮೊದಲ ಪ್ರಯತ್ನ. ಡಾ : ಶಂಕರರಾವ್ ಬಾಳದೀಕ್ಷಿತ ಜೋಶಿ ಅವರು ಕರ್ನಾಟಕ ಕಂಡ ಅತ್ಯಂತ ಶ್ರೇಷ್ಠ ಸಾಂಸ್ಕೃತಿಕ ಸಂಶೋಧಕರು. ನಮ್ಮ ಈ ನಾಡಿನ ಪ್ರತಿಭಾಪೂರ್ಣ ವಿದ್ವತ್ ಪರಂಪರೆಯಲ್ಲಿ

ಡಾ: ಜೋಶಿ ಅವರದ್ದು ಅಪೂರ್ವವೂ ಮತ್ತು ವಿಶಿಷ್ಟವೂ ಆದ ಮಾರ್ಗ. ಜೋಶಿ ಅವರು ಹಿಡಿದಿರುವ ಮತ್ತು ನಡೆದು ಬಂದಿರುವ ಈ ಮಾರ್ಗ ಅನ್ಯಸುಗಮವಾದುದಲ್ಲ. ಅವರು ಪರಂಪರಾಗತ ಸಂಶೋಧನೆಗೆ ಮತ್ತು ಕರ್ನಾಟಕದ ಸಾಂಸ್ಕೃತಿಕ ಹಾಗೂ ವಿದ್ವತ್ ಕ್ಷೇತ್ರಕ್ಕೆ ವಿನೂತನ ಆಯಾಮವನ್ನು ನೀಡಿದ ಅಪರೂಪದ ಸಂಶೋಧಕರು. ಅವರು ತೆರೆದ ಆಯಾಮಗಳು ವೈವಿಧ್ಯಮಯವಾದವುಗಳು. ಕನ್ನಡ ವಿದ್ವತ್ ಪರಂಪರೆಯಲ್ಲಿ ಹೊಸ ಸಂಶೋಧನ ಪದ್ಧತಿಯೊಂದನ್ನೆ ಅವರು ರೂಪಿಸಿದರು. ಸಂಶೋಧನೆಗೆ ವಿಶಾಲವ್ಯಾಪ್ತಿಯನ್ನು ಮತ್ತು ಗಟ್ಟಿತಳಹದಿಯನ್ನು ನೀಡುವ ಸಲುವಾಗಿ ಹಲವು ಬಗೆಯ ಜ್ಞಾನಮಾರ್ಗಗಳನ್ನು ತಮ್ಮ ಶೋಧನೆ ಹಾಗೂ ಸತ್ಯಪ್ರತಿಪಾದನೆಯ ಆಕರಗಳನ್ನಾಗಿ ದುಡಿಸಿಕೊಂಡರು. ಅವರು ನಡೆಸಿದ ಸಾಂಸ್ಕೃತಿಕ ಅನ್ವೇಷಣೆ ಬೌದ್ಧಿಕ ವ್ಯಾಪಾರವಲ್ಲ; ವರ್ತಮಾನದ ವಿಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ದಾಟಿ ಸರ್ವಮಾನ್ಯವೆನಿಸಬಹುದಾದ ವೈಜ್ಞಾನಿಕ ಚಿಂತನೆಯ ಒಂದು ವಿಶಿಷ್ಟ ಉಪಕ್ರಮವಾಗಿ ಅದನ್ನು ಸ್ವೀಕರಿಸಿದರು. ತಾವು ಸತ್ಯವೆಂದು ನಂಬಿದ ಮತ್ತು ಕಂಡ ಅಂಶಗಳನ್ನು ಅನ್ಯಮೂಲಗಳಿಂದ ಪರೀಕ್ಷಿಸುವುದಕ್ಕಾಗಿ ಮತ್ತು ಪರಿಷ್ಕರಿಸುವುದಕ್ಕಾಗಿ ಅವರು ಪ್ರಾಚೀನ ಗಡಿಪ್ರದೇಶಗಳನ್ನು ಕಾಣುವ ವಿಶೇಷ ಪ್ರಯತ್ನ ಮಾಡಿದರು. ಕನ್ನಡ ನಾಡಿನಲ್ಲಿ ಮಾತ್ರವಲ್ಲದೇ ಮಹಾರಾಷ್ಟ್ರ, ಮಧ್ಯಪ್ರದೇಶ, ಬಂಗಾಳ, ಬಿಹಾರ ಮತ್ತು ಇನ್ನು ಹಲವು ಹತ್ತುಕಡೆಗಳಿಂದ ತಮ್ಮ ಸಂಶೋಧನೆಗೆ ಪೂರಕವಾದ ನೂರಾರು ಸಾಕ್ಷಿ ಮತ್ತು ಸಾಮಗ್ರಿಗಳನ್ನು ಹೆಕ್ಕಿಹೆಕ್ಕಿ ತೆಗೆದು; ಆ ಮೂಲಕ ವಿವಿಧ ವಾದ ಮತ್ತು ಅಭಿಪ್ರಾಯಗಳ ನಡುವೆ ಗೊಂದಲಮಯವಾಗಿದ್ದ ಕನ್ನಡನಾಡಿನ ಭೌಗೋಳಿಕ ಜಾನಾಂಗಿಕ ಮತ್ತು ಸಾಂಸತಿಕ ಎಲ್ಲೆಗಳನ್ನು ಪುನರ್‌ರಚನೆ ಮಾಡಿದರು. ತಾವು ಸಮೃದ್ಧವಾಗಿ ಕಂಡು ಹಿಡಿದು, ಅಧ್ಯಯನಮಾಡಿದ ಆಕರಗಳ ಬೆಳಕಿನಲ್ಲಿ ನೂತನ ನೆಲೆಗಳನ್ನು ಕಂಡು ಕಾಣಿಸಿದರು. ಹಾಗೆಯೇ, ತಮ್ಮ ಸತತ ಪರಿಶ್ರಮ ಮತ್ತು ಶ್ರದ್ಧಾತಪಸ್ಸು ಗಳಿಂದ ದರ್ಶಿಸಿದ ಆ ನೆಲೆಗಳ ಮತ್ತು ಸೆಲೆಗಳ ಫಲಿತಗಳನ್ನು ಕಾಲಕಾಲಕ್ಕೆ ಕನ್ನಡದ ಅಗ್ರಮಾನ್ಯ ವಿದ್ವಾಂಸರ, ಸಂಶೋಧಕರ ಎದುರು ಇಟ್ಟು ಆರೋಗ್ಯಕರ ಚರ್ಚೆ ಮತ್ತು ವಿದಗ್ಧವಾದಗಳ ವೇದಿಕೆಯನ್ನು ಸೃಷ್ಟಿಸುವ ಮೂಲಕ ಕನ್ನಡನಾಡಿನಲ್ಲಿ ಹೊಸ ಸಾಂಸತಿಕ ಹಾಗೂ ಐತಿಹಾಸಿಕ ಚಿಂತನೆಗಳ ಮಿಂಚಿನ ಅಲೆಗಳನ್ನು ಎಬ್ಬಿಸಿದರು.

ಡಾ : ಶಂಬಾ ಅವರ ಆಸಕ್ತಿ, ಅಧ್ಯಯನ, ಸಂಶೋಧನೆ ಮತ್ತು ಚಿಂತನೆಗಳ ಬೀಸು ತುಂಬಾ ವ್ಯಾಪಕವಾದುದು. ಈ ಕಾರಣ ಅವರು ಇತಿಹಾಸದ ಭಾಷಾ ವಿಶ್ಲೇಷಣಾ ಪದ್ಧತಿಯನ್ನು ಕರುನಾಡಿನ ಎಡೆಗಳ ಹೆಸರುಗಳ, ದೇವತಾ ಪ್ರತಿರೂಪಗಳ, ಸಾಂಕೇತಿಕ ನೆಲೆಗಳ, ಮನೋವೈಜ್ಞಾನಿಕ ಶೋಧನೆಗಳ, ಧಾರ್ಮಿಕ, ಚಿಂತನೆಗಳ ಸಂಕೀರ್ಣ ಪಥವನ್ನು ಹಿಡಿದು ನಡೆದರು. ತಿರುವು ಮುರುವು ಆಗಿರುವ ಸಮಕಾಲೀನ ಮೌಲ್ಯಗಳ ಜೊತೆಗೆ ಪ್ರಾಚೀನ ಸಂಸತಿಯ ಸಾಧಾರವಿವರಗಳನ್ನು ಇಟ್ಟು ತೌಲನಿಕವಾಗಿ ನೋಡಿದ್ದು ಮತ್ತು ವಿಶ್ಲೇಷಿಸಿದ್ದು ಜಾಗತಿಕ ಸಾಂಸ್ಕೃತಿಕ ಅಧ್ಯಯನದ ಅಖಂಡ ಇತಿಹಾಸದಲ್ಲೇ ಹೊಸಬಗೆಯದು. ಹೀಗಾಗಿ ಆಧುನಿಕ ಸಮಾಜದ ಬಹುಮುಖ ನೆಲೆಗಳನ್ನು ಅರಿಯಲು ಮತ್ತು ಅರ್ಥೈಸಲು ಪ್ರಾಚೀನ ಆಕರಗಳನ್ನು ಯಥೇಚ್ಛವಾಗಿ ಬಳಸಿಕೊಂಡು ಮುನ್ನಡೆದ ಶಂಬಾ ಅವರು ಹೊಸ ಅರ್ಥಗ್ರಹಣ ಪದ್ಧತಿಯನ್ನೇ ತಮ್ಮ ಬರಹಗಳ ಮೂಲಕ ನಮಗೆ ನೀಡಿದ್ದಾರೆ. ಇಂದಿನ ಸಂಕೀರ್ಣಯುಗದ ಮಾನವನ ಅಧೋಗತಿಗೆ ಸಮಾಜ ಸಮ್ಮುಖ ಆಚರಣೆಗಳು ಹಿಂದೆ ಸರಿದು ವ್ಯಕ್ತಿ ವಿಶಿಷ್ಟ ಆಚರಣೆಗಳು ದೈತ್ಯಾಕಾರವನ್ನು ತಳೆದು ನಿಂತದ್ದೆ ಕಾರಣವೆಂದು ತಮ್ಮ ಸತತ ಮತ್ತು ಸುವಿಸ್ತಾರವಾದ ಸಂಶೋಧನೆಯ ನೆಲೆಯಲ್ಲಿ ಅವರು ಕಂಡುಕೊಂಡಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಡಾ : ಶಂಬಾ ಅವರದು ಬಹುಮುಖವಾದ ಮತ್ತು ಬಹುಶ್ರುತವಾದ ಅಪರೂಪದ ವ್ಯಕ್ತಿತ್ವ. ಅವರು ನಮ್ಮ ಸಾಂಸತಿಕ ಚಿಂತಕರಲ್ಲಿ ಪ್ರಥಮರಲ್ಲಿ ಪ್ರಥಮರು. ಕಲ್ಪನಾಪ್ರಧಾನ ಸಾಂಪ್ರದಾಯಕ ಸಾಂಸತಿಕ ಇತಿಹಾಸದ ಪರಂಪರೆಯ ಮೃದುಶಯ್ಯೆಯ ಮೇಲೆ ನಿರಾಳವಾಗಿ ಮಲಗಿದ್ದ ವೈದಿಕಶಾಹಿ ಚಿಂತನಕ್ರಮವನ್ನು, ತನ್ನ ಜಾತ್ಯತೀತ ನಿಲುವಿನ ಸತ್ಯಶೋಧನೆಯ ಅಚ್ಚರಿಗೊಳಿಸುವ ಫಲಿತಗಳ ಮೂಲಕ ತಲ್ಲಣಗೊಳಿಸಿ ಹೂತು ಹೋಗಿದ್ದ ತಥ್ಯಗಳಿಗೆ

ಜೀವದಾನ ಮಾಡಿ ಹೊಸ ಬೆಳಕಿನ ಪಥವನ್ನು ನಿರ್ಮಿಸಿದ ಅಸಾಧಾರಣ ವ್ಯಕ್ತಿ. ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು, ವಿಶಾಲನೆಲೆಗಟ್ಟಿನ ಸೂಕ್ಷ್ಮತಮ ಚಿಂತನೆಗಳು, ಅಪ್ರಿಯವಾದರೂ ಕಷ್ಟದ ಕಲ್ಲುಮುಳ್ಳುಗಳನ್ನು ತುಳಿದು ಸತ್ಯಸೂರ್ಯನನ್ನು ದರ್ಶನ ಮಾಡಿಸುವ ವಿದ್ವತ್ ತಪಸ್ಸು-ಇವುಗಳೆಲ್ಲ ಅನ್ಯಾದೃಶ್ಯವಾಗಿ ಮೈತಳೆದು ನಿಂತ ಅವರ ಬರಹಗಳ ಸುಮಾರು ೪೦೦೦ ಪುಟಗಳ ಬೃಹತ್ ರಾಶಿಯೇ ನಮ್ಮ ಮುಂದಿದೆ. ಭೂತ ಮತ್ತು ವರ್ತಮಾನಗಳನ್ನು ನಿಷ್ಕೃಷ್ಟವಾಗಿ ಅರಿತು ಅವುಗಳ ತಳಹದಿಯ ಮೇಲೆ ಬಹುಶ್ರುತ ಚಿಂತನೆ ಮತ್ತು ಕ್ರಿಯೆಗಳನ್ನು ರೂಪಿಸುವ ಅದ್ಭುತ ಸ್ಫೂರ್ತಿಯ ಜೀವಕೇಂದ್ರಗಳಿವು. ಈ ಕಾರಣಗಳಿಂದಾಗಿ ಜೋಶಿ ಅವರ ಸಮಗ್ರ ಕೃತಿಗಳನ್ನು ಪ್ರಾಧಿಕಾರ ಹೊರತರುವ ಮೂಲಕ ಕನ್ನಡನಾಡಿನ ಜನರಿಗೆ ತಮ್ಮ ಸಂಸತಿ ಮತ್ತು ಇತಿಹಾಸ ಪರಿಜ್ಞಾನವನ್ನು ಬೆಳಸಿಕೊಳ್ಳಲು ಇವು ಸಾಧಕವಾಗುತ್ತವೆ ಎಂದು ಭಾವಿಸಿದ್ದೇನೆ. ೨೦ನೆಯ ಶತಮಾನದ ಅಂಚಿನಲ್ಲಿ ನಿಂತಿರುವ ನಮಗೆ ಇವು ಹೊಸ ಆಕರಗಳಾಗಿ, ಮೌಲ್ಯಗಳ ಅನ್ವೇಷಣೆಯ ದಾರಿದೀಪಗಳಾಗಿ, ಮುಂದೆ ನಡೆಯಬಹುದಾದ ಮತ್ತು ನಡೆಯಬೇಕಾದ ಅರ್ಥಪೂರ್ಣ ಪಥಗಳನ್ನು ತಿಳಿಸುವ ಮೈಲುಗಲ್ಲುಗಳಾಗಿ ನೆಲೆನಿಲ್ಲುತ್ತವೆಂಬ ನಂಬುಗೆ ನಮ್ಮದು. ಈ ದೃಷ್ಟಿಯಿಂದ ಇವು ಈ ಶತಮಾನದ ಅಮೂಲ್ಯ ಸಂಪುಟಗಳು.

ಕನ್ನಡನಾಡಿನ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಶ್ರೀಮಂತ ಆಕರಗಳನ್ನು ಕನ್ನಡ ಓದುಗರಿಗೆ ಒದಗಿಸಬೇಕೆಂಬ ಹೆಬ್ಬಯಕೆಯಿಂದ ಕರ್ನಾಟಕ ಸರ್ಕಾರದ ಉಪ ಮುಖ್ಯಮಂತ್ರಿಗಳೂ ಹಾಗು ಹಣಕಾಸು ಸಚಿವರಾದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ ಅವರು ಈ ಸಂಪುಟಗಳ ಪ್ರಕಟಣೆಗಳಿಗಾಗಿ ವಿಶೇಷ ಅನುವಾದವನ್ನು ತುಂಬಾ ಪ್ರೀತಿ ಮತ್ತು ಸಂತೋಷಗಳಿಂದ ಒದಗಿಸಿಕೊಟ್ಟಿದ್ದಾರೆ. ಲೋಕಸೇವಾ ಆಯೋಗದ ಸದಸ್ಯರಾದ ಶ್ರೀ ಮುಕಡಪ್ಪ ಅವರು ಈ ಯೋಜನೆಯಲ್ಲಿ ವಿಶೇಷ ಆಸಕ್ತಿತೋರಿ ಸಹಕರಿಸಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಸಹೃದಯ ಸದಸ್ಯರು ಈ ಯೋಜನೆ ನನಸಾಗಲು ಒತ್ತಾಸೆ ನೀಡಿದ್ದಾರೆ. ಈ ಸಂಪುಟಗಳ ಸಲಹಾ ಸಮಿತಿಯ ಮಾನ್ಯ ಸದಸ್ಯರುಗಳಾದ ಪ್ರೊ : ದೇ. ಜವರೇಗೌಡ, ಪ್ರೊ. ದೇವೇಂದ್ರಕುಮಾರ ಹಕಾರಿ ಮತ್ತು ಶ್ರೀಮತಿ ವಿಮಲ ಡಿಸ್ಕಳ್ಕರ್ ಅವರು ಸೂಕ್ತ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡಿ ಈ ಸಂಪುಟಗಳು ಉಪಯುಕ್ತವಾಗಿ ಪ್ರಕಟವಾಗುವಲ್ಲಿ ನೆರವಾಗಿದ್ದಾರೆ. ಪ್ರಸಿದ್ಧ ವಿದ್ವಾಂಸರೂ ಮತ್ತು ಸಂಶೋಧಕರೂ ಹಾಗು ಡಾ : ಶಂಬಾ ಅವರ ಅಭಿಮಾನಿಗಳೂ ಆದ ಪ್ರೊ : ಮಲ್ಲೇಪುರಂ ಜಿ. ವೆಂಕಟೇಶ ಅವರು ಈ ಆರು ಸಂಪುಟಗಳ ಬಹು ಜವಾಬ್ದಾರಿಯುತವಾದ ಸಂಪಾದಕತ್ವವನ್ನು ವಹಿಸಿಕೊಂಡು ವಿಶೇಷ ಪರಿಶ್ರಮ, ಶ್ರದ್ಧೆ ಮತ್ತು ಅರ್ಪಣಾ ಮನೋಭಾವಗಳಿಂದ ದುಡಿದಿದ್ದಾರೆ. ಖ್ಯಾತ ಯುವಕಲಾವಿದ ಶ್ರೀ ಹಾದಿಮನಿ ಅವರು ಈ ಸಂಪುಟಗಳಿಗೆ ಅರ್ಥಪೂರ್ಣ ಮುಖಪುಟಗಳನ್ನು ವಿನ್ಯಾಸಗೊಳಿಸಿ ಇವುಗಳ ಸೌಂದರ್ಯವನ್ನು ವರ್ಧಿಸಿದ್ದಾರೆ. ಕಲಾತ್ಮಕ ಮುದ್ರಣಕ್ಕೆ ಹೆಸರಾದ ಲಕ್ಷ್ಮೀ ಮುದ್ರಣಾಲಯದ ಶ್ರೀ ಅಶೋಕ ಕುಮಾರ್ ಮತ್ತು ಸಿಬ್ಬಂದಿ ವರ್ಗ ಅತ್ಯಂತ ಆಸಕ್ತಿ ಮತ್ತು ಸಂತೋಷದಿಂದ ಅತ್ಯಲ್ಪಕಾಲದಲ್ಲಿ ಈ ಸಂಪುಟಗಳನ್ನು ಮುದ್ರಿಸಿ ದಾಖಲೆ ನಿರ್ಮಿಸಿದ್ದಾರೆ. ಪ್ರಾಧಿಕಾರದ ಸಿಬ್ಬಂದಿ ವರ್ಗ ಇವುಗಳ ತ್ವರಿತ ಪ್ರಕಟಣೆಗಾಗಿ ಹಗಲಿರುಳು ಶ್ರಮಿಸಿದೆ. ಇವರೆಲ್ಲರಿಗೂ ವೈಯಕ್ತಿಕವಾಗಿ ಮತ್ತು ಪ್ರಾಧಿಕಾರದ ಪರವಾಗಿ ಗೌರವದ ಪ್ರೀತಿಯ ಕೃತಜ್ಞತೆಗಳು.

ದಿನಾಂಕ : ೮.೦೭.೧೯೯೯ ಡಾ|| ಎಚ್. ಜೆ. ಲಕ್ಕಪ್ಪಗೌಡ
ಬೆಂಗಳೂರು - ೫೬೦ ೦೧೮ ಅಧ್ಯಕ್ಷರು

ಸಂಪಾದಕನ ಅರಿಕೆ

ಶಂಬಾ ಎಂಬ ಎರಡಕ್ಷರಗಳಿಂದಲೇ ಸುಪ್ರಸಿದ್ಧರಾದ ಡಾ. ಶಂಕರ ಬಾಳದೀಕ್ಷಿತ ಜೋಶಿ (೧೮೯೬-೧೯೯೧) ಕನ್ನಡದ ಮಹಾವಿದ್ವಾಂಸರು. ಅವರು ಕನ್ನಡ ಸಂಶೋಧನ ಕ್ಷೇತ್ರದ ಅಶ್ವತ್ಥವೃಕ್ಷ. ಬಹುಶ್ರುತರೂ, ಚಿಂತಕರೂ ಆದ ಶಂಬಾ, ಎಪ್ಪತ್ತು ವರ್ಷಗಳಿಗೂ ಹೆಚ್ಚುಕಾಲ 'ಜೀವನದ ಅರ್ಥಗ್ರಹಣ ಪದ್ಧತಿ'ಯ ಜಾಡು ಹಿಡಿದು ನಡೆಸಿದ ಕೆಲಸಗಳು ಅನನ್ಯವಾದವು. ಅವರು ವಿದ್ವತ್ತು ಮತ್ತು ವೈಚಾರಿಕ ಚಿಂತನೆಗಳ ಅಪೂರ್ವ ಸಂಗಮವಾಗಿದ್ದರು. ಅವರು ಸೃಜಿಸಿದ ಸಾಂಸ್ಕೃತಿಕ ಸಂಶೋಧನೆ, ಭೂತ ಹಾಗೂ ವರ್ತಮಾನ ಕಾಲಗಳ ನಡುವಣ ನೆಲೆಗಳನ್ನು ತಿಳಿಯಲು ಅನುವು ಮಾಡಿಕೊಡುತ್ತವೆ. 'ಕೃತಿಗಳೇ ಆಕೃತಿ ನಿರ್ಮಾಣಕ್ಕೆ ಮುಖ್ಯ ನೆಲೆಗಳು' ಎಂಬುದು ಅವರ ನಿಷ್ಠೆ ಹಾಗೂ ಶ್ರದ್ಧೆ. ವ್ಯಕ್ತಿವಿಶಿಷ್ಟ ಸಂಗತಿಗಳು ಬದುಕಿನಲ್ಲಿ ಗೌಣವಾಗಿದ್ದು, ಜೀವನ ಸಮಷ್ಟಿ ಸಂಗತಿಗಳು ಮುಖ್ಯವಾಗಬೇಕೆಂಬ ಹಂಬಲ ಅವರದಾಗಿತ್ತು. ಅವರು ಈ ಜಾಡಿನಲ್ಲಿ ಕೊನೆಯ ವರೆಗೂ ನಡೆದರು.

ಡಾ. ಶಂ. ಬಾ. ಅವರು ತೀರಿಕೊಂಡು ಇಂದಿಗೆ ಎಂಟು ವರ್ಷಗಳು ಆದುವು. ೧೯೯೬ ಅವರ ಜನ್ಮ ಶತಮಾನೋತ್ಸವದ ವರ್ಷ. ಆ ಹೊತ್ತಿಗೆ ಅವರ ಎಲ್ಲ ಪುಸ್ತಕಗಳು ಪ್ರಕಟಗೊಳ್ಳಬೇಕೆಂಬ ಅಪೇಕ್ಷೆ ಇತ್ತು. ಆ ಬಗೆಗೆ ಪ್ರಯತ್ನ ನಡೆದರೂ ಆಗ ಕೈಗೂಡಲಿಲ್ಲ. ಒಮ್ಮೆ ಖ್ಯಾತಕಲಾವಿದ, ಗೆಳೆಯ ಸಿ. ಚಂದ್ರಶೇಖರ್ ಅವರ ಮನೆಯಲ್ಲಿ ಲೋಕಸೇವಾ ಆಯೋಗದ ಸದಸ್ಯರೂ ಶಂಬಾ ಜೋಶಿ ಅವರ ಪ್ರಿಯ ಅಭಿಮಾನಿಗಳೂ ಕನ್ನಡ ಸಂಸ್ಕೃತಿ ಅಭ್ಯಾಸಿಗಳೂ ಆದ ಶ್ರೀ ಮುಕಡಪ್ಪ ಅವರ ಸ್ನೇಹವಾಯಿತು. ಅವರು ಶಂಬಾ ಅವರ ಕೃತಿಗಳು ಹಲವು ಸಂಪುಟಗಳಾಗಿ ಸಮಗ್ರರೂಪದಲ್ಲಿ ಬರಬೇಕೆಂದು ಹೇಳಿ ಒತ್ತಾಯಿಸಿದರು. ಆನಂತರ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರು ಬಂದ ಮೇಲೆ ನನ್ನ ಅಭಿಲಾಷೆಯನ್ನೂ ಶ್ರೀ ಮುಕಡಪ್ಪ ಅವರ ಇಚ್ಛೆಯನ್ನೂ ಅವರ ಬಳಿ ಹೇಳಿಕೊಂಡೆ. ಅನಂತರ ಈ ಯೋಜನೆಗೆ ಚಾಲನೆ ಸಿಕ್ಕಿತು. ಕರ್ನಾಟಕ ಸರ್ಕಾರದ ಉದಾರವಾದ ನೆರವು ಈ ಯೋಜನೆಗೆ ದೊರಕಿ, ಈ ಹಿನ್ನೆಲೆಯಲ್ಲಿ ಶಂಬಾ ಕೃತಿಸಂಪುಟಗಳು ಹೊರಬರುತ್ತಿವೆ.

ನಮ್ಮ ಕಾಲದ ಅಪರೂಪ ವಿದ್ವಾಂಸರೂ ಸಾಂಸ್ಕೃತಿಕ ಆಚಾರ್ಯರೂ ಆದವರೊಬ್ಬರ ಸಮಗ್ರ ಸಾಹಿತ್ಯವನ್ನು ಸಂಪಾದಿಸುವ ದೊಡ್ಡಹೊಣೆಯನ್ನು ಗೌರವವನ್ನು ಪಡೆದಿರುವುದು ನನಗೆ ತುಂಬಾ ಸಂತೋಷ ಉಂಟು ಮಾಡಿದೆ. ಇದು ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಚ್. ಜೆ. ಲಕ್ಕಪ್ಪಗೌಡ ಹಾಗೂ ಲೋಕಸೇವಾ ಆಯೋಗದ ಸದಸ್ಯರಾದ ಶ್ರೀ ಮುಕಡಪ್ಪ ಅವರ ವಿಶ್ವಾಸದಿಂದ ಸಾಧ್ಯವಾಗಿದೆ. ಅದಕ್ಕಾಗಿ ಅವರಿಬ್ಬರಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು ಮೊದಲಿಗೆ ಸಲ್ಲುತ್ತವೆ.

ಶಂಬಾ ಜೋಶಿ ಅವರು ಪುಸ್ತಕರೂಪದಲ್ಲಿ ಪ್ರಕಟಿಸಿರುವ ಸಾಹಿತ್ಯ ಸುಮಾರು ಡೆಮ್ಮ್ಯ ಆಕಾರದಲ್ಲಿ ನಾಲ್ಕು ಸಾವಿರ ಪುಟಗಳಾಗುತ್ತವೆ. ೧೯೨೧ ರಿಂದ ಹಿಡಿದು ೧೯೮೬ರ ವರೆಗಿನ ಕಾಲಾವಧಿಯಲ್ಲಿ ಈ ಎಲ್ಲ ಕೃತಿಗಳು ರಚನೆಗಳಾಗಿವೆ. ಇವಲ್ಲದೆ ನೂರಾರು ಬಿಡಿಲೇಖನಗಳಿವೆ. ಅವು ವಿವಿಧ ವಿಷಯಗಳಿಗೆ ಸೇರಿವೆ. ಅವುಗಳಲ್ಲಿ ಅಪೂರ್ವವಾದ ಕೆಲವು ಲೇಖನಗಳನ್ನು ಆಯ್ದು ಪುಸ್ತಕರೂಪದಲ್ಲಿ 'ಕನ್ನಡ ಪುಸ್ತಕ ಪ್ರಾಧಿಕಾರ'ವು ೧೯೯೬ರಲ್ಲಿ ಪ್ರಕಟಿಸಿದೆ. ಅವರು ಬರೆದಿರುವ ಒಟ್ಟು ಪುಸ್ತಕಗಳು ಮೂವತ್ತೆರಡು. ಇವುಗಳಲ್ಲಿ ಮರಾಠಿ ಅನುವಾದ 'ಭಗವದ್ಗೀತೆ'ಯ ಮೊದಲಭಾಗ ಮತ್ತು ರಾನಡೆ ಅವರ 'ಉಪನಿಷತ್ ರಹಸ್ಯ'ದ 'ಮನಃಶಾಸ್ತ್ರ'ದ ಭಾಗ ಇವುಗಳನ್ನು ಸಂಪುಟಗಳಲ್ಲಿ ಸೇರಿಸಿಲ್ಲ. ಉಳಿದ ಎಲ್ಲ ಪುಸ್ತಕಗಳು ಸೇರ್ಪಡೆಗೊಂಡಿವೆ. ಅವುಗಳನ್ನು ವಿಷಯ ಹಾಗೂ ಚಾರಿತ್ರಿಕಾನುಗುಣವಾಗಿ ಜೋಡಿಸಿ ಈ ಸಂಪುಟಗಳನ್ನೂ ಸಿದ್ಧಪಡಿಸಿ ಹೀಗೆ ವಿನ್ಯಾಸಗೊಳಿಸಲಾಗಿದೆ.

ಸಂಪುಟ – ೧ ಕಂನಾಡು-ಕರ್ನಾಟ

ಈ ಸಂಪುಟದಲ್ಲಿ ಕಣ್ಮರೆಯಾದ ಕನ್ನಡ ೧೯೩೩, ಮಹಾರಾಷ್ಟ್ರದ ಮೂಲ ೧೯೩೪, ಮರ್ಹಾಟಿ ಸಂಸ್ಕೃತಿ : ಕೆಲವು ಸಮಸ್ಯೆಗಳು - ೧೯೮೯, (ಮರ್ಹಾಟಿ ಸಂಸ್ಕೃತಿ : ಕಾಂಹಿ ಸಮಸ್ಯಾ - ೧೯೫೭ರ ಮರಾಠಿ ಕೃತಿಯ ಕನ್ನಡಾನುವಾದ) ಕರ್ನಾಟದ ವೀರಕ್ಷತ್ರಿಯರು - ೧೯೩೭ ಇವು ಮುಖ್ಯವಾಗಿ ಕನ್ನಡದ ನೆಲೆಯನ್ನೂ ಮೂಲಿಗರ ಸಾಂಸ್ಕೃತಿಕ ನೆಲೆಗಳನ್ನು ಕುರಿತಿವೆ.

ಸಂಪುಟ – ೨ ಕಂನಡ-ಕಂನುಡಿ

ಈ ಸಂಪುಟವು 'ಕನ್ನಡದ ನೆಲೆ ೧೯೩೯, ಎಡೆಗಳು ಹೇಳುವ ಕಂನಾಡ ಕತೆ ೧೯೪೭, ಕಂನುಡಿಯ ಹುಟ್ಟು ೧೯೩೭, ಕನ್ನಡ ನುಡಿಯ ಜೀವಾಳ ೧೯೪೦ ಇವುಗಳನ್ನು ಒಳಗೊಂಡಿದೆ. ಮೊದಲೆರಡು ಪುಸ್ತಕಗಳು ಕನ್ನಡ ಸಂಸ್ಕೃತಿ ವಿಚಾರಧಾರೆಯ ಮೂಲಗಾಮಿ ಚರ್ಚೆಗಳನ್ನು ಮತ್ತು ಭಾಷೆಯ ಹಲವು ಬಗೆಯ ನಂಟುಗಳ ವಿಶಿಷ್ಟ – ನೆಲೆಗಳನ್ನು ಚರ್ಚಿಸುತ್ತವೆ.

ಸಂಪುಟ – ೩ ಕರ್ನಾಟ ಸಂಸ್ಕೃತಿ

ಈ ಸಂಪುಟವು ಹಾಲುಮತದರ್ಶನ ೧೯೬೦, ಕರ್ನಾಟ : ಸಂಸ್ಕೃತಿಯ ಪೂರ್ವಪೀಠಿಕೆ ಭಾಗ - ೨, ೧೯೬೭ ಇವೆರಡನ್ನು ಒಳಗೊಂಡಿದೆ ಈ ಹಿಂದಿನ ಕಂನಾಡ ಮೂಲಿಗರ ಸಂಸ್ಕೃತಿ-ಭಾಷೆ, ಪಾರಸ್ಪರಿಕ ಸಂಬಂಧ ಅವುಗಳ ಇಳಿಗಾಲಕ್ಕೆ ಈಡಾದ ಕಾರಣಮೀಮಾಂಸೆ ಯನ್ನು ಕುರಿತು ಈ ಸಂಪುಟಗಳು ಚರ್ಚಿಸುತ್ತವೆ.

ಸಂಪುಟ – ೪ ಭಾರತೀಯ ಸಂಸ್ಕೃತಿ

ಋಗ್ವೇದಸಾರ : ನಾಗಪ್ರತಿಮಾ ವಿಚಾರ - ೧೯೭೨, ಸತ್ತ್ಯ-ಸತ್ಯ ೧೯೭೫, ಭಾಷೆ ಮತ್ತು ಸಂಸ್ಕೃತಿ ೧೯೭೫ ಇವುಗಳನ್ನು ಒಳಗೊಂಡಿದೆ. ಕಂನಾಡ ನೆಲೆಯಿಂದ ಅಖಿಲ ಭಾರತೀಯ ಸಂಸ್ಕೃತಿಯ ಜೀವನ ಕ್ರಮವನ್ನು, ಜೀವನದ ಅರ್ಥಗ್ರಹಣದ ನೆಲೆಗಳನ್ನು ಇವು ವ್ಯಾಖ್ಯಾನಿಸಿ ತಿಳಿಸುತ್ತವೆ.

ಸಂಪುಟ - ೫ ಮಾನವ ಸಂಸ್ಕೃತಿ

ಈ ಸಂಪುಟವು ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ ೧೯೭೬, ಶ್ರೀಮತ್ ಭಗವದ್ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ ೧೯೭೭, ಮಾನವಧರ್ಮದ ಆಕೃತಿ ೧೯೭೯, ಬುಧನ ಜಾತಕ ೧೯೮೦, ಬಿತ್ತಿದ್ದನ್ನು ಬೆಳಕೊ ೧೯೮೪, ಜೀವನದ ಅರ್ಥಗ್ರಹಣ ಪದ್ಧತಿ ೧೯೮೬ ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕಂನಾಡು, ಭಾರತೀಯ ನೆಲೆಗಳಿಂದ ಜಾಗತಿಕ ಸಂಸ್ಕೃತಿ ನೆಲೆಗಳ ಪುರಾಣ ಹಾಗೂ ಹಲವು ಜ್ಞಾನಶಾಖೆಗಳ ಜಾಡು ಹಿಡಿದು ಮನುಷ್ಯನ ಅಧಃಪತನಕ್ಕೆ ಕಾರಣವಾದ ನೆಲೆಗಳನ್ನು ತಿಳಿಯುವ ಕಡೆಗೆ ಸಾಗುತ್ತವೆ.

ಸಂಪುಟ - ೬ ಸಂಸ್ಕೃತಿ-ಸಾಹಿತ್ಯ

ಈ ಸಂಪುಟವು, ಮಹರ್ಷಿ ಅರವಿಂದ ಘೋಷ ಇವರ ಸಂಕ್ಷಿಪ್ತ ಚರಿತ್ರವು ೧೯೨೧, ಟಿಳಕ ಕಥಾಮೃತಸಾರ ೧೯೩೨, ರೂಢಿ ಹಾಗೂ ಭಾವಿಕ ಕಲ್ಪನೆಗಳು ೧೯೪೦, ಅಗ್ನಿವಿದ್ಯೆ - ಎದ್ದೇಳು ಕನ್ನಡಿಗಾ ಅಥವಾ ಅಸಂತೋಷವೆ ಏಳ್ಗೆಯ ಮೂಲ - ೧೯೪೩, ಯಕ್ಷ ಪ್ರಶ್ನೆ ಅಥವಾ ಬರಲಿರುವ ಸಮಾಜ ೧೯೪೮, ಸಮಾಜದರ್ಶನ ೧೯೪೯, ಮಕ್ಕಳ ಒಡಪುಗಳು ೧೯೪೦, ಸೌಂದರ್ಯವಿಚಾರ ೧೯೪೯, ದಾರಿಯ ಬುತ್ತಿ ೧೯೫೦, ಕರ್ಣನ ಮೂರು ಚಿತ್ರಗಳು ೧೯೪೭, ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಎರಡು ಜೀವನ ಚರಿತ್ರೆಗಳು, ನಾಲ್ಕು ಸಮಾಜ ಚಿಂತನೆಗಳೂ, ನಾಲ್ಕು ಸಾಹಿತ್ಯ ಸಂಸ್ಕೃತಿಯನ್ನು ಒಳಗೊಂಡ ಪುಸ್ತಕಗಳಿವೆ.

ಶಂಬಾ ಜೋಶಿಯವರ ಎಲ್ಲ ಪುಸ್ತಕಗಳನ್ನು ಈ ಆರುಸಂಪುಟಗಳಲ್ಲಿ ಅಡಕಗೊಳಿಸಲಾಗಿದೆ. ಆರನೆಯ ಸಂಪುಟಕ್ಕೆ ಸೇರಬೇಕಾದ ೧೯೭೬ರಲ್ಲಿ ಪ್ರಕಟವಾದ 'ಕನ್ನಡ ಸಾಹಿತ್ಯ ಅಭಿವೃದ್ಧಿ' ಪುಸ್ತಿಕೆ ಕೊನೆಯ ವೇಳೆಯ ವರೆಗೂ ಲಭ್ಯವಾಗಲಿಲ್ಲ. ಅದನ್ನು ಇಲ್ಲಿ ಸೇರಿಸಲಾಗಿಲ್ಲ.

ಶಂಬಾ ಅವರು ಸಾಂಸ್ಕೃತಿಕ ಸಂಶೋಧನೆಯ ಹಾದಿಯಲ್ಲಿ ನಡೆದದ್ದು ಸುದೀರ್ಘ ನೆಲೆಯಲ್ಲೇ. ಅವರು ಅತ್ತ ಮಹಾರಾಷ್ಟ್ರ, ಇತ್ತ ಕರ್ನಾಟಕ ಈ ಎರಡೂ ಸಾಂಸ್ಕೃತಿಕ ಸಾಗರದಲ್ಲಿ ಮಿಂದೆದ್ದವರು. ಅವರು ಉಸಿರಾಡಿದ್ದು ಕಂನಾಡಿನ ಪುಣ್ಯ. ಅವರ ಕೃತಿಗಳನ್ನು ಬೇರೆ ಬೇರೆ ಕ್ಷೇತ್ರದ ಹಾಗೂ ಬೇರೆ ಬೇರೆ ಕಾಲಘಟ್ಟದ ಓದುಗರಿಗೆ ಪುನರ್ ಓದಿಕೆಗೆ ಸಜ್ಜುಗೊಳಿಸಿಕೊಡುವ ಆವಶ್ಯಕತೆ ಇತ್ತು. ಆ ಬಗೆಯ ಸಜ್ಜುಗೊಳಿಸುವ ಸಂಪಾದಕತ್ವದ ಕೆಲಸವನ್ನು ಈ ಆರು ಸಂಪುಟಗಳಲ್ಲಿ ಕೈಗೊಳ್ಳಲಾಗಿದೆ. ಈ ಸಂಪುಟಗಳನ್ನು ಸಿದ್ಧಪಡಿಸುವಾಗ ಕೆಲವೊಂದು ನಿಯಮಗಳನ್ನು ಹಾಕಿಕೊಳ್ಳಲಾಯಿತು. ಆ ನಿಯಮಗಳು ಹೀಗಿವೆ:

i) ಶಂಬಾ ಅವರ ಕಾಲದಲ್ಲಿ ಪ್ರಕಟವಾದ ಮೊದಲ ಮುದ್ರಣ ಹಾಗೂ ಆನಂತರದ ಪುನರ್ಮುದ್ರಣಗಳನ್ನು ಗಮನಿಸುವುದು

ii) ಶಂಬಾ ಅವರ ಕೃತಿಗಳಲ್ಲಿ ಕಾಣಬರುವ ಅಚ್ಚಿನ ದೋಷಗಳು, ಉದ್ಧೃತ ಭಾಗಗಳ ಪರಿಷ್ಕರಣ, ಹಾಗೂ ಟಿಪ್ಪಣಿಗಳ ಆಮೂಲಾಗ್ರ ಪರಿಷ್ಕರಣ ಹಾಗೂ ಸೂಕ್ತವಾದ ಎಡೆಗಳಲ್ಲಿ ಅಧ್ಯಾಯಗಳ ಮರುವಿಂಗಡಣ.

iii) ಪ್ರತಿಸಂಪುಟಗಳ ಅನುಬಂಧಗಳಲ್ಲಿ ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ, ಆಕರ ಗ್ರಂಥಗಳ ಸೂಚಿ, ಶಬ್ದಸೂಚಿ ನೀಡುವುದು.

iv) ಪ್ರತಿ ಸಂಪುಟಗಳಿಗೂ ಪ್ರತ್ಯೇಕವಾದ ಪ್ರಸ್ತಾವನೆ ಬರೆಯುವುದು. ಈ ಪ್ರಸ್ತಾವನೆಯು ಸಮಕಾಲೀನ

ಸಂಸ್ಕೃತಿ, ಭಾಷೆಯ ವಾಗ್ವಾದಗಳನ್ನು ಶಂಬಾ ಜೋಶಿಯವರ ಸಾಂಸ್ಕೃತಿಕ ನಡೆಯ ನೆಲೆಗಳನ್ನು ಅವರ ಕೊಡುಗೆಗಳ ವೈಶಿಷ್ಟ್ಯಗಳು ಅದರಲ್ಲಿ ಬರುವಂತೆ ನೋಡಿಕೊಳ್ಳುವುದು.

v) ಪ್ರತಿಸಂಪುಟಗಳಿಗೂ ಆಯಾ ಸಂಪುಟಗಳಲ್ಲಿ ಇರುವ ಅಪರೂಪದ ಪುಸ್ತಕಗಳ ಮುಖಚಿತ್ರ, ಶಂಬಾ ಅವರ ಹಳೆಯ ಭಾವಚಿತ್ರ ಮೊದಲಾದುವುಗಳನ್ನು ನೀಡುವುದು.

ಈ ಅಂಶಗಳಿಗೆ ಸಂಪಾದಕ ಸಲಹಾ ಸಮಿತಿಯ ಸದಸ್ಯರೆಲ್ಲರೂ ಒಪ್ಪಿಗೆ ಸೂಚಿಸಿದರು. ಶಂಬಾ ಜೋಶಿಯವರ ಮಗಳು ಶ್ರೀಮತಿ ವಿಮಲ ಡಿಸ್ಕಳ್ಕರ್ ಅವರು ನೀಡಿದ ಸಲಹೆ ಮತ್ತು ಸಹಕಾರಗಳು ಈ ಸಂಪುಟಗಳು ಉತ್ತಮಗೊಳ್ಳಲು ಪರೋಕ್ಷವಾಗಿ ಕಾರಣವಾಗಿವೆ.

ಇನ್ನು, ಕೊನೆಯವಾಗಿ ನೆನೆಯಬೇಕಾದದ್ದು ಈ ಸಂಪುಟಗಳಿಗೆ ಚಾಲನೆ ಕೊಟ್ಟು, ವಿಶೇಷಾನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಲೋಕಸೇವಾ ಆಯೋಗದ ಸದಸ್ಯರೂ ನನ್ನ ಹಿರಿಯ ಮಿತ್ರರೂ ಆದ ಶ್ರೀ ಮುಕಡಪ್ಪ ಅವರಿಗೆ, ಈ ಹೊಣೆಗಾರಿಕೆಯನ್ನು ನನ್ನ ಹೆಗಲಿಗೆ ಹೊರಿಸಿ ಅಡಿಗಡಿಗೂ ಪ್ರೋತ್ಸಾಹ ನೀಡಿ ಈ ಸಂಪುಟಗಳು ಉತ್ತಮವಾಗಿ ಬರಲು ಕಾರಣರಾದ ಹಿರಿಯ ವಿದ್ವಾಂಸರೂ ಸಮರ್ಥ ಆಡಳಿತಗಾರರೂ ಆದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರಿಗೆ, ಸಂಪಾದಕ ಸಲಹಾ ಸಮಿತಿಯ ಸದಸ್ಯರಾದ ಡಾ. ದೇ ಜವರೇ ಗೌಡ, ಶ್ರೀಮತಿ ವಿಮಲ ಡಿಸ್ಕಳ್ಕರ್ ಹಾಗೂ ಡಾ. ದೇವೇಂದ್ರಕುಮಾರ ಹಕಾರಿ ಅವರಿಗೆ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ವಿ. ಎನ್. ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕರಾದ ಶ್ರೀ ಜೆ. ಎಸ್. ಶಾಮರಾವ್ ಅವರಿಗೆ, ಸಿಬ್ಬಂದಿವರ್ಗದವರಿಗೆ, ಹಲವು ಬಗೆಗಳಲ್ಲಿ ನೆರವಾದ ವಿದ್ವಾನ್ ಎಂ. ಆರ್. ರಕ್ಷಿತ್, ಶಂಬಾ ವಿಚಾರ ವೇದಿಕೆಯ ಎಸ್. ಶಿವಲಿಂಗಯ್ಯ ಇವರಿಗೆ, ಶ್ರೀ ಕೃಷ್ಣಾನಂದ ಕಾಮತ್, ಶ್ರೀ. ಕೆ. ಜಿ. ಸೋಮಶೇಖರ್, ಎಂ. ಮಲ್ಲಿಕಾರ್ಜುನಯ್ಯ ಇನ್ನು ಮುಂತಾದ ಗೆಳೆಯರು ತೆಗೆದ ಛಾಯಾಚಿತ್ರ ಗಳನ್ನು ವಿಶ್ವಾಸ ಹಾಗೂ ಕೃತಜ್ಞತಾಪೂರ್ವಕವಾಗಿ ಉಪಯೋಗಿಸಿಕೊಳ್ಳಲಾಗಿದೆ. ಈ ಮಹನೀಯರಿಗೆ, ಆರು ಸಂಪುಟಗಳ ಮುಖಪುಟ ವಿನ್ಯಾಸ ಮಾಡಿಕೊಟ್ಟ ತರುಣ ಕಲಾವಿದ ಶ್ರೀ ಹಾದಿಮನಿ ಅವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಲಕ್ಷ್ಮಿ ಮುದ್ರಣಾಲಯದ ಗೆಳೆಯರಾದ ಶ್ರೀ ಅಶೋಕ್ ಕುಮಾರ್ ಮತ್ತು ಅವರ ಎಲ್ಲ ಸಿಬ್ಬಂದಿ ವರ್ಗದವರಿಗೆ, ಪರೋಕ್ಷವಾಗಿ ಅಪರೋಕ್ಷವಾಗಿ ಹಲವು ವಿಧಗಳಲ್ಲಿ ನೆರವಾದ ಹಾಗೂ ಈ ಮೇಲೆ ಹೆಸರಿಸದ ಎಲ್ಲರಿಗೂ ತುಂಬು ವಂದನೆಗಳು.

ಇವು ಡಾ. ಶಂ. ಬಾ. ಜೋಶಿ ಅವರ ಕೃತಿಸಂಪುಟಗಳು. ಇದರ ಗುಣಾತ್ಮಕ ಶ್ರೇಯಸ್ಸೆಲ್ಲವೂ ಅವರಿಗೆ ಸಲ್ಲಬೇಕು. ಉಪನಿಷತ್ತು ಶ್ರೇಯಸ್ಸು- ಪ್ರೇಯಸ್ಸು ಎಂದು ಎರಡು ತತ್ತ್ವಗಳನ್ನು ಹೇಳುತ್ತದೆ. ಶ್ರೇಯಸ್ಸು ಮುಖ್ಯವೆಂದು, ಅದೇ ಜೀವನ ಶ್ರದ್ಧೆಯೆಂದು, ಉಪನಿಷತ್ತು ಹೇಳುತ್ತದೆ. ಶಂಬಾ ಕಂನಾಡಿನ ಶ್ರೇಯಸ್ಸಿಗಾಗಿ ದುಡಿದವರು. ಇದರ ಸಮಗ್ರದರ್ಶನವನ್ನು ಅವರ ಕೃತಿಗಳು ರುಜುವಾತುಗೊಳಿಸುತ್ತವೆ. ಅವರ ಸಮಗ್ರ ಸಂಪುಟಗಳನ್ನು ನಿಮ್ಮ ಉಡಿಯಲ್ಲಿ ಹಾಕುತ್ತಿದ್ದೇವೆ. ಸಂಪುಟಗಳು ಹಲವು ರೀತಿಯ ಓದಿಕೆಗೆ ಹಾಗೂ ನಿಮ್ಮ ಪ್ರೀತಿಗೆ ಒಳಗಾಗಲಿ. ಈ ಸಂಪುಟಗಳಲ್ಲಿ ಏನಾದರೂ ಕೊರತೆಗಳಿದ್ದರೆ ಅದು ಸಂಪಾದಕನ ಸೀಮಿತ ಫಲ. ಇದಕ್ಕಾಗಿ ಕಂನಾಡ ಓದುಗರು ಮನ್ನಿಸಬೇಕು. ಇಷ್ಟು ಹೇಳಿದರೆ ತೀರಿತೆ?

ಕಂನಾಡಿನ ಜನರು ಈ ಸಂಪುಟಗಳನ್ನು ಸಹೃದಯತೆಯಿಂದ ಸ್ವೀಕರಿಸಬೇಕೆಂದೂ ಕುಗ್ಗಿರುವ ಕಂನಾಡನ್ನು ಹಿಗ್ಗುವ ತೆರದಲ್ಲಿ ಹೊರಳಬೇಕೆಂದೂ ಬೇಡುತ್ತೇನೆ. ನಮ್ಮ ತರುಣ ಜನಾಂಗವು ಶಂಬಾ ಅವರನ್ನು ಹೊಸ ಓದಿನ ನೆಲೆಯಲ್ಲಿ ಸ್ವೀಕರಿಸಬೇಕೆಂದೂ ಕೋರುತ್ತೇನೆ.

ಜುಲೈ ೨೫, ೧೯೯೯
ಕನ್ನಡ ವಿಶ್ವವಿದ್ಯಾಲಯ-ಹಂಪಿ

ಮಲ್ಲೇಪುರಂ ಜಿ. ವೆಂಕಟೇಶ
ಸಂಪಾದಕ

ಪ್ರಸ್ತಾವನೆ

ಸಕ್ತುಮಿವ ತಿತಉನಾ ಪುನಂತಃ ಯತ್ರ ಧೀರಾಃ ವಾಚಮಕ್ರತ।
ಅತ್ರಾ ಸಖಾಯಃ ಸಖ್ಯಾನಿ ಜಾನತೇ ಭದ್ರಾ ಏಷಾಂ ಲಕ್ಷ್ಮೀಃ ನಿಹಿತಾಧಿ ವಾಚಿ॥

ಋಗ್ವೇದ ಸಂಹಿತೆ X-೭೧.೨

ಶಂಬಾ ಜೋಶಿ, ಅರುವತ್ತನೆಯ ದಶಕದಲ್ಲಿ ನಡೆಸಿದ ಸಾಂಸ್ಕೃತಿಕ ಅಧ್ಯಯನವು ತೀರ ವಿಶಿಷ್ಟವಾದದ್ದು. ಈ ಅಧ್ಯಯನವು ಮುಖ್ಯವಾಗಿ ಜೀವನ ಅರ್ಥ ಗ್ರಹಣದ ಕ್ರಮವನ್ನು ಕುರಿತದ್ದಾಗಿತ್ತು. ಅವರು ಈ ಮೊದಲು ಕರ್ಣಾಟ ಮತ್ತು ಮಹಾರಾಷ್ಟ್ರಗಳ ಸಾಂಸ್ಕೃತಿಕ ಭೂಮಿಕೆಯನ್ನು ಹಲವು ಬಗೆಗಳಲ್ಲಿ, ಹಲವು ಕ್ರಮಗಳಲ್ಲಿ ಕೈಹಿಡಿದು ನಡೆದಿದ್ದರು. ಅದಕ್ಕಾಗಿ ಅವರು ಸಾಂಸ್ಕೃತಿಕ ನಡೆವಳಿ ಮತ್ತು ನುಡಿವಳಿಗಳ ಸಮಸ್ತ ಮೊತ್ತವನ್ನು ಗ್ರಹಿಸಿ ಹಿಡಿದಿದ್ದರು. ಈ ಗ್ರಹಿಕೆಯು ಅವರು ಅರ್ಥಹಚ್ಚಿದ ಕ್ರಮವಾಗಿರಲಿಲ್ಲ; ಬದಲಾಗಿ ಅದು ರೂಪಿತಗೊಂಡ ಅರ್ಥದ ನೆಲೆಯಾಗಿತ್ತು. ಸಾಂಸ್ಕೃತಿಕ ಅರ್ಥದ ನೆಲೆಗಳಿಗೆ ಕಾಲದ ಘಟನೆ ಮತ್ತು ತಾತ್ವಿಕ ವಿಸಂಗತಿಗಳು ಪರ್ಯಾಯವಾಗಿ ಕಾರಣವಾಗಿರುತ್ತವೆ. ಈ ಅಂಶವನ್ನೂ ಕೇವಲ ಭೂತದ ಘಟನೆ ಮತ್ತು ವಿಸಂಗತಿಗಳಿಗೆ ಮಾತ್ರ ನಿಗದಿಯಾಗಿರುವುದಿಲ್ಲ. ಅದು ವರ್ತಮಾನವೂ ಆಗಿರುತ್ತದೆ. ನಿನ್ನೆಯನ್ನು ತಿಳಿಯುವುದು ಎಂದರೆ ವರ್ತಮಾನವನ್ನು ತಿಳಿಯುವ ಬಗೆಯೇ ಆಗಿದೆ. ನಿನ್ನೆ ಮತ್ತು ಇಂದು ತಿಳಿಯುವುದರ ಮೂಲಕ 'ನಾಳೆ'ಯ ಅರ್ಥದ ನೆಲೆಗಳನ್ನು ತಿಳಿಯಲು ಸಾಧ್ಯ. ಚರಿತ್ರೆಗೆ ನಿನ್ನೆಯನ್ನು ತಿಳಿಯುತ್ತ ವೈಭವೀಕರಿಸುವ ಅಗತ್ಯ ಇರುವುದಿಲ್ಲ. ವರ್ತಮಾನದ ಸಂಕಷ್ಟಗಳನ್ನು ತಿಳಿಯುವ ಅಗತ್ಯ ಇರುತ್ತದೆ.

ಸಾಂಸ್ಕೃತಿಕ ಕಥನ

ಸಾಂಸ್ಕೃತಿಕ ಚರಿತ್ರಶಾಸ್ತ್ರವು ಮನುಷ್ಯನ ನೆಲೆಗಳನ್ನು ತಿಳಿಯುವ ಹಂಬಲಕ್ಕೆ ಕೈ ಹಾಕುತ್ತದೆ. ಸಾಂಪ್ರದಾಯಿಕ ಚರಿತ್ರಶಾಸ್ತ್ರಕ್ಕೆ ಈ ಬಗೆಗೆ ಆಸಕ್ತಿ ಇರುವುದಿಲ್ಲ. ಚರಿತ್ರೆಯು ಕಾಲದ ಮೇಲ್ಮೈ ಸಂಗತಿಗಳನ್ನೂ ಅಂಕೆ ಸಂಖ್ಯೆಗಳ ವಿವರಗಳನ್ನೂ ಒದಗಿಸುತ್ತದೆ. ಒಂದು ಚರಿತ್ರೆ, ಒಂದು ಸಮಾಜ, ತಿಳಿಯುವುದಕ್ಕೆ ಈ ಬಗೆಯ ಸಂಗತಿಗಳೂ ಘಟನೆಗಳೂ ಅಂಕೆಸಂಖ್ಯೆಗಳೂ ಅಗತ್ಯವೇನೊ ನಿಜ. ಆದರೆ, ನಿಜದ ಚರಿತ್ರೆಯ ಪುನಾರಚನೆಗೆ ಇದಿಷ್ಟೇ ಸಾಕಾಗದು. ಇತಿಹಾಸವು ಮಾನವನ, ಮಾನವಸಮಾಜದ ನಡೆವಳಿಗಳ ಸಮಸ್ತ ಉಜ್ಜೀವನವನ್ನು ಕುರಿತು ಚಿಂತಿಸುತ್ತದೆ. ಸಾಂಸ್ಕೃತಿಕ ಇತಿಹಾಸಶಾಸ್ತ್ರವು ಈ ಬಗೆಯ ಆಳದ ನೆಲೆಯಲ್ಲಿ ನಡೆಯುತ್ತದೆ. ಈ ಆಳದ ನೆಲೆಗಳ ಕಡೆಗೆ ಶಂಬಾ ಮೊದಲು ನಡೆದರು. ಶಂಬಾ, ತಮ್ಮ ಸಾಂಸ್ಕೃತಿಕ ಕಥನಾತ್ಮಕ ಅಧ್ಯಯನಗಳಿಗೆ ಇತಿಹಾಸವನ್ನು ಒಂದು ಉಪಕರಣವಾಗಿ ಸ್ವೀಕರಿಸಿದರೂ ಅದನ್ನು ಸಾಂಕೇತಿಕ ನೆಲೆಯಲ್ಲೂ ಅರ್ಥದ

ಪಾತಳಿಗಳಲ್ಲೂ ಹಿಡಿಯುವ ಪ್ರಾಮಾಣಿಕ ಯತ್ನ ಮಾಡಿದರು. ಇದು ಕಂನಡದ, ಸಾಂಸ್ಕೃತಿಕ ಅದೃಷ್ಟವೆಂದೇ ಹೇಳಬೇಕು.

ಶಂಬಾ ಈ ಸಾಂಸ್ಕೃತಿಕ ಚರಿತ್ರಶಾಸ್ತ್ರದ ತಿಳಿವಳಿಕೆಗೆ ಒಂದು ಹಂತದಲ್ಲಿ ಋಗ್ವೇದದ ಅಧ್ಯಯನಕ್ಕೆ ತೊಡಗಿದರು. ಋಗ್ವೇದವು ಸಾಂಸ್ಕೃತಿಕ ಅರ್ಥದ ನೆಲೆಗಳನ್ನು ತಿಳಿಯಲು ಸಹಾಯಕವೆಂಬ ಅರ್ಥಧಾರಣೆ ಅವರ ಕಾಲಕ್ಕೆ ಅಪರೂಪವಾದ ಸಂಗತಿಯಾಗಿತ್ತು. ಋಗ್ವೇದವು ಈ ಸಂಸ್ಕೃತಿಯ ಚಾರಿತ್ರಿಕ ನೆಲೆಗಳನ್ನೂ ತಾತ್ವಿಕ ಸಂಗತಿಗಳನ್ನೂ ತನ್ನ ಆಕೃತಿಯಲ್ಲಿ ಇಟ್ಟುಕೊಂಡಿದೆಯೆಂಬ ಅಂಶ ಇಪ್ಪತ್ತನೆಯ ಶತಮಾನದ ಹಾಗೂ ಹತ್ತೊಂಬತ್ತನೆಯ ಶತಮಾನದ ಓರಿಯಂಟಲಿಸ್ಟರು ನಂಬಿಕೊಂಡಿದ್ದರು. ಈ ಓರಿಯಂಟಲಿಸ್ಟರಲ್ಲೂ ದೇಶೀ ಅಧ್ಯಯನಕಾರರು, ಮಾರ್ಗ ಅಧ್ಯಯನಕಾರರು, ತುಲನಾತ್ಮಕ ಅಧ್ಯಯನಕಾರರು ಜತೆಜತೆಗೆ ಇದ್ದರು. ದೇಸಿ ಅಧ್ಯಯನಕಾರರು ಮುಖ್ಯವಾಗಿ ಭೂತದ ಭವ್ಯತೆಯಲ್ಲಿ, ಅದರ ವಿವರಣೆಯಲ್ಲಿ ತೊಡಗಿದ್ದರು. ಇವರಿಗೆ ಲಿಖಿತ ಆಧಾರಗಳು ಎಷ್ಟು ಮುಖ್ಯವೋ ಅಲಿಖಿತ ಆಧಾರಗಳೂ ಅಷ್ಟೇ ಮುಖ್ಯ. ಲಿಖಿತ ಆಧಾರಗಳ ಜತೆ ಅಲಿಖಿತ ಆಧಾರಗಳೂ ಹಲವಾರು ಬಗೆಯ ಮೌಖಿಕ ವಿವರಗಳೂ ಸ್ಮೃತಿಗಳಲ್ಲಿ ಉಳಿದುಹೋಗಿದ್ದ ಸಂಗತಿಗಳೂ ಇವರಿಗೆ ಮುಖ್ಯವಾಗಿದ್ದವು. ಈ ಬಗೆಯ ಅಧ್ಯಯನವು ದೇಸೀ ಚರಿತ್ರಕಾರರಿಗೆ ವಿಸ್ಮಯದ ನೆಲೆಯಾಗಿತ್ತು. ಆದರೆ, ತಿಳಿಯುವ ನೆಲೆ ಇವರ ಪಾತಳಿಯದ್ದಲ್ಲ. ಮಾರ್ಗ ಅಧ್ಯಯನಕಾರರು ಲಿಖಿತ ಆಧಾರಗಳಿಂದ ಚರಿತ್ರೆಯ ಪುನಾರಚನೆಯ ಹಂಬಲದಲ್ಲಿದ್ದರು. ಅವರಿಗೆ ಚರಿತ್ರೆಯ ಅರ್ಥದ ಹಾಗೂ ವಿಕಲ್ಪದ ಪಾತಳಿಗಳನ್ನು ತಿಳಿಯುವ ಹಂಬಲ ಇರಲಿಲ್ಲ. ವೇದ, ಉಪನಿಷತ್ತು, ಪುರಾಣ, ಕಾವ್ಯಗಳನ್ನು ಒಂದು ಆಕರವೆಂದು ತಿಳಿದು ಅಧ್ಯಯನ ಮಾಡುವುದೂ ಆ ಬಗೆಗೆ ತೃಪ್ತಿಯಿಂದ ವಿವರಿಸುವುದೂ ಮಾರ್ಗ ಅಧ್ಯಯನಕಾರರ ಮನಃಸ್ಥಿತಿ ಆಗಿತ್ತು. ಮಾರ್ಗಅಧ್ಯಯನಕಾರರ ಮುಂದುವರೆದ ರೂಪವೇ ತುಲನಾತ್ಮಕ ಅಧ್ಯಯನಕಾರರದ್ದು. ಇವರಿಗೆ ಕೇವಲ ತಾವು ನಿಂತ ನೆಲೆಯ ಲಿಖಿತ ಆಧಾರಗಳಲ್ಲದೆ, ಉಳಿದ ಸಂಸ್ಕೃತಿಗಳ ಲಿಖಿತ ಆಧಾರಗಳನ್ನು ತಿಳಿಯುವ ಆಸಕ್ತಿ ತೋರಿಸುತ್ತಿದ್ದರು. ಋಗ್ವೇದಕ್ಕೆ ಸಮವಾಗಿ ಹೋಲುವ ಪರ್ಷಿಯನ್ನಿನ ಜೆಂಡ್ ಅವೆಸ್ತ- ಈ ಬಗೆಯ ಉತ್ತಮ ಉದಾಹರಣೆಗಳಲ್ಲಿ ಒಂದು. ಭಾರತದ ಪ್ರತಿಮಾಶಾಸ್ತ್ರಗಳ ಜತೆಗೆ ಜಗತ್ತಿನ ಪ್ರತಿಮಾಶಾಸ್ತ್ರಗಳ ತುಲನಾತ್ಮಕ ಅಭ್ಯಾಸವೂ ಒಂದು ಮುಖ್ಯ ನೆಲೆಯಾಗಿತ್ತು.

ಈ ಮೂರೂ ಬಗೆಯ ಅಧ್ಯಯನಗಳು ಒಂದೊಂದು ವಿಶಿಷ್ಟ ದೃಷ್ಟಿಕೋನಗಳನ್ನು ತಮಗೆ ತಾವೇ ಪಡೆದಿದ್ದವು. ಆದರೆ, ಶಂಬಾ ಈ ಎಲ್ಲಾ ಬಗೆಯ ದೃಷ್ಟಿಕೋನಗಳ ಅಧ್ಯಯನಗಳನ್ನು ತಿಳಿದು, ಅವುಗಳನ್ನು ಧಾರಣೆ ಮಾಡಿ ಮುಂದುವರೆದರು. ಇದು ಸಾಂಸ್ಕೃತಿಕಾಧ್ಯಯನದ ದೃಷ್ಟಿಯಿಂದ ಈಗಲೂ ಬಹುಮಹತ್ವದ ಸಂಗತಿ ಆಗಿದೆ. ಯಾವುದೊಂದು ವಿಶಿಷ್ಟ ದೃಷ್ಟಿಕೋನವೂ ಕೊನೆಯಲ್ಲ. ಆ ಎಲ್ಲ ದೃಷ್ಟಿಕೋನಗಳೂ 'ಮಾನವ ಚರಿತ್ರೆ'ಯನ್ನು ತಿಳಿಯುವ ಹಂಬಲವನ್ನು ಹೊತ್ತಿರಬೇಕೆಂಬ ಅದಮ್ಯ ಆಸೆ ಅವರಿಗಿತ್ತು. 'ಋಗ್ವೇದಸಾರ ನಾಗಪ್ರತಿಮಾ ವಿಚಾರ' ಬೃಹದ್‌ಗ್ರಂಥದ ಮೂಲ ತಾತ್ವಿಕಭೂಮಿಕೆಯು ಮಾನವ ಚರಿತ್ರೆಯ ನೆಲೆಯನ್ನು ತಿಳಿಯುವ ಹಂಬಲವನ್ನು ಹೊಂದಿತ್ತು. ಈ ಅಂಶವು ಕಂನಡದ ಮಟ್ಟಿಗೆ ಹೊಚ್ಚಹೊಸದೂ ಕೂಡಾ.

ಅಧ್ಯಯನದ ನೆಲೆಗಳು

ಭಾರತ ದೇಶಕ್ಕೆ ಸಂಬಂಧಿಸಿದ ಸಂಶೋಧನೆಯಲ್ಲಿ 'ಇಂಡಾಲಜಿ' ಎಂಬುದೊಂದು ವಿಭಾಗ ಉಂಟಷ್ಟೆ. ಭಾರತದೇಶದ ಇತಿಹಾಸ, ಸಂಸ್ಕೃತಿ, ಸಮಾಜ, ಕಲೆ, ಭಾಷೆ, ಧರ್ಮ ಎಲ್ಲವನ್ನೂ ಒಟ್ಟಿಗೆ ಅಧ್ಯಯನ ಮಾಡಿ ಭಾರತದ ಮೂಲಭೂತ ಮೌಲ್ಯಗಳನ್ನು ನಿರ್ಧಾರ ಮಾಡುವ ಪ್ರಯತ್ನ ಈ ಶಾಸ್ತ್ರಕ್ಕೆ ಸಂಬಂಧಿಸಿದ್ದು. ಸಂದರ್ಭ ಶುದ್ಧಿಯನ್ನು ಪಡೆದ ಎಲ್ಲ ವಿವರಗಳೂ ಇಲ್ಲಿ ಕಲೆಯುತ್ತವೆ. ವಿವರಗಳನ್ನು ಅರ್ಥವತ್ತಾಗಿ ಜೋಡಿಸುವುದೇ ಒಂದು ಸಂಶೋಧನ ಪ್ರಕಾರವಾಗುತ್ತದೆ. ಈ ದೃಷ್ಟಿಯಿಂದ ಈ ವಿಭಾಗದ ವ್ಯಾಪ್ತಿ ಅತ್ಯಂತ

ವಿಶಾಲವಾದದ್ದು. ಶಂಬಾ ಅವರ ವಿಚಾರದಲ್ಲಿ ಈ ಹರವು ಇರುವುದು ಮಾತ್ರವಲ್ಲ, ಪರಿಕರಗಳ ನೆರವೂ ಇದೆ. ಕಣ್ಮರೆಯಾದ ಕನ್ನಡನಾಡಿನ ಹಿನ್ನೆಲೆಯಲ್ಲಿ ಹುಡುಕುತ್ತ ಹೊರಟು, ನೆರೆಯ ಮಹಾರಾಷ್ಟ್ರದ ಮೂಲವನ್ನು ಹುಡುಕಿ, ಎರಡೂ ಸಮಾಜಗಳ ಹಿನ್ನೆಲೆಯಲ್ಲಿದ್ದ 'ಕಂದಮಿಳ' ನೆಲೆಯನ್ನು ಅವರು ಗುರುತಿಸಿದರೆಂದು ಹಿಂದಿನ ಸಂಪುಟಗಳಲ್ಲಿ ಹೇಳಿದೆಯಷ್ಟೆ. ಮರವರು (ಜಾಡರು) ಮತ್ತು ಕುರುಂಬರೆಂದು ಪಂಗಡಗಳಲ್ಲಿ ಒಡೆದಿದ್ದ ಹಟ್ಟಿಕಾರರ ಹಳಮೆ ಆರೇಳು ಸಾವಿರ ವರ್ಷಗಳಷ್ಟು; ಕಾವೇರಿಯಿಂದ ಗಂಗೆಯ ವರೆಗೆ, ನೀಲಗಿರಿಯಿಂದ ರಾಜಸ್ಥಾನದ ವರೆಗೆ ಹರಡಿದ್ದ ಈ ಕನ್ನಡ 'ದನಕಾರರ' ಹಿನ್ನೆಲೆಯನ್ನು ಹಿಡಿದು ಹೊರಟಾಗ, ಮಹಾರಾಷ್ಟ್ರ, ಕರ್ನಾಟ ಮತ್ತು ಆಂಧ್ರ, ಈ ಮೂರರ ಒಕ್ಕೂಟವಾಗಿದ್ದ ಕಾಲವನ್ನು ಕಲ್ಪಿಸಿಕೊಳ್ಳುವುದು ಅವರಿಗೆ ಸಾಧ್ಯವಾಯಿತು. ಇದೇ ಗುಂಗಿನಲ್ಲಿ 'ಮೂಲಸ್ಥಾನ ಕಲ್ಲೇಶ್ವರ'ನ ವಿಚಾರ ಅವರನ್ನು ವೇದಕಾಲದ ವರೆಗೆ ಕರೆದೊಯ್ದಿತು. ಇಡೀ ಭಾರತದ ಸಂಸ್ಕೃತಿಯ ಚೌಕಟ್ಟಿನಲ್ಲಷ್ಟೇ ಕನ್ನಡನಾಡಿನ ಕತೆಯನ್ನು ಕಾಣಬೇಕಾದುದು! ಇದಕ್ಕೆ ಹೊರತಾದರೆ ಇತಿಹಾಸವೆಲ್ಲಿ ಬಂದಿತು? ಇದೇ ವಾದವು ಜಾಗತಿಕ ಜನಸಮುದಾಯದ ಔಚಿತ್ಯಕ್ಕೂ ಅನ್ವಯಿಸುತ್ತದೆ. ಜೋಶಿಯವರು ಭಾರತೇತರ ಸಂಸ್ಕೃತಿಗಳಲ್ಲಿ ಸೇರಿಬಂದಿರುವ ಮಾತು, ಸಂಕೇತ, ಧಾರ್ಮಿಕ ವಿವರ ಮೊದಲಾದುವುಗಳನ್ನು ವಿಪುಲವಾಗಿ ಪ್ರಸ್ತಾಪಿಸಿ ಭಾರತೀಯ ಸಂಸ್ಕೃತಿಯ ನೆಲೆಯನ್ನು ನಿರ್ಧರಿಸಲು ಯತ್ನಿಸುತ್ತಾರೆ.

ಈ ನೆಲೆಯಲ್ಲಿ ವಿವೇಚನೆ ಮಾಡಬೇಕಾದರೆ ಮಾನವ ಇತಿಹಾಸದ ಮೂಲಭೂತ ಪ್ರಕಾರಗಳ ಅರಿವೂ ಬೇಕು. ಮಾನವ ಸ್ವಭಾವದ ಪ್ರಮುಖ ಪ್ರವೃತ್ತಿಗಳ ಪರಿಚಯವೂ ಇರಬೇಕಾದ ಅಗತ್ಯವಿದೆ. ಬರಿಯ ದೇಶವೊಂದರ ಬೆಳವಣಿಗೆ, ಒಂದು ಸಂಸ್ಕೃತಿಯ ವಿಕಾಸ, ಒಂದು ಜನಪದ 'ಸಂಕ್ರಮಣ' ಇಷ್ಟನ್ನು ಅವಲಂಬಿಸಿದರೆ ಸಾಕಾಗದು. ಸಮಾಜ ರಚನೆಯ, ಹಿನ್ನೆಲೆಯಲ್ಲಿರುವ ಮನೋವೈಜ್ಞಾನಿಕ ವಿವರಗಳು ಈ ಬಗೆಯ ಅಧ್ಯಯನಕ್ಕೆ ಮುಖ್ಯವಾಗುತ್ತವೆ. ಮಾತುಗಳ ಕೊಳ್ಳಾಟ, ಕೊಡುವಾಟ, ಅರ್ಥಗಳ ಅಲೆದಾಟ, ಪರಿಕರಗಳ ಹರಿದಾಟ, ಸಂಕೇತಗಳ ಸೇರಾಟ ಇವನ್ನೆಲ್ಲ ಈ ನೆಲೆಯಲ್ಲಿ ಅಳೆದು, ತೂಗಿ, ಪೂರ್ವಾಪರಗಳನ್ನು ನಿರ್ಧರಿಸಿ, ಕೊಂಡಿಗಳನ್ನು ಬೆಸೆದು ಒಂದು ಸಮಗ್ರ ಚಿತ್ರವನ್ನು ಬಿಡಿಸಬೇಕಾಗುತ್ತದೆ. ಬಿಡಿಸಿದ ಚಿತ್ರ ಸಾರ್ಥಕವಾಗಬೇಕೆಂದರೆ ಮಾನವ ಪ್ರವೃತ್ತಿಗಳಲ್ಲಿ ಒಳನೋಟ ಇರಬೇಕು. ಪರಿಕರಗಳಿಗಿಂತ ಹೆಚ್ಚಾಗಿ ಈ ಒಳನೋಟ (insight) ಮುಖ್ಯ. ಆದರೆ, ಪರಿಕರಗಳು ಚೊಕ್ಕವಾಗಿರದೆ ಒಳನೋಟಗಳು ಅಚ್ಚುಕಟ್ಟಾಗಿರಲಾರವು.

ಶಂಬಾ ಅವರ ಮೊದಲ ಬರಹಗಳಲ್ಲೇ ಈ ಒಳನೋಟಗಳ ಸುಳಿವು ಸಿಗುತ್ತವೆ. ಆದರೆ, ನೆರವಾಗಬಲ್ಲ ಪರಿಕರಗಳ ಬಳಕೆ ಮಟ್ಟಿಗೆ ತೆಳುವಾಗಿಯೇ ಇದೆ. ಬರುಬರುತ್ತ ಈ ಬಳಕೆ ಆಳವಾಯಿತು. ಮಾತಿನ ಮೈಯನ್ನು ಹರಿದು, ಪದರಪದರವಾಗಿ ಬಿಡಿಸಿಟ್ಟು, ಹುದುಗಿರುವ ಹಿನ್ನೆಲೆಯನ್ನು ಹೊರಗೆ ತೆಗೆಯುವುದೇ ಹೆಚ್ಚಿನ ಹವಣಿಕೆಯಾಯಿತು. 'ಋಗ್ವೇದ ಸಾರ ನಾಗಪ್ರತಿಮಾ ವಿಚಾರ'ದಲ್ಲಿ ಇತಿಹಾಸದ ಎಲ್ಲ ಸಹಾಯಕ ಸಾಮಗ್ರಿಗಳನ್ನು ಬಳಸಿಕೊಳ್ಳುವ ಕೌಶಲವಾಗಿ ಮಾರ್ಪಟ್ಟಿತು. ಶಾಸ್ತ್ರೀಯ ಬರೆಹ ಒಮ್ಮೆಲೇ ಕೈಗೂಡುವ ಕಲೆಯಲ್ಲ; ಅನುಭವದಿಂದಲೂ, ಪ್ರಯೋಗದಿಂದಲೂ, ಅಭ್ಯಾಸದಿಂದಲೂ ಅದು ಸಾಧ್ಯ. ಶಂಬಾ ಅವರ ಬರೆಹಗಳಲ್ಲಿ ಈ ಬಗೆಯ ಬೆಳವಣಿಗೆಯನ್ನು ಗುರುತಿಸಬಹುದು. ಮೊದಮೊದಲಿಗೆ, ಹಲವು ಸುಪ್ರಸಿದ್ಧ ವಿದ್ವಾಂಸರ ಇಂಗ್ಲಿಷ್ ಬರೆಹಗಳನ್ನು ನೋಡಿ ಅವರ ಸಿದ್ಧಾಂತಗಳನ್ನು ಹಾಗೆಹಾಗೆಯೇ ಸ್ವೀಕರಿಸಿರುವುದನ್ನು ಕಾಣುತ್ತೇವೆ. ಆರ್ಯ-ದ್ರಾವಿಡರೆಂಬ ಭೇದ, ನರ್ಮದಾತೀರದಲ್ಲಿ ಮೊದಲಿಗೆ ಮಂಗ ಮನುಷ್ಯನಾದನೆಂಬ ವಾದ, ಗಿಡಗಳು ನೇಯ್ಕಾರರಿಗೆ ಜೀವನಾಧಾರವೆಂಬ ನಂಬಿಕೆ, ಚಂದ್ರವಂಶದಲ್ಲಿ ಕುಟುಂಬ ವ್ಯವಸ್ಥೆ ಸ್ತ್ರೀಪ್ರಧಾನವಾಗಿದ್ದಿತೆಂಬ ಊಹೆ, ಪಂಢರಿಯ ವಿಟ್ಠಲ (ಹಟ್ಟಿಕಾರರ ವಿಟ್ಟ) ಒಂಟಿಯಾಗಿರುವುದು, ಈ ಮುಂತಾದುವೆಲ್ಲ ನಿದರ್ಶನಗಳನ್ನು ಕಾಣಬಹುದು. ಇವೆಲ್ಲ ಸಮಾಜ ಚಿಂತನೆಯ ಯಾವುದೋ ಘಟ್ಟದಲ್ಲಿ ಮೂಡಿಬಂದ ಸೂಚನೆಗಳು ಮಾತ್ರ. ಅವು ಕೆಲಕಾಲ ಬದುಕಿ, ಬಾಳಿ, ಅನಂತರ ಮಣ್ಣುಗೂಡುತ್ತವೆ. ಈಗ ಆರ್ಯ-ಆರ್ಯೋತ್ತರವೆಂಬ ವಾದ ಪ್ರಚಲಿತವಾಗಿಲ್ಲ. ಮಂಗ ಮನುಷ್ಯವಾಯಿತೆಂಬುದು ಹಳೆಯ ಕತೆ, ಬಹುಮಟ್ಟಿಗೆ ಇದು ಕಲ್ಪನೆಯೇ ಆಗಿದೆ.

ಮೊದಲಮನುಷ್ಯ ಮೂಡಿಕೊಂಡದ್ದು ಆಫ್ರಿಕಾದಲ್ಲಿಯೇ ಹೊರತು ನರ್ಮದಾ ತೀರದಲ್ಲಿ ಅಲ್ಲ. ಪಂಢರಿಯ ವಿಟ್ಠಲ ಇವನೆ ಎನ್ನುವಷ್ಟು ಪ್ರಾಚೀನ ನಿದರ್ಶನಗಳಿಲ್ಲ. 'ಇಪ್ಪತ್ತೆಂಟು ಯುಗಗಳ ದೈವ' (ಯುಗೇ ಅಠ್ಠಾವೀಸ) ಎಂದು ಭಾವುಕರು ಹಾಡಿದೊಡನೆ ಐತಿಹಾಸಿಕ ಪ್ರಾಚೀನತೆ ಸಿದ್ಧವಾಗುವುದಿಲ್ಲ. ಸೂರ್ಯವಂಶ ಆರ್ಯರದ್ದು, ಚಂದ್ರವಂಶ ಆರ್ಯೇತರ ದಾಕ್ಷಿಣಾತ್ಯರದ್ದು ಎಂದು ವಿಂಗಡಿಸುವುದು ಅಷ್ಟು ಸಮಂಜಸವಲ್ಲ. ಈ ಬಗೆಯ ಚರ್ಚೆಗೆ ಆಹ್ವಾನವೇನೋ ಉಂಟು.

ಶಂಬಾ ಅವರ ಮುಂದಿನ ಬರೆಹಗಳಲ್ಲಿ ಹೀಗಲ್ಲದೆ, ವಿಮರ್ಶೆ ಮಾಡಿ ವಿಚಾರ ಮಾಡುವ ಹವ್ಯಾಸವೂ ಇದೆ. ಇತರರ ವಾದಗಳಲ್ಲಿ ಮುಂದಿರಿಸಿದರೂ, ತಮ್ಮ ಸಮ್ಮತಿಯನ್ನು ಸೂಚಿಸಿದರೂ ಅದಕ್ಕೆ ಉತ್ತೇಜಕವಾದ ವಿವರಗಳನ್ನು ಕೊಡುವ ಎಚ್ಚರಿಕೆಯನ್ನು ಅವರು ವಹಿಸುತ್ತಾರೆ. ಅವರ 'ಋಗ್ವೇದಸಾರ'ವು ಈ ದೃಷ್ಟಿಯಿಂದ ಬಹುಮೌಲ್ಯದ ಗ್ರಂಥ. ನಾಗಪ್ರತಿಮಾ ವಿಚಾರ ಮಾಡಲು ಹೊರಟು ಜಗತ್ತಿನ ಎಲ್ಲೆಡೆ ಹಳೆಯ ಪೂಜಾ ಪದ್ಧತಿಗಳು ಪ್ರಚಾರದಲ್ಲಿರುವುದನ್ನು ಸಂಗ್ರಹಿಸಿ, ಸಾದೃಶ್ಯಗಳನ್ನು ಕಾಣಿಸಿ, ವೈದಿಕ ಸಂಸ್ಕೃತಿಯ ಮೂಲಸ್ತರವನ್ನು ನಿರ್ಧರಿಸಿ, ಆ ಕಾಲದ ಸಮಾಜವ್ಯವಸ್ಥೆಯ ರೂಪವನ್ನು ಪುನಾರಚಿಸಲು ಯತ್ನಿಸಿದ್ದಾರೆ. ಈ ಪ್ರಯತ್ನದಲ್ಲಿ ಮೇಲೆ ಕಾಣಿಸಿದಂತೆ ಭಾಷಾಶಾಸ್ತ್ರವೊಂದನ್ನೇ ಅವಲಂಬಿಸಿಲ್ಲ. ಬೇರೊಬ್ಬರ ಅಭಿಪ್ರಾಯಗಳನ್ನೇ ಪ್ರಮಾಣವೆಂದು ಬಗೆದಿಲ್ಲ. ಸಮಸಾಮಯಿಕವಾದ ಶೋಧನಸಾಧನಗಳನ್ನೆಲ್ಲ ಶಂಬಾ ಬಳಸಿಕೊಂಡಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ, ಸಂಕೇತಗಳ ಅಂತರಾರ್ಥವನ್ನು ಕಾಣಿಸಲು ಹೆಣಗಾಡಿದ್ದಾರೆ. ಇದೇ ಈ ಗ್ರಂಥದ ಹೆಚ್ಚುಗಾರಿಕೆ. ಇದು ಇಂಗ್ಲೀಷಿನಲ್ಲಿ ಬಂದಿದ್ದರೆ ಈ ವೇಳೆಗೆ ಎಷ್ಟೋ ಉತ್ಸಾಹಕ್ಕೆ ಕಾರಣವಾಗುತ್ತಿತ್ತು! ವಿಶ್ವದ ಹಲವಾರು ಭಾಷೆಗಳಲ್ಲಿ ಹೊರಬರುತ್ತಿತ್ತು. ಇದರಲ್ಲಿರುವಷ್ಟು ಸ್ವಾರಸ್ಯವಾದ ವಿಚಾರಗಳು, ಕೌತುಕದ ವಿವರಣೆಗಳು, ಚಿಂತನೆಗೆ ತಕ್ಕ ಸೂಚನೆಗಳು ಜಗತ್ತಿನ ಇತರ ಭಾಷೆಗಳ ಯಾವೊಂದೂ ಗ್ರಂಥದಲ್ಲಿಯೂ ಕಾಣಸಿಗುವುದಿಲ್ಲವೆಂದರೆ ಉತ್ಪ್ರೇಕ್ಷೆಯ ಮಾತಲ್ಲ. ಇಲ್ಲಿರುವ ವಿಚಾರವಂತಿಕೆ ಯಾರನ್ನಾದರೂ ಬೆರಗು ಉಂಟು ಮಾಡುವಂಥದು.

ಭಾರತೀಯ ಸಂಸ್ಕೃತಿಯನ್ನು ಅರಿತುಕೊಳ್ಳಲು ಅದರ ಹಿನ್ನೆಲೆಯನ್ನು ಕರಾರುವಾಕ್ಕಾಗಿ ಗುರುತಿಸಲು ಅಗತ್ಯವಾದ ಒಳನೋಟ ಜೋಶಿಯವರಿಗಿದೆ. ಇತಿಹಾಸ ಸಂಶೋಧನೆಯಲ್ಲೇ ನುರಿತವರಿಗೆ ಜೋಶಿಯವರ ಸಂವಿಧಾನ ಶಿಥಿಲವಾದುದೆಂದು ಕಂಡೀತು. ಅವರ ಗ್ರಂಥವೊಂದನ್ನು ವಿಮರ್ಶೆ ಮಾಡುತ್ತ ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳು, ಪ್ರತಿಯೊಂದು ಶಾಸ್ತ್ರದಲ್ಲಿಯೂ ಅದಕ್ಕೆ ತಕ್ಕ ಶಿಕ್ಷಾಪದ್ಧತಿಯನ್ನು (discipline) ಪಡೆಯದಿದ್ದರೆ, ಆಗ ಮಾಡಿದ ಸಲಹೆಗಳು ಮಾನ್ಯತೆ ಪಡೆಯುವುವು' ಎಂದು ಮೊದಲೇ ಸೂಚಿಸಿ, ಕಡೆಯಲ್ಲಿ 'ಅವಶ್ಯವಾದ ಆಳವಾದ ಅಧ್ಯಯನವಿಲ್ಲದೆ ಇಂತಹ ಪ್ರಯತ್ನಗಳಿಗೆ ಕೈಹಾಕುವುದು ವಿದ್ವದ್ಗ್ರಾಹ್ಯವಾಗುವುದಿಲ್ಲ, ಹಾಸ್ಯಾಸ್ಪದವಾಗುತ್ತದೆ' ಎಂದಿದ್ದಾರೆ (ಸಂಶೋಧನ ಲೇಖನಗಳು, ಪು. ೬೪೫-೬೪೯). ಸಾಂಪ್ರದಾಯಿಕ ಸಂಶೋಧನೆಯ ದೃಷ್ಟಿಯಿಂದ ಈ ಮಾತು ಸರಿ. ಆದರೆ, ಸಾಂಪ್ರದಾಯಿಕ ಸಂಶೋಧನೆಯೊಂದೇ ಸಂಶೋಧನೆಯ ಬಗೆಯಲ್ಲ. ಸಾಮಗ್ರಿಗಳು ಸಮರ್ಪಕವಾಗಿದ್ದು, ಸಂವಿಧಾನ ಸಮಂಜಸವಾಗಿದ್ದ ಮಾತ್ರಕ್ಕೆ ಸಂಶೋಧನೆ ಸಾರ್ಥಕವಾಯಿತು ಎನ್ನುವುದು ಸರಿಯಲ್ಲ. ಆ ಶಾಸ್ತ್ರದ ಶಿಕ್ಷಾಪದ್ಧತಿಯಲ್ಲಿ ಉತ್ತೀರ್ಣರಾದವರು ಎಷ್ಟುಮಂದಿ ಇಂತಹ ಸಂಶೋಧನೆಗಳನ್ನು ಮಾಡಿದ್ದಾರೆ? ಇತಿಹಾಸವನ್ನು ಕುರಿತು ಅಧ್ಯಯನ ಮಾಡುವಲ್ಲಿ ಮುಖ್ಯವಾಗಿ ಬೇಕಾದುದು ಒಳನೋಟ. ಇದೇ ಶಂಬಾ ಅವರನ್ನು ಕಾಯ್ದುಕೊಂಡು ಬಂದಿದೆ. ಐತಿಹಾಸಿಕ ಸಂಗತಿಗಳನ್ನೂ, ಸಾಮಾಜಿಕ ಕಲ್ಪನೆಗಳನ್ನೂ, ಧಾರ್ಮಿಕ ಪ್ರಕ್ರಿಯೆಗಳನ್ನೂ, ಕಲಾಪ್ರಕಾರಗಳನ್ನೂ, ಭಾಷಾಪ್ರಯೋಗಗಳನ್ನೂ ಸಮಾನವಾಗಿ ಪರಿಶೀಲಿಸಿ, ಅವುಗಳಲ್ಲಿಯ ಸಂಬಂಧವನ್ನು ಗಮನಿಸಿ, ಪೂರ್ವಾಪರವನ್ನು ವಿವೇಚಿಸಿ, ವರ್ತಮಾನಕ್ಕೆ ಅರ್ಥವಾಗುವ ಭವಿಷ್ಯತ್ತಿಗೆ ನೆರವಾಗುವ ಅತೀತ ಚಿತ್ರವನ್ನು ಒದಗಿಸುವಲ್ಲಿ ಒಳನೋಟ ಯಾವೊಬ್ಬ ಅಧ್ಯಯನಕಾರನಿಗೂ ಅತ್ಯಗತ್ಯವೇ ಸರಿ.

ಶಂಬಾ ಅವರ ಬರೆಹದಲ್ಲಿ ಬಹಳ ತೊಡಕುಂಟು ನಿಜ. ನಿದರ್ಶನಗಳಿಂದ ಸಿದ್ಧವಾದುದನ್ನು, ಬರಿಯ

ಊಹೆಯನ್ನು, ಒಂದೇ ರೀತಿ ಮುಂದಿಡುತ್ತಾರೆ, ಮಂಡಿಸುತ್ತಾರೆ. ಇತರರ ವಾದಗಳನ್ನೂ ತಮ್ಮ ಅನಿಸಿಕೆಗಳನ್ನೂ ಕಲೆಸಿ ನಿರೂಪಿಸುತ್ತಾರೆ. ಒಕ್ಕಣೆಯಲ್ಲಿ ಸಾಂಗತ್ಯ ಹಲವು ಬಾರಿ ಕಣ್ಮರೆಯಾಗುತ್ತದೆ; ಬರಹದಲ್ಲಿ ಭಾವನೆಗಳೂ ಭಾವಗಳೂ, ನಿರೂಪಣೆಗಳೂ, ನಿಂದನೆಗಳೂ, ಕಾಕುಕೊಂಕುಗಳೂ ಬೆರೆತು ಬರುತ್ತವೆ. ಇದೇನು ಶಾಸ್ತ್ರೀಯ ಸಾಹಿತ್ಯವೋ ಕಾಲ್ಪನಿಕ ಸಾಹಿತ್ಯವೋ ಎಂದು ಶಂಕೆ ಊರುವಂತೆ ಇರುತ್ತದೆ. ಗೌಣವಾದ ಅಂಶಗಳಿಗೆ ಅಚ್ಚುಕಟ್ಟಾಗಿ ಆಕರಗಳನ್ನು ಒದಗಿಸಿ, ಮುಖ್ಯವಾದ ವಿಚಾರಗಳನ್ನು ನಿರಾಲಂಬವಾಗಿ ಅಂತರಾಳದಲ್ಲಿ ನಿಲ್ಲಿಸುತ್ತಾರೆ. ಆಲೋಚನೆಯ ಕಾವಿನಲ್ಲಿ ವಿಷಯಗಳು ಎಲ್ಲಿಂದೆಲ್ಲಿಗೋ ಹಾರುತ್ತವೆ. ಇದು ಅವರ ಬರೆಹದ ಸ್ವಭಾವವೆನ್ನಬೇಕು. ಇದು ಅವರು ರೂಢಿಸಿಕೊಂಡು ಬಂದಿರುವ ಶೈಲಿ, ಮಾತಿನ ಮೋಡಿಯನ್ನು ಮೂಡಿಸಲು ಹೊರಡುವುದು ಸಹಜವೇ. ಆದರೆ, ಅವರ ಬರೆಹದಲ್ಲಿ ನೇರವಾದ ಅರ್ಥ ಸಾಮಾನ್ಯನಿಗೆ ಮರೆಯಾಗುತ್ತದೆ; ಇಂಗಿತನವನ್ನು ಅರಿತುಕೊಳ್ಳುವುದು ಕಠಿಣವೆನಿಸುತ್ತದೆ. ಸಂಸ್ಕೃತವಾಗಲೀ ಕನ್ನಡವಾಗಲೀ, ಪದದ ನಡುವೆ ಎಲ್ಲೋ ವಿರಾಮ ರೇಖೆಯನ್ನಿರಿಸಿ ಪದದ ಅರ್ಥವು ನಾವು ಬಗೆದುದಕ್ಕಿಂತ ಬೇರೆ ಎಂದು ಕಾಣಿಸುವುದು ಅವರಿಗೊಂದು ಆಟ. ಇದು ಕೆಲವೊಮ್ಮೆ ಸ್ವಾರಸ್ಯವಾಗಿರುತ್ತದೆ. ಆದರೆ, ಅದರ ಅತಿರೇಕವಾದರೆ ಬೇಸರವಾಗುತ್ತದೆ. 'ಲಿಂಗ್ವಿಸ್ಟಿಕ್ ಅನಾಲಿಸಿಸ್' ಎಂದರೆ ಇಷ್ಟೇ ಎಂಬುದು ಅವರ ಗ್ರಹಿಕೆಯಿರುವಂತೆ ತೋರುತ್ತದೆ. ಇವೆಲ್ಲ ಅವರ ಬರಹದಲ್ಲಿ ಕಾಣುವ ಕಷ್ಟಗಳೇ. ಆದರೆ, ಇಷ್ಟರಿಂದ ಅವರ ಬರೆಹವೆಲ್ಲ ಜೊಳ್ಳು ಎನ್ನಬಹುದೇ? ಈ ಹೊರಪದರವನ್ನು ಲೆಕ್ಕಿಸದೆ ಒಳಗೆ ಇಣುಕಿ ನೋಡಿದರೆ ಅವರ ಒಳನೋಟದ ಪರಿ ಅರಿವಿಗೆ ಬರುತ್ತದೆ.

ಈ ಒಳನೋಟದ ಮುಖ್ಯಲಕ್ಷಣ ಮನೋವೈಜ್ಞಾನಿಕ ದೃಷ್ಟಿಕೋನವೇ ಆಗಿದೆ. ಈಚೆಗೆ ಮನೋವೈಜ್ಞಾನಿಕ ವಿಶ್ಲೇಷಣೆಯ ಹರವಿನಲ್ಲಿ ವ್ಯಕ್ತಿ-ಸಮಾಜಗಳ ನಡುವಣ ಸಂಬಂಧ, ಸಮಾಜ-ಸಂಸ್ಕೃತಿಗಳ ಸಾಮಾನ್ಯ ನೆಲೆ, ವ್ಯಕ್ತಿವಿಕಾಸದ ಅಭಿವ್ಯಕ್ತಿಗಳು ಮೊದಲಾದ ವಿವರಗಳೆಲ್ಲ ಸೇರುತ್ತವೆ. ವ್ಯಕ್ತಿಯ ಅನುಭವದ ಆಧಾರದ ಮೇಲೆ ಸಮುದಾಯವೂ ವಿಶಿಷ್ಟವಾದ ಅರಿವಿನ ನೆಲೆಯನ್ನು ಪಡೆದುಕೊಂಡು, ಇದರ ಪ್ರಭಾವವನ್ನು ವ್ಯಕ್ತಿಯ ಮೇಲೆ ಸಂಕೇತಗಳ ಮೂಲಕ, ಪ್ರತಿಮೆಗಳ ಮೂಲಕ ಒದಗಿಸುತ್ತದೆ ಎಂಬ ತತ್ತ್ವವು ಸರ್ವಸಮ್ಮತವಾಗಿದೆ. ಇತಿಹಾಸದ ಓರೆಕೋರೆಗಳನ್ನು ಅರ್ಥಮಾಡಿಕೊಳ್ಳಲು ಸಂಕೇತಗಳ ಸಮ್ಮತವಾಗಿದೆ. ಇತಿಹಾಸದ ಓರೆಕೋರೆಗಳನ್ನು ಅರ್ಥಮಾಡಿಕೊಳ್ಳಲು ಸಂಕೇತಗಳ ಜಾಲ ನೆರವಾಗುತ್ತದೆ. ಆಡುಮಾತಿನಲ್ಲಿ ಮೂಡಿಬರುವ ಪ್ರತಿಮೆಗಳಲ್ಲದೆ ನಮ್ಮ ಆಚಾರ ವ್ಯವಹಾರಗಳಲ್ಲಿಯೂ ವಿಧಿ-ನಿಷೇಧ ಪ್ರಕ್ರಿಯೆಗಳಲ್ಲಿಯೂ, ಆಟ-ಪಾಠಗಳ ಪದ್ಧತಿಯಲ್ಲಿಯೂ, ಧರ್ಮಕರ್ಮ ಪರಿಪಾಟಿಯಲ್ಲಿಯೂ ಹಲವಾರು ಪ್ರತಿಮೆಗಳು ಕೆಲಸ ಮಾಡುತ್ತವೆ. ಹೀಗಿಲ್ಲವಾದರೆ, ಜನರ ಸಂಸರ್ಗ-ಸಂಪರ್ಕಗಳೇ ಸಾಧ್ಯವಿಲ್ಲದೆ ಹೋಗುತ್ತವೆ. ಸಮಾಜವೆಂಬ ಸೇರ್ಪಡೆ ಅಸ್ತವ್ಯಸ್ತವಾಗುತ್ತದೆ. ಸಂಕೇತಗಳ ಜಾಲವನ್ನು ಗ್ರಹಿಸಲು ಪುರಾಣಕಥೆಗಳು, ಕಲಾಪ್ರತಿಮೆಗಳು, ಧಾರ್ಮಿಕ ಕಲ್ಪಗಳು, ಜಾನಪದ ಕಲ್ಪನೆಗಳು ಇವೆಲ್ಲವೂ ಸಾಮಗ್ರಿಗಳಾಗುತ್ತವೆ. ಶಂಬಾ ಅವರು ಈ ಅನ್ವೇಷಣೆಗೆ ಒಲಿದುಕೊಂಡವರು. ಕಣ್ಮರೆಯಾದ ಕಂನಡವೂ ಮಹಾರಾಷ್ಟ್ರದ ಮೂಲವೂ ಕರ್ಣಾಟ ಸಂಸ್ಕೃತಿಯ ಪೂರ್ವಪೀಠಿಕೆಯೂ ಈ ಅನ್ವೇಷಣಾ ಪ್ರಕಾರ ಅವರಲ್ಲಿ ಬೇರೂರಲು ನೆರವಾದುವು. ಮುಂದೆ ಋಗ್ವೇದ ಸಂಹಿತೆಯನ್ನೂ ಭಗವದ್ಗೀತೆಯನ್ನೂ ಈ ಅನ್ವೇಷಣೆಯೊಳಗೆ ಬಳಸಿಕೊಂಡರು. ಸರ್ಪ-ಸೂರ್ಯ-ಕಲ್ಪನೆಯೂ ನಾಗಾರಾಧನೆಯೂ ಅವರ ಗ್ರಹಿಕೆಯಲ್ಲಿ ಮಹತ್ತ್ವದ ಸಂಕೇತಗಳಾದವು. ನಾಗ, ನೀರು, ಬೆಂಕಿ ಇವುಗಳ ತಾತ್ತ್ವಿಕ ನೆಲೆಯೇ ನಮ್ಮ ದೇವತಾ ಮೂರ್ತಿಗಳು ಎಂಬುದನ್ನು ಇವರು ವಿವರಿಸುತ್ತಾರೆ. ವೇದದೊಳಗಿನ ಅನೇಕ ಸಂದಿಗ್ಧ ಸಮಸ್ಯೆಗಳಿಗೆ ಈ ಪ್ರತಿಮೆಗಳ ಮೂಲಕ ಉತ್ತರವನ್ನು ದೊರಕಿಸಿಕೊಡಲು ಅವರು ಯತ್ನಿಸಿದ್ದಾರೆ. ಈವರೆಗೆ ಪಂಡಿತರು ಆಯ್ದುಕೊಂಡು ಚೆಲ್ಲಾಪಿಲ್ಲಿಯಾಗಿ ಹರಡಿರುವ ವೈದಿಕ ವಿವರಗಳಲ್ಲಿ ಒಂದು ವ್ಯವಸ್ಥೆಯನ್ನು ಮೂಡಿಸಲು 'ಹೈಪಾಥಿಸಿಸ್' ಒಂದನ್ನು ಶಂಬಾ ಸೂಚಿಸಿದ್ದಾರೆ. ನೀರು, ನಾಗ ಇವೆರಡು ಪ್ರತಿಮೆಗಳ ಪ್ರಾಚೀನತೆ, 'ನಾಗ ಸಂಪ್ರದಾಯ'ವು ಋಗ್ವೇದಕ್ಕೂ ಹಿಂದಿನದು ಎಂಬ ಊಹೆಯನ್ನು ಹಿಡಿದು ಭಾರತೀಯ ಸಂಸ್ಕೃತಿಯ ಪ್ರವೃತ್ತಿಗಳ ಒಗಟ್ಟನ್ನು ಬಿಡಿಸಲು

ತೊಡಗುತ್ತಾರೆ. ನೀರನ್ನು ನೀರೆ (ನಾರಿ) ಎಂದು ಬಗೆದು, ನಾಗವೂ ನಾರಿಯೂ ನೀರವೇ ಎಂದು ಪುರಾತನರ ಕಲ್ಪನೆಯಿಂದ ಪ್ರತಿಪಾದಿಸುತ್ತಾರೆ.

ಶಂಬಾ ಅವರ ಬರೆಹದಲ್ಲಿ ಊಹೆಗೂ ಸಿದ್ಧಾಂತಕ್ಕೂ ಅಂತರ ಅಷ್ಟಾಗಿ ಇರದು. ಅವರು ಉಲ್ಲೇಖಿಸುವ ವಿವರಗಳನ್ನೆಲ್ಲ ಐತಿಹಾಸಿಕ ಸತ್ಯಗಳೆಂದು ಬಗೆಯುವುದು ಈ ಹೊತ್ತಿನ ಅಧ್ಯಯನಗಳ ನೆಲೆಗಳಿಂದ ಸಾಧ್ಯವಿಲ್ಲ. "ನೇತಿನೇತಿ ವಾದದ ತಳಹದಿಯಲ್ಲಿ ನೀರೇ ಉಂಟು" (ಪು. ೧೦೯) ಎಂದು ಮುಂತಾಗಿ ಅವರು ಬರೆಯುವುದುಂಟು. "ನೀರು; ಕಾಮನೆ; ಮನಸ್ಸು; ಚಂಚಲ; ಸರ್ಪ ಆದಕಾರಣ ಈ ಕಾಮನಾದೇವಿ; ಸರ್ಪದೇವಿ!" ಇಂಥ ಅಸಮರ್ಪಕ ವಾದಗಳೂ ಅಲ್ಲಲ್ಲಿ ಇವೆ. ಅಲ್ಲದೆ, ಅವರು ಋಗ್ವೇದದಲ್ಲಿ ಸಂದಿಗ್ಧ ಸಮಸ್ಯೆಗಳೆಂದು ಕೆಲವನ್ನು ತೋರಿಸಿದ್ದಾರೆ. ಅವು ಸಮಸ್ಯೆಗಳೇ ಹೌದೆ? ಅಲ್ಲವೆ? ಎಂಬ ಚರ್ಚೆಗೆ ಇನ್ನೂ ಅವಕಾಶವಿದೆ. ಬರಿದೆ ಭೂತವನ್ನೆಬ್ಬಿಸಿ ಬಡಿದಾಡುವ ಆಸೆ ಕೆಲವರಿಗಿರುತ್ತದೆ. ಸ್ಪಷ್ಟವಾಗಿರುವುದರಲ್ಲೂ ಯಾವುದೋ ರಹಸ್ಯವನ್ನರಸುವ ಪ್ರವೃತ್ತಿ ಕೆಲವರಿಗುಂಟು. ಎಲ್ಲಕ್ಕೂ ಹುದುಗಿದ ತಾತ್ಪರ್ಯವನ್ನು ಹವಣಿಸುವ ಬಯಕೆ, ನೇರವಾದ ಮಾತಿನಲ್ಲೂ ಮೋಸವನ್ನು ಕಾಣುವ ಕಾತರ ಈ ಬಗೆಯ ಸಂಗತಿಗಳನ್ನು ಇವರ ಬರೆಹಗಳಲ್ಲಿ ಕಾಣುವುದು ಕಷ್ಟ. ಸಂಶೋಧನೆ ವೃತ್ತಿಯಾಗಿರದೆ ಪ್ರವೃತ್ತಿಯಾಗಿಬಿಟ್ಟರೆ ಅದರಿಂದ ತೊಂದರೆಯಿದೆ; ನಿಯಮಿತವಾದ ಚೌಕಟ್ಟಿರದಿದ್ದರೆ ಅದರ ಚೆಲ್ಲಾಟ ಹಿಡಿಯತೀರದು. ಈ ವಿಚಾರವನ್ನು ನಾವು ಇಂದಿಗೇ ಇತ್ಯರ್ಥ ಮಾಡುವುದು ಸಾಧ್ಯವಿಲ್ಲ. ಅವರು ಕೊಟ್ಟಿರುವ ಎಲ್ಲ ವಿಮರ್ಶೆಗಳನ್ನು ಒಪ್ಪಿಕೊಳ್ಳಬೇಕಾದ ಅಗತ್ಯವಿಲ್ಲ. ಅವುಗಳಲ್ಲಿ ಕಾಳೆಷ್ಟೋ ಜೊಳ್ಳೆಷ್ಟೋ! ವಿಮರ್ಶೆಯ ಗಾಳಿಯಲ್ಲಿ ತೂರಿಹೋಗುವುವೆಷ್ಟೋ! ಸಮಯವೇ ಈ ಸಮಸ್ಯೆಯನ್ನು ಬಿಡಿಸುತ್ತದೆ. ಆದರೆ, ಅವರು ಅಳವಡಿಸಿಕೊಂಡಿರುವ ಮನೋವೈಜ್ಞಾನಿಕ ದೃಷ್ಟಿಕೋಣ ಮಾತ್ರ ಬೆಲೆಯುಳ್ಳದ್ದು. ಕನ್ನಡದಲ್ಲಿ ಈವರೆಗೆ ಈ ಪದ್ಧತಿಯನ್ನು ಅನುಸರಿಸಿದವರು ಬೇರೆ ಯಾರಿದ್ದಾರೆ? ಇಷ್ಟು ವಿಪುಲವಾಗಿ ವ್ಯಾಸಂಗ ಮಾಡಿ ವಿಭಿನ್ನ ವಿವರಗಳನ್ನು ಒಟ್ಟಿಗೆ ಕಲೆಹಾಕಿರುವುದೇ ಒಂದು ದೊಡ್ಡ ಕೊಡುಗೆ. ಋಗ್ವೇದಸಾರವು ನಾಗಪ್ರತಿಮೆಯೇ ಹೌದೆಂಬ ಅವರ ಹಟ ಹೇಗಾದರೂ ಇರಲಿ; ಇದನ್ನು ಸಾಧಿಸಲು ಅವರು ಬಳಸಿರುವ ಬಗೆ ಎಂತಾದರೂ ಇರಲಿ, ಜನಜೀವನದಲ್ಲಿ ಬಯಲಾಗದ ಬಯಕೆಗಳ ಬಲದಿಂದ ನಮ್ಮ ಆಚಾರ-ವ್ಯವಹಾರಗಳ ಓರೆ-ಕೋರೆಗಳು ಕಾಣಿಸಿಕೊಳ್ಳುವುವು ಎಂಬ ತತ್ತ್ವವನ್ನು ಅವರು ಹಿಡಿದಿರುವುದು ಮನೋವೈಜ್ಞಾನಿಕ ನೆಲೆಯಲ್ಲಿ ಸಾಧುವಾದುದೇ ಸರಿ.

ಅವರ ಒಳನೋಟದ ಆಳವನ್ನು ಗಮನಿಸಬೇಕೆಂದರೆ, "ಮನು-ಜನೊಳಗಿನ ವೈಶ್ವಾನರ ಪುರುಷರ (Universal man) ಪ್ರಜ್ಞೆ ಜಾಗ್ರತವಾಗುತ್ತದೆ" (ಪು. ೫೫೦) ಎಂಬ ಮಾತಿನ ತಾತ್ಪರ್ಯವನ್ನು ಅರಿತುಕೊಳ್ಳಬೇಕು. ಮೊದಲ ಪದದ ನಡುವಣ ವಿರಾಮರೇಖೆ ಇಲ್ಲಿ ಅರ್ಥಗರ್ಭಿತವಾಗಿದೆ. ಮನುಷ್ಯ ಮೂಲದಿಂದ ಹೊರಹೊಮ್ಮಿದ ಪ್ರತಿವ್ಯಕ್ತಿಯಲ್ಲಿಯೂ ಇಡೀ ವರ್ಗದ ಅರಿವು ಅಡಗಿರುತ್ತದೆ ಎಂಬುದನ್ನು ಕಾರ್ಲ್‌ಯೂಂಗ್ ಸ್ಪಷ್ಟಪಡಿಸಿ ಹಲವು ವರ್ಷಗಳೇ ಕಳೆದುವು. ಅದು ಹೊರಗೆ ಹರಿಯುತ್ತಲೂ ಇರುತ್ತದೆ, ಅರಿವಿಗೆ ಮಾತ್ರ ಬರುವುದಿಲ್ಲ ಎಂಬುದು ಮನೋವೈಜ್ಞಾನಿಕ ಕ್ಷೇತ್ರದಲ್ಲಿ ಈಗ ಸಿದ್ಧವಾಗಿದೆ. ಅರಿವಿಗೆ ತಂದುಕೊಂಡಾಗ ಬಾಳನೋಟ ಬದಲಾಗುತ್ತದೆ. ಹಳೆಯ ಸಮಸ್ಯೆಗಳು ಹರಿಯಬಹುದಾಗಿದೆ. ಆದರೆ, ವ್ಯಕ್ತಿ-ವರ್ಗಗಳ ನಡುವಣ ನಂಟು ಮೊದಲಿನಂತೆ ಇರಲಾರದು; ವರ್ಗದ ಒತ್ತಾಯ ವ್ಯಕ್ತಿಯಲ್ಲಿ ವಿರೋಧವನ್ನು ಒದಗಿಸುತ್ತದೆ. ವ್ಯಕ್ತಿಯಲ್ಲಿಯ ಅರಿವು ಎಚ್ಚರಗೊಳ್ಳಬೇಕೆನ್ನುವ ತವಕವಿದ್ದಂತೆಯೇ ವರ್ಗವು ಅರಿವನ್ನು ಅದುಮಿಡಬೇಕೆಂದು ಬಯಸುತ್ತದೆ. ಇದು ಘರ್ಷಣೆಗೆ ನಾಂದಿಯೇ ಸರಿ. ಮನೋವಿಶ್ಲೇಷಣದ ಈ ನಿಯಮದ ಮುಖ್ಯ ಪ್ರಕಾರಗಳನ್ನು ಶಂಬಾ ಮೆಚ್ಚಿಕೊಂಡಂತೆ ಕಾಣುತ್ತದೆ. ಇದು ಅವರ ಒಳನೋಟದ ಇಂಗಿತವಿರುವಂತೆ ತೋರುತ್ತದೆ. ನಾಗಪ್ರತಿಮೆಯಂಥ ವಿಶ್ವವ್ಯಾಪಕ ಸಂಕೇತವು ಎಷ್ಟು ಪ್ರಭಾವಶಾಲಿ ಎನ್ನುವುದು ಅವರ ಉತ್ಸಾಹವನ್ನು ಮಿಡಿದಿದೆ. ಅನುಭವದ ಆಳದಲ್ಲೇ ಅಡಗಿರುವ ಈ ಸಂಕೇತದ ಸ್ವಾರಸ್ಯವನ್ನು ವಿವರಿಸಲೆಂದೇ ಅವರ ಬರೆಹ ರೂಪುಗೊಂಡಿದೆ.

ಋಗ್ವೇದ ಸಂಹಿತೆ ಮತ್ತು ಮಾನವಶಾಸ್ತ್ರ

ಮಾನವಶಾಸ್ತ್ರಕ್ಕೆ ಶಂಬಾ ಅವರ ಕೊಡುಗೆಯನ್ನು ಸ್ವಲ್ಪ ವಿವರಿಸಬೇಕು. ಈ ಸಂಗತಿಯನ್ನು ಋಗ್ವೇದಸಾರದಲ್ಲಿ ಅವರು ವ್ಯಾಪಕವಾಗಿ ವಿವರಿಸುತ್ತಾರೆ. ಸಂಸ್ಕೃತಿಯನ್ನು ಅದರಲ್ಲಿಯ ಭಾಷೆ ಮತ್ತು ಸಂಕೇತಗಳ ಸಹಾಯದಿಂದ ಅರ್ಥ ಮಾಡಿಕೊಳ್ಳುವ ಒಂದು ಅರ್ಥಗ್ರಹಣ ಪದ್ಧತಿಯನ್ನು (Methodology) ಅವರು ಕಂಡುಕೊಂಡದ್ದು ಒಂದು ವಿಶೇಷ. ಭಾಷೆಯು ಅದನ್ನಾಡುವ ಜನಾಂಗದ ಉಸಿರು, ಪ್ರಾಣ. ಈ ಕಾರಣದಿಂದ ಭಾಷೆ ಮತ್ತು ಸಂಸ್ಕೃತಿ ಇವೆರಡರಲ್ಲಿ ಅನ್ಯೋನ್ಯತ್ವ ಇರಬಲ್ಲದು ಇದ್ದೇ ಇರುತ್ತದೆ. ಈ ಆಧಾರದ ಮೇಲೆ ಅಥವಾ ನಂಬಿಕೆಯಲ್ಲಿ ಅರ್ನೆಸ್ಟ್ ಕ್ಯಾಸಿರರ್ ಮುಂತಾದವರು ಭಾಷೆ ಮತ್ತು ಸಂಕೇತ ಶಾಸ್ತ್ರದ ಸಂಶೋಧನೆಯ ಬೆಳಕಿನಲ್ಲಿ ಹೊರಟರು. ಶಂಬಾ ಜೋಶಿಯವರು ತಮ್ಮ 'ಋಗ್ವೇದ ಸಾರ ನಾಗಪ್ರತಿಮಾ ವಿಚಾರ' ಗ್ರಂಥವನ್ನು ಬರೆಯಲು ಈ ಹಿನ್ನೆಲೆಯಲ್ಲಿ ಶಕ್ತರಾದರು. ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಜೋಶಿಯವರು ಉಪಯೋಗಿಸಿಕೊಂಡ ಅರ್ಥಗ್ರಹಣ ತಂತ್ರಪದ್ಧತಿ ಹೀಗಿದೆ: ಮೊದಲನೆಯದು ನೇತಾರ, ಆತನ ಸಹಕಾರಿಗಳು, ಎರಡನೆಯದು ಇವರಿಂದ ನಿರ್ಮಾಣವಾಗುವ ಸಮಯ ಮತ್ತು ಮೂರನೆಯದು ಈ ಸಮಯಾಚಾರಕ್ಕೆ ಸುಸಂಗತವಾಗಿ ಮೈದಾಳುವ ಸಂಕೇತ, ಪ್ರತಿಮೆಗಳು. ಈ ಮೂರರಲ್ಲಿ ಜೀವಂತವಾದ ಸಂಬಂಧಗಳೂ ಅನ್ಯೋನ್ಯತೆಯೂ ಉಂಟು. ಶಬ್ದದ ಸಂಕೇತ, ಪ್ರತಿಮೆಗಳು, ತಿಳಿದರೆ ಸಾಕು. ಅದರ ಬಲದಿಂದ ಆ ಸಂಕೇತಗಳ ತುಲನೆಯಲ್ಲಿ ಅವುಗಳಿಗೆ ಆಧಾರಭೂತವಾದ ಸಮಯ-ಪರಿಸರ ಗೊತ್ತಾಗಬಲ್ಲುದು. ಸಮಯ, ಸಂಕೇತ ಇವೆರಡರೊಳಗಿನ ಅಂತಃಸಂಗತಿಯಿಂದಾಗಿ ಈ ಸಂಸ್ಕೃತಿಯ ನೇತಾರರು ಎಂತಹ ಜೀವನ ದೃಷ್ಟಿಯವರು ಇರಬಹುದು ಎಂಬುದನ್ನು ಗ್ರಹಿಸಿಕೊಳ್ಳಲು ಶಕ್ಯವಿದೆ. ಉದಾಹರಣೆಗೆ ಸೈಂಧವ ಸಂಸ್ಕೃತಿಯಲ್ಲಿ ಧ್ಯಾನಮಗ್ನ ನಾಸಿಕಾಗ್ರ ದೃಷ್ಟಿಯ ಒಬ್ಬ ವ್ಯಕ್ತಿಯ ಮೂರ್ತಿ ದೊರೆತಿದೆ. ಪಶುಪತಿಯು, ಯೋಗಾಸನದಲ್ಲಿ ಇರುವ ಚಿತ್ರ ಅದು. ಇವೆರಡನ್ನೇ ಲೆಕ್ಕಿಸಿದರೂ, ಆ ಸಂಸ್ಕೃತಿಯಲ್ಲಿ ಐಹಿಕ ಜೀವನದ ಬಗೆಗಿನ ಆಸಕ್ತಿಯು ನಷ್ಟವಾಗತೊಡಗಿರಬೇಕು ಎಂದು ಬಗೆಯಬೇಕಾಗುತ್ತದೆ. ಈ ಸಂಸ್ಕೃತಿಯು ಭೌತ- ಐಹಿಕ ದೃಷ್ಟಿಯಿಂದ ಉನ್ನತ ಸ್ಥಿತಿಯಲ್ಲಿದ್ದರೂ ನೇತಾರರಿಗೆ ಪಾರಲೌಕಿಕದ ಕಡೆ ಆಸಕ್ತಿ ಹೆಚ್ಚಿದುದು ಕಾಣುತ್ತದೆ. ಸೈಂಧವ ಸಂಸ್ಕೃತಿಯಲ್ಲಿ ಐಹಿಕ ಜೀವನ ಸೌಕರ್ಯಗಳ ಕಡೆಗಿನ ಆಸಕ್ತಿ ಸೂಚಕ ಅವಶೇಷಗಳೂ ಇವೆ. ನೃತ್ಯಾಂಗನೆಯ ಸೊಗಸಾದ ಮಣಿಬಳೆ ಅಲಂಕಾರಗಳು ಇತ್ಯಾದಿ. ಆದರೆ, ಆದಿಮಾತೆಯ ಉಪಾಸನೆ, ಜನನದೇವತೆಯ ಸಂಪ್ರದಾಯವು ಪ್ರಬಲವಿದ್ದುದನ್ನು ಸರ್ ಜಾನ್ ಮಾರ್ಷಲ್ ತಮ್ಮ ಗ್ರಂಥದಲ್ಲಿ ಹೇಳುತ್ತಾರೆ.

ಸೈಂಧವ ಸಂಸ್ಕೃತಿಯಲ್ಲಿ ಮುನಿ ಸಂಪ್ರದಾಯವು ಪ್ರಬಲವಾಗಿತ್ತೆಂದು ಪ್ರಾಚ್ಯವಸ್ತುಶಾಸ್ತ್ರಜ್ಞರು ಬಹು ಹಿಂದೆಯೇ ನಿರ್ಣಯಿಸಿದ್ದಾರೆ. ಸಂಕೇತ-ಪ್ರತೀಕದಿಂದ, ಮುನಿಯ ಮೂಲಕ ಆ ಸಮಯ ಗೊತ್ತಾಗುತ್ತದೆ. ಈ ಸಮಯ (Cultural duration of time) ನಿರ್ಮಾಣದ ನೇತಾರರು ನಿವೃತ್ತಿಯ ದೃಷ್ಟಿಯವರೇ ಇರಲಿಕ್ಕೆ ಬೇಕಾಗುತ್ತದೆ. ಇಂದಿನ ವೇದದಲ್ಲಿ ಸೈಂಧವ ಸಂಸ್ಕೃತಿಯ ಪೂಜ್ಯಸೂಚಕ ಮುನಿಮೂರ್ತಿಗಳಿದ್ದಾರೆ. ಅಶ್ವತ್ಥ ವೃಕ್ಷವು ವೇದದಲ್ಲಿಯೂ ಇದೆ, ಸೈಂಧವ ಸಂಸ್ಕೃತಿಯಲ್ಲಿಯೂ ಇದೆ. ಅಲ್ಲಿ ನಾಗಪೂಜೆ ಇತ್ತು. ವೇದದಲ್ಲಿಯೂ ಇದರ ಪೂಜೆಯನ್ನು ಕಾಣುತ್ತೇವೆ. ವೇದದಲ್ಲಿಯ ವಸಿಷ್ಠ, ಮಹಾಭಾರತದ ವ್ಯಾಸ ಇವರು ಸೈಂಧವ ಸಂಸ್ಕೃತಿಯ ಉತ್ತರಾಧಿಕಾರಿಗಳೇ ಸರಿ. ವೇದದಲ್ಲಿ ವಿಶ್ವಾಮಿತ್ರರ ಹೆಸರು ಬರುತ್ತದೆ. ಆದರೆ, ವಿಶ್ವಾಮಿತ್ರರು ಸೋತು ವಸಿಷ್ಠರೇ ಶ್ರೇಷ್ಠರೆಂದು ಗೊತ್ತಾದುದು ಪುರಾಣಾದಿಗಳ ಕತೆಗಳಿಂದ ದೃಢವಾಗುತ್ತದೆ. ವಿಶ್ವಕ್ಕೇ ಮಿತ್ರನಾದವನು ವಿಶ್ವಾಮಿತ್ರ. 'ವಸು'ವಿಗೆ (=ಐಶ್ವರ್ಯ) ಪ್ರಾಧಾನ್ಯವಿದ್ದ ವಸಿಷ್ಠರಿಗೆ ಸೋತದ್ದು ಮಾನವೀಯತೆ. ಮಾನವ ಕಲ್ಯಾಣದ ಸೋಲು ಎನ್ನುತ್ತಾರೆ. ಆದರೆ, ಪ್ರಕಾಶಪೂಜಕನು ವಿಶ್ವಾಮಿತ್ರ. ಇವನು ವಿಶ್ವಾಮಿತ್ರನೇ ಆಗಬೇಕು. ವಸಿಷ್ಠನು ದಕ್ಷಿಣಕಪರ್ದನೇ ಆಗಬೇಕೆಂಬ ಸಂಕೇತದಲ್ಲಿ ಅರ್ಥದ ಅಂತಃಶಕ್ತಿ ಇದೆ. ಈ ವಾದವನ್ನು ಮುಂದಿಡುವಲ್ಲಿ ಶಂಬಾ, ಭಾಷಾಶಾಸ್ತ್ರಜ್ಞ ಕ್ಯಾಸಿರರ್‌ರಿಂದ ಪಡೆದ ಬೆಂಬಲ ಹೀಗಿದೆ. ಯಾವುದೇ ಭಾಷೆಯಲ್ಲಿಯ ಶಬ್ದಗಳ

ಮೂಲ ಅರ್ಥ (Primary meaning) ಆ ಶಬ್ದದ ಮೂಲದಲ್ಲಿಯೇ ಇರುತ್ತದೆ. ಆದ್ದರಿಂದ, ನಾವು ಯಾವುದೇ ಶಬ್ದದ ಚಾರಿತ್ರಿಕ ಕಾಲವನ್ನಲ್ಲ (historical time) ಅದರ ಸಾಂಸ್ಕೃತಿಕ ಕಾಲವನ್ನು (Cultural time) ತೆಗೆದುಕೊಳ್ಳಬೇಕಾಗುತ್ತದೆ. ಇದು ಭಾರತೀಯ ಸಂಸ್ಕೃತಿಯಲ್ಲಾಗಿರುವ ತಿರುವುಮುರುವು, ಅರ್ಥಹೀನತೆ ಮುಂತಾದ ಅನೇಕ ಅಸಂಬದ್ಧಗಳಿಗೆ ಉತ್ತರವನ್ನು ಜೋಶಿಯವರು ಇಲ್ಲಿ ಕಂಡುಕೊಂಡರು. ಮೊದಲಿನಿಂದಲೂ ಜೋಶಿಯವರಿಗಿದ್ದ ಅನುಮಾನವೆಂದರೆ, ಅನೇಕ ಸಂಸ್ಕೃತಶಬ್ದಗಳ ಇಂದಿನ ಅರ್ಥ ಸರಿಯಾಗಿಲ್ಲದ್ದು. ಅರ್ನೆಸ್ಟ್ ಕಾಸಿರರ್ ವಾದದಂತೆ, ಇದು ಚಾರಿತ್ರಿಕ ಕಾಲಕ್ಕೆ ಕೊಟ್ಟ ಪ್ರಾಧಾನ್ಯವಲ್ಲ. ಇಂತಹ ಅನೇಕ ಶಬ್ದಗಳನ್ನು ತೆಗೆಮುಕೊಂಡು ಜೋಶಿಯವರು ಅವುಗಳ ಸಮಯ (Cultural duration ot rime) ಗ್ರಹಿಸಿಕೊಂಡು ಅವುಗಳ ನಿಜವಾದ ಅರ್ಥ ತಿಳಿಯಲು ಯತ್ನಿಸುತ್ತಾರೆ. ನರ-ನಾರಾಯಣ ಸಂಪ್ರದಾಯ, ಅಶ್ವತ್ಥದ ಕಲ್ಪನೆ, ಗರ್ಭಗುಡಿಯಲ್ಲಿ ದೇವರು, ಭಗವದ್ಗೀತೆ ಮುಂತಾದುವುಗಳ ಬಗ್ಗೆ ಜೋಶಿಯವರು ತಮ್ಮ ಅನೇಕ ಪುಸ್ತಕಗಳಲ್ಲಿ, ಲೇಖನಗಳಲ್ಲಿ ಬಹು ಹಿಂದಿನಿಂದಲೂ ಬರೆಯುತ್ತಾ ಬಂದಿದ್ದಾರೆ. ಇವು ಮಾನವಶಾಸ್ತ್ರದ ವಿಚಾರಕ್ಕೆ ಹತ್ತಿರವಾಗಿವೆ. ಅವರ ವಿಚಾರಗಳನ್ನು ಹೀಗೆ ಸಂಗ್ರಹಿಸಬಹುದು: ನರ-ನಾರಾಯಣ ಸಂಪ್ರದಾಯದ ಪ್ರಮುಖ ಆರಾಧಕ ದೇವರು ಕೃಷ್ಣ. ಕೃಷ್ಣನೆಂದರೆ ಕತ್ತಲು, ಸಾವು, ಕೆಟ್ಟದ್ದು. ಈ ಕತ್ತಲೆ ಅಥವಾ ಸಾವೇ ನಮ್ಮ ಆರಾಧಕ ದೇವರೇ? ಈ ದೇವರು ಉಪದೇಶ ಮಾಡಿದ್ದು ಧರ್ಮವೇ? ಅರ್ಜುನ (ಬೆಳಕು, ಪ್ರಕಾಶ, ಸತ್ಯ) ಈ ಕತ್ತಲ ಹಿಂದೆ ಅದರ ಆಶ್ರಯಕ್ಕೆ ಹೋಗಿದ್ದರ ಅರ್ಥವೇನು? ಮಹಾಭಾರತದ ಉದ್ದಕ್ಕೂ, ದಶಾವತಾರ ಪುರಾಣಗಳಲ್ಲಿಯೂ ಕೃಷ್ಣನ ಪೂಜೆ ನಡೆಯುತ್ತದೆ. ಈ ಕತ್ತಲ, ಕಪ್ಪಿನ, ಅಸತ್ಯದ, ಸಾವಿನ ಪೂಜೆ ಏಕೆ? ನಾವೆಲ್ಲಾ ಕತ್ತಲ ಬೆನ್ನು ಹತ್ತಿದ್ದೇಕೆ, ಕತ್ತಲನ್ನೇ ಪ್ರಧಾನ ಮಾಡಿದ್ದೇಕೆ? ಎಂದು ಶಂಬಾ ಕೇಳುತ್ತಾರೆ.

ಇದೇ ರೀತಿ ಅನೇಕ ಸಂಸ್ಕೃತ ಶಬ್ದಗಳು ನಕಾರಾತ್ಮಕದಿಂದ ಸಕಾರಾತ್ಮಕ್ಕೆ ಬರುತ್ತವೆ ಅಥವಾ ನಿಜವಾದ ಅರ್ಥ (primary meaning) ಹೇಳಲು ಇಲ್ಲದುದರ ಅರ್ಥ (negative meaning) ಮೊದಲು ಹೇಳುತ್ತೇವೆ. ಇಲ್ಲಿ ಉದಾಹರಣೆಗೆ ಅಮೃತ, ಕುಮಾರ-ಕುಮಾರಿ ಮುಂತಾದುವನ್ನೇ ತೆಗೆದುಕೊಳ್ಳಬಹುದು. ಸಾವನ್ನು ತಪ್ಪಿಸುವುದು ಅಮೃತ, ಅ-ಮೃತ. ಕು-ಎಂದರೆ ಕುಮಾರತ್ವ: ಇದಕ್ಕೆ ಮಾರಕವಾದದ್ದು ಕು-ಮಾ, ಕುಮಾರ-ಕುಮಾರಿ. ಕುಮಾರಿಗೆ ಕುಮಾರ. ಕುಮಾರನಿಗೆ ಕುಮಾರಿ ಮಾರಕ. ಈ ವಿಶೇಷಣವೇಕೆ? ಈ ಇಮ್ಮುಖವಾದ ಅರ್ಥದ ಶಬ್ದಗಳ ಬಳಕೆಯ ಉದ್ದೇಶವೇನು? ಇದಕ್ಕೆ ಸಂಕೇತ ಪ್ರತಿಮೆಗಳು ಇತಿಹಾಸದ ಕಕ್ಷೆಗೆ ಒಳಗಾದುದೇ ಕಾರಣ ಎನ್ನುತ್ತಾರೆ ಶಂಬಾ. ಹೀಗಿರುವಾಗ ಗೀತೆ, ವೇದ ಮುಂತಾದ ತೊಡಕಿನ ಶೈಲಿಯ ಗ್ರಂಥಗಳ ಅರ್ಥಗ್ರಹಣವು ತೊಡಕಿನದಾಗುತ್ತದೆ. ಆದರೆ, ಭಾಷೆಯು ಮೂಲತಃ ಸಾಂಕೇತಿಕ ಅರ್ಥವನ್ನು ಹುಡುಕಿದರೆ ಮಾತ್ರ ಈ ಶಬ್ದಗಳ ನಿಜಾರ್ಥ ತಿಳಿಯುತ್ತದೆ. ಉದಾಹರಣೆಗೆ ವೇದಕಾಲದ 'ಮಾರುತ' ಮತ್ತು ಭಗವದ್ಗೀತೆಯ 'ಕುರುಕ್ಷೇತ್ರ ಯುದ್ಧ' ಇವನ್ನು ತೆಗೆದುಕೊಳ್ಳಬಹುದು. 'ಮಾರುತ'ರಿಗೆ ವೇದದಲ್ಲಿ ಬಾಲವಿಲ್ಲ. ಆದರೆ, ಅವರನ್ನು ಕಬಂಧ (ಕೊಳವಿ, ನಳ) ರೂಪದಲ್ಲಿ ಕಂಡಿದ್ದಾಗಿದೆ. ಇಂದು ನಾವು ಕಾಣುವ ಮಾರುತನಿಗೆ ಬಾಲವಿದೆ. ಇದರ ಅರ್ಥವೇನು? ಹೇಗೆ ಯಾರು ಮಾಡಿದರು? ಎಂದು ಶಂಬಾ ಕೇಳುತ್ತಾರೆ. ಕುರುಕ್ಷೇತ್ರ ಯುದ್ಧ ಭೂದೇವಿಗಾಗಿ ಭೂಪತಿಗಳಲ್ಲಿ ಕಾದಾಟ: 'ವಿಶ್ವರೂಪ' ದರ್ಶನವು ಸ್ಮಶಾನದ ಭೂಮಿಯ ಪ್ರತೀಕ; ಭಗವಂತನು ತಾನು ರಥದ ಅವಿಭಾಜ್ಯ ಅಂಗವೆಂದು ಹೇಳಿಕೊಂಡಿದ್ದಾನೆ. ಈ ಸಾರಥಿ 'ಕುರುಕ್ಷೇತ್ರ'ದ ಕಾಳಗದಲ್ಲಿ ಪ್ರಮುಖ ಸೂತ್ರಧಾರಿ. ಭಗವದ್ಗೀತೆಯಲ್ಲಿ ನರ-ನಾರಾಯಣರು ಬೇರೆಯಲ್ಲ. ಮೂಲಾರ್ಥದಲ್ಲಿ 'ನಾರಾಯಣ' ಶಬ್ದದ ಅರ್ಥವನ್ನು ನಾವಾಗಲೇ ತಿಳಿದಿದ್ದೇವೆ. ಬಣ್ಣದಿಂದಲೂ ಇದು ಕಪ್ಪು, ಕೃಷ್ಣ. ಈ ಎಲ್ಲಾ ಸಾಂಕೇತಿಕ ಅರ್ಥ ಬಿಡಿಸಿ ನೋಡಿದಾಗ ಕುರುಕ್ಷೇತ್ರವು ಲೈಂಗಿಕಕ್ರೀಡೆಯಾಗುತ್ತದೆ. ನಾರಾಯಣನು ಪುರುಷ ಲಿಂಗವಾಗುತ್ತಾನೆ. ಇದು ಸಾಧ್ಯವೇ? ಎಂದು ನೋಡಿದರೆ ಇಂದಿನ ಅರ್ಥದಲ್ಲಿಯಂತೂ ಸಾಧ್ಯವಿಲ್ಲ. ಈ ತಿರುವು ಮುರುವಿಗೆ ನಮ್ಮ ಧರ್ಮ ಮತ್ತು ಅದರ ಪಾಲಕರು, ಪ್ರಚಾರಕರು ಮಾಡಿದ ಕಣ್ಣುಕಟ್ಟೇ ಕಾರಣವೆನ್ನುತ್ತಾರೆ ಶಂಬಾ.

ವಿವಸ್ವನ್ ಮನುಪ್ರೇರಿತ ಮಾನವ ಧರ್ಮವನ್ನು ವಿರೋಧಿಸಿ ತಲೆ ಎತ್ತಿರುವ ಸ್ವಯಂಭೂ ಮನುಪ್ರೇರಿತ ಮಾನವ ಧರ್ಮ; ಅಂದರೆ ನರಧರ್ಮವೇ ಇದಕ್ಕೆ ಕಾರಣ. ಇಂದು ನರಧರ್ಮವೇ ಪ್ರಧಾನವಾಗಿರುವುದರಿಂದ ಉಳಿದ ಧರ್ಮಗಳು ತಮಗೆ ತಾವೇ ಮರೆಯಾಗಿವೆ. ಕತ್ತಲೆ ಬೆಳಕನ್ನು ಮುಚ್ಚಿದೆ. ಇಂದು ಸಮಾಜದಲ್ಲಿನ ಅನೇಕ ಅನಾಚಾರಗಳಿಗೆ, ಅಪಚಾರಗಳಿಗೆ ಈ ನರಧರ್ಮ ಪ್ರತಿಪಾಲನೆಯೇ ಕಾರಣ. ಎಲ್ಲರೂ ಅಸತ್ಯ, ಅವ್ಯವಹಾರ, ಅನಾಚಾರದ ಕಡೆ ನಡೆದಿರುವುದಕ್ಕೂ ಇದೇ ಕಾರಣ. ಆದ್ದರಿಂದ, ಜೋಶಿಯವರು ಹೇಳುವ ವಿಚಾರಗಳು ಹಳೆಯ ವೇದ-ಪುರಾಣ ಕಾಲಕ್ಕೆ ಸೇರಿದವು. ಅವು ಹಳೆಯವಾದರೂ ಇಂದಿನ ಎಲ್ಲಾ ಸಾಮಾಜಿಕ ತೊಡಕುಗಳನ್ನು, ನಷ್ಟಗಳನ್ನು ಅರ್ಥಮಾಡಿಕೊಳ್ಳಲೂ, ನಿವಾರಿಸಿಕೊಳ್ಳಲೂ ಉಪಯೋಗವಾಗಬಹುದು. ಸಮಸ್ಯೆಯ ಪರಿಹಾರಕ್ಕೆ ಜೋಶಿಯವರು ಹೇಳುವ ಅಥವಾ ನೀಡುವ ಪರಿಹಾರವೆಂದರೆ ಈ ನರ ಸಂಪ್ರದಾಯವನ್ನು ಬಿಟ್ಟುಬಿಡುವುದು. ಇದನ್ನು ಮಾಡದೆ ಮನುಕುಲದ ಉದ್ಧಾರವಿಲ್ಲ. ನಾವಿಂದು ಮಾನವ ವೇಷಧಾರಿಯಾದ ನರರಿದ್ದೇವೆ, ನರಗಳ ಸುಖದ ಸೆಳೆತಕ್ಕೆ ಸಿಕ್ಕಿ ನರಳುತ್ತಿದ್ದೇವೆ ಎಂಬುದು ಅವರಿಗೆ ತಿಳಿಯಬೇಕು. ಮನುಷ್ಯತ್ವವೆಂಬುದಿದೆ. ಅದೇ ನಿಜವಾದ ಮಾನವಧರ್ಮ ಎಂಬ ಪ್ರಜ್ಞೆ ಬಂದಾಗಲೇ ಇಂಥ ಒಂದು ಬದಲಾವಣೆ ಸಾಧ್ಯ. ಈ ಬದಲಾವಣಾ ಕಾರ್ಯವನ್ನು ಧರ್ಮಗಳು, ಧರ್ಮ ಬಂದಾಗಲೇ ನರನು ಮಾನವನಾಗುತ್ತಾನೆ. ಇದೇ ಆಧುನಿಕ ಮಾನವ ಕುಲಕ್ಕೆ ಶಂಬಾ ಅವರು ನೀಡುವ ಕೊಡುಗೆ. ಬಹು ಹಿಂದಿನಿಂದಲೂ ಮಾನವಶಾಸ್ತ್ರದ ಅನೇಕ ಪ್ರಮುಖ ಹಾಗೂ ಕ್ಲಿಷ್ಟ ವಿಚಾರಗಳ ಬಗೆಗೆ ಹೇಳುತ್ತಾ ಮಾನವಶಾಸ್ತ್ರದಲ್ಲಿ ಜೋಶಿಯವರು ಹೇಳಿರುವ ಕೆಲವು ವಿಚಾರಗಳು, ವಾದಗಳು ಈಗಲೂ ಹೊಸವು ಮತ್ತು ವಿಚಾರಪೂರ್ಣವಾದವು.

ಸಂಕೇತಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ

ಭಾರತೀಯ ಸಂಸ್ಕೃತಿಯಲ್ಲಾದ ಸ್ಥಿತ್ಯಂತರವನ್ನು ಅರ್ಥೈಸಿಕೊಳ್ಳುವಲ್ಲಿ ಶಂಬಾ ಅವರು ಮುಖ್ಯವಾಗಿ ಭಾಷಾ ನೆಲೆಯನ್ನುಳ್ಳದ್ದೇ ಆದರೂ-ಅನುಸರಿಸಿದ ಮಾರ್ಗ ತುಸು ಭಿನ್ನವಾದದ್ದು ಹಾಗೂ ಶಬ್ದಾರ್ಥಗಳ ನಡುವಿನ ಬೇರೊಂದು ನೆಲೆಯ ಸಂಬಂಧವನ್ನು ಗಮನಿಸುವಂತಹದು. ಇದನ್ನು ಸ್ಥೂಲವಾಗಿ ಸಾಂಕೇತಿಕ ಸಂಬಂಧವೆಂದು ನಿರ್ದೇಶಿಸಬಹುದು. ಈ ಅಂಶದ ಬಗೆಗೆ ಮಾನವಶಾಸ್ತ್ರದ ಚರ್ಚೆಯಲ್ಲಿ ತುಸು ಬಂದಿದೆ. ಆದರೆ, ಆ ವಿಚಾರ ಪಾತಳಿಯನ್ನು ಇನ್ನಷ್ಟು ವಿವರವಾಗಿ ನೋಡಲು ಅವಕಾಶವಿದೆ. ಈ ಸಂಬಂಧದಲ್ಲಿ ಜೋಶಿಯವರ ಒಟ್ಟು ಆಲೋಚನೆಗಳನ್ನು ಹೀಗೆ ಸಂಕ್ಷೇಪಿಸಬಹುದು. ಭಾರತೀಯ ಸಂಸ್ಕೃತಿಯು ಅಧಃಪತನಗೊಳ್ಳುತ್ತಿದೆ. ಈಜಿಪ್ಟ್, ಸುಮೇರಿಯನ್ ಮುಂತಾದ ಕೆಲವು ಭಾರತೇಯ ಸಂಸ್ಕೃತಿಗಳಲ್ಲೂ ಇಂತಹುದೇ ಸ್ಥಿತ್ಯಂತರ ಸಂಭವಿಸಿದೆ. ಈ ಅಧೋಮುಖ ಸ್ಥಿತ್ಯಂತರಕ್ಕೆ ಕಾರಣವಾಗಿ ನಮ್ಮ ಪ್ರಜ್ಞೆಯನ್ನು ಆಳುತ್ತಿರುವ ವೈಚಾರಿಕ ಆಕೃತಿಗಳು ಬಹು ಹಿಂದೆಯೇ ವೇದಕಾಲದಲ್ಲಿಯೇ ಸಮಷ್ಟಿಯ ನೆಲೆಯಲ್ಲಿ ನಿರ್ಮಾಣಗೊಂಡಿವೆ. ವಾನರನು ನರನಾಗಿ, ಮುಂದೆ ಮನುಷ್ಯನಾಗಿ (ವ್ಯಷ್ಟಿ ನೆಲೆಯಲ್ಲಿ) ಜಾತವೇದ ಅಗ್ನಿ ಹಾಗೂ (ಸಮಷ್ಟಿ ನೆಲೆಯಲ್ಲಿ) ವೈಶ್ವಾನರಾಗ್ನಿಯಿಂದ ಪ್ರಚೋದಿತನಾಗಿ ಪ್ರಜ್ಞಾಪಾತಳಿಯಲ್ಲಿ ವ್ಯವಹರಿಸುವ ಅವಸ್ಥೆಯನ್ನು ಪಡೆದು ಊರ್ಧ್ವಗತಿಯನ್ನು ಹೇಳಿದರೆ, ಪುನಃ ವಿಶ್ಲೇಷಕ ಪ್ರವೃತ್ತಿಯಿಂದ ದೂರವಾದ ನಾಚಿಕೇತಾಗ್ನಿಯನ್ನು ಮೊರೆ ಹೋಗಿರುವುದು ಇಂದ್ರಿಯಪಾತಳಿಗೆ ಇಳಿದಿರುವುದನ್ನು ಅರ್ಥಾತ್ ಅಧೋಗತಿಯನ್ನು ಇದು ಸೂಚಿಸುತ್ತದೆ. ಚಲನೆಯ ಈ ಎರಡು ದಿಕ್ಕುಗಳನ್ನು ಶಂಬಾ ಅವರು ಕ್ರಮವಾಗಿ ಹಗಲು ಸಂಪ್ರದಾಯ ಹಾಗೂ ರಾತ್ರಿ ಸಂಪ್ರದಾಯವೆಂದು ಸಾಂಕೇತಿಕವಾಗಿ ಹೇಳಿದ್ದಾರೆ. ಎರಡನೆಯದನ್ನು ರಸ-ರೇತದ ನೆಲೆಯೆಂದು ಹೇಳಿದ್ದಾರೆ. ಈ ಸ್ಥಿತ್ಯಂತರವು ವೇದಕಾಲದಲ್ಲಿಯೇ ಪ್ರಾರಂಭವಾಗಿ ಮುಂದೆ ಪುರಾಣ-ಕಾವ್ಯಗಳಲ್ಲಿ ಉದ್ದಕ್ಕೂ ಸೂಚಿತವಾಗಿದೆ. ಇಂದಿನ ಸಾಮಾಜಿಕ ವಿಕಾರಗಳಿಗೆಲ್ಲ ಮೂಲಕಾರಣ ಸಾವಿರಾರು ವರ್ಷಗಳ ಹಿಂದೆಯೇ ಘಟಿಸಿದ ಈ ಸ್ಥಿತ್ಯಂತರವು ವೈಚಾರಿಕ ಆಕೃತಿಯಾಗಿ ನಮ್ಮನ್ನು ಆವರಿಸಿದುದೇ ಆಗಿದೆ. ಕಾಲವೆಂಬುದು ಚಕ್ರಾಕಾರವಾದದ್ದು ಎಂಬ ನಂಬಿಕೆ ಹೀಗೆ ಫಲಿತವಾಗಿ ಮೂಡಿದ ಒಂದು ವೈಚಾರಿಕ ಆಕೃತಿ. ಈ ಆಕೃತಿ ಕಾರಣವಾಗಿ ಘಟನೆಗಳು ಪುನರ್ ಸಂಭವಿಸುತ್ತವೆ.

ಪುನರ್‌ಜನ್ಮ ವಿದೆ ಮುಂತಾದ ಅನೇಕ ನಂಬಿಕೆಗಳು ಮೈದಳೆದಿವೆ. ವೇದ, ಪುರಾಣ, ಮಹಾಭಾರತ, ರಾಮಾಯಣ, ಭಗವದ್ಗೀತೆ ಮುಂತಾದವುಗಳಲ್ಲಿಯ ದೈವತಗಳು, ಪಾತ್ರಗಳು ಹಾಗೂ ಘಟನೆಗಳು ಸಾಮಾನ್ಯವಾದ ಗೃಹೀತ ಅರ್ಥಕ್ಕಿಂತ ಬೇರೆಯಾದ ಅರ್ಥವೊಂದನ್ನು ಸಾಂಕೇತಿಕವಾಗಿ ಸೂಚಿಸುತ್ತವೆ. ವೈದಿಕ ದೇವತೆಗಳಲ್ಲಾದ ಸ್ಥಾನಪಲ್ಲಟಗಳು ಸಂಸ್ಕೃತಿಯು ರಾತ್ರಿ ಸಂಪ್ರದಾಯದ ಕಡೆಗೆ ತಿರುಗುತ್ತಿರುವುದನ್ನು ಸೂಚಿಸುತ್ತದೆ.

ಭಾರತೀಯ ಸಂಸ್ಕೃತಿ ಅಥವಾ ಹಿಂದೂಧರ್ಮ ಅವನತಮುಖಿಯಾಗಿದೆ ಎಂಬುದನ್ನು ಸಾಧಿಸಿತೋರಿಸಲು ಜೋಶಿಯವರು ಬಳಸಿಕೊಂಡ ಭಾಷಿಕ ವಿಶ್ಲೇಷಣೆ ಎರಡು ಬಗೆಯದೆಂದು ಹೇಳಬಹುದು: ಒಂದು, ದೇವತೆಗಳ ಸ್ಥಾನಪಲ್ಲಟವನ್ನು, ಅವು ಸಾಂಕೇತಿಕವಾಗಿ ಸೂಚಿಸುವ ತತ್ವಗಳ ಸ್ಥಿತ್ಯಂತರವೆಂದು ಪರಿಗಣಿಸುವುದು. ಉದಾಹರಣೆಗೆ, 'ವೃತ್ರ ಹಂತಕ' (=ಕತ್ತಲೆಯನ್ನು ಕೊಲ್ಲುವವನು) ಪ್ರಕಾಶತತ್ತ್ವದ ಸಂಕೇತವಾಗಿದ್ದನು. ಋಗ್ವೇದದಲ್ಲಿ ಪ್ರಮುಖ ದೇವತೆಯೆನಿಸಿದ್ದ ಇಂದ್ರನು ಕ್ರಮೇಣ ತನ್ನ ಸ್ಥಾನವನ್ನು ಕಳೆದುಕೊಳ್ಳುವುದು ಪ್ರಕಾಶತತ್ತ್ವದ ಸೋಲನ್ನು ಸಂಕೇತಿಸುತ್ತದೆ. ಹಾಗೆಯೇ ವಿಶ್ವವನ್ನೇ ನಿಯಂತ್ರಿಸುವ 'ಋತ'ದ ಪರಿಪಾಲಕನಾಗಿದ್ದ ವರುಣನು ಆದಿತ್ಯರಲ್ಲಿ ಒಬ್ಬನಾಗಿ ನೀರಿನ ಅಧಿಪತಿಯಾದುದು (ನೀರು=ರಸ=ಕತ್ತಲೆ) ಕತ್ತಲೆಯ ಕಡೆಗೆ ಸರಿದುದನ್ನೇ ಸೂಚಿಸುತ್ತದೆ. ಭಗವದ್ಗೀತೆಯಲ್ಲಿ ಅರ್ಜುನ ಕೃಷ್ಣನಿಗೆ ಶರಣಾಗತನಾಗುವುದನ್ನು ಇದು ಹೇಳುತ್ತದೆ. ಇದು 'ಸರ್ಪವೋ ಸೂರ್ಯನೋ?' ("ಸಾರ್ಪರಾಜ್ಞೀ ಸೂರ್ಯೋ ವಾ") ಎಂಬ ಭ್ರಮಾಜನಕ ಸ್ಥಿತಿಯುಂಟಾಗುವುದೂ ಜಾತವೇದ ಅಗ್ನಿಯ ಅಭಾವದಿಂದಲೇ ಅಥವಾ ನಾಚಿಕೇತಾಗ್ನಿಯ (=ಅಚಿಕಿತ್ಸಕ ಪ್ರಜ್ಞೆ) ಪ್ರಭಾವದಿಂದಾಗಿಯೇ ಸಾಧ್ಯ. ಎರಡನೆಯದು, ಶಬ್ದಗಳ ಮೂಲಾರ್ಥಗಳು. ಅವು ಸಾಂಕೇತಿಕ-ನೆಲೆಯಲ್ಲಿ ಇದರ ಶಬ್ದಗಳೊಂದಿಗೆ ಪಡೆಯುವ ಸಾಹಚರ್ಯವು ಒಟ್ಟಾಗಿ ಸಾಂಸ್ಕೃತಿಕ ಸ್ಥಿತಿಯೊಂದನ್ನು ಸೂಚಿಸುತ್ತವೆ. ಉದಾಹರಣೆಗೆ, 'ನಾರಾಯಣ'ನು ನೀರಿಗೆ ಸಂಬಂಧಿಸಿದುದರಿಂದ ('ಆಪೋ ನಾರಾ ಇತಿ ಪ್ರೋಕ್ತಾ' ಎಂಬುದರಿಂದಾಗಿ), ಮೇಲಾಗಿ ಅವನು ಅನಂತಶಯನನೂ ಆಗಿರುವುದರಿಂದ (ಅನಂತ=ಸರ್ಪ=ಕತ್ತಲೆ) ರಾತ್ರಿ ಸಂಪ್ರದಾಯದ ಪ್ರತೀಕನಾಗಿದ್ದಾನೆ. ಚಂದ್ರನು ಮನಸೋ ಜಾತಃ ಆದ್ದರಿಂದ ರಸ, ರೇತಸತ್ವದ ಪಾತಳಿಗೆ ಸೇರಿದವನು. ಕತ್ತಲೆಯನ್ನೇ ಸಂಕೇತಿಸುತ್ತಾನೆ. ಹೀಗೆ ಕೃಷ್ಣ=ವಿಷ್ಣು=ನಾರಾಯಣ, ನಾಗ, ಚಂದ್ರ (ಅದಿತೀಪುತ್ರ) 'ಆದಿತ್ಯ' ಸೂರ್ಯ ಮುಂತಾದುವೆಲ್ಲ ರಾತ್ರಿ ಸಂಪ್ರದಾಯದ ದೈವತಗಳು.

ಹಿಂದೂ ಸಂಸ್ಕೃತಿಯನ್ನು ಕುರಿತು ಜೋಶಿಯವರು ತಾಳಿರುವ ಗ್ರಹಿಕೆಗಳು ಮೂಲಭೂತವಾಗಿ ವೈದಿಕ ಸಂಹಿತೆಗಳನ್ನು ಅರ್ಥಮಾಡಿಕೊಂಡ ರೀತಿಯನ್ನಾಧರಿಸಿದೆ. ಈ ಸಂದರ್ಭದಲ್ಲಿ ವೇದಗಳ ಶಬ್ದ, ವಾಕ್ಯಗಳನ್ನು ಸಾಂಕೇತಿಕ ನೆಲೆಯಲ್ಲಿಯೇ ಸ್ವೀಕರಿಸಲಾಗಿದೆ. ಆದರೆ, ಭಾಷೆಯೊಂದು ಬಳಕೆಯಾದ ಹಿನ್ನೆಲೆಯನ್ನೂ, ಅದರಿಂದಾಗಿ ಶಬ್ದ, ವಾಕ್ಯಾರ್ಥಗಳ ನಡುವೆ ವಿವಿಧ ರೀತಿಯ ಸಂಬಂಧಗಳಿರುವ ಸಾಧ್ಯತೆಯನ್ನೂ ಗಮನಿಸದಿದ್ದರೆ ಸಂಶೋಧಕನು ದಾರಿ ತಪ್ಪುವ ಅಪಾಯ ಇಲ್ಲವೇ ಇಲ್ಲ. ಆದ್ದರಿಂದಲೇ, ಈ ಹಿಂದೆ ಶಬ್ದಗಳ ವಿಶ್ಲೇಷಣೆಯ ಮೂಲಕ ಕರ್ನಾಟಕ ಸಂಸ್ಕೃತಿಯನ್ನು ಭೌತಿಕ ವಿವರಗಳಲ್ಲಿ ಹುಡುಕುವುದಕ್ಕಿಂತ ಸಂಕೇತ ವಿಧಾನದ ಮೂಲಕ ಪ್ರಜ್ಞಾ ಪಾತಳಿಯಲ್ಲಿ ಹುಡುಕ ಹೊರಡುವುದು ತೊಡಕಿನ ಮಾರ್ಗ ಎಂದು ಹೇಳಿದ್ದು. ಈ ಸಂಗತಿಯ ಬಗೆಗೆ ಕೃಷ್ಣ ಪರಮೇಶ್ವರ ಭಟ್ಟರು ತಮ್ಮೊಂದು ಲೇಖನದಲ್ಲಿ ಮೂರೂ ಸಂಗತಿಗಳ ನೆಲೆಗಳಲ್ಲಿ ಹೀಗೆ ವಿವರಿಸುತ್ತಾರೆ.

೧. ಅರ್ಥದೊಡನೆ ಕ್ರಿಯಾಶೀಲ ಸಂಬಂಧವಿರುವ ರೂಪಗಳು. ನಿರ್ದಿಷ್ಟ ಅರ್ಥದಲ್ಲಿ ದಿನನಿತ್ಯ ಬಳಕೆಯಾಗುವ ಸಾಮಾನ್ಯ ಶಬ್ದಗಳೆಲ್ಲ ಇಂತಹವು. ಉದಾ: 'ಮರ' ಎಂಬ ಶಬ್ದರೂಪವು ನಿರ್ದಿಷ್ಟ ಸಂದರ್ಭವೊಂದರಲ್ಲಿ ನಿರ್ದಿಷ್ಟ ಅರ್ಥವೊಂದನ್ನೇ ಸೂಚಿಸುತ್ತಿದ್ದು, ಈ ರೂಪ ಅದೇ ಅರ್ಥವನ್ನು ಸೂಚಿಸುತ್ತದೆಯೆಂಬುದು ಆ ಶಬ್ದದ ಬಳಕೆಯ ಮೂಲಕ ಮತ್ತೆ ಮತ್ತೆ ಖಚಿತಗೊಳ್ಳುತ್ತದೆ.

೨. ಪ್ರತಿಮಾರ್ಥಕ ಸಂಬಂಧವಿರುವ ಭಾಷಾರೂಪಗಳು. ಶಬ್ದ(ಗಳು) ಅಥವಾ ವಾಕ್ಯ(ಗಳು) ಮೇಲೆ ಹೇಳಿದ ರೀತಿಯ (ವಾಚ್ಯ/ಲಕ್ಷ್ಯ) ಅರ್ಥವೊಂದನ್ನು ಹೇಳುತ್ತಲೇ ವಿಸ್ತೃತ ಸಂದರ್ಭದ ಹಿನ್ನೆಲೆಯಲ್ಲಿ ಬೇರೊಂದು

ಅರ್ಥವೊಂದನ್ನು ಸೂಚಿಸಬಹುದು. ಉದಾಹರಣೆಗೆ, 'ಭೂತ' ಎಂಬ ಶಬ್ದ ವಾಚ್ಯಾರ್ಥಕ್ಕಿಂತ ಭಿನ್ನವಾದ ಅರ್ಥವೊಂದನ್ನು ಕವನವೊಂದರ ವಿಸ್ತೃತ ಸಂದರ್ಭದಲ್ಲಿ ಸೂಚಿಸಬಹುದು. ಇಲ್ಲಿಯ ಶಬ್ದ ಹಾಗೂ ಈ ಬಗೆಯ ಅರ್ಥಗಳ ಸಂಬಂಧ ಪರೋಕ್ಷವಾದದ್ದು.

೩. ಶಬ್ದ/ವಾಕ್ಯವೊಂದು ಅನುಭಾವವೊಂದನ್ನು (Mystic experience) ಸೂಚಿಸಲು ಬಳಕೆಯಾಗಿರಬಹುದು. ಉದಾಹರಣೆಗೆ, 'ಅರಗಿನ ಕಂಬದ ಮೇಲೊಂದು ಬೆಂಕಿಯ ಚಪ್ಪರ ಕಂಡೆ' ಎಂಬ ವಾಕ್ಯ ಅದರೊಳಗಿನ ಶಬ್ದಾರ್ಥಗಳ ಸಮುಚ್ಚಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವ ಅನುಭಾವ ಜೊತೆಗೆ ನೇರವಾಗಿ ಸಂಬಂಧಿಸಿದ ಸರೂಪವಿರಬಹುದು, ಅಥವಾ ಜೋಶಿಯವರೇ ಹೇಳುವ ಹಾಗೆ ವ್ಯಕ್ತಿಯ ಭಾವೋತ್ಕಟ ಸ್ಥಿತಿಯಲ್ಲಿ ಹೊಳೆದ ದೃಶ್ಯವೊಂದು 'ನಿರರ್ಗಳವಾಗಿ' ಚಿಮ್ಮಿರಬಹುದು.

ಕೃಷ್ಣಪರಮೇಶ್ವರ ಭಟ್ಟರು 'ಕಾವ್ಯಭಾಷೆಯ' ಸಂಕೇತವನ್ನು ಕುರಿತು ಹೇಳುತ್ತಿದ್ದಾರೆ. ಕಾವ್ಯಭಾಷೆಯ ಸಂಕೇತಕ್ಕೂ ಭಾಷಿಕ ಸಂಸ್ಕೃತಿಯ ಸಂಕೇತಕ್ಕೂ ವ್ಯತ್ಯಾಸವುಂಟು. ಅವೆರಡರ ಸಂಕೇತಗಳು ಒಂದೇ ಬಗೆಯವಲ್ಲ. ಅವು ಭಿನ್ನಭಿನ್ನ ಪಾತಳಿಯನ್ನು ಹೊಂದಿವೆ. ಸಂಸ್ಕೃತಿಯಲ್ಲಿ ಕಾವ್ಯಕಲೆ ಒಂದು ವಿಶಿಷ್ಟ ರಚನೆಯೇ. ಆದರೆ, ಅದರ ಉತ್ಪಾದನೆ ಏಕವ್ಯಕ್ತಿಯದ್ದು. ಆದರೆ, ಸಮಾಜ ಸಮಷ್ಟಿಯ ಸಾಂಕೇತಿಕ ಪಾತಳಿ ಭಿನ್ನಬಗೆಯ ನೆಲೆಯನ್ನು ಹೊಂದಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾಚೀನ ಕಾಲದಲ್ಲಿಯೇ ರೂಪಿತವಾದ ವೈಚಾರಿಕ ಆಕೃತಿಗಳು ಸಂಕೇತ ರೂಪದಲ್ಲಿ ಇಂದಿಗೂ ನಮ್ಮ ಜೀವನದ ಭೌತಿಕ ವಿವರಗಳಲ್ಲಿ ಪ್ರಕಟವಾಗುತ್ತವೆ ಎಂಬ ಗ್ರಹಿಕೆಯನ್ನು ಶಂಬಾ ಅವರು ತಾಳಿರುವುದರಿಂದ ಇಂದು ಬಳಕೆಯಲ್ಲಿರುವ ಅನೇಕ ಶಬ್ದಗಳಲ್ಲಿ ಉದ್ದಿಷ್ಟವಾದ ಸಂಕೇತಾರ್ಥಗಳನ್ನು ಆರೋಪಿಸುವಂತೆ ತೋರುತ್ತದೆ. ಇದರಿಂದಾಗಿ ಶಬ್ದಗಳಿಗೆ ನಿಷ್ಪತ್ತಿಯನ್ನು ನೀಡುವ ರೀತಿಯೂ ಸಾಂಕೇತಿಕ ನೆಲೆಯಲ್ಲಿ ಇನ್ನೊಂದು ಅಥವಾ ಇನ್ನಿತರ ಶಬ್ದಗಳ ಜೊತೆ ಸಂಬಂಧಿಸುವ ರೀತಿಯೂ ಊಹೆಗೆ ಎಡೆಮಾಡಿ ಕೊಟ್ಟಿದೆ; ಕಾಣದೊರೆಯದ ಶಬ್ದಗಳು 'ಇತ್ತು ಈಗ ಇಲ್ಲ' ಎಂದು ಹೇಳುವಂತೆ ಮಾಡಿದೆ. ಒಂದೆರಡು ಉದಾಹರಣೆಗಳು ಈ ಸಂಗತಿಯನ್ನು ಸ್ಪಷ್ಟಪಡಿಸುತ್ತವೆ; ಬೇವಿನ ಮರ ದೇವಿಯ ಮರ ಎಂಬ ನಂಬಿಕೆ ಉಂಟಾದುದ್ದಕ್ಕೆ ಕಾರಣ ಜೋಶಿಯವರ ಪ್ರಕಾರ ಹೀಗಿದೆ. ಬೆಯ್>ಬೇ(ಂ)ಯು>ಬೇ(ಂ)ವು>ಬೇವು ಹೀಗೆ ಇದು ಬೆಯ್ ಧಾತುವಿನಿಂದ ಬಂದದ್ದು; 'ಬೆಯ್' ಬೆಂಕಿಗೆ ಸಂಬಂಧಿಸಿದುದರಿಂದ ಹಾಗೂ ಬೆಂಕಿ ಒಂದು ಶಕ್ತಿಯಾಗಿರುವುದರಿಂದ ಬೇವಿನ ಮರ ಬೆಂಕಿಗೆ=ಅಗ್ನಿಶಕ್ತಿಗೆ ಆದ್ದರಿಂದ (ಶಕ್ತಿ=ದೇವಿ) ದೇವಿಗೆ ಸಂಕೇತವಾಗಿದೆ. ನೀರು, ನಾರಕ, ನಾರಾಯಣ ಇವೆಲ್ಲವೂ ನೀರಿಗೆ ಸಂಬಂಧಪಟ್ಟವು. ಈ ಶಬ್ದಗಳಲ್ಲಿ ನಿಷ್ಪತ್ತಿ ಸಂಬಂಧವಿರುವುದರಿಂದ ಇದನ್ನೊಪ್ಪಲು ಅಭ್ಯಂತರವಿಲ್ಲ. ಆದರೆ, ನೀರಿನಲ್ಲಿ ಬೆಳೆಯುವುದರಿಂದ 'ಪಾಚಿ'ಯೂ ಇದಕ್ಕೆ ಸಂಬಂಧಿಸಿದೆ ಹಾಗೂ ಅದರ ಬಣ್ಣದಿಂದಾಗಿ ಪಸುಳೆ, ಬಸಳೆ, ಹಸುಸಿಸೀರೆಗಳೂ ಜೋಶಿಯವರ ಪ್ರಕಾರ ಪಾಚಿಯ ಜೊತೆಗೆ ನೀರಿನ ಜೊತೆಗೆ ಸಂಬಂಧಿಸಿವೆ. ಈ ಸಂಗತಿಗಳನ್ನು ಹಲವು ಬಗೆಯ ಚರ್ಚೆಗಳಲ್ಲಿ ಇಟ್ಟು ನೋಡಬಹುದು. ಇನ್ನೂ ಮುಂದುವರೆದು ಬಸಿರಿಯರಿಗೆ ಹಸಿರು ಸೀರೆ ಉಡಿಸಿ 'ನಾಗಸ್ವರ'ದೊಡನೆ ಮಂಗಲ ಕಾರ್ಯವನ್ನು ಆಚರಿಸುವುದರಿಂದ ಹಾಗೂ 'ನಾಗ' ಎಂಬುದು ನೀರಿಗೆ ಸಂಬಂಧಿಸಿದುದರಿಂದ 'ನಾಗಸ್ವರ'ವೂ ಇದೇ ಸಂಕೇತಾರ್ಥಕ್ಕೆ ಸಂಬಂಧಪಟ್ಟದ್ದು. ಕನ್ನಡದ 'ನಾರು (ನರುಗು)' ಎಂಬ ಶಬ್ದಕ್ಕೂ ಮೇಲಿನವುಗಳ ಜೊತೆ ಸಾಂಕೇತಿಕ ಸಂಬಂಧವಿದೆ. ಈ ಶಬ್ದಗಳಲ್ಲಿ ಮೊದಲ ಮೂರು ಶಬ್ದಗಳಲ್ಲಿ ನಿಷ್ಪತ್ತಿ ಸಂಬಂಧವಿದೆ. ನಂತರದವು ಬಣ್ಣ ಅಥವಾ ಸಾಹಚರ್ಯ ಸಂಬಂಧ ಹೊಂದಿವೆ. ಕೊನೆಯ 'ನಾರು' ಎಂಬುದು 'ನೀರು'ವಿನ ಜೊತೆಗೆ ಧ್ವನಿಸಾಮ್ಯ ಹೊಂದಿದೆ ಅಷ್ಟೆ. ಆದರೆ, ಜೋಶಿಯವರ ಪ್ರಕಾರ ಇವೆಲ್ಲ ರಸ, ರೇತ, ಸತ್ಯ (=ಕತ್ತಲೆ)ಯನ್ನೇ ಸಂಕೇತಿಸುತ್ತವೆ. ಈ ವಿಚಾರಗಳ ಬಗೆಗೆ ಹಲವು ಬಗೆಯ ಚರ್ಚೆಗಳು ಸಾಧ್ಯ.

ರಾತ್ರಿ ಸಂಪ್ರದಾಯವು ನೆಲೆಯೂರಲು ನಿರ್ದಿಷ್ಟ ವೈಚಾರಿಕ ಆಕೃತಿಗಳೇ ಕಾರಣವಾಗಿವೆ. ಅವು ನಮ್ಮ ವರ್ತನೆಗಳನ್ನು ಇಂದಿಗೂ ನಿಯಂತ್ರಿಸುತ್ತಿವೆ. ಇದು ಶಂಬಾ ಅವರ ಗ್ರಹಿಕೆ. ಅವರು ನಮ್ಮ ಭಾಷೆಯ

ಬದಲಾವಣೆಯಲ್ಲಿ ಈ ನಿಯಂತ್ರಣವನ್ನು ಕಾಣುತ್ತಾರೆ. ಭಾಷೆಯಲ್ಲಾಗುವ ಕೆಲವು ಬದಲಾವಣೆಗಳನ್ನು ಉದ್ದೇಶ ಪೂರ್ವಕವಾಗಿ ಮಾಡಿಕೊಂಡದ್ದು ಎಂದು ಅವರು ತಿಳಿಯುತ್ತಾರೆ. ವಿಶ್ವಕ್ಕೇ ಮಿತ್ರನಾದ ವಿಶ್ವಮಿತ್ರನನ್ನು ಹೀಗೆಂದಿರಬೇಕಿದ್ದದ್ದು ವಿಶ್ವಾಮಿತ್ರ (ವಿಶ್ವಾ+ಅಮಿತ್ರ)ನನ್ನಾಗಿ ಉದ್ದೇಶಪೂರ್ವಕವಾಗಿ ಬದಲಾಯಿಸಿಕೊಳ್ಳಲಾಗಿದೆ. ಈ ಅಂಶವನ್ನು ಯಾಸ್ಕರು ತಮ್ಮ 'ನಿರುಕ್ತ'ದಲ್ಲಿ ವಿವರಿಸಿಯೂ ಇದ್ದಾರೆ. "ಇಂಗ್ಲೀಷಿನಲ್ಲಿರುವ Language is vertical ಎಂಬ ಸಂಕೇತವು ಔಚಿತ್ಯಪೂರ್ಣವಾಗಿದೆ. ಸಂಸ್ಕೃತ ಭಾಷೆಯಲ್ಲಿ ಇದೇ ಆಶಯದ ಗರ್ಭಿತಾರ್ಥಯುಕ್ತ ಶಬ್ದಪ್ರತಿಮೆ ನಿಜಕ್ಕೂ ಇರಬೇಕಿತ್ತು. ಅಲ್ಲಿ ಇತ್ತು: ನಾಮಾವಶೇಷವಾಗಿದೆ, ಯೋಜನಾಪೂರ್ವಕವೇ ಎಂದೂ ತೋರುತ್ತದೆ" ಎನ್ನುವ ಜೋಶಿಯವರು ಚಾರಿತ್ರಿಕ ತುಲನೆಯಲ್ಲಿ 'ಕಾಣ'ಬಯಸುತ್ತಾರೆ. ಪ್ರತಿಭಾಷೆಗೂ ಪ್ರತ್ಯೇಕ ವ್ಯವಸ್ಥೆಯಿದೆ ಹಾಗೂ ಭಾಷಾ ಬದಲಾವಣೆಯ ಎಲ್ಲ ಹಂತಗಳೂ ಉದಾಹರಣೆಗಳೂ ಸಾಂಸ್ಕೃತಿಕ ಬದಲಾವಣೆಯನ್ನು ಅದೂ ಉದ್ದೇಶಪೂರ್ವಕ ಬದಲಾವಣೆಯನ್ನು ಸೂಚಿಸಬೇಕಾಗಿಲ್ಲ ಅಷ್ಟೆ.

ಅರ್ಥದ ಪಾತಳಿ

ಒಂದು ಸಂಸ್ಕೃತಿಕಥನ ತಿಳಿಯಲು ಹಲವು ಅರ್ಥಗ್ರಹಣ ತಂತ್ರದ ಪಾತಳಿಗಳಿರುತ್ತವೆ. ಈ ಅಂಶವನ್ನು ಶಂಬಾ ಕಂನಡದ ಮಟ್ಟಿಗೆ ಮೊದಲಿಗೆ ತೋರಿಸಿಕೊಟ್ಟರು. ಭೂಗರ್ಭಶಾಸ್ತ್ರಜ್ಞನೊಬ್ಬ ಮಣ್ಣಿನ ಒಂದೊಂದು ವಿಶಿಷ್ಟ ಪದರುಗಳನ್ನು ಹಿಡಿದು ಚರಿತ್ರೆಯ ಸಂದುಹೋದ ಬಗೆಯನ್ನು ಹೇಗೆ ವ್ಯಾಖ್ಯಾನಿಸುವನೋ ಹಾಗೆ ಭಾಷೆ ಮತ್ತು ಸಂಸ್ಕೃತಿಯ ಸಂದುಹೋದ ಬಗೆಗಳನ್ನು ಸಂಸ್ಕೃತಿಚಿಂತಕನೊಬ್ಬ ವ್ಯಾಖ್ಯಾನಿಸುತ್ತಾನೆ. ಈ ಸಂಸ್ಕೃತಿಚಿಂತಕನು ಸಾಂಸ್ಕೃತಿಕ ಅರ್ಥದ ಪಾತಳಿಗಳನ್ನು ಮೊದಲಿಗೆ ಗುರುತಿಸುತ್ತಾನೆ. ಇದು ಅರ್ಥಕ್ಕಾಗಿ ನಡೆದ ಅರ್ಥದ ನೆಲೆಯಲ್ಲ. ಬದಲಾಗಿ ಸಂಸ್ಕೃತಿಯಲ್ಲಿಯ ಅಂತಃಸಂಗತಿಗಳ ವೈಶಿಷ್ಟ್ಯಗಳನ್ನು ತಿಳಿಯುವ ಬಗೆಯದೂ ಆಗಿರುತ್ತದೆ.

ಈ ಅಂಶವನ್ನು ಭಾರತೀಯ ಸಂಸ್ಕೃತಿ ಸಂದರ್ಭದಲ್ಲಿ ಹೇಗೆ ನೋಡಬಹುದೆಂಬ ಅಂಶವನ್ನು ಶಂಬಾ ಅವರು ಮೊದಲಿಗೆ ತೋರಿಸಿಕೊಟ್ಟರು. ಈ ವಿಚಾರಗಳ ಸ್ಥೂಲಸೂತ್ರವನ್ನು ಅವರ ಮಾತುಗಳಲ್ಲೆ ಹೀಗೆ ವಿವರಿಸಿಕೊಳ್ಳಬಹುದು. ಭಾರತೀಯ ಸಂಸ್ಕೃತಿಯ ಭೂಮಿಕೆ ಯಾವುದು? ಈ ಭೂಮಿಕೆ ಪ್ರವೃತ್ತಿಪರವೆ, ನಿವೃತ್ತಿಪರವೆ? ಈ ವಾದ ಈ ಹೊತ್ತಿಗೂ ಇನ್ನೂ ಮುಗಿದಿಲ್ಲ. ಮಹಾರಾಷ್ಟ್ರದಲ್ಲಿ ಲೋಕಮಾನ್ಯ ತಿಲಕರ 'ಗೀತಾರಹಸ್ಯ' ಪ್ರಕಟವಾದ ತಕ್ಷಣ ಈ ವಾದ ಕಾಣಿಸಿಕೊಂಡಿತು. ಎರಡೂ ಬಗೆಯ ವಾದ ಭೂಮಿಕೆಗಳಿಗೂ ಗೀತೆ ಪರ್ಯಾಯವಾಗಿ ಪ್ರೇರಣೆಯನ್ನು ನೀಡಿತು. ರಾಷ್ಟ್ರೀಯವಾದದ ಭೂಮಿಕೆಯಲ್ಲೂ ಗೀತೆಯ ಕೈವಾಡ ಉಂಟೇ ಉಂಟು. ತಿಲಕ್ ಮತ್ತು ಗಾಂಧೀಜಿ ಈ ಭೂಮಿಕೆಯ ಸಾಧಕರು. ತಿಲಕರಿಗೆ ಪ್ರವೃತ್ತಿಪರ ಜೀವನ ಪ್ರೇರಣೆಯ ಅತ್ಯಗತ್ಯವಿದೆ ಎಂದು ತಿಳಿದು ವ್ಯಾಖ್ಯಾನಿಸಿದರು. ಆದರೆ, ನಿಜಕ್ಕೂ ಈ ಗೀತೆಯ ಅರ್ಥ; ಆಶಯ ಏನು? ಈ ಅರ್ಥ: ಆಶಯಗಳನ್ನು ವಸ್ತುನಿಷ್ಠ ನೆಲೆಯಿಂದ ತಟಸ್ಥವಾಗಿ ಸ್ವೀಕರಿಸಲು ಸಾಧ್ಯವೆ? ಈ ಬಗೆಯ ಪ್ರಶ್ನೆಗಳು ಒಡಮೂಡಿ ಬಂದುವು. ಇಂದಿಗೂ ಕೂಡ ಈ ಪ್ರಶ್ನಪಾತಳಿಗಳು ನಮ್ಮನ್ನು ಬೆದರಿಸುತ್ತಿವೆ.

ಋಗ್ವೇದ, ಪಂಚಮವೇದ ಮಹಾಭಾರತ ಮತ್ತು ವಾಲ್ಮೀಕಿ ರಾಮಾಯಣಗಳಲ್ಲಿ ಏಕಸೂತ್ರತೆ ಇದೆಯೆಂಬ ಸಂಗತಿಯನ್ನು ಮೊದಲು ನಾವು ತಿಳಿಯಬೇಕು. ಸಾಂಪ್ರದಾಯಿಕ ವ್ಯಾಖ್ಯಾನವೂ ಇದರ ಬೆನ್ನಿಗಿದೆ. ಅದರ ಸಂಗತಿ ಬೇರೆ. ಋಗ್ವೇದದಿಂದ ರಾಮಾಯಣ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು, ಪಂಚಮವೇದ ಎನಿಸಿಕೊಂಡ ಮಹಾಭಾರತ- ಇವೆಲ್ಲವುಗಳ ಆಶಯ ಹಾಗೂ ಪ್ರತಿಪಾದನೆಗಳಲ್ಲಿ ಅಂತಃಸಂಗತಿ ಇರುವುದು ನಿರ್ವಿವಾದ. ರಾಮ-ಅಯನ ಕಾವ್ಯದ ಕರ್ತೃ ತನ್ನನ್ನು ಹುತ್ತದೊಳಗಿನ 'ವಾಲ್ಮೀಕಿ' ಎಂದು ಅನಿಸಿಕೊಳ್ಳುತ್ತಾನೆ. ಆದ್ದರಿಂದ ರಾಮ-ಚಂದ್ರನು ನಾಗ-ಅಯನಿಗೆ ಆದರ್ಶವೆಂದು ಬೇರೆ ಹೇಳುವ ಅಗತ್ಯವಿಲ್ಲ. ಆದರೆ, ಶ್ರೀರಾಮಚಂದ್ರ ನಾಗ: ನಾರಾಯಣ ಮಾರ್ಗಿ ಎಂದು ಹೇಳಿದರೆ ಕಾಲಿದಾಸನು ಹೇಳುವ 'ಕ್ವ ಸೂರ್ಯ ವಂಶ ಪ್ರಭವೋ' ಈ

ವರ್ಣನೆಯಲ್ಲಿ ಅತಿಶಯೋಕ್ತಿ ತಲೆದೋರಿದೆಯೆ? ಅಥವಾ ನಾಗ: ಚಂದ್ರ ಮತ್ತು ಸೂರ್ಯ ಎಂಬ ಸಾಂಕೇತಿಕ ಪ್ರತಿಮೆಗಳು ಸಮಾನ ಅರ್ಥದ ಸಮಾನ ಮೌಲ್ಯದ ಅರ್ಥಕ್ಕೆ ಸೇರಿದವೆ? ಈ ಪ್ರಶ್ನೆಗಳು ನಮ್ಮ ಬೆನ್ನನ್ನು ಹತ್ತುತ್ತವೆ. ಇಕ್ಷ್ವಾಕು ವಂಶಕ್ಕೆ ಸೂರ್ಯವಂಶ ಎಂದು ಕರೆಯಲಾಗುತ್ತದೆ. ಈ ಸಾಂಪ್ರದಾಯಕ ಶ್ರದ್ಧೆಯ ಅರ್ಥವೇನು? ಈ ಪ್ರಶ್ನೆಯು ಅರ್ಥದ ಹಲವು ಪಾತಳಿಗಳನ್ನು ಹೇಳುತ್ತದೆ.

ಈ ಸಂದರ್ಭದಲ್ಲಿ ಭಾಷೆಯೊಳಗಿನ ಧಾರಣೆ ಮತ್ತು ಸಂಕಲ್ಪನೆ ಇವೆರಡರೊಳಗಿನ ವ್ಯತ್ಯಾಸಗಳನ್ನು ಹೇಳುವ ಹಾಗೂ ತಿಳಿಯುವ ಕ್ರಮವು ಪೂರ್ವಾಪರವಾಗಿ ಮೊದಲಿನಿಂದಲೂ ನಡೆದು ಬಂದಿದ್ದರೆ ವಿಚಾರಗಳಲ್ಲಿ ವಿಸಂಗತಿಗಳಿಗೆ ಅವಕಾಶ ಖಂಡಿತ ಇರುತ್ತಿರಲಿಲ್ಲ. ಋಗ್ವೇದ ಸಂಹಿತೆಯು ಪ್ರವೃತ್ತಿ ಪರವಿದೆ. ಈ ಒಂದೇ ವೇದವಲ್ಲ ಮೂರೂ ವೇದಗಳು ಪ್ರವೃತ್ತಿಪರವಾಗಿ ನಿಂತಿವೆ. ಆದುದರಿಂದ, 'ಹೇ ನರನೆ ನೀನು ನಿಸ್ತ್ರೈಗುಣ್ಯನಾಗು ದ್ವಂದ್ವಾತೀತನಾಗು' ಇದು ಗೀತೆಯ ಆದೇಶ. ಈ ಅಂಶವನ್ನು ಬಹುತೇಕವಾಗಿ ಈ ವಿದೇಶಿ ವಿದ್ವಾಂಸರು ಒಪ್ಪುತ್ತಾರೆ. ಆಧುನಿಕ ಭಾರತೀಯ ವಿದ್ವಾಂಸರಲ್ಲೂ ಈ ಅಭಿಪ್ರಾಯ ಉಂಟೇ ಉಂಟು. ಪ್ರೊ. ವಿಂಟರ್‌ನಿಟ್ಜ್ ಮಹಾಭಾರತ ಕುರಿತು ಆಳವಾಗಿ ಅಧ್ಯಯನ ಮಾಡಿದವರು. ಅವರಿಗೂ ಕೂಡ ಪಂಚಮವೇದವು, ಋಗ್ವೇದದಂತೆ ಪ್ರವೃತ್ತಿಪರವಾಗಿ ಇರಬೇಕೆಂದು ಅನಿಸಿತು. ಮಹಾಭಾರತ ಮೂಲದ ಹೆಸರು ಜಯ. ಇದು ವೀರಗಾಥೆಯ ಸ್ವರೂಪದಲ್ಲಿ ಇರಬೇಕೆಂದು ಅಂದಾಜು ಮಾಡಲಾಯಿತು. ಪ್ರಕ್ಷಿಪ್ತ ಶ್ಲೋಕಗಳು ಮಹಾಭಾರತದಲ್ಲಿ ಹೆಚ್ಚು. ಈ ಶ್ಲೋಕಗಳಿಂದಾಗಿ ವೀರಕಾವ್ಯಕ್ಕೆ ವಿಕೃತಿ ಉಂಟಾಯಿತು ಎಂದು ಭಾವಿಸಲಾಯಿತು. ಜೈನ ಮತ್ತು ಬೌದ್ಧಪಂಥಗಳು ನಿವೃತ್ತಪರವಾದುವು. ಅವುಗಳ ನಿವೃತ್ತಿಮಾರ್ಗದ ನಿರ್‌ವೇದಿಯಾದ ತತ್ತ್ವಜ್ಞಾನದ ಪ್ರಭಾವದಲ್ಲಿ ಸಿಲುಕಿ ಮಹಾಭಾರತದ ಮೂಲಸೌಂದರ್ಯವು ನಷ್ಟವಾದುವೆಂಬ ಪುರಾವೆಗಳನ್ನು ಮಂಡಿಸಲಾಯಿತು. ಪ್ರೊ. ಸುಕಟಣಕರರು ಭೃಗುವು ಮಹಾಭಾರತದಲ್ಲಿ ಬಗೆದ ಕೈವಾಡವನ್ನು ಬಯಲಿಗೆ ತಂದರು. ಈ ಲೇಖನಗಳು ಅವರಿಗೆ ಜಾಗತಿಕ ಕೀರ್ತಿಯನ್ನು ತಂದುವು. ಸುಕಟಣಕರರು ಮಹಾಭಾರತದ ಅರ್ಥಪದರಿನ ಪಾತಳಿಗಳನ್ನು ಗೊತ್ತಿಲ್ಲದೆ ಹೊರಗೆ ತಂದರು. ಆದರೆ, ಹೀಗೆ ಪ್ರಕ್ಷಿಪ್ತ ಭಾಗಗಳನ್ನು ತೆಗೆಯುತ್ತ ಹೋದರೆ ಕೊನೆಗೆ ಮಹಾಭಾರತದಲ್ಲಿ ಏನೂ ಉಳಿಯುವುದಿಲ್ಲವೆಂಬ ಭಯ ಅವರಿಗುಂಟಾಯಿತು. ಆದರೆ, ಗೀತೆಯು ಪ್ರವೃತ್ತಿಪರ ಜೀವನ ನಿಷ್ಠೆಯನ್ನು ಪ್ರತಿಪಾದಿಸುತ್ತದೆಂದು ಅವರು ಆಳವಾಗಿ ನಂಬಿದ್ದರು. ಆದರೆ, ಗೀತೆಯಲ್ಲಿಯೂ ಶುದ್ಧವಾದ ಪಾಠವನ್ನು ಹುಡುಕಲು ಹೋಗಿದ್ದರೆ ಅಲ್ಲೂ ಅವರ ಕೈಗೆ ಏನೂ ಉಳಿಯುತ್ತಿರಲಿಲ್ಲ. ಇದನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು. 'ತಸ್ಮಾತ್ ಅಪರಿಹಾರ್‍ಯಾರ್ಥೇ ತತ್ರ ಕಾ ಪರಿದೇವನಾ?' ಹೀಗೆಂದು ಭಗವಾನ್ ಕೃಷ್ಣನು ಕೇಳುತ್ತಾನಷ್ಟೆ. ಆಗ ಆತನೇ ಜನ್ಮ, ಮೃತ್ಯು, ಜರಾವ್ಯಾಧಿಗಳ ಭಯವನ್ನು ನರನಿಗೆ ಹುಟ್ಟಿಸಿ ಮೋಕ್ಷಮಾರ್ಗವನ್ನು ಹಿಡಿಯಲು ಹೇಳುತ್ತಾನೆ. 'ಏತತ್ ವಿಮೃಶ್ಯ ಅಶೇಷೇಣ ಯಥೇಚ್ಛಸಿ ತಥಾ ಕುರು' ಈ ನಿರ್ಣಯ ಆದ ಮುಂದಿನ ಶ್ಲೋಕದಲ್ಲಿಯೇ 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಈ ಆದೇಶ, ಇಂಥ ಎರಡು ಹೇಳಿಕೆಗಳ ವಿಸಂಗತಿ ತಪ್ಪಿಸುವುದಕ್ಕೆ ಗೀತೆಯಲ್ಲಿಯ ಪ್ರವೃತ್ತಿಪರವಾದ ಶುದ್ಧಪಾಠವನ್ನು ಸ್ವೀಕರಿಸಲು ನಿಶ್ಚಯಿಸಿದರೆ ಗೀತೆಯಲ್ಲಿ ಭಗವಾನನ ಭಗವಂತಿಕೆಯ ವೈಶಿಷ್ಟವೇ ಪೂರ್ತಿ ನಷ್ಟವಾಗುತ್ತದೆ. ಅಧಿಕ ಮತ್ತು ಋಣ (+ ಮತ್ತು -) ಇವುಗಳ ಮೊತ್ತ ಎಷ್ಟು? ೦ (ಶೂನ್ಯ). ವೀರಶೈವ ತತ್ತ್ವಜ್ಞಾನದಲ್ಲಿ ಶೂನ್ಯ ಸಂಪಾದನೆಯೇ ಜೀವಿತದಲ್ಲಿಯ ಮಹಾನ್ ಸಿದ್ಧಿಯಾಗಿದೆ. ಈ ಅಂಶವನ್ನು ಮುಂದುವರೆಸಿ ಹೇಳುವುದಾದರೆ: ಈ ಭಗವಾನನೇ ಹೇಳುತ್ತಾನೆ: ಅಮೃತಂ ಚೈವ ಮೃತ್ಯುಃ ಚ, ಸತ್ ಅಸತ್ ಚ....., ಆಗಿದ್ದೇನೆ. ಈ ದೇವನು ಇಂಥ ಉಭಯವಿದ ಸ್ವರೂಪದವನಾಗಿದ್ದಾನೆ! 'ಕಾಲಃ (ಸರ್ಪಃ) ಅಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ' ಹೀಗೆ ತನ್ನ ನಿಜ ಸ್ವರೂಪವನ್ನು ತೆರೆದು ತೋರಿಸುವ ಈ ಭಗವಂತನು 'ನಾಗ' ದೇವನಾಗಿದ್ದಾನೆ ಎಂಬುದು ನಿಜ. 'ನಾಗ: ಸರ್ಪ:' ಈ ಮಾಧ್ಯಮ ಪ್ರತಿಮೆಯ ಮೂಲಕ ಈ 'ವಿಶ್ವರೂಪ' ಭಗ-ವಂತನ ದರ್ಶನ ಮಾಡಿಸುವುದರಲ್ಲಿ ಪುರಾತನ ದ್ರಷ್ಟಾರರ ಪ್ರತಿಭಾಶಕ್ತಿಯ ಅಮೋಘವಾದ ಸಾಮರ್ಥ್ಯವು ವ್ಯಕ್ತವಾಗುತ್ತದೆ.

ಸಾಂಕೇತಿಕ ಪಾತಳಿಯ ಮೇಲಿನ ಇಂಥ ಅಭಿಜಾತ ಪ್ರತಿಮೆಗಳ ನಾನಾ ಅರ್ಥಗಳು ಸಂಭವಿಸುತ್ತವೆ. 'ನಾಗ' ಪ್ರತಿಮೆಯಲ್ಲಿಯ ನಾನಾರ್ಥಗಳಲ್ಲಿ ಪ್ರಸ್ತುತ ಪ್ರಸಂಗಕ್ಕೆ ಗೀತೆಯೊಳಗಿನ ದ್ವಿಧಾನಿಷ್ಠೆಯ ವ್ಯಾಮಿಶ್ರ ಶೈಲಿಯ ಸಂದರ್ಭದಲ್ಲಿ ಈ ಗೀತೆಯಂತೂ ಎರಡು ನಾಲಗೆಯ ದೈವತಶಕ್ತಿಯ ಕೃತಿಯಾಗಿದೆ ಎಂಬುದು ಮನೋಜ್ಞವಾದ ರೀತಿಯಲ್ಲಿ ವ್ಯಕ್ತವಾಗಿದೆ. ಅದೂ ಒಡೆದೂ ಹೇಳುತ್ತದೆ! ಈ ಪ್ರಕಾರದ ವಾಸ್ತವ ಸತ್ಯವು ಬಚ್ಚಿಡಬೇಕೆಂದರೂ ಬಚ್ಚಿಡುವುದು ಶಕ್ಯವಿಲ್ಲವಾಗಿದೆ. ಭಾಷೆಯ ಪ್ರತಿಮೆ: ಸಾಂಕೇತಿಕ ಅರ್ಥ ಸಾಮರ್ಥ್ಯದಿಂದಾಗಿ; Dramatic irony ಯ ಸ್ವರೂಪದಲ್ಲಿಯಾದರೂ ಈ ರೀತಿಯ ಕಣ್ಣು ಮುಚ್ಚುವ ಆಟ ಬಯಲಿಗೆ ಬರುವುದು ಖಂಡಿತ!

ಈ ಅಂತಃಸಂಗತಿಯು ಪ್ರಸ್ಥಾನತ್ರಯಿಯ ಮೇಲಿನ ಆಚಾರ್ಯರೆಲ್ಲರ ಭಾಷ್ಯಗಳಲ್ಲಿ ನೋಡಲು ಸಿಗುತ್ತದೆ. ವೇದ, ಉಪನಿಷತ್ತು, ಗೀತೆ ಈ ಗ್ರಂಥಗಳು ಬ್ರಹ್ಮಸೂತ್ರಗಳೊಂದಿಗೆ ಸುಸಂಗತವಿರುತ್ತವೆ. ಆಚಾರ್ಯರು ಯಾವುದೇ ಪಂಥದವರಾಗಿರಲಿ ಅವರಲ್ಲಿಯ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಈ ಭೇದಗಳು ಮುಖ್ಯವಾಗಿ ಗೌಣವಾಗಿವೆ. ವೇದೋಪನಿಷತ್ತುಗಳು, ಗೀತೆ ಇವೆಲ್ಲವುಗಳಲ್ಲಿ ಮೋಕ್ಷಮಾರ್ಗವೇ ಹೇಳಲಾಗಿದೆಯೆಂಬುದು ಒಂದು ಸನಾತನ ಶ್ರದ್ಧೆಯೇ ಉಂಟು. ಆದರೆ, ಈ ಅಂತಃಸಂಗತಿಯನ್ನು ಮಾನ್ಯ ಮಾಡಿದರೆ, ಇನ್ನೊಂದು ಸಮಸ್ಯೆ ತಲೆ ಎತ್ತುತ್ತದೆ. ಗೀತೆಗೆ ಮಾನ್ಯವಿಲ್ಲದ ಪ್ರವೃತ್ತಿಮಾರ್ಗದ ಪ್ರೇರಣೆಗಳ ವೇದ - ಋಗ್ವೇದವಾದರೂ ಎಲ್ಲಿದೆ? ಇಂದು ಪ್ರಚಲಿತವಿರುವ ಋಕ್‌ಸಂಹಿತೆಯಲ್ಲಿ ನಾಗ ಸಂಪ್ರದಾಯದ ನಿರ್ದೇಶನವಿದೆ! ಈ ಋಗ್ವೇದವೂ ಆಚಾರ್ಯರ ಮತದಂತೆಯೆ ನಾಗ-ಶಯನ ವಿಷ್ಣು ನಾರಾಯಣನ ಪರ್ಯಾಯ ಅವತಾರವೆನಿಸಿದ ಭಗವಾನ್ ಶ್ರೀಕೃಷ್ಣನ ಗೀತೆಯೊಂದಿಗೆ ಸುಸಂಗತವಿದೆ! ಆದರೆ, ಇದರ ಹೊರತು ಋಗ್ವೇದದ ಇನ್ನೊಂದು ಪಾಠವಿರಬೇಕಾಗಿದೆ. ಆದರೆ ಅದು ಈಗ ದೊರೆಯುವುದಿಲ್ಲ.

ಈ ಸಂಶಯದ ನಿವಾರಣೆಗಾಗಿ ಶಂಬಾ ಸಾಂಪ್ರದಾಯಿಕ ವಿದ್ವಾಂಸರ ಸಂಗಡ ಚರ್ಚೆ ನಡೆಸಿದರು. ಗೀತೆಯಂತೆ ಈ ಋಕ್‌ಸಂಹಿತೆಯಲ್ಲಿಯೇ ಉಭಯವಿಧವಾದ 'ದ್ವಿಧಾನಿಷ್ಠೆ, ಹುದುಗಿದೆ ಮತ್ತು ಅವರ ಈ ಶ್ರದ್ಧೆ ಅಸ್ಥಾನದ್ದಲ್ಲ. ಈ ವೇದದಲ್ಲಿ ಪ್ರವೃತ್ತಿಪರವಾದ ಜಾತವೇದ ಅಗ್ನಿ ಇದೆ. ಹಾಗೆಯೇ, ನಿವೃತ್ತಿಪರವಾದ ನಚಿಕೇತಾಗ್ನಿಯೂ ಉಂಟು. ಗೀತೆಯೊಳಗಿನ ಭಗವಾನನು ಲೋಕಕ್ಷಯಕೃತ್ ಪ್ರವೃದ್ಧ ಕಾಲ (:ಸರ್ಪ), ಸ್ವರೂಪಿಯಾದ ದೈವತಾಶಕ್ತಿ ಆಗಿದ್ದಾನೆ. ಗೀತೆಯಲ್ಲಿ - ಮಹಾಭಾರತದಲ್ಲಿ ಆಕೃತಿ ರೂಪದ ವಿಶ್ವಾಸ ಜನಕವೂ, ವಿಶ್ವಸಂಚಾಲಕವೂ ಆದ ಒಂದು ದಿವ್ಯಶಕ್ತಿಯು ಈ ಋಕ್ ಅಂದಾಜಿಗೆ ಜತೆಗೂಡುವ ಸರ್ಜಕ ಮತ್ತು ಸಂಹಾರಕ ಶಕ್ತಿಯೆಂದರೆ ಈ ನೀರಿನೊಳಗಿನ ಅಗ್ನಿರೂಪದ ಸರ್ಪವೇ ಆಗಿದೆ. ಇದೇ ಅಪಾಂ ನಪಾತ್!

ಭಾರತೀಯ ತತ್ತ್ವಜ್ಞಾನದ ನಿಷ್ಕರ್ಷ ಇದು. ವಿಶ್ವದ ಬುಡದಲ್ಲಿಯ ದಿವ್ಯ ಮೂಲತತ್ತ್ವವು 'ನೇತಿ ನೇತಿ', ಸ್ವರೂಪದ್ದಾಗಿದೆ. ಈ ಸಂಗತಿಯು ಪರಂಪರೆಯಿಂದ ಬಂದ ಸಾಂಪ್ರದಾಯಿಕ ಶ್ರದ್ಧೆಯ ಪ್ರಕಾರದಲ್ಲಿದೆ. ಡಾ. ಸುಕಟಣಕರರಿಗೆ ಅವರ ಸಂಶೋಧನೆಯಲ್ಲಿ ಬಂದ ಅನುಭವದ ಮೂಲಕವೂ ಇದು ಸಿದ್ಧವಾಗುತ್ತಿದೆ. ಈ ನಾಗ ಸಂಪ್ರದಾಯವು ನಿಜವಾಗಿಯೂ ಈ ಋಗ್ವೇದದಲ್ಲಿ ಇದ್ದುದಾದರೆ ಈ ಋಗ್ವೇದವೂ ಗೀತೆಯಂತೆ ವ್ಯಾಮಿಶ್ರ ಶೈಲಿಯ ವಿರೋಧಾಭಾಸಾತ್ಮಕ ಎಂದರೆ ಸಂಭ್ರಾಮಕ ಮನೋಭಾವವನ್ನು ನಿರ್ಮಿಸುವಂತಹ ದಾಗಿರಬೇಕು. "ಸರ್ಪಾಣಾಂ ಅಸ್ಮಿ ವಾಸುಕೀ" ಎಂಬ ಮಾತಾಗಲಿ "ಅನಂತಶ್ಚಾಸ್ಮಿ ನಾಗಾನಾಂ" ಎಂದು ಕಲಿಸಿಕೊಟ್ಟ ಭಗ-ವಂತನ ಈ ಅಹಿಮಾಯೆ ಸ್ವಯಂ ಋಕ್‌ಸಂಹಿತೆಯಲ್ಲಿಯೂ ಪ್ರತ್ಯಯಕ್ಕೆ ಬಂದಿರಬೇಕು! ಆದರೆ, ಈ ಅಹಿಮಾಯೆಯ ಅರ್ಥವೇನು? ಈ ಮಾಯೆಯ ಸ್ವರೂಪವೇನು?

'ಅಹಿಮಾಯೆ' ಯೆಂದರೆ ಗಾರುಡಿಗರು ಉಂಟು ಮಾಡುವಂಥ ಸ್ವರೂಪದ ದೃಶ್ಯ: ಯಾತು>ಜಾದು. ಜಾದುವೆಂದರೇನು? ನಿಜವಾಗಿ ಇರುವುದು ಒಂದು, ಆದರೆ, ಇಲ್ಲಿ ಕಾಣುವುದು ಏನೋ ಬೇರೆಯೇ! ಇದು ನಮ್ಮ ಪರಂಪರಾಗತ ಚಾಲ್ತಿಯಲ್ಲಿಯ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ. 'ನಾಗಶಯನ': ಜಲಶಾಯಿಯಾದ ಈ ದೈವತಶಕ್ತಿ ಸೂರ್ಯವಂಶೀ ಆದ ಶ್ರೀ ರಾಮ-ಚಂದ್ರನ ರೂಪದಲ್ಲಿ ಅವತರಿಸುತ್ತದೆ. ಸೂರ್ಯ ನಾರಾಯಣ

(ನಾರ-ಅಯನ=ಅಯನ: ಸರ್ಪ; ನಾರ ಆಪ:) ಈ ದಿವ್ಯ ಉಪಾಸನೆ ಇಂದಿಗೂ ರೂಢಿಯಲ್ಲಿದೆ! ಸೂರ್ಯನನ್ನು ನಾರಾಯಣನನ್ನಾಗಿ ಮಾಡುವ ಈ ಮಾಟ ಈ ಮಂತ್ರಶಕ್ತಿ ಜಾದುವಿಗಿಂತ 'ಯಾತು' ಎನ್ನಬೇಕು. ಜಾದು ಇದು ಮನಸ್ಸಿನ ವಿನೋದಕ್ಕಾಗಿ, ಮೋಜಿನ ಸ್ವರೂಪದ್ದಾಗಿ ತೋರುತ್ತದೆ. ಆದರೆ, ನಿಜವಾದ ಪ್ರಕಾಶ ರೂಪಿಯಾದ ದೈವತವು ಇದು ಸೃಜನ ಜಲದ (ನಾರ:ಆಪ) ಮಾರ್ಗ (:ಅಯನ)ವಿದು ಎಂಬ ಶ್ರದ್ಧೆಯನ್ನು ಉಂಟುಮಾಡುವ ಈ ಮಂತ್ರವು ಲೋಕಕ್ಕೆ ಉಪಕಾರಿಯೆಂದು ಅನ್ನುವುದೋ ಅಥವಾ ಲೋಕಕ್ಷಯಕೃತ್ ಪ್ರವೃದ್ಧನಾದ ಕಾಲನಿಗೆ ಬಲಿಯನ್ನು ನೀಡುವ ಯಾತು ಎನ್ನುವುದೋ. ಈ ಅಂಶವು ಶಂಬಾ ಅವರನ್ನು ತುಂಬಾ ಕಾಡಿದೆ.

'ಮೋಕ್ಷ'ವನ್ನು ಬೇಡುವ ನಮ್ಮ ಮಂತ್ರ ತಂತ್ರಗಳಲ್ಲಿ ವೇದ-ಪುರಾಣಾದಿ ಸಾಹಿತ್ಯ ಗ್ರಂಥಗಳಲ್ಲಿ ಜನರಿಗೆ ಮೋಕ್ಷಮಾರ್ಗದತ್ತ ಒಯ್ಯುವ ಪ್ರೇರಣೆಯು ಜಡಿದು ತುಂಬಿದೆಯೆಂದು ಭಾವಿಸುವುದು ನಿಷ್ಕಾರಣವೇನೂ ಅಲ್ಲ. ಋಗ್ವೇದದಲ್ಲಿಯ ಇಂಥ ಒಂದು ಆಯ್ದ ಯಾತು, ಮಾಟ ಉಂಟು; 'ಇದೊ ನೋಡಿ, ಈ ವೇದದಲ್ಲಿ ಅವಿತಿಟ್ಟ ಹಾವು ಇಲ್ಲಿದೆ' ಎಂದು ಆತ್ಮವಿಶ್ವಾಸಪೂರ್ವಕವಾಗಿ ಈ ಹಿಂದೆಯೇ ಪೂನಾದ ವೇದವ್ಯಾಸಂಗಿ ಮಂಡಲೀಕರರು ತಮ್ಮ ಲೇಖನದಲ್ಲಿ ಹೇಳಿದ್ದರು.

ವೇದದಲ್ಲಿಯ ಸರ್ಪ: ನಾಗವೆಂದರೆ ಹೊಟ್ಟೆ ಹೊಸೆದು ಸರಿಯುವ ಪ್ರಾಣಿ. ಇದು ನಮಗೆ ಕಾಣಸುತ್ತದೆ ಎಂದಲ್ಲ. (: not the snakes we see) ಉನ್ನತ ಪಾತಳಿಯ ಮೇಲಿನ ದಿವ್ಯಶಕ್ತಿಯ ಇರುವಿಕೆಯ ಬಗೆಗೆ ಶ್ರದ್ಧೆ ಮಾತ್ರ ಇಲ್ಲಿ ಕಾಣುತ್ತದೆ ಎಂದು ಅವರು ತಮ್ಮ ಲೇಖನದಲ್ಲಿ ಸೂಚಿಸಿದ್ದಾರೆ. ಈ ನಾಗ : ಸರ್ಪ ದೇವತೆ ಇದು ಲಿಂಗಪೂಜೆಯೊಂದಿಗೆ ನಿಕಟ ಸಂಬಂಧ ಉಂಟು. (:It is intimately connected with the worship of the Linga) ಎಂದೂ ಶ್ರೀ ಮಂಡಲೀಕರು ತಮ್ಮ ಲೇಖನದಲ್ಲಿ ಹೇಳುತ್ತಾರೆ. ವಿಷ್ಣು (ನಾಗಶಯನ) ಮತ್ತು ರುದ್ರಶಕ್ತಿಯ ಎರಡು ಪ್ರತೀಕಗಳಾಗಿರುವುದನ್ನು ಪುರಾಣದ ಕತೆಗಳು ಪ್ರಕಟ ಮಾಡುತ್ತಿರುವುದನ್ನು ಮಂಡಲೀಕರು ನಿವೇದಿಸಿದ್ದಾರೆ. ಈ ದೈವತ ಶಕ್ತಿಯು ವೇದದೊಳಗಿಂದ ಅಹಿ - ಸರ್ಪದಂಥ ಸಂಕೇತಗಳಿಂದ ಸೂಚಿತವಾಗಿದೆ. 'ನಾಗ' ಈ ಸಂಕೇತವು ವೇದಗಳ ನಂತರ ಪ್ರಭಾವಶಾಲಿಯಾಗುತ್ತದೆ. ಆದರೆ, ನಿಜವಾಗಿಯೂ ಇದರಲ್ಲಿ ವ್ಯತ್ಯಾಸವನ್ನು ಎಣಿಸುವ ಕಾರಣವಿಲ್ಲವೆಂದೂ ಮಂಡಲೀಕರಿಗೆ ಕಂಡುಬಂದಿದೆ.

ಈ ಪರ್ಯಾಯದ ಸ್ವರೂಪದಲ್ಲಿ 'ಅಮೃತಂ ಚೈವ ಮೃತ್ಯುಃ ಚ ಸದಸತ್ ಚ' ಈ ತಾತ್ವಿಕ ಭೂಮಿಕೆಯಲ್ಲಿಯ ದಿವ್ಯಶಕ್ತಿಯು ಅಭಿಪ್ರೇತವಾಗಿದ್ದರೂ ಈ ಶಕ್ತಿಯ ವಿವಿಧ ಮಗ್ಗುಲುಗಳ ದರ್ಶವನ್ನು ಮಾಡಿಸುವುದಕ್ಕೆ ಬೇರೆ ಬೇರೆ ಸಂಕೇತಗಳು ರೂಢಿಗೊಳಿಸಿರಬೇಕು. ದೈವತಗಳ ಸಹಸ್ರ ನಾಮಾವಳಿಯು ಪ್ರಚಲಿತವಾಗುವುದರ ಹಿಂದೆ ಇದೇ ಹೇತುವಿರಬೇಕೆಂದು ಕಾಣುತ್ತದೆ. ಮಂಡಲೀಕರಿಗೆ ಋಗ್ವೇದದಲ್ಲಿ 'ಸರ್ಪ'ವು ಕಂಡಿತು. ಇದರ ಅರ್ಥವೇನು? ಇದು ತಿಳಿಯಲಿಕ್ಕೆ 'ಸರ್ಪ' ಈ ಸಂಕೇತದ ಹಿಂದಿನ ಧಾರಣೆ ಮತ್ತು ಸಂಕಲ್ಪನೆ ಯಾವುದು ಎಂಬುದರ ಸ್ಥೂಲವಾದ ಅಂದಾಜಾದರೂ ಗೊತ್ತಿರುವುದು ಅವಶ್ಯವಿದೆ. ಆದ್ದರಿಂದ, ಶ್ರೀ ಮಂಡಲೀಕರರು ನೀಡಿದ ಸರ್ಪಮಂತ್ರದ ನಿರ್ದೇಶ ಮಾಡುವ ಮುಂಚೆ ತಮ್ಮ ಲೇಖನದಲ್ಲಿ ಅವರು ಹೇಳಿದ ಸರ್ಪವೆಂಬ ಸಂಕೇತದ ಅರ್ಥದ ಪರಿಚಯ ಮಾಡಿಕೊಳ್ಳುವುದು ಅಗತ್ಯವಿದೆ ಮತ್ತು ಅವರು ನೀಡಿದ ಅರ್ಥದ ಸಮರ್ಪಕತೆಯನ್ನು ತಪಾಸಿಸಿ ನೋಡುವ ಆವಶ್ಯಕತೆಯಿದೆ.

ಭಾರತೀಯರ ಸನಾತನ ಶ್ರದ್ಧೆಯಂತೆ ಆದಿಶೇಷ (:ನಾಗ=ನಾರಾಯಣ)ನು ಸೃಷ್ಟಿಕರ್ತ. ಆದರೆ ಪುರಾಣಗಳಲ್ಲಿ ನಾರಾಯಣನ 'ನಾಭಿ'ಯಿಂದ ಬ್ರಹ್ಮ (ಅಂಡ) ಸೃಷ್ಟಿಕರ್ತನು ಸಂಭವಿಸಿದನು ಎಂದು ಸೂಚಿಸಲಾಗಿದೆ! ಆದಿ-ನಾರಾಯಣನ ನಂತರ ಸ್ತೋತ್ರಗಳ ವಿಷಯ ಬರುತ್ತದೆ. ಆದರೆ, ಆಮೂಲಕ ಆದಿ-ಶೇಷ ಮತ್ತು ಆದಿನಾರಾಯಣ ಈ ಹೆಸರುಗಳು ಒಂದೇ ದೈವತವೇ ಎಂದು ಹೇಳಲು ಬರುವುದೋ ಎಂಬ ಶಂಕೆಗೆ ಅವಕಾಶ ಉಳಿದುಬಿಟ್ಟಿದೆ. ಋಗ್ವೇದ ಸೂಕ್ತದಲ್ಲಿ ಇದೇ ಪ್ರಭಾವಿಯಾದ ತಂತ್ರವು ಬಳಕೆ ಬಂದದ್ದು ಕಾಣುತ್ತದೆ. ಡಾ.ರಾ.ಗೋ. ಭಂಡಾರಕರಿಗೆ ಋಗ್ವೇದದಲ್ಲಿಯ 'ವಿಶ್ವಕರ್ಮ' ಎಂಬ ಸೂಕ್ತದಲ್ಲಿ ಈ (ಆದಿ-ಶೇಷ:ನಾಗಃ) 'ನಾರಾಯಣ' ದೈವತದ ಪೂರ್ವಪೀಠಿಕೆ

ಇರುವಂತೆ ದಟ್ಟ ಶಂಕೆ ಇತ್ತು. 'ಅಜಸ್ಯ ನಾಭೌ' ಅಧಿ ಏಕಂ ಅಂಡಂ ಅರ್ಪಿತಂ, ಯಸ್ಮಿನ್ ವಿಶ್ವಾನಿ ಭುವನಾನಿ ತಸ್ಥುಃ (೧೦.೮೨.೫) ಆದರೆ, ಈ ವೇದದಲ್ಲಿ 'ನಾಗ: ನಾರಾಯಣ ಸಂಪ್ರದಾಯವಿದೆ ಎಂದು ತಮಗೂ ಪೂರ್ವದ ಶ್ರೀ ಮಂಡಲೀಕರ ಹೇಳಿಕೆಯಂತೆ (ಪು. ೧೮೮) ಒತ್ತಿ ಹೇಳುವ ಸಾಹಸವನ್ನು ಯಾರೂ ಮಾಡಿದ್ದು ಕಾಣುವುದಿಲ್ಲ! ನಾಗ (:ನಾರಾಯ-ಅಯನ) ಇದು ಸೃಜನದ ಮಾಧ್ಯಮ. ಆದ್ದರಿಂದ 'ನಾಗ' ನಾರಾಯಣನು 'ಆದಿಪುರುಷ'ನೆನಿಸಿಕೊಳ್ಳುತ್ತಾನೆ. ಇದೇ ಋಕ್ಕಿನಲ್ಲಿ ಈ ಆದಿಪುರುಷನ ಭವ್ಯವಾದ ಸೂಕ್ತವಿದೆ. ಈ ಆದಿಪುರುಷನ ಸ್ತೋತ್ರಕಾರ ಕವಿ 'ನಾರಾಯಣ' ಎಂಬ ಸಾಂಕೇತಿಕವಾದ ನಾಮರೂಪವನ್ನು ಧರಿಸಿರುತ್ತಾನೆ. ಅಂದರೆ, ಈ ನಾಮರೂಪಾತ್ಮಕ ಹುತ್ತದೊಳಗಿನ ವಾಲ್ಮೀಕಿ: (ನಾಗ) ಇಲ್ಲಿ ನೋಡಲು ಸಿಗುತ್ತಾನೆ.

ಋಗ್ವೇದದ ಸೂಕ್ತಕಾರನೆನಿಸುವ 'ಕವಿ' ಮತ್ತು ಸೂಕ್ತದ ದೈವತ ಇವರಿಬ್ಬರಿಗೂ ಅನೇಕ ಸಲ ತಾದಾತ್ಮ್ಯವು ಸೂಚಿಸಲಾಗುತ್ತದೆ. ಆದರೆ, ಈ ತಂತ್ರ (Techinic)ದ ರಹಸ್ಯವು ಬೆಳಕಿಗೆ ಬಂದದ್ದು ಕಾಣುವುದಿಲ್ಲ! ಸೃಷ್ಟಿನಿರ್ಮಾಣ ಕರ್ತೃವಾದ ದೈವತದ ಸ್ತೋತ್ರ ಮತ್ತು ಆ ಸ್ತೋತ್ರ, ಸೂಕ್ತಗಳ ಕವಿಗಳ ಸಾಂಕೇತಿಕ ಹೆಸರು ತಪಾಸಣೆ ಮಾಡಿ ನೋಡಬೇಕು. ಅಲ್ಲಿ ಈ 'ನಾಗ' ಹುದುಗಿದಂಥ 'ಗುಹಾ-ನಿಹಿತ' ಪ್ರತಿಮೆಯು ಕಂಡೀತು? ಋಗ್ವೇದದಲ್ಲಿ ಶ್ರೀ ಮಂಡಲೀಕರಿಗೆ ನಾಗವು ಕಂಡು ಬಂದಿದೆ. 'ಅಯಂ ಗೌ ಪೃಶ್ನಿಃ' ಈ ಸೂಕ್ತದ ಕವಿಯ ಮತ್ತು ಈ ಸೂಕ್ತದೊಳಗಿನ ದೈವತದ ನಾಮರೂಪದ ತಾದಾತ್ಮ್ಯವಿರುವುದು 'ಸಾರ್ಪರಾಜ್ಞೀ ನಾಮ ಋಷಿಕಾ' (ಕವಯಿತ್ರಿ ಮತ್ತು) 'ಸಾ ಏವ ದೇವತಾ ಸೂರ್ಯೋ ವಾ ಇತಿ' ಈ ಪಾರಂಪರಿಕ ವಿವರಣೆಯ ಮೇಲಿಂದ ಈ ಅಂಶವು ಖಚಿತವಾಗಿ ವ್ಯಕ್ತವಾಗುತ್ತದೆ. ಇದೇ ಸೂಕ್ತದಲ್ಲಿ ಕೊನೆಗೆ 'ಪತತಿ ಗಚ್ಛತಿ' ಎಂಬ ಪ್ರಕೃತಿ ಪ್ರಭಾವದ (ಧಾತುವಿನ) 'ಪತಂ-ಗ' 'ಸೂರ್ಯ'ನ ನಿರ್ದೇಶವೂ ಬರುತ್ತದೆ. ಈ ಪತಂಗ ಸೂಕ್ತದ ಕವಿ ಯಾರು? ಅಂದರೆ ಈತ ಪ್ರಜಾಪತಿ - ಪುತ್ರ! ಪ್ರಜಾಪತಿ ಎಂಬ ಹೆಸರಿನ ದೈವತದ ಒಂದು ಸ್ವತಂತ್ರವಾದ ಸೂಕ್ತ ಋಗ್ವೇದದಲ್ಲಿ ಉಂಟು. 'ಹಿರಣ್ಯಗರ್ಭಃ ಸಮವರ್ತ ಅಗ್ರೇ ಭೂತಸ್ಯ ಜಾತಃ ಪತಿಃ ಏಕ ಆಸೀತ್' ಎಂದು ಈ ಸೂಕ್ತ ಆರಂಭವಾಗುತ್ತದೆ. ಇಂಗ್ಲಿಷ್‌ನಲ್ಲಿ ಈ ಹಿರಣ್ಯಗರ್ಭ ಸಂಕೇತಕ್ಕೆ Golden germ ಅರ್ಥವು ಅಭಿಪ್ರೇತವಿರುವುದೆಂದು ಪಾಶ್ಚಾತ್ಯ ಸಂಶೋಧಕರಲ್ಲಿ ಸರ್ವಮಾನ್ಯವಾಗಿದೆ.

ಸೃಷ್ಟಿ, ಪ್ರಳಯ ಈ ಎರಡೂ ಶಕ್ತಿಗಳ ದಿವ್ಯ ದೈವತವೆಂದರೆ ನಾಗ : ಸರ್ಪವೇ. ಈ ಹಿರಣ್ಯಗರ್ಭ ಸೂಕ್ತದ ಕರ್ತೃ ಪ್ರಜಾಪತಿ ಪುತ್ರ ಹಿರಣ್ಯಗರ್ಭ ಎಂಬ ಹೆಸರಿನಿಂದ ಗುರುತಿಸಲ್ಪಡುತ್ತಾನೆಂದು ಭಾಷ್ಯಕಾರರು ಹೇಳಿದ್ದಾರೆ. ನಾರಾಯಣನಿಗೆ ಹಿರಣ್ಯಗರ್ಭನೆಂದು ಪರ್ಯಾಯ ನಾಮ ಉಂಟು. ಇದು ಸುವಿಖ್ಯಾತವೇ ಆಗಿದೆ. 'ನಾಗ'ವು 'ತಪ್ತಕಾಂಚನ ಸನ್ನಿಭಂ' ಆಗಿರುತ್ತದೆ. ಇದನ್ನು ಗಮನಿಸಿದರೆ ಭಾಷಿಕ ಸಾಂಕೇತಿಕ ಮಾಧ್ಯಮ: ಪ್ರತಿಮೆಗಳ ಮೂಲಭೂತ ಪಾತಳಿಯ ಮೇಲೆ ಇರುತ್ತದೆ. ಇದನ್ನು ಇಲ್ಲಿ ಅಲ್ಲಗಳೆಯಲಾಗುವುದಿಲ್ಲ. ಸೋಜಿಗದ ಸಂಗತಿಯೆಂದರೆ 'ಜಜಾನ ಚಂದ್ರಾ: ಆಪಃ' ಎಂದು ಈ ಸಮರ್ಥ ಹಿರಣ್ಯಗರ್ಭ ದೈವತದ ಮಹಿಮೆಯನ್ನು ಹಾಡುವಾಗ ಇರುವ 'ಯಸ್ಯಛಾಯಾ ಅಮೃತಂ ಯಸ್ಯ ಮೃತ್ಯುಃ' ಈ ಅರ್ಥದ ವಾಕ್ಯವು ಭಗವದ್ಗೀತೆಯಲ್ಲಿಯೂ ಇನ್ನೊಂದು ನೆಲೆಯಲ್ಲಿ ಸಿಗುತ್ತದೆ. ಈ ಅಂತಃಸಂಗತಿಯು ಒಳ್ಳೆ ವಾಚಾಳಿ ಆಗಿದೆ.

ಋಗ್ವೇದದಲ್ಲಿ ನಾಗ ಸಂಪ್ರದಾಯವಿದೆಯೆಂದು ನಿರ್ಧರಿಸಿದ್ದು 'ಅಗಳಿನಿಂದ ಅನ್ನದ ಪರೀಕ್ಷೆ' ಎಂಬ ಪಾಕಶಾಸ್ತ್ರದ ನ್ಯಾಯದಂತೆ ಮಂಡಲೀಕರರ ಪ್ರಬಂಧದಿಂದ ಎದ್ದು ಕಾಣುತ್ತದೆ. ಆದರೆ, ಅವರ ಪರೀಕ್ಷಾಪದ್ಧತಿಯು ಒಟ್ಟಾರೆ ತಪ್ಪಿದೆ ಎಂದು ಅನ್ನುವಂತಿಲ್ಲ. ಅದು ತಪ್ಪಿಲ್ಲವೆಂಬುದಕ್ಕೆ ಸಂಶಯವಿಲ್ಲ. ಆದರೆ, ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಅದೆಂದರೆ: ಶ್ರೀ ಮಂಡಲೀಕರು ೧೦೨ ವರ್ಷಗಳ ಹಿಂದೆ (೧೩ ಮೇ ೧೮೬೯) ಓದಿದ ಈ ನಿಬಂಧ ಮತ್ತು Royal Asiatic Society ಯಂಥ ಹೆಸರಾದ ಸಂಸ್ಥೆಯು ಪ್ರಕಟಿಸಿದ ಈ ಪ್ರಬಂಧವು ಇಂದಿನ ತನಕ ದುರ್ಲಕ್ಷಿತವಾಗಿ ಉಳಿದಿದೆ. ಇದೊಂದು ಆಶ್ಚರ್ಯ. ಇದರಲ್ಲಿಯ ಮುಖ್ಯ ಅಂಶವೆಂದರೆ 'ಋಕ್ ಸಂಹಿತೆಯಲ್ಲಿ ನಾಗ ಸಂಪ್ರದಾಯವಿದೆ' ಈ ವಿಚಾರವು ಒಂದು ಶತಕ ಉರುಳಿ ಹೋದರೂ ಇಂದಿನ

ತನಕ ಪೌರ್ವಾತ್ಯ ಅಥವಾ ಪಾಶ್ಚಾತ್ಯರಲ್ಲಿ ಯಾರೂ ವಿಚಾರವಂತ ಸಂಶೋಧಕರಿಗೆ ವಿಚಾರಾರ್ಹವೆಂದು ಅನಿಸಲಿಲ್ಲ. ಈ ವಿಚಾರದ ಖಂಡನೆ ಮಾಡುವ ಒಂದು ಅಗತ್ಯವು ಯಾರಿಗೂ ಕಾಣಲಿಲ್ಲ! ಇದರ ಅರ್ಥವೇನು?

ಶ್ರೀ ಮಂಡಲೀಕರ ತಲೆಮಾರಿನ ಪ್ರೊ ಮ್ಯಾಕ್‌ಡೊನೆಲ್ ಮತ್ತು ಕೀತ್, ಇವರಿಬ್ಬರು ಅಪ್ಪಟ ಸಂಶೋಧಕರು. ವೇದಗಳ ವ್ಯಾಸಂಗಿಗಳೆಂದು ಪ್ರಚಂಡ ಕೀರ್ತಿ ಪಡೆದವರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಈ ವಿದ್ವಾಂಸರು ವೈದಿಕ ಸಂಸ್ಕೃತಿ - ಸಂಶೋಧನೆಯ ಕ್ಷೇತ್ರದಲ್ಲಿ ಪರಿಶ್ರಮ ಪೂರ್ವಕವಾಗಿ ಬಹಳ ಕೆಲಸ ಮಾಡಿದವರು. ಆದರೆ, ಅವರ ಮಾರ್ಗದರ್ಶಕ ಗ್ರಂಥದಲ್ಲಿ ಋಗ್ವೇದದಲ್ಲಿ ನಾಗ ಸಂಪ್ರದಾಯದ ಪ್ರಭಾವದ ಯಾವ ಸುಳಿವೂ ಇಲ್ಲ. no trace of it ಎಂದು ಹೇಳಿದ್ದಾರೆ. Vedic indian ಈ ಗ್ರಂಥದಲ್ಲಿ ಅಹಿ:ನಾಗ:ಸರ್ಪ ಇವುಗಳ ಮೇಲೆ ಟಿಪ್ಪಣಿಗಳಿವೆ. ಅಹಿ:ಸರ್ಪವೆಂಬ ಅರ್ಥದಲ್ಲಿ 'ದತ್ವತೀ ರಜ್ಜು'ದಂತೆ ಇರುವ ರಜ್ಜು (ಹಗ್ಗ) ಎಂದು ಸ್ತ್ರೀಲಿಂಗಿಯಾದ ಸರ್ಪಿಣಿಯ ನಿರ್ದೇಶವು ಅಥರ್ವವೇದದಲ್ಲಿ ಇರುವುದೆಂದು ಹೇಳುತ್ತಾರೆ. ಆದರೆ, ಋಗ್ವೇದದಲ್ಲಿ 'ಶೃಂಗೀಃ ವಾತರಶನ' ಎಂಬ ಹೆಸರಿನ ವಾತನೇಯ ಎಂಬ ಒಂದು ದೊಡ್ಡ ಮಾರ್ಮಿಕವಾದ ಸ್ತೋತ್ರವಿದೆ. ಇದನ್ನು ಲೆಕ್ಕಕ್ಕೆ ಹಿಡಿದಿಲ್ಲ. ರಜ್ಜು ಮತ್ತು ರಶನ ಇವು ಸ್ತ್ರೀಲಿಂಗಿ ಮತ್ತು ಪುಲ್ಲಿಂಗಿಗಳೆಂದು ವೇದಗಳಲ್ಲಿ ಇವೆ. 'ರಜ್ಜು ವತ್ ಸರ್ಪ' ಅಥವಾ 'ಸರ್ಪವತ್ ರಜ್ಜು' ಅಂದರೆ ಈ ರಜ್ಜು ಸರ್ಪಗಳು ಎಂಬ ಸಾಂಕೇತಿಕತೆಯು ಮಾತ್ರ ಈ ವಿದ್ವಾಂಸರ ಗಮನಕ್ಕೆ ಬಂದದ್ದು ಕಾಣುವುದಿಲ್ಲ! ದಂತವಿರುವ ರಜ್ಜು ಸರ್ಪವು ಎಂದು ಟಿಪ್ಪಣಿಸುವ ಸಂಶೋಧಕರಿಗೆ 'ವಾತ' (ಗಾಳಿಯನ್ನು ಹೀರಿ ನೇರನಿಲ್ಲುವ) ರಶನವು ಸರ್ಪಗಳಿರಲಿಕ್ಕಿಲ್ಲವೇ ಎಂದು ಶಂಕೆ ಬಂದಿದ್ದರೆ ಈ ಶಂಕೆ ಅನಿಸಲು ಅವಕಾಶವೇ ಇರುತ್ತಿದ್ದಿಲ್ಲ.

ಅದೇನೇ ಇರಲಿ, ತಮಗೆ ಅಗತ್ಯವೆನಿಸಿದಲ್ಲಿ ಡಾ. ಶ್ರೀ ವೆಂ. ಕೇತಕರರ ತನಕದ ಸಂಶೋಧಕರು ನಾಮ ನಿರ್ದೇಶ ಪೂರ್ವಕವಾಗಿ ಅವರ ಮತದ ಚರ್ಚೆ ಮಾಡಿದ್ದಾರೆ. ಆದರೆ, ಋಗ್ವೇದದಲ್ಲಿ 'ನಾಗ' ಸಂಪ್ರದಾಯವಿದೆ ಎಂದು ತಮ್ಮ ಮತವನ್ನು ಮಂಡಿಸುವ ಶ್ರೀ ಮಂಡಲೀಕರ ಮತವು ಬಿತ್ತು. ಇದು ಹೇಗೆ?

ಆದರೆ, ಶ್ರೀ ಮಂಡಲೀಕರ ಪ್ರಬಂಧವನ್ನು ಓದಿದ ನಂತರ ಆ ವಿಷಯ ಕುರಿತ ವಾದವಾದರೂ ಆ ಸಭೆಯ ಇತಿವೃತ್ತದಲ್ಲಿ ನಮೂದಿಸಲಾಗಿದೆ. (P. extix) ಜೇಮ್ಸ್ ಫರ್ಗುಸನ್ ಎಂಬ ತಜ್ಞರು ಮಂಡಲೀಕರೊಂದಿಗೆ ತನ್ನ ಮತಭೇದವಿದ್ದುದನ್ನು ವ್ಯಕ್ತಪಡಿಸಿದರು. most elaborate and able work ಮಾಡಿದ ಫರ್ಗುಸನ್‌ರು ತಮ್ಮ ವೈಚಾರಿಕ ಭೂಮಿಕೆ (Theory) ಪ್ರಸ್ತಾಪಿಸಿದರು. ಆದರೆ, in some respects he (Mandalik) differs in theory ಎಂದು ಆ ವೃತ್ತಸಭೆಯ ವರದಿಯಲ್ಲಿ ಹೇಳಿದೆ. ತಜ್ಞರೆನಿಸಿಕೊಂಡ ಸಾಹೇಬರ ಜತೆ ಮತಭೇದವನ್ನು ವ್ಯಕ್ತಮಾಡುವ ಮಂಡಲೀಕರ 'ಸತ್ಯ' ನಿಷ್ಠೆ ಮತ್ತು ಆತ್ಮ ವಿಶ್ವಾಸವು ಬಲಿಷ್ಠ. ಇದರಿಂದ ತಿಳಿಯುವುದೇನೆಂದರೆ ಶ್ರೀ ಮಂಡಲೀಕರಿಗೆ theory supposition ಈ ವಿಶಿಷ್ಟ ದೃಷ್ಟಿಕೋನ (attitude) ಪಡೆದು ಸಂಸ್ಕೃತಿ ಸಂಶೋಧನದಲ್ಲಿ ತೊಡಗುವುದು ಸಾಧ್ಯವಿದ್ದಿಲ್ಲ. ಏಕೆಂದರೆ, ಮಂಡಲೀಕರ ಸುದೀರ್ಘವಾದ ವಿವೇಚನೆಯಲ್ಲಿ ಮೂಲದ ಆಧಾರಗಳನ್ನು ತೆಗೆದುಕೊಂಡು ಅವುಗಳ ಅರ್ಥದ ಬೆಳಕಿನಲ್ಲಿ ಸಂಶೋಧನೆಯನ್ನು ನಡೆಯಿಸುವುದು, ಈ ಪದ್ಧತಿಯು ಲೇಖನದ ಎಲ್ಲೆಡೆಗೂ ಎದ್ದು ಕಾಣಿಸುತ್ತದೆ. ಅದರಲ್ಲಿ ಸ್ವಂತದ ಭಾವನೆ ಇಲ್ಲವೆ ದೃಷ್ಟಿಕೋನ ಪ್ರಭಾವಿಯಾಗಲು ಬಿಟ್ಟಿದ್ದರೆ ಸೂರ್ಯನಿಗೆ ಸರ್ಪ ಕತ್ತಲೆಯಾಗಿಸುವ ಈ ಕ್ರಿಯೆ ಅವರಿಗೆ ಪೀಡಿಸದೆ ಇರುತ್ತಿದ್ದಿಲ್ಲ. ನಾಗ ಸಂಪ್ರದಾಯದ ನಡೆ-ಜೀವನ ರೀತಿ-ಪ್ರಶಸ್ತವಲ್ಲ ಎಂಬ ದನಿ ಶ್ರೀ ಮಂಡಲೀಕರರ ಪ್ರಬಂಧದಲ್ಲಿ ಕಿವಿಗೆ ಬರುತ್ತದೆ. ಆದರೆ 'ಸಾಂಸ್ಕೃತಿಕ ಸತ್ಯ'ವು ವೈಯಕ್ತಿಕ ಸಂಕಲ್ಪನೆಯಲ್ಲ, ಸತ್ಯವು ಭೌತವಿರಲಿ ಅಭೌತವಿರಲಿ, ತಾತ್ವಿಕ ಪಾತಳಿಯ ಮೇಲಿನದಿರಲಿ: ಈ ಸತ್ಯ ಇರುತ್ತದೆ ಮತ್ತು ಕಾರಣಾಂತರಗಳಿಂದ ಅದರ ಸುಳಿವು ಸಿಗುತ್ತದೆ ಮತ್ತು ಅದು ಕಂಡಂತೆ ಕಾಣುತ್ತದೆ. ಆದರೆ, 'ಈ ಕಂಡಂತೆ ಅನಿಸುವ' ಭಾವನೆಯ ಪಾತಳಿಯ ಮೇಲಿನ ಸತ್ಯವು ಒರೆಗಲ್ಲಿಗೆ ತಾಗಬೇಕು. ಈ ವೇದದಲ್ಲಿಯೇ ಇರುವ 'ಬೃಹಸ್ಪತಿ' ವಾಕ್‌ಪರಂಪರೆಯಂತೆ ಇರುವ ವಾಕ್ ಪುರಾಣಕಾಲದ ವಾಕ್ ಅಲ್ಲ,

ಶುಕ್ರ ಎಂಬ ಆಚಾರ್ಯನ 'ದೇವಯಾನಿ' ವಾಕ್ ಈ ಸಂಪ್ರದಾಯದಿಂದ ಬೇರೆ. 'ತಿತ ಉನಾ ಸಕ್ತುಂ ಇವ ಪುನಂತಃ' ವಾಕ್ ಆಗಿದೆ. ಇದು ಧೀರ: ಧೀಮಂತರು ವಿಮರ್ಶಾಪೂರ್ವಕವಾಗಿ ಘಟಿಸಿದ್ದು ಆಗಿದೆ ಮತ್ತು ಈ ವಾಕ್ 'ಯತ್ ಪ್ರೆರತ' (ಏನೋ ಒಂದು ಪ್ರೇರಣೆಯಿಂದ) ತಿಳಿದು ಬಂದ ಕುಟ್ಟಿ, ಹೆಕ್ಕಿ, ಕೇರಿ, ಧಾನ್ಯದಂತೆ 'ಪುನೀತ' ಶುದ್ಧವಾಗಿ ಮಾಡಿದ್ದು ಆಗಿದೆ. ಅಂದರೆ ಈ ಜ್ಞಾನವು insight ಸ್ವರೂಪದ್ದು. ಈ ಒಳಗಿನ ಅರ್ಥವು ಕಾರಣವನ್ನು ಸವರಿ ಹೋಗುವುದು ಅವಶ್ಯವೇ. ಆಧಾರಗಳ, ಅಡಿಟಿಪ್ಪಣಿಗಳ ಬಲದಿಂದ ಸತ್ಯವನ್ನು ಸಿದ್ಧಮಾಡುವ ಹೆಣಗಾಟದಲ್ಲಿ ಇರುವವರು 'ಪಶ್ಯನ್ ಅಪಿ ನ ದದರ್ಶ, ವಾಚಂ ಶೃಣ್ವನ್ ಅಪಿ ನ ಶೃಣೋತಿ, ಏತತ್ ವಿಮೃಶ್ಯ' ಈ ಗೀತೆಯ ಮತ್ತು ಋಗ್ವೇದದ ಮೂಲಗಳಿಂದ ವೈಚಾರಿಕ ಆಕೃತಿಯ ಸಾಮ್ಯ ಈ ಎರಡೂ ಗ್ರಂಥಗಳ ಕಟ್ಟು ಸಮಾನವಾಗಿರುವುದನ್ನು ನಿದರ್ಶನಕ್ಕೆ ತರುತ್ತಿದೆ.

ಅರ್ಥ: ಆಚಾರ-ವಿಚಾರ

ಆಚಾರ ಮತ್ತು ವಿಚಾರ ಇವೆರಡರಲ್ಲಿಯ ಸಂಗತಿಯ ಮೇಲಿಂದ ಅರ್ಥವನ್ನು ನಿರ್ಣಯಿಸುವುದು ಯುಕ್ತವೇ ಹೌದು. 'ಚರ್' ಈ ಆಖ್ಯಾತದಿಂದ ಸಾಧಿಸಿದ ಆ-ಚಾರ ಮತ್ತು ವಿ-ಚಾರ ಇವೆರಡರಲ್ಲಿ ಸಾಂಗತ್ಯಸಾಹಚರ್ಯವಿದೆ. ಇದು ಈ ಶಬ್ದ ಪ್ರತಿಮೆಯೊಳಗಿನಿಂದ ಧ್ವನಿತವಾಗುತ್ತದೆ. ಆದರೆ, ಇವೆರಡರಲ್ಲಿ ಜನ್ಯಜನಕ ಸಂಬಂಧವನ್ನು ಗೃಹೀತವೆಂದು ಇಟ್ಟುಕೊಂಡರೆ ಮೋಸವಾಗುತ್ತದೆ. ಕೆಲವೊಂದು ಕ್ರಿಯೆಯ ಆಚಾರದ ಸಂದರ್ಭದಲ್ಲಿ: ಆ ಸಮಯ: ಪರಿಸರದಲ್ಲಿ ಅನಿರೀಕ್ಷಿತವಾಗಿ ಈ ಆಚಾರದ (ಲಂಬ) ಸಮಾ(ನಾಂ)ತರ ಪಾತಳಿಯಲ್ಲಿ ಏನಾದರೊಂದು ಅರ್ಥ: ವಿಚಾರವು ಮಿಂಚಿ ಹೋಗುತ್ತದೆ. ಇದು ಆಕಸ್ಮಿಕ ಘಟನೆ. ಆದ್ದರಿಂದ ಎ.ಎಲ್. ಕ್ರೋಬರರಂಥ ಮಾನವಶಾಸ್ತ್ರಜ್ಞರು ಈ ಘಟನೆಗೆ accident ಅಥವಾ chance ಅನ್ನುತ್ತಾರೆ. ನಿಜವಾಗಿಯೂ ಹೊಸ ಅರ್ಥವು: ವಿಚಾರವು ತೋಚುವುದು ಒಂದು ಯೋಗಾಯೋಗವೇನೋ ನಿಜ. ಆದರೆ ಜಿಜ್ಞಾಸುವಿನ ಆರ್ತತೆಯೂ ಅಷ್ಟೇ ತೀವ್ರವಾಗಿರಬೇಕಾಗುತ್ತದೆ. ಈ ಜಿಜ್ಞಾಸೆಯು ಅಸ್ಪಷ್ಟವಾಗಿ ಮೂಡುತ್ತದೆ. ಅಂಥ ಹಿನ್ನೆಲೆಯಲ್ಲಿ ಪ್ರಜ್ಞೋದಯದ ಯೋಗಾಯೋಗವು ಕೆಲವು ಸಲ ಸಂಭವಿಸುತ್ತದೆ. ಕೆಲವು ಸಲ ಈ ಯೋಗಾಯೋಗವು ಅಪಘಾತ-ಆಘಾತದ ರೂಪವನ್ನು ಧರಿಸುತ್ತದೆ.

ಆಚಾರ ಮತ್ತು ವಿಚಾರ ಇವುಗಳಲ್ಲಿ ಆಕಸ್ಮಿಕವಾಗಿ ಉಂಟಾದ ಸಂಗತಿ ಇದೆ. ಇದನ್ನು ಒಪ್ಪದಿರಲು ಆಗುವುದಿಲ್ಲ. ಆದರೆ, ಈ ವಿಶಿಷ್ಟ 'ವಿಚಾರ'ವನ್ನು ಸೂಚಿಸಿದ 'ಆಚಾರ'ವು ಯಾವುದು? ಅದನ್ನು ನಿರ್ಣಯಿಸುವುದು ಹೇಗೆ? ಆಹ್ನಿಕಕ್ರಿಯೆಯ ವಿಧಿ ವಿಧಾನಗಳು (rituals) ಮತ್ತು ಈ ಆಹ್ನಿಕಕ್ರಿಯೆಗಳೊಂದಿಗೆ ನಿಗದಿತವಾದ ದೈವಕಥೆಗಳು (myth) ಆಚಾರ ಮತ್ತು ವಿಚಾರ ಇವೆರಡರಲ್ಲಿ ಇರುವ ಅಂತಃಸಂಗತಿ ಇಂದು ಮಾನಸಶಾಸ್ತ್ರದಲ್ಲಿ ಸರ್ವಮಾನ್ಯವಾಗಿದೆ. ಈ ಕ್ರಿಯೆಯು ಆದಿದೈವತ ಕಥೆಯೊಂದಿಗೆ ನಿಗದಿತವಿರುತ್ತದೆ. ಪ್ರಮಾಥೀ ಸ್ವರೂಪದ ನಿಸರ್ಗ ಪ್ರೇರಿತವಾದ elemental ಇವು ಎಲ್ಲಕ್ಕೂ ಮೊದಲು. ಪ್ರಾಥಮಿಕವಾಗಿ (primordial) ಅನುಭೂತಿಯ ಕ್ರಿಯೆಗಳೇ ಆಗಿವೆ. ಇವು ಅಪೂರ್ವ ಅವಿಸ್ಮರಣೀಯ ಘಟನೆಗಳ ಪುನಃಸ್ಮರಣದ ಸ್ವರೂಪವಾಗಿರುತ್ತವೆ. ಈ ಕ್ರಿಯೆ (Ritual) ಒಂದು ರೀತಿಯ ಮೂಲ ಅನುಭವದ ರೂಪಕ: ನಾಟ್ಯ ಎನ್ನಬಹುದು. ಈ ನಾಟಕದ ಕಥಾವಸ್ತುವು ಆಯಾ ದೈವತಕಥೆಯಲ್ಲಿ (myth) ಹುದುಗಿರುತ್ತದೆ. ಈ ಮೂಲದ ಅನುಭೂತಿಯ ಪ್ರಭಾವವು ಸಂಪೂರ್ಣ ಜೀವನ ರೀತಿಯ ಮೇಲೆ ಬಿದ್ದಿರುವುದು ಕಂಡುಬರುತ್ತದೆ. ಈ ಮೂಲಕ ಇಂಥ ದೈವತ ಕಥೆಗಳೊಳಗಿಂದ ನಿತ್ಯದ ವರ್ತಮಾನ ಕಾಲವು ಸಮಾವೇಶಗೊಂಡ ಪ್ರತ್ಯಯವು ಬರುತ್ತದೆ. 'The essence of the myth is recurrence of timelessness, a perpetual present', ಎಂದು ಡಾ. ಥಾಮಸ್ ಹೇಳುತ್ತಾರೆ. ದೈವತ ಕಥೆಗಳ ನಿಜವಾದ ಒರೆಗಲ್ಲು ಇದೇ ಆಗಿದೆ. ಪಂಥದ ಪ್ರಚಾರಕ್ಕಾಗಿ ಬಹಳಷ್ಟು ದೈವತಕತೆಗಳು ವಿಕೃತ ಸ್ವರೂಪದಲ್ಲಿ ಪ್ರಚಲಿತವಿರುವುದನ್ನು ಕಾಣಬಹುದು. ದೈವತಕಥೆ ಮತ್ತು ಆಹ್ನಿಕಕ್ರಿಯೆಯೇ

ದಿನನಿತ್ಯ ಆಚರಿಸಬೇಕಾದ ವಿಧಿ. ಇವೆರಡರ ಸಂಬಂಧದ ವಿಷಯವಾಗಿ ಈಚೆಗೆ ಬಹಳ ಸಂಶೋಧನೆಯೂ ಆಗಿದೆ. ಶಂಬಾ ಅವರು ಈ ಶೋಧನೆಯನ್ನು ಸಾಕಷ್ಟು ಬಳಸಿಕೊಂಡಿದ್ದಾರೆ.

ಆದರೆ, ೧೦೦ ವರ್ಷಗಳ ಹಿಂದೆ ಮಂಡಲೀಕರು ಒಂದು ವಿಶಿಷ್ಟ ದೈವತಕಥೆಯ ಅರ್ಥಗ್ರಹಣಕ್ಕಾಗಿ ಈ ಆಧುನಿಕ ತಂತ್ರವನ್ನು ಬಳಸಿದ್ದಾರೆ. ಸಂತಾನ ಪ್ರಾಪ್ತಿಗಾಗಿ 'ನಾರಾಯಣ'-'ನಾಗಬಲಿ'ಯನ್ನು ಮಾಡುವ ಕ್ರಿಯೆಯಲ್ಲಿ ಋಗ್ವೇದದ ಮಂತ್ರದ ವಿನಿಯೋಗವು ನಡೆಯುತ್ತದೆ. ಇದು ನಿಜವಿದ್ದರೆ ಈ ಋಗ್ವೇದದಲ್ಲಿ ನಾಗ ಸಂಪ್ರದಾಯದ ವಿಚಾರವು ನಾಗಪಂಥದ ತತ್ವಜ್ಞಾನವು ಸೋಜಿಗವಾದರೂ ಏನು? (ಪು. ೧೮೮-೯೨) ಈ ತೀರ್ಮಾನದ ಆಧಾರದ ಮೇಲೆ ಋಗ್ವೇದದಲ್ಲಿಯ 'ಅಯಂ ಗೌಃ ಪೃಶ್ನಿಃ' ಈ ಸೂಕ್ತವು ಸರ್ಪದೇವತೆಯನ್ನು ಕುರಿತೇ ಇರಬೇಕೆಂದು ಶ್ರೀ ಮಂಡಲೀಕರು ಭಾವಿಸಿದ್ದಾರೆ. ಆ ಸೂಕ್ತದ ದೈವತವೇ 'ಸಾರ್ಪರಾಜ್ಞೀ ಸೂರ್ಯೋ ವಾ' ಈ ಅಂಶವನ್ನು ಶಂಬಾ ಎತ್ತಿಹಿಡಿದು ಮುಂದುವರೆಸಿರುತ್ತಾರೆ.

ಆದರೆ 'ವೇದದಲ್ಲಿಯ ದೈವತ ಕಥೆಗಳು' (Vedic Mythology- ಲೇಖಕ ಪ್ರೊ ಮ್ಯಾಕ್‌ಡೊನೆಲ್) ಗ್ರಂಥ ಶ್ರೀ ಮಂಡಲೀಕರ ಲೇಖನವು ಪ್ರಕಟವಾದ ೨೦-೨೫ ವರ್ಷಗಳ ನಂತರ ಪ್ರಕಟವಾಗಿದೆ. ಆದರೂ ಈ ಹಿರಿಯ ಸಂಶೋಧಕರಿಗೆ ದೈವತಕಥೆಗಳ ಅರ್ಥದೊಂದಿಗೆ ಆಹ್ನಿಕ ಕ್ರಿಯೆಯ ಸಾಂಗತ್ಯವನ್ನು ಜೋಡಿಸುವ ಅಗತ್ಯ ಅನಿಸಲಿಲ್ಲ ಎಂಬುದು ಆಶ್ಚರ್ಯ. ಸಾರ್ಪರಾಜ್ಞೀ ಸೂಕ್ತವಂತೂ ಅವರ ಕಣ್ಣಿನಿಂದ ತಪ್ಪಿ ಜಾರಿತು. ಇದೇನು ಅಹಿಮಾಯೆ ಎನ್ನಬೇಕೆ? ಅಥವಾ ಪ್ರೊ. ಮ್ಯಾಕ್‌ಡೊನೆಲ್ಲರು ಏನೋ ಒಂದು Theory ಯ ಪೂರ್ವಗ್ರಹದ ಮೂಲಕ ಈ ವಾಸ್ತವಸತ್ಯವನ್ನು ಅರಿಯಲು ಅಸಮರ್ಥರಾದರೆನ್ನಬೇಕೆ? ಈ ಸಂಗತಿಯು ಶಂಬಾ ಅವರನ್ನು ತುಂಬಾ ಕಾಡಿದೆ.

ಈ ಸೂಕ್ತ ಮತ್ತು ಈ ಸೂಕ್ತದಲ್ಲಿಯ ದೈವತನಾಮದ ಸಂಕೇತ - ಇವುಗಳಲ್ಲಿ 'ಅಹಿಮಾಯೆ' ಯಾತು>ಜಾದು ಎಷ್ಟು ಪ್ರಭಾವಶಾಲಿಯಾಗಿದೆ ಎಂಬುದರ ಖಾತ್ರಿಯು 'ಸಾರ್ಪರಾಜ್ಞೀ ಸೂರ್ಯೋ ವಾ' ಈ ಒಂದು ನಾಮ ಸಂಕೇತದಿಂದಲೂ ಆಗಲು ಸಾಧ್ಯ. ಈ ನಾಮರೂಪದಲ್ಲಿ 'ವಾ ನ ವಾ' ಜೀವ ಹಿಡಿವ ಮೋಸದ್ದು ಆಗಿದೆ 'ಅಶ್ವತ್ಥಾಮ ಸತ್ತ' ಎಂಬ ಸಂಭ್ರಮ ಉಂಟುಮಾಡುವ ಕೂಗು ಹಾಕಲ್ಪಟ್ಟಿತಷ್ಟೆ. ಕೂಡಲೆ ಮುಂದೆ 'ನರೋ ವಾ ಕುಂಜರೋ ವಾ' ಎಂಬ 'ವಾ ನ ವಾ' ದ ಯಾತು. ಈ ಯಾತುವಿಗೆ ದ್ರೋಣ ಬಲಿಬಿದ್ದ. ಋಗ್ವೇದದಲ್ಲಿಯ, ಪ್ರಸ್ತುತ ಸೂಕ್ತದಲ್ಲಿ ನಾಗ (ಪುರುಷ) ಬಲಿಯಾಗುತ್ತಾನೆ. ಆಮರಣ ಕುಮಾರ ವ್ರತಿಯಾಗುವ ಪೂರ್ವದಲ್ಲಿ 'ನಾರಾಯಣ'ನು ಪುರುಷಮೇಧವನ್ನು ಆಚರಿಸಿದನು. ಇದರ ವರ್ಣನೆ ಶತಪಥ ಬ್ರಾಹ್ಮಣದಲ್ಲಿ ಬರುತ್ತದೆ. 'ಪುರುಷ', 'ನಾರಾಯಣ' ಮತ್ತು 'ನಾಗ' ಇವುಗಳಲ್ಲಿಯ ಸಾಂಕೇತಿಕ ಅಂತಃಸಂಗತಿಯನ್ನು ಲಕ್ಷಿಸುವುದು ಅಗತ್ಯವಿದೆ. ಪುರುಷಸೂಕ್ತದಲ್ಲಿಯ 'ಯಜ್ಞೇನ ಯಜ್ಞ ಮಯಜಂತ' ಋಕ್ಕಿನ ನಾರಾಯಣ (ನಾಗ) ಪುರುಷ ತಾನೆ ಬಲಿಯಾಗಿ ಸೃಷ್ಟಿಯನ್ನು ನಿರ್ಮಿಸುತ್ತಾನೆ ಎಂದು ಸಾಂಕೇತಿಕ ವರ್ಣನೆ ಇದೆ. ಈ ಅಂಶಗಳು ಅಧ್ಯಯನಕ್ಕೆ ಹೊಸ ಅರ್ಥವನ್ನು ಕೊಟ್ಟವು. ಈ 'ಸಾರ್ಪರಾಜ್ಞೀ ಸೂರ್ಯೋ ವಾ' ದೈವತ ಸೂಕ್ತದಲ್ಲಿಯ ಅರ್ಥವು ಅತ್ಯಂತ ಪ್ರಾಚೀನ ಯುಗದಲ್ಲಿ ನಡೆದ ಚಿತ್ರವನ್ನು ಕಣ್ಣೆದುರಿಗೆ ನಿಲ್ಲಿಸಬಲ್ಲದು. ಆದರೆ, ಇದರಲ್ಲಿಯ ಮೂಲದ ಚಿತ್ರವು ಅರಿಯಲು ಅಡ್ಡಿಯೊಡ್ಡುವ ಅಡ್ಡತೆರೆಯ ಮರೆ ಈ ಶಬ್ದ ಸಂಕೇತದಲ್ಲಿಯೇ ಇದೆ. ಈ ಹೊದಿಕೆ ಬದಿಗೆ ಸರಿದರೆ ಒಳಗಿನ ವಿಸಂಗತಿ ಚಿತ್ರವು ನಮಗೆ ಕಾಣುತ್ತದೆ.

ಆದರೆ, ಭಾಷೆಯಲ್ಲಿಯ ಸಂಕೇತ - ಶಬ್ದಪ್ರತಿಮೆ ಆ ಭಾಷಿಕರ ಸಾಮಾಜಿಕ ಜೀವನದ ಪರಿಸರದಿಂದ ಪ್ರಚಲಿತವಾಗುತ್ತದೆ. ಇಂಥ ಸಂಕೇತ : ಪ್ರತಿಮೆಗಳು ನಾನಾ ಅರ್ಥಗಳಾಗಿ ಒಮ್ಮೆಲೇ ಬಂದವು. ಈ ಅರ್ಥಗಳು ಬರುವುದರ ಹಿಂದೆ ಇತಿಹಾಸವಿರುತ್ತದೆ. ಅದರಲ್ಲಿ ಒಂದು ಕ್ರಮ ವ್ಯವಸ್ಥೆ ಇದ್ದದ್ದು ಮನವರಿಕೆ ಆಗುತ್ತದೆ. ಈ ಸೂಕ್ತದಲ್ಲಿ 'ಸರ್ಪ' ಎಂಬ ಸಂಕೇತವು ಅತ್ಯಂತ ಪುರಾತನವೆಂದು ಒಪ್ಪಬೇಕಾಗುತ್ತದೆ. ಏಕೆಂದರೆ ಸುಮೇರಿಯನ್, ಈಜಿಪ್ಟ್, ಕ್ರಿಟ್, ಗ್ರೀಸ್ ಇತ್ಯಾದಿ ಪ್ರಾಚೀನ ಸಂಸ್ಕೃತಿಗಳಲ್ಲಿಯ ದೈವತ 'ನಾಗ' ಸರ್ಪ dragon ಸ್ವರೂಪದ್ದಾಗಿದೆ.

ಆದರೆ, ಇದರಲ್ಲಿ ಇನ್ನೂ ಸ್ವಲ್ಪ ಸೂಕ್ಷ್ಮಗಳಿವೆ. ಸರ್ಪ ಮತ್ತು ನೀರು ಇವೆರಡೂ ಸಂಕೇತಗಳಲ್ಲಿ ಅದ್ವೈತ-ಏಕಾತ್ಮತೆಯನ್ನು ಗೃಹೀತವಿಟ್ಟುಕೊಂಡಂತೆ ಕಾಣುತ್ತದೆ. ಸರ್ಪವು ನೀರನ್ನು ನಿರ್ಮಿಸುತ್ತದೆ. ನೀರು ಸರ್ಪಕ್ಕೆ ಜನ್ಮ ನೀಡುತ್ತದೆ. ಈ ಅನ್ಯೋನ್ಯ ಸಂಬಂಧವು ಋಗ್ವೇದದ 'ಅಪಾಂ ನಪಾತ್' ಎಂಬ ಪ್ರತಿಮೆಯಲ್ಲಿ ಅಭಿಪ್ರೇತವಿದೆ. ಅಪಾಂ ನಪಾತ್: ಇದರಲ್ಲಿ ನೀರು ಸ್ತ್ರೀ ಪ್ರತೀಕ. ಆದರೆ ನಪ್ತಾ=ಸರ್ಪ. ಇದು ಕುಮಾರ, ಪುರುಷನ ಪ್ರತೀಕವೇ ಆಗಿದೆ. ಕೆಲವು ಸಲ 'ಅಪಾಂ ನಪಾತ್' ಪ್ರತಿಮೆ ಸರ್ಪ ಮಿಥುನರೂಪದಲ್ಲಿಯೂ ಕಾಣುತ್ತದೆ. ಉದಾಹರಣೆಗೆ ಸುಮೇರಿನ ತೈಮಾತಾ ಮತ್ತು ಅಪ್ಸು-ಎರಡೂ ದೈವತಗಳೂ ಉಂಟು.

ನಾಗಪ್ರತಿಮೆಯ ಆಶಯ

ಈ ನಾಗ: ಸರ್ಪ (ನೀರಿನದು) ಅಶ್ವನಾಗುತ್ತಾನೆ! ಅಶ್ವರೂಪವು ತೀರಾ ಅರ್ವಾಚೀನ. ಅದಕ್ಕೆ ಹಿಂದೆ ಅಜ (ಕುರಿ) ಅಜಾ (ಆಡು) ಎಂಬ ಸಂಕೇತಗಳು ಪ್ರಚಲಿತವಿದ್ದವು. ಅ-ಜ, ಅ-ಜಾ ಅಂದರೆ ಹುಟ್ಟದೇ ಇದ್ದ ಪ್ರಾಣಿ! ಇಂಥ ಎರಡು ಅರ್ಥಗಳಿದ್ದ ಸಂಕೇತದ ಮರೆಯಲ್ಲಿ ನಿಂತು ಅಜ (ಪುಲ್ಲಿಂಗ), ಅಜಾ (ಸ್ತ್ರೀಲಿಂಗ) ಇವರ ಮಿಥುನಯೋಗದ ವರ್ಣನೆಯಲ್ಲಿ ಹೆಣ್ಣು-ಗಂಡಿನ ಸಂಯೋಗವಂತೂ ಅಭಿಪ್ರೇತವೇ ಇದೆ. ಈ ದೃಶ್ಯ ಈ ಮೈಥುನ ಕ್ರಿಯೆ ಕೇವಲ ಅಭಾಸವಾಗಿದೆ ಎಂಬ ಶ್ರದ್ಧೆಯನ್ನು ಉಂಟು ಮಾಡುವ ಪ್ರಯತ್ನವಾದದ್ದು ಇಂಥ ಎಲ್ಲ ಯಾತು ಮಂತ್ರಗಳ ಒಳಗಿಂದ ಪ್ರತೀತಿಗೆ ಬರುತ್ತದೆ.

ಈ 'ಸಾರ್ಪರಾಜ್ಞೀ ಸೂರ್ಯೋ ವಾ' ಸೂಕ್ತದಲ್ಲಿಯ ಅಂಶ ಇಂತಹುದೇ ಹಿಡಿತಬಿಡಿತದ್ದು ಆಗಿದೆ. ಗಾರುಡೀ ಮಾಟದ: ನಾಗ ಸಂಪ್ರದಾಯದ ವೈಶಿಷ್ಟವೇ ಇದು. ಇದರಿಂದ ಇಂಥ ಯಾತು ಮಂತ್ರಯುಕ್ತವಾದ ಈ ಋಗ್ವೇದವು ನಾಗಪಂಥದ ಗ್ರಂಥವಾಗಿದೆ ಎಂದು ಹೇಳಬೇಕಾಗುತ್ತದೆ. ಈ ಸರ್ಪ-ಸರ್ಪಿ ಸಂಕೇತ ಅಜ-ಅಜಾ, ವೃಶಭ-ವೃಶಭೌ, ಗರ್ದಭ-ಗಾರ್ದಭೀ (ಅಶ್ವರಾಗುವದಕ್ಕೆ ಪೂರ್ವದಲ್ಲಿ) ರೂಪಗಳಲ್ಲಿ ಇದ್ದವು. 'ಬಿಳಿಯ ಗರ್ದಭ' ಈ ಅರ್ಥದ ಶ್ವೇತ ಅಶ್ವತವೆಂಬ ಉಪನಿಷತ್ತಿನ ಹೆಸರನ್ನು ತಪಾಸಣೆ ಮಾಡಿ ನೋಡಬೇಕು. ಅಶ್ವ (ವಿಷ್ಣು) ಅಶ್ವತರ (:ರುದ್ರ) ಇವೆರಡು ಸಂಪ್ರದಾಯಗಳಲ್ಲಿ ತರ ಯಾರು? ತಮ ಯಾರು? ಎಂಬ ಮೇಲಾಟ ಬಹುಕಾಲ ಇತ್ತು. ಇದರ ವೃತ್ತಾಂತ ಸಿಗಬಹುದು. ವೃಷಭ-ಭೀ ಈ ಸಂಕೇತಗಳಿಗೂ ಪೂರ್ವದಲ್ಲಿ ಮಹಿಷ-ಮಹಿಷೀ ಈ ಪ್ರತಿಶಬ್ದಗಳು ಸಂಸ್ಕೃತಿಯಲ್ಲಿ ಪ್ರಚಲಿತವಿದ್ದವು. ಋಗ್ವೇದದಲ್ಲಿಯ 'ಬ್ರಹ್ಮ ದೇವಾನಾಂ' 'ಮಹಿಷಃ ಮೃಗಾಣಾಂ'- ಈ ವರ್ಣನೆಯಲ್ಲಿ ಸೋಮ ಎಂಬ ಹೆಸರಿನ ಚಂದ್ರನ ವರ್ಣನೆ ಉಂಟೇ ಉಂಟು.

ಪ್ರಸ್ತುತ 'ಸಾರ್ಪರಾಜ್ಞೀ ಸೂರ್ಯೋ ವಾ' ಈ ಸೂಕ್ತದಲ್ಲಿಯ ಆಶಯವನ್ನು ಅರಿಯುವುದಕ್ಕೆ ಮಹಿಷ-ಮಹಿಷೀ ಸಂಕೇತಗಳ ಪೂರ್ವವೃತ್ತ ಗೊತ್ತಿರುವುದು ಅವಶ್ಯವಿದೆ. ಏಕೆಂದರೆ, ಈ ಸೂಕ್ತದಲ್ಲಿಯ ದೇವಿ ಸಾರ್ಪರಾಜ್ಞೀ ಇವಳು ಸೂರ್ಯರೂಪಿಯಾದ ಮಹಿಷನ ಬಲಿ ತೆಗೆದುಕೊಳ್ಳುತ್ತಾಳೆ ಎಂಬ ವರ್ಣನೆ ಋಗ್ವೇದದ ಒಂದು ಕಡೆ ಬರುತ್ತದೆ (೧೦ ೧೮೯.೨) ಮಹಿಷನ ಬಲಿ ಪಡೆಯುವವಳು (ಮಹಿಷನ ಮಡದಿ: ಮಹಿಷಿ) ಈ ದೇವಿ ಯಾರು? 'ಮಹಿಷಾಸುರ ಮರ್ದಿನೀ' ಎಂದು ವಿಶ್ವ ವಿಖ್ಯಾತಳಾದ ಈ ದೇವಿಗೆ ಕಾಲಿ (:ಕಾಲ=ಸರ್ಪ), ದುರ್ಗಾ, ಕುಮಾರಿ ಎಂಬ ಪರ್ಯಾಯ ನಾಮಗಳು ಇಂದೂ ರೂಢಿಯಲ್ಲಿವೆ. 'ಮಹಿಷ' ಇದು ಸೂರ್ಯನೆಂಬ ಹೆಸರಿನ ಚಂದ್ರನ ಪುಲ್ಲಿಂಗ ರೂಪ. ಇದೇ ಚಂದ್ರನು ಸ್ತ್ರೀ ರೂಪದಲ್ಲಿ 'ಮಹಿಷೀ' ಎನಿಸಿಕೊಳ್ಳುತ್ತಾನೆ. ಮಹಿಷೀ: ಚಂದ್ರಾ ಮಹಿಷನ ಬಲಿ ತೆಗೆದುಕೊಳ್ಳುತ್ತಾಳೆ ಎಂದು ಹೇಳುವುದು ಶುದ್ಧ ವಿನೋದವಾಗುತ್ತದೆ. ಶ್ರೀ ಶಂಕರಾದಿ ಆಚಾರ್ಯರ ತತ್ವಜ್ಞಾನದ ಮೂಲ ಋಗ್ವೇದದಲ್ಲಿಯ ಆದಿದೈವತ ಕತೆಯೊಳಗಿಂದ ಒಸರುತ್ತಿರುವುದು ಇಲ್ಲಿ ಕಾಣುತ್ತದೆ. ಮಾನವಶಾಸ್ತ್ರದ ಈ ಸೂತ್ರ Myths praced philosophy: ಜ್ಞಾನೋಪಲಬ್ಧಿಶಾಸ್ತ್ರಕ್ಕೆ ಸುಸಂಗತವಿದ್ದು (Sociology of Knowledge) ಜೀವನ ಸತ್ಯದ ದರ್ಶನವನ್ನು ಮಾಡಿಸುತ್ತದೆ.

ಆದರೆ, ಈ ಚಾಂದ್ರ ಭೂಮಿಕೆಯ ಮೇಲಿನ ಮಿಥುನ ಯೋಗದಲ್ಲಿ ಸೂರ್ಯನ ಸಂಬಂಧವು ಎಲ್ಲಿ

ಬರುತ್ತದೆ? ಹೇಗೆ ಬರುತ್ತದೆ? ಈ ಒಗಟಿಗೆ ಉತ್ತರವೇನು? ಆದರೆ, ಇದರ ಉತ್ತರವನ್ನು ಕೇವಲ ಭಾರತೀಯ-ಋಗ್ವೇದದ ಸಂದರ್ಭದಲ್ಲೇ ಹುಡುಕುವುದಕ್ಕಿಂತ ಶ್ರೀ ಮಂಡಲೀಕರು ಸೂಚಿಸಿದ. ಇನ್ನೂ ಒಂದು ಶ್ರೇಷ್ಠತಮ ಒರೆಗೆ ಹಚ್ಚಿ ಈ ಉತ್ತರವನ್ನು ಹೇಳುವುದು ಹೆಚ್ಚು ಯುಕ್ತವೆನಿಸುತ್ತದೆ. ಈ ಅಂಶದ ಕಡೆ ಶಂಬಾ ಅವರು ಚಿಂತಿಸಿದ್ದರು.

ಆದರೆ, ಋಗ್ವೇದದಲ್ಲಿಯ ನಾಗ ಸಂಪ್ರದಾಯದ ಅಸ್ತಿತ್ವವು ಸಿದ್ಧವಾಗಲು ಆಧುನಿಕ (modern) ಕಾಲದಲ್ಲಿಯ 'ನಾಗ' ಪೂಜೆಯು ವಿಶೇಷವಾಗಿ ಉಪಯೋಗವಾದೀತೆಂಬುದು ಇಲ್ಲ. ಆದರೂ ನಾಗಪೂಜೆಯ ಈ ಆಚರಣೆಯಲ್ಲಿಯ ತಾತ್ವಿಕ ಪಾತಳಿಯ ಮೇಲಿನ ವೈಚಾರಿಕ ಆಕೃತಿಯನ್ನು ತಿಳಿಯಲು ಶಕ್ಯವಾಗುವುದಾದರೆ ಕೆಲವು ವೈಚಾರಿಕ ಆಕೃತಿಗಳು ಈ ಸನಾತನ (perenial) ಸ್ವರೂಪದ್ದಾದುದರಿಂದ ಪ್ರಾಚೀನ ಕಾಲದಲ್ಲಿಯ 'ನಾಗ' ಸಂಪ್ರದಾಯವು ಅರ್ವಾಚೀನ ಕಾಲದಲ್ಲಿ ವೇಷವನ್ನು ಬದಲಿಸಿ ಯಾವ ಸ್ವರೂಪದಲ್ಲಿ, ಯಾವ ಪ್ರತಿಮೆಗಳ ಮಾಧ್ಯಮದೊಳಗಿನಿಂದ ವ್ಯಕ್ತವಾಗುತ್ತದೆ. ಇದನ್ನು ನಾವು ಪರೀಕ್ಷಿಸಿ ನೋಡುವುದು ಶಕ್ಯವಿದೆ. ಮೊದಲು, ಈ ನಾಗಾರಾಧನೆಯ ಪುರಾತನ ಪ್ರಸಾರವು ಭಾರತದ ಹೊರಗಿನ ದೇಶಗಳಲ್ಲಿ ಯಾವ ಸ್ವರೂಪದ್ದಾಗಿತ್ತು ಎಂಬುದರ ಅಧ್ಯಯನ ನಡೆಸುವುದು ಸೂಕ್ತ. ಸುಮೇರಿಯನ್, ಈಜಿಪ್ಟ್, ಗ್ರೀಕ್ ಕಡೆಯ ಪ್ರಾಚೀನ ಸಂಪ್ರದಾಯಗಳ ಸ್ವಲ್ಪಮಟ್ಟಿಗಿನ ಸ್ವರೂಪದಲ್ಲಿಯ ಸ್ಥೂಲವಾದ ಪರೀಕ್ಷಣದಲ್ಲಿ ಈ ನಾಗಾರಾಧನೆ ಈ ಜನರಲ್ಲಿ ಪ್ರಚಲಿತವಿದ್ದದ್ದು ಸಿದ್ಧವಾಗುತ್ತದೆ. ಈ ನಾಗ: ಸರ್ಪನೆಂದರೆ ಪ್ರಚ್ಛನ್ನ ಚಂದ್ರನಿರುತ್ತಾನೆ. ಇದು ಸರ್ವಮಾನ್ಯವಿದೆ. ಈ ನಾಗಾರಾಧನೆಯೆಂದರೆ 'ಮಧು: ಚಂದ್ರ' (honeymoon) ಆಹ್ನಿಕ (Ritual) ಧಾರ್ಮಿಕ ಸ್ವರೂಪದ ಆಚರಣವಾಗಿದೆ. ಆದ್ದರಿಂದ, ಈ ನಾಗ ಸಂಪ್ರದಾಯವು 'ರಾತ್ರಿ' ಉಪಾಸಕರ ಸಂಪ್ರದಾಯವಾಗಿದೆ. ಗ್ರೀಕ್ ಪ್ರಾಚೀನ ಸಂಸ್ಕೃತಿಯಲ್ಲಿಯ 'Elysian mysteries Dionysion festivals' 'orphism' ಇಂಥ ಪ್ರಕಾರಗಳು ಭಾರತೀಯ ಶಾಸ್ತ್ರ ಉಪಾಸನೆಗಳ ಸಮಾಂತರ ಸ್ವರೂಪದವೇ ಆಗಿದ್ದವು. ಋಗ್ವೇದದಲ್ಲಿಯ 'ಚಮಸಪಾನ'-ಪಾತ್ರ 'ಭೋಗ' ವರ್ಣನೆ ಮಾಡುವ ಸೂಕ್ತವು ಈ ಸಂದರ್ಭದಲ್ಲಿ ತೌಲನಿಕ ಅಧ್ಯಯನಕ್ಕೆ ಅರ್ಹವಾಗಿದೆ. ತ್ವಷ್ಟನು ನಿರ್ಮಿಸುವ ಈ ಚಮಸಪಾನ (ಭೋಗ) ಪಾತ್ರ - 'possibly represents the moon' ಎನ್ನುತ್ತಾರೆ. ಮ್ಯಾಕ್‌ಡೊನೆಲ್ ಸಾಹೇಬರು. ಇದು ಸಾಮೂಹಿಕ ಸ್ವರೂಪದಲ್ಲಿ ಆಚರಿಸಲಾಗುತ್ತಿದ್ದ ಪ್ರಕಾರವೇ ಆಗಿತ್ತು. ಇದನ್ನು ಸೂಚಿಸುವ ಸಾಂಕೇತಿಕ ವರ್ಣನೆ ಇಲ್ಲಿ ದೊರಕುತ್ತದೆ. ಈ ಚಮಸಪಾನ ಭೋಗದಲ್ಲಿ ಭಾಗವಹಿಸುವುದರಲ್ಲಿಯ ತಾತ್ವಿಕ ಪಾತಳಿಯ ಮೇಲಿನ ಒಂದು ಸಂವಾದ - ಚರ್ಚೆಯು ಒಂದು ದೃಷ್ಟಿಯಿಂದ ಮಹತ್ವದ್ದೇ ಆಗಿದೆ. ಈ ಭೋಗಕ್ರಿಯೆಯಲ್ಲಿ ಘಟಕಗಳು ಮೂರು: ಮೊದಲನೆಯದು ಆಪ (ಸಲಿಲ) ಎರಡನೆಯದು ತತ್ವ (ಅಗ್ನಿ) ಮೂರನೆಯದು ಮರ್ಧಯಂತೇ ಆಘಾತ ಮಾಡುವ ಪುರುಷ ಇಂದ್ರಿಯ, ಸೃಜನಕ್ಕೆ ಅವಶ್ಯವಾದ ಈ ಮೂರು ಘಟಕಗಳಲ್ಲಿ 'ಏಕಂ ಏವ' ಮಹತ್ವದ್ದು ಯಾವುದು? ಈ ಕುರಿತ ವಾದವು ಇಲ್ಲಿ ನಡೆದಿದ್ದು ನಮೂದು ಇದೆ. ಈ ಏಕಂಸತ್ ಪಂಥದಂತೆ 'ಅಣು-ಪರಮಾಣು'. ಇದು ಏಕಂ ಅಥವಾ ಸಮಗ್ರ ಅಖಂಡಿತ ಅದಿತಿ ಸ್ವರೂಪಿಯಾದ ಏಕಂ - ಇಂಥ ಎರಡು ಭೂಮಿಕೆಗಳ ಜಗಳವಿದು. ಒಬ್ಬ ಹೇಳುತ್ತಾನೆ: ಆಪಃ ಭೂಮಿಷ್ಠಾಃ; ಇನ್ನೊಬ್ಬನು ಹೇಳುತ್ತಾನೆ; ಅಲ್ಲ ಅಗ್ನಿಯೇ ಶ್ರೇಷ್ಠ. ಆಗ ಮೂರನೆಯವನು ಹೇಳುತ್ತಾನೆ: 'ಪುರುಷನ ಆಯುಧವೇ' ಇದು. ಇದಿಲ್ಲದಿದ್ದರೆ ಎಲ್ಲವೂ ವ್ಯರ್ಥ. ಹೀಗೆ ಮಾತಾಡುತ್ತಾ (ಪರಸ್ಪರ ವದಂತಃ) 'ಚಮಸ' ಪಾತ್ರದ ಮೇಲೆ ಹನವ ಮಾಡಹತ್ತಿದರು. (ಚಮಸಾ ಅಪಿಂಶತ್)

ಈ ವರ್ಣನೆಯಲ್ಲಿಯ 'ಮರ್ಧಯಂತಿ' ಎಂಬ ಸಂಕೇತದಲ್ಲಿರುವ ಶ್ಲೇಷ (ಸೌರ) ಇಂದ್ರನ ಧ್ವಂಸ ಮಾಡುವ ಹಾಗಿದೆ. ಆದರೆ, ಆ ಚರ್ಚೆಗೆ ಇಲ್ಲಿ ಅವಕಾಶವಿಲ್ಲ. 'ಮರ್ಧಯಂತಿಃ ವಜ್ರನಾಮ' ಈ ಸಾಂಪ್ರದಾಯಿಕ ಅರ್ಥವು ಇಂದ್ರನು ಭೋಗಿ ಸರ್ಪವೆಂದು ಜಾಹೀರು ಮಾಡುತ್ತಿದೆ. ಇಂದ್ರನ 'ವಜ್ರೇಣ ಹನ್ಯಮಾನತ್ವಾತ್' ಎಂಬ ವಿವರಣೆ ಉಂಟು. ಅಂದರೆ, ಈ ಚಮಸ (ಪಾನ) ಪಾತ್ರ ಭೋಗವು ಸುಫಲೀಕರಣ (fertility cult)

ಸಂಪ್ರದಾಯವೇ ಆಗಿದೆ. ಈ ಸುಫಲೀಕರಣ ವಿದ್ಯೆಯು ಮುಂದೆ ಸುಪ್ರಜಾ ಜನನ (Eugenics) ಶಾಸ್ತ್ರದಲ್ಲಿ ಪರಿವರ್ತನಗೊಳ್ಳುತ್ತದೆ. ಮಹಾಭಾರತದ ಕಾಲದಲ್ಲಿ 'ನಿಯೋಗ'ವೆಂಬುದು ನಾಗ ಸಂಪ್ರದಾಯದ ಪ್ರಕಾರವಾಗಿತ್ತು. ಪ್ಲೇಟೋನ ಆದರ್ಶರಾಜ್ಯದಲ್ಲಿ ಸುಪ್ರಜೆಯನ್ನು ಹುಟ್ಟಿಸಲಿಕ್ಕೆ ಸೂಚಿಸುವ ತಂತ್ರವು ಇಲ್ಲಿಯ ಶಾಕ್ತಪಂಥದ ತಂತ್ರದಂತೆ ಇದ್ದೇ ಇದೆ.

ವೇದಕಾಲದಲ್ಲಿ ಈ ಆಹ್ನಿಕವು ನಿಂದ್ಯವೆಂದು ಗೊತ್ತುಪಡಿಸಬೇಕೆಂಬ ಸೂಚಕ ಉಲ್ಲೇಖಗಳೇನೊ ಇವೆ. ಇದು 'ದೈವ' ಪಾನವಾಗಿದೆ. ಆದರೂ (ಮೂರ್ಖ, ಅಜ್ಞಾನಿ) ಅನಿಂದ್ಯವಾದ ಈ ಅನುಷ್ಠಾನ ಕ್ರಿಯೆಯನ್ನು ನಿಂದ್ಯವಾಗಿ ಮಾಡುತ್ತಾರೆಯೇ 'ಯೇ ನರಾಃ ಅನಿಂದಿಷು ನಿಂದಾಂ ಕುರ್ವಂತಿ' ಎಂಬ ಮಾತಿದೆ. ಇದಲ್ಲದೆ, ಈ ಸೂಕ್ತಕ್ಕೆ ಆರಂಭದಲ್ಲಿ 'ಯೇ ನ ನಿಂದಿಮ ಚಮಸಂ' ಎಂದು ಆದೇಶವಿದೆ. ಈ ಚಮಸಪಾತ್ರ ಆರಾಧನೆಯು ಶಾಕ್ತ ತಂತ್ರದ್ದಾಗಿತ್ತು ಎಂದು ಸೂಚಿಸುವ ಮೂಲಭೂತ ಸಾಂಕೇತಿಕ ಪ್ರತಿಮೆಯೂ ಈ ಸಂಹಿತೆಯ ಮೊದಲ ಋಚೆಯಲ್ಲಿಯೇ ಇದೆ. ಈ ಚಮಸ ಪಾತ್ರಕ್ಕೆ 'ಮಹಾಕುಲ'ವೆಂಬ ವಿಶೇಷಣವೂ ಉಂಟು. (ಕುಲ>) ಕೌಲವೆಂಬ ಆಚಾರ ಪ್ರಕಾರವು ಶಾಕ್ತ ಪಂಥದ್ದೆಂಬುದು ಇಂದು ಸರ್ವ ಮಾನ್ಯವಾಗಿದೆ. 'ಮಹಾಕುಲ'ವೆಂದರೆ 'ಮಹಾಪಾತ್ರ' ಬಂಗಾಲ, ಒರಿಸ್ಸಾದತ್ತ ಮಹಾಪಾತ್ರ ಎಂಬ ಕುಲನಾಮವು ಉಂಟು. ಕನ್ನಡ ಜಿಲ್ಲೆಗಳಲ್ಲಿ 'ನಾಗಪತ್ರಿ' ಎಂಬ ಬ್ರಾಹ್ಮಣ ವರ್ಗವಿದ್ದುದನ್ನು ಶ್ರೀ ಮಂಡಲೀಕರು ತಮ್ಮ ಪ್ರಬಂಧದಲ್ಲಿ ಹೇಳುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂದಿಗೂ ಅವರು ಇದ್ದಾರೆ. ಮಹಾಪಾತ್ರ ಆರಾಧನೆ ಮಹಾರಾಷ್ಟ್ರದಲ್ಲಿ ಮಹಾಲಕ್ಷ್ಮೀ ಎಂಬ ಹೆಸರಿನಿಂದ ನವರಾತ್ರಿಯಲ್ಲಿ ನಡೆಯುತ್ತದೆ. ಈ ಆರಾಧನೆಯಲ್ಲಿ ಘಟ: ಕೊಡದ ಪೂಜೆ ಉಂಟು. 'ಆಕಾಲ ಹಚ್ಚುವುದು' ಎಂಬ ಮರಾಠೀ ವಾಕ್‌ಪ್ರಕಾರವು ಮಹಾರಾಷ್ಟ್ರದಲ್ಲಿಯ ಈ ವೇದಕಾಲದ 'ಮಹಾಕುಲ' ಚಮಸ-ಪಾತ್ರದ ಪಾನಗಳ ನೆನಪನ್ನು ನಮಗೆ ಕೊಡುತ್ತದೆ.

ಈ ರಾತ್ರಿ ಸಂಪ್ರದಾಯವು ವೇದಕಾಲದ ಮೂಲ ಸಂಪ್ರದಾಯದ ಸುಧಾರಿಸಿದ ಆವೃತ್ತಿಯಾಗಿದೆ. ರಾತ್ರಿ ಸಂಪ್ರದಾಯ 'ಹಗಲು' ಆಚರಿಸುವ ರೂಢಿಯಿಂದಾಗಿ ಈ ಬದಲಾವಣೆ ಭದ್ರವಾಗಿರಬೇಕು! ಆದರೆ ಸೂರ್ಯನು ನಾರಾಯಣನಾಗುವುದರಿಂದ, ಸಾಂಕೇತಿಕ ರೀತಿಯಿಂದ ಹಗಲು ಕೃಷ್ಣವರ್ಣದ್ದಾಯಿತು. ಈ ರಾತ್ರಿ ಸಂಪ್ರದಾಯಕ್ಕೆ ಪ್ರಕಾಶವು (ಸವಿತೃ) ಸೂರ್ಯ ಶತ್ರುವು ಎನಿಸುವುದು ಸ್ವಾಭಾವಿಕ. ಈ ಪ್ರಕಾಶವು 'ಸೂರ್ಯ' ದ್ವೇಷ ರಾತ್ರಿ (:ಕತ್ತಲೆ) ಪೂಜಕರಲ್ಲಿ ಭಾರತದಲ್ಲಿಯೇ ಆಗುತ್ತಿದೆ ಎಂದಲ್ಲಿ ಪ್ರಾಚೀನ ಗ್ರೀಕ್ ಈಜಿಪ್ಟ್‌ದಲ್ಲಿಯ ಪ್ರತಿಮೆಗಳಲ್ಲಿ ಪ್ರತಿಬಿಂಬಿತವಾಗಿದ್ದ ಈ ದ್ವೇಷವು ಇಂದಿಗೂ ಈ ಉಲ್ಲೇಖಗಳಲ್ಲಿ ಅಡಗಿದ್ದು ಕಾಣುತ್ತದೆ.

ವೇದದಲ್ಲಿಯ 'ಹಿರಣ್ಯಗರ್ಭ' (golden germ) ಪ್ರಜಾಪತಿ ಈ ದೈವತವನ್ನು ಹೋಲುವ pripos ಎಂಬ ಹೆಸರಿನ ದೈವತವು ಯುರೋಪಿನಲ್ಲಿ ಪೂಜಿಸಲಾಗುತ್ತಿತ್ತು. Priapas: God of Procreation ಮತ್ತು ಅದರಿಂದ ರೂಢವಾದ Priapism ಎಂಬ ಸಂಕೇತಕ್ಕಿರುವ ಲೈಂಗಿಕ ಸ್ವರೂಪದ ಅರ್ಥವನ್ನು ಲಕ್ಷಿಸುವುದು ಅಗತ್ಯವಿದೆ. ವೇದಗಳೇ ಮೊದಲಾದ ಗ್ರಂಥಗಳ ಪರಿಚಯವಾಗುವುದರ ಮೊದಲು ಬರೆದ, ಪ್ರಬಂಧದಲ್ಲಿ ಇಂಗ್ಲಿಷ್ ಸಂಶೋಧಕನೊಬ್ಬ ಅಲ್ಲಿಯ 'ಪ್ರಜಾಪತಿ' ದೇವತಾರಾಧನೆಯಲ್ಲಿ ಪ್ರಚಲಿತವಿದ್ದ ಪ್ರಾಚೀನ Icons (ಪ್ರತಿಮೆ) ನೀಡಿದ್ದಾನೆ. ಈ iconಗಳಲ್ಲಿ ವೇದದಲ್ಲಿಯ 'ಅಜ ಏಕಪಾತ್' ಎಂಬ ಮಾದರಿಯ ದೈವತ ನಾಮಗಳ ಸ್ಪಷ್ಟೀಕರಣ ದೊರೆಯುವ ಮೂರ್ತಿ ಉಂಟು. ಅಜ ಅಂದರೆ, ಜನ್ಮಕ್ಕೆ ಬಾರದ 'ವಿದೇಹಿ; ಜನಕ-ಅಜ 'ಏಕಪಾತ್' ದೇವನ ಮೂರ್ತಿಯನ್ನು ನೋಡಿದಾಗ ಹೆಸರು ಬೇರೆ ಬೇರೆ ಇಡುವುದರಿಂದ ಆತ್ಮವಂಚನೆ ಪರವಂಚನೆಗಳು ಮಾತ್ರ ಆಗುತ್ತವೆ ಎಂಬುದರ ಮನವರಿಕೆ ಆಗುತ್ತದೆ.

ಈ ಹಿನ್ನೆಲೆಯಲ್ಲಿ ಶಂಬಾ ಅವರು ತಮ್ಮ ಗ್ರಂಥದ ಉದ್ದಕ್ಕೂ ವಿಶ್ಲೇಷಿಸಿದ್ದು, ವ್ಯಾಖ್ಯಾನಿಸಿದ್ದು ನಿಶ್ಚಿತವಾಗಿ ಹೇಳಿದ್ದು ನಾಗ: ಲಿಂಗ ಸರ್ಪಾರಾಧನೆ ಭಾರತದಲ್ಲಿ ಮಾತ್ರವಲ್ಲ, ಯೂರೋಪಿನಲ್ಲಿ ಮಾತ್ರವಲ್ಲ, ಸಮಾನ

ಸ್ವರೂಪದ ಸಾಂಕೇತಿಕ ಭಾಷೆಯು ಎಲ್ಲ ಕಡೆಯೂ ಪ್ರಚಲಿತವಿತ್ತು ಎಂದು. ಭಾರತದಲ್ಲಿಯ ನಾಗ ಸಂಪ್ರದಾಯವು ಸೂರ್ಯನನ್ನು ಚಂದ್ರನಾಗಿಸಿದ 'ಸೂರ್ಯ ನಾರಾಯಣ'= ನಾರ (ಸೃಜನ ಜಲ) ಅಯನ ಈ ಸೃಜನ ಜಲವನ್ನು ಪ್ರವಿಸುವ ದಾರಿ-ಮಾರ್ಗ ಆಗುತ್ತಾನೆ. ಈ ಬೂಟಾಟಿಕೆಯ ರೂಪದ ಕೃತ್ಯದ ಸಾಫಲ್ಯವು ಕಾಣಸಿಗಬಹುದು ಚಂದ್ರನು ಮಾರ್ತಾಡನೆಂಬ ಹೆಸರಿನ ಸೂರ್ಯನೆನಿಸಿಕೊಳ್ಳುತ್ತಾನೆ. ಸಲಿಲ=ಜಲ ಸ್ವರೂಪಿಯಾದ ಅದಿತಿಯ ಪುತ್ರನೆಂಬ ವರ್ಣನೆ ನೀರಿನೊಳಗಿಂದ ಜನ್ಮತಾಳುವ ಈ ದೇವ 'ಮೃತಾತ್ ಅಂಡಾತ್ ಜಾತಃ' ಅರ್ಥದ ಮಾರ್ತಾಂಡನೆಂಬ ಹೆಸರನ್ನು ಧರಿಸುತ್ತಾನೆ. ಪ್ರಜಾಪತಿ ಪುತ್ರನೆನಿಸಿಕೊಳ್ಳುವ ಪತಂ-ಗ ಹೆಸರಿನ ಸೂರ್ಯ(?) ದೈವತ 'ಸಾರ್ಪರಾಜ್ಞೀ' ಬರುತ್ತದೆ.

ನಾಗ ಸಂಪ್ರದಾಯದ ಈ ಎಲ್ಲ ಕೃತಿಗಳಿಂದ ಈ ಪಂಥದವರಿಗೆ ಸೂರ್ಯ (ಹಗಲು) ಚಂದ್ರ (ರಾತ್ರಿ) ಎಂಬ ಈ ಮೂಲಭೂತ ಭೇದವು ಒಪ್ಪಿಗೆಯಿಲ್ಲ ಎಂಬುದು ಸ್ಪಷ್ಟ. ಈ 'ನಾಗ' ಸಂಪ್ರದಾಯವು 'ಏಕಸ್ವರೂಪಿಯಾದ ಸತ್' ಸತ್ಯದ ಉಪಾಸಕರಾಗಿದೆ. 'ರಸೋ ವೈ ಸಃ' 'ಆನಂದಂ ಬ್ರಹ್ಮ' ಈ ಸೂತ್ರದಿಂದ ಇದು ತತ್‌ಮಯದ ಆಶಯವಾಗಿದೆ. ಏಕಂ ಏವ ಅದ್ವಿತೀಯಂ ಈ ಶ್ರದ್ಧೆಯು ಸರ್ವಾಧಿಕಾರಿ ಪ್ರವೃತ್ತಿಗೆ ಪ್ರೇರಕವಾಗಿದೆ. ನಿಯಮ, ಅರ್ಥ, ವಿಚಾರ ಇವುಗಳಿಗೆ ಎಡೆಯಿಲ್ಲದ ಏಕಾಂತಿಕ ಸ್ವೈರ ಭಾವೋತ್ಕಟ ಮನೋವೃತ್ತಿಗೆ ಪೋಷಕವಾದ ಭೂಮಿಕೆಯು ಈ 'ಏಕಂ ಸತ್' ಸಂತ ಪಂಥದ ತತ್ತ್ವಜ್ಞಾನದಲ್ಲಿ ಕಾಣುತ್ತದೆ. 'ಪಿಂಡಬ್ರಹ್ಮಾಂಡ'ದ ಐಕ್ಯದ ಸ್ವರೂಪದ ಜೀವನ ದೃಷ್ಟಿ ಇರುತ್ತದೆ. ಈ ಜೀವನ 'ಅರ್ಥಶೂನ್ಯ'ವಿದೆ ಎಂದು ಈ ಸಂಪ್ರದಾಯದ ಮುಖ್ಯಶ್ರದ್ಧೆಯಾಗಿದೆ. ಆದ್ದರಿಂದ, ಈ 'ಏಕಂ ಸತ್' ವಾದವು ಮೂಲತಃ ಅಸಾಮಾಜಿಕವಾಗಿದೆ. ಹೀಗೆ ಈ ನಾಗಪಂಥದ ಜೀವನ ಪ್ರೇರಕವಾದ ವೈಚಾರಿಕ ಆಕೃತಿ ಎಲ್ಲೆಲ್ಲೂ ಕಾಣುತ್ತದೆ. ಈ ಪಂಥದಲ್ಲಿ ಸಾಧನ : ಮಾಧ್ಯಮಗಳಲ್ಲಿಯೇ ಸಿದ್ಧಿ ಸಾಧ್ಯಗಳು ಸಮಾವೇಶಗೊಂಡಿವೆ ಎಂಬ ಶ್ರದ್ಧೆ ಇದ್ದೇ ಇದೆ. ಆ ಮೂಲಕ ಇವರ ಜೀವನದೊಳಗಿನ ವ್ಯಕ್ತಿ ಅಥವಾ ಪಕ್ಷ ಇದರ ಹೊರಗೆ ಜೀವನದ ಮೌಲ್ಯಗಳಿಗೆ - ಸತ್ಯಕ್ಕೆ ವ್ಯಕ್ತಿ ಮತ್ತು ಪಂಥ ನಿರಪೇಕ್ಷ ಮೌಲ್ಯಗಳಿಗೆ ಮತ್ತು ಸತ್ಯಕ್ಕೆ ಸ್ವತಂತ್ರವಾದ ಅಸ್ತಿತ್ವವಿರುವುದಿಲ್ಲ. ಇದಿಷ್ಟು ಶಂಬಾ ಭಾರತೀಯ ಸಂಸ್ಕೃತಿಯನ್ನು ಪರ್ಯಾಯವಾಗಿ ಋಗ್ವೇದ ಸಂಹಿತೆಯ ಆಶಯದ ನೆಲೆಯಲ್ಲಿ ನಿರೂಪಿಸಿರುವ ಸಂಗತಿಗಳು.

ಶಂಬಾ ಅವರು ಸಂಸ್ಕೃತಿ ಪಾತಳಿಗಳ ಮೂಲನೆಲೆಗಳನ್ನು ಹುಡುಕುತ್ತ ಹೊರಟರಷ್ಟೆ. ಈ ಹುಡುಕುವಿಕೆ ವ್ಯಕ್ತಿ, ಗುಂಪು, ಸಮಾಜ, ಆಚರಣೆ, ದೈವತಕತೆ, ಪವಾಡ ಇವೇ ಮೊದಲಾದ ದುರ್ಗಮ ನೆಲೆಗಳ ಹಿಂದಿರುವ ಅಂತಃಸಂಗತಿಗಳನ್ನು ಹುಡುಕುವ ಬಗೆಯೇ ಆಗಿತ್ತು. ಋಗ್ವೇದ ಸಂಹಿತೆಯನ್ನು ಅವರು ಆಧಾರವಾಗಿ ತೆಗೆದುಕೊಳ್ಳುವ ಕ್ರಮದಲ್ಲೂ ಇದನ್ನೂ ಕಾಣುತ್ತೇವೆ. ಯಾವ ಒಂದು ಸಾಮಗ್ರಿಯು ತನಗೆ ತಾನೇ ಸ್ಥಗಿತಗೊಂಡದ್ದಲ್ಲ. ಪ್ರತಿಯೊಂದು ಪದಾರ್ಥಕ್ಕೂ ಚಲನೆಯುಂಟು. ಈ ಚಲನೆಯು ತಿಳಿವಿನ ಒಳ ಬೆಳಕಿನ ಕಡೆ ಮೈಚಾಚುತ್ತದೆ. ಶಂಬಾ ಈ ಬಗೆಯ ಅಗ್ನಿತತ್ತ್ವವನ್ನು ಹಿಡಿದು ಮುನ್ನಡೆದವರು. ಇಂದಿನ ಭಾರತ, ಹಿಂದಿನ ಭಾರತ ಹಾಗೂ ಸಮಾಜದ ಎಲ್ಲಕಡೆ ವಿಸಂಗತಿಗಳ ಸಂಕೇತಗಳೇ ಕಾಣಸಿಗುತ್ತವೆ. ಇಂಥ ವಿಸಂಗತ ಸಂಕೇತಗಳನ್ನೂ ತುಳಿದು, ಸುಸಂಗತ ಸಂಕೇತಗಳ ಧಾರಣೆಯಲ್ಲಿ ಸಂಸ್ಕೃತಿಯೊಂದು ಉಳಿಯಬೇಕೆನ್ನುವ ತಾತ್ತ್ವಿಕ ಹಠ ಅವರ ಕೃತಿಗಳ ಹಿಂದೆ ನಿಂತಿವೆ. ಈ ಅಂಶದಿಂದ ಶಂಬಾ ಕೇವಲ ಸಂಶೋಧಕರು ಮಾತ್ರವಲ್ಲ, ವರ್ತಮಾನದ ತತ್ತ್ವಜ್ಞರೂ ಆಗಿದ್ದಾರೆ.

ಮಲ್ಲೇಪುರಂ ಜಿ. ವೆಂಕಟೇಶ

ಪರಿವಿಡಿ

ಜಾಗತಿಕ ಪುರಾತನ ಆದಿದೈವತ ಕಥೆಗಳ ಅನುಸಂಧಾನದಲ್ಲಿ

ಋಗ್ವೇದಸಾರ : ನಾಗಪ್ರತಿಮಾ ವಿಚಾರ

Man can participate in a higher order of Life only through the realization of the perennial forms of human thought.

History as well as poetry is an orgasm of our self-knowledge an indispensable instrument for building up of our human universe.

- E. cassirer

ಪ್ರಕಾಶಕರ ಮಾತು

ಕನ್ನಡ ನಾಡುನುಡಿಗಳಿಗಾಗಿ ತಮ್ಮ ಜೀವನವನ್ನೇ ತೇದಿರುವ ಮಹಾ ವಿದ್ವಾಂಸರು ಶ್ರೀ ಶಂ. ಬಾ. ಜೋಶಿಯವರು. ತಮ್ಮ ಅನೇಕ ದಶಕಗಳ ವಿದ್ವತ್ತಿನ ಫಲವಾದ ಈ ಕೃತಿಯನ್ನು ನಮ್ಮ ವಿಶ್ವವಿದ್ಯಾನಿಲಯದ ಪ್ರಕಟಣೆಗೆಂದು ಒಪ್ಪಿಸಿದ್ದು ಅವರ ಔದಾರ್ಯ. ಇಲ್ಲಿಯ ಅನೇಕ ಸಂಗತಿಗಳು ಡಾ. ಸುನೀತ ಕುಮಾರ ಚಟರ್ಜಿಯವರೇ ಮುಂತಾದ ಭಾರತದ ಅನೇಕ ಸುಪ್ರಸಿದ್ಧ ವಿದ್ವಾಂಸರ ಪ್ರಶಂಸೆಗೆ ಪಾತ್ರವಾಗಿವೆ. ನಮ್ಮ ಪ್ರಾಚೀನತಮ ಚಿಂತನ ಕೃತಿಗಳಾದ ವೇದಗಳಲ್ಲಿ 'ನಾಗಪ್ರತಿಮಾ ವಿಚಾರ' ಉಂಟೆ? ಎಂಬುದರ ಚರ್ಚೆಯ ಜತೆಗೆ, ಮಾನವ ನಾಗರಿಕತೆಗೆ ಅಡಿಗಲ್ಲುಗಳಾದ ಅನೇಕ ಮೂಲತತ್ತ್ವಗಳನ್ನು ಶ್ರೀ ಜೋಶಿಯವರು ವಿದ್ವತ್ಪೂರ್ಣವಾಗಿ, ಹೊಚ್ಚ ಹೊಸದಾಗಿ ಇಲ್ಲಿ ಚರ್ಚಿಸಿದ್ದಾರೆ. ಇಂಥದೊಂದು ಕೃತಿಯನ್ನು ನಮ್ಮ ಮಾಲೆಯಲ್ಲಿ ಪ್ರಕಟಿಸಲು ಒಪ್ಪಿಗೆ ನೀಡಿದುದಕ್ಕಾಗಿ ಶ್ರೀ ಶಂ. ಬಾ. ಜೋಶಿಯವರಿಗೆ ವಿಶ್ವವಿದ್ಯಾನಿಲಯವು ಕೃತಜ್ಞವಾಗಿದೆ.

ಪ್ರಭುಶಂಕರ
ಡೈರೆಕ್ಟರ್

ಓದುಗರಲ್ಲಿ ತಲೆಬಾಗಿ ಬೇಡಿಕೆ

ನಾಗ-ಸಮಸ್ಯೆ ಸಾಂಸ್ಕೃತಿಕ ಮಹತ್ವದ ಜಾಗತಿಕ ಸಮಸ್ಯೆ ಎಂಬುದು ಮೊದಲು ಹೊಳೆದಿರಲಿಲ್ಲ. ಇಂದ್ರ-ವೃತ್ರ (: ಅಹಿ) ಸಮಸ್ಯೆ ಋಗ್ವೇದಕ್ಕೆ ಮಾತ್ರ ಸೀಮಿತ ಪ್ರಮುಖ ಸಮಸ್ಯೆ, ಎಂಬ ಗ್ರಹಿಕೆಯಿತ್ತು! ಈ ಪ್ರಬಂಧ, ಮೊದಲು ೧೦೦ ಪುಟ ಸಹ ಮಿಕ್ಕಲಾರದು ಎನಿಸಿತ್ತು. ಬರೆಹ ಪ್ರಾರಂಭಿಸಿದಾಗ ನಾಗನ ಬಗೆಗಿನ ಉಲ್ಲೇಖ, ಸಂದರ್ಭಗಳ ಈ ವಿಸ್ತಾರದ ಸುತರಾಂ ಅಂದಾಜು ಸಿಗಲಿಲ್ಲ. ವಿಷಯದಲ್ಲಿ ಪ್ರವೇಶ ದೊರೆತಹಾಗೆ, ಮೆಲ್ಲನೆ ಹತ್ತು ದಿಕ್ಕಿನಿಂದಲೂ ಆಶಾಕಿರಣ ಕಾಣತೊಡಗಿ ಏನು ಬರೆಯಲಿ, ಏನು ಬಿಡಲಿ ಎಂಬ ಅವಸ್ಥೆ ಬಂತು. ಈ ಪ್ರಬಂಧದ ಕಟ್ಟು ತೀರ ಶಿಥಿಲವಾಯ್ತು. ಮಾರ್ಗದರ್ಶನ ದೊರೆಯದೆ- ಅರಣ್ಯದೊಳಗಿಂದ ಊರು ಹುಡುಕಿಕೊಂಡು ಹೋಗುವ ಸ್ವರೂಪದ ಸುತ್ತಾಟದಲ್ಲಿ ಅಡಿಗಡಿಗೂ ದಾರಿತಪ್ಪುವ ಭೀತಿ ಬೇರೆ! ಸಂಸ್ಕೃತಿಯ ಅರ್ಥ ಗ್ರಹಣದ ಒಂದು 'ಪ್ರಯೋಗ' ಎಂದೇ ಪ್ರಾರಂಭಿಸಿದ್ದಾಗಿತ್ತು. ಆದರು, ಒಟ್ಟಿನಲ್ಲಿ ನಾಗಸಂಕೇತಸ್ಥ ಅರ್ಥದ ಇತಿ-ಮಿತಿಗಳನ್ನು, ವಸ್ತುನಿಷ್ಠ ರೀತಿಯಿಂದ ವಿಮರ್ಶಿಸಿಕೊಳ್ಳಲು ಪ್ರಾಜ್ಞರ ಎದುರು ಇರಿಸಲು ಶಕ್ಯವಾಗಿದೆ ಎಂಬ ಭಾವನೆ ಮೂಡಿದೆ. ಇದು ತಥ್ಯವೆ, ಮಿಥ್ಯವೆ, ನಿರ್ಣಯಿಸುವ ಹೊಣೆ ವಿಪಶ್ಚಿತ ವಿಮರ್ಶಕರದು. ಈ ಪ್ರಯತ್ನದೊಳಗಿನ ಕುಂದುಕೊರತೆಗಳನ್ನು ಕ್ಷಮಿಸಿ ಗುಣಾಂಶವಿದ್ದರೆ ಸ್ವೀಕರಿಸಲು, ತಮ್ಮ ಪ್ರಾಮಾಣಿಕ ವಿಧಾಯಕ ಟೀಕೆ, ಸೂಚನೆಗಳನ್ನು ತಿಳಿಸಿ, ಇನ್ನೂ ಆಳವಾದ ವಿಚಾರ ಚರ್ಚೆಗೆ ನೆರವಾಗಲು ಪ್ರಾರ್ಥನೆ.

ಇಂಥ ಸಮಸ್ಯಾ ಪರಿಹಾರದ ವಿಚಾರ-ಮಂಥನ ಮತ್ತು ಇದಕ್ಕೆ ಆವಶ್ಯಕ ಗ್ರಂಥ ಸಂಗ್ರಹದಿಂದ ತೊಡಗಿ, ಅಚ್ಚಿಗಾಗಿ ಓಡಾಟ, ಮುದ್ರಿತ ಕರಡು ತಿದ್ದುವುದರ ವರೆಗಿನ ಏನೆಲ್ಲ ಕೆಲಸ ಒಬ್ಬನೆ ನಿರ್ವಹಿಸುವ ಈ ರೀತಿಯ ಅಸಮರ್ಪಕತೆಯನ್ನು ಮನಗಾಣಿಸಿಕೊಡುವಂತೆ ಆಗಿರುವ ಇದರ ಮುದ್ರಣಕ್ಕೆ ಲೇಖಕನೆ ಪ್ರಮುಖ ಹೊಣೆಗಾರನು.

ಋಣದ ಅನು-ಬಂಧ

ಕಳೆದ ನಾಲ್ಕು ತಪಗಳ ಅವಧಿಯಲ್ಲಿ, ಪೌರ್ವಾತ್ಯ-ಪಾಶ್ಚಾತ್ಯ ಪೂರ್ವಸೂರಿಗಳಲ್ಲಿ ಯಾರಿಂದ ಪಡೆದ ಋಣ ಎಷ್ಟು, ಎಂದು ಹೇಳುವುದು ತೀರ ಅಶಕ್ಯ. ಪಡೆದ ಋಣದ ಅಲ್ಪಾಂಶವನ್ನು 'ಬಡ್ಡಿ'ಯ ರೀತಿಯಲ್ಲಿ, ಆಗ-ಈಗೊಮ್ಮೆ ಮರಳಿ ಸಲ್ಲಿಸಲು ಶಕ್ಯವಾಗುತ್ತ ಬಂತಲ್ಲ, ಎಂಬ ಸಮಾಧಾನವೇ ಸಮಾಧಾನ. ಈ ನಾಗ-ಸಮಸ್ಯಾ ಪರಿಹಾರ-ಕಾರ್ಯದಲ್ಲಿ ವಿವಿಧ ಪ್ರಕಾರದಿಂದ ನೆರವಾದ ಮಿತ್ರರನ್ನು ಒಬ್ಬೊಬ್ಬರನ್ನು ಸ್ಮರಿಸಿ ಹೆಸರಿಸಬೇಕೆಂದರೆ, ಈ ವಾಡಿಕೆ, ತೀರ ಔಪಚಾರಿಕವೆನಿಸಿ ಈಗಾಗಲೆ ತನ್ನ ಬೆಲೆಗೆ ಎರವಾಗಿದೆ.

ನಾನಾದೇವತಾ ರೂಪದಲ್ಲಿ ಭಾರತೀಯರ ಜೀವನಾದರ್ಶವಾಗಿ ಅವರ ಬಾಳನ್ನು ರೂಪಿಸಿರುವ ಈ ನಾಗ-ಸಂಕೇತಸ್ಥ ಅರ್ಥ-ಗ್ರಹಣದ ಒಂದು ಪ್ರಯತ್ನ, ಈ ಪ್ರಬಂಧ. 'ಅನಾರಂಭೋ ಹಿ ಕಾರ್ಯಾಣಾಂ ಪ್ರಥಮಂ ಬುದ್ಧಿ ಲಕ್ಷಣಂ' ಎಂಬ ಸು(?) ಭಾಷಿತದಿಂದ ಬುದ್ಧಿ-ಕಲಿಯದೆ, ಈ ಪ್ರಯತ್ನವನ್ನು ಪ್ರಾರಂಭಿಸಿಯೆ ಬಿಟ್ಟುದು ಅಪರಾಧವಾಯ್ತು, ಎಂದು ನಗಿಸಿಕೊಳ್ಳುವ ಪರಿಸ್ಥಿತಿ ಸಮೀಪಿಸಿತ್ತು! ಈ ಸಮಸ್ಯಾ ಪರಿಹಾರಕ್ಕೆ ಕೈಹಾಕಿ ಆರ್ಥಿಕ ವಿಷಮ ಪರಿಸ್ಥಿತಿಯನ್ನು ಆಮಂತ್ರಿಸಿದಂತಾಯ್ತು! 'ಹಾಲುಮತ-ದರ್ಶನ'ದ ಪ್ರತಿಗಳೇ, ಇನ್ನೂ ತಲೆಯ ಮೇಲೆ ಕುಳಿತಿರುವಾಗ, ಈ ವಯಸ್ಸಿನಲ್ಲಿ ನೀವೇತಕ್ಕೆ ಈ ಅವ್ಯಾಪಾರೇಷು ವ್ಯಾಪಾರದಲ್ಲಿ ಬಿದ್ದಿರಿ?' ಎಂಬ ಹಿತಚಿಂತಕರಿಗೆ, ಇದು 'ವ್ಯಾಪಾರಕ್ಕಾಗಿ' ಬರೆಯುತ್ತಿರುವ ಗ್ರಂಥವಲ್ಲ, ಎಂದು ಹೇಳಿ ಎಂತೊ ದಾಟಿಕೊಳ್ಳುತ್ತಿದ್ದೆ. ಆದರೆ, ಈ 'ಪ್ರಬಂಧವನ್ನು ತಮ್ಮ ಗ್ರಂಥಮಾಲೆಯಲ್ಲಿ ಸ್ವೀಕರಿಸಿ ಇದಕ್ಕೆ ಜೀವದಾನವನ್ನಿತ್ತ ಶ್ರೇಯಸ್ಸು, ಕೀರ್ತಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಬೇಕು. ಕಂನಡದ ಸಾಹಿತ್ಯ-ಸಂಸ್ಕೃತಿಯ ಸಂವರ್ಧನೆಗಾಗಿ ಕಂಕಣಬದ್ಧರಾಗಿರುವ ಸಂಮಾನ್ಯ ಡಾ. ದೇ. ಜ. ಗೌ. ಅವರು ಉಪಕುಲಪತಿಗಳಾಗಿ ದೊರತುದು ಮೈಸೂರ ವಿಶ್ವವಿದ್ಯಾನಿಲಯದ ಸೌಭಾಗ್ಯ. ದೇಶದೊಳಗಿನ ಮೇಧಾವೀ ಜ್ಞಾನೋಪಾಸಕರನ್ನು ಹುಡುಕಿಕೊಂಡು ಹೋಗಿ, ತಮ್ಮ (ಕಲಕತ್ತೆ) ವಿಶ್ವವಿದ್ಯಾನಿಲಯಕ್ಕೆ ಪ್ರಾಧ್ಯಾಪಕರನ್ನಾಗಿ ಆಮಂತ್ರಿಸುವ ಉಪಕುಲಪತಿಗಳೆಂಬ ಕೀರ್ತಿ, ಹಿಂದಿನ ತಲೆಮಾರಿನ ಸರ್ ಆಶುತೋಷ ಮುಖರ್ಜಿ ಅವರದಾಗಿತ್ತು. ಇಂದು ಡಾ. ದೇ. ಜ. ಗೌ. ಅವರು ಕರ್ನಾಟದ ಆಶುತೋಷ ರಾಗಿರುವ ಅನುಭವವನ್ನು ಹಲವು ಸಾಹಿತ್ಯಿಕರೂ, ವಿದ್ವಾಂಸರುಗಳಿಂದಲೂ ಕೇಳಿ ಸಂತೋಷಪಟ್ಟಿದ್ದೇನೆ.

ಈ ಸಂದರ್ಭದಲ್ಲಿ ಪ್ರಸಾರಾಂಗದ ಡಾ. ಪ್ರಭುಶಂಕರ ಅವರು ನನ್ನ ಅನಿಮಿತ್ತ ಬಾಂಧವರಾಗಿರುವ ಅಪೂರ್ವ ಅನುಭವ ಬಂತು. ಅವರಿಂದ ವಿಶ್ವಾಸ ಕುದುರಿಸುವ ಆತ್ಮೀಯತೆಯ ಕಾಗದ ಬರದೆ ಇದ್ದಲ್ಲಿ, ಈ ಪ್ರಬಂಧವು ವಿಶ್ವವಿದ್ಯಾನಿಲಯದ ಪ್ರಕಟನೆಯಾಗುವ ಯೋಗ ಲಭಿಸುತ್ತಿದ್ದಿಲ್ಲವೇನೊ!

ನಾಗಚೌತಿ
೨೬-೬-೭೧

ಶಂ. ಬಾ. ಜೋಶಿ

ಭಾಗ - ೧
ಗ್ರಂಥದ ಬಾಹ್ಯಾಂಗ ಪರಿಚಯ

ಪೀಠಿಕೆ

ಇದು ಮೂರು ಭಾಗಗಳನ್ನು ಒಳಗೊಂಡಿದೆ. 'ನಾಗ-ಪ್ರತಿಮೆ'ಯ ಅರ್ಥದ ಇತಿ-ಮಿತಿಗಳನ್ನು ನಿರ್ಧರಿಸಿಕೊಳ್ಳುವ ಪ್ರಯತ್ನದ ಅಂಗವಾಗಿ ಇವು ಮೂರೂ ಅನಿವಾರ್ಯವಾದುವು.* ಈ ಪ್ರಬಂಧದ ಎರಡನೆಯ ಭಾಗ ಪ್ರಧಾನಾಂಗ. ಈ ನಿಮಿತ್ತದಿಂದ (ಪುರಾತನ) ಜೀವನ : ಸಂಸ್ಕೃತಿಯ ಅರ್ಥ-ಗ್ರಹಣದ ಪ್ರಯೋಗವಿದು. 'ಜೀವನ' ಎಂಬುದಕ್ಕೆ ಅರ್ಥ : ಆಕೃತಿ ಉಂಟೆ? ಜೀವನಕ್ಕೆ 'ಅರ್ಥ' ಇದ್ದರೆ, ಅದು ಆ ಜೀವನ : ಸಂಸ್ಕೃತಿಯಲ್ಲಿಯೂ ಅಭಿವ್ಯಕ್ತವಾಗಿರಲೇಬೇಕು. ಆದರೆ, ಜೀವನದಲ್ಲಿ ಅರ್ಥ: ಮೂಲ್ಯಗಳು ಉಂಟೆ? ಎಂಬ ಸಂದೇಹ ನನ್ನನ್ನು ಕೆಲಕಾಲ ಬಾಧಿಸದೆ ಇಲ್ಲ. ಜೀವನದಲ್ಲಿ ಅರ್ಥ: ವ್ಯವಸ್ಥೆ: ಅಂತಃಸಂಗತಿ ಎಂಬುದು ಸುತಾರಾಂ ಇಲ್ಲ. ಜೀವನ ಅರ್ಥವಿಹೀನ, ಅನರ್ಥಕಾರಿ ನಡೆನುಡಿಗಳ ತಾಂಡವ ಎಂದರೆ ಈ ಜೀವನ. ನೀತಿವಂತಿಕೆ, ಸಜ್ಜನಿಕೆ ಎಂಬುದು ಕೇವಲ ಮೊಗವಾಡ ಸೋಗು. ಈ ನಿಟ್ಟುಸುರೇ ಎಲ್ಲೆಲ್ಲೂ ಹೊರಬೀಳುತ್ತಿದೆ. ಇಂದಿನ ಜೀವನದ ಬಗೆಗಿನ ಈ ಅಪಶ್ರುತಿ: (ಹೀಗೆ) ಕೇಳಬರುತ್ತಿರುವಾಗ ಪುರಾತನರ ಜೀವನ : ಸಂಸ್ಕೃತಿಯಲ್ಲಿ (ಮಾತ್ರ) ಅರ್ಥವಿದೆ ಎಂದು ಬಗೆಯುವುದು ಸುಸಂಗತ ವಿಚಾರ : ವಿವೇಕ ಎನಿಸದು. ಹಾಗಾದರೆ ನಿಜಸ್ಥಿತಿ ಏನು ಎಂದು ಅರಿಯಲು ಮಾಡಿದ ಒಂದು ಪ್ರಯೋಗ, ಜೀವನ: ಸಂಸ್ಕೃತಿಯ ಅರ್ಥಗ್ರಹಣದ ಈ ಪ್ರಯತ್ನ, ಈ ಪ್ರಾಯೋಗಿಕ ಪ್ರಯತ್ನವೆ ಈ ಗ್ರಂಥದ ಮೂಲ ಭಾಗ.

ಈ ಪ್ರಬಂಧವನ್ನು 'ಪ್ರಯತ್ನ': ಪ್ರಯೋಗ ಎನ್ನಲು ಇನ್ನೂ ಕೆಲವು ಕಾರಣಗಳಿವೆ. ಪುರಾತನ ಸಂಸ್ಕೃತಿಯ ಸ್ವರೂಪವನ್ನು ಪ್ರಾಧಾನ್ಯದಿಂದ ತತ್ಕಾಲೀನ ಪವಾಡ ಕಥೆಗಳ (myths) ಮೂಲಕ ಗ್ರಹಿಸಿಕೊಳ್ಳಬೇಕಾಗುತ್ತದೆ. ಇಂಥ ಕಥೆಗಳನ್ನು ಮತ್ತು ವಿವರಣೆಗಳನ್ನು ಅರ್ಥಯಿಸಿಕೊಳ್ಳುವ ಶಿಷ್ಟಮಾನ್ಯ-ಶಾಸ್ತ್ರೀಯ ಮಟ್ಟದ ಅರ್ಥಪದ್ಧತಿ, ಇನ್ನೂ ಪ್ರಚಾರಕ್ಕೆ ಬಂದಿಲ್ಲ. 'ಅರ್ಥ'ವು ವೈಯಕ್ತಿಕ; ಅವರವರ 'ಅರ್ಥ' ಅವರವರ ಪಾಲಿನ 'ಸತ್ಯ' ಎಂದಲ್ಲಿ 'ಸತ್ಯ' ಎಂಬುದೇ ಅರ್ಥವಿಹೀನವಾಗುತ್ತದೆ : ಸಾಯುತ್ತದೆ! ಇದು ಗಮನಕ್ಕೆ ಬಂದಾಗ, ಜನ-ಜೀವನದಲ್ಲಿ ಅರ್ಥವಿಲ್ಲ ಎಂಬ ಮಾತಿನ ಅರ್ಥ ಹೊಳೆಯಿತು. ವಸ್ತುನಿಷ್ಠ ಭೂಮಿಕೆಯಿಂದ ಈ ಜೀವನದ ಅರ್ಥವನ್ನು ಗ್ರಹಿಸಿಕೊಳ್ಳಲು ಸಾಧ್ಯವೆ? ಎಂಬ ಮೂಲಭೂತ ಪ್ರಶ್ನೆ ಇಲ್ಲಿ ತಲೆಯೆತ್ತುತ್ತದೆ! ಆದರೆ ಈ ಪ್ರಶ್ನೆಗೆ, ಪ್ರಶ್ನರೂಪ

---

* ಶಂಬಾ ಜೋಶಿಯವರು ವಿಂಗಡಿಸಿದ್ದು ಮೂರು ಭಾಗಗಳನ್ನೆ, ನಾನು ಒಟ್ಟು ಗ್ರಂಥವನ್ನು ಮೂಲ ಆಕೃತಿ ಮತ್ತು ಆಶಯ ಕೆಡದಂತೆ ಒಟ್ಟು ಏಳು ಭಾಗಗಳನ್ನೂ ಮಾಡಿದ್ದೇನೆ. ಮೂಲದ ಎರಡನೆಯ ಭಾಗವು ಇಲ್ಲಿ ಮೂರನೆಯ ಭಾಗದಿಂದ ಆರನೆಯ ಭಾಗದ ವರೆಗೂ ವಿಂಗಡಣೆಯಾಗಿದೆ. ಈ ವಿಂಗಡಣೆಯು ಕೃತಿಯ ಮರು ಓದಿಗೆ ಸುಖಕರವಾಗಿದೆ. (ಸಂ)

ಉತ್ತರವು ಇಲ್ಲಿಯೆ ಉಂಟು. ವಿಶಿಷ್ಟ ಭಾವನೆ ವಿಚಾರವನ್ನೊಳಗೊಳ್ಳುವ ಅ-ಮೂರ್ತ ಅರ್ಥವು, ಆವಿಷ್ಕಾರ ಪಡೆವಾಗ 'ಮೂರ್ತ'ರೂಪ ತಾಳದೆ, ಅದು ಕಾಣಲು-ತಿಳಿಯಲು ಶಕ್ಯವೊ? ಆದುದರಿಂದ, ಜೀವನ ('ಅರ್ಥ'ದ) ಅಭಿವ್ಯಕ್ತಿಯ 'ಮಾಧ್ಯಮ'ವು ಮೂರ್ತ : ವಸ್ತುನಿಷ್ಠ ಪಾತಳಿಯದೆ ಇರಬೇಕಾಗುತ್ತದೆ ! ಜೀವನ ಚಿರಂತನ ಅಮೂರ್ತ. ಆದರೆ ಮಾನವ 'ಜೀವಿತ'ವು ವಿಶಿಷ್ಟ ಮೂರ್ತರೂಪದ್ದು ಆಗದೆ ಕಾಣಬಲ್ಲುದೆ? 'ಕುಟುಂಬ' (ದಂಪತಿಗಳು ಮತ್ತು ಸಂತಾನ), ವಾಸಸ್ಥಾನ, ಉಡುಪು-ತೊಡಪು, ಭಾಷೆ.... ಇವು ಆ ಕುಟುಂಬಸ್ಥರ ಜೀವನದ ಮೂರ್ತ ಅರ್ಥದ:ಜೀವಿತದ ಮೂರ್ತರೂಪದ ಬಗೆಗಿನ ಈ ಸ್ಥೂಲ ವಿಚಾರವು ಹಿಂದಿನ ಪ್ರಯತ್ನಗಳಲ್ಲಿ ಪ್ರಯೋಜನಕ್ಕೆ ಬಂದಿದ್ದರೂ ಇದು ನಾಗ-ಪ್ರತಿಮೆಯ ಪೂರ್ವೋತ್ತರಗಳನ್ನು ಗ್ರಹಿಸಿಕೊಳ್ಳುವುದಕ್ಕೆ ಉಪಕಾರಕವಾದೀತೆ? ಎಂಬ ಸಂದೇಹವಿತ್ತು. ಈ ಕಾರಣದಿಂದಲೂ ಈ ಪ್ರಬಂಧವನ್ನು 'ಪ್ರಯೋಗ' ಎನ್ನುವ ಆವಶ್ಯಕತೆ ಉಂಟಾಯ್ತು. ಆದರೆ, ಋಗ್ವೇದದಲ್ಲಿ 'ನಾಗ' ಸಂಪ್ರದಾಯವೇ ಇಲ್ಲ, ಎಂದು ಏನೆಲ್ಲ ಆಧುನಿಕ ವಿದ್ವಾಂಸರು ಹೇಳುವಾಗ ಈ ಸಂಹಿತೆಯಲ್ಲಿ ನಾಗಾರಾಧನೆ ಇರಲೇಬೇಕು, ಎಂಬ ಬಲವಾದ ಸಂದೇಹ ನನಗೆ! ಆದಕಾರಣ, ಈ ಸಂಶಯ ನಿವಾರಣದ ಪ್ರಯತ್ನವನ್ನು 'ಪ್ರಯೋಗ' ಎನ್ನುವುದೇ ಕ್ಷೇಮ ಎನ್ನಿಸಿತು.

ಈ ಪ್ರಯೋಗದಲ್ಲಿ ದೃಢಪಟ್ಟ ಅರ್ಥಗ್ರಹಣ-ಪದ್ಧತಿಯನ್ನು ಪ್ರಾಜ್ಞರಿಂದ ಪರೀಕ್ಷಿಸಿಕೊಳ್ಳುವುದು ಯುಕ್ತವೆನಿಸಿತು. ಇದರ ಸಂಕ್ಷಿಪ್ತ ವಿವರವೆ ಈ ಪ್ರಬಂಧದ ಮೊದಲನೆಯ ಭಾಗ. ಶಾಸ್ತ್ರೀಯ ಮಟ್ಟದಿಂದ ಜೀವನ: ಸಂಸ್ಕೃತಿಯ ಅರ್ಥವನ್ನು ಗ್ರಹಿಸಿಕೊಳ್ಳುವ ತಂತ್ರದ ಆವಶ್ಯಕತೆಯನ್ನು ದೂರಮಾಡುವ ಅರ್ಹತೆಯು, ಇದರಲ್ಲಿ ಏನಾದರೂ ಉಂಟೆ, ಎಂಬುದನ್ನು ವಿಪಶ್ಚಿತರೇ ನಿರ್ಣಯಿಸಬಲ್ಲರು. ಈ ಅರ್ಥ-ಪದ್ಧತಿಯು 'ಶಾಸ್ತ್ರೀಯ' ಮಟ್ಟದ್ದು ಇದ್ದಲ್ಲಿ ಭಾರತದ ಹೊರಗಿನ ಪುರಾತನ ಸಂಸ್ಕೃತಿಗಳ ಸಂದಿಗ್ಧ-ಸಮಸ್ಯಾಪರಿಹಾರಕ್ಕೂ ಇದು. ಉಪಯುಕ್ತವಿದೆಯೆ? ಎಂಬ ವಿಚಾರ ತಲೆಯೆತ್ತಿತು! ಇಜಿಪ್ಟ್, ಸುಮೇರು ಮತ್ತು ಸಿಂಧೂ-ತೀರದ ಕೆಲ ಪುರಾತನ ಅವಶೇಷಗಳ ತುಲನಾತ್ಮಕ ವಿಮರ್ಶೆಯೆ ಈ ಪ್ರಕಟನೆಯ ಮೂರನೆಯ ಭಾಗ.* ಒಟ್ಟಿನಲ್ಲಿ ಈ 'ನಾಗ' ಪ್ರತಿಮೆಯ ಪೂರ್ವೋತ್ತರಗಳ ಸಮೀಕ್ಷೆಯಲ್ಲಿ ಜ್ಞಾನೋಪಲಬ್ಧಿಯ ಇತಿಹಾಸದ ಸ್ಥೂಲ-ಬಾಹ್ಯರೇಖೆಗಳು ಬೆಳಕಿಗೆ ಬರುತ್ತಿವೆ. ಈ ಸೋಜಿಗದ ಕಾರಣವೇನು? Sociology of Knowledge ಮತ್ತು Sociology of Culture ಈ ಕ್ಷೇತ್ರಗಳ ವ್ಯಾಸಂಗಿಗಳು ಇದನ್ನು ಉತ್ತರಿಸಬಲ್ಲರು.

---

* ಈ ಭಾಗವು ಮರಳಿ ಭಾಗ ಏಳರಲ್ಲಿ ಮರುಪರಿಷ್ಕರಣಗೊಂಡಿದೆ.

ಸಂಹಿತಾಸಾರ

ಈ ಸಂಹಿತೆಯ ವಿಚಾರಮಂದಿರದ ಅಲ್ಪ ಪ್ರಮಾಣದ ಪ್ರತಿಕೃತಿಯೇ (model) ನಾಸದೀಯ ಸೂಕ್ತ? ಇದು, ಗರ್ಭಗುಡಿಯಲ್ಲಿ (ಹೃದೀ ಪ್ರತೀಷ್ಯ) ಲಭಿಸುವ 'ಕುಡಿ' ಬೆಳಕಿನ ಆನಂದ ದೀಪ, 'ಆ-ಭು: ಏಕಂ ಸತ್' ದರ್ಶನ ಪರಮ ಸಿದ್ಧಿ. ಇಲ್ಲಿಯೇ ಈ ವೇದವು ಕೃತಾರ್ಥವಾಗಿದೆ. 'ಬಯಲು ಆಲಯದೊಳಗೊ, ಆಲಯವು ಬಯಲೊಳಗೊ'? ಎಂಬ ಹಾಗೆ, ಪ್ರತಿಜೀವಿಗೂ 'ಸತ್ ಏವ ಇದಂ ಅಗ್ರೇ ಆಸೀತ್' ಎಂಬ ದಿವ್ಯತತ್ತ್ವದ ದರ್ಶನ ಮಾಡಿಸುವ ನಾಸದೀಯ (ನ-ಅಸತ್ ತತ್ತ್ವ ಪ್ರತಿಪಾದಕ) ಸೂಕ್ತವನ್ನು ಅದರ ವ್ಯಂಗ್ಯಾರ್ಥದೊಡನೆ ಇಡಿಯಾಗಿ ಗ್ರಹಿಸಿಕೊಳ್ಳುವುದು ಸಾಮಾನ್ಯರ ತುತ್ತಲ್ಲ. ಆದರೆ, ಈ ವ್ಯಕ್ತಿ, ಜೀವಿತದ, (ಚಿರಂತನ) ಜೀವನದ-ಇಡಿಯಾದ ಅರ್ಥವನ್ನು ಸಂಗ್ರಹಿಸಿ ಹೇಳುವ ಸೂತ್ರರೂಪ ಒಂದೇ ಋಗ್ವಾಕ್ಯ, ಎಂದರೆ ಅದು, 'ಸಾರ್ಪರಾಜ್ಞೀ ಸೂರ್ಯೋ ವಾ'! ಈ (ರೂಪಕದ) ಸರ್ಪವು, 'ಏನೆಲ್ಲ ರೂಪ ತಾಳಬಲ್ಲುದು,' ಎಂಬ (ಸನಾತನ) ಶ್ರದ್ಧೆಯಂತೆ ಸರ್ಪವೇ ವಿಶ್ವ-ರೂಪ (universe) ಆಯ್ತು; ಮತ್ತು ಇಲ್ಲಿ 'ಸೂರ್ಯ' ಎಂದರೆ, ಈ ವಿಶ್ವರೂಪವು ಪ್ರಕಾಶರೂಪ (: ಸೂರ್ಯ) ಚಿರಂತನ ಜೀವನವೂ ಸರ್ಪವಾಯ್ತು-ಜೀವಿಯ ಜೀವಿತದಂತೆ! ಜೀವಿತ=ಜೀವನ ಸರಿಯೆ? ಸೂರ್ಯ ಸಂಕೇತವು ಒಳಗೊಳ್ಳುವು ಅರ್ಥರೂಪ ಪ್ರಕಾಶ, ಅಥವಾ ಪ್ರಕಾಶರೂಪ ಅರ್ಥ, ಶೂನ್ಯ=ಕತ್ತಲೆ ಆಯ್ತು! ಈ ಹಿನ್ನೆಲೆಯಲ್ಲಿ 'ಸಾರ್ಪರಾಜ್ಞೀ ಸೂರ್ಯೋ ವಾ' ಎಂದರೆ ಈ ದೃಶ್ಯ ವಿಶ್ವರೂಪ (ಬಾಹ್ಯರೂಪ) : ಸರ್ಪ ಸತ್ಯವೊ? ಅಥವಾ ಈ ದೃಶ್ಯಕ್ಕೆ-ಬಾಹ್ಯದರ್ಶನಕ್ಕೆ ಕಾರಣವಾಗುವ ಅಂತಃ ಪ್ರಕಾಶ (ಸೂರ್ಯ) ಇದೇ ಸತ್ಯವೊ? 'ಪ್ರತಿಮೆ'ಯೊಳಗಿನ ಗರ್ಭಿತಾರ್ಥ ರೂಪೀ ಪ್ರಕಾಶ ಮತ್ತು ಮಾತ್ರಾಸ್ಪರ್ಶದ ಭೌತ ಬಾಹ್ಯವಲಯ ಸಮಾನ ಮೂಲ್ಯದುವು ಆದುವು. ಇವೆರಡರಲ್ಲಿ ಒಂದು (: ಸರ್‌ಪ), ಮಾತ್ರಾಸ್ಪರ್ಶದ ಎಂದರೆ ಇಂದ್ರಿಯಗಮ್ಯ ಪಾತಳಿಯ ಸತ್ಯ. ಇನ್ನೊಂದು (: ಸೂರ್ಯ : ಸವಿತೃ) ಇಂದ್ರಿಯಾತೀತ ಪಾತಳಿಯ ಸತ್ಯ! ಒಂದು ರೇತ ಸತ್ಯ=ಏಕಂ ಸತ್; ಇನ್ನೊಂದು ತ್ರಿಕಾಲ (ಅಬಾಧಿತ) ಸತ್ಯ=ಋತ ಸ್ವರೂಪೀ ಸತ್ಯ. ಆದುದರಿಂದ 'ಸಾರ್ಪರಾಜ್ಞೀ=ಸೂರ್ಯ' ಅಭಿನ್ನವಾಗುವಲ್ಲಿ ಪ್ರಳಯ (: ಮೋಸ) ಆಗಲೇ ಬೇಕಷ್ಟೆ? ಪ್ರಪಂಚದೊಳಗಿನ ಏನೆಲ್ಲ ತತ್ತ್ವಪ್ರಣಾಲಿಗಳ ಉದ್ಗಮ ಕೇಂದ್ರ : ಈ ವಿರೋಧಾಭಾಸಾತ್ಮಕ ರೂಪಕ! ಮಾನವರ ಜೀವನಾನುಭವಗಳ ಅಭಿವ್ಯಕ್ತಿ ಮಾಧ್ಯವೇ ಸರ್ಪಸೂರ್ಯರೂಪದ್ದಾಯ್ತು!*

---

* ಋಗ್ವೇದದ ಹತ್ತನೆಯ ಮಂಡಲದ ನೂರ ಎಂಬತ್ತೊಂಬತ್ತನೆಯು ಸೂಕ್ತದ ಋಷಿ ಸಾರ್ಪರಾಜ್ಞೀ ದೇವತೆ 'ಸಾರ್ಪರಾಜ್ಞೀ ಸೂರ್ಯೋ ವಾ' ಸಾಯಣ ಭಾಷ್ಯವು ಸಾರ್ಪರಾಜ್ಞೀ ನಾಮರ್ಷಿಕಾ, ಸೈವ ದೇವತಾ ಸೂರ್ಯೋ ವೇತ್ತಿ ಎಂದು ಹೇಳುತ್ತದೆ.

ರಜ್ಜು=ಸರ್ಪವತ್ ಈ ದೃಶ್ಯ (ಪ್ರಪಂಚವೆಂಬ) ವಿಶ್ವ; ಈ ವೇದಾಂತ ಸೂತ್ರವು, ಸೂರ್ಯನ ಪರ್ಯಾಯ ಪ್ರತಿಮೆ ಎಂಬ-ಇಂದ್ರನೇ ಪ್ರಧಾನ ದೈವತ ಎಂಬ ಈ ವೇದದ ಅಂತ್ಯದಲ್ಲಿ[೨] ಅಡಗಿ ಕುಳಿತಿದೆ! 'ವೇದಾಂತ' ಎಂಬ ಪಾರಿಭಾಷಿಕ ಪ್ರತಿಮೆಯಲ್ಲಿ ಇನ್ನೊಂದು ಸತ್ಯದ ಸಾಂಕೇತಿಕ ದರ್ಶನವಾಗುತ್ತಿದೆ! ಈ ಸಂಹಿತೆಯಲ್ಲಿ ಅಹಿ: ವೃತ್ರಹಂತಕನೆಂಬ ಇಂದ್ರನೇ ಪ್ರಧಾನ ದೈವತ, ಎಂದು ಮ್ಯಾಕಡೊನೆಲ್ ಪ್ರಭೃತಿ ಆಧುನಿಕ ಸಂಶೋಧಕರ ಅಭಿಮತ. ಆದರೆ, 'ಸಾರ್ಪರಾಜ್ಞೀ' (ಸೂರ್ಯೋ ವಾ) ದೈವತ ಸ್ತೋತ್ರವೇ ಉಪ-ಸಂಹಾರ ಭಾಗದಲ್ಲಿ ಇರುವ ಈ ವೇದದಲ್ಲಿ ಅಹಿ: ವೃತ್ರಹಂತಕನೆಂಬ ಇಂದ್ರನು ಜೀವಂತ ಇರಲು ಶಕ್ಯವೊ? 'ಸೂರ್ಯ' ಇದು ಪ್ರಕಾಶದ ಸಂಕೇತವಾದರೆ; 'ಸರ್ಪ' ಕತ್ತಲೆಯ ಸಂಕೇತವಾಗಿದೆ. 'ಇದು ಸರ್ಪವೊ ಸೂರ್ಯನೋ' ಎಂಬ ಹಾಗಿನ ಈ ವಿರೋಧಾಭಾಸದಿಂದ ಜೀವನದಲ್ಲಿ 'ಪ್ರಕಾಶ'ವು ಇಲ್ಲ ಎಂದು ಸೂಚಿಸುತ್ತಿದೆ. ಇಂಥ ಈ ಸಂಹಿತೆಯಲ್ಲಿ ಸೂರ್ಯ (: ಸವಿತೃ) ತೇಜೋಯುಕ್ತನಿರಲು ಶಕ್ಯವೆ? ಸರ್ಪವು ರಾಹು (: ಚಂದ್ರನ ಒಂದು ನಿಲುಮೆ) ರೂಪದಲ್ಲಿ ಸೂರ್ಯನನ್ನು ಆವರಿಸುವಾಗ ಗ್ರಹಣ ಅಥವಾ ಅಮಾವಾಸ್ಯೆಯ ದೃಶ್ಯ ಉಂಟಾಗಲೇ ಬೇಕು. ಆದಕಾರಣ, 'ಸಾರ್ಪರಾಜ್ಞೀ ಸೂರ್ಯೋ ವಾ' ದೈವತ ಎಂದರೆ ಅಮಾವಾಸ್ಯೆ ಅಥವಾ ಸೂರ್ಯಗ್ರಹಣವು ಆರಾಧಿಸಲ್ಪಡುವ ಈ ವೇದದಲ್ಲಿ, ಸೂರ್ಯ : ಪ್ರಕಾಶವು ಇಲ್ಲ; ಸೂರ್ಯ (: ಸವಿತೃ) ದೇವನ ಪರ್ಯಾಯ ಎಂಬ (ವೃತ್ರಹನ್) ಇಂದ್ರನೂ ಇರಲು ಶಕ್ಯವಿಲ್ಲ!

ಈ ಬಗೆಯ ಅರ್ಥಕ್ಕೆ ಏನು ಆಧಾರ, ಎಂಬ ಸಂದೇಹಕ್ಕೂ ಅವಕಾಶವಿಲ್ಲ. ಏಕೆಂದರೆ, ಮೇಲೆ ಋ. ವೇದದೊಳಗಿನ ನಾಸದೀಯ ಸೂಕ್ತವೆ ಹೇಳುವ ಅರ್ಥವಿದು: ಪ್ರಪಂಚದಲ್ಲಿ 'ತಮಃ ಆಸೀತ್ ತಮಸಾ ಗೂಳ್ಹಂ....' ಎಂಬ ಸ್ಥಿತಿ ಉಂಟು. ಈ ವೇದದಲ್ಲಿ ಸವಿತೃ (: ಸೂರ್ಯ) ದೇವನು, ತೊಳಗಿ ಬೆಳಗುತ್ತಿರಲು ಶಕ್ಯವೊ? ಧೀ ಪ್ರೇರಕ ಸವಿತೃ ಉಪಾಸನೆಯ ಹಿರಿಮೆಯನ್ನು ಹೇಳಲಾಗುವ ಈ ವೇದದಲ್ಲಿ ಪ್ರಕಾಶರೂಪ ಸವಿತೃ ಆರಾಧನೆಗೆ ಪ್ರಾಶಸ್ತ್ಯವಿರಬೇಕಿತ್ತು! ಆದಕಾರಣ, ಈ ಸಂಹಿತೆಯ ದೃಷ್ಟಿಯಲ್ಲಿ ಜೀವನವು ಒಂದು ಬರಿ ಕಾಳರಾತ್ರಿ ಮಾತ್ರ ಅಲ್ಲ; ಕತ್ತಲೆಯಿಂದ ಆವರಿಸಲ್ಪಟ್ಟ (ತಮಸಾ ಗೂಳ್ಹಂ) ಕತ್ತಲೆ! ಎಂದರೆ, ಏನೇ ಆದರೂ ಈ 'ಕತ್ತಲು' ಉಳಿಯತಕ್ಕದ್ದೇ! ಜೀವನದ=ಕತ್ತಲೆಯ ಆಚೆಗೆ - ಸ್ವಪ್ನ-ಸುಷುಪ್ತಿಯ ಆಚೆಗೆ 'ತುರೀಯಾ' ಅವಸ್ಥೆಯಲ್ಲಿ ಆಗುವ 'ಏಕಂ ಸತ್': ರಸೇಶ್ವರ (ಬಿಂದು ಮಾಧವ) ಸಾಕ್ಷಾತ್ಕಾರವೊಂದೇ ನಿತ್ಯಸತ್ಯ. 'ಸರ್ಪ' ಎಂದರೆ ದೃಶ್ಯವಿಶ್ವವೇ ಸತ್ಯ. ಪ್ರಕಾಶರೂಪ ತಾತ್ತ್ವಿಕ ಸೂರ್ಯ : ಎಂಬ ಈ ಭೂಮಿಕೆ ಕೇವಲ ಕಲ್ಪನಾವಿಲಾಸ=ಶಬ್ದ (: ಪ್ರತಿಮೆಯ ಬಾಹ್ಯವಲಯ) ನಿತ್ಯ ಎಂಬ ತತ್ತ್ವಜ್ಞಾನಕ್ಕೂ, ಈ ವಿರೋಧಾಭಾಸದಲ್ಲಿ ಅವಕಾಶವಿದೆ! ಇದೇ ಮೇರೆಗೆ ಏನೆಲ್ಲ ತೋರಿಕೆಯ ವಿಶ್ವರೂಪ (: ಸರ್ಪ) ಇದು ಸಂಭ್ರಾಂತಿ. ಹೀಗೆ ಕಾಣುವುದರ ಹಿಂದೆ ಅಡಗಿರುವ ಇದೆಲ್ಲವೂ ಕಾಣಲು ಕಾರಣವಾಗುವ ಪ್ರಕಾಶರೂಪ ಶಾಶ್ವತ-ತತ್ತ್ವವು ಮಾತ್ರ ಸತ್ಯ ಎಂಬ ಮಾಯಾವಾದವಂತೂ ಸುಪ್ರಸಿದ್ಧವೆ ಇದೆ! ಇದೆಲ್ಲ 'ಪ್ರಪಂಚ-ಚಿತ್-ವಿಲಾಸ' ಎಂಬ ವಿಚಾರವಂತರು ಇದ್ದಾರೆ, 'ದರ್ಪಣ ದೃಶ್ಯಮಾನ ನಗರೀ' ಇದು!

ಪಾಶ್ಚಾತ್ಯ ತತ್ತ್ವಜ್ಞಾನದೊಳಗಿನ ಥ್ಯಾಲೆಸ್‌ನಿಂದ ಇಂದಿನ Phenominalist, Nominalist ರಿಂದ Existentialist, ಹೆಡ್ಡಗಾರನ ತನಕ ವಿವಿಧ ವೈಚಾರಿಕ ಪರಂಪರೆಗಳ ಪೂರ್ವಪೀಠಿಕೆಯನ್ನು ಇಲ್ಲಿ ಸೂಕ್ಷ್ಮ ರೂಪದಲ್ಲಿ ಕಾಣಬಹುದು. ಗತ ಶತಕದ ಹೆಗೆಲ್ಲನ ಸಿದ್ಧಾಂತದ ಥೀಸಿಸ್-ಆ್ಯಂಟಿ ಥೀಸಿಸ್=ಅಪಾಂ-ನಪಾತ್ ಆಕೃತಿ. ಇದು ಜನ್ಮಕೊಡುವ ಸಿಂಥೆಸಿಸ್ ಲೋಕದಾಹಕ ಮಾರ್ಕ್ಸವಾದ! ಅಲ್ಲಿಂದೀಚೆಯ ಅಸ್ತಿತ್ವವಾದ,

---

ಇದರರ್ಥ : ಈ ಸೂಕ್ತಕ್ಕೆ ಸಾರ್ಪರಾಜ್ಞೀ ಎಂಬುವಳು ಋಷಿಕೆ. ಆ ಸ್ತ್ರೀಯೆ ದೇವತೆ ಅಥವಾ ಸೂರ್ಯನು ದೇವತೆ ಎಂದು ಹೇಳಲಾಗಿದೆ. ಈ ಮೂಲ ವಿವಕ್ಷೆಯನ್ನು ಶಂಬಾ ದೈವತ ಪ್ರತಿಮಾಗ್ರಹಣದಲ್ಲಿ ಸೂರ್ಯ ಮತ್ತು ಸರ್ಪಗಳ ಅಭಿನ್ನತ್ವವನ್ನು ಸಾಂಕೇತಿಕ ಪಾತಳಿಯಲ್ಲಿ ನಿಂತು ವಿವರಿಸುತ್ತಾರೆ. (ಸಂ)

ಅಸ್ತಿತ್ವವಾದ ಇವು 'ಆಭು' ಉಪಾಸನಾ ಪ್ರಕಾರದ ಇನ್ನೊಂದು ರೀತಿ! ಎಂದಿನ ಋ. ವೇದ? ಇದರಲ್ಲಿ ಇಂದಿನ ವರೆಗಿನ ತತ್ತ್ವಪ್ರಣಾಲಿಗಳ ಅಂಕುರಗಳನ್ನು ಕಾಣಬಹುದು, ಎಂದರೆ ಇದನ್ನು ನಂಬಲಾದೀತೆ? ನಾಗ: ಸರ್ಪದ ಬಗೆಗಿನ ಭಾವಿಕತನದ ನಂಬುಗೆಗಳ ಆಧಾರದ ಮೇಲೆ ನಿಂತ ಜೀವನದ ಬಗೆಗಿನ ಅಂದಿನ ದೃಷ್ಟಿಕೋನ ಎತ್ತ? ಶಾಸ್ತ್ರೀಯ ಭೂಮಿಕೆಯ ಇಂದಿನ ತತ್ತ್ವ-ಜ್ಞಾನ ವಿಚಾರ ಎತ್ತ? ಇವೆರಡೂ ಅಷ್ಟೆ ತೂಕದುವೆ?

ಶಾಸ್ತ್ರೀಯ ಸ್ವರೂಪದ ವಿಚಾರ : ಚರ್ಚೆಯಲ್ಲಿ-ತತ್‌ತ್ವಜ್ಞಾನ ಕ್ಷೇತ್ರದಲ್ಲಿ-ಭಾವಿಕತನಕ್ಕೆ ನಂಬುಗೆ ಶ್ರದ್ಧೆಗಳಿಗೆ, ಭಾವುಕತನಕ್ಕೆ ಆಸ್ಪದವಿರಲಾಗದು, ನಿಜ. ಆದರೆ, ವಿಚಾರವಂತಿಕೆಯ ಆಢ್ಯತೆಯಿಂದ ಭಾವಿಕತನವನ್ನು ಅಸಡ್ಡೆಯಿಂದ (< ಅಶ್ರದ್ಧೆಯಿಂದ) ನೋಡುವಲ್ಲಿ, ವಿಚಾರವಂತಿಕೆಗೆ ಅನ್ಯಾಯವಾಗುತ್ತಿದೆ. ಭೌತ ನಿಸರ್ಗದ-'ಪ್ರಕೃತಿ'ಯ (Nature) ಅರ್ಥ-ಗ್ರಹಣದಲ್ಲಿ, 'ಮೂಲ್ಯ'ಗಳ ವಿಚಾರ ಈವರೆಗೆ ಮೌಲಿಕವೆನಿಸಿರಲಿಲ್ಲ. ಆದರೆ ಅಣುವಿಸರಣದಂತಹ ಸಂಶೋಧನದ ಫಲಿತಗಳೆಲ್ಲವನ್ನೂ ಅಷ್ಟೇ ಉಪಯುಕ್ತ, ಅಷ್ಟೇ ಮೌಲಿಕ ಎನ್ನಲಾದೀತೆ? ಯಾವುದೇ ಸತ್ಯ ಸಂಶೋಧನೆಯ ಸಂದರ್ಭದಲ್ಲಿ ಪೂರ್ವಾಗ್ರಹ ವಿರಹಿತ ತಟಸ್ಥ ಭೂಮಿಕೆಯು ಅತ್ಯವಶ್ಯವೇ. ಆದರೆ, ಫಲಿತಾಂಶಗಳಲ್ಲಿ "ಅಮೃತಂ ಚೈವ ಮೃತ್ಯುಃ ಚ" ಹೀಗೆ ಉಭಯ ಸ್ವರೂಪೀ 'ಏಕಂ ಸತ್' ರೂಪದಂತಿರುವ ಸೈನ್ಸನ್ನು ಆರಾಧಿಸುವಾಗ, ಇದರ ಮೃತ್ಯುಸ್ವರೂಪದ ಪೂಜೆಯೂ ಶ್ಲಾಘ್ಯವೆ? ಸೈನ್ಸಿನ ಅಮೃತ ಸ್ವರೂಪದ ಪೂಜೆ ಮಾತ್ರ, ಮಾನವ ಸಂಸ್ಕೃತಿಗೆ ತಾರಕ ಶಕ್ತಿಯಾಗಬಲ್ಲದು, ಎಂಬ ವಿವೇಕಯುಕ್ತ ಭಾವನಾತ್ಮಕ ಶ್ರದ್ಧೆಯನ್ನು ವಿಚಾರ-ವಿರಹಿತ ಗ್ರಹಿಕೆ ಎನ್ನಲಾದೀತೆ? ವಿಚಾರದ ಬಗೆಗಿನ ಭಾವನೆಯ ಉದ್ರೇಕದಲ್ಲಿ, ಭಾವನೆಯ ಬಗೆಗಿನ ವಿಚಾರವು ಸದೋಷವಾಗುತ್ತಿಲ್ಲವೆ, ಇಲ್ಲಿ?

ಭೌತನಿಸರ್ಗದ ಅಂಗವಾದ ಮನುಷ್ಯನ 'ಪ್ರಕೃತಿ'ಯ ಚಿಕಿತ್ಸೆಯಲ್ಲಿ ಮನೋಭಾವನೆಗಳನ್ನು ಲೆಕ್ಕಿಸಲಾಗುತ್ತಿದ್ದಿಲ್ಲ. ಭೌತಶಾಸ್ತ್ರೀಯ ಈ ಭೂಮಿಕೆ ಸದೋಷವಾಗಿದೆಯೆಂದು ಈಗ ಸಿದ್ಧವಾಗಿದೆ. ಮಾನವ ಜೀವನದ ತತ್ತ್ವಜ್ಞಾನದಲ್ಲಿ ಭಾವಿಕ ಶ್ರದ್ಧೆ ನಂಬುಗೆಗಳನ್ನು ಲೆಕ್ಕಿಸಲಾಗುತ್ತಿಲ್ಲ. ಭಾವನಿಕ ಅಭಿವ್ಯಕ್ತಿಯನ್ನು ಪರಿಗಣಿಸದ ತತ್ತ್ವಜ್ಞಾನವು ಅಸಮರ್ಪಕ ಸದೋಷವಾಗಲಿಕ್ಕೆ ಬೇಕಷ್ಟೆ? ಪುರಾತನರಿಗೆ, ಕೇವಲ ಭಾರತೀಯರಿಗೆ ಮಾತ್ರ ಅಲ್ಲ, ದೃಶ್ಯವಿಶ್ವವು, ಆದಿಯಲ್ಲಿ, ನಾಗ : ಸರ್ಪರೂಪದಲ್ಲಿ ಕಂಡಿತು! ಅಣು-ಪರಮಾಣುಗಳಿಂದ ಈ ದೃಶ್ಯ ವಿಶ್ವ; ಆಗಿದೆ. ಇದರ ಅಣುವಿನ ವಿಶ್ಲೇಷಣದಲ್ಲಿ, ಈ ವಿಶ್ವವು 'ಯಸ್ಯ ಛಾಯಾ ಅಮೃತಂ, ಯಸ್ಯ ಮೃತ್ಯು' ಎಂದು ವೇದವು ವರ್ಣಿಸಿರುವ, ಕಂ=ಹಿರಣ್ಯಗರ್ಭ ದೇವನ ಪ್ರತಿ-ಮಾ(ನ) ರೂಪವೇ ಆಗಿರುವುದಾಗಿ ಸಿದ್ಧವಾಗಿದೆ! 'ಅಮೃತಂ ಚೈವ ಮೃತ್ಯುಃ' ತಾನು ಎಂಬ 'ಕಾಲೋಽಸ್ಮಿ' ಎಂಬ ಕೃಷ್ಣರೂಪೀ ವಿಷ್ಣುವು ಶೇಷಶಾಯಿ! ಕಾಳೋರಗ! 'ಯಸ್ಯ ಛಾಯಾ ಅಮೃತಂ ಯಸ್ಯ ಮೃತ್ಯುಃ' ಶಕ್ತಿಯವನೆಂಬ ಹಿರಣ್ಯಗರ್ಭ=ಪ್ರಜಾಪತಿ (=ಕಂ) ದೇವನೂ ಕಾಳೋರಗನೇ ಸರಿ. ಸೃಷ್ಟಿಕರ್ತ ಹಿರಣ್ಯಗರ್ಭ=ಪ್ರಜಾಪತಿ (=ಬ್ರಹ್ಮ) ದೇವನೇ ಕಾಳ (ಕೃಷ್ಣ:ನೀಲಾಂಗ) ಸರ್ಪ, ಎಂದ ಬಳಿಕ ಈ ವಿಶ್ವವು 'ಸರ್ಪ' ರೂಪವಾಯಿತು. ಋ. ವೇದದಲ್ಲಿ ಇದನ್ನು ಸ್ಪಷ್ಟಪಡಿಸಿಲ್ಲವಾದರೂ ವೇದದೊಳಗಿನ ಇನ್ನೂ ಹಲವಾರು ಅಂತಸ್ಥ ಪ್ರಮಾಣಗಳಿಂದಲೇ ಈ ಸಂ-ಗತಿ ದೃಢಪಡುತ್ತದೆ. ಆದಕಾರಣ, ಸೃಜನಶಕ್ತಿಯ-ಸರ್ಪರೂಪೀ ಈ ದೇವರು ಭೌತ ಪಾತಳಿಯ (ಭೌಮಾಸುರ) ಶಕ್ತಿಯೆ ಆಗುತ್ತಲಿದೆ!

ಕ(ಂ) : ಪ್ರಜಾಪತಿಯನ್ನು, ಹಿರಣ್ಯಗರ್ಭಾದಿ ಸುಂದರ ಸಂಮೋಹಕ ಸಂಕೇತಗಳಿಂದ ವರ್ಣಿಸಿದರೂ ಈ ಆದಿದೇವನು, ಅಮೃತ ಮತ್ತು ವಿಷ ಸ್ವರೂಪೀ ನಾಗ : ಸರ್ಪವೇ ಇರುವ ಬಗೆಗೆ ಸಂದೇಹಕ್ಕೆ ಅವಕಾಶವಿಲ್ಲ. ಇಜಿಪ್ತಿನ ಆದಿದೇವ ಮಿಡಿನಾಗ; ಅಲ್ಲಿಯೂ ಕ(ಂ) ಶಕ್ತಿಯ ಬಗೆಗಿನ ಶ್ರದ್ಧೆ ಪ್ರಭಾವಶಾಲಿಯಿತ್ತು. ಸುಮೇರಿನ ಆದಿ ಸ್ತ್ರೀ-ಪುಂ ಶಕ್ತಿಯ ಯುಗಲವನ್ನು 'dragon' ಎಂದು ಹೇಳಲಾಗಿದೆ! ಗ್ರೀಸಿನ ಪರಂಪರೆ ಇದನ್ನು 'ಟಿಟಾನ್' ಎಂದಿದೆ! ಪುರಾತನರ ಭಾವುಕ ದೃಷ್ಟಿಗೆ, 'ವಿಶ್ವ'- 'ವಿಶ್ವರೂಪ' ಕಾಳೋರಗ, ನೀಲಾಂಗ=ಕೃಷ್ಣಸರ್ಪವಾಗಿ ಕಂಡಿತು. ಅವರಲ್ಲಿ ಈ ನಾಗ-ಸರ್ಪವು ಅಮೃತ ಮತ್ತು ವಿಷಸ್ವರೂಪಿಯಾಗಿದೆ, ಎಂಬ ಶ್ರದ್ಧೆಯಿತ್ತು. ಆಧುನಿಕ

ಸೃಷ್ಟಿಗೂ ವಿಶ್ವಸ್ಥ (ವಸ್ತುಗಳು, ಅಣುವಿಸರಣದಲ್ಲಿ, ಈ ವಿಶ್ವರೂಪವು ಅಮೃತ ಹಾಗೂ ವಿಷ ಎರಡೂ ಅಂಶಗಳಿಂದ ಕೂಡಿರುವುದಾಗಿ ಪ್ರತೀತಿ ಬಂದಿದೆ. ಸೃಷ್ಟಿನಿಂದ ಸಿದ್ಧವಾದುದು ಇದಕ್ಕಿಂತ ಬೇರೆಯಿಲ್ಲ. ಆದಕಾರಣ, ಪುರಾತನರು ಪರಸ್ಪರ ವಿರೋಧೀ ಉಭಯಶಕ್ತಿ ತತ್ತ್ವವನ್ನು ನಾಗ; ಸರ್ಪ, ಎಂದು ಹೆಸರಿಸಿದ್ದು ತಪ್ಪೇನಲ್ಲ. ದೃಶ್ಯವಿಶ್ವವನ್ನು 'ಸಾರ್ಪರಾಜ್ಞೀ ಸೂರ್ಯೋ ವಾ' ಎಂಬ ವಿರೋಧಾಭಾಸಾತ್ಮಕ ಒಂದು ಸಚಿತ್ರ ರೂಪಕದಲ್ಲಿ ಹೇಳಲಾಗಿದೆ. ಜಾಗತಿಕ ಏನೆಲ್ಲ (ಪ್ರಾಧಾನ್ಯದಿಂದ) ಭೌತವಾದೀ ತತ್ತ್ವಪ್ರಣಾಲಿಗಳ ಬೇರುಗಳು ಇರುವಲ್ಲಿ ಸಮರ್ಪಕತೆಯೆ ಇದೆ. ಆದರೂ ಕ್ರಿ. ಪೂ. ಮೂರು-ನಾಲ್ಕು ಸಾವಿರ ವರುಷದಷ್ಟು ಪ್ರಾಚೀನ ಕಾಲದ ಆ ಪುರಾತನರಿಗೆ ಹೊಳೆದದ್ದು, ಇಷ್ಟು ಆಳವಾದ ಅರ್ಥಗರ್ಭಿತ ವಿಚಾರವುಳ್ಳದ್ದು ಇರಲು ಶಕ್ಯವೊ?

'History repeats itself' ಎಂದರೇನು? ಇತಿಹಾಸದ ಬಾಹ್ಯವಲಯ=ಭೌತ ಘಟನೆಗಳೇ ಮರಳುತ್ತವೆ, ಎಂಬುದಕ್ಕೆ ಆಧಾರವಿಲ್ಲ; ಅವೇ ಅವೇ ರಾಜ ಮನೆತನಗಳು ಮರಳಿ ಬರುವುದಿಲ್ಲ-ದಶಾವತಾರ, ಕ್ರಿಸ್ತಾದಿಗಳಂತೆ. ಆದರೆ, ಅವತಾರ-ಯುಗಚಕ್ರ ಇವು ಕಾಲ್ಪನಿಕ. ಈ ಘಟನೆಯೊಳಗಿನ ವೈಚಾರಿಕ ಆಕೃತಿ ಮಾತ್ರ ಮರಳುತ್ತವೆ. ಗಾಂಧೀಜಿ ಕ್ರಿಸ್ತನ ಅಪರರೂಪ ಎಂದಂತೆ. ಗಾಂಧೀಜಿಯ ಮೋಹನ ಹೆಸರು, ಕೃಷ್ಣನ ಅಂಶಾವತಾರ ಎಂಬ ಗ್ರಹಿಕೆ ತಂದಿತು. ಗಾಂಧೀ ರಾಟಿ-ಸುದರ್ಶನ ಚಕ್ರ ಎಂದವರೂ ಇದ್ದಾರೆ; ಇದು ತೀರ ಸ್ಥೂಲ ಆಭಾಸ. ಜ್ಞಾನ ಹಾಗೂ ಜ್ಞಾನೋಪಲಬ್ಧಿ ಇವೆರಡರ ಬಗೆಗಿನ ಮೂಲಭೂತ ವಿಚಾರವು, ಅರ್ವಾಚೀನ ಮಾನವಶಾಸ್ತ್ರ, ಮಾನವೇತಿಹಾಸಾದಿಗಳ ಬೆಳಕಿನಲ್ಲಿ ಹೆಚ್ಚು ಹೆಚ್ಚು ಸ್ಪಷ್ಟತೆಯನ್ನು ಪಡೆಯತೊಡಗಿದೆ. Phenominalism. Nominalism, Realism, Existentialism ಇತ್ಯಾದಿ ಅರ್ವಾಚೀನ ತಾತ್ತ್ವಿಕ ವಿಚಾರಗಳನ್ನು ಅತಿ ಪುರಾತನ ಕಾಲದ ಪವಾಡ ಚಮತ್ಕಾರದ ಕಥೆಗಳಲ್ಲಿ ಕಾಣುವ ಪ್ರಯತ್ನವು, ನಗಿಸಿಕೊಳ್ಳುವಂತಿರುವುದು ನಿಜ. ಆದರೆ 'ಶಾಸ್ತ್ರ' ಎಂಬ ಅರ್ಹತೆ ಪಡೆದಿರುವ ಮಾನವಶಾಸ್ತ್ರದ ತಜ್ಞರೇ ಹೇಳುತ್ತಿರುವ ಸೂತ್ರ ನೋಡಿ: 'ತತ್ತ್ವಜ್ಞಾನದ ಉಗಮವು ತತ್ಪೂರ್ವದ ಪವಾಡ ಕಥೆಗಳಲ್ಲಿ ಕಾಣದೊರೆಯುತ್ತದೆ,'! ಮಾನವಶಾಸ್ತ್ರಜ್ಞರು ಹೇಳುವ ಈ ಸೂತ್ರವನ್ನು ಪುಷ್ಟೀಕರಿಸುವ ಪ್ರಮಾಣಗಳು ಋಗ್‌ವೇದದಲ್ಲಿಯೆ ಹಲವಾರು ಇವೆ. ಸಾಂಖ್ಯರ 'ಪುರುಷ' ಮತ್ತು ಪ್ರಕೃತಿ (: ಅದಿತಿ) ತತ್ಪೂರ್ವದಲ್ಲೆ ಒಂದಿಲ್ಲೊಂದು ರೂಪದಲ್ಲಿ ಇಲ್ಲದೆ ಈ 'ವಿಚಾರ' ಶುದ್ಧರೂಪದಲ್ಲಿ ಒಮ್ಮೆಲೆ ತಲೆಯೆತ್ತಲು ಶಕ್ಯವೆ? ಅಮೂರ್ತ ಅಜ್ಞಾತ ತತ್-ತ್ವ; ವಿಚಾರವು, ಮೂರ್ತ ಜ್ಞಾನವಸ್ತು-ವಿಷಯದ ಅನುಸಂಧಾನದಲ್ಲಿಯೆ ಹೊಳೆದುದು, ತಿಳಿದುದು ಉಂಟು. ಮೂರ್ತದಿಂದ ಅಮೂರ್ತ, ಸ್ಥೂಲದಿಂದ ಸೂಕ್ಷ್ಮ ವಸ್ತುವಾಚಕದಿಂದ ಭಾವವಾಚಕ ಅರಿಕೆಗೆ ಬಂದಿರುವ ಈ ಕ್ರಮವು ಒಂದಕ್ಕಿಂತ ಹೆಚ್ಚು ಬಗೆಗಳಿಂದ ದೃಢಪಟ್ಟಿದೆ.

ಹೊಳೆದಂತೆ ಆದ ಅರ್ಥ (: ವಿಚಾರ)ದ ಸ್ಪಷ್ಟತೆಗೆ, ತರ್ಕದ (Logic) ಸಹಾಯವು ಅನಿವಾರ್ಯ. ಆದರೆ ತರ್ಕ : ಅನು-ಮಾನದಿಂದ ಜ್ಞಾನಾರಂಭವಾಗಿಲ್ಲ. ಅನು-ಮಾನಕ್ಕೆ ಹಿನ್ನೆಲೆಯಾಗಿ ಏನೊಂದೂ ಇಲ್ಲದೆ ಯಾತರ ಮಾ-(ನ,) ಪ್ರ-ಮಾ ಮಾಡುವುದು? ಪ್ರತಿ-ಮಾ(ನ) ಉಂಟಾಗಲು ಸಾಂಕೇತಿಕವಾಗಿ ತತ್ಪೂರ್ವದಲ್ಲಿ ಏನೊಂದು ಹೊಳೆದಿರಬೇಕು; ಅದು ಸ್ಪಷ್ಟತೆಯನ್ನು ಅಪೇಕ್ಷಿಸುತ್ತಿರಬೇಕು. ಉಪ-ಮಾ ಮುಂಚೆ ಹುಟ್ಟಿಲ್ಲ; ಸರ್ವಪ್ರಥಮದಲ್ಲಿ ರೂಪ-ಕ (: ದರ್ಶನ : ಕಾಣ್ಕೆ). ಜ್ಞಾನೋಪಲಬ್ಧಿಯ ಈ ಕ್ರಮವನ್ನು ಲೆಕ್ಕಿಸದಿರುವ ಬರ್ಟ್ರಂಡ್ ರಸೆಲ್ ಪ್ರಭೃತಿ ಮೇಧಾವೀ ಅಗ್ರಣಿಗಳ ವಿಚಾರಪದ್ಧತಿಯು ಅಸಮರ್ಪಕವಾಗಲು ಇದೂ ಒಂದು ಮಹತ್ವದ ಕಾರಣ. ಸಾಮಾನ್ಯವಾಗಿ ದೇವರು-ದೈತ್ಯರು, ಸಜ್ಜನ-ದುರ್ಜನ.... ಅಮೃತತತ್ತ್ವ-ವಿಷತತ್ತ್ವ (: ಮೃತ್ಯು) ಇದರ ಬಗೆಗಿನ ಮೂಲಭೂತ ಗ್ರಹಿಕೆ ಸದೋಷವಾದರೆ ಇಡೀ ಜೀವನದೃಷ್ಟಿಯೆ ವಿಕೃತವಾಗುವ ಶಕ್ಯತೆಯಿದೆ. ದೇವ-ಅಸುರರಲ್ಲಿ ಆತ್ಯಂತಿಕ ಭೇದ ಕಲ್ಪಿಸಲು ಜೀವನದಲ್ಲಿ ನಿಜವಾಗಿ, ಅವಕಾಶವಿಲ್ಲ! ಪುರಾತನ ಭಾರತೀಯ ಸಾಹಿತ್ಯದಲ್ಲಿ ಇದಕ್ಕೆ ಪ್ರಮಾಣಗಳಿವೆ. ಆದರೆ, ವೇದಾದಿಗಳಲ್ಲಿಯ ಅತಿಮಾನುಷ, ಅಮಾನುಷ ಆಕೃತಿಯ ಅತಿಶಯೋಕ್ತಿಯ ವರ್ಣನೆಗಳ ಮೂಲಕ ಇದು ಗಮನಕ್ಕೆ ಬರುವುದಿಲ್ಲ. ಆದರೂ ಇದು ತಜ್ಞರ ಗಮನಕ್ಕೆ ಇಲ್ಲ. 'ಅಸುರ' ಸಂಕೇತಕ್ಕೆ ಏಕಕಾಲಕ್ಕೇ ಉಭಯಾರ್ಥಗಳೂ ಇರಲು ಕಾರಣವೇನು? ಒಳಿತು-ಕೆಡಕು, ಶತ್ರು-ಮಿತ್ರ ಎಂಬ

ಭೇದ ಮೊದಲ ನೋಟದಲ್ಲೆ ನಿಶ್ಚಿತವಾಗಿ ಗೊತ್ತಾಗಲು ಶಕ್ಯವಿಲ್ಲ. ಆದಕಾರಣ, ಜ್ಞಾನೋಪಲಬ್ಧಿಯ ಪ್ರಾರಂಭದಲ್ಲಿ ಪ್ರತಿಮೆಗಳು ಪರಸ್ಪರ ವಿರೋಧೀ ಉಭಯಾರ್ಥದುವು ಇರುವುದಾಗಿ, ಭಾಷಿಕ ಶಬ್ದ-ಪ್ರತಿಮೆಗಳ ವಿಶ್ಲೇಷಣಾದಲ್ಲಿ ದೃಢಪಟ್ಟಿದೆ. ಇಂಗ್ಲಿಷಿನ Demon ಇದೂ ಸಂಸ್ಕೃತ 'ಅಸುರ' ಸಂಕೇತದಂತೆ, ಲ್ಯಾಟಿನ್ ಗ್ರೀಕ್ ಮೂಲದಲ್ಲಿ ದೇವತಾವಾಚಕವಿದೆ! ಋ. ವೇದದ 'ಅದಿತಿ' (=ಅ-ಖಂಡಿತ=ಸಮಗ್ರ ಎಂಬ ಅರ್ಥದ ನಾಮ ಸಂಕೇತದಂತೆ) ನಿಜವಾಗಿ ಜೀವನ ಮತ್ತು ಮೃತ್ಯು ಈ ಉಭಯಾರ್ಥದ ಆದಿಶಕ್ತಿಯೇ ಇದ್ದಾಳೆ. ಆದರೆ, (ಮೂಲ) ಋ. ವೇದದ ಸೌರ ಸವಿತೃ, ವೃತ್ರಹನ್ ಇಂದ್ರಾದಿಗಳ ಭೂಮಿಕೆಯ ಮೇಲೆ ಜೀವನ ಸಮ್ಮುಖ ದೈವತಗಳಿಗೆ ಮಾತ್ರ ಸ್ಥಾನವಿರಬೇಕಾಗುತ್ತದೆ. ಈ ಕಾರಣದಿಂದ ಋ. ವೇದದ ಇಂದಿನ ಸಂಹಿತೆಯಲ್ಲಿಯೂ ಅದಿತಿಯು ವ್ಯಕ್ತವಾಗಿ ಎಲ್ಲಿಯೂ ಮೃತ್ಯುಸ್ವರೂಪದಲ್ಲಿ ಚಿತ್ರಿತಳಾಗಿಲ್ಲ! ಕ್ರಿಸ್ತಮಾತೆಯ ಇಂದಿನ ವಾತ್ಸಲ್ಯಪೂರ್ಣ ಚಿತ್ರವು, ಮೊದಲಲ್ಲಿ ಉಗ್ರರೂಪದ್ದೇ ಇತ್ತು.

ಆದರೆ, ಬಾಳಿನಲ್ಲಿ ಜೀವನ ಮತ್ತು ಮೃತ್ಯು, ಸುಷ್ಟ ಮತ್ತು ದುಷ್ಟ ಹೀಗೆ ಭೇದ ಮಾಡಿದಲ್ಲಿ, ಅದು ತತ್: ಏಕಂ ಸ್ವರೂಪೀ ಸತ್=ಸತ್ಯದ 'ರಸೋ ವೈ ಸಃ' ಭೂಮಿಕೆಯಾಗಲಾರದು. ಈ ಕಾರಣದಿಂದ 'ಏಕಂ ಸಂತಂ' ಭೂಮಿಕೆಯ ಇಂದಿನ ಸಂಹಿತೆಯಲ್ಲಿ 'ಲೋಕಮಾತೆ' ಎಂಬ ಅದಿತಿಯು ಮೃತ್ಯುಸ್ವರೂಪಳೂ ಆಗಿರುವುದನ್ನು, ವ್ಯಂಗ್ಯ, ಧ್ವನಿಯಿಂದಲಾದರೂ ಸೂಚಿಸುವುದು ಅನಿವಾರ್ಯವೇ ಇದೆ. 'ಅದಿತಿಯು ತನ್ನ ಏಳು (ಸೌರ) ಪುತ್ರರೊಡನೆ ಸಲಿಲದಲ್ಲಿ ಅಡಗಿದಳು'[೩] ಎಂಬ ವರ್ಣನೆಯಲ್ಲಿ ಒಂದೇ ವಾಗ್ಬಾಣದಿಂದ ಎರಡು ಗುರಿ ಹೊಡೆವ ಅಪೂರ್ವ ಕೌಶಲವು ವ್ಯಕ್ತವಾಗಿದೆ. ಸೌರಸಪ್ತರೂ ನೀರಪಾಲಾದರು, ಎಂಬುದನ್ನೂ ಹೇಳುವುದರೊಡನೆ ಅದಿತಿಯು ಆಪ : ರಸ : ಸಲಿಲ (: ಶರೀರ) ಸ್ವರೂಪೀದೇವಿ ಎಂಬುದನ್ನು ಸೂಚಿಸಿದಂತಾಗಿದೆ! ಸಲಿಲ : ಆಪ: ರಸ ತತ್ತ್ವವು, ಜೀವನ ಮತ್ತು ಮೃತ್ಯು ಈ ಉಭಯ ಸ್ವರೂಪಿಯಾಗಿದೆ. ಇಂಥ ದೈವತಭಕ್ತಿ, ಗಣೆಯಿಂದ ಹೊರಗೆ ಬರುವ ಅದಿರಿನ ಭಕ್ತಿ! ಚೊಕ್ಕ ಚಿನ್ನದ ಭಕ್ತಿ ಅಲ್ಲ! 'ಅಮೃತಂ ಚೈವ ಮೃತ್ಯುಃ' ಈ ಉಭಯ ಸ್ವರೂಪೀ ದೈವಭಕ್ತಿ ಅಶುದ್ಧ ಅದಿರಿನ ಪೂಜೆಯೇ ಅಲ್ಲವೆ? ಜ್ಞಾನೋಪಲಬ್ಧಿಯಲ್ಲಿ ಸ್ಥೂಲದಿಂದ ಸೂಕ್ಷ್ಮ, ಮೂರ್ತದಿಂದ ಅಮೂರ್ತ, ಇಡಿಯದರ ಆಕಲನದ ತರುವಾಯ ಅದರ ವಿಭಾಗ..........ಈ ಕ್ರಮವಿರುವುದು ಇನ್ನೂ ಒಂದು ಬಗೆಯಿಂದ ದೃಢಪಡುತ್ತದೆ, 'ಆಪವು' ಆರಂಭದಲ್ಲಿ 'ಸಲಿಲ' (: ಶರೀರ) ರೂಪದಲ್ಲಿ ಇತ್ತು. ಆದಿಶೇಷ : ಸೃಷ್ಟಿಕರ್ತಃ ಆದಿ ಪುರುಷ ಎಂಬ ಈ ಸಾಂಕೇತಿಕತೆಯಲ್ಲಿ ಮಾನವರ ಪ್ರಧಾನಾಂಗದ ಮೂರ್ತರೂಪವೇ ಅಭಿಪ್ರೇತವಿದೆ. "ಸತ್' ಏವ, ಇದಂ ಅಗ್ರೇ ಆಸೀತ್" ಎಂಬ ಆಗ್ರಹದಲ್ಲಿ ಈ 'ಸಂತ'=ಪುರಿ-ಶಯನೇ ಆದಿಯಲ್ಲಿ ಇದ್ದನೆಂಬ ಒಪ್ಪಿಗೆಯಿದೆ. 'ಮಧ್ಯಮಾಃ ವಾಕ್‌ದೇವಿ' ಭೂಮಿಯ ಮೇಲಿನ ಸ್ತ್ರೀಯಲ್ಲಿ ಆವೇಶವಾಗುತ್ತಾಳೆ. 'ಆದಿ ಪುರುಷ' ಎಂಬ ವಿಚಾರಕ್ಕೂ ಮುಂಚೆ 'ಆದಿಮಾತಾಃ ಶಕ್ತಿ'ಯ ಪೂಜೆಯೆ ಮೊತ್ತಮೊದಲು. ಇದಕ್ಕೂ ಮುಂಚಿನ ಹಂತದಲ್ಲಿ 'ಅಪಾಂ-ನಪಾತ್' ಅಥವಾ 'ವಾಗರ್ಥಾವಿವ ಸಂಪ್ರಕ್ತೌ' ಏಕಾತ್ಮಕ ಪಿತರೌ : ಮಿಥುನ ದೈವತವು ಪೂಜೆಗೊಂಡಿದೆ. 'ದಾಂಪತ್ಯ'ವನ್ನು ಆಮಂತ್ರಿಸಿ ಪೂಜಿಸುವ ಸಮಯಾಚಾರವು ಸನಾತನ ಸಂಪ್ರದಾಯಗಳಲ್ಲಿ ಒಂದು.*

ಜೀವನ : ಸಂಸ್ಕೃತಿಯ ಅರ್ಥವನ್ನು ಗ್ರಹಿಸಿಕೊಳ್ಳುವಲ್ಲಿ ವಿಚಾರ-ವಿಕಾಸ ಕ್ರಮವನ್ನು ಗಮನಿಸದಿರುವುದರಿಂದ ಲೆಕ್ಕ ತಪ್ಪುತ್ತಿದೆ. ವಿಶ್ಲೇಷಣಾತ್ಮಕ ವಿಚಾರವನ್ನು ಮಾತ್ರ 'ವಿಚಾರ' ಎಂದು ಬಗೆಯಲಾಗುವುದರಿಂದ ಮಾನವೇತಿಹಾಸವನ್ನು ಮತ್ತು ತತ್ತ್ವಜ್ಞಾನದ ಇತಿಹಾಸವನ್ನು ಗ್ರಹಿಸಿಕೊಳ್ಳುವಲ್ಲಿ ಎಡಹಿ ಬೀಳುತ್ತಿರುವ ಎಡೆಯನ್ನು ಮಾನವಶಾಸ್ತ್ರವು, ಬೆಳಕಿಗೆ ತಂದಿದೆ. ದೈವತ ಮತ್ತು ತತ್ತ್ವಜ್ಞಾನ ಇವುಗಳೊಳಗಿನ ಸಂಬಂಧವು ಇಂತಹ ಒಂದು ಎಡೆ. ಅರ್ಥದ ಅತಿಮಿತಿಯನ್ನು ನಿರ್ದಿಷ್ಟ ಪಡಿಸದ ಅರ್ಥವಿಚಾರವು. ಅತಿವ್ಯಾಪ್ತಿ-ಅವ್ಯಾಪ್ತಿ ದೋಷಕ್ಕೆ ಆಸ್ಪದವೀಯಬಲ್ಲ ವಿರೋಧಾಭಾಸಾತ್ಮಕ ವಿಚಾರವಿರಬಹುದಾಗಿದೆ. ವಿಶ್ಲೇಷಣೆಗೆ ಒಳಗಾದ ಬಳಿಕ ಮೂರ್ತ,

---

* ಈ ಆದಿದೈವತ ವಿಚಾರಕ್ಕಾಗಿ ಈ ಸಂಪುಟದ ಏಳನೆಯ ಭಾಗದ ಚಿತ್ರ ಸಂಖ್ಯೆ, ೩ರ ವಿವರಣೆಯನ್ನು ನೋಡಬಹುದು. (ಸಂ)

ಸೂಕ್ಷ್ಮ ರೂಪದ್ದಾಗುವ ಆ ವಿಚಾರವು, ತತ್ಪೂರ್ವದಲ್ಲಿ ಮೂರ್ತ ಹಾಗೂ ಸ್ಥೂಲ ಭೌತ ಆಕೃತಿಯದಾಗಿರುವ ಶಕ್ಯತೆಯುಂಟು. 'ಸರ್ಪ=ಸೂರ್ಯ'? (: 'ಸಾರ್ಪರಾಜ್ಞೀ ಸೂರ್ಯೊವಾ') ಈ ರೂಪಕವು, ಇಂತಹ ಒಂದು ಉದಾಹರಣವಾಗಿದೆ. ದೆವ್ವೊ ದೇವನೊ? ಸರ್ಪವೊ ಸೂರ್ಯನೊ? ಎಂಬೀ ಬಗೆಯ ಸಂಭ್ರಮಕಾರೀ ವಿರೋಧಾಭಾಸದಲ್ಲಿ ಸಹ-ಇವೆರಡರೊಳಗಿನ ತಾರತಮ್ಯದ ಪ್ರಜ್ಞೆ ಮೂಡಿರುವುದರ ಒಪ್ಪಿಗೆ ಇದೆ! ಆದರೆ, ಪ್ರ-ಜ್ಞಾ-ಪ್ರಕಾಶ-ಕಿರಣದ (: ಪ್ರಜ್ಞೆಯ) ಅಭಾವವಿದ್ದ ಇದಕ್ಕೂ ಮುಂಚಿನ ಹಂತದಲ್ಲಿ, 'ಅಸುರ' ಸಂಕೇತವು ಅಖಂಡಿತ (undifferentiated whole) ಅರ್ಥವುಳ್ಳದೇ ಇತ್ತು. ವಿಚಾರವು ಮೊದಲಲ್ಲಿ 'ಏಕಂ ಸತ್' ರೂಪದ್ದು. ಆದರೆ ವಿಚಾರವು 'ಅಮೃತಂ ಚೈವ ಮೃತ್ಯುಃ' ಹೀಗೆ ಉಭಯ ಸ್ವರೂಪಿಯಾಗಿರುವುದರ ಪ್ರ-ಜ್ಞೆ (: ಸವಿತೃ) ಉದಯವಾಗುವುದರೊಡನೆ ಮಾನವೇತಿಹಾಸದ ಎರಡನೆಯ ಅಧ್ಯಾಯವು ಪ್ರಾರಂಭವಾಗುತ್ತದೆ. ಈ ಹಂತದಲ್ಲಿ ನರ-ಜಂತು, ಮನು-ಜ ಪಾತಳಿಯ ಮೇಲೆ ವ್ಯವಹರಿಸುವ ಜೀವಿಯಾಗುತ್ತದೆ. ಆದರೆ, 'ಸರ್ವೇಷು ಗಾತ್ರೇಷು ಶಿರಃ ಪ್ರಧಾನಮ್' ಆಗುವುದನ್ನು ಸಹಿಸದ ನಾರ-ಅಯನ (=ಅಧ್ವಾನ), ಸೂರ್ಯನಾರಾಯಣ ಆಗಿರುವಲ್ಲಿ ಮರಳಿ ಮಾನವ ನರ ಜಂತುವಿನ ಹಾದಿ ಹಿಡಿಯುವನು.

ಅರ್ಥ : ವಿಚಾರ ಇದು ಮಾನವ ಕಲ್ಪಿತ ಎಂದಲ್ಲಿ, ಜೀವನ ಮತ್ತು ಮೃತ್ಯು ಇವು ಕೇವಲ ಕಾಲ್ಪನಿಕವಾಗಲಿವೆ. 'ತಾನು ಇದ್ದೇನೆ' ಎಂಬ ಪ್ರಜ್ಞೆಯೂ ಒಂದು ಭ್ರಾಂತಿ ಆಗಲಿದೆ. ಪ್ರಪಂಚದಲ್ಲಿ ಅರ್ಥ : ವಿಚಾರ ಎಂಬುದಕ್ಕೆ ಸ್ವತಂತ್ರ ಅಸ್ತಿತ್ವವೇ ಇಲ್ಲದಿದ್ದರೆ ತನಗೆ 'ತಿಳಿಯಿತು', 'ತಿಳಿಯುತ್ತದೆ' ಎಂಬ ಸ್ವ-ಅನುಭವವೂ ಅರ್ಥಶೂನ್ಯವಾಗಲಿದೆ. Nihilism (ಶೂನ್ಯವಾದ). ಮತ್ತು Agnosticism (ಅ-ಜ್ಞೇಯವಾದ) ಇವುಗಳ ಉದ್ಗಮಬಿಂದುವು ಒಂದರೊಂದರ ಪಕ್ಕದಲ್ಲಿದೆ. ಜ್ಞಾನೋಪ-ಲಬ್ಧಿಕ್ರಮ, ವಿಚಾರ ವಿಕಾಸಕ್ರಮ ಅರಿಯಲು ಅಶಕ್ಯ ಎನ್ನುವವರು ಅಥವಾ ಇದು ಅಮಾನ್ಯವಿರುವವರು ಹಾಗೂ ಪ್ರಪಂಚವು ಅರ್ಥಶೂನ್ಯವಿದೆ, ವ್ಯವಸ್ಥೆ ಅಥವಾ ನಿಯಮರಹಿತವಾಗಿದೆ ಎನ್ನುವವರು 'ಇತಿಹಾಸ'ದ ಅಸ್ತಿತ್ವವನ್ನೇ ಅಲ್ಲಗಳೆಯಬೇಕಾಗುತ್ತದೆ!

ಟಿಪ್ಪಣಿಗಳು

೧. ಋಗ್ವೇದ ಸಂಹಿತೆ ಮಂಡಲ X ಸೂಕ್ತ ೧೨೯ ನಾಸದೀಯ ಸೂಕ್ತವು ಒಟ್ಟು ಏಳು ಋಕ್ಕುಗಳಿಂದ ಕೂಡಿದೆ.
ನಾಸದಾಸೀನ್ನೋ ಸದಾಸೀತ್ತದಾನೀಂ ನಾಸೀದ್ರಜೋ ನೋ ವ್ಯೋಮಾ ಪರೋ ಯತ್।
ಕಿಮಾವರೀವಃ ಕುಹ ಕಸ್ಯ ಶರ್ಮನ್ನಂಭಃ ಕಿಮಾಸೀದ್ಗಹನಂ ಗಂಭೀರಂ ॥ ೧॥
ನ ಮೃತ್ಯುರಾಸೀದಮೃತಂ ನ ತರ್ಹಿ ನರಾತ್ರ್ಯಾ ಅಹ್ನ ಆಸೀತ್ಪ್ರಕೇತಃ।
ಆನೀದವಾತಂ ಸ್ವಧಯಾ ತದೇಕಂ ತಸ್ಮಾದ್ಧಾನ್ಯನ್ನ ಪರಃ ಕಿಂ ಚನಾಸ ॥ ೨॥
ತಮ ಆಸೀತ್ತಮಸಾ ಗೂಳ್ಹಮಗ್ನೇಽಪ್ರಕೇತಂ ಸಲಿಲಂ ಸರ್ವಮಾ ಇದಂ।
ತುಚ್ಛ್ಯೇನಾಭ್ವಪಿಹಿತಂ ಯದಾಸೀತ್ತಪಸಸ್ತನ್ಮಹಿವಾಜಾಯತೈಕಂ ॥ ೩॥
ಕಾಮಸ್ತದಗ್ರೇ ಸಮವರ್ತತಾಧಿ ಮನಸೋ ರೇತಃ ಪ್ರಥಮಂ ಯದಾಸೀತ್।
ಸತೋ ಬಂಧುಮಸತಿ ನಿರವಿಂದನ್ಹೃದಿ ಪ್ರತೀಷ್ಯಾ ಕವಯೋ ಮನೀಷಾ ॥ ೪॥
ತಿರಶ್ಚೀನೋ ವಿತತೋ ರಶ್ಮಿರೇಷಾಮಧಃ ಸ್ವಿದಾಸೀದುಪರಿಸ್ವಿದಾಸೀತ್
ರೇತೋಧಾ ಆಸನ್ಮಹಿಮಾನ ಆಸನ್ತ್ಸ್ವಧಾ ಅವಸ್ತಾತ್ಪ್ರಯತಿಃ ಪರಸ್ತಾತ್ ॥ ೫॥
ಕೋ ಅದ್ಧಾ ವೇದ ಕ ಇಹ ಪ್ರ ವೋಚತ್ಕುತ ಆಜಾತಾ ಕುತ ಇಯಂ ವಿಸೃಷ್ಟಿ :
ಅರ್ವಾಗ್ದೇವಾ ಅಸ್ಯ ವಿಸರ್ಜನೇನಾಥಾ ಕೋ ವೇದ ಯತ ಆ ಬಭೂವ ॥ ೬॥
ಇಯಂ ವಿಸೃಷ್ಟಿರ್ಯತ ಆ ಬಭೂವ ಯದಿ ವಾ ದಧೇ ಯದಿ ವಾ ನ ।
ಯೋ ಅಸಾಧ್ಯಕ್ಷಃ ಪರಮೇ ವ್ಯೋಮನ್ತ್ಸೋ ಅಂಗ ವೇದ ಯದಿ ವಾ ನ ವೇದ ॥೭॥

೨. ಮೇಲಿನದೆ X - ೧೮೯

೩. ಮೇಲಿನದೆ X - ೭೨

ಅರ್ಥ, ಜ್ಞಾನ ಮತ್ತು ಇತಿಹಾಸ

ಮಾನವನು ಅರಿತ ಅರ್ಥ (: ವಿಚಾರ)ವು, 'ನಿನ್ನೆ'ಯನ್ನು-ಎಂದರೆ ಆ ಅರ್ಥವು ಕಾಣಿಸಿಕೊಂಡ-ತತ್ಪೂರ್ವದ 'ಸಮಯ'ವನ್ನು ಅಪೇಕ್ಷಿಸುತ್ತದೆ. ಈ ಅರ್ಥದ (: ವಿಚಾರದ) ಬಾಹ್ಯವಲಯದ ಸ್ಥಿತ್ಯಂತರಗಳ ಅರ್ಥವಾಗಬೇಕಿದ್ದರೆ, ಇದರ ನಿನ್ನೆ ಇಂದುಗಳಲ್ಲಿ ಆಗುತ್ತ ಬಂದಿರುವ ಜೀವನ ರೀತಿಯ ಏರು-ಪೇರು ಗೊತ್ತಾಗುವ ಆವಶ್ಯಕತೆಯಿದೆ! ಜೀವನದ ಏರು-ಪೇರು ಎಂದರೆ ಜೀವನ ಕ್ಷೇತ್ರದಲ್ಲಿ ಮಾನವರು ಕ್ರಮಿಸುತ್ತ ಬಂದ ದಾರಿ: ಮಾನವರು ನಡೆದು ಬಂದ ದಾರಿಯ ಕಥೆ ಎಂದರೆ. ಇತಿಹಾಸ: ಆದಕಾರಣ, ಮಾನವರಿಗೆ ಸ್ವ-ಸ್ವರೂಪದ ಜ್ಞಾನ ಮಾಡಿಸಬಲ್ಲ ಕೈಗನ್ನಡಿ ಎಂದರೆ ಇತಿಹಾಸ : ಮಾನವೇತಿಹಾಸ.

> "History is not knowledge of eternal facts or events; it is a form of self-knowledge. In history man constantly returns to himself, he attempts to recollect and actualize the whole into the past experience. But historical self is not a mere individual self. It is anthropo-morphic but it is not mere egocentric.
>
> "It is thus, enrichment and enlargement; not the effacement of the self of our knowledge or our knowing and feeling which is the aim of historical knowledge.೧

ಸ್ವ-ಸ್ವರೂಪದ ಈ ಸಾಕ್ಷಾತ್ಕಾರ : ದರ್ಶನವನ್ನು, ದಿಕ್ಕಾಲ ಪರಿಸರದ ಪ್ರಜ್ಞೆಗೆ ಎರವಾಗಬೇಕಾಗುವ ಏಕಂ : ಸತ್ತಿನ ದಿವ್ಯಾನುಭೂತಿಯೊಡನೆ : ಗೀತೆಯ ೧೧ನೆಯ ಅಧ್ಯಾಯವನ್ನು ಹೋಲಿಸಿರಿ. ಇತಿಹಾಸ ಜ್ಞಾನ ಎಂದರೆ ನಿನ್ನೆ→ಇಂದುಗಳೊಳಗಿಂದ ನಾಳೆಯತ್ತ ಸಾಗಿರುವ ಚಿರಂತನ ಜೀವನ ಪ್ರಕಾಶದ ಸಂಕೋಚ-ವಿಕಾಸ ಕ್ರಮದ ಜ್ಞಾನ. ವೈಶ್ವಾನರ ಸಮಷ್ಟಿಯ ಸಂದರ್ಭದಿಂದಾಗಿ ವ್ಯಕ್ತಿಗೆ, ಇಲ್ಲಿ ತನ್ನ ಸ್ವ-ಸ್ವರೂಪದ ಅರ್ಥ=ಜ್ಞಾನ ಲಭಿಸಬಲ್ಲುದು: ಏಕೆಂದರೆ ಅರ್ಥವು 'ನಿನ್ನೆ'ಯಲ್ಲಿದೆ! ಇದು ಏಕಾಕಿಯಲ್ಲ, ಏಕಾಂತಿಕವಲ್ಲ. ಅರ್ಥವು ಸಾಮಾಜಿಕ; ಅರ್ಥಕ್ಕೆ ಸಮಷ್ಟಿ, ಸಮಷ್ಟಿಗೆ ಅರ್ಥ ಆಧಾರವಾಗಿದೆ.

ಆದಕಾರಣ, 'ಸ್ವ-ಸ್ವರೂಪ ಜ್ಞಾನದಲ್ಲಿ ವ್ಯಕ್ತಿಗೆ ತನ್ನ ಅಸ್ಮಿತತೆಯ ಅರ್ಥದ ವೈಭವವು ವೃದ್ಧಿಂಗತವಾಗುತ್ತಿರುವ ಅನುಭವವೇ ಬರಬಲ್ಲುದು. ವ್ಯಕ್ತಿ ತನ್ನ ಜಾಗೃತ ಪ್ರಜ್ಞೆಗೆ, ಜೀವನವನ್ನು ಅರಿತು ಹಿಗ್ಗುಗೊಳ್ಳಬಲ್ಲ ಸೂಕ್ಷ್ಮ

ಸಂವೇದನಾಕ್ಷಮತೆಗೆ ಎರವಾಗಿ ನಿನ್ನೆ-ನಾಳೆಗಳನ್ನು ಶೂನ್ಯಗೊಳಿಸುವ ನ-ಚಿಕೇತ: 'ಸ್ಥಿತ' ಪ್ರಜ್ಞನಾಗಬೇಕಾಗಿಲ್ಲ.* ಇತಿಹಾಸ(-ತತ್ತ್ವ) ಅ-ಮಾನ್ಯವಿರುವವರು ಉಂಟೆ? ಇತಿಹಾಸವು ನಿನ್ನೆ→ಇಂದುಗಳ ಎಂದರೆ ಕಾಲ-ಗತಿಯ ಆಕೃತಿ ಸ್ವರೂಪವನ್ನು ಗಮನಕ್ಕೆ ತಂದುಕೊಡುತ್ತದೆ: ನಿನ್ನೆಗಳು ಇಂದಿನಲ್ಲಿ ಮಾರ್ಪಟ್ಟು ಮಾರ್ಪಡುವ ಕ್ರಮವನ್ನು ಕಾರ್ಯಕಾರಣ ಸಂದರ್ಭದಲ್ಲಿ ವಿವರಿಸುವುದೇ ಇತಿಹಾಸದ ಮುಖ್ಯ ಕಾರ್ಯವಾಗಿದೆ. ಆದರೆ, ಕಾಲ-ಗತಿಯೇ ಅಮಾನ್ಯವಿರುವರಿಗೆ ಇತಿಹಾಸವು ಅನಾವಶ್ಯಕ. 'ಕಾಲವು ಮಾನವ ಕಲ್ಪಿತ' ಎಂಬ ಸೈದ್ಧಾಂತಿಕರಿಗೆ 'ಪೂರ್ಣಬ್ರಹ್ಮ' ವಾದಿಗಳಿಗೆ ಇತಿಹಾಸವು ಬೇಕಿಲ್ಲ.* ಈ ಸೃಷ್ಟಿ ನಿರ್ಮಿಸಿದನೆಂಬ ಕಪಟನಾಟಕ ಸೂತ್ರಧಾರೀ ದೇವರು=ಪರಮಾತ್ಮ ಎಂಬವನ ಅಸ್ತಿತ್ವವನ್ನು ಸಿದ್ಧಪಡಿಸಲು ಇತಿಹಾಸದ ಪ್ರಯೋಜನ ಪಡೆವ ಆಸ್ತಿಕರು ಉಂಟು! ಆದರೆ, ಸೃಷ್ಟಿಕರ್ತನೆಂಬುವನ ಅಸ್ತಿತ್ವದ ಶ್ರದ್ಧೆಗೆ, ಇತಿಹಾಸ ಎಂದರೆ (ಅರ್ಥ=ವಿಚಾರ=) ಜ್ಞಾನದ (: ಪ್ರಕಾಶ ತತ್‌ತ್ವದ) ಸ್ವತಂತ್ರ ಅಸ್ತಿತ್ವವು ಮಾನ್ಯವಿರಲು ಶಕ್ಯವಿಲ್ಲ! ಇಷ್ಟೆಲ್ಲ ವಿವರ ಯಾತಕ್ಕೆ? 'ಏಕಂ' ಸ್ವರೂಪೀ ಸತ್=ಸತ್ಯದ ಆಗ್ರಹಿಗಳೆಲ್ಲ ನ-ಇತಿಹಾಸವಾದೀ ಭೂಮಿಕೆಯನ್ನೆ ಸ್ವೀಕರಿಸಬೇಕಾಗುತ್ತದೆ. -ಇವರು ಭೌತ ಏಕಂ ಸತ್ ಸಂಪ್ರದಾಯದವರಿರಲಿ, ಅಭೌತ ದಿವ್ಯಾಧ್ಯಾತ್ಮವಾದೀ ಏಕಂ ಸತ್ ಮಾರ್ಗಿಗಳಿರಲಿ!

ಅರ್ಥ (: ವಿಚಾರ) ದ=ಪ್ರಕಾಶ ತತ್ತ್ವದ ಸ್ವತಂತ್ರ, ಸ್ವಯಂ-ಭೂ ಅಸ್ತಿತ್ವವು ಅಮಾನ್ಯವಿರುವವರ 'ಶಾಸ್ತ್ರೀಯ' ಎಂಬ ಭೂಮಿಕೆಯ ವಿಚಾರ ಪದ್ಧತಿಯು, ಹೇಗೆ ಸದೋಷವಾಗಿರುತ್ತದೆ ಎಂಬುದಕ್ಕೆ, ಈ ವರೆಗಿನ, (ಬ. ರಸೆಲ್ಲ ಪ್ರಭೃತಿಗಳ) ಪಾಶ್ಚಾತ್ಯ ತತ್ತ್ವಜ್ಞಾನದ ಇತಿಹಾಸಗಳೇ ಪ್ರಮಾಣ. ತತ್ತ್ವಜ್ಞಾನದ ಈ ಇತಿಹಾಸ, ಸುಮಾರಾಗಿ ಗ್ರೀಕಿನ ಥ್ಯಾಲೆಸ್‌ನಿಂದ ಪ್ರಾರಂಭವಾಗುತ್ತದೆ. 'ಆಪವೇ ವಿಶ್ವದ ಮೂಲತತ್ತ್ವ' ಎಂಬ ವಿಚಾರವು ಥ್ಯಾಲೆಸನಿಗೆ ಹೇಗೆ ಗೋಚರವಾಯಿತು; ಥ್ಯಾಲೆಸನಿಗೂ ಪೂರ್ವದಲ್ಲಿ ಈ ವಿಚಾರವು ಯಾವ ಬಗೆಯಲ್ಲಿ, ಯಾವ ರೂಪದಲ್ಲಿ ಪ್ರಚಲಿತವಿರಲಾರದೆ? ಎಂಬ ವಿಚಾರ ವಿಮರ್ಶೆಯನ್ನು, ತತ್ತ್ವಜ್ಞಾನದ ಇತಿಹಾಸದ ಕಕ್ಷೆಯ ಹೊರಗೆ ಉಳಿಯಗೊಟ್ಟಿರುವಲ್ಲಿ, ಅಸಮರ್ಪಕತೆ ತಲೆದೋರಿದೆ. ಮಾನವನಿಗೆ ಆದ ಜ್ಞಾನದ ಇತಿಹಾಸದ-ಈ ಸಮೀಕ್ಷೆಯು ಅಸಮಗ್ರ, ತನ್ಮೂಲಕ ಸದೋಷ ಆಗುತ್ತಿದೆ. ವಿಶಿಷ್ಟ ಜ್ಞಾನೋಪಲಬ್ಧಿಯ 'ಸಮಯ' ಪರಿಸರದ ವೈಶಿಷ್ಟ್ಯ ತಿಳಿಯುತ್ತಿದೆ. ಇದರಿಂದ, ಬೆಳಕಿನಲ್ಲಿ ಬರದೆ ಇಂದಿಗೂ 'ಕತ್ತಲ'ಲ್ಲಿಯೇ ಉಳಿಯುತ್ತಿದೆ! ಗ್ರೀಕಿನ 'Seven Sages' ಸಪ್ತರ್ಷಿಗಳು, ಭೌತಿಕ ಪಾತಳಿಯಲ್ಲಿ ಅಪ, ಅಗ್ನಿ, ಏಕಂ, ಅ-ಭು (Being) ಇತ್ಯಾದಿ ತಮ್ಮ ತಮ್ಮ ಒಂದೊಂದು ತತ್‌ತ್ವದ ಪ್ರತಿಪಾದನ ಮಾಡುತ್ತಿದ್ದ ಕಾಲದಲ್ಲಿ (ಕ್ರಿ. ಪೂ. ೫೮೫ ರಿಂದ ಪ್ಲೇಟೋ ಆರಿಸ್ಟಾಟಲ್‌ರ ವರೆಗೂ) ಆ ಜನದಲ್ಲಿ ಭಾರತೀಯ ಶಾಕ್ತಸಂಪ್ರದಾಯವನ್ನು ಹೋಲುವ 'ಆರ್‌ಫಿಕ್' ಡಯೊನಿಸಸ್ ಸಮಯಾಚಾರಗಳು ತುಂಬ ಪ್ರಭಾವಶಾಲಿಯಾಗಿದ್ದುವು! ಈ ಕಾರಣದಿಂದ ಗ್ರೀಸಿನ ಸಪ್ತರ್ಷಿ-ಪ್ರಣೀತ ತತ್ತ್ವಜ್ಞಾನದ ವೈಚಾರಿಕ ಪ್ರೇರಣೆಯು, 'ಆರ್‌ಫಿಕ್' ಸಮಯಾಚಾರಗಳಲ್ಲಿಯೆ ಇರಲಾರದೆ? ಎಂಬ ವಿಮರ್ಶೆಯ ಆವಶ್ಯಕತೆ ಈವರೆಗೂ ಶಾಸ್ತ್ರೀಯ ಭೂಮಿಕೆಯ ಒಬ್ಬ ಇತಿಹಾಸಕಾರನಿಗೂ ಎನಿಸದಿರುವುದು ಸೋಜಿಗದ್ದಾಗಿದೆ! ಋಗ್ವೇದದ 'ಸಪ್ತರು, ಗ್ರೀಸಿನ 'ಸಪ್ತ'ರು ಸಾರ್‌ಪ ಭೂಮಿಕೆಯ (ಇಂದ್ರಿಯ ಪಾತಳಿಯ) ಜೀವನ ತತ್ತ್ವಪ್ರತಿಪಾದಕರು. ಮುಂಚೆ ಈ ಏಳುಹೆಡೆ ನಾಗ, ಹೆರಾಕ್ಲಿಸ್ (ಇಂದ್ರ) ಕೊಂದಿದ್ದರೂ ಅದು ಮರಳಿ ಜೀವಂತವಾಗಿದೆ! ಗ್ರೀಸಿನ ಥ್ಯಾಲೆಸ್ ಪ್ರಭೃತಿ ಸಪ್ತರ್ಷಿಗಳು ಪ್ರತಿಪಾದಿಸಿರುವ 'ಸಪ್ತ' ತತ್ತ್ವಗಳು; ಋಗ್‌ವೇದದ ಪರಿಭಾಷೆಯಲ್ಲಿ ಹೇಳುವುದಾದರೆ ಸರ್ಪ : ಆಪ-ರಸ ಪಂಥೀಯ 'ಏಕಂ' ಸತ್ತಿನ ವಿವಿಧ ಪರ್ಯಾಯಗಳೇ ಆಗಿವೆ! ಏಕಂ ಸಂತ ಸತ್ಯವು, 'ರಾತ್ರೀ ಸಮಯಾಚಾರದ ಭಾವಾನುಭಾವದ ತತ್-ಮಯತೆಯ ಹಿನ್ನೆಲೆಯಲ್ಲಿ ಮೈವೆತ್ತ ತತ್‌ತ್ವ ಜ್ಞಾನ ಅಥವ ಚಾಂದ್ರ

---

* ಗೀತೆಯಲ್ಲಿ, 'ಸ್ಥಿತಪ್ರಜ್ಞ:' ಎಂಬ ಮಾತಿದೆ. ಈ ಮಾತನ್ನು ಶಂಬಾ ತುಂಬಾ ವ್ಯಾಪಕವಾಗಿ ಬಳಸುತ್ತಾರೆ. ಪ್ರಜ್ಞೆ ಎಂಬುದು ಚಲನಶೀಲ. ಆದರೆ, ಸ್ಥಿತಪ್ರಜ್ಞ: ಎಂದೊಡನೆ ಚಲನರಹಿತ ಎಂಬ ಅರ್ಥ ಬರುತ್ತದೆ (ಸಂ)

* ಪೂರ್ಣ ಬ್ರಹ್ಮ ಎಂದರೆ ಇದು ಮೋಕ್ಷದ ಆತ್ಯಂತಿಕ ಸ್ವರೂಪ ದ್ವೈತವಾದಿಗಳನ್ನು ಪೂರ್ಣಬ್ರಹ್ಮವಾದಿಗಳೆಂದು ಕರೆಯುವುದುಂಟು. ಇವರಿಗೆ ಭೌತಿಕಶೀಲ ಇಲ್ಲ. ಕೇವಲ ಅ-ಭೌತಿಕಕಾಲ (ಸಂ)

ತತ್‌ತ್ವಜ್ಞಾನ! ಆದರೆ, 'ಅಮೃತಂ ಚೈವ ಮೃತ್ಯುಃ' ಈ ಪರಸ್ಪರ ವಿರೋಧೀ ತತ್ತ್ವಗಳ ಏಕಾತ್ಮಕತೆಯ 'ಏಕಂ' ಸತ್ತಿನ ಅನುಷ್ಠಾನದಿಂದ ಜೀವನದಲ್ಲಿ ಕಾಣತೊಡಗುವ ದುಷ್ಪರಿಣಾಮಗಳ ಹಿನ್ನೆಲೆಯಲ್ಲಿ, ವಿಷ=ಮೃತ್ಯುವಿನ ಅಂಶವನ್ನು ದೂರವಿರಿಸಿ ಅಮೃತ ಸ್ವರೂಪೀ ಕಲ್ಯಾಣಕಾರೀ ಸ್ವರೂಪದ ತತ್ತ್ವಾನು ಸಂಧಾನವೇ ಜೀವನದ ಗುರಿ ಆಗುವ ಇನ್ನೊಂದು ಸೌರಜೀವನ ರೀತಿಯು ತಲೆಯೆತ್ತುತ್ತದೆ. ಆದರೆ, ಸಂಯಮದ ಆವಶ್ಯಕತೆಯ್ಲು ಈ ನೂತನ ವಿಚಾರವು ಚಾಂದ್ರ ಸಮಯಾಚಾರದಷ್ಟು ಆಕರ್ಷಕವಲ್ಲ; ಅದರಷ್ಟು ಪ್ರಾಚೀನವೂ ಅಲ್ಲ!

ಮಾನವ ಪಾತಳಿಯಲ್ಲಿ ಜೀವನ ಮತ್ತು ಈ ಜೀವ(ನ)ವು ಪಡೆದ ಸಂಸ್ಕಾರ=ಸಂಸ್ಕೃತಿ ಇವು ಒಂದರೊಡನೊಂದು ಬೆಸದುಕೊಂಡಿವೆ. ಆದಕಾರಣ, ಮಾನವ ಜೀವನದ ಅರ್ಥ ಎಂದರೆ ಆ ಭಾಷಿಕರ ಸಂಸ್ಕೃತಿಯ ಅರ್ಥ. ಈ ಅರ್ಥವು ಪ್ರತಿಮಾ : ಸಂಕೇತಗಳ ರೂಪದಲ್ಲಿ ಅಭಿವ್ಯಕ್ತವಾಗಿರುತ್ತದೆ. ಈ ಸಂಕೇತಾತ್ಮಕ ಅರ್ಥವು ಆ ಜನವು ನಿರ್ಮಿಸಿಕೊಂಡ 'ಸಮಯ'ದ ಆಧಾರದಿಂದ ಅವರಿಗೆ ಅರಿಕೆಗೆ ಬಂದಿರುತ್ತದೆ. ಆದಕಾರಣ ಯಾವುದೇ ಸಂಸ್ಕೃತಿಯ ಭಾವನಿಕ ಹಿನ್ನೆಲೆಯ ಅರ್ಥಗ್ರಹಣಕ್ಕೆ ಆ ಭಾಷಿಕರು ಸೃಷ್ಟಿಸಿದ ಪ್ರತಿಮಾ : ಸಂಕೇತಗಳ 'ಸಮಯ' ಪರಿಸರವನ್ನು ಗ್ರಹಿಸಿಕೊಳ್ಳುವುದು ಅವಶ್ಯವಾಗುತ್ತದೆ.* ಸಮಯ ಎಂದರೆ 'ಕಾಲ' (: ಗತಿ), ಪರಿಸರ ಎಂದರೆ ಅವಕಾಶ : ಸ್ಥಳ. ಜೀವನಕ್ಕೆ ಸಂಬಂಧ ಸ್ಥಲ ಕಾಲ (ಗತಿ) ಬಿಟ್ಟರೆ ಇತಿಹಾಸವು ಉಂಟೆ?

ಕಾಲ ಮತ್ತು ಸಮಯ ಕಾಲ್ಪನಿಕವೆ?

ಕಾಲ=ಭೌತಕಾಲ, ಇದುವೆ ಕಾಲ-ಸರ್ಪ ಎಂಬ ಸಾಂಕೇತಿಕ ಪ್ರತಿಮೆ. ಏಕಂ ಸತ್ ಆಗುವಾಗ ಇದು ರೇತಸತ್ಯದ ಜೀವನ ಪಾತಳಿ ಎನಿಸುತ್ತದೆ. 'ಸಮಯ'ವು ಮಾನವರ ಸಾಮಾಜಿಕ 'ಸಮಷ್ಟಿ' ಸ್ವರೂಪದ ಜೀವನ ಸಂದರ್ಭದಲ್ಲಿ ಪ್ರತೀತಿಗೆ ಬರುವ ತಾತ್ತ್ವಿಕ ಪಾತಳಿಯ ಕಾಲ. ನಿಸರ್ಗದ : ಪ್ರಕೃತಿಯ (ವಿಶ್ಲೇಷಣದ) ಅರ್ಥಗ್ರಹಣಕ್ಕೆ ಆಧಾರಭೂತವಾಗಿ ಇರಬಲ್ಲ ಸ್ಥಳ (space) ಮತ್ತು ಕಾಲ (time) ಭೌತಸ್ವರೂಪದ್ದು. ಆದರೆ ಮಾನವ ಜೀವಿಯ ಜೀವಿತಸ್ಥ ಜೀವನದ=ಸಂಸ್ಕೃತಿಯ ಅರ್ಥಗ್ರಹಣಕ್ಕೆ ಆಧಾರಭೂತವಾಗಿ ಇರುವ ಪರಿಸರ ಮತ್ತು ಸಮಯ ಇವೆರಡೂ ಅ-ಭೌತ : ತಾತ್ತ್ವಿಕ ಸ್ವರೂಪದವು ಇರುತ್ತವೆ. ಈ 'ಸಮಯ'-ಪರಿಸರ, ಇಂದ್ರಿಯಜನ್ಯ ಜ್ಞಾನದ ಪಾತಳಿಯ ಹೊರಗೆ ಭೂಮಿಗೆ ಲಂಬ ಸಮಾಂತರವಿರುವುದಾಗಿ ಅರಿಕೆಗೆ ಬರುತ್ತದೆ. ಭೌತದ ಸಾಹಚರ್ಯ (ಸಂದರ್ಭದ) ಮೂಲಕ, ಇಂದ್ರಿಯಾತೀತ ಅಭೌತ ಅರ್ಥ ತತ್‌ತ್ವವು ಮಾನವರ ಅರಿಕೆಯ ತಳವಿನಲ್ಲಿ ಬಂದುದು ಉಂಟು. ಪುರಾತನರಿಗೆ, 'ಭೂಃ' ಈ ಐಹಿಕ ಭೌತಜೀವನದ ಸಾಹಚರ್ಯದಿಂದ 'ಭುವಃ' ಲೋಕದ ಅಸ್ತಿತ್ವವು ಅರಿಕೆಗೆ ಬಂದಿತು. ಆದಕಾರಣ, ಭೌತಕಾಲ-ಪರಿಸರವೇ ಕಾಲ್ಪನಿಕವಿದ್ದರೆ, ಇದರ ಹಿನ್ನೆಲೆಯಲ್ಲಿ ಅರಿಕೆಗೆ ಬಂದ ಆಧಾರಭೂತ ಸಮಯ ಪರಿಸರವೂ ಕಾಲ್ಪನಿಕ; ಅ-ಭಾಸವೇ ಸರಿ.

'ಭೂಃ' ಮತ್ತು ಭೌತ ಅಸ್ತಿತ್ವದ ಅರ್ಥದ ಮೂಲಕ ಅರಿಕೆಗೆ ಬರುವ ಭುವರ್‌ಲೋಕ ಇವೆರಡರಲ್ಲಿ ಅಂಗಾಂಗೀ ಭಾವ, ಜನ್ಯ-ಜನಕ ಭಾವವು ಕಾಣುವುದುಂಟು, ಇಲ್ಲಿ, ಭೂಮಿಯ ಅನುಭವ- ಅನುಭಾವ, ಅನು-ಭೂತಿಗೆ, ಅನುಭವಕ್ಕೆ ಭಾವನೆಯ ಆಧಾರವಿರುತ್ತದೆ. ಭಾವದ ಬೇರು ಭೂಮಿಯಲ್ಲಿ; ಭೂ>ಭವ್> ಭಾವ(ನಾ); ಭಾವನೆಯ ಮೂಲಕ ಜೀವಿಗೆ ತನ್ನ ಜೀವಿತಸ್ಥ ಹಾಗೂ ಜೀವಿತದ ಆಚೆಯ ಜೀವನದ ಹಾಗೂ ತನ್ನ ಅಸ್ತಿತ್ವದ ಪ್ರಜ್ಞೆ ಉಂಟಾಗಲು ಶಕ್ಯವಾಗಿದೆ. ಆದರೆ ಭಾವನೆಯೇ ಜೀವನವಲ್ಲ ! ಭಾವನೆ ವ್ಯಕ್ತಿಗೆ ಸೀಮಿತ; ಜೀವಿತದೊಡನೆ ನಿಬದ್ಧ. ಆದರೆ ಜೀವನದ ವಿಸ್ತಾರ, ವೈಯಕ್ತಿಕ ಜೀವಿತದ ಆಚೆಗೂ ಉಂಟು. ಭಾವನೆಯಲ್ಲಿ

---

* ಇದು ಭೌತಕಾಲದಿಂದ ಭಿನ್ನ. ನೈಸರ್ಗಿಕವೂ ಮನುಜ ಪಾತಳಿಯನ್ನು ಉಳ್ಳದ್ದೂ ಆಗಿದೆ. ಸಮಯ ಎಂಬುದಕ್ಕೆ ಎಂಟ ಅರ್ಥವೇನೂ ಉಂಟು. ಆದರೆ, ಈ ಪರಿಭಾಷೆಗಿಂತ ಭಿನ್ನವಾದುದು ವ್ಯಾಪ್ತವಾದುದು 'ಸಮಯ' ಎಂಬ ಸಾಂಕೇತಿಕ ಪದ ಇದು. ಸಾಂಸ್ಕೃತಿಕ ಪರಿಭಾಷೆಯ ಸ್ತರದಲ್ಲಿ ಶಂಬಾ ಇದನ್ನು ಬಳಸುತ್ತಾರೆ (ಸಂ)

ಭೂಮಿಯ-ಭೌತ ಅಂಶವೂ ಉಂಟು ಆದರೆ, ಭಾವನೆ ಜೀವನದಿಂದ ಬೇರೆ. ಜೀವನ ಇದು ಅ-ಭೌತ: ಪ್ರಕಾಶ ತತ್ತ್ವ. ಜೀವನವು ವಿಶ್ವಾನರ ರೂಪದಲ್ಲಿ ಅರಿಕೆಗೆ ಬರುತ್ತದೆ.

ಗ್ರಹಿಕೆ, ನಂಬುಗೆ, ಶ್ರದ್ಧೆ ಇದು ಭಾವನಿಕ, ಭಾವ-ವಿಭಾವ-ಅನುಭಾವದ ಮೂಲಕ ಅಮೂರ್ತ ಅರ್ಥವು ಮೂರ್ತರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಆದಕಾರಣ, ಭಾವನೆಗಳನ್ನು ಅರ್ಥವಿಹೀನ ಎನ್ನಲಿಕ್ಕಾಗದು. 'ಕಾಲ' ಭೌತ ಎಂದರೂ ಇದು ಅತ್ಯಂತ ಅಮೂರ್ತ ತತ್ತ್ವ. ಈ ಅಮೂರ್ತ ವಿಚಾರ, ಮೊತ್ತ ಮೊದಲಲ್ಲಿ ಅರಿಕೆಯ ಅಳವಿನಲ್ಲಿ ಬಂದುದು ಎಂತು? ಇದೊಂದು ಸೋಜಿಗವೇ ಸರಿ. ಈ ಜ್ಞಾನೋಪಲಬ್ಧಿಯ ಹಿನ್ನೆಲೆಯನ್ನು ಅರಿವ ವಿವಿಧ ಪ್ರಯತ್ನಗಳಾಗಿವೆ. ಮೊದಲಲ್ಲಿ, ತರ್ಕದ ಮೂಲಕ ಅರ್ಥ : ವಿಚಾರ ತಲೆಯೆತ್ತಿಲ್ಲ, ಎಂಬುದನ್ನು ಇಲ್ಲಿ ಮನಗಾಣಬಹುದು. ಸ್ಥೂಲ-ಭೌತ ಅನುಭವವು ಅರ್ಥದ ಮಟ್ಟದಲ್ಲಿ ಸೂಕ್ಷ್ಮ ವೈಚಾರಿಕ ಪಾತಳಿಯದಾಗುತ್ತದೆ. ಸ್ಥಳ ಮತ್ತು ಕಾಲ ಇವೆರಡರಲ್ಲಿ ನಿಕಟ ಸಂಬಂಧವಿದೆ. ಗತಿಯಲ್ಲಿ ಇರುವ ಸ್ಥಲವೆ ಕಾಲದ ಅನುಭವ ತರುತ್ತದೆ. ಅದು+ದು=ಅಂದು; ಇದು+ದು=ಇಂದು. ದೂರವಿದ್ದ 'ಆ' 'ಅದು' ಹತ್ತಿರ ಬಂದ ಅನುಭವದೊಡನೆ 'ಈ' 'ಇದು' ಆಯ್ತು! ಕಾಲದ ವಿಚಾರ ತಲೆದೋರಿದ್ದುದರ ಸೂಚನೆ ಇಲ್ಲಿ ಉಂಟು. ಆದರೆ, ಸ್ಥಳ-ಅವಕಾಶದ ವಿಚಾರವೂ ಸೂಕ್ಷ್ಮವೇ. ಇದಕ್ಕೂ ಮುಂಚಿನ ಸ್ಥೂಲ ಹಂತವಿದೆ. ಇದು ಹೊಳೆಯಲು ಸ್ರವ-ಸ್ರಾವವು, ದ್ರವ-ದ್ರವ್ಯವು ಕಾರಣ. ಮೊದಲಲ್ಲಿ ಕಾಲವು ದ್ರವ-ದ್ರವ್ಯದ ಸ್ರಾವ-Flux ಗತಿಯೊಡನೆ ಸಂಬದ್ಧವಿದ್ದುದಾಗಿ ಅರಿಕೆಗೆ ಬಂದಿದೆ! ನದೀ-ಸ್ರೋತ, ನೀರೆ-ನಾರಿ! ಕಾಲಿ! 'ನವ' ಮಾಸ : ಶಿಶುಜನ್ಮ (ಸಂ)ವತ್ಸ-ರ=ವೃಷ್;ವೃಷ್ಣಿ, ವೃಷಭ<ವೃಷನ್, 'ಕಾಲ'! 'ನವ' ಇದು (ಬಾಲ)ಚಂದ್ರನೊಡನೆ ಸಂಬದ್ಧ ಮಾ-ಸ. ಈ ಭೌತಕಾಲದ ಅವಧಿಯ ಮಾನ ದಂಡ, ಚಂದ್ರ=ಮಸ್! Month=moon ತಿಂಗಳು ಎಂದು ಚಂದ್ರನ ಪರ್ಯಾಯನಾಮ; 'ಕಾಲ' (:ಪುರುಷ) ಕಲ್ಪನೆಯ ತಳಪಾಯದಲ್ಲಿ ಚಂದ್ರ ! ಚಾಂದ್ರ ಅನುಭೂತಿ ಹಾಗೂ ಚಂದ್ರನ ಅಸ್ತಿತ್ವವೇ ಕಾಲ್ಪನಿಕ. ಎಂದರೆ ಈ ಚಂದ್ರನ ಮಾನದಂಡದಿಂದ ಅರಿಕೆಗೆ ಬರುವ ತಿಂಗಳು, ವರ್ಷ, ಈ ಕಾಲ ಎಲ್ಲವೂ ಕಾಲ್ಪನಿಕ-ಸಂಭ್ರಾಮಕ! 'ಕಾಲ' ತತ್ವದ ಜ್ಞಾನೋಪಲಬ್ಧಿಯ ಈ ಹಿನ್ನೆಲೆ (: ಇತಿಹಾಸ), ವಿಚಾರ-ವಿಕಾಸ-ಕ್ರಮದ ಮೇಲೆ ಬೆಳಕು ಬೀರುತ್ತಿದೆ. ಮೊದಲು ಸ್ಥಳ 'ಕಾಲ'ದ ಭೌತರೂಪ, ಸೃಜನೇಂದ್ರಿಯ ರೂಪದಲ್ಲಿ (ಕಾಲಿ : ಕಾಲ) ಪ್ರತೀತಿಗೆ ಬಂದಿದೆ! ಇದು ಬಳಿಕ ರೇತ-ಸ್ರಾವದ ಗತಿಯ : ಪವಮಾನ ಸೋಮ=ರಸರೇತ; ಮರುತ=ರುದ್ರ!

ಈ ಹಿನ್ನೆಲೆಯಲ್ಲಿ ಭೂಮಿ (:ರಸಾ ವಿಶ್ವಂಭರಾ) ಮತ್ತು ಭಾವನೆ ಹಾಗೂ ಕಾಲ (:ಚಂದ್ರ) ಈ ಮೂರರೊಳಗಿನ ಅನ್ಯೋನ್ಯವು ಅಭ್ಯಸನೀಯವಿದೆ. ಈ 'ಕಾಲ'ವು ಭೌತ. ಆದರೆ, ಸಾಮಾಜಿಕ ಸ್ವರೂಪದ ಜೀವನಾನುಭವದ ಹಿನ್ನೆಲೆಯಲ್ಲಿ ತಲೆದೋರುವ ಆಚಾರ-ವಿಚಾರ, ಇವುಗಳ ಪ್ರತೀಕ ಸ್ವರೂಪ ಪ್ರತಿಮಾ : ಸಂಕೇತಗಳ ಸಂಗತಿಯಲ್ಲಿ ಅರಿಕೆಗೆ ಬರುವ 'ಸಮಯ' ರೂಪೀ ಕಾಲವು ಅಭೌತ; ತಾತ್ತ್ವಿಕ, ವ್ಯಕ್ತಿನಿರಪೇಕ್ಷ ಜೀವನ ಸತ್ಯ. ಇದು ವೈಯಕ್ತಿಕ-ಕಲ್ಪಿತ ಕೃತ್ರಿಮ ಸಮಯದಿಂದ ಭಿನ್ನವೇ ಸರಿ. ಇದು ಸಮಷ್ಟಿ (ಸಾಮಾಜಿಕ) ಜೀವನ ಸಂದರ್ಭದಲ್ಲಿ ಮೈದೋರುತ್ತದೆ. ಜೀವ(ನ)ದ ಅರ್ಥ-ಗ್ರಹಣಕ್ಕೆ-ಜೀವಕ್ಕೆ ಭಾವನೆಯೆ ಆಧಾರವಾಗಿದೆ. ಭಾವನೆಯಿಂದ ಪರಿಮಿತ ಜೀವದ ಜೀವಿತಕ್ಕೆ ಭಾವ(ನೆ) ಅರ್ಥಯುಕ್ತವಿದ್ದರೂ ಭಾವ(ನೆ) ಇದುವೆ 'ಅರ್ಥ' ಎನ್ನಲು ಅವಕಾಶವಿಲ್ಲ! ಅರ್ಥಕ್ಕೆ ಚಿರಂತನ ಜೀವನದ ಆಧಾರವುಂಟು. ಜೀವಿತ ರೇತಸತ್ಯ : ಸರ್ಪವೇ ಸೂರ್ಯವಲ್ಲ, ಅರ್ಥದ ಸಾಹಚರ್ಯದಲ್ಲಿ ಭಾವ ವಿಭಾವದ ಅರಿವುಂಟಾಗುತ್ತದೆ. ಭೂ>ಭವ್=ಸಂಭವಿಸು, ಆಗು, ಇರು; ಈ ಭೌತಕ್ರಿಯೆಯ ಪ್ರೇರಕ ಶಕ್ತಿ ಭಾವ(ನಾ). ಇದು (ಭೂ>) ಭೌತಸ್ವರೂಪದ್ದು; ಭಾವ(ನಾ) ಜೀವಿತದಲ್ಲಿ ಗತಿ ಪ್ರೇರಕ ಶಕ್ತಿ: ಸತ್ ಅಥವಾ ದುರ್ ಉಭಯ ರೂಪದ್ದೂ ಇರಬಲ್ಲದು! ಭಾವಾರ್ಥದಲ್ಲಿಯ ಪ್ರೇರಕ ಶಕ್ತಿಯು, ಅದು ಒಳಗೊಳ್ಳುವ ಭಾವ(ನಾ) ಶಕ್ತಿಯ ಮೂಲಕ; 'ಭಾವಾರ್ಥ'=ಭಾವ-ಸ್ಥ ಅರ್ಥ. ಆದಕಾರಣ ಭಾವ(ನಾ) ಮತ್ತು ಅರ್ಥ ಇವೆರಡೂ ಭಿನ್ನವೇ ಆಗಿದೆ. 'ಸ್ಥಿತಿ' ಅರ್ಥಶೂನ್ಯ; ಅಥವಾ ಅರ್ಥಕ್ಕೆ ಒಗ್ಗದ್ದು, ಗತಿಯಲ್ಲಿ ಅರ್ಥ ಕಾಣುತ್ತದೆ; ತಿಳಿಯುತ್ತದೆ. ಜೀವಕ್ಕೆ ಗತಿ ದೊರೆಯುತ್ತಿರುವುದು ಅದು ಕಲ್ಪಿಸಿಕೊಂಡ ಭಾವಾರ್ಥದ ಮೂಲಕವೇ. ಆದರೆ

ಕವಿ : ವ್ಯಕ್ತಿಯು ಕಲ್ಪಿಸಿದ ಅರ್ಥ ಮತ್ತು ಈ ಜೀವನ-ವಿಶ್ವಸ್ಥ ಅರ್ಥ ಯಾವಾಗಲೂ ಸಮಾನವೇ ಇದೆಯೆಂದು ಬಗೆಯಲಿಕ್ಕಾಗದು. ಭಾವ, ವಿಭಾವ, ಅನುಭಾವದ ಮೂಲಕ ಇರುವು (ಜೀವಿತ) ಗತಿಯುಕ್ತವಾಗಿದೆ: 'ಜೀವನ' ಎಂಬುದು ಈ ಗತಿಯ ಮೂಲಕ ಆ-ಚಾರ-ಕ್ರಿಯೆಯಾಗಿ ಮೂರ್ತ ಆ-ಚರಣ=ಕೃತಿರೂಪದಲ್ಲಿ ಕಾಣಿಸಿಕೊಳ್ಳಲು ಶಕ್ಯವಾಗಿದೆ. ಈ ಕೃತಿಯೆ 'ಶಿಲ್ಪ'ವಾಗಿ ಕಲೆ, ಶಬ್ದ ಪ್ರತಿಮೆ, ಗೀತನೃತ್ಯಾದಿರೂಪದಲ್ಲಿ ಮಾರ್ಪಡುವಾಗ ಅದುವೆ ಸಂಸ್ಕೃತಿ ಎನಿಸುತ್ತದೆ. 'ಆತ್ಮ ಸಂಸ್ಕೃತಿಃ ವೈ ಶಿಲ್ಪಾನಿ' ಈ 'ಆ-ತ್ಮನ್' ಸಂಕೇತಸ್ಥ ಅರ್ಥದ ಮೂಲ ಆಕೃತಿ ಆ-ತನು: ಸೃಜನೇಂದ್ರಿಯ, 'ಸೃಜನ' ಕೇಂದ್ರ ಎನಿಸಿದರೂ ಇದು 'ಹಿರಣ್ಯಗರ್ಭ' ಚಾಂದ್ರ ಭೂಮಿಕೆಯ ಸೃಜನ-ವಾಚಕವಿದೆ! 'ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ' ಆಗುವಾಗ ಈ ಪ್ರಬೋಧಕ ಸವಿತೃ ದೇವನ ಭೂಮಿಕೆಯ 'ಸೃಜನ' ಎರಡೂ ಸಮಾನ ಪಾತಳಿಯ 'ಶಿಲ್ಪ'ವಲ್ಲ. ಎರಡೂ ಅತ್ಯಾವಶ್ಯಕ 'ಶಿಲ್ಪ'ಗಳೇ, ಮಾನವ ಸಂಸ್ಕೃತಿಯ ಪ್ರ-ಗತಿಗೆ. ಆದರೆ ಇವೆರಡರಲ್ಲಿ ಒಂದೇ ಮಹತ್ವದ್ದು ಎಂದರೆ ಏಕಂ : ಸತ್=ಕತ್ತಲೆ! ಆದರೂ ಎರಡರೊಳಗಿನ ನಿತ್ಯ ಅಂತರ ಮತ್ತು ತಾರತಮ್ಯ ಮರೆಯಲಿಕ್ಕಾಗದು.

ಸೃಜನಕ್ಕೆ ಪ್ರೇರಕ-ಭಾವ ಶಕ್ತಿಯ ನಿಜಸ್ವರೂಪವನ್ನರಿಯಲು ಇನ್ನೂ ಆಳಕ್ಕೆ ಇಳಿಯುವ ಆವಶ್ಯಕತೆಯಿದೆ. ತಮ್ಮ ಗೃಹೀತ (hypothesis)* ಕಾಲ್ಪನಿಕ-ಅಥವಾ ಪೂರ್ವಗ್ರಹ-ದೂಷಿತ ಚಿತ್ರವಾಗಬಾರದೆಂದು ಲೋಕಾನುಭವವು ಪ್ರತಿಬಿಂಬಿತವಾಗಿರುವ ಶಬ್ದಪ್ರತಿಮೆಗಳ ಪ್ರಯೋಜನ ಪಡೆಯುವುದು ಯಾವಾಗಲೂ ಸುರಕ್ಷಿತ. ಸಂಸ್ಕೃತ 'ಭಾವನಾ' ಇಂಗ್ಲೀಷಿನ Emotion ಮೂಲಾರ್ಥ ಬೇರೆಯಲ್ಲ. ಆದರೆ, ಗತ್ಯರ್ಥಕ ಸೂಚನೆ ನಮ್ಮಲ್ಲಿ ಇಲ್ಲ! ಇಂಗ್ಲಿಷ್ ಭಾಷಿಕರಂತೆ ಸಾಮಾನ್ಯವಾಗಿ ಯೂರೋಪಿನ ಎಲ್ಲ ಭಾಷಿಕರಿಗೂ ಭಾವನಾ (ಶಕ್ತಿಯು) ಗತಿಯುಕ್ತವಿರುವ ಅನುಭಾವವು ಆ ಭಾಷಿಕ ಶಬ್ದಪ್ರತಿಮೆಯಲ್ಲಿ ಒಡಮೂಡಿ ನಿಂತಿದೆ. ಭಾರತೀಯರ 'ಸ್ಥಿತಿ' ಪ್ರಿಯತೆ ಇಲ್ಲಿ ಬಯಲಿಗೆ ಬಂದಿದೆ. ಸುಸ್ಕೃತದ ಆ-ವೇಗ ಉತ್-ವೇಗದಲ್ಲಿ ಗಾಳಿಯ ಭಾವ ಉಂಟೇ ಉಂಟು! ಕೆಲವೊಮ್ಮೆ ವೇಗ ತೀವ್ರವಾಗಿ ಕಾವು ಆಗುತ್ತದೆ. ಈ ಕಾರಣದಿಂದ ಮಾರುತ=ರೌದ್ರ ಗಾಳಿ=ವಾತ (:ವಾಯು) ಇದು ದೈವತ. ಭಾವನಾ ಶಕ್ತಿಯ ಮೂರ್ತರೂಪವೇ 'ಗಾಳಿ' ರೂಪದಲ್ಲಿ ಕಂಡಿದ್ದು. ಮೈಯಲ್ಲಿ 'ಆ-ವೇಶ' ಬಂದಿದೆ, ಎಂಬುದಕ್ಕೆ 'ಗಾಳಿ' ಆಗಿದೆ ಎಂಬ ವಾಡಿಕೆಯಿದೆ. ಇದು ಉನ್ಮನಸ್ಕ, ಭಾವೋನ್ಮತ್ತತೆಯ ಪ್ರತಿಮೆ ಇರಬಲ್ಲದು. 'ಗಾಳಿ ದೇವರು' ಮರುತರು=ರುದ್ರಿಯರು. ಗ್ರೀಸಿನಲ್ಲಿ Typhon=Python ದೈವತವಿತ್ತು. ಬಿರುಗಾಳಿ-ಚಕ್ರವಾತ-ಸರ್ಪ ಇವು ಒಂದು ಇನ್ನೊಂದರಲ್ಲಿ ಮಾರ್ಪಡುವ ಪವಾಡ ಕಥೆಗಳಿವೆ.

'ಕಾಣ್ಕೆ'ಗೆ (Vision) ಭಾವುಕತೆ ಕಾರಣ; ನೋಳ್ಕೆಗೆ ಪರೀಕ್ಷಣ ವೃತ್ತಿಯ ದೃಷ್ಟಿ ಪುನರ್-ವಿಮರ್ಶಾ ಪ್ರವೃತ್ತಿ (:ಧೀ) ಕಾರಣ. ಕೇವಲ ಭಾವನೆಯ ಮೂಲಕ ಕಾಣುವುದೆಲ್ಲವೂ ಲೋಲಕದೊಳಗಿಂದ (Prism) ಕಾಣುವ ಬಣ್ಣಬಣ್ಣದ ದೃಶ್ಯದ ಹಾಗಿನ ನೋಟವಿರಬಹುದು ಅಥವಾ ಅಂತರ್‌ಗೋಲ ಇಲ್ಲವೆ ಬಬಿರ್‌ಗೋಲ ಕನ್ನಡಕದ ಹಾಗಿನ ದೃಶ್ಯವಿರಬಹುದು. ಭಾವನೆಯ ಕನ್ನಡಕದೊಳಗಿಂದ ಮಾಡಿಸಲಾಗುವ ಕಲಾಸಾಹಿತ್ಯ ಕೃತಿ ಇದರಲ್ಲಿ ಅಡಕವಾಗುವ 'ಸತ್ಯ' ವಿಶ್ವಾಸಾರ್ಹವೇ ಎಂಬ ವಿಮರ್ಶೆ ಅನಿವಾರ್ಯ. ಸಾಹಿತ್ಯಿಕ ಸತ್ಯ ಮತ್ತು ಜೀವನ ಸತ್ಯ ಇವೆರಡರೊಳಗಿನ ಅಂತರವನ್ನು ಸ್ಪಷ್ಟಪಡಿಸುವ ರಸೋದ್ಗ್ರಾಹೀ ವಿಮರ್ಶಾಪದ್ಧತಿಯು ಇಲ್ಲದ್ದರಿಂದ ಏಕಂಸತ್ತಿನ ದಿಗ್ಭ್ರಮೆ ಇಂದು ಜನಮನವನ್ನಾಳಲು ಅವಕಾಶದೊರೆತಿದೆ. ಋಗ್‌ವೇದದಲ್ಲಿ, ಮರುತರನ್ನು 'ಅಹಿಭಾನವಃ' ಎಂದು ವರ್ಣಿಸುವ ಕವಿಗಳಿಗೆ ಮರುತ=ಮಾರುತ=ಗಾಳಿಯು ಹಾವಿನಂತೆ ಕಂಡುದಂತೂ ಸರಿ. ಅಲ್ಲದೆ, ಗಾಳಿಯಲ್ಲಿ ಪ್ರಕಾಶ (=ಅಗ್ನಿ) ಇರುವುದಾಗಿಯೂ ಅಂದಿನವರ ಗ್ರಹಿಕೆಯಾಗಿತ್ತು ಮತ್ತು ಈ ಪ್ರಕಾಶಕ್ಕೆ ಭಾ-ನು ಎಂಬಲ್ಲಿ ಗಾಳಿಯನ್ನು ಸೂರ್ಯನ ಮಟ್ಟಕ್ಕೆ ಒಯ್ಯುವ ಹೊಂಚು ಕಾಣುತ್ತಿದೆ! ಉಗ್ರಭಾವನೆ

---

* ಶಂಬಾ ತಮ್ಮ ಮೊದಲ ಕೃತಿಗಳಲ್ಲೂ ಅನಂತರದ ೧೯೬೦ರ ಹಾಲುಮತದರ್ಶನ ಹಾಗೂ ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ ಗ್ರಂಥಗಳಲ್ಲಿ hypothsis ಎಂಬುದಕ್ಕೆ ಅನುಮಾನಿತ ಸತ್ಯ ಎಂಬ ಪದವನ್ನು ಸಮನಾರ್ಥವಾಗಿ ಬಳಸುತ್ತಿದ್ದರು. (ಸಂ)

ತ್ವೇಷ; ಋಗ್ವೇದದಲ್ಲಿ ರುದ್ರಿಯರ-ರುದ್ರನ 'ತ್ವೇಷ'ದ ಉಲ್ಲೇಖ ಬರುತ್ತದೆ. ಅಲ್ಲಿ ಸಾಯಣರು ತ್ವೇಷಕ್ಕೆ ತೇಜ ಎಂದು ಅರ್ಥ ಹೇಳುತ್ತಾರೆ. ಆದರೆ, ಈ ತೇಜವು ಭಾ-ನು ಪ್ರಕಾಶವೆ? 'ತ್ವೇಷ' ಬಂದಾಗಿನ 'ತೇಜ'ವನ್ನು ಕೆಂಡ ಬೆಂಕಿ ಎನ್ನಬಹುದು. ಸಿಟ್ಟಿನಿಂದ ಮೋರೆ ಕೆಂಜಗದಂತೆ ಆಗಿ ನಿಗಿನಿಗಿ ಕೆಂಡದ (White heat) ನೆನಪು ತರಬಹುದು. ಝುಂಝಾವಾತದ ಘೋರರೂಪ ರುದ್ರಿಯರು; ರುದ್ರನು ಪ್ರಳಯಾಗ್ನಿ ರೂಪ ಎನಿಸುತ್ತಾನೆ! ಭಾವನೆಗಳ ಆತ್ಯಂತಿಕ ಉಗ್ರಸ್ವರೂಪದ ಪ್ರತಿಮಾನ, ಮೂರ್ತಿ 'ರುದ್ರ'. ಗಾಳಿಯರೂಪ ಮರುತರನ್ನು 'ದ್ರಪ್ಸಿನಃ' 'ಪೃಷತ್ ಅಶ್ವಃ' ಎಂದರೆ ವರ್ಷಯಿತ್ರ : ವೃಷನ್ ಎಂದರೆ ರುದ್ರನು ವೃಷಭನು ! ಸೃಜನ ಜಲ ಸೇಕ್ತಾರನು, ವೃಷ್ಟಿಮಾನ್ ದೈವತ ಶಕ್ತಿ; ಆದುದರಿಂದಲೆ, ಇವನು ರಸೇಶ್ವರ : ಗಂಗಾಧರ.

ಭಾವನೆಯು 'ಉಗ್ರ'ವಿರುವಂತೆ 'ಸೌಮ್ಯ'ವೂ ಇರಬಲ್ಲದು. ಭಾವನೆಯ ಸೌಮ್ಯ [<ಸೋಮ್ಯ<ಸೋಮ= ಚಾಂದ್ರ ದೈವತಕ್ಕೆ ಸಂಬದ್ಧ] ರೂಪ ಸೂಚಕತೆ ಅಖಂಡಿತ ರುದ್ರನ 'ಶಿವ' ಸ್ವರೂಪದ ನಿಲುಮೆ ಉಂಟು. ಋ. ವೇದದ 'ಶಿವತಮೋ ರಸಃ' ಸಂಕೇತವು ಈ ದೃಷ್ಟಿಯಿಂದ ಅಭ್ಯಸನೀಯವಿದೆ. ವಿಷ (ಕಪ್ಪು), ಅಮೃತ (ಶುಭ್ರ) ಎರಡನ್ನೂ ಒಳಗೊಂಡ ಶಕ್ತಿ ಚಂದ್ರ. ಈ ಅಖಂಡಿತ ಅದಿತಿರೂಪ ಸಂಕೇತವು, ಇಡೀ ಭಾವಶಕ್ತಿ=ಚಂದ್ರ=ರಸ ಇವುಗಳಲ್ಲಿ ಇರುವ ಆಂತರಿಕ ಏಕಸೂತ್ರವನ್ನು ಪ್ರತೀತಿಗೆ ತರುತ್ತದೆ. ಈ ಚಂದ್ರಶಕ್ತಿಯೆ 'ಏಕಂ ಸಂತಂ' (ಬಹುಧಾ ಕಲ್ಪಯಂತಿ) ಸ್ವರೂಪದ ವಿಶ್ವವ್ಯಾಪಕ ತತ್ತ್ವವಾಗಿದೆ! ಭಾವನೆ=ಚಂದ್ರ=ಅಪ : ಮಧು : ರಸ : ರೇತಶಕ್ತಿ! ಚಂದ್ರ ತತ್ತ್ವದೊಳಗಿನ ಸೌಮ್ಯ : ಮಧು(ರ) ರಸ ಮಂಡ-ಲ (೦) ಮತ್ತು ಈ ಮಂಡ-ಲಸ್ಥ ಕಪ್ಪು 'ಶೃಂಗ' ಸದೃಶ ಆಕೃತಿ. 'ಮೊಲ'=ಪುರುಷ ಮೃಗ : ಏಕ ಶೃಂಗ ಪಶು ಎಂದರೂ ಇದೆ. ಈ ಕೃಷ್ಣರೂಪವನ್ನೇ 'ಅಗ್ನಿ'='ಕುಮಾರ' ಇತ್ಯಾದಿ ನಾಮಾಂತರದಿಂದ ವೇದೋಪನಿಷತ್ತುಗಳು ವರ್ಣಿಸುತ್ತ ಬಂದಿವೆ. ವಿಶ್ವಸ್ಥ ಮೃತ್ಯುತತ್ತ್ವದ ಮೂರ್ತಿ ಎಂಬ ಗ್ರಹಿಕೆಯಾಗಲು ಯುವಕನನ್ನು ಕು-ಮಾರ ಕುಮಾರಿ ಎಂದು ಹೆಸರಿಸುವ ಕವಿ ಸಂಪ್ರದಾಯವು ಮೃತ್ಯುಪೂಜಕ ಪರಂಪರೆಯದೆಂದು ಸ್ಥಿರಪಡಿಸುತ್ತದೆ.

ಋ, ವೇದದಲ್ಲಿ 'ಮರುದ್ಭಿಃ ಅಗ್ನ ಆಗಹಿ' 'ಪಯಸ್ವಾನ್ ಅಗ್ನ ಆಗಹಿ'[೨] ಎಂದು 'ಯಜ್ಞ'ಕ್ಕೆ ಆಮಂತ್ರಿತ ಅಗ್ನಿಯು, ಚಾಂದ್ರ (: ಗೌತಮ) ಅಗ್ನಿಯೆ (=ಕುಮಾರ=ಶೃಂಗ : ಪುರುಷನೆ) ಹೊರತು ಇವನು ಜಾತವೇದ, ಹವ್ಯವಾಹನ ಅಗ್ನಿ ಸುತರಾಂ ಅಲ್ಲ! ದ್ರಪ್ಸಃ ಮರುತ್=ಪಯಸ್ ವಂತ (ಚಂದ್ರಾಃ ಆಪಃ) ಗಾಳಿ ಮತ್ತು ಇದು ಅಗ್ನಿಯೊಡನೆ ಇದೆ. ಇಜಿಪ್ತಿನ ಟೆಫ್ನಟ್ (air and moisture) ಮತ್ತು ಸುಮೇರಿದ ಎನಲಿಲ್ ಹಾಗೂ ಹಿಟ್ಟೈಟ್-ಕ್ಯಾನಾನತ್ತಣೆನ Storm god ಹೋಲಿಸಿರಿ ಈ ನೆಲದಲ್ಲಿ ದೇಹದಲ್ಲಿ ಸುಫಲೀಕರಣಕ್ಕೆ ಅಥವಾ ಪ್ರಲಯಕ್ಕೆ ಆವಶ್ಯಕವಿರುವ ಬೆಂಕಿ (=ಬೆದೆ) =ಅಗ್ನಿಯು ಇದು. ಮನೋಭಾವ(ನಾ)ದ ಭೂಮಿಕೆಯಲ್ಲಿ ಅಂಕುರಿಸುವ ಮನಸಿ-ಜನು; 'ಕಂ'ದರ್ಪನು ಎಂದರೆ ಈ ಸೃಜನ ಜಲಪ್ರೇರಕ ಅಗ್ನಿ. ಜರತ್ಕಾರು ಪತ್ನಿ ಮಾನಸೀ=ಸರ್ಪರೂಪ ಪ್ರತಿಮೆ. 'ಚಂದ್ರಮಾ ಮನಸೋ ಜಾತಃ'! ಚಂದ್ರ=ಸರ್ಪ! 'ಅಮೃತಂ ಚೈವ ಮೃತ್ಯುಃ' ಸ್ವರೂಪದ ವಿಶ್ವರೂಪ (:ಸರ್ಪ) ಶಕ್ತಿ ಈ ಭಾವನೆ! ಭೂ>ಭವನು : ಭೂಮಿ ಪುತ್ರನು 'ಭೌಮ'ನು : ಅಸುರನು=ನಾರ (:ನರ)ಕ ದೈತ್ಯನು ಪುರಾಣಕಥೆಯಂತೆ. ನಾರ(ಕ)=ಪಾತಾಳಲೋಕ (ಆಪ ; ಸಲಿಲ=ನಾರ!). 'ನಾರಣ' ಎಂದರೆ ದಿವ್ಯಲೋಕ ! 'ಕೃಷ್ಣ' (ಸರ್ಪ), ನಾರಕನನ್ನು ಸಂಹರಿಸಿದನೆಂಬ 'ಕೃತಕ' ಕಥೆಯ ನೋಡಿ ! ಗ್ರೀಸಿನಲ್ಲಿ Titans ಎಂದರೂ ಇವರೇ. ಪ್ರಚ್ಛನ್ನ ಚಂದ್ರ ವರುಣ=ಯುರೇನಸ್ ದೇವನ ಸೇಚನದಿಂದ ಉತ್ಪನ್ನ ಸಂತತಿ. 'ಭೌಮ'ನೆಂಬುದು 'ಮಂಗಳ' ಗ್ರಹದ ಮತ್ತೊಂದು ಹೆಸರು! (ಅ)ಮಂಗಳ, ಶನಿ, ಚಾಂದ್ರ ದುಷ್ಟಶಕ್ತಿಯ ಪ್ರತೀಕಗಳು! ಮಂಗಳ ಯುದ್ಧಪ್ರೇರಕ: ಇದು ಹಿರಾಕ್ಲಿಟಸ್ ಹೇಳುವ ಯುದ್ಧ. ಲಗ್ನಸಂಬಂಧದಲ್ಲಿ ಮಂಗಳ 'ಶುಭ' ಸ್ಥಾನದಲ್ಲಿ ಉಂಟೇ ಎಂದು ನೋಡುವ ವಾಡಿಕೆಯಿದೆ. 'ಶುಭ ಮಂಗಳಂ' ಎಂಬ ಘೋಷದೊಡನೆ ಲಗ್ನ ನಡೆಯುತ್ತದೆ! ಆದರೆ, ಅಖಂಡಿತ ದೈವತಶಕ್ತಿ ಪೂಜಿಸುವ ಭಾರತೀಯರ, ಅಮಂಗಳ-ಮೃತ್ಯುವನ್ನು ದೂರವಿರಿಸುವ ಇಂಥ ಪ್ರಯತ್ನ ನಿಷ್ಫಲವಾಗಲೇ ಬೇಕಷ್ಟೆ?

ಜೀವನಾನುಭವಗಳ ಈ ಭಾವ-ವಿಶ್ವವನ್ನು ಅರ್ಥವಿಹೀನ-ಗ್ರಹಿಕೆಗಳ ಮೊತ್ತ ಎಂದು ತಿರಸ್ಕರಿಸಿದರೆ ಮಾನವರಿಗೆ ಜ್ಞಾನ (ವಿಚಾರ : ಅರ್ಥ) ಹೊಳೆದುದು ಹೇಗೆ ಇದರ ನೆಲೆಯೆ ನಿಲುಕಲಾರದು. ಅಖಂಡಿತ: ಸಮಗ್ರ ದೈವತಶಕ್ತಿಯ ಆರಾಧನೆಯು ತತ್ತ್ವತಃ ಮೃತ್ಯುಪೂಜೆಯಾಗುವುದರ ಅರಿವು ಮೊತ್ತ ಮೊದಲಲ್ಲೆ ಇರಲು ಶಕ್ಯವಿಲ್ಲ. ಸ್ಥೂಲದಿಂದ ಸೂಕ್ಷ್ಮವಿಚಾರ: ಇದು ವಿಕಾಸಕ್ರಮ. 'ಕಾಲ' ತತ್ತ್ವವು ಅರಿಕೆಗೆ ಬಂದುದರ ಭಾವನಾತ್ಮಕ ಪಾರ್ಶ್ವಭೂಮಿಯನ್ನು ವಿವರಿಸುವಾಗ ಇದು ಸ್ಪಷ್ಟವಾಗಿದೆ. ಇದರ ಇನ್ನೂ ಹೆಚ್ಚಿನ ಸ್ಪಷ್ಟೀಕರಣವು ಇಲ್ಲಿ ದೊರೆಯಲಿದೆ. ಕವಿಯು, ಕಾಲವನ್ನು ಪಕ್ಷಿಯಾಗಿ ಕಂಡಿದ್ದಾನೆ. ಆಯುಷ್ಯ : ಜೀವಿತ ಸರ್ಪದಂತೆ ಸರಿದುಹೋಗುತ್ತದೆ. ಜೀವಪಕ್ಷಿ ಹಾರಿಹೋಗುತ್ತದೆ.! 'ಹಕ್ಕಿ ಹಾರುತಿದೆ ನೋಡಿದಿರಾ?' ಎಂಬ ಸೋಜಿಗ, ಕವಿ ಎಂದೊ ಕಂಡಿದ್ದಾನೆ. ಕಾಲ=ಗತಿ ಇದು ಸರ್ಪವೂ ನಿಜ. ಇದನ್ನು 'ಕಾಳಿಂಗ' ಸರ್ಪ; 'ಕೃಷ್ಣ' (ದ್ರಪ್ಸಃ) ಸರ್ಪ ಎಂಬಲ್ಲಿ ಇನ್ನೂ ಹೆಚ್ಚಿನ 'realism' ಉಂಟು. ಜೈನ ಪರಂಪರೆಯ ಕುಕ್ಕುಟ ಸರ್ಪವು ಹಾವು-ಹಕ್ಕಿಯ ಸಂಯುಕ್ತ ರೂಪ, ಋ. ವೇದದ 'ಬೃಹಂತಂ ವಾಯಸಂ', ಗ್ರೀಸಿನ ಕ್ರೋನಸ್, ರೋಮನ್ ಸ್ಯಾಟರ್ನ, (ಶನಿ) ಒಂದೇ! 'ಬೃಹಂತಂ ವಾಯಸಂ' ಇದು ಅಪಾಂಗರ್ಭಂ' ಎಂದು ವರ್ಣಿತವಾಗಿದೆ! ಶನಿ=ಮಾರುತಿ! ವಾಯಸ=ಕಾಕದೇವ! 'Cronus' ಈ ದೈವತದ ಮೂಲಕ. 'Chronos', chronical, chronic ಮುಂ. ಕಾಲಸೂಚಕ ಶಬ್ದಪ್ರತಿಮೆ ಪ್ರಚಲಿತವಾದುವಾಗಿ ತಜ್ಞರು ಹೇಳುತ್ತಾರೆ. ಗೀತೆಯ ಭಗ-ವಂತನು 'ಕಾಲಃ ಅಸ್ಮಿ' ಎಂದು ಸಾರಿರುವಲ್ಲಿ ಇವನು ನೀರೊಳಗಿನ ಹಾವು=ಅಪಾಂಗರ್ಭ, ವಾಯಸ=ಕ್ರೋನಸ್, ಶನಿ=ಯಮ ಏನೆಲ್ಲವೂ ಆಗುತ್ತಾನೆ! ಈ ಏಕಂ ಸತ್-ರೂಪ ಎಂದರೆ ಚಂದ್ರ! ಈ ಭಗವಂತನು, ಋ. ವೇದದ 'ದ್ರಪ್ಸಃ ಕೃಷ್ಣಃ (:ಶುಷ್ಣ ಅಹಿಯ ಸಂಗಾತಿ) ಸರ್ಪಸ್ವರೂಪನು ಎಂಬ ಅಂಶಗಳು, ಗ್ರೀಸಿನತ್ತಣಿನ ಕಥೆಯಿಂದಲೂ ದೃಢಪಡುತ್ತಿವೆ!

'ಅಪಾಂಗರ್ಭಂ ವಾಯಸಂ' ಇಧನ್ನು 'ಮಾತರಿ-ಶ್ವನ್ (ತಾಯ ಒಡಲಲ್ಲಿ : ನಾರ: ಜಲದಲ್ಲಿ ಉಸಿರಾಡಿಸುವ ಸರ್ಪ) = 'ಸರೀಮಣಿ' ಈ ಪ್ರತಿಮೆಯೊಡನೆ ಹೋಲಿಸಬಹುದು; ಇಲ್ಲಿ, ಇನ್ನೂ ಹುಟ್ಟಲಿರುವ ಗರ್ಭಸ್ಥ ಶಿಶು: ಅ-ಭು=ಬಾಲಚಂದ್ರ : Being : Becoming ಆಗುತ್ತದೆ. ಋ. ವೇದದ ಕವಿಗಳು ಗರ್ಭಸ್ಥ ಭ್ರೂಣವನ್ನು 'ಸರೀ-ಸೃಪ' ರೂಪದಲ್ಲಿ ಕಾಣುತ್ತಾರೆ.! ಮೂರ್ತ ರೂಪದ 'ಕಾಲ' ಸರ್ಪವು ಇಲ್ಲಿದೆ! ಕಾಲವು, ಮೊತ್ತ ಮೊದಲಲ್ಲಿ ಪಯಸ್ವಾನ್ ಮಾರುತ (Air and moisture) ರೂಪದ್ದಾಗಿ ಕಂಡುದಕ್ಕೆ ಬೇರೆ ಬೇರೆ ದೇಶಗಳ ಆದಿ ದೈವತಕತೆಗಳ ಮೂಲಕ ದೊರೆವ ಪ್ರಮಾಣಗಳನ್ನು ಸೂಚಿಸಿ ಆಗಿದೆ. ಪ್ರಪಂಚದ ಗತಿತತ್ತ್ವ ನಿಜಕ್ಕೂ ಚಾಂದ್ರಕಾಲ. ಪುರಾತನ ಕವಿ ಇದನ್ನೆ ಸರ್ಪರೂಪ : ಪ್ರಾಣ-ವಾಯುರೂಪ ಕಾಣುತ್ತಾನೆ. 'ಚಂದ್ರಾಃ ಆಪಃ' ಇದು ವ್ಯಕ್ತಿಜೀವಿತದ ಸಾರ ಎಂಬ ಅನುಭಾವವು ಮೂಲತಃ ರಾತ್ರೀ ಸಮಯಾಚಾರ. 'ರಸೋ ವೈ ಸಃ' 'ಏಕಂ ಸತ್', ಈ ವೈಚಾರಿಕ ಆಕೃತಿ ಇದಕ್ಕೆ ಸಾಕ್ಷಿ. ಇದನ್ನು ಸಿದ್ಧಪಡಿಸಲು ಬೇರೆ ಬಾಹ್ಯ ಪ್ರಮಾಣಗಳು ಅನಾವಶ್ಯಕ. ಭಾವ(ನೆ) ಅರ್ಥಕ್ಕೆ ಎಂದರೆ ನಿಯಮಕ್ಕೆ ಒಗ್ಗದು, ಎಂಬಲ್ಲಿ ಅಜ್ಞಾನ ಅಥವಾ ಆತ್ಮವಂಚನೆಯಿದೆ. ಇದು ವಿಶ್ವಸ್ಥ ನಿಯಮಕ್ಕೆ ಎಂದರೆ ಋತಕ್ಕೆ ಒಳಗಾಗಿದೆ: ರೇತೋತ್ಸರ್ಜನದೊಡನೆ ಆಗುವ ಉಸಿರಾಟದ ತೀವ್ರಗತಿ. ಪ್ರ-ಲಯ ಮತ್ತು ಸೃಜನ ಉಭಯ ಕ್ರಿಯೆಯ ಸೂಚಕವಿರುವುದಾಗಿ ಪುರಾತನರು ಗ್ರಹಿಸಿಕೊಂಡಿದ್ದುದು ಕಾಣುತ್ತದೆ. (ಸಂ)ಯೋಗ ಶಾಸ್ತ್ರದ ಉಗಮ ನೋಡಿ ಇಲ್ಲಿದೆ. 'ಕಾಲ' ತತ್ತ್ವದ ಭೌತ ಸ್ಥೂಲ ರೂಪವು, ವೇದದ ಸೋಮಸೂಕ್ತಗಳಲ್ಲಿ ಉಂಟು. ಅಥರ್ವವೇದದಲ್ಲಿ ಸ್ವತಂತ್ರ 'ಕಾಲ' ಸೂಕ್ತವೇ ಉಂಟು; ತುಂಬ ಮೇಲ್ಮಟ್ಟದ್ದಾಗಿದೆ. ಈ ಸ್ತೋತ್ರ ಚಂದ್ರನ ಮೂಲಕವಾದ ಕಾಲದ್ದು ಇದ್ದು, ಸೂರ್ಯನ ಮೂಲಕ ಉಂಟಾಗುವ 'ಕಾಲ' ಎಂಬ ಸಂಭ್ರಾಮಕತೆಗೆ ಅವಕಾಶ ಕಲ್ಪಿಸಲಾಗಿದೆ! ವಕ್ರ ಮಾರ್ಗೀಯ ಅಲಂಕರಣದ ಸುಂದರ ಮಾದರಿಯಾಗಿದೆ. ಸೃಜನ-ಪ್ರೇರಕ 'ಕಾಲ' ಆದಿದೇವ ಕಾಮ[೩] ಇವನೇ ಯಮ : ಚಂದ್ರ! ಇದಕ್ಕೆ ಋಗ್‌ವೇದದ ಆಧಾರವಿದೆ. 'ಋತೂನ್ ವಸಂತಾದೀನ್ ಚಂದ್ರಮಾಃ ವಿದಧತ್'.[೪] ಮರಳಿ ಮರಳಿ ಹುಟ್ಟುವವನು (: ಪುನಃ ಜಾಯತೇ) ಚಂದ್ರನು; ಸೂರ್ಯನಲ್ಲ, ಎಂಬ ವಿವರಣೆಯೂ, ಸೌರ-ಸಂಪ್ರದಾಯದ್ದು ಎಂದು ನಂಬಿಸಲಾಗಿರುವ ಈ ಸಂಹಿತೆಯಲ್ಲಿಯೆ ಉಂಟು.

ನರರೊಳಗಿನ ಭಾವಶಕ್ತಿಯು ತನ್ನ ಸ್ವೈರ ವೃತ್ತಿಯ ಮಂಡನಕ್ಕಾಗಿ ಸೌರ ಭೂಮಿಕೆಯ ಸಂಭ್ರಮ ನಿರ್ಮಿಸಲು 'ಬುದ್ಧಿ' ರೂಪ ಕುಮಾರನಿಗೆ ಜನ್ಮವೀಯಬಲ್ಲದು; (ಸೌರ ಜೀವನ ರೀತಿಯ ಎಂದರೆ ಹಗಲಿನಂತೆ ಎನಿಸುವ ಮೊಗವಾಡ ಧರಿಸದೆ) ರಾತ್ರೀ ಸಮಯಾಚಾರ ತತ್ತ್ವ : ಏಕಂ ಸತ್, ಹಗಲಿನ ಬಾಳಿನಲ್ಲಿ ಪ್ರತಿಷ್ಠಿತವಾಗಲು ಅಶಕ್ಯ; ಮತ್ತು ಇಂಥ ಭಾವ-ಬುದ್ಧಿ ಈ ಎರಡರಲ್ಲಿ ಜನ್ಯ-ಜನಕ ಭಾವ ಕಾಣಿಸಿಕೊಳ್ಳುತ್ತದೆ. ವೇದದ ಪುರಾತನ ಪರಿಭಾಷೆಯಲ್ಲಿ 'ಅಪಾಂನ್ನಪ್ತ್ರ' ತತ್ವದ ಅತ್ಯಾಧುನಿಕ ವೈಚಾರಿಕ ಆಕೃತಿ: ಈ ಭಾವ ಮತ್ತು ಬುದ್ಧಿಯ ಅವಳಿ ಸಂತಾನ : ಯಮ-ಯಮೀ! ಇದು 'Unity in duality'ಕೃತಿ! ಇವೆರಡನ್ನೇ ಸ್ವಯಂ ಪೂರ್ಣವಾಗಿ ಗ್ರಹಿಸಿದಲ್ಲಿ ಅನವಸ್ಥೆಗೆ ಆಮಂತ್ರಣ. ನೇತಿನೇತಿ ಸಂಭ್ರಾಮಕತೆ ನಿರ್ಮಾಣವಾಗುವುದರಿಂದಾಗಿ, ಇನ್ನೊಂದು (ಸವಿತೃ) ಪ್ರಕಾಶದ ಅಸ್ತಿತ್ವವು ಇಲ್ಲದಿದ್ದಲ್ಲಿ, ಈ 'ವಾಗರ್ಥಾವಿವ' ಯುಗಲದ ಆಟ ಅರಿಕೆಗೆ ಬರಲು ಶಕ್ಯವಿದ್ದಿಲ್ಲ. ಭೌತ ಪಾತಳಿಯ ಚಂದ್ರ (:ಭಾವಶಕ್ತಿ)-ಸೂರ್ಯ (ಬುದ್ಧಿ ಶಕ್ತಿ), ಇವೆರಡರ ಆಚೆಗೆ ಇಂದ್ರಿಯಾತೀತ ಪ್ರಕಾಶ ತತ್ವದ ಸವಿತೃರೂಪ 'ಧೀ' ಶಕ್ತಿ ಉಂಟೇ ಉಂಟು.

ಟಿಪ್ಪಣಿಗಳು

೧. Cassirer Ernost; ***Essay on Man : An Introduction to a philosophy of human Culture*** p. 45
೨. ***ಋಗ್ವೇದ ಸಂಹಿತೆ*** I. ೨೩.೨೩: ಮತ್ತು X ೯.೯. ಮುಂ
೩. ಮೇಲಿನದೇ X. ೧೨೯
೪. ಮೇಲಿನದೆ X. ೮೫-೧೮

ಚಾಂದ್ರ ಹಾಗೂ ಸೌರಸತ್ಯ : ಇತಿಮಿತಿಗಳು

ಸತ್ಯವು ಸಾಂಕೇತಿಕವಿದೆ. ಜೀವನ-ಸತ್ಯವನ್ನು ಪ್ರಕಾಶ ರೂಪದಲ್ಲಿ ಕಂಡ ಪುರಾತನರ ಈ ಜೀವನಾನುಭವವು, ರಾತ್ರಿ ಮತ್ತು ಹಗಲಿನ ರೂಪಕದಿಂದ ಅಭಿವ್ಯಕ್ತವಾದುದು ಕಂಡುಬರುತ್ತದೆ. ರಾತ್ರಿ-ಹಗಲು ಈ ಶಬ್ದಗಳು ಸಂಕೇತ ಎಂಬುದನ್ನು ಮರೆತರೆ ಘಾತ=ಆಘಾತ ನಿಶ್ಚಿತ. ಆದಕಾರಣ, ಸತ್ಯ ಸಾಂಕೇತಿಕ ಎಂದು ಹೇಳುವ ಆವಶ್ಯಕತೆ. ಈ ಅಭಿವ್ಯಕ್ತಿಯ ರಾತ್ರೀ ಸಂಕೇತಗಳ (ಮಾಧ್ಯಮ : ಪ್ರತಿಮೆಗಳ) ರೂಪ-ಆಕೃತಿ ವೈವಿಧ್ಯಗಳು, ಬೆರಗುಗೊಳಿಸುವಂತಿವೆ. ಆದರ ಸಮಸಾಮಯಿಕ, ಅಥವಾ ತತ್ಪೂರ್ವದ ಸಂಸ್ಕೃತಿಗಳ ಮಾಧ್ಯಮ : ಪ್ರತಿಮೆಗಳೊಡನೆ, ತುಲನಾತ್ಮಕವಾಗಿ ವಿಮರ್ಶಿಸುವಾಗ 'ಹಗಲಿನ' ವೇಷಧರಿಸಿದ ರಾತ್ರೀ ಸಂಕೇತಗಳ ಬಣ್ಣ ಬಯಲಿಗೆ ಬರದೆ ಉಳಿಯದು. ಉದಾ : ಸೂರ್ಯನ ಮಟ್ಟಕ್ಕೆ ಏರಿಸಲ್ಪಟ್ಟ ಮೂಲಕ ಮಾರ್ತಾಂಡ, ನಾರಾಯಣ, 'ಪತಂಗಂ' (ಅಕ್ತಂ ಅಸುರಸ್ಯ ಮಾಯಯಾ') ಎಂಬ ಪ್ರತಿಮೆ ಚಾಂದ್ರಭೂಮಿಕೆಯದಿದ್ದು 'ಸೂರ್ಯ'ನ ವೇಷಧರಿಸಿದೆ! ತನ್ನ ಗುಹ್ಯವನ್ನು ಬಚ್ಚಿ ಇಡುವ ನರ-ಮಾನವ ಪ್ರವೃತ್ತಿಯ ಈ ಪ್ರಪಂಚದಲ್ಲಿ, 'ಸತ್ಯ' ಎಂಬುದು ಕಾಣ ದೊರೆಯಬಾರದಿತ್ತು. 'ಸತ್ಯ' ಸಂಭವಿಸಿದ್ದನ್ನು ಹಲ ಕೆಲಬಾರಿ ಬುದ್ಧಿ ಪುರಸ್ಸರವಾಗಿ ಮರೆಮಾಜಲಾಗುವಂತೆ, ಇದು ಕೆಲವೊಮ್ಮೆ ಅಬುದ್ಧಿ-ಪುರಸ್ಸರವಾಗಿಯೂ, ಮರೆಯಲ್ಲಿ ಉಳಿಯುತ್ತದೆ. ಅಥವಾ ಮರೆತೂ ಹೋಗುತ್ತದೆ. ಆದಕಾರಣ, ಈ ಜೀವನದಲ್ಲಿ ಎಲ್ಲೆಲ್ಲೂ ಸುಳ್ಳು-ಠಕ್ಕು ತಾಂಡವವಾಡುತ್ತಿದೆ, ಎಂದು ಎನಿಸುವುದು ಸಹಜ. ಕೆಲ ಪಂಥ ಸಂಪ್ರದಾಯಗಳು ಬುದ್ಧಿ-ಪುರಸ್ಸರವಾಗಿಯೆ ಹೀಗೆ ಬಗೆಯ ಹೇಳುತ್ತಿರುವುದೂ ನಂಬಹಚ್ಚಿರುವುದೂ ಸುಳ್ಳಲ್ಲ!

ನರ-ಪ್ರಾಣಿಯು ಜಾಗೃತ ಪ್ರಜ್ಞೆಯೊಡನೆಯೆ ಹುಟ್ಟಿಲ್ಲ. ವಿಚಾರ-ವಿಮರ್ಶೆಯ ವಿವೇಕ ತಲೆದೋರುವುದು, ಸಾಕಷ್ಟು ಜೀವನಾನುಭವಗಳ ಸಂಚಯದ ತರುವಾಯವೇ. ತತ್ಪೂರ್ವದ ಜೀವನದಲ್ಲಿ ವೈಚಾರಿಕ ಪ್ರೇರಣೆಗಿಂತ ಭಾವೋತ್ಕಟತೆಯ ಪ್ರಭಾವವೆ ಎದ್ದು ಕಾಣುತ್ತಿರುತ್ತದೆ. ಸ್ವಚ್ಛ ತಾತ್ತ್ವಿಕ ವೈಚಾರಿಕ ಜೀವನ ರೀತಿಯಿಂದಲೆ ಮಾನವೇತಿಹಾಸಕ್ಕೆ ಪ್ರಾರಂಭವಾಗಿಲ್ಲ. ಇದನ್ನು ಒಪ್ಪದಿರಲು ಕಾರಣವಿಲ್ಲ (ಕೆಲವೊಂದು) ಅಪವಾದಗಳೇ ನಿಯಮ ಅಲ್ಲ! ಇದು ನಿಜವಿದ್ದರೆ.

ಸಂದೇಹ, ನಿರಾಶೆ ಇದನ್ನು 'ಕತ್ತಲು' ಈ ಸಂಕೇತದಿಂದ ಸೂಚಿಸಲಾಗುತ್ತದೆ. ಆದಕಾರಣ, ಸಂದೇಹವನ್ನು ನಿರಾಶೆಯನ್ನು ಎಂದರೆ ಕತ್ತಲನ್ನು ತೊಲಗಿಸುವ ಅರ್ಥ=ವಿಚಾರ=ಜ್ಞಾನವು ಉದಯವಾಗುವ ಮೊದಲಿನ ಹಂತದ ಭಾವುಕತನ, ಕತ್ತಲೆ ಅಥವಾ ರಾತ್ರಿಯ ಸಮಯ ಎನ್ನಲು ಆತಂಕವಿರಬಾರದು. ಆದಿ ದೈವತ ಕಥೆಗಳಲ್ಲಿ ಬರುವ 'ಪ್ರಲಯ'. 'ಕಾಳರಾತ್ರಿ' ಇವೂ ಸಂಕೇತಗಳೇ. ಎಲ್ಲೆಲ್ಲೂ ಸಲಿಲ : ಆಪವೇ ಹರಿವ

ಪ್ರ-ಲಯ ಕಾಲ, ಎಂದರೆ ರಾತ್ರಿ ಸಮಯಾಚಾರದ ರೇತೋತ್ಸರ್ಗ. ಇದು ವಿನಾಶ, ಸೃಜನ ಎರಡನ್ನೂ ಸೂಚಿಸಬಲ್ಲದು. ನಿರಾಶೆ : ಕತ್ತಲು ವ್ಯಾಪಿಸಲು ಅಪ-ಈಕ್ಷೆಯ ಭಾವನಾವಶತೆಯೆ ಪ್ರಧಾನ ಕಾರಣ. ಅಪೇಕ್ಷೆ-ನಿರಾಶೆ ಭಾವನಾವಶವಾಗುವಿಕೆ; ಕತ್ತಲು ಆವರಿಸುವಿಕೆ, ವಿಚಾರಯುಕ್ತ ಜಾಗೃತ ಪ್ರಜ್ಞೆಯ ಅ-ಭಾವ, ಈ ನಾಲ್ಕೂ ಸಾಂಕೇತಿಕ ಪದಗಳು ಒಳಗೊಳ್ಳುತ್ತಿರುವ ಅಂತಃಸಂಗತಿ ವಿಮರ್ಶಾರ್ಹವಿದೆ. ಈ ಸಮಾಜ ಗರ್ಭಿತಾರ್ಥದ ಮೂಲಕ, 'ಸತ್ಯ'ವು ಸಾಂಕೇತಿಕ ಎಂದರೇನು, ಎಂಬುದು ಇಲ್ಲಿ ಗಮನಕ್ಕೆ ಬರುತ್ತಿದೆ.

ಎಲ್ಲಮ್ಮ ಮುಂ. ಆದಿಶಕ್ತಿಯ ಪರ್ಯಾಯ ದೈವತಗಳ ಜಾತ್ರೆಗಳು ಹೆಚ್ಚಾಗಿ ಹುಣ್ಣಿಮೆಗೆ, ಕೆಲವೆಡೆಗಳಲ್ಲಿ ಅಮಾವಾಸ್ಯೆಯೊಡನೆಯೂ ಸಂ-ಬದ್ಧವಿರುತ್ತವೆ. ಇಂದು ಚಂದ್ರನು ಪುಲ್ಲಿಂಗಿ ಎನಿಸಿದರೂ, ಮೊತ್ತ ಮೊದಲಲ್ಲಿ ಈ ರಾ(: ರಜ)ಜನ್ ಸ್ತ್ರೀಲಿಂಗೀ ದೈವತ; ತಿಂಗಳ ರಜೋದರ್ಶನ Menstruation ಎನಿಸುತ್ತದೆ. ಪುಲ್ಲಿಂಗೀ 'ಪುರುಷ' ಎಂದರೂ ಪುರಿ-ಶಯ ಸ್ವರೂಪ ಏಕಾತ್ಮಕ ಉಭಯಲಿಂಗೀ (Unity in duality) ದೈವತವಿದು! 'ವಾಗರ್ಥಾವಿವ ಸಂಪೃಕ್ತೌ' ಏಕಾತ್ಮಕ ಭಾವದ=ಅನುಭಾವಕ್ಕೆ ಚಂದ್ರನಷ್ಟು ಸಮರ್ಪಕವಾದ ಆದರ್ಶ ಪ್ರತಿ-ಮೆ ಬೇರೊಂದು ದೊರೆಯದು. 'ಚಂದ್ರಮಾ ಮನಸೋ ಜಾತಃ' ಎಂದರೆ ಮನೋಜ : ಚಂದ್ರ : ಕಾಮ(ನೆ) : ಮನಸ್ಸು, ಇವಕ್ಕೆ ಭಾವನೆಯೆ ಅಧಿಷ್ಠಾನ; 'ರಾತ್ರೀ' ಸಮಯಾಚಾರದ ಈ ಸಾಂಕೇತಿಕತೆಯು ಜೀವಿತದೊಳಗಿನ ಭಾವನಾರೂಪ ಕತ್ತಲೆ=(ರಾತ್ರೀ) ಕೋಣೆಯ 'ಪಾತಾಳ'ಸ್ಥ ಲೋಕದ ಕೆಲವೊಂದು ಅರಿವನ್ನು ತಂದುಕೊಡುತ್ತದೆ. 'ಪಾತಾಳ' ನಾಗಲೋಕ! ಇದರ ಇನ್ನೊಂದು ಮಗುಲೇ ನಾಕಲೋಕ!

ನಾಗ-ಸರ್ಪಗಳು ಪಾತಾಳದಲ್ಲಿರುತ್ತವೆ. ಪತ್>ಪಾತ ಅಧಃಪಾತ. ನರಲೋಕದ ಕೆಳಗಿನಲೋಕ : ನರ-ಕ=ನಾರ- ಲೋಕ! ಆದರೆ,ಇದೆಲ್ಲ ಸಾಂಕೇತಿಕ. ಪಾತಾಳ=ಅಧೋಲೋಕ; ಇದು ಕವಿ ನಿರ್ಮಿತ ಶುದ್ಧ ಸಾಂಕೇತಿಕ ಸಂಕಲ್ಪನೆ; (concept). ಈ ವಿಚಾರವು 'ಕಾಲ್ಪನಿಕ' ಎಂದರೆ ತೀರ ನಿರಾಧಾರವಲ್ಲ . ಆದರೆ ದಿಕ್ಕಾಲ-ಪರಿಸರಸ್ಥ ಜೀವನಾನುಭವದಲ್ಲಿ ಇದಕ್ಕೆ ಸ್ಥಾನವಿಲ್ಲ. ಜೀವನದಲ್ಲಿ ಸಾಕ್ಷಾತ್ ಇದ್ದ-ಇರುವ ಮೂರ್ತದ ಅನುಭವದ ಆಧಾರದಿಂದ ತಲೆದೋರಿದ-ತಲೆದೋರುವ ಲಾಕ್ಷಣಿಕ ಅರ್ಥದ ಸಾಂಕೇತಿಕ ಪ್ರತಿಮೆ ಇದಲ್ಲ. ಸತ್ಯವೂ ಸಾಂಕೇತಿಕ, ನಿಜ. ಆದರು ಮೊತ್ತ ಮೊದಲಲ್ಲಿ ಸ್ಥೂಲಮೂರ್ತ ಆಕೃತಿಯಿರಬಲ್ಲುದು. ದಿಕ್ಕಾಲ-ಪರಿಸರಸ್ಥ ಸಾಮಾಜಿಕ ಜೀವನದ ಅನುಭಾವ-ವಿಭಾವದಲ್ಲಿ ಸಾಕ್ಷಾತ್ ಕಾಣಬಂದ ಮೂರ್ತರೂಪ ಆಕೃತಿಯ ಮೂಲ ಸ್ಥೂಲ ಸಂಕೇತವೆ, ಮುಂದಿನ ಹಂತದಲ್ಲಿ ಲಾಕ್ಷಣಿಕ ಅಮೂರ್ತ ಅರ್ಥದ ಶಬ್ದ-ಪ್ರತಿಮೆ ಆಗುತ್ತದೆ. ಇಂತಹ ಗರ್ಭಿತಾರ್ಥದ ಶಬ್ದಸಂಕೇತಗಳಿಂದ ಧ್ವನಿತವಾಗುವ ಸತ್ಯಾಂಶದ ಬೆಲೆಯೆ ಒಂದು. ಇದಕ್ಕೆ ವಿಪರೀತವಾಗಿ ಕವಿ ಕಲ್ಪಿತ ಲಾಕ್ಷಣಿಕ ಅರ್ಥ-ಗರ್ಭದ ಶಬ್ದ-ಪ್ರತಿಮೆಯ ಮೂಲಕ ಸೂಚಿತವಾಗುವ ಸತ್ಯಾಂಶದ ಬೆಲೆಯೆ ಇನ್ನೊಂದು! ಸತ್ಯಾರ್ಥದ ಇವೆರಡೂ ಆಕೃತಿಗಳನ್ನು ಸಮಾನ ಪಾತಳಿಯವೆಂದು ಬಗೆವಲ್ಲಿ ವಾಸ್ತವಸತ್ಯಕ್ಕೆ ಅಪಚಾರವಾಗಲೇಬೇಕು. ಕವಿಕಲ್ಪಿತ ಅರ್ಥಗರ್ಭಯುಕ್ತ ಶಬ್ದಪ್ರತಿಮೆ ವಾಲ್ಮೀಕಿಯ 'ಪುಷ್ಪ-ಕ' ವಿಮಾನದಂತೆ ಅಂತರಿಕ್ಷಸ್ಥ ನಾರಣ ಲೋಕಕ್ಕೆ ತಳ್ಳಿಕೊಂಡೊಯ್ಯುತ್ತದೆ. ದಿಕ್ಕಾಲ ಪರಿಸರದ ಜೀವನಾನುಭವದಲ್ಲಿ ದಿಗ್ಭ್ರಾಂತಿಯನ್ನುಂಟುಮಾಡುತ್ತದೆ.

'ನಾರಾಯಣ' (ಲೋಕ) ಈ ಶಬ್ದ-ಪ್ರತಿಮೆಯ ಉದಾಹರಣದಿಂದ ನಾರಕಲೋಕದ ವಿಚಾರವೂ ಸ್ಪಷ್ಟೀಕರಣ ಪಡೆಯಲಿದೆ. 'ನಾರ'-ಅಯನ ಎಂದರೆ ನಾರ (=ನೀರು) ಅಯನ (ಊರುವ ಎಡೆ, ಮಾರ್ಗ) ಎಂದರೆ ಈ ಅಯನ ಸ್ತ್ರೀಲಿಂಗಿಯಾಗಿರಬಹುದು ಅಥವಾ ಪುಲ್ಲಿಂಗಿಯಾಗಿರಬಹುದು. ನಾರ-ಅಯನ=ನಾರಾಯಣ ಇದು ಚಂದ್ರನಂತೆ ಏಕಕಾಲಕ್ಕೇ ಉಭಯಲಿಂಗೀ ಶಬ್ದ ಪ್ರತಿಮೆ! ಮತ್ತು 'ನಾರಾಯಣ' ಚಂದ್ರವಾಚಕ ಸಂಕೇತವಿರುವುದೂ ನಿಜ. ಸೂರ್ಯ (ರೂಪಧಾರಿ) ನಾರಾಯಣ ಎಂದರೆ ಚಂದ್ರನಲ್ಲದೆ ಮತ್ತಾರೂ ಅಲ್ಲ. ಒಂದು ಕಾಲಕ್ಕೆ ಯೂರೋಪಿನ ಆರ್‌ಫಿಕ್ ಸಮಯಾಚಾರಗಳಲ್ಲಿ ರಾತ್ರೀ ಸೂರ್ಯನ (Nocturnal Sun) ಪ್ರತಿಮೆ ಆರಾಧ್ಯ ದೈವತವಾಗಿತ್ತು. ವಿಷ್ಣು=ಕೃಷ್ಣ=ವಾಸು(ಕಿ)ದೇವ ಸಂಪ್ರದಾಯವನ್ನು ನಾರಾಯಣ ಸಂಪ್ರದಾಯವೆಂದೂ ಹೇಳಲಾಗುವಲ್ಲಿ ತುಂಬ ಔಚಿತ್ಯವಿದೆ. ರಂಗ-ನಾಥ-ನಾರಾಯಣ ದೇವನನ್ನು ನದೀ (ನಾರ) ಮಾರ್ಗದಲ್ಲಿ (ಅಯನ) ಸ್ಥಾಪಿಸುವ ವಾಡಿಕೆಯೂ

ಉಂಟು. ನಾರಾಯಣ ಮತ್ತು ವಿಷ್ಣುದೈವತಗಳ ಪ್ರತಿಮಾ : ಸಂಕೇತಗಳಲ್ಲಿ ಸರ್ಪಶಯನ=ಜಲಶಾಯಿ ಚಿತ್ರವಿರುವುದು ಸುಪ್ರಸಿದ್ಧವಿದೆ. ಸಮುದ್ರ ಮಂಥನದಲ್ಲಿ ಚಂದ್ರನು ಹುಟ್ಟಿರುವನೆಂಬ ಸಾಂಪ್ರದಾಯಿಕ ಕಥೆಯ ಸಾಂಕೇತಿಕತೆಯು ಚಂದ್ರ=ಜಲೋದ್ಭವ=ಸರ್ಪ=ನಾರಾಯಣ=ವಿಷ್ಣು=ವಾಸು(ಕಿ) ದೇವ=ಕೃಷ್ಣ ಈ ಸಮೀಕರಣವನ್ನು ಪುಷ್ಟೀಕರಿಸುತ್ತದೆ. ಇವೆಲ್ಲ ಅವೆಸ್ತಾ-ವೇದಕಾಲೀನ ಅಪಾಂ-ನಪಾತ್ ದೈವತ ಪ್ರತಿಮೆಯ ಪರ್ಯಾಯಗಳು!

'ನಾರ-ಅಯನ' ಈ ಶಬ್ದ-ಪ್ರತಿಮೆಯ ಆಧಾರದಿಂದ 'ನಾರಾಯಣ'='ನಾರಣ' ಲೋಕ ಎಂಬುದು ದಿಕ್ಕಾ-ಲ ಪರಿಸರಸ್ಥ ಜೀವನದಲ್ಲಿಯೇ ಇರುವುದನ್ನು ಕಾಣಬಹುದಾಗಿದೆ. ಆದರೆ 'ನಾರ' ಸಂಕೇತದ ಬಲದಿಂದಲೇ ನಿರ್ಮಿತ 'ನಾರ-ಕ' ಶಬ್ದ ಪ್ರತಿಮೆಯಲ್ಲಿ ಅಭಿಪ್ರೇತವಿರುವ ನಾರಕ (: ನರ-ಕ) ಲೋಕವು ಮಾತ್ರ ಕವಿ ನಿರ್ಮಿತ ಸಂಕಲ್ಪನೆ (Concept). ನಾರ=ಸೃಜನ ಜಲ; ಈ ಸೃಜನ ಜಲದ ಅಧಃಪಾತ : ಪಾತಾಲ : ನಾರಕಲೋಕ. ಊರ್ಧ್ವಗಮನ=ನಾರಣಲೋಕ ಎಂದು ಈ ಸಾಂಕೇತಿಕತೆಯ ಅರ್ಥವಾಗುತ್ತದೆ. ಇಲ್ಲಿರುವ ಅಯನ ಎಂಬ ಸಂಕೇತದ ಹಿನ್ನೆಲೆಯಲ್ಲಿ ದಕ್ಷಿಣಾಯನ ಮತ್ತು ಉತ್ತರಾಯಣ ಈ ಪ್ರತಿಮೆಗಳ ರಹಸ್ಯ ತಿಳಿಯಬಲ್ಲದು. ಕಾಲದ ಭೌತರೂಪದ ವಿಭಾಗಕ್ಕೆ ಇಂದು ಈ ಸಂಜ್ಞೆಗಳುಂಟು. ಆದರೆ ಇದರ ಗುಹ್ಯಾರ್ಥವು ಬೇರೆಯೆ ಇದೆ: ದಕ್ಷಿಣ ಅಯನದಲ್ಲಿ (ಸೂರ್ಯನು) ಕೆಳಗೆ; ಉತ್-ತರ ಅಯನದಲ್ಲಿ-ಎಂದರೆ ಊರ್ಧ್ವ (ರೇತ) ಗಮನಿಯಾಗಿ=ಉತ್ಥಿತ ಕುಂಡಲಿನೀ ಸರ್ಪ ಉರ್ಧ್ವಕ್ಕೆ ತೆರಳಿ, ಶಿರಸ್ಸಿನ ಸಹಸ್ರಾರದಲ್ಲಿ ಹೊಕ್ಕು ಕುಳ್ಳಿರುವ ಮಿಥುನಯೋಗದಲ್ಲಿ ಇಹದ ಯಾತ್ರೆ ಮುಗಿಯಬೇಕು! ಈ ನಾರ-ಅಯನಯೋಗ ಇಂದು ಕು-ಮಾರ, ಕುಮಾರೀ ಸಂಪ್ರದಾಯವಾಗಿದೆ! ಐಹಿಕ ಜೀವನವು ಮೃತ್ಯುಸ್ವರೂಪ. ಊರ್ಧ್ವರೇತಿಗಳಾಗದವರು ದಕ್ಷಿಣಾಯನಿಗಳು 'ನಾರಕ' ಲೋಕಕ್ಕೆ ಹೋಗುತ್ತಾರೆ, ಎಂಬ ಪ್ರಚಾರಕ್ಕಾಗಿ ಈ 'ನರಕ'ದ ಕಲ್ಪನೆ ನಿರ್ಮಿತವಾಗಿದೆ!

'ನಾರ-ಅಯನ'ದ ತಾರಕ ಮಂತ್ರ ಸ್ವೀಕರಿಸುವ ಯತಿ-ಯೋಗೀ ಸಂಪ್ರದಾಯವೊಂದುಂಟು.- 'ನಾರಾಯಣ' = ಆದಿ ಪುರುಷ=ಅಶ್ವ-ತ್ಥ=ಸರ್ಪ (ಶಾಯಿ) ಈ ಸಂಕೇತಗಳು ಮೇಲಣ ಊರ್ಧ್ವರೇತ ಯೋಗಮಾರ್ಗ ಸೂಚಕ ಅರ್ಥವನ್ನು ಬೆಂಬಲಿಸುತ್ತವೆ. ನಾರ-ಅಯನ ಈ ಊರ್ಧ್ವರೇತ ಸಿದ್ಧಿಯ ಸಂಪ್ರದಾಯವು ಶೈವ ಪರಂಪರೆಯಲ್ಲಿಯೂ ಉಂಟು. 'ನಾರಾಯಣ' ಮತ್ತು 'ನಾರಕ' ಇವೆರಡೂ ಶಬ್ದಪ್ರತಿಮೆಗಳನ್ನು ಪ್ರತಿನಿಧಿಸುವ ಅರ್ಥವು ಸಮಾನ ಬೆಲೆಯುಳ್ಳುದು ಎಂದು ಬಗೆದಲ್ಲಿ, ವಾಸ್ತವ: ಸತ್ಯಕ್ಕೆ ಅಪಚಾರವಾಗಲಿದೆ. ದಿಕ್ಕಾಲ-ಪರಿಸರಸ್ಥ ಜೀವನ ದರ್ಶನದಲ್ಲಿ ಸ್ಫುರಿಸಿಸುವ ಶಬ್ದಪ್ರತಿಮೆಯೊಳಗಿನ ಗರ್ಭಿತಾರ್ಥದ (Concept) ಮಾತ್ರಾಸ್ಪರ್ಶದ ಬಾಹ್ಯವಲಯಕ್ಕೆ ವಾಸ್ತವದೊಳಗಿನ ಏನೊಂದು ವಸ್ತುವಿಷಯದ ಆಕೃತಿ-ಆಧಾರ ಇರಬಲ್ಲುದು. ಆದರೆ 'ರವಿಕಾಣದ್ದನ್ನು', ಕವಿಯು ತನ್ನ 'ಅನನ್ಯ ಪರತಂತ್ರ'-'ಸ್ವ'-ತಂತ್ರ ಪ್ರಜ್ಞೆಯಿಂದ ಸೃಜಿಸುವ ಅರ್ಥ-ಗರ್ಭವು ಕೃತ್ರಿಮವಾಗುತ್ತಿರುವುದರಿಂದ ಇದರ ಮಾತ್ರಾಸ್ಪರ್ಶದ ಬಾಹ್ಯವಲಯವು ದಿಕ್ಕಾಲ ಪರಿಸರದಲ್ಲಿ ಏನೂ ಆಧಾರವೆ ಇಲ್ಲದೆ, ಇದು ಕೇವಲ ಅದ್ಭುತರಮ್ಯ ಕಲ್ಪನಾವಿಲಾಸದ ಒಂದು ಉತ್ತಮ ಮಾದರಿಯಾಗಬಹುದು. ವಾಲ್ಮೀಕಿ ಸೃಜಿಸಿರುವ ಕಾಂಚನಮೃಗ, 'ಕಂ' : ಹಿರಣ್ಯಗರ್ಭ ಪ್ರತಿಮೆಯಂತೆ ದಿಗ್ಭ್ರಮೆಯ ಒಂದು ಸರ್ವೋತ್ಕೃಷ್ಟ ಮಾದರಿಯೆ ಆಗಿದೆ. ಆದರೆ 'ನಾರ'=ಸಲಿಲದ ಊರ್ಧ್ವ ಅಯನ, ಮತ್ತು ಅಧಸ್ ಅಯನ ಎಂದರೇನು? ಇಲ್ಲಿ ಅಧಸ್-ಪಾತಾಲದ ಕಾಲ್ಪನಿಕ ಚಿತ್ರವೊಂದಿದೆ. ನಾರದ (ಪತನ>) ಪಾತನ ಆಗುವ ಕ್ರಿಯೆ ಇಲ್ಲಿ ಅಭಿಪ್ರೇತವಿದೆ. ಪಾತಾಲ, ಅಂತರಾಲ ಇವೆರಡರೊಳಗಿನ 'ಆಲ' ಸಮಾನ ಅರ್ಥದ ಸಂಕೇತವಿರಬೇಕು; ಆಲ Spawn; any discharge...... (ಮೋನಿಯರ್, ವಿಲಿಯಂಸ್) ಈ ಅರ್ಥದಲ್ಲಿ ಪಾತ-ಆಲ ಸಂಕೇತ ಸಮರ್ಪಕವೆ ಸರಿ! ಅಂತರ್ (ಒಳಗೆ) ಆಲ=ಬೀಳುವುದು; ಪಾತ (ಕೆಳಗೆ) ಆಲ=ಬೀಳುವುದು. ನಾರ-ಅಯನ ಪಾತಾಳ, ಅಂತರಾಳದೊಡನೆ ಹೇಗೆ ಸಂಭವಿಸಿದೆಯೆಂಬ ಸೂಚನೆ ಇಲ್ಲಿದೆ.

ಈ ಸಾಂಕೇತಿಕತೆಯೊಳಗಿನ ಊರ್ಧ್ವರೇತ=ಸಲಿಲ=ಜಲ=ಬ್ರಹ್ಮ-ಚರ್ಯ ಮಹಿಮೆಯ ಈ ಉಲ್ಲೇಖ ನೋಡಿ: ಸರ್ವಂ ಖಲು ಇದಂ ಬ್ರಹ್ಮ। ತತ್‌ಜಲಾನಿತಿ। ಶಾಂತ ಉಪಾಸೀತ।[೨] 'ನಾರಾಯಣ' ದೈವತ

ತತ್ತ್ವವಿಚಾರಕ್ಕೆ ಈ ಉಪನಿಷತ್ ವಾಕ್ಯದಲ್ಲಿ ಪುಷ್ಟಿಯಿದೆ. ಶ್ರೀ ಆನಂದತೀರ್ಥರು, ವೇದಕಾಲೀನ ವಿಷ್ಣು ಸಂಪ್ರದಾಯದ 'ಮಧ್ವಉತ್ಸ:' ಸಾಂಕೇತಿಕತೆಯ ರಹಸ್ಯಾರ್ಥವನ್ನು ಅರಿತಿರುವ ಈ ಕಾರಣದಿಂದಲೆ ಈ ಉಪನಿಷದ್ವಾಕ್ಯಕ್ಕೆ 'ನಾರಾಯಣ' ತತ್ತ್ವಪರ ಅರ್ಥ ಹೇಳಲು ಸಮರ್ಥರಾಗಿದ್ದಾರೆ. ಇಲ್ಲಿಯ ತತ್ (: ಅನಿರ್ದೇಶ್ಯ), ಅನಿತಿ (ಉಸಿರಾಟದ) ಜಲ (: ದಿವ್ಯ ಸೃಜನ ಸಾಮರ್ಥ್ಯದ ಸಲಿಲ); ಇದುವೆ ವಿಶ್ವಸ್ಥ ಬ್ರಹ್ಮಶಕ್ತಿ. ಇದನ್ನರಿತು ಶಾಂತಿ ಉಪ ಆಸನದಲ್ಲಿರಲು ಹೇಳಲಾಗಿದೆ.[೩] ಯಾರ ಭಾವನೆ (ಕ್ರತು : ಸಂಕಲ್ಪ ಶಕ್ತಿ : (Will power) ಎಂಥದೊ ತತ್‌ಸ್ವರೂಪ ಅವರು ಆಗುತ್ತಾರೆ. ಅಥ ಖಲು ಕ್ರತುಮಯಃ ಪುರುಷಃ; ಯಥಾಕ್ರತುಃ ಅಸ್ಮಿನ್ ಲೋಕೇ ಪುರುಷೋ ಭವತಿ ತಥೇತಃ ಪ್ರೇತ್ಯ ಭವತಿ। ಸಃ ಕ್ರತುಂ ಕುರ್ವೀತ.[೪] ಭಾವ(ನಾ) ಶಕ್ತಿ=ಕ್ರತುಶಕ್ತಿಯನ್ನು ಕಾಮಧೇನು ಕಲ್ಪವೃಕ್ಷದ ಹಂತಕ್ಕೆ ಒಯ್ದಿರುವ ಈ ಆಪ=ರಸ ಸಂಪ್ರದಾಯದ ದೃಷ್ಟಿಯಲ್ಲಿ ಕ್ರತು=ಭಾವನೆಯ ಹೊರಗೆ ಈ ವಿಶ್ವದಲ್ಲಿ ಬೇರೆ ಏನೂ ಇಲ್ಲ. ಆದಕಾರಣ, 'ದೇವರು' ಎಂಬುವವನೂ ಭಾವನೆಗೆ ಅಧೀನ! ಭಾವನೆ 'ಬ್ರಹ್ಮಶಕ್ತಿ' 'ದಕ್ಷ' ಶಕ್ತಿಯಾಯ್ತು! ಹಯ-ಶಿರ (=ಹಯಗ್ರೀವ, ಹಯವದನ) ಪುರುಷ ಶಕ್ತಿಯ ಕಥೆ ಸುಪ್ರಸಿದ್ಧವಿದೆ. 'ಹಯ-ಶಿರ'=ಅದಿತಿ=ಸ್ತ್ರೀಲಿಂಗೀ ಶಕ್ತಿಯ ಸಾಂಕೇತಿಕ ಕಥೆಯೂ ಒಂದು ಉಂಟು! ಕ್ರತು=ಪುರುಷನ ಸ್ತ್ರೀ ಹಯ-ಶಿರಾ! ಭಾವ(ನಾ) ಶಕ್ತಿಯ ಈ ಲೈಂಗಿಕ ಪ್ರತಿಮೆಗಳಲ್ಲಿ 'ಕ್ರತು' ಸೃಜನೇಂದ್ರಿಯದ ಅರ್ಥ ದ್ಯೋತಕವಾಗಿದೆ. 'ನಾರ-ಕ'ದಂತೆ ಇವೆಲ್ಲವೂ ಕವಿ ಕಲ್ಪನಾವಿಲಾಸದ ಸಾಂಕೇತಿಕ ಪ್ರತಿಮೆಗಳೇ.

'ಚಾಂದ್ರ ಸಂಕೇತಗಳು ಒಳಗೊಳ್ಳುವ (ಸತ್ಯ) ಪ್ರಕಾಶದ ನಿಜವಾದ ಸ್ವರೂಪವನ್ನು ಅರಿಯಲು, ಈ ಪ್ರಕಾಶಕ್ಕೆ ಆಧಾರಭೂತವಾದ (ಮಾತ್ರಾ ಸ್ಪರ್ಶದ=ಭಾವನಾ ಪ್ರೇರಕ) ಬಾಹ್ಯವಲಯದ ಸ್ವರೂಪವನ್ನು ಅರಿಯಬೇಕು. ಏಕಂ : ಸತ್ : ಚಂದ್ರಾಃ ಆಪಃ=ರೇತಸತ್ಯದ ಪಾತಳಿ. ಆದಕಾರಣ, ಇದರ ಮೂಲಕ ಉಂಟಾಗುವ ಸಂಭ್ರಮವನ್ನು ಕಡಿಮೆಮಾಡಿಕೊಳ್ಳುವ ಪ್ರಯತ್ನವು ಅವಶ್ಯವಿದೆ: 'ನಾರಾಯಣ' (: ನಾರ-ಅಯನ), ನಿತ್ಯ ಉಭಯಲಿಂಗೀ ಪ್ರತಿಮೆ! ಈ 'Unity in Duality' : ಮಿಥುನಯೋಗದ ಸಾಂಕೇತಿಕತೆಯಲ್ಲಿ ಪುಲ್ಲಿಂಗೀ ಸಂಕೇತಕ್ಕೇ ಪ್ರಾಧಾನ್ಯವನ್ನೀಯುವ ಶಬ್ದ-ರಚನೆಯಿಂದಾಗಿ ಕೇವಲ ಏಕಂ : ಸತ್ ಸ್ವರೂಪದ ಸಂಭ್ರಮಕ್ಕೆ ಅವಕಾಶ ದೊರೆಯುತ್ತಿದೆ! ಅಪಾಂನಪಾತ್‌ದಲ್ಲಿಯೂ ಹೀಗೆಯೇ ತೋರಿಕೆಯ ಪುಲ್ಲಿಂಗೀ ಅರ್ಥ ಆದರೆ. ನಿಜವಾಗಿ ಇದು ಉಭಯಲಿಂಗೀ ಮಿಥುನ ಪ್ರತಿಮೆ. ಇದೇ ಬಗೆಯ 'ಅಸುರ' ಮಾಯಾಶಕ್ತಿಯ ಸಂಭ್ರಾಮಕ ಶಬ್ದಪ್ರತಿಮೆಗಳ ಇನ್ನೊಂದು ಮಾದರಿ ಪುರಿ-ಶಯ (=ಪುರುಷ): ಇದಕ್ಕೆ ಪ್ರತಿಯಾಗಿ ಕೇವಲ ಸ್ತ್ರೀಲಿಂಗಿಯಾಗಿ ಕಾಣುವ ಅ-ದಿತಿ ಉಭಯ ಲಿಂಗೀ ಸಂಕೇತ ಎಂದು ನಿರುಕ್ತಾದಿಗಳೇ ಒಪ್ಪಿವೆ! ಇದು ಅತ್ರಿ=ಅಗ್ನಿರೂಪದಲ್ಲಿ ಪುಲ್ಲಿಂಗೀ ಶಕ್ತಿ! ಹಾಗಾದರೆ, ಈ ಸಂಭ್ರಮದ ಕಾರಣವೇನು? ಅರ್ಥರೂಪ ಪ್ರಕಾಶದ ಅಥವಾ ಪ್ರಕಾಶರೂಪ ಅರ್ಥದ (: concept) ಕಿರಣಗಳು ಮಾತ್ರಾಸ್ಪರ್ಶದ (ಭಾವನಾ ಪ್ರೇರಕ) ಬಾಹ್ಯವಲಯದೊಳಗಿಂದ ಹಾಯ್ದು ಬರುವಾಗ ಅರ್ಥದ ಕಿರಣಗಳ ವಕ್ರೀಭವನ-ಪರಾವರ್ತನ ಕ್ರಿಯೆಯಿಂದಾಗಿ ಈ ಏನೆಲ್ಲ ಸಂಭ್ರಮಕ್ಕೆ ಅವಕಾಶ ದೊರೆಯುತ್ತದೆ. ಲೈಂಗಿಕ ಪಾತಳಿಯ ಜೀವನಾನುಭವಗಳನ್ನು ಜಾಗೃತಗೊಳಿಸುವ ಶಬ್ದ-ಸಂಕೇತಗಳಿಂದ ಭಾವನೆಗಳಿಗೆ ಪ್ರಚೋದನೆ ದೊರೆತು, ವಿಚಾರ ಶಕ್ತಿ ಮಂದವಾಗುತ್ತದೆ.

'ನಾರಾಯಣ' ಸಂಕೇತದ ಮೂಲಾರ್ಥವೆ ಒಂದು. ದಿವ್ಯಶಕ್ತಿಯ ಆದಿ ನಾರ : ಜಲದ ಬಗೆಗಿನ ಮೊದಲುತನದ ಅದ್ಭುತ ರಮ್ಯ ಅನುಭಾವದ ಸ್ಮೃತಿಯನ್ನು ಪ್ರೇರಿಸುವ ರಮ್ಯ ಅಗಮ್ಯ ಗೂಢದ ಭಾವನೋದ್ದೀಪಕ ಮನೋಭಾವದಿಂದಾಗಿ ಎಂದಿನಿಂದಲೆ ಈ ನಾಮ ಮಾಧುರ್ಯದ ಹುಚ್ಚು! 'ಹೇ ಜಿಹ್ವೇ ರಸ-ಸಾರಜ್ಞೇ, ಸರ್ವದಾ ಮಧುರಪ್ರಿಯೇ। ನಾರಾಯಣಾಖ್ಯ ಪೀಯೂಷಂ ಪಿಬ ಜಿಹ್ವೇ ನಿರಂತರಮ್। ಈ ಶ್ಲೋಕದ ಸಾಂಕೇತಿಕತೆಯಲ್ಲಿ 'ತತ್ ಅನಿತಿ ಜಲ'ದ ಇನ್ನೊಂದು ಪರ್ಯಾಯದ ವರ್ಣನೆಯೆ ಉಂಟು.

ಗೀತೆಯ 'ಅಶ್ವ-ತ್ಥ' ಈ ಸಂಯುಕ್ತ ಸಾಂಕೇತಿಕ ಪ್ರತಿಮಾ-ಚಿತ್ರದಲ್ಲಿ ನಾರ-ಅಯನದ ಮೂಲಾರ್ಥವು ಪ್ರತಿಬಿಂಬಿತವಾಗಿದೆ. ಋಗ್ ವೇದದ 'ದ್ವಾ ಸುಪರ್ಣಾ'ಗಳನ್ನು ಧಾರಣಮಾಡಿದ 'ಪಿಪ್ಪಲ' ಸಂಜ್ಞಕ ವೃಕ್ಷವೇ 'ಅಶ್ವ-ತ್ಥ' ವೃಕ್ಷ. ಈ 'ವೃಕ್ಷ'ವು 'ಆದಿತ್ಯ' ವೃಕ್ಷ ಎಂದು ಭಾಷ್ಯಕಾರರೇ ಅರ್ಥ ನಿವೇದಿಸಿದ್ದಾರೆ: ಯಸ್ಮಿನ್

ವೃಕ್ಷೇ=ಆದಿತ್ಯೇ ವೃಕ್ಷೇ.[೨೫] 'ಅಶ್ವತ್ಥ'ವನ್ನು 'ಆದಿತ್ಯ'ನ ಪ್ರತಿಮಾ : ಚಿತ್ರ ಎಂದು ಸಾಯಣರು ಹೇಳಿದ ಅರ್ಥಕ್ಕೆ ಗೀತೆಯ ಭಗ-ವಂತನಿಂದ ಪುಷ್ಟಿ ದೊರೆತಿದೆ: 'ಆದಿತ್ಯಾನಾಂ ಅಹಂ ವಿಷ್ಣುಃ! ಎಂದರೆ 'ಅಶ್ವ-ತ್ಥ'ವು 'ವಿಷ್ಣು'ವಿನ ಪ್ರತಿಮಾ ರೂಪವಾಯ್ತು. ಆದರೆ, 'ಆದಿತ್ಯ' ಎಂಬಲ್ಲಿ ಕವಡು ಇದೆ. ಕಾಲು ಜಾರುತ್ತದೆ ಏಕೆಂದರೆ ಇಲ್ಲಿ ಆದಿತ್ಯನೆಂದರೆ ಚಂದ್ರನೊ? ಸೂರ್ಯನೊ? ಈ ಸಂದಿಗ್ಧತೆ ಏಕೆ? 'ಆದಿತ್ಯ' ಸಂಕೇತದಲ್ಲಿ ಚಂದ್ರ-ಸೂರ್ಯ ಎರಡೂ ದೇವತೆಗಳು ಒಳಗೊಳ್ಳುತ್ತವೆ! ಆದರೆ, 'ಆದಿತ್ಯ'ಕ್ಕೆ ಅದಿತಿ ಪುತ್ರ ಎಂದು ಅರ್ಥ. ಅದಿತಿಯೋ, ವಿಶ್ವ 'ಜನಿತ್ರೀ'! ವಿಶ್ವದ ಉದ್ಗಮ ಕೇಂದ್ರ. ಆದಕಾರಣ ದೇವರು ಮಾತ್ರವಲ್ಲ, ಏನೆಲ್ಲ, ನರ-ಪ್ರಾಣಿಗಳೂ ಸಹ, 'ಆದಿತ್ಯ' ಈ ಮುಸುಕಿನ ಮಾತಿನಲ್ಲಿ ಒಳಗೊಳ್ಳುತ್ತಾರೆ! ಋ. ವೇದದ (ಮೃತಾತ್ ಅಂಡಾತ್ ಜಾತ=) 'ಮಾರ್ತಾಂಡ' ಈ 'ಸಲಿಲ' ಪುತ್ರನ ನಾಮ-ಸಂಕೇತದಿಂದ ಮೃತ್‌ಪಿಂಡದ ಮಾನವರು ಹಾಗೂ ಚಂದ್ರನು ಉಭಯ ಅರ್ಥಗಳೂ ಧ್ವನಿತವಾಗುತ್ತಿವೆ! ಪಾಣಿನೀ ಮುನಿ ಪ್ರಣೀತ ವ್ಯಾಕರಣ ಸೂತ್ರದಲ್ಲಿ 'ಶ್ವಾನ-ಯುವಾನ-ಮಘವಾನಃ' (ನಾಯಿ, ಯುವಕ ಮತ್ತು ಇಂದ್ರ) ಈ ಮೂರೂ ಒಂದೇ ಬಗೆಯಾಗಿ ನಡೆಯುತ್ತವೆ, ಎಂಬ ಸೂತ್ರದ ಸಾಂಕೇತಿಕ ಅರ್ಥವು ವ್ಯಾಕರಣಕ್ಕೆ ಸೀಮಿತವಾಗಿಲ್ಲ. ಇಲ್ಲಿ ಫ್ರೆಡ್‌ದೊರೆಯ ತತ್ತ್ವಜ್ಞಾನಕ್ಕೆ ಪುಷ್ಟಿ ದೊರೆಯುತ್ತದೆ. ನಾಯಿ=ಯುವಕ : ನರ=ದೇವಾಧಿದೇವ, ಮಘವನ್ ಇವರೆಲ್ಲರೂ (ಇಂದ್ರ=ಇಂದ್ರಿಯರೂಪ) ಒಂದೇ ಬಗೆಯವರು : ವರ್ಷಯಿತೃ : ವೃಷ್ಣಿ ಕುಲದವರು ಎಂಬ ದಿವ್ಯಾಧ್ಯಾತ್ಮ ರಹಸ್ಯವೂ ಇಲ್ಲಿ ಅಭಿಪ್ರೇತವಿರಬೇಕು! ಎಂದರೆ ವಿಷ್ಣುಸ್ವರೂಪ ಈ 'ಆದಿತ್ಯವೃಕ್ಷ' ವಿಶ್ವರೂಪ ವೃಕ್ಷ: ಪ್ರಪಂಚದ ಪ್ರತಿ-ಮಾ(ನ) ದಂಡವಾಯಿತು! ಆದಕಾರಣ, ಈ ಅಶ್ವ-ತ್ಥದಲ್ಲಿ ಸೂರ್ಯ-ಚಂದ್ರರು (ಸು-ಪರ್ಣ ಪಕ್ಷಿ) ಇಬ್ಬರೂ ಇದ್ದಂತಾಯಿತು! ಈ ಕಾರಣದಿಂದಲೇ ಅರಳಿ=ಪಿಪ್ಪಲ='ಅ-ಶ್ವ' ವೃಕ್ಷ : ವಟ (=ಆಲ) ಸಾವಿತ್ರಿ=(ಸೂರ್ಯ) ವೃಕ್ಷ:ಸ್ಥ ಆಗುತ್ತವೆ! ಈ ಹಿನ್ನೆಲೆಯಲ್ಲಿ 'ಅ-ಶ್ವ' (ಚಂದ್ರ)+ತ್ಥ (=ಸೂರ್ಯ)! ಆದುದರಿಂದ, ಚಂದ್ರ-ಸೂರ್ಯಾ ಸಂ-ಯೋಗ (=ಲಗ್ನ)=ಅಮಾವಾಸ್ಯೆ! ಈ ನಗ್ನಸತ್ಯವು ಹೇಳುವುದೇನು? ಈ ಪ್ರಪಂಚವು 'ತಮಃ ಆಸೀತ್ ತಮಸಾ ಗೂಳ್ಹಂ, ಅಪ್ರಕೇತಂ ಸಲಿಲಂ (=ಸರಿರ=ಶರೀರ); ಸರ್ವಂ ಆಃ ಇದಂ'[೨೬] ಈ ಆಶಯದ ಸಾರವೇ 'ಸಾರ್ಪರಾಜ್ಞೀ ಸೂರ್ಯೋ ವಾ' ಈ ಸಾಂಕೇತಿಕ ಪ್ರತಿಮೆಯಲ್ಲೂ ಅಡಕವಾಗಿದೆ.

ಹೀಗಿದು ಚಾಂದ್ರಸತ್ಯದ-ಪ್ರಕಾಶ : ನೀರ-ಅಂಜನ=ದೀಪ : ಅಥವಾ 'ಹರಿವಾಣ' ಸೇವೆಯ ಕದಲಾರತಿ ಪ್ರಕಾಶ, ಇವು ರಾತ್ರೀ 'ಸಮೆ' (=ಸಮಯ) ಆಚಾರ ಸಂಪ್ರದಾಯವಾಗಿ ಇಂದಿಗೂ ಉಳಿದಿವೆ! ಸತ್ಯವು ಸಾಂಕೇತಿಕವಿದ್ದು, ಸಾಂಕೇತಾತ್ಮಕ ಸತ್ಯವು, ನಿನ್ನೆ→ಇಂದುಗಳಂತೆ. ನಾಳೆಗಳಲ್ಲಿಯೂ ಉಳಿದು ಬರಬಲ್ಲ ತ್ರಿಕಾಲ ಸತ್ಯ=ತ್ರಿವಾರ ಸತ್ಯ ಆಗಿದೆ. ವಿಶ್ವನಿಯಮಾಧಿಷ್ಠಿತ 'ಋತ' ಸ್ವರೂಪೀ ಸತ್ಯ ಎಂದರೆ ಇದು. ಇಂಥ ಸತ್ಯವು ಅಂತಃಸಂಗತಿಯುಳ್ಳ (self consistent), ಹಾಸು ಹೊಕ್ಕು ಆಗಿರುವ ಹಲವಾರು ಸಂಕೇತಗಳಿಂದ ಇಲ್ಲಿ ದೃಢಪಡುತ್ತಿರುತ್ತದೆ. ವಿಷ್ಣುವು ಸೂರ್ಯನೆಂಬ ಭ್ರಮೆ. ಡಾ. ಭಂಡಾರಕರ ಪ್ರಭೃತಿಗಳನ್ನು ಆವರಿಸಿತ್ತು. ಆದರೆ ಸತ್ಯವು ಸಾಂಕೇತಿಕವಿರುವುದರಿಂದ ಅದು ಸತ್ಯವು ಒಂದಿಲ್ಲೊಂದು ಬಗೆಯಲ್ಲಿ ಬಯಲಿಗೆ ಬಂದೇ ಬರುತ್ತದೆ. ಇದನ್ನು ಮರೆಮಾಜಲು ಶಕ್ಯವಿಲ್ಲ. ವಿಶ್ವದಲ್ಲಿ ಅರ್ಥ: ಸತ್ಯ, ಇದು ಮಾನವ ಕಲ್ಪಿತವಿದ್ದಲ್ಲಿ ಇದನ್ನು ಬಚ್ಚಿಡಲು ಶಕ್ಯವಾಗಬಹುದಿತ್ತು. ಅರ್ಥವು ಸಾಮಾಜಿಕ (: ಸಮಷ್ಟಿ) ಜೀವನದ ಸಂದರ್ಭದಲ್ಲಿ ಪ್ರತೀತಿಗೆ ಬರುತ್ತದೆ, ಆದಕಾರಣ, 'meaning or mind is private' ಎಂಬ ಗ್ರಹಿಕೆ ಸದೋಷವಿದೆ; ಅಸಮರ್ಪಕವೂ ಆಗಿದೆ.

'ಅರ್ಥವು ವೈಯಕ್ತಿಕ': ಅವರವರ ಅರ್ಥ ಅವರವರ ಪಾಲಿನ ಸತ್ಯ' ಎಂಬೀ ಬಗೆಯ ವಿಚಾರ ಪ್ರತಿಪಾದಕರಲ್ಲಿ ಆಧುನಿಕ ವಿಜ್ಞಾನಿಗಳು ಇದ್ದಾರೆ. ವಿಜ್ಞಾನವು ಏಕಂ, ಸತ್ ಭೂಮಿಕೆಯದು ಆಗುವಾಗ ಅದು ಸಹ, ಚಾಂದ್ರ ಭೂಮಿಕೆಯ ವೈಚಾರಿಕ ಆಕೃತಿ ಆಗುವುದು. ಈ ಏಕಂ : ಸತ್ ಭೂಮಿಕೆಯ ಮೇಲೆ ಜೀವನ ಮೂಲ್ಯಗಳು ಶೂನ್ಯವಾಗಲೇ ಬೇಕು. ಡಾರ್ವಿನನ ಭೌತವಿಕಾಸವಾದ ಇದಕ್ಕೆ ನಿದರ್ಶನ. 'ಜೀವೋ ಜೀವಸ್ಯ ಜೀವನಂ' ಸಿದ್ಧಾಂತವು ಏಕಂ : ಸತ್ ದೃಷ್ಟಿಕೋನದ ಪರಿಣಾಮ ಅಥವಾ ಆತ್ಯಂತಿಕ ಅಹಿಂಸಾ ವ್ರತ ಇದರ ಪ್ರತಿಕ್ರಿಯೆ. ಜೀವನದಲ್ಲಿ 'ಅಂತಃ ಸಂಗತಿಯ ಅರ್ಥ' ಕಾಣಲು ದೊರೆಯದು. ಸಾಮಾಜಿಕ ಜೀವನದಲ್ಲಿ 'ಸ್ವ'

ಅರ್ಥ ಸಾಧನೆಗಾಗಿ ನಿತ್ಯ ಹೋರಟೆ ನಡೆಯತಕ್ಕದ್ದೇ. ಆದ ಕಾರಣ, ಈ ಆಪ ರಸ : ರೇತ ಭೂಮಿಕೆಯ ಈ 'ಸತ್ಯ' ಎಂಬುದು Truce ಮಾತ್ರ! ಬಳಿಕ ಇದೇ Truth ಈ ವೈಚಾರಿಕ ಆಕೃತಿಗೂ ಜನ್ಮವಿತ್ತಿದೆ. ಸಮಾಜಧಾರಣೆ Social contractದ ಮೂಲಕ ಶಕ್ಯವಾಗಿದೆ ಎಂಬ ಪಾಶ್ಚಾತ್ಯ ವಿಚಾರ ಪದ್ಧತಿಯ ತಳಪಾಯದಲ್ಲಿ ಏಕಂ ಸತ್=ರೇತಸತ್ಯವೇ ಉಂಟು.

'ಕಾಲ' ಮತ್ತು 'ಸಮಯ' ಇವೆರಡೂ ಆಕೃತಿಗಳೊಳಗಿನ ಅಂತರವನ್ನು ಗಮನಿಸಿದರೆ ಚಾಂದ್ರ ಹಾಗೂ ಸೌರ ಜೀವನ ಪ್ರೇರಕ ಅರ್ಥ=ಪ್ರಕಾಶದೊಳಗಿನ ಅಂತರವು ಗೊತ್ತಾಗಬಲ್ಲುದು. ಚಾಂದ್ರಭೂಮಿಕೆಯ 'ಸಮಯ' (ಭೌತ) ಕಾಲಕ್ಕೆ ತೀರ ಹತ್ತಿರದ್ದು! ಭೌತ ನಿಸರ್ಗದಲ್ಲಿ ಸ್ವೈರ-ಸ್ವಚ್ಛಂದ ನೈತಿಕ-ಮೂಲ್ಯಗಳ ಅಳುಕು ಇಲ್ಲದ ಜೀವನ ರೀತಿಯ ಪ್ರೇರಣೆಯುಂಟು. ತಾಯ್ಗಂಡತನಕ್ಕೆ (ಫ್ರೈಡ್) ಪ್ರೇರಿಸುವ. ಏಕಂ ಸತ್ತಿನ ನಿಸರ್ಗಸ್ಥ ಪಾಶುಪತ, ಸಾತ್ವತ ಧರ್ಮಕ್ಕೆ ಪ್ರಚೋದಿಸುತ್ತದೆ. ಆದರೆ, ಋತ : ಸತ್ಯದ ಸಮಯವು ಸಮಷ್ಟಿ ಪ್ರಜ್ಞೆಯ ಬೆಳಕಿನಲ್ಲಿ ಜೀವನ ಮೂಲ್ಯಗಳೇ ಬಾಳ ಗುರಿಯಾಗುವ ಆಚಾರ-ವಿಚಾರಗಳಿಗೆ ಪ್ರೇರಿಸುತ್ತದೆ.

ಈ ಜೀವನದಲ್ಲಿ, ಅರ್ಥ-ಸಂಗತಿಯುಂಟು. ಇದರ ಮೂಲಕ ವಿಶ್ವ ನಿಯಮವು, ಎಂದರೆ ಋತ (ಸ್ವರೂಪೀ) ಸತ್ಯವು ಅರಿಕೆಗೆ ಬರುತ್ತದೆ. ಇದು ತ್ರಿಕಾಲ ಸತ್ಯ ತ್ರಿವಾರ ಸತ್ಯ. ಇದು ಏಕಂ ಸತ್>ಸಂತ ಸತ್ಯಕ್ಕೆ ತೀರ ಭಿನ್ನ. ಇದನ್ನು ಅರಿತುಕೊಂಡು ಲೋಕಕ್ಕೆ ಮೊದಲು ಬಾರಿ ಸಾರಿ ಹೇಳಿದ ಶ್ರೇಯಸ್ಸು 'ಸವಿತೃ' ಉಪಾಸಕ ಭಾರತೀಯ ಪುರಾತನರಿಗೇ ಸಲ್ಲುತ್ತದೆ. ಇದು ನಿಜವಿದ್ದರೆ, ಭಾರತೀಯ ಸಂಸ್ಕೃತಿಯಲ್ಲಿ ಋತ : ಸತ್ಯದ ಭೂಮಿಕೆಯ ದೈವತಗಳು ಮತ್ತು ಜೀವನ ರೀತಿ ಕಾಣದೆ ಇರಲು ಕಾರಣವೇನು ? ಆದರೆ, ನಮ್ಮ ಧರ್ಮ ಮತ್ತು ಸಂಸ್ಕೃತಿಯು 'ಏಕಂ ಸತ್ ವಿಪ್ರಾಃ ಬಹುಧಾ ವದಂತಿ' ಈ ತಾತ್ವಿಕ ತಳಹದಿಯ ಮೇಲೆ ನಿಂತಿದೆಯೆ; ಎಂದು ಭಾರತೀಯರೇ ಹೇಳುತ್ತಾರಲ್ಲ! 'ಅವಿಭಕ್ತಂ ವಿಭಕ್ತೇಷು' ಎಂಬ ಗೀತಾ ವಾಕ್ಯದಲ್ಲಿ ಅಭಿಪ್ರೇತವಿರುವ 'ಸಮನ್ವಯ' ದೃಷ್ಟಿ ಭಾರತೀಯರದು, ಎಂಬಲ್ಲಿ ಋತ : ಸತ್ಯದ ಗಂಧವು ತಿಲಮಾತ್ರವೂ ಇಲ್ಲ! ಈ ಸಾಂಸ್ಕೃತಿಕ ಸ್ಥಿತ್ಯಂತರವಾದುದು ಹೇಗೆ? ಏಕೆ? 'ಅವಿಭಕ್ತಂ ವಿಭಕ್ತೇಷು' ತೋರಿಕೆಯಲ್ಲಿ ಸುಂದರ ಸಂಮೋಹಕವಾದ ಈ ವೈಚಾರಿಕ ಆಕೃತಿಯ ತಳಪಾಯದಲ್ಲಿ ಏಕಂ ಸಂತ ತಾತ್ವಿಕ ಭೂಮಿಕೆಯಿದೆ; ಇದು ತಾಯ್ಗಂಡತನದ ಆ-ಕೃತಿಯಾಗಿರುವುದನ್ನು ಪುರಾತನ ಆದಿದೈವತ ಕಥೆಗಳೆ ಸಾರುತ್ತಿಲ್ಲವೆ?

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X.೧೭೭

೨. ***ಛಾಂದೋಗ್ಯೋಪನಿಷತ್*** ೩-೧೪-೧

೩. ***ಬೃಹದಾರಣ್ಯಕೋಪನಿಷತ್***. ೧-೨-೧ ಆಪ: ಅರ್ಕ ಬ್ರಹ್ಮ ಇವುಗಳ ಜೊತೆ ಅರ್ಕನಾವಿಧಿ ಹೋಲಿಸಬಹುದು.

೪. ಅದೇ. ೩. ೧೪.೧; ಇದರೊಡನೆ ಈ ಮಂತ್ರವನ್ನು ಹೋಲಿಸಬಹುದು. ೭.೨೫.೨

೫. ***ಋಗ್ವೇದ ಸಂಹಿತೆ*** I.೧೬೪.೨೨ರ ಬುಕ್ಕಿನ ಸಾಯಣ ಭಾಷ್ಯವನ್ನು ಗಮನಿಸಬಹುದು.

೬. ಮೇಲಿನದೇ X-೧೨೯

ಮಾನವ ಸಂಸ್ಕೃತಿ ಕವಲು ದಾರಿಯಲ್ಲಿ

ಜ್ಞಾನ ಸ್ವರೂಪ ಸವಿತೃ : ಸೂರ್ಯನು, ರಾ-ಜನ್: ನಿಶಾನಾಥ ಚಂದ್ರನ ಆ-ಲಿಂಗನದಲ್ಲಿರುವ ಎಂದರೆ ಸೂರ್ಯ-ಗ್ರಹಣದ ಈ ದೃಶ್ಯ ಪುರಾತನ ಕಾಲದಲ್ಲಿ ಭಾರತದಲ್ಲಿ ಮಾತ್ರವಲ್ಲ, ಗ್ರೀಸಿನಲ್ಲಿ ಸಂಭವಿಸಿದ್ದುದೂ ಹೀಗೆಯೆ. ಅಲ್ಲಿ, ದ್ಯೌಃ=ಝುವೂಸ ನಾಮ ಮಾತ್ರ. ಚಾಂದ್ರಭೂಮಿಕೆಯ ಏಕಂ ಸತ್ ಪಂಥೀಯ 'ಸಪ್ತ' ಋಷಿಗಳ ತತ್ತ್ವಜ್ಞಾನವೇ ಪ್ರಭಾವಶಾಲಿಯಾಗುತ್ತದೆ; ಜನಮನವನ್ನು ಸೆಳೆದುಕೊಳ್ಳುತ್ತದೆ. ಆದುದರಿಂದಲೇ, ಯುರೋಪಿನಲ್ಲಿ ಆಮರಣ ಕುಮಾರ: ಕುಮಾರೀ ವ್ರತಿಗಳಾಗಿ ಬಾಳುವ ಆದರ್ಶದ (ಆದಿ) ಮಾತಾ-ಪುತ್ರನ ಕ್ರೈಸ್ತ ಪಂಥವು ಪ್ರವರ್ಧಮಾನವಾಗಿ ಬೆಳೆದು ಬೇರೂರಿ ನಿಲ್ಲಲು ಶಕ್ಯವಾಯಿತು. ಜಪಾನಿನ ಪುರಾತನ ದೈವತ ಕಥೆಗಳ ಮೇಲಿಂದ, ಅಲ್ಲಿ ಸಂಭವಿಸಿದ ಸಾಂಸ್ಕೃತಿಕ ಸ್ಥಿತ್ಯಂತರದಲ್ಲಿಯೂ ಚಾಂದ್ರ ಹಾಗೂ ಸೌರದೈವತಗಳಲ್ಲಿ ಸ್ಪರ್ಧೆಯಿದ್ದಿತೆಂಬ ಸಂಗತಿ, ಸೂಕ್ಷ್ಮವಾಗಿ ಅರಿಕೆಗೆ ಬರುತ್ತದೆ. ಆದಿಪುರುಷ : ಇಝುನಾಗಿ (: Male-who-invites); ಇವನಿಗೆ ಸಹೋದರಿ=ಪತ್ನಿ ಇಝುನಾಮಿ (: Female-who-invites); ಇವಳು ಮೊದಲ ಹೆಂಡತಿ.

೧. ಮೊದಲಲ್ಲಿ ಸರ್ಪ ಸಂಬಂಧದಲ್ಲಿ ಆದಿಶಕ್ತಿ ಮಾತೆಯಾಗುತ್ತಾಳೆ: ಉದಾ : ತ್ವಷ್ಟಾರ-ವೃತ್ರ-ಅದಿತಿ.

೨. ಎರಡನೆಯ ಹಂತದಲ್ಲಿ 'ಅದಿತೇಃ ದಕ್ಷ'. ಈ ದಕ್ಷ : ಕುಮಾರನಿಂದಲೆ ಅದಿತಿಯು ವಿಶ್ವಸೃಜಿಸಿದ ಕಥೆ.[೧]

೩. ಮೂರನೆಯ ಹಂತದಲ್ಲಿ 'ಸ್ವಸಾ ಆದಿತ್ಯಾನಾಂ' ಎಂಬ ಅದಿತಿ, ಆದಿತ್ಯನೆಂಬ ವಿಷ್ಣು-ಪತ್ನಿ ಆಗುತ್ತಾಳೆ. ವಿಷ್ಣು, ರುದ್ರನಿಂದ ಅರ್ವಾಚೀನ. 'ಅಂಬಾ ರುದ್ರಸ್ಯ ಸ್ವಸಾ" ಮತ್ತು ಯಮ-ಯಮೀ ಇವು ವೇದದ ಅಂತ್ಯದಲ್ಲಿ ಬರುವ ಸಾಂಕೇತಿಕ ಪ್ರತಿಮೆಗಳು. ಇಜಿಪ್ತಿನಲ್ಲಿ ಇಸಿಸ್ (ಮಡದಿ) ಒಸಿರಿಸ್, ಸೆಟ್ ಈ ಮೂವರೂ ಸಹೋದರರು. ಮೊದಲಲ್ಲಿ ಚಂದ್ರ ಉಭಯಲಿಂಗೀ ದೈವತವೇ. (ನಾರ-ಅಯನ ಹೋ.). ಸುಮೇರಿನಲ್ಲಿ ಇನನ್ನಾ-ಡುಮುಝಿಯಂತೆ ಚಂದ್ರಬಿಂಬದಲ್ಲಿಯೆ ಈ ಸ್ತ್ರೀ-ಪುರುಷ ಸಂಕೇತಗಳು ಏಕಾತ್ಮಕವಾಗಿ ಬೆರೆತಿದ್ದುವು.

ಆದರೆ, ಅದಿ 'ನಾರಾಯಣ' 'ಸೂರ್ಯ'ನಾಗುವ ಹೊತ್ತಿಗೆ, ಸೂರ್ಯ-ನಾರಾಯಣ ಸಂಕೇತ ತಲೆದೋರುವಾಗ ಅಥವಾ ಋ. ವೇದದಲ್ಲಿ ಚಂದ್ರಸೂಚಕ ಮಾರ್ತಾಂಡ ನಾಮಸಂಕೇತಕ್ಕೆ ಸೂರ್ಯವಾಚಕ ಅರ್ಥವನ್ನು ಆರೋಪಿಸುವ 'ಸಮಯ'ದಲ್ಲಿ, ಸೌರ ಸಂಪ್ರದಾಯವು ತಲೆಯೆತ್ತಿ ಪ್ರಭಾವಶಾಲಿಯಾಗತೊಡಗಿದ್ದ ಕಾಲ ಗತಿಸಿತೆಂಬ ಅನುಮಾನ

ಅನಿವಾರ್ಯವಾಗುತ್ತದೆ. ಈ ಮೊದಲು ಸೌರಭೂಮಿಕೆಯ ದೈವತ ಪ್ರತಿಮೆಗಳು ಪ್ರಭಾವಶಾಲಿಯಾಗತೊಡಗಿದ್ದುದು ಯೂರೋ ಭಾರತೀಯ ಮೂಲದ ಸಂಸ್ಕೃತ ಸಹೋದರ ಭಾಷಿಕರ ಉದಯದೊಡನೆ ಆಗ. ಚಂದ್ರನು ಉಭಯಲಿಂಗಿ, ಸೂರ್ಯ ಸಂಕೇತವು ಅಂದು ಚಂದ್ರನ ಪತ್ನಿಯಾಗುವ ಕಾರಣವಿದ್ದಿಲ್ಲ. ಆದರೆ ಉಭಯಲಿಂಗೀ ಚಂದ್ರ ಸಂಕೇತವನ್ನು 'ಆದಿ ಪುರುಷ' : ಕೇವಲ ಪುಲ್ಲಿಂಗಿ ದೇವನೆಂದು ಆರಾಧಿಸುವಾಗ ಈ ಆದಿಪುರುಷನ ಮಡದಿಯಾಗಿ ಸೂರ್ಯಸಂಕೇತದ ಪ್ರಯೋಜನ ಪಡೆವ ಪ್ರಯತ್ನವಾದುದು ಪುರಾತನ ಉಲ್ಲೇಖಗಳಿಂದ ಬಯಲಿಗೆ ಬರುತ್ತಿದೆ. ಈ ಘಟನೆ, ಭಾರತ, ಇಜಿಪ್ಟ್ ಮತ್ತು ಜಪಾನ್ ಈ ಮೂರೂ ದೇಶದ ಸಂಕೇತಗಳಲ್ಲಿಯೂ ಸಂಭವಿಸಿದೆ. ಅಲ್ಲಿಯ ಆದಿದೈವತ ಕಥೆಗಳಲ್ಲಿ ಇದು ಪ್ರತಿಬಿಂಬಿತವಾಗಿದೆ. ಆದರೆ ಜಪಾನಿನ ಸ್ಪಷ್ಟತೆ ಈಜಿಪ್ಟ್ ಭಾರತದಲ್ಲಿ ಇಲ್ಲ. ಜಪಾನಿನ ಆದಿ ಪುರುಷನ ಸಹೋದರಿ-ಪತ್ನಿ ಇಝುನಾಮಿ ಸೃಷ್ಟಿ ಪ್ರಸವದಲ್ಲಿ ಅಗ್ನಿ ದೈವತವನ್ನು ಪಡೆಯುವಾಗ ಅವಳ ಗುಹ್ಯಾಂಗವು ಸುಟ್ಟು, ಪ್ರಾಣಕ್ಕೆ ಎರವಾಗುತ್ತಾಳೆ. ಆ ಬಳಿಕಿನ ಎರಡನೆಯ ಹಂತದಲ್ಲಿ ಆದಿದೈವತ ಪಟ್ಟಕ್ಕೆ ಬರುವ ಸುಸಾನೊವೊ (: Impetuous-Male) ಮತ್ತು ಇವನ ಮಡದಿ ಸೂರಾ : ಅಮಾತೆರಾಸು (Amaterasu) ಇವರು ಕೇಂದ್ರ ದೈವತಗಳಾಗುತ್ತಾರೆ!

ಆದಿಯಲ್ಲಿ ಇಜಿಪ್ತಿನ ದೈವತಗಳು 'ಇಸಿಸ್' 'ಹೊರಸ್ (=ಒಸಿರಿಸ್)' ಸೆಟ್ ಇವು ಚಂದ್ರನ ಪರ್ಯಾಯ ಪ್ರತಿಮೆಗಳೇ ಆಗಿದ್ದುವು. ಸೂರ್ಯ : ಕಮಲ ಸಂಕೇತವು ಕ್ರಿ. ಪೂ. ೧೫೦೦ಕ್ಕೆ ಮುಂಚೆ ಇರಲಿಲ್ಲ ಎಂದು ಆ ಸಂಸ್ಕೃತಿಯ ವ್ಯಾಸಂಗಿಗಳೇ ಹೇಳುತ್ತಾರೆ ಇಲ್ಲಿ ಸೂರ್ಯನ 'ಕಣ್ಣು' (Eye of Ra). ವಿಶ್ವ ಪ್ರಸವಿಸಿದ ಹಾಗಿನ ಕಥೆಯ ಮೂಲಕ ಸೂರ್ಯನನ್ನು ಸ್ತ್ರೀಲಿಂಗಿಯಾಗಿ ಸೂಚಿಸಿದ್ದಾಗಿದೆ. ವೇದದಲ್ಲಿ 'ಪ್ರಸವಿತಾ ಜನಾನಾಂ' ಎಂಬಲ್ಲಿ 'ವಾ ನ ವಾ' ಶೈಲಿಯಲ್ಲಿ ಸ್ತ್ರೀತ್ವದ ಸೂಚನೆಯುಂಟು. 'ಸಾರ್ಪರಾಜ್ಞೀ ಸೂರ್ಯೋ ವಾ' ಎಂಬಲ್ಲಿ 'ಸೂರ್ಯ' ವಿಶೇಷಣ ಸ್ತ್ರೀಲಿಂಗಿ ಇರಬೇಕಿತ್ತು. ಆದರೆ, ಸೋಮನಾಂತರದ ಚಂದ್ರನ ಪತ್ನಿ ಎಂದು ಸೂರ್ಯಾದೇವಿಯ ಲಗ್ನದ ವರ್ಣನೆಯಲ್ಲಿ ಸೂರ್ಯನ 'ಸ್ತ್ರೀ' ರೂಪವು ಸ್ಪಷ್ಟವಿದ್ದರೂ ಚಂದ್ರನನ್ನು 'ಸೋಮ'ನ ಸೋಗಿನಲ್ಲಿ ವಿವಾಹ ಮಂಟಪಕ್ಕೆ ತಂದುದಾಗಿದೆ! ಏಕಂ ಸತ್ ಪ್ರತಿಪಾದಕ ಇಡೀ ಋಕ್‌ಸಂಹಿತೆ ಚಾಂದ್ರಭೂಮಿಕೆಯದು. ಮಿತ್ರನ ಸಂಗಾತಿ ವರುಣನು ಪ್ರಚ್ಛನ್ನ ಚಂದ್ರನೇ, ಸೋಮನಂತೆ! ಎಲ್ಲೆಲ್ಲೂ ಚಂದ್ರನೇ ಸ್ತೋತ್ರದ ವಿಷಯವಿದ್ದರೂ ಒಂದೆಡೆಗೂ ಚಂದ್ರನಾಮ-ಸಂಕೇತ ಬಹಿರಂಗವಾಗಿ ದೊರೆಯುವುದಿಲ್ಲ!

ಚಂದ್ರ ಮತ್ತು ಸೂರ್ಯ ಈ ದೈವತ ಪ್ರತಿಮೆಗಳ ಸಾಂಕೇತಿಕ ಗರ್ಭಿತಾರ್ಥವನ್ನು ಸ್ಮರಿಸಿಕೊಂಡಲ್ಲಿ, ನರನು ಮನು-ಜತ್ವ ಪಡೆದ ಸುಮಾರಿಗೆ ಮಾನವ ಸಂಸ್ಕೃತಿಯು ಮರಳಿ ಚಾಂದ್ರಭೂಮಿಕೆಯಿಂದ ಆಕರ್ಷಿತವಾಗಿ ಮುಂದುಗಾಣದೆ ಕವಲುದಾರಿಯಲ್ಲಿ ನಿಂತುದು ಕಾಣುತ್ತದೆ ಚಕ್ರನೇಮಿ : ಚಕ್ರತೀರ್ಥದಲ್ಲಿ ಪ್ರವಾಹ ಪತಿತವಾಗಿ ಸುತ್ತಾಡುತ್ತಿರುವ ಈ ದೃಶ್ಯ ಎಂದರೇನು ಎಂಬುದು ಇಲ್ಲಿ ಸ್ಪಷ್ಟವಾಗಬಲ್ಲುದು. ನರ-ಮಾನವರಿಗೆ ಅಥವಾ ಮಾನವ ನರರಿಗೆ ಸೌರ ಎಂದರೆ ಹಗಲಿನ ಸಮಯಾಚಾರಕ್ಕಿಂತ, ಚಾಂದ್ರ ಎಂದರೆ 'ರಾತ್ರಿ' ಸಮಯಾಚಾರಗಳೇ ಹೆಚ್ಚು ಆಕರ್ಷಕವೆನಿಸಿದ್ದು ಇಲ್ಲಿ ಬಯಲಿಗೆ ಬರುತ್ತಿದೆ. ಪ್ರಪಂಚದ ಆದಿದೈವತ ನಾಗ-ಸರ್ಪ; ನಾಗ-ಸರ್ಪ-ಸಂಕೇತಕ್ಕೆ ಕತ್ತಲೆ, ರಾತ್ರಿ, ಚಂದ್ರ, ಆಪ : ರಸ ಎಂಬ ಛಾಯಾರ್ಥಗಳು ಸಂಭವಿಸುವುದನ್ನು ವಿವರಿಸಿದ್ದಾಗಿದೆ. ಇದು ರಾತ್ರೀ ಸಮಯಾಚಾರ. ಇದು 'ಏಕಂ ಸತ್' ಪಂಥ 'ರಾತ್ರೀ' ಸಮಯಾಚಾರದ ಸಂಪ್ರದಾಯದಲ್ಲಿ ಚಂದ್ರನೇ ಕೇಂದ್ರಸ್ಥ ದೈವತ. ಆದರೆ, ಮೊದಲು ಕಾಣೆಯಾಗಿದ್ದ 'ಸೂರ್ಯ' ಪ್ರತಿಮೆ ಬಳಿಕ ಕಾಣಿಸಿಕೊಳ್ಳುವ ಅರ್ಥವೇನು? ಸಂಸ್ಕೃತಿಯ ಅರ್ಥ-ಗ್ರಹಣದಲ್ಲಿ ಈ ಎರಡು ಸೂತ್ರಗಳು ತುಂಬ ಪ್ರಯೋಜನಕಾರಿಯಾಗಿರುವುದಾಗಿ ಈ 'ಪ್ರಯೋಗ'ದ ಉದ್ದಕ್ಕೂ ಕಂಡುಬಂದಿದೆ: ಸತ್ಯವು ಸಾಂಕೇತಿಕವಾಗಿದೆ: ಸಮಸಾಮಯಿಕ ಸಾಂಕೇತಿಕ ಪ್ರತಿಮೆಗಳ ತುಲನೆಯಲ್ಲಿ, ಮಾನವ ಜೀವನಕ್ಕೆ ಸಂಬಂಧಿಸಿದ ಸುಸಂಗತವಾದ ಒಂದು ಅಂಶಚಿತ್ರವು (Concept) ತನ್ನ ತಾನೆ ಎದ್ದು ಕಾಣತೊಡಗುತ್ತದೆ. ವೈಚಾರಿಕ ಆಕೃತಿ ಸನಾತನವಿದೆ. ಅಂತಃಸಂಗತಿಯ ಈ ಗರ್ಭಿತಾರ್ಥವು 'ಏಕಂ ಸತ್' ಭೂಮಿಕೆಯ 'ಸತ್ಯ'ವೊ? ಅಥವಾ ಋತಸ್ವರೂಪಿ 'ಸತ್ಯ'ವೊ ಎಂಬುದನ್ನು ಸನಾತನ ವೈಚಾರಿಕ

ಆಕೃತಿಯ ನಿಕಷದಿಂದ ನಿರ್ಧರಿಸಿಕೊಳ್ಳಲು ಶಕ್ಯವಿದೆ. ಈ ಬಗೆಯ ವಿಮರ್ಶೆಯಲ್ಲಿ ಮಾನವೇತಿಹಾಸದಲ್ಲಿ ಮೊದಲು ಚಾಂದ್ರಸಂಪ್ರದಾಯ ರೂಢವಿತ್ತು; ಬಳಿಕ ಸೌರ ಸಂಪ್ರದಾಯದ ಉದಯವಾಯಿತು: ಎಂಬುದು ದೃಢಪಟ್ಟಿದೆ. ಪಿತೃಪ್ರಧಾನ ಕುಟುಂಬ ಪದ್ಧತಿ. ಯೂರೊಭಾರತೀಯ ಮೂಲದ-ಸಂಸ್ಕೃತ ಸಹೋದರ ಭಾಷಿಕರ ವೈಶಿಷ್ಟ್ಯ. ಇವರು ಸೂರ್ಯಪೂಜಕರು. ಇದಕ್ಕೂ ಮೊದಲು ಮಾತೃಪ್ರಧಾನ ಕುಟುಂಬ ಪದ್ಧತಿ ಇತ್ತು. ಇದು ಚಾಂದ್ರ ದೈವತಪೂಜಕರ ವೈಶಿಷ್ಟ್ಯ: ಎಂಬ ಈ ಸಂಗತಿಗಳೂ ಮಾನವ ಸಂಸ್ಕೃತಿಯಲ್ಲಾದ ಒಂದು ಕಾಲದ ಸ್ಥಿತ್ಯಂತರವನ್ನು ಪುಷ್ಟೀಕರಿಸುತ್ತಿವೆ. ಆದರೆ, ಚಾಂದ್ರ ಮಾತೃಪ್ರಧಾನ ಕುಟುಂಬ ಪದ್ಧತಿಯು ಅಮಾನ್ಯವಾಗಿ ಸೌರ ಪಿತೃಪ್ರಧಾನ ಕುಟುಂಬ ಪದ್ಧತಿ ರೂಢಿಗೆ ಬಂದುದು ನಿಜವಿದ್ದರೂ ಪ್ರಪಂಚದಲ್ಲಿ ಏಕಂ : ಸತ್ ಭೂಮಿಕೆಯ ಚಾಂದ್ರ ಸಂಪ್ರದಾಯದ ದೈವತಗಳು ಹಾಗೂ ಸಮಯಾಚಾರಗಳೇ ಒಟ್ಟಿನಲ್ಲಿ ಉಳಿದಿವೆಯೆ ಹೊರತು; ಋತ : ಸತ್ಯದ ಭೂಮಿಕೆಯ ಸೌರ ದೈವತಗಳಾಗಲಿ ಸಮಯಾಚಾರಗಳಾಗಲಿ ಎಲ್ಲಿಯೂ ಜೀವಂತ ಕಾಣುವುದಿಲ್ಲ.

ಆದರೆ, ಇಲ್ಲಿ ಒಂದು ಸಂದೇಹ ಸಾಂಕೇತಿಕ ಭೂಮಿಕೆಯ ಮೇಲಿಂದಲೇ ಉಂಟು. ಸೌರ=ಪ್ರಕಾಶ ತತ್ತ್ವದ ದೈವತ ಪೂಜೆಯ ಹಂತಕ್ಕೆ ಬಂದಿದ್ದ ಮಾನವ ಸಂಸ್ಕೃತಿಯು ಮರಳಿ ಚಾಂದ್ರ : ನೀರ-ಅಂಜನ ಪ್ರಕಾಶದ ರಾತ್ರೀ 'ಸಮೆ' (: ಸಮಯ)=ನಾಗಹೆಡೆವಣಿಯ ಬೆಳಕಿನಲ್ಲಿ ಬಾಳಬಟ್ಟೆಯಲ್ಲಿ ಸಾಗಿದ್ದು ಕಾಣುತ್ತಿದೆ. ಆದರೆ ಒಮ್ಮೆ ಕೆಲಕಾಲವಾದರೂ ರೂಢಿಯಲ್ಲಿ ಇದ್ದಿತೆಂಬ ಸೌರ : ಪ್ರಕಾಶ ಪೂಜಾ ಸಮಯಾಚಾರದ ಏನೂ ಅವಶೇಷಗಳೇ ಉಳಿಯದೆ ಅದು ನಾಮಶೇಷವಾಗಲಾರದು. ಸಂಸ್ಕೃತಿಯ ಸಾಂಕೇತಿಕ ಪ್ರತಿಮೆಗಳ ಭೌತ=ಮಾತ್ರಾ ಸ್ಪರ್ಶದ ಭಾಗವು ತೀರ ಬದಲಾಗಬಹುದು; ಅಥವಾ ಪಿರಾಮಿಡ್ಡುಗಳಂತೆ ಅದು ತೀರ ಭೂತಕಾಲದ ಸಂಗತಿಯಾಗಬಹುದು. ಇದರಂತೆ, ಸೌರ ಸಂಪ್ರದಾಯವು ಅಸ್ತಿತ್ವದಲ್ಲಿದ್ದುದನ್ನು ಸೂಚಿಸುವ ಕೆಲವೊಂದು ಪ್ರತಿಮೆಗಳು ವಿಕೃತ ಸ್ಥಿತಿಯಲ್ಲಾದರೂ ದೊರೆಯಲೇಬೇಕು. ಹಾಗಾದರೆ, ಇಲ್ಲಿ 'ಪ್ರಕಾಶ' ತತ್ತ್ವದ ಸವಿತೃ=ಸಾವಿತ್ರಿಯ ಮೇಲೆ ನಡೆದಿರುವ ಈ ಬಲಾತ್ಕಾರ ನೋಡಿಕೊಳ್ಳಿ : ನಾರಾಯಣನು ತನ್ನ (ನಾರ ಆಯನದ) ದಾಸಿಯನ್ನಾಗಿಸಿದ್ದಾನೆ, ಸವಿತೃವನ್ನು! "ಸವಿತೃ ಮಂಡಲ (೦) ಮಧ್ಯವರ್ತೀ ನಾರಾಯಣ"ನು ಈ ಶಬ್ದ-ಪ್ರತಿಮೆ ಇಂದಿಗೂ ಪೂಜ್ಯಧ್ಯಾನ ಮೂರ್ತಿಯಾಗಿದೆ. ಬ್ರಾಹ್ಮಣರೆಂಬವರಿಗೆ! 'ಸರ್ವಸ್ಯ ಪ್ರಸವಿತಾ ಸವಿತಾ' ಇಂಥ 'ಸವಿತುಃ ಉಪಸ್ಥೇ ವಿಶ್ವಾಭುವನಾನಿ ತಸ್ಥುಃ' 'ಪ್ರಸವಿತಾ ಜನಾನಾಂ'. ಸೂರ್ಯಾದೇವಿಯ ಹೆರಿಗೆಯ ವರ್ಣನೆ ವೇದದಲ್ಲೇ ಇದೆ.[೨]

ಇರಾಣಿನ (ಪರ್ಶಿಯಾ) ಅವೆಸ್ತಾ ಗ್ರಂಥ ಮತ್ತು ಋಗ್‌ವೇದದ ಭಾಷೆಗಳಲ್ಲಿ ನಿಕಟಸಾಮ್ಯವಿದೆ. ದೈವತಗಳಲ್ಲೂ ಕೆಲಮಟ್ಟಿಗೆ ಸಾಮ್ಯವುಂಟು. ಅವೆಸ್ತಾದ ಮೂಲ ಸ್ವರೂಪವನ್ನು ಗ್ರಹಿಸಿಕೊಳ್ಳಲು ಆಗದೆ ಇದ್ದರೂ, ಇಂದಿಗೂ ಅವಶಿಷ್ಟವಿರುವ ಝುರತುಷ್ಟನ ಸಂಪ್ರದಾಯದ ಫಾರ್ಶಿಕರಲ್ಲಿ ಪ್ರಕಾಶರೂಪ ಅಹುರ್‌ಮಝ್ದನ ಉಪಾಸನೆ ಇಂದಿಗೂ ಜೀವಂತವಿದೆ. ಈ ಸಂಪ್ರದಾಯದಲ್ಲಿ ಕತ್ತಲೆಯನ್ನು ಪ್ರತಿನಿಧಿಕರಿಸುವ ಅರ್ಹಿಮನ್ ಖಲನಾಯಕನೇ ಆಗಿದ್ದಾನೆ. ಋಗ್‌ವೇದದಲ್ಲಿ ಇದಕ್ಕೆ ಪ್ರತಿಯಾಗಿ ವೃತ್ರ=ಅಹಿ (: ಕತ್ತಲೆಯ) ಹಂತಕ (ಪ್ರಕಾಶರೂಪ) ಇಂದ್ರನನ್ನು 'ಭೋಗಿ'=ಸರ್ಪರೂಪಕ್ಕೆ=ಲೈಂಗಿಕ ಆಕೃತಿಗೆ ಮಾರ್ಪಡಿಸಿದ್ದಾಗಿದೆ. ಆಬಳಿಕ ಪುರಾಣಗಳಲ್ಲಿ ಖಲನಾಯಕನಾಗುತ್ತಾನೆ. ಗ್ರೀಕಿನ ಝೂಸ್ (: ದ್ಯೌಃ) ಮೂಲ ಸೌರಪ್ರತಿಮೆಯಾಗಿ ಉಳಿಯದಿದ್ದರೂ, ಈ ದೈವತದ ಪಾಲಿಗೆ ಖಲನಾಯಕತ್ವವು ಬರಲಿಲ್ಲ! ಅಲ್ಲದೆ, ಆಪ : ರಸ ಪಂಥೀಯರಲ್ಲಿ, ಸಮಾಜ ತಿರಸ್ಕರಿಸಿ ಏಕಾಂತಿಕ ಮಾರ್ಗಿಗಳಾದ ಯೋಗಿ-ಯತಿಗಳನ್ನು ವಿರೋಧಿಸಿದ ಇಂದ್ರನನ್ನು ಹೋಲುವ ಒಡೆಸಿಸ್, 'ಏಕಾಕ್ಷ' ಸೈಕ್ಲೊಪಸ್ ಹಂತಕ-ವೀರನ ಪ್ರತಿಮಾ ಭಂಜಕ ಕವಿ, ಗ್ರೀಸಿನಲ್ಲಿ ಹುಟ್ಟಲಿಲ್ಲ. 'ಏಳು' ಹೆಡೆಯ ನಾಗನನ್ನು ಸಂಹರಿಸುವ ವೀರ ಹೆರಾಕ್ಲೆಸ್‌ನನ್ನು ಖಲನಾಯಕನನ್ನಾಗಿಸುವ ಪ್ರಯತ್ನವಾದುದು ಕಾಣುವುದಿಲ್ಲ. ಅಲ್ಲಿಯೂ ಮಾತಾ ಸಂಪ್ರದಾಯದ 'ಕುಮಾರನೇ' ಜೀವನದ ಆದರ್ಶವಾಗುವ ಕ್ರಾಂತಿ ಸಂಭವಿಸಿತು. ಬಾಳು ಹಾಳು ಎಂದು ಪಾರಲೌಕಿಕ ಸಿದ್ಧಿಯೆ ಬಾಳಗುರಿ ಆಗುವ ಧರ್ಮ ಪಂಥವೇ ಅಲ್ಲಿಯೂ ಬಳಿಕ ಬೆಳೆದುದು ಉಂಟು.

ಋಕ್‌ಸಂಹಿತೆಯ ನಾಗ-ಪ್ರತಿಮಾ ಸಮೀಕ್ಷೆಯ ಅನುಷಂಗದಿಂದ, ಹೀಗೆ ಮಾನವ ಸಂಸ್ಕೃತಿಯ ಪ್ರಾರಂಭದ ಅಧ್ಯಾಯಗಳ ಸ್ಥೂಲ ಬಾಹ್ಯರೇಖೆಗಳ ಒಂದು ಆಕೃತಿ (map) ಕಣ್ಣಳತೆಯಲ್ಲಿ ಬರುತ್ತಿದೆ. ದಿವ್ಯ ದೈವತ ವಿಚಾರವು ಇಲ್ಲದ ಪುರಾತನ ಸಂಸ್ಕೃತಿ ಇಲ್ಲ. ಪ್ರತಿಯೊಂದು ಭಾಷಿಕರು ತಮ್ಮ ಜೀವಿತದಲ್ಲಿ ಅಗಮ್ಯವೆನಿಸಿದ ಜೀವನದ ಅರ್ಥವನ್ನು ಗ್ರಹಿಸಲು ನಡೆಸಿದ ಪ್ರಯತ್ನ. ಅಂದು, ದೈವತ ವಿಚಾರ ಹಾಗೂ ದಿವ್ಯಾಧ್ಯಾತ್ಮ ಸಂಪ್ರದಾಯವಾಗಿ ಪರಿಣಮಿಸಿದ್ದುದು ಅರಿಕೆಗೆ ಬರುತ್ತಿದೆ. ಮೂಲತಃ ಅರ್ಥವನ್ನು ಬಚ್ಚಿಡುವ ಉದ್ದೇಶದಿಂದ ಸಂಕೇತಗಳು ತಲೆದೋರದಿದ್ದರೂ, ಬರುಬರುತ್ತ ಈ ಉದ್ದೇಶವು ಇಲ್ಲಿ ಕಾಣತೊಡಗುತ್ತದೆ. 'ನಾಗಪೂಜೆ' ಎಂದರೆ ಇಂದ್ರಿಯ (ವೃತ್ತಿಗಳ) ಪೂಜೆಯಾಗಿದೆ, ಎಂಬ ಪ್ರಜ್ಞೆ ಮೂಡುತ್ತದೆ! ಈ ವೈಯಕ್ತಿಕ ಪ್ರಜ್ಞೆಯೊಡನೆ ಸಾಮಾಜಿಕ ಪ್ರಜ್ಞೆ (: ಸವಿತೃ=ಸೂರ್ಯನ) ಉದಯವಾಗುವುದು ಅನಿವಾರ್ಯ. ಆಗ ಅನಿಷ್ಟ ಪ್ರಕಾರವು ತಲೆಯೆತ್ತಿದ್ದುಂಟು; ಭಾರತೀಯ ನಾಗ-ಸಂಪ್ರದಾಯದ ಸಂಶೋಧಕ ವ್ಹೊಗೆಲ್ ಕಂಡಿರುವಂತೆ. ನಾಗನು ಸಂತನಾಗಿ ಮಾರ್ಪಡುತ್ತಾನೆ! ವೀರ್ಯವಂತನ ಭೋಗವೃತ್ತಿ, ಮೃತ್ಯುವನ್ನು ಅಪ್ಪಿದಂತೆ! ಈ ವಿಪರೀತ ಅನುಭವ ಭೋಗಿಯನ್ನು ತ್ಯಾಗವೀರ ನನ್ನಾಗಿಸುತ್ತದೆ. ಈ ಮಾತು ಭಾರತದಲ್ಲಿ ಮಾತ್ರವಲ್ಲ; ಜಾಗತಿಕ ಸ್ವರೂಪದ ದೃಶ್ಯವಾಗಿದೆ.

ಮಾನವನು ಜೀವಿತದಲ್ಲಿ ಅನುಸರಿಸುವುದು ಏಕಂ ಸತ್; ಎಂದರೆ ರೇತ ಸತ್ಯ. ಏಕೆಂದರೆ ಇದು ಅನಿವಾರ್ಯ ಸತ್ಯ. ಆದರೆ ಮೊಗವಾಡ ಧರಿಸಿರುವುದು ಋತ : ಸತ್ಯದ್ದು; ಎಂದರೆ (ವಿಚಾರ)ಯುಕ್ತ ಸತ್ಯದ್ದು. ವಿವೇಕಯುಕ್ತ ವಿಚಾರದ ಸಂಭ್ರಮ ನಿರ್ಮಿಸುವಂತಹ ಮೊಗವಾಡ ಧರಿಸಿ. ಅಂದಿನ ನಾಗ, ಸಂತ-ಪಂಥ ಸ್ವೀಕರಿಸಿದನು; ಅನಿವಾರ್ಯ=ಕರ್ಮವು ರೇತಸತ್ಯವು. ಋತ ಸತ್ಯ:ಕರ್ತವ್ಯದ ವೇಷಧರಿಸದೆ ತನ್ನ ಪ್ರತಿಷ್ಠೆ ಉಳಿಸಿಕೊಳ್ಳಲಾರದು. ಮಾನವ ಇಂಥ ಇಕ್ಕಟ್ಟಾದ ಕಣೆ(ವೆ)ಯಲ್ಲಿ ಸಿಕ್ಕಿಕೊಂಡಿರುತ್ತಿರುವುದಕ್ಕೆ ಇಂದಿನ ಸಂಹಿತೆಯೆ ಸಾಕ್ಷಿ. ಈ ವೇದದಲ್ಲಿ ಏಕಂ : ಸತ್‌ಮಾರ್ಗ ಪ್ರೇರಕ ಚಂದ್ರಮನೇ ಕೇಂದ್ರಸ್ಥ ದೈವತ, ಸೌರ ದೈವತ ಪ್ರತಿಮೆಗಳ ಮೊಗವಾಡ ಧರಿಸಿದ್ದಾನೆ. ಇವನು ವರುಣನ ಹಿಂದೆ ಅಡಗಿದುದನ್ನು ಓಲ್ಡೆನ್ ಬರ್ಗ್ ಪ್ರಭೃತಿಗಳು ಗುರುತಿಸಿದ್ದೂ ಉಂಟು. ಕೊನೆಯಲ್ಲಿ 'ಸೂರ್ಯಾ' ದೇವೀ ಸಂಗಮೋತ್ಸುಕ ಚಂದ್ರನು ಸೋಮನಾಂತರದಿಂದ ವಿವಾಹಮಂಟಪ ಪ್ರವೇಶಿಸಿರುವುದನ್ನು ಅಮಾನ್ಯ ಮಾಡುವ ಆಧುನಿಕ ಸಂಶೋಧಕರು ದೊರೆಯರು. ಆಗಾಮೀ ಯುಗದ ಜೀವನ ರೀತಿಯೆ ಈ ವೇದದಲ್ಲಿ ಪ್ರತಿಬಿಂಬಿತವಾದಂತಿದೆ! ಆದರೆ, ಇಲ್ಲಿ ಪ್ರಶ್ನೆ : 'ಏಕಂ ಸತ್'>ಸತ್ಯದ ವೈಚಾರಿಕ ಆಕೃತಿಯ (ಮಾತ್ರಾಸ್ಪರ್ಶದ) ಬಾಹ್ಯ ವೇಷ ಬದಲಾದಲ್ಲಿ, ಈ ವೈಚಾರಿಕ ಆಕೃತಿಯೊಳಗಿನ ತಾಯ್ಗಂಡತನಕ್ಕೆ ಪ್ರೇರಿಸುವ ಅರ್ಥಶಕ್ತಿ (Logical form) ನಷ್ಟವಾಗಬಲ್ಲುದೆ? ಹಾಗಾದರೆ ಈ ಇಕ್ಕಟ್ಟಿಂದ ಹೊರಬರಲು ಉಪಾಯವೇನು?

ರಾತ್ರಿ ಸಮಯಾಚಾರ ಹಗಲಿನ ಆಲಿಂಗನ

ಮೂಲ ಋಗ್‌ವೇದದಲ್ಲಿರುವ ವೃತ್ರ : ಅಹಿ-ಹನ್ ಇಂದ್ರ, ಈ ಪಾತ್ರದ ಕಾರ್ಯವು, ಅರ್ವಾಚೀನ ಕಾಲದಲ್ಲಿ ಜಾಗೃತ-ಪ್ರಜ್ಞ; ದಕ್ಷ ವಿಮರ್ಶಾ ಶಾಸ್ತ್ರದ ಪಾಲಿಗೆ ಬಂದಿದೆ. ವೃತ್ರ : ಅಹಿ ಈ ಸಂಕೇತವು ಮೂಲದಲ್ಲಿ ನಿಶಾ (-ನಾಥ), ಪ್ರತೀಕವಾಗಿದೆ. ಇಂದ್ರನು ಸವಿತೃ-ಸೂರ್ಯನ ಎಂದರೆ ಪ್ರಜ್ಞಾಪ್ರಕಾಶದ ಪ್ರತಿಮೆ. ಹಗಲನ್ನು ಆ-ಲಿಂಗಿಸ ಬಯಸುವ ಈ ನಿಶಾ(-ನಾಥ), ಭೌತ ರಾತ್ರಿ-(ಚಂದ್ರ) ಅಲ್ಲ. ಪ್ರಕಾಶರೂಪ ಜೀವನ ಕ್ಷೇತ್ರವನ್ನು ಆವರಿಸುವ ಕತ್ತಲು ಇದು. ಈ ಕತ್ತಲಿನ ಒಡೆಯ 'ಮಧು'-ಸ್ರವಿಸುವ ಚಂದ್ರ: ಇದು ಲೈಂಗಿಕ ಸಂಕೇತ-ಉಭಯಲಿಂಗೀ. ಲೈಂಗಿಕ ಪ್ರವೃತ್ತಿಗೆ - ಪ್ರೇರಣೆಗೆ ಕತ್ತಲಿನ ಹಿನ್ನೆಲೆ ಅವಶ್ಯ; ಲೈಂಗಿಕ ಸ್ವರೂಪದ ಭೌತ-ಪ್ರತ್ಯಕ್ಷ ಕ್ರಿಯೆಗೆ ಕತ್ತಲು(-ರಾತ್ರಿ) ಅವಶ್ಯಕವಿರುವುದನ್ನು ಎಲ್ಲರೂ ಬಲ್ಲರು; ಆದರೆ ಇಂಥ ಸಾಂಕೇತಿಕ ಕ್ರಿಯೆಯೂ ಸಾಂಕೇತಿಕ ಕತ್ತಲನ್ನು-ರಾ-ತ್ರಿಯನ್ನು ಅಪೇಕ್ಷಿಸುತ್ತದೆ. ಸುತ್ತಲಿನ ಪರಿಸರವನ್ನು ಮರೆಯ ಹಚ್ಚುವ ಭಾವೋನ್ಮಾದವು ಹಗಲಿನಲ್ಲಿಯೂ ರಾತ್ರಿಯ 'ಸಮಯ' ನಿರ್ಮಿಸಬಲ್ಲದು! ಭಾವ(ನಾ) ವಿವಶತೆಗೆ ವಿವೇಕದ ಕಡಿವಾಣ ಸಹಿಸದು ಪ್ರಜ್ಞಾ-ಪ್ರಕಾಶ. ಮಂದವಾಗದೆ ಭಾವವಿವಶತೆಯ ತತ್-ಮಯಾವಸ್ಥೆ-ಇಂಥ 'ರಸೋ

ವೈ ಸಃ' ಅನುಭೂತಿ ಅಶಕ್ಯ. ಇಂದಿನ ಈ ಋಕ್‌ಸಂಹಿತೆಯಲ್ಲಿ, ವೃತ್ರ : ಅಹಿಹನ್ ಇಂದ್ರನ ತೇಜೋವಧೆ ಯಾಗಿರದಿದ್ದರೆ 'ಪವಮಾನ-ಸೋಮ' (: Air & moisture) ಸೂಕ್ತಗಳಾಗಲಿ, 'ಸಾರ್ಪರಾಜ್ಞೀ ಸೂರ್ಯೋ ವಾ' ಪ್ರತಿಮೆಗಾಗಲಿ ಅಥವಾ ಸೋಮ (=ಚಂದ್ರ)-ಸೂರ್ಯಾ ವಿವಾಹದ ಸೂಕ್ತಕ್ಕಾಗಲಿ ಸ್ಥಾನವು ದೊರೆಯಲು ಶಕ್ಯವಿದ್ದಿಲ್ಲ. ತಲೆತಲಾಂತರಗಳಿಂದ ಬಂದಿರುವ ಇಂದಿನ ರಸ-ವಿಮರ್ಶಾ ಶಾಸ್ತ್ರವು ಸದೋಷವಿರುವ ಕಾರಣದಿಂದಲೆ ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಹಗಲು (: ಸೂರ್ಯ)=ರಾತ್ರಿ (: ಚಂದ್ರ) ಅಥವಾ ಸೂರ್ಯ=ಸರ್ಪ ಎಂಬ ಅನೈಸರ್ಗಿಕ ವಿಸಂಗತಿ, ಇಂದಿನ ವರೆಗೂ ಪತ್ತೆಯಾಗದೆ ಉಳಿದು ಬರಲು ಶಕ್ಯವಾಗಿದೆ.

ಏಕಂ : ಸತ್ ಎಂಬ ಭೂಮಿಕೆಯಲ್ಲಿ ಹಗಲು ಅಥವಾ ಇರುಳು ಒಂದೇ, ಋತ : ಸತ್ಯಕ್ಕೆ ಅವಕಾಶವು ದೊರೆಯಲಾರದು. ಆದರೆ, ಋತ ಎಂದರೆ ವಿಶ್ವಸ್ಥ ನಿಯಮ-ವ್ಯವಸ್ಥೆ (Law and order). ಇದುವೆ ತಳಹದಿ ಯಾಗಿರುವ ಸತ್ಯಕ್ಕೆ ಯಾವುದೇ ಏಕಾಂತಿಕತೆ ಸಲ್ಲದು. 'ಏಕಂ ಸತ್ಯ' ಮತ್ತು ಋತ : ಸತ್ಯ ಇವೆರಡೂ ವೈಚಾರಿಕ ಆಕೃತಿಗಳು ಹಾಗೂ ಜೀವನ ರೀತಿಗಳು ಋಗ್ವೇದಕ್ಕೆ ಸೀಮಿತವಿಲ್ಲ. ಇದು ಸನಾತನ ತ್ರಿಕಾಲಾಭಾಧಿತ ಸತ್ಯ. ಪರಿಭಾಷೆ ಭಿನ್ನವಾಗಿ ತೋರಿದರೂ ಇಂದಿಗೂ ಈ ಸಂಘರ್ಷ ಉಂಟೇ ಉಂಟು! ಉದಾ: 'ಏಕಂ ಸತ್' ಎಂಬ ವಿಚಾರ ಪದ್ಧತಿಯಲ್ಲಿ, ಅರ್ಥ (: ವಿಚಾರ : ಜ್ಞಾನ) ಇದಕ್ಕೆ ಸ್ವತಂತ್ರ ಅಸ್ತಿತ್ವವು ಇಲ್ಲ. 'ಏಕಂಸತ್' ಎಂಬ ಶ್ರದ್ಧೆಯು ಇಂದ್ರಿಯ ಪೂಜೆಯಾಗಿ, ಇದು ಭೋಗವಾದದಲ್ಲಿ ಪರಿಣಮಿಸಲೇಬೇಕು. ಇದರ ತೀವ್ರ ಪ್ರತಿಕ್ರಿಯೆ ವಿರಕ್ತ, ದಿವ್ಯಾಧ್ಯಾತ್ಮವಾದ: ಅಥವಾ ಈ ಬಾಳು ಅನರ್ಥಕಾರಿ ಎಂಬ ನೈರಾಶ್ಯವಾದ. ಇಲ್ಲವೆ ಹಿಪ್ಪೀಪಂಥ. 'ನಿಃಸ್ತ್ರೈಗುಣ್ಯೋ ಪಥಿ ವಿಚರತಾಂ ಕೋ ವಿಧಿಃ ಕೋ ನಿಷೇಧಃ' ಎಂಬ ನಿಃಸ್ಸಂಗವಾದವು ಪ್ರಭಾವಶಾಲಿಯಾಗುವುದು. ಆದರೆ, ಅರ್ಥ (: ವಿಚಾರ : ಜ್ಞಾನ) ಇದು ವಿಶ್ವದಲ್ಲಿ ಸ್ವಯಂ ಜ್ಯೋತಿ ಸ್ವರೂಪದಲ್ಲಿ ಉಂಟು, ಎಂಬ ಶ್ರದ್ಧೆಯು ಋತಸತ್ಯದ ಭೂಮಿಕೆಯ ಜೀವನ ರೀತಿಗೆ ಪ್ರೇರಿಸುತ್ತದೆ.

ಏಕಂ : ಸತ್ಯದ ತಳಪಾಯದಲ್ಲಿ ಜನ್ಯ-ಜನಕ ಭಾವದ ಮೂಲಭೂತ ಆಕೃತಿಯಿದೆ. ಈ 'ಏಕಂ' ಎಂಬುದು Unity in duality 'ವಾಗರ್ಥಾವಿವ ಸಂಪೃಕ್ತೌ' ಏಕಾತ್ಮಕ 'ಮಿಥುನ'; ವೇದಪೂರ್ವಕಾಲೀನ 'ಅಪಾಂ ನ ಪಾತ್' ಆಧುನಿಕ ಥಿಸಿಸ್-ಆ್ಯಂಟಿಥಿಸಿಸ್ ಈ ಸಂಯೋಗದಲ್ಲಿ 'ಸಿಂಥೆಸ್' ಅರ್ಥ, ವಿಚಾರ ಸ್ವರೂಪದ ನೂತನ(?) ಸಂತಾನ ನಿರ್ಮಾಣವಾಗುತ್ತದೆ, ಎಂಬ ಹಾಗಿನ ಈ ಶ್ರದ್ಧೆ ಸದೋಷವಿದೆ. ಸ್ವ-ಕಲ್ಪಿತ ಅಥವಾ ತಾನು ಗ್ರಹಿಸಿಕೊಂಡ ಥೀಸಿಸ್ (: concept), ಇದು ದಿಕ್ಕಾಲ ಪರಿಸರಸ್ಥ ಜೀವನದಲ್ಲಿ ಹೊಳೆದ ವಿಚಾರ ಇರುವ ಶಕ್ಯತೆಯಿಲ್ಲ. ಒಂದು 'ಪೂರ್ವಪಕ್ಷ' ಎಂದೊಡನೆ ಅದಕ್ಕೆ ವಿರೋಧೀ ಉತ್ತರಪಕ್ಷ ಬಂತೆ. ಈ ಪೂರ್ವೋತ್ತರಗಳ ಮಥನದಲ್ಲಿ ನಿರ್ಮಾಣವಾಗುವ 'ಸಮನ್ವಯ' (ಸಿಂಥೆಸಿಸ್) ಎಂಬುದು ಇನ್ನೂ ಕೃತ್ರಿಮ ವಿಚಾರವಾಗಲೆ ಬೇಕು. ಆದಕಾರಣ, ನೂತನ ಗರ್ಭಿತಾರ್ಥ : ವಿಚಾರ (concept) ಹೊಳೆಯಬೇಕೆ ಹೊರತು, ಇಂಥ 'ಸಿಂಥೆಸಿಸ್;' ಸಿಂಥೆಟಿಕ್ ಔಷಧಿಯಂತೆ ಕೃತ್ರಿಮ, ಹಾಗೂ ಅಪಾಯಕಾರಿ ಪರಿಣಾಮಗಳಿಗೆ ಕಾರಣವಾಗುವ ಶಕ್ಯತೆಯೆ ಹೆಚ್ಚು.

ಪೌರ್ವಾತ್ಯವಾಗಲಿ, ಪಾಶ್ಚಾತ್ಯವಾಗಲಿ ಇಂದಿನ ವಿಮರ್ಶಾ ಪದ್ಧತಿ 'ಬ್ರಹ್ಮಾನಂದ'ದ ಏಕಂ : ಸತ್ ತತ್ತ್ವದ 'ಅಪಾಂ-ನ ಪಾತ್' ಭೂಮಿಕೆಯ ಮೇಲೆ ನಿಂತ ವೈಚಾರಿಕ ಆಕೃತಿಯಾಗಿದೆ. ಕೃತಿಯ ಬಾಹ್ಯಆಕೃತಿ (Form) ಮತ್ತು ಅದರ ಆಶಯ (Content) ಇವೆರಡೇ ಮೌಲಿಕ. ಆಕೃತಿಯು ಅರ್ಥವನ್ನೂ, ಅರ್ಥವು ಆಕೃತಿಯನ್ನೂ ರೂಪಿಸಬಲ್ಲುದು ಎಂಬಲ್ಲಿ ಇದು ಏಕಂ ಸತ್ತಿನ Unity in duality ಭೂಮಿಕೆಯ ಅಪಾಂ ನ ಪಾತ್ ಆಕೃತಿಯೆ ಆಯಿತು. ಸಾಹಿತ್ಯಿಕ ಕೃತಿ ವಿಮರ್ಶೆಯ ಈ ದೃಷ್ಟಿಕೋನವೇ, ಜೀವನ : ಸಂಸ್ಕೃತಿಯನ್ನು ಗ್ರಹಿಸಿಕೊಳ್ಳುವ ತಂತ್ರದಲ್ಲಿಯೂ ಇನ್ನೊಂದು ಬಗೆಯಲ್ಲಿ ಕಾಣದೊರೆಯುತ್ತದೆ. (ಭೌತ) ಕಾಲ-ಪರಿಸರವು (Form), ಸಂಸ್ಕೃತಿಯನ್ನು (ಅರ್ಥ) (Content) ರೂಪಿಸುತ್ತದೆ ಎಂಬ ಸೂತ್ರದಂತೆ, ಈಜಿಪ್ಟ್, ಸುಮೇರು ಭಾಗದ ಸಂಸ್ಕೃತಿಯನ್ನು ಅರ್ಥಯಿಸುವ ಪ್ರಯತ್ನದಲ್ಲಿ ಜಾರಿರುವ ಒಂದೆರಡು ಎಡೆಗಳನ್ನು ಮಾದರಿಗಾಗಿ ವಿವರಿಸಿದ್ದಾಗಿದೆ. ಸಂಸ್ಕೃತಿಯನ್ನು ರೂಪಿಸಿದ್ದು ಭೌತಕಾಲ-ಪರಿಸರವಲ್ಲ. ನೇತಾರ ಸಮಿತಿ (: ಸಮಷ್ಟಿ) ನಿರ್ಮಿತ 'ಸಮಯ' (: ಕಾಲ) ಮತ್ತು

ಈ ಸಮಯವು ರೂಪಿಸುವ ಪ್ರತಿಮಾ : ಸಂಕೇತಗಳು ಈ ಮೂರರ ಒಟ್ಟು ಪರಿಣಾಮದಲ್ಲಿ ಒಂದು ಸಂಸ್ಕೃತಿಯಾಗಲಿ, ಕೃತಿಯಾಗಲಿ ರೂಪಗೊಳ್ಳುತ್ತದೆ. ಏಕಂ : ಸತ್ ಭೂಮಿಕೆಯು ಮೂಲದಲ್ಲಿಯೆ ಹೇಗೆ ಸದೋಷವಿದೆ, ಎಂಬುದನ್ನು, ತಾಯ್ಗಂಡ ವೃತ್ತಿಗೆ ಒತ್ತಾಯಪಡಿಸುವ ಇದರ ಅಂತರಾರ್ಥವನ್ನು ಈ ಮೊದಲು ವಿವರಿಸಿ ಆಗಿದೆ. ಭಾರತದ ಹೊರಗಿನ ಈಜಿಪ್ಟ್, ಸುಮೇರು, ಗ್ರೀಕ್ ಮೊದಲಾದ ಕಡೆಯ ಆದಿದೈವತ ಕಥೆಗಳ ಮೂಲಕ ಇದು ಸ್ಪಷ್ಟವಾಗುತ್ತಿದೆ. ಏಕಂ : ಸತ್ಯವನ್ನು ನಂಬಹಚ್ಚಿರುವ ತಂತ್ರದೊಳಗಿನ ಚಾಕಚಕ್ಯದ ಮಾಟವು ಬೆಳಕಿನಲ್ಲಿ ಬರುವಲ್ಲಿಯೂ ಈ ವಿಚಾರ : ತತ್ತ್ವಜ್ಞಾನದ ಭಯಾವಹ ಸ್ವರೂಪವು ಬಯಲಿಗೆ ಬರುತ್ತವೆ. 'ಸಾರ್ಪರಾಜ್ಞೀ ಸೂರ್ಯೋ ವಾ' ಈ ಶಬ್ದ ಪ್ರತಿಮೆಯೊಳಗಿನ ವಕ್ರಾರ್ಥಕ್ಕೆ ಪ್ರೇರಕ 'ವಾ' (: ಅಥವಾ) ಈ ಸಂಕೇತವನ್ನು ತೆಗೆದು ಹಾಕಿದರೆ, ಸೌರ ಭೂಮಿಕೆಯ ಜೀವನ ದೃಷ್ಟಿ ಸೂಚಕ 'ಸರ್ಪ-ಸೂರ್ಯ' ಈ ಪ್ರತಿಮೆ ಉಳಿಯುತ್ತದೆ. ಕ್ಷಣ ಕ್ಷಣಕ್ಕೂ ಸರಿದು ಹೋಗುತ್ತಿರುವ ವಿಶ್ವದ ಬಾಹ್ಯವಲಯವು ಸರ್ಪ; ಮಾತ್ರಾಸ್ಪರ್ಶದ=ಇಂದ್ರಿಯ ಗೋಚರ ಬಾಹ್ಯವಲಯದ ಒಳಗೆ ಇರುವ, ಈ ಪ್ರಪಂಚವು ಅರಿಕೆಗೆ ಬರಲು ಕಾಣವಾಗುವ ಸ್ವಯಂ ಪ್ರಕಾಶವೆ ಸೂರ್ಯ. ಮಾನವ ಜೀವನ ಪಾತಳಿಯ ಮೇಲಣ ಪ್ರತಿಯೊಂದು ವ್ಯಕ್ತಿಯೂ ಹೀಗೆಯೆ ಸರ್ಪ ಅಮೃತ ಸೂರ್ಯ ಸ್ವರೂಪದ್ದು. ತಾನು ಪ್ರಕಾಶರೂಪನು; ಸರ್ಪಸ್ವರೂಪ ಶರೀರವೇ ತಾನು ಅಲ್ಲ. ಶಬ್ದ ಪ್ರತಿಮೆಯೊಳಗಿನ ಗರ್ಭಿತಾರ್ಥದಂತೆ ತಾನು; ಮತ್ತು ಈ ಅರ್ಥವನ್ನು ಧಾರಣಮಾಡುವ ಶಬ್ದವಲಯದಂತೆ ತನ್ನ ದೇಹ; ಎಂಬ ಸ್ವ-ಸ್ವರೂಪ ಜ್ಞಾನವಾಗುವಲ್ಲಿ ನಾಗಾನಂದ ಸಂಪ್ರದಾಯದ ಪ್ರಭಾವ ಬೆಳೆಯಲು ಶಕ್ಯವಿಲ್ಲ.

'ಸರ್ಪ-ಸೂರ್ಯ' ಈ ಪ್ರತಿಮೆಯಲ್ಲಿ 'ಮೊದಲುತನ'ದ ಸರಳತೆ ಎದ್ದು ಕಾಣುತ್ತದೆ. ಆದರೆ, ಸರ್ಪವೊ-ಸೂರ್ಯನೊ? ಎಂಬ ಋಗ್ವಾಕ್ಯಸ್ಥ ವಕ್ರೋಕ್ತಿಯ ಮಾಟ ಇಲ್ಲಿ ಇಲ್ಲ. ಸರ್ಪ=ವೃತ್ರ ಚಂದ್ರನ ಪರ್ಯಾಯ ಪ್ರತಿಮೆ ಎಂದು ವೇದದಲ್ಲೆ ಉಂಟು. ಆದಕಾರಣ, ಸರ್ಪವೊ? ಸೂರ್ಯನೊ ಎಂಬ ಆಶಯವನ್ನು ಚಂದ್ರನೊ? ಸೂರ್ಯನೊ? ಎಂದೂ ವ್ಯಕ್ತಪಡಿಸಬಹುದಿತ್ತು! ಇದು ಹಾಗಿರಲಿ ಸರ್ಪ-ಸೂರ್ಯ ಅಥವಾ 'ಸಾರ್ಪರಾಜ್ಞೀ ಸೂರ್ಯ' ಈ ಪ್ರತಿಮೆಯ ಸಂದರ್ಭದಿಂದ ವಿಮರ್ಶಾ ಶಾಸ್ತ್ರಕ್ಕೆ ಸಂಬದ್ಧ ಕೆಲವೊಂದು ತಾತ್ತ್ವಿಕ ಸತ್ಯಾಂಶಗಳು ಇಲ್ಲಿ ತಲೆಯೆತ್ತುತ್ತವೆ: ಏಕಂ : ಸತ್ಯ ಪಂಥಕ್ಕೆ ಸರ್ಪ ಮತ್ತು ಸೂರ್ಯ ಈ ಭೇದ ಅಮಾನ್ಯ; ಅ-ಸಹ್ಯ. ಆದುದರಿಂದ, ಇದು ಸರ್ಪವೊ? ಸೂರ್ಯನೋ ಎಂಬ ಸಂಭ್ರಮವನ್ನು ಉಂಟುಮಾಡುವ 'ವಾ (ನ ವಾ)' ಶೈಲಿಯ ಮಾಟವು ಇಲ್ಲಿ ಅವಶ್ಯವಾಗಿದೆ. 'ಏಕಂ ಸಂತಂ' ತತ್ತ್ವ ಪ್ರತಿಪಾದನೆಗೆ ಸರ್ಪ (ಚಂದ್ರ :) ಮತ್ತು ಸೂರ್ಯ (ಪ್ರಕಾಶ) ಇವೆರಡೂ ಸಂಕೇತಗಳ ಗರ್ಭಿತಾರ್ಥವು ಸಮಾನ ಎನ್ನಲು ಆದೀತೆ? ಸರ್ಪ=ಸೂರ್ಯ ಎಂಬುದನ್ನು ಮಾನ್ಯ ಮಾಡಿದರೆ, ಕತ್ತಲು=ಪ್ರಕಾಶ; ಮೃತ್ಯು=ಜೀವನ ಎಂಬ ತರ್ಕ-ದುಷ್ಟ, ಅನೈಸರ್ಗಿಕ ವಿಚಾರದ ವಿಷಚಕ್ರದ ಉರುಲಿಗೆ ಸಿಕ್ಕಿಬೀಳುವುದು ನಿಶ್ಚಿತ.

ಏಕಂ : ಸತ್ಯ ಭೂಮಿಕೆಯು ಗ್ರಹಿಸಿರುವಂತೆ, ಬೇಕಾದ ಅರ್ಥ ಆಶಯವನ್ನು ಬೇಕಾದ ಮಾಧ್ಯಮ=ಪ್ರತಿಮೆಯಿಂದ ವ್ಯಕ್ತಪಡಿಸಲು ಶಕ್ಯವೆ? ಜ್ಞಾನ (: ಪ್ರಕಾಶ) ಮೂರ್ತಿಯಾದ ಸುಮೇರಿನ ಎಂಕಿ ದೇವನು ಆಪ : ರಸದ ಪ್ರತಿಮೆ; ಈಜಿಪ್ತಿನ ಮಾತ್ (Law and order) ದೇವಿ ಆಪ : ರಸದ ಪ್ರತಿಮೆ ಆಗಿರುವಲ್ಲಿ ಈ ಜಲಸ್ವರೂಪೀ ಅನಿಶ್ಚಿತ ಆಕೃತಿಯ ಮಾಧ್ಯಮದ ಮೂಲಕ ಜ್ಞಾನ ಮತ್ತು ಅರ್ಥ (: ನಿಯಮ ವ್ಯವಸ್ಥೆ) ಈ ಆಶಯದ ಅಭಿವ್ಯಕ್ತಿ ಸಮರ್ಪಕವಾಗಲು ಅಶಕ್ಯವಿತ್ತು. ಡಾ. ಫ್ರಾಂಕ್‌ಫೋರ್ಟ್, ಎಂಕಿ ದೇವನು ಕಪಟನಾಟಕೀಯ ಭೂಮಿಕೆಯವನು ಆಗುವ ಕಾರ್ಯವನ್ನು ಕಂಡುಹಿಡಿದು ಸಮರ್ಪಕವಾಗಿ ವಿವರಿಸಿದ್ದಾರೆ. ಆದಕಾರಣ, ಅವೆಸ್ತಾ ಹಾಗೂ ಮೂಲ ಋಗ್‌ವೇದದಲ್ಲಿ ಅಶ : ಋತ (: ಸತ್ಯ)ಕ್ಕೆ ಪ್ರಕಾಶರೂಪ ಮಾಧ್ಯಮವಾಗಿ ತಿಳಿದೊ ತಿಳಿಯದೆಯೊ, ಯೋಜಿಸಿರುವಲ್ಲಿ ಔಚಿತ್ಯವಿದೆ ಮತ್ತು ತತ್ಪೂರ್ವದ ಸುಮೇರು ಈಜಿಪ್ತಿನತ್ತಣಿನ ಅನುಭವದಿಂದ ಪಾಠ ಕಲಿತಿರುವ ಶಕ್ಯತೆಯೂ ಉಂಟು. ಈ ಎರಡರ ಜೊತೆಗೆ ಮೂರನೆಯ ತಾತ್ತ್ವಿಕ ಪ್ರಶ್ನೆಯೂ ಒಂದು ಅತ್ಯಂತ ಮಹತ್ತ್ವದ್ದಾಗಿದೆ:

'ಸರ್ಪ' ಇದು ದೃಶ್ಯವಿಶ್ವದ ಅಥವಾ ಜೀವ ಪಿಂಡದ ಬಾಹ್ಯವಲಯ ಎಂದರೆ, 'ಸೂರ್ಯ' ಇದು ತದಂತರ್ಗತ ಗರ್ಭಿತಾರ್ಥ=ಆಶಯದ ಅರ್ಥರೂಪ ಪ್ರಕಾಶತತ್ತ್ವ. ಮೊದಲನೆಯದು ಭೌತ : ಇಂದ್ರಿಯ ಗೋಚರ ವಿಷಯ: ಎರಡನೆಯದು ಮಾತಾಸ್ಪರ್ಶದ ವಸ್ತುವಿನ ಆಧಾರದಿಂದ ಕಾಣುವ ಹಂತಕ್ಕೆ ಬರುವ ಅರ್ಥರೂಪ (Super organic) ತತ್ತ್ವ. ಇವೆರಡೂ ಒಂದೇ ಬಗೆಯವು ಆಗಲಾರವು. ಎಂದರೆ ಇದರ ನಿಜಸ್ವರೂಪವು ಹೀಗೆ : ಭಾಷೆ : ಇಂದ್ರಿಯ ಗ್ರಾಹ್ಯ ಶಬ್ದವಲಯ: ಇದಕ್ಕಿಂತ ಈ ಭಾಷೆಯು ಒಳಗೊಳ್ಳುವ ಇಂದ್ರಿಯಾತೀತ ಅರ್ಥರೂಪ ಪ್ರಕಾಶವು ಮಿಗಿಲಾದುದು, ವಿಶಾಲವಾದುದು. ಆದಕಾರಣ, ಸರ್ಪ (Form) ಮತ್ತು ಸೂರ್ಯ (Content) ಇವೆರಡೂ ಸಮಾನ ಪರಿಮಿತಿಯವು ಆಗಲಾರವು.

ಅರ್ಥವು ಭಾಷೆ-ಅಭಿವ್ಯಕ್ತಿ ಮಾಧ್ಯಮ (: ಸರ್ಪ) ಇದಕ್ಕಿಂತ ಯಾವಾಗಲೂ ವಿಶಾಲವಿದೆ. ಆದರೆ, ಇವೆರಡನ್ನು ಸಮಾನ ಪರಿಮಿತಿಯವು ಎಂದಲ್ಲಿ, ಅರ್ಥ ಗ್ರಹಿಸುವ ಸಾಧನ=ಇಂದ್ರಿಯದ ಹೊರಗೆ ಅರ್ಥವೇ ಉಳಿಯದೆ ಇಂದ್ರಿಯ ಪೂಜೆಯು-ಭೋಗವಾದವು ಪ್ರಭಾವಶಾಲಿಯಾಗಲೇಬೇಕು. ಅಥವಾ ಮಾಧ್ಯಮ : ಸಾಧನ=ಇಂದ್ರಿಯವು ಅರ್ಥದ ಅಮೂರ್ತ ಮಟ್ಟಕ್ಕೆ ಏರಿದಲ್ಲಿ ಜೀವನದಲ್ಲಿ ಆಭಾಸ ತಲೆದೋರುವುದು ನಿಶ್ಚಿತ. ಇಲ್ಲಿ ಸೋಜಿಗವೆಂದರೆ ಈ ಭೂಮಿಕೆ ತತ್ತ್ವತಃ ಒಂದೇ 'ಏಕಂ ಸತ್ಯ' ಪಂಥೀಯರದು! ಇದು. ಭೌತಶಾಸ್ತ್ರೀಯ ಪಂಥವಿರಬಹುದು ಅಥವಾ 'ರಸೋ ವೈ ಸಃ' ಭೂಮಿಕೆಯ ರಸಾನಂದೀ ಅನುಭಾವದ ನೆಪದ ಶಾಕ್ತಾಚಾರವಿರಬಹುದು. ಇವು ಎರಡೂ ಇಂದ್ರಿಯ ಪೂಜಕ ಸಂಪ್ರದಾಯಗಳಾಗಿ ಪರಿಣಮಿಸಲೇಬೇಕು. ಏಕಂ ಸತ್ಯದ ಶ್ರದ್ಧೆಯಿಂದಾಗಿ ಈ ಭೋಗವಾದದ ವಿಪರೀತ ಪ್ರತಿಕ್ರಿಯೆಯೇ ವಿರಕ್ತಪಂಥೀಯ ತ್ಯಾಗವಾದ= ಪಾರಲೌಕಿಕ ಪರಮಾನಂದ-ಮೋಕ್ಷವಾದ : ಕುಮಾರ, ಕುಮಾರೀ ವ್ರತಧಾರೀ ದಿವ್ಯಾಧ್ಯಾತ್ಮವಾದ. ಇಹಭೋಗದ ನಿರಾಶೆಯನ್ನು ತುಂಬಿಕೊಳ್ಳಲು ನಿರ್ಮಿತ ಪಾರಲೌಕಿಕ ಪರಮಾನಂದವಾದವು ಮೈದಾಳಿದ್ದುಂಟು ಅಥವಾ ಈ ಪ್ರತಿಕ್ರಿಯೆಗಳ ಇನ್ನೂ ಕೆಲ ಪರ್ಯಾಯಗಳಿವೆ. ನೀತಿ-ಅನೀತಿಯ ಬಂಧನ ಮುಕ್ತ ನಿಃಸಂಗಿಗಳ ನಿಸ್ತ್ರೈಗುಣ್ಯವಾದ, ಪ್ರಪಂಚ ಕ್ಷಣಭಂಗುರವಾದ, ಹಿಪ್ಪೀಸಂಪ್ರದಾಯ ಇತ್ಯಾದಿ.

ವೇದಕಾಲೀನ 'ವೃತ್ರ: ಸರ್ಪ ಸಂಕೇತವು, ಸಾಹಿತ್ಯದಲ್ಲಿ 'ವಕ್ರ' ಮಾರ್ಗ ಪ್ರೇರಕ ವಕ್ರೋಕ್ತಿಯಾಗಿ ಪರಿಣಮಿಸಿದ್ದು ಕಾಣುತ್ತದೆ. 'ಹ್ಲಾದೈಕಮಯೀಂ ಅನನ್ಯ ಪರತಂತ್ರಾಂ' ಕೃತಿ ನಿರ್ಮಿಸುವ ಸರ್ವತಂತ್ರ ಸ್ವತಂತ್ರ ನಿರಂಕುಶ ಕವಿ ಪ್ರತಿಭೆ ಇದಕ್ಕೆ ಸಾಕ್ಷಿ. ಮಹಾಭಾರತ-ರಾಮಾಯಣದ ರಚನೆಯೊಳಗಿನ ಅಹಿ-ಮಾಯಾಶಕ್ತಿಯ ಅನನ್ಯ ಸಾಧಾರಣ ಪ್ರಭಾವವು ಉಂಟುಮಾಡಿರುವ ದಿಗ್ಭ್ರಮೆಯ ನೆಲೆ ಇಂದಿಗೂ ತಿಳಿದಿಲ್ಲ! ಸರ್ಪ-ಶಯನನ ಮಾಯಾ-ಸಾಮರ್ಥ್ಯ ಅಮೋಘ; 'ವಿಷ್ಣುಮಾಯಾ ದುರತ್ಯಯಾ' ಎಂಬ ಸಾಂಪ್ರದಾಯಿಕ ಉಕ್ತಿಯಲ್ಲಿ ಈ ಒಪ್ಪಿಗೆಯೂ ಪರ್ಯಾಯವಾಗಿ ಉಂಟು. 'ಸರ್ಪ-ಸೂರ್ಯ' ಈ ಶಬ್ದ-ಪ್ರತಿಮೆಯೊಳಗಿನ ಅರ್ಥವನ್ನು ವಿಚಿತ್ರ ವಿಕೃತ ಮಟ್ಟಕ್ಕೆ ಒಯ್ಯುವ 'ವಾ (ನ ವಾ)' ಸಂಕೇತವನ್ನು 'ವಾ' ಎಂಬುದಕ್ಕೆ ಇರಬಹುದು, ಇಲ್ಲ ಎಂಬ ಎರಡು ಅರ್ಥದ ಪದರುಗಳಿವೆ. ಆಗಬಹುದು, ಆಗಲಾರದು ಎಂಬ ನೆಲೆಯುಂಟು.* ದೂರವಿರಿಸುತ್ತಲೆ ದೊರೆಯುವ ಅರ್ಥದ್ಯೋತಕ ಭೂಮಿಕೆಯ ಮೇಲಿಂದ ನೋಡಿದರೆ ಭಾರತೀಯ ಸಂಸ್ಕೃತಿಯು ಅನೈಸರ್ಗಿಕ ರೀತಿಯಲ್ಲಿ ತಲೆಕೆಳಗಾಗಿ ತಿರುವುಮುರುವು ನಡೆಯುತ್ತಿರುವ ಸ್ಪಷ್ಟಚಿತ್ರವು ಕಣ್ಣೆದುರು ನಿಲ್ಲುತ್ತದೆ. 'ಸರ್ಪ-ಸೂರ್ಯ' ಈ ಸಂಕೇತದ ಪರ್ಯಾಯವೇ ವಿಷ್ಣು-ಇಂದ್ರ. ಋಗ್‌ವೇದದಲ್ಲಿ, ವಿಷ್ಣುವು 'ಇಂದ್ರಸ್ಯ ಯುಜ್ಯಃ ಸಖಾ' ಈ ದೇಹ (: ಸರ್ಪ), ಅಂತರಂಗಸ್ಥ ಸೂರ್ಯರೂಪೀ ಇಂದ್ರನ ತಂತ್ರದಿಂದ ನಡೆವ, ಇಂದ್ರನಮಿತ್ರ. ಆದರೆ, ಮಹಾಭಾರತದಲ್ಲಿ ಇದು ತೀರ ತಿರುವು ಮುರುವು ಆಗಿದೆ. ಸೂರ್ಯನು ಕೃಷ್ಣ-ಸರ್ಪಕ್ಕೆ ಶರಣಾಗತನಾಗಬೇಕೆಂಬ ಆದೇಶದ ಮಾಯವೀ-ಉಪದೇಶ, ಭಗ-ವಂತನನೆಂಬ ಪರಮ ಆ-ತ್ಮನ್ ಎಂಬ ದಿವ್ಯಪುರುಷನಿಂದ. ಇಲ್ಲಿ 'ಸರ್ಪ'ಪೂಜೆ

* ಇದು ಕೇವಲ ತತ್ತ್ವಶಾಸ್ತ್ರಕ್ಕೆ ಸಂಬಂಧಿಸದ್ದಲ್ಲ. ಭಾಷೆ, ವ್ಯಾಕರಣ, ಅಲಂಕಾರ, ಛಂದಸ್ಸು ಮೊದಲಾದ ಭಾಷಿಕಸಂಕೇತಗಳಿಗೆಲ್ಲ ಅನ್ವಯಿಸುವಂಥದ್ದು (ಸಂ)

ಎಂದರೆ ಇಂದ್ರಿಯ=ಶರೀರ : ಸಾಧನ : ಮಾಧ್ಯಮದ ಪೂಜೆಯಾಗುವುದನ್ನು ಸ್ಪಷ್ಟವಾಗಿ ಮನಗಾಣಬಹುದು, ಇಲ್ಲಿ 'ಆ-ತ್ಮನ್' : ಸೃಜನೇಂದ್ರಿಯ ಶಕ್ತಿ ತತ್ತ್ವ ಎಂಬ ವೇದಕಾಲೀನ ಮೂಲಾರ್ಥವನ್ನು ಸ್ಮರಿಸಿಕೊಂಡರೆ, ಕವಿಪ್ರತಿಭೆ ಸೃಜಿಸಿದ ಈ 'ಅಹಿಮಾಯೆ', ಕಾವ್ಯದ ಭೂಮಿಕೆಯಿಂದ ಕೌತುಕಾಸ್ಪದವೂ, ಉಚ್ಚ ಆದರ್ಶಪ್ರೇರಕ ಪವಿತ್ರ ಧಾರ್ಮಿಕಗ್ರಂಥ ಎಂಬ ಭೂಮಿಕೆಯಿಂದ ಘೃಣಾಸ್ಪದವೂ ಆಗಿ ಕಾಣದೆ ಇರಲಾರದು!

ಸತ್ಯವು ಸಾಂಕೇತಿಕವಿರುವುದರಿಂದ ಇದನ್ನು ಮರೆಮಾಜಲು ಯತ್ನಿಸಿದರೂ ಈ ಸಾಂಕೇತಿಕ ಪ್ರತಿಮೆಗಳು ಬಚ್ಚಿಡಬಯಸಿದ ಸತ್ಯವು, ನಿನ್ನೆ→ಇಂದುಗಳಲ್ಲಿ ಆಗುತ್ತ ಬಂದ ಸ್ಥಿತ್ಯಂತರಗಳಿಂದಲೂ, 'ಮಾಧ್ಯಮ' : ಪ್ರತಿಮೆಯ ಸ್ವರೂಪ ಹಾಗೂ ಅದರ ಇತಿಮಿತಿಗಳ ಮೂಲಕವಾಗಿಯೂ ಬಯಲಿಗೆ ಬರಲೇ ಬೇಕು. ಉದಾ: ಈ ಸಂಹಿತೆಯೊಳಗಿನ ಸೂರ್ಯವೇಷಧಾರೀ ಪತಂ-ಗ (:ಸರ್ಪ : ಚಂದ್ರ). ಹೃದಾಪಶ್ಯಂತಿ ಮನಸಾ ವಿಪಶ್ಚಿತಃ।[೩] ಪತಂಗಂ ಅಕ್ತಂ ಅಸುರಸ್ಯಮಾಯಯಾ ಇಲ್ಲಿ dramatic irony ಉಂಟು. ಈ 'ಅಹಿ' ಮಾಯೆಯ (ಜಾದು<ಯಾತು) ಗುಟ್ಟು ಯಾರಿಗೂ ತಿಳಿಯಲಾರದು, ಎಂಬುದು ಸುಳ್ಳು. ಏಕೆಂದರೆ, ಇಲ್ಲಿಯೆ ಪೂರ್ವ ವಾಕ್ಯ ಭಾಗಕ್ಕೆ ಉತ್ತರಭಾಗವು ವಿಸಂಗತವಿದೆ. ವಾಸ್ತವ : ಸತ್ಯವು-ಅಥವಾ (: ಪತಂಗ), ಅಸುರ : ರಂಜಕ ಮಾಯಾವೀ ಬಣ್ಣವಣ್ಣಗಳುಳ್ಳದ್ದಾಗಿದೆ. ಆದಕಾರಣ ಇದರ ನೆಲೆ ಯಾರಿಗೂ ಗೊತ್ತಾಗಲು ಶಕ್ಯವಿಲ್ಲ, ಎಂಬ ಧ್ವನಿ ಇಲ್ಲಿ ಉಂಟು. ಆದರೆ, ಮುಂದಿನ ವಾಕ್ಯ ನೋಡಿ : ವಿಮರ್ಶಾ ವಿಚಕ್ಷಣ ಚಿಕಿತುಷಿಗಳು: ವಿಪಶ್ಚಿತರು ಇದನ್ನು ಹೃದಯದಲ್ಲಿ ಮನಃಸಾಕ್ಷಿಯಾಗಿ ಕಾಣುತ್ತಾರೆ. ನಾಸದೀಯ ಸೂಕ್ತದೊಳಗಿನ 'ಹೃದಿಪ್ರತೀಷ್ಯ' ಈ ಶಬ್ದ-ಪ್ರತಿಮೆ ಈ ಋಚೆಯ ಭಾಗದೊಳಗಿನ 'ಹೃದಾ ಮನಸಾ' ಸಂಕೇತವನ್ನು ಹೋಲುತ್ತದೆ. 'ತತ್ : ಸತ್' ಸ್ವರೂಪವನ್ನು ಮನನ, ಧ್ಯಾನ ಮಾಡಲು ಮಾತ್ರ ಸಾಧ್ಯ ಎಂಬ ಸೂಚಕತೆ ಇಲ್ಲಿ ಇದೆ. ಆದರು, ಈ 'ಪತಂ-ಗ'ದ ನಿಜಸ್ವರೂಪವನ್ನು ವಿಶ್ಲೇಷಣಾತ್ಮಕ ವಿಮರ್ಶೆಯಿಂದ ಅರಿಯಲು ಶಕ್ಯವಿದೆ.

ಈ 'ಪತಂಗ'ವನ್ನು ಸೂರ್ಯನೆಂದು ನಂಬಲು ಹೇಳುತ್ತಾರೆ. ಭಾಷ್ಯಕಾರರು: 'ಪತಂಗಂ : ಪತತಿ ಗಚ್ಛತಿ ಇತಿ ಪತಂಗಃ ಸೂರ್ಯಃ', ಬೀಳುವುದು ಮರಳಿ ಎದ್ದು ನಡೆಯುವುದು ಎಂಬ ಈ [ಅಮಾವಾಸ್ಯಾ ಪತನ ಪ್ರ-ಲಯ : ಸ್ರಾವ) ಮತ್ತು ಮರಳಿ (ಪೌರ್ಣಿಯತ್ರ)] ಗಮನಕ್ರಿಯೆ ಸೂರ್ಯನಿಗಿಂತಲೂ ಸೃಜನದ ಪ್ರತಿಮೆ ಎನಿಸುವ ಚಂದ್ರನಿಗೇ ಸರಿಹೋಗುತ್ತದೆ. ಪತಂ-ಗ ಈ ನಾಮ ಸಂಕೇತದೊಳಗಿನ ಪತ-ಪಾತ-ಪತನ ಈ ವರ್ಣನೆ ಸೂರ್ಯನ ಸಂದರ್ಭದಲ್ಲಿ ತೀರ ಅಸಮರ್ಪಕ ಎನಿಸುತ್ತದೆ. ಈ ಮಾಧ್ಯಮ : ಪ್ರತಿಮೆ 'ಪತಂಗ' : ದೀಪದ ಹುಳು ಎಂಬ ನಾಮ ಸಂಕೇತದಿಂದ ಗುರುತಿಸಲಾಗುತ್ತದೆ! ಜ್ಯೋತಿ ಪ್ರಕಾಶದತ್ತ ಆಕರ್ಷಿಸಲ್ಪಟ್ಟು, ಆ ಜ್ಯೋತಿಯ ಮೇಲೆ ಬಿದ್ದು ಸ್ವನಾಶಮಾಡಿಕೊಳ್ಳುವ ಕ್ರಿಯೆಯ ಸೂಚನೆಯೂ ಇಲ್ಲಿದೆ. ಈ ಪತಂ-ಗ ಸೃಜನೇಂದ್ರಿಯ ಎಂದಲ್ಲಿ, ಈ 'ಪತಂಗ', 'ಪುಷ್ಪ'-ದೀಪದತ್ತ ಆಕರ್ಷಿತವಾಗಿ ನೆಗೆದು ಬೀಳುತ್ತದೆ. ತನ್ನ ನಾಶವನ್ನು ಆಮಂತ್ರಿಸುತ್ತದೆ ಎಂಬ ವ್ಯಂಗ್ಯಧ್ವನಿಗೂ ಇಲ್ಲಿ ಅವಕಾಶವುಂಟು. ಈ 'ಪತಂಗ' ಕೀಟಕ ಎಂದು ಉಪನಿಷತ್ತು ಹೇಳುತ್ತದೆ. 'ಪತಂಗಃ ಪ್ರಾಜಾಪತ್ಯಃ' ಎಂಬ ಉಲ್ಲೇಖವೂ ಉಂಟು.[೪] ಇಲ್ಲಿಯೂ ನುಸುಳಿಕೊಳ್ಳಲು ಅವಕಾಶವನ್ನಿಡಲಾಗಿದೆ. ಆದರೂ ಈ ಪ್ರಾಜಾಪತ್ಯ ಪತಂಗವು, ಸೂರ್ಯ ಎಂಬ ಕಾರಣದಿಂದ ಈಶೋಪನಿಷತ್ತಿನ ಪ್ರಾಜಾಪತ್ಯ ಸೂರ್ಯನನ್ನು ಹೋಲುತ್ತದೆ. ಪ್ರಜಾನಿರ್ಮಾಣ ಶಕ್ತಿಯನ್ನು ಇಲ್ಲಿ ಸೂರ್ಯ ಎಂದು ಹೇಳಿದು ಸ್ಪಷ್ಟವಿದೆ. 'ಆದಿ ನಾರಾಯಣ'= ಸೃಷ್ಟಿಕರ್ತನೆಂಬುವನು ಸೂರ್ಯ-ನಾರಾಯಣನ ಪದಕ್ಕೆ ಏರಿದ ಘಟನೆಯು ಪ್ರಜಾಪತ್ಯ-ಪತಂಗ ಸೂರ್ಯನ ನಿಜಸ್ವರೂಪವನ್ನು ಬಯಲಿಗೆ ಎಳೆಯುತ್ತಿದೆ! ಪ್ರಪಂಚವು ಪತಂಗ : ಸೂರ್ಯ ಎಂಬಲ್ಲಿ, ಮರಳಿ ಸರ್ಪ-ಸೂರ್ಯ ಪ್ರತಿಮೆಯೆ ಇಲ್ಲಿ ಅಡಗಿದೆ! ಈ ಪ್ರಪಂಚವನ್ನು ಗ್ರಹಿಸಿಕೊಂಡು ಅರ್ಥ-ಮಾಡಿಕೊಳ್ಳಲು ಮೈದಾಳಿದ ಭಾಷೆಯೂ 'ಪತಂ-ಗ'ವೇ ಆಯ್ತು! ಭಾಷಾಪತಂಗವು ತನ್ನ ಸಂಮೋಹಕ ಬಣ್ಣಬಣ್ಣಗಳಿಂದ ಉಂಟುಮಾಡುವ ದಿಗ್ಭ್ರಾಂತಿಯನ್ನು ಹೇಗೆ ದೂರವಾಗಿಸಬೇಕು, ಎಂಬುದೇ ಮಾನವ ಸಂಸ್ಕೃತಿಯ ಪ್ರಗತಿಯಲ್ಲಿ ಆಸ್ಥೆಯಿರುವ ಪ್ರತಿಯೊಬ್ಬ ವಿಚಾರವಂತನ ಕರ್ತವ್ಯವಾಗುತ್ತದೆ.

ಭಾಷಿಕ ಶಬ್ದ ಪ್ರತಿಮೆಗಳೇ ಮಾನವರ ಕಣ್ಣು. ಈ ಕನ್ನಡಕವು ಸಂಭ್ರಾಮಕವಾಗುವಲ್ಲಿ ಜೀವನದ ಅರ್ಥಗ್ರಹಣವು ಸದೋಷ-ಕೆಲಬಾರಿ ಸಂಪೂರ್ಣ ತಪ್ಪು ಆಗುವ ಶಕ್ಯತೆಯಿದೆ. ಭಾಷಿಕ ಶಬ್ದ-ಪ್ರತಿಮೆಗಳ ಇಂದ್ರಿಯ ಗ್ರಾಹ್ಯ ಬಾಹ್ಯವಲಯವನ್ನೆ ನಂಬಿ ಅರ್ಥಕ್ಕೆ ತೊಡಗಕೂಡದು. ಪ್ರತಿಮೆಗಳ ಅಂತರವಲಯದ : ಗರ್ಭಿತಾರ್ಥದ ವೈಚಾರಿಕ ಆಕೃತಿಯು ಎಂತಹದು, ಎಂಬುದರ ವಿಮರ್ಶೆಯು ಅತ್ಯವಶ್ಯ. ಮಾಧ್ಯಮ : ಪ್ರತಿಮೆ ಎಂದರೆ ಭಾಷಿಕ ಬಾಹ್ಯರೂಪ ಮತ್ತು ಅಂತರಾರ್ಥ ಇವೆರಡರ ಸಂಬಂಧದೊಳಗಿನ ಔಚಿತ್ಯ ಅನೌಚಿತ್ಯದ ವಿಚಾರವಾಗಲೇಬೇಕು. ಮೃತಾತ್ ಅಂಡಾತ್ ಜಾತ 'ಮಾರ್ತಾಂಡ' ಈ ಸಂಕೇತದಲ್ಲಿ ನಿತ್ಯ ಪ್ರಕಾಶರೂಪ ಸೂರ್ಯವಾಚಕ ಅರ್ಥವನ್ನು ಕವಿಯು ಆರೋಪಿಸಿದರೂ, ಇಲ್ಲಿ ಕವಡು ಮಾಟವಿರುವುದನ್ನು ವಿಮರ್ಶೆಯು ಬಹಿರಂಗಕ್ಕೆ ತರಬಲ್ಲುದು.

ಭಾಷೆಗಳು ಆಯಾ ಜನಗಣದ ಸಾವಿರಾರು ವರುಷಗಳ ಜೀವನಾನುಭವದ ನಿಧಿನಿಕ್ಷೇಪ. ಆದಕಾರಣ ಒಂದೇ ಭಾಷೆಯು, 'ಅಸುರಸ್ಯ ಮಾಯಯಾ ಅಕ್ತಂ ಪತಂಗಂ' ಆಗುತ್ತಿದ್ದರೂ ಸಮಾನ 'ಸಮಯ'ದ ಆವರಣವಿರುವ ಭಿನ್ನಭಾಷಿಕ ಶಬ್ದ-ಪ್ರತಿಮೆಗಳ ತುಲನೆಯಲ್ಲಿ, ಈ ಸಂಕೇತಗಳ ಮೂಲಾರ್ಥವು ಯಾವುದು, ಎಂಬುದು ನಿಶ್ಚಿತವಾಗಬಲ್ಲುದು. ನಾರಾಯಣ, ಮಾರ್ತಾಂಡ ಇದರ ನಿಜಸ್ವರೂಪ ಯುರೋಪಿನ 'ರಾತ್ರೀ ಸೂರ್ಯ' (Nocturnal Sun) ಶಬ್ದಪ್ರತಿಮೆಯಿಂದ ಬಯಲಿಗೆ ಬರಬಲ್ಲದು. ಅಶ್ವ(ತ್ಥ) ವೃಕ್ಷ ಏನು, ಎಂಥದು ಇದು. ಸ್ಕ್ಯಾಂಡಿನೇವಿಯದ 'ಯಗ್ಗಡ್ರಸಿಲ್' ವೃಕ್ಷದ ತುಲನೆಯಲ್ಲಿ ತಿಳಿಯಬಲ್ಲುದು. ಸೂರ್ಯನ ಪರ್ಯಾಯ ಇಂದ್ರನು, ವೃತ್ರ=ಅಹಿ (=ಕತ್ತಲೆ) ನಾಶ ಮಾಡಲು ಸಮರ್ಥನು, ಹುಟ್ಟಿನಿಂದಲೇ ಇಂದಿನ ಯುಗದಲ್ಲಿ ಇಂದ್ರನ ಸ್ಥಾನವು ಮೇಧಾವೀ ವಿಮರ್ಶಕರಿಗೆ ಬಂದಿದೆ. ಸಂಸ್ಥೆ, ಲೇಖಕ, ಸಮಾಜ-ನೇತಾರರ ಪಾಲಿಗೆ ಬಂದಿದೆ. ಆದರೆ ನಾರಾಯಣನು ತನ್ನ ತೊಡೆಯಿಂದ ಸೃಷ್ಟಿಸಿದ ಅಪ್ಸರೆ : ಊರ್ವಶಿಯನ್ನು ಕೊಟ್ಟು, ವರುಣನನ್ನು ಸಲಿಲ (ಶರೀರ) ಪತಿಯಾಗಿಸಿದನು. ಈ ಅಪ್ಸರೆಯನ್ನು ಇಂದ್ರನ ಸಲುವಾಗಿ ನಿರ್ಮಿಸಿದ ಕಥೆ ಪುರಾಣದಲ್ಲಿದೆ. ಉರ್ವಶಿಯ ಪಾಶವು, ಅಂದು ಇಂದ್ರನನ್ನು 'ಭೋಗಿ'=ಸರ್ಪವಾಗಿ ಮಾರ್ಪಡಿಸಿದ್ದಾಗಿ ನಮ್ಮ ಸಂಪ್ರದಾಯದಿಂದ ಗೊತ್ತಾಗುತ್ತದೆ. ಈ ಊರ್ವಶೀ ಕಥೆ ಪುರಾಣ ಕಾಲಕ್ಕೇ ಸೀಮಿತವಿಯುವೆಂಬುದು ಇಂದಿನ ನೇತಾರ-ವಿಮರ್ಶಕ ಪದಸ್ಥ ಪಟ್ಟಭದ್ರ ಇಂದ್ರರ ಚರಿತೆಯಿಂದಲೂ ಸಿದ್ಧವಾಗುತ್ತಿಲ್ಲವೆ? ಇದು ಸುಳ್ಳಿದ್ದರೆ ಭಾರತದಲ್ಲಿ ಈ ಹೊತ್ತಿಗೂ ಭ್ರಷ್ಟಾಚಾರ- ಅನಾಚಾರದ ಕತ್ತಲು ಕವಿದಿರುವ ಕಾರಣವೇನು?

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X. ೭೨
೨. ಮೇಲಿನದೇ I. ೩೫. ೫
೩. ಮೇಲಿನದೇ X. ೧೭೭-೧
೪. ***ಜೈಮಿನೀಯ ಉಪನಿಷತ್ತು*** ೩-೩೦-೩)

ಭಾಗ - ೨

ಜೀವನಸಂಸ್ಕೃತಿಯ ಅರ್ಥಗ್ರಹಣ ಪದ್ಧತಿ

(ಶಾಸ್ತ್ರೀಯ ಭೂಮಿಕೆಯ ಒಂದು ಹೊಳಹು)

ನಾಗ-ಪ್ರತಿಮಾ ಸಮೀಕ್ಷೆಯ ಫಲಿತ

ಇದು ನನ್ನ ಮಟ್ಟಿಗೆ, ಎರಡು ಬಗೆಯಲ್ಲಿ ಪ್ರಯೋಜನಕಾರಿಯಾಗಿದೆ. ನಾಗಗಳು ನಾನಾ ದೈವತರೂಪದಲ್ಲಿ ಪೂಜೆಗೊಳ್ಳುತ್ತಿವೆ; ಆದರೆ, ಈ ದೇವತಾರಾಧನೆಯ ತಳಪಾಯದ ತತ್ತ್ವಜ್ಞಾನವು ಯಾವುದು? ಈ ವೈಚಾರಿಕ ಆಕೃತಿಯು ಒಳಗೊಳ್ಳುವ ಅರ್ಥದ ಇತಿಮಿತಿಗಳು ಏನು? ಇದನ್ನು ಗ್ರಹಿಸಿಕೊಳ್ಳುವ ಉದ್ದೇಶವೊಂದು ಇತ್ತು. ಆದರೆ, ಈ ಸಮಸ್ಯೆ ತೀವ್ರತಮವಾಗಿ ಮನಸಿನ ಸಮಾಧಾನವನ್ನೇ ಕಳೆವ ಒಂದು ಘಟನೆ ಸಂಭವಿಸಿತು. ಸರ್ಪಯಾಗದ ಕಥೆ ಚಿಕ್ಕಂದಿನಿಂದ ಕೇಳಿ ಗೊತ್ತು. ನಾಗವೈರಿ ಇಂದ್ರನೇ, ತಕ್ಷಕನಾಗನನ್ನು ಉಳಿಸುತ್ತಾನೆ, ಎಂಬ ಕತೆಯ ಸಾಂಕೇತಿಕತೆಯು ತೊಡಕಿನದಿಲ್ಲ. ನಾಗನು ಮೃತ್ಯುಶಕ್ತಿಯ ಸಂಕೇತ; ಇಂದ್ರನು ಜೀವನ : ಅಸ್ತಿತ್ವದ ಸಂಕೇತ; ಜೀವನವು ಇರುವ ವರೆಗೆ, ಮೃತ್ಯುವೂ ಅದರ ಬೆನ್ನಿಗೇ ಉಂಟು; ಇರಲೇಬೇಕು! ಆದರೆ, ಈ ಸಮಾಧಾನವು ಇತ್ತೀಚೆಗೆ ಅಳಿದುಹೋಯ್ತು. ಋಗ್ವೇದದ ಇಂದ್ರನು, ಸವಿತೃ : ಸೂರ್ಯನ ಪರ್ಯಾಯ ಪ್ರತಿಮೆ ಎಂದು ವೇದವೇ ಹೇಳುತ್ತಿರುವುದನ್ನು, ಮ್ಯಾಕ್‌ಡೊನೆಲ್ಲರು ನಮೂದಿಸಿದ್ದಾರೆ ! ವೃತ್ರ : ಅಹಿ-ಹನ್ ಇಂದ್ರನು ಸೌರನು; ಪ್ರಕಾಶತತ್ತ್ವದ ಪ್ರತಿಮೆ, ಎಂದಲ್ಲಿ ವೃತ್ರ: ಅಹಿ (: ನಾಗ) ಕತ್ತಲೆಯ ಪ್ರತೀಕವಿರಲೇಬೇಕಾಯ್ತು! ಈ ಭೂಮಿಕೆಯಲ್ಲಿ, ಹುಟ್ಟು-ಸಾವು, ಜೀವನ-ಮೃತ್ಯು ಈ ಪರಿಭಾಷೆಗೆ ಅವಕಾಶವೇ ಇಲ್ಲ! 'ಪ್ರಕಾಶ': ಸವಿತೃವು=ಕವಿ, ಉದಯಿಸುತ್ತಾನೆ. ಅವನು 'ವಿಶ್ವಾ-ರೂಪಾಣಿ ಪ್ರಾಸಾವೀತ್': ಈ ನಾಮ ರೂಪಾತ್ಮಕ ಪ್ರಪಂಚವು, ಅರಿಕೆಯ ಅಳವಿನಲ್ಲಿ ಬಂದುದಾಗಿ ಕಾಣತೊಡಗುತ್ತದೆ! ಸವಿತೃವು ಮುಳುಗುತ್ತಲೆ ಪ್ರಪಂಚವೂ ಅದೃಶ್ಯವಾಗುತ್ತದೆ!

ಇದು ನಿಜವಿದ್ದರೆ, ಇಂದ್ರ-ತಕ್ಷಕ ಈ ಸಂಕೇತಗಳು ಋಗ್ವೇದದ ಮೂಲಭೂಮಿಕೆಗೆ ತೀರ ವಿಸಂಗತ ವಾಗುತ್ತವೆ! ಈ ಕಾರಣದಿಂದಾಗಿ, ಪಂಚಮವೇದದ ಪದವಿಗೆ ಏರಿಸಲ್ಪಟ್ಟ ಮಹಾಭಾರತವು, ಯಾವ ನಾಲ್ಕು ವೇದಗಳ ಪರಂಪರೆಯದೊ, ಅವು ಸೌರ(ಋಗ್) ವೇದದಿಂದ ಭಿನ್ನವಿರಲೇಬೇಕಾಯಿತು! ಆದರೆ, ಈ ಲೆಕ್ಕಾಚಾರದ ಉತ್ತರ=ಗಣಿತವನ್ನು ಭಾವನೆ ಒಪ್ಪದಾಯಿತು! ಈ ಗಣಿತದ ಉತ್ತರದ ಬೆಳಕಿನಲ್ಲಿ ಇಂದಿನ ಋಗ್ವೇದವು, ಮೂಲವೇದ ಎಂಬ ಶ್ರದ್ಧೆಯೇ ಒಂದು ಮೋಸ, ಎಂಬ ಭಾವನೆ ಬೆಳೆಯಲಿದೆ! ಎಂದರೆ ನಮ್ಮ ಪುರಾತನರು 'ಮಾಯಾವೀ' ಕೃತಿ-ಕೃತ್ಯ ಮಾಡಲು ಸಂಕೋಚಪಡಲಿಲ್ಲ! ಎಂಬ ಈ ಭಾವನೆಯು ಸೋಂಕುತ್ತಲೆ ಎದೆ ನಡುಗಿತು; ಮನಸಿನ ಕಳವಳ ತಡೆಯದಾಯಿತು.

ನನ್ನಲ್ಲಿ ಮೂಡಿದ ಈ ಸಂದೇಹವು ಸಾಧಾರವೇ? ಕೇವಲ ಕಾಲ್ಪನಿಕವೆ? ಹಗ್ಗವನ್ನೇ ಹಾವು ಎಂದು ಗ್ರಹಿಸುವ ಮೂರ್ಖತನವು ಸಂಭವಿಸುತ್ತಿಲ್ಲವಷ್ಟೆ? ಎಂಬುದನ್ನು ನಿರ್ಧರಿಸಿಕೊಳ್ಳುವುದಕ್ಕಾಗಿ ಇಂದಿನ ಸಂಹಿತೆ ಯೊಳಗಿನ ಸಾಂಕೇತಿಕ ಪ್ರತಿಮೆಗಳ ಸಮೀಕ್ಷೆ ಅನಿವಾರ್ಯವಾಯಿತು. ಋಗ್‌ವೇದದಲ್ಲಿಯೆ, ಇದಕ್ಕೂ ಸ್ವಲ್ಪ

ಮುಂಚೆ ಕಂಡ ಒಂದು ದಿಗ್-ಭ್ರಾಮಕ ದೃಶ್ಯ: 'ಸಾರ್ಪ-ರಾಜ್ಞೀ ಸೂರ್ಯೋ ವಾ' ದೈವತ ಪ್ರತಿಮೆಯು ಕೆರಳಿಸಿದ ಕುತೂಹಲ. ಈ ಸಂದರ್ಭದಲ್ಲಿ ಭಾವನೆಗೆ ಬಿದ್ದ ಪೆಟ್ಟು, ಎಂತೊ ಮರೆತಂತೆ ಆಗಿತ್ತು. ಇಂದಿನ ಋಗ್ವೇದ ಸಂಹಿತೆಯಲ್ಲಿ 'ಮಾಯಾವೀ' ಮಾತುಗಳು 'ಉಂಟು'-ಇರಬೇಕು, ಎಂಬ ಸಂದೇಹ ನಿವೃತ್ತಿಯ ದಾರಿ ತಿಳಿಯದೆ ಆ 'ಪೆಟ್ಟು'ಗಳು ನೆನಪಿನಲ್ಲಿ ಉಳಿದೂ ಫಲವೇನು? ಆದರೆ, ಇಂದ್ರ-ತಕ್ಷಕರ ಈ ಜೋಡಿಯ ವಾಸ್ತವತೆಯನ್ನು ನಿರ್ಧರಿಸಿಕೊಳ್ಳಬೇಕಾದರೆ, ತಕ್ಷಕ=ನಾಗ=ಸರ್ಪ, ಈ ವೇದದಲ್ಲಿ ಉಂಟು ಎಂಬ ಸಂಗತಿ ದೃಢಪಡುವುದು ಅವಶ್ಯ ಎಂಬುದು ಸ್ಪಷ್ಟವಾಯಿತು. ಒಟ್ಟಿನಲ್ಲಿ, ಈ ಸಂಹಿತೆಯಲ್ಲಿ 'ಅಡಗಿವೆ' ಎಂಬ ಹಾವುಗಳನ್ನು ತೆರೆಯ ಮರೆಯ ಹೊರಗೆ ತರಲು ಹೇಗೆ ಶಕ್ಯ, ಎಂಬ ಪ್ರಶ್ನೆ ಕಾಡತೊಡಗಿತು.

ನನ್ನ ದೃಷ್ಟಿಯಲ್ಲಿ, ಈ ಎರಡನೆಯ ಫಲಿತವೇ ವಿಶೇಷ ಮೌಲಿಕವಾಗಿದೆ. ('ಕಣ್ಮರೆಯಾದ ಕಂನಡ'ದಿಂದ ತೊಡಗಿ (೧೯೩೩), ಕರ್ನಾಟಸಂಸ್ಕೃತಿಯ ಪೂರ್ವಪೀಠಿಕೆಯ ವರೆಗಿನ ಅನ್ವೇಷಣೆಯಲ್ಲಿ (೧೯೬೭) ಮಾರ್ಗದರ್ಶಕವಾದ ತಂತ್ರವು, ಮತ್ತೆ ಇತ್ತೀಚಿನ ವಾಚನ ಮನನದಿಂದ ಇನ್ನೂ ಪರಿಷ್ಕಾರ ಪಡೆದ ಹಾಗಿನ ಭಾವನೆ ತಂದಿತ್ತು. ಈ ತಂತ್ರದ ಬೆಳಕಿನಲ್ಲಿ, ಸರ್ಪಾನ್ವೇಷಣೆಯ ಈ 'ಪ್ರಯೋಗ'ವು ಸಫಲವಾಗುವುದೊ, ಎಂದು 'ಪ್ರಯತ್ನ' ಪಡುವುದರಲ್ಲಿ ಹಾನಿಯೇನು? ಎಂಬ ವಿಚಾರವು ಪ್ರಬಲವಾಯಿತು. ಪ್ರಯೋಗದ ಈ ಮೋಹ ತಡೆಯಲಾರದೆ ಬರೆಯುವುದಕ್ಕೇ ಪ್ರಾರಂಭವಾಯ್ತು! ವಿಚಾರವಂತರೆಂಬವರು ಅಡಿಯಿಡಲು ಅಳುಕುವಲ್ಲಿ, ನ-ವಿಚಾರಿ (ಅ-ವಿಚಾರಿ ಎನ್ನಲಾರೆ.) ಒಮ್ಮೆಲೆ ಧುಮುಕುತ್ತಾನೆ. (ವಿವೇಕರಹಿತ ಎಂಬ ಧ್ವನ್ಯರ್ಥದಲ್ಲಿ) 'ಸಾಹಸದ' ಅನ್ವೇಷಣೆ=ವಿಚಾರ, ಎಂದು ವಂದ್ಯ ಎಂ. ಗೋವಿಂದ ಪೈಗಳೂ, ಕಂನುಡಿಯ ಸಾಹಿತ್ಯ ಚರಿತ್ರೆಯಲ್ಲಿ, ಅಪವಾದಕ್ಕೆ ಈಡಾಗಿರುವಾಗ, ಈ ಅಲ್ಪನು ಯಾವ ಗಿಡದ ತೊಪ್ಪಲು?

ಈ ಸಂಹಿತೆಯಲ್ಲಿ ಸರ್ಪಾರಾಧನೆಗೆ ಅವಕಾಶವಿಲ್ಲ, ಎಂದು ಮ್ಯಾಕ್‌ಡೊನೆಲ್ಲರಂತಹ ಸಂಶೋಧಕರು ನಿಃಸಂದಿಗ್ಧವಾಗಿ ಹೇಳಿರುವಾಗ ಇದರಲ್ಲಿ 'ನಾಗ'-ಸರ್ಪ ಪ್ರತಿಮೆಗಳು ಇರುವ ಶಕ್ಯತೆಯನ್ನು ಊಹಿಸುವವನ 'ಬುದ್ಧಿ' ಸಮನಾಗಿ ಇಲ್ಲ, ಎಂದು ನನ್ನನ್ನು ನಾನೇ ನಕ್ಕಿದ್ದೇನೆ. ಆದರೂ 'ತಜ್ಞ'ರೆಂಬವರು ಎಡಹಿರಲಾರರು, ಎಂದು ಕಣ್ಣುಮುಚ್ಚಿ ನಂಬುವುದು ಮೋಸ-ತರುತ್ತದೆ. ಭಾರತೀಯ ಶ್ರದ್ಧಾಸ್ಥಾನಗಳ ಪುನರ್ವಿಮರ್ಶೆಯಲ್ಲಿ ಇದನ್ನು ಕಾಣುತ್ತಲಿರುವಾಗ ವೇದದ ಬಗೆಗಿನ ಈವರೆಗಿನ ಗ್ರಹಿಕೆಗಳನ್ನು ಒರೆಗೆ ಹಚ್ಚಿ ನೋಡಲೇಬೇಕು ಎಂದು ಎನಿಸಿತು. ಈ ಪ್ರಯೋಗವು, ವಿಫಲವಾಗಿ ಲೇಖಕನು ನಿಂದೆಯ ವಿಷಯವಾಗುವ ಶಕ್ಯತೆ ಕಾಣುತ್ತಿತ್ತು. ಆದರೆ ನನ್ನಲ್ಲಿ ನಖಶಿಖಾಂತವಾಗಿ ನಡುಕ ಹುಟ್ಟಿಸಿದ ವಿಚಾರವು ಲೋಕನಿಂದೆಗಿಂತ ತೀರ ಬೇರೆಯಿದೆ. ಶ್ರದ್ಧೆಯೆ ಮಾನವರ ಜೀವನಾಧಾರ. ಇಂತಹ ಶ್ರದ್ಧೆಯನ್ನೇ ಶಂಕಿಸುವ ನನ್ನ ರೀತಿ, ನಿಂತ ಮರವನ್ನೇ ಕಡಿಯುವ ಬಗೆಯ ಆತ್ಮಘಾತಕ ಕೃತ್ಯ ಎನಿಸಲಾರದೊ?

ಶ್ರದ್ಧೆ ಮತ್ತು ವಿಚಾರ : ವಿಮರ್ಶೆಯೂ ಎಣ್ಣೆ-ಸೀಗೆಯಂತೆ, ಹಾವು-ಮುಂಗುಲಿಯಂತೆ, ಎಂಬ ಹಾಗಿನ ವಿಚಾರ-ಧಾರಣೆ ವಿವೇಕದ್ದೊ? ಈ ನಿಷ್ಠೆ ಸಮಂಜಸವೊ? ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡೆ. ಶ್ರದ್ಧೆ ಮತ್ತು ಸಂದೇಹ ಇವೆರಡರೊಳಗಿನ ಪರಸ್ಪರ ಸಂಬಂಧವನ್ನು ಕುರಿತು, ವಿಜಾಪುರದ ವೀರಶೈವ ಮಾಧ್ಯಮಿಕ ಶಾಲೆಯಲ್ಲಾದ ಗಣೇಶೋತ್ಸವದ ಕಾಲಕ್ಕೆ ಮಾತನಾಡಿದ್ದೆ. ಅಂದು ಕೆರಳಿ ಏರಿ ಬಂದ ವ್ಯಕ್ತಿಯನ್ನು ಮಿತ್ರ ಅಕ್ಕಿ ಬಸಪ್ಪನವರು, ತಡೆದು ಹಿಡಿದರು. ಭಾರತೀಯರ ಅ-ವಿಚಾರಿತ ರಮಣೀಯ ಶ್ರದ್ಧೆಯನ್ನು 'ನವತರಂ, ಕಲ್ಯಾಣತರಂ (?)' ಎಂದು ಎನಿಸುವಂತೆ ಪ್ರತಿಪಾದಿಸಲು ತಮ್ಮ ಪ್ರತಿಭೆ-ಮೇಧಾಸಾಮರ್ಥ್ಯ-ವಿನಿಯೋಗಿಸುತ್ತ ಬಂದ ಮಹಾಪುರುಷರ ಅವಿಚ್ಛಿನ್ನ ಪರಂಪರೆ ಎಂದಿನಿಂದಲೆ ನಮ್ಮಲ್ಲಿ ನಡೆದು ಬಂದಿದೆ; 'ದೇವರು', 'ಸತ್ಯ' ಮತ್ತು 'ಶ್ರದ್ಧೆ' ಈ ಶಬ್ದಗಳು, ಅ-ವಿಮರ್ಶಿತವಾಗಿ ಉಳಿಯುತ್ತ ಬಂದಿರುವಲ್ಲಿಯೇ ಭಾರತೀಯ ಸಂಸ್ಕೃತಿಯ ಅವನತಿಯ-ವಿಕೃತಿಯ ಮೂಲ ಕೇಂದ್ರವು ಉಂಟು; ಇದು ನಾಗ-ಪ್ರತಿಮಾ ಸಮೀಕ್ಷೆಯ ಕೊನೆಯಲ್ಲಿ ಸ್ಪಷ್ಟವಾಗತೊಡಗಿತು!

ಆದರೆ ಈ 'ನಾಗ' ಸಮಸ್ಯಾ ಪರಿಹಾರಕ್ಕೆ ಪ್ರಾರಂಭಿಸುವುದು ಎಲ್ಲಿಂದ? ಹೇಗೆ? ಇದಾವುದೂ ಸ್ಪಷ್ಟವಾಗಲೊಲ್ಲದು. 'ಗೃಹೀತ ಇವ ಕೇಶೇಷು ಮೃತ್ಯುನಾ' ಎಂಬ ಮಾತು ಆಲಂಕಾರಿಕವಲ್ಲ ಮತ್ತೆ! ಅದಕ್ಕಾಗಿ ಬರೆಯುವುದನ್ನೇ ಪ್ರಾರಂಭಿಸಿದ್ದಾಯ್ತು! 'ಜ್ಞಾತ ಸಂಗತಿಯಿಂದ ಅ-ಜ್ಞಾತ ಸಂಗತಿಯತ್ತ ಸಾಗುವ' ಸ್ಥೂಲ ಸೂತ್ರವನ್ನು ಅವಲಂಬಿಸಿ ನಡೆಯುವುದು ಯಾವಾಗಲೂ ಕ್ಷೇಮ. 'Myth precedes philosophy' ಎಂಬ ಮಾನವ-ಶಾಸ್ತ್ರಜ್ಞರ ಸೂತ್ರವು ನಿಜವಿದ್ದರೆ, ಭಾರತೀಯ-ಏಕೆ ಜಾಗತಿಕ-ಮೊದಲಿನ ತತ್ತ್ವಜ್ಞಾನಗಳ ತಳಪಾಯದಲ್ಲಿ, ಒಂದಿಲ್ಲೊಂದು ಬಗೆಯ ದೈವತ-ಪವಾಡ ಕಥೆ (myth) ಇರಲೇ ಬೇಕು: ಆದಿ ದೈವತವು 'ನಾಗ': ಆದಿಶೇಷ ಈ ಶ್ರದ್ಧೆ ಭಾರತೀಯರಲ್ಲಿ ಉಂಟೇ ಉಂಟು. ಗ್ರೀಕ್, ಈಜಿಪ್ಟ್ ಬಳಿಕ ಸುಮೇರಿನಲ್ಲೂ ಇರುವುದು ಕಂಡಿತು. ಈ ಕಾರಣದಿಂದ, ಭಾರತೀಯ ಏನೆಲ್ಲ ವಿರಕ್ತಪಂಥೀಯ ತತ್ತ್ವಜ್ಞಾನ ಮಂದಿರಗಳ ತಳಪಾಯದಲ್ಲಿ 'ನಾಗ' ಶಕ್ತಿಯ ಒಂದಿಲ್ಲೊಂದು ಬಗೆಯ ಆಕೃತಿಯು ಇರಲೇಬೇಕಾಯಿತು. 'ಉಂಟೆ?' ಎಂಬುದನ್ನು ಹುಡುಕುವ ಹೊಣೆ ಮಾತ್ರ ಇನ್ನು ಉಳಿಯಿತು! ಈ ಪ್ರಬಂಧವು ಒಂದು 'ಪ್ರಯೋಗ'. ಅಲ್ಲದೆ, ಮೊದಲ ಪ್ರಯತ್ನ. ಇದರ Rambling ಸ್ವರೂಪ, 'ಸಿದ್ಧಾನ್ನ' ಸೇವಿಸುವ ಸವಿಗಾರ ನಾಲಗೆಗೆ ರುಚಿಸದಿರುವ ಭೀತಿಯಿದೆ; ವಿನಯಕ್ಕೆ ನೀರು ಬಿಡದಿದ್ದರೂ ಮಾತಿನ ಒರಟುತನ ತಪ್ಪಿಸಲು ಅಸಮರ್ಥನಾಗಿದ್ದೇನೆ. ಈ ಅಪರಾಧಕ್ಕಾಗಿ ಕ್ಷಮಿಸಲು ಸುಹೃದರನ್ನು ಪ್ರಾರ್ಥಿಸುವುದು ನನ್ನ ಕರ್ತವ್ಯ.

ಈ ಪ್ರಯತ್ನವು, ಒಳಗೊಂಡಿರುವ ಸತ್ಯಾರ್ಥ-ಗ್ರಹಣದ ತಂತ್ರವು, ಸಾಂಸ್ಕೃತಿಕ ಸತ್ಯಾನ್ವೇಷಣೆಯ, ಒಂದು 'ಶಾಸ್ತ್ರೀಯ' ಮಟ್ಟದ ಪದ್ಧತಿ ಆಗುವ ಶಕ್ಯತೆ ಎನಿಸಿತು. ಸಾಂಕೇತಿಕ ಪ್ರತಿಮೆಗಳನ್ನು ಕುರಿತು ಈ ಮೊದಲು ಬರೆದ ಕೆಲವು ಲೇಖನಗಳಿಂದ, ಈ ಆತ್ಮವಿಶ್ವಾಸವು ಅಂಕುರಿಸಿತ್ತು. ಆದುದರಿಂದ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಈ ತಂತ್ರವು, 'ಶಾಸ್ತ್ರೀಯ'ಮಟ್ಟದ ಸತ್ಯಾನ್ವೇಷಣೆಯ ಒಂದು ಪದ್ಧತಿ (: Grammar of meaning) ಆಗುವ ಶಕ್ಯತೆಯು ಉಂಟೆ? ಪ್ರಾಜ್ಞರು, ಈ ತಂತ್ರದ ಅರ್ಹತೆಯನ್ನು ಪ್ರಶ್ನಿಸಿ, ಕೂಲಂಕಷವಾಗಿ ವಿಮರ್ಶಿಸಬೇಕಾಗಿ ಪ್ರಾರ್ಥನೆ ಭೌತಶಾಸ್ತ್ರದ ತಂತ್ರವೂ ಹುಟ್ಟಿನೊಡನೆಯೆ ಪರಿಪೂರ್ಣವಿದ್ದಿಲ್ಲ. ಗ್ರೀಕ್‌ಸಂಸ್ಕೃತಿ ಸಂಶೋಧಕ ಡಾರ್ಡ್ಸ್ ಹೇಳುವಂತೆ ತಜ್ಞರು, "Progressive elimination of errors"-ಇದರೊಳಗಿನ ಕುಂದುಕೊರತೆಗಳನ್ನು ಕಡಿಮೆಮಾಡಬಲ್ಲ ಸಮರ್ಥ ಮೇಧಾವೀ ವಿಮರ್ಶಕರ ಕೊರತೆ ನಮ್ಮಲ್ಲಿ ಇಲ್ಲ. ಇಂತಹರು ಉದಾರ ಮನಸ್ಸಿನಿಂದ 'ವಿಧಾಯಕ' ಟೀಕೆ ಮಾಡಿ ಶಾಸ್ತ್ರೀಯ ಸ್ವರೂಪದ ಒಂದು ಅನ್ವೇಷಣಾ-ತಂತ್ರವನ್ನು ರೂಪಿಸಲು ಕಾರಣರಾದ ಶ್ರೇಯೋಭಾಗಿಗಳಾಗಬೇಕೆಂದು ಪ್ರಾರ್ಥನೆ. ಮಾನವ ಜೀವನ ಪಾತಳಿಯಲ್ಲಿ ಆಕಾರ ಪಡೆದಿರುವ ಭಾಷೆ ಹಾಗೂ ಸಂಸ್ಕೃತಿಯು ಒಳಗೊಳ್ಳುವ ವಾಸ್ತವ : ಸತ್ಯವನ್ನು ಗ್ರಹಿಸಿಕೊಳ್ಳುವುದು ಶ್ರಮಸಾಧ್ಯವಿದ್ದರೂ ತೀರ ಅಶಕ್ಯವೇನಲ್ಲ. ಇದು ಶಕ್ಯವೆಂಬ ವಿಶ್ವಾಸವನ್ನು ಉಂಟುಮಾಡಿದ ಕಾರಣಗಳು ಇವು.

ಅರ್ಥಕ್ಕೆ ಅದರದೇ ಆದ ಒಂದು ಆಕೃತಿ ಇರುತ್ತದೆ

ಆ-ಕೃತಿಯಿಲ್ಲದ ಅರ್ಥವು ಅರಿಕೆಗೆ ಬರಲಾರದು. ಅರ್ಥಕ್ಕೆ ಕೆಲವೊಂದು ಇತಿ-ಮಿತಿ ಇರಲೇಬೇಕು. ಈ ಇತಿ-ಮಿತಿ, ಅದರ ಕ್ಷೇತ್ರ (area), ಪಾತಳಿ ಸೂಚಿಸುತ್ತದೆ. ಅರ್ಥರೂಪ ವಿಚಾರ, ಅಥವಾ ವಿಚಾರರೂಪ ಅರ್ಥವು ವಿಶಿಷ್ಟ ಆ-ಕೃತಿ-ರೂಪದ್ದು ಇರುತ್ತದೆ. ಯಾವುದೊಂದು ಕ್ಷೇತ್ರಕ್ಕೆ ಸಂಬದ್ಧ ವಿಚಾರರೂಪ ಅರ್ಥದ ಮೊತ್ತವೇ ಆ ಕ್ಷೇತ್ರದ-ವಿಷಯಕ ಜ್ಞಾನ ಎನಿಸುವುದು. ಅರ್ಥವು ಸ್ವೀಕರಿಸುವ ಸಂಕೇತ (: ಪ್ರತಿಮಾ): ಮಾಧ್ಯಮವು ಅದರ ಇತಿಮಿತಿಯನ್ನು ನಿರ್ಧರಿಸುತ್ತದೆ. ಆದರೆ, ಸಂಕೇತ (: ಪ್ರತಿಮಾ) ಮಾಧ್ಯಮ ಇದಕ್ಕಿಂತ, ಅರ್ಥ (: ವಿಚಾರ) ಯಾವಾಗಲೂ ವಿಶಾಲವಿರುತ್ತದೆ. ಅಭಿವ್ಯಕ್ತ ಅಥವಾ ಆವಿಷ್ಕೃತ ಅರ್ಥ (: ವಿಚಾರ). ಇದು ವಿಶ್ವಸ್ಥ ಅಥವಾ ವ್ಯಕ್ತಿಯ ಅಂತಸ್ಥ ಆ-ಶಯಕ್ಕಿಂತ ಅಲ್ಪ. ಇದು ಯಾವಾಗಲೂ, ಅಂತರಂಗಸ್ಥ (ವ್ಯಕ್ತಿ ಇಲ್ಲವೆ ವಸ್ತು ಅಥವಾ ವಿಶ್ವದ) ಆಶಯವು, ಏಕಕಾಲಕ್ಕೆ-ಇಡಿಯಾಗಿ, ಅರ್ಥಕ್ಕೆ ಎಟಕದು.

ಅರ್ಥದಲ್ಲಿ, ತರ್ಕಬದ್ಧವಾದ ಅನುಸ್ಯೂತ ಒಂದು ಆಕೃತಿ (Logical form) ಇದ್ದೇ ಇರುತ್ತದೆ. ಎರಡು ಅಥವಾ ಹೆಚ್ಚು ಸಂಗತಿಗಳ ನಡುವಣ ಸಂಬಂಧ ಸೂಚಿಸುವ ಶಕ್ತಿಯೆ ಅರ್ಥ (:Meaning). 'ಏಕಾಕೀ' ಆ-ಕೃತಿ ಅರ್ಥವಿಹೀನ, ಅಥವಾ ಅರ್ಥಕ್ಕೆ ಒಗ್ಗದು ಎಂದರೆ ಅರ್ಥವು ಸಾಮಾಜಿಕ. ಆದುದರಿಂದ, 'ಅರ್ಥ'ವು ಕೇವಲ ವ್ಯಕ್ತಿಯ ಮಟ್ಟದಲ್ಲಿ ಆತ್ಮನಿಷ್ಠ (Subjective) ಎನಿಸಿದರೂ ಅಭಿವ್ಯಕ್ತಿಯಲ್ಲಿ ಅದು ಮಾಧ್ಯಮ. ಪ್ರತಿಮಾ-ಸಂಕೇತದ ಮೂಲಕ ವಸ್ತುನಿಷ್ಠ ಭೂಮಿಕೆಯದೇ ಆಗುತ್ತದೆ. ಅರ್ಥ (: ವಿಚಾರ : ಜ್ಞಾನ) ವಿಶ್ವದಲ್ಲಿ ಉಂಟೊ? ಅಥವಾ ಕೇವಲ ಮನು-ಜ ಕಲ್ಪಿತವೆ? ಅರ್ಥವು ಕೇವಲ ವೈಯಕ್ತಿಕ-ಮಾನವ ಕಲ್ಪಿತವೇ ಇದ್ದಲ್ಲಿ ಪರಸ್ಪರರು, ಒಬ್ಬರೊಬ್ಬರೊಬ್ಬರೊಡನೆ ವ್ಯವಹರಿಸುವುದೇ ಅಶಕ್ಯವಿತ್ತು. ಜೀವನದಲ್ಲಿ- ಜೀವನದ ಹಿನ್ನೆಲೆಯಲ್ಲಿ ಕುಟುಂಬ, ಸಂಸ್ಥೆ, ಸಮಾಜ ಇವು ಅಸ್ತಿತ್ವದಲ್ಲಿ ಬರುತ್ತಿದ್ದಿಲ್ಲ; ಮಾತು-ಭಾಷೆ ಇದು ಜೀವ-ಜೀವದ ನಡುವಣ ಸೇತುವೆ; ಎರಡು-ಹಲವು ಜೀವಗಳನ್ನು ಹತ್ತಿರ ತರಬಲ್ಲ, ಆತ್ಮೀಯ ಅನುಭವಕ್ಕೆ ಕಾರಣವಾಗಬಲ್ಲ ಅರ್ಥದ ಮಾರ್ಗ-ವಾಹನ-ಸೇತು-ಮಾಧ್ಯಮ : ಭಾಷೆ.

(ಅರ್ಥ :) ವಿಚಾರ, ಆಚಾರ : ಕೃತಿಯೊಡನೆ ಹೊಸೆದುಕೊಂಡಿದೆ-ಬೆಸೆದುಕೊಂಡಿದೆ. ವಿಚಾರ-ಆಚಾರ ಉಭಯ ಕ್ರಿಯೆಗೂ 'ಚರ್' (ಗತ್ಯರ್ಥಕ) ಆಖ್ಯಾತವೆ ಮೂಲದಲ್ಲಿದೆ. ಇವು ಆತ್ಯಂತಿಕವಾಗಿ ಒಂದರಿಂದ ಒಂದು ದೂರವಿರಲಾರವು. ಇವೆರಡರಲ್ಲೂ ಪರಸ್ಪರ ಜನ್ಯ-ಜನಕ ಭಾವವಿದೆ. ಆಚರಣೆ ವಿಚಾರಕ್ಕೂ, ವಿಚಾರಣೆ ಆಚಾರಕ್ಕೂ ಪ್ರೇರಿಸಬಲ್ಲುದು-ಆ ವ್ಯಕ್ತಿ, ಆ ಸಮಾಜ ನಿನ್ನೆಗಳಲ್ಲಿ ಮೈಮರೆತಿಲ್ಲವಾದರೆ; ಎರವಲು ಅಲ್ಲದ ಜೀವಂತ ಅನುಭವಗಳ ಸಂದರ್ಭದಲ್ಲಿ ಬಾಳಬೇಕು, ಎಂಬಲ್ಲಿ ಆ-ಚಾರ-ವಿಚಾರಗಳಲ್ಲಿ ಫಾರೀಕತ್ತು ಆಗಿ ನಡೆಯದು. ಆ-ಚಾರ ದಿಕ್ಕಾಲ-ಪರಿಸರಕ್ಕೆ ಸೀಮಿತ; ವಿಚಾರವು ಸಾರ್ವಕಾಲಿಕ, ಸಾಮಾಜಿಕ. ಮೊದಲನೆಯದು ಇತಿಹಾಸದ ವಿಷಯ; ಎರಡನೆಯದು ತತ್ತ್ವಶಾಸ್ತ್ರದ ವಿಷಯ. ಆದರೆ ಯಾವುದೇ ವಿಚಾರದ ಮೂಲ (ಮೊದಲಣ) ಆಕೃತಿಯು, ಎಂದರೆ ಆ-ಚಾರ-ಯಾವ ಬಗೆಯ ಕೃತಿ=ಆಚರಣದಲ್ಲಿ ಪ್ರತೀತಿ ಬಂದಿತೊ, ಆ ಆಚಾರ ಸೂಚಕ ಮೂಲ (ಮೊದಲಣ) ಭಾಷಿಕ ಸಂಕೇತ-ಪ್ರತಿಮೆ ಅಥವಾ ಮಾಧ್ಯಮ ಯಾವುದು (: ಮಧ್ಯಸ್ಥ ಯಾರು), ಇದು ತಿಳಿಯಲು ಶಕ್ಯವಾದರೆ ಆ ತಾತ್ತ್ವಿಕ : ವೈಚಾರಿಕ ಆಕೃತಿಯ ಇತಿಹಾಸವು-ಜನ್ಮಕಾಲದ ಪಾರ್ಶ್ವಭೂಮಿಯು ಅರಿಕೆಗೆ ಬರಲು ಶಕ್ಯವಿದೆ. ಈ ಹಿನ್ನೆಲೆಯಲ್ಲಿ ನಿಜವಾದ ಇತಿಹಾಸದ ತತ್ತ್ವಜ್ಞಾನ ಮತ್ತು ತತ್ತ್ವಜ್ಞಾನದ ಇತಿಹಾಸ ಮೈದಾಳಲು ಶಕ್ಯವಿದೆ. ಒಂದು ಸಮಯಸ್ಥ ಆಚಾರ ಮತ್ತು ವಿಚಾರದ ಆಕೃತಿಗಳಲ್ಲಿ ತಾಳ-ಮೇಳವನ್ನು ಸಂಗತಿ-ಸಂಬಂಧವನ್ನು ಪ್ರಸ್ತಾಪಿಸದ ಇತಿಹಾಸವಾಗಲಿ ತತ್ತ್ವಶಾಸ್ತ್ರವಾಗಲಿ ವಾಸ್ತವ : ಸತ್ಯಕ್ಕೆ ಹತ್ತಿರದ್ದು, ಎಂದು ಬಗೆಯುವಲ್ಲಿ ಮೋಸವಾಗಲಿದೆ !

ಭಾಷೆಯು ಮೂಲತಃ ಸಾಂಕೇತಿಕವಿದೆ. ಇಂದು, ವಿವರಣಾತ್ಮಕ-ಸುಸಂಗತ ವಾಕ್ಯಾತ್ಮಕವಾಗಿ ಇರುವಂತೆ ತೋರುವ ಭಾಷೆ ಸಂಭ್ರಮಕ್ಕೆ ಕಾರಣವಾಗುತ್ತಿದೆ. ಈ ಭಾಷಾ ಪತಂಗವು ಅಸುರ ಮಾಯಾ ವರ್ಣರಂಜಿತವಾಗಿದೆ. (: ಪತಂಗಂ ಅಕ್ತಂ ಅಸುರಸ್ಯ ಮಾಯಯಾ); ಆದರೆ ವಿಪಶ್ಚಿತರು-ವಿಮರ್ಶಕರು ಇದರ ನಿಜಸ್ವರೂಪವನ್ನು ಗ್ರಹಿಸಿಕೊಳ್ಳಬಲ್ಲರು ಎಂದು ಒಬ್ಬ ಪುರಾತನ ಕವಿ ಋಗ್ವೇದದಲ್ಲಿ ಸೂಚಿಸಿದ್ದಾನೆ. ಇಂದಿನ ಮಾತುಗಳನ್ನು ಹೋಲುವ ಒಂದು ಭಾಷೆಯೊಡನೆಯೆ ಅಂದು, ಈ ಮಾನವ ಸಂಸ್ಕೃತಿ ಹುಟ್ಟಿಕೊಂಡಿದ್ದರೆ, ಇಂದು ಉಳಿದು ಬಂದಿರುವ ಅತಿ ಪುರಾತನ ದೈವತಗಳು- ಆ ದೈವತ ಕಥೆಗಳೂ ನಿಶ್ಚಿತವಾಗಿಯೂ ಇದಕ್ಕಿಂತ ಬೇರೆ ನಾಮರೂಪದುವು ಇರುತ್ತಿದ್ದುವು. ಭಾಷೆಯೊಳಗಿನ ಸಾಂಕೇತಿಕತೆಯು, 'ಸತ್ಯ' ಎಂಬುದನ್ನು ಬಚ್ಚಿಡುವುದಕ್ಕಾಗಿಯೇ ಮೈದಾಳಿದೆಯೊ? ಎಂಬ ಸಂದೇಹಕ್ಕೆ ಎಡೆದೊರೆತಿದೆ. ವೇದೋಪನಿಷತ್ತು-ಗೀತೆ ಇಂತಹ ಗ್ರಂಥಗಳಲ್ಲಿ ಬರುವ 'ನಿಹಿತಂ ಗುಹಾಯಾಂ' 'ಗುಹಾನಿಹಿತಂ, ಗುಹರಂ', 'ಗುಹ್ಯಾತ್ ಗುಹ್ಯತಮಂ' ಇಂತಹ ಮಾತುಗಳ ಮೂಲಕ ಅರ್ಥ ಬಚ್ಚಿಡುವುದಕ್ಕಾಗಿಯೆ ಸಂಕೇತಗಳು, ಸಾಂಕೇತಿಕ ಪ್ರತಿಮೆಗಳು ಹುಟ್ಟಿರಲಿಕ್ಕೆ ಬೇಕು, ಎಂಬ ಅನು-ಮಾನಕ್ಕೆ ಪುಷ್ಟಿದೊರೆಯುತ್ತದೆ. ಏನೆಲ್ಲ ಧರ್ಮಗ್ರಂಥಗಳಲ್ಲಿ ಕಾಣಲು ದೊರೆವ ಒಂದೇ ಮಾತಿನ ನಾನಾರ್ಥಗಳ ಮೂಲಕ, ಭಾಷೆ ಮೈದಾಳಿದ

ಮೂಲ-ಪ್ರಧಾನ-ಉದ್ದೇಶವೇ ತಿಳಿಯುವುದು ಅಶಕ್ಯವಾಗಿದೆ. ಅಥವಾ ಆ ಉದ್ದೇಶವು ವಿ-ಫಲವಾಗುವ ದಿಕ್ಕಿನಲ್ಲಿ ಭಾಷೆಯನ್ನು ತಳ್ಳಿಕೊಂಡು ಹೊರಟಿದ್ದಾಗಿದೆ!

ಅರ್ಥದ ಮೂಲ ಆಕೃತಿ-ರೂಪ ವಿಸಂಗತವಾಗತೊಡಗುವಲ್ಲಿ ಆ ಭಾಷಿಕ ಜನಜೀವನದಲ್ಲಿ ಸ್ಥಿತ್ಯಂತರ-ಕ್ರಾಂತಿ ಸಂಭವಿಸುತ್ತದೆ. ಪ್ರಾಮಾಣಿಕ ಅನುಭವದ-ಅಭಿವ್ಯಕ್ತಿಯಲ್ಲಿ, ಒಂದು ಸಂಕೇತಕ್ಕೆ ಒಂದೇ ಅರ್ಥವು ಇರಬಲ್ಲದು. 'ಋತ' ಈ ಸಂಕೇತಕ್ಕೆ ಮೂಲತಃ ಗತಿ-ಮಾರ್ಗ, (ದಿಶಾ) ಎಂಬ ಅರ್ಥವಿತ್ತು. ಇದು ಪ್ರಕಾಶ (: ಸೂರ್ಯ ಅಗ್ನಿ) ಆರಾಧಕರ ಜೀವನ ಪರಿಸರದಲ್ಲಿ ತಲೆಯೆತ್ತಿದ ಸಂಕೇತವಾಗಿದೆ. 'ಋ' (> ಋತ) ಗಮನಾರ್ಥಕ ಆಖ್ಯಾತದಿಂದ ಸೂರ್ಯಗತಿಯ ಸಂದರ್ಭದಲ್ಲಿ ಮೊದಲು ರೂಢಿಗೆ ಬರುತ್ತದೆ. ಮೊದಲ ಹಂತದಲ್ಲಿ ತೀರ ಭೌತ ಸ್ವರೂಪದ 'ಗತಿ' ಸೂಚಕವಿದ್ದ ಮೂಲಾರ್ಥವು, ಬಳಿಕ, (ಗತಿ) ನಿಯಮಿತ ಮಾರ್ಗ, ನಿಯಮ ಈ ಲಾಕ್ಷಣಿಕ ಅರ್ಥಪಡೆಯುತ್ತದೆ. ಈ ಅರ್ಥವು ವಿಕಾಸಗೊಂಡ ರೀತಿ ತರ್ಕಶುದ್ಧವಾಗಿಯೇ ಇದೆ. ಋತ=ಪ್ರಕಾಶದ ಗತಿ-ದಾರಿ=ನಿಯಮ, ಇದು ಜೀವನದಲ್ಲಿ ಸತ್ಯದ ಮಾರ್ಗ ಎಂಬ ಅರ್ಥವು, ಅವೆಸ್ತಾದ 'ಅಶ', ಋ. ವೇದದ ಆಶಾ=ದಿಶಾ(ray of hope) ಪ್ರಕಾಶ ಎಂಬ ಶಬ್ದ ಸಂಕೇತಗಳಿಂದಲೂ ದೃಢಪಡುತ್ತದೆ, ಅವೆಸ್ತಾದಲ್ಲಿ, ಋಗ್ವೇದದಂತೆ 'ಋತ' ಸಂಕೇತವನ್ನು 'ಸತ್ಯ' ಎಂಬ ಇನ್ನೊಂದು ಸಂಕೇತದೊಡನೆ ಜೋಡು ನುಡಿಯಂತೆ ಉಪಯೋಗಿಸುತ್ತಿದ್ದಂತೆ ಕಾಣುವುದಿಲ್ಲ. ಆದರೆ ಕೇವಲ 'ಅಶ' ಅಥವಾ ಕೇವಲ 'ಋತ' ಎಂಬ ಪ್ರಯೋಗವು, ಆ ಬಳಿಕ ಸಂದಿಗ್ಧಾರ್ಥಕ್ಕೆ ತಿರುಗಿದ್ದು ಕಾಣುತ್ತದೆ! ಋ. ವೇದದಲ್ಲಿಯೇ 'ಋತ' ಸಂಕೇತಕ್ಕೆ ಉದಕ-ರೇತ-ರಸವಾಚಕ ಅರ್ಥ ಪ್ರಾಪ್ತವಾದದ್ದು ಕಾಣುತ್ತದೆ! ಸಂಕೇತ: ಪ್ರತಿಮೆಗಳ ಅರ್ಥವು, ಜೀವನ : ಸಮಯದ (: ಆಚಾರ-ವಿಚಾರಗಳ) ಸಂದರ್ಭದಿಂದ (ಲೋಕವ್ಯವಹಾರದಲ್ಲಿ) ನಿಷ್ಪನ್ನವಾಗುತ್ತದೆ-ಪ್ರತೀತಿಗೆ ಬರುತ್ತದೆ. ಉದಾ: ಗಾಂಧೀಟೋಪಿ, ಶುಭ್ರಖಾದಿ ವಸನ; ಇದು ಒಂದು 'ಸಮಯ'ದ (: ಆಚಾರ-ವಿಚಾರಗಳು ಆವರಣದಲ್ಲಿ, ಪ್ರಾಮಾಣಿಕತೆ, ದೇಶಭಕ್ತಿ, ತ್ಯಾಗ ಇಂತಹ ಗುಣಗಳನ್ನು ಪ್ರತಿನಿಧೀಕರಿಸುತ್ತಿತ್ತು; ಮಹಾತ್ಮಾಜಿಯವರ ತರುವಾಯ ಜೀವನ 'ಸಮಯ'ದ (ಆಚಾರ-ವಿಚಾರಗಳ ಪ್ರತ್ಯಕ್ಷ) ಆ-ಕೃತಿ ಮಾರ್ಪಟ್ಟಿತು. ಅದರೊಡನೆ 'ಖಾದೀ ಟೋಪಿ' ತ್ಯಾಗ ಸೇವೆ ಇತ್ಯಾದಿ, ಮಾತುಗಳ ಮಾಟದಿಂದ ಇನ್ನೊಬ್ಬರಿಗೆ 'ಟೋಪೀ' ಹಾಕುವ ಧೂರ್ತರು, ಧಾರಣಮಾಡುವ ಸಂಕೇತ ಎಂಬ ಅರ್ಥ ಪಡೆಯುತ್ತದೆ. ಜೀವನದ ಅರ್ಥಕ್ಕೆ ಕಾರಣವಾಗುವ 'ಸಮಯ' ಭೌತಕಾಲದಿಂದ ತೀರ ಬೇರೆ.

ಸಂಸ್ಕೃತಿಯ ಪ್ರೇರಕ ನೇತಾರ ಅಥವಾ ಪೋಷಕ ಆಧಾರಭೂತರು (ಸಹ ಪ್ರವಾಸಿ :) ಇಂಥ 'ಸಮಿತಿ'ಯ ಮೂಲಕ ಅವರ ಆಚಾರ-ವಿಚಾರಗಳಿಂದ ಒಂದು ಸಾಂಸ್ಕೃತಿಕ ಸಮಯ (ಜೀವನ ರೀತಿಯ ಆಕೃತಿ) ಆಕಾರ ಪಡೆಯುತ್ತದೆ. ಈ 'ಸಮಯ'ದ ಹಿನ್ನೆಲೆಯಲ್ಲಿ, ಅಭಿವ್ಯಕ್ತಿಯ ಮಾಧ್ಯಮ: ಸಂಕೇತ ಪ್ರತಿಮೆಗಳು ಮೈದಾಳುತ್ತವೆ. 'ಖಾದೀ ಟೋಪಿ' ಸಂಕೇತದ ಹಿಂದಿನ ಪ್ರೇರಕ 'ಸಮಿತಿ' ದುರ್ಬಲವಾಗುತ್ತದೆ. ಬಳಿಕ ಆ ಸ್ಥಳದಲ್ಲಿ ಬಂದ ನೇತಾರ ಸಮಿತಿಯು, ತನ್ನ ಹಿಂದಿನ ತಲೆಮಾರಿನ ಸಂಕೇತಗಳನ್ನೇ ಉಳಿಸಿಕೊಂಡು ಆ ಮಾಧ್ಯಮದ ಪ್ರಯೋಜನ ಪಡೆಯುವ ಉದ್ದೇಶವನ್ನು ಇಟ್ಟುಕೊಳ್ಳಬಹುದು; ಆದರೂ, ಪ್ರತ್ಯಕ್ಷ ಆಚರಣೆಯಲ್ಲಿ ತನ್ನ ಉದ್ದೇಶ-ಅರ್ಥವನ್ನೇ ಅನುಸರಿಸುವುದರಿಂದ ತತ್ಪೂರ್ವದ ಸಮಯದ (: ಆಚಾರ ವಿಚಾರಗಳ) ವಾಹನ ರೂಪ ಪ್ರತಿಮಾ ಸಂಕೇತಗಳ ಅರ್ಥ-ಆಕೃತಿಯು ಆ ಬಳಿಕ ಬದಲಾಗುವುದನ್ನು ತಪ್ಪಿಸಲು ಯಾರಿಗೂ ಶಕ್ಯವಿಲ್ಲ. ಈ ಸ್ಥಿತ್ಯಂತರವು, ಯುದ್ಧಜನ್ಯ ಕ್ರಾಂತಿಗಿಂತ ತೀರ ಭಿನ್ನ. ಋತು ಬದಲಾಗುವ ಹಾಗಿನ ನೈಸರ್ಗಿಕ ಸ್ಥಿತ್ಯಂತರವೇ ಇದೆ, ಎಂದು ಭಾಸವಾಗುತ್ತದೆ. ಈ ಮೋಸದ ಮುಖ್ಯ ಕಾರಣ, ಅಂದು ರೂಢಿಯಲ್ಲಿ ಇರುವ, ಹಾಗೂ ಮುಂದೆ ಬರಲಿರುವ ವೈಚಾರಿಕ ಆಕೃತಿಯ ನಿಜಸ್ವರೂಪವನ್ನು ಎಂದರೆ ಅದರ ಅರ್ಥದಲ್ಲಿ ಅನುಸ್ಯೂತವಿರುವ ತರ್ಕ-ಪ್ರತಿಷ್ಠಿತ ಸಾರ್ವಕಾಲಿಕ ಆಕೃತಿಯನ್ನು-ಮೊದಲೇ ಗ್ರಹಿಸಿಕೊಳ್ಳುವ ಇಂದಿನ ಅಸಾಮರ್ಥ್ಯ.

ಸಂಸ್ಕೃತಿಯು ಅಂಗತ್ರಯಗಳು

ಯಾವ ಜನಾಂಗದ, ಯಾವ ಭಾಷಿಕ ಜನಗಣದ ಸಂಸ್ಕೃತಿಯೇ ಇರಲಿ; ಅದರ ಅಂಗತ್ರಯಗಳಲ್ಲಿ ಜೀವಾಳದ ಸಂಬಂಧವಿದೆ. ಸಂಸ್ಕೃತಿಯ ಪ್ರೇರಕ ನೇತಾರ, ದಿವ್ಯಪುರುಷ-ಅವನ ಬೆಂಬಲದೊಡನೆ ಆ ವಿಶಿಷ್ಟಜೀವನ 'ಸಮಯ' (: ಕಾಲತತ್ತ್ವ) ನಿರ್ಮಿತಿಗೆ ಕಾರಣವಾಗುವ ಅಂದಿನ ಶಿಷ್ಟರ-ಪ್ರತಿಷ್ಠಿತರ 'ಸಮಿತಿ' ಯಾವುದು ಎಂಬುದರ ಏನೊಂದೂ ನಿಶ್ಚಿತ, ಲಿಖಿತ ಆಧಾರವು ದೊರೆಯುತ್ತಿರಲಿಕ್ಕಿಲ್ಲ. ಆದರೂ ಆ ಸಮಿತಿ ಮತ್ತು ಸಮಯವು ನಿರ್ಮಿಸುವ,-ಆ ಸಮಯದ ಜೀವನರೀತಿಯ ಪ್ರೇರಕ ಹಾಗೂ ಪೋಷಕ ಸ್ವರೂಪದ (ಆ-ಚಾರ, ವಿ-ಚಾರಗಳ ಅಮೂರ್ತ ಸ್ವರೂಪವೇ ಎಂಬ ಹಾಗಿನ) ಆ ಸಂಸ್ಕೃತಿಯ ಮಹತ್ತ್ವದ ಸಂಕೇತಗಳು,-ಸಂಕೇತ ಸಮುಚ್ಚಯದ ಪ್ರತಿಮೆಗಳು, ಕೆಲವೊಂದು ದೊರೆತರೂ ಸಾಕು. ಭಾಷಾರೂಪ ಅಭಿವ್ಯಕ್ತಿಯ ಪ್ರಯೋಜನ ಪಡೆಯದೆ ಯಾವ ಸಂಸ್ಕೃತಿಯೆ ಆಗಲಿ ಮೈದಾಳಿ ಬಾಳಲು-ಉಳಿದು ಮುಂದು ವರೆಯಲು ಶಕ್ಯವಿಲ್ಲ. ಭಾಷೆ, ಸಾಹಿತ್ಯ, ಕಲೆ, ಕಟ್ಟಡ, ವಸ್ತ್ರ ಮುಂತಾದುವು ಸಮಸಾಮಾಯಿಕ ಸ್ವರೂಪದ ಸಂಕೇತಗಳ ತುಲನಾತ್ಮಕ ಸಮೀಕ್ಷೆಯಲ್ಲಿ, ಅವು ಆಕಾರ ಪಡೆದ ಜೀವನ ಪರಿಸರ ಅದರ ಹಿನ್ನೆಲೆಯ ಸಮಯ ಇದರ ಆ-ಕೃತಿ ಅರಿಕೆಗೆ ಬರಬಲ್ಲದು. ಸಾಂಕೇತಿಕ ಪ್ರತಿಮೆಗಳಿಗೆ ಇರುವ ಅಂತರ್-ವಲಯದ (ಅರ್ಥಗರ್ಭದ) ಆಕೃತಿ ಮತ್ತು ಮಾತ್ರಾಸ್ಪರ್ಶದ ಬಾಹ್ಯವಲಯದ ಆಕೃತಿ ಇವುಗಳ ತುಲನೆಯಲ್ಲಿ ಆ ವಿಶಿಷ್ಟ 'ಸಮಯ'ದ ರೂಪ ಆಕೃತಿ ಅರಿಕೆಯ ಅಳವಿನಲ್ಲಿ ಬರತೊಡಗುತ್ತದೆ. ಇದರೊಡನೆಯೆ ಆಗಲೆ ಈ ಸಮಯಸ್ಥ ಆಚಾರ ಸ್ವರೂಪದ ಮೂಲಕ, ಅವನ್ನು ರೂಪಿಸಿದ-ಪ್ರೇರಿಸಿದ, ಪೋಷಿಸಿದ ಶಿಷ್ಟ-ಪ್ರತಿಷ್ಠಿತ ನೇತಾರ : ಸಮಿತಿಯ (ವರ್ಗ) ಆಕೃತಿ ರೂಪವೂ ನಿಶ್ಚಿತಪಡಲಾರಂಭಿಸುತ್ತದೆ. ಈ ನೇತಾರ ಸಮಿತಿಯ ಸಂಸ್ಥಾಪಕ-ಪುನರುದ್ಧಾರಕ ದಿವ್ಯಶಕ್ತಿಯ (Charismatic) ಮಹಾನ್ ವ್ಯಕ್ತಿಯ ಹಾಗೂ ಸಂಗಾತಿಗಳ ಅಂಕಿತನಾಮಗಳು ತಿಳಿಯದಿರಬಹುದು. ಆದರೂ ಅವರು ರೂಪಿಸಿದ ಜೀವನದ ಆ ಕೃತಿಯಿಂದ ಅವರ-ಅನ್ವರ್ಥಕ=ಶೀಲ-ಗುಣಸೂಚಕ ಸಾಂಕೇತಿಕ ನಾಮಗಳಿಂದ ಇವರನ್ನು ವಿಂಗಡಿಸಿ ಗುರುತಿಸಿಕೊಳ್ಳಬಹುದಾಗಿದೆ. ಈ ನೇತಾರ ಸಮಿತಿ ಪ್ರೇರಿಸುವುದು 'ಭೋಗಿ' (: ನಾಗ ವೃತ್ತಿ) ಸಂಪ್ರದಾಯವನ್ನೊ ಅಥವಾ ಸಮಾಜ ಸಮ್ಮುಖ ಜೀವನ ರೀತಿಯನ್ನೊ ಎಂಬುದನ್ನು ಆ ಭಾಷಿಕ ಹಾಗೂ ಇನ್ನುಳಿದ ಪ್ರತಿಮಾ : ಸಂಕೇತಗಳಿಂದ ನಿರ್ಧರಿಸಿಕೊಳ್ಳಲು ಶಕ್ಯವಿದೆ.

ಸಂಸ್ಕೃತಿಯ ನೇತಾರ ಸಮಿತಿ ಮತ್ತು ಅವರಿಂದ ಪ್ರಚೋದಿತ ಸಮಯ (: ಆಚಾರ-ವಿಚಾರಗಳು); ಒಂದು ವಿಶಿಷ್ಟ ಸಮಯ ಮತ್ತು ಆ ಸಮಯವು ರೂಪಿಸುವ (ಆಚಾರ-ವಿಚಾರಗಳ ಅಭಿವ್ಯಕ್ತಿಯ ಮಾಧ್ಯಮ-ಅಥವಾ ವಾಹನ ರೂಪ) ಸಂಕೇತ ಪ್ರತಿಮೆಗಳು; ಇವುಗಳಲ್ಲಿ ಅಂಗಾಂಗೀ ಸಂಬಂಧವಿರುತ್ತದೆ. ಸಂಸ್ಕೃತಿಯ ಅಂಗತ್ರಯಗಳಲ್ಲಿ

'ಸಮಿತಿ'ಯ ಭೂಮಿಕೆಯಿಂದ ವಿಶೇಷ ವಿಚಾರವು ಆಗಿರದಿದ್ದರೂ ನೇತಾರ : ದಿವ್ಯಪುರುಷನ ಕುರಿತು, ಸಮಾಜಶಾಸ್ತ್ರ, ಮಾನಸಶಾಸ್ತ್ರದ ತಜ್ಞರು ಬಗೆಬಗೆಯಿಂದ ವಿಮರ್ಶಿಸಿದ್ದಾರೆ. ಮಾನವನ ಅಭಿವ್ಯಕ್ತಿಯ ಮಾಧ್ಯಮವೂ ಇತ್ತೀಚೆಗೆ ಆಧುನಿಕರ ಚಿತ್ತವನ್ನು ಸೆಳೆದಿದೆ, ದೇವತಾಪುರುಷ, ಮಂತ್ರಶಕ್ತಿ ಎಂಬೀ ಬಗೆಯ ಹಿಂದಿನ ಕಾಲದ ಗ್ರಹಿಕೆಗಳ ಅರ್ಥಗ್ರಹಣದ ಪ್ರಯತ್ನವಾಗಿರುವಂತೆ ಕಾಲ : ಸಮಯ ಈ ಗ್ರಹಿಕೆಯ ವಿಮರ್ಶೆಯು ಇನ್ನೂ ಸಾಕಷ್ಟು ಆಗಿಲ್ಲ.

'ರಾಜಾ ಕಾಲಸ್ಯ ಕಾರಣಂ' ಎಂಬ ಶ್ರದ್ಧೆಯು ಒಂದು ವ್ಯಕ್ತಿಗೆ ಏನೆಲ್ಲ ಮಹತ್ತ್ವವನ್ನೀಯುತ್ತಿದೆ! ಅವತಾರೀ ಪುರುಷರ ಬಗೆಗಿನ ಈ ಶ್ರದ್ಧೆ ಸದೋಷವಿದೆ. ದೇವನೆಂಬವನು 'ಅಷ್ಟ ಪ್ರಕೃತಿ'ಗಳ ನೆರವಿನಿಂದ ಸೃಷ್ಟಿ ನಿರ್ಮಾಣಮಾಡಿದನು, ಶಾಸ್ತ್ರಾದಿಗಳನ್ನು ರಚಿಸಿದನು ಎಂಬ ಪುರಾತನ ಸಾಂಕೇತಿಕತೆ ಅಭ್ಯಸನೀಯವಿದೆ. ರಾಜನ ಅಷ್ಟಪ್ರಧಾನರ ವಿಚಾರವು (ಸಭೆ-ಸಮಿತಿ) ವೇದ ಪೂರ್ವಕಾಲದಷ್ಟು ಪ್ರಾಚೀನವಿದೆ. ಜೀವನ : ಸಂಸ್ಕೃತಿಗೆ ಆಧಾರಭೂತ ಕಾಲವನ್ನು 'ಸಮಯ' ಎಂದು ಹೆಸರಿಸುವುದು ಲೇಸು. ಸಮಿತಿ ಮತ್ತು ಸಮಯ ಎರಡಕ್ಕೂ ಒಂದೇ ಆಖ್ಯಾತ (ಇ>ಅಯ್) ಆಧಾರವಾಗಿದೆ. ಆದರೆ ಸಂ+ಇತಿ, ಸಂ+ಅಯ ಇವೆರಡೂ ಶಬ್ದಪ್ರತಿಮೆಗಳು ಒಳಗೊಳ್ಳುವ ಒಂದು ಅರ್ಥವು ಜೀವನದ ಮೂರ್ತಘಟನೆಯನ್ನು ಸೂಚಿಸುತ್ತಿದ್ದರೆ, ಇನ್ನೊಂದು ಅದೇ ಘಟನೆಯ ಅಮೂರ್ತ ಆಕೃತಿಯನ್ನು ಗಮನಕ್ಕೆ ತಂದುಕೊಡಬಲ್ಲುದು. ಇ>ಅಯ್ (ಹೋಗು, ನಡೆ, ಚರಿಸು) ಆಖ್ಯಾತಸ್ಥ ಗತ್ಯರ್ಥದೊಳಗಿಂದ ನೆಲದ ಮೇಲಣ ಮೂರ್ತಘಟನೆಯ ಅನುಷಂಗದಿಂದಲೇ ಇನ್ನೊಂದು ಅ-ಮೂರ್ತ ಘಟನೆ ಸಂಭವಿಸಿ ಇದಕ್ಕೆ ಸಮಾಂತರವಾಗಿಯೆ ನಡೆಯುವುದಾಗಿ ಗೋಚರಕ್ಕೆ ಬರುತ್ತದೆ. ಆಚಾರ ಮತ್ತು ವಿಚಾರ ಇವೆರಡೂ ಸಂಕೇತಗಳ ತುಲನೆಯಿಂದ ಈ ವಿಚಾರವು ಇನ್ನಷ್ಟು ದೃಢಪಡುತ್ತದೆ. 'ಚರ್' ಒಂದೇ ಆಖ್ಯಾತ ಜನ್ಯ 'ಆಚಾರ (: ಕೃತಿ)'ದ ಅನುರೋಧದಿಂದ ಪ್ರತೀತಿಗೆ ಬರುವ ತಿಳುವಳಿಕೆ = 'ವಿಚಾರ'; ಇವೆರಡರಲ್ಲಿಯೂ ಸಮಿತಿ ಹಾಗೂ ಸಮಯ ಇವೆರಡರಲ್ಲಿ ಇರುವ ಅಂಗಾಂಗೀ ಸಂಬಂಧವೆ ಉಂಟು.

ವಿಶಿಷ್ಟಕಾಲದ ಜೀವನ : ಸಂಸ್ಕೃತಿಯನ್ನು ಗ್ರಹಿಸಿಕೊಳ್ಳುವಾಗ ಅದರ ಅಂದಿನ ಆಚಾರ-ವಿಚಾರಗಳಿಗೆ-ಪ್ರತಿಮಾ-ಸಂಕೇತಗಳಿಗೆ ಆಧಾರಭೂತ 'ಸಮಯ'ದ ಆಕೃತಿಯನ್ನು ಗ್ರಹಿಸಿಕೊಳ್ಳುವ ಆವಶ್ಯಕತೆಯಿದೆ. ಆದರೆ 'ಸಮಯ' ಈ ಪಾರಿಭಾಷಿಕ ಸಂಕೇತವು ಇನ್ನೂ ರೂಢಿಗೆ ಬಂದಿಲ್ಲ! ಇಂಗ್ಲೀಷಿನಲ್ಲಿ Historical Time ಎಂಬ ಮಾತು ಬಳಕೆಗೆ ಬಂದಿದೆ. ಆದರೆ, ಇತಿಹಾಸ ಪೂರ್ವಕಾಲದ 'time' ಉಂಟಲ್ಲ? ಮಾನವ ಜೀವನ ರೀತಿಯನ್ನು ರೂಪಿಸುವ ಈ ನಡೆವಳಿ-ನುಡಿವಳಿಗಳ ಆಧಾರವಾದ (ಕಾಲ). ಭೌತಸೂರ್ಯನಿಂದ ಉಂಟಾಗುವ ನಿನ್ನೆ-ಇಂದು-ನಾಳೆಗಳ ರೂಪದ ಕಾಲವಲ್ಲ, ಮಾನವ ಜೀವನ ಪಾತಳಿಯ ಮೇಲಣ ಕಾಲವು ಯಾವುದೊಂದು ಜನಗಣದ ಮೂಕ (tacit) ಸಮ್ಮತಿಯೊಡನೆ, ಅವರ ನೇತಾರ-ಸಮಿತಿಯ ಪ್ರಭಾವದಲ್ಲಿ ಪ್ರಚಲಿತವಾಗುವ ನಡೆವಳಿ ನುಡಿವಳಿಯ ಮೂಲಕ ಪ್ರತೀತಿಗೆ ಬರುತ್ತದೆ. ಒಂದು ವಿಶಿಷ್ಟ ಜೀವನ ರೀತಿ ಸೂಚಕವಾದ ಆ ಜನಗಣದ ಕೂಡಿನಡೆಯುವಿಕೆಯ ಆಚಾರ ವಿಚಾರಗಳು ಪ್ರಚಲಿತವಿರುವ ಈ ಬಗೆಯ ಕಾಲಾವಧಿಯು ಒಂದು 'ಸಮಯ' ಎನಿಸುತ್ತದೆ.

ಮನುಜ ಪಾತಳಿಯ ಜೀವನ ರೀತಿಯಲ್ಲಿ ಈ 'ಸಮಯ' (ಕೂಡಿ ನಡೆವ ಪ್ರವೃತ್ತಿ) ಪ್ರಕೃತಿಸಿದ್ಧ ನೈಸರ್ಗಿಕ ಪ್ರೇರಣೆಯೆ ಆಗುತ್ತದೆ. ಆದರೆ, ವ್ಯಕ್ತಿತ್ವದ ಅಹಂಕಾರೀ ವೃತ್ತಿಯ ಜೀವನಗಳಲ್ಲಿ, ಅ-ಸಾಮಾಜಿಕತೆಯ ಕಡೆಗಿನ ಒಲವೂ ಉಂಟಲ್ಲ! ಇದನ್ನು ಅರ್ಥಯಿಸುವುದು ಹೇಗೆ? ಕುಟುಂಬ ಸಂಸ್ಥೆ, ಸಮಾಜ ಎಂಬುದು ಅಸ್ತಿತ್ವದಲ್ಲಿ ಬಂದಿರುವುದಂತೂ ನಿಜ! ಆದರೆ 'Mind is Private' ಒಬ್ಬರ ಮನಸ್ಸು ಇನ್ನೊಬ್ಬರಿಗೆ ತಿಳಿಯಲು ಸಾಧ್ಯವಿಲ್ಲ; 'ಅವರವರು ಗ್ರಹಿಸಿದ ಅರ್ಥ ಅವರವರ ಸತ್ಯ' ಎಂಬ ಏಕಾಂತಿಕ ಪ್ರವೃತ್ತಿಪ್ರಚೋದಕ ಮಾತುಗಳು, ಇತ್ತೀಚೆಗೆ ಎಲ್ಲೆಲ್ಲೂ ಕೇಳಬರುತ್ತಿರುವುವು. ಆದರೂ 'ಭಾಷೆ' ಎಂಬ ಸಾಮಾಜಿಕ ವ್ಯವಹಾರದ ಭಾಷೆ ಅಸ್ತಿತ್ವದಲ್ಲಿ ಬಂದಿದೆಯಲ್ಲ! 'ಸ್ವಾಂತಃ ಸುಖಾಯ' ಎಂದರೂ ನವ್ಯಸಾಹಿತ್ಯ ಕಲಾಕೃತಿ ಅಚ್ಚಾಗಿ ಹೊರಬರುತ್ತಲೆ ಇವೆ! ಈ

ಸಮಸ್ಯೆಯ ಪರಿಹಾರಕ್ಕಾಗಿ 'Social contract' ಎಂಬ ಒಂದು ಪಾರಿಭಾಷಿಕ ಪದದ ಪ್ರಯೋಜನ ಪಡೆಯಲಾಗುತ್ತವೆ! ವಿಚಾರದ ವಾಹನ-ಮಾಧ್ಯಮ ಪ್ರತಿಮೆ, ಅಂತರಾರ್ಥವನ್ನು ಪರಿಮಿತಗೊಳಿಸುವುದಂತೂ ಸರಿ. ಆದರೆ ಕೆಲವೊಮ್ಮೆ ಅಸಮರ್ಪಕ ಅಭಿವ್ಯಕ್ತಿಯಾಗುವುದು ತಿಳಿಯದೆ ಹೋದರೆ, ಸಕಾಲದಲ್ಲಿ ಅದನ್ನು ತಿದ್ದಿಕೊಳ್ಳಲು ಆಗದಿದ್ದರೆ ಆಗುವ ದುಷ್ಪರಿಣಾಮಗಳು ಜೀವನದ ಸರಿಯಾದ ಅರ್ಥಗ್ರಹಣಕ್ಕೆ ಆತಂಕಕಾರಿಯಾಗುತ್ತವೆ. ಪಾಶ್ಚಾತ್ಯರಲ್ಲಿ ಪ್ರಚಲಿತವಿರುವ 'Social contract' ಎಂಬ ಸದೋಷ ಪಾರಿಭಾಷಿಕ ಪದವು ಇಂತಹ ಒಂದು ಮಾದರಿ. ಸಂಸ್ಥೆ-ಸಮಿತಿ-ಸಾಮಾಜಿಕ ಭಾವನೆಗೆ, ಕರಾರು (Contract) ಕಾರಣವಾಗಿದೆ, ಎಂಬ ಗ್ರಹಿಕೆಯಲ್ಲಿ ಮಾನವರೊಳಗಿನ ಸಾಮಾಜಿಕ ಪ್ರವೃತ್ತಿಯು ಅನೈಸರ್ಗಿಕ; ವ್ಯಕ್ತಿತ್ವದ ಅಸ್ಮಿತತೆಯೇ ಮೂಲ ಸ್ಥಾಯೀಭಾವ ಎಂಬ ಸಂಬುಗೆಯು ಹುದುಗಿಕೊಂಡಿರುವುದು ಇಲ್ಲಿ ಬಯಲಿಗೆ ಬರುತ್ತಿದೆ.

ಆದರೆ 'Social Contract' ದ ಮೂಲಕ ಸಾಮಾಜಿಕ ವ್ಯವಹಾರಗಳು ಶಕ್ಯವಾಗಿವೆ ಎಂಬಲ್ಲಿ, ಸಾಮಾಜಿಕತೆಯು ಸಾಂಸ್ಕೃತಿಕ-ಜೀವನದ ಪ್ರಕೃತಿ-ಧರ್ಮ ಎಂಬುದರ ಪ್ರಜ್ಞೆ ಉಂಟಾಗಲು ಅವಕಾಶವೇ ಇಲ್ಲವಾಗಿದೆ! ಸಂ ಅಯನ (ಕೂಡಿನಡೆವ) ಪ್ರವೃತ್ತಿ ಹಲವು ಮನುಷ್ಯೇತರ ಪ್ರಾಣಿವರ್ಗದಲ್ಲಿ ಸಹ ಹುಟ್ಟುಗುಣವಾಗಿದೆ! ಈ ದೃಷ್ಟಿಯಿಂದ ಏಕಾಕಿತ್ವದ ಏಕಾಂತಿಕಭಾವನೆ ನರ-ಪ್ರಾಣಿಯೊಳಗಿನ ವೈಶಿಷ್ಟ್ಯಕ್ಕೆ ಕಾರಣವಾಗಿರುವಂತೆ ಆತನೊಳಗಿನ ವಿಕೃತಿಯನ್ನು ಹೆಚ್ಚಿಸಿದ್ದೂ ಕಾಣುತ್ತಿದೆ! ಸಮಾಜ : ಸಮಷ್ಟಿಯ ಸಂದರ್ಭದಿಂದ ಕೌಟುಂಬಿಕ ಹಾಗೂ ಸಾಮಾಜಿಕ ಜೀವನದೊಳಗಿನ ಆಘಾತ-ಪ್ರತ್ಯಾಘಾತಗಳ ಫಲವಾಗಿ-'ತಾನು'-ತನ್ನ 'ವ್ಯಕ್ತಿತ್ವ' ಇವರ ಅರಿವು ಮೂಡಿದ ಜೀವ, ಆ ತನ್ನ 'ಸಮಷ್ಟಿಯ' ಅಸ್ತಿತ್ವವನ್ನೇ ಅಮಾನ್ಯಮಾಡುತ್ತಿದೆ-ತನ್ನ ಏಕಾಂತಿಕ 'ವ್ಯಕ್ತಿ ಮಾಹಾತ್ಮ್ಯ' ಬೆಳೆಸಿಕೊಳ್ಳುವ ಗಡಿಬಿಡಿಯಲ್ಲಿ!

ಆದರೆ, ಸಂಸ್ಕೃತಿಯು ಮೈದಾಳಿದ್ದು ಯಾವುದೇ ಬಗೆಯ Contract (ಕರಾರು) ಆಗಿ ನಿರ್ಮಿತವಾದ ಸಮಿತಿಯಿಂದ ಅಲ್ಲ! ಜೀವನದಲ್ಲಿ 'ಮೂಲ್ಯ'ಗಳು (ಅರ್ಥ : ಸೌಂದರ್ಯ) ಇಲ್ಲವೇ ಇಲ್ಲ ಎಂಬ ಭೂಮಿಕೆಯ ಶಾಸ್ತ್ರೀಯ ವಿಚಾರವಂತರೆಂಬವರೂ ಇದ್ದಾರೆ; ಎಚ್. ಜೆ. ಮುಲ್ಲರ್ ಬರೆದಿರುವ 'Scientific progress and Human Values' ಗ್ರಂಥದಲ್ಲಿ ಈ ಬಗೆಯ ನಿವೇದನೆಯಿರುವುದಾಗಿ ವಿಮರ್ಶಕರು ಬರೆದಿದ್ದಾರೆ. ಈ ಪ್ರಪಂಚವೊಂದು ಅನಾಚಾರಗಳ ಆಗರ ಎಂಬ ಹಾಗಿನ ಜುಗುಪ್ಸೆ ಹುಟ್ಟಿಸುವ ಸಾಹಿತ್ಯ ಕೃತಿಗಳನ್ನು-ಕಲಾಕೃತಿಗಳನ್ನು ಸೃಷ್ಟಿಸುವ ಕಲಾಭಿಜ್ಞರಿದ್ದಾರೆ. ಹಿಪ್ಪೀ ಜೀವನರೀತಿಯ ಸಿದ್ಧರ ಬಳಗವಿದೆ, ಮೋಕ್ಷವಾದಿ ಪಾರಲೌಕಿಕ ದೃಷ್ಟಿಯ ದಿವ್ಯಾಧ್ಯಾತ್ಮವೂ ಉಂಟು. ಬಾಳನ್ನು ಬರಡು ಎಂದು ಬಗೆವ ಇಂತಹ ವಿವಿಧ ಸಮಯ (: ಆಚಾರ-ವಿಚಾರ) ನಿರ್ಮಾಣದ ವರ್ಗವು ಒಂದಿಲ್ಲೊಂದು ರೂಪದಲ್ಲಿ ಎಂದಿನಿಂದಲೇ ಉಂಟು. ಆದರೂ ಮನುಜ: ಸಂಸ್ಕೃತಿ ಎಂಬುದೂ ಮೈದಾಳಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಎಂದಿನಿಂದಲೇ ಪ್ರಯತ್ನ ಪಡುತ್ತಿರುವುದೂ ಇದರ ಜೊತೆಗೇ ಪ್ರತೀತಿಗೆ ಬರುತ್ತಿದೆ. ಜೀವನದಲ್ಲಿ ತಮ್ಮ ಅಪ-ಈಕ್ಷೆ ಅಥವಾ ನಿರೀಕ್ಷೆ ಮೇರೆಗೆ 'ಅರ್ಥ'ವು ಲಭಿಸಲಿಲ್ಲ ಅಥವಾ ಕಾಣಲಿಲ್ಲ ಎಂದು ನಿರಾಶೆಯ ಕಗ್ಗತ್ತಲು ಕವಿದು, ಬಾಳಿನಲ್ಲಿ ಮುಗ್ಗರಿಸಿಬೀಳಬೇಕಾಗುವ ಅನುಭವವು ಇತ್ತೀಚೆಯದಲ್ಲ. ಆದುದರಿಂದ, ನಿರಾಶಾವಾದೀ ಜೀವನದೃಷ್ಟಿಯ 'ಸಮಯ', ಆಚಾರ-ವಿಚಾರ ಇದು ಎಂದಿನಿಂದಲೇ ಉಂಟು. ಆದರೆ ಈ ನಿರಾಶಾವಾದವು ಸಹ, ಪ್ರಪಂಚದಲ್ಲಿ 'ಅರ್ಥ' ಉಂಟು ಎಂದು, ಮಾನವರಲ್ಲಿ ಹುಟ್ಟಿನಿಂದಲೇ ಕಾಣುವ ಮೂಲಭೂತ ಶ್ರದ್ಧೆಯ ಅಸ್ತಿತ್ವವನ್ನು ಒಪ್ಪಿಕೊಂಡಂತೆಯೇ ಇದೆ. 'ತಮ್ಮ' ಅರ್ಥವನ್ನು ಕಾಣದ್ದಕ್ಕೆ ಸಿಡಿಮಿಡಿಗೊಂಡು ಬಾಳಿನಲ್ಲಿ ಅರ್ಥವೇ ಇಲ್ಲ ಎಂದು ಸಾರತೊಡಗುವ ಈ ರೀತಿ, ವಿಶ್ವದ ಕೇಂದ್ರವೇ 'ವ್ಯಕ್ತಿ' ಎಂಬ ಹಾಗಿನ ಗ್ರಹಿಕೆಯ ದ್ಯೋತಕವಾಗಿದೆ! ಈ ನಿರಾಶಾವಾದಿಗಳು ಮೊದಲು ಭೋಗವಾದೀ 'ಯಯಾತಿ' ಪಂಥಿಗಳು ಇರುತ್ತಾರೆ; ಬಳಿಕ ಹಿಪ್ಪೀಜೀವನ ರೀತಿಗೊ ಅಥವಾ ಗುರುಶರಣಮಾರ್ಗದ ದಿವ್ಯಾಧ್ಯಾತ್ಮಕ್ಕೊ ತಿರುಗುತ್ತಾರೆ. 'ಯತಿ', 'ಯಯಾತಿ'ಯ ಅಣ್ಣನೆಂಬ ಪುರಾತನ ಸಾಂಕೇತಿಕ ಪ್ರತಿಮೆ ಮನೋಜ್ಞವಾಗಿದೆ. 'ಯಯಾತಿ'ಯು ದೇವ-ಯಾನಿ, ಈ 'ಅಯನ'ವೂ ನಿರಾಶೆಗೆ ಕಾರಣವೆಂದು ತದ್ವಿಪರೀತ ನಾರ-ಅಯನಿ=ಪಂಥಿ ಆಗುತ್ತಾನೆ!

ಆದರೆ, ತಮ್ಮ ಕಲ್ಪಿತ ಅಥವಾ ಅಪ-ಈಕ್ಷಿತ ಅರ್ಥವೇ ಸತ್ಯವೆಂಬ,

"ಯಾರು ಯಾರಿಗೆ ಯಾವುದರಲ್ಲಿ ಭಕ್ತಿಯೋ ಅವರು ಆಯಾ ದೇವರ ಉಪಾಸಕರಾಗಲಿ;
ಯಾವ ನಾಮರೂಪದಿಂದ ಭಜಿಸಿದರೂ ಕೊನೆಗೆ ಅವರು ನನ್ನಲ್ಲಿಯೇ ಬಂದು
ಸೇರುತ್ತಾರೆ"*

ಎಂಬ ಬೋಧನೆಯೊಳಗಿನ ಮಾಯಾವೀತನವು ಮೃತ್ಯುವಿನ ಉಪಾಸನೆಯಾಗಿ ಪರಿಣಮಿಸುವುದು ಅನಿವಾರ್ಯವಿದೆ. ಏಕೆಂದರೆ, ಈ ಬಗೆಯ ವೈಯಕ್ತಿಕ ಜೀವನಾದರ್ಶದ ಅನುಸರಣೆಯ ಉಪದೇಶದಲ್ಲಿ, ಸಾಮಾಜಿಕ ಸಮಷ್ಟಿಯನ್ನು ಸಂಪೂರ್ಣವಾಗಿ ದುರ್ಲಕ್ಷಿಸಲಾಗಿದೆ! ಅಲ್ಲದೆ 'ಯೇ ಯಥಾ ಮಾಂ ಪ್ರಪದ್ಯಂತೇ...' ಅವರವರನ್ನು ಆಯಾ ರೀತಿಯಲ್ಲಿಯೇ ಉದ್ಧರಿಸುತ್ತೇನೆ, ಎಂಬ ಲೋಕೋದ್ಧಾರದ ಆಶ್ವಾಸನವನ್ನಿತ್ತ ದೇವರು (?) ಯಾರು? 'ಕಾಲೋऽಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ' ಎಂದು ತಾನಾಗಿಯೆ ಸಾರಿರುವ ಗೀತೆಯ ಭಗ-ವಂತನು ತಾನೆ? ಸತ್ಯವು ಸಾಂಕೇತಿಕವಾಗಿದೆ ಎಂಬುದೂ ಇಲ್ಲಿ ಸಿದ್ಧವಾಗುತ್ತಿದೆ. 'ನಾಸ್ತಿ ಸತ್ಯಾತ್ ಪರೋಧರ್ಮಃ' ಎಂದು ಸಾರಲಾಗಿದೆ. ಆದರೆ ಈ 'ಸತ್ಯ'ದ ಅರ್ಥವನ್ನು ಸ್ಪಷ್ಟಪಡಿಸುವಲ್ಲಿ ಅಟ-ಮಟದ ಮಾತಿನ ಕವಡು! ಭಾರತೀಯ ಪುರಾತನ ಸಂಪ್ರದಾಯಗಳಲ್ಲಿ ತತ್-ಏಕಂ ಇದೇ ಸತ್=ಸತ್ಯ ಎಂಬ ಪಂಥವು ಇದ್ದಂತೆ, ವೇದಕಾಲದಲ್ಲಿ ಋತ (: ನಿಯಮ) ಬದ್ಧ ಸತ್ಯವೇ ಸತ್ಯ; ಇನ್ನುಳಿದುದು 'ಅನೃತ' ಎಂದರೆ ನಿರಾಧಾರ ಮಾತು; ಸಂಭ್ರಾಮಕಸತ್ಯ ಎಂಬ ಶ್ರದ್ಧೆಯೂ ಒಂದು ಇತ್ತು ಎಂದು ಹೇಳಲಾಗುತ್ತದೆ. ಇದರಲ್ಲಿ ಏನಾದರೂ ತಥ್ಯಾಂಶವಿದೆಯೆ ಎಂಬುದನ್ನು, ಸಾಂಸ್ಕೃತಿಕ ಅರ್ಥಗ್ರಹಣ-ತಂತ್ರದ ಆಧುನಿಕ ಸಾಧನದಿಂದ ನಿರ್ಧರಿಸಿಕೊಳ್ಳಲು ಶಕ್ಯವಿದೆ.

ಸಮಸಾಮೂಹಿಕ ಪ್ರತಿಮಾ-ಸಂಕೇತಗಳ ತುಲನೆಯಿಂದ ಆ ಕಾಲದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಗ್ರಹಿಸಿಕೊಳ್ಳಬಹುದಾಗಿದೆ. ಈ ಮೊದಲು ಎತ್ತಿರುವ, ವೇದದಲ್ಲಿ ಬರುವ 'ಋತ (:ಸತ್ಯ)'ದ ಉದಾಹರಣವನ್ನೇ ನೋಡಿ 'ಋತ ಸಂಕೇತಕ್ಕೆ ಮೊದಲು ಇದ್ದ ನಿಯಮ, ವ್ಯವಸ್ಥೆ ಎಂಬೀ ಬಗೆಯ ಅರ್ಥವು ಹಿಂದೆ ಬೀಳುತ್ತದೆ. ಆಪ ರಸ, ಮಧುಮತ್-ಪಯಸ್ ಎಂಬೀ ಬಗೆಯ ಅರ್ಥಕ್ಕೆ ಪ್ರಾಶಸ್ತ್ಯ ದೊರೆಯುತ್ತದೆ. ಮಾತುಗಳಿಗೆ ಜೀವನ ಸಮಯಸ್ಥ ಆಚಾರ ವಿಚಾರಗಳ ಸಂದರ್ಭದಲ್ಲಿಯೇ ಅರ್ಥವು ರೂಢಿಗೆ ಬರುತ್ತದೆ. ಇದು ನಿಜವಿದ್ದರೆ ಮೊದಲಿನ ಅರ್ಥವು ಬದಲು ಆಗಿ, 'ಋತ (=ಸತ್ಯ)' ಈ ಸಂಕೇತಕ್ಕೆ ಉದಕ=ರಸ=ರೇತಸೂಚಕ ಅರ್ಥವು ರೂಢವಾಗ ತೊಡಗುವಾಗ ಅಂದಿನ ಸಾಮಾಜಿಕ ಜೀವನದಲ್ಲಿ ಮೊದಲಿನ 'ಸಮಯ' ಆಚಾರ ವಿಚಾರಗಳ ರೀತಿಯು ಪ್ರತಿಷ್ಠೆಗೆ ಎರವಾಗಿರಲೇಬೇಕು. ಬಾಳಿನಲ್ಲಿ ನಿಯಮ : ವ್ಯವಸ್ಥೆಯ ಬಗೆಗಿನ ಅಸಡ್ಡೆ (<ಅ-ಶ್ರದ್ಧೆ) ಪ್ರಬಲವಾಗ ತೊಡಗಿರಲೇಬೇಕು. ಜೀವನ 'ಸಮಯ' (: ಆಚಾರ-ವಿಚಾರ) ಅದರ ಹಿಂದೆ ಕೆಲವೊಂದು ಪ್ರಭಾವೀ ವ್ಯಕ್ತಿಗಳ (=ಸಮಿತಿಯ) ಕೈವಾಡವು ಇಲ್ಲದೆ, ಅದು ತನ್ನ ತಾನೇ ಸಂಭವಿಸುತ್ತಿರುವುದಿಲ್ಲ. ಇಂಥ ಪ್ರಭಾವವು ಯಾರದು-ಯಾವ ಸಂಪ್ರದಾಯದ್ದು ಎಂಬುದೂ ಈ ಅನ್ವೇಷಣಾ ಪದ್ಧತಿಯಿಂದ ಬೆಳಕಿನಲ್ಲಿ ಬರಬಲ್ಲದು.

ಆಪ : ರಸ : ರೇತ ತತ್ತ್ವಾರಾಧಕ ಸಂಪ್ರದಾಯಗಳು ಭಾರತಕ್ಕೆ ಮಾತ್ರ ಸೀಮಿತವಾಗಿದ್ದುವು, ಎಂದು ಬಗೆಯಲಿಕ್ಕಾಗದು. ಲಾರ್ಡ ಆಕ್ಟನ್ ಹೇಳುವಂತೆ, ಮಾನವ ಜೀವನವು ನಿನ್ನೆ-ಇಂದು-ನಾಳೆಗಳ ರೂಪದಲ್ಲಿ ಅಖಂಡಿತವಾಗಿ ('in a succession') ಪ್ರವಹಿಸುತ್ತಲಿದೆ. ಇದರಲ್ಲಿ ವಿಶಿಷ್ಟ ದೇಶ (ಭಾಷೆ) ಗೌಣ; ಮಾನವ

---

* ಇದು ಭಗವದ್ಗೀತೆಯ ಒಂದು ಮಾತು. ಮೂಲಶ್ಲೋಕ ಹೀಗಿದೆ : VII-೨೧, ೨೨
ಯೋ ಯೋ ಯಾಂ ಯಾಂ ತನುಂಭಕ್ತ ಶ್ರದ್ಧಯಾರ್ಚಿತುಮಿಚ್ಛತಿ । ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ ॥
ಸ ತಯಾ ಶ್ರದ್ಧಯಾ ಯುಕ್ತಸ್ತಸ್ಯಾऽऽರಾಧಾನ ಮೀಹತೇ । ಲಭತೇ ಚ ತತಃ ಕಾಮನ್ ಮಯ್ಯೆವ ವಿಹಿತಾನ್ ಹಿತಾನ್ ॥ (ಸಂ)

ಜೀವನ ಸಮೀಕ್ಷೆಯೊಳಗಿನ ವೈಶಿಷ್ಟ್ಯವು ಆ ವಿಭಾಗದ ಮಟ್ಟಿಗೇ (not for their own sake) ಎಂದು ಬಗೆಯಲಾಗದು...

> 'but in reference and in subordination to a higher series according to the time and the degree in which they contribute to the common fortune of Mankind.[೧]

ಋಗ್ವೇದದ ಸಮೀಕ್ಷೆಯಲ್ಲಿ ಗಮನಕ್ಕೆ ಬರುವ ಸಾಂಸ್ಕೃತಿಕ ಸ್ಥಿತ್ಯಂತರವನ್ನು ಹೋಲುವ ಬದಲಾವಣೆಗಳು ಈಜಿಪ್ಟ್, ಗ್ರೀಕ್ ಮೊದಲಾದ ಹಲವು ದೇಶಗಳಲ್ಲೂ ಕಾಣದೊರೆಯುತ್ತವೆ! ಆದರೆ, ವೈಯಕ್ತಿಕ ವೈಶಿಷ್ಟ್ಯವಾದೀ ಏಕಾಂತಿಕ ಭೂಮಿಕೆಯ ದೃಷ್ಟಿಕೋನದ ಸಂಶೋಧಕರ ಪ್ರಭಾವವು ಬೆಳೆದು ಲಾರ್ಡ ಆಕ್ಟನ್‌ರಂತಹ ದೃಷ್ಟಿಕೋನವು ದುರ್ಲಕ್ಷಿಸಲ್ಪಟ್ಟುದು ಕಾಣುತ್ತಿದೆ! ಕೋಲಿಂಗವುಡ್‌ನಂತಹ ಇತಿಹಾಸತತ್ತ್ವ ವಿವೇಚಕನು ಸಹ ಹೇಳುತ್ತಾನೆ : 'ಇತಿಹಾಸ ಎಂಬುದು ಇದ್ದರೆ, ಮಾನವನ ಇತಿಹಾಸ-ಅದು ಒಂದೇ ಇತಿಹಾಸ, ಇರಬಲ್ಲದು'. ಮಾನವ ಶಾಸ್ತ್ರಜ್ಞರ ಸಂಶೋಧನದಿಂದಲೂ ಇದು ದೃಢಪಡುತ್ತಲೆ ಇದೆ. ಆದರೂ ಈ ಭೂಮಿಕೆಯು ದುರ್ಲಕ್ಷಿಸಲ್ಪಟ್ಟಿರುವದರಿಂದ ಮನುಜ ವರ್ಗವು ಸ್ವ-ಸ್ವರೂಪಜ್ಞಾನಕ್ಕೆ-ವಾಸ್ತವ ಸತ್ಯಕ್ಕೆ ವಂಚಿತವಾಗಬೇಕಾಗಿದೆ!

ವೈಚಾರಿಕ ಆಕೃತಿ (: thought forms) ಸನಾತನವಾಗಿರುವುದರಿಂದ ಇವು ಪುರಾತನ ಸಂಸ್ಕೃತಿಗಳಲ್ಲಿ ಅರಿಕೆಗೆ ಬಂದ ರೀತಿ, ಮತ್ತು ಆ ಸಮಯದ ವಿಮರ್ಶೆಗೆ ಮಹತ್ತ್ವವು ಪ್ರಾಪ್ತವಾಗುತ್ತದೆ. 'ಏಕಂ' ಸ್ವರೂಪೀ ಸತ್ಯದ ವೈಚಾರಿಕ ಆ-ಕೃತಿಯು ಮೊದಲಬಾರಿ ಪ್ರತೀತಿಗೆ ಬಂದ ಭೌತಕಾಲವು ಸಮಾನವಿರಲಿಕ್ಕಿಲ್ಲ. ಆದರೆ ಈ ಬಗೆಯ ಮೊತ್ತಮೊದಲಬಾರಿಯ ಈ ಪ್ರತೀತಿ=ಜೀವನಾನುಭವ, ಈ ಅನುಭವಕ್ಕೆ ಕಾರಣವಾದ ಆಚಾರ=ಸಮಯವು ಮಾತ್ರ ತೀರ ಭಿನ್ನವಿರಲು ಶಕ್ಯವಿಲ್ಲ. 'ರಸೋ ವೈ ಸಃ=' ಈ 'ಏಕಂ' ಸತ್ಯದ ಅನುಭಾವದ, ಈ 'ನಿತ್ಯಾನಂದ ಸಿದ್ಧಿ'ಯ (Eternal Bliss) ಪಾರ್ಶ್ವಭೂಮಿ ಮೂಲದಲ್ಲಿ ಎಂತಹದು ಇತ್ತು, ಎಂಬುದನ್ನು ಪಾಶ್ಚಾತ್ಯರ 'Eleusian Mysteries,' 'Dionysion festivals', 'Orphic literature' ಮೂಲಕ ಅರಿಯಬಹುದಾಗಿದೆ.[೨]

ಭಾರತೀಯ ಶಾಕ್ತರಲ್ಲಿ ಮಾತ್ರ ಈ ಸಂಪ್ರದಾಯ, ಈ ಸಮಯ=ಆಚಾರವಿತ್ತು ಎಂಬ ಗ್ರಹಿಕೆಯಿದೆ! ವೇದಪೂರ್ವ ಕಾಲದಿಂದಲೇ ಇದ್ದ ಈ ಆಪಃರಸ ಪಂಥೀಯ ನಡೆವಳಿ, ವೇದಗಳಲ್ಲಿಯೂ ಇದ್ದಿತೆಂಬ ವಾಸ್ತವ ಸತ್ಯವನ್ನು ಕಣ್ಮರೆಯಾಗಿಸಲು ಈ ಗ್ರಹಿಕೆಯನ್ನು ಉಪಯೋಗಿಸಿಕೊಂಡಿದ್ದುಂಟು. ಉಪನಿಷತ್ತುಗಳಲ್ಲಿ ಈ ಆಚಾರವು ಮಾರ್ಪಡುತ್ತ ಬಂದಿರುವ ಹಂತಗಳನ್ನು ಗುರುತಿಸಿಕೊಳ್ಳಲು ಶಕ್ಯವಿದೆ. ಋಗ್ವೇದದಲ್ಲಿ ಸಮಾನ 'ಪಾತ್ರ' ಪಾನ-'ಚಮಸ' ಪಾನದ ನಿರ್ದೇಶಗಳು ಈ ಎರಡು ಕಡೆಗಂತೂ ಸ್ಪಷ್ಟವುಂಟು-ಶ್ಲೇಷಾರ್ಥಕ್ಕೆ ಅವಕಾಶ ಕಲ್ಪಿಸಿದ್ದರೂ![೩]

ಏಕಂ ಸ್ವರೂಪೀ ಸತ್ಯಸಾಕ್ಷಾತ್ಕಾರಕ್ಕೆ ಕಾರಣವಾದ ಈ 'ತತ್' ಮಯಾನಂದೀ ಅನುಭಾವದ ಮೂಲಸಮಯ (: ಆಚಾರ-ಪ್ರಕಾರವು) 'ರಾತ್ರಿ' ಉಪಾಸನೆಯೇ ಆಗಿತ್ತು, ಮೊತ್ತಮೊದಲಲ್ಲಿ[೪] ಸುಮೇರಿನಲ್ಲಿ ಈ ಸಂಪ್ರದಾಯದ ಸಾಮೂಹಿಕ ಆಚರಣೆಯೇ ನಡೆಯುತ್ತಿದ್ದುದನ್ನು ಸಂಶೋಧಕರು ಬೆಳಕಿನಲ್ಲಿ ತಂದಿದ್ದಾರೆ. 'ಸಹ ಯಜ್ಞಾಃ ಪ್ರಜಾಃ ಸೃಷ್ಟ್ವಾಃ' (Fertility cult) ಸೂಚಕ ಉಲ್ಲೇಖ ಗೀತೆಯಲ್ಲೂ ವೇಷಾಂತರ ಹೊಂದಿ ಉಳಿದುದುಂಟು. ವೇದದಲ್ಲಿ ಸವಿತೃ-ಸೂರ್ಯ-ಇಂದ್ರ ದೈವತವೇ ಪ್ರಧಾನವೆಂಬ ಗ್ರಹಿಕೆಗೆ ಆಸ್ಪದವನ್ನಿಟ್ಟು, ಅಲ್ಲಿ ಪ್ರತ್ಯಕ್ಷ ವರ್ಣನೆಯು ಇದ್ದುದು ರಾತ್ರೀ ಸಂಪ್ರದಾಯದ್ದು! ಆಗ ಯುರೋಪಿನಲ್ಲಿ ರಾತ್ರೀಸೂರ್ಯನ (Nocturnal Sun) ಆರಾಧನೆಯಿತ್ತು. 'ರಾತ್ರಿ-ಸೂರ್ಯ' ಈ ಪರಿಭಾಷೆಯು ಸೌರಸಂಪ್ರದಾಯವು ತಲೆಯೆತ್ತಿದ ಬಳಿಕಿನ ಸ್ಥಿತ್ಯಂತರದ ಸೂಚಕವಾಗಿದೆ. ಯುರೋಪಿನ 'ರಾತ್ರೀಸೂರ್ಯ' ಸಂಕೇತವು ಭಾರತದ 'ಮಾರ್ತಾಂಡ ನಾಮಾನಂ ಸೂರ್ಯ'ನ ನಿಜಸ್ವರೂಪವನ್ನು ಬಯಲಿಗೆಳೆಯುತ್ತದೆ. ಅಲ್ಲದೆ, ಸೂರ್ಯ(ನಾದ) ನಾರಾಯಣನ ರಹಸ್ಯವನ್ನು ಅರಿಯಲ್ಲು ನೆರವಾಗುತ್ತದೆ!

ಋಗ್‌ವೇದದ ಮಾರ್ತಾಂಡನು ಸಲಿಲರೂಪೀ ಅದಿತಿಪುತ್ರನು=ಅಪೋವತ್ಸನು! ನಾರ=ನೀರು ಎಂಬ ಅರ್ಥವು ನಿಶ್ಚಿತವಿರುವುದರಿಂದ ನಾರಣನೂ ಜಲೋದ್ಭವನು=ಚಂದ್ರನು.

ಹೀಗಿದು, ಏಕಂ ಸ್ವರೂಪೀ ಸತ್=ಸತ್ಯವು, 'ರಾತ್ರೀ' ಸಂಪ್ರದಾಯ ಚಾಂದ್ರಸಮಯಾಚಾರ ಮೂಲತಃ, ಈಜಿಪ್ತಿನಲ್ಲೂ ಚಾಂದ್ರಸಂಪ್ರದಾಯದ ಪ್ರತೀಕಗಳೇ ಇಸಿಸ್, ಒಸಿರಿಸ್/ಹೊರಸ್ ಮತ್ತು ಸೆಟ್. ಜಲೋದ್ಭವ ಆದಿನಾಗವೂ ಆದಿದೈವತವಿರುವ ಇಜಿಪ್ತಿನಲ್ಲಿ ಚಾಂದ್ರಸಂಪ್ರದಾಯಕ್ಕೇ ಪ್ರಾಧಾನ್ಯವಿರಲಿಕ್ಕೆಬೇಕು. 'ವೃಕ್ಷ' ರೂಪನಾದ ಒಸಿರಿಸ್, ವೃಕ್ಷ ಪ್ರಿಯೆ ಇಸಿಸಿ ಇರುವ ಇಜಿಪ್ತಿನಲ್ಲಿ 'ಸೂರ‍್ಯ'ನ ಆರಾಧನೆಯು ಇದ್ದಿತು, ಎಂದರೂ ಇವನು ರಾತ್ರೀಸೂರ‍್ಯನೇ ಇರಬೇಕಾಗುತ್ತದೆ! 'Bull of his own mother' ಆಗಿರುವ ದೈವತ ಪ್ರಕಾರವಿದ್ದ ಈಜಿಪ್ತಿನಲ್ಲಿ ಈ ನಡೆವಳಿ, ಪುತ್ರದಕ್ಷನೇ, ತಾಯಿ ಅದಿತಿಯ ಪತಿಯಾಗುವ ಭಾರತೀಯ ಆಚಾರವನ್ನು ಹೋಲುತ್ತಿರುವುದನ್ನು ಗಮನಿಸಬೇಕು. ಹೀಗೆ ಪ್ರತಿಮಾ : ಸಂಕೇತಗಳಿಂದ, ಅವು ಪ್ರಚಲಿತವಿದ್ದ 'ಸಮಯ' ಮತ್ತು ಆಚಾರ ಸ್ವರೂಪವನ್ನು ನಿರ್ಧರಿಸಿಕೊಳ್ಳಲು ಶಕ್ಯವಿದೆ. ಈ ಆಚಾರ-ವಿಚಾರ ರೂಪಿಸಿದ ನೇತಾರರನ್ನು ಭೋಗಿ (: ನಾಗ) ಸಂಪ್ರದಾಯದವರೆಂದು ಹೆಸರಿಸಿರುವಲ್ಲಿ ಔಚಿತ್ಯವಿಲ್ಲದಿಲ್ಲ. ಈ ನಾಗಸಂಪ್ರದಾಯದ ಭೋಗವಾದವೇ ವಿಪರೀತಕ್ಕೆ ಮುಟ್ಟಿ, ಅದುವೆ ತ್ಯಾಗವಾದದ ಆವರಣವುಳ್ಳ ಕುಮಾರ-ಕುಮಾರೀ ವ್ರತದ ಸಂನ್ಯಾಸವಾದವಾಗಿ ಪರಿಣಮಿಸುವ ಈ ಪ್ರತಿಕ್ರಿಯೆಯೂ ಮೂಲ ಕ್ರಿಯೆಗೆ ಸುಸಂಗತವೇ ಇರುತ್ತದೆ.

ವಿಚಾರ ವಿಕಾಸಕ್ರಮದ ಭೂಮಿಕೆಯಿಂದ ವಿಚಾರಿಸಿದರೆ, ಋಗ್‌ವೇದದಲ್ಲಿ ಕಾಣಿಸಿಕೊಂಡು ಬಳಿಕ ಅದೃಶ್ಯವಾಗಿರುವ ಋತ ಸ್ವರೂಪೀ ಸತ್ಯದ ವೈಚಾರಿಕ ಆಕೃತಿಯು ಕೇವಲ ಸೌರಪಂಥೀಯರ ಗುತ್ತಿಗೆ, ಎನ್ನಲು ಆಗುವುದಿಲ್ಲ. ಸೌರ ಸಂಪ್ರದಾಯವು ಪ್ರಚಲಿತವಾದ ಬಳಿಕ ಈ ವೈಚಾರಿಕ ಆಕೃತಿಗೆ ಪರಿಣತ ಸ್ವರೂಪವು ಬರತೊಡಗಿದ್ದುಂಟು. ಆದರೆ, ತತ್ಪೂರ್ವದಲ್ಲಿಯೆ ಋತ=ಸತ್ಯದ ವಿಚಾರವು ಅಂಕುರಿಸಿದ್ದುದನ್ನು ಸೂಚಿಸುವ ನಿಶ್ಚಿತ ಪ್ರಮಾಣಗಳು ದೊರೆಯುತ್ತವೆ. ಇರಾಣಿನ ಅವೆಸ್ತಾ ಮತ್ತು ಋಗ್‌ವೇದದಲ್ಲಿ ಸಾಮ್ಯವಿದ್ದುದು ಸರ್ವಮಾನ್ಯವಿದೆ. ಅವೆಸ್ತಾದಲ್ಲಿ 'ಸತ್ಯ' ಎಂಬ ಅರ್ಥದ 'ಅಶ' ಸಂಕೇತವಿದೆ. ಈ ಅರ್ಥವನ್ನು ಪರಿಮಿತಗೊಳಿಸುವ 'ಸತ್ಯ'ವಾಚಕ ಇನ್ನೊಂದು ಸಂಕೇತವು ಪಕ್ಕದಲ್ಲಿ ಇಲ್ಲ. ಇಜಿಪ್ತಿನಲ್ಲಿ 'ಏಕಂ' ಸ್ವರೂಪೀ ಸತ್ಯದ ಉಪಾಸನೆಯ 'ರಾತ್ರೀ' ಸಂಪ್ರದಾಯವೇ ಪ್ರಾಶಸ್ತ್ಯ ಹೊಂದಿ-ಈ ಸಂಪ್ರದಾಯದ 'ಕ' ಬೀಜಾಕ್ಷರದ ಉಪಾಸನೆಯ ದುಷ್ಪರಿಣಾಮಗಳನ್ನು ತಪ್ಪಿಸಿಕೊಳ್ಳಲು ಆಗದೆ ಇದ್ದರೂ, ಹಗಲಿನ ಜೀವನ ರೀತಿಯಲ್ಲಿ ಅವರಿಗೂ ವ್ಯವಸ್ಥೆ-ನಿಯಮಗಳ ಆವಶ್ಯಕತೆ ಇದ್ದೇ ಇತ್ತು. ಇಜಿಪ್ತಿನ ದೈವತಗಳೊಳಗಿನ ಮಾತ್ (Maat) ದೇವಿಯ ವೈಚಾರಿಕ ಪ್ರತಿಮೆ ಇದಕ್ಕೊಂದು ನಿದರ್ಶನ. ಸುಮೇರು ವಿಭಾಗದಲ್ಲಿ ಕೀ (: ಭೂದೇವಿ), ಪತಿ ಎಂಕಿ, (ಮರ್ದುಕ್) ಈ ದೈವತಗಳು ಅಲ್ಲಿಯ ಜೀವನವನ್ನು ವ್ಯವಸ್ಥಿತವಾಗಿ ರೂಪಿಸಿದುವಾಗಿ ವರ್ಣನೆಗಳಿವೆ. ಎಂಕಿಯನ್ನು 'God of Wisdom' ಎಂದು ಬಗೆಯಲಾಗುತ್ತಿದ್ದು ದರಿಂದ ಭಾರತೀಯ ಸವಿತೃರೂಪ ಜ್ಞಾನ ಸೂರ‍್ಯನ ಸಂಕೇತದ ಅಂಕುರವೇ ಇಲ್ಲಿ ಉಂಟು: ಮಾತ್ರವಲ್ಲ ಈ ಎಂಕಿ, (ಪ್ರಕಾಶರೂಪ) ದೇವನು, ಭೋಗಿ ನಾಗರೂಪ ತಂದೆ ಅಪ್ಸುವನ್ನು ಕೊಲ್ಲುವ ಈ ಕ್ರಿಯೆ, ಇಂದ್ರ (ಸೂರ‍್ಯ ರೂಪ) ತನ್ನ ತಂದೆ ತ್ವಷ್ಟಾರ (ನಾಗ), ಅಹಿ-ವೃತ್ರನನ್ನು ಕೊಂದನೆಂಬ ಕಥೆಯನ್ನು ಸಂಪೂರ್ಣ ಹೋಲುತ್ತದೆ! ಆದರೆ, ಸೂರ‍್ಯತತ್ತ್ವದ ಪ್ರಕಾಶರೂಪೀ ಇಂದ್ರನ ಪ್ರತಿಮೆ ಮತ್ತು ಆಪತತ್ತ್ವದ ಪ್ರಕಾಶರೂಪೀ ಎಂಕಿ (: ಜ್ಞಾನಮೂರ್ತಿ) ಈ ಪ್ರತಿಮೆ (ಮಾತ್‌ಸಹ) ಇವೆರಡೂ 'ಮಾಧ್ಯಮ' ಸಂಕೇತಗಳಲ್ಲಿ ತತ್ತ್ವತಃ ಇರುವ ಭೇದವನ್ನು ದುರ್ಲಕ್ಷಿಸಿ ನಡೆಯದು. ಅಸ್ಪಷ್ಟಾರ್ಥದ ಎಂದರೆ ಅಪಾರದರ್ಶಕ ಜಲತತ್ತ್ವದ ಪ್ರತೀಕಗಳು, ಮತ್ತು ಸುಸ್ಪಷ್ಟ ನಿಶ್ಚಿತ ಅರ್ಥದ ಸೌರತತ್ತ್ವದ ಪ್ರಕಾಶದ ಪ್ರತೀಕಗಳು. 'ಸರಿಸಮಾನ' ಎಂದು ನಾವು ಅಪೇಕ್ಷಿಸಿದರೂ ವಿಶ್ವದ ನಿಯಮಕ್ಕೆ (ಎಂದರೆ ನಿಜವಾದ ಋತತತ್ತ್ವಕ್ಕೆ) ಇದು ವಿಪರೀತ; ಇಲ್ಲಿಯೇ ಮಾನವ ಕಲ್ಪಿತ-ಅವನ ಅಪ-ಈಕ್ಷಿತ ಅರ್ಥವು ಕೈಗೂಡದೆ ಹೋಗುವುದುಂಟು. ಅರ್ಥವನ್ನು ನಿರ್ಧರಿಸದೆ ಶ್ರದ್ಧೆ ವಹಿಸುವ 'ಸತ್ಯ'ವು ತನ್ನ ಅನಿಶ್ಚಿತ ಆಕೃತಿಯಿಂದಾಗಿ ಆಪ : ರಸತತ್ತ್ವಾಧಿಷ್ಠಿತ 'ಸತ್ಯ' (: ಏಕಂ) ಆಗಿ ಪರಿಣಮಿಸಲೇಬೇಕು! ಅನಿಶ್ಚಿತ ಅರ್ಥವೆಂದರೆ ಉಭಯಾರ್ಥ, ಏಕಕಾಲಕ್ಕೆ! (: ಅಮೃತಂ ಚೈವ ಮೃತ್ಯುಃ) ಸ್ವರೂಪ ಇನ್ನಾವಬಗೆಯ ಶಕ್ತಿ

ಒಳಗೊಂಡ ಅರ್ಥ! ಆದಕಾರಣ, ಅನಿಶ್ಚಿತ ಅರ್ಥದ 'ಸತ್ಯ'ದ ಆಗ್ರಹಕ್ಕೆ ಪ್ರತಿಷ್ಠೆಯಿರುವ ಸಾಮಾಜಿಕ ಜೀವನವು ತನ್ನ ಅವನತಿಗೆ-'ಪರಾ'ಗತಿಗೆ ತಾನೇ ಆಮಂತ್ರಿಸುತ್ತದೆ!

ಆದರು, ಇಲ್ಲಿ ಈ ಸಾಂಕೇತಿಕತೆಯೊಳಗಿನ ಒಂದು ನಿತಾಂತ ರಮ್ಯ ಹೃದ್ಯದೃಶ್ಯವು ಮನನೀಯವಿದೆ. ಇಂದ್ರನು, ಸೂರ್ಯನ ಪರ್ಯಾಯ ಎಂದರೆ ಪ್ರಕಾಶಸ್ವರೂಪನು; ವೃತ್ರ, ತ್ವಷ್ಟಾರ ನಾಗ ಎಂದರೆ ಕತ್ತಲೆಯ ಸೂಚಕ. ಪ್ರಕಾಶವು ಬರುತ್ತಲೆ ಕತ್ತಲೆ (ನಾಗ) ಹತವಾಗಲೇ ಬೇಕಷ್ಟೆ? ವೃತ್ರನನ್ನು ಕತ್ತಲೆ, ನಾಗ ಎಂದು ಬಗೆದಂತೆ ಚಂದ್ರನ ಪರ್ಯಾಯ ರೂಪವೆಂದೂ ವರ್ಣಿಸಲಾಗಿದೆ!* ಸೂರ್ಯ ರೂಪೀ ಇಂದ್ರನು ಹುಟ್ಟುತ್ತಲೆ ಇವನ 'ತಂದೆ' ಎಂಬ ಚಂದ್ರನು ಅಸ್ತಂಗತನಾಗಬೇಡವೆ? ಹೀಗಿರುವಾಗ ಇಂದ್ರ (ಸೂರ್ಯ) ದೇವನು ಪಿತೃಹಂತಕನು, ವೃತ್ರನನ್ನು ಕೊಂದ ಬ್ರಹ್ಮಹತ್ಯಾಪಾತಕಿ ಎಂಬ ವರ್ಣನೆಯ ಮೂಲಕ ಆಪ : ರಸಪಂಥೀಯರ ಪ್ರಚಾರ ತಂತ್ರವು ಮಾತ್ರ ಬಯಲಿಗ ಬರುತ್ತಿದೆ!

ಆಪ : ರಸಪಂಥೀಯ ನೇತಾರ : ಸಮಿತಿಗೂ ನಿಯಮ ವ್ಯವಸ್ಥೆಯ ಎಂದರೆ ಋತಸ್ವರೂಪೀ ಸತ್ಯದ (=ಹಗಲಿನ ಜೀವನ ರೂಪಿಸುವ ಆಚಾರಾಂಗದ) ಆವಶ್ಯಕತೆ ಎನಿಸಿದ್ದುಂಟು. ಅವರು ಮಾತ್, ಎಂಕಿ ಇಂತಹ ಸಾಂಕೇತಿಕ ಪ್ರತಿಮೆ ಸೃಜಿಸಿದ್ದೂ ಉಂಟು. ಆದರೂ ಈ ಪ್ರತಿಮೆ ರಸತತ್ತ್ವದ ಮಾಧ್ಯಮದಿಂದಾಗಿ, 'ಋತವು' ನಿಶ್ಚಿತ ಆಕೃತಿ ಸೂಚಕವಾಗಿ ಪರಿಣಮಿಸದ್ದು ಕಂಡು ಬರುತ್ತದೆ. ಅರ್ಹತೆ ಔಚಿತ್ಯ ಗಮನಿಸದೆ ಮಾನವ ಜೀವನ ಪಾತಳಿಯ ಮೇಲಿನ ಬೇಕಾದ ಆಶಯ=ಅರ್ಥವನ್ನು ಬೇಕಾದ 'ಮಾಧ್ಯಮ' ಸಂಕೇತದಿಂದ ಸೂಚಿಸುವ ಪ್ರಯತ್ನವು ವಿಫಲವಾಗುವ ಭೀತಿಯಿದೆ. ಭೌತಪಾತಳಿಯಲ್ಲಿ ಸಹ ಉಷ್ಣತೆಯ ವಾಹನಕ್ಕಾಗಿ ಆಯಾ ಉಷ್ಣತಾಮಾನದಂತೆ ಬೇರೆ ಬೇರೆ ಲೋಹಗಳ ಪ್ರಯೋಜನ ಪಡೆಯಬೇಕಾಗುತ್ತದೆ! ಅರ್ಥ : ನಿಯಮ : ವ್ಯವಸ್ಥಾ, ಸೂಚಕ ಮಾಧ್ಯಮವಾಗಲು, ಸ್ವಂತದ ಏನೂ ಆಕಾರವೇ ಇಲ್ಲದ ಆಪ : ರಸ ಸ್ವರೂಪೀ ತತ್ತ್ವವು ತೀರ ಅನರ್ಹ. ನೀರಿಗೆ ಸ್ವಂತದ ಆಕಾರವಿಲ್ಲ; ಮಾತ್ರವಲ್ಲ, 'ನೀರು' ಪಾರ-ದರ್ಶಕವಲ್ಲ! ನೀರಲ್ಲಿ ಬಿದ್ದ ನಾಣ್ಯ ಇರುವುದು ಒಂದು ಕಡೆ, ಕಾಣುವುದು ಇನ್ನೊಂದು ಕಡೆ! ನೀರು 'ಪ್ರಕಾಶ'ದ 'good conductor' ಆಗಲಾರದು! ಸುಮೇರಿನಲ್ಲಿ ಕೀ (ki) ಭೂದೇವಿ, ವೇದದ ಅದಿತಿಯಂತೆ ದೇವಮಾತೆ! ವಿಶ್ವಜನನಿ! ಸಮ್ರಾಜ್ಞಿ! ಎಲ್ಲರ ಹಣೆಬರೆಹ ಬರೆವ 'ಶಟಿಗೆ'ವ್ವ (ಷಷ್ಠಿದೇವಿ) ಪುಲ್ಲಿಂಗೀ ಆಪೋದೇವನೊಬ್ಬನಿದ್ದು ಅವನೇ ಸೃಷ್ಟಿ ಕರ್ತನು. (It typifies active productivity, conscious thought, creativity). ಈ ಆಪತತ್ತ್ವವೇ 'ಎಂಕಿ' ದೇವ![೫]

ಪುರಾತನ ಭಾರತೀಯ ಪ್ರತಿಭೆ, ಅಪತತ್ತ್ವಾಧಿಷ್ಠಿತ 'ಋತ'=ಸತ್ಯದ ಪ್ರತಿಮೆಯೊಳಗಿನ ಕೊರತೆಯನ್ನು ಊಹಿಸಿಕೊಂಡು, 'ಋತ' ಸ್ವರೂಪೀ ಸತ್ಯವು ಅನಿಶ್ಚಿತ ಆಕೃತಿರೂಪದ್ದು ಆಗದಂತೆ, ಇದನ್ನು (ಸೌರ) ಪ್ರಕಾಶ ತತ್ತ್ವಾಧಿಷ್ಠಿತ ಪ್ರತಿಮೆಯನ್ನಾಗಿ ರೂಪಿಸಿಕೊಂಡಿದ್ದಾಗಿ ಕಾಣುತ್ತಿದೆ. ಈ ತುಲನೆಯ ಮೂಲಕ. ಸಲಿಲರೂಪೀ ಅದಿತಿ ಪುತ್ರನೆಂಬ ಇಂದ್ರನು ಮತ್ತು ಸಲಿಲರೂಪೀ ತೈಮತ್ ಪುತ್ರನೆಂಬ ಎಂಕಿ ಇವರಿಬ್ಬರೊಳಗಿನ ಈ ಮೂಲ ಸಮಾನ ಆಕೃತಿಯನ್ನು ಲೆಕ್ಕಿಸಿ, ಆ ಬಳಿಕ ಈ ಎರಡೂ ಪಾತ್ರಗಳು ಬೇರೆ ಬೇರೆ ಬಗೆಯ ಆಕಾರ

---

* ವೃತ್ರನು ವಾಯುಮಂಡಲದ ರಾಕ್ಷಸರುಗಳಲ್ಲಿ ಬಹಳ ಮುಖ್ಯನಾದವನು. ಇವನ ಪ್ರಸ್ತಾವ ಋಗ್ವೇದದಲ್ಲಿ ಬಹಳಷ್ಟು ಸಲ ಬರುತ್ತವೆ. ಇವನೇ ಇಂದ್ರನ ಮುಖ್ಯ ಶತ್ರು. 'ವೃತ್ರಹಾ' ಎಂಬುದು ಇಂದ್ರನ ವೈಯಕ್ತಿಕ ವಿಶೇಷಣ. ವೃತ್ರನಿಗೆ ಸರ್ಪಾಕೃತಿ ಉಂಟು. ಅವನಿಗೆ ಕೈಕಾಲುಗಳಿಲ್ಲ. ಇದು ಋಗ್ವೇದ ಸಂಹಿತೆಯ ೧.೩೭-೭ ಮತ್ತು ೩.೩೦.೮ರಲ್ಲಿ ಉಕ್ತವಾಗಿದೆ. ವೃತ್ರನ ತಾಯಿ ದಾನು. ಈ ದಾನುಪದದಿಂದ ದಾನವ ಎಂಬ ಪದನಿಷ್ಪನ್ನವಾಗಿದೆ. ವೃ ಎಂಬ ಧಾತುವಿನಿಂದಲೇ 'ವೃತ್ರ' ಶಬ್ದ ನಿಷ್ಪನ್ನವಾಗಿದೆ. 'ವೃ' ಎಂಬುದಕ್ಕೆ ಆವರಿಸು, ಸುತ್ತುಗಟ್ಟು ಎಂಬ ಅರ್ಥವಿದೆ. ಬ್ರಾಹ್ಮಣಗ್ರಂಥಗಳಲ್ಲಿ 'ವೃತ್ರ' ಎಂಬುದಕ್ಕೆ ಚಂದ್ರ, ಅಮಾವಾಸ್ಯೆಯ ದಿನ, ಎಂಬ ಅರ್ಥಗಳುಂಟು. 'ವೃತ್ರ' ಎಂಬುದಕ್ಕೆ ಶಂಬಾ ಸಂಗ್ರಹಿಸುವ ಅರ್ಥ ಸಂಕೇತವು ಮೂಲವೇದದಲ್ಲೆ ಉಂಟು (ಸಂ)

ಪಡೆವುದನ್ನು ವಿಮರ್ಶಿಸುವುದು ಅಗತ್ಯ. ಪ್ರಕಾಶವು ನೇರವಾಗಿ ಬರುತ್ತದೆ; ನಡುವಣ ಕಿರಣ ವಕ್ರೀಭವನ-ಪರಾವರ್ತನ ಕ್ರಿಯೆಯು ಸಹ ಸೂಕ್ಷ್ಮ ಲೆಕ್ಕಕ್ಕೆ ಒಗ್ಗುತ್ತದೆ. 'ನೀರಿನ ನೆಲೆ' ಮಾತ್ರ ತಿಳಿಯದು, ಎಂಬ ಲೋಕೋಕ್ತಿಯೂ ಇಲ್ಲಿ ಅಭ್ಯಸನೀಯವಿದೆ.

ಋತ ಸ್ವರೂಪೀ ಸತ್ಯದ ಈ ಧಾರಣೆ (Concept), ಭಾರತೀಯ ಸಂಸ್ಕೃತಿಯು ಜಾಗತಿಕ ಜ್ಞಾನಭಾಂಡರಕ್ಕೆ ಇತ್ತ ಅಮೌಲಿಕ ಕಾಣಿಕೆ. ವಿಶ್ವಸ್ಥ 'ಸತ್ಯ' ಎಂದರೇನು, ಎಂಬುದನ್ನು ಗ್ರಹಿಸಿಕೊಳ್ಳಲು ಅಶಕ್ಯ; ಅಗಮ್ಯ. ಅಚಿಂತ್ಯವಾದ 'ಏಕಂ' (ಜೀವನ+ಮರಣ, ನೀತಿ+ಅನೀತಿ, ಹೀಗೆ ಏನೆಲ್ಲ ಪರಸ್ಪರ ವಿರೋಧೀ ಸಂಗತಿಗಳ ಸಂಕೀರ್ಣ ಪ್ರತಿಮೆ: Absolute) ಇದೇ ಒಂದು ಸತ್ಯ ಎಂಬ ಶ್ರದ್ಧೆಯು ಏನೆಲ್ಲ ಜನಾಂಗಗಳಲ್ಲಿ ಇರುವಾಗ, ಭಾರತೀಯ ಒಂದು ಸಂಪ್ರದಾಯವು ಸತ್ಯವು ಋತ (: ನಿಯಮ) ಬದ್ಧವಾಗಿದೆ ಎಂಬ ಶ್ರದ್ಧೆಯನ್ನು ತಾಳುತ್ತದೆ. ಈ ಶ್ರದ್ಧೆಗೆ ಸುಸಂಗತವಾದ ಆಚಾರಾಂಗ, ದೈವತ ಪ್ರತಿಮೆಗಳನ್ನು ರೂಪಿಸಿಕೊಳ್ಳುತ್ತದೆ. ಆದರೆ ಈ ಋತ: ಸತ್ಯ ಸ್ಪಷ್ಟತೆಯನ್ನು ಪಡೆಯದೆ ಅಜ್ಞಾನಜನ್ಯ ಕತ್ತಲಲ್ಲಿ ಮೂಲೆಗುಂಪಾಗಿ ಬಿದ್ದುಕೊಂಡಿರುವುದಾಗಿ ಇದೀಗ ಅರಿಕೆಗೆ ಬರತೊಡಗಿದೆ! ಸಂಸ್ಕೃತಿಯ ಅಂಗತ್ರಯದ ವೈಚಾರಿಕ ಭೂಮಿಕೆಯಿಂದ ಇದು ದೃಢಪಡುತ್ತಿದೆ.

(ಋತ=) ಸತ್ಯವು ಸಾಂಕೇತಿಕವಾಗಿದೆ. ಏಕಾಕೀ ಸಂಕೇತವು ಅರ್ಥವಿಹೀನ. ಮೂಲ ಋಗ್ವೇದ ಸಂಹಿತೆಯಲ್ಲಿ ಋತಾಧಿಷ್ಠಿತ ಸತ್ಯದ ವಿಚಾರಕ್ಕೇ ಪ್ರಾಶಸ್ತ್ಯವಿರಬೇಕು, ಎಂಬ ಮಾತು ದೃಢಪಡಬೇಕಾದರೆ ಋತ ಸತ್ಯಕ್ಕೆ ಸಂಬದ್ಧ ಸಮಸಾಮಯಿಕವಾದ ಇನ್ನೂ ಹಲವಾರು ಸಂಕೇತಗಳಲ್ಲಿ ಸುಸಂಗತಿ ಸುಸಂಬದ್ಧತೆಯಿದೆ-ಇತ್ತು ಎಂದು ಸಿದ್ಧವಾಗುವ ಆವಶ್ಯಕತೆಯಿದೆ. ಈ ವೇದದಲ್ಲಿಯೆ ದೊರೆವ ಪ್ರಮಾಣಗಳು, ಮಾದರಿಗಾಗಿ ಕೆಲವು : 'ಏಕಂ ಸತ್' ಇದೇ ಪ್ರಪಂಚದ ಮೂಲ ತತ್ತ್ವ, ಎಂಬ ಹಾಗೆ 'ಋತ : ಸತ್ಯವೇ ವಿಶ್ವಾಧಾರಕ ತತ್ತ್ವ' ಎಂಬ ಉಲ್ಲೇಖವೂ ಉಂಟು. ಈ ಸಮಾಜ ಸಮ್ಮುಖ ವೈಚಾರಿಕ ಜೀವನ ರೀತಿ ಪ್ರಚೋದಕ ಆದೇಶಮಂತ್ರದಿಂದ ಈ ಸಂಹಿತೆಯ ಮುಕ್ತಾಯವಾಗಿದೆ 'ಕೂಡಿ ನಡೆಯಿರಿ=ಸಂಗಚ್ಛಧ್ವಂ...' ಈ ಸಂಪ್ರದಾಯದಲ್ಲಿ ಸ್ವೈರ ಅನಿಯಂತ್ರಿತ ದೈವತ ಪೂಜೆ ಇಲ್ಲ; ಏಕೆಂದರೆ ಋತ ಪ್ರಜಾತ (ನಿಯಮವೆ ಜನ್ಮಪಿತ್ರ) ದೈವತ; ಋತ (ನಿಯಮ) ರಕ್ಷಣೆಯೇ ಕರ್ತವ್ಯವಾಗಿರುವ ಈ ದೈವತಗಳು ಋತಕ್ಕೆ ಅಧಿನವಾಗಿರಲೇಬೇಕು. ಮೃತ್ಯುರೂಪ ದೈವತಕ್ಕೆ ಜಗಲಿಯಮೇಲೆ ಇಂಬುಗೊಟ್ಟಿಲ್ಲ, ಕಸ್ಮೈದೇವತಾ ಸೂಕ್ತದಲ್ಲೆ ಮೊದಲಬಾರಿ ಹಿಂಬಾಗಿಲಿನಿಂದ ಈ ವಿಚಾರ ಒಳನುಗ್ಗಿ ಬಂದಿದೆ! ಹುಟ್ಟಿನಿಂದಲೇ ಕತ್ತಲೆ, ಮೃತ್ಯುರೂಪನೆಂಬ ವೃತ್ರ : ಅಹಿ=ನಾಗವೈರಿಯೆನಿಸಿರುವ ಇಂದ್ರ (: ಸವಿತೃ) ಈ ಸಂಪ್ರದಾಯದ ಆರಾಧ್ಯದೈವತವಾಗಿದೆ. ಅ(ಮೂರ್ತ)ಸತ್ತಿನೊಳಗಿಂದ (ಮೂರ್ತ) ಸತ್=ಸತ್ಯವು ಕಾಣಿಸಿಕೊಳ್ಳುತ್ತದೆ;-(ಅಸತಃ ಸತ್ ಅಜಾಯತ); ಅಥವಾ ಕವಿಯಂತೆ ಸವಿತೃದೇವನ ಕೃಪೆಯಿಂದ, ಈ ವಿಶ್ವಾರೂಪಾಣಿ ಕಾಣುವ- ಅರಿತುಕೊಳ್ಳುವ ಪ್ರಜ್ಞೋದಯವಾಗುತ್ತದೆ. ಸವಿತೃವು ಎರಡು ಕತ್ತಲೆಗಳ (ನಿನ್ನೆ-ನಾಳೆಗಳ) ನಡುವಣಿಂದ ಬೆಳಗುತ್ತ ಹೊರಟಿದ್ದಾನೆ.

ಋತ : ಸತ್ಯದ ಭೂಮಿಕೆಯ ಸಮಯಾಚಾರಪ್ರೇರಕ ಆದೇಶಮಂತ್ರ, ಈ ಜೀವನ ರೀತಿಯ ಪ್ರೇರಕ ದೈವತಮಂಡಲಾದಿ ಸುಸಂಬದ್ಧ ಸಂಗತಿಗಳ ಸೂಚಕ ಸಾಂಕೇತಿಕ ಪ್ರತಿಮೆಗಳು ಇರುವ ಈ ವೇದದಲ್ಲೆ ಇವೆಲ್ಲವು ಸ್ಪಷ್ಟಭವಾಗಿ ಬರಡಾದುದು ಹೇಗೆ? ಈ ಪ್ರಶ್ನೆಗೂ, ಸತ್ಯಾನ್ವೇಷಣೆಯ ಸಂಕೇತಶಾಸ್ತ್ರದ ತಂತ್ರದಿಂದ ಉತ್ತರವನ್ನು ಕಂಡುಕೊಳ್ಳಬಹುದಾಗಿದೆ. ಸುಮೇರು ಸಂಸ್ಕೃತಿಯ ವ್ಯಾಸಂಗೀ ವಿದ್ವಾಂಸರೇ ಆಪ: ರಸ ತತ್ತ್ವದ ಸಾಂಕೇತಿಕ ಆಕೃತಿ : ಅರ್ಥವನ್ನು ಸೂತ್ರರೂಪದಲ್ಲಿ ಸೊಗಸಾಗಿ ಹೇಳಿದ್ದಾರೆ :

> The ways of water are devious. It avoids rather than surmounts obstacles, goes round and yet gets to its goal!

ಸುಮೇರಿನ ಗುರುವರ್ಗವು ಪಡೆದ ಮಾಯಾ ಮಂತ್ರಶಕ್ತಿಯ (priests' spells) ನಿಧಾನವೇ ಈ ಆಪತತ್ತ್ವ, ಎಂದು ಅಲ್ಲಿಯ ಉಲ್ಲೇಖಗಳಿಂದ ಗೊತ್ತಾಗುತ್ತದೆ.[೬] ಇಂದಿನ ಋಗ್‌ವೇದ ಸಂಹಿತೆಯು ಆಪ :

ರಸಪಂಥೀಯ ಮೋಡಿಯ ಮಾಟದ ಶಕ್ತಿಯ ವಿವಿಧ ಪ್ರತಿಮಾ ಸಂಕೇತಗಳ ಅಪೂರ್ವ ಗಣಿ-ಖಣಿಯೆ ಆಗಿದೆ. ಆದರೂ ಕೆಲವು ಮಾದರಿ ನೋಡಿ : ಆಪ : ಸಲಿಲ ಸ್ವರೂಪೀ ಆದಿತಿಯೆ ತಾಯಿ ಎಂದು ವರ್ಣಿತ 'ಇಂದ್ರ', ಸೂರ್ಯನ ಪರ್ಯಾಯ ಪ್ರತಿಮೆ, ಎಂಬಲ್ಲಿ ಇರುವ ವಿಸಂಗತಿ ಗಮನಿಸಿದಲ್ಲಿ, ಅಪೋವತ್ಸನಾಗುವ ಇಂದ್ರನು ಇಂದು=ರಸ ಸ್ರವಿಸುವ ಮಧು-ಚಂದ್ರನೇ ಆಗುತ್ತಾನೆ! ಮಿತ್ರಾ-ವರುಣ ಈ ಜೋಡು ದೈವತನಾಮವೇ ಒಂದು ಯಾತು ನಿರ್ಮಿಸುತ್ತಿದೆ : ಮಿತ್ರಸಂಕೇತವು ಸೂರ್ಯವಾಚಕವೆಂಬುದು ಸರ್ವಮಾನ್ಯವಿದೆ. 'ವರುಣ'ನು ರಾತ್ರೀದೇವರೆಂದು ಸೂಚಿಸುವ ಸೂಕ್ತಗಳಿವೆ! ಸಾಂಪ್ರದಾಯಿಕ ಶ್ರದ್ಧೆಯಂತೆ ಇವನು ರಾತ್ರೀ ದೇವರೇ. 'ಸಮುದ್ರದಲ್ಲಿ ಅರಮನೆ'ಯಿರುವ ಈ ದೇವನು ಚಂದ್ರನೇ ಆಗುತ್ತಾನೆ. ಹಗಲಿನ ದೇವನಾದ ಸೂರ್ಯವಾಚಕ 'ಮಿತ್ರ' ಸಂಕೇತವು ಸಂಗಡ ಇರುವ ವರುಣನು ರಾತ್ರಿದೇವರು ಇರಲೇಬೇಕು! ಅಲ್ಲದೆ ಆದಿತ್ಯರಲ್ಲಿ ಅಗ್ರಗಣ್ಯನಾದ ವರುಣನು ಅದಿತಿಪುತ್ರನು. ಅಲ್ಲದೆ, ಅಪ್-ಸರೆ ಊರ್ವಶೀ ಪತಿ! ಹೀಗೆ ಮಿತ್ರಾ ವರುಣರು= ಸೂರ್ಯ-ಚಂದ್ರರ ಸಂಯುಕ್ತ ಪ್ರತಿಮೆಯಾಗುತ್ತಾರೆ! ಎಂದರೆ ಇದು ಅಮಾವಾಸ್ಯೆ ಅಥವಾ ಸೂರ್ಯಗ್ರಹಣ ಸೂಚಕ ದೃಶ್ಯವಾಯ್ತು. ಆದಿತ್ಯರ ತಾಯಿ ಎಂಬ ಅದಿತಿಯ ಸ್ತುತಿಯು ಹತ್ತೂ ಮಂಡಲದಲ್ಲಿ ಬರುವುದರಿಂದ ಇಡೀ ಋಗ್ವೇದವು ರಾತ್ರೀ ಸ್ತೋತ್ರವಾಗುತ್ತದೆ. ಅಲ್ಲದೆ ಋಗ್ವೇದದಲ್ಲಿ ಸಮ್ರಾಟನೆನಿಸಿದ ವರುಣನ ಸ್ತೋತ್ರಗಳು ಇಲ್ಲದ ಮಂಡಲವಿಲ್ಲ. ಈ ಬಗೆಯಿಂದಲೂ ಈ ವೇದವು ರಾತ್ರೀ ಸಮಯಾಚಾರಗಳ ವರ್ಣನೆಯ ಗ್ರಂಥವೇ ಆಗುತ್ತದೆ. ಈ ಯಾತುವಿನ ಬಗೆಗೆ ಇನ್ನೂ ಸಂದೇಹವಿದ್ದರೆ ವರುಣನಿಗೆ ರಾ-ಜನ್ ಎಂದು ಇರುವ ನಾಮವಿಶೇಷವನ್ನು ಗಮನಿಸಬೇಕು. 'ರಾ-ಜನ್' ರಾಕಾಪತಿ, ಚಂದ್ರನಲ್ಲದೆ ಬೇರೆಯಾರೂ ಅಲ್ಲ ಋಗ್‌ವೇದದಲ್ಲಿ, ರಾ-ಜನ್ ಪದವಿ ಕೊನೆಗೆ ಸೋಮನಾಮಧಾರೀ ಚಂದ್ರನಿಗೆ ಅರ್ಪಿತವಾಗಿದೆ-ಸೋಮ ಸೂಕ್ತಗಳಲ್ಲಿ, ಇಂತಹ ಎಲ್ಲ ಮಾಯಾವೀ ಪ್ರಕಾರಗಳು ಇವೆ. ಅವುಗಳನ್ನು ವಿವರಿಸುವ ಸ್ವತಂತ್ರ ಪ್ರಬಂಧವೇ ಅವಶ್ಯ. 'ಏಕಂ' ಸ್ವರೂಪೀ ಸತ್ಯದ ನಿವೇದನೆಯಲ್ಲಿ ಈ 'ಯಾತು' ಚಮತ್ಕಾರವು ಅನಿವಾರ್ಯ. ಒಂದು ಕೊಳ್ಳಿಯನ್ನು ವೇಗದಿಂದ ತಿರುಗಿಸುತ್ತಲೆ ಒಂದು ವರ್ತುಲದ ವಿವಿಧ ಆಕೃತಿಗಳು ಉಂಟಾಗುವುದು ಕಂಡರೂ ಅಲ್ಲಿ ಇದ್ದುದು ಒಂದೇ ಕೊಳ್ಳಿ!

ಸಮಸಾಮಯಿಕ ವೈಚಾರಿಕ ಆಕೃತಿ ಸೂಚಕ ಸಂಕೇತ : ಪ್ರತಿಮೆಗಳ ಮೂಲಕ ಅರಿಕೆಗೆ ಬರುವ ಸಮಯ : ಆಚಾರಗಳು, ಮತ್ತು ಈ ಆಚಾರಗಳನ್ನು ರೂಪಿಸಿದ, ಹಾಗೂ ಕಾಲಕಾಲದ 'ಸಮಯ'ಕ್ಕೆ (ಆಗಿನ ಅಭಿರುಚಿಗೆ) ಸರಿಹೋಗುವಂತೆ ಆ ಆಚಾರಗಳನ್ನು ಮಾರ್ಪಡಿಸುತ್ತ ಬಂದ ಶಿಷ್ಟರ-ನೇತಾರ ಸಮಿತಿಯ ಸ್ವರೂಪ-ಸ್ವಭಾವವು ಸಹ ಈ ಅನ್ವೇಷಣ ಪದ್ಧತಿಯಿಂದ ಬೆಳಕಿನಲ್ಲಿ ಬರಬಲ್ಲುದು. ಋಗ್‌ವೇದದಲ್ಲಿ ಸೌರ ಜೀವನರೀತಿಯ ನಿಯಮ : ವ್ಯವಸ್ಥೆಯನ್ನು ಸೂಚಿಸುವ ಋತ ಸಂಕೇತದ ಅರ್ಥವು ದುರ್ಲಕ್ಷಿಸಲ್ಪಡುತ್ತದೆ; ಋತ : ಅರ್ತವರೇತ (: ಚಂದ್ರಾಃ ಆಪಃ=ಅಗ್ನಿ [ಗೌತಮ]) ಸೂಚಕ ಅರ್ಥವು ಪ್ರಾಶಸ್ತ್ಯ ಪಡೆಯುತ್ತದೆ. ಋತಃ ಸತ್ಯದ ಸಂರಕ್ಷಕನೆಂಬ (ಮಿತ್ರಾ) ವರುಣನು ಚಂದ್ರನೆಂಬುದು ಸಿದ್ಧವಾಗುತ್ತದೆ. ಏಕೆಂದರೆ ಚಂದ್ರನೇ 'ರಸ'ದ ಸ್ವಾಮಿ. ಅವನು ತಿಂಗಳ ಮುಟ್ಟಿಗೆ ಕಾರಣನಾದವನು; ಈ ಕಾರಣದಿಂದ ರಾ-ಕಾ ನಾಮಸಂಕೇತದ (ಹುಣ್ಣಿಮೆ) ಚಂದ್ರನು ಸ್ತ್ರೀ-ಶಕ್ತಿಯ ಪ್ರತೀಕ! ಆದರೆ, ಈ ಚಂದ್ರಮನು ಋಗ್‌ವೇದದಲ್ಲಿ ಪುಲ್ಲಿಂಗಿಯಾಗುತ್ತಾನೆ; ಇಷ್ಟೂ ಸಾಲದೆ ಸೌರ ಪಂಥೀಯ 'ಸೋಮ' ನಾಮವನ್ನು ಧರಿಸುತ್ತಾನೆ! ಎಂದರೆ, ರಾತ್ರಿಯ ಕಾಲದ ಈ ನೂತನ 'ಸಮಯ' ರೂಢಿಸಿದ ನೇತಾರರು, ಆನಂದ ಬ್ರಹ್ಮಸಿದ್ಧಿ ಎಂದು ಉಪನಿಷತ್ಕಾಲದಲ್ಲಿ ವರ್ಣಿಸಲ್ಪಡುವ, ಇಂದಿಗೂ ದಿವ್ಯಾಧ್ಯಾತ್ಮಮಾರ್ಗಿಗಳ ಜೀವನಾದರ್ಶವಾಗಿರುವ ಸಂಪ್ರದಾಯದ ಪ್ರಸ್ಥಾಪಕರು. ಇವರು ಹೀಗೆ ಋಗ್ವೇದದಲ್ಲಿಯೇ ಅವಿತುಕೊಂಡಿರುವುದು ಬಯಲಿಗೆ ಬರುತ್ತಿದೆ. ಯಾವ ಧರ್ಮ-ಸಂಪ್ರದಾಯವೇ ಆಗಲಿ, ಹಿಂದುಮುಂದಿನ ಸಂಬಂಧವಿಲ್ಲದೆ ಫಕ್ಕನೆ ಹೊರಬರದು ಅಥವಾ ಒಮ್ಮೆಲೆ ಇಲ್ಲವಾಗದು. ಇದು ವಿಶ್ವಸ್ಥ ಒಂದು ನಿಯಮ (: ಅರ್ಥ : ವ್ಯವಸ್ಥೆ). ಆದರೆ, ನಿಯಮ ಸ್ವರೂಪೀ ಋತ: ಸತ್ಯದ ಅಸ್ತಿತ್ವವು, 'ಏಕಂ ಸ್ವರೂಪೀ ಸತ್ (: ಸತ್ಯದ) ಉಪಾಸಕರಿಗೆ ಸರ್ವಥಾ ಮಾನ್ಯವಿಲ್ಲ! ಇದು ಅಮಾನ್ಯವಿರಲು ಒಂದಕ್ಕಿಂತ ಹೆಚ್ಚು ಕಾರಣಗಳಿವೆ. ಆದರೆ,

ಋತ; ಸತ್ಯವು ಭಾರತೀಯ ಜೀವನರೀತಿಯಿಂದ ಫಕ್ಕನೆ ಅದೃಶ್ಯವಾಗಿಲ್ಲ. ಇದು ಕ್ರಮವಾಗಿ ತನ್ನ ಪ್ರಭಾವ ಕಳಕೊಂಡುದನ್ನು ಸೂಚಿಸುವ ಪ್ರಮಾಣಗಳು ಮಹಾಭಾರತ ರಾಮಾಯಣಗಳಲ್ಲಿ ದೊರೆಯುತ್ತವೆ. ಯಾವುದೇ ಆಚಾರ-ವಿಚಾರ ತನ್ನ ತಾನೇ ನಷ್ಟವಾಗುತ್ತಿರುವುದಿಲ್ಲ;

೧. 'ವಿಶ್ವಸ್ಥ ನಿಯಮಸ್ವರೂಪೀ ಋತ-ಸತ್ಯ ಎಂದರೆ ಇದು' ಎಂಬ ಹಾಗಿನ ಸಾಂಕೇತಿಕ ಪ್ರತಿಮೆಯೇ ತಿರುವುಮುರುವಾದರೆ, ಸ್ಥೂಲದೃಶ್ಯದ ಮೂಲಕವಾಗಿಯೇ ವಿಶ್ವಸ್ಥ ಸೂಕ್ಷ್ಮಾರ್ಥವನ್ನು ಅರಿಯುವ ಚಟದವರಿಗೆ ಅಥವಾ ಸಾಮಾನ್ಯ ನರಪ್ರಾಣಿಗಳ ಪಾತಳಿಯ ಜನಕ್ಕೆ, ನಿಜ ಯಾವುದು, ನಾಟಕ ಯಾವುದು ಗೊತ್ತಾಗುತ್ತಿರುವುದಿಲ್ಲ. 'ಗಾಂಧೀ ಟೋಪೀ' 'ಖಾದೀ ಉಡುಪು' ಸೆರೆಮನೆಗೆ ಹೋದ ಸತ್ಯ ಆಗ್ರಹಿ' ಇಂತಹ ಇಂದಿನ ಭ್ರಷ್ಟಸಾಂಕೇತಿಕ ಪ್ರತಿಮೆಗಳೆ ಇದಕ್ಕೆ ಉದಾಹರಣೆ.

೨. ಅಥವಾ ನೇತಾರ ವರ್ಗವು ತಮ್ಮ ಕಲ್ಪಿತ ಅರ್ಥ : ನಿಯಮವನ್ನೇ ವಿಶ್ವಸ್ಥ ನಿಯಮ=ಅರ್ಥ ಇದೇ (ಋತ:) ಸತ್ಯ ಎಂಬ ಹಾಗಿನ ಸಂಭ್ರಮ ನಿರ್ಮಿಸುವಾಗಲೂ ಬಾಳಿನಲ್ಲಿ 'ಅರ್ಥ'ವೇ ಇಲ್ಲ ಎಂಬ ಪ್ರತೀತಿ ಬರತೊಡಗುತ್ತದೆ.

ಋಗ್ವೇದ ಸಂಹಿತೆಯೊಳಗಿನ ಮಿತ್ರನಂತೆ ಸೌರನೆನಿಸಿದ ವರುಣನು 'ಚಂದ್ರ'ನಿದ್ದಾನೆ ಎಂದು ಬಾಯ್ಬಿಟ್ಟು ಹೇಳದಿದ್ದರೂ 'ಯಾಸಾಂ ರಾಜಾ ವರುಣಃ' ಎಂಬ ಸೂಕ್ತದಲ್ಲಿ ಇವನು ಸಲಿಲ-ಆಪಗಳ ಪತಿ ಎಂಬ ವರ್ಣನೆ ಉಂಟು! ಮಿತ್ರ (ಸೂರ್ಯ) ದೇವನ ಸಂಗಾತಿ ವರುಣನು ರಾತ್ರಿಯ ದೇವನೇ. ಸವಿತೃವಿನ ವರ್ಣನೆಯಂತೆ ತೋರುವ ಈ (ವರುಣ) ಸೂಕ್ತದಲ್ಲಿ ಸವಿತೃವೂ 'ಅಪರಿ' ಅಸ್ತಂಗತನಾಗಿ ವರುಣನನ್ನು ಸೇರಿದ ಸೂಚನೆಯಿದೆ. 'ವರುಣಃ ಯೋನಿಂ ನಿಮಿಷಿ (ನಿಮೇಷೇ) 'ಭಗಂ ಧಿಯಂ' ಸಂಕೇತದಿಂದ ಸವಿತೃವನ್ನು ಸೂಚಿಸಲಾಗಿದೆ ಈ ಸೂಕ್ತದಲ್ಲೇ! 'ವರುಣೋ ಯಾದಸಾಂ ಅಹಂ, ಎಂಬ ವಿಷ್ಣು ಕೃಷ್ಣನೂ 'ಭಗ'-ವಂತನಾದುದು ಹೇಗೆ ಎಂಬುದರ ಮೂಲಾಧಾರವು ಹೀಗೆ ಈ ವೇದದಲ್ಲೆ ಇದೆ! ಎಂದರೆ, ಸವಿತೃವು ವಿಶ್ವಪ್ರಸವ ಯೋನಿ-ಭಗವಾಗಿ ಋ. ವೇದದಲ್ಲೆ ತೆರೆಯ ಮರೆಯಲ್ಲಿ ಮಾರ್ಪಟ್ಟುದು ಸಾಕಾಗದೆ ಋತ : ಸತ್ಯದ ಭೂಮಿಕೆಯನ್ನು ಸಂಪೂರ್ಣ ನಾಮಾವಶೇಷ ಮಾಡುವ ಪ್ರಯತ್ನಕ್ಕಾಗಿಯೆ ಮಹಾಭಾರತದ ಭಗವಂತನು ಅವತರಿಸಿದ್ದು ಕಾಣುತ್ತದೆ.

ಋಗ್‌ವೇದದಲ್ಲಿ, ಇನ್ನೂ ಒಂದು ಬಗೆಯಲ್ಲಿ ಜೀವನ=ಪ್ರಕಾಶ (=ಸೂರ್ಯ) ತತ್ತ್ವವನ್ನು ನಿಷ್ಪ್ರಯೋಜಕ ವಾಗಿಸಿದ್ದುಂಟು : 'ಸಾರ್ಪರಾಜ್ಞೀ ಸೂರ್ಯೋ ವಾ'! ಈ ಸರ್ಪ=ಚಂದ್ರ (=ವೃತ್ರ) ಈ ಸಮೀಕರಣ ಮರೆಯಲಾಗದು. ಸೋಮನಾಮದ ಚಂದ್ರನೊಡನೆ 'ಸೂರ್ಯಾ' ವಿವಾಹ ಮಾಡಿಸಿದ್ದುಂಟು[2] ಇದು ಇಷ್ಟು ಸಾಕಾಗದೆ, ಕುಂಡಲಿನೀ 'ಸರ್ಪ' ಸಹಸ್ರಾರದಲ್ಲಿ (ತಲೆ=ವಿಚಾರ=ಪ್ರಕಾಶದ ಎಡೆ) ಹೊಕ್ಕು ಕುಳ್ಳಿರುವಲ್ಲಿ 'ಬ್ರಹ್ಮ ಆನಂದ' ಸಿದ್ಧಿ ಎಂದರೂ, ಮಿತ್ರಾ-ವರುಣ=ಸೂರ್ಯ-ಸರ್ಪ,= ಸೂರ್ಯಾ-ಸೋಮ, 'ಏಕಂ' ಸ್ವರೂಪೀ ಸತ್ಯವೇ ಇದು! ವಾಗರ್ಥಾವಿವ ಸಂಪೃಕ್ತೌ ಜಗತಃ ಪಿತರೌ=ಸೂರ್ಯಾ-ಚಂದ್ರಮಸೌ! ವಿವಸ್ವಾನ್ (:ಸೂರ್ಯಾ-ಸವಿತಾ) ದೈವತಕ್ಕೆ ('ಬ್ರಹ್ಮ') ಯೋಗ ದೀಕ್ಷೆಕೊಟ್ಟವನು ನಾನೇ ಎಂಬ ವಿಷ್ಣು-ಕೃಷ್ಣನು. ಭಗ-ವಂತನೆಂಬಲ್ಲಿ ಪ್ರಚ್ಛನ್ನ ಸವಿತೃವಿಡಂಬನೆಯೆ ಉಂಟಲ್ಲವೆ? ಇದೂ ವಿವಸ್ವಾನ್ (ಸೂರ್ಯ)+ಕೃಷ್ಣ=ವಿಷ್ಣು=ನಾರಾಯಣ=ಸರ್ಪ (ಚಂದ್ರ) ಎಂಬ ಸಮೀಕರಣವೇ ಆಗುತ್ತಿರುವುದನ್ನು ಗಮನಿಸಬೇಕು! 'ಪಿಂಡ-ಬ್ರಹ್ಮಾಂಡ' ತತ್ತ್ವದಲ್ಲಿ ಶ್ರದ್ಧೆ ದೃಢವಾಗಲು ವಿಶ್ವಾನರ='ವೈಶ್ವಾನರ' ಈ ಸಾಂಕೇತಿಕ ಪ್ರತಿಮೆ ಅಡ್ಡಬರದೆ ಇರಲಾರದು. ಋ. ವೇದದಲ್ಲಿ ಇದು ಪ್ರಚ್ಛನ್ನವಾಗಿ ಭಗ್ನವಾಗಿದೆ. ಆದರೆ, ಇಷ್ಟೆ ಸಾಕಾಗಿಲ್ಲ. ವ್ಯಕ್ತಿಗಳ ದೇಹಸ್ಥ 'ಕ್ಷುಧಾ' ರೂಪ ಅಗ್ನಿ='ಅಹಂ ವೈಶ್ವಾನರಃ ಭೂತ್ವಾ' ಪ್ರಾಣಿಗಳ ದೇಹದಲ್ಲಿ ಇದ್ದೇನೆ ಎಂಬ ಗೀತೆಯ ಭಗ-ವಂತನ ಹೇಳಿಕೆಯೊಳಗಿನ ಮಾಯಾವೀತನವು ಒಮ್ಮೆಲೆ ಗಮನಕ್ಕೆ ಬರುವುದಿಲ್ಲ; ಋಗ್‌ವೇದ

ದೊಳಗಿನ 'ಕ್ಷುಧಮಿತ್ ವಧಂ' ಎಂಬ ಶಬ್ದ ಪ್ರತಿಮೆಯಲ್ಲಿ, ವೈಶ್ವಾನರನ ಕೊಲೆಯ ಪೂರ್ವ ಯೋಜನೆಯನ್ನು ಕಾಣಬಹುದು. 'ಪ್ರಪಂಚವು ಮೃತ್ಯುವಿನಿಂದ ಆವರಿಸಲ್ಪಟ್ಟಿದೆ' ಎಂಬ ಉಪನಿಷತ್ತಿನ ವರ್ಣನೆಯಲ್ಲಿ ಈ ಕ್ಷುಧೆಯ ವಿರಾಟ್ ರೂಪದರ್ಶನ ದೊರೆಯುತ್ತದೆ.[೮] ಗೀತೆಯಲ್ಲಿ ಸ್ಮಶಾನ ರೂಪ ವಿರಾಟವಿಶ್ವರೂಪದರ್ಶನ ಮಾಡಿಸಿ, 'ಕಾಲೋಽಸ್ಮಿ ಲೋಕಕ್ಷಯ ಕೃತ್ ಪ್ರವೃದ್ಧ ಮೃತ್ಯುಶಕ್ತಿ ತಾನೇ ಎಂದು ತನ್ನ ನಿಜಸ್ವರೂಪವನ್ನು ಬಹಿರಂಗಪಡಿಸುವ ಭಗ-ವಂತನೇ ಹೇಳುತ್ತಾನೆ : 'ಅಹಂ ವೈಶ್ವಾನರಃ ಎಂದು!

ವೈಶ್ವಾನರ-ವಿಶ್ವಾನರ (Universal Man) ಇದು, ಮಾನವ ಸಮಾಜರೂಪ ಅಮೂರ್ತ 'ಸಮಷ್ಟಿಯ'ನ್ನು ಗ್ರಹಿಸಿಕೊಳ್ಳಲು ನಿರ್ಮಿತವಾದ ಒಂದು ಶಬ್ದಸಂಕೇತ. ಸಮಾಜ ಸಮ್ಮುಖ ಜೀವನ ಪ್ರೇರಕವಾದ ಈ ಶಬ್ದ-ಪ್ರತಿಮೆ ಭ್ರಷ್ಟವಾಗದೆ ಏಕಾಂತಿಕ ವ್ಯಕ್ತಿನಿಷ್ಠೆ. 'ಆತ್ಮಾರ್ಥೇ ಪೃಥಿವೀಂ ತ್ಯಜೇತ್' ಎಂಬ ಆದೇಶ ಹಾಸ್ಯಾಸ್ಪದವಾಗಲಿದೆ. ಬಾಳಿನಲ್ಲಿ ವಿಶ್ವ-ನರನ ಉಪಾಸನೆಗೆ ಪ್ರಾಶಸ್ತ್ಯವು ಬಂದುದಾದರೆ ಆ ಜನಗಣದಲ್ಲಿ 'ಗುರುವೇ ದೇವರು' ಆಗಿ ಉಳಿಯಲು ಶಕ್ಯವಿಲ್ಲ! ವೈಶ್ವಾನರ(:ಅಗ್ನಿ) ಉಪಾಸನೆಯೆಂದರೆ ವಿಶ್ವಸ್ಥ ತೇಜ : ಪ್ರಜ್ಞೆಯ ಜಾತವೇದ 'ಸಮಷ್ಟಿ' ಶಕ್ತಿಯನ್ನು ಮೆಚ್ಚಿಸುವ ರೀತಿಯ ಬಾಳುವೆ. ಇದರಲ್ಲಿ ಸತ್ತಮೇಲಿನ ಸ್ವರ್ಗದ ಆಮಿಷಕ್ಕೆ ಅವಕಾಶವಿಲ್ಲ. ಆದರೆ ಈ ದಾರಿಯು ಬದಲಾದುದನ್ನು ಸೂಚಿಸುವ 'ಪುರುಷ' ಯಜ್ಞದ, 'ಅಶ್ವತ್ಥ' ಉಪಾಸನೆಯು ಆರಂಭವಾದುದನ್ನು ಸೂಚಿಸುವ ಸೂಕ್ತಗಳು, ಈ ಸಂಹಿತೆಯಲ್ಲಿಯೆ ಉಂಟು[೯] 'ಹಿರಣ್ಯಗರ್ಭಃ ಸಮವರ್ತತ ಅಗ್ರೇ. ಭೂತಸ್ಯ ಜಾತಃ ಪತಿಃ ಏಕಃ ಆಸೀತ್' ಎಂಬ ಈ 'ಕ(ಂ)' ಬ್ರಹ್ಮೋಪಾಸನೆಯ ಸೂಕ್ತವೂ ಈ ದೃಷ್ಟಿಯಿಂದ ಅಭ್ಯಸನೀಯವಿದೆ. ಕಂ+ಖಂ ಬ್ರಹ್ಮ(ಸಂ) ಯೋಗವು ಸು-ಖಂ (=ಆನಂದ) ಸಿದ್ಧಿ. ಇದೇ ಬಾಳಿನಲ್ಲಿ ಗಂತವ್ಯ ಸ್ಥಾನ ಎಂಬ ಸಂಪ್ರದಾಯವು ಪ್ರಭಾವಶಾಲಿಯಾಗುವುದಕ್ಕೆ ಸಾಮಾಜಿಕ ಸಮಷ್ಟಿಯ=ವೈಶ್ವಾನರ ದೈವತದ ಪ್ರಜ್ಞೆ ನಶಿಸುವುದು ಅವಶ್ಯವಿದೆ. ಇಹಲೋಕದೊಳಗಿನ (ಸು) 'ಖಂ' ಬೇಗನೆ ದುರ್-ದುಸ್-ದುಃ 'ಖಂ' ಆಗಿ, 'ಹೆಣ್ಣೆಂಬುದು ಮಾಯೆ', 'ಹೊನ್ನೆಂಬುದು ಮಾಯೆ'. ಈ ಪ್ರಪಂಚ ನಶ್ವರ... ಎಂಬ ಅನುಭಾವ ಮೂಡಲೇಬೇಕು! 'ಜನ್ಮ-ಮೃತ್ಯು-ಜರಾ-ವ್ಯಾಧಿ'ಗಳು ಅಪರಿಹಾರ್ಯ! 'ತಸ್ಮಾತ್ ಅಪರಿಹಾರ್ಯ ಅರ್ಥೇ ತತ್ರ ಕಾ ಪರಿದೇವನಾ?' ಎಂದು ಒಂದು ನಾಲಗೆಯಿಂದ ಉಪದೇಶಿಸುವ ಭಂಗವೇತನೇ, ಹುಟ್ಟು ಸಾವುಗಳ ಕೋಟಲೆಯಿಂದ ತಪ್ಪಿಸಿಕೊಳ್ಳಲು ವೈಯಕ್ತಿಕ ಮೋಕ್ಷ ಸಿದ್ಧಿಗಾಗಿ ಬಾಳನ್ನು ಮುಡುಪಲು ಅಪ್ಪಣೆಕೊಡಿಸಿದ್ದಾನೆ!

ಬುದ್ಧಿವಂತಿಕೆಯ ಅಹಂಕಾರ: 'ತಾನು ಕಾಣುತ್ತಿದ್ದೇನೆ'; "ಇದು ನನ್ನ ವಿಚಾರ" ಎಂದು! ಆದರೆ, ಮನುಜರಿಗೆ ಕಾಣುವುದೂ ತಿಳಿಯುವುದೂ, ಅವರು ಪಡೆದ ಸಂಸ್ಕಾರ ಹಾಗೂ (ಚಿಕ್ಕಂದಿನಿಂದಲೇ ನುಂಗಿರುವ, ಮೆಚ್ಚಿ ಅರಗಿಸಿಕೊಂಡಿರುವ) ಭಾಷಿಕ ಶಬ್ದ ಪ್ರತಿಮೆಗಳ ಪ್ರೇರಣೆ-ಪ್ರಚೋದನೆಯ ಮೂಲಕವೇ, ಪ್ರಾಧಾನ್ಯದಿಂದ! ವೈಶ್ವಾನರ (ವಿಶ್ವಾ-ನರ) ಈ ಶಬ್ದ-ಪ್ರತಿಮೆಯ ಉಪಾಸಕ ವರ್ಗವೂ ಈ ಸಾಂಕೇತಿಕ ಪ್ರತಿಮೆ ವಿಕೃತವಾಗುವುದರೊಡನೆ ಜೀವನದಲ್ಲಿ ಸಮಾಜ ಸಮ್ಮುಖ ಋತ=ಸತ್ಯದ ದೃಷ್ಟಿಕೋನಕ್ಕೆ ಎರವಾಗುತ್ತ ಬರುತ್ತದೆ. ಏಕಂ ಸ್ವರೂಪೀ ಸತ್ಯದ ಉಪಾಸನೆಯ ರೇತ : ರಸಾ ನಂದೀ ಭೂಮಿಕೆಯ ತತ್=ಮಯತೆಯ ಅನುಷ್ಠಾನರತ ರಾಗುವಲ್ಲಿಯೇ ಧನ್ಯತೆಯನ್ನು ತಾಳುತ್ತದೆ! ಆದರೆ, 'ವೈಶ್ವಾನರ' ಸಂಕೇತಕ್ಕೆ ಇದ್ದ-ಈಗಲೂ ಕಾಣಬಹುದಾದ ಅರ್ಥಗಳನ್ನು ಸ್ಮರಿಸಿಕೊಂಡರೂ ಸಾಕು. ಇದರೊಳಗಿನ ಉದಾತ್ತ ಐಹಿಕ ಜೀವನ ಪ್ರೇರಕಶಕ್ತಿಯು ಅದೆಷ್ಟು ಸ್ಫುರಿಸುತ್ತಿದೆ, ಎಂಬುದು ಗೋಚರಕ್ಕೆ ಬರಬಲ್ಲದು.

> 'relating or belonging to all men, omnipresent,... gods collectively, fire, the sunlight (A. Veda); the Supreme Spirit, or Intellect when located in supposed collective aggregate of gross bodies'[೧೦]

ಕೋಶಗಳಲ್ಲಿ ಉಳಿದಿರುವ ಈ ಜೀವನ ದೃಷ್ಟಿಯುಳ್ಳ ಶ್ರದ್ಧೆಯ ಜೀವಂತ ಪ್ರಜ್ಞೆಯವರು ಸಮಾಜದ ನೇತಾರರಾಗಿ ದೊರೆಯಲು-ಇಂತಹ ದೃಷ್ಟಿಕೋನದ ಸಮಯ, ಆಚಾರ ರೂಢವಾಗಲು, ಆದರ್ಶ ಎಲ್ಲಿ

ಹುಡುಕಬೇಕು? ಪಾಶ್ಚಾತ್ಯ ಭಾಷಿಕ ಪರಂಪರೆಯಲ್ಲಿ ಈ 'ವೈಶ್ವಾನರ' ಪ್ರತಿಮೆಗೆ ಸರಿದೊರೆಯಾದ ಗರ್ಭಿತಾರ್ಥದ ಬೇರೊಂದು ಪ್ರತಿಮೆ ಉಂಟೊ ತಿಳಿಯದು. Humanism, Humanity ಇಂತಹ ಪ್ರತಿಮೆಗಳು ತೀರ ಅರ್ವಾಚೀನ. ಆದರೆ, ಪ್ರಾಚೀನ ಜಾಗತಿಕ ಸಾಹಿತ್ಯದಲ್ಲಿಯೇ ಅನನ್ಯ ಸಾಧಾರವಾಗಿರುವ ಈ ಸಮಾಜ ಸಮ್ಮುಖಿ ಜೀವನ ಪ್ರೇರಕವಾದ 'ವೈಶ್ವಾನರ' ಎಂಬ ಈ ಪ್ರತಿಮೆಯನ್ನು ಸೃಷ್ಟಿಸಿರುವ ಭಾರತೀಯ ಪ್ರತಿಭೆಯ ಕೌತುಕ (appreciation) ಈವರೆಗೆ ಎಲ್ಲಿಯೂ ಆಗದಿರಲು ಕಾರಣವೇನು? ಶ್ರೀಮದ್‌ಭಗವದ್ಗೀತೆಯು ಪ್ರಚಾರಕ್ಕೆ ತಂದಿರುವ- ಲೋಕಪ್ರಿಯವಾಗಿಸಿರುವ ಜೀವನದ ದೃಷ್ಟಿಗೆ 'ವೈಶ್ವಾನರ' ಈ ಶಬ್ದ-ಪ್ರತಿಮೆಯಲ್ಲಿ ಕಾಣುವ ಚಿತ್ರವು ಯಾವುದು? 'ಅಹಂ ವೈಶ್ವಾನರಃ' ಎಂದೆಂಬ ಲೋಕಕಲ್ಯಾಣಕ್ಕೆ ಕಟಿಬದ್ಧನಾದ ಕಾಲಪುರುಷನದು ತಾನೆ?

ಭಾಷಿಕ ಶಬ್ದ ಪ್ರತಿಮೆಗಳೇ ಮಾನವರ ಕಣ್ಣು. ಆದಕಾರಣ, ಎಷ್ಟೇ ಪೂಜ್ಯ ಗೌರವಾರ್ಹವೆಂಬ ಶ್ರದ್ಧೆಯು ಬೆಳೆದು ಬಂದಿದ್ದರೂ ತಾನು ನಂಬಿ ನುಂಗಿರುವ-ನುಂಗುತ್ತಿರುವ ಶಬ್ದಪ್ರತಿಮೆಗಳು ಮೋಸಕ್ಕೆ ಕಾರಣವಾಗಲಿಕ್ಕಿಲ್ಲ ವಷ್ಟೆ? ಎಂದು, ನಿನ್ನೆ-ಇಂದುಗಳ ಸಂದರ್ಭದಲ್ಲಿ ಅವನ್ನು ವಿಮರ್ಶಿಸಿಕೊಳ್ಳುವುದೇ ಕ್ಷೇಮ. ಈ ಕಣ್ಣಿಗೆ, ಒಂದು ಕಾಲಕ್ಕೆ ಸೌರ ಋತ : ಸತ್ಯದ ಭೂಮಿಕೆಯಲ್ಲಿ 'ವೈಶ್ವಾನರ' ಶಬ್ದಪ್ರತಿಮೆಯಲ್ಲಿ ಕಾಣುತ್ತಿದ್ದ ಚಿತ್ರವೇ, (Intellect of collective Soul: Universal Man), ಆ ಬಳಿಕ 'ಏಕಂ' ಸ್ವರೂಪೀ ಸತ್ಯದ ರಸೋಪಾಸಕರ ದೃಷ್ಟಿಗೆ ಈ ಪ್ರತಿಮೆಯಲ್ಲಿ ಕಾಣತೊಡಗಿದ್ದು, ರೇತಸ್ಥ ಅಗ್ನಿ=ದೇಹದಲ್ಲಿ ಇದ್ದು ದೇಹವನ್ನು ಸುಡುತ್ತಿರುವ 'ಅಧೋಧ್ಯಗ್ನಿ'!

ಋತ : ಸತ್ಯದ ಭೂಮಿಕೆಯು ಫಕ್ಕನೆ ಅದೃಶ್ಯವಾಗಿಲ್ಲ; ಇಂದಿಗೂ ಅದರ ಪ್ರೇರಣೆ ತೀರ ನಷ್ಟವಾಗಿಲ್ಲ. ವಿವಸ್ವಾನನ ಪುತ್ರನೆಂಬ 'ಮನು'ವಿನ 'ಸ್ಮೃತಿ'ಯು ಸಹ ಸನ್ಯಾಸ ಸ್ವೀಕರಿಸಿ ಮೋಕ್ಷಾರ್ಥಿಯಾಗುವುದೇ ಬಾಳಗುರಿ ಎಂದರೂ, ಇನ್ನೂ 'ಧನ್ಯೋ ಗೃಹಸ್ಥಾಶ್ರಮಃ' ಎಂಬ ಸಮಾಜ ಸಮ್ಮುಖಿ ಜೀವನ ಪ್ರೇರಕ ಪ್ರತಿಮೆಯು 'ಸ್ಮೃತಿ' ತೀರ ಅಳಿದಿಲ್ಲ! ಜೀವನದೊಳಗಿನ ಋತ ಸ್ವರೂಪೀ ಸತ್ಯದ ಬಗೆಗಿನ ಶ್ರದ್ಧೆಯು ನಷ್ಟವಾಗಿ 'ತತ್ ಏಕಂ' ಸ್ವರೂಪೀ ಸತ್ಯದ ಭೂಮಿಕೆಯ ಜೀವನ ರೀತಿಯು ಆಕಾರ ಪಡೆಯುವುದರೊಳಗೂ ಒಂದು ಕ್ರಮವಿದೆ-ನಿಯಮವಿದೆ! ಇದನ್ನು ಗಮನಿಸಿದರೆ ಕಾಣುವುದೇನು? ಜೀವನವನ್ನು ಆಳುತ್ತಿರುವ=ಜೀವನವನ್ನು ನಿಯಂತ್ರಿಸುವ=ನಿಯಮ(ನ)ಕ್ಕೆ ಒಳಪಡಿಸಿಕೊಂಡಿರುವ ಒಂದು ಶಕ್ತಿಯು ಎಂದರೇ ಋತ ಸ್ವರೂಪೀ ಸತ್ಯವು ಉಂಟು. ಇದುವೆ, ದೇವಾಧಿ ದೇವರು ಎಂಬುವರಿಗಿಂತಲೂ ಮಿಗಿಲಾದದ್ದು.

ಆದಕಾರಣ, ಜೀವನ ಇದರ ಅರ್ಥವು ಸಂ-ಗತಿಯಲ್ಲಿ ಮಾತ್ರ ಅರಿಕೆಗೆ ಬರಬಲ್ಲದು. ಜೀವನ ಸಂ-ಗತಿಯೆ ಸಮ್+ಅಯ (ಕೂಡಿ ಹೋಗುವಿಕೆ)-ಸಮ್+ಇತಿ (ಕೂಡಿ ನಿರ್ಣಯಕ್ಕೆ ಬರುವಿಕೆ). ಸತ್ತಮೇಲಿನ ವೈಯಕ್ತಿಕ ಮೋಕ್ಷದ ಆಮಿಷ ಒಡ್ಡುವ ಸಂಪ್ರದಾಯಗಳು ತಮ್ಮ ಮತ-ಪಂಥ-ಜಾತಿ ವಿಶಿಷ್ಟ ಸಮಯ, ಸಮಿತಿ, ಸಂಕೇತ ನಿರ್ಮಿಸಿಕೊಂಡು ಜೀವನಸ್ಥ 'ಸಂ-ಗತಿ' ತತ್ವದ ಲಾಭಪಡೆದು ಈ ಜೀವನಕ್ಕೇ ಅಪಚಾರ ಬಗೆಯುತ್ತಿವೆ. ಜೀವನವನ್ನು ತೆಗಳಿ, ಸತ್ತಮೇಲಿನ ಮೋಕ್ಷವನ್ನು ಹೊಗಳಿ! ಸಮಾಜ ಸಮಷ್ಟಿ : ವೈಶ್ವಾನರನು ತಲೆಮಾರಿನಿಂದ ತಲೆಮಾರಿಗೆ ಉಳಿಸಿಕೊಂಡು ಬಂದಿರುವ ಭಾಷೆ, ಜ್ಞಾನದ ಪ್ರಯೋಜನದಿಂದಾಗಿ ವೈಯಕ್ತಿಕ ಅಸ್ಮಿತೆ-ಪ್ರಜ್ಞೆ ಶಕ್ಯವಾಗಿದೆ! ಆದರೆ, ಪಿಂಡ-ಬ್ರಹ್ಮಾಂಡ ನ್ಯಾಯದಲ್ಲಿ, ಅಥವಾ ವ್ಯಕ್ತಿಯೇ ವಿಶ್ವದ ಕೇಂದ್ರವೆಂಬ ಗ್ರಹಿಕೆಯಲ್ಲಿ ಈ ಸಮಷ್ಟಿ : ವೈಶ್ವಾನರನಿಗೆ ಸ್ಥಾನವೆಲ್ಲಿದೆ? ನರ-ಜಂತುವು ಮನು-ಜತ್ವ ಪಡೆದು ಮಾನವತೆಯ ಪಾತಳಿಯಲ್ಲಿ ಉಸಿರಾಡಿಸುತ್ತಿದ್ದರೆ, ಬದುಕಿ ಬಾಳುತ್ತಿದ್ದರೆ ಈ ವೈಶ್ವಾನರನ ಕೃಪೆಯ ಆವರಣದಲ್ಲಿ. 'In Him we live move, and have our being' ಎಂಬ ಕ್ರೈಸ್ತ ಪಂಥೀಯ ಶ್ರದ್ಧೆಯ ಈ ವಿಚಾರವು ವೈಶ್ವಾನರನಿಗೆ ಮಾತ್ರ ಸರಿ ಹೋಗಬಲ್ಲುದು.

ಜಾಗತಿಕ ಸ್ವರೂಪದ ಸನಾತನ ವೈಚಾರಿಕ ಆಕೃತಿಯ ಹಿನ್ನೆಲೆಯ ಸತ್ಯಾನ್ವೇಷಣೆಯಲ್ಲಿ ಯಾವುದೊಂದು ಸಂಸ್ಕೃತಿಯೊಳಗಿನ ಸಮಸಾಮಯಿಕ ಸಾಂಕೇತಿಕ ಪ್ರತಿಮೆಗಳ ಮೂಲಕ, ಆ ವಿಶಿಷ್ಟ ಆಕೃತಿಯ ವೈಚಾರಿಕ ಪರಂಪರೆಯನ್ನು ರೂಢಿಸಿದ, ಅದನ್ನು ಉಳಿಸಿಕೊಂಡು ಬರಲು ನಿಮಿತ್ತಕಾರಣವಾದ ನೇತಾರ : ಸಮಿತಿಯನ್ನು-ಅದರ

ಪೂರ್ವೋತ್ತರಗಳನ್ನು ನಿಷ್ಕರ್ಷಿಸಿಕೊಳ್ಳಲು ಸಾಧ್ಯವೆ? ಎಂಬುದನ್ನೂ ಇಲ್ಲಿ ಒರೆಗೆ ಹಚ್ಚಿ ನೋಡಬಹುದು. ಋ. ವೇದ ಸಮಯಸ್ಥ ದಿವ್ಯ 'ವೈಶ್ವಾನರ' ದೈವತ ಪ್ರತಿಮೆಯು ಲುಪ್ತವಾಗುತ್ತದೆ: ರೇತ ಸತ್ಯದ ಪಾತಳಿಯ ಸಂಕೇತವಾಗುತ್ತದೆ. ಹಿಂದಿನ 'ಸಮಯ'ವು ಮಾರ್ಪಟ್ಟು ಈ ನೂತನ ಸಮಯ ನಿರ್ಮಾಣಕ್ಕೆ ಕಾರಣವಾದ ನೇತಾರ ವರ್ಗ : ಸಮಿತಿ ಯಾವುದಿರಬಲ್ಲುದು? ಸವಿತೃ, ಪೂಷನ್, ಜಾತವೇದ ಅಗ್ನಿ, ವೈಶ್ವಾನರ (ಅಗ್ನಿ) ಇವೆಲ್ಲ ಸೌರ-ಋತ : ಸತ್ಯದ ಭೂಮಿಕೆಯ ವೈವಸ್ವತ ಮಂಡಲದ ದೈವತಗಳು. ಸವಿತೃವಿಗಿಂತ ಮುಂಚೆ ಕಾಣಿಸಿಕೊಳ್ಳುವ ಪೂಷನ್ ದೇವನು 'ಪ್ರಜಾಪತ್ಯ' ಸೂರ್ಯನ ಎಂದರೆ ಆಪ : ರಸ ಪಂಥೀಯ ಆದರ್ಶದೇವನ ಹತ್ತಿರ (ಪಿತೃಲೋಕಕ್ಕೆ) ಹೋಗುವ ಮಾರ್ಗದರ್ಶಕ ದೇವನಾಗುತ್ತಾನೆ, ಪೂಷನ್‌ನೇ ಸವಿತೃವಿನ ಸೂಚಕನು: ಪೂಷನ್‌ನನ್ನು ಪ್ರಜಾಪತ್ಯ ಸೂರ್ಯನ (=ಚಂದ್ರನ) ಸಾಲಿಗೆ ತಂದವರು. ಆಪ : ರಸ ಪಂಥೀಯ ನೇತಾರರೇ ಇರಬೇಕಾದಂತೆ, ಸವಿತೃವಿನ ಮಾರ್ಪಾಟಕ್ಕೆ ಕಾರಣರು-ಸವಿತೃವನ್ನು ಅಪಾಂನಪಾತ್ ದೇವನ ಪಂಕ್ತಿಗೆ ತಂದವರು. ಆಪ : ರಸ ರೇತತತ್ವಾರಾಧಕರೇ ಇರಲಿಕ್ಕೆ ಬೇಕು. ಇದೇ ಮೇರೆಗೆ ಸವಿತೃವನ್ನು ಭ್ರಷ್ಟಗೊಳಿಸುವಲ್ಲಿ ಹಿಗ್ಗುಗೊಂಡವರೇ ವೈಶ್ವಾನರ (ಅಗ್ನಿ) ದೈವತದ ಆಚಮೂಲ್ಯನಕ್ಕೂ ಕಾರಣರಾಗಿರಲಿಕ್ಕೆ ಬೇಕು. 'ಅಹಂ ವೈಶ್ವಾನರಃ' ಎಂದು ಹೇಳುವ ಗೀತೆಯ ಭಗವಂತನ ಉಪಾಸನಾ ಪರಂಪರೆಯನ್ನು ನಿರ್ಮಿಸಿದ, ಮುಂದುವರಿಸಿಕೊಂಡು ಬಂದ ಗುರುವರ್ಗವೇ ಆಪ : ರಸ ಸಂಪ್ರದಾಯದ ನೇತಾರ ಸಮಿತಿ ಎಂಬುದು ಹೀಗೆ ಬಯಲಿಗೆ ಬರುತ್ತದೆ. ಈ ಏಕಂ : ಸತ್‌ಮಾರ್ಗದತ್ತ ಜನಮನವನ್ನು ಸೆಳೆದು ತರುವ ಮಂತ್ರ-ತಂತ್ರ ಸೃಷ್ಟಿಸಿದವರು, ಸಾಹಿತ್ಯಕೃತಿ ರಚಿಸಿದವರು ಯಾರು ಎಂಬುದರ ಸಪ್ರಮಾಣ ವಿವರಣೆ. ಡಾ. ವಿಶ್ವಂಭರ ಪಾಠಕರ ಸಂಶೋಧನದ ಫಲವಾಗಿ, ಅವರು ಪ್ರಕಟಿಸಿರುವ ಗ್ರಂಥದಲ್ಲಿ ದೊರೆಯಬಲ್ಲದು. 'ಪುರಾತನ ಭಾರತೀಯ ಐತಿಹಾಸಿಕ ಪ್ರಜ್ಞೆ' ಲಂಡನ್ ವಿದ್ಯಾಪೀಠದಲ್ಲಿ ಮಾಡಿದ ವ್ಯಾಸಂಗ; ತಮ್ಮ ನೇತೃತ್ವದಲ್ಲಿ ಸಿದ್ಧವಾದ ಈ ಗ್ರಂಥಕ್ಕೆ ಡಾ. ಎ. ಎಲ್. ಭಾಷಂ ಅವರ ವಿಚಾರಾರ್ಹ ಪ್ರಶಸ್ತಿ ಪತ್ರವೂ ಉಂಟು.[೧೧]

ಭಾರತದಲ್ಲಿ ಮಧ್ಯಯುಗದ ವರೆಗೂ ಕಾಣಿಸಿಕೊಳ್ಳುವ ಇತಿಹಾಸ ಲೇಖನದ(?) ವಿಶಿಷ್ಟ ತಂತ್ರವು ವೇದದಷ್ಟು ಪ್ರಾಚೀನವಿರುವುದಾಗಿ ಡಾ. ಪಾಠಕ್ ಸಾಧಾರವಾಗಿ ಹೇಳಿದ್ದಾರೆ ಈ ಪರಂಪರೆಯ ಅಗ್ರಗಣ್ಯರಲ್ಲಿ ವಸಿಷ್ಠ, ಭೃಗು, ಅಂಗಿರಸರ ಹೆಸರು ಪ್ರಾಧಾನ್ಯದಿಂದ ಬರುತ್ತವೆ. ಭೃಗುವು ವರುಣ ಪುತ್ರನೆಂಬ (ಭೃಗುಃ ವೈ ವಾರುಣಿಃ) ಈ ಸಾಂಕೇತಿಕತೆ ಭೃಗುವನ್ನು ವರುಣಪುತ್ರನೆಂಬ ವಸಿಷ್ಠನ ಆಕೃತಿಗೇ ತಿರುಗಿಸುತ್ತಿದೆ! 'ಅಂಗಾನಾಂ ರಸಃ' ಸ್ವರೂಪೀ ಅಂಗಿರ > ಆಂಗಿರಸ ಸಂಕೇತವು, ಆಪ : ರಸ=ರೇತ ತತ್ವದ ಸಾಂಕೇತಿಕ ಪ್ರತಿಮೆಗಳ ಅಂತರಂಗದ ದರ್ಶನ ಮಾಡಿಸುತ್ತಿದೆ.* ನೇತಾರರ ಈ ನಾಮಸಂಕೇತಗಳು ಸಹ ತತ್: ಏಕಂ ಸ್ವರೂಪೀ ಸಲಿಲ (ಸರಿರ)ದ ದರ್ಶನ ಮಾಡಿಸುತ್ತವೆ! ಈ ವಾರುಣೀ ವಿದ್ಯೆ (ಏಷಾ ವಾರುಣೀ ವಿದ್ಯಾ), ತತ್-ಮಯಾನಂದೀ ದಿಕ್ಕಾಲಾತೀತ ಭೂಮಿಕೆಗಳ ಮೇಲೆ ಒಯ್ದು ನಿಲ್ಲಿಸುತ್ತದೆ ಎಂದು ಭೃಗುವಲ್ಲಿಯ ತೈ. ಉಪನಿಷತ್ತು ಹೇಳುತ್ತದೆ. ವಸಿಷ್ಠ-ಭಗ್ವಂಗೀರಸ ಪರಂಪರೆಯು ರೂಪಿಸಿರುವ ಇತಿಹಾಸ ಲೇಖನ ತಂತ್ರದ ವೈಶಿಷ್ಟ್ಯವನ್ನು ಡಾ. ಪಾಠಕರು, '....fictional garb to historical incidents; ಮತ್ತು ....Historical persons into super-natural beings' (ಐತಿಹಾಸಿಕ ಘಟನೆಗಳು ಸಾಂಕೇತಿಕ-ಕಾಲ್ಪನಿಕ ಮಟ್ಟದುವು ಆಗುವುದು; ಐತಿಹಾಸಿಕ ವ್ಯಕ್ತಿಗಳು ಅಪ್ರಾಕೃತ ದಿವ್ಯಪುರುಷರಾಗಿ ಮಾರ್ಪಡುವುದು) ಎಂದು ಸ್ಪಷ್ಟಪಡಿಸಿದ್ದಾರೆ.[೧೨]

ಡಾ. ಪಾಠಕರು ಹೇಳುವ ಭಾರತೀಯರದೆಂಬ ಈ ವೈಶಿಷ್ಟ್ಯಪೂರ್ಣ ತಂತ್ರವು, 'ಐತಿಹಾಸಿಕ ಪ್ರಜ್ಞೆ' ('History sense') ರೂಪಿಸಿತು ಎನ್ನಲು ಆದೀತೆ? ಏನೆಲ್ಲ ಲೌಕಿಕ ಘಟನೆಗಳನ್ನು ಅಪ್ರಾಕೃತ-ಅಗಮ್ಯ-ದಿವ್ಯತ್ವದ ಮಟ್ಟಕ್ಕೆ ತಿರುಗಿಸಿ, ರೋಮಹರ್ಷಕ ಉನ್ಮನಸ್ಕಭಾವ ಉಂಟಾಗುವಂತೆ ಮಾರ್ಪಡಿಸಿಕೊಳ್ಳುವ ಈ ತಂತ್ರವು

---

* ಈ ಸಾಂಕೇತಿಕತೆಯನ್ನು ದ್ರಪ್ಸಃ-ಸ್ಕನ್ನಃ ಕೃಷ್ಣ, ಸ್ಕಂದ ಈ ರಸ ಹನಿವ ಆಕೃತಿಯ ದೈವತನಾಮಗಳೊಡನೆ ಹೋಲಿಸಿ ಸ್ವಾರಸ್ಯ ಗ್ರಹಿಸುವ ಆವಶ್ಯಕತೆಯಿದೆ.

ನಿಜವಾದ ಇತಿಹಾಸದ ವಿಡಂಬನೆಯೇ ಸರಿ. ಭಾರತೀಯರಲ್ಲಿ 'ಐತಿಹಾಸಿಕ ಪ್ರಜ್ಞೆ'ಯ ಅಭಾವವಿದೆ ಎಂಬ ಪಾಶ್ಚಾತ್ಯರ ಆಕ್ಷೇಪವು ನಿರಾಧಾರವಾಗಿದೆ, ಎಂದು ಸಿದ್ಧಪಡಿಸಲು ಹೊರಟ ಡಾ. ಪಾಠಕರು ದುರ್ಲಕ್ಷಿಸಿದರೂ, ಅಥರ್ವವೇದದಿಂದ ಬೃಹದಾರಣ್ಯಕ ಉಪನಿಷತ್ತಿನ ವರೆಗೆ ಪುರಾಣದ ಸಂಗಡವೇ ಸ್ವತಂತ್ರವಾಗಿ ನಿರ್ದೇಶಿಸಲ್ಪಡುತ್ತಿದ್ದ 'ಇತಿಹಾಸ' ಈ ಸಾಂಕೇತಿಕಪ್ರತಿಮೆ, ಆ ಬಳಿಕ ಲುಪ್ತವಾದುದೇಕೆ? ಎಂಬ ಈ ಪ್ರಶ್ನೆಯನ್ನು ಎತ್ತಿಕೊಳ್ಳಲು ಆ ವ್ಯಾಸಂಗದ ನಿರ್ದೇಶಕರಾದ ಡಾ. ಭಾಷಾಂ ಸೂಚಿಸಬಹುದಿತ್ತಲ್ಲ? ಹಿಂದಿನ ಅದ್ಭುತ ಭಾರತ : 'The Wonder that was India' ಗ್ರಂಥ ಬರೆದ ಡಾ. ಭಾಷಾಂ ಅವರೂ ಇದನ್ನು ದುರ್ಲಕ್ಷಿಸಿದ್ದು ಸರಿಯೆ; (?).

'ಅಥರ್ವನಿಧಿ' ಬಿರುದಿನವನೂ ಒಬ್ಬ ವಸಿಷ್ಠನಿದ್ದಾನೆ. ಅಥರ್ವವೇದಕ್ಕೆ ಭೃಗ್ವಂಗೀರಸವೇದ ಎಂದು ಪರ್ಯಾಯನಾಮ. 'ಅಥರ್ವನಿಧಿ' ಎಂದರೆ ಯಾತು>ಜಾದು ವಿದ್ಯಾಪ್ರವೀಣ. ಭಾರತೀಯ ವೈಶಿಷ್ಟ್ಯದ್ದೆಂಬ ಈ ಇತಿಹಾಸ (?) ಲೇಖನ ತಂತ್ರವನ್ನು ರೂಪಿಸಿದವರು, ವಸಿಷ್ಠ-ಭೃಗ್ವಂಗೀರಸ ಪರಂಪರೆಯ ನೇತಾ ಸಮಿತಿ, ಎಂದು ಡಾ. ಪಾಠಕರು ಹೇಳಿರುವುದರಲ್ಲಿ ಒಂದು ಸಾಂಕೇತಿಕ ಅಪೂರ್ವ ಆಂತರಿಕ ಸುಸಂಗತಿಯಿದೆ : ಸೌರತತ್ವದ ದೈವತಮಂಡಲದ ಉಪಾಸಕರಿಗೆ ಋತಸ್ವರೂಪೀ (ಮೂರ್ತ) ಸತ್ಯದಲ್ಲಿ ಶ್ರದ್ಧೆ. ಇವರು ಜಾತವೇದ ಅಗ್ನಿಯ ಆರಾಧಕರು; ಧೀ ಪ್ರೇರಕ ಸವಿತೃ (ಸೂರ್ಯ) ಉಪಾಸಕರು; ಇವರಿಗೆ ವಿಶ್ವಾ-ನರನಲ್ಲಿ ನಿಷ್ಠೆ; ಸಂಗಚ್ಛಧ್ವಂ....ಎಂಬ ಹಾಗಿನ ಬಾಳದಾರಿಗೆ ಮಾರ್ಗದರ್ಶಕವಾಗಿ, ಕಾವ್ಯದೊಡನೆ, ಇತಿಹಾಸದ ಆವಶ್ಯಕತೆಯೂ ಎನಿಸಿತ್ತು. ಆದರೆ ಆಪ=ರಸ ತತ್ವಾಧಿಷ್ಠಿತ ದೈವತ ಮಂಡಲದ ಆರಾಧಕರಿಗೆ ತತ್:ಏಕಂ ಸ್ವರೂಪೀ ಸತ್ (ಸತ್ಯ)ದಲ್ಲಿ ತತ್‌ಮಯವಾಗಿ ಮೈಮರೆತು ದಿಕ್ಕಾಲಾತೀತ ಅವಸ್ಥೆಯಲ್ಲಿ ಇರುವಲ್ಲಿಯೆ ಸು-ಖಂ ಅನುಭಾವಸಿದ್ಧಿ ಎಂಬ ಶ್ರದ್ಧೆ. ಆದಕಾರಣ, ಮೂರ್ತಸತ್ಯವು ಕಣ್ಣೆದುರುಕಾಣುವ, ಐಹಿಕ ಪ್ರಜ್ಞೆಯ ಋತಾಧಿಷ್ಠಿತ ವಿಶ್ವಾನರನಲ್ಲಿ ನಿಷ್ಠೆ-ನಿನ್ನೆ→ಇಂದು→ನಾಳೆಗಳ ಸುಸಂಬದ್ಧ ಸ್ಮೃತಿ-ಅರಿವು, ಇದೆಲ್ಲವೂ (ತತ್:ಏಕಂ) ಸ್ವರೂಪೀ 'ಭಾಗ'-ವತರಾಗಲು ತುಂಬ ಆತಂಕಕಾರಿ. ಆದಕಾರಣ, ಐಹಿಕ ಜೀವನವು ಯಾವ ಋತಸ್ವರೂಪೀ ಸನಾತನ ನಿಯಮಗಳ ಆಧಾರದ ಮೇಲೆ ನಿಂತಿದೆಯೊ ಆ ಮೂರ್ತ ಸತ್ಯದ ಅರಿವನ್ನು ತಂದುಕೊಡಬಲ್ಲ 'ಇತಿಹಾಸ'ವನ್ನು ತತ್:ಏಕಂ ಸ್ವರೂಪೀ ಸತ್ಯದ ಸಾಕ್ಷಾತ್ಕಾರದ ಒಂದು ಸಾಧನವಾಗುವಂತೆ ಮಾರ್ಪಡಿಸಿಕೊಂಡಿರುವಲ್ಲಿ ಪ್ರತೀತಿಗೆ ಬರುವ ಈ ಹಾಸುಹೊಕ್ಕಾಗಿರುವ ಆಂತರಿಕ ಸುಸಂಗತಿಯು ಅಭ್ಯಸನೀಯವಿದೆ.

ಡಾ. ಪಾಠಕರು ಭಾರತೀಯ ವೈಶಿಷ್ಟ್ಯದ ಇತಿಹಾಸಲೇಖನ ತಂತ್ರ ಎಂದು ಗ್ರಹಿಸಿರುವ ಈ ನಿವೇದನ ಪದ್ಧತಿ, ಜಗತ್ತಿನ ಏನೆಲ್ಲ ಪ್ರಾಥಮಿಕ ಜನಾಂಗಗಳಲ್ಲಿ ಉಂಟು. ಇತಿಹಾಸವು ಮಾನವಶಾಸ್ತ್ರದ ಅಂಗ. ಅನೇಕ ತಂಡಗಳಲ್ಲಿ ಇರುವ 'ಇತಿಹಾಸ'(?) ನಿವೇದನೆಯ ಈ ತಂತ್ರವು ಮಾನವಶಾಸ್ತ್ರಜ್ಞರ ಅರಿಕೆಗೆ ಬಂದಿದೆ. ಡಾ. ಮಸಿನಯಾ ಇಲಿಯದೆ ಈ ವಿಚಾರದಲ್ಲಿ ಬರೆದುದು ಅಭ್ಯಸನೀಯವಿದೆ. ಇಂದಿನ ಋಗ್‌ವೇದ ಸಂಹಿತೆಯಲ್ಲಿ ಋತ=ಸತ್ಯದ ನಿರ್ದೇಶವಿದ್ದರೂ ಈ ಭೂಮಿಕೆಯನ್ನು ನಿಷ್ಪ್ರಯೋಜಕವಾಗಿಸಲು ಗಾಥಾ, ನಾರಾಶಂಸಿ, ಆಖ್ಯಾಯಿಕೆ (legend) ಇವುಗಳಲ್ಲಿ ಅಂತರವನ್ನೇ ಉಳಿಸಿಲ್ಲ! ಎಳ್ಳನಿತೂ ವಾಸ್ತವದಲ್ಲಿ ಆಧಾರವಿಲ್ಲದ ಶುದ್ಧ ಕಾಲ್ಪನಿಕ ಸಂಕೇತಗಳನ್ನು ಐತಿಹಾಸಿಕ ಸ್ವರೂಪದ ಆಖ್ಯಾಯಿಕೆಗಳು ಎನಿಸುವಂತೆ ಚಿತ್ರಿಸಿದ್ದುಂಟು. ಡಾ. ಪಾಠಕರು ಈ ಅಂಶವನ್ನು ಗಮನಿಸಿಲ್ಲ! 'ಕಂ' ಬ್ರಹ್ಮಶಕ್ತಿ; 'ಪ್ರಜಾಪತಿ' ಪ್ರತಿಮೆಯಾಗುತ್ತದೆ; ಉಪನಿಷತ್ತಿನಲ್ಲಿ ಬ್ರಹ್ಮೋಪದೇಶ ಮಾಡುವ ಗುರುಪೀಠವನ್ನು ಅಲಂಕರಿಸುತ್ತದೆ. ಇಂದ್ರನೆಂಬ ಒಬ್ಬನು ವಿರೋಚನನೆಂಬ ಅಸುರ (ದೇಶದ) ಜ್ಞಾನ ಜಿಜ್ಞಾಸುವಿನೊಡನೆ ಪ್ರಜಾಪತಿಯ ಬಳಿಗೆ ಬಂದ ಕಥೆಯಿದೆ. ಈ ವಿರೋಚನನು, ಅಸ್ಸೀರಿಯದ ಒಂದು ಪ್ರಾತಿನಿಧಿಕ ಸಂಕೇತ ಎಂದು ಡಾ. ಸುರೇಂದ್ರನಾಥ ದಾಸಗುಪ್ತಾ ಬರೆದಿದ್ದಾರೆ. 'ಕಂ' ಆಪೋದೇವಿ : ಕಂ> ಗಾ ಗಮನಶೀಲ=ಪ್ರವಾಹ; ಶಂ-ತನು ಇದೂ ಸಾಂಕೇತಿಕ ವ್ಯಕ್ತಿ : ಕಂ<ಶಂ ಬ್ರಹ್ಮಶಕ್ತಿಸಂಯೋಗದಲ್ಲಿ ಕೌರವ ಪಾಂಡವರ (ಕಥೆ) ಸೃಷ್ಟಿ! ಇದು ಐತಿಹಾಸಿಕ ಮಹಾಕಾವ್ಯ!

ವಿಶಿಷ್ಟ 'ಸಮಯ'ದ ಆವರಣದಲ್ಲಿ ಆಗ ಪ್ರಚಲಿತವಿದ್ದ ಸಾಂಕೇತಿಕ ಪ್ರತಿಮೆಗಳ ತುಲನಾತ್ಮಕ ವಿಮರ್ಶಾ ತಂತ್ರದಿಂದ ಆ ಸಂಸ್ಕೃತಿಯ ಸ್ಥಿತ್ಯಂತರಗಳನ್ನು ಗ್ರಹಿಸಿಕೊಳ್ಳಲು ಶಕ್ಯವಿರುವುದಾಗಿ ತೋಚಿದ್ದು ಹೀಗೆ. ಈ ಪ್ರಬಂಧವನ್ನು ಪ್ರಾರಂಭಿಸಿದುದು ಸುಮಾರು ಎರಡು ವರ್ಷಗಳ ಹಿಂದೆ. ಈ ತಂತ್ರದ ಬಗೆಗೆ ಇಂದಿನಷ್ಟು ಸ್ಪಷ್ಟತೆಯಿರಲಿಲ್ಲ. ಆದರೂ ಸ್ಥೂಲ ಎನಿಸಿಕೆಯ ಬಲದಿಂದಲೆ ಈ ಮೊದಲು ಮಾಡಿದ ಪ್ರಯೋಗಗಳ ಅನುಭವದ ಬೆಳಕಿನಲ್ಲಿ, ತೋಚಿದ ರೀತಿಯಲ್ಲಿ ಹೊರಟದ್ದಾಯಿತು. ಪ್ರಬಂಧವು ಮುಗಿದ ಬಳಿಕವೂ ಈ ಅರ್ಥವನ್ನು ಇನ್ನೂ ಒರೆಗಲ್ಲಿಗೆ ಹಚ್ಚಿನೋಡುವ ಆಂತರಿಕ-ಒತ್ತಾಯವು ಅಸ್ವಸ್ಥತೆಯನ್ನು ತರುತ್ತಿತ್ತು. ಋತ್ಯ:ಸತ್ಯದ ಭೂಮಿಕೆಯ ದೈವತ ಮಂಡಲವು ಸೌರತತ್ತ್ವಾಧಿಷ್ಠಿತವಾಗಿದ್ದರೂ ಈ ದೈವತವಿಚಾರದಲ್ಲಿ 'ತತ್-ಏಕಂ' ಎಂಬ ಅತ್ಯಾಗ್ರಹವಿಲ್ಲ. ಅಲ್ಲದೆ, 'ಸತ್ಯ'ವನ್ನೂ 'ಏಕಂ' ಕೇವಲ ಎಂದು ಬಗೆದಿಲ್ಲ. ಈ ಸತ್ಯದಲ್ಲಿ ಸ್ವೈರ ಅರ್ಥಕ್ಕೆ ಅವಕಾಶ ದೊರೆಯಬಾರದೆಂದು ಇದನ್ನು ನಿಯಮಬದ್ಧ ಎಂದರೆ ಋತಾಧಿಷ್ಠಿತ ಸತ್ಯ ಎಂದು ಹೇಳುವ ಮುಂಜಾಗ್ರತೆಯನ್ನು ವಹಿಸಿದ್ದು ಉಂಟು. 'ಸೂರ್ಯನೇ ಸೃಷ್ಟಿಕರ್ತನು' ಎಂದಲ್ಲಿ ಇದು ಸೌರಭೂಮಿಕೆಯ 'ಏಕಂ : ಸತ್' ಆಗಿ, ಅದು ಕೇವಲ ಹಗಲಿನ ಉಪಾಸನೆಯಾಗಿ ಇದೂ ಆಪ : ರಸ : ರೇತ ಪಂಥೀಯ ಅರ್ಧಾಂಗ ಸತ್ಯವಾಗದೆ ಇರದು. ಆದುದರಿಂದ, ಈ ಸತ್ಯವನ್ನು 'ಋತ' ಸಂಕೇತದೊಡನೆಯೇ ಉಚ್ಚರಿಸುವ ವಾಡಿಕೆಯು ಇದ್ದುದು ಕಾಣುತ್ತದೆ. ಇಂತಹ ಆಂತರಿಕ ಸಂಗತಿಯು, ಈ ಪ್ರಬಂಧದ ಒಟ್ಟಿನ ಆಶಯವು ನನ್ನ ಸಂಭ್ರಮ ಆಗಿರಲಾರದು ಎಂಬ ಆತ್ಮವಿಶ್ವಾಸ ಮೂಡಿಸಿತು.

ಆದರೂ ಒಂದು ಸ್ಪಷ್ಟೀಕರಣ ಆವಶ್ಯಕವೆನಿಸಿತು. 'ಹಗಲಿನ' ಉಪಾಸನೆಯು ತ್ಯಾಜ್ಯವೆನಿಸಿ 'ರಾತ್ರೀ' ಆರಾಧನೆ ಪ್ರಚಲಿತವಾಯಿತು ಎಂಬ ಆಶಯದ ವಾಸ್ತವತೆಯನ್ನು ಸೂಚಿಸಲು ಪಂಚರಾತ್ರ, ನವರಾತ್ರ, ಶಿವರಾತ್ರ್ಯಾದಿ ಇವಿಷ್ಟೆ ಸಂಕೇತಗಳು ಸಾಕೇ? ಎಂಬ ಅಳುಕು, ದಶಾವತಾರದ ಪ್ರತಿಮೆಗಳ ಗರ್ಭಿತಾರ್ಥದ ಸಮೀಕ್ಷೆಯಲ್ಲಿ ನಷ್ಟವಾಯಿತು. ಋಗ್ವೇದದ 'ಅಪಾಂನಪ್ತ್ರ'* -ನೀರೊಳಗಿನ ಮಗು-ಈ ಸಾಂಕೇತಿಕ ಪ್ರತಿಮೆಯ ವಿವಿಧ ರೂಪಗಳು ಎಂದರೆ 'ಏಕಂ ಸತ್ ವಿಪ್ರಾಃ ಬಹುಧಾವದಂತಿ'! ಮತ್ತು ವಿಷ್ಣುವಿನ ನಾನಾ ಅವತಾರಗಳು ಎಂದರೆ ಆಪೋವತ್ಸನ ನಾನಾ ರೂಪಗಳು: ಮತ್ಸ್ಯ, ಕೂರ್ಮ, ವರಾಹ ಇವು ಮೂರು ನೀರೊಳಗಿನ 'ಮಗು'ವಿನ ಪರ್ಯಾಯಗಳೇ; ನಾರ-ಸಿಂಹ, ನಾರ-ಣನ ರೂಪವೇ! ನಾರ-ಅಯನ=ಈ ನಾರ (ಸಿಂಹ) ಹೊರಬಂದುದು ಸ್ತಂಭ-ಸ್ಕಂಧದೊಳಗಿಂದ! ಇದು 'ಸಲಿಲಸ್ಯ ಮಧ್ಯೇ' ಎಂದು ಅಥರ್ವವೇದವೇ ಹೇಳಿದೆ! ಅಲ್ಲದೆ, ನಾರ (ನ) ಅಯನ ಮಾರ್ಗ 'ಕಂಭ' ರೂಪದ್ದು ಎಂದು ಇಲ್ಲಿ ಸ್ಪಷ್ಟೀಕರಣ ದೊರೆಯುತ್ತದೆ; ಮಾತ್ರವಲ್ಲ, 'ಅಶ್ವತ್ಥ-ನರಸಿಂಹ' ಎಂಬ ಸಂಪ್ರದಾಯವೂ 'ಅಶ್ವತ್ಥ' (ವೃಕ್ಷ) ಎಂದರೂ ನೀರು ಊರುವ ಖಂಬವೇ ಎಂದು ಈ 'ಗುಹಾನಿಹಿತ' ಸಂಕೇತದ ಅರ್ಥವನ್ನು ಹೊರಗೆಡಹುತ್ತದೆ! ಜಲಾಶಯದ ಹತ್ತಿರ ಅಶ್ವತ್ಥ-ನರಸಿಂಹನ ಕ್ಷೇತ್ರಗಳು ಇರುವಂತೆ ನೀರಾ ನರಸಿಂಹನ ತೀರ್ಥಕ್ಷೇತ್ರವೂ ಉಂಟು! ಅಶ್ವತ್ಥ=(ಸೂರ್ಯ!)=ನಾರಾ-ಯಣ! ಅಲ್ಲದೆ, ಸೋಮ (!) ರಸ ಸ್ರವಿಸುವ ಅಶ್ವತ್ಥ ಐರಂಮದೀಯ ಕೊಳದಲ್ಲಿ ಮತ್ತು ದ್ರಪ್ಸಃ ಕೃಷ್ಣಃ ಹಾಗೂ ಸ್ಕನ್ನಃ ಸ್ಕಂದಃ=ಸುಬ್ರಹ್ಮಣ್ಯ=ಸರ್ಪ ಈ ಸಾಂಕೇತಿಕ ಪ್ರತಿಮೆಗಳು ಒಂದರೊಂದರ ಸನ್ನಿಧಿಯಲ್ಲಿ 'ಸ್ವ' ಅರ್ಥವನ್ನು ವಿಶದೀಕರಿಸುತ್ತಿವೆ; ಪುಷ್ಟೀಕರಿಸುತ್ತಿವೆ!

---

* 'ಅಪಾಂ ನಪಾತ್' ಎಂಬ ದೇವತೆ ಋಗ್ವೇದದಲ್ಲಿ ಮೂವತ್ತು ಬಾರಿ ಬಳಕೆಗೊಂಡಿದೆ. ಇದು ಅಂತರಿಕ್ಷ ದೇವತೆಗಳಲ್ಲಿ ಒಂದು. ನೀರಿನ ಜತೆ, ಅಗ್ನಿಯ ಜತೆ ಸಂಬಂಧವುಂಟು. ಅಗ್ನಿಯನ್ನು 'ಅಪಾಂ ನಪಾತ್' ಎಂದು ಋಗ್ವೇದವು ಕರೆಯುತ್ತವೆ. ಇಷ್ಟಲ್ಲದೆ, ಈ ದೇವತೆಯು ನೀರಿನ ದೇವತೆ, ನೀರಿನಿಂದ ಹುಟ್ಟಿದ ಅಗ್ನಿ, ಚಂದ್ರ, ಸೂರ್ಯ, ವಿದ್ಯುತ್ತು, ಇವೇ ಮೊದಲಾಗಿ ನಾನಾ ರೀತಿಯ ಅರ್ಥಗಳನ್ನು ಎಡೆ ಮಾಡಿಕೊಟ್ಟಿದೆ. ಒಂದು ಶಬ್ದಸಂಕೇತವು ಸಮಾಜದ ಆಚಾರ-ವಿಚಾರ ಬದಲಾವಣೆಯೊಂದಿಗೆ ಅವರ ಅಭಿವ್ಯಕ್ತಿ ಮಾಧ್ಯಮವೂ ಬದಲಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಶಬ್ದಪ್ರತಿಮೆಯ ನಾನಾರ್ಥಗಳೂ ಛಾಯಾರ್ಥಗಳೂ ಬೇರೆ ಬೇರೆಯಾಗುತ್ತವೆ. (ಸಂ)

ಮೊದಲಿನ ನಾಲ್ಕು ಅವತಾರಗಳ ಪ್ರತಿಮಾ-ರಹಸ್ಯದಲ್ಲಿ ಕಾಣುವ ಅರ್ಥಗರ್ಭವೇ (concept) ಇನ್ನು ಮುಂದಿನ ನಾಮಾಂತರಗಳಲ್ಲಿಯೂ ಹುದುಗಿರಲಿಕ್ಕೇ ಬೇಕಷ್ಟೇ? ಇಲ್ಲವಾದರೆ 'ಏಕಂ ಸಂತಂ ವಿಪ್ರಾಃ ಬಹುಧಾ ಕಲ್ಪಯಂತಿ' ಎಂಬ 'ಸಂತ' ಮಹಾತ್ಮ್ಯವನ್ನು ಸಾರುವ ವೇದವಾಕ್ಯವು ಸುಳ್ಳಾದೀತಲ್ಲ! ಆದಕಾರಣ ಐದನೆಯ ಅವತಾರವೂ ಋ. ವೇದದಲ್ಲಿ ಮಾತೃಗರ್ಭಸ್ಥ ಅಪಾಂನಪಾತ್ ವಾಮದೇವನ ಪರ್ಯಾಯವೇ, ವಾಮ-ನ ರೂಪದಲ್ಲಿ ಕಾಣಿಸಿಕೊಳ್ಳುತ್ತಿರುವಲ್ಲಿ ಸಂದೇಹವಿಲ್ಲ. ವಾಮ(ನ)ನೂ (ಭೂ) ಮಾತೆಯನ್ನು ಇಬ್ಭಾಗಿಸಿ (ವಿ+ಷ್ನು) ಒಳಗೆ 'ಪಾದ'ದಿಂದ ಬಲಿಯನ್ನು (?) ಮೆಟ್ಟಿ ಮೇಟಿಯಂತೆ ನಿಂತಿರುವ ಪುರಾಣ ಕಥೆಯ ಸಾಂಕೇತಿಕತೆಗೆ, ವಿಷ್ಣುವಿನ ವೈಶಿಷ್ಟ್ಯಪೂರ್ಣ ಬೇರೆ ವರ್ಣನೆಗಳಿಂದಲೂ ಪುಷ್ಟಿ ದೊರೆಯುತ್ತದೆ. ವರಾಹವಾಗಿ ಕೋರೆಯಿಂದ ಭೂಮಿಯನ್ನು ಬಗೆಯುವ ಕೃತಿವೈಶಿಷ್ಟ್ಯ (ಈ ಕೋರೆ ಹಲ್ಲು ಗಣಪತಿಯ ಏಕ-ದಂತತ್ವ, ಆಖು-ಸೊಂಡೆ ಇಲಿತನ, ಶೃಂಗಾಶ್ವ-ಸರ್ಪ ಇಂತಹ ವೇದಕಾಲೀನ ಸಂಕೇತಗಳ ವಿಶಿಷ್ಟಾರ್ಥವುಳ್ಳದೇ ಆಗಿದೆ); ಭೂಮಿಗೆ (ಸು)ರಸಾ ಎಂಬ ಹೆಸರುಂಟು. 'ಆಪೋವಾ ಅಸ್ಮಾನ್ ಮಾತರಃ' ಭೂಮಾತೆಯಲ್ಲಿ ಪ್ರವೇಶಿಸುವ 'ಮಗು' ವಾಮ-ನ ದೇವ ಅಪಾಂ-ನಪ್ಪವೆ ಸರಿ. ಮಧು-ಸ್ರವಿಸುವ (ಪರಮ) ಪದದ ವಿಷ್ಣುವಿನ ಋ. ವೇದಸ್ಥ ನಿರ್ದೇಶವು ಈ 'ಪದ'=ಜಗದಾಧಾರ ಸ್ಕಂಭ=ಅಶ್ವತ್ಥ=ವೃಕ್ಷ ಈ ಸಂಕೇತಗಳಿಗೆ ಸುಸಂಗತವಾಗಿಯೇ ಇದೆ.

ಪರಶುರಾಮ: ಏಕವೀರಾದೇವಿಪುತ್ರ, ಎಲ್ಲಮ್ಮ-ಅದಿತಿ=ಪುತ್ರ; ಹಿಮಾಚಲ ಪ್ರದೇಶದಲ್ಲಿ ರೇಣುಕಾ-ಪರಶುರಾಮ ತೀರ್ಥಕ್ಷೇತ್ರವಿದೆ. ಈತನು 'ಕು-ಮಾರ'! 'ರಾಮ' ಈ ಸಂಕೇತಸ್ಥ ಮೂಲ ಅರ್ಥವನ್ನು ಗಮನಿಸಿದರೆ ಈ ಇಬ್ಬರು ರಾಮರ ಕಥೆ 'ನೇತಿನೇತಿ' ಸ್ವರೂಪದ ಸಂಭ್ರಮ ನಿರ್ಮಾಣಕ್ಕಾಗಿಯೆ ಹೊರಟಿರಲಾರದೆ, ಎಂದು ಎನಿಸುತ್ತದೆ. ಜಮದಗ್ನಿ. ರಾಮ ಈ ಸಂಕೇತಗಳಂತೆ ದಶರಥ-ರಾಮ ಸಂಕೇತಗಳ ಪುರಾತನ ಉಲ್ಲೇಖಗಳು ಇಲ್ಲ ಎಂದರೂ ತಪ್ಪಲ್ಲ, 'ಸೀತಾ' ಸಂಕೇತ ವೇದದಷ್ಟು ಪ್ರಾಚೀನವಿದೆ. ಆದರೆ ಇವಳ ಪೂರ್ವಕಥೆಯೇ ಬೇರೆ! 'ಇಕ್ಷ್ವಾಕು' ಸಂಕೇತವೂ ಋ. ವೇದದ ಹತ್ತನೆಯ ಮಂಡಲದಲ್ಲಿ ಒಮ್ಮೆ ಮಾತ್ರ! ಸರ್ಪವು ಸೂರ್ಯತ್ವವನ್ನು ಪಡೆಯುವುದೆಂಬ ಇಂದಿನ ಋ. ವೇದ, ಸಂಹಿತೆಯ ಉಕ್ತಿಯನ್ನು[೧೩] ಮತ್ತು ವೃತ್ರಾತ್ (=ಸರ್ಪಾತ್) ಜಾತಃ ದಿವಾಕರಃ' ಎಂಬ ಅಥರ್ವವೇದ ಮಾತನ್ನೂ ಸತ್ಯ(?) ಎಂದು ಪ್ರಸ್ತಾಪಿಸಲು ಸೂರ್ಯವಂಶಲಲಾಮ ವೀರನೊಬ್ಬನ ಕತೆ ಅವಶ್ಯವೆನಿಸಿ ಈ ಕೊರತೆಯನ್ನು ಇಲ್ಲವಾಗಿಸಲು ರಾಮಾವತಾರದ ಕಥೆ-ರಾಮಾಯಣ ಹುಟ್ಟಿಕೊಂಡಿರಲಿಕ್ಕೆ ಬೇಕು. 'ಸಂಧ್ಯಾವಂದನೆಯಲ್ಲಿ ಸೇರಿಸಲಾಗಿರುವ ವಿಷ್ಣುವಿನ ೨೪ ಪರ್ಯಾಯ ನಾಮಗಳಲ್ಲಿ ಕೃಷ್ಣನಿದ್ದಾನೆ. ಆದರೆ ರಾಮ (ಪರಶುರಾಮ ಸಹ) ಈ ಸಂಕೇತಕ್ಕೆ ಸ್ಥಾನವಿಲ್ಲದ್ದರಿಂದ 'ರಾಮ'ನ ಸಂಪ್ರದಾಯ ಕೃಷ್ಣನ (ಅರ್ಥಾತ್ ಮಹಾಭಾರತದ) ತರುವಾಯ ಮೈದಾಳಿರಲಿಕ್ಕೆ ಬೇಕು. ಋಗ್‌ವೇದ, ಬ್ರಾಹ್ಮಣ, ಉಪನಿಷತ್ತು, ಮಹಾಭಾರತದ ವರೆಗೆ ಆದ ವೃತ್ರಹನ್-ನಾಗವೈರಿ ಇಂದ್ರನ ತೇಜೋವಧೆಯಿಂದ ಸಮಾಜ-ಸಮ್ಮುಖ ಜೀವನ ರೀತಿಯ=ಇಂದ್ರ ಸಂಪ್ರದಾಯವು ಸಂಪೂರ್ಣ ನಾಮಶೇಷವಾಗದಿರುವುದನ್ನು ಕಂಡು ಒಬ್ಬ ವಾಲ್ಮೀಕಿಗೆ ರಾಮಾಯಣ ಬರೆವ ಸ್ಫೂರ್ತಿ ಬಂದಿರಬೇಕೆಂದು ಊಹಿಸುವುದಕ್ಕೂ ಅವಕಾಶವಿದೆ.

ಇದು ಏನೆ ಇರಲಿ, (ಉಭಯ) 'ರಾಮ' ನಾಮರಹಸ್ಯವು ವಿಷ್ಣು ಸಂಪ್ರದಾಯದ 'ಸಮಯ'ಕ್ಕೆ ಸಂಪೂರ್ಣ ಸುಸಂಗತವೇ ಇದೆ : ರಮ್>ರಾಮ; ರಮ್‌ಕ್ರೀಡಿಸು; ರಮಣ(ಣಿ), ರಮಮಾಣ, ಆ-ರಾಮ: ಕಣ್ಣುಮುಚ್ಚಿ ತತ್‌ಮಯತೆಯಲ್ಲಿ ಸೇರು (ವಿಶ್ರಮಿಸು ಎಂಬುದು ತೀರ ಸ್ಥೂಲ ಅರ್ಥ). ಆದಕಾರಣ 'ರಾಮ' ಸಂಕೇತವು ತತ್ವತಃ ಸಂಪೂರ್ಣವಾಗಿ ರಾತ್ರೀ ಸಂಪ್ರದಾಯದ 'ಸಮಯ' (: ಆಚರಣ) ಸೂಚಕವಾಗಿದೆ. ರಾಮ ಸಂಕೇತಕ್ಕೆ ವೈದಿಕ ಸಾಹಿತ್ಯದಲ್ಲಿ 'In most meanings Dark Black' (cf ರಾತ್ರಿ) (ಕಪ್ಪು-ಕತ್ತಲೆ) ಎಂಬ ಅರ್ಥವುಂಟು, (ಮೊ. ವಿಲಿಯಂಸನ ಕೋಶ ನೋಡಿ) 'ರಾಮಃ ಶಕುನಿಃ' (ಕಪ್ಪುಬಣ್ಣದ ಶಕುನ-ಪಕ್ಷಿ)=ಕಾಗೆ ಎಂಬ ಪ್ರಯೋಗವುಂಟು. ಕಾಠಕ ಗೃಹ್ಯಸೂತ್ರದಲ್ಲಿ ವಿಷ್ಣುವಾಚಕ ಸಂಕೇತ! ಮಹಾಭಾರತದಿಂದ ಸೌಂದರ್ಯಸೂಚಕ. ರಾಮ-ರಮಾ! ಋಗ್‌ವೇದದಲ್ಲಿ 'ಅಪಾಂನಪ್ಪ'=ಸರ-ಸ್ವಂತನನ್ನು 'ಬೃಹಂತಂ ವಾಯಸಂ' ಎಂದು ಕಾಗೆಯ ರೂಪದಲ್ಲಿ ಹೆಸರಿಸಿದ್ದೂ ಉಂಟು. ಈ ಸಂಕೇತವು ಗ್ರೀಸಿನ cronus ದೈವತವನ್ನು ಹೋಲುತ್ತದೆ.

ಎಂಟನೆಯ ಅವತಾರ : ಕೃಷ್ಣ! ಇದೂ ಸಾಂಕೇತಿಕ ಪ್ರತಿಮೆ. ಆದರೆ, ಕೃಷ್ಣನನ್ನು ಒಬ್ಬ ಯಾದವನೆಂದು, ಇದು ವ್ಯಕ್ತಿ ಎಂಬ ಗ್ರಹಿಕೆ ನಿರ್ಮಿಸಲಾಗಿದೆ. ಇದರಿಂದ ಈ ಗುಹಾನಿಹಿತ ಅರ್ಥವು ಬಹಿರಂಗಕ್ಕೆ ಬರದೆ ವೇದಾದಿ ಗ್ರಂಥದಲ್ಲೆ ಉಳಿದಿದೆ! ಈ ಮೂಲ ರಹಸ್ಯಾರ್ಥವನ್ನು ಜೀವಂತವಾಗಿ ಉಳಿಸಿಕೊಂಡು ಬರುವ ಪ್ರಯತ್ನಗಳು ಲುಪ್ತವಾಗಿ ನಮ್ಮ ಸನಾತನಧರ್ಮವು ಅರ್ಥವಾಗದ ನಿರ್-ರಸ 'ರಸವರ್ಜ(ರ)' ಆಚಾರ-ಸಂಪ್ರದಾಯವಾಗಿಬಿಟ್ಟಿದೆ! ಋಗ್‌ವೇದದಲ್ಲಿ ಅಂಶು-ಮತೀ ತೀರದ 'ದ್ರಪ್ಸಃ ಕೃಷ್ಣನು', ಅಹಿಃಶೃಂಗಿ ಕೃಷ್ಣನ ಸಂಗಾತಿ; ಇಂದ್ರವೈರಿ ಇವೆರಡೂ ಅಪಾಂನಪ್ತೃವಿನ ಪರ್ಯಾಯಗಳೇ; ಗೀತೆಯಲ್ಲೆ ಕೃಷ್ಣನು ಊರ್ಧ್ವಮೂಲ ಅಶ್ವತ್ಥ=(ಪುರುಷ) ವೃಕ್ಷರೂಪ ಮತ್ತು (ಅಬೋಧಿ) ಅಗ್ನಿಯ ಲೋಕದಾಹಕ ವಿಶ್ವರೂಪ ರೂಪ ಸಂಕೇತವಾಗಿ ಕಾಣಿಸಿಕೊಳ್ಳುತ್ತಾನೆ.

ಇದರಲ್ಲಿ ಎಂಟು ಎಂಬ (ಚಾಂದ್ರ) ಸಂಕೇತವು ಅಭ್ಯಸನೀಯವಿದೆ. 'ಅಷ್ಟಮೀ' (ದುರ್ಗಾ) ದೇವಿ! ಅಷ್ಟಮೀ : ಚಂದ್ರಾ ದುರ್ಗಾಕಾಲಿಯಾದರೆ, ಚಂದ್ರನು ಕೃಷ್ಣನು! 'ಕಾಲೋಽಸ್ಮಿ' ಎಂಬಲ್ಲಿ ಪುಲ್ಲಿಂಗೀ ಕಾಲಿಯ ದರ್ಶನವೇ ಲಭಿಸುತ್ತದೆ ಗೀತೆಯಲ್ಲಿ. ಕೃಷ್ಣಜನ್ಮ ಅಷ್ಟಮಿಯಂದು. ಅವತಾರದ ಯಾದಿಯಲ್ಲಿಯೂ ಇವನು ಅಷ್ಟಮನೇ! ಅದಿತಿ (ಸಲಿಲ) ಪುತ್ರ ಮಾರ್ತಾಂಡ (ಸೂರ್ಯ?) 'ಹುಟ್ಟುಸಾವುಗಳ ಅಧ್ಯಕ್ಷ' ಎಂಟನೆಯವನೇ ಎಂದು ಋ. ವೇದ ಹೇಳುತ್ತದೆ. [ಕಂ>] ಗಂಗಾಪುತ್ರ ಭೀಷ್ಮನು, 'ಕುರು'ಕ್ಷೇತ್ರದ ನರಮೇಧದ ಸಾಕ್ಷಿ (ಅಪಾಂನಪ್ತೃ) ಎಂಟನೆಯ ಕು-ಮಾರ!

ಒಂಬತ್ತನೆಯ ಅವತಾರವೆಂಬ 'ಬುದ್ಧ'ನು ಜ್ಞಾನ ಪಡೆದದ್ದು (ಅ) ಬೋಧಿವೃಕ್ಷದ ಅಡಿಯಲ್ಲಿ! ಈ ಬೋಧಿ ವೃಕ್ಷ=ಅಶ್ವತ್ಥ! (ಅರಳೆಯೊ, ಆಲವೊ ಎಂಬ ಸೂಕ್ಷ್ಮಭೇದವು ಇದ್ದು ಇದೂ ಮೌಲಿಕಮಹತ್ವದ್ದಾಗಿದೆ) ಅಶ್ವತ್ಥ=ಬೋಧಿವೃಕ್ಷ ಎಂಬ ಈ ಸಾಂಕೇತಿಕತೆ, ಬುದ್ಧನೂ ಅಪಾಂ-ನಪ್ತೃ=ನಾಗನೆಂಬುದನ್ನೆ ಸಾರುತ್ತಿದೆ. ಆದರೆ ಕಿವಿದವರಿಲ್ಲ!

ಹೀಗೆ, ಭಾರತೀಯ ಸಂಸ್ಕೃತಿಯಲ್ಲಿ 'ಅಪಾಂ-ನಪ್ತ' ಆರಾಧನೆಯನ್ನು ಸುಸಂಗತವಾಗಿ ಪ್ರಚ್ಛನ್ನರೀತಿಯಲ್ಲಿ ಉಳಿಸಿಕೊಂಡು ಬಂದಿರುವಾಗ, ವಿಷ್ಣುವಿನ ಈ ಒಂಬತ್ತು ಅವತಾರಗಳಂತೆ; ಹತ್ತನೆಯದೂ 'ಕಲಿ'=ವೀರ (=ವೀರ್ಯ)ವಂತಿಕೆಯ ಅವತಾರವೇ ಆಗಬೇಕಾದುದು ಕ್ರಮಪ್ರಾಪ್ತವೆ ಅಲ್ಲವೊ? 'ವಿಷ್ಣೋಃ ನು ಕಂ ವೀರ್ಯಾಣಿ ಪ್ರವೋಚಂ' ಎಂಬ ಋಗ್ವಾಣಿಯುಂಟು.[೧೪] ವಿಶಿಷ್ಟ ಸಾಂಕೇತಿಕ ಪ್ರತಿಮೆಗಳೊಳಗಿನ ಅರ್ಥಗರ್ಭದ ವೈಚಾರಿಕ ಆಕೃತಿರೂಪ ದೃಢಪಟ್ಟು ಅದರ ಸುತ್ತಲೂ ಇರುವ ಸಮಯದ (ಕಾಲತತ್ತ್ವದ) ಆವರಣದ ಆಕೃತಿಯು ನಿಶ್ಚಿತವಾದಲ್ಲಿ, ಆ ಬಳಿಕವೂ ಭವಿಷ್ಯತ್‌ಕಾಲದಲ್ಲಿ ಈ ವೈಚಾರಿಕ ಆಕೃತಿಯು ಮರಳಿ ಕಾಣಿಸಿಕೊಳ್ಳುವಾಗ ನಾಮರೂಪದ ಬೇರೆ ವಸ್ತ್ರಾಲಂಕಾರ ಧರಿಸಿದ್ದರೂ ಮತ್ತು ಆಗಿನ ಆಚಾರಗಳ ಬಾಹ್ಯಸ್ವರೂಪವು ಬೇರೆ ಎನಿಸಿದರೂ ಅವುಗಳು ಪರಿಣಾಮತಃ ನಿರ್ಮಿಸುವ 'ಸಮಯ', ಕಾಲದ ಸ್ವರೂಪವು, (ಆ ವೈಚಾರಿಕ ಆಕೃತಿಗೆ ಸುಸಂಬದ್ಧವಾದುದೇ ಇರಬೇಕಾಗುವುದರಿಂದ ಅಂದಿನ ಆಚಾರಗಳು) ಯಾವ ಬಗೆಯ ಜೀವನ ರೀತಿಗೆ ಪ್ರೇರೇಪಿಸಬಲ್ಲುದು ಎಂಬುದನ್ನು ಮುಂಗಂಡು ಹೇಳಲು ಶಕ್ಯವಿದೆ. 'ಕಲಿ(ಗಳ) ಯುಗದಲ್ಲಿ ಅಶ್ವಾರೋಹಿ ಕಲ್ಕಿ(ೕ) ವೀರನ ಅವತಾರವೇ ಆಗುತ್ತದೆ ಎಂದು ಹೇಳಲು ಶಕ್ಯವಾಗುತ್ತಿರುವ ಕಾರಣವೇ ಇದು! ಈ ಅವತಾರದ ವಾಹನ 'ಅಶ್ವ'ವಾಗಿರುವಲ್ಲಿ ವೇದ (ಪೂರ್ವ)ಕಾಲೀನ ಅಶ್ವ-ತ್ಥ ಉಪಾಸನೆಯ ಸನಾತನತ್ವವು ಅರಿಕೆಗೆ ಬರುತ್ತದೆ.

ಭಾರತೀಯ ಈ ಸನಾತನ ಧರ್ಮವು ಕೆಲವೊಂದು ಕಾಯಂ ಮೊಗವಾಡಪಡಿಯಚ್ಚು ನಿರ್ಮಿಸಿದೆ; ಇತಿಹಾಸವನ್ನಲ್ಲ

> Categories instead of historical personages:... personages are assimilated in their historical models....

ಋಗ್ವೇದದಿಂದ ತೊಡಗಿ ಬುದ್ಧಮಹಾವೀರಾದಿಗಳ ವರೆಗೂ ಈ ಮಾತು ಅನ್ವಯಿಸುತ್ತದೆ. ಹೀಗಿರುವಾಗ ಡಾ. ವ್ಹೀಲರ್ ಪ್ರಭೃತಿ ಇತಿಹಾಸ ಸಂಶೋಧಕರು ಸೈಂಧವ ಸಂಸ್ಕೃತಿಯ ವಿನಾಶಕ್ಕೆ ಕಾರಣನು, ಋಗ್‌ವೇದದ ವೃತ್ರಹನ್ ವೀರ ಇಂದ್ರನೇ ಇರಲಿಕ್ಕೇಬೇಕು, ಎಂದು ಎದೆತಟ್ಟಿ ಹೇಳುವ ಧೈರ್ಯ ತಾಳುತ್ತಾರೆ! ಆಪೋ (ಗಂಗಾ)ವತ್ಸ ಭೀಷ್ಮನು ಐತಿಹಾಸಿಕ ವ್ಯಕ್ತಿ ಎನಿಸುತ್ತಾನೆ! ಇದೆಲ್ಲ ಯಾತು>ಜಾದು ದೃಶ್ಯವೊ ಇತಿಹಾಸವೊ? ರಾಮ, ಪರಶುರಾಮ, ಕೃಷ್ಣ ಇವನ್ನು ಮೊಗವಾಡ ಎಂದು ಅರಿಯದೆ, ಇವು ಸಂಪೂರ್ಣ ಐತಿಹಾಸಿಕ ವ್ಯಕ್ತಿಗಳೇ ಎಂಬ ಶ್ರದ್ಧೆಯಿಂದ ರಾಮಾಯಣ ಮಹಾಭಾರತ ಸಂಭವಿಸಿದ್ದು ಪ್ರತ್ಯಕ್ಷ ಎಂದು ನೆರೆನೆಮ್ಮುವಲ್ಲಿ ಮೋಸ ಒಳಗೊಂಡಿಲ್ಲವೆ?

ಋಗ್ವೇದಸ್ಥ ಮಹತ್ವದ ಕೆಲವೊಂದು ಸಂಕೇತಗಳ ವಿಮರ್ಶೆಯ ಮೂಲಕ ಅಲ್ಲಿ ಹುದುಗಿರುವ ಸಂಸ್ಕೃತಿಯನ್ನು ಈ ವಸ್ತುನಿಷ್ಠ ಅರ್ಥಪದ್ಧತಿಯಿಂದ ಗ್ರಹಿಸಿಕೊಳ್ಳಲು ಸಾಧ್ಯವೊ, ಎಂಬ ಒಂದು ಪ್ರಯೋಗವೆ ಪ್ರಸ್ತುತ ಪ್ರಬಂಧ. ಈ ಪ್ರಯೋಗವು ಒಂದು ದಿಗ್‌ಭ್ರಮೆಯನ್ನು ನಿವಾರಿಸಿಕೊಳ್ಳುವ ತೀವ್ರ ಆವಶ್ಯಕತೆಯಿಂದಾಗಿ ಅನಿವಾರ್ಯವಾಯಿತು. ಋಗ್‌ವೇದಸ್ಥ ಆದಿಶಕ್ತಿ ಕನ್ಯಕಾ ಪರಮೇಶ್ವರಿ ಕುಮಾರಿ ಅದಿತಿದೇವಿಯ ಸಮಗ್ರ ಸಮೀಕ್ಷೆಯ ಕೊನೆಯಲ್ಲಿ ಈ ದೇವಿಯು 'ಸಾರ್ಪರಾಜ್ಞೀ ಸೂರ್ಯೋ ವಾ' ರೂಪದಲ್ಲಿ ಕಾಣಿಸಿಕೊಂಡಳು! ಈ ದೃಶ್ಯ ಉಂಟು ಮಾಡಿದ ದೃಗ್-ಭ್ರಾಂತಿ, ಕಳವಳದ ತೀವ್ರ ವೇದನೆ ಅಸಹ್ಯವಾಯ್ತು. 'ಸರ್ಪ-ಸೂರ್ಯ' ದೈವತ ಸೋತ್ರಕ್ಕೆ ಈ ಸಂಹಿತೆಯಲ್ಲಿ ಸ್ಥಾನವಿರುವ ಈ ವಿಸಂಗತಿಯೆ ಈ ಏನೆಲ್ಲ ಅಸ್ವಾಸ್ಥ್ಯಕ್ಕೆ ಕಾರಣ.*

ಋಗ್‌ವೇದದಲ್ಲಿ ಧೀ-ಪ್ರೇರಕ ಸವಿತೃ:ಸೂರ್ಯ, ಜಾತವೇದ ಅಗ್ನಿ, ವೃತ್ರಹನ್ ಇಂದ್ರನು ಪ್ರಧಾನ ದೈವತಗಳು ಎಂದು ನಂಬಲಾಗಿದೆ, ನಂಬಿಸಲಾಗಿದೆ. ಆದರೆ ವೃತ್ರ (=ಅಹಿ) ಹನ್ ಇಂದ್ರನೇ ಪ್ರಧಾನವಿರುವನೆಂದು ನಂಬಿಸಲಾಗಿರುವ ಈ ಸಂಹಿತೆಯಲ್ಲಿ 'ಸರ್ಪ'ವೂ ಆರಾಧ್ಯದೈವತವೇ? ಬರಿ ಸರ್ಪವಲ್ಲ ಇದು; ಅಹಿರ್ಬುಧ್ನ್ಯ ನೊಬ್ಬನಿಗೆ ವಂದನಾರ್ಹರಲ್ಲಿ ಅವಕಾಶ ಕಲ್ಪಿಸಿಕೊಟ್ಟುದುಂಟು. ಆದರೆ ಈ ಬಾರಿ ಅದಕ್ಕೂ ಮುಂದಿನ ಹಂತ! ಸಾರ್ಪರಾಜ್ಞೀ ಸೂರ್ಯೋ ವಾ! ಸರ್ಪವು ಸೂರ್ಯರೂಪದ್ದಾಗಿದೆಯೊ, ಸೂರ್ಯನೇ ಸರ್ಪರೂಪನೊ ಇದಾವುದೂ ಸ್ಪಷ್ಟವಾಗದ ಈ 'ವಾ ನ ವಾ' ಶೈಲಿಯನ್ನು ಯೋಜನಾಪೂರ್ವಕವಾಗಿಯೇ ಈ ಕವಿಗಳು ಉಪಯೋಗಿಸಿ ಕೊಳ್ಳುತ್ತಿಲ್ಲವಷ್ಟೆ? ಎಂಬ ಸಂದೇಹ ಮೂಡಿತು! 'ಸಾರ್ಪರಾಜ್ಞಿ' ಈ ಪದಕ್ಕೆ ವಿಶೇಷಣದಂತಿರುವ 'ಸೂರ್ಯ' ಪುಲ್ಲಿಂಗಿ ಏಕೆ? ಇಲ್ಲಿ ಏನೋ ತಂತ್ರ ಮಾಟದ ಮಂತ್ರ ಇರಲೇಬೇಕೆಂದು ಎನಿಸತೊಡಗಿ ಮನಸ್ಸಿನ ವಿಷಣ್ಣತೆ ವಿಪರೀತಕ್ಕೆಟ್ಟಿತು. 'ಸಾರ್ಪರಾಜ್ಞೀ ಸೂರ್ಯಾ' ಇರುವ ಈ ಗ್ರಂಥದಲ್ಲಿ ಸರ್ಪ-ಸೂರ್ಯ ಯುತಿಯ ಎಂದರೆ ಅಮಾವಾಸ್ಯಾ ಅಥವಾ ಸೂರ್ಯಗ್ರಹಣದ=ಮೃತ್ಯು-ತಿಥಿಯ ಸಾಂಕೇತಿಕತೆಯಿರಬೇಕಾಯ್ತು. ಇದು ನಿಜವಿದ್ದರೆ ಈ ವೇದದಲ್ಲಿ ವೃತ್ರವಿಜಯ ಇಂದ್ರನ ತೇಜೋವಧೆಯೇ ಚಿತ್ರಿತವಾಗಿರಲಿಕ್ಕೆ ಬೇಕು ಮತ್ತು ಅಸೂರ್ಯರ ರಾತ್ರೀ ಸಂಪ್ರದಾಯದ ಸಮಯಾಚಾರಗಳೇ ಇಲ್ಲಿ ಹುದುಗಿಕೊಂಡಿರಲಿಕ್ಕೇಬೇಕು! ಇದು ನಿಜವೆ? ಎಂಬ ಪ್ರಶ್ನೆ ಕಾಡತೊಡಗಿತು!

ಪವಿತ್ರ ಧರ್ಮಗ್ರಂಥ; ಇದು 'ಅಪೌರುಷೇಯ ಕೃತಿ', ಎಂದು ಬಗೆಯಬೇಕೆಂಬ ಆಗ್ರಹ ಬೇರೆ! ಅಪೌರುಷೇಯತ್ವವನ್ನು ಸಂದೇಹಿಸಿದರೂ ಇದರೊಳಗಿನ ಪುರುಷಸೂಕ್ತಾದಿ ಹಲವು ಸ್ತೋತ್ರಗಳ ನಿತ್ಯ ವಿನಿಯೋಗದ ಆಹ್ನಿಕಗಳ, ಛಂದೋಗೀತದ ಇಂಪಿನ ಅನುಭವದ ಅಪೂರ್ವತೆಯು, ಜಗತ್ತಿನಲ್ಲೆ ಅತಿ ಪುರಾತನ ಗ್ರಂಥ ಎಂಬ ಅಭಿಮಾನದ, ಉಚ್ಚ ಪಾತಳಿಯ ಶ್ರೇಷ್ಠ ಆದರ್ಶ ವಿಚಾರಗಳ ನಿಧಾನ ಎಂಬ ರಕ್ತಗತವಾಗಿರುವ

---

* 'ಸರ್ಪ' ಪದಕ್ಕೆ ಇರುವ ಅರ್ಥ, ಸ್ಥಾನ, ಪರಿವೇಶಗಳೇ ಬರೇ; 'ಸೂರ್ಯ' ಶಬ್ದಕ್ಕೆ ಇರುವ ಅರ್ಥ, ಸ್ಥಾನ, ಪರಿವೇಶಗಳೇ ಬೇರೆ. ಇವೆರಡೂ ಬೇರೆ ಬೇರೆ ಪಾತಳಿಗಳಲ್ಲಿ ಇರುತ್ತವೆ. ಆದರೆ, ಅವೆರಡೂ ಸಮಾನ ಪಾತಳಿಗೆ ಬಂದಾಕ್ಷಣ ಅರ್ಥವು ತಿರುಗು-ಮುರುಗು ಆಗುತ್ತದೆ. ಆಗ ಮೊದಲಿದ್ದ ಶಬ್ದದ ಅರ್ಥ ಸಂಕೇತವು ನಷ್ಟವಾಗುತ್ತದೆ. ಶಂಬಾ ಈ ವಿಚಾರವನ್ನೂ ಗಟ್ಟಿಯಾಗಿ ಹಿಡಿದಿದ್ದಾರೆ (ಸಂ)

ಸಾಂಪ್ರದಾಯಿಕ ಶ್ರದ್ಧೆಯ... ಇಂತಹ ಈ ಮಹಾನ್ ಗ್ರಂಥದಲ್ಲಿ ಮಾತಿನ ಮೋಡಿ-ಮಾಟ: ಯಾತು ತಂತ್ರವು ಇರುವ ಹಾಗಿನ ಈ ಸಂದೇಹದ ಇತ್ಯರ್ಥವು ನನ್ನ ಮಟ್ಟಿಗಂತು ಆಗಲೇಬೇಕು ಎಂದು ಎನಿಸಿತು. ತೋರಿದ-ತೋಚಿದ ಸಂದೇಹ ಸ್ಥಳಗಳನ್ನು ಎತ್ತಿಕೊಂಡು ಅವುಗಳ ವಿಶ್ಲೇಷಣೆ ಪ್ರಾರಂಭಿಸಿದ್ದಾಯ್ತು. ಗರ್ಭಸ್ಥ ವಾಮದೇವನ ಮಾತುಗಳ ವಿಚಾರವು ಮೊದಲು ಅವಶ್ಯವೆನಿಸಿತು. ಹಾಗೆಯೆ ಒಂದರಿಂದ ಇನ್ನೊಂದು ಹೀಗೆ 'ಆಶಾ' (:ದಿಶಾ; ray of hope : ಬೆಳಕಿನ ಕಿರಣ) ಕಂಡಂತೆ ಎನಿಸಿದ ದಿಕ್ಕಿನಲ್ಲಿ ಸಾಗಿದ್ದಾಯ್ತು. ಈ ಪ್ರಶ್ನೆಗೆ ಯಾವ ಗ್ರಂಥದಿಂದಲೂ ನೇರವಾದ ಉತ್ತರ ದೊರೆವಂತೆ ತೋರಲಿಲ್ಲ.

ಸಂಕೇತ-ಪ್ರತಿಮಾ ವಿಚಾರದ ಬಗೆಗೆ ಆವಶ್ಯಕ ವಿಚಾರ ವಾಚನ ಚಿಂತನವು ಇದ್ದಿತಾದರೂ ಈ ಭೂಮಿಕೆಯನ್ನು ಕುರಿತು ಇನ್ನೂ ಸ್ಪಷ್ಟತೆಯಿರಲಿಲ್ಲ, ಆದರೂ ನನ್ನ ತಿಳಿದ ರೀತಿಯಲ್ಲಿ ಸತ್ಯಾನ್ವೇಷಣೆಯಲ್ಲಿ ತೊಡಗಿದ್ದಾಗಿತ್ತು. 'ಶಬ್ದಗಳ' ಆಧಾರದ ಮೇಲೆ ಮುನ್ನುಗ್ಗುವ ಅವಿವೇಕೀ ಸಾಹಸ ನನ್ನದು, ಎಂದು ನಕ್ಕು ಎಚ್ಚರಿಸಿದ ಮಿತ್ರರಿದ್ದಾರೆ. ಪ್ರತಿಮೆಯೊಳಗಿನ ಸಾಂಕೇತಿಕ ಅರ್ಥದ ಸ್ವರೂಪಾದಿಗಳ ಬಗೆಗಿನ ಶಾಸ್ತ್ರೀಯ ವಿವೇಚನದ ಗ್ರಂಥಗಳ ಮೂಲಕ ವ್ಯಾಸಂಗ ಮಾಡದೆಯೆ ಹೊರಟುದು ಪ್ರಶಸ್ತವಲ್ಲ, ಎಂಬ ಎಚ್ಚರ ಆ ಮೊದಲೆ ಉಂಟಾಗಿದ್ದಿತಾದರೂ, ವ್ಯಾಂಡ್ರಿಯಾಸ್, ಕಾರ್ಲ ಮ್ಯಾನ್‌ಹ್ಯಾಮ, ಅರ್ನೆಸ್ಟ್ ಕ್ಯಾಸಿರರ್, ಸಪೀರ್ ಇಂತಹರ ಗ್ರಂಥಗಳ ಪರಿಚಯದ ವರೆಗೆ. ಈ ವಿಷಯದಲ್ಲಿ ತೃಪ್ತಿಕರವಾದ ವಿವರಣೆ, ಸಾಕಷ್ಟು ಪ್ರಮಾಣದಲ್ಲಿ ಎಲ್ಲಿಯೂ ದೊರೆಯದೆ ಹೋಯ್ತು. 'ಸಂಕೇತ' ಎಂದರೇನು? ಇದರ ಅರ್ಥದ ವಿಷಯದಲ್ಲಿಯೇ ಇರುವ ವಿವಿಧ ಮತಗಳಲ್ಲಿ ಯಾವುದು ಸ್ವೀಕಾರಾರ್ಹ, ಇದನ್ನು ನಿರ್ಧರಿಸಲಿಕ್ಕಾಗದೆ ಒದ್ದಾಡಿದ್ದುಂಟು. ದಿಗಂತ ಕೀರ್ತಿಗೆ, ಸೂಕ್ಷ್ಮಮೇಧಾಶಕ್ತಿಗೆ ಬೆಲೆ ಕೊಟ್ಟರೆ ಬರ್‌ಟ್ರಾಂಡ್ ರಸೆಲ್ಲರ ವ್ಯಾಖ್ಯೆ ಸ್ವೀಕರಿಸಬೇಕು. ಆದರೆ ರಸೆಲ್ಲರಿಗಿಂತ ವ್ಹೈಟ್‌ಹೆಡ್ ಅವರ ತಾತ್ವಿಕ ಭೂಮಿಕೆ (Adventures of Ideas) ಹೆಚ್ಚು ಹಿಡಿಸಿತು. ಇಂದಿನ ಫ್ಯಾಶನ್ ಅಥವಾ ಲೋಕರೂಢಿಯೆ ಆಗುತ್ತಿರುವ ಫ್ರೈಡ್ ಹೇಳುವ ಅರ್ಥ ಸರಿ ಎಂದು ಆ ದೃಷ್ಟಿಯಿಂದ ಸಂಸ್ಕೃತಿಯನ್ನು ಅರ್ಥಯಿಸಬೇಕು ಅಥವಾ Thesis-Anti-thesis-Synthesis ಸೂತ್ರ ಹಿಡಿದು ಹೊರಡಬೇಕು. ಯುಗಚಕ್ರದ ಸಿದ್ಧಾಂತವಂತೂ ಇದ್ದೇ ಇದೆ; 'Supramental' ದೃಷ್ಟಿಕೋನದವರೆಂಬ ಶ್ರೀ ಅರವಿಂದರ ವಿಚಾರ ಪದ್ಧತಿ, ಹೆಗೆಲ್ಲನಿಂದ ಪ್ರಭಾವಿತವಾದದ್ದು!....ಇಂತಹರ ಗ್ರಂಥಗಳಿಂದ ಈ ಮಹಾನ್ ಪ್ರತಿಭಾವಂತರ ಬಗೆಗೆ ನಿತಾಂತ ಆದರವುಂಟಾದರೂ ಅವು ಅದ್ಭುತ ವಿಶಿಷ್ಟ ದೃಷ್ಟಿಕೋನಗಳು ('attitudes') ಎನಿಸಿದುವೇ ಹೊರತು, ಈ ಯಾವ ಭೂಮಿಕೆಯಿಂದ ಸಮಗ್ರ ಜೀವನದ ಅವ-ಗಾಹನದ ಶಕ್ಯತೆ ಎನಿಸಲಿಲ್ಲ. ಯಾವುದೇ ವ್ಯಕ್ತಿಯ ಅಥವಾ ಪಂಥೀಯ 'ಸಂಕೇತ'ದ ವ್ಯಾಖ್ಯೆ ಸ್ವೀಕರಿಸದೆ ಈ ಪ್ರಯೋಗದಲ್ಲಿ ದೃಢಪಡುವ ಅರ್ಥವೆ ಆ 'ವ್ಯಾಖ್ಯೆ'ಯನ್ನು ನಿರ್ಧರಿಸಲಿ, ಎಂಬ ಸಂಕಲ್ಪದಿಂದ ಹೊರಟುದಾಯ್ತು. ಋಗ್‌ವೇದಸ್ಥ ಆಶಯ, ಅರ್ಥಗ್ರಹಣದ ಉದ್ದೇಶವಿದ್ದರೂ, ನಾಗ=ಸರ್ಪವೇ ಋಗ್ವೇದದ ಪ್ರಧಾನ ದೈವತ ಎಂದು ಮೊದಲೇ ನಿರ್ಧರಿಸವುದಕ್ಕೆ ಮನಸ್ಸು ಅಳುಕಿತು. 'ಸಾರ್ಪರಾಜ್ಞೀ ಸೂರ್ಯೋವಾ' ಈ ದೈವತ ಪ್ರತಿಮೆಯೊಳಗಿನ 'ಸರ್ಪ' ಸಂಕೇತಸ್ಥ ಅರ್ಥದ ಆಕೃತಿ ಸ್ವರೂಪವನ್ನು ನಿರ್ಧರಿಸಿಕೊಳ್ಳುವುದು ಈ ಪ್ರಬಂಧದ ಪ್ರಮುಖ ಉದ್ದೇಶವಾಯಿತು. ಆದಕಾರಣ 'ನಾಗಪ್ರತಿಮಾ ಪೂಜಾ ವಿಚಾರ' ಎಂಬ ತಲೆಬರಹದಿಂದಲೇ ಈ ಪ್ರಬಂಧವನ್ನು ಪ್ರಾರಂಭಿಸಿದ್ದಾಯಿತು.

ಈ ಅನ್ವೇಷಣೆಯಲ್ಲಿ ಸಾಂಕೇತಿಕ ಪ್ರತಿಮೆಗಳ ಅರ್ಥ-ಗ್ರಹಣಕ್ಕಾಗಿ ಸ್ವೀಕರಿಸಿದ ಭೂಮಿಕೆಯನ್ನು ಅಲ್ಲಲ್ಲಿ ವಿಸ್ತರಿಸುತ್ತಲೆ ಮುಂದುವರೆದುದಾಗಿದೆ. ಆದುದರಿಂದ, ಅದನ್ನು ಸಾರಾಂಶ ರೂಪದಿಂದಲಾದರೂ ಇಲ್ಲಿ ಮರಳಿ ಸೂಚಿಸುವ ಆವಶ್ಯಕತೆಯಿಲ್ಲ. ನಾಗಪ್ರತಿಮೆಯ ಅರ್ಥದ ಇತಿಮಿತಿಗಳನ್ನು ನಿಷ್ಕರ್ಷಿಸಿಕೊಳ್ಳಲು ನಾಗನನ್ನು ಹುಡುಕಿಕೊಂಡು ಹೊರಡುವಲ್ಲಿ ನೇರದಾರಿ ಗೊತ್ತಿಲ್ಲದ್ದರಿಂದ ಈ ಪ್ರಯೋಗದಲ್ಲಿ ತುಂಬ ಸುತ್ತಾಟವಾಗಿದೆ. ಈ ಅರ್ಥ-ಗ್ರಹಣ ಪದ್ಧತಿಯ ಕೆಲವೊಂದು ಮಾತುಗಳ ವಿವರಣೆ ಉಳಿದುಹೋಗಿದೆ. ಆದರೂ ಈ ಅರ್ಥಗ್ರಹಣ-ಪದ್ಧತಿಯ ಫಲಿತಾಂಶಗಳು, 'ಸಾಕಷ್ಟು ತೃಪ್ತಿಕರ ಆಗಿವೆ' ಎಂದು ನಾನೇ ಹೇಳುವುದು, ಸದಭಿರುಚಿಗೆ

ಸರಿಹೋಗದು. ಈ ಫಲಿತಾಂಶಗಳು ಸರಿಯಿದ್ದಲ್ಲಿ, ನಾಗವೇ ಆದಿ ದೈವತವಾಗಿರುವ ಇಜಿಪ್ತ, ಕ್ರೀಟ-ಗ್ರೀಸ್, ಸಮೇರಿಯನ್-ಅಸ್ಸೀರಿಯಾದಿ ಪುರಾತನ ಸಂಸ್ಕೃತಿಗಳ ಮೂಲಕ ಇದರೊಳಗಿನ ವಿವರಣೆಗೆ-ಪ್ರತಿಮಾ : ಸಂಕೇತಗಳ ಅರ್ಥಕ್ಕೆ ಪುಷ್ಟಿ ದೊರೆಯಲೇಬೇಕು. ಇದು ನಿಜವೇ ಎಂಬುದನ್ನು ನೋಡುವುದಕ್ಕಾಗಿ ಬರೆದ ಭಾಗವನ್ನೆ ಈ ಪ್ರಬಂಧದ 'ಪೀಠಿಕಾ' ಪ್ರಕರಣ ಮಾಡುವ ಅಪೇಕ್ಷೆಯಿತ್ತು. ಆದರೆ, ಆ ಪ್ರಬಂಧ ೨-೩ ಬಾರಿ ಬರೆದರೂ ೨೦೦-೨೫೦ ಪುಟಗಳಿಗೆ ಮಿಕ್ಕಿತು! ಈ ಪ್ರಬಂಧದ ವಿಸ್ತಾರ ಮೊದಲೇ ನನ್ನ ಎಣಿಕೆಗೆ ಮೀರಿದೆ! ಅದರಿಂದಾಗಿ ಬರೆದುದನ್ನು ವಿಷಾದದಿಂದ ಬದಿಗೆ ಇರಿಸಬೇಕಾಯ್ತು. ಅರ್ಥಗ್ರಹಣ ಪದ್ಧತಿಯ ಪರಿಚಯಾತ್ಮಕ ಸ್ಥೂಲ ಪ್ರಸ್ತಾವನೆಯೆ ಇರುವುದೇ ಲೇಸೆನಿತು; ಏಕೆಂದರೆ ಸಾಂಸ್ಕೃತಿಕ ಪ್ರತಿಮೆಗಳ ಅರ್ಥಗ್ರಹಣದಲ್ಲಿ ಏಕಸೂತ್ರತೆ ಇಲ್ಲ. ಸತ್ಯಾನ್ವೇಷಣೆಯ ಈ ಕ್ಷೇತ್ರದಲ್ಲಿ, ಪ್ರಾಜ್ಞವಿಮರ್ಶಕರ ವಿಧಾಯಕ ಟೀಕೆ, ಸೂಚನೆಗಳ ಸಹಕಾರದಿಂದ, ವಸ್ತುನಿಷ್ಠ ಭೂಮಿಕೆಯ ಅರ್ಥಗ್ರಹಣದ ಒಂದು ಶಾಸ್ತ್ರೀಯ ಪದ್ಧತಿಯು ನಿಶ್ಚಿತವಾಗಿ ಆಕಾರ ಪಡೆವ ಶಕ್ಯತೆಯು ತೋರುತ್ತಿದೆ.

ಟಿಪ್ಪಣಿ

೧. Sharma. S. R., ***Brief Survey of Human History*** ಗ್ರಂಥದಿಂದ ಈ ಅವತರಣಿಕೆಯು ಉದ್ಧೃತವಾಗಿದೆ.
೨. James. E. O ; ***The Ancient Gods,*** London University pp. 163-225
೩. ***ಋಗ್ವೇದ ಸಂಹಿತೆ*** x-ಮಂಡಲ ೧೩೬ ಸೂಕ್ತ ೯ ಮಂತ್ರ ಹಾಗೂ i-೧೬೧
೪. ಕ್ರೀಟ, ಗ್ರೀಸಗಳಲ್ಲಿಯ ತನ್ಮಯಾ ನಂದೀ ಉಪಾಸನೆಯ ಬಗೆಗಿನ ವಿವರಗಳಿಗಾಗಿ ***Sexual Symbolism***, Publisher Julian press Ny;' 62, ನೋಡಿ.
೫. The idea of canning, of superior intelligence, came to be imparted to Enki
೬. Frankfort. H. ; ***Before philosophy***, p. 160
೭. ***ಋಗ್ವೇದ ಸಂಹಿತೆ*** x-೮೫
೮. ***ಬೃಹದಾರಣ್ಯಕೋಪನಿಷತ್ತು*** ೧-೨,೧
೯. ***ಋಗ್ವೇದ ಸಂಹಿತೆ*** X. ೮೫
೧೦. ಅದೇ X-೮೧,೮೨,೯೦ ಮತ್ತು I-೧೩೮.೮
೧೧. Sir Monier Willams; ***A Sanskrit English Dictionary*** p. 1027
೧೨. Basham A. L.; 1963 ***The Wonder that was India***, Asia Publishing House -1963
೧೩. ***ಋಗ್ವೇದ ಸಂಹಿತೆ*** X - ೧೮೯
೧೪. ಅದೇ I - ೧೫೪
೧೫. ಈ ಭೂಮಿಕೆಯಿಂದ ಪಂಪಭಾರತ, ರಾಷ್ಟ್ರಕೂಟರ ಕಾಲದ ಐತಿಹಾಸಿಕ (ಕಾವ್ಯ?) ಗ್ರಂಥ, ರನ್ನನ ಗದಾಯುದ್ಧವು ಕಲ್ಯಾಣ ಚಾಲುಕ್ಯರ ಕಾಲದ ಐತಿಹಾಸಿಕ ಕೃತಿಯಾಗುತ್ತದೆ!

ಭಾಷಿಕ ಮಾಧ್ಯಮ : ಸಾಂಕೇತಿಕ ಪ್ರತಿಮೆ

ಭೌತಶಾಸ್ತ್ರದಲ್ಲಿ ಸತ್ಯಾನ್ವೇಷಣೆಯ ಪದ್ಧತಿ ನಿಶ್ಚಿತವಾಗಿದೆ. ಆದರೆ, ಜೀವನ ಕ್ಷೇತ್ರದಲ್ಲಿ ಅರ್ಥವು ವೈಯಕ್ತಿಕ (private) ಎಂಬ ಏಕಾಂತಿಕ ಗ್ರಹಿಕೆಯಿಂದಾಗಿ ಹಾನಿಯಾಗಿದೆ. ಅರ್ಥವನ್ನು ಕಲ್ಪಿಸಿಕೊಳ್ಳುವ ಅಥವಾ ಗ್ರಹಿಸಿಕೊಳ್ಳುವ ಕ್ರಿಯೆ ವೈಯಕ್ತಿಕ ನಿಜ, ಆದರೆ ತನ್ನೊಳಗೆ ತಾನೇ ಚಿಂತನ-ಮನನ-ಮನೋಮಥನ ಮಾಡಬೇಕೆಂದರೂ, ಅಲ್ಲಿ ತನ್ನೊಳಗೆ ಇನ್ನೊಂದು ವ್ಯಕ್ತಿಯ ಆವಶ್ಯಕತೆಯಿದೆ; ತಾನು 'ಏಕಾಕಿ' ಎಂಬ ಗ್ರಹಿಕೆ, ಅರ್ಧ ಸತ್ಯ. ಯಾವುದೇ ವ್ಯಕ್ತಿಗೆ 'ತಾನು' ಎಂಬ ಅರಿವು ಮೂಡಿದ್ದೇ ಇನ್ನೊಬ್ಬರ-ಇಂತಹ ಹಲವರ ಸಂಬಂಧದಲ್ಲಿ; ಸಂಪರ್ಕದಲ್ಲಿ ಇಲ್ಲಿ ಈ ಸಂಬಂಧ-ಸಂಪರ್ಕ ಕೇವಲ ದೈಹಿಕ ಭೌತಪಾತಳಿಯದಲ್ಲ ಮತ್ತೆ, ಭಾಷಿಕ ಸೇತುವೆಯ ಮೇಲಿಂದ ಇನ್ನೊಂದು ಭೌತದ ಆಧಾರದ ಮೇಲೆಯೆ ನಿಂತೇ ಆದರೂ, ಅಭೌತ, ಅ-ಪ್ರಾಕೃತ ಕ್ಷೇತ್ರದಲ್ಲಿ ಪ್ರವೇಶ ಪಡೆಯಲಾಗುತ್ತದೆ. ಮೂಲ ಋ. ವೇದದ ಪರಿಭಾಷೆಯಲ್ಲಿ ಹೇಳಬಹುದಾದರೆ, 'ಭೂಃ' ಲೋಕದ ಆಧಾರದ ಮೇಲೆ ನಿಂತಿರುವ 'ಭುವಃ' ಲೋಕವು, ಭಾಷಾ ಸೇತುವಿನಿಂದ ಏರಿ ಹೋಗಿ ವ್ಯವಹರಿಸುವ ಲೋಕ.

ಆದರೆ, ಇಲ್ಲಿ ಒಂದು ಜಾರುವ ಎಡೆಯಿದೆ; ಕೆಲವೊಂದು ಬಗೆಯ ಕೇವಲ ಕವಿಕಲ್ಪಿತ ಸಂಕೇತಗಳ ಸೇತುವೆ ದಿಗ್ಭ್ರಮೆಗೆ ಕಾರಣವಾಗುತ್ತದೆ! 'ಭೂ' ಆಖ್ಯಾತದಿಂದಲೇ ಆಗಿರುವ 'ಭುವಃ' ಸಂಕೇತದ ಲೋಕವು ಕೇವಲ ಕಲ್ಪನಾ ವಿಲಾಸದ-ರವಿಕಾಣದ್ದನ್ನು ಕಾಣುವ ಕವಿ-ನಿರ್ಮಿತ ಲೋಕವಲ್ಲವೆ ಮತ್ತೆ! ರವಿ-ಕಾಣದ ಕವಿ-ಕಲ್ಪನಾ-ವಿಲಾಸಕ್ಕೆ 'ಭುವಃ' ಭೂಮಿಕೆಯ ಜೀವನ ದೃಷ್ಟಿ ಆತಂಕ-ಕಾರಿ! ಈ ಋಕ್‌ಸಂಹಿತೆಯಲ್ಲಿಯೇ ಭೂಃ ಭುವಃ ಮತ್ತು ಸುವಃ (ಸ್ವಃ) ಈ ವ್ಯಾಹೃತಿತ್ರಯವನ್ನು ಬರಡುಗೊಳಿಸುವ ಪ್ರಯತ್ನವಾಗಿದೆ! ವ್ಯಾಹೃತಿಗಳು 'ಸಪ್ತ' (: ಸರ್ಪ) ಸಂಕೇತಕ್ಕೆ ತಿರುಗುವ ಮುಂಚೆ, ಒಮ್ಮೆ ನಾಲ್ಕು ಆದುದುಂಟು. ಈ ವ್ಯಾಹೃತಿ-ತ್ರಯದ ವಿನಾಶದ ಪ್ರಚ್ಛನ್ನ ಪ್ರಯತ್ನವಾದುದಕ್ಕೆ ಈ ಸಂಹಿತೆಯಲ್ಲಿಯೇ ಪ್ರಮಾಣಗಳಿವೆ:

೧) 'ಮಮ ಪೂರ್ವೇ ಭ್ರಾತರಃ ಹತಃ' ಎಂದು ಗಾಬರಿಯಾಗಿ 'ತಾನು ಎಂತೂ ಆಪ : ರಸ : ರೇತದಲ್ಲಿ ಅಡಗಿ ಉಳಿದುಕೊಂಡಿದ್ದೇನೆ' ಎಂದು ಹವ್ಯವಾಹನ ಅಗ್ನಿಯ ಮಾತುಗಳೆ ಇವೆ[೧] ತತ್ : ಏಕಂ : ಸತ್ ಪಂಥೀಯ ಭೂಮಿಕೆಯ ಕೈವಾಡವು ಇಲ್ಲಿ ಇದೆ.

೨) 'ಅತ್ರಿ' ಮಂಡಲದಲ್ಲಿ 'ತುರೀಯೇಣ ಬ್ರಹ್ಮಣಾ ಗೂಳ್ಹಂ ಸೂರ್ಯಂ ಅವಿಂದನ್' ಎಂಬ ಮಾತು ಬರುತ್ತದೆ 'ತುರೀಯಾ' ಇದು ಆಧ್ಯಾತ್ಮದೊಳಗಿನ ಪಾರಿಭಾಷಿಕ

ಸಂಕೇತ ೧ ಜಾಗೃತ, ೨ ಸ್ವಪ್ನ, ೩ ಸುಷುಪ್ತಿ ೪ ತುರಿಯಾ. ಈ 'ತುರಿಯೆ', 'ಏಕಂ : ಸತ್' ಬ್ರಹ್ಮಸಿದ್ಧಿಯ ಹಂತ, ತೈತ್ತಿರೀಯ ಉಪನಿಷತ್ತಿನಲ್ಲಿ: ಈ ಚತುರ್ಥ (: ತುರೀಯ) ವ್ಯಾಹೃತಿಯ ಸ್ಥಾನವು ಯಾವುದು, ಎಂಬುದರ ಸ್ಪಷ್ಟೀಕರಣವಿದೆ : ಮಹಃ ಇತಿ ಚಂದ್ರಮಾಃ। ಎಂದು ಹೇಳುವ ಮುಂಚೆ 'ಮಹಃ ಆದಿತ್ಯಃ' ಎಂಬಲ್ಲಿ ಒಂದು ಮೂಲಕೀಲ (master key) ಸಹಜವಾಗಿ ಬಯಲಿಗೆ ಬರುತ್ತಿದೆ.

'ಆದಿತ್ಯ'ರು ಋಗ್ವೇದದಲ್ಲಿ ತುಂಬ ಗೊಂದಲಕ್ಕೀಡು ಮಾಡುತ್ತಾರೆ. ಆದಿತ್ಯರು 'ಸಪ್ತ' ಆಗುತ್ತಾರೆ! 'ಅಷ್ಟ' ಆಗಿದ್ದಾರೆ; ಕೊನೆಗೆ ಬ್ರಾಹ್ಮಣಗಳಲ್ಲಿ ೧೨. (ಅಧಿಕಮಾಸ) ೧೩. ಆಗಿದ್ದು ಉಂಟು. ಋಗ್‌ವೇದದ ಆದಿತ್ಯರಲ್ಲಿ ಚಂದ್ರನು ಒಳಗೊಂಡಿದ್ದಾನೆ, ಎಂಬುದನ್ನು ಬಚ್ಚಿಡುವ ಬುದ್ಧಿಪೂರ್ವಕ ಪ್ರಯತ್ನವಿರುವ ಸಂಶಯಕ್ಕೆ ಅವಕಾಶವಿದೆ. ಅಥರ್ವ ವೇದ, ಉಪನಿಷತ್ತಿನಲ್ಲಿ ಬರುವ ಮಾತನ್ನು ಋಗ್‌ವೇದದಲ್ಲಿ ತೆರೆಯ ಮರೆಯಲ್ಲಿ ಸೂಚಿಸಲಾಗಿದೆ.[೨] ಋಗ್‌ವೇದದಲ್ಲಿ ಕೇವಲ ಸೂಚಿತವಾದ 'ಅದಿತಿ'ಯ ಸ್ಪಷ್ಟೀಕರಣ (ಮೃತ್ಯುದೇವಿ ಎಂಬುದು), ಬೃ. ಉಪನಿಷತ್ತಿನಲ್ಲಿದೆ! ಇದು 'ನೇತಿ ನೇತಿ' ಸಂಭ್ರಮ ನಿರ್ಮಾಣ ತಂತ್ರದ ಒಂದು ರೀತಿ! ಮೂಲತಃ ಈ ವ್ಯಾಹೃತಿಗಳು ಮೂರೇ (ಏತಾಃ ತಿಸ್ರೋವ್ಯಾಹೃತಯಃ): ಆದರೆ 'ಚತುರ್ಥೀಂ' ಒಂದು ಹೆಚ್ಚಿಸಲಾಗುತ್ತದೆ. ಇದನ್ನು 'ಮಹಾ ಚಮಸ್ಯಃ ಪ್ರವೇದಯತೇ।' ಇನ್ನು ಈ 'ಚಮಸ'-ಪಾನವಿಚಾರವು ಇದೇ ಒಂದು ಸ್ವತಂತ್ರ ವಿಷಯ! ಈ ಶಾಕ್ತಾಚಾರದ ಸಾಂಕೇತಿಕ ವಣನೆ ಋಗ್ವೇದದಲ್ಲಿದೆ ಇದು ಮಹಾಕುಲ (ಕೌಲ) ಸಂಪ್ರದಾಯ ಎಂಬ ಸೂಚನೆಯೂ ಅಲ್ಲಿದೆ. ತೈತ್ತಿರೀಯ ಉಪನಿಷತ್ತಿನ 'ರಸೋ ವೈ ಸಃ' ಈ ಅನುಭಾವ ಸಿದ್ಧಿಯ ಪಾರ್ಶ್ವ ಭೂಮಿಯನ್ನು ಸಂಪೂರ್ಣ ಗ್ರಹಿಸಿಕೊಳ್ಳಬೇಕಿದ್ದರೆ ತೈತ್ತಿರೀಯ ಆರಣ್ಯಕದಲ್ಲಿ. ಈ ಉಪನಿಷತ್ತು ಬಂದಿರುವ ಭಾಗವನ್ನು ನೋಡಿದರೂ ಸಾಕು. ಅಲ್ಲಿಯೆ ತ್ರಿ-ಸುಪರ್ಣ ಮಹಾಮಂತ್ರದ ಪಾಠವೂ ಕಾಣದೊರೆತೀತು.

ಸಂಸ್ಕೃತಿ : ಜೀವನದ ವಾಸ್ತವ ಅರ್ಥವನ್ನು ಗ್ರಹಿಸಿಕೊಳ್ಳಲು ಭಾಷಿಕ ಮಾಧ್ಯಮ : ಸಂಕೇತವು ಒಂದು ಅಮೋಘ ಉಪಕರಣ (Linguistic tool) ಆಗಲಿದೆ. ಸಮ ಸಾಮಯಿಕ ಸಾಂಕೇತಿಕ ಪ್ರತಿಮೆಗಳ ತುಲನೆಯಲ್ಲಿ ಪ್ರತೀತಿಗೆ ಬರುವ ಆ ಸಮಯಸ್ಥ ಆಚಾರಗಳ ಆಕೃತಿಗೆ, ಆ ಭೂಮಿಕೆಯ ಜೀವನ ದೃಷ್ಟಿಯ ತಾತ್ವಿಕ ಶ್ರದ್ಧೆಯ ಆಕೃತಿಯು ಸುಸಂವಾದಿಯಾಗಿರುವುದು ದೃಢಪಡುತ್ತಿರುವಲ್ಲಿ, ಆ ಸಮಯಸ್ಥ ಜೀವನದ ವಾಸ್ತವ ಚಿತ್ರವು ಅಲ್ಲಿ ಪ್ರತಿಬಿಂಬಿತವಾಗಿರುತ್ತದೆ. ಇದಕ್ಕೆ ಇನ್ನೂ ಬೇರೆ ಬೇರೆ ಪ್ರಮಾಣಗಳಿಂದ ಪುಷ್ಟಿದೊರೆಯುವಲ್ಲಿ ಪ್ರತಿಮಾ : ಸಂಕೇತದ ಭೂಮಿಕೆಯಿಂದ ಅರಿಕೆಗೆ ಬಂದ ಅರ್ಥವನ್ನು ನಿರಾಕರಿಸುವುದಕ್ಕೆ ಆಗುವುದಿಲ್ಲ.

ಮಾಧ್ಯಮ : ಸಂಕೇತದ ಉಪಕರಣದ ಮೂಲಕ, ಇದೀಗ ಗಮನಕ್ಕೆ ಬಂದ ವ್ಯಾಹೃತಿಗಳ ಸ್ಥಿತ್ಯಂತರದ ಉದಾಹರಣವನ್ನೆ ನೋಡಿ. ಜಾತವೇದ, ಹವ್ಯವಾಹನ, ಅಗ್ನ್ಯಾರಾಧಕರ ಮೂಲ ವ್ಯಾಹೃತಿಗಳು ಮೂರೇ ಮೂರು. ಇವು ಉಪನಿಷತ್ತಿನಲ್ಲಿ ನಾಲ್ಕು ಇರುವ ನಿರ್ದೇಶನವುಂಟು. ಆದರೆ, ಋಗ್ವೇದದಲ್ಲಿ ಚತುರ್ಥ ವ್ಯಾಹೃತಿಯನ್ನು, ಸ್ಪಷ್ಟವಾಗಿ ಎಲ್ಲಿಯೂ ಉಚ್ಚರಿಸಿಲ್ಲ. ಅಗ್ನಿಯ ಅಣ್ಣಂದಿರಿಬ್ಬರು 'ಹತ'ರಾದರು, ಎಂಬ ಮಾತು 'dramatic irony' ರೂಪದ ಸಾಂಕೇತಿಕ ಸತ್ಯ! ವಾಸ್ತವ : ಸತ್ಯವು ಬಚ್ಚಿ ಉಳಿಯಲಾರದು. ಬಚ್ಚಿಟ್ಟ ಸತ್ಯ ಆ ಜನದ ನಡೆನುಡಿಗಳಲ್ಲಿ ನಾನಾ ವಿಕೃತಗಳಿಗೆ ಕಾರಣವಾಗುತ್ತದೆ; ಇದು ವಿಶ್ವನಿಯಮ.

ಭಾಷಿಕ ಮಾಧ್ಯಮ : ಸಂಕೇತಸ್ಥ, ವಾಸ್ತವ : ಸತ್ಯ ಸೂಚಕ ಅಮೋಘ ಸೂಕ್ಷ್ಮ ಸಾಮರ್ಥ್ಯವು, ವ್ಯಾಹೃತಿತ್ರಯವು ನಾಲ್ಕು ಆಗಿ ಅವು ಬರಡು ಆದುದನ್ನು ಬಚ್ಚಿ ಇಡುವ ಪ್ರಯತ್ನಗಳು ವಿಫಲಗೊಂಡುದರಲ್ಲಿ ಬಯಲಿಗೆ ಬರುತ್ತಿದೆ! ಈಜಿಪ್ಪಿನ ಸಂಸ್ಕೃತಿಯಲ್ಲಿ ನಾಲ್ಕು 'Cardinal number' ಇರುವುದಾಗಿ ಆ ಪುರಾತನ ಉಲ್ಲೇಖಗಳಲ್ಲೂ ಕಂಡುಬಂದಿದೆ! ನಾಲ್ಕು ಇದು ಚಾಂದ್ರಸಂಕೇತ; ಮೂರು ಸಂಖ್ಯೆ ಸೌರಸಂಕೇತವೇ. ವ್ಯಾಹೃತಿತ್ರಯ ನಾಲ್ಕು ಆಗುವಾಗ, ಸೌರ ಸಂಪ್ರದಾಯವು ಪ್ರತಿಷ್ಠೆಗೆ ಎರವಾಗಿರಲೇಬೇಕು. ಎಂಬುದು ಬಯಲಿಗೆ ಬರುತ್ತಿದೆ.

ಇದೇ ಬಗೆಯ ಇನ್ನೊಂದು ಮೌಲಿಕ ಸಂಕೇತ ಋತ : ಉದಕ ಸೂಚಕ. ಈ ಸಂಹಿತೆಯಲ್ಲಿ 'ಋತಂ ಚ ಸತ್ಯಂ ಚ ಅಭೀದ್ಧಾತ್ ತಪಸಃ ಅಜಾಯತ' ಈ ಶ್ರದ್ಧೆಯ ತಳಪಾಯದ ಮೇಲಿನ ದೈವತಗಳು ಇವೆ. ಇದೇ ಮೇರೆಗೆ 'ಏಕಂ ಸತ್' ಶ್ರದ್ಧೆಯ ತಳಹದಿಯ ಮೇಲಿನ ದೈವತಗಳೂ ಇವೆ. ಅಗ್ನಿಯನ್ನು 'ಋತ ಪ್ರಜಾತ'ನೆಂಬಲ್ಲಿ ಈ 'ಋತ' ಸಂಕೇತಕ್ಕೆ ಇರುವ ಎರಡು ಅರ್ಥಗಳಲ್ಲಿ

೧. ನಿಯಮಬದ್ಧ ನಿಯತ ರೂಪ ಅರ್ಥವು ಇದ್ದರೆ ಅವನು ಜಾತವೇದ ಹವ್ಯವಾಹನ ಅಗ್ನಿ ಆಗುತ್ತಾನೆ:

೨. ಉದಕ-ರೇತ-ರಸಸೂಚಕ ಅರ್ಥವು ಇದ್ದರೆ ನೀರಿನಲ್ಲಿರುವ ಅಗ್ನಿ ಪ್ರಾಣಿ-ಪಶು-ನರವರ್ಗದಲ್ಲಿರುವ ಅಗ್ನಿ ಅಥವಾ ಔಷಧ ವನಸ್ಪತಿಗಳಲ್ಲಿ ಇರುವ ಅಗ್ನಿ, ಈ ಯಾವ ಬಗೆಯ ಅಗ್ನಿಯೇ ಆಗಲಿ, ಇವನು 'ಜಾತವೇದ' 'ಪ್ರಚೇತಸ', ಸೌರಸಂಪ್ರದಾಯದ ಹವ್ಯವಾಹಕನಲ್ಲ. ಇವನನ್ನು 'ಅಬೋಧ್ಯಗ್ನಿ' ಎಂದು 'ಅತ್ರಿ' ಮಂಡಲದಲ್ಲಿ ಸ್ತೋತ್ರಮಾಡಿದ್ದಾಗಿದೆ. ಈ ಅಬೋಧ್ಯ ಅಗ್ನಿಯೇ 'ಚಾಂದ್ರ ಅಗ್ನಿ'! ಇವನನ್ನು (ತರುಣ-ತರುಣಿಯರೊಳಗಿನ) ಗೌತಮಾಗ್ನಿ ಎಂದು ಉಪನಿಷತ್ತುಗಳಲ್ಲಿ ವರ್ಣಿಸಲಾಗಿದೆ.

ಋಗ್ವೇದದ ಇಂದಿನ ಸಂಹಿತೆಯಲ್ಲಿ ಪ್ರಾಚೀನತಮವೆಂಬ ಮಂಡಲಗಳಲ್ಲಿಯೇ 'ತ್ವಂ ಅಗ್ನೇ ಅದಿತಿಃ'; 'ಅತ್ರಿಃ' ಎಂದಿರುವಲ್ಲಿ ಇವನು ಅದಿತಿ ರೂಪನು ಎಂದರೆ ಅಖಂಡಿತ ಸಮಗ್ರ ಸ್ವರೂಪನು ಎಂದ ಹಾಗಾಯಿತು! ಹವ್ಯವಾಹನತ್ವದ ತಾರತಮ್ಯಕ್ಕೆ ತಿಲಾಂಜಲಿದೊರೆತಿತು! ಅತ್ರಿ=ಅದಿತಿ ಎಂದು ಉಪನಿಷತ್ತಿನಲ್ಲಿ ಸೂಚಿಸಲಾಗಿದೆ!* ಸರ್ವಭಕ್ಷಕ ಅಗ್ನಿಯೇ 'ಅತ್ರಿ'! ಆತ್ರೇಯ ಗುರು (ದತ್ತ) ಸಂಪ್ರದಾಯ, ಪ್ರಪಂಚವನ್ನು ಹೋಮಿಸಿ ಭಸ್ಮರೂಪದಲ್ಲಿ ಮೈಗೆ ಪೂಸಿಕೊಂಡು 'ತುರೀಯೇಣ ಬ್ರಹ್ಮಣಾ' ಬ್ರಹ್ಮಾನಂದ ಸಿದ್ಧಿಗಾಗಿ' ಯದಹರೇವ ವಿರಜೇತ್, ತದಹರೇವ ಪ್ರವ್ರಜೇತ್' ಎಂಬ ಜೀವನ ದೃಷ್ಟಿಯ ಪಂಥ!

ವ್ಯಾಹೃತಿತ್ರಯವನ್ನು 'ತುರೀಯ' ಹಂತಕ್ಕೆ ಒಯ್ಯಲು ಮಾಡಿದ ಪ್ರಯತ್ನದ ಫಲವಾಗಿ ಈ ಸಂಹಿತೆಯು ಚಾಂದ್ರಭೂಮಿಕೆಯ ವೇದವಾಯ್ತು! ನಿಯಮ-ವ್ಯವಸ್ಥೆ-ಜೀವನದಲ್ಲಿ 'ಅರ್ಥ' ಆಕೃತಿಯು ಉಂಟೆಂಬ ಶ್ರದ್ಧಾಸೂಚಕ 'ಋತ (: ಸತ್ಯ)' ಈ ಸಂಕೇತಕ್ಕೆ ಪ್ರಾಪ್ತವಾದ ಉದಕ-ರಸ-ರೇತ ಎಂಬ ಇನ್ನೊಂದು ಅರ್ಥದ ದಿಕ್ಕಿನಿಂದಲೂ ಪುಷ್ಟಿದೊರೆಯುತ್ತದೆ. ಆದಕಾರಣ ಈ ಸಂಹಿತೆಯಲ್ಲಿ ನಿಜವಾದ ಸವಿತೃ : ಸೂರ್ಯನಿಲ್ಲ; ವೃತ್ರಹಂತಕನೆಂಬ ಇಂದ್ರನಿಗೂ ಸ್ಥಳವಿಲ್ಲ. ಋತವು, ಚಾಂದ್ರಭೂಮಿಕೆಯ ಜೀವನ ರೀತಿಯಲ್ಲಿಯೇ ರೇತ : ರಸ : ಉದಕವಾಗಬಲ್ಲದು. ಓಷಧೀಶ, ರಸಾಧೀಶ, ಸುಧಾ (: ರಸ) ಕರನೆಂದು ಚಂದ್ರನ ಬಗೆಗೆ ಇರುವ ಶ್ರದ್ಧೆಯು ಈ ಮಾರ್ಪಾಟಿಗೆ ಕಾರಣವಾಗಿರಲಿಕ್ಕೆಬೇಕು.

ಸಂಕೇತ ಮತ್ತು ಪ್ರತಿ-ಮಾ ಇವೆರಡರಲ್ಲಿ ಅಂತರವುಂಟು. ದಿಕ್ಕಾಲ ಪರಿಸರದೊಳಗಿನ ಆಗಾಮಿ ಸಂಗತಿಯ ಸೂಚಕವೆಂದು ಬಗೆಯಲಾಗುವ 'ಧೂಮ'ಕೇತುವನ್ನು 'ಧೂಸರ' ಕಾಲ ಬರಲಿರುವುದರ ಸಂಕೇತ, ಎಂದು ಇಂದಿಗೂ ಬಗೆಯಲಾಗುತ್ತದೆ. ಏನೊಂದು ಕಾರ್ಯ-ಕಾರಣ ಸಂಬಂಧ ಇರಲೇಬೇಕೆಂದಿಲ್ಲ; ದಿಕ್ಕಾಲ ಪರಿಸರದ ಘಟನೆಯ ಸಾಹಚರ್ಯದ ಮೂಲಕವಾಗಿ, ಆಗಾಗ ಕಾಣಿಸಿಕೊಳ್ಳುವ ಮಾತೂ ಸಂಕೇತ ಎನಿಸಬಲ್ಲದು. ಸೂಚಕೆ

---

* 'ಅತ್ರಿನ್' ಎಂಬುದು ಅದ್ ಧಾತುವಿನಿಂದ ನಿಷ್ಪನ್ನವಾಗಿದೆ. ಈ ಧಾತುವಿಗೆ 'ತಿನ್ನು' ಎಂಬ ಅರ್ಥವಿದೆ. ಅಗ್ನಿಗೆ ಇದು ವಿಶ್ಲೇಷಣ. ಋಗ್ವೇದದ ಐದನೆಯ ಮಂಡಲ ಅತ್ರಿಋಷಿಯಿಂದ ದ್ರಷ್ಟವಾದುದು. ಅತ್ರಿ ಎಂಬುದು ಋಗ್ವೇದದಲ್ಲಿ ಆರುವತ್ತು ಸಲ ಬಳಕೆಗೊಂಡಿದೆ. ಪುರಾತನ ಋಷಿಗಳಲ್ಲಿ ಇವನು ಪ್ರಮುಖ. ಮನು ಮೊದಲಾದ ಮಾನವವರ್ಗದ ಮೂಲಪುರುಷರಲ್ಲಿ ಒಬ್ಬನೆಂದು ಋಗ್ವೇದವು ಹೇಳುತ್ತದೆ. ಅದು ೩೯-೯ರಲ್ಲಿ ಸ್ಪಷ್ಟವಾಗಿ ಬಳಕೆಗೊಂಡಿದೆ. ಈ ಶಬ್ದಸಂಕೇತವು ಅಗ್ನಿ, ಇಂದ್ರ,. ಅಂಗೀರಸ, ಅಶ್ವಿನೀದೇವತೆ, ಸ್ವರ್ಭಾನು, ಮೊದಲಾದ ದೇವತೆಗಳ ಜತೆಗೆ ಸಮೀಕರಿಸಿ ಹೇಳಿದ್ದಾಗಿದೆ. (ಸಂ)

ಅರ್ಥ-ಸಂಗತಿಯ ಪ್ರತಿ-ಬಿಂಬವನ್ನುಳ್ಳ ಶಬ್ದವೂ ಸಂಕೇತ; ಇದು ಚಿತ್ರರೂಪ ಶಬ್ದವಿರಬಹುದು. ಸಂಕೇತ ಎಂಬುದು 'ಪ್ರತಿಮಾ' ಇದ್ದೀತೆಂಬ ಭರವಸೆಯಿಲ್ಲ. ಇಂಥ ಅಂಶ ಚಿತ್ರರೂಪ ಶಬ್ದಗಳ ಜೋಡಣೆಯಿಂದ ಜೀವನದ ಒಂದು (ದೊಡ್ಡ ಪ್ರಮಾಣದ) ಶಬ್ದ-ಚಿತ್ರವು ಸಿದ್ಧವಾಗಬಲ್ಲದು. ಮೂರರ ತ್ರಿಕೋನ ಅಥವಾ ಈ ಬಗೆಯ ಹೊಂದಾಣಿಕೆ ಪ್ರವೃತ್ತಿಪರ ಜೀವನ ರೀತಿಯ (ಅಭಿವ್ಯಕ್ತಿಯ) ತಳಪಾಯದಲ್ಲಿ ಇರುತ್ತದೆ. ನಾಲ್ಕು (: ದಿಕ್ಕುಗಳ ಒಟ್ಟು) ಇಲ್ಲವೇ ಎಂಟು (: ದಿಕ್ಕುಗಳ ಒಟ್ಟು) ಅಥವಾ ಹತ್ತು (ದ್ಯಾವಾ-ಭೂಮಿ ಸೇರಿ); ಈ ಬಗೆಯ ಸಂಖ್ಯೆ ವಿಶ್ವದ 'ಒಂದು' ತನದ ಏಕಂ : ಸತ್ ಸೂಚಕ ಸಂಕೇತ. ಆದರೆ ಮೂರು, ಇದು ವೃತ್ತಾಕೃತಿ : O : ವೃತ್ತವರ್ತನ ಸೂಚಕವಾಗಲು ಆತಂಕಕಾರಿಯಾಗಿದೆ. ವೇದದಲ್ಲಿ 'ಸಪ್ತ' ಅಶ್ವ, ಋಷಿ, ಮಾತೃ, ಸ್ವ-ಸಾ, ಹೋತಾರ ಈ ಸಂಕೇತಗಳಿದ್ದರೂ ಪ್ರತಿಮಾ (ಚಿತ್ರದ) ಹಂತದ ಶಬ್ದವಲ್ಲ. 'ಸಪ್ತ' ಸಂಕೇತವನ್ನು ಸಪ್ತಲೋಕ (ವ್ಯಾಹೃತಿ) ಸಂಖ್ಯೆಗೆ ತಿರುಗಿಸುವುದರೊಡನೆ '೧೪' ಲೋಕದ ವಿಚಾರ ಆದರ ಬೆನ್ನಿಗೆ ಬಂತೇ! ಶಬ್ದ ಪ್ರತಿಮೆಗಳಲ್ಲಿ, ಸಾರ : ಅರ್ಕರೂಪ (Substance) ಅರ್ಥಧಾರಣದುವು ಮತ್ತು ಪ್ರತಿಬಿಂಬರೂಪ ಚಿತ್ರಯುಕ್ತ ಅರ್ಥ (Concept) ಧಾರಣ ಮಾಡುವಂತಹವು ಎಂಬ ಎರಡು ವಿಧಗಳು ಉಂಟು.

ಸಂಕೇತದಲ್ಲಿ ಚಿತ್ರರೂಪ ಸೂಚಕತೆಯು ಇರಬಹುದು; ಇರಲಿಕ್ಕೂ ಇಲ್ಲ. ಉದಾ : ಬಾಣ, ಶಂಕು, ಕಬಂಧ, ರಶ್ಮಿ ನಾಗ ಮುಂ. ಇವನ್ನು ಪುಲ್ಲಿಂಗ ಸೂಚಕ ಸಂಕೇತಗಳು ಎಂದು ಬಗೆಯಲಾಗುತ್ತದೆ. ಆದರೆ, ರಶ್ಮಿ ಉಭಯಲಿಂಗಿಯಾಗಿ ಬಗೆಯಲಾಗುವಲ್ಲಿ ಇದನ್ನು 'ಸ್ತ್ರೀ' ಪ್ರತೀಕವೆಂದು, ಕವಿಯು ಅಪೇಕ್ಷಿಪಡುವ ಅರ್ಥಕ್ಕಾಗಿ ಆತನ ಈ ಸಮಯ ಒಪ್ಪಿಕೊಳ್ಳಬೇಕಾಗುತ್ತದೆ! ಭಾಷೆಯಲ್ಲಿ ಕೃತ್ರಿಮ ಸಂಕೇತಗಳ ಸ್ವೈರ ಸಂಚಾರಕ್ಕೆ ಅವಕಾಶ ದೊರೆತಷ್ಟು ಅದರೊಳಗಿನ ಜಾದು=ಸಂಮೋಹಕ ಶಕ್ತಿ ಹೆಚ್ಚಾಗುತ್ತ ನಡೆಯುವುದು. ಈ ಬಗೆಯ ವಿಭ್ರಮ ಶಕ್ತಿಯಿಂದಾಗಿ ಮುಕ್ತಸಂಕೇತಗಳ ಮೂಲಕ ನೇರ ವಾಸ್ತವ : ಸತ್ಯ ಸೂಚಕ ಶಕ್ತಿಯು, ಭಾಷೆಯೊಳಗಿನ ಕೃತ್ರಿಮ ಶ್ಲೇಷ, 'ವಾ ನ ವಾ' ಶೈಲಿಯ ಶಿಲ್ಪದಿಂದ ನಷ್ಟವಾಗತೊಡಗ್ಗುವುದು. ಭಾಷೆಯಲ್ಲಿ ಸಂಕೇತಗಳೆಲ್ಲ ಸ್ವ-ಧಾ ಶಕ್ತಿಯುತವೇ ಇರುವದು ಅಶಕ್ಯ. ಎರ್ರಿಕ್ ಫ್ರಾಮ್ ಹೇಳುವಂತೆ, ಜಾಗತಿಕ ಸ್ವರೂಪ ಅರ್ಥಶಕ್ತಿಯ ('Universal') ಸಾರ್ವಕಾಲಿಕ ಸನಾತನ (Perennial) ಸಂಕೇತಗಳು ಕೆಲವೇ ಇರಬಲ್ಲವು. ಇನ್ನು ಕೆಲವೊಂದು ಸಾಮ್ಯಾದಿ ಕಾರಣಗಳಿಂದ ಸಂಕೇತವಾಗಿರುತ್ತದೆ; ಅಭಿವ್ಯಕ್ತಿಯ ಆವಶ್ಯಕತೆಯನ್ನು ಬಗೆಹರಿಸಿಕೊಳ್ಳಲು ಸ್ವೀಕರಿಸಿದ ಅಥವಾ ನಿರ್ಮಿಸಿಕೊಂಡ ಸಂಕೇತಗಳ ಹಿಂದು-ಮುಂದು ತಿಳಿಯುವದು ಕಷ್ಟವಾಗುತ್ತದೆ. ಭಾಷೆಯೊಳಗಿನ ಸಂಕೇತಗಳ ಬರುವಳಿಯ-ಅವು ಬಂದ ವಾಸ್ತವ ಹಿನ್ನೆಲೆ ತಿಳಿದಲ್ಲಿ, ಭಾಷೆಯೊಳಗಿನ 'ಅಸುರ'ತ್ವದ ಬಾಧೆ ಕಡಿಮೆಯಾಗುವ ಶಕ್ಯತೆಯುಂಟು. ಭಾಷೆ ಮಾನವನ ಕಣ್ಣು. ಕಣ್ಣು (: ದೃಷ್ಟಿ) ಕೊಡುವ ಸಾಧನವಾದ ಭಾಷೆಯ ಹಿರಿಮೆ ಎಷ್ಟೆಂದು ಹೇಳಬೇಕು?

ಭಾಷಿಕ ಪ್ರತಿಮಾ : ಸಂಕೇತಗಳ ಮಾತ್ರಾಸ್ಪರ್ಶದ ವಲಯದ ಆಕೃತಿಯು, ಆ ವಿಶಿಷ್ಟ ಪ್ರತಿಮೆ ಮೈದಾಳಿದ ಸಮಯ-ಪರಿಸರದ ಮುದ್ರೆಯುಳ್ಳದಾಗಿರುತ್ತದೆ. ಬಾಹ್ಯವಲಯ ಇತಿಹಾಸ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು. ಈ ಕಾರಣದಿಂದಾಗಿ ಬಾಹ್ಯವಲಯದ ಮೂಲಕ ಸಂಕೇತದ ಐತಿಹ್ಯದ ಅಂಶವು ಬೆಳಕಿನಲ್ಲಿ ಬರುತ್ತದೆ. ಇದರ ಅಂತರ್-ವಲಯ ಅರ್ಥದ ಆಕೃತಿಯಿಂದ, ಆ ಅರ್ಥ: ವಿಚಾರದ ತಾತ್ವಿಕ ಪಾತಳಿ-ಕ್ಷೇತ್ರ ಸೂಚಿತವಾಗುತ್ತಿರುತ್ತದೆ. ಸಾಂಕೇತಿಕ ಬಾಹ್ಯವಲಯದ ಆಕೃತಿ ಐತಿಹಾಸಿಕ (historical) ಮತ್ತು ಅಂತರ್‌ವಲಯದ ಅರ್ಥಗರ್ಭದ (Logical) ಆಕೃತಿ ತಾತ್ವಿಕ; ಇವೆರಡರ ತಾಳಮೇಳವಿರುವಲ್ಲಿ-ಎಂದರೆ ಆಚಾರ-ವಿಚಾರದ ಆಕೃತಿಯ ಹೊಂದಾಣಿಕೆಯಲ್ಲಿ-ಜೀವನಸ್ಥ ವಾಸ್ತವ-ಸತ್ಯದ ದರ್ಶನ ಮಾಡಿಸುವ ಅಮೋಘ ಶಕ್ತಿಯನ್ನು ಮಾಧ್ಯಮ ಸಂಕೇತವು ಹುಟ್ಟಿನಲ್ಲೇ ಪಡೆದು ಬಂದಿದೆ! ಉದಾ : ಋತ ಈ ಸಂಕೇತದ ಶಬ್ದರೂಪ ಬಾಹ್ಯವಲಯದ ಆಕೃತಿಯ ಮೂಲ 'ಋ' ಆಖ್ಯಾತದಲ್ಲಿ, ಗಮನಾರ್ಥಕ ಸೂಚನೆಯಿದೆ. ಸೂರ್ಯನ ಗತಿಯ ಸಂದರ್ಭದಲ್ಲಿ ಈ ಶಬ್ದ ಪ್ರಯೋಗವು ಕಾಣುವದರಿಂದ ಸೌರಸಂಪ್ರದಾಯದ ಪರಿಸರದಲ್ಲಿ ಪಡೆದ ಅರ್ಥ, ಅರ್ಥ ಛಾಯೆ-ಲಕ್ಷಣಾರ್ಥ ಕಾಣಿಸಿಕೊಂಡಿವೆ.

ನಿಯಮಬದ್ಧ ಆಚಾರ ಆಹ್ನಿಕದೊಡನೆ ನಿಯಮ ಎಂಬ ಅಮೂರ್ತ ಅರ್ಥವು ಇದರಲ್ಲಿ ಕಾಣಿಸಿಕೊಂಡಿದೆ. 'ಋತ=ನಿಯಮದ ಆಚರಣೆ-ಘಟನೆ ಮಾತ್ರ. ಮೂರ್ತ ಸತ್ಯ; ಋತ: ಸತ್ಯ. 'ಸತ್ಯ' ಎಂಬುದು ದಿಕ್ಕಾಲ-ಪರಿಸರದಲ್ಲಿ ಅರಿಕೆಗೆ ಬರುವ ಮತ್ತು ಪ್ರತ್ಯಕ್ಷಕಾಣುವ ಉಭಯ ವಿಧದ ಸಂಗತಿಯೂ ಸರಿ. ನಿಯಮಾಧಿಷ್ಠಿತ ಈ 'ಸತ್ಯ'ದ ಅಸ್ತಿತ್ವವು, ಅದರ ಹಿಂದಿನ ಅಮೂರ್ತ ನಿಯಮ (: ಋತ)ದ ಆಧಾರದ ಮೇಲೆ ನಿಂತಿದೆ. 'ಸತ್ಯ'ವು ನಿಯಮ-ಅರ್ಥಯುಕ್ತವಿದೆ. ಇದು 'ಏಕಂ' ಸ್ವರೂಪ ಸತ್ಯದಂತೆ ಏಕಾಕಿ ಸಂಗತಿಯಲ್ಲ, ಎಂದು ಸೂಚಿಸಲು ಋತ=ಸತ್ಯ ಎಂಬ ಎರಡು ಸಂಕೇತ ಯುಕ್ತ ಪ್ರತಿಮೆ ಇದು. 'ಸತ್ಯಂ ಏವ ಜಯತಿ (ತೇ); ನ ಅನೃತಂ' ಎಂಬಲ್ಲಿ ವಿಶ್ವಸ್ಥ ಸನಾತನ ವಲ್ಲದ ಸ್ವೈರಕೃತ್ಯಗಳು ಕೊನೆಗೆ ಸೋಲಲೇಬೇಕು ಎಂಬ ಈ ಲೋಕೋಕ್ತಿಯಲ್ಲಿ, 'ಸತ್ಯ'ದೊಡನೆ ಪರ್ಯಾಯದಿಂದ ಋತ (: ನಿಯಮ ಬದ್ಧತೆಯ) ನಿರ್ದೇಶ, ಅದರ ಹಿರಿಮೆ ಎರಡೂ ಉಂಟು. 'ಏಕಂ' ಸ್ವರೂಪೀ ಸತ್-ಸತ್ಯದ ವೈಶಿಷ್ಟ್ಯವೆಂದರೆ ಅದು ಏಕಕಾಲಕ್ಕೆ ಪರಸ್ಪರ ವಿರೋಧೀ ಅರ್ಥವನ್ನು ಒಳಗೊಂಡಿರುತ್ತದೆ. 'ಚಂದ್ರ'ನು ಬೆಳಕಿನ ಸಂಕೇತವಾದರೂ ರಾತ್ರಿಯ ಬೆಳಕು ಇದು! ಕತ್ತಲೆಯೊಳಗಿನ ಪ್ರಕಾಶ ಅಥವಾ ಪ್ರಕಾಶದೊಳಗಿನ ಕತ್ತಲೆಯಂತಿರುವ ಅರ್ಥಶಕ್ತಿಯು, 'ಏಕಂ' ಸತ್ತಿನ ವೈಶಿಷ್ಟ್ಯವಾಗಿದೆ. ಈ ಅರ್ಥದ ಅಂತರ್ಹಿತ ತರ್ಕ-ಪ್ರತಿಷ್ಠಿತ ಆಕೃತಿ ಏಕಕಾಲಕ್ಕೆ ಸಂವಾದೀ-ವಿಸಂವಾದೀ ಶ್ರುತಿ : ನಾದ ನಿನದಿಸುತ್ತಿರುವುದು! ವಿರೋಧಾಭಾಸದ ಸಮಸ್ಯಾತ್ಮಕ-ಅರ್ಥವನ್ನು ಸೂಚಿಸುವದೇ ತತ್:ಏಕಂ=ಸತ್:ಬ್ರಹ್ಮ

ಋತ ಸಂಕೇತವು ಮೊದಲು ಸೌರ ಪರಂಪರೆಯಲ್ಲಿಯೇ ಮೈದಾಳಿರುವದಾಗಿ ಮ್ಯಾಕ್ಸ್‌ಮುಲ್ಲರ್ ಪ್ರಭೃತಿಗಳು ಏಕಾಭಿಪ್ರಾಯದವರಾಗಿದ್ದಾರೆ. ಆದಕಾರಣ, 'ಋತ' ಸಂಕೇತಕ್ಕೆ ಪ್ರಾಪ್ತವಾಗಿರುವ ಉದಕ; ರೇತ; ರಸವಾಚಕ ಅರ್ಥವು ಹಿಂದುಗಡೆಯದು ಎಂದು ಇದರಿಂದ ಗೊತ್ತಾಗುತ್ತದೆ. ಋತು ಪ್ರಾಪ್ತವಾಗಲು ಚಂದ್ರನೇ ಕಾರಣನೆಂಬುದು ಜಾಗತಿಕ ಸಂಕೇತವಿರುವದೂ ನಿಜ. ಯುರೋಪೀಯ 'ಸಮಯ'ದಲ್ಲಿ ರೂಢವಿರುವ menstrual flow : menses ಎಂಬ ಶಬ್ದ ಪ್ರತಿಮೆಯಲ್ಲಿ ಚಾಂದ್ರ ಭೂಮಿಕೆಯ ಶ್ರದ್ಧೆಯು ನಿಃಸಂದಿಗ್ಧವಾಗಿ ಕಾಣುತ್ತದೆ. ಋಗ್ವೇದದ ವರುಣನ 'ಋತ' ಋತುದರ್ಶನ=ತಿಂಗಳ ಮುಟ್ಟು. 'ತಿಂಗಳು' ಚಂದ್ರನ ಸಂಕೇತ! ಭೌತಜೀವನ ಸ್ರೋತಕ್ಕೂ ಅದರದೇ ಆದ ನಿಯಮ-ಕಟ್ಟುಕಟ್ಟಳೆ ಉಂಟೇ ಉಂಟು! ಈ 'ಋತು'ವೂ ಸತ್ಯವೇ. ಆದರೆ ಈ ನಿಯಮ ಅನಿಯತ! ಈ ಮುಟ್ಟಿನ 'ತಿಂಗಳಿ'ಗೆ ೩೦ ದಿನದ್ದೇ ಎಂಬ ಬಂಧನವಿಲ್ಲ!

ಋಗ್‌ವೇದದಲ್ಲಿ ವರುಣನನ್ನು ಋತಸ್ಯ ಗೋಪ್ತಾರನೆಂದು ವರ್ಣಿಸಲಾಗಿದೆ. ಈ ವರುಣನು (ಸೂರ್ಯವಾಚಕ) 'ಮಿತ್ರ'ನ ಸಂಗಾತಿಯಾಗಿದ್ದಾನೆ. ಆದಕಾರಣ, ವರುಣನು ಸೌರಮಂಡಲದ ದೈವತ ಎಂದು ಎನಿಸುತ್ತದೆ. ಆದರೆ ಒಲ್ಡೆನ್‌ಬರ್ಗ್ ಪ್ರಭೃತಿ ಸಂಶೋಧಕರಿಗೆ ಈ ವರುಣನು ಪ್ರಚ್ಛನ್ನ ಚಂದ್ರನಿರಬೇಕೆಂದು ತೋರಿತು. 'ಯಾಸಾಂ ರಾಜಾ ವರುಣೋ' ಎಂಬ ಸ್ತೋತ್ರಗಳಲ್ಲಿ ಆಪೋದೇವಿಯರನ್ನು ಆಳುವ ಈ ರಾಜನು ಚಂದ್ರನೇ ಇರಲಿಕ್ಕೆ ಬೇಕು. ಹೀಗೆ, ಈ ವರುಣ ಪಾತ್ರ ನಿರ್ಮಿತಿಯೊಳಗಿನ ಕವಡನ್ನು ಸಂಶೋಧಕರು ಎಂದೋ ಬಹಿರಂಗಪಡಿಸಿದ್ದಾರೆ. ಆದರೆ, ಓಲ್ಡೆನ್‌ಬರ್ಗ್ 'ಋತ' ಸಂಕೇತಸ್ಥ ಸತ್ಯಸೂಚಕ ಅಮೋಘ ಶಕ್ತಿಯ ಪ್ರಯೋಜನ ಪಡೆದಿರುವನೊ; ಇಲ್ಲವೋ ತಿಳಿಯದು. ಈ ವರುಣನ ಯುರೇನಸನನ್ನು ಹೋಲುತ್ತಿದ್ದಾನೆ. ಈತನ ಸೃಜನಜಲ ವರ್ಷಣದಿಂದ ಭೂದೇವಿ ಕ್ರೋನಸಾದಿ ಅಸುರ ಟಿಟಾನರನ್ನು ಹೆತ್ತಳೆಂಬ ಕಥೆ ಇದೆ. ಭಾರತೀಯ ಪುರಾಣ ಕಥೆಗಳಲ್ಲಿ ಭೌಮಾಸುರ ನಾರಕಾದಿಗಳುಂಟು! ಇವರ ಪಿತನು ಪ್ರಚ್ಛನ್ನ ಚಂದ್ರ : ವರುಣನೇ ಎಂದು ಹೇಳಿದ್ದರೆ, ಋಗ್ವೇದದ ವರುಣನ 'ಅಸುರ ಮಾಯಾವಿ' ಎಂಬ ವಿಶೇಷಣಗಳ ನಿಜವಾದ ಅರ್ಥದ ಬಗೆಗಿನ ಸಂಭ್ರಮ ತಪ್ಪಬಹುದಿತ್ತು.

ಹೀಗೆ, ಮಾಧ್ಯಮ ಸಂಕೇತದ ಬರುವಳಿ, ಅದರ ಅರ್ಥದಲ್ಲಿ ಆದ ಸ್ಥಿತ್ಯಂತರಗಳಿಂದ ದೊರೆವ ಅಮೋಘ ಪ್ರಕಾಶದಲ್ಲಿ ಆ ವಿಶಿಷ್ಟ ಜೀವನ 'ಸಮಯ' ಪರಿಸರಸ್ಥ ವಾಸ್ತವಾಂಶದ ಚಿತ್ರಪಟವು ಕಾಣಲು ಶಕ್ಯವಿದೆ. ಋಗ್ವೇದದ ಮಟ್ಟಿಗೆ ಇಲ್ಲಿ ಗೊತ್ತಾಗುವ ಅಂಶವೆಂದರೆ, ಋತ : ಸತ್ಯದ ಸಾಂಕೇತಿಕ ಪ್ರತಿಮೆಯು ಮೊದಲು ಸೌರದೈವತಮಂಡಲದ ಹಿನ್ನೆಲೆಯಲ್ಲಿ ರೂಢಿಯಲ್ಲಿ ಇತ್ತು. ಅಂದು ಹವ್ಯವಾಹನ ಜಾತವೇದ ಅಗ್ನಿಗೆ

'ಋತ-ಪ್ರಜಾತ'ನು ಎಂದುದರ ಅರ್ಥಭಾಗವು ಒಂದು ಇತ್ತು. ಈ ಅಗ್ನಿಯು ನಮಗೆ ಕಲ್ಯಾಣಪ್ರದ ಮಂಗಲಕರ ಜೀವನಪ್ರೇರಕ ಶಕ್ತಿಯಾಗಲಿ; 'ಅಗ್ನೇ ನಯ ಸು-ಪಥಾ ರಾಯೇ ಅಸ್ಮಾನ್'.... ಎಂಬ ಪ್ರಾರ್ಥನೆ ಇದೆ. ಆದರೆ 'ಋತ' ಸಂಕೇತವು, ಉದಕ ವಾಚಕವಾಗುವುದರೊಡನೆ ಜೀವನ ಪರಿಸರವು ಇಡಿಯಾಗಿ ಬದಲಾಗುತ್ತದೆ. ಆಗ 'ಋತ-ಪ್ರಜಾತ'ನೆಂದರೆ ಅವನು ನೀರೊಳಗಿನ ಅಗ್ನಿ; ಬೂದಿ : ಭಸ್ಮಸ್ಥ ಅಗ್ನಿ=ನ-ಚಿಕೇತಾಗ್ನಿ ಆಗುತ್ತಾನೆ. ಇದನ್ನು 'ಅಂಗಾರ' ಎಂದಂತೆ! ಇವನೇ ಪ್ರಪಂಚದೊಳಗಿನ 'ವೃಕ್ಷ'ಸ್ಥ ಅ-ಬೋಧಿ ಅಗ್ನಿ! ಬನ್ನಿ (ವಹ್ನಿ)ವೃಕ್ಷ=ಬೆಂಕಿಯ ಮರ; ಬೇ(O)ವು (ಬೆಮ್-ಬೇಯ್) ಬೆಂಕಿಮರ! ಈ ಅಗ್ನಿ-ರಹಸ್ಯದ 'ಜ್ಞಾನ'ವಾದರೆ ಈ ಅ-ಬೋಧಿ (:ದೇಹ-) ವೃಕ್ಷ, ಆಗ 'ಬೋಧಿ'ವೃಕ್ಷವಾಗಿ ಪರಿಣಮಿಸುತ್ತದೆ. ಗೌತಮ (: ಅಗ್ನಿ) 'ಬೋಧಿ' ವೃಕ್ಷದ ಅಡಿಯಲ್ಲಿ ಜ್ಞಾನ ಪಡೆಯುತ್ತಾನೆ! ಈ 'ಬೋಧಿ'=ಅಶ್ವ-ತ್ಥ ವೃಕ್ಷ, ಈ ಅಶ್ವ(ಸ್ಥ) ವೃಕ್ಷಸ್ಯಜನ ಶಕ್ತಿಯ ಅಗ್ನಿ-ವೃಕ್ಷ! ಪುರುಷೋತ್ತಮ (=ದ್ರಪ್ಸಃ ಸ್ಕನ್ನಃ) ಭಗ-ವಾನ್ ಕೃಷ್ಣನ ಸಾಕ್ಷಾತ್ಕಾರ ಮಾಡಿಸುವ ವೃಕ್ಷ! 'ಅಶ್ವತ್ಥೋ ದೇವ ಸದನಂ' 'ಶಮಿಂ ಆರೂಢ' ಅಶ್ವತ್ಥದ ಕೆಳಗೆ ಪುಂಸವನ' ಸಂಸ್ಕಾರ=ಆಚರಿಸಬೇಕು.

ಕವಿಕುಲಗುರು ಕಾಲಿದಾಸನು ಗರ್ಭಿಣಿ ಶಕುಂತಲೆಯನ್ನು 'ಅಗ್ನಿ ಗರ್ಭಾಂಶಮೀಂ ಇವ' ಎಂದಿದ್ದಾನೆ. ದುಷ್ಯಂತನು ಅಶ್ವತ್ಥ=ಪುರುಷ=ವೃಕ್ಷ=ಬೆಂಕಿಯಮರ; ಬಸುರೆ ಶಕುಂತಲೆ ಶಮೀ; ಬೆಂಕಿಯಮರ; ಬಸುರಿನಲ್ಲಿರುವ ಹಸುಳೆ ಬೆಂಕಿಯ ಕಿಡಿ. ಶಕುಂತಲೆಯ ಪುತ್ರನು 'ಭರತನು'! ಇದೂ ಅಗ್ನಿಯ ಒಂದು ಪರ್ಯಾಯನಾಮ! ಋಗ್ವೇದದ ಪರಿಭಾಷೆಯಲ್ಲಿ ಬಸುರಿನೊಳಗಿನ ಅಗ್ನಿ=ಸರೀಸೃಪ! ಈ ಅಗ್ನಿ ವೃಕ್ಷಗಳಿಂದ ಅಥವಾ ಸರೀಸೃಪ-ಸರ್ಪಗಳಿಂದ ತುಂಬಿರುವ ಈ ಪ್ರಪಂಚವನ್ನು, ಗೀತೆಯು ಸ್ಮಶಾನರೂಪದ ವಿಶ್ವರೂಪವಾಗಿ ಚಿತ್ರಿಸಿದ್ದನ್ನು ಕಾಲಿದಾಸನು ಇನ್ನೊಂದು ಬಗೆಯಲ್ಲಿ ಅದಕ್ಕೂ ಹೃದ್ಯವಾಗಿ ವರ್ಣಿಸಿದ್ದಾನೆ. ಈ ಪ್ರಪಂಚ ಮಿಥ್ಯಾ ಮಾಯಾ ರೂಪದ್ದೆಂದು ಸೂಚಿಸುವ ಈ ಕೃತಿ: ಪ್ರತಿಮೆಯೊಳಗಿನ ಸಾಂಕೇತಿಕ ಶಕ್ತಿಯು ಅಮೋಘವಿದೆ. ಜನದ 'ಬುದ್ಧಿ ಭೇದ' ಮಾಡದೆ, ಜೀವನ ಸತ್ಯದ ದರ್ಶನ ಮಾಡಿಸುವ ಈ ಕೃತಿ ನಾಲ್ಕನೆಯ ಅಂಕಿನ ವರೆಗೂ 'ಸ್ವಭಾವೋಕ್ತಿ'ಯ ಉತ್ಕೃಷ್ಟ ಮಾದರಿಯಾಗಿದೆ.

ಈ ಎರಡು ಅಗ್ನಿಗಳೊಳಗಿನ ತಾರತಮ್ಯವನ್ನು ಲೆಕ್ಕಿಸದೆ, ಹವ್ಯವಾಹನಾದಿ ವಿಶೇಷಣಗಳನ್ನು ನಚಿಕೇತಾಗ್ನಿಗೂ ಉಪಯೋಗಿಸಿರುವ ತಂತ್ರದಿಂದಾಗಿ ಈ ಸಂಹಿತೆಯ ನಿಶ್ಚಿತ ಅರ್ಥವನ್ನು ಗ್ರಹಿಸಿಕೊಳ್ಳುವದು ಅಶಕ್ಯವಾಗುತ್ತಿದೆ ಆದರೆ, ಸಮಸಾಮಯಿಕ ಸಾಂಕೇತಿಕ ಪ್ರತಿಮೆಗಳ ತುಲನೆಯಲ್ಲಿ ಎಂತಹ ನೇತಿ, ನೇತಿ ಸ್ವರೂಪದ ದಿಗ್ಭ್ರಮೆಯಾಗಲಿ ಅದು ದೂರವಾಗಲೇಬೇಕು. ಮಾಧ್ಯಮ : ಸಂಕೇತದ ಬಾಹ್ಯವಲಯವು, ತಾನು ಮೈದಾಳಿದ ಮೂಲ ಸಮಯ-ಪರಿಸರಕ್ಕೆ ಪ್ರಾಮಾಣಿಕವಾಗಿರುವಂತೆ, ಅದರ ಅಂತರ್‌ವಲಯವು ಎಂದರೆ ಅರ್ಥಗರ್ಭವು ತನ್ನ ತಾತ್ವಿಕ ಭೂಮಿಕೆಗೆ ಪ್ರಾಮಾಣಿಕವಿರುತ್ತದೆ.

೧. ಸೌರಭೂಮಿಕೆಯ ಋತದ ಬಾಹ್ಯವಲಯವು 'ಆಶಾ' (ಅವಸ್ತೆದ ಅಶ) ದಿಶಾಸೂಚಕ ಪ್ರಕಾಶ ಸ್ವರೂಪದ್ದಾಗಿರುತ್ತದೆ. ಅದೇ ಮೇರೆಗೆ ಈ ಬಾಹ್ಯವಲಯದ ಅಂತಸ್ಥ ಅರ್ಥದ ಆಕೃತಿಯ ವೈಶಿಷ್ಟ್ಯವೆಂದರೆ ಇದು ದ್ವಂದ್ವಾರ್ಥದಿಂದ ದೂರ; ತರ್ಕಬದ್ಧ ಸುಸಂಗತ ಆಕೃತಿ ಅರ್ಥವುಳ್ಳದ್ದು ಆಗುತ್ತದೆ.
೨. ಚಾಂದ್ರಭೂಮಿಕೆಯ ಋತದ ಬಾಹ್ಯಆಕೃತಿಯು ತೀರ ಅನಿಶ್ಚಿತ ಸ್ವರೂಪದ್ದು ಇರಲು ಕಾರಣವಿದೆ.

ಸೌರತತ್ತ್ವ : ಪ್ರಕಾಶ ರೂಪ; ಅನಿಶ್ಚಿತತೆ ಅಸ್ಪಷ್ಟತೆಯ ಶತ್ರು ಇದು. ಆದರೆ, ಚಾಂದ್ರತತ್ತ್ವವು ಸಂಧ್ಯಾ-ರಾತ್ರಿಯಂತೆ ಅಸ್ಪಷ್ಟ. ಇದನ್ನು ಆಪ : ರಸ-ಸ್ವರೂಪೀ ಮೂಲತತ್ತ್ವವೆಂಬಲ್ಲಿ, ಇದರ ನಿಜವಾದ ಆಕೃತಿಯು ಒಳಗೊಂಡಿದೆ. ನೀರಿಗೆ ನಿಶ್ಚಿತ ಆಕೃತಿ ಇಲ್ಲ. ಯಾವ ವಸ್ತುವಿನೊಡನೆ ಇರುವುದೋ ಅದೇ ಆಪ : ರಸದ ಆಕೃತಿ! 'ಆಪ' ತತ್ತ್ವವೇ ವಿಶ್ವನಿರ್ಮಾಣದ ಹಾಗೂ ವಿಶ್ವಾಧಾರಕ ತತ್ತ್ವಶಕ್ತಿ ಆಗಿರುವಲ್ಲಿ, ಅದು ಏನೆಲ್ಲ ರೂಪವೂ ಆಗುವಾಗ ಅದರ

ಬಾಹ್ಯವಲಯವನ್ನು ನಿರ್ದಿಷ್ಟಪಡಿಸಿ ಹೇಳುವದು ಅಶಕ್ಯ. ಆದರು, ಈ ಭೂಮಿಕೆಯ ಪ್ರತಿಮಾ ಸಂಕೇತಗಳ ಬರುವಳಿಯಲ್ಲಿ ಇವುಗಳ ಅಂತಃಸ್ವರೂಪದ ಸೂಚನೆ ಒಳಗೊಳ್ಳದೇ ಇಲ್ಲ! ಅಭಿವ್ಯಕ್ತಿಯ ಸಂದರ್ಭದಲ್ಲಿ ಕಾಣುವ ಒಂದರೊಂದರ ಸಾಹಚರ್ಯದ ಮೂಲಕವಾಗಿಯೂ ಇಂತಹ ಸಂಕೇತಗಳ ಅಂತರಂಗದ ಗುಟ್ಟು ಹೊರವಡುತ್ತದೆ. ವಾಗಾಂಭೃಣೆಯು ರಹಸ್ಯಮಯ ಭಾಷೆಯಲ್ಲಿ 'ಅಹಂ ರುದ್ರೇಭಿಃ ವಸುಭಿಃ. ಆದಿತ್ಯೈಃ ಉತ ವಿಶ್ವದೇವೈಃ ಚರಾಮಿ' ಎನ್ನುತ್ತಾಳೆ. 'ಇಂದ್ರಾಗ್ನೀ ಮಿತ್ರಾ ವರುಣೋ ಬಿಭರ್ಮಿ' ಎಂದಿದ್ದಾಳೆ. 'ಅಪ್ಸು ಅಂತಃ ಸಮುದ್ರೇ ಮಮ ಯೋನಿಃ' ಎಂದು ತಾನು ಆಪೋದೇವಿಯಾಗಿರುವುದನ್ನು ಸಾರಿ ಹೇಳುವ ಈ ಮಹಾದೇವಿಯು, ತಾನು ಯಾರ ಸಹಚರಿ ಎನ್ನುತ್ತಾಳೋ ಅವರು, ನಾನು 'ಬಿಭರ್ಮಿ' : ಪೋಷಿಸುತ್ತೇನೆ ಎಂಬವರಿಗಿಂತ ಈ ದೇವಿಗೆ ಹೆಚ್ಚು ಆತ್ಮೀಯರು ಎಂಬುದನ್ನು ಸಿದ್ಧಪಡಿಸದೆಯೇ ಗೊತ್ತಾಗಬಲ್ಲದು. ಆದರೆ ತತ್ಕಾಲದಲ್ಲಿ ಸಂಭ್ರಾಮಕ-ಸಂಮೋಹಕವಾಗಿರುವ ಸಂಕೇತಗಳ 'ಜಾದು' ಅವುಗಳ ನಿನ್ನೆ-ಇಂದುಗಳ ಆಕೃತಿರೂಪವನ್ನು ತುಲನಾತ್ಮಕವಾಗಿ ಸಮೀಕ್ಷಿಸುವಾಗ ಆ ಸಂಭ್ರಾಮಕತೆ ನಿಸರ್ಗದ ಅಂಗವೋ ಅಥವಾ ಕವಿ ಪ್ರತಿಭೆ ಸೃಜಿಸಿದ ಕಲ್ಪನಾವಿಲಾಸಜನ್ಯ ಕೃತ್ರಿಮ ಸಂಕೇತವೋ ಎಂಬುದು ಬಯಲಿಗೆ ಬರಲೇಬೇಕು. ದೇವ-ದೇವರೊಳಗಿನ ಈ ತಾರತಮ್ಯ ಕವಿಕೃತ.

ಟಿಪ್ಪಣಿಗಳು

೧. *ಋಗ್ವೇದ ಸಂಹಿತೆ* X. ೫೧

೨. ಅದೇ V. ೪೨

೩. ಅದೇ I. ೧೬೧

ಸಂಕೇತಗಳ ಸ್ವಭಾವ ಮತ್ತು ಸ್ವರೂಪ

ದಿಕ್ಕಾಲ ಪರಿಸರದ ಹಿನ್ನೆಲೆಯ ಜೀವನಾನುಭವದಲ್ಲಿ ಒಂದುಬಾರಿ ಪ್ರತೀತಿಗೆ ಬರುವದು ಒಂದೇ ಅರ್ಥ. ಆದರೆ, 'ಒಂದೇ' ಎಂಬ ಈ ಅನುಭವ, ಇಬ್ಬಗೆಯ ಅರ್ಥವುಳ್ಳದ್ದು ಎಂದು ತಿಳಿಯುವುದು ಇನ್ನೊಂದು 'ಸಮಯ'ದಲ್ಲಿ! ಅನು-ಭೂ=ತತ್‌ಮಯವಾಗುವಿಕೆಯಲ್ಲಿ, ನಿಜವಾದ ಅನುಭವದಲ್ಲಿ ಒಂದೇ ಕಾಣಬಲ್ಲದು. ಈ ಕಾರಣದಿಂದಲೇ ಬಾಳಿನಲ್ಲಿ 'ಪ್ರಮಾಣಿತ' ಹಾಗೂ 'ಪ್ರಾಮಾಣಿಕ' ಎಂಬ ಸಂಕೇತಗಳು (ಸತ್ಯ ಯಾವುದು ಎಂಬ ಬಗೆಗೆ ವಾದ ಎದ್ದರೂ) ಎಲ್ಲ ಭಾಷೆಗಳಲ್ಲಿಯೂ ಇವು ಉಳಿದು ಬಂದಿವೆ! ಅನುಭವದ ಒಂದು ಅಳತೆ: 'ಮಾಪು' ಎಂಬ ಅರ್ಥಭಾವದ ಪ್ರತಿಮಾ-ಸಂಕೇತದಲ್ಲಿ ಅದು ಹುಟ್ಟುವಾಗಲೇ ಇಬ್ಬಗೆಯ ಅರ್ಥ ಕಂಡಿರಲು ಸಾಧ್ಯವಿಲ್ಲ.

ಸಂಕೇತಗಳ ಮೂಲ ಅರ್ಥ-ಆಕೃತಿ ಬದಲಾಗುವಲ್ಲಿ ಒಂದು ನಿಯಮ; ಪದ್ಧತಿ ಒಳಗೊಂಡಿದೆ. ಮೂಲ ಅರ್ಥಕ್ಕೆ ಸುಸಂಗತವಾದ ಬದಲಾವಣೆಯ ಪ್ರಕಾರವು ಒಂದು. ಮೂಲ ಅರ್ಥದ ಆಕೃತಿ ತಿರುವು ಮುರುವಾಗುವ ಪ್ರಕಾರವು ಇನ್ನೊಂದು. 'ಋತ' ಈ ಸಂಕೇತದ ಮೂಲ ಅರ್ಥವು ಗತಿ ಸೂಚಕವಿದೆ. ರಥ ಈ ಸಂಕೇತವು 'ಋ' ಆಖ್ಯಾತ ಸಾಧಿತ ಎಂದು ಋಗ್ವೇದದಲ್ಲಿ ಕಂಡುಬರುತ್ತದೆ. ದೇಹವನ್ನು 'ರಥ' ರೂಪದಲ್ಲಿ ಕಂಡ ಕವಿಯು 'ಋ' ಆಖ್ಯಾತದಿಂದ 'ರಥ' ಪ್ರತಿಮಾ ನಿರ್ಮಾಣಮಾಡಿದ್ದಾನೆ. ಸೂರ್ಯನ 'ರಥ'ದ ಮಾರ್ಗ 'ಋತ' ಎಂದಿರುವಲ್ಲಿ ಔಚಿತ್ಯವಿದೆ. ಸಂಕೇತಗಳು ಹುಟ್ಟುವಾಗಲೇ ಅಮೂರ್ತ ಅರ್ಥದವು ಇದ್ದಿಲ್ಲ. ಮೂರ್ತದ ನೆಪದಿಂದಲೇ ಅಮೂರ್ತ ಅರ್ಥವು ಹೊಳೆದದ್ದು-ಮೊತ್ತಮೊದಲಲ್ಲಿ; 'ನೆಪದಿಂದ' ಎಂಬ ಮಾತನ್ನು ಮರೆತು ನಡೆಯದು ಮೂರ್ತ ರೂಪಕ್ಕೂ ಅಮೂರ್ತಕ್ಕೂ ಜನ್ಯ-ಜನಕ ಸಂಬಂಧವಿಲ್ಲ. ಆದರು ಆ ವಿಶಿಷ್ಟ ಅರ್ಥಭಾವದ ಪ್ರೇರಣೆಗೆ ಕಾರಣವಾದ ಸೂಕ್ಷ್ಮ ಗುಣ-ತತ್ತ್ವವು ಅಲ್ಲಿ ಹುದುಗಿರುತ್ತದೆ. ಗಮನಾರ್ಥಕ 'ಋ' ಆಖ್ಯಾತ ಸಾಧಿತ 'ಋತ' ಸಂಕೇತಕ್ಕೆ ಮಾರ್ಗ-ಅಯನ ಎಂಬ ಸ್ಥೂಲ ಭೌತ ಆಕೃತಿ: ಅರ್ಥವೇ ಮೊದಲು ಇತ್ತು. ಸೂರ್ಯನ ಗತಿಯಿಂದ (ಉತ್ತರ-ದಕ್ಷಿಣ) 'ಅಯನ' ಈ ಸಂಕೇತವು ಮಾರ್ಗ ಎಂಬ ಅರ್ಥದ್ದೇ ಇದೆ. ಸಂಕೇತಗಳ ಅರ್ಥದಲ್ಲಿ ಅಡಗಿರುವ ತರ್ಕಬದ್ಧ ಅಮೂರ್ತ ಆಕೃತಿಯು (Logical form), ಇದು ಸಾರ್ವಕಾಲಿಕ ಸನಾತನ ಅರ್ಥ-ಧಾರಣದ ಅರ್ಹತೆಯುಳ್ಳದ್ದು ಆಗಿರುವುದನ್ನು ಕಂಡ ಹಂತದಿಂದ ನರ-ಮನುಜನ ಜೀವನದ ಮಾರ್ಗದಲ್ಲಿ ಪ್ರಗತಿಯ ವೇಗವು ಹೆಚ್ಚಿತು. ಈ ಪ್ರಗತಿಯ ದಾರಿ ಸ್ಥೂಲದಿಂದ-ಸೂಕ್ಷ್ಮದತ್ತ, ಮೂರ್ತದಿಂದ- ಅಮೂರ್ತದತ್ತ ಸಾಗಿದೆ. ಮೂಲ ಅರ್ಥವು, ಸಮಂಜಸ ತರ್ಕಬದ್ಧ ರೀತಿಯಲ್ಲಿ ಪಡೆವ ಬೇರೆ ಬೇರೆ ಸೂಕ್ಷ್ಮಾರ್ಥದ ಛಾಯೆಗಳು ಆ ಜನಜೀವನದಲ್ಲಿ ಆದ ಸುಸಂಗತ ಏರಿಳಿತಗಳನ್ನು ಸೂಚಿಸುತ್ತವೆ. ಗತಿ : ಮಾರ್ಗ ಎಂಬರ್ಥದ

ಋತವು ಆಹ್ನಿಕ ('rite') ಸೂಚಕವಾಗುವಲ್ಲಿ ಆಹ್ನಿಕದ ಮೂರ್ತ ಪ್ರಕಾರದ ಮೇಲಿಂದ ಅವರ ಸಮಯಾಚಾರ ಬೆಳಕಿನಲ್ಲಿ ಬರಬಲ್ಲವು. 'Rite' ಮತ್ತು ಲ್ಯಾಟಿನ್ 'ritus' ರೂಪವು 'ಋತ' ಸಂಕೇತದ ಮೂಲ ಸೌರ ಅರ್ಥವನ್ನೇ ಪುಷ್ಟೀಕರಿಸುತ್ತದೆ.

ಸಂಕೇತ-ಪ್ರತಿಮೆಗಳು (: ಅವುಗಳ ಅರ್ಥದ ಆಕೃತಿ). ಆ ಭಾಷಿಕರು ಜೀವನ ಜಲ ಪಡೆದ ಎಡೆಯನ್ನು ಸೂಚಿಸುತ್ತವೆ. ಅ-ಮೂರ್ತ ಜೀವನ ಪ್ರವಾಹದೊಡನೆ, ಸಾಂಸ್ಕೃತಿಕ ಪಾತಳಿಯಲ್ಲಿ ಸಂಬಂಧ-ಸಂಪರ್ಕ ಸಾಧಿಸಲು ಮಾನವನು ಪಡೆದ ತಂತ್ರವೆ, ಈ ಪ್ರತಿಮಾ : ಸಂಕೇತ ರೂಪ ಭಾಷಾ : ಮಾಧ್ಯಮ. ತೀರ ಸ್ಥೂಲ (ಮಾತ್ರಾಸ್ಪರ್ಶದ ಪಾತಳಿಯ-) ಅರ್ಥದಲ್ಲಿ ಸಂತೃಪ್ತ ಜೀವಗಳು, ಭುವರ್‌ಲೋಕವನ್ನರಿಯವು. ಕಾಲು ನೆಲದ ಮೇಲೆ ಇದ್ದರೂ ಅರ್ಥರೂಪ ಭುವರ್ಲೋಕದಲ್ಲಿ (Contemplative Plane) ವ್ಯವಹರಿಸುವ ಅರ್ಹತೆ. ಸಂಕೇತಸ್ಥ ಲಾಕ್ಷಣಿಕ ಅರ್ಥದ ನೆರವಿನಿಂದಲೆ ಪ್ರಾಪ್ತವಾಗಿದೆ. ಈ ಭುವರ್ಲೋಕದ ಔನ್ನತ್ಯ, ಆ ಸಂಕೇತದ ನೆಪದಿಂದ ಪಡೆದ ಅರ್ಥದ ಮಟ್ಟದ್ದು ಮಾತ್ರ ಇರಬಲ್ಲದು. ಆದರೆ ಜೀವನದಲ್ಲಿ 'ಅರ್ಥ' ಎಂಬುದೇನಾದರೂ ಇದ್ದರೆ ಮಾತ್ರ ಅದು ದೊರೆಯಬಲ್ಲದು. ಬಾಳು ಅರ್ಥಶೂನ್ಯ-ಅನರ್ಥಕಾರಿ ಆಗಿದೆ, ಎಂಬುದೇ ಮೂಲಭೂತ ಶ್ರದ್ಧೆಯಿದ್ದರೆ, ಅವರೇನು ಪಡೆಯಬಲ್ಲರು, ಮಣ್ಣು?

ಇಲ್ಲಿ ಮತ್ತೆ, ಈ ಮೊದಲು ಎತ್ತಿದ ಪ್ರಶ್ನೆಯೆ, ಇನ್ನೊಂದು ರೂಪದಲ್ಲಿ ಬಂತು! ಈ ವಿಶ್ವದಲ್ಲಿಯ 'ಅರ್ಥ' ಇದು ವ್ಯಕ್ತಿಯ ಶ್ರದ್ಧೆಯ ಮೇಲೆ ಅವಲಂಬಿಸಿದೆಯೆ? ಅಥವಾ ವ್ಯಕ್ತಿ-ನಿರಪೇಕ್ಷ ಸ್ವತಂತ್ರ ಸ್ವಯಂ-ಭೂ ಅರ್ಥ=ಸತ್ಯ ಎಂಬುದು ಏನಾದರೂ ಉಂಟೆ? ವಿಶ್ವದ 'ಅರ್ಥ' ಎಲ್ಲಿ ಉಂಟು? ಈ ವಿಶ್ವದ ಅಂತರಿಕ್ಷಸ್ಥ-'ಅರ್ಥ'ವು, ವಿಶಿಷ್ಟ ದಿಕ್ಕಾಲ ಪರಿಸರಸ್ಥ ಜೀವನ ಪಾತಳಿಯಲ್ಲಿಯೂ ವ್ಯಕ್ತಿಯ ಅಂತರಿಕ್ಷದಲ್ಲಿ-ಅಂತರ್ ಅಂಗದಲ್ಲಿಯೂ ಪ್ರತೀತಿಗೆ ಬರುತ್ತದೆ, ತಾನೆ? ಸಾಮಾಜಿಕ ಮುಷ್ಟಿಯ ಮೂಲಕ ದಿಕ್ಕಾಲ-ಪರಿಸರಸ್ಥ 'ಅರ್ಥ'ವು ಪ್ರತೀತಿಗೆ ಬರುತ್ತದೆ. ಇದೇ ಇಲ್ಲವಾದರೆ, ದಿವ್ಯಾಧ್ಯಾತ್ಮವಾದಿಗಳ ಪಿಂಡ-ಬ್ರಹ್ಮಾಂಡದೊಳಗಿನ ಸಾಮರಸ್ಯದಲ್ಲೂ 'ಅರ್ಥ'ವೆ ಇಲ್ಲವಾಗಲಿದೆ! ಪಿಂಡ-ಬ್ರಹ್ಮಾಂಡ ಐಕ್ಯದ ಕಲ್ಪನಾ-ವಿಲಾಸಕ್ಕೆ ಆತಂಕಕಾರಿಯಾಗುವ 'ವಿಶ್ವಾ-ನರ' ವಿಚಾರದ ಪ್ರತಿಮೆಯನ್ನೂ, ಇದರೊಡನೆಯೆ ಭುವರ್‌ಲೋಕದ ಶಬ್ದಪ್ರತಿಮೆಯನ್ನೂ ದಿವ್ಯಾಧ್ಯಾತ್ಮವು ಬರಡುಗೊಳಿಸಿ, ಬಾಳನ್ನು ಅರ್ಥ-ಶೂನ್ಯವೆನ್ನಲು ಅವಕಾಶ ಕಲ್ಪಿಸಿಕೊಂಡಿದೆ!

ಅಪೇಕ್ಷಿತ ವಿಶಿಷ್ಟ ಅರ್ಥವು ದೊರೆಯದೆ ಉಂಟಾದ ವೈಫಲ್ಯದ ತೀವ್ರ ವೇದನೆಯಲ್ಲಿ, ಆ ನಿರಾಶಾಮಯ ದೃಷ್ಟಿಗೆ ಎಲ್ಲೆಲ್ಲೂ ಕತ್ತಲೆಯೆ ಕಾಣುವುದು ಸ್ವಾಭಾವಿಕ. ಆಗ ಮನಃಶಾಂತಿಗೆ ಬೆಳಕಿಗಿಂತ ಕತ್ತಲೆಯೆ ಹೆಚ್ಚು ಆಕರ್ಷಕವಾಗುತ್ತದೆ. ಜೀವನ=ಪ್ರಕಾಶ: ಮೃತ್ಯು-ಕತ್ತಲೆ ಎಂಬ ಈ ಸಾಂಕೇತಿಕ ಪ್ರತಿಮೆ ಜಗತ್ತಿನ ಏನೆಲ್ಲ ಭಾಷೆಗಳಲ್ಲೂ ದೊರೆಯುತ್ತವೆ. ಈ ನಿರಾಶಾವಾದವು ಪ್ರಾರಂಭದಲ್ಲಿ ಇಲ್ಲದಿದ್ದುದು ಪ್ರಭಾವಶಾಲೀ ತತ್ತ್ವಜ್ಞಾನ ಪೀಠವಾದದ್ದು ಜೀವನದ ಯಾವ ಹಂತದಲ್ಲಿ ಎಂಬುದೂ ಭಾಷಿಕ ಮಾಧ್ಯಮದ ಮೂಲಕವೇ ಬಹಿರಂಗಕ್ಕೆ ಬರುತ್ತಿದೆ. ಸಂಕೇತಗಳ ಸ್ವ-ಭಾವ ಮತ್ತು ಸ್ವರೂಪದ ಸ್ಥಿತ್ಯಂತರಗಳ ಮೂಲಕ, ಆ ಭಾಷಿಕ ಸಂಸ್ಕೃತಿಯ ಪ್ರಗತಿ-ಪರಾಗತಿಯ ಒಂದು ಆಲೇಖವೇ (graph) ಸಿದ್ಧವಾಗಬಲ್ಲದು.

ಮೂಲದಲ್ಲಿ ಒಂದೇ ಅರ್ಥಧಾರಣ ಮಾಡುವುದು, ಸಂಕೇತದ ಹುಟ್ಟುಗುಣ: ಸ್ವ-ಭಾವ. ಆರಂಭದಲ್ಲಿಯೆ ಇದು ಅ-ಮೂರ್ತ ತಾತ್ತ್ವಿಕ ಹಂತದ ಅರ್ಥದ್ದು ಇರಲಾರದು. ಇದು ನಿಜವಿದ್ದರೆ, ಋಗ್ ವೇದಸ್ಥ ಅಮೂರ್ತ ಭವ್ಯ ವಿರಾಟ್ ವಿಶ್ವರೂಪ 'ಪುರುಷ' ಪ್ರತಿಮೆಯ, Model ಮೂರ್ತ ಆಕೃತಿ ಯಾವುದು, ಎಂಬ ಪ್ರಶ್ನೆ ಏಳುತ್ತದೆ. ಪುರಿ-ಶಯ ಎಂಬ ಎರಡು ಸಂಕೇತಗಳ ಸಂಯುಕ್ತ ಪ್ರತಿಮೆ ಪುರುಷ; ಇದು ಸಂಪ್ರದಾಯ ಮಾನ್ಯ ವಿವರಣೆ. ಪುರ, ಪುರಿ ಈ ಸಂಕೇತಕ್ಕೆ ಅಥರ್ವವೇದದಲ್ಲಿ ದೇಹವಾಚಕ ಸಾಮಾನ್ಯ (general) ಅರ್ಥವು ಕಾಣಿಸಿಕೊಳ್ಳುತ್ತದೆ; 'ನವದ್ವಾರೇ ಪುರೇ ದೇಹೀ' ಎಂಬಲ್ಲಿ. ಆದರೆ, ಋಗ್‌ವೇದದಲ್ಲಿ 'ಪುರ'ವು ಮೊದಲಲ್ಲಿ ವಿಶಿಷ್ಟ ದೇಹಸೂಚಕ ಸಂಕೇತವಾಗಿತ್ತು. ತನ್ನ ಉಸುರಿನ ಜ್ವಾಲೆಯಿಂದ ಲೋಕಶೋಷಕನೆನಿಸಿದ ಕೃಷ್ಣ,

ಈ ಸಾಂಕೇತಿಕ-ನಾಮದ ಅಸುರ ಅಹಿ=ನಾಗನ ವಾಸವು 'ಚರಿಷ್ಣಂ ಪುರ' ಎಂದು ಋಗ್‌ವೇದದಲ್ಲೆ ಉಂಟು! ವೃತ್ರನ ಬಳಗದ ಶೋಷಕ ಶುಷ್ಣನು. ಇವನ ಸಂಗಾತಿ 'ಅಸುರ' 'ದ್ರಪ್ಸಃ' ಕೃಷ್ಣನು ಇವರು ಅಹಿ=ನಾಗರು: ನಡೆದಾಡುವ (ಚರಿಷ್ಣಂ) 'ಪುರ'ದಲ್ಲಿ ಇವರ ವಾಸ! ಎಂದರೆ ಈ 'ಪುರ'=ಹಾವು ಇರುವ (ಒಂದು) ಹುತ್ತು=ಗುದ್ದು ಆಯಿತು! ಏಳುಕೊಳ್ಳದ ಎಲ್ಲಮ್ಮನನ್ನು ಏಳು ಹುತ್ತಿನ ದೇವಿ ಎಂದು ಹಾಡಿ ಹೊಗಳಿದ್ದುಂಟು. ಏಳು=ಸಪ್ತ ಈ ಸಂಕೇತವು ಋಗ್‌ವೇದದಲ್ಲಿ ಸರ್ಪ-ನಾಗವಾಚಕವಿದೆ. ಇಜಿಪ್ತಿನ ಚಿತ್ರಲಿಪಿಯಲ್ಲಿ ಸ್ತ್ರೀಯನ್ನು ಸರ್ಪದ ಚಿತ್ರದಿಂದ ತೋರಿಸಲಾಗುತ್ತಿತ್ತು!

> Egyptian female deities appear either as a Cow.... or a snake
> and also in hierographic writing as an egg...

ಎಂದರೆ ಹುತ್ತ-ಏಳು ಇವೆರಡರ ರಹಸ್ಯಾರ್ಥವು ಹೆಣ್ಣು ಆಯ್ತು. 'ವಾಲ್ಮೀಕಿ' 'ಹುತ್ತಿನಿಂದ' ಹುಟ್ಟಿದವನು; ಅಥವಾ ಹುತ್ತಿನಲ್ಲಿ ಇರುವವನು ಈ ಸಂಕೇತವು ಋ. ವೇದದ 'ಪುರಿ-ಶಯ' ಪುರುಷನ ಇನ್ನೊಂದು ಪ್ರತಿ-ಮಾ ರೂಪ!

ಸಂಕೇತಗಳು (ತಮ್ಮ) ಸ್ವ-ಭಾವವನ್ನು-ಅಂತರಂಗವನ್ನು ಬಚ್ಚಿಡಲು ಅಪೇಕ್ಷಿಸುವುದಿಲ್ಲ. ಅವು ತಮ್ಮ ಜನ್ಮವೃತ್ತಾಂತವನ್ನು ಯಾವ ಅತಿಶಯೋಕ್ತಿಯಿಲ್ಲದೆ ಹೇಳಲು ತತ್-ಪರವಾಗಿರುತ್ತವೆ. ಆ 'ಸಮಯ'ದಲ್ಲಿ ಪ್ರವೇಶಿಸಿ ಹತ್ತಿರ ಬಂದು ತಮ್ಮ ನಿನ್ನೆ-ಇಂದುಗಳನ್ನು (: ಪೂರ್ವೋತ್ತರವನ್ನು) ಸಮೀಕ್ಷಿಸಲು ಬಿನ್ನವಿಸುತ್ತವೆ. ಸಂಕೇತಗಳು ಸತ್ಯಾರ್ಥ ಬಚ್ಚಿಡುವ ಉದ್ದೇಶದಿಂದ ಹೊರಟಿಲ್ಲ. ಮಾನವನಿಗೆ ತನ್ನ 'ಉದ್ದೇಶ' ಏನು ಎಂಬುದರ ಅರಿವು ಮೂಡುವ ಮುನ್ನವೇ ರೂಢಿಗೆ ಬಂದ ಸಂಕೇತಗಳು ಹಲವು ಉಂಟು. ದಿವ್ಯ ಪವಾಡದ ದೈವತಗಳು, ಆ ದೇವತಗಳ ನಡೆವಳಿ ಇವುಗಳ ಸಂದರ್ಭದಿಂದ, ಸಂಕೇತಗಳೊಳಗಿನ ಆ ಅತಿ ಪುರಾತನ ರೂಪ ಆಕೃತಿಯ ಅದೆಷ್ಟೊ ಭಾಗವು ಇಂದಿಗೂ ಉಳಿದು ಬಂದಿದೆ-ಅದನ್ನು ಉಳಿಸಿಕೊಳ್ಳಲಾಗಿದೆ. ಉದಾ : 'ಶುಕ್ರ', ನಾರ-ಅಯನ, ಸ್ಕಂಭ-ಸು-ಖ, ಪುರುಷ ಮುಂತಾದವು ಕೆಲವು ಈ ಸಂಕೇತಗಳು ಎಷ್ಟು ಪ್ರಾಚೀನ ಎಂಬುದು ಸಹ ಇವುಗಳ ರೂಪ-ಆಕೃತಿಯಿಂದ ಗೊತ್ತಾಗಬಲ್ಲದು. ಆದರೆ, ಈ ಸಂಹಿತೆಯ ಸಂಕಲನ ಕಾಲದ ಕವಿಗಳು ಒಂದು ಇರುಕಿನಲ್ಲಿ-ಧರ್ಮ ಸಂಕಟದಲ್ಲಿ-ಸಿಕ್ಕಿದ್ದು ಕಾಣುತ್ತದೆ. ತಮ್ಮ ಪುರಾತನರು ಅರ್ಚಿಸಿದ ಆ ದಿವ್ಯ ದೈವತ ಪ್ರತಿಮೆಗಳ ಮೂಲರೂಪ ಆಕೃತಿಯನ್ನು ಬದಲಿಸುವ ಅಪರಾಧ ತಮ್ಮಿಂದ ಆಗಕೂಡದು ಎಂಬ ಸಾಂಪ್ರದಾಯಿಕ ನಿಷ್ಠೆ; ಅಲ್ಲದೆ ತಮಗೆ ಪಾಪ ತಟ್ಟೀತು ಎಂಬ ಭೀತಿ ಬೇರೆ! ಆ ಮೂಲ ಆಕೃತಿ ರೂಪವು ಉಳಿದಿರಬೇಕು. ಆದರೆ, ಜನರಿಗೆ ಅವರ ಮೆಚ್ಚಿಕೆಯ ರೂಪದರ್ಶನವೇ ಲಭಿಸಬೇಕು, ಎಂಬ ರೀತಿಯಲ್ಲಿ ತಮ್ಮ ಪುರಾತನ ಸಂಪ್ರದಾಯವನ್ನು ಸನಾತನವಾಗಿ ಉಳಿಸಿಕೊಳ್ಳಲು ಮಾಡಿರುವ ಯೋಜನೆಯ ಫಲವೇ ವೇದೋಪನಿಷತ್ತುಗಳು. ಇವುಗಳ ಆಶಯದ ವಿಶದೀಕರಣಕ್ಕಾಗಿ-ನೂತನೀಕರಣಕ್ಕಾಗಿ ಹೊರಟ ಎರಡು ಮಹಾಕಾವ್ಯಗಳು; ಭಾಗವತಾದಿ ಪುರಾಣಗಳು: ಕಾಲಿದಾಸ, ಬಾಣರಂತಹ ಸಂಪ್ರದಾಯತಜ್ಞ ಸಾಹಿತ್ಯಿಕರ ಕೃತಿಗಳು. ಸಂಕೇತಗಳು 'ಗುಹಾನಿಹಿತ' ಅರ್ಥದುವು ಆಗತೊಡಗಿದ್ದು, ಮಾನವನಿಗೆ ತನ್ನ ಕೃತಿಗಳನ್ನು-ಕೃತ್ಯಗಳನ್ನು ಬಚ್ಚಿಡುವ ಆವಶ್ಯಕತೆ-ಅನಿವಾರ್ಯತೆ ಎದುರಿಸಬೇಕಾಗಿ ಬಂದ ಹಂತದಲ್ಲಿ.

ಪ್ರಪಂಚದಲ್ಲಿ ಮಾಧ್ಯಮ (: ಮಧ್ಯಸ್ಥ) ಪ್ರತಿಮಾ : ಸಂಕೇತ ಸನಾತನವಾಗಿ ಅದೇ ಉಳಿದಿದೆ! (ಸುಮೇರಿನ ಕ್ರಾಂತಿಯ ವರೆಗಿನ ಸಮೀಕ್ಷೆ). ಮಾಧ್ಯಮ ಪ್ರತಿಮೆಯೊಳಗಿನ ಎರಡು ಆಕೃತಿಗಳಲ್ಲಿ ಅಂತರ್ ವಲಯಸ್ಥ ಗರ್ಭಿತಾರ್ಥದ ಆಕೃತಿ ಸನಾತನ (Perennial) ಅದೇ ಉಂಟು; ಆದರೆ, ಮಾಧ್ಯಮದ ಬಾಹ್ಯವಲಯ : ಮಾತ್ರಾಸ್ಪರ್ಶದ ಆಕೃತಿ ರೂಪ ಮಾತ್ರ 'ಸಮಯ'ದೊಡನೆ ಮಾರ್ಪಡುತ್ತ ಬಂದಿದೆ!

ಅ. ಭಾಷಾಸಂಕೇತಗಳೇ ಇಲ್ಲದಂದು ಮೈಯಲ್ಲಿ ಆವೇಶವಾದ 'ವಾಕ್' (ದೇವಿಯ) ಸ್ತ್ರೀರೂಪೀ ಪ್ರತಿ-ಮಾ ಶಕ್ತಿಯೇ ಮಾಧ್ಯಮ (medium) ಆಗಿದ್ದಳು. ಈ ಶಕ್ತಿ :

ದೇವಿಯು 'ಮಧ್ಯ'ಲೋಕದಲ್ಲಿ : ಅಂತರಿಕ್ಷದಲ್ಲಿ: ಸಲಿಲದಲ್ಲಿ ಇರುತ್ತಾಳೆ, ಎಂಬ ಗ್ರಹಿಕೆಯ ರಹಸ್ಯ ಅರಿಯಬೇಕು, ಅಷ್ಟೆ.

ಬ. ತಂದೆಯ ತಲೆಯೊಳಗಿಂದ ಹುಟ್ಟಿದ ವಾಕ್=ಮಾಧ್ಯಮ ಆವೇಶವಾದಲ್ಲಿ ದೇವಿಯು (ಅಂಭೃಣಿ ಋ. ವೇದ; ಅಥೆನೆ ಗ್ರೀಸ್). ತನ್ನ ಅನುಷ್ಠಾನದಲ್ಲಿ ಜ್ಞಾನವನ್ನು ಭಜಕನಿಗೆ ಅನುಗ್ರಹಿಸುವಳು. 'ತತ್ ವನಂ ಉಪಾಸೀತ' ಎಂಬ ಕೇನೋಪನಿಷತ್ತು ಇದಕ್ಕೆ ಪ್ರಮಾಣ. 'ಯಕ್ಷ' : ವೃಕ್ಷ-ಸರ್ಪಪೂಜೆ ಅಂದು ಇದ್ದುದೂ ಈ ಉಪನಿಷತ್ತಿನಲ್ಲೇ ಕಾಣದೊರೆಯುತ್ತದೆ.

ಕ್ರೀಟ್‌ದೇಶದಲ್ಲಿ ಜಗತ್ತಿನಲ್ಲೆ ಅತಿ ಪುರಾತನ ಸಾಂಸ್ಕೃತಿಕ ಅವಶೇಷಗಳು ಉಂಟೆಂದು ಬಗೆಯಲಾಗುತ್ತದೆ. 'ಗವಿ'ಗಳು ಗುಹ್ಯವಿಶ್ವದ ಪ್ರವೇಶದ್ವಾರವೆಂಬ ಗ್ರಹಿಕೆಯಿತ್ತು; ಮತ್ತು ಅಂದು 'ಗವಿ' ಅನುಷ್ಠಾನದ ಕೇಂದ್ರವಾಗುತ್ತದೆ. ಮೌಂಟ್‌ಇಡಾದ ಗವಿಯಲ್ಲಿ ರ್ಹೀ (Rhea) ಝೂಸನಿಗೆ ಜನ್ಮವಿತ್ತ ಕಥೆಯುಂಟು. ಕೃಷ್ಣನ ಜನ್ಮಸ್ಥಾನ : ಸೆರೆಮನೆಯ ಕತ್ತಲೆಯಕೋಣೆ; ಇದು ಗುಹೆಯ ಪರ್ಯಾಯ ಅಲ್ಲ ಎನ್ನಲು ಆಗುವುದಿಲ್ಲ. ವಸು-ವಾಸು (ಕಿ) ದೇವ ಈ ಶಬ್ದಸಂಕೇತಗಳಲ್ಲಿ ಇದು 'ನಾಗ' ಪರಂಪರೆ ಎಂಬುದನ್ನು ಬಚ್ಚಿಡುವ ಪ್ರಯತ್ನವು ಸ್ಪಷ್ಟವಿದೆ. 'ನಿಹಿತಂ ಗುಹಾಯಾಂ' 'ಗುಹಾನಿಹಿತಂ' ಇಂತಹ ಸಂಕೇತಗಳಲ್ಲಿ 'ಗುಹೆ'ಯ ಬಗೆಗಿನ ದಿವ್ಯಭಾವನೆ ಸ್ಪಷ್ಟವಿದೆ. ವೃತ್ತಾಕೃತಿ ಕಟೆದು ಪೂಜಿಸಲಾಗುತ್ತಿದ್ದ ಕಲ್ಲುಗಳು ಕ್ರೀಟಿನಲ್ಲಿ ದೊರೆತಿವೆ. ಸೈಂಧವ ಸಂಸ್ಕೃತಿಯ ಅವಶೇಷ ಗಳಲ್ಲಿ ಬಾಣ (: ಲಿಂಗ), ವೃತ್ತಾಕೃತಿ ಎರಡೂ ಉಂಟು. ಇಲ್ಲಿ ಲೆತ್ತ (<ನೆತ್ತ <ನೇತ್ರ=), 'ಅಕ್ಷ'ದ್ಯೂತದ ಸಾಂಕೇತಿಕ ಪ್ರತಿಮೆ ದೊರೆತಿರುವುದು ಮಹತ್ವದ್ದು. ಋಗ್ ವೇದದಲ್ಲಿ 'ಅಕ್ಷ'ದ್ಯೂತದ ಸೂಕ್ತವಿದೆ ಉಪನಿಷತ್ತಿನ 'ಚಾಕ್ಷುಷೀಪುರುಷ' : ಅಕ್ಷಿ-ಪುರುಷ, ಜ್ಞಾನದ ಮಾಧ್ಯಮ! (ಇಜಿಪ್ತಿನ ರಾ-ಅಟುಂ= ಸೂರ್ಯಾಕ್ಷ=ಸರ್ಪ ಋಗ್ ವೇದದ ವರುಣಸ್ಯ (ಸರ್ಪ) ಚಕ್ಷು : ಸೂರ್ಯ).

ವೃಕ್ಷ : ಪುರುಷಪೂಜೆ, ಜ್ಞಾನೋಪಾಸನೆಯ ಸಾಧನವಾಗುವ ಹಂತವು ಪಿತೃಪ್ರಧಾನ ಕುಟುಂಬ ಪದ್ಧತಿಯು ರೂಢಿಗೆ ಬರುವ 'ಸಮಯ' ಸುಮಾರಾಗಿ ಒಂದೇ. ಅಭಿವ್ಯಕ್ತಿಯ ಮಾಧ್ಯಮ : ಸಂಕೇತದಲ್ಲಿ ಒಡಮೂಡಿದ ವಿಶ್ವಸ್ಥ ವಾಸ್ತವ: ಸತ್ಯದ ಮೂರ್ತ ಆಕೃತಿಯ ಮೂಲಕ, ಕುಟುಂಬ ಸಂಸ್ಥೆ ಆಕಾರ ಪಡೆದ ಕ್ರಮವು ಸಹ, ಪುರಾತನ ಆದಿ ದೈವತಗಳ ಕಥೆಗಳಿಂದ ಹೊರವಡುತ್ತಿದೆ. ಸುಮೇರು, ಭಾರತ, ಇಜಿಪ್ಟ್, ಗ್ರೀಕಿನ ಪುರಾತನ ಕಥೆಗಳ ತುಲನೆಯಲ್ಲಿ ಇದು ದೃಢಪಡುತ್ತದೆ. ಅನುಭವವು ಬರತೊಡಗಿದಂತೆ ಅಭಿವ್ಯಕ್ತಿ ಮಾಧ್ಯಮದ ಸಾಂಕೇತಿಕ ಪ್ರತಿಮೆಗಳ ನುಣ್ಪು, ಗುಣ್ಪು ಹೆಚ್ಚಾಗತೊಡಗುತ್ತದೆ. ಈ ದೃಷ್ಟಿಯಿಂದ ಜಾಗತಿಕ ಪುರಾತನ ಕಥೆಗಳಲ್ಲಿ ಹೆಚ್ಚಿನ ಮಟ್ಟಿಗಿನ 'ಮೊದಲುತನ' (firstness) ಉಳಿದಿರುವುದು ಸುಮೇರಿನತ್ತಣಿನ ಕಥೆಗಳಲ್ಲಿಯೇ. ಈಜಿಪ್ಟಿನ ಕತೆಗಳು ಋಗ್‌ವೇದದಷ್ಟು ಅಹಿಮಾಯಾಶಿಲ್ಪದುವು ಅಲ್ಲದಿದ್ದರೂ ಗ್ರೀಕಿಗಿಂತ ತುಂಬ ಹೆಚ್ಚಿನ ಪ್ರಮಾಣದಲ್ಲಿ ಸಂಭ್ರಾಮಕವಾಗಿವೆ. ಜಪಾನಿನ ಆದಿದೈವತ ಕಥೆಗಳೂ ಈ ತುಲನೆಯಲ್ಲಿ ಉಪಯುಕ್ತವಾಗಿವೆ. ಈ ತುಲನೆಯ ಯಥಾರ್ಥತ್ವವನ್ನು ದೃಢಪಡಿಸಿಕೊಳ್ಳಲು, 'ಜ್ಞಾನ'-ಸಿದ್ಧಿಗಾಗಿ 'ಪುರುಷ : ವೃಕ್ಷಪೂಜೆ ಪ್ರಾರಂಭವಾಗಿ ಬಹಳ ಕಾಲ ಸಂದಿಲ್ಲ-ತತ್ಪೂರ್ವದ ಉಪಾಸನಾ ಪದ್ಧತಿಯ ಅವಧಿ ಹಾಗೂ ಸ್ಥಿತ್ಯಂತರಗಳನ್ನು ಗಮನಿಸಿದಲ್ಲಿ.

ಹಾಲುಮತದ ಬೀರನು : ಏಕ ವೀರಾಪುತ್ರ, ಸುಮೇರಿನ ಡುಮುಝಿ ಪುರಾತನನಾದರೂ, ತೈಮತ್-ಅಪ್ಸು ಕಥೆಯ ಸಾಂಕೇತಿಕತೆಗೆ ಸರಿದೊರೆಯಾದ ಕಥೆಯೆಂದರೆ ಋಗ್‌ವೇದದ ಅದಿತಿ-ತ್ವಷ್ಟಾರ (: ವೃತ್ರ), ಹಂತದ ಉಲ್ಲೇಖ ಈಜಿಪ್ಟಿನಲ್ಲಿ ಸಹ ದೊರೆತುದು ಕಾಣದು. ಅದಿತಿ-ತ್ವಷ್ಟಾರ ಯುಗಲ, ತೈಮತ್-ಅಪ್ಸು ಹಂತದ ಜೀವನ ಸಮಯದ ಛಾಯೆಯನ್ನು ಉಳಿಸಿಕೊಂಡಿದ್ದರೂ ಈ ಪ್ರತಿಮಾ-ಶಿಲ್ಪದ ಮಾಟದಲ್ಲಿ ತೈಮತ್-ಅಪ್ಸು ಯುಗದ ತರುವಾಯದ ಘಟನೆಗಳ ಪ್ರತಿಬಿಂಬವೂ ಕಾಣುತ್ತಿದೆ.

ತೈಮತ್-ಅಪ್ಸು : ಸ್ತ್ರೀ-ಪುಂಶಕ್ತಿಗಳ=ಆಪ-ರಸತತ್ವದ ಪ್ರತೀಕಗಳು ಇವನ್ನು ಸರ್ಪ (dragon) ಸಂಕೇತದಿಂದ ಸೂಚಿಸಲು ಎನುಮಾ ಎಲಿಶ್ ಕಾವ್ಯದ ಕವಿ ಅಳುಕಿಲ್ಲ. ಋಗ್ವೇದದ ಅದಿತಿ-ತ್ವಷ್ಟಾರರು ಸರ್ಪವೆಂದು ಒಂದೆಡೆಗೂ ಸೂಚಿತವಾಗಿಲ್ಲ! ಆದರೆ, 'ಸಾರ್ಪರಾಜ್ಞೀ ಸೂರ್ಯೋ ವಾ' ಈ ಸರ್ಪರೂಪೀ ಅದಿತಿ : ಪೃಶ್ನಿ (ಮಾತಾರುದ್ರಾಣಾಂ) 'ಗೌ' ದೈವತ ಇರಲೇಬೇಕೆಂದು ಊಹಿಸಬೇಕಾಗಿ ಬಂತು! ತ್ವಷ್ಟಾರನು ಸರ್ಪನೆಂದು ನಿರ್ಧರಿಸಲು ಪಂಚಮವೇದ=ಮಹಾಭಾರತದ ಸಹಾಯ ಬೇಕು! ತ್ವಷ್ಟಾರ=ತಕ್ಷಕ ಇಬ್ಬರೂ 'ಬಡಿಗರೇ'; ಬಡಿಗೆ=ಸರ್ಪ; ಜ್ಞಾನೋಪಾಸನೆಯ ಈ ವೃಕ್ಷಪೂಜಾ ಸಂಪ್ರದಾಯ ಮುಂದೆಯೂ ನಡೆದು ಬಂದಿದೆ. ಲಕುಲೀಶ=ಲಗುಡೀಶನು ಮಹಾ ಕಾಯಾವತಾರ! ಇವನು ಐತಿಹಾಸಿಕ ಕಾಲದ ತ್ವಷ್ಟಾರನು! ವೇದದ ತ್ವಷ್ಟಾರನು ಮಹಾಕುಲ; ಚಮಸ (=ಪಾತ್ರ) ಪಾನ ಸಂಪ್ರದಾಯದ ವೇದಕಾಲೀನ ಅಧ್ವರ್ಯು.[೨]

ವೀರನಾ ಇವನು[೩] ಆದರೆ ಸುಮೇರಿನ ಪುರಾತನರು, ತೈಮತ್-ಅಪ್ಸುಗಳನ್ನು, 'ವಾಗರ್ಥಾವಿವ ಸಂಪೃಕ್ತೌ, ಜಗತಃ ಪಿತರೌ' ಎಂಬ ಹಾಗಿನ ಭಾರತೀಯ ಆಪ-ರಸಪಂಥೀಯ ಶ್ರದ್ಧಾಮ ದೃಷ್ಟಿಯಿರುವ ಕಾಣಲಿಲ್ಲ! ಆರಾಧ್ಯ ದೈವತ ಎಂಬ ಭಾವುಕತೆಯಿಂದ ತೈಮತ್-ಅಪ್ಸುಗಳನ್ನು ಪೂಜಿಸಲಿಲ್ಲ!

'ಜಗತಃ ಪಿತರೌ' ಸದಾ (ಸಂ)ಯೋಗಾರೂಢರಾಗಿರುತ್ತಾರೆ, ಎಂಬ ಈ ಸಾಂಕೇತಿಕತೆಯು ಒಳಗೊಳ್ಳುವ ತರ್ಕಪ್ರತಿಷ್ಠಿತ ಸಾರ್ವಕಾಲಿಕ ಅರ್ಥವು ಅಭ್ಯಸನೀಯವಿದೆ. ಈ ಅರ್ಥಗ್ರಹಣಕ್ಕಾಗಿ ಅವಶ್ಯವಿರುವ ಆಧಾರಭೂತ ಪ್ರಮಾಣಗಳು ಎನುಮಾ ಎಲಿಶ್‌ದಲ್ಲಿ ದೊರೆಯುತ್ತವೆ. ಮಾತ್ರವಲ್ಲ, ಋಗ್ವೇದದಲ್ಲೂ ಉಂಟು. ಎನುಮಾ ಎಲಿಶ್ ಕಾವ್ಯವು, ಉತ್ಖನನದಲ್ಲಿ ಮೊದಲಬಾರಿ ಬೆಳಕಿಗೆ ಬಂದದ್ದು ಕ್ರಿ. ಶ. ೧೮೭೬ರಲ್ಲಿ. ಕ್ರಿ. ಪೂ. ೨೦೦೦ ವರುಷಗಳ ಹಿಂದಿನ ಕಾವ್ಯ ಕ್ರಿ. ಪೂ. ೮ನೆಯ ಶತಕದ ವರೆಗಿನ ಪಾಠಾಂತರಗಳು ಮತ್ತೆ ದೊರೆತಿವೆ. ಹೀಬ್ರೂ ದೈವತಕಥೆಗಳ ಮೂಲ ಆಕೃತಿ-ಸ್ವರೂಪ ಗ್ರಹಣಕ್ಕಾಗಿ ಆ ಕಥಾ ಸಂಪಾದಕರು, ಈ ಕಾವ್ಯದ ಪ್ರಯೋಜನ ಪಡೆದಿದ್ದಾರೆ. ಆ ಸಾಂಕೇತಿಕತೆಯನ್ನು ಈ ಸಂಶೋಧಕರು ಅರ್ಥಯಿಸಿಕೊಂಡ ರೀತಿಯನ್ನು ವಿವರಿಸುವ ಮೊದಲು, ಋಗ್ ವೇದದೊಳಗಿನ ಸಾಂಕೇತಿಕ ವರ್ಣನೆಯನ್ನು ಅರಿಯುವುದು ಲೇಸು.

ನಾಸದೀಯ ಸೂಕ್ತವು ಸೃಷ್ಟಿ ನಿರ್ಮಾಣದ ಬಗೆಗಿನ ವಿಚಾರವನ್ನೇ ವಿವರಿಸುವುದು ಸರ್ವಮಾನ್ಯವಿದೆ. ವಿಶ್ವವು ಉತ್ಪನ್ನವಾಗುವ ಮೊದಲು 'ಕಿಂ ಆಸೀತ್ ಗಹನಂ ಗಂಭೀರಂ?' ಎಂದು ಮೊದಲ ಪ್ರಶ್ನೆ. ಬಳಿಕಿನ ಮುಖ್ಯ ಮಾತು "ತಮಃ ಆಸೀತ್ ತಮಸಾಗೂಳ್ಹಂ ಅಗ್ರೇ ಅಪ್ರಕೇತಂ ಸಲಿಲಂ ಸರ್ವಂ ಆಃ ಇದಮ್।"[೪] ಈ ಅರ್ಥ ಗ್ರಹಣದಲ್ಲಿ ಕತ್ತಲೆ, ಅ-ಪ್ರಕೇತ, ಸಲಿಲ ಇವು ಮೂರು ಮೌಲಿಕ ಸಂಕೇತಗಳು, ಋಗ್ವೇದದ 'ಸಲಿಲ' ಯಜುರ್ವೇದದಲ್ಲಿ ಸರಿರ ಆಗುತ್ತದೆ: ಉಪನಿಷತ್ತು, ಬೌದ್ಧಗ್ರಂಥಗಳಲ್ಲಿ ಸರಿರ-ಶರೀರ ಎಂಬ ರೂಪದಲ್ಲೂ ಕಾಣತೊಡಗಿದ್ದುಂಟು! ಮರುತಾದಿಗಳನ್ನು ವೃಷಣ ಜಲ ಸೇಚಕ 'ಜೀರದಾನವಃ' ಎಂದು ಋಗ್ವೇದ ಹೇಳಿದರೆ, ಇದು 'ಜೀವದಾನ' ಕ್ರಿಯೆಯೆಂಬ ಸೂಚಕ ವ್ಯತ್ಯಾಸ ಯಜುರ್ವೇದದಲ್ಲಿ! ಆದಕಾರಣ, ಸೃಷ್ಟಿನಿರ್ಮಾಣ ಪೂರ್ವದ ಗಾಢಾಂಧಕಾರದಲ್ಲಿ ಸರ್ವತ್ರ ವ್ಯಾಪಿಸುತ್ತಿದ್ದ ಅಂದಿನಲ್ಲಿ ಸಲಿಲ (=ಜೀವನ ಜಲ) ಸ್ರಾವ ನಡೆದಿತ್ತು ಎಂಬ ವಸ್ತುಸ್ಥಿತಿ ಸೂಚಕ ಅರ್ಥವು ಇಲ್ಲಿ ಅಭಿಪ್ರೇತವಿರಬೇಕು. ಇದನ್ನು ಸೃಜನಪೂರ್ವ 'ಪ್ರಲಯ' ಎಂಬ ಸಂಕೇತದಿಂದಲೂ ಸೂಚಿಸಲಾಗುತ್ತದೆ. ಹಿಬ್ರುದೈವತ ಕಥಾಸಂಪಾದಕರು ಹೇಳುವ ವಿವರಣೆ ಹೀಗಿದೆ:

> in (the) myth...chaotic commingling of the two sexes which delays the establishment of...social order-like rain pouring down into the sea, which delays the appearance of dry land. Thus male and female principles must first be decently separared,[೫]

ಎನುಮಾ ಎಲಿಶ್ ಮತ್ತು ಋಗ್‌ವೇದದ ನಾಸದೀಯ ಸೂಕ್ತಸ್ಥ ಆಶಯವು ತೀರ ಭಿನ್ನ. ಆದರೂ ಇವೆರಡರಲ್ಲಿ ಕ್ರಿಯೆ-ಪ್ರತಿಕ್ರಿಯಾರೂಪ ಸಂಬಂಧವಿರುವುದಾಗಿ ಕಾಣುತ್ತದೆ. ಕ್ರಿಯೆಯೇನು ಅದರ ಪ್ರತಿಕ್ರಿಯಾ ಯಾವುದು? ಎಂಬ ಪ್ರಶ್ನೆ ಉಂಟಾಗುತ್ತದೆ. ಈ ಪ್ರಶ್ನೆಗೂ ಮೊದಲು ಇನ್ನೂ ಒಂದು ಪ್ರಶ್ನೆಯ ಪರಿಹಾರವು ಅವಶ್ಯವಿದೆ. ಸುಮೇರಿಯನ್ ಭಾಗದ ಸಂಸ್ಕೃತಿಯೊಡನೆ ಭಾರತೀಯ ಪುರಾತನ ಸಂಸ್ಕೃತಿಯ ಸಂಬಂಧವೂ ಹತ್ತಿರದ್ದೇ ಇತ್ತು ಎಂಬುದು ದೃಢಪಡದೆ. ಎನುಮಾ ಎಲಿಶ್ ಮತ್ತು ನಾಸದೀಯಸೂಕ್ತದ ಆಶಯದಲ್ಲಿ ಕ್ರಿಯಾ-ಪ್ರತಿಕ್ರಿಯಾರೂಪ ಸಂಬಂಧವು ಇದೆ ಎಂದು ಗ್ರಹಿಸಲು ಆಗುವುದಿಲ್ಲ. ವಿಶ್ವಸ್ಥ ಸನಾತನ ಆಶಯವನ್ನು ಗ್ರಹಿಸಿಕೊಂಡು ರಚಿತಕಾವ್ಯಗಳ ಆಶಯದಲ್ಲಿ ಸಾಮ್ಯವಾಗಲಿ, ಪ್ರತಿಕ್ರಿಯಾರೂಪ ವೈಷಮ್ಯವಾಗಲಿ ಕಾಣಿಸಿಕೊಳ್ಳುವ ಶಕ್ಯತೆಯುಂಟು. ಸಂಸ್ಕೃತಿಯ ಉದ್ಗಮ ಕೇಂದ್ರವನ್ನು ಒಂದೆಡೆಯಲ್ಲಿಯೇ ಕಾಣುವ ಆಗ್ರಹವನ್ನು ಬಿಟ್ಟುಕೊಡಬೇಕಾದ ಕಾರಣವೇನು? ವಿಚಾರ-ಭಾವನೆಗಳ ಗುತ್ತಿಗೆ ಯಾವುದೊಂದೇ ಜನಾಂಗಕ್ಕೆ ಅಥವಾ ಭಾಷೆಗೆ ಉಂಟು ಎಂದು ಬಗೆವಲ್ಲಿ ಇರುವ ವೈಚಾರಿಕ ಅ-ಸಾಮಂಜಸ್ಯವು ಎನುಮಾ ಎಲಿಶ್ ಮತ್ತು ನಾಸದೀಯ ಸೂಕ್ತದ ಕ್ರಿಯೆ-ಪ್ರತಿಕ್ರಿಯೆಗಳ ಬಗೆಗಿನ ಗ್ರಹಿಕೆಯಲ್ಲಿಯೂ ಇರುವ ಶಕ್ಯತೆಯುಂಟು ಆದರೆ, ಈ ಕ್ರಿಯೆ-ಪ್ರತಿಕ್ರಿಯೆಗಳ ಆಕೃತಿ ಸ್ವರೂಪನ್ನು ಸಮೀಕ್ಷಿಸದೆ, ಇಂಥ ಪ್ರತಿಕ್ರಿಯೆ, ನಿಕಟ ಸಂಬಂಧವು ಗೃಹೀತವಿಲ್ಲದೆಯೂ ಶಕ್ಯವೆ ಎಂಬುದರ ನಿಷ್ಕರ್ಷದ ಸಲುವಾಗಿ ಇವೆರಡೂ ಕವನಗಳಲ್ಲಿಯ ಸಾಮ್ಯವಿರೋಧದ ಅಂಶಗಳು, ಸ್ಥೂಲವಾಗಿಯಾದರೂ, ಮೊದಲು ಗೊತ್ತಿರಬೇಕಾಗುತ್ತದೆ. ಎನುಮಾ ಎಲಿಶ್ ಇಡಿಯಾಗಿ ಪ್ರಕಟವಾಗಿದೆಯೊ, ತಿಳಿಯದು. ಆ ಸಂಸ್ಕೃತಿಯ ಸಮೀಕ್ಷರು ಕೊಟ್ಟಿರುವ ಭಾಗದ ಮೇಲಿಂದ ತಿಳಿಯುವ ಅಂಶಗಳು ಇವು. ಆದರೆ, ಇವರು ಸಮಾನ ಪಾಠಗಳ ಪ್ರಯೋಜನ ಪಡೆದಿರುವಂತೆ ಕಾಣುವುದಿಲ್ಲ. ತುಲನಾತ್ಮಕ ವ್ಯಾಸಂಗದ ದೃಷ್ಟಿಯಿಂದ ಇದೂ ಲಾಭದಾಯಕವೇ ಸರಿ. ಆ ಭಾಷಿಕರ ವಿಚಾರಗಳಲ್ಲಿ ಆದ ಸ್ಥಿತ್ಯಂತರಗಳನ್ನು ಊಹಿಸಿಕೊಳ್ಳಲು ಅವಕಾಶ ದೊರೆಯುತ್ತದೆ.

ಎನುಮಾ-ಎಲಿಶಿನ ಕಥಾನಾಯಕನು ಮರ್ಡುಕ್; ತೈಮತ್-ಅಪ್ಸು ಪುತ್ರ ಎಂಕಿಯ ಮಗ. ಇದು ವೀರನ ಸ್ತೋತ್ರವಾದರೂ ಸೃಷ್ಟಿನಿರ್ಮಾಣದ ವಿವರದೊಡನೆ ಈ ಕವನ ಪ್ರಾರಂಭವಾಗುತ್ತದೆ. ಸುಮೇರಿಯನ್ (ಅಸ್ಸೀರಿಯಾ-ಅಕ್ಕಡ-ಬಾಬಿಲೋನ ಖಾಲ್ಡಿಯಾ) ಭಾಗದ ಕಥೆ. ಅದು 'ಊರು' : 'ಪುರ'ಗಳ (ಗಣ)ರಾಜ್ಯದ ಯುಗ; ಸೈಂಧವ ಸಂಸ್ಕೃತಿಯೂ 'ನಗರ' ಸಂಸ್ಕೃತಿಯೆ. 'ಪುರದ ರಾಜ ಸತ್ತನವಗೆ, ವರಕುಮಾರರಿಲ್ಲದಿರಲು' ಆನೆಯು ಕೊರಳಿಗೆ ಮಾಲೆ ಹಾಕಿದ ತಿರುಕನೊರ್ವನು ರಾಜನಾಗುತ್ತಾನೆ! ಇಂತಹ ಕಥೆ ಕವನಗಳಲ್ಲಿ, ಅಜ್ಜಿಯ ಕಥೆಗಳಲ್ಲಿ ಪುರಯುಗದ ನೆನಹು ಅಸ್ಪಷ್ಟವಾಗಿ ಇಂದಿಗೂ ನಮ್ಮಲ್ಲಿ ಉಳಿದು ಬಂದಿದೆ. ಎನುಮಾ ಎಲಿಶವು ಮರ್ಡುಕನ 'ವೀರಗಾಥೆ'. ಮಹಾಭಾರತದ ಮೂಲ ಕಾವ್ಯನಾಮ 'ಜಯ' ಎಂಬದು ಇಲ್ಲಿ ನೆನಪಿಗೆ ಬರುತ್ತದೆ. 'ಜಯ' ಗ್ರಂಥದ ನೆನಪು ಬರಲು ಕಾರಣವಿದೆ : ಮಹಾಭಾರತವಾಗಿ ಮಾರ್ಪಟ್ಟ 'ಜಯ' ಗ್ರಂಥದ ವಸ್ತುವು ಋಗ್ವೇದದ ಮುಂದುವರಿದ ಕಥೆ. ಇದನ್ನು ಪಂಚಮವೇದ ಎಂದಿರುವಲ್ಲಿ ಒಂದಕ್ಕಿಂತ ಹೆಚ್ಚು ಬಗೆಯ ಔಚಿತ್ಯವಿದೆ, ಋಗ್‌ವೇದದ ಯದುತುರ್ವಶರು ಮಹಾಭಾರತದ ವೀರರು. 'ಜಯ' ಕಾವ್ಯದ ರೂಪ : ಆಕೃತಿ ಮಾರ್ಪಟ್ಟರೂ ಕಥೆಯ ಪ್ರಧಾನ ಪಾತ್ರಗಳು ತೀರ ಬೇರೆಯಾಗಿರಲಾರವು. ಏಕಂ : ಸತ್ ತತ್ತ್ವದ ಮೂರ್ತರೂಪ: ಕೃಷ್ಣ (: ವಿಷ್ಣು : ವಾಸುದೇವ : ನಾರಾಯಣ)ನೇ ವಿಶ್ವಾಧ್ಯಕ್ಷನೆಂಬ ಶ್ರೀಕೃಷ್ಣ ವಿಜಯದ ಕಾವ್ಯವೇ ಈ ಮಹಾಭಾರತ.

ಈ ಋಗ್ ವೇದ ತತ್ : ಏಕಂ : ಸತ್ ತತ್ತ್ವದ ತಳಪಾಯದ ಮೇಲೆ ನಿಂತ ಕೃತಿ. ಪ್ರಚ್ಛನ್ನ ಚಂದ್ರನ ವಿಜಯದಲ್ಲಿ ಪರಿಣಮಿಸುತ್ತದೆ: ಸಾಮ್ರಾಟ್ ರಾಜನೆಂಬ ವರುಣನು ಚಂದ್ರನೇ ಎಂದು ಸಿದ್ಧವಾಗಿದೆ; ವಿಶ್ವಾವರಕ ವೃತ್ರನು ಚಂದ್ರನೆಂದು ವೇದವೇ ಒಪ್ಪಿದೆ. ಈ ವೇದದಲ್ಲೇ ವರುಣನನ್ನು, ಪ್ರಜಾಪತಿಯು ಹಿಂದಿಕ್ಕಿದ್ದಾನೆ, ಎಂದು ಮ್ಯಾಕ್‌ಡೊನೆಲ್ ಸಿದ್ಧಪಡಿಸಿದ್ದಾರೆ. ಆದರೆ, ಈ 'ಪ್ರಜಾಪತಿ' ಹಿರಣ್ಯಗರ್ಭ=ಕಂ ದೈವತವು: 'ಕಸ್ಮೈದೇವ'ನು ಶ್ಲೇಷಯುಕ್ತನಾದುದಕ್ಕೆ ಕಾರಣವಿದೆ: ಕಂ=ಚಂದ್ರಾಃ ಆಪಃ-ಅಗ್ನಿ ಸ್ವರೂಪನಾಗಿದ್ದಾನೆ. ವರುಣನು 'ಯಾಸಾಂ ರಾಜಾ' ಆ ಆಪೋದೇವಿಯರ ಪತಿ=ಪ್ರಜಾಪತಿಯೂ ಸರಿ. ಅಲ್ಲದೆ, ಯಾವನ ಪಾದ-ಮಧುವಿನಿಂದ ಸೃಷ್ಟಿಹುಟ್ಟಿದೆ

ಎಂದು ಋಗ್‌ವೇದವೇ ಹೇಳುತ್ತದೊ, ಆ ವಿಷ್ಣುವೂ ಸೃಷ್ಟಿಕರ್ತ ಹಿರಣ್ಯಗರ್ಭ ಶಕ್ತಿಯೇ ಆಗುತ್ತಾನೆ. ಗಂಗಾ-ಧರ: ಅಂಬಯಃ (=ಅಂಬಾ) ಪತಿ, ಚಂದ್ರಶೇಖರನೆಂಬ ಪುರಾಣಗಳ ಸಂಕೇತಗಳ ರುದ್ರ-ಶಿವನೂ, ಹಿರಣ್ಯಗರ್ಭ= ಪ್ರಜಾತಿ ಶಕ್ತಿ ಎಂದೇ ಹೇಳಲಿಕ್ಕೆಬೇಕು. ಉತ್ತಾನಪದ : ವೃಕ್ಷ(ರೂಪ). ದಕ್ಷ ಈ ಸಾಂಕೇತಿಕತೆ ಉತ್ಥಿತಲಿಂಗದ ಸೂಚಕ. ಊರ್ಧ್ವಲಿಂಗದ (Ithyphallic) ಮುದ್ರೆಯಿರುವ ಹುವಿಷ್ಕನ ಪುರಾತನ ನಾಣ್ಯವೊಂದು ದೊರೆತಿದೆ.[೬] 'ಊರ್ಧ್ವರೇತಸ್...' ಎಂದು ರುದ್ರಶಿವನ ಸ್ತೋತ್ರಗಳಿವೆ. 'ಮಹಾಯೋಗಿ' ಎಂಬ ಪದವಿ ರುದ್ರನಿಗೇ, ಪ್ರಾಧಾನ್ಯದಿಂದ ಉಂಟು. ಕುಂಡಲಿನೀ ಸರ್ಪ ಎದ್ದು (: ಉರ್ಧರೇತ) ಸಹಸ್ರಾರದಲ್ಲಿ ಅದು ವಿರಮಿಸಬೇಕು; ಎಂಬ ಈ ಸಾಂಕೇತಿಕತೆಯನ್ನು ಇಲ್ಲಿ ಲೆಕ್ಕಿಸುವುದು ಅವಶ್ಯವಾಗಿದೆ. ಈ ಕಾರಣದಿಂದ ರುದ್ರನೂ ನಿಃಸಂಶಯವಾಗಿ 'ಹಿರಣ್ಯಗರ್ಭ ಪ್ರಜಾಪತಿ ಶಕ್ತಿ; ಅರ್ಥಾತ್ ಚಂದ್ರಶಕ್ತಿ ಆಗುತ್ತಾನೆ.

ಋಗ್‌ವೇದದಲ್ಲಿ (ಅಥವಾ ಭಾರತೀಯ ದಿವ್ಯಾಧ್ಯಾತ್ಮವಾದದಲ್ಲಿ) ತತ್ : ಏಕಂ ಸತ್ (: ಚಂದ್ರ) ಇದೇ ವಿಶ್ವದ ಆದಿತತ್ತ್ವ ಎಂಬುದು ಮೂಲಭೂತ ಭೂಮಿಕೆ. ಈ ಭೂಮಿಕೆಯ ದೈವತ ಪ್ರತಿಮೆ ಋಗ್ ವೇದದಲ್ಲಿ ಅಸುರ ವೃತ್ರನು (ಶುಷ್ಣ, ಕೃಷ್ಣಾದಿ ನಾಮಾಂತರಗಳ ತ್ವಷ್ಟಾರ ಸಹಿತ ಅವನ) ಮಾಯಾ ರೂಪಗಳು. ವರುಣ (: ಚಂದ್ರ) ಪುತ್ರನೆಂಬ 'ವಸಿಷ್ಠ'ನ ಸಂಪ್ರದಾಯವು ವಿಷ್ಣು ಸರ್ವೋತ್ತಮತ್ವದ ಧ್ವಜ ಎತ್ತಿ ನಿಲ್ಲಿಸಲು ಮಾಡಿದ ಹೊಂಚು ಋಗ್‌ವೇದದಲ್ಲೆ ಎದ್ದು ತೋರುವಂತಿದೆ. 'ಮರ್ತ್ಯಾಃ' ಎಂದು ವರ್ಣಿತರಾದ ಮರುತ=ರುದ್ರಿಯರು: ಪಿತನೆಂಬ ವೃಷಭ : ರುದ್ರನಿಂದ ಅದಿತಿ=ದೇವಮಾತೆಗೆ ಸಂಭವಿಸಿದ ಸಂತಾನ. ಈ ಸಂಹಿತೆಯಲ್ಲಿ 'ದೇವಮಾತೆ'ಯ ಮಕ್ಕಳನ್ನು 'ದಕ್ಷಪಿತರಃ' ಎಂದಿರುವಲ್ಲಿ, ಒಂದು ರೀತಿಯಿಂದ ಉತ್ತಾನಪದ : ವೃಕ್ಷ ರುದ್ರನೇ ಎಂದ ಅಭಿಪ್ರೇತವಿದೆ. ಆದರೆ, ಅದಿತಿ ವಿಷ್ಣುವಿನ ವೇಶ್ಯೆ, ಬಳಿಕ ವಿಷ್ಣು ಪತ್ನಿ ಎಂದು ಹೇಳಿರುವ ರೀತಿಯಲ್ಲಿ ಅದಿತಿ-ರುದ್ರರ ಮೊದಲಿನ ಸಂಬಂಧವನ್ನು ಯೋಜನಾಪೂರ್ವಕವಾಗಿ ತಪ್ಪಿಸಿರುವುದು ಬಯಲಿಗೆ ಬರುತ್ತದೆ! ರುದ್ರನ ತಲೆಯಿಂದ ಗಂಗೆ ಹೊರಟರೆ, ವಿಷ್ಣು ಪಾದದಿಂದ ಗಂಗೆ-ಭೂಲೋಕದಲ್ಲಿ ಸ್ರವಿಸುತ್ತಾಳೆ! 'ವೃಕ್ಷ'ವು ಸಹ ವಿಷ್ಣುಸಂಪ್ರದಾಯದಲ್ಲಿ 'ಊರ್ಧ್ವಮೂಲ'ವಾಗಿದೆ! ಶೈವಪರಂಪರೆಯ ಶ್ವೇತ ಅಶ್ವತರ ಉಪನಿಷತ್ತಿನ 'ವೃಕ್ಷೇವ ಸ್ತಬ್ಧಃ' ಮತ್ತು 'ಸಃ ವೃಕ್ಷ-ಕಾಲಾಕೃತಿ ಭಿಃ...' ಉಲ್ಲೇಖವನ್ನು ವಿಷ್ಣುಪರ ಕಠದ 'ಊರ್ಧ್ವಮೂಲ'ದೊಡನೆ ಹೋಲಿಸಿರಿ[೭] ಶೈವ ಉಪನಿಷತ್ಕಾರನು ರುದ್ರನನ್ನು 'ಹಿರಣ್ಯಗರ್ಭ' ರೂಪದಲ್ಲಿ ಕಂಡದ್ದೂ ಉಂಟು. ಹೀಗೆ ಋ. ವೇದದ 'ಕಸ್ಮೈದೇವ' ನಾಮದ ಪ್ರಜಾಪತಿತ್ವದ ಹಕ್ಕು ರುದ್ರ-ವಿಷ್ಣುಗಳಿಬ್ಬರಿಗೂ ಉಂಟು! ಶೈವ ಪ್ರತಿಮಾ : ಸಂಕೇತಗಳನ್ನೇ ಸ್ವೀಕರಿಸಿ. ಅವನ್ನು ತಿದ್ದಿ-ತೀಡಿ ನುಣ್ಣನೆಯ ಬಣ್ಣದ ಮಾತುಗಳಿಂದ ಲೋಕರಂಜಕ ವಾಗುವಂತೆ ಹೇಳುವ ಅಹಿಮಾಯಾ ಶಿಲ್ಪದ ಮೆರಗಿನ ವೈಶಿಷ್ಟ್ಯವು, ವಿಷ್ಣು-ಕೃಷ್ಣ ಪರಂಪರೆಯಲ್ಲಿ ಎದ್ದು ಕಾಣುತ್ತದೆ.

ಅಹಿಹಂತಕನೆಂಬ ವೃತ್ರ (ಅಹಿ) ಶತ್ರು ಇಂದ್ರನ ತೇಜೋವರ್ಧೆಗಾಗಿ, ರುದ್ರನಲ್ಲಿ ವಿಲೀನವಾದ 'ಅಹಿ-ಬುಧ್ನ್ಯ', ಅದಿತಿಯ-ಮರುತರು ಇಂಥ ಸಂಕೇತಗಳ ಲಾಭಪಡೆದುದಾಗಿದೆ. ಆದರೂ ವಸಿಷ್ಠಕೃತ, ರುದ್ರನಿಗೆ ಇರುವ 'ಶಿಪಿವಿಷ್ಟ' ಸಂಕೇತದಿಂದಲೇ ವಿಷ್ಣುವನ್ನು ಸಂಬೋಧಿಸಿ ಮಾಡಿರುವ ಸ್ತೋತ್ರವುಂಟು! ಹೇ (ಶಿಪಿವಿಷ್ಟ) ವಿಷ್ಣುವೆ, ನಿನ್ನ ಎತ್ತರಕ್ಕೆ ನಿಲ್ಲಬಲ್ಲ ದೇವರುಂಟೆ? ಎಂದು 'ತನ್ವಾ ವಾವೃಧಾನ' ಶಿಪಿವಿಷ್ಟ-ವಿಷ್ಣುವಿನ ಮಹಾತ್ಮ್ಯವನ್ನು ಹೊಗಳಿದ್ದಾಗಿದೆ. ವಿಷ್ಣುವು ತನ್ನ 'ಶಿಪಿವಿಷ್ಟ' ರೂಪವನ್ನು ಬಹಿರಂಗ ಪಡಿಸಿದ್ದಕ್ಕೆ ಆದ ವಸಿಷ್ಠನ ಚಡಪಡಿಕೆಯೂ ಈ ಸೂಕ್ತದಲ್ಲಿ ವ್ಯಕ್ತವಾಗಿದೆ.[೮] 'ಶಿಪಿವಿಷ್ಟ' ಈ ಸಂಕೇತವು 'ಕುತ್ಸಿತಾರ್ಥೀಯ' 'ಅಶ್ಲೀಲಪದ ಇರುವುದಾಗಿ, 'ಔಪಮನ್ಯವ' ಎಂಬ ಪ್ರಾಚೀನನು ಹೇಳುವುದನ್ನು ಭಾಷ್ಯವು ಬಚ್ಚಿ ಇಟ್ಟಿಲ್ಲ.*

---

* ಶಿಪಿವಿಷ್ಟ ಶಬ್ದ ಸಂಕೇತವು ಋಗ್ವೇದದ ೭-೯೯ ಮತ್ತು ೭-೧೦೦ ಈ ಎರಡು ಸೂಕ್ತಗಳಲ್ಲಿ ಬಳಕೆಗೊಂಡಿದೆ. ಏಳನೆಯ ಮಂಡಲದ ನೂರನೆಯ ಸೂಕ್ತದ ಆರನೆಯ ಋಚೆಗೆ ಸಾಯಣರು ಭಾಷ್ಯ ಬರೆಯುತ್ತ 'ಶಿಪಿವಿಷ್ಟ'ದ ಬಗೆಗಿನ ಪೂರ್ವವಿವರಗಳನ್ನು ನೀಡುತ್ತಾರೆ. ಯಾಸ್ಕರು ನಿರುಕ್ತದಲ್ಲಿ 'ಶೇಷ'ಎಂದರೆ ರಶ್ಮಿ ಆ ರಶ್ಮಿಗಳಿಂದ ಮುಚ್ಚಲಾಗಿರುವ,

ಈ ಸಂಹಿತಾ ಸಂಕಲನವು ವಿಷ್ಣುಸರ್ವೋತ್ತಮತ್ವ ಸೂಚಕವಾಗಿಯೆ ಇದೆ. ಇದನ್ನು ಡಾ. ಜೆ. ಗೊಂಡಾ ಪ್ರಭೃತಿಗಳು ಹೇಳಿದ್ದಾರೆ. 'ವಿಷ್ಣೋಃ ಪರಮಂ ಪದಂ' : ವಿಷ್ಣುಪಾದದ-ಮಹೋನ್ನತ, 'ದಿವೀವ ಚಕ್ಷುಃ ಆತತಂ' ಸ್ವರೂಪೀ ತೃತೀಯ ಪದದ ಹಿರಿಮೆಯ ಮಾತುಗಳು ಈ ಸಂಹಿತೆಯಲ್ಲಿವೆ. ಇವು ಈ ವೇದದಲ್ಲಿ ವಿಷ್ಣುವೆ ಮಹೋನ್ನತನು ಎಂಬುದರ ಸೂಚಕವಾಗಿವೆ. ಶೈವ ಪರಂಪರೆಗೂ ಮಾನ್ಯವಿರುವ 'ಪುರುಷ' ಸೂಕ್ತವು ಕೊನೆಗೆ 'ವಿಷ್ಣುಪರ' ಎಂಬ ಗ್ರಹಿಕೆ ಬಲಿಯುತ್ತದೆ. ಆದರೆ, ಈ ಸಂಹಿತೆಯಲ್ಲಿ ಇದನ್ನು 'ವಿಷ್ಣುಪರ' ಎಂದು ಬಾಯ್ಬಿಟ್ಟು ಹೇಳಿಲ್ಲ! ಆದರೆ, ಇದನ್ನು ರಚಿಸಿದವನು 'ನಾರಾಯಣ'ನು ಎಂಬ ಸೂಚಕ ಸಂಕೇತದ ಮೂಲಕ ಇದರ ಮೇಲಿನ ವಿಷ್ಣುಪರ- ಸಂಪ್ರದಾಯದ ಹಕ್ಕು ಸೂಚಿಸಲ್ಪಟ್ಟಿದೆ!

'ಏವಂ ಗುಣ ವಿಶಿಷ್ಟ' ಈ ಸಂಹಿತೆಯಲ್ಲಿ, ರುದ್ರನೇ ಜಗತ್ಪಿತನು, ಎಂಬ ಹಾಗಿನ ಸ್ತೋತ್ರ ಉಳಿದಿದೆಯೊ, ಅದನ್ನು ಉಳಿಯಗೊಡಲಾಗಿದೆಯೊ, ಸಂಶೋಧಕರೇ ನಿರ್ಧರಿಸಬೇಕು. 'ಇಮಾ ರುದ್ರಾಯ ತವಸೇ ಕಪರ್ದಿನೇ...' ಎಂಬ ಈ ವಿಖ್ಯಾತ ಸ್ತೋತ್ರದಲ್ಲಿ ರುದ್ರನನ್ನು "ಪಿತಾ (: ಉತ್ಪಾದಕಃ) ಮನುಃ (ಸ್ವಕಿಯಾಭ್ಯಃ ಪ್ರಜಾಭ್ಯಃ)" ಎಂಬ ವರ್ಣನೆಯಿದೆ[*] ಈ ಸ್ತೋತ್ರದಲ್ಲಿಯೆ 'ಇದಂ ಪಿತ್ರೇ ಮರುತಾಂ ಉಚ್ಯತೇ ವಚಃ... ರುದ್ರಾಯ' ಮರುತಾಂ ಜನಕಾಯ : ರುದ್ರಾಯ. ಇಲ್ಲಿ ರುದ್ರನು ಈ ಲೋಕದ ತಂದೆ ಎಂಬ ಮಾತು ಧ್ವನ್ಯರ್ಥದಿಂದಲೂ ಸೂಚಿತವಾಗಿದೆ. ಮರುತರನ್ನು 'ಮರ್ಯಾಃ' ಎಂದು ಹೇಳಿರುವ ಆ ಅಂದಿನ ಪುರಾತನರ ದೃಷ್ಟಿಯಲ್ಲಿ ಏನೆಲ್ಲ ಮರ್ತ್ಯರೂ ಮರುತರ ಬಳಗದವರೆಂದೇ ಅರ್ಥವಾಗುತ್ತದೆ. ವಾ-ನರರು=ಮರ್ಯಾಃ ಮರುತರೇ ಆಗಿದ್ದಾರೆ! ಆದರೆ, ರುದ್ರಪುತ್ರ ಮಾರುತಿಯ (ಮರುತರ=ಮರ್ಯರ) ಸ್ವಾಮಿ, ರಾಮನು ಎಂಬಲ್ಲಿ ವಿಷ್ಣು ಸರ್ವೋತ್ತಮತ್ವದ ಧ್ವಜವನ್ನು ವಾಲ್ಮೀಕಿ ಮುನಿನಾಥನು 'ಮುಗಿಲಂ ಮುಟ್ಟೆ' ಎತ್ತರಿಸುತ್ತಾನೆ! ಅಹಿ-ಹನ್ ಇಂದ್ರನನ್ನು ನೆಲಕ್ಕುರುಳಿಸುವಲ್ಲಿ ಹುತ್ತಪ್ಪ ವಾಲ್ಮೀಕಿ. ವಸಿಷ್ಠ-ವ್ಯಾಸರನ್ನೂ ಮೀರಿಸಿದ್ದಾನೆ.

ಅಹಿಹಂತಕ ಇಂದ್ರನ ತೇಜೋವಧೆಯಾಗುವ ವರೆಗೆ ರುದ್ರ-ರುದ್ರಿಯರ ನೆರವು ಪಡೆದ ವಿಷ್ಣು ಸಂಪ್ರದಾಯದಿಂದ. ಆ ಬಳಿಕ ನಾನಾ ಪ್ರಕಾರದ ಪ್ರಚ್ಛನ್ನ ರೀತಿಗಳಿಂದ ರುದ್ರನನ್ನು ಅಸುರನು ಎಂದು ನಿಂದಿಸಿ ಶೈವ ಸಂಪ್ರದಾಯ ಕೀಳ್ಬಗೆಯುವ ಪ್ರಯತ್ನಗಳಾಗಿವೆ. ವಿಷ್ಣುವು ಅವತಾರ ತಾಳಿ ಸೋಲಿಸಿದ್ದು, ಕೊಂದದ್ದು ಯಾರನ್ನು? ಹಿರಣ್ಯಕಶ್ಯಪು=ಶಿವಭಕ್ತ; ಕೌರವಪಕ್ಷ=ಶಿವಭಕ್ತವರ್ಗ: ರಾವಣನಂತೂ ವಿಖ್ಯಾತ ಶಿವೋಪಾಸಕ! ಅದಿತಿ, ರುದ್ರ-ವಿಷ್ಣು ಈ ಸ್ಪರ್ಧೆಯ ಹಿನ್ನೆಲೆಯನ್ನು ಗ್ರಹಿಸಿಕೊಳ್ಳಲು ಸುಮೇರಿಯನ್ ಮತ್ತು ಇಜಿಪ್ಟಿನ ದೈವತ ಕಥೆಗಳೊಡನೆ ಇದರ ತುಲನಾತ್ಮಕ ಸಮೀಕ್ಷೆ ಪ್ರಯೋಜನಕಾರಿಯಾದೀತೆಂದು ತೋರುತ್ತದೆ.

ವಾಲ್ಮೀಕಿಯ ರಾಮಾಯಣದ ಮೇರೆಗೆ, ಭಾರತೀಯ ಜೀವನವನ್ನಾಳುವ ಸ್ವಾಮಿ ರಾಮನೆ ಆಗಲಿ ಅಥವಾ ಶೈವ ರಾವಣನೇ ಆಗಲಿ ಇಬ್ಬರೂ ಭುಜಂಗರೇ ಆಗಿದ್ದಾರೆ. ಆದುದರಿಂದ, ಇದು ಋಗ್ವೇದಕಾಲೀನ ಅಹಿಹಂತಕನೆಂಬ ಇಂದ್ರನ ತೇಜೋವಧೆಯೊಡನೆ, ಬಹಿರಂಗವಾಗಿ ಲಿಂಗೋಪಾಸಕರ ಪರಂಪರೆಯ ರಾವಣನ ಪಾತ್ರದ ಮೂಲಕ ಶೈವ ಸಂಪ್ರದಾಯದ ಪ್ರಚ್ಛನ್ನ ಅವಹೇಳನೆಯೂ ಸರಿ. ಅಸುರ ರಾವಣಪುತ್ರನು-ಅಹಿಶೇಷನ ಅಳಿಯನೆಂಬವನು ಇಂದ್ರನನ್ನು ಸೋಲಿಸಿ, ಇಂದ್ರ-ಜಿತನೆಂಬ ಬಿರುದು ಧರಿಸಿದಂದು ಒಮ್ಮೆ ಇಂದ್ರನು ಜೀವನ್ಮೃತನಾಗುತ್ತಾನಲ್ಲದೆ, ಪತಿಯ ಶಾಪದಿಂದ ಕಲ್ಲಾದಳೆಂಬ ಅಹಲ್ಯೆ, ರಾಮ-ಪಾದ-ಸ್ಪರ್ಶದಿಂದ ಮರಳಿ ಸ್ತ್ರೀತ್ವ ಪಡೆದಳೆಂಬ ಪವಾಡ ಕಥೆ ಹುಟ್ಟಿಸಿ ಇಂದ್ರನನ್ನು ವ್ಯಭಿಚಾರಿ ಎಂದು ಸಾರಿದಾಗ ಈ ಅಹಿಹಂತಕ ಇಂದ್ರನು ಭಾರತೀಯ ಜೀವನದ ಆದರ್ಶ ಪ್ರತಿಮೆಯಾಗುವ ಅರ್ಹತೆಗೆ ಸಂಪೂರ್ಣ ಎರವಾಗುತ್ತಾನೆ! ಆದರೆ,

---

ಆವೃತವಾಗಿರುವ, ಎಂದು ಶಿಪಿವಿಷ್ಟ ಶಬ್ದಕ್ಕೆ ಇರುವ ಅರ್ಥ. ಇದು ವಿಷ್ಣುಸೂಕ್ತದ ಸಂದರ್ಭದಲ್ಲಿ ಬಂದಿದೆ. ಸಾಯಣರು "ಶೇಷ ಇವ ನಿರ್ವೇಷ್ಟಿತಸ್ತೇಜಸಾನಾಚ್ಛಾದಿತೋ ಭವಾಮೀತಿ ತದಶ್ಲೀಲಾರ್ಥತ್ವಾದಿದಂ ನಾಮ ನ ಪಶಸ್ತಂ ಇತ್ಯರ್ಥಃ. ತನ್ನಾಮ ಕಿಂ ಪರಿಚಕ್ಷ್ಯ ವರ್ಜನೀಯಂ ಪರಿತ್ಯಾಜ್ಯ. ವಿರುದ್ಧಾರ್ಥ ಪ್ರತಿಪಾದಕತ್ವಾತ್ಸ್ವತ ಏವ ಪರಿತ್ಯಕ್ತಂ ಹಿ ತತ್" ಎಂದು ಹೇಳಿದ್ದಾರೆ (ಸಂ)

'ಅಹಿ'ಹಂತಕ ಇಂದ್ರನನ್ನು ಶೇಕಡ ನೂರಕ್ಕೆ ನೂರು ಹೋಲುವ ಎಂಕಿ/ಮರ್ದುಕ ಪ್ರತಿಮೆಗಳು ಸುಮೇರಿನ ಜೀವನದ ಆದರ್ಶ ಪೂಜ್ಯ ಪ್ರತಿಮೆಗಳು ಆಗುತ್ತವೆ! ತೈಮತ್ ದೇವಿ ಆದಿಶಕ್ತಿ-ಪೀಠದಿಂದ ತಳ್ಳಲ್ಪಡುತ್ತಾಳೆ. ಭಾರತೀಯ ತ್ವಷ್ಟಾರ ವೃತ್ರನ ಹೋಲಿಕೆಯ ತೈಮತಳ ನಲ್ಲ ಅಷ್ಟು, ನಲ್ಲೆಗಿಂತ ಮೊದಲೆ ಗತಪ್ರಾಣನಾಗುತ್ತಾನೆ. ತೈಮತ್‌ಳ ತರುವಾಯ ಪಿತೃಪ್ರಧಾನ ಕುಟುಂಬಪದ್ಧತಿಯು ರೂಢಿಗೆ ಬರುತ್ತದೆ. ಸುಮೇರಿಯನ್-ಅಸ್ಸೀರಿಯಾ ಭಾಗದ ಆದಿಪಿತನೇ ಎಂಕಿ/ಮರ್ದುಕ.

ಸೌರ (ಮಾಧ್ಯಮದ) ಅರುಣೋದಯದ ಕ್ರಾಂತಿ

ಅನುಭೂತಿ ಮೊದಲು; ಆ ಬಳಿಕ, ಬಂದ ಅನುಭೂತಿಯನ್ನು ಅರ್ಥಯಿಸಿಕೊಳ್ಳದೆ ಜೀವಕ್ಕೆ. ಸಮಾಧಾನವಿಲ್ಲ, ಜೀವಕ್ಕೆ. ಅನುಭವದ ಅರ್ಥದ ಮೂಲಕ ಜೀವನದಲ್ಲಿ, ಸಂ-ಆದಾನ ದೊರೆವಂತೆ ಎನಿಸುತ್ತದೆ. ನಿಶ್ಚಿತ ಅರ್ಥದ ವಿಶ್ವಾಸದ ಆಧಾರ ದೊರೆತಾಗ ಅದು ಸಮಾಧಾನ ಲಭಿಸಿದಂತೆ. ಇಂಥ ಸಂ-ಆಧಾನ ಸ್ಥಾನ ಎಂದರೆ,-ಒಂದರ್ಥದಿಂದ-ಇದು ಅಂತರಂಗದ ಬೆಳಕು. ಅನುಭವದ ಅರ್ಥ ರೂಪ ಆಳತೆಯಿಂದ ನಿರ್ಮಿತ ರೂಪ ಆಕೃತಿ ಪ್ರತಿ-ಮಾ; ಆದರೆ ಇದು ಸ್ಕೇಲ ಡ್ರಾಯಿಂಗ ಅಲ್ಲ; ಮೊಡೆಲ್ ಇರುವುದಾದರೂ ಪ್ರತಿಮಾ-ಸೃಷ್ಟಿಯ ಈ ಕ್ರಮ, ರೀತಿಯೆ ಬೇರೆ!

ಅತಿಪುರಾತನ ಭಾಷಿಕ ಸಂಸ್ಕೃತಿಗಳ ಅವಶಿಷ್ಟ ಆದಿದೈವತ ಕಥೆಗಳಲ್ಲಿ ಚಂದ್ರಬಿಂಬವೇ ಅಂದಿನ ಜೀವದೊಳಗಿನ ಅನುಭಾವದ ಮಾನದಂಡವಾಗಿದೆ! 'ನಿಯಮಕ್ಕೆ ಅಪವಾದ ಇರಲೇಬೇಕು' ಈ ಲೋಕದಲ್ಲಿ, ಎಂಬ ಇನ್ನೊಂದು ನಿಯಮಕ್ಕೆ ಕಟ್ಟುಬಿದ್ದು ಮಾನದಂಡ 'ಪ್ರಾಧಾನ್ಯದಿಂದ' ಎನ್ನಬೇಕು ಅಷ್ಟೇ. ಮನೋಭಾವದ: ಭಾವನಿಕ ಅನುಭೂತಿಯ ಮಾನದಂಡ ಚಂದ್ರನೇ ಆಗಬಲ್ಲನು; ಸೂರ್ಯನಲ್ಲ. 'ಚಂದ್ರಮಾ ಮನಸೋ ಜಾತಃ' ಎಂಬ ಋಗ್ ವೇದ ವಾಕ್ಯದಲ್ಲಿ ಅಂದಿನವರ ಅನುಭೂತಿಯ ಆಧಾರ ಸ್ಥಾನವು ಯಾವುದಿತ್ತು, ಎಂಬುದರ ಚಿತ್ರವೆ ಇಲ್ಲಿ ಪ್ರತಿಬಿಂಬಿತವಾಗಿದೆ. ಉತ್ಖನನದಲ್ಲಿ ದೊರೆವ ಭೌತ ಆವಿಷ್ಕಾರಗಳ ಪ್ರಕಾರಗಳಿಂದ ಮಾತ್ರ ಸಂಸ್ಕೃತಿಯನ್ನು ಅರ್ಥಯಿಸಿಕೊಳ್ಳುವಲ್ಲಿ, ಈ ಆವಿಷ್ಕಾರಗಳ ಪ್ರೇರಕಶಕ್ತಿಯನ್ನೇ ಕಡೆಗಣಿಸಿದ ಅಪರಾಧ ಸಂಭವಿಸುತ್ತಿದೆ. ಅವಶೇಷಗಳನ್ನು ಭೌತ ಪರಿಸರದಿಂದ, ಭೌಗೋಲಿಕ ಸ್ಥಾನದಿಂದಲೇ ಅರ್ಥಯಿಸುವಲ್ಲಿಯೂ ಈ ಬಗೆಯ ದೋಷಕ್ಕೆ ಎಡೆ ದೊರೆಯುತ್ತದೆ. ಸುಮೇರ ಭಾಗದಲ್ಲಿ ದರ್ಭೆ (Reed), ಗಲಗಿನ ಹುಲ್ಲು (-ವೇತಸ-ವೇಣು= ವಂಶ-ಬಿದಿರು ಜಾತಿ) ತುಂಬ ಬೆಳೆಯುತ್ತದೆ, ಅಲ್ಲಿಯ ನದಿಗಳ ರೇವೆಯಲ್ಲಿ (in mesopotamian marshes). ಅಂದು, ಅಲ್ಲಿಯ ಪುರಾತನರಲ್ಲಿ ಈ ವನಸ್ಪತಿಯ ಬಗೆಗೆ ತುಂಬ ಭಯಭರಿತ ದಿವ್ಯಭಾವ ನೆಲಸಿತ್ತು.

> "A reed was capable of amazing things, such as the music, which would come out of a shepherd's pipe, or meaningful signs which would take form under the scribes reed stylus and make a story or a poem. These powers, which are to be found in every reed and were always the same, combined for the Mesopotamian into a divine personality-that of the goddess Nidaba"[೧೦]

ಈಜಿಪ್ಟ್ ಹಾಗೂ ಮೆಸೊಪೊಟಮಿಯಾದ ಪುರಾತನ ಸಂಸ್ಕೃತಿಯ ವಿಖ್ಯಾತ ತಜ್ಞ ಡಾ. ಫ್ರಾಂಕಫೋರ್ಟ್ ದಂಪತಿಗಳು ಮತ್ತು ಅವರ ಇಬ್ಬರು ಸಹಕಾರಿಗಳು ಬರೆದ ಗ್ರಂಥದ ಅವತರಣಿಕೆ ಇದು. ಗಲಗು (Reed) ಈ ಸ್ವರೂಪದ ಸಾಂಕೇತಿಕ ಪ್ರತಿಮೆ, ಹಾಗೂ ಜವುಳು (marshy) ಭೂಭಾಗ ಇರಾಕಿನ ಪುರಾತನ ಸಂಸ್ಕೃತಿಗೇ ಸೀಮಿತವಿಲ್ಲ! ಗ್ರೀಕಿನ ಪ್ಯಾನ್ (ಕಂ-ದರ್ಪ) ದೇವನು ಮಾಡಿಕೊಂಡ ವಾದ್ಯ : ವೇಣು (Reed) ! ಮೋಹನಾಂಗ

(ವ್ರಪ್ಸಃ) ಕೃಷ್ಣನ ಮುರಲಿ=ವೇಣು! ಇದು 'ನಾಗ' ಸ್ವರವೂ ನಿಜ! Organ (ವಾದ್ಯ) ಎಂಬ ಸಂಕೇತವು ಈ 'Reed' ಪ್ರತಿಮೆಯ ಯಥಾರ್ಥ ಸ್ವರೂಪವನ್ನು ಸೂಚಿಸುತ್ತಿದೆ, ಇಂದಿಗೂ! ಜಪಾನಿನ ಆದಿ ಪುರುಷನು "Reed" ಆಕೃತಿ-ಸ್ವರೂಪನೇ ಆಗಿದ್ದಾನೆ.

> 'In the beginning was the chaos, like an ocean of oil or like an egg, ill-defined but containing germs. From this confusion sprang a "thing" likened to a reed shoot, but conceived of as a divinity and given a name".[೧೧]

ಈಜಿಪ್ಟ್‌ನ ಪುರಾತನ ಅವಶೇಷಗಳಲ್ಲಿ ಕ(ಂ) ಪುರುಷನ ಸ್ಮಾರಕ ಚಿತ್ರ 'Reed' ಆಗಿದೆ! ಸಂಸ್ಕೃತಿಯ ಪ್ರೇರಣಾ ಕೇಂದ್ರ ಕೇವಲ ಬಾಹ್ಯಪರಿಸರದಲ್ಲೇ ಇಲ್ಲ! 'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ' ಎಂಬ ಉಕ್ತಿ, ಚಂದ್ರಶಕ್ತಿಯೇ ಜೀವನ ಪ್ರೇರಣೆಯ ಕೇಂದ್ರ ಎಂಬ ಶ್ರದ್ಧೆಯ ಸೂಚಕವಾಗಿದೆ. ಮೊದಲ ಹಂತದ ಭಾಷಿಕ ಪ್ರತಿಮೆಗಳು ಆಕಾರ ಪಡೆಯುವಲ್ಲಿ ಚಾಂದ್ರಶಕ್ತಿಯ ಕೈವಾಡವಿದ್ದಿತೆಂಬ ನಂಬುಗೆಯು ಪಾಶ್ಚಾತ್ಯ ಭಾಷೆಗಳಲ್ಲಿ ಸಹ ಎದ್ದು ಕಾಣುತ್ತದೆ. ಹುಚ್ಚರ ಆಸ್ಪತ್ರೆಗಳಿಗೆ ಇದ್ದ ಮೊದಲಿನ ಹೆಸರನ್ನು ಬಿಟ್ಟು 'Mental Hospital' ಎಂಬ ಸಂಕೇತವನ್ನು ರೂಢಿಸಲಾಗಿದೆ. ಶಾಸ್ತ್ರೀಯ ದೃಷ್ಟಿಕೋನದ ಛಾಂದಸಿಗರಿಗೆ Lunatic asylum ಪ್ರತಿಮೆ ಹಿಡಿಸಲಿಲ್ಲ! ಚಂದ್ರನಿಗೂ ಮನೋವಿಕಾರಕ್ಕೂ ಏನು ಸಂಬಂಧ? ಹುಚ್ಚರು ರೂಢಿಸಿದ ಹೆಸರು, ಎಂದು ಮೊದಲಿನ ಹೆಸರನ್ನು ತೊಡೆದುಬಿಡಲಾಯಿತು. ಆದರೆ, ಭಾಷೆಯಲ್ಲಿ lunacy ಇರುವ ವರೆಗೆ, 'moon struck' ಚಂದ್ರಾ-ಪೀಡಿತರು-ಚಂದ್ರಾ-ಪೀಡರು ಇದ್ದೇ-ಇರುತ್ತಾರೆ ಎಂದು ಕೋಶಗಳು ಸಾರುತ್ತಲೆ ಇವೆ!

ಆದರೆ 'ಬಾಣ' ಈ ನಾಮ-ಸಂಕೇತಧಾರೀ ಭಾರತೀಯ ಕವಿ-ಪುಂ-ಗವನು ಚಾಂದ್ರ ಸಂಪ್ರದಾಯ ರಹಸ್ಯತಜ್ಞನಿರಲೇಬೇಕು. ಆ-ಶಯ ಹುದುಗಿಸಿಡುವ ಕಾಲಿದಾಸನ 'ಕೌಶಲಂ' (: ಯೋಗಃ ಕರ್ಮಸು) ಬಾಣನಲ್ಲಿ ಕಡಿಮೆ ಎನ್ನಿ. ಆ ಕೊರತೆಯನ್ನು, ಈತನು ವೇದದೊಳಗಿನ ಶ್ಲೇಷೆ, ವಾ ನ ವಾ ಈ ಶೈಲಿಯ ಬಾಹ್ಯ ಆಕೃತಿಯ ಅನುಸರಣದಿಂದ ಕಡಿಮೆ ಮಾಡಿಕೊಂಡಿದ್ದಾನೆ. ಕಾಲಿದಾಸನು, ಋಗ್ವೇದ ರಹಸ್ಯವನ್ನು=ಗೀತೆಯ ವಿಶ್ವರೂಪ ದರ್ಶನವನ್ನು ಈ ಕವ್ಯ>ಕಾವ್ಯಗಳಿಗೂ ಮಿಗಿಲೆನಿಸುವಂತೆ ಅದೆಷ್ಟು ನಿತಾಂತ ರಮಣೀಯ ಸುಲಭ ಶೈಲಿಯಲ್ಲಿ ಮಾಡಿಸಿದ್ದಾನೆ. ದುಷ್ಯಂತ (: ಅಶ್ವ-[ತ್ಥ]-ಶಮೀಂ ಅಗ್ನಿಗರ್ಭಾಂ=ಆರೂಢಃ), ಮತ್ತು ಶಕುಂತಲಾ (ಶಮೀ) ಈ ಎರಡು ಅ-ಬೋಧ್ಯಗ್ನಿ ವೃಕ್ಷಗಳು! (ಅರಣಿಮಂಥನದ) ಸಹಯಜ್ಞದ ಫಲವಾಗಿ ದೊರೆತ ಯಜ್ಞಫಲ, ಗರ್ಭಸ್ಥ 'ಭರತ'ರೂಪೀ ನ-ಚಿಕೇತಾಗ್ನಿಯ ದರ್ಶನ ಮಾಡಿಸುವುದರೊಡನೆ, ಇಡಿ ಸಂಸಾರ ಸಾರವನ್ನೇ ಇಲ್ಲಿ ಮನೋಜ್ಞ ರೀತಿಯಲ್ಲಿ ಹೃದ್ಯವಾಗಿ ಚಿತ್ರಿಸಿದ್ದಾನೆ. ಪಂಡಿತರಿಗೆ-ಪಾಮರರಿಗೆ ಇಬ್ಬರಿಗೂ ಹಿಡಿಸುವಂತೆ! ರಸಿಕರಿಗೆ,-ವೇದಾಭ್ಯಾಸ ಜಡ, ಕೇವಲ ಸಾರಗ್ರಾಹಿಗಳಿಗೆ ಉಭಯ ವರ್ಗಕ್ಕೂ ಈ ಶಾಂಕುತಲವೇ ಒಂದು 'ಬೋಧಿ' ವೃಕ್ಷ. ಅವರವರ ಯೋಗ್ಯತೆಯಂತೆ! ಯುರೋಪಿನಲ್ಲೂ ಉಂಟು ಮತ್ತೆ, ಈ 'ಬೋಧಿ' ಮರ=ಅ-ಬೋಧಿ ಅಗ್ನಿವೃಕ್ಷ! ಬಾಹ್ಯ ಆವರಣ: 'ಡ್ರೆಸ್' ಮಾತ್ರ ಬೇರೆ. -Yggdrasil: The tree whose roots and branches bind together, Heaven and Earth (Hell, ನರಕ ವಿಚಾರ ಋಗ್ವೇದದಲ್ಲಿ ಹೇಳುವ ಧೈರ್ಯಪಡಲಿಲ್ಲ. ಈ ಸಂಕಲನಕಾರನು). ನರ-ಕ (ನಾರ-ಕ) ವಿಚಾರ ಋಗ್ವೇದದ ಚೌಕಟ್ಟಿನ ಹೊರಗೆ ಉಂಟು! 'ಬೋಧಿ' ವೃಕ್ಷದ ನೆಪದಿಂದ, ('ಅಶ್ವತ್ಥೋಽಯಂ ಸನಾತನಃ) ಉರ್ಧ್ವಮೂಲ ವೃಕ್ಷದ ದರ್ಶನ ಮಾಡಿಸುತ್ತಾನೆ. ಬಳಿಕ 'ತುಚ್ಛೇನ ಜಲೇನ ಅಪಿಹಿತಂ' ಆ-ಭು (Becoming ದ ಮಾರ್ಗದೊಳಗಿನ Being : ಸರೀ-ಸರೀಸೃಪ : ಯುಗ ಪ್ರತಿಪದ : ಬಾಲ-ಚಂದ್ರನ) ಶಕ್ತಿಯ ಸಾಕ್ಷಾತ್ಕಾರವಾಗಿಸುತ್ತಾನೆ. ಆ ಹಂತದಲ್ಲಿ ಈ ಬಾಲವಾಮನನು ಧಾರಣಮಾಡಿದ ಮಾತೆ ಶಕುಂತಲೆ, ವಾಮದೇವನ ಕಾಟದಿಂದ ಇನ್ನು ತಾನು ಬದುಕಿ ಉಳಿಯುವುದೆಂತು, ಎಂಬ ಚಿಂತಾಕ್ರಾಂತಳಾದಾಗ ಅವಳಿಗೆ ಸಂಸಾರ ಅಸಾರ ಎಂಬ ಅನುಭೂತಿ ದೊರೆಯುತ್ತದೆ. ಆ-ಶ್ರಮಿಯಾಗಿ, ಬಳಿಕ ಸಿಂಹಾಸನಕ್ಕೆ ಅರ್ಹ ಭರತನಿಗೆ ಜನ್ಮವೀಯುತ್ತಾಳೆ.

ಬಾಣನ, ಸೃಷ್ಟಿಯ ಅಚ್ಛೋದ (ಅಚ್ಛ-ಉದ), ವಜ್ರಾಯುಧ (: ಅಶ್ವ) ಮತ್ತು ಚಂದ್ರಾ-ಪೀಡ ಈ ಮೂರು ಪ್ರತಿಮೆಗಳು ಸಾಕು. ಆತನು ವೇದ-ರಸೋದ್ಗಾಹಿ ರಸಿಕನಿದ್ದನೆಂಬುದನ್ನು ಮನಗಾಣಿಸಿ ಕೊಡಲು. 'ಅಚ್ಛ' ಬರಿ ಸ್ವಚ್ಛವಲ್ಲ. ಇಲ್ಲಿಯ ಶ್ಲೇಷ (ಶೇಷ) ಕಾಣಲು ಕೋಶಗಳಲ್ಲಿಯ ವೇದಕಾಲೀನ 'ಸಮಯ'ದಲ್ಲಿ ಪ್ರವೇಶ ಮಾಡಿಸುವ ಪ್ರಯೋಗಗಳ ನೆರವು ಪಡೆಯಬೇಕು. ಉದ(ಕ) ಸಂಕೇತವೂ ವೇದಕಾಲೀನ ಪ್ರತಿಮೆ ! ಇದು ವರುಣ ಜಲ : 'ತತ್' ಜಲ ಇದು. ಇದು ಸರ(ಸ) ಅಪ್-ಸರದ ಪ್ರತಿಮೆ! ಋಗ್ ವೇದದ ಯಜ್ಞ-ಕ್ರಿಯಾಶ್ವ ಹುಟ್ಟಿದ ಯೋನಿ: ಅಪ್ಸು ಪ್ರತೀಕ; ಅಚ್ಛೋದ ಈ 'ಸರ' (O)! ಮಹಾ-ಶ್ವೇತೆ-ಪುಂಡರೀಕ ಇಹದಲ್ಲಿಲ್ಲಿಯೇ 'ತತ್'-ಮಯ ಸಿದ್ಧಿಯ-ದಿಕ್ಕಾಲಾತೀತ ಆನಂದಲೋಕದ ಅಸ್ತಿತ್ವದ ಅನುಭೂತಿದೊರೆತದ್ದು ಈ 'ಸರ'ದ ಅನು-ಸ್ಥಾನದಲ್ಲೇ ದುಷ್ಟ ಸಾಮಾಜಿಕ ಬಂಧನಗಳಿಂದ ಅವರಿಗೆ 'ಅನಾಥತೆ' ಅನುಭವಿಸಬೇಕಾಗುತ್ತದೆ. ಚಂದ್ರಾ-ಪೀಡನ ವಾಹನ (ಅಪ್ಸುಯೋನಿಃ) ಇಂದ್ರಾಯುಧ(=ವಜ್ರ=ಅಶ್ವ), ಈ 'ಅಶ್ವಕ್ಕೆ' ಇಷ್ಟ ಸ್ಥ-ಳ ಎಲ್ಲಿ, ಎಂಬುದರ ಸಹ-ಜ ಜ್ಞಾನ ಇದ್ದೇ ಇರುತ್ತದೆ. ಈ ಅಶ್ವವು ಕಾದಂಬರಿಯ ಗೃಹವನ್ನು ತಲುಪುತ್ತಲೇ; ಅದು ಅಶ್ವ-ತ್ಥ ವೃಕ್ಷವಾಗುತ್ತದೆ, ಎಂಬ ವೇದರಹಸ್ಯವು 'ಬಾಣನಿಗೆ' ಅಲ್ಲದೆ ಬೇರಾರಿಗೆ ತಿಳಿದೀತು?

ಮಾಧ್ಯಮ : ಪ್ರತಿಮೆಯನ್ನು ಕುರಿತ ಸಮೀಕ್ಷೆಯಲ್ಲಿ ಇವೆಲ್ಲ ಮಾತುಗಳ ಸಂಬಂಧವು ಏನು? ಎಂದು ಆಕ್ಷೇಪಿಸಬಹುದು. ಆದರೆ. 'ಮಾಧ್ಯಮ'ದ ಸ್ಪಷ್ಟೀಕರಣಕ್ಕಾಗಿಯೆ ಈ ಎಲ್ಲ ವಿವರಣೆ! 'ಜವುಳು'-ಭೂಮಿಯಲ್ಲಿ ಬೆಳವ ಗಲಗು (=ವೇಣು=ಬಿದಿರು) ಕೊಳಲು=ನಾಳಿ, ನಳ ಆಗುತ್ತಿತ್ತು ಕುರುಬ ದನಗರರಿಗೆ, ಎಂದು ಸುಮೇರಿನ ಪುರಾತನ ಉಲ್ಲೇಖಗಳನ್ನು ಅರ್ಥಾಯಿಸುವವರು ಹೇಳಿದ್ದಾರೆ. (ನಳ, ನಲ್ಲ ಹೋಲಿಸಿ ಟಿ. ಬರೊ). ಆದರೆ ಅವರು ಆ ಗಲಗಿನ ದಿವ್ಯತ್ವ=ಗಲಗೇ ಆ ದಿವ್ಯ, ಎಂಬುದನ್ನು ಹೇಳಲಿಲ್ಲ! ಜವುಳು=ನೀರು ಊರುವ ಎಡೆ,-ಅಲ್ಲೆ 'ವಂಶ' (: ಬಿದಿರು) ಅಂಕುರಿಸುವುದು. ಇದೇ ಈ ವಿಶ್ವಸ್ಥ 'ಅರ್ಥ'ದ ಜ್ಞಾನವಾಗುವ ಮಾಧ್ಯಮ, ಎಂಬುದನ್ನು ಗ್ರಹಿಸಿಕೊಳ್ಳದ್ದರಿಂದ ಅವರ ಅರ್ಥದಲ್ಲಿ ಸ್ವಲ್ಪ ಕೊರತೆ ಉಳಿಯುತ್ತಿದೆ. ಇದನ್ನು ಸ್ಪಷ್ಟೀಕರಿಸಲು ಸಮಸಾಮಯಿಕ ಬೇರೆ ಬೇರೆ ಸಾಂಕೇತಿಕ ಪ್ರತಿಮೆಗಳ, ಅಂತರ್-ಬಾಹ್ಯ ಆಕೃತಿಗಳ ತೌಲನಿಕ ಸಮೀಕ್ಷೆ ಅವಶ್ಯವಾಯಿತು.

ಈಜಿಪ್ಟ್ ಹಾಗೂ ಸುಮೇರಿಯನ್ ಭಾಗದ ಪುರಾತನ ಅವಶೇಷಗಳೆಲ್ಲವೂ ಆ ಸಂಸ್ಕೃತಿಯು ಆವಿಷ್ಕಾರ ಪಡೆದ ಮಾಧ್ಯಮ : ಪ್ರತಿಮೆಗಳೇ. ಆದರೆ ಇವೆಲ್ಲವುಗಳ ಆಶಯ=ಅರ್ಥದ ಆಕೃತಿಯು ಯಾವುದು? ಅರ್ಥ : ಆಕೃತಿಯ ದೃಷ್ಟಿಯಿಂದ ಈ ಸಂಸ್ಕೃತಿಗಳ ವಿಚಾರ-ವಿಮರ್ಶೆಯು ಆಗಿಯೆ ಇಲ್ಲ! ಅರ್ಥ: ವಿಚಾರಕ್ಕೆ, ಅದರದೇ ಆದ ಒಂದು ವಿಶಿಷ್ಟ ಆ-ಕೃತಿಯಿರುತ್ತದೆ ಮತ್ತು ಆಶಯ : ವಿಚಾರದ ಈ ಆಕೃತಿ, ತಾನು ಆಶ್ರಯ ಪಡೆದ ಸಾಂಕೇತಿಕ ಮಾಧ್ಯಮದ (ನೆಪದಿಂದ:) ಮೂಲಕ ಅರಿಕೆಗೆ ಬರುತ್ತದೆ. ಹಾಗಾದರೆ ಮಾಧ್ಯಮ; ಪ್ರತಿಮೆಯ ಆಕೃತಿಯು ಇಂಥದೇ ಎಂದು ನಿಷ್ಕರ್ಷಿಸಿಕೊಳ್ಳುವುದು ಹೇಗೆ? ಜೀವನದ=ಸಂಸ್ಕೃತಿಯ ರಹಸ್ಯದ ಅನ್ವೇಷಣೆಯ ಮೌಲಿಕ ಪ್ರಶ್ನೆಯೆ ಇದು.

ಸಾಂಸ್ಕೃತಿಕ ಆಶಯ : ವಿಚಾರವು ಪಡೆದ ಆಕೃತಿಯನ್ನು (ಭಾಷಿಕ) ಸಾಂಕೇತಿಕ ಪ್ರತಿಮೆಗಳ ಅರ್ಥ-ಗರ್ಭದ (Concept) ತುಲನಾತ್ಮಕ ಸಮೀಕ್ಷೆಯಿಂದ ನಿರ್ಧರಿಸಿಕೊಳ್ಳಲು ಶಕ್ಯವಿದೆ. ಸುದೈವದಿಂದ ಈಜಿಪ್ಟ್ ಸುಮೇರಿಯನ್ (ಕ್ರೀಟ್) ಗ್ರೀಸ್-ಯುರೋಕ್ (ಯಗ್‌ಡ್ರಸಿಲ್ ಸಂಕೇತ ನಾರ್ವೇ ಭಾಗದ್ದು) ಮತ್ತು ಭಾರತ ಇವುಗಳ ಈ ಸಮಯದ ಪ್ರಧಾನ ಸಂಕೇತಗಳ ಆಕೃತಿಗಳಲ್ಲಿ ಸಾಮ್ಯವಿದ್ದುದು ಬೆಳಕಿಗೆ ಬಂದಿದೆ. 'ವೃಕ್ಷ'ಪೂಜೆ ಇವೆಲ್ಲ ಜನಗಳಲ್ಲೂ ಇತ್ತು. ಈಗಲೂ ಇಜಿಪ್ತ ಮೊದಲಾದ ಹಲವೆಡೆಗಳಲ್ಲಿ ಇದರ ಅವಶೇಷ ಉಳಿದಿರುವುದಾಗಿ ಹೇಳಲಾಗುತ್ತದೆ). ಇಜಿಪ್ತಿನ ಓಸಿರಿಸ್ ವೃಕ್ಷವಾಗುತ್ತಾನೆ. ಯೆಹೂದಿ ಧರ್ಮಗ್ರಂಥದಲ್ಲಿ ತಮಾರ ವೃಕ್ಷಪೂಜೆಯ ಉಲ್ಲೇಖವಿದೆ. 'ತಮಾರ' (ತಮಾಲ?) ಇದು "a palm tree; and palm was sacred to the love and birth goddess Isis"[೧೨] ಭಗ-ವಾನ್ ಕೃಷ್ಣನ ಅಣ್ಣನು 'ತಾಲಾಂಕನು': ಇಷ್ಟೇ ಸಾಲದೆ 'ಮುಸಲ' (ಬಡಿಗೆ),

ನೇಗಿಲಧಾರಿ ಎಂದೂ ಆತನ ಪರ್ಯಾಯ ನಾಮಗಳು! ಸುಂದರ 'palm tree motif' ಇರುವ ಪುರಾತನ ನಾಣ್ಯ ಭಾರತದಲ್ಲಿ ದೊರೆತಿದೆ. 'palm' ವೃಕ್ಷಪೂಜಾ ಸಂಪ್ರದಾಯ ಅಳಿದಿದ್ದರೂ ತೆಂಗು ನಾರ-ಳ=ನಾರಿಯಳ ಪ್ರತಿಮೆ ದೇವರ ಸ್ಥಾನದಲ್ಲಿದೆ, ದೇವರ 'ತೀರ್ಥ'ದ ಗಿಂಡಿ ಆಕಾರ ಹೀಗೆಯೆ ಏಕೆ? ಪವಿತ್ರ ತೀರ್ಥ-ಪ್ರಸಾದ ಭಜಕ-ಭಕ್ತಿವಾಂಸಃ (ಭಜ - ಭಕ್ಷ) ಇದ್ದಾರೆ. ಎಂದರೆ 'ವೃಕ್ಷ' ಈ ಮಾಧ್ಯಮದ ಅರ್ಥ ಏನು ಎಂಬ ಪ್ರಶ್ನೆಯ ಉತ್ತರ ಏನಾಯ್ತು?

ವೃಹ್>ಬೃಹ್ ಬೆಳೆದು ಎದ್ದು ನಿಲ್ಲುವ ವೃಕ್ಷವೇ ಬ್ರಹ್ಮರೂಪ! ಯುರೋಪಿನಲ್ಲೂ Tree ಪೂಜೆಯಿತ್ತು; ವೃಕ್ಷದ ವ್ಯಾಖ್ಯೆಯೆ ಇದಕ್ಕೆ ಸಾಕ್ಷಿ: Perennial plant with single woody self-supporting stem or trunk=ದಕ್ಷ : ಉತ್ತಾನ ಪದ ತತ್-ಸ್ವರೂಪದ ಪ್ರತಿರೂಪವೇ ಈ ವೃಕ್ಷ; ಈ ವೃಕ್ಷವೇ ತಾನು ಎಂಬ ಬೋಧೆ=ಅರಿವು ಮಾಡಿದ ಕ್ಷಣದಲ್ಲೆ ಆ ಸಾಧಕನು 'ಈ ಅ-ಬೋಧ್ಯಗ್ನಿ' ವೃಕ್ಷ. (ಅಶ್ವ-ತ್ಥ=) 'ಬೋಧಿ' ತಾನೇ ಪ್ರ-ಬುದ್ಧನಾಗಿ ಪರಿಣಮಿಸುತ್ತಾನೆ! ವೃಕ್ಷವೇ ತಾನು ಹಾಗೂ (ಇದರ) ಅರ್ಥ ಒಂದರಲ್ಲೆ, ಇವು ಮೂರೂ, ಅವಿಗಲಿತ ತತ್: ಏಕಂ ಸತ್ ಸ್ವರೂಪ ಇದೇ ತಾನೆ? ತತ್-ಸ್ವರೂಪ-ಜ್ಞಾನದ ವೃಕ್ಷವೇ ಈ ಬೋಧಿ; ತತ್-ರೂಪ ಆಕೃತಿಯ=ಸಾಂಕೇತಿಕ ಅರ್ಥ ಗ್ರಹಿಸಿಕೊಳ್ಳಲು ಇದು ಒಂದು 'ನೆಪ' ಮಾತ್ರ. ಭೋಕ್ತಾ, ಭೋಗ್ಯ ಮತ್ತು ಪ್ರೇರಿತಾರ ಎಂಬ ತ್ರಿವಿಧದ (ಶ್ವೇತ ಅಶ್ವತರ ಉಪನಿಷತ್ತಿನ) ಪರಿಭಾಷೆಯು, ಜ್ಞಾತಾ, ಜ್ಞಾನ ಮತ್ತು ಜ್ಞೇಯ ಈ ಪರಿಭಾಷೆಗಿಂತ ಗ್ರಹಿಸಿಕೊಳ್ಳಲು ಸುಲಭವಿದೆ. ಇದನ್ನು ಕ್ಷೇತ್ರ-ಕ್ಷೇತ್ರಜ್ಞ ಪರಿಭಾಷೆಯೊಡನೆ ಗ್ರಹಿಸಿಕೊಳ್ಳುವಲ್ಲಿ ಈ ವಿಚಾರ ವಿಕಾಸದ ಹಂತವು ಗಮನಕ್ಕೆ ಬರಲಿದೆ. ಜ್ಞಾನ=ಬೋಧಿ ಮತ್ತು ತಾನು (ವ್ಯಕ್ತಿ), ಕ್ಷೇತ್ರ(ದೇಹ)=ವೃಕ್ಷ. ತನ್ನೊಳಗಿನ ಅಗ್ನಿ=ಕುಮಾರ ಅ-ಬೋಧಿ, ಇವನೇ 'ಬೋಧಿ' ಹಂತದಲ್ಲಿ, ಕ್ಷೇತ್ರಜ್ಞನಾಗುತ್ತಾನೆ. ಈ ಅಗ್ನಿ ವೃಕ್ಷರೂಪಿ ತಾನು, ಬೋಧಿ-ಸತ್ತ್ವ ಹಂತದ ವ್ಯಕ್ತಿಯಾಗುವನು ಹೊಳೆದ ಈ ಅರ್ಥ, ಇದು ಮೊದಲ ಹಂತದ ತ್ರೈಮತ್-ಅಪ್ಸು (ಸಂ)ಯೋಗಾನುಭವದಲ್ಲಿ ಈ 'ಕ್ಷೇತ್ರಜ್ಞನು ತಾನು' ಎಂಬ ಜ್ಞಾನ. 'ತತ್ ವನಂ ಉಪಾಸೀತ' ಹಂತದ ಯೋಗ ಸಿದ್ಧಿ. ವಿಶ್ವದ ಆರಂಭಣ=ವೃಕ್ಷ: ಮತ್ತು ಅಧಿ-ಸ್ಥಾನ=ವನ (=ವನಿತಾ : ಸರಸ್) ಎಂದು ಋಗ್ವೇದವೆ ಹೇಳಿದೆ. ಇದು ಅದಿತಿ ತ್ವಷ್ಟಾರ (: ದಕ್ಷ) ಹಂತದ ಸಾಂಸ್ಕೃತಿಕ ಜೀವನದ ಅರ್ಥದ ಮಾಧ್ಯಮ ಪ್ರತಿಮೆ. ಸುಮೇರಿಯನ್ನಲ್ಲಿ ತ್ರೈಮತ್-ಅಪ್ಸು (: ಕಿಂಗು) ಇದು ಪ್ರತಿಮೆ: ಬಾಹ್ಯ ಭಾಷಾವಲಯ ಬಿಟ್ಟರೆ, ತತ್ತ್ವತಃ, ಋಗ್‌ವೇದದ ಪ್ರತಿರೂಪವೇ ಸರಿ.

ಆದರೆ, ಈ ಹಂತದ ಸುಮಾರಿಗೆ ಸುಮೇರಿನಲ್ಲಿ ಒಂದು ವೈಚಾರಿಕ ಕ್ರಾಂತಿ ಸಂಭವಿಸುತ್ತದೆ. ತ್ರೈಮತ್-ಅಪ್ಸುಗಳ ಪುತ್ರನೆಂಬ ಎಂಕಿಯು ಅಪ್ಸುವನ್ನು ಕೊಂದು, ಊರ್ಧ್ವಲೋಕದಲ್ಲಿ ಅಪ್ಸುವಿನ ಶವದ ಮೇಲೆ ತನ್ನ ಅರಮನೆ ಕಟ್ಟಿಸುತ್ತಾನೆ. ಇವನ ಮಗನೆ ಮರ್ಡುಕ ವೀರ. ಅಪ್ಸುವು ಹತನಾದ ಬಳಿಕ ತ್ರೈಮತಳು ತನ್ನ ಮಗ ಕಿಂಗುವನ್ನೆ ಪತಿಯಾಗಿ ಸ್ವೀಕರಿಸುತ್ತಾಳೆ. ಎಂಕಿಯ ಸೇಡಿನ ಸಿದ್ಧತೆ ನಡೆಯುತ್ತದೆ. ಇದನ್ನು ಅರಿತ ಮರ್ಡುಕನು ತ್ರೈಮತಳನ್ನು ಸಂಹರಿಸಿ, ಈ ನಾಗಿಯ ಒಂದು ಸೀಳಿನಿಂದ ಅಂತರಿಕ್ಷದ (ದಿವ್ಯ) ಜಲ ಕೆಳಗೆ ಸೋರಿ ಹೋಗಬಾರದೆಂದು ಆಕಾಶ ನಿರ್ಮಿಸುತ್ತಾನೆ; ಇನ್ನೊಂದು ಭಾಗವನ್ನು ಭೂಮಿಯ ಭದ್ರವಾದ ಆಧಾರವಾಗಿಸುತ್ತಾನೆ. ಹಿಬ್ರೂ ದೈವತ ಕಥೆಯ ಸಂಪಾದಕರು, ಈ ಪವಾಡವನ್ನು ಅರ್ಥಯಿಸುವಾಗ ಮಾತೃಕುಟುಂಬ ಪದ್ಧತಿಯಿಂದ ಸ್ಥಿರ ಸಮಾಜವು ಅಸ್ತಿತ್ವದಲ್ಲಿ ಬರಲು ಶಕ್ಯವಿಲ್ಲ ಎಂಬ ಅಭಿಪ್ರಾಯ ಸೂಚಿಸುತ್ತಾರೆ. ಈ ದೃಷ್ಟಿಯಿಂದ ಈ ಕ್ರಾಂತಿಯು ಮಾನವ ಸಂಸ್ಕೃತಿಯ ಪ್ರಗತಿಯ ದೃಷ್ಟಿಯಿಂದ ಕ್ರಮಪ್ರಾಪ್ತ ನೈಸರ್ಗಿಕ ಘಟನೆಯೆ ಆಗುತ್ತದೆ. ಯೆಹೂದಿ ಹಾಗೂ (ಆ ಬಳಿಕ) ಕ್ರೈಸ್ತ ಸಂಸ್ಕೃತಿಯ ತಳಪಾಯದಲ್ಲಿ ಸುಮೇರಿನ ಈ ಹಂತದ ದೈವತ ಕಥಾಭಾಗಗಳೆ ಉಂಟು.

ತ್ರೈಮತಳು ಮಗ ಕಿಂಗುವನ್ನು ಮದುವೆಯಾಗುವ ವರೆಗಿನ ಕಥಾಭಾಗವು, ಋಗ್ವೇದದಲ್ಲಿ, ಸುಮೇರಿನ ಆಕೃತಿಯದೇ ಆಗಿದೆ. ತ್ರೈಮತಳ ಮೊದಲಿನ ಸಂಗಾತಿ ಮತ್ತು ಮಗನೆಂಬ ಎಂಕಿಯ ತಂದೆ ಅಪ್ಸು (dragon). ಇವನು ಬಳಗದ ಹೊರಗಿನವನು. ಹೀಗೆಯೆ, ದಕ್ಷನು ಅದಿತಿಯ ಪತಿಯಾಗುವ ಮುಂಚಿನ ತ್ವಷ್ಟಾರನೂ ಪರಕೀಯನೇ! ವಿವಾಹ ಸಂಸ್ಥೆಯ ಇತಿಹಾಸದ ದೃಷ್ಟಿಯಿಂದ ಈ ಸಾಂಕೇತಿಕತೆ ಅಭ್ಯಸನೀಯವಿದೆ. ಗ್ರೀಸಿನ ಯುರಿನೊಮೆ 'ಅಪರ್ಣೆ' ಸಮುದ್ರ ಕನ್ಯೆ, ಹುಟ್ಟಿದೊಡನೆ ಅಲೆಗಳ ಮೇಲೆ ಕುಣಿಯತೊಡಗುತ್ತಾಳೆ. ಉತ್ತರದಿಕ್ಕಿನ

ವಾಯುದೇವ ಸರ್ಪನಾಗಿ ಆಲಿಂಗಿಸುತ್ತಾನೆ. ಅಯೋನಿ ಸಂಭವ ಪ್ರಥಮ ಶಿಶು ಹುಟ್ಟುತ್ತದೆ! ಹೆಣ್ಣು-ಗಂಡಿನ ಶುದ್ಧ ಆಕರ್ಷಣದಲ್ಲಿ 'ಅಪಘಾತ' ಸಂಭವಿಸುತ್ತದೆ. ಆ ಬಳಿಕ ಹೊರಗಿನ ಅಜ್ಞಾತ ವ್ಯಕ್ತಿಗಿಂತ ಬಳಗದಲ್ಲೆ ವೈವಾಹಿಕ ಹೊಂದಾಣಿಕೆಯು ಹೆಚ್ಚು ಅನುಕೂಲವೆನಿಸಿರಲು ಸಾಕು.

ಎಂಕಿಯು, ತಂದೆ ಅಪ್ಸುವನ್ನು ಕೊಂದ ಈ ಘಟನೆಯ ಅರ್ಥವು, ಫ್ರೈಡನು ರೂಢಿಸಿರುವ ಅರ್ಥದ ಅ-ಸಮರ್ಪಕತೆಯನ್ನು ಸಿದ್ಧಪಡಿಸುತ್ತದೆ! ಭಾಷಿಕ ಶಬ್ದ-ಪ್ರತಿಮೆಗಳೇ ಜ್ಞಾನದ ಮಾಧ್ಯಮ; ಫ್ರೈಡನ ಆಕ್ಷೇಪಾರ್ಹ ಅರ್ಥವು ಹೆಚ್ಚು ರುಚಿಕರವೆನಿಸಿ ತರುಣರಿಗೆ ಮೆಚ್ಚಿಕೆ ತಂದಿತು! ಈ 'ಅಬೋಧ್ಯಗ್ನಿ'ಯ ವೈಚಾರಿಕ ಕಿಡಿ ಕೌಟುಂಬಿಕ ಹಾಗೂ ಸಾಮಾಜಿಕ ತಳಹದಿಯನ್ನೇ ಅ-ಭದ್ರಗೊಳಿಸಲು ನಿಮಿತ್ತವಾಗತೊಡಗಿದ್ದನ್ನು ಕಂಡು ಫ್ರೈಡನ ಶಿಷ್ಯೋತ್ತಮ ಯೂಂಗನು ಗುರುವಿನಿಂದ ದೂರ ಸರಿದನು! ತಾಯ್‌ಗಂಡತನದ ಪ್ರವೃತ್ತಿಯು ಆರಂಭದಲ್ಲಿ ತಲೆದೋರಿರಲೆಬೇಕು; ನಿಜ. ನರನು-ಮನು-ಜನಾಗುವ ದಿಕ್ಕಿನಲ್ಲಿ ನಡೆದಾಗ ಒಂದು ಹಂತದಲ್ಲಿ 'ಈಡಿಪಸ್' ಘಟ್ಟದ ಕಣಿವೆಯೊಳಗಿಂದ ಹಾಯ್ದು ಹೊರ ಬಂದುದರ ಸೂಚನೆ ಗ್ರೀಸಿನ 'ಈಡಿಪಸ್' ಕಥೆಯಂತೆ, 'ಅದಿತೇಃ ದಕ್ಷಃ ಅಜ್ಞಾಯತ' ಎಂಬ ಋಗ್ವಾಕ್ಯದಲ್ಲೂ ಇದೆ. ಸುಮೇರಿನತ್ತಣಿನ ತೈಮತ್-ಮಗ ಕಿಂಗುಳ ಕಥೆ, ಇನ್ನೂ ಒಂದು ಭಾಷಿಕರ ಜೀವನದ ಮೂಲಕ ದೊರೆವ ಪ್ರಮಾಣ. ಆದರೆ, ಇದು ಮಾನವರ ಮೂಲಭೂತ ಪ್ರವೃತ್ತಿಯಾಗಿದ್ದರೆ ಮಾನವ ಸಮಾಜ ಆ ವಿಷ (Vicious) ಚಕ್ರದೊಳಗಿಂದ ಹೊರಬರುವ ಶಕ್ಯತೆಯೇ ಇದ್ದಿಲ್ಲ.

ಜೀವನದ ಆ ಮೊದಲ ಹಂತದ ಸ್ತ್ರೀ-ಪುರುಷರೊಳಗಿನ ಆ-ಕರ್ಷಣದ ಅರ್ಥವು, ಅಗಮ್ಯ ನಿಗೂಢ ದಿವ್ಯಭಾವದ ಉತ್ಕಟತೆಯ ಅನುಭವಕ್ಕಿಂತ ಬೇರೊಂದೂ ಇರಲಾರದು. ಅಂತರಿಕ್ಷಸ್ಥ 'ಅರ್ಥ'ವು ಮಾನವನ ಅರಿಕೆಯ ಆಳವಿನಲ್ಲಿ ಬಂದದ್ದು ಅಥವಾ ಬರುವುದು, ಅನು-ಭವದ ತರುವಾಯದ ಪುನಃಸ್ಮೃತಿಯಲ್ಲಿ. ತನ್ನ ಕೃತಿಯ ಅರ್ಥ : ಉದ್ದೇಶವೇ ಅರಿಕೆಗೆ ಬಂದಿರದ ಹಂತದ ಕೃತಿಯಮೇಲೆ ವಿಶಿಷ್ಟಾರ್ಥದ ಆರೋಪ ಮಾಡುವವನು ತನ್ನ ಅರ್ಥವನ್ನು ಅಲ್ಲಿ ಕಾಣುತ್ತಾನೆ, ಹೊರತು ಇದು 'ವಸ್ತುನಿಷ್ಠ' ಭೂಮಿಕೆಯ ವಾಸ್ತವ ಅರ್ಥ ಪದ್ಧತಿಯಲ್ಲ! ಅಂದಿನ ಆ ಅದಿತಿ-ದಕ್ಷ ಸಂಬಂಧವನ್ನು ಒಂದಿಲ್ಲೊಂದು ಹೆಸರಿನಲ್ಲಿ ಆಚರಿಸುವ ಪ್ರವೃತ್ತಿಯು-ವಿಚಾರೋದಯವಾದ ಬಳಿಕಿನ ಈ ಪ್ರವೃತ್ತಿಯು ಗರ್ಹ್ಯವಾಗಿದೆ-ಮಾನವ ಸಂಸ್ಕೃತಿಯ ಪ್ರ-ಗತಿಗೆ ವಿಘ್ನಕಾರಿಯಾಗಿದೆ.

ಅಪ್ಸು-ಪುತ್ರನೆಂಬ ಎಂಕಿಯು ತಂದೆಯನ್ನು ಕೊಂದದ್ದು, ತಾಯ್-ಗಂಡನಾಗಲು ಅಲ್ಲ; ಇದನ್ನು ಆ ಭಾಷಿಕರ ಪುರಾತನ ಕಥೆಯೆ ಹೇಳುತ್ತದೆ. ತೈಮತಳು ತನ್ನ ಮಗ ಕಿಂಗುವನ್ನೇ ಪತಿಯಾಗಿ ಸ್ವೀಕರಿಸುವಲ್ಲಿ, ಪರಂಪರಾಗತ ಸಂಪ್ರದಾಯವನ್ನೇ ಮುಂದುವರಿಸಿಕೊಂಡು ಹೋಗುವ ಸನಾತನೀ ವೃತ್ತಿಯು ಪ್ರತಿಬಿಂಬಿತವಾಗಿದೆ. ಸನಾತನ ದೃಷ್ಟಿಗೆ, ನಿನ್ನೆಯೆ ಇಂದಿನಲ್ಲಿ ಮರಳುತ್ತಿರುವ ದೃಶ್ಯ ಕಾಣುತ್ತದೆ. ಆದರೆ, ಎಂಕಿಯು ನಿನ್ನೆಗಳ ವಿಷಚಕ್ರಭೇದಿಸಿದ ಆದಿ ಪುರುಷನು. ಎಂಕಿ (: ಈ) ಸಂಕೇತವು ಸುಮೇರಿನವರ ಆದರ್ಶ : ಜ್ಞಾನದೇವತಾ ಮೂರ್ತಿ (god of Wisdom). ಜ್ಞಾನ : ವಿಚಾರ : ಅರ್ಥ ಇದು ಸ್ವಯಂಪ್ರಕಾಶ ಶಕ್ತಿ. ಈ ಜ್ಞಾನದೇವನ ಉದಯ ಸೌರ ಮಾಧ್ಯಮದ ಅರುಣೋದಯದ ಸೂಚಕ ಎಂದು ಎನ್ನಬಹುದು.

ಮಾನವಕೋಟಿಗೆ ಚಂದ್ರಗ್ರಸ್ತ ಸೂರ್ಯನ ದರ್ಶನ!

ಇದು ಋಗ್ವೇದ ಮತ್ತು ಅಥರ್ವವೇದ ಈ ಉಭಯ ವೇದಗಳಿಗೂ ಮಾನ್ಯವಿರುವ ಭಾರತೀಯ ಜೀವನ ಕ್ಷಿತಿಜದ ಮೇಲೆ ಬೆಳಗುತ್ತಿರುವ ನೀರಾಂಜನ ದೀಪ ಸ್ವರೂಪ ಪ್ರಕಾಶದ ಸೂರ್ಯದರ್ಶನ! 'ಸಾರ್ಪರಾಜ್ಞೀ ಸೂರ್ಯೋ ವಾ' ಎಂಬ ಈ ಶೈಲಿ ಋಗ್ ವೇದದ ಸಂಕೋಚ ವೃತ್ತಿಯ ಸೂಚಕವಾಗಿದೆ. ಹೇಳಲೆ-ಬಿಡಲೆ? ಆದರೆ ಹೇಳಿದಂತೂ ಅಲ್ಲ, ಬಿಟ್ಟಂತೂ ಅಲ್ಲ ಎಂಬ ಹಾಗಿನ ಈ ಶೈಲಿಯನ್ನು ತ್ಯಜಿಸಿ, ಅಥರ್ವವೇದವು 'ವೃತ್ರಾತ್ ಜಾತಃ' ದಿವಾಕರನ ಎಂದರೆ ನಾರಣನಿಂದ ಜನಿಸಿದ ಸೂರ್ಯನ ದರ್ಶನ ಮಾಡಿಸುತ್ತಿದೆ! 'ನೀರ-ಅಂಜನ' ರೂಪೀ ದೀಪವು ಸೌರ ಪ್ರಕಾಶ Flash ಅಲ್ಲ; ಚಂದ್ರಯೋಗದ ರಸ-Flush of light=ಸಂದ್ರಕ್ Feeling ಮಾತ್ರ.

ಸುಮೇರಿನತ್ತಣಿನ ಅದಿತಿ (ತ್ರೈಮತ್) ಮತ್ತು ತ್ವಷ್ಟಾರ (: ಅಪ್ಸು) ಇಬ್ಬರೂ; 'ಜಗತಃ ಪಿತರೌ': ವಾಗರ್ಥಾವಿವ ಸಂಪೃಕ್ತೌ. ಇವರು 'ಯೋಗಾರೂಢ ಸ್ಥಿತಿಯಲ್ಲಿ ಉಳಿದರೆ, ಈ ಬಾಳೆಲ್ಲ ಕಗ್ಗತ್ತಲೆ (: ತಮಃ ಆಸೀತ್ ತಮಸಾ ಗೂಳ್ಹಂ). ಅಲ್ಲದೆ, ಎಲ್ಲೆಲ್ಲೂ ಜಲ-ಪ್ರಲಯ (ಸಲಿಲಂ ಸರ್ವಂ ಆಃ ಇದಂ). ಈ ಅ-ಪ್ರಕೇತ ಅವಸ್ಥೆಯಲ್ಲಿ ಈ ಲೋಕದಲ್ಲಿ ಜೀವಿಸುವುದು ಅಶಕ್ಯ ಎಂಬ ವಿಚಾರದಿಂದ ಪಿತೃಹಂತಕನಾದ ಸುಮೇರಿನ ಇಂದ್ರ (: ಎಂಕಿ) ಆ ಜನದ ಸ್ತೋತ್ರಾರ್ಹ ಆದರ್ಶವ್ಯಕ್ತಿಯಾಗುತ್ತಾನೆ. ಋಗ್ವೇದದಲ್ಲೂ 'ವೃತ್ರಹನ್' ಎಂಬ ಕೀರ್ತಿಯ ಪಿತೃಹಂತಕ ಇಂದ್ರನ ಸ್ತೋತ್ರ ಉಂಟು. ಇಲ್ಲಿಯ ವರೆಗೂ ಎನುಮಾ ಎಲಿಶ್ ಮತ್ತು ಋಗ್‌ವೇದದ ಕಥಾ ಭಾಗದಲ್ಲಿ ನೂರಕ್ಕೆ ನೂರು ಸಾಮ್ಯವಿದೆ! ಆದರೆ, ಇದೆಲ್ಲ ಮೇಲ್ತೋರಿಕೆಯ ಸ್ತೋತ್ರವಿದ್ದು ನಿಜವಾಗಿ ಹೊಗಳಿದ್ದು ವೃತ್ರನನ್ನು : ವರುಣ-ಸೋಮಾದಿ ನಾಮಾಂತರದ ಸೋಗಿನಲ್ಲಿರುವ ಚಂದ್ರನನ್ನು! ಆದರೆ ಋಗ್‌ವೇದದ ಮಾತಿನ ಮಾಟದ ಗುಟ್ಟು ಗೊತ್ತಾಗಲು, ಚಂದ್ರ-ಸೂರ್ಯರೂಪ ಸಾಂಕೇತಿಕ ಮಾಧ್ಯಮದ ಹೊರಗೆ ನಿಂತು ಸಮೀಕ್ಷಿಸುವ ಆವಶ್ಯಕತೆ ಇದೆ. ಇಂದಿನ ಭಾಷಿಕ ರೂಢ ಪ್ರತಿಮೆಗಳು ಪಡೆದು ಬಂದಿರುವ ಅರ್ಥದ ಕನ್ನಡಕವು ಇದ್ದಕಿದ್ದಂತೆ ಜೀವನ: ಸಂಸ್ಕೃತಿಯ ವಾಸ್ತವ : ಸತ್ಯದ ದರ್ಶನ ಮಾಡಿಸಲು ಅಶಕ್ಯ. ಈ ಕನ್ನಡಕ ಸಂಭ್ರಮಕಾರಿಯಾಗಿದೆ. ಆದುದರಿಂದ, ಭಾಷಿಕ ಮೂಲ ಪ್ರತಿಮೆ, ಆ ಪ್ರತಿಮಾ ನಿರ್ಮಿತಿಯ ದ್ರವ್ಯರೂಪ ಸಂಕೇತಗಳು ಇವುಗಳನ್ನು ಲೆಕ್ಕಿಸದೆ ಮಾನವನ ಮನೋಬುದ್ಧಿಗಳ ಪ್ರೇರಣೆಯ ಅರ್ಥವು ಸರಿಯಾಗಿ ಗಮನಕ್ಕೆ ಬರಲಾರದು, ಎಂಬ ಸಂಗತಿಯನ್ನು ಮನೋವಿಶ್ಲೇಷಣ ಶಾಸ್ತ್ರವು ಮನಗಾಣಿಸಿ ಕೊಟ್ಟಿದೆ. ಈ ಶಾಸ್ತ್ರಜ್ಞನು ತನ್ನ ಕಡೆಗೆ ಬರುವ ದಿಗ್-ಭ್ರಾಂತ ವ್ಯಕ್ತಿಗೆ ಸುಮ್ಮನೆ ಮಾತನಾಡಲು ಪ್ರೇರಿಸುವನು: ಈ ವ್ಯಕ್ತಿಯ ಮಾತುಗಳನ್ನು ಆಡಿದ ರೀತಿಯಲ್ಲಿಯೇ ಕರ್ತೃ-ಕರ್ಮ-ಕ್ರಿಯಾಪದದ ಮೂಲಕ ನೇರವಾಗಿ ಗ್ರಹಿಸಿಕೊಂಡಲ್ಲಿ, ಆ ವ್ಯಕ್ತಿಯ ಮನೋವ್ಯಾಧಿಯು ಅರ್ಥವಾಗಲು ಶಕ್ಯವಿರುವುದಿಲ್ಲ. ಆತನ ಮಾತಿನ ಅಡ್ಡ ಎಳೆಗಳನ್ನು ಲೆಕ್ಕಿಸುವಲ್ಲಿ ಆ ವ್ಯಕ್ತಿಯ ವಿಭ್ರಮಸ್ಥಾನವು ಬೆಳಕಿಗೆ ಬರುವ ಶಕ್ಯತೆಯನ್ನು ತಜ್ಞರು ಒಪ್ಪಿದಂತಾಗಿದೆ. ಆದರೆ, ಈ ಮೂಲ ಮಾದರಿಗಳ (archetypes) ಆಚೆಗೆ ಹೋದವರು ವಿರಳ. ಸಂಕೇತಗಳನ್ನು ನಿಶ್ಚಿತ ಒಂದೇ ಅರ್ಥದಲ್ಲಿ (fixed) ಗ್ರಹಿಸಿಕೊಳ್ಳುವಲ್ಲಿ 'ಅರ್ಥ'=ಜೀವ-ಜೀವಾಳ ಇದರ ಸ್ವೈರ-ಮುಕ್ತ ಸ್ವಾತಂತ್ರ್ಯವನ್ನೇ ಕಡೆಗಣಿಸಿದಂತಾಗುತ್ತಿದೆ. ಈ ಮಾನಸ-ಶಾಸ್ತ್ರದ ಕಕ್ಷೆಯ ಆಚೆಗೆ ಇರುವ ಸಂಕೇತಗಳ ಉದ್ಗಮಕೇಂದ್ರವು ಶುದ್ಧ ಮನೋವಿಶ್ಲೇಷಣ ಶಾಸ್ತ್ರದ ಲೆಕ್ಕಕ್ಕೆ ನಿಲುಕಲು ಶಕ್ಯವೇ ಇಲ್ಲ! ಇಲ್ಲಿ ತತ್ತ್ವಜ್ಞಾನದ ಮೂಲಭೂತ ವಿಶ್ಲೇಷಣದ ಭೂಮಿಕೆಯೇ ಪ್ರಯೋಜನ ಕಾರಿಯಾಗುವ ಶಕ್ಯತೆಯಿದೆ. ಮನೋವಿಶ್ಲೇಷಣ ಶಾಸ್ತ್ರವು ನೇರವಾಗಿ ಚಾಂದ್ರ ಭೂಮಿಕೆಯ ವರೆಗೆ ಬಂದು ನಿಂತಿಲ್ಲ. ಮತ್ತೆ! ನೀರು, ಸರ್ಪ, ವೃಕ್ಷ, ಸನಾತನ ಶಿಶು, ಅಥವಾ ಪ್ರತಿ ಗಂಡಿನಲ್ಲಿ ಹೆಣ್ಣಿನ ಪ್ರತಿಮೆ, ಪ್ರತಿ ಹೆಣ್ಣಿನಲ್ಲಿ ಗಂಡಿನ ಪ್ರತಿಮೆ ಸುಪ್ತಚೇತನದಲ್ಲಿ ಹುದುಗಿದ್ದು ಉಂಟೇ ಉಂಟು, ಎಂಬ ಈ ಮೂಲಮಾದರಿ ವಿಶ್ವದ ಏನೆಲ್ಲ ಅರ್ಥ ವಿವರಿಸಬಲ್ಲವು ಎಂಬ ಈ ಶಾಸ್ತ್ರದ ಗ್ರಹಿಕೆಯೂ 'ಏಕಂ : ಸತ್' ಸ್ವರೂಪದ ಏಕಾಂತಿಕ ಶ್ರದ್ಧೆಯ ಆಕೃತಿಯೇ ಆಗುತ್ತಿದೆ! ನೀರು, ಸರ್ಪ, ವೃಕ್ಷ, ಕೂಸು, ಸ್ತ್ರೀ, ಪುರುಷ ಈ ನಾನಾ ಪ್ರಕಾರಗಳ ಬದಲು 'ಚಂದ್ರ' ಈ ಒಂದೇ ಸಂಕೇತದಲ್ಲಿಯೆ ಇಂತಹ ಏನೆಲ್ಲ ಸಂಕೇತ ನಿರ್ಮಾಣಕೇಂದ್ರವಿರುವುದನ್ನು ಪುರಾತನರು ಎಂದೋ ನಿರ್ಧರಿಸಿಬಿಟ್ಟಿದ್ದಾರೆ. ಈ ಶ್ರೇಯ ಯಾವ ಒಂದೇ ಜನಾಂಗಕ್ಕೆ ಸಲ್ಲುವ ಕಾರಣವಿಲ್ಲ. ಈ ನಿರ್ಣಯ ಆಧುನಿಕ ಸ್ವರೂಪದ 'ತರ್ಕ' ಪದ್ಧತಿಯ ನೆರವಿನಿಂದಾದುದಲ್ಲ. ಅಂದಿನ ಸಮಯಾಚಾರಗಳ ಅನುಭಾವದ ಹಿನ್ನೆಲೆಯಲ್ಲಿ ತಮ್ಮ ಆನಂದ ಸಂದೋಹದ ಮೂಲಕೇಂದ್ರ ಚಂದ್ರನೇ ಎಂಬ ಮನವರಿಕೆಯಾಗಿ ಈ ವಿವಿಧ ಆಕೃತಿಯ ಚಾಂದ್ರ ಪ್ರತಿಮೆಗಳು ಆರಾಧ್ಯ ದೈವತಗಳಾದುವು.

ಋಗ್ವೇದದ ಪ್ರತಿಮೆಗಳ ವಿಶ್ಲೇಷಣದಲ್ಲಿ ವೃಕ್ಷ-ವನ ವಿಶ್ವಾರಂಭದ ಎರಡು ಮೂಲಶಕ್ತಿಗಳು ಎಂಬ ಮಾತು ನಿಃಸಂದಿಗ್ಧವಾಗಿ ದೊರೆಯುತ್ತದೆ[೧೩] ಆದರೆ, ಸರ್ಪ, ಪೂಜ್ಯದೈವತ ರೂಪದಲ್ಲಿ ಕಂಡಿತು- ಕಾಣುವದಿಲ್ಲ. ಈ 'ವಾ ನ ವಾ' ರೀತಿಯಲ್ಲಿ ತೆರೆಯ ಹೊರಗೆ ಬರುತ್ತದೆ. ಚಂದ್ರನು ಸುಪ್ತಚೇತನದ ತೀರ ತಳಪಾಯದಲ್ಲಿ

ಆಪ-ರಸದ : ರೇತರೂಪ ಸೋಮನಾಮದ ಮುಸುಕಿನಲ್ಲಿ ಹೊರಗೆ ಬರುತ್ತಾನೆ! ಈ ಸಂಕೇತಗಳ ಮೇಲು-ಮೇಲಿನ ಪದರಿನಲ್ಲಿ ಕಾಣುವ ವೃಷಭ, ಅಶ್ವ ಅರ್ವಾಚೀನ. ಅಶ್ವ-ತರ : ರಾಸಭ ಇದಕ್ಕೂ ಪುರಾತನ. ಮೊಸಳೆ, ವಾಯಸಾದಿಗಳು ಇವೆಲ್ಲ ಇಜಿಪ್ಷಿನಲ್ಲೂ ಇವೆ! ಅಲ್ಲಿಯು ಚಂದ್ರನು ಸರ್ಪಾಕ್ಷ-ಸೂರ್ಯ ಮೊಗವಾಡ ಧರಿಸುತ್ತಾನೆ. ಸುಮೇರು-ಅಸ್ಸೀರಿಯಾ ಭಾಗದಲ್ಲಿ 'ಉತು' ಸಂಕೇತದ ಸೂರ್ಯನು, ಚಂದ್ರನಿಂದ ಬೇರೆಯೆ ಇದ್ದಾನೆ. ಆ ಉತ್ಖನನದಲ್ಲಿ ದೊರೆತದ್ದು ಚಂದ್ರನ ಗುಡಿ! ಋಗ್ವೇದದಲ್ಲಿ ಕಾಣುವ ಸುಫಲೀಕರಣದ ದೇವಿ 'ಸಿನೀವಾಲಿ' ಖಾಲ್ಡಿಯಾ-ಸುಮೇರಿನತ್ತಣಿಂದ ಸ್ವೀಕರಿಸಿದ ಪ್ರತಿಮೆ ಎಂದು ತಜ್ಞರು ನಿರ್ಣಯಿಸಿದ್ದಾರೆ. ಚಂದ್ರಮನ ಪೂಜೆ, ಮಾನವನಿಗೆ ತನ್ನ 'ಮನಸ್ಸು' ಎಂಬುದರ ಅರಿವು ಮೂಡಿದ ಹಂತದ ಸೂಚಕವಾಗಿದೆ. ಈ ಹಂತದಲ್ಲಿ ಈ ಮನಸ್ಸಿನ ಆಟದ ಇತಿ-ಮಿತಿಗಳು ಗಮನಕ್ಕೆ ಬರುತ್ತವೆ: ತೈಮತ್-ಅಪ್ಸು ಅಥವಾ ಅದಿತಿ-ತ್ವಷ್ಟಾರ (: ವೃತ್ರ : ಸರ್ವಾವರಕ ಏಕಾತ್ಮಕ ಶಕ್ತಿ : ಉಭಯಲಿಂಗೀ ಚಂದ್ರ). ಈ ಭೂಮಿಕೆ ಜೀವನದ ರಾತ್ರಿಯ ಸೂಚಕ: 'ತಮಃ ಆಸೀತ್ ತಮಸಾ ಗೂಳ್ಹಂ' ಎಲ್ಲೆಲ್ಲೂ ಸಲಿಲ-ಸರಿಲ-ಶರೀರ=ರಸರೂಪದಲ್ಲಿ ಪ್ರಳಯ ವೃಷ್ಟಿ! ಈ ಅನಾಹುತದಿಂದ ಹೊರಬೀಳುವ ಪ್ರಯತ್ನ ಎಂದರೆ ಬುದ್ಧಿದೇವ=ಜ್ಞಾನದೇವ ಎಂಕಿ (god of Wisdom) ಎಂಬ ಸಾಂಕೇತಿಕ ಪ್ರತಿಮೆ. 'Wisdom' ಎಂಬ ಅರ್ಥಸೂಚಕತೆ ಎಂಕಿ (ಅಥವಾ ಈ) ಸಂಕೇತದಲ್ಲಿ ವಿದ್>ವೇದ ಈ ಆರ್ಯಭಾಷಾವರ್ಗದ ಶಬ್ದಮೂಲವಿರುವುದು ಮಾತ್ರ ನಿಶ್ಚಿತ. ಏನಿದೆಯೊ ಇದನ್ನು ಆ ಭಾಷಿಕ ತಜ್ಞರೇ ಬಲ್ಲರು. ಆದರೆ, 'Wisdom' ಈ ಪ್ರತಿಮೆಯ ಅರ್ಥ ಗರ್ಭದಲ್ಲಿ ವಿದ್>ವಿತ್ತ, ವೇತ್ತ ವಿದ್ಯಾ ಈ ಬರುವಳಿಯಲ್ಲಿ ಆಚಾರದೊಡನೆ ಬಂದ ಆರ್ಜನೆ-'ಅರ್ಥ' ಸಂಪಾದನೆ ಎಂಬ ಭಾವಾರ್ಥವೂ ಉಂಟು. 'ವಿದ್' ಶಬ್ದಮೂಲದಲ್ಲಿ ಇರುವ ಉಭಯಾರ್ಥಗಳು ಸ್ಪಷ್ಟತೆ ಪಡೆವ ಹಂತದಲ್ಲಿ ವಿದ್>ವಿಂದ್, ಈ ಸಂಪಾದನೆ=ಅರ್ಥದ ಪಾತಳಿಯೆ ಒಂದು, ವಿದ್>ವಿದ್ಯೆ=ಅನುಭವಜನ್ಯ-ಕ್ರಿಯೆಯೊಡನೆ ಪ್ರಾಪ್ತವಾಗುವ ತಿಳುವಳಿಕೆ ಮತ್ತು ಈ ಪಾತಳಿಯ ಅರ್ಥ ಸಂಪಾದನೆಯೆ ಒಂದು.

ದಿವ್ಯಾಧ್ಯಾತ್ಮಕ್ಕೆ, ಈ ವಿದ್> 'ವೇದ' Wit : Wisdom ರುಚಿಸಲಿಲ್ಲ. ಯಜುರ್ವೇದದ ಅಂಗವಾದ 'ವಾಜ'ಸನೇಯ ಸಂಹಿತೆ : 'ಸೂರ್ಯ' (?)ನಿಂದ ದತ್ತವಿದ್ಯೆಯ ಈ ಗ್ರಂಥದಲ್ಲಿ ವಿದ್ಯೆಗೆ ಅಡ್ಡ, ಅ-ವಿದ್ಯೆ ಎಂಬ ಹೊಸ ಸಂಕೇತ ತಲೆಯೆತ್ತುತ್ತದೆ! ನಿರ್-ವೇದಿ ಜೀವನ ದೃಷ್ಟಿ ಎಷ್ಟು ಪ್ರಾಚೀನ ಎಂಬುದಕ್ಕೆ ಬೇರೆ ಪ್ರಮಾಣಬೇಡ. ಮೆಲ್ಲನೆ ಅ-ವಿದ್ಯೆ-ವಿದ್ಯೆ ಎರಡನ್ನೂ ದೂರ ಎಸೆಯಲಾಗುತ್ತದೆ. ಋತ (: ಸತ್ಯ) ಈ ಸಾಂಕೇತಿಕ ಪ್ರತಿಮೆಯನ್ನು ಹೇಗೆ ಮುಳುಗಿಸಲಾಯಿತು, ಎಂಬುದಕ್ಕೆ ಈ 'ವಿದ್ಯೆ'ಯ ಲೋಪವೂ ಒಂದು ಸಾಕ್ಷಿ. ಜ್ಞಾನ-ವಿಜ್ಞಾನದ ಪರಿಭಾಷೆ ಪ್ರಭಾವಶಾಲಿಯಾಗುತ್ತದೆ. 'ಜ್ಞಾ' ಇದು ಕೇವಲ Pre-hension ಮಾತ್ರ. ನಿನ್ನೆ→ಇಂದು→ನಾಳೆಗಳ ಅರಿವಿನೊಡನೆ ಸಂಬದ್ಧ ಸಮ್ಯಕ್ ಜ್ಞಾನವು ವಿದ್ಯೆ, ದಿವ್ಯಾಧ್ಯಾತ್ಮಕ್ಕೆ ಅಥವಾ ತತ್-ಮಯಾನಂದೀ ಅವಸ್ಥೆಯಲ್ಲೆ ಇರಬಯಸುವವರಿಗೆ ನಿನ್ನೆ, ಇಂದು ಅಥವಾ ನಾಳೆ ಇವುಗಳಲ್ಲಿ ಯಾವುದೊಂದೇ ಬಿಂದುವಿನಲ್ಲಿ ಏನೆಲ್ಲ ವಿಶ್ವ-ಪ್ರಪಂಚ ಕಲ್ಪಿಸಿ ಚಿತ್ರಿಸಿಕೊಳ್ಳುವಲ್ಲಿ ಬಾಹ್ಯಪ್ರಪಂಚದಿಂದ 'ಮುಕ್ತಿ' ದೊರೆಯಬಲ್ಲುದು. ಭೂತಕಾಲದಲ್ಲಿ ಪರಿಪೂರ್ಣ ಸ್ಥಿತಿಯನ್ನು ಕಲ್ಪಿಸಲಾಗಿದೆ. ಈ ಕ್ಷಣದಲ್ಲಿ ಮೆಯ್ಮರೆಯಲು ಏನೊಂದು ಬಗೆಯ ಅನಾಥತೆಯ ಭಾವೋತ್ಕಟ ಅನುಭವದ ಪ್ರಯೋಜನ ಪಡೆವ ನವ್ಯತಂತ್ರವಿದೆ. ಜಗದ್ಗುರು ಜೆ. ಕೃಷ್ಣಮೂರ್ತಿ ಪ್ರಣೀತ ಗ್ರಂಥಗಳ ಇನ್ನೊಂದು ತಂತ್ರವುಂಟು, ಅಥವಾ 'ನಾಳೆ'ಯಲ್ಲಿ ಬರಲಿರುವ-ಬಂದೇ ಬಿಟ್ಟಿದೆ, ಎಂಬ ಹಾಗಿನ ಶ್ರದ್ಧೆ ಬೆಳೆಸಿಕೊಳ್ಳುವ 'ಯುಟೋಪಿಯ' : ಇಝುಂಗಳು ಪ್ರಯೋಜನ ಪಡೆಯುತ್ತಿರುವ-ಇಹವನ್ನು-ವಾಸ್ತವವನ್ನು ಮರೆಯಿಸುವ ತಂತ್ರವು 'ಜನತಾ' ಉಪಾಸನೆಯಲ್ಲಿ ಅಡಕವಾಗಿದೆ. 'ನಿಃಸ್ತ್ರೈಗುಣ್ಯೋ ಪಥಿವಿಚರತಾಂ ಕೋ ವಿಧಿಃ ಕೋ ನಿಷೇಧಃ' ಎಂಬ ಈ ಗುರುಸಿದ್ಧ : ಆತ್ರೇಯ ಪಂಥೀಯ ಅವಧೂತ, ಹಿಪ್ಪೀ ಪಂಥಿಯ ತಂತ್ರವು ಋಗ್‌ವೇದಕ್ಕೂ ಮುಂಚಿನಿಂದ ನಡೆದು ಬಂದಿದೆ.

ಎಂಕಿ : god of Wisdom, ತನ್ನ ತಂದೆ ಆಪಃರಸ (ಸರ್ಪ) ಅಪ್ಸುವನ್ನು ಕೊಲ್ಲುತ್ತಾನೆ. ಜ್ಞಾನಸೂರ್ಯನ ಉದಯ ಕಂಡಿತು. ಋಗ್ ವೇದದ ಇಂದ್ರನು ತನ್ನ ತಂದೆ ಆಪಃರಸ ಸ್ವರೂಪೀ (: ಸರ್ಪ=ಅದಿತಿಪತಿ) ತ್ವಷ್ಟಾರನನ್ನು ಕೊಲ್ಲುತ್ತಾನೆ. ಈ ತ್ವಷ್ಟಾರ ರೂಪ ಅಹಿ ಹಂತಕ ಇಂದ್ರನು ಋಗ್‌ವೇದದಲ್ಲಿ ಸವಿತೃ (=ಸೂರ್ಯನ) ದೇವನ ಪರ್ಯಾಯ ಪ್ರತಿಮೆ! ಎನುವ ಎಲಿಶ ಕವಿಯು ಕಾಮದ-ಧೀಪ್ರೇರಕ ಶಕ್ತಿ ಎಂಬರ್ಥದ ಸವಿತೃ=ಸೂರ್ಯನನ್ನು ಸೃಷ್ಟಿಸಿದ್ದು ಭಾರತೀಯ ಕವಿ ಪ್ರತಿಭೆ. ಇರಾಣಿನ ಅವೆಸ್ತಾದಲ್ಲಿ ಸೂರ್ಯನ ಸವಿತೃರೂಪೀ ಸ್ವತಂತ್ರ ಪ್ರತಿಮೆ ಇಲ್ಲ. ಆದರೆ, ಸೂರ್ಯ=ಸವಿತೃವಿನ ಪ್ರೇರಣೆಯಿಂದ ಕಾಣುವುದು ಎಂದು ಬಗೆಯಲಾದ 'ಸತ್ಯ' ಅರ್ಥ ಸೂಚಕ ಅಶ=ಋತ ಈ ಸಂಕೇತವು ಉಂಟು. ಋಗ್ವೇದ ಮತ್ತು ಅವೆಸ್ತಾಗಳ ಭಾಷಿಕ ಮೂಲ ಆಕೃತಿ ನೂರಕ್ಕೆ ನೂರು ಸಮಾನವಿದೆ, ಎಂದು ಮ್ಯಾಕಡೊನೆಲ್ಲ ಅವರ ವಿವರಣೆಯಿಂದ ತಿಳಿಯುತ್ತದೆ. ದೈವತ ಕಥೆಗಳಲ್ಲಿ ಮಾತ್ರ ಇಷ್ಟು ಸಾಮ್ಯವಿಲ್ಲ. ಆದರೂ ಸೋಮ>ಹೋಮ, ಹೋತೃ, ಆಪ, ಅಪಾಂ ನಪಾತ್, ಅಶ=ಋತ, ವಾಯು, ಅಗ್ನಿ, ಮಿತ್ರ ಇಂತಹ ಮೂಲಭೂತ ಸಂಕೇತಗಳು ಸಮಾನವಾಗಿಯೇ ಇವೆ. ಈ ಭಾಷಿಕರ ದೃಷ್ಟಿಕೋನದಲ್ಲಿ ಅಂದೇ ವ್ಯತ್ಯಾಸವಾಗ ತೊಡಗಿದ್ದುದನ್ನು ಸೂಚಿಸುವ ಸಂಕೇತಗಳನ್ನು ತಜ್ಞರು ಕಂಡುಹಿಡಿದಿದ್ದಾರೆ.

ಅವೆಸ್ತಾದಲ್ಲಿ ದೇವ ಸಂಕೇತಕ್ಕೆ ದೆವ್ವ ಎಂಬ ವಿಪರೀತಾರ್ಥವುಂಟು! ವೃತ್ರಹನ್ ಇಂದ್ರನೂ ಕೀಳುದೈವತ; ಅವೆಸ್ತಾದೊಳಗಿನ ವೆರೆಥ್ರಗ್ನ (Verethragna) ಒಂದು ಸ್ವತಂತ್ರ ಸಂಕೇತವೇ 'ವೃತ್ರಹನ್' (ಇಂದ್ರ)ನೊಡನೆ ಸಂಬಂಧದ ಬಗೆಗೆ ಇನ್ನೂ ವಿವಾದಗಳು ಉಂಟಂತೆ. ಇದರ ನಿರ್ಣಯವು ಕೇವಲ ಅವೆಸ್ತಾದಿಂದ ಶಕ್ಯವಿಲ್ಲ. ವೃತ್ರ (dragon) ಹನ್ ಭೂಮಿಕೆಯ ಮೂಲಪಾತ್ರ ಆರ್ಮೇನಿಯದತ್ತಣಿನ ಪುರಾತನ ಕಥೆಗಳಲ್ಲಿದೆ- ಎಂದು ಅವೆಸ್ತಾದ ವ್ಯಾಸಂಗಿಗಳು ಹೇಳುತ್ತಾರೆ. ಋಗ್‌ವೇದದ ವೃತ್ರಹನ್ ಇಂದ್ರನ ಕಥಾಭಾಗವು, ಸುಮೇರಿನತ್ತಣಿನ 'ಜ್ಞಾನದೇವ'ನೆಂಬ ಎಂಕಿಯ ಹೋಲಿಕೆಯದೇ ಆಗಿರುವಲ್ಲಿ, 'ವೃತ್ರ' ಸಂಕೇತದ ಅರ್ಥಕ್ಕಾಗಿ ಅವೆಸ್ತಾದ ಸಂಶೋಧಕರು ಇರಾಣಿನ ಹೊರಗಿನ ಕಥೆಗಳ ವಿಮರ್ಶೆ ಅವಶ್ಯ ಎಂಬ ನಿರ್ಣಯಕ್ಕೆ ಬಂದುದರ ಸಮಂಜಸತೆಯು ಪ್ರತೀತಿಗೆ ಬರುತ್ತದೆ. ಋಗ್ ವೇದದಲ್ಲಿ ಸೂರ್ಯ ಮತ್ತು ಸವಿತೃ ಎಂಬ ಇಬ್ಬರು ಸೂರ್ಯರಿದ್ದಾರೆ. ಒಬ್ಬನು ಭೌತ ಸೂರ್ಯ 'ಸವಿತೃ' ಸಂಕೇತವು (ಜ್ಞಾನ) ಪ್ರೇರಕ ಎಂಬರ್ಥದ ಸೂ>ಸವ್ ಆಖ್ಯಾತದಿಂದ ಇದು ನಿರ್ಮಿತವಾಗಿದೆ. ಇದರ ವಿವಿಧ ಪ್ರಯೋಗಗಳನ್ನು ಸಮೀಕ್ಷಿಸಿ

> "...the combinations show clearly that the root has the sense of stimulating, arousing, vivifying"[೬]

ಎಂದು ಮ್ಯಾಕಡೊನೆಲ್ ನಿರ್ಣಯವಿತ್ತಿದ್ದಾರೆ, ಎಂದರೆ ದೈವತ ಕಥೆಗಳೊಳಗಿನ ಸೂರ್ಯ=ಸವಿತೃವು, 'ಧೀ-ಪ್ರಚೋದಕ' (: ಧಿಯೋ ಯೋ ನಃ ಪ್ರಚೋದಯಾತ್) ಪ್ರಾರ್ಥನೆ ನಿತ್ಯ ಸಂಧ್ಯಾವಂದನೆಯೊಳಗಿನ ಶುದ್ಧ ಸಾಂಕೇತಿಕ ಪ್ರತಿಮೆಯಾಗಿದೆ. ಈ ರೀತಿಯಲ್ಲಿ ಈ ದೈವತ ಕಥೆಗಳೊಳಗಿನ ಚಂದ್ರನಾಗಲಿ ಸೂರ್ಯನಾಗಲಿ ಆ ಪುರಾತನರು ತಮ್ಮ ಜೀವನಾನುಭವದ ಅರ್ಥವನ್ನು ಮೂರ್ತರೂಪದಲ್ಲಿ ಕಾಣುವಾಗಿನ ಸಾಂಕೇತಿಕ ಮಾನದಂಡವು ಮಾತ್ರ, ಈ ಚಂದ್ರ ಅಥವಾ ಸೂರ್ಯ. ಚಾಂದ್ರ-ಸರ್ಪ ಪ್ರತಿಮಾ ಪೂಜಕರು, ಚಂದ್ರನು ಸ್ತ್ರೈಣತನದ ಪ್ರೇರಕನು ಎಂಬ ಲೋಕಾನುಭವವನ್ನು ಒಪ್ಪಲಾರರು-ಒಪ್ಪದೆ ಇರಲಾರರು ಎಂಬ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡ ಜೀವನ ಸಮಯವು ಋಗ್ವೇದ ಸಂಹಿತೆಯಲ್ಲಿ ಪ್ರತಿಬಿಂಬಿತವಾಗಿದೆ. ಸುಮೇರಿನತ್ತಣಿನ ವೃತ್ರ (ಅಪ್ಸು) ಹಂತಕ ಎಂಕಿಯು (: god of Wisdom) ಅಲ್ಲಿ ಆರಾಧ್ಯದೈವವಾಗುತ್ತಾನೆ. ಆದರೆ, ಋಗ್ವೇದದಲ್ಲಿ ವೃತ್ರ (ತ್ವಷ್ಟಾರ) ಹಂತಕ ಇಂದ್ರನೇ (ಸವಿತೃರೂಪೀ ಸೂರ್ಯ) ಪ್ರಧಾನ ದೈವತ. ಇವನು ವೃತ್ರ ಸಂಹಾರಮಾಡಿ ಉಪಕಾರ ಮಾಡಿದನು ಎಂಬ ಕೃತಜ್ಞತೆಯ ಸ್ತೋತ್ರಗಳೇ ಈ ವೇದದಲ್ಲಿ ಹೆಚ್ಚು ಇವೆ, ಎಂದು ಆಧುನಿಕ ಸಂಶೋಧಕರನ್ನು ಸಂಭ್ರಮಿತರನ್ನಾಗಿಸುವ ಯಾತು ತಂತ್ರದ ಪ್ರಯೋಜನ ಪಡೆಯಲಾಗಿದೆ! ಮೇಲ್ತೋರಿಕೆಯ ವರ್ಣನೆಯ ಮರೆಯಲ್ಲಿ, ಇಂದ್ರನು ಬ್ರಹ್ಮಹತ್ಯಾಪಾತಕಿ ಎಂಬ ಆರೋಪವನ್ನು ಬಹಿರಂಗಪಡಿಸಲು ಯೋಜಿಸಿರುವ ಅಮೋಘತಂತ್ರ ಸಮೀಕ್ಷಾರ್ಹವಾಗಿದೆ!

ಸವಿತೃವನ್ನು 'ಸರ್ವಸ್ಯ ಪ್ರಸವಿತಾ' (ಎಲ್ಲವನ್ನೂ ಹಡೆಯುವ) ಯೋನಿ ಮಂಡಲವಾಗಿ ವಿಪರೀತಾರ್ಥಕ್ಕೆ ತಿರುಗಿಸಿದ್ದಾನೆ! 'ಧ್ಯೇಯಃ ಸದಾ ಸವಿತೃಮಂಡಲ [O] ಮಧ್ಯವರ್ತೀ ನಾರಾಯಣಃ (ಸರ್ಪಃ); ಹೀಗೆ ಸೂರ್ಯಾದೇವಿ ಸರ್ಪನ (ಚಂದ್ರ) ಆ-ಲಿಂಗನದಲ್ಲಿ ಇದ್ದಾಳೆ. ಸೂರ್ಯ+ನಾರಾಯಣ ಎಂಬ ಈ ಮಿಥುನ ಸಂಕೇತವು ಅಮವಾಸ್ಯಾ ಅಥವಾ ಸೂರ್ಯಗ್ರಹಣದ ಸೂಚಕ! ಭಾರತದಲ್ಲಿ ಹಗಲಿನ ಬೆಳಕು (ಜ್ಞಾನ) ಇದ್ದರೆ ಈ ಮಿಥುನಯೋಗ ಕಾಣದಿರಲು ಶಕ್ಯವೊ? ಸಾರ್ಪರಾಜ್ಞೀ 'ಸೂರ್ಯ'ದೇವಿ ಹಡೆದ ದಿವಾಕರನನ್ನು ಅಥರ್ವವೇದ 'ವೃತ್ರಾತ್ ಜಾಕೋ ದಿವಾಕರಃ' ಎಂದು ಸ್ಪಷ್ಟೀಕರಿಸಿದ್ದುಂಟು!

ಟಿಪ್ಪಣಿಗಳು

೧. ಪು. ೩೭೧ ?
೨. ***ಋಗ್ವೇದ ಸಂಹಿತೆ*** I - ೧೬೧
೩. ಕಾಲಿದಾಸ ***ರಘುವಂಶಂ*** ೧-೧
೪. ಎಲ್ಲೆಲ್ಲೂ ಆದಿಯಲ್ಲಿ ಕತ್ತಲನ್ನು ಆಲಿಂಗಿಸಿದ ಕತ್ತಲು ಕವಿದಿತ್ತು. [ಯಾವ ಆಶಾ=ದಿಶಾ ಸೂಚಕ] ಒಂದೂ ಕಿರಣ-ಸಂ-ಕೇತವೂ ಕಾಣದ ಕಗ್ಗತ್ತಲು! ಆಃ! ಸರ್ವತ್ರ ಸಲಿಲವೇ ಸಲಿಲ!
೫. Gertrude Jobes (Ed) Dictionary of Mythology P. 30
೬. Banarjee J. N.; ***Development of Hindu Iconography*** 1956 p. 124
೭. ***ಶ್ವೇತಾಶ್ವತರೋಪನಿಷತ್ತು*** ೩-೯, ೬-೬ ***ಕಠೋಪನಿಷತ್ತು*** ೬-೧
೮. ***ಋಗ್ವೇದ ಸಂಹಿತೆ*** vii. ೯೯ ಮತ್ತು I - ೨೨, ೫-೭
೯. ಅದೇ vii. ೯೯, I - ೧೪೪
೧೦. Frank fort H.; ***Before Philosophy***, P. 144
೧೧. Ibid p. 417
೧೨. Gertrude Jobes (Ed) ***Distionary of Mythology*** pp.244-47
೧೩. ***ಋಗ್ವೇದ ಸಂಹಿತೆ*** I-೮೧
೧೪. Macdonell ; ***Vedic Mythology*** p. 34

ಸವಿತೃ ಪ್ರತಿಮೆಯ ಅಪೂರ್ವತೆ

ಸಂಕೇತದ ಸ್ವರೂಪ

ಋತ (: ಪ್ರಕಾಶ) ಸ್ವರೂಪೀ ಸತ್ಯದ ಸಾಂಕೇತಿಕ ಪ್ರತಿಮೆ : ಸವಿತೃ. ದಿಕ್ಕಾಲ ಪರಿಸರಸ್ಥ ಯಾವ ಅನುಭೂತಿಯು ಈ ಪ್ರತಿಮಾ-ಸೃಷ್ಟಿಯ ಹಿನ್ನೆಲೆಯಲ್ಲಿ ಉಂಟು, ಎಂಬುದನ್ನು ಸೂಚಿಸುವ ವಾಕ್ಯಖಂಡವು ಋಗ್ವೇದದಲ್ಲಿಯೆ ಇದೆ: "(ಹೇ ಸವಿತಃ ದೇವ) ಉಭೇ ರಾತ್ರೀ ಪರಿ ಈಯಸೇ"[1] ಸವಿತೃದೇವನ ವೈಶಿಷ್ಟ್ಯವು ಅವನು ಎರಡು ರಾತ್ರಿಗಳ ನಡುವೆ ಮುಂದೆ ಹೊರಟಿರುತ್ತಾನೆ. ಈ ರಾತ್ರಿಗಳು ಎರಡು ಯಾವುವು? ಇಲ್ಲಿ ಸೌರ ಭೂಮಿಕೆಯಂತೆ ಎರಡು ಬಗೆಯ ವಿವರಣೆ ಶಕ್ಯವಿದೆ. ಈ ಋಚೆಯ ಪ್ರಾರಂಭವೇ 'ಹೇ ಸವಿತಃ ದೇವ ತ್ರೀಣಿ ರೋಚನಾ 'ಯಾಸಿ' ಈ ರೀತಿಯಲ್ಲಿ ಆಗಿದೆ. ಈ ಸವಿತೃವು ಮೂರು ಲೋಕಗಳನ್ನು ಬೆಳಗುತ್ತ-ಆನಂದವನ್ನೀಯುತ್ತ ಹೋಗುತ್ತಾನೆ. ಭೂಃ ಭುವಃ ಮತ್ತು ಸ್ವಃ ಈ ಮೂರು ಲೋಕಗಳಲ್ಲಿ, ಅಂತರಿಕ್ಷದ ಮಧ್ಯಸ್ಥ : ಭುವರ್ಲೋಕದ ಮಾಧ್ಯಮದ ಮೂಲಕ ಸವಿತೃವಿನ ಅಸ್ತಿತ್ವವು ಪ್ರತೀತಿಗೆ ಬರುತ್ತದೆ. ಆಚಾರ-ಭೂಲೋಕ, ಇಲ್ಲಿ ಕೃತಿಯ ನೆಪದಿಂದ ಕಾಣತೊಡಗುವ ಜೀವನದ ಅರ್ಥ=ವಿಚಾರ ರೂಪ ಪ್ರಕಾಶವೇ ಭುವರ್‌ಲೋಕ, ಎಂದು ಈ ಮೊದಲು ವಿವರಿಸಿದ್ದುಂಟು. ಸ್ವರ್‌ಲೋಕವು ಅರಿಕೆಯ ಅಳವಿನ ಹೊರಗಿನ ಪ್ರಕಾಶಲೋಕ. ಅದು 'ಮಾಧ್ಯ'ಮದ ಮೂಲಕವೇ ಕಾಣಬಲ್ಲುದು. ಈ ಕಾರಣದಿಂದ ಅದು ಅ-ಪ್ರಕೇತ (Unconscious) ಕತ್ತಲು! ಭೂಲೋಕ ಸುಷುಪ್ತಿಯ (Sub-conscious) ಕತ್ತಲಿನಲೋಕ! ನಿನ್ನೆಗಳಲ್ಲಿಯ ಅರ್ಥ ವಿಸ್ಮೃತಿ-ಪಥ ಸೇರುವುದರಿಂದ! ಭುವರ್‌ಲೋಕದ ಎಂದರೆ ಭಾಷಿಕ ಪ್ರತಿಮೆಗಳ ಗರ್ಭಿತಾರ್ಥದ ಬೆಳಕಿನಲ್ಲಿ ಭೂಲೋಕದ ಜೀವನದ ಅರ್ಥವಾಗುತ್ತದೆ. ಈ ಸಮಷ್ಟಿ ಜೀವನದ ಸಂತತ ಪ್ರವಾಹ ನಾಳೆಯತ್ತ ಸಾಗಿದ್ದುದು ಪ್ರತೀತಿಗೆ ಬರುತ್ತದೆ.

ಕತ್ತಲೆಯ ಸಂಕೇತಕ್ಕೆ ಇನ್ನೂ ಒಂದು ಬಗೆಯ ಅರ್ಥವು ಶಕ್ಯವಿದೆ. ಈ ವೇದದಲ್ಲಿ ಋತ ಸ್ವರೂಪೀಸತ್ಯ ಮತ್ತು ಏಕಂ : ಸತ್=ಸತ್ಯ ಎಂಬ ಎರಡು ಬಗೆಯ ವೈಚಾರಿಕ ಭೂಮಿಕೆಗಳ ಉಲ್ಲೇಖವಿದೆ. ಏಕಂ ಸ್ವರೂಪೀ ಸತ್-ಸತ್ಯವು ದಿಕ್ಕಾಲಾತೀತ (Absolute) ಸ್ವರೂಪದ್ದು. ಈ ಭೂಮಿಕೆಯಲ್ಲಿ 'ಕಾಲ' ಎಂಬುದು ಕೇವಲ ಕಾಲ್ಪನಿಕವಾಗುತ್ತದೆ! ನಿನ್ನೆ, ಇಂದು ಅಥವಾ ನಾಳೆ ಈ ಮೂರೂ ಅರ್ಥವಿಹೀನ. ಈ ಮೂರರಲ್ಲಿ ಯಾವುದಾದರೂ ಒಂದು ಬಿಂದುವಿನಲ್ಲಿ ವಿಶ್ವಸ್ಥ ಏನೆಲ್ಲ 'ಅರ್ಥ'ವು ಕೇಂದ್ರೀಕೃತವಾಗಿದೆ ಎಂಬ ಹಾಗಿನ ಶ್ರದ್ಧೆಯಿಲ್ಲದೆ ಏಕಂ ಸತ್ತಿನಲ್ಲಿ ನಂಬುಗೆ ಹುಟ್ಟಲಾರದು. 'ಏಕಂ' ಪಂಥವು ವ್ಯಾಹೃತಿತ್ರಯ ನಾಶಮಾಡಿದ್ದೇಕೆ? ಮೂರು ಈ ಸಂಖ್ಯೆಯು ಏಕಂ ಸತ್ತಿನ ಶತ್ರುವೇ ಆಗಿದೆ.

ಆದರೆ, ನಿನ್ನೆ→ಇಂದು→ನಾಳೆಗಳ ಅಸ್ತಿತ್ವವನ್ನು ಒಪ್ಪದವರಿಗೆ ಋತ ಸ್ವರೂಪೀ ಸತ್ಯದ ಅರ್ಥವೇ ಆಗಲಾರದು! ಇಷ್ಟೇ ಅಲ್ಲ; ಏಕಂ : ಸತ್ತಿನ ಎಂದರೆ ರೇತ-ಸತ್ಯದ ಭೂಮಿಕೆಯ ಪೂರ್ವಾನುಭವಗಳ ಆಧಾರವಿಲ್ಲದೆ-ಎಂದರೆ ಭೂಲೋಕದ ನಿನ್ನೆಗಳ ಪಾರ್ಶ್ವಭೂಮಿ ಇಲ್ಲದೆ 'ಇಂದು' ಎಂಬುದು ಅರ್ಥ ಶೂನ್ಯ. ಯಾರಿಗೆ 'ಇಂದು' ಇಲ್ಲವೊ ಅವರ ಪಾಲಿಗೆ 'ನಾಳೆ' ಎಂಬುದೇ ಇಲ್ಲ! ಆದರೆ, 'ನಿನ್ನೆ'ಗಳು=ನಿನ್ನೆಗಳ ಅರ್ಥ, ಇದು ಮರೆತುಹೋಗಿ ಸುಪ್ತಚೇತನದ ಕತ್ತಲಿನ ಅಡಕಲ ಕೋಣೆಯಲ್ಲಿ ಉಳಿಯುತ್ತದೆ. ಅಲ್ಲಿ ಸಂಗ್ರಹವಾಗುವ ಸ್ಮೃತಿ-ಪ್ರತಿಮೆಗಳು, ಸಾಮಾನ್ಯವಾಗಿ ಬಗೆಯಲಾಗಿರುವಷ್ಟು, ಅ-ವ್ಯವಸ್ಥಿತವಿರುವುದಿಲ್ಲ. ಇಷ್ಟಪಟ್ಟ ಹಾಗೆ ವ್ಯವಸ್ಥಿತವಾಗ್ಗಿ ಅವು ಹೊತ್ತಿಗೆ ಒದಗುವುದಿಲ್ಲ. ಆದರೆ, ಫಕ್ಕನೆ ನೆನಪು ಒತ್ತರಿಸುತ್ತಲೆ ಸರ್ಕಸಿನ ಪ್ರಾಣಿಗಳಂತೆ ಒಂದು ನಿಯಮಬದ್ಧ ರೀತಿಯಲ್ಲಿ ಕಾಣಿಸಿಕೊಳ್ಳುತ್ತವೆ. 'there is method, even in madness' ಎಂಬುದೂ ಸುಳ್ಳಲ್ಲ.

ಮಾನವನು, ಜೀವನದ ಉದ್ದಕ್ಕೂ-ಅನುದಿನವೂ-ನಿನ್ನೆ-ನಾಳೆಗಳೆಂಬ ಎರಡು ಕತ್ತಲೆಗಳ ನಡುವೆ ತನ್ನ ದಾರಿಯನ್ನು ಕಂಡುಕೊಳ್ಳುತ್ತ, ಇಂದಿನಲ್ಲಿ ಮುನ್ನಡೆಯಬೇಕಾಗಿದೆ. ನಿನ್ನೆಯ ಸುಪ್ತಚೇತನದ ಕತ್ತಲು ಒಂದು ಕಡೆಗೆ ನಾಳೆಯ ಅ-ಪ್ರಕೇತ ಕಗ್ಗತ್ತಲೆಯು ಇನ್ನೊಂದು ಕಡೆಗೆ, ಅವನನ್ನು ಸುತ್ತುವರೆದು ಕವಿದು ನಿಂತಿದೆ! ಪ್ರತಿದಿನವೂ 'ಇಂದಿ'ನಲ್ಲಿ ಬಾಳದಾರಿ ಕಾಣುತ್ತಿರುವುದು ಸವಿತೃದೇವನ ಕೃಪೆಯ ಫಲವಾಗಿದೆ ನಿನ್ನೆಯೊಳಗಿಂದ ನಾಳೆಯತ್ತ ಸಾಗಿದ ಅವ್ಯಾಹತ ಭೌತಕಾಲ-ಪ್ರವಾಹ ನಿನ್ನೆ→ಇಂದು→ನಾಳೆಯ ರೂಪದ ಈ ಕಾಲಪ್ರವಾಹ→ಈ ಅಖಂಡಿತ ಅ-ದಿತಿ ರೂಪವು ಪ್ರತಿ ವ್ಯಕ್ತಿಯ ಜೀವನದಲ್ಲಿ ಇಬ್ಭಾಗವಾಗುವ ಕ್ಷಣ; ಪ್ರಜ್ಞಾರೂಪ ಸವಿತೃ ಕಿರಣ ಬಂದು ತಾಗುವ ಕ್ಷಣದ ಎಡೆಯಲ್ಲಿ 'ಇಂದು' ಈ ಪ್ರಜ್ಞೆ ಮೂಡುತ್ತದೆ. ಆಗ ಅದಿತಿ-'ದಿತಿ'ಯಾಗುತ್ತಾಳೆ! ಮೊದಲು ಅಖಂಡಿತವಿದ್ದ ಹಗಲು ಇರುಳು ಸಹ ಅರಿವಿನ ಬೆಳಕಿನಲ್ಲಿ ಹಗಲು-ರಾತ್ರಿ ಎಂದು ತುಂಡರಿಸಲ್ಪಡುತ್ತದೆ! ಈ ಒಂದೊಂದು ತುಂಡಿನಲ್ಲಿ ಮತ್ತೆ ಏಳು-ಏಳು (ವಾರ) ಉಂಟಾಗುವವು; ಶುಕ್ಲ-ಕೃಷ್ಣಪಕ್ಷವು ಕಾಣುವುವು! ದಿತಿಯ ಗರ್ಭ ಇಂದ್ರ (ಸೂರ್ಯ) ಛೇದಿಸಿದನೆಂಬ ಕಥೆ ಇದೆ! ಪ್ರತಿಮಾ : ಸಂಕೇತಗಳ ಮೂಲಕ ಅರಿಕೆಗೆ ಬರುವ ಈ ಅರ್ಥವು ಜೀವನದೊಳಗಿನ ವಾಸ್ತವ : ಸತ್ಯದ ದರ್ಶನ ಮಾಡಿಸುವುದು ನಿಜವೊ? ಸಂಭ್ರಾಮಕವೊ? ಎಂಬುದನ್ನು ಪ್ರಾಜ್ಞ ವಿಮರ್ಶಕರು ಈ ಫಲಿತಾಂಶಗಳನ್ನು ಒರೆಗೆ ಹಚ್ಚಿ ನೋಡಿಕೊಳ್ಳಬೇಕಾಗಿ ಬಿನ್ನಹ:

೧. 'ಅದಿತಿ' ಅಖಂಡಿತ ಕಾಲ-ಸರ್ಪ, ಸ್ವಷ್ಟಾರನೆಂದರೂ ಅದಿತಿಯ ಅಂಗವೇ.

೨. ಇಂದ್ರನು (: ಸವಿತೃ) ಪ್ರಕಾಶ ಸ್ವರೂಪನು

೩. ಈ (ಸವಿತೃರೂಪ) ಪ್ರಜ್ಞಾಪ್ರಕಾಶ ಕಿರಣವು ಬರುತ್ತಲೆ, ಅಖಂಡಿತ ಅದಿತಿ ಸ್ವರೂಪದ ಸರ್ಪವು ಇಬ್ಭಾಗವಾಗುತ್ತದೆ!

೪. ಹಗಲು ಇರುಳೆಂಬ ಪ್ರಜ್ಞೆ ಮೂಡುತ್ತದೆ. ಭಾಷಾರೂಪ ಸಾಂಕೇತಿಕ ಪ್ರತಿಮೆಗಳು ಆಧಾರಕ್ಕೆ ಇಲ್ಲದಂದು ಈ ನರ : ದ್ವಿಪಾದ-ಪಶುವರ್ಗದ ಸಂಗಾತಿಯಾಗಿದ್ದನು. ಪ್ರಜ್ಞೋದಯವಾಗುವುದರೊಡನೆ ಹಗಲು-ಇರುಳಿನ ಭೇದ ಗೊತ್ತಾಯಿತು. ನಿನ್ನೆ ಇಂದು ನಾಳೆಗಳ ಅರಿವು ಮೂಡಿತು ಹಗಲಿನಲ್ಲಿ ೭ ತುಂಡು! ಇರುಳಿನಲ್ಲಿ ೭ ತುಂಡು ಇವನ್ನು ಮರುತರನ್ನಾಗಿ ಪವಾಡ ಕಥೆ ಕಲ್ಪಿಸಲಾಗಿದೆ. (ಅ)ದಿತಿ ಗರ್ಭಸ್ಥ ಶಿಶುವನ್ನು ಇಬ್ಭಾಗಿಸಲಾಯಿತಂತೆ; ಬಳಿಕ ಒಂದೊಂದರಲ್ಲಿ ೭, ೭, ತುಂಡಾಗಿ ಆ ನೀಚ ಇಂದ್ರನು ಆ ಕೂಸು ಕತ್ತರಿಸಿದನಂತೆ!

೫. ಇಂದ್ರ (: ಸವಿತೃ-ಸೂರ್ಯ) (=ಪ್ರಜ್ಞೆ) ಇದರ ಬಗೆಗಿನ ವಿರಕ್ತ ಪಂಥೀಯ ದಿವ್ಯಾಧ್ಯಾತ್ಮವಾದಿಗಳ ದ್ವೇಷದ ಭಾವವು ಸ್ಪಷ್ಟವಿದೆ: ಪ್ರಜ್ಞೆಯು ಉಳಿದಲ್ಲಿ ಜೀವನದಲ್ಲಿ ಬಾಳಿನಲ್ಲಿ ಆಸ್ಥೆ ಉಂಟಾಗುತ್ತದೆ. ಬಾಳಿನಲ್ಲಿ ಇರುವುದಕ್ಕೆ ಪ್ರೇರಿಸುವ

ಪ್ರಜ್ಞೆ-ಅರಿವನ್ನೇ ಬರಡು ಅಥವಾ ಕುರುಡು ಮಾಡುವ ತಂತ್ರವು, ಋಗ್ ವೇದದಿಂದ ತೊಡಗಿ ಏನೆಲ್ಲ ಸಾಹಿತ್ಯದಲ್ಲಿ ನಾನಾರೂಪದಲ್ಲಿ ಸೇರಿದ್ದು ಕಾಣದೊರೆಯುತ್ತದೆ. ಮಹಾಭಾರತ, ಗೀತೆ, ರಾಮಾಯಣಗಳು ಮುಕ್ತವಿಲ್ಲ.

೬. ಸವಿತೃವು=ಇಂದ್ರನು ಪ್ರಕಾಶರೂಪವಿರುವುದು ಇಲ್ಲಿ ಕಾಣುತ್ತಿರುವುದಕ್ಕೆ ಬೇರೆಡೆಯ ಪ್ರಮಾಣಗಳೂ ಇವೆ. (ಎಂಕಿ, ಇಂದ್ರರ ಸಾಮ್ಯ ನೋಡಿ).

೭. ಇಂದ್ರನು ಪ್ರಕಾಶರೂಪನೆಂಬುದು ನಿಜವೆಂದರೆ ಅವನು ಲೈಂಗಿಕ ಶಕ್ತಿಯ ಪ್ರತೀಕವಾಗಲು ಶಕ್ಯವೊ? 'ಇಂದ್ರ, ಇಂದ್ರಿಯಂ, ದಧಾತು' ಎಂಬ ಪ್ರಾರ್ಥನಾ ಮಂತ್ರದಲ್ಲಿ ಇಂದ್ರನ ವಿಕೃತಿಯಾಗಿರುವುದು ನಿಜವೊ ಪರೀಕ್ಷಿಸಿಕೊಳ್ಳಿ.

ಋ. ವೇದದಲ್ಲಿ ಇಬ್ಬಗೆಯ ಪ್ರಶ್ನೆಗಳು ಅಡಕವಾಗಿವೆ: ಈ ವಿಶ್ವವು ಮಾನವರಿಗೆ ಕಾಣುವುದು ಹೇಗೆ? ಇದು ಕಣ್ಣಿಗೆ=ಪ್ರಕಾಶಕ್ಕೆ ಸಂಬದ್ಧಪ್ರಶ್ನೆ. ಈ ವಿಶ್ವ ಹುಟ್ಟಿದ್ದು ಹೇಗೆ? ಇದು ಸೃಜನದ ಕ್ಷೇತ್ರಕ್ಕೆ ಸೀಮಿತ ಪ್ರಶ್ನೆ! ಪ್ರಶ್ನೆಯು ಉತ್ತರವನ್ನು ರೂಪಿಸುತ್ತದೆ.

ಈ ಸವಿತೃದೇವನು ಭೌತ ಸೂರ್ಯನಲ್ಲ. ಈ ಸವಿತೃವಿನ ಪ್ರಕಾಶದಲ್ಲಿ ಕಾಣುವ 'ಸತ್ಯ'ವು, ಶಬ್ದ ಪ್ರತಿಮೆಗಳ ಮೂಲಕ ಮೂರ್ತ ಆಕೃತಿರೂಪ (name and form) ಉಳ್ಳದು. ಋಗ್ ವೇದದ 'ಅ-ಸತಃ ಸತ್ ಅಜಾಯತ' ಎಂಬ ವಾಕ್ಯದಲ್ಲಿ ಅಭಿಪ್ರೇತವಿರುವ ಅರ್ಥವೇ ಇದು. ಅ-ಸತಃ (: ನಾಮರೂಪ ವಿವರ್ಜಿತೇನ) ಸತ್ (: ನಾಮ-ರೂಪವಿಶಿಷ್ಟಂ) ಅಜಾಯತ (ಪ್ರಾದುರಾಭೂತ್) ಎಂದು, ಸಂಪ್ರದಾಯವಂತ ಭಾಷ್ಯಕಾರರೇ ಅರ್ಥ ವಿವರಿಸಿದ್ದಾರೆ.[೨] ಅಸ್ ಆಖ್ಯಾತಕ್ಕೆ ಇರು, ಸಂಭವಿಸು, ಆಗು, ಕಾಣಿಸಿಕೊಳ್ಳು ಎಂಬೀ ಬಗೆಯ ಅರ್ಥಗಳಿವೆ. ಅಸ್>ಅಸ್ತಿ; ಅಸ್>ಸತ್, ಸತ್ಯ, ಎಂಬಿವು ದಿಕ್ಕಾಲಪರಿಸರಸ್ಥ ಮೂರ್ತ ಆಕೃತಿರೂಪ ಸೂಚಕ ಸಂಕೇತಗಳೇ ಆಗುತ್ತವೆ. ಸತ್=ಮೂರ್ತ ಆಕೃತಿರೂಪ, ಇದಕ್ಕೆ ಪ್ರತಿಯಾಗಿ ಅ-ಮೂರ್ತ (ಆ-ಕೃತಿರೂಪ) ಎಂಬ ಅರ್ಥದಲ್ಲಿ 'ಅ-ಸತ್' ಎಂದಾಗ ಇದರಲ್ಲಿ ಆತ್ಯಂತಿಕ ಅಭಾವವು ಅಭಿಪ್ರೇತವಿಲ್ಲ. ಅ-ಸತಃ, ಎಂದರೆ ಅ (ಮೂರ್ತ) ಸತ್ತಿನೊಳಗಿಂದ ಸತ್ ಎಂದರೆ ಮೂರ್ತ ಆಕೃತಿರೂಪ ಸಂಭವಿಸಿತು. ಈ ಸೃಷ್ಟಿ ಕಾಣಿಸಿಕೊಂಡದ್ದು ಹೇಗೆ? ಎಂಬ ಪ್ರಶ್ನೆಯು ಇಲ್ಲಿ ಉತ್ತರ ಪಡೆವ ಹಾಗೆ ಕಾಣುತ್ತದೆ. ಏಕೆಂದರೆ ಮೂರ್ತ-ಅಮೂರ್ತ ಎಂಬ ಈ ವಿಚಾರವು, ಕಣ್ಣಿನ ಪ್ರೇರಣೆಯಿಂದ ಪ್ರಚೋದಿತ 'ಧೀ'ಶಕ್ತಿಯ ಫಲ. 'ವಿಶ್ವಚಕ್ಷು' ಎಂಬ ಸೂರ್ಯನ ಈ ನಾಮರೂಪದಲ್ಲಿ ಮಾನವನ ಸ್ವಂತದ ಅನುಭವವೇ ಪ್ರತಿಬಿಂಬಿತವಾಗಿದೆ! 'ಅ-ಸತಃ ಸತ್ ಅಜಾಯತ' ಇದು ಚಕ್ಷುಸ್ಸಿನ ಭೂಮಿಕೆಯ ಉತ್ತರ; ಸೂರ್ಯ ಪ್ರಕಾಶವಿದ್ದೂ, ಭಾಷೆ ಬರುವ ಮೊದಲು ಸುತ್ತಲಿನ ವಸ್ತು-ವಿಷಯಗಳನ್ನು ವಿಂಗಡಿಸಿ ಹೇಳಲು ಬಾಯಿ ಇರುವುದಿಲ್ಲ! ತೀರ ಅಪರಿಚಿತ ಭಾಷೆಯ ದೇಶದಲ್ಲಿ ಹೋದಾಗ, ಹೊರಗಣ್ಣಿಗೆ ಕಾಣುತ್ತಿದ್ದರೂ ಅನೇಕ ಸಂಗತಿಗಳ ಅರ್ಥವು ಆಗುತ್ತಿರುವುದಿಲ್ಲ. ಅಲ್ಲಿಯ ಭಾಷಿಕ ಕನ್ನಡಕದಿಂದಲೊ ಅಥವಾ ತನ್ನ ಭಾಷಿಕ ಕನ್ನಡಕಕ್ಕೆ ಮಾರ್ಪಡಿಸಿಕೊಂಡ ಬಳಿಕವೊ, 'ಕಣ್ಣು' ಪಡೆದ ಅನುಭವ ಬರುತ್ತದೆ. ಸವಿತೃ (: ಸೂರ್ಯ) ಪ್ರಕಾಶವು ಜೀವನದ ಈ ಹಂತದ ಅನುಭವದಲ್ಲಿ ಅರಿಕೆಗೆ ಬಂದುದು.

ಆದರೆ, ಏಕಂ : ಸತ್ ಭೂಮಿಕೆಯ ಸಾಂಕೇತಿಕ ಪ್ರತಿಮೆಗಳನ್ನು ಹಾಗೂ ಅವುಗಳ ಪಾರ್ಶ್ವಭೂಮಿಯನ್ನು ಸಮೀಕ್ಷಿಸಿದರೆ, ಈ ವೈಚಾರಿಕ ವಿವರಣೆಯನ್ನು ಉತ್ತರ ರೂಪವಾಗಿ ಪಡೆದ ಪ್ರಶ್ನೆ, ಸೃಜನ ವ್ಯಾಪಾರಕ್ಕೆ ಸಂಬಂಧಿಸಿದ್ದು ಇರುವುದಾಗಿ ಸ್ಪಷ್ಟವಾಗುತ್ತದೆ. ಋಗ್ ವೇದದಲ್ಲಿಯೆ "ಕಿಂ ಸ್ವಿತ್ ಆಸೀತ್ ಅಧಿಷ್ಠಾನಂ? ಆರಂಭಣಂ ಕತಮತ್ ಸ್ವಿತ?" ಎಂಬ ಪ್ರಶ್ನೆಗೆ ವನಂ (: ವನಿತಾ) ಮತ್ತು ವೃಕ್ಷ (: ಪುರುಷ) ಎಂಬ ಉತ್ತರವು ಅದೇ ಸೂಕ್ತದಲ್ಲುಂಟು.[೩] 'ಶಮಿತ್ ಗರ್ಭಂ ದಧ್ರ ಆಪಃ' (ನೀರು ಬಸಿರಾದ) ಪವಾಡ ಇದರ ಮುಂದಿನ ವಿಶ್ವ-ಕರ್ಮನ ಸೂಕ್ತದಲ್ಲಿದೆ.[೪] ಭಾರತೀಯ ತತ್ವಜ್ಞಾನದೊಳಗಿನ 'ಕರ್ಮ' ಸಿದ್ಧಾಂತ ಎಲ್ಲಿಂದ ಬಂತು? ಎಂಬ ಸಮಸ್ಯೆ ಹಲವರನ್ನು ಕಾಡುತ್ತಿದೆ! ಜನ್ಮಕ್ಕೂ ಮೊದಲೆ ಒಂದು ವ್ಯಕ್ತಿಗೆ ಅವನ 'ಕರ್ಮ' ಬೆನ್ನಟ್ಟಿ ಬರುತ್ತದೆ ಎಂಬ

ಶ್ರದ್ಧೆ ಬುದ್ಧಿಗೆ ಹಿಡಿಸದು! ಕರ್ಮ ದೇವರು ಎಂದರೆ ಇಂದ್ರಿಯಗಳು! 'ಕರ್ಮ-ದೇವಾನಾಂ ಆನಂದಾಃ' ಎಂಬಲ್ಲಿ, ಕರ್ಮದೇವರಲ್ಲಿ ಪ್ರಧಾನ ದೇವರು, ಎಂದರೆ ವಿಶ್ವ (ನಿರ್ಮಾಣ) ಕರ್ಮರತ ಇಂದ್ರಿಯ=ಜನನೇಂದ್ರಿಯ ಎಂದೇ ಅರ್ಥ. ಇವನನ್ನು ವಿ-ದೇಹದ ರಾಜ=ಜನಕನ ರೂಪದಲ್ಲಿ ಹಾಗೂ 'ಅಂಗ' ರಾಜನ ರಾಜಧಾನಿ 'ರೋಮಪುರಿ' ಎಂಬೀ ಬಗೆಯ ಅದ್ಭುತ ಪ್ರತಿಮಾ ರೂಪದಲ್ಲಿ ಭಾರತೀಯ ಲೋಕಕಥೆಗಳಲ್ಲಿ ಅ-ಮರವಾಗಿಸಿದ್ದಾಗಿದೆ. 'ರವಿ' ಕಾಣದ್ದನ್ನು ಸೃಜಿಸಬಲ್ಲ ನವೋನವ ಶಬ್ದಸೃಷ್ಟಿಯ ವಿಶ್ವಕರ್ಮರ ಪ್ರತಿಭೆ ಇದು.

ಸೃಜನದ ಪಾತಳಿಯ ಹಿರಣ್ಯಗರ್ಭ ದೇವನ ಭೂಮಿಕೆ; ಏಕಂ : ಸತ್ ಸ್ವರೂಪೀ ತತ್-ಮಯತೆಯ ದಿಕ್ಕಾಲಾತೀತ 'ನಿಃಶಬ್ದಂ ಬ್ರಹ್ಮಮುಚ್ಯತೇ' ಎಂಬ ಅನುಭವದ ಭೂಮಿಕೆಯೇ ಬೇರೆ. ಕವಿಯಂತೆ, ಅಮೂರ್ತದಿಂದ ರೂಪ ಆಕೃತಿಯ ಮೂರ್ತ ಸತ್‌ಸ್ವರೂಪದಲ್ಲಿ ಶಬ್ದ-ಪ್ರತಿಮೆಗಳ ದರ್ಶನ ಮಾಡಿಸುವ ಸವಿತೃವಿನ ಋತ=ಸತ್ಯದ ಭೂಮಿಕೆಯೆ ಬೇರೆ. ಇವೆರಡನ್ನೂ ಅ-ಭಿನ್ನ ಎನ್ನಲಾಗುವುದಿಲ್ಲ. ಸ್ಪರ್ಶಜ್ಞಾನ ಜನ್ಯ ಉನ್ಮಸ್ಕಭಾವ ಸಮಾಧಿಯಲ್ಲಿ ಪ್ರಪಂಚವು ಒಂದು ಶೂನ್ಯ ಅಥವಾ 'ತಮಃ ಆಸೀತ್ ತಮಸಾ ಗೂಳ್ಹಂ' ಸ್ವರೂಪದ ಅನುಭವವು ಇಲ್ಲದಿದ್ದರೆ ಅದು 'ಸಾಮರಸ್ಯ'ದ ಹಂತದ ಪ್ರಾಮಾಣಿಕ ಅನುಭವವು ಎನಿಸಲಾರದು. ಸ್ಪರ್ಶಜ್ಞಾನದ ಅಂಗವೇ 'ಪ್ರಧಾನ' ಅಂಗವಾಗಿದ್ದ ಹಂತದಲ್ಲಿ ಪೂಜಾರ್ಹವೆನಿಸಿದ ಪ್ರತಿಮೆ : ಹಿರಣ್ಯಗರ್ಭ ದೇವನ ಮೂರ್ತರೂಪ!

ಋಗ್‌ವೇದಸ್ಥ ಆಶಯ ಗ್ರಹಣದಲ್ಲಿ ಪ್ರಯೋಜನಕ್ಕೆ ಬಂದ ಅರ್ಥ-ಪದ್ಧತಿಯ ಪ್ರಯೋಗವಿದು. ನೇತಾರ : ಸಮಿತಿ; ಅದು ರೂಢಿಸುವ ಸಾಂಸ್ಕೃತಿಕ ಸಮಯ; ಮತ್ತು ಈ ಸಮಯವು ಸೃಜಿಸುವ ಸಂಕೇತ ಹಾಗೂ ಪ್ರತಿಮೆಗಳು. ತಳಪಾಯದಲ್ಲಿ ಈ ಮೂರೂ ಘಟಕಗಳ ಆಧಾರವಿಲ್ಲದೆ, ಯಾವ ಸಂಸ್ಕೃತಿಯೂ ಮೈದಾಳಲು ಶಕ್ಯವಿಲ್ಲ. ಇಂದು ಪ್ರಪಂಚದಲ್ಲಿ, ಯಾವ ಒಂದು ಸಂಸ್ಕೃತಿಯೂ ಅದರ ಮೂಲ ರೂಪದಲ್ಲಿ ಕಾಣದೊರೆಯಲು ಶಕ್ಯವಿಲ್ಲ. ಸಂಸ್ಕೃತಿಗಳಲ್ಲಿ ಸಮಿಶ್ರಣಕ್ಕೆ ಅತಿಪುರಾತನ ಕಾಲದಿಂದಲೇ ಪ್ರಾರಂಭವಾಗಿದೆ. ಆದರೂ ಪ್ರಭಾವಶಾಲಿಯಾಗಿ ಮೆರೆದ ಯಾವ ಸಂಸ್ಕೃತಿಯೂ ಸ್ಥೂಲವಾಗಿಯಾದರೂ, ಬೆಳಕಿನಲ್ಲಿ ಬರುವ ಶಕ್ಯತೆ ದಿನ ದಿನಕ್ಕೂ ಹೆಚ್ಚಾಗುತ್ತಿದೆ. ಸಂಸ್ಕೃತಿಯ ಮೂಲಭೂತ ಘಟಕಗಳ ಅನುಸಂಧಾನದಿಂದ ಪುರಾತನ ಸಮಿಶ್ರ ಸಂಸ್ಕೃತಿಗಳನ್ನು ವಿಂಗಡಿಸಿ ಗ್ರಹಿಸಿಕೊಳ್ಳುವುದರ ಶಕ್ಯತೆಯು ಈ ಪ್ರಯೋಗದಲ್ಲಿ ಕಂಡು ಬರುತ್ತಿದೆ.

ಋಗ್‌ವೇದದಲ್ಲಿ ಋತ : ಸತ್ಯ ಹಾಗೂ ಏಕಂ:ಸತ್ ಈ ಎರಡು ಭಿನ್ನ ವೈಚಾರಿಕ ಆಕೃತಿಗಳಿವೆ. ವೈಚಾರಿಕ ಆಕೃತಿಗಳು ಶಾಶ್ವತ, ಸನಾತನ ಎಂಬುದರ ಮೂಲಕ ಈ ವಿಚಾರಗಳ ವೇದಕಾಲೀನ ಆಕೃತಿಗಳನ್ನುಳ್ಳ ಸಂಕೇತಗಳು, ಪ್ರತಿಮೆಗಳು ಯಾವುವು? ಈ ಪ್ರತಿಮಾ : ಸಂಕೇತಗಳ ಸುತ್ತಲಿನ 'ಸಮಯ'ದ ಆವರಣದಲ್ಲಿ ಸಮಾನತೆ ಉಂಟಷ್ಟೆ? ಎಂಬುದನ್ನು ಒರೆಗೆ ಹಚ್ಚಿ ನೋಡಿದಲ್ಲಿ ಅಂದಿನ ದ್ವಿ-ವಿಧ ನಿಷ್ಠೆಯ ಮಾನವ ಪ್ರತಿಮೆಗಳು ತಮ್ಮ ತಾವೇ ಚಿತ್ತಭಿತ್ತಿಯ ಮೇಲೆ ಮೂಡಿ ನಿಲ್ಲಬಲ್ಲವು: ಹಿರಣ್ಯಗರ್ಭ ದೈವತ ಸಂಪ್ರದಾಯದ ಕಂ, (ಸು)ಖಂ ಬ್ರಹ್ಮೋಪಾಸಕರ ಅವಿಚ್ಛಿನ್ನ ಪರಂಪರೆಯು ಇಂದಿನ ವರೆಗೂ ಉಂಟು. ನಾಮಭೇದದಿಂದ ಅತ್ರಿ-ಗುರು ಪ್ರಣೀತ ವಿರಕ್ತಮಾರ್ಗ ಅನುಸರಿಸಿ, 'ತುರೀಯೇಣ ಬ್ರಹ್ಮಣಾ ಗೂಳ್ಹಂ ಸೂರ್ಯಂ' ಪಡೆದು, ನಿತ್ಯಾನಂದಿಗಳಾಗ ಬಯಸುವ ಜಗತ್ತಿನ ಜನರಿಗೆ, ಭಾರತವು ಪವಿತ್ರ ಯಾತ್ರಾಸ್ಥಳ 'ಮೆಕ್ಕಾ' ಎನಿಸಿದೆ. ಪಾಶ್ಚಾತ್ಯ ದೇಶಗಳಿಂದಲೂ ಹಿಪ್ಪಿ ಮೊದಲಾದ ಅತ್ಯಧುನಿಕ ನಾಮ-ರೂಪಧಾರಿಗಳ ಜೀವನ ಸ್ಫೂರ್ತಿಯ ತತ್ತ್ವಜ್ಞಾನವು ಈ ಸಂಹಿತೆಯಲ್ಲಿದೆ. ಮುನಿಸೂಕ್ತದಲ್ಲಿ 'ಅಪ್ಸರಸಾಣಾಂ, ಗಂಧರ್ವಾಣಾಂ, ಮೃಗಾಣಾಂ ಚರಣೇ ಚರನ್' 'ಪಿಶಂಗಾಃ ವಸತೇ ಮಲಾಃ' ಇಂತಹ ಸಿದ್ಧರ, 'ಅಂತರಿಕ್ಷ' ಗಮನಾದಿ ಪವಾಡಗಳಲ್ಲಿ ಆಸಕ್ತಿಯ ಪುರಾತನರ ಒಂದು ಸ್ಥೂಲ ಚಿತ್ರವೂ ಅಲ್ಲಿ ಕಾಣದೊರೆಯುತ್ತದೆ.

'ಧಿಯೋ ಯೋ ನಃ ಪ್ರಚೋದಯಾತ್' ಎಂಬ ನಿತ್ಯ ಸಂಧ್ಯಾವಂದನೆಯ ಮೂಲಕ ತನ್ನೊಳಗಿನ ಹಾಗೂ ವಿಶ್ವಸ್ಥ 'ಧೀಃ' ಪ್ರಕಾಶದ ಅನುಸಂಧಾನದಲ್ಲಿ, ವಿಶ್ವಾನರನ ಉಪಾಸನೆಯಲ್ಲಿಯೆ ಜೀವನದ ನಿಜವಾದ

ಕೃತಾರ್ಥತೆಯು ಉಂಟು, ಎಂಬ ಶ್ರದ್ಧೆಯ ಈ 'ಮಾನುಷ'=ಮನುಷ್ಯರ, ವಿವಸ್ವಾನ್ ಮನುವಿನ ಪರಂಪರೆಯನ್ನು ಮುಂದುವರಿಸಿಕೊಂಡು ಹೊರಟ ಈ ಸಂಪ್ರದಾಯವು, ಈ ಸಂಹಿತಾ ಸಂಕಲನದ ಸುಮಾರಿಗೆ ತನ್ನ ಪ್ರಭಾವ ಪ್ರತಿಷ್ಠೆಗೆ, ನಿಶ್ಚಿತವಾಗಿಯೂ ಎರವಾಗಿರಲಿಕ್ಕೆ ಬೇಕು. ಸೌರತತ್ತ್ವದ ವೈಶ್ವಾನರ ಅಗ್ನಿ, ವಿಶ್ವೇದೇವರು-ವೈಶ್ವದೇವ ಈ ಭವ್ಯ ಪ್ರತಿಮೆಯನ್ನು ಆಪ : ರಸ : ರೇತದ ಪಾತಳಿಯ ದೈವತವಾಗಿಸಿದ್ದಾಗಿದೆ. ಈ ಸಂಹಿತೆಯಲ್ಲಿಯೆ, ವಿವಸ್ವಾನ್ ಮನು ಈ ಪ್ರತಿಮೆಯನ್ನು ಆಪ : ರಸ=ರೇತದ ಪಾತಳಿಯ ಮೇಲೆ ತರಲು ಆದ ಎರಡು ಬಗೆಯ ಪ್ರಯತ್ನಗಳು ಸಾಧಾರವಾಗಿ ಬೆಳಕಿನಲ್ಲಿ ಬಂದಿವೆ. ವೈವಸ್ವತ ಮನುವನ್ನು ಕುಲಗೆಡಿಸಿ ಮನುಪ್ರಣೀತವೆಂಬ ಮಾನವ-ಧರ್ಮಶಾಸ್ತ್ರವನ್ನು ರೂಢಿಯಲ್ಲಿ ಉಳಿಸಿಕೊಂಡದ್ದಾಗಿದೆ. 'ದಗ್ಧಪಟ' ನ್ಯಾಯದ ಈ ಮನುವಿನಲ್ಲೂ 'ಗೃಹಸ್ಥಾಶ್ರಮ'ದ ಕುಟುಂಬ ಸಂಸ್ಥೆಯ ಹಿರಿಮೆಯ ಮಾತುಗಳನ್ನು ಇಟ್ಟು, ಸಂಸಾರವನ್ನು ಸ್ಮಶಾನವತ್ ಬಗೆವ ಈ ಆವಶ್ಯಕ ಸಾಧನ ಮಾಡಬೇಕಾಗುವ 'ಮೋಕ್ಷ'ದ ಅಸಂಬದ್ಧ ಕಲ್ಪನೆಯನ್ನು ಪುರುಷಾರ್ಥತ್ರಯದಲ್ಲಿ ತುರುಕಿದ್ದಾಗಿದೆ. ವ್ಯಾಹೃತಿತ್ರಯ ಬರಡುಗೊಳಿಸಿದ ತಂತ್ರವೇ ಇಲ್ಲಿಯೂ ಉಂಟು! ಇವೆರಡಕ್ಕೂ ಈ ಸಂಹಿತೆಯಲ್ಲೇ ಆಧಾರವುಂಟು. 'ನೀರಿನ ಒಳಗಡೆ (: ರೇತತತ್ತ್ವದ ರೂಪದಲ್ಲಿ) ಇರುವ ಅಸ್ತಿತ್ವ (: ಸತ್-ತ್ವ : Existence), ನಿಜವಾದ ಅಮೃತ-ರಸಯೋಗ:

ಯತ್ ದೇವಾಃ ಸಲೀಲೆ ಅಬ್ಧಃ ಸುಸುಂರಬ್ಧಾಃ ಅತಿಷ್ಠತ ಅತ್ರಾ ವೋ ನೃತ್ಯ ತಾಂ ಇವ'!

ಈ 'ಗುಹಾನಿಹಿತ' ಸತ್ಯಸಿದ್ಧಿಯ ಆಕರ್ಷಣದಲ್ಲಿ, ವ್ಯಾಹೃತಿತ್ರಯದ ಅನುಸಂಧಾನದ ಜೀವನದ ರೀತಿ ವಿಚ್ಛಿನ್ನವಾಯಿತು; ಬರಡಾಯಿತು!

ಋಗ್ವೇದಸ್ಥ ಅರ್ಥದ ಅನ್ವೇಷಣ

ವಾ-ನರತ್ವದ ಹಂತದಿಂದ ಮನು-ಜತ್ವದ ಪಾತಳಿಯಲ್ಲಿ, ಇಂದಿಗೂ ಈ ದಾರಿಯಲ್ಲಿ ನರ-ಮಾನವನನ್ನು ಮುನ್ನಡೆಯಲು ಒತ್ತಾಯಪಡಿಸುವ ಪ್ರೇರಣೆ (urge) ಎಲ್ಲಿದೆ? ಯಾವ ಸಂಗತಿಯು, ಈ ಪಾತಳಿಯ ಜೀವಿಗಳ ಪ್ರೇರಣಾ ಕೇಂದ್ರವಾಗಿದೆ? ಇದನ್ನು ಕುರಿತ ಚಿಂತನ, ಪ್ರಯೋಗಗಳು ಬಗೆ ಬಗೆಯವು ಆಗುತ್ತ ಬಂದಿವೆ; ಇನ್ನೂ ಆಗಲಿವೆ. ಇವೆರಡರಲ್ಲಿ ಪ್ರಯೋಗ ಪದ್ಧತಿಯ ರೀತಿಯ ವೈಶಿಷ್ಟ್ಯವೇ ಒಂದು. ಆದರೆ, ಚಿಂತನ, ಮನನದ ಭೂಮಿಕೆಯಿಂದ ಆಗಿರುವ ಸಂಶೋಧನದಲ್ಲಿ, ವಸ್ತುನಿಷ್ಠ ಭೂಮಿಕೆಯ ಅಭಾವದಿಂದಾಗಿ, ಈ ಪೂರ್ವದಲ್ಲಿ ಫ್ರೈಡನ ವರೆಗೂ ಆಯಾ ವ್ಯಕ್ತಿಯ ಜ್ಞಾತಾಜ್ಞಾತ ಪೂರ್ವಗ್ರಹಗಳಿಗೆ ಅವಕಾಶವಿತ್ತು. ಫ್ರೈಡನು ಪ್ರತಿಮಾ : ಸಂಕೇತಗಳ ವಿಚಾರವನ್ನು ರೂಢಿಸಿದರೂ ಈ ಸಂಕೇತಗಳಲ್ಲಿ, ಇಂಥ ಸಂಕೇತಕ್ಕೆ ಇಷ್ಟೇ ಅರ್ಥ ಎಂದು ಮೊದಲೇ ನಿರ್ಧರಿಸಿ ಬಿಟ್ಟನು! ಇದರಿಂದ ಸಂಕೇತಗಳು ತಮ್ಮ ವಿಭಿನ್ನ ಅರ್ಥದ್ಯೋತಕ ಸಾಮರ್ಥ್ಯಕ್ಕೆ ಎರವಾಗಿ, ಅಲ್ಲಿ ನಾಮಮಾತ್ರ ಸಾಂಕೇತಿಕತೆ ಉಳಿಯಿತು. ಆದರೂ ಈ ಸಂಪ್ರದಾಯದ ಸಂಮೋಹಕತೆಗೆ ಬಾಧೆ ಬಂದಿಲ್ಲ!

ತುಲನಾತ್ಮಕ ಭಾಷಾಶಾಸ್ತ್ರ ಹಾಗೂ ಮಾನವಶಾಸ್ತ್ರ, ಮಾನವೇತಿಹಾಸ (ಶಾಸ್ತ್ರ) ಈ ದಿಕ್ಕಿನಿಂದ ಆಗಿರುವ ಜೀವನದ ಬಗಗಿನ ಸಂಶೋಧನದಲ್ಲಿ, ವಸ್ತುನಿಷ್ಠ ಭೂಮಿಕೆಯ ಚಿಂತನ, ಮನನ ಹಾಗೂ ಸಂಶೋಧನವು ಶಕ್ಯವೆಂಬ ಅಪೂರ್ವ ವಿಚಾರವು ದೃಢಪಟ್ಟಿದೆ. ಮಾನವನಲ್ಲಿ ಹುಟ್ಟಿನಿಂದಲೇ ಕೆಲವೊಂದು ಆಕೃತಿ, ಸಂಖ್ಯೆ ಹಾಗೂ ವರ್ಣಗಳ ಗೂಢ ಆಕರ್ಷಣವು ಅಭಿಜಾತವಿರುವುದಾಗಿ ಕಂಡುಬಂದಿದೆ. ಇದು ಸಂಶೋಧಕರ ವೈಯಕ್ತಿಕ ಅಭಿಪ್ರಾಯವಲ್ಲ; ಸಪ್ರಮಾಣವಾಗಿ ಸಿದ್ಧವಾಗಿರುವ ಸಂ-ಗತಿ. ಪುರಾತನ ಸಂಸ್ಕೃತಿಗಳ ದೈವತ ಕಥೆಗಳಲ್ಲಿ, ಅವರ ಆಚಾರ ಸಂಪ್ರದಾಯಗಳಲ್ಲಿ ಈ ಸಂಗತಿ ಸುಮಾರಾಗಿ ಎಲ್ಲ ಕಡೆಗೂ ಸಮಾನ (general) ಸ್ವರೂಪದ್ದಾಗಿ ಕಂಡುಬರುತ್ತಿದೆ.

ಈ ಗೂಢ ಆಕರ್ಷಣವು ಹಿಂದೆ ಇತ್ತು, ಇಂದು ಇಲ್ಲ ಎನ್ನಲು ಅವಕಾಶವಿಲ್ಲ. ಶೈಶವದಲ್ಲಿ ಒಗಟೆಯ ನಾದವನ್ನುರಿಯದ ಪ್ರೌಢರಾಗಲಿ, ಹಿರಿಯರಾಗಲಿ ದೊರೆಯುವುದು ವಿರಳ. ತಾಯಿಯ ಕಡೆಯಿಂದ ಅರಿತ ಒಗಟೆ ಹೇಳಿ, ಗೆಳೆಯರ ಬಳಗದಲ್ಲಿ ಆಕರ್ಷಕನಾಗುವ ತಂತ್ರವನ್ನು ಕೆಲವು ಹುಡುಗರು ಚಿಕ್ಕಂದಿನಿಂದಲೆ

ಬಲ್ಲರು. 'ದಿವ್ಯ' ಅಧ್ಯಾತ್ಮ ವಿಚಾರ-ಭಾವನೆಯು ಉಗಮದಲ್ಲಿ ಒಗಟಿಯ ಸ್ವರೂಪದ ಕುತೂಹಲವೇ ಇದ್ದಿತೆಂದು ಕಾಣುತ್ತದೆ. ಕನಕನ ಮುಂಡಿಗೆ, ಅಲ್ಲಮಪ್ರಭುವಿನ ಬೆಡಗಿನ ವಚನಗಳು, ಸಾಕ್ಷಾತ್ಕಾರದ ಬೆಳಕಿನ ದಾರಿಯವು. ಋಗ್ವೇದದಲ್ಲಿ ಇಂಥ ಋಚೆಗಳು ತುಂಬ ಇವೆ. ಮೊದಲನೆಯ ಮಂಡಲದ ೧೬೪ನೇ ಸೂಕ್ತವು 'ಬ್ರಹ್ಮೋದ್ಯ'ದ ಒಗಟೆಗಳಿಗಾಗಿ ಹೆಸರಾಗಿದೆ. ಜೀವನದೊಳಗಿನ ಗೂಢದ ಬಗೆಗಿನ ಈ ಹುಚ್ಚು ಆಕರ್ಷಣವನ್ನು ಲೆಕ್ಕಕ್ಕೆ ಹಿಡಿಯದೆ, ಮಾನವನ ದೇವತಾ ವಿಚಾರ, ಭಾಷೆ, ಸಾಹಿತ್ಯ, ಕಲೆ ಮತ್ತು ಶಾಸ್ತ್ರ ಇವುಗಳ ಯಥಾರ್ಥ ಪಾರ್ಶ್ವಭೂಮಿ ಅರಿಕೆಗೆ ಬರಲು ಶಕ್ಯವಿಲ್ಲ. ಯಾವ ಜನಾಂಗದಲ್ಲೇ ಆಗಲಿ, ಅವರ ಶಬ್ದ-ಪ್ರತಿಮೆಗಳಲ್ಲಿ ಹುದುಗಿರುವ ಅರ್ಥದ ಪೂರ್ವೋತ್ತರದ ಸಮೀಕ್ಷೆಯು, ಕೊನೆಗೆ ಆ ಜನಕ್ಕಿದ್ದ ಅಗಮ್ಯ-ದಿವ್ಯಭಾವದ ಹತ್ತಿರಕ್ಕೆ ಒಯ್ದು ನಿಲ್ಲಿಸುತ್ತದೆ! ಪುರಾತನ ಗ್ರೀಕ್ ಸಂಸ್ಕೃತಿಯ 'ಝುವೂಸ್' ದೇವರ ಬಗೆಗಿನ ಶ್ರದ್ಧೆಯಲ್ಲಿ ಇದು ನಿದರ್ಶನಕ್ಕೆ ಬರುತ್ತದೆ. ಆ ಜನರಲ್ಲಿ ಕಾಮನಬಿಲ್ಲು ಮತ್ತು ಹದ್ದು (Eagle) ಇವು ಝೀಉಸನ ಸಂದೇಶವಾಹಕ ದೂತರು ಎಂಬ ಹಾಗಿನ ನಂಬುಗೆ ಇತ್ತು. ಗುಡುಗು ಅವನ ಧ್ವನಿ (ಭಾಷೆ) ಎಂದೂ ನಂಬುಗೆಯೂ ಇತ್ತು.[೫]

ಗುಡುಗು ಮಿಂಚು ಇವು ದೇವರ ಸಾಂಕೇತಿಕ ಭಾಷೆ ಎಂಬ ನಂಬುಗೆ ಋಗ್ವೇದ ಕಾಲದಲ್ಲೂ ಒಂದು ಹಂತದಲ್ಲಿ ಇತ್ತು 'ಮಧ್ಯಮಾ' ವಾಕ್ ಈ ಪರಿಭಾಷೆಯೊಳಗಿನ ಅರ್ಥದ ಪದರುಗಳಲ್ಲಿ ಇದು ಗಮನಕ್ಕೆ ಬರುತ್ತದೆ. ಅಂತರಿಕ್ಷ=ಮಧ್ಯಲೋಕ, ಸಲಿಲ=ಸಮುದ್ರದಲ್ಲಿ ವಾಗಾಂಭೃಣಿ, ತನ್ನ ಹುಟ್ಟು ಎಂದು ಹೇಳುತ್ತಾಳೆ. ಆದರೆ, ಮಾನವನು ಈ ಮಾಧ್ಯಮದಿಂದ ಒಂದು ಭಾಷೆಯನ್ನು ಪಡೆದಂತೆ, ಮೈಯಲ್ಲಿ ಆವೇಶವಾಗಿ 'ಹೇಳಿಕೆ' ಕೊಡುವವರ ಆವಶ್ಯಕತೆ ಕಡಿಮೆಯಾಗುತ್ತ ಬಂತು. ಭಾಷೆ ಬಂದು, ಕ್ರಮವಾಗಿ ವಿಶ್ವದೊಳಗಿನ ಅಗಮ್ಯ ಗೂಢವು ಇಲ್ಲವಾಗಿ ಮಾನವನ, ನಾಗರೀಕತೆ ಹೆಚ್ಚಿ ಆಶ್ಚರ್ಯದ ಅಭಾವದಿಂದ ಅವನು ಒರಲುವದೂ ಇಂದು ಕಾಣುತ್ತಿದೆ! ಬಾಳಿನಲ್ಲಿ ಯೌವನಕಾಲದಲ್ಲಿದ್ದ ಸೃಷ್ಟಿಯೊಳಗಿನ ಅಗಮ್ಯತೆಯು, ಭಾಷೆಯ ಮೂಲಕ ಇಲ್ಲವಾಗಿದ್ದನ್ನು ತಪ್ಪಿಸುವುದಕ್ಕಾಗಿ, ಮಾನವನೊಳಗಿನ ಒಗಟೆಯ ಪ್ರವೃತ್ತಿಯು, ಬೇರೊಂದು ಹಂಚಿಕೆಯನ್ನು ಹುಡುಕಿಕೊಂಡದ್ದು ಕಾಣುತ್ತದೆ : ಇದರಿಂದ ಪರಸ್ಪರ ವಿರುದ್ಧಾರ್ಥದ, ಶ್ಲೇಷಾರ್ಥದ ಕೃತ್ರಿಮ ಶಬ್ದಪ್ರತಿಮೆಗಳು ಬೆಳೆದುದು ಕಂಡುಬರುತ್ತದೆ. ಅರ್ಥವನ್ನು ಹುದುಗಿಸಿ-ಅಡಗಿಸಿ ಹೇಳುವ ಪ್ರವೃತ್ತಿ, ಗೂಡಾರ್ಥದ ಭಾಷಾಶೈಲಿಯ ಪ್ರೇಮ ಮಾನವರಲ್ಲಿ ಇಂದಿಗೂ ಉಂಟು. ಇದರಿಂದ ಏಕಾಕ್ಷರೀಕೋಶಗಳು ಹುಟ್ಟಿವೆ. ಬಾಳಿನ ಅರ್ಥ ವಿವರಿಸಿ, ಈ ಬೆಳಕಿನಲ್ಲಿ ವಾಸ್ತವಸತ್ಯವನ್ನು ತೋರಿಸಿ ಎಚ್ಚರಿಸುವ ಸಾಹಿತ್ಯದ ಒಂದು ಪ್ರಕಾರವು ಇರುವಂತೆ, ಜೀವಕ್ಕೆ ಸ್ವಪ್ನ-ಸುಷುಪ್ತಿಯ ಕತ್ತಲೆಯ ಲೋಕಕ್ಕೆ ಒಯ್ಯುವ ಆ-ರಾಮ ಸಾಹಿತ್ಯವೂ ಉಂಟಷ್ಟೆ? (ಶುದ್ಧ ಸುಖ ಸಂಕಥಾ ವಿನೋದ ಕ್ರೀಡಾಸಾಹಿತ್ಯವು ಇದರಿಂದ ಬೇರೆ.) ಮಾನವನೊಳಗಿನ ಈ ಪ್ರವೃತ್ತಿ ಸಂಸ್ಕೃತಿಯ ಪ್ರಾರಂಭ ಕಾಲದಿಂದಲೂ ಇದೆ. ಈ ಉಭಯ ವಿಧ ಪ್ರವೃತ್ತಿಯಲ್ಲಿ ಯಾವುದೇ ಒಂದು, ತಾನೆ ತಾನಾಗಿ ತಲೆಯೆತ್ತಿ ನಿಂತು ತತ್ 'ಏಕಂ ಏವ' ಅದ್ವಿತೀಯತ್ವದ (: ಏಕಂ=ಸತ್) ಸರ್ವಾಧಿಕಾರವನ್ನು ಮರೆಯಿಸುವ ಚಪಲಕ್ಕೆ ಒಳಗಾಗದಿರುವಾಗ ಪ್ರಗತಿಯೂ 'ಏಕಂ ಏವ ಅದ್ವಿತೀಯಂ' ಹೆಮ್ಮೆಯೇ ಪ್ರಭಾವಶಾಲಿಯಾಗುವಾಗ ಮಾನವ ಸಂಸ್ಕೃತಿಯ ಪರಾಗತಿಯೂ ಆಗುತ್ತ ಬಂದಿದೆ.

ಪುರಾತನ ಕಾಲದಿಂದಲೂ 'ಏಕಂ' ಈ ಆಕೃತಿ : ಸಂಖ್ಯೆಯ ಬಗೆಗಿನ ಗೂಢ ಆಕರ್ಷಣಕ್ಕೆ ಮನಸೋತವರ ವರ್ಗವು ಇರುವಂತೆ, 'ಮೂರು' (ತ್ರಿ) ಈ ಸಂಖ್ಯೆಯು ಒಳಗೊಂಡಿರುವ ಅದ್ಭುತ ಆಶ್ಚರ್ಯದ ನೆಲೆಯನ್ನರಿಯಲು ಹೊರಟ ಪಂಗಡವೂ ಇದ್ದುದಾಗಿ ಇಂದಿನ ಋಕ್‌ಸಂಹಿತೆಯಿಂದಲೂ ಕಂಡು ಬರುತ್ತದೆ. ಮೂಲತಃ, ಏಕಾಂತಿಕ ಸ್ವರೂಪದಲ್ಲಿ ಇವೆರಡರ ಪ್ರಭಾವದ ಪರಿಣಾಮಗಳು ತೀರ ಭಿನ್ನ ಸ್ವರೂಪದುವು ಆಗಿವೆ. ಆದುದರಿಂದ 'ಏಕಂ' ಈ ಆಕೃತಿಯ ಎಳೆತಕ್ಕೆ ಸಿಕ್ಕ ಜೀವರುಗಳ ಬಾಳದಾರಿಯ ದಿಕ್ಕೆ ಒಂದು ಮತ್ತು ಮೂರರ ಸೋಜಿಗವು ಮನಸ್ಸನ್ನು ಸೂರೆಗೊಂಡವರ ಬಾಳದಾರಿಯೆ ಇನ್ನೊಂದು. ತನ್ನ ಜೀವನದ ಅರ್ಥವನ್ನು-ಕ್ರಿಯಾಫಲಗಳನ್ನು ಅರಿಯಲು 'ಜಾತಕ' ನೋಡುವುದು ಹಲವರ ಸಾಮಾನ್ಯ ಸ್ವಭಾವ. ಆದರೆ, ಅಂತರಿಕ್ಷಸ್ಥ ಗ್ರಹ-ನಕ್ಷತ್ರಾದಿಗಳಿಗಿಂತ ತನ್ನ

ಅಂತರಂಗಸ್ಥ ಆಕರ್ಷಣಾದ ಆಕೃತಿಯ ಸ್ವರೂಪವನ್ನು ನೋಡಿಕೊಳ್ಳಲು ಸಮರ್ಥನಾದರೂ ಸಾಕು. ಅವನಿಗೆ 'ಸ್ವ'-ಸ್ವರೂಪದ ಜ್ಞಾನವಾಗಿ, ಬಾಳದಾರಿಯಲ್ಲಿ ಎಡಹುವ ಎಷ್ಟೊ ಪ್ರಸಂಗ ತಪ್ಪಬಲ್ಲವು. ಭಾವನಿಕ ಹಾಗೂ ವೈಚಾರಿಕ ಆಕೃತಿಗಳು, ತತ್ತ್ವತಃ ಸಾರ್ವಕಾಲಿಕ ಸನಾತನವಾಗಿವೆ. ಆದುದರಿಂದ, ಅಂದಿನ ಆಕೃತಿಗಳ ಇಂದಿನ ನಾಮಾಂತರಗಳು ತಿಳಿದಲ್ಲಿ, ಇದರ ನೆರವಿನಿಂದ ಋಗ್ವೇದ ಕಾಲೀನ ಸಾಂಸ್ಕೃತಿಕ ಸ್ಥಿತ್ಯಂತರಗಳ ಹಿನ್ನೆಲೆಯನ್ನು ಗ್ರಹಿಸಿಕೊಳ್ಳಲು ಸುಲಭವಾಗಲಿದೆ. ಇಂದಿನ ಪರಿಭಾಷೆಯಲ್ಲಿ 'ಅಂತರ್-ಮುಖ ಪ್ರವೃತ್ತಿ' ಎಂದು ಹೇಳಲಾಗುವ ಮನೋಭಾವವೆ (Introvert). ಋಗ್ ವೇದಕಾಲೀನ ಏಕಂ : ಸತ್ ಭೂಮಿಕೆಯ 'ವಿಪ್ರ'ತ್ವದ ಆದರ್ಶ. ಇದೇ ಮೇರೆಗೆ 'ಮೂರು' ಈ ಸಂಖ್ಯೆಯ ರಹಸ್ಯದಿಂದ ಆಕರ್ಷಿತವಾದ ಅಂದಿನ ಮನೋಭಾವವು, (extrovert:) ಇಂದಿನ ಬಹಿರ್-ಮುಖ ಪ್ರವೃತ್ತಿ ಎನಿಸುತ್ತದೆ.

ಹಿಂದೆ ಒಂದು ಕಾಲದಲ್ಲಿ ಕಾಣಸಿಕೊಳ್ಳಬಹುದಾಗಿದ್ದಷ್ಟು ಆತ್ಯಂತಿಕ ಏಕಾಂತಿಕ ಸ್ವ-ಭಾವದ ವ್ಯಕ್ತಿಗಳ ಸಂಖ್ಯಾ-ಪ್ರಮಾಣ, ಶತಮಾನದಿಂದ ಶತಮಾನಕ್ಕೆ ಕಡಿಮೆಯಾಗುತ್ತ ಬಂದಿರಲಿಕ್ಕೆ ಬೇಕೆಂಬುದನ್ನು ಮರೆತು ನಡೆಯದು. ಪ್ರವಾಸದ ಅನುಕೂಲತೆ ಹೆಚ್ಚಿ ಪ್ರಪಂಚದ ವಿವಿಧ ಭಾಗಗಳ, ವಿವಿಧ ಭಾಷಿಕರ ಸಂಬಂಧ, ಸಂಪರ್ಕವು ಬೆಳೆಯತೊಡಗಿದಂತೆ, ವೈಯಕ್ತಿಕ ಹಾಗೂ ಸಾಮಾಜಿಕ ಜೀವನ ರೀತಿಯ ಮೇಲೆ ಪರಿಣಾಮವಾಗದಿರಲು ಶಕ್ಯವಿಲ್ಲ. ಆದುದರಿಂದ, ಪುರಾತನ ಸಂಸ್ಕೃತಿಗಳನ್ನು ಗ್ರಹಿಸಿಕೊಳ್ಳುವಾಗ, ಕಾಲದ ಹಾಗೂ ಪರಿಸ್ಥಿತಿಯ ಈ ಅಂತರವನ್ನು ಗಮನದಲ್ಲಿ ಇಟ್ಟುಕೊಳ್ಳುವುದು ಅವಶ್ಯವಿದೆ. ಹಿಂದಿನ ಕೆಲ ತಲೆಮಾರಿನಲ್ಲಿ ಇದ್ದ ಏಕಾಂತಿಕ ಶ್ರದ್ಧೆಯ ತೀವ್ರತೆ, ಇಂದಿನ ತಲೆಮಾರಿನಲ್ಲಿ ಕಾಣಲು ದೊರೆಯದು. ಅಂತರ್-ಮುಖಪ್ರವೃತ್ತಿ, ಬಹಿರ್-ಮುಖ ಪ್ರವೃತ್ತಿ ಇವು ಧಾರ್ಮಿಕ ಶ್ರದ್ಧೆಯೆನಿಸಿ ತೀರ ಏಕಾಂತಿಕ ಮನೋಭಾವಗಳಾಗಿದ್ದ ಕಾಲವು ಇಂದು ಉಳಿದಿಲ್ಲ; ಉಳಿಯಲು ಸಾಧ್ಯವಿಲ್ಲ. ಇಂದಿನ ಸ್ವಭಾವದಲ್ಲಿ ಸಂಕೀರ್ಣತೆ ಹೆಚ್ಚು. ಕೇವಲ ಅಂತರ್-ಮುಖ ವೃತ್ತಿಯ ಪ್ರತಿಪಾದಕನಾಗಿದ್ದರೂ, ಅವನು ಲೌಕಿಕ ವ್ಯವಹಾರದಲ್ಲಿ, ಬಹಿರ್-ಮುಖ ವೃತ್ತಿಯವರಿಗಿಂತ ಹೆಚ್ಚೇ ಮನಸ್ಸು ತೊಡಗಿಸುವುದನ್ನು ಕಾಣಬಹುದು! ಬಹಿರ್-ಮುಖ ಮನೋಭಾವದ ಜೀವನ ರೀತಿಯಿಂದ, ಸಮಾಜ ಸಮ್ಮುಖವಾಗಿ ಬಾಳುವ ಸಂಕಲ್ಪವಿದ್ದರೂ ಕೆಲರು ಅಂತರ್ ಮುಖಿಗಳಾಗಿ ಮಾನವ ಜೀವನ-ಸಂಸ್ಕೃತಿಯ ಅರ್ಥಗ್ರಹಣಕ್ಕಾಗಿ, ಸೈನ್ಸಿನ ಮೂಲಗಾಮಿ ಸಂಶೋಧನಕ್ಕಾಗಿ, ಏಕಾಂತವನ್ನು ಮೆಚ್ಚಿಕೊಂಡಿರಬಹುದು. ಸೈನ್ಸಿನಲ್ಲಿ 'ಸಾಪೇಕ್ಷ ಸಿದ್ಧಾಂತ'ದ ದ್ರಷ್ಟಾರ ಐನ್ಸಟನ್‌ರಿಗೆ, ಸಾಮಾಜಿಕ ಹಿತದ ಪ್ರತ್ಯಕ್ಷಕಾರ್ಯ ತನ್ನಿಂದ ಆಗಲಿಲ್ಲವಲ್ಲ ಎಂಬ ವ್ಯಥೆ, ಬಾಳಿನುದ್ದಕ್ಕೂ ಇದ್ದುದು ಅವರ ಚರಿತ್ರದಿಂದ ಬೆಳಕಿಗೆ ಬಂದಿದೆ.

ಐನ್‌ಸ್ಟನ್ 'ಮೂರು' (ಬರ್ಹಿಮುಖ ಪ್ರವೃತ್ತಿಯ) ಸಂಖ್ಯೆಯ ಉಪಾಸಕರಾಗಿದ್ದರು. ಅಣುವಿಸರಣತಂತ್ರಕ್ಕೆ ಅವರು ಇತ್ತ ಕಾಣಿಕೆಯೆ ಸಾಕ್ಷಿ. ಆದರೆ 'ಏಕಂ ಸತ್ತ್ವ'ವನ್ನು ಅವರು (ಬ. ರಸೆಲ್ಲರಂತೆ) ಬಹಿಷ್ಕರಿಸಿದ್ದಿಲ್ಲ! ಫಿಡಲ್ ವಾದನದ 'ತತ್'ಮಯತೆಯು ಅವರನ್ನು ಭೌತದಿಕ್ಕಾಲ- ಪರಿಸರದ ಆಚೆಗೆ ಒಯ್ಯುತ್ತಿತ್ತು. ಆದರೆ, ಕೇವಲ ತನ್ಮಯತೆಯ ಜೀವನ ವಿನ್ಮುಖರು ಆಗಲಿಲ್ಲ! 'ಕಲೆ'ಯೆ (ತನ್ಮಯಾನಂದೀ ಜೀವನವೇ) ಏಕಮೇವ ಸತ್ಯ ಎನ್ನಲಿಲ್ಲ. ತನ್ನ 'ಬದ್ಧ' ಆಕೃತಿಯನ್ನು ಬದಿಗಿರಿಸಿ ಆ ವಿಶಿಷ್ಟ ಆ-ಕೃತಿರೂಪದ ಆ-ಚೆಗೆ ಹೋಗಿ ವಿಶ್ವಸ್ಥ 'ಆಶಯ'ದೊಡನೆ ಸಂಪರ್ಕ ಪಡೆವ ಅರ್ಹತೆಯಿರುವ ಜೀವವೇ ನಿಜವಾದ ನೂತನ (ವಿಕೃತಜನ್ಯ ನವ್ಯ ರೂಪವಲ್ಲ.) ಆಕೃತಿರೂಪ ನಿರ್ಮಿಸಬಲ್ಲುದು. ತಂತುವಾದ್ಯ ಸಂಗೀತವನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದರೂ ಐನ್ಸ್‌ಟನ್, ಜಗದ್ವಿಖ್ಯಾತ ಪಾಶ್ಚಾತ್ಯ ಕಲಾವಿದರ ಅಮರ ನಾಮಾವಳಿಯಲ್ಲಿ ಸ್ಥಾನಪಡೆಯಬಹುದಿತ್ತು, ಎಂದು ಅವರ ಚರಿತ್ರೆ ಬರೆದ ರಶಿಯದ ವಿಜ್ಞಾನಿಯು ಹೇಳಿದ್ದಾನೆ. ಗಣಿತಜ್ಞ ಪೈಥಾಗೊರೊಸನದೆಂದು ಹೇಳಲಾಗುವ

> "number is the ruler of forms, and the cause of gods and0 demons"[೬]

ಈ ವಾಕ್ಯವು ಮನನೀಯವಿದೆ. ದೇವರಿಗೂ ಜನ್ಮಕೊಡುವ (Cause) ದಿವ್ಯಶಕ್ತಿ ಸಂಖ್ಯೆಯಲ್ಲಿದೆ! ಎಂದರೆ 'ದೇವರು' 'ದೆವ್ವ' ಸಂಖ್ಯೆಯ ನಿರ್ಬಂಧಕ್ಕೆ=ನಿಯಮಕ್ಕೆ (: ಋತಕ್ಕೆ) ಒಳಗಾಗಿವೆ, ಎಂದೇ ಪೈಥ್ಯಾಗೊರಾಸನ ಈ ಮಾತಿನ ಅರ್ಥವಷ್ಟೆ?

ಬಾಹ್ಯ ನಾಮ-ರೂಪ ಬೇರೆಯಾಗಿ ಮತ್ತು ಅದು ಕಾಣಿಸಿಕೊಳ್ಳುವಲ್ಲಿ ಸಂಕೀರ್ಣತೆಯು ಉಂಟೆಂದು 'ಏಕಂ' ಸಂಖ್ಯೆಯ ಆಕರ್ಷಣವಾಗಲಿ, ಮೂರು ಈ ಸಂಖ್ಯೆಯ ದಾರಿಯೊಳಗಿನ ಗೂಢದ ಆಹ್ವಾನವಾಗಲಿ ಇಂದಿಗೂ ಎಳ್ಳಷ್ಟೂ ಕಡಿಮೆಯಾಗಿಲ್ಲ. ಋಗ್ ವೇದಕಾಲೀನ ಜೀವನ ರೀತಿಯಲ್ಲಿ ಈ ಉಭಯ ವರ್ಗದಲ್ಲಿ ಇದ್ದ ಈರ್ಷ್ಯೆ-ವಿರೋಧ ಇಂದಿಗೂ ಒಂದಿಲ್ಲೊಂದು ರೂಪದಲ್ಲಿ ಉಂಟು. 'ಏಕಂ' ಪಂಥೀಯ ಭೂಮಿಕೆ. ಇಂದಿನ ಅಂತರ್-ಮುಖ ಪ್ರವೃತ್ತಿ ಆಗುವಂತೆ, ವೇದಕಾಲೀನ ಭಾಷೆಯಲ್ಲಿ ಇದು ರಾತ್ರೀ ಉಪಾಸನಾ ಸಂಪ್ರದಾಯವು ಆಗುತ್ತದೆ. ಇವೆರಡೂ ಪ್ರವೃತ್ತಿಗಳನ್ನು ಇನ್ನೂ ಒಂದು ಬಗೆಯಿಂದ ಹೆಸರಿಸಬಹುದು. ರಾತ್ರೀ ಉಪಾಸನಾ ಪರಂಪರೆಯು, ಸಾಹಿತ್ಯ, ಸಂಗೀತ, ನೃತ್ಯ, ಕಲಾಶಾಸ್ತ್ರದ ಭೂಮಿಕೆಯಿಂದ ಅರಿಕೆಗೆ ಬರುವುದು. ಈ ಸಂಗತಿಗಳಲ್ಲಿ ತಥ್ಯಾಂಶ-ಸತ್ಯಾಂಶವು ಎಷ್ಟು. ಎಂಬ ಪ್ರಶ್ನೆಗೆ ಉತ್ತರವು ಇಲ್ಲಿಯೇ ಇದೆ? ಭಾರತದಲ್ಲಿ ಭೌತಶಾಸ್ತ್ರ ವಿಕಾಸಹೊಂದದಿರುವ ಕಾರಣವೇನು? ಇತಿಹಾಸ, ಭೂಗೋಲ, ರಾಜಕಾರಣಾದಿ ಶಾಸ್ತ್ರಗಳು ಬೆಳೆಯದಿರುವ ಕಾರಣ ಯಾವುದು? ಹಗಲಿನ ಆರಾಧನಾ ಸಂಪ್ರದಾಯವು, ಇಲ್ಲಿ ಪ್ರತಿಷ್ಠೆಗೆ ಎರವಾಗಿರಲಿಕ್ಕೆ ಬೇಕು. ಇದು ನಿಜವೊ? ಒರೆಗೆ ಹಚ್ಚಿ ನೋಡಿಕೊಳ್ಳಿ. (ಸಂ)ಯೋಗ ಶಾಸ್ತ್ರ-ಷಟ್-ಚಕ್ರ ವಿಚಾರ, ಇದರ ಅಂಗವಾಗಿಯೇ ಸುಪ್ತಚೇತನದ ಮಾನಸಶಾಸ್ತ್ರ, 'ಬ್ರಹ್ಮಾನಂದ ಸಹೋದರ' ಸಾಹಿತ್ಯಿಕ ರಸಶಾಸ್ತ್ರ ವಿಕಾಸಗೊಂಡಿವೆ ಏಕೆ? ಮೂರ್ತಿಶಿಲ್ಪವು ಕೋನಾರ್ಕ (ಕೋಣ-ಅರ್ಕ) ದಂತಹ ಪ್ರತಿಮಾ ಸೃಷ್ಟಿಯಲ್ಲಿ ಪರಿಣಾಮಗೊಂಡುದರ ಅರ್ಥವೇನು?

ಇಂದಿನ ಋಕ್-ಸಂಹಿತೆಯಲ್ಲಿ 'ಏಕಂ' ತತ್ತ್ವದ ಆರಾಧಕರ ಮೇಲುಗೈಯಾಗಿ, ಮೂರರ ಗೂಢದ ಉಪಾಸಕರ ತೇಜೋವಧೆಯಾಗಿರುತ್ತದೆ, ಎಂದಿಷ್ಟೆ ಹೇಳಿದಲ್ಲಿ 'ಪಕ್ಷಪಾತಿ' ಎಂಬ ಟೀಕೆಗೆ ಒಳಗಾಗಲೇ ಬೇಕು. ಮೇಲಣ 'ಆರೋಪ' ನಿಜ ಎಂಬುದನ್ನು ಸಾಧಾರವಾಗಿ ತೋರಿಸಲು ಶಕ್ಯವಾಗಿರುವಲ್ಲಿಯೆ, ಪ್ರತಿಮಾ ಸಂಕೇತದ ಹಾಗೂ ಈ ಅರ್ಥ ಪದ್ಧತಿ ಮತ್ತು 'ವಿಚಾರಗಳಿಗೆ ಸಾರ್ವಕಾಲಿಕ, ಸನಾತನ ಆಕೃತಿ ಇರುತ್ತವೆ,' ಎಂಬ ಸೂತ್ರ ಇದರ ವಿಶ್ವಾಸಾರ್ಹತೆ ಸಿದ್ಧವಾಗಲಿದೆ. ಸಂಸ್ಕೃತಿಯ ಅರ್ಥಗ್ರಹಣದ ಈ ಪ್ರಯೋಗದಲ್ಲಿ,

೧. ಸಂಸ್ಕೃತಿಯ ಘಟಕ ತ್ರಯಗಳ ಅನುರೋಧದಿಂದ ಋಗ್ ವೇದಕಾಲೀನ ಜೀವನ ರೀತಿಯೊಳಗಿನ ಸ್ಥಿತ್ಯಂತರಗಳನ್ನು ನಿರ್ಧರಿಸಿಕೊಳ್ಳುವ ಶಕ್ಯತೆಯನ್ನು ಈ ಮೊದಲು ಕಂಡುಕೊಂಡದ್ದಾಯಿತು.

೨. 'ಏಕಂ' ಮತ್ತು 'ತ್ರಿ' ಈ ಆಕೃತಿ-ಸಂಖ್ಯೆಯ ಆಕರ್ಷಣವು ಗೀತೆಯು ಹೇಳುವ ಜೀವನದೊಳಗಿನ 'ದ್ವಿವಿಧಾ ನಿಷ್ಠಾ' ಸೂಚಕವಾಗಿರುವುದಲ್ಲದೆ, ಈವರೆಗೆ ಸ್ಪಷ್ಟವಾಗಿ ಬೆಳಕಿಗೆ ಬರದೆ ಇರುವ ಋಗ್ ವೇದಕಾಲೀನ ವೈಚಾರಿಕ ಸಂಘರ್ಷವೂ ಈ ಪ್ರತಿಮಾ : ಸಂಕೇತಗಳ ಭೂಮಿಕೆಯಿಂದ ಬಹಿರಂಗಕ್ಕೆ ಬರಬಲ್ಲುದು. ಎಂಬುದನ್ನು ಸ್ವಲ್ಪದರಲ್ಲಿ ಸೂಚಿಸಬೇಕಾಗಿದೆ.

ಹಗಲಿನ ಹಿರಿಮೆಯ ಬಗೆಗಿನ ಏಕಾಂತಿಕ ಶ್ರದ್ಧೆಯು, ಇರುಳಿನ ಬೆಲೆಯನ್ನು-ಸ್ಥಾನ-ಮಾನವನ್ನು ನಷ್ಟಪಡಿಸಲು ಹವಣಿಸುವುದು ಇರುಳು-ಹಗಲಿನ ನಡುವಿನ ಅಂತರವನ್ನೇ ಶೂನ್ಯಗೊಳಿಸುವ ಏಕಾಂತಿಕ ಶ್ರದ್ಧೆಯಷ್ಟೇ ನಿಂದ್ಯ ಹಾಗೂ ಗ್ರಾಹ್ಯವಾಗಿದೆ. ಋಗ್‌ವೇದದಲ್ಲಿ-ಆ ಬಳಿಕವೂ ಸೂರ್ಯ-ಚಂದ್ರ ದೈವತದ ಏಕಾಂತಿಕ ಶ್ರದ್ಧೆಯು, ಈ ಬಗೆಯ ವೈಚಾರಿಕ ಸಂಘರ್ಷಕ್ಕೆ ಕಾರಣವಾಯಿತು. ಆಧುನಿಕ ಕಾಲದಲ್ಲಿ ಭೌತಶಾಸ್ತ್ರದ ಮತ್ತು ಸಾಹಿತ್ಯಕಲೆಯ ಏಕಾಂತಿಕ ಶ್ರದ್ಧೆಯು ಪ್ರತ್ಯಕ್ಷಾಪ್ರತ್ಯಕ್ಷವಾಗಿ ಮಾನವ ಸಂಸ್ಕೃತಿಯನ್ನು ಉಧ್ವಸ್ತಗೊಳಿಸುವ ಭೋಗವಾದಕ್ಕೆ

ಪ್ರೇರಿಸುತ್ತಿರುವ ಈ ದೃಶ್ಯವಂತೂ ಸರಿಯೆ. ಅಲ್ಲದೆ ಏಕಂ : ಸತ್ ಭೂಮಿಕೆಯ ಮೇಲ್‌ತೋರಿಕೆಯ ಏಕೇಶ್ವರವಾದೀ ನಾನಾ ವಿರಕ್ತ ಪಂಥಗಳಿಂದಲೂ ಹಗಲು-ರಾತ್ರಿಯೊಳಗಿನ ತಾರತಮ್ಯವು ನಷ್ಟವಾಗಿ ಪಾರಲೌಕಿಕವಾದಕ್ಕೆ ಜೀವದಾನ ದೊರೆಯುತ್ತಿದೆ. ಇವೆಲ್ಲವೂ ಮಾನವ ಸಂಸ್ಕೃತಿಯ ಪ್ರಗತಿಗೆ ಆತಂಕಗಳೇ ಆಗಿವೆ.

ಹಗಲಿನ ದೇವರೇ ಆಗಲಿ, ರಾತ್ರಿಯ ದೇವರೇ ಆಗಲಿ, ಇವರಾರೂ ಸ್ವೈರ, ಸರ್ವತಂತ್ರ ಸ್ವತಂತ್ರ ಸರ್ವಾಧಿಕಾರಿಗಳಲ್ಲ. ಆದರೆ ಈ ವಿಶ್ವದ ಆಗುಹೋಗುಗಳಿಗೆ ವಿಶ್ವಪಿತ, ವಿಶ್ವರಕ್ಷಕ ಈ ಹೆಸರಿನ ಒಂದು ದೇವತಾ ಶಕ್ತಿಯ ಅಸ್ತಿತ್ವದ ಶ್ರದ್ಧೆ, ಹಲವರಿಗೆ ಅವಶ್ಯವೆನಿಸಿದೆ. ಆದರೆ, ಇಂಥ ಒಂದು ದೇವರ ಬಗೆಗಿನ ನಂಬುಗೆ, ಈ ವಿಶ್ವವು ಕೆಲವೊಂದು ಶಾಶ್ವತ-ಸನಾತನ ನಿಯಮಗಳ ಬಲದಿಂದ (: ಋತದ ಆಧಾರದಿಂದ) ನಿಂತಿದೆ-ಮುಂದೆ ಸಾಗಿದೆ, ಎಂಬ ಶ್ರದ್ಧೆಗೆ ಮಾರಕವಾಗದಿರದು. ಈ ದೇವರೇ ವಿಶ್ವ ನಿಯಮಗಳಿಗೆ ಅಧೀನನು ಎಂದು ವಿಶ್ವಾಸವಿಲ್ಲದೆ ಹೋದರೆ ದೇವನು ಸರ್ವಾಧಿಕಾರಿ ಸ್ವೈರಶಕ್ತಿಯಾಗುತ್ತಾನೆ. 'ಸೃಷ್ಟಿ'ಕರ್ತ : ನಿರ್ಮಾತೃದೇವ ಎಂದೊಡನೆ, (ಭಕ್ತನ ಇಷ್ಟವಿರಲಿ, ಇಲ್ಲದಿರಲಿ) ಈ ದೈವತ ವಿಚಾರವು ಲೈಂಗಿಕ ಆಕೃತಿಯದು ಆಗಲೇ ಬೇಕು! ಏಕೆಂದರೆ ಈ 'ಏಕಂ : ಸತ್' ಭೂಮಿಕೆಯ 'ದೇವರು' ಎಂಬವನು 'Essence' ರಸ ಸ್ವರೂಪಿಯಾಗುವುದನ್ನು ಮರೆಯಲಾಗದು. ಹಿಬ್ರೂ ಮುಂತಾದ ಅನುಭಾವ ಮಾರ್ಗೀ ತತ್ತ್ವಜ್ಞಾನದ ತಳಹದಿ 'Essence' ತತ್ತ್ವವೇ ಆಗಿದೆ. ಈ 'ಏಕಂ : ಸತ್' ರಸವು (Essence : Being). ಇದು ನಿಸರ್ಗತಃ ಸಂಭೂತಿ ಶಕ್ತಿ ತತ್‌ತ್ವ, ಇದನ್ನು ಅ-ಸಂಭೂತಿ ತತ್ತ್ವ ಎಂದು ವಕೀಲಿ ಬುದ್ಧಿ ಪ್ರತಿಪಾದಿಸಬಲ್ಲದು. ಆದರೆ, ಆ ಭೂಮಿಕೆ ದಿಕ್ಕಾಲಾತೀತ ಕೇವಲವಾದೀ ಒಂದು 'ಸ್ಥಿತಿ'. ಅದರ ಅನುಸಂಧಾನದಲ್ಲಿ, ಐಹಿಕಜೀವನ ರೀತಿಯನ್ನು ರೂಪಿಸುವ ಪ್ರಯತ್ನಗಳು ಆತ್ಮವಂಚನೆಗೂ ಪರವಂಚನೆಗೂ ಕಾರಣವಾಗದಿರವು; ಅಥವಾ ಗೀತೆಯ ಭಗ-ವಂತನ ಲೌಕಿಕ ಸತ್ಯ ಮತ್ತು ಪಾರಮಾರ್ಥಿಕ ಸತ್ಯ ಎಂಬ ಇನ್ನಾಲಗೆಯ ತಾತ್ತ್ವಿಕ ಭೂಮಿಕೆಗೆ ಒತ್ತಾಯಪಡಿಸಲೇಬೇಕು. ತುಳಸೀದಾಸಾದಿಗಳು ಕರ್ಣಾಟದ ಶರಣರು, ದಾಸರಂತೆ, 'ಗುರುವೇ ದೇವರಿಂದ ಅಧಿಕ' ಎಂದು ಜ್ಞಾನದೇವನ ಸಂತರಾಮದಾಸ ಹೇಳುತ್ತಾರೆ. ಸಹ ಸಾರಿದ್ದಾರೆ. ಈ ಕಾರಣದಿಂದ ಗುರು-ಪ್ರಸಾದ ದೀಕ್ಷಾ ಸಂಪ್ರದಾಯೀ ವಿರಕ್ತ ಪಂಥಗಳಲ್ಲಿ ನಿಜಕ್ಕೂ 'ದೇವರು' ಎಂಬ ವಸ್ತುವಿಗೆ ಸ್ಥಾನವೇ ಇಲ್ಲ. ಈ ಗುರು ವರ್ಗವು ತಮ್ಮ ಪ್ರತಿಷ್ಠೆ ಬೆಳಸಿಕೊಳ್ಳಲು ಮತ್ತು ಮರ್ಯಾದೆ ಉಳಿಸಿಕೊಳ್ಳಲು ನಿರ್ಮಿಸಿರುವ ನೈಮಿತ್ತಿಕ ಸಂಕೇತ ದೇವರು! ಭಕ್ತರ ಕಾರ್ಯ ಸಿದ್ಧಿಯಾದರೆ ಅದು ಗುರುಕೃಪಾ ಶಕ್ತಿದ್ಯೋತಕ ! ಕಾರ್ಯ ಹಾನಿಯಾದರೆ ಅವರ ಆಶೀರ್ವಾದ(?) ಫಲಿಸದಿದ್ದರೆ, 'ಭಕ್ತ'ನ ದೈವ ಅಥವಾ ಅವನ ಕರ್ಮ ಅಡ್ಡ ಬಂದಿದೆ ಎಂದು ಬಗೆಯಲು ಅನುಕೂಲವಾಗಿದೆ. 'ಏಕಂ' ಸದ್ರಸಸ್ಥ ಸಂಭೂತಿ ಶಕ್ತಿಯ ಅನು-ಸ್ಥಾನರತರಾಗುವಲ್ಲಿ, ಅದು ಅ-ಸಂಖ್ಯ ಪ್ರಜಾಕೋಟಿ ನಿರ್ಮಾಣಕ್ಕೆ ಪ್ರೇರಿಸದಿರದು. ಈ 'ಪ್ರಜಾಪತಿ=ಬ್ರಹ್ಮಶಕ್ತಿ'. ಅಥವಾ ಸಂಭೂತಿಯ ಈ ದುಷ್ಪರಿಣಾಮಗಳ ನಿವಾರಣಾರ್ಥ ತ್ರಿವಿಧ ಪುರುಷಾರ್ಥಗಳಲ್ಲಿ 'ಚತುರ್ಥ : ತುರೀಯ (ಇದು ಐಹಿಕ ಜೀವನ ಸಮ್ಮುಖಿ ವೈಶ್ವಾನರ: ಸಮಷ್ಟಿ ಪುರುಷನ ಸೇವೆಗಾಗಿಯೆ ಬಾಳು ಮುಡುಪುವ ಸಂನ್ಯಾಸವಲ್ಲದ್ದರಿಂದ,) : ಸಂನ್ಯಾಸಕ್ಕೂ ಸ್ಥಾನವನ್ನು ಕಲ್ಪಿಸಿಕೊಟ್ಟರೆ, ಇಡೀ ಪುರುಷಾರ್ಥತ್ರಯದ ತಳಪಾಯವು ಸಡಿಲಾಗಲೇ ಬೇಕು.*

ಸಂಭೂತಿ, ಹಗಲಿನದಿರಲಿ, ರಾತ್ರಿಯದಿರಲಿ, ಇದರ ಉಪಾಸನೆಯ ಈ ಇವೆರಡೂ ಪ್ರಕಾರಗಳು ಏಕಂ: ಸತ್ತಿನ ಭೂಮಿಕೆಯ ಕ್ರಿಯೆ ಪ್ರತಿಕ್ರಿಯೆಗಳೇ ಆಗಿವೆ. 'ಏಕಂ ಏವ ಅದ್ವಿತೀಯಂ' ತತ್ತ್ವದ ಭೂಮಿಕೆಯು ನಿತ್ಯ ಪ್ರಲಯ- ಎಂದರೆ ಸರ್ವಾರ್ಪಣ ಅಪೇಕ್ಷಿಸುತ್ತದೆ. ಧರ್ಮ 'ಚಕ್ರ'ಧಾರೀ ಗುರುಸಾರ್ವಭೌಮ : ಜಗದ್ಗುರು ಅಥವಾ 'ಚತುಃ ಸಮುದ್ರ ವಲಯಾಂಕಿತ ಪೃಥಿವೀ ರಾಜ್ಯಂ ಗೆಯ್ಯುತ್ತಿರೆ'...ಎಂಬ ಬಿರುದಿನ (ಕನಿಷ್ಠಪಕ್ಷ)

---

* "ಸತ್‌ತ್ಯ ಮತ್ತು ಸತ್ಯ" ವ್ಯಾಹೃತಿತ್ರಯಗಳ ವಿಚಾರ ಕುರಿತ ಪುಸ್ತಿಕೆಯು ಇದೇ ಸಂಪುಟದ ಕೊನೆಯಲ್ಲಿ ಸೇರಿದೆ. ಹೆಚ್ಚಿನ ಸಾಂಕೇತಿಕ ಅರ್ಥಗ್ರಹಣಕ್ಕೆ ಆ ಪುಸ್ತಿಕೆಯನ್ನು ಆಸಕ್ತರು ಓದಬಹುದು (ಸಂ)

ಸಮ್ರಾಟ್ ಚಕ್ರವರ್ತಿ ಪದಸ್ಥ ಈ 'ಏಕಂ' ಮಾತ್ರ ಸತ್ಯ ಎಂಬ ಸಿದ್ಧಿಯೆ ಈ ವೈಚಾರಿಕ ಆಕೃತಿಯ ಅರ್ಥ. ಆದುದರಿಂದ, ಸಂಭೂತಿ ಶಕ್ತಿಯ ಸತ್-ರಸೋಪಾಸಕರ ಈ ಭೂಮಿಕೆಯಲ್ಲಿ 'ದೇವರು' ಈ ಸಂಕೇತಕ್ಕೆ ನಿಜವಾಗಿ ಸ್ಥಾನವೆಲ್ಲಿದೆ? ಪೀಠಸ್ಥ (ಗುರು ಅಥವಾ ರಾಜ) ಶಕ್ತಿಯೆ ನಿಜವಾದ ದೇವರು.

'ರಾತ್ರಿಯ' ಹೆಸರೇ ಉಳಿಯದಂತೆ, ಏಕಮೇವ ಹಗಲೇ ಆಗುವಂತೆ ಮಾಡುವ ಶಕ್ತಿ (: ಸೈನ್ಸು), ಸಾಮ್ರಾಟ ಪೀಠಕ್ಕೆ ಬಂದರೂ ಬಾಳಿನಲ್ಲಿ ಪ್ರಳಯಕ್ಕೆ ಆಮಂತ್ರಣವಿತ್ತಂತೆಯೇ. ಇನ್ನು ರಾತ್ರಿಯೇ ಹಗಲಿನ ವೇಷದಲ್ಲಿ (: ಅಷ್ಟ, ನವರಸ ಸಾಹಿತ್ಯ, ಇದರ ಛಾಯಾನುವರ್ತಿ ಕಲೆಗಳು ಅಥವಾ 'ಏಕಂ' ಸತ್-ರಸ ಸಿದ್ಧಿಯ ಸಂತ : ವಿರಕ್ತ ಗುರುಸಂಪ್ರದಾಯ) ಸಮ್ರಾಟ 'ಚಕ್ರ'ವರ್ತಿಯಾಗುವಾಗಲಂತೂ, ಪ್ರಳಯ ಪ್ರತಿ ವರ್ಷ 'ಹೋಳಿ', 'ಯುಗಾದಿ' : 'Janus' ಮಾಸ ಈ ಋತು ಪೂಜೆಯ ಸಮಯಾಚಾರ: ಇದೇ ನಿಯತಿ : ನಿಯಮ ಋತ=ಸತ್ಯವಾಗಬಲ್ಲದು. ಈ ಜೀವನದ ಆ-ಕೃತಿಯ ಜನಗಣದಲ್ಲಿ-ಸಾಂಸ್ಕೃತಿಕ ವಿಶಿಷ್ಟ ಪ್ರತಿಮಾ : ಸಂಕೇತಗಳಿಂದ ದೃಢಪಡುವ ಈ ಸತ್ಯವು, ವಿಶಿಷ್ಟ ವೈಚಾರಿಕ ಆಕೃತಿಗಳೊಡನೆ ಹಾಗೂ ಅಭಿವ್ಯಕ್ತಿ=ಮಾಧ್ಯಮದೊಡನೆ ಸು-ಸಂಗತವಾಗಿ ಸಂಬದ್ಧವಿರುತ್ತದೆ. ಆದಕಾರಣ ಆವಿಷ್ಕೃತ ಅಥವಾ ಅಭಿವ್ಯಕ್ತ ಮಾಧ್ಯಮ ಪ್ರತಿಮೆಗಳಿಂದ ಅವು ಒಳಗೊಳ್ಳುವ ವೈಚಾರಿಕ ಆಕೃತಿ ಮತ್ತು ಜೀವನ ಸಮಯ=ಆಚಾರ ಸ್ವರೂಪವು ಅಲ್ಲಿ ತನ್ನ ತಾನೆ ಕಾಣುತ್ತಿರುತ್ತದೆ. ಕಾಲಾನುಕ್ರಮದ ಸಮೀಕ್ಷೆಯಲ್ಲಿ ವಿಮರ್ಶಕನಿಗೂ ಇದು ಕಾಣತೊಡಗುತ್ತದೆ. 'ಯುಗ' ಈ ಪ್ರತಿಮೆಯಲ್ಲಿರುವ ಅರ್ಥದ ಪದರುಗಳನ್ನು ಅರಿಯಲು, ಋಗ್‌ವೇದದ 'ಸೂರ್ಯ(ರ್‍ಯಾ)' ಸ್ತೋತ್ರ ಸಮೀಕ್ಷಿಸುವುದು ಅವಶ್ಯ.[2] ಮೊದಲ ನುಡಿಯಲ್ಲಿ ವರುಣ (: ಸರ್ಪನ) 'ಚಕ್ಷು(O)' ರೂಪ ಸೂರ್ಯಮಂಡಲದೊಳಗಿಂದ 'ದೇವ' (-ಜನ) ಸಮೂಹ (ಕಿರಣ ರೂಪೀ ಸರ್ಪಗಳು) ಹೊರಬರುವ (ವಿ)ಚಿತ್ರಂ ವರ್ಣಿತವಾಗಿದೆ, ಎರಡನೆಯ ನುಡಿಯಲ್ಲಿ ಈ ಸೂರ್ಯ ತರುಣಿ ಉಷೆಯನ್ನು ಅನುಸರಿಸಿ, ಮರ್ತ್ಯರಂತೆ ಹೊರಟ ವರ್ಣನೆ ಇದೆ! ಭೂಲೋಕದಲ್ಲಿ 'ನರಃ ದೇವಯಂತಃ ಯುಗಾನಿ ವಿತನ್ವತೇ' ಇಲ್ಲಿ ಯುಗ ನೇಗಿಲಕ್ರಿಯೆ (ಸುಫಲೀಕರಣ), ಯುಗ(ಲ)ನಾಗಿ, ಸಪತ್ನಿಕ 'ಯಜ್ಞ' ಕರ್ಮ್ಮರಂತನು; ಈ 'ಯುಗ'-ಪ್ರತಿಪದ (ಮರಳಿ ಅಡಿಯಿಡುವ) ಬಾಲ-ಚಂದ್ರ (ಆ-ಭು : Being) ಸೃಷ್ಟಿಗೆ ಕಾರಣವಾಗುತ್ತದೆ. 'ದೇವೀದ್ವಾರ'ದ ಅಧಿಕಾರಿ Janus : ಇಮ್ಮೊಗದ ದೇವರು ವರ್ಷದ ಅಂತ್ಯ-ಆರಂಭಶಕ್ತಿ=ಹೋಳಿಹುಣ್ಣಿಮೆ (ರಂಡೆ-) ಮುತ್ತೈದೆ ಹುಣ್ಣಿಮೆಯ ಇಮ್ಮೊಗದ ದೇವೀ ಕಲ್ಪನೆಯೊಡನೆ ಹೋಲಿಸಬಹುದು.

ಬಾಳಿನಲ್ಲಿ ಹಗಲಿಗಾಗಲಿ, ರಾತ್ರಿಗಾಗಲಿ ಏಕಮೇವ ಮಹತ್ವವಿಲ್ಲ. ಪ್ರಸಂಗ-ವಶಾತ್, ಅಪವಾದವಾಗಿ ಇರುಳನ್ನು ಹಗಲಾಗಿಸಿ ದುಡಿಯುವ ಆವಶ್ಯಕತೆಯುಂಟಾಗುತ್ತದೆ. ಆದರೆ, ರಾತ್ರಿ ತೊಡೆದು ಹಾಕಲು ಆಗುವುದಿಲ್ಲ. ಹಗಲನ್ನು ರಾತ್ರಿಯಾಗಿಸಿಕೊಳ್ಳುವಲ್ಲಿ ದುರ್ಯೋಧನನು ನೀರಲ್ಲಿ ಅಡಗಿ ಕುಳ್ಳಿರಬೇಕಾದ ಸ್ವರೂಪದ ದುರ್‌ಧರ ಪ್ರಸಂಗವು ಮಾತ್ರ ಸ್ವ-ನಾಶ ಸ್ವರೂಪದ್ದೇ ಇರಬಲ್ಲದು! ನವ(?) ಜೀವ ವಿಶ್ವನಿರ್ಮಿಸುವ ಮಹತ್ವಾಕಾಂಕ್ಷೆಯ ಸೈನ್ಸು ಸಹ ವಿಶ್ವಸ್ಥ ನಿಯಮರೂಪ ಸತ್ಯವನ್ನು ಅರಿತು ಅದನ್ನು ಅನುಸರಿಸಿ ಹೊರಟಿದೆ! ಅದೇ ಕಾಲಕ್ಕೆ ತಾನೇ ಏಕಂ ಸತ್ಯ ಎನ್ನುತ್ತಿದೆ! ಆದರೆ ನಿಯಮ=ಋತ ಶ್ರೇಷ್ಠ; ಸೈನ್ಸ, ಅದರ ನೆಳಲು ತಾನೆ? ಮಾನವ ಜೀವನವು ಸಹ ವಿಶ್ವಸ್ಥ ನಿಯಮ ಎಂದರೆ ಋತ ಸ್ವರೂಪೀ ಸತ್ಯವನ್ನು ಅರಿತು, ಅದನ್ನು ಅನುಸರಿಸಿ ಸಾಗಬೇಕಷ್ಟೇ? ಈ ಜೀವ ತಾನೇ ಏಕಂ : ಸತ್ ಸ್ವರೂಪ ಹೇಗೆ ಆದೀತು? ಜೀವನವು 'ಸತ್ಯ' ಎಂದರೂ ನಿಜವಾಗಿ ಇದು ಋತದ (: ವಿಶ್ವನಿಯಮದ) ನೆಳಲು. 'ಸತ್ಯ' ಎಂದರೇನು? ಎಂಬುದರ ಬಗೆಗಿನ ಯುರೋಪೀಯ ಹಾಗೂ ಭಾರತೀಯ ಪುರಾತನರ ಧಾರಣೆಯನ್ನು ಇವೆರಡೂ ಸಂಸ್ಕೃತಿಗಳ ಭಾಷಿಕ ಸಂಕೇತಗಳಿಂದ ಗ್ರಹಿಸಿಕೊಂಡು ಅರಿಯಲು ಶಕ್ಯವಿದೆ. ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಸತ್ಯವನ್ನು Truth ಎಂಬ ಸಂಕೇತದಿಂದ ಸೂಚಿಸಲಾಗುತ್ತದೆ. ಈ Truth ಸಂಕೇತದ ಬರುವಳಿ <truce, ಎಂದು ಕೋಶ ಸೂಚಿಸುತ್ತವೆ. ಈ ವೈಚಾರಿಕ ಆಕೃತಿಯು ಋತ : ಸತ್ಯದ ಆಕೃತಿಗಿಂತ ತುಂಬ ಭಿನ್ನ. True : In accordance with fact or reality, ಎಂದರೆ ವಸ್ತುಸ್ಥಿತಿ. ನಿಜಸ್ಥಿತಿ

ಆದರೆ Truce, ಸಂಕೇತಸ್ಥ ('ವಸ್ತುಸ್ಥಿತಿ' : 'ಇರುವ ಸ್ಥಿತಿ' ಇದರ) ಮೂಲಾರ್ಥ ತಿಳಿಯಲು 'True' ಸಂಕೇತದ ನೆರವು ಪಡೆಯಬೇಕು. truce: (agreement for) temporary cessation of hostility-ಜಗಳ, ಕಾದಾಟ ನಿಲ್ಲಿಸುವ ತಾತ್ಪೂರ್ತಿಕ ಒಪ್ಪಂದ. ಆದಕಾರಣ, ವಸ್ತುಸ್ಥಿತಿ (=True), ಎಂದರೆ ಕಾದಾಟ-ಜಗಳ ಇದು ಯಾವಾಗಲೂ ಇದ್ದದ್ದೇ. ಆದಕಾರಣ : ತಾತ್ಪೂರ್ತಿಕ ಹೊಂದಾಣಿಕೆ ಇದೇ ನಿಜ! Truce>True. ಈ ಹಿನ್ನೆಲೆಯಲ್ಲಿ ಆಕಾರ ಪಡೆದ ಪಾಶ್ಚಾತ್ಯ Truth ಇದರೊಳಗಿನ ಗರ್ಭಿತಾರ್ಥದ (concept) ಆಕೃತಿಯ ಈ ಮಾಧ್ಯಮವು ತತ್ತ್ವಜ್ಞಾನ ಭೂಮಿಕೆಯ 'ಸತ್ಯ'ದ ಅರ್ಥಧಾರಣೆಗೆ ಅಸಮರ್ಥವಾಗಿದೆ ಈ ಸಂಗತಿಯು Truth ಬಗೆಗೆ ಅಲ್ಲಿಯ ತತ್ತ್ವಜ್ಞಾನಿಗಳಲ್ಲಿ ನಡೆದಿರುವ ನಾನಾ ಪ್ರಕಾರದ ತೀವ್ರ ವಿವಾದಗಳ ಮೂಲಕ ಕಾಣುತ್ತಲೆ ಇದೆ!

ಪಾಶ್ಚಾತ್ಯ ಭಾಷಿಕರ *Truth* ಶಬ್ದ-ಪ್ರತಿಮೆಯ ಮೂಲದಲ್ಲಿ ಅವರು, ಈ ಜೀವನದಲ್ಲಿ ಕಂಡ ಚಿತ್ರ : ಹೋರಟೆ=ಅಶಾಂತಿ-ಪರ್ವವೇ ಸ್ಥಾಯೀಭಾವವುಳ್ಳದ್ದು. ಆದರೆ, ಈ ಹೋರಾಟ-ಕಾದಾಟದಲ್ಲಿ ಒಪ್ಪಂದ; Compromise, ಇದು ಸಾಂಸ್ಕೃತಿಕ ಜೀವನ ಪಾತಳಿಯಲ್ಲಿ ಸಾಧಿಸಬಹುದಾದ ಆದರ್ಶ=Truth. ಸರ್‌ಜಾನ್ ಮೋರ್ಲೆ ಒಪ್ಪಂದದ ತತ್ತ್ವಜ್ಞಾನವನ್ನೇ ನಿರ್ಮಿಸಿದ. ಪಾಶ್ಚಾತ್ಯರ ಈ ದೃಷ್ಟಿಕೋನವೇ, 'Social- Contract' ಎಂಬ ಶಬ್ದಪ್ರತಿಮೆಯಲ್ಲಿಯೂ ಇನ್ನೊಂದು ಬಗೆಯಿಂದ ಕಾಣಲು ದೊರೆಯುತ್ತದೆ! ಸ್ಪರ್ಧೆ-ಈರ್ಷ್ಯೆ. ಹೋರಟೆಯೆ ಮೂಲಭೂತ ಸ್ವಭಾವವಾಗಿರುವ ಮಾನವ ಪ್ರಾಣಿಗಳು, ಇಲ್ಲಿ ಸಂಸ್ಥೆ, ಸಮಾಜ, ಸಂಸ್ಕೃತಿ ನಿರ್ಮಿಸಿಕೊಂಡ ಪವಾಡ ಸಂಭವಿಸಿದ್ದು ಹೇಗೆ! ಅಂದು ಪಾಶ್ಚಾತ್ಯ ಭಾಷಿಕರು ಗ್ರಹಿಸಿಕೊಂಡ ಜೀವನದ ಅರ್ಥವು ಸದೋಷವಿರುವುದನ್ನು ಸಿದ್ಧಪಡಿಸಲು, ಲಿಖಿತ ಕರಾರುಪತ್ರದಿಂದ ಕೌಟುಂಬಿಕ ಹಾಗೂ ಸಾಮಾಜಿಕ ಸಂಸ್ಥೆ ನಿರ್ಮಾಣವಾಗಿಲ್ಲ ಎಂಬ ಒಂದು ಪ್ರಮಾಣವೇ ಸಾಕು. ಮಾನವಜೀವನ ಪಾತಳಿಯಲ್ಲಿ ಸ್ನೇಹ, ಪ್ರೇಮ-ಋಣಾನುಬಂಧಗಳ ಆಂತರಿಕ ಆಕರ್ಷಣವು ಸ್ಥಾಯೀಭಾವವಾಗಿದ್ದಿಲ್ಲವಾದರೆ, ಮೊತ್ತ ಮೊದಲಲ್ಲಿ ಹೆಣ್ಣು-ಗಂಡು ಮತ್ತು ಮಗು ಈ ರೂಪದಲ್ಲಿ ಕುಟುಂಬ ಸಂಸ್ಥೆ, ಕುಲ-ವಂಶಗಳು,. ಬೆಳೆದು ಬರಲು ಅಶಕ್ಯವಿತ್ತು. ಬಾಳಿನಲ್ಲಿ ಸ್ಪರ್ಧೆ-ಈರ್ಷ್ಯೆ, ಕಾದಾಟ ಇಲ್ಲ, ಇರಬಾರದು, ಎಂಬ ಅಪೇಕ್ಷೆ ಸಾಧುವಿದ್ದರೂ ಈ ಹಾರಯಿಕೆ ವಿಶ್ವಸ್ಥ ಅರ್ಥಕ್ಕೆ ಸು-ಸಂಗತವಿಲ್ಲ. ಈ ದೃಷ್ಟಿಯಿಂದ ಪಾಶ್ಚಾತ್ಯರ Compromise : ಒಪ್ಪಂದ Truce ಇದು ಬಾಳಿನಲ್ಲಿ ಅವಾಸ್ತವಲ್ಲವಾದರೂ ಇದೇ Truth ಎಂದಲ್ಲಿ ಇದು ಅರ್ಧಸತ್ಯವೆನ್ನಬೇಕಾಗುತ್ತದೆ.

ಪಾಶ್ಚಾತ್ಯ ಭಾಪಿನ ಕ್ರೈಸ್ತ ತತ್ತ್ವಜ್ಞಾನವು ತಳಪಾಯದಲ್ಲಿ ವಿಶ್ವ(?) ಪ್ರೇಮದ ಆಧಾರವನ್ನು ಕಲ್ಪಿಸಿಕೊಂಡು ತನ್ನ ಸಮಯಾಚಾರಗಳನ್ನು ರೂಪಿಸುವ ಪ್ರಯತ್ನ ಮಾಡಿದೆ. ಅಲ್ಲದೆ, ಪ್ರಪಂಚದಲ್ಲಿ ಕಾಮಕ್ಕೆ ಪ್ರಾಧಾನ್ಯವನ್ನಿತ್ತು 'ವಿವಾಹ ಮತ್ತು ನೈತಿಕ ವಿಚಾರ' ಕುರಿತು (ಫ್ರೆಡ್ ಪಂಥೀಯರ) ಪ್ರಮಾಣ ಗ್ರಂಥ ಬರೆದ ಮಹಾಮೇಧಾವಿ ಬರ್‌ಟ್ರಾಂಡ್ ರಸೆಲ್ಲನು ಸಹ ಪ್ರಪಂಚದಲ್ಲಿ ಮೌಲಿಕವಾದದ್ದು-ಯಾವುದರ ಸಲುವಾಗಿಯಾದರೂ ಬದುಕಲೇ ಬೇಕು. ಇಂತಹ ಅತ್ಯುದಾತ್ತ ಜೀವನ ರೀತಿಯೆಂದರೆ ಅದು 'ಪ್ರೇಮ'(?) ತತ್ತ್ವಾಧಿಷ್ಠಿತ ಬಾಳುವೆ ಎಂದು ಪ್ರತಿಪಾದಿಸಿದ್ದಾನೆ! ಆದರೆ, ಆತ್ಯಂತಿಕ ಅಹಿಂಸೆ, ಏಕಾಂತಿಕ ಪ್ರೇಮ ಇಂಥ ವೈಚಾರಿಕ ಆಕೃತಿ 'ಏಕಂ' ಸತ್ತಿನ ಪ್ರತಿರೂಪ! ಎಂದರೆ ಸುಂದರ ಮಾತಿನ ಆವರಣದಲ್ಲಿ ಪ್ರಳಯದ ಅಥವಾ ಭೋಗವಾದೀ ಜೀವನ ರೀತಿಗೆ ಪ್ರೋತ್ಸಾಹನ!

ಆದರೆ, ವಿಶ್ವದಲ್ಲಿ Realism ಅಪೇಕ್ಷಿಸುವ Reality. Turce: ಒಪ್ಪಂದ : ಕರಾರ (:Social contract) ಇದೇ ಇರಬಲ್ಲುದು, ಯಾವುದಕ್ಕೆ ವಿಶ್ವದಲ್ಲಿ (: ನಿಸರ್ಗದಲ್ಲಿ) ಸ್ಥಾನವೇ ಇಲ್ಲವೊ ಆ 'ಪ್ರೇಮ' ಎಂಬುದನ್ನು ಆಚರಣೆಯಲ್ಲಿರುವುದು ಹೇಗೆ ಶಕ್ಯ? 'ಕಾಮ'ದ ಅಸ್ತಿತ್ವವುಂಟು. ಕಾವ್ಯದ ಉದಾತ್ತೀಕರಣ (ಎಂದರೆ ಗಂಜೀ ಇಸ್ತ್ರೀ ಮಾಡಿದ ಕಾಮ) 'ಪ್ರೇಮ' ರೂಪಕ್ಕೆ ತಿರುಗಲು ಶಕ್ಯವೊ? ಇದು! ಸೈಂಟಿಫಿಕ್ ರೀತಿಯಿಂವ ಹಿತ್ತಾಳೆಯನ್ನು ಬಂಗಾರವಾಗಿಸುವ 'ಕಿಮಯಾ'ದಲ್ಲಿಯ ನಂಬಿದಂತೆಯೆ ಆಗಲಿದೆ ಜೀವನ ತತ್ತ್ವದ ವಿಶ್ಲೇಷಣಾದಲ್ಲಿಯೆ ಭೌತಪಾತಳಿಯ ಕಾಮವಲ್ಲದೆ ಅಭೌತ ಸವಿತ್ರ ಪಾತಳಿಯ ಪ್ರೇಮವೂ ಒಂದು ಉಂಟೆಂಬ ಶ್ರದ್ಧೆ ಅ-ಸಾಧುವಲ್ಲ ಎಂದು, ವಿರಕ್ತ

ಸಂತ ಪಂಥವೂ ನೇರವಾಗಿ ಒಪ್ಪಿಲ್ಲ. ಆದಕಾರಣ, ಮಾತಾಸಂಪ್ರದಾಯದ ಹಿನ್ನೆಲೆಯಲ್ಲಿ ಮೈದಾಳಿದ ಕುಮಾರೀ-ಕುಮಾರ ವ್ರತಾಚರಣೆಗೆ ಒತ್ತಾಯ ಪಡಿಸುವ ಕ್ರೈಸ್ತಪಂಥೀಯ ತಾತ್ವಿಕ ದೃಷ್ಟಿಗೆ, ಈ ಪ್ರಪಂಚವು ಅರ್ಥವಿಹೀನ ಮಾತ್ರವಲ್ಲ, ಅನರ್ಥಕಾರಿಯೂ ಆಗಿದೆ. ಆದುದರಿಂದ ಕ್ರೈಸ್ತಪಂಥೀಯ ತತ್ಪೂರ್ವಪಕ್ಷ ಬೌದ್ಧ, ಜೈನ, ಶೈವ, ವೈಷ್ಣವಾದಿ ಏನೆಲ್ಲ ವಿರಕ್ತ ಸಂಪ್ರದಾಯಗಳು ಹೇಳುವ 'ವಿಶ್ವ' ಪ್ರೇಮ : 'ಸರ್ವಭೂತ ಹಿತ' ಎಂಬ ಮಾತು ಮೋಸದ್ದೇ ಸರಿ. ಇಡೀ ಜೀವನವೇ ಅರ್ಥ-ಶೂನ್ಯವಿರುವಾಗ ವಿಶ್ವ-ವಿಶ್ವಾನರ ವಿಚಾರಕ್ಕೆ ಸ್ಥಾನವೆಲ್ಲಿದೆ ಈ ಸ್ಮಶಾನರೂಪೀ ಪ್ರಪಂಚದಲ್ಲಿ? ಭಾರತೀಯ ಯತಿ, ಮುನಿ ಸಂಪ್ರದಾಯವು 'ವೈಶ್ವಾನರ' ಪ್ರತಿಮೆಯನ್ನು ಮೃತ್ಯುರೂಪಕ್ಕೆ ತಿರುಗಿಸಿ, ಸರ್ವಭೂತ ಹಿತದ ಉಪದೇಶ ಮಾಡುವಲ್ಲಿರುವ ಈ ವಕ್ರರೀತಿಯು ಅದ್ಭುತವಿದೆ! ಜೀವನದಲ್ಲಿ ಯಾವ ತತ್ವ: ಅರ್ಥವೇ ಇಲ್ಲವೋ ಅದನ್ನು ಆದರ್ಶವಾಗಿ ಕಲ್ಪಿಸಿ ಆಚರಿಸ ಹೇಳುವ ಈ ರೀತಿ ಸಾಧುವೆ? 'ನ ಬುದ್ಧಿ-ಭೇದಂ ಜನಯೇತ್' ಎಂಬ ಸೂತ್ರದಂತೆ, ಸುಳ್ಳೂ, ಕಪಟವೂ ಸಾಧುಮಾರ್ಗವೇ! ಹೀಗೆ ಬಗೆದಿರುವ ಸಂತಪಂಥಗಳ ಮಾತು ಹಾಗಿರಲಿ; ಜೀವನ ಮೂಲ್ಯಗಳು : ನೈತಿಕ ತತ್ವ ಇವು ಮಾನವರು ಕಲ್ಪಿಸಿಕೊಂಡ ಗ್ರಹಿಕೆಗಳೇ ಆಗಿವೆ. ಮೇಧಾವೀ ರಸೆಲ್ಲರಿಗೂ 'ಪ್ರೇಮ'ದ ಗ್ರಹಿಕೆಯ ಆವಶ್ಯಕತೆಯೆನಿಸಿದೆ. ಇದು ಒಂದು ಅದ್ಭುತ ವಿಸಂಗತಿ! ಬುದ್ಧಿವಾದೀ ಶಾಸ್ತ್ರೀಯವೆಂಬ ತತ್ವಪದ್ಧತಿಯ ಸಂದರ್ಭದಲ್ಲಿ ಸಹ ಈ ವಿಸಂಗತಿ ಕಾಣದೊರೆಯುತ್ತದೆ!

ಸದೋಷ ಪೂರ್ವಪೀಠಿಕೆಯುಳ್ಳ (ಅರ್ಥ ಧಾರಣ ಮಾಡುವ) ಮಾಧ್ಯಮ : ಪ್ರತಿಮೆಯ ಮೂಲಕ ಭಾಷಾಭಿವ್ಯಕ್ತಿಯಲ್ಲಿ ಪ್ರತೀತಿಗೆ ಬರುವ ಆಶಯ : ಅರ್ಥ : ವಿಚಾರದಲ್ಲಿ ಅಸಮರ್ಪಕತೆಯ ದೋಷವು, ನೆಳಲಿನಂತೆ ಆ ಅಭಿವ್ಯಕ್ತಿಯ ಸಂಗಡವೆ ಅದನ್ನು ಬೆನ್ನಟ್ಟಿಕೊಂಡು ಹೊರಡಲೇಬೇಕು. ಈ ವಿಶ್ವನಿಯಮ ಈವರೆಗೆ ಸ್ಪಷ್ಟವಾಗಿರಲಿಲ್ಲ. ಪ್ರತಿಮಾ : ಸಂಕೇತಗಳ ಅರ್ಥ ವಾಹಕತೆಯ ಇತಿಮಿತಿಗಳನ್ನು ಅರಿತುಕೊಳ್ಳದ ಅಥವಾ ಈ ಇತಿಮಿತಿಗಳನ್ನು ಒಪ್ಪದ ಅಭಿವ್ಯಕ್ತಿ ಪ್ರಕಾರದ ಬಗೆಗೆ, ಪ್ರಜ್ಞೆ ಮೂಡತೊಡಗಿದ್ದೇ ತೀರ ಇತ್ತೀಚೆಗೆ! ಭಾಷಿಕ ಪ್ರತಿಮೆಗಳ ಮೂಲಕವಾಗಿಯೇ ಈ ವಿಶ್ವಸ್ಥ ಅಮೂರ್ತ ಸತ್ಯವನ್ನು, ಮೂರ್ತಪಾತಳಿಯಲ್ಲಿ, ದಿಕ್ಕಾಲ ಪರಿಸರದ ಜೀವನದ ಸಂದರ್ಭದಿಂದ ಅರಿಯಲು-ಗ್ರಹಿಸಿಕೊಳ್ಳಲು ಶಕ್ಯವಾಗಿದೆ. ಆದಕಾರಣ, ಮೂಲತಃ ಈ ಪ್ರತಿಮೆಗಳೇ ಅಸಮರ್ಪಕವಾಗಿದ್ದರೆ ತನ್ಮೂಲಕವಾಗಿ ಕಾಣುವ, ಅರಿಕೆಗೆ ಬರುವ ಅ-ಮೂರ್ತ ಸತ್ಯದ ಆಕೃತಿಯೂ ಸದೋಷವಾಗಲೇ ಬೇಕು. ಈ ಪ್ರತಿಮಾ: ಸಂಕೇತದ ವಿಚಾರದೊಡನೆ ಇನ್ನೂ ಒಂದು ಮಾತು ಸ್ಪಷ್ಟತೆ ಪಡೆಯತೊಡಗಿದೆ. ಅರ್ಥ: ವಿಚಾರ, ಮಾನವಕಲ್ಪಿತವಲ್ಲ. ತರ್ಕ, ಅನುಮಾನವು ಅರ್ಥ : ವಿಚಾರವನ್ನು ಸ್ಪಷ್ಟೀಕರಿಸುವ ಸಾಧನವೇ ಹೊರತು ಅದುವೆ 'ಜ್ಞಾನ'ವಲ್ಲ. ತರ್ಕದಿಂದ ಜ್ಞಾನದ ಆರಂಭವಾಗುತ್ತಿಲ್ಲ. ಆದಕಾರಣ ವ್ಯಕ್ತಿಯು ತನ್ನ ಪಾಡಿಗೆ ಗ್ರಹಿಸಿಕೊಳ್ಳುವ 'ಅನುಮಾನಿತ-ಸತ್ಯ (hypothesis)' ಎಂಬುದಕ್ಕೆ ದಿಕ್ಕಾಲ ಪರಿಸರದಲ್ಲಿ ಸ್ಥಾನವು ಇರದೆ ಇದ್ದರೆ ಆ 'ಅನುಮಾನಿತ ಸತ್ಯ'ವು ಕೇವಲ ಊಹೆಯೇ ಸರಿ. ಜೀವನ ಸಂದರ್ಭದ ಒಂದಕ್ಕಿಂತ ಹೆಚ್ಚು-ಹಲವು ಸಂದಿಗ್ಧ ಸಮಸ್ಯೆಗಳ ಮೂಲಕ ಆ ವಿಶಿಷ್ಟ 'ಅನುಮಾನಿತ ಸತ್ಯ'ದ ಸ್ವೀಕಾರವು ಅನಿವಾರ್ಯವಿದೆ ಎಂದು ಸಿದ್ಧವಾಗುತ್ತಿದ್ದರೆ ಮಾತ್ರ, ಅಂತಹ ಅನುಮಾನ : ತರ್ಕ ಅನ್ವೇಷಕನನ್ನು ವಾಸ್ತವ : ಸತ್ಯದ ಹತ್ತಿರಕ್ಕೆ ಕೊಂಡೊಯ್ಯಬಲ್ಲುದು. ಹೆಗೆಲ್-ಮಾರ್ಕ್ಸರು ತಮ್ಮ ಗ್ರಹಿಕೆಯ (ಕೇವಲವಾದೀ) (Hypo-) *Thesis* ಸಿದ್ಧಾಂತದ ಮೇಲೆ ಸುಂದರ ತತ್ವಜ್ಞಾನ ಮಂದಿರ ನಿಲ್ಲಿಸಿ ಲೋಕವಿಭ್ರಮವನ್ನು ಹೆಚ್ಚಿಸಿದಕ್ಕೆ ಜರ್ಮನಿ-ರಶಿಯಗಳ ಅರ್ವಾಚೀನ ಕಾಲದಲ್ಲಿ ಕಾಣಿಸಿಕೊಂಡ ಏಕಂ : ಸತ್ ಪಂಥೀಯ ಸರ್ವಾಧಿಕಾರೀ ರಾಜ್ಯಪದ್ಧತಿಗಳೇ ಸಾಕ್ಷಿಯಾಗಿದೆ.

ಸಾಂಸ್ಕೃತಿಕ ಜೀವನ ಸಂದರ್ಭದ ವಾಸ್ತವ : ಸತ್ಯವನ್ನು ಕಂಡುಹಿಡಿಯುವ ಒಂದು ಸಾಧನವೆಂದು, ಮಾನವ ಕಲ್ಪಿತ ಈ 'ಸತ್ಯ(?)'ದ ಪ್ರಕಾರವೂ ಒಂದು ಉಂಟು: ಸಮಸಾಮಯಿಕ ಪ್ರತಿಮಾ : ಸಂಕೇತಗಳ ತುಲನೆಯಲ್ಲಿ ಈ ಮಾತು ಸ್ಪಷ್ಟವಾಗುತ್ತದೆ. ಪ್ಲೇಟೋನ 'ರಿಪಬ್ಲಿಕ್'ದ ಬಗೆಗಿನ ಸ್ವಪ್ನ, 'ಅನಾರ್ಕಿಸ್ಟ್': ಆತ್ಯಂತಿಕ ವ್ಯಕ್ತಿವಾದೀ ಜೀವನ ರೀತಿ, ಮಾರ್ಕ್ಸನ ಆದರ್ಶ ಸಮತಾವಾದೀ ಜೀವನ ರೀತಿ-ರಾಜ್ಯಪದ್ಧತಿ, ಗಾಂಧೀಜಿ

ಕಲ್ಪಿತ ರಾಮರಾಜ್ಯದ ಆದರ್ಶ ಇವು ಇಂತಹ ಅರ್ವಾಚೀನ ಮಾದರಿಗಳೇ ಆಗಿವೆ. ಇವುಗಳ ವಾಸ್ತವತೆಯ ಶಕ್ಯತೆಯ ಬಗೆಗೆ ಜೀವನ ಪರಿಸರದಲ್ಲಿ ಪ್ರಮಾಣಗಳೇ ದೊರೆಯುತ್ತಿಲ್ಲ. ಯಾವ ಭಾಷಿಕ ಪ್ರತಿಮೆಗಳಲ್ಲಿಯೂ ಇಂತಹ ಜೀವನದ ಅಸ್ತಿತ್ವಸೂಚಕ ಸುಸಂಗತ ಸಂಕೇತಗಳೇ ಲಭಿಸಿಲ್ಲ. ವಿಶ್ವದಲ್ಲಿ ಈ ವೈಚಾರಿಕ ಆಕೃತಿಯು ಉಂಟೆಂದು ಬಗೆಯಲು ಈ ದಿವ್ಯ ಪುರುಷರ ವೈಯಕ್ತಿಕ ಶ್ರದ್ಧೆಯ ಹೊರಗೆ ಬೇರೆ ಪ್ರಮಾಣಗಳು ದೊರೆಯದಿರುವುದು ವಿಷಾದದ ಸಂಗತಿ. ವಿಶ್ವಸ್ಥ ವಾಸ್ತವ : ಸತ್ಯ ಮಾನವ ಕಲ್ಪಿತವಲ್ಲ. ಅದು 'ಉಂಟು' ಆದರೆ, ಈ 'ಉಂಟು' ಎಂಬುದು ಗ್ರಹಿಸಿಕೊಂಡಲ್ಲದೆ ತಿಳಿಯದು. ಆದಕಾರಣ, ಈ 'ಉಂಟನ್ನು' ಗ್ರಹಿಸಿಕೊಳ್ಳುವ ವೈಯಕ್ತಿಕ ಹಕ್ಕನ್ನು-ಈ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವಷ್ಟು ಅನ್ಯಾಯ ಮತ್ತು ಸಂಸ್ಕೃತಿಗೆ ಕೇಡು ಬೇರೊಂದರಿಂದ ಇಲ್ಲ.

ಸಂಸ್ಕೃತಿಯು ಮಾನವ ನಿರ್ಮಿತ (: Invention) ಎನ್ನಬಹುದಾದರೂ, ಇದು ಸರ್ವಾರ್ಥದಿಂದ ಸರಿಯಲ್ಲದ ಮಾತು.

೧. ವಿಶ್ವಸ್ಥ ಮೂಲಭೂತ ನಿಯಮರೂಪೀ ಸತ್ಯವನ್ನು ಗ್ರಹಿಸಿಕೊಳ್ಳುವುದು

೨. ಜೀವನದ ಪ್ರಗತಿಗೆ ಅದರ ಪ್ರಯೋಜನ ಪಡೆಯುವುದು.

ಹೀಗೆ ಇವು ಎರಡು ಭಿನ್ನ ಪಾತಳಿಯ ಕಾರ್ಯಗಳು. ಆದರೆ ಮೂಲಭೂತ ಸತ್ಯ-ತತ್ತ್ವದ ದರ್ಶನ-ಪಡೆದ ಐನ್‌ಸ್ಟನ್‌ರಂತಹರು, ಮತ್ತು ಐನ್ಸಟ್‌ರಂತಹರ 'ದರ್ಶನ'ದ ಲಾಭಪಡೆದು, ತನ್ನವೇ ಆದ ಹೊಸ ಹೊಸ ಕೃತಿ ರಚನೆ ಮಾಡುವ ಎಡಿಸನ್‌ರಂತಹರು ಇವೆರಡೂ ವರ್ಗದ ಕೃತಿಗಳಲ್ಲಿ ತಾರತಮ್ಯವು ಉಳಿಯದಿರುವಾಗ, ಆ ಸಂಸ್ಕೃತಿಯ ಕೊನೆಯ ದಿನಗಳು ಸಮೀಪಿಸುತ್ತಿರುವುದರ ಲಕ್ಷಣಗಳೂ ಅಲ್ಲಿ ಕಾಣತೊಡಗಲೇ ಬೇಕು. ಪ್ರತಿಯೊಂದು ಭಾಷೆಯ ಶಬ್ದಗಳ ಬರುವಳಿಯಲ್ಲಿ ದರ್ಶನದ ಪಾತಳಿಯ ಪ್ರತಿಮೆಗಳು ಇರುವಂತೆ, ಪ್ರಭಾವೀ ವ್ಯಕ್ತಿಯ ಸಂಕಲ್ಪನೆಯ ಪ್ರತಿಮೆಗಳೂ ಇರಬಲ್ಲುವು. ಆದರೆ, ಇವೆರಡೂ ಅಷ್ಟೇ ಮೌಲಿಕವಲ್ಲ. 'ಮರೆತುಹೋದ ಭಾಷೆ' ಗ್ರಂಥದಲ್ಲಿ ಎರಿಕ್ ಫ್ರಾಮ್ ಹೇಳುವ ವೈಶ್ವಿಕ (Universal) ಸಂಕೇತಗಳು ಈ ಬಗೆಯ ಮಾದರಿ ಎನ್ನಬಹುದು.[2] ಆತನು ಬೆಂಕಿ, ನೀರು ಈ ಪ್ರತಿಮಾ : ಸಂಕೇತಗಳ ಅಪೂರ್ವತೆಯನ್ನು ವಿವರಿಸುತ್ತಾನೆ. ಅರ್ನೆಸ್ಟ್ ಕ್ಯಾಸಿರರ್ ಇದನ್ನು ಇನ್ನೂ ಚೆನ್ನಾಗಿ ವಿವರಿಸಿದ್ದಾರೆ.

ಈ ದೃಷ್ಟಿಯಿಂದ ಸಹ-ಜ ಸಂಕೇತ ಮತ್ತು ವಕ್ರ ಅಥವಾ ಕೃತ್ರಿಮ ಸಂಕೇತ ಇವೆರಡರಲ್ಲಿ ಇರುವ ಭೇದವು ಮಾಸಿಹೋದರೆ ಆ ಭಾಷಿಕರ ದೃಷ್ಟಿ ಸದೋಷವಾಗಿ ಅವರು ವಾಸ್ತವಸತ್ಯಕ್ಕೆ ವಂಚಿತರಾಗುವರು. ಉದಾ : ಯುರೋ ಭಾರತೀಯ 'ಮಾಸ್' (: ಚಂದ್ರ) ಸಂಕೇತ ಕಾಲವನ್ನು ಅಳೆವ ಪುರಾತನ ಮಾನದಂಡ=ಮಾಸ್ (=ಚಂದ್ರ): ಕಂದಮಿಳ ಭಾಷೆಯಲ್ಲಿಯೂ 'ತಿಂಗಳು'! ಇದು ಮಾನವೇತಿಹಾಸವನ್ನು ಬೆಳಕಿನಲ್ಲಿ ತರುತ್ತಿರುವ ಒಂದು ಅಪೂರ್ವ ಸಂಕೇತವಾಗಿದೆ. ಸೂರ್ಯನಿಂದ ಕಾಲಗಣನೆ ಮಾಡುವುದಕ್ಕಿಂತ ಮುಂಚೆ. ಚಾಂದ್ರ-'ಮಾ'-ನವೇ ಪ್ರಪಂಚದಲ್ಲೆಲ್ಲ ರೂಢವಿತ್ತು. ಆದ್ದರಿಂದ, 'ಸೂರ್ಯ' ಸಂಪ್ರದಾಯವು ಚಂದ್ರ ಸಂಪ್ರದಾಯದ ತರುವಾಯದ್ದು, ಎಂಬ ಈ ಸಾಂಕೇತಿಕ ಸತ್ಯವನ್ನು ಶಂಕಿಸಲು ನಿಜವಾಗಿ ಅವಕಾಶವೇ ಇಲ್ಲ. ಚಂದ್ರ (: ಮಧುರ ಚಮಸ : ಪಾತ್ರ) ಈ ಸಂಕೇತವು ತಿಂಗಳ-ಮುಟ್ಟಿನೊಡನೆ ಸಂಬದ್ಧವಿದೆ. ಯುರೋಪೀಯ ಭಾಷೆಯ 'Menses" (ಮುಟ್ಟು : ಆರ್ತವ) ಇದಕ್ಕೆ ಸಾಕ್ಷಿ. ಈ ಕಾರಣದಿಂದ ಚಂದ್ರ ಸಂಕೇತವು (: ಚೆಂದಿರೆ-ಚಲುವೆ) ಮೂಲತಃ ಸ್ತ್ರೀ ಪ್ರತಿಮಾ ರೂಪದಲ್ಲಿಯೇ ಆಕರ್ಷಕವೆನಿಸಿ ದೇವೀರೂಪದಲ್ಲಿ ಆರಾಧಿಸಲ್ಪಡುತ್ತಿರಬೇಕು. ಡೊನಾಲ್ಡ್ ಮ್ಯಾಕೆಂಝಿ, ಈಜಿಪ್ಟ್ ಸಂಸ್ಕೃತಿಯ ಪ್ರಾರಂಭ ಚಂದ್ರನಿಂದ ಎಂದು ಸಾಧಾರ ಹೇಳಿದ್ದಾನೆ. ಆದರೆ, ಸಹ-ಜ ದರ್ಶನದ ಈ ಮೂಲ ಪ್ರತಿಮಾ ಸ್ವಭಾವ. ಇದು ಪುಲ್ಲಿಂಗೀ-ಉಭಯಲಿಂಗೀ ಆಗುವುದರೊಡನೆ ವಕ್ರವಾಗತೊಡಗಿದ್ದುಂಟು! ಪ್ರತಿಮಾ : ಸಂಕೇತದೊಳಗಿನ ಈ ಸಹ-ಜ 'ಪ್ರತೀಯಮಾನ ಅರ್ಥತತ್ತ್ವವು' ವಕ್ರೋಕ್ತಿ ಸಂಪ್ರದಾಯದ ಕೈಯಲ್ಲಿ ಸಾಹಿತ್ಯಿಕ ಶೃಂಗಾರ-ಸಂವರ್ಧನೆಗೆ ಮೂಲಧನವಾಗಿ ದೊರೆತಂದು ಕಾಣುತ್ತದೆ, ಭಾರತೀಯ ರಸಸಾಹಿತ್ಯದಲ್ಲಂತೂ!

ಪ್ರತಿಮಾ-ಸಂಕೇತಾತ್ಮಕ ಭಾಷೆ ಪ್ರಚಲಿತವಾಗುವ ಮುಂಚಿನ ಕಾಲದಲ್ಲಂತೂ ಸರಿ. ಇಂದೂ ಸಹ ಪ್ರತಿಯೊಂದು ವ್ಯಕ್ತಿಯಲ್ಲಿಯು ಅಗಮ್ಯ ಗೂಢಭಾವದ ಬಗೆಗಿನ ಆಕರ್ಷಣವು, ಹುಟ್ಟಿನಿಂದಲೇ ಉಂಟೇ ಉಂಟು. ಯಾವುದೇ ಒಂದು ವಿಶೇಷ ವರ್ಣ, ಆಕೃತಿ ಮತ್ತು ಸಂಖ್ಯೆಯ ಆಕರ್ಷಣವು, ಆ ವ್ಯಕ್ತಿ ವಿಶಿಷ್ಟ-ಸ್ವಭಾವದ ದ್ಯೋತಕವಾಗಿರುತ್ತದೆ. ಇಂದಿಗೂ ಪುರಾತನ ಆಕೃತಿಯ ಆಕರ್ಷಣವೇ ಉಂಟು. ಆದರೆ ಬಾಹ್ಯನಾಮರೂಪ ಬೇರೆ! ಮಾನವೇತರ ಜೀವಿಗಳ ಮೇಲೆ ಬಣ್ಣ ಬಣ್ಣದ ಆಕೃತಿ ದೃಶ್ಯಗಳ ಪರಿಣಾಮವಾಗುವುದು ನಿಜವಿದ್ದರೂ, ಈ ಪರಿಣಾಮದ ಸ್ವರೂಪವನ್ನು ಕುರಿತು ವ್ಯಾಸಂಗವಾಗಿದೆಯೋ ತಿಳಿಯದು. ಆದರೆ, ಸಂಖ್ಯೆಗಳ ಬಗೆಗಿನ ಆಕರ್ಷಣವು,. ಮಾನವ ಜೀವನ ಪಾತಳಿಯ ವೈಶಿಷ್ಟ್ಯವೇ ಸರಿ. ಸಂಖ್ಯೆಗಳಲ್ಲಿ ಶುದ್ಧ ಏಕ್ಕಂ ಸ್ಥಾನದ ಅರಿವು, ಪ್ರಾರಂಭದಲ್ಲಿ ಇರಲಿಲ್ಲ ಇರಲಾರದು. ವೈವಿಧ್ಯವು ನಿಸರ್ಗದಲ್ಲಿ ಸಹಜವಾಗಿ ಕಾಣುತ್ತದೆ. 'ಹಲವು' ಗೊತ್ತಾಗದ ಬಳಿಕ ಅವುಗಳೊಳಗಿನ 'ಸಮಾನ' 'ಸಾಮಾನ್ಯ' ಏನು, ಎಷ್ಟು ಇದು ಅರಿಕೆಗೆ ಬರಬಲ್ಲುದು. ಭಾರತೀಯ ಭಾಷೆಗಳಲ್ಲಿ ಒಂದು-ತನದ ಸೂಚಕ general ಮತ್ತು common ಈ ಸ್ಥೂಲ ಸಂಕೇತಗಳು ಇದ್ದರೂ, ಇಂಗ್ಲಿಷಿನಂತೆ ಸಾಮಾನ್ಯ ಮತ್ತು ಸಮಾನ ಇವುಗಳೊಳಗಿನ ಸೂಕ್ಷ್ಮಾರ್ಥ ಭೇದದ ಆವಶ್ಯಕತೆ ಎನಿಸದ್ದರಿಂದ ಇವು ಇಂದಿಗೂ ಸ್ಥೂಲವಾದ ಒಂದು : ಏಕಂ ಆಗಿಯೇ ಉಳಿದಿವೆ! ಇಂಗ್ಲೀಷಿನಂತೆ, ಈ ಒಂದು ತನದಲ್ಲಿಯೇ ಇರುವ ಸಮಾನ ಮತ್ತು ಸಾಮಾನ್ಯತ್ವದ ತಾರತಮ್ಯದ ಆವಶ್ಯಕತೆ, ನಮ್ಮ ಜೀವನದಲ್ಲಿ-ಬರೆವಣಿಗೆಯಲ್ಲಿ ಇಂದಿಗೂ, ಎನಿಸಿದ್ದು ಎಷ್ಟು ಜನರಿಗೆ?

ಆದಕಾರಣ, ಆ ಪುರಾತನ ಋಗ್ವೇದದ ಪ್ರಾರಂಭದಲ್ಲಿ 'ಏಕಂ : ಸತ್' ಈ ಶಬ್ದ ಪ್ರತಿಮೆಯಲ್ಲಿ, ಆಧುನಿಕ ಸ್ವರೂಪದ ವಿಚಾರದೊಳಗಿನ ಸಮಾನ-ಸಾಮಾನ್ಯ ಎಂಬ ಅರ್ಥ ಕಲ್ಪಿಸುವಲ್ಲಿ ಮೋಸವಾಗುತ್ತಿದೆ. ಕಂದಮಿಳ ಒಂದು (: ಹೊಂದು) ಕೂಡು-ಬೆರೆ ಎಂಬ ಸಂಕೇತಸ್ಥ ಗರ್ಭಿತಾರ್ಥವೇ ಪುರಾತನ ಸಂಸ್ಕೃತ "ಏಕಂ" (ಸತ್=ಸಲಿಲ) ಸಂಕೇತದಲ್ಲೂ ಉಂಟು. ಈ ಮೂಲ ಆಕೃತಿ, ಚಿತ್ರವು ಕಂದಮಿಳ ಶಬ್ದ-ದೇಹ ವಿಶ್ಲೇಷಣ ಶಾಸ್ತ್ರಜ್ಞರಿಗೆ ಕಂಡಿಲ್ಲ. ಅವರು ಇವನ್ನು ಭಿನ್ನವೆಂದು ಬಗೆಯುತ್ತಾರೆ. ಆದರೆ, ಈರ್-ನೀರ್, ಆಲ್-ಪಾಲ್‌ಗಳಂತೆ ಒಂದು-ಹೊಂದು ಇವು ಒಂದೇ ಇದ್ದು, ಸ್ವರಾದಿ ವ್ಯಂಜನಾದಿಯಾಗಿ ರೂಢವಾಗಿವೆ. ಒಂದು-ಹೊಂದು ಇವೆರಡನ್ನೂ ಬೇರೆ ಮೂಲದವಾಗಿ ಗ್ರಹಿಸುವಲ್ಲಿ, ವಿಚಾರ ವಿಕಾಸ ಕ್ರಮದ ಸೂತ್ರಕ್ಕೆ ಬಾಧೆ ಬರುತ್ತದೆ. ಆದರೆ ವಿಶ್ವಾರಂಭದ ಬಗೆಗಿನ ಪವಾಡ ಕಥೆಗಳಲ್ಲಿ ಕಾಣದೊರೆವ (ವಾಗರ್ಥಾವಿವ ಸಂಪೃಕ್ತ 'ಒಂದು'), ಆದಿದೈವತ ಪ್ರತಿಮೆಯಿಂದ, ಒಂದು-ಹೊಂದು, ಒರು-ಒಕ್ಕ (Together, ಒನ್ರು; to unite, become one) ಈ ಅರ್ಥಕ್ಕೆ ಬಾಧೆ ಬರಲಿದೆ. ಗಣಿತಶಾಸ್ತ್ರದಲ್ಲಿ Unity=ಕೂಡ, ಮಿಥುನ. ಇದನ್ನು ಒಂದು ಎಂದು ಗ್ರಹಿಸಲಾಗಿದೆ. ಇಂಗ್ಲೀಷಿನ One, ಇದು ಗ್ರೀಕ ಭಾಷೆಯಲ್ಲಿ ಸ್ತ್ರೀಲಿಂಗೀ ಸಂಕೇತ! ವಂಶಾವಳಿ (Patronymic) ಸೂಚಕ ಸಂಕೇತ ಎಂದು ಕೋಶವು ಸೂಚಿಸುತ್ತದೆ. ಸಂಸ್ಕೃತ 'ಏಕ' ಸಂಕೇತದ ಮೂಲದಲ್ಲಿ. 'ಇ' (ಅಯನ) ಹೋಗು ಗಮನಿಸು ಎಂಬ ಅರ್ಥದ ಆಖ್ಯಾತವಿರಬೇಕೆಂದು ಬಗೆಯಲಾಗಿದೆ.

ಕೆಲವು ಭಾಷೆಗಳಲ್ಲಿ, ಏಕ, ದ್ವಿ, ತ್ರಿ ಹೀಗೆ ಮೂರು ಇದ್ದರೇ ಬಹುವಚನ! ಒಂದು ಮತ್ತು ಎರಡು ಎಂದರೆ ನಿತ್ಯ ಬಹುವಚನವಲ್ಲ! ಒಂದು ಮತ್ತು ಇನ್ನೊಂದು ಇವೆರಡೂ ಒಂದು ಗೂಡುವ ಶಕ್ಯತೆಯಿಂದಾಗಿ, ಅಥವಾ ಇಂಥ ಅನುಭವದಿಂದಾಗಿ ಮೂರನೆಯದು ಇದ್ದಾಗ ಅಥವಾ ಆದಾಗಲೇ ಅದು ನಿಜವಾದ ಬಹುವಚನ! ಈ ಪ್ರಪಂಚದಲ್ಲಿ ಲಿಂಗ ಮೂರೇ. ಪುರುಷ ಮೂರೇ! ನಾನು-ನೀನು ಇಬ್ಬರೆ ಅರ್ಥವಿಹೀನ. ಅದು: ಅವಳು-ಅವನು ಇಲ್ಲದೆ ಇದ್ದರೆ! ಈ ಹಿನ್ನೆಲೆಯಲ್ಲಿ ವಚನಗಳು ಮೂರು ಇರುವುದಕ್ಕೂ ಏನೊಂದು ಲೋಕಾನುಭವವು ಕಾರಣವಿರುವ ಶಕ್ಯತೆಯುಂಟು. ಸ್ತ್ರೀ ಮತ್ತು ಪುರುಷ ಎರಡರಿಂದಲೇ ಕುಟುಂಬವಾಗದು; ಮಗುವು ವಂಶದ ಚಿಗುರು. ಆದಕಾರಣ ಮೂರು ನಿಜವಾದ ಬಹುವಚನ. ಆಗಲೇ ಸೃಷ್ಟಿಗೆ ಪ್ರಾರಂಭ. ಆದುದರಿಂದ, 'ಮೂರು' ಇದೇ ಬಹುಚನ ಎಂಬ ಮೂಲದರ್ಶನದ ಸಂಸ್ಕೃತ ಭಾಷಿಕರಲ್ಲಿ, ಏಕಂ : ಸತ್ ಪಂಥೀಯ ಜೀವನ ದೃಷ್ಟಿಗೇ ಪ್ರಾಶಸ್ತ್ಯ-ಪ್ರತಿಷ್ಠೆಯಿರಲು

ಶಕ್ಯವಿಲ್ಲ, ಆದರೆ ಋಗ್ ವೇದದ ಇಂದಿನ ಸಂಹಿತೆಯಲ್ಲಿ 'ಏಕಂ : ಸಂತ' ಸಂಪ್ರದಾಯದ ಪ್ರಾಶಸ್ತ್ಯ-ಪ್ರತಿಷ್ಠೆಯಿರಲು ಶಕ್ಯವಿಲ್ಲ, ಆದರೆ ಋಗ್‌ವೇದದ ಇಂದಿನ ಸಂಹಿತೆಯಲ್ಲಿ 'ಏಕಂ : ಸಂತ' ಸಂಪ್ರದಾಯದ ಕೈವಾಡವೇ ಪ್ರಾಧಾನ್ಯದಿಂದ ಕಾಣುತ್ತದೆ! ಆದರೂ, ಈ ಸಂಹಿತೆಯಲ್ಲಿಯೆ ಇರುವ ಜಾತವೇದ ಅಗ್ನಿ, ಧೀಪ್ರಚೋದಕ ಸವಿತೃ (ಸೂರ್ಯ), ವೃತ್ರಹನ್ ಇಂದ್ರನ ಸಂಪ್ರದಾಯದಲ್ಲಿ 'ಮೂರು' ಈ ಸಂಖ್ಯೆಯ ವಿಶೇಷ ಆಕರ್ಷಣವಿದ್ದುದು ಕಾಣುತ್ತದೆ. — ವಿಶ್ವದ ಮೂಲದಲ್ಲಿ 'ತ್ರಿಧಾತು'ಗಳು ಇದ್ದುವಾಗಿ ಅವರ ಗ್ರಹಿಕೆಯಿತ್ತು. ಪಂಚೀಕರಣಕ್ಕೂ ಪೂರ್ವದಲ್ಲಿ, ತ್ರಿವೃತ್‌ಕರಣದ ಭೂಮಿಕೆಯಿಂದಲೇ ಸೃಷ್ಟಿಯ ಮೂಲತತ್ತ್ವದ ವಿವರಣೆ ಹೇಳಲಾಗುತ್ತಿತ್ತು. ವಾತ, ಪಿತ್ತ ಮತ್ತು ಕಫ ಎಂಬ ತತ್ತ್ವತ್ರಯಗಳ ಆಧಾರದ ಮೇಲೆ ಮಾನವನ ಆರೋಗ್ಯ ನಿಂತಿದೆ ಎಂಬ ಗ್ರಹಿಕೆಯಿತ್ತು. ಆದರೆ, ಮಾನವರಿಗೆ ಮೂರನೆಯ ಕಣ್ಣು ಇರುವ ಭ್ರೂಮಧ್ಯ ದೃಷ್ಟಿ ಅಥವಾ ಭಾಲಲೋಚನತ್ವವು ಇರುವ ವಿಚಾರವು ಮಾತ್ರ ಪ್ರಚಲಿತವಾದ ರೀತಿಯೆ ಬೇರೆ! ಋಗ್ವೇದದೊಳಗಿನ ಏಕಚಕ್ರ, ತ್ರಿಚಕ್ರದ ಅನುಸಂಧಾನದಲ್ಲಿ ತ್ರ್ಯಂಬಕ ಶಬ್ದಪ್ರತಿಮೆ ಮೈದಾಳಿದೆ. ಇದು ಮೂಲತಃ ಸೌರ-ಸಂಪ್ರದಾಯದ ಪ್ರತಿಮೆಯಲ್ಲ.

ಈ ತ್ರಿ 'ಚಕ್ರ'ವೇ ಋಗ್ವೇದದ ಅಂತ್ಯದಲ್ಲಿ ತ್ರಿ 'ಕೋಣ'ವಾಗುತ್ತದೆ. ವೇದದ ಖಿಲಭಾಗದ ಸೂಕ್ತಗಳಲ್ಲಿ ಬರುವ ಶ್ರೀ (ಲಕ್ಷ್ಮೀ) ದೇವಿ ಉಪಾಸನಾ 'ಚಕ್ರವು ತ್ರಿಕೋಣಯುಕ್ತವಿದೆ! ಆದರೆ, ಈ ಚಕ್ರ (O) ಪೂಜೆಯಲ್ಲಿ ಸಂಖ್ಯೆಗೆ ಪ್ರಾಶಸ್ತ್ಯವಿಲ್ಲ! ಷಟ್‌ಚಕ್ರ-ಯೋಗದ ಪೂರ್ವ ಪೀಠಿಕೆ ಇಲ್ಲಿದೆ. ಮೂಲ ಮುಖ್ಯ ಚಕ್ರ (ಕೋಣ) ಒಂದೇ; 'ಮೂಲಾಧಾರ ಚಕ್ರ' ಎಂಬ ಇದರ ಹೆಸರೇ ಈ ಮಾತಿಗೆ ಸಾಕ್ಷಿ. 'ಒಂದು' (ಒಂದು=ಕೂಡು) ಈ ಸಂಖ್ಯೆಯ ಅರ್ಥದಲ್ಲೆ ಮಾಯಾಶಕ್ತಿ ಹುದುಗಿದೆ. ನಿಜಕ್ಕೂ 'ಒಂದು', ಇದು ಎರಡರ ಒಕ್-ಕೂಟ: ತೋರುವಲ್ಲಿ ಮಾತ್ರ 'ಒಂದು'! ಒಂದರೊಳಗಿನ ಜಾದೂ ಮತ್ತು ಶೂನ್ಯ `O' ದೊಳಗಿನ ಮಾಯಾತತ್ತ್ವ ಬೇರೆಯಲ್ಲ! ಆದಕಾರಣ, ಇಲ್ಲಿ ವಿಚಾರಾರ್ಹ ಪ್ರಶ್ನೆ : 'ಒಂದು' : O : ಚಕ್ರ (=ಕೋಣ : ಖಂ : ಖೆಡ್ಡಾ) ಇದೇ ಪ್ರದಾನವಿರುವಾಗ ಇದು ತ್ರಿಚಕ್ರ=ತ್ರಿಕೋಣವಾಗಿ ಮಾರ್ಪಡುವ ಆವಶ್ಯಕತೆ ಏನಿತ್ತು? 'ತ್ರಿ' ಸಂಖ್ಯಾ ಉಪಾಸಕರ ಸಂಪ್ರದಾಯ ಮತ್ತು ಏಕಂ=ಚಕ್ರ ಆರಾಧಕರ ಸಾಂಸ್ಕೃತಿಕ ಸಂಗಮದ ಸೂಚನೆ ಇಲ್ಲಿ ಉಂಟೊ? ಶ್ರೀದೇವಿ ಮೂಲತಃ ಚಂದ್ರಾ. ಆದರೆ ಋಗ್ ವೇದದಲ್ಲಿ ಸೋಮನಾಮಾಂತರದ ಚಂದ್ರ, ಪುಲ್ಲಿಂಗೀ ವೇಷಧಾರಿ (: ಪುರುಷ=ಪ್ರಚ್ಛನ್ನ ವಿಷ್ಣು)! ಈ ಲಿಂಗ ವ್ಯತ್ಯಾಸದಿಂದಾಗಿ ಸೂರ್ಯನನ್ನೇ ಶ್ರೀಲಕ್ಷ್ಮೀದೇವಿಯನ್ನಾಗಿ ಕಲ್ಪಿಸಲು ಅನುಕೂಲವಾಗಿದೆ! ಸಾರ್ಪರಾಜ್ಞಿ : ಸೂರ್ಯ (: ಸೂರ್ಯಾ) ಯಾರು? ಸೂರ್ಯಾ-ಸೋಮವಿವಾಹ ! ತೆರೆಯ ಮರೆಯ ಈ ತಂತ್ರ ಶ್ರೀಸೂಕ್ತದಲ್ಲಿ ಬಯಲಿಗೆ ಬರುತ್ತಿದೆ.[೯] ಈ ದೇವಿ 'ಚಂದ್ರಾಂ ಹಿರಣ್ಮಯೀಂ' ಎಂದು ವರ್ಣಿತಳು! 'ಕಾ' (ಕಂ : ದೇವಪತ್ನಿ : ರುದ್ರಾಣಿ). 'ಆರ್ದ್ರಾ' ಎಂದು ನಿರ್ದೇಶ! ಈ 'ಚಂದ್ರಾಂ' 'ಸೂರ್ಯಾಂ ಹಿರಣ್ಮಯೀಂ' ಎಂದೂ ವರ್ಣಿಸಲಾಗಿದೆ! 'ಏಕಂ' ಇದೇ ಸತ್ಯ ಎಂಬ ಆಗ್ರಹೀ ಶ್ರದ್ಧೆಗೆ ಸೂರ್ಯ=ಚಂದ್ರ; ಬೆಳಕು=ಕತ್ತಲೆ; ೧=೩ ಆದರೆ ತಪ್ಪೇನು?

ವಿಶಿಷ್ಟ ಸಂಖ್ಯೆಯ ಬಗೆಗಿನ ಗೂಢ ಆಕರ್ಷಣದ ಪ್ರಾರಂಭ ಸ್ಥಾನವೇ ಮೂಲಾಧಾರ ಚಕ್ರ : (ಕೋಣ: ಕೋಣೆ). ಪುರಾತನ ಕ್ರೀಟ್ ಸಂಸ್ಕೃತಿಯಲ್ಲಿ ಮೊಟ್ಟ ಮೊದಲು ಗವಿಯ ಪೂಜೆ ಇತ್ತಂತೆ. ವೇದೋಪನಿಷತ್ತು ಗೀತೆಯಲ್ಲಿಯ 'ನಿಹಿತಂಗುಹಾಯಾಂ'='ಗುಹಾ-ನಿಹಿತಂ' 'ಗೂಳ್‌'ೂ'ಗಹ್ವರಂ' ಸಂಕೇತಗಳ ಬಗೆಗಿನ ಆತ್ಮೀಯತೆಯೂ ಇದಕ್ಕೆ ಪ್ರಮಾಣ. ಗುಹೆ : ಕತ್ತಲು-ಗವಿ, ಕೋಣೆ, ಗರ್ಭ-ಗುಡಿ, ಧ್ಯಾನ-ಸಮಾಧಿಗೆ ಏಕಾಂತ ಸೇವನೆಗೆ ಆಕರ್ಷಕ ಸ್ಥಾನ. 'ಕೂಟ-ಸ್ಥ', ಆ-ತ್ಮನ್, ಗುಹೇಶ್ವರ, ಜ್ಯೋತಿರ್ಲಿಂಗ' ಈ ಪರಿಭಾಷೆಯು ಇಂದು. ಅಂದಿನ ಮೂಲ ಗೂಢಭಾವಕ್ಕೆ ಎರವಾಗಿದೆ! ಈ ಪರಿಭಾಷೆಯು ಮೈದಾಳಿದ ಮೂಲ ಸಮಯದ (ಆಚಾರದ) ಹಿನ್ನೆಲೆ ಇಲ್ಲದೆ, ಭಾಷಿಕ ಪ್ರತಿಮೆಗಳು ಒಳಗೊಳ್ಳುವ ಜೀವನದ ಛಾಯಾಚಿತ್ರವು, ಚಿತ್ತ ಭಿತ್ತಿಯಮೇಲೆ ಮೂಡಿ ನಿಲ್ಲಲಾರದು. ದಿಕ್ಕಾಲ-ಪರಿಸರಕ್ಕೆ ಸಂಬದ್ಧ ಜೀವನದ ಅಂಶಚಿತ್ರವನ್ನು ಅಂಥ ಸ್ಮೃತಿಯನ್ನು ಜಾಗ್ರತ ಮಾಡದ ಅರ್ಥ (: ಶಬ್ದಪ್ರತಿಮೆ) ಅರ್ಥವಿಹೀನವೆಂದೇ ಬಗೆಯಬೇಕಾದೀತು.

//

ಕನ-ಕನಿ, ಕಾಣು (dream) ಕನ್-ನಡಿ ಪ್ರತಿಬಿಂಬ. ಸಂಸ್ಕೃತ ಭಾಷೆಯ ದರ್ಪ-ಣದಲ್ಲಿ ಕನ್-ನಡಿಯ ಸೊಬಗು ಇಲ್ಲ! ಇದಕ್ಕಿಂತ ಆ-ದರ್ಶವು, ಕನ್-ನಡಿಯಂತೆ 'ಪ್ರತೀಯಮಾನ' ರೂಪ-ಆಕೃತಿ ಸೂಚಕ ಸುಂದರ ಪ್ರತಿಮೆಯ ಪ್ರತಿ-ಬಿಂಬದ ಸಮೀಕ್ಷೆಯಲ್ಲಿ ಸೌಂದರ್ಯದ ಅನುಭವ ದೊರೆಯುತ್ತದೆ. ಕನಸಿನ : ಪ್ರತಿಬಿಂಬದ-ಆದರ್ಶದ ಆಕರ್ಷಣದಲ್ಲಿ (Aesthetic phantasy) ಯ ಕೈವಾಡವೇ ಪ್ರಧಾನ. ಕನಿವ ಮತ್ತು ಕನ-ಸು ಕಟ್ಟುವ ಪ್ರಾಣಿ, ಎಂದು ಈ ಮನುಜನ ವ್ಯಾಖ್ಯೆ ಮಾಡಬಹುದು. ನಾಯಿಯು ಕೆಲವೊಮ್ಮೆ ಅಳುತ್ತಿರುವ ಧ್ವನಿಮಾಡುತ್ತ ಏಳುತ್ತದೆ. ನಾಯಿ, ಕುದುರೆ, ಆನೆ ಮುಂತಾದ ಪ್ರಾಣಿಗಳು ಕನಸು ಕಾಣುತ್ತವೆಂದು ಬಗೆಯಲಾಗುತ್ತದೆ. ಆದರೆ ಆ ಕನಸನ್ನು ಕನವರಿಕೆಯನ್ನು ನೆನಪಿಟ್ಟುಕೊಳ್ಳುವ ಸಾಧನವಾದ ಸಂಕೇತಾತ್ಮಕ ಭಾಷೆ ಅವಕ್ಕೆ ಲಭಿಸಿಲ್ಲ! ನಿನ್ನೆ ಇಂದುಗಳ ಸುಸಂಗತ ಸ್ಮೃತಿಯನ್ನು ಹೆಚ್ಚುಕಾಲ ಉಳಿಸಿಕೊಳ್ಳುವ ಸಾಮರ್ಥ್ಯವು ಅವುಗಳಲ್ಲಿ ಬೆಳೆಯಲಿಲ್ಲ. ಆದರೆ, ಈ ಸ್ಮೃತಿ ಶಕ್ತಿಪಡೆದ ಮಾನವನು, ತಾನು ಈ ಸಾಮರ್ಥ್ಯವನ್ನು ಬೆಳಿಸಿಕೊಂಡದ್ದೇ ತಪ್ಪು ಎನ್ನುವ ಪರಿಸ್ಥಿತಿಗೆ ಬಂದಿದ್ದಾನೆ! ಈ ಸ್ಮರಣಶಕ್ತಿ-ನಿನ್ನೆ-ಇಂದುಗಳ ಪ್ರಜ್ಞೆ-ಭವ-ಬಂಧನಕ್ಕೆ ಕಾರಣವಾಗಿದೆ, ಎಂದು ಮಿಡುಕುವುದೂ ಕಾಣುತ್ತದೆ. ನಿಸರ್ಗದ ಶಿಶುವು ತಾನು. ಆದರೆ ಪಶು-ಪಕ್ಷಿಗಳಿಗೆ ಇರುವ ಸ್ವೇಚ್ಛಾವಿಹಾರದ ಅರ್ಹತೆಗೆ ತಾನು ಎರವಾಗಿರುವೆನಲ್ಲ, ಎಂದು ಮಮ್ಮಲನೇ ಮರಗುವುದೂ ಕಾಣುತ್ತದೆ. ಕಲಿಕೆಯ ತಿಳುವಳಿಕೆಗಿಂತ ನಿಸರ್ಗಸ್ಥ ಅಂತಃಪ್ರೇರಣೆಯಿಂದ ಪ್ರಾಪ್ತವಾಗುವುದೆಂಬ ಜ್ಞಾನದ ಬಗೆಗಿನ ಆಕರ್ಷಣದಲ್ಲಿ, ನಿನ್ನೆ→ಇಂದು→ನಾಳೆಗಳ ಸಂದರ್ಭದ ಸ್ಮೃತಿ-ಬದ್ಧ ಜ್ಞಾನ-ವಿದ್ಯೆಯನ್ನು ಕೀಳ್ಗಗೆವ ಪ್ರವೃತ್ತಿ ಕಾಣುತ್ತದೆ. ಆದರೆ, ನಿನ್ನೆ-ಇಂದು-ನಾಳೆಗಳ ಸಂದರ್ಭದ ಜೀವನದ ಪ್ರೇರಣೆಯಿಲ್ಲದೆ ಇದ್ದರೆ ಈ ಭಾಷೆ ಮೈದಾಳುವ ಕಾರಣವೇ ಇದ್ದಿಲ್ಲ! ಕನಿವಲ್ಲಿ ಕಣಿಯೊಡನೆ ಹುಟ್ಟಿದ ಭಾಷೆ, ಈ ಸ್ಮೃತಿ, ನಿಃಸಂಗ-ಮುಕ್ತ ಜೀವನ ರೀತಿಗೆ- ಕನಸುಗಾರಿಕೆಗೆ ಆತಂಕಕಾರಿಯಾಗುವಾಗ, ಅದನ್ನು 'ನೇತಿನೇತಿ' ಸ್ವರೂಪದ ಅನಿಶ್ಚಿತ ಆಕೃತಿಗೆ ಒಗ್ಗಿಸಿಕೊಳ್ಳುವ ಎಳೆದಾಟ ನಡೆಯುತ್ತದೆ.

ಶಬ್ದ-ದ್ರವ್ಯದ ಆವರಣದಲ್ಲಿರುವ ಅರ್ಥರೂಪ ಕನಸಿನ ದ್ರವ್ಯದ ಪೃಥಃಕರಣ ಮಾಡಿದಲ್ಲಿ ಈ 'ಕನಿ'ಯುವಿಕೆಯಲ್ಲಿ ಎರಡು ಭಾಗಗಳು ಕಾಣಬಲ್ಲವು. ದಿಕ್ಕಾಲ ಪರಿಸರವನ್ನು ಮರೆಯಿಸುವ ಮಾಯಕ ಶಕ್ತಿಯ ಅರ್ಥವನ್ನುಳ್ಳದ್ದು; ಇದು ಭಾವನಾ ಪ್ರೇರಕ ಕನಿಕೆ (ಪುರುಳು), ಸ್ವಪ್ನಲೋಕಕ್ಕೆ ತಳ್ಳಿಕೊಂಡೊಯ್ಯುತ್ತದೆ. ಇದು ಅಕರ್ಮಕ; ಕಾಣುವ ಹಂತದಲ್ಲಿ ಪರಿಣಾಮಕಾರಿಯಾಗಬಲ್ಲುದು! ಮರಳಿ ನೋಡುವಲ್ಲಿ ವಿಮರ್ಶೆಗೆ- ವಿಶ್ಲೇಷಣಕ್ಕೆ ಒಗ್ಗಲು ಸಿದ್ಧವಿಲ್ಲದ ಸ್ವಭಾವ ಇದರದು. ಆದರೆ, ಕಾಣುವ ಹಂತವು ಅಕರ್ಮಕವಾಗಿಯೇ ಉಳಿಯದಿರುವ ಶಾಪವೋ ವರವೋ ಈ ನರನಿಗೆ ಉಂಟು! 'ನನಗೆ ಕಂಡಿತು' 'ನಾನು ಫಕ್ಕನೆ ಕಂಡೆ' ಎಂಬುದು ಹೆಚ್ಚಾಗಿ ಭೂತಕಾಲದ್ದೇ! ಇದರಿಂದಾಗಿ ಆ ದಿವ್ಯ (ಕನಿ-ಕಣಿ) ಇನ್ನೊಮ್ಮೆ ಕಾಣಲು ಆತಂಕಕಾರಿ ಎನಿಸುವ ವರ್ತಮಾನ ಕಾಲವು, ಈ ವ್ಯಕ್ತಿಗೆ ಬೇಸರ ತರುತ್ತದೆ! ತಿರಸ್ಕಾರದ ವಿಷಯವಾಗುತ್ತದೆ. ಭೂತಕಾಲದಲ್ಲಿ ಏನೆಲ್ಲ ಸೌಂದರ್ಯ: ದಿವ್ಯ ದಿವ್ಯಾಧ್ಯಾತ್ಮದ ಕ್ಷೇತ್ರದಲ್ಲಿ ಈ ಪ್ರವೃತ್ತಿಗೆ ಪ್ರಾಧಾನ್ಯ. ಆದರೆ ನಿನ್ನೆಯಂತೆ ನಾಳೆಯ ಆಗಾಮೀ ಆ-ದರ್ಶ: ಕನಿಯಲ್ಲಿ ಮೆಯ್ಮರೆವ, ಅದು ಈಗ ಇದ್ದೇ ಇದೆ ಎಂಬ ಹಾಗಿನ ಭಾವುಕ ಉನ್ಮನಸ್ಕ 'ಇಝುಂ'ಗಳೂ ಈ ವರ್ಗದುವೇ, ತತ್ತ್ವತಃ.

'ಕಾಣು' ಸಕರ್ಮಕವಾಗುವುದರೊಡನೆ ಅದು ಮಾನವನೊಳಗಿನ ಅಸ್ಮಿತತೆಯಾಗಿ ತಲೆದೋರುತ್ತದೆ. ದಿವ್ಯಾಧ್ಯಾತ್ಮದಲ್ಲಿ 'ದರ್ಶನ' 'ಸಾಕ್ಷಾತ್ಕಾರ'ದ ಹಂಬಲಿಗರಿಗೆ, 'ಇಝುಂ'ವಾದಿಗಳಿಗೆ ಸಹ ತಮ್ಮ ವೈಯಕ್ತಿಕ ಅಸ್ಮಿತತೆಯ ಪ್ರಜ್ಞೆಯನ್ನು ತೊಡೆದು ಹಾಕದೆ-ನಿನ್ನೆ-ಇಂದುಗಳನ್ನು ಶೂನ್ಯವಾಗಿಸದೆ ನಾಳೆಯ ಕನಿಯಲ್ಲಿ ಸೇರಲು ಅಶಕ್ಯ. ಆದುದರಿಂದ, ಇವರಿಗೆ ಮನುಜಪಾತಳಿಯಿಂದ ಮರಳಿ ನಿಸರ್ಗದ ಪಾತಳಿಗೆ ಹೋಗುವ ಪ್ರಾಯಶ್ಚಿತ್ತವೊ ಅಥವಾ ಒಂದು ಬಗೆಯ ಪರಾಗತಿಯೋ ಅವಶ್ಯವಾಗುತ್ತದೆ! ಮನುಜತ್ವವನ್ನು ಪಡೆವ ಪ್ರಯತ್ನದಲ್ಲಿ ಕೆಲವು ಮಾರ್ಗ ಕ್ರಮಿಸುವದರೊಳಗಾಗಿ ಮಾನವ ಪಂಗಡಗಳು ಏಕಂ : ಸತ್ತಿನ ದಿವ್ಯಾಧ್ಯಾತ್ಮದ 'ಚಕ್ರ'ವ್ಯೂಹದಲ್ಲಿ

ಸಿಕ್ಕಿಬಿಟ್ಟಿರುವ ಅಥವಾ ತಾವಾಗಿಯೇ ಹೋಗಿ ಸಿಲುಕಿಕೊಳ್ಳುವ ಆತುರದಲ್ಲಿರುವ ಒಂದು ವಿಚಿತ್ರದೃಶ್ಯವು ಕಾಣಲು ದೊರೆಯುತ್ತದೆ! ಮಾನವ ಪ್ರಗತಿಯ 'ಕಾಣು' ಮತ್ತು 'ನೋಡು', ಈ ಹಂತದ ಸಂದುಕಟ್ಟಿನಲ್ಲಿ ಈ ಘಟನೆ ಸಂಭವಿಸುತ್ತಿರುವುದು ಇಂದಿಗೂ ಕಾಣದೊರೆಯುತ್ತದೆ.

ಅಕರ್ಮಕ ಹಂತದ ಕನಿ : ದರ್ಶನ, ಸಕರ್ಮಕ ಹಂತದಲ್ಲಿ ಮರಳಿ ಕಾಣಲು ಅಳುಕಬೇಕೇಕೆ? ಒಮ್ಮೆ ಕಂಡೂ ಕೊನೆಯ ವರೆಗೂ ಕಣ್ಮರೆಯಾಗುವ ಅಥವಾ ಮರಳಿ ವಿಮರ್ಶೆಗೆ ಎಟುಕದಿರುವ ದೃಶ್ಯವನ್ನು 'ದರ್ಶನ' ಎಂದು ನಂಬುವಲ್ಲಿ ಮೋಸವಾಗುವ ಶಕ್ಯತೆ ಇಲ್ಲವೆ? ಒಂದು ಎರಡು ಬಾರಿ ಮಾತ್ರವಲ್ಲ ಮೂರುಸಾರೆಯಾದರೂ ಕನಿಷ್ಟ, ಅದರಲ್ಲಿ ಸುಸಂಬದ್ಧತೆ ಉಂಟು ಎಂದು ಒಂದಿಲ್ಲೊಂದು ಬಗೆಯಿಂದ ಸಿದ್ಧವಾಗದೆ ಯಾವುದನ್ನು 'ಸು'-ಸಂಗತಿ ಎಂದು ನಂಬತಕ್ಕದ್ದಲ್ಲ; ಎಂಬ ವಾಡಿಕೆಯಲ್ಲಿ ತಥ್ಯಾಂಶವಿದೆ. ವಿಮರ್ಶೆಗೆ ಮಹತ್ವವನ್ನೀವ ಇಂತಹ ಒಂದು ಸಂಪ್ರದಾಯವು, ಹಿಂದೊಮ್ಮೆ ಭಾರತದಲ್ಲಿ ಪ್ರಭಾವಶಾಲಿಯಾಗಿತ್ತು. ಇದು ಇಂದಿನ ಋಕ್ ಸಂಹಿತೆಯೊಳಗಿನ ಅವಶೇಷಗಳಿಂದಲೂ ದೃಢಪಡುತ್ತದೆ.[೧೦] 'ತ್ರಿವಾರ' ಉಚ್ಚರಿಸಿದಾಗಲೇ ಅದನ್ನು ಸತ್ಯ ಎಂದು ನಂಬಬೇಕು ಎಂಬ ಸಂಪ್ರದಾಯ ಇಂದಿಗೂ ಇದೆ. ಆ ಅಂದಿನ ವಿಮರ್ಶಾ ಸಂಪ್ರದಾಯದ ಅವಶಿಷ್ಟ ನಡೆವಳಿ : ಸಮಯ ಇದು.

ಕನಸು-ಕನವರಿಕೆಗಳಲ್ಲಿ ಸುಸ್ವರ ಸಂಗೀತ ಕೇಳಬಲ್ಲ ಜೀವಿಗಳೂ ಇದ್ದಾರೆ. ಆದರೆ ನಾದ ಮತ್ತು ಬಣ್ಣವಣ್ಣ ಈ ಎರಡರ ಅನುಭವ ಕೆಲವೊಂದು ವಿಶೇಷ ಮನೋಭಾವದವರಿಗೇ ಹೆಚ್ಚಾಗಿ. ಇದು ಸಾಮಾನ್ಯ ಅಥವಾ ಸಮಾನ ಗುಣ ಧರ್ಮವಾಗಿ ಉಳಿದಿಲ್ಲ. ಆದರೆ, ಶಬ್ದದೊಡನೆ ವರ್ಣವು ಹೊಂದಿಕೊಂಡಿರುವ ಅನುಭವವನ್ನು ಹೇಳುವ ವ್ಯಕ್ತಿಗಳೂ ಉಂಟು. ಶಬ್ದದ ಮೂಲಕ ಇನ್ನೂ ಕೆಲ ಇಂದ್ರಿಯಜನ್ಯ ಅನುಭವವೂ ಬರುವುದುಂಟು. ಈ ಕ್ಷೇತ್ರದೊಳಗಿನ ಗೂಢದ ಸಂಶೋಧನ ಇತ್ತೀಚೆಗೆ ಪ್ರಾರಂಭವಾಗಿದೆ. ಕನಸುಗಳ ಬಗೆಗೆ ಫ್ರೆಂಚ್‌ಭಾಷೆಯಲ್ಲಿ ಹೆಚ್ಚು ಗ್ರಂಥಗಳು ಪ್ರಕಟವಾಗಿವೆ. ಧರ್ಮ ಹಾಗೂ ಧಾರ್ಮಿಕ ಭಾವನೆಗಳ ತಪ್ಪು ಗ್ರಹಿಕೆಗಳಿಂದ ಅನಾಚಾರಕ್ಕೇ ಪ್ರೋತ್ಸಾಹ ದೊರೆತಂತೆ "ಸೈನ್‌ಟಿಫಿಕ್" ಎಂಬ ಗ್ರಹಿಕೆಯಿಂದ ಜೀವನ-ಸತ್ಯಕ್ಕೆ ಆಗುವ, ಆಗುತ್ತಿರುವ ಅಪಚಾರವೂ ಅಷ್ಟಿಷ್ಟಲ್ಲ. ಫ್ರೈಡ್, ಬಟ್ರಾಂಡ್‌ರಸೆಲ್ ಪ್ರಭೃತಿಗಳಿಂದ ಪ್ರೇರಿತವಾದ ಶಾಸ್ತ್ರೀಯವೆಂಬ ದೃಷ್ಟಿಯ ದುಷ್ಪರಿಣಾಮಗಳು ಇಂತಹ ಉದಾಹರಣೆಗಳಾಗಿವೆ.

ಪ್ರೈಡನು ಗ್ರಹಿಸಿರುವ ಕನಸುಗಳ ಅರ್ಥವು ತಪ್ಪಲ್ಲವಾದರೂ ಸದೋಷವಾಗಿದೆ.[೧೧] ಫ್ರೈಡನ ನಿವೇದನದ ರೀತಿಯು ತುಂಬ ಅಕ್ಷೇಪಾರ್ಹವಾಗಿದೆ. ಸಾಮಾಜಿಕ ಸಮಷ್ಟಿಯ ಅಸ್ತಿತ್ವವನ್ನೇ ಗಮನಿಸದ ಫ್ರೈಡನ ಕಾಮಪ್ರೇರಣೆಯ ಅರ್ಥವು ಕೌಟುಂಬಿಕ ಹಾಗೂ ಸಾಮಾಜಿಕ ಕಟ್ಟಡವನ್ನೇ ಶಿಥಿಲಗೊಳಿಸುತ್ತಿದೆ! ಕನಸುಗಳನ್ನು ಗ್ರಹಿಸಿಕೊಳ್ಳುವ ಬಗೆಗೆ ಫ್ರೆಂಚರಲ್ಲಿ ಈವರೆಗೆ ಆಗಿರುವ ಕೆಲವು ಪ್ರಯತ್ನಗಳ ಸಮಾಲೋಚನೆ ಭಾಷಾಂತರಿತ ಗ್ರಂಥದಲ್ಲಿದೆ.[೧೨] "Life is a continuous whole" ಎಂಬ ಮಾತು ಕನಸಿನ ಮೂಲಕವಾಗಿಯೂ ಕೆಲವೊಂದು ರೀತಿಯಲ್ಲಿ ಅರಿಕೆಗೆ ಬರುವುದು ನಿಜ. ಆಶಾಪಾಶ ಪ್ರೇರಿತ ಹಳವಂಡದ ಕನಸುಗಳು, ದೈಹಿಕ ಮಾನಸಿಕ ಅನಾರೋಗ್ಯದ ಮೂಲಕವಾದ ಮನೋವಿಕೃತಿಯ ಪರಿಣಾಮಗಳ ಫಲವಾಗಿ ಬೀಳುವ ಕನಸುಗಳು, ಇಂತಹ ದೃಶ್ಯಗಳಿಂದ ನಿಜವಾದ ಕನಸನ್ನು ಬೇರ್ಪಡಿಸುವುದು ಅಶಕ್ಯವೆನಿಸುವಷ್ಟು ತೊಡಕುಗಳಿವೆ ಇದರಲ್ಲಿ. ಆದಕಾರಣ ಕನಸಿನ ಹಳವಂಡಗಳ ಬೆಂಬತ್ತುವ ಹುಚ್ಚು, ಅಡ್ಡದಾರಿಗೆ ಒಯ್ಯುವ ಶಕ್ಯತೆಯೇ ಹೆಚ್ಚು. ಇದೆಲ್ಲವೂ ನಿಜವಿದ್ದರೂ ಕನಸಿನಲ್ಲಿ ಅರ್ಥವೇ ಇರಲಾರದು ಎಂದು ಬಗೆಯುವುದೂ ಸಮಂಜಸವಾಗದು. The true dream is a prelude and not a sequel to our active life ಎಂದು ಆ ಫ್ರೆಂಚ್‌ಲೇಖಕನು ವ್ಯಕ್ತಪಡಿಸಿರುವ ವಿಚಾರವು.[೧೩] ಫ್ರೈಡನ ಸ್ವಪ್ನಗಳ ಅರ್ಥ-ಪದ್ಧತಿಯ ದೋಷವನ್ನು ಎತ್ತಿ ತೋರಿಸುತ್ತದೆ. "Man by himself" ಎಂಬ ಪುಸ್ತಕದಲ್ಲಿ ಎರಿಕ್ ಫ್ರಾಮ್‌ನು ಕೊಟ್ಟಿರುವ ಕನಸುಗಳ ಅರ್ಥವು ಮನನೀಯವಾಗಿವೆ.

ಆದರೆ, ಮಾನವನೊಳಗಿನ ಅಗಮ್ಯ ಗೂಢದ ಬಗೆಗಿನ, ಆಕರ್ಷಣದ ಅರ್ಥವನ್ನು ಅಂದರೆ ಜೀವನದ ಅರ್ಥವನ್ನು-ಮನೋವಿಶ್ಲೇಷಣಶಾಸ್ತ್ರ ಅಥವಾ ಅದರ ಕನಸುಗಳ ಅರ್ಥವನ್ನು ಗ್ರಹಿಸುವ ಪದ್ಧತಿ, ಇದೊಂದೂ ಸಮರ್ಪಕವಾಗಿ ವಿವರಿಸಲಾರದು. ಜೀವನದಲ್ಲಿ ಆವಿಷ್ಕಾರಪಡೆದ ಅರ್ಥದ ಅರ್ಥವನ್ನು ಗ್ರಹಿಸಿಕೊಳ್ಳುವ ಅರ್ಹತೆ ಬರಿ ಅನುಮಾನ ತರ್ಕಕ್ಕೆ ಇಲ್ಲ. ಇತಿಹಾಸದ ತತ್ತ್ವಜ್ಞಾನ ಮತ್ತು ತತ್ತ್ವಜ್ಞಾನದ ಇತಿಹಾಸ ಇವೆರಡರ ಸಹಕಾರದ ಸಂಕೇತ : ಪ್ರತಿಮಾಶಾಸ್ತ್ರವು (Philosophy of Language) ಮಾತ್ರ ಈ ಅರ್ಥ ಗ್ರಹಣಶಕ್ತಿ ಪಡೆದಿದೆ. ಮಾಧ್ಯಮಾ ಪ್ರತಿಮೆ ಮತ್ತು ಅದು ಒಳಗೊಳ್ಳುವ ಅರ್ಥ ಇವೆರಡರೊಳಗಿನ ಸಂಬಂಧದಲ್ಲಿ ಕಾಣುವ ಪ್ರಕಾರಗಳಲ್ಲಿ ಮೂರು ಬಗೆಗಳು ಮಾತ್ರ ಶಕ್ಯ. ಮಾಧ್ಯಮ ಪ್ರತಿಮೆ ಮತ್ತು ಅರ್ಥ ಇವೆರಡೂ ತೀರ ಸಮಾನ ವ್ಯಾಪ್ತಿಯವು ಆಗಿರುವ ಶಕ್ಯತೆ; ಒಂದಕ್ಕಿಂತ ಒಂದು ಪ್ರಮಾಣದಲ್ಲಿ, ಹೆಚ್ಚಾಗಿ ಭೌತ ನಿಸರ್ಗದಲ್ಲಿಯೇ ಕಾಣದೊರೆಯಬಲ್ಲುದು. ಮಾನವ ಜೀವನ ಪಾತಳಿಯಲ್ಲಿ ಮನಸ್ಸು ಮತ್ತು ಭಾವ-ಬುದ್ಧಿಗಳ ಕೈವಾಡದಿಂದಾಗಿ, ಅರ್ಥವು ಮಾಧ್ಯಮದ ವ್ಯಾಪ್ತಿಗಿಂತ ಕಡಿಮೆ ಇರಬಹುದು ಅಥವಾ ಮಾಧ್ಯಮಕ್ಕಿಂತ ವಿಶಾಲವಿರಬಹುದು. ಉದಾ : ನೀರು : ಅಪ್-ರಸ ಈ ಸಂಕೇತದ ಭೌತಪಾತಳಿಯ ಅರ್ಥವು, ಅದರ ಮಾತ್ರಾಸ್ಪರ್ಶದ ಬಾಹ್ಯವಲಯದ ಪರಿಮಿತಿಯದು, ಆದರೆ. ಈ 'ನೀರು' ಇದು ಪುರಾತನ ಭಾರತೀಯ ಶ್ರದ್ಧೆಯಂತೆಯೆ ಏಕೆ, ಎಲ್ಲ ಸಂಸ್ಕೃತಿಯ ಮೊದಲಹಂತದಲ್ಲಿ, ಅಂಭಸ್=ದಿವ್ಯಲೋಕದ್ದು; ಸೃಜನಕ್ಕೆ ಕಾರಣವಾಗುವ 'ನೀರು' ಇದು! ಸುಮೇರಿಯನ್ ಶ್ರದ್ಧೆಯಂತೆ ಮೇಲಣ ನೀರು (upper water) ಆಗುವಾಗ ಮಾಧ್ಯಮಕ್ಕಿಂತ ವಿಶಾಲವಾಯಿತು. ಆದರೆ, ಈ ನೀರು ಅಧೋಲೋಕದ್ದು (ಅಪ್) ಆಗುವಾಗ, ಮಾಧ್ಯಮಕ್ಕಿಂತ ಕೀಳು ಆಯ್ತು. ಮರ್ತ್ಯರ ನೀರು : ರೇತ ಅಥವಾ ಅಪಾತಾಳದ ನೀರು : ನಾರಕ. ಈ ಶ್ರದ್ಧೆ ಸುಮೇರಿಯನ್-ಭಾರತೀಯರಿಬ್ಬರಲ್ಲೂ ಸಾಮಾನ್ಯವಿದೆ! 'Language is vertical' ಎಂಬ ಪಾಶ್ಚಾತ್ಯ ವಿಚಾರವಂತರ ಈ ವಾಕ್ಯದ ಆಶಯವು ಈ ಸಂದರ್ಭದಲ್ಲಿ ಸ್ಪಷ್ಟವಾಗುತ್ತಿದೆ. ಅಭಿವ್ಯಕ್ತಿ : ಕೃತಿ : ಮಾಧ್ಯಮದ (=ಭಾಷೆಯ) ಅರ್ಥವು ಅದರ ಮೇಲ್ಗಡೆಯಲ್ಲಿ ಸಮಾನಾಂತರದಲ್ಲಿ ಕಾಣಿಸಿಕೊಳ್ಳುತ್ತದೆ. ತೀರ ಭಾಷೆಯಲ್ಲೇ ಅದು ಇಲ್ಲ. ಭಾಷೆಗೆ ಎರಡು ಪಾತಳಿಗಳು ಇರುತ್ತವೆ. ಭೂಮಿಗೆ ತಾಗಿ ನಿನ್ನೆ ಇಂದುಗಳೊಳಗಿಂದ ನಾಳೆಯತ್ತ ಜೀವನದೊಡನೆ ನಿಬದ್ಧವಾದ ಅಭಿವ್ಯಕ್ತಿಯ ಭಾಷಣದ ಪಾತಳಿಯು ಒಂದು. ಈ ಪಾತಳಿಗೆ ಸಮಾನಾಂತರವಾಗಿಯೇ ಇರುವ ಅರ್ಥ (: ವಿಚಾರ : ಜ್ಞಾನ) ರೂಪದಲ್ಲಿ ಕಾಣಿಸಿಕೊಳ್ಳುವ ಪಾತಳಿಯು ಇನ್ನೊಂದು. 'Vertical' ಎಂಬ ಸಂಕೇತ ಔಚಿತ್ಯ ಪೂರ್ಣವಿದೆ : ಭಾಷಿಕ ಶಬ್ದ-ಪ್ರತಿಮೆಗಳಿಗೆ ಯುಕ್ತ (RIGHT) ಕೋನದ ಲಂಬವಾಗಿ ಇದು ಸಮಾನಾಂತರ ಪಾತಳಿ ಎಂಬ ಮಾತನ್ನು 'Vertical' ಸಂಕೇತವು ಬಹಿರಂಗಪಡಿಸುತ್ತದೆ.

ಸಂಸ್ಕೃತ ಭಾಷೆಯಲ್ಲಿ ಇದೇ ಆಶಯದ ಗರ್ಭಿತಾರ್ಥಯುಕ್ತ ಶಬ್ದಪ್ರತಿಮೆ ನಿಜಕ್ಕೂ ಇರಬೇಕಿತ್ತು; ಅಲ್ಲ, ಇತ್ತು; ನಾಮಶೇಷವಾಗಿದೆ; ಯೋಜನಾಪೂರ್ವಕವೇ, ಎಂದೂ ತೋರುತ್ತದೆ. ಆದರೂ ಸುಮಾರಾಗಿ ಈ ಆಶಯವೇ ಅಭಿಪ್ರೇತವಿದ್ದರೂ ಅದು ಸ್ವಲ್ಪ ಬೇರೆ ಆಕೃತಿರೂಪ ಪಡೆದಿದೆ!

"ಊರ್ಧ್ವೋರ್ಧ್ವಂ ಆರುಹ್ಯ-ಯತ್ ಅರ್ಥ-ತತ್ತ್ವಂ, ಧೀಃ, ಪಶ್ಯತಿ, ಶ್ರಾಂತಿಂ ಅವೇದಯಂತೀಂ ಫಲಂ, ತತ್, ಆದ್ಯೈಃ ಪರಿಕಲ್ಪಿತಾನಾಂ ವಿವೇಕ ಸೋಪಾನಪರಂಪರಾಣಾಂ"[೧೨] ರಸವಿಮರ್ಶನ ಕ್ಷೇತ್ರದಲ್ಲಿ ವಿಖ್ಯಾತ ಅಭಿನವಗುಪ್ತನ ಈ 'ಅರ್ಥ ತತ್ತ್ವದ' ವಿವರಣೆ ಉದ್ಬೋಧಕವಿರುವಲ್ಲಿ ಸಂದೇಹವಿಲ್ಲ. ಅಭಿನವಗುಪ್ತನ ಈ ವಿವರಣೆಯಲ್ಲಿ ಭಾರತೀಯ ಯತಿ-ಮುನಿ ಪಂಥೀಯ ವೈಚಾರಿಕ ಭವ್ಯತೆ (magnitude) ಮತ್ತು ಈ ಸಂಪ್ರದಾಯದ ವಿಚಾರಗಳ ತಳಹದಿಯ ದೌರ್ಬಲ್ಯ ಇವೆರಡರ ದರ್ಶನವೂ ಆಗುತ್ತದೆ. ಅರ್ಥ-ತತ್ತ್ವವು ಅಭಿವ್ಯಕ್ತಿಯ ಸಮಾಂತರವಾಗಿ (Vertical) ಇರುತ್ತದೆ; ಇರಬೇಕು, ಎಂಬ ವೈಚಾರಿಕ ಕೃತಿ ಮತ್ತು ಆಕೃತಿಯೆ ಬೇರೆ. ಈ ಅರ್ಥ-ತತ್ತ್ವ ಹಾಗೂ 'ಊರ್ಧ್ವೋರ್ಧ್ವಂ ಗಚ್ಛತಿ' ಎಂಬ ವೈಚಾರಿಕ ಕೃತಿ ಹಾಗೂ ಆಕೃತಿ, ಇವೆರಡರ ಗತಿಯ ಕ್ರಮ ಸಮಾನವಲ್ಲ. ಕೃತಿಗೆ : ಭಾಷೆಗೆ ಸಮಾಂತರವಾಗಿ ಹೋಗುವ ಅರ್ಥತತ್ತ್ವವು ಒಂದು ನಿಯಮಬದ್ಧ

ರೀತಿಯಲ್ಲಿಯೇ ಮುಂದುವರಿಯಬೇಕಾಗುತ್ತದೆ. ಕೃತಿ : ಭಾಷೆಯಿಂದ ಹೊರಟ ಅರ್ಥ ತತ್ತ್ವ ಮೇಲು ಮೇಲಕ್ಕೆ ಹೊರಡುವಲ್ಲಿ ಇದು ಸ್ವೈರ ಗತಿಯದಾಗುತ್ತದೆ. ಆಚಾರ ಮತ್ತು ವಿಚಾರ, ಸಮಿತಿ ಮತ್ತು ಸಮಯ, ಇವುಗಳ ವಿವರಣೆಯ ಸಂದರ್ಭದಲ್ಲಿ ಒಂದು ಮಾತು ನಿಶ್ಚಿತವಾಗಿ ಕಂಡುಬಂದಿದೆ. ವಿಚಾರ : ಸಮಯ ಎಂಬ ಅರ್ಥ-ತತ್ತ್ವವು ಆಚಾರ ಮತ್ತು ಸಮಿತಿಗೆ ಸಮಾಂತರವಾಗಿಯೇ ಇರಬಲ್ಲದು; ಇರಲೇಬೇಕು. ಏಕೆಂದರೆ, ಅರ್ಥ : ವಿಚಾರ ಇದು ಆಚಾರಕ್ಕೆ ಪ್ರೇರಿಸುತ್ತದೆ. ಆದಕಾರಣ, ಆಚಾರದಿಂದ ನಿಷ್ಪನ್ನ ವಿಚಾರವು ಆಚಾರಕ್ಕೆ ಸಮಾಂತರ ಪಾತಳಿಯಲ್ಲಿ ಇರಲೇಬೇಕಾಗುತ್ತದೆ. ಅರ್ಥತತ್ತ್ವವು 'ಊರ್ಧ್ವೋರ್ಧ್ವ'ಕ್ಕೆ-ಮೇಲು-ಮೇಲಕ್ಕೆ ಏರಿ-ಹಾರಿ ಹೋಗುವದಾದರೆ ಆ ವಿಚಾರಕ್ಕೂ ಮತ್ತು ಅದು ಯಾವ ಸಾಂಕೇತಿಕ ಅಭಿವ್ಯಕ್ತಿ : ಕೃತಿ-ಆಚಾರದಿಂದ ನಿಷ್ಪನ್ನವಾಗುವುದೊ ಅದಕ್ಕೂ ಸುತರಾಂ ಯಾವ ಸಂಪರ್ಕ-ಸಂಬಂಧವೇ ಉಳಿಯಲಾರದು! ಇದರಿಂದಾಗಿ ನೆಲದೊಡನೆಯ ಸಂಬಂಧವೇ ತಪ್ಪಿ ಆ ವಿಚಾರ, ಆ ವೈಚಾರಿಕ ಲೋಕವು ಒಂದು ಶುದ್ಧ ಆಭಾಸದ ಆಕೃತಿಯಾಗುವ ಭೀತಿಯಿದೆ, ಇಷ್ಟೆ ಏಕೆ? ನೆಲದ ಸಂಬಂಧವೇ ತಪ್ಪಿದ್ದಕ್ಕೆ ಕ್ರಮವಾಗಿ ನೆಲದ ವಾಸನೆಯ ಬಯಕೆಯು ತೀವ್ರವಾಗಿ, 'ಉರ್ಧ್ವ ಊರ್ಧ್ವಕ್ಕೆ ಹಾರುವ ಅರ್ಥ-ತತ್ತ್ವ', ಕೆಸರಲ್ಲಿ ಹೊರಳಾಡುವ ದಾರಿಗೆ ಮರಳುವ ಈ ಪ್ರತಿಕ್ರಿಯೆಯೂ, ಇದಕ್ಕೆ ತಪ್ಪಿದ್ದಲ್ಲ!

ಈ ವೈಚಾರಿಕ ಶೈಥಿಲ್ಯಕ್ಕೆ ದೌರ್ಬಲ್ಯಕ್ಕೆ ಅಭಿನವಗುಪ್ತನೇ ಕಾರಣನಲ್ಲ. ಒಂದು ಯುಗದ ಭಾಷಿಕ ಪ್ರತಿಮೆಯೇ ಅಂದಿನ ಮಾನವರ ಕಣ್ಣು; ಅಭಿನವಗುಪ್ತನಿಗೂ ಮುಂಚೆ ಸಾವಿರಾರುವರುಷ, ಇಂದಿನ ಋಕ್-ಸಂಹಿತೆಯ ಸಂಕಲನದ ಕಾಲಕ್ಕೇ ಭಾರತೀಯ ದೃಷ್ಟಿಕೋನದಲ್ಲಿ ಈ ಬದಲಾವಣೆಯಾಗಿದ್ದುಂಟು. ವಿಪಶ್ಚಿತ ಮೇಧಾವೀ ಎನಿಸಿದ ಅಭಿನವಗುಪ್ತನೂ, ತನ್ನ ಪೂರ್ವದ ಆಪ : ರಸ ಪಂಥೀಯ ಸಂಪ್ರದಾಯಿಕ ವೈಚಾರಿಕ ಪ್ರಭಾವದಲ್ಲಿ ಸಿಕ್ಕಿರುವುದು ಕಾಣುತ್ತದೆ. ಅರ್ಥವು ಭಾಷೆಗೆ ಸಮಾಂತರವಾಗಿರುತ್ತದೆ, ಎಂಬ ಈ 'Vertical'ಸಂಕೇತದ ಹಿನ್ನೆಲೆ ಯುರೋಪೀಯ ಸಂಸ್ಕೃತಿಯಲ್ಲಿ, ಎಲ್ಲಿದೆಯೊ ತಿಳಿಯದು. ಆದರೆ, ಯುರೋಪೀಯ ಭಾಷಿಕ 'Vertical' ಈ ಸಂಕೇತದ ಆಶಯವು, ವೇದಕಾಲೀನ ಭೂಃ ಮತ್ತು ಭುವಃ ಈ ಎರಡು ವ್ಯಾಹೃತಿಗಳಲ್ಲಿ ಸಂಪೂರ್ಣವಾಗಿ ಅಡಕವಾಗಿದೆ. ಭೂಃ ಮತ್ತು ಭುವಃ ಎರಡು ವ್ಯಾಹೃತಿಗಳು ಎನಿಸಿದರೂ ಇವು ತೀರ ಭಿನ್ನವಲ್ಲ. ಭಾಷೆಯಿಂದ ಅರ್ಥವು ಬೇರ್ಪಟ್ಟು, 'ಪ್ರತೀಯಮಾನಂ ಪುನಃ ಅನ್ಯತ್ ಏವ' ಎಂಬ ಹಾಗಿನ ಸಂಬಂಧವೇ ಭೂಃ ಮತ್ತು ಭುವಃ ಈ ಎರಡೂ ವ್ಯಾಹೃತಿಗಳಲ್ಲಿ ಉಂಟು. ಆದರೆ, ಸುವಃ (ಅಥವಾ ಸ್ವಃ) ಮಾತ್ರ ಭಿನ್ನ 'ಸ್ವಃ' ಇದು ವಿವಸ್ವನ್-ಪ್ರಕಾಶಲೋಕ; ಭಾಷಾಪ್ರತಿಮೆಗಳ ಅರ್ಥ-ಪ್ರಕಾಶಲೋಕ. ಭೂ>ಭವ್=ಆಗು-ಸಂಭವಿಸು ಎಂಬ ಆಖ್ಯಾತ ಜನ್ಯರೂಪಗಳೇ ಎರಡೂ. ಭೂ : ಜೀವನ ಪಾತಳಿಗೆ ಸಂಬಂಧ್ದ ನಿನ್ನೆ→ಇಂದು→ನಾಳೆಗಳ ಸಂದರ್ಭದ ಭಾವಾನುಭವದ ಹಿನ್ನೆಲೆಯಲ್ಲಿ ಪ್ರತೀತಕ್ಕೆ ಬರುವ ಅರ್ಥ-ತತ್ತ್ವದ ಲೋಕವೇ 'ಭುವಃ'. 'ಭುವಃ' ಇದು (ಭೌತಜೀವನದ ಅರ್ಥದ ಮೂಲಕ) ಪುನಃ 'ಪ್ರತೀಯ ಮಾನಂ' ಲೋಕವಾಗುವ ಕಾರಣ, ಮರಳಿ ಅರಿಯಲು ಶಕ್ಯವಿರುವ ಈ ಭುವ(ನ) ಲೋಕವು ಭುವಿಗೆ ಸಮಾಂತರವಿರಬೇಕೆ ಹೊರತು, 'ಮೇಲು ಮೇಲಕ್ಕೆ' ಊರ್ಧ್ವೋರ್ಧ್ವಂ ಗಮನಿಸುತ್ತಿರಲಿಕ್ಕಾಗದು. ವ್ಯಾಹೃತಿ ನಾಮಸಂಕೇತದ ಮೂಲಕ ಭೂಲೋಕ ಮತ್ತು 'ಭುವ'ನ ಲೋಕ ಇವೆರಡರಲ್ಲಿಯೂ ಮೂಲತಃ ತಾತ್ತ್ವಿಕ ಸ್ವರೂಪದ ಅಂತರವನ್ನು ಕಲ್ಪಿಸಿಕೊಳ್ಳಲಾಗಿತ್ತು. ಆದರೆ, ವ್ಯಾಹೃತಿತ್ರಯ ವ್ಯರ್ಥಗೊಳಿಸುವ ಹೊಂಚು, 'ಭುವ'ನ ಎಂಬುದನ್ನೂ ಭೂಮಿ-ಜಲ ಎಂಬ ಎರಡೂ ಅರ್ಥದಲ್ಲಿ ರೂಢಿಸಿರುವಲ್ಲಿ ಬಯಲಿಗೆ ಬರುತ್ತಿದೆ. ಭೂಮಿಗೆ ಸಮಾಂತರವಿರಬೇಕಾದ ಭುವರ್ ಲೋಕವನ್ನು ಸ್ಮರಿಸಿಕೊಳ್ಳುವ ಜಾತವೇದ ಅಗ್ನಿ-ಧೀ (ಪ್ರತಿ-ಭಾ) ಪ್ರೇರಕ ಸವಿತೃವಿನ ಉಪಾಸನಾ ಪದ್ಧತಿಯು ಅವಿಚ್ಛಿನ್ನವಾಗಿ ನಡೆದುಬಂದಿದ್ದರೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಉಳಿದಿರುವ Language is Vertical ಎಂಬ ಸೂತ್ರಸ್ಥ ಈ ವೈಚಾರಿಕ ದೃಷ್ಟಿಗೆ ಭಾರತೀಯರೂ ಎರವಾಗುತ್ತಿದ್ದಿಲ್ಲ. ಆದರೆ ಜಾತವೇದ ಅಗ್ನಿಯನ್ನು ನಚಿಕೇತ : ಅ-ಬೋಧಿ ಅಗ್ನಿಯಾಗಿ ಮಾರ್ಪಡಿಸಿಕೊಳ್ಳುವ ಸಂದರ್ಭದಲ್ಲಿ 'ಭುವಃ' ಮತ್ತು 'ಸ್ವಃ' ಈ ಎರಡೂ ವ್ಯಾಹೃತಿಗಳನ್ನು ನಿರರ್ಥಕಗೊಳಿಸಲಾಗಿದೆ. ಭುವಃ ಮತ್ತು ಸ್ವಃ ಲೋಕಗಳ ಅಭಾವದಲ್ಲಿ

ಜಾತವೇದ ಅಗ್ನಿ, ಭೂಮಿಗತನು-ಆಪ-ರಸ ರೇತಸ್ಥನಾದನು. ತನ್ನ ಈ ಪಾಡನ್ನು ಜಾತವೇದ ಅಗ್ನಿಯೇ ಹೇಳುತ್ತಾನೆ. ಕಿವಿಗೊಡಿ 'ಮಮ ಪೂರ್ವೇ ಭ್ರಾತರಃ ಹತಃ'.

ಮಾಧ್ಯಮ : ಪ್ರತಿಮೆ : ಕೃತಿ ಇದರ ಮೂಲಕ ಪ್ರತೀಯಮಾನ (ಭಾಷೆಯಿಂದ ಅರಿಯತಕ್ಕ) ಅರ್ಥವು ನಿಜವಾಗಿ ಆ ಭಾಷೆಗೆ : ಕೃತಿಗೆ : ಮಾಧ್ಯಮಕ್ಕೆ ಸಮಾಂತರವಾಗಿ ಇದ್ದರೆ ಅದು (ಆ ಅರ್ಥ) ಪ್ರಮಾಣಿತವೋ ಪ್ರಾಮಾಣಿಕವೋ ಎಂಬುದನ್ನು ನಿರ್ಧರಿಸಿಕೊಳ್ಳಲು ಶಕ್ಯವಾಗಬಲ್ಲದು. ಆದರೆ, ಅಂತರಿಕ್ಷದಲ್ಲಿ 'ಊರ್ಧ್ವೋರ್ಧ್ವ' ಸಂಚರಿಸುವ ಅರ್ಥ=ಆಶಯದ ನೆಲೆ ತಿಳಿಯಲು ಅಶಕ್ಯವಾಗುತ್ತದೆ! ಪ್ರಪಂಚದಲ್ಲಿ ನಿಶ್ಚಿತ ಪ್ರಮಾಣಿತ ಅರ್ಥವು ಇಲ್ಲವೇ ಇಲ್ಲ, ಎಂದು ನಂಬಿಸಲು 'ಊರ್ಧ್ವೋರ್ಧ್ವಂ' ಗಮನಿಸುವುದೆಂದು ಸೂಚಿಸಬೇಕಾದ ಅರ್ಥವೂ, ಒಂದು ಕೃತಿ : ಮಾಧ್ಯಮ ಪ್ರತಿಮೆಯಲ್ಲಿ ಉಂಟು, ಎಂದು ಸಿದ್ಧಪಡಿಸಲು ಅನುಕೂಲವಾಗುವುದಕ್ಕಾಗಿ ಋ. ವೇದದಲ್ಲಿಯೇ ಈ ವಿಚಾರದ ಪೀಠಿಕೆ ಹಾಕಿದ್ದಾಗಿದೆ!

ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಸಹ, 'Language is Vertical' ಎಂಬ ಸೂತ್ರವು ಎಂತೋ ಉಳಿದಿದ್ದರೂ, ಅಲ್ಲಿಯ ರಸವಿಮರ್ಶೆಯ ಇಂದಿನ ಆಕೃತಿಯಲ್ಲಿ 'ಏಕಂ ಸತ್' ಪಂಥೀಯ ನೇತಿ ನೇತಿ-ವಾದಿಗಳ ಪ್ರಭಾವವೇ ವಿಶೇಷವಿರುವದನ್ನು ಕಾಣಬಹುದು. ಆದರೂ ಪಾಶ್ಚಾತ್ಯ ಸಂಸ್ಕೃತಿಯ ಮೇಲೆ ಅಲ್ಲಿಯ ರಸವಾದಿಗಳ ವರ್ಚಸ್ಸು, ಭಾರತೀಯ ಸಂಸ್ಕೃತಿಯಷ್ಟು ಎದ್ದು ಕಾಣುವುದಿಲ್ಲ. ಯುರೋಪೀಯ ಸಂಸ್ಕೃತಿಯು, ಕೊನೆಗೆ ಏಕಂ : ಸತ್ ಪಂಥೀಯ ಮಾತಾಸಂಪ್ರದಾಯ-ಜನ್ಯ ಕ್ರೈಸ್ತಪಂಥೀಯ ಪ್ರಭಾವಕ್ಕೆ ಒಳಗಾದುದು ನಿಜ. ಆದರೆ, ತತ್-ಪೂರ್ವದಲ್ಲಿದ್ದ, 'ಅಂತರಿಕ್ಷ : ಪುಂಡರೀಕಸ್ಥ ಭ್ರಮರತ್ವ' ಸಿದ್ಧಿಯಲ್ಲಿ, ಮನೆಮಾರು ಮರೆತು ಗುಹೆಯಲ್ಲಿ ಇರುತ್ತಿದ್ದ (Lotus eaters) ಏಕಾಂತಮಾರ್ಗೀ ಹಣೆಗಣ್ಣರ (Cyclopes) ಸಂಪ್ರದಾಯವನ್ನು ವೀರ ಒಡೆಸಿಸ್ ನಾಶಮಾಡಿದನೆಂಬ ಸಾಂಕೇತಿಕ ವರ್ಣನೆ ಹೋಮರನ ಕಾವ್ಯದಲ್ಲಿ ಉಂಟು. ಆದರೆ, ಭಾರತೀಯ ಆಪ : ರಸ ಪಂಥೀಯ ಮಹಾಕವಿಗಳು, ಪ್ರಪಂಚತ್ಯಾಗಮಾಡಿ 'ಅರಣ್ಯಾಯನ'-'ವನಾಯನ'ರಾಗಿದ್ದ ಯತಿ-ಮುನಿಗಳ (: ವೃತ್ರ ಸಂಪ್ರದಾಯದ) ಶತ್ರುವಾದ ಇಂದ್ರನ ಪಾತ್ರವನ್ನು (ತೇಜೋವಧೆ ಮಾಡಿ,) ಖಲನಾಯಕನ ರೂಪಕ್ಕೆ ತಿರುಗಿಸಿದ್ದಾರೆ. ಹೋಮರನ ಒಡೆಸಿಸ್ ಮುಂ. ಪಾತ್ರಸೃಷ್ಟಿಗೆ ಸುಮೇರಿಯನ್-ಅಸ್ಸೀರಿಯ ಹಾಗೂ ಹಿಟೈಟ್ ಪುರಾತನ ಕಥನ ಕವನಗಳಿಂದ ಪ್ರೇರಣೆ ದೊರೆತಿರಲಿಕ್ಕೆ ಬೇಕು, ಎಂದು ಗ್ರೀಕ್ ಸಂಸ್ಕೃತಿಯ ವ್ಯಾಸಂಗಿಗಳ ಅಭಿಮತವಿದೆ. ಸೋಜಿಗದ ಸಂಗತಿ ಎಂದರೆ ಋಗ್‌ವೇದದ ತ್ವಷ್ಟಾರ : ಪಿತೃಹಂತಕ ಇಂದ್ರ ಮತ್ತು ಸುಮೇರಿನ ಅಪ್ಸುಪಿತನ ಕೊಂದ ಎಂಕಿ ಇವರಲ್ಲಿ ತುಂಬ ಸಾಮ್ಯವಿದ್ದು ಇದನ್ನು ಇನ್ನೂ ಗಮನಿಸಿದವರಿಲ್ಲ.

ಕೃತಿ ಮತ್ತು ಅದರಿಂದ 'ಪ್ರತೀಯಮಾನ' ಅರ್ಥತತ್ತ್ವವು ಸಮಾಂತರವಾಗಿಯೆ ಉಳಿದಿದ್ದರೆ ಇಂದಿನ ಋಗ್‌ವೇದ ಸಂಹಿತೆಯ ಆಕೃತಿಯು 'ನೇತಿ ನೇತಿ' ಸ್ವರೂಪದ್ದಾಗುತ್ತಿದ್ದಿಲ್ಲ. ಪ್ರಾಮಾಣಿಕ ಅರ್ಥದ ನೆಲೆಯು ಅಶಕ್ಯವಾಗುವ ಕಾರಣವಿದ್ದಿಲ್ಲ. ಕೆಲವೆಡೆ ಮಾಧ್ಯಮ : ಸಂಕೇತದಿಂದ ಸೂಚಿತವಾಗುವುದಕ್ಕಿಂತ ತೀರ ಭಿನ್ನ ಅಲ್ಪಾರ್ಥ: ಕೆಲವೆಡೆ ತೀರ ವಿಶೇಷ ವಿಪರೀತ ಅರ್ಥವು ಇರುವುದರಿಂದ ದಿಗ್‌ಭ್ರಾಂತಿ ಉಂಟಾಗುತ್ತದೆ. ಇದರಿಂದ ಈ ಸಂಹಿತೆಯು 'ಏಕಂ : ಸತ್' : ಏಕ ಚಕ್ರ ಉಪಾಸಕರ ಪವಿತ್ರ ಗ್ರಂಥವಾಗಿ ಪರಿಣಮಿಸಿದೆ.

ನಿಜವಾಗಿ ಇಲ್ಲಿ ಕೃತಿಗೆ ಸಮಾಂತರವಾಗಿ ಇರಬೇಕಾದ ಅರ್ಥವೇ ಒಂದು : ಆದರೆ, ಇಲ್ಲಿಯ ಪ್ರತಿಮೆಗಳ ಮೂಲಕ ತೋರುವ ವಕ್ರ ಅರ್ಥವೇ ಇನ್ನೊಂದು!

೧. ಸಾರ್ಪರಾಜ್ಞೀ-ಸೂರ್ಯ, ಕಾಣುವ ಅರ್ಥ : ಸರ್ಪ=ಸೂರ್ಯ; ಅಭಿಪ್ರೇತ ಅರ್ಥ: ಚಂದ್ರ-ಸೂರ್ಯ ಯುಗ್ಮ: ಸೋಮ-ಸೂರ್ಯಾ (ಸಂ)ಲಗ್ನ=ಕಾಣುವ ಅರ್ಥ: ನಿಜವಾಗಿ ಅಮಾವಾಸ್ಯಾ ಅಥವಾ ಸೂರ್ಯಗ್ರಹಣ ಪ್ರಳಯ: ಮೃತ್ಯುಸೂಚಕ ಸಂಕೇತ.

೨. ಸಲಿಲದಲ್ಲಿ ಅಡಗಿದ ಬೃಹದುಲ್ಬಸ್ಥ ಅಗ್ನಿ=ನಚಿಕೇತಾಗ್ನಿ : ಗರ್ಭಸ್ಥ ಶಿಶುವಾಗಲಿರುವ ರೇತ: ಗರ್ಭಸ್ಥ ಸರೀಸೃಪ, ಸಲಿಲ-ತೋರುವ ಅರ್ಥ ಜಲ-ನೀರು: ಅಭಿಪ್ರೇತ ಅರ್ಥ ರೇತ, (ರೇತರೂಪ) ಶರೀರ ಇತ್ಯಾದಿ.

ಏಕಂ : ಒಂದು: ಕೂಡು : ಬೇರೆ ಭೂಮಿಕೆಯ ಪೂರ್ಣ (ಸಂ)ಯೋಗ: 'ಅ'-ಕರ್ಷಣದಲ್ಲಿ ಈ 'Unity' : ಸತ್ ತತ್ತ್ವಜ್ಞಾನವು ಮೂಲತಃ ಅಂಕುರಿಸಿದ್ದು, ವಿಶಿಷ್ಟ ಅನುಭಾವ ಕ್ರಿಯೊಳಗಿಂದ, ಆಚಾರದೊಳಗಿಂದ ಬೇರ್‌ಪಟ್ಟ ಅರ್ಥವು. ವಿಚಾರ : ತತ್ತ್ವಜ್ಞಾನದ ಆಕೃತಿಯಾಗುತ್ತದೆ. ಆದಕಾರಣ ಅಚಾರವು ವಿಚಾರಕ್ಕೆ ಪ್ರೇರಕ ಎಂಬುದು ವಿಶ್ವಸ್ಥ ಒಂದು ನಿಯಮ. ಋತ ಸ್ವರೂಪೀ ಸತ್ಯ. ಸಮಾಂತರ-ಸರಳವಾಗಿ ಹೋಲುವ ಅರ್ಥದಿಂದ ಈ ವಕ್ರ : ವೃತ್ತಾಕೃತಿಯ-ವೃತ್ರಶಕ್ತಿಯ ಅರ್ಥ=ಆಶಯವು ಭಿನ್ನ. ಇದರಿಂದಾಗಿ ಇದನ್ನು ನಿತ್ಯ 'ನೇತಿ ನೇತಿ' ಸ್ವರೂಪದ ಏಕಶೃಂಗ (ಅಶ್ವ) 'ಪುರುಷ' ಪಶುವನ್ನು (Unicorn : One Horned) ಪ್ರಾಣ (ಹೀರುವ) ಕಾಲ : ಪುರುಷ ಶಕ್ತಿಯೆಂದು ಋಗ್ವೇದದಲ್ಲಿ ಅಲ್ಲದೆ, ತತ್ಪೂರ್ವದ್ದೆಂಬ ಸಂಧವ ಸಂಸ್ಕೃತಿಯಲ್ಲಿಯೂ ಆರಾಧಿಸುತ್ತಿದುದಾಗಿ ಬೆಳಕಿಗೆ ಬಂದಿದೆ!

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** V. ೮೧. ೪
೨. ಅದೇ X - ೭೨-೨
೩. ಅದೇ X - ೮೧, ೨-೪
೪. ಅದೇ X- ೮೨-೬
೫. Ancient Civilization, Macmillan co New York p. 204
೬. Robert Graves ***White goddess; A Historical Grammer of poetic Myth,*** Newyork P. 257
೭. ***ಋಗ್ವೇದ ಸಂಹಿತೆ*** I - ೧೧೫
೮. Erich Fram ***Forgotten Language*** P. 16
೯. ***ಋಗ್ವೇದ ಸಂಹಿತೆ*** X-೧೮೯ ಮತ್ತು X-೮೫
೧೦. ಅದೇ X- ೭೧, ೧-೨
೧೧. Hadfield J. A., ***Dreams and Nightmares*** pelican books p. 48 (1967)
೧೨. De Becker ***The Under-standing, of Dreams or Machinations of Night*** George Alten Unwin
೧೩. Ibid; Dreams and Nightmares ಪುಸ್ತಕದೊಳಗಿನ ಹಲವು ಅವತರಣಿಕೆಗಳನ್ನು ಸಂಸ್ಕೃತಿ ವ್ಯಾಸಂಗಿಗಳು ಓದಬೇಕು.
೧೪. ಅಭಿನವಗುಪ್ತ ***ಅಭಿನವಭಾರತೀ*** (ಭರತನ ನಾಟ್ಯಶಾಸ್ತ್ರಕ್ಕೆ ಬರೆದ ವ್ಯಾಖ್ಯಾನ) ಪುಟ ೨೦

ಶಾಸ್ತ್ರೀಯ ಪದ್ಧತಿಯಿಂದ ಜೀವನ ಸಂಸ್ಕೃತಿಯ ಸತ್ಯಾನ್ವೇಷಣೆಯ ಶಕ್ಯತೆ

ಋಗ್‌ವೇದದಲ್ಲಿ ನಾಗಪ್ರತಿಮಾ ಪೂಜೆಯು ಇಲ್ಲವೇ ಇಲ್ಲ ಎಂದು ತಜ್ಞರು ಸಾರಿದ್ದಾರೆ. ಆದರೆ, ಈ ಸಂಹಿತೆಯಲ್ಲಿಯೆ 'ಸಾರ್ಪರಾಜ್ಞೀ ಸೂರ್ಯೋ ವಾ' ಈ ದೈವತವು ಉಂಟು! ಇಲ್ಲಿ ತಜ್ಞರೆಂಬುವರೂ ಎಡಹಿರಲಾರರೇ ಎಂಬ ಸಂದೇಹಕ್ಕೆ ಇದು ಕಾರಣವಾಯಿತ್ತು! ಈ ಸಂದೇಹವು ನಿರಾಧಾರವೊ? ಸಾಧಾರವೊ? ಎಂಬುದನ್ನು ನಿರ್ಧರಿಸಿಕೊಳ್ಳಲು ಮಾಡಿದ ಪ್ರಯೋಗದಲ್ಲಿ, ಮಾನವ ಸಂಸ್ಕೃತಿಯ ಸ್ಥಿತ್ಯಂತರಗಳು ದೃಷ್ಟಿಪಥದಲ್ಲಿ ಬರುತ್ತಿರುವುದಾಗಿ ಕಾಣತೊಡಗಿತು! ಆದುದರಿಂದ, ಈ ಪ್ರಯೋಗದಲ್ಲಿ ಪ್ರಯೋಜನಕ್ಕೆ ಬಂದ ಈ ಅರ್ಥಗ್ರಹಣದ ರೀತಿಯು, 'ಶಾಸ್ತ್ರೀಯ' ದೃಷ್ಟಿಯಿಂದ (ಜೀವನ : ಸಂಸ್ಕೃತಿಯ) ಸತ್ಯಾನ್ವೇಷಣೆಯು ಒಂದು ಶಾಸ್ತ್ರೀಯ ಪದ್ಧತಿಯಾಗಿ ರೂಪಗೊಳ್ಳುವ ಶಕ್ಯತೆಯು ಎನಿಸಿ, ಹೆಚ್ಚಿನ ಚಿಕಿತ್ಸೆ, ಚರ್ಚೆಗಾಗಿ ಅದರ ಸ್ಥೂಲಸ್ವರೂಪವನ್ನು, ಪ್ರಾಜ್ಞರಿಗಾಗಿ ಈವರೆಗೆ ವಿವರಿಸಿದ್ದಾಯಿತು. ಇದು ಸತ್ಯಾನ್ವೇಷಣೆಯ ಶಾಸ್ತ್ರೀಯ ಮಟ್ಟದ ಒಂದು ತಂತ್ರವಾಗಬಹುದೆಂದು ಎನಿಸಲು ಕಾರಣಗಳು ಇವು :

ಪ್ರತಿಮಾ ಸಂಕೇತಗಳ ಮೂಲಕ ನಡೆವ ಈ ಅರ್ಥಗ್ರಹಣ ತಂತ್ರವು ಒಂದು ವಿಶಿಷ್ಟ ದೇಶ, ಕಾಲಕ್ಕೇ ಪರಿಮಿತವಿಲ್ಲ. ಜಾಗತಿಕ ಸ್ವರೂಪದ ಇಡಿಯಾದ ಮಾನವ ಜೀವನದ ಅಭಿವ್ಯಕ್ತಿ ಅಥವಾ ಆವಿಷ್ಕಾರವನ್ನು, ಪ್ರತಿಮೆಗಳ ರೂಪದಲ್ಲಿ ವಸ್ತುನಿಷ್ಠ ರೀತಿಯಿಂದ ವಿಮರ್ಶಿಸಿಕೊಳ್ಳಲು ಶಕ್ಯವಾಗುತ್ತಿದೆ. ಉದಾ : ಸಂಸ್ಕೃತಿಯ ಘಟಕತ್ರಯಗಳ ವಿಚಾರಕ್ಕೆ ಒಳಪಡದ ಮಾನವ ಜೀವನದ ಅಭಿವ್ಯಕ್ತಿ ಅಥವಾ ಆವಿಷ್ಕಾರವು ದೊರೆಯಲಾರದು. 'ಋತ' ಸಂರಕ್ಷಕನೆಂಬ ವರುಣನು ಜಲಾಭಿಮಾನಿ ದೇವರು ಆಗುವಾಗ ಆತನು ರಸಾಧಿಪ : ಚಂದ್ರನೇ ಇರಲಿಕ್ಕೆ ಬೇಕು, ಎಂದು ಜಾಗತಿಕ ಸಂಕೇತದ ಬಲದಿಂದಲೇ ನಿಃಸಂದಿಗ್ಧವಾಗಿ ಸಿದ್ಧವಾಗುತ್ತದೆ. ಮಿತ್ರನ (ಸೂರ್ಯ) ಸಂಗಾತಿಯಾದ ವರುಣನು ಚಂದ್ರನಾಗುವ ಕಾರಣ ಈ ಸಾಂಕೇತಿಕತೆಯು ಅಮಾವಾಸ್ಯಾ ಆರಾಧಕರ ಸಂಪ್ರದಾಯದ್ದಾಗಲೇಬೇಕಾಗುತ್ತದೆ.

ಆದರೆ, ಜೀವನ : ಸಂಸ್ಕೃತಿಯ ಅರ್ಥಗ್ರಹಣದಲ್ಲಿ ಆತಂಕಕಾರಿಯಾದ ಕೆಲವು ಗ್ರಹಿಕೆಗಳು ಅವಿಮರ್ಶಿತವಾಗಿ, 'ಶಿಷ್ಟಮಾನ್ಯ'ವಾಗಿ ಉಳಿದು ಬರುತ್ತಿವೆ. ಇವುಗಳಿಂದಾಗಿ ಈ ಅರ್ಥಗ್ರಹಣದ ರೀತಿಯು, 'ಶಾಸ್ತ್ರೀಯ' ಮಟ್ಟದ ತಂತ್ರವಾಗಿ ಮೈದಾಳಲು ಅಶಕ್ಯವಾಗುತ್ತ ಬಂದಿದೆ. ಈ ಗ್ರಹಿಕೆಗಳಲ್ಲಿ ಕೆಲವು ಸನಾತನಧರ್ಮ ಸಂಪ್ರದಾಯದ ಹಿನ್ನೆಲೆಯಲ್ಲಿ ಪೋಷಣೆ ಪಡೆವ ನಂಬುಗೆಗಳು ಆಗಿರುವಂತೆ, 'ಶಾಸ್ತ್ರೀಯ'ತೆಯದೆಂಬ ಛಾಂದಸಿಗತನದ

ಗ್ರಹಿಕೆಗಳೂ ಉಂಟು. ಆದರೆ, ಇವೆರಡೂ ತತ್ತ್ವತಃ 'ಏಕಂ' ಸ್ವರೂಪೀ ಸತ್ಯದ ಭೂಮಿಕೆಯ ಗ್ರಹಿಕೆಗಳೇ ಆಗಿರುವಾಗಿ ಬೆಳಕಿಗೆ ಬರುತ್ತಿರುವುದು ಸೋಜಿಗ!

i) ದಿಕ್ಕಾಲಾತೀತ ದಿವ್ಯಾನಂದ-ವಾದಿಗೆ ಇಹದಲ್ಲಿ 'ಅರ್ಥ'ವಿರಲಾರದು. ಈ ಪ್ರಾಮಾಣಿಕ ಶ್ರದ್ಧೆಗೆ, ಇಹವಲ್ಲಿ ಎಂದರೆ ಮಾನವ ಜೀವನದಲ್ಲಿ 'ಅರ್ಥ'ವಿಲ್ಲ. ಆದರೆ ಇದನ್ನು ನೇರವಾಗಿ ಒಪ್ಪಿಕೊಳ್ಳುವ ಇಚ್ಛೆಯಿಲ್ಲ! ಉದಾ : ಋಗ್ವೇದ, ಭಗವದ್ಗೀತೆ ಪ್ರವೃತ್ತಿಪರವೆಂಬ ಹಾಗಿನ ಸಂಭ್ರಮ ಹುಟ್ಟಿಸಿ ಮೃತ್ಯುಪೂಜೆಯ ದಾರಿತೋರುವ ಗ್ರಂಥಗಳಾಗಿವೆ. ತಮ್ಮ ಮಹತ್ವಾಕಾಂಕ್ಷೆಗಳು ಕೈಗೂಡದೆ, ಅಥವಾ ಬೇರೆ ಆಪತ್ತುಗಳ ಅಘಾತಗಳಿಂದ, ಬಾಳಿನಲ್ಲಿ ನಿರಾಶೆಯನ್ನು ಎದುರಿಸಬೇಕಾಗಿರುವ ನರಮಾನವರು ದೊರೆಯುವುದು ವಿರಳ. ಇಂತಹರು 'ಬಾಳೊಂದು ಗೋಳು' ಎಂದು ನಿಟ್ಟುಸಿರು ಬಿಡುತ್ತ, 'ಜೀವನದಲ್ಲಿ ಅರ್ಥವಿಲ್ಲ' ಎಂಬ 'ಪುರೂ-ರವರು' ಎಬ್ಬಿಸಲಾಗುವ ಕೂಗು, ಪ್ರಪಂಚದ ಆದ್ಯಂತ ಕೇಳಬರುತ್ತದೆ! ನರ-ಮನುಜರಿಗೆ ಪ್ರಾಪ್ತವಾಗುವ 'ಪುರೂರವತ್ವ'ವು, ಈ ಜನವು ವಿಶ್ವಸ್ಥ ಅರ್ಥ ಗ್ರಹಿಸುವಲ್ಲಿ ಆದ ತಪ್ಪಿನಿಂದ ಪ್ರಾಪ್ತವಾಗಿರುವ ಶಕ್ಯತೆಯೂ ಇಲ್ಲವೊ? ಆದರೆ, ಈ ಅಪ-ಈಕ್ಷಿತವು, ಜನ ಹಾರಯಿಸುವ ಅವರವರ ವೈಯಕ್ತಿಕ ಅರ್ಥವಾಗಿದೆ. ಇದೇ ವಿಶ್ವಸ್ಥ 'ಜೀವನದ ಅರ್ಥ'ವೊ? ಎಂಬ ಪ್ರಶ್ನೆ ವಿಚಾರಾರ್ಹವಾಗಿದೆ. ಋಗ್ವೇದಾದಿ ಧರ್ಮಗ್ರಂಥಗಳೆಂಬುವು ಪ್ರತಿಪಾದಿಸುತ್ತ ಬಂದಿರುವ 'ಏಕಂ' ಸಂತರ : 'ಏಕಂ' ಸತ್-ಮಾರ್ಗವು, ಮಾತಿನ ಮೋಡಿಕಾರಿಕೆಯ ಮಾಟದಿಂದ, ಜೀವನವನ್ನು 'ಶ್ಮಶಾನ'ವೆಂಬ ಹಾಗೆ ಬಗೆಯಲು ಹಚ್ಚುವ ನಾನಾ ತಂತ್ರಗಳನ್ನು ಪ್ರಚಲಿತಗೊಳಿಸಿದೆ. ಇವುಗಳ ವಿವರಣೆ ಪ್ರಬಂಧದಲ್ಲಿ ಬಂದಿದೆ. ಇವೆಲ್ಲವುಗಳ ಪ್ರಭಾವದಿಂದಾಗಿ ಜೀವನದಲ್ಲಿ 'ಅರ್ಥ' ಎಂಬುದು ಉಂಟು, ಎಂಬ ಶ್ರದ್ಧೆಯವು ಸಂಪ್ರದಾಯ ನಿಷ್ಪ್ರಭವಾಗಿದ್ದುಂಟು.

ii) ಸೈನ್ಸಿನ ಪ್ರಯೋಗ 'ನಾಳೆ'ಯಲ್ಲಿ (test-tube) ಕಾಣದೊರೆಯದ ಆ 'ಏಕಂ'ದ ಹೊರಗೆ ಅರ್ಥವಿಲ್ಲ; ಸತ್ಯವಿಲ್ಲ, ಎಂಬ ಶಾಸ್ತ್ರೀಯ ಭೂಮಿಕೆಗೆ ಜೀವನದ ಭಾವನಾತ್ಮಕ ಅನುಭವಗಳನ್ನು ಲೆಕ್ಕಿಸುವ ಆವಶ್ಯಕತೆ ತೋರಿಲ್ಲ! ಇದು ಸೈನ್ಸಿನ ಏಕಗ್ರಾಹೀ ದೃಷ್ಟಿಯಾಗಿದೆ. ಜೀವನದಲ್ಲಿ 'ಅರ್ಥ' ಎಂಬುದನ್ನು ಭಾಷೆಯ ಮೂಲಕ ಗ್ರಹಿಸಿಕೊಳ್ಳಲಾಗುತ್ತದೆ. ಭಾಷೆಯ ಮೂಲಕ ತಮ್ಮ ವಿಚಾರ-ಭಾವನೆ ವ್ಯಕ್ತಪಡಿಸಲಾಗುತ್ತದೆ. ಆದರೆ ಈ 'ಭಾಷೆ' ಎಂಬುದರ ಇತಿಮಿತಿಗಳನ್ನು ಅರಿತು ಇದರ ಪ್ರಯೋಜನ ಪಡೆವ ಶಿಷ್ಟಮಾನ್ಯ ಶಾಸ್ತ್ರೀಯ ತಂತ್ರ ಒಂದನ್ನು ಕಂಡುಹಿಡಿಯುವ ಪ್ರಯತ್ನಗಳು ಮುಂದುವರೆಯದಿರುವುದಕ್ಕೆ ಶಾಸ್ತ್ರೀಯ ದೃಷ್ಟಿಯದೆಂಬ ಛಾಂದಸಿಗ ತನವೇ ಅಡ್ಡ ಬರುತ್ತಿದೆ. ಸಂಕೇತ ಮತ್ತು ಅರ್ಥ ಇವೆರಡರ ನಡುವಣ ಸಂಬಂಧ-ಇತಿಮಿತಿಗಳೇ ಇದಕ್ಕೆ ಕಾರಣ.

ನಿಸರ್ಗರೂಪ ವಿಶ್ವದ ಅಡಿಯಲ್ಲಿ, (ಭೌತ) ಸತ್ಯ : ತತ್ತ್ವ ಹುದುಗಿದೆ, ಎಂಬ ಸಮಾನ ಶದ್ಧೆಯು ಇಲ್ಲದೆ ಸೈನ್ಸಿನ ಯಾವ ಶಾಖೆಯ ಸಂಶೋಧನವೂ ಅಶಕ್ಯವಿದೆ. ಇದೇ ಮೇರೆಗೆ ಮಾನವ ಜೀವನ (: ಸಂಸ್ಕೃತಿಯ) ವಿಶ್ವದ ತಳಹದಿಯ (ದಿವ್ಯ) ಸತ್ಯ : ತತ್ತ್ವದ ಬಗೆಗೂ, ಮೂಲಭೂತ ಶ್ರದ್ಧೆಯು ಭೌತಶಾಸ್ತ್ರಜ್ಞರೆಂಬವರಲ್ಲೇ ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತಿಲ್ಲ. ಸಂಸ್ಕೃತಿಯ ಸತ್ಯಾನ್ವೇಷಣೆಯ 'ಶಾಸ್ತ್ರೀಯ' ಪದ್ಧತಿಯು ಈವರೆಗೂ ಮೈದಾಳದೆ ಇರುವ ಮುಖ್ಯ ಕಾರಣವೇ ಇದು! (ಜೀವನ :) ಸತ್ಯದ ಸ್ವತಂತ್ರ ಅಸ್ತಿತ್ವದ ಬಗೆಗೆ ವಿಶ್ವಾಸವು ಇದ್ದರೆ, ಅದನ್ನು ಬರಿ ಬಾಹ್ಯತರ್ಕ, ಅನುಮಾನಗಳಿಂದಲೆ ಗುರುತಿಸುವ ಪ್ರಯತ್ನದ ಈ ದಾರಿ-ತಪ್ಪು. ಜೀವನ-ಸತ್ಯಗ್ರಹಣದ ಸ್ವತಂತ್ರ ತಂತ್ರಬೇಕು ಎಂದು ಮೇಧಾವಿ ಬರ್ಟ್ರಾಂಡ್ ರಸೆಲ್, ವೈಟ್‌ಹೆಡ್ ಪ್ರಭೃತಿ ಸೈಂಟಿಫಿಕ್ ದೃಷ್ಟಿಕೋನದವರು, ಎಂದೊ ಅರಿಯಬಹುದಿತ್ತು. ಗಣಿತಶಾಸ್ತ್ರದಲ್ಲಿ ಇವರು ಸಂಕೇತಶಾಸ್ತ್ರದ ಮಹಾದ್ವಾರದ ಹತ್ತಿರ ಬಂದರೂ, ನಿಸರ್ಗಸ್ಥ (ಭೌತ) ಅರ್ಥಗ್ರಹಣದಲ್ಲಿ ಪ್ರಯೋಜನಕಾರಿಯಾದ ಸಂಕೇತ ವಿಚಾರವು ಮಾನವ ಜೀವನ ರೀತಿಯ ಹಾಸು-ಹೊಕ್ಕಾಗಿರುವ (ಅಭೌತ) ಅರ್ಥದ : ತತ್ತ್ವದ ಗ್ರಹಣದಲ್ಲಿ, ಕೆಲಸಕ್ಕೆ ಬರದು, ಎಂಬುದು ಅವರ ಗಮನಕ್ಕೆ ಬರಲಿಲ್ಲ.

'ಸಂಕೇತವಶಾತ್ ಭಾಷಾ' ಎಂದು 'ಶಬ್ದಾನುಶಾಸನ' ಬರೆದ ಭಟ್ಟಾಕಳಂಕದೇವನು, ಫಕ್ಕನೆ ಉಸುರಿದ್ದಾನೆ, ನೂರಾರು ವರುಷಗಳ ಹಿಂದೆಯೆ! 'ಸಂಕೇತ' ಎಂಬುದಕ್ಕೆ ಆತನು ಅರಿತ (ಪರಂಪರಾಗತ) ಅರ್ಥವು ಏನಿದ್ದಿತೊ; ಆದರೂ 'ಸಂಕೇತ' ಎಂಬುದರ ಅಂದಿನ ಸ್ಥೂಲ ಅರ್ಥದಲ್ಲಿ ವಿಶೇಷ ವ್ಯತ್ಯಾಸವಾಗಿಲ್ಲ. ಚಿತ್->ಕೇತ; ಸಂಕೇತ, ಫಕ್ಕನೆ ಹೊಳೆದಂತೆ ಆದುದು. 'ಭಾಷೆ' ಸಂಕೇತಾತ್ಮಕ ಎಂದೊಡನೆ ಪ್ರಪಂಚದ ಏನೆಲ್ಲ ಭಾಷೆಗಳೂ ಒಂದೇ ಪಾತಳಿಯ ಮೇಲೆ ಬಂದುವು! ಶಿಲಾಲೇಖ, ಚಿತ್ರಲಿಪಿ ಇವನ್ನು ಗುರುತಿಸಿ ಓದುವ ಪ್ರಯತ್ನ ಮಾಡಬೇಕಾಗುತ್ತದೆ. ಸೈಂಧವ ಸಂಸ್ಕೃತಿಯ ಲಿಪಿ ಇನ್ನೂ ಗುಹಾನಿಹಿತ ಸತ್ಯವೇ ಆಗಿದೆ. ಬಳಕೆಯಲ್ಲಿ ಇರುವ ಭಾಷೆಗಳ ಸಂಕೇತಗಳು ರೂಢಿಯಿಂದಾಗಿ, ತಿಳಿದ ಹಾಗಿನ ಗ್ರಹಿಕೆ ತರುತ್ತಿವೆ. ಆದರೆ ನಿಜವಾಗಿ ಅವುಗಳಲ್ಲಿ ಉಳಿದು ಬಿಡುವ ತಿಳಿಯದ (ಅಥವಾ ತಪ್ಪು ಗ್ರಹಿಕೆಯ) ಭಾಗದಿಂದಾಗಿ, ಜನವು-ಮೇಧಾವಿಗಳು ಸಹ, ತಮಗೆ 'ತಿಳಿದಿದೆ' ಎಂದು ನೆರೆನೆಮ್ಮಿ ನಿಂತಿರುವಲ್ಲಿಯೇ ಮೋಸವಾಗುತ್ತಿರುತ್ತದೆ ಆಗಾಗ!

ಇಂಥ ಮೋಸದ ಎಡೆಗಳು ಸಹ, ಪ್ರತಿಮಾ : ಸಂಕೇತಗಳ ಭೂಮಿಕೆಯ ಸಮೀಕ್ಷೆಯಲ್ಲಿ ತಮಗೆ ತಾವೆ ಸ್ಪಷ್ಟೀಕರಣ ಪಡೆಯಬಲ್ಲವು, ಎಂಬುದು ನಾಗಪ್ರತಿಮಾ ಸಮೀಕ್ಷೆಯ ಸಂದರ್ಭದಿಂದ ಹಲವು ಉದಾಹರಣೆಗಳಲ್ಲಿ ಬೆಳಕಿಗೆ ಬಂದಿದೆ. ಇಂತಹ ಇನ್ನೂ ಒಂದು ಮಾದರಿಯನ್ನು, Truth ಏಕಂ : ಸತ್ಯ ಮತ್ತು ಋತ : ಸತ್ಯ ಈ ಮೂರು 'ಸತ್ಯ'ಗಳ ತುಲನೆಯ ಮೂಲಕ ಇಲ್ಲಿ ಸಮೀಕ್ಷಿಸಬಹುದು. ಪ್ರಪಂಚದಲ್ಲಿ 'ಸತ್ಯ' ಎಂದು ಹೇಳುವ-'ಸತ್ಯ' ಎಂದು ಬಗೆಯಲಾಗುವ, ಮಾತಿನಲ್ಲಿಯೇ ಒಳಪದರು, ಟೊಳ್ಳು ಇರಬೇಕೆ? Truth is God; God is Truth ಎಂದು ಶ್ರದ್ಧೆ ವಹಿಸಲು ಹೇಳಲಾಗುತ್ತದೆ. ಆದರೆ ಈ Truth ಸಂಕೇತಕ್ಕೆ 'ಕಾದಾಟ ಸಾಕು; ಒಪ್ಪಂದವೇ ಬಾಳು' ಎಂಬ ಅಭಾವಾತ್ಮಕ ಮೂಲಾರ್ಥವಿದೆ! ಬಳಿಕ ಈ Truthಕ್ಕೆ ಸರಿಸಮಾನ God ಎಂಬವನ ಗತಿಯೇನಾಯಿತು?

'Truth' ಸಂಕೇತಸ್ಥ 'Compromise' ಎಂಬ ಅರ್ಥವೇ, ಅಂದು, ಆ ಜೀವನ ಪರಿಸರದಲ್ಲಿ ಅರಿಕೆಗೆ ಬಂದ ವಾಸ್ತವ : ಸತ್ಯ ಎಂಬುದನ್ನು ಸೂಚಿಸುವ ಬೇರೆ ಪ್ರಮಾಣಗಳು ಸಾಕಷ್ಟು ಉಂಟು. ಗ್ರೀಸಿನ ಒಬ್ಬ ದ್ರಷ್ಟಾರ ಮಹಾನುಭಾವ : ಹಿರಾಕ್ಲಿಟಸ್‌ನ ದರ್ಶನ : ತತ್ತ್ವಜ್ಞಾನ ಸಮೀಕ್ಷಿಸಬೇಕು.[೧] ಹಿರಾಕ್ಲಿಟಸ್ ಅಗ್ನಿ ತತ್ತ್ವದ ಸಾಕ್ಷಾತ್ಕಾರಿ ಈತನ "War is the father of all and king of all" ಈ ಸೂತ್ರ ನೋಡಿ. ಹಿರಾಕ್ಲಿಟಸನ 'War' (ಕಾದಾಟ) ಈ ಸಾಂಕೇತಿಕ ಪ್ರತಿಮೆಯ ತಾತ್ತ್ವಿಕ ಹಿನ್ನೆಲೆಯನ್ನು, ಋಗ್‌ವೇದ ಹಾಗೂ ಮಹಾಭಾರತದ ವರ್ಣನೆಗಳಲ್ಲಿ ಬರುವ ಕದನದ ಸಾಂಕೇತಿಕತೆಯೇ ಸ್ಪಷ್ಟಪಡಿಸಬಲ್ಲದು! ಮತ್ತು ಭಾರತೀಯ ಛಾಪಿನ ಕದನದ ಪ್ರೇರಕ 'ಸತ್ಯ' ತತ್ತ್ವವು, ಯುರೋಪೀಯ Truth ಸಂಕೇತಕ್ಕೆರಷ್ಟು ಹೋಲಿಕೆಯದಾಗಿದೆ! ಋಗ್‌ವೇದ ಕಾಲದಿಂದ ಭಾರತೀಯ ಸಂಸ್ಕೃತಿಯು, ಇಬ್ಬಗೆಯ 'ಸತ್ಯದ' ಪ್ರಯೋಜನ ಪಡೆಯುತ್ತಿದೆ! ಇದು ವೇದದ ಪ್ರತಿಮಾ : ಸಂಕೇತಗಳ ಮೂಲಕ ಶಕ್ಯವಿರುವ ತುಲನಾತ್ಮಕ ವಿಮರ್ಶೆಯಿಂದ ಬಯಲಿಗೆ ಬರುತ್ತಿದೆ. ಈ ಋಗ್‌ವೇದ ಸಂಹಿತೆಯಲ್ಲಿ ಅರ್ಥದ ನೆಲೆ ತಿಳಿಯದಿರುವ ಒಂದು ಮಹತ್ತ್ವದ ಕಾರಣವು, ಅಲ್ಲಿಯ, ವರ್ಣನೆಗಳು ಒಳಗೊಂಡಿರುವ ಇಬ್ಬಗೆಯ 'ಸತ್ಯ'! ಋತ : ಸತ್ಯದ ತಳಹದಿಯ ಮೇಲೆ ನಿಂತ ವಿಶ್ವದ ಬಗೆಗಿನ ಶ್ರದ್ಧೆಯ ನಿರ್ದೇಶವಿರುವ ಈ ವೇದದಲ್ಲಿಯೆ, ವಿಶ್ವದ ಮೂಲತತ್ತ್ವ 'ಏಕಂ ಸತ್' ಇದೊಂದೇ! ಎಂಬ ಶ್ರದ್ಧೆಯ ಉಲ್ಲೇಖವೂ ಉಂಟು! 'ಏಕಂ' ಸ್ವರೂಪೀ ಸತ್ಯವು, ರೇತಸತ್ಯ ಎಂಬುದನ್ನು ವಿವರಿಸಿದ್ದುಂಟು. ಈ ಆಪ : ರಸ ರೇತ ಸತ್ಯವನ್ನು ಸೌರ ಋತ : ಸತ್ಯದ ಆಭಾಸವಾಗುವ ತೆರನಾಗಿ, ಸಂಭ್ರಾಮಕ ರೀತಿಯಲ್ಲಿ ಇಡೀ ಈ ಸಂಹಿತೆಯ ಕಟ್ಟಡವಿದೆ!

ಸತ್, ಸತ್ಯ ಎಂಬ ಶಬ್ದ-ಪ್ರತಿಮೆಯ ಬಾಹ್ಯವಲಯವು ತೋರಿಕೆಯಲ್ಲಿ ಒಂದೇ ಇದೆ. ಆದರೆ, ಋತ ಸ್ವರೂಪೀ ಸತ್, ಸತ್ಯ ಹಾಗೂ ಏಕಂ ಸ್ವರೂಪೀ ಸತ್, ಸತ್ಯ ಇವುಗಳಲ್ಲಿ ತತ್ತ್ವತಃ ದ್ಯಾವಾ-ಪೃಥ್ವಿಗಳಷ್ಟು ಅಂತರವಿದೆ! ಇವೆರಡೂ ಸತ್-ಸತ್ಯ ತೀರ ವಿಭಿನ್ನ ಎಂಬುದನ್ನು ನಿದರ್ಶನಕ್ಕೆ ತರುವ ಈ ಸಂಗತಿಗಳನ್ನು ನೋಡಿ. 'ಏಕಂ' ಸಂಕೇತದೊಡನೆ ಬದ್ಧ 'ಸತ್ : ಸತ್ಯ', ಅಸ್' ಆಖ್ಯಾತಜನ್ಯ ಸತ್ಯವಲ್ಲ!

i) 'ಏಕಂ' ಸ್ವರೂಪೀ ಸತ್-ಸತ್ಯವು ಋತ ಸ್ವರೂಪೀ ಸತ್ಯವೇ ಆಗಿದ್ದರೆ ಸತ್ಯವನ್ನು 'ಏಕಂ' ಎಂದು ಉಲ್ಲೇಖಿಸುವ ಕಾರಣವಿದ್ದಿಲ್ಲ:

ii) 'ಏಕಂ' ಸತ್-ಸತ್ಯದ ಶ್ರದ್ಧೆಯ ಜೊತೆಗೆ ತದಿತರ (ಬೇರೆ) ಯಾವುದೇ ಬಗೆಯ ಶ್ರದ್ಧೆಗೆ ಅವಕಾಶವಿರಲಾರದು. 'ಏಕಂ' ಸತ್ಯವು-ಇನ್ನುಳಿದುದರ ಸಂಗಡ ಸಹಕರಿಸಿದರೆ, ಅದರ 'ಏಕಂ' ಹೆಸರಿಗೇ ಕೇಡು! ಆದಕಾರಣ, ವಿಭಿನ್ನ ಪಂಥೀಯ 'ಏಕಂ' ಸತ್ಯ, ಒಂದೆಡೆಗೇ ಇದ್ದು ಬದುಕಲೇ ಬೇಕಾದ ಅನಿವಾರ್ಯ ಪರಿಸ್ಥಿತಿಯು ಇರುವಲ್ಲಿ, 'ಯಂ ಶೈವಾಃ ಸಮುಪಾಸತೇ ಶಿವ ಇತಿ..." ಎಂಬ ನಿರ್ಗತಿಕ ಸ್ವರೂಪದ ಶಿವ, ವಿಷ್ಣು, ಜಿನ, ಬುದ್ಧ, ಅಲ್ಲಾ, ಅರ್ಹಿಮನ್... ಎಲ್ಲಾ ದೇವರು ಒಂದೇ. 'ಸುಮ್ಮನೆ ಕಾದಾಟವೇಕೆ? : ಒಪ್ಪಂದ=Truth=ಸಮನ್ವಯ(?) ಇಂಥ ಆತ್ಮವಂಚನೆಯ ಸಂಕೇತಗಳಿಂದ ಸಮಾಧಾನ ತಂದುಕೊಳ್ಳದೆ ಬೇರೆ ದಾರಿಯಾವುದು, ಎಂತೂ ಬದುಕಿ ಉಳಿಯಲು? ಆದರೆ, ಒಂದು ಅಖಂಡ ಜೀವಂತ ಸಮಾಜ : ಒಂದು ರಾಷ್ಟ್ರವಾಗಿ ಬಾಳಲು ಏಕಾತ್ಮಕ ಸಮಯ : ಸಂಕೇತಗಳು ಪ್ರಚಲಿತವಿರುವ ಆವಶ್ಯಕತೆಯಿದೆ. ಹಲವು ಅಂತಸ್ಥ ಭೇದಗಳು ಇರಬಲ್ಲವು. ಆದರೆ ಅವೆಲ್ಲವು ತಾವೇ ಮಿಗಿಲು 'ಏಕಂ' ಎನ್ನುವಲ್ಲಿ ಏಕಾತ್ಮತೆ ಅಶಕ್ಯ. ಈ ಒಪ್ಪಂದ=Truth ಎಲ್ಲಿಯ ವರೆಗೆ ಉಪಯುಕ್ತ? ತಾನು ಇನ್ನುಳಿದವರನ್ನು ಮೆಟ್ಟಿ ನಿಲ್ಲಬಲ್ಲೆ; ಗೆಲ್ಲಬಲ್ಲೆ ಎಂಬ ಅನುಕೂಲ ಸಮಯ ಬರುವ ವರೆಗೆ ಮಾತ್ರ!

iii) 'ಏಕಂ' ಸ್ವರೂಪೀ 'ಸತ್ಯ' ಈ ಶಬ್ದ-ಪ್ರತಿಮೆಯ ನಿರುಕ್ತವು ಉಪನಿಷತ್ತುಗಳಲ್ಲಿದೆ! ಸಂಸ್ಕೃತ ಅಸ್ ಆಖ್ಯಾತಜನ್ಯ ಸತ್, ಸತ್ಯ ಈ ಸಂಕೇತಗಳಿಗಿಂತ ಇದನ್ನು ಭಿನ್ನರೀತಿಯಿಂದ ವಿವರಿಸುವ ಆವಶ್ಯಕತೆಯೇನಿತ್ತು? ಈ ಸಂಕೇತವು ಮೂಲ ಸಂಸ್ಕೃತ ಭಾಷಿಕರ ಜೀವನ ಪರಿಸರದಲ್ಲೆ ಆಕಾರಪಡೆದಿದ್ದರೆ ಈ 'ಏಕಂ' ಸತ್-ಸತ್ಯದ ವ್ಯುತ್ಪತ್ತಿ ಅಸ್>ಸತ್ಯಕ್ಕಿಂತ ಬೇರೆ ಬಗೆಯದಾಗುವ ಕಾರಣವೇ ಇರಲಿಲ್ಲ. 'ಏಕಂ' ಸತ್ಯವು ಒಳಗೊಳ್ಳುವ ಅರ್ಥವು, ('ಅಸ್' [ಇರು ಬಾಳು,] ಈ ಆಖ್ಯಾತ ಜನ್ಯ) 'ಸತ್ಯ' ಈ ಸಂಕೇತದಲ್ಲಿ ಪ್ರತೀತಿಗೆ ಬರುವ ಜೀವನದ ಅರ್ಥಕ್ಕಿಂತ ತೀರ ಬೇರೆ ಬಗೆಯದು ಇರಲಿಕ್ಕೇಬೇಕು. ಏಕೆಂದರೆ (ಏಕಂ : 'ಸತ್ಯ' ಈ ಸಂಕೇತದ ಒಂದೊಂದು ಅಕ್ಷರ ಬಿಡಿಸಿ 'ಸ-ತಿ(ೀ)-ಯಂ' ಎಂಬ ಈ ಪೃಥಕ್-ಕರಣವು, ಪ್ರಾಚೀನ ಎರಡು ಉಪನಿಷತ್ತುಗಳಲ್ಲಿ ಬಂದಿದೆ![೨] ಸ್ವಲ್ಪ ಬೇರೆಯಾದರೂ ಇನ್ನೂ ವಿಶೇಷ ವಿವರಣೆಯೊಂದಿಗೆ ಕೌಷೀತಕೀ ಉಪನಿಷತ್ತಿನಲ್ಲೂ ಉಂಟು[೩] ಮತ್ತು ಈ 'ಸ-ತಿ(ೀ)-ಯಂ' ಈ ಮುಸುಕಿನಲ್ಲಿ ಚಮಸಪಾನ ಸಂಪ್ರದಾಯದ 'ಸ-ತಿ'ಯ ಸಾಂಕೇತಿಕ ಚಿತ್ರವು ಅಡಗಿರುವುದನ್ನು ಕಾಣಬಹುದಾಗಿದೆ!

'ಏಕಂ' ಸ್ವರೂಪೀ 'ಸತ್-ಸತ್ಯಕ್ಕೇ ಋಗ್ ವೇದ ಹಾಗೂ ಮಹಾಭಾರತದಲ್ಲಿ ಪ್ರಾಶಸ್ತ್ಯವಿದ್ದುದನ್ನು ಈ ಪ್ರಬಂಧದ ಉದ್ದಕ್ಕೂ ಸಮೀಕ್ಷಿಸಿದ್ದಾಗಿದೆ. ಋಗ್ ವೇದ ಹಾಗೂ ಮ. ಭಾರತಸ್ಥ 'ಮಹಿಷ-ಮಹಿಷೀ' ಅಥವಾ ಪೋತರಾಜ-ರಾಣಿಗರಲ್ಲೆ ನಡೆವ ಕಾದಲರ ಕಾದಾಟಕ್ಕೆ ಈ 'ಏಕಂ' ಸ್ವರೂಪೀ ಸತ್ಯವೇ ಪ್ರೇರಕವೆಂದ ಹಾಗಾಯಿತು. ಕಾದುಹವೇ ಹೇಳುವ ಜೀವನ ಒಂದು ಹಿರಾಕ್ಲಿಟಸ್‌ನಿಗೆ 'ಏಕಂ' ಸತ್ಯದಲ್ಲಿ ಶ್ರದ್ಧೆಯಿತ್ತೆ? ಎಂದು ಕೇಳುವ ಕಾರಣವೇ ಇಲ್ಲ! "all things come into being and pass away through strife" ಎಂದು ಪ್ರತಿಪಾದಿಸುವ 'ಅಗ್ನಿತತ್ತ್ವ'-ದ್ರಷ್ಟಾರ ಹಿರಾಕ್ಲಿಟಸನ 'ಸತ್ಯ'ವೂ 'ಏಕಂ' ಸ್ವರೂಪದ್ದೇ ಇರಲಿಕ್ಕೆ ಬೇಕು : 'The One made up of all things and all things issue from the One'! ವೇದೋಪನಿಷತ್ತಿನ 'ಏಕಂ : ಸತ್ಯವು, ಆಪ : ರಸ : ರೇತ ಸ್ವರೂಪಿಯಾಗಿದೆ. ಇದನ್ನು (ಚಾಂದ್ರ) ಅಗ್ನಿರೂಪವೆಂದೂ ಗೌತಮಾಗ್ನಿ (ಅ)ಬೋಧಿ ಅಗ್ನಿ ಎಂದೂ ಹೆಸರಿಸಿದ್ದನ್ನು ವಿವರಿಸಿದೆ. ಹಿರಾಕ್ಲಿಟಸನ ಈ 'ಏಕಂ' ತತ್ತ್ವವು 'ಆಪ' ಸ್ವರೂಪ ಮತ್ತು ಅಗ್ನಿ ಸ್ವರೂಪ ಉಭಯ ರೂಪಿಯೂ ಇದೆ. ಹಿರಾಕ್ಲಿಟಸನಿಗೆ ಆಪ (: ಸ್ತ್ರೀ) ತತ್ತ್ವ ಹಿಡಿಸಿಲ್ಲ! ಅವನು ಹೇಳುವುದೇನಂದರೆ "The soul is mixture of fire and water (ಇದೇ ಅಪಾಂ-ನಪ್ತ!); the fire being noble and the water ignoble." ಹಿರಾಕ್ಲಿಟಸನ ಈ ವಿವರಣೆ ಋಗ್‌ವೇದಸ್ಥ ಆಪ : ರಸ-ಅಗ್ನಿ (ಕುಮಾರ) : ಚಾಂದ್ರ

ಭೂಮಿಕೆಯದೇ ಸರಿ. 'ಹಿರಣ್ಯಗರ್ಭ' ದೇವನ ಗುಹ್ಯನಾಮ ವಿವರಣೆ ಹೋಲುವ ಈ ವಾಕ್ಯನೋಡಿ: 'It is pleasure to souls to become moist' ಈ ವಾಕ್ಯವನ್ನು ವೇದದ 'ಕಂ (: ಚಂದ್ರಾಃ ಆಪಃ) ಸುಖಂ' ಎಂಬ ಭಾಷ್ಯಾರ್ಥದೊಡನೆ ಹೋಲಿಸಿರಿ.

ಈ ಹೋಲಿಕೆಯ ಬಲದಿಂದ, ಹಿರಾಕ್ಲಿಟಸನಿಗೆ ಋಗ್ ವೇದಸ್ಥ 'ಕಂ': ಹಿರಣ್ಯಗರ್ಭ ದೈವತದ ತಾತ್ತ್ವಿಕ ಭೂಮಿಕೆ ಗೊತ್ತಿರಲೇಬೇಕೆಂದು ಅನುಮಾನ ಹೊರಡುತ್ತದೆ. ಇಷ್ಟೆ ಅಲ್ಲ: ಅಂದು ಗ್ರೀಸಿನಲ್ಲಿ ಚಾಂದ್ರ ಸಂಪ್ರದಾಯದ ಸಮಯ: ಆಚಾರ-ವಿಚಾರ ಪ್ರಚಲಿತವಿರಲೇಬೇಕೆಂಬುದು ಅನಿವಾರ್ಯ ನಿರ್ಣಯ. ಎಲ್ಲಿ ಭಾರತ? ಎಲ್ಲಿ ಗ್ರೀಕ್? ಎಂಬ ಭೌಗೋಲಿಕ ಆತಂಕವು ಎದುರು ನಿಲ್ಲುವುದು ನಿಶ್ಚಿತ. ಆದರೆ ಕ(ಂ) ಉಪಾಸನೆ ಇಜಿಪ್ಟಿನಲ್ಲಿ ಇದ್ದುದಾಗಿ ಬೆಳಕಿಗೆ ಬಂದಿದೆ! ಅಲ್ಲದೆ, ಯುರೋಪಿನಲ್ಲಿಯೆ 'ರಾತ್ರೀ-ಸೂರ್ಯನ' (Nocturnal Sun) ಆರಾಧನೆಯ ಶಾಕ್ತಸಮಯಾಚಾರಗಳಿದ್ದುದನ್ನು ಅಲ್ಲಿಯ ಸಂಶೋಧಕರೇ ಸಚಿತ್ರ ಪ್ರಕಟಿಸಿದ್ದಾರೆ! ಈ ರಾತ್ರೀ ಸೂರ್ಯನು ಋ. ವೇದದ 'ಮಾರ್ತಾಂಡ ನಾಮಾನಂ ಸೂರ್ಯಂ' ಹೋಲುತ್ತಾನೆ. ಅಲ್ಲದೆ, ಮಹಾಭಾರತ ಕಾಲೀನ (ಪುರುಷ=) ನಾರಾಯಣ ರೂಪೀ ಸೂರ್ಯನ ಸರ್ಪತ್ವ=ಲೈಂಗಿಕ ಆಕೃತಿಯೂ ಇದರಿಂದ ಮರಳಿ ಸ್ಪಷ್ಟೀಕರಣ ಪಡೆಯುತ್ತದೆ!

ಆದಕಾರಣ, ಶಾಸ್ತ್ರೀಯ ಭೂಮಿಕೆಯನ್ನು ಸ್ವೀಕರಿಸಿ ವಿಮರ್ಶೆಯನ್ನು ಕೈಗೊಳ್ಳುವ ಪ್ರಾಜ್ಞರಲ್ಲಿ ಬಿನ್ನಹ: ಮೇಲೆ ಸೂಚಿಸಿರುವ ಸಾಮ್ಯವು ಸುಳ್ಳೆಂದು ಸಿದ್ಧವಾದರೆ, ಹೆಚ್ಚಿನ ಮಾತಿಗೆ ಇಂಬಿಲ್ಲ. ಆದರೆ, ಈ ಸಾಮ್ಯವನ್ನು ಅಲ್ಲಗಳೆಯಲು ಆಗದಿದ್ದಲ್ಲಿ ಭಾರತೀಯ ಹಾಗೂ ಈಜಿಪ್ಟ್, ಗ್ರೀಕ್- ಈ ಭಾಗಗಳಲ್ಲಿ ಸಾಂಸ್ಕೃತಿಕ ಸಮಾನ 'ಸಮಯ' ಮತ್ತು ಕಾಲ ಎರಡೂ ಕಡೆಗೂ ಒಂದೇ ಇದ್ದರೆ ಇವರಲ್ಲಿ ಒಬ್ಬರೊಬ್ಬರಲ್ಲಿ ಆಚಾರ-ವಿಚಾರ ವಿನಿಮಯವಾಗಿರಲೇ ಬೇಕು, ನಿಜವೆ? ಕಾಲಭಿನ್ನವಿದ್ದರೆ ಯಾರಿಂದ ಯಾರು ಸ್ವೀಕರಿಸಿದರು, ಎಂಬುದನ್ನು ನಿರ್ಧರಿಸಬೇಕು. ಸಾಕಷ್ಟು ಪ್ರಮಾಣಗಳು ಇಲ್ಲವೆಂದರೆ, ಇವೆರಡೂ ಕಡೆಗೂ ಅಲ್ಲಲ್ಲಿಯೇ ಸಮಾನ ಆಚಾರದ (: ಚಾಂದ್ರ ಸಂಪ್ರದಾಯದ) ಮೂಲಕ ಸಮಾನ ವಿಚಾರಗಳು ಸ್ಫುರಿಸಿರುವ ಶಕ್ಯತೆಯಿದೆ, ಎಂದು ನಿರ್ಣಯಿಸಬಹುದು. ಆದರೂ ಆಶ್ಚರ್ಯದ ಸಾಮ್ಯವೆಂದರೆ ಈಜಿಪ್ಟ್ ಹಾಗೂ ಭಾರತದೊಳಗಿನ ವೃಷಭ (: ಗೂಳಿ) ಆದಿದೈವತವಿದ್ದುದು! (Bell of his mother) ಎಂಬ ವರ್ಣನೆ ಇಜಿಪ್ಟಿನಲ್ಲೂ ಇದ್ದುದು! ಇದರೊಡನೆ ಅದಿತಿ-ದಕ್ಷರ ಅಥವಾ ಗೌ (ಅದಿತಿ)-ವೃಷಭ=ರುದ್ರ, ಈ ಸಾಮ್ಯದ ಅರ್ಥವೇನು?

Truth, ಏಕಂ ಸತ್ (ತ್ಯ) ಮತ್ತು ಋತ : ಸತ್-ಸತ್ಯ-ಈ ಮೂರರಲ್ಲಿ ಮೊದಲಿನ ಎರಡೂ ಒಂದೇ ತತ್ತ್ವದ ಎರಡು ಭಿನ್ನ ನಾಮಾಂತರಗಳು, ಎಂದು ಕಂಡುಬರುತ್ತದೆ. ಇದು 'ಚಾಂದ್ರ' ಸತ್ಯ: 'ಏಕಂ ಸತ್' ನಾನಾನಾಮಾಂತರ! ಈಜಿಪ್ಟಿನಲ್ಲಿರಲಿ, ಗ್ರೀಸಿನಲ್ಲಿರಲಿ, ಸುಮೇರಿನಲ್ಲಿರಲಿ, ಭಾರತದಲ್ಲಿರಲಿ ಎಲ್ಲಿಯೆ ಇದ್ದರೂ ಇದರ ಮೂಲ ಕೃತಿ, ಆಕೃತಿ ತಾಯ್-ಗಂಡತನದ ರೂಪದ್ದೇ ಇರುವುದನ್ನು ಯಾರೂ ಅಲ್ಲಗಳೆಯಲು ಶಕ್ಯವಿಲ್ಲ. ಫ್ರೈಡನ 'ಈಡಿಪಸ್' ಸಿದ್ಧಾಂತವು ಸ್ಥೂಲಾರ್ಥದಿಂದ ವಾಸ್ತವವೇ ಸರಿ. ಇದು ತಾತ್ತ್ವಿಕ ಆಪ : ರಸ : ರೇತ ಸ್ವರೂಪೀ ವಿಶ್ವದ ಮೂಲ ತತ್-ತ್ವ (Essence ಅಥವಾ Being) ಎಂಬ ಶ್ರದ್ಧೆ, ಯೆಹೂದಿ ಹಾಗೂ ಕ್ರೈಸ್ತಪಂಥೀಯ ತತ್ತ್ವಜ್ಞಾನದಲ್ಲಿ ಇಂದಿಗೂ ಉಳಿದುಬಂದಿದೆ. 'ಅಮೃತಂ ಚೈವ ಮೃತ್ಯುಃ ಚ' ಈ ಬಗೆಯ ಪರಸ್ಪರ ವಿರೋಧಿಯಾದ ಇಬ್ಬಗೆಯ ಪ್ರವೃತ್ತಿಗಳನ್ನು ಒಳಗೊಳ್ಳುವ ಈ ತಾತ್ತ್ವಿಕ ಭೂಮಿಕೆಯ ಜೀವನವು ನಿತ್ಯ ಕಾಳಗದ ಕಣ : ಕುರುಕ್ಷೇತ್ರ : ಯಾದವೀ ಯುದ್ಧ ಭೂಮಿಯಂತಾಗಲೇಬೇಕೆಂದು ಹಿರಾಕ್ಲಿಟಸ್ ಪ್ರಾಂಜಲ ರೀತಿಯಿಂದ ಈ ತತ್ತ್ವಾರ್ಥ ಹೇಳಿದ್ದಾನೆ. ಆದರೆ, ಋಗ್‌ವೇದದಿಂದ ತೊಡಗಿ ಗೀತೆ ರಾಮಾಯಣಾದಿಗಳು ಈ 'ಏಕಂ ಸತ್ಯ'ದ ವಿವರಣೆಗೆ ಹೊರಟಿದ್ದರೂ ಹಿರಾಕ್ಲಿಟಸನ ಸ್ಪಷ್ಟ ಪ್ರಾಮಾಣಿಕ ಅರ್ಥ ವಿವರಣೆಯು ಮುಚ್ಚುಮರೆಯಿಲ್ಲದೆ ಭಾರತೀಯ ಪುರಾತನದಿಂದ ತೀರ ವಿರಳ. ಈ ಅಂತರವೇಕೆ? ಭಾರತೀಯ ಪರಿಸರದಲ್ಲಿ ಋತ : ಸತ್ಯದ ತುಲನೆಯಲ್ಲಿ. ಏಕಂ : ಸತ್(ತ್ಯ)ವು ಹೀಗೆ ಸಂಕೋಚಪಟ್ಟುಕೊಳ್ಳಬೇಕಾಗುವ ಕಾರಣವೇನು? 'ಏಕಂ : ಸತ್(ಸತ್ಯ)ದ ಆಕೃತಿ ಎಷ್ಟೇ ಸುಂದರವಾದರೂ ಅದರ ಅರ್ಥ ತತ್ತ್ವವು, ರಾತ್ರೀ ಸಮಯಾಚಾರಕ್ಕೆ ಸಂಬದ್ಧವಾಗಿದೆ!

ಈ ಮೊದಲೇ ವಿವರಿಸಿರುವಂತೆ, 'ಏಕಂ : ಸತ್' ಪಂಥೀಯ ವೈಚಾರಿಕ ತಾತ್ವಿಕ ಆಕೃತಿಯು, ಸಾಕ್ಷಾತ್ ಸರ್ಜನ ಕ್ರಿಯೆಗೆ ಸಂಬಂಧಪಟ್ಟ (: ಗರ್ಭಂ ದಧ್ರ ಆಪಃ) ಲೈಂಗಿಕ ಜೀವನಾನುಭವದೊಳಗಿಂದ ಆಕಾರ ಪಡೆದಿದೆ. ವೈಚಾರಿಕ ಆಕೃತಿಯು (ಅದು ಒಳಗೊಂಬ Logic) ನಿತ್ಯ ಸನಾತನ. ಈ ಕಾರಣದಿಂದಾಗಿ, ಈ 'ಏಕಂ: ಸತ್' (: Absolute) ಸ್ವರೂಪದ ತಾತ್ವಿಕ ಭೂಮಿಕೆಯನ್ನು ಎಷ್ಟೋ ಉದಾತ್ತೀಕರಿಸಿದರೂ ಅದರಲ್ಲಿ ಒಂದಿಲ್ಲೊಂದು ಬಗೆಯ (ತಾಯ್ಗಂಡತನ, ಮಗಳಗಂಡತನ ಅಥವಾ ಯಮ-ಯಮೀಭಾವದ ದಾಂಪತ್ಯ ಸಂಬಂಧ, ಇಲ್ಲವೆ ಸ್ವೈರ ಸರ್ವಾಧಿಕಾರೀ 'ದಂಡ'ನಾಯಕೀ ಪ್ರವೃತ್ತಿಯ 'ಇಝುಂ') ಶಾಕ್ತವಾದೀ ಜೀವನ 'ಸಮಯ' (: ಆಚಾರ-) ಪ್ರೇರಕ ಅಂತಃಶಕ್ತಿ ಉಳಿಯಲೇಬೇಕು. ಇದನ್ನು ಜಾಗತಿಕ ದೈವತ ಕಥೆಗಳು, ಐತಿಹಾಸಿಕ ಘಟನೆಗಳು, ತೋರಿಸಿಕೊಡುತ್ತಿವೆ. Ancient Indian Serpent Lore ವ್ಯಾಸಂಗಿ ವ್ಹೊಗೆಲ್ ಬೆಳಕಿಗೆ ತಂದಿರುವ ಸಾಂಕೇತಿಕ ಸತ್ಯವು;-'ನಾಗಗಳು' ಸಾಧು, ಸಂತ, ಸಿದ್ಧ ಪುರುಷರ ರೂಪದಲ್ಲೂ ಮಾರ್ಪಡುತ್ತವೆ. ಇದೂ ಉದ್ಬೋಧಕವಿದೆ.

ಋತ : ಸತ್ಯವು, ಏಕಂ ಸತ್ಯ (=Truth) ದಿಂದ ತೀರ ಬೇರೆ. ಇದು ಜಗತ್ತಿನಲ್ಲಿ ಅರ್ಥ=ಸಂಗತಿ, ವ್ಯವಸ್ಥೆ 'ಉಂಟು' ಎಂದು ನಂಬಹೇಳುತ್ತದೆ. ತೇಜೋರೂಪ ವಿಶ್ವ-ನರನಲ್ಲಿ ಶ್ರದ್ಧೆಯ, ಶಿಷ್ಟ ನಿರ್ಮಿತ 'ಸಮಯ'ದ ಆಚಾರ ವಿಚಾರವು, 'ಸಂ ಗಚ್ಛಧ್ವಂ ಸಂ ವದಧ್ವಂ...' ರೀತಿಯ ಬಾಳನ್ನು ಪ್ರಚೋದಿಸುತ್ತದೆ. ಯುರೋಭಾರತೀಯ ಅಸ್ ಆಖ್ಯಾತವು Is ಕ್ಕೆ ಹತ್ತಿರ. ಇದು ಭೂ>ಭವ=Be ಮತ್ತು ವಸ್-ಇರು ಇವೆರಡೂ ಆಖ್ಯಾತಗಳನ್ನು ಒಳಗೊಳ್ಳುತ್ತದೆ. ಅಸ್>ಅಸ್ತಿ=Is ಎಂದರೇ ಮೂರ್ತ ಜೀವನ ರೂಪ ಸತ್ಯ. ಋತಸ್ವರೂಪೀ (ಎಂದರೆ ಮಾನವ ಜೀವನ ನಿಯಮನ ಮಾಡುವ ನಿಯಮಗಳ ಆಧಾರದ ಮೇಲೆ ನಿಲ್ಲುವ) ಸತ್ಯವು ಇದು. ಇದು ಪ್ರಕಾಶ ಕಿರಣ ರೂಪದ್ದು. ಆಪ : ರಸ : ರೇತದ ಪಾತಳಿಯು ನಿಸರ್ಗದ ಪಾತಳಿ; ಕೇವಲ ಭಾವನಾತ್ಮಕ ಪಾತಳಿ. ಜೀವನವು ಬುದ್ಧಿ-ವಿಚಾರ-ವಿವೇಕದ ಬೆಳಕು ಅಪೇಕ್ಷಿಸುತ್ತದೆ. ನರ-ಜಂತುವು, ಮನುಜ ಹಂತದಲ್ಲಿ ತನ್ನೊಳಗೇ ಈ ಉಭಯ ಸತ್ಯಗಳ ಅಸ್ತಿತ್ವವನ್ನು ಕಂಡುಕೊಳ್ಳಬಲ್ಲುದು. ಆದರೆ, ಋತ : ಸತ್ಯದ ಸ್ವತಂತ್ರ ಅಸ್ತಿತ್ವವನ್ನು ಒಪ್ಪಲು, ರೇತಪಾತಳಿಯ ಜೀವಿಗೆ ರುಚಿಸದು. ಋತ : ಸತ್ಯದ ವಿಚಾರವು ಭಾರತದಷ್ಟು ವಿಕಾಸದ ಮಟ್ಟದಲ್ಲಿ ಬೇರೆಯಾವ (ಭಾಷಿಕ) ಸಂಸ್ಕೃತಿಗಳಲ್ಲಿಯೂ ಅಭಿವ್ಯಕ್ತವಾಗಿಲ್ಲ. ಈಜಿಪ್ಟ್-ಸುಮೇರಿಯನ್-ಗ್ರೀಸಗಳಲ್ಲಿ 'ನಿಯಮ'ಕ್ಕಿಂತ 'ನಿಯತಿ' (: ದೇವಿ) ಆಕೃತಿಯೆ (ಆಪ : ರಸ ರೂಪದಲ್ಲಿ) ಕಾಣಿಸಿಕೊಂಡಿದೆ. ಅವೆಸ್ತಾ (ಇರಾಣ) ಅಶ (=ಋತ=ಸತ್ಯ) ಸೂಚಕ ಪ್ರತಿಮೆ ಅಪೂರ್ಣವಿದೆ. ಪ್ರಕಾಶ : ಅಹುರಮಝ್ದ ಇವನೇ ಏಕಂ : ಸತ್ ಆದರೂ ಅದರಿಂದ ಸರ್ಜಕ=ಲೈಂಗಿಕ ಆಕೃತಿಯೆ ಆಗುವುದು! ಯೆಹೂದಿ ಕ್ರೈಸ್ತ ಸಂಪ್ರದಾಯಗಳು ಸರ್ಪವನ್ನು ಕೊಂದಂತೆ ಅಥವಾ ಓಡಿಸಿಬಿಟ್ಟಂತೆ ಕಥೆ ನಿರ್ಮಿಸಿವೆ. ಆದರೆ, ಅಂತರಿಕ್ಷಸ್ಥ ದೇವನು ವಿಶ್ವಪಿತನು! ಭಾರತೀಯ ಪುರಾತನರು, ದೇವರನ್ನು ಋತ=ಪ್ರಜಾತ (: 'ಸತ್ಯ') ಎಂದಿರುವರಲ್ಲದೆ, ಋತ (: ನಿಯಮಗಳ) ಪಾಲಕನು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ವೇದದಲ್ಲಿ ಋತ : ಸತ್ಯ ಇವೆರಡೂ ಸಂಕೇತ ಕೂಡಿ ನಿರ್ದೇಶಿಸುವ ವಾಡಿಕೆ ಇತ್ತು.

'ಅಸತಃ ಸತ್ ಅಜಾಯತ' : ಸತ್-ಸತ್ಯವು ಅಮೂರ್ತ-ಆಕೃತಿವಿಹೀನವಿದ್ದು ಅದು ನಾಮರೂಪ ಪಡೆದು ಆಕೃತಿ-ರೂಪದ್ದು ಆಯಿತು ಎಂಬ ಶ್ರದ್ಧೆಯು ಉಂಟೇ ಉಂಟು. ಇಂಥ ಮೂರ್ತ ಆಕೃತಿರೂಪವೇ 'ಸತ್ಯ'; (: ನಾಮ-ರೂಪದ ಮೂಲಕ) ಇದನ್ನು ನಿಷ್ಕರ್ಷಿಸಿಕೊಳ್ಳಲು ದೊರೆಯುತ್ತದೆ. ಇಂಥ ಮೂರ್ತ : ನಾಮರೂಪಾತ್ಮಕ 'ಸತ್ಯ'ವನ್ನು ಈ ಬಗೆಯ ಹಲವು ಮೂರ್ತ ರೂಪ-ಆಕೃತಿಗಳೊಡನೆ ತೂಗಿ ಬೆಲೆಯನ್ನು ನಿರ್ಧರಿಸಿಕೊಳ್ಳಲು ಶಕ್ಯವಿದೆ. ಈ ಕಾರಣದಿಂದ ಈ ಜೀವನವು (ಸತ್ಯ=) ಅರ್ಥಯುಕ್ತವಿದೆ, ಎಂಬುದು ಸೌರ ಸವಿತೃಸಂಪ್ರದಾಯದ ಪುರಾತನರ ನಿಷ್ಠೆಯಾಗಿತ್ತು, 'ಮನು'ವು ವಿವಸ್ವಂತನ (: ಸವಿತೃ-ಸೂರ್ಯನ) ಸಂತಾನ ಎಂಬ ಜಾಗೃತ ಪ್ರಜ್ಞೆಯಿರುವಲ್ಲಿ ಈ ನರ-ಜಂತುವು, ಋತ : ಸತ್ಯದ ಪಾತಳಿಯ ಮನುಜನಾಗುತ್ತಾನೆ. ಆದರೆ,

ಈ ಮನುಜನನ್ನು (ಯಾಯಾವರ : ನಾಗ ಜರತ್ಕಾರು+ಮಾನಸೀ=ನಾಗಿ) ಸಂತಾನವೆಂದು ಸೂಚಿಸುವ ಆಪ : ರಸ=ರೇತ ಸಂಪ್ರದಾಯದ ತಂತ್ರವೂ ನೋಡಲು ದೊರೆಯುತ್ತದೆ: ಮಾನಸಿ (=ಮನವೇ) ಸರ್ಪ=ಎಂದರೇನು ಅರ್ಥ? ವೈವಸ್ವತ ಮನುವನ್ನು ಅರ್ಥವಿಹೀನ ನಿರ್ಜೀವ ಪ್ರತಿಮೆಯಾಗಿಸಿರುವ ಗತ್ತುಗಾರಿಕೆ ನೋಡಿ ಈ ಸಂಹಿತೆಯಲ್ಲಿಯೆ 'ಅಪ್ಸು ನಾಮ್ನಃ ಪುತ್ರಃ ಮನು' ಎಂಬ ಇನ್ನೂ ಒಂದು ಪ್ರತಿಮೆ ಉಂಟು. 'ಅಸತಃ ಸತ್' ಉಂಟಾಗಿದೆ ಎಂಬ ಸಾಂಕೇತಿಕ ಪ್ರತಿಮೆಯೊಳಗಿನ 'ಅಸತ್' (=ಮೂರ್ತ ಸತ್ಯ) ಈ ಸಂಕೇತವನ್ನು, 'ಕಾಮಪ್ರಚೋದಕ' ತತ್ತ್ವವೆಂದು, ಗೀತೆ ಇದನ್ನು ನಾಶಮಾಡಲು ಬೋಧಿಸಿದೆ, 'ನರ'ನಿಗೆ! 'ಜಹಿ ಶತ್ರುಂ ಕಾಮ ರೂಪಂ ದುರ್ ಅಸತಂ'! ಈ ದ್ವೇಷವು ಗ್ರೀಸಿನತ್ತಣೆನ ಶಬ್ದ ಪ್ರತಿಮೆಗಳಲ್ಲಿ ಕಾಣದೊರೆಯುವುದಿಲ್ಲ. ಇಜಿಪ್ತಿನಲ್ಲಿ 'ಸೂರ್ಯಾಕ್ಷ ಸರ್ಪ' 'Ra-Atum'ಎಂಬಲ್ಲಿ ಈ 'Ball of his' mother : ಮಾತಾ ಸಂಪ್ರದಾಯವು ಪ್ರಚಲಿತವಿದ್ದ ಇಜಿಪ್ತಿನ ಸರ್ಪಯುಕ್ತ ಈ ಸೂರ್ಯನು 'ರಾತ್ರಿ' ದೇವನು. ಭಾರತೀಯ ಸೂರ್ಯ ನಾರಾಯಣನೇ ನಿಶ್ಚಿತ, 'ವನಸ್ಯಸ್ತೂಪ' (: ಸರ್ಪರೂಪ) ವರುಣಸ್ಯ ಚಕ್ಷುಃ ಸೂರ್ಯನ ಹೋಲಿಕೆ ಇಜಿಪ್ತಿನಲ್ಲೂ ಇದೆ. ಆದರೂ 'ನರ'(: ಜಂತು : ಪ್ರಾಣಿ!) ವರ್ಗವನ್ನು ಜೀವಿಯ ಪಾತಳಿಗೆ ('ಮನು-ಜ' ಪಾತಳಿಯ ಪ್ರಜ್ಞೆಯಿಂದ) ಮರಳಿ ಕೆಳಕ್ಕೆ ತಳ್ಳಿ, ನಾಗಬಂಧದಲ್ಲಿ ಉಳಿಸಲು ಮಾಡಲಾಗಿರುವ ಮೋಡಿಕಾರ ಮಾಟವು ಭಾರತೀಯ ಸಂಕೇತ ಪ್ರತಿಮೆಗಳಲ್ಲಿ ಅನನ್ಯ ಸಾಧಾರಣವಾಗಿದೆ!

ವೇದದಲ್ಲಿ ಇಂದ್ರನು ಸೂರ್ಯನ ಪರ್ಯಾಯ ಪ್ರತಿಮೆ ಎನಿಸಿದೆ. ಕೃಷ್ಣದ್ವೈಪಾಯನನು ಈ ಮೂಲ ಸಾಂಕೇತಿಕತೆಯನ್ನೆ ವಿಕೃತಿಗೊಳಿಸಿದ್ದಾನೆ! ಇಂದ್ರನನ್ನು ನಾಗಃತಕ್ಷನ ಅವಿಭಾಜ್ಯ ಅಂಗವಾಗಿಸಿದ್ದಾನೆ. ಸೂಕ್ಷ್ಮವಾಗಿ! ಎಂದರೆ ಇಂದ್ರನೂ 'ನಾಗ' ರೂಪನೇ ಆದಂತೆ! ಆದರೆ, ಮೂಲ ಸಂಕೇತ ಬೆಳಕು-ಕತ್ತಲೆಯ ರೂಪದ್ದು ಆಗಿದೆ! ಬೆಳಕು ವಿಧಾಯಕ ರೂಪ; ಕತ್ತಲೆ (ಮೃತ್ಯು) ಅಭಾವಾತ್ಮಕ ಅರ್ಥಸೂಚಕ ಸಂಕೇತ! ಇಂಥ ಇನ್ನೂ ಒಂದು ವಿಕೃತಿ ಇಂದ್ರನು ಸೂರ್ಯನ ಪರ್ಯಾಯನೆಂಬ ಶ್ರದ್ಧೆಯಂತೆ ಮ. ಭಾರತದ ಇಂದ್ರಾಂಶನೆಂಬ 'ನರ' (=ಅರ್ಜುನ =ಬೆಳ್ಳಗೆ=ಬೆಳಕು!): ಮತ್ತು ಸೂರ್ಯಾಂಶನೆಂಬ ಕರ್ಣ (ಇವನನ್ನು ನದಿಯಲ್ಲಿ ಚಲ್ಲಿ, ಅಂಬಿಯ ಮಗನಾಗಿಸಿ ಆಪಃರಸಪುತ್ರನಾಗಿಸಿದ್ದು ಚಿಂತ್ಯವಾಗಿದೆ), ಇವು ಪರಸ್ಪರ ದ್ವೇಷದ ಎರಡು ಸಾಂಕೇತಿಕ ಪ್ರತಿಮೆಗಳಾಗಲು ಶಕ್ಯವಿಲ್ಲ. ಮೂಲ ವೇದಕ್ಕೆ ಸುಸಂಗತ ಪ್ರಾಮಾಣಿಕ ಚಿತ್ರ ಎಂದಲ್ಲಿ! ಇದು ವೈಶ್ವಾನರ ಪ್ರತಿಮೆ, ಇತಿಹಾಸದ ಸಂಕೇತ ನಷ್ಟವಾದ ರೀತಿ ಆಗಿದೆ. ಭಾಷಾರೂಪ ಶಬ್ದಪ್ರತಿಮೆಗಳೇ ಕಂನಡಕ; ಯಾವುದರ ಮೂಲಕ ಜಗತ್ತಿನ ಅರ್ಥವಾಗುತ್ತದೊ ಆ ಕಂನಡಕವನ್ನೇ ವಿಕೃತ ಅರ್ಥದ್ದಾಗಿಸಿಡುವುದು. ಜೀವನದಲ್ಲಿ 'ಅರ್ಥವೇ ಇಲ್ಲ' ಎಂಬ ಗ್ರಹಿಕೆ ನಿರ್ಮಿಸುವುದು, ಆಪ : ರಸ ಸಂಪ್ರದಾಯದ ನೇತಾರರ ಈ ತಂತ್ರವು ಭಯಾವಹವಾಗಿದೆ, ಇದು ಏಕಂ ಸತ್‌ಪಂಥ!

ಕೃಷ್ಣನ (ಕತ್ತಲೆಯ) ಅಂಗವಾಗಿ, ತನ್ನ ಅರ್ಜುನತ್ವ (ಬೆಳ್ಳಗೆ-ಬೆಳಕು) ಕಳೆದುಕೊಂಡ 'ನರ' ಜಂತುವರ್ಗದ ಪ್ರಾಣಿಯಾಗುತ್ತಾನೆ. ತೇಜಸ್ವೀ ಸೂರ್ಯಪುತ್ರ ಪೌರುಷದ ಪ್ರತೀಕ ಎಂಬ ಹಾಗಿನ ಸೋಗುಹಾಕಲಾದ 'ಕರ್ಣ'ನಿಂದ 'ಇಂದ್ರ' (=ಸೂರ್ಯ!) ಎಂಬವನು ದಾನ ಪಡೆದದ್ದೇನು? ಕುಂಡಲ (ಕುಂಡಲಿನೀ ಚಕ್ರ=ಸರ್ಪ=ಲಿಂಗ=)! ಪೌರುಷದ ಪ್ರಧಾನ ಅಂಗ! ಗೀತೆಯ ಭಗವಂತನು 'ಕುರು'ಕ್ಷೇತ್ರದಲ್ಲಿ ಉಪದೇಶಿಸಿದ್ದು 'ನರ'ನಿಗೆ! ಈ ಸಾಂಕೇತಿಕ ಪ್ರತಿಮೆಯೇ ನರ- ನಾರಯಣನದು! ಈ ಗೀತೆ ಮನು-ಜನಿಗೆ ಅಲ್ಲ; ನರ-ಪಾತಳಿಯ ಪುರೂರವ ವರ್ಗಕ್ಕೆ. ಗೀತೆ ನರನಿಗೆ ಸಂಬೋಧಿಸಿ ಹೇಳಿದ್ದಾಗಿದೆ! ನಿಜವೆ, ನೋಡಿಕೊಳ್ಳಿ, 'ನರಜಂತುವೇ, ನೀನೇನು ಮಾಡಬಲ್ಲೆ, 'ನನಗೆ ಶರಣುಬಾ' ಎಂದು ಹೇಳುವ ಕೃಷ್ಣಭಕ್ತಿ, ಕ್ರಿಸ್ತಭಕ್ತಿಯೊಳಗಿನ ಈ ಸಾಮ್ಯವು, ಇನ್ನೊಂದು ಬಗೆಯಲ್ಲಿ ಕರುಣಭಕ್ತಿಯಲ್ಲಿಯೂ ಇಲ್ಲದಿಲ್ಲ. ಶುದ್ಧ ಪ್ರತಿಪದಾ-ದ್ವಿತೀಯೆಯ 'ಅಭು=ಚಂದ್ರಪ್ರತಿಮೆಯ ಭಕ್ತಿಯು ಇಸ್ಲಾಮಿನಷ್ಟು ಬೇರಾವ ಏಕಂ=ಸತ್‌ಪಂಥವು, ಬಹಿರಂಗವಾಗಿ ಜೀವಂತವಾಗಿ ಉಳಿಸಿಕೊಂಡು ಬಂದಿದೆ? ಈಜಿಪ್ಟ್‌ನಿಂದ ಭಾರತ, ಜಪಾನಿನ ವರೆಗೂ ಒಂದು ಕಾಲಕ್ಕೆ ತತ್:ಏಕಂ ಸ್ವರೂಪೀ 'ಸತ್ಯ'ದ ವೈಚಾರಿಕ ಆಕೃತಿಯೆ,

ಜನಜೀವನವನ್ನು-ಅಲ್ಲಲ್ಲಿಯ ಸಂಸ್ಕೃತಿಯನ್ನು ರೂಪಿಸಿದೆ. ಅಲ್ಲಲ್ಲಿಯ ದೈವತಕಥೆ (myths) ಹಾಗೂ ತತ್ತ್ವಜ್ಞಾನದ ಉಪಲಬ್ಧಿ ಉಲ್ಲೇಖಗಳ ಆಧಾರದಿಂದ ಇದು ಸಿದ್ಧವಾಗುತ್ತದೆ. ಅಲ್ಲಲ್ಲಿಯ ದೈವತಪ್ರತಿಮೆಗಳ ಭಾಷಿಕ ಬಾಹ್ಯವಲಯ ಬೇರೆ ಎನಿಸಿದರೂ ಈ ಬಾಹ್ಯವಲಯದ ಅಂತಸ್ಥ ಗರ್ಭಿತಾರ್ಥದ ಆಕೃತಿ ಸಮಾನವಿದ್ದುದು ಬೆಳಕಿಗೆ ಬಂದಿದೆ. ಆದುದರಿಂದ, ಸಮಾನ ಸಮಯದ ಆವರಣವುಳ್ಳ ಈ ಪ್ರತಿಮಾ ಸಂಕೇತಗಳ ಮೂಲಕ ಅರಿಕೆಗೆ ಬರುವ ಈ ಸು-ಸಂಗತಿಯ ಸೂತ್ರವನ್ನು ಹಿಡಿದು ನಡೆವ ಸತ್ಯಾನ್ವೇಷಣೆಯನ್ನು 'ಶಾಸ್ತ್ರೀಯ ಪದ್ಧತಿಯ ತಂತ್ರ' ಎನ್ನಲು ಆತಂಕವೇನು?

ಹಾಗಾದರೆ, 'ಶಾಸ್ತ್ರೀಯ' ಪದ್ಧತಿ ಎಂದರೇನು, ಎಂಬ ಪ್ರಶ್ನೆ ತಲೆಯೆತ್ತುತ್ತದೆ. 'ಶಾಸ್ತ್ರೀಯ' (Scientific) ಪದ್ಧತಿ ಎಂದೊಡನೆ ಅದು ಭೌತಶಾಸ್ತ್ರಕ್ಕೇ ಸೀಮಿತ ತಂತ್ರ, ಎಂಬ ಗ್ರಹಿಕೆಯನ್ನು ತಿದ್ದಿಕೊಳ್ಳುವ ಕಾಲವು ಬಂದಿದೆ: 'Man the Unknown' ಎಂಬ ಪ್ರಸಿದ್ಧ ಗ್ರಂಥಕಾರ, ಭೌತಶಾಸ್ತ್ರಜ್ಞನೆಂದೂ ವಿಖ್ಯಾತ ಡಾ. ಕ್ಯಾರೆಲ್ ಅಂಥವರೂ ವ್ಯಥೆಪಟ್ಟುಕೊಂಡುದುಂಟು. ಮಾನವ ಜೀವನದೊಳಗಿನ ಸತ್ಯಾಂಶಗಳನ್ನು ಶಾಸ್ತ್ರೀಯ ರೀತಿಯಿಂದ ನಿಷ್ಕರ್ಷಿಸಿಕೊಳ್ಳಲು ಆಗದ್ದಕ್ಕೆ. ಆದರೆ 'ಪರೀಕ್ಷಾವಳಿ'ಯ ಛಾಂದಸಿಗತನಕ್ಕೆ ತಿಲಾಂಜಲಿಯನ್ನೀಯಬೇಕಾಗುವ ಹೊತ್ತು ಬಂದು, ಸೈನ್ಸಿನ ವ್ಯಾಖ್ಯೆಯೂ ಇಂದು ಬದಲಾಗಿದೆ! ಸೈನ್ಸಿನಲ್ಲಿಯೂ ಸಂಕೇತಗಳ ಮೂಲಕವೇ ನಿಸರ್ಗಸ್ಥ ಸತ್ಯಾಂಶ ನಿರ್ಧರಿಸಿಕೊಳ್ಳಬೇಕಾಗಿ ಬಂದಿದೆ. ಅಣುವಿಸರಣ ಶಾಸ್ತ್ರದ ಈ ಯುಗದಲ್ಲಿ! ಅಲ್ಲದೆ, (ಮಾನವ) ಜೀವನಸ್ಥ ಚೇತನಶಕ್ತಿಯ (Bio-dynamics) ಭೌತಸ್ವರೂಪದಂತೆ, ಇದರ ಅಭೌತ ಶಕ್ತಿಯ ಇತಿಮಿತಿಗಳನ್ನು ಅರಿಯುವ ಕುತೂಹಲ-ಆವಶ್ಯಕತೆ ತೀವ್ರವಾಗುತ್ತಿದೆ. ಈ ದಿಶೆಯಿಂದ ವಿಚಾರಕ್ಕೆ ಪ್ರವೃತ್ತರಾದವರಲ್ಲಿ ಇಂಗ್ಲೆಂಡಿನ ಡಾ. ಟಿ. ಎಲ್. ವ್ಹಿ. ಉಲ್‌ಬ್ರಿಚ್ಟ್ (Ulbricht) ಒಬ್ಬರು. 'Is Science Failing?' ಎಂದು ಪ್ರಶ್ನಿಸಿ, ಇವರು ಅಲ್ಲಿಯ ಆಕಾಶವಾಣಿಯಲ್ಲಿ ಮಾಡಿದ ಭಾಷಣವು ಉದ್ಬೋಧಕವಾಗಿದೆ. ಸೈನ್ಸಿನ 'ವಸ್ತುನಿಷ್ಠ'ತೆಯ ಈ ಮೊದಲಿನ ಛಾಂದಸಿಕತನವು ಅರ್ಥವಿಹೀನವಾಗಿದೆ ಎಂದು ಹೃದಯಂಗಮವಾಗಿ ವಿವರಿಸಿದ್ದಾರೆ.

ಅಣುವಿಸರಣ ಶಾಸ್ತ್ರ ವಿಭಾಗದ ಜೀವಾಣು ಶಾಖೆಗೆ ಸಂಬಂಧಿಸಿದ ಜೀವನ ಮತ್ತು ಮಾನವನೊಳಗಿನ ದ್ವಿಧಾಭಾವದ ವಿಚಾರವಾಗಿ (molecular Biology and the division in Man) ಡಾ. ಉಲ್‌ಬ್ರಿಚ್ಟ್ ಮಾಡಿದ ಉಪನ್ಯಾಸಗಳಲ್ಲಿ ಇದೂ ಒಂದು. ಅವರು ಇಂಗ್ಲೆಂಡಿನ ವಿಖ್ಯಾತ ಪ್ರಯೋಗ ಶಾಲೆಯ ಸಂಚಾಲಕರು ಮತ್ತು ಸಂಶೋಧನಗಳ ಮಾರ್ಗದರ್ಶಕರು ಎಂದು ಹೆಸರಾಗಿದ್ದಾರೆ. ಇವರಿಗೆ ಸೈನ್ಸಿನ ನೂತನ ವ್ಯಾಖ್ಯೆಯು ಅವಶ್ಯವೆನಿಸಿ, 'It is necessary to have an agreed definition of Science; I suggest the following' ಎಂದು ವಿನಯದಿಂದ ತಮ್ಮ ವ್ಯಾಖ್ಯೆಯನ್ನು ಸೂಚಿಸಿದ್ದಾರೆ.

> "Science is a self-consistent description of the observable and measurable universe such that future observations and measurable events can be predicted."*

ಜೀವನ : ಸಂಸ್ಕೃತಿಯನ್ನು ಒಳಗೊಳ್ಳುವಂತೆ ಸೈನ್ಸಿನ ನೂತನ ವ್ಯಾಖ್ಯೆಯ ಆವಶ್ಯಕತೆಯು ಏನಿತ್ತು? ಇದು ಸ್ಪಷ್ಟವಾಗಲು, ಹಿಂದಿನ ತಲೆಮಾರಿನ 'ಸೈಂಟಿಫಿಕ್' ದೃಷ್ಟಿಕೋನದ ಆಗ್ರಹಿಗಳ ಗ್ರಹಿಕೆಗಳನ್ನು ಅರಿಯಬೇಕು. ಭಾವನಾತ್ಮಕ ಅಭಿವ್ಯಕ್ತಿಯನ್ನು 'emotive expression' ಎಂದೇ ತಿರಸ್ಕರಿಸಲಾಗುತ್ತಿತು. ಭಾವನೆ, 'ವಸ್ತುನಿಷ್ಠ' (objective) ವಿಚಾರವಲ್ಲ, ಎಂದು ಮಾನವ ಜೀವನದ ಈ ಅವಿಷ್ಕಾರವನ್ನು ಲೆಕ್ಕಿಸಲಾಗುತ್ತಿದ್ದಿಲ್ಲ! ವಿಶಿಷ್ಟ ಸಾಂಸ್ಕೃತಿಕ ಅಭಿಮಾನದ ಪಕ್ಷಪಾತೀ ಅಭಿಪ್ರಾಯ (expression of cultural prejudice) ಎಂದೂ ಹೆಸರಿಡಲಾಗುತ್ತಿತ್ತು. ಈ ಬಗೆಯ ಅಭಿವ್ಯಕ್ತಿಯನ್ನು ಶಾಸ್ತ್ರೀಯ ಭೂಮಿಕೆಯ ತತ್ತ್ವಜ್ಞಾನದ ಅನ್ವೇಷಣೆಗೆ ಅನರ್ಹವೆಂದು

---

* ಇಂಗ್ಲೆಂಡಿನ ಸ್ನೇಹಿತರ ಭಾಷಣದ ಪ್ರತಿಯನ್ನು ಮುಂಬೈ 'ಸೀಬಾ' ಸಂಶೋಧನ ಕೇಂದ್ರದ ಡಾ. ಬಿ. ಎಸ್. ಜೋಶಿ ಅವರು ಸರಿಯಾದ ಹೊತ್ತಿಗೆ ಒದಗಿಸಿದ್ದಕ್ಕೆ ಧನ್ಯವಾದಗಳು ಸಲ್ಲುತ್ತವೆ.

ಬಗೆಯಲಾಗುತ್ತಿತ್ತು. 'ಶಾಸ್ತ್ರೀಯ' ತತ್ತ್ವಜ್ಞಾನಿಗಳ ಹಿಂದಿನ ಆ ಪರಂಪರೆಯೆ ಇಂದಿಗೂ ಪ್ರಭಾವಶಾಲಿಯಾಗಿದೆ, ಯುರೋಪು ಅಮೇರಿಕೆಗಳಲ್ಲಿ! ಭಾರತೀಯ ವಿಶ್ವವಿದ್ಯಾಲಯಗಳಲ್ಲಿ 'ಪ್ರಗತಿಪರ'ರೆಂಬ ಆ ಸಂಪ್ರದಾಯದ ಶಿಷ್ಯರೇ ಅಲ್ಲದೆ, ಆ ಸೈನ್ಸಿನ 'ಏಕ'ಗ್ರಾಹಿಗಳ 'ಏಕಂ' ಸತ್ಯದ ಇನ್ನೊಂದು ಪ್ರತಿಕ್ರಿಯೆಯಾಗಿರುವ-ದ್ವೈತಾದ್ವೈತ ಶಕ್ತಿವಿಶಿಷ್ಟಾದ್ವೈತ ಇತ್ಯಾದಿ 'ಗುರುಪರಂಪರಾ-ಪ್ರಾಪ್ತ' ಅನುಭಾವ ಸಿದ್ಧಿಗಳ ಪವಾಡಗಳ ಆಧಾರದಿಂದಲೆ ನಿಲ್ಲಬೇಕಾಗಿರುವ-'ಸನಾತನವಾದೀ' ತತ್ತ್ವ ಪ್ರಣಾಲಿಯ ಬೋಧಕ ವರ್ಗವೂ ಒಂದು ಉಂಟು.

ಆದರೆ, 'ಇತಿಹಾಸ'ದ ಬಗೆಗಿನ ಧಾರಣೆಯೊಡನೆ! ಇಂದು ತತ್ತ್ವಜ್ಞಾನದ ಬಗೆಗಿನ ದೃಷ್ಟಿಕೋನವೇ ಮಾರ್ಪಟ್ಟಿದೆ. 'ಇತಿಹಾಸ'ದ ಪ್ರಾಧ್ಯಾಪಕನು ತಾನು ಎಂದುಕೊಳ್ಳುವುದು, ಬೇಗನೆ ನಗೆಮಾತು ಆಗಲಿದೆ. ಏಕೆಂದರೆ ಇತಿಹಾಸಕ್ಕೆ ಒಳಪಡದ ವಿಷಯವು ಯಾವುದಿದೆ? ಸಾಹಿತ್ಯ, ಸಂಗೀತ, ಸೈನ್ಸಿಗೆ ಕೂಡ 'ಇತಿಹಾಸ' ಉಂಟು. ಕೇವಲ ರಾಜಕೀಯ ಇತಿಹಾಸ, ಇತಿಹಾಸವೆನಿಸದು. ಇದೇ ಮೇರೆಗೆ, ಏನೊಂದು ತರ್ಕಬದ್ಧ ವಿಚಾರದ ಸೈದ್ಧಾಂತಿಕ ಭೂಮಿಕೆಯ ಮೇಲೆ ನಿಲ್ಲಿಸಲಾಗುವ ತಾತ್ತ್ವಿಕ ವಿಚಾರಮಂದಿರವು, ಎಷ್ಟೇ ರಮ್ಯ ಆಕರ್ಷಕವಿರಬಹುದಾದರೂ, ಅದಕ್ಕೆ ದಿಕ್ಕಾಲ-ಪರಿಸರದ ಜೀವನಾನುಭವದ ಬೆಂಬಲವಿದೆ, ಎಂದು ಸಿದ್ಧವಾಗುವುದು ಅವಶ್ಯವಿದೆ. ಅರ್ಥ : ವಿಚಾರಗಳಲ್ಲಿ ಮಾನವ ಕಲ್ಪಿತಭಾಗವೂ ಇರಬಹುದಾಗಿದೆ. ಮಾನವ ಪ್ರತಿಭೆಯು 'ಕಂಡು'-ವಿವರಿಸಿದ ಈ 'ಅರ್ಥ' : ವಿಚಾರ, ತೀರ ತ್ಯಾಜ್ಯ ಅಥವಾ ನಾಳೆಯಲ್ಲಿ ಅದು ಸಂಭವಿಸಲಿಕ್ಕಿಲ್ಲ ಎಂದು ಹೇಳಲಿಕ್ಕೆ ಬರಲಾರದು; ಇದೂ ನಿಜ. ಆದರೆ, ದಿಕ್ಕಾಲ-ಪರಿಸರದ ಜೀವನದಲ್ಲಿ ಆ ಅರ್ಥ : ವಿಚಾರದ ಆಕೃತಿಯ ಅಸ್ತಿತ್ವವು ಕಾಣುವ ಮುನ್ನವೇ, ಎಂದರೆ ಈ ವಿಚಾರ : ತತ್ತ್ವಜ್ಞಾನ 'ಮೂರ್ತ' ಸತ್ಯವಾಗುವ ಮುಂಚಿತವೇ ಅದು 'ಉಂಟು' ಎಂದು ಬಗೆಯುವುದು,- ಇದು ಜೀವನದ ಶ್ರದ್ಧೆಯಾಗಿ, ಪರಿಣಮಿಸುವುದು-ತೀರ ಅಪ್ರಶಸ್ತ. 'ನಾಳೆ ಬರಲಿರುವ ವಿಚಾರ:ತತ್ತ್ವಜ್ಞಾನ; ಇದು ಸಾಹಿತ್ಯ-ಕಲೆಯಂತೆ ಕನ್ನಡಿಯೊಳಗಿನ ಚಿತ್ರ' (: myth)ವೇ ಆಗಿದೆ. ತಳಹದಿಯೇ ಇಲ್ಲದ ವಿಚಾರ : ತತ್ತ್ವಜ್ಞಾನ, ಬಾಳಿನಲ್ಲಿ ವಿಶ್ವಾಸಾರ್ಹ (dependable) ಜ್ಞಾನ ಆಗಲಾರದು. ಇತಿಹಾಸದ ಆಕೃತಿಯೊಡನೆ ನೇರ-ಸಮಾಂತರವಾಗಿ ಇರಬಲ್ಲ 'ಪ್ರತೀಯ'ಮಾನಂ ಅರ್ಥ-ತತ್ತ್ವ' ಸ್ವರೂಪದ ವೈಚಾರಿಕ ಆಕೃತಿಯೆ ನಿಜವಾದ ತತ್ತ್ವಜ್ಞಾನ ಎನಿಸಬಲ್ಲುದು. ಈ ತಾರತಮ್ಯ ಇಲ್ಲವಾದರೆ ಪುರಾಣ=ಇತಿಹಾಸ=ತತ್ತ್ವಜ್ಞಾನ ಇವುಗಳಲ್ಲಿ ಅಂತರವೇ ಉಳಿಯಲಾರದು-

Myths precede philosophy ಎಂಬ ಸೂತ್ರದ ವಾಸ್ತವತೆಯು ಸಿದ್ಧವಾಗಿದೆ. ಏಕಂ ; ಸತ್ ಪಂಥೀಯ ಮಾತಾ ಸಂಪ್ರದಾಯದ 'ರಸೋ ವೈ ಸಃ' ಸ್ವರೂಪೀ ಅನುಭಾವಕ್ಕೆ ಇದು ಕಾರಣ. 'ಆದಿಮಾತಾ' ದೈವತದ ಸಮಯಾಚಾರ ಮತ್ತು ಆ ಪವಾಡ ಕಥೆಗಳು; ಇದು ನಿಶ್ಚಿತವಿದೆ. ಆದಿಮಾತಾ ಸಂಪ್ರದಾಯವು, ಕುಮಾರೀ ಜೀವನ ರೀತಿಯ ಅಸ್ತಿತ್ವಕ್ಕೆ ಆತಂಕಕಾರಿಯಾಗುವುದು ಕಾಣತೊಡಗುವಾಗ ಕುಮಾರ, ಆದಿಪುರುಷನ ವೇಷಧರಿಸಿ (: ಶಿನೀವಾಲೀ ಚಂದ್ರಾ ಕುಮಾರಿಯೆ 'ಆಭು' ಪ್ರತಿಪದ : ಚಂದ್ರ : ಕುಮಾರನಾಗಿ) ಪೂಜೆಗೊಳ್ಳತೊಡಗುವುದು, ಈ ಸಮೀಕ್ಷೆಯಲ್ಲಿ ಹೊರವಡುತ್ತಿದೆ. ಯುರೋಪೀಯ ತತ್ತ್ವಜ್ಞಾನವು ಗ್ರೀಸಿನಲ್ಲಿ ಥ್ಯಾಲೆಸ್ ಪ್ರಭೃತಿಗಳಿಂದ ಅಂಕುರಿಸಿದ್ದು ಸರ್ವಮಾನ್ಯವಿದೆ. ಥ್ಯಾಲೆಸ್‌ನು ಪ್ರತಿಪಾದಿಸಿದ್ದು 'ಆಪವೇ ಆದಿತತ್ತ್ವ' ಎಂದು. ಹಿರಾಕ್ಲಿಟಸ್‌ನ 'ಅಗ್ನಿ' ತತ್ತ್ವದ ಪರಿಚಯ ಮಾಡಿಕೊಂಡುದೂ ಆಗಿದೆ. ಪೆರ್ಮೆನೈಡಸ್ ಪ್ರತಿಪಾದಿಸಿದ್ದು ಅವ್ಯಯ ನಿತ್ಯ, ಶಾಶ್ವತ 'Being' ತತ್ತ್ವ. ಇದು ಋ. ವೇದದ 'ಆ-ಭು' ಏಕಂ : ಸತ್ ತತ್ತ್ವದಿಂದ ಭಿನ್ನವಲ್ಲ. 'Being' ಈ ಸಂಕೇತದಲ್ಲಿ ಕೇವಲ ಅಸ್ತಿತ್ವದ (Existence) ಸೂಚನೆಯಿದೆ! ಆದರೆ ಈ 'ಅ-ಸಂಭೂತಿ': ಅ-ಭವ ತತ್ತ್ವದ ಅಸ್ತಿತ್ವವು ಸಿದ್ಧವಾಗಲು ಇದು 'ಭವ' ಸ್ವರೂಪೀ ಸಂಭೂತಿ ಸಾಮರ್ಥ್ಯವುಳ್ಳದ್ದೂ ಇರುವ ಆವಶ್ಯಕತೆಯಿದೆ. ಭಾರತೀಯ ಪ್ರತಿಭೆ ಸೃಜಿಸಿರುವ 'ಆ-ಭು' ಈ ಎರಡು ಅಕ್ಷರಗಳಲ್ಲಿ 'ಆ' ಇದಕ್ಕೆ ಪ್ರಾಶಸ್ತ್ಯ ಬರುವ ಉಚ್ಚಾರದಲ್ಲಿ ಕೇವಲ ಅಸ್ತಿತ್ವ ಸೂಚಕ ಪ್ರತಿಮೆ ಎನಿಸಿದರೆ 'ಭು' (<ಭೂ) ಅಕ್ಷರವನ್ನು ಒತ್ತಿ ಉಚ್ಚರಿಸುವಲ್ಲಿ ಭವ-ಸಂಭವ ಶಕ್ತಿಯ ಅರ್ಥಕ್ಕೆ ಪ್ರಾಶಸ್ತ್ಯ ಬರುತ್ತದೆ. ಋ. ವೇದದ ಅ-ಭು ಮತ್ತು ಪರ್ಮೆನೈಡಸನ Being ಇವೆರಡರ ಈ ಸಾಮ್ಯವು

ನಿಜವಿದ್ದಲ್ಲಿ ಅದೂ ಚಾಂದ್ರ ಸಂಪ್ರದಾಯದ ಸಮಯಾಚಾರ ಹಾಗೂ ಆ ದೈವತಕಥೆಗಳ ಹಿನ್ನೆಲೆಯಲ್ಲಿ ಸ್ಫುರಿಸಿದ ತತ್ತ್ವಜ್ಞಾನವೆಂದು ಒಪ್ಪಲೇಬೇಕಾಗುತ್ತದೆ. ಉಪನಿಷತ್ಕಾಲದ ಪುರಾತನ ಭಾರತೀಯ ಶ್ರೇಷ್ಠ ತತ್ತ್ವಜ್ಞಾನಿ ಎನಿಸಿದ ಯಾಜ್ಞವಲ್ಕ್ಯನ 'ಸಲಿಲ ಏಕೋ ದ್ರಷ್ಟಾ ಅದ್ವೈತೋ ಭವತಿ'[೪] ಎಂಬಲ್ಲಿ ಈ 'ಸಲಿಲ'ವು ಅ-ದಿತಿ : ಆದಿಮಾತೆಯ ಪರ್ಯಾಯ ಪ್ರತಿಮೆ! ಈತನೇ ಹೇಳಿರುವ ಆನಂದಾನುಭೂತಿಯ : ದಿಕ್ಕಾಲಾತೀತ : ನಚಿಕೇತ ಅವಸ್ಥೆಯು, 'ಪ್ರಿಯಯಾ ಸ್ತ್ರೀಯಾ ಸಂಪರಿಷ್ವಕ್ತಃ' ಹಾಗೆ ಇರುತ್ತದೆ, ಎಂಬ ಈ ರೂಪಕ-ಉಪಮಾನ ದಂಡವು ಬಹಿರಂಗಪಡಿಸುತ್ತಿರುವ ಸಂಗತಿ ಯಾವುದು?

ಹೀಗೆ, ಪುರಾತನ ತತ್ತ್ವಜ್ಞಾನದ ಉದ್ಗಮ ಕೇಂದ್ರವೇ ಆಪ : ರಸ : ಚಾಂದ್ರಸಂಪ್ರದಾಯದಲ್ಲಿದೆ. ರಸ ಪ್ರಧಾನ ಸಾಹಿತ್ಯ-ಕಲೆಯ ಉದ್ಗಮ ಕೇಂದ್ರವೂ ರಸಾಧಿಪತಿ ಚಂದ್ರನೇ, ಆದಕಾರಣ ಆಗಿದ್ದಾನೆ. ವೇದ : ಸಾಹಿತ್ಯವೇ ಚಾಂದ್ರ : ಚಮಸಪಾನದ ಅನುಭೂತಿ, ಎಂದ ಬಳಿಕ, ಈ ವೇದಾಂತ : ಆ ತತ್ತ್ವಜ್ಞಾನ ಅದಕ್ಕಿಂತ ಬೇರೆಯಾಗಲು ಹೇಗೆ ಶಕ್ಯ ? ಆದಿರಸ ಶೃಂಗಾರ ತಾನೆ? ಈ ಸಂಕೇತದ ಮೂಲದಲ್ಲಿರುವ 'ಶೃಂಗ': 'ಆಭು' ಉಭಯಲಿಂಗೀ ಚಂದ್ರನ ಸೂಚಕವಾಗಿದೆ. 'ಪ್ರತಿಪದೆ' ('ಮಗುಳಿ ಅಡಿಯಿಟ್ಟ ಮಗು) ಈ ಚಂದ್ರಕಲೆ, 'ಏಕ'ದಂತ (: ಕುಮಾರ), 'ವಜ್ರ', ಅಂಕುಶ ಆಗುತ್ತದೆ; ಬಾಣ, ಭಲ್ಲೆ ಎಂಬ ರೂಪವೂ ಸರಿ. ಪುಲ್ಲಿಂಗೀ ಸಂಕೇತ; ಇದು ತಟ್ಟಿ (Patter) (: ಪಾನ ಪಾತ್ರ) ಅಲ್ಲವೆನ್ನಲು ಅವಕಾಶವಿಲ್ಲ. ಕಾರಣ ಇದು ಸ್ತ್ರೀಲಿಂಗೀ ಸಂಕೇತವೇ ಸರಿ! ಯುರೋಪೀಯ Knight-errant : Gallant (ತರುಣಿಯ ಅನುನಯಾಸಕ್ತ 'ವೀರ' ರೋಮಹರ್ಷಕ) ಸಂಪ್ರದಾಯದ ಸಂಕೇತಗಳಾದ Lance and Grail ಇವೆರಡೂ ಏಕಕಾಲಕ್ಕೆ, ಈ ಚಂದ್ರನ ಶೃಂಗ ಸಂಪ್ರದಾಯ ದೊಡನ ಸಂಬಂಧವುಳ್ಳವುಗಳಾಗಿವೆ. ಪ್ರತಿಪದ-ದ್ವಿತೀಯೆ (ಯಮ-ಯಮೀ) ಚಂದ್ರ ಇದು ಭೋಗವಾದೀ ಜೀವನ: ಪ್ರೇರಣೆಯ ಸಂಕೇತವಾಗುವಂತೆ, ತ್ಯಾಗಪ್ರೇರಕ ಸಂಕೇತವೂ ಆಗಿದೆ. ದಂಡ-ಕಮಂಡಲು! ಆಮರಣ ಕುಮಾರ-ಕುಮಾರೀವ್ರತಿಗಳ ಪವಿತ್ರ ಸಂಕೇತಗಳಾಗಿವೆ.[೫] ಈ ಸಂಶೋಧಿಕೆ ಪಡೆದಿರುವ ಸಂಕೇತ ರಹಸ್ಯವನ್ನರಿವ ಒಳನೋಟ (insight), ಈ ಧೈರ್ಯ ನಮ್ಮಲ್ಲಿಯ ರಸಜ್ಞ ವಿಮರ್ಶಕರಲ್ಲೂ ಇರಲು ಆತಂಕವೇನು? ಈ ಲೇಖಿಕೆ, ಋ. ವೇದದ 'ಮರುತ'ರನ್ನು (ಶಾಕ್ತ) ವೀರರ ರೂಪದಲ್ಲಿ ಗ್ರಹಿಸಿಕೊಂಡಿರುವಲ್ಲಿ ಔಚಿತ್ಯವಿದೆ. ಮರುತ= ಮಾರುತಿ=ಪ್ರಾಣದೇವ=ಪವಮಾನ ಮತ್ತು ಚಂದ್ರ ಇವರ ಲೀಲೆಯ ವರ್ಣನೆಯೆ ಋ. ವೇದದ ಆಶಯ! ಮಹಾ ಭಾರತ ತಾತ್ಪರ್ಯ ನಿರ್ಣಯದಲ್ಲಿ ಹೇಳಿರುವ ದ್ರೌಪದೀ ಪಾತ್ರದ ಸಾಂಕೇತಿಕ ಅರ್ಥದಿಂದ ಇದಕ್ಕೆ ಪುಷ್ಟಿದೊರೆಯುತ್ತದೆ. ಭೀಮ=ಹನುಮ ಮತ್ತು ದ್ರೌಪದಿಯ ದಾಂಪತ್ಯ ಸಂಬಂಧವು, ಚಂದ್ರ ಮತ್ತು ಪವಮಾನ ಸಂಯೋಗ ಎಂಬ ರಹಸ್ಯಾರ್ಥ ಸೂಚಕವಿರುವುದಾಗಿ ಶ್ರೀ ಮಧ್ವಾಚಾರ್ಯರೇ ಹೇಳುತ್ತಾರೆ![೬]

'ತತ್ತ್ವಜ್ಞಾನ' ಎಂಬ ವಿಚಾರದ ಉದ್ಗಮ ಕೇಂದ್ರವೂ ಸಾಹಿತ್ಯಕಲೆಯ ಉದ್ಗಮ ಕೇಂದ್ರವೂ ಚಾಂದ್ರ ಭೂಮಿಕೆಯ ಏಕಂ : ಸತ್ ಪಂಥೀಯ ದೈವತ ವಿಚಾರದ ಪಾರ್ಶ್ವ ಭೂಮಿಕೆಯಲ್ಲಿಯೆ : ಉಂಟು ಎಂಬುದರೊಳಗಿನ ಈವರೆಗಿನ ಈ ಅಂತಃಸಂಗತಿಯು (: Self-consistency) ಡಾ. ಉಲ್‌ಬ್ರಿಚ್ಟ್ ಹೇಳುವ 'ಸೈನ್ಸ'ದ ನೂತನ ವ್ಯಾಖ್ಯೆಗೆ ಸಂಪೂರ್ಣವಾಗಿ ಸರಿ ಹೋಗುತ್ತಿದೆ.

ಡಾ. ಉಲ್‌ಬ್ರಿಚ್ಟ್‌ರ ಸೈನ್ಸಿನ ನೂತನ ವ್ಯಾಖ್ಯೆಯಲ್ಲಿ, ಶಾಸ್ತ್ರೀಯ ಸ್ವರೂಪ ನಿರ್ಧರಿಸುವ ಮೂರು ಒರೆಗಲ್ಲುಗಳನ್ನು ಹೇಳಲಾಗಿದೆ : ವಿವರಣಾತ್ಮಕ ವಿಚಾರ-ಚಿತ್ರವು (description) ೧) ಅಂತಃ ಸಂಗತಿಯುಳ್ಳದು (Self-consistent) ಇರಬೇಕು; ೨) ಈ ವಿವರಣಾತ್ಮಕ ಚಿತ್ರವು (: description), ಸಮೀಕ್ಷಾರ್ಹ (observable) ಮತ್ತು 'ಮಾ'-ಪಿಗೆ ಒಗ್ಗುವ (measurable) ಅಂತಹದು ಮತ್ತು ಜೀವನ ವಿಶ್ವಕ್ಕೆ (universe) ಸಂಬಂಧಿಸಿದ್ದು ಇರಬೇಕು. ೩) ಈ ಮುಂಚೆ ಆದ ಸಮೀಕ್ಷೆಯ ಮುಂದಿನ ನಿರೀಕ್ಷಣೆಯನ್ನು (ಆಗಾಮೀ) ಸಂಗತಿಗಳ ನೆಲೆ (: ಅಳತೆ), ಮುಂಗಡ ಹೇಳಲು (future observations and measurable events) ಶಕ್ಯವಾಗುತ್ತಿರಬೇಕು (can be predicted). 'ಪ್ರತಿ-ಮಾ' ಎಂದರೇ ಮರು ಅಳತೆ; ಪ್ರತಿಚಿತ್ರ, ಎಂಬ ಅರ್ಥವಿದೆ. ಋಗ್‌ವೇದದಲ್ಲೇ ಇಂಥ ಪ್ರಯೋಗಗಳುಂಟು. 'ಕಾ ಆಸೀತ್ ಪ್ರತಿಮಾ ಅಸ್ಯ' 'ಇಂದ್ರಃ ದಿವಃ

ಪೃಥಿವ್ಯಾಃ ಪ್ರತಿಮಾನ, ಈ ಮಾತುಗಳು ಗಮನಾರ್ಹ ಆದಕಾರಣ ಪ್ರತಿಮಾ; ಸಂಕೇತವು ವಿವರಣಾತ್ಮಕ ಚಿತ್ರರೂಪದ್ದು ಅಲ್ಲವೆನ್ನಲು ಆಗುವುದಿಲ್ಲ.

ಜೀವನ : ಸಂಸ್ಕೃತಿಯ ಸತ್ಯಾನ್ವೇಷಣೆಯಲ್ಲಿ ಅರಿಕೆಗೆ ಬರುವ ಸಮಸಾಮಯಿಕ ಪ್ರತಿಮಾ : ಸಂಕೇತಗಳಲ್ಲಿ ಅಂತಃಸಂಗತಿಯು ಇದ್ದೇ ಇರುತ್ತದೆ. 'ಸಮಯ' ಮತ್ತು ವಿಚಾರ (: ಅರ್ಥ) ಎರಡೂ ತತ್ತ್ವತಃ ಒಂದೇ ಎಂಬುದರ ವಿವರಣೆ ಈ ಮುನ್ನ ಆಗಿದೆ. ಸಮಿತಿ ಮತ್ತು ಸಮಯ ಇವೆರಡರಲ್ಲಿ ಇರುವ ಅಂಗಾಂಗೀ ಭಾವವು, ಆಚಾರ ಮತ್ತು ವಿಚಾರಗಳಲ್ಲಿ ಇರಲೇ ಬೇಕಾಗುತ್ತದೆ. ಆದಕಾರಣ, ಒಂದು ಸಮಯ: ವಿಚಾರದ ಆಕೃತಿಯು ನಿಶ್ಚಿತವಾದಲ್ಲಿ, ಆ ಸಮಯ : ವಿಚಾರಕ್ಕೆ ಲಂಬ ಸಮಾಂತರ (Vertical) ವಾಗಿ ದಿಕ್ಕಾಲ ಪರಿಸರದಲ್ಲಿ ಇರುವ ಸಮಿತಿಯ-ಆಚಾರ: ಕ್ರಿಯೆಯ-ಆಕೃತಿ ಸ್ವರೂಪದ ಲೆಕ್ಕವು ಹೊರಡಲೇ ಬೇಕು. ಉದಾ: 'ಏಕಂ' ಸ್ವರೂಪೀ ಸತ್ (ತ್ರ)ದ ಭೂಮಿಕೆಯ ಜೀವನದ ವಿಚಾರ : ಸಮಯದ ಆಕೃತಿಗೆ ಅನುಗುಣವಾಗಿ ಆ ಭಾಷಿಕ ಗಣದ ಆಚಾರ : ಸ್ಥಿತಿ, ಅಲ್ಲಿ ಇರಲೇಬೇಕಾಗುತ್ತದೆ. ಗ್ರೀಸಿನ ಥ್ಯಾಲೆಸ್, ಹಿರಾಕ್ಲಿಟಸ್, ಪೆರ್ಮೆನ್ನೈಡಸ್, ಪ್ಲೆಟೋನ ವರೆಗೂ ಸುಮಾರಾಗಿ, ಏಕಂ : ಸತ್(ತ್ರ)ದ ವೈಚಾರಿಕ ಆಕೃತಿಯ ಪೋಷಕ 'ಸಮಯ' ಇದ್ದುದನ್ನು ವಿವರಿಸುವ ಧರ್ಮ-ಇತಿಹಾಸ-ತತ್ತ್ವಜ್ಞಾನದ ಗ್ರಂಥಗಳಲ್ಲಿ, ಆ ಕಾಲಕ್ಕೇ ಒರ್‌ಫಿಕ್, ಬಚ್ಚೂ ಮುಂತಾದ ಹೆಸರಿನ ಶಾಕ್ತಾಚಾರಗಳು ಅಲ್ಲಿ ಪ್ರಚಲಿತವಿದ್ದುದರ ವಿವರಣಗಳೂ ದೊರೆಯಬಲ್ಲವು.

'Good and ill are one' : ಒಳಿತು-ಕೆಡಕು ಎರಡೂ ಸಮ; ಪತಿತ-ಪಾವನ ಇಬ್ಬರೂ ಅಷ್ಟೇ ಈ ವಿಶ್ವದಲ್ಲಿ! But men hold some things wrong and some right ಎಂದು ಉಪದೇಶಿಸುತ್ತಿದ್ದ 'ಅಗ್ನಿ' ತತ್ತ್ವದ ದೃಷ್ಟಾರನು, ಸ್ವತಃ 'ಆಪ'=ಕಂ (=ಸು-ಖಂ) ಜಲ ಪ್ರವಿಸುವುದು ಅಧಃಪಾತ ಎಂಬ ಉಗ್ರವಾದೀ ವಿರಕ್ತ (ಅಗ್ನಿ : ಕು-ಮಾರ) ವೃತ್ತಿಯವನಿದ್ದನು. ಆದರೂ ಆ ಕಾಲದಲ್ಲಿ ಮುಕ್ತಸಂಗೀ, ದಿಕ್ಕಾಲಾತೀತ ಆನಂದವಾದೀ ಸ್ವೈರ ಜೀವನರೀತಿಯವರಿದ್ದುದು ಸುಳ್ಳಲ್ಲ. ಅವನೇ ಹೇಳಿದ್ದಾನೆ.

> "They vainly purify themselves by defiling themselves with blood,
> just as if one who had stepped into mud were to wash his feet
> in mud...

'ಅಮೃತಂ ಚೈವ ಮೃತ್ಯುಃ' ಎರಡೂ ಸಮ, 'ಅಪಿಚೇತ್ ಸುದುರಾಚಾರಃ... ಸಾಧುರೇವ ಸಃ' ಇತ್ಯಾದಿ ವೈಚಾರಿಕ ಆಕೃತಿ ಸಮಯ : ಆಚಾರ ವೇದಕಾಲದಿಂದ ತೊಡಗಿ ಗೀತೆಯ ವರೆಗೆ ಇದ್ದುದು ಕಾಣುತ್ತಿದೆ. ಆದರೆ ಗ್ರೀಕ್‌ನತ್ತಣೆನಂತೆ ಐತಿಹಾಸಿಕ ಸ್ವರೂಪದ ಲೇಖನಗಳ ರೀತಿಯನ್ನು ನಮ್ಮ ಪುರಾತನರು ಪೋಷಿಸಿಕೊಂಡು ಬರಲಿಲ್ಲ. ಪಂಥೀಯ ಪ್ರಚಾರಕ್ಕಾಗಿ ಬರೆದ ಪುರಾಣಗಳೇ 'ಇತಿಹಾಸ' ಎನಿಸತೊಡಗುತ್ತವೆ! ಆದರು, ಇವುಗಳಲ್ಲಿ ಬರುವ ಸರ್ಪ, ಅಶ್ವ-ತ್ಥ, ಚಮಸ, ಸತಿ, ಸೇತು, ಅಯನಾದಿ ಸಾಂಕೇತಿಕ ಪ್ರತಿಮೆಗಳ ಮೂಲಕ, ಆ ಸಮಯದ ಆವರಣದಲ್ಲಿ ಸಂಭವಿಸುತ್ತಿದ್ದ ಸಂಗತಿಗಳು (events), ಸಮೀಕ್ಷೆಯ (observation) ನೆಲೆಗೆ (measuring) ನಿಲುಕುತ್ತಿರುವುದನ್ನೂ ಮನಗಾಣಬಹುದಾಗಿದೆ.

ಇಜಿಪ್ತಿನಲ್ಲಿ 'ರಾ-ಕಾ' ಸಂಪ್ರದಾಯದ ಉಪಾಸನೆಯ ಪರಿಣತಿ ಆತ್ಮದಹನದ ವರೆಗೆ ಹೋದುದುಂಟು. ಆ ಸಂಸ್ಕೃತಿಯು ಕೊನೆಗೆ ಹೇಳ ಹೆಸರಿಲ್ಲದಾಯಿತು. ಗ್ರೀಸಿನಲ್ಲಿಯೂ ಹಿರಾಕ್ಲಿಟಸ್ ಪ್ರಭೃತಿಗಳು ಶ್ವೇತ-ಧವಳ ಆಚಾರದ ಮಹಾತ್ಮರೆನಿಸಿದರೂ, ಏಕಂ : ಸತ್ತಿನ ಜೀವನ ಪ್ರೇರಣೆ ಏಕಾಂತವಾದೀ ವೈಯಕ್ತಿಕ 'ಸಂಘ' ಮಠ-ಚರ್ಚ್ ಇಂಥ ಗರಡಿಗಳನ್ನು ನಿರ್ಮಿಸಿವೆ.* ಇನ್ನೊಂದು ಬಗೆಯ ಕಾಳಗದ ಪ್ರೇರಕ ಕೇಂದ್ರಗಳಾಗಿ ಇವು

---

* ಇವು ಮೋಕ್ಷ ಮಾರ್ಗದ್ದಾಗಲೇ ಬೇಕು! ಈ ದುಷ್ಪರಿಣಾಮ ತಪ್ಪಿಸಲು ಭಾರತೀಯ ಬೌದ್ಧ-ಜೈನ ಸಂಪ್ರದಾಯಗಳಂತೆ ಪಾಶ್ಚಾತ್ಯ ಹೀಬ್ರೂ, ಕ್ರೈಸ್ತ, ಮಹಮ್ಮದೀಯ ಸಂಪ್ರದಾಯಗಳು ಚಾಂದ್ರಭೂಮಿಕೆಯವೇ ಆಗಿದ್ದರು ಅಂತರಗಳನ್ನು ಉಳಿಸಿಕೊಳ್ಳುವ ಪ್ರಯತ್ನಗಳೂ ಆಗಿವೆ. (ಸಂ.)

ಪರಿಣಮಿಸಿವೆ; ಈ ಭೂಮಿಕೆಯಿಂದ ಏಕಂ : ಸತ್ ಭೂಮಿಕೆಯ ಆಗಾಮೀ ಸಂಗತಿಗಳ ನೆಲೆಯು ಸಹ ತಿಳಿಯಬಲ್ಲುದು, ಎಂಬುದಕ್ಕೆ ಇಂದಿನ ಏನೆಲ್ಲ 'ಇರುಘಂ'ಗಳೇ ಸಾಕ್ಷಿಯಾಗಿದೆ.

ಭಾಷೆಯು ಸಾಂಕೇತಿಕವೇ ಆಗುವ ಕಾರಣವೇನು? ಅರ್ಥದ ಪಾತಳಿಯಿಂದ ಅರಿಕೆಗೆ ಬರುವ 'ಸತ್ಯ' ಎಂಬುದೇ ಮೂಲತಃ ಸಾಂಕೇತಿಕವಿದೆ! ಅನುಭವದ ಹಿನ್ನೆಲೆಯಲ್ಲಿ ಅರಿಕೆಗೆ ಬರುವ ಅರ್ಥವನ್ನು ಗ್ರಹಿಸಿಕೊಳ್ಳಲು ಜ್ಞಾತ ನಾಮರೂಪಾತ್ಮಕ ಸಂಗತಿಯ ನೆಪಮಾಡಿಕೊಳ್ಳಲಾಗುತ್ತದೆ. ಉದಾ : ಹಿರಾಕ್ಲಿಟಸನ 'War' (: ಕಾದುಹ) ಈ ಸಂಕೇತದ ನೆಪದಿಂದ ಆತನಿಗೆ ವಿಶದಪಡಿಸಬೇಕಾದ ಆಶಯವೇನು? ಕಾದುವಿಕೆಯೆ ಪ್ರಪಂಚದ 'ತಂದೆ' ಎನ್ನುತ್ತಾನೆ! ಎಂದರೆ ಈ ಕಾದುಹ ವೀರ್ಯವಂತ-ವೀರಕಾದಲರ ಕಾದಾಟವಾಯಿತು! ಕಾದುಹ, ಎಲ್ಲದರ ಸರ್ಜಕ ಸಂಕೇತ ಇಲ್ಲಿ. ಋ. ವೇದದ ಪರಿಭಾಷೆಯಲ್ಲಿ ಇದು 'ಪ್ರಜಾಪತಿ', 'ಬ್ರಹ್ಮ'-ಶಕ್ತಿ! ಇದೇ 'King of all' ರಾ-ಜನ್: ಚಾಂದ್ರ : ರೇತಶಕ್ತಿಯಾಯಿತು! ಆದರೆ, ಈ ಅರ್ಥವು ಸು-ಸಂಗತವಿದೆಯೆಂಬುದಕ್ಕೆ ಪ್ರಮಾಣವೇನು? ಋಗ್‌ವೇದ ಮತ್ತು ಮಹಾಭಾರತದಲ್ಲಿ ಬರುವ ಕಾದುಹ, ಹಿರಾಕ್ಲಿಟಸನು ಚಿತ್ರಿಸುವ ಕಾಳಗವೇ ಆಗಿದೆ, ಎಂದರೆ ತಪ್ಪಾಗಲಾರದಷ್ಟೆ. ಋ. ವೇದದೊಳಗಿನ 'ಅಕ್ಷ' ದ್ಯೂತವು, ತೀರ ಪತ್ತೆಯಾಗದಷ್ಟು 'ಮಡಿ'(?)ಯ ವರ್ಣನೆ : ಅಕ್ಷದ್ಯೂತದ ದುಷ್ಪರಿಣಾಮಗಳ ಬೋಧನೆಗಾಗಿಯೆ ಬರೆದ ಸುಂದರ ಕವನ ಎಂದು ಅನೇಕರಿಗೆ ಎನಿಸಿದ್ದೂ ಉಂಟು! ಆದರೆ, ಮಹಾ ಭಾರತಸ್ಥ 'ಅಕ್ಷ'ದ್ಯೂತ, ಅದರಲ್ಲಿ ದ್ರೌಪದಿ ಮುಖ್ಯ 'ಪಾತ್ರ'....ಇತ್ಯಾದಿ ಸಂಗತಿಗಳಿಂದ, ಈ ತುಲನಾತ್ಮಕ ಸಮೀಕ್ಷೆಯಲ್ಲಿ ಹಿರಾಕ್ಲಿಟಸನ 'ಕಾದುಹ' ಕಾಣದೊರೆವ ಮುನ್ನವೆ ಎನಿಸಿದ್ದನ್ನು ಸ್ಪಷ್ಟ ವಿವರಿಸಿದ್ದು ತಪ್ಪಾಗಲಿಲ್ಲ, ಎಂದು ಈಗ ಖಾತ್ರಿಯಾಗಿದೆ.

ಗ್ರೀಕಿನ ಹಿರಾಕ್ಲಿಟಸ್ ಹೇಳುವ 'War' ಸಂಕೇತಸ್ಥ ಅಂತಃಸಂಗತಿಯ ವಿವರಣೆಗೆ, ಋಗ್ ವೇದ-ಮಹಾಭಾರತಸ್ಥ 'ಅಕ್ಷ'ದ್ಯೂತ : ಅಕ್ಷ-ಅಕ್ಷಗಳ ಸಂಘರ್ಷವು, ಉದಾಹರಣವಾಗಬಲ್ಲುದೆ? ಎಂದು ಸಂದೇಹ ತಲೆಯೆತ್ತುವುದು ತಪ್ಪಲ್ಲ. ಆದರೆ, ವೇದ-ಗೀತೆಗಳಲ್ಲಿ ಬರುವ ಅಶ್ವ-ತ್ಥ (: ನಾಗ=ಪುರುಷ=ಅಶ್ವ+ತ್ಥ) ಈ ಸಾಂಕೇತಿಕ ಪ್ರತಿಮೆಯನ್ನೇ ಹೋಲುವ ಯುರೋಪಿನ ಶಾಶ್ವತ ವೃಕ್ಷ : ಯಗ್ಗ್ನಸಿಲ್ ಆ ವೃಕ್ಷಸ್ಥ ಸಾಂಕೇತಿಕ ಅರ್ಥ-ವಿವರಣದ ಈ ಚಿತ್ರ ನೋಡಿ: (Etymology of it is Horse of Odin battle-ground of eternal conflict which is Life). ಇದೂ 'ಅಶ್ವತ್ಥ'ದಂತೆ ಕವಿಕಲ್ಪಿತ ಸಂಕಲ್ಪನೆ. ದಿಕ್ಕಾಲ ಪರಿಸರದ ಜೀವನಾನುಭವದಲ್ಲಿ ಕಂಡ ಮೂಲ ಪ್ರತಿಮೆಯಲ್ಲ. 'ಅಶ್ವ' ಸಂಕೇತವು ಅಕ್ಷ (axle) ದಷ್ಟು ಸಹ-ಜ ಚಿತ್ರವಲ್ಲ. ಆದರು, ಇದರ 'ಸಮಯದ (: ಆಚಾರ-ವಿಚಾರ)' ಆಕೃತಿಯನ್ನು ಅರಿತಲ್ಲಿ 'ಅಶ್ವತ್ಥ'ದ ಹೊರವಲಯದ ಮುಸುಕು ಕಳಚಿ ಬೀಳಬಲ್ಲುದು. ಆದುದರಿಂದ, ಇದು (ಜೀವನ) ವಿಶ್ವ(Universe)ದೊಳಗಿನ 'Observable and measurable event' ಅಲ್ಲ ಎನ್ನಲು ಅವಕಾಶವಿಲ್ಲ.

ಯೆಗ್ಗ್ನಸಿಲ್ ಮತ್ತು ಅಶ್ವ-ತ್ಥ ಇವೆರಡೂ ಪ್ರಪಂಚದ ವೃಕ್ಷರೂಪ ಪ್ರತೀಕಗಳೇ ಆಗಿವೆ. (ಅ)ಬೋಧಿ=ಅಶ್ವತ್ಥ (: ಅಗ್ನಿ=ಕುಮಾರ=ಗೌತಮ=ಚಂದ್ರ), ಮತ್ತು ಯಗ್ಗ್ನಸಿಲ್ ಇವೆರಡರೊಳಗಿನ ಅಂತಃ ಸಂ-ಗತಿಯನ್ನು ಮನಗಾಣಿಸಿ ಕೊಡುವ ವಿವರವೂ ಉಂಟು, ಇದೇ ಗ್ರಂಥದಲ್ಲಿ:

> "...it is the iatent invisible fire in the living wood which is the perfect symbol of eternal spirit, trapped in matter-himself to himself!"

ಗೀತೆಯ ಊರ್ಧ್ವಮೂಲ 'ಅಶ್ವತ್ಥ'ದ ರಹಸ್ಯಾರ್ಥವು ಈ ವರ್ಣನೆಯಿಂದ ಇನ್ನಷ್ಟು ಸ್ಪಷ್ಟವಾಗಲಿದೆ. ಇದು 'ಅವ್ಯಯ' ವೃಕ್ಷ. ಆದರೂ 'ಮನುಷ್ಯ ಲೋಕೇ' ಇದರ ಶಾಖೆಗಳು ಹಬ್ಬುತ್ತಲೆ ಇವೆ... 'ಅಸಂಗ ಶಸ್ತ್ರದಿಂದ' ಎಂದರೆ (ಅ-ಸಹಕಾರ ವ್ರತಿ ಕುಮಾರ-ಕುಮಾರಿಯಾಗಿ ಬಾಳಿ) ಈ ವೃಕ್ಷದ ಛೇದನ ಮಾಡಲು ಗೀತೆ ಬೋಧಿಸಿದೆ! ಎಂದರೆ ಇದು ಅನುದಿನವೂ ಚಿಗುರುವ ವೃಕ್ಷ ಎಂದ ಹಾಗೇ ಆಯಿತು! ಯೆಗ್ಗ್ನಸಿಲ್ ಇದನ್ನು

'Eternally Green; yet eternally decays' ನಿತ್ಯ ಪಸುರ್ (>ಬಸಿರು), ನಿತ್ಯ ಸ್ರಾವ-ಸಾವೂ ಉಂಟು, ಎಂದು ಹೇಳಿದ್ದಾಗಿದೆ! ಋಗ್‌ವೇದದ ಅಂಶುಮತೀತೀರದ ಕೃಷ್ಣನ 'ದ್ರಪ್ಸಃ' ಸಾಂಕೇತಿಕತೆಯು ಯಗ್ಡ್ರಸಿಲ್ ವೃಕ್ಷದ ಪಸಿ (>ಹಸಿರು)ತನದ ಮೂಲಕ ಸ್ಪಷ್ಟೀಕರಣ ಪಡೆಯುತ್ತಿದೆ. ಮತ್ತು ಯಗ್ಡ್ರಸಿಲ್ ನಿತ್ಯ 'ಕುರು' (: ಕರ್ಮ) ಕ್ಷೇತ್ರ (Battle ground) ಎಂದಿರುವಲ್ಲಿ, ಗೀತೆಯಲ್ಲಿ ಬಂದಿರುವ ಪುರುಷ:ವೃಕ್ಷ ಇವು ಎರಡೂ ಅಮರ ಸನಾತನ ಪ್ರತಿಮಾ ಚಿತ್ರಗಳೂ ಅಭಿನ್ನ ಎಂಬುದು ದೃಢಪಡುತ್ತಿದೆ!

ಆದರೆ, ಗೀತೆಯ ಭಗ-ವಂತನು ತನ್ನ ನಿವೇದನೆಯಲ್ಲಿ, ಆ ಅಬೋಧ್ಯಗ್ನಿ (latent fire) ವೃಕ್ಷದೊಳಗಿನ 'ಅಗ್ನಿ'ಯನ್ನು ಲೋಗರ ಬೋಧೆಗಾಗಿ ಬೇರ್ಪಡಿಸಿದ್ದಾನೆ. ನಡೆದಾಡುವ ಶ್ರ(ಚರಿಷ್ಣಂ) ನರರೂಪೀ (ಪುರುಷ) ವೃಕ್ಷಗಳಲ್ಲಿಯ (ಅವುಗಳಲ್ಲಿ ಹುದುಗಿರುವ-ಅವಕ್ಕೇ ತಿಳಿಯದಂತೆ ಒಳಗೆ ಇರುವ) ಅಗ್ನಿಜ್ವಾಲೆ ಭುಗಿಲ್ಲನೆ ಎದ್ದು ಈ (ಪ್ರಪಂಚರೂಪಿ) ಅರಣ್ಯವೇ ಹೊತ್ತಿ ಉರಿಯತೊಡಗಿದೆ; ಈ ವಿಶ್ವವೆಲ್ಲ ರುದ್ರ-ಭೂಮಿಯಾಗಿದೆ, ಎಂಬ ಹಾಗಿನ 'ವಿಶ್ವರೂಪ'ದ ಸಾಕ್ಷಾತ್ಕಾರವು ಆ 'ನರ'ನ ದಿವ್ಯ(?) ಚಕ್ಷುಗಳಿಗೆ ಕಾಣುವಂತೆ ಮಾಡಿದ್ದಾನೆ![೮]

ಅಗ್ನಿ-ವಿರಹಿತ ವೃಕ್ಷದ ದರ್ಶನವನ್ನು 'ಪುರುಷೋತ್ತಮ' ಯೋಗದಲ್ಲಿ ಮಾಡಿಸಲಾಗಿದೆ! ಋ. ವೇದದಲ್ಲಿ ಚರಿಷ್ಣಂ ಪುರಿ-ಶಯ: ಪುರುಷನು 'ವಾಗರ್ಥಾವಿವ ಸಂಪೃಕ್ತ' ಮಿಥುನ ಪ್ರತಿಮೆ ಎಂಬುದನ್ನು ತೇಲಿಸಿ, (?) ತಿಳಿಯದಂತೆ ಹೇಳಲಾಗಿದೆ! ಇಂದ್ರ ಅಗ್ನಿಗಳನ್ನು ಬಾಯಿಂದ ಸೃಜಿಸುವ (ಮುಖಾತ್ ಇಂದ್ರಃ ಚ ಅಗ್ನಿಃ ಚ) ಈ ಪುರಿಶಯನನು, ಅಹಿರೂಪದಲ್ಲಿ ಶುಷ್ಣ (ಶೋಷಕ) ನಾಮಸಂಕೇತದಿಂದ ಅಂಶುಮತೀ ತೀರದಲ್ಲಿದ್ದಾನೆ! ಸಂಗಾತಿ ದ್ರಪ್ಸಃಕೃಷ್ಣನ ಸಹಿತ ಇವನನ್ನು ಅಹಿಹನ್ ಇಂದ್ರನು ಕೊಂದನಂತೆ!

Forgotten Religions ಈ ಗ್ರಂಥದಲ್ಲಿ, ಸನಾತನ 'ಕುರು' ಕ್ಷೇತ್ರ ರೂಪ ವೃಕ್ಷ ಒಂದಿದೆ. 'Battle ground of eternal conflict' ಎಂಬ ಶ್ರದ್ಧೆ old Norse Religion ನಲ್ಲಿ ಇತ್ತು. ಇದು ಗ್ರೀಕಿನ ಹಿರಾಕ್ಲಿಟಸನಿಗೂ ಮುಂಚಿನ ಸಂಪ್ರದಾಯ. ಆದಕಾರಣ, ಹಿರಾಕ್ಲಿಟಸನ 'ಅಗ್ನಿ' ತತ್ತ್ವ, 'ಯುದ್ಧ'ದ ಪ್ರತಿಮೆ ಇವು ಅರ್ವಾಚೀನ. ಋಗ್‌ವೇದದ ನಾಸದೀಯ ಸೂಕ್ತದ Striking similarity ಇರುವ ಪುರಾತನ ಉಲ್ಲೇಖ ಜರ್ಮನ್ನಿನಲ್ಲಿವೆ ಎಂದು ಈಗಾಗಲೇ ಹೇಳಿದೆ. ಕ್ರಿ. ಪೂ. ೧೮೦೦-೨೦೦೦ ವರುಷಗಳಷ್ಟು ಪ್ರಾಚೀನ ಉಲ್ಲೇಖವಿರಬೇಕೆಂದು ಬಗೆಯಲಾಗಿದೆ. ನಾಸದೀಯ ಸೂಕ್ತದ 'ತಮಃ ಆಸೀತ್ ತಮಸಾ ಗೂಳ್ಹಂ...' ಹೋಲಿಕೆಯ ಪ್ರಾರಂಭದ ನುಡಿ ಸುಮೇರು ಭಾಗದ 'ಎನುಮಾ ಎಲಿಶ್' ಕಾವ್ಯದಲ್ಲೂ ಪರ್ಯಾಯವಾಗಿ ಉಂಟು. ಗ್ರೀಕ್, ಯುರೋಪದ ಭಾಗದ ಒಂದು ಸಮಯದ ಜೀವನ ರೀತಿಯ ದರ್ಶನ ಮಾಡಿಸುವ ಈ ವಿವರಣೆ. ಶಾಸ್ತ್ರೀಯ ಮಟ್ಟದ್ದೋ, ಎಂಬುದನ್ನು ಪರೀಕ್ಷಿಸಿಕೊಳ್ಳಬಹುದಾಗಿದೆ.

ಸಂಶೋಧನದಲ್ಲಿ ಬೆಳಕಿಗೆ ಬಂದ ನಿರ್ಣಯಗಳು, ಶಾಸ್ತ್ರೀಯ ಪದ್ಧತಿಯ್ದೇ ಆಗಿದ್ದರೆ, ಅವುಗಳಿಂದ, ಅದೇ ಬಗೆಯ ಕ್ಷೇತ್ರದ ಆಗಾಮೀ ಸಮೀಕ್ಷೆಯ ಫಲಿತಾಂಶಗಳನ್ನು ಮುಂಗಂಡು ಅರಿಯಲು ಶಕ್ಯವಾಗುತ್ತಿರಬೇಕು. ಉದಾ : ಜೀವನಸ್ಥ 'ಸಮ ಸಾಮಯಿಕ' : ಆಚಾರವಿಚಾರಗಳು, ಎಲ್ಲಿಯೆ ಇರಲಿ ಸುಮಾರಾಗಿ ಸಮಾನವೇ ಇರಬೇಕು. ಇದು ನಿಜವಿದ್ದರೆ, ಯುರೋಪಿನಲ್ಲೂ ಈ ಹೋಲಿಕೆಯ ಪ್ರತಿಮೆಗಳಿರುವ ನಾಸದೀಯಸೂಕ್ತವು ಇರುವ ಋಗ್‌ವೇದದಲ್ಲಿ 'ಅಶ್ವತ್ಥ'ವೃಕ್ಷ ವಿಚಾರವೂ ಬಂದಿರುವುದರಿಂದ; ಇದೂ ಪುರುಷ : ವೃಕ್ಷವೇ ಇರಬೇಕಾಯಿತು.[೯] ಅಲ್ಲದೆ. ಅಶ್ವತ್ಥ : ಪುರುಷ : ವೃಕ್ಷ ಈ ದೈವತ ಸಂಪ್ರದಾಯದ ಪರಂಪರೆಯೆ, ಋಗ್ ವೇದದಂತೆ, ಪಂಚಮ ವೇದವೆಂಬ ಮಹಾ ಭಾರತದಲ್ಲಿಯೂ ಇರಲಿಕ್ಕೆ ಬೇಕು. ಋಗ್‌ವೇದ, ಹಾಗೂ ಮಹಾಭಾರತಗಳಲ್ಲಿ ಜೀವನಸ್ಥ ('ನರ'ಜೀವಿಗಳ) ಸಾರ್ವಲಿಕ ಸ್ವರೂಪದ ನಿತ್ಯ 'ಕದನದ' ಚಿತ್ರವೇ 'ಇರಬೇಕಾಯ್ತು'. ಈ ಕದನ 'Eternal conftlict' ಇದರ *Battle ground* ಯಾವುದು, ಎಂತಹದು? ಇದರ ಚಿತ್ರವು, ಭಾರತೀಯ ಆಪ : ರಸ ಪಂಥೀಯ ಪುರಾತನರಷ್ಟು ಭವ್ಯ-ಭಯಂಕರ ಬೀಭತ್ಸ ಶ್ರೀಮದ್ಗಾಂಭೀರ್ಯದಿಂದ ಚಿತ್ರಿತವಾದದ್ದು ಬೇರೆ ಎಲ್ಲಿಯೂ ಕಾಣದೊರೆಯಲಿಕ್ಕಿಲ್ಲ. ಹಿಟ್ಟೈಟ್ ಕ್ಯಾನೈನ್ (ಇರಾಕ, ಸಿರಿಯಾ, ಪಾಲಿಸ್ಟೈನ)

ಈ ಭಾಗವ ನಿರ್ಮಾಣದಲ್ಲಿ ಭಾರತೀಯ ಮಟ್ಟದ ಸಾಹಿತ್ಯಿಕ ಕೌಶಲದ ಲವಲೇಶವೂ ಇಲ್ಲ. ಆ ಭಾಗದ ಅನಥ-ಅನಹಿತಾ ದೇವಿ, ಅವೆಸ್ತಾದ ಅನಾಹಿತಾ ದೇವಿಯೆ ಆಗಿದೆ. ಆದರೆ ಇರಾಣಿನ ಈ ದೇವಿಯ ರೂಪಲಾವಣ್ಯ ಹಿಟ್ಟೈಟ್ ಕಡೆಯಲ್ಲಿ ಇಲ್ಲ, ಪುರಾಣಕಾಲದ ಭೈರವಿ ರುಂಡಮಾಲಾಧಾರೀ ಚಂಡಿ ಚಾಮುಂಟ್ ಹಿಟ್ಟೈಟ್ ಅನಥ ದೇವಿ. ಆದರೆ ಅದಿತಿಯು, ದ್ರೌಪದೀ ಭೂಮಿಕೆಯಲ್ಲಿ ಸಹ ಅಷ್ಟು ಭಯಾವಹಳಲ್ಲ.

ಧಾರ್ಮಿಕ ಸಂಪ್ರದಾಯ (Cult) ಮತ್ತು ಸಂಪ್ರದಾಯದ ಕಥಾದಿ ಪ್ರಕಾರಗಳು ತಲೆದೋರುವ ಕಾರಣವನ್ನು ಒಬ್ಬ ಶಾಸ್ತ್ರಜ್ಞ ಹೀಗೆ ವಿವರಿಸುತ್ತಾನೆ.

> Myth and cult two elemental stems of human capabilities; man's cognitive nature which enables him to grasp reality through observation and his representative nature which eternally urges him on actively to integrate himself into existing order. The recognition of profundity and magnificence inspires man to emulations and this explains cult as well as other human regulations and ethical aspects of his activities.[೧೦]

ಮಾನವನ ಆಚಾರ ವಿಚಾರಗಳ ಪ್ರೇರಕ ಮೂಲಭೂತ ಪ್ರೇರಣೆ ಅ-ಗಮ್ಯ ಭವ್ಯದ ಆಕರ್ಷಣದಲ್ಲಿ ಉಂಟು. ಫ್ರೈಡ್ ಸಂಪ್ರದಾಯವು ಹೇಳುವ ಕಾಮುಕತೆಯು ಪ್ರಧಾನ ಪ್ರೇರಣೆಯಲ್ಲ, ಎಂಬ ಸಂಗತಿಯನ್ನು ಮರಳಿ ಮರಳಿ ನೆನಸಿಕೊಳ್ಳದಿದ್ದಕ್ಕೆ ನರಜಂತುಗಳನ್ನು ಆಕರ್ಷಿಸಿದ 'ನಾಗಪೂಜೆ'ಯು, ಮಾನವ ಸಂಸ್ಕೃತಿ, ಈ ಮಟ್ಟದ ಎತ್ತರಕ್ಕೆ ಬಂದುದರ ಅನ್ವಯಾರ್ಥವೇ ಆಗಲಾರದು. ನರ-ಜಂತು, ಚತಷ್ಪಾದಗಳ ಸಂಗಾತಿ : ಪ್ರಾಣಿ, ಮನು-ಜ ಪಾತಳಿಯ ಜೀವಿಯಾಗುತ್ತದೆ! ಈ ಪವಾಡ ಅನನ್ಯ ಸಾಧಾರಣವಾಗಿದೆ. ಸಂಸ್ಕೃತಿ ಮತ್ತು ಜೀವನ ಎರಡೂ ಅಭಿನ್ನ ಎನ್ನುವಷ್ಟು ಏಕಾತ್ಮಕವಾಗಿದೆ, ಮಾನವನ ಪಾತಳಿಯಲ್ಲಿ! ಭಾಷಾ ಮಾಧ್ಯಮಕ್ಕಾಗಿ, ಚಂದ್ರ, ಸೂರ್ಯ, ಸರ್ಪ, ಗ್ರಹಾದಿಗಳನ್ನು ದೈವತಮಟ್ಟದಲ್ಲಿ ಸ್ವೀಕರಿಸಿದ್ದೂ ಕಾಣುತ್ತದೆ. ಆದರೆ, ಇವೆಲ್ಲ ಕೇವಲ ಸಾಂಕೇತಿಕ!

> Mythic focus of culture is on the life and death cycle which has been given form in a magnificent world-view which places links between death and procreation at the centre of all mythic experience the moon its constant waxing and waning would symbolize the perception basic to such world view ... we would have to do violence to data if we were to make the moon primary mythogenic factor. (... after earthly work ascended to the skies and became moon), it is deeds that make up decisive mythic statement.[೧೧]

'ಆ-ತ್ಮನ್' ಎಂಥ ಅಗಮ್ಯ ಗೂಢ ಪ್ರತಿಮೆ! ಇದನ್ನು 'observable and measurable' ಜೀವನ ವಿಶ್ವದ ಮಾನದಂಡದಿಂದಲೇ ಕಲ್ಪಿಸಿಕೊಂಡಿದ್ದಾಗಿದೆ. ಆತ್ಮನ್=ತನೂ=ಶರೀರ! 'ಲಿಂಗ'='ಶರೀರ'! 'ಮೂಲಾಧಾರ ಚಕ್ರ'=ನಾಗ ಸರ್ಪ! ಇದನ್ನೇ 'ಆಹುತಿ'ಯಾಗಿ; ದಿವ್ಯ'ಶಕ್ತಿ' ದೈವತಕ್ಕೆ ಅರ್ಪಿಸಲಾಗುತ್ತಿತ್ತು. ಈ 'ಮೂರ್ತ' ರೂಪವು ಆಪ : ರಸರೂಪದಲ್ಲಿ 'ರಸೋ ವೈ ಸಃ' ದಿವ್ಯಶಕ್ತಿಯಾಯಿತು! 'ಶ್ವೇತ' ದ್ವೀಪ : ಅಂತರಿಕ್ಷದಲ್ಲಿ ಚಂದ್ರ-ಮಂಡಲ! ಅದರೊಳಗಿನ ಕಪ್ಪು=ಕೃಷ್ಣದ್ವೀಪ=ಪುರುಷ ಪ್ರತೀಕವಾಗುತ್ತದೆ! ಈ 'ಶ್ವೇತ' ಸಂಕೇತವು ಮೊದಲಲ್ಲಿ ಶುಕ್ರ (: ಚಂದ್ರ), ಬಳಿಕ, 'ಶುಕ್ಲ' ಆಯಿತು. ವೇದನಾಮದಲ್ಲಿ ಇದನ್ನು ಮನಗಾಣಬಹುದು. ಒಂದು

ಶಾಖೆ 'ಕೃಷ್ಣ' ಪಕ್ಷವಾದರೆ ಇನ್ನೊಂದು 'ಶುಕ್ಲ'! ಇವೆರಡೂ ಪ್ರತಿಮೆಗಳ ಔಚಿತ್ಯ ಚಂದ್ರಬಿಂಬದ ಸಂದರ್ಭದಿಂದಲೇ ತಿಳಿಯಬಲ್ಲುದು! ಯುರೋಪಿಯನ್ ಚಾಂದ್ರ ಸಮಯಾಚಾರಗಳಲ್ಲಿ ಆ-ತ್ಮನ್ (: ಲಿಂಗ) ಬಲಿ ಕೊಡುವ ವಾಡಿಕೆಯಿತ್ತು. ಭಾರತವು ಮಾತ್ರ ಇದಕ್ಕೆ ಅಪವಾದವಲ್ಲ. 'ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ' ಆದದ್ದು ಅರ್ವಾಚೀನ. ಈ ಹಂತದಲ್ಲಿ ತಲೆಯೇ 'ಆ-ತ್ಮನ್'-ಶಕ್ತಿಯ ವಾಸಸ್ಥಾನವಾಯಿತು. ಪ್ರಾಕ್‌ಜ್ಯೋತಿಷ (ಅಸಾಮ) 'ಬ್ರಹ್ಮ' ದೇಶದ ಸರಹದ್ದಿನಲ್ಲಿ, ಬೇಟೆಯಾಡಿ, ಧಾರ್ಮಿಕ ಕಾರ್ಯಕ್ಕಾಗಿ 'ತಲೆ'ಗಳನ್ನು ತರುವ 'ಸಮಯ': ಆಚಾರಾಂಗವಿದೆ. ಈ ಜನಕ್ಕೆ 'ನಾಗ'ರು ಎಂದು ಇರುವ ಹೆಸರಿನ ಗೂಢ : ಈ ಸಾಂಕೇತಿಕತೆ ಚಮತ್ಕಾರಯುಕ್ತವಾಗಿದೆ! ಈ ಜನದ ಪುರಾತನರಿಂದ ಪಡೆದ ಮಾಹಿತಿಯಂತೆ ತಂದ ಲೆಲೆಯೊಳಗಿನ 'ಆತ್ಮ ಶಕ್ತಿ'ಯಿಂದ ಇವರು ತಮ್ಮ ತಮ್ಮ ಗ್ರಾಮದಲ್ಲಿ ಕ್ಷೀಣವಾಗುತ್ತ ಬಂದ ದಿವ್ಯ ದೈವೀ ಸಾಮರ್ಥ್ಯವನ್ನು ಮರಳಿ ಒಲಿಸಿಕೊಳ್ಳುವ ತಂತ್ರವು ಇದು, ಎಂದು ತಿಳಿದು ಬಂದಿದೆ.[೧೨] ಅ-ಸಂಸ್ಕೃತರೆಂಬ ನಾಗರ ಆತ್ಮನ್ ವಿಚಾರವು, ವಿಕಾಸಗೊಳ್ಳುತ್ತ. 'ತಲೆ' ಬೇಟೆಯ ಮಟ್ಟಕ್ಕೆ ಬಂತು. ಸು-ಸಂಸ್ಕೃತರೆಂಬ ಆಪ : ರಸ : ರೇತ ಪಂಥೀಯ ವೇದಜ್ಞರಲ್ಲಿ ಸಹ, 'ಇಂದ್ರನು' ಕರ್ಣನಿಂದ 'ಕುಂಡಲ' (: ಕುಂಡಲ ಸರ್ಪ) ದಾನವಾಗಿ ಪಡೆದ ಕಥೆಯುಂಟಲ್ಲ! ವ್ಯಾಸನು, ಸೂರ್ಯ (: ಇಂದ್ರ) ಈ ಪೌರುಷ ಪ್ರೇರಕ ಪ್ರತಿಮೆ ಭಗ್ನಗೊಳಿಸಿ ವೈವಸ್ವತ ಸಂತಾನ; ಮನು-ಜನನ್ನು ನರ=ಜಂತು ನಪುಂಸಕ ಪ್ರತಿಮೆಯಾಗಿಯೇ ಉಳಿವಂತೆ ಹೊಂಚುಹಾಕಿದ್ದರೂ ಸೂರ್ಯಪುತ್ರನೆಂಬ 'ಕರ್ಣನ' : ವೀರನ ದುರಂತಕ್ಕೆ ರಸಿಕ ಜಗತ್ತೇ ಮಮ್ಮಲನೆ ಮಿಡುಕಿದೆ. 'ನೆನೆವೊಡೆ ಕರ್ಣನಂ ನೆನೆಯ' ಎಂಬಲ್ಲಿ ಸೌರತೇಜಕ್ಕೆ ವಂದನೆ ಇದೆ. 'ಅಶ್ವತ್ಥಾಮನ್' (: ವೃಕ್ಷ=ನಾಗ) ತಲೆ-'ಮಣಿ'ಗೆ ಎರವಾದನೆಂಬ ಕಥಾರಹಸ್ಯವೇನು? ಇದು ವೇದಪೂರ್ವಕಾಲದ ನಡೆವಳಿಯ ಮಾರ್ದನಿಯ ಕಥೆಯಿರಬೇಕು. ಏಕೆಂದರೆ, ಮೂಲಾಧಾರ ಚಕ್ರಸ್ಥ ನಾಗನು 'ತಲೆ'ಯನ್ನೇ ತನ್ನ ವಾಸಸ್ಥಾನವಾಗಿ ಆಯ್ದುಕೊಳ್ಳುವ ಈ (ಸಂ)ಯೋಗ 'ಸಮಾಧಿ', 'ತಲೆ'ಯನ್ನು 'ಬ್ರಹ್ಮನಿಗೆ' ಅರ್ಪಿಸುವ ಸು-ಸಂಸ್ಕೃತ ಕೃತಿಯೆನಿಸಿ ಇಂದಿಗೂ ಗೌರವ ಪ್ರತಿಷ್ಠೆಯ ಸಾಧನವಾಗಿ ಉಳಿದು ಬಂದಿಲ್ಲವೆ?

ದ್ರೌಪದಿಯೇ ಚಂದ್ರಾದೇವಿ, ಎಂಬುದರೀದ ಮಹಾಭಾರತದ ಸಾಂಕೇತಿಕತೆಯೂ, ಮೇಲಿನ ಶಾಸ್ತ್ರೀಯ ಸೂತ್ರದಂತೆ, ಸಂಪೂರ್ಣ ಬಯಲಿಗೆ ಬರುತ್ತಿದೆ. 'ಮಧು' ಸಂಪ್ರದಾಯದ ಪರಂಪರಾಪ್ರಾಪ್ತ ರಹಸ್ಯವನ್ನು ಸೂಚಿಸುವ 'ಮಧ್ವ'ನಾಮ ಧಾರಣಮಾಡಿರುವ ಶ್ರೀಮದಾನಂದ ತೀರ್ಥರೇ ಈ ಗುಹ್ಯಾರ್ಥವನ್ನು ವಿವರಿಸಿದ್ದಾರೆ.

> 'ಶಂ ರೂಪೇ ರತೇ ವ್ಯಾಪಿ, ಶ್ರೀಃ ಇತ್ಯೇವ ಕೀರ್ತ್ಯತೇ'
> ಸೈವ ಚ ದ್ರೌಪದೀ ನಾಮ ಕಾಲೀ ಚಂದ್ರೇತಿ ಚೋಚ್ಯತೇ। [೧೩]

ಶಂ-ತನು, ಕಂ>ಗಂಗಾ ಈ ಸಾಂಕೇತಿಕತೆಯ ವಿವರಣೆ ಈ ಪ್ರಬಂಧದಲ್ಲೆ ಉಂಟು. ಶಂ>ಚಂ, ಕಂ>ಶಂ<ಚಂ ಈ ಬೀಜಾಕ್ಷರ ವಿಚಾರವೂ, ಕಂ-ಶಂ 'ಬ್ರಹ್ಮ'ನ ಜ್ಞಾನಕ್ಕೆ, ಈ ಗುಹ್ಯಜ್ಞಾನಕ್ಕೆ ಉಪಯುಕ್ತವಿದೆ.

'ಪ್ರಧಾನ' ಅಂಗವು=ಬ್ರಹ್ಮಶಕ್ತಿ ಕೇಂದ್ರ=ತಲೆ ಆಗುವುದರೊಡನೆ 'ಚಕ್ಷು'ವೂ 'ದಿವ್ಯ' ಪುರುಷ=ಬ್ರಹ್ಮ=ವೃಕ್ಷ= ಅಕ್ಷಸ್ಥಾನವಾಯಿತು! 'ಕಾಣುವ' ಹಂತದ 'ಕಣ್ಣು' (ಅಕರ್ಮಕ); ಸಕರ್ಮಕವಾಗಿ 'ನೋಡು'ವ ಮಟ್ಟದ ಸಾಧನವಾಗುತ್ತದೆ; ನೋಡುವ 'ನಾನು' ನಷ್ಟವಾಗುವಾಗ ಮರಳಿ ಕಣ್ಣು ಬರಿ ಕಂಡಿ (ಖಿಂಡಿ) ಆಗುತ್ತದೆ. ಗುರು : ದೇವರಿಗೆ ತನ್ನನ್ನು ಅರ್ಪಿಸಿಕೊಳ್ಳುವಲ್ಲಿ ಆ ಸಾಧಕನು ತನ್ನ 'ಕಣ್ಣ'ನ್ನೇ ಅರ್ಪಿಸಿಕೊಳ್ಳುತ್ತಾನೆ! ಗುರುವು ಮೃತ್ಯು-ಸ್ವರೂಪನು, ಎಂಬ ಸಾಂಕೇತಿಕ ಸನಾತನ ಸತ್ಯ, ವೇದದಲ್ಲೆ ಉಂಟು. ಕುಮಾರನು ಜ್ಞಾನಕ್ಕಾಗಿ ಹೋದದ್ದು ಯಮನಲ್ಲಿ; ಋಕ್ಕುಗಳು ಯಮನಲ್ಲಿ ಒಯ್ಯುವ ರಥ. ಒಂದೇ ಪೋಥಿಗೆ ತನ್ನ ತಲೆ ಸಮರ್ಪಿಸುವವನು ಮೃತ್ಯುವನ್ನು ಅಪ್ಪುತ್ತಾನೆ. 'ಗುರುವೇ ದೇವರು' ಗುರುವೇ ಬ್ರಹ್ಮ, ವಿಷ್ಣು, ರುದ್ರನೆಂಬ ಈ ದೇವತಾ ಸಮನ್ವಯ (?) ತಾರತಮ್ಯವಿರಹಿತ ಏಕಂ : ಸತ್, ಮೃತ್ಯುಪೂಜೆಗೆ ಒತ್ತಾಯಪಡಿಸುತ್ತಿದೆ! ಮೂವರ ಒಟ್ಟು ಎಂದರೂ ಅದು ಒಂದೇ. ಒಬ್ಬನೇ 'ವಿಷ್ಣು' ಅಥವಾ ಬ್ರಹ್ಮ ಇಲ್ಲವೆ ರುದ್ರ ಎಂದರೂ 'ಒಂದೇ'=ಏಕಂ : ಸತ್=ಮೃತ್ಯು ಅಥವಾ ಶೂನ್ಯ! ಆದಕಾರಣ, 'ಗುರುವೇ ದೇವ' ಎಂಬ ಸಂಪ್ರದಾಯವು ವಿದ್ಯಾಪೀಠಗಳಲ್ಲಿ ಪ್ರವೇಶಿಸಿದರೆ,


ಅದು ಮೃತ್ಯುರೂಪ ವಿದ್ಯೆಯೇ ಆಗಬೇಕು. 'ಶಿಷ್ಯಾತ್ ಇಚ್ಛೇತ್ ಪರಾಜಯಂ' ಎಂಬ ಗುರುಪರಂಪರೆ ಪ್ರಾರಂಭವಾಗುವಂದೇ, ಭಾರತವು ಮರಳಿ ಜೀವಂತವಾದೀತು. ವ್ಯಾಸನು, ಗುರು=ಮೃತ್ಯು ಈ ತತ್ತ್ವ ಬಲ್ಲ. ಆದರೆ, ಬಾಯ್ಬಿಟ್ಟು ಹೇಳಲಾರ : ಏಕಲವ್ಯನಿಂದ 'ಗುರು' ಎಂಬ ದ್ರೋಣ ಬೇಡಿದ್ದು ಹೆಬ್ಬೆರಳನ್ನು! ಜಾತಿಭೇದದ ಬೇಗೆ ಹೊತ್ತಿಸುವ ರೀತಿಯಲ್ಲಿ ಈ ಕಥೆ ರಚಿಸಿರುವ ತಂತ್ರ ನೋಡಿ! ಇದೇ ತಂತ್ರ ಋಗ್ವೇದದಲ್ಲಿ, ಗರ್ಭಸ್ಥ ವಾಮದೇವನಿಂದ ಆಡಿಸಿದ್ದರಲ್ಲದೆ, ಇಂದ್ರನ ರೂಪದಲ್ಲಿ, ತಾನು 'ಆರ್ಯರಿಗೆ' (?) ಭೂಮಿಯನ್ನು ಕೊಟ್ಟೆ; ಎಂಬಲ್ಲಿ, ಆರ್ಯ-ದಾಸ, ದಸ್ಯು ಭೇದದ ಬೆಂಕಿ ಹೊತ್ತಿಸಿಡಲಾಗಿದೆ. ಈ ಸಂಹಿತೆಯಲ್ಲಿಯೇ ಸುಮೇರಿನ ಎಂಕಿ ಹೋಲುವ ಈ ಇಂದ್ರನು, ಕೇವಲ ಒಂದು ಸಾಂಕೇತಿಕ ಪ್ರತಿಮೆಯೇ ಆಗಿದೆ.[೧೪]

ಈ ಪ್ರತಿಮಾ : ಸಂಕೇತಗಳ ಭೂಮಿಕೆಯಿಂದ, ಡಾ. ಉಲ್‌ಬ್ರಿಚ್ಟ್ ಹೇಳುವಂತೆ, ಈ ಪದ್ಧತಿಯಿಂದ, ಸಮೀಕ್ಷೆಯ ಕ್ಷೇತ್ರದೊಳಗಿನ ಆಗಾಮೀ ಸಂಗತಿಗಳನ್ನು ಗ್ರಹಿಸಿಕೊಳ್ಳಲು ನೆರವು ದೊರೆಯುತ್ತಿರುವುದನ್ನು ಕಂಡುದಾಯಿತು. ಋಗ್ವೇದ, ಮಹಾಭಾರತದೊಳಗಿನ 'ಕದನ' ಎಂಬುದು ಸ್ತ್ರೀ-ಪುರುಷ ಶಕ್ತಿಗಳ ಕಾದಾಟದಲ್ಲಿ ಇಬ್ಬರೂ ನಾಶರಾಗುವ ಸಾಂಕೇತಿಕ ವರ್ಣನೆಯೇ ಉಂಟೆಂಬುದೂ ಬಯಲಿಗೆ ಬರುತ್ತದೆ! ಇಷ್ಟೆ ಅಲ್ಲ, ಅಂದಿನ 'ಚಂದ್ರ', ಶುಕ್ರಾದಿ ಗ್ರಹಗಳ ಆಕರ್ಷಣದ ಪ್ರಭಾವಕ್ಕೆ ಇಂದು 'ಏಕಂ' ಸತ್ತಿನ ಸೈಂಟಿಸ್ಟರೂ ಒಳಗಾಗಿ ಇನ್ನೊಂದು ಬಗೆಯ ಚಂದ್ರಾಪೀಡರು ಆಗುತ್ತಿರುವ ಇಂದಿನ ದೃಶ್ಯವು 'ಏಕಂ' ಸತ್ತಿನ ಸತ್ತೆಯ ಅಗಾಧತೆಯನ್ನು ಸಾರುತ್ತಿದೆ!

ಪ್ರತಿಮಾ : ಸಂಕೇತಗಳ ಭೂಮಿಕೆಯ ಸತ್ಯಾನ್ವೇಷಣೆಯು ಶಾಸ್ತ್ರೀಯ ಸ್ವರೂಪದ್ದು ಆಗುತ್ತಿದೆ, ಎಂಬುದನ್ನು ಇನ್ನೂ ಒಂದು ಬಗೆಯಿಂದ ನಿಷ್ಕರ್ಷಿಸಿಕೊಳ್ಳಬಹುದಾಗಿದೆ. ವಿಶ್ವದಲ್ಲಿ 'ಉಂಟು' ಎಂಬ 'ಅರ್ಥ'ವು.

೧. ಅಮೂರ್ತ ಆ-ಶಯ ರೂಪದ ಒಂದು ಮೊತ್ತ; ಜೀವನದ ಅನುಭವದ ಅಥವ ಚಿಂತನ ಮನನದ ಹಿನ್ನೆಲೆಯಲ್ಲಿ ಆ ಅಮೂರ್ತ ಆಶಯ ಉಂಟು.
೨. ಅರ್ಥದ ಆಕೃತಿಯ ಮಟ್ಟಕ್ಕೆ ಬರುತ್ತದೆ.
೩. ಅದು ಆವಿಷ್ಕೃತವಾಗಲು ಅಭಿವ್ಯಕ್ತಿಗಾಗಿ ಮಾತ್ರಾಸ್ಪರ್ಶದ ಪ್ರತಿಮಾ : ಸಂಕೇತದ ವಲಯ ಸ್ವೀಕರಿಸುತ್ತದೆ.


ಇದನ್ನು ಒಂದು ಯುಕ್ತ ತ್ರಿಭುಜದ ಆಕೃತಿಯಿಂದ ಹೀಗೆ ಸೂಚಿಸಬಹುದು



ಋಗ್‌ವೇದಕಾಲೀನ ಪುರಾತನರಲ್ಲಿ ಮೂರು (: ತ್ರಿ) ಈ ಸಂಖ್ಯೆಯ ಬಗೆಗಿನ ಆಕರ್ಷಣದಲ್ಲಿ, ಜೀವನವನ್ನು ಅಳೆದು ನೋಡುವ ಒಂದು ಸಾಧನವೇ ದೊರೆವ ಅದ್ಭುತ ಆಶ್ಚರ್ಯಕಾರಕ ಪವಾಡ ಚಮತ್ಕಾರವನ್ನು (: Mythical Wonder) ಅವರು ಅನುಭವಿಸುತ್ತಿದ್ದಂತೆ ತೋರುತ್ತದೆ: ವಿಶ್ವಸ್ಥ ಆಶಯವು ವ್ಯಾಹೃತಿತ್ರಯದ ರೂಪದಲ್ಲಿ ಮಾನವ ಜೀವನ-ವಿಶ್ವದ ನಕ್ಷೆಯೆ (map of knowledge) ಒಳಗೊಂಡಿದೆ! 'ತ್ರಿ-ಧಾತು' : ವಿಶ್ವಾಧಾರಕ ದ್ರವ್ಯಗಳೂ ಮೂರು! ಭಾಷೆಯಲ್ಲಿ ಲಿಂಗ ಮೂರು; ಕಾಲದ ಅಳತೆ ನಿನ್ನೆ-ಇಂದು-ನಾಳೆ! ಭೂತ, ವರ್ತಮಾನ, ಭವಿಷ್ಯ! ವಚನಗಳೂ ಮೂರು! ನಾನು-ನೀನು-ಅವನು, ಪುರುಷ ತ್ರಯಗಳೂ ಮೂರು! Rule of three! Three R's ಆಧುನಿಕರಿಗೂ ಈ ಮೂರರ ಅದ್ಭುತತೆ ಎನಿಸದೆ ಇಲ್ಲ. ಜ್ಞಾನಕ್ಷೇತ್ರದ ವೈಯಕ್ತಿಕ ಪಾತಳಿಯಲ್ಲಿ ಜ್ಞಾತೃ ಜ್ಞಾನ ಮತ್ತು ಜ್ಞೇಯ ಈ ಮೂರೂ ಅಂಗ ಅನಿವಾರ್ಯ! ಘನ, ಪ್ರವಾಹಿ, ವಾಯು ರೂಪ, ಸೈನ್ಸಿನಲ್ಲಿ!...


ಈ ಮಾನವನ 'ಸಂಸ್ಕೃತಿ' ಎಂಬುದರ ಘಟಕಗಳೂ ಮೂರೇ ಆಗಿವೆ. ಸಮಿತಿ; ಸಮಯ; ಮತ್ತು ಸಂಕೇತ. ಇದೇ ಮೇರೆಗೆ 'ಕುಟುಂಬ' ಸಂಸ್ಥೆಯ ಆಕೃತಿಯಾಗಲು ಗಂಡ-ಹೆಂಡತಿ ಎರಡೇ ಸಾಲದು. ಒಂದು ಆಕೃತಿಗೆ ಕನಿಷ್ಠ ಮೂರು ರೇಷೆಗಳಾದರೂ ಬೇಕು. ಈ ಮೂರು ರೇಷೆಗಳ ತ್ರಿಕೋನದಲ್ಲಿ ಒಂದು ಯುಕ್ತ (Right) ಕೋನವು ಇರಲೇಬೇಕು.

ಜೀವನ : ಸಂಸ್ಕೃತಿ ಮಾಪಕ




ಕುಟುಂಬ ಸಂಸ್ಥೆ (Primary unit); ಇದರಲ್ಲಿ ಮಗುವಿನ ಮೂಲ್ಯ ಹೆಚ್ಚಿನದು, ಲಂಬ (ತಂದೆ)+ತಳ (ತಾಯಿ) = (ಮಗು) ಕರ್ಣ. ಈ ತ್ರಿಕೋನದಲ್ಲಿ ಪ್ರತಿಯೊಬ್ಬರ ಸ್ಥಾನವನ್ನು ನಿಸರ್ಗವೇ ನಿರ್ಧರಿಸಿದಂತಿದೆ. ಜೀವನದಲ್ಲಿಯ ನೈಸರ್ಗಿಕ ಮೂಲ್ಯಗಳನ್ನು ಇಲ್ಲಿ ಕಾಣಬಹುದು. ಈ ಸ್ಥಾನಗಳಲ್ಲಿ ಪಲ್ಲಟವಾದರೆ ಸಂಸ್ಕೃತಿಯು ಅನೈಸರ್ಗಿಕ ದಾರಿಯಲ್ಲಿ ಹೊರಡಲೇಬೇಕು; ಆಗ, ಒಬ್ಬ ತಜ್ಞ ಹೇಳಿದ ಹಾಗೆ Culture degenerates into civilization! ಹೀಗೆ ಆಗಾಮೀ ಜೀವನ ರೀತಿಯನ್ನು ಮುಂಗಂಡು ಹೇಳಲು ಶಕ್ಯವಿದೆ. ತಾಯಿ-ತಂದೆ, ಎಂಬವರು ಮಗುವನ್ನು ತಮ್ಮ ಆಟಿಗೆಯ ವಸ್ತು, ಅಥವಾ ತಾವು ಸಾಕಿದ ಪ್ರಾಣಿಯಂತೆ ಕಾಣುವವರು, ಆತ್ಮಕ್ರೀಡಾ ವಿಲಾಸಕ್ಕೆ ಪ್ರಾಧಾನ್ಯವೀಯುವವರು ಆಗುವ ಸಾಂಸ್ಕೃತಿಕ ಜೀವನ 'ಸಮಯ', ವಿಕೃತಿಯ ದಾರಿಯಲ್ಲಿ ಹೊರಟಂತೆಯೆ ಸರಿ. ಇದನ್ನು ಕಾಣುವಾಗ, ಆಗಾಮೀ ಕಾಲದ ಪೂರ್ವಸೂಚನೆ ಇಲ್ಲಿ ಕಾಣದೊರೆಯಲೆಬೇಕು.

ಸಂಸ್ಕೃತಿಯ ತಳಪಾಯದಲ್ಲಿ ಜೀವಂತ 'ಸಮಿತಿ' : ನೇತಾರ ಇರಬೇಕಾದುದು ನೈಸರ್ಗಿಕ. ಆದರೆ ಪ್ರಭಾವಶಾಲೀ 'ಸಮಯ' (: ಕಾಲ-ಪರಿಸ್ಥಿತಿ)



ನಿನ್ನೆ → ಇಂದು → ನಾಳೆ
ನೇತಾರ = ಸಮಿತಿ (: ಆಚಾರ)

ತಳಪಾಯದಲ್ಲಿ ಇದ್ದು, ಈ ಕಾಲವು ಅಂದಿನ ಸಮಾಜ ನೇತಾರರನ್ನು ಒದಗಿಸಿ ಕೊಡುವುದೂ ಉಂಟು. ಇಂಥ ನೇತಾರ : ಸಮಿತಿ ಅಂದಿನ ಕಾಲ-ಪರಿಸ್ಥಿತಿಯ ಕೂಸು! ಗತಿಮಂತ ಸಂಸ್ಕೃತಿಯು, ಸ್ಥಗಿತವಾದ ಲಕ್ಷಣ. ಇದು ಪರ-ಪ್ರಕಾಶದಿಂದ ಜೀವಿಸುವ, ಗೌಣ ಅನಿವಾರ್ಯ ಕರ್ಮದ ಯುಗ! ಸಮಾಜವು ಎಂತೂ ಸ್ವೀಕರಿಸಬೇಕಾಗುವ ನೇತಾರ-ಸಮಿತಿಯು ಇದು ಅಥವಾ ಕೆಲವೊಮ್ಮೆ (ತಲೆತಲಾಂತರದಿಂದ ಬಂದ) ಹಿಂದಿನ ಸಂಕೇತಗಳು ತಳಪಾಯದಂತಿದ್ದು ಅದರ ಮೇಲೆ ನಿಂತ ಜೀವನ : ಸಂಸ್ಕೃತಿಯು ಕಾಣದೊರೆಯುತ್ತದೆ. ಇಂಥ ಸಂಸ್ಕೃತಿಯು ಗತಕಾಲೀನ ಗ್ರಂಥಗಳಲ್ಲಿ ಇದ್ದು, ಇಂದಿನಲ್ಲಿ ಅದು ಕೇವಲ ಆ-ಭಾಸ ಸ್ವರೂಪದ್ದು ಆಗಲೇಬೇಕು! ಜೀವಂತ ಸ್ವಪ್ರಕಾಶದ ನೇತಾರ ಇಲ್ಲದೆ, ಜೀವಂತ 'ಸಮಯ' ಜೀವಂತ ವಿಚಾರ ಎಂಬುದೂ ಇರಲಾರದು. ಸಂಕೇತಗಳು, ಸಾಂಕೇತಿಕ ಪ್ರತಿಮೆಗಳು ಉಳಿಸಿಕೊಂಡಿರಬಹುದಾದ ಸಮಯಾಚಾರಗಳಿಂದ ಸ್ಫೂರ್ತಿ(?) ಪಡೆವ ಇಂಥ ಧರ್ಮ, ಸಂಸ್ಕೃತಿ, ರಾಜಕಾರಣ ಎಂತೊ ಉಳಿದುಕೊಂಡು ಹೊರಟಿರುತ್ತದೆ. ಆ ರಾಷ್ಟ್ರದ ಜೀವನ್ಮೃತಾವಸ್ಥೆಯೆಂದರೇ ಇದು!



ನಿನ್ನೆ → ಇಂದು → ನಾಳೆ
ರೇತ-ಸತ್ವ (: ಏಕಂ : ಸತ್) ಜೀವಿ (ಜ್ಞಾತಾ)

ಸಂಸ್ಕೃತಿಯ ಮಟ್ಟಲಿಕೆಯ ತಳಪಾಯ ಮತ್ತು ಅದರ ಮೇಲಣ ಲಂಬ (ಸವಿತೃ ಕಿರಣಸೂಚಕ) ಇವೆರಡರಲ್ಲಿ ಲಂಬವು ತಳದ ರೇಖೆಗಿಂತ ದೊಡ್ಡದಿರಲೇಬೇಕು. ಏಕೆಂದರೆ, ಅಭಿವ್ಯಕ್ತಿಗಿಂತ ಅರ್ಥವು ವಿಶಾಲ ಮತ್ತು ಮಿಗಿಲಾದುದು.

ರಾಜಕೀಯ ಜೀವನ ಕ್ಷೇತ್ರವನ್ನು ಆಳುವ ಗೌರವಾರ್ಹ ಶಕ್ತಿಯೂ 'ಮೂರು'. ಈ ಸಂಖ್ಯಾಯುಕ್ತವಾಗಿಯೆ ಉಂಟು : ಮಾನವನೊಳಗಿನ ನಾನು ಮತ್ತು ನೀನು ಈ ಉಭಯ ಸಂಘರ್ಷಕ ಅಂಗಗಳು ಮಿಥುನಯೋಗದಲ್ಲಿ (Unity) 'ಒಂದು' ಆಗಿ, ಲೋಕನಾಶಕ್ಕೆ ಆಮಂತ್ರಣವಾಗದಿರುವಂತೆ ನೋಡಿಕೊಳ್ಳುವ ಮೂರನೆಯ ಪುರುಷ ಶಕ್ತಿ 'ಅದು' ಎಂಬುದರ ಅಸ್ತಿತ್ವವೂ ಉಂಟಷ್ಟೆ? ಈ ದೃಷ್ಟಾಂತದಂತೆ ಎರಡು ಪಕ್ಷಗಳು ಅಧಿಕಾರಕ್ಕಾಗಿ ಸ್ಪರ್ಧಿಸುವಲ್ಲಿ, ಒಂದು ಇನ್ನೊಂದಕ್ಕೆ ಸಂಯಮದಂತೆ ತಡೆಯಾಗುತ್ತವೆ. ರಾಜ್ಯಶಕ್ತಿ ಇದು ತಟಸ್ಥ ಮೂರನೆಯ 'ಅದು'! ಎರಡರ ಸ್ಪರ್ಧೆಯಲ್ಲಿ ಯಾರು ವರ್ತಮಾನ 'ಸಮಯ'ಕ್ಕೆ ಲೋಕಮತ ಗೆದ್ದು ತೋರಿಸುವರೊ ಅವರು, ಮುಂದಿನ ಆಯ್ಕೆಯವರೆಗೆ ಆಡಳಿತಕ್ಕೆ ಬರಬೇಕು ಎಂಬ ಮೂರರ ನಿಯಮವು 'ಏಕಂ'ಸತ್ ಸ್ವರೂಪಕ್ಕೆ ಮಾರ್ಪಡುವಾಗ ಅಲ್ಲಿ ಸರ್ವತಂತ್ರ ಸ್ವತಂತ್ರ 'ಸರ್ವಾಧಿಕಾರಿ' ರೇತಸತ್ಯವು ಸಾಮ್ರಾಟ್ ಪದಕ್ಕೆ ಬರಲೇಬೇಕು. ಬಹುಕೋಶ ಆಕೃತಿಯೂ O : ಏಕಂ ಆಕೃತಿಗೆ ಹತ್ತಿರದ್ದೇ ಸರಿ. ಯಾವ ರಾಜಕೀಯದಲ್ಲಿ ೨-೩ಕ್ಕಿಂತ ಹೆಚ್ಚು ಸಮ-ಸಮಾನ ಪ್ರಬಲ ಪಕ್ಷಗಳು ಕಾಣತೊಡಗುವುವೊ ಅಲ್ಲಿಯ '೪', '೮', ೯-೧೦, ೧೩ ಈ ಮೃತ್ಯು ಸಂಖ್ಯೆಯಾಗುವುದರ ಕಡೆಗಿನ ಈ ಪ್ರವೃತ್ತಿ, ಆ ನಾಡಿನ ಅವನತಿಯ ಸೂಚಕವೇ ಸರಿ. ಸಾಮಾಜಿಕ ಜೀವನ ಮೂಲ್ಯಗಳ ಬದಲು, ಧರ್ಮ-ಪಂಥ, ಜಾತಿಭೇದಾದಿ ಸ್ವಾರ್ಥೀ ಪ್ರೇರಣೆ, ವೈಯಕ್ತಿಕ ಸ್ವಾರ್ಥ ಇದೇ ಆ ಜನಗಣದ ಮಾನಸದ ಭಾವನಾ ಪ್ರೇರಕ ಶಕ್ತಿಯಾಗಿರಲು ಬೇಕು.

ಸಾಹಿತ್ಯ ಕಲಾಕೃತಿಯಲ್ಲಿ ಕವಿ, ಕಲಾವಂತನು ಆಯ್ದುಕೊಳ್ಳುವ 'ಆಶಯ' ಜೀವನದೊಡನೆ ಸಂಬದ್ಧವಿದ್ದ-ಜೀವನದಿಂದ ಎತ್ತಿಕೊಂಡ ಅಂಶ ತಳಪಾಯ; ಅವನು ತನ್ನ ಪ್ರತಿಭೆಯಿಂದ ಸೃಜಿಸುವ 'ಸಮಯ' ಅರ್ಥ : ಕಾಲ-ಪರಿಸರ ಇವೆರಡರ ಸಂದರ್ಭದಿಂದ ನಿರ್ಮಿತ ಕೃತಿ ಕರ್ಣ ಹೀಗೆ ಮೂರು ಅಂಗಗಳು ಇರಬಲ್ಲವು. ಆದರೆ, ಈ ಮೂರು ಅಂಗಗಳಲ್ಲಿ ಅರ್ಥ : ಸಮಯ ಮತ್ತು ಕೃತಿ : ಪ್ರತಿಮಾ ಇಂಥ ಎರಡನ್ನೇ ಲೆಕ್ಕಿಸಲಾಗುವ ಸಾಹಿತ್ಯ-ಕಲಾಕೃತಿಯ ಮೂಲ್ಯ-ಮಾಪನ-ವಿಮರ್ಶೆ ಸದೋಷವಾಗಲೇ ಬೇಕಾಗುತ್ತದೆ. ಪಿಂಡ ಬ್ರಹ್ಮಾಂಡ ರೂಪದ ಭೂಮಿಕೆಯ ಮೇಲೆ ನಿಂತ ಈ ವೈಚಾರಿಕ ರೀತಿ ಏಕಂ ಸತ್ ಭೂಮಿಕೆಯ ವಿಷಚಕ್ರದಲ್ಲಿ ಪರಿಣಮಿಸುತ್ತದೆ.

ಆದರೆ, ಸಾಹಿತ್ಯ ಕ್ಷೇತ್ರದಲ್ಲಿಯೆ ಏಕೆ, ಒಟ್ಟು ಮಾನವ ಜೀವನ ರೀತಿಯಲ್ಲಿಯೇ ಸಾಧನ ಮತ್ತು ಸಾಧ್ಯಗಳಲ್ಲಿ ಅಂತರವೇ ಉಳಿಯದಿರುವಾಗ ಜೀವನದಲ್ಲಿ 'ಸಿದ್ಧಿ' : ಮೂಲ್ಯ ಎಂಬುದಕ್ಕೆ ಸ್ವತಂತ್ರ ಅಸ್ತಿತ್ವವೇ ಉಳಿಯಲಾರದು. ಭಾಷೆಯು 'ಜ್ಞಾನ'ದ ಸಾಧನ. ಆದರೆ, ಭಾಷೆಯನ್ನು ಕಲಿಯುವುದೇ ಸಾಧ್ಯ (: ಗುರಿ) ಆಗುವಾಗ, 'ಜ್ಞಾನ' : 'ವಿಚಾರ'ಕ್ಕೆ ಸ್ವತಂತ್ರ ಸ್ಥಾನವಿಲ್ಲವಾಗುತ್ತದೆ. 'ಸಂಸ್ಥೆ' ಮತ್ತು ಆ ಸಂಸ್ಥೆಯ ಮೂಲಗುರಿ ಇವೆರಡರೊಳಗಿನ ಅಂತರದ ಪ್ರಜ್ಞೆ ಇಲ್ಲವಾದ ಏನೊಂದು ಗುಂಪಿನ ಸಂಸ್ಥೆ (ಸಾಧನ) ಆಗಿ, ಇದನ್ನು ಉಳಿಸುವುದು ಬೆಳಸುವುದೇ ಪರಮಗುರಿಯಾಗುವಾಗ, ಆ ಸಂಸ್ಥೆಯು ಮೃತ್ಯುವನ್ನು ಆಲಿಂಗಿಸುವಂತೆಯೆ ಸರಿ. 'ಮನು'ಜ ತಾನು ಒಂದು ಸಾಧನ; ಸಾಧ್ಯವು ಕೆಲಕಾಲ ಕುಟುಂಬ ಪೋಷಣೆ (ಕರ್ತವ್ಯ) ಆಗಬಲ್ಲದು. ಆದರೆ, ಇಡೀ ಜೀವನವೇ ಕುಟುಂಬ, ಸ್ವಪ್ರತಿಷ್ಠೆ, ಕೀರ್ತಿ ಕಾಮುಕತೆಯಂತಹ ಗುರಿಯನ್ನು ಮುಟ್ಟುವ ಸಾಧನ ತಾನು ಆಗುವ ಮನುಜ, ತನ್ನ ಶಿಕ್ಷಣ-ಸಂಸ್ಕಾರಗಳಿಗೆ ಕಲಂಕ ಹಚ್ಚುತ್ತಾನೆ. ಅಥವಾ ಆ ಶಿಕ್ಷಣ ಮತ್ತು ಅಲ್ಲಿಯ ಸಾಹಿತ್ಯ ಕೃತಿಯಲ್ಲೆ, ಸಾಧ್ಯ-ಸಾಧನಗಳಲ್ಲಿ ಇರಬಲ್ಲ ನಿತ್ಯ ಅಂತರದ ಪ್ರಜ್ಞೆ ಪ್ರಜ್ವಲಿಸುವಂತೆ ಮಾಡುವ ಶಕ್ತಿಯ ಅಭಾವವಿರಲಿಕ್ಕೆ ಬೇಕಾಗುತ್ತದೆ.


ಸಾಹಿತ್ಯ-ಕಲಾಕೃತಿ 'ಉದ್ದೇಶ'ವಿರಹಿತವಿರಬೇಕು; ಎಂದರೆ ಏನೊಂದು (ಪಂಥೀಯ) ಪ್ರಚಾರಕ್ಕಾಗಿ ಇರಬಾರದು, ಎಂಬ ಸೂತ್ರವು ಶ್ಲಾಘ್ಯವಿದೆ. ಆದರೆ, ಕವಿ, ಕಲಾವಂತನಿಗೆ ಅವನದೇ ಆದ ಕೆಲವೊಂದು 'ಮತ'

'ಅಭಿಪ್ರಾಯ', ಇಲ್ಲದಿರಲು ಅಶಕ್ಯ. ಡಾ. ಉಲ್‌ಬ್ರಿಚ್ಟ್ ಹೇಳುವಂತೆ ತೀರ ಉದ್ದೇಶವಿರಹಿತ ವ್ಯಕ್ತಿ ದೊರೆಯಲಾರ ಮತ್ತು ಕಲಾಕೃತಿಯನ್ನು, ಕೇವಲ ಪ್ರತಿಭೆಯ ಫಲಿತ, ಎಂದರೂ ಈ ಪ್ರತಿಭೆಗೆ 'ವಸ್ತು'ರೂಪ (nucleus :) ಭಾವನೆ ವಿಚಾರದ ಬೀಜ ಪೂರಯಿಸುವವನು ಕವಿಯೆ ತಾನೆ? ಆದಕಾರಣ ಕವಿತೆ, ಕಥೆ ನಾಟಕಾದಿ ಸಾಹಿತ್ಯಿಕ ಕಲಾಕೃತಿಯ 'ಬೀಜ' ಸಂತತ ಜೀವನ : ಸಮಷ್ಟಿಯ ಕೇಡಿಗೆ ಕಾರಣವಾಗುವ ದುರ್ ಬೀಜವಲ್ಲವಷ್ಟೆ? ಎಂಬುದು ವಿಮರ್ಶೆಯ ಅಂಗವೆಂದು ಬಗೆವ ನಿಯಮದ ಆವಶ್ಯಕತೆಯಿದೆ. ಇಂದಿನ ವಿಮರ್ಶೆ ರೂಪಿಸಿದವರು ಏಕಂ : ಸತ್ ಪಂಥೀಯರು : ಸಾಹಿತ್ಯಾನಂದವನ್ನು 'ಬ್ರಹ್ಮಾನಂದ ಸಹೋದರ' ಎಂದು ಹೇಳಿರುವಲ್ಲಿ ಇದು ಬಯಲಿಗೆ ಬರುತ್ತದೆ. 'ನೇತಿ ನೇತಿ' ಸ್ವರೂಪೀ ಸಂಭ್ರಮಾತ್ಮಕ ಅಹಿಮಾಯಾ ನಿರ್ಮಿತಿಯು 'ಏಕಂ ಸತ್' ಕೃತಿಯ ವೈಶಿಷ್ಟ್ಯ. ಇದು ಋಗ್ವೇದ, ಮಹಾಭಾರತ, ಗೀತೆ, ರಾಮಾಯಣದ ಮೂಲಕ ಸ್ಪಷ್ಟವಾಗಿ ಹೊರವಡುತ್ತಿದೆ.

ಆದಿಕವಿ ಎಂಬವನೇ ಮೊದಲು 'ವಲ್ಮೀಕಸ್ಥ'; ನಾಗಸಂಪ್ರದಾಯಿ! ನಾಗ : ಸರ್ಪ='ಯಾಯಾವರ' ವಂಶ. ಮಹಾಕವಿ ರಾಜಶೇಖರನು ತಾನು 'ಯಾಯಾವರ ಕುಲಜ'ನೆಂದುಕೊಂಡಿದ್ದಾನೆ! ಅಲ್ಲದೆ 'ರಾಜಶೇಖರ' ನಾಮ ರಾ-ಜನ್ : ಚಂದ್ರನಿಂದ ಬಂದದ್ದು! ಇದೇ ಮೇರೆಗೆ 'ಬ್ರಹ್ಮಾ ದೇವಾನಾಂ' ಎಂಬ ಸೋಮನೇ 'ಕವೀನಾಂ ಕವಿ' ಬ್ರಹ್ಮಣಸ್ಪತಿ: ನಿಜವಾಗಿ ಇವನೇ ಆದಿಕವಿ ಭೃಗು=ಏಕಾಕ್ಷ=(=ನಾಗ) ಶುಕ್ರ! 'ಕಾವ್ಯ' ಎಂದೂ ಈತನಿಗೆ ಹೆಸರು. ಈತನ 'ದೇವಯಾನೀ' ಸಂಪ್ರದಾಯ ದೇವಗುರು ಬೃಹಸ್ಪತಿಗೆ (ಪುತ್ರನಿಗೆ) ಅಮಾನ್ಯವಿತ್ತು! ಈ ಕಾವ್ಯ='ಕವ್ಯ' (ಅಗ್ನಿ) ಸಂಪ್ರದಾಯವು ಏಕಂ : ಸತ್ ಪಂಥೀಯ ಪರಂಪರೆಯನ್ನು ಮುಂದುವರಿಸಿಕೊಂಡು ಹೊರಡಲು ನಿರ್ಮಿತ 'ಶೃಂಗಾರ-ವೀರ' ಎರಡರ ಫಲಿತ 'ಕರುಣಾ'! ಅಥವಾ ಬೀಭತ್ಸ-ರೌದ್ರ! ಈ ರಸ ಎಂಟು ಎಂದಲ್ಲಿ ಮೃತ್ಯುವಿನ ಅಷ್ಟಮಸ್ಥಾನ! ಆದಕಾರಣ, ಇಂದಿನ ಏಕಂ : ಸತ್ ಪಂಥೀಯ ವಿಮರ್ಶಾ ಪದ್ಧತಿ ತಿದ್ದಿಕೊಳ್ಳದಿದ್ದರೆ ಸಾಹಿತ್ಯದ ಪ್ರಗತಿಗೇ ಕೇಡು!


ಕವಿಪ್ರತಿಭೆ ಸೃಜಿಸಿದ್ದು ಯುಕ್ತ ಆಕೃತಿಯೇ ಎಂದು ನೋಡಲು ಮೂರನೆಯ ಭುಜದ ವಿಚಾರವೂ ಅತ್ಯವಶ್ಯವಾಗಿದೆ. ಎರಡೇ ಭುಜಗಳಾದರೆ ಆಕೃತಿಯಿಂದ ಭೌತ : ರೇತ ಸತ್ಯವನ್ನೇ ಚಿತ್ರಿಸಿದ್ದಾಗಿದೆಯೆ ಅಥವಾ ಭೌತ ಆಶಯವು ಪ್ರತಿಭೆಯ ಸೋಂಕಿನಿಂದ ಜೀವನ : ಸಂಸ್ಕೃತಿಯ ಮಟ್ಟ ಎತ್ತರಿಸುವ ಕೃತಿ ನಿರ್ಮಿತವಾಗಿದೆಯೆ ಎಂಬುದನ್ನು ನಿಷ್ಕರ್ಷಿಸಿಕೊಳ್ಳಲು ಅಶಕ್ಯವಾಗುತ್ತದೆ.

ಕಲಾ : ಸಾಹಿತ್ಯವಿಶ್ವ



ವೇದಾಂತ-ತತ್ತ್ವಜ್ಞಾನದಲ್ಲಿ ಕ್ಷೇತ್ರ-ಕ್ಷೇತ್ರಜ್ಞ ಎರಡೇ ಭುಜಗಳ ಆಕೃತಿ, ಪಿಂಡ-ಬ್ರಹ್ಮಾಂಡ ನ್ಯಾಯದ ಏಕಂ: ಸತ್ತಿನ ವಿಷಚಕ್ರದಲ್ಲಿ ಸಿಲುಕಿದ್ದು ಕಾಣುತ್ತಲೆ ಇದೆ. ವಿಶ್ವಸ್ಥ ಆಶಯದೊಡನೆ ಸಂಬಂಧವಿಟ್ಟುಕೊಳ್ಳಲು ತನ್ನ (ಪರಿಮಿತ) ಅನುಭವ-ವಿಚಾರಗಳ ವಲಯದ ಆಚೆಗೆ ಹೋಗುವುದು ಅವಶ್ಯವಿದೆ. ಇದು ಒಂದು ಬಗೆಯ 'ಶೂನ್ಯ' (no man's land) ದಲ್ಲಿ ಸೇರುವ, ಸಾಧನ. ಅಲ್ಲಿ ಕೆಲ ಕ್ಷಣ ಇರುವ ಸಾಧನೆ, ಸ್ವತಂತ್ರಚಿಂತನ ಶೀಲಭಾವುಕ ಜೀವಕ್ಕೆ, ತನ್ನ ಪುನರ್‌ವಿಮರ್ಶೆಗಾಗಿ ಅತ್ಯವಶ್ಯ. ಇನ್ನೊಂದು ಬಗೆಯಲ್ಲಿ ಈ ಹಂತದ ಕ್ಷಣಗಳು ಲಭಿಸಬಲ್ಲವು : ಸ-ಹಜತೆಯಲ್ಲೆ; ಕೆಲವೊಮ್ಮೆ ಈ ಜೀವನ ಪರಿಸರದಲ್ಲೆ ಪ್ರತೀತಿಗೆ ಬರುವ ಅನುಪಮ ಉದಾತ್ತ ಭವ್ಯತೆ, ದಿವ್ಯಲಾವಣ್ಯ, ಬೆರಗುಗೊಳಿಸಿ ಭಯಾವಹವೆನಿಸಿದರೂ ಆ-ಕರ್ಷಕ ಅದ್ಭುತ ರಮ್ಯ (: ಸಾಹಸದ) ದೃಶ್ಯ, (ಇಂಥ) ತನ್ನ ಅನುಭವ-ಸ್ಮೃತಿ....ಇದೂ ದಿಕ್ಕಾಲ-ಪರಿಸರಸ್ಥ ವರ್ತಮಾನದ ಕ್ರೂರ ಕಪಿಮುಷ್ಟಿಯೊಳಗಿಂದ (ಕ್ಷಣಕಾಲ) ಬಿಡಿಸಬಲ್ಲದು. ಈ ಜೀವಂತ ಪವಾಡ ಬಲ್ಲವನೆ ಬಲ್ಲ. ದಿವ್ಯ ಉದಾತ್ತ ಭವ್ಯದ, ಅದ್ಭುತ ಆಶ್ಚರ್ಯದ ಸಂಸ್ಪರ್ಶನದಲ್ಲಿ ಉಳಿಯಬಯಸುವ ಚಟ ಕೃತ್ರಿಮ ಪವಾಡ ಚಮತ್ಕಾರಗಳ ಜೂಜಿನ 'ಅಕ್ಷ'ದ್ಯೂತದ ದಾರಿಗೆ ಒಯ್ಯುವುದು ನಿಶ್ಚಿತವಾಗುತ್ತದೆ.

ಸ್ವ-ಸ್ವರೂಪದ ಜ್ಞಾನ ನಿನ್ನೆ-ಇಂದು-ನಾಳೆಗಳ ಸುಸಂಗತ ಇತಿಹಾಸದಿಂದಲೇ ಲಭಿಸಬಲ್ಲದು. ದಿಕ್ಕಾಲಾತೀತ ರೋಮಹರ್ಷಕ ಚಮತ್ಕಾರದ ಬಯಕೆ ಸಾಹಿತ್ಯ, ಕಲೆ, ಇಂದಿನ 'ಚಾಂದ್ರ' ಸೈನ್ಸೂ ಪೂರಯಿಸಬಲ್ಲದು. ಇತಿಹಾಸದ ಎಂದರೆ ದಿಕ್ಕಾಲ-ಪರಿಸರಸ್ಥ ಸಮಯ : ಆಚಾರಗಳ ಆಕೃತಿಗೆ ಸುಸಂಗತ ವೈಚಾರಿಕ ಆಕೃತಿಯೆ ವಿಶ್ವಸಾರ್ಹ ತತ್ತ್ವಜ್ಞಾನವಾಗಬಲ್ಲದು.



ಸಾಹಿತ್ಯ ಕಲೆ ತನ್ನ ಅರ್ಥ : ಸಮಯ ತಾನೇ ಸೃಷ್ಟಿಸಿಕೊಳ್ಳಲು ಸ್ವತಂತ್ರವಿದೆ. ಆದರೆ, ಇತಿಹಾಸದ, ತತ್ತ್ವಜ್ಞಾನದ ಆಧಾರಭೂತ ಸಮಯ : ಅರ್ಥವು (ದಿಕ್ಕಾಲ ಪರಿಸರದ ಜೀವನಕ್ಕೆ) ಲಂಬ-ಸಮಾಂತರ (Vertical) ಇರಲೇಬೇಕು. ಇತಿಹಾಸ-ತತ್ತ್ವಜ್ಞಾನದ ಕ್ಷೇತ್ರದ 'ಅರ್ಥ'ವು ಆ 'ಸಮಯ'ದ ಆಕೃತಿಗೆ ಸುಸಂಬದ್ಧವಾಗಿರಬೇಕಾಗುತ್ತದೆ.

ಇತಿಹಾಸಕ್ಕೆ, ತತ್ತ್ವಜ್ಞಾನಕ್ಕೆ, ಇಲ್ಲದೆ ಇರುವ ನೂತನ 'ಸಮಯ' ಸೃಷ್ಟಿಸುವ ಸ್ವಾತಂತ್ರ್ಯವು, ಕಲಾ-ಸಾಹಿತ್ಯಿಕ ಕ್ಷೇತ್ರದ ಪ್ರತಿಭೆಗೆ ಜನ್ಮಸಿದ್ಧ ಹಕ್ಕೇ ಆಗಿದೆ. ಆದರೆ, ಈ ಹಕ್ಕಿನ ದುರುಪಯೋಗವು ಸ್ವೈರವೃತ್ತಿಯಾಗಿ ಜೀವನ-ಸಂಸ್ಕೃತಿಗೆ

ಹಾನಿ ತಟ್ಟಲಿದೆ-ತಟ್ಟಿದೆ; ರಸ ನಿಷ್ಪತ್ತಿಗಾಗಿ, ಸೂಕ್ಷ್ಮಧ್ವನ್ಯರ್ಥ ನಿರ್ಮಿತಿಗಾಗಿ ಕವಿಪ್ರತಿಭೆ ತನ್ನದೇ ಆದ ಸಮಯ : ಅರ್ಥ ಸೃಷ್ಟಿಸಿಕೊಳ್ಳಬಹುದು; ವಾಸ್ತವ ಜೀವನ-'ಸಮಯ' (ಇತಿಹಾಸ). ತನ್ನ ಅರ್ಥಕ್ಕಾಗಿ ಮಾರ್ಪಡಿಸಿಕೊಳ್ಳಲು ಅಡ್ಡಿಯಿಲ್ಲ. ಆದರೆ, ಈ 'ಕೃತಿ' ವಿಶ್ವಸ್ಥ ಸಂತತ ಜೀವನದ (ಸನಾತನ) ಅರ್ಥ: ಮೂಲ್ಯಗಳನ್ನೆ ಶೂನ್ಯಗೊಳಿಸುವ ಮಾರ್ಪಾಟು ಆದಲ್ಲಿ ಅದು ಮಾನವ ಸಂಸ್ಕೃತಿಯ ಅವನತಿಗೆ ಕಾರಣವಾಗದೆ ಇರದು. ಉದಾ : 'ಆದಿಮಾತೆ' ಈ ಸಮಯ : ಅರ್ಥವು ಒಂದು ಕಾಲಕ್ಕೆ ಪ್ರಚಲಿತವಿತ್ತು. ದಿಕ್ಕಾಲ-ಪರಿಸರದ ಜೀವನದಲ್ಲಿ ವಿಪರೀತ ಪರಿಣಾಮ ಕಾಣಿಸಿಕೊಳ್ಳುವುದನ್ನು ತಪ್ಪಿಸಲು 'ಆದಿಪುರುಷ' ಈ ಸಮಯ : ಅರ್ಥರೂಢಿಸಲಾಯ್ತು ಪುರುಷನೆ ತನ್ನ ಪತ್ನಿಯನ್ನು ಪ್ರಸವಿಸಿದನು ಎಂದು ಜನವನ್ನು ನಂಬಿಸುವ ಮಾಯಾತಂತ್ರವನ್ನು ಪ್ರಚಾರಕ್ಕೆ ತರಲಾಗಿದೆ! ಈ ಸಂಪ್ರದಾಯವು ನಿರ್ಮಿಸಿರುವ ಸಾಹಿತ್ಯಕ ಮೀಮಾಂಸೆಯಲ್ಲಿ 'ಶೃಂಗ' ಪೂಜೆಗೆ-ಶೃಂಗಾರ ರಸಕ್ಕೆ ಪ್ರಾಧಾನ್ಯ! ಇದು ಮೃತ್ಯುಪೂಜೆಯಲ್ಲೆ ಪರಿಣಮಿಸಿತು. ರಸಗಳು 'ಎಂಟು'! 'ಅಷ್ಟಮ' ಸ್ಥಾನ ಮೃತ್ಯುವಿನ ಸಂಕೇತ! ಒಂದು 'ಜೀವಿ'ಯ ಕಥೆಯನ್ನೆ, ಸಾಂಕೇತಿಕವಾಗಿ ಇಡೀ ಜೀವನದ ಅರ್ಥದ ಮಟ್ಟಕ್ಕೆ ಎತ್ತರಿಸುವಲ್ಲಿ ಪಿಂಡ ಬ್ರಹ್ಮಾಂಡ ನ್ಯಾಯದ ಅರ್ಥದ ಅತಿವ್ಯಾಪ್ತಿ ದೋಷ ತಲೆಯೆತ್ತುತ್ತದೆ!

ಮಾಧ್ಯಮ : ಪ್ರತಿಮೆ (: ಭಾಷೆ). ಇದೇ ಮಾನವರ ಕ-ಣ್ಣು. ಭಾಷಾಸಂಕೇತ : ಮಾತುಗಳು ಪಡೆವ ಅರ್ಥದ ಇತಿಮಿತಿ ತಿಳಿಯದೆ ಮೋಸವಾಗುತ್ತದೆ. ಅಭಿವ್ಯಕ್ತವಾಗುವ 'ಅರ್ಥ'ದ ಭೂಮಿಕೆಯಿಂದ, ಸಾಂಕೇತಿಕ 'ಸತ್ಯ'ವನ್ನು ನಿಷ್ಕರ್ಷಿಸಿಕೊಳ್ಳುವ ಒಂದು ಬಗೆ ಹೀಗಿದೆ : ವಿಶ್ವಸ್ಥ ಆಶಯ-ಅರ್ಥ ಮತ್ತು ಈ ಆಶಯ: ಅರ್ಥವು ಪಡೆದ ಅಥವಾ ಅದರಲ್ಲಿ ಕಾಣಿಸಿಕೊಳ್ಳುವ ಮಾಧ್ಯಮ : ಪ್ರತಿಮೆ ಇವೆರಡರ ನಡುವೆ ಮೂರು ಬಗೆಯ ಸಂಬಂಧವು ಶಕ್ಯವಿದೆ.

ಅರ್ಥ (ಆಶಯ) ಮಾಧ್ಯಮದ ಪರಿಮಿತಿಯಷ್ಟು ಮಾತ್ರ ಇಲ್ಲವೆ ಮಾಧ್ಯಮಕ್ಕಿಂತ ಕಡಿಮೆ ಇರಬಹುದು; ಅಥವಾ ಮಾಧ್ಯಮಕ್ಕೆ ಮಿಕ್ಕಿ ಇರಬಹುದು. ಇದೇ ಮೇರೆಗೆ ಮಾಧ್ಯಮದ ಮೂಲಕ, ಅರ್ಥಕ್ಕೆ ಒಳಗಾಗಬೇಕಾಗುವ ಇತಿಮಿತಿಗಳ ವಿಮರ್ಶೆಯೂ ಅವಶ್ಯವಿದೆ. 'ವಿಶ್ವಸ್ಥ ಶಾಶ್ವತ ನಿಯಮ' ಈ ಅರ್ಥವನ್ನು ಧಾರಣ ಮಾಡಲು ಆಪ : ರಸ=ರೇತ ಸ್ವರೂಪೀ ಸ್ವಂತದ ಆ-ಕೃತಿ ವಿಹೀನ ತತ್ತ್ವದ ವೈಚಾರಿಕ ಭೂಮಿಕೆಯ ಮಾಧ್ಯಮ : ಪ್ರತಿಮೆ ಸದೋಷವಾಗಿ ಅದರ ದುಷ್ಪರಿಣಾಮ ಸಂಭವಿಸಲೇಬೇಕು. Truth-true< truce ಹಾಗೂ 'ಏಕಂ' ಸ್ವರೂಪೀ ಸತ್-ತ್ವ ಇದು 'ಅಸ್>ಸತ್ಯ'. Is, Be, ಭೂ ಅಸ್ ಆಖ್ಯಾತದ ತೂಕದ ಮೂರ್ತ ಆಕೃತಿ ಸೂಚಕವಾಗಲು ಶಕ್ಯವಾಗಿಲ್ಲ. ಸಂಸ್ಕೃತದಲ್ಲಿ ವಸ್-'ವಸು'ಗಳು ಸೌರರು-ವಾಸವರು ಇರುವಂತೆ. ಆಪ : ರಸ ಸ್ವರೂಪೀ 'ವಸು'=ಜಂತು=ವಾಸುಕಿ ಸರೀಸೃಪ-ನಾಗರೂ ಇದ್ದಾರೆ! ಋಗ್ ವೇದದಲ್ಲಿ ಇಬ್ಬಗೆಯ 'ವಸು'ಗಳು, ಇಬ್ಬಗೆಯ ಸತ್-ಸತ್ಯ ಇಬ್ಬರು ಅಗ್ನಿ, ಇಬ್ಬರು ಬೃಹಸ್ಪತಿ ಬ್ರಹ್ಮಣಸ್ಪತಿ! ಇಂಥ 'double' ಮಾತಿನ ಜಾದುವಿನಿಂದ 'ಏಕಂ' ಪಂಥೀಯ ಸಂತರು ತಮ್ಮ ಸತ್‌ರಸ ಮಾರ್ಗದ 'ಸತ್ಯ'ವನ್ನು ಹೇಗೂ ಗೆದಿಸಿಕೊಂಡಿದ್ದಾರೆ. ಸತ್ಯಂ ಏವ ಜಯತಿ(ತೇ)ನ ಅನೃತಂ'! ಇಲ್ಲಿ ಸತ್ಯದ ಅರ್ಥ ಏನು? ಸತ್ (=ರಸ=ರೇತ)=ಸತ್ಯವೇ ಗೆಲ್ಲಬಲ್ಲದು : (ನ 'ಋತ' ಎಂದರೆ ರೇತಸ್ವರೂಪಿಯಲ್ಲದ್ದು=) ಅನೃತ ಗೆಲ್ಲಲಾರದು ಎಂದೇ ಅರ್ಥವಾಗುತ್ತದೆ. ಇಂದಿನ ಋಕ್ ಸಂಹಿತೆಯ ವ್ಯಾಮಿಶ್ರ ಶೈಲಿಯ ಮೂಲಕ ಹೀಗೆ ಋತ : ಸತ್ಯದ ಕೊಲೆಯಾಗಿದೆ!

ಇನ್ನು ಅರ್ಥ (ಆಶಯ) ಮತ್ತು ಮಾಧ್ಯಮದ ಸಂಬಂಧದ ವಿಚಾರ :

೧. ಆಶಯವು ಇಡಿಯಾಗಿ ಎಂದೂ ಎಲ್ಲಿಯೂ ಅಭಿವ್ಯಕ್ತಿ ಪಡೆದಿಲ್ಲ; ಪಡೆಯಲಾರದು. ದಿಕ್ಕಾಲ ಪರಿಸರದ ಅನುಭವ ಅಥವಾ ಮನನದಲ್ಲಿ 'ಅರ್ಥ' ಪಡೆದುದು ಅಭಿವ್ಯಕ್ತವಾಗಬಲ್ಲದು.

೨. ಆದಕಾರಣ, ಭಾಷೆಯು ಆ ಭಾಷಿಕರ ಜೀವನಾನುಭವದ ಇತಿ-ಮಿತಿಗಳನ್ನು ಸೂಚಿಸುವುದು ನಿಜವಿದ್ದರೂ, ಆ ಜನ-ಮಾನಸದಲ್ಲಿ ಇರಬಲ್ಲ ಆಶಯ (: potential or latent) ಆ ಭಾಷೆಯ ಪರಿಮಿತಿಯದೇ (coterminus) ಆಗಿದೆ, ಎಂದು ಬಗೆಯಲಿಕ್ಕೆ ಆಗದು.

೩. ಆದುದರಿಂದ, ವ್ಯಕ್ತವಾದ ಅರ್ಥಕ್ಕಿಂತ ಇನ್ನು ವ್ಯಕ್ತವಾಗಲಿರುವ ಆಶಯವು ಯಾವಾಗಲೂ ಹೊರಗೆ-ಅಪರಿಮಿತವಾಗಿ ಅಳತೆಗೆ ನಿಲುಕದೆ ಉಳಿಯುತ್ತದೆ. ಮಾನವ ಜೀವನ : ಸಂಸ್ಕೃತಿಯ ಪಾತಳಿಯಲ್ಲಿ ನಿನ್ನೆ ಇಂದುಗಳ ರೂಪದಿಂದ ಪ್ರತೀತಿಗೆ ಬರುವ ಆಶಯದ ಇನ್ನುಳಿದ ಭಾಗವು 'ನಾಳೆ'ಯ ರೂಪದಲ್ಲಿ ಉಳಿಯುತ್ತಲೆ ಬಂದಿದೆ!

೪. 'ಅರ್ಥ' ಎಂಬುದು ಹಿಂದಿನ ಕ್ಷಣದ-ಎಂದರೆ ನಿನ್ನೆಯ ಅನುಭವದ ವಿವರಣೆ. ಆದಕಾರಣ ಅರ್ಥ, ನಿನ್ನೆಗೆ ಎಂದರೆ ಇತಿಹಾಸಕ್ಕೆ ಸಂಬಂಧಿಸಿದ್ದಾಯಿತು! ಆದುದರಿಂದ, 'ಅರ್ಥ' (: ಆಶಯ) 'ಇಂದು' ಇದಕ್ಕಿಂತ ಮುನ್ನವೇ ಇರಬೇಕಾಯಿತು.

೫. ಮಾಧ್ಯಮ : ಪ್ರತಿಮೆಯ ಆಧಾರವಿಲ್ಲದೆ ಅರ್ಥವು (ಕೆಲವೊಮ್ಮೆ ಹೊಳೆದಂತೆ ಎನಿಸಿದರೂ 'ವಸ್ತುನಿಷ್ಠ' ಆಕೃತಿ ರೂಪದ ಸ್ಪಷ್ಟತೆಯನ್ನು ಪಡೆಯಲಾರದು.

೬. ಮೂರ್ತ ಮಾಧ್ಯಮಕ್ಕಿಂತ ಅಮೂರ್ತ ಅರ್ಥವು ಯಾವಾಗಲೂ ವಿಶಾಲ;

೭. ಮಾಧ್ಯಮ : ಪ್ರತಿಮೆಯ ಅರ್ಥದ ಆಕೃತಿ ಆ ಭಾಷಿಕರ ಜೀವನ 'ಸಮಯ' (ಪರಿಸರ) ಅವಲಂಬಿಸಿರುತ್ತದೆ. 'ಸಮಯ'ದ ಆವರಣದ ಹಿನ್ನೆಲೆಯಲ್ಲಿಯೆ ಆ ಮಾಧ್ಯಮ : ಪ್ರತಿಮೆಯ ಅರ್ಥದ ಇತಿಮಿತಿಗಳು ತಿಳಿಯಬಲ್ಲವು.

ಉದಾ : 'ಅಮೃತ ಹಸ್ತ'ದಿಂದ ಆಗುವ ಉದ್ಘಾಟನೆಯ ಈ ಸಾಂಕೇತಿಕತೆಯಲ್ಲಿ ವಿಡಂಬನದ ಹಿನ್ನೆಲೆ (ಸಮಯ) ಇದ್ದರೆ, ಮಾಧ್ಯಮ : ಪ್ರತಿಮೆಯ ಅರ್ಥವು ಸಂಕುಚಿತವಾಗಿ, ಈ ವಿಸಂಗತಿಯಿಂದ ವಿನೋದವು ತಲೆದೋರುತ್ತದೆ.

ಅ) ಅರ್ಥವು ಸದೋಷವಾಗಿ ದುಷ್ಪರಿಣಾಮಕಾರಿಯಾಗುವ ಶಕ್ಯತೆಗಳು ಎರಡು : ಅರ್ಥವು, ಮಾಧ್ಯಮ : ಪ್ರತಿಮೆಯ ಪರಿಮಿತಿಯದೇ ಆಗುವಲ್ಲಿ (ವಿಶ್ವಸ್ಥ) ಆಶಯದೊಡನೆ (Potential) ಇರುವ ಅದರ ಸಂಬಂಧವು ತಪ್ಪಿ, ಆ ಅರ್ಥವು ಸದೋಷವಾಗುವುದು. ಉದಾ : ಫ್ರೈಡನ ಸಂಕೇತಗಳು ವರ್ತನವಾದೀ ಮಾನಸ ಶಾಸ್ತ್ರವು ವ್ಯಕ್ತಿಯ ಅರ್ಥವನ್ನು ಅವನ ಪರಿಸರಾದಿ ಬಾಹ್ಯಪರಿಮಿತಿಯಿಂದಲೇ ನಿರ್ಧರಿಸುವಲ್ಲಿ, ಆ ವ್ಯಕ್ತಿಯೊಳಗಿನ 'ಅಪ್ರಕೇತ' ಚಿತ್ತ (unconscious) ಲೆಕ್ಕಿಸಲ್ಪಡುವುದಿಲ್ಲ. ಬಾಹ್ಯ ಪರಿಸರವೇ ಪ್ರಾಧಾನ್ಯಪಡೆದು ಸಂಕೇತಗಳಿಗೆ ಮಾಡಲಾಗುವ ಅರ್ಥವು ಸದೋಷವಾಗುವುದಕ್ಕೆ ಉದಾ : ಸುಮೇರಿನತ್ತಣ ವಿಶೇಷ ಹುದುಲಿನ (marshy land) ಪ್ರದೇಶದಲ್ಲಿ ಗಲಗು (Reed) ಬೆಳೆಯುತ್ತವೆ. (ಗಲಗಿನ ಅಂತರಾರ್ಥ ಗಮನಿಸದೆ) ಅಲ್ಲಿಯ ಭಾವುಕರಿಗೆ ಕೊಳಲಿನಂತಹ ವಾದ್ಯವಾಗಿ ಧ್ವನಿ ಹೊರಡುವ ಅಕ್ಷ-ರ (: ವಾಕ್) ಶಕ್ತಿ, ಲೇಖಣಿ ಜ್ಞಾನಶಕ್ತಿಯ ಈ ದಿವ್ಯಪವಾಡ ಸಾಮರ್ಥ್ಯದ ದೈವತದ ವಾಸಸ್ಥಾನ (ಅಕ್ಷ-ಅಕ್ಷಿ). ಬರಿ ಗಣೆ-ಗಲಗು ಎಂಬ ನಂಬುಗೆಯಿತ್ತು, ಡಾ. ಫ್ರಾಂಕ್‌ಫೋರ್ಟ್ ಸಂಪಾದಿತ ಗ್ರಂಥದಲ್ಲಿ ಹೇಳಿರುವ ಈ ಅರ್ಥವು ಅಸಮರ್ಪಕವಾಗಿದೆ. ಆದರೆ, ಅರ್ಥವನ್ನು ಮಾಧ್ಯಮ : ಪ್ರತಿಮೆಯ ಬಾಹ್ಯವಲಯಕ್ಕೆ ಸೀಮಿತಪಡಿಸುವ ಭೌತವಾದೀ ಏಕಂ : ಸತ್ ಭೂಮಿಕೆಗೆ ತೀರ ವಿಪರೀತವಾಗಿರುವ ಇನ್ನೊಂದು ಏಕಂ : ಸತ್ : ದಿವ್ಯಾಧ್ಯಾತ್ಮ ! ಇದರಲ್ಲಿ ಮೂರ್ತ ರೂಪದ ಇತಿಮಿತಿಯ ಮಾಧ್ಯಮವನ್ನು ಅಮೂರ್ತ ಅರ್ಥದ-ವಿಶ್ವವ್ಯಾಪೀ ಆಶಯದ-ಮಟ್ಟಕ್ಕೂ ಎತ್ತರಿಸಲಾಗುತ್ತದೆ! ಉದಾ :

೧. ಗುರು : ಆರಾಧ್ಯ ಪ್ರತಿಮೆ ಬ್ರಹ್ಮ-ವಿಷ್ಣು-ಮಹೇಶ್ವರಾದಿ ವಿಶ್ವಶಕ್ತಿಯಾಗಬಲ್ಲದು!

೨. ಪಂಥೀಯ ಪೋಥಿ ಏನೆಲ್ಲ ಜ್ಞಾನದ ಖಣಿ!

೩. ಸಿದ್ಧಪುರುಷ ತ್ರಿಕಾಲಜ್ಞಾನಿ ಎಂಬ ಗ್ರಹಿಕೆ.

ಕೃತಿ (: ಮಾಧ್ಯಮ) ಮತ್ತು ಅದರೊಳಗಿನ ಅರ್ಥ ಇವೆರಡನ್ನೇ ಲೆಕ್ಕಿಸಿ ಆಗುವ ಕಲಾಕೃತಿಯ 'ರಸ-ವಿಮರ್ಶೆ ಪಿಂಡ ಬ್ರಹ್ಮಾಂಡ ನ್ಯಾಯದ ಏಕಂ : ಸತ್ ವಿಷಚಕ್ರದಲ್ಲಿ ಸಿಲುಕಿಸುತ್ತದೆ. ಆಶಯ, ಅರ್ಥ ಮತ್ತು ಪ್ರತಿಮಾ

(: ಮಾಧ್ಯಮ) ಈ ಮೂರರ ಸಂದರ್ಭದ ವಿಮರ್ಶೆ ಅಲ್ಲವಾದಾಗ ಪ್ರತಿಮೆಯಲ್ಲಿ ಇತಿ-ಮಿತಿಗೆ ಒಳಗಾದ ಅರ್ಥಕ್ಕೆ ಇಡೀ (ವಿಶ್ವತ್ವ) ಆಶಯದ ಪಟ್ಟಬರುತ್ತದೆ! ಆ ಅರ್ಥ ಮೋಸದ್ದಾಗುತ್ತದೆ.

ನರಜಂತುವು ಮನುಜತ್ವ ಪಡೆದದ್ದು ಭಾಷೆಯ ಮೂಲಕ ಎಂದು ಹಂಬೋಲ್ಟ್ ಭಾಷೆಯ ಮಹಿಮೆಯನ್ನು ಹೊಗಳಿದ್ದಾನೆ. ಈ ಭಾಷೆಯನ್ನು 'ಅಸುರ ಮಾಯವೀ ಬಣ್ಣಪಣ್ಣಗಳಿಂದ' ಸಂಭ್ರಮಕ್ಕೆ ಕಾರಣವಾಗುವ 'ಪತಂಗ' ಎಂದು ಋಗ್‌ವೇದದ ಕವಿ ಹೇಳಿದ್ದಾನೆ! (ಪತನವಾಗುವುದೂ, ಮತ್ತೆ 'ಹಾರು'ವುದೂ ಸ್ವಭಾವವಾಗಿರುವ ಲೈಂಗಿಕ ಶಕ್ತಿಯ ಪ್ರತಿಮೆ!) ಈ ಎರಡೂ ಹಗೆಯ ಭಾಷೆಗಳ ಲಕ್ಷಣವನ್ನೂ ಅಲ್ಲಿಯೆ ಸಾಂಕೇತಿಕವಾಗಿ ಸೂಚಿಸಿದ್ದೂ ಉಂಟು : ಈ ವಾಕ್‌ನ್ನು 'ಸ್ವರ್ಯಂ ದ್ಯೋತಮಾನಾಂ' ಎಂದು ಹೇಳಿ 'ಋತಸ್ಯ ಪದೇ' ಈ ವಾಕ್ ರಕ್ಷಿತವಾಗಿದೆ, ಎಂಬ ಮಾತನ್ನೂ ಅಲ್ಲಿಯೆ ಸೂಚಿಸಲಾಗಿದ.[೧೫] ಈ ಸಂಹಿತೆಯ ಪದ್ಧತಿಯಂತೆ ಇಬ್ಬಗೆಯ ಅರ್ಥವು ಈ ಋತದಲ್ಲಿ ಉಂಟು ! ಸ್ವಭಾವೋಕ್ತಿಯ ವಾಕ್ಕು ಋತ : ಸತ್ಯದ ವಾಕ್ಕು; ಋತದ ಇನ್ನೊಂದು ಅರ್ಥವು ರೇತ-ಸತ್ಯ. ಈ ಭೂಮಿಕೆಯ ವಾಕ್ಕಿನ ವಕ್ರೋಕ್ತಿ : ದಿಗ್‌ಭ್ರಮಶಕ್ತಿ, ಮಾಯಾಶಕ್ತಿಯನ್ನು ಈ ಪತಂಗದ ಅರ್ಥವನ್ನು 'ವಿಪಶ್ಚಿತಃ ಹೃದಾ ಮನಸಾ ಪಶ್ಯಂತಿ' (ಜ್ಞಾನಿಗಳು ಭಾವುಕ ಹೃದಯದಿಂದಲೂ, ವಿಮರ್ಶಕ ಮನಸ್ಸಿನಿಂದಲೂ ಅರಿಯುತ್ತಾರೆ) ಎಂದೂ ಅಲ್ಲೇ ಹೇಳಿದೆ ! ಆದರೆ, ಈ ಗುಹ್ಯಾರ್ಥ ಗೂಢವೇ ಉಳಿದಿದು ದುರ್ದೈವ! 'ರೇತ ಸತ್ಯಕ್ಕೇ ವಿಜಯ; ಅರೇತ ಸತ್ಯಕ್ಕೆ=ಅನೃತಕ್ಕಲ್ಲ, ಎಂಬ ವೇದೋಪನಿಷತ್ತಿನ ಮೋಸ, ಇನ್ನೂ ಬೆಳಕಿಗೆ ಬರಬೇಕಾಗಿದೆ!

ರೇತಸತ್ಯದ ಭೂಮಿಕೆಯಲ್ಲಿ 'ಜೀವಿ' ಜೀವನದ ಅನುಭವ ಪಡೆಯುತ್ತದೆ. ಆದರೆ, ಈ ಅನುಭವ ಜನ್ಯ 'ಅರ್ಥ'ವು, ರೇತಸತ್ಯದ ಪಾತಳಿಯ ಹೊರಗಿನ ಪ್ರಕಾಶ ಕಿರಣ; ಈ ಪ್ರಕಾಶದಲ್ಲಿ ಎಂದರೆ ಅರ್ಥ : ವಿಚಾರ: ಜ್ಞಾನರೂಪೀ ಸ್ವಯಂ ಜ್ಯೋತಿ : ಪ್ರಕಾಶದ ಅಸ್ತಿತ್ವದಲ್ಲಿ, ಶ್ರದ್ಧೆಯೆಂದರೇ ಜೀವನ ಮೂಲ್ಯದಲ್ಲಿ ಶ್ರದ್ಧೆ. ಜೀವನ ಮೂಲ್ಯರೂಪೀ ಅರ್ಥವೇ ಸಾಮಾಜಿಕ ಪ್ರಕಾಶವಾಗಬಲ್ಲದು. ಆದರೆ, ಜೀವಿಯ 'ಜೀವನ' ಮತ್ತು ಆ ಜೀವದ ರೇತ : ಪಾತಳಿ ಬೇರೆಯಲ್ಲ, ಎಂಬ ಸಿದ್ಧಾಂತವು ಒಂದುಂಟು. ಇದು 'ಸತಿ'-ಸೇತು-ಯಾನ ಈ ಸಮಯಾಚಾರ, ನಾರ-ದ ಸಂಪ್ರದಾಯದ್ದು. ಸ-ತಿ(ಈ)-ಯಂ, ಸಂಪ್ರದಾಯದ ಅರ್ಥ ವಿವರಣೆಯಲ್ಲಿ ಕೌಷೀತಕೀ ಉಪನಿಷತ್ತಿನಷ್ಟು 'ಮೊದಲುತನ' ಛಾಂದೋಗ್ಯ ಬೃಹದಾರಣ್ಯಕದಲ್ಲಿ ಇಲ್ಲ. ಛಾಂದೋಗ್ಯಕ್ಕಿಂತ ಬೃಹದಾರಣ್ಯಕದಲ್ಲಿ ಮೊದಲತನ ಹೆಚ್ಚು. 'ಅದಿತಿ' ಮೃತ್ಯುಸ್ವರೂಪಳು; ಈ ಪ್ರಪಂಚವು ಮೊದಲಲ್ಲಿ ಮೃತ್ಯುವಿನಿಂದಲೇ ಆವೃತವಿತ್ತು ಎಂಬ ಸಾಂಕೇತಿಕ ಸತ್ಯ, ಬೃಹದಾರಣ್ಯಕದಲ್ಲೆ ಉಂಟು! ಬೃಹದಾರಣ್ಯಕ್ಕಿಂತ ಕೌಶೀತಕಿಯಲ್ಲಿ ಇನ್ನೂ ಪ್ರಾಂಜಲ ಉಲ್ಲೇಖಗಳಿವೆ : 'ಋತುಃ ಅಸ್ಮಿ! ಆರ್ತವಃ ಅಸ್ಮಿ' ಈ ರಸೋವೈಸಃ' ಬ್ರಹ್ಮಾನಂದೀ ಸಂಪ್ರದಾಯವು ಹೀಗೆ ಇಡೀ 'ಜೀವನ'ವನ್ನು ಒಂದು 'ಜೀವಿ'ಯ ಮಟ್ಟಿಗೆ ಸೀಮಿತಪಡಿಸುವಲ್ಲಿ ನಿನ್ನೆ→ಇಂದುಗಳೊಳಗಿಂದ ನಾಳೆಯತ್ತ ಪ್ರವಹಿಸುತ್ತಿರುವ ಜೀವನದ ಸಂತತ ಅಸ್ತಿತ್ವವನ್ನು-ಅ-ಮರತ್ವವನ್ನೇ ಮರೆಮಾಜಿಸಿದೆ! ವೈಯಕ್ತಿಕ 'ಅರ್ಥ'ಕ್ಕಾಗಿ ಜೀವಿಗಳು, ರೇತ-ಸತ್ಯದ ಮೋಹಕ್ಕೆ ಒಳಗಾಗಿ, ಶಾಶ್ವತ ಋತಸ್ವರೂಪೀ ಸತ್ಯವನ್ನು ಕಡೆಗಣಿಸುವುದುಂಟು. ರೇತ ಸತ್ಯವು ತನ್ನಲ್ಲಿ (ತನ್ನ) ಸ್ವ-'ಅರ್ಥ' ಕಾಣುವುದು ಅದರ ಸ್ವಭಾವ ಆಗಿದೆ. ಆದರೆ ಇದು 'ಅರ್ಥ', 'ಆಶಯ' ವಿಶಿಷ್ಟ ವ್ಯಕ್ತಿ, ಪಂಥ, ಪಕ್ಷಗಳಿಗೂ ಮಿಗಿಲಾದುದು. ಅದು ಜೀವನ ಸಮಷ್ಟಿಯಲ್ಲಿದೆ; ನಿನ್ನೆ→ಇಂದು→ನಾಳೆಗಳ ಸಂದರ್ಭದಲ್ಲಿ ಕಾಣದೊರೆಯುತ್ತದೆ-ಇದೇ ಋತ: ಸತ್ಯ.

'ಋತಸ್ಯ ಪದೇ' ಎಂಬ ಇನ್ನೊಂದು ಬಗೆಯ ವಾಕ್ಕೂ ರೇತಸತ್ಯದ ಪಾತಳಿ. ಇದಕ್ಕೆ ನಿನ್ನೆ-ನಾಳೆಗಳ ಇತಿಮಿತಿ ಇಲ್ಲ. ಇದು 'ಏಕಂ' ಸ್ವರೂಪ; ಜ್ಯೋತಿ ಜ್ಯೋತಿರ್ಲಿಂಗ! ಈ ವಾಕ್‌ಸ್ವರೂಪೀ 'ಸ್ವರ್ಯ(?)' ಎಂಬ ಪ್ರಕಾಶವು 'ಹಿರಣ್ಯ ಸಂದೃಕ್' ಎಂದು ವೇದದಲ್ಲೇ ಸೂಚಿತವಿದೆ.[೧೬] ಕ್ರೈಸ್ತ ಪಂಥೀಯ ಪ್ರಾರ್ಥನೆಗಳಲ್ಲೂ 'ಕರುಣಾಳು ಬೆಳಕನ್ನು' ಪ್ರಾರ್ಥಿಸಲಾಗುತ್ತದೆ; ಈ Candle Light' ಸಾಂಕೇತಿಕ ಪ್ರಕಾಶವು ಭಾರತೀಯ ದೀಪಸ್ತಂಭದ ಇನ್ನೊಂದು ಆಕೃತಿ. ನಿಜವಾಗಿ ಇದು ಸಮೆ=ದೀಪ; ರಾತ್ರೀ ಸಮಯ (ಸಮೆ) ರೂಪೀ ಪ್ರಕಾಶದ ಸಾಂಕೇತಿಕತೆ

ಇಲ್ಲಿದೆ. ಮರಾಠಿಯಲ್ಲಿ 'ಸಮೆ'='ಸಮಯ' ರೂಪದಲ್ಲೆ ಉಂಟು. ನವರಾತ್ರಿಯಲ್ಲಿ 'ಸಮೆ' ದೀಪ ಇಡಲಾಗುತ್ತದೆ. ದೇವರ ಗರ್ಭಗುಡಿಯಲ್ಲಿ ಇಡುವ-ಇರುವ 'ನಂದ' (ಉಚ್ಚಾರದಲ್ಲಿ ನಂದಾ) ದೀಪದ ಈ ಸಾಂಕೇತಿಕತೆ, 'ಪ್ರತಿ-ಪದ'ದ 'ಆ-ಭು' ಪ್ರಕಾಶದ ಪ್ರತಿಮೆ ಎನ್ನಲು ಅವಕಾಶವಿದೆ. ಹರಿವಾಣ ದೀಪದ ಆ-ರತಿಯ ಪ್ರಕಾರವೂ ಒಂದುಂಟು. ಇದು ಕದಲದ ಆರತಿ! ನೀರ-ಅಂಜನ ದೀಪ! ಕರ್ತ್-ಜಲ! ಈ ಪ್ರತಿಮಾಶಿಲ್ಪದ 'ಪ್ರತೀಯಮಾನಂ ಅರ್ಥತತ್ವಂ' ಸಹಜ ರಮಣೀಯವಿದೆ. ದೀಪ ಆವಲಿಯ ಸಮಯದ 'ಪ್ರಣತಿ' ಯಕ್ಷರಾತ್ರಿಯು ಬಗೆಗಿನ ಆನಂದದ ಪೂಜ್ಯಭಾವದ ವಂದನಾ ಪ್ರಕಾರವು ಇದು. ಒಟ್ಟಿನಲ್ಲಿ ಈ ದೀಪ ಪೂಜೆ, ಜೀವನ ಮಾರ್ಗದರ್ಶಕ ಪ್ರಕಾಶಕ್ಕಾಗಿ ಅಲ್ಲ; ಅಗಮ್ಯ, ಗೂಢದ ಸಂಸ್ಪರ್ಶನಾನಂದಕ್ಕಾಗಿ ಮಾತ್ರ.

ಸವಿತೃ-ಪ್ರಕಾಶದ ಎದುರು 'ಅಹಃ ಚ ಕೃಷ್ಣಂ ಅಹಃ ಅರ್ಜುನಂ ಚ'.[೧೭] : ಹಗಲು ಕೃಷ್ಣ (ವರ್ಣ) ಮತ್ತು ಅರ್ಜುನ (ಶುಭ್ರ) ಈ ಉಭಯ ವರ್ಣದ್ದೂ ಉಂಟು; 'ರಾತ್ರಿಯೇ ಸೂರ್ಯನನ್ನು ಹಡೆದವಳು' 'ವೃತ್ರಾತ್ ಜಾತೋ ದಿವಾಕರಃ, ಇಂತಹ ಅಸುರ ಮಾಯಾ ವರ್ಣರಂಜಿತ ಮೋಡಿಯ ಮಾತುಗಳ ಮೂಲ ಬಣ್ಣ ಬೆಳಕಿಗೆ ಬರದೆ ಇರಲು ಶಕ್ಯವಿಲ್ಲ-ವ್ಯಾಹೃತಿತ್ರಯದ ಮತ್ತು ಏಕಂ ಸಂತರ ಭೂಮಿಕೆಯೊಳಗಿನ ಮೂಲಭೂತ ವ್ಯತ್ಯಾಸವನ್ನು ನೆನಪಿನಲ್ಲಿ ಇಟ್ಟರೆ. ಭೂಃ, ಭುವಃ ಇವು ಎರಡೇ ವ್ಯಾಹೃತಿ, ನಾನು-ನೀನು, ಈ ಸಂಬಂಧದಂತೆ ಅನ್ಯೋನ್ಯವಾಗಿವೆ. ಇವು ಒಂದರಿಂದ ಇನ್ನೊಂದು ಅಂಗಾಂಗೀ ಭಾವದುವೇ : Logical continuum ಇದು. ಆದರೆ, ಮೂರನೆಯ 'ಸುವಃ' (ಸ್ವಃ) ಈ ವ್ಯಾಹೃತಿ ನೀರಾಲಂಬ, ಸ್ವತಂತ್ರ ಸ್ವಯಂಪ್ರಕಾಶರೂಪ ತತ್ವವೇ ಆಗಿದೆ. ಈ 'ತತ್' ಎಂದರೆ ಸವಿತೃ : ಪ್ರಕಾಶವೇ, ತತ್=ಏಕಂ ಸತ್ ಇದು ಸತ್-ತ್ವ→ರಜ→ತಮಸ್ ಅಥವಾ ತಮಸ್ ರಜ ಸತ್‌ತ್ವ ಹೀಗೆ ಇಳಿಕೆ-ಏರಿಕೆಯ ರೂಪದಲ್ಲಿ ಪ್ರತೀತಿಗೆ ಬರುವ ರೇತಸತ್ಯದ ಪಾತಳಿಯ ಸಂ-ಗತಿ. ಅಂತರಿಕ್ಷಾತ್-ವಾಯುಃ, ವಾಯೋಃ, ಅಗ್ನಿಃ, ಅಗ್ನೇಃ ಆಪಃ, ಅದ್ಭ್ಯಃ ಪೃಥಿವೀ. ಇದು ಭೌತ ಅಥವಾ ಆದಿದೈವಿಕ ಸತ್ಯ, ಋತ ಸ್ವರೂಪೀ ಸ್ವಯಂ ಪ್ರಕಾಶಯುಕ್ತ ಅರ್ಥ : ನಿಯಮಾಧಿಷ್ಠಿತ ಸತ್ಯವಲ್ಲ.

ಯುಕ್ತ ಜೀವನ ತ್ರಿಕೋನದ ಕೋನವು 'ಲಘು'ವಾಗುವಾಗ ಅದ ರೇತ ಸತ್ಯದ=ಸ್ವ-ಅರ್ಥದ ಪಾತಳಿಯ ಕಡೆಗೆ ಒಲೆಯುತ್ತದೆ. ಅಥವಾ ರೇತಸತ್ಯದ ವಿಪರೀತ ಪ್ರತಿಕ್ರಿಯೆಯಾಗಿ ಈ ಕೋನ 'ವಿಶಾಲ'ವಾಗುವುದುಂಟು. ಆದರೆ, ನಿಜವಾದ 'ಪರಿ'ಪಕ್ವ ಬುದ್ಧಿಯ ಪರಿಣತಿ ಅಲ್ಲವಾಗಿದ್ದರೆ, ಇದು ಸುಪರಿಣಾಮಕಾರಿಯಾಗದು. ಏಕಂ : ಸತ್ ಪಂಥವು ಆ-ತ್ಮನ್, ಪರಮಪದ ಇಂಥ ಸಂಮೋಹಕ ನಿರಾಧಾರ ಶಬ್ದಪ್ರತಿಮೆಗಳನ್ನು ಸೃಜಿಸಿ ಮನು-ಜ ಪಾತಳಿಯ ಜೀವನ ರೀತಿಯನ್ನು ನರ-ಜಂತುಗಳ ಪಾತಳಿಗೆ ತರುವ ತಂತ್ರ ಹೂಡಿದೆ. ನಿಜವಾಗಿಯೂ ಭೂಃ-ಭುವಃ ಇವೆರಡರ ನಡುವಣ ಅವಕಾಶದ ಹೊರಗೆ ಇರುವುದು ಅರ್ಥ=ವಿಚಾರ : ಜ್ಞಾನಸ್ವರೂಪ ಸ್ವಯಂ ಪ್ರಕಾಶ. ಸಮಾಜ ಸಮ್ಮುಖ ಜೀವನ ರೀತಿಯ ಕೃತಾರ್ಥದ ಬಾಳು ಇದು ಪ್ರಕಾಶರೂಪ ಜೀವನ. ಆದಕಾರಣ, ಸವಿತೃವಿನ ನಿತ್ಯಸ್ಮರಣ ಮನು-ಜರ ಕರ್ತವ್ಯ.

ತತ್ ಸವಿತುಃ ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ।
ಧೀಯೋ ಯೋ ನಃ ಪ್ರಚೋದಯಾತ್।[೧೮]

ಟಿಪ್ಪಣಿಗಳು

೧. Bertrand Russell ***History of philosophy*** pp 54-66

೨. ***ಛಾಂದೋಗ್ಯೋಪನಿಪತ್ತು*** ೮.೩.೫ ಮತ್ತು ***ಬೃಹದಾರಣ್ಯಕೋಪನಿಷತ್ತು*** ೫-೫-೧

೩. ***ಕೌಷೀತಕೀ ಉಪನಿಷತ್ತು*** ೧-೬

೪. ***ಬೃಹದಾರಣ್ಯಕೋಪನಿಷತ್ತು*** ೪-೩, ೩೨

೫. Jessic L Weston ***From Ritual to Romance,*** Anchor books U.S.A.

೬. ಮಧ್ವಾಚಾರ್ಯ-ಶ್ರೀ ***ಮನ್ಮಹಾಭಾರತ ತಾತ್ಪರ್ಯ ನಿರ್ಣಯ*** ೨. ೧೨೭ರಿಂದ ೧೨೯ ಉಡುಪಿ.

೭. ***ಋಗ್ವೇದ ಸಂಹಿತೆ*** x-೧೩೦-೩ ಮತ್ತು x-೧೧೧-೫

೮. ***ಭಗವದ್ಗೀತೆ*** ಅಧ್ಯಾಯ ೧೧. ಈ ಅಧ್ಯಾಯವನ್ನು ವಿಶ್ವರೂಪ ಸಂದರ್ಶನ ಯೋಗ 'ವೆಂದೇ ಕರೆಯುತ್ತಾರೆ. ಇದೇ ಅಧ್ಯಾಯದ ಮೂರನೆಯ ಶ್ಲೋಕದಲ್ಲಿ "ದ್ರಷ್ಟುಮಿಚ್ಛಾಯಿ ತೇ ರೂಪಂ ಐಶ್ವರಂ ಪುರುಷೋತ್ತಮಂ" ಎಂದು ಅರ್ಜುನ ಕೇಳುತ್ತನೆ. ಆಗ 'ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ' ಎಂದು ಹೇಳುತ್ತಾನೆ (೧೧-೫) ಆ ಮುಂದಿನ ಶ್ಲೋಕಗಳೆಲ್ಲ ವಿಶ್ವರೂಪದ ಸಂದರ್ಶನವೇ ಆಗಿದೆ.

೯. ***ಋಗ್ವೇದ ಸಂಹಿತೆ*** x - ೧೩೫-೮

೧೦. Adolf E. Jensen ***Myth and Cult,*** Chicago University p. 324

೧೧. ***Ibid*** p. 131

೧೨. ***Ibid*** p. 322

೧೩. ಶ್ರೀಮದಾನಂದ ತೀರ್ಥ ***ಮಹಾಭಾರತ ತಾತ್ಪರ್ಯ ನಿರ್ಣಯ.*** ೨-೧೨೯

೧೪. ***ಋಗ್ವೇದ ಸಂಹಿತೆ*** IV-೨೬-೨

೧೫. ***ಅದೇ*** x 122, ೨

೧೬. ***ಅದೇ*** II - ೩೫-೧೦

೧೭. ***ಅದೇ*** vI - ೯-೧

೧೮. ***ಅದೇ*** - x-೧೯೧

ಭಾಗ - ೩

ನಾಗ-ಪ್ರತಿಮಾ ವಿಚಾರ

(ಸಾಂಸ್ಕೃತಿಕ ಐತಿಹ್ಯ)

ವಿಷಯ ಪ್ರಸ್ತಾವ

ಇದು ಶ್ರಾವಣಮಾಸ, ಮಳೆಗಾಲ. ಎಲ್ಲೆಲ್ಲೂ ಹಸಿರು ಬೆಳೆದು ನಿಲುತ್ತದೆ. ಹಾವುಗಳ ಕಾಟ ಹೆಚ್ಚಾಗುವ ಕಾಲ. "ದೇವರೇ, ನಮ್ಮನ್ನು ಹಾವುಗಳ ಬಾಯಿಂದ ಉಳಿಸಪ್ಪ" ಎಂಬ ಪ್ರಾರ್ಥನೆಯೊಡನೆ ನಾಗರಾಜನ ಪೂಜೆಯು ರೂಢಿಗೆ ಬಂದಿರಬೇಕು, ಎಂದು ಅರ್ಥ ಕಲ್ಪಿಸುವ ವಾಡಿಕೆ, ಒಂದುಂಟು. ಆದರೆ, ವಿಶ್ಲೇಷಣಾತ್ಮಕ ಈಗಿನ ಸ್ವರೂಪದ ತರ್ಕ-ಪ್ರತಿಷ್ಠಿತ ವಿಚಾರ: ವಿಮರ್ಶೆಯು ಶುರುವಾದ ಬಳಿಕ, ಈ ದೇವರು, ಈ ಧರ್ಮ ಸಂಪ್ರದಾಯಗಳು ಹುಟ್ಟಿವೆ, ಎಂಬ ಗ್ರಹಿಕೆ ಸರ್ವಥಾ ನಿರಾಧಾರ. ಜೀವನಾನುಭವ ಎಂದರೆ : ಆಚಾರ-ನಡೆವಳಿ ಮೊದಲು. ಆ ಬಳಿಕ ಆಚಾರಗಳ - ಅನುಭವಗಳ ಹಿನ್ನೆಲೆಯಲ್ಲಿ ವಿಚಾರವು, ತತ್ತ್ವಜ್ಞಾನವು ಮೈದಾಳಿದ್ದುಂಟು. ಪ್ರತಿಯೊಂದು ಧರ್ಮ-ಪಂಥೀಯ ತತ್ತ್ವಪ್ರಣಾಲಿಕೆಗೆ ಆಯಾ ಧರ್ಮದ 'ದಿವ್ಯ' ದೈವತ ಪವಾಡ ಕಥೆಗಳೇ ಜನ್ಮ ಕೊಟ್ಟದ್ದುಂಟು. ದೇವತಾರಾಧನೆಗೆ ಕಾರಣವಾದ ಆಚಾರ: ಸಂಪ್ರದಾಯ ಮೊದಲು; ಅದಕ್ಕೆ ಪೋಷಕವಾಗಿ ಆ ದೈವತದ 'ದಿವ್ಯ' ಪವಾಡ ಕಥೆಗಳು ಬಳಿಕ ಮೈದಾಳುತ್ತವೆ. ಈ ದಿವ್ಯ ಪವಾಡ ಕಥೆಗಳ ತಳಹದಿಯ ಮೇಲೆ ಆಯಾ ಪಂಥೀಯ ಅಧ್ಯಾತ್ಮ: ತತ್ತ್ವಜ್ಞಾನಮಂದಿರವು ನಿಂತಿರುತ್ತದೆ.

ನಾಗರಪಂಚಮಿ ಶ್ರಾವಣಮಾಸದಲ್ಲಿದ್ದರೆ, ಭಾದ್ರಪದದಲ್ಲಿ ಅನಂತ ಚತುರ್ದಶಿಯಿದೆ. ಅದು ಅನಂತನ ಹುಣ್ಣಿವೆಯಾದರೆ, ಶ್ರಾವಣದಲ್ಲಿ ನೂಲಹುಣ್ಣಿವೆ. ಅನಂತ ಎಂಬುದನ್ನು ಹಾವಿನ ಪರ್ಯಾಯ ನಾಮವಾಗಿ ಕಲ್ಪಿಸಲಾಗಿದೆ. ಸರ್ಪರೂಪ ಅನಂತನ ಹೆಸರಿನಲ್ಲಿ ಪೂಜೆಪಡೆದ ಒಂದು ದಾರವನ್ನು ಕೈಗೆ ಕಟ್ಟಿಕೊಳ್ಳಲಾಗುತ್ತದೆ. ನೂಲಹುಣ್ಣಿವೆಯ ತಿಂಗಳಲ್ಲಿ ಮಂತರಿಸಿದ ನೂಲನ್ನು ಜನಿವಾರ, ಶಿವದಾರ ಎಂಬ ಸಂಕೇತದಲ್ಲಿ ಧರಿಸಲಾಗುವುದು. ಶಿವನ ಹೆಸರಿನ ದಾರ, ಹಾವಿನ ಪ್ರತೀಕವೆಂದರೆ ಸೋಜಿಗಪಡಬೇಕಾಗಿಲ್ಲ. ಆದರೆ, ಯಜ್ಞದ ಉಪವೀತವೆಂಬುದು ವಸ್ತ್ರರೂಪದಲ್ಲೇ ಇರಬೇಕು. ವಸ್ತ್ರವು ದಾರವಾಗಿ ಪರಿಣಮಿಸಿದುದಕ್ಕೆ ನಾಗ-ಸಂಪ್ರದಾಯದ ಪ್ರಭಾವವೆ ಕಾರಣವಿರುವ ಶಕ್ಯತೆಯಿದೆ. ಜನಿವಾರದ ನೂಲಿನ ಎರಡು ತುದಿಗಳನ್ನು ಕೂಡಿಸಿ ಹಾಕುವ ಗಂಟಿನ ವಿಶಿಷ್ಟಪ್ರಕಾರದಲ್ಲಿ ಒಂದಕ್ಕೆ 'ರುದ್ರಗಂಟು' ಎಂದು ಹೆಸರು; ಇನ್ನೊಂದು 'ಬ್ರಹ್ಮಗಂಟು' ಈ 'ಬ್ರಹ್ಮ' ಸಂಕೇತಕ್ಕೆ ಏನು ಅರ್ಥ ? 'ಸುಬ್ರಹ್ಮ(ಣ್ಯ)' ದೇವರು ಸರ್ಪರೂಪನೆಂಬುದನ್ನು ಸ್ಮರಿಸಿಕೊಂಡರೆ ಈ 'ಬ್ರಹ್ಮ'ಗಂಟಿನೊಳಗಿನ ರಹಸ್ಯಾರ್ಥವು ಬಯಲಿಗೆ ಬರಲಿದೆ. ಋಗ್ವೇದ ಕಾಲದ ತರುವಾಯ ಯಜ್ಞದ 'ಉಪವೀತ'ವು ಪ್ರತಿಷ್ಠೆಗೆ ಎರವಾಗುತ್ತದೆ. ಅದರ ಸ್ಥಳವನ್ನು ಆಕ್ರಮಿಸಿದ 'ಯಜ್ಞ'ದ ಹೆಸರಿನ ಈ ದಾರವು, ಸರ್ಪಸಾಮರ್ಥ್ಯದ ಪ್ರತೀಕವಾಗಿಯೆ ಧರಿಸಲ್ಪಡುತ್ತಿರಲಿಕ್ಕೆ ಬೇಕೆಂದು ಹೇಳಬಹುದಾಗಿದೆ. 'ಯಜ್ಞ' ಎಂಬುದು, ಗ್ರಂಥಸ್ಥ ವಿವರಗಳಿಂದಲೂ ತಿಳಿಯಲಾರದ ಗೂಢ ಅಥವಾ ಪ್ರಾಥಮಿಕ ವಿಚಾರವೆಂದು ತಿರಸ್ಕೃತವಾಗುವ ಸುಮಾರಿಗೆ ಅದರ ಸ್ವರೂಪವೇ ಆಮೂಲಾಗ್ರ

ಬದಲಾಗುತ್ತದೆ! ಅದಿತಿಃ ತ್ವಷ್ಟ್ರ: (ತಕ್ಷಕ) ಸಂಪ್ರದಾಯದ ಪ್ರಭಾವ ಬೆಳೆದು ರುದ್ರ, ವಿಷ್ಣು, ಕಾಲಿ ಪೂಜೆಗೊಳ್ಳುತ್ತಾರೆ. ಈ ಜನಿವಾರವು, ಈ ನೂತನಯುಗದ ಸಂಕೇತವಾಗಿದೆ. ಈ ಜನಿವಾರ, ಎಂಬ ದಾರದ ರುದ್ರಗಂಟು, ಬ್ರಹ್ಮಗಂಟು ಈ ಪ್ರತಿಮಾ ಸಂಕೇತಗಳು ಸಹ ಈ ದಾರವು ಸರ್ಪರೂಪವಿರಬೇಕೆಂಬುದನ್ನೇ ಸೂಚಿಸುತ್ತಿವೆ. ರುದ್ರನೇ ಸರ್ಪನೆಂದ ಬಳಿಕ ಆತನ ಅರ್ಧಾಂಗಿಯರೆಂಬ ಗಂಗೆ-ಗೌರಿಯರ ಹೆಸರಿನಲ್ಲಿ ಧರಿಸಲಾಗುವ ದಾರಗಳ ಮೂಲ ಸ್ವರೂಪ ಏನು? ಎಂಬುದನ್ನು ವಿವರಿಸುವ ಆವಶ್ಯಕತೆ ಇಲ್ಲ. ಭಾದ್ರಪದ ಆಶ್ವೀಜಗಳಲ್ಲಿ ಇಂತಹ ದಾರದ ಹಬ್ಬಗಳಿವೆ. ದೀಪಾವಳಿಯ ಪ್ರಾರಂಭದ, ನರಕಚತುರ್ದಶಿ, ನಿಜವಾಗಿ ಹಾವಿಗೆ ಸಂಬಂಧಿಸಿದ್ದೇ. ನರಕ ಇದರ ಉಚ್ಚಾರವು, ನಾರಕ ಎಂದೂ ಉಂಟು. ವಾಜಸನೇಯ ಸಂಹಿತೆ, ಅಥರ್ವವೇದ ಇವುಗಳಲ್ಲಿ 'ನಾರಕ' ಈ ಪದಪ್ರಯೋಗವೆ ಇದೆ. ನರಕಾಸುರನನ್ನು ಯಾದವ ಕೃಷ್ಣನು ಕೊಂದನೆಂದು ಸಾಂಪ್ರದಾಯಿಕ ನಂಬುಗೆಯಿದೆ. ಯಮುನಾ ನದಿಯಲ್ಲಿ ಕೊಲ್ಲಲ್ಪಟ್ಟ ಕಾಲಿಯನಂತೆ ನರಕ : 'ನಾರಕ'ನೆಂಬವನೂ ಒಬ್ಬ ನಾಗರಾಜನೇ ಸರಿ. ಇದನ್ನು, 'ನಾರ' ಈ ಶಬ್ದ ಸಂಕೇತವೆ ಸಾರಿ ಹೇಳುತ್ತಿದೆ. ಏಕೆಂದರೆ ನಾರ : ನೀರು ಮತ್ತು ನಾಗ (ಹಾವು) ಇವು ಸಮಾನಾರ್ಥಕ (ಶಬ್ದ) ಸಂಕೇತಗಳೂ ಅಹುದು. ಆದರೆ, 'ನಾರಕ'ನು ನಾಗರೂಪನೆಂಬುದು ಪುರಾಣಕಥೆಗಳಲ್ಲಿ ಬಚ್ಚಿ ಉಳಿದಿದೆ! 'ನಾರಕ'ನು ಸರ್ಪನೆಂದರೆ 'ನಾರಣ'ನೂ ಸರ್ಪನೆಂಬುದು ಬಯಲಿಗೆ ಬರಲಿದೆ! 'ನಾರ'-'ನಾರಕ' ಈ ಶಬ್ದಸಂಕೇತಗಳ ಮೂಲಕ, ನಾಗ ಮತ್ತು ನೀರು ಇವೆರಡರಲ್ಲಿ ಇರುವ ಅನ್ಯೋನ್ಯ ಸಂಬಂಧವು ಬೆಳಕಿಗೆ ಬರುತ್ತಿದೆ. 'ನಾರ' ಎಂದು ನೀರಿಗೆ ಇನ್ನೊಂದು ಹೆಸರು. 'ನಾರಾಯಣ' ವಿಷ್ಣುದೈವತಕ್ಕೆ ಜಲಶಾಯೀ ಎಂಬ ಪರ್ಯಾಯ ನಾಮವಿದೆ. ಇದೇ ಮೇರೆಗೆ ದೇವರ ಶೇಷ - ಶಯನ ಪ್ರತಿಮಾ ಚಿತ್ರಗಳು ಸುಪ್ರಸಿದ್ಧವಾಗಿವೆ. ಈ ಹಿನ್ನೆಲೆಯಲ್ಲಿ ನೀರು : ನಾರ ಮತ್ತು ಹಾವು ಇವು ಸಮಾನಾರ್ಥ ಪದಗಳಾಗುತ್ತವೆ. 'ಆಪೋನಾರಾಃ' ಎಂದು ಹೇಳಿ 'ಆಪೋ ವೈ ನರಸೂನವಃ' ಇರುವುದಾಗಿ ಮಹಾಭಾರತವು ಹೇಳುತ್ತಿದೆ. ಆದಕಾರಣ 'ನರಸೂನವಃ' ಎಂದರೆ ನರರ ಸಂತಾನವು, ನೀರಿನ ರೂಪದ್ದೇ ಆಯಿತು. ಇಂತು ನಾರ ಮತ್ತು ನರ, ಇವು ಎರಡೂ ಅಭಿನ್ನ ನಾಗಪ್ರತಿಮೆಯ ಎರಡು ರೂಪಗಳೆ ಎಂಬುದು ಇಲ್ಲಿ ದೃಢಪಡುತ್ತಿದೆ. ಅದ್ವೈತ ತತ್ತ್ವಜ್ಞಾನದ ತಳಹದಿಯೆ ಇದು. 'ಅಪಾಂ ನಪಾತ್' (ನೀರಿನ ಮಗು) ಮತ್ತು ತನೂ-ನಪಾತ್ (ತನ್ನ ತನುವಿನಿಂದ ತಾನೇ ಹುಟ್ಟಿದ ಮಗು) ಋಗ್ವೇದದೊಳಗಿನ ಇವೆರಡೂ ಶಬ್ದಪ್ರತಿಮೆಗಳು ತುಂಬ ಸಂಭ್ರಮಕಾರಿಯಾದ ರೀತಿಯಲ್ಲಿ ಅದ್ಭುತ ಅರ್ಥ ಶಕ್ತಿಯನ್ನು ಪ್ರದರ್ಶಿಸುತ್ತಿರುವ ಶಬ್ದ ಸಂಕೇತಗಳಾಗಿವೆ. ನೀರು ಮತ್ತು ಹಾವು ಬೇರೆಯಲ್ಲ. ನೀರಿನಿಂದೇ (ತನುವಿನ) ಇನ್ನೊಂದು ರೂಪ: ಈ ಮಗು; ಹಾವು ಅಥವಾ 'ಆಪೋವತ್ಸ' ಚಂದ್ರ, ವೃಕ್ಷವೂ ನಿಜ. "ಸಲಿಲ ಏಕಂ ದೃಷ್ಟಾ ಅದ್ವೈತಃ ಭವತಿ । ಏಷಃ ಬ್ರಹ್ಮಲೋಕಃ ಸಮ್ರಾಟ್.[೧]

ನರ (ಕ) ಮತ್ತು ನಾರ (ಕ) ಈ ಎರಡೂ ಉಚ್ಚಾರಗಳಿರುವ ನರ ಮತ್ತು ನಾರ ಸಂಕೇತಗಳು ತೋರಿಕೆಯಲ್ಲಿ ಬೇರೆ ಕಂಡರೂ ಆಶಯ ಒಂದೇ ಆಗಿವೆ. ಒಂದೇ ಅರ್ಥದ ಎರಡು ಆಕೃತಿಗಳು ಇವು. 'ನರನು' ಶ್ರದ್ಧಾ ತಪಸ್ಸಿನ ಬಲದಿಂದ 'ನಾರಾಯಣ' ನಾಗಬಲ್ಲ ಎಂಬ ಹಿಂದೀ ಭಾಷೆಯ ಗಾದೆಯ ಮೂಲಕವೂ ಈ ವಿಚಾರಕ್ಕೆ ಪುಷ್ಟಿ ದೊರೆಯುತ್ತಿದೆ. 'ನರ ಕರಣೀ ಕರೇಸೊ ನರಕಾ ನಾರಾಯಣ ಹೋಯ ಜಾಯ' ಶ್ರೀಮನ್ನಾರಾಯಣನ ದರ್ಶನಕ್ಕಾಗಿ ಹೋದ ನಾರದನಿಗೆ ಬದರಿಯ ಆಶ್ರಮದಲ್ಲಿ 'ನರ' ಹಾಗೂ 'ನಾರಾ(ಯಣ)' ಇವರಿಬ್ಬರೂ ತಪೋನಿರತರಾಗಿದ್ದುದು ಕಂಡಿತಂತೆ. ಮಹಾಭಾರತಸ್ಥ ಈ ಕಥೆಯಿಂದಲೂ ನರ-ನಾರರು ಹೀಗೆ ಅವಿಚ್ಛಿನ್ನ ರೀತಿಯಲ್ಲಿ ಸಂ-ಬದ್ಧರಾಗಿರುವುದೇ ಹೊರವಡುತ್ತದೆ. ಸಂಸ್ಕೃತ ಭಾಷೆಯ 'ನೃ' ಶಬ್ದ ಪ್ರತಿಮೆಗೂ ಏಕವಚನಾಂತ 'ನರ' ಪದಕ್ಕೂ ಏನು ಸಂಬಂಧವು ಕಾಣುವುದಿಲ್ಲ. ಸಂಸ್ಕೃತ ಭಾಷೆಯ 'ನೃ' ಪದವು 'ನಾ' (ಏಕವಚನ) 'ನರೌ' (ದ್ವಿವಚನ) 'ನರಾಃ' (ಬಹುವಚನ); ಹೀಗೆ ಆಕಾರ ಪಡೆಯುತ್ತದೆ. ಆದಕಾರಣ, ಸಂಸ್ಕೃತ ಭಾಷೆಯಲ್ಲಿ ಕಾಣಸಿಕೊಳ್ಳುವ ಏಕವಚನಾಂತ 'ನರ' (ವ್ಯಕ್ತಿ) ಎಂಬ ಪದವು, ಸಂಸ್ಕೃತ ಭಾಷೆಯಲ್ಲಿ ಬೇರೊಂದು ಭಾಷೆಯಿಂದ ಬಂದ ಮಾತು ಆಗಿರಲಿಕ್ಕೆ ಬೇಕೆಂಬುದು ಸ್ಪಷ್ಟವಿದೆ. 'ನಾರ' ಶಬ್ದವು ಸಂಸ್ಕೃತಕ್ಕೆ ಸಲ್ಲದ ಮಾತೆಂದು

ಡಾ. ಎಸ್. ಕೆ. ಡೇ ಪ್ರಭೃತಿ ವಿದ್ವಾಂಸರು ಹೇಳುತ್ತಾರೆ. "Probably invented to explain" ನಾರಾಯಣ ಎಂದು ಮೋನಿಯರ್ ವಿಲಿಯಂಸನ ಕೋಶವು ನಮೂದಿಸಿದೆ.

'ಆಪೋ ವೈ ನರಸೂನವಃ' ಎನ್ನುವುದರಿಂದಲೂ ನಾರ=ನರ ಈ ಪ್ರತಿಮೆಗಳ ವಿಚಾರಗರ್ಭವು (Concept) ಸಮಾನವಿರುವುದೇ ಸಿದ್ಧವಾಗುತ್ತದೆ. ಆದರೆ, ನಾರ: ನರ: ಹಾವು ಎಂಬ ಮಾತನ್ನು ತೆರೆಯ ಮರೆಯಲ್ಲಿ ಉಳಿಸಲಾಗಿದೆ! ಇದಕ್ಕೆ ಎರಡು ಕಾರಣಗಳುಂಟು. ಅನೇಕ ಲಕ್ಷ ವರುಷಗಳ ಹಿಂದಿನ ಸಂಪ್ರದಾಯ ಈ ನಾಗಭಕ್ತಿ. ಆದುದರಿಂದ, ನಾಗಪೂಜೆಯ ಮೂಲ ಸ್ವರೂಪವು ಮರೆತು ಹೋದಂತೆ ಆಗಿದ್ದರೆ ಸೋಜಿಗವಲ್ಲ. ನಾಗಪೂಜೆ ಮಾನವ ಸಂಸ್ಕೃತಿಯ ಆದಿಮಕಾಲದ ಜೀವನಪರಿಸರವನ್ನು ಕಣ್ಣುಮುಂದೆ ನಿಲ್ಲಿಸಬಲ್ಲುದಾಗಿದೆ. ಭಾರತದಲ್ಲಿ ಮಾತ್ರ ಇದು ಇಂದಿಗೂ ಸಮಾಜಿಕ ಎಲ್ಲ ಹಂತದ ಜೀವನ ರೀತಿಯಲ್ಲಿಯೂ ಹಾಸುಹೊಕ್ಕಾಗಿ ಉಳಿದಿದ್ದರೂ, ಪ್ರಗತಿ ಪಥದೊಳಗಿನ ಅನೇಕ ರಾಷ್ಟ್ರಗಳಲ್ಲಿ ನಾಗಪೂಜಾ ಸಂಪ್ರದಾಯವು ಮರ್ಯಾದೆಗೆ ಎರವಾಗಿದೆ. ನಾಗಪ್ರತಿಮೆಗೆ ಭಾರತದಲ್ಲಿಯಷ್ಟು ಪ್ರತಿಷ್ಠೆ ಗೌರವಗಳು ಪ್ರಗತಿಪರ ಯಾವ ದೇಶದಲ್ಲಿಯೂ ಕಾಣಲು ದೊರೆಯಲಾರದು. ಇಂದಿನ ಜೀವನ ರೀತಿಯಲ್ಲಿ ನಾಗಪ್ರತಿಮಾ ಸಂಕೇತಗಳು ಕೆಲಮಟ್ಟಿಗೆ ಸ್ಥಾನಭ್ರಷ್ಟವಾಗಿರುವಂತೆ ತೋರಿದರೂ ಪುರಾತನ ಸಾಹಿತ್ಯದೊಳಗಿನ ನಾಗದೈವತದ ದಿವ್ಯ ಪವಾಡಗಳಲ್ಲಿರುವ ಆ 'ಶೇಷ'ವನ್ನು ನಿಃಶೇಷಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ. ಡ್ರಾಗನ್ (Dragon) ಅಹಿಯ ಸಂಹಾರಕ್ಕಾಗಿ ನಡೆದ ಹೋರಾಟದ ಜಾನಪದ ಕಥೆಗಳು ಇಲ್ಲದ ಜನಾಂಗಗಳು ನಮಗೆ ದೊರೆಯಲಾರವು.

ಅಹಿ: ಡ್ರಾಗನ್ ಸಂಹಾರದ ಕಥೆಗಳಲ್ಲಿ ಮಾನವ ಸಂಸ್ಕೃತಿಯ ಪೂರ್ವಪೀಠಿಕೆಯು ಒಳಗೊಂಡಿರುವುದಾಗಿ ಕಂಡುಬರುತ್ತದೆ. ಇನ್ನು ಭಾಷೆ : ಸಂಸ್ಕೃತಿಯು ಮೈದಾಳುವದರಲ್ಲಿದೆ. ಮಾನವ ತಂಡಗಳು ಅಲ್ಲಲ್ಲಿ ಘೋರ ಅರಣ್ಯಗಳಲ್ಲಿ ವನೇಚರ ವೃತ್ತಿಯಲ್ಲಿ ಅಲೆಯುತ್ತಿವೆ. ಆ ಸುಮಾರಿನ ಜೀವನ ಪರಿಸರವು ಎಂತಹದಿತ್ತು? ಎಂಬುದನ್ನು ಶಾಸ್ತ್ರಜ್ಞರು ಸುಮಾರಾಗಿ ನಿರ್ಧರಿಸಿಕೊಳ್ಳಲು ಸಮರ್ಥರಾಗಿದ್ದಾರೆ. ಪ್ರಾಚ್ಯವಸ್ತುಗಳಿಗಾಗಿ ಆದ ಉತ್ಖನನದಲ್ಲಿ ನೂರಾರು ಅಡಿ ಉದ್ದ ಬೆನ್ನೆಲುಬಿನ ಸರಿಸೃಪ ಮಹಾವಂಶದ (Megalosaurus) ಪ್ರಾಣಿಗಳ ಅವಶೇಷಗಳು ದೊರೆತಿವೆ. ಇವುಗಳಿಗೆ ಪಕ್ಕಗಳೂ ಇದ್ದು, ಅವು ನೀರು ಹಾಗೂ ನೆಲದ ಮೇಲೆ ಕೂಡಿಯೆ ಇರಬಲ್ಲುವಾಗಿದ್ದವಂತೆ. ಮಾನವನಿಗಿಂತ ಅತ್ಯಂತ ಪುಷ್ಟ ಬಲಿಷ್ಠ ದೇಹದ ರಾಕ್ಷಸ ಸ್ವರೂಪಿ ಈ ಪ್ರಾಣಿಗಳೊಡನೆ ಹೋರಾಡದೆ, ಮಾನವರಿಗೆ ಅಂದು ಬದುಕು ಅಶಕ್ಯವಿತ್ತು.

ಈ ದೇವತಾ-ಭಾವ ಹೊಳೆದ ಬಗೆ

ನಾಗ-ಪ್ರತಿಮಾ ಪೂಜೆಯಲ್ಲಿ ಮಾನವ ಸಂಸ್ಕೃತಿಯ ಇತಿಹಾಸವೆ ಸಾರರೂಪದಲ್ಲಿ ಒಳಗೊಂಡಿದೆ, ಎಂದರೆ ಅತಿಶಯೋಕ್ತಿಯಾಗದು. ದೇವತಾ ಅವತಾರ ಕಲ್ಪನೆಯ ಮೂಲಕವಾಗಿಯೂ ಈ ಮಾತು ಗಮನಕ್ಕೆ ಬರಲಿದೆ. ದಶಾವತಾರಗಳ ಇಂದಿನ ಕ್ರಮ, ಒಮ್ಮೆಲೆ - ಮೊದಲಿನಿಂದಲೇ ಪ್ರಚಲಿತವಿರಲಿಲ್ಲ. 'ಅವತಾರ' ಎಂಬ ಮಾತೂ ಸಹ ಒಂದು ಬಗೆಯಲ್ಲಿ ಅರ್ವಾಚೀನ. 'ಪ್ರಾದುರ್ಭಾವ' ಎಂಬ ಶಬ್ದವು, 'ಅವತಾರ'ಕ್ಕಿಂತಲೂ ಮೊದಲು ಪ್ರಚಾರದಲ್ಲಿ ಇದ್ದಿತು, ಎಂದು ಡಾ. ಎಸ್. ಕೆ. ಡೇ ಅವರು 'ನಾರಾಯಣ' ಪ್ರತಿಮೆಯನ್ನು ಕುರಿತು ಒಂದು ಪ್ರಬಂಧದಲ್ಲಿ ಹೇಳಿದ್ದುಂಟು. ಋಗ್ವೇದದಲ್ಲಿಯೆ ಅವತಾರ ವಿಚಾರದ ಬೀಜಗಳು ಇರುವುದಾಗಿ ಬಗೆಯಲಾಗಿದೆ. ಆದರೆ. 'ರಾಮ' 'ಕೃಷ್ಣ' ಇಂತಹ ಅವತಾರದ ಕಲ್ಪನೆ ತೀರ ಇತ್ತಿಚಿನದು; ಅದಕ್ಕೂ ಮುಂಚೆ ಮತ್ಸ್ಯ, ಕೂರ್ಮಾದಿ 'ದಿವ್ಯ' ದೈವೀಸಾಮರ್ಥ್ಯವು ಉಂಟೆಂದು ಬಗೆಯಲಾದ ನಿಸರ್ಗಸ್ಥ ಪ್ರಾಣಿ-ವೃಕ್ಷಾದಿಗಳ ಆರಾಧನೆಯ ಪ್ರಚಲಿತವಿತ್ತು. "ಅಶ್ವತ್ಥೋ ದೇವಸದನಃ" ಎಂಬ ವಾಕ್ಯವು ಅಥರ್ವವೇದದಲ್ಲಿದೆ. ಅಶ್ವತ್ಥ, ಔದುಂಬರಾದಿ ವೃಕ್ಷಗಳಲ್ಲಿ 'ದೇವರು' ಇದ್ದಾನೆ, ಎಂಬುದು ಹೇಗೆ ಗೊತ್ತಾಗುತ್ತಿತ್ತು? ಎಂಬ ಪ್ರಶ್ನೆ ಮಹತ್ವದ್ದು. ಈ ಪ್ರಶ್ನೆಯನ್ನು ಮರೆತು ಬಿಡಲಾಗಿದೆ! ಈ ಪ್ರಶ್ನೆಯನ್ನು ನೆನಪಿಗೆ ತಂದುಕೊಂಡರೆ ಈ ಸಮಸ್ಯೆಗೆ ತಾನೇ ಉತ್ತರವು ದೊರೆಯಲಿದೆ.

ಪಕ್ಕನೆ ಅದ್ಭುತ ಆಶ್ಚರ್ಯಕಾರ ಏನೋಂದು ಘಟನೆಯು, ಸಂಭವಿಸಿ ಅಥವಾ ದೈತ್ಯ ಆಕೃತಿಯು ಕಂಡಂತಾಗಿ-ಉಕ್ಕಿಬಿದ್ದು ಮೈಮೇಲಿನ ಎಚ್ಚರವೂ ತಪ್ಪುವುದು ಬಾಲಭಾವದ ಮನಸ್ಸಿನ ಲಕ್ಷಣವಾಗಿದೆ. ಈ ಭಾವೋತ್ಕಟ ಮನಃಸ್ಥಿತಿಯಲ್ಲಿ ಮೈಯಲ್ಲಿ 'ಗಾಳಿ' ಹೊಕ್ಕಂತೆ ಆಗಿ, ಸುಂದು ಹಿಡಿದು ತೆಪ್ಪಗೆ ಇರುವ ಮನೋಭಾವ ಕೆಲವರದು; ಇನ್ನು ಕೆಲವರಿಗೆ ಏನೇನೊ ಕಂಡಂತೆ ಎನಿಸಿ ಬಾಯಿಂದ ನಿರರ್ಗಳ ವಾಕ್‌ಪ್ರವಾಹವು ಆರಂಭವಾಗುವುದುಂಟು. ಈ ಬಗೆಯ ಆವೇಶವನ್ನು ಕಂಡಾಗ ಆ ಉನ್ಮನಸ್ಕ ಅವಸ್ಥೆಯಲ್ಲಿ ಆಡಲಾಗುವ ಮಾತುಗಳಲ್ಲಿ ಕೆಲವೊಮ್ಮೆ ಅತ್ಯಂತ ಅರ್ಥಗರ್ಭಿತ ಸೂತ್ರಗಳು ಇರುವುದೂ ಉಂಟು. ಒಬ್ಬ ತಜ್ಞನು, ಇದನ್ನು ದೈವೀಭಾವದಲ್ಲಿ ಬರುವ 'ಹುಚ್ಚು' ಎನ್ನುತ್ತಾನೆ. ಈ 'ಹುಚ್ಚು' ಮಾನವ ಸಂಸ್ಕೃತಿಯ ಪ್ರಗತಿಗೆ ಕೆಲಮಟ್ಟಿಗೆ ಉಪಕಾರಕವಾಗಿರುವುದೂ ಸುಳ್ಳಲ್ಲ ಇಂತಹ 'ಹುಚ್ಚು' ತಲೆಯೆತ್ತಿದಾಗ ಮಾನವನೊಳಗಿನ ಸುಪ್ತ ಚೇತನಸ್ಥ ಕೆಲವೊಂದು ಅದ್ಭುತ ದಿವ್ಯಮನೋಭಾವವು, ತನಗೆ ಹೊಳೆದ ಆ ಸಾಮಾಜಿಕ ಪರಿಸರದ : ದಿಕ್ಕಾಲದ ಆಚೆಗಿನ ವಾಸ್ತವಃ ಸತ್ಯದ ಕೆಲವೊಂದು ಅಂಶವನ್ನು ಕಾಣಬಲ್ಲುದು, ಎಂದು ಆಧುನಿಕ ಸಂಶೋಧಕರು ಕಂಡುಹಿಡಿದ್ದಾರೆ. ಸಂಕೇತ-ಪ್ರತೀಕಾತ್ಮಕ ಸ್ವಪ್ನಗಳ ರೂಪದಲ್ಲಿಯೂ ಈ ವಾಸ್ತವಃ ಸತ್ಯವು ಕೆಲವೊಮ್ಮೆ ಹೊಳೆದು ಹೋಗಬಲ್ಲದು ಎಂದು ಆಧುನಿಕ ಮನೋವಿಶ್ಲೇಷಣ ಶಾಸ್ತ್ರದ ಅಭಿಪ್ರಾಯವಾಗಿದೆ. ಮೈಯಲ್ಲಿ ಬರುತ್ತಿದ್ದ ಅಥವಾ ಅದ್ಭುತ ಸ್ವಪ್ನಗಳನ್ನು ಕಾಣಬಲ್ಲ 'ಕಣಿ'ಯವರಿಂದಲೇ ಮಾನವ ಸಂಸ್ಕೃತಿಯ ಪ್ರಾರಂಭವು ಆಗಿರುವುದನ್ನು ಇತಿಹಾಸವೇ ಹೇಳುತ್ತಿದೆ. ಮಾನವ ಜನಾಂಗಕ್ಕೆ ಮೊತ್ತಮೊದಲು ದೇವತೆಗಳ ಅಸ್ತಿತ್ವವು ತಿಳಿದು ಬಂದುದು ಮೈಯಲ್ಲಿ 'ಆವೇಶ' ಬರುತ್ತಿದ್ದ ಕೆಲವೊಂದು ಭಾವೋನ್ಮತ್ತ, 'ಭಕ್ತ' ವರ್ಗದಿಂದಲೇ. ಅದಕಾರಣ, 'ನಾಗ' ಪೂಜೆ ಎಂದರೆ 'ನಾಗ'ನು ಮೈಯಲ್ಲಿ ಬರುತ್ತಿದ್ದಂತಹ ಒಂದು 'ದಿವ್ಯ' ವ್ಯಕ್ತಿಯ ಪೂಜೆಯಿಂದಲೆ ಈ ಸಂಪ್ರದಾಯವು ಆರಂಭವಾಗಿದೆ ಎಂಬಲ್ಲಿ ಸಂದೇಹವೆ ಇಲ್ಲ.

ಟಿಪ್ಪಣಿ

೧. *ಬೃಹದಾರಣ್ಯಕೋಪನಿಷತ್* ೪.೩-೩೨

ದೇವತಾ - ವಿಚಾರ ವಿಕಾಸಕ್ರಮ

ಈ ನಾಗಪ್ರತಿಮೆಯ ನಾನಾ ರೂಪಗಳನ್ನು ಗಮನಿಸಿದರೆ ಆ ದೈವತ ಪ್ರತಿಮಾವಿಕಾಸವು ಸ್ಪಷ್ಟವಾಗಿ ಅರಿಕೆಗೆ ಬರಲಿದೆ. ಶಾಕ್ತ, ಶೈವ, ವೈಷ್ಣವ, ಬೌದ್ಧ ಹಾಗೂ ಜೈನ ಈ ಎಲ್ಲ ಸಂಪ್ರದಾಯಗಳಲ್ಲೂ ನಾಗಪ್ರತಿಮೆಯ ಪೂಜೆಯಿದ್ದರೂ ಇವೆಲ್ಲವುಗಳ ವಿಕಾಸಕ್ರಮವನ್ನು, ಇಷ್ಟು ಅಲ್ಪಾವಕಾಶದಲ್ಲಿ, ವಿವರಿಸಲು ಶಕ್ಯವಿಲ್ಲ. ಮಾದರಿಗಾಗಿ ನಾರಾಯಣ-ವಿಷ್ಣು ಪ್ರತಿಮೆಯ ವಿಚಾರವೊಂದೇ ಸಾಕು. 'ಆಪೋ ನಾರಾಃ ಇತಿ ಪ್ರೋಕ್ತಾಃ' ಎಂದು 'ನಾರ' ಪ್ರತಿಮಾ: ಸಂಕೇತದ ಅರ್ಥವನ್ನು ಶ್ರೀಮನ್ನಾರಾಯಣನೇ ಸ್ವತಃ ನಾರದನಿಗೆ ಹೇಳಿರುವಂತೆ, ಮಹಾಭಾರತದ ಶಾಂತಿಪರ್ವದಲ್ಲಿ ವರ್ಣನೆಯುಂಟು. ಆಪ: ನೀರು ಎಂದರೆ 'ನಾರ'. ಹಾಗಾದರೆ ಈ ನೀರು: ನಾರವು ದೈವತ ಸ್ವರೂಪದಲ್ಲಿ ಕಂಡುದು ಹೇಗೆ? ಯಾವ ರೂಪದಲ್ಲಿ ಎಂಬುದು ಮುಖ್ಯ ಪ್ರಶ್ನೆ. ಇಂದು ಶ್ರೀಮನ್ನಾರಾಯಣ ದೈವತ ಪ್ರತಿಮೆಗೆ ನಾಲ್ಕು ಕೈಗಳಿದ್ದರೂ ಅದು ಮಾನವನ ಆಕಾರವುಳ್ಳದು ಆಗಿದೆ. ಆ ದಿವ್ಯ ನಾರ: ನೀರು ಇದು ಮನುಷ್ಯಾಕಾರದಲ್ಲೆ, ಮೊತ್ತಮೊದಲ ಬಾರಿ ಕಂಡಿತೆಂದು ಬಗೆಯಬಹುದೆ? ಅದು 'ದಿವ್ಯ' ಜಲ:ತತ್ತ್ವ; ದಿವ್ಯತ್ವದಲ್ಲಿ ಪವಾಡ ಚಮತ್ಕಾರ ಶಕ್ತಿಯು ಒಳಗೊಂಡಿರುತ್ತದೆ. ಆದಕಾರಣ, ದಿವ್ಯಶಕ್ತಿಯ, ಈ (ವಿಶ್ವದ) ಆದಿ ಜಲತತ್ತ್ವವು ಮಾನವರೂಪದಲ್ಲಿಯೆ ಕಂಡಿಲ್ಲವೆಂದು ಸಂದೇಹಿಸುವುದು ಅಶ್ರದ್ಧೆಯ ನಾಸ್ತಿಕತನದ ಲಕ್ಷಣವಾಗಿದೆ, ಎಂದು ಕೋಪಿಸಿಕೊಂಡು ಕೆಲವರು ಆಕ್ಷೇಪಿಸಬಹುದಾಗಿದೆ.

ಆದರೆ, ಹೀಗೆ ಗ್ರಹಿಸಲು ಆತಂಕವಿಷ್ಟೆ : ದಿವ್ಯ ಆಪತತ್ತ್ವದ ಈ ದೈವತವು ಹಾವಿನ ಮೇಲೆ ಮಲಗಿರುವ ಮೂರ್ತಿಗಳೂ ಪ್ರತಿಮೆಗಳೂ ಭಾರತದಲ್ಲಿ ಎಲ್ಲೆಲ್ಲೂ ಪೂಜೆಗೊಳ್ಳುತ್ತಿರುವ ಕಾರಣವೇನು? ನಾರಾಯಣನ ಇನ್ನೊಂದು ಹೆಸರಿನಂತೆ ಇರುವ ವಿಷ್ಣುವಿಗೆ ಅನಂತಶಯನ ಎಂಬ ಹೆಸರಿರುವಂತೆ 'ಅನಂತ' ಎಂದು ಪರ್ಯಾಯನಾಮವಿದೆ. 'ನಾರಾಯಣ' ನಾಮದಲ್ಲಿ ಈ ಮಾತು ಇನ್ನಷ್ಟು ದೃಢಪಡುತ್ತಿದೆ; 'ನಾರ' ಸಂಕೇತಕ್ಕೆ ನೀರು ಎಂಬ ಅರ್ಥವಿರುವಲ್ಲಿ ಸಂದೇಹವೆ ಇಲ್ಲ. ನಾರ: ಪಾಚಿ, ನೀರಿನೊಳಗಿನ ಪಾಚಿ ಈ ಮಾತು ಬಳಕೆಯಲ್ಲಿದೆ. 'ಪಾಚಿ' ನೂಲೆಳೆಯಂತಹ ಹಸಿರು ದಾರದಂತಹುದು. ಹಾವಸೆಯೂ ಪಾಚಿಯೆ ಸರಿ. ಪಸಿ-ಪಚ್‌ಪಚ್-ಪಚ್ಚೆ=ಹಸುರು ಇವು ನೀರಿಗೆ ಸಂಬದ್ಧ ಪದಗಳೇ ಪಸಿ-ಹಸಿ, ಪಸಲೆ-ಪಸಳೆ-ಬಸಳೆ, ಬಸರಿ ಗಿಡ; ಬಸುರೆಯ ಒಡಲಲ್ಲಿ ಒಂದು 'ಪಾಚಿ' ಪ್ರವರ್ಧಮಾನವಾಗುತ್ತಿರುತ್ತದೆ. ಬಸುರಿಗೆ ಹಸುರು ಸೀರೆ, ಹಸಿರು ಬಣ್ಣದ ಬಳೆ ಏಕೆ? ಎಷ್ಟು ಔಚಿತ್ಯ, ಈ ಆಪ: ನಾರ, ಪಸಿರು-ಬಸಿರು ಎಂಬೀ ಪ್ರತಿಮಾ ಸಂಕೇತಗಳಲ್ಲಿ, ಬಸುರೆಗೆ ಎಳೆತಳಿರ ಪಸೆ ಹಸೆಯ ಮೇಲೆ ಕುಳ್ಳಿರಿಸಿ 'ಕರಿರಾಜ'ಗಮನೆಯನ್ನು ಮಧುರಗಾನದಿಂದ ಸ್ವಾಗತಿಸಿ ಪೂಜಿಸುವುದುಂಟು. ಈ ಮಂಗಲ ಸಮಾರಂಭದ ಕಾಲಕ್ಕೆ 'ನಾಗ' - ಸ್ವರ ಕೇಳಿಸಲಾಗುತ್ತದೆ! ನೀರಲ್ಲೆ ಆಗುವ 'ನಾರು' ಪಾಚಿ

ರೈತರೆಲ್ಲ ಬಲ್ಲರು. ನಾರು (ಹುಳದ ಹುಣ್ಣು) ನೀರಿಗೇ ಸಂಬಂಧಿಸಿದ್ದು! ಹೀಗೆ ‘ನಾರ’ ಈ ಒಂದೇ ಪದಕ್ಕೆ ಮಂಗಳಕಾರಿ ಹಾಗೂ ಅಮಂಗಳಕಾರಿ (ನಾರುಹಣ್ಣು) ಈ ಎರಡೂ ಅರ್ಥಗಳ ನಾತವು, (ನರು) ನರುಗು ಕೂಡಿಯೆ ಇರಬೇಕೆ? ಹಿಮಾಲಯದ ಕುಲುಕೊಳ್ಳದ ಜಾನಪದದಲ್ಲಿ ಹಾವಿಗೇ ‘ನಾರಾಯಣ’ ಎಂಬ ಹೆಸರಿದೆ!

‘ನಾರಣ’ ದೇವರು ಬ್ರಹ್ಮಾಂಡ; ಸೃಷ್ಟಿಕರ್ತನು ಎನಿಸಿದರೆ, ‘ನಾರಕ’ ಅಧಮ ಪತಿತ - ಪಾತಾಳ ಲೋಕದ ರಾಕ್ಷಸನೆಂಬ ಈ ಎರಡು ಪ್ರತಿಮಾ: ಸಂಕೇತಗಳು ಹೇಗೆ ತಲೆದೋರಿದುವು, ಏಕೆ ತಲೆದೋರಿದುವು ಎಂಬುದನ್ನು ‘ನಾರ’ ಸಂಕೇತಸ್ಥ ಅರ್ಥಛಾಯೆಗಳ ಮೇಲಣ ವಿವರಣೆಯಿಂದ ಸ್ಪಷ್ಟವಾಗಬಹುದಾಗಿದೆ. ಋಗ್ವೇದದಲ್ಲಿ ಬಂದಿರುವ ‘ಹಿರಣ್ಯ-ಗರ್ಭ’ ಪ್ರತಿಮೆಯು ಸಂಪೂರ್ಣವಾಗಿ ‘ನಾರಣ’ ಪ್ರತಿಮೆಯ ಪ್ರತಿಕೃತಿಯೆ ಆಗಿದೆ.[೧] ‘ನಾರಣ’ ದೈವತ ನಾಭಿಯೊಳಗಿಂದ ಹೊರಟ ‘ಪದ್ಮ’ದಲ್ಲಿ ಬ್ರಹ್ಮ ಅಂಡವು ಉತ್ಪನ್ನವಾಯಿತು. ‘ಗರ್ಭಂ ದಧ್ರ ಆಪಃ’ ‘ಅಜಸ್ಯ ನಾಭೌ ಅಧಿ ಏಕಂ (ಅಂಡಂ) ಅರ್ಪಿತಂ; ಯಸ್ಮಿನ್ ವಿಶ್ವಾಭುವನಾನಿ ತಸ್ಥುಃ’[೨] ಋಗ್ವೇದ ಸೂಕ್ತಸ್ಥ ಸಂಸ್ಕೃತ ಭಾಷೆಯ ಈ ಎಲ್ಲ ವಿವರಣೆ ಈ ಪ್ರತಿಮೆಗಳ ಹಿನ್ನೆಲೆಯಲ್ಲಿ ಕಂದಮಿಳ ಭಾಷಿಕ ಎಂದರೆ ಅಂಧಕ: (ವೃಷ್ಣಿ)ಗಳ ಭಾಷೆಯ ‘ನಾರ’ ಈ ಶಬ್ದ ಸಂಕೇತವೇ ಪ್ರೇರಕವಾಗಿದೆ, ಎಂದು ಋಗ್ವೇದಸ್ಥ ಅಂತಃ ಪ್ರಮಾಣಗಳಿಂದಲೂ ಈಗ ಬಹಿರಂಗಕ್ಕೆ ಬರುತ್ತಿದೆ. ಆಪ: ನಾರದಲ್ಲಿ ಕಂಡದೇ ‘ಅಂಡ’. ಇದೇ ಮೇಲಿಂದ (analogy) ಬ್ರಹ್ಮಾಂಡದ ಕಲ್ಪನೆಗೆ ಜನ್ಮಕೊಟ್ಟಿರಲಿಕ್ಕೆ ಸಾಕು. ನಾರ: ಪಾಚಿ ಜೀವಜಂತು ನೀರಲ್ಲೆ ಹುಟ್ಟುವುದು; ಈ ಕಾರಣದಿಂದಲೇ ‘ಗರ್ಭಂ ದಧ್ರ ಆಪಃ’ ಎಂಬ ಮಾತು, ನೀರಲ್ಲಿ ಬೆಳೆವ “ಹಿರಣ್ಯ-ಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿಃ ಏಕ ಆಸೀತ್” ಎಂಬ ಮಂತ್ರದ ಔಚಿತ್ಯವು ಮನೋಜ್ಞವಾಗಿದೆ.

ಆದರೆ, ಋಗ್ವೇದದ ಪ್ರತಿಮೆಗಳು ‘ಸಂಸ್ಕೃತ’ ಇರುವುದನ್ನು ಮರೆಯಲಿಕ್ಕಾಗದು. ಈ ಅಪೋ ಗರ್ಭಸ್ಥ ‘ಸರೀಸೃಪ’ವು ಮಾನವರೂಪದಲ್ಲಿ ದೇವಮಾನವರೂಪದಲ್ಲಿ ಮಾರ್ಪಡುವ ಮುಂಚೆ ಅದು ಘೋರ ಭಯಂಕರ ಮಹಾನ್ ಕಾಳನಾಗವೇ ಆಗಿತ್ತು. ಮಾನವ ಗರ್ಭವನ್ನು ‘ಸರೀಸೃಪ’* ಎಂಬ ಸ್ವರೂಪದಲ್ಲಿ ಕಂಡವರಿಗೆ, ‘ಸರೀಸೃಪ’ ಸರ್‌ಪ ಇವುಗಳ ಬಗೆಗೆ ಅನಾದರ ಅಥವಾ ತಿರಸ್ಕಾರವಿರುವುದೆಂದು ಬಗೆಯಲು ಅವಕಾಶವಿಲ್ಲ. ಹಾವುಗಳ ವಿವಿಧ ಹೆಸರಿನಿಂದ ಮಕ್ಕಳನ್ನು ಕರೆವ ವಾಡಿಕೆಯಲ್ಲಿರುವ ಕಾರ್ಯಕಾರಣ ಸಂಬಂಧ ಹಾಗೂ ಔಚಿತ್ಯವೂ ಇಲ್ಲಿ ಗೊತ್ತಾಗುತ್ತದೆ. ಗರ್ಭವೇ ‘ಸರೀಸೃಪ’ ಎಂದ ಬಳಿಕ ಅದು ಹಸುಳೆ (ಪಸುಳೆ)ಯಾಗಿ ತಲೆ: (ಹೆಡೆ) ಎತ್ತಿ ಹೊಟ್ಟೆ ಹೊಸೆದು ಸರಿದಾಡುವಾಗ-ಹರಿದಾಡುವಾಗ ಸಾಕ್ಷಾತ್ ‘ಸರೀಮಣಿ’ ನಾಗಮಣಿಯೆಂದೇ ಈ ತಾಯ್ತಂದೆಗಳಿಗೆ ಕಾಣುತ್ತಿರಲಿಕ್ಕೆ ಬೇಕು. ಬಸುರಿಯ ಆಪ: ಪ್ರಸವವಾಗಬಾರದೆಂದು ಒಂದು ಹೋಮ, ಮಂತ್ರ ಕ್ರಿಯೆಯನ್ನು ಋಗ್ವೇದದಲ್ಲಿ ಹೇಳಲಾಗಿದೆ. ಈ ಸೂಕ್ತದಲ್ಲಿ ಗರ್ಭಸ್ಥ ಹಸುಳೆಯನ್ನು ‘ಸರೀಸೃಪ’ ಎಂದುದಾಗಿದೆ![೩] ತನೂನ ಪಾತ್ (ಅಗ್ನಿ), ‘ಮಾತರಿಶ್ವಾ’ ತೇಜೋಯುಕ್ತವಾದ ವರ್ಣನೆಯಲ್ಲಿ’ ಇದನ್ನು ‘ಸರೀಮಣಿ’ ಎಂದು ಸರ್ಪಕ್ಕೆ ಹೋಲಿಸಲಾಗಿದೆ! ‘ಮಾತರಿಶ್ವಾ’ ಎಂದರೆ ಮಾತರಿ (ತಾಯಿಯ ಗರ್ಭದಲ್ಲಿ) ಶ್ವಸನ ಮಾಡುತ್ತಿರುವ ಪ್ರವರ್ಧಮಾನವಾಗುತ್ತಿರುವ ‘ಸರೀಸೃಪ’ವೇ ಇದು![೪]

ಹಾವುಗಳು ನಾನಾ ರೂಪ ಆಕಾರವನ್ನು ತಾಳುತ್ತವೆ, ಎಂಬುದನ್ನು ನಿದರ್ಶನಕ್ಕೆ ತರುವ ಜಾನಪದ ಕಥೆಗಳು ಭಾರತದಲ್ಲಿ ಇಂದಿಗೂ ಉಂಟು. ಫಾದರ್ ಎಲ್ವಿನ್ ಸಂಗ್ರಹಿಸಿರುವ ಅಸ್ಸಾಮ, ಮಧ್ಯಪ್ರಾಂತ ಮೊದಲಾದ ಕಡೆಯ ಲೋಗರ ಕಥೆಗಳ ಒಂದು ಸಣ್ಣ ಪುಸ್ತಿಕೆ ಕಂನುಡಿಯಲ್ಲೂ ಆಗಿದೆ. ಅದರಲ್ಲಿಯ ‘ಸರ್ಪ ಪತಿ’ಯ ಕಥೆ ಓದಬಹುದು. ಒಬ್ಬ ನೇಕಾರ ಹುಡುಗೆಗೆ ಸರ್ಪವು ಮಾನವರೂಪ ತಾಳಿ ಮದುವೆಯಾಗಿ

---

* ಋಗ್ವೇದ ಸಂಹಿತೆಯ ಹತ್ತನೆಯ ಮಂಡಲದ ನೂರ ಅರುವತ್ತೆರಡನೆಯ ಸೂಕ್ತದಲ್ಲಿ ‘ಸರೀಸೃಪಂ’ ಎಂಬ ಪದದ ಬಳಕೆಯಿದೆ. ಈ ಪದದ ಅರ್ಥ “ಗರ್ಭಕೋಶದಲ್ಲಿ ಅಲುಗಾಡುತ್ತಿರುವ ಶಿಶು” ಎಂದು. ಸಾಯಣರು ತಮ್ಮ ಭಾಷ್ಯದಲ್ಲಿ ‘ಸರೀಸೃಪಂ ಸರ್ಪಣಶೀಲಂ ಚ ಗರ್ಭಂ’ ಎಂದು ಹೇಳಿದ್ದಾರೆ. ಶಂಬಾ ಅವರು ‘ಸರ್ಪಣಶೀಲ’ ಎಂಬ ಶಬ್ದ ಪ್ರತಿಮೆ ಹಿಡಿದು ಇಲ್ಲಿ ವ್ಯಾಖ್ಯಾನಿಸುತ್ತಾರೆ (ಸಂ)

ನಾಗಲೋಕಕ್ಕೆ ಕರೆದೊಯ್ದ ರಮ್ಯಕಥೆಯೊಂದುಂಟು. ನಾಗಗಳು ಮೈಯಲ್ಲಿ ಬಂದು ಭವಿಷ್ಯ ನುಡಿಯುತ್ತಿದ್ದ ಚಂದ್ರದೈವತದ ಭಕ್ತೆಯರ ಒಂದು ಪರಂಪರೆಯು ಈಜಿಪ್ಟ್, ಗ್ರೀಕ್‌ನಲ್ಲಿ ಆಗಿಹೋಯ್ತು.[೫] ನಾಗಶಕ್ತಿ ದೈವತವು ಮೈಯಲ್ಲಿ ಆವೇಶವಾದ ಕಾಲಕ್ಕೆ ಆ ವ್ಯಕ್ತಿಯನ್ನು ದೇವರು ಎಂದೇ ಬಗೆಯಲಾಗುತ್ತದೆ. ಮೈಯ್ಯ ಮೇಲ್ಭಾಗ ಮಾನವಾಕಾರದ್ದು. ಆದರೆ, ಕೆಳಭಾಗ ಹಾವಿನ ಸ್ವರೂಪದ್ದಾಗಿ ಚಿತ್ರಿಸಲಾದ ಗಂಗಾ-ಯಮುನಾ ನದಿಗಳ ಪ್ರತಿಮೆಗಳು ದೊರೆಯುತ್ತವೆ. ಪ್ರಾಚೀನ ದೇವಸ್ಥಾನಗಳಲ್ಲಿ ದೇವರ ಬಳಿಗೆ ಹೋಗುವ ಮೊದಲು ಈ ನಾಗರೂಪೀ ದೇವಿಯರ ಪ್ರತಿಮೆಯ ದರ್ಶನ ದೊರೆಯುತ್ತಿತ್ತು. ಪ್ರಾಣಿ ವನಸ್ಪತಿ ಮೊದಲಾದುವುಗಳಲ್ಲಿ ದಿವ್>ದೈವತ ಶಕ್ತಿಯ ಪ್ರಾದುರ್ಭಾವವಾದುದು ಕೆಲವೊಂದು ಬಾವೋತ್ಕಟ ಉನ್ಮನಸ್ಕ ಭಕ್ತರಿಗೆ ‘ಗಾಳಿ’ ಸೇರಿದಂತಾಗಿ ಬರುವ ವಿಚಿತ್ರ ಅನುಭವದಿಂದ ಗೊತ್ತಾಗುತ್ತಿತ್ತು. ಈ ಹಂತದಲ್ಲಿ ‘ದಿವ್ಯಪವಾಡ ಶಕ್ತಿಯನ್ನುಳ್ಳುವು ಎಂಬ ವೃಕ್ಷ, ಪಶು, ಪ್ರಾಣಿಗಳನ್ನೇ ದೇವರೆಂದು’ ಪೂಜಿಸುವುದರ ಜೊತೆಗೆ, ಈ ದಿವ್ಯಶಕ್ತಿಯ ‘ಆವೇಶವಾಗಿದೆ’ ಎಂಬ ವ್ಯಕ್ತಿಗಳ ಪೂಜೆಯೂ ನಡೆಯುತ್ತಿತ್ತು. ಇದರ ಮುಂದಿನ ಹಂತದಲ್ಲಿ ಮಾನವ ವ್ಯಕ್ತಿಯೇ ಪೂಜೆಯ ವಿಷಯವಾಗಿ, ಆ ಬಳಿಕ ಆ ‘ದಿವ್ಯ’ಶಕ್ತಿಯ ಪ್ರತೀಕವು ಆ ವ್ಯಕ್ತಿಯ ಪಕ್ಕದಲ್ಲಿ ಕಾಣತೊಡಗಿತು.[೬] ಅವರ ಗ್ರಂಥದಲ್ಲಿ ಈ ಹಂತಗಳ ವಿವರಗಳನ್ನು ಕಾಣಬಹುದು.

ನಾರ : ಆಪ: ಹಾವು ಇವು ದೇವತಾರೂಪದಲ್ಲಿ ಕಾಣಿಸಿಕೊಂಡರೂ ಅವುಗಳನ್ನು ದೇವತಾರೂಪದಲ್ಲಿ ಕಂಡ, ಅವು ‘ಆವೇಶ’ವಾದ ವ್ಯಕ್ತಿಯ ಪೂಜೆಯ ವಿಷಯವಾದ ಈ ಮೂರೂ ಪದರುಗಳನ್ನು ನಾರಾಯಣ ಪ್ರತಿಮಾ ಚಿತ್ರದಲ್ಲಿ ಈಗಲೂ ಕಾಣಬಹುದು; ಜಲಾಶಯ ಆದರಲ್ಲಿ ಹಾವು, ಹಾವಿನಮೇಲೆ ಮಾನವಾಕಾರದ ಚಿತ್ರ. ಶ್ರೀರಂಗಂ ಮೊದಲಾದ ಕಡೆಗೆ ನೀರಿನ ಪ್ರವಾಹದ ನಡುವೆಯೆ ಗುಡಿಯನ್ನು ಕಟ್ಟಿರುವ ಕಾರಣವು ಈ ಹಿನ್ನೆಲೆಯಲ್ಲಿ ಸ್ಪಷ್ಟವಾಗುತ್ತದೆ.

ದೈವತ ಪ್ರತಿಮಾಸಂಕೇತದಲ್ಲಾದ ಇನ್ನೊಂದು ಕ್ರಾಂತಿ

ಮಾನವ ಕುಲಕ್ಕೆ ‘ದಿವ್ಯ’ ದೈವತ ಶಕ್ತಿಯ ಸರ್ವ ಪ್ರಥಮ ಪ್ರತೀತಿಯನ್ನು ತಂದುಕೊಟ್ಟ ಶ್ರೇಯಸ್ಸು ಸ್ತ್ರೀಯರಿಗೇ ಸಲ್ಲುತ್ತದೆ. ಮಾನವನ ಆದಿಗುರು ಸ್ತ್ರೀ ದೇವಿಯೇ ಆದರೆ, ಮಾನವೇತಿಹಾಸದೊಳಗಿನ ಇದೂ ಒಂದು ಮರೆತುಹೋದ (ಅಥವಾ ದರ್ಲಕ್ಷಿಸಲ್ಪಟ್ಟ-ದುಲಕ್ಷಿಸಲ್ಪಡುತ್ತಿರುವ) ಒಂದು ಅಧಾಯವಾಗಿದೆ. ಋಗ್ವೇದದೊಳಗಿನ ‘ಅದಿತಿ’ದೇವಿಯ ಸಮಿೋಕ್ಷೆಯಲ್ಲಿ ಈ ಮಾತು ದೃಢಪಡುತ್ತದೆ. ಪಿತೃಪ್ರಧಾನ ಕುಟುಂಬ ಪದ್ಧತಿಗೂ ಮೊದಲು ಮಾತೃಪ್ರಧಾನ ಕುಟುಂಬ ಪದ್ಧತಿಯಿತ್ತು, ಎಂಬುದು ಇಂದು ನಿರ್ವಿವಾದ ವಿಷಯವಾಗಿದೆ. ಆದಿಮಾತೆಯ ಆರಾಧನಾ ಸಂಪ್ರದಾಯದೊಳಗಿನ ಆಚಾರ-ವಿಚಾರಗಳು ಅರ್ವಾಚೀನ ಅಭಿರುಚಿಗೆ ವಿಪರೀತವೆನಿಸುತ್ತಿವೆ. ಆದುದರಿಂದ, ತಮ್ಮ ಸಮಾಜ ಹಾಗೂ ಧರ್ಮ ಆದಿಮಾತಾ ಸಂಪ್ರದಾಯವನ್ನು ಎಂದೂ ಒಪ್ಪಿಲ್ಲ ಎಂಬ ಗ್ರಹಿಕೆಗೆ ದೃಢವಾಗಿ ಅಂಟಿಕೊಳ್ಳುವ ಪ್ರವೃತ್ತಿಯಿಂದಾಗಿ ವಾಸ್ತವ : ಸತ್ಯಕ್ಕೆ ವಂಚಿತರಾಗುತ್ತಿದ್ದೇವೆ. ಅಫ್ರೋಡಾಯಿಟ್ (Aphrodite) ಎಂಬ ದೇವಿ ಸಮುದ್ರದೊಳಗಿಂದ ಹುಟ್ಟಿದ ಆದಿಮಾತೆ! ಇವಳು ದಿಗಂಬರ ರೂಪಿಣಿ: ನಗ್ನಿಕಾ : ಅಪರ್ಣಾದೇವಿ! ‘ಅಪ್ಸು ಅಂತಃಸಮುದ್ರೇ ಮಮಯೋನಿಃ’ ಎಂದು ಆತ್ಮಕಥೆಯನ್ನು ಹೇಳುವ ಅಂಭೃಣೀ : ಅಂಬುದೇವಿ: ಆದಿಮಾತೆ! ಆಪೋದೇವ ಆದಿ ‘ನಾರಾಯಣ’ ಸರ್ಪರೂಪನೆಂದರೆ ಆಪೋದೇವಿ ಆದಿಮಾತೆ ಸರ್ಪರೂಪಳು ಅಲ್ಲ ಎಂದು ಎನ್ನಲು ಆದೀತೆ?

ಮೈಯಲ್ಲಿ ‘ಆವೇಶ’ ಬರುವುದು, ಹೆಣ್ಣುಮಕ್ಕಳಲ್ಲೆ ವಿಶೇಷ. ಇಂದಿಗೂ ಈ ಮಾತು ನಿಜವಿದೆ. ಹಳ್ಳಿಪಳ್ಳಿಗಳಲ್ಲಿ ‘ಮೈಯಲ್ಲಿ ದೇವರು ಬರುವ ಹೆಣ್ಣುಮಕ್ಕಳು ದೊರೆಯುವಷ್ಟು ಗಂಡಸರು ದೊರೆಯುವದಿಲ್ಲ. ಋಗ್ವೇದದಲ್ಲಿ ‘ವಾಗಾಂಭೃಣೀ’ ಸೂಕ್ತವು, ಮೈಯಲ್ಲಿ ಬಂದು ಆದಿಮಾತೆಯು ಹೇಳಿದ ಹಾಗಿನ ವರ್ಣನೆಯುಳ್ಳದಾಗಿದೆ. ವಾಮದೇವನೆಂಬ ಒಬ್ಬ ಋಷಿಯ ತಾಯಿಯು, ಬಸುರೆ ಇದ್ದಾಗ ಅವಳ ಮೈಯಲ್ಲಿ ಆದಿತಿಯ ಆವೇಶ,

ಇಂದ್ರನ ಆವೇಶ ಆದ ಹಾಗಿನ ಸೂಕ್ತಗಳು ಋಗ್ವೇದದಲ್ಲಿ ಇವೆ.[೭] ಅದಿತಿಯು ವಿಶ್ವಜನನಿ; ಆದಿಮಾತೆ. ಆದಕಾರಣ ಇವಳು ಯಾರ ಅರ್ಧ ಅಂಗಿಯಲ್ಲ, ಇವಳೇ ಸಂತಾನವನ್ನು ಅಪೇಕ್ಷಿಸಿ ಪುರುಷ ಸಂಪರ್ಕ ಪಡೆಯುವಳು; ಪುರುಷನು ಆದಿಮಾತೆಯ ಛಾಯಾನುವರ್ತಿ; ಪುರುಷನಿಗೆ ಆ ಯುಗದಲ್ಲಿ ಸ್ವತಂತ್ರ ಅಸ್ತಿತ್ವವಿದ್ದಿಲ್ಲ.

ಗ್ರೀಕ್ ಪವಾಡ ಕಥಾಸಂಗ್ರಹಕಾರನು ಹೇಳುವಂತೆ, ಆ ಆದಿಮಾತಾ ಸಂಪ್ರದಾಯದ ಯುಗದಲ್ಲಿ 'ತಂದೆ'ತನಕ್ಕೆ - ಪಿತೃತ್ವಕ್ಕೆ ಮನ್ನಣೆಯಿದ್ದಿಲ್ಲ. ಇದಕ್ಕೆ ಇನ್ನೂ ಒಂದು ಕಾರಣವಿದೆ. ಒಂದು 'ವ್ಯವಸ್ಥೆ' ಕಟ್ಟು ಪಾಡಿನ 'ಕುಟುಂಬ'ದ ವಿಚಾರವು ಸೋಂಕದಿದ್ದ ಆದಿಯುಗದಲ್ಲಿ, ಸ್ತ್ರೀಯು ಗರ್ಭಿಣಿಯಾಗುವುದಕ್ಕೆ ಪುರುಷನೇ ಕಾರಣನು ಎಂಬ ನಿರ್ಣಯಕ್ಕೆ ಬಂದಿರದ ಯುಗವದು. ಗುರು-ದೇವತಾ ಪ್ರಸಾದದಿಂದ ಮಕ್ಕಳಾಗುತ್ತವೆ ಎಂಬ ಇಂದಿಗೂ ಇರುವ ಶ್ರದ್ಧೆಯು, ಆ ಆದಿಯುಗದ ಅವಶಿಷ್ಟ ಸ್ಮೃತಿ. ಮಗುವನ್ನು ಪಡೆದ ಹಾಗಿನ ಪವಾಡ ಕಥೆಯೊಂದು ಗ್ರೀಕ್-ಇಜಿಪ್ತ್‌ದಲ್ಲಿ ಉಂಟು. ಅದಿತಿಯ ಪತಿ ಯಾರು, ಎಂಬುದರ ಉಲ್ಲೇಖವು ಇಡೀ ಋಗ್ವೇದದಲ್ಲಿ ಒಂದೆಡೆಗೂ ಇಲ್ಲ! ಸೂರ್ಯ, ಇಂದ್ರ, ವರುಣಾದಿ ಸೌರ ದೈವತಗಳು ತಾಯಿ ಎಂದು ಅದಿತಿಯ ಹಿರಿಮೆಯನ್ನು ವರ್ಣಿಸಲಾಗುತ್ತದೆ. ಈ ಕಾರಣದಿಂದಲೆ 'ದೇವಮಾತಾ' ಎಂದು ಅದಿತಿಗೆ ಹೆಸರು' ರಾಜಾ-ಸಮ್ರಾಟ್ ವರುಣನ ತಾಯಿ ಎಂಬ ಕಾರಣದಿಂದ ರಾಜಮಾತೆ, ಸಮ್ರಾಟ್‌ಜನನಿ ಅದಿತಿ. ಆದರೆ, ಈ ಜೋತಿರ್ಮಂಡಲದ ದೈವತಗಳ ಜನನಕ್ಕೆ ಕಾರಣನಾದ ತಂದೆ (ಗಳು?) ಯಾರು ಎಂಬುದರ ಸ್ಪಷ್ಟತೆಯಿಲ್ಲ. ಆದರೂ 'ಮಾತಾ ರುದ್ರಾಣಾಂ' ಮಾತಿನಿಂದ ವರ್ಣಿಸಲ್ಪಟ್ಟ ಅದಿತಿ, ರುದ್ರನ ಸಂಗಾತಿ, ಎಂದು ಒಂದೆಡೆಗೆ ಸೂಚಿತವಾಗುತ್ತಿದೆ. ಯಜುರ್ವೇದದಲ್ಲಿ ಈ ಅದಿತಿದೇವಿ, ವಿಷ್ಣುವಿಗೆ ಬೇಕಾದವಳು, ಪತ್ನಿ ಎಂದೂ ವರ್ಣಿತಳಾಗಿದ್ದಾಳೆ. ಅದಿತಿಯು ತ್ವಷ್ಟಾರನ ಮಡದಿಯಾಗಿರಬೇಕೆಂದು ಋಗ್ವೇದದಲ್ಲಿ ಧ್ವನಿತವಾಗಿದೆ. ತಂದೆ ತ್ವಷ್ಟಾರನನ್ನು ಕೊಂದನೆಂಬ ಆರೋಪ, ಅದಿತಿಯ ಎದುರಿಗೆ ವಾಮದೇವನಿಂದ ಆಡಿಸಿದ್ದಾಗಿದೆ.[೮] ನಿಶ್ಚಿತ ಗಂಡನೆ ಇಲ್ಲದ ಆದಿಮಾತೆಯ ಪುತ್ರನೊಬ್ಬನು ತಂದೆಯನ್ನು ಕೊಂದನು ಎಂದರೆ ಏನು ಅರ್ಥ? ಈ ಸುಳ್ಳು ಆರೋಪ ಹೊರಿಸುವಲ್ಲಿ ಏನೋ ಒಂದು ಕಪಟವಿರಬೇಕೆಂದು ಹೇಳಬೇಕಾಗುತ್ತದೆ.

ಗರ್ಭಸ್ಥ ವಾಮದೇವನು ಮಾತಾಡುತ್ತಾನೆ! ಎಂಬ ಹಾಗಿನ ಹಿನ್ನೆಲೆಯ ವಾಮದೇವನ ಜನ್ಮಕಥೆಯ ಈ ಪವಾಡವನ್ನು ಲೋಕಕ್ಕೆ ಸಾರುತ್ತಿರುವ ಋಗ್ವೇದದ ಈ ಸೂಕ್ತವು ಒಂದಕ್ಕಿಂತ ಹೆಚ್ಚು ದೃಷ್ಟಿಯಿಂದ ಅಭ್ಯಸನೀಯವಾಗಿದೆ. ಆದರೆ, ಆ ಅವಾಂತರದಲ್ಲಿ ಸೇರಲು ಇಲ್ಲಿ ಎಡೆಯಿಲ್ಲ; ಮೈಯಲ್ಲಿ ಆವೇಶವಾಗಿ ಭೂತ. ಭವಿಷ್ಯಗಳನ್ನು ಹೇಳುವ 'ಮಾಧ್ಯಮಿಕಾ' (Medium) ಸ್ತ್ರೀ ವರ್ಗವು - ಈ ಸಂಪ್ರದಾಯವು - ಋಗ್ವೇದ ಕಾಲದಲ್ಲಿ ಜೀವಂತ ಇತ್ತು; ಗೌರವ ಪ್ರತಿಷ್ಠೆಗಳುಳ್ಳುದೂ ಆಗಿತ್ತು, ಎಂಬುದನ್ನು ಮನಗಾಣಿಸಿಕೊಳ್ಳುವುದು, ಪ್ರಸ್ತುತ ವಿಷಯವಾಗಿದೆ. ಗರ್ಭದಲ್ಲಿ ಇರುವಾಗಲೆ 'ದಿವ್ಯ' ಜ್ಞಾನ ಸಿದ್ಧಿಯನ್ನು ಪಡೆದ ಸಾಕ್ಷಾತ್ಕಾರೀ ಸಿದ್ಧ ಪುರುಷನು : ವಾಮದೇವನು, ಎಂದು ಈತನ ಖ್ಯಾತಿಯಿದೆ. ಈ ಖ್ಯಾತಿಗೆ : ಈ ನಂಬುಗೆಗೆ ಮೂಲಾಧಾರವಾದ ಈ ಸೂಕ್ತದ ತಳುಕು-ಮಲಕು, 'ನಾಗ' - ಮುರಿಯ ತೊಡಕು ಆಗಿರುವುದು ಇನ್ನೂ ಬೆಳಕಿಗೆ ಬಂದಿಲ್ಲ![೯] ಇದೂ ಒಂದು ಪವಾಡ - ಚಮತ್ಕಾರವೇ!

ಈ ಸೂಕ್ತ ನಿವೇದನೆಯೊಳಗಿನ ಮುಮ್ಮರಿಗೆಯನ್ನು ಗಮನಿಸುವುದು ಮೊದಲ ಕೆಲಸ. ಗರ್ಭಸ್ಥ ಹಸುಳೆ: (ಸರೀಸೃಪ)ಮಾತಾಡುತ್ತಿದೆ; ಇದು ಆ ಸೂಕ್ತಕಾರನಿಗೆ ಕೇಳಬಂದುದು ಹೇಗೆ? ಎಂಬ ಪ್ರಶ್ನೆಗೆ ಅಲ್ಲಿಯೆ ಉತ್ತರವುಂಟು; ಈ ಸೂಕ್ತದ ವಿಷಯವು 'ಸಂವಾದಃ ಇಂದಾದಿತಿವಾಮ ದೇವಾನಾಂ' ಎಂದು ಋಗ್ವೇದಾನು ಕ್ರಮಣಿಕೆಯಲ್ಲಿ ಹೇಳಲಾಗಿದೆ. ಈ ಸಂವಾದವಾಗಲು ಸಂಭವಿಸಿದ ಕಾರಣವನ್ನು ಅಲ್ಲಿ ನಿವೇದಿಸಲಾಗಿದೆ. ವಾಮದೇವನು ತಾನು ಸಿದ್ಧಪುರುಷನಾದ ಕಾರಣ ಆತನು, ಇನ್ನುಳಿದ ಮರ್ತ್ಯರಂತೆ 'ಯೋನಿ ಮಾರ್ಗ'ದಿಂದ ಹುಟ್ಟುವುದಕ್ಕೆ ಸಿದ್ಧನಿರಲಿಲ್ಲ. ತಾಯಿಯ 'ಪಾರ್ಶ್ವ' ಭಾಗದಿಂದ ಹೊರಬರುವ ಹವಣಿಕೆಯಲ್ಲಿದ್ದನಂತೆ. ವಾಮದೇವನು ತನ್ನ ಈ ಇಚ್ಛೆಯನ್ನು ಆಡಿತೋರಿಸಿದಂತೆ ತಾಯಿಗೆ ಎನಿಸಿತಂತೆ. ಹೀಗೆ ಎನಿಸುವದು (feeling) ಅಶಕ್ಯವೇನಲ್ಲ.

ಆಗ ಬಸುರಿ ತಾಯಿ ತನ್ನ ಜೀವಕ್ಕೆ ಅಂಜಿ, ಇಂದ್ರನ ತಾಯಿಯಾದ ಅದಿತಿದೇವಿಯನ್ನು ಪ್ರಾರ್ಥಿಸಿದಳಂತೆ. ಆ 'ಅದಿತಿಃ ತು ಇಂದ್ರ ಸಹಿತಾ ಗರ್ಭಿಣೀ ಅಭ್ಯಗಾತ್‌ವನೇ' ಎಂಬ ಈ ಸಾಂಪ್ರದಾಯಿಕ ಕಥೆಯನ್ನು ಭಾಷ್ಯಕಾರರು ಅಲ್ಲಿ ಕೊಟ್ಟಿದ್ದಾರೆ ಮತ್ತು 'ಅದಿತಿ-ಇಂದ್ರ-ವಾಮದೇವಾಃ ಸಂವಾದಂ ಅಥ ಚಕ್ರಿರೇ' ಎಂಬ ಮಾತಿನಿಂದ ಆ ಸೂಕ್ತಾರ್ಥಕ್ಕೆ ಪ್ರಾರಂಭವಾಗುತ್ತದೆ. ಆದರೆ ಅದಿತಿ, ಇಂದ್ರ ಈ ದೈವತಗಳು ಅಲ್ಲಿ ಬಂದು ವಾಮದೇವನೊಡನೆ ನಡೆಸಿದ ಸಂವಾದವು ಹೊರಗೆ ಹೇಗೆ ಕೇಳಬಂತು? ಎಂಬ ಪ್ರಶ್ನೆಯ ಉತ್ತರವನ್ನು ಪಾಠಕರೇ ಕಲ್ಪಿಸಿಕೊಳ್ಳಬೇಕಾಗುತ್ತದೆ. ವಾಮದೇವನು, 'ಗರ್ಭಸ್ಥ ಶಿಶು' ಎಂಬುದು ನಿಶ್ಚಿತವಿದೆ. ಆದಕಾರಣ ಈ ಹಸುಳೆಯ ಮಾತುಗಳು ಆ ತನ್ನ ಗರ್ಭ ಧರಿಸಿದ್ದ ತಾಯಿಗೇ ಮೊದಲು ಕೇಳಬಂದಿರಲಿಕ್ಕೆಬೇಕು. ಅಲ್ಲದೆ, ಇನ್ನೂ ಒಂದು ತೊಡಕು ಗಮನಿಸುವುದು ಅವಶ್ಯ. ಅದಿತಿ ಹಾಗೂ ಇಂದ್ರ ಇವರು ವಾಮದೇವನೊಡನೆ ಮಾತಾಡಬಂದಿದ್ದರೂ ಅವರು ಮಾನುಷ ದೇಹಧಾರಿಗಳಾಗಿ ಬಂದಿರಲಿಲ್ಲ. ಅವ್ಯಕ್ತ ರೂಪದಲ್ಲಿ ಬಂದ ಅದಿತಿ, ಇಂದ್ರರ ಮಾತು ತಿಳಿದ ಬಗೆಯಾವುದು? ಇದರ ಉತ್ತರವೂ, ಪರ್ಯಾಯದಿಂದ ಈ ಸೂಕ್ತದಲ್ಲಿಯೆ ಅಡಗಿ ಇದೆ. ಈ ಇಡೀ ಸಂವಾದವು ವಾಮದೇವನ* ಬಸಿರನ್ನು ಹೊತ್ತ ತಾಯಿಯ ಬಾಯಿಂದಲೇ ಕೇಳದೊರೆತುದು ನಿಜ; ಆದರೆ ಈ ತಾಯಿ ಒಮ್ಮೆ ತನ್ನ ಗರ್ಭಸ್ಥ ಶಿಶುವಾಗಿ ಆಡುತ್ತಾಳೆ, ಒಮ್ಮೆ ಇಂದ್ರನ ಆವೇಶದಂತೆ ಮಾತಾಡುತ್ತಾಳೆ; ಮಗುದೊಮ್ಮೆ ಅದಿತಿಯಾಗಿ ಮಾತಾಡುತ್ತಾಳೆ.

ಹೀಗೆ ಒಬ್ಬಳಲ್ಲಿಯೇ ಮೂರು ಆವೇಶಗಳು! ವಾಮದೇವ, ಹೊಟ್ಟೆಯೊಳಗಿನ ಕಂದ, ಅದರ ಮಾತು ಕೇಳಬರುತ್ತವೆ. ಈ ತಾಯಿಗೆ; ಇನ್ನೊಮ್ಮೆ ಇವಳೆ ಇಂದ್ರನಾಗಿ ಮಾತಾಡುತ್ತಾಳೆ. ಮತ್ತೊಮ್ಮೆ ಅದಿತಿಯಾಗುತ್ತಾಳೆ. ಅಲ್ಲದೆ ತಾಯಿಯಾಗಿ ಆಡುವ ಅವಳ ಮಾತಂತೂ ಸರಿಯೆ!

ಆದರೆ, ಜನರಲ್ಲಿ ಈ ತಾಯಿಯ ಮಾತು ಪ್ರವಾದ: ಪವಾಡವಾಗಿ ಅದಿತಿಗೆ ಸೂಚಕವಾಗಿವೆ. ಮಾನವರೊಳಗಿನ ಕುಂಡಲಿನೀ (: ಸರ್ಪ) ಶಕ್ತಿಯನ್ನು ಸೂಚಿಸುವ ಭಾವಾರ್ಥವು ಈ ಸೂಕ್ತದಲ್ಲಿದೆ. ಇಂತು ಅದಿತಿಯ 'ನಾಗ' ಸ್ವರೂಪಳು ಎಂಬುದು ದೃಢಪಟ್ಟಿದೆ, ಅದಿತಿದೇವೀ ಸಮೀಕ್ಷೆಯಲ್ಲಿ ವ್ಹೊಜೆಲ್ ಎಂಬ ಸಂಶೋಧಕನಿಗೂ ಸರ್ಪಗಳ ತಾಯಿಯೆನಿಸಿದ 'ಕದ್ರು'ವಿನ ಇನ್ನೊಂದು ಹೆಸರು, 'ಅದಿತಿ' ಎಂದು ಕಂಡಿದೆ. ನನ್ನ ಮಿತ್ರರಾದ ಶ್ರೀ ಹೋಳೀಕಟ್ಟೆ ವೆಂ. ಕೃ. ಅವರು ಇದನ್ನು ನನ್ನ ಗಮನಕ್ಕೆ ತಂದುಕೊಟ್ಟು ಉಪಕಾರ ಮಾಡಿದ್ದಾರೆ.

೧. ಇಂದಿನ ನಾಗಪೂಜೆಯ ಪ್ರಾಚೀನತೆ ಎಷ್ಟು?
೨. ಋಗ್ವೇದ ಕಾಲದಲ್ಲಿ ನಾಗಪೂಜೆ ಇದ್ದಿತೆ?
೩. ಇಂದ್ರ-ವೃತ್ರ ಕಾಳಗದ ಪೂರ್ವೋತ್ತರವೇನು?
೪. ಇಂದ್ರನು ಪುರಾಣ ಕಥೆಗಳಲ್ಲಿ ಖಳನಾಯಕನಾಗುವುದು ಏಕೆ?
೫. ಋಗ್ವೇದದೊಳಗಿನ ಜೀವನಸಮ್ಮುಖ ಪ್ರವೃತ್ತಿ, ಜೀವನ ದೇವತಾಪೂಜೆ ಅಪ್ರತಿಷ್ಠಿತವಾದುದು ಹೇಗೆ? ಏಕೆ?

---

* ಋಗ್ವೇದ ಸಂಹಿತೆಯ ನಾಲ್ಕನೆಯ ಮಂಡಲದ ಹದಿನಾರನೆಯ ಸೂಕ್ತಕ್ಕೆ ವಾಮದೇವನೇ ಋಷಿ. ಈತನ ಉಲ್ಲೇಖ ಅದೇ ಸೂಕ್ತದ ೧೮ನೇ ಮಂತ್ರದಲ್ಲಿ ಬಳಕೆಗೊಂಡಿದೆ. ಈತನು ಋಗ್ವೇದದ ಐನೂರ ಅರುವತ್ತು ಋಕ್ಕುಗಳ ಋಷಿ. ಈತ ಗೋತಮಋಷಿಯ ಮಗ, ಬ್ರಹ್ಮಜ್ಞಾನ ಪಡೆದ ಮಹರ್ಷಿಯೆಂದು ಶ್ರುತಿವಾಕ್ಯಗಳು ಹೇಳುತ್ತವೆ. ಈ ಮಹರ್ಷಿ ಪ್ರಾಣರೂಪದ ಬ್ರಹ್ಮನ ವಿಭೂತಿಪುರುಷನೆಂದು ಐತರೇಯ ಆರಣ್ಯಕದಲ್ಲಿ ಹೇಳಿದೆ. "ಅಹಂ ಮನುರಭವಂ ಇತ್ಯಾದಿಮಂತ್ರತ್ರಯೇಣ ಗರ್ಭೇ ವಸನ್ ವಾಮದೇವಃ ಉತ್ಪನ್ನ ತತ್ತ್ವಜ್ಞಾನಃ ಸನ್ ಸಾರ್ವಾತ್ಮ್ಯಂ ಸ್ವಾನುಭವಂ ಮನ್ವಾದಿರೂಪೇಣ ಪ್ರದರ್ಶಯನ್ನಾಹ" ಐತರೇಯ ಆರಣ್ಯಕದಲ್ಲಿ ಹೇಳಿರುವ ಮಾತು ಗಮನಾರ್ಹ. ಋಕ್ ಸಂಹಿತೆಯ ೪.೨೭.೧ರಲ್ಲಿ "ಗರ್ಭಸ್ಥನಿರುವಾಗಲೆ ನಾನು ಸಕಲ ದೇವತೆಗಳ ಉತ್ಪತ್ತಿಕ್ರಮಗಳನ್ನು ತಿಳಿದೆ" ಎಂದಿದ್ದಾನೆ. ಶೌನಕನ ಬೃಹದ್ದೇವತ ೪-೧೩೦ರಿಂದ ೧೩೭ರ ವರೆಗೆ ಹೆಚ್ಚಿನ ವಿವರಗಳುಂಟು. ಐತರೇಯ ಬ್ರಾಹ್ಮಣ ೬-೧೮ರಲ್ಲೂ ವಿವರಗಳಿವೆ. ಬಾ.ಉ. ೧.೪.೧೦ರಲ್ಲಿ 'ವಾಮದೇವ ಸೂರ್ಯನು ನಾನೇ' ಎಂದಿದೆ. (ಸಂ.)

ವೇದಕಾಲಕ್ಕೂ ಮುಂಚಿನ ಆಚಾರ-ವಿಚಾರಗಳು, ಈ ನಾಗಸಂಪ್ರದಾಯದಲ್ಲಿವೆ. ಹಿಂದೆ ಭಾರತದಲ್ಲಿ ಎರಡು ಭಿನ್ನಸಂಸ್ಕೃತಿಗಳಲ್ಲಿ ತಮ್ಮ ವರ್ಚಸ್ಸಿನ ಬಗೆಗೆ ಸ್ಪರ್ಧೆ ನಡೆದು, ಕೊನೆಗೆ ನಾಗ-ಸಂಪ್ರದಾಯವೇ ವಿಜಯಿಯಾದುದು, ಋಗ್ವೇದ ಸಂಹಿತೆಯ ಇಂದಿನ ಪ್ರಚಲಿತ ಪಾಠದಿಂದ ವ್ಯಕ್ತವಾಗುತ್ತದೆ. ಅದಿತಿಯು ಆಪ: ರಸ ಸಂಪ್ರದಾಯದ ದೇವಿ, ಎಂಬುದು ಸುಸ್ಪಷ್ಟವೆ ಇದೆ. ಈ ಆಪ: ರಸ ಸಂಪ್ರದಾಯವು ಭಾರತದಲ್ಲಿ ಆರ್ಯರು ಬರುವುದಕ್ಕೆ ಮುಂಚಿನಿಂದಲೂ ಇದ್ದಿತು, ಎಂದು ಬಗೆಯದೆ ಆರ್ಯವರ್ಗದ ಯಾಜಕ ಸಂಪ್ರದಾಯ ಮತ್ತು ಆಪ: ರಸ ಪರಿಣಸಿದೆ. ಸಾಕ್ಷಾತ್ ವಾಮದೇವನೇ 'ಗರ್ಭಸ್ಥನಿರುವಾಗ ಮಾತಾಡಿದನು'! ಎಂದು ಜನ ನಂಬುವಂತಾಗಿದೆ! ಇದೆಲ್ಲ ಸುತ್ತು ಮಾತಿನಲ್ಲಿ ಇಂದ್ರನ ತೇಜೋವಧೆಯ ಪ್ರಯತ್ನವಿರುವುದು ಬಯಲಿಗೆ ಬರುತ್ತದೆ!

ಗರ್ಭಸ್ಥ ವಾಮದೇವನಿಂದ ಇಂದ್ರನ 'ಹೀನಕರ್ಮಿ' 'ಪಿತೃಘಾತಕ'ನೆಂಬ ಹಾಗಿನ ಮಾತನಾಡಿಸಲಾಗಿದೆ! 'ಕಃ ತೇ ಮಾತರಂ ವಿಧವಾಂ ಆಚಕ್ರತ?, ಇಂದ್ರನು ತನ್ನ ತಾಯಿಯನ್ನು ವಿಧವೆ ಮಾಡಬೇಕೆ? ಎಂದು ಗರ್ಭಸ್ಥ ವಾಮದೇವನು ಕೇಳುವ ಪ್ರಶ್ನೆ, ಇಂದ್ರನಿಗೆ! ಗರ್ಭಿಣಿ ವಾಮದೇವನ ತಾಯಿಯು ವಾಮನನ ಪರವಾಗಿ ಈ ಮಾತು ಆಡುವಾಗ, ಈ ಬಸುರಿಯಲ್ಲಿ ಆವೇಶವಾಗಿದ್ದ ಅದಿತಿಯು ಬದಿಗೆ ಸರಿದಿರುತ್ತಾಳೆ! ಆದರೆ ಅದಿತಿಯಾಗಿಯೂ ಈ ಬಸುರಿಯೆ ಆಡುವ ಮಾತೂ ಉಂಟು ಎಂದರೆ ಇಂದ್ರನ ತಾಯಿ ಅದಿತಿಯು ಗಂಡನನ್ನು ಮಗನೇ ಕೊಂದನೆಂಬುದನ್ನು ಒಪ್ಪಿದಂತೆಯೇ ಸರಿ. ಅಲ್ಲದೆ, ಇಂದ್ರನು ಪಿತೃವನ್ನು ಕೊಂದುದು 'ಬ್ರಹ್ಮಹತ್ಯೆಯ' ಪಾಪಿಷ್ಠನು, ಎಂಬ ಆರೋಪವನ್ನು ಒಪ್ಪಿಕೊಳ್ಳುತ್ತಾಳೆ. ಬಳಿಕ 'ನದಿಗಳು ಇಂದ್ರನನ್ನು ಈ ಆರೋಪದಿಂದ ಪುನೀತನನ್ನಾಗಿಮಾಡಿವೆ' ಎಂದು ಈ ಅದಿತಿಯು ಆಡಿದ ಹಾಗೆ ಇಲ್ಲಿ ಮಾತುಗಳನ್ನು ಕಲ್ಪಿಸಲಾಗಿದೆ! ನದೀ: ತೀರ್ಥಸ್ನಾನದಿಂದ ಬ್ರಹ್ಮಹತ್ಯಾದಿ ಪಾಪಗಳು ತೊಳೆದು ಹೋಗುತ್ತವೆ' ಎಂಬ ಹಾಗಿನ ತೀರ್ಥ-ಮಹಾತ್ಮ್ಯವನ್ನು ಅದಿತಿಯಿಂದ ಆಡಿಸಿದ್ದಾಗಿದೆ!

ಈ ಎಲ್ಲ ತಳಕು ಮಲಕಿನ 'ನಾಗ'ಮುರಿಯ 'ಅದಿತಿ'ದೇವಿಯು ಸರ್ಪ ಸ್ವರೂಪಳಾಗಿರುವುದನ್ನು ಋಗ್ವೇದ ಸಂಹಿತಾಸಂಕಲನಕಾರನು ಬಚ್ಚಿಡಲು ಏನೆಲ್ಲ ಹಂಚಿಕೆಗಳನ್ನು ಮಾಡಿರುವುದು ಈಗ ಬೆಳಕಿಗೆ ಬರತೊಡಗಿದೆ! 'ಅದಿತಿ' ಎಂಬವಳು, ಆಪ : ಸಲಿಲ ಸ್ವರೂಪಿಣಿಯಾಗಿರುವುದನ್ನು ಯಾರೂ ಅಲ್ಲಗಳೆಯಲಾರರು.[೧೦] ಆದಕಾರಣ, ಸಲಿಲ: ಅಪ:ನಾರ ಸ್ವರೂಪೀ ಈ 'ನೀರೆ' ಅಪ್-ಸರೆ: ನಾಗಕನ್ಯೆ ನಾಗಸ್ವರೂಪಳು, ಎಂಬುದರ ಬಗೆಗೆ ಸಂದೇಹಪಡಬೇಕಾಗಿಲ್ಲ. ಋಗ್ವೇದದ ಇನ್ನೊಂದು ಸೂಕ್ತದ ದೈವತವೆಂಬ 'ಸಾರ್ಪರಾಜ್ಞೀ' ಯು, ಅದಿತಿಯೇ ಸರಿ.[೧೧] ಈ ಸೂಕ್ತಸ್ಥ 'ಅಯಂ ಗೌಃ ಪೃಶ್ನಿಃ...' ಎಂಬ ಎರಡೂ ಸಂಕೇತಗಳೂ ಆಪರಸ ಪಂಥೀಯ ಅದಿತಿ ಸಂಪ್ರದಾಯ ವಿಜಯಿಯಾಗಿ ಯಾಚಕ ಸಂಪ್ರದಾಯವು ಇವೆರಡರಲ್ಲಿ ಸಂಘರ್ಷವು ಇರುವುದರ ಅರ್ಥವೇ ಆಗಲಾರದು. ಅಲ್ಲದೆ 'ಅದಿತಿ' ಸಂಪ್ರದಾಯವು ಅರ್ಥವಾಗದಷ್ಟು ಗತಕಾಲದ ಕಥೆಯಾಗಿ ಪರಿಣಮಿಸಿರುವುದರ ಕಾರಣವೂ ತಿಳಿಯದು. ಇದೂ ಅಲ್ಲದೆ ಋಗ್ವೇದದಲ್ಲಿ ಸರ್ವಶ್ರೇಷ್ಠ ದೈವತವೆಂದು ಸರ್ವಮಾನ್ಯವಿರುವ ಇಂದ್ರನು ಋಗ್ವೇದದ ಅಂತ್ಯದಲ್ಲಿ ಹತಪ್ರಭನಾಗುತ್ತಾನೆ. ಪುರಾಣ ಕಥೆಗಳಲ್ಲಿ ಖಳನಾಯಕನಾಗಿ ಚಿತ್ರಿಸಲ್ಪಡುತ್ತಾನೆ. ಇಷ್ಟೇ ಅಲ್ಲ, 'ದೇವಮಾತೆ' ಎಂಬ ಅದಿತಿದೇವಿಯು, ತನ್ನ ಮಕ್ಕಳೆಂಬ ಇಂದ್ರ, ಸೂರ್ಯಾದಿ, ಸಪ್ತಪುತ್ರರೊಡನೆ 'ಸಲಿಲ' ಪ್ರವೇಶ ಮಾಡುತ್ತಾಳೆ![೧೨] ಎಂದರೆ ಜಲಸಮಾಧಿ ಹೊಂದುತ್ತಾಳೆ! ಈ ಸಂಗತಿಯೇ ಮಹಾಭಾರತದಲ್ಲಿ ಇನ್ನೂ ಒಂದು ಬಗೆಯಲ್ಲಿ ಉಕ್ತವಾಗಿದೆ. ಶಂತನುವಿನ ಪ್ರೇಯಸಿ ದೇವಲೋಕದ ಗಂಗೆಯು ತನ್ನ ಏಳು ಮಕ್ಕಳನ್ನು ಜಲದೇವಿಗೆ ಅರ್ಪಿಸುತ್ತಾಳೆ! ಶಂತನುವು ಆಕ್ಷೇಪಿಸುತ್ತಲೆ ಎಂಟನೆಯ ಮಗುವನ್ನು ಹಿಂದೆಬಿಟ್ಟು ತಾನು ನೀರಲ್ಲಿ ಅಡಗುತ್ತಾಳೆ! ಈ ಎರಡೂ ಸಂಕೇತ ಪ್ರತೀಕಾತ್ಮಕ ಕಥೆಗಳು ತುಲನಾರ್ಹವಾಗಿವೆ. ಈ 'ದೇವಮಾತೆ ಎಂಬವಳೇ 'ದ್ಯಾಮವ್ವ' ಎಂದು ಕಂನಾಡಿನಲ್ಲೂ 'ಯಮವ್ವ' (ಯಮುನವ್ವ) - 'ಯಮಾಯಿ' ಎಂದು ಮಹಾರಾಷ್ಟ್ರದಲ್ಲೂ ಗ್ರಾಮದೇವಿಯಾಗಿದ್ದಾಳೆ. ಈ ಗ್ರಾಮದೇವಿ ಇರುವಲ್ಲಿ ಕರೆವ್ವನ ಕರಾಳ ಸರ್ಪವಿರುವುದಾಗಿ ಇಂದಿಗೂ ನಂಬುಗೆ ಉಂಟು.

ಈ ಕಾರಣದಿಂದ 'ತಾಯಿ' ಎಂಬ ವೇಷದಲ್ಲಿ ಇಂದ್ರ, ಸೂರ್ಯಾದಿಗಳೊಡನೆ ಜಲಪ್ರವೇಶ ಮಾಡಿದಳೆಂಬ 'ದೇವಮಾತೆ' 'ಅದಿತಿ' ಪಾತ್ರ ಸೃಜಿಸಿದ್ದು, ಅದರ ಮೂಲಕ ಅಗ್ನ್ಯಾದಿ ಸೌರ ದೇವತೆಗಳೆಲ್ಲ ನೀರಪಾಲಾದವೆಂದು ಸಾಂಕೇತಿಕವಾಗಿ ಸೂಚಿಸಿದ್ದೂ... ಇದೆಲ್ಲವನ್ನು ಒಳಗೊಂಡ ಇಂದಿನ ಋಗ್ವೇದ ಸಂಹಿತೆಯನ್ನು, ಇಂದ್ರಾಗ್ನೀ ಸೂರ್ಯ ಸಂಪ್ರದಾಯದ ಮೂಲ ಯಾಜಕರ ಸಂಹಿತೆಯೆಂದು ಬಗೆಯಲಿಕ್ಕೆ ಆಗುವುದಿಲ್ಲ. ಇಂದಿನ ಈ ಸಂಹಿತಾ ಪಾಠವು, ಉಪನಿಷತ್ತು, ಗೀತೆಯ ತಾತ್ವಿಕ ತಳಹದಿಯನ್ನು ಪುಷ್ಟೀಕರಿಸುವ ಸೂಕ್ತ ಸಂಕಲನವನ್ನುಳ್ಳ ಆಪ:ರಸಪಂಥೀಯರಿಗೆ ಅನುಕೂಲವಾದ ಋಗ್ವೇದವಾಗಿರುವುದಾಗಿ ಹೇಳಬೇಕಾಗುತ್ತದೆ.

ಅಗ್ನಿ, ಇಂದ್ರ, ವರುಣ, ನಾಸತ್ಯರು ಇವರು ಅವೆಸ್ತಾ, ಹಿಟ್ಟಾಯಿಟ್, ಇಟ್ಟಿಗೆಗಳಲ್ಲಿ ಉಲ್ಲೇಖಿತರಿದ್ದಾರೆ. ಇವರು ಇಂಡೊ-ಇರಾಣಿ-ಇಂಡೋ ಯುರೋಪೀಯ ದೇವರುಗಳು, ಎಂದು ತಜ್ಞರು ನಿರ್ಧರಿಸಿದ್ದುಂಟು. ಅದಿತಿಯ ಕಥೆಯು ಇಜಿಪ್ಟ್, ಲಿಬ್ಯ; ಕ್ರೀಟ್ ಗ್ರೀಕ್‌ಗಳ ಅತಿಪುರಾತನ ಕಥೆಯನ್ನು ಹೋಲುತ್ತದೆ. ಇದು ಭೂಮಧ್ಯ ಸಮುದ್ರದ ಸಂಸ್ಕೃತಿಯ ಸೂಚಕವಾಗಿದೆ. ಆರ್ಯಪೂರ್ವ ಭಾರತೀಯ ಸಂಸ್ಕೃತಿಯು ಭೂಮಧ್ಯ ಸಮುದ್ರ ಹಾಗೂ ಬ್ಯಾಬಿಲೋನ ಅಸ್ಸಿರಿಯಾಗಳಿಗೆ ಸಂಬಂಧಪಟ್ಟುದಾಗಿ ಇರುವುದನ್ನು, ತಜ್ಞರು ಊಹಿಸಿದ್ದಾರೆ. ಆದರೆ ಋಗ್ವೇದದೊಳಗಿನ ಅದಿತಿಯ ಸಂದರ್ಭದಿಂದಾಗಿ, ಆ ಸಂಶೋಧನಕ್ಕೆ ಬೆಂಬಲ ದೊರೆಯುತ್ತಿದೆ ಎಂಬುದು, ಇದೀಗ ಕನ್ನುಡಿಯಲ್ಲಿ ಮೊದಲ ಬಾರಿ ಪ್ರಕಟವಾಗುತ್ತಿದೆ. ಬೇರೆ ಭಾಷೆಗಳಲ್ಲಿಯೂ ಈ ವಿಚಾರವು ಬೆಳಕಿಗೆ ಬಂದಿದ್ದರೆ 'ಅಧಿಕಸ್ಯಾಧಿಕಂ ಫಲಂ', ನನಗೆ ಹೆಚ್ಚಿನ ಸಂತೋಷವೇ ಇದೆ-ಅಷ್ಟು ವೈಯಕ್ತಿಕ ಹೊಣೆಯ ಭಾರ ಕಡಿಮೆಯಾಯಿತು.

ವಾಜಸನೇಯ ಸಂಹಿತೆಯಲ್ಲಿ ಅದಿತಿಯನ್ನು 'ಚಂದ್ರಾ' ಎಂದು ವರ್ಣಿಸಲಾಗಿದೆ. ಈಜಿಪ್ಟ್-ಗ್ರೀಕ್ ಪುರಾತನ ಪವಾಡ ಕಥೆಗಳಲ್ಲಿ Moon goddess ಬರುತ್ತಾರೆ. Serpent goddess ಇದ್ದಾರೆ. Moon goddess priestesses (ಚಂದ್ರಾದೇವಿಭಕ್ತೆಯರು), ಸರ್ಪದೇವೀ ಭಕ್ತೇಯರಲ್ಲಿ ಇದ್ದರು. ಅವರ ಮೈಯಲ್ಲಿ ದೇವಿಯ ಆವೇಶವಾಗಿ ಭೂತ-ಭವಿಷ್ಯ ಹೇಳುತ್ತಿದ್ದರು. ಇವು ಕ್ರಿ.ಪೂ. ೪೦೦೦ ವರುಷಗಳ ಸುಮಾರಿನ ಕಥೆಗಳು ಎಂದು ಬಗೆಯಲಾಗಿದೆ. 'ಅದಿತಿ'ಯು ವಾಮದೇವನ ತಾಯಿಯ ಮೈಯಲ್ಲಿ ಬಂದುದರ ಉಲ್ಲೇಖ ಒಂದೆಡೆ ಬಂದಿದೆ. ಅಂಭೃಣೆಯ ಮೈಯಲ್ಲೂ ಒಂದನ್ನು ಹೇಳಿದ್ದಾಗಿದೆ.[೧೩] ಇವರು 'ಮಧ್ಯಮಾ' 'ವಾಕ್' ಎಂದು ಬಗೆಯಲಾಗುತ್ತಿತ್ತು. ಆದರೆ, ಋಗ್ವೇದದ ಅಂತ್ಯದಲ್ಲಿ ಅದಿತಿಯ ಜಲಸಮಾಧಿಯೊಂದಿಗೆ ಒಂದು ವೈಚಾರಿಕ ಕ್ರಾಂತಿಯಾದುದು ಕಾಣುತ್ತದೆ. ಈ ಕ್ರಾಂತಿಸೂಚಕವಾಗಿಯೇ ಆ ಸಾಂಕೇತಿಕ ವರ್ಣನೆಯಿರಬೇಕು. ಆದಿಮಾತೆ: 'ಅದಿತಿ' ಸಂಪ್ರದಾಯವು ತನ್ನ ಗೌರವ-ಪ್ರತಿಷ್ಠೆಗೆ ಎರವಾಗುತ್ತದೆ. ಆದಿಪುರುಷ ಪೂಜೆ ಪ್ರಚಾರಕ್ಕೆ ಬರುತ್ತದೆ.

ಸ್ತ್ರೀಯ ಸ್ಥಳದಲ್ಲಿ ಪುರುಷನೇ ಪ್ರಧಾನನಾಗುತ್ತಲೆ ಅಂದಿನ ಸಾಮಾಜಿಕ ಹಾಗೂ ನೈತಿಕ ರೀತಿ ಪದ್ಧತಿಗಳಲ್ಲಿ ಆದ ಸ್ಥಿತ್ಯಂತರಗಳ ವಿವರಕ್ಕಾಗಿ ಒಂದು ಸ್ವತಂತ್ರ ಅಧ್ಯಾಯವೇ ಬೇಕು. ಈ ಸ್ಥಿತ್ಯಂತರವು ಆದುದು ನಿಜ, ಎಂಬುದನ್ನು ಖಾತ್ರಿಮಾಡಿಕೊಡುವ ಒಂದೆರಡು ಪ್ರಮಾಣಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಬಹುದು: 'ಪುರುಷ' ಸೂಕ್ತ ಎಂಬುದು ಋಗ್ವೇದದ ಕೊನೆಯಲ್ಲಿ ಮೈದಾಳಿದೆ! ಇದು ಋಗ್ವೇದದಲ್ಲಿ ಬಹಳ ಇತ್ತೀಚಿನ 'ನೂತನೈಃ' ರಚಿತ ಸೂಕ್ತವೆಂದು ಎಲ್ಲ ತಜ್ಞರು ಏಕಾಭಿಪ್ರಾಯದವರಾಗಿದ್ದಾರೆ. ರುದ್ರ, ವಿಷ್ಣು, ಪ್ರಜಾಪತಿ ಇವರಿಗೆ 'ಪತ್ನಿ' ಎಂದು, ನಿಶ್ಚಿತ ಸ್ತ್ರೀಯ ಹೆಸರಿನ ವ್ಯಕ್ತಿ ವೇದದಲ್ಲಿ ದೊರೆಯುವುದಿಲ್ಲ ! ಕೊಲ್ಹಾಪುರದ ದೇವಿಗೆ 'ಮಹಾಲಕ್ಷ್ಮಿ' ಎಂದರೆ ವಿಷ್ಣುವಿನ ಸಂಬಂಧವು ಸೂಚಿತವಾಗುತ್ತದೆ. 'ಜಗದಂಬೆ' ಎಂದರೆ ರುದ್ರನ ಸಂಗಾತಿಯಾಗುತ್ತಾಳೆ. ಬಾಗಿಲುಕೋಟೆ ತಾಲೂಕಿನ ಶಿರೂರ ಶಾಸನದಲ್ಲಿ ಕೊಲ್ಹಾಪುರ 'ಮಹಾಲಕ್ಷ್ಮಿ ದೇವಿ' ಎಂಬ ಹೆಸರು ಉಲ್ಲೇಖಿತವಿದ್ದರೂ ರುದ್ರನ ಅರ್ಧಾಂಗಿ ಎಂದು ಅಲ್ಲಿ ವರ್ಣಿತಳಾಗಿದ್ದಾಳೆ! ವಿದ್ಯಾಧಿದೇವತೆ ಮೊತ್ತಮೊದಲಲ್ಲಿ ಸ್ತ್ರೀ ದೈವತವೇ. 'ಮಧ್ಯಮಾ' ವಾಕ್. ಆದರೆ ಬೃಹಸ್ಪತಿ, ಗಣಪನು ವಿದ್ಯಾಧಿಪತಿಯಾಗತೊಡಗಿದ್ದಕ್ಕೆ ಅಂದಿನ ಸ್ಥಿತ್ಯಂತರವೇ ಕಾರಣವಾಗಿದೆ. ಗ್ರೀಕ್ ದೇಶದ ಪುರಾತನ ಪವಾಡ ಕಥೆಗಳಲ್ಲೂ ಈ 'ವಿಸಂಗತಿ'ಯನ್ನು ಗುರುತಿಸಿ ಹೇಳಿದ್ದಾರೆ.[೧೪]

ಅಗ್ನ್ಯಾರಾಧಕರಾದ ಯಾಜಕರಲ್ಲಿ ಪಿತೃಪ್ರಧಾನ ಕುಟುಂಬ ಪದ್ಧತಿಯಿತ್ತು. ಆಪಃ ರಸ ಪಂಥೀಯ ಅದಿತಿ ಸಂಪ್ರದಾಯ, ಹಾಗೂ ಅಗ್ನ್ಯಾರಾಧಕ ಯಾಜಕ ಸಂಪ್ರದಾಯ ಈ ಕೂಡಲ-ಸಂಗಮದಲ್ಲಿ ಉಭಯ ಸಂಪ್ರದಾಯಗಳ ಮೇಲೆಯೂ ಪರಸ್ಪರರ ಪ್ರಭಾವವು ಬಿದ್ದಿತು. ಇವೆರಡರ ಸಮಿಶ್ರ, ಆಚಾರ ವಿಚಾರಗಳ ಮೂಲಕ ಇಂದಿನ ಭಾರತೀಯ ಸಂಸ್ಕೃತಿಯೆಂಬುದು ಆಕಾರ ಪಡೆದಿದೆ. ‘ಧೀ’ ಉಪಾಸನೆಗೆ ಪ್ರಾಧಾನ್ಯವಿರುವ ಸವಿತೃ ದೈವತದ ಆರಾಧನೆಯು ‘ಜಾತವೇದ’, ಪ್ರಾಚೇತಸ ಅಗ್ನಿಯ ಉಪಾಸನೆಯು, ಹಾವುಗಳ ಪೂಜೆಯಷ್ಟು, ಪ್ರಾಚೀನವಿರಲು ಶಕ್ಯವೇ ಇಲ್ಲ. ವಿಚಾರ-ವಿಮರ್ಶೆ, ವಿವೇಕ, ಈ ಅಂಶವು ಮಾನವಸಮಾಜದ ಆದಿಯಿಂದಲೇ ತಲೆಯೆತ್ತಿ ಪೂಜೆಗೊಳ್ಳತೊಡಗಿರಲು ಶಕ್ಯವಿಲ್ಲ. ವಿಚಾರ-ವಿಕಾಸದ ಭೂಮಿಕೆಯಿಂದ ನಾಗಪೂಜೆಗಿಂತ ಅಗ್ನಿಪೂಜೆ ಅರ್ವಾಚೀನವಿರುವುದಾಗಿ ಕಂಡುಬರುತ್ತದೆ.

ಈ ಭೂವಲಯದ ಮೇಲೆ ವನಸ್ಪತಿಗಳು ಪ್ರಾಣಿಗಳು, ಯಾವ ಕ್ರಮದಿಂದ ಕಾಣಿಸಿಕೊಳ್ಳುತ್ತ ಬಂದುದಾಗಿದೆ, ಎಂಬುದರ ಆಳವಾದ ಸಂಶೋಧನವಾಗಿದೆ. ಅದರೊಳಗಿನ ಅನೇಕ ನಿರ್ಣಯಗಳು ಸರ್ವಮಾನ್ಯವಾಗಿವೆ. ಹೀಗೆ, ಬಹುಸಂಖ್ಯ ತಜ್ಞರು ಒಪ್ಪಿರುವ ಅಂಶಗಳ ಆಧಾರದಿಂದ ಹೇಳಬಹುದಾದರೆ ಮಾನವಸಂಸ್ಕೃತಿಗೂ ಮುಂಚೆ ‘ಮತ್ಸ್ಯ’ಯುಗ (Age of fishes), ನಾಗಯುಗ (Age of Reptiles) ಮತ್ತು ಸಸ್ತನಿಪ್ರಾಣಿಗಳ ಯುಗ (Age of Mammals), ಎಂದು ಸ್ಥೂಲವಾಗಿ ಮೂರು ವಿಭಾಗಗಳನ್ನು ಕಲ್ಪಿಸಬಹುದಾಗಿದೆ. ‘ಮತ್ಸ್ಯ’ವನ್ನು ಆದಿ ಅವತಾರವೆಂದು ಬಗೆಯುವುದರಲ್ಲಿ ‘ಆಪ್’ ಆದಿ ಎಂಬ ವಿಚಾರವು ತಳಹದಿಯಲ್ಲಿದೆ. ಕಾಮನನ್ನು ‘ಮೀನಕೇತನ, ಎಂದಿರುವರು. ಆದರೆ, ಮೀನಕ್ಕಿಂತ ‘ನಾಗ’ವು ಮುಂದಿನ ಹಂತದ ದಿವ್ಯಾದ್ಭುತ ಶಕ್ತಿಯ ದೈವತವೆಂದು ಭಾರತದಲ್ಲಿ ಮಾತ್ರವಲ್ಲ, ವಿಶ್ವದ ನಾನಾ ಜನಾಂಗಗಳಲ್ಲೂ ವಿಖ್ಯಾತವಾಗಿದೆ.

ಪ್ರಾಣಿಶಾಸ್ತ್ರಜ್ಞರು ಪ್ರಕಟಿಸಿರುವ ಪುರಾತನ ನಾಗಗಳ (Reptiles) ವಿವಿಧ ವರ್ಣರಂಜಿತ, ನಾನಾ ಆಕೃತಿಗಳನ್ನು ಒಂದು ಬಾರಿ ನೋಡಿ ಆನಂದ ಪಡಲೇಬೇಕು. ನಾಗರು ಯಾವುದೇ ಆಕಾರ ತಾಳಬಲ್ಲರು, ಎಂಬ ಹಾಗಿನ ಕಥೆಗಳಿಗೆ ಅಂದಿನ ಮಾನವ ಪಂಗಡಗಳ ಅನುಭವವೇ ಪ್ರೇರಕವಿದೆ, ಎಂದು ಖಾತ್ರಿಯಾಗದಿರದು. ಅವು ನೀರ ಮೇಲೆ, ನೆಲದ ಮೇಲೆ ತಮ್ಮ ಇಷ್ಟದಂತೆ ಬೇಕಾದಾಗ ಸಂಚರಿಸುತ್ತಿದ್ದುವಂತೆ; ಆಕಾಶದಲ್ಲಿ ಹಾರಬಲ್ಲವಂತೆ! ಸ್ಥೂಲ, ಸೂಕ್ಷ್ಮ ಆಕೃತಿಯವೂ ಇದ್ದುವಂತೆ; ಇಂತಹ ಅದ್ಭುತ ಸರೀಸೃಪ ಪ್ರಾಣಿಗಳು ಹೊಟ್ಟೆ ಹೊಸೆಯುತ್ತ ಸುತ್ತಲೂ ಸರಿದಾಡುವುದು-ಹರಿದಾಡುವುದು ಕಾಣತೊಡಗಿದಾಗ ‘ನಾಗ’ಗಳ ವಿಶ್ವರೂಪದರ್ಶವಾಗದೆ ಏನು? ‘ನಾಗ’ ಎಂದರೆ ಇಂದಿನ ಕೇವಲ ಹಾವೆ ಅಲ್ಲ; ಇಂದಿನ ಹಾವುಗಳು ಸಹ ಕಡಿಮೆ ಭಯಾನಕವಿಲ್ಲ! ಪ್ರಾಚೀನ (Reptiles) ಎಂಬ ವರ್ಗದಲ್ಲಿ ಬರುವ ‘ಸೃಪ್’>ಸರ್ಪ ಎಂಬ ಶಬ್ದಸಂಕೇತದಿಂದ ಸೂಚಿತವಾಗಬಲ್ಲ ಏನೆಲ್ಲ (ಕಾಲಿಗಿಂತ ಹೊಟ್ಟೆ ಹೊಸೆವ ರೀತಿಯ) ಹರಿದಾಟದ ಪ್ರಾಣಿಗಳೂ ‘ನಾಗ’ ಸಂಕೇತದಲ್ಲಿ ಒಳಗೊಳ್ಳುತ್ತವೆ.

ನಾಗಗಳ ಬಗೆಗಿನ ದಿವ್ಯದೈವೀಭಾವ

ಅತಿಮಾನುಷ ರೂಪ ಆಕಾರವುಳ್ಳವಾಗಿ ಕಂಡಾಗ ಈ ನಾಗಗಳನ್ನು ದೇವತಾಸ್ವರೂಪದಲ್ಲಿ ಕಂಡು ಪೂಜಿಸುವ ಭಾವವು ಉಕ್ಕೇರಿಬರುವುದು ಸಹಜವಾಗಿದೆ. ಕಾಡಿನಲ್ಲೆ ವಾಸವಾಗಿ ಇರಬೇಕಾದ ಆ ಪುರಾತನ ಯುಗದಲ್ಲಿ ಸುತ್ತಮುತ್ತಲು ನಾಗಗಳೇ ನಾಗಗಳು ಕಂಡಾಗ ಕನಸು ಸಹ ನಾಗರವೆ ಕಾಣಬಲ್ಲವು. ನೀರಿನೊಡನೆ ಸಂಬದ್ಧವಾದ ಈ ಪ್ರಾಣಿಗಳ ಮೂಲಕ ಭೋರ್ಗರೆಯುತ್ತ ಹೊರಟ ನದಿಗಳೂ ಹಾವಿನಂತೆ ಎನಿಸಿದ್ದು ಕಾಣುತ್ತದೆ. ಹಾವಿನಂತೆ ಕಾಣುವ ಕೋಲ್ಮಿಂಚುಗಳೊಡನೆ ಬರುವ ಸೋನೆ ಮಳೆಗೆ ನಾಗಗಳೇ ಕಾರಣವೆಂಬ ನಂಬುಗೆಯುಂಟಾಗಿರುವುದು ಅಸ್ವಾಭಾವಿಕವೇನಲ್ಲ. ರಭಸದಿಂದ ಹೊರಟ ಚಕ್ರಾಕಾರದ ಸುಟ್ಟುರೆಗಾಳಿ, ಕಾಡಿನಲ್ಲಿ ಗಾಳಿಯೊಜನೆ, ಹಬ್ಬುತ್ತ ಹೊರಟ ಕಾಳ್ಗಿಚ್ಚು, ಬೆಂಕಿ ಇದೂ ಸರ್ಪವೇ. ಮಾನವರ ದೇಹದಲ್ಲಿ ಆಹಾರವನ್ನು ಸುಟ್ಟುಬಿಡುವದು ‘ಕ್ಷುಧಾಗ್ನಿ’ಯನ್ನು ಸರ್ಪ, ಕಾಲ ಸರ್ಪ, ಘಟಸರ್ಪ ಎಂದು ಕಂಡವರೂ ಉಂಟು. ‘ಕ್ಷುಧಮಿತ್ ವಧಂ’.[೧೫] ಹಸಿವನ್ನು -ಜಠರಾಗ್ನಿಯನ್ನು - ವೈಶ್ವಾನರನನ್ನು ಮೃತ್ಯುರೂಪದಲ್ಲಿ ಕಾಣುವಲ್ಲಿ,

ಇದನ್ನು ಸರ್ಪವೆಂದೇ ಭಾವಿಸಲಾಗಿರುವುದಾಗಿ ಬಗೆಯಲು ಅವಕಾಶವಿದೆ. ಅಗ್ನಿಯು (ನಾಗನು) ಸೃಜನಕ್ಕೆ ಕಾರಣವಿರುವಂತೆ ಅದು ಮೃತ್ಯುದೈವತವೂ ಆಗಿರುವುದಾಗಿ ಬಗೆಯಲಾಗಿದೆ. 'ನಾಗವು' ಮೃತ್ಯುವು, ಎಂದರೆ ನೈಸರ್ಗಿಕ ಮೃತ್ಯುವಲ್ಲ ಮತ್ತೆ! ಅಪಮೃತ್ಯು, ಆಕಸ್ಮಿಕ ಮೃತ್ಯುರೂಪ; ಆಪತ್ಕಾರೀ ವಿಪತ್ತುಗಳ ಸಾಕ್ಷಾತ್ ಪ್ರತಿಮೆ ಹಾವುಗಳು! ಈ ಕಾರಣದಿಂದಲೇ ಅವುಗಳ ಬಗೆಗೆ ಎಂದೆಂದೂ ಭಯ!

ಹಾವು; ಮಾನವನ ಹಿತಕರ್ತ ಎಂಬ ಶ್ರದ್ಧೆಯು ಜನದಲ್ಲಿ ಇಲ್ಲದಿಲ್ಲ. ಹಾವನ್ನು ಭಯಭರಿತ ಪೂಜ್ಯಭಾವದಿಂದ ಕಾಣುವ ತಂಡಗಳೂ ಪುರಾತನ ಕಾಲದಿಂದಲೇ ಜಗತ್ತಿನ ಹಲವು ಕಡೆಗಳಲ್ಲಿ ಇದ್ದುದು ಕಂಡು ಬರುತ್ತದೆ. ಆದರು, ಈ ನಾಗಪೂಜಾ ಸಂಪ್ರದಾಯವು, ಮೂಲ ಸ್ವರೂಪದಲ್ಲಿಯೆ ಉಳಿಯದೆ ಕಾಲಕಾಲಕ್ಕೆ ಮಾರ್ಪಡುತ್ತ ಬಂದಿದೆ. ವಿಚಾರ, ವಿಮರ್ಶಾಶಕ್ತಿಯು ತಲೆಯೆತ್ತಿ ಬೆಳೆಯತೊಡಗಿದಂತೆ, ಈ ನಾಗಪೂಜೆಯನ್ನು ಮೂಲ ಪ್ರಾಥಮಿಕ ಸ್ವರೂಪದಲ್ಲಿಯೆ ಆಚರಿಸಲು ಮಾನವರ ಸುಸಂಸ್ಕೃತ ಭಾವನೆ ಹಾಗೂ ಬುದ್ಧಿಯು ಅಡ್ಡಬರುತ್ತದೆ. ಆದಕಾರಣ, ಬುದ್ಧಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಈ ನಾಗಪ್ರತಿಮೆಯನ್ನು ಇದರ ಆಚಾರ-ವಿಚಾರಗಳನ್ನು ಉದಾತ್ತೀಕರಿಸಿಕೊಳ್ಳದೆ ಈ ಸಂಪ್ರದಾಯವು ಸಮಾಜದಲ್ಲಿ ಮಾನ್ಯವಾಗಿ ಜೀವಂತ ಉಳಿಯುವುದೇ ಶಕ್ಯವಿದ್ದಿಲ್ಲ. ಈ ಕಾರಣದಿಂದಲೇ ಈ ನಾಗಸಂಪ್ರದಾಯವು, ಭಾರತದಲ್ಲಿ ಆಗಾಗ ದಿವ್ಯ-ಭವ್ಯ ಅರ್ಥದ ಅವರಣವನ್ನು ಧರಿಸುತ್ತ ಬಂದಿದೆ. ಅದರಿಂದಲೆ ಇಂದಿಗೂ ಇಷ್ಟು ವಿಶಾಲರೂಪದಲ್ಲಿ ಇಷ್ಟು ವರ್ಚಸ್ವಿಯಾಗಿ ನಮ್ಮಲ್ಲಿ ಉಳಿದು-ಬೆಳೆದು ನಿಂತಿದೆ. ಈ ನಾಗಭಕ್ತಿಯನ್ನು ಸನಾತನವಾಗಿ ಉಳಿಸಿಕೊಳ್ಳಲು, ಅಟಮಟದ ಕೆಲವೊಂದು ಕವಡು ಪವಾಡ ಕಥೆ-ಪುರಾಣಗಳು ಸಾಹಿತ್ಯವೂ ಉತ್ಪನ್ನವಾಗಿದೆ!

ಆಪ: ರಸಪಂಥೀಯರು ನಾಗಪೂಜಕರಾಗಿದ್ದರೂ, ಅಗ್ನ್ಯಾರಾಧಕರು ನಾಗಪೂಜೆಯನ್ನು ತಿರಸ್ಕರಿಸುವ ವರಾಗಿದ್ದರು. 'ನಾಗ'ವು ಮೃತ್ಯುವೇ ಸಾಕ್ಷಾತ್ತಾಗಿ; ಇದು ಅಧೋಲೋಕದ-ಕತ್ತಲೆಯಲ್ಲಿ ಇರುವ ಪ್ರಾಣಿ; ಬೆಳಕಿನ ಶತ್ರು ಎಂದು ಅಗ್ನ್ಯಾರಾಧಕರು ಶ್ರದ್ಧೆಯಾಗಿತ್ತು. ಅಗ್ನ್ಯಾರಾಧಕರ ದೈವತಗಳನ್ನೆಲ್ಲ ತಿರುವುಮುರುವಾಗಿಸಿ ಮಾರ್ಪಡಿಸಿದರೂ ತಾವು ನಾಗಪೂಜಕರೇ ಆಗಿರುವುದನ್ನು ಬಹಿರಂಗಪಡಿಸುವುದಕ್ಕೆ ಆಪ: ರಸಪಂಥಿಗಳು ಆಳುಕುತ್ತಿದ್ದರು. ಶ್ರೀಕೃಷ್ಣನ ಕಥೆಗಳಲ್ಲಿ ಇದಕ್ಕೆ ನಿದರ್ಶನವು ದೊರೆಯುತ್ತದೆ. ಶ್ರೀಕೃಷ್ಣನು ಯಮುನಾ ನದಿಯ 'ಕಾಲೀಯ' ನಾಗನನ್ನು ಕೊಂದಹಾಗಿನ ಕಥೆ ಹುಟ್ಟುತ್ತದೆ. ಕೃಷ್ಣನು 'ನಾರಕ'ನೆಂಬ ಅಸುರನನ್ನು ಕೊಂದ ಕಥೆ ತಲೆಯೆತ್ತುತ್ತದೆ. 'ನಾರಕ' - ನರಕ ಎಂಬುದು ಪಾತಾಳಲೋಕ; ಪಾತಾಳದ ಜಲಾಶಯದಲ್ಲಿರುವ ಹಾವು: ನಾರ-ಕ. ಈ ನಾರ-ಕ: ನಾಗ ದುಷ್ಟನೇ ಸರಿ. ದುಷ್ಟಸಂಹಾರಕ್ಕಾಗಿ, ಶಿಷ್ಟಪರಿಪಾಲನಕ್ಕಾಗಿ ಅವತರಿಸಿದನೆಂಬ ಕೃಷ್ಣನು, ನಾರಕ-ಕಾಲಿಯ ಹೆಸರಿನ ನಾಗನನ್ನು ಕೊಂದುದು ಸರಿಯಾಯಿತು. ಆದರೆ, ನಮ್ಮ ಪುರಾಣಕಥೆಗಳ ಮೇರೆಗೆ, ಕೃಷ್ಣನ ಅಣ್ಣ ಬಲದೇವನು ಶೇಷನ ಅವತಾರನಂತೆ! ಅಣ್ಣನು ಶೇಷನೆಂದರೆ, ಈ ಶೇಷ ಬಲದೇವನ ತಮ್ಮ ಕೃಷ್ಣನೂ, ನಾಗರೂಪನೆ ಆಗುವದಿಲ್ಲವೆ? ನಾರಾಯಣ - ವಿಷ್ಣುವಿನ ಅವತಾರವೆಂಬ ಕೃಷ್ಣನು ಸಹ, ತತ್ವತಃ ನಾಗನೇ ಇರಬೇಕಾಯಿತು; ಏಕೆಂದರೆ, ನಾರಣನು ನಾಗನೇ ಆಗಿದ್ದಾನೆ. ವಾಸುದೇವ, ವಾಸುಕೀ (ನಾಗ) ಈ ಹೆಸರಿನಲ್ಲಿರುವ ಸಾಮ್ಯ ಅಭ್ಯಸನೀಯವಿದೆ. ವಸ್ - ವಸು ಎಂದರೆ ಎಲ್ಲೆಲ್ಲೂ ಇರುವವ ಎಂದರ್ಥ. 'ಆಪ'ವು ವಿಶ್ವವ್ಯಾಪಿ ತತ್ತ್ವ. 'ವಾಸುದೇವಃ ತೋಯಾತ್ಮಾ' ಎಂಬ ವಾಕ್ಯವು ವಾಸುದೇವ ಮತ್ತು ವಾಸುಕಿ ಇವರೊಳಗಿನ ಆಂತರಿಕ ಐಕ್ಯವನ್ನು ಬಹಿರಂಗಕ್ಕೆ ತರುತ್ತಿದೆ. ಕೃಷ್ಣಾವತಾರದಲ್ಲಿ ಬಲದೇವ: ಅಣ್ಣನು, ನಾಗನೆಂದು ಸೂಚಿತ ನಾಗಿರುವಂತೆ, ರಾಮಾವತಾರದಲ್ಲಿ ಲಕ್ಷ್ಮಣ, ರಾಮನ ತಮ್ಮನು ನಾಗರೂಪನೆಂದು ಸಾಂಕೇತಿಕವಾಗಿ ಸೂಚಿಸಲಾಗಿದೆ! ಲಕ್ಷ್ಮಣನು, ನಾಗನಾದರೆ, ರಾಮನಾರು? ಹಾಗಾದರೆ ಇದೆಲ್ಲ ಅಟಮಟ, ಈ ಕಣ್ಣು ಮುಚ್ಚಾಲೆ, ಈ ಕವಡು ಯಾತಕ್ಕಾಗಿ ಯಾರಿಗಾಗಿ? ಪ್ರತ್ಯಕ್ಷವಾಗಿ ತಾನೇ ನಾಗರೂಪನಿರುವಾಗ, ಈ ಶ್ರೀಕೃಷ್ಣನು ನಾರಕ ಹಾಗೂ ಕಾಲೀಯರನ್ನು ಕೊಂದನೆಂಬ ಕಥೆಯನ್ನು ಪ್ರಚಾರಕ್ಕೆ ತರುವ ಕಾರಣವೇನಿತ್ತು? ಈ ಕಥೆಗಳಿಂದ

ಯಾರನ್ನು ಸಮಾಧಾನಪಡಿಸಬೇಕಾಗಿತ್ತು? ಈ ಕಥೆ ಪ್ರಚಾರಕ್ಕೆ ಬರಬೇಕಾಗಿದ್ದರೆ, ಆ ಕಾಲಕ್ಕೆ ನಾಗ-ವಿರೋಧೀ ಪಂಥವು ಕೆಲಮಟ್ಟಿಗಾದರೂ ವರ್ಚಸ್ವೀ ಇರಬೇಕಾಯಿತು. ಅದೇನೆ ಇರಲಿ, ನಾಗಾರಾಧನೆಯಲ್ಲಿ ಸರ್ಪದ ಬಗೆಗೆ ನಮ್ಮ ಪುರಾತನರ ಭಾವನೆಯೇನಿತ್ತು? ಈ ನಾಗಾರಾಧನೆಗೆ ಕಲ್ಪಿಸಿಕೊಳ್ಳಲಾದ ತಾತ್ವಿಕ ಭೂಮಿಕೆಯು ಯಾವುದು? ಅಥವಾ ಈ ನಾಗಾರಾಧನೆಯ ಆಚಾರದಲ್ಲಿ ಹುದುಗಿರುವ ವಿಚಾರದ ತಾತ್ವಿಕ ಆಕೃತಿಯು ಯಾವುದು? ಎಂದು ಕೇಳಿಕೊಳ್ಳುವುದು ಹೆಚ್ಚು ಲೇಸು.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X-೧೨೧, ೧
೨. ***ಅದೇ*** X-೮೨, ೬
೩. ***ಅದೇ*** X-೧೬೨, ೩
೪. ***ಅದೇ*** III ೨೯, ೧೧
೫. ರಾಬರ್ಟ್ ಗ್ರೇವ್ಸ್ ಮಹೋದಯನ ***Greek Myths in two volumes***; ೧ನೆಯ ಭಾಗದ ಮೊದಲಿನ ೧೦೦ ಪುಟ ಓದಿದರೂ ಸಾಕು; ಇಂತಹ ಹಲವು ಉಲ್ಲೇಖಗಳು ದೊರೆಯುತ್ತವೆ.
೬. Gilbert Murray; ***Five stages of Greek Religion***
೭. ***ಋಗ್ವೇದ ಸಂಹಿತೆ*** IV ೧೮; ೨೬-೨೭
೮. ***ಅದೇ*** IV ೧೮. ೭
೯. ***ಅದೇ*** IV-೧೮.೭
೧೦. ***ಅದೇ*** X. ೭೨. ೫೬
೧೧. ***ಅದೇ*** X. ೭೨, ೮ ರಿಂದ ೯ರ ಋಕ್ಕುಗಳು
೧೨. ***ಅದೇ*** X-೭೨. ೮-೯
೧೩. ***ಅದೇ*** X-೧೨೫ನೇ ಸೂಕ್ತ ಗಮನಿಸಿರಿ
೧೪. Robert Graves; ***Greek Myths*** Vol. I. P. 46.
೧೫. ***ಋಗ್ವೇದ ಸಂಹಿತೆ*** X-೧೧೭. ೧

ವಿಶ್ವಸ್ಥ ಮೂಲಶಕ್ತಿ : ಸರ್-ಪ

ವಿಶ್ವವನ್ನು ನಾನಾರೂಪದಲ್ಲಿ ಆಕರ್ಷಿಸಿ ಆಳುತ್ತ ಉಗ್ರ ಘೋರರೂಪದಿಂದ ಜನಮನದಲ್ಲಿ ಅಗಮ್ಯ (ಗೂಢ) ಭಯಭರಿತ ಧಿಙ್ಮೂಢಭಾವ ಪ್ರೇರಿಸಿ, ಭಕ್ತರಲ್ಲಿ ಸರ್ವಾರ್ಪಣಭಾವವನ್ನು ಪ್ರಚೋದಿಸಲು ಸರ್-ಪ ರೂಪದಲ್ಲಿ ಹೆಡೆಯೆತ್ತಿ ನಿಂತ, ಸರ್ವಾಶ್ಚರ್ಯಮಯ ಅದ್ಭುತ ದಿವ್ಯಶಕ್ತಿಯೆ ಈ ನಾಗದೈವತ. ಭಾರತದೊಳಗಿನ ಪ್ರತಿಯೊಂದು ಪುರಾತನ ಧರ್ಮಪಂಥದ ತಳಹದಿಯಲ್ಲೂ, ವ್ಯಕ್ತಾವ್ಯಕ್ತ ರೂಪದಲ್ಲಿ ಈ ನಾಗಪ್ರತಿಮೆಯು ಉಂಟು. ಅಂಗಾಂಗಗಳೆಲ್ಲ ನಾಗವಿಭೂಷಿತನಾದ ರುದ್ರನ 'ಉಗ್ರ' ಎಂಬ ಈ ನಾಮ-ಸಾರ್ಥಕ್ಯಕ್ಕೆ ಭಾಷ್ಯದ ಆವಶ್ಯಕತೆಯೆಲ್ಲಿ? ಮೋಹನಾಂಗ : ಚೆಲುವ ಚೆನ್ನಿಗರಾಯನೆಂಬ ನಾರಾಯಣ: ವಾಸುದೇವ: ವಿಷ್ಣು: ಕೃಷ್ಣರ ಮೋಹಕ ಸೌಂದರ್ಯದ ನಿಲುಮೆಯು ಹಾವಿನ ಇನ್ನೊಂದು ಅಂಗವನ್ನು ಪ್ರದರ್ಶಿಸುತ್ತದೆ. ಹರ: ಹರಿ ಈ ಎರಡೂ ಶಬ್ದ ಪ್ರತಿಮೆಗಳ ಮೂಲ ಹೃ-ಹರ್ ಆಖ್ಯಾತ. ಹರ, ಹರಿ ಎಂದರೆ ಹರಣ ಮಾಡುವ ದೈವತ ಎಂದರ್ಥ. ಲೋಗರ ದುಃಖಗಳನ್ನೊ ಪ್ರಾಣಗಳನ್ನೊ ಹರಣಮಾಡಿ ಆ ಜೀವಗಳನ್ನು 'ಮುಕ್ತ' ಮಾಡುವ ಶಕ್ತಿಯ ದೈವತಗಳಿವು. ಜೈನ ತೀರ್ಥಂಕರರೊಳಗಿನ 'ಅನಂತನಾಥ' ಹಾಗೂ ಯಕ್ಷಿಣಿ 'ಪದ್ಮಾವತಿ' ಇವು ಹಾವಿನ ಪರ್ಯಾಯ ನಾಮಗಳೇ. 'ಪದ್ಮ'. : ವಿಷ್ಣು - ಲಕ್ಷ್ಮಿಯರ ಸಂಕೇತ ಪ್ರತೀಕವೂ ಅಹುದು! ಇದಕ್ಕೆ ಶ್ರೀಸೂಕ್ತದಲ್ಲಿ ಆಧಾರವಿದೆ. ಆದಿ ಬುದ್ಧನು, ಯಕ್ಷ: ವೃಕ್ಷ: ಸರ್ಪರೂಪನಾಗಿರುವುದಾಗಿ ಆನಂದಕುಮಾರ ಸ್ವಾಮಿಯವರು ಸಾಧಾರವಾಗಿ ಸಿದ್ಧಪಡಿಸಿದ್ದಾರೆ. ಹೀಗೆ ಶೈವ, ವೈಷ್ಣವ, ಜೈನ, ಬೌದ್ಧ ಈ ಪಂಥಗಳೆಲ್ಲವೂ ನಾಗ: ನೀರು: ವೃಕ್ಷ ಈ ಪ್ರತಿಮಾ ಮೂಲದಿಂದ ಹೊರಟ ಶಾಖೋಪಶಾಖೆಗಳೆಂದು ತಜ್ಞರ ಸಂಶೋಧನೆಯಲ್ಲಿ ಬೆಳಕಿಗೆ ಬಂದಿದೆ.

ಆದಿಶೇಷ, ಆದಿನಾಥ, ಆದಿನಾರಾಯಣ ಇತ್ಯಾದಿ ಸಂಕೇತಗಳೊಳಗಿನ 'ಆದಿ' ಎಂಬ ಮಾತು, ಈ 'ನಾಗ'ವು ಸೃಜನ ಶಕ್ತಿಯ ಪ್ರತೀಕವಾಗಿರುವುದನ್ನು ಗಮನಕ್ಕೆ ತರುತ್ತಿದೆ. ಸರ್ಪ, ವೃಷಭ, ಲಿಂಗ, ಪದ್ಮ ಗೋವು, ಪುಷ್ಕರಿಣಿ, ವೃಕ್ಷ, ಚಂದ್ರ ಇವು ನಾಗಸಂಕೇತದ ಪರ್ಯಾಯ ರೂಪಗಳೇ ಆಗಿರುವುದಾಗಿ ಪುರಾತನ ದಿವ್ಯಪವಾಡ ಕಥೆಗಳ (Mythology) ತುಲನಾತ್ಮಕ ಸಮೀಕ್ಷೆಯಲ್ಲಿ ಬೆಳಕಿಗೆ ಬಂದಿದೆ.* ರಾಬರ್ಟ್‌ಗ್ರೇವ್ಸ್‌ನ ಈ ಗ್ರಂಥದಿಂದ ಇದು ದೃಢಪಡುತ್ತದೆ. ನಾಗದ ಹೆಡೆಯಮೇಲೆ ಪದ್ಮ - 'ಸ್ವಸ್ತಿಕ' ಲಾಂಛನವಿರುತ್ತದೆ, ಎಂಬ ನಂಬುಗೆಯುಂಟು. ನಾಗವು ಕೇವಲ ದುಷ್ಟಶಕ್ತಿಯಲ್ಲ, ಎಂಬ ಗ್ರಹಿಕೆಯು ಸಾರ್ವತ್ರಿಕವಿದೆ: ನಿಧಿ ನಿಕ್ಷೇಪ: ದ್ರವ್ಯದ ಸಂರಕ್ಷಕ ದೈವತ 'ನಾಗ' ಎಂದೂ ಬಗೆಯಲಾಗುತ್ತದೆ.⁽ ಹಾವು ಮೃತ್ಯುಸ್ವರೂಪ ಎಂಬುದಂತೂ

---

* ವೇದದೊಳಗಿನ ಅದಿತಿ, ಸರಸ್ವತಿ, ಅಂಭೃಣಿ ಹಾಗೂ ಬಳಕಿನ ಲಕ್ಷ್ಮಿ ಕಾಲಿ ದೇವಿಯರ ತುಲನಾತ್ಮಕ ಸಮೀಕ್ಷೆಯಲ್ಲಿ ಇದು ಸ್ಪಷ್ಟತೆಗೆ ಬಂದಿದೆ

ಸರ್ವಮಾನ್ಯವೇ ಇದೆ. ಮಾನವರಿಗೆ ಕಲ್ಯಾಣ ಮಾಡುವ ಸಾಮರ್ಥ್ಯವೂ ನಾಗಗಳಲ್ಲಿ ಉಂಟಂತೆ. ಆದಿನಾಥ ರುದ್ರನೆ ವಿಶ್ವಪಿತ; ಅಥವಾ ಆದಿನಾರಣದಿಂದ ಈ ಬ್ರಹ್ಮಾಂಡ ಸೃಷ್ಟಿ ಆಯಿತು, ಎಂಬ ಮಾತು 'ನಾಗ'ನ ಸರ್ಜಕ ಶಕ್ತಿಗೆ ಸಾಕ್ಷಿ. ಆಧುನಿಕ ಫ್ರೈಡ್ ಮಹಾಶಯನಿಗೆ, ನಾಗದಲ್ಲಿ 'ಲಿಬಡೊ' ಶಕ್ತಿ ಕಂಡಿದೆ. ಕರ್ಕೋಟಸೆಂಬ ನಾಗನು ಕಚ್ಚಿದ್ದರಿಂದ ನಳರಾಜನ ಮೈಬಣ್ಣ ಬದಲಾಯಿತು. ಆತನಿಗೆ ವಿಪತ್ತಿನೊಳಗಿನಿಂದ ಪಾರಾಗಲು ಉಪಯುಕ್ತವಾಯ್ತು. ನಾಗಕನ್ಯೆಯರು ಪಾಂಡುಪುತ್ರ ಭೀಮನನ್ನು ಪಾತಾಳಲೋಕಕ್ಕೆ ಒಯ್ದು ಸಾವಿರ ನಾಗಗಳ (ಆನೆಗಳ) ಶಕ್ತಿಬರುವ ಔಷಧಿ ರಸಾಯನ ಕೊಟ್ಟ ಕಥೆಯಿದೆ. ರುದ್ರನು 'ಪ್ರಥಮೋ ದೈವ್ಯೋ ಭಿಷಕ್' ಎಂದು ವೇದವು ಹೊಗಳುತ್ತದೆ. ರುದ್ರನು ಜಲಾಷಹಸ್ತನು: ಜಲಾಷಭೇಷಜನು ಮಾತ್ರವಲ್ಲ ಗಂಗಾಧರ ಕೂಡಾ. ಪುರಾಣ ಕಥೆಗಳಲ್ಲಿ "ಔಷಧಂ ಜಾಹ್ನವೀ ತೋಯಂ ವೈದ್ಯೋ ನಾರಾಯಣೋ ಹರಿಃ," ಎಂಬ ಶ್ಲೋಕವು ನಾರಾಯಣ - ವಿಷ್ಣು ದೈವತವು ಔಷಧಿ, ವೈದ್ಯರೂಪಿಯಾಗಿರುವುದನ್ನು ನಿದರ್ಶನಕ್ಕೆ ತರುತ್ತದೆ. ಔಷಧಿ, ಅಮೃತಶಕ್ತಿಯುಳ್ಳ ಈ ದೈವತವು ಸಾಕ್ಷಾತ್ ಮೃತ್ಯುರೂಪವೂ ಇರುವುದು. ವೈದ್ಯರಾಜ: 'ಧನ್ವಂತರಿ' ಸಮುದ್ರ ಮಥನದಲ್ಲಿ ಹೊರಬಂದಿದ್ದಾನೆ. ವೈದ್ಯರಿಗೆ 'ಯಮ ರಾಜ ಸಹೋದರ' ಎಂದೂ ಬಗೆಯಲಾಗುತ್ತದೆ. ಗಂಗಾ: ಅಮೃತರೂಪಳಾದರೆ ಯಮುನಾ: ಮೃತ್ಯುರೂಪಳು. ಕಾಲಿಯ : ಕಾಲ : ಸರ್ಪನ ನಿವಾಸಸ್ಥಾನ ಯಮುನಾನದಿ! 'ಯಸ್ಯ ಛಾಯಾ ಅಮೃತಂ ಯಸ್ಯ ಮೃತ್ಯುಃ' ಎಂದು ಋಗ್ವೇದದಲ್ಲಿ ಸ್ತೋತ್ರದ ವಿಷಯವಾಗಿರುವ[೨] ದೈವತದ ಹೆಸರು, 'ಹಿರಣ್ಯಗರ್ಭ' ಶಕ್ತಿ. ಹಿರಣ್ಯ - ಗರ್ಭ: ದಿವ್ಯಶಕ್ತಿ ಎಂದರೆ ಆ ದೇವರು ಯಾರು? "ಕಸ್ಮೈದೇವಾಯ ಹವಿಷಾ ವಿಧೇಮ" ಎಂಬ ಸೂಕ್ತದ ಪಲ್ಲವಿಯ ಸಂದಿಗ್ಧತೆ ಅಂದಿನ ಋಷಿಗಳನ್ನೂ ಸಂದೇಹಕ್ಕೆ ಒಳಗಾಗಿಸಿದೆ. ಈ 'ಕಂ' 'ಕಃ' ದೈವತ ಯಾರು? ಇದು ತಾರಕ ದೈವತವೋ? ಮಾರಕ ದೈವತವೋ? ರುದ್ರನೋ? ವಿಷ್ಣುವೋ? ಈ 'ಹಿರಣ್ಯಗರ್ಭ' ಪ್ರತಿಮೆಯು ಸೂರ್ಯನೆಂಬ ಹಾಗಿನ ಸಂಭ್ರಮವನ್ನುಂಟುಮಾಡುವ ಒಂದು ಹೊಂಚು ಸಹ ಅಲ್ಲಿ ಇಲ್ಲದಿಲ್ಲ! "ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿಃ ಏಕ ಆಸೀತ್" ಎಂಬ ಮಂತ್ರೋಕ್ತ ಈ 'ಹಿರಣ್ಯಗರ್ಭ'ನಲ್ಲಿ ಅರುಣೋದಯದ ಸವಿತೃವಿನ ಸಂಭ್ರಮಕ್ಕೂ ಅವಕಾಶ ಕಲ್ಪಿಸಲಾಗಿದೆ. ಇಲ್ಲಿ ಮ್ಯಾಕ್‌ಡೊನೆಲ್ ಪ್ರಭೃತಿ ಸಂಶೋಧಕರೂ ದಿಗ್ಭ್ರಮೆಗೆ ಒಳಗಾಗಿದ್ದುಂಟು! 'ವಿಶ್ವರೂಪ' ತ್ವಷ್ಟಾರ (: ತಕ್ಷಕ) ದೈವತವನ್ನು 'ಸವಿತೃ' ಎಂದಿದ್ದು, ಸವಿತೃವಿಗೆ 'ಪ್ರಜಾಪತಿ' ಎಂದು ಸಂಬೋಧಿಸಿ ಸವಿತೃ (: ಸೂರ್ಯ) ದೈವತವನ್ನು ನಾರ: ನಾಗ ಪ್ರತೀಕದ ಹತ್ತಿರ ಸೂಚಿಸಿರುವ ಈ ತಂತ್ರವು ಸಂಶೋಧಕರ ಗಮನವನ್ನು, ಇನ್ನೂ ಸೆಳೆದಿಲ್ಲ![೩]

ಪದ್ಮನಾಭನೆಂಬ ನಾಗನು ಆಗೀಗ ಸೂರ್ಯನ ಸಾರಥಿಯಾಗುತ್ತಾನೆ, ಎಂಬ ಕಥೆ ಶಾಂತಿಪರ್ವದಲ್ಲಿ ಬರುತ್ತದೆ. ಇಲ್ಲಿ 'ಪದ್ಮನಾಭ' ಪ್ರತಿಮೆಯು ವಿಷ್ಣುವಿನ ಹೆಸರನ್ನು ನೆನಪಿಗೆ ತಂದುಕೊಡುತ್ತದೆ. ವಿಷ್ಣು-ನಾರಾಯಣರನ್ನು 'ಸೂರ್ಯ'ರನ್ನಾಗಿ ಮಾರ್ಪಡಿಸುವ ಹೊಂಚು ಅಭ್ಯಸನೀಯವಿದೆ. 'ಆದಿತ್ಯಾನಾಂ ಅಹಂ ವಿಷ್ಣುಃ' ಎಂಬಲ್ಲಿ ಆದಿತ್ಯ ಎಂದರೆ ಯಾರು? ಆದಿತ್ಯ ಪದದ ಮೂಲಾರ್ಥ 'ಅದಿತಿ - ಪುತ್ರ' ಎಂದು. 'ಆದಿತ್ಯ' ಎಂಬಲ್ಲಿ ಸೂರ್ಯನಲ್ಲಿ ಚಂದ್ರ ಎಂಬ ಅರ್ಥವೂ ಅಭಿಪ್ರೇತವಿದೆ. ಋಗ್ವೇದದಲ್ಲಿ ಇದನ್ನು ಬಚ್ಚಿ ಇಟ್ಟಿದ್ದರೂ ಅಥರ್ವವೇದದ ಸೂಕ್ತದಲ್ಲಿ ಆದಿತ್ಯರ ವಿವರವಾದ ಯಾದಿಯಲ್ಲಿ ಚಂದ್ರನ ಹೆಸರೂ ಉಂಟು. ಜಲಶಾಯಿ : ನಾಗಸ್ವರೂಪೀ 'ವಿಷ್ಣು' ವು ಚಂದ್ರರೂಪನೇ ಹೊರತು ಸೂರ್ಯನಾಗಲು ಶಕ್ಯವಿಲ್ಲ. 'ಸೂರ್ಯ - ನಾರಾಯಣ' ಎಂಬ ರೂಢಿಯ ಮಾತಿನಲ್ಲಿ 'ನಾರಾಯಣ' ಎಂಬುದು ಸೂರ್ಯನ ಪರ್ಯಾಯನಾಮ, ಎಂಬ ಹಾಗಿನ ಸಂಭ್ರಮಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ! ಅಗ್ನಿ - ನಾರಾಯಣ ಎಂಬಲ್ಲೂ ಈ ದಿಗ್ಭ್ರಮೆಯುಂಟು. ನೀರೊಳಗಿನ (: ನಾರಾಯಣ) ಸೂರ್ಯ ಎಂದರೇನರ್ಥ? ನೀರೊಳಗಿನ (ನಾರಾಯಣ) ಅಗ್ನಿ ಎಂದರೆ ಇದ್ದಿಲು ತಾನೆ? 'ಆಪೋ ನಾರಾಃ' ನಾರ - ನೀರು ಎಂಬ ಅರ್ಥವು ನಿಶ್ಚಿತವಿರುವಾಗ 'ನೀರು' ಎಂಬ ಸಂಕೇತವು ಬೆಂಕಿ ಅಥವಾ ಸೂರ್ಯ - ಸವಿತೃ ಆಗಲು ಹೇಗೆ ತಾನೆ ಶಕ್ಯ? 'ಪದ್ಮನಾಭ'ನೆಂಬ ನಾಗನು ಸೂರ್ಯನ ತೇರನ್ನು ಎಸಗುವನು' ಎಂಬ ಕಥೆಯೊಳಗಿನ ಅಸಂಬದ್ಧತೆ: ವಿಸಂಗತಿ. ವ್ಹೊಜೆಲ್ ಎಂಬ ಸಂಶೋಧಕನಿಗೂ ಉಂಟಾಗದೆ ಇಲ್ಲ! ಸರ್ಪ ಹಾಗೂ ಸೂರ್ಯ ಇವೆರಡೂ ಪ್ರತಿಮಾ:

ಸಂಕೇತಗಳ ಮೂಲಾರ್ಥದಲ್ಲಿ ತಿಲಮಾತ್ರವೂ ಹೊಂದಾಣಿಕೆಯಿಲ್ಲ; ಶಾಬ್ದಿಕ ಗಾರುಡಿಗತನದ ಮೂಲಕ 'ಸರ್ ಪತಿ ಇತಿ ಸೂರ್ಯ:' ಎಂದು ಅರ್ಥಮಾಡಿ ಸೂರ್ಯನನ್ನು ಸರ್-ಪ ರೂಪದಲ್ಲಿ ತೋರಿಸುವ ಪ್ರತಿಭೆ ನಮ್ಮ ಕವಿಗಳ ವೈಶಿಷ್ಟ್ಯವಾಗಿದೆ. ಶ್ಲೇಷಾರ್ಥದಿಂದ ಗೌ-ಗಮನಶೀಲ (ಹಾವು), ಅಗ್ನಿ ಗಮನಶೀಲ (ಹಾವು) ಎಂಬ ಧ್ವನ್ಯರ್ಥ ಸೂಚಿಸುವ ಈ ರೀತಿಯು ಪ್ರಶಸ್ತವೋ? ಎಂಬುದು ಒಂದು ಮಹತ್ವದ ಪ್ರಶ್ನೆಯಾಗಿದೆ. ವಾಸ್ತವ ಸತ್ಯಕ್ಕಿಂತ ಕವಿಯ ಕಲ್ಪನಾಲೋಕದ ಸತ್ಯವು ನಮ್ಮ ಧಾರ್ಮಿಕ ಜೀವನಾದರ್ಶಗಳ ಪ್ರತಿಮೆಗಳ ತಳಹದಿಯಾಗಿದ್ದುದು, ಹೀಗೆ ಬಯಲಿಗೆ ಬರುತ್ತಿದೆ! ಸರ್-ಪ : ಸೂರ್ಯ ಇವೆರಡೂ ಪ್ರತಿಮೆಗಳು ಎರಡು ಭಿನ್ನ ವಾಸ್ತವಾಂಶವನ್ನು ಅರಿಕೆಗೆ ತಂದುಕೊಡುತ್ತವೆ. ಸೂರ್ಯ: ಸವಿತೃ, ಬೆಳಕು, ಜ್ಞಾನ ಇವು ಜೀವನದ ಪ್ರತಿಮೆಯಾದರೆ; ಹಾವು: ಕತ್ತಲೆ, ಮೃತ್ಯುವಿನ ಪ್ರತಿಮೆಯಾಗಿದೆ. ಸರ್ಪವು ರಾಹುರೂಪದಲ್ಲಿ ಸೂರ್ಯನನ್ನು ನುಂಗಲು ಬರುವುದಾಗಿ ಹೇಳಲಾಗುತ್ತದೆ. ಸೂರ್ಯನಿಗೆ (: ಪ್ರಕಾಶ : ಜ್ಞಾನ : ಜೀವನಕ್ಕೆ) ಆತಂಕವನ್ನು ತರುವ ಅಹಿರೂಪ ವೃತ್ರನ ಸಂಹಾರವು ಇಂದ್ರನ ಆದಿಕರ್ತವ್ಯವಾಗಿತ್ತು. 'ಅಹಿಜಿತ್', 'ವೃತ್ರಘ್ನ'ನೆಂಬ ವರ್ಣನೆಗಳು ಋಗ್ವೇದದಲ್ಲಿ ಕೇಳಬರುತ್ತವೆ. ಮೂಲ ಋಗ್ವೇದದ ಇಂದ್ರ ವೃತ್ರ ಕಾಳಗವು ಲೋಕದೊಳಗಿನ ಜೀವನ: ಕಲ್ಯಾಣಶಕ್ತಿ ಹಾಗೂ ವಿನಾಶಕ ಶಕ್ತಿ ಇವೆರಡರೊಳಗಿನ ಅಖಂಡಿತ ಹೋರಾಟದ ಸಾಂಕೇತಿಕ ಪ್ರತಿಮೆಯಾಗಿದೆ. ಪಾಪರೂಪೀ ಅಹಿ: ವೃತ್ರ : ದುಷ್ಟಶಕ್ತಿ : ಇದು ಕತ್ತಲೆಯನ್ನು ಪ್ರತಿನಿಧೀಕರಿಸುವ ಸಂಕೇತ. ಈ ಅಹಿಯನ್ನು ಸಂಹರಿಸಲು ಕಟಿಬದ್ಧವಾದ ಜೀವನಚೈತನ್ಯದ ಪ್ರತಿಮೆ ಇಂದ್ರನು ಎಂದು ತಜ್ಞರು ಹೇಳುತ್ತಾರೆ.

ಮಹಾಭಾರತ ಪುರಾಣಾದಿಗಳಲ್ಲಿ ಬಂದಿರುವ ನಾಗರ ನಾನಾ ಕಥೆಗಳಿಂದ, ಈ ನಾಗಪ್ರತಿಮಾ: ಸಂಕೇತವು ವಿರಕ್ತಪಂಥವನ್ನು ಪ್ರತಿನಿಧೀಕರಿಸುತ್ತಿರುವುದು ಕಂಡುಬರುತ್ತದೆ, ಎಂಬುದನ್ನು ವ್ಹೊಜೆಲ್ ತಮ್ಮ ಪ್ರಬಂಧದಲ್ಲಿ ಅನೇಕಾನೇಕ ಕಥೆಗಳಿಂದ ನಿರ್ಣಯಿಸಿದ್ದಾರೆ. ಶೈವ, ವೈಷ್ಣವ ಸಂಪ್ರದಾಯದ ಕಥೆಗಳನ್ನಲ್ಲದೆ, ಬೌದ್ಧ ಸಾಹಿತ್ಯದ ಸಮಗ್ರ ಪರಿಶೀಲನದಲ್ಲೂ ಕಂಡುಬಂದುದು ಇದೇ ಸಂಗತಿ ಆಗಿದೆ. ಶೇಷನೆಂಬ ನಾಗನು, ಬ್ರಹ್ಮದೇವನಲ್ಲಿ ಬೇಡಿಪಡೆದವರ : ತಪಸ್ಸಿಗಾಗಿ 'ಏಕಾಂತ'. ವಿಶ್ವದ ಕಲ್ಯಾಣಕ್ಕಾಗಿ ಏಕಾಂತಿಯಾಗಿ ತಲೆಯಮೇಲೆ ಇಡಿ ಪ್ರಂಪಚದ ಭಾರವನ್ನು ಹೊತ್ತು ನಿಂತ ಆದಿಶೇಷ: ಫಣಿರಾಯನು, ಪುರಾಣಕಥೆ, ಸಾಹಿತ್ಯಾದಿಗಳಲ್ಲಿ ಅಡಿಗಡಿಗೆ ದರ್ಶನವೀಯುತ್ತಾನೆ. ಭೂಮಿಯ ಮೇಲಿನ ಅನ್ಯಾಯ, ಅನೀತಿಯ ಭಾರ ಹೆಚ್ಚಾಗಿ ತಿಣುಕುವ ಹೊತ್ತು ಬರುತ್ತಲೆ, ಪರಮಾತ್ಮನ ಅವತಾರಕ್ಕಾಗಿ ಪ್ರಾರ್ಥಿಸುವನಂತೆ! ಭೋಗಿ ಎಂದು ಹೆಸರಿದ್ದೂ ಲೋಕವನ್ನು ತ್ಯಜಿಸಿ ಏಕಾಂತವನ್ನು ಆಶ್ರಯಿಸಿರುವ ಆದಿಶೇಷನೆಂಬ ನಾಗನು, ಯುಗಯುಗಗಳಿಂದ ವಿರಕ್ತ ಸಂಪ್ರದಾಯಕ್ಕೆ ಆದರ್ಶ ಪ್ರತಿಮೆಯಾಗಿದ್ದಾನೆ. ಪರಿವ್ರಾಜಕ : ಜಂಗಮ, ವಿರಕ್ತ ಪಂಥೀಯ ಯತಿ ಭಿಕ್ಷುಗಳ ಆಚಾರ : ತತ್ವದ ಆಕೃತಿಯಲ್ಲಿ (Form of Life) 'ನಾಗ' ವರ್ಗದ ಜೀವನ ರೀತಿಯಲ್ಲಿ ಹಲವು ಅಂಶಗಳ ಅನುಸರಣ (analogy) ಇರುವುದು ಕಾಣುತ್ತದೆ:

೧. ನಾನಾ ವಿಧದ ನಾಗಪ್ರತಿಮಾ: ಸಂಕೇತದ ಪವಾಡಕಥೆಗಳಲ್ಲಿ ಅಡಕವಾಗಿರುವ ಸತ್ಯಾಂಶವೆಂದರೆ, ಐಹಿಕ ಜೀವನದಲ್ಲಿ ತಥ್ಯವಿಲ್ಲ; ಇದು ಕ್ಷಣಭಂಗುರ. ಕಾಲ: ನಾಗ-ಕೃಪೆಯಿರುವ ವರೆಗೆ ಬಾಳು: ಬದುಕು. ಈ ಮಾನವ ದೇಹ ತ್ಯಾಗದ ತರುವಾಯ ಈ ಜೀವವು ಸರ್‌ಪ ವಿಶ್ವದ ಅಂಗವಾಗುತ್ತದೆ. ಆದಕಾರಣ ಸಂಸಾರಕ್ಕಿಂತ ಗುಹಾವಾಸದ ಏಕಾಂತಿಕ ಜೀವನ ರೀತಿ ಮಿಗಿಲು;

೨. ಯತಿಭಿಕ್ಷವು ಯಾವಾಗಲೂ ತಿರಿಯುವುದು-ಹರಿದಾಡುವುದು, ಒಂದೆಡೆಗೆ ವಾಸಮಾಡಲಾಗಿರದೆಂಬ ನಿರ್ಬಂಧ

೩. ಅಸಂಗ್ರಹವೃತ್ತಿ

೪. ನಾಳಿನ ಚಿಂತೆಯಿಂದ ಅಥವಾ ನಿನ್ನೆಯ ಅನುಭವದಿಂದ ಪಾಠ ಕಲಿಯದಿರುವ 'ಸನಾತನ' ಏಕಾಂತಿಕ ಏಕಮಾರ್ಗೀ ವೃತ್ತಿ; ಆತ್ಮರತಿಯಲ್ಲಿ ಶ್ರದ್ಧೆ.

೫. 'ಸಂತತಿ'ಯ ಇಚ್ಛೆ ಹೆಣ್ಣಿಗೆ ಮಾತ್ರ

೬. ಮಾತೃವಂಶ: ಆದಿಮಾತೆಯ ಸಂಪ್ರದಾಯವೇ ಮಾನವ ಕುಟುಂಬದಲ್ಲಿ ಎಲ್ಲೆಲ್ಲೂ ಮೊದಲು ರೂಢವಿದ್ದುದು ವಿಚಾರಾರ್ಹವಿದೆ. ಋಗ್ವೇದದ 'ಅದಿತಿ' ಈ ಬಗೆಯ ಒಂದು ಮಾತೃದೈವತ ಪ್ರತಿಮೆಯೇ ಆಗಿದೆ.

ಇಂತಹ ಇನ್ನೂ ಕೆಲವು ಅಂಶಗಳನ್ನು ಹೇಳಬಹುದು. ಇಜಿಪ್ತ, ಗ್ರೀಸ ದೇಶದ ಪುರಾಣ ಕಥೆಗಳಿಂದ ಅರಿಕೆಗೆ ಬರುತ್ತಿರುವ ಅಂಶವೂ ಮೇಲಣ ವಿಚಾರವನ್ನು ದೃಢಪಡಿಸುತ್ತದೆ:

> "In this archaic religious system there were as yet neither gods nor priests, but only a universal Goddess and her priestesses, woman being the dominant sex and man frightened victim. Fatherhood was not honoured conception being attributed to the wind, eating of beans or..., inheritance was matrilineal and Snakes were regarded as incarnation of the dead... ... the (mother) Goddess's tittle (was) as the visible moon;... Ophion or Boreas is the serpent demurge of Hebrew and Egyption myth - in early Mediterranean art, the Goddess is constantly shown in his (Serpent's) company[೪]

'ಸರ್-ಪವೇ ವಿಶ್ವಸ್ಥ ಮೂಲ ದಿವ್ಯ ಶಕ್ತಿ' ಎಂಬ ಈ ಶ್ರದ್ಧೆಯು ಭಾರತೀಯ ಜಾನಪದದಲ್ಲಿ ಬೇರೂರಿರುವುದನ್ನು ನಿದರ್ಶನಕ್ಕೆ ತರುವ ಈ ಎರಡು ಮೂರು ಸಂಗತಿಗಳನ್ನು ಗಮನಿಸಬಹುದು: ತಮ್ಮ ಸಂತಾನಕ್ಕೆ 'ನಾಗ'ನ ಒಂದಿಲ್ಲೊಂದು ಪರ್ಯಾಯ ನಾಮವನ್ನಿಡುವುದು. ಆ ದಿವ್ಯಶಕ್ತಿಯು ತಮ್ಮಲ್ಲಿ ಹುಟ್ಟಿಬಂದಿತೆಂಬ ಭಾವನೆ. ಹಾವಪ್ಪ ಎಂಬ ಹೆಸರು ಗಾಂಪರಲ್ಲಿ ಉಂಟೆಂದರೂ, 'ನಾಗ' ಹೆಸರಿನಿಂದ ಅಲಂಕೃತವಾಗಿರದ ಒಂದೂ ಜಾತಿಯಿಲ್ಲ; ಪ್ರತಿಷ್ಠಿತ ವರ್ಗವಿಲ್ಲ. ವೇದವೇದಾಂತ ಪಾರಗ ನಾಗಾಭಟ್ಟರು ಆಚಾರ್ಯರು, ಉಪಾಧ್ಯಾಯರು ಇದ್ದಾರೆ; ಆಗಿಹೋಗಿದ್ದಾರೆ. ಬೌದ್ಧ ಪಂಥೀಯ ನಾಗಾರ್ಜುನನ ಹೆಸರು ವಿಶ್ವಖ್ಯಾತಿಯುಳ್ಳದುದಾಗಿದೆ. ಆತನ ಅನನ್ಯ ಸಾಧಾರಣ ವಿದ್ವತ್ತಿನಿಂದಾಗಿ 'ಕಿಮಯಾ' ಅಥವಾ ಬಂಗಾರ ಮಾಡುವ ವಿದ್ಯೆಯನ್ನು (Alchemy) ಬಲ್ಲ, ಹಾಗೂ ಔಷಧಿ ರಸಾಯನಗಳಲ್ಲಿ ನಿಪುಣನೆಂಬ, ಒಬ್ಬನೋ - ಹಲವರೋ ನಾಗಾರ್ಜುನರಾದುದುಂಟು. 'ಸರ್'ಪ' ದೈವತದ ಅವಕೃಪೆಯಿಂದ ಮಕ್ಕಳು ಆಗುವುದಿಲ್ಲ - ಬದುಕುವುದಿಲ್ಲ; ಎಂಬ ಗ್ರಹಿಕೆಯಿದೆ. ಮಕ್ಕಳು ಬಾಳಲೆಂದು ಹುಟ್ಟಿದ ಹಸುಳೆಗಳಿಗೆ ನಾಗಮಣಿ, ನಾಗರತ್ನ, ಶೇಷ, ಭುಜಂಗ ಮೊದಲಾದ ಹೆಸರು ಇಡಲಾಗುತ್ತದೆ. ಮಕ್ಕಳಾಗದಿರುವಾಗ 'ನಾಗಬಲಿ-ನಾರಾಯಣಬಲಿ' ಎಂಬ ತಂತ್ರವಿಧಾನ ಮಾಡಿಸುವ ಸಂಪ್ರದಾಯವಿದೆ. 'ನಾರಾಯಣ' ಎಂಬುದು ನಾಗನ ಪರ್ಯಾಯನಾಮವೆಂಬುದನ್ನು ಇಲ್ಲಿ ಮನಗಾಣಬಹುದು. 'ಅದಿತಿ' ನಾಗಮಣಿ, ಎಂದು ಈ ಮೊದಲು ಸೂಚಿಸಿದೆ. ಇದರಂತೆ ಪದ್ಮ (ಅಪ್ಪ-ಅವ್ವ) ಕಮಲ, ಅರವಿಂದ, ಪುಂಡರೀಕಾದಿ ನಾಮಗಳೂ 'ನಾಗ' ಸಂಪ್ರದಾಯಕ್ಕೆ ಸಂಬಂಧಿಸಿದವುಗಳೇ ಆಗಿವೆ.

'ನಾಗ' ಈ ಹೆಸರನ್ನು ಇಡುವುದು ಮಕ್ಕಳ 'ಅಲಂಕರಣ' ಎಂದುದಕ್ಕೆ ಕಾರಣವಿದೆ : ಅಲಂಕೃ-ಅರಂಕೃ ಎಂಬ ಮಾತು ವೇದಗಳಲ್ಲಿ ಬರುತ್ತದೆ. ಅಲ್ಲಿರುವ ಮೂಲಾರ್ಥವು ಒಂದುಕಾಲದ ನಮ್ಮ ನಂಬುಗೆಗಳ ಸ್ವರೂಪವನ್ನು ಬೆಳಕಿಗೆ ತರುತ್ತಿದೆ. 'ಅಲಂ' -'ಅರಂ' ಈ ಪದಕ್ಕೆ ಯೋಗ್ಯ ಎಂಬ ಅರ್ಥವಿದ್ದು, ಸಾಕಷ್ಟು ಸಾಮರ್ಥ್ಯ

ಯೋಗ್ಯತೆ, ಶಕ್ತಿ ಪ್ರಾಪ್ತವಾಗಲೆಂದು ಮಂತ್ರಸಾಮರ್ಥ್ಯಯುಕ್ತ 'ದಿವ್ಯ' ನಾಮವನ್ನು ಧಾರಣ ಮಾಡಲಾಗುತ್ತಿತ್ತು; ಅಥವಾ ಆ ನಾಮವನ್ನು ಇಡಲಾಗುತ್ತಿತು. ನಾಮರೂಪ ಶಬ್ದಪ್ರತಿಮಾ - ಧಾರಣದಂತೆ, ಕೆಲವೊಂದು ಮಣಿ, ತಾಯ್ತದಂತಹ 'ದಿವ್ಯ' ವಸ್ತುಗಳನ್ನು ಧರಿಸುವ ವಾಡಿಕೆಯೂ ಇದ್ದಿತು - ಇಂದಿಗೂ ಇದೆ, ಏನೊಂದು ರೂಪದಲ್ಲಿ. 'ಅಲಂಕಾರ' ಎಂಬುವು ಈಗ, ಅಂದ ಚೆಂದದ ಸೊಬಗಿನ ಹಿಗ್ಗಿನ ಅಥವಾ ವೈಭವಪ್ರದರ್ಶನ ವಸ್ತುಗಳಾಗಿವೆ! ಆದರೆ, ಮೂಲತಃ 'ಅಲಂಕರಣ' ವಿಚಾರವು ಸ್ಫುರಿಸಿದ್ದು, ದಿವ್ಯದೈವತ ಶಕ್ತಿಯ ಸಂರಕ್ಷಣೆಯನ್ನು ಪಡೆಯುವ ಪ್ರಯತ್ನದಲ್ಲಿ.[೫]

ಒಂದೊಂದು ದೇವತೆಯ 'ಕವಚ' ಎಂಬ ಮಂತ್ರಗಳು ಇವೆ; ಅವುಗಳ ಪಠನದಿಂದ ಆ ದೈವತದ ಸಂರಕ್ಷಕ 'ಕವಚವು' ಪ್ರಾಪ್ತವಾಗುತ್ತದೆ, ಎಂಬ ಶ್ರದ್ಧೆಯು ಇದ್ದಿತು. 'ಮಣಿ' ಎಂಬ ಶಬ್ದಪ್ರತಿಮೆಯಲ್ಲಿ ಈ ಅರ್ಥವೆ ಅಡಗಿದೆ. ಸಮುದ್ರದೊಳಗಿಂದ ಹೊರಗೆ ಬರುವ - ತೆಗೆಯಲಾಗುವ ಮಣಿಗಳಲ್ಲಿ ಹವಳ ಮುತ್ತುಗಳಂತೆ ಶಂಖ, ಸಿಂಪುಗಳ ಸಮಾವೇಶವೂ ಆಗುತ್ತದೆ. ಮಣಿ ಈ ಶಬ್ದಪ್ರತಿಮೆ ಋಗ್ವೇದದಲ್ಲಿದೆ, ಅಥರ್ವವೇದದಲ್ಲಿದೆ. ಮುತ್ತು - ಮೌಕ್ತಿಕ; ಮುಕ್ತಾ ಎಂಬುದರ ಮಣಿಯಷ್ಟು ಪ್ರಾಚೀನ ಉಲ್ಲೇಖಗಳು ದೊರೆಯುವುದಿಲ್ಲ. ಶಂಖವನ್ನು 'ಮಣಿ'ಯೆಂದುದುಂಟು. ದನಗಳಿಗೆ ದೃಷ್ಟಿತಾಗಬಾರದೆಂದು, ಭೂತಾದಿಗಳ ಬಾಧೆಯಾಗಬಾರದೆಂದು, ಕೊರಳಲ್ಲಿ ಶಿಂಪು-ಶಂಖಗಳ ಸರ ಕಟ್ಟಲಾಗುತ್ತದೆ. ಹವಳಮುತ್ತಿನ ಸರ ಧರಿಸುವಲ್ಲಿಯೂ ಈ ಮಂತ್ರ ದಿವ್ಯಶಕ್ತಿಯ ಶ್ರದ್ಧೆಯೇ ಇತ್ತು. ಬೆರಳಲ್ಲಿ ಧರಿಸುವ ಉಂಗುರ (ವಲಯ ಸರ್-ಪ) ಅದರಲ್ಲಿ ಹರಳು. ಯಾವ ಬಣ್ಣದ್ದಿದ್ದರೆ ತಮಗೆ ಶುಭಕರ ಎಂದು ಜ್ಯೋತಿಷ್ಕರ 'ಕಣಿ' ಕೇಳುವ ವಾಡಿಕೆ ಇಂದಿಗೂ ಇದೆ. 'ಮಂಗಲಸೂತ್ರ' ದಾರ: ಸರ್-ಪ ಸೂಚಕ. 'ಅದಿತಿ' ಸಂಪ್ರದಾಯದ ದೇವದಾಸಿಯರಿಂದ ಅಥವಾ ಕುಲೀನ ಕಲಾವತಿಯರಿಂದಲೇ ಪೋಣಿಸಿ - ಮಂತ್ರಿಸಿ ಧರಿಸುತ್ತಿದ್ದ ಸಂಪ್ರದಾಯ ಈಗ ಮರೆತುಹೋಗತೊಡಗಿದೆ. ನಾರ : ನೀರು : ನಾಗ ಈ ಮಂತ್ರ ದಿವ್ಯಶಕ್ತಿಯ ಶ್ರದ್ಧೆಯೇ ಇತ್ತು. ಬೆರಳಲ್ಲಿ ಧರಿಸುವ ಉಂಗುರ (ವಲಯ ಸರ್-ಪ) ಅದರಲ್ಲಿ ಹರಳು, ಯಾವ ಬಣ್ಣದ್ದಿದ್ದರೆ ತಮಗೆ ಶುಭಕರ ಎಂದು ಜ್ಯೋತಿಷ್ಕರ 'ಕಣಿ' ಹೇಳುವ ವಾಡಿಕೆ ಇಂದಿಗೂ ಇದೆ. 'ಮಂಗಲಸೂತ್ರ' ದಾರ : ಸರ್-ಪ ಸೂಚಕ. 'ಆದಿತಿ' ಸಂಪ್ರದಾಯದ ದೇವದಾಸಿಯರಿಂದ ಅಥವಾ ಕುಲೀನ ಕಲಾವತಿಯರಿಂದಲೇ ಪೋಣಿಸಿ- ಮಂತ್ರಿಸಿ ಧರಿಸುತ್ತಿದ್ದ ಸಂಪ್ರದಾಯ ಈಗ ಮರೆತುಹೋಗತೊಡಗಿದೆ. ನಾರ : ನೀರು: ನಾಗ ಈ 'ದಿವ್ಯ' ಶಕ್ತಿಯ ವಸ್ತುಗಳ ಸಹೋದರ ಶಂಖ, ಶಿಂಪು, ಹವಳ, ಮುತ್ತು ಇತ್ಯಾದಿ. ದೇವರ ಪೂಜೆಯಲ್ಲಿ ಶಂಖದಿಂದ ಸ್ನಾನಕ್ಕೆ ಹಾಕುವ ರೂಢಿಯಿದೆ. ನಾಗನ ಹೆಡೆಯಲ್ಲಿ 'ದಿವ್ಯ' ಮಣಿಯಿರುತ್ತದೆ ಎಂಬ ಗ್ರಹಿಕೆಯುಂಟು. ಇಂತಹ ಮಣಿಯಲ್ಲಿ 'ಪವಾಡ' ಶಕ್ತಿಯಿರುವ ನಂಬುಗೆಯಿದೆ. 'ದಿವ್ಯ' ಮಣಿಯನ್ನು ಕೊರಳಲ್ಲಿ ಕಟ್ಟಿಕೊಳ್ಳುವ ಸನಾತನ ಸಂಪ್ರದಾಯವು ಅಭ್ಯಸನೀಯವಿದೆ. ದಾರ, ಮಣಿ (ಮಂತ್ರಸಾಮರ್ಥ್ಯವುಳ್ಳವರಿಂದ) ಪಡೆದು, ಅವನ್ನು ಧರಿಸುವ ವಾಡಿಕೆಯಿತ್ತು-ಇದೆ. ಇಂತಹ ಮಣಿ, ದಾರ, ಕೈಯ್ಯಲ್ಲಿ, ಕೊರಳಲ್ಲಿ ಇದ್ದರೆ ಆಪತ್ತುಗಳು ದೂರ ಹೋಗುವವು ಎಂಬ ಶ್ರದ್ಧೆಯಿದೆ. ಆತ್ಯಂತಿಕ ಭಕ್ತರ ಕೊರಳೊಳಗಿನ ಮಣಿ-ದಾರ ಅವರ ಮೈಮೇಲೆ ಬಂದವರಿಗೆ ಹಾವು ಆಗಿ, ಏರಿಬಂದವರನ್ನು ಕಚ್ಚಿದ ಪವಾಡ ಕಥೆಗಳೂ ಇವೆ. ರಾಜನ ಖಡ್ಗದಲ್ಲಿ, ಸಿಂಹಾಸನದಲ್ಲಿ ನಾಗಶಕ್ತಿಯಿರುವುದಾಗಿ ಶ್ರದ್ಧೆಯಿದೆ. ನಮ್ಮ ದೇವರ 'ಆಸನ'ವನ್ನು 'ಸಿಂಹ' ಆಸನವಾಗಿ ಈಗ ರಚಿಸಲಾಗುತ್ತಿದ್ದರೂ ಮೂಲತಃ ಅದು ನಾಗಾಸನವೇ. ಫಣಿರಾಯ : ನಾಗ, ಹಿನ್ನೆಲೆಯಲ್ಲಿ ಸಾವಿರ ಹೆಡೆಯೆತ್ತಿ ನೆರಳಾಗಿ ನಿಂತಿರುವ ಹಾಗಿನ ವಿಷ್ಣು, ಗಣಪತಿಯ ಪ್ರತಿಮೆಗಳು ಈಗಲೂ ಉಂಟು. ಆಪ : ರಸ ಶಕ್ತಿಯ ಯಾವ ಮುನ್ನೀರಿನೊಳಗಿಂದ ಈ ಜೀವಜಂತುಗಳಾದುವೋ ಆ ಸರೀಸೃಪ ಮಹಾವಂಶವು ಸರ್ವಪ್ರಥಮ ದಿವ್ಯ ದೈವತವಾಗಿ ಕಾಣಿಸಿದ್ದರ ಅವಶಿಷ್ಟ ಸ್ಮೃತಿಗಳು ಇವೆಲ್ಲ ಮಾನವನು ಇವುಗಳನ್ನು ದೇವರೆಂದು ದಿವ್ಯ ವಿಶ್ವಶಕ್ತಿಯ ಪ್ರತೀಕವೆಂದು ಭಾವಿಸಿ ಆರಾಧಿಸಿದಂತೆ, ಅದನ್ನು ಗೆದ್ದೆನೆಂಬುದನ್ನು ಸೂಚಿಸುವ ಹಾಗಿನ ಆಸನದ ಸಂಕೇತವಾಗಿ ಚಿತ್ರಿಸಿಕೊಂಡದ್ದೂ ಉಂಟು.

ನಾಗ : ಹಾವು ಸುಸಂಸ್ಕೃತ ಮನಸ್ಸಿಗೆ ಹಿಡಿಸದಾಗುತ್ತದೆ. ಆಗ 'ನಾಗ' ಆನೆಯ ಹೆಸರಾಗುತ್ತದೆ 'ಹಸ್ತಿನ್' ಎಂಬುದು 'ನಾಗ'ವೇ! ಆನೆ, ಸಿಂಹ, ಹುಲಿ ಇವು 'ಸರೀಸೃಪ' (Reptile) ಯುಗವು ಮುಗಿದ ಬಳಿಕ ಮಾನವನ ಚಿತ್ತವನ್ನು ಸೆಳೆದ ಪ್ರಾಣಿಗಳು. ಹಾವನ್ನು ಪೂಜಿಸುವುದು ತೀರ ಪ್ರಾಥಮಿಕತೆಯ ಸೂಚಕ, ಎಂಬ ವಿಚಾರವು ತಲೆಯೆತ್ತಿದ ಹಾಗೆ ಪೂಜಾಸಂಕೇತದ ನಾಮರೂಪವು ಮಾರ್ಪಡತೊಡಗಿದ್ದುಂಟು. ನಾಗವು 'ಭುಜ'-ಗವು; ಒಂದು ಬಗೆಯಲ್ಲಿ ಗಮನಶೀಲ 'ಹಸ್ತ'ವೇ ಭುಜ-ಗದ ಹೆಡೆ, ಹಸ್ತವೆ ತಾನೆ? ಚಲನವಲನದಲ್ಲಿ ನಾಗ(ಸರ್ಪ)ವನ್ನು ಹೋಲುವ ಸೊಂಡಿಲಿನ ಆನೆಗೆ 'ನಾಗ' 'ಹಸ್ತಿ' (ಭುಜ-ಕೈ) ಎಂಬ ಹೆಸರು ಇರುವುದು ವಿಚಾರಾರ್ಹವಾಗಿದೆ. ಆನೆಗೆ 'ನಾಗ' ಎಂಬ ಹೆಸರು ಬಂದಿರುವಲ್ಲಿ ಹಾವೇ ಮಾನದಂಡವಾಗಿದೆ. ದೇವರಿಗೆ 'ಮಾತೆ' ಅಥವಾ 'ಪುರುಷ'- ಪುರುಷೋತ್ತಮ ಎಂದ ಹಾಗೆ. ಜ್ಞಾನವಸ್ತುವಿನಿಂದ ನೂತನವಾಗಿ ತಿಳಿದ ಹೊಸದನ್ನು ಹೆಸರಿಸುವ ರೀತಿ ಹೀಗೆಯೇ ಉಂಟು. ಉದಾ ನೆಲ-ಕಡಲೆ;

ಭಾರತೀಯ ಸಂಸ್ಕೃತಿಯ ತಳಪಾಯದಲ್ಲಿ 'ನಾಗ' ಸಂಪ್ರದಾಯದ ಪ್ರಭಾವವು ಅದೆಷ್ಟು ಆಳವಾಗಿದೆ, ಎಂಬುದಕ್ಕೆ ವ್ಯಕ್ತಿನಾಮಗಳಂತೆ ಸ್ಥಳನಾಮಗಳೂ ನಿದರ್ಶನವಾಗಿವೆ. ಭಾರತದಲ್ಲಿ ಆಸೇತು ಹಿಮಾಚಲ ಅಲ್ಲಲ್ಲಿಯ ಭಾಷೆಯಲ್ಲಿ ಅನೇಕಾನೇಕ ಹಾವನೂರು, ಹಾವಿನಹಾಳು, ಹಾವೇರಿಗಳುಂಟು. ಹಾವನ್ನು ಗೌರವದಿಂದ ಕಾಣದ ಪ್ರತಿಷ್ಠಿತ-ವರ್ಗದ ವರ್ಚಸ್ಸಿನ ಮೂಲಕವಾಗಿ ಹಾವಿನ ಊರುಗಳ ಹೆಸರಿನ ಬಾಹ್ಯ ಆಕಾರವು ಬೇರೆಯಾಗುವುದನ್ನು ನಾಗಪುರ, ಹಸ್ತಿನಾಪುರದಂತಹ ಸ್ಥಳನಾಮಗಳಲ್ಲಿ ಮನಗಾಣಬಹುದು. 'ನಾಗ' ಹಾವು 'ಆನೆ' ಎಂಬ ಅರ್ಥಕ್ಕೆ ಬರುತ್ತಲೆ ನಾಗರಖಂಡದೊಳಗಿನ ಈ ನಗರವು ಹಸ್ತಿನಾಪುರವಾದುದಾಗಿ ಮೇಲೆಯೆ ಕಾಣುವಂತಿದೆ. ಏಕೆಂದರೆ ಹಸ್ತಿನಾಪುರದ ಪರಿಸರಕ್ಕೆ ಅನತಿ ದೂರದಲ್ಲೆ 'ಅಹಿ-ಛತ್ರ' ಎಂಬ ಪ್ರದೇಶವುಂಟು! ಈ ಅಹಿ-ಛತ್ರದಿಂದ ಕಂನಾಡಿನ ಬನವಸೆಯತ್ತ ವಲಸೆಬಂದು ನಿಂತವರ ನಾಡು 'ನಾಗರ'ಖಂಡ! ಹಸ್ತಿನಾಪುರದ ಹಾಗೆ ಆ ಪ್ರದೇಶದಲ್ಲಿಯೆ ಇಂದ್ರಪ್ರಸ್ಥ ಎಂಬ ಹೊಸ ಪಟ್ಟಣವೊಂದನ್ನು ಪಾಂಡವರು ನಿರ್ಮಿಸಿಕೊಂಡ ಕಥೆಯಿದೆ. ಈ ಇಂದ್ರಪ್ರಸ್ಥವನ್ನು ಕಟ್ಟಲು ಅರಿಸಿದ ಖಾಂಡವ ವನವು ನಾಗ-ಕುಲದ ನೆಲೆವೀಡು. ಯಮುನಾ ತಟಾಕವಂತೂ ನಾಗವಂಶದ ಆಗರವೆ ಆಗಿತ್ತು. ಕಾಳಿಂಗಸರ್ಪವಿದ್ದ ಈ ನದಿಯ ಹೆಸರೆ 'ಕಾಳಿ' 'ಕಾಲಿಂದೀ' ಯಮುನಾ-ಯಮಿ (ಯಮನ ಜೊತೆಯವಳು) ಎಂಬ ಹಾಗೆ ಯಮನೆ ಗಂಗೆಯ ಜೊತೆಯವಳು: ಯಮಳಳು. ಅಕ್ಕ ಗಂಗೆಯಾದರೆ, ತಂಗಿ ಯಮುನೆ. ಈ ಹೆಸರಿನ ಮೂಲಕವಾಗಿಯೂ ಈ ಭಾಗದ ಜನಪದ ಸಂಸ್ಕೃತಿಯ ವೈಶಿಷ್ಟ್ಯವು ಬಹಿರಂಗಕ್ಕೆ ಬರಲಿದೆ. ಕಾಲಿಂದೀ ತೀರದ ಮಥುರ-ಮಧುರೆ ಮಾಧವ ನಂದಗೋಪಾಲನ ಲೀಲಾವಿಹಾರದ ಸ್ಥಾನ. ನಂದ-ಗೋಪರು-ಯಾದವರು ನಾಗಕುಲಕ್ಕೆ ಸಂಬಂಧಪಟ್ಟವರು. 'ನಂದ'ನೆಂದು ವಿಷ್ಣುವಿಗೆ ಹೆಸರು. 'ನಂದಿ' ರುದ್ರ! ನಾಗರು: ನಂದರುಗಳ ನೆಲೆವೀಡು ಈ ಗಂಗಾ-ಯಮುನಾ ಪರಿಸರ! ಆದುದರಿಂದ, 'ಹಸ್ತಿನಾಪುರ' ಎಂಬುದು ಈ ಊರ ಮೂಲ ಹೆಸರು ಇರುವ ಶಕ್ಯತೆಯಿಲ್ಲ. ಆದಕಾರಣ 'ಹಸ್ತಿನಾಪುರ'ವು ನಾಗ-ಪುರ ಎಂಬ ಮೂಲ ಹೆಸರಿನ ಭಾಷಾಂತರವಿರುವ ಶಕ್ಯತೆಯೆ ಇಲ್ಲಿ ಹೆಚ್ಚು. ಪಂಜಾಬಿನಲ್ಲಿ ಇರುವ 'ತಕ್ಷಶಿಲೆ' ತಕ್ಷಕ : ನಾಗನ ಸ್ಮಾರಕ. ಕಾಶ್ಮೀರವಂತೂ ನಾಗರ ಆಗರವಾಗಿದ್ದ ಕತೆ ಪುರಾಣಗಳೆ ಉಂಟು.

ಕೌರವ-ಪಾಂಡವರ ಪೂರ್ವೋತ್ತರಗಳ ಸಮೀಕ್ಷೆಯಲ್ಲಿ ಕಾಣುತ್ತಿರುವುದೇನು? ಇವರೂ ನಾಗ-ನಾರಣರು ಎಂದೇ. ಶಂತನುವಿನ ಮೊದಲ ಪ್ರೇಯಸಿ ಗಂಗಾದೇವಿಯಂತೆ! ಇವಳು ಆಪ-ಸ್ವರೂಪಳು. (ಇವಳು ಋಗ್ವೇದದ ಅದಿತಿಯನ್ನು ಸಂಪೂರ್ಣವಾಗಿ ಹೋಲುತ್ತಾಳೆ!) ಈ ಆಪೋದೇವಿಯ ಪುತ್ರ : ಗಂಗಾ-ಪುತ್ರ ದೇವವ್ರತನೆಂಬ ಭೀಷ್ಮ! 'ನಾರ' ಸ್ವರೂಪನಾದನು. ಶಂತನುವಿನ ಇನ್ನೊಬ್ಬ ನೀರೆ ಯೋಜನಗಂಧಿ (ಪೂರ್ವಾಶ್ರಮದಲ್ಲಿ ಮತ್ಸ್ಯಗಂಧಿ). ಇವಳ ಹೊಟ್ಟೆಯಲ್ಲಿ ಹುಟ್ಟಿದ ಸಂತತಿ ಅಲ್ಪಾಯುಷಿಯಾಗಿ ಆ ನೀರಗುಳ್ಳೆ ಕೂಡಲೆ ಕಾಣೆಯಾದುವು. ಚಿತ್ರವೀರ್ಯ, ವಿಚಿತ್ರವೀರ್ಯ ಎಂಬ ವೀರರಿಬ್ಬರ ವಿಧವೆಯರಿಗೆ ನಿಯೋಗದಿಂದಾದ ಸಂತಾನ ಧೃತರಾಷ್ಟ್ರ ಮತ್ತು

ಪಾಂಡು. ಈ ನಿಯೋಗವು ಯಾರಿಂದಾಯ್ತೋ ಅವನು 'ಗಂಗಾ-ಪುತ್ರ' ವ್ಯಾಸನೆಂಬವನು. ನಾರಾಯಣ - ವಾಸುದೇವ- ವಿಷ್ಣು (ಕೃಷ್ಣ) ದೈವತ ಪಂಥವನ್ನು ಪುನರುಜ್ಜೀವನಗೊಳಿಸಿದ ಶ್ರೇಯಸ್ಸು ಈ ವ್ಯಾಸನಿಗೆ ಉಂಟು. ಎಂದರೆ ವ್ಯಾಸ-ನಾರಾಯಣಾಂಶ ಸಂಭೂತರೇ ಕೌರವ ಪಾಂಡವರೂ ಎಂದಾಯ್ತು. 'ಆಪೋ ನಾರಾಃ ಇತಿ ಪ್ರೋಕ್ತಾಃ' ಆಪೋ ವೈ ನರಸೂನವಃ; ಅಲ್ಲವೆ?

ನಾಗಕನ್ಯೆಯನ್ನು ಮದುವೆಯಾಗದಿರುವ ನಾಗವಂಶಕ್ಕೆ ಸಂಬಂಧವೆ ಇಲ್ಲದ ಅರಸುಮನೆತನಗಳೇ ನಮ್ಮಲ್ಲಿ ವಿರಳ. ಪ್ರಾಚೀನ ಇತಿಹಾಸದಲ್ಲೆ ಏಕೆ? ಮಧ್ಯಯುಗದ ರಾಜವಂಶಗಳಲ್ಲೂ ಸಹ. ಇದರಿಂದಾಗಿ ಈ ದೇಶವು ಭರತ ವಂಶದ ಭೂಮಿ - 'ಭರತಖಂಡ' ಆಗುವುದಕ್ಕೂ ಮುಂಚೆ ನಾಗರಖಂಡವೇ ಆಗಿದ್ದಿತೆಂಬ ಮಾತು ಒಂದಕ್ಕಿಂತ ಹೆಚ್ಚು ಬಗೆಗಳಿಂದ ಬಯಲಿಗೆ ಬರುತ್ತಿದೆ. ಅಗ್ನಿಕುಲ, ಸೌರವಂಶದ ರಾಜರ ಕಥೆಗಳು ಉಂಟು, ಭಾರತೀಯ ಇತಿಹಾಸದಲ್ಲಿ. ಆದರೆ, ಚಂದ್ರವಂಶದ ಯದು-ತುರ್ವಸುಗಳ ಪ್ರಭಾವ-ವರ್ಚಸ್ಸಿನ ಎದುರು, ಸೂರ್ಯ-ವಂಶದ ಅರಸುಮನೆತನಗಳ ಕಥೆಯು ಅಷ್ಟು ವಿವಿಧ ವರ್ಣರಂಜಿತ ಜೀವನದ ಹಿನ್ನೆಲೆಯುಳ್ಳದಾಗಿ ಕಾಣುವುದಿಲ್ಲ. ಸೂರ್ಯವಂಶಿ ಎಂದು ಬಗೆಯಲಾದ ಇಕ್ಷ್ವಾಕು ಕುಲದ ಘನಮಹಿಮ ರಾಮನ ಕಥೆಯನ್ನೊಳಗೊಂಡ ರಾಮಾಯಣ ಮತ್ತು ಚಂದ್ರವಂಶದವರೆಂಬ ಯದುವಂಶದ ಕಥೆಯನ್ನೊಳಗೊಂಡ ಮಹಾಭಾರತ ಈ ಮಹಾಕಾವ್ಯಗಳೇ ಇದಕ್ಕೆ ಸಾಕ್ಷಿ ಚಂದ್ರಪೂಜೆ, ಎಂದರೆ ಹುಣ್ಣಿಮೆಗಳ ಉತ್ಸವ; ಈ ಹುಣ್ಣಿಮೆಗಳೊಡನೆ ಹೊಸೆದುಕೊಂಡಿರುವ ನಾನಾ ನಾಮರೂಪದ ದೇವಿಯರುಗಳ ಜಾತ್ರೆಗಳು ಆಸೇತು ಹಿಮಾಚಲದಲ್ಲಿ ನಡೆಯುತ್ತವೆ. 'ರೇಣುಕಾ' ಎಂಬ ಹೆಸರಿನಲ್ಲಿ ಎಲ್ಲಮ್ಮ (ಋಗ್ವೇದದ ಅದಿತಿ) ಅಖಿಲ ಭಾರತೀಯ ಸ್ವರೂಪದ ದೇವಿಯಾಗಿದ್ದಾಳೆ. ಮುತ್ತೈದೆ ಹುಣ್ಣಿಮೆ-ರಂಡೆ ಹುಣ್ಣಿಮೆ ಇವು ಸೃಷ್ಟಿ ಮತ್ತು ಪ್ರಳಯ: 'ಅಮೃತಂ ಚೈವ ಮೃತ್ಯುಃ ಚ' ಈ ಉಭಯ ಶಕ್ತಿಯ ಸಂಕೇತ ಪ್ರತೀಕಗಳನ್ನುಳ್ಳ ದೇವಿ: ಪ್ರಕೃತಿಮಾತೆ ಸಾಕ್ಷಾತ್ತಾಗಿ; ಎಲ್ಲ(ದರ) ಅಮ್ಮ ಈ ದೇವಿ. ಆದಕಾರಣ ಈಕೆ ಜಗದಂಬೆ ಲೋಕಮಾತೆ ಹುಣ್ಣಿಮೆಗೆ ಸಂಬದ್ಧಳಾಗಿರುವ ಚಂದ್ರಾ-ಚಂದಲಾದೇವಿ, ಈಕೆ.

ಚಂದಲಾ-ಪರಮೇಶ್ವರಿ : ಕೊಟ್ಟರಿ : ಹಿಂಗುಲಜಾ: ನೈನಾ: ನನಾ: ವರನಂದಿನೀ ಈ ಎಲ್ಲ ಹೆಸರುಗಳಿಂದ ಕೂಡಿರುವ ದೇವಿಯು ಕಾಶ್ಮೀರದಿಂದ ತೊಡಗಿ ಕಂನಾಡವರೆಗೆ ಇದ್ದಾಳೆ! ಈ ಶಕ್ತಿಗೆ ಲಕ್ಷ್ಮೀ, ಕಾಲೀ, ದುರ್ಗೆ ಎಂದೂ ಹೆಸರು. ಈ 'ಚಂದ್ರಾ' ದೇವಿಯರ ಗುಡಿಗಳು ಒಂದಿಲ್ಲೊಂದು ನಾಮಾಂತರದಿಂದ ಇಡೀ ಹಿಂದುಸ್ತಾನದಲ್ಲಿವೆ. ಕಾಶ್ಮೀರ ಕೊಳ್ಳದ ಶಾರದಾಂಬೆಯಲ್ಲದೆ, ಅಲ್ಲಿಯ ಖೀರಾ (ಕ್ಷೀರಾ) ದೇವಿಯ ಮಹಾತ್ಮ್ಯವು ಅಪೂರ್ವವಾಗಿದೆ. ಶಾರದಾಂಬೆ ಕಂನಾಡಿನ ಶೃಂಗೇರಿಗೆ ಬಂದುದುಂಟು. ಆದ್ಯ ಶಂಕರಾಚಾರ್ಯರೊಂದಿಗೆ, ಖೀರಾ (ಕ್ಷೀರಾ) ದೇವಿ: ಹಾಲಮ್ಮ -ಹಾಲುಮತದಮ್ಮ ಇವಳೇ ಮಾಳಮ್ಮ : ಕುರುಬಿತಿ! ಮಹಾರಾಷ್ಟ್ರದ ಮ್ಹಾಳಸಾ : ಮೋಹಿನೀರಾಜ (ವಿಷ್ಣು) ಇವಳೇ.

ಹಾವಿನ ವಿಚಾರವಾಗಿ - ನಾಗಪ್ರತಿಮೆಯನ್ನು ಕುರಿತು - ನಡೆದ ವಿವರಣೆಯಲ್ಲಿ ಚಂದ್ರವಂಶ, ಚಂದ್ರಾದೇವಿಯರು - ಹಾಲಮ್ಮ ಮಾಳಮ್ಮ ಇವರೆಲ್ಲ ಮೂಲತಃ ಸರ್ಪರೂಪ ದೇವಿಯರೇ. ಈ ದೇವಿಯರ ದೇಗುಲಗಳು ದೇವಸ್ಥಾನ :ಕ್ಷೇತ್ರದ ಸಂದರ್ಭದಿಂದ 'ನಾಗ' ದರ್ಶನವು ತಪ್ಪದೆ ಆಗುತ್ತದೆ. ಈ ಕಾರಣದಿಂದಲೇ ಹುಣ್ಣಿವೆ ಗಳೊಡನೆ ಸಂಬದ್ಧ ಚಂದ್ರಾದೇವಿಯರನ್ನು ಇನ್ನೂ ಸ್ಮರಿಸಿಕೊಳ್ಳುವುದು ಅವಶ್ಯವೆನಿಸಿದೆ. ನಾಗನಾಮಕ್ಕೆ ಸಾಕ್ಷಾತ್ತಾಗಿ ಸಂಬಂಧಿಸಿದ ಸ್ಥಳನಾಮಗಳ ಸಂಖ್ಯೆ ವಿಶೇಷವಿರಲಿಕ್ಕಿಲ್ಲ. ಆದರೆ, ದೇವರ ಹಾವು ಇಲ್ಲದೆ ಇರುವ ಪ್ರಾಚೀನ ದೇವತಾಮಂದಿರ, ಕ್ಷೇತ್ರ- ತೀರ್ಥ ಒಂದಾದರೂ ಉಂಟೆ? ಎಂಬುದು ಸಂದೇಹಾಸ್ಪದವಿದೆ. ಪುರಾತನ ದೇಗುಲದ ಲಕ್ಷಣವೆಂದರೆ ಗುಹೆಯಂತಿರುವ ಗರ್ಭಗುಡಿ: ಅದೊಂದು ಹುತ್ತವೇ ಸರಿ. ಮಣ್ಣ ಗುಡ್ಡ : ಅಲ್ಲೊಂದು ಮಿಣುಕುದೀಪ: ಹಾವಿನ ಹೊಳೆವ ಕಣ್ಣೋ? ಫಣಾಮಣಿಯ ಹೊಳಪೋ? ಎಂಬ ಹಾಗಿನದು. ಆ ಕತ್ತಲ ಗವಿಯಲ್ಲಿ ಒಂದು 'ಸ್ವಯಂಭೂ' ಗುಂಡೋ-ಕಲ್ಲೋ ಆ ದೇವತಾ ಪ್ರತಿಮೆಯಾಗಿ ಕಲ್ಪಿಸಲಾದುದನ್ನು ಕಾಣಲು ದೊರೆಯುತ್ತದೆ. ಆದರೆ ಈ ಸ್ಥಾವರ ಭೌತ ಪ್ರತಿಮಾ ಪೂಜೆ ಒಂದು ಬಗೆಯಲ್ಲಿ ಅರ್ವಾಚೀನವೇ ಸರಿ.

ಜೀವನಪರಿಸರ ಮತ್ತು ಸಾಕ್ಷಾತ್ಕಾರ ದರ್ಶನ : ಅನ್ಯೋನ್ಯ ಸಂಬಂಧ

ದರ್ಶನ- ಸಾಕ್ಷಾತ್ಕಾರಕ್ಕೆ ಕಾರಣವಾದ ವಸ್ತು - ವಿಷಯವು ಆ ದೇವತಾ-ಸ್ಥಾನದಲ್ಲಿ ಕುಳಿತು ಪೂಜೆಗೊಳ್ಳುವುದುಂಟು. 'ದರ್ಶನ'- 'ಸಾಕ್ಷಾತ್ಕಾರ' ಎಂಬುದು, ಮೂಲದಲ್ಲಿ ರೋಮಹರ್ಷಕ; ಸರ್ವಾಶ್ಚರ್ಯಮಯ. ಇಂತಹ ಅಗಮ್ಯ ದಿವ್ಯದ ಸಂಸ್ಪರ್ಶನದ ಒಂದು ಕ್ಷಣವು ಇದು. ಆಶ್ಚರ್ಯ ಎಂಬುದು 'ಆಃ' ಚರ್ಯೆ! ಕಣ್ಣಿಗೆ ಹೊಳೆದು ಹೋಗುವ ಆ ದೃಶ್ಯ ಮೈಮೇಲಿನ ಎಚ್ಚರವನ್ನೇ ತಪ್ಪಿಸುವುದುಂಟು. ಶ್ರೀ ರಾಮಕೃಷ್ಣ ಪರಮಹಂಸರ ಚರಿತ್ರೆಯಲ್ಲಿ ಭಾವೋತ್ಕಟ - 'ಭಾವಾವಿಷ್ಟ': ಆ-ರೂಢ ಸ್ಥಿತಿಯ ಕ್ಷಣಗಳಲ್ಲಿ ಅವರ ಅವಸ್ಥೆ ಹೇಗಿರುತ್ತಿತ್ತು, ಎಂಬುದರ ಉಲ್ಲೇಖಗಳಿದ್ದು ಅವು ಮಾನಸಶಾಸ್ತ್ರಜ್ಞರಿಗೆ ಅಭ್ಯಾಸಾರ್ಹವಾಗಿವೆ. ದೇವತಾ 'ದರ್ಶನ'- 'ಸಾಕ್ಷಾತ್ಕಾರ' ಎಂಬುದು ಇಂದು ಬಲು ಹಗುರು ಆಗಿ ಬಿಟ್ಟಿದೆ. ಆದರೆ, ತೀರ ಆರಂಭದ ಈ 'ದರ್ಶನ' ಎಂಬುದು ಜೀವಕ್ಕೆ ಸಂಚಕಾರವೆ ಆಗಿರಲಿಕ್ಕೆ ಸಾಕು. ಆಫ್ರಿಕಾ ಮೊದಲಾದ ಕಡೆಗಳಲ್ಲಿ ಅಲ್ಲಿಯ ಒಂದೊಂದು ತಂಡದಲ್ಲೂ ಅವರ ತಂಡದ ಗುರು-ನೇತಾರನು ದಾರ್ಶನಿಕ ದ್ರಷ್ಟಾರನೆ ಆಗಿರುತ್ತಾನೆ. ಅವರಲ್ಲಿ ಸಾಕ್ಷಾತ್ಕಾರದ ಸಂದರ್ಭಗಳಲ್ಲಿ ಮಲರೋಗ ಬಂದವರಂತೆ ಮೃತವತ್ ಅವಸ್ಥೆಯಲ್ಲಿ ಬಿದ್ದು ಬಿಡುತ್ತಾರೆ. ನಮ್ಮ ದೇಶದಲ್ಲಿಯೂ ಗುಡಿಗುಂಡಾರಗಳಲ್ಲಿ ಜಾತ್ರೆಯ ಸಮಯಾಚಾರಗಳ ಸಂದರ್ಭದಲ್ಲಿ ಮೈಯಲ್ಲಿ ಆವೇಶವಾದವರು ಕೆಲಬಾರಿ ಹೀಗೆಯೇ ಬಿದ್ದು ಬಿಡುತ್ತಾರೆ. ಈ ಕಾರಣದಿಂದಲೆ, ಇದನ್ನು 'ಸರ್ವಾಶ್ಚರ್ಯಮಯ' ಸ್ಥಿತಿ ಎಂದು ಹೇಳಲಾಗುತ್ತದೆ. 'ಆಃ' ಚರ್ಯೆಯ- ಬೆಪ್ಪಾಗಿ ಬೆಡಗುಗೊಂಡು 'ಆ' ಎಂದು ಬಾಯ್ದೆರೆದು 'ಮೂಕವಿಸ್ಮಿತನಾಗಿ' ಅಥವಾ ಮೈಮೇಲೆ ಪ್ರಜ್ಞೆಯಿಲ್ಲವಾಗಿ ಏನೆಲ್ಲ ದಿಙ್ಮೂಢತೆ ಆವರಿಸಿ ನಿಲ್ಲುವ ಈ 'ಆಶ್ಚರ್ಯ'ವನ್ನು ಅಂಶತಃ ಆದರು ಅನುಭವಿಸುವ ಸಂವೇದನಾಶೀಲತೆಗೆ ಎರವಾದವರು ಈ 'ಸವಿ'ಯನ್ನು ಅನುಭವಿಸಿ ಅರಗಿಸಿಕೊಳ್ಳುವುದಕ್ಕೆ ಸಿದ್ಧತೆಯಿದ್ದವರು ಎಷ್ಟು ಜನ ದೊರೆಯಬಲ್ಲರು? ದೇವತಾ ಸಾಕ್ಷಾತ್ಕಾರದ ಮಾತಿನ ವ್ಯಾಪಾರ ನಡೆಯುತ್ತಿದೆ. ಆದರೆ ನಿಜವಾದ 'ಆಃ' ಚರ್ಯೆಯಲ್ಲಿ ನ-ಚಿಕೇತರಾಗಿ ಬಾಹ್ಯಪ್ರಜ್ಞೆಗೆ ಎರವಾಗಿ 'ಆರೂಢ' ಸ್ಥಿತಿಯಲ್ಲಿ ಕಾಣದೊರೆವ 'ಗುರು'- 'ಸ್ವಾಮಿ'ಗಳು ಎಷ್ಟು? 'ಆಃ' ಚರ್ಯೆಯನ್ನು ಅನುಭವಿಸಲು ಅರಿಯದವರು ದೇವತಾ ವಿಚಾರದಲ್ಲಿ ಪ್ರವೇಶಕ್ಕೇ ತಾವು ಅನರ್ಹರೆಂದು ನಿರ್ಧರಿಸಿಕೊಳ್ಳಲು ಅಡ್ಡಿಯಿಲ್ಲ.

ಬಾಳಿನಲ್ಲಿ ಆಶ್ಚರ್ಯವೆ ಎನಿಸದಿರುವ ವ್ಯಕ್ತಿ ದುರ್ದೈವಿ. ಆ ಜೀವಿಯೊಳಗಿನ ಚೈತನ್ಯವು-ಆ ಚೈತನ್ಯಕ್ಕೆ ಆಧಾರವಾದ ದೇಹ, ಸರ್ವಂಕಷವೂ ಸೂಕ್ಷ್ಮವೂ ಆದ ಸಂವೇದನಾ ಕ್ಷಮತೆಯನ್ನು ಕಳೆದುಕೊಂಡ ಲಕ್ಷಣವಿದು. ಆಶ್ಚರ್ಯಚಕಿತ ಭಾವದ ರೋಮಾಂಚಕ ಅನುಭವವು, ವ್ಯಕ್ತಿಯನ್ನು ಅದರ ಇತಿ-ಮಿತಿಗಳ ಪೂರ್ವಾಗ್ರಹಯುಕ್ತ ಬಂಧನಗಳ ಆಚೆಗೆ ಒಯ್ಯುತ್ತದೆ. ಆಗ ಅನಿರೀಕ್ಷಿತ ಅದ್ಭುತರಮ್ಯ ಏನೋ ಒಂದು ಅಂಶ ಹತ್ತಿರ ಸುಳಿದಂತೆ, ಸಂಸ್ಪರ್ಶಿಸಿದಂತೆ ಎನಿಸುವುದು. ತನ್ನ ದಿಕ್ಕಾಲದ ಮೇರೆಗಳ ಹೊರಗಿನ ಕ್ಷಿತಿಜವು ಕಾಣಿಸಿದಂತೆ ಭಾಸವಾಗುವುದು. ಬಾಹ್ಯ ನಿಸರ್ಗಸ್ಥ ಅದ್ಭುತ ರಮ್ಯ ಅಥವಾ ಅದ್ಭುತ ಭಯಾನಕ ದೃಶ್ಯಗಳ ಆಶ್ಚರ್ಯಾನುಭವದಿಂದ ಭಾವಬುದ್ಧಿಗಳ ಮೇಲೆ ಆಗುವ ಪರಿಣಾಮಗಳ ಬಗೆಯೆ ಒಂದು. ಕಲೆ, ಸಾಹಿತ್ಯ, ಶಾಸ್ತ್ರ, ತತ್ತ್ವ ವಿಚಾರಾದಿ ಕ್ಷೇತ್ರದೊಳಗಿನ ಆಶ್ಚರ್ಯಾನುಭವದಿಂದ ಉಂಟಾಗುವ ಪರಿಣಾಮದ ಬಗೆಯೇ ಇನ್ನೊಂದು. ಇವುಗಳಲ್ಲಿ ಆತ್ಯಂತಿಕ ದ್ವೈತವನ್ನು ಕಲ್ಪಿಸಲಿಕ್ಕಾಗುವುದಿಲ್ಲವಾದರೂ ಇವೆರಡರೊಳಗಿನ ತಾರತಮ್ಯಮಯವಿಹೀನ ದೃಷ್ಟಿಗೆ ನಿಸರ್ಗದ ಹಾಗೂ ಜೀವಸೃಷ್ಟಿಯ ಅಗಾಧವಾದ ಆಳ-ಅಗಲ ಏನೊಂದೂ ಹೊಳೆಯಲಾರದು. ಅರಿಕೆಗೂ ಬರಲಾರದು - ತಿಳಿಸಿ ಹೇಳಿದಲ್ಲಿ.

ಆಃ ಚರ್ಯದ ಮೂಲಭಾವನೆ ತುಂಬಾ ಸಮಿಶ್ರ ಮನೋಭಾವವಾಗಿದೆ. ಅಜ್ಞಾನಜನ್ಯ ಕುತೂಹಲ, ಜಿಜ್ಞಾಸೆಯ ಕೈವಾಡವು ಇದರಲ್ಲಿ ಪ್ರಾಮುಖ್ಯದಿಂದ ಉಂಟು. ಆದರೆ, ಈ ಜಿಜ್ಞಾಸೆಯ ಸ್ಪಷ್ಟ ಅರಿವು ಮಾತ್ರ ಇರುವುದಿಲ್ಲ. ಏನೊಂದು ಬಾಹ್ಯ ಆಘಾತದಿಂದ ಈ ಸುಪ್ತ ಜಿಜ್ಞಾಸೆ ಥಟ್ಟನೆ ಎಚ್ಚರುತ್ತದೆ. ಅಜ್ಞಾನಜನ್ಯ ಸ್ವ-ಭಾವದ ಸುಷುಪ್ತಿಯೊಳಗಿಂದ ಎದ್ದು ಬಹುರ್ಮುಖವಾಗಬೇಕಾದ ದುಃಖವೂ ಇದರಲ್ಲಿ ಬೆರೆತಿರುತ್ತದೆ; ತನ್ನ

'ಸ್ವ' ಸ್ಥತೆಯನ್ನು ಭಗ್ನಗೊಳಿಸಲು ಕಾರಣವಾದ ಸಂಗತಿ- ಘಟನೆ ಏನು? ಎಂಬ ಸಂದೇಹವು ಈ ಆಶ್ಚರ್ಯಭಾವದಲ್ಲಿ ಒಳಗೊಂಡಿರುತ್ತದೆ. ಸಂದೇಹ ಹಾಗೂ ಭೀತಿ ಒಂದರಿಂದೊಂದು ದೂರವಿಲ್ಲ. ಕಾಡಿನಲ್ಲಿ ಆಹಾರಕ್ಕಾಗಿ ಅಲೆಯುತ್ತ ಬದುಕಬೇಕಾಗಿದ್ದ ಸಂಸ್ಕೃತಿಯ ಆರಂಭಯುಗದ ಮಾನವ ತಂಡಗಳಿಗೆ ಸುತ್ತು-ಮುತ್ತಿಕೊಂಡಿದ್ದ ಭೀತಿ ಸಂದೇಹ ಅದೆಷ್ಟು ಮಹಾಘನ ಸ್ವರೂಪದ್ದಾಗಿರಬೇಕೆಂಬುದನ್ನು ಕಲ್ಪಿಸಿಕೊಂಡರೂ ಇಂದು ಅದರ ಅಲ್ಪಸ್ವಲ್ಪಾದರೂ ಅರಿವು ಮೂಡಲು ಸಾಧ್ಯವೋ, ಎಂಬುದೇ ಸಂದೇಹಾಸ್ಪದವಾಗಿದೆ.

'ಆಃ' ಚರ್ಯ ಭಾವನವು, ಇಂದು ತೀರ ಸಪ್ಪೆಯಾಗಿದೆ! 'ಆಶ್ಚರ್ಯ'ದ ಆಳವು ತೀರ ಕಿರಿದಾಗತೊಡಗಿದೆ. ಬಾಲ್ಯದಲ್ಲಿ ಪ್ರಾಥಮಿಕ ಶಾಲೆಗೆ ಹೋಗುವ ವಯಸ್ಸಿನ ವರೆಗೆ ಇರುವ ಆಶ್ಚರ್ಯಭಾವ, ಮಾಧ್ಯಮಿಕ ಶಾಲೆಯಲ್ಲಿ ಕಾಲಿಡುವ ಸುಮಾರಿಗೆ ಬೇರೆ ರೂಪ ತಾಳಿರುತ್ತದೆ. ಆರಂಭದ ಭಯಭರಿತ ಭಾವವು ತನ್ನ ತೀವ್ರತೆಯನ್ನು ಕಳೆದುಕೊಂಡಿರುತ್ತದೆ! ಈ ತರುಣರು ಕಾಲೇಜಿನಲ್ಲಿ ಕಾಲಿಡುವ ಹೊತ್ತಿಗೆ, ತಮಗೆ ತಿಳುವಳಿಕೆಯ ಕುಡಿಮೀಸೆ ಮೂಡಿದ ಅಥವಾ ತಾನು 'ಷೋಡಶೀ' ಆದ ಪ್ರೌಢಿಮೆಯ ಅರಿವು ಆ ವ್ಯಕ್ತಿಗಳನ್ನು ಆಳುತ್ತಿರುತ್ತದೆ. ಪದವೀ ಪರೀಕ್ಷೆಯೊಡನೆ, ಇನ್ನು 'ಕಲಿಯಲಿರುವದೆಲ್ಲ ಮುಗಿಯಿತು' ಎಂಬ ಸಂತೃಪ್ತ ಭಾವನೆಯೊಂದಿಗೆ ಸಂಸಾರಿಯಾಗುವುದು ಇಂದಿನ ರೂಢಿ.

'ಆಃ'ಚರ್ಯೆಯ ಈ ಅವಸ್ಥೆ, ಅಡಿಗಡಿಗೂ ಉಂಟಾಗುತ್ತಿದ್ದ ಆ ಪರಿಸ್ಥಿತಿಗೆ ಮುಖ್ಯ ಕಾರಣವು : ತನ್ನ ಸುತ್ತಲಿನ ತನ್ನ ಒಳಹೊರಗಿನ ನೆಲೆ, ಏನೂ ತಿಳಿಯದಿದ್ದುದು, ಕಣ್ಣಿಗೆ ಏನೇನೋ ವಸ್ತು ವಿಷಯ ಕಾಣುತ್ತಲಿದೆ; ಆದರೆ, ಅವುಗಳಲ್ಲಿ ಏನೊಂದರ ಹೆಸರೂ ಗೊತ್ತಿಲ್ಲ! ಆದುದರಿಂದ ಭಾಷಾಪೂರ್ವದ ಅಂದು ಸೂರ್ಯನು ಪ್ರಕಾಶಿಸುತ್ತಲಿದ್ದೂ ಎಲ್ಲೆಲ್ಲೂ ಸಂದೇಹ ಭೀತಿಯ ಕಗ್ಗತ್ತಲು ನುಂಗಲು 'ಆ' ಎಂದು ಬಾಯ್ದೆರೆದು ನಿಂತಂತೆ ತೋರುತ್ತಿರಲಿಕ್ಕೆ ಸಾಕು. ನಿದ್ದೆ ಬಂದಾಗ ರಾತ್ರಿ; ಎಚ್ಚತ್ತಾಗ ಹಗಲು! 'ಬಾಲಘತ್ ಜೀವನರೀತಿ'! ಭಾಷೆಯೇ ಇಲ್ಲದ್ದರಿಂದ ಅವರ ಪಾಲಿಗೆ 'ನಿನ್ನೆ' ಎಂಬುದೂ ಇಲ್ಲ; 'ನಿನ್ನೆ'ಯೆ ಇಲ್ಲದಿರುವಾಗ 'ನಾಳೆ'ಯೂ ಶೂನ್ಯ. ನಿನ್ನೆಗಳೊಳಗಿನ ಅನುಭವಗಳು ಸಂಗ್ರಹಗೊಳ್ಳುವ 'ಭಾಷೆ' ಎಂಬುದೇ ಇಲ್ಲದಿರುವ ಪ್ರಾಣಿಗಳು; ಮಂಗಗಳು ಶ್ವಪದಾದಿಗಳು ಇವುಗಳ ಒಡನಾಡಿಯಾಗಿ, ಮಾನವಾಕಾರದ ಪ್ರಾಣಿಗಳು ಬದುಕಿದ್ದ ಕಾಲವೂ ಒಂದಾಯಿತು. ಈ ಹಂತದ ಅದ್ಭುತ, ಭಯಾನಕ, ಸರ್ವಾಶ್ಚರ್ಯಮಯ ಪರಿಸ್ಥಿತಿಯೊಳಗಿಂದ ಮಾನವ ಪಂಗಡಗಳು ಹೊರಬರಲು ಶಕ್ಯವೇ ಇದ್ದಿಲ್ಲ. ಅವರವರ 'ಭಾಷೆ' ಎಂಬ ಅಮೋಘ ಸಾಧನವು ಮಾನವರಿಗೆ ದೊರೆಯದೆ ಇದ್ದರೆ! ತನ್ನನ್ನು ಸುತ್ತುಮುತ್ತಿರುವ ಗೂಳ್ಹಂ ಗಂಭೀರಂ ಆಗಿರುವ ಅದ್ಭುತ ಭಯಾನಕ ಈ 'ಗುಮ್ಮ' : ಈ ಅಗಮ್ಯ 'ದಿವ್ಯ' : ಚಮತ್ಕಾರವು ಏನು? ಎಂಬುದನ್ನು ಅರ್ಥಯಿಸಿಕೊಳ್ಳುವ ಹೋರಾಟದಲ್ಲಿ ಅದರಂತೆ, ಈ ಅದ್ಭುತ ಚಮತ್ಕಾರಮಯ ಪರಿಸ್ಥಿತಿಯೊಡನಾಟದಲ್ಲಿ ಮಾನವನು 'ಭಾಷೆ' ಎಂಬುದನ್ನು ಕಂಡುಕೊಂಡನು; ಬೆಳೆಸಿಕೊಂಡನು. ಆಶ್ಚರ್ಯದ ಮೂಲಕ ದೊರೆತ ಪ್ರಚೋದನೆಯಲ್ಲಿ ಮೈವೆತ್ತ ಭಾಷೆಯಿಂದ ಅದರ ತಂದೆಯಂತಿರುವ ಆಶ್ಚರ್ಯವೆ ಬರಡು ಆಗಬೇಕೆ? ಇದರ ಸೇಡು ತೀರಿಸಲ್ಪಡುತ್ತಿರುವುದು ಹೀಗೆ : ಮರಳಿ ಭಾಷೆಯ ಕೊಲೆಮಾಡಿ!

ರಮ್ಯವಿರಲಿ, ಭಯೋತ್ಪಾದಕವಿರಲಿ, ಆ ಅದ್ಭುತತೆಯ ಆಶ್ಚರ್ಯ ಹಾಗೂ ಇಂತಹ ಆಶ್ಚರ್ಯದ ಅದ್ಭುತ ರಮ್ಯತೆ ಇವೆರಡರಿಂದ ಬಾಳಿನ ಅನುಭವದಲ್ಲಿ ಸ್ವಾರಸ್ಯವು ತಲೆದೋರಿರುವುದುಂಟು. ಬಾಳಿನಲ್ಲಿ ವಿರಸ : ಬೇಸರದ ಬೇಗುದಿ, ಆಶ್ಚರ್ಯದ ಸಹ್ಯ, ಆಘಾತ-ಪ್ರತ್ಯಾಘಾತಗಳ ಅಭಾವದಲ್ಲೇ ಉಂಟಾಗುತ್ತದೆ. ಆದರೆ, ಈ 'ಆಶ್ಚರ್ಯ'ದ ಸ್ವರೂಪ-ಆಕೃತಿ, ಸಂಸ್ಕಾರವಂತಿಕೆಯೊಡನೆ ಸೂಕ್ಷ್ಮ-ಸೂಕ್ಷ್ಮವಾಗತೊಡಗುತ್ತದೆ. ಸ್ಥೂಲ ಪ್ರಾಥಮಿಕ ರೋಮಹರ್ಷಕ ಉನ್ಮಾದ ಉನ್ಮತ್ತತೆಯನ್ನು ತರುವ ದಿಙ್ಮೂಢಾವಸ್ಥೆಯಲ್ಲಿ ಮೈಮರೆಯಿಸುವ 'ಆಃ' ಚರ್ಯಕ್ಕೆ ಮೆಚ್ಚಿದ ಜೀವಕ್ಕೆ ಜಾಗೃತ ಪ್ರಜ್ಞಾವಸ್ಥೆಯ ವಿಚಾರ-ವಿಮರ್ಶಾಯುಕ್ತ ಆಶ್ಚರ್ಯ: ವಿಶ್ಲೇಷಣಾತ್ಮಕ ವಿಮರ್ಶೆಯಲ್ಲಿಯೂ ಇರುವ ಭಾವುಕ ವಿಚಾರದ-ವೈಚಾರಿಕ ಭಾವುಕತೆಯ ಆಶ್ಚರ್ಯ-ಆನಂದ, ಅರ್ಥವೆ ಆಗದೆ ಹೋಗುತ್ತದೆ. 'ನವತರಂ ಕಲ್ಯಾಣತರಂ' ರೂಪ-ಆಕೃತಿದರ್ಶನದ ಹಂಬಲ ಜೀವದ ಲಕ್ಷಣವಾಗಿದೆ. ಇಂದು ಈ ಕ್ಷಣದಲ್ಲಿ,

‘ನವೀನ’ ಎನಿಸಿದ್ದು ಮುಂದಿನ ಕ್ಷಣದಲ್ಲಿ ಹಳತಾಗುವದು-ಹಳಸುವುದೂ ಉಂಟು. ಅದು ‘ಅಪಕ್ವ’ವಿದ್ದಲ್ಲಿ; ‘ಕ್ಲಾಸಿಕ್’ ಪಟ್ಟ ದೊರೆತ ಹಳತ ಪರಿಪಕ್ವ ಫಲ ಎಂದೆಂದಿಗೂ ರುಚಿಕರವೆಂಬುದು ನಿಜವಿದ್ದರೂ ‘ನವ್ಯ’ದ ಹಸಿವು ಉಳಿದೇ ಉಳಿಯುತ್ತದೆ; ಉಳಿಯಲೇಬೇಕಾಗುತ್ತದೆ. ಮಾನವ ಸಂತಾನದ ಪ್ರ-ಗತಿಯೆ ನವ್ಯದ ಆಕರ್ಷಣದಲ್ಲಿ. ಆದರೆ, ‘ನವ್ಯ’ದ ಆಕರ್ಷಣದಲ್ಲಿ ಆಶಾಂಕುರದಂತೆ ಗಂಡಾಂತರವೂ ಉಂಟು : ಇದು ‘ನಿನ್ನೆ’ಗಳಿಂದ ಬೇರೆಯಾಗಬಯಸುತ್ತದೆ: ಇದು ಸಂಪ್ರದಾಯಕ್ಕೆ ಕುತ್ತು. ಇಂದಿನ ನವ್ಯದಲ್ಲಿ, ನಾಳಿನ ಭವ್ಯಕ್ಕೆ ಉಜ್ವಲ ಭವಿತವ್ಯಕ್ಕೆ ಕಾರಣವಾಗುವ ಶಕ್ಯತೆಗಳು ಸೂಕ್ಷ್ಮರೂಪದಲ್ಲಾದರೂ ಕಾಣುತ್ತಿರಬೇಕು. ‘ನವ್ಯಕ್ಕಾಗಿ ನವ್ಯ’ ಎಂಬುದು ಸಾಮಾಜಿಕ ಜೀವನದ ವಿಕೃತಿಗೆ ಕಾರಣವಾಗದಿರದು. ‘ನವ್ಯ’ದ ಹುಚ್ಚು ಆಕರ್ಷಣದಲ್ಲಿ ವಿವೇಕಕ್ಕೆ ನಶಿಸಿಕೊಳ್ಳಬೇಕಾಗುತ್ತದೆ. ಸ್ಥೂಲ ರೋಮಹರ್ಷಕ ವಿಕೃತಿ ವೈಚಿತ್ರ್ಯವೇ ‘ನವ್ಯ’ ಎಂಬ ಹೆಸರಿನಲ್ಲಿ ಬೇಗನೆ ಲೋಕರಂಜಕ ಕೃತಿಯಾಗುವ ಶಕ್ಯತೆಯುಂಟು.ಇದಕ್ಕಾಗಿ ‘ನವ್ಯ’ವಾದವು ಆಕ್ಷೇಪ ವಿರೋಧಗಳನ್ನು ಸ್ವಾಗತಿಸಿ ತನ್ನ ಸೌಂದರ್ಯಮೂಲ್ಯಗಳ ಸಾಧುತ್ವವನ್ನು ಮನಗಾಣಿಸಿಕೊಡಬೇಕಾಗುತ್ತದೆ. ‘ನವ್ಯ’ದ ಈ ಗಂಡಾಂತರಗಳನ್ನು ಆಮಂತ್ರಿಸುವುದಕ್ಕಿಂತ ಪಾರಂಪರಿಕ ಸಂಪ್ರದಾಯಬದ್ಧ ಜೀವನ ರೀತಿಯಲ್ಲಿಯೆ ಹಳೆಯದರಲ್ಲೆ ‘ನವ್ಯ’ದ ಹೊಸ ಅನುಭವವನ್ನು ಹೀರುವ ತಂತ್ರವನ್ನು ಪ್ರತಿಯೊಂದು ಸಮಾಜವೂ ಕಂಡುಹಿಡಿದಿದೆ. ಇಂತಹ ತಂತ್ರಗಳಲ್ಲಿ ಹಬ್ಬ-ಹರಿದಿನ, ಪಾರಣೆ-ಪರ್ವ ಜಾತ್ರೆ-ಉತ್ಸವಗಳ ಯೋಜನೆಯೂ ಒಂದು. ಪ್ರಸ್ತುತ ನಾಗಪಂಚಮಿ-ಶ್ರಾವಣಾದಿ ಪ್ರತಿಮಾಸದ ಹಬ್ಬಗಳು ಈ ದೃಷ್ಟಿಯಿಂದ ಸಮೀಕ್ಷಾರ್ಹವಾಗಿವೆ.

ಸಂಪ್ರದಾಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ‘ನವ್ಯ’ತೆಯ ಜೀವಂತ ಆಕರ್ಷಣವನ್ನು ಬೇರೆ ದಾರಿಯಲ್ಲಿ ಸುತ್ತುವರಿಯ ಹಚ್ಚಿದ್ದು ಕಾಣುತ್ತಿದೆ; ಬಾಳನ್ನು, ಬೀಜ-ವೃಕ್ಷ ನ್ಯಾಯದ ಭೂಮಿಕೆಯಿಂದ ಕಾಣುವಲ್ಲಿ ನಿಜವಾದ ನಾವೀನ್ಯ -‘ನವ್ಯ’ ಎಂಬುದೇ ಏನೂ ಉಳಿಯುವುದಿಲ್ಲ! ಈ ವಿಶ್ವದಲ್ಲಿಯೇ! ‘ಚಕ್ರನೇಮಿಕ್ರಮೇಣ’ ಈ ಕಾಲಚಕ್ರವು ತಿರುಗುತ್ತಿದೆ. ‘ಶಿಶಿರ ವಸಂತೌ ಪುನರಾಯಾತಃ’ ಮರಳಿ ಮರಳಿ ಬರುವ ಅವೇ ವಾರ ಶನಿ, ಸೋಮ, ಮಂಗಳಾದಿಗಳು; ಅವೇ ಋತುಗಳು; ಶಿಶಿರ ವಸಂತಾದಿಗಳು; ಇನ್ನು ಬರಲಿರುವವು ಎಂಬ ಅವೇ ಅವೇ ಅವತಾರಗಳು! ಆ ಅಂದಿನ ಪ್ರವಾದೀ ಧರ್ಮಪ್ರವರ್ತಕರೆ ಮರಳಿ ಹುಟ್ಟುವುದು! ಈ ಬಗೆಯ ಹುಟ್ಟು-ಸಾವು, ಸೂರ್ಯೋದಯ-ಸೂರ್ಯಾಸ್ತ. ಈ ಕಾಲಚಕ್ರದಲ್ಲಿ ‘ನವೀನ’ ಎಂಬುದೇನಿದೆ? ‘ತತ್ ಏಕಂ ಸತ್’ ಆಗಿದೆ! ಈ ‘ಏಕಂ’ ಅರಿತು ‘ತತ್’- ಮಯವಾಗುವುದಕ್ಕಿಂತ ಬೇರಾವ ಇತಿ ಕರ್ತವ್ಯವು ಇಲ್ಲ. ಈ ಮಾನವಜೀವನದ ಸಾರ್ಥಕ್ಯವೆ ಇದು. ·ಈ ಮಾನವನು ತನ್ನ ‘ಸ್ವ’- (ಸ್ಥ)ಭಾವ: ತನ್ನ ನಿಜವಾದ ಸ್ಥಾನ ಎಲ್ಲಿ ಎಂಬುದನ್ನು ಮರೆತು ಜನ್ಮಮರಣದ ಚಕ್ರದಲ್ಲಿ ಸಿಲುಕಿ ಬೆಕ್ಕಸಗೊಂಡಿದ್ದಾನೆ ಎಂಬುದು ಒಂದು ದೃಷ್ಟಿ.

ಚಕ್ರಾಕಾರದಲ್ಲಿ ಸುತ್ತುತ್ತಿರುವ ವಾಸ್ತವ ಸತ್ಯವೇ ಈ ಕಾಲ : ಸರ್-ಪ. ತನ್ನನ್ನು ಸುತ್ತಿಕೊಂಡಿರುವ ಈ ‘ಗೂಢಂ ಗಂಭೀರಂ’ ಆಗಿರುವ ವಿಶ್ವವು ಏನು? ಎಂತು? ಎಂಬ ಮಾನವನ ಭಯಭರಿತ ಆರ್ತ ಜಿಜ್ಞಾಸೆಗೆ ಅಂದು ಆ ಆದಿಯುಗದಲ್ಲಿ ದೊರೆತ ಒಂದು ಉತ್ತರವು ಇದು. ಈ ವಿಶ್ವವನ್ನು ಅರ್ಥಯಿಸಿಕೊಳ್ಳುವ ಪ್ರಯತ್ನದಲ್ಲಿ ಕೆಲವೊಂದು ಮಾನವ ಪಂಗಡಗಳಿಗೆ ಆದ ಗುಹಾನಿಹಿತ ‘ಸತ್ಯ’ದ ದರ್ಶನವೇ, ಈ ಕಾಲರೂಪೀ ಸರ್‌ಪ, ಅಥವಾ ಸರ್ಪರೂಪೀ ಕಾಲ. ಸಾಕ್ಷಾತ್ಕಾರ ಮತ್ತು ಭಾಷೆ ಇವೆರಡೂ ಮೂಲತಃ ಒಂದರಿಂದ ಒಂದು ದೂರವಿಲ್ಲ. ತನ್ನ ಅಜ್ಞಾನದ ಕತ್ತಲೆಯಲ್ಲಿ ಕಸಿವಿಸಿಪಡುತ್ತಿರುವ ಆರ್ತ ಜೀವದ ಸಂದೇಹ : ಪ್ರಶ್ನೆಗೆ ಹೊಳೆದ ಉತ್ತರವೆ, ಸಾಕ್ಷಾತ್ಕಾರ-ದರ್ಶನವೂ ಅಹುದು. ಅದುವೆ ಭಾಷಾ ಪ್ರತಿಮೆಯೂ ಅಹುದು. ಆದರೆ, ಈ ದರ್ಶನವು ಅಂದು, ಸರ್-ಪ ರೂಪದಲ್ಲಿಯೆ ಆದುದರ ಕಾರಣವೇನು? ಎಂಬ ಪ್ರಶ್ನೆಯು ಇಲ್ಲಿ ತಲೆಯೆತ್ತುತ್ತದೆ. ಜರ್ಮನಿಯ ಹಂಬೋಲ್ಟ್ ಎಂಬ ವಿದ್ವಾಂಸನು ಈ ಸಮಸ್ಯೆಯನ್ನು ಎಂದೋ ಪರಿಹರಿಸಿದ್ದಾನೆ. ಭಾಷೆ ಹಾಗೂ ದೇವತಾಪವಾಡ ಕಥೆ (Myth) ಇವೆರಡರ ಅನ್ಯೋನ್ಯ ಸಂಬಂಧವನ್ನು ಕುರಿತು ಮೂಲಗಾಮಿಯಾಗಿ ವಿವೇಚಿಸಿರುವ ಅರ್‌ನೆಸ್ಟ್! ಕ್ಯಾಸಿರರ್, ಹಂಬೋಲ್ಟ ಮಹಾಶಯನ ವಿಚಾರವನ್ನು ಬೆಂಬಲಿಸಿ ಅದನ್ನು ಎತ್ತಿ ಹೇಳಿದ್ದುಂಟು:

> "Man lives with his own objects chiefly-infact, since his feeling and acting depends on his perceptions, one may say exclusively - as language presents them to him. By the same process whereby he spins language out of his own being, he ensnares himself in it; and each language draws a magic circle round the people to which it belongs, a circle from which there is no escape, save by stepping out of it into another" [೬]

ಭಾಷೆಯು ಆಕಾರ ಪಡೆದುದು ಪ್ರಾಮುಖ್ಯವಾಗಿ ಕಣ್ಣಿನಿಂದ : ಕಣ್ಣಿಯವರಿಂದ-ಆರಂಭದಲ್ಲೇ ತೂ. ಯಾವುದೇ ಭಾಷೆಯಲ್ಲಾಗಲಿ ಕಣ್ಣಿನ ಮೂಲಕ ಮೈದೋರಿರುವಷ್ಟು ಶಬ್ದ ಸಂಖ್ಯೆ ಬೇರಾವ ಇಂದ್ರಿಯದಿಂದಲೂ ಇಲ್ಲ, ಎಂದು ಲೆಕ್ಕದಿಂದ ಸಿದ್ಧವಾಗಿದೆ. ಮೆದುಳಿನಲ್ಲಿಯ ನೇತ್ರೇಂದ್ರಿಯಕ್ಕೆ ಸಂಬಂಧಿಸಿದ ಜ್ಞಾನತಂತುಗಳಿಗೆ ದೊರೆತಿರುವಷ್ಟು ವಿಸ್ತೃತವಾದ ಕ್ಷೇತ್ರ ಇನ್ನುಳಿದ ಯಾವ ಒಂದೇ ಇಂದ್ರಿಯಕ್ಕಿಲ್ಲ ಎಂದು ಶರೀರಶಾಸ್ತ್ರ ವಿಶಾರದರಿಗೆ ಕಂಡುಬಂದಿದೆ. ಭಾಷೆ ಹಾಗೂ ಸಂಸ್ಕೃತಿಗೆ ಆಕಾರವು ದೊರೆತುದು 'ಕಣಿ'ಯವರಿಂದಲೇ, ಎಂಬ ಮಾತನ್ನು ಮೇಲೆ ಸೂಚಿಸಿದ್ದಾಗಿದೆ. ಕಣ್ಣಿನಿಂದ ಎಂದರೆ ಈಕ್ಷೆ : ಅಪೇಕ್ಷೆಯಿಂದ 'ಹಾರಯಿಕೆ' ಎಂಬ ಕಂನುಡಿಯಲ್ಲೂ ಪಾರು ಕಾಣು-ಎದುರು ನೋಡು ಹಾರೈಸು ಎಂಬ ಕಣ್ಣಿಗೆ ಸಂಬದ್ಧವಾದ ಅಂತರಾರ್ಥವೇ ಇದೆ.

ಕಣ್ಣಿನ ಕೋರಿಕೆಯಿಂದ ಅಂತರಂಗದಲ್ಲಿ ಉಂಟಾಗುವ ಬಾವ-ವಿಭಾವದ ಊರ್ಮಿಗಳು-ವಿಚಾರಗಳು ಯಾವ ಬಾಹ್ಯ ವಸ್ತು-ವಿಷಯದ ಸಂದರ್ಭದಿಂದ ತಲೆಯೆತ್ತಿದುವು, ಎಂಬುದನ್ನು ಮಾನವ ಪಂಗಡಗಳು ನಿರ್ಮಿಸಿಕೊಂಡಿರುವ ಅವರವರ ಭಾಷಿಕ ಸರ್ವಪ್ರಥಮ ಅಥವಾ ಅತಿ ಪುರಾತನ ಶಬ್ದ-ಪ್ರತಿಮೆಗಳ ಮೂಲಕ ನಿರ್ಧರಿಸಿಕೊಳ್ಳಲು ಶಕ್ಯವಿದೆ. ಪ್ರಾಮುಖ್ಯವಾಗಿ ತನ್ನ ಕಣ್ಣಿನ ಮೂಲಕ ಆಕರ್ಷಿಸಲ್ಪಟ್ಟ ಮಾನವನು, ತನಗೆ ಕಂಡ ವಸ್ತು-ವಿಷಯಗಳ ಅನುಸಂಧಾನದಿಂದ ತನ್ನದೇ ಆದ ಅನೇಕ ಶಬ್ದ-ಪ್ರತಿಮೆಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಇಂತಹ ಶಬ್ದ-ಪ್ರತಿಮೆಗಳ ಸಂಮೋಹಕ ಮಾಯಾಜಾಲದೊಳಗಿಂದ ಮುಕ್ತನಾಗಿರಲು ಯಾವ ಮಾನವನಿಗೂ ಶಕ್ಯವಿಲ್ಲ. ಇನ್ನೊಂದನ್ನು ನಿರ್ಮಿಸಿಕೊಳ್ಳದೆ ಅಥವಾ ಆಧಾರಪಡೆಯದೆ ತಾನು ಬದುಕಿ ಉಸಿರಾಡಿಸುತ್ತಿರುವ ಈಗಿನ ಭಾಷಿಕ ಕವಚದೊಳಗಿಂದ ಹೊರಬರುವುದು ಅಶಕ್ಯವಿದೆ. ಉಸಿರಾಡಿಸದೆ ಕೆಲಹೊತ್ತು 'ಸ್ವ'-ಸ್ಥ ವಿರಬಹುದಾದಷ್ಟು ಅಲ್ಪಾವಧಿಯಲ್ಲಿ ಸಹ, ಏನೊಂದೂ ಶಬ್ದ-ಪ್ರತಿಮೆಯನ್ನು ಒಳಗೆ ಬರಗೊಡದೆ ಮನವನ್ನು ಅಕ್ಷರಶಃ ಶೂನ್ಯವಾಗಿರಿಸುವುದು ಒಂದು ಅಸಾಧ್ಯ ಸಾಧನವೇ ಸರಿ.

ಮಾನವನಿಗೆ ಜಗತ್ತು ಕಾಣುತ್ತಿರುವುದು - ಎಂದರೆ ಅರ್ಥವಾಗುವುದು, ಸೂರ್ಯನ ಬೆಳಕಿನಿಂದಲ್ಲ; ಶಬ್ದ-ಪ್ರತಿಮೆಗಳ ಬೆಳಕಿನಲ್ಲಿ* 'ಕಾಣುವುದು' ಎಂದರೆ ಅರ್ಥವಾಗುವುದು. ಭೌತವಸ್ತುಗಳ ಬರಿ ಸ್ಥೂಲರೂಪದ ಏಕಾಕಿ ಪಟ್ಟಿಯೊಂದು ಕಣ್ಣೆದುರು ಬರಬಲ್ಲದು, ಭೌತ ಸೂರ್ಯಪ್ರಕಾಶದಿಂದ. ಆದರೆ ಏಕ ಅಖಂಡಿತ ರೂಪದ ದೃಶ್ಯದೊಳಗಿಂದ ಒಂದೊಂದೇ ಬೇರ್ಪಟ್ಟು ಅದರ ನಾಮ-ರೂಪ : ಆಕೃತಿ : ಅರ್ಥ ಹೊಳೆದಂತಾಗುವುದು, ಸೂರ್ಯನ ಬೆಳಕಿನಿಂದಲ್ಲ; ಅಂತರಂಗದ ಆ-ಕಾಶದಲ್ಲಿ ಮಿನುಗಿದಂತಾಗುವ ಪ್ರ-ಕಾಶದ ಮೂಲಕ. ಇದು ಅಭೌತ ತಾತ್ತ್ವಿಕ 'ದಿವ್ಯ' ಪ್ರಕಾಶ. ಈ ಪ್ರಕಾಶವೇ ಶಬ್ದಪ್ರತಿಮಾ ಮಾಧ್ಯಮದ ನೆರವಿನಿಂದ ಭಾಷಾರೂಪ ತಾಳುತ್ತದೆ;

---

* ದಂಡಿಯು ತನ್ನ ಕಾವ್ಯಾದರ್ಶದ ಪ್ರಾರಂಭದಲ್ಲೆ ಹೇಳುವ ಒಂದು ಮಾತು ಈ ಅಂಶವನ್ನು ದೃಢಪಡಿಸುತ್ತದೆ. ಪ್ರಾಚೀನ ಸಂಪ್ರದಾಯಕವು 'ಭಾಷೆ' ಬಗೆಗೆ ಇಟ್ಟುಕೊಂಡ ನಿಲುಮೆಯನ್ನು ತೋರಿಸುತ್ತದೆ.

ಇದಮಂಧಂ ತಮಂ ಕೃತ್ಸ್ನಂ ಜಾಯೇತ ಭುವನತ್ರಯಮ್ । ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಾನ್ನ ದೀಪ್ಯತೇ ॥ I-೪ ಶಬ್ದವೆಂಬ ಜ್ಯೋತಿ ಸೃಷ್ಟಿಕಾಲದಿಂದ ಹಿಡಿದು ಇಲ್ಲಿಯ ವರೆಗೂ ಬೆಳಗದೆ ಇದ್ದಿದ್ದರೆ ಮೂರುಲೋಕವೆಲ್ಲ ಕಗ್ಗತ್ತಲಲ್ಲೆ ಮುಳುಗಿರುತ್ತಿತ್ತು. ಇಲ್ಲಿ 'ಜ್ಯೋತಿ' ಎಂಬುದನ್ನು ಬೆಳಕು ಎಂಬ ಅರ್ಥದಲ್ಲಿ ಕೃತಿಕಾರ ಮಂಡಿಸುತ್ತಿದ್ದಾನೆ. (ಸಂ)

ಮಾನವನಿಗೆ ಅವನನ್ನು ಸುತ್ತಿಮುತ್ತಿಕೊಂಡಿರುವ ಒಳ-ಹೊರಗಿನ ವಾಸ್ತವ: 'ವಸ್ತು'ವಿನ ಬಗೆಗೆ ಅರಿವನ್ನುಂಟು ಮಾಡಿಕೊಡುತ್ತದೆ. ಬರಿಯ ಅರಿವೇ - (ಜ್ಞಾನ)ವಲ್ಲ. (ತಿಳಿಯಿತು) ಎಂಬ ಘಟನೆ-ಘಟನೆಗಳಲ್ಲಿ ಇರುವ ಸಂಬಂಧ (Coherence) ಹಾಗೂ ಸಂ-ಗತಿ (Consistency : continuity) ಯ ನಿಯಮ ಅರ್ಥ, ಮೂಲ್ಯ, ಸೌಂದರ್ಯದ ಬಗೆಗೆ ಸ್ಪಷ್ಟ ಬೆಳಕನ್ನು ನೀಡಬಲ್ಲುದೇ ಜ್ಞಾನ. ಬರಿ 'ಅರಿಮೆ' (Cognition) ಇದನ್ನೇ 'ಜ್ಞಾನ' ಎಂದು ಗ್ರಹಿಸುವುದರಲ್ಲಿ ವಿಶ್ವಸ್ಥ ಅರ್ಥವನ್ನು ಶೂನ್ಯಗೊಳಿಸುತ್ತಿರುವ ಅನ್ಯಾಯವು ಸಂಭವಿಸುತ್ತಿದೆ. ಈ ಅನ್ಯಾಯದ ಫಲವಾಗಿ ಋತ : ಸತ್ಯಕ್ಕೆ ವಂಚಿತರಾಗುವ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ವಿಶ್ವವನ್ನು 'ಶೂನ್ಯ' : 'ಪೂರ್ಣ' (O) ರೂಪದಲ್ಲಿ ಕಾಣಲು ಮೃತ್ಯುವನ್ನೇ ಆರಂಭದ ಬಿಂದುವಾಗಿ ಗ್ರಹಿಸಬೇಕಾಗುವುದು ಅನಿವಾರ್ಯವಾಗಿದೆ. ಈ ಏಕಂ : ತತ್: ಸತ್ ಭೂಮಿಕೆಯ ಜೀವನ ದೃಷ್ಟಿಯ ವಿಶ್ವವು ಅರ್ಥಶೂನ್ಯವಾಗುತ್ತದೆ. ಜೀವನ ಕ್ಷಣಭಂಗುರ, ಇದರ ಆಚೆಗೆ 'ಸತ್ಯ': 'ಅರ್ಥ'ವುಂಟು ಎಂಬುದು ಈ ಶ್ರದ್ಧೆ. ಈ ಶ್ರದ್ಧೆಯಂತೆ ಭಾಷೆ ಎಂಬುದು ಬರಿ ಭ್ರಾಂತು!

ಭಾಷೆಯು ಒಂದು ಮಾಯಾ ಕವಚ ನಿಜ. ಯಾವಾಗ? ಯಾರಿಗೆ? ಒಂದು ವ್ಯಕ್ತಿಯು ಕೇವಲ ತನ್ನ ಅನುಭವ- ಅರ್ಥ ಇದುವೆ 'ಸತ್ಯ' ಎಂದು ನೆರೆನಂಬಿ ಇನ್ನುಳಿದವರ ಅರ್ಥವನ್ನು ಎಂದರೆ ಅವರ ಅಸ್ತಿತ್ವವನ್ನು ಶೂನ್ಯಗೊಳಿಸುವ ಅಪರಾಧವನ್ನು ಎಸಗುವವರಿಗೆ ಇದೇ ಮಾತು ಏಕಮೇವ ತನ್ನ ಭಾಷಿಕ ಶಬ್ದಪ್ರತಿಮೆಗಳನ್ನೇ ನೆರೆನೆಮ್ಮಿ ಬಾಳಬಯಸುವವನು, ಆತ್ಮಕೇಂದ್ರಿತ ವ್ಯಕ್ತಿಯನೇ ಹೋಲುತ್ತಾನೆ. ಒಂದೊಂದು ಭಾಷೆಯು, ಆಯಾ ಜನ ಸಮಷ್ಟಿ ಪುರುಷನು ವಿಶ್ವಸ್ಥ ವಾಸ್ತವ 'ವಸ್ತು'ವನ್ನು ಅರಿಯಲು ಮಾಡಿದ ಪ್ರಯತ್ನದ ಫಲವಾಗಿಯೇ ಅಭಿವ್ಯಕ್ತವಾಗಿದೆ. ಈ ಕಾರಣದಿಂದ ವಿಶ್ವಸ್ಥ ವಾಸ್ತವ 'ವಸ್ತು'ವಿನ ನಿಜ ಸ್ವರೂಪ ಆಕೃತಿಯ ಪ್ರಜ್ಞೆ ಮೂಡಬೇಕಾಗಿದ್ದರೆ ಮಾನವ ಪಂಗಡಗಳು ಸೃಷ್ಟಿಸಿರುವ - ಕಂಡುಕೊಂಡಿರುವ ಭಾಷೆ-ಭಾಷೆಗಳೊಳಗಿನ ಗರ್ಭಿತ ವಿಚಾರಗಳ (Concepts) ತುಲನಾತ್ಮಕ ವ್ಯಾಸಂಗದ ಆವಶ್ಯಕತೆ ಇದೆ. ಪ್ರತಿಮಾ : ಸಂಕೇತದ ತತ್ತ್ವಜ್ಞರು ಹೇಳುವಂತೆ, ಇಂದಿನ ತತ್ತ್ವಜ್ಞಾನ (Philosophy) ಒಂದು ಮಾನವರೊಳಗಿನ ಪ್ರತಿಭಾಶಾಲಿಗಳ ಕಲ್ಪನಾವಿಲಾಸದ ತರ್ಕಶುದ್ಧ ವಿಚಾರಮಂದಿರ (Construction), ಈ ತತ್ತ್ವಮಂದಿರ ದಿಕ್ಕಾಲದ ಸಂದರ್ಭದೊಳಗೂ ಅನುಭವಕ್ಕೆ ಬಂದ ವಾಸ್ತವ 'ವಸ್ತು'ವಿನ ಆಧಾರದ ಮೇಲೆಯೆ ನಿಂತಿದೆ, ಎಂಬುದಕ್ಕೆ ಆಧಾರವೇನು? ಆದರೆ, ಭಾಷೆಗಳೊಳಗಿನ ಶಬ್ದ-ಪ್ರತಿಮೆಗಳಲ್ಲಿ ಆ ಭಾಷಿಕ ಸಮಷ್ಟಿಯ ಮೂಕಸಮ್ಮತಿಯನ್ನುಳ್ಳ (Tacit consent) 'ದರ್ಶನ'ದಲ್ಲಿ ಲಭಿಸಿದ ವಾಸ್ತವ ಸತ್ಯದ ಅಂಶಗಳು ಇರುತ್ತವೆ. ಆದಕಾರಣ ಮಾನವನು ಸತ್ಯದರ್ಶನಕ್ಕಾಗಿ ತನ್ನ ಒಂದೇ ಭಾಷೆಯನ್ನು ಅವಲಂಬಿಸಿದಲ್ಲಿ ಅದು 'ಮಾಯಾ'ಕವಚವಾಗದೆ ಇರದು.

ಪ್ರಸ್ತುತ 'ನಾಗ' ಪ್ರತಿಮಾ ವಿಚಾರವು ಮಾನವ ಪಂಗಡಗಳು ಈವರೆಗೆ ನಡೆದುಬಂದ ದಾರಿಯಲ್ಲಿ ಮೊತ್ತಮೊದಲಲ್ಲಿ ಎಲ್ಲರಿಗೂ ದರ್ಶನವಿತ್ತ 'ದಿವ್ಯ' ದೈವತವು: 'ಸರೀಸೃಪ' ನಾಗ-(Reptile) ಈ ನಾಗಭಕ್ತಿ, ನಾಗಗಳ ದಿವ್ಯಪವಾಡ ಕಥೆಗಳು ಇಲ್ಲದ ಜನಾಂಗಗಳೇ ಇಲ್ಲ. ಆದರೆ, ಈ ನಾಗವನ್ನು 'ಮೃತ್ಯ' ಸ್ವರೂಪವೆಂದು ಈ ನಾಗಕುಲವನ್ನು ಸಂಹರಿಸಲು ಬದ್ಧಪ್ರತಿಜ್ಞೆಯ ಜನಪಂಗಡಗಳು ಲೋಕದಲ್ಲಿ ಆದುದುಂಟು. ಮೊದಲ ಹಂತದಲ್ಲಿ 'ನಾಗ'ವು ಒಂದು ಭೌತ ಪ್ರತ್ಯಕ್ಷ ವಾಸ್ತವ ವಸ್ತುವೆ ಆಗಿತ್ತು. ಆದರೆ, ಈ 'ನಾಗ'ದ ಮೂಲಕವಾಗಿ ಹೊಳೆದ ಅರ್ಥ : ವಿಚಾರವು ಎರಡನೆಯ ಹಂತದ ಜೀವನದಲ್ಲಿ ಆ ಜನಜೀವನವನ್ನು ರೂಪಿಸುವುದುಂಟು.

ಭಾರತದಲ್ಲಿ ಆರ್ಯರು ಬರುವ ಮೊದಲು ವಾಸವಾಗಿದ್ದ ಜನಗಳಲ್ಲಿ 'ನಾಗ'ವನ್ನು ದಿವ್ಯ ದೈವತವೆಂದು ಆರಾಧಿಸುವ ಸಂಪ್ರದಾಯವಿದ್ದಿತು. ಭಾರತದ ಜಾನಪದ ಜೀವನದ ವಿಶ್ಲೇಷಣಾತ್ಮಕ ಸಮೀಕ್ಷೆಯಲ್ಲಿ ಹೊರಡುವ ಸಂಗತಿಯೆಂದರೆ, ಈ ದೇಶವು ನಾನಾ ಅರಣ್ಯಗಳ ಬೀಡು ಆಗಿದ್ದಾಗ ಎಲ್ಲೆಲ್ಲೂ ನಾಗ : ಸರ್ಪಗಳ ಸುಳಿದಾಟವು ವಿಪರೀತವಾಗಿತ್ತು*.

* Indian Serpent Lore ಎಂಬ ಗ್ರಂಥದಲ್ಲಿ ಈ ಸಂಗತಿಯನ್ನು ಚೆನ್ನಾಗಿ ವಿಶದಪಡಿಸಲಾಗಿದೆ. ಆಸಕ್ತರು ಈ ಗ್ರಂಥವನ್ನು ನೋಡಬಹುದು. ಶಂಬಾ ಅವರು ಈ ಗ್ರಂಥದ ಆಶಯದಿಂದ ಅನೇಕ ವಿಚಾರಗಳನ್ನು ಪಡೆದಿದ್ದಾರೆ (ಸಂ)

ಜಲಾಶಯ, ವೃಕ್ಷ, ನಾಗ, ಚಂದ್ರಾದಿಗಳು 'ದಿವ್ಯ' ದೈವತಶಕ್ತಿಯುಳ್ಳ ಶಬ್ದ-ಪ್ರತಿಮೆಗಳಾಗಿರುವ ಜನದ ಮೂಲ ಪಂಗಡವು, ಯಾವ ಬಗೆಯ ನಿಸರ್ಗಸ್ಥ ಪರಿಸರದಲ್ಲಿ ಬಾಳಿ ಬದುಕಬೇಕಾದಾಗ ಈ ಪ್ರತಿಮಾ : ಸಂಕೇತಗಳು ಪ್ರಚಲಿತವಾಗಿರಬೇಕು, ಎಂಬುದನ್ನು ಊಹಿಸಿಕೊಳ್ಳಲು ಕಷ್ಟಪಡಬೇಕಾಗಿಲ್ಲ. ಇದೇ ಮೇರೆಗೆ ಅಗ್ನಿ, ಸೂರ್ಯ, ಇಂದ್ರ, ವರುಣಾದಿ ಪ್ರಕಾಶ ತೇಜೋರೂಪ ದಿವ್ಯಶಕ್ತಿಯವೆಂಬ ಶಬ್ದ-ಪ್ರತಿಮೆಗಳನ್ನು ಆರಾಧಿಸುವ ಜನದ ಮೂಲಪಂಗಡವು ಈ ಪ್ರತಿಮೆಗಳನ್ನು ಸೃಜಿಸಿಕೊಂಡ ಆರಂಭದ ಆ ಜೀವನ ಪರಿಸರವು ಆಪ : ರಸ, ವೃಕ್ಷ, ನಾಗ ಪ್ರತಿಮಾ ಪೂಜಕರ ಪರಿಸರಕ್ಕಿಂತ ಬೇರೆಯಾಗಿರಬೇಕೆಂದು ಸಿದ್ಧಪಡಿಸುವ ಆವಶ್ಯಕತೆಯುಂಟೆ?

ಇಂದಿನ ಸ್ವರೂಪದ ಸಮ್ಮಿಶ್ರ ಜನತಂಡಗಳು ತಲೆದೋರತೊಡಗುವ ಮೊದಲು ಆಹಾರ ಸಂಚಯಕ್ಕಾಗಿ ಕಾಡಿನಲ್ಲಿ ಕೂಡಿ ಬಾಳಿ ಅಲೆಯಬೇಕಾಗುತ್ತಿದ್ದ ಸಣ್ಣ ಸಣ್ಣ ಗುಂಪು -ಪಂಗಡಗಳ ಅಸ್ತಿತ್ವವನ್ನು ಗೃಹೀತ ಹಿಡಿಯದೆ ಒಂದೊಂದು ವಿಶಿಷ್ಟ ರೂಪ - ಆಕೃತಿಯ ಅನೇಕ ಭಾಷೆಗಳು ಮೈದಾಳಿದ ಹಿನ್ನೆಲೆಯ ಅರ್ಥವೇ ಆಗಲಾರದು. ಯಾವುದೇ ಒಂದು ಭಾಷೆಯನ್ನು ವಿಶ್ಲೇಷಿಸಿ ವಿಮರ್ಶಿಸಿದಲ್ಲಿ, ಅದರ ತಳಪಾಯದ ಸುಸಂಗತ, ಸುಸಂಬದ್ಧ ಜೀವನದ ಆಕೃತಿ (Life Form) ಗಮನಕ್ಕೆ ತಂದುಕೊಡುವ ಜೀವಾಳದಂತಿರುವ (Basic) ಶಬ್ದ ಪ್ರತಿಮೆಗಳು ಕೆಲವು ದೊರೆಯುತ್ತವೆ. ಈ ಬಗೆಯ ಸುಸಂಬದ್ಧ ಜೀವನದ ಯಾವುದೇ ಆಕೃತಿಯ ಪಂಗಡವಿರಲಿ, ಇಂತಹ ಜೀವಾಳದ ಶಬ್ದಪ್ರತಿಮೆಗಳ ಪಂಗಡದ ಒಂದು ಸ್ವತಂತ್ರ ಅಸ್ತಿತ್ವವನ್ನು ಒಪ್ಪಿಕೊಳ್ಳದೆ ಇಷ್ಟು ವಿವಿಧ ಭಾಷೆಗಳು ಆಕಾರ ಪಡೆದುದರ ಅರ್ಥವೇ ಆಗಲಾರದು.

ಆಹಾರ ಸಂಚಯಕ್ಕಾಗಿ ಅಥವಾ ವಿಷುಗೀಷು ವೃತ್ತಿಗಾಗಿ ಅಲೆಯುವಾಗ ಭಿನ್ನಭಿನ್ನ ಭಾಷಿಕ ಪಂಗಡಗಳ ಸಂಘರ್ಷಗಳು ಉಂಟಾಗದೆ ಇಲ್ಲ. ಒಂದೆಡೆಗೆ ಕೂಡಿ ಬಾಳದೆ ಗತಿಯಿಲ್ಲವಾದಾಗ ಆ ಭಿನ್ನಭಾಷಿಕರಲ್ಲಿ ಕೂಡಲ-ಸಂಗಮದ ಜೀವನ ದೃಶ್ಯವು ಕಂಡರೆ ಸೋಜಿಗಪಡಬೇಕಾಗಿಲ್ಲ. ಭಾರತೀಯ ಸಂಸ್ಕೃತಿಯು ಹೀಗೊಂದು ಕೂಡಲಸಂಗಮ ಸಂಸ್ಕೃತಿ. ನಾಗವು ವಿಶ್ವದ ಹಾಗೂ ವ್ಯಕ್ತಿಯ ಮೂಲಾಧಾರ ಕುಂಡಲಿನೀ ಶಕ್ತಿ ಎಂಬ ಶ್ರದ್ಧೆಯ ತಾತ್ವಿಕ ತಳಹದಿಯ ಈ ಪಂಗಡದ ಮೂಲಿಗರೆ ಒಂದು ಅಹಿ, ಪಾಪಿ : ಅಂಹಸ್ ಸ್ವರೂಪಿ, ಎಂದು ಬಗೆದು ಇದನ್ನು ಮೃತ್ಯುಸ್ವರೂಪ, ಪ್ರಕಾಶ - ಜ್ಞಾನದ ಶತ್ರು ಎಂದು ಬಗೆದು ಅದರ ಸಂಹಾರಕ್ಕಾಗಿ ಕಟಿಬದ್ಧವಾದ ವೃತ್ರಘ್ನ : ಇಂದ್ರಪೂಜಕರ ಪರಂಪರೆಯು ಇಂದು ನಾಮಮಾತ್ರ ಉಳಿದಿದ್ದರೂ ಈ ಸಂಪ್ರದಾಯದ ಮೂಲಿಗರೇ ಬೇರೆ ಆಗಿದ್ದರು. ವೇದಕಾಲದ ಆರಂಭದಲ್ಲಿ ಇದೆಲ್ಲವು ಆಯ್ತು. ಇದು ಹಿಂದಣ ಕಥೆ! ಇಂದೇನು? ಇಂದು, ಆ ನಿನ್ನೆಗಳ ಮಾತು ಯಾತಕ್ಕೆ?

ಈಗ, ಅಂದಿನ ಋಷಿವರ್ಗವೂ ಇಲ್ಲ; ಯಜ್ಞ ಸಂಪ್ರದಾಯವೂ ಇಲ್ಲ. ಇರಬೇಕೆಂದರೂ ಮರಳಿ ಇರಲು-ಆಚರಿಸಲು ಶಕ್ಯವಿಲ್ಲ. ಸರ್ಪವನ್ನು ಎಂದರೆ ಮೃತ್ಯುವನ್ನು ಆರಾಧಿಸುತ್ತಿರುವುದು ಮಾತ್ರ ನಿಜವಿದೆ! ಆದರೆ, ಸರ್ಪವನ್ನು-ಎಂದರೆ ಸಂಕಟ-ವಿಪತ್ತು, ಮೃತ್ಯುವನ್ನೇ ದೇವರೆಂದು ಆರಾಧಿಸುತ್ತಿರುವೆವು, ಎಂದು ಕಣ್ತೆರೆದು ನೋಡಿ ಒಪ್ಪುವ ಇಚ್ಛೆ ಮಾತ್ರ ನಮಗಿಲ್ಲ! ಮೋಕ್ಷ, ಕೈವಲ್ಯ, ಕೇವಲ ಸ್ಥಿತಿ, ನಿರ್ವಾಣ ಇದೇ ಬಾಳಿನ ಗುರಿ, ಎಂದು ಬೋಧಿಸಿ ಭಕ್ತರನ್ನು ಭವಬಂಧನದಿಂದ ಮುಕ್ತಮಾಡುವ, ಲೋಕಹಿತಾರ್ಥವಾಗಿ ಇರುವ ಮಠಗಳೂ 'ಸಾಧು ಸಮಾಜ'ಗಳೂ ಸತ್ತಮೇಲಣ ಸ್ವರ್ಗದ ಪುರಾಣಗಳನ್ನು ಹೇಳುವ ಪರಿಪಾಠಿ ಬಿಟ್ಟಿಲ್ಲವಾದರೂ ಜನರಿಗೆ ಪ್ರವೃತ್ತಿ ಮಾರ್ಗದಲ್ಲಿಯೂ ಮುಂದುವರಿಯಲು ಸಾಕ್ಷಾತ್ತಾಗಿ, ಅಡ್ಡಿಗಳನ್ನು ಒಡ್ಡುತ್ತ ಇಲ್ಲ. 'ಪ್ರಪಂಚ ನಶ್ವರ' ಎಂದು ಹೇಳಿದರೂ ಈ ನಶ್ವರ ಪ್ರಪಂಚದ ಆಗುಹೋಗುಗಳಲ್ಲಿ ಭಾಗವಹಿಸಿ ಭಾರತೀಯ ಸ್ವಾತಂತ್ರ್ಯದ ಸಲುವಾಗಿ ತ್ಯಾಗಕ್ಕೂ ಸಿದ್ಧತೆಯನ್ನು ತೋರಿಸುತ್ತಾರೆ. ಶಾಲೆ-ಕಾಲೇಜುಗಳನ್ನು ಸ್ಥಾಪಿಸುತ್ತಾರೆ. ಇದರಿಂದಾಗಿ ಸಂನ್ಯಾಸಪಂಥವು ಸಮಾಜ ಸಂಮುಖ ಜೀವನವೃತ್ತಿಯ ಸಂಪ್ರದಾಯವಾಗಿ ಮಾರ್ಪಡುವ ಶಕ್ಯತೆಯೂ ಕಾಣತೊಡಗಿದ್ದು ಶುಭಲಕ್ಷಣವೇ ಸರಿ. ಆದರೆ, ಸಾಂಪ್ರದಾಯಿಕ 'ಪೋಥೀ' ಭಕ್ತಿ, 'ಪಾದೋದಕ ಪ್ರಸಾದೀ' ನಿಷ್ಠೆ, ಪಾಪಮಾಡಿದ್ದರಿಂದ ಈ ಜನ್ಮ ಬಂದಿದೆ, ಎಂಬೀ ಬಗೆಯ ಮನೋಭಾವದ ನಂಬುಗೆಗಳ ಹೆಗ್ಗಣಗಳನ್ನು

ಜೀವಂತವಾಗಿ ಸಾಕಿ-ಉಳಿಸಿ. ಅದರ ಮೇಲೆ ಐಹಿಕ ಜೀವನ ನಿಷ್ಠೆಯ ಗುಡಿಸಲನ್ನು ನಿಲ್ಲಿಸುವ ಈ ಪ್ರಯತ್ನಗಳು, 'ನ ಬುದ್ಧಿ-ಭೇದಂ ಜನಯೇತ್ ಜ್ಞಾನಾಂ ಕರ್ಮಸಂಗಿನಾಮ್' ಎಂಬ ಗೀತೆಯ ತಂತ್ರಕ್ಕೆ ಅನುಗುಣವಾದ ಮಾಟದ ಕೃತಿಗಳು, ಎಂದೇ ಹೇಳಬೇಕಾಗುತ್ತದೆ.

ಗೀತೆಯ ಈ ದ್ವೈತಾಚರಣೆಯಲ್ಲಿ ಮೋಸಕ್ಕೆ ಇಂಬು ದೊರೆಯುತ್ತಿದೆ. ಇದಕ್ಕಿಂತ ಶ್ರೀ ಬಸವಣ್ಣನವರ ನೇರವಾದ ಬಿಚ್ಚುಮಾತಿನ ಶೈಲಿ ಸ್ವಾಗತಾರ್ಹವಾಗಿದೆ: 'ಮರಣವೇ ಮಹಾನವಮಿ' ಎಂದು ಸುಸ್ಪಷ್ಟ ಉಪದೇಶ ಶ್ರೀ ಬಸವಣ್ಣನವರದು. 'ಪ್ರಪಂಚವೆಂಬುದು ಮಾಯೆ ಕಾಣಭೋ' ಎಂಬೀ ಬಗೆಯವಚನ ಶೈಲಿಯ ಪ್ರಾಂಜಲ ಮಾತಿನಲ್ಲಿ ಮೋಸಕ್ಕೆ ಎಡೆಯಿಲ್ಲ. "ತಸ್ಮಾತ್ ಅಪರಿಹಾರ್ಯೇರ್ಥೇ ನ ತ್ವಂ ಶೋಚಿತುಂ ಅರ್ಹಸಿ".- ಯಾವುದು ನಿನ್ನ ಕೈಯಲ್ಲಿ ಇಲ್ಲವೊ-ಅ-ಪರಿಹಾರ್ಯವಾಗಿದೆಯೊ, ಅದರ ಬಗೆಗೆ ಅತ್ತು-ಕೈಕಾಲುಗೆಟ್ಟು ಆಗುವುದೇನು? ಎಲೈ 'ನರ'ನೇ ಎದ್ದೇಳು ಯುದ್ಧಕ್ಕೆ ತೊಡಗು-ಎಂದು ಉಪದೇಶಿಸಿ ಕರ್ಮಪ್ರವೃತ್ತನಾಗಲು ಪ್ರೇರಿಸುವ ಭಗವಂತನೇ, 'ಜನ್ಮ-ಮೃತ್ಯು-ಜರಾ-ವ್ಯಾಧಿ'ಗಳ ಕೋಟಲೆಯ ಈ ಬಾಳಿನೊಳಗಿಂದ ಬೇಗನೆ ಹೊರಬೀಳಲು ಅಪ್ಪಣೆ ಕೊಡಿಸುತ್ತಾನೆ! 'ಉದ್ಧರೇತ್ ಆತ್ಮನಾತ್ಮಾನಂ' 'ನಿನ್ನ ಉದ್ಧಾರ ನಿನ್ನ ಕೈಯಲ್ಲಿದೆ' ಎಂಬ ಗೀತೆಯೇ, 'ಮಾಮ್ ಏಕಂ ಶರಣಂ ವ್ರಜ' ಎಂದೂ ಬೋಧಿಸುತ್ತದೆ; ವಿಚಾರ-ಪ್ರಯತ್ನ ಮುಖ್ಯ, 'ದೈವಂ ಚೈವಾತ್ರ ಪಂಚಮಂ' ಎಂಬ ಶ್ರೀ ಕೃಷ್ಣನು 'ನ ಮೇ ಭಕ್ತಃ ಪ್ರಣಶ್ಯತಿ' ಎಂದು ಅನನ್ಯಗತಿಕನಾಗಿ ಶರಣುಬರಲು ಆಮಿಷ ಒಡ್ಡುತ್ತಿದ್ದಾನೆ. ಮೋಕ್ಷಾದಿ ಸಿದ್ಧಿಗಳ ರೂಪದಲ್ಲಿ! ವಿರಕ್ತಪಂಥಗಳು ಗೀತೆಯ ಶೈಲಿಯ ಪದರು ನಡೆವಳಿ ನುಡಿವಳಿಗಳ ತಂತ್ರ-ಮಂತ್ರಗಳನ್ನು ಬಿಟ್ಟು, ನಿಜವಾಗಿಯೂ ಸಮಾಜಧಾರಣೆಯ ಸಾಮಾಜಿಕ ಜೀವನ ರೀತಿಯನ್ನು ಪ್ರೋತ್ಸಾಹಿಸುವುದಾದರೆ, ಭಾರತದ ಭವ್ಯ ಭವಿಷ್ಯತ್ತು ದೂರವಿಲ್ಲ. ಆದರೆ, ಕೆಲವರು ಕೇಳಬಹುದು : ಆ ಸರ್ಪಾರಾಧನೆ ಹಳೆಯ ಕಥೆ; ಹಳೆಯ ಧರ್ಮಗ್ರಂಥ, ಅವುಗಳಲ್ಲಿ ಹೇಳಿದ್ದು- ಆ ಪುರಾಣ ಶ್ರವಣ, ಇದಕ್ಕೆ ಇಂದು ಇರುವ ಬೆಲೆಯೇನು? ಇದೂ ಒಂದು ಪ್ರತಿಷ್ಠೆ ಪಡೆವ ಅಥವಾ ಸಮಾಧಾನ ತಂದುಕೊಳ್ಳುವ ರೀತಿ. ಅದು ಇದ್ದರೆ ಆಗುವ ಹಾನಿಯೇನು?

ಮರೆತು ಹೋದ ಆ ನಿನ್ನೆಗಳ ನೆನಪು ಯಾತಕ್ಕೆ

'ಇಂದು' ಎಂಬುದು ಆಕಾರ ಪಡೆಯಲು ನಿನ್ನೆಗಳು ಕಾರಣವಾಗುತ್ತವೆ. ನಿನ್ನೆಯು ಪೂರಾ ಮರೆತರೆ 'ಇಂದು' ಅರ್ಥಶೂನ್ಯವಾಗುತ್ತದೆ. ತನ್ನ ಹಾಗೂ ತನ್ನ ಸಂಸ್ಕೃತಿಯ 'ನಿನ್ನೆ'ಗಳನ್ನು ಅರಿಯದವರಿಗೆ ಅದರ ಇಂದಿನ ರೂಪ-ಆಕೃತಿಯ ಅರ್ಥವಾಗಲು ಶಕ್ಯವಿಲ್ಲ. ಯಾವುದೇ 'ಅರ್ಥ' ಎಂಬುದು ನಿನ್ನೆಗಳ ಫಲಿತ. ಬಾಳನ್ನು ಅರ್ಥಶೂನ್ಯವಾಗಿಸಿಕೊಳ್ಳಬೇಕಿದ್ದರೆ 'ನಿನ್ನೆ'ಗಳನ್ನು-ಎಂದರೆ ಇತಿಹಾಸವನ್ನು ಮರೆತುಬಿಡುವುದೊಂದೇ ಮಾರ್ಗ*. ಇತಿಹಾಸವನ್ನು ತಳ್ಳಿ ಹಾಕಿ, ಅದರ ಸ್ಥಳದಲ್ಲಿ 'ಪುರಾಣ' ಸಾಹಿತ್ಯ ನಿರ್ಮಿಸುವ ಅಧ್ಯಾತ್ಮಮಾರ್ಗದ ರೀತಿಯಿಂದಾಗಿ ಭಾರತೀಯರಿಗೆ ಮರಣಾನಂತರದ ನಾನಾಲೋಕಗಳ ಜ್ಞಾನವು ಇರುವಷ್ಟು, ಅವರ ಸುತ್ತಲಿನ ಪ್ರಪಂಚದೊಳಗಿನ ಯಾವ ಒಂದೂ ದೇಶದ ಇತಿಹಾಸ- ಭೂಗೋಲ ಗೊತ್ತಿರಲಿಲ್ಲ; ಗೊತ್ತಿರುವ ಆವಶ್ಯಕತೆಯೂ ಎನಿಸಿರಲಿಲ್ಲ-ನಿನ್ನೆ ಮೊನ್ನೆಯ ವರೆಗೆ! ಅದೇಕೆ, ಈ ಕ್ಷಣಕ್ಕೂ ಕೂಡ, ಆ ಸ್ಥಿತಿಯೆ ಇಲ್ಲವೆ? ನಮ್ಮ 'ಹಿಂದಿನ ಕತೆ ಯಾತಕ್ಕೆ' ಎಂದು ಕೇಳುವ ಸುಶಿಕ್ಷಿತ ವರ್ಗವು ಸುತ್ತಲು ಇರುವಾಗ!

ಈ ವಿಚಾರಗಳನ್ನು ಕುರಿತು ಶಂಬಾ ೧೯೩೩ರ ತಮ್ಮ ಮೊದಲ ಗ್ರಂಥದಿಂದ ಹೇಳುತ್ತ ಬಂದಿದ್ದಾರೆ. ಕನ್ನಡದಲ್ಲಿ ನಿನ್ನೆ-ಇಂದು-ನಾಳೆಗಳ ಸುಸಂಗತ ಹಾಗೂ ವಿಸಂಗತ ಸಾಂಸ್ಕೃತಿಕ ಇತಿಹಾಸವನ್ನು ಹೀಗೆ ತೆರೆದಿಟ್ಟು ನೇರವಾಗಿ ಹೇಳಿದವರು ಇಲ್ಲ. ಶಂಬಾ ಅವರ ಪ್ರಮುಖ ವಿಚಾರಧಾರೆಗಳು ಈ 'ನಿನ್ನೆ-ಇಂದು-ನಾಳೆ'ಗಳ ಸಾಂಸ್ಕೃತಿಕ ಪರಿಭಾಷೆಯಲ್ಲಿ ವ್ಯಾಖ್ಯಾನಕ್ಕೆ ಒಳಗಾಗುತ್ತವೆ. (ಸಂ)

'ನಿನ್ನನ್ನು ನೀನು ತಿಳಿ; ಅನ್ಯರ ಗೊಡವೆ ಏಕೆ?' ಎಂಬ ವಾದವುಂಟು. ಆದರೆ, ಈ 'ತತ್'ತ್ವದ ತಳಹದಿಯಲ್ಲಿ, ನಾಗರಾಜನೇ ಇರುವುದನ್ನು ಬಚ್ಚಿಡಲಾಗಿದೆ! ತನ್ನನ್ನು ತಾನು ತಿಳಿಯುವುದು, ಎಂದರೇನು? ವ್ಯಕ್ತಿಗೆ ಸಮಷ್ಟಿಯ ಹಿನ್ನೆಲೆಯಲ್ಲಿ ಮಾತ್ರ ಬೆಲೆ; ಇಡಿಯದರ ಸಂದರ್ಭದಲ್ಲಿ ಅದರ ಅಂಶಕ್ಕೆ ಅಂಗಕ್ಕೆ-ಅರ್ಥ. ಅಂಗಾಂಗಗಳ ಹೊಂದಾಣಿಕೆ-ಬೇರಿಜು ಆಗಿ 'ಇಡಿ' ಎಂಬುದು ಆಗಿರುವುದು ನಿಜ. ಆದರೆ 'ಇಡಿ'ಯು, ಅಂಗಾಂಗಗಳ ಒಟ್ಟು ಬೇರೀಜಿಗಿಂತ ಮಿಗಿಲಾದುದು ಆಗಿರುತ್ತದೆ. ಆದಕಾರಣ, ಅಂಶ ಸ್ವರೂಪಿಯಾದ ಒಂದು ವ್ಯಕ್ತಿ, ತನ್ನ ಸ್ವ-ರೂಪ ಜ್ಞಾನಕ್ಕಾಗಿ, ಏಕಾಕಿಯಾಗಿ-ಬಾಹ್ಯ ಪ್ರಜ್ಞಾವಿಹೀನನಾಗಿ ಆತ್ಮರತಿಯಲ್ಲಿ ಕಣ್ಣಮುಚ್ಚಿ ಕುಳಿರುವಲ್ಲಿ ಆಗುವ 'ಆತ್ಮ' ಎಂಬುದರ ಜ್ಞಾನವು, ಸಮಾಜ-ಸಮಷ್ಟಿಯ ಸಂದರ್ಭದ ಪ್ರಾಮಾಣಿಕ ಜೀವನಾನುಭವದಲ್ಲಿ ಆಗುವ ಸ್ವ-ಸ್ವರೂಪದ ಜ್ಞಾನಕ್ಕೆ ಸರಿದೊರೆಯಾದುದು ಇರಲಾರದು.

ನಿಜವಾದ 'ಅರ್ಥ'ವು ಜೀವನ ಸಂದರ್ಭದ ಗತಿಯಲ್ಲಿ-ಸಂ-ಗತಿಯಲ್ಲಿ ಅರಿಕೆಗೆ ಬರಬಲ್ಲುದು; ಕೋಶಗಳಲ್ಲಿ-ಸಾಹಿತ್ಯಾದಿ ಗ್ರಂಥಗಳಲ್ಲಿ ಕಾಣದೊರೆವ 'ಅರ್ಥ' ಮತ್ತು ಕನ್ನಡಿಯ ಚೌಕಟ್ಟಿನಲ್ಲಿ ಹಾಕಿ ಇಟ್ಟಿರುವ ಚಿತ್ರ; ಇವೆರಡರಲ್ಲೂ ವಿಶೇಷ ವ್ಯತ್ಯಾಸವಿಲ್ಲ. 'ತಾನು'- ತನ್ನನ್ನು ತಿಳಿಯಬೇಕು, ಎಂಬ ಹಂಬಲದ ವ್ಯಕ್ತಿಯು, ಜೀವನದ ಸಂದರ್ಭದಿಂದಲೇ ತನ್ನ ಅರ್ಥವನ್ನು ಅರಿತುಕೊಳ್ಳುವುದು ಲೇಸು. ಕನ್ನಡಿಯ ಚೌಕಟ್ಟಿನೊಳಗಿನ ಚಿತ್ರಗಳು ಕಲಾ-ಕೃತಿಯ ಮಟ್ಟಕ್ಕೆ ಏರಿ, ವಾಸ್ತವದಿಂದ ದೂರವಾಗುತ್ತವೆ. ಸಾಹಿತ್ಯಿಕ 'ಸತ್ಯ'ವು ವಾಸ್ತವ ಸತ್ಯಕ್ಕಿಂತ ಬೇರೆಯದೇ. 'ನಾನು' ಎಂಬ ವ್ಯಕ್ತಿ, ಕನ್ನಡಿಯೊಳಗಿನ ಚಿತ್ರವಲ್ಲ; ದಿಕ್ಕಾಲದ ಸಂದರ್ಭದಿಂದ ಪ್ರವಹಿಸುತ್ತಿರುವ ವಾಸ್ತವ ಸ್ರೋತದ ಒಂದಂಶ. ಇದು ನಿಜವಿದ್ದರೆ, ವಾಸ್ತವ ಪ್ರವಾಹದ ಸಂದರ್ಭದಿಂದಲೇ ತನ್ನನ್ನು ಅರ್ಥಯಿಸಿಕೊಳ್ಳುವಲ್ಲಿ ಕಲ್ಯಾಣವಿದೆ. ಪ್ರವಾಹ ರೂಪ ವಾಸ್ತವ ಎಂದರೇ ನಿನ್ನೆ-ಇಂದು-ನಾಳೆ. ಪುರಾಣ ಕಥೆಗಳು ನಿನ್ನೆಗಳನ್ನು ಅರ್ಥಯಿಸಿ ಹೇಳುವ ರೀತಿಯು ಇತಿಹಾಸಕ್ಕಿಂತ ತೀರ ಬೇರೆ. ಅವುಗಳಲ್ಲಿ ಸಾಂಕೇತಿಕ ಗುಹಾನಿಹಿತ ಗೂಢ ಅರ್ಥವಿರುವುದೇ ಹೆಚ್ಚು. ಅಲ್ಲದೆ ಮತ-ಪಂಥ ಪ್ರಚಾರಕ್ಕಾಗಿ ಅತಿರಂಜಿತವಾಗಿ ಬರೆದ ಪುರಾಣಗಳೆ ಹೆಚ್ಚು. ಸ್ವ-ಪಂಥದ ಶ್ರೇಷ್ಠತೆಯನ್ನು ಪ್ರಸ್ಥಾಪಿಸುವ ಈರ್ಷ್ಯೆ, ಪರಮತ ದ್ವೇಷಾದಿ ಭಾವನಾತ್ಮಕ ವಿಕೃತಿಯಿಂದಾಗಿ ಪುರಾಣಗಳ ಬಗೆಗೆ ಆದರವನ್ನು ಉಳಿಸಿಕೊಳ್ಳುವುದು, ನಿಷ್ಪಕ್ಷಪಾತಿಗೆ, ತುಂಬ ಕಷ್ಟದ ಕೆಲಸವಾಗಿದೆ. ಇಂತಹ ಒಂದೇ ಉದಾಹರಣ ಸಾಕು : ಗಂಗಾವತರಣದ ಪವಿತ್ರ ಕಥಾನಿರೂಪಣೆಯಂತಹ ಸಂದರ್ಭವನ್ನು ಉಪಯೋಗಿಸಿಕೊಂಡು ವಿಷ್ಣು ಸರ್ವೋತ್ತಮತ್ವವನ್ನು ಪ್ರಸ್ಥಾಪಿಸಲು ಆದ ಈ ಮಾತಿನ ಕವಡು ನೋಡಿ : ವಿಷ್ಣುವಿನ ಪಾದದಿಂದ ಹೊರಡುವ ಗಂಗಾ ಪ್ರವಾಹದ ರಭಸವನ್ನು ಭೂದೇವಿ ಸಹಿಸಲಾರಳು, ಎಂದು ಶಿವನಿಗೆ ಆ ಸ್ರೋತಸ್ಸನ್ನು ತನ್ನ ತಲೆಯಲ್ಲಿ ಹಿಡಿಯಲು ದೇವತೆಗಳು ಪ್ರಾರ್ಥಿಸಿದರಂತೆ! 'ವಿಷ್ಣು ಪಾದಾಬ್ಜ ಸಂಭೂತಾ ಗಂಗಾ' ರುದ್ರನ ಮಸ್ತಕದಲ್ಲಿ! ಎಂದರೆ ಈ ಧ್ವನ್ಯರ್ಥವು ಏನು? 'ಗಂಗಾವತರಣ'ದ ಈ ಘಟನೆಯ ವರದಿ ಮಾಡಲು 'ಖಾಸ ಬಾತ್ಮೀದಾರ'ರನ್ನು ಕಳಿಸಿ ಈ ಪುರಾಣಗಳು ಆ ಪ್ರಸಂಗದ ವರ್ಣನೆಯನ್ನು ತರಿಸಿವೆಯೊ, ಎನ್ನುವಂತೆ ಆ ಕಥೆ ಬರೆಯಲ್ಪಡುತ್ತದೆ!

ದೇವತಾ ಪ್ರತಿಮಾ ನಿರ್ಮಾಣದಲ್ಲಿ ತಮ್ಮ ಧರ್ಮ-ಪಂಥದ ಹಿರಿಮೆಯ ಪ್ರದರ್ಶನದ ಹುಮ್ಮಸವನ್ನು ವ್ಯಕ್ತಪಡಿಸದ ಪಂಥಗಳಿಲ್ಲ. ಬ್ರಹ್ಮನ ಚಂಡು ಹಾರಿಸಿದ ವೀರಭದ್ರನಿದ್ದಾನೆ; ಬೌದ್ಧಮತೀಯ ಮೂರ್ತಿ- ವಿಜ್ಞಾನದಲ್ಲಿ, ಪ್ರಸನ್ನ ತಾರಾದೇವಿ ವಿಷ್ಣುವನ್ನು ತುಳಿಯುತ್ತಿರುವಂತೆ ಪ್ರತಿಮಾ ನಿರ್ಮಾಣ ಮಾಡಬೇಕೆಂಬುದು ವಿಧಿಸಲಾಗಿದೆ. 'ಲೋಕೇಶ್ವರ' ಹೆಸರಿನ ಬೌದ್ಧದೈವತವು 'ಹರಿಹರೋದ್ಭವ ಮೂರ್ತಿ!' ಇವನು ಸಿಂಹಾರೂಢ ನಾಗಿರಬೇಕು; ಗರುಡವಾಹನ ವಿಷ್ಣುವನ್ನು ಮೆಟ್ಟಿ ನಿಂತ ಹಾಗೆ ಚಿತ್ರಿತನಾಗಬೇಕು. ಮಥುರಾ ಮ್ಯುಸಿಯಂನಲ್ಲಿ ಇರುವ ಜೈನಮತೀಯ ವೃಷಭನಾಥನ ಪಾದ -ಸೇವಾಮಗ್ನ ಬಲರಾಮ-ವಿಷ್ಣುಗಳು ನೋಡಲು ದೊರೆಯುತ್ತಾರೆ.[೭]

ಈ ಮಾದರಿಯ ಪುರಾಣ ಕಥೆ, ಆದರ್ಶ ದೇವತಾ ಪ್ರತಿಮೆಗಳ ಧ್ಯಾನ ಅನುಷ್ಠಾನವು ಸು-ಕೃತಕ್ಕೆ ಕಾರಣವಾದೀತೆ? ಭಕ್ತರ ಮನೋವಿಕೃತಿಗೆ ಕಾರಣವಾದೀತೆ? ಮತ ಪಂಥೀಯ ಸನಾತನತ್ವದ ಆವೇಶವನ್ನು

ಪ್ರಬೋಧಿಸುವ ಪ್ರತಿಮಾ : ಸಂಕೇತಗಳ ಬೆಳಕಿನಲ್ಲಿ ಆಗುವ ಬಾಳಿನ ಅರ್ಥ, ಆಯಾ ಮತೀಯರಿಗೆ ಆಗುವುದೆಂಬ 'ಸ್ವ'ಸ್ವರೂಪಜ್ಞಾನ, ಇದು ಭಾರತೀಯ ಜೀವನದಲ್ಲಿ ಏಕಾತ್ಮತೆಯ ಮನೋಭಾವವನ್ನು ತರಬಲ್ಲುದೆಂದು ಆಶಿಸಬಹುದೆ? ಈ ಸನಾತನ ಪಂಥಗಳು ಎರಡು ಸಾವಿರ ವರುಷಗಳಿಂದ ಅಕ್ಕಪಕ್ಕದಲ್ಲಿಯೇ ಬಾಳದಾರಿಯನ್ನು ಕ್ರಮಿಸುತ್ತ ಬಂದಿವೆ. ಆದರೆ, ನಿನ್ನೆಗಳಲ್ಲಿ ಕಾಣಸಿಕೊಳ್ಳದಿರುವ ಏಕಾತ್ಮ-ಮನೋಭಾವ, ಇಂದಿನಲ್ಲಿ-ನಾಳೆಯಲ್ಲಿ ಥಕ್ಕನೆ ಕಂಡೀತು,-ಕಾಣಸಲೇಬೇಕು ಎಂದು ಗ್ರಹಿಸಿಕೊಳ್ಳುವಲ್ಲಿ, ದುರ್ದಮ್ಯ ಆಶಾವಾದವುಂಟೊ? ಆತ್ಮವಂಚನೆಯುಂಟೊ? ಹೇಳುವುದು ಕಷ್ಟ.

ನಿನ್ನೆಗಳೊಳಗಿನ ಜೀವನಾನುಭವಗಳ ಅರ್ಥವೇ, ಮಾನವರಿಗೆ ಇಂದು-ನಾಳೆಗಳ ದಾರಿಯ ಬೆಳಕು ತಾನೆ? ನಮ್ಮ ದೈವತ ಪ್ರತಿಮೆ ಹಾಗೂ ಪುರಾಣ ಕಥೆಗಳ ಮೂಲಕ, ದೊರೆಯುತ್ತಿರುವ ಅರ್ಥದ ಬೆಳಕು : ಜೀವನ ಪ್ರೇರಣೆ ಸರಿಯಾಗಿದೆಯೆ? ಆಧುನಿಕ ಜಾಗತಿಕ ಜೀವನ ರೀತಿಗೆ ವಿಸಂಗತವಿಲ್ಲವಷ್ಟೆ? ಈ ನಮ್ಮ ಶ್ರದ್ಧಾಸ್ಥಾನಗಳು, ನಮ್ಮ ನಾಡಿನ ಉತ್ಕರ್ಷಕ್ಕೆ ಕಾರಣವಾಗಬಲ್ಲುವೆ? ಈ ದೃಷ್ಟಿಯಿಂದ ನಮ್ಮ 'ನಿನ್ನೆ'ಗಳನ್ನು ಮರಳಿ ವಿಮರ್ಶಿಸಿಕೊಳ್ಳುವ ಆವಶ್ಯಕತೆ ತೀವ್ರವಾಗಿದೆ.

ಮಾನವನು ಪಡೆದಿರುವ ಸಂಸ್ಕಾರಗಳು : ಅವನ ಸಂಸ್ಕೃತಿ, ಎಂತಹದು? ಅದರ ಮಟ್ಟ, ಸ್ವರೂಪ ಎಂತಹದು ಎಂಬುದು, ಆ ವ್ಯಕ್ತಿಯ ಅಥವಾ ವ್ಯಕ್ತಿ ಸಮೂಹದ ಆಚರಣೆಯ ಮೇಲಿಂದ ಬಯಲಿಗೆ ಬರುತ್ತಿರುತ್ತದೆ. ಆಚರಣಕ್ಕೆ ಪ್ರೇರಿಸುವುದು ಸಂಸ್ಕಾರ-ಸಂಸ್ಕೃತಿ. 'ಸಂಸ್ಕೃತಿ' ಎಂಬುದು ಪುಸ್ತಕದಲ್ಲಿ ಇರುವುದಲ್ಲ. 'ಸಂಸ್ಕೃತಿ' ಎಂಬುದು ಅಮೂರ್ತ; ಅಮೂರ್ತ ಸಂಸ್ಕೃತಿ ಜೀವನದೊಳಗಿನ ಆಚಾರ-ವಿಚಾರಗಳ ರೂಪದಲ್ಲಿ ಮೂರ್ತ ಆಕೃತಿಯಾಗುತ್ತದೆ. 'ಭಾರತೀಯ ಸಂಸ್ಕೃತಿಯು ಬಹು ಮಿಗಿಲಾದದ್ದು' ಎಂದು ಹೇಳುವುದು; ಅದೇ ಕಾಲಕ್ಕೆ ದೇಶದಲ್ಲಿ ಎಲ್ಲೆಲ್ಲೂ ಅಪ್ರಮಾಣಿಕತನ ಭ್ರಷ್ಟಾಚಾರ ತಾಂಡವವಾಡುತ್ತದೆ; ಎಂದೂ ಇನ್ನೊಂದು ಉಸುರಿನಲ್ಲಿ ಆಡುವುದು! ಒಂದೇ ಕಾಲಕ್ಕೆ ಇವೆರಡೂ ನಿಜವಿರಲಾರವು. ಭ್ರಷ್ಟಾಚಾರವು ಎಲ್ಲರ ಅನುಭವದ ವಿಷಯವಾಗಿದೆ. ಈ ಕಾರಣದಿಂದ ನಮ್ಮ ಧರ್ಮ ಪಂಥಗಳ ಶ್ರದ್ಧಾಸ್ಥಾನಗಳಲ್ಲಿಯೆ ಎಲ್ಲಿಯೋ ದೋಷವಿದೆ, ಎಂದು ತನ್ನತಾನೆ ಸಿದ್ಧವಾಗುತ್ತದೆ. ಈ ಭ್ರಷ್ಟಾಚಾರ ಇಂದು ನಿನ್ನೆಯದಲ್ಲ. 'ಸನಾತನ'ವಾಗಿ ಉಳಿದುಬಂದಿರುವುದೆಂಬ ಕ್ರೂರಸತ್ಯವನ್ನು ಇತಿಹಾಸವು ಬಯಲಿಗೆಳೆಯುತ್ತಿದೆ. ಅಲೆಕ್ಸಾಂಡರನನ್ನು ಕಪ್ಪಕಾಣಿಕೆ ಕಳಿಸಿ ಸ್ವಾಗತಿಸಿದ ಭಾರತೀಯ ರಾಜರು ಆಗಿಹೋಗಿದ್ದಾರೆ. ಮುಸಲ್ಮಾನರನ್ನು ಆಮಂತ್ರಿಸಿದ್ದುಂಟು. ಮೋಕ್ಷಾರ್ಥಿಗಳಾದ ಭಾರತೀಯರಿಗೆ ಭೌತರಾಜಕೀಯ ಸ್ವಾತಂತ್ರ್ಯದಲ್ಲಿ ಆಸಕ್ತಿಯೇ ಇರಲಿಲ್ಲ, ಎಂಬುದು ಇನ್ನೊಂದು ಕಟುಸತ್ಯ. ಶಕರೆ ಇರಲಿ, ಯವನರೆ ಇರಲಿ, ಮುಸಲ್ಮಾನರೆ ಇರಲಿ, ಬ್ರಿಟಿಶರೆ ಇರಲಿ, ತಮ್ಮ ಮೋಕ್ಷ ಸಾಧಕ (?) ಧರ್ಮಕ್ಕೆ ಅಡ್ಡಬರದೆ ಇದ್ದರೆ ಸಾಕು; ತಮ್ಮ ಧರ್ಮಕ್ಕೆ ರಾಜಾಶ್ರಯ ದೊರೆಯಬೇಕೆಂದು ಶಕ, ಹೂಣ, ರಾಜರಿಗೆ ದಾಳಿ ಮಾಡಲು ನೆರವಾದ ಧರ್ಮಪಂಥಗಳು ಉಂಟೆಂದು ಇತಿಹಾಸದಲ್ಲಿ ಬಯಲಿಗೆ ಬಂದಿದೆ. ಬಾಳಿನಲ್ಲಿ ಪಾರಲೌಕಿಕ ಸಿದ್ಧಿ, ಪವಾಡ ಸಾಮರ್ಥ್ಯಕ್ಕೆ ಅಗ್ರಸ್ಥಾನವಿರುವ ಮನೋಭಾವವು, ಐಹಿಕ ಜೀವನದಲ್ಲಿ ದ್ವಿಧಾಭಾವದಿಂದಲೆ ವರ್ತಿಸುವುದು ಸಹಜ. 'ಮರಣವೇ ಮಹಾನವಮಿ' ಎಂಬ ವಚನದಲ್ಲಿಯೂ ಶ್ರದ್ಧೆ; ಇತ್ತ ಸಾಮಾಜಿಕ ಜೀವನ ಮಟ್ಟವನ್ನು ಎತ್ತರಿಸಬೇಕು; ತಮ್ಮ ವಯೋಮಾನದ ಪ್ರಮಾಣ ಹೆಚ್ಚಿಸಬೇಕು-ಇನ್ನೂ ಬದುಕಬೇಕು, ಎಂಬಲ್ಲಿಯೂ ಆಸಕ್ತಿ! ಈ ಬಗೆಯ ದ್ವಿಧಾಮನೋಭಾವವು ಭ್ರಷ್ಟಾಚಾರಕ್ಕೆ ಎಂದರೆ ಅಪ್ರಮಾಣಿಕತೆಗೆ ಆಸ್ಪದ ಕೊಡದಿರಲು ಶಕ್ಯವಿಲ್ಲ.

ಈ ಕಾರಣದಿಂದಲೆ, ಈ ದ್ವಿಧಾಭಾವದ-ಇಮ್ಮೊಗದ ಅಥವಾ ಇನ್ನಾಲಗೆಯವರಾಗಿ ಬಾಳಬೇಕಾಗುವ ಈ ವೈಚಾರಿಕ ಇರುಕಿನಲ್ಲಿ ಸಿಲುಕಿಕೊಂಡಿರುವುದು ಎಂತು? ಹೇಗೆ? ಎಂಬುದನ್ನು ಕಂಡುಹಿಡಿಯುವುದು ಅತ್ಯವಶ್ಯವಾಗಿದೆ. ಇದರ ಉತ್ತರವು ನಮ್ಮ ನಿನ್ನೆಗಳ ಸಮೀಕ್ಷೆಯಲ್ಲಿಯೆ ದೊರೆಯಬಹುದಲ್ಲದೆ, ಇದಕ್ಕೆ ಬೇರೊಂದು ಪರ್ಯಾಯವಿರಲಾರದು. ಏಕೆಂದರೆ ೨+೩=೫ ಆಗಲೇ ಬೇಕಲ್ಲದೆ, ಇದರ ಬೇರಿಜು ಕೇವಲ ನಾಲ್ಕು, ಎಂದು ತನ್ನ ಕೈಯೆತ್ತಿ ಹೇಳುವ ಹಟವಾದಿಗಳಂತಾಗಿದೆ, ಭಾರತೀಯರ ಇಂದಿನ ಇತಿಹಾಸ-ಸಂಸ್ಕೃತಿಗಳ ಕಥೆ! ಆದರೆ

ಈ ಬೇರೀಜು ಐದು ಆಗುವುದಿಲ್ಲ, ಎಂದು ಅಲ್ಲಗಳೆಯಲು ಎತ್ತಿದ ಕೈ, ತನ್ನ ಐದು ಬೆರಳು ಚಾಚಿ, ವಸ್ತುಸ್ಥಿತಿಯನ್ನು ಸಾರುತ್ತಲೇ ಇರುತ್ತದೆ-ಅದೇ ಕಾಲಕ್ಕೆ!

ಭಾರತೀಯರು ಧರ್ಮ ಸಹಿಷ್ಣುಗಳು, ಎಂದು ಸಿದ್ಧಪಡಿಸುವಾಗ ಅನುಕೂಲ ಪ್ರಮಾಣಗಳನ್ನೇ ಎತ್ತಿ ಹೇಳುವ ಚಟದಿಂದಾಗಿ ಸತ್ಯದ ಅವಜ್ಞೆಯಾಗುತ್ತಿದೆ, ಎಂಬ ಪ್ರಜ್ಞೆ ಮಸುಳಿಸಿಹೋಗಿದೆ! ಪ್ರತಿಯೊಂದು ಪಂಥೀಯರಲ್ಲಿ ತಮ್ಮ ದೈವತ, ತಮ್ಮ ಧರ್ಮಪ್ರೇಷಿತ ಹಾಗೂ ತಮ್ಮ ಧರ್ಮತತ್ತ್ವ ಇದುವೆ 'ಏಕಂ ಏವ ಅದ್ವಿತೀಯಂ' ಎಂಬ ಸರ್ವೋತ್ತಮತ್ವದ ಏಕಾಂತಿಕ ಶ್ರದ್ಧೆ, ಅಂತರಂಗದಲ್ಲಿ ಉಕ್ಕೇರುತ್ತಿರುವ ಧರ್ಮ-ಪಂಥಗಳ ಸಾಮಾಜಿಕ ಜೀವನದಲ್ಲಿ ಸಂಘರ್ಷಗಳೇ ತಲೆದೋರಿಲ್ಲ- ತಲೆದೋರಲಾರವು, ಎಂಬೀ ಗ್ರಹಿಕೆ ತೀರ ಬಾಲಿಶ ಬಾಲಭಾವದ್ದು, ಎಂದು ಎನಿಸಲಾರದೊ? 'ಯಂ ಶೈವಾಃ ಸಮುಪಾಸತೇ ಶಿವ ಇತಿ....' ಹೀಗೆ ಹಿಂದೂ, - ಛೇ ಎಲ್ಲಿದೆ 'ಹಿಂದೂ' ಎಂಬ ಏಕಾತ್ಮಕ ಪಂಥ? ಇದೂ ಒಂದು ಸುಖ ಸ್ವಪ್ನವೇ-ಅಲ್ಲ; ಶೈವ ವೈಷ್ಣವಾದಿಗಳು, ಮುಸಲ್ಮಾನ್ರ, ಕ್ರೈಸ್ತರು ಸಹ, ತಮ್ಮ ತಮ್ಮ ಓಣಿಗಳಲ್ಲಿ, ಗುಡಿಗುಂಡಾರಗಳಲ್ಲಿ ದೈವತೋಪಾಸಕರಾಗಿ ಸುಖವಾಗಿ ಬಾಳಲಿ; ಎಂಬ ಆಶಯದ ಒಂದು ಶಿಲಾಲೇಖ ದೊರೆಯುತ್ತದೆ. ಈ ಕಲ್ಬರೆಹದ ಅರ್ಥ ಏನು? ಈ ಪಂಥಗಳಲ್ಲಿ ಅಸಹಿಷ್ಣುತೆ-ಸ್ಪರ್ಧೆ ಇರಲಿಲ್ಲವೆಂದು ಇದರ ಅರ್ಥವಾಗುವುದಿಲ್ಲ. "(ಕಾದಾಟ ಬೇಡ;) ನಿಮ್ಮ ನಿಮ್ಮ ದೇವರನ್ನು ನೀವು ಆರಾಧಿಸಿ ನಿಮ್ಮ ಧರ್ಮದಲ್ಲಿ ಹೇಳಿರುವ ಐಹಿಕ-ಆಮುಷ್ಮಿಕ ಸುಖಾನಂದವನ್ನು ಪಡೆಯಿರಿ" ಎಂಬಲ್ಲಿ 'ಜನಗಳೇ ಕಚ್ಚಾಟ ಬೇಡಿ' ಎಂಬ ಮಾತು ಅಧ್ಯಾಹೃತವಿರುತ್ತದೆ, ಕಾದಾಟ-ಕಿರಿಚಾಟ ನಡೆಸುವ ಬೆಕ್ಕುಗಳನ್ನು ಒಂದೇ ಓಣಿಯಲ್ಲಿ ಇರಿಸಲಾರದ್ದಕ್ಕೆ ಬೇರೆ ಬೇರೆ ಕಡೆಗಳಲ್ಲಿ ಬಿಡಾರ ಕಲ್ಪಿಸಿಕೊಟ್ಟಂತಿದೆ. ಭಾರತೀಯ ಗ್ರಾಮ ರಚನೆಯೊಳಗಿನ ಒಂದೊಂದು ಜಾತಿ-ಪಂಥಕ್ಕೆ ಮೀಸಲಾದ ಓಣಿ-ಗಲ್ಲಿಗಳು, ಸ್ಪೃಶ್ಯರೆಂಬುವರಿಗೆ ಊರ ಓಣಿಗಳಲ್ಲಿ ಹಾಯಲಿಕ್ಕೂ ವಿರೋಧವಿರುವುದು ಯಾವ ಬಗೆಯ ಸಹಿಷ್ಣುತೆಯ ಲಕ್ಷಣ? 'ಹಾಗಾದರೆ ಬಿಳಿಯರು ನೀಗ್ರೋಗಳನ್ನು ದೂರ ಇಡುವುದಿಲ್ಲವೆ?' ಎಂದು ಕೆರಳಿ ಕೇಳುವವರುಂಟು. ಸರಿ; 'ನಾವು ಎಂದಿನಿಂದಲೂ ಧರ್ಮಕ್ಕಾಗಿ ದೇಶಾಭಿಮಾನದ ಬೆಲೆಯನ್ನು ಸಲಹೆ ತೆತ್ತಿದ್ದೇವೆ' ಎಂದು ಒಪ್ಪಿದರೆ ಆಯ್ತು; ಸರಿ. ಮತ್ತೆ, ನಿಜವಾದ ಇತಿಹಾಸವೆ ಇದು!

ದೇವತಾ ಪ್ರತಿಮೆಗಳಲ್ಲೂ, ದೈವತಗಳ ಪವಾಡ-ಕಥಾ-ನಿರ್ಮಾಣದಲ್ಲೂ ಇದೇ ಹಾಡಿನ ಪಲ್ಲವಿ ಕೇಳಬರುತ್ತಿದೆ. ಇಂತಹ ಕೆಲವು ಉದಾಹರಣೆಗಳನ್ನು, ಮಾದರಿಗಾಗಿ ಎತ್ತಿ ತೋರಿಸಿದ್ದಾಗಿದೆ. ಇದೇ 'ಶ್ರುತಿ' ವೇದದಲ್ಲೂ ಕೇಳಬರದಿದ್ದರೇ ಏನು ಸೋಜಿಗ! ಇಂದು ಬೆಳೆದು ನಿಂತಿರುವ ಗಿಡದ ಬೇರುಗಳು ನಿನ್ನೆಗಳ ಆಳದಲ್ಲಿ ದೂರದ ವರೆಗೆ ಹೋಗಿರಲೇಬೇಕು. ಇದರಲ್ಲಿ ಸಂದೇಹವೇನಿದೆ? ನಮಗೆ ನಮ್ಮ ನಿಜವಾದ ಸ್ವ-ಸ್ವರೂಪ ದರ್ಶನವು ಬೇಕಾಗಿಲ್ಲ. ಪಂಡಿತ್ ಜವಾಹರಲಾಲ್ ನೆಹರು, ತಮ್ಮ ಆತ್ಮಚರಿತ್ರೆಯ ಗ್ರಂಥವನ್ನು ಶೇರ್ ಗಿಲ್ ಎಂಬ ವಿಖ್ಯಾತ; ಚಿತ್ರಕಲಾ ಪರಿಣತ ವಿದುಷಿಗೆ ಕಾಣಿಕೆಯಾಗಿ ಕಳಿಸಿದ್ದರು. ಆ ಮಹಿಳೆ ಬರೆದ ಮಾರುತ್ತರ ಪಂ. ನೆಹರು 'ಬಂಚ್ ಆಫ್ ಲೆಟರ್ಸ್' ಸಂಗ್ರಹದಲ್ಲಿ ಪ್ರಕಟಿಸಿದ್ದಾರೆ. ಗಿಲ್ ಬರೆಯುತ್ತಾರೆ: ತಾನು ಸಾಮಾನ್ಯವಾಗಿ, ಯಾರ ಆತ್ಮಕಥೆಗಳನ್ನು ಓದುತ್ತಿರುವುದು ತೀರ ವಿರಳ. ಏಕೆಂದರೆ 'ಆತ್ಮಕಥೆ'- 'ಆತ್ಮಚರಿತ್ರೆ' ಎಂಬ ಹೆಸರಿನಲ್ಲಿ, ಆ ವ್ಯಕ್ತಿ ತನ್ನ ಕೃತಿಗಳ-ಕೃತ್ಯಗಳ ಮಂಡನ ಮಾಡುವ ಪ್ರವೃತ್ತಿಯವನಾಗುವುದು ಸ್ವಾಭಾವಿಕವಾಗಿದೆ. ತನ್ನನ್ನು ಜನರು ಯಾವ ಬಗೆಯಾಗಿ ನೋಡಬೇಕು, ಎಂದು ಆ ವ್ಯಕ್ತಿಯ ಇಚ್ಛೆ ಇದೆ, ಎಂಬುದು ಮಾತ್ರ ಅವರ ಆತ್ಮಚರಿತ್ರೆಗಳಿಂದ ಗೊತ್ತಾಗಬಲ್ಲುದು; ಹೊರತು, ಹೇಳಲಾರದ್ದನ್ನು ಬಚ್ಚಿಡುವ ಅಥವಾ ಬಣ್ಣಬಳಿದು ಹೇಳುವ ಸ್ವಭಾವದ ಮಾನವ ಪ್ರಾಣಿ ತನ್ನ ನಿಜಸ್ವರೂಪವನ್ನು ಚಿತ್ರಿಸಿರುತ್ತಾನೆ, ಎಂದು ನಾನು ಬಗೆಯಲಾರೆ. ನೀವೋ (ಪಂಡಿತರಿಗೆ) ಅಸಾಮಾನ್ಯ ಪುರುಷರು; ಆದಕಾರಣ ಅದನ್ನು ಸ್ವೀಕರಿಸಿ ಓದಲಪೇಕ್ಷಿಸಿದ್ದೇನೆ. ಆ ಮಾನಿನಿ ಶೇರ ಗಿಲ್ ಬರೆದ ಈ ಆಶಯವು ನಮ್ಮ 'ರಾಷ್ಟ್ರೀಯ' ಎಂಬ ಇತಿಹಾಸಗಳಿಗೂ ಅನ್ವಯಿಸುವುದಿಲ್ಲ, ಎಂದು ಬಗೆಯಲಾದೀತೆ? ಆದರೂ ಶುದ್ಧ ಜ್ಞಾನಜಿಜ್ಞಾಸೆಯ ಭೂಮಿಕೆಯಿಂದ ಶಕ್ಯವಿದ್ದಷ್ಟೂ ತಟಸ್ಥ ವೃತ್ತಿಯನ್ನು

ತಾಳುವ ಪ್ರಯತ್ನದಿಂದ ಮಾಡಲಾಗುವ ಇತಿಹಾಸ ಸಂಶೋಧನವು ವಾಸ್ತವಸತ್ಯಕ್ಕೆ ವಿದೂರವಾದೀತೆಂದು ಬಗೆಯಲು ಕಾರಣವಿಲ್ಲ. ಈ ಬಗೆಯ ಹಲವರ ಪ್ರಯತ್ನಗಳಿಂದ ಸಾಮಾನ್ಯ ಸ್ವರೂಪದ ಏನೊಂದು ನಿಶ್ಚಿತಜ್ಞಾನವು ಅಶಕ್ಯವೆಂದು ತೋರುವುದಿಲ್ಲ. ಶಕ್ಯವಿರುವಷ್ಟೂ ಶಾಸ್ತ್ರೀಯ ದೃಷ್ಟಿಯನ್ನು ಸ್ವೀಕರಿಸುವ ಸಿದ್ಧತೆಯು ಮಾತ್ರ ಬೇಕು.

ಪ್ರಮಾಣಗಳನ್ನು ಸರಿಯಾಗಿ ಅರ್ಥಯಿಸುವ ಶಾಸ್ತ್ರೀಯ ಪದ್ಧತಿಯು, ಇನ್ನೂ ರೂಢಿಗೆ ಬರುವುದರಲ್ಲಿದೆ. ಸತ್ಯವು ಸೂಕ್ಷ್ಮವೂ ಸಾಂಕೇತಿಕ ಸ್ವರೂಪದ್ದೂ ಆಗಿದೆ. ಆದುದರಿಂದ, ಅದನ್ನು ಗುರುತಿಸಿ ನಿರ್ಧರಿಸಿಕೊಳ್ಳುವುದು ತುಂಬ ತೊಡಕಿನ ಕೆಲಸವಾಗಿದೆ. ಮನುಷ್ಯನು ಮೊದಲ ಬಾರಿ, ಥಕ್ಕನೆ, ಒಳ-ಹೊರಗಿಲ್ಲದೆ ಆಡಿಬಿಡುವ ಮಾತನ್ನು, ಎರಡನೆಯಬಾರಿ ಉಚ್ಚರಿಸುವಾಗ, ಅದರೊಳಗಿನ ಕೊರತೆ, ಅನಿಷ್ಟಭಾಗ ಅರಿಕೆಗೆ ಬಂದಂತೆ ಎನಿಸಿ, ಮೊದಲು ಆಡಿಹೋಗಿರುವುದನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡುವುದು ಕಂಡುಬರುತ್ತದೆ. ಇದು ಸಾಮಾನ್ಯವಾಗಿ ಎಲ್ಲ ಮಾನವರ ಸ್ವಭಾವವೆ ಆಗಿದೆ. "When speaks the soul, alas, the soul no longer speaks," ಎಂದು ಒಬ್ಬ ವಿದ್ವಾಂಸನು ಆಡಿರುವ ಮಾರ್ಮಿಕ ಮಾತು, ಸಂಸ್ಮರಣೀಯವಾಗಿದೆ.

ಈ ಕಾರಣದಿಂದಾಗಿ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಘಟನೆಗಳ - ಉಲ್ಲೇಖಗಳ ಅರ್ಥವನ್ನು ಗ್ರಹಿಸಿಕೊಳ್ಳುವಾಗ ಮೈತುಂಬ ಕಣ್ಣು ಅವಶ್ಯ ಆಧುನಿಕ ಮನೋವಿಶ್ಲೇಷಣ ಶಾಸ್ತ್ರಜ್ಞರಿಗೂ ಈ ಅನುಭವವು ಬಂದಿದೆ. ತನ್ನ 'ಸ್ವ' - ರೂಪವನ್ನು -ಮನಸ್ಸಿನ ಆಕೃತಿಯನ್ನು-ಅರಿಯಲು ಬರುವ ಗಿರಾಕಿಯು ಹೇಳುವ ಮಾತುಗಳನ್ನು ಮನೋವಿಜ್ಞಾನಿಯು ಕೇಳಿಕೊಳ್ಳುತ್ತಾನೆ. ಆದರೆ, ಆ ವಾಕ್ಯಗಳನ್ನು ಕರ್ತೃ-ಕರ್ಮ-ಕ್ರಿಯಾಪದದ ಕ್ರಮದಲ್ಲಿ ಉದ್ದಕ್ಕೂ ನೋಡ ಹೋಗುವುದಿಲ್ಲ; ಆ ಗಿರಾಕಿಯು ಮೈಮರೆತು ಆಡುವ ಮಾತುಗಳಲ್ಲಿ ಕೆಲ ಬಾರಿ ಥಕ್ಕನೆ ನಿಜವಾದ ಸಂಗತಿ ಹೊರಬರುತ್ತಿರುತ್ತದೆ. ಅಥವಾ ಹೇಳುತ್ತಿರುವ ವಿವರಣೆಯು ಬಣ್ಣದ ನುಣ್ಣನೆಯ ಮಾತುಗಳ ಆವರಣದಲ್ಲಿ ಅಡಗಿಕೊಂಡಿರುವ ವಾಸ್ತವಾಂಶವು ಸೂಕ್ಷ್ಮರೂಪದಿಂದ ಮಿನುಗಿದಂತೆ ಎನಿಸುತ್ತದೆ. ಆದಕಾರಣ, ಮನೋವಿಶ್ಲೇಷಣ ಶಾಸ್ತ್ರಜ್ಞರು, 'ಸತ್ಯ'ವನ್ನು ಕಂಡು ಹಿಡಿಯುವ ಸಂಕೇತ : ಪ್ರತಿಮಾ ವಿಚಾರದ ಹೊಸತೊಂದು ತಂತ್ರವನ್ನು ರೂಢಿಸಿಕೊಳ್ಳುತ್ತಿದ್ದಾರೆ. ಇದು ಯಶಸ್ವೀ ಪದ್ಧತಿಯಾಗಿ-ಒಂದು ಶಾಸ್ತ್ರವಾಗಿ ಪರಿಣಮಿಸುವ ವಿಶ್ವಾಸವೂ ತಜ್ಞರಲ್ಲಿ ಉಂಟಾಗಿದೆ. ಪುರಾಣ ಕಥೆಗಳನ್ನು ತುಲನಾತ್ಮಕವಾಗಿ ಈ ಪದ್ಧತಿಯಿಂದ ಹಿಂಜಿ ಹಿಂಜಿ ಅವುಗಳ ಸಂದುಗಳಲ್ಲಿ ಅಡಗಿರುವ ವಾಸ್ತವಾಂಶಗಳನ್ನು ಬೆಳಕಿಗೆ ತರುವುದು ಶಕ್ಯವಿದೆ. ವೀರಭದ್ರನು ಬ್ರಹ್ಮನಿಗೆ ತಲೆದಂಡ ವಿಧಿಸುತ್ತಾನೆ. ವಿಷ್ಣುವಿನ ಪಾದದಿಂದ ಹೊರಟ ಜಲ, ಶಿವನ ತಲೆಯ ಗಂಗಾಸ್ರೋತವಾಗುತ್ತದೆ; ಬೌದ್ಧ ಪ್ರಸನ್ನ ತಾರೆ, ವಿಷ್ಣುವನ್ನು ಮೆಟ್ಟಿನಿಲ್ಲುತ್ತಾಳೆ... ಎಂದರೇನು? ಈ ದೇವರುಗಳ ಕಾದಾಟವೊ ಇದು? ಅಥವಾ ಆಯಾ ಮತೀಯರೊಳಗಿನ ಈರ್ಷ್ಯೆ-ಅಸೂಯೆಯ ಪ್ರದರ್ಶನವೊ? ಭೂರಿ ದಕ್ಷಿಣೆ ಕೊಟ್ಟು ಪಂಚಪಕ್ವಾನ್ನಗಳನ್ನು ನೀಡಿ ಗುರುವರ್ಗಕ್ಕೆ ತಣಿಸಿದಲ್ಲಿ ಮೋಕ್ಷವೊ-ಕೈವಲ್ಯವೊ ಸಿಕ್ಕುವುದು, ಎಂಬ ಈ ಬಗೆಯ ಉಪದೇಶದ ಅರ್ಥವು ಏನು?[೮]

ಭಗವದ್ಗೀತೆಯ ತಾತ್ಪರ್ಯದ ಸಮಸ್ಯೆಗೂ, ಈ ಬಗೆಯ ಅರ್ಥಪದ್ಧತಿಯಿಂದ, ಪರಿಹಾರವು ದೊರೆಯ ಬಲ್ಲುದಾಗಿದೆ: 'ನಿನ್ನನ್ನು ನೀನು ನಂಬು' ಇದಕ್ಕೆ ಪ್ರತಿಯಾಗಿ 'ನನಗೆ ಶರಣು ಬಾ' ಎಂಬ ಉಪದೇಶ; ಜೀವನವೂ ನಾನೇ, ಮೃತ್ಯುವೂ ನಾನೇ;' 'ಸತ್ ನಾನೇ ಅಸತ್ ನಾನೆ' ಎಂದರೆ ಈ ಬಗೆಯ ಉಭಯ ವಿಧ ಉಪದೇಶದ ಅರ್ಥವು ಏನು? (O) (ಶೂನ್ಯ). 'ಶೂನ್ಯ'-ಸಂಪಾದನೆಯೆ ಬಾಳಗುರಿ ಎಂಬ ಉಪದೇಶವು ಬಿಚ್ಚುಮಾತಿನ ಶೈಲಿಯದು. ಗೀತೆಯ ವ್ಯಾಮಿಶ್ರ ಅಪೂರ್ವ ಶೈಲಿ ಸಾಹಿತ್ಯಿಕ ಉಚ್ಚಮಟ್ಟದ್ದೆಂದು ಜಾಗತಿಕ ವಿದ್ವಾಂಸರೇ ಬೆರಗಾಗಿ ಹೊಗಳುತ್ತಿಲ್ಲವೆ?

ಜೀವನವು ಅರ್ಥಶೂನ್ಯವಿದೆ, ಮಾತ್ರವಲ್ಲ ಅನರ್ಥಕಾರಿಯೂ ಆಗಿದೆ, ಎಂಬುದನ್ನು ಭಾವುಕರ ಮನದ ಮೇಲೆ ಬಿಂಬಿಸುವ ಗೀತೆಯ ತಂತ್ರವು ಇನ್ನೂ ಸೂಕ್ಷ್ಮತಮ ಉನ್ನತ ಮಟ್ಟದಲ್ಲಿ ಋಗ್ವೇದ ಸಂಹಿತೆಯ ಇಂದಿನ ಪಾಠದಲ್ಲಿ ಪ್ರತೀತಿಗೆ ಬರುತ್ತದೆ! 'ನಾಗ-ಪ್ರತಿಮಾ ಪೂಜಾ ವಿಚಾರ'ದ ಈ ಪ್ರಬಂಧದಲ್ಲಿ ಭಗವದ್ಗೀತೆ, ಋಗ್ವೇದ

ಸಂಹಿತೆಗಳನ್ನು ಎಳೆದು ತರುವ ಕಾರಣವೇನು? ಎಂಬ ಆಕ್ಷೇಪವನ್ನು ಎತ್ತಬಹುದು. ಮೇಲ್ನೋಟಕ್ಕೆ ಈ ಆಕ್ಷೇಪವು ಸರಿ, ಎಂದೇ ಎನಿಸುವಂತಿದೆ. ಆದರೆ, ನಾಗಾರಾಧನೆಯ ಸಮಗ್ರಸಮೀಕ್ಷೆಯ ಸಂದರ್ಭದಲ್ಲಿ, ಗೀತೆಯಾಗಲಿ-ಋಗ್ವೇದವಾಗಲಿ ಈ ವಿಮರ್ಶೆಯ ಕಕ್ಷ್ಯೆಯ ಹೊರಗೆ ಉಳಿಯಲು ಶಕ್ಯವಿಲ್ಲ. ಈ ಮೊದಲೇ ಸೂಚಿಸಿರುವಂತೆ ಗೀತೆಯ 'ಭಗವಂತ' ಶ್ರೀ ಕೃಷ್ಣನು ನಾಗನೇ ಆಗಿದ್ದಾನೆ. ಆದಕಾರಣ, ಶ್ರೀಮದ್ ಭಗವದ್ಗೀತೆಯ ತಳಹದಿಯಲ್ಲಿ ನಾಗ : ಸರ್ಪ ತತ್ತ್ವಜ್ಞಾನವೇ ಇರಲಿಕ್ಕೆ ಬೇಕೆಂಬುದನ್ನು ಅಲ್ಲಗಳೆಯಲಿಕ್ಕೆ ಆಗುವುದಿಲ್ಲ 'ಕಾಲೋಽಸ್ಮಿ' ಎಂದು ತಾನೇ ಸಾರಿ-ಸಾರಿ ಹೇಳುತ್ತಿರುವ ವಿಷ್ಣು : (ಕೃಷ್ಣ), ಕಾಲ: ಸರ್ಪ ಎಂಬುದನ್ನು ಸಿದ್ಧಪಡಿಸುವ ಆವಶ್ಯಕತೆಯುಂಟೆ? ಇಷ್ಟರಿಂದಲೇ ಸಮಾಧಾನವಾಗದವರು ವಿಷ್ಣುವಿನ ಪರ್ಯಾಯ ನಾಮಾವಳಿಯನ್ನು ನೋಡಬಹುದು; 'ಅನಂತ': ಹಾವಿನ ರೂಪ; ಹಾವಿನ ಮೇಲೆ ಒರಗಿರುವ ವಿಷ್ಣುವನ್ನು ನಾನಾ ಚಿತ್ರ, ಮೂರ್ತಿ ರೂಪದಲ್ಲಿ ನೋಡಲು ದೊರೆಯುತ್ತದೆ.

'ವಿಷ್ಣು'ವಿನ ಮಾಯೆಯ ನೆಲೆ, ಯಾರಿಗೂ ನಿಲುಕಲಾರದು. ಶ್ರದ್ಧೆಯಿಂದ ವಿಷ್ಣುವು ನಾಗರೂಪನೆಂದೇ ಸಿದ್ಧವಾಗುತ್ತದೆ. 'ಕಾಲ-'ಸ್ವರೂಪನು, ಎಂಬ ಕಾರಣದಿಂದ ಕಾಲಕ್ಕೆ ತಕ್ಕಂತೆ ಬೇಕಾದ ರೂಪ ಆಕೃತಿಯಾಗಬಲ್ಲ ಸಾಮರ್ಥ್ಯವು ಈ ದೈವತ ಶಕ್ತಿಯಲ್ಲಿ ಉಂಟು, ಎಂದು ಅರ್ಥವಾಗುತ್ತದೆ. ನಾಗ : ನಾರ : ಆಪ, ಎಂಬ ಸಮೀಕರಣದಿಂದಲೂ ಈ ಮಾತು ದೃಢಪಡುತ್ತದೆ; ನೀರಿಗೆ ಒಂದು ನಿಶ್ಚಿತ ಆಕಾರವುಂಟೆ? ಒಟ್ಟಿನಲ್ಲಿ ನೀಲ ವರ್ಣ ಒಮ್ಮೊಮ್ಮೆ ಕಾಣುವುದು. ರುದ್ರನ ಕಂಠ ಮಾತ್ರ 'ನೀಲ' ಎಂದು ಸೂಕ್ಷ್ಮವಾಗಿ ಸೂಚಿತವಿದ್ದರೆ, ವಿಷ್ಣು-ಕೃಷ್ಣರು ಇಡಿಯಾಗಿಯೆ ನೀಲರು-ನೀರರು! ಈ ಸಾಂಕೇತಿಕ ಕವಿ-'ಸಮಯ'ದ ಸಂದರ್ಭದಲ್ಲಿ 'ನಾಗರು ಬೇಕಾದ ರೂಪ ವೇಷ ಧರಿಸಬಲ್ಲರು' ಎಂಬ ಒಂದು ಶ್ರದ್ಧೆಯ ರಹಸ್ಯಾರ್ಥವು ಬೆಳಕಿನಲ್ಲಿ ಬರುತ್ತಿದೆ. ವೊಗೆಲ್ ತನ್ನ ಸಂಶೋಧನದಲ್ಲಿ ಕಂಡ ಸತ್ಯವೂ ಇದೆ:

> The Nagas may assume various forms. Takshaka appears at one time as a naked mendicant, at another as an old Brahmin, and on a third occasion a little woman, his proper shape is that of a snake. They may adopt yet other forms beside those of men and beasts.[೬]

ನಾಗರು ಮೋಡಗಳಾಗಿ ಯಜ್ಞದ ಅಗ್ನಿಯನ್ನು ಆರಿಸಬಲ್ಲರು; ಯಾವುದೆ ಬಗೆಯ ರೂಪ ತಾಳಿ ಬೇಡವಾದವರಿಗೆ ವಿಘ್ನಕಾರಕವಾಗಿ ಕಾಡುವ ಶಕ್ತಿಯಾಗುವಂತೆ, ಒಲಿದವರಿಗೆ ವರಗಳನ್ನು ನೀಡುವ ದಿವ್ಯದೈವತ ಶಕ್ತಿ ಇದು, ಎಂಬ ಭಾವನಿಕ ಶ್ರದ್ಧೆಯು ಈ ನಾಗಾರಾಧನೆಯ ತಳಹದಿಯಲ್ಲಿ ಉಂಟು.

ಆದರೆ, 'ದೇವರ' ಹಾವು ಇಲ್ಲದ ಒಂದೂ ಪುರಾತನ ದೇಗುಲವಿಲ್ಲದ ಈ ಭಾರತೀಯ ಶ್ರದ್ಧೆಯು ಎಷ್ಟು ಪ್ರಾಚೀನ? ದೇವರ ಹಾವಿನ ಬಗೆಗೆ ಪ್ರವಾದ: ಪವಾಡಗಳು ಇದ್ದರೂ ಈ ಹಾವೇ ದೇವರು. ಮೂಲತಃ; ಯಾವ ಗ್ರಂಥದಲ್ಲಿ ಹುಡುಕಿದರೂ ನೇರವಾಗಿ ಇದನ್ನು ಒಪ್ಪಿಕೊಳ್ಳುವ ಪ್ರಮಾಣಗಳು ಮಾತ್ರ ದೊರೆಯುವುದಿಲ್ಲ! ಗ್ರೀಕ್ ಸಂಸ್ಕೃತಿಯ ಪೂರ್ವೋತ್ತರಗಳನ್ನು ಕಂಡುಹಿಡಿಯುವುದೂ, ಇದೇ ಬಗೆಯಲ್ಲಿ ತೊಡಕಿನದಾಗಿತ್ತು. ಆದರೆ ಜೇನ್ ಹ್ಯಾರಿಸನ್, ಗಿಲ್ಬರ್ಟ್‌ಮರ್ರೆ ಪ್ರಭೃತಿ ಸಂಶೋಧಕರ ಪ್ರಯತ್ನಗಳಿಂದಾಗಿ ಆ ಸಂಸ್ಕೃತಿಯ ಉದ್ಗಮದ ಪರಿಸರ ಹಾಗೂ ಬೆಳವಣಿಗೆಯ ಕ್ರಮವು ಈ ಬೆಳಕಿನಲ್ಲಿ ಬಂದಿದೆ. ಡೊಡ್ಡಸ್ ಎಂಬ ಮಹಾವಿದ್ವಾಂಸನು ಆ ಕಾರ್ಯವನ್ನು ಈಗ ಮುಂದುವರಿಸಿದ್ದಾನೆ. ಝುಪೂಸ್ ಎಂಬ ದೈವತದ ಮೂಲ ಸ್ವರೂಪವು ತೀರ ಸಂದಿಗ್ಧವಾಗಿತ್ತು. ಪವಾಡ ಕಥೆ ಕಾವ್ಯಾದಿಗಳಲ್ಲಿ ಕಾಣುವ ಬೌದ್ಧಿಕ ಪಾತಳಿಯ ಮೇಲಣ ಸುರಮ್ಯ ದೈವತ ಪ್ರತಿಮೆಗಳ ಮೂಲವು ಯಾವುದೊಂದು ವೃಕ್ಷ, ಪ್ರಾಣಿಯಲ್ಲಿ ಇದ್ದೀತೆಂಬ ಸಂಶಯ ಪಡಲು ಸಹ ಧೈರ್ಯವಾಗದ ಕಾಲವೊಂದಾಯ್ತು. ಆದರೆ, ಜಾನಪದ ಕಥೆ, ಧಾರ್ಮಿಕ ಆಚಾರವಿಧಿ, ಹಳ್ಳಿಗರಲ್ಲಿ ಇರುವ ಭಾವುಕ ನಂಬುಗೆಗಳು ಇವನ್ನೆಲ್ಲ ಸಂಗ್ರಹಿಸಿ ಆದ ತುಲನಾತ್ಮಕ ವಿಮರ್ಶೆಯಲ್ಲಿ ಒಂದೊಂದು ದೈವತ ಪ್ರತಿಮಾ ಸಂಕೇತಗಳ ಮೂಲ

ರೂಪವು ಅರಿಕೆಯ ಅಳವಿನಲ್ಲಿ ಬಂದಿತಲ್ಲದೆ, ಆ ಸಂಕೇತಗಳು ಕಾಲಕಾಲಕ್ಕೆ ಮಾರ್ಪಡುತ್ತ ನವೋನವರೂಪ ಆಕಾರಗೊಳ್ಳುತ್ತ ಬಂದ ಕ್ರಮವೂ ಈಗ ನಿಶ್ಚಿತವಾಗಿದೆ. ಈ ಸಂಶೋಧನದ ಸಂದರ್ಭದಲ್ಲಿ, ಗಿಲ್ಬರ್ಟ್‌ಮರ್ರೆ ತನಗೆ ಬಂದ ಒಂದು ಅನುಭವವನ್ನು ಸೂತ್ರ ರೂಪದಲ್ಲಿ ಹೇಳಿದ್ದು ಹೀಗೆ: 'ದೈವತದ ಪರ್ಯಾಯ ನಾಮ-ವಿಶೇಷಣ ಅದರ ಮೂಲ ಸ್ವರೂಪ-ಆಕೃತಿಯಾಗಿರುವ ಶಕ್ಯತೆಯಿದ್ದು, ಈಗಿನ ಆಕೃತಿ ರೂಪವು ಅರ್ವಾಚೀನ' ಎಂದು ಬಗೆಯಲು ಅಡ್ಡಿ ತೋರುವುದಿಲ್ಲ.

> .... attribute is original and god is added, the safest rule in all.[೧೦] 'A God with an epithet is always suspicious like a human being with an 'alias'..[೧೧]

ನಾಗಭೂಷಣ : ರುದ್ರ ; ಅನಂತ : ನಾರಾಯಣನು ವಿಷ್ಣು, ದುರ್ಗೆ, ಕಾಲಿ (: ಸರ್ಪಿಣಿ) ದೇವಿ ಈ ಪರ್ಯಾಯನಾಮಗಳು ನಮ್ಮ ದೈವತ ಪ್ರತಿಮೆಗಳ ಮೂಲ ಆಕೃತಿಯನ್ನು ಬೆಳಕಿನಲ್ಲಿ ತರುತ್ತಿವೆ ಎಂಬುದು, ಸಂಶೋಧನ ಪದ್ಧತಿಯ ಒಂದು ಆಧುನಿಕ ಸೂತ್ರ : ತಂತ್ರದಿಂದಲೂ ಹೀಗೆ ನಿರ್ಧರಿಸಲ್ಪಡುತ್ತಿದೆ.

ವಿಶ್ವಸ್ಥ 'ನಾಗ' ಶಕ್ತಿಯು ಯಾವ ಬೇಕಾದ ರೂಪ ತಾಳಬಲ್ಲುದು, ಎಂಬುದನ್ನು ವ್ಹೊಜೆಲ್ ವಿವರಿಸಿದ್ದುಂಟು. ಇದಕ್ಕೆ ನಮ್ಮ ದೈವತ ಪವಾಡಕಥೆಗಳ ಬೆಂಬಲವೂ ಇದೆ. ಈ ವಿಶ್ವದಲ್ಲಿರುವ ಯಾವ ಶಕ್ತಿಯು ತನ್ನ ಇಚ್ಛಾ ಮಾತ್ರದಿಂದ ಗಂಡೂ ಆಗಬಹುದು, ಹೆಣ್ಣೂ ಆಗಬಹುದು, ವೃಕ್ಷವಾಗಬಹುದು, ಜಲಚರ ಪ್ರಾಣಿಯಾಗಬಹುದು- ಹಾಗೂ ಈ ವರ್ಣನೆ, ಉಪನಿಷತ್ತುಗಳು 'ನೇತಿ ನೇತಿ' ಪರಿಭಾಷೆಯಲ್ಲಿ ಅಭಿಪ್ರೇತವಿರುವ ಅರ್ಥ ಇವೆರಡರಲ್ಲಿ ಅಂತರವು ಎಲ್ಲಿದೆ? ಇದು ನಿಜವಿದ್ದರೆ ಉಪನಿಷತ್ತುಗಳಲ್ಲಿ ವರ್ಣಿತ 'ಬ್ರಹ್ಮನ್' ಶಕ್ತಿ : ವಿಶ್ವಸ್ಥ ಮೂಲಾಧಾರ ಶಕ್ತಿ, ಎಂದರೆ ನಾಗ : ಸರ್ಪ ಅಲ್ಲವೆ? ಹಾವನ್ನು 'ಬ್ರಹ್ಮನ್' ಶಕ್ತಿ ಎನ್ನಲಾದೀತೆ? ಎಂದು, ಆಧುನಿಕ ವಿಮರ್ಶಾಬುದ್ಧಿ, ಸುಸಂಸ್ಕೃತರು ತಾವು ಎಂಬ ಪ್ರಜ್ಞೆ..... ಏನೆಲ್ಲ ವಿರೋಧ ತಲೆಯೆತ್ತಬಹುದು; ನಿಜ. ಆದರೆ ಸು-ಬ್ರಹ್ಮಣ್ಯ ಎಂಬ ದೈವತವು ಹಾವಿನ ರೂಪದಲ್ಲೆ ಉಂಟೆಂಬುದನ್ನು ಒಪ್ಪದಿರಲು ಶಕ್ಯವಿಲ್ಲ; ಏಕೆಂದರೆ ಈ ಸ್ಮೃತಿ ಇಂದಿಗೂ ಜೀವಂತವಾಗಿ ಉಳಿದಿದೆ!

ಉಪನಿಷತ್ತುಗಳಲ್ಲಿ 'ಬ್ರಹ್ಮನ್' ಕುರಿತು ಚರ್ಚೆ, ವಿವೇಚನೆಯೆ ತುಂಬಿಕೊಂಡಿದೆ, ಯೆಂದರೂ 'ಬ್ರಹ್ಮನ್' ವಿಚಾರದ ಮೂಲ 'ನೆಲೆ' ತಿಳಿಯದಂತೆ, ಏನೆಲ್ಲ ಹಂಚಿಕೆಗಳು ಅಲ್ಲಿವೆ! 'ಉಪನಿಷತ್' ಎಂಬ ಶಬ್ದ ಪ್ರತಿಮೆಯೆ ಪದರು ನುಡಿಯಾಗಿದೆ! ಉಪ(ಹತ್ತಿರ) ನಿಷತ್ (ಕುಳಿತು, ಕಿವಿಯಲ್ಲಿ ಹೇಳತಕ್ಕ ಗುಟ್ಟಿನ ವಿಷಯ), ಇದರಲ್ಲಿ ಗುಟ್ಟಿನ ಮಾತು ಇರಲೇಬೇಕಷ್ಟೆ? ಚರ್ಚೆ ಮಾಡಿದಂತೆ, ವಿವರಿಸಿ ಹೇಳಿದಂತೆ ಒಟ್ಟಿನ ರೀತಿಯುಂಟು. ಆದರೂ 'ತತ್ : ವನಂ'; 'ವನಂ' ಉಪಾಸನೆ ಮಾಡು, ಎಂಬ ಗೂಢಮಾತು : ಮುಂಡಿಗೆಯು ಕೇನೋಪನಿಷತ್ತಿನಲ್ಲಿ ಪಾಠಕರನ್ನು ಎದುರಿಸುತ್ತದೆ! 'ವನಂ' ಎಂಬುದಕ್ಕೆ ಏನು ಅರ್ಥ? ಗುರುವೇ ಹೇಳಬೇಕು. ಗುರು-ದೇವಿ : ಉಮಾ-ಮಾತೆ, ಕೇನೋಪನಿಷತ್ತಿನಲ್ಲಿ ಕಾಣಿಸಿಕೊಂಡಿದ್ದಾಳೆ.

ಈ 'ವನಂ' ಶಬ್ದ-ಪ್ರತಿಮೆಯು ಒಳಗೊಂಡಿರುವ ಚಿತ್ರವನ್ನು ನಿರ್ಧರಿಸಿಕೊಳ್ಳುವಲ್ಲಿ ಕೋಶಗಳ ಸಹಾಯವನ್ನು ಕೋರಿದರೆ ಅಡ್ಡದಾರಿಗೆ ಹೋಗುವ ಹೆದರಿಕೆ ಉಂಟು. ಕರ್ಣೋಪದೇಶಕ್ಕಾಗಿ, ಇಂದು ಈ ರಹಸ್ಯಾರ್ಥವನ್ನು ಜೀವಂತವಾಗಿ ಉಳಿಸಿಕೊಂಡು ಬಂದಿರುವ ದೇವ ಅಥವಾ ದೇವೀ ಸ್ವರೂಪ ಗುರುಮೂರ್ತಿ ದೊರೆಯಬಹುದೆ, ಎಂಬುದು ಸಂದಿಗ್ಧವಾಗಿದೆ. ಒಂದು ವೇಳೆ ಅಂತಹ ಗುರುಮೂರ್ತಿ ದೊರೆತರೂ ಅದು ಹೇಳಿದ್ದೇ ಕೊನೆಯ ಮಾತು, ಎಂದು ಕಣ್ಣು ಮುಚ್ಚಿ ನಂಬಬೇಕಾಗುವುದರಿಂದ, ಮರುಪ್ರಶ್ನೆಗೂ ಇಂಬಿಲ್ಲ. ಆದಕಾರಣ, ಈ ತತ್ : ವನಂ ಎಂಬುದರ ಅರ್ಥವನ್ನು ನಿರ್ಧರಿಸಿಕೊಳ್ಳುವ ಸುರಕ್ಷಿತ ಒಂದೇ ದಾರಿ, ಎಂದರೆ ಉಪನಿಷತ್ತು ಹಾಗೂ ವೇದದಲ್ಲಿ ಬರುವ 'ವನ', 'ಅರಣ್ಯ' ಈ ಪ್ರತಿಮಾ ಸಂಕೇತಗಳನ್ನು ಸಂಗ್ರಹಿಸಿ ಅವುಗಳ ತುಲನಾತ್ಮಕ ಸಮೀಕ್ಷೆ ಆಗಬೇಕಿದೆ. ಇದರಲ್ಲಿ ಅರಿಕೆಗೆ ಬರುವ ಅರ್ಥದ ಯುಕ್ತಾಯುಕ್ತತೆಯ ವಿಮರ್ಶೆಗಾಗಿ, ಸಾಂಪ್ರದಾಯಿಕ

ಪವಾಡ ಕಥೆ, ಗ್ರೀಕ್, ಈಜಿಪ್ಟ್ ಮೊದಲಾದ ಕಡೆಯ ದಿವ್ಯ ಪವಾಡಕಥೆ ಇವುಗಳ ನೆರವು ಪಡೆಯುವುದು ಲೇಸು ಅಲ್ಲವೆ?

'ಜಾತವೇದ'ನೆಂಬ ಅಗ್ನಿಗೆ, ಮಹಾಯೋಧ ಇಂದ್ರನಿಗೆ ಅರ್ಥವಾಗದ ಈ 'ವನಂ'! ಇದೇ 'ಯಕ್ಷ' ಈ ಉಪನಿಷತ್ತಿನ ಮುಖ್ಯ ಪಾತ್ರ. ಆನಂದಕುಮಾರ ಸ್ವಾಮಿ ಅವರು 'ಯಕ್ಷ' ವಿಚಾರವನ್ನು ಕುರಿತು ಎರಡು ಸಂಪುಟದ ಮಹಾಗ್ರಂಥ ಪ್ರಕಟಿಸಿದ್ದಾರೆಂದು, ಅನೇಕ ಸಂಶೋಧಕರ ಉಲ್ಲೇಖಗಳಿಂದ ಗೊತ್ತಾಗುತ್ತದೆ. 'ಯಕ್ಷ' ಎಂದರೆ ಮಹಾನ್ (ಯಹ್ವೀಃ) 'ದಿವ್ಯ' ಶಕ್ತಿ. ಇದು ಜಲಾಶಯ, ವೃಕ್ಷಕ್ಕೆ ಸಂಬಂಧಪಟ್ಟುದು, ಎಂದರೆ ಅಲ್ಲಿ ಇರುವಂತಹ ದಿವ್ಯಶಕ್ತಿ; ಈ ಸೂಚಕತೆಯಿಂದ 'ನಾಗ'; ಸರ್ಪದ ನಿರ್ದೇಶವೇ ಇದು. 'ನೀರೊಳಗಿನ ಅಗ್ನಿ' ಎಂಬ ಸಂಕೇತದಿಂದ ವೇದದಲ್ಲಿ ಬರುವ 'ಅಪಾಂ ನಪಾತ್' ತತ್ : ವನಂ-ಯಕ್ಷ ಬೇರೆ ಅಲ್ಲ.

ನೀರೊಳಗಿನ ಈ 'ಅಗ್ನಿ' ಇಡೀ ಋಗ್ವೇದದಲ್ಲಿ ಎಲ್ಲೆಲ್ಲೂ ಬರುತ್ತಾನೆ. ಆದರೆ ಇವನ ಈ ಸ್ವರೂಪವು ಸುಮಾರಾಗಿ ಬಿಚ್ಚಿಯೆ ಉಳಿದಿದೆ ಎಂದರೆ, ಅತಿಶಯೋಕ್ತಿಯಲ್ಲ. ಕಲೆಯ ಹಿರಿಮೆ ಅದನ್ನು ಬಚ್ಚಿಡುವುದರಲ್ಲಿದೆ, Art is in concealing art ಎಂಬ ಮಾತು ಋಗ್ವೇದದ ಇಂದಿನ ಸಂಹಿತಾ ಪಾಠಕ್ಕೆ ಸಂಪೂರ್ಣವಾಗಿ ಸರಿಹೋಗುತ್ತದೆ. ಕೇನೋಪನಿಷತ್ತಿನ 'ಯಕ್ಷ' ರೂಪೀ ಬ್ರಹ್ಮನ್, ಆ ಬಳಿಕ ಅದೃಶ್ಯನಾಗುತ್ತಾನೆ! ಯಾವ ಉಪನಿಷತ್ತಿನಲ್ಲೂ ಕಾಣುವುದಿಲ್ಲ. 'ಬ್ರಹ್ಮನ್' ಎಂಬ ಸಂಕೇತವು ಪ್ರಭಾವಶಾಲಿಯಾಗುತ್ತದೆ; 'ಯಕ್ಷ'ದಂತೆ 'ಪ್ರಜಾಪತಿ' ಈ ಸಂಕೇತವೂ ಬೇಗನೆ 'ಬ್ರಹ್ಮನ್' ಸಂಕೇತಕ್ಕಿಂತ ಗೌಣವಾಗುತ್ತದೆ. ಈ ಸ್ಥಿತ್ಯಂತರದ ಹಿಂದೆ ಯಾವ ವಿಶಿಷ್ಟ ಪಂಥೀಯರ ಕೈವಾಡವಿದೆ, ಎಂಬುದರ ಸಂಶೋಧನವೂ ಅವಶ್ಯವಿದೆ. ಅದಂತಿರಲಿ 'ಯಕ್ಷ' ಸಂಕೇತವೂ ಗೌಣವಾದುದು ನಿಜ. ಯಕ್ಷ, ಯಕ್ಷಿ, ಕಿನ್ನರ, ಕಿಂಪುರುಷಾದಿ ಕ್ಷುದ್ರವರ್ಗದ ಶಕ್ತಿಗಳಲ್ಲಿ ಎಣಿಸಲ್ಪಡುತ್ತದೆ. ಸರ್ಪಗಳು 'ದೇವ'-ಜನ, ಎನಿಸಿದರೆ ಯಕ್ಷರು 'ಪುಣ್ಯ' ಜನರಾಗಿ ಉಳಿಯುವುದು ಕಾಣುತ್ತದೆ.

'ಬ್ರಹ್ಮನ್' ಸಂಕೇತವು ವೇದಾಂತದ ಭೂಮಿಕೆಯಲ್ಲಿ ತನ್ನ ಪರಮ ಪದವನ್ನು ಎಂತೂ ಉಳಿಸಿಕೊಂಡಂತೆ ತೋರುತ್ತದೆ. ಆದರೆ, ವಾಸ್ತವದಲ್ಲಿ ರುದ್ರ, ಶಿವ, ಶಕ್ತಿಗಳಿಗೆ ಇರುವ ಬೆಲೆ 'ಬ್ರಹ್ಮನ್' ಸಂಕೇತಕ್ಕೆ ಉಳಿದಿಲ್ಲ. ಗಣಿತ ಪದ್ಧತಿಯ ಶುದ್ಧ ತಾರ್ಕಿಕ ಭೂಮಿಕೆಯಲ್ಲಿ ಬ್ರಹ್ಮನ್ ನಪುಂಸಕ ಲಿಂಗದ ಒಂದು ಪ್ರತಿಮೆ- ಕಲ್ಪನೆ ಅವಶ್ಯವಾಗುತ್ತದೆ. ಅದರಿಂದಾಗಿ ಅಂತೂ 'ಬ್ರಹ್ಮನ್' ನಾಮ ಮಾತ್ರಕ್ಕೆ ಉಳಿಯಬೇಕಾಗಿದೆ. 'ಬ್ರಹ್ಮ'ತತ್ತ್ವ ಪ್ರತಿಪಾದಕ ಆಚಾರ್ಯರು ತಾರಕಮಂತ್ರವೆಂದು ಸ್ವೀಕರಿಸುವುದು 'ನಾರಾಯಣ' ನಾಮವನ್ನೇ ಶೈವರಲ್ಲೂ ಅಷ್ಟೆ; 'ತತ್; ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ'.... ವೀರಶೈವರಲ್ಲಿ 'ಬಸವ' ಎಂಬುದೇ ತಾರಕಮಂತ್ರ. ಚಾರಿತ್ರಿಕ ಅಲ್ಲಮ-ಬಸವರಲ್ಲಿ, ಅಲ್ಲಮನು ಪ್ರಭು; ಆಚಾರ್ಯಪುರುಷ, ಆದರೂ ತಾರಕ ಮಂತ್ರವಾಗಿ 'ಅಲ್ಲಮ'ನಾಮ ಪ್ರಚಲಿತವಿಲ್ಲ, ಎಂದು ದಿವಂಗತ ಪ್ರೊ. ಶಿ. ಶಿ. ಬಸವನಾಳರೊಡನೆ ಆದ ಚರ್ಚೆಯಲ್ಲಿ ನನಗೆ ತಿಳಿದು ಬಂದಿತು. ಋಗ್ವೇದದಲ್ಲಿ ಬರುವ 'ವೃಷಭ' (ರುದ್ರ), 'ವೃಷ್ಣಿ' (ವಿಷ್ಣು-ನಾರಾಯಣ) ಈ ಪ್ರತಿಮಾ ಸಂಕೇತಗಳ ಸಮೀಕ್ಷೆಯಲ್ಲಿ ಪ್ರೊ. ಬಸವನಾಳರ ಅಭಿಪ್ರಾಯದ ಯಥಾರ್ಥತೆಯ ಮನವರಿಕೆಯಾಯಿತು. 'ನಾಗರು ಮೋಡಗಳ ರೂಪ ತಾಳಿ ಮಳೆ ಸುರಿಸಬಲ್ಲರು', ಎಂಬ ಕಥಾಭಾಗವನ್ನು ವ್ಹೊಜೆಲ್ ಹೇಳಿದ್ದಾರೆ. ಮರುತರು: ರುದ್ರಿಯರು, ಇವರ ಮಾತೆ ಪೃಶ್ನಿ : ಗೌ ಇವರು 'ವರ್ಷಯಿತೃ'ಗಳು ಆಪ : ರಸ ಸ್ರವಿಸುವ ಪ್ರತಿಮಾ : ಸಂಕೇತಗಳು. ವೃಷ್ಣಿಯೂ ವರ್ಷಯಿತೃವೇ. ಇವು 'ಅಪಾಂ ನಪ್ತೃ' ಎಂಬ ಅತಿ ಪುರಾತನ ಸಂಕೇತದ ಪರ್ಯಾಯ ರೂಪಗಳು. ಋಗ್ವೇದದ ಸಂದರ್ಭದಿಂದ ಹೇಳುವುದಾದರೆ 'ಬ್ರಹ್ಮನ್' ಸಂಕೇತವು ಖಾಸಾ ಅಗ್ನ್ಯಾರಾಧಕರದು. ಯಜ್ಞ ಕಾಲದಲ್ಲಿ ನಡೆವ ಮಂತ್ರ ಪಾಠಾದಿ ಎಲ್ಲ ಕಾರ್ಯಗಳ ಮೇಲ್ವಿಚಾರಕನಂತೆ ಇರುವ ಅಧ್ವರ್ಯುವು 'ಬ್ರಹ್ಮನ್' (ಪುಲ್ಲಿಂಗ) ಆಗುತ್ತಿದ್ದನು. ವೈದಿಕ ಮಂತ್ರಶಕ್ತಿಯ ಜೀವಂತ ಪ್ರತಿಮೆ ಈ ಬ್ರಹ್ಮನ್. ವೇದ ಮಂತ್ರಗಳಿಗೆ ಬ್ರಹ್ಮನ್ ಎಂಬ ವಾಡಿಕೆಯಿದೆ. ಬೃಹ-ಬೃಹತ್; ವೃದ್ಧಿಂಗತವಾಗು, ಮಹಾನ್ ಆಗು, ಎಂಬ ಭಾವಾರ್ಥವು ಮೂಲದಲ್ಲಿದೆ. ಅಗ್ನಿಯೊಳಗಿನ ತೇಜಸ್ಸಿನ ವಿಶ್ವವ್ಯಾಪಿ ಮೂಲತತ್ತ್ವದ ದೈವತ ಎಂಬ ರೀತಿಯಲ್ಲಿ ಬ್ರಹ್ಮಣಸ್ಪತಿ-ಬೃಹಸ್ಪತಿ ರೂಢಿಗೆ

ಬಂದಿರಬೇಕು. ಆದರೆ, ಒಂದೇ ಅರ್ಥದ ಎರಡು ಪ್ರತಿಮೆಗಳು ತಲೆದೋರಿರುವಲ್ಲಿ, ಏನೋ ಒಂದು ತಗಲು-ಕವಡು ಕಾರಣವಿರಬೇಕೆಂದು ಊಹಿಸಲೇಬೇಕಾಗುತ್ತದೆ. ಏನೂ ಅರ್ಥವ್ಯತ್ಯಾಸವಿಲ್ಲದೆ ತೀರ ಸಮಾನಾರ್ಥದಲ್ಲಿ ಎರಡು ಪದಗಳು ಬಳಕೆಯಲ್ಲಿ ಇರಲು ಶಕ್ಯವೇ ಇಲ್ಲ; ಹಾಗೆ ಉಂಟು, ಎಂದು ತೋರಿಸುವ ಹಟವು ಕಾಣಿಸಿಕೊಳ್ಳುವಲ್ಲಿ, ಏನೋ ಒಂದು ಸಂಭ್ರಮಕ್ಕೆ ಅವಕಾಶವನ್ನು ಕಲ್ಪಿಸಲಾಗುತ್ತಿದೆ, ಎಂಬ ಸಂದೇಹವು ಉಂಟಾಗದಿರದು. ಉಪನಿಷತ್ಕಾಲದಲ್ಲಿಯೆ 'ಬ್ರಹ್ಮನ್' ಪದದ ಜೊತೆಗೆ 'ಪುರುಷ' ಎಂಬ ಸಂಕೇತವೂ ಸ್ಪರ್ಧಿಸುತ್ತಿರುವುದನ್ನು ಕಾಣಬಹುದು. ಕೊನೆಗೆ ಪುರುಷ-ಬ್ರಹ್ಮನ್ ಇವೂ ಹಿಂದೆ ಬೀಳುತ್ತವೆ. ವಿಷ್ಣು ಮತ್ತು ರುದ್ರ ಇವರೇ ಜೀವನ ರಂಗದ ಕಣದಲ್ಲಿ ಇಂದು ಕಾಣುತ್ತಿದ್ದಾರೆ. ಬ್ರಹ್ಮನು ಭರಮಪ್ಪನಾಗಿ ಎಲ್ಲೊ ಮೂಲೆಗುಂಪಾಗಿದ್ದಾನೆ.

ಆದರೆ, ಹೀಗೆ ನಾಮಮಾತ್ರವಾಗಿ ಉಳಿಯಬೇಕಾಗಿ ಬಂದ ಭರಮ<ಬ್ರಹ್ಮ ಇವನೂ ಅಂತರಂಗದಲ್ಲಿ ನಾಗನೆ! ಆದರೆ ಈ ಪ್ರತಿಮೆಯ ಬಾಹ್ಯ ಶಬ್ದ-ಸಂಕೇತವು ಅಗ್ರ್ಯಾರಾಧಕ ಸೌರರದು! ವಿಷ್ಣು-ರುದ್ರರ ನಾಗತ್ವದ ಬಗೆಗೆ ಪ್ರಶ್ನೆಯೆ ಉಳಿಯುವುದಿಲ್ಲ. ಹತ್ತು ಬಗೆಗಳಿಂದ ಇದು ಸಿದ್ಧವಾಗುತ್ತದೆ. ಆದರೆ, ಈ 'ಬ್ರಹ್ಮನ್' ಯಾರು? ಇವನೂ ನಾಗನೇ? ಎಂದು ಎನಿಸುವಂತಿದೆ. ಆದರೆ, ಪ್ರತಿಮಾ : ಸಂಕೇತಗಳ ಮೂಲಕ ಈ ಭರಮನೂ ನಾಗನೇ ಎಂಬುದು ನಿಃಸಂದಿಗ್ಧವಾಗಿ ಅರಿಕೆಗೆ ಬರಬಲ್ಲದು. ಈ ಪ್ರತಿಮಾ: ಸಂಕೇತಗಳ ಪೂರ್ವೋತ್ತರಗಳನ್ನು ಸ್ಮರಿಸಿಕೊಂಡಲ್ಲಿ. ಇಂದು ಪ್ರಚಲಿತವಿರುವ ದೈವತ ಪ್ರತಿಮೆಗಳಲ್ಲಿ ಬ್ರಹ್ಮ-ವಿಷ್ಣು-ಮಹೇಶ್ವರ ಎಂಬ ಈ ದೇವತಾತ್ರಯಕ್ಕೆ ಅನನ್ಯ ಸಾಧಾರಣವಾದ ಸಾಂಸ್ಕೃತಿಕ ಮಹತ್ವವಿದೆ. ಬ್ರಹ್ಮನ್ : ನಿರ್ಮಾತೃವು: ವಿಷ್ಣು : ಸಂರಕ್ಷಕನು; ರುದ್ರ-ಮಹೇಶ್ವರ: ಸಂಹಾರಕನು. ಸೃಷ್ಟಿಯಲ್ಲಿ ಕಾಣುವ ಈ ಮೂರೂ ದಿವ್ಯಶಕ್ತಿಗಳು. ಇವುಗಳಲ್ಲಿ, ಪರಸ್ಪರಾವಲಂಬಿತ್ವದ ಮೂಲಕ ; ಆತ್ಯಂತಿಕ ತಾರತಮ್ಯವನ್ನು ಕಲ್ಪಿಸಲು ಆಗುವುದಿಲ್ಲ. ರಾಷ್ಟ್ರಕೂಟರ ಕಾಲದ ತ್ರೈಪುರುಷ ದೇವಾಲಯಗಳಲ್ಲಿ ಸೂರ್ಯನು ಒಮ್ಮೊಮ್ಮೆ ಸೇರಿಕೊಳ್ಳುತ್ತಿದ್ದರೂ ಸುಮಾರಾಗಿ ಈಗಣ ದೇವತಾ ತ್ರಯಕ್ಕೆ ಪ್ರಾಶಸ್ತ್ಯವಿತ್ತು. ಇವರನ್ನು ಒಂದೇ ಸಾಲಿನಲ್ಲಿ-ಎಂದರೆ ಸಮಾನ ಪಾತಳಿಯಲ್ಲಿ ಇರುವ ಮೂರು ಗುಡಿಗಳಲ್ಲಿ ಸ್ಥಾಪಿಸಲಾಗುತ್ತಿತ್ತು. ಆದಕಾರಣ, 'ತತ್' ತ್ವತಃ ಇವು ಮೂರೂ ಅಭಿನ್ನ, ಎಂದೆ ಹೊರಪಡುತ್ತದೆ. ಆದುದರಿಂದ, ರುದ್ರ-ವಿಷ್ಣುಗಳಲ್ಲಿ ಯಾರು ಒಬ್ಬರನ್ನು 'ನಾಗ' ಎಂದರು ಅವನು ನಾಗನೇ ಆಗುತ್ತಾನೆ.

ಜಲಶಾಯಿ ನಾರಾಯಣ-ವಿಷ್ಣು ಪ್ರತಿಮೆಯ 'ನಾಭಿ' ಕಮಲದಲ್ಲಿ ಹುಟ್ಟುವ ಬ್ರಹ್ಮನು, ನಾರಣರೂಪನು ಎಂದರೆ, ನಾಗರೂಪನೇ ಸರಿ. ಋಗ್ವೇದದ ಪ್ರಜಾಪತಿಯೆ, ಆ ಬಳಿಕ ಬ್ರಹ್ಮನ್ ಎನಿಸುತ್ತಾನೆ. ಅಲ್ಲಿ ಪ್ರಜಾಪತಿ, ಆಪ : ರಸ ಸ್ವರೂಪಿಯಾಗಿರುವ ಬಗೆಗೆ ಭಿನ್ನಾಭಿಪ್ರಾಯಗಳಿಲ್ಲ. ನಾರ : ಆಪ ಸಂಕೇತವು ರಸ :ರೇತ ಎಂಬ ಅರ್ಥವುಳ್ಳದು. ಆ ಕಾರಣದಿಂದ ಋಗ್ವೇದದ 'ಆಪ: ರಸ ಅಥವಾ 'ಮಧುಮತ್ ಪಯಸ್' ಇದು ವೇದದಲ್ಲಿಯೆ ಮೆಲ್ಲನೆ 'ಪುಷ್ಕರ'- ಪದ್ಮ, ಕಮಲವಾಗಿ ರೂಪ-ಆಕೃತಿ ಬದಲಿಸಿಕೊಳ್ಳುತ್ತದೆ. 'ನಾಗ'ವು ಬೇಕಾದ ವೇಷ ಧರಿಸಬಲ್ಲುದು, ಎಂಬ ಮೂಲಶ್ರದ್ಧೆಯನ್ನು ಮರೆತರೆ ಈ ಆಪ : ರಸ ಸಂಕೇತ : ಪ್ರತಿಮೆಗಳ ಸ್ವಾರಸ್ಯದ ಅಂತರಾರ್ಥಕ್ಕೆ ಎರವಾಗಬೇಕಾಗುತ್ತದೆ. ಈ ರಹಸ್ಯಾರ್ಥವನ್ನು ಶತಪಥ ಬ್ರಾಹ್ಮಣವೆ ಬಯಲಿಗೆ ತರುತ್ತಿದೆ: ಆಪೋ ವೈ ಪುಷ್ಕರಂ (೬-೪-೨೨; ೭-೪-೧.೮). 'ಆಪೋ ವೈ ಪ್ರಜಾಪತಿಃ-ಪರಮೇಷ್ಠೀ' ಎಂದು ವಾಜಸನೇಯ ಸಂಹಿತೆ ಹೇಳುತ್ತಿದೆ! (೧೪.೯). ಈ ಪ್ರಜಾಪತಿ : ಬ್ರಹ್ಮನ್ ಸೃಜನಶಕ್ತಿಯ ದೈವತ ಎಂಬ ಬಗೆಗೆ ಸಂದೇಹ ಪಡಬೇಕಾಗಿಲ್ಲ.

'ದಿವ್ಯ' ಪವಾಡ ಕಥೆಗಳನ್ನು ಅರ್ಥಯಿಸುವಾಗ, ಅದಕ್ಕೆ ಆ ಜನಜೀವನದ ಧಾರ್ಮಿಕ ಹಾಗೂ ಸಾಮಾಜಿಕ ಆಚಾರಾಂಗದಲ್ಲಿ (Ritual) ಸ್ಥಾನವಿರುವುದನ್ನು ತೋರಿಸಲು ಶಕ್ಯವಾಗದ ವಿವರಣೆ, ಅಷ್ಟರ ಮಟ್ಟಿಗೆ ಊನ-ಕುಂಟ ಎಂದು ಗ್ರಹಿಸಬೇಕಾಗುತ್ತದೆ. ಆದರೆ, ಈ 'ಭರಮ'ಪ್ಪನ ಒಂದು ಪರ್ವ>ಹಬ್ಬ, ಸ್ವಾರಸ್ಯಕರವಾದ ರೀತಿಯಲ್ಲಿ ಪ್ರತಿ ವರುಷವೂ ಆಚರಿಸಲ್ಪಡುತ್ತದೆ. ಇದುವೆ ದೀವಳಿಗೆಯ ಆರಂಭದ 'ನೀರು ತುಂಬುವ' - ಎರಕೊಳ್ಳುವ ಹಬ್ಬ. ಆಶ್ವೀನ ವದ್ಯ ತ್ರಯೋದಶಿ : ಧನ ತ್ರಯೋದಶಿ : (ಧನ=ಪುರುಳ್, ಹುರುಳು). ಅಂದಿನ ಇರುಳು,

ಸ್ನಾನಗೃಹದ ಒಲೆಯ ಮೇಲಣ ಹಂಡೆ ಲಕಲಕಿಸುವಂತೆ ತಿಕ್ಕಿ, ಒಲೆಯ ಮೇಲಿಟ್ಟು ನೀರು ತುಂಬುವರು. ಹಂಡೆಪೂಜೆಯಾಗಬೇಕು. ಜಲಪೂರ್ಣ : 'ಸಲಿಲ' ಪೂರ್ಣ ಈ ಪಾತ್ರೆಯೆ ಭರಮ>ಬ್ರಹ್ಮನ ಸಂಕೇತ. ಈ ಸಂಕೇತದ ಸಂದಿಗ್ಧತೆಯನ್ನು ಹೋಗಲಾಡಿಸುವ ಇನ್ನೊಂದು ಸಾಂಕೇತಿಕ ಕ್ರಿಯೆಯುಂಟು : ಈ ಭರಮ>ಬ್ರಹ್ಮನಿಗೆ (ಸಲಿಲ ಪಾತ್ರೆಗೆ) ಮಹಾಲಿಂಗದ ಬಳ್ಳಿಯನ್ನು ತಂದು ಸುತ್ತುವುದು ಒಂದು ವಾಡಿಕೆ. ಆ ಬಳಿಕ ಪೂಜೆ. ಮಹಾಲಿಂಗನ ಔಚಿತ್ಯವನ್ನು ಮನಗಾಣಲು ಇದರ ಕಾಯಿಗಳಲ್ಲಿರುವ ಬೀಜದ ಆಕೃತಿಯನ್ನು ನೋಡಲೇಬೇಕು. ಸೃಜನಶಕ್ತಿಯ 'ಆಪ' : 'ಸಲಿಲ ಇದು. 'ಸಲಿಲ' ಇದು 'ಸರಿರ' ಎಂದೂ ವ್ಯವಹರಿಸುತ್ತಿದ್ದು, ಇದಕ್ಕೆ 'ಶರೀರ' ಎಂಬ ಅರ್ಥವಾಗುವ ಹಾಗಿನ ಪ್ರಯೋಗಗಳೂ ಸಿಕ್ಕುತ್ತವೆ- ಪ್ರಾಚೀನ ಸಾಹಿತ್ಯದಲ್ಲಿ!

ಈ ಪರ್ವಕ್ಕೆ (ಪರ್ವ : ಸಂಧಿ) ಅಳಿಯನನ್ನು, ದೀವಳಿಗೆಯ ಹಿಗ್ಗಿಗಾಗಿ ಆಮಂತ್ರಿಸುವ ವಾಡಿಕೆ-ಮದುವೆಯ ಮೊದಲ ವರುಷದಲ್ಲಂತೂ! ಆತನಿಗೆ 'ಪಾಯಸ'<ಪಯಸ್ ಊಟದಲ್ಲಿ ಆಗಲೇ ಬೇಕು! (ಮಧು-ಮತ್-ಪಯಸ್ಸಿನ' ಈ ಹಬ್ಬವನ್ನು ಆಚರಿಸುವಲ್ಲಿ ಇರುವ 'ಜೀವನ' ಸ್ವಾರಸ್ಯ ಅದೆಷ್ಟೆಂದು ಹೇಳಬೇಕು! "(ಮಾನಾಮಿಯಂ) ದೀವಳಿಗೆಯಂ ಮಾಡೆನೆ?" ನಿನಗೆ ಎಂದು ಒಬ್ಬ ನಲ್ಲೆ, ನಲ್ಲನಿಗೆ ಎಂದಿರುವುದಾಗಿ ಪಂಪನು ಆಡಿಸಿರುವ ಈ ಮಾತಿನ ಆ ಮಧುರ ಸಂದರ್ಭವು ಔಚಿತ್ಯಪೂರ್ಣವಾಗಿದೆ. ಈ 'ಪುರುಳಿನ' ಧನ ತ್ರಯೋದಶಿಯ ಮುನ್ನಾದಿನ 'ವಸು'- ದ್ವಾದಶಿ: ಸ-ವತ್ಸ ಗೋಪೂಜೆ. ಅಂದು ಗೋ-ಧೂಳಿಯ ಸಂಧ್ಯಾಸಮಯದಲ್ಲಿ ಗೃಹಿಣಿಯರಿಂದ ಸಾಂಗವಾಗಿ ಜರುಗಲೇಬೇಕು; ಇಲ್ಲಿ 'ಸ-ವತ್ಸ'-ಗೋ ಇರಲೇಬೇಕಾಗಿರುವುದರೊಳಗಿನ ಸು-ಸಂಬದ್ಧತೆ, ಸುಸಂಗತಿ: ಈ ಅರ್ಥ : ಆಚಾರ-ವಿಚಾರದೊಳಗಿನ ಹೆಣಿಕೆಯ (texture) ಈ ಕುಸುರಿ, ಸಂಸ್ಕೃತ ಜೀವನದ ಈ ಕಟ್ಟಡ (Structure), ನಿತಾಂತ ರಮಣೀಯವಾಗಿಲ್ಲವೆ? ಜೀವನದೊಳಗಿನ ಈ ಅರ್ಥ : ಮೂಲ್ಯ: ಸೌಂದರ್ಯಾನುಭೂತಿಯು, ಇದೇ ಕಾಲಕ್ಕೆ ಸ್ಮಶಾನ-ಮರಣ-ಸಂಕಟಗಳ ಸ್ಮರಣದಿಂದ ಅಳಿದೀತೇ? ಉಳಿದೀತೆ? ಮಂಗಲ ಅಮಂಗಲಗಳನ್ನು ಒಂದೇ ಕಾಲಕ್ಕೆ ಒಂದೆಡೆಗೇ ಜಗುಲಿಯ ಮೇಲಿಟ್ಟು ಆರಾಧಿಸುವುದು? ಯುಕ್ತವೆ? ಎಂಬ ಪ್ರಶ್ನೆ, ಈ ನಾಗಾರಾಧನೆಯ ಯುಕ್ತಾಯುಕ್ತತೆಯ ಸಂದರ್ಭದಿಂದ ಅಡಿಗಡಿಗೂ ತಲೆಯೆತ್ತುತ್ತದೆ.

'ವಸು'-ದ್ವಾದಶಿಯ ಸಂವತ್ಸ ಗೋಪೂಜೆಯಿಂದ ಪ್ರಾರಂಭವಾಗುವ ಈ ಹಬ್ಬ; ಧನ-ತ್ರಯೋದಶಿ ಅಂದಿನ 'ಸಲಿಲ'ಪೂರ್ಣ ಪಾತ್ರದ ಸಾಂಕೇತಿಕ ಆರಾಧನೆ; ಆ ಬಳಿಕ ಅಮಾವಾಸ್ಯೆಯಂದು, ಶುದ್ಧಪ್ರತಿಪದೆಯಂದು (ಶಿನೀವಾಲೀ: ಪ್ರತಿಪದೆಯ ಚಂದ್ರ; ಮಿಡಿನಾಗ) ವೃಷಭ (: ವರ್ಷಯಿತೃ) ದೇವನ ಪೂಜೆ ; ಹೋರಿ-ಎತ್ತುಗಳನ್ನು ಅಲಂಕರಿಸಿ, ಪೂಜಿಸಿ, ಸಂಜೆಗೆ ಊರಲ್ಲಿ ಮೆರವಣಿಗೆ ಮಾಡುವ ರೂಢಿಯೂ ಹಲವೆಡೆಗೆ ಉಂಟು. ಮಾನವ ಸಮಾಜದ ವಿಕಾಸಕ್ರಮದಲ್ಲಿ, ಪಶುಪಾಲನ ವೃತ್ತಿ : ಗೋವಳಿಕೆ ಗೊತ್ತಾಗುವ ಮೊದಲು ಆಡು-ಕುರಿಗಳನ್ನು ಸಾಕುವುದು ತಿಳಿದಿತ್ತು; ಕುರುಂಬಿಕೆಗೂ ಮುಂಚಿನ ಹಂತವು ಆಡಿನದಾಗಿರಬೇಕೆಂದು ಕಾಣುತ್ತದೆ. ನವರಾತ್ರಿ-ದೀವಳಿಗೆಯ ಈ ಪರ್ವದಲ್ಲಿ, ಗೋ ವೃಷಭ ಹೆಚ್ಚು ಪ್ರಯೋಜನಕಾರಿಯೆಂಬುದು ತಿಳಿದ ಬಳಿಕ ಅವುಗಳ ಪೂಜೆಯೆ ಪ್ರಧಾನವಾಯಿತು. ಕಂನುಡಿಯ ಕುರುಂಬ-ಧನಗರ-ದನಗಾರ, ಸಂಕೇತದಲ್ಲಿ ಈ ಸ್ಥಿತ್ಯಂತರದ ನೆನಹು ಅಚ್ಚಳಿಯದೆ ಮೂಡಿನಿಂತಿದೆ ದನಗಾರರು ದನಗಳನ್ನು ಪೂಜಿಸುವಂತೆ ಆಡಿನವರು-ಕುರುಬರು ತಮ್ಮ ಸಾಕುಪ್ರಾಣಿಗಳ ಪೂಜೆಗೈಯ್ಯುವರು. ವೃಷ್>ವರ್ಷ್: ಜೀವನದಾಯಿ ಸತ್-ತ್ವವನ್ನು ಎಲ್ಲ ಹಂತದಲ್ಲೂ ದಯಪಾಲಿಸುವ ಕ್ರಿಯಾಶಕ್ತಿ ಇದು. ಧನ ಇದೂ ಪುರುಳೇ, ಜೀವನ ಶಕ್ತಿಗೆ ಪೋಷಕವಾದುದರಿಂದ ಲಕ್ಷ್ಮೀಪೂಜೆಯ ಪ್ರಚಲಿತವಾಗಿದೆ.

ದೈವತ ಪ್ರತಿಮಾ : ಸಂಕೇತಗಳಲ್ಲಿ ಆಗಿರುವ ಸ್ಥಿತ್ಯಂತರಗಳು

'ನಾಗ' ಪ್ರತಿಮೆಯ ಈವರೆಗಿನ ಸಮೀಕ್ಷೆಯಲ್ಲಿ ನಿಶ್ಚಿತವಾಗಿರುವ ಅಂಶಗಳು ಇವು :

೧. ತ್ರೈಮೂರ್ತಿಗಳೆಂಬ ಬ್ರಹ್ಮ-ವಿಷ್ಣು-ರುದ್ರ ಈ ಪ್ರತಿಮೆಗಳ ಅರ್ವಾಚೀನ ಆಕೃತಿಗಳು ಎಂತಹವೆ ಇರಲಿ, ಈ ಮೂರರ ತಳಹದಿಯಲ್ಲಿ 'ನಾಗ' ಉಂಟು. "ಪ್ರಪಂಚವೆಲ್ಲ

ಒಂದೇ (ಏಕಂ) ಸತ್-ತ್ವದಿಂದ (ಸಂತಂ) ಆಗಿದ್ದು ವಿದ್ವಾಂಸರು ಅದನ್ನು ನಾನಾ ನಾಮರೂಪಗಳಿಂದ ಆರಾಧಿಸುತ್ತಾರೆ," ಎಂದು ಋಗ್ವೇದದ ಕೊನೆಯಲ್ಲಿ ಹೇಳಲಾಗಿರುವ ವಿಚಾರದ ಯಥಾರ್ಥತೆಯು, ಇದಕ್ಕೆ ಸಾಕ್ಷಿಯಾಗಿದೆ.

೨. 'ನಾಗ' ಪ್ರತಿಮಾಪೂಜೆ ಮಾನವ ಸಂಸ್ಕೃತಿಯ ಉಗಮದ ಪರಿಸರವನ್ನು ಕಣ್ಣಳತೆಯಲ್ಲಿ ತರುತ್ತದೆ. ಭಾರತೀಯ 'ಅದಿತಿ'ಗೆ ಹೋಲುವ 'ಯುರಿಯಾ', 'ಅಫ್ರೊಡೈಟ್' ಎಂಬೀ ಬಗೆಯ ಆಪೋದೇವಿಯರು (ಜಲದೇವಿ: ನಾಗಕನ್ಯೆ) ಈಜಿಪ್ಟ್-ಗ್ರೀಕ್‌ದತ್ತಣಿನ ಪುರಾತನ ಪವಾಡ ಕಥೆಗಳಲ್ಲೂ ಇದ್ದಾರೆ. ಸೃಜನ ಶಕ್ತಿಯ 'ನಾಗ'ನು ಅಲ್ಲಿಯೂ ಕಾಣುತ್ತಾನೆ. ಈ ದೃಷ್ಟಿಯಿಂದ, ಮಾನವ ಸಂಸ್ಕೃತಿಯು ಬೆಳೆಯುತ್ತ ಆಕಾರಗೊಂಬುವಲ್ಲಿ ನಾನಾ ವಿಧವಾಗಿ ರೂಪಗೊಳ್ಳುತ್ತ ಹೊರಟಿದ್ದರೂ ಅದರ ಉಗಮದಲ್ಲಿ ಎಲ್ಲ ಜನಾಂಗಗಳಲ್ಲೂ ಸುಮಾರಾಗಿ ಜಲ-ಜಲಕನ್ಯೆ, ನಾಗ ಇರುವುದು ನಿಶ್ಚಿತವಾಗುತ್ತದೆ.

೩. ಭಾರತೀಯ ಸಂಸ್ಕೃತಿಯು, ಮುಂದಿನ ಹಂತಗಳಲ್ಲಿ ನಾನಾ ಶಾಖೋಪ ಶಾಖೆಗಳಾಗಿ ಹಬ್ಬುತ್ತ ಹೊರಟರೂ ಆಪ : ರಸ-ನಾಗ ಹಂತದಲ್ಲಿ, ಶಾಕ್ತ, ಶೈವ, ವೈಷ್ಣವ ಪಂಥಗಳು ಮಾತ್ರವಲ್ಲ; ಜೈನ, ಬೌದ್ಧ ಮತಗಳ ಉಗಮವೂ ಇಲ್ಲಿಯೆ ಇರುವುದಾಗಿ ಅರಿಕೆಗೆ ಬರುತ್ತದೆ. ಭಾರತೀಯ ಸಂಸ್ಕೃತಿಯೊಳಗಿನ ಏಕಾತ್ಮಕತೆಯ ಪಾತಳಿಯು ಇಲ್ಲಿರುವುದು ಕಾಣುತ್ತದೆ.

೪. 'ನೀರು' ಜೀವನವು ನಿಜ. ಆದರೆ ಜೀವನ 'ನೀರಗುಳ್ಳೆ!' ನೀರಿಗೆ ಸ್ವಂತದ ಆಕೃತಿಯೆ ಇಲ್ಲ. ಆದಕಾರಣ ಸಮತ್ವ, ಏಕರೂಪತೆ ಆದಿಯಲ್ಲಿದೆ. ಈ ಸಮತ್ವ : ಏಕರೂಪತೆ ಎಂದರೆ ಮೃತ್ಯುರೂಪ. ಅಮಾವಾಸ್ಯೆ ಮೊದಲು ಪ್ರತಿಪದೆ : ಮಿಡಿನಾಗ : ಚಂದ್ರದ ಕುಡಿ ಬಳಕಿನದು. ಇದು ಪ್ರಾಥಮಿಕ ಮೂಲ ಶ್ರದ್ಧೆ.

೫. ಆದರೆ, ಜೀವನವು ಸ್ಥಾಯಿಭಾವ; ಜೀವನದ ಅಭಾವ-ಅದು ಅದೃಶ್ಯವಾಗುವುದು: 'ಮರಣ' ಎಸುತ್ತದೆ. ಬೆಳಕಿನ ಅಭಾವ ಕತ್ತಲೆ; ಕತ್ತಲೆಗೆ ಸ್ವತಂತ್ರ ಅಸ್ತಿತ್ವವಿಲ್ಲ, ಎಂಬ ಸೌರ ಸಂಪ್ರದಾಯವು ಒಂದು ಉಂಟು.

೬. ಜೀವನಾನುಭವದ ಪರಿಸರವು, ಆ ಜನದ ಆಚಾರ-ವಿಚಾರ: ಸಂಸ್ಕೃತಿ-ಜ್ಞಾನ ಇವು ಪಡೆವ ಆಕೃತಿಗೆ ಕಾರಣವಾಗುತ್ತದೆ. ಆದುದರಿಂದ ನಾಗ : ಆಪ-ರಸ ಪೂಜೆ ಹಾಗೂ ಈ ಆಚಾರ ವಿಚಾರಕ್ಕೆ ಕಾರಣವಾದ ಪರಿಸರವು ಮತ್ತು ಸೌರ ಪ್ರತಿಮಾ ಪೂಜಕರ ಅಗ್ನ್ಯಾರಾಧನೆ ಹಾಗೂ ಅದಕ್ಕೆ ಅನುಗುಣವಾದ ಆಚಾರ-ವಿಚಾರಗಳಿಗೆ ಪ್ರೇರಕ ಪರಿಸರ ಇವೆರಡೂ ಮೊತ್ತಮೊದಲಲ್ಲಿ ತೀರ ಬೇರೆ-ಬೇರೆಯೆ ಇರಬೇಕಾಗುತ್ತದೆ.

೭. ಈ ಕಾರಣದಿಂದಾಗಿ ಆಪ : ರಸ ಪಂಥೀಯ ನಾಗಾರಾಧನೆಯು, ಭಾರತೀಯ ಮೂಲದ್ದು- ಭೂಮಧ್ಯ ಸಮುದ್ರ, ಇರಾಕದ ವರೆಗಿನ ಕ್ರಿ.ಪೂ. ೪೦೦೦ ವರುಷಗಳ ಸುಮಾರಿನ ಸಂಸ್ಕೃತಿಗೆ ಸಂಬಂಧ ಪಟ್ಟುದು ಅಥವಾ ಸುಮಾರಾಗಿ ಆ ಸಮಾನ ಆಕೃತಿಯದು ಆಗಿದೆಯೆಂದು ಗ್ರಹಿಸಬೇಕಾಗುತ್ತದೆ. ಸೌರ ಪ್ರತಿಮಾ ಪೂಜಕರ ಅಗ್ನ್ಯಾರಾಧನೆಯು ಇರಾಣ ದತ್ತಣಿಂದ ಭಾರತಕ್ಕೆ ಪಂಚನದ ದೇಶಕ್ಕೆ ಬಂದಿತೆಂದು ಋಗ್ವೇದದ ಹಲವು ಋಚೆಗಳ ಮೂಲಕ ಊಹಿಸಲು ಅವಕಾಶವಿದೆ.

ಋಗ್ವೇದದಲ್ಲಿ ಆರ್ಯರು ಹೊರಗಣಿಂದ ಬಂದ ಸ್ಪಷ್ಟ ಉಲ್ಲೇಖವಿಲ್ಲ; ನಿಜ. ಆದರೆ ಸಿಂಧೂನದಿಯ ಪ್ರಾರಂಭದ ಹಿರಿಮೆ ಕಡಿಮೆಯಾಗಿ, ಋಗ್ವೇದ ದಲ್ಲಿಯೆ ಗಂಗಾ-ಯಮುನಾ ನದಿಯ ಮಹಾತ್ಮ್ಯವು ತಾನೆತಾನಾಗಿ ಬೆಳೆಯ ತೊಡಗುವ ಸೂಚನೆಗಳು ಇವೆ. ಸೌರ ಪ್ರತಿಮಾ ಪೂಜಕ ಅಗ್ನ್ಯಾರಾಧಕರೂ ಭಾರತೀಯ ಮೂಲದವರೇ ಆಗಿದ್ದಲ್ಲಿ ಸಿಂಧೂನದಿಯೊಡನೆಯೆ ಗಂಗಾ ಯಮುನಾ ನದಿಗಳ ಉಲ್ಲೇಖ-ಮಾಹಾತ್ಮ್ಯ ಋಗ್ವೇದದಲ್ಲಿ ಮೊದಲಿನಿಂದಲೆ ಇರಬೇಕಾಗಿತ್ತು. ಯಮುನಾ ಮತ್ತು ಕಂ ಗಂ-ಗಾ ಈ ನದೀ ನಾಮಗಳಲ್ಲಿ ಇರುವ ಪದರು ಪದರಿನ ಅರ್ಥವು ಆಪ : ರಸ-ಸರ್ಪ ಪಂಥೀಯ ವಿಜಯವನ್ನು ಸೂಚಿಸುತ್ತಲಿದೆ. ನದೀ-ನಾಮ ವರ್ಜ್ಯ ಸಂತಾನಕ್ಕೆ ; ಎಂದೆಂಬ ಗೃಹ್ಯಸೂತ್ರದ ನಿಷೇಧವು, ಆಪ : ರಸ ಪಂಥದ ಬಗೆಗಿನ ವಿರೋಧ ಸೂಚಕವಾಗಿದೆ. 'ಗಂಗಾ ಗಂಗೇತಿ ಯೋ ಬ್ರೂಯಾತ್' ಅವನು ವಿಷ್ಣು ಲೋಕಕ್ಕೆ ಹೋಗುತ್ತಾನೆ, ಎಂಬ ಶ್ರದ್ಧೆಯಂತೆ ಗಾಂಗಾನಾಮಸ್ಮರಣ ಪೂರ್ವಕವಾಗಿ ನಿತ್ಯಸ್ನಾನ ಮಾಡುವ ಈ ವಾಡಿಕೆ ಆಪ : ರಸ ಪಂಥೀಯ ವರ್ಚಸ್ಸಿನ ಸೂಚಕವಾಗಿದೆ. 'ಜೀವನ-ಮರಣ' ಎರಡನ್ನೂ ಸಮ, ಎಂದು ಭಾವಿಸುವ ಶ್ರದ್ಧೆಯಂತೆ ಗಂಗಾಸ್ನಾನದ ತರುವಾಯ ಯಮುನಾ : ಕಾಲಿ(ಂದಿ) ನದಿಯಲ್ಲೂ ಮುಳುಗು ಹಾಕಲೇಬೇಕು! ಇಲ್ಲವಾದರೆ ಯಾತ್ರಾ ಫಲವಿಲ್ಲ. ಗಂಗಾ-ಯಮುನೆಯರ ಈ ಜೋಡಿ ಜೀವನವಾದೀ ಸೌರ ಪ್ರತಿಮಾ ಪೂಜೆಯ ಮೂಲೋದ್ದೇಶಕ್ಕೆ ಬಾಧಕವಾಗಿದೆ.

ಆಪ : ರಸದ ನಾಗಪ್ರತಿಮೆಯ ಆರಾಧನೆ, ಹಾಗೂ ಸೌರ ಭೂಮಿಕೆಯ ಅಗ್ನ್ಯಾರಾಧನೆ-ಯಾಜಕ ಸಂಪ್ರದಾಯ, ಇವೆರಡೂ ಭಿನ್ನ ಭಿನ್ನ ವೈಚಾರಿಕ ಜೀವನ ರೀತಿಗಳು ಒಂದೇ ಭೌಗೋಲಿಕ ಪರಿಸರದಲ್ಲಿ ಮೈದಾಳಿರುವ ಶಕ್ಯತೆಯಿಲ್ಲ, ಎಂಬ ತಾತ್ವಿಕ ವಿಚಾರಕ್ಕೆ ಐತಿಹಾಸಿಕ ಘಟನೆಗಳಿಂದಲೂ ಪುಷ್ಟಿ ದೊರೆಯುತ್ತದೆ. ಅವೆಸ್ತಾ ಹಾಗೂ ಋಗ್ವೇದದ ಸೌರಪ್ರತಿಮೆಗಳಲ್ಲಿ ಇರುವ ಸಾಮ್ಯವು ಇಂತಹ ಒಂದು ಘಟನೆ. ಸಂಸ್ಕೃತ ಭಾಷೆಯ ಇತಿಹಾಸವು ಇಂತಹ ಇನ್ನೊಂದು ಪ್ರಮಾಣ. ಯೂರೋ-ಭಾರತೀಯ ಶಾಖೆಗೆ ಹತ್ತಿರದ್ದಾದ ಗ್ರೀಕ್ ಸಂಸ್ಕೃತಿಯು ಮುಂಚಿನ ಒಂದು ಸಂಸ್ಕೃತಿಯೊಡನೆ ಸಂಘರ್ಷದಲ್ಲಿ ಹೀಗೆಯೆ ಮಾರ್ಪಟ್ಟ ಸಮಾಂತರ ಘಟನೆ ಗ್ರೀಕ್ ಇತಿಹಾಸದಲ್ಲಿದೆ :

> "Greek Mythology, which contains importations from Crete, Egypt, Palestine, Phrygia, Babylonia and elsewhere, can properly be classified-"[೧೨]

ನಾಗಪ್ರತಿಮೆಯಲ್ಲಿ ಎಂದರೆ ಆಪ : ರಸ ಭೂಮಿಕೆಯ ದೈವತ ವಿಚಾರದಲ್ಲಿ ಹಾಗೂ ಆ ಪ್ರತಿಮೆಗಳ ಆಕೃತಿ ರೂಪದಲ್ಲಿ ಸ್ಥಿತ್ಯಂತರಗಳು ಆಗುತ್ತ ಬಂದಿವೆ. ಇದೇ ಮೇರೆಗೆ ಸೌರ ದೈವತ ಪ್ರತಿಮೆಗಳಲ್ಲಿ-ಅಗ್ನ್ಯಾರಾಧನೆಯ ರೀತಿಯಲ್ಲೆ, ತೀರ ಭಿನ್ನಸ್ವರೂಪದ ವ್ಯತ್ಯಾಸಗಳು ಆಗಿದ್ದುಂಟು. ದೈವತ ಪ್ರತಿಮೆಗಳಲ್ಲಿ ಆಗುವ ಈ ವ್ಯತ್ಯಾಸಗಳು ಅಂದಿನ ಆ ಸುಮಾರಿನ ಸಾಮಾಜಿಕ ಜೀವನದಲ್ಲಿ ಆದ ಸ್ಥಿತ್ಯಂತರದ ಪ್ರತಿಬಿಂಬವೆಂದು ಬಗೆಯದೆ ಹೋದರೆ ಈ ಆಗು-ಹೋಗುಗಳು, ನಿಷ್ಕಾರಣವಾಗಿ ಅಥವಾ ತನ್ನ ತಾನೆ ಸಂಭವಿಸಿರಬೇಕೆಂದು ಗ್ರಹಿಸುವ ಆಪತ್ತಿಯನ್ನು ಸ್ವಾಗತಿಸಬೇಕಾಗುತ್ತದೆ!

ಎರಡು ಅಗ್ನಿಗಳಲ್ಲಿ ಈರ್ಷ್ಯೆ

ಋಗ್ವೇದದಲ್ಲಿ ಕಾಣುವ ಎರಡು ಭಿನ್ನ ವೈಚಾರಿಕ ಹಾಗೂ ಸಾಂಸ್ಕೃತಿಕ (: ಆಚಾರಗಳ) ಸಂಘರ್ಷವನ್ನು, ಎರಡು ಬಗೆಯ 'ಅಗ್ನಿ'ಗಳ ಸೆಣಸಾಟ ಎಂದು ಒಟ್ಟಿನಲ್ಲಿ-ಸ್ಥೂಲವಾಗಿ ಹೇಳಲು ಅಡ್ಡಿ ತೋರುವುದಿಲ್ಲ. ಒಂದು ನೀರೊಳಗಿನ ಅಗ್ನಿ; ಇನ್ನೊಂದು ಹೋಮ ಕುಂಡದೊಳಗಿನ ಅಗ್ನಿ. ಇವೆರಡೂ ಅಗ್ನಿಗಳು ತಮ್ಮ ಮಾಹಾತ್ಮ್ಯವನ್ನು ಪ್ರಸ್ಥಾಪಿಸಲು ಹೋರುತ್ತವೆ. ಎಂದರೇನು? ಆಯಾ 'ಅಗ್ನಿ'ಯ ಭಕ್ತರ ಶ್ರೇಷ್ಠಿ-ಶ್ರೇಷ್ಠಿಗಳಲ್ಲಿ ನಡೆದ ಈರ್ಷೆ-ಸ್ಪರ್ಧೆ ಎಂದೇ ಅರ್ಥ ತಾನೆ?

ಈ ಬಗೆಯ ಈರ್ಷೆ-ಹೋರಟೆ ಎರಡು ಪಾತಳಿಯ ಮೇಲಿನದು ಇರುತ್ತದೆ; ಮೊತ್ತ ಮೊದಲಲ್ಲಿ ಇದರ ಸ್ಪಷ್ಟತೆ ಇರುವುದಿಲ್ಲ. ಮಾನವರ ಸಾಮಾಜಿಕ ಜೀವನದ ಸಂದರ್ಭದಲ್ಲಿ ವ್ಯಕ್ತಿ-ವ್ಯಕ್ತಿಗಳಲ್ಲಿ, ಸಾಮಾಜಿಕ ಪಂಗಡ-ಪಂಗಡಗಳಲ್ಲಿ ವೈಯಕ್ತಿಕ ಅಥವಾ ಸಾಮೂಹಿಕ 'ಸ್ವ'ದ ಅರ್ಥಕ್ಕಾಗಿ ಕಚ್ಚಾಟ-ಕಾದಾಟವು ತಲೆದೋರುವುದು, ನೈಸರ್ಗಿಕ ಘಟನೆಯೆ ಆಗಿದೆ. ಆಚರಣೆಯ ಸಂದರ್ಭದಿಂದ 'ವಿಚಾರ'- ಅದರಲ್ಲಿ ಅಡಕವಾದ ಜೀವನತತ್ತ್ವದ ಪ್ರಜ್ಞೆ ಮೂಡುತ್ತದೆ. ಇದು, ನೆಲದ ಮೇಲಣ ಘಟನೆಗಳಿಗೆ ಸಮಾಂತರವಾಗಿ ಪ್ರವಹಿಸುವ ಸಾಂಸ್ಕೃತಿಕ ಪಾತಳಿ, ಇನ್ನೊಂದು. ನೆಲದ ಮೇಲಣ ಸಂಘರ್ಷವು ನಿಂತು ಹೋದರೂ ಸಂಸ್ಕೃತಿಯ ಪಾತಳಿಯ ಮೇಲಣ ವೈಚಾರಿಕ-ತಾತ್ತ್ವಿಕ ಸ್ವರೂಪದ ಸಂಘರ್ಷವು ಶತಮಾನ-ಶತಮಾನಗಳಿಂದ ಉಳಿದು ಬರುವುದುಂಟು. ಮೊದಲನೆಯ ಪಾತಳಿಯು ಇತಿಹಾಸದ ವಿಷಯ; ಎರಡನೆಯ ಪಾತಳಿಯು, ಧರ್ಮ-ತತ್ತ್ವಜ್ಞಾನಗಳ ಹಾಗೂ ಅದರ ಇತಿಹಾಸದ ವಿಷಯ. ಯಾವುದೇ ಧರ್ಮ ಹಾಗೂ ತತ್ತ್ವಜ್ಞಾನದ ಇತಿಹಾಸಕ್ಕಾಗಲಿ, ತತ್‌ಸಮಾಂತರವಾಗಿ ಇದ್ದ ನೆಲದ ಮೇಲಣ ಘಟನೆಗಳ ಇನ್ನೊಂದು ಬದಿ ಇದ್ದೇ ಇರುತ್ತದೆ. ಯಾವ ಧರ್ಮವಾಗಲಿ, ತತ್ತ್ವಜ್ಞಾನವಾಗಲಿ ಆಕಾಶ ಪುಷ್ಪವಲ್ಲ. ಜೀವನ ಸಂದರ್ಭದ ದಿಕ್ಕಾಲ-ಪರಿಸ್ಥಿತಿಯಲ್ಲೆ ಮೊಳೆತು ಅದು ಬೆಳೆದಿರಬೇಕೆಂಬುದನ್ನು ಅಲ್ಲಗಳೆಯಲು ಶಕ್ಯವೆ ಇಲ್ಲ. ಅಂತರ್ಜ್ಞಾನಿ-ಪವಾಡಿ-ಗಾರುಡಿಗ ಪ್ರವಾದಿಗಳ ಅವತಾರಗಳನ್ನು ಕಲ್ಪಿಸಿಕೊಂಡಲ್ಲದೆ, ಐತಿಹಾಸಿಕ ಕಾರ್ಯಕಾರಣ ಸಂಬಂಧದ ಋಣಾನುಬಂಧವನ್ನು ಕಡಿದುಕೊಳ್ಳಲು ಶಕ್ಯವಿಲ್ಲ.

ನೀರೊಳಗಿನ 'ಅಗ್ನಿ' ಎಂದರೇನು? ಯಜ್ಞವೇದಿಕೆಯ ಕುಂಡದೊಳಗಿನ 'ಅಗ್ನಿ' ಎಂದರೆ ಎಂತಹದು, ಇದರ ವಿವರಣೆ ಅನಾವಶ್ಯಕ. ಎರಡು ಅರಣಿಗಳನ್ನು ತಿಕ್ಕಿ-ಉಜ್ಜಿ ಬೆಂಕಿ ಕಿಡಿ ಹೊರಡಿಸಿ ಅಗ್ನಿ ಸಾಧನೆ ಮಾಡಿಕೊಳ್ಳುವ ಈ ಪ್ರಾಥಮಿಕ ಪ್ರಕಾರವು, ಋಗ್ವೇದದ ಸೂಕ್ತಗಳಲ್ಲೂ ಅರಿಕೆಗೆ ಬರುತ್ತದೆ. ಗೃಹ್ಯಾಗ್ನಿಯ ಹೋಮ ಕುಂಡಗಳು ಯಾಜಕ ಪಂಥೀಯರ ಮನೆಗಳಲ್ಲಿ ಇರುತ್ತಿದ್ದುವು. ಆದರೆ, ನೀರಲ್ಲಿ ಇರುವ ಅಗ್ನಿಯ ಸ್ತೋತ್ರ-ಮಹಾತ್ಮ್ಯವೂ ಋಗ್ವೇದದ ಎಲ್ಲ ಮಂಡಲಗಳಲ್ಲೂ ಉಂಟು. ನೀರೊಳಗಿನ ಅಗ್ನಿಯ ನಿರ್ದೇಶವು ನಿಶ್ಚಿತ ಒಂದೇ ನಾಮರೂಪದಲ್ಲಿ ಇಲ್ಲ; 'ಅಪಾಂ ನಪ್ತೃ' ಎಂಬ ಶಬ್ದಪ್ರತಿಮೆಯು ಮಾತ್ರ ನಿಃಸಂದಿಗ್ಧವಾಗಿ ನೀರೊಳಗಿನ ಅಗ್ನಿ ಸೂಚಕವಾಗಿರುತ್ತದೆ. ಈ 'ಅಗ್ನಿ'ಯ ಅರ್ಥವೇನು? ಸ್ವರೂಪವೆಂತಹುದು? ಎಂಬ ಬಗೆಗೆ ತಜ್ಞರಲ್ಲಿ ತುಂಬ ಭಿನ್ನಾಭಿಪ್ರಾಯಗಳಿವೆ. ಆದುದರಿಂದ, ಈ 'ಅರ್ಥ'ದ ವಿಚಾರ ಹಾಗೆ ಇರಲಿ.

ಅಪಾಂ ನಪ್ತೃ ಎಂಬುದಕ್ಕೆ 'ನೀರ-ದಿವ್ಯಪುತ್ರ' ಎಂದು ಸಾಮಾನ್ಯವಾದ ಅರ್ಥ. ಇದನ್ನು 'ವಡವಾನಲ' ಎಂದರೆ ನೀರೊಳಗಿನ ಕುದುರೆ ಎಂದೂ ಹೇಳಲಾಗುತ್ತದೆ. ವಿದ್ಯುತ್ ಶಕ್ತಿ ನೀರಲ್ಲಿ ಇರುತ್ತದೆ. ನೀರೊಳಗಿಂದ-ಮಳೆಯ ಸಂದರ್ಭದಲ್ಲಿ ಮೋಡಗಳಲ್ಲಿ-ಕಾಣುವ ಮಿಂಚನ್ನು 'ನೀರಮಗು' ಎಂದಿರಲಿಕ್ಕೆ ಸಾಕು ಎಂಬ ಹಾಗಿನ ಸಂಭ್ರಾಮಕಾರಕ ವರ್ಣನೆಗಳೂ ಉಂಟು. ಈ ಎಲ್ಲ ಉತ್ಪ್ರೇಕ್ಷೆ-ಆಲಂಕಾರಿಕ ವರ್ಣನೆಗಳು ಹಾಗಿರಲಿ. ಇದು ಸಲಿಲ>ಸರಿರ (: ಶರೀರಸ್ಥ) ಅಗ್ನಿ ಎಂಬ ವರ್ಣನೆ ಕೊನೆಗೆ ಬಂದು ನಿಲ್ಲುತ್ತವೆ.[೧೩] ಈ ಅಗ್ನಿಯು ಶರೀರಸ್ಥನಾದ ಬಳಿಕ ಯಜ್ಞದ ನೂತನ ವಿಧಾನವು ಶಿಷ್ಟಮಾನ್ಯವಾದುದಾಗಿ ಕಂಡುಬರುತ್ತದೆ. "ಯಜ್ಞೇನ ಯಜ್ಞಂ ಅಜನಯಂತ ದೇವಾಃ; ತಾನಿ ಧರ್ಮಾಣಿ ಪ್ರಥಮಾನಿ ಆಸನ್" ಸೃಷ್ಟಿ ನಿರ್ಮಿತಿಯ ಈ ಯಜ್ಞದ ಮೂಲಕವಾಗಿಯೆ ಪ್ರಪಂಚವು ಅವ್ಯಾಹತವಾಗಿ ಉಳಿದಿದೆ. 'ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರಃ ಉವಾಚ ಪ್ರಜಾಪತಿಃ' ಎಂದು ಗೀತೆಯು

ಮಾನ್ಯ ಮಾಡಿರುವ ಈ 'ಪ್ರಾಜಾಪತ್ಯ' ಯಜ್ಞವು, ಆಪ: ರಸಪಂಥೀಯ 'ಅಗ್ನ್ಯಾರಾಧನೆ' ಆಗಿದೆ. ಆದರೆ 'ರಸೋsಹಂ ಅಪ್ಸು' ಎಂಬ ಗೀತೆಯ ಭಗವಂತನಿಗೆ, 'ಸೋಮ'ಪಾಯಿಗಳ ಯಜ್ಞವು, ಎಂದರೆ ನೆಲದ ಮೇಲೆ ರಚಿಸಿದ ಅಗ್ನಿಕುಂಡದಲ್ಲಿ ಆಹುತಿ ಹಾಕಿ ಮಾಡುತ್ತಿದ್ದ ಸೌರ ಪರಂಪರೆಯ ಯಜ್ಞವು ಅಮಾನ್ಯವಿತ್ತು.[೧೪] ಆಪ : ರಸ ಪಂಥೀಯ ಈ 'ಪ್ರಾಜಾಪತ್ಯ ಯಜ್ಞ'ವು ಲೋಕಪ್ರಿಯವಾಗಿ, ಸೌರಪಂಥೀಯ ಯಜ್ಞ ವಿಧಾನವು ತಿರಸ್ಕೃತವಾಗುತ್ತದೆ. 'ಪ್ರಾಜಾಪತ್ಯ ಅಗ್ನಿ'[೧೫] 'ಪ್ರಾಜಾಪತ್ಯ ಸೂರ್ಯ'[೧೬], ಎಂಬ ನೂತನ ಅಗ್ನಿ, ನೂತನ ಸೂರ್ಯರ ಪ್ರತಿಮಾ : ಸಂಕೇತಗಳು ತಲೆಯೆತ್ತುತ್ತವೆ.

ಈವರೆಗೆ ಹೇಳಿದ ಎರಡು 'ಅಗ್ನಿ'ಗಳಲ್ಲಿ ಒಂದು ಅರಳಿ, ಬನ್ನಿ, ಆಲ, ಅತ್ತಿ ಇಂತಹ ಸಮಿತ್ತುಗಳನ್ನು ಹಾಕಿ ಕಾಯ್ದಿಡಲಾಗುತ್ತಿದ್ದ ಅಗ್ನಿ-ಸಂಪ್ರದಾಯವೇ ಒಂದು; 'ಅಪಾಂ ನಪ್ತ್ರ' ಪಂಥೀಯ ಸಲಿಲಸ್ಥ ಅಗ್ನ್ಯಾರಾಧನೆಯ ಸಂಪ್ರದಾಯವೇ ಒಂದು. ಇವೆರಡೂ ಬೇರೆ ಬೇರೆ ವೈಚಾರಿಕ ಭೂಮಿಕೆಗಳು. ಅವರವರ ಆಚಾರ-ವಿಧಾನ ದೊಳಗಿಂದ ಹುಟ್ಟಿಕೊಂಡಿದ್ದು. ಇಡೀ ಋಗ್ವೇದದಲ್ಲಿ ಈ ಎರಡು ಸಂಪ್ರದಾಯಗಳ ದೈವತ ಪ್ರತಿಮೆಗಳ ಸ್ಪರ್ಧೆಯ ಸರಸ ಚಿತ್ರಪಟವನ್ನು ನೋಡಲು ದೊರೆಯುತ್ತದೆ. ಇವೆರಡರೊಳಗಿನ ಆಪ : ರಸ ಪಂಥೀಯ ಅಗ್ನಿಯೆಂದರೆ 'ದಿವ್ಯ ನಾಗಶಕ್ತಿ'ಯೆ ಆಗಿರುವುದರ ಮನವರಿಕೆಯಾಗಲು ಋಗ್ವೇದದೊಳಗಿನ ಕೆಲವೊಂದು ಪ್ರಮುಖ ಸೌರದೈವತ ಪ್ರತಿಮೆಗಳ ಹಿನ್ನೆಲೆಯು ಸ್ವಲ್ಪ ಮಟ್ಟಿಗಾದರೂ ತಿಳಿದಿರುವುದು ಅವಶ್ಯವಿದೆ.

ಎರಡು 'ಅಗ್ನಿ'ಗಳ ನಡುವಣ ಸ್ಪರ್ಧೆಯನ್ನು ಇದೀಗ ಸೂಚಿಸಿದ್ದಾಯ್ತು. ಆದರೆ, ಈ ಸ್ಪರ್ಧೆಯ ಸ್ಪಷ್ಟ ಪ್ರಮಾಣಗಳು ದೊರೆಯುವುದಿಲ್ಲ. ಒಟ್ಟಿನ ಪರಿಣಾಮದ ಮೇಲಿಂದ ಈ ಸ್ಪರ್ಧೆಯ ಅಸ್ತಿತ್ವವು ಬಯಲಿಗೆ ಬರುತ್ತದೆ. ಪುರುಷಸೂಕ್ತದಲ್ಲಿ ಯಜ್ಞದ ಮೂಲ ಸ್ವರೂಪವು ತೀರ ಬದಲಾಗುವುದನ್ನು-ಲಾಕ್ಷಣಿಕವಾದುದನ್ನು ಎಲ್ಲರೂ ಒಪ್ಪುತ್ತಾರೆ. 'ಪುರುಷ (-ಸ್ತ್ರೀ)' ಯಜ್ಞರೂಪರಾಗುತ್ತಾರೆ! "ಪುರುಷೋ ವೈ ಯಜ್ಞಃ" ಈ ಮಾತು ತೈತ್ತಿರೀಯ ಸಂಹಿತಾದಿ ಅನೇಕ ಕಡೆಗೆ ಬಂದಿದೆ. ಇದರ ಮುಂದಿನ ಹಂತದಲ್ಲಿ 'ವಿಷ್ಣುವೇ ಯಜ್ಞರೂಪಕ' ಎಂಬ ಸಂಪ್ರದಾಯವು ಪ್ರಚಾರಕ್ಕೆ ಬರುತ್ತದೆ! 'ಯಜ್ಞೋ ವೈ ವಿಷ್ಣುಃ, ಶಿಪಿವಿಷ್ಟಃ. (ತಾಂಡ್ಯ ಬ್ರಾಹ್ಮಣ ೯.೭.೧೦). 'ಶಿಪಿವಿಷ್ಟ' ಎಂಬ ಪರ್ಯಾಯ ನಾಮವು ರುದ್ರನಿಗೂ ಉಂಟು, ಯಜುರ್ವೇದದ ರುದ್ರಾಧ್ಯಾಯದಲ್ಲಿ! ಎಂದರೇನಾಯಿತು? ಈ 'ಶಿಪಿವಿಷ್ಟ' ಸ್ವರೂಪ ದೈವತದ ಆರಾಧನೆಯೆ 'ಯಜ್ಞ'ವಾಯಿತು! ಸೌರ-ಪರಂಪರೆಯ ಅಗ್ನ್ಯಾರಾಧನೆ-ಯಜ್ಞಕಾರ್ಯ ತಿರಸ್ಕೃತವಾಗಿ, ಬೇರೊಂದು ಬಗೆಯ ಯಜ್ಞ: 'ಪ್ರಾಜಾಪತ್ಯ' ಯಜ್ಞವು ಪ್ರಚಲಿತವಾಗುತ್ತದೆ, ಎಂದರೆ ಇದು ಸ್ಪರ್ಧೆಯಲ್ಲವೆ? ಈ ಪರಿಭಾಷೆಯು ಇನ್ನೂ ರಹಸ್ಯವಾಗಿಯೆ ಉಳಿಯುವಂತಾಗಿದೆ! 'ಪ್ರಾಜಾಪತ್ಯ ಅಗ್ನಿ' ಎಂಬ ಪ್ರಯೋಗವು, 'ಸೂರ್ಯ : ಪ್ರಾಜಾಪತ್ಯ' ಪ್ರಯೋಗದಂತೆ-ಇದರಷ್ಟು ಸ್ಪಷ್ಟವಿಲ್ಲ. ಆದರೂ ಈ 'ಪ್ರಾಜಾಪತ್ಯ ಯಜ್ಞ' ಎಂದರೇನೆಂಬುದು ಬಯಲಿಗೆ ಬರುತ್ತಿದೆ. 'ಗರ್ಭಂ ದಧ್ರ ಆಪಃ'; ಎಂದು, ಸೃಷ್ಟಿ ನಿರ್ಮಾಣ ಕ್ರಿಯೆಯ ಯಜ್ಞದಿಂದ (ಈ ಆಹುತಿ ಹಾಕುವುದರ ಮೂಲಕ) ಮಾಡಲಾಗುವ ಯಜ್ಞದ, ಆಪ : ರಸ ಪಂಥೀಯ ('ಯಜ್ಞೇನ ಯಜ್ಞಂ ಅಯಜಂತ' ಎಂಬ ವೇದದ ಅಥವಾ 'ಸಹಯಜ್ಞಾಃ ಪ್ರಜಾಃ, ನಿರ್ಮಾಣ ಮಾಡುವ ಭಗವದ್ಗೀತೆಯು ಹೇಳುವ ವಿಧಾನದ) -ಯಜ್ಞವು ಇದು. ಆಪ : ಸಲಿಲ> ಸರಿರದಲ್ಲೆ ಹಾಕುವ ಅದೇ ಬಗೆಯ ಆಹುತಿಯ ಮೂಲಕ ನಡೆವ 'ಯಜ್ಞವು' ಇದು. ಋಗ್ವೇದದಲ್ಲೆ ಇದರ ವರ್ಣನೆಗಳು ಇವೆ. ಈ ಪ್ರಾಜಾಪತ್ಯ ಯಜ್ಞವು ಆಪ: ಸಲಿಲದಲ್ಲೆ ಆಗುವುದರಿಂದ ಈ ಯಜ್ಞ ಕುಂಡದ 'ಸಲಿಲ'ದಲ್ಲೆ 'ಅಗ್ನಿ'ಯು ಇರಬೇಕಾಯ್ತು. ಇದನ್ನೂ ಋಗ್ವೇದದಲ್ಲಿ ಗುರುತಿಸಿ ಕಂಡುಕೊಳ್ಳಬಹುದಾಗಿದೆ.

ವೃಕ್ಷದ ಅರಣಿ ಮಂಥನದಿಂದ ನಿರ್ಮಿತನಾಗಿ ನೆಲದ ಮೇಲಣ ಯಜ್ಞಕುಂಡಗಳಲ್ಲಿ ಸ್ಥಾಪಿತನಾದ ಅಗ್ನಿಯು, ಆಜ್ಯಾಹುತಿಗಳನ್ನು ಸ್ವೀಕರಿಸಿ ಇಂದ್ರಾದಿ ದೈವತಗಳಿಗೆ ತಲುಪಿಸುತ್ತಾನೆ, ಎಂಬ ಒಂದು ಶ್ರದ್ಧೆ ಸೌರ ಸಂಪ್ರದಾಯದ್ದು. ಆದರೆ, ಆಪ : ರಸ ಪಂಥೀಯ ವಿರಕ್ತ - ಸಂನ್ಯಾಸ ಮಾರ್ಗಿಗಳಿಗೆ 'ಯಜ್ಞ'- 'ಅಗ್ನಿ' ಈ ಸಂಕೇತಾತ್ಮಕ ಪ್ರತಿಮೆಗಳ ಈ ಭೌತಸ್ವರೂಪವು ಅಮಾನ್ಯವಿತ್ತು. ಆಪ : ರಸ ಪಂಥಿಗಳು, ತಮ್ಮದೇ ಆದ

ಒಂದು 'ದಿವ್ಯಾಧ್ಯಾತ್ಮ' ಸ್ವರೂಪದ 'ಯಜ್ಞ' ವಿಧಾನವನ್ನು ಆಚರಿಸುತ್ತಿದ್ದರು. ಆದರೆ, ಮೊತ್ತ ಮೊದಲಲ್ಲಿ ಸೌರ ಪಂಥೀಯರಿಗೆ, ಆಪ : ರಸ ಪಂಥೀಯ 'ಯಜ್ಞ' ವಿಧಾನವು ತಿಲಮಾತ್ರವೂ ಹಿಡಿಸಲಿಲ್ಲ. 'ಅಯಾಜಕ'ರು ಇವರು;' 'ಅನ್ಯದೇವಾಃ' 'ಅನ್ಯವ್ರತಾಃ' ಎಂಬ ತಿರಸ್ಕಾರದ ಸಂಕೇತಗಳು, ವೇದದಲ್ಲಿ ಈ ಆಪ : ರಸ ಪಂಥೀಯ ಆಚಾರ-ಪ್ರಕಾರಕ್ಕೇ ಇರಬೇಕೆಂದು ಋಗ್ವೇದದ ಇಂದಿನ ಪಾಠದಿಂದಲೂ ಊಹಿಸಿಕೊಳ್ಳಲು ಬರುವಂತಿದೆ. 'ಅಯಾಜಕ' ಎಂಬ ಸಂಕೇತದೊಡನೆ 'ನಿರಗ್ನಯಃ' ಎಂಬ ಇನ್ನೂ ಒಂದು ಆ ಸಮಸಾಮಯಿಕ ನಿಂದಾರ್ಥೀ ವಿಶೇಷಣವನ್ನು ಲೆಕ್ಕಕ್ಕೆ ಹಿಡಿದು ವಿಚಾರ ಮಾಡುವುದು ಅವಶ್ಯವಿದೆ. ಈ ಹಿನ್ನೆಲೆಯಲ್ಲಿ ಯಜ್ಞವಿಧಾನದ ಸೌರ ಪರಂಪರೆಯ ಕ್ರತಿಯು ಲುಪ್ತವಾಗಿ ಆಪ : ರಸ ಪಂಥೀಯ ಯಜ್ಞವು ಋಗ್ವೇದದ ಕೊನೆಯಲ್ಲಿ ಪ್ರತಿಷ್ಠಿತವಾಗಿರುವ ಈ ಸ್ಥಿತ್ಯಂತರವನ್ನು ಅರ್ಥಯಿಸಿಕೊಳ್ಳುವುದು ಅವಶ್ಯವಿದೆ.

ಸೌರ ಸಂಪ್ರದಾಯದ ನೆಲದ ಮೇಲಣ ಕುಂಡಗಳಲ್ಲಿ ಇದ್ದ ಅಗ್ನಿಯು ಗಾಬರಿಯಾಗಿ ಓಡಿಹೋಗುತ್ತಾನೆ. ಸಲಿಲದಲ್ಲಿ ಪ್ರವೇಶಿಸುತ್ತಾನೆ, ಎಂಬ ಒಂದು ಪವಾಡ ಕಥೆ ಹುಟ್ಟಿಕೊಂಡಿದ್ದುಂಟು! ನೆಲದ ಮೇಲಣ ಯಜ್ಞ ಕುಂಡಗಳಲ್ಲಿ ಇರತಕ್ಕ ಅಗ್ನಿಯು ಅದೃಶ್ಯವಾದ ಈ 'ಪವಾಡ' ನೋಡಿ: ಅಂದಿನ ಸೌರ (?) ಯಾಜಕರು ಗಾಬರಿಯಾಗುತ್ತಾರಂತೆ. ಆ ತಮ್ಮ ಅಗ್ನಿಯನ್ನು ಮರಳಿ ಹುಡುಕಿಕೊಂಡು ಬರಲು ಹೊರಡುತ್ತಾರಂತೆ. ಈ ಸಂದರ್ಭದಲ್ಲಿ ಅಗ್ನಿಯು 'ವರುಣ' ದೇವನಿಗೆ ಮೊರೆ ಹೊಕ್ಕಿದ್ದಾಗಿ ಒಂದು ಸೂಚ್ಯಸಂಕೇತವಿದೆ. ಈ ಸುಮಾರಿಗೆ (ಎಂದರೆ ಋಗ್ವೇದದ ಅಂತ್ಯದಲ್ಲಿ) ಸೌರಮಂಡಲದ ವರುಣನು ಆಪ : ರಸ ಪಂಥೀಯ ದೈವತವಾಗಿ ರೂಪಬದಲಿಸಿಕೊಂಡಿರುತ್ತಾನೆ. ಈ ವರುಣನಲ್ಲಿ ಅಗ್ನಿಯು ತನ್ನ ಕಥೆ ನಿವೇದಿಸಿದ್ದಾನೆ; 'ಮಮ ಪೂರ್ವೇ ಭ್ರಾತರಃ ಹತಃ'; ಆದಕಾರಣ ನನ್ನ ಜೀವಕ್ಕೂ ಗಂಡಾಂತರವು ಉಂಟೆಂದು ತೋರಿ ತಾನು ನೆಲದ ಮೇಲಣ ಯಜ್ಞಕುಂಡಗಳಿಂದ ಹೊರಬಿದ್ದು ಉಲ್ಬಾದಿಗಳಲ್ಲಿ-ಆಪ : ರಸದಲ್ಲಿ ಅಡಗಿದ್ದೇನೆ, ಎಂದು ತಾನು ಅದೃಶ್ಯನಾದ ಕಾರಣವನ್ನು ಹೇಳಿದ್ದಾನೆ. ಇವನೇ 'ನ-ಚಿಕೇತ ಅಗ್ನಿ'; ಮಾನವ ದೇಹ ದೇಹಗಳಲ್ಲಿ ಹೊಕ್ಕು ಜೀವನ ಉಳಿಸಿಕೊಂಡ ಕಥೆ ಋಗ್ವೇದದಲ್ಲಿ ಇದೆ. 'ಪುರುಷಮೇಧ ಯಜ್ಞ' ವಿಚಾರ ಶತಪಥದಲ್ಲಿದೆ. ಪುರುಷ : ವಿರಾಟ್ ಬಯಸಿ, ನಾರಾಯಣನೆಂಬುವನು ಪಂಚರಾತ್ರ ಸತ್ರದ 'ಪುರುಷ ಮೇಧ' ಜರುಗಿಸಿ ಪರಿವ್ರಾಜಕನಾಗುವ ಸಂದರ್ಭದ 'ಯಜ್ಞ'ದ ಈ 'ಅಯನ'ದ ವಿಚಾರವು ಸದ್ಯಕ್ಕೆ ಇಷ್ಟು ಸಾಕು. ಋಗ್ವೇದದಲ್ಲಿ ಎರಡು ಬಗೆಯ 'ಯಜ್ಞ'ದ ಉಲ್ಲೇಖಗಳು ಇವೆ; ಅವುಗಳಲ್ಲಿ 'ಪುರುಷ' ಯಜ್ಞದ[೧೨] ಈ ದಾರಿ ಅಥವ ಅಯನವು ತತ್ಪೂರ್ವದ ಸೌರ ಸಂಪ್ರದಾಯದ ಯಜ್ಞದ ದಾರಿಗಿಂತ ತೀರ ಬೇರೆ ದಿಕ್ಕಿನದಾಗಿತ್ತು, ಎಂಬುದು ಋಗ್ವೇದಸ್ಥ ಪ್ರಮಾಣಗಳಿಂದಲೇ ಸಿದ್ಧವಾಗುತ್ತಿದೆ.

ಈ ಹಿನ್ನೆಲೆಯಲ್ಲಿ, ಗೀತೆಯೊಳಗಿನ ಒಂದು ಸಮಸ್ಯೆಯು ತನ್ನ ತಾನೇ ಅರ್ಥ ಪಡೆಯುತ್ತಿದೆ. ಗೀತೆಯ ಭಗವಂತನಿಗೆ, 'ಪ್ರಜಾನಿರ್ಮಾಣ ರೂಪ ಯಜ್ಞ' (: ಸಹ ಯಜ್ಞಾಃ ಪ್ರಜಾಃ ಸೃಷ್ಟ್ವಾ) ಮಾನ್ಯವಿತ್ತು; ಸೌರರ ಯಜ್ಞಪದ್ಧತಿ ಅಮಾನ್ಯವಿತ್ತು ಆದಕಾರಣ, ಗೀತೆ, ಆಪ : ರಸ ಪಂಥೀಯ ವೈಚಾರಿಕ ಆಕೃತಿಯ ಮಂಡನಕ್ಕಾಗಿ ಅವತರಿಸಿದ ಗ್ರಂಥ, ಎಂಬುದು ಸ್ವತಃ ಸಿದ್ಧಸಂಗತಿ. ಅಲ್ಲದೆ 'ರಸೋऽಹಂ ಅಪ್ಸು' ಎಂಬ ಭಗವಂತನು ಅಗ್ನಿ-ಸೂರ್ಯ-ಸ್ವರೂಪನಿರಲಾರನು, ಎಂಬುದೂ ನಿಶ್ಚಿತ. ಆದರೆ, 'ಆದಿತ್ಯಾನಾಂ ಅಹಂ ವಿಷ್ಣುಃ' ಎಂಬ ವಾಕ್ಯದೊಳಗಿನ 'ಆದಿತ್ಯ' ಸಂಕೇತವು ಸಂದಿಗ್ಧಾರ್ಥವುಳ್ಳುದಾಗಿದೆ; ಸೂರ್ಯನಿಗೂ 'ಆದಿತ್ಯ'ನೆಂದೇ ಹೇಳುವುದಕ್ಕೆ ಋಗ್ವೇದದಲ್ಲೇ ಮೊದಲು ಅವಕಾಶ ಕಲ್ಪಿಸಲಾಗಿದೆ! ಸೌರ ದೈವತಗಳು 'ಅದಿತಿ ಪುತ್ರರು' ಎಂಬ ಪವಾಡ ಕಥೆ ಹುಟ್ಟಿಸಿರುವಲ್ಲಿ,

---

* (ಗೀತೆಯ ವಿಷ್ಣು-ನಾರಾಯಣ-ಕೃಷ್ಣನು 'ವರುಣಃ ಯಾದಸಾಂ ಅಹಮ್' ಎಂದಿರುವುದನ್ನು ಸ್ಮರಿಸಬೇಕು. ನಾರಾಯಣ ಕನ್ಯೆ ಎಂಬ ಪುರಾಣಕಥೆಯ ಉರ್ವಶಿಗೆ ಮರುಳಾದ ವರುಣನಿಂದ ಅಗಸ್ತ್ಯ-ವಶಿಷ್ಠರು ಹುಟ್ಟಿದ ವಿವರ ಋಗ್ವೇದದಲ್ಲಿಯೆ ಇದೆ. (VII ೩೩).

ಈ ದೂರದರ್ಶೀ ಧೋರಣವು ಇಲ್ಲ ಎಂದು ಹೇಳಲು ಅವಕಾಶವಿಲ್ಲ. ಆಪ ಸ್ವರೂಪೀ ಅದಿತಿಯ ನಿಜವಾದ ಮಗನು ಚಂದ್ರ. ನಿಜವಾದ 'ಆದಿತ್ಯ'ನೆಂದರೆ ಚಂದ್ರನೇ. ಆದರೆ, ಚಂದ್ರ-ಸೂರ್ಯ ಇವರಲ್ಲಿ ಇರುವ ಅಂತರವನ್ನು ಶೂನ್ಯಗೊಳಿಸುವುದಕ್ಕಾಗಿ ಸೌರ ದೈವತಗನ್ನು 'ಆದಿತ್ಯ'ರನ್ನಾಗಿಸಿದ್ದಾಗಿದೆ! 'ಶೂನ್ಯ' ಸಂಪಾದನೆಯ ತಾತ್ತ್ವಿಕ ಭೂಮಿಕೆಯ ಪೂರ್ವಸಿದ್ಧತೆಗೆ ಋಗ್ವೇದದಲ್ಲೆ ಪ್ರಾರಂಭವಾಗಿದೆ! ಗೀತೆಯಲ್ಲಿ ಅದು ಕೊನೆ ಮುಟ್ಟಿದೆ! ಪ್ರಜಾಪತಿ: ಬ್ರಹ್ಮ ಇವರು ನೀರೊಳಗಿನ ದೈವತಗಳು. 'ಪ್ರಜಾಪತ್ಯ ಸೂರ್ಯ' ಎಂದರೆ ನೀರೊಳಗಿನ ಸೂರ್ಯನು= ಚಂದ್ರ! ಸೂರ್ಯನು=ನಾರಾಯಣನು, ಎಂಬುದು 'ಪ್ರಾಜಾಪತ್ಯ' ಸೂರ್ಯನೆಂಬ ಇನ್ನೊಂದು ರೀತಿ! ಗೀತೆಯ ಭಗವಂತನು ಹೇಳುತ್ತಾನೆ: 'ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಮ್'- ವಿವಸ್ವತನೆಂಬ ಸೌರ ದೈವತಕ್ಕೆ ಜ್ಞಾನೋಪದೇಶ ಮಾಡಿದವನು, 'ಅಹಂ', ಎಂಬ ಈ ಭಗವಂತನು. ಸ್ವತಃ ಸೌರದೈವತವಾಗಿರುವ ಶಕ್ಯತೆಯಿಲ್ಲ, ಎಂಬ ಈ ದಿಕ್ಕಿನಿಂದಲೂ ವಿಷ್ಣು-ನಾರಾಯಣ-ವಾಸುದೇವ-ಕೃಷ್ಣರು ಚಾಂದ್ರ ಸಂಪ್ರದಾಯದವರೆಂದು ಸಿದ್ಧವಾಗುತ್ತಿದೆ.

ವಿವಸ್ವಾನ್ ಎಂಬುದು ಸೌರ ದೈವತಪ್ರತಿಮೆ, ಎಂಬ ಬಗೆಗೆ ಭಿನ್ನಾಭಿಪ್ರಾಯಗಳು ಇಲ್ಲ. ಸೌರ ವಿವಸ್ವಾನನಿಗೆ ಉಪದೇಶಮಾಡುವ 'ಭಗವಂತನು' ಸೌರ-ಸಂಪ್ರದಾಯದ ದೈವತಗಳಿಗಿಂತಲೂ ತಾನು ಮಿಗಿಲಾದವನು, ಎಂದು ಸೂಚಿಸಿ ಜಗತ್ತಿನಲ್ಲಿ ತನ್ನ ಪಂಥೀಯ ಪ್ರತಿಷ್ಠೆಯನ್ನು ಬೆಳಸಿಕೊಳ್ಳುವ ಗೀತೆಯ ಈ ಪ್ರಯತ್ನದಲ್ಲಿ, ವೇದಕಾಲದ ಸೌರ ಹಾಗೂ ಚಾಂದ್ರ ಸಂಪ್ರದಾಯದೊಳಗಿದ್ದ ಏರಾಟದ ಮಾರ್ದನಿಯೆ ಕೇಳಬರುತ್ತಿಲ್ಲವೆ? ಈ ಏರಾಟವು ಯಾತಕ್ಕಾಗಿ? ವಾಮದೇವನ ಮಾತಿನಲ್ಲಿ ಧ್ವನಿತವಾಗಿರುವ 'ಅರ್ಯಾಯ ಭೂಮಿಂ' ಕೊಡಿಸಲು ಆದ ಹೋರಾಟದ ಆ ಘಟನೆಯಲ್ಲಿ, ಈ ಕಾದಾಟದ ನಿಶ್ಚಿತ ಸೂಚನೆ ಇದೆ.[೧೮] ಭಾರತೀಯ ಮೂಲದ ಚಾಂದ್ರ ಆಪ : ರಸ ಪಂಥೀಯರು ಮತ್ತು ಇಲ್ಲಿ ಇರಾಣದ ಕಡೆಯಿಂದ ನೆಲಸ ಬಂದ ಸೌರ ಅಗ್ನ್ಯಾರಾಧಕ ಪಕ್ಷೀಯರು ನೆಲಕ್ಕಾಗಿ ಕಾದಾಡಿರುವ ಐತಿಹ್ಯವು ಇಲ್ಲಿ ಸೂಚಿತವಾಗಿದೆ. ಇಂದ್ರನು ಶತ್ರುಗಳ ನೂರಾರು ಕೋಟೆಗಳನ್ನು ನಾಶಮಾಡಿ 'ಪುರಂದರ' ಹೆಸರನ್ನು ಸಾರ್ಥಕಗೊಳಿಸಿದ ಹೊಗಳಿಕೆಯ ಸೂಕ್ತಗಳು ಋಗ್ವೇದದಲ್ಲಿವೆ. ಈ ಮೊದಲು ಹೇಳಿದಂತೆ ಆಚಾರ ಸಂದರ್ಭದ ಜೀವನ ಪರಿಸರದಲ್ಲಿ ಸಂಭವಿಸುವ ಘಟನೆಗಳಿಗೆ-ಕೃತಿಗಳಿಗೆ ಸಮಾನಾಂತರವಾಗಿ ಸಾಂಸ್ಕೃತಿಕ ಪಾತಳಿಯಲ್ಲಿ ವೈಚಾರಿಕ-ತಾತ್ತ್ವಿಕ ಆಕೃತಿಯು ಇದ್ದೇ ಇರುತ್ತದೆ, ಎಂಬ ಮಾತಿನ ಪ್ರತ್ಯಂತರವು ಇಲ್ಲಿದೆ. ಋಗ್ವೇದಸೂಕ್ತದ ಇಂದಿನ ಪಾಠವನ್ನು ಸಮೀಕ್ಷಿಸಿದಲ್ಲಿ, ಐತಿಹಾಸಿಕ ಸ್ವರೂಪದ ನೆಲದ ಮೇಲಣ ಸಂಘರ್ಷವು ಆಗಿ ಹಳೆ ಮಾತಾದುದು ಕಂಡುಬರುತ್ತದೆ. ಋಗ್ವೇದದ ಇಂದಿನ ಪಾಠವು ತಾತ್ತ್ವಿಕ ಭೂಮಿಕೆಯ ಮೇಲಣ ಸಂಘರ್ಷವನ್ನೆ ಪ್ರಾಮುಖ್ಯವಾಗಿ ಕಣ್ಣೆದುರು ತರುತ್ತದೆ. ಋಗ್ವೇದ ಸೂಕ್ತಗಳ ಮೂಲಕ ಈಗ ಅರಿಕೆಗೆ ಬರುತ್ತಿರುವ ಸಂಗ್ರಾಮವು ಜೀವನದ ಅರ್ಥ : ಮೂಲ್ಯಗಳ ಸಂದರ್ಭದಲ್ಲಿ. ಸೌರ ಪ್ರತಿಮೆಗಳು ಜೀವನದ ಅರ್ಥ : ಮೂಲ್ಯ : ಸೌಂದರ್ಯವನ್ನು ಪ್ರತೀತಿಗೆ ತಂದುಕೊಡುತ್ತವೆ. 'ಸೂರ್ಯ ಆತ್ಮಾ ಜಗತಃ ತಸ್ಥುಷಃ ಚ' ಸೌರ ಪ್ರತಿಮೆಗಳು ಐಹಿಕ ಜೀವನದ 'ಆತ್ಮ' ಎಂದರೆ ಪ್ರೇರಕ ಶಕ್ತಿ. ಸೌರ ಪ್ರತಿಮೆಗಳ ನಾಮಕರಣದಲ್ಲಿಯೆ ಈ ಪಂಥೀಯರ ಬಾಳಿನ ಬಗೆಗಿನ ದೃಷ್ಟಿಕೋನವು ಸ್ಪಷ್ಟವಾಗುತ್ತದೆ. ಅಗ್ನಿಯನ್ನು ಇವರು 'ಸರ್ವಭಕ್ಷಕ' ಸಂಹಾರಕ ರೂಪದಲ್ಲಿ ಕಾಣಲು ಸಿದ್ಧರಿಲ್ಲ. ವಿವೇಕ ವಿಚಾರಗಳಿಂದ-ಪ್ರಾರ್ಥನೆಯಿಂದ ಬಾಳಿನ ನೆಮ್ಮದಿಗಾಗಿ ಅಗ್ನಿಯನ್ನು ಒಲಿಸಿಕೊಳ್ಳುವುದು ಶಕ್ಯವಿದೆ, ಎಂಬುದು ಇವರ ಶ್ರದ್ಧೆ. ಸರ್ವಭಕ್ಷಕ-ಸುಡುಗಾಡಿನ ಅಪವಿತ್ರ ಅಗ್ನಿಯನ್ನು ಊರಲ್ಲಿ ಬರಗೊಡದಿರುವ ಸಂಕಲ್ಪ ಇವರದು. ಅಗ್ನಿಯನ್ನು ಜಾತವೇದ, ಕವಿ ಪ್ರಾಚೇತಸನು, ದ್ರವಿಣೋದಾ ಎಂದು ಮುಂತಾಗಿ ಕಾಣುತ್ತಾರೆ. ಆದರೆ, ಅಗ್ನಿಯನ್ನು ನೀರಲ್ಲಿ ಕಾಣುವವರಿಗೆ ಜೀವನವು ಭವಬಂಧನ ಎಂಬ ಶ್ರದ್ಧೆ ರಕ್ತಗತವಾದುದು ಕಾಣುತ್ತದೆ. ಅಗ್ನಿಯನ್ನು ಹವ್ಯವಾಹನ ಹಾಗೂ ಕ್ರವ್ಯಾದ ರೂಪದಲ್ಲಿ ತಾರತಮ್ಯದಿಂದ ಕಾಣುವುದು ಮಾನ್ಯವಿಲ್ಲದ ಪಂಥವು ಅಗ್ನಿಯನ್ನು 'ನ-ಚಿಕೇತ'ನನ್ನಾಗಿಸಿದ್ದು-ನೀರಿಗೆ ಓಡಿಸಿದ್ದು ಆ ಭೂಮಿಕೆಗೆ ಸುಸಂಗತವಾಗಿಯೆ ಇದೆ. 'ಧಿಯೋ ಯೋ ನಃ ಪ್ರಚೋದಯಾತ್' ಎಂದು ಸವಿತೃವನ್ನು ಪ್ರಾರ್ಥಿಸುವುದು ಸೌರ ಪಂಥೀಯ ರೀತಿಯಾದರೆ, 'ನ ಮೇಧಯಾ, ನ ಬಹುನಾ ಶ್ರುತೇನ' ಎಂಬುದು ಉಪನಿಷತ್ತುಗಳ

ಬೋಧನೆ. 'ಜೀವೇಮ ಶರದಃ ಶತಮ್' ಎಂದು ಸೌರಪಂಥೀಯ ಆಕಾಂಕ್ಷೆ. 'ಅತಿದೀರ್ಘೇ ಜೀವಿತೇ ಕೋ ರಮೇತ?' ಎಂಬುದು ನ-ಚಿಕೇತ-ಸ್ಥಿತ-ಪ್ರಜ್ಞ ಪಂಥೀಯರ ಜೀವನದೃಷ್ಟಿ. ಈ ಕಾರಣದಿಂದಲೇ ಗೀತೆಯು 'ವಿರಾಟ್ ವಿಶ್ವರೂಪದ' ಸಾಕ್ಷಾತ್ಕಾರ ಮಾಡಿಸುವ ನೆಪದಲ್ಲಿ ಪ್ರಪಂಚವೆಂದರೆ ಒಂದು ಅವ್ಯಾಹತ ಉರಿಯುತ್ತಿರುವ ಸ್ಮಶಾನ ಎಂಬ ಹಾಗಿನ ಭವ್ಯ ಸಾಹಿತ್ಯಿಕ ಕೃತಿಯನ್ನು ರಚಿಸಿದ್ದಾಗಿದೆ. ಬಸವಣ್ಣನವರು ಇಂತಹ ಮುಸುಕಿನ ಮಾತಿನವರಲ್ಲ: 'ಮರಣವೇ ಮಹಾನವಮಿ' ಎಂದು ಖಾಡಾಖಾಡಿಯಾಗಿ ಹೇಳಿಬಿಟ್ಟಿದ್ದಾರೆ.

ಆಪ : ರಸ ಪಂಥೀಯ ಹಾಗೂ ಸೌರ ಪಂಥೀಯ ದೈವತ ಪ್ರತಿಮೆಗಳಲ್ಲಿ ಸ್ಪರ್ಧೆದ್ದಿತು, ಎಂಬುದನ್ನು ವಿಮರ್ಶಿಸಲು ಎರಡು 'ಅಗ್ನಿ'ಗಳ ವಿಚಾರವನ್ನು ಸಮೀಕ್ಷಿಸಿದ್ದಾಯ್ತು. ಸೌರ ಅಗ್ನ್ಯಾರಾಧನೆ ನಷ್ಟವಾಗುತ್ತದೆ. ಆಪ : ರಸ ಪಂಥೀಯ ಅಗ್ನಿಯಾಗಿ, ನೆಲದ ಮೇಲಣ ಕುಂಡಗಳಲ್ಲಿ ಇರುತ್ತಿದ್ದ ಹವ್ಯವಾಹನ ಅಗ್ನಿಯು, ಸಲಿಲ : ಸರಿರಸ್ಥ (: ಶರೀರಸ್ಥ) ಅಗ್ನಿಯಾಗಿ ಜೀವ ಉಳಿಸಿಕೊಂಡುದನ್ನು, ಋಗ್ವೇದ ಸೂಕ್ತವೆ ಹೇಳುತ್ತದೆ. ಎಂದರೆ ಇದು ಪೈಪೋಟಿಯಲ್ಲವೊ? 'ಪೂರ್ವೇ ಭ್ರಾತರಃ ಹತಃ' ಎಂಬ ಮಾತನ್ನು ಯಾಜಕರ ಅಗ್ನಿಯ ಬಾಯಲ್ಲಿ ಆಡಿಸಿದ್ದು, ಇನ್ನೂ ಉದ್ಬೋಧಕವಾಗಿದೆ. ಈ ಸ್ಪರ್ಧೆಯಲ್ಲಿ ಸೌರ ಭೂಮಿಕೆಯ ಋಗ್ವೇದವು, ಆಪ : ರಸ ಪಂಥೀಯ ಆಕೃತಿಯಾಗಿ ಪರಿಣಮಿಸಿರುವುದು, ಈ ಪೈಪೋಟಿಯು ಇದ್ದಿತೆಂಬುದಕ್ಕೆ ಇನ್ನೊಂದು ಪ್ರಮಾಣ. ಋಗ್ವೇದದಲ್ಲಿ ತೀರ ಗುಹಾನಿಹಿತ ಸಂಕೇತಗಳಾಗಿ ಅರ್ಥವು ಸ್ಪಷ್ಟವಾಗದ ಪ್ರತಿಮೆಗಳನ್ನು ವೇದವ್ಯಾಸರು, ಸ್ಪಷ್ಟೀಕರಿಸಿ, ಈ ಸ್ಪರ್ಧೆಯ ಸ್ವರೂಪವು ಬಯಲಿಗೆ ಬರಲು ನೆರವಾಗಿದ್ದಾರೆ; 'ಯಯಾವರ' ಪುತ್ರ ಜರತ್ಕಾರುವಿನ ಪ್ರತಿಮಾ : ಸಂಕೇತವು ಈ ಬಗೆಯ ಒಂದು ದೃಷ್ಟಾಂತ. ಜರತ್ಕಾರುವು ಒಬ್ಬ ನಾಗನೆಂಬುದನ್ನು ಒಪ್ಪದಿರಲು ಶಕ್ಯವಿಲ್ಲ. ಏಕೆಂದರ. ಮೂಲ ಕಥೆಯಲ್ಲೆ ಇದನ್ನು ಹೇಳಿದೆ. ಹುಟ್ಟುವ ಮಕ್ಕಳು 'ಸರೀಸೃಪ'ಗಳೇ ಎಂಬ ಹಾಗಿನ ಒಂದು ಸಂಕೇತವು ಋಗ್ವೇದದಲ್ಲಿದೆ.[೧೯] ನೆಲದ ಮೇಲಣ ಅಗ್ನಿಕುಂಡದಿಂದ ಅದೃಶ್ಯನಾದ ಅಗ್ನಿಯು ಮಾನವ ಕುಂಡದಲ್ಲಿ ಸೇರುತ್ತಾನೆ: ಘಟ (: ದೇಹ)- ಸರ್ಪ ಈ ಮಾನವ! 'ಅಗ್ನಿಯು ಉಲ್ಬದಲ್ಲಿ ಸೇರಿದ್ದಾಗಿ ಋಗ್ವೇದ ಸೂಕ್ತದಲ್ಲಿ ಹೇಳಿದ ಉಲ್ಲೇಖ ಮೇಲೆ ಬಂದಿದೆ. ಉಲ್ಬ=ಗರ್ಭಾಶಯ! ಗರ್ಭಾಶಯಸ್ಥ ಅಗ್ನಿಯನ್ನೇ ಇನ್ನೊಂದೆಡೆಯಲ್ಲಿ 'ಸರೀಸೃಪ' ಎಂದುದಾಗಿದೆ! ಆದಕಾರಣ, ಆಪ : ಸಸ್ಥ 'ಅಗ್ನಿ' ಎಂದರೆ ಸರೀಸೃಪ-ಸರ್ಪ ಎಂದು ಋಗ್ವೇದದೊಳಗಿನ ಉಲ್ಲೇಖಗಳಿಂದಲೇ ಬಹಿರಂಗಕ್ಕೆ ಬರುತ್ತದೆ! ಈ ಹಿನ್ನೆಲೆಯಲ್ಲಿ ವ್ಯಾಸರ 'ಜರತ್ಕಾರು' ಪ್ರತಿಮೆ ಇನ್ನೂ ಅರ್ಥಪೂರ್ಣವಾಗುತ್ತದೆ.

ಆದರೆ, ಸೋಜಿಗದ ಸಂಗತಿಯೆಂದರೆ 'ಋಗ್ವೇದದಲ್ಲಿ ಹಾವಿಗೆ ಗೌರವದಿಂದ ಕಾಣುವ ದೃಷ್ಟಿಕೋನವು ಇದೆ' ಎಂದು ಹೇಳಬೇಕಿದ್ದರೆ, ಅವನು ನಗಿಸಿಕೊಳ್ಳುವುದಕ್ಕೆ ಸಿದ್ಧನಿರಬೇಕು; ಅಥವಾ (ಅಜ್ಞಾನ ಜನ್ಯ) 'ಸಾಹಸಿ' ಎಂದು ಆಡಿಸಿಕೊಳ್ಳಲು ಅಳುಕಲಾಗದು, ಎನ್ನುವ ಪರಿಸ್ಥಿತಿಯಿದೆ! ಆದರೆ, ಸತ್ಯಾನ್ವೇಷಣೆಯಲ್ಲಿ ಹೆಚ್ಚಿನ ಒಂದಕ್ಕಿಂತ ಬಗೆಯ ಪ್ರಮಾಣಗಳಲ್ಲಿ ತಾಳಮೇಳ ಹೊಂದುತ್ತಿರುವಾಗ ವಿಧ್ವಂಸಕ ಟೀಕೆಗೆ-ನಿಂದೆಗೆ ನಡುಗಿ ವಾಸ್ತವ-ಸತ್ಯವನ್ನು ಬೆಳಕಿನಲ್ಲಿ ತರಲು ತತ್ತರಿಸಿದರೆ ಜ್ಞಾನವಿಕಾಸವಾಗುವುದೇ ಅಶಕ್ಯ. ಮ್ಯಾಕಡೊನೆಲ್ಲ ಪ್ರಭೃತಿ ಮಹಾನ್ ಸಂಶೋಧಕರಿಗೆ, ಋಗ್ವೇದದ ಭೂಮಿಕೆಯು, ಸರ್ಪತತ್ತ್ವ - ಜ್ಞಾನದ್ದಾಗಿದೆ, ಎಂಬುದರ ಸಂದೇಹವು ಕೂಡ ಸೋಂಕಿಲ್ಲ : " ನಾಗರ ಉಲ್ಲೇಖ ಆಶ್ವಲಾಯನ ಗೃಹ್ಯಸೂತ್ರಗಳಲ್ಲಿ ಬರುತ್ತದೆ.

> It does not seem likely that the later serpent worship had any connection with the myth of Vratra : serpent, but its development was probably due rather to the influence of the aborigines. For on the one hand there is no trace of it in the R.V., and on the other it has been found prevailing very widely among the non-Aryan Indians. The Aryans doubtless found the cult extensively

diffused among the natives who then spread over India, the land of serpents.[೨೦]

ದ್ವ್ಯರ್ಥೀ ಪದಗಳನ್ನು ಬಳಸಿ ಪ್ರಸ್ತುತ ಸಂಹಿತಾಪಾಠವು, ಎಂತಹ ಅದ್ಭುತ ಸಂಭ್ರಮಕಾರೀ ಶಬ್ದ-ಚಿತ್ರವನ್ನು ಪಾಠಕರ ಎದುರು ನಿಲ್ಲಿಸುತ್ತಿದೆ, ಎಂಬುದಕ್ಕೆ ಹಾವಿನ ವಿಚಾರವು ಒಂದೇ ಸಾಕು. ಆದರೆ, ಮ್ಯಾಕಡೊನೆಲ್ಲರು ಈಗ ಗ್ರಹಿಕೆಯಲ್ಲಿ ಎಡಹಿರುವ ಒಂದೆರಡು ಎಡೆಗಳು ಮೇಲೆಯೇ ಕಾಣುವಂತಿವೆ. ಭಾರತವು ಮೂಲತಃ 'ನಾಗರ-ಖಂಡ' (Land of Serpents) ಎಂದು ಹೇಳುತ್ತಾರೆ. ಎಲ್ಲೆಲ್ಲೂ ಹಾವಿನ ಪ್ರಭಾವವೇ ಇರುವ ಆ ಸಾಮಾಜಿಕ ಪರಿಸರದಲ್ಲೇ ಮೈದಾಳಿದ ಋಗ್ವೇದದಲ್ಲಿ, ಆ ಹಾವಿನ ಪವಾಡಗಳ ಪ್ರತಿಧ್ವನಿ ಮಾತ್ರ ಕೇಳಲು ದೊರೆಯುವುದಿಲ್ಲ ಎಂದು ಗ್ರಹಿಸಲಿಕ್ಕಾದೀತೆ? ಅಲ್ಲದೆ, ಋಗ್ವೇದ ಸಂಪ್ರದಾಯದ ಮೂಲ ಋಷಿಪರಂಪರೆ, ವೀರರ-ರಾಜರ ವಂಶ 'ಆರ್ಯರದು', ಇದ್ದಿತೆಂದರೂ ಅವರು ಈ ನಾಗ-ಭಾರತದಲ್ಲಿ ನಿಂತು ನೆಲೆಸಿದ ಕೆಲವು ತಲೆಮಾರಿನೊಳಗಾಗಿಯೆ, 'ನಾಗ'- ಕನ್ಯೆಯರನ್ನು ಮೆಚ್ಚಿ ಮದುವೆಯಾಗಲಿಲ್ಲ. 'ಶುದ್ಧ' ಆರ್ಯರಾಗಿ ಉಳಿದರು ಎಂದು ಗ್ರಹಿಸಲು ಆಧಾರಗಳೆ ಇಲ್ಲ. ಮಾನವ ಸ್ವಭಾವಕ್ಕೆ ಇದು ವಿಪರೀತ. ಸಾಮಾಜಿಕ ಜೀವನದಲ್ಲಿ ಸುತ್ತಲಿನ ಪರಿಸರದ ಪ್ರಭಾವಕ್ಕೆ ಒಳಗಾಗದೆ ಬಾಳುವುದು ಅಶಕ್ಯ. ಹೀಗೆ, ಕೇವಲ ಸಮಾಜ ಮಾನಸ ಶಾಸ್ತ್ರೀಯ ತರ್ಕಗಳ ಮೇಲೆಯೆ ಅವಲಂಬಿಸುವ ಆವಶ್ಯಕತೆಯೆ ಇಲ್ಲ. ಋಗ್ವೇದದಲ್ಲಿ ಉರ್ವಶಿಯ ಉಲ್ಲೇಖವಿದೆ. ಇವಳು ಅಪ್-ಸರೆ ಎಂಬುದೂ ಸರ್ವಮಾನ್ಯವಿದೆ. 'ಅಪ್-ಸರೆ' ಎಂಬ ವೇದಕಾಲದ ಸಂಕೇತವೆ ಮಹಾಭಾರತದಲ್ಲಿ 'ನಾಗಕನ್ಯೆ'ಯ ರೂಪ ತಾಳುತ್ತದೆ. ಅಲ್ಲದೆ, ಪುರಾಣಕಥೆಯ ಮೇರೆಗೆ ಅಪ್-ಸರೆ : ಉರ್ವಶಿ, ನಾರಣ ಕನ್ಯೆ! ನಾರಣ ದೈವತ ನಾಗ ಸ್ವರೂಪದ ಬಗೆಗಿನ ಸಂದೇಹಕ್ಕೆ ಅವಕಾಶವೆ ಇಲ್ಲ.

ಮಾಕಡೋನೆಲ್ ಅವರು ದೈವತ ಪ್ರತಿಮಾ : ಸಂಕೇತಗಳನ್ನು ಪುರಾಣ ಪವಾಡ ಕಥೆಗಳನ್ನು ತಮ್ಮ ಸಂಶೋಧನೆಯಲ್ಲಿ ಉಪಯೋಗಿಸಿಕೊಂಡಿದ್ದರೆ, ಅವರು - ಋಗ್ವೇದದಲ್ಲಿ 'ನಾಗ' ಸಂಪ್ರದಾಯದ ಸುಳಿವೆ ಇಲ್ಲ ಎಂದು ಹೇಳಲು ಶಕ್ಯವಿರುತ್ತಿರಲಿಲ್ಲ. ಗ್ರೀಕ್ - ಇಜಿಪ್ತ ಹಾಗೂ ಬ್ಯಾಬಿಲೋನ ಸಂಸ್ಕೃತಿಗಳೊಳಗಿನ ಆಪ : ರಸ ಹಾಗೂ ನಾಗ ಪ್ರತಿಮಾ : ಸಂಕೇತದ ನೆರವು ಪಡೆಯಬಹುದಿತ್ತು, ಅದನ್ನೂ ಅವರು ಲೆಕ್ಕಿಸಿಲ್ಲ. ಈ ಬಾಹ್ಯ ಪ್ರಮಾಣಗಳನ್ನು ಬಿಟ್ಟರೆ ಋಗ್ವೇದದ ಅದಿತಿಯ 'ಅಯಂ ಗೌಃ ಪೃಶ್ನಿಃ' ರೂಪದಲ್ಲಿ 'ಸಾರ್ಪರಾಜ್ಞೀ' ಯಾದುದನ್ನು ಅವರು ದುರ್ಲಕ್ಷಿಸಿದ್ದು ಮಾತ್ರ ಸೋಜಿಗದ್ದಾಗಿದೆ. ಒಂದು ಹೀಗೂ ಶಕ್ಯತೆಯಿದೆ. ಅವರು Vedic Mythology ಪ್ರಕಟಿಸಿದ ತರುವಾಯ 'ಬೃಹದ್ದೇವತಾ' ಗ್ರಂಥವನ್ನು ಭಾಷಾಂತರಿಸಿರಬೇಕೇನೊ; ಅದರ ಪ್ರಕಟನೆಯ ವರುಷ ನೋಡಲು ಆಗಿಲ್ಲ; ವೇದದ ಪವಾಡ ಕಥೆಗಳು ಪ್ರಕಟವಾದುದು ೧೮೯೭ರಲ್ಲಿ. ಬೃಹದ್ದೇವತೆಯಲ್ಲಿ ಸಾರ್ಪರಾಜ್ಞೀ ದೈವತದ ವಿಚಾರ ಬಂದಿದೆ. ಈ ಗ್ರಂಥಕ್ಕೆ ಅವರು ಬರೆದ ಮುನ್ನುಡಿಯಲ್ಲಿ, ವೇದದ ಅರ್ಥಗ್ರಹಣಕ್ಕೆ, ಬೃಹದ್ದೇವತಾ ಗ್ರಂಥದಿಂದ ಅಪೂರ್ವ ಬೆಳಕು ದೊರೆಯಬಲ್ಲುದು, ಎಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಋಗ್ವೇದದಲ್ಲಿ ಒಂದು 'ಸಾರ್ಪರಾಜ್ಞೀ' ಸೂಕ್ತಕ್ಕೆ ಸ್ಥಾನ ದೊರೆಯುತ್ತದೆ, ಎಂಬ ಒಂದು ಸಂಗತಿಯೆ ಸಾಕು. ಋಗ್ವೇದದಲ್ಲಿ 'ಸರ್ಪ' ಪ್ರತಿಮಾ ಪೂಜೆಯ ಉಲ್ಲೇಖವಿಲ್ಲ ಎಂಬ ಮ್ಯಾಕಡೊನೆಲ್ಲರ ಮತವು ನಿರಾಧಾರವೆಂದು ಸಿದ್ಧಪಡಿಸಲು.

ವಾಸ್ತವ : ಸತ್ಯ ನಿರ್ಣಯಿಸಿಕೊಳ್ಳುವ ಶಾಸ್ತ್ರೀಯ ಸ್ವರೂಪದ ಒಂದು ವಿಧಾನ

ಈ ವೇದದ ಪವಾಡ ಕಥೆಗಳು ಪ್ರಕಟವಾಗಿ ಎಪ್ಪತ್ತು ವರುಷ ಉರುಳಿದುವು. ಈ ಅವಧಿಯಲ್ಲಾದ ಸಂಶೋಧನದ ಲೆಕ್ಕ ಹಿಡಿದು ಹೊಸ ಆವೃತ್ತಿ ಹೊರಡಿಸುವ ಆವಶ್ಯಕತೆಯನ್ನು ಎಲ್ಲ ವಿದ್ವಾಂಸರೂ ಒಪ್ಪುತ್ತಾರೆ. ಅಲ್ಲದೆ, ತೀರ ಇತ್ತೀಚೆಗೆ ಮೈದಾಳಿರುವ ಪ್ರತಿಮಾ : ಸಂಕೇತಶಾಸ್ತ್ರವು, ಸಂಶೋಧನದ ಅತ್ಯಂತ ಸೂಕ್ಷ್ಮ ಅಮೋಘ ಸಾಧನವಾಗಿ ತನ್ನ ಉಪಯುಕ್ತತೆಯನ್ನು ವಿಚಿಕಿತ್ಸಕರ ನಿದರ್ಶನಕ್ಕೆ ತಂದುಕೊಡುತ್ತಲಿದೆ. ಪ್ರಸ್ತುತ, 'ನಾಗ' ಪ್ರತಿಮೆಯ ಮೂಲಕ ಋಗ್ವೇದದೊಳಗಿನ ಅನೇಕ ಸಂದಿಗ್ಧ ಸಮಸ್ಯೆಗಳಿಗೆ ದೊರೆಯುತ್ತಿರುವ ಉತ್ತರವೇ

ಇದಕ್ಕೆ ಸಾಕ್ಷಿ. ಸಾಂಸ್ಕೃತಿಕ ಅಥವಾ ಐತಿಹಾಸಿಕ ಸ್ವರೂಪದ ಸತ್ಯಾನ್ವೇಷಣೆಯಲ್ಲಿ ಆ ಸಂಶೋಧನೆಯಲ್ಲಿ ಕಂಡುಬಂದುದನ್ನು 'ಸತ್ಯ' ಎಂದು ನಂಬುವುದು ಹೇಗೆ? ಏಕೆ? ಎಂಬ ಪ್ರಶ್ನೆಯು, ಜಗತ್ತಿನ ಚಿಕಿತುಷೀ ವಿದ್ವಾಂಸರನ್ನೆಲ್ಲ ಕಾಡಿದೆ, ಅದಕ್ಕೆ ಉತ್ತರವನ್ನು ಕಂಡುಹಿಡಿಯಲಾಗಿದೆ. ಯಾವ 'ಅನುಮಾನಿತ ಸತ್ಯವು' (hypothesis), ಒಂದಕ್ಕಿಂತ ಹಲವು ಸಮಸ್ಯೆಗಳ ಪರಿಹಾರಕ್ಕೆ ಬೆಳಕನ್ನು ನೀಡಬಲ್ಲುದೊ, ಆ 'ಅನುಮಾನಿತ' ಸತ್ಯವು, ಅನು-ಮಾನವಾಗಿಯೆ ಉಳಿಯದೆ, ವಿಶ್ವಾಸಾರ್ಹ-ಗ್ರಾಹ್ಯ ವಾಸ್ತವ ಕೋಟಿಯೊಳಗಿನ ಅಂಶವಾಗುತ್ತದೆ. ಹರ್‌ಬರ್ಟಸ್ಪೆನ್ಸರನು ಹೇಳಿರುವ ಅನುಮಾನಿತ ಸತ್ಯದ ಈ ಲಕ್ಷಣಗಳು, ವಿದ್ವಾಂಸರ ವರ್ಗಕ್ಕೂ ಮಾನ್ಯವಾಗಿ, ಯುರೋಪಿನಲ್ಲಿ ಕಳೆದ ಹಲವು ದಶಕಗಳಿಂದ ಈ ವಿಚಾರವು ಸ್ವೀಕೃತವಾಗಿದೆ. ಆದರೆ 'ಪಾಶ್ಚಾತ್ಯರ ವಿಚಾರ' ಸ್ವೀಕರಿಸಿದಂತಾದೀತೆಂಬ ಭೀತಿಯಿಂದ ನಮ್ಮ ಸಂಪ್ರದಾಯ ಶರಣ ವಿದ್ವನ್ಮಂಡಲಿಯಲ್ಲಿ ಸಂಸ್ಕೃತಿ-ಇತಿಹಾಸದ ಕ್ಷೇತ್ರದ ಸಂಶೋಧನೆಯಲ್ಲಿ ಈ 'ಅನುಮಾನಿತ ಸತ್ಯ'ದ ಭೂಮಿಕೆಯನ್ನು ದೂರ ಅಸ್ಪೃಶ್ಯ ಕ್ಷೇತ್ರದಲ್ಲಿ ಇರಿಸಿರುವಂತೆ ಕಾಣುತ್ತದೆ. 'ಕರ್ಣಾಟಕ ಸಂಸ್ಕೃತಿಯ ಪೂರ್ವಪೀಠಿಕೆ' ಭಾಗ ವಿಮರ್ಶಕರೊಬ್ಬರು 'ಅನುಮಾನಿತ' ಸತ್ಯ ಎಂಬುದನ್ನು 'ಅನುಮಾನ ಸತ್ಯ' ಎಂದು ಬರೆದು ವಿಕೃತಗೊಳಿಸುತ್ತಾರೆ! ಅನುಮಾನವೇ 'ಸತ್ಯ' ಎಂದೂ ಆಗಲಾರದು. ಅನೇಕ ವಿಧದಿಂದ, ವಿವಿಧ ದಿಕ್ಕುಗಳಿಂದ ಅನುಮಾನಿತ=ಅಳೆದು ಮಾನದಂಡದಿಂದ ಮಾ-ಪು ಮಾಡಿದ ಸಂಗತಿಗಳಿಂದ, ಒಂದಕ್ಕೊಂದು ಸು-ಸಂಗತ, ಸು-ಸಂಬದ್ಧವಾಗಿ ಇರುವ ಏನೊಂದು ವಿಚಾರವು ಸುಸ್ಪಷ್ಟವಾಗಿ ಹಲವರಿಗೆ ಕಾಣುವಂತಾದಾಗ ಅದು ಅನುಮಾನ-ಸತ್ಯವಂತೂ ಅಲ್ಲವೇ ಅಲ್ಲ; ಅನುಮಾನಿತ ಸತ್ಯದ ಭೂಮಿಕೆಯಿಂದ ಸಿದ್ಧವಾದ ವಾಸ್ತವ ಕೋಟಿಯೊಳಗಿನ ಒಂದು 'ಸಂ-ಗತಿ' ಆಗುತ್ತದೆ

ಡಾ. ಬೊಶ್ಚ್, 'ಹಿರಣ್ಯಗರ್ಭ' ಪ್ರತಿಮಾ ಸಂಕೇತವನ್ನು ಕುರಿತು ಮಾಡಿದ ಸಂಶೋಧನೆಯಲ್ಲಿ 'ಅನುಮಾನಿತ' ಸತ್ಯದ ಈ ವ್ಯಾಖ್ಯೆಯನ್ನು ಸ್ಪೆನ್ಸರರಿಂದ ಸ್ವೀಕರಿಸಿದ್ದಾಗಿ ಸೂಚಿಸಿದ್ದಾನೆ:

> Accumulated facts lying in disorder begin to assume some order when a hypothesis is thrown among them".

ನನ್ನ ಈವರೆಗಿನ ಅನ್ವೇಷಣೆಯಲ್ಲಿ ಆತ್ಮವಿಶ್ವಾಸವನ್ನು ದೃಢಪಡಿಸುತ್ತ ಬಂದಿರುವ ವಾಸ್ತವ : ಸತ್ಯವನ್ನು ನಿರ್ಧರಿಸಿಕೊಳ್ಳುವಲ್ಲಿ ನೆರವಾದ ವಿಧಾನವೆ ಇದು. 'ನರ್ಮದಾ ಪರಿಸರದಲ್ಲಿ ಕಂನಾಡ ಮೂಲ ಆಕೃತಿಯು ಮೈದೋರತೊಡಗಿರಬೇಕು' ಎಂಬ ಈ ಸಂಗತಿಯ ಸ್ವೀಕಾರದಿಂದ ದೊರೆಯುತ್ತಿರುವ ಬೆಳಕಿನಲ್ಲಿ ಆಗುತ್ತಿರುವ ಸಮಸ್ಯಾ-ಪರಿಹಾರವನ್ನು ಅಲ್ಲಗಳೆವ ಒಂದು ಪ್ರಯತ್ನವೂ ಆಗಿಲ್ಲ ಟೀಕಾಕಾರರಿಂದ! ಮರ್ಹಾಠಿಯೊಳಗಿನ ಸ್ಥಳನಾಮ, ಭಾಷೆಯಲ್ಲಿರುವ ಆಖ್ಯಾತಾದಿಗಳು, ಮೈಲಾರಾದಿ ದೈವತಗಳು ಕರ್ಣಾಟ ಸಂಸ್ಕೃತಿಗೆ ಹತ್ತಿರದುವು. ಇದನ್ನು ಮರಾಠಿಗರು (ಇಂದಿನ) ಕರ್ಣಾಟದಲ್ಲಿ ಬಂದು ಸ್ವೀಕರಿಸಿ ಮರಳಿ ಮಹಾರಾಷ್ಟ್ರಕ್ಕೆ ಹೋದರು, ಎಂದು ಅರ್ಥಯಿಸುವುದು ಲೇಸೊ? ಕರ್ಣಾಟ ಸಂಸ್ಕೃತಿ-ಜನ ಅಲ್ಲಿಯೆ, ಒಂದು ಕಾಲಕ್ಕೆ ಇರಬೇಕು, ಎಂದು ಒಪ್ಪುವುದು ಲೇಸೊ? ಈ ಪ್ರಶ್ನೆಗೆ ಉತ್ತರವನ್ನೀಯದೆಯೆ, ಒಬ್ಬ ಪ್ರಾಧ್ಯಾಪಕರು, ಮೈಲಾರ ಉಜ್ಜಯಿನಿಯತ್ತಣನವನು, ಎಂಬುದನ್ನು ನಂಬುವುದು ಹೇಗೆ? ಎನ್ನುತ್ತಾರೆ! 'ಗೋದಾವರಿವರಂ ಕಂನಡದ ಜನಪದ ಇದ್ದಿತೆಂದು' ಕವಿರಾಜಮಾರ್ಗದ ವಿಚಾರವನ್ನು, 'ಅತಿಶಯೋಕ್ತಿ' ಎಂದು ಸಿದ್ಧಪಡಿಸುವ ವರೆಗೆ ಮೇಲಣ ಅನುಮಾನಿತ ಸತ್ಯವನ್ನು ಸಂದೇಹಿಸುವ ಅಧಿಕಾರವೆ ಬರಲಾರದು.

'ಅದಿತಿ ಆದಿಮಾತೆ' ಇದನ್ನು ನಂಬುವುದು ಹೇಗೆ? ಎಂದು ಅವರ ಸಂದೇಹ!

'ಅಹಲ್ಯಾ, ದ್ರೌಪದಿ, ಸೀತಾ, ತಾರಾ, ಮಂಡೋದರಿ'
ತಥಾ ಪಂಚ ಕಂ ನ್ಯಾ ಸ್ಮರೇತ್ ನಿತ್ಯಂ ಸರ್ವಪಾಪ ವಿನಾಶನಮ್'

ಎಂಬ ಈ ಐದು ಆಪಸ್ವರೂಪೀ 'ಕಂ' ಪ್ರತಿಮೆಗಳ ಪಾತಿವ್ರತ್ಯದ ಬಗೆಗಿನ ಶಂಕೆಯನ್ನು ಪ್ರೊ. ಬ್ಯಾತನಾಳ ಎತ್ತಿ, ಅದನ್ನು ಅರ್ಥಯಿಸಿಕೊಳ್ಳುವ ಪ್ರಯತ್ನಪಟ್ಟಿದ್ದಾರೆ.[೨೧] ಆದರೆ, ಪುರಾಣಯುಗದೊಳಗೆ ಮಾರ್ಪಟ್ಟ

ಪ್ರತಿಮಾ : ಸಂಕೇತಗಳ ಬಲದಿಂದ ಆ ಪಂಚ 'ಕಂ' (ಅಥವಾ ಕನ್ಯಾ) ಸಮಸ್ಯೆಗೆ ಸಮರ್ಪಕ ಉತ್ತರವು ದೊರೆಯಲಾರದು. ಇದರ ಹಿನ್ನೆಲೆ ನಿಶ್ಚಿತವಾಗಲು ಋಗ್ವೇದದ ಅದಿತಿ, ಸರಸ್ವತಿ, ಅಂಭೃಣಿಯರೆ ಹಾಗೂ ವೇದದ ಹೊರಗಿನ ಶ್ರೀಲಕ್ಷ್ಮೀ, ಕಾಲಿಯರ ಸಮಗ್ರ ಸಮೀಕ್ಷೆ ಅವಶ್ಯ. ಇವರು ಐವರು ಕನ್ಯಾಪರಮೇಶ್ವರಿಯರು! ನಿತ್ಯ ಕುಮಾರಿಯರು. ಆದರೂ ಲೋಕ ಮಾತೆಯರು! ಕ್ರೈಸ್ತನ ತಾಯಿ ಮೇರೀ, ಕುಮಾರಿ ತಾನೆ? ಆದರೆ, ವೇದಕಾಲದ ತರುವಾಯ ಮಾತೃಪ್ರಧಾನ ಕುಟುಂಬ ಪದ್ಧತಿ ಅಪ್ರತಿಷ್ಠಿತವಾಯಿತು. ಆದರು, ಆ ಸಂಪ್ರದಾಯವನ್ನು ಸನಾತನವಾಗಿ ಉಳಿಸಿಕೊಳ್ಳುವ ಹಟದಲ್ಲಿ ಆ 'ಕಂ' ಆಪ: ರಸ ಪಂಥೀಯ ನಡೆವಳಿ ಸಾಂಕೇತಿಕವಾಗಿಯಾದರೂ ಉಳಿದು ಬಂದಿದೆ. ಕೆಲವೊಂದು ಸುಧಾರಿಸಿದ ರೀತಿಯಲ್ಲಿ, ಇಂದಿಗೂ! ಹುಟ್ಟಿಗೆ ಕಟ್ಟಿಕೊಂಡು ಏಕಾಂತದಲ್ಲಾದರೂ ಎಲ್ಲಮ್ಮನ ಪೂಜೆ, 'ಅ-ಪರ್ಣಾ' ಸ್ವರೂಪದಲ್ಲೇ ಮಾಡುವ ರೂಢಿ ಇಂದೂ ಇಲ್ಲವೊ? ಗಂಡನ ಸಮ್ಮತಿಯಿಂದ 'ನಿಯೋಗ'. ಇದು ಆ ಕುಮಾರೀ ಯುಗದ ಒಂದು ರೂಢಿ, ಮಹಾಭಾರತ ಕಾಲದ ವರೆಗೂ ಉಳಿದು ಬಂದದ್ದು! ಇದೇ 'ನಾಗ' ಸಂಪ್ರದಾಯ ರಹಸ್ಯ! ಅಹಲ್ಯೆ ನಾಗ: 'ಕುಮಾರೀ' ಸಂಪ್ರದಾಯದ ಒಬ್ಬ ಕನ್ಯೆ, ಅಷ್ಟೆ, ಇದರ ಅರ್ಥ.

'ನಾಗ' ಸಂಪ್ರದಾಯದ ಅಸ್ತಿತ್ವವನ್ನು ಮಾನ್ಯಮಾಡದೆ ಋಗ್ವೇದದಿಂದ ತೊಡಗಿ ಮಹಾಭಾರತ-ಪುರಾಣಗಳ ವರೆಗಿನ ಆಪ : ರಸ ಪಂಥೀಯ ಆಚಾರ-ವಿಚಾರಗಳ ಅನ್ವಯಾರ್ಥವೇ ಆಗದು. ಗ್ರೀಕ್-ಈಜಿಪ್ಟ್‌ನತ್ತಣಿನ ಪುರಾತನ ಪವಾಡ ಕಥೆಗಳಲ್ಲಿ ಆಪೋದೇವಿಯರುಂಟು. ಇವರು 'ನಾಗೀ'ಗಳು. 'ನಾಗ'ನ ಸಂಬಂಧದಲ್ಲಿ ಸೃಷ್ಟಿ ನಿರ್ಮಾಣ ಮಾಡುತ್ತಾರೆ. ಇವರೂ ನಿತ್ಯ 'ಕುಮಾರಿಯರು;' 'ಅದಿತಿ' ಆಪೋದೇವಿ : ಲೋಕಮಾತೆ; ಸರ್ಪರೂಪಳು; ಋಗ್ವೇದದಲ್ಲಿ ರುದ್ರನ ಸಂಗಾತಿ[೨೨] ಅದಿತಿ ವಿಷ್ಣುವಿನ ವೇಶ್ಯೆ[೨೩] ಬಳಿಕ ವಿಷ್ಣುಪತ್ನಿ[೨೪] 'ವೇಶ್ಯೆ ಅಥವಾ 'ಪತ್ನಿ' ಈ ಮಾತಿಗೆ ಮಾತೃಪ್ರದಾನ ಕುಟುಂಬ ಪದ್ಧತಿಯಲ್ಲಿ ಅರ್ಥವೇ ಆಗದು. ಈ ಸಂಕೇತಗಳನ್ನು ರೂಢಿಸಿದವರು ಪಿತೃಪ್ರಧಾನ ಕುಟುಂಬ ಪದ್ಧತಿಯವರು! ಮೂಲದಲ್ಲಿ ಇದು ಕುಮಾರೀ ಕುಮಾರ ಸಂಪ್ರದಾಯ. ರುದ್ರನು 'ಕುಮಾರ' ಎಂದು ಎಲ್ಲರೂ ಬಲ್ಲರು. ವಿಷ್ಣುವೂ ನಿತ್ಯ 'ಯುವಾ'[೨೫] ಅದಿತಿಯಾಗಲಿ, ರುದ್ರ-ವಿಷ್ಣುಗಳಾಗಲಿ 'ಚಂದ್ರ' ಸ್ವರೂಪರು, ಎಂಬುದನ್ನು ಸ್ಮರಿಸಿಕೊಂಡರೆ ಅವರ ಈ ಕಾವ್ಯಮಯ "ಮಧು-ಚಂದ್ರ" ಕೃತಿಗಳ ಬಗೆಗಿನ ಅಶ್ಲೀಲತೆಯ ತೀವ್ರತೆ ಕಡಿಮೆಯಾಗದಿರದು. ಚಂದ್ರ (: ಚಂದಾ) ನಿತ್ಯತರುಣೆ; ಪುಲ್ಲಿಂಗಿ ಎಂದರೆ ನಿತ್ಯ ತರುಣ. ಇಪ್ಪತ್ತೇಳು 'ತಾರೆ'ಯರೊಡನೆ ಆತನು ಕ್ರೀಡಿಸುವ ಪುರಾಣ ಕಥೆಯುಂಟು. ಋಗ್ವೇದದಲ್ಲಿ ವಿಷ್ಣುವನ್ನು 'ನ ಮರ್ಧಂತಿ ಯುವತಯಃ ಜನಿತ್ರೀ' ಎಂದು ವರ್ಣಿಸಿದ್ದುಂಟು.[೨೬] 'Early Vishnuism' ಎಂಬ ಸುಂದರ ಗ್ರಂಥದ ಸಂಪಾದಕನಾದ ಜೆ. ಗೊಂಡಾ ಮೇಲಣ ಋಗ್ವಾಕ್ಯದ ಭಾಷಾಂತರ ಮಾಡಿರುವುದು ಹೀಗೆ : "Vishnu to whom young women, the mother are not remiss". ವಿಷ್ಣುವಿಗೆ 'ಸುಮಜ್ಜಾನಿ' ಎಂದು ಹೇಳಿರುವಲ್ಲಿ "Vishnu to whom belong many women" ಎಂದೂ ಅವರೆ ಭಾಷಾಂತರಿಸಿದ್ದಾರೆ. ಅದಿತಿ, ರುದ್ರ, ವಿಷ್ಣು, ಇವರು ಆಪ : ರಸ: ಚಂದ್ರ : ಸರ್ಪ ಸ್ವರೂಪಿಗಳು. ಆದಕಾರಣ ಈ ಕುಮಾರೀ-ಕುಮಾರ ಪರಂಪರೆಯು ನಾಗ ಸಂಪ್ರದಾಯವೆಂಬುದು ನಿಶ್ಚಿತ.

ಗರತಿಯ ಹಾಡುಗಳನ್ನು ಮಾತ್ರ ಜಾನಪದಗೀತೆಗಳು, ಎಂದು ಮೊದಲು ಗ್ರಹಿಸಿಕೊಂಡವರು, ಮೈಸೂರಿನ ಕ. ರಾ. ಕೃಷ್ಣಸ್ವಾಮಿ ಪ್ರಭೃತಿಗಳು ಪ್ರಕಟಿಸಿರುವ ಹಳ್ಳಿಯ ಹಾಡುಗಳಲ್ಲಿ 'ಅಶ್ಲೀಲ'ವು ತುಂಬಿಕೊಂಡಿದೆ! ಎಂದು ಗೊಣಗುವುದು ಕೇಳಬರುತ್ತದೆ. ಆದರೆ, ನಿನ್ನೆಗಳ ಫಲಿತವೆ ಇಂದು ತಾನೆ? ಇಂದಿನ ಬೇರು ನಿನ್ನೆಗಳ ಆಳದಲ್ಲಿ ಕಾಣಲೇ ಬೇಕಷ್ಟೆ?.... ನಾಗ ಪ್ರತಿಮಾ ಪೂಜೆಯು ಹಳ್ಳಿಪಳ್ಳಿಗಳ ವರೆಗೂ ಉಂಟಲ್ಲ! 'Accumulated facts lying in disorder' : ಋಗ್ವೇದದ ಅದಿತಿ, ರುದ್ರ, ವಿಷ್ಣು: ಅಥರ್ವವೇದದ ಬ್ರಹ್ಮಚಾರಿ, ಪುರಾಣ ಕಥೆಗಳಲ್ಲಿ ಕಾಣುವ ದೇವತಗಳ ಕ್ರೀಡಾ ವಿಲಾಸ, ಋಷಿ ಮುನಿಗಳ ಪ್ರಣಯ ಕೇಳಿ : ಸ್ತ್ರೈಣ ವೃತ್ತಿ, ಮಧ್ಯಯುಗದ 'ಮಧುರಾ ಭಕ್ತಿ'ಯ ಚೈತನ್ಯ ಸಂಪ್ರದಾಯದ ಬಗೆಯ ಪಂಥಗಳು, ಹಳ್ಳಿಯ ಹಾಡುಗಳಲ್ಲಿ ಬರುವ ಭಕ್ತರು

ಬಸವಣ್ಣನಂತಹ ವಿರಾಗಿಗಳು....., ಗುರುವಿಗೆ ಸರ್ವಸಮರ್ಪಣ ಮಾಡುವಲ್ಲಿ ಮಡದಿಯ ಸಮರ್ಪಣೆಯೂ ಆಗುತ್ತದೆ, ... ಹಾಗೂ ಆಹಾರ, ನಿಯಮ... ಇರುವಲ್ಲಿ ಇಂದಿನ ಹಾಗೂ ಹಿಂದಿನ ನಡವಳಿ-ಮಡಿವಂತಿಕೆಗಳ ಒಳ್ಳೆಯ ಪ್ರೇರಣೆಯು ಇಂಥವು ಯಾವುದು? ಇದರ ಅರ್ಥವೆ ಅವರಿಗೆ ಆಗುತ್ತಿಲ್ಲ, ನಾಗ-ಪ್ರತಿಮಾ-ಪೂಜೆಯ ಹಿನ್ನೆಲೆ ಬೆಳಕಿನಲ್ಲಿ ಇವೆಲ್ಲವುಗಳ ಅನ್ವಯಾರ್ಥವು ಸ್ಪಷ್ಟವಾಗಿ ಆಗುತ್ತಲಿದೆ.

ಅಥವಾ : ಲಿಂಗ ಸಂಬಂಧೀಯ ಪ್ರತಿಮೆಗಳು, ಸೂರ್ಯನನ್ನು ಪ್ರತ್ಯಕ್ಷವಾಗಿ ದ್ವೇಷಿಸುತ್ತಿರುವುದರ ಕಾರಣವೇನು? ನಹುಷನು ಸೂರ್ಯನನ್ನು ಆವರಿಸಿ, ಕತ್ತಲೆಯನ್ನುಂಟು ಮಾಡಬಾರದೆಂದು, ಇಂದ್ರನು ವೃತ್ರ : ಅಹಿಯನ್ನು ತುಂಡುಗಳನ್ನಾಗಿ ಸಂಹರಿಸಲು ಹೋಗುತ್ತಾನೆ, ಇದರ ಅರ್ಥವೇನು? ಈ ಸಂಪ್ರದಾಯವು ಸೂರ್ಯನನ್ನು ಗ್ರಹಣಗ್ರಸ್ತನನ್ನಾಗಿಸಿರುವ ಕಾರಣವಾವುದು? ಇದೆಲ್ಲವೂ ನಾಗ ಸಂಪ್ರದಾಯದ ಮುಕ್ತಾಚಾರ ವಿಚಾರಗಳ ಹಿನ್ನೆಲೆಯಲ್ಲಿ ಬಯಲಿಗೆ ಬರುತ್ತಲಿದೆ. ಋಗ್ವೇದದ ವಿಷ್ಣು ಸ್ತೋತ್ರಗಳ ಕವಿಯ ಹೆಸರು 'ದೀರ್ಘತಮಸ್'! ಇವನು ಕುರುಡನಂತೆ! ಈತನ ಜನ್ಮಕಥೆಯಲ್ಲದೆ ಇವನ ಚರಿತೆಯು ಸಹ ಮುಕ್ತಸಂಗದ ಒಂದು ಮಾದರಿ (model) ಆಗಿದೆ. ಋಗ್ವೇದದ ಮುನಿಸೂಕ್ತದಲ್ಲಿ ಅವರು 'ಪಿಶಂಗಾಃ ವಸತೇ ಮಲಾಃ' ಎಂದು ವರ್ಣಿಸಿದ್ದುಂಟು; ಅಲ್ಲದೆ, ಇವರ ಆಚರಣೆಯ ರೀತಿಯನ್ನು 'ಅಪ್ಸರಸಾಂ ಗಂಧರ್ವಾಣಾಂ, ಮೃಗಾಣಾಂ, ಚರಣೇ ಚರನ್' ಎಂದು ಇವರ ಲೋಕ ವಿಲಕ್ಷಣ ಅ-ಲೌಕಿಕ ಮಾರ್ಗ ಸೂಚ್ಯವಾಗಿ ನಿರ್ದೇಶಿಸಲಾಗಿದೆ. ವೇದಕಾಲದಲ್ಲಿ 'ನಾಗ ಸಂಪ್ರದಾಯದ ಅಸ್ತಿತ್ವವನ್ನು ಒಪ್ಪಿಕೊಂಡಲ್ಲದೆ ಈ ಅನೇಕ ವಿಚಿತ್ರ ಆಚಾರ-ವಿಚಾರಗಳ ಅರ್ಥವೇ ಆಗಲಾರದು.

ಭಾರತೀಯ ಸಂಸ್ಕೃತಿಯ ಪ್ರೇರಕ ಸ್ಥಾನಗಳಂತಿರುವ ಪ್ರತಿಮೆಗಳಲ್ಲಿ ಎರಡು ವಿಧವಾದ ಸಂಕೇತಗಳಿವೆ: ಬಾಳು ಕ್ಷಣಿಕ, ಮೃತ್ಯುಸ್ವರೂಪ. ಆದಕಾರಣ, ಇದರಲ್ಲಿ ಅರ್ಥವಿಲ್ಲ; ಬಾಳು ಇದುವೆ ಅನೃತ ಅಥವಾ ಮಾಯಾ ರೂಪವಾಗಿದೆ. ಆದುದರಿಂದ 'ಸತ್ಯ' ಎಂಬುದನ್ನು ಭೂಲೋಕದಲ್ಲಿ ಕಾಣಲು ಶಕ್ಯವಿಲ್ಲ. ಈ ಭೂಮಿಕೆಯಲ್ಲಿ ಎರಡು ತುದಿಯ ಪ್ರತಿಮೆಗಳು ಶಕ್ಯ :

೧. ಆತ್ಯಂತಿಕ ವೈರಾಗ್ಯ, ಆತ್ಯಂತಿಕ ಬ್ರಹ್ಮಚರ್ಯ, ಈ ಬ್ರಹ್ಮಚರ್ಯದ ಇನ್ನೊಂದು ಮಗ್ಗುಲು ಆತ್ಯಂತಿಕ ಅಹಿಂಸೆ. ಆಪ : ರೇತವು ದಿವ್ಯಜೀವನ-ಸತ್‌ತ್ವವುಳ್ಳುದು: 'ಸರೀಸೃಪ' : ಜೀವ ನಿರ್ಮಾಣದ 'ದಿವ್ಯ' ಶಕ್ತಿ. ಇದನ್ನು ನಾಶ ಮಾಡಲಾಗದು. ಅಧೋರೇತವು ಅಧಃಪಾತ. ಆದಕಾರಣ 'ಊರ್ಧ್ವರೇತ' ಸಾಧನೆ: ಬ್ರಹ್ಮಚರ್ಯ ಬಾಳಗುರಿ.

೨. ಇದಕ್ಕೆ ಪ್ರತಿಯಾಗಿ ಇನ್ನೊಂದು ಪ್ರೇರಣೆಯೂ ಈ ಭೂಮಿಕೆಯಲ್ಲಿದೆ: 'ಯದಾ ಯದಾ ಹಿ ಧರ್ಮಸ್ಯ ಗ್ಲಾನಿ' ಆಗ ಪರಮಾತ್ಮನು ಜಗದೋದ್ಧಾರಕನು ಹುಟ್ಟುತಾನೆ; ಆದಕಾರಣ 'Sin for salvation'; ಮುಕ್ತನಾಗಲು, ಮುಕ್ತಸಂಗನಾಗಿ ಆಚರಿಸಲು ಅಡ್ಡಿಯಿಲ್ಲ; ರಾಸಪುತಿನ್ ಎಂಬ ರಶಿಯದ ಮಹಾಪುರುಷ ಈ ಬಗೆಯ ಉಪದೇಶ ಮಾಡಿದ್ದುಂಟು.

೩. ಇನ್ನೊಂದು ಪ್ರಕಾರ : ವಿಕೃತಾಚಾರಗಳಲ್ಲಿ ಮಗ್ನರಾಗಿ ಐಹಿಕ, ದಿಕ್ಕಾಲದ ಬಂಧನದ ಆಚೆಗೆ ಇರಲು ಸಾಧನಾರತರಾಗಿರುವುದು. 'ಗುರುಮಾಹಾತ್ಮ್ಯ' ಎಂಬ ಗ್ರಂಥದಲ್ಲಿ 'ಮನೋವಿಜಯಕ್ಕಾಗಿ ವಿಕೃತಾಚರಣ' ಸಾಧನೆ ಅವಶ್ಯವೆಂದು ಹೇಳಲಾಗಿದೆ!

ಆದರೆ, ಇದನ್ನು ಸಂಪೂರ್ಣ ಬಿಚ್ಚುಮಾತಿನಲ್ಲಿ ಹೇಳಲು ತೊಂದರೆಯುಂಟು. ತೀರ ಪ್ರಾಥಮಿಕ ಅವಸ್ಥೆಯಲ್ಲಿ 'ತಾಯ್ಗಂಡತನ' ಅಥವಾ 'ಮಗಳಗಂಡ'ತನ ಒಂದು ಹಂತದಲ್ಲಿ ಆಯ್ತು , ಹೋಯ್ತು. 'ನಾಗ' ಪ್ರತಿಮಾ: ಸಂಕೇತಗಳ ಪೂರ್ವೋತ್ತರದ ಸಮೀಕ್ಷೆಯಲ್ಲಿ ಇದು ಭಾರತೀಯ ಪ್ರತಿಮೆಗಳಲ್ಲಿ ಇರುವಂತೆ ಗ್ರೀಕ್ ಪವಾದ ಕಥೆಗಳಲ್ಲೂ ಉಂಟು. 'ಅದಿತಿಯಿಂದ ದಕ್ಷನಾದ', ಎಂಬ ಮೊದಲಿನ ಭೂಮಿಕೆ ಬದಲು ಆಗುತ್ತದೆ; ಬಳಿಕ 'ದಕ್ಷನಿಂದ ಅದಿತಿ' ಆದಳು ಎಂಬ ವಿಚಾರವು ಪ್ರಭಾವಶಾಲಿಯಾಗುತ್ತದೆ.[೨೭] ಇವನ್ನು ಉದಾತ್ತ ಭಾಷೆ

ಯಲ್ಲಿ ಬೌದ್ಧಿಕ ಆವರಣದಲ್ಲೂ ಹೇಳಲಾಗುತ್ತದೆ. ಶಾಕ್ತತಂತ್ರಗಳ ಮೇಲಣ ಗ್ರಂಥಗಳು ಸಾಕಷ್ಟು ಪ್ರಕಟವಾಗಿವೆ.[೨೮] ಇತ್ಯಾದಿ ಗ್ರಂಥಗಳಲ್ಲಿ ಸಾಕಷ್ಟು ಸಾಧಾರ ವಿವರಗಳಿವೆ. ಈ ಸಂಪ್ರದಾಯಗಳ ಉಗಮವು ಋಗ್ವೇದಕ್ಕೂ ಪೂರ್ವದ 'ನಾಗ' ಸಂಪ್ರದಾಯದಲ್ಲಿಯೆ ಉಂಟು, ಎಂಬುದಕ್ಕೆ 'ಅದಿತಿ' ಹಾಗೂ ಋಗ್ವೇದ ಮತ್ತು ಅವೆಸ್ತಾಗಳಲ್ಲಿ ಬರುವ 'ಅಪಾಂ ನಪ್ತ್ರ' ಈ ಪ್ರತಿಮಾ ಸಂಕೇತಗಳೇ ಸಾಕ್ಷಿ.

ಬಾಳಿನಲ್ಲಿ ಅರ್ಥ : ಮೂಲ್ಯ : ಸೌಂದರ್ಯವಿದೆ. ಮಾನವನಿಗೆ ಇಡಿಯದರ ಅನುಸಂಧಾನದಲ್ಲಿ ಅದರ (ತನ್ನ) ಅಂಗಾಂಗದ ರಚನೆ-ಕಟ್ಟಡದ ಸಮೀಕ್ಷೆ ಶಕ್ಯ. ಈ ಪ್ರಪಂಚದ ಆಗು-ಹೋಗುಗಳನ್ನು ತಟಸ್ಥಭಾವದಿಂದ ಸಮೀಕ್ಷಿಸುವಾಗ, ಈ ಘಟನೆಗಳು ಯಾವ ನಿಯಮ ಸೂತ್ರಕ್ಕೆ ಅನುಗುಣವಾಗಿ ಸಾಗಿವೆ, ಎಂಬುದು ಮಾನವನ ಅರಿಕೆಯ ಕಕ್ಷೆಯಲ್ಲಿ ಬರಬಲ್ಲದು - ಎಂದರೆ ಇಲ್ಲಿಯ ದಿಕ್ಕಾಲ ಪರಿಸರದ ಜೀವನದ ಅರ್ಥವು, ಮಾನವನಿಗೆ ಕಾಣಬಲ್ಲದು, ಎಂಬ ಅನುಭವವು ದೊರೆತ ಕ್ಷಣದಿಂದ ಮಾನವ ಸಂಸ್ಕೃತಿಯು, ಪ್ರಕೃತಿಯ ಪ್ರಯೋಜನ ಪಡೆದು ತನ್ನದೇ ಆದ ಒಂದು ತಾತ್ತ್ವಿಕ ವಿಶ್ವವನ್ನು ಸೃಷ್ಟಿಸಿಕೊಳ್ಳತೊಡಗಿದ್ದುಂಟು. ಈ ದೃಷ್ಟಿಯಿಂದ ಋಗ್ವೇದದ ಸೌರಪ್ರತಿಮೆಗಳು ಅಭ್ಯಸನೀಯವಾಗಿವೆ.

ಟಿಪ್ಪಣಿಗಳು

೧. Ceremonies closely analogous to this Indian worship of the snake have survived in Europe into recent times, and doubtless date from a very primitive paganism; ***The Golden Bough***. Vol II, P. 703.

೨. ***ಋಗ್ವೇದ ಸಂಹಿತೆ*** X - ೧೨೧ರ ಸೂಕ್ತದ ಸಾಯಣಬಾಷ್ಯ ಹಾಗೂ ನಿರುಕ್ತದ ವಿವರಗಳನ್ನು ಗಮನಿಸಿರಿ.

೩. Macdonell, A. A.; ***Vedic Mythology***, pp. 13, 14, 117, 118

೪. Rabert Graves, ***The Greek Myths*** Penguin Book part I, P. 28.

೫. J. Gonda ಅವರ ಲೇಖ, New Indian Antiquary ಡಾ. ಥಾಮಸನ್ ಅವರ ಸಂಸ್ಕೃತಿಗಾಗಿ ಪ್ರಕಟವಾದ ವಿಶೇಷ ಸಂಪುಟ.

೬. Earnost Cassirer ***Language and Myth***; p. 9. Dover publication Inc.

೭. ಮೂರ್ತಿ ವಿಜ್ಞಾನ ಶ್ರೀ ಗ. ಹ. ಖರೆ, ಭಾರತ ಇತಿಹಾಸ ಸಂಶೋಧನ ಮಂಡಳ ಪುಣೆ; ಭಾರತ ಸರಕಾರದ ಆರ್ಕಿಯಾಲಜಿಕಲ್ ಸರ್ವೇ ಇಲಾಖೆಯ ಡೈರೆಕ್ಟರ ಜನರಲ್ ಶ್ರೀ ಕೆ. ಎನ್. ದಿಕ್ಷಿತರ ಮುನ್ನುಡಿಯೊಡನೆ.

೮. ***Elements of Hindu Iconography vol. I*** introduction P. 45; ***Development of Hindu Iconography*** P. 231.

೯. Woezel; ***Indian Serpent Lore***, P. 49

೧೦. Gilbert Murray; ***Five stages of Greek Religion***, 1925; P. 35

೧೧. ***Ibid***

೧೨. Robert Graves; ***The Greek Myths***, vol. I Introduction P. 9-10

೧೩. ***ಋಗ್ವೇದ ಸಂಹಿತೆ*** X - ೭೨.೪-೬

೧೪. ***ಅದೇ*** IX ೯.೨೦-೨೧

೧೫. ***ಅದೇ*** X - ೧೨೧

೧೬. ***ಈಶಾವ್ಯಾಸೋಪನಿಷತ್*** - ***ಯಜುರ್ವೇದ*** ೧೦. ೧೫-೧೬

೧೭. ***ಋಗ್ವೇದ ಸಂಹಿತೆ*** X - ೮೧

೧೮. ***ಅದೇ*** IV. ೨೬.೨

೧೯. ***ಅದೇ*** X. ೧೬೨.೩
೨೦. ***Macdonell A. Vedic Mythology*** p. 153
೨೧. ***ಕಸ್ತೂರಿ,*** ವಸಂತ ಸಂಚಿಕೆ; ೧೯೬೮
೨೨. ***ಋಗ್ವೇದ ಸಂಹಿತೆ*** I. ೪೩.೩ VIII; ೧೦೧.೧೫ ಇತ್ಯಾದಿ
೨೩. *ಯಜುರ್ವೇದ* ೧-೩೦; ೨೪ ***ಶತಪಥ ಬ್ರಾಹ್ಮಣ*** ೧.೩.೧.೧೭
೨೪. *ಯಜುರ್ವೇದ* ೨೯.೬೦; ೨೬ ***ತೈತ್ತಿರೀಯ ಸಂಹಿತೆ*** ೭.೫.೧೪
೨೫. ***ಋಗ್ವೇದ ಸಂಹಿತೆ*** I. ೧೫೬.೫
೨೬. ***ಅದೇ*** IV. ೫೪. ೧೪
೨೭. ***ಅದೇ*** X. ೭೨.೩-೪
೨೮. Dasgupta, S. B.; ***Indian Buddhist Iconography; An Introduction to Tantric Buddhism.*** Calcutta University.

ಸವಿತೃ-ಪ್ರತಿಮಾ ಸ್ವಾರಸ್ಯ

'ಸವಿತಾ : ವಿಶ್ವಸ್ಯ ಪ್ರಸವಿತಾ', ಎಂದು ಭಾಷ್ಯಕಾರರು ಹಲವೆಡೆಗಳಲ್ಲಿ 'ಸವಿತೃ' ಪದದ ನಿರ್ವಚನ ಹೇಳುವ ವಾಡಿಕೆಯಿದೆ. 'ಸವಿತೃ' ಎಂಬುದು 'ಸೂರ್ಯ'ನ ಪರ್ಯಾಯನಾಮವೆಂದು ಬಗೆವವರೂ ಉಂಟು. ಆದರೆ, ಸೂರ್ಯ ಹಾಗೂ ಸವಿತೃ ಪ್ರತಿಮಾ: ಸಂಕೇತದಲ್ಲಿ ಅತ್ಯಂತ ಮೌಲಿಕ ಅಂತರವಿದೆ. ಸೂರ್ಯನದು ಭೌತ ಪ್ರಕಾಶ; ಸವಿತೃವಿನದು ತಾತ್ವಿಕ ದಿವ್ಯ (spiritual) ಪ್ರಕಾಶ. ಸೂರ್ಯನ ಬೆಳಕಿನಲ್ಲಿ, ಸುತ್ತಲೆಲ್ಲ ವಸ್ತುಮಾತ್ರಗಳು ಒಂದರ ಮುಂದೊಂದು-ಒಂದಕ್ಕೊಂದು ತಾಗಿ, ಮೇಲೆ ಕೆಳಗೆ-ಎಲ್ಲೆಲ್ಲೂ ತುಂಬಿರುವ ಒಂದು ಬಣ್ಣ ಬಣ್ಣದ ಚಿತ್ರವಿಚಿತ್ರ ಪಟ್ಟಿಯೆಂತೇನೊ ಕಾಣಬಲ್ಲುದು. ಏಕೆಂದರೆ, ಯಾವುದರ ಹೆಸರು ಏನು, ಎಂಬುದೇ ಗೊತ್ತಿಲ್ಲದಿರುವಾಗ ಸೂರ್ಯಪ್ರಕಾಶವು ಏನು ಮಾಡಬಲ್ಲದು? ತೀರ ಅಪರಿಚಿತ ಪ್ರದೇಶದಲ್ಲಿ ಹೋದಾಗ ಪಡುವ ಪಾಡು ನೆನೆಯಬೇಕು. ನಿಜವಾಗಿ ಮಾನವನಿಗೆ 'ಕಾಣುವುದೂ'- 'ತಿಳಿಯುವುದೂ' ಅವನ ಭಾಷಿಕ ಸಂಕೇತಾತ್ಮಕ ಶಬ್ದ-ಪ್ರತಿಮೆಗಳ ಮೂಲಕವೇ ಸೂರ್ಯನಿಂದ ಬರಿ ಬಾಹ್ಯಆಕೃತಿ ದೃಷ್ಟಿಗೆ ಕಾಣುತ್ತದೆ. ಆದರೆ ಸವಿತೃವಿನಿಂದ ಎಂದರೆ ವಾಕ್ : ಸಾವಿತ್ರಿಯಿಂದ ಪ್ರಪಂಚದ ನಾಮ-ರೂಪಾತ್ಮಕ ಅಂತರಂಗವು ಅರಿಕೆಗೆ ಬರತೊಡಗುತ್ತದೆ! ಈ ಕಾರಣದಿಂದ ಸವಿತೃವು ವಿಶ್ವವನ್ನು 'ಪ್ರಸವಿಸುತ್ತಾನೆ' (ಅಜ್ಞಾನದ) ಕತ್ತಲೆಯ ಒಡಲೊಳಗಿಂದ ವಿಶ್ವವನ್ನು ಹೊರಗೆ ತರುತ್ತಾನೆಂದು ವೇದದ ಕವಿಗಳು ವರ್ಣಿಸಿದ್ದುಂಟು. ಇಷ್ಟೆ ಅಲ್ಲದೆ, ವಿಶ್ವದ ಆಧಾರವೂ, ಪ್ರೇರಣೆಯೂ ಸವಿತೃದೇವನು, ಎಂದು ಸ್ತೋತ್ರ ಮಾಡಿದ್ದುಂಟು. ನಿದ್ದೆಯಲ್ಲಿ ಅಥವಾ ಅಜ್ಞಾನದಿಂದ ಜೀವನ್ಮೃತರಾಗಿದ್ದವರು, (ಅಂತರಂಗದಲ್ಲಿ) 'ಸವಿತೃದೇವನ ಉದಯದೊಡನೆ ಜೀವಂತ ಚೈತನ್ಯಯುಕ್ತ 'ಮಾನವ' ಪ್ರಾಣಿಗಳೆನಿಸುತ್ತಾರೆ' ಮಾನವನಿಗೆ ಮಾನವತ್ವವು ಬಂದುದು ವಾಕ್ : ಸಾವಿತ್ರಿ (: ಸವಿತೃ) ದೈವತದ ಕೃಪೆಯಿಂದ. ಆದಕಾರಣ ಸವಿತೃವನ್ನು (ಸಾಂಸ್ಕೃತಿಕ) ವಿಶ್ವದ ಪ್ರಜಾಪತಿಯು-ವಿಶ್ವಕರ್ಮನು: ತ್ವಷ್ಟಾರ (ಬಡಿಗನು). ಎಂಬೀ ಆಶಯದ ಸ್ತವಿಸಿದ ಸ್ತೋತ್ರಗಳ ಔಚಿತ್ಯವನ್ನು ವಿವರಿಸಿ ಹೇಳಬೇಕಾಗಿಲ್ಲ.

ಈ ಸ್ತೋತ್ರಗಳಲ್ಲಿ ಸವಿತೃದೇವನನ್ನು ಕವಿಗೆ ಹೋಲಿಸಿರುವುದರ ಔಚಿತ್ಯವನ್ನು ಗಮನಿಸುವುದು ಅವಶ್ಯ. ಕವಿಗಳು ತಮ್ಮ ಪ್ರತಿಭೆಯಿಂದ ನೂತನ ವಿಶ್ವವನ್ನೆ ಹಡೆಯುತ್ತಾರೆ. ಶೆಕ್ಸಪಿಯರನ ನಾಟಕದೊಳಗಿನ ಪಾತ್ರಗಳ 'ಪ್ರಜಾಪತಿ', ಆ ಕವಿಯೇ ತಾನೆ? ಹಾಗೆ ಈ ಪ್ರಪಂಚದೊಳಗಿನ ಪ್ರತಿಭಾವಂತರ, ಬುದ್ಧಿಶಾಲಿಗಳ, ಧೀಮಂತರ, ಕರ್ತೃತ್ವಶಾಲಿಗಳ ಕೃತಿಗೆ ಪ್ರೇರಕನು-ಪ್ರಸವಿತಾರನು ಯಾರೋ ಅವನೇ ಸವಿತೃವು. ಈ ಸವಿತೃವು ಧೀ (: ಪ್ರತಿಭೆಯ) ಪ್ರೇರಕ ದೈವತವೇ ಆಗಿದೆ. 'ಧೀ' ಶಕ್ತಿಯನ್ನು ಪ್ರೇರಿಸಲು ದಿನಾಲು ತ್ರಿಕಾಲ ಸಂಧ್ಯಾ ಸಮಯದ ಧ್ಯಾನ-ಧಾರಣೆಯ ಆಹ್ನಿಕವನ್ನು ಹೇಳಲಾಗಿದೆ.

ಸಾವಿತ್ರೀ: ವಾಕ್, ಆಪ : ರಸ ತತ್ತ್ವಾಧಿಷ್ಠಿತ ವಾಕ್ಕಿನಿಂದ ಭಿನ್ನ ಸವಿತೃವಿನ ಶಕ್ತಿ, ವಾಕ್; ಸಾವಿತ್ರಿ ಆಗಿದೆ. ಈ ವಾಕ್ಕು ಕೇವಲ 'ಯತ್ ಪ್ರೈರತ'ದ- ದೇವೇಷಿತ - ಪ್ರೇಷಿತರ ವಾಕ್ಕಿಗಿಂತ ಭಿನ್ನವಾಗಿದೆ. ಋಗ್ವೇದ ದಲ್ಲಿ ಈ ಎರಡೂ ವಾಕ್ಕುಗಳೂ ಉಂಟು! ಇವೆರಡರಲ್ಲಿರುವ ತಾರತಮ್ಯವನ್ನು ಬುದ್ಧಿಪೂರ್ವಕವಾಗಿ ಶೂನ್ಯಗೊಳಿಸಿರುವುದಾಗಿ ಕಾಣುತ್ತದೆ. 'ಆದಿತ್ಯ' ಎಂಬ ಒಂದೇ ಸಂಕೇತದಲ್ಲಿ ಸವಿತೃ, ಸೂರ್ಯ, ಇಂದ್ರಾದಿಗಳನ್ನೆಲ್ಲ ಅಡಗಿಸಿಲ್ಲವೆ? ಹೀಗೆಯೆ, ಅಪ:ರಸದ ಭೂಮಿಕೆಯ ವಾಕ್ಕನ್ನೂ, ಸೌರತತ್ತ್ವಾಧಿಷ್ಠಿತ ವಾಕ್ಕನ್ನೂ ಕೂಡಿಯೆ, 'ವಾಕ್' 'ಧೇನು' ಇಂತಹ ಸಂದಿಗ್ಧ ಸಂಕೇತಗಳಿಂದ ನಿರ್ದೇಶಿಸುವುದು ಕಂಡುಬರುತ್ತದೆ! ಆದರೆ, ಆಪ: ರಸ ತತ್ತ್ವಾಧಿಷ್ಠಿತ ಅಂಭೃಣ್ಯಾದಿಗಳು 'ಮಧ್ಯಮಾ' ವಾಕ್ ಆಗಿದ್ದಾರೆ. ಮೈಯಲ್ಲಿ ಗಾಳಿ ಸೇರಿ 'ಆವೇಶವಾಗುವ 'ವಾಕ್ಕು' ಇದು; ಈ ವಾಕ್ ಮರುತರ ಸಂಗಾತಿ! ಭಾರತಿ: ವಾಕ್ 'ಪ್ರಾಣದೇವರ ಪತ್ನಿ' ಎಂದು ಒಂದು ಸಾಂಪ್ರದಾಯಿಕ ಶ್ರದ್ಧೆಯುಂಟು. ಆದರೆ, ಸಾವಿತ್ರಿ, ಮೈಯಲ್ಲಿ 'ಆವೇಶ'ವಾಗುವ ವಾಕ್ಕು ಅಲ್ಲ. 'ಗಾಳಿ'ಯಾಗಿ ಆಡುವ ಮಾತಲ್ಲ; ಜ್ಞಾನರೂಪ ಪ್ರಕಾಶವನ್ನು 'ಸವಿತೃ' ಎಂದು ಬಗೆಯಲಾಗಿದೆ. ಈ ಸವಿತೃವಿನ ಕಿರಣವು ಹೊಳೆದು-ಮಿಂಚಿದಂತಾಗಿ ಆರ್ತ ಜಿಜ್ಞಾಸುವಿಗೆ ತನ್ನ ಪ್ರಶ್ನೆಯ ಉತ್ತರವು ದೊರೆತ ಅನುಭವವು ಬರುವುದುಂಟು. ಅಂತರಂಗದ ಅಥವಾ ಬಹಿರ್ ಆ-ಕಾಶದಲ್ಲಿ ಪ್ರ-ಕಾಶ ರೂಪ 'ಅರ್ಥ'ವು ಹೊಳೆದಂತೆ ಎನಿಸುವುದು. ಇಂಗ್ಲೀಷಿನಲ್ಲೂ 'flash' ಎಂದು ಹೇಳುವುದುಂಟು. ಈ 'ದರ್ಶನ' ಯಾವುದೇ ವಿಶಿಷ್ಟ ಜಾತಿ, ದೇಶ ಭಾಷೆಯ ಸೊತ್ತಲ್ಲ. ಮಾನವನಿಗೆ ಬಂದ ದಿಕ್ಕಾಲದ ಸಂದರ್ಭದ ಜೀವನದೊಳಗಿನ ಅನುಭವವು ಇದು. ಈ 'ದರ್ಶನ', ಆಗಬೇಕಾಗುತ್ತದೆ. ಮೊದಲು 'ಕಾಣುವುದು' ಅವಶ್ಯವಿದೆ. ಆದರೆ, ಕಂಡುದು-ತೋರಿದ್ದು ತಾನು ಬಯಸಿದ್ದನ್ನೆ ಸಂಭ್ರಮವಿರುವ ಶಕ್ಯತೆಯೂ ಉಂಟು. ಆದಕಾರಣ 'ಕಂಡು'ದನ್ನು ಮರಳಿ 'ನೋಡು'ವ ಎಂದರೆ ಪರೀಕ್ಷಿಸಿಕೊಳ್ಳುವ ಆವಶ್ಯಕತೆಯು ಯಾವಾಗಲೂ ಉಂಟೇ ಉಂಟು. ಋಗ್ವೇದದಲ್ಲಿ ಈ ಹಂತದ ಎಂದರೆ ವಿಮರ್ಶೆಗೆ ಒಳಗಾದ ವಾಕ್ : ಜ್ಞಾನದ ಹಿರಿಮೆಯನ್ನೂ ಒಂದೆಡೆಗೆ ಒಪ್ಪಿಕೊಂಡುದು ಉಂಟು;

'ವಾಕ್' ಮಹಿಮಾ ಸೂಕ್ತವೊಂದರಲ್ಲಿ ಮೊದಲು 'ಯತ್ ಪ್ರೈರತ' ಸ್ವರೂಪದ ವಾಕ್ಕಿನ ನಿರ್ದೇಶವಿದೆ. ಬಳಿಕ ಮುಂದಿನ ಋಚೆಯಲ್ಲಿಯೆ ವಿಮರ್ಶಿತ ಜ್ಞಾನದ ಶ್ರೇಷ್ಠತೆಯನ್ನು ವಿವರಿಸಿದ್ದಾಗಿದೆ :

'ಸಕ್ತುಂ ಇವ ತಿತ ಉನಾ ಪುನಂತಃ ಯತ್ರ ಧೀರಾಃ ಮನಸಾ ವಾಚಂ ಅಕ್ರತ।
ಅತ್ರ ಸಖಾಯಃ ಸಖ್ಯಾನಿ ಜಾನತೇ ಭದ್ರಾ ಏಷಾಂ ಲಕ್ಷ್ಮೀಃ ನಿಹಿತಾ ಅಧಿವಾಚಿ॥[೨]

ಈ ಋಚೆಯಲ್ಲಿ ಪವಿತ್ರ ವಾಕ್ಕನ್ನು, ಕೇರಿದ ಧಾನ್ಯಕ್ಕೆ ಹೋಲಿಸಿದ್ದಾಗಿದೆ. ಧೀಮಂತರು : ವಿಮರ್ಶಕ-ಮನಸ್ಕರು (ಮನಸಾ), ಧಾನ್ಯ (ಸಕ್ತುಂ) (ಕುಟ್ಟಿ ಕೇರಿ) ಮೊರದಿಂದ ಹಸನಾಗಿಸುವಂತೆ (ಪುನಂತಃ) ವಾಕ್ಕನ್ನು ಚೊಕ್ಕಟಗೊಳಿಸಿ ಉಪಯೋಗಿಸುತ್ತಾರೆ; ಎಂದು ಹೇಳುವುದರೊಂದಿಗೆ, ಈ ಜ್ಞಾನೋಪಾಸನೆಯಲ್ಲಿ, ಶುದ್ಧಜ್ಞಾನಜಿಜ್ಞಾಸೆಯ ಪ್ರೇಮದ ಆವಶ್ಯಕತೆಯನ್ನು ಈ ಋಚೆಯಲ್ಲಿ ಹೇಳಿರುವುದಲ್ಲದೆ, ಮುಂದೆಯೂ ಈ 'ಪ್ರೇಮ' ವಿಚಾರವನ್ನು ನಿತಾಂತ ರಮಣೀಯವಾಗಿ ವರ್ಣಿಸಿದ್ದಾಗಿದೆ.[೩] ಈ ಋಚೆಗಳಲ್ಲಿ ಬರುವ 'ಸಖಾ' 'ಸಖ್ಯ' ಈ ಶಬ್ದಪ್ರತಿಮೆ ಹಾಗೂ ನಾಲ್ಕನೆಯ ಋಚೆಯೊಳಗಿನ ರೂಪಕವು ಅತ್ಯಂತ ಹೃದ್ಯವಾಗಿದೆ. ಜ್ಞಾನವು ಒತ್ತಾಯದಿಂದ ಲಭಿಸುವುದಲ್ಲ; ಜ್ಞಾನವನ್ನು ಕುರಿತ ಶುದ್ಧ ಆಂತರಿಕ ತೀವ್ರ ಪ್ರೇಮವು ಇದ್ದಲ್ಲಿ, ವಾಕ್ಕು (: ಜ್ಞಾನವು) ಸಹ ಅವನನ್ನು ಮೆಚ್ಚಿ ತಾನೆ ಅಪ್ಪುವುದು ಖಚಿತ ವಿಮರ್ಶೆಯಲ್ಲಿ ಸಹ, ಜ್ಞಾನ ಪ್ರೇಮದಿಂದ ಪ್ರೇರಿತನಲ್ಲದ ವಿಮರ್ಶಕನ ಮನಸ್ಸಿಗೆ, ವಾಕ್ಕಿನ ರಹಸ್ಯ (ಅಂತರಂಗ) ಹೊಳೆಯಲಾರದು ಎಂಬ ಈ ವರ್ಣನೆಯಿಂದ 'ಧೀ' ಪ್ರೇರಕ ಸವಿತೃವಿನ ಸಾವಿತ್ರಿ. ಶುಷ್ಕ ತರ್ಕಕರ್ಕಶ ವಾಕ್ಕು ಅಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆರ್ತ ಜಿಜ್ಞಾಸುವಿನ ಜ್ಞಾನಪ್ರೇಮಕ್ಕೆ ಮೆಚ್ಚಿ ಪ್ರಸನ್ನಳಾದ ವಾಕ್ಕಿನ ಪ್ರಯೋಜನ ಪಡೆವ ಜನಕ್ಕೆ 'ಭದ್ರಾಲಕ್ಷ್ಮೀ' ಲಭಿಸುವುದು ನಿಶ್ಚಿತ ಎಂದು ಇಲ್ಲಿ ಹೇಳಲಾಗಿದೆ.

ಆಪ : ರಸ ಸಂಪ್ರದಾಯವು, ಸೌರ : ಸವಿತೃ ಸಂಪ್ರದಾಯವನ್ನು ಮೆಟ್ಟಿ ನಿಲ್ಲುವ ನಾನಾ ತಂತ್ರ-ಮಂತ್ರಕ್ಕೆ ಪ್ರವೃತ್ತವಾದುದು ಏಕೆ, ಇದು ಸ್ಪಷ್ಟವಾಗಲು 'ಯತ್ ಪ್ರೈರತ' ವಾಕ್ ಹಾಗೂ 'ತಿತ ಉನಾ' ಮಾರ್ಗದ ವಾಕ್

ಇವೆರಡರೊಳಗಿನ ಅಂತರವನ್ನು ಅರಿಯುವುದು ಅವಶ್ಯವಿದೆ. ಭಾಷೆಯೆ, ಮಾನವನಿಗೆ ಮಾನವತ್ವವನ್ನು ತಂದಿದೆ. ಭಾಷೆಯೆ ಮಾವನರ ಕಣ್ಣು; ಸವಿತೃವು ಕಣ್ತೆರೆದು ನೋಡಲು ಪ್ರೇರಿಸುವ ದೇವರು. 'ಜಾಗರ'ದ ಸಂಪ್ರದಾಯದ ಭಜನೆ ಧ್ಯಾನಾದಿಗಳಿಗೆ ಭಕ್ತಿಯ ಆವೇಶದಲ್ಲಿ ಕಣ್ಣುಮುಚ್ಚಿಕೊಳ್ಳುವ ಆವಶ್ಯಕತೆ ವಿಶೇಷ. 'ತತ್-ಮಯ ಸ್ಥಿತಿಯಲ್ಲಿ ಮೈಮರೆತಾಗ ಆಗುವ 'ದರ್ಶನ' 'ಸ್ವಪ್ನ'ಗಳ ಬೆಲೆಯ ಅನನ್ಯ ಸಾಧಾರಣವಿರುವ ಸಂಪ್ರದಾಯಕ್ಕೆ, 'ಧೀ ಪ್ರಚೋದಕ ಸವಿತೃವಿನ ಉಪಾಸನೆ ಈ ವಿಮರ್ಶಾ ಪ್ರಧಾನ ವಾಕ್ಕು ಒಗ್ಗಲು ಹೇಗೆ ಶಕ್ಯ? 'ವಿವಸ್ವಾನನಿಗೆ (ಸವಿತೃವಿನ ವರ್ಗದ ದೈವತಕ್ಕೆ) ಜ್ಞಾನೋಪದೇಶ ಮಾಡಿದವನು ನಾನು' ಎಂದು ಸಾರುವಲ್ಲಿ 'ಧೀ' ಪ್ರೇರಕ ಸವಿತೃವಿಗಿಂತಲೂ ತಾಹು ಹೆಚ್ಚಿನವನು ಎಂದು ಕೃಷ್ಣ (: ಚಂದ್ರ) ಸಿದ್ಧಪಡಿಸುವ ಪ್ರಯತ್ನ ನಡಸಿದ್ದು ಕಾಣುತ್ತಲೆ ಇದೆ. 'ನ ಮೇಧಯಾ ನ ಬಹುನಾ ಶ್ರುತೇನ' ಎಂದು, ಗೀತೆಯ ಆಧಾರಸ್ತಂಭದಂತಿರುವ ಕಠೋಪನಿಷತ್ತು ಪ್ರತಿಪಾದಿಸುತ್ತದೆ. ಗುರುಕೃಪೆಯಿಂದ ಮಾತ್ರ ಜ್ಞಾನವಾಗಬಲ್ಲದು, ಎಂಬ ಪಂಥವು ಸವಿತೃವಿನ ಸ್ಥಾನದಲ್ಲಿ 'ಪವಾಡಿ'ಯನ್ನು 'ಗುರು' ಎಂದು ಕಲ್ಪಿಸಿ ಮನುಷ್ಯನನ್ನು ಪೂಜಿಸುತ್ತಿರುವುದನ್ನು ಗಮನಿಸುವುದು ಅವಶ್ಯ. ಆದರೆ ಈ 'ಗುರು'ವು ಆದಿಯಲ್ಲಿ 'ಪುರುಷ'ನಿರಲಿಲ್ಲ! ಸ್ತ್ರೀಯೆ ಆದಿಗುರು ಆಗಿದ್ದುದನ್ನು ಹಿಂದೆ ವಿವರಿಸಿಯಾಗಿದೆ. ಬೌದ್ಧರಲ್ಲಿ ಉದ್ಧಾರಕ ದೇವಿಯ ಹೆಸರು ತಾರಾ ಭಗವತಿ ಇವಳೇ ತಾರಿಣಿ : ಭವದಿಂದ ದಾಟಿಸಬಲ್ಲ ನೌಕೆ, ಸೇತು! ವೇದದಲ್ಲಿ ಅದಿತಿ : ನೌಕಾರೂಪ ವರ್ಣನೆಯಿದೆ! ಈ 'ಗುರು'ವು ಸರ್ಪದ ಮಾನವ ರೂಪ ಅಥವಾ ಮಾನವರಲ್ಲಿ ಆವೇಶವಾಗಿ ಅವರಿಗೆ 'ದಿವ್ಯ' ಪವಾಡ ಶಕ್ತಿಯನ್ನು ದಯಪಾಲಿಸುವ ಆದಿ ನಾಗ-ಶೇಷನೆ ಇವನು, ಎಂಬುದೂ ಪ್ರತಿಮಾ; ಸಂಕೇತಗಳ ಬೆಳಕಿನಲ್ಲಿ ಬಚ್ಚಿ ಉಳಿಯಲು ಶಕ್ಯವಿಲ್ಲ. ಬ್ರಹ್ಮ-ಸಿದ್ಧಿ ಬಯಸುವ ಬ್ರಹ್ಮಚಾರಿಯನ್ನು ಮೃತ್ಯುವಿಗೆ ಸಮರ್ಪಿಸಲಾಗುವುದಾಗಿ ಅಥರ್ವಣ ವೇದದಲ್ಲಿ ಉಲ್ಲೇಖವಿದೆ. (೬.೧೩೩.೩) ಕಠೋಪನಿಷತ್ತಿನ 'ಕುಮಾರನು' ಯಮನಲ್ಲಿ ಹೋಗುತ್ತಾನೆ, ಈ ಸಂಕೇತಗಳು ಅರ್ಥಪೂರ್ಣವಾಗಿವೆ. ಓಂಕಾರ ಸ್ವರೂಪವೆಂಬ ಜ್ಞಾನಸ್ವರೂಪ ಗಣನಾಯಕನ ಸಂಗಡ ಸರ್ಪವನ್ನು ತೋರಿಸದೆ ಆ ಪ್ರತಿಮಾ : ಸಂಕೇತವು ಅಪೂರ್ಣವೆನಿಸುತ್ತದೆ. ಸಂಯೋಗವಿದೆ. 'ಅಹಿನ್ ಸರ್ವಾನ್ ಜಂಭಯನ್' ಎಂದರೂ 'ಅಸೌರ್ಯಃ ಅವಸರ್ಪತಿ ನೀಲಗ್ರೀವಃ ನೀಲಲೋಹಿತಃ' ಎಂದು ರುದ್ರನ ವರ್ಣನೆಯಿದೆ. ರುದ್ರನ ಪ್ರತಿಮೆಯಲ್ಲಿ ಇಂದಿಗೂ ಸರ್ಪ-ಚಂದ್ರ ಸಂಯೋಗವುಂಟು! ವಿಷ್ಣುವಿನ ಚಾಂದ್ರ ಸ್ವರೂಪವನ್ನು ಬಾಯ್ಬಿಟ್ಟು ಒಪ್ಪಿಕೊಳ್ಳದಿದ್ದರೂ ಜಲಶಾಯಿ ಹಾಗೂ ಶೇಷಶಯನ ಇವೆರಡನ್ನು ಏಕಕಾಲಕ್ಕೆ ತೋರಿಸುವ ಸಂಕೇತಾತ್ಮಕ ಪ್ರತಿಮೆಯು ನಾಗಚಂದ್ರನದೇ ಆಗಿರುವುದೆಂದು ಹೇಳಲು ಯಾವ ಆತಂಕವೂ ಇಲ್ಲ.

ಗುರುವು ಮೃತ್ಯುರೂಪನು; ಬ್ರಹ್ಮ-ಸಿದ್ಧಿಗಾಗಿ ಶರಣು ಹೋಗಬೇಕಾದ ಗುರುವು ಮೃತ್ಯುರೂಪನು, ಎಂಬ ಈ ಸಂಕೇತವು ತುಂಬ ಅರ್ಥಯುಕ್ತವಾಗಿದೆ. ವೈರಾಗ್ಯಭಾವ ಮೂಡಿಸುವಲ್ಲಿ 'ಶ್ಮಶಾನ'ಕ್ಕೆ ಇರುವ ಅನನ್ಯ ಸ್ಥಾನವು ಗುರುಸ್ವರೂಪದ್ದೇ ಆಗಿವೆ. ಆದಿಗುರು ನಾರಾಯಣ-ವಿಷ್ಣು, ಶೇಷ: ರುದ್ರ-ನಾಗ ಮೂರ್ತಿ, ಸರಸ್ವತಿ, ಅಭ್ರಣಿಯರು ಸರ್ಪರೂಪರು ಆಪ ಸ್ವರೂಪಿಗಳಾದ ಕಾರಣ. ಬುದ್ಧನ ಶಿಷ್ಯಕೋಟಿಯಲ್ಲಿ ನಾಗರೆ ಹೆಚ್ಚು ಸ್ವತಃ ಬುದ್ಧನ ಪ್ರತಿಮಾ : ಸಂಕೇತಗಳಿಂದ ಅವನೂ ನಾಗನೆಂದು ಗೊತ್ತಾಗದಿರದು; ಆನಂದ ಕುಮಾರಸ್ವಾಮಿ ಹಾಗೂ ಭಾಶ್ಚರ ಸಂಶೋಧನೆಯಲ್ಲಿ ಈ ಮಾತು ಬೆಳಕಿಗೆ ಬಂದಿದೆ.[೪] ಜೈನ ತೀರ್ಥಂಕರರ ಹಾಗೂ ಅವರ ಪರಿವಾರದ ಯಕ್ಷ ಯಕ್ಷಿಯರ ಪ್ರತಿಮಾ : ಸಂಕೇತಗಳಲ್ಲಿ ಚಿತ್ರಿಸಲಾಗುವ ಲಾಂಛನಾದಿಗಳು ಅಭ್ಯಸನೀಯವಾಗಿವೆ. ವೃಷಭದಂತೆ ಆನೆ, ಕುದುರೆ, ಮಂಗ, ಕಮಲ, ಕ್ರೌಂಚ, ಚಂದ್ರ ಘೇಂಡಾಮೃಗ, ಆಮೆ ಇಂತಹ ಸಂಕೇತಗಳು ಆಪ : ಸಲಿಲ ಸೂಚಕವೆಂಬುದಂತೂ ನಿಶ್ಚಿತವಿದೆ. ಅಲ್ಲದೆ, ಏಳು ಹೆಡೆಯ ನಾಗನ ಪ್ರತಿಮೆ, ಕುಕ್ಕುಟ-ಸರ್ಪ ಎಂಬ ಸಂಕೇತ ವಿಶೇಷ; ಈ ಸಂಪ್ರದಾಯದಲ್ಲೂ ಗುರು, ಮೃತ್ಯು, ನಾಗ ಈ ಸಮೀಕರಣವೆ ತಳಹದಿಯಲ್ಲಿ ಇರುವುದಾಗಿ ಇವುಗಳಿಂದ ಗೊತ್ತಾಗುತ್ತದೆ.

ಸವಿತೃವು ಪ್ರಕಾಶರೂಪನು, ಆಪ : ರಸ ಪಂಥೀಯ ಗುರು (ದೇವಿ-ದೇವ) ಮೃತ್ಯು ಸ್ವರೂಪರು; ಎಂದರೆ ಪ್ರಪಂಚವನ್ನು ಶೂನ್ಯ ಬಗೆಯಲು ಅದನ್ನು ಕಾಳಗ್ತಲು ಎಂದು ಶ್ರದ್ಧೆ ವಹಿಸಲು ಹೇಳಬೇಕಾಗುವುದೆಂದು ಇದರ ಅರ್ಥವಾಗಬಲ್ಲದು. ಸೃಷ್ಟಿ ನಿರ್ಮಾಣದ ಬಗೆಗೂ ಹೀಗೆಯೇ ಎರಡು ಭಿನ್ನಭೂಮಿಕೆಗಳಿವೆ.

ವಿಶ್ವೋತ್ಪತ್ತಿಯನ್ನು ಕುರಿತ ಎರಡು ಭೂಮಿಕೆಗಳು.

ವಿಶ್ವೋತ್ಪತ್ತಿಯನ್ನು ಕುರಿತು ಇರುವ ಸೂಕ್ತಗಳಲ್ಲಿ ಎರಡು ಪ್ರಮುಖ ಪ್ರಕಾರಗಳಿವೆ. ಇವುಗಳಲ್ಲಿ ಒಂದು ಸವಿತೃ ಪ್ರಭೃತಿ ದೈವತಗಳ ಸೌರ ತತ್ತ್ವಾನುಸಾರಿಯಾದುದು; ಇನ್ನೊಂದು ದೇವಿ ಅದಿತಿ ಪ್ರಭೃತಿ ದೈವತಗಳ ಆಪ : ರಸ ತತ್ತ್ವಾನುಸಾರಿಯಾದುದು. ಮೊದಲನೆಯ ಪ್ರಕಾರದ ವಿಶ್ವೋತ್ಪತ್ತಿಯ ವಿವರಣೆಯು 'ಋತಂ ಚ ಸತ್ಯಂ ಚಾಭೀಧಾತ್ ತಪಸಃ ಅಜಾಯತ'[೫] ಈ ಸೂಕ್ತದಲ್ಲಿ ಉಂಟು. ಎರಡನೆಯ ಪ್ರಕಾರದ ವಿಶ್ವೋತ್ಪತ್ತಿಯು. 'ಗರ್ಭಂ ದಧ್ರ ಆಪಃ' ಎಂಬೀ ಬಗೆಯಲ್ಲಿ, ಪ್ರಕೃತಿ-ಪುರುಷ ಸಂಬಂಧದಿಂದ ಸೃಷ್ಟಿಯು ಉಂಟಾದುದನ್ನು ವರ್ಣಿಸುವ ಸೂಕ್ತಗಳು ಹಲವು ಇವೆ.[೬] ಇದು ತತ್ : ಏಕಂ : ಸತ್ ಭೂಮಿಕೆಯ ಸೃಷ್ಟಿ ನಿರ್ಮಿತಿಯ ವರ್ಣನೆ; 'ತತ್ : ಏಕಂ' ಎಂದು ಸಾರಲಾಗುತ್ತಿದ್ದರೂ ತಮ್ಮ ತಮ್ಮ ಪಂಥೀಯ 'ಏಕಂ' ಅದುವೆ ಮಾತ್ರ ತತ್ : ಸತ್; ಉಳಿದುವು ಅಲ್ಲ, ಎಂಬ ಅಭಿನಿವೇಶವು ನಾನಾ ಪಂಥಗಳಲ್ಲಿ ಇದ್ದುದು ಋಗ್ವೇದ ಕಾಲದಿಂದಲೇ ಕಾಣುತ್ತದೆ. ಹಾಗೆ ಇದ್ದಿಲ್ಲವಾದರೆ, ಋತ : ಸತ್ಯದ ಭೂಮಿಕೆಯ ಸೃಷ್ಟಿನಿರ್ಮಾಣದ ಸೂಕ್ತವು ಒಂದೇ ಏಕೆ? ಮತ್ತು 'ಏಕಂ; ತತ್; ಸತ್' ಎಂಬ ಭೂಮಿಕೆಯ ಸೃಷ್ಟಿನಿರ್ಮಾಣದ ಸೂಕ್ತಗಳು ಒಂದಕ್ಕಿಂತ ಹೆಚ್ಚು ಏಕೆ? ಇದರ ಕಾರಣವೆ ತಿಳಿಯಲಾರದು. "ದ್ಯಾವಾ ಭೂಮಿಂ ಜನಯನ್ ದೇವ ಏಕಃ" ಎಂಬುದು ವಿಶ್ವಕರ್ಮ ದೈವದ ಪಂಥೀಯರ ಉಗ್ಘಡಣೆ. 'ಹೇ ಪ್ರಜಾಪತಿಯೆ, ನಿನ್ನ ಸಮನಾದ ಬೇರೊಬ್ಬ ದೇವನಿಲ್ಲ' (ತ್ವತ್ ಅನ್ಯಃ ನ) ಎಂಬುದು ಹಿರಣ್ಯಗರ್ಭ ಪ್ರಜಾಪತಿಯ ಆರಾಧಕರ ಉದ್ಘೋಷ. "ವಿಶ್ವವನ್ನು ನಿರ್ಮಿಸಿದ-ವಿಶ್ವಕ್ಕೆ ಆಧಾರವಾಗಿರುವ ವಿಷ್ಣುವಿನ ಎತ್ತರಕ್ಕೆ ಇನ್ನಾವ ದೈವತವೂ ಬಾರದು" ಎಂಬುದು ವಿಷ್ಣು ಸರ್ವೋತ್ತಮತ್ವದ ಬಗೆಗಿನ ಪೈಪೋಟಿಯ ಮಾತು! ಇದೇನೇ ಇದ್ದರೂ ಇವೆಲ್ಲವೂ ರಾತ್ರಿಯ ಪಂಥಗಳು. ನಿಶಾನಾಥನ ಆರಾಧಕರೊಳಗಿನ ಒಳಪಂಗಡಗಳು ಇವು. 'ಸವಿತೃ' ಸಂಪ್ರದಾಯವು ಹಿಮ್ಮೆಟ್ಟುವುದು ಇವರೆಲ್ಲರಿಗೂ ಇಷ್ಟವಿತ್ತು. ಏಕೆಂದರೆ, ಋತ: ಸತ್ಯ ವರ್ಚಸ್ವೀ ವೈಚಾರಿಕ ಭೂಮಿಕೆಯ ಎದುರು, 'ಏಕಂ-ತತ್' ಪಂಥೀಯ ಕೇವಲ ಶ್ರದ್ಧಾಮಯ ವೈಚಾರಿಕ ಭೂಮಿಕೆಯು ನಿಷ್ಪ್ರಭವಾಗುವ ಹೆದರಿಕೆ ನೈಸರ್ಗಿಕವಾದುದೇ ಇತ್ತು - ಇದೆ.

ಸವಿತೃವಿನ (: ಜ್ಞಾನ-ಸೂರ್ಯನ) ಉದಯದೊಡನೆ (ಸಾಂಸ್ಕೃತಿಕ) ವಿಶ್ವದ ಸೃಷ್ಟಿಗೆ ಪ್ರಾರಂಭವಾಗುತ್ತದೆ; ಎಂದರೆ ಅಜ್ಞಾನವೆಂಬ ಕತ್ತಲೆಯು ಮುಸುಕಿ ಅರಿಕೆಗೆ ಬರದೆ ಇರುವ ನಾಮ-ರೂಪಾತ್ಮಕ ವಿಶ್ವಸ್ವರೂಪಗಳು ಜ್ಞಾನದ ಬೆಳಕಿನಲ್ಲಿ ಹೊಸದಾಗಿ ಕಾಣತೊಡಗುತ್ತವೆ. ಆಗಲೆ, ಈ ಸೃಷ್ಟಿ ಆದಂತೆಯೆ ಸರಿ. ಸಮರ್ಪಕ ಬೇರೆ ಬೇರೆ ಹೆಸರುಗಳು ಇಲ್ಲದ್ದರಿಂದ ನಮಗೆ ಬಣ್ಣಗಳೊಳಗಿನ ಸೂಕ್ಷ್ಮ ಭೇದಗಳನ್ನು ಗುರುತಿಸಿ-ಬೇರ್ಪಡಿಸಿಕೊಂಡು ನೆನಪು ಇಡಲು ಆಗುತ್ತಿಲ್ಲ. ಇಂಗ್ಲೀಷಿನಲ್ಲಿ ಇರುವಷ್ಟು ಈ ಬಗೆಯ ಶಬ್ದ- ವೈವಿಧ್ಯವು ದೇಶಭಾಷೆಗಳಲ್ಲಿ ಇಲ್ಲ. ಕೆಂಪು,. ಕೆಂದ, ಕೆಂಡಗೆಂಪು, ತಿಳಿಗೆಂಪು-ಕೆನ್ ಶಬ್ದಮೂಲದ ಈ ಕೆಲವು ಸಾಧಿತ ರೂಪಗಳು ಕೆನ್-ಶೆನ್-ಚೆನ್ ಇವು 'ಕೆನ್' ಶಬ್ದ ಮೂಲಕ್ಕೆ ಸಂಬದ್ಧವಾಗಿವೆ. ಸಿಂಧೂರ, ಚೆಂಪಕ, ಆದರೆ ಇವು ವಸ್ತುವಾಚಕ ನಾಮಗಳಾದುವು. ಇವುಗಳ ಭಾವ=ವರ್ಣಸೂಚಕ ನಾಮಗಳು ಇನ್ನೂ ಆಗಿಲ್ಲ. ಭಾಷೆಯು ಆ ಭಾಷಿಕ ಜನದ ಭಾವನೆ ಹಾಗೂ ವಿಚಾರದ ಆಳ-ಅಗಲ-ಎತ್ತರದ ಘನಸ್ವರೂಪವನ್ನು-ಪರಿಮಿತಿಯನ್ನು ಸೂಚಿಸುತ್ತದೆ. ಭಾಷೆಯಿಂದ ಆ ಜನದ ಸಂಸ್ಕೃತಿಯ ಮಟ್ಟವು ಗೊತ್ತಾಗಬಲ್ಲದು. ಮಾನವ ಭಾಷೆಗೆ ಪ್ರೇರಣೆಯನ್ನಿತ್ತ ಪ್ರಕಾಶರೂಪ ದೈವತವನ್ನು ಭಾರತೀಯ ಪುರಾತನರ ಒಂದು ಪಂಗಡವು 'ಸವಿತಾ' ಎಂದು ಹೆಸರಿಸಿತು. 'ಭಾ' ಪ್ರಕಾಶಿಸು ಈ ಆಖ್ಯಾತವೆ, 'ಭಾಷೆ' ಎಂಬ ಶಬ್ದಪ್ರತಿಮೆಗೆ ಜನ್ಮಕೊಟ್ಟಿರುವುದಾಗಿ ತಜ್ಞರು ಹೇಳುತ್ತಾರೆ.

ಭೌತಸೂರ್ಯನು ಬೆಳಗುತ್ತಿದ್ದರೂ ತಿಳಿವಿನ ಬೆಳಕಿಲ್ಲದೆ ಇರುವ ಕಗ್ಗತ್ತಲೆಯ ಪ್ರಪಂಚದಲ್ಲಿ, ಭಾಷಾ (: ಜ್ಞಾನ) ರೂಪ ಪ್ರಕಾಶದ ಮೂಲಕವಾಗಿ ಮಾನವತೆಗೆ-ಮಾನವ ಲೋಕಕ್ಕೆ : ಸಂಸ್ಕೃತಿ ವಿಶ್ವಕ್ಕೆ ಜನ್ಮಕೊಟ್ಟ ಸವಿತೃವೇ ಈ ಲೋಕಪಿತ. ಭಾಷೆಯ ಮೂಲಕವಾಗಿ ವಿಶ್ವಸ್ಥ ಅರ್ಥ : ನಿಯಮ: ಮೂಲ್ಯ : ಸೌಂದರ್ಯ ತಿಳಿಯುತ್ತದೆ. ಇದೇ ಋತ. ಬಾಳಿನ ಅರ್ಥ : ನಿಯಮದ ಪ್ರಜ್ಞೆಯನ್ನು ಜಾಗೃತಗೊಳಿಸದಿರುವುದು-ಎಂದರೆ, ವ್ಯಕ್ತಿಯ ಅಂತಃಸಾಕ್ಷಿಯು ಎಚ್ಚರಾಗದ ಜ್ಞಾನವು, ಜ್ಞಾನವೆಂಬ ಹೆಸರಿಗೆ ಅರ್ಹವಲ್ಲ. ದಿಕ್ಕಾಲ ಪರಿಸ್ಥಿತಿಯ ಸನ್ನಿವೇಶದಂತೆ ಅಮೂರ್ತ ಋತವು, ಭಾಷಿಕ ಪ್ರತಿಮಾ : ಸಂಕೇತಗಳ ಆಧಾರದಿಂದ ಮೂರ್ತ : ಇಂದ್ರಿಯ ಗಮ್ಯ ಆಕೃತಿಯನ್ನು ಪಡೆಯುತ್ತದೆ. ಋಗ್ವೇದದ ಮೂಲಭೂಮಿಕೆಯ ದೈವತಗಳು ಋತಾಧಿಷ್ಠಿತ-'ಋತ ಪ್ರಜಾತ' ಆಗಿವೆ. ಋತದ ಸಂರಕ್ಷಣವು ವರುಣನ ಕೆಲಸವಾಗಿತ್ತು. ಋತದ ಹೊರಗೆ ದೇವತ್ವವಿಲ್ಲ. ಋತಕ್ಕೆ ಮೀರಿದ ದೈವತವು, ದೆವ್ವ; ದೇವರಲ್ಲ. ಭಾಷೆಯ ದಿವ್ಯವಲಯವನ್ನು ಕಳಚಿ ಬಾಳಲು ಅಶಕ್ಯವಿರುವ ಕಾರಣವೆ ಇದು : ಋತದ ಸಂರಕ್ಷಕ ಕವಚಕ್ಕೆ ಆ ವ್ಯಕ್ತಿ ಎರವಾಗುತ್ತದೆ. ಈ ಕಾರಣದಿಂದಲೆ ವಾಕ್=ಸಾವಿತ್ರಿಯ ಉಪಾಸನೆಯು, 'ಬಾಳಬೆಳಕಿಗಾಗಿ ಆವಶ್ಯಕ ಆಹ್ನಿಕವೆಂದು ವಿಧಿಸಲಾಗಿತ್ತು.

ಸವಿತೃ ಪ್ರತಿಮಾ ವಿಡಂಬನೆ

ಆದರೆ, ವೇದದಲ್ಲಿ ಏನೆಲ್ಲ ಮಹತ್ವವೂ 'ಯಜ್ಞ'ಕ್ಕೆ, ಎಂಬ ಹಾಗೆ ಟೀಕೆಗಳು ಕೇಳಬರುತ್ತವೆ! ಪ್ರತಿ ಪಕ್ಷಿಯನ್ನು ಗೇಲಿ ಮಾಡಲು, ಆ ಪಕ್ಷದ ವಿಚಾರದೊಳಗಿನ ಅಜೇಯ ಅಂಗವನ್ನು ಎದುರಿಸದಿರುವ ಜಾಣ್ಮೆಯು, ಈ ವಿರೋಧೀ ಟೀಕೆಯಲ್ಲಿ ಬಯಲಿಗೆ ಬರುತ್ತಿದೆ. ಬೆಂಕೆಯಲ್ಲಿ ತುಪ್ಪ ಸುರಿಯುವ ಅ-ಜಾಪುತ್ರನನ್ನು ಬಲಿಕೊಡುವ ಆ ಯಜ್ಞವು ಟೀಕಾಸ್ಪದವೇ ಸರಿ. ಆದರೆ, ಪ್ರತ್ಯಕ್ಷ ಟೀಕೆಗೆ- ನಿಂದೆಗೆ ಗುರಿಯಾಗಿಸದೆಯೆ 'ಸವಿತೃ' ದೈವತದ ಉಪಾಸನಾ ಪರಂಪರೆಯನ್ನು ನಷ್ಟಗೊಳಿಸಲಾಗಿದೆ! ಇದರಿಂದ ಭಾರತಕ್ಕೆ ಮಾತ್ರವಲ್ಲ; ಅಖಿಲ ಮಾನವ ಕುಟುಂಬಕ್ಕೇ ಹಾನಿಯಾಗಿದೆ. ಆದರೆ, ಬ್ರಾಹ್ಮಣ-ಬ್ರುವ ಸ್ವಾರ್ಥಿಗಳ ಒಂದು ಪಂಗಡವು, ಈ 'ಸವಿತೃ' ಉಪಾಸನಾ ಪರಂಪರೆಯನ್ನು ಕೇವಲ ತಮ್ಮ ಜಾತಿಯ ಸೊತ್ತು ಎಂಬಂತೆ, ಅದನ್ನು ಬಚ್ಚಿಟ್ಟುಕೊಳ್ಳಲು ಮಾಡಿದ ಪ್ರಯತ್ನವು ಅತ್ಯಂತ ಅಶ್ಲಾಘ್ಯವಾಗಿತ್ತು. ಜ್ಞಾನವು : ಪ್ರಕಾಶವು, ತಮ್ಮ ಪಾಡಿಗೇ ಬಚ್ಚಿಟ್ಟುಕೊಳ್ಳಲು ಶಕ್ಯವಾಗುವ ವಸ್ತುವಲ್ಲ, ಎಂಬುದೂ ಗಮನಕ್ಕೆ ಬರದ 'ಜ್ಞಾನೀ' ವರ್ಗಕ್ಕೆ ಸೇರಿದ್ದು.

ಸೌರ ಪಂಥೀಯರ ಅಕೃತ್ಯಗಳಿಂದ 'ಸವಿತೃ'ಪ್ರತಿಮೆಗೆ ಕುಂದುಬಂದಂತೆ ಆಪ : ರಸ ಪಂಥೀಯರು ಈ ದಿವ್ಯ ತೇಜೋಮಯ ಸವಿತೃವನ್ನು 'ಅಪಾಂ ನಪಾತ್' : (ನೀರೊಳಗಿನ ಅಗ್ನಿ : ಸರ್ಪ) ಈ ದೈವತದ ಸಾಲಿನಲ್ಲಿ ತಂದು ನಿಲ್ಲಿಸುವಲ್ಲಿ, ಆಗಿರುವ ಅರ್ಥ : ಮೂಲ್ಯ : ಸೌಂದರ್ಯದ ಅಪಾರ ಹಾನಿ ಎಂದೂ ತುಂಬಿ ಬರಲಾರದು.[೭] ಆಪ : ರಸ ಪಂಥೀಯರ ಈ ಪ್ರಯತ್ನಗಳಿಗೆ, ಋತ : ಸತ್ಯದ ಉಪಾಸಕರಿಂದ ಆ ಭೂಮಿಕೆಗೆ ಆದ ಅಪಚಾರಗಳಿಂದ ಇನ್ನಿಷ್ಟು ಬಲ ಬಂದಿರಲಿಕ್ಕೆ ಸಾಕು. 'ಧೀ' ಪ್ರೇರಕನಾದ ಸವಿತೃವು, 'ಗರ್ಭಂ ದಧ್ರ ಆಪಃ' ಎಂಬ ಗರ್ಭಾಧಾನ ಕ್ರಿಯೆಯ-ಸೃಜನ ಕ್ರಿಯಾ ಸಾಕ್ಷಿ : ಪ್ರಜಾಪತಿಯೆಂಬ ಹಾಗೆ ಅವಸ್ಥಾಂತರ ಹೊಂದಿದ್ದು ಋಗ್ವೇದದ ಅಂತ್ಯದಲ್ಲೆ ಕಾಣದೊರೆಯುತ್ತದೆ![೮] ಬೃಹದಾರಣ್ಯಕೋಪನಿಷತ್ತಿನಲ್ಲಿ ಇನ್ನೂ ವಿವರವಾಗಿ ಈ ಚಿತ್ರವನ್ನು ಕಾಣಬಹುದು.

ವಿಷ್ಣುಃ ಯೋನಿಂ ಕಲ್ಪಯತು ತ್ವಷ್ಟಾ ರೂಪಾಣಿ ಪಿಂಶತು।
ಆ ಸಿಂಚತು ಪ್ರಜಾಪತಿಃ, ಧಾತಾ ಗರ್ಭಂ ದಧಾತು ತೇ॥
ಗರ್ಭಂ ದೇಹಿ ಸಿನೀವಾಲೀ ಗರ್ಭಂ ಧೇಹಿ ಪೃಥೂಷ್ಟಕೇ ।

ಎಂಬ ಈ ಗರ್ಭಾಧಾನ ಮಂತ್ರಗಳಿಗೆ ಮುಂಚೆ 'ಸ್ಥಾಲೀಪಾಕ' ಹೋಮದ ಸಂದರ್ಭದಲ್ಲಿ 'ಜಾತವೇದ' ಅಗ್ನಿಯ ಉಲ್ಲೇಖವು 'ಅನುಮತಿ'ಯೊಡನೆ ಬರುತ್ತದೆ! ಬಳಿಕ 'ಧೀ' ಪ್ರೇರಕನೆಂದು ಬಗೆಯಲಾದ ಸವಿತೃವು, 'ಸವಿತ್ರೇ ಸತ್ಯಪ್ರಸವಾಯು' ಎಂಬ ಮಾತಿನಿಂದ ಆಮಂತ್ರಿಸಲ್ಪಡುತ್ತಾನೆ! ಆದರೆ, ಇಲ್ಲಿ ಈ 'ಪ್ರಸವವು'

ಭೌತರೂಪದ್ದು. ತಾತ್ವಿಕ : ದಿವ್ಯಾಧ್ಯಾತ್ಮ ಸ್ವರೂಪದ್ದಲ್ಲ ಎಂಬುದು ಮೇಲೆಯೆ ಕಾಣುತ್ತಿದೆ! ಆದರೆ, ಶಿಶುವಿನ ಜನನವು ಭೌತ ಸ್ವರೂಪದ್ದೆಂದರೂ, ಈ ಸೃಜನ-ಶಕ್ತಿ : ಈ ಸೃಜನಕ್ಕೆ ಕಾರಣವಾದ ಆಪ : ರಸ ತತ್-ತ್ವ ಎಂದರೆ ಆದರೊಳಗಿನ 'ಅಗ್ನಿ' (?) ರೂಪೀ ಸರ್ಪ : ಸರೀಸೃಪ (ಈ ಎರಡನೆಯ ಸಂಕೇತವು ಋಗ್ವೇದದಲ್ಲೆ ಇದೆ!) ನಿರ್ಮಾಣ ಶಕ್ತಿ, ಇದು ಅಭೌತ ತಾತ್ವಿಕ ಪಾತಳಿಯ ಮೇಲಣದು, ಎಂಬುದನ್ನು ಒಪ್ಪಲೇ ಬೇಕು; ಸರಿ.

ವಿರಕ್ತ ಪಂಥೀಯ ದಿವ್ಯಾಧ್ಯಾತ್ಮದ ಪಾತಳಿಯ ಮೇಲಿನ ಆಪ : ರಸದ 'ತತ್': ಏಕಂ : ಸತ್ ಎಂದರೆ ಇದು. 'ವಿಶ್ವಕರ್ಮ' ಎಂಬ ನಾಮಸಂಕೇತವಿರಲಿ, 'ಪ್ರಜಾಪತಿ' ಪ್ರತಿಮಾ : ಸಂಕೇತವಿರಲಿ, ಇದು 'ದಕ್ಷ' ಎಂಬ ನಾಮರೂಪದಲ್ಲಿ ಕಾಣಿಸಿಕೊಳ್ಳಲಿ; ಇಲ್ಲವೆ 'ತ್ವಷ್ಟಾರ' ಎಂಬ ರೂಪ ಧರಿಸಿರಲಿ, ರುದ್ರ, ವಿಷ್ಣು, ಧಾತಾ, ಪರಮೇಷ್ಠಿ, ಬ್ರಹ್ಮ ಎಂಬೀ ಯಾವುದೇ ನಾಮವಿರಲಿ: 'ಪುರುಷ' ಎಂಬ ಮೂಲ ಸಂಕೇತದಲ್ಲಿ ಅವೆಲ್ಲವೂ ಒಳಗೊಳ್ಳುತ್ತವೆ. ಇದನ್ನೆ 'ಹಿರಣ್ಯಗರ್ಭ' 'ಸ್ಕಂಭ', ಜೋತಿಃ (ಲಿಂಗ) ಎಂಬ ಹೆಸರಿನ ಮೂಲಕವಾಗಿಯೂ ನಿರ್ದೇಶಿಸಿದ್ದುಂಟು. 'ಮೂಲಸ್ತಂಭ' (ಶಂಭು) ಎಂಬುದು ಶೈವ ಸಂಪ್ರದಾಯದ ಪರ್ಯಾಯನಾಮ. ವಿಷ್ಣುವಿನ "ಮಧುವು ಚಿಮ್ಮುತ್ತಿರುವ (ಮಧ್ವಉತ್ಸಃ) ಪದ"ವು, 'ಸ್ಕಂಭ'; ಸ್ತಂಭದಿಂದ ಬೇರೆಯಲ್ಲ (I. ೧೫೪) 'ನಂದೀ'-ಕೋಲು ಎಂದರೆ ಶೈವರದು; ನಂದ (ವಿಷ್ಣುವಿನ) ಕೋಲು (: ಪಾದ) ಎಂದರೆ ವೈಷ್ಣವರದಾಗುತ್ತದೆ. ಈ ಸಂದರ್ಭದಲ್ಲಿ ಹಿಮಾಚಲದಲ್ಲಿ ಆಪ : ರಸ ಸ್ರೋತದ ಕೇಂದ್ರ 'ನಂದಾ'-ದೇವಿ ಶಿಖರ ನೆನಪಾಗುತ್ತದೆ! ಈ ಶಿಖರ ನಾಮದ ಪ್ರಾಚೀನತೆ ತಿಳಿದರೆ ಇನ್ನೂ ಅದೆಷ್ಟೊ ಹೆಚ್ಚಿನ ಬೆಳಕು ಸಿಕ್ಕಬಲ್ಲುದು.

ವಿಶ್ವನಿರ್ಮಿತಿಯ ದಿವ್ಯಶಕ್ತಿ 'ಆಪ : ರಸ ಮತ್ತು 'ಸವಿತೃ' ದೇವನು ಹೀಗೆ- ಇವೆರಡೂ ದಿವ್ಯದೈವತಗಳ ಅನುಭಾವದ ಪಾತಳಿಗಳೇ ಬೇರೆ, ಬೇರೆ. ಆದರೂ ಈ ಜ್ಞಾನ ಪ್ರಕಾಶವನ್ನು, ಭೌತಸೃಷ್ಟಿಯ ಸೃಜನ ಶಕ್ತಿಯ ಆಪ : ರಸದ ಪಾತಳಿಯ ಮೇಲೆ ತಂದು ನಿಲ್ಲಿಸಿರುವುದರಿಂದ, ಈ ರಸದ ಆವರಣದಲ್ಲಿ-ಅದರ ಪ್ರಭಾವದಲ್ಲಿ 'ನಚಿಕೇತ'ರಾಗುವ ಭಾರತೀಯರು, ಸವಿತೃ ಪ್ರಕಾಶಕ್ಕೆ ವಂಚಿತರಾಗಬೇಕಾಗಿರುವದು ಕಾಣುತ್ತಲೆ ಇದೆ. ಹಗಲು ತನ್ನ ಪ್ರತಿಷ್ಠೆಗೆ ಎರವಾಗದೆ ಹಗಲು=ರಾತ್ರಿ ಸಮವಾಗಲಾರವು; 'ಜಾಗರ' ಪಂಥ ತಲೆಯೆತ್ತಲಾರವು. ಚಾಂದ್ರಾಯಣ, ನಕ್ತ, ಪ್ರದೋಷ, ಪೂಜಾ-ಪೌರ್ಣಿಮಾ, ಪ್ರತಿಪದಾದಿ ದೇವಿ : ಶಕ್ತಿಯ ಉಪಾಸನಾದಿಗಳ ಮಹಿಮೆ ಹೆಚ್ಚುತ್ತದೆ. ಸೌರತತ್ವದ ಪ್ರತಿಮೆಗಳು ಹಿಂದೆ ಬೀಳುತ್ತವೆ. 'ನಾರ'ಣನೇ ಸೂರ್ಯ, ಅಗ್ನಿ ಎಂಬ ಹಾಗಿನ ಸೂರ್ಯ-ನಾರಾಯಣ, ಅಗ್ನಿನಾರಾಯಣ ಎಂಬ ಸಂಕೇತ : ಪ್ರತಿಮೆ ಆರಾಧ್ಯ ದೈವತವಾಗುತ್ತದೆ!

ಟಿಪ್ಪಣಿಗಳು

೧. ದಿವೋ ಧರ್ತಾ, ಭುವನಸ್ಯ ಪ್ರಜಾಪತಿಃ ಪಿಶಂಗಂ ದ್ರಾಪಿ ಪ್ರತಿಮುಂಚತೇ ಕವಿಃ। ***ಋಗ್ವೇದ ಸಂಹಿತೆ***, IV. ೫೩.೨
ವಿಶ್ವರೂಪಾಣಿ ಪ್ರತಿಮುಂಚತೇ ಕವಿಃ ಪ್ರಾಸಾವೀತ್ ಭದ್ರಂ ದ್ವಿಪದೇ ಚತುಷ್ಪದೇ। ***ಋಗ್ವೇದ ಸಂಹಿತೆ*** V. ೮೧.೨

೨. ***ಋಗ್ವೇದ ಸಂಹಿತೆ*** X - ೭೧. ೨

೩. ಋಗ್ವೇದ ಸಂಹಿತೆಯ ಹತ್ತನೆಯ ಮಂಡಲದ ಎಪ್ಪತ್ತೊಂದನೆಯ ಸೂಕ್ತದ ೫,೬,೭,೮ ಮತ್ತು ೧೦ನೆಯ ಮಂತ್ರಗಳಲ್ಲಿ ಇವರು ವಿವರಗಳನ್ನು ಗಮನಿಸಬಹುದು.

೪. Bosch, F. D. K.; ***The Golden Germ : An Introduction to Indian Symbolism***, Leiden, 1960

೫. ***ಋಗ್ವೇದ ಸಂಹಿತೆ*** X ೧೯೦

೬. ***ಅದೇ*** X ೮೧, ೮೨, ೭೨, ೧೨೧ ಇತ್ಯಾದಿ

೭. ***ಅದೇ*** I ೨೨.೬

೮. ***ಅದೇ*** X. ೨೨.೬ ಮತ್ತು X. ೨೪೯.೨

೯. ***ಬೃಹದಾರಣ್ಯಕೋಪನಿಷತ್*** ೬.೪.೧೯

ಆಪ : ರಸತತ್ತ್ವದ ಮೂಲಪ್ರತಿಮಾ : ಸಂಕೇತದ ಸ್ವರೂಪ

ವಿರಕ್ತ ಪಂಥೀಯ ದೈವತಗಳ ಏನೆಲ್ಲ ನಾಮರೂಪಗಳ ಉಲ್ಲೇಖಗಳು, 'ಅಪಾಂ ನಪಾತ್' ಸಂಕೇತದ ತರುವಾಯದುವು. ಪಾರ್ಸಿಗಳ ಅವೆಸ್ತಾ ಗ್ರಂಥದಲ್ಲಿ 'ಅಪಾಂ ನಪಾತ್' ಇದ್ದಾನೆ.[1]

ಈ ದೈವತವು ನೀರಿನಡಿಯಲ್ಲಿ ಇರುತ್ತದೆ. ಸ್ತ್ರೀಯರಿಂದ ಸುತ್ತುವರಿಯಲ್ಪಟ್ಟಿರುವುದು.

ಇದು ಸಾಗರದ ಅಡಿಯಲ್ಲಿ ಕುದುರೆಗಳ (Steeds) ವೇಗದಿಂದ ಓಡುವುದು.....

ಎಂಬ ಅವೆಸ್ತಾದ ವರ್ಣನೆಯಿಂದ ಈ ದೇವತಾ ಸ್ವರೂಪವನ್ನು ನಿರ್ಧರಿಸಿಕೊಳ್ಳುವ ಹಲವಾರು ಪ್ರಯತ್ನಗಳು ಆಗಿವೆ. ಇದು 'ಅಗ್ನಿ' ಸ್ವರೂಪೀ ದೈವತವಿದ್ದು ಮಳೆಯೊಳಗಿನ ಮಿಂಚು ಆಗಿರಬೇಕು, ಎಂಬ ಅಭಿಪ್ರಾಯವು ಒಂದು. ಆದರೆ, ಓಲ್ಡೆನ್‌ಬರ್ಗನ ದೃಷ್ಟಿಯಲ್ಲಿ, ಮೂಲತಃ ಇದು ಸುಷ್ಟ-ದುಷ್ಟ ಈ ಉಭಯ ಶಕ್ತಿಗಳನ್ನುಳ್ಳ ಕೇವಲ ನೀರಿಗೆ ಸಂಬದ್ಧ ಒಂದು ದೈವತ (genius) ಇರಲಿಕ್ಕೆ ಬೇಕು; ಜಲೋತ್ಪನ್ನ 'ಅಗ್ನಿ'ಯೊಡನೆ ಇದನ್ನು ತಳಕು ಹಾಕುವಲ್ಲಿ ವೈಚಾರಿಕ ಗೊಂದಲವು (Confusion) ಉಂಟಾಗುತ್ತದೆ. ಜಲೋತ್ಪನ್ನ ಅಗ್ನಿಯಿಂದ-ಮಿಂಚಿನಿಂದ ಇದು ತೀರ ಬೇರೆ ಎಂದು ಅವನು ಧೈರ್ಯದಿಂದ ಹೇಳುತ್ತಾನೆ. ಋಗ್ವೇದದಲ್ಲಿ ಸಹ ಈ ದೈವತವೇ ಉಂಟು.[2] ಹಿಲ್ಲೆಬ್ರಾಂಟ್ ಮತ್ತು ಹಾರ್ಡಿ ಅವರ ಮತದಂತೆ 'ಅಪಾಂ ನಪಾತ್' ಎಂಬುದು ಚಂದ್ರನ ಸಂಕೇತ. ಮಾಕ್ಸ್‌ಮುಲ್ಲರನಿಗೆ ಇಲ್ಲಿ ಸೂರ್ಯ ಅಥವಾ ವಿದ್ಯುಲ್ಲತೆ ಇರುವ ಸಂದೇಹ.

ಈಜಿಪ್ಟ್-ಕ್ರೀಟ್-ಗ್ರೀಕ್ ಭಾಗದ ದಿವ್ಯ ದೇವತಾ ಪವಾಡಕಥೆಗಳೊಡನೆ ಭಾರತೀಯ ದೈವತಗಳ ದಿವ್ಯ ಪವಾಡಗಳನ್ನು ಹೋಲಿಸಿ ನೋಡುವಾಗ, ಈ 'ಅಪಾಂ ನಪಾತ್' ದೈವತವು ಹಾವು ಮತ್ತು ಚಂದ್ರರೂಪ ವಾಗಿರುವುದೆಂದು ನನಗೆ ಕಂಡು ಬಂದಿದೆ. ಈ ಕಾರಣದಿಂದ ಓಲ್ಡೆನ್‌ಬರ್ಗ್ ಮತ್ತು ಹಿಲ್ಲೆಬ್ರಾಂಟ್-ಹಾರ್ಡಿ ಇವರ ನಿರ್ಣಯವು ವಾಸ್ತವ : ಸತ್ಯಕ್ಕೆ ಹೆಚ್ಚು ಹತ್ತಿರದ್ದು ಎಂದು ತೋರುತ್ತದೆ; ಏಕೆಂದರೆ ಇದು ಋಗ್ವೇದದ ಹಲವು ಸಮಸ್ಯೆಗಳನ್ನು ಬಗೆಹರಿಸುತ್ತದೆ. ಇರಾಣದಲ್ಲಿ ನೆಲೆಸಿದ್ದಾಗಲೆ ಯುರೋ-ಭಾರತೀಯ ಭಾಷಿಕ ಆರ್ಯರ ಪಂಗಡದೊಡನೆ ಅಸ್ಸೀರಿಯಾ ಬ್ಯಾಬಿಲೋನ ಹಾಗೂ ಭೂಮಧ್ಯ ಸಮುದ್ರ ವಿಭಾಗದಲ್ಲಿ ಅಂದು ಅತ್ಯಂತ ಪ್ರಭಾವಶಾಲಿಯಾಗಿದ್ದ ಆಪೋದೇವತಾ ಸಂಪ್ರದಾಯದ ಸಂಘರ್ಷಕ್ಕೆ ಪ್ರಾರಂಭವಾಗಿರಲಿಕ್ಕೆಬೇಕೆಂದು ಊಹಿಸುವ ಆವಶ್ಯಕತೆಯಿದೆ. ಏಕೆಂದರೆ 'ವೃತ್ರಘ್ನ' ಎಂಬ ವೇದದ ಪ್ರತಿಮೆ, ಅವೆಸ್ತಾದಲ್ಲಿ ವೆರೆಥ್ರಘ್ನ (Verethraghna) ಈ ಹೆಸರಿನಲ್ಲಿ ಉಂಟು. ಅವನು ವೃತ್ರ : ಅಹಿಯ (Dragon) ಸಂಹಾರಕನೆಂದೂ ಅಲ್ಲಿ ಹೇಳಲಾಗಿದೆ. ಅಲ್ಲದೆ, ಅವೆಸ್ತಾದಲ್ಲಿ ಇಂದ್ರನ ಹೆಸರು ಎರಡು ಬಾರಿ ಬರುತ್ತದೆ. ಆದರೆ, ಇಂದ್ರನಿಗೆ ಫಾರ್ಸಿಗಳ ದೈವತಗಳಲ್ಲಿ ಮೇಲಣ ಸ್ಥಾನವಿಲ್ಲ; ದೆವ್ವ (demon) ಆಗಿದ್ದಾನೆ. ಇದೇನೇ ಇದ್ದರೂ ಅಹಿ-ವೃತ್ರನ ದ್ವೇಷಿಯಾದ ದೈವತವೊಂದು,

ಇರಾಣದಲ್ಲಿ ಇರುವಾಗಲೆ ಆ ಯುರೋ-ಭಾರತೀಯರ ದೇವತಾ ಮಂಡಲದಲ್ಲಿ ಸ್ಥಾನ ಪಡೆದಿತ್ತು. ಇದೇ ಮೇರೆಗೆ ಆಪೋದೇವತೆ ಮತ್ತು 'ಅಪಾಂ ನಪ್ತ್ರ' (ಜಲ-ಪುತ್ರ) ಈ ದೈವತಗಳೂ ಅಲ್ಲಿಯೂ ಪೂಜ್ಯವಾಗಿದ್ದುವು. ಆದರೆ, ಆಪೋ ದೈವತ ಮಂಡಲದ ವಿಕಾಸಕ್ಕೆ ಇರಾಣಕ್ಕಿಂತ ಭಾರತೀಯ ಪರಿಸರವು ತುಂಬ ಪೋಷಕವಾಗಿ ಪರಿಣಮಿಸಿದ್ದಾಗಿ ಕಾಣುತ್ತದೆ. ಭಾರತವು 'Land of Serpents' ಆಗಿತ್ತು ಎಂದು ಎ.ಎ. ಮ್ಯಾಕಡೊನೆಲ್ಲ ಅವರಿಗೆ, ಗ್ರಂಥಾಂತರಗಳಿಂದ ಎನಿಸಿದೆ; ವ್ಹೊಜೆಲ್ ಮತ್ತು ಡಚ್ ವಿದ್ವಾಂಸರು ಭಾರತದ ಎಲ್ಲ ಪ್ರಾಂತ್ಯವನ್ನು ತಿರುಗಾಡಿ, ಸಾಹಿತ್ಯ ಸಂಶೋಧಿಸಿ ಇದೇ ನಿರ್ಣಯಕ್ಕೆ ಬಂದಿದ್ದಾನೆ!

ಈಜಿಪ್ಟ್-ಗ್ರೀಕ್ ಇರಾಣ ಭಾಗದ ಆಪೋ ದೇವತಾ ಪಂಥವನ್ನು ಹೋಲುವ ಕೆಲವೊಂದು ದೈವತಗಳು ವೇದಪೂರ್ವದಿಂದಲೂ ಭಾರತದಲ್ಲಿ ಇದ್ದುವೆಂಬುದು ನಿಶ್ಚಿತವಾಗಿದೆ. ಖಾಲ್ಡಿಯಾ ವಿಭಾಗದಲ್ಲಿ ಪೂಜಿಸಲ್ಪಡುತ್ತಿದ್ದ 'ಶಿನೀವಾಲೀ' ದೈವತದ ಉಲ್ಲೇಖವು, ಋಗ್ವೇದದಲ್ಲಿ ಉಂಟು, 'ಶಿನ್' ಶಬ್ದ-ಸಂಕೇತದ ಚಂದ್ರ ದೈವತದ ಒಂದು ಗುಡಿ ಆ ದೇಶದ 'ಊರ್' ಎಂಬಲ್ಲಿ ಇದ್ದುದು ಉತ್ಖನನದಲ್ಲಿ ಬೆಳಕಿಗೆ ಬಂದಿದೆ. ಈ ದೈವತದ ಖಾಲ್ಡಿಯಾದ ಸಂಬಂಧವನ್ನು ಕುರಿತು ಲೋಕಮಾನ್ಯ ತಿಲಕರು ಬರೆದ ಸಂಶೋಧನಾತ್ಮಕ ಪ್ರಬಂಧವು ಪ್ರಕಟವಾಗಿ ಅರ್ಧ ಶತಕ ಮಿಕ್ಕಿದೆ.[೩] 'ಶಿನೀವಾಲೀ' ಈ ಸಂಕೇತದಲ್ಲಿ ಇರುವ 'ಶಿನ್' ಈ ಶಬ್ದಮೂಲವು ಕಂದಮಿಳ ಭಾಷೆಗೆ ಸಂಬಂಧಪಟ್ಟುದು ಆಗಿರುವ ಶಕ್ಯತೆಯಿದೆ; ಏಕೆಂದರೆ ಚೆನ್-ಕೆನ್ ಎಂದೂ 'ಶಿನ್' ಪದದ ಉಚ್ಚಾರವು ಆಗಬಲ್ಲುದು. ಚನ್ದ್ರ ಪದವು ಋಗ್ವೇದದಲ್ಲಿ ಮೊದಲು ಶ್ಚಂದ್ರ ಎಂಬ ಉಚ್ಚಾರದ್ದಾಗಿದೆ. ಚ-ಶ ಇವೆರಡರ ನಡುವಣ ಉಚ್ಚಾರವು ಕಂದಮಿಳರ ಶಾಖೆಗಳಲ್ಲಿ ಇಂದಿಗೂ ಉಂಟು. ಶಿನೀವಾಲೀ-ಚಂದಿರನ ಆರಾಧನೆಯನ್ನು ಸಂಸ್ಕೃತ ಭಾಷಿಕರು ಹೊರಗಣಿಂದ ಸ್ವೀಕರಿಸಿದರೆಂದು ಬೇರೆ ಪ್ರಮಾಣಗಳಿಂದ ಗೊತ್ತಾಗಿರುವುದಕ್ಕೆ ಈ ಶಬ್ದವ್ಯುತ್ಪತ್ತಿಯಿಂದ ಬೆಂಬಲ ದೊರೆಯುತ್ತದೆ. ಬ್ಯಾಬಿಲೋನಿಯದಲ್ಲಿ ಆಪೋದೇವತಾ ಸಂಪ್ರದಾಯವು ಇದ್ದಿತೆಂಬುದನ್ನು ಇತಿಹಾಸಕಾರರು ಹೇಳುತ್ತಿದ್ದಾರೆ.[೪]

೧. ಜಲದ 'ದಿವ್ಯ' ಮಾಡಿ 'ಸತ್ಯ'ತೆಯನ್ನು ಸಿದ್ಧಪಡಿಸಬೇಕಾಗುತ್ತಿದ್ದಿತು.
೨. ಜಲದಲ್ಲಿ ಪಾವನ ಶಕ್ತಿ ಉದ್ಧಾರಕ ಶಕ್ತಿ, ಔಷಧೀ ಶಕ್ತಿ (ಉದಾ. ಗಂಗೋದಕ) ತೀರ್ಥದಂತೆ ಇದ್ದುದಾಗಿ ಶ್ರದ್ಧೆ;
೩. 'ಆಪ'ವು ಜೀವನ (Life) ದಾಯಿ.
೪. ಈ ಜಲ : ಜೀವನದ ಆಚೆಗೆ- ಮೃತ್ಯುವಿನ ಆಚೆಗೆ-ಸೂರ್ಯನ ಹೊರತು ಯಾರೂ ಹೋಗಲಾರರು.
೫. ಅಪ್‌ಧಿಪತಿ (Lord of Waters) ಒಬ್ಬನಿದ್ದನು. ಇವನು ಜ್ಞಾನಿ. ಸರ್ವಜ್ಞ, ಹಸ್ತಕೌಶಲವನ್ನು ಲೋಕಕ್ಕೆ ಕಲಿಸಿದವನು, ಯಾತು (>ಜಾದು) ವಿದ್ಯಾನಿಪುಣನು.

ಈತನ ಪ್ರೀತಿಯ ಪ್ರಾಣಿ ಆಡು (Ibex) ಭಾರತೀಯರು 'ಅ-ಜ' ಎಂದು ಹೆಸರಿತ್ತ ಆಡಿಗೆ, ಮೊದಲಲ್ಲಿ ಕುರಿಗಿಂತಲೂ ಹೆಚ್ಚಿನ ಆದರ ಗೌರವವಿದ್ದಿತೆಂದು ಕಾಣುತ್ತದೆ. 'ಅ-ಜ' : ಬ್ರಹ್ಮ ಸಂಕೇತದ ಮಾನದಂಡ ಆಡು! ಗ್ರೀಕ್ ದೇಶದ ದೇಶದ ಪುರಾತನ ಕತೆಗಳಿಂದ, ಅಲ್ಲಿ ಆಡಿನ ಚರ್ಮದ 'ದಿವ್ಯ' ಕವಚ ಧರಿಸುವ ವಾಡಿಕೆಯಿದ್ದಿತಾಗಿ ತಿಳಿಯುತ್ತದೆ. 'ನಿನ್ನಿ' ಶಿನ್ ದೇವತೆಯ ಮಗಳು, ಪ್ರೇಮದ ಅಧಿದೇವತೆ! ಭಾರತೀಯ ಶಿನೀವಾಲಿ ಗರ್ಭ-ಪ್ರಸವದ ದೇವಿ! ಮಧುಚಂದ್ರ (Honey-moon) ಈ ಪ್ರತಿಮಾ ಸಂಕೇತವು ಈ ಸಂದರ್ಭದಲ್ಲಿ ವಿಚಾರಾರ್ಹವಾಗಿದೆ. ಬಾಬಿಲೋನ್ ಸಂಸ್ಕೃತಿಯಲ್ಲಿ 'ಅಪ್ಸು' (Apsu) ಹೆಸರಿನ ಆಪೋ ದೈವತವಿದ್ದಿತೆಂಬುದನ್ನೂ ದುರ್ಲಕ್ಷಿಸಲಿಕ್ಕಾಗುವುದಿಲ್ಲ. ಅಪ್ಸುದೊಳಗಿಂದ ದೇವರು ಹುಟ್ಟಿದರು. ಅಪ್ಸುವೆ ನಾನಾ ವಿಕೃತ ರೂಪದ ವಿನಾಶಕ ದೈವತಗಳಿಗೂ ಜನ್ಮವಿತ್ತಿದೆಯಂತೆ

out of Apsu come hedious devils of composite forms.....

ಅಪಾಂ-ನಪ್ತೃ : ನೀರಿನ ಸಂತಾನ

ಅವೆಸ್ತಾ ಹಾಗೂ ಋಗ್ವೇದದೊಳಗಿನ ಅಪಾಂ-ನಪಾತ್ ದೈವತದ ತುಲನಾತ್ಮಕ ಸಮೀಕ್ಷೆಯಲ್ಲಿ ಓಲ್ಡೆನ್‌ಬರ್ಗನಿಗೆ ಕಂಡದ್ದು: ನೀರಿನ ಸಂತಾನ (Apamnapat was orginally a water genius pure and simple), ಓಲ್ಡೆನ್‌ಬರ್ಗನು Genius ಎಂದು ಬಳಸಿದ ಮಾತು ಅರ್ಥಪೂರ್ಣವಿದೆ. 'genie', 'ಜಿನ್' ಎಂಬ ಇಂಡೋ-ಯುರೋಪೀಯ- ಆರ್ಯಭಾಷೆಯ ಶಬ್ದಮೂಲದಿಂದ ನಿಷ್ಪನ್ನವಾದ ಮಾತು. 'gignere, genit : beget' ಎಂಬ ಈ ಪದದ ಮೂಲಾರ್ಥವು ಗಮನಾರ್ಹವಾಗಿದೆ; ಈ ಶಬ್ದ ಮೂಲದಿಂದಲೇ 'genital' (ಲಿಂಗ) ಎಂಬ ಪದವೂ ಮೈದಾಳಿದೆ! 'genius' ಇದು ದೈವತವಾಚಿಯಿರುವಂತೆ, ದೆವ್ವಗಳ ವರ್ಗವನ್ನು ಗಮನಕ್ಕೆ ತಂದುಕೊಡುತ್ತದೆ.

> 'Two opposed spirits or angels working for person's salvation or damnation' (ಆಕ್ಸಫರ್ಡ ಸಂಕ್ಷಿಪ್ತ ಕೋಶ).

'Water genius' ಎನ್ನುವಲ್ಲಿ ಇದು ನೀರನಲ್ಲೆ ಹುಟ್ಟುವ (ಪ್ರಾಣಿ) ಶಕ್ತಿ ; ನೀರಿನ ಸಂತಾನ ಎಂಬ ಅರ್ಥವು ಅಭಿಪ್ರೇತವುಂಟು. 'ನಪಾತ್' ಎಂಬುದಕ್ಕೆ descendent, offspring ಎಂದೂ ಮೊನಿಯರ್ ವಿಲಿಯಂಸ್ ಕೋಶ ಅರ್ಥ ಹೇಳುತ್ತದೆ. 'ಅಪಾಂ ನಪಾತ್' ಇದರಲ್ಲಿ ಉದ್ಧಾರಕ ಶಕ್ತಿಯಂತೆ ಮಾರಕ ಸಾಮರ್ಥ್ಯವೂ ಇದೆ! Genital ನಾಗ ಸೃಷ್ಟಿಗೆ ಕಾರಣನಾಗುವಂತೆ, ವೀರ್ಯನಾಶದಿಂದ ಸಂಹಾರ ಸ್ವರೂಪನೂ ಆಗುತ್ತಾನೆ!

"ಆಪೊ ನಾರಾಃ ಇತಿ ಪ್ರೋಕ್ತಾಃ, ಆಪೋ ವೈ ನರ-ಸೂನವಃ ಎಂಬ ಮಹಾಭಾರತದ ಶ್ಲೋಕವು, 'ಅಪಾಂ ನಪಾತ್' ಪದದ ಅರ್ಥವನ್ನೇ ಇನ್ನೊಂದು ಬಗೆಯಲ್ಲಿ ವಿವರಿಸುತ್ತಿರುವುದನ್ನು ಕಾಣಬಹುದು! 'ನಾರ': ಆಪ; ಆದಕಾರಣ ನಾರ-ಸೂನು: ನಾರಾಯಣ : ಅಪಾಂ ನಪ್ತೃ. ನೀರಲ್ಲಿ ಹುಟ್ಟಿದ 'ಪ್ರಾಣಿ-ಚೈತನ್ಯ' : Genius. ಮಹಾಭಾರತವು ಹೇಳುವಂತೆ, ಈ ಭೂಮಿಕೆಯಿಂದ 'ನರ' ಸೂನುಗಳೂ, ನಾರ-ಸೂನುಗಳೇ. 'ನಾರ' (ಕ) ಮತ್ತು 'ನರ(ಕ)' Angel & Devil ಏಕಕಾಲಕ್ಕೆ!! ನಾರ-ಸಿಂಹ ಮತ್ತು ನರ-ಸಿಂಹ ಈ ಎರಡೂ ಉಚ್ಚಾರದ ಪದಗಳೂ ಸಮಾನಾರ್ಥಿಗಳೆಂಬುದನ್ನು ಮರೆಯಲಾಗದು. ಸಂಸ್ಕೃತ 'ನೃ' ಎಂಬುದು ನಾ (ಏಕವಚನ), ನರೌ (ದ್ವಿ. ವ), ಮತ್ತು ನರಃ (ಬ.ವ.) ರೂಪ ತಾಳುತ್ತದೆ. ಆದಕಾರಣ ಏಕವಚನಾಂತ 'ನರ' (ಒಂದು ವ್ಯಕ್ತಿ) ಎಂಬ ಪದವು ಮೂಲತಃ ಸಂಸ್ಕೃತ ಭಾಷೆಯ ಪದವಾಗಿರದೆ ಇದು ಸಂಸ್ಕೃತದಲ್ಲಿ homonym ಆಗಿರುವದಾಗಿ ಕಾಣುತ್ತದೆ. ಹಿಮಾಲಯದ ಕುಲೂ ಕೊಳ್ಳದ ಜಾನಪದದಲ್ಲಿ ಹಾವಿಗೆ 'ನಾರಾಯಣ' ಎಂದು ಇರುವ ಹೆಸರು, ಓಲ್ಡೆನ್‌ಬರ್ಗನ 'Water genius' ಎಂದರೆ ಯಾರು, ಎಂಬುದನ್ನು ಸ್ಪಷ್ಟೀಕರಿಸುತ್ತಿದೆ. ವ್ಹೊಜೆಲ್ ನಿವೇದಿಸಿರುವ, ಆ ಜನಪದದಲ್ಲಿ ಪ್ರಚಲಿತವಿರುವ ಕಥೆಗಳು ಈ 'ಅಪಾಂ ನಪಾತ್' : ನಾರಾಯಣನ ಮಹಾತ್ಮ್ಯವನ್ನು ನಿದರ್ಶನಕ್ಕೆ ತರುವಂತಹವು ಇವೆ. ಈ Genie : ನಾರಣ ಕನಸಿನಲ್ಲಿ ಬಂದು, ತರುಣಿ ಬಸುರಿಯಾದ ಕಥೆಯಿದೆ! ಈ 'ಅಪಾಂ ನಪಾತ್' ದಿವ್ಯ ದೈವತಶಕ್ತಿಯು, ಹಾವಿನ ರೂಪ ಮಾತ್ರವಲ್ಲ, ತನಗೆ ಇಷ್ಟವಾದ ಯಾವುದೂ ರೂಪ ತಾಳಬಲ್ಲದು, ಎಂದು ಜಾಗತಿಕ ಪವಾಡ ಕಥೆಗಳೆ ಹೇಳುತ್ತವೆ!

ವಿಶ್ವಜನನಿ ಅದಿತಿ; ಇವಳು 'ಸಲಿಲ' ಸ್ವರೂಪೀ ದೇವಿ 'ಅಪೋವಾ ಆಸ್ಮಾನ್ ಮಾತರಃ' ಎಂದು ಋಗ್ವೇದದ ಕವಿಗಳು ಸಾರುತ್ತಾರೆ. ಈ ಮಹಾತಾಯಿ ಅದಿತಿ : ವಿಶ್ವಜನನಿಯಿಂದ "(ತಾಂ) ದೇವಾಃ ಅನ್ವಜಯಾಂತ ಭದ್ರಾಃ ಅಮೃತಂ ಬಂಧುವಃ" ಈ ಭೂಮಿಕೆಯ ಶ್ರದ್ಧೆಯಂತೆ ಸಲಿಲೋದ್ಭವರು ಎಲ್ಲರೂ ಅಮೃತ : (ರಸೋದ್ಭವ) ಬಂಧುಗಳು! ಉಪನಿಷತ್ತಿನಲ್ಲಿ 'ಸರ್ಪ-ದೇವಜನ'ರ ಉಲ್ಲೇಖ ಬರುತ್ತದೆ 'ದೇವಜನ' ಎಂಬ ಸಂಕೇತಕ್ಕೆ ಸರ್ಪಗಳು ಎಂದೇ ಅರ್ಥವಿದೆ. ಸರ್ಪಗಳು 'ದೇವಜನ' ಹೇಗೆ ಎಂಬ ಪ್ರಶ್ನೆ ಅದೆಷ್ಟೊ ಕಾಲ ಕಾಡಿತ್ತು! ಅದಿತಿಯ ದರ್ಶನದಿಂದ ಭಾರತೀಯ ಛಾಪಿನ ಆತ್ಯಂತಿಕ ಅಹಿಂಸೆಯ ಅರ್ಥವು ಆಗಲೆ ವಿಶದವಾಯ್ತು.

ನೀರು : ಜೀವನ (ಜಲ) ವಿಶ್ವಸ್ಥ ಪ್ರಾಣಿಮಾತ್ರಗಳೆಲ್ಲವೂ ನೀರಿನ ಸಂತಾನ. ಆದಿ ನಾರಾಯಣನೇ ಸೃಷ್ಟಿಕರ್ತ. ಇದೇ ಮೇರೆಗೆ ಆದಿನಾಥ : ವೃಷಭ : ವರ್ಷಯಿತೃ: ನಾಗ ಸಂಕೇತ : ಪ್ರತಿಮಾ ರೂಪವು ಎಂಬ ಶ್ರದ್ಧೆಯ ಅರ್ಥವೇನು? ನೀರಿನಲ್ಲಿ (ಆಪೋ ವೈ ರೇತಃ), ಹುಟ್ಟಿದವರೆಲ್ಲರೂ ಅಮೃತ (: ರಸ) ಬಂಧುಗಳು. 'ಸಮತ್ವಂ ಯೋಗಂ ಉಚ್ಯತೇ; 'ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ' ಈ ಶ್ರದ್ಧೆಯೆ, ಭಾರತೀಯ ಆತ್ಯಂತಿಕ ಸ್ವರೂಪದ ಸಮತ್ವ ಹಾಗೂ ಅಹಿಂಸೆಯ ಶ್ರದ್ಧೆಯನ್ನು ಒತ್ತಾಯಪಡಿಸುವ ಭೂಮಿಕೆಯು ತಳಹದಿಯಲ್ಲಿದೆ. ಈ ಆತ್ಯಂತಿಕ ಸ್ವರೂಪದ ಅಹಿಂಸೆಯೆ, ಆ-ಜನ್ಮ 'ಕುಮಾರೀ' 'ಕುಮಾರ'ತ್ವದ ಜೀವನ ರೀತಿಗೆ ಪ್ರಚೋದಿಸುತ್ತದೆ. ಈ ಏಕಾಂತಿಕ ಅಹಿಂಸೆ, ಈ ನೈಷ್ಠಿಕ ಬ್ರಹ್ಮಚರ್ಯ, ಕ್ರೈಸ್ತ, ಬೌದ್ಧ, ಜೈನ, ಶೈವ, ವೈಷ್ಣವ, ಶಾಕ್ತಾದಿಗಳಲ್ಲಿ ಏಕಾಂತಿಕ ಶ್ರದ್ಧೆಯ ಒಂದು ಪ್ರಕಾರವು; ಹೊರತು ವಿಮರ್ಶಾತ್ಮಕ ವಿಚಾರಮಾನವೀಯ ಕರುಣೆಯ ಮೂಲದಲ್ಲಿ ಅಂಕುರಿಸಿದ್ದು ಅಲ್ಲ ಎಂದು ಬಾಶ್ಚ್ ಹೇಳಿದ್ದು ಸರಿಯಿದೆ. "Mankind is under the rule of Logical Fate" ಎಂದು ಗಣಿತಶಾಸ್ತ್ರದ ತತ್ತ್ವಜ್ಞಾನದ ನಿರ್ಣಯವಿದೆ. ಆತ್ಯಂತಿಕ ಅಹಿಂಸೆಯಲ್ಲಿ ರೇತಸ್ಖಲನವೂ ಒಂದು ಉಂಟು. ಆದುದರಿಂದ, ಆಪ : ರಸ ಪಂಥೀಯ ಚಾಂದ್ರ ಸಂಪ್ರದಾಯದ ಈ ಕುಮಾರೀ-ಕುಮಾರ ಸಂಪ್ರದಾಯಗಳು ತಲೆಯೆತ್ತಿದ್ದು - ಭಾರತದಲ್ಲಿ ಮಾತ್ರವಲ್ಲ ಪ್ರಪಂಚದಲ್ಲಿಯೇ, ಕ್ರಿಸ್ತನ ಮಾತ ಮೇರೀ: ಕುಮಾರಿ; ಇದು 'ಅದಿತಿ'ಯ ಇನ್ನೊಂದು ರೂಪ. ಮೂಲ ಕ್ರೈಸ್ತ ಪಂಥವೂ ಕುಮಾರೀ-ಕುಮಾರತ್ವದ ತಾತ್ವಿಕ ಭೂಮಿಕೆಯಲ್ಲಿಯೆ ಅಂಕುರಿಸಿದೆ. 'ಸನಾತನ' ಭೂಮಿಕೆ ಬಿಡದೆ ಪ್ರಗತಿಯ ದಾರಿಯನ್ನು ಕ್ರಮಿಸುವ ಹಟದ ಈ ಮಾನವ ಸಮಾಜವು ಧರ್ಮ ಸಂಕಟದಲ್ಲಿ ಸಿಕ್ಕಿದೆ. ಹಿಡಿದರೆ ಕಚ್ಚುತ್ತದೆ, ಬಿಟ್ಟರೆ ಓಡುತ್ತದೆ! ಈ ಪೇಚಿನಲ್ಲಿ ಸಿಕ್ಕು ಒರಲುತ್ತಿರುವುದು ಇಂದು ಕಾಣುತ್ತಿದೆ! ಋಗ್ವೇದದ ಇಂದಿನ ಪಾಠವು, ತನ್ನ ಮೂಲ ಭೂಮಿಕೆಯ ಮೇಲೆಯೇ ನಿಂತ ಹಾಗಿನ ಸಂಭ್ರಮವನ್ನು ನಿರ್ಮಿಸುವುದು ನಿಜ. ಆದರೆ, ಸಾರ್ಪರಾಜ್ಞೀ ಅದಿತಿ ಪುತ್ರರೆಲ್ಲರು ಅಮೃತ ಬಾಂಧವರು; ನರರು ಒಂದೇ ತಾಯಿ ಮಕ್ಕಳು ಎಂಬುದನ್ನು ಇದು ಧ್ವನಿತ ಪಡಿಸುತ್ತದೆ. ಇಂದಿನ ಸಂಹಿತೆ, ಒಟ್ಟಿನಲ್ಲಿ! ಅದರೊಡನೆ ಒಬ್ಬ 'ಕುಮಾರನು' ಯಮನಲ್ಲಿಗೆ ಜ್ಞಾನಸಿದ್ಧಿಗಾಗಿ ಹೋದ ಒಂದು ಸೂಕ್ತವನ್ನೂ ಕೊನೆಯಲ್ಲಿ ಸೇರಿಸಿದ್ದುಂಟು.[೫] 'ನೀರಿನಿಂದಾದ ಮಾನವ ಪ್ರಾಣಿ' ಎಂಬ ಶ್ರದ್ಧೆಯೆ ಒಂದಿಲ್ಲೊಂದು ಬಗೆಯಿಂದ ತಳಹದಿಯಲ್ಲಿರುವ ಜೀವನದ ಆ-ಕೃತಿಗಳೆಲ್ಲ 'ಶೂನ್ಯ'ವನ್ನೇ ಬಾಳಿನ ಗುರಿಯನ್ನಾಗಿಸಿಕೊಳ್ಳಲೇಬೇಕಾಗುತ್ತದೆ! ತಿಳಿದು ಆಗಲಿ ತಿಳಿಯದೆ ಆಗಲಿ, 'ತತ್ : ಏಕಂ' ಇದುವೆ ತಾತ್ವಿಕ ಭೂಮಿಕೆಯಾಗಿರುವ ಬಾಳಿನಲ್ಲಿ ಪ್ರಳಯಕ್ಕೆ ಆಮಂತ್ರಣವಿದ್ದೇ ಇದೆ! ಆದರೆ, ತಮ್ಮ ನಡೆವಳಿ- ನುಡಿವಳಿಯಲ್ಲಿ ಈ ಅನಿವಾರ್ಯ 'ನಿಯತಿ', 'Logical Fate'. ಹಣೆಯ ಬರಪ ಒಳಗೊಂಡಿದೆ ಎಂಬುದನ್ನು ಒಪ್ಪಿಕೊಳ್ಳುವ ಮನಸ್ಸು ಮಾತ್ರ ಇರುವುದಿಲ್ಲ! ಏಕಂ : ತತ್ ಎಂದೊಡನೆ ಉಳಿದೆಲ್ಲವೂ 'ಶೂನ್ಯ' ಅರ್ಥವಿಹೀನವೆಂದು ಶ್ರದ್ಧೆ ವಹಿಸದೆ, ಆತನ 'ತತಃ ಏಕಂ'ದ ಬಗೆಗಿನ ಶ್ರದ್ಧೆಯು ಪ್ರಾಮಾಣಿಕ ಸ್ವರೂಪದ್ದಾಗಿ ಉಳಿಯಲು ಶಕ್ಯವಿಲ್ಲ. ಆದುದರಿಂದ, ತತ್: ಏಕಂ, ಈ ಜೀವನ (: ಜಲ) ತತ್ತ್ವವು ಸಂನ್ಯಾಸವಾದಕ್ಕೆ ಎಂದರೆ ತನ್ನ ಹೊರಗಿನ ವಿಶ್ವಕ್ಕೆ ತಿಲಾಂಜಲಿಯನ್ನೀಯಲು ಒತ್ತಾಯ ಪಡಿಸುತ್ತದೆ. ಬಾಳಿನಲ್ಲಿ ನಾನಾ ಏಕೇಶ್ವರ ಭೂಮಿಕೆಗಳು ತಲೆಯೆತ್ತಿದರೆ, ಪ್ರಪಂಚದಲ್ಲಿ ಅವು, ಭಾವನಾತ್ಮಕ ಏಕಾತ್ಮತೆಗೆ ಮಾರಕವಾಗುವುದು ಕಟ್ಟಿಟ್ಟಮಾತು. ಜೈನ, ಬೌದ್ಧ, ಕ್ರೈಸ್ತ, ವೇದ, ಆಗಮ, ಖುರಾನ್, ಪುರಾಣ... ಏನೆಲ್ಲಕ್ಕೂ ತಮ್ಮ ತಮ್ಮ ಪಾಡಿನ 'ಏಕಂ ಸತ್' ಆಗಿರುವ ಭಾರತೀಯ ಜೀವನ ರೀತಿಯೆ ಇದಕ್ಕೆ ಸಾಕ್ಷಿ.

ದೇವತಾ - ಪ್ರತಿಮಾ: ಸಂಕೇತಗಳ ಪೂರ್ವೋತ್ತರವು ಆ ದೈವತಗಳ ದಿವ್ಯಪವಾಡ ಕಥೆಗಳ ಮೂಲಕವೆ ಶಕ್ಯ. ಆದರೆ, ಈ ಪವಾಡ ಕಥೆಗಳೆಲ್ಲ ಒಂದೇ ಕಾಲದವು ಅಲ್ಲ. ಒಂದೇ ಘಟ್ಟದುವೂ ಅಲ್ಲ. ಯಾವ ದೈವತದ ಕಥೆಗಳಾಗಲಿ, ಅವುಗಳ ತುಲನಾತ್ಮಕ ಸಮೀಕ್ಷೆಯಲ್ಲಿ, ಅವು ಬುದ್ಧಿ-ಪುರಸ್ಸರವೊ-ಅಬುದ್ಧಿ-ಪುರಸ್ಸರವೊ, ಕಾಲ ಕಾಲಕ್ಕೆ ಕೆಲವೊಂದು ವ್ಯತ್ಯಾಸಗಳು ಆಗುತ್ತ ಬಂದಿರುವುದು ಬೆಳಕಿಗೆ ಬರುತ್ತದೆ. ಆದರೆ, ಸಂಪ್ರದಾಯದ

'ಸನಾತನ'ತ್ವದ ಅಭಿಮಾನವು, ತಮ್ಮ ದೈವತದ ವೈಚಾರಿಕ ಧಾರಣೆಯಲ್ಲಿ (Conception) ವ್ಯತ್ಯಾಸವಾಗುತ್ತ ಬಂದಿದೆ ಎಂಬುದನ್ನು ನೇರವಾಗಿ ಒಪ್ಪಿಕೊಳ್ಳುವುದಕ್ಕೆ ಸಿದ್ಧವಿರುವುದಿಲ್ಲ. ಐತಿಹಾಸಿಕ ದೃಷ್ಟಿಯು, ಸನಾತನತ್ವದ ಬಗೆಗಿನ ಏಕಾಂತಿಕ ಶ್ರದ್ಧೆಯ ತಳಪಾಯವನ್ನೇ ಸಡಿಲಿಸುವುದು ಎಂಬ ಕಾರಣದಿಂದ ಸಂಪ್ರದಾಯಗಳು ಇತಿಹಾಸವನ್ನು ವಿರೋಧಿಸುವುದು ಸ್ವಾಭಾವಿಕವಾಗಿದೆ. ತಮ್ಮ ತಮ್ಮ ಮತದ ಪರಮಾತ್ಮನೆಂಬುವನ ಪ್ರೇರಣೆಯಿಂದಲೆ ವೈಶ್ವಿಕ ಘಟನೆಗಳೆಲ್ಲ ನಡೆದಿವೆ, ಎಂಬ ಹಾಗಿನ ಇತಿಹಾಸಗಳು ಕೆಲವೊಂದು ಧರ್ಮಪಂಥಿಗಳಿಂದ ಬರೆಯಲ್ಪಟ್ಟಿರುವುದನ್ನು - ಬರೆಯಲಾಗುತ್ತಿರುವುದನ್ನು ಕಾಣಬಹುದು! ಆದರೆ, ಇತ್ತೀಚಿನ ಸಂಶೋಧನಗಳಿಂದ ಮಾನವೇತಿಹಾಸ ಎಂಬುದು ಒಂದೇ ಉಂಟು ಎಂಬ ಸಂಗತಿ, ಸಾಮಾನ್ಯ ರೀತಿಯಲ್ಲಿ ದೃಢಪಟ್ಟಿದೆ. ಒಂದೊಂದು ಜನ, ಅವರ ಭಾಷೆ, ಧರ್ಮಪಂಥಗಳ ಇತಿಹಾಸವು, ಒಟ್ಟಿನ ಮಾನವೇತಿಹಾಸದ ಅಂಗವಾಗಿರುವುದಾಗಿಯೆ ಕಂಡುಬರುತ್ತದೆ. ತಳಹದಿಯಲ್ಲಿ, ಮಾನವ ಸ್ವಭಾವವು ಸುಮಾರಾಗಿ ಒಂದೇ ಬಗೆಯದಾಗಿರುವುದರಿಂದ, ಈ ಮಾನವ ಸ್ವಭಾವದ ಅಭಿವ್ಯಕ್ತಿಯ ವಿಪುಲ ವೈವಿಧ್ಯದ ಅಡಿಯಲ್ಲಿ ಸಮಾನ ಸ್ವರೂಪದ ಜೀವನದ ಆಕೃತಿಗಳು (Life forms) ಇರುವುದಾಗಿ ಪ್ರತ್ಯಯಕ್ಕೆ ಬರುತ್ತದೆ.

ಭಾರತ, ಈಜಿಪ್ಟ್, ಗ್ರೀಕ್‌ದ ಪುರಾತನ ದೇವತಾ ಪವಾಡ ಕಥೆಗಳ ತುಲನೆಯಲ್ಲಿ ಇವರಿಗೆಲ್ಲ ಪೂಜ್ಯವೆನಿಸಿದ್ದ ಕೆಲವೊಂದು ಸಮಾನ ಪ್ರತಿಮಾ: ಸಂಕೇತಗಳು ಇರುವುದು ಅರಿಕೆಗೆ ಬರುತ್ತದೆ. ಸಮುದ್ರದೊಳಗಿಂದ ಹೊರ ಬರುವ ಕುಮಾರಿ : ಲೋಕಮಾತೆ; ಅವಳೆ ಆದಿಜನನಿ. ಅಯೋನಿಸಂಭವ ಶಿಶು ಜನ್ಮ ಇದು 'ನಾಗನಿಂದ ಸಂಭವಿಸಿದ್ದು' ಎಂಬುದು ಈಜಿಪ್ಟ್-ಗ್ರೀಕ್ ದೇಶದ ಕಥೆಗಳಿಂದ ದೃಢಪಟ್ಟಿದೆ. ಭಾರತೀಯ ಪವಾಡ ಕಥೆಗಳಲ್ಲಿ ಇದು ಹುದುಗಿ-ಅಡಗಿ ಉಳಿದಿದೆ. ನೀರು (:ನಾರ:) ನಾಗ ಇವುಗಳ ಜನ್ಯಜನಕ ಸಂಬಂಧದೊಳಗಿನ ಶ್ರದ್ಧೆಯು ಅಭ್ಯಸನೀಯವಿದೆ. ನೀರೆ: ನಾರಿ: ನಾಗಿಯಾದರೆ, ನಾಗ: ಜಲಕುಮಾರನು. ಅವೆಸ್ತಾ ಗ್ರಂಥ (ಇರಾಣ) ಹಾಗೂ ಋಗ್ವೇದದಲ್ಲಿ ಇರುವ 'ಅಪಾಂ ನಪ್ಪ' : Water genius ಯಾರು ಎಂಬುದುಂ, ಮಹಾಭಾರತ ಜಗತ್ಕಾರುವಿನ ಆಸ್ತಿಕ ವಂಶವೃಕ್ಷದಿಂದಲೂ ಇದು ಸಿದ್ಧವಾಗುತ್ತದೆ. ಋಗ್ವೇದದಲ್ಲಿ, 'ಅಪಾಂ ನಪ್ಪ'ವಿನ ಮೂಲಪ್ರತಿಮೆ ನಾಗನದೆಂಬುದನ್ನು ಬಚ್ಚಿಡಲು ಅಂದಿನ ಆಪ:ರಸ ಪಂಥೀಯ ಪ್ರತಿಭಾ ಸಾಮರ್ಥ್ಯವು ಪಣತೊಟ್ಟಿತ್ತೆಂದು ಕಾಣುತ್ತದೆ. ಆದರೆ, ಇಂದ್ರಾದಿ ಸೌರ ಮಂಡಲದ ದೈವತಗಳ ತಾಯಿ ಎಂಬ ಪಾತ್ರವಹಿಸಿದ ಆಪೋದೇವಿ ಕೊನೆಗೆ 'ಸಾರ್ಪರಾಜ್ಞೆ'ಯ ರೂಪದಲ್ಲಿ ಒಂದು ಸೂಕ್ತದ ದೈವತವಾಗಿರುವುದು ಬೆಳಕಿಗೆ ಬರುತ್ತದೆ![೬] ಇದನ್ನು, 'ಬೃಹದ್ದೇವತಾ' ಪರಂಪರೆಯನ್ನು ವಿವರಿಸುವ ಸಾಂಪ್ರದಾಯಿಕ ಗ್ರಂಥವು ಹೇಳದೆ ಇದ್ದರೆ ಆದಿತಿ : ದೇವಮಾತೆ, ಮೂಲತಃ ಸರ್ಪಸ್ವರೂಪಳು ಎಂಬುದು ಇಂದಿಗೂ ವಾದಗ್ರಸ್ತ ವಿಷಯವೇ ಆಗಿ ಉಳಿಯಬಹುದಿತ್ತು! 'ಸಾರ್ಪರಾಜ್ಞೆ'ಯ ಸ್ತೋತ್ರ - ಮಹಾತ್ಮ್ಯ ಅಡಕವಾಗಿರುವ "ಅಯಂ ಗೌಃ ಪೃಶ್ನಿಃ" ಈ ಸೂಕ್ತದಲ್ಲಿ 'ಅದಿತಿ'ಯ ಹೆಸರು ಸಹ ಇಲ್ಲ. ಸರ್ಪದ ಮಾತು ಏತಕ್ಕೆ! 'ಗೌ' ಮತ್ತು 'ಪೃಶ್ನಿ' ಈ ಪ್ರತಿಮೆಗಳು ಅಲ್ಲಿ ಇವೆ. ಇವೆರಡೂ ಸಂಕೇತಗಳು ಅದಿತಿಗೆ ಸಂಬದ್ಧವಾದವು, ಎಂದು ಋಗ್ವೇದದ ಸೂಕ್ತಗಳಿಂದಲೆ ಗೊತ್ತಾಗುವಂತಿದೆ. ಆದರೂ ಈ 'ಸಾರ್ಪರಾಜ್ಞೆ'ಯ ಸ್ತೋತ್ರದಲ್ಲಿ ಅವಕ್ಕೆ ಬೇರೆಯ ಅರ್ಥವನ್ನು ಹೇಳಲಾಗುತ್ತದೆ : ಗೌಃ ಗಮನಶೀಲವಾದ (ಪ್ರಾಣೆ,) ಎಂಬರ್ಥ ಅಲ್ಲಿ! ಪೃಶ್ನಿಗೆ ಸೂರ್ಯವಾಚಕ ಅರ್ಥ! ಎಂದರೆ ಸರಪ್ (: ಗಮನಶೀಲ) ಪೃಶ್ನಿ ಎಂದರೆ ಇಲ್ಲಿ ಅದಿತಿಯೊಡನೆ ಸೂರ್ಯನನ್ನೂ ತಳಕು ಹಾಕಿಕೊಂಡದ್ದಾಗಿದೆ! ಸೂರ್ಯನು ಅದಿತಿ ಪುತ್ರನಲ್ಲವೆ? ಆಪ: ರಸ ಪಂಥೀಯ ಶ್ರದ್ಧೆಯಂತೆ! ಎಂದರೆ ಸೂರ್ಯನು ಸರ್ಪೀಯ ಪುತ್ರನಾದನು! ಕಾಲ=ಸರ್ಪ. ಆದುದರಿಂದ ಕಾಲದ ತನಯ ಸೂರ್ಯನೂ ಸರ್ಪವೇ ಆಗುವನಲ್ಲವೆ? ಆಹಾ! ಬುದ್ಧಿ ವೈಭವವೆ! ಪ್ರತಿಭೆಯೇ! ನಮಸ್ಕಾರ ನಿನಗೆ!

ಋಗ್ವೇದದಲ್ಲಿ ಈ ಬಗೆಯ ಶ್ಲೇಷಾರ್ಥವಿಲ್ಲದ ಸೂಕ್ತಗಳೆ ವಿರಳ. ಅರ್ಥ 'ಶೇಷ' ಉಳಿಸುವ ಕ್ಲಿಷ್ಟಪದಗಳ ನಾಗಬಂಧದಿಂದ ರಚನೆಯ ಬಂಧುರತೆಯು ಆಕರ್ಷಕವೆನಿಸಬಹುದಾದರೂ, ಈ ಗಾರುಡಿಗ ಮಂತ್ರಗಳ ಮಾಟದಿಂದ ಪ್ರಚಾರಕ ಪ್ರವಾದ: ಪವಾಡಗಳಿಂದ ಸಾಧಿಸಿದ್ದೇನು? ಋತ : ಸತ್ಯದ ಕೊಲೆ! ಜೀವನ ಮೂಲ್ಯಗಳ ನಾಶ -

ಬಾಳು ಅರ್ಥವಿಹೀನ ಎಂಬ ಸಿದ್ಧಾಂತ! ಅದೆಷ್ಟು ಉದಾತ್ತ - ಭವ್ಯ, ದಿವ್ಯ ಪ್ರತಿಮಾ: ಸಂಕೇತಗಳು ಋಗ್ವೇದ, ಮಹಾಭಾರತ - ಭಗವದ್ಗೀತೆಯಲ್ಲಿ! ಆದರೆ, ಈ ಅದ್ಭುತ ಆಶ್ಚರ್ಯಕರ ಪ್ರತಿಭೆಯೆಲ್ಲವೂ ಭಾರತೀಯ ಜೀವನವನ್ನು, ನಾಗ-ಬಂಧದಲ್ಲಿ ಸಿಲುಕಿಸಿಡುವ ಮೋಡಿಕಾರಿಕೆಯ ಪ್ರತಿಮಾ: ಸಂಕೇತಗಳ ನಿರ್ಮಿತಿಯಲ್ಲಿ ವ್ಯಯವಾಗಿ ಹೋಗಬೇಕೆ? ಅಹಿಜಿತ್-ವೃತ್ರಘ್ನ ಇಂದ್ರನ ಸಂಹಾರ! 'ನಾಗ' ಪಂಥಕ್ಕೆ ಜೀವದಾನ, ದೊರೆಯಬೇಕೆ-ಈ ಧಾರ್ಮಿಕ ಸಾಹಿತ್ಯ ರತ್ನಗಳಿಂದ! ಈ 'ಶ್ಲೇಷ' ಸಂಪ್ರದಾಯದ ಆಕರ್ಷಣದಿಂದ ಭಾರತೀಯ ಸಾಹಿತ್ಯದಲ್ಲಿ ವಿ-ಶ್ಲೇಷಣಾತ್ಮಕ ಪದ್ಧತಿಯ ಗ್ರಂಥರಚನೆಯ ಅಭಾವವೆ ಎದ್ದು ಕಾಣುತ್ತದೆ. ಗಣಿತ, ಜ್ಯೋತಿಷ ವೈದ್ಯಕಾದಿಗಳಲ್ಲಿ ನಾವು ಒಂದು ಕಾಲಕ್ಕೆ ಜಾಗತಿಕ ರಂಗದಲ್ಲಿ, ಮುಂದುವರಿದವರಾಗಿದ್ದೇವೆಂದು, ಹಳೆಯ ಕಥೆಗಳನ್ನು ಹೇಳಿಕೊಂಡು, ಮರ್ಯಾದೆಯನ್ನು ಎಂತಲೂ ಉಳಿಸಿಕೊಳ್ಳಬೇಕಾಗಿರುವ ಇಂದಿನ ಈ ಅವಸ್ಥೆ ಏನು ಹೇಳುತ್ತಿದೆ! 'Logical fate' ನಿಶ್ಚಿತ, ಎಂದೇ ತಾನೆ? ಇದಂತಿರಲಿ.

ಪ್ರಸ್ತುತ, ನೀರೆ (: ನಾರ-ನಾರಿ), ನಾಗ ಇವೆರಡೂ ಮಾನವ ಸಂಸ್ಕೃತಿಯ ಉದ್ಗಮದ ಹತ್ತಿರಕ್ಕೆ ಕೊಂಡೊಯ್ಯುವ ಪ್ರತಿಮಾ : ಸಂಕೇತಗಳಾಗಿವೆ. ನೀರೆ-ನಾಗ ನೀರಿನವೇ ಎರಡು ರೂಪಗಳು ಎಂದು ಪುರಾತನರು ನಂಬಿದಂತಿದೆ, 'ಅಪಾಂ ನಪ್ತ್ರ' ಈ ಪ್ರತಿಮೆಯೆ ಇದಕ್ಕೆ ನಿದರ್ಶನ. 'ಆಪೋ ವಾ ಇದಂ ಅಗ್ರೇ ಆಸೀತ್' : ಎಂದು ಮುನ್-ನೀರ ಬಗೆಗಿನ ಶ್ರದ್ಧೆಯುಂಟು. 'ಅಪಾಂ ನಪ್ತ್ರ' ನೀರಿನ ಸಂತಾನ; ಎಂಬ ಈ ಪವಾಡ ಕಥೆಯಲ್ಲಿಯೆ ಭಾರತೀಯ ವಿವಿಧ ತತ್ತ್ವಜ್ಞಾನಗಳು ಅಂಕುರಿಸಿವೆ: 'ತತ್ ಜಲಾನಿತಿ' ತತ್ (ಆ) ಉಸಿರಾಡಿಸುವ (ಅನಿತಿ) ಜಲವು, ವಿಶ್ವದ ಮೂಲ ತತ್ತ್ವ-ಎಂದು ಛಾಂದೋಗ್ಯದಲ್ಲಿ ಬರುವ ಮಾತು. 'ಅಪಾಂ ನಪ್ತ್ರ' ಪ್ರತಿಮೆಯು ಪರ್ಯಾಯ ಸಂಕೇತವಾಗಿದೆ. ಶ್ರೀ ಮಧ್ವಾಚಾರ್ಯರಿಗೆ ಇಲ್ಲಿ 'ನಾರಾಯಣ'ಪರ ಅರ್ಥವು ಕಂಡುದರಲ್ಲಿ ಸ್ವಾರಸ್ಯವಿದೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತಾದಿಗಳ ಉಗಮದಲ್ಲಿ ಇಂತಹ ಒಂದು ಪವಾಡ ಕಥೆಯಿದೆ; ಅಥವಾ ಒಂದು ಪವಾಡ ಕಥೆಯ ಆಧಾರದ ಮೇಲೆ ಒಂದೊಂದು ಪಂಥವು ತಮ್ಮದೇ ಆದ ಒಂದೊಂದು 'ತತ್ತ್ವ' ಜ್ಞಾನ ಮಂದಿರವನ್ನು ನಿಲ್ಲಿಸಿದ್ದು ಕಾಣುತ್ತಿದೆ. 'Myths precede Philosophy' ಎಂಬ ಸೂತ್ರ, ಮಾನವೇತಿಹಾಸದಲ್ಲಿ ಬಂದಿರುವ ಅನುಭವ. ಭಾರತೀಯ ತತ್ತ್ವಜ್ಞಾನದ ಉಗಮದಲ್ಲೂ ಆ ಸೂತ್ರವೆ ಒಳಗೊಂಡಿರುವುದನ್ನು ಇಲ್ಲಿ ಮನಗಾಣಬಹುದು. ಆಪದಲ್ಲಿ ಹುಟ್ಟುವ ಎಷ್ಟು ನಾಗ-ನಾಗಿಗಳೊ, ಅಷ್ಟೆಲ್ಲ ಪ್ರತಿಯೊಂದೂ ಭಿನ್ನ ಭಿನ್ನ! ಜೀವ-ಜೀವ ಭೇದದ ಈ ತತ್ತ್ವವಿಚಾರದ ಅಡಿಗಲ್ಲು ಇಲ್ಲಿಯೆ ಇದೆ! ಅನೇಕ ನಾಗಗಳು ಕಂಡರೂ ನಾಮರೂಪ ಭೇದವೇ ಹೊರತು ತಳಪಾಯದ ಆಕೃತಿ (basic form) ಒಂದೇ ಎಂದರೆ, ಅ-ದ್ವೈತವಾಗುತ್ತದೆ. 'ನೀರು' ಒಂದೇ, ಇದೂ ನಿಜ. ನೀರಲ್ಲಿ ನಾನಾ ನಾಗ-ನಾಗಿ ಒಳಗೊಂಡಿರುವುದು ಇದೂ ನಿಜ! ಇದು ತತ್ತ್ವಜ್ಞಾನಕ್ಕೆ ಹಾದಿ! ನೀರಿಗೇನು ಆಕಾರ! ನೀರಿನ ಮೇಲಣ ಬರೆಹ ಈ ಸಂಸಾರ! ನೀರಗುಳ್ಳೆಯಂತೆ ಈ ಜೀವನ ಕ್ಷಣಿಕ! ಆಯ್ತು ಇದು ಕ್ಷಣವಾದ. ನೀರಿಗೆ ಆಕೃತಿಯೇನು? ಹಾವಿನ ಆಕೃತಿ ಯಾವುದು? ಏನೆಲ್ಲ ಆಕಾರಗಳೂ ಅಹುದು. ಅದೇ ಕಾಲಕ್ಕೆ ಯಾವ ಆಕೃತಿಯೂ ಮೂಲತಃ ಇಲ್ಲ. ಅಹುದು ಮತ್ತು ಅಲ್ಲ, ಈ ಎರಡೂ ಭೂಮಿಕೆಗಳು ಏಕಕಾಲಕ್ಕೆ ಸರಿ-ಇರುವ ಸಾಕ್ಷಾತ್ಕಾರಕ್ಕೆ, ಆಪೋ ದೈವತವೇ ಕಾರಣವೆಂಬುದನ್ನು ಅಲ್ಲಗಳೆಯಲು ಶಕ್ಯವಿಲ್ಲ 'ನೇತಿನೇತಿ' ವಾದದ ತಳಹದಿಯಲ್ಲಿ ನೀರೇ ಉಂಟು! 'ಬ್ರಹ್ಮ'ನ ಪ್ರತಿಮಾ ಸಂಕೇತಗಳೇ ಇದಕ್ಕೆ ಸಾಕ್ಷಿ. ನೀರು-ಹಾವು ಯಾವ ಲಿಂಗ? ಗಂಡು ಹೆಣ್ಣು ಆಗಿ ಒಂದುಗೂಡಿದಾಗ ಪುಂ-ಸ್ತ್ರೀಲಿಂಗ ಐಕ್ಯಸ್ಥಿತಿ. ಅದು ಯಾವುದೇ ಆಕೃತಿ ರೂಪವಾಗಬಲ್ಲುದಾದ್ದರಿಂದ ಎಲ್ಲ ಲಿಂಗವೂ ಅದುವೆ. ಅದು ನಾಮರೂಪ ಲಿಂಗಾತೀತ.

'ಅಪಾಂ ನಪ್ತೃ'ವು ನಾಗದಂತೆ ಚಂದ್ರನೂ ಅಹುದು. ಅಪಾಂ ನಪ್ತೃವಿನ (Life forms) ಅವಸ್ಥಾ ಹಾಗೂ ಋಗ್ವೇದದ ವರ್ಣನೆಗಳಲ್ಲಿ ಓಲ್ಡೆನ್‌ಬರ್ಗನಿಗೆ Water genius ಕಂಡರೆ, ಹಿಲ್ಲೆಬ್ರಾಂಟ್ ಮತ್ತು ಹಾರ್ಡಿ ಅವರಿಗೆ ಚಂದ್ರನು ಕಂಡಿದ್ದಾನೆ. ಭಾರತೀಯ ವರ್ಣನೆಗಳಲ್ಲಿ ಕೊನೆಗೆ 'ಅಪಾಂ ನಪ್ತ್ರ' 'ಅಗ್ನಿ'ಯಾಗುತ್ತದೆ! ನೀರಿನೊಡನೆ, ನೀರೆ-ನಾಗ ಅಲ್ಲದೆ ಚಂದ್ರನೂ ಇರುವುದು, ಇಜಿಪ್ಟ್, ಗ್ರೀಕ್ ಕಥೆಗಳಂತೆ ಭಾರತೀಯ ಕಥೆಗಳಲ್ಲೂ

ಕಂಡು ಬರುತ್ತದೆ. ಮಾನವರ ಪ್ರಾಥಮಿಕ 'ದರ್ಶನ' : ಸಾಕ್ಷಾತ್ಕಾರದಲ್ಲಿ ನಿದರ್ಶನಕ್ಕೆ ಬರುತ್ತಿರುವ ಈ ಸು-ಸಂಗತಿ, ಸು-ಸಂಬದ್ಧತೆ ಅಭ್ಯಸನೀಯವಿದೆ. ಈ ಕಾರಣದಿಂದಲೆ 'ದರ್ಶನ'ಗಳೊಳಗಿನ ತುಲನಾತ್ಮಕ ವಿಮರ್ಶೆಯಲ್ಲಿ ದೃಢವಾಗಿ ಉಳಿಯುವ ಇಂತಹ ಅಂಶಗಳನ್ನು ವಿಶ್ವಸ್ಥ ವಾಸ್ತವ : ಸತ್ಯದ ಪ್ರತೀತಿಯ ಆಗುವುದೆಂದೇ ಗ್ರಹಿಸಬೇಕಾಗುತ್ತದೆ.

> In these realms the spirit ehibits itself in that inwardly directed dialectic by virtue of which alone there is any reality any organised and definite being at all. Thus the special symbolic forms are not imitations, but organs of reality, since it is solely by their agency that anything real becomes an object for intellectual apprehension, and as such is made visible to us.[2]

ದೇವಿ : ಶಕ್ತಿಯ ದೇವಾಲಯ. ಆ ದೇವಿಯ ಹಾವು, ಪುಷ್ಕರಣಿ ಸುಮಾರಾಗಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಇರುವುದು ವಾಡಿಕೆಯಾಗಿದೆ. ಅಂದಿನ ಅಂತರಂಗದ ಸಾಕ್ಷಾತ್ಕಾರಕ್ಕೆ, ಭೌತ ಬಹಿರಂಗದಲ್ಲಿ ಕಲ್ಪಿಸಿದ ಆಕೃತಿ ಇದು. ಇಂದು ಅಲ್ಲಿ ಹಾವು ಇಲ್ಲದಿರಬಹುದು. ಆದರೆ ಹಿಂದೊಮ್ಮೆ 'ಇದ್ದಿತು' ಎಂಬ ಪೂರ್ವಸ್ಮೃತಿ ಕಥೆಗಳು ಪ್ರಚಲಿತವಿರುತ್ತವೆ. ಗೇಣುದ್ದ ಕೂದಲಿರುವ ಹಾವಿನ ಕಥೆಗಳನ್ನು ಕೇಳುತ್ತೇವೆ! ಪರಿಬಿಡುವ ಹಾವಿಗೆ, ಕೂದಲು ಇರಲು ಶಕ್ಯವೆ? ಈ ವಿಚಾರಕ್ಕೆ ಅವಕಾಶವಿಲ್ಲ. ದೇವಸ್ಥಾನ-ಅದರೊಳಗಿನ ಮೂರ್ತಿ, ಇವು ನಾಗರೀಕತೆಯೊಡನೆ ಬೆಳೆದು ಬಂದ ಸಂಕೇತಗಳು. ಇವು ಅರ್ವಾಚೀನ. ಆದಿಯಲ್ಲಿ ಮೂಲ ದೇವತಾ ಸ್ವರೂಪ ನೀರು : ಸರ್ಪ : ವೃಕ್ಷ ಚಂದ್ರ ಇವೇ. ದೇವಿಯ ಉತ್ಸವಗಳು ಹುಣ್ಣಿಮೆಯೊಡನೆ ಸಂಬದ್ಧವಾಗಿವೆ. ಈ ಒಂದು ಘಟನೆಯೆ ಸಾಕು, 'ಶಕ್ತಿ' : ದೇವಿ ಮತ್ತು ಚಂದ್ರ. ಇವರೊಳಗಿನ ಅನ್ಯೋನ್ಯ ತಾದಾತ್ಮ್ಯವನ್ನು ನಿದರ್ಶನಕ್ಕೆ ತರಲು. ದೇವಿ : ಆಪ,-ಆಪೋದೇವಿ ಉತ್-ಸಾಹಸಭರಿತಳಾಗಿ ಹಿಗ್ಗಿ ಕುಣಿಯತೊಡಗುವಳು ಸಾಗರದಲ್ಲಿ, (ಪೂರ್ಣ) ಚಂದ್ರನ ದರ್ಶನ ಮಾತ್ರದಿಂದಲೆ ತಾನೆ! ನೀರು ಮತ್ತು ಚಂದ್ರ ಇವರಲ್ಲಿ ಅಭೇದ ಕಾಣುವುದಕ್ಕೆ ಒತ್ತಾಯಪಡಿಸುವ ಇಂತಹ ಘಟನೆಗಳನ್ನು ಗಮನಿಸುವುದು ಅವಶ್ಯ.

ಆ ವಿಚಾರ ಸರಣಿಯ ವೈಶಿಷ್ಟ್ಯವನ್ನು ಅರಿಯದೆ, ಅಂದಿನ ಪವಾಡ ಕಥೆಗಳನ್ನು ಇಂದು ಅರ್ಥಯಿಸಿ ಕೊಳ್ಳುವುದು ಅಶಕ್ಯವಿದೆ. ಆ ದೇವತಾ ಸಂಕೇತಗಳ ಅರ್ಥವು ಸಹ ಹೊಳೆಯುವುದು ಈಗ ಕಷ್ಟ. ವೃಕ್ಷ-ವನಸ್ಪತಿ ಜಲಾಶಯಾದಿಗಳು ಸುತ್ತಲೂ ಇವೆ. ಹಿಂದಿನವರಿಗೆ ಕಾಣುತ್ತಿದ್ದುದು ಆ ಬಳಿಕಿನವರಿಗೆ ಕಂಡಿಲ್ಲ! ಏಕೆ? ಲೆವ್ಹಿ, ಬ್ರುಹ್ಲರ್, ಪ್ರಭೃತಿಗಳು, ಪ್ರಾಥಮಿಕ ಮಾನವನು ಹೇಗೆ ವಿಚಾರ ಮಾಡುತ್ತಿದ್ದನು ಎಂಬುದರ ಬಗೆಗೆ ಮಾಡಿರುವ ಸಂಶೋಧನವು ಮೌಲಿಕವಾಗಿದೆ. ಇತ್ತೀಚೆಗೆ ಮಾನವಶಾಸ್ತ್ರದಲ್ಲಿ ಆಗಿರುವ ಪ್ರಗತಿಯ ಮೂಲಕವಾಗಿಯೂ ಪವಾಡಕಥೆಗಳ ಅರ್ಥಪದ್ಧತಿಯು ಒಂದು ರೂಪಕ್ಕೆ ಬರುವ ಶಕ್ಯತೆ ಕಾಣತೊಡಗಿದೆ. ಸಂಕೇತ : ಪ್ರತಿಮಾಶಾಸ್ತ್ರದ ವ್ಯಾಸಂಗಗಳಿಂದ ಭಾಷೆ ಹಾಗೂ ಮೂಲ ಪವಾಡಕಥೆಗಳಲ್ಲಿ ಇರುವ ಅನ್ಯೋನ್ಯ ಸಂಬಂಧವು ಪ್ರಸ್ತಾಪಿತವಾಗಿದೆ. ವಿಶ್ಲೇಷಣ : ವಿಚಾರ-ವಿಮರ್ಶೆಗಳಿಂದ ಭಾಷೆಯು ಹುಟ್ಟಿಲ್ಲ. ಭಾಷಿಕ ಮೂಲ ಶಬ್ದಪ್ರತಿಮೆಗಳ ಅರ್ಥನಿಶ್ಚಿತಿಗೆ, ಇಂದಿನ ಸ್ವರೂಪದ ತರ್ಕ-ಅನುಮಾನ ಯಾವ ಬಗೆಯಿಂದಲೂ ಉಪಯುಕ್ತವಾಗಲಾರದು. ಅವನಿಗೆ 'ಗಾಳಿ' ಆಗಿದೆ ಎಂಬ ಮಾತು, ನದಿಗೆ 'ಉಡಿ' ತುಂಬಿ ಬರುವ ವಾಡಿಕೆ ಇದರ ಅರ್ಥವೇನು? ಬನಶಂಕರಿದೇವಿಯ ತೃಪ್ತ್ಯರ್ಥವಾಗಿ, ಮಕ್ಕಳನ್ನು ತೆಪ್ಪದ ಮೇಲಿಂದ ನೀರಲ್ಲಿ ಬಿಟ್ಟು ಮರಳಿ ಪಡೆವ ರೂಢಿಯುಂಟು. ಇಂತಹ ನಡೆವಳಿಗೆ ಕೆಲವೊಂದು ಪವಾಡ ಕಥೆಗಳು ಪ್ರೇರಕವಾಗಿರುತ್ತವೆ. ಹರಿಶ್ಚಂದ್ರನು ವರುಣ (ಜಲ) ದೇವರಿಗೆ ಮೊದಲ ಕೂಸು ಮೀಸಲು-ಮುಡುಪು ಕೊಡುವುದಾಗಿ ಬೇಡಿಕೊಂಡಿದ್ದನು. ವಚನ-ಭ್ರಷ್ಟನಾದುದಕ್ಕೆ ಉದರ ರೋಗವಾಯಿತಂತೆ! ಈ ಕಥೆಗಳನ್ನು ವಿಮರ್ಶಾತ್ಮಕ ಪದ್ಧತಿಯಿಂದ ಅರ್ಥಯಿಸುವುದು ತೀರ ವ್ಯುತ್ಕ್ರಮ ಪದ್ಧತಿ

: ತಮ್ಮನ್ನು ಆವರಿಸಿರುವ ಅಗಮ್ಯ 'ಗೂಳ್ಹ ಗಭೀರಂ' ಆದ ದಿವ್ಯಶಕ್ತಿಯನ್ನು ಅರ್ಥಯಿಸಿಕೊಂಡು ಬದುಕುತ್ತಿದ್ದ ಜನದಲ್ಲಿ, ಒಂದು ಸಂದರ್ಭದಲ್ಲಿ ಪ್ರಚಾರಕ್ಕೆ ಬಂದ ನಡೆವಳಿ ನುಡಿಗಳು ಇವು. ಈ ಮಾತುಗಳು : ನಡೆವಳಿಗಳು; ಅವು ಯಾವ ಜೀವನ ಪರಿಸರದಲ್ಲಿ ಮೈದಾಳಿರಬಹುದೊ, ಅದರ ಸಮ-ಸಾಮಯಿಕವಾದ ಬೇರೆ ಬೇರೆ ಪ್ರಮಾಣಗಳನ್ನು ತುಲನಾತ್ಮಕವಾಗಿ ಸಮೀಕ್ಷಿಸಿ, ಇವುಗಳ ಅರ್ಥವನ್ನು ಗ್ರಹಿಸಿಕೊಳ್ಳುವುದು, ಹೆಚ್ಚು ಶ್ರೇಯಸ್ಕರವೆಂದು ಈಗ ಕಂಡು ಬಂದಿದೆ. ಸುತ್ತಲಿನ ಲೌಕಿಕ ಭೌತಕಾಲವು ಬದಲಾದರೂ ಧಾರ್ಮಿಕ ಪಂಥೀಯ ಸಮಯಾಚಾರಗಳಲ್ಲಿ ಬದಲು ಆಗಬಾರದೆಂಬ ಪ್ರಯತ್ನವಿರುತ್ತದೆ; ತಮ್ಮ ಸಂಪ್ರದಾಯದ ಮೂಲ 'ಸಮಯ'ದ ಆಕೃತಿಯನ್ನು ಅಚ್ಚಳಿಯದೆ ಉಳಿಸಿಕೊಂಡು ಬರಬೇಕೆಂಬ ತೀವ್ರ ಆಕಾಂಕ್ಷೆ, ಶ್ರದ್ಧೆ ಇವುಗಳ ಮೂಲಕ ಮಾನವ ಪಂಗಡಗಳಲ್ಲಿ ಸಾವಿರಾರು ವರುಷಗಳ ಹಿಂದಿನ ಆಚಾರ : ಸಮಯ ಕೆಲವೊಂದು ಸಾರ-ರೂಪದಲ್ಲಿ ಇಂದಿಗೂ ಉಳಿದು ಬಂದಿರುವುದು ಸುಳ್ಳಲ್ಲ. ಭಾರತೀಯ ನಾಗಾರಾಧನೆಯೆ ಇಂತಹ ಒಂದು ನಿದರ್ಶನ.

ಹುಣ್ಣಿಮೆಯಂದು ದೇವಿಯು ಮೈಯಲ್ಲಿ ಬರುವ ಭಕ್ತೆಯರು, ಭಾರತದಲ್ಲಿ ಇಂದಿಗೂ ಎಲ್ಲ ಪ್ರಾಂತಗಳಲ್ಲೂ ಕಾಣದೊರೆಯುತ್ತಾರೆ. ಶುಕ್ರ, ಮಂಗಳ ಇವು ದೇವಿಯ ವಾರಗಳು. ಅಂದು ದೇವಿಯಿಂದ ಆದೇಶ ಪಡೆಯಲು, ಮೈಯಲ್ಲಿ ಆವೇಶವಾಗುವ ಭಕ್ತೆಯರಿರುವ ಸ್ಥಾನಗಳಿಗೆ, ಕ್ಷೇತ್ರಗಳಿಗೆ ಹೋಗುವ ಜನರುಂಟು. ಹೀಗೆ ಜನವನ್ನು ಆಕರ್ಷಿಸುವ ವ್ಯಾಪಾರ ವ್ಯವಹಾರವು ಲಾಭದಾಯಕವೂ, ಪ್ರತಿಷ್ಠೆಗೆ ಕಾರಣವೂ ಎನಿಸಿದ ಬಳಿಕ 'ಪುರುಷ'ನು ಗುರುದೇವಿಯ ಆ ಸ್ಥಾನವನ್ನು ತಾನೇ ಆಕ್ರಮಿಸಿದ್ದಾನೆ! ಲೋಕ-ತಾರಕ : ತಾರಣೀ : ತಾರಾಭಗವತಿ; ತಾರಕೆಯರನ್ನು ಎಂದರೆ ಸ್ತ್ರೀಯರನ್ನು ಅನರ್ಹರೆಂದು ನಿರ್ಣಯಿಸಿದ್ದುಂಟು! ಏಕೆಂದರೆ, ಈ ಪುರುಷನೇ 'ಸರೀಸೃಪ' ನಿರ್ಮಿತಿಗೆ ಕಾರಣನಿದ್ದರೂ ಪುರುಷನ ಕೃತ್ಯ ನೀರೆಯಂತೆ ಬಯಲಿಗೆ ಬರಲು ಶಕ್ಯವಿಲ್ಲ! ಮಧ್ಯಮಾ : ವಾಕ್ : ದೇವಿಯಾಗಿದ್ದಳು. ಇವಳೇ 'ಸೇತು': ಸಿದ್ಧಿಯ ಅಯನ (: ದಾರಿ); ತಾರಿಣಿ; ಇದರ ಮನವರಿಕೆಗಾಗಿ 'ಬೃಹದ್ದೇವತಾ' ಗ್ರಂಥ ನೋಡಿ: ಅತ್ರಿಯ ಜನ್ಮಕಥೆ[೮] ವಸಿಷ್ಠ ಅಗಸ್ತ್ಯಜನ್ಮವೂ ಇದೇ ಬಗೆಯಾಗಿದೆ.

ನೀರು ಮತ್ತು ನೀರೆ ಇವರೊಳಗಿನ ಅಭೇದ ಸಂಬಂಧ : 'ನೀರು' ಇದುವೆ ಸ್ತ್ರೀರೂಪವಾಗಿ ಕಂಡುದನ್ನು ಬೇರೆ ಭಾಷಿಕ ಪ್ರತಿಮೆಗಳೂ ದೃಢಪಡಿಸುತ್ತವೆ. ಹಿಂದಿ ಹಾಗೂ ಮರಾಠಿಯಲ್ಲಿ 'ನಾರ' ಎಂದರೆ ಕಾಮಿನಿ : ಯೌವನೆ! 'Nymph' ಇಂಗ್ಲೀಷ್ ನೀರೆ! ನೀರೆ : ನಾರಳ ಸಂಸ್ಕೃತ ರೂಪವೆ ಅಪ್-ಸರೆ! ಭಾಷೆಯಲ್ಲಿ ಮೊದಲು, ಉಪ-ಮಾ ಅಲ್ಲ; ತೀರ ಆದಿಯಲ್ಲಿ ರೂಪಕವೆ ಶಕ್ಯ. ತಾನು ಅಳೆದು ಅರ್ಥ ಮಾಡಿಕೊಳ್ಳುತ್ತಿದ್ದೇನೆ, ಎಂಬ ಅರಿವು ಉಂಟಾಗುವ ಮಟ್ಟದಲ್ಲಿ 'ಉಪ-ಮಾ' ಬರುತ್ತದೆ. ಆರಂಭದಲ್ಲಿ ಸಾಕ್ಷಾತ್ ಆಕಾರ : ಸಾಕ್ಷಾತ್ಕಾರ; ದರ್ಶನದಿಂದಲೇ ಭಾಷೆಗೆ ಆರಂಭವಾಗಿವೆ. ಅಲ್ಲಿ ತರ್ಕ, ಅನುಮಾನ ಇತ್ಯಾದಿ ಹೊರಗಿನ ಮಾತಿಗೆ ಅವಕಾಶವಿಲ್ಲ. ತರ್ಕ, ಅನುಮಾನಕ್ಕೆ, 'ವಸ್ತು' ಯಾವುದು? ಆದಕಾರಣ 'ಕಣಿ' ಮೊದಲು. ಆ 'ಕಣಿ'ಯನ್ನು ಅರ್ಥಯಿಸಿಕೊಳ್ಳುವ ಸಂದರ್ಭದಿಂದ ತರ್ಕ, ಅನುಮಾನ, ಇವು ಹುಟ್ಟಿಕೊಂಡಿದ್ದು ಆ ಬಳಿಕವೇ. ಮೈಯಲ್ಲಿ ಆವೇಶವಾದ ನಾರಿ, 'ನೀರೆ' ಸಾಕ್ಷಾತ್‌ದೇವಿ! ಈ ದಿವ್ಯ ದೈವತದ ಆವೇಶಕ್ಕೆ, ಆ ಬಗೆಯ ಅನುಭವಕ್ಕೆ ಕಾರಣವಾದುದು ಮೊದಲಲ್ಲಿ ಏನೊಂದು ದಿವ್ಯವೃಕ್ಷವಿರಬೇಕು. ಔಷಧಿ-ವೃಕ್ಷ 'ರಸ' ಇರಬೇಕು. ಹಿಂದೀ ಮರಾಠೀ ಭಾಷೆಯ ಇಂದಿನ ಪಾನೀ(ಣಿ)>ಪಾನೀಯವು, ಹಾಗೆ ಮೈಯಲ್ಲಿ ಆವೇಶ ತರುವ ನೀರು ಅಲ್ಲ. ಆ ಪಾನೀಯವು ಮೂಲದಲ್ಲಿ ರಸ ಇರಬೇಕು. ಹಾಗಾದರೆ ಮೈಯಲ್ಲಿ ಆವೇಶಕ್ಕೆ ಕಾರಣವಾಗುವ ಆ ಪಾನೀಯ : ನೀರು : ರಸ ಯಾವುದು? ಯಾವ ವೃಕ್ಷದ್ದು? ಇದನ್ನು ನಿಶ್ಚಿತ ಪಡಿಸಲು ಶಕ್ಯವಿಲ್ಲ. 'ರಸೋ ವಾ ಆಪಃ'; 'ಅಪೋ ಹವಾ ಓಷಧೀನಾಂ ರಸಃ'[೯] ಈ ವಾಕ್ಯಗಳಲ್ಲಿ ವೃಕ್ಷ 'ರಸ'ದ ಪ್ರಾಚೀನ ಸ್ಮೃತಿಯೆ ಒಳಗೊಂಡಿದೆ. ಬ್ರಾಹ್ಮಣ ಗ್ರಂಥಗಳ ಕಾಲಕ್ಕಿಂತ ಪೂರ್ವದಲ್ಲಿಯೇ ಮೂಲ 'ರಸ'ವು ಪ್ರತಿಷ್ಠೆಗೆ ಎರವಾಗಿ 'ಆಪ' ಎಂಬ ಸಭ್ಯಸಂಕೇತವು ಪ್ರಚಲಿತವಾದುದು ಕಾಣುತ್ತದೆ. ಸೌರರ ಸೋಮವು 'ಆಪದಲ್ಲಿ ಅಡಗಿದ್ದಾಗಿ' ಋಗ್ವಾಕ್ಯದಿಂದ ಗೊತ್ತಾಗುತ್ತದೆ.[೧೦] ಈ 'ಆಪ' (ನೀರು) ಬಳಿಕ ಅನೇಕಾರ್ಥ ಪಡೆದುದುಂಟು. 'ಮಧು' ಎಂಬ ಒಂದೇ ಸಂಕೇತದಲ್ಲಿಯೇ ಸೋಮ ಹಾಗೂ

ಆಪ : ರಸ ಅಡಗಿಸುವ ಪ್ರಯತ್ನವೂ ಆಗಿದೆ! ಸೋಮ ಬಳ್ಳಿಯ ರಸ. ಆದರೆ, ಅಶ್ವತ್ಥ ವೃಕ್ಷದಲ್ಲೆ ಸೋಮದ ಆರೋಪ ಮಾಡಿರುವ ತಂತ್ರದಲ್ಲಿ ಇರುವ ಕವಡು, ಮಧುಸ್ರವಿಸುವ ವಿಷ್ಣು ಪದದ ತುಲನೆಯಲ್ಲಿ ಬಯಲಿಗೆ ಬರುತ್ತದೆ![೧೧]

'ನೀರೆ' ನೀರಿನ (ರಸದ) ನಾರೀ ರೂಪವಾದಂತೆ, ಚಂದ್ರನ ಆವೇಶವಾಗಿ ಅವಳು ಸಾಕ್ಷಾತ್ 'ಚಂದ್ರಾ' ಆದುದುಂಟು; ನೀರು-ರಸ ಅಪಾರ್ಥಕ್ಕೆ ಕಾರಣವಾಗಿ ಅಪ್ಸರ-ತ್ವವು ಟೀಕೆಯ ವಿಷಯವಾಯಿತು. ಆದರೆ ಚಂದ್ರಾ, ಚಂದ್ರಿಕಾ, ಜ್ಯೋತ್ಸ್ನಾ, ತಾರಾ ಇವು ಒಮ್ಮೆಲೆ ಅಷ್ಟು ಗೌರವಕ್ಕೆ ಎರವಾಗಲಿಲ್ಲ; ಋಗ್ವೇದದ 'ರಸ' ಪಂಥಿಗಳು ಚಂದ್ರ ದೈವತ ಬಚ್ಚಿಟ್ಟಿದ್ದಾರೆ! ನಕ್ಷತ್ರ ಹಾಗೂ ನದಿಗಳ ಹೆಸರು ಸ್ತ್ರೀಯರಿಗೆ ಇಡಬಾರದು, ಎಂಬ ಗೃಹ್ಯಸೂತ್ರಕಾರರ ಆದೇಶವಿದ್ದಿತೆಂಬುದನ್ನು ಗಮನಿಸುವುದು ಅವಶ್ಯ. ನಿಜವಾಗಿ, ಮಧುರ 'ಚಂದ್ರ' ಸ್ತ್ರೀಲಿಂಗಿಯೇ ಇರಬೇಕು. ಸಂಸ್ಕೃತದಲ್ಲಿ ಚಂದ್ರ-ಮಸ್ ಜೋಡುನುಡಿಯಾಗಿ ಪುಲ್ಲಿಂಗಿಯಾಗುತ್ತದೆ. 'ಚಂದ್ರ' ಸೌಂದರ್ಯ ಸೂಚಕ ವರ್ಣವಾಗಿ ವ್ಯವಹರಿಸುತ್ತದೆ ಋಗ್ವೇದದಲ್ಲಿ. ಆದರೂ ಸಿನೀವಾಲೀ, ರಾಕಾ (: ಪೂರ್ಣಿಮಾ) ಗುಂಗೂ ಈ ಮಾತು, ಚಂದ್ರಾದೇವಿಯ ಪರ್ಯಾಯದ ನಾಮಸಂಕೇತಗಳೇ ಆಗಿವೆ. ಹೀಗೆ ಋಗ್ವೇದದಲ್ಲಿ ಬೇರೆ ಹೆಸರು ಧರಿಸಿ ಚಂದಲಾದೇವಿ : ಚಂದ್ರಿಕೆ ಪೂಜೆಗೊಳ್ಳುತ್ತಿದ್ದಾಳೆ; ಸ್ತ್ರೀರೂಪದಲ್ಲಿ! 'ಚಂದ್ರ'ಮಸ್ ಆಗಿ ಲಿಂಗ ಬದಲಿಸಲು ಕಾರಣವೇನು? ಮೂಲ ಸಂಸ್ಕೃತ ಭಾಷಿಕ ಆರ್ಯರಲ್ಲಿ ಪಿತೃಪ್ರಧಾನ ಕುಟುಂಬ ಪದ್ಧತಿಯಿದ್ದಿತು. ಇವರಿಗೆ ಚಾಂದ್ರ ಸಾಂಪ್ರದಾಯ, ಆಪ : ರಸ ಪಂಥದ ಆಚಾರ-ವಿಚಾರ ಮಾನ್ಯವಿರಲಿಲ್ಲ, ಎಂಬುದು ಬೇರೆ ಪ್ರಮಾಣಗಳಿಂದ ದೃಢಪಡುತ್ತಿದೆ. ಆದುದರಿಂದ, ಋಗ್ವೇದದಲ್ಲಿ ಚಾಂದ್ರ ದೈವತಗಳು ಪ್ರತಿಷ್ಠೆಯನ್ನು ಪಡೆಯಲು ಕೆಲವೊಂದು ಕಾಲವು ಸಂದಿತು. ಸೌರ ಸಂಪ್ರದಾಯದ ಇಳಿಗಾಲದ ವರೆಗೆ 'ಚಂದ್ರ'-'ಚಂದ್ರಾ' ತಲೆಮರೆಯಿಸಿಕೊಂಡು 'ಸೋಮ'ನ ಬಾಹ್ಯ ವೇಷ ತೊಡುತ್ತದೆ! ಆದರೂ ಚಂದ್ರನು ಸೋಮನಾದರು ಅದು ಉಭಯಲಿಂಗೀ ದೈವತ! ಇದು 'ಶಿಖಂಡಿ' ಸಂಪ್ರದಾಯ ಎಂಬುದು ಬಚ್ಚಿ ಉಳಿದಿಲ್ಲ. ಅಪಾಂನಪ್ತ ಅಭಿನ್ನವಿರದಾಗ : 'ಅಪಾಂ ನಪ್ತ' ಉಭಯಲಿಂಗಿ ಆಗುತ್ತದೆ. ಋಗ್ವೇದದ ಸೂಕ್ತಕಾರರಲ್ಲಿ ಶಿಖಂಡಿ ಇದ್ದಾರೆ. ಮಹಾಭಾರತಕಾರನು ಇದನ್ನು ಯೋಜನಾ ಪೂರ್ವಕ ಉಳಿಸಿದ್ದಾನೆ. ಗಂಗಾ (: ಜಲ) ಪುತ್ರ : 'ಭೀಷ್ಮ' : ಚಂದ್ರನು ತಾನೆ? ಇವನ ಸಂಹಾರಕ್ಕೆ ಇನ್ನೊಂದು ಚಾಂದ್ರ : ಶಿಖಂಡೀ ಪಾತ್ರ ಸೃಷ್ಟಿಸಿರುವ ವ್ಯಾಸ, 'ವೇದ'ವ್ಯಾಸ ನಿಜ!

ವೇದಪೂರ್ವಕಾಲದ ಭಾರತೀಯ ಜನರು ಶ್ರದ್ಧೆಯನ್ನು ಗ್ರಹಿಸಿಕೊಳ್ಳಲು ವೇದದೊಳಗಿನ ಪವಾಡ ಕಥೆಗಳ ನೆರವು ಪಡೆಯದೆ ಬೇರೊಂದು ದಾರಿಯಿಲ್ಲ. ಇವುಗಳೊಳಗಿನ ಅರ್ಥದ ಸಂದಿಗ್ಧತೆಯಿಂದಾಗಿ ತೊಂದರೆ ಎದುರಿಸಬೇಕಾಗುತ್ತದೆ. ಆದರೂ ಈ ಕಥೆಗಳ ಮೂಲ ಸಂಕೇತಗಳ ಅರ್ಥವನ್ನು ನಿರ್ಧರಿಸಿಲು ಆಪ : ರಸ : ಚಂದ್ರ ಪಂಥೀಯ ಕ್ರೀಟ್, ಈಜಿಪ್ಟ್, ಗ್ರೀಕ್ ಕತೆಗಳಿಂದಲೂ, ಮಾನವಶಾಸ್ತ್ರದ ಸಂಶೋಧನೆಗಳಿಂದಲೂ ಬೆಳಕು ದೊರೆಯಬಲ್ಲುದು. (ಗಿಡದ) ರಸ : ನೀರು ಮೈಯಲ್ಲಿ ಬರುವ ಹಂತಕ್ಕೂ ಮುಂಚೆ, ಅದ್ಭುತ ವೃಕ್ಷ, ಪಶು, ಸರ್ಪಾದಿಗಳೇ ಮೈಯಲ್ಲಿ ಬರುತ್ತಿರಲಿಕ್ಕೆಬೇಕು. ಪ್ರಾಥಮಿಕ ಹಂತದಲ್ಲಿ ಜನಕ್ಕೆ ಆವೇಶದ ಅನುಭವವೆ ಎಲ್ಲಕ್ಕೂ ಮುಂಚೆ ಬಂದಿರುವ ಶಕ್ಯತೆಯಿದೆ. ಖಾಲ್ದಿಯದಂತೆ ಈಜಿಪ್ಟ್-ಗ್ರೀಕ್ ಸಂಸ್ಕೃತಿಯಲ್ಲಿಯೂ ಚಾಂದ್ರ ಸಂಪ್ರದಾಯ, ಅದರೊಡನೆಯೆ ಸರ್ಪ ಸಂಪ್ರದಾಯವೂ ಇದ್ದಿತು. ಇಂಗ್ಲೀಷಿನಲ್ಲಿ 'Moon Struck'(ಚಂದ್ರನ ಬಾಧೆಯಾದ) ಎಂಬ ಪಡೆನುಡಿಯಿದೆ. ಹುಚ್ಚಿಗೆ Lunacy ಎಂದು ಚಂದ್ರ ಸಂಬಂಧಿಯಾದ ಹೆಸರೆ ಉಂಟು. ಹೋಳಿ-ಹುಚ್ಚಾಟ : ಫಾಲ್ಗುಣ ಪೌರ್ಣಿಮೆಯಂದು! 'ಫಲ್ಗು' ಸಂಕೇತಯೋಜನೆಯಲ್ಲೂ ಅರ್ಥ ಕಾಣುತ್ತದೆ. ಈ ಶಬ್ದದ 'ನಿರುಪಯುಕ್ತ' 'ಅರ್ಥವಿಹೀನ' ಎಂಬ ಅರ್ಥವು ವರ್ಷಾಂತ್ಯ-ಕೊನೆ-ಪ್ರಳಯ ಸೂಚಕವಾಗುತ್ತದೆ; 'ಕೆಂಪು' ಎಂಬುದು 'ರಜಸ್ಸು' : ಸೃಜನದ ಕರ್ದಮ : 'ಕರ್ದಮೇನ ಪ್ರಜಾಭೂತಾಃ!' ಅಂದು ಕೆಸರು, ರಾಡಿ ಎಸೆದಾಟವೂ ಆಗದೆ ಇಲ್ಲ! 'ರಂಗ ಪಂಚಮಿ! ಓಕುಳಿಯಾಟ! ವಸಂತಾಗಮನದ ಪೂರ್ವಸೂಚನೆ. ಮರಣ ಲಯದೊಳಗಿಂದಲೇ ಜೀವಸೃಷ್ಟಿ ಜೀವ-ಜೀವದ, ಸ್ತ್ರೀ-ಪುರುಷ ಲಯಯೋಗ ಸಿದ್ಧಿ, ಸೃಷ್ಟಿ! ಹನ್ನೆರಡೂ

ತಿಂಗಳಲ್ಲಿ 'ಚಂದ್ರ' ಬಾಧೆಯು ಆಗದಿರಲೆಂದು, ಕೊನೆಯಲ್ಲಿ ಒಮ್ಮೆ ಏನೆಲ್ಲ ಆ 'ಹುಚ್ಚು' ತೀರಿ ಹೋಗಲೆಂದು, ವರ್ಷದಲ್ಲಿ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಂತಿವೆ, ಈ ಪರ್ವ : ಸಂಧಿ! ಚಂದ್ರಿಕಾ ಪ್ರಭಾವಕ್ಕೆ ಒಳಗಾಗದ ಚಂದ್ರನ 'ಮಧು' : ಮಧುಚಂದ್ರದ ಆಕರ್ಷಣಕ್ಕೆ ವಿದೂರ ಸ್ತ್ರೀ-ಪುರುಷರುಂಟೇ? ಅಭಾವದ ರೊಚ್ಚು ಅಥವಾ ಅತಿರೇಕೀ ರತಿಯ ಜುಗುಪ್ಸೆಯೆ ಕೌಮಾರ್ಯ-ಜೀವನದ ಆದರ್ಶಕ್ಕೆ ಒತ್ತಾಯ ಪಡಿಸುವ ಮುಖ್ಯ ಪ್ರೇರಣೆ.

ಭಾರತೀಯ ಚಂದ್ರ ಸಂಪ್ರದಾಯದ ಬಗೆಗೆ ಸಂದೇಹವೆ ಇಲ್ಲ. ಚಂದ್ರ-ಸರ್ಪ ಈ ನಿಕಟ ಸಂಬಂಧದ ಬಗೆಗೂ ಸಂಶಯವಿಲ್ಲ. ಆದರೂ ನಮ್ಮ ಕಥೆಗಳ ಸ್ಪಷ್ಟೀಕರಣಕ್ಕೂ, ಈ ಅರ್ಥದ ದೃಢೀಕರಣಕ್ಕೂ ಭಾರತದ ಹೊರಗಣ ಕಥೆಗಳಿಂದ ಪುಷ್ಟಿ ದೊರೆತಷ್ಟು ಲೇಸು ಎನಿಸಿದೆ. ಗ್ರೀಕ್ ಪುರಾತನ ಕಥಾ ವಿಷಯವಾದ ಆಫ್ರೋಡೈಟ ದೇವಿಯನ್ನು ಇಲ್ಲಿ ನೆನೆಸಿಕೊಳ್ಳಬಹುದು : "Aphrodite Goddess of desire rose naked from the foam of the sea" ಈ ಕಥಾಸಂಗ್ರಹಕಾರನು, ಆಫ್ರೋಡೈಟ್ ಮತ್ತು ಯುರಿನೋಮೆ (Eurynome) ದೇವಿ ಇಬ್ಬರೂ ಒಂದೇ ಎಂದು ಸೂಚಿಸಿದ್ದಾನೆ. ಈ ಕವಿಗೆ ಓಫಿಯೊನ್ ಎಂಬ ಸರ್ಪದ ಸಂಬಂಧವುಂಟಾಯಿತು. ಬಳಿಕ ಅವಳು ಶಿಶುವಿಗೆ ಜನ್ಮವಿತ್ತಳು, ಎಂದು ಕಥೆಯಿದೆ. ಈ ಆದಿಮಾತೆಯ ಸಂದರ್ಭದ ಸಂಕೇತಗಳು ಅಭ್ಯಸನೀಯವಾಗಿವೆ.

೧. ನೀರೊಳಗಿಂದ ಹುಟ್ಟಿದ್ದು;
೨. ಇವಳನ್ನು 'Goddess of desire' ಎಂದುದು.
೩. ಒಂದು ಸರ್ಪದ ಸಂಬಂಧ.
೪. ಮಾತೃತ್ವ, ಇವುಗಳಲ್ಲಿ 'ಆಪೋವಾ ವಾ ಅಸ್ಮಾನ್ ಮಾತರಃ' 'ಆಪೋ ನಾರಾಃ' : ಗಂಗೆ ಮಕ್ಕಳು ನಾವೆಲ್ಲ ಎಂಬುದರ ವಿಚಾರ.

ನೀರು : ಕಾಮನೆ : ಮನಸ್ಸು ಚಂಚಲ : ಸರ್‌ಪ. ಆದಕಾರಣ ಈ ಕಾಮನಾದೇವಿ : ಸರ್ಪದೇವಿ! ಆದುದರಿಂದ, ನೀರೊಳಗಿಂದ ಹುಟ್ಟಿದ ಈ ದೇವಿಗೆ ಕಾಮಿ(ನೀ) ದೇವಿ! (Goddess of Desire) ಎಂದುದರ ಸ್ವಾರಸ್ಯವು ವಿಶೇಷವಿದೆ. 'ಕಂ' ಎಂದು ನೀರಿಗೆ ಹೆಸರಿದೆ. ಕಂ-ಜ=ಕಮಲ (ನೀರಲ್ಲಿ ಹುಟ್ಟಿದ್ದು). ಕಂ-ದರ್ಪ : ಕಾಮ; ಕಾಮನ ಹೆಂಡತಿ 'ರತಿ' ಕಾಮಿನಿ ತಾನೆ? 'ಕಂ(ο)' ಪದಕ್ಕೆ ಈ 'ಚಂದ್ರಾಃ ಆಪ'ಕ್ಕೆ-ಈ 'ಸಲಿಲ'ಕ್ಕೆ-ಸರ್ಜಕ ಜಲಕ್ಕೆ ಭಾಷ್ಯಗಳಲ್ಲಿ 'ಸುಖ' ಎಂದೂ ಅರ್ಥ ಹೇಳಲಾಗಿದೆ! 'ಕಂ' : ಪ್ರಜಾಪತಿಯಂತೆ! ಸೃಷ್ಟಿನಿರ್ಮಾಣದಲ್ಲಿ 'ಆಪ ಏವ ಸಸರ್ಜ ಆದೌ' ಎಂದು ಮನು ಹೇಳುತ್ತಾನೆ. ಈ ಆಪ : ದೈವತಕ್ಕೆ 'ಹಿರಣ್ಯಗರ್ಭ' (: ಬ್ರಹ್ಮಾಂಡ (ತತ್ರಿ) ನಿರ್ಮಿಸಿದ) ದೇವರು ಎಂದು ಹೆಸರು. ಇಂಗ್ಲೀಷಿನ 'Golden Germ' ಇದೇ ಈ 'ಕ' ದೇವನ ಮಡದಿ. ಕಾ(ಲಿ)! ಕಾಮನು ಮನೋಜನು; ಮನಸ್ಸನು ಸೆಳೆವ-ಹುಚ್ಚು ಹಿಡಿಸುವ ಚಂದ್ರನು ಸಹ ಕಂ-ದರ್ಪನಂತೆ ನೀರೊಳಗಿಂದ ಹುಟ್ಟಿರುವುದಾಗಿ ಪುರಾಣ ಕಥೆ ಹೇಳುತ್ತದೆ. 'ಚಂದ್ರಮಾ ಮನಸೋ ಜಾತಃ' ಎಂದು ಪುರುಷಸೂಕ್ತವು ಹೇಳುತ್ತದೆ. ಆದಕಾರಣ, ಪ್ರಜಾ-ಪತಿ=ಚಂದ್ರ; ಪ್ರಜಾಪತಿ : ಕಂ ದೇವತಾ ಸೂಕ್ತದ ಅಥರ್ವವೇದ ಪಾಠದಲ್ಲಿ 'ಆಪೋವತ್ಸಂ ಜನಯಂತೀಃ ಗರ್ಭಂ ಅಗ್ರೇ' ಎಂಬ ಋಚೆಯೂ ಉಂಟು[೧೨] ಆದರೆ, ಈ ಸೂಕ್ತದ ಋಗ್ವೇದ ಪಾಠದಲ್ಲಿ ಈ ಋಚೆಯಿಲ್ಲ! ಈ ಋಚೆಗೆ ಸಾಂಪ್ರದಾಯಿಕ ಪದಚ್ಛೇದ-ಪದಪಾಠವೂ ಇಲ್ಲ! ಆದುದರಿಂದ ಈ ಪಾಠದ ಬೆಗಗಿನ ಸಂದೇಹ ಹೆಚ್ಚುತ್ತಿದೆ. ಒಂದು ಅಧಿಕ ಪ್ರಸಂಗದ inter-polation ಆದ ಸೂಚನೆ ಇಲ್ಲಿದೆ!

ಕಂ-ಜ : ಕಮಲ; ಸೌಂದರ್ಯದ ಪ್ರತೀಕ, ಸೌಂದರ್ಯದಲ್ಲೆ ವಿನಾಶದ ಬೀಜ. ಕ-ಕಾ (ಲ-ಲಿ) ದೈವತವು ಮೃತ್ಯುವಿನ ಪ್ರತಿಮೆ! ನಾರಿ : ಮಾರಿ!' Water genie : good and evil! 'ಕಸ್ಮೈ ದೇವಾಯ ಹವಿಷಾ ವಿಧೇಮ?' ಯಾವ ದೈವತಕ್ಕೆ ಹವಿಸ್ಸನ್ನೀಯಲಿ? ಸೌದರ್ಯದೇವಿಗೊ? ಮೃತ್ಯುದೈವತಕ್ಕೊ? ಎಂಬ ಪ್ರಶ್ನಾರ್ಥಕ 'ಕ(ο)' ದೇವತೆಯ ಅದ್ಭುತ ರಮ್ಯ ಸೂಕ್ತವೊಂದು ಋಗ್ವೇದದಲ್ಲಿದೆ! ಋಗ್ವೇದ ಕಾಲದ ಕೊನೆಗೆ, ವಿಚಾರವಂತರ ಎದುರು ಇದು ಜೀವಂತ ಪ್ರಶ್ನೆಯಾಗಿತ್ತು : ಏಕೆಂದರೆ, ಋಗ್ವೇದದ ಮೂಲದೈವತಗಳು ಬೆಲೆಗೇಡಾಗತೊಡಗಿದ್ದುವು.

ಋಗ್ವೇದೀಯ ಮೂಲಭೂಮಿಕೆಯಲ್ಲಿ ಮೃತ್ಯು : ಸಂಕಟ-ಸ್ವರೂಪೀ ದೈವತಗಳಿಗೆ ಸ್ಥಾನವಿಲ್ಲ! ಕಂ-ಪ್ರಜಾಪತಿಯಂತಹ ಇಮ್ಮೊಗದ ದೈವತಗಳ 'ತತ್‌ಏಕಂ' ಈ ತಾತ್ವಿಕ ಭೂಮಿಕೆಯು, ಋಗ್ವೇದದ ಮೂಲನಿಲುವಿಗೆ ತೀರ ವಿಸಂಗತವಾಗಿದೆ. ಈ ಕಾರಣದಿಂದಲೇ 'ಇಂದ್ರನು ಅಹಿಃ ವೃತ್ರನ ಶತ್ರು'; ಎಂಬ ಹಾಗಿನ ಪ್ರತಿಮೆಗೇ ಈ ವೇದದಲ್ಲಿ ಏನೆಲ್ಲ ಮಹತ್ತ್ವ ಇತ್ತು. ಆದರೆ, ಇಂದಿನ ಸಂಹಿತಾ ರಚನೆಯಲ್ಲಿ ಕೇವಲ ಅದರ ಆಭಾಸವನ್ನು ಉಳಿಸಲಾಗಿದೆ. ಮತ್ಯುರೂಪ ದೈವತಗಳು ಕೊನೆಗೆ ಪ್ರಭಾವಶಾಲಿಯಾಗುತ್ತವೆ: 'ಯಸ್ಯ ಛಾಯಾ (ಅಮೃತಂ,) ಯಸ್ಯ ಮೃತ್ಯುಃ' ಎಂಬ (ಜೀವನ ಹಾಗೂ) ಮರಣ ಶಕ್ತಿಯ ದೇವತಾ ಪ್ರತಿಮೆಗಳು ಎಂದರೆ ತತ್ : ಏಕಂ (ಜೀವನ+ಮರಣ) ಒಂದೇ ಆಗಿರುವ (ಸಂಯುಕ್ತ) ಶಕ್ತಿಯ ದೈವತದ ಉದ್ಘೋಷವೇ ಕೊನೆಗೆ ಕೇಳಬರುತ್ತದೆ-ಸೌರ ಪಂಥೀಯರಿಂದಲೂ : ಏಕಂ : ಸತ್ 'ವಿಪ್ರಾಃ ಬಹುಧಾ ವದಂತಿ' ಕೂಗಾಟ ನಡೆಯುತ್ತದೆ![೧೩] ನಿಜಕ್ಕೂ ಋತ : ಸತ್ಯದ ಶ್ರದ್ಧೆಗೆ ಎರವಾಗದೆ ಸವಿತೃ ಉಪಾಸಕರಲ್ಲಿ ಏಕಂ : ಸತ್ ಈ ತಲೆಯೆತ್ತಿ ಪ್ರಭಾವಶಾಲಿಯಾಗಲು ಶಕ್ಯವಿಲ್ಲ. ನೀರಿನಲ್ಲಿ ಕಂ-ಜದಲ್ಲೆ ಹಾವು : ಕಾಲಿ ಉಂಟು, ಎಂಬುದನ್ನೂ 'ಕ' ದೇವತಾ ಮಹಾತ್ಮ್ಯದ ಸೂಕ್ತವು ಸೂಚ್ಯವಾಗಿ ಹೇಳಿದೆ : ಆಪ ಸಂಪ್ರದಾಯದ ಎಲ್ಲ ದೈವತಗಳೂ ಪದ್ಮಾಸನಸ್ಥರೇ ಆಗಿದ್ದಾರೆ.

> ಆಪಃ ಯತ್ ಬೃಹತೀಃ ವಿಶ್ವಮಯಾನ್ ಗರ್ಭಂ ದಧಾನಾಃ,
> ಜನಯಂತೀಃ ಅಗ್ನಿಂ।
> ತತಃ ದೇವಾನಾ ಅಸುಃ ಏಕಃ ಸಮವರ್ತತ.........

ಪ್ರಪಂಚದ ಗರ್ಭಧಾರಣೆಗೆ (ಸೃಜನಕ್ಕೆ) ಕಾರಣವಾಗುವ ಆಪವು, ಜೀವನದೊಡನೆ ಅಗ್ನಿಯನ್ನೂ ನಿರ್ಮಿಸಿವೆ. ಆಪದೊಳಗಿನ ಈ 'ಅಗ್ನಿ' : 'ಸರೀಸೃಪ' : ಚಂದ್ರ! ಆದರೆ, ಇದನ್ನು ಇಲ್ಲಿ ಸ್ಪಷ್ಟ ಹೇಳದಿರುವುದು ಗಮನಾರ್ಹವಾಗಿದೆ. ಈ ಆಪೋವತ್ಸ'ದ ಸ್ಪಷ್ಟ ನಿರ್ದೇಶವು ಅಥರ್ವವೇದದಲ್ಲಿ ಬರುತ್ತದೆ. ಈ 'ಆಪೋವತ್ಸ'ನು, ಎಲ್ಲ ದೇವರಿಗೂ ಪ್ರಾಣಸ್ವರೂಪನಾದ ಒಬ್ಬನು (ಪ್ರಜಾಪತಿಯು)! ಏಕೆಂದರೆ, ಸೃಜನ ಶಕ್ತಿಯ ಕೇಂದ್ರ ಈತನೇ ಆಗಿದ್ದಾನೆ. ಇಲ್ಲಿ 'ದೇವಾನಾಂ' ಅಸು, ಎಂದರೆ ಮಾನವರ ಜೀವ ಎಂದೇ ಅರ್ಥವು ಅಭಿಪ್ರೇತವಿದೆ. ಏಕೆಂದರೆ, ಈ ಪ್ರಜಾಪತಿಯ ಹೊರತು ವಿಶ್ವದಲ್ಲಿ ಮತ್ತಿನ್ನಾವ ದೇವನೂ ಇಲ್ಲ; ನಿನ್ನಲ್ಲಿ ಏನೆಲ್ಲ ಒಳಗೊಳ್ಳುತ್ತದೆ;* ಈ ಶ್ರದ್ಧೆಯನ್ನು ಗಮನಿಸಿದರೆ ಏಕಂ : ತತ್ ಎಂಬ ಭೂಮಿಕೆಯಲ್ಲಿ ನಿಜವಾಗಿ ಜೀವನ-ಪ್ರಪಂಚ ಎಂಬುದೇ ಇಲ್ಲ-ಸುಳ್ಳು. ಆ-ತ ಒಬ್ಬನೇ ನಿಜ; ಉಳಿದುದೆಲ್ಲ ಮಾಯೆ! ಬಯಲು! ಎಂಬುದು ಇದರ ಭಾವಾರ್ಥವಾಗುತ್ತದೆ! ಆದುದರಿಂದ ಈ 'ಕಂ' ಇದು ಕಮಲ : ಕಾಮಿನಿಯಂತೆ ಕಂಡರೂ ಕಾಲೀ ಕರಾಳೀ ಪ್ರಳಯಾಗ್ನಿ ಸ್ವರೂಪಿಯೇ ಇರುವುದಾಗಿ 'ಕಸ್ಮೈದೇವಾಯ' ಸೂಕ್ತದ ಧ್ವನ್ಯರ್ಥವಿದೆ. ಕಮಲದಲ್ಲಿ ಪ್ರಚಂಡ ಜ್ವಾಲೆ ಹೊಮ್ಮುತ್ತಿರುವ ಪ್ರತಿಮಾ : ಸಂಕೇತವನ್ನು ತಮ್ಮ ಪಂಥೀಯ ಚಿಹ್ನವಾಗಿಸಿಕೊಂಡಿರುವ ಮಠಗಳು ಉಂಟು. ಋಗ್ವೇದ ಸಂಹಿತೆಯು ಇಂದಿನ ಪಾಠದಲ್ಲಿ, ಇದನ್ನು ಸ್ಫುಟವಾಗಿ ಕಾಣದಂತೆ ಕವಡಿನ ಶ್ಲಿಷ್ಟಪದಗಳಿಂದ ನಿವೇದಿಸಲಾಗಿದೆ. ಏಕೆಂದರೆ, ಮೂಲ ಋಗ್ವೇದದಲ್ಲಿ ಹವ್ಯವಾಹನ ಜಾತವೇದ ಅಗ್ನಿಗಲ್ಲದೆ. ಪ್ರಳಯಾಗ್ನಿಗೆ ಸ್ಥಾನವಿಲ್ಲ.

ಉದಾಹರಣಾರ್ಥವಾಗಿ ಹಿರಣ್ಯಗರ್ಭ ಸೂಕ್ತದ ಈ 'ಅಗ್ನಿ' ಪ್ರತಿಮಾ : ಸಂಕೇತವನ್ನೆ ನೋಡಿ 'ಈದೃಶೀ ಆಪಃ ಪ್ರಳಯ ಕಾಲೀನಃ' ಎಂದು ಸಾಯಣಭಾಷ್ಯ ಹೇಳುತ್ತದೆ. ಆದರೆ ಮೂಲ ಯಾಜಕರು, ಅಗ್ನಿಯನ್ನು 'ಜಾತವೇದ' 'ಕವಿ' ಪ್ರಚೇತಸನೆಂದು ಕಾಣುತ್ತಾರಷ್ಟೆ. ಈತನು ಹವ್ಯವಾಹನನು; ದೇವರಿಗೆ ಹವಿಸ್ಸನ್ನು ಒಯ್ದು ಸಲ್ಲಿಸುವನೆಂಬ ಕಾರಣದಿಂದ ದೇವರು ಅಗ್ನಿಮುಖನು. ಇವನು 'ದ್ರವಿಣೋದಾ' ಇಷ್ಟಾರ್ಥಧಾತೃ, ಮಂಗಳಕರ ಅಗ್ನಿಯೆಂದು ಋಗ್ವೇದದ ಮೂಲ ಶ್ರದ್ಧೆ ಉಂಟೇ ಉಂಟು. ಇದರ ಬಗೆಗೆ ಭಿನ್ನಾಭಿಪ್ರಾಯಗಳೇ ಇಲ್ಲ. ಆದರೆ ಮಂಗಳ ಅಗ್ನಿಯ ಸ್ತೋತ್ರಗಳಲ್ಲೆ, ಈತನು ಕಲ್ಯಾಣಕಾರನೆಂಬ ಹಾಗಿನ ರೀವಿನ ವರ್ಣನೆಯ ಚೌಕಟ್ಟಿನಲ್ಲಿಯೆ,

---

* 'ದೇವೇಷು ಅಧಿ ದೇವಃ ಏಕಂ ಅಸೀತ್; ಹೇ ಪ್ರಜಾಪತೇ ನ ತ್ವತ್ ಅನ್ಯಃ' ಋಗ್ವೇದದ ಈ ಋಕ್ಕು ಹಲವು ಕಾರಣಗಳಿಂದ ಮುಖ್ಯವೆನಿಸಿವೆ. (ಸಂ.)

'ತ್ವಂ ಅಗ್ನೇ, ಅದಿತಿಃ' ಎಂದು ವರ್ಣಿಸಲಾಗಿದೆ! ಋಗ್ವೇದದ ಆರಂಭಕ್ಕೇ! ಈ ಅದಿತಿಯು-ಸಾರ್ಪರಾಜ್ಞಿ-ಸರ್ಪ ಸ್ವರೂಪ; ಎಂದರೆ ಅಗ್ನಿಯ ಈ ಅಖಂಡಿತ 'ಅದಿತಿ' ರೂಪವು ಸರ್ವಭಕ್ಷಕ=ಸಂಹಾರಕ ಸ್ವರೂಪದ್ದು! ಇದನ್ನು ಋಗ್ವೇದದೊಳಗಿನ ಪ್ರತಿಮಾ : ಸಂಕೇತಗಳೆ ಇನ್ನೊಂದು ನಾಲಗೆಯಿಂದ ಮೆಲ್ಲನೆ ಸೂಚಿಸುತ್ತಿವೆ![೧೪] ಬೃಹದಾರಣ್ಯಕದಲ್ಲಿ ಇದರ ಸ್ಪಷ್ಟೀಕರಣವಿದೆ. 'ಅದಿತಿಯ' ರಹಸ್ಯಾರ್ಥವನ್ನು ಅಲ್ಲಿ ಬಿಡಿಸಿ ಹೇಳಲಾಗಿದೆ!

ಸರ್ವಂ ವಾ ಅತ್ತಿ ಇತಿ ಅದಿತಿಃ; ತತ್ ಅದಿತೇಃ ಅದಿತ್ವಮ್।
ಸರ್ವಸ್ಯ ಏತಸ್ಯ ಅತ್ತಾ ಭವತಿ; ಸರ್ವಂ ಅಸ್ಯ ಅನ್ನಂ ಭವತಿ.....।[೧೫]

'ಅತ್ರಿ' ಎಂಬ ಪ್ರತಿಮಾ : ಸಂಕೇತದಲ್ಲೂ ಇದೇ ಅರ್ಥವು ಅಭಿಪ್ರೇತವಿದೆ ಹಲವೆಡೆಗಳಲ್ಲಿ; ಹವ್ಯವಾಹನ ಅಗ್ನಿಯನ್ನು ಅದಿತಿ ಎಂಬಲ್ಲಿ ಇರುವ ಗುಪ್ತಹೇತುವೇ ಅಗ್ನಿಯನ್ನು 'ಅತ್ರಿ' ಎಂಬಲ್ಲೂ ಇಲ್ಲದಿಲ್ಲ. ಉಪನಿಷತ್ತಿನಲ್ಲಿ 'ಅಷ್ಟಮೀ' 'ವಾಕ್ 'ಅತ್ರಿ' ಎಂದಿದೆ. ಅದಿತಿ=ವಾಕ್. ಈ ಸಂಸಾರವನ್ನು ಮಾಯೆಯೆಂದು ಪರಿತ್ಯಜಿಸುವ ಗುರು-ದತ್ತ ಪಂಥೀಯ ಆದಿನಾಥನು ಆತ್ರೇಯನು! ಹೀಗೆ, ಸಂನ್ಯಾಸ ಪಂಥೀಯ ಆದಿಗುರುನಾಥನು 'ಅತ್ರಿ' ಸಂಕೇತದ ಮೂಲಕ, ಅದಿತಿ ಸಂಪ್ರದಾಯದ ಮೂಲಕ ಋಗ್ವೇದದ ಭೂಮಿಯಲ್ಲೆ ಪ್ರವರ್ಧಮಾನವಾಗಿ ಬೆಳೆದುದನ್ನು ಧ್ವನಿತಪಡಿಸಲಾಗಿದೆ! ಸಂಸಾರವು ಮಾಯೆ ಎಂಬ ಗುರುಪಂಥ ಋಗ್ವೇದದಲ್ಲಿ ಹೇಗೆ? ಸಂಸಾರವನ್ನು ಸುಡುವ ಶ್ಮಶಾನದ ಅಗ್ನಿಯನ್ನು ಸರ್ವಭಕ್ಷಕನೆಂಬಲ್ಲಿ ಔಚಿತ್ಯವಿದೆ. ಆದರೆ, ಋಗ್ವೇದದ ಮೂಲಭೂಮಿಕೆಯಂತೆ ಮಂಗಲಧಾಮ ಹವ್ಯವಾಹನನು ಬೇರೆ ಮತ್ತು ಶವಭಕ್ಷಕ ಕ್ರವ್ಯಾದ ಅಗ್ನಿಯೇ ಬೇರೆ, ಎಂಬ ಶ್ರದ್ಧೆ ಮೂಲ ಋಗ್ವೇದದ್ದು. ಆದರೆ, ಇಂದಿನ ಸಂಹಿತಾ ಪಾಠ, ಇದಕ್ಕೆ ತೀರ ವಿಪರೀತ ಹೇಗೆ? 'ಅದಿತಿ' ಪಾತ್ರ ನಿರ್ಮಿಸಿ ಇದೆಲ್ಲವನ್ನೂ ಸೊಗಸಾಗಿ ಕೈಗೂಡಿಸಿಕೊಂಡುದಾಗಿದೆ ಅಥವಾ ಋಗ್ವೇದೀಯ ವೈಚಾರಿಕ ಆಕೃತಿ, 'ಆದಿಮಾತಾ' ಸಂಪ್ರದಾಯದ ಸೆಳವಿನಲ್ಲಿ ತನ್ನ ವಿಕೃತಿಗೆ ಆಮಂತ್ರಿಸಿತು, ಎಂಬುದನ್ನು ಈ ಸಂಹಿತಾಪಾಠ, ನಿದರ್ಶನಕ್ಕೆ ತರುತ್ತಿದೆ-ಅದಿತಿ, ಅಂಭೃಣೆ, ಸರಸ್ವತಿಯಂತಹ ಮಧ್ಯಮಾ ವಾಕ್ಕುಗಳ ಸಂಕೇತಗಳ ಮೂಲಕ.

ಬಾಳಿನಲ್ಲಿ ನಂಜು, ನೋವು, ಸಾವು ಇಲ್ಲವೆಂದಲ್ಲ; ಇದನ್ನು ಶಕ್ಯವಿದ್ದಷ್ಟೂ ದೂರವಿರಿಸುವ ಸಂಕಲ್ಪವು ಇಲ್ಲದೆ ಹೋದರೆ, ಮನೆಯ ಹಿತ್ತಲಲ್ಲೇ ಶ್ಮಶಾನ : ಸಮಾಧಿ ಸ್ಥಾನ ಬರದೆ ಹೋಗದು! 'ದೇವರ ಹಾವು' ಎಂದು ನಾಗನನ್ನು ಮನೆಯಲ್ಲೆ ಇರಗೊಟ್ಟು ಪೂಜಿಸುವ ರೂಢಿಯಲ್ಲಿ ನಿತ್ಯ ಶ್ಮಶಾನದ ನೆನೆಪಿನ ಯೋಜನೆಯಿದೆ! ಏಕತ್ವ-ಸಮತ್ವ-ಸಾಮದ ಉಪದೇಶ ಕೇಳಿ :

'ನಾಗೇನ ಸಮಃ ಏಭಿಃ ತ್ರಿಭಿಃ ಸಮಃ, ಅನೇನ ಸರ್ವೇಣ; ತಸ್ಮಾದ್ರಾವೇ ವ ಸಾಮ।
'ಅಶ್ನುತೇ ಸಾಮ್ನಃ ಸಾಯುಜ್ಯಂ ಸಲೋಕತಾಂ ಯಃ ಏವಂ ಏತತ್ ಸಾಮಃ ವೇದ॥[೧೬]

ಈ ಹಿನ್ನೆಲೆಯಲ್ಲಿ, ಗೀತೆಯ ಭಗವಂತನು ಹೇಳುವ 'ಸಮತ್ವಯೋಗ'ದ ಗುಹ್ಯಾರ್ಥವು ಮತ್ತು 'ವೇದಾನಾಂ ಸಾಮವೇದೋಽಸ್ಮಿ' ಎಂಬ ಮಾತಿನ ಅಂತರಾರ್ಥವು ಸ್ಪಷ್ಟವಾಗಲಿದೆ: 'ಕಾಲೋಽಸ್ಮಿ ಲೋಕ ಕ್ಷಯ ಕೃತ್ ಪ್ರವೃದ್ಧ'ನಾದ ಮಹಾನಾಗ : ಕಾಲಸರ್ಪನು ಈ ಶ್ರೀಮನ್ ಮಹಾವಿಷ್ಣುವು ಎಂಬುದರ ಸಾಕ್ಷಾತ್ಕಾರ ಮಾಡಿಸುವುದೇ ಗೀತೆಯು ನಿಜವಾದ ಉದ್ದೇಶವಿದ್ದರೂ, ಇದನ್ನು ಅದೆಷ್ಟು ನುಣ್ಣನೆಯ ಬಣ್ಣದ ಮಾತುಗಳಿಂದ ಸಂಮೋಹಕವಾಗುವಂತೆ ಹೇಳಲಾಗಿದೆ. ಗೀತೆಯಲ್ಲಿ ಇದನ್ನೆಲ್ಲ ನೋಡುವಾಗ ವೇದಾಂತದ ಮಾತುಗಳ ಈ ಗಾರುಡಿಗತನದ ಕೌತುಕವೆನಿಸುತ್ತದೆ.

ನೀರೆ : ನಾರಿ, ನಾರ : ಆಪದ ಮೂರ್ತಿಯು; ಇವಳು 'ಕಾಮಿ(ನೀ)' Moon goddess, Serpent goddess; ಈ ಚಂದ್ರಾದೇವಿ : ಸರ್ಪಸ್ವರೂಪಿಯೂ ಅಹುದು, ಎಂಬ ಈ ಪ್ರತಿಮಾ ಸಂಕೇತಗಳು ಏಕದೇಶೀಯವಲ್ಲ. ಮಾನವ ಜೀವನೇತಿಹಾಸವನ್ನು ಅರ್ಥಯಿಸಿ ಹೇಳುವ, 'ಸತ್'ತ್ವಯುತ ಸಂಕೇತಗಳು: (organs of Reality) ಎಂಬ ಹಾಗಿನ ಸಾರ್ವಕಾಲಿಕ ಸಾರ್ವದೇಶಿಕ ಪ್ರತಿಮೆಗಳಾಗಿರುವುದನ್ನು ನೋಡಿದ್ದಾಯಿತು. ಭಾರತದಿಂದ ಗ್ರೀಕಿನವರೆಗಂತೂ. 'ಅಪಾಂ ನಪ್ತ' : ನೀರೊಳಗಿನ ಅಗ್ನಿ ಅಥವಾ ವಿದ್ಯುತ್ತು ಎಂಬ ಹಾಗಿನ

ಅರ್ಥವನ್ನು ಸೂಚಿಸುವ ಕೆಲವರ್ಣನೆಗಳು ದೊರೆವುದು ನಿಜ. ಆದರೆ ಅಲ್ಲಿ ಸರ್ಪತ್ವವನ್ನು ಮುಚ್ಚಿಡುವ ಪ್ರಯತ್ನವಿರುವುದಾಗಿ ಬಗೆಯಲು, ಇಡಿ ಋಗ್ವೇದದಲ್ಲಿ ಎಲ್ಲೆಲ್ಲೂ ಅವಕಾಶವಿದೆ. 'ಅಪಾಂ ನಪ್ತೃ' : ಆಪದಲ್ಲಿ ಅಡಗಿದ ಅಗ್ನಿ : ಗರ್ಭಸ್ಥ ಶಿಶುವನ್ನು 'ಸರೀಸೃಪ' ಸಂಕೇತದಿಂದ ಸೂಚಿಸಲಾಗಿದೆ. ಆದಕಾರಣ ಋಗ್ವೇದ ಕಾಲೀನ ಕವಿಗಳಲ್ಲಿ ಆಪ : ರಸ ಪಂಥೀಯರು ಸರ್ಪ : ನಾಗ ಪೂಜಕರಾಗಿದ್ದರು ಎಂಬುದೇ ಹೊರಪಡುತ್ತದೆ. ಮುಂದಿನ ಕಾಲದಲ್ಲಿ ಈ 'ಅಪಾಂ-ನಪ್ತೃ'ವೇ (ಒಡಲ :) ಅಂತರಿಕ್ಷದ ಪಾಲ್ಗಡಲಲ್ಲಿ ಒಂದಾಲದೆಲೆಯ ಮೇಲೆ (ಉಲ್ಬದಲ್ಲಿ) ಒರಗಿರುವ 'ಸನಾತನ' (ಚಂದ್ರ) ಶಿಶುವಾಗಿ ಕಂಡಿದೆ, ಭಾರತೀಯರಿಗೆ. ಇದೇನೇ ಇರಲಿ; 'ಅಪಾಂ ನಪ್ತೃ' : 'ಆಪೋವತ್ಸ' ಎಂಬಲ್ಲಿ ಹಾವಿನ ಪ್ರತಿಮೆಯೆ ಅಭಿಪ್ರೇತವಿರುವ ಬಗೆಗೆ ಸಂಶಯಪಟ್ಟು ಕೊಳ್ಳಬೇಕಾಗಿಲ್ಲ. ವಿನಾಶಕ ಶಕ್ತಿಯ ಬಡಬಾನಲ : ನೀರೊಳಗಿನ ಬೆಂಕಿ ಎಂದರೆ ಮೃತ್ಯು ಶಕ್ತಿರೂಪ ಸರ್ಪವೇ ಸರಿ. ಚಂದ್ರನ ಸಂದರ್ಭದಲ್ಲಿ ಇದು ಅಮಾವಾಸ್ಯಾ ಶಕ್ತಿ : ಸಮುದ್ರ ಮಂಥನದಲ್ಲಿ ಹೊರಬಂದ ವಿಶ್ವಸಂಹಾರಕ ಗರಲ : ವಿಷವೆಂಬುದೂ ಹಾವಿನ ನಂಜೇ. ಈ ನಂಜೇಶ ರುದ್ರನನ್ನು, ಸಾಕ್ಷಾತ್ತಾಗಿ ನಾಗನೆನ್ನದೆ ನಾಗಭೂಷಣನೆಂದು ವರ್ಣಿಸುವುದು, ನಂಜುಂಡನೆಂಬುದು, ಭಾರತೀಯ ದೈವತ ಪ್ರತಿಮೆಗಳ ವಿಕಾಸಕ್ರಮದೊಳಗಿನ ಎರಡನೆಯ ಹಂತದ ಸ್ಮೃತಿ ಸೂಚಕವಾಗಿದೆ. ವಿಷ್ಣುವು ನಾಗಶಯನನಾದದ್ದು ಈ ಹಂತದಲ್ಲಿಯೇ. ಆಪ : ರಸ ಪಂಥೀಯ ಬ್ರಹ್ಮನೇ ನಾಗನು! 'ಸುಬ್ರಹ್ಮಣ್ಯ' ಎಂಬ ವೇಷಾಂತರ ಮಾಡುತ್ತಾನೆ. ವಾಕ್ (: ಅತ್ರಿ) ದೇವಿಯ ಪತಿ : ವಾಕ್ ಪತಿ : ಬ್ರಹ್ಮಣಸ್ಪತಿ (ಎರಡೂ ಸಂಕೇತಗಳನ್ನು), 'ಸಮ' ರೂಪ : ಸಾ+ಅಮ ಎಂದು ವಿವರಿಸಿ ಹೇಳಲಾಗಿದೆ![೧೭] ಹೀಗೆ 'ಸರ್ಪ' ಸಂಕೇತವು ವೇಷಾಂತರ ಮಾಡುತ್ತ ಋಗ್ವೇದ ಕಾಲದಿಂದಲೆ ಮುಂದುವರೆಯುತ್ತ ಬಂದಿದೆ! ಈ ಸಂಕೇತದಿಂದ ಸೂಚಿಸಬೇಕಾದದ್ದು ಮೃತ್ಯುವೆ ಸತ್ಯ; ಜೀವನ ಆಭಾಸ ಎಂದು!

ಟಿಪ್ಪಣಿಗಳು

೧. Mac donell A. A; ***Vedic mythology*** P. ೭೦
೨. ***ಋಗ್ವೇದ ಸಂಹಿತೆ II*** ೩೫: X ೩೦
೩. ವಂದ್ಯ ಡಾ. ರಾಮಕೃಷ್ಣ ಭಂಡಾರಕರರ ಗೌರವ ಗ್ರಂಥದಲ್ಲಿ ಈ ಪ್ರಬಂಧವು ಪ್ರಕಟವಾಗಿದೆ.
೪. Wallis Budge, E.A; ***Babylonian Life and History*** 1925
೫. ***ಋಗ್ವೇದ ಸಂಹಿತೆ*** X. ೧೩೫
೬. ***ಅದೇ*** X. ೧೮೯
೭. Ernst cassirer ***Myth, and Language*** P.8
೮. ಶೌನಕ, ***ಬೃಹದ್ದೇವತಾ*** ೫೬-೧೦೧; ೧-೪-೫-೧೩
೯. ***ಶತಪಥ ಬ್ರಾಹ್ಮಣ*** ೩.೬.೧.೭
೧೦. ***ಋಗ್ವೇದ ಸಂಹಿತೆ I.*** ೨೩. ೨೦
೧೧. ***ಅದೇ*** I. ೧೫೪. ೫; ೧೩೫.೮; ***ಛಾಂದೋಗ್ಯ ಉಪನಿಷತ್ತು*** ೮. ೫. ೩
೧೨. ***ಋಗ್ವೇದ ಸಂಹಿತೆ*** IV. ೨. ೮
೧೩. ***ಅದೇ*** X. ೧೧೪. ೨; ಉ. ೧೬೪. ೪೬
೧೪. ***ಅದೇ*** X - ೭೨.೮-೯
೧೫. ***ಬೃಹದಾರಣ್ಯಕೋಪನಿಷತ್*** ೧. ೨. ೫
೧೬. ***ಅದೇ*** ೧.೩.೨೨
೧೭. ***ಅದೇ*** ೧. ೩.೨೦-೨೧

ಋಗ್ವೇದದ ನಾನಾ ಆಕೃತಿ-ರೂಪದ ಸರ್ಪಪ್ರತಿಮೆಗಳು

ಸಾ+ಅಮ : ಸಾಮ : ಸಾಮ್ಯ : "ಏಕತ್ವಂ, ಅನುಪಶ್ಯತಃ ಕೋ ಮೋಹಃ? ಕಃ ಶೋಕಃ?" ಇದು 'ಐಕ್ಯ'-ಸ್ಥಲ : 'ಸಮ-ರಸ' ಸ್ಥಲ. 'ಪೂರ್ಣ'(:ಯೋಗ:). 'ಶೂನ್ಯ' ಸಿದ್ಧಿ. 'ಶಬ್ದದಾಚೆಯ ಶಬ್ದ (?)'! 'ನಿಃ ಶಬ್ದಂ ಬ್ರಹ್ಮನ್ ಉಚ್ಯತೇ'! ಮೂಲ ಸಂಕೇತಾತ್ಮಕ ಆ-ಕೃತಿಯಲ್ಲಿ ಹೇಳುವುದಾದರೆ ಇದುವೆ ಅದಿತಿ ಸ್ವರೂಪ : 'ಅಪಾಂ-ನಪ್ತ' ಯೋಗ. ಏಕಶೇಷ ದ್ವಂದ್ವ!

ಈ 'ಸಮಸ್ತ'ಪದ ವಿಚ್ಛೇದದಲ್ಲಿ ವಿಶ್ವವಾಗುತ್ತದೆ! ಈ 'ಏಕಂ' ಬೇರೆಯಾಗಿ ಹೊರಬಂದಾಗ 'ಅದಿತಿ' 'ದಿತಿ'ಯಾಗುತ್ತಾಳೆ! 'ಏಕವೀರಾ' ದೇವಿ ! ಈ 'ಏಕಂ' (: ಗರ್ಭ), ಇಂದ್ರನು ತುಂಡರಿಸಿದನಂತೆ! ೭; ೭X೭; ೭ರ ಅನಂತ ಪಟ್ಟು! ಹೀಗೆ ನಾನಾ ರೂಪಕ್ಕೆ ಕಾರಣನಾಗುವ ಇಂದ್ರನು, ಎಲ್ಲ ನುಂಗಿ ನೀರು ಕುಡಿವ ಮೃತ್ಯುರೂಪ ಏಕಂ : ನಾಗದ ಶತ್ರು! ಆದರೆ, ಈ ಕಥೆಯಲ್ಲಿ 'ಇಂದ್ರ' ಸಂಕೇತಕ್ಕೆ ಇಂದ್ರಿಯ ವಾಚಕ ಅರ್ಥವನ್ನು ಧ್ವನಿತಪಡಿಸುವ ಹಂಚಿಕೆ ಇದೆ! 'ತತ್-ಮಯ' ಲಯ ಯೋಗದೊಳಗಿಂದ ಎಚ್ಚರಕ್ಕೆ ಕಾರಣವಾಗುವ ಪ್ರವೃತ್ತಿ ಪರ ಸ್ವಭಾವವು ಇಂದ್ರಿಯಕ್ಕೆ ಉಂಟಲ್ಲ! ಆತ್ಮ-ಕ್ರೀಡೆ, ಆತ್ಮ-ರತಿಯಿಂದ : ಐಕ್ಯಸ್ಥಲದಿಂದ ಚ್ಯುತವಾಗುವ ದುಃಖವು ಇಂದ್ರನನ್ನು ಕೊಲೆಪಾತಕಿಯಾಗಿಸಿದೆ, ಈ ಕಥೆಯಲ್ಲಿ!

ಆಪ : ರಸ ಪಂಥೀಯ ವಿರಕ್ತ ಸಂಪ್ರದಾಯಗಳ ಎಲ್ಲ ಪ್ರತಿಮೆಗಳ ಮೂಲ 'ಅಪಾಂ-ನಪ್ತ'ವೇ ಇರುವುದಾಗಿ ಕಾಣುತ್ತದೆ :

೧. ಅ-ದಿತಿ, ಉಭಯಲಿಂಗೀ ದೈವತ; 'ನ-ಸ್ತ್ರೀ'-'ನ ಪುಮಾನ್'

೨. ರುದ್ರ-ಶಿವ (ಶಕ್ತಿ ಸಹಿತ). ಇಬ್ಬರೂ 'ಅಮೃತಮೃತ್ಯು'ರೂಪರು,

೩. ರುದ್ರನಿಂದ ಬೇರ್ಪಡಿಸಿದ ಶಿವರೂಪದಿಂದ ಮಂಗಲಧಾಮ ವಿಷ್ಣು-ಶ್ರೀ ಲಕ್ಷ್ಮೀ;
ಇದರ ಪರಿಶಿಷ್ಟ ಕಾಲಭೈರವ;

ಹೀಗೇ ಈ ಪ್ರತಿಮಾ-ನಿರ್ಮಾಣದ ಪ್ರಯತ್ನವಾಗಿದೆ. ಲೋಕಾಧಾರಕ ಲೋಕಸಂರಕ್ಷಕ ಶಕ್ತಿವಿಷ್ಣು ಎಂದು ಬಗೆಯಲಾಗಿದ್ದೂ ಉಂಟು. ಆದರೆ, ಶ್ರೀಲಕ್ಷ್ಮೀ ಸಹಿತ ವಿಷ್ಣುವು ಪ್ರವೃತ್ತಿಪರ ಜೀವನ ಪ್ರೇರಕ ಸಂಕೇತವಾಗುವುದನ್ನು ಸಹಿಸದ ವಿರಕ್ತಪಂಥೀಯರಿಂದ ವಿಷ್ಣುವು ವೈಕುಂಠವಾಸಿ ದೈವತವಾಗುತ್ತದೆ! ಭಗವದ್ಗೀತೆ ಗೀತಾ ಭೂಮಿಕೆಯ ವಿಷ್ಣುವು ಅಮೃತತತ್ವಮೃತ್ಯುರೂಪನು. ಕರಾಳ ಕಾಲನಂತೆ ಇವನು ಮೋಹಿನೀ ರೂಪನೂ ಅಹುದು!

೪. ಅದಿತಿಯೊಳಗಿನ ಸರ್ಜಕ ಭಾಗದಿಂದ ಅಮೃತ ಸ್ವರೂಪಳಾದ ಗಂಗೆ, ಗೌರಿ,
ಶ್ರೀಲಕ್ಷ್ಮಿ, ಸರಸ್ವತಿ ರೂಪಗಳು; ಮಾರಕ ಭಾಗದಿಂದ ಕಾಲೀ, ಚಂಡಿ, ಜ್ಯೇಷ್ಠಾ
(ಲಕ್ಷ್ಮಿ) ಮಾರಿ ಮಾಯಮ್ಮ..........

ಜೈನ ಸಂಪ್ರದಾಯದಲ್ಲಿ ಪ್ರವೃತ್ತಿ ಮಾರ್ಗೀ 'ದಿತಿ' ಸ್ವರೂಪ ಪ್ರತಿಮೆಗಳನ್ನು ನಿರ್ಮಿಸುವ ದಾರಿಯಲ್ಲಿ ವಿಶೇಷ ಪ್ರಗತಿಯಾಗಲಿಲ್ಲ. 'ಅ-ದಿತಿ'ತ್ವ ಸೂಚಿತ 'ನ-ಚಿಕೇತ' ಸ್ಥಿತಿಯ ಪ್ರತಿಮೆಗಳೇ ಪ್ರಾಧಾನ್ಯದಿಂದ ಉಂಟು. ಆದಕಾರಣ, ತತ್-ಮಯ ಸ್ಥಿತಿ='ಅಪಾಂ-ನಪ್ತ' ಸಿದ್ಧಿ ಸೂಚಕ ತೀರ್ಥಂಕರ ಪ್ರತಿಮೆಗಳೆ ಎಲ್ಲೆಲ್ಲೂ ಪೂಜ್ಯವಾಗಿವೆ.

ಬೌದ್ಧರ ಪ್ರತಿಮೆಗಳೂ 'ಅಪಾಂ-ನಪ್ತ' ಸ್ವರೂಪದುವು. ಇವುಗಳಲ್ಲಿ 'ಯುಂ+ಯಾಂ' ಎಂಬ ಸಂಯುಕ್ತ ಪ್ರತಿಮೆ ವಿಶೇಷ ಅಭ್ಯಸನೀಯವಿದೆ. ಕ್ರಿಸ್ತನು ನಿತ್ಯ ನ-ಚಿಕೇತ ವೃತ್ತಿಯ ಪ್ರತಿಮೆ! ಕೂಸು ತೊಡೆಯ ಮೇಲಿರುವ ಮೇರಿ : ಅಪಾಂ-ನಪ್ತವೆ ಮೈದಾಳಿರುವ ಆಕೃತಿ. ಈ ಪ್ರತಿಮೆಯ ಪ್ರರ್ಯಾಯವೇ ಆಪ : ಸಲಿಲದ ಮೇಲೆ ಒರಗಿರುವ (ಜಲಶಾಯಿ) ವಿಷ್ಣುನಾರಾಯಣ ರೂಪವಲ್ಲವೆ?

ಋಗ್ವೇದದಲ್ಲಿ ಕಾಣಿಸಿಕೊಳ್ಳುವ 'ಅಪಾಂ-ನಪ್ತ'ವಿನ ಕೆಲವು ರೂಪಾಂತರಗಳೂ ಅಭ್ಯಸನೀಯವಾಗಿವೆ. 'ತನೂ ನಪಾತ್' ಎಂಬುದಕ್ಕೆ 'Son of himself' ಎಂದು ಮ್ಯಾಕಡೊನೆಲ್ ಅರ್ಥ ಹೇಳುತ್ತಾರೆ 'The bodily (i. e. own) son of divine father.. ಎಂಬ ಅರ್ಥ ಬರ್ಗನೆ ಹೇಳುತ್ತಾನೆ. ಈ ಅರ್ಥಗಳು ಸಮರ್ಪಕವಲ್ಲವೆಂದು ಹೇಳುವ ಉದ್ದೇಶವಿಲ್ಲ. ಆದರೆ 'ತನು' ಎಂಬುದು ಶ್ಲಿಷ್ಟಪದ, ಇಲ್ಲಿ ಶೇಷನೆ ಇದ್ದಾನೆ! 'ಆಪಃ ಅತ್ರ ತನ್ವಃ ಉಚ್ಯಂತೇ' ಎಂದು ನಿರುಕ್ತಕಾರರು ಹೇಳುವ ಸಾಂಪ್ರದಾಯಿಕ ಅರ್ಥವು, ತುಂಬ ಸಮರ್ಪಕವಾಗಿದೆ. 'ಆಪ' ಸ್ವರೂಪಿ ತನುವಿನಿಂದ ಹುಟ್ಟಿದ ಮಗು (ನಪ್ತ)! 'ತನೂ ನಪಾತ್' ದೈವತದ ಈ ವರ್ಣನೆಯಲ್ಲಿ 'ಸು ಜಿಹ್ವಃ' ಎಂದಿರುವ ಮಾತು ತುಂಬ ವಾಸ್ತವವೂ ಹೃದ್ಯವೂ ಆಗಿದೆ. ಜ್ವಾಲೆಯ ಅಗ್ನಿಯಂತೆ ನಾಲಗೆಗಳನ್ನು ಹೊರದೆಗೆವ ಸ್ವ-ಭಾವ ನಾಗನದೆ![೧] ಈ ಸರ್ಪ (Water) genius, : genital ಎಂಬ ಹಾಗೆ ಇರುವುದನ್ನು ಭಾರತೀಯ ಸಂಕೇತಗಳು ಮಾತ್ರವಲ್ಲ ಗ್ರೀಕ್ ಪ್ರತಿಮಾ : ಸಂಕೇತಗಳೂ ಪುಷ್ಟೀಕರಿಸುತ್ತವೆ. ಈ ಋಚೆಯೊಳಗಿನ 'ಯಜ್ಞ' ಕ್ರಿಯಾ ಸಿದ್ಧಿಯ ವಾಹನದ ದಾರಿಯನ್ನು ಮಧು (ರಸ) ಯುಕ್ತ ಮಾಡಲು (ಹೇ ತನೂ ನಪಾತ್ ಸುಜಿಹ್ವ, ಋತಸ್ಯ ಯಾನಾನ್ ಪಥಃ ಮಧ್ವಾ ಸಮಂಜನ್-) ಎಂಬ ಈ ಪ್ರತಿಮಾ ಸಂಕೇತಗಳು ಗುಹ್ಯಾರ್ಥಗಳನ್ನೊಳಗೊಂಡಿವೆ. ಆದರೆ, ಇಲ್ಲಿ ಒಂದು ಸಂದೇಹ : ಭೌತ ಬೆಂಕಿಯಲ್ಲಿ ಆಜ್ಯಾಹುತಿಯಿಂದ ಯಜ್ಞ ಮಾಡುವುದರ ಅರ್ಥವು ಸ್ಪಷ್ಟವಾಗುತ್ತದೆ. ಆದರೆ, 'ನೀರಲ್ಲಿ ಮಾಡುವ ಹವನ,' ಯಜ್ಞ ಅಂದರೇನು? 'ನೀರಿನಲ್ಲಿರುವ ಅಗ್ನಿ': 'ಉಲ್ಬಸ್ಥ ಅಗ್ನಿ' ಈ ಅಗ್ನಿದೇವನಿಗೆ ಆಹುತಿ ಹಾಕುವ ಯಜ್ಞವು ಆಪ : ರಸ ಪಂಥೀಯ ಯಾಗ-ಸತ್ರವಾಗಿ ಪರಿಣಮಿಸಿದ್ದು ಕಂಡುಬರುತ್ತದೆ ಋಗ್ವೇದದಲ್ಲಿಯೇ.[೨] ಗ್ರೀಕ್‌ಕಥೆಗಳಲ್ಲಿ orphion Moonsnake; Phython : serpent ಎಂಬೀ ಬಗೆಯ ಸರ್ಪ ಸಂಕೇತಗಳು ಸೃಜನಕ್ಕೂ ಕಾರಣವಾಗಿ, ಆ ಜಗದ 'ಪ್ರಜಾಪತಿ'ಗಳೆನಿಸಿವೆ.

ಋಗ್ವೇದದ 'ತನೂ-ನಪಾತ್'ದೊಡನೆ ಅಲ್ಲಿಯೇ ಇರುವ ಇನ್ನೆರಡು ನಾಮ-ಸಂಕೇತಗಳೂ ಸಂಸ್ಮರಣೀಯವಾಗಿವೆ. ಅಜ-ಏಕಪಾತ್ : ಇದು ಅಹಿಬುಧ್ನ್ಯದ ನಿಕಟ ಸಂಬಂಧಿಯಾಗಿದೆ. ತತ್-ಸ್ವರೂಪೀ ಪ್ರತಿಮೆ ಎಂದರೂ ಸರಿ[೩] ಇದನ್ನು 'ಅಗ್ನಿ' ಸೂಚಕವೆಂದೂ, ಸೂರ್ಯನೆಂದೂ, ಸಂದೇಹಿಸಿ ಅರ್ಥಯಿಸಿದವರುಂಟು! ಆದರೆ, 'ಅಜ ಏಕಪಾದ'ವು ಕೊನೆಗೆ ಪುರಾಣ ಕಾಲದಿಂದ ರುದ್ರ-ಶಿವನ ಪ್ರತಿಮೆಯಾದುದು ಕಾಣುತ್ತದೆ.

ರಾಥ್ ಮತ್ತು ಗ್ರಾಸ್‌ಮನ್ ಅವರಿಗೆ 'ಅಜ ಏಕಪಾತ್' : ಒಂದು ಕಾಲಿನ ಏರಾಳಿ (: ಕಕ್ಕಿ) 'one footed Driver, or Storm genius' ಎಂದು ಕಂಡಿದೆ; 'ಒಂದು ಕಾಲಿನ ಆಡು (one footed Goat) ಓಲ್ಡೆನ್‌ಬರ್ಗ್‌ನ ಮತ. ಇದನ್ನು ಸೂರ್ಯ ಹಾಗೂ ಕೋಲ್ಮಿಂಚು ಎಂದವರಿದ್ದಾರೆ. ಯಜ್ಞಬಲಿಯ ಮೇಷ ವೃಷಭ ಪ್ರಾಣಿಗಳಿಗಿಂತಲೂ ಮೊದಲು ಆಡು (: ಹೋತು) 'ದಿವ್ಯ' ಪಶುವಾಗಿತ್ತೆಂಬುದನ್ನು ಹಿಂದೆ ಸೂಚಿಸಲಾಗಿದೆ. ಆದಿಯಲ್ಲಿ ಸೃಷ್ಟಿ ಕರ್ತೃ : ಸರ್ಜಕ ಶಕ್ತಿಯ ದೈವತ, ಹೋತಿನ (ಗಂಡಾಡಿನ) ರೂಪದಲ್ಲಿ ಆರಾಧ್ಯ ಪ್ರತಿಮಾ ಸಂಕೇತವಾಗಿದ್ದಿತೆಂದು ಅರಿಕೆಗೆ ಬರುತ್ತದೆ. 'ಅಜ' ಇದುವೆ ಮೊದಲು ಆಹುತಿಯ ಪ್ರಾಣಿಯಾಗಿತ್ತು :

"ಅಜಾ-ಪುತ್ರಂ ಬಲಿಂ ದದ್ಯಾತ್, ದೇವೋ ದುರ್ಬಲ ಘಾತಕಃ"

ಎಂಬ ಸುಪ್ರಸಿದ್ಧ ಸುಭಾಷಿತವು ಸಂಸ್ಮರಣೀಯವಿದೆ. 'ದಿತಿ'ತ್ವಕ್ಕೆ ಮುಂಚಿನ, ಸೃಜನಕ್ಕೆ ಪೂರ್ವದ, ಅ-ಜಾ : ಅದಿತಿ! 'ಅಜಾಂ ಏಕಾಂ, ಲೋಹಿತ, ಶಕ್ಲ ವರ್ಣಾಂ' (: ಅಜಾ : ಆಡು:) ಪ್ರಕೃತಿಮಾತೆಗಾಗಿ ಕಂಡಿದೆ ಪುರಾತನರಿಗೆ![೫೯]

'ಅಜ : ಏಕಪಾತ್' ಸಂಗಾತಿ, ಇನ್ನೊಂದು ಸಂಕೇತವು ಅಹಿರ್ಬುಧ್ನ್ಯ : ಬುಡದ ಹಾವು! ಬಾಳ್ಗಡಲ ಬುಡವ ತಳಪಾಯದಲ್ಲಿ ಇರುವ ಹಾವು! ಸ್ತೋತ್ರಗಳಲ್ಲಿ ಅಹಿ-ಬುಧ್ನ್ಯನ ಹೆಸರು ಅಪಾಂ ನಪ್ತೃವಿನೊಡನೆ ಬರುತ್ತದೆ![೬೦] ಆದುದರಿಂದ, ಈ ಹಾವು ನೀರಿನ ತಳದಲ್ಲಿ ಇರುವುದು ಎಂದಾಯ್ತು! 'ಅಪಾಂ-ನಪ್ತೃ'ವಿನ ಸಂಗಡ ಪ್ರಾರ್ಥಿಸಲ್ಪಡುವ ಮೂಲಕ ಈ ಅಜ : ಏಕಪಾತ್ (: ಈ ಒಂದು ಕಾಲಿನ ಆಡು-ಹೋತ) ನೀರಿನ ತಳದ ಹಾವಿನ ಪಂಕ್ತಿಯ ದೇವತಾಶಕ್ತಿಯೆ ಆಯ್ತು! ಈ ಹಿನ್ನೆಲೆಯಲ್ಲಿ ಈ 'ಅಹಿ : ಏಕಪಾತ್' ಇವು 'ಅ-ಜ' ಎಂದರೆ ಸ್ವಯಂಭೂ ಎಂದು ಈ ಪ್ರತಿಮೆಗಳ ತುಲನಾತ್ಮಕ ಸಮೀಕ್ಷೆಯಲ್ಲಿ ಹೊರವಡುತ್ತಿದೆ! ಆದಕಾರಣ, '(ಅಪಾಂ) ನಪ್ತೃ'ವಿನ ಪರ್ಯಾಯ ಸಂಕೇತಗಳೇ ಇವೆಲ್ಲ, ಎಂದು ಎನ್ನಲಿಕ್ಕೂ ಅಡ್ಡಿ ತೋರುವುದಿಲ್ಲ. ಆದರೆ 'ನೀರಿನ ಮಗು'ವಿನ ಸ್ವರೂಪದ ಈ (ಭೌತ) ಸರ್ಜಕ ಶಕ್ತಿಯ ಸಾಲಿನಲ್ಲಿಯೆ (ಸೌರಮಂಡಲಸ್ಥ ಜ್ಞಾನರೂಪ ಪ್ರಕಾಶದಿಂದ ಸೃಷ್ಟಿಯ ಪ್ರಸವಿತಾರನೆಂಬ) 'ಸವಿತೃ'ವನ್ನು ಹೇಳಿರುವ ರೀತಿಯು ಮಾತ್ರ ಆಕ್ಷೇಪಾರ್ಹವಿದೆ. ವಿಶ್ವನಿರ್ಮಿತಿಗೆ ಕಾರಣವಾಗುವ ಆಪ : ರಸ ಸ್ವರೂಪೀ 'ಹಿರಣ್ಯಗರ್ಭ' (: ಸರೀಸೃಪ)ವು ಮತ್ತು ತೇಜ : ಪ್ರಕಾಶರೂಪ ದರ್ಶನ-ಸಾಕ್ಷಾತ್ಕಾರ (flash) ಮೂಲಕ ಅರಿಕೆಗೆ ಬರುವ, ಸಾಂಸ್ಕೃತಿಕ ಜ್ಞಾನಸ್ವರೂಪ-ವಿಶ್ವದ ನಿರ್ಮಿತಿಗೆ ಕಾರಣವಾಗುವ 'ಸವಿತೃ', ಇವೆರಡೂ ಒಂದೇ ಪಾತಳಿಯ ದೈವತಗಳೆಂದು ಬಗೆವಲ್ಲಿ ಅಜ್ಞಾನವಾದರೂ ಉಂಟು ಅಥವಾ ಸೌರ ಪ್ರತಿಮೆಯ ಅವಮೂಲ್ಯನದ ಹಂಚಿಕೆಯಾದರೂ ಉಂಟು, ಎಂದು ಹೇಳಬೇಕಾಗುತ್ತದೆ. ನೀರಿನ ಬುಡದ ಹಾವು (: ಅಹಿರ್ಬುಧ್ನ್ಯ) ಮತ್ತು ಸವಿತೃವನ್ನು ಒಂದೆಡೆಗೆ ಹೇಳಿರುವಲ್ಲಿ ಅಹಿಯು, ಸೂರ್ಯ : ಸವಿತೃ (:ಜ್ಞಾನ) ಮಂಡಲವನ್ನು ಆವರಿಸಿದ್ದರ ಸೂಚನೆಯಿದೆ! ಅಹಿಯ ಪೀಡೆಯಿಂದ ಜೀವನವನ್ನೂ, ಜ್ಞಾನವನ್ನೂ ಉಳಿಸಬೇಕೆಂಬ ಉದ್ದೇಶದಿಂದ ಅಹಿ : ವೃತ್ರನೊಡನೆ ಇಂದ್ರನು ಕಾದುತ್ತಿರುವುದಾಗಿ, ಮೂಲ ಋಗ್ವೇದದ ಭೂಮಿಕೆಯಿದೆ, ಎಂಬುದು ನಿಜವಿದ್ದರೆ ಅಹಿ-ಬುಧ್ನ್ಯನನ್ನು ಸವಿತೃವಿನ ಸಂಗಡ ಹೇಳಿರುವಲ್ಲಿ ಈ ಸಂಹಿತೆಯು ಇಂದ್ರ-ಶತ್ರುಗಳ ಪ್ರಭಾವದಲ್ಲಿ ಆಕಾರ ಪಡೆದಿದೆ, ಎಂದು ಬಗೆಯದೆ ಗತ್ಯಂತರವಿಲ್ಲ. ಆದುದರಿಂದ, ಸೂರ್ಯನನ್ನು ಆವರಿಸುವ ಹೊಂಚಿನ ಅದಿತಿ ಸಾರ್ಪರಾಜ್ಞಿಯಾಗಿದ್ದಾಳೆ ಎಂದು ಬೃಹದ್ದೇವತೆಯು ಬಹಿರಂಗ ಪಡಿಸಿದ್ದು ವಾಸ್ತವ ಸತ್ಯವೆಂದೇ ದೃಢಪಡುತ್ತದೆ. ಸೌರ ಭೂಮಿಕೆಯ 'ಸತ್ಯ', ಋತ ಸ್ವರೂಪದ್ದು. ಚಾಂದ್ರ ಭೂಮಿಕೆಯ 'ಸತ್ಯ' : ಆಪ-ರೇತ ಸ್ವರೂಪದ್ದು! ಇದು ವೇದೋಪನಿಷತ್ತುಗಳೊಳಗಿನ ಪ್ರಮಾಣಗಳಿಂದಲೇ ಸಿದ್ಧವಾಗಿದೆ. ಇವೆರಡೂ ಆಯಾ ಪಾತಳಿಯಲ್ಲಿ ವಾಸ್ತವ: ಸತ್ಯವೇ ನಿಜ. ಆದರೆ 'ಋತ'ದಿಂದ* ನಿರ್ಮಾಣವಾಗಿ ಅನುಭವಕ್ಕೆ ಬರುವ ವಿಶ್ವವು ಸಾಂಸ್ಕೃತಿಕ ಸ್ವರೂಪದ್ದು; ತಾತ್ವಿಕ; ಅನುಭವ ಗಮ್ಯವಾದರೂ ಅಮೂರ್ತ; ಅಂತಃಚಕ್ಷುವಿಗೆ ಗೋಚರಿಸುವಂತಹದು. ಆದರೆ, ಋತು-ರೇತದಿಂದ ಆಗುವ ವಿಶ್ವವು ಪ್ರಾಕೃತಿಕ : ಭೌತ. ಆದಕಾರಣ, 'ಅಪಾಂ ನಪ್ತೃ' ಅಜ ಏಕಪಾದದ ಸೃಜನ-ಸೃಷ್ಟಿ ಹಾಗೂ ಸವಿತೃ-ಪ್ರಕಾಶದಿಂದ ಆಗುವ ಸೃಜನ-ಸೃಷ್ಟಿ ಒಂದೇ ಎಂಬಲ್ಲಿ ಸಾಂಸ್ಕೃತಿಕ ಅಧಃಪಾತವಾಗಿದೆ. ಅಜಃ ಏಕಪಾತ್ ಎಂಬುದು ರುದ್ರ-ಶಿವನ ಸಂಕೇತವಾಗುವಂತೆ, ಅಹಿ-ರ್ಬುಧ್ನ್ಯವು ರುದ್ರ-ಶಿವನ ಪರ್ಯಾಯ ನಾಮವಾಗಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡಿದೆ!

ಅಹಿ-ಬುಧ್ನ್ಯನ ಸ್ವರೂಪವು, ವಸಿಷ್ಠಕುಲದ ಸೂಕ್ತ ಸಂಗ್ರಹಗಳಲ್ಲಿ, ಬಹಳ ಚೆನ್ನಾಗಿ ಬೆಳಕಿಗೆ ಬರುತ್ತದೆ! 'ಬುಧ್ನೇ ನದೀನಾಂ ಸೀದನ್' 'ನದಿಗಳ ಎಂದರೆ 'ಅಪಾಂ' ಬುಡದಲ್ಲಿ (ಬುಧ್ನೇ) Water genius ಹೊಕ್ಕು

---

* ಋತ ಎಂದರೆ ಜೀವನ ಮೂಲ್ಯಗಳ ಅರ್ಥ ನಿಯಮಾನುಸಾರವಾದ ನಡೆ-ನುಡಿಗಳ ಮೂಲಕ ಅನುಭವಕ್ಕೆ ಬರುತ್ತದೆಂದು ಶಂ ಬಾ ವಾದಿಸುತ್ತಾರೆ. (ಸಂ.)

ಕುಳಿತಿರುವ ಅಹಿ' ಈ ದೈವತ![೭] ಈ 'ಅಹಿ' ಇದು ಅಪ್-ಜ ನೀರಿಲ್ಲಿ ಹುಟ್ಟಿದ್ದು : ಎಂದು ಈ ಋಚೆಯಲ್ಲಿ ಸ್ಪಷ್ಟವಾಗಿ ಹೇಳಿದೆ. ಆದಕಾರಣ ತನೂ-ನಪಾತ್, ಅಪಾಂ-ನಪಾತ್, ಅಜ-ಏಕಪಾತ್, ಬುಧ್ನ್ಯ-ಅಹಿ ಇವೆಲ್ಲವು ನೀರಲ್ಲೆ ಜನಿಸಿದ 'ಜನುಷಃ' : ಜಂತು, (ಹಾವು) ಎಂದು ಸ್ಪಷ್ಟವಾಗುತ್ತದೆ. ನೀರು 'ಅ-ಜ'; ಏಕೆಂದರೆ 'ಆಪೋ ವಾ ಇದಂ ಅಗ್ರೇ ಅಸೀತ್', ಎಂದು ವೇದ ಹೇಳುತ್ತದೆ. ಆಪ=ಅಜ; ಈ ತನುವಿನಿಂದಾದ 'ನಪ್ತ್ಯ' ಮತ್ತು ಬುಧ್ನ್ಯದ ಅಹಿ ಒಂದೇ ಅರ್ಥದ ಎರಡು ಪ್ರತಿಮೆಗಳು ಆಗುತ್ತವೆ. 'ಆಪೋ ನಾರಾಃ ಇತಿ ಪ್ರೋಕ್ತಾಃ', ಆಪೋ ವೈ ನರಸೂನವಃ', ಈ ಶ್ಲೋಕವಿರುವ ಮಹಾಭಾರತಕಾರ ವ್ಯಾಸನು, ವಶಿಷ್ಠನಿಂದ ನಾಲ್ಕನೆಯವನು. ವ್ಯಾಸನು 'ನಾರಾಯಣ' ಸಂಪ್ರದಾಯದ ಪುನರುತ್ಥಾಪಕನು. ವಸಿಷ್ಠನ ವರುಣಸೂಕ್ತಗಳಲ್ಲಿ ನಾರಾಯಣೀಯ ಪಂಥದ ದಾಸ್ಯಭಕ್ತಿಯ ಉಗಮವಿರುವುದಾಗಿ, ತಜ್ಞರು ಕಂಡುಹಿಡಿದಿದ್ದಾರೆ. ವರುಣನ ಊರ್ಧ್ವಮೂಲ ವೃಕ್ಷ=ವನಸ್ತೂಪವು ಗೀತೆಯಲ್ಲೂ ಇದೆ!* ವಸಿಷ್ಠನು ನಾರಾಯಣ ಪುತ್ರಿ (ಆಪ-ಪುತ್ರಿ) ಎಂಬ ಊರ್ವಶಿಯ (: ಅಹಿಯ) ಮಗನು ಎಂಬುದು ಸರ್ವಮಾನ್ಯವಾಗಿರುವ ಮಾತು. ವ್ಯಾಸನು ಗಂಗಾ-ಪುತ್ರ. ಆದಕಾರಣ, 'ಅಪಾಂ ನಪ್ತ್ಯ'ವೇ ಎಂಬುದನೂ ಅಲ್ಲಗಳೆಯಲು ಆಗುವುದಿಲ್ಲ. ವ್ಯಾಸನು ನಾರಾಯಣನ ಸ್ವರೂಪನೆಂಬ ಶ್ರದ್ಧೆ ಅರ್ಥಪೂರ್ಣವಿದೆ. ವಸಿಷ್ಠನ ಮೇಲಣ ಪ್ರಾರ್ಥನೆಯಲ್ಲಿ 'ಪೃಶ್ನಿಯ' ಮೂಲ ಸ್ವರೂಪವೂ ಬಯಲಿಗೆ ಬರುತ್ತಿದೆ :

ಶಂ ನೋ ಅಜ ಏಕಪಾತ್ ದೇವೋ ಅಸ್ತು,
ಶಂ ನೋ ಅಹಿರ್ಬುಧ್ನ್ಯಃ; ಶಂ ಸಮುದ್ರಃ!
ಶಂ ನೋ ಅಪಾಂ ನಪಾತ್ ಪೇರುಃ ಅಸ್ತು, ಶಂ. ನಃ ಪೃಶ್ನಿಃ ಭವತು.....।[೮]

ಅಜ : ಏಕಪಾತ್ ಅಹಿರ್ಬುಧ್ನ್ಯ, ಸಮುದ್ರ। ಅಪಾಂ ನಪ್ತ್ಯ ಇವರೊಡನೆ ಇರುವ ಈ 'ಪೃಶ್ನಿ' ಯಾರು? 'ಅಯಂ ಗೌಃ ಪೃಶ್ನಿಃ.....? ಈ ಸೂಕ್ತದ[೯] ಪೃಶ್ನಿಯ ದರ್ಶನವು ಇಲ್ಲಿ ಲಭಿಸುತ್ತದೆ! ಈ ಗೌಃ (ಗಮನಶೀಲ) 'ಪೃಶ್ನಿಯು' ಸಾರ್ಪರಾಜ್ಞಿಯ ಸ್ತೋತ್ರದ ದೇವತೆ.[೧೦] ಈ ಹಿನ್ನೆಲೆಯಲ್ಲಿ ಈ ಸಾರ್ಪರಾಜ್ಞಿ : ಪೃಶ್ನಿ : ಅದಿತಿ; ಮತ್ತು ಮಹಾಭಾರತಾದಿಗಳಲ್ಲಿ ಬರುವ ಹಾವಿನ ಕಥೆಗಳ ತಾಯಿ 'ಕದ್ರು' ಇವರು ಒಂದೇ ಅಲ್ಲದೆ ಬೇರೆ ಅಲ್ಲ! ಋಗ್ವೇದದ ಅದಿತಿ-ಪೃಶ್ನಿ ಈ ಗೂಢ ಸಂಕೇತಗಳ ಸ್ಪಷ್ಟೀಕರಣವು ಮಹಾಭಾರತದ ಕದ್ರುವಿನಲ್ಲಿದೆ.

ಅಹಿಬುಧ್ನ್ಯ ದೈವತವನ್ನು ಮರುತರೊಡನೆ ಸೇರಿಸಿ ಪ್ರಾರ್ಥಿಸಿರುವಲ್ಲಿ ಇನ್ನೂ ಒಂದು 'ಗುಹ್ಯ' ಅರ್ಥವು ಬೆಳಕಿಗೆ ಬರುತ್ತದೆ. ಪೃಶ್ನಿಯು, ಅಪಾಂ-ನಪ್ತ್ಯ, ಅಹಿಬುಧ್ನ್ಯ, ಅಜ : ಏಕಪಾತ್ ಈ ಪ್ರತಿಮೆಗಳ ಪಂಪ್ತಿಯಲ್ಲಿ ಇರುವುದರಿಂದಲೂ, ಸಾರ್ಪರಾಜ್ಞಿ ಸೂಕ್ತದ ದೈವತವು 'ಪೃಶ್ನಿ' ಆಗಿರುವುದರಿಂದಲೂ, 'ಪೃಶ್ನಿಯು' ಸರ್ಪಗಳ ತಾಯಿಯಾಗಿರಬೇಕೆಂಬ ಅನುಮಾನವು ದೃಢಪಡುತ್ತದೆ. ಪೃಶ್ನಿಯು ರುದ್ರಿಯರೆನಿಸುವ ಮರುತರ ತಾಯಿ ಎಂದೇ ಪ್ರಾಮುಖ್ಯವಾಗಿ ಎಲ್ಲೆಲ್ಲೂ ಸ್ತುತಿಸಲ್ಪಟ್ಟಿದ್ದಾಳೆ. ಆದುದರಿಂದ, ಪ್ರಶ್ನಿಯು ಸರ್ಪಗಳ ತಾಯಿ, ಎಂದಾದರೆ ರುದ್ರಿಯರೆನಿಸುವ ಮರುತರೂ ಸರ್ಪಸ್ವರೂಪರೇ ಇರಬೇಕಾಗುತ್ತದೆ! ಅಪಾಂ ನಪ್ತ್ಯ, ಅಹಿಬುಧ್ನ್ಯದ ಸಂದರ್ಭದಿಂದ ಪೃಶ್ನಿ ಹಾಗೂ ಪೃಶ್ನಿಮಾತರಃ ಎನಿಸುವ ರುದ್ರಿಯರೂ ಸರ್ಪಗಳಾಗಿರಬೇಕೆಂದು ಹೊರಡುವ ಈ ಅನುಮಾನದ ವಾಸ್ತವತೆಯನ್ನು ಸಿದ್ಧಪಡಿಸುವ ಒಂದು ಋಚೆ ಋಗ್ವೇದದಲ್ಲಿಯೆ ಉಂಟು :

---

* ಊರ್ಧ್ವಮೂಲಮಧಶ್ಶಾಖಮಶ್ವತ್ಥಂ ಪ್ರಾಹುರವ್ಯಯಮ್ । ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್॥

ಈ ಶ್ಲೋಕದ ಅರ್ಥ ಇಷ್ಟು "ಮೇಲೆ ಬುಡ, ಕೆಳಗೆ ಶಾಖೆ, ಈ ಅಶ್ವತ್ಥವೃಕ್ಷವು ಅವ್ಯಯವಾಗಿರುವುದೆಂದು ಶಾಸ್ತ್ರಗಳು ಹೇಳುತ್ತವೆ. ಅದರ ಎಲೆಗಳು ಛಂದಸ್ಸುಗಳು. ಅದನ್ನು ಯಾವನು ತಿಳಿಯುವನೋ ಅವನು ವೇದವನ್ನು ತಿಳಿದವನು." ಇಲ್ಲಿರುವ ಅಶ್ವ ಎಂಬಲ್ಲಿ ಶ್ವಃ ಎಂದರೆ ನಾಳೆ. ಸಂಸಾರವು ನಾಳೆಯ ವರೆಗೆ ಕೂಡ ನಿಲ್ಲುವುದಿಲ್ಲವಾದುದರಿಂದ ಅಶ್ವತ್ಥವೆಂದು ಹೇಳಿದೆ. ಸಂಸಾರವನ್ನು ಅಶ್ವತ್ಥವೃಕ್ಷಕ್ಕೆ ಹೋಲಿಸದೆ. ಶಂಕರರರು ತಮ್ಮ ಭಾಷ್ಯದಲ್ಲಿ "ನಶ್ವೋಽಪಿ ಸ್ಥಾತಾ ಇತ್ಯಶ್ವತ್ಥಃ ತಂ ಕ್ಷಣಪ್ರಧ್ವಂಸಿನಮಶ್ವತ್ಥಮ್" ಎಂದು ಹೇಳಿದ್ದಾರೆ.(ಸಂ)

'ಅತ್ರಿ' ಕುಲದ್ದೆಂಬ ಮಂಡಲದಲ್ಲಿ ಬಂದಿರುವ ಈ ಸ್ತೋತ್ರ ನೋಡಿ : 'ದುರಾರಾಧ್ಯರಾದ ಮರುತರನ್ನು ಮೆಚ್ಚಿಸಲು ಯಾವ ಬಗೆಯಿಂದ ಸೇವೆ ಸಲ್ಲಿಸಲಿ? ಪ್ರಾರ್ಥಿಸಲಿ? ಇದೇ ಮೇರೆಗೆ, ಅಹಿರ್ಬುಧ್ನ್ಯನು, ನಮ್ಮನ್ನು ಹಿಂಸಕರಿಗೆ ಒಪ್ಪಿಸದಿರಲಿ; ಅವನು ನಮ್ಮ ಶತ್ರುಗಳನ್ನು ಸಂಹರಿಸುವಂತಹನಾಗಲಿ'* ಈ ವರ್ಣನೆಯಿಂದ ಬೆಳಕಿಗೆ ಬರುವ ಮೌಲಿಕ ಸಂಗತಿ : ರುದ್ರಪತ್ನಿ ಎನಿಸಿದ ಪೃಶ್ನಿ ಸಾರ್ಪರಾಜ್ಞಿಯಾಗಿದ್ದಾಳೆ. ರುದ್ರಿಯರು ಹಾಗೂ 'ಪೃಶ್ನಿ ಮಾತರಃ' ಎಂದು ವರ್ಣಿತರಾದ ಮರುತರು ಸರ್ಪರೂಪಗಳೇ ಆಗಿರುವುದಾಗಿ ಅಹಿಬುಧ್ನ್ಯ ಸಂಕೇತದ ಸಾಹಚರ್ಯದಿಂದ ದೃಢಪಡುತ್ತಿದೆ. ವೇದಕಾಲದ ತರುವಾಯ ಅಹಿಬುಧ್ನ್ಯ, ಸಂಕೇತವು ರುದ್ರ-ಶಿವನ ಪರ್ಯಾಯನಾಮಗಳಲ್ಲಿ ಒಂದಾದುದು ನಿಷ್ಕಾರಣವಲ್ಲ, ಎಂಬುದು ಮೇಲಣ ಸಂ-ಗತಿಗಳಿಂದ ಸಿದ್ಧವಾಗುತ್ತಿಲ್ಲವೆ? ಈ ಮೊದಲು ನಾರ : ಆಪ ಈ ಗುಹ್ಯಾರ್ಥದ ಬಲದಿಂದಲೂ ನಾಗಶಯನ ಪ್ರತಿಮೆಗಳ ಆಧಾರದಿಂದಲೂ ವಿಷ್ಣು-ನಾರಾಯಣ, (ವಸು:) ವಾಸುದೇವ-ಕೃಷ್ಣ ಸಂಪ್ರದಾಯವು ವಾಸುಕಿ : ನಾಗರ ಪರಂಪರೆಯೆಂಬುದು ಬೆಳಕಿಗೆ ಬಂದಿತ್ತು. ಶೇಷ : ಬಲದೇವ, ಕೃಷ್ಣನ ಅಣ್ಣ! ಶೇಷ : ಲಕ್ಷ್ಮಣ, ರಾಮನ ತಮ್ಮ! ಎಂಬೀ ಸಂಕೇತಗಳಿಂದಲೂ ಶ್ರೀವಿಷ್ಣುವಿನ ಅವತಾರಗಳೆಂಬುವು ನಾಗರ ವಿವಿಧ ರೂಪಗಳೇ ಆಗಿರುವುದು ದೃಢಪಟ್ಟಿತ್ತು. ಆದರೆ, ನಾಗಭೂಷಣ : ರುದ್ರನ ನಾಗಸ್ವರೂಪವು, ಅದಿತಿಗಿಂತಲೂ ಪೃಶ್ನಿ ಈ ಸಂಕೇತಾತ್ಮಕ ಪ್ರತಿಮೆಯ ಮೂಲಕ ಇಲ್ಲಿ, ಹೆಚ್ಚು ನಿಃಸಂದಿಗ್ಧವಾಗಿ ಅರಿಕೆಗೆ ಬಂದಿತು. ಪ್ರತಿಮಾ ನಿರ್ಮಾಣ-ಶಾಸ್ತ್ರದಲ್ಲಿ ರುದ್ರನಿಗೆ ಹಾವಿನ ಕುಂಡಲ, ಹಾವಿನ ಜನಿವಾರ ಇರಬೇಕೆಂಬ ಸೂಚನೆಗಳು ಸಾರ್ಥವಿರುವುದಾಗಿ ಸಿದ್ಧವಾಗುತ್ತದೆ.

ಈ ಹಿನ್ನೆಲೆಯಲ್ಲಿ ರುದ್ರೀಯ : ಮರುತರ ಬಗೆಗಿನ ಒಂದು ಜನ್ಮಕಥೆಯು; ಪಡೆಯುತ್ತಿರುವ ಸ್ಪಷ್ಟೀಕರಣವು, ಇನ್ನೊಂದು ಸಮಸ್ಯೆಯನ್ನು ಪರಿಹರಿಸುತ್ತಿದೆ. ಈ ಋಗ್ವೇದದ ಸಂಕಲನಕಾರನು ಶಾಂಕರ ಛಾಪಿನ ಅದ್ವೈತ ಪಂಥೀಯ ಪುರಾತನರಲ್ಲಿ ಒಬ್ಬನೆಂದು ಕಾಣುತ್ತದೆ. ಶಂಕರಾಚಾರ್ಯರು ಬೌದ್ಧಿಕ ಕಸರತ್ತು ಮಾಡಿ ಪ್ರಪಂಚದ ಮೇಧಾವಿಗಳನ್ನು ಬೆರಗುಗೊಳಿಸಿರುವ ಸುಂದರ ತರ್ಕಪದ್ಧತಿಯಿಂದ 'ನ ಮೇಧಯಾ ನ ಬಹುನಾ ಶ್ರುತೇನ!' ಎಂಬ ಶ್ರದ್ಧೆಯ ಮೌನಿ<ಮುನಿ ಸಂಪ್ರದಾಯದ ಜಗನ್ಮಿಥ್ಯಾವಾದವನ್ನು ಅಮೋಘ ರೀತಿಯಲ್ಲಿ ಪ್ರತಿಪಾದಿಸಿದ್ದುಂಟು. ಆದರೆ, ಋಗ್ವೇದಸ್ಥ 'ಅದಿತಿ' ಭೂಮಿಕೆಯ ಪ್ರತಿಮೆಗಳಿಂದಲೂ ವಿಶ್ವವೆಲ್ಲವೂ ಮಾಯೆ; 'ತತ್ : ಏಕಂ ಇದುವೆ 'ಸತ್' ಎಂಬುದೆ ಎಲ್ಲೆಲ್ಲೂ ಪ್ರತೀತಿಗೆ ಬರುತ್ತಿದೆ. ಮರುತಜನ್ಮದ ಪವಾಡ ಕಥೆಯೂ ಈ ಒಂದು ಮಾದರಿಯ ಪ್ರತಿಮಾ : ಸಂಕೇತವೆ ಆಗಿದೆ!

"ಇದಂ ಪಿತ್ರೇ ಮರುತಾಂ ಉಚ್ಯತೇ ವಚಃ...." ಈ ಋಚೆಯ ಮೇಲಣ ಭಾಷ್ಯದಲ್ಲಿ ಮರುತರ ಜನ್ಮಕಥೆಯನ್ನು ನಿವೇದಿಸಲು ಪ್ರಾಚೀನರು ಸೃಷ್ಟಿಸಿದ ಒಂದು ಪವಾಡ ಕಥೆಯನ್ನು ಸಾಯಣರು ನಮೂದಿಸಿದ್ದಾರೆ.[೧೧] ಹಿಂದೊಮ್ಮೆ ಇಂದ್ರನು ಅಸುರರನ್ನು ಗೆದ್ದನು. ಆಗ ಅಸುರರ ತಾಯಿ 'ದಿತಿ'ಯು, ಇಂದ್ರಹನನ ಸಮರ್ಥನಾದ ಪುತ್ರಾರ್ಥಿಯಾಗಿ ಪತಿಯೊಡನೆ ತಪಸ್ಸುಮಾಡಿ ಬಸುರಿಯಾದಳು.ಈ ಸುದ್ದಿ ಇಂದ್ರನಿಗೆ ಬಂತು. ಆಗ ವಜ್ರಹಸ್ತ ಇಂದ್ರನು ಸೂಕ್ಷ್ಮರೂಪತಾಳಿ ದಿತಿಯ ಉದರ ಪ್ರವೇಶಮಾಡಿ ಆ ಗರ್ಭದಲ್ಲಿ ೭X೭ ತುಂಡುಗಳನ್ನು ಮಾಡಿದನು. ಆ ತುಣುಕುಗಳು ದಿತಿಯ ಬಸುರಿನಿಂದ ಹೊರಬಂದು ಆಕ್ರಂದನ ನಡಸಿದುವು. ಆಗ ಲೀಲಾವಿಹಾರಕ್ಕಾಗಿ ಪರಮೇಶ್ವರನೊಡನೆ ಹೊರಟ ಪಾರ್ವತಿಗೆ ಆ ಕಂದಮ್ಮಗಳ ಅಳು ಕೇಳಬಂತು. ಇಬ್ಬರೂ ಅಲ್ಲಿ ಹೋದರು. ತಾಯಕರುಳಿನ ಪಾರ್ವತೀದೇವಿ, ಪತಿಗೆ ಬಿನ್ನವಿಸಿದಳು : 'ಈ ಪ್ರತಿಯೊಂದು ಎಲ್ಲ ತುಣುಕನ್ನು ಒಂದೊಂದು ಶಿಶುವನ್ನಾಗಿಸು; ನನಗೆ ಇವರನ್ನು ಸಲುಹಬೇಕೆಂಬ ಅಕ್ಕರೆಯುಂಟಾಗಿದೆ.' ಮಡದಿಯ ಈ ಬಯಕೆಯನ್ನು ಪೂರಯಿಸಲು ಪರಮೇಶ್ವರನು. 'ತಾನ್ ಸಮಾನ ರೂಪಾನ್, ಸಮಾನ ವಯಸಃ ಸಮಾನಾಲಂಕಾರಾನ್ ಪುತ್ರಾನ್ ಕೃತ್ವಾ' ಗೌರಿಗೆ ಕೊಟ್ಟನು.

---

* ಕಥಾ ದಾಶೇಮ ನಮಸಾ ಸುದಾನೂ ನೇವಯಾ ಮರತೋ ಅಚ್ಛೋಕ್ತೌ ಪ್ರಶ್ರವಸೋ ಮರುತೋ ಅಚ್ಛೋಕ್ತೌ ಮಾ ನೋಽಹಿರ್ಬುಧ್ನೋ ರಿಷೇ ಧಾ ದಸ್ಮಾಕಂ ಭೂಪಮಾತಿವಾನಿಃ ॥ ಋ. ಸಂಹಿತೆ ೪೧-೧೬ ಎಂದು ಹೇಳಿರುವ ಅಂಶ ಗಮನಾರ್ಹವಾಗಿದೆ. (ಸಂ)

'ದಿತಿ'ಯನ್ನು ಮರುತರ ತಾಯಿಯನ್ನಾಗಿಸಿರುವ ಈ ಪವಾಡಕಥೆಯ ಮೂಲಕ, ಋಗ್ವೇದ ಸಂಹಿತೆಯ ತಳಪಾಯದಲ್ಲಿ ಅಡಗಿರುವ ಒಂದು ಗುಹ್ಯಾರ್ಥವು ಬಯಲಿಗೆ ಬರುತ್ತಿದೆ! ಋಗ್ವೇದ ಸೂಕ್ತಗಳಲ್ಲಿ, ಮರುತರನ್ನು 'ದಿತಿ'ಯ ಮಕ್ಕಳು, ಎಂದು ಬಾಯ್ಬಿಟ್ಟು ಹೇಳಿರುವ ಒಂದೂ ಉಲ್ಲೇಖವಿಲ್ಲ! ಆದರೆ, ಇದಕ್ಕೆ ಪ್ರತಿಯಾಗಿ 'ಮಾತಾ ರುದ್ರಾಣಾಂ' ಎಂದು ಅದಿತಿಯ ಸ್ತೋತ್ರದ ಒಂದು ಋಚೆ ಇದೆ![೧೨] ಆದರೂ ಋಗ್ವೇದದಲ್ಲಿ 'ಮರುತರ ತಾಯಿ' ಎಂದು 'ಪೃಶ್ನಿ' ಈ ಸಂಕೇತವೆ ಪ್ರಾಮುಖ್ಯದಿಂದ ಹಲವೆಡೆಗೆ ಬರುತ್ತದೆ! ಇದರಿಂದ ಅದಿತಿ=ಪೃಶ್ನಿ ಎಂಬ ಅ-ದ್ವೈತ ರೂಪವು ಧ್ವನಿತವಾಗುತ್ತಿದೆ. ಅದಿತಿಯನ್ನು 'ಗೌ' ಎಂದಿರುವಂತೆ, ಪೃಶ್ನಿಯನ್ನೂ 'ಗೌ' ಸಂಕೇತದಿಂದಲೇ ನಿರ್ದೇಶಿಸಿದ್ದುಂಟು. 'ಗೌ' ಎಂಬುದಕ್ಕೆ ಆವು-ಗೋವು ಎಂಬ ಸುಪ್ರಸಿದ್ಧವಾದ ಅರ್ಥವುಂಟು. ರುದ್ರನನ್ನು 'ವೃಷಭ' ಎಂದು ಸೂಚಿಸುವುದರಿಂದ, ರುದ್ರನಿಂದ ಮರುತರನ್ನು ಪಡೆದ ಅದಿತಿ, ಪೃಶ್ನಿಯರೂ 'ಗೌ' ಎಂಬಲ್ಲಿ ಇವೆರಡೂ ಸಂಕೇತಗಳ ಅಂತರಾರ್ಥವು ಸುಸಂಗತವಿರುವುದು ಅರಿಕೆಗೆ ಬರುತ್ತಿದೆ.

ಆದರೆ, 'ಗೌ' ಎಂಬ ಸಂಕೇತಕ್ಕೆ ಆವು-ಹಸು ಎಂಬ ಅರ್ಥವಿರುವಂತೆ, 'ಗೌ' ಎಂಬುದಕ್ಕೆ 'ಗಮನ ಶೀಲ (ಪ್ರಾಣಿ)' ಎಂಬ ಅರ್ಥವೂ ಋಗ್ವೇದದಲ್ಲಿಯೆ ಅಭಿಪ್ರೇತವಿದೆ![೧೩] 'ಅಯಂ ಗೌಃ ಪೃಶ್ನಿಃ' ಎಂಬಲ್ಲಿ 'ಗಮನ ಶೀಲ' ಈ 'ಪೃಶ್ನಿ' ಯಾರು? ಎಂಬ ಪ್ರಶ್ನೆಯುಂಟಾಗುತ್ತದೆ. ಈ ಋಚೆಯಲ್ಲಿ ಪೃಶ್ನಿಗೆ 'ಸಾರ್ಪರಾಜ್ಞೀ' ಅಥವಾ 'ಸೂರ್ಯ' ದೇವತಾ ಸೂಚಕ ಅರ್ಥವಿರುವುದಾಗಿ ಬೃಹದ್ದೇವತೆಯಿಂದ ತಿಳಿಯುತ್ತದೆ; ಭಾಷ್ಯಕಾರರೂ ಈ ಅರ್ಥವನ್ನೆ ಎತ್ತಿ ಹೇಳಿದ್ದಾರೆ.

'ಗೌ' ಸಂಕೇತದಲ್ಲಿ ಇಬ್ಬಗೆಯ ಅರ್ಥವು ಅಭಿಪ್ರೇತವಿರುವುದು ಅಂತಸ್ಥ ಪ್ರತಿಮಾ : ಸಂಕೇತಗಳ ಮೂಲಕವಾಗಿ ನಿಶ್ಚಿತವಾಗುತ್ತದೆ. ಪೃಶ್ನಿಗೆ 'ಸಾರ್ಪರಾಜ್ಞಿ' ಅಥವಾ ಸೂರ್ಯ ಎಂಬ ಅರ್ಥವಿರುವುದಾಗಿ ಇಲ್ಲಿ ಕಲ್ಪಿಸಲಾಗಿದೆ.[೧೪] ಸರ್ಪರೂಪ ಪೃಶ್ನಿಯು ಗಮನಶೀಲಳು : ಸರ್ಪ್‌ತಿ ಎಂದರೆ ಹೊಟ್ಟೆಹೊಸೆಯುತ್ತ ಸರಿವವಳು-ಹರಿವವಳು; ಸೂರ್ಯನು ಆಕಾಶದಲ್ಲಿ ಸರ್ಪರೂಪದಲ್ಲೆ ಹೊರಟಿದ್ದಾನೆ. ಆದಕಾರಣ, ಸೂರ್ಯ=ಸರ್ಪ! ಸೂರ್ಯನನ್ನು 'ಸರ್ಪ' ಸ್ವರೂಪದಲ್ಲಿ ಕಾಣುವ-ಸೂರ್ಯನ ಮೇಲೆ ಸರ್ಪತ್ವದ ಆರೋಪ ಮಾಡುವ ಈ ವೈಚಾರಿಕ ಮನೋಭೂಮಿ ಸೌರ ಸಂಪ್ರದಾಯದ್ದೆ, ಎಂದು ಹೇಳುವುದು ಸಾಹಸದ್ದು ಆಗದಿರದು. ವಿಶ್ವಸ್ಥಮೂಲ ಶಕ್ತಿ ಸರ್ಪರೂಪದ್ದು ಎಂಬ ಶ್ರದ್ಧೆಯು, ಸೌರ ಸಂಪ್ರದಾಯದ್ದೇ ಎಂದಲ್ಲಿ, 'ಸವಿತೃ' ದೇವನಿಂದ ವಿಶ್ವರೂಪವು ಬೆಳಕಿನಲ್ಲಿ ಬರುತ್ತದೆ, ಎಂಬ ಸ್ತೋತ್ರವು ಅರ್ಥವಿಹೀನವಾಗುತ್ತದೆ. ಸೌರ ಸಂಪ್ರದಾಯವು, ವಿಶ್ವೋತ್ಪತ್ತಿಯ ವಿಚಾರವನ್ನು, ಪ್ರಜಾನಿರ್ಮಾಣದ ಭೂಮಿಕೆಯ ಮೇಲೆ ಉತ್ತರಿಸುವ ಗೋಜಿಗೆ ಹೋಗಿಲ್ಲ. ಮಾನವನಿಗೆ, ವಿಶ್ವವು ನಾನಾರೂಪ ಆಕೃತಿಗಳಲ್ಲಿ ಕಾಣಲು ಕಾರಣನು, 'ಸವಿತೃವು' (ಭೌತಸೂರ್ಯನಲ್ಲ), ಎಂದು ಋಗ್ವೇದದ ಮೂಲ ಸೌರ ಭೂಮಿಕೆಯು ಇದೆ. ಸವಿತೃ ಪ್ರಕಾಶದ ಮೂಲಕ ವಿಶ್ವವು (ಕತ್ತಲೆಯೊಳಗಿಂದ) ಹೊರಗೆ ಬರುತ್ತದೆ. ಈ ಪಂಥಕ್ಕೆ, ತಾವು ವಿಶ್ವವನ್ನು ಪಡೆವಲ್ಲಿ, ಸವಿತೃವೇ ಕಾರಣ ಇರುವುದಾಗಿ ಕಂಡಿದೆ. ಹೀಗೆ ವಿಶ್ವಜನಕತ್ವ, ಎಂದರೆ ಈ ತಾತ್ವಿಕ ಸ್ವರೂಪದ 'ಪ್ರಜಾ-ಪತಿತ್ವ'ವು ಸವಿತೃವಿಗೆ ಸಲ್ಲುತ್ತದೆ, ಎಂದು ಋಗ್ವೇದದಿಂದಲೆ ಕಂಡುಬರುತ್ತಿದೆ. ಆದರೆ, ವಿಶ್ವಸ್ಥ ಆಪ : ರಸ ಸ್ವರೂಪೀ ಸರ್ಪಶಕ್ತಿಯ ಮೂಲಕ ಈ ಪ್ರಜೋತ್ಪತ್ತಿಯಾಗಿದೆ- ಸೃಷ್ಟಿಯಾಗಿದೆ. ಈ ವಿಶ್ವವೆಲ್ಲವೂ 'ಅಪಾಂನಪ್ತೃ'ವಿನ ಸಂತಾನ. ಆದಕಾರಣ, ಈ ಸರ್ಪ : ಆಪ : ರಸ ಸ್ವರೂಪೀ ದೈವತವೇ ನಿಜವಾದ 'ಪ್ರಜಾ-ಪತಿ' ಎಂಬ ಇನ್ನೊಂದು ಭೂಮಿಕೆಯು ಋಗ್ವೇದದಲ್ಲಿಯೆ ಇದೆ. ಇವೆರಡೂ ಭೂಮಿಕೆಗಳ ಸ್ಪರ್ಧೆಯನ್ನು ಗೃಹೀತ ಹಿಡಿಯದೆ, ಸೌರ-ಸವಿತೃ ಸಂಪ್ರದಾಯವು ಹಿಂದೆ ಬೀಳುವ-'ಧಿಯೋ ಯೋ ನಃ ಪ್ರಚೋದಯಾತ್' ಈ ಭೂಮಿಕೆಯು ಅಪ್ರತಿಷ್ಠಿತವಾಗುವ ಹಾಗೂ ಔಪನಿಷದಿಕ 'ನ ಮೇಧಯಾ' ಪಂಥವೇ ಲೋಕಪ್ರಿಯವಾಗುವ ಈ ಸ್ಥಿತ್ಯಂತರದ ಅರ್ಥವೆ ಆಗಲಾರದು.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X. ೧೧೦.೨

೨. ***ಅದೇ*** X. : ೮೧; ೮೨; ೧೨೧

೩. ***ಅದೇ*** X. ೬೬.೧೧

೪. ಟಿ. ಗೋಪೀನಾಥರಾಯರ ಪ್ರತಿಮಾಶಾಸ್ತ್ರದಲ್ಲಿ ಈ ಚಿತ್ರವೂ ಉಂಟು

೫. ***ಶ್ವೇತಾಶ್ವತರೋಪನಿಷತ್ತು*** ೪. ೫

೬. ***ಋಗ್ವೇದ ಸಂಹಿತೆ*** I. ೧೮೬.೫; II. ೩೧.೬; VII. ೩೫.೧೧

೭. ***ಅದೇ*** VII. ೩೪.೧೬

೮. ***ಅದೇ*** VII ೩೫.೧೩

೯. ***ಅದೇ*** X. ೧೮೯.೧

೧೦. ***ಅದೇ*** X. ೧೮೯.೧

೧೧. ***ಅದೇ*** I ೧೧೪.೬

೧೨. ***ಅದೇ*** VIII. ೧೦೧.೧೫

೧೩. ***ಅದೇ*** X. ೧೮೯.೧

೧೪. ***ಅದೇ*** X. ೧೮೯. ೧

ಧಾರ್ಮಿಕ ತತ್-ತ್ವಜ್ಞಾನದ ಉಗಮವು ದೈವತದ ಪವಾಡ ಕಥೆಗಳಲ್ಲಿ

ತತ್ : ಏಕಂ : ಸತ್‌ದಿಂದ ಈ ಪ್ರಪಂಚವು ಹುಟ್ಟಿದೆ, ಎಂಬ ತತ್ತ್ವಜ್ಞಾನದ ಹಿನ್ನೆಲೆಯಲ್ಲಿ ಈ ಬಗೆಯ ಹಲವು ಪವಾಡ ಕಥೆಗಳಿವೆ. ಪ್ರಸ್ತುತ ಮಾದರಿಗಾಗಿ-ಮರುತರ ಮೂಲ ಸ್ವರೂಪ, ಆಕೃತಿ : ಅರ್ಥ ಸಮೀಕ್ಷಿಸಬಹುದು. ಅದಿತಿ : ಪೃಶ್ನಿಯರ ಮೂಲಕವಾಗಿ ಈ ಅರ್ಥಕ್ಕೆ ಮೌಲಿಕ ಸಹಾಯವು ದೊರೆಯುತ್ತಿದೆ. ಅದಿತಿ : ಪೃಶ್ನಿ ಈ ಪ್ರತಿಮಾ : ಸಂಕೇತವು 'ಗೌಃ' ಗಮನಶೀಲ : ಸರ್ಪ ಸ್ವರೂಪಿಯಾಗಿದೆ, ಎಂಬುದು ಈ ಮೊದಲಿನ ವಿವರಣೆಯಂತೆ ಸರಿಯಿದ್ದುದಾದರೆ, ಈ ಸಾರ್ಪರಾಜ್ಞಿಯ ಪುತ್ರರಾದ 'ಮರುತರು' ಸರ್ಪ ಸ್ವರೂಪರೇ ಆಗುತ್ತಾರೆ; ನಿಜ. ಆದರೆ, 'ಗೌ' ಈ ಸಂಕೇತದಂತೆ ಋಗ್ವೇದದಲ್ಲಿ, ಪ್ರಚ್ಛನ್ನ ಸರ್ಪ-ಸ್ವರೂಪದ ಇನ್ನೂ ಕೆಲವು ಬೇರೆ ಪ್ರತಿಮಾ : ಸಂಕೇತಗಳು ಇದ್ದಲ್ಲಿ ಈ ವಿಚಾರಕ್ಕೆ ಪುಷ್ಟಿ ದೊರೆಯಲಿದೆ. ಇಲ್ಲವಾದರೆ ಇದನ್ನು ವಾಸ್ತವ : ಸತ್ಯ ಎಂದು ಒಪ್ಪಲಿಕ್ಕೆ ಆಗುವುದಿಲ್ಲ. ಅದಕ್ಕಾಗಿ ಈ ಕೆಲವು ಪವಾಡ ಕಥಾಭಾಗಗಳನ್ನು ವಿಮರ್ಶಿಸಿ ಅರಿಯುವುದು ಅವಶ್ಯವಾಗುತ್ತದೆ.

ವೇದದ ನದೀ ವರ್ಣನೆಗಳಲ್ಲಿ 'ಸಪ್ತ', ಸಿಂಧು 'ಸಪ್ತ-ಸ್ವಸಾ' ಎಂಬ ಪ್ರತಿಮಾ : ಸಂಕೇತವು ಹಲವು ಬಾರಿ ಬರುತ್ತದೆ. 'ಸ್ವಸಾ' ಎಂಬಲ್ಲಿ ಸ್ವ-ಸೃ : ತನ್ನ ತಾನೆ ಸರಿಯುತ್ತಿರುವ ಹರಿದಾಡುತ್ತಿರುವ ಎಂಬ ಅರ್ಥವಿರುವುದಾಗಿ ಭಾಷ್ಯಕಾರರು ಹೇಳಿದ್ದಾರೆ. ನದಿಗಳನ್ನು 'ಸ್ವಸಾ' ಎನ್ನುವಲ್ಲಿ ಅವು ತನ್ನ ತಾನೆ ಪ್ರವಹಿಸುತ್ತಿವೆ, ಎಂಬ ಅರ್ಥವು ಅಭಿಪ್ರೇತವಿರುತ್ತದೆ. ನದಿಯನ್ನು ಹಾವಿಗೆ ಹೋಲಿಸುವುದರಲ್ಲಿ ಅಸಹಜತೆ ವಿಶೇಷವಿಲ್ಲ. ಸುಬ್ರಹ್ಮಣ್ಯ ; ಸ್ಕಂದನು ನದೀಪುತ್ರನೆಂಬ ಕಥೆಯಿದೆ. ಸು-ಬ್ರಹ್ಮಣ್ಯ ದೇವರು ಸರ್ಪರೂಪನೆಂದು ಬರೆಯಲಾಗುತ್ತದೆ. 'ಸ್ವಸಾ' ಈ ಸಂಕೇತದೊಡನೆ ಜೋಡಿಸಲಾಗುವ ಸಪ್ತ' ಎಂಬುದಕ್ಕೂ 'ಸರಣಶೀಲ' ಎಂದು ಭಾಷ್ಯಕಾರರು ಅರ್ಥ ಹೇಳುತ್ತಾರೆ. 'ಸ್ವಸಾ' ಎಂಬುದಕ್ಕೆ ಸಹೋದರಿ ಎಂಬ ಅರ್ಥವು ಪ್ರಸಿದ್ಧವಿದೆ. ಆದಕಾರಣ, 'ಸ್ವಸಾ' ಎಂಬುದರೊಳಗಿನ ಸರ್ಪಸೂಚಕ ಧ್ವನ್ಯರ್ಥವು ಅಸ್ಪಷ್ಟವಾಗುವ ಶಕ್ಯತೆಯಿಂದಾಗಿ ಸ್ವಸೃ ಪದಕ್ಕೆ, 'ಸಪ್ತ' ಎಂಬ ಇನ್ನೂ ಒಂದು ಗಮನಸೂಚಕ ಸಂಕೇತವನ್ನು ಜೋಡಿಸುವ ಆವಶ್ಯಕತೆ ಕಂಡಿರಬೇಕು.

'ಸಪ್ತ' ಎಂಬುದನ್ನು ಸೂರ್ಯನ ಕಿರಣಗಳನ್ನು ಸಂದರ್ಭದಲ್ಲಿ ಆಗಾಗ ಉಪಯೋಗಿಸಲಾಗುತ್ತದೆ. ಸೂರ್ಯನ ಕಿರಣಗಳನ್ನು 'ಸಪ್ತ' ಎಂದು ಹೇಳಿರುವುದರ ಕಾರಣವೇನು? ಇದರ ಔಚಿತ್ಯವೇನು ಎಂಬ ಪ್ರಶ್ನೆಗೆ ಆಧುನಿಕ ಶಾಸ್ತ್ರೀಯ ದೃಷ್ಟಿಯಿಂದ ದೊರೆಯುತ್ತಿರುವ ಸಮಾಧಾನವೊಂದುಂಟು. ಕಿರಣಗಳ ಪೃಥಕ್ಕರಣದಲ್ಲಿ, ಒಂದೊಂದು

ಕಿರಣವು ಏಳು ಬಣ್ಣದ್ದಾಗಿರುತ್ತದೆ ಎಂದು ಕಂಡಿದ್ದುಂಟು. ಸೂರ್ಯನ ಪ್ರತಿಮೆಯಲ್ಲಿ ಅವನ ತೇರಿಗೆ ಏಳುಕುದುರೆ ತೋರಿಸಬೇಕು, ಎಂಬ ಸಂಕೇತವಿದೆ. ಆದರೆ, ಈ 'ಸಪ್ತ' ಸಂಕೇತಕ್ಕೆ ಏಳು ಎಂಬ ಮೇಲ್ತೋರಿಕೆಯ ಅರ್ಥವೊಂದು ಇದ್ದರೂ, ಋಗ್ವೇದದ ಸೂಕ್ತಗಳಲ್ಲಿ ಬರುವ 'ಸಪ್ತ' ಪ್ರತಿಮೆಯ ಎಲ್ಲೆಗೂ ಸಂಖ್ಯಾಸೂಚಕವಾಗಿಲ್ಲ. 'ಅಗ್ನಿಂ ಸಪ್ತಿಂ' ಎಂಬಲ್ಲಿ 'ಸರ್ಪಣ ಸ್ವಭಾವಃ ಅಗ್ನಿಃ' ಎಂದು ಅರ್ಥ ಹೇಳಲಾಗಿದೆ! ಇಲ್ಲಿ ಅಗ್ನಿಯನ್ನು ಸರ್ಪ ರೂಪದಲ್ಲಿ ಕಂಡುದು ಸ್ಪಷ್ಟವಿದೆ.

'ಸಪ್ತ' ಎಂಬುದಕ್ಕೆ ಧಾರ್ಮಿಕ ಗುಹ್ಯಾರ್ಥವಿರುವುದನ್ನು ಗಮನಕ್ಕೆ ತರುವ ಸಪ್ತ-ಸ್ವಸಾ, ಸಪ್ತ-ಮಾತರಃ, ಸಪ್ತ-ಋಷಯಃ, ಸಪ್ತ-ಹೋತಾರಃ ಎಂಬೀ ಶಬ್ದ-ಪ್ರತಿಮೆಗಳೊಡನೆ ಸಂ-ಬದ್ಧ 'ಸಪ್ತ' ಈ ಸಂಕೇತಕ್ಕೆ ಏಳು ಈ ಸಂಖ್ಯಾವಾಚಕ ಅರ್ಥವು ಇರಬೇಕೆಂದು ಎನಿಸಿದರೂ, ಅಲ್ಲಿ 'ಗಮನಶೀಲ' ಎಂಬ ಧ್ವನ್ಯರ್ಥವೇ ಅಭಿಪ್ರೇತವಿರುತ್ತದೆ. ಬ್ರಾಹ್ಮಣರ ಮದುವೆಯ ಕೊನೆಗೆ ಆಗುವ 'ಸಪ್ತ' ಪದಿಯಲ್ಲಿ ಸಾಂಕೇತಿಕ 'ಏಳು' ಹೆಜ್ಜೆ ನಡೆವ ಕ್ರಿಯೆಯನ್ನು ಸೂಚಿಸಲಾಗುತ್ತದೆ. ಆದರೆ, ಇಲ್ಲಿ 'ಏಳು' ಎಂಬ ಸಂಖ್ಯೆಗೆ ಮಹತ್ವವಿಲ್ಲ. ಎದ್ದು ನಡೆಯ ತೊಡಗುವ-ಗಮನಾರ್ಥಕ ಅರ್ಥವೇ ಅವಶ್ಯವಿದೆ. ಪತಿಪತ್ನಿಯರಾಗಿ ಇನ್ನು 'ಸಪ್ತ' ಪದಿಗೆ ಪ್ರಾರಂಭವಾಯಿತು : ಜೀವನ ಮಾರ್ಗದಲ್ಲಿ ಗಮನಕ್ಕೆ ತೊಡಗುವ ಪ್ರಾರಂಭೋತ್ಸವವೇ ಈ 'ಸಪ್ತ' ಪದಿ. 'ಸಪ್ತ' ಮಾತರಃ ಎಂಬಲ್ಲಿ ತಾಯಂದಿರು ಏಳೇ, ಏಕೆ? ಇಲ್ಲಿ ಸಂಖ್ಯಾವಾಚಕ ಸೂಚನೆಯೇ ಇಲ್ಲ. ಗಮನಶೀಲ ತಾಯಂದಿರು-ನದೀ ಸ್ವರೂಪರು : 'ಆಪೋ ವಾ ಅಸ್ಮಾನ್ ಮಾತರಃ' ಎಂದರೆ ಇವರು 'ನದೀ' ಸ್ವರೂಪರು ಮಾತ್ರ ಅಲ್ಲ; 'ಗಮನಶೀಲ ಆಪ' ಎಂದರೇ ಸರ್‌ಪ. ಆದಿಮಾತೆ ಅದಿತಿಯು ಆಪಸ್ವರೂಪಿ. ಇವಳು ಸಾರ್ಪರಾಜ್ಞಿ ಎಂಬುದನ್ನು ಸ್ಮರಿಸಿಕೊಂಡರೂ 'ಸಪ್ತ' ಆಪ (: ಮಾತೃ) ಈ ಸಂಕೇತ ರಹಸ್ಯವು ಬಯಲಿಗೆ ಬರಲಿದೆ.

ಸೂರ್ಯನು 'ಸಪ್ತ-ರಶ್ಮಿ' ಎಂಬಲ್ಲಿ, ಹಾವಿನಂತೆ ಹರಿದಾಡುವ (:ಸಪ್ತ=ಸರಣಶೀಲ) ಕಿರಣ ಎಂದು ಹೇಳುವ ಉದ್ದೇಶವೆ ಇರುವಲ್ಲಿ ಸಂದೇಹವಿಲ್ಲ. ಇಂದಿನ ವೈಜ್ಞಾನಿಕ ವಿಶ್ಲೇಷಣಾತ್ಮಕ ದೃಷ್ಟಿ, ಸುತ್ತಲೂ ಪವಾಡಗಳನ್ನೆ ಕಾಣುವ ಹಿಂದಿನ ಯುಗದಲ್ಲೂ ಇರಲು ಶಕ್ಯವಿಲ್ಲ, ಆದರೆ, ಸಹ-ಜ ಭಾವದಿಂದ ಆಡಿದ ಮಾತಿನಲ್ಲಿ, ಕೆಲವು ಬಾರಿ, ನಾವು ಎಣಿಸಿದ್ದಿಕ್ಕಿಂತ ಆಳವಾದ ಅರ್ಥವಿರುವುದಾಗಿ ಅನುಭವಕ್ಕೆ ಬರುತ್ತದೆ. 'ಸಪ್ತ' ಸಂಕೇತದ ಸಪ್ತವರ್ಣವಾಚಕ ಅರ್ಥಸೂಚನೆಯು ಇದೇ ಬಗೆಯದು. ಆದರೆ, ಅಂದಿನವರಿಗೂ ಈ ಅರ್ಥ ಸ್ಪಷ್ಟ ಕಂಡಿತ್ತು, ಎಂದು ಬಗೆಯಲಿಕ್ಕೆ ಆಗುವುದಿಲ್ಲ. ಸೂರ್ಯನನ್ನು 'ಸರ್ಪ'ವಾಗಿಸುವ ಹೊಂಚಿನ ಸೂಚನೆ ಇದೆ. ಈ 'ಸಪ್ತ-ರಶ್ಮೀ' ಸಂಕೇತದಲ್ಲಿ! 'ಸಾರ್ಪರಾಜ್ಞೀ ಸೂರ್ಯೋವಾ' ಎಂದು ಇಬ್ಬರಿಗೂ ಅನ್ವಯಿಸುವ 'ಗೌಃ ಪೃಶ್ನಿಃ' ಈ ಸ್ತೋತ್ರದ ದ್ವಂದ್ವಾರ್ಥವೇ ಇದಕ್ಕೆ ಪ್ರಮಾಣ.

'ಸರ್ಪ' ಸಂಕೇತಸ್ಥ 'ಸರಣ-ಶೀಲ' ಸೂಚಕ ಅರ್ಥವನ್ನು ದೃಢಪಡಿಸುವ ಇನ್ನೂ ಒಂದು ಉದಾಹರಣವು 'ಸಪ್ತ'-ಋಷಿಗಳು. ಇವರೂ 'ಸರಣಶೀಲರು' ಎಂದರೆ ಸರ್ಪಸ್ವರೂಪರೇ ಆಗಿದ್ದಾರೆ, ತತ್-ತ್ವತಃ. ಅಥರ್ವ ವೇದದಲ್ಲಿ ಈ ಮಾತನ್ನು ಬಹಿರಂಗ ಪಡಿಸಲಾಗಿದೆ. ಋಗ್ವೇದದಲ್ಲಿ ರುದ್ರನ ಸಂಗಾತಿಯಾಗಿರುವ 'ಅದಿತಿ' ಅಥರ್ವವೇದದಲ್ಲಿ ಸಪ್ತ-ಋಷಿಗಳ ಸಹಚರಿ; ಅದಿತಿ ಹಾಗೂ ರುದ್ರ ಇವರು ತತ್-ತ್ವತಃ ಸರ್ಪಸ್ವರೂಪರು (ಅರ್ಥಾತ್ ಆಪ:ರಸ) ಎಂಬುದನ್ನು ನೆನಪಿಗೆ ತಂದುಕೊಂಡರೆ, ಈ 'ಋಷಿ' ಎಂಬವರು 'ಸಪ್ತರು' ಎಂದರೆ ಸರ್ಪಸ್ವರೂಪರು, ಎಂಬುದರ ಸಷ್ಟೀಕರಣವು ಅನಾವಶ್ಯಕ. ಈ ಸಪ್ತರ್ಷಿಗಳ 'ಸರ್ಪ'ಸ್ವರೂಪವು, ಇನ್ನೂ ಒಂದು ದಿಕ್ಕಿನಿಂದ ಬಯಲಿಗೆ ಬರುತ್ತದೆ. ಮಹಾಭಾರತದ ಶಾಂತಿಪರ್ವದಲ್ಲಿ ನಾರಾಯಣಾಖ್ಯಾನವು ಬರುತ್ತದೆ. 'ಆಪ' ಸ್ವರೂಪೀ ಈ ನಾರಣನು ಸರ್ಪಸ್ವರೂಪನಿರುವ ವಿವರಣೆ ಈ ಮೊದಲು ಬಂದಿದೆ. ಈ ಶ್ರೀಮನ್ನಾರಾಯಣನು ಸಪ್ತಋಷಿಗಳನ್ನೂ 'ಮಮ ಪ್ರಕೃತಯಃ' ತನ್ನ ಸ್ವರೂಪಕ್ಕೆ ಸಂಬಂಧಿಸಿದವರು, ಎಂದು ತಾನೇ ಹೇಳಿದ್ದು ಉಂಟು. ಭಗವದ್ಗೀತೆಯ ಕೃಷ್ಣನಿಂದ ಇದಕ್ಕೆ ಪುಷ್ಟಿ ದೊರೆಯುತ್ತದೆ : 'ಮಹರ್ಷಯಃ ಸಪ್ತ, ಪೂರ್ವೇ' ಮದ್ಭಾವಾಃ ಮಾನಸೋ ಜಾತಾಃ' ಸಪ್ತಋಷಿಗಳು ತನ್ನ ಮಾನಸ ಪುತ್ರರು-ಎಂದು ಶೇಷನ ಅವತಾರವೆನಿಸಿದ ಬಲದೇವನ

ತಮ್ಮನ್ನು ಹೇಳುತ್ತಾನೆ. ಈ 'ಸಪ್ತ' ಋಷಿಗಳು ಋಗ್ವೇದದ 'ವಿಶ್ವಕರ್ಮ'ನಿಗೆ ಸಂಬಂಧಿಸಿದವರು.[೨] ಈ ವಿಶ್ವಕರ್ಮನು 'ಆಪ' ಸ್ವರೂಪಿಯಾಗಿರುವುದರ ಬಗೆಗೆ ಯಾರಿಗೂ ಸಂದೇಹವಿಲ್ಲ. ಆದಕಾರಣ ಆಪ : ರಸದ ನಪ್ಪ ವಿಶ್ವಕರ್ಮನು; ಆಪದ ನಪ್ಪ ಸಪ್ತಋಷಿಗಳೂ ಎನ್ನಲು ಆತಂಕವೇನುಂಟು?

ಆಪ : ಸಲಿಲ>ಸರಿರ-ಶರೀರಸ್ಥ ಆಪ : ಸಲಿಲ, ಆಗುವ ಈ ದೃಶ್ಯವೂ ಋಗ್ವೇದದಲ್ಲಿ ಸೂಚ್ಯವಾಗಿ ಉಂಟು.[೩] ಅದಿತಿ : ಸಾರ್ಪರಾಜ್ಞಿ ದೇಹಸ್ಥ (ದೇಹ=ಕುಂಡ)-ಕುಂಡಲಿನೀ ಶಕ್ತಿಯಾಗುತ್ತಾಳೆ. ಸರ್ಪಸ್ವರೂಪದಲ್ಲಿ ಅದಿತಿಯು ಪ್ರತಿದೇಹದಲ್ಲೂ ಇದ್ದಾಳೆ : ಘಟ (ದೇಹ)-ಸರ್ಪವಾಗಿ ಮಾನವರನ್ನು ಹರಿದಾಡಿಸುತ್ತಿದ್ದಾಳೆ. ಈ ಸರ್ಪವು ಅಧೋಮುಖವಿದ್ದು ಅದನ್ನು ಊರ್ಧ್ವಮುಖವಾಗಿಸುವುದು ಯೋಗಶಾಸ್ತ್ರದ ಒಂದು ಗುರಿ. ಊರ್ಧ್ವ-ಉತ್ಥಿತಲಿಂಗದ ರುದ್ರ-ಶಿವನ ಪ್ರತಿಮೆಗಳಿವೆ; ಪುರಾತನ ನಾಣ್ಯಗಳ ಮೇಲೆ ಸಹ ಈ ಚಿತ್ರವಿದ್ದುದನ್ನು ಶ್ರೀ ಜತೀಂದ್ರನಾಥ ಬ್ಯಾನರ್ಜಿ ಹೇಳುತ್ತಾರೆ.[೪]

ಅದಿತಿಯು ದೇಹಸ್ಥ ಶಕ್ತಿಯಾದ ಬಳಿಕ, ಸಪ್ತ ಋಷಿಗಳೂ ಈ ದೇಹದಲ್ಲಿ ವಾಸಮಾಡಲು ಬಂದಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ. 'ಪ್ರಾಣಾಃ ವಾ ಋಷಯಃ'.[೫] 'ಸಪ್ತ ಪ್ರಾಣಾಃ' ಎಂದು ಹೇಳಿರುವಲ್ಲಿ[೬] ಸರ್ಪರೂಪ= ಚಲಿಸುವ ಎಂದೇ 'ಸಪ್ತ' ಸಂಕೇತಕ್ಕೆ ಅರ್ಥವೇ ಹೊರತು, ಸಂಖ್ಯಾವಾಚಕ ಏಳು ಈ ಅರ್ಥವು ಇಲ್ಲ. ಪ್ರಾಣಗಳ ಸಂಖ್ಯೆ 'ಪಂಚ' ಎಂದು ಇಂದಿಗೂ ಬಗೆಯಲಾಗಿದೆ. ಪ್ರಾಣರೂಪ 'ಸಪ್ತ' ಋಷಿಗಳು ದೇಹದಲ್ಲಿ ಇದ್ದಾರೆ, ಎಂಬ ವಿವರಣೆ ಬೃಹದಾರಣ್ಯಕದಲ್ಲಿದೆ.

ಸಾರ್ಪರಾಜ್ಞಿ ಅದಿತಿ : ಪೃಶ್ನಿ ಮೂಲಕ ಯಾರ ಸರ್ಪತ್ವವು ಬಯಲಿಗೆ ಬಂದಿದೆಯೋ, ಆ ಮರುತರು ಸರ್ಪರೂಪರೆಂಬುದನ್ನು 'ಸಪ್ತ' ಈ ಸಂಕೇತದ ಮೂಲಕವಾಗಿಯೂ ಋಗ್ವೇದದಲ್ಲಿ ಧ್ವನಿತಪಡಿಸಲಾಗಿದೆ. ಮರುತರು 'ಸಪ್ತ' 'ಸಪ್ತ' ಗಣವಾಗಿ ಅಲೆಯುತ್ತಾರೆಂದು ಹೇಳಲಾಗಿದೆ. 'ತ್ರಿ-ಸಪ್ತಭಃ ಸತ್-ತ್ವ ಭಿಃ'.[೭] ಇಲ್ಲಿ ಏಳರ ಮೂರು ಗಣವೆಂಬ ಅರ್ಥಸೂಚನೆಯಿದೆ. ಒಂದು ಗರ್ಭದಲ್ಲಿ ಮೊದಲು 'ಸಪ್ತ'ತುಂಡು, ಬಳಿಕ ಅದರಲ್ಲಿ ಪ್ರತಿಯೊಂದರ ಏಳೇಳು ತುಂಡುಮಾಡಿ ಇಂದ್ರನು ಕತ್ತರಿಸಿದ ಕಥೆಯಿದೆ. ೭x೭ ಈ ಸಂಖ್ಯೆಯಲ್ಲದೆ, 'ತ್ರಿಷಷ್ಟಿ' ಮರುತ[೮] ಉಲ್ಲೇಖವೂ ಋಗ್ವೇದದಲ್ಲಿದೆ. ಇಲ್ಲಿ ಪ್ರತಿಯೊಂದು ಕಡೆಗೆ ಇರುವ 'ಸಪ್ತ' ಸಂಕೇತವು ಸಂಖ್ಯಾವಾಚಕವಾಗಿರದೆ 'ಸತ್-ವ' : ಸರ್ಪ ಸೂಚಕವಾಗಿದೆ. ಸಂಸ್ಕೃತದಲ್ಲಿ ಸತ್-ತ್ವನ್ ಎಂದರೆ ಜಂತು; 'ಸರೀಸೃಪ'ವಂತಹಳು='ಆಪನ್ನ-ಸತ್ತ್ವಾ'. ಮರುತರನ್ನು 'ನರಃ' ಎಂದುದುಂಟು. ರುದ್ರಸ್ಯ ಮರ್ಯಃ, ರುದ್ರನ ಜನ ಮರ್ತ್ಯರು ಎಂದುದುಂಟು. ಮರುತರ ಸಂಕೇತದಿಂದ, ಮರ್ತ್ಯನರರೂ ಸರ್ಪರೂಪರು, ಎಂಬುದನ್ನು ಪರ್ಯಾಯದಿಂದ ಧ್ವನಿತ ಪಡಿಸುವ ಪ್ರಯತ್ನವು ಇಲ್ಲಿದೆ. ನರ-ನಾರಾಯಣರು ಬದರಿಯಲ್ಲಿ ಜೋಡಿಯಾಗಿ ಇರುವುದನ್ನು, ನಾರದನು ಕಂಡನೆಂಬ ಕಥೆ ನಾರಾಯಣಾಖ್ಯಾನದಲ್ಲಿದೆ.

ಇವೆಲ್ಲ ಪವಾಡಕಥೆಗಳ ತಳಹದಿಯಲ್ಲಿ ಇರುವ ಆಕೃತಿ: ಪ್ರತಿಮೆ ಒಂದೇ. ಅದು ನಾಗ : ಸರ್ಪ. 'ಏಕಂ-ಸತ್'; 'ತಂ ಬಹುಧಾ ಕಲ್ಪಯಂತಿ'! 'ಅದಿತಿ' ಈ ಸಂಕೇತದ ಅರ್ಥವೂ ಇದೇ. ಅ-ಖಂಡಿತ-ಸಮಗ್ರವಾದುದು 'ಅದಿತಿ' : Undifferentiated Whole. ಮೂಲದಲ್ಲಿ ಒಂದೇ (ಗರ್ಭ : ಸತ್ತ್ವ : ಸರೀಸೃಪ); ಅದನ್ನು ಇಂದ್ರನು ಏಳೇಳು ತುಂಡು ಮಾಡಿದನಂತೆ; ಆದರೂ ಇವರೆಲ್ಲ ಅಖಂಡ-ಒಂದೇ ಎಂಬುದನ್ನೆ ಪ್ರಸ್ಥಾಪಿಸಲು, ಇವರು 'ಸಮಾನ ರೂಪರು, ಸಮಾನ ವಯಸ್ಕರು, ಸಮಾನ ಅಲಂಕೃತರು' ಆಗಿದ್ದರೆಂಬ ವರ್ಣನೆಯು ಬರುತ್ತದೆ. 'ಸತ್-ತ್ವನ್' ಪದಕ್ಕೆ ಆಪ : ರಸವಾಚಕ ಅರ್ಥವೂ ಇದೆ. 'ಸತ್ಯ' ಎಂಬುದಕ್ಕೆ ಆಪ : ರಸಾರ್ಥವಿದ್ದುದಕ್ಕೆ ಪ್ರಮಾಣಗಳುಂಟು. 'ಸತ್ ಏವ ಇದಂ ಅಗ್ರ ಆಸೀತ್' ಮತ್ತು 'ಆಪೋವಾ ಇದಂ ಅಗ್ರ ಆಸೀತ್' ಈ ಎರಡೂ ವಾಕ್ಯಗಳನ್ನು ಸಮೀಕ್ಷಿಸಿದಲ್ಲಿ ಸತ್ : ಆಪ ಬೇರೆಯಲ್ಲ, ಎಂಬ ಶ್ರದ್ಧೆಯು ಇಲ್ಲಿ ಬಹಿರಂಗಕ್ಕೆ ಬರುತ್ತಿದೆ. ಮರುತರನ್ನು 'ಸತ್ವಾನಃ' ಎಂದಿರುವಲ್ಲಿ ಅವರು ಆಪ : ರಸ ಸ್ವರೂಪೀ 'ಸತ್ವನ್' ಜಂತುಗಳು ಎಂಬುದು ಸ್ಪಷ್ಟವಾಗುತ್ತದೆ. 'ಸಲಿಲ ಏಕಃ ದೃಷ್ಟಾ ದ್ವೈತಃ ಭವತಿ' ಎಂದು ಬೃಹದಾರಣ್ಯಕ ಉಪನಿಷತ್ತು ೪. ೩.೩೨ ಹೇಳುತ್ತದೆ.

ಮಹಾಭಾರತದಲ್ಲಿ ಬರುವ ಜರತ್ಕಾರುವಿನ ಪವಾಡ ಕಥೆಯ* ಮೂಲಕವಾಗಿಯೂ, ಋಗ್ವೇದವು, ಪ್ರಾಮುಖ್ಯದಿಂದ ಆಪ : ರಸ : ಸಲಿಲ ತತ್ತ್ವದ ಅದ್ವೈತ ಭೂಮಿಕೆಯನ್ನು ಪ್ರತಿಪಾದಿಸುತ್ತಿರುವುದಾಗಿಯೆ ದೃಢಪಡುತ್ತದೆ.

ತ್ವಷ್ಟೃ (: ತಕ್ಷಕ) ಮತ್ತು ಇಂದ್ರರ ಜೋಡಿ.

ಸೂರ್ಯನನ್ನು 'ಸರ್ಪ'ವಾಗಿಸುವ ತಂತ್ರವನ್ನು ಗಮನಿಸಿದಲ್ಲಿ, ವೃತ್ರ-ಇಂದ್ರ, ಮತ್ತು ತ್ವಷ್ಟೃ-ಇಂದ್ರ ಈ ಜೋಡಿಯ ದ್ವಂದ್ವದ ಹಿನ್ನೆಲೆಯೂ ಸುಲಭವಾಗಿ ಗೊತ್ತಾಗಬಹುದಾಗಿದೆ.

> "Vedic Ahi connected closely with the great myth of storms and struggle of light with darkness"

ಎಂದು ಬಲ್ಲಿದರು ಈ ಸಾಂಕೇತಿಕ ಪ್ರತಿಮೆಗಳ ಅರ್ಥ ಹೇಳುತ್ತಾರೆ.[೯] ವೃ-ಆವರಿಸು, ವ್ಯಾಪಿಸು ಎಂಬ ಆಖ್ಯಾತದಿಂದ ಸಾಧಿತ 'ವೃತ್ರ' ಸಂಕೇತಕ್ಕೆ (ವಿಶ್ವವನ್ನು) ಸರ್ವವನ್ನು ವ್ಯಾಪಿಸಿರುವ ಪ್ರಾಣ ಎಂದು ಅರ್ಥವಾಗುತ್ತದೆ. ಇದನ್ನು ಅಹಿ-ಸರ್ಪ ಎನ್ನುವುದರಿಂದ ಇದು ವಿಶ್ವವನ್ನು ಸುತ್ತುವರಿದು ತನ್ನ ಪಾಶದಲ್ಲಿ ಬಂಧಿಸಿದೆ,ಎಂಬ ಚಿತ್ರವು ಕಣ್ಣೆದುರು ನಿಲ್ಲುತ್ತದೆ. ಇದು 'ಅಹಿ'-ನಾಗ ಸ್ವರೂಪ, ಎನ್ನುವುದರಿಂದ ಮೃತ್ಯುರೂಪ : ಕತ್ತಲೆಯ ರೂಪ ಎಂದೂ ಅರ್ಥವಾಗುವುದು. 'ವೃತ್ರಃ ಇಂದ್ರಶತ್ರುಃ ದೀರ್ಘಂ ತಮಃ ಆಶಯನ್' ಈ ವೃತ್ರ : ಅಹಿ : ಆಪಸ್ವರೂಪಿಯಾಗಿರುವ ವರ್ಣನೆಯುಂಟು. ಆಪವು 'ಅದಿತಿ' ಸ್ವರೂಪ. ಅದಿತಿಯು 'ಸರ್ವಸ್ಯ ಅತ್ತಿ': 'ಅತ್ರಿ'! ಏನೆಲ್ಲ ನುಂಗುವವಳು, ಸರ್ವಭಕ್ಷಕಳು. ಈ ಕಾರಣದಿಂದ ಸಂಹಾರಕ ಅಗ್ನಿರೂಪಳೂ ಸರಿ. ನಿರುಕ್ತಕಾರರು, ಅದಿತಿಪದಕ್ಕೆ ಅಗ್ನಿವಾಚಕ ಅರ್ಥವನ್ನು ಹೇಳುತ್ತಾರೆ. ಋಗ್ವೇದದ ಗೃತ್ಸಮದ ಋಷಿಯ ಸೂಕ್ತಗಳಲ್ಲಿ ಅಗ್ನಿಗೆ 'ಅದಿತಿ' ಎಂಬುದರ ಅನುಚಿತತೆಯನ್ನು ಹಿಂದೆ ವಿವರಿಸಿದ್ದಾಗಿದೆ. ಅದಿತಿ ಮತ್ತು ವೃತ್ರ ಈ ಬಾಹ್ಯ ಶಬ್ದ-ಭೇದವನ್ನು ಬಿಟ್ಟರೆ ಈ ಉಭಯ ಸಂಕೇತಗಳ ಅಂತರಾರ್ಥದ ಆಕೃತಿ ಸಮಾನವೇ ಇದೆ.

ಅದಿತಿ-ರುದ್ರರಲ್ಲಿ ಇರುವ ಏಕಾತ್ಮತೆಯೂ ಗಮನಾರ್ಹವಾಗಿದೆ : ಅದಿತಿ ಸರ್ವಭಕ್ಷಕ ಅಗ್ನಿ ಸ್ವರೂಪಳು; ಸರ್ಪಸ್ವರೂಪಳು; ರುದ್ರನೂ ಪ್ರಳಯಾನಲ; 'ಅಸೌ ಯಃ ಅವಸರ್ಪತಿ ನೀಲಗ್ರೀವಃ ವಿಲೋಹಿತಃ' ಎಂಬುದು, ಹರಿದು ಬರುತ್ತಿರುವ ಅಗ್ನಿಜ್ವಾಲೆ ಹಾಗೂ ಸರ್‌ಪ ಈ ಉಭಯ ರೂಪಗಳನ್ನು ಸ್ಮರಣೆಗೆ ತಂದು ಕೊಡುತ್ತಿದೆ! ಆದರೆ, ಮ್ಯಾಕಡೊನೆಲ್‌ರವರ ತಕರಾರು:

> 'The evidence of the R. V. does not distinctly show with what physical basis Rudra is connected'[೧೦]

---

* ಜರತ್ಕಾರು ಭೃಗುವಂಶಕ್ಕೆ ಸೇರಿದ ಋಷಿ. ತಪಸ್ಸಿನಿಂದ ದೇಹವನ್ನು ತುಂಬ ಜೀರ್ಣಗೊಳಿಸಿಕೊಂಡುದರಿಂದ ಜರತ್ಕಾರು ಎಂಬ ಹೆಸರು ಬಂತು. ಈತ ಬ್ರಹ್ಮಚರ್ಯ ಆಶ್ರಮದಿಂದಲೇ ಜೀವನವನ್ನು ಕೊನೆಗೊಳಿಸಲು ಬಯಸಿದ್ದ. ಇವನು ಒಂದು ದಿನ ಕಾರಟನಲ್ಲಿ ಅಲೆಯುತ್ತಿದ್ದಾಗ ಕೆಲವು ಬಳ್ಳಿಗಳನ್ನು ಅವಲಂಬಿಸಿ ತಲೆಕೆಳಗಾಗಿ ಜೋತಾಡುತ್ತಿದ್ದ ತನ್ನ ಪಿತೃಗಳನ್ನು ಕಂಡು ಅವರ ಉದ್ಧಾರಕ್ಕಾಗಿ ವಿವಾಹವಾಗುವೆನೆಂದು ಒಪ್ಪಿಕೊಂಡನು. ತನ್ನ ಹೆಸರಿನ ಕನ್ಯೆಯನ್ನು ಹುಡುಕುತ್ತಿದ್ದಾಗ ವಾಸುಕಿಯೆಂಬ ಸರ್ಪರಾಜನಿಗೆ ಜರತ್ಕಾರುವೆಂಬ ಸೋದರಿ ಇರುವಳೆಂದು ತಿಳಿದು ಬಂದಿತು. ನಾಗರಾಜನು ಜರತ್ಕಾರುವಿಗೆ ತನ್ನ ಸೋದರಿಯನ್ನು ಮದುವೆ ಮಾಡಿಕೊಟ್ಟನು. ಹೀಗೆ ಈ ದಂಪತಿಗಳು ಸಂಸಾರಿಗಳಾದರು. ಒಂದು ಸಂಧ್ಯಾಕಾಲ ಪತ್ನಿಯ ತೊಡೆಯ ಮೇಲೆ ತಲೆಯಿಟ್ಟು ಮಲಗಿರುವಾಗ ಸೂರ್ಯ ಮುಳುಗಿತು. ಜರತ್ಕಾರು ಪತಿಯ ಸಂಧ್ಯಾವಂದನೆಯ ವೇಳೆ ತಪ್ಪುವುದೆಂದು ಎಬ್ಬಿಸಲು ಪತಿ ಕೋಪಗೊಂಡು ಸಿಟ್ಟಿನಿಂದ ತಪಸ್ಸಿಗೆ ಹೊರಟುಹೋದನು. ಆಗ ಜರತ್ಕಾರು ಗರ್ಭಿಣಿಯಾಗಿದ್ದಳು. ಮುಂದೆ ಇವಳು ನಾಗಕುಲವನ್ನು ಉದ್ಧರಿಸಿದ ಆಸ್ತೀಕನೆಂಬ ಮಗನನ್ನು ಪಡೆದಳು. ಈ ವಿವರಗಳು ಮಹಾಭಾರತದ ಆದಿ ಪರ್ವದ ಆಸ್ತಿಕೋಪಾಖ್ಯಾನದಲ್ಲಿ ವಿವರವಾಗಿ ಬಂದಿದೆ (ಸಂ)

ರುದ್ರದೈವತದ ದಿವ್ಯದರ್ಶನಕ್ಕೆ ನಿಮಿತ್ತಮಾತ್ರವಾದ ಭೌತಸ್ವರೂಪದ-ಮಾತಾಸ್ಪರ್ಶದ ವಸ್ತು-ವಿಷಯ ಯಾವುದು ಇರಬಹುದು, ಎಂಬುದರ ನೆಲೆ ತಿಳಿಯದಾಗಿದೆ, ಎಂದು ಮ್ಯಾಕಡೊನೆಲ್ಲ ಪ್ರಾಂಜಲವಾಗಿ ಒಪ್ಪಿಕೊಂಡಿದ್ದಾರೆ. ಋಗ್ವೇದದ ಕವಿಗಳು, ವರ್ಣನಾ ವೈಖರಿಯಲ್ಲಿ ಅತ್ಯುಕ್ತಿ ಯಾವುದು? ಎಷ್ಟು? ಎಂಬುದರ ಸಂಭ್ರಮವುಂಟಾಗುವ ತಂತ್ರವನ್ನು ಯೋಜನಾ ಪೂರ್ವಕವಾಗಿ ಬಳಸಿರುವ ಸಂದೇಹಕ್ಕೆ ಅವಕಾಶವಿದೆ. ವೇದಕಾಲದ ತರುವಾಯ ಬ್ರಾಹ್ಮಣ ಉಪನಿಷತ್ತುಗಳಲ್ಲಿ ಈ ತಂತ್ರವೇ ದಿಗ್ಭ್ರಮೆಯನ್ನುಂಟು ಮಾಡಿ 'ನೇತಿ ನೇತಿ' ಭಾವವನ್ನು ಒತ್ತಾಯ ಪಡಿಸುತ್ತದೆ. ಉಪನಿಷತ್ತಿನೊಳಗಿನ 'ಮಧುವಿದ್ಯೆ'ಯ ವಿವರಣೆಯು ಇಂತಹ ಒಂದು ಅಭ್ಯಸನೀಯ ಮಾದರಿಯಾಗಿದೆ.[೧೧] ಆದರು, ರುದ್ರನ ಸಂಗಾತಿಗಳೆಂಬ ಅದಿತಿ : ಪೃಶ್ನಿ ಪುತ್ತು ರುದ್ರಿಯರೆಂಬ ಮರುತರು ಇವರ ಮೂಲಕ ರುದ್ರ-ಶಿವನ ಮೂಲ ಧಾರಣೆಗೆ (conception) ನಿಮಿತ್ತವಾದ ಅನುಭಾವವು ಎಂತಹುದು ಎಂಬುದನ್ನು ನಿರ್ಧರಿಸಿಕೊಳ್ಳಲು ಶಕ್ಯವಿದೆ.

'ಅಹಿ-ಭಾನವಃ' ಎಂದು ವರ್ಣಿತರಾದ ಮರುತರು,[೧೨] ತಳತಳಿಸುತ್ತಿರುವ ಸೂರ್ಯಸದೃಶ ಅಹಿ : ಸರ್ಪರೂಪರು ಎಂದು ಗ್ರಹಿಸಿಕೊಳ್ಳಲು ಆಕ್ಷೇಪವಿರಬಾರದು. (ಸಾರ್ಪರಾಜ್ಞಿ) ಅದಿತಿ : ಪೃಶ್ನಿಯರ ಮಕ್ಕಳೆಂದು ಸಾರಿ ಸಾರಿ ಹೇಳಲಾಗುವ ಮರುತರನ್ನು 'ಅಹಿ-ಭಾನವಃ' ಎಂದಿರುವಲಿ ಇರುವ ಸು-ಸಂಬದ್ಧತೆಯು ಮರುತರ 'ಸರ್ಪ' ಸ್ವರೂಪನನ್ನು ದೃಢಪಡಿಸುತ್ತಿದೆ. ಮರುತರಿಗೆ ರುದ್ರಿಯರು ಎಂಬ ಪರ್ಯಾಯ ನಾಮವಿದೆ. ಆದಕಾರಣ ರುದ್ರನೂ 'ಅಹಿ-ಭಾನು' ಸ್ವರೂಪನೇ ಸರಿ. 'ಅಹಿ-ಭಾನು' ಎಂಬ ಸಮಸ್ತ ಪದವನ್ನು ಭಾನುಸದೃಶ ಅಹಿ ಎಂದು ವಿಂಗಡಿಸಬಹುದು; ಅಥವಾ ಅಹಿರೂಪಿ ಭಾನು ಎಂದೂ ಸ್ಪಷ್ಟೀಕರಿಸಬಹುದು. ಇವೆರಡರಲ್ಲಿ ಪೂರ್ವಾಪರ ಸಂಗತಿ, ವಸ್ತುಸ್ಥಿತಿ ಹಾಗೂ ಔಚಿತ್ಯದ ದೃಷ್ಟಿಯಿಂದ ಸೂರ್ಯನಂತೆ ಹೊಳೆವ ಹಾವು ಎಂಬ ವರ್ಣನೆಯೆ ವಾಸ್ತವವೆಂದು ಹೇಳಬೇಕಾಗುತ್ತದೆ. ಏಕೆಂದರೆ ಅಹಿರೂಪೀ ಸೂರ್ಯನು ಎಂಬಲ್ಲಿ, ಎಳ್ಳಷ್ಟೂ ಸುಸಂಗತಿಯಿಲ್ಲ, 'ಅಹಿ' ಪದಕ್ಕೆ ಪಾಪೀ-ದುಷ್ಟ ಎಂಬ ಅರ್ಥವಿದೆ. ಪ್ರಪಂಚದ ಜೀವನವನ್ನು-ಪ್ರಕಾಶವನ್ನು ಅಡ್ಡಗಟ್ಟಿ ವ್ಯಾಪಿಸಿ (ಕತ್ತಲೆಗೆ ಕಾರಣವಾಗಿ) ಇರುವ ವೃತ್ರನನ್ನು 'ಅಹಿ' ಎಂದುದಾಗಿದೆ. ಹೀಗಿರುವಾಗ 'ಅಹಿ-ಭಾನು' ಎಂಬ ಈ ಸಮಸ್ತಪದವನ್ನು ಪ್ರಯೋಗಿಸಿರುವ ಆ ಕವಿಯು ಸೌರಪಂಥೀಯ ಭಾವನೆಗಳನ್ನು, ಬುದ್ಧಿಪೂರ್ವಕವಾಗಿ ಭಗ್ನಗೊಳಿಸಿರುವಂತೆ ಕಾಣುತ್ತಿದೆ. 'ದಿತಿ'ಯ ಪುತ್ರರು : ಮರುತರು, ಎಂಬ ಕಥೆಯಿಂದ, ಇವರು ದೈತ್ಯರೆಂದು ಒಪ್ಪಿಕೊಂಡಂತೆಯೆ ಇದೆ! ಮರುತರು : ರುದ್ರಿಯರೂ ಅಹುದು. ಆದಕಾರಣ ರುದ್ರನೂ ದೈತನೆಂದು ಧ್ವನಿತವಾಗುತ್ತದೆ. ಅಲ್ಲದೆ, ಅದಿತಿ=ವೃತ್ರ; ಅದಿತಿ=ರುದ್ರ, ಈ ಹಿನ್ನೆಲೆಯಲ್ಲೂ ರುದ್ರಮತರು 'ಅಹಿ' ಸ್ವರೂಪಿಗಳೆಂದೇ ಹೊರವಡುತ್ತಿದೆ.

ಹಿಂದಿನ ತಲೆಮಾರಿನ ಮೆಕಡೊನೆಲ್ ಪ್ರಭೃತಿ ಸಂಶೋಧಕರಿಗಂತೂ ಸರಿ; ಆಧುನಿಕ ಸಂಶೋಧಕರಲ್ಲಿಯೂ, ಋಗ್ವೇದ ಸಂಹಿತೆಯ ಸೂಕ್ತಾರ್ಥಗಳಲ್ಲಿ ಒಳಗೊಂಡಿರುವ ಅಂತರ್ಗತ ವಿಸಂಗತಿಯು, ಭಾಷಿಕ ಹಾಗೂ ಸಾಂಸ್ಕೃತಿಕ ಅರ್ಥ : ವಿಚಾರಗಳಿಗೆ ತಮ್ಮದೆ ಆದ ಒಂದು ವಿಶಿಷ್ಟ ಆ-ಕೃತಿಯು ಇರುತ್ತದೆ, ಎಂಬುದನ್ನು ಲೆಕ್ಕಕ್ಕೆ ಹಿಡಿಯದೆ, ಇದು ಅರಿಕೆಗೆ ಬರಲು ಶಕ್ಯವಿಲ್ಲ. ಹಾವು ಹಾಗೂ ಸೂರ್ಯ ಈ ಮಾನವೇ ತತ್ತ್ವತಃ ಅ-ಸಂಬದ್ಧವಾಗಿದೆ. ಸೂರ್ಯನನ್ನು ಹಾವಿಗೆ ಹೋಲಿಸುವಲ್ಲಿ, ಈ 'ವಿಸಂಗತಿ ಅಷ್ಟು ಎದ್ದಾಗಿ ಕಾಣುವುದಿಲ್ಲ; ಆದರೆ, ಹಾವನ್ನು 'ಸೂರ್ಯ' ಎನ್ನುವಾಗ ಇಲ್ಲಿ ತಾಲ-ಜಯಬದ್ಧ ಆಕೃತಿಯು ಉಂಟಾಗುವುದಿಲ್ಲ. ಸೂರ್ಯನ ಮಾರ್ಗ : ಗತಿ ಹಾವಿನಂತೆ ವಕ್ರವಲ್ಲ; 'ಅಹಿ' ಸಂಕೇತಕ್ಕೆ ಪಾಪಿ, ದುಷ್ಟ ಎಂಬ ಮೂಲಾರ್ಥವಿರುವ ಯುರೋ- ಭಾರತೀಯ ಭಾಷೆಯ ಅರ್ಥದ ಆಕೃತಿಯಲ್ಲಿ ಸುಸಂಗತಿಯಿದೆ : ಅಂಹ್-ಅಂಹಸ್-ಅಹಿ, anguine (snake like), anxiety (ಮೊ. ವಿ. ಕೋಶ)ದಲ್ಲಿ ನಮೂದು ಇದೆ. ಸೂರ್ಯನನ್ನು ಸರ್ಪ (: ಆಪ : ರಸದ ಪ್ರಾಣ) ಮಾಡುವ ಈ ಹವ್ಯಾಸವು 'ಸಾರ್ಪರಾಜ್ಞೀ ಸೂರ್ಯೋವಾ', ಈ ದೈವತ ಸೂಕ್ತದಲ್ಲೂ ವ್ಯಕ್ತವಾಗಿದೆ. ಅಲ್ಲದೆ ಸೂರ್ಯನನ್ನು (?) 'ಕಶ್ಯಪಸ್ಯ ಚಕ್ಷುಃ ಅಸಿ' ಎಂಬಲ್ಲಿಯೂ ಈ ಆಗ್ರಹವೆ, ಇನ್ನೂ ಸ್ವಲ್ಪ ಸಂಭ್ರಾಮಕ ಶಬ್ದ ಪ್ರತಿಮೆಯ ಮೂಲಕವಾಗಿ ಬಹಿರಂಗಕ್ಕೆ ಬಂದಿದೆ.[೧೩] ಬ್ಲೂಮ್‌ಫೀಲ್ಡನಿಗೆ ಈ ಉಪಮಾನೋಪಮೇಯಗಳಲ್ಲಿ ಅಷ್ಟು

ಸು-ಸಂಗತಿ, ತಾಳಮೇಳವು ಇಲ್ಲದಿರುವುದು, ಗಮನಕ್ಕೆ ಬರದೆ ಇಲ್ಲ. ಆದರೂ ಎಂತೊ ಇದರಲ್ಲೂ-ಔಚಿತ್ಯವನ್ನು ಹುಡುಕಿಕೊಳ್ಳಬೇಕಾಗಿದೆ. 'ಕಶ್ಯಪಃ ಪಶ್ಯಕೋ ಭವತಿ; ಯತ್ ಸರ್ವಂ ಪಶ್ಯತಿ' ಎಂಬಲ್ಲಿ ಪಂಥೀಯ ಏನೊಂದು ಆಗ್ರಹವಿರಬೇಕೆಂದು ತೋರುತ್ತದೆ. 'ಅಯಂ ಗೌಃ ಪೃಶ್ನಿಃ' ಇದು ದೇಹದೊಳಗಿನ ಕುಂಡಲಿನೀ ಸರ್ಪ; 'ಪ್ರಸುಪ್ತಾಭುಜಗೋಪಮಾ' ಶಕ್ತಿಯನ್ನು ಯೋಗಸಾಧನೆಯಿಂದ ಎಬ್ಬಿಸುವುದು ಊರ್ಧ್ವಮುಖ (ರೇತ)ವಾಗಿಸುವುದು, ಮಸ್ತಕಸ್ಥ 'ಸಹಸ್ರಾರರ'ದ ಕಡೆಗೆ ಹೊರಡಿಸುವುದು, ದೇಹಸ್ಥ ಷಟ್ ಚಕ್ರಗಳ ವಿಚಾರವು ಋಗ್ವೇದದಲ್ಲಿ ಸ್ಪಷ್ಟವಾಗಿಲ್ಲ. ಋಗ್ವೇದದ ಸೌರಭೂಮಿಕೆಗೆ ತೀರ ವಿಸಂಗತವೆನಿಸದಂತೆ, ಆಪ : ರಸ ಪಂಥೀಯ ವಿಚಾರಗಳನ್ನು, ಇಲ್ಲಿ ಶಕ್ಯವಿರುವಷ್ಟು, ಅಳವಡಿಸಿಕೊಳ್ಳಲಾಗಿದೆ. 'ಕಶ್ಯಪ' ವ್ಯಕ್ತಿನಾಮವು, ಈ ಸಂಹಿತೆಯಲ್ಲಿ ಸೋಮ-ರಸದ ಮಂಡಲದಲ್ಲಿ ಒಂದೇ ಬಾರಿ ಬರುತ್ತದೆ. 'ಕಶ್ಯಪ' ಮಹಾತ್ಮ್ಯವು ಅಥರ್ವವೇದದಿಂದ ಅದ್ಭುತವಾಗಿ ಬೆಳೆಯ ತೊಡಗಿದ್ದುಂಟು. ಹೀಗೆ, ಋಗ್ವೇದದೊಳಗಿನ ಅಹಿನಾಗ ಕಚ್ಛಪ ಭೂಮಿಕೆಯ ಆಕೃತಿ ವೈಶಿಷ್ಟ್ಯವು, ಸೌರಭೂಮಿಯ ಆಕೃತಿಗಳಿಂದ ತೀರ ಭಿನ್ನವಾಗಿರುವುದು.

ಈ ಆಕೃತಿ ಭೇದವನ್ನು ಒಪ್ಪಿಕೊಳ್ಳದೆ ಸೌರ, ಇಂದ್ರ-ಸೂರ್ಯಾದಿಗಳು, ಮೊದಲು 'ಆದಿತ್ಯ'ರೆನಿಸಿ, ಅದಿತಿಯೊಡನೆ ಸಲಿಲ>ಸರಿರದಲ್ಲಿ ಹೊಕ್ಕರು, ಎಂಬ ಸಂಕೇತಾತ್ಮಕವಾದ ಋಗ್ವೇದ ಸೂಕ್ತಸ್ಥ ಪ್ರತಿಮೆಯೊಳಗಿನ ಚಿತ್ರದ ಅರ್ಥವೇ ಆಗಲಾರದು.[೧೪] ಈ ಸೂಕ್ತದಲ್ಲಿ 'ದೇವತಾ ಜನನ'ದ ವಿಚಾರವು ಒಳಗೊಂಡಿರುವುದಾಗಿ, ಇದರ ಮೊದಲ ಋಚೆಯಲ್ಲಿಯೆ ಹೇಳಿದೆ. ಆದರೆ, ಇಲ್ಲಿ ವರ್ಣಿಸಲಾಗಿರುವ ಜನನದ ದೈವತ-ಪ್ರತಿಮೆಯ ನಿಜಸ್ವರೂಪವನ್ನು 'ಮಾರ್ತಾಂಡ' ಎಂಬ ಸಂದಿಗ್ಧನಾಮ ಸಂಕೇತದಲ್ಲಿ ಹುದುಗಿಸಿ ಇಡಲಾಗಿದೆ! ಸೌರ ಆದಿತ್ಯರು 'ಸಲಿಲ'ದಲ್ಲಿ ಅಡಗುತ್ತಾರೆ, ಎಂಬ ಸಂಕೇತವು, ಇನ್ನು ಮುಂದೆ 'ರಾತ್ರೀ' ಸಂಪ್ರದಾಯದ ಯುಗದ ಆರಂಭವಾಯಿತು, ಎಂಬುದನ್ನು ಸೂಚಿಸುತ್ತದೆ. 'ಮಾರ್ತಾಂಡ' ಎಂಬ ಸಂಕೇತಕ್ಕೆ ಮೃತ ಅಂಡದಿಂದ ಆದ (ಹೊರಬಂದ) ದೈವತ ಎಂಬ ಅರ್ಥವಿರುವುದಾಗಿ ಭಾಷ್ಯದಿಂದ ತಿಳಿಯುತ್ತದೆ.* ಈ ದೈವತವನ್ನು, ಸಾಯಣರು 'ಮಾರ್ತಾಂಡ ನಾಮನಂ ಸೂರ್ಯಮ್' ಎಂದು ಕರೆದಿದ್ದಾರೆ. ಆದರೆ, ಈ ಹೆಸರು ಸೂರ್ಯನನ್ನು 'ಅಹಿರೂಪೀ ಭಾನು' ಎಂದಷ್ಟೇ ಅನುಚಿತವಾಗಿದೆ. ಅಂಡದಿಂದ ಹೊರಬರುವ (: ಸರ್ಪ) ಸ್ವರೂಪದ ವಸ್ತು ಸೂರ್ಯನಲ್ಲ; ಅಲ್ಲದೆ ಈ 'ಮಾರ್ತಾಂಡ' ಸಲಿಲ : ಜಲೋದ್ಭವನೆಂಬುದು ಆ ಸೂಕ್ತದಿಂದಲೇ ಗೊತ್ತಾಗುತ್ತಿದೆ! ಆದುದರಿಂದ, ಇಲ್ಲಿ ಇನ್ನೂ ಬೇರೊಂದು ಗುಹ್ಯಾರ್ಥವಿರುವುದಾಗಿ ಕಾಣುತ್ತದೆ.

ಮಾನವನು 'ದ್ವಿ-ಜ'ನಾಗಬಲ್ಲ, ಎಂಬ ಪ್ರತಿಮಾ : ಸಂಕೇತಕ್ಕೆ ಸೌರಪಂಥೀಯ ರೀತಿಯಲ್ಲಿ ಒಂದು ಅರ್ಥ : ಸವಿತೃವಿನ ಉಪಾಸನೆಯಿಂದ : ಅಧ್ಯಯನ-ಲೋಕಾನುಭವಾದಿಗಳ ಮೂಲಕ ಆಗುವ ಜ್ಞಾನೋದಯದಿಂದ ವ್ಯಕ್ತಿಯ ಪುನರ್‌ಜನ್ಮವಾಗಿ ದ್ವಿ-ಜತ್ವವು ಪ್ರಾಪ್ತವಾಗುತ್ತದೆ. ಆದರೆ, ಆಪ : ರಸ ಪಂಥೀಯ ಭೂಮಿಕೆಯ ಬ್ರಹ್ಮ-ಚರ್ಯ, ಹಾಗೂ ದ್ವಿಜತ್ವದ ಅರ್ಥ ಇನ್ನೊಂದು ಬಗೆಯದಾಗಿದೆ : 'ಸಮ'-ತ್ವ ಸಿದ್ಧಿ : 'ಸರ್ವಭೂತೇಷು ಚ ಆತ್ಮಾನಂ, ಸರ್ವಭೂತಾನಿ ಚ ಆತ್ಮನಿ' ಕಾಣುತ್ತ 'ಏಕತ್ವಂ ಅನು-ಪಶ್ಯತಃ' ಅವಸ್ಥೆಯಲ್ಲಿ ಸ್ಥಿರವಾಗಿ ನಿಲ್ಲುವ ಈ ಸಿದ್ಧಿಯಿಂದ ದೊರೆವ ದ್ವಿಜತ್ವದ ಆ-ಕೃತಿಯು, ಸೌರ ಭೂಮಿಕೆಯ ದ್ವಿಜತ್ವದ ಆ-ಕೃತಿಗಿಂತ ತೀರ ಭಿನ್ನ. ಇವೆರಡೂ ಆಕೃತಿಗಳನ್ನು ಭಾರತೀಯ ಪರಂಪರಾಗತ ಪರಿಭಾಷೆಯಲ್ಲೆ

> "ಸರ್ವಂ ಕರ್ಮಾಖಿಲಂ ಜ್ಞಾನೇ ಪರಿಸಮಾಪ್ಯತೇ" ಇದು ಸೌರಭೂಮಿಕೆಯ ಜೀವನ ದರ್ಶನ.
> ಶ್ರದ್ಧಯಾ (: ಗುರುಕೃಪಯಾ) ಲಭತೇ ಜ್ಞಾನಂ; ಇದು ಆಪ : ರಸ ಪಂಥೀಯ ಜೀವನ
> ದರ್ಶನ ದ್ವಿಜತ್ವ.

---

* ಸಾಯಣರು ತಮ್ಮ ಭಾಷ್ಯದಲ್ಲಿ 'ಮೃತಾತ್ ಅಂಡಾತ್ ಜಾತಃ ಮಾರ್ತಾಂಡಃ' ಎಂದು ಹೇಳುತ್ತಾರೆ. ಇದು ಪರಂಪರೆಯಿಂದ ಬಂದ ಅರ್ಥ. 'ಮೃತಗೊಂಡ ಅಂಡದಿಂದ ಹುಟ್ಟಿದ್ದು ಮಾರ್ತಾಂಡ' ಎಂಬಲ್ಲಿ ಸೂರ್ಯಸಂಕೇತವು ನಷ್ಟವಾಗಿರುವುದನ್ನು ಶಂ ಬಾ ಗುರುತಿಸುತ್ತಾರೆ (ಸಂ)

ಮಾನವನು ಸಲಿಲೋದ್ಭವನು; ಮರಣಾಧೀನನು. ಕೊರಳ ಸುತ್ತಿರುವ (ಕಾಲ-)ಸರ್ಪ ಕಚ್ಚದೆ ಬಿಡುವುದೆ? ಆದಕಾರಣ, ಬೇಗನೆ 'ಜ್ಞಾನ'ಸಿದ್ಧಿಯನ್ನು ಪಡೆದು 'ಮಾರ್ತಾಂಡ'ನಾಗು, ಎಂಬ ಹಾಗಿನ ಋಗ್ವೇದ ಸಂಹಿತೆಯ ವ್ಯಂಗ್ಯಧ್ವನಿಯೊಂದು ಕೇಳಬರುತ್ತದೆ. ಕುಂಡಲಿನೀ : ಘಟ-ಸರ್ಪವು 'ಪ್ರಸುಪ್ತ ಭುಜಗ'ದಂತೆ ಪ್ರತಿದೇಹದಲ್ಲೂ ಇದೆ. 'ಇಹ ಸ್ಥಾನೇ ಭಗವಾನ್ ಸಾಕ್ಷಾತ್ಕಾರ ವಿಷಯಃ ಭವತಿ'[೧೫]. ಇದುವೆ 'ಮಹಾಶೂನ್ಯ ಸಿದ್ಧಿ'. ಸಂಸಾರವನ್ನು ಶೂನ್ಯವತ್=ಶ್ಮಶಾನವತ್ ಕಾಣುವ ಪ್ರಥಮ 'ಶೂನ್ಯ' ಅಭಾವಾತ್ಮಕವೆಂದೂ, ಕುಂಡಲಿನೀ ಸರ್ಪವು ಸಹಸ್ರಾರದಲ್ಲಿ ಸೇರಿ ನಿಲ್ಲುವ ಅವಸ್ಥೆಯೆ 'ಮಹಾಶೂನ್ಯ ಸಿದ್ಧಿ' ವಿಧಾಯಕ 'ಪೂರ್ಣ' ಯೋಗವೆಂದೂ ಬಗೆಯಲಾಗಿದೆ. ಇದು 'ಪೂರ್ಣೇಂದು ಶುಭ್ರಂ; ಪೀಯೂಷ ಪೂರ್ಣಂ; ಶಶಾಂಕ ಶತ ಸನ್ನಿಭಂ' ಇರುವುದೆಂಬ ಶ್ರದ್ಧೆಯಿದೆ.

ಶಾಕ್ತತಂತ್ರಗಳ ಮೇರೆಗೆ, ಇದು ನಿಜಕ್ಕೂ ಚಾಂದ್ರಸಿದ್ಧಿಯೇ ಆಗಿದೆ. ಈ ಸ್ಥಾನದಲ್ಲಿ 'ಬಾಲಸೂರ್ಯ ರಶ್ಮಿ' ಸಮಕೇಸರ ಸಮೂಹವಿರುವ ಪದ್ಮವು ಇರುತ್ತದೆ; ಇದು ಶುಕ್ಲ ವರ್ಣವುಳ್ಳುದು, ಎಂದು ಬಗೆಯಲಾಗಿದೆ. ಆದರೂ ಇವನು ನೀರೊಳಗಿನ ಸೂರ್ಯನೇ (ನಾರ : ಚಂದ್ರ) ಆಗಿರಲಿಕ್ಕೆ ಬೇಕು; ಇಲ್ಲವಾದರೆ ಜೀವನ 'ಶಾಂತಿ' ಸುಖಾನಂದವು ಅಶಕ್ಯವಿದೆ.

ಘಟಸ್ಥ ಸರ್ಪವು : 'ಅಗ್ನಿ' (: ರೇತ) ಊರ್ಧ್ವ ಮುಖವಾಗಿ ಹೊರಟು, ಸಹಸ್ರದಲ-ಪದ್ಮದಲ್ಲಿ (: ಚಂದ್ರಾ) ಸೇರಿಕೊಂಡಾಗ ಪರಮಾನಂದ ಸಿದ್ಧಿಯು ಪ್ರಾಪ್ತವಾಗುತ್ತದೆ: ಈ ಸಿದ್ಧಿಯಿಂದ ದಿವ್ಯಜ್ಞಾನ ದೃಷ್ಟಿಯು ಪ್ರಾಪ್ತವಾಗುತ್ತದೆ. ಆಕಾಶ ಗಮನಾದಿ ಶಕ್ತಿಗಳು ಬರುತ್ತವೆ. ಪ್ರಪಂಚದಲ್ಲಿ ಈ ಸಿದ್ಧ-ಪುರುಷನಿಗೆ ಭೂತ-ವರ್ತಮಾನ-ಭವಿಷ್ಯತ್ತು ಏನೆಲ್ಲ ಅಂಗೈನೆಲ್ಲಿಯಂತೆ ಕಾಣತೊಡಗುತ್ತದೆ.....ಇತ್ಯಾದಿ ಪವಾಡಶಕ್ತಿಗಳು ಈ ಸಿದ್ಧನನ್ನು ನೆಳಲಿನಂತೆ ಹಿಂಬಾಲಿಸುತ್ತಯೆವೆಂದು ಈ ದಿವ್ಯಾಧ್ಯಾತ್ಮ ಪಂಥಗಳಲ್ಲಿ ತಲೆತಲಾಂತರಗಳಿಂದ ಬೇರೂರಿ ನಿಂತಿರುವ ನಂಬುಗೆಗಳಿವೆ. ಋಗ್ವೇದದಲ್ಲಿ ಬರುವ ಮುನಿಸೂಕ್ತದಲ್ಲೂ ಇದರ ಸೂಚನೆಗಳಿವೆ. ಸೂರ್ಯ-ಸವಿತೃ ಇವು ಜ್ಞಾನದ ಪ್ರತೀಕಗಳು' ಎಂಬ ಸೌರಪಂಥೀಯ ಪರಿಭಾಷೆಯನ್ನೇ ಹೋಲುವ ತಮ್ಮ ಶಬ್ದ-ಪ್ರತಿಮೆಗಳನ್ನು, ಆಪ : ರಸ ಪಂಥವೂ ಸೃಷ್ಟಿಸಿಕೊಳ್ಳುವ ಪ್ರಯತ್ನಪಟ್ಟಿದೆ. ಋಗ್ವೇದದ ಸಾರ್ಪರಾಜ್ಞಿಯೊಡನೆ ತಳಕು ಹಾಕಲಾದ ಸೂರ್ಯಹಾಗೂ ತೈತ್ತರೀಯ ಸಂಹಿತೆ, ಆರಣ್ಯಕಗಳಲ್ಲಿ ಬರುವ, ಅಥರ್ವವೇದದಿಂದಲೂ ಪುಷ್ಟಿ ದೊರೆವ 'ಕಶ್ಯಪೋ ಪಶ್ಯಕಃ ಭವತಿ' ಈ ಕಶ್ಯಪ ಸಿದ್ಧಿಯ ಪ್ರತಿಮೆ ಇವು ಇಂಥವಕ್ಕೆ ಉದಾಹರಣಗಳು. ನಿಜವಾಗಿ ಇವು ಚಾಂದ್ರಪ್ರತಿಮೆಗಳೇ ಇರಲಿಕ್ಕೆಬೇಕೆಂದು ಆಪ : ರಸ ಪಂಥೀಯ ಆಕೃತಿಯ ಇತಿಮಿತಿಗಳಿಂದ (Logic) ಅರಿಕೆಗೆ ಬರುತ್ತಿರುವುದಕ್ಕೆ ತಂತ್ರಗ್ರಂಥಗಳಿಂದ ಬೆಂಬಲ ದೊರೆಯುತ್ತಿರುವುದನ್ನು ಇದೀಗ ಮನಗಂಡುದಾಗಿದೆ. ಇದಂತಿರಲಿ.

ದೇವತಾ ಜನನವನ್ನು ಕುರಿತ ಋಗ್ವೇದ ಸೂಕ್ತಸ್ಥ ವರ್ಣನೆಯಲ್ಲಿ, ಮಾನವನು 'ಮಾರ್ತಾಂಡ' ಸಿದ್ಧಿಯನ್ನು ಪಡೆದು 'ದ್ವಿ-ಜ'ನಾಗಿ ದೇವನಾಗುವ ಸಾಧನೆಯ ಪ್ರಸ್ತಾವನೆಯಿದ್ದು ಇನ್ನೊಂದು ಸೂಕ್ತದಲ್ಲಿ ಇದರ ಉತ್ತರಾರ್ಧವಿರುವುದಾಗಿ ಕಾಣುತ್ತದೆ. ಈ ಸಿದ್ಧಿಯನ್ನು ಪಡೆದು ದೇವತ್ವದ ಪದವಿಗೆ ಹೋದನೆಂಬ ಒಬ್ಬ (?) ಕಶ್ಯಪನ ಪವಾಡ ಸಿದ್ಧಿಗಳ ಮಹಾತ್ಮ್ಯವು, ಅಥರ್ವವೇದದಿಂದ ತೊಡಗಿ ಮಹಾಭಾರತದವರೆಗೂ ಕೇಳಬರುತ್ತಿದೆ. ಸೌರಭೂಮಿಕೆಯಂತೆ ವಿಶ್ವವನ್ನು ಆಳುತ್ತಿರುವು ಶಕ್ತಿಗಳು, ಕೇವಲ ವ್ಯಕ್ತಿನಿಷ್ಠವಾಗಿಲ್ಲ; ಮಾನವ-ಸಮಷ್ಟಿ ಪುರುಷನ ಅಂಶವು, ಒಂದು ವ್ಯಕ್ತಿಯೇ ಆಗಿದೆ. ಆದಕಾರಣ, ವ್ಯಕ್ತಿಯ 'ಅರ್ಥ'ವು-ಅದರ ಕೃತ-ಅರ್ಥತೆಯು, ಕೇವಲ ವಾದೀ ವೈಯಕ್ತಿಕ ಜೀವನ ಪಾತಳಿಯ ಮೇಲೆ ಎಂದೆಂದೂ ಸಿದ್ಧಿಸಲಾರದು. ಆದಕಾರಣ, ವ್ಯಕ್ತಿಯು 'ವೈಶ್ವಾನರ'-(: ವಿಶ್ವ-ಪುರುಷ) ತತ್ತ್ವದೊಡನೆ ತನ್ನ ಜೀವನ ಶ್ರುತಿಯನ್ನು ಸರಿಹೊಂದಿಸಿಕೊಳ್ಳಬೇಕು. ದಿಕ್ಕಾಲದ ಸಂದರ್ಭದ ಜೀವನ ರಂಗದಲ್ಲಿ ನಿನ್ನೆಗಳ ಪಾರ್ಶ್ವಭೂಮಿಯ ಮೇಲೆ ನಾಳೆಯತ್ತ ಗಮನವಿತ್ತು, ಇಂದಿನ ತಾಳ-ಲಯದಲ್ಲಿ ಅವನ ಪಾಡು ಸಾಗಬೇಕು. ಈ ಜೀವನ ದೃಷ್ಟಿಯ ವ್ಯಕ್ತಿಗೆ, ಸ್ವ-ರತಿ-ಆತ್ಮಕ್ರೀಡೆಯ ಜೀವನ ರೀತಿ ಆತ್ಮಹತ್ಯೆ, ಎಂದು ಎನಿಸದೆ ಇರದು. ಆದಕಾರಣ, ಸೌರಭೂಮಿಕೆಯ 'ಸವಿತೃ' ದೈವತವು, ಆಪ : ಸಲಿಲದಲ್ಲಿ-ಅಪಾಂ ನಪ್ಪವಿನ ಪಂಕ್ತಿಯಲ್ಲಿ ಇಲ್ಲ; ಇರಲಾರದು. ಅದು ಅದಿತಿ : ಅಪಾಂ-ನಪ್ಪವಿನ ಪಾತಳಿಯ ಆಚೆಗೆ ಚಿತ್-ಪ್ರಕಾಶ

ರೂಪದಲ್ಲಿ ಸ್ವಯಂ ಪೂರ್ಣರೀತಿಯಲ್ಲಿ ತೊಳಗಿ ಬೆಳಗುತ್ತಲಿದೆ; ವಿಶ್ವವನ್ನು ಆಳುತ್ತಲಿದೆ. ಅರ್ಥ : ವಿಚಾರ : ಜ್ಞಾನ ಎಂಬುದನ್ನು ಮಾನವನಲ್ಲಿ ಗ್ರಹಿಸಿಕೊಳ್ಳುವ ಶಕ್ತಿಯಿದೆ. ಆದರು, ಅದು ಮಾನವನಿಂದ ಸ್ವತಂತ್ರವಿದೆ. ಮೃತ್ಯುವು ವ್ಯಕ್ತಿಯನ್ನು ಒಯ್ದರೂ ಸಂತತಿಯಿಂದ ಜೀವನ ಪ್ರವಾಹವು ಸಂತತವಾಗಿ ಪ್ರವಹಿಸಲಿದೆ. ಆದುದರಿಂದ, ಸಮಾಜ ಸಮುಷ್ಟಿ : ವೈಶ್ವಾನರನು ಅ-ಮರನೇ ಆಗಿದ್ದಾನೆ. ವೈಶ್ವಾನರನಲ್ಲಿ ತಾದಾತ್ಮ್ಯಕ್ಕೆ ಬೇರೆಯಾದ ಅರ್ಥವುಂಟು. 'ಮೋಕ್ಷ' ಎಂಬುದಕ್ಕೆ ಋಗ್ವೇದದ ಮೂಲಭೂಮಿಕೆಯಲ್ಲಿ ಆಸ್ಪದವಿಲ್ಲ. ಆದರೆ, 'ಸಂಗಚ್ಛಧ್ವಂ; ಸಂವದಧ್ವಂ.....' ಎಂಬೀ ಬಗೆಯು ಸಮಷ್ಟಿ ಜೀವನ ಪ್ರೇರಣೆಯ ಆದೇಶದ ಮಂತ್ರದೊಡನೆ ಮುಕ್ತಾಯವಾಗುವ ಋಗ್ವೇದವೇ, ವೈಯಕ್ತಿಕ ಮೋಕ್ಷ ನಿರ್ವಾಣದ ವೈಚಾರಿಕ ಭೂಮಿಕೆಯ ಪೂರ್ವ ಪೀಠಿಕೆಯಾಗಿ ಮಾರ್ಪಟ್ಟಿದೆ!

ಆದರೆ, ಇದರ ಪತ್ತೆಯಾಗದಂತೆ ಈ ಸಂಹಿತೆಯನ್ನು ಹೊಂದಿಸಿರುವ ಈ ಸಂಕಲನಕಾರನ ಯೋಜನಾ ಕೌಶಲವು ಅದೆಷ್ಟು ಅಪೂರ್ವ; ಅನನ್ಯ ಸಾಧಾರಣ ಎನ್ನಬೇಕು! ವಿಂಟರ್‌ನಿಟ್ಸ್‌ನಂತಹ ಮಹಾವಿದ್ವಾಂಸನಾದ ಸಂಶೋಧಕನಿಗೆ ಋಗ್ವೇದದಲ್ಲಿ ಜೀವನ ಸಮ್ಮುಖ ವೈಚಾರಿಕ ಪ್ರೇರಣೆಯೆ ಉಂಟೆಂದು ಕಂಡಿದೆ :

> an active joyful and warlike people of simple and still savage beliefs, As yet we don't find in the songs of the R. V. that effeminate ascetic and pessimistic traits of the Indian character with which we shall meet again and again in later Indian literature.[೧೬]

ವಿಂಟರನಿಟ್ಸ್, ತಮಗೆ 'ಇನ್ನೂ (As yet) ಕಂಡಿಲ್ಲ' ಎಂದು, ಸಂಶೋಧಕನಿಗೆ ಒಪ್ಪುವ ಮುಂಜಾಗ್ರತೆಯ ಮಾತನ್ನೂ ಅಲ್ಲಿ ಹೇಳದೆ ಇಲ್ಲ. ಆದರೆ ಡಾ. ಆನಂದಕುಮಾರ ಸ್ವಾಮಿ ಅವರ ಪ್ರೇರಣೆಯಿಂದ ಈ ಸಂಶೋಧನದಲ್ಲಿ ಕೆಲಸ ಮಾಡಿರುವ ಹೆನ್ರಿ ಝಿಮ್ಮರ್ ಮತ್ತು ಬಾಶ್[೧೭] ಇವರಿಗೆ ಆಪ : ರಸ ಪಂಥೀಯ ಭೂಮಿಕೆಯ ಅಸ್ತಿತ್ವವು ಕಂಡಿರುವುದು ನಿಜ. ಆದರೂ ಅಗ್ನಿ ಹಾಗೂ ಆಪ ಇವೆರಡೂ ಎರಡು ಭಿನ್ನಜೀವನ ದೃಷ್ಟಿಗಳು, ಮತ್ತು ಇವೆರಡರ ಸ್ಪರ್ಧೆಯಲ್ಲಿ ಋಗ್ವೇದದ ಮೂಲಭೂಮಿಕೆ ತಲೆ ಕೆಳಗಾಗಿದೆ, ಎಂಬುದನ್ನು ವಿವರಿಸಿರುವ ಗ್ರಂಥವನ್ನು ಇನ್ನೂ ನೋಡಲು ದೊರೆತಿಲ್ಲ.

ಋಗ್ವೇದದ ಭೂಮಿಕೆಯಲ್ಲಾದ ವ್ಯತ್ಯಾಸದೊಡನೆ 'ಇಂದ್ರ' ಪ್ರತಿಮೆಯ ಸ್ವರೂಪದಲ್ಲಿಯೂ ಬದಲಾಗುತ್ತದೆ. ಆಪ : ರಸ ಸ್ವರೂಪೀ ಜೀವನ ಪ್ರವಾಹವನ್ನು ಎಲ್ಲೆಲ್ಲೂ ಆವರಿಸಿ ತಡೆಗಟ್ಟುವ, ಸಂಕಟ, ಮೃತ್ಯು, ಕತ್ತಲೆಯ ಸಾಂಕೇತಿಕ ಪ್ರತಿಮೆಯಾದ ಅಹಿ : ವೃತ್ರನ ಸಂಹಾರವೇ ಕರ್ತವ್ಯವಾಗುವ ಇಂದ್ರನು ಸಮಷ್ಟಿ ಜೀವನದ ಒಂದು ಜೀವಂತ ಪ್ರತಿಮೆಯಾಗಿರುತ್ತಾನೆ. ಋಗ್ವೇದದಲ್ಲಿ ಮೊದಲು; ಆದರೆ ಸಮಷ್ಟಿ ಜೀವನ ದೃಷ್ಟಿಯು ಲೋಪವಾಗಿ, ವೈಯಕ್ತಿಕ ಜೀವನದಲ್ಲಿ ವೈರಾಗ್ಯ-ಮೋಕ್ಷ ಇವೇ ಬಾಳಗುರಿಯಾಗುವ ಸಂದರ್ಭದ ಋಗ್ವೇದೀಯ ಕಥೆಗಳಲ್ಲಿ, ಸೂಕ್ತಗಳಲ್ಲಿ, ಇಂದ್ರನು ಇಂದ್ರಿಯಗಳ ವೃತ್ತಿಗಳ ಸಾಂಕೇತಿಕ ಪ್ರತಿಮೆಯಾಗುತ್ತಾನೆ! ಇದರಿಂದಾಗಿ ಇಂದ್ರ-ವೃತ್ರರ ದ್ವಂದ್ವದ ಇದಕ್ಕೂ ಮುಂಚಿನ ಪಾರ್ಶ್ವಭೂಮಿಯ ಭವ್ಯತೆ ಉದಾತ್ತತೆಯು ನಷ್ಟವಾಗುತ್ತದೆ.

> i) ಲೋಕ ಹಿತಕ್ಕಾಗಿ ಮಾನವ ಜೀವನ ಪಾತಳಿಯ ಮೇಲಣ ಯಾವುದೆ ಬಗೆಯ ಗಂಡಾಂತರ, ಅಪಮೃತ್ಯು, ಅಜ್ಞಾನದ ಕತ್ತಲೆಯನ್ನು ಹೊಡೆದು ಅಟ್ಟುವುದಕ್ಕಾಗಿ ತನ್ನ ಜೀವನವನ್ನು ಗಂಡಾಂತರಕ್ಕೆ ಈಡು ಮಾಡುವ ಸಾಹಸೀ ವೀರ : 'ಇಂದ್ರ'
>
> ii) ವೈಯಕ್ತಿಕ-ಆರ್ಥಿಕ ಉದ್ಧಾರಕ್ಕಾಗಿಪ್ರಯತ್ನ ಪಡುವ ಜೀವಿಯ ಸಂಯಮಾದಿ ವ್ರತಗಳನ್ನು ಭಂಗಗೊಳಿಸುವ ವ್ಯಾಮೋಹಕ ಇಂದ್ರಿಯ ವೃತ್ತಿಗಳ ಸಂಕೇತ: ಇಂದ್ರ

ಇವೆರಡರಲ್ಲಿ ಮೊದಲನೆಯ ಪ್ರತಿಮೆಯು ಸ್ತೋತ್ರದ ವಿಷಯವಾದರೆ, ಎರಡನೆಯದ್ದು ತುಚ್ಛ, ಹೀನ, ನಿಂದ್ಯಜೀವನದ ಪ್ರತಿಮೆಯಾಗುತ್ತದೆ. ಪುರಾಣ ಕಥೆಗಳಲ್ಲಿ ಖಲನಾಯಕನಾಗುವ ಇಂದ್ರನು ಈ ಎರಡನೆಯ

ಪಾತಳಿಯ ಮಹಿಮೆ. ಆಪ : ರಸಪಂಥೀಯರ ಮಾಟ : ಮಂತ್ರಗಳ ಸ್ವರೂಪದ ಕಟ್ಟುಕಥೆಗಳ ಒಟ್ಟಿನ ಪರಿಣಾಮದಲ್ಲಿ ಇಂದ್ರನ ತೇಜೋವಧೆಯಾದುದನ್ನು ಸಪ್ರಮಾಣವಾಗಿ ವಿವರಿಸಲು ಬರುತ್ತದೆ. ಅದಿತಿ, ವಿಷ್ಣುಗಳ ಸಂದರ್ಭದಿಂದ ಇದನ್ನು ಸ್ವಲ್ಪ ವಿವರಿಸಿದ್ದೂ ಉಂಟು.[೧೭]

ತ್ವಷ್ಟೃ-ಇಂದ್ರರ ಸಂಬಂಧವೂ ಅಭ್ಯಸನೀಯವಿದೆ. ವೃತನು 'ಅಹಿ' ಎಂಬುದು ನಿಃಸಂದಿಗ್ಧವಾಗಿದೆ. ಆದರೆ, ತ್ವಷ್ಟೃವೂ ನಾಗನು ಎಂಬುದನ್ನು ಬಾಯ್ಬಿಟ್ಟು ಹೇಳಿದವರಿಲ್ಲ. ಅದಿತಿಯು ಸಾರ್ಪರಾಜ್ಞಿಯಾಗಿರುವುದರ ಮನವರಿಕೆಯಾಗುವ ವರೆಗೆ ತ್ವಷ್ಟೃವಿನ ಮೂಲ ಆಕೃತಿಯನ್ನು ನಿರ್ಧರಿಸುವುದು ಅಶಕ್ಯವಾಗಿತ್ತು. ಕರ್ನಾಟ-ಮಹಾರಾಷ್ಟ್ರಗಳ ದೈವತಸಮೀಕ್ಷೆಯಲ್ಲಿ ಕಂಡ ದೇಮಾಯಿ-ದೇಮವ್ವನು.[೧೮] ಋಗ್ವೇದದ 'ದೇವಮಾತೆ' ಎಂಬ ಖ್ಯಾತಿಯ ಅದಿತಿಯೆ ಇರಲಾರಳೆ? ಎಂಬ ಸಂದೇಹ ಉಂಟಾಗಿತ್ತು. ಆದರೆ, ಜಾನಪದ ಗೀತೆಗಳ ದೇಮವ್ವನು ದುರ್ಗಾ-ಕಾಲಿ-ಮಾರಿಯ ಅಕ್ಕ; ಋಗ್ವೇದದ ಅದಿತಿದೇವಿಯ ಮೃತ್ಯುಸ್ವರೂಪವು ಅಲ್ಲಿ ಬಹಿರಂಗಕ್ಕೆ ಬರದಂತೆ ದಕ್ಷತೆ ವಹಿಸಲಾಗಿರುವುದರ ಮನವರಿಕೆಯಾದುದು ಇತ್ತೀಚೆಗೆ. ಮಂಗಲಸ್ವರೂಪಿಯಾಗಿ ಕಾಣುವ ಋಗ್ವೇದದ ಅದಿತಿ : ದೇವಮಾತೆಯನ್ನು ನಮ್ಮ ಗ್ರಾಮದೇವತೆ ದೇಮವ್ವನೆಂದು ಗ್ರಹಿಸುವುದು ಮೂರ್ಖತನವೆಂದು ಹಿಂದೆಗೆದ್ದಿದೆ. ಆದರೆ, ದೇವತಾ ಜನ್ಮದ ಕಥಾಭಾಗವಿರುವ ಸೂಕ್ತದಲ್ಲಿ ಅದಿತಿಯು ಮೃತ್ಯುಸ್ವರೂಪಳೆಂಬ ಸಂದೇಹವು ಮೂಡಿದರೂ,[೧೯] ಈ ದೇವಮಾತೆ, ದ್ಯಾಮವ್ವನೇ ಸರಿ ಎಂದು ಗ್ರಹಿಸಲು ಧೈರ್ಯ ಸಾಲಲಿಲ್ಲ. ಬೃಹದಾರಣ್ಯಕದಲ್ಲಿ ಅದಿತಿಯು, ಮೃತ್ಯುಸ್ವರೂಪಳೆಂದು ಸಿದ್ಧಪಡಿಸಲು ಹೇಳಿದ ನಿರುಕ್ತವು, ನನ್ನನ್ನು ನಿರುತ್ತರನನ್ನಾಗಿಸಿತು. ಕಂನಾಡಿನ ಜಾನಪದ ಗೀತಗಳಲ್ಲಿ ಸಂಸ್ತುತಳಾದ ದ್ಯಾಮವ್ವನೆ ಋಗ್ವೇದ ಸೂಕ್ತಗಳ ದೇವ ಮಾತೆ ಎಂಬುದನ್ನು ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆಯಲ್ಲಿ ಕಾಣಿಸಿದ್ದು ಆಯ್ತು.[೨೦] 'ಹೆಬ್ಬಾವಿನ ಹಾಗೆ ಮೆರೆಯೊ ದೇವೀರಮ್ಮ' 'ಘಟ ಸರ್ಪದ ಸತ್ಯವ್ವ', 'ಸುಂಟಿಗೆ ಕಾಳಿಂಗ', 'ಚಪಲ ಕಾಳಸರ್ಪ' ಬೆನವಣ್ಣನ ಪದಗಳಲ್ಲಿ, ಈ ಬಗೆಯ ನಾನಾ ಜಾನಪದ ಗೀತಗಳಿಂದ ದ್ಯಾಮವ್ವನ ಹಾವು ಕಂಡಿದ್ದರೂ ಋಗ್ವೇದದಲ್ಲಿ ಇದಕ್ಕೆ ಪ್ರಮಾಣಗಳು ದೊರೆತಿರಲಿಲ್ಲ. ಆದರೆ ಬೃಹದ್ದೇವತಾದ ಕಡೆಯಿಂದ ದೊರೆವ ಬೆಳಕಿನಲ್ಲಿ ಸಾರ್ಪರಾಜ್ಞೀ (ಅದಿತಿ) ದೃಷ್ಟಿ ಪಥದಲ್ಲಿ ಬಂದಳು. ಆಗ ಸಾರ್ಪರಾಜ್ಞಿಯಾದ ಅದಿತಿ 'ಪತಿ' ಅಥವಾ ಅದಿತಿಯಲ್ಲಿ ಇಂದ್ರನ ಜನನಕ್ಕೆ ಕಾರಣನೆಂದು ಬಗೆಯಲಾಗುವ ತ್ವಷ್ಟಾರನು ಸಹ ಸರ್ಪಸ್ವರೂಪನೇ ಇರಲಿಕ್ಕೆಬೇಕೆಂದು ಬಗೆಯಲೇಬೇಕಾಯಿತು.

ಇಂದ್ರನು 'ತ್ವಷ್ಟಾರನನ್ನು ' ಕೊಂದನು, ಎಂದರೇನು? ಕೊಂದುದು ಯಾತಕ್ಕಾಗಿ? ತ್ವಷ್ಟಾರನು 'ಅಹಿ' ಎಂಬುದು ನಿಜವಿದ್ದರೆ ಸಾಮಾಜಿಕ ಜೀವನಕ್ಕೆ ಗಂಡಾಂತರಕಾರಿ, ಎಂಬ ಕಾರಣದಿಂದ 'ಅಹಿ'ಯ ನಾಶ ಇಂದ್ರ ಸಂಕೇತದ ಸಾರ್ಥಕ್ಯವನ್ನೇ ಸೂಚಿಸುತ್ತದೆ. ಆದರೆ, ಇಂದ್ರನನ್ನು ಅಪರಾಧಿ ಎಂದು ಸೂಚಿಸಲು ಅಹಿ ಸಂಕೇತವನ್ನೇ ಪಿತೃಸ್ಥಾನದಲ್ಲಿ ಕಲ್ಪಿಸಿದ ಈ ತಂತ್ರವು ನಾಗದ ಗತಿಯಂತೆ ಈ ದೈವತದ ಆರಾಧನೆಯ ವೈಚಾರಿಕ ಭೂಮಿಕೆಯೂ ವಕ್ರವಕ್ರವಾಗಿಯೆ ಆಗುವಲ್ಲಿ, ಆದರ್ಶಾಧಿಷ್ಠಿತ ಆಚಾರ-ವಿಚಾರಗಳ ಆಕೃತಿಯೂ ಆರಾಧ್ಯ ಪ್ರತಿಮೆಯ ಸ್ವರೂಪದ್ದೇ ಆಗುವುದು. ಇದು ನಿಸರ್ಗಸ್ಥ ಒಂದು ಸಾರ್ವಕಾಲಿಕ ಸತ್ಯವೆ ಇರುವುದಾಗಿ ಗಮನಕ್ಕೆ ಬರುತ್ತದೆ.

ತ್ವಷ್ಟಾರನೆಂದರೆ ಬಡಿಗ. 'ತಕ್ಷ್ (: ಕೆತ್ತು-ಬಾಚು, (ನುಣುಪಾದ) ಆಕಾರ ನಿರ್ಮಿಸು) ಆಖ್ಯಾತ ಸಾಧಿತ ನಾಮ-ಸಂಕೇತ, ತ್ವಷ್ಟೃ ಮತ್ತು ತಕ್ಷಕ. ಮೊದಲನೆಯದು ಋಗ್ವೇದದಲ್ಲಿ ಮೊದಲು ಭೆಟ್ಟಿಯಾಗುತ್ತದೆ; ಎರಡನೆಯದು ಸರ್ಪಯಾಗದ ಪವಾಡ ಕಥೆಯಲ್ಲಿ ಕಾಣಿಸಿಕೊಳ್ಳುತ್ತದೆ. ತ್ವಷ್ಟಾರನು ಯಾರು, ಏನು ಎಂಬುದರ ಪತ್ತೆ ಯಾಗುವುದು ದುಸ್ತರವೇ ಸರಿ. ಇಂದ್ರನ ಜನನಕ್ಕೆ ತ್ವಷ್ಟಾರನು ಕಾರಣನು; 'ಲೋಕಮಾತೆ' : 'ವಿಶ್ವಜನನಿ' ಎಂಬ ಖ್ಯಾತಿಯ ಕನ್ಯಕಾ-ಪರಮೇಶ್ವರಿ ಅದಿತಿಯ ('ಅಯೋನಿ ಸಂಭವ') ಶಿಶು ಇಂದ್ರನು. ಈತನು ಹುಟ್ಟಿದೊಡನೆ ತಂದೆಯ ಪ್ರಾಣ ಹೀರಿದ ಹಾಗೆ ಒಂದು ಪವಾಡ ಕಥೆಯುಂಟು. ಲೋಕವಿಖ್ಯಾತ ಶಿಶುವಿಗೆ ಜನ್ಮವೀಯುವ ಪಿತನ ಸ್ಮೃತಿ, ಆತನ ಮಗನ ಮೂಲಕ ಉಳಿಯಬೇಕಾಗುತ್ತದೆ; ಎಂದರೆ ಆ ತೇಜಸ್ವೀ ಪುತ್ರನು ಹುಟ್ಟಿದಂದೇ,

ತಂದೆಯ ಜೀವಿತ ಕಾರ್ಯವು ಮುಗಿದಂತೆ! ಎಂದೊ, ಇನ್ನಾವ ಅರ್ಥದಿಂದಲೊ ತಂದೆಗೆ ಮೂಲವಾದ ಮಗು ಹುಟ್ಟುವುದು ಉಂಟು. ಅದೇನೆ ಇದ್ದರೂ, ತ್ವಷ್ಟ್ರ ಹೆಸರಿನ ಸಂಕೇತಾರ್ಥವನ್ನು ಗಮನಿಸಿದರೆ, ಈ ಪ್ರಪಂಚದ ಶಿಲ್ಪಿ (: ಜಕ್ಕಣ್ಣನು :) ಈತನು ಎಂದು ಸೂಚಿಸುವುದೇ ಈ ಪ್ರತಿಮಾ ನಿರ್ಮಾಣದ ಉದ್ದೇಶವಿರುವುದಾಗಿ ಸ್ಪಷ್ಟವಾಗುತ್ತದೆ.

'ಪ್ರಪಂಚ ನಿರ್ಮಾತೃ'ವು 'ತ್ವಷ್ಟಾರನು' ಸರಿ. ಇವನನ್ನು ಅದಿತಿಯ 'ಪತಿ' ಎಂದೂ ಸೂಚಿಸಲಾಗಿದೆ.[೨೧] ಅದಿತಿಯು ಆಪ: ರಸ ತತ್ತ್ವಾಧಿಷ್ಠಿತ ಪ್ರತಿಮೆ; ಸರ್ಪರೂಪಳು. ಇದು ನಿಶ್ಚಿತವಿರುವುದರಿಂದ ತ್ವಷ್ಟೃವು, ಅದಿತಿ ಪ್ರತಿಮಾ : ಸಂಕೇತಕ್ಕೆ ಅನುಗುಣವಾದ ರೂಪ-ಆಕೃತಿಯವನೇ ಇರಲಿಕ್ಕೆ ಬೇಕಾಯಿತು. ಈ ಸಂಗತಿ ಇನ್ನೂ ಕೆಲ ರೀತಿಯಿಂದಲೂ ದೃಢಪಡುತ್ತದೆ. 'ವಿಶ್ವಕರ್ಮ' ಎಂಬ ನಾಮ-ಸಂಕೇತದಲ್ಲೂ ಇವನು ಶಿಲ್ಪಿಪಾಂಚಾಲ ಕುಶಲ ಕಲಾನಿಪುಣ ಎಂಬ ಅರ್ಥವು ಇದೆ. ಅಲ್ಲದೆ, ಇವನೂ ಸೃಷ್ಟಿಕರ್ತನೇ! ಆಪ: ರಸ ಸ್ವರೂಪಿಯೆ.[೨೨] ಆದಕಾರಣ, ವಿಶ್ವಕರ್ಮ ಮತ್ತು ತ್ವಷ್ಟಾರ ಹೀಗೆ ಒಂದೇ ಅರ್ಥ-ಗರ್ಭದ ಎರಡು ಪ್ರತಿಮೆಗಳ ನಿರ್ಮಾಣದಲ್ಲಿ ಏನೊಂದು ಉದ್ದೇಶವಿರಬೇಕೆಂಬ ಸಂದೇಹಕ್ಕೆ ಅವಕಾಶ ದೊರೆಯುತ್ತದೆ. ತತ್ : ಏಕಂ : ಸತ್, ಇದುವೆ ಎಲ್ಲೆಲ್ಲೂ ವ್ಯಾಪಿಸಿದೆ. ಇದುವೆ ಸೃಷ್ಟಿ ನಿರ್ಮಾಣದ ಹಿಂದೆ ಇದೆ, ಎಂಬದನ್ನು, ನಾನಾ ರೀತಿಯಾಗಿ, ಪಾಠಕರ ಮೇಲೆ ಬಿಂಬಿಸಲು ನಡೆದ ಆಪ: ರಸ ಪಂಥೀಯ ಪ್ರಚಾರ ತಂತ್ರವೆ ಇದು, - ಇರಲಾರದೊ?

ವೇದಗಳಲ್ಲಿ ಬಂದಿರುವ ಈ ಬಗೆಯ ಬೇರೆ ಉದಾಹರಣೆಗಳ ವಿವರಣೆಗಿಂತ, ಕಂನಾಡಿನಲ್ಲಿ ಇಂದಿಗೂ ಜೀವಂತವಾಗಿ ಉಳಿದು ಬಂದಿರುವ 'ವಿಶ್ವಕರ್ಮ'ನ ಪರಂಪರೆಯ ಪಾಂಚಾಳ ವರ್ಗದ ಶಿಲ್ಪಕಲೆಯ ಅಜರಾಮರ ಸ್ಮೃತಿಯು ಋಗ್ವೇದ ಸೂಕ್ತಗಳ ತ್ವಷ್ಟಾರ=ವಿಶ್ವಕರ್ಮರ ವರೆಗೂ ನಮ್ಮನ್ನುಕೊಂಡೊಯ್ಯುತ್ತಿರುವುದು ಸೋಜಿಗದ್ದಾಗಿದೆ. ಪ್ರತಿಮಾ : ಸಂಕೇತಗಳ ಸುತ್ತಲೂ ಇರುವ 'ಸಮಯ'ದ (Cultural atmosphere) ಆವರಣವು, ಸಾಂಸ್ಕೃತಿಕ ಪೂರ್ವೋತ್ತರಗಳ ಸಮೀಕ್ಷೆಯಲ್ಲಿ ಅತ್ಯಂತ ಮೌಲಿಕ ಮಹತ್ತ್ವದ್ದಾಗಿರುತ್ತದೆ. ಈ ಆವರಣವು, ಥಕ್ಕನೆ ಕಲ್ಪಿತವಾದುದು ಇರಲಾರದೇ ಎಂಬ ಸಂದೇಹಕ್ಕೂ ಅವಕಾಶ ಉಳಿಯುವುದಿಲ್ಲ. ಈ ವಿಶ್ವಕರ್ಮ : ಪಾಂಚಾಲರ ಬೇರೆ ಬೇರೆ ಶಾಖೆಗಳಲ್ಲೂ ಇರುವ ಈ ಸ್ಮೃತಿ ಹಾಗೂ ಇದನ್ನು ಪುಷ್ಟೀಕರಿಸುವ ಕೆಲವೊಂದು ನಡೆವಳಿಗಳಿಂದ ದೊರೆಯುವ ಬೆಂಬಲದಿಂದಾಗಿ.

ಕರ್ಣಾಟದೊಳಗಿನ ಅಮರ ಶಿಲ್ಪಿ ಜಕ್ಕ(ಣ)<ಯಕ್ಷ ಈ ಶಬ್ದ-ಪ್ರತಿಮೆಯ ಮೂಲಕ ದೊರೆವ ಮೌಲಿಕ ಪ್ರಕಾಶವು, ಋಗ್ವೇದದ ತ್ವಷ್ಟಾರ= ವಿಶ್ವಕರ್ಮರ ಸ್ಪಷ್ಟೀಕರಣಕ್ಕೆ ಉಪಯುಕ್ತವಿದೆ. ಕೇನೋಪನಿಷತ್ತಿನ 'ಯಕ್ಷ'ವು ಋಗ್ವೇದ ತ್ವಷ್ಟಾರ-ವಿಶ್ವಕರ್ಮ ಬಗೆಯ ಅದೇ ಅರ್ಥಗರ್ಭದ ಇನ್ನೊಂದು ಸಂಕೇತ ಎಂಬುದನ್ನೂ ಮನಗಾಣಿಸಿ ಕೊಡುತ್ತಿದೆ. ಈ ಪಾಂಚಾಳ ಮನೆತನಗಳು 'ಕಾಳೀ' ಉಪಾಸಕರವು![೨೩] 'ಯಕ್ಷ' ಪ್ರತಿಮೆಯೊಡನೆ, ಕೇನೋಪನಿಷತ್ತಿನಲ್ಲಿ ಉಮಾ ಹೈಮವತಿಯು ಬರುತ್ತಾಳೆ.* ವೇದದಲ್ಲಿ ಬರುವ 'ರಥಕಾರ'ರ ಉಲ್ಲೇಖಗಳಲ್ಲಿ ಈ ವಿಶ್ವಕರ್ಮ ಪರಂಪರೆಯವರು ಕೆಲರು ಒಳಗೊಳ್ಳುತ್ತಿರಬೇಕು. ಋಭುಗಳು ಇವರಿಗೆ ಹತ್ತಿರದವರಾಗಿ ಕಾಣುತ್ತಾರೆ. ಸರ್ಪವಿದ್ಯೆಗಾಗಿ, ಮಂತ್ರ ಔಷಧಿಗಳಲ್ಲಿ ತಜ್ಞರೆಂದು, ನಿಕ್ಷಿಪ್ತ ಧನವನ್ನು ಕಾಣುವ ಅಂಜನಾದಿಗಳನ್ನು ಬಲ್ಲವರೆಂದು, ಪ್ರತಿಮಾ ಶಿಲ್ಪಗಳೆಂದು ಇವರ ಮನೆತನಗಳು ಕಳೆದ ತಲೆಮಾರಿನ ವರೆಗೂ ಪ್ರಖ್ಯಾತವಿದ್ದುವು.

---

* ಕೇನೋಪನಿಷತ್ತಿನ ಮೂರನೆಯ ಖಂಡದ ೧೫, ಆ ಮುಂದಿನ ಮಂತ್ರಭಾಗದಲ್ಲಿ ಯಕ್ಷನ ಬಗೆಗೆ ವಿವರಗಳಿವೆ. "ತದ್ಧೈಷಾಂ ವಿಜಜ್ಞೌತೇಭ್ಯೋ ಹ ಪ್ರಾದುರ್ಬಭೂವ ತನ್ನ ವ್ಯಜಾನಂತ ಕಿಮಿದಂ ಯಕ್ಷಮಿತಿ" ಎಂಬ ಮಂತ್ರದಲ್ಲಿ 'ಯಕ್ಷ'ನೂ ಆ ಮುಂದಿನ ಮಂತ್ರಭಾಗದಲ್ಲಿ "ಸ ತಸ್ಮಿನ್ನೇವಾಕಾಶೇ ಸ್ತ್ರೀಯಮಾಜಗಾಮ ಬಹುಶೋಭಮಾನಾಮುಮಾಂ ಹೈಮವತೀಂ ತಾಂ ಹೋವಾಚ ಕಿಮೇತದ್ಯಕ್ಷಮಿತಿ" ಎಂಬಲ್ಲಿ ಉಮಾ-ಹೈಮವತಿಯರ ವಿವರಣೆಗಳಿವೆ. ಶಂಬಾ ಜೋಶಿ ಅವರು ಯಕ್ಷ-ಉಮಾಹೈಮವತಿಯವರ ಶಬ್ದಸಂಕೇತಗಳ ಹಿಂದಿರುವ ಸಾಂಸ್ಕೃತಿಕ ಸಮಯಾಚಾರ ಹಾಗೂ ಸಂಕೇತಗಳ ಆಶಯಗಳನ್ನು ತಿಳಿಯುತ್ತಿದ್ದಾರೆ. (ಸಂ)

ಇಲ್ಲಿ ಗಮನಕ್ಕೆ ತರಬೇಕಾಗಿರುವ ಮುಖ್ಯಾಂಶವೆಂದರೆ, ಸೃಷ್ಟಿಕರ್ತನು ಯಾರು, ಎಂಬ ಋಗ್ವೇದದೊಳಗಿನ ತ್ವಷ್ಟಾರ-ವಿಶ್ವಕರ್ಮ-ಯಕ್ಷ ಪಂಥೀಯ ವಿಚಾರಧಾರೆಯ ಆಪ:ರಸ ಪಂಥೀಯರು, ಆರ್‍ಯಪೂರ್ವ ಭಾರತೀಯರು ಆಗಿರಬೇಕು, ಎಂದು ಇನ್ನೂ ಬೇರೆ ಬಗೆಯ ಪ್ರಮಾಣಗಳಿಂದಲೂ ಕಂಡು ಬರುತ್ತಿರುವ ಸಂಗತಿಗೆ, ಕಂನಾಡಿನ ವಿಶ್ವಕರ್ಮ-ಬ್ರಾಹ್ಮಣ ವರ್ಗದ ಸ್ಮೃತಿಗಳಿಂದಲೂ ಅವರೊಳಗಿನ ಕೆಲವೊಂದು ಆಚಾರಗಳಿಂದಲೂ ಬೆಂಬಲ ದೊರೆಯುತ್ತದೆ. ಆಪ : ರಸ ಸಂಪ್ರದಾಯಕ್ಕೆ ಪ್ರಾಧಾನ್ಯವಿರುವ ಅಥರ್ವವೇದದ ಮಂತ್ರೌಷಧಿ, ಮಾಟ ಮುಂತಾದವುಗಳ ಪರಂಪರೆಯನ್ನು ಇಲ್ಲಿಯ ವರೆಗೂ ಉಳಿಸಿಕೊಂಡು ಬಂದಿರುವ ವಿಶ್ವಕರ್ಮ ಬ್ರಾಹ್ಮಣರ ಸಾಂಸ್ಕೃತಿಕ ಪಾರ್ಶ್ವಭೂಮಿ ಇನ್ನುಳಿದ ಬ್ರಾಹ್ಮಣರೆಂಬವರ ಸಾಂಸ್ಕೃತಿಕ ಪಾರ್ಶ್ವಭೂಮಿಗಿಂತಲೂ ಕಡಿಮೆ ಪ್ರಾಚೀನವೆಂದು ಬಗೆಯಲು ಏನೂ ಆಧಾರಗಳಿಲ್ಲ. 'ಕರ್ಮಾರ ಇವ. ಅಧಮತ್' ಎಂದು ವಿಶೇಷರೀತಿಯಲ್ಲಿ ವರ್ಣಿತನಾದ ದೇವತಾ ಜನನ ಸೂಕ್ತದ ಈ 'ಬ್ರಹ್ಮಣಸ್ಪತಿ' ಯು ಆಪ: ರಸ ಪಂತೀಯ 'ವಿಶ್ವಕರ್ಮ' ಬ್ರಾಹ್ಮಣ ಪಂಥದ ಆದಿಗುರುಗಳಲ್ಲಿ ಒಬ್ಬನಿರುವ ಶಕ್ಯತೆಯಿದೆ. ಈ ಸೂಕ್ತದಲ್ಲೇ 'ಸಲಿಲ' ದೊಳಗಿಂದ ಆಗುವ 'ದೇವಜನನ'ದ ವರ್ಣನೆಯಿರುವುದರಲ್ಲಿ ತುಂಬ ಔಚಿತ್ಯವಿದೆ. 'ಗರ್ಭಂ ದಧ್ರ ಆಪಃ' ಈ ವರ್ಣನೆಯ ಸೂಕ್ತಕ್ಕೆ 'ವಿಶ್ವಕರನು' ದೈವತವಾಗಿದ್ದಾನೆ. ಹೀಗೆ ಋಗ್ವೇದದಲ್ಲಿ ಇಬ್ಬಗೆಯ 'ಬ್ರಹ್ಮನ್' ಇರುವುದು ಇಲ್ಲಿ ಬಯಲಿಗೆ ಬರುತ್ತಿದೆ. 'ಬೃಹಸ್ಪತಿ' ಆಗಿದೆ. ಈ ಋಗ್ವೇದ ಪಾಠದಲ್ಲಿ 'ಬ್ರಹ್ಮಣಸ್ಪತಿ' ಈ ಪ್ರತಿಮಾ : ಸಂಕೇತಗಳಲ್ಲಿ ಅಂತರವು ಕಾಣದಂತೆ, 'ಏಕಂ: ತತ್' ದೃಶ್ಯವೇ ಕಾಣುವಂತೆ ಸೂಕ್ತಗಳನ್ನು ಸಂಗ್ರಹಿಸಿ ಜೋಡಿಸಲಾಗಿದೆ. ಆದರೆ, ಜೀವಂತ ಸಾಮಾಜಿಕ ವ್ಯವಹಾರದಲ್ಲಿ ತೀರ ಸಮಾನಾರ್ಥಕವಾದ ಎರಡು ಸಂಕೇತಗಳ ಆವಶ್ಯಕತೆಯೆ ಇರಲಾರದು. ಸಮಾನಾರ್ಥವಾಗಿ ಎನಿಸುವ ಎರಡು ಸಂಕೇತಗಳು ರೂಢಿಯಲ್ಲಿ ಇರಬಹುದಾದರೂ ಅವುಗಳಲ್ಲಿ ಸೂಕ್ಷ್ಮವಾದ ಅಂತರವು ಇದ್ದೇ ಇರುತ್ತದೆ. '

ಋಗ್ವೇದದಲ್ಲಿ, ತ್ವಷ್ಟೃ=ವಿಶ್ವಕರ್ಮ ಪರಂಪರೆಯ ಪುರೋಹಿತ: ಬ್ರಹ್ಮನ್ ಹಾಗೂ ಇಂದ್ರ=ಸೂರ್ಯ ಪರಂಪರೆಯ ಪುರೋಹಿತ: ಬ್ರಹ್ಮನ್ ಹೀಗೆ ಒಂದು ಆಪ: ರಸ ಪಂಥೀಯ ಇನ್ನೊಂದು ಅಗ್ನ್ಯಾರಾಧನೆಯ ಯಾಜಕ ಪಂಥೀಯ ಇಬ್ಬರು 'ಬ್ರಹ್ಮನ್' ಇದ್ದ ಬಗೆಗೆ ಸಂಶಯವೆ ಇಲ್ಲ. ವಿಶ್ವಕರ್ಮ ಬ್ರಾಹ್ಮಣ ಪರಂಪರೆಯಲ್ಲಿ ಕಾಳೀದೇವಿಯು ಪೂಜ್ಯಳಾಗಿರುವಂತೆ, ವೀರಭದ್ರನ ಭಕ್ತಿಯೂ ಉಂಟು. ವೀರಭದ್ರನ 'ಗುಗ್ಗುಳ' ಕಾರ್ಯದ 'ಪುರವಂತಿಕೆ' ವೀರಶೈವ ಪಂಥೀಯರ ಕಡೆಗೂ ಕೆಲವೆಡೆಗಳಲ್ಲಿ ಉಂಟು. ಆದರೆ, ವಿಶ್ವಕರ್ಮ ಬ್ರಾಹ್ಮಣರಲ್ಲಿ ಇರುವ ಈ ಪುರವಂತಿಕೆ ವಿಶೇಷ ಅರ್ಥದಾಯಕವಾಗಿದೆ. 'ಸತಿ'ಯ ಆತ್ಮಾಹುತಿಯಾದ ಯಜ್ಞದ ಸಂದರ್ಭದಲ್ಲಿ ದಕ್ಷಬ್ರಹ್ಮನ ಚೆಂಡು ಹಾರಿಸಿದ ಆ ಘೋರ ಪ್ರಸಂಗದ ಸಂಕೇತ ಪುನರಾವೃತ್ತಿ ವೀರಭದ್ರನ ಗುಗ್ಗುಳದ ನೆಪದಿಂದ ನಡೆಯುತ್ತದೆ. ಮರ್ಸಿಯಾ ಇಲಿಯದೆ, ಇಧರ ತಾತ್ತ್ವಿಕ ಹಿನ್ನೆಲೆ ಬಹಳ ಸುಂದರವಾಗಿ ಮಾನಸ ಶಾಸ್ತ್ರೀಯ ರೀತಿಯಲ್ಲಿ ವಿವರಿಸಿರುವುದು ಹೀಗೆ :

> Abolition of time through the imitation of Archetypes and repetition of paradigmatic gestures. Every sacrifice repeats the initial sacrifice and coincides with the profane time and duration are suspended, - through such imitation man is projected into mythical epoch in which the archetypes were first revealed[೨೪]

'ಆದಿ'ಯಲ್ಲಿ ಯಾರು? ಎಂದು ಏಕಂ : ಸತ್ ಪಂಥೀಯ ಒಳಪಂಗಡಗಳಲ್ಲಿ ಇಂದಿಗೂ ಈರ್ಷ್ಯೆಯುಂಟಲ್ಲ, ಇದೇ ಸ್ವ-ಭಾವವೇ, 'ತ್ವಷ್ಟೃವೇ ಶ್ರೇಷ್ಠ', ಎಂದು ಸಿದ್ಧಪಡಿಸಲು, ಅವನನ್ನು ಇಂದ್ರನ (ಎಂದರೆ ಪರ್ಯಾಯದಿಂದ ಸೂರ್ಯನ) ತಂದೆ ಎಂಬ ಗ್ರಹಿಕೆಯಾಗುವ ಹಾಗಿನ ಪಾತ್ರರಚನೆಯನ್ನು ಕಲ್ಪಿಸಿರುವುದಾಗಿ ಕಾಣುತ್ತದೆ. ಈ ಮೊದಲು ಹೇಳಿರುವಂತೆ ಅದಿತಿ ಪತಿ: ತ್ವಷ್ಟೃ : ಅಹಿಸ್ವರೂಪ; ಎಂದರೆ ಮೃತ್ಯು-ಕತ್ತಲೆಯ ಸಂಕೇತ. ಇಂದ್ರನು

ಜೀವನಸ್ಥ ಚೈತನ್ಯದ ಪ್ರತಿಮೆ, ಪ್ರಪಂಚವು ಮೃತ್ಯುವಿನೊಳಗಿಂದ ಹುಟ್ಟಿದೆ, ಎಂಬ ಆಪ: ರಸ ಸಿದ್ಧಾಂತವು ಈ ಪಾತ್ರರಚನೆಯ ತಳಪಾಯದಲ್ಲಿದೆ. ಈ ಸಿದ್ಧಾಂತವೇ ಅದಿತಿ: ಮೃತ್ಯುವು ಇಂದ್ರ, ಸೂರ್ಯ, ಸವಿತೃ, ವರುಣ ಮುಂತಾದ ಸೌರ ದೇವತೆಗಳ ತಾಯಿ, ಎಂದು ಪ್ರತಿಪಾದಿಸಿರುವಲ್ಲಿಯೂ ಉಂಟು!

ಮೃತ್ಯುವಿನಿಂದ ಜೀವ-ಚೈತನ್ಯದ ಸೃಷ್ಟಿಯಾಗಿದೆ, ಎಂಬುದು ಆಪ: ರಸ ಪಂಥೀಯ ಆಚಾರ-ವಿಚಾರಗಳ ತಳಪಾಯದ ಮೂಲಭೂತ ಸಿದ್ಧಾಂತವಾಗಿದೆ. ಎಂದು ಇದನ್ನು ಊಹಿಸಿ-ಅನುಮಾನಿಸಿ ಕಂಡುಕೊಳ್ಳಬಹುದು; ಅಲ್ಲದೆ, ಈ ಮೊದಲು ಹೇಳಿರುವ ಬೃಹದಾರಣ್ಯಕ ಉಪನಿಷತ್ತು[೨೫] ಗೀತೆಯ ವಿಶ್ವರೂಪ ದರ್ಶನದ ಶ್ಮಶಾನದ ವರ್ಣನೆ ಹಾಗೂ ಜಗತ್ಕರ್ತನೆಂಬ ವಿಷ್ಣುವು ತಾನೇ 'ಕಾಲೋऽಸ್ಮಿ' ಎಂದು ಹೇಳುತ್ತಿರುವುದು. ಲೋಕ ಜನನಿ ಆದಿ ಮಾತೆ 'ಕಾಲಿ' ಎಂಬ ಶ್ರದ್ಧೆ. ಇತ್ಯಾದಿ ಲಿಖಿತ ಪ್ರಮಾಣಗಳುಂಟು. ಚಿತ್ರಮೂರ್ತಿ ಸ್ವರೂಪದಲ್ಲಿ ದೈವತ ಪ್ರತಿಮೆಗಳೊಡನೆ ಇರುವ ವಿವಿಧ ಸ್ವರೂಪದ ಸರ್ಪಸಂಕೇತಗಳು. ಇವೆಲ್ಲ ಕಲ್ಲು ಕಂಚು ಮೊದಲಾದ ರೂಪದಲ್ಲಿ ಮಾಡಿರುವ ಕಣ್ಣಾರೆ ಕಾಣಬಹುದಾದ ಮೂರ್ತಿಗಳು. ಪ್ರಳಯ ತಾಂಡವ ಮೂರ್ತಿ ಸೌಂದರ್ಯ-ಸಾಹಿತ್ಯ-ಕಲೆ ಇತ್ಯಾದಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಭಾರತೀಯರಿಗೆ ಪ್ರೇರಕ ಆದರ್ಶ; ಪ್ರಳಯ ಭೈರವನೆ ರಾಷ್ಟ್ರೀಯ ಮಟ್ಟದಲ್ಲಿ ಜೀವನಕ್ಕೂ ಆದರ್ಶ! ಆದರೆ, 'ಮೃತ್ಯುವಿನಿಂದ ಜೀವ-ಚೈತನ್ಯದ ಸೃಷ್ಟಿಯಾಗಿದೆ' ಎಂಬುದು ಕೇವಲ ಶೈವ ಪಂಥೀಯರ ಶ್ರದ್ಧೆ; ವೈಷ್ಣವ ಪಂಥೀಯರಿಗೆ ಇದು ಮಾನ್ಯವಿಲ್ಲ, ಎಂದು ವಿಖ್ಯಾತ ವಿಚಾರವಂತ, ಇತಿಹಾಸಕಾರ ಭಾಷಾಮ್ (A. L. Basham) ಅವರು ಗ್ರಹಿಕೆಯಾಗಿದೆ! ಅವರು ಬರೆಯುವುದೇನಂದರೆ, "ರುದ್ರನು ವಿಷ್ಣುವಿನಂತಿಲ್ಲ. (unlike ವಿಷ್ಣು)."

> In........ fierce Vedic god Rudra with whom ಶಿವ is merged (there are) elements of a non-Aryan fertility deity. Through developed Saivaite sects often made of their chosen deity a wholly moral and paternal father in heaven, Shiva's character, unlike that of Vishnu, is ambivalent.[೨೬]

ವಿಷ್ಣು ಪ್ರತಿಮಾ ನಿರ್ಮಾಣದಲ್ಲಿ ಎರಡು ತೀರ ಭಿನ್ನ ಶೈಲಿಗಳನ್ನು ಕಾಣಬಹುದು; ಭಶಾಮ್ ಹೇಳುವಂತೆ

> Vishnu is generally thought of as wholly benevolent. The god works continuously for the welfare of the world, with this in view has from time to time incarnated himself, wholly or partially. (P. 301).

'ಮನವೆ ಹಿತಾಯ' ವಿಷ್ಣುವಿನ ಅವತಾರವಿರುವ ಹಾಗಿನ ಉಲ್ಲೇಖವು ಋಗ್ವೇದದಲ್ಲಿಯೆ ಉಂಟು. ಆದರೆ, ಇದರ ಜೊತೆಗೆ ವಿಷ್ಣುವು ಪ್ರಚ್ಛನ್ನ ವೃತ್ರನಾಗಿರುವುದೂ ನಿಜ. 'ವ್ಯಾಪ್ನೋತಿ ಇತಿ' ವಿಷ್ಣು ಎಂಬ ವ್ಯಾಖ್ಯೆ ವೃ= ಆವರಿಸು ವ್ಯಾಪಿಸುವವನು ವೃತ್ರ! ಇದು ಮೃತ್ಯುರೂಪ ಎಂದು ಗೀತೆಯಲ್ಲೇ ಹೇಳಿದ್ದನ್ನು ಭಾಶಾಮ ಹೇಗೆ ಗಮನಿಸಿಲ್ಲವೊ, ಸೋಜಿಗ. 'ಅಮೃತವೂ ನಾನೇ; ಮೃತ್ಯುವೂ ನಾನೇ' ಎಂಬ ಕರಾಳಕಾಲನು, ಲೋಕಕ್ಷಯವೇ ಕರ್ತವ್ಯ ಎಂಬ ಗೀತೆಯ ವಿಷ್ಣು 'ambivalent' ಅಲ್ಲದೆ ಮತ್ತೇನು? ಸಮಾಜಧಾರಣೆಗಾಗಿ ಅವತಾರ ಧರಿಸುವ ವಿಷ್ಣು, ಶ್ರೌತಸ್ಮಾರ್ತ : ಸೌರ ಭೂಮಿಕೆಯ ಶೈಲಿಯ ಪ್ರತಿಮೆ! ಆದರೆ ಇವನು ಮರಳಿ ಹಾವು ಆಗಿದ್ದುಂಟು!

ಆರ್ಯ-ಅನಾರ್ಯ ಭೇದದ ಆಚಾರವು, ಅನುಲೋಮ-ಪ್ರತಿಲೋಮ ವಿವಾಹಗಳು ಪ್ರಾರಂಭವಾದ ದಿನವೇ ಮೃತ್ಯುಮುಖದಲ್ಲಿ ಪ್ರವೇಶಿಸಿದ್ದುಂಟು. ವೈದಿಕ ಋಷಿವರ್ಗದ ಜನ್ಮಕಥೆಗಳು ಇದಕ್ಕೆ ಸಾಕ್ಷಿ. ನಿನ್ನೆಗಳೊಳಗಿಂದ ಇಂದಿಗೂ ಉಳಿದ ಜಾತೀಯ ವೈಷಮ್ಯದ ವಿಷವನ್ನು ನಷ್ಟ ಪಡಿಸುವುದು ಮೊದಲ ಕರ್ತವ್ಯವಾಗಿರುವಂತೆ, ಇನ್ನೊಂದು ಪ್ರಶ್ನೆಯನ್ನು ಸೂಕ್ಷ್ಮವಿಚಾರವಂತರು ಉತ್ತರಿಸುವುದು ಅವಶ್ಯವಿದೆ: ಮೃತ್ಯು-ಸ್ವರೂಪ. ತಂದೆ ಎಂಬ ತ್ವಷ್ಟೃವನ್ನು ಕೊಂದಲ್ಲಿ, ಜೀವನ ಸಂಕೇತ ಮಗನು: ಇಂದ್ರನು ಅಪರಾಧಿಯೆ? ಋಗ್ವೇದದ ಈ ಪ್ರತಿಮಾ:

ಸಂಕೇತದಲ್ಲಿ ಇನ್ನೂ ಒಂದು ಪದರು ಉಂಟು: ರೇಶಿಮೆ ಗಂಡುಹುಳು, ಹೆಣ್ಣಿನ ಸಂಪರ್ಕದಲ್ಲಿ, ಹೆಣ್ಣಿಗೆ ತನ್ನ ಸರ್ವಸ್ವ ದಾನಮಾಡಿ, ಮಡದಿಯ ಮಗ್ಗುಲಲ್ಲೆ ಮರಣ ಹೊಂದುತ್ತದೆ! ನಿಸರ್ಗಸ್ಥ, ತಾಯ್ತ ತನದ ಅಥವಾ ಪುತ್ರಜನ್ಮದ ತೀರ ಆರಂಭದ ಈ ಪ್ರಾಕೃತಿಕ ದೃಶ್ಯವೇ ಮಾನವೀಯ ಸಂಸ್ಕೃತಿಯ ಆರಂಭದ ಅಧ್ಯಾಯಗಳ ವರ್ಣನೆಯ ವಿಷಯವಾಗುತ್ತದೆ. ಋಗ್ವೇದದೊಳಗಿನ ಊರ್ವಶೀ-ಪುರೂರವ ಇವರ ಪ್ರೇಮ ಸಂಬಂಧದಲ್ಲಿ, ಪ್ರತಿಭಾಶಾಲಿ-ನೂತನ ವಿಚಾರಿ ಡಿ.ಟಿ. ಕೋಸಾಂಬಿಯವರಿಗೆ ಈ ಬಗೆಯ ಒಂದು ನೋಟವೇ ಕಂಡಿದ್ದು, ಇದನ್ನು ಅವರು ತಮ್ಮ ಇತಿಹಾಸ ಗ್ರಂಥದಲ್ಲಿ ನಿವೇದಿಸಿದ್ದಾರೆ. ಇದು ಹೇಗೆಯೆ ಇರಲಿ, ಇಂದ್ರನು 'ತಂದೆ' (ಎಂಬ ಮೃತ್ಯುಸ್ವರೂಪ: ಪ್ರಚ್ಛನ್ನ 'ಅಹಿ' ಸ್ವರೂಪ) ತ್ವಷ್ಟೃವನ್ನು ಕೊಂದನು, ಎಂಬ ಆರೋಪವನ್ನು ಹೊರಿಸುವ, ಹಾಗೂ ಅದನ್ನು ನಿವೇದಿಸುವ ಕವಡಿನ ರೀತಿ, ಋಗ್ವೇದದ ಈ ಪಾಠವು ಇಂದ್ರಪರ ಸಂಹಿತೆ ಯಾಗಿರಲಾರದು, ಎಂಬುದನ್ನೇ ಸೂಚಿಸುತ್ತದೆ. ಅಲ್ಲದೆ ಋಗ್ವೇದದಲ್ಲಿ ನಿರಾಶಾವಾದವಿಲ್ಲ. ಐಹಿಕ ಜೀವನವು ಪಾಪಮಯ ಭವಬಂಧನ, ಎಂಬೀ ಕರ್ಮವಾದಕ್ಕೂ ಈ ವೇದದಲ್ಲಿ ಅವಕಾಶವಿಲ್ಲ ಎಂಬ ವಿಖ್ಯಾತ ಸಂಶೋಧಕರಿಗೆ ಎನಿಸಿದೆ! ಇಂತಹ ಜೀವನ ಸಮ್ಮುಖ ಪ್ರೇರಣೆಯ ಋಗ್ವೇದದಲ್ಲಿ, ಮೃತ್ಯುವನ್ನು ಪ್ರಪಂಚದ ಪ್ರಾರಂಭದ ಬಿಂದುವಾಗಿ ಗ್ರಹಿಸಲು ಶಕ್ಯವಿಲ್ಲ. ಸೌರಭೂಮಿಕೆಯಲ್ಲಿ ಮರಣ: ಕತ್ತಲೆ; ಪ್ರಕಾಶದ ಅಭಾವ; ಹೊರತು 'ಅಸ್ತಿ' ಪಕ್ಷದ ಅರ್ಥವಿಲ್ಲ 'ರಾತ್ರಿಯು ಸೂರ್ಯನಿಗೆ ಜನ್ಮಕೊಡುತ್ತದೆ ಎಂಬ ದೃಶ್ಯಕ್ಕೆ ಅಲ್ಲಿ ಅವಕಾಶವೆ ಇಲ್ಲ. 'ಮೃತ್ಯುವು ಜೀವನದ ತಂದೆ' ಎಂಬ ಶ್ರದ್ಧೆಯು, ಬಾಳಿನಲ್ಲಿ ಒಂದರೆ ಗಳಿಗೆಯೂ ಆಸ್ಥೆಯನ್ನುಂಟು ಮಾಡಲಾರದು. ಈ ಕಾರಣದಿಂದಲೂ ಇಂದಿನ ಸಂಹಿತೆ, ಮೂಲ ಪಾಠವೆನ್ನಲು ಆಗುವುದಿಲ್ಲ. ಭಗವದ್ಗೀತೆಯು 'ತ್ರೈಗುಣ್ಯಾಃ ವಿಷಯೋಃ ವೇದಾಃ......' ಎಂದು ಮುಂತಾಗಿ ಮೂದಲಿಸುವುದಕ್ಕೆ ಪ್ರಸ್ತುತ ಋಗ್ವೇದ ಪಾಠದಲ್ಲಿ ಅವಕಾಶವೆ ಇಲ್ಲ! ಪ್ರಪಂಚವೇ ಮಾಯೆ ಅಥವಾ ಮೃತ್ಯುರೂಪ ಎಂಬ ಹಾಗಿನ ದೃಶ್ಯವನ್ನು ಕಣ್ಣೆದುರು ನಿಲ್ಲಿಸುವ - ಅದಿತಿ ಮೃತ್ಯು) ಪುತ್ರ : ಇಂದ್ರ ಸೂರ್ಯಾದಿ ಆದಿತ್ಯರು! ನಿರ್ಮಿತ ಈ ವಿಶ್ವವನ್ನು ವರ್ಣಿಸುವ ಇಂದಿನ ಋಕ್ ಸಂಹಿತೆಯು, ಗೀತೆಯ ಟೀಕೆಯ ಬೆಳಕಿನಲ್ಲೂ, ಮೂಲಪಾಠವಿರಲಾರದೆಂದೇ ಸಿದ್ಧವಾಗುತ್ತದೆ.

ಅಹಿ: ವೃತ್ರ - ಇಂದ್ರರಲ್ಲಿ ಇರುವ ವಿರೋಧ ವೈರ ಭಾವವು ಸರ್ವಶ್ರುತವಿದೆ. ಆದರೆ, ತ್ವಷ್ಟೃ ಹಾಗೂ ಇಂದ್ರ ಇವರಲ್ಲಿ ತಂದೆ-ಮಗನ ಆತ್ಮೀಯ ಸಂಬಂಧವನ್ನು ತೋರಿಸಿ ತ್ವಷ್ಟಾರನ ಸರ್ಪತ್ವವನ್ನು ಬಚ್ಚಿ ಇಟ್ಟಿರುವುದರಿಂದ, ಸರ್ಪ : ಮೃತ್ಯುವಿನ ವಿರೋಧವೇ ಯಾರ ಮುಖ್ಯ ಕಾರ್ಯವೊ, ಆ ಮಾನವ ಜೀವನದ ಪ್ರತೀಕ ಇಂದ್ರನು, ಪ್ರಚ್ಛನ್ನ ಸರ್ಪ : ತ್ವಷ್ಟಾರನನ್ನು ಕೊಂದುದು ಅಪರಾಧ, ಎಂಬ ಹಾಗಿನ ಗ್ರಹಿಕೆಗೆ, ಯೋಜನಾ ಪೂರ್ವಕವಾಗಿ ಅವಕಾಶವನ್ನು ಕಲ್ಪಿಸಿದ್ದಾಗಿ ಕಾಣುತ್ತಿದೆ. ತ್ವಷ್ಟಾರ-ಇಂದ್ರರಲ್ಲಿ ಇರುವ, ಇದೇ ಬಗೆಯ ಅಂತರ್ಗತ ವಿರೋಧೀ ಸಂಬಂಧವೇ ಇದ್ದರೂ ತೋರಿಕೆಯಲ್ಲಿ ಮಿತ್ರತ್ವದ ವೇಷ ಧರಿಸಿರುವ 'ಇಂದ್ರಸ್ಯ ಯುಜ್ಯಃ ಸಖಾ' ಎಂದು ವರ್ಣಿಸಲ್ಪಟ್ಟಿರುವ ವಿಷ್ಣು ಪ್ರತಿಮೆಯೂ ವಿಚಾರಾರ್ಹವಾಗಿದೆ.

ವಿಷ್ಣುವನ್ನು ಇಂದ್ರನ ಸಂಗಾತಿಯಾಗಿಸುವ ಋಗ್ವೇದದ ಈ ಪಾಠದೊಳಗಿನ ಪ್ರತೀಕಾತ್ಮಕ ಸಂಕೇತವು ವೈಶ್ವಿಕ ಸತ್ಯದ ಒಂದು ನಿಲುಮೆಯನ್ನು ಗಮನಕ್ಕೆ ತಂದು ಕೊಡುತ್ತದೆ: ಮೃತ್ಯುವು ಜೀವನದ ನಿತ್ಯ ಸಂಗಾತಿ: ಸಖ. ಮಹಾಭಾರತದಲ್ಲಿ ಈ ಪ್ರತಿಮಾ: ಸಂಕೇತವೆ, ನರ-ನಾರಾಯಣ (: ಕೃಷ್ಣ) ಈ ಜೋಡಿಯ ಮೂಲಕ ಅಭಿ ವ್ಯಕ್ತಿಯನ್ನು ಪಡೆದಿದೆ. ನಾರಣ=ಹಾವು; ಶೇಷ: ಬಲರಾಮನ ತಮ್ಮನೆಂಬ ಸೂಚಕ ಸಂಕೇತದಿಂದ ಕೃಷ್ಣನೂ ಸರ್ಪಸ್ವರೂಪನೆಂದು ಧ್ವನಿತ ಪಡಿಸಲಾಗಿದೆ! ಈ ಮೃತ್ಯುಸ್ವರೂಪನಾದ 'ಭಗವಂತನು' ಯಾದವ ಕೃಷ್ಣನ ವೇಷದಲ್ಲಿ 'ನರ'ನಿಗೆ ಹೇಳುತ್ತಾನೆ: 'ನೀನು ನನ್ನ ಭಕ್ತನಾಗಿದ್ದೀಯೆ! ('ಭಕ್ತೋಽಸಿ ಮೇ); ಇಷ್ಟೆ ಅಲ್ಲ; ನೀನು ಗೆಳೆಯನೂ ನಿಜ' (ಸಖಾಚ)! ಋಗ್ವೇದ ಸೂಕ್ತದಲ್ಲಿ ವಿಷ್ಣುವು, ಇಂದ್ರನ ಗೆಳೆಯನು ನನ್ನ ಗೆಳೆಯನು (ಇಂದ್ರಸ್ಯ ಯುಜ್ಯಃ ಸಖಾ) ಎಂದಿದೆ. ಆದರೆ, ಮಹಾಭಾರತದಲ್ಲಿ ವಿಷ್ಣುವಿನ ಅವತಾರವೆಂಬ ಕೃಷ್ಣನನ್ನು (ಮೃತ್ಯು),

ಮಿತ್ರನೆಂದು ನಂಬಿದ 'ನರನು' ಇಂದ್ರನ ಅಂಶ, ಎಂದು ಸಾಂಪ್ರದಾಯಿಕ ಶ್ರದ್ಧೆ! ಅಹಾ, ಎಷ್ಟು ಸುಸಂಗತಿ ಇದು. ಋಗ್ವೇದ ಹಾಗೂ ಗೀತೆಯಲ್ಲಿ! ಅಥವಾ 'There is method in madness' ಎನ್ನಬೇಕೊ?

ನರರು, ಮೃತ್ಯುವಿನ ಮಿತ್ರರು ಎಂಬುದು ಗೀತೆಯ ವಚನ ಹಾಗೂ ಮೃತ್ಯುವು, ನರರ ಮಿತ್ರ ಎಂಬುದು ಋಗ್ವೇದ ವಾಕ್ಯವಾಗಿದೆ. ಇವೆರಡೂ ಸಮಾನ ಅರ್ಥದುವು ಎಂದು ಅನ್ನಲಾದೀತೆ? ಮೃತ್ಯುವು ಎಂದೆಂದಿಗೂ ನರರನ್ನು ಬೆನ್ನಟ್ಟಿಕೊಂಡು ಹೊರಟಿದೆ, ನೆಳಲಿನಂತೆ, ಎಂಬುದು ವೇದದ ಆಶಯವೆಂದಲ್ಲಿ, ಮಾನವನು ನೆಳಲಂತಿರುವ ಮೃತ್ಯುವನ್ನು ಬೆನ್ನಟ್ಟಿಕೊಂಡು ಹೊರಟ್ಟಿದ್ದಾನೆ, ಎಂದು ಸಿದ್ಧಪಡಿಸ ಬಯಸುವ ಆಪ : ರಸ ಪಂಥೀಯ ಪ್ರಣೇತಾರ ವೇದವ್ಯಾಸರು ಪ್ರತಿಪಾದಿಸುವ ಈ ಆಶಯ, ಇವೆರಡೂ ಸಮಾನ ಸ್ವರೂಪದ ಜೀವನದ ಆ-ಕೃತಿಗಳಾಗ ಬಲ್ಲವೊ? ಮೂಲವೇದವು, ಐಹಿಕ ಜೀವನವನ್ನು ವಿಧಾಯಕ ವಾಸ್ತವ ವಸ್ತುವಿನ ಪ್ರತ್ಯಕ್ಷ ಆಕೃತಿ ಎಂಬ ಶ್ರದ್ಧೆಯುಳ್ಳದಾಗಿದ್ದರೆ, ವೇದ (?) ವ್ಯಾಸ ಪ್ರಣೀತ ಎಂದರೆ ವ್ಯಾಸ ಪರಂಪರೆಯ ಋಗ್ವೇದದ ಆ-ಕೃತಿ ಮೃತ್ಯು ಅಥವಾ ಅನೃತ ಸ್ವರೂಪಿ: ಸರ್ಪ ಸ್ವರೂಪಿ ಆಗಿದೆ, ಎಂಬುದು ಇಲ್ಲಿ ಸುಂದರವಾಗಿ ಬಯಲಿಗೆ ಬರುತ್ತದೆ! ೫=ಜೀವನ; + ೫=ಮೃತ್ಯು ಇವೆರಡನ್ನೂ ಸಮಾನವೆಂದು ಬಗೆದು ಬಾಳು ನಡೆಸಿರುವ ಭಾರತೀಯ ಸಂಸ್ಕೃತಿಯ ಆಡಾವೆಯೇ ಶಿಲ್ಕು, (balance) ಏನು? ಭಾರತೀಯ ಜೀವನದ ಆದರ್ಶ ಸತ್ತಬಳಿಕಿನ ಸಿದ್ಧಿ: 'ಮೋಕ್ಷ' ಕೈಲಾಸ, ನಿರ್ವಾಣ! ಸರಿ, ಐಹಿಕ ಜೀವನ ಅರ್ಥ-ಶೂನ್ಯ; ಮಾತ್ರವಲ್ಲ ಅನರ್ಥಕಾರಿ! 'ಅತಿ ಆದಕಾರಣ ಮರಣವೇ ಮಹಾನವಮಿ'!

ಇಂದ್ರಸಖನೆಂಬ ವಿಷ್ಣುವಿನ ಪ್ರತಿಮಾ ರಹಸ್ಯದ ಗುಹ್ಯಾರ್ಥ, ಇದಕ್ಕಿಂತ ಬೇರೆ ಆಗುತ್ತಿದ್ದಲ್ಲಿ, ನನಗೆ ಅದು ಇಷ್ಟವೇ ಇದೆ. ಆದರೆ, ಋಗ್ವೇದದಲ್ಲಿ ತೋರಿಸಿದ್ದು, ವಿಷ್ಣುವು ಇಂದ್ರನ ಸಖ ಎಂಬ ಹಾಗಿನ ಸೋಗು; ಏಕೆಂದರೆ; ಉಪನಿಷತ್ತಿನ 'ಸ-ತಿ-ಯಂ' ಈ ಪ್ರತಿಮಾ-ಸಂಕೇತದ ಮೂಲಕವಾಗಿ ಹೇಳಲಾದ ವಿವರಣೆಯಲ್ಲಿ ಇದು ತಿರುವು ಮುರುವಾಗಿದೆ.[೨೭] ವ್ಯಾಸರು ಮಾಡಿದ ಜೀವನದ ಅರ್ಥವು ಅವರದೇ ಸ್ವಂತದ್ದಲ್ಲ; ಉಪನಿಷತ್ತುಗಳಲ್ಲೆ ಈ ವಿಚಾರವು ಉಂಟು. 'ಸರ್ವೋಪನಿಷದೋ ಗಾವೋ' ಎಂಬ ರೂಪಕದ ಮೂಲಕ ಹೇಳಲಾದ ಗೀತಾ-ಧೇನುವು ಕರೆದ ನೊರೆಹಾಲು ಮಾನವ ಜೀವನಕ್ಕೆ ನಂಜೋ ಅಮೃತ ಸ್ವರೂಪಿಯೋ? ಎಂಬುದನ್ನು ಸೂಜ್ಞರೇ ನಿರ್ಧರಿಸಲಿ. ನಾರಾಯಣ-ವಿಷ್ಣು-ಕೃಷ್ಣರು ನಾಗ ಸ್ವರೂಪರೆಂಬುದು ನಿಜವಿದ್ದಲ್ಲಿ, ನಾಗನಾಗಿಯ ಮೂಲಕ ದೊರೆವುದೇನು? ಬಾಯ್ಬಿಟ್ಟು ಹೇಳುವ ಆವಶ್ಯಕತೆಯುಂಟು?

ಈ ಅರ್ಥಸ್ಥ ಸುಸಂಗತ, ಸುಸಂಬದ್ಧ ಹೆಣಿಕೆ-ಕಟ್ಟಡ ನೋಡಿ: ಜೀವನ ಚೈತನ್ಯದ ಪ್ರತೀಕವಾದ ಇಂದ್ರನ ಸ್ನೇಹಿತನೆಂಬ ಹಾಗೆ ಋಗ್ವೇದದಲ್ಲಿ ಮೇಲ್ತೋರಿಕೆಯಲ್ಲಿ ಕಾಣುತ್ತಿರುವ ವಿಷ್ಣು-ಪ್ರತಿಮಾ-ಸಂಕೇತಗಳು ಪದುರು ನುಡಿಗಳಾಗಿರುವ ಚಮತ್ಕಾರವನ್ನು: ಮಧುಸ್ರವಿಸುವ 'ಪರಮ-ಪದ (ಪದ್ಮ), ಸೂರ್ಯನದೆಂಬ ಹಾಗಿನ ಸಂಭ್ರಮ ನಿರ್ಮಾಣದ ಪ್ರಯತ್ನ! ಅಮೃತಾಂಶು-ಸುಧಾಂಶು ಎಂಬುದು ಚಂದ್ರನ ವರ್ಣನೆಗೆ ಸರಿ ಹೋಗುತ್ತದೆ. 'ಮಾಧ್ವ'-ಸಂಪ್ರದಾಯದ ಅಮೃತ ಸದೃಶ ಪವಿತ್ರ ಗ್ರಂಥದ ನಾಮಸಂಕೇತ : 'ಸುಧಾ'! ವಿಷ್ಣುವಿಗೆ 'ಮಧು' - ಮಾಧವನೆಂದು ಹೆಸರೂ ಉಂಟು. ಸೂರ್ಯನು ಮಧು ಸ್ರವಿಸುವ ಪವಾಡ ಕಥೆ ಭಾರತೀಯ ಸಂಪ್ರದಾಯದಲ್ಲಿ ಒಂದರಲ್ಲಿ ಕೂಡ ಇಲ್ಲ! ಮಧು-ಸ್ರವಿಸುವ ಆ ಪರಮಪದದಲ್ಲಿ ಭಕ್ತರು[೨೮] 'ತತ್'- ಮಯಾನಂದದ ಸ್ಥಿತಿಯಲ್ಲಿ ಇದ್ದಾರೆ, ಎಂಬ ಈ ವರ್ಣನೆ ಚಂದ್ರನಿಗೇ ಸಲ್ಲುತ್ತದೆ. ಮೃತರು ಇರುವುದು ಚಂದ್ರಲೋಕದಲ್ಲಿ ಎಂದು ಬಗೆಯಲಾಗಿದೆ. 'ಸರ್ವಪಿತೃ'ಗಳ ಹೆಸರಿನಲ್ಲಿ ಭಾದ್ರಪದ ಅಮಾವಾಸ್ಯೆ 'ತಿಥಿ' ಎಂದು ಪಾಲಿಸಲಾಗುತ್ತದೆ. ವಿಷ್ಣುವು ಮೃತ್ಯುಸ್ವರೂಪನಾಗಿರುವನೆಂಬ ಈ ಬಗೆಯ ಚಾಂದ್ರ ಸಂಕೇತಗಳು ಇನ್ನೂ ಹಲವು ಇವೆ, ಋಗ್ವೇದದಲ್ಲಿಯೆ! ಆದರೂ ರುದ್ರನು ವಿಷ್ಣುವಿನಂತೆ (unlike ವಿಷ್ಣು)ಮಂಗಲ ಸ್ವರೂಪಿಯಲ್ಲ, ಎಂಬ ಸಂಭ್ರಮವು ಈ ವರೆಗೂ ಉಳಿದು ಬಂದಿರ ಬೇಕಾದರೆ, ಈ ವಿಷ್ಣುವಿನ 'ಮೋಹಿನೀ' ರೂಪ : 'ವಿಷ್ಣು'ಮಾಯೆ ಅದೆಂತಹ ಗಹನ-ಗೂಢ ಶಬ್ದಜಾಲ ನಿರ್ಮಿತ ಗಾರುಡಿಗತನದ ತಂತ್ರವಿರಬೇಡ!

ಈ ಮಧುರ-ಮಾಯಾ ರೂಪದ ಸಂದೇಹವು ತಟ್ಟಬಾರದೆಂದೇ ಈ ತಂತ್ರವು ಇರಲಾರದೊ? ಮಧು ಸ್ವರೂಪಿಯೆಂದು ಋಗ್ವೇದದಲ್ಲಿ ಪ್ರಶಂಸಿತ ವಿಷ್ಣುವು 'ಮಧು'-ಸೂದನೂ ಇದ್ದಾನೆ! ಮಧು ಎಂಬ ದೈತ್ಯನನ್ನು ವಿಷ್ಣುವು ಸಂಹರಿಸಿದ್ದಾಗಿ ಒಂದು ಪವಾಡಕಥೆ ಹುಟ್ಟಿಸಲಾಗಿದೆ! 'ನಾರಕ'ನನ್ನು ಸಂಹರಿಸುವವನು 'ನಾರ'ಣ ಸ್ವರೂಪೀ ಕೃಷ್ಣನಂತೆ ! 'ಹಯಗ್ರೀವ'ನೆಂದು ಇರುವ ವಿಷ್ಣು ಪ್ರತಿಮಾ : ಸಂಕೇತದಲ್ಲಿ ಅಡಿಗಿಸಿಡಲಾಗಿರುವ ವಾಸ್ತವಾಂಶಗಳು ಅಭ್ಯಸನೀಯವಾಗಿವೆ. 'ಕಾಲಿಯ' ನಾಗನನ್ನು ಸಂಹರಿಸಿದನೆಂಬ ಕೃಷ್ಣನು ಶೇಷ: ಬಲದೇವನ ತಮ್ಮ ! 'ಹಯಗ್ರೀವ' ರೂಪಕದ ಕಥೆಯೂ ಹೀಗೇ ಇದೆ. ಅಗ್ನಿ, ಇಂದ್ರ, ವಾಯು ಸೇರಿಯಜ್ಞ ಮಾಡಿದರು. ಆದರೆ ಈ ಯಜ್ಞ ಫಲವು ಅಗ್ನಿ-ಇಂದ್ರ-ವಾಯುಗಳಿಗೆ ದೊರೆಯದೆ, 'ಯಜ್ಞ'ವು ತಾನೇ ಅಪಹರಿಸಿತು. ಈ 'ಯಜ್ಞ' ಎಂದರೇ ವಿಷ್ಣುವು ಎಂದು ತೈತ್ತಿರೀಯ ಸಂಹಿತೆಯಲ್ಲಿ ಹೇಳಿದೆ.[೨೮] ಯಜ್ಞದ ತಲೆ ಹಾರಿಸಲ್ಪಟ್ಟು ಅಶ್ವಿನಿಗಳಿಂದ ಒಂದು ತಲೆಯನ್ನು ಜೋಡಿಸಲಾಯಿತಂತೆ! ಈ ಕಥೆಗೆ ವಿವಿಧ ಪಾಠಾಂತರಗಳಿವೆ. ಅವೆಲ್ಲವುಗಳಲ್ಲಿ ಪ್ರಸ್ತುತ ಆವಶ್ಯಕವಾದ ಕಥೆ ಇದು : ಕಶ್ಯಪನಿಂದ 'ದಿತಿ'ಯಲ್ಲಿ ರಾತ್ರಿಯಲ್ಲಿ ಹುಟ್ಟಿದ ದೈತ್ಯನು ಹಯಗ್ರೀವನು! ವಿಷ್ಣುವು ಅವತಾರ ತಾಳಿ ಈ ದೈತ್ಯನನ್ನು ಕೊಂದನಂತೆ! 'ಮಧು' ವಿಷ್ಣುವೇ ಮಧು- ಸೂದನನಾಗುತ್ತಾನೆ. ಹಯಗ್ರೀವ ವಿಷ್ಣುವೇ ದೈತ್ಯ ಹಯಗ್ರೀವನನ್ನು ಕೊಲ್ಲುತ್ತಾನೆ! 'ಅಹಿಭಾನು' ಮರುತರನ್ನು 'ದಿತಿಯ' ಪುತ್ರರೆಂದು ಸೂಚಿಸುವ ಪವಾಡ ಕಥೆಯನ್ನು ನೆನೆಯಬೇಕು. ಪ್ರಸ್ತುತ, ಒಬ್ಬ ಹಯಗ್ರೀವನೂ 'ದಿತಿ'ಯ ಪುತ್ರನು! ವಿದ್ಯಾನಿಧಿ ಚಿತ್ರಾವ ಶಾಸ್ತ್ರಿಗಳ 'ಪ್ರಾಚೀನ ಚರಿತ್ರ ಕೋಶ'ದಲ್ಲಿ ದೊರೆವ ಇನ್ನೊಂದು ಕಥಾಭಾಗವು ಇನ್ನೂ ಉದ್ಬೋಧಕವಾಗಿದೆ. ಈ ಹಯಗ್ರೀವನು ವೃತ್ರನ ಅನುಯಾಯಿ;[೨೯] ಹಿರಣ್ಯ ಕಶಿಪು-ದೈತ್ಯನ ಸಂಗಡಿಗ[೩೦] ತಾರಕಾಸುರನ ಸಹಕಾರಿ!

ಈ ಹಿನ್ನೆಲೆಯಲ್ಲಿ ಇಂದ್ರಮಿತ್ರನೆಂಬ, ಉಪೇಂದ್ರನೆಂಬ ವೇಷದಲ್ಲಿ ವೇದ-ಪುರಾಣಗಳ ಒಂದು ಭಾಗದಲ್ಲಿ ಕಾಣಿಸಿಕೊಳ್ಳುವ ವಿಷ್ಣುವು ಪ್ರಚ್ಛನ್ನ ವೃತ್ರಾಸುರನೇ ಆಗಿರುವುದು ಬೆಳಕಿನಲ್ಲಿ ಬರುತ್ತಿದೆ. ಜಲದಲ್ಲಿ ಇರುವನೆಂಬ ವರ್ಣಿತನಾದ ಋಗ್ವೇದದ ಇಂದ್ರಶತ್ರು ವೃತ್ರ: ಅಹಿಗೂ, ಜಲಾಶಾಯಿ-ಶೇಷ ಶಾಯಿ ಎಂದೆಂಬ ಪುರಾಣ ಕಥಾ ಪ್ರತಿಮಾ-ಸಂಕೇತದ ವಿಷ್ಣು ಇವರಲ್ಲಿ ಬಾಹ್ಯ ನಾಮಸಂಕೇತದ ಹೊರತು ಈ ಸಂಕೇತಾಂತರ್ಗತ ಅಂತರ್ಗತ ಅರ್ಥ-ಗರ್ಭದ ಆಕೃತಿಯಲ್ಲಿ ಎಳ್ಳಷ್ಟಾದರೂ ವ್ಯತ್ಯಾಸವುಂಟೆ? ಈ ಬಗೆಯಲ್ಲಿ ದಿಗ್ಭ್ರಾಂತಿಯನ್ನುಂಟು ಮಾಡುವ ಇಂತಹ ಪವಾಡ ಕಥೆಗಳು ಹುಟ್ಟುವುದು ಹೇಗೆ? ಏಕೆ? ಎಂಬ ಪ್ರಶ್ನೆಯನ್ನು ಎತ್ತದಿರುವ ವಿವೇಕವು ಇರಲಾರದು ಎಂದು ತೋರುತ್ತದೆ.

'ವಿಷ್ಣು' ನಾಮ ನಿರ್ವಚನವು, ಈ ದೈವತದ 'ಅಪಾಂ ನಪ್ತ್ರ' ಸ್ವರೂಪವನ್ನು ಸ್ಪಷ್ಟೀಕರಿಸುತ್ತಲಿದೆ. ವಿಷ್+ನು, ಎಂದು ವಿಗ್ರಹಿಸಿ ಅರ್ಥ ಹೇಳುವ ವರ್ಗವು ಒಂದು ಇದೆ. ವಿಷ್ (: ವ್ಯವಸಾಯೀ, ಕ್ರಿಯಾಶೀಲ) ಈ ಆಖ್ಯಾತ ಸಾಧಿತವೆಂದರೂ 'ನಾಗ'ನು ಸತತ ಚಲಿಸುವ 'ವಿ-ಕ್ರಮಿ', : ವಕ್ರಕ್ರಮಿ. 'ವಿರ್' ಆಖ್ಯಾತವುಂಟು, ಎಂದರೆ ಒಳಗೆ ಹೋಗುವ ಆ-ಕ್ರಮಕ ವೃತ್ತಿಯ ಈ ನಾಗನು, 'ವಿಶ್ವವನ್ನು' ಸೃಜಿಸಿ, ಅದರಲ್ಲಿ ತಾನು ಪ್ರವೇಶಿಸುತ್ತಾನೆ: 'ಚರಾಚರೇಷು ಭೂತೇಷು ವೇಶನಾತ್ ವಿಷ್ಣುಃ ಉಚ್ಯತೇ' 'ವಿಶತೇಃ ವಾನುಕ್ ಪ್ರತ್ಯಯಸ್ಯ ರೂಪಂ ವಿಷ್ಣುಃ ಇತಿಃ' (ವಿಷ್ಣು ಸಹಸ್ರನಾಮ ಟೀಕೆ). ವಿ+ಸ್ನು ಎಂದಲ್ಲಿ 'ಪೃಷ್ಠ ಭಾಗವನ್ನು ಭೇದಿಸಿ ಒಳಸೇರುವವನು' ಎಂದು ಬ್ಲೂಮ್‌ಫೀಲ್ಡರು ಹೇಳುತ್ತಾರೆ ; ವಿ+ಸ್ನು ಎಂದರೆ ಎರಡು ವಿಭಾಗ ಅಗಲಿಸಿ ಸೇರುವವನು' ಎಂದು ಕೆಲವರ ಮತ. ಡಾ. ರಾ. ನಾ. ದಾಂಡೇಕರರು ಈ ಎಲ್ಲ ಮತಗಳನ್ನು ಕ್ರೋಡಿಕರಿಸಿ ಹೇಳಿದ್ದಾರೆ.[೩೧]

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X. ೮೦.೧
೨. ***ಅದೇ*** X. ೮೨
೩. ***ಅದೇ*** X. ೭೨
೪. Jatendranath Banarji; ***The Development of Hindu Iconography,*** 1956, P. 124
೫. ***ಬೃಹದಾರಣ್ಯಕೋಪನಿಷತ್ತು*** ೨. ೨. ೩
೬. ***ಮುಂಡಕೋಪನಿಷತ್ತು*** ೨. ೧. ೮
೭. ***ಋಗ್ವೇದ ಸಂಹಿತೆ*** I. ೧೩೩.೬
೮. ***ಅದೇ*** x ೯.೭
೯. ***The Indian Serpent Lore*** P. 6
೧೦. ***Ibid*** ೭೭
೧೧. ***ಬೃಹದಾರಣ್ಯಕೋಪನಿಷತ್*** ೨.೫.೧-೧೯
೧೨. ***ಋಗ್ವೇದ ಸಂಹಿತೆ*** I. ೧೭೨,೧
೧೩. ***ತೈತ್ತಿರೀಯ ಸಂಹಿತೆ*** I. ೩.೧; ***ತೈತ್ತಿರೀಯ ಆರಣ್ಯಕ*** V. ೬. ೧. ೧; ***ಅಥರ್ವವೇದ*** I. ೩೩.೧
೧೪. ***ಋಗ್ವೇದ ಸಂಹಿತೆ*** X. ೭೨.೫-೯
೧೫. ***Serpent power*** P. 115
೧೬. Winterintz; ***History of Ancient Indian Literature*** Vol-p. 68
೧೭. ಇವರುಗಳು ಬರೆದಿರುವ ಲೋಕೋತ್ತರ ಗ್ರಂಥ : ***Symbolism is Indian Art and Literature*** ಮತ್ತು ***The Golden Germ***
೧೮. ***ಕಂನಾಡ ಕತೆ*** ಪು. ೧೯೨; ೧೯೪೭
೧೯. ***ಋಗ್ವೇದ ಸಂಹಿತೆ*** X. ೭೨.೮-೯
೨೦. ಭಾಗ I. ಪು. ೫೩೪; ೧೯೪೭
೨೧. ***ಋಗ್ವೇದ ಸಂಹಿತೆ*** IV. ೧೮
೨೨. ***ಅದೇ*** X. ೮೨
೨೩. ***ಕಂನಾಡ ಕತೆ,*** ಪು. ೧೮೮. ೧೯೨
೨೪. Mercia Eliade; ***The Myth of the Eternal Repetition.*** P. 25
೨೫. ***ಬೃಹದಾರಣ್ಯಕೋಪನಿಷತ್ತು*** ೧.೨.೧
೨೬. Basham A. L; ***The Wonder that was India,*** P. 307
೨೭. ಬೃಹದಾರಣ್ಯಕದಲ್ಲಿ ಮಾತ್ರವಲ್ಲ, ಛಾಂದೋಗ್ಯದಲ್ಲೂ ಉಂಟು. ಆಸಕ್ತಿಗಾಗಿ ನೋಡಿ : ***ಬೃಹದಾರಣ್ಯಕೋಪನಿಷತ್ತು*** ೫.೫.೧; ***ಛಾಂದೋಗ್ಯೋಪನಿಷತ್*** ೮.೩.೫.
೨೮. ***ತೈತ್ತಿರೀಯ ಸಂಹಿತೆ*** ೬.೪.೯.೧
೨೯. ***ಮಹಾಭಾರತ*** ೬.೧೦.೧೯
೩೦. ***ಅದೇ*** ೭.೨೪
೩೧. ***ವೈದಿಕ ದೇವತಾಂ ಚೆ ಅಭಿನವ ದರ್ಶನ*** ಇದರೊಡನೆ ***Early Vishnuism*** of J. Gonda, ಗ್ರಂಥವೂ ಉಪಯುಕ್ತವಿದೆ.

ಪವಾಡ ಕಥೆಗಳು ಮೈದಾಳುವುದರ ಹಿಂದಿನ ಪ್ರೇರಣೆಯ ಸ್ವರೂಪ

ಇದು ಎರಡು ಬಗೆಯದಾಗಿದೆ. ದಿಕ್ಕಾಲದ ಸಂದರ್ಭದ ಜೀವನದ ಪರಿಸರದಲ್ಲಿ ತನ್ನಲ್ಲಿ ಉಂಟಾದ ಆರ್ತ-ಜಿಜ್ಞಾಸೆಯ ಉತ್ತರಕ್ಕಾಗಿ ಉತ್ಕಟಭಾವದಿಂದ ಹಂಬಲಿಸುತ್ತಿರುವಾಗ ಏನೊಂದು ನಿಮಿತ್ತದಿಂದ ಫಕ್ಕನೆ ಹೊಳೆದಂತೆ ಆಗುವ ಸಂಕೇತ: ಪ್ರತೀಕವು ಅಥವಾ ಇದರ ತಾತ್ಪರ್ಯವು ತಾಳುವ 'ಪವಾಡ' ರೂಪದ ಕಥೆಗಳು. ಇನ್ನೂ ಒಂದು ಬಗೆಯ ಪವಾಡ ಕಥೆಗಳು ಮೈದಾಳಬಲ್ಲವು; ಈ ಬಗೆಯ ಕಥೆಗಳ ಹಿನ್ನೆಲೆಯಲ್ಲಿ ಶುದ್ಧ ಜ್ಞಾನದ ಆರ್ತ ಜಿಜ್ಞಾಸೆಗಿಂತ, ವ್ಯಕ್ತಿಯ ಭಾವ-ಬುದ್ಧಿಯ ಲೀಲಾವಿನೋದದಲ್ಲಿ ಅಭಿವ್ಯಕ್ತವಾಗುವ ಕಥೆ 'ಕೃತಿ' ಪವಾಡವೇ. ಮಕ್ಕಳು ಮಳಲಲ್ಲಿ ಆಡುವಾಗ ಅವು ಸಹಜ ಭಾವದಲ್ಲಿ ನಡೆಸಿದ ಆಟದಲ್ಲಿ ಆ - 'ಕೃತಿ'ಯಲ್ಲಿ ಅವು ಎಣಿಸಿದ್ದಕ್ಕಿಂತ ಅದ್ಭುತ ಅರ್ಥ: ಸೌಂದರ್ಯ ಕೆಲವೊಮ್ಮೆ ಪ್ರತೀತಿಗೆ ಬರುತ್ತದೆ. ಬುದ್ಧಿಪೂರ್ವಕವಾಗಿ ಅಥವಾ ಭಾವನೋದ್ರಿಕ್ತನಾಗಿ 'ಸ್ವ' ಅರ್ಥಕ್ಕಾಗಿ ವಾಸ್ತವ-ಸತ್ಯದ ಆಭಾಸವಾಗುವಂತಹ ಕಥಾಸೃಷ್ಟಿಯನ್ನು ಮಾನವನು ಮಾಡಬಲ್ಲನು. ಮಾನವನಲ್ಲಿರುವ ಸರ್ಜಕ ಶಕ್ತಿಯ (: ಸವಿತೃ ಶಕ್ತಿಯ) ಅಪವ್ಯಯದಂತೆ, 'ಅಪಾಂ ನಪ್ತ' ಶಕ್ತಿಯ ಮೂಲಕ ಆಗುತ್ತಿರುವ - ಆಗಿರುವ ದುರುಪಯೋಗವೂ ಅಷ್ಟೆ ಭೀಕರವೂ ಭಯಾವಹವೂ ಆಗಿದೆ. ನಿಸರ್ಗದತ್ತವಾದ ಹಾಗೂ ಸ್ವಪ್ರಯತ್ನದಿಂದ (: ತಪದಿಂದ) ಸಾಧಿಸಿದ ಸವಿತೃಪಾತಳಿಯ ಮೇಲಿನ ಸರ್ಜಕ ಶಕ್ತಿಯನ್ನು 'ಸ್ವ' ಅರ್ಥಕ್ಕಾಗಿ ಎಂದರೆ ಕೇವಲ ಧನಾರ್ಜನೆಗಾಗಿ ಸೂರೆ ಮಾಡುವಲ್ಲಿ ಋತ : ಸತ್ಯಕ್ಕೆ ಚ್ಯುತಿ ಬರದೆ ಇರಲಾರದು. ಈ 'ಸ್ವ' - ಕೆಲಬಾರಿ ಧನಾರ್ಥಿಯಾಗಿ ಕೇವಲ 'ಅಸಂತೃಪ್ತ' ಕೌಟುಂಬಿಕ ಅರ್ಥಾರ್ಜನೆಗಾಗಿಯೆ ಇರಲಿಕ್ಕಿಲ್ಲ. ಆದರು, 'ಸ್ವ'-ಜಾತಿ, ಪಂಥ ಪಕ್ಷೀಯ ಸ್ವಾರ್ಥಕ್ಕಾಗಿ 'ಸಾಹಿತ್ಯ' ನಿರ್ಮಿಸುತ್ತಿರಬಹುದು. ಈ ಬಗೆಯ 'ಸ್ವ' ಅರ್ಥದ ಪ್ರೇರಣೆಯಲ್ಲಿ ಹುಟ್ಟುವ ಪವಾಡ ಕಥೆಗಳು, ಸಾಮಾಜಿಕ ಜೀವನ ಮೂಲ್ಯಗಳನ್ನು ಬರಡುಗೊಳಿಸದಿರವು.

ಭಾಷಿಕ ಪ್ರತಿಮಾ=ಸಂಕೇತಗಳೆಲ್ಲ, ಅಷ್ಟೇ ವಿಶ್ವಾಸಾರ್ಹವಾಗಿ ಇಲ್ಲದಿರುವ ಕಾರಣವೇ ಇದು. ಕೆಡೆಲೆಸ್ಕೋಪ್ (Kalei-doscope)ಆಕೃತಿಗಳು ಬಣ್ಣಬಣ್ಣದುವೂ ಆಗಿ ಆಕರ್ಷಕವಾಗಿದ್ದರೂ ನೋಡಿ ನಲಿವ ಮಟ್ಟಿಗೇ ಅವುಗಳ ಉಪಯುಕ್ತತೆ ಮಾತ್ರ ಜೀವನದ - ಸಂದರ್ಭದ ದಿಕ್ಕಾಲದ ಪರಿಸರದಲ್ಲಿ ದೊರೆತ ಅಥವಾ ದೊರೆಯಬಹುದಾದ ವಾಸ್ತವ : ಸತ್ಯದ ಆ-ಭಾಸವೆ ಅಲ್ಲಿ ಇರಬಹುದೇ ಹೊರತು ಅದು ವಿಶ್ವಾಸಾರ್ಹ ಜೀವನಸ್ಥ 'ಮೂರ್ತ' 'ಸತ್ಯ'ವೆನಿಸಲಾರದು. ಪ್ರಚಾರಕ್ಕಾಗಿ ರಚಿಸಿದ ಕೃತ್ರಿಮ ಪವಾಡ-ಕಥೆಗಳಂತೂ ಶುದ್ಧ ಮೋಸವೇ ಹೌದು.

ಉದಾಹರಣಾರ್ಥವಾಗಿ, ಕೇನೋಪನಿಷತ್ತಿನ ಪವಾಡ ಕಥೆ ನೋಡಿ: 'ಜಾತವೇದ'ನೆಂದು (ಋತ : ಸತ್ಯದ ಭೂಮಿಕೆಯ ಸವಿತೃ ಸಂಪ್ರದಾಯವು) ಹೊಗಳಿರುವ ಜ್ಞಾನ - ಸ್ವರೂಪ ಅಗ್ನಿಪ್ರತಿಮೆಯನ್ನು ವಿಡಂಬಿಸುವದಕ್ಕಾಗಿಯೇ ಮೈದಾಳಿದ ಶುದ್ಧ ಟೊಳ್ಳು ಕಥೆ ಇದು! 'ಕಿಂ ಇದಂ ಯಕ್ಷಮ್' ಎಂದು ಪ್ರಶ್ನೆ ಮಾಡಿದರೆ, ಆ 'ಜಾತವೇದ'ನೆಂಬ ಅಗ್ನಿಗೆ, ತನ್ನ ಎದುರೇ ಇರುವ 'ಯಕ್ಷ' ರೂಪಸ್ಥ ಆ 'ದಿವ್ಯ'ದ ಅರ್ಥವಾಗಲಿಲ್ಲವಂತೆ! ಅಗ್ನಿ ಸಂಪ್ರದಾಯದ ಅವಜ್ಞೆಗಾಗಿ, ಆಪ : ರಸ ಪಂಥೀಯರಿಂದ ಕಲ್ಪಿತ ಈ 'ಯಕ್ಷ'ನು 'ಅಪಾಂ-ನಪ್ತೃ'ವಿನ ಆಪ್ತನೇ ಇರಲಿಕ್ಕೆಬೇಕು. ಆ ಸಂದರ್ಭದಲ್ಲಿ ಅವತರಿಸುವ ಮಹಾತಾಯಿ ಉಮಾ (ಕೆಲರ ಅಭಿಪ್ರಾಯದಂತೆ ಇದು 'ಅಮ್ಮಾ' ಇದರ ಒಂದು ರೂಪ) ಇವಳು 'ಹೈಮವತಿ' = ಹಿಮವಂತನ ಮಗಳು ಅರ್ಥಾತ್ ಆಪ-ಸ್ವರೂಪೀ ದೇವಿ! ಆ ಯಕ್ಷನು ಇವಳ 'ನಪ್ತೃ'ವು! ಈ ಉಪನಿಷತ್ತೇ ಹೇಳುತ್ತದೆ : 'ತತ್‌ವನಂ' ಉಪಾಸನೆ ಮಾಡಲು ಈ 'ವನದ' : 'ಅರಣ್ಯ'ದ (ಅಯನ :) ದಾರಿ, ಸರದ ತೀರದಲ್ಲಿ ಆಪ : ರಸ ಸ್ರವಿಸುವ 'ವೃಕ್ಷ'ದ ಹತ್ತಿರಕ್ಕೇ ಒಯ್ಯುತ್ತಿರುವುದಾಗಿ ಛಾಂದ್ಯೋಗದಲ್ಲಿ ಸಂಕೇತಾತ್ಮಕವಾಗಿ ಸೂಚಿಸಲಾಗಿದೆ!* ಋಗ್ವೇದದ ಪುರಾತನ ಸಂಕೇತದಂತೆ ಆಪದಲ್ಲಿ ನಪ್ತೃ ಇರುವನೆಂಬ ಈ ಪ್ರತಿಮೆಯು, ವೇದದಲ್ಲೆ ಬಳಿಕ ಜಲಾಶ/ ಅದರ ಪಕ್ಕದ ವೃಕ್ಷ ಆಗುತ್ತದೆ![೧] ಆಪ : ರಸ ಪಂಥೀಯ ಈ 'ಯಕ್ಷ' ಪ್ರಶ್ನೆ, 'ಜಾತವೇದ'ನೆಂಬ ಅಗ್ನಿಗೆ ತಿಳಿಯಲಿಲ್ಲ! ಎಂದು ಮೂದಲಿಸಲು, ಅಗ್ನಿ ಸಂಪ್ರದಾಯ ಹೀಯಾಳಿಸಲು ರಚಿಸಲಾದ ಕೇನೋಪನಿಷತ್ತಿನ ಕಥೆಯನ್ನು, ದಿಕ್ಕಾಲದ ಪರಿಸರದೊಳಗಿನ ಸಾಕ್ಷಾತ್ಕಾರವೆಂದು ಬಗೆಯಲಿಕ್ಕಾದೀತೆ? ಸೌರಪಂಥೀಯ ಅಗ್ನಿ, ಇಂದ್ರ ಈ ಪ್ರತಿಮೆಗಳನ್ನು ಪಥಭ್ರಷ್ಟಗೊಳಿಸಲು ಮಾಡಿರುವ ಮಾಟದ ತಂತ್ರವೇ ಇದು, ಅಲ್ಲವೊ? ಈ ಕಥೆ ಕಟ್ಟುವ ಉದ್ದೇಶವೇನು? 'ಜಾತವೇದ' ಹಾಗೂ ಸವಿತೃವಿನ ಉಪಾಸಕರು, ಔಪನಿಷದಿಕ ಆಪ : ರಸ ಪಂಥೀಯ "ಆತ್ಮಕ್ರೀಡಃ- ಆತ್ಮರತಿಃ" ಕ್ರಿಯಾವಂತರಾಗದೆ ಆ 'ತತ್ತಿ'ನಲ್ಲಿ ಅನುರಕ್ತರಾಗದೆ, ಬಾಳಿನಲ್ಲಿ ಅರ್ಥ: ಮೂಲ್ಯ : ಸೌಂದರ್ಯಗಳನ್ನು ಕಂಡುಕೊಂಡು, ಸಮಾಜ-ಜೀವಿಗಳಾಗಿ ಬಾಳಿ, ಮೋಕ್ಷಕ್ಕೆ ಎರವಾಗುವರಲ್ಲ; - ಭವ ಬಂಧನದಲ್ಲಿ ಸಿಲುಕುವರಲ್ಲ, ಎಂದು ಈ ನಾಗ ಸಂಪ್ರದಾಯೀ ಯಕ್ಷ-ಪೂಜಕರಿಗೆ ಚಿಂತೆ!

ಈ ನಾಗ ಸಂಪ್ರದಾಯದ ಪ್ರತಿಮಾ : ಸಂಕೇತಗಳು ಗುಹ್ಯ : ಗೂಢ ಕ್ಷೇತ್ರಕ್ಕೆ ಸಂಬದ್ಧ ಅನುಭೂತಿ ಸೂಚಕವಾದವುಗಳು. ಈ ಅನುಭಾವ ಚಿತ್ರಿಸುವ ಪರಿಭಾಷೆ 'ಗುಹ್ಯಾತ್ ಗುಹ್ಯತರಂ' ಆಗಿ ಇರುವುದಾಗಿ ಈ ಸಂಪ್ರದಾಯದ ಪುರಾತನರೇ ಹೇಳುತ್ತ ಬಂದಿದ್ದಾರೆ. ಈ ಸಂಕೇತಗಳು ಗುಹ್ಯಾರ್ಥವನ್ನು ಅರಿಯುವುದು ಹೇಗೆ? ಈ ಸಂಪ್ರದಾಯದಲ್ಲಿ ಪ್ರಚಲಿತವಿರುವ ಸಮಸಾಮಯಿಕ ಸ್ವರೂಪದ ಬೇರೆ ಬೇರೆ ಪ್ರತಿಮೆಗಳನ್ನು ಹೋಲಿಸಿ ನೋಡುವಾಗ ಆ ಗುಹ್ಯಾರ್ಥದ ರಹಸ್ಯವು ಕೆಲಮಟ್ಟಿಗಾದರೂ ಬೆಳಕಿನಲ್ಲಿ ಬರುವುದಾಗಿ ಹಲವೆಡೆಗಳಲ್ಲಿ ಕಂಡುಬಂದಿದೆ. ಪ್ರಸ್ತುತ ವನ : ಅರಣ್ಯ=ಸರೋವರ (ಐರಂಮದೀಯ) ಮತ್ತು ವೃಕ್ಷ (ರಸ ಸ್ರವಿಸುತ್ತಿರುವ) ಈ ಪ್ರತಿಮೆಗಳೊಡನೆ ಅಥರ್ವವೇದದೊಳಗಿನ 'ಸ್ಕಂಭ' ಪ್ರತಿಮೆಯೂ ತುಲನೀಯವಾಗಿದೆ.[೨] ಈ ಸ್ಕಂಭ (=ಸ್ತಂಭ > ಕಂಬ)ವೂ ನೀರಲ್ಲಿದೆ (ಅಪ್ಸು, ಆಸೀತ್)! ಈ ಅಪ್ಸು, ಸಲಿಲವು ಇದೆ. (ಸಲಿಲಾನಿ ಆಸನ್) ಇದು 'ಬ್ರಹ್ಮಣಂ ಮಹತ್' ಬ್ರಹ್ಮನಿಂದ ಮಿಗಿಲು. ಇವನು

> ಏಕೋ ಹ ದೇವಃ ಮನಸಿ ಪ್ರವಿಷ್ಟಃ, ಪ್ರಥಮೋ ಜಾತಃ, ಸಃ ಉ ಗರ್ಭೇ
> ಅಂತಃ....ಪೂರ್ಣಂ ಪೂರ್ಣೇನ ಸಿಚ್ಯತೇ!

ಈ ಸ್ಕಂಭದ ಅರ್ಧ ಅಂಶದಿಂದ ವಿಶ್ವವು ನಿರ್ಮಾಣವಾಗಿದೆ. ಇನ್ನುಳಿದ ಅರ್ಧವು ಎಲ್ಲಿದೆ? ಯಾರು ಇದರ ನೆಲೆ ಬಲ್ಲರು? ಇದು ('ಊರ್ಧ್ವ ಬುಧ್ನ') (ಊರ್ಧ ಮೂಲವೃಕ್ಷ)! ಈ ಸ್ಕಂಭದೇವನನ್ನು ಅರಿತವನು ಪ್ರಜಾಪತಿಯಾಗುತ್ತಾನೆ: "ಯಃ ವೇತಸಂ ಹಿರಣ್ಮಯಂ ವಿತಿಷ್ಠಂತಂ ಸಲಿಲೇ । ಸಃ ವೈ ಗುಹ್ಯಃ ಪ್ರಜಾಪತಿಃ".

---

* ಐರಂ ಮದೀಯ ಸರ ಮತ್ತು ರಸ ಹನಿಯುತ್ತಿರುವ ಅಶ್ವತ್ಥ ಈ ಸಂಕೇತಗಳು ತಿಳಿಯಲು ತೊಡಕಿನವಲ್ಲ ಆಸಕ್ತರು ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ ೮.೫.೩ ಈ ಉಲ್ಲೇಖದ ವಿವರಗಳನ್ನು ನೋಡಬಹುದು. (ಸಂ)

ಋಗ್ವೇದದ ವನ (ಸರಸ್ಸು), ವೃಕ್ಷ, ಅಥರ್ವದ ಸಲಿಲ - ಸ್ಕಂಭ ಇವೆರಡೂ ಪ್ರತಿಮೆಗಳಲ್ಲಿ ಇರುವ ಆಕೃತಿ ಸಾಮ್ಯವು ಅಭ್ಯಸನೀಯವಿದೆ. ಈ ಪ್ರತಿಮೆಯ ಪರ್ಯಾಯವೊಂದು ಋಗ್ವೇದದ ವರುಣನ ಸ್ತೋತ್ರದಲ್ಲೂ ಉಂಟು: 'ವನಸ್ಯ ಸ್ತೂಪ'ದ ಉಲ್ಲೇಖದಲ್ಲಿ.[೩] ಈ ಕಂಬದ ಕಿರಣಗಳು ಕೆಳಗೆ ಹರಡುತ್ತಿದ್ದರೂ ಮೂಲವು (ಬುಧ್ನಃ) ಉಪರಿ (ಮೇಲೆ) ಇದೆ, ಎಂಬ ಈ ವಿವರಣೆಯಿಂದ ಈ ಊರ್ಧ್ವಮೂಲ 'ವನಸ್ಯ ಸ್ತೂಪದ' ಸಂಕೇತವು ಉದ್ದೇಶಪೂರ್ಣವಾದುದು, ಸಾಂಪ್ರದಾಯಿಕ ಗುಹ್ಯಾರ್ಥವನ್ನುಳ್ಳದು ಆಗಿರುವಲ್ಲಿ ಸಂದೇಹವು ತೋರುವುದಿಲ್ಲ. ಭಗವದ್ಗೀತೆಯಲ್ಲಿ ಬರುವ 'ಊರ್ಧ್ವಮೂಲ ವೃಕ್ಷ'ದ ಹಿನ್ನೆಲೆಯು ಅದೆಷ್ಟು ಆಳವಾಗಿದೆ, ಎಂಬುದನ್ನು ಇಲ್ಲಿ ಮನಗಾಣಬಹುದು. ಈ (ಊರ್ಧ್ವ ಮೂಲ) ವೃಕ್ಷದ ಕೊಂಬೆ - ಶಾಖೋಪಶಾಖೆಗಳು ಕೆಳಗೆ ಭೂಲೋಕದಲ್ಲಿ ಕೊನರುವುದು ನೈಸರ್ಗಿಕವಿದ್ದರೂ ಇವನ್ನು 'ಅಸಂಗ ಶಸ್ತ್ರದಿಂದ ದೃಢವಾಗಿ ಛೇದಿಸಬೇಕು' ಎಂದು ಆದೇಶವನ್ನಿತ್ತಿದೆ, ಗೀತೆ! ಇದನ್ನು 'ಅಶ್ವತ್ಥ' ವೃಕ್ಷ ಎಂದಿದ್ದು, ಛಾಂದೋಗ್ಯದಲ್ಲೂ ಇದೇ ನಾಮ ಸಂಕೇತದ ವೃಕ್ಷವಿದೆ! ಈ ವೃಕ್ಷವು (ಸೋಮ?) ರಸ-ಸ್ರವಿಸುತ್ತದೆ ಎಂದು ಛಾಂದೋಗ್ಯದಲ್ಲಿ ಹೇಳಿರುವ ವಿಶೇಷ ಸಂಗತಿಯನ್ನು ಗೀತೆಯು ಮೊಟಕುಗೊಳಿಸಿದೆ!

ಋಗ್ವೇದದಲ್ಲಿ ಬರುವ 'ಹಿರಣ್ಯ ವೇತಸ'ದ ಒಂದು ಪ್ರತಿಮೆ, ಅತ್ಯಂತ ಕಾವ್ಯಮಯವಾಗಿದ್ದು ಶ್ರೇಷ್ಠ ಧ್ವನ್ಯರ್ಥದ ಒಂದು ಅಪೂರ್ವ ಮಾದರಿಯೂ ಆಗಿದೆ. ಇದು ವಾಮದೇವನ ಪರಂಪರೆಯ ಸೂಕ್ತಗಳಲ್ಲಿ ಒಂದು. 'ವಾಮ' ಎಂದರೆ ಸೌಂದರ್ಯ. ವಾಮಾಂಗಿ ಸೌಂದರ್ಯ-ರಾಶಿಯಾದ ಸ್ತ್ರೀ. ಈ ಸೂಕ್ತದ ವಾಮದೇವನು ಈ ವಿಶ್ವದೊಳಗಿನ 'ಮಧುಮಂತಂ ಊರ್ಮಿಂ ಅಶ್ಯಾಮ' ಎಂಬ ಬಾಳಗುರಿಯ ಸೌಂದರ್ಯೋಪಾಸಕ ರಸಿಕ ಶಿಖಾಮಣಿಯಾಗಿರಬೇಕು.[೪] ಈ ಸೂಕ್ತಸ್ಥ ಋಚೆಗಳಿಗೆ ಒಂದಕ್ಕಿಂತ ಹೆಚ್ಚು ಅರ್ಥಗಳು ಆಗಬಲ್ಲವು. ವಿಶೇಷ ಎಳದಾಟವಿಲ್ಲದೆ! 'ಘೃತಸ್ಯ ನಾಮ ಗುಹ್ಯಂ' ಎಂದು, ಮೊದಲ ಋಚೆಯಲ್ಲಿಯೆ ಹೇಳಿಬಿಡಲಾಗಿದೆ. ಆದಕಾರಣ ಈ ಪ್ರತಿಮೆಗಳಲ್ಲಿ ಮೇಲ್ತೋರಿಕೆಯಲ್ಲಿ ಕಾಣುವ ಅರ್ಥವು ಒಂದು ಮತ್ತು ರಹಸ್ಯಾರ್ಥವು ಇನ್ನೊಂದು ಉಂಟು, ಎಂಬ ಬಗೆಗೆ ಸಂದೇಹ ಪಡಬೇಕಾಗಿಲ್ಲ. ಪ್ರಸ್ತುತ ಹಿರಣ್ಯ ವೇತಸದ ಉಲ್ಲೇಖ ಹೀಗಿದೆ:

'ಘೃತಸ್ಯ ಧಾರಾಃ ಅಭಿಚಾಕಶೀಮಿ, ಹಿರಣ್ಯಯೋ ವೇತಸೋ ಮಧ್ಯ ಆಸಾಮ್।'*

ಮ್ಯಾಕ್‌ಡೊನೆಲ್ಲ ಪ್ರಭೃತಿ ಕೆಲರಿಗೆ, 'ಅಪಾಂ ನಪ್ತ್ರ' = ನೀರೊಳಗಿನ ವೈದ್ಯುತಾಗ್ನಿ, ಎಂದು ಎನಿಸುವ ವರ್ಣನೆಯ ಒಂದು ಮಾದರಿಯು ಇದು. ಆದರೆ, ಅಥರ್ವ ಸಲಿಲ ಮಧ್ಯದ ಸ್ಕಂಭ (: ಕಂಬ)ವನ್ನೂ, "ಹಿರಣ್ಯಯಂ ವೇತಸಂ ಸಲಿಲೇ ತಿಷ್ಠಂತಂ" ಎಂದಿರುವಲ್ಲಿ ಅದು ನೀರಿನಲ್ಲಿ ಕುಳಿತಿರುವ ಮಿಂಚು - ವಿದ್ಯುತ್ತು ಎನ್ನಲುಬಾರದು. ಛಾಂದೋಗ್ಯದಲ್ಲಿ ಸರೋವರದ ಪಕ್ಕದ ಅಶ್ವತ್ಥ (ರಸ ಸ್ರವಿಸುತ್ತಿರುವುದು) ಇದೂ ಸ್ಕಂಭ=ಸ್ತಂಬವೇ; ಹಿರಣ್ಯಯ ವೇತಸಕ್ಕೆ ಸರಿ ಸಮಾನವಾದ ಪ್ರತಿಮೆ ಎಂದು ಸ್ಕಂಭಸೂಕ್ತದ ಮಾತುಗಳಿಂದಲೆ ಹೊರವಡುತ್ತಿದೆಯಲ್ಲ!

ಈ ಸ್ಕಂಭ=ಸ್ತಂಭ, ವೇದಕಾಲದಲ್ಲಿಯೆ ಪಂಥೀಯ ಸ್ಪರ್ಧೆಯ ಪ್ರತಿಮೆಯಾಗತೊಡಗಿದ್ದೂ ಕಾಣುತ್ತದೆ. ಡಾ. ಬಾಶ್ಮ್ ಹೇಳುವಂತೆ, ಸ್ಕಂಭ: ಹಿರಣ್ಯ ವೇತಸ ಈ ಸಂಕೇತ: ಪ್ರತಿಮೆಯಲ್ಲಿ ಶೈವ - ವೈಷ್ಣವ ಪಂಥೀಯ ಸ್ಪರ್ಧೆಯ ನಾತವಿಲ್ಲ. ಆದರೆ ಋಗ್ವೇದದಲ್ಲಿ, ವಿಶ್ವಕ್ಕೆ ಆಧಾರಭೂತ ಸ್ತಂಭವಾಗಿರುವನೆಂಬ ವಿಷ್ಣುವಿನ ವರ್ಣನೆಯಲ್ಲಿ ಈ ಸ್ಪರ್ಧೆಯ ಛಾಯೆ ಇಲ್ಲದಿಲ್ಲ. ವಿಷ್ಣುವು ಲೋಕತ್ರಯದ ಆಧಾರ 'ಸ್ತಂಭ'ವಾಗಿದ್ದಾನೆ (: ಅಸ್ಯ ಛಾಯತ್ ಉತ್‌ತರಂ ಸಧಸ್ಥಂ, ದಾಧಾರ ಭುವನಾನಿ ವಿಶ್ವಾ). ಈ ವರ್ಣನೆಗಳಲ್ಲಿ[೫] ಇರುವ ಸ್ಪರ್ಧಾ ಭಾವದ ಅರ್ಥವಾಗಲು ಪುರಾಣಕಥೆಗಳಲ್ಲಿ ಬರುವ ಲಿಂಗೋದ್ಭವ ಮೂರ್ತಿ: ಶಿವನ ಪ್ರತಿಮೆಯ ಸಹಾಯವು ಅವಶ್ಯವಿದೆ. ಈ ಶೈವ ಪವಾಡಕಥೆಗೆ ವೇದಗಳಲ್ಲಿ ಇಂಬು ದೊರೆತುದು ನನಗೆ ಕಂಡಿಲ್ಲ. ಬ್ರಹ್ಮ-ವಿಷ್ಣುಗಳಲ್ಲಿ

---

* ಮೇಲಿನಿಂದ (ಆಪ:ಘೃತ) ಧಾರೆ ಧಾರೆಯಾಗಿ ಸುರಿಯುತ್ತಿದೆ (ಅರ್ಷಂತಿ). ಆ ಘೃತದ ಧಾರೆಗಳನ್ನು ನಾನು ನೋಡುತ್ತಿದ್ದೇನೆ; ಚಿಮ್ಮುತ್ತಿರುವ ಈ ಘೃತಧಾರೆಗಳ ನಡುವೆ ಬಂಗಾರದ ಬೆತ್ತವು (ಹಿರಣ್ಯಯೋ ವೇತಸಃ) ಉಂಟು. (ಸಂ)

ಯಾರು ಮೇಲು ಎಂಬ ವಾದ ಆರಂಭವಾಗಿ, ತೀರ್ಪಿಗಾಗಿ ಶಿವನ ಕಡೆಗೆ ಬಂದರಂತೆ. ಶಿವನು ಹೇಳಿದ್ದು ನಿಮ್ಮೆದುರು ಕಾಣುತ್ತಿರುವ ಈ ಲಿಂಗದ ತುದಿ-ಬುಡ ಎಲ್ಲಿದೆ ಹುಡುಕಿ ಯಾರು ಹೇಳುವರೊ ಅವರು ಶ್ರೇಷ್ಠರು ಎಂದು ಶಿವನು ಅಪ್ಪಣೆ ಕೊಡಿಸಿದೊಡನೆ ಹಂಸವಾಹನ ಬ್ರಹ್ಮನು ಆಕಾಶದಲ್ಲಿ, ಆ ಸ್ಕಂಭದ ತುದಿ ಹುಡುಕಲು ಹೊರಟ. ವಿಷ್ಣುವು ವರಾಹನಾಗಿ ನೆಲ ತೋಡಿ ಬುಡ ಕಂಡುಹಿಡಿವ ಉಜ್ಜುಗದಲ್ಲಿ ತೊಡಗಿದೆ. ಇಬ್ಬರೂ ಕೊನೆಗಾಣದೆ ದಣಿದು ಸೋಲು ಒಪ್ಪಿದಾಗ, ರುದ್ರ-ಶಿವನ ಹಿರಿಮೆ ತನ್ನ ತಾನೆ ಸಿದ್ಧವಾಯಿತು. 'ಸಮಸ್ತ ನಗರಾರಂಭ ಮೂಲಸ್ತಂಭಾಯ ಶಂ-ಭವೇ' ಎಂಬ ನಮನ ಶ್ಲೋಕದ ಸ್ತಂಭವು, ಅಥರ್ವ ವೇದೀಯ ಸ್ಕಂಭವು ಬೇರೆಯಲ್ಲ. 'ಸ್ಕಂಭೋ ದಾಧಾರ ದ್ಯಾವಾಪೃಥಿವೀ...' ಇದರ ಅರ್ಥ ಭಾಗವು ಎಲ್ಲಿದೆ? ನೆಲೆ ತಿಳಿಯದು, ಎಂಬ ಈ ವರ್ಣನೆ ವಿರಾಟ್ ಪುರುಷನ 'ಅತ್ಯತಿಷ್ಠತ್ ದಶಾಂಗುಲಂ'. ಈ ಪ್ರತಿಮಾ: ಸಂಕೇತ ಹೋಲುತ್ತದೆ. ರುದ್ರ-ಶಿವನು ವಿಶ್ವಾಧಾರಸ್ತಂಭ; ವಿಷ್ಣುವೂ 'ಭುವನಾನಿ ವಿಶ್ವಾದಾಧಾರ ಅ-ಸ್ಕಂಭಾಯತ್' ಸ್ಕಂಭವಾಗಿ ಎತ್ತಿ ಹಿಡಿದಿದ್ದಾನೆ. ಇವನ 'ಮಧುಸ್ರವಿಸುವ ಪರಮೇ ಪದ' ಈ ಪ್ರತಿಮಾ- ಸಂಕೇತವು 'ರಸ ಸ್ರವಿಸುವ ಅಶ್ವತ್ಥ ವೃಕ್ಷ'ವನ್ನು ಹೋಲುತ್ತದೆ. 'ಅಶ್ವತ್ಥ' ವೃಕ್ಷದ ಸಂಕೇತವನ್ನು ವಿಷ್ಣು ಸಂಪ್ರದಾಯವು ತನ್ನದಾಗಿಸಿಕೊಂಡಿದೆ.

ಪ್ರಸ್ತುತ ಪವಾಡ ಕಥೆಗಳ ಈ ತುಲನೆಯ ಉದ್ದೇಶವು, ಈ ಕಥೆಗಳು ಮೈದಾಳಿರುವ ಹಿನ್ನೆಲೆಯ ಪ್ರೇರಣೆಯನ್ನು ಅರಿಯುವುದೂ ಆಗಿದೆ. ದೇವತಾ ಪವಾಡ ಕಥೆಗಳಲ್ಲಿ ಹಲ ಕೆಲವು, ಪಂಥೀಯ ಸ್ಪರ್ಧೆ ಅಥವಾ ಬೇರೊಂದು ಪಂಥೀಯ ಪ್ರತಿಮೆಗಳ ಅವಹೇಳನೆ, ಇಲ್ಲವೆ ತಮ್ಮ ಏಕಮೇವಾದ್ವಿತೀಯತ್ವ ಸ್ಥಾಪನೆ ಈ ಬಗೆಯ ಭಾವಾರ್ಥದುವು ಇರುವುದನ್ನು ಯಾರೂ ಅಲ್ಲಗಳೆಯಲಾರರು. ಇನ್ನು ಕೆಲವು, ದಿಕ್ಕಾಲದ ಸಂದರ್ಭದಲ್ಲಿ ಸಂಭವಿಸಿದ ಸಾಕ್ಷಾತ್ಕಾರ ಸೂಚಕವಾದ ಸಾರ್ವಕಾಲಿಕ ಸತ್ಯಾಂಶವನ್ನೊಳಗೊಂಡ ಪವಾಡ ಕಥೆಗಳು ಇರುವುದೂ ನಿಜ. ನಿಜವಾಗಿ ಯಾವುದೇ ಪಂಥವಾಗಲಿ ಅಸ್ತಿತ್ವದಲ್ಲಿ ಬರಲು, - ವಿಚಾರವಂತ ಭಾವುಕರನ್ನು ಆಕರ್ಷಿಸಲು - ಇಂತಹ ಪವಾಡ ಕಥೆಗಳು: ಪ್ರತಿಮಾ ಸಂಕೇತಗಳು ಕಾರಣವಾಗುತ್ತಿರುತ್ತವೆ. ಪವಾಡ ಕಥೆಗಳ ಪ್ರತಿಮೆಗಳು ಅತ್ಯಂತ ಪರಿಣಾಮಕಾರಿ ಅಥವಾ ಸುಂದರವಿದ್ದರೂ ಅವು ಕೇವಲ ಕಾಲ್ಪನಿಕವಾದುವು. ಅವು ಸಂಭ್ರಾಮಕ ಸಾಮರ್ಥ್ಯದ ಪ್ರತೀತಿ ಬರಬಲ್ಲುವೇ ಹೊರತು, 'ಸತ್ಯ' ದರ್ಶನಕ್ಕೆ - ಸತ್ಯದ ಅರಿಮೆ ಮೂಡಲಿಕ್ಕೆ ನೆರವಾಗಲಾರವು. ಇಂತಹವು ಯಾತು>ಜಾದು ವಿದ್ಯೆಯ - ಮೋಡಿಕಾರರ ಮಾಟದ ಸಂಕೇತಗಳಾಗಿ ಪರಿಣಮಿಸುವ ಭೀತಿಯ ವಿಶೇಷವಿದೆ. ಉದಾಹರಣೆಗಾಗಿ ತ್ರೈಮೂರ್ತಿಗಳಲ್ಲಿ ಯಾರು ಮಿಗಿಲಾದವರು? ಎಂಬುದನ್ನು ಪ್ರಸ್ಥಾಪಿಸಲು ಹೊರಟ ಪವಾಡ ಕಥೆಗಳು; ಕೇನೋಪನಿಷತ್ತಿನೊಳಗಿನ ಜಾತವೇದ ಅಗ್ನಿಯ ವಿಡಂಬನೆಯ ಕಥೆ ಇತ್ಯಾದಿ. ಒಂದು ಪರಿಮಿತ ಕ್ಷೇತ್ರದೊಳಗಿನ ವಾಸ್ತವ : ಸತ್ಯದ-ಜೀವನ-ದರ್ಶನಕ್ಕೆ, 'ಅಪಾಂ-ನಪ್ತ್ರ' ಈ ಪ್ರತಿಮೆಯನ್ನು ಸರಿಗಟ್ಟುವ ಇನ್ನೊಂದು ಹೃದ್ಯ ಪ್ರತಿಮೆ ಎಂದರೆ, ಕಾಲಿದಾಸ ಕೃತ 'ವಾಗರ್ಥಾವಿವ ಸಂಪೃಕ್ತ ಪರಮಾತ್ಮ ಶಕ್ತಿ (: ಪಾರ್ವತೀ-ಪರಮೇಶ್ವರೌ') ಸಂಕೇತ. ಇಂತಹವು ಮಾನವ ನಿರ್ಮಿತ ಕೃತಕ ಆಕೃತಿ-ರಚನೆಯಲ್ಲ. ಅರ್ನೆಸ್ಟ್ ಕ್ಯಾಸಿರರ್ ಹೇಳುವಂತೆ 'organs of Being'.

ಮಾನವನಿಗೆ, ಈ ಬಗೆಯ ಮೂಲಭೂತ (Basic) ಪವಾಡ ಕಥೆಗಳ ಆಧಾರವಿಲ್ಲದೆ, ಬಾಳಿನ ಅರ್ಥವಾಗುವುದೇ ಅಶಕ್ಯವಿದೆ. ಇಂತಹ ಪವಾಡ ಕಥೆಗಳ ಭಾಷಿಕ ಬಾಹ್ಯಆಕೃತಿಯು ಕಂನುಡಿ, ಸಂಸ್ಕೃತ, ಇಂಗ್ಲೀಷ, ಜರ್ಮನ್, ಉರ್ದು ಏನೇ ಇರಬಹುದು; ಆದರೆ ವಿಶ್ವಸ್ಥ ವಾಸ್ತವ ವಸ್ತುವಿನ ದಿವ್ಯಾನುಭೂತಿಯ ಸಂಸ್ಪರ್ಶನ ಸೂಚಕವಾಗಿ, ಆ ವಾಸ್ತವ: ಸತ್ಯಾಂಶವನ್ನು ಬೌದ್ಧಿಕ ಪಾತಳಿಯ ಮೇಲೆ ಅರಿಕೆಗೆ ತಂದುಕೊಂಡುವ, ಕಾಣ್ಕೆಯನ್ನು ನಿಡಿದಾಗಿ ನೋಡಿ ಮರಳಿ ಹಿಗ್ಗುಗೊಳ್ಳುವುದಕ್ಕೆ ನೆರವಾಗುವ - ಕೆಲವೊಂದು ಸಮಾನ ಸ್ವರೂಪದ ಪ್ರತಿಮಾ: ಸಂಕೇತಗಳು : ಆಕೃತಿಗಳು, ಪ್ರತಿಯೊಂದು ಸಂಸ್ಕೃತಿಯಲ್ಲೂ ಇರಲೇ ಬೇಕಾಗುತ್ತದೆ. ಇದರ ಬಗೆಗೆ ಅರ್ನೆಸ್ಟ್ ಕ್ಯಾಸಿರರ್ ಹೇಳುವುದೇನಂದರೆ:

> This holds, perhaps, even more for the basic mythical conceptions of mankind than for language. Such conceptions are not culled from a ready-made world of Being, they are not mere products of fantasy which vapour off from fixed, empirical realistic existence, to float above the actual world like a bright mist; to primitive consciousness they present the totality of Being. The mythical form of conception is not something super-added to certain definite elements of empirical existence; instead, the primary "experience" itself is steeped in the imagery of myth and saturated with its atmosphere. Man lives with objects only in so far as he lives with these forms; he reveals reality to himself and himself to reality, in that he lets himself and the environment enter into this plastic medium, in which the two do not merely make contact but fuse with each other.[೬]

ಒಂದು ಭಾಷೆಯು ಒಳಗೊಂಡಿರುವ ಏನೆಲ್ಲ ಪ್ರತಿಮಾ : ಸಂಕೇತಗಳು ಅಷ್ಟೇ ಹುರುಳುಳ್ಳವೂ ಬೆಲೆಯುಳ್ಳವೂ ಎಂದು ಗ್ರಹಿಸಿದಲ್ಲಿ, ವಾಸ್ತವ: ಸತ್ಯಕ್ಕೆ ವಂಚಿತರಾಗಬೇಕಾಗುವುದನ್ನು ತಪ್ಪಿಸಲು ಯಾರಿಗೂ ಶಕ್ಯವಿಲ್ಲ. ದಿಕ್ಕಾಲದ ಸಂದರ್ಭದಲ್ಲಿ ಕಂಡ 'ಸತ್ಯ'ವು (fact or event), ಭಾಷಿತ ಪ್ರತಿಮೆಯಾಗಿ ಪ್ರಚಲಿತವಾದ ಬಳಿಕ; ಆಯಾ ಸಮಯದ ಶಿಷ್ಟ-ಪ್ರತಿಷ್ಠರಿಂದ ಅಂದಿನ ಅಭಿರುಚಿಯಂತೆ ಆ-ಕೃತಿಯು, ಮೋಹಕ, ಆಕರ್ಷಕವಾಗುವಂತೆ ಸಂಮೋಹಕ ವರ್ಣ-ರೂಪ ತಾಳುತ್ತ ಹೋಗುತ್ತದೆ. ತಲೆ ತಲಾಂತರಗಳಿಂದ ಬಂದಿರುವ ಪ್ರತಿಮಾ ಸಂಕೇತಗಳ ಅಂತರ್-ಬಾಹ್ಯ ಆಕೃತಿಯು, ಅದೆಷ್ಟೋ ಬಾರಿ, ಮಾರ್ಪಟ್ಟಿರುವ ಶಕ್ಯತೆಯೆ ಹೆಚ್ಚು. ಆದಕಾರಣ ಇಂದು ನೆಮ್ಮಿ-ನೆಚ್ಚಿ ನಡೆಯಬೇಕಾಗಿರುವ ಭಾಷಿಕ ಪ್ರತಿಮೆಯ ಹಿನ್ನೆಲೆಯನ್ನೂ ತಟಸ್ಥ ಮನೋಭಾವದ ಸತ್ಯಾನ್ವೇಷೀ ದೃಷ್ಟಿಯಿಂದ ವಿಮರ್ಶಿಸಿಕೊಂಡಷ್ಟು ಲೇಸು ಇದೆ; ಕಲ್ಯಾಣವಿದೆ. ಏಕೆಂದರೆ, ಏನೊಂದು ಮಾತು, ಅಭಿವ್ಯಕ್ತಿಯ ಪ್ರಪ್ರಥಮ ಬಾರಿ ಕಾಣಿಸಿಕೊಳ್ಳುವಾಗ ಇದ್ದ ಅದರ 'ಮೊದಲುತನ'ದ (firstness) ಅಳಿದು, ಆ ಬಳಿಕ ಸಮಯಾನುಗುಣವಾಗಿ, 'ತಿದ್ದಿಬೆಳಿಸಿದ ಆವೃತ್ತಿ ಆಗತೊಡಗುತ್ತದೆ. ಅಮೇರಿಕೆಯ ವಿಖ್ಯಾತ ಸಂಶೋಧಕನಾದ ಪೆರಸೆ (Peirce) ಹೇಳುವಂತೆ ಸತ್ಯಾನ್ವೇಷಣೆಯಲ್ಲಿ, ಪ್ರತಿಮೆಯ ಮೂಲ ಆಕೃತಿಯ ಸಂದರ್ಭದಿಂದ ಬೆಳಕಿನಲ್ಲಿ ಬರುವ ಸಂಗತಿಗಳು ಮೌಲಿಕವಾಗಿರುತ್ತವೆ. ಈಗ ಮಾದರಿಗಾಗಿ ನೋಡಿ: 'ಊರ್ಧ್ವಮೂಲ ವೃಕ್ಷ'ದ ಮೂಲ ಧಾರಣೆಯು (conception) ಶ್ರೀಮದ್ ಭಗವದ್ಗೀತೆಯ ಭಗವಂತನ ವಿವರಣೆಯಲ್ಲಿ, ಎಳ್ಳನಿತೂ ಅರಿಕೆಗೆ ಬರುವುದಿಲ್ಲ, ಎಂಬುದನ್ನು ಮೇಲಣ ತುಲನಾತ್ಮಕ ವಿವರಣೆಯಿಂದ ನಿರ್ಧರಿಸಿಕೊಳ್ಳಬಹುದು. ಈ ಬುಡಮೇಲಾದ ವೃಕ್ಷದ ನಿಜ ಸ್ವರೂಪವು, ಛಾಂದೋಗ್ಯದ 'ಅರಣ್ಯ'ದಲ್ಲಿ - ಸರಸ್ಸಿನ ಪಕ್ಕದಲ್ಲಿ ರಸ ಸ್ರವಿಸುವ ಅಶ್ವತ್ಥದ ಮೂಲಕ, ಬೆಳಕಿನಲ್ಲಿ ಬರುತ್ತದೆ. ಆದರು, 'ರಸ' ವನ್ನು 'ಸೋಮ' ಎಂದು ಹೆಸರಿಸಿ ದಿಗ್ಭ್ರಾಂತಿಯ ಪ್ರಯತ್ನವು ಆಗದೆ ಇಲ್ಲ! ಅದಕ್ಕೂ ಮುಂದೆ ಹೋದಾಗ ಆ-ನಂದ ಲೋಕದಲ್ಲಿ, ಎಲ್ಲಿ - 'ಯತ್ರ ದೇವ ಯವಃ' 'ಮದಂತಿ' ಸ್ಥಿತಿಯಲ್ಲಿ, ತತ್-ಮಯರಾಗಿರುವರೂ ಅಲ್ಲಿ ಮಧುವಿನ ಊಟೆಯ ಹತ್ತಿರ ಆ ಸಾಯುಜ್ಯ ಅಥವಾ ಸಾಲೋಕ್ಯ ಪದವಿಯ ಸಂಗ ಮುಕ್ತ ಭಕ್ತವರ್ಗದ ದರ್ಶನ ಲಭಿಸುತ್ತದೆ.[೭] ಶ್ರೀ ವಿಷ್ಣುನಾರಾಯಣನ ನಿಜರೂಪಕ್ಕಾಗಿ 'ಮೂಲ' ಬದರಿಗೆ ಹೋಗಬೇಕೆಂದು ಸಾಂಪ್ರದಾಯಿಕ ಶ್ರದ್ಧೆಯಿದೆ. 'ವಿ-ಕ್ರಮಿ'ಯಾದ 'ತ್ರಿಪಾತ್' ವಿಷ್ಣುವಿನ ನಿಜರೂಪಕ್ಕಾಗಿ, ಋಗ್ವೇದದ 'ಅಜ: ಏಕಪಾತ್' ದೇವನನ್ನು ಸಾಕ್ಷಾತ್ ಕಂಡು ವಿಚಾರಿಸಬೇಕು. ಅಕ್ಕಪಕ್ಕದಲ್ಲೆ

ಅಹಿ-ಬುಧ್ನ್ಯ' ದೇವನು (ತಳದ ನಾಗನು) ಕಾಣುವನು; ಇಲ್ಲಿ, ನೀರಿನ ತಳದ ಈ ಅಹಿಯೊಡನೆ ಜಲಶಾಯಿ-ಶೇಷಸ್ವರೂಪಿಯ, ಶೇಷ-ಶಯನ ವಿಷ್ಣುವಿನ 'ಅಪಾಂ-ನಪ್ತ' ಸ್ವರೂಪದ ಸಾಕ್ಷಾತ್ಕಾರವಾಗದಿರದು. ಈ ಅಪಾಂ ನಪ್ತವು ಋಗ್ವೇದದಲ್ಲಿ ಬರುವ ಆಪ : ರಸ ಪಂಥೀಯ ಅತ್ಯಂತ ಪುರಾತನ ಪ್ರತಿಮೆ, ಎಂದರೆ ಇದೇ. 'ಊರ್ಧ್ವ ಬುಧ್ನ್ಯ ವನಸ್ಯ ಸ್ತೂಪ'ದ ವರುಣನು, ನಿಜವಾಗಿ ಸೌರ ದೈವತಮಂಡಲದವನು. ಆದರೆ ಅಪ್‌ಸರೆ ಉರ್ವಶಿಗೆ ವಶನಾಗಿ ಮತಾಂತರ ಮಾಡಿರುವುದರ ಸೂಚನೆ ಇಲ್ಲಿ ಇದೆ. ಭಾಷಾ: ಮಾಧ್ಯಮದ ಮೂಲಕವಾಗಿ ಮಾನವರಿಗೆ ವಿಶ್ವಸ್ಥ ವಾಸ್ತವ: ವಸ್ತುವಿನ ಆಕೃತಿ ವೈಶಿಷ್ಟ್ಯದ ಅರಿವು ಮೂಡುತ್ತದೆ. ಆದರೆ, ಈ ಮಾನವನೂ, ಸ್ವ-ಕಪೋಲ ಕಲ್ಪಿತ, ವಾಸ್ತವ ಸದೃಶ ಅಥವಾ ಆ ಬಗೆಯ ಸಂಭ್ರಮವುಂಟಾಗುವಂತಹ ಪ್ರತಿಮಾ: ಸಂಕೇತಗಳನ್ನು ಸೃಷ್ಟಿಸಬಲ್ಲನು! ಇದರಿಂದಾಗಿ, ದಿಕ್ಕಾಲದ ಸಂದರ್ಭದಿಂದ ನಿನ್ನೆ-ಇಂದು-ನಾಳೆಗಳಲ್ಲಿ ಪ್ರವಹಿಸುತ್ತಿರುವ ಜೀವನಸ್ಥ ಅರ್ಥ: ಮೂಲ್ಯ: ಸೌಂದರ್ಯವು ಯಾವುದು? ಕಾಲ್ಪನಿಕ ಕೃತ್ರಿಮ, ಮಾಯಾರೂಪವು ಯಾವುದು, ತಿಳಿಯುವುದು ತೊಡಕಿನದಾಗಿದೆ!

ಭಾಷಾರೂಪೀ 'ಪತಂಗವು' ವಾಕ್‌ನ್ನು (=ಅರ್ಥವನ್ನು) ಅಂತರಂಗದಲ್ಲಿ ಧಾರಣ ಮಾಡಿರುತ್ತದೆ (: ಪತಂಗಃ ವಾಚಂ ಮನಸಾ ಬಿಭರ್ತಿ). ಭಾವ ಬುದ್ಧಿಯನ್ನು ಆಳುವ (ಮನೀಷಾಂ) ಪ್ರಕಾಶಮಯ ಈ ದಿವ್ಯ ಅರ್ಥರೂಪ ವಾಕ್ಕನ್ನು ಕವಿಗಳು ಋತದಲ್ಲಿ ಕಾಣಬಲ್ಲರು - ಅದನ್ನು ರಕ್ಷಿಸಬಲ್ಲರು. (: ತಾಂ ದ್ಯೋತಮಾನಾಂ ಸ್ವರ್ಯಂ - ವಾಕ್, ಕವಯಃ ಋತಸ್ಯ ಪದೇ ನಿಪಂತಿ); ಈ ದಿಕ್ಕಾಲ ಪರಿಸರದಲ್ಲಿ ನಾನಾರ್ಥಗಳಿಂದ ವರ್ಣರಂಜಿತ ಅಸುರ ಮಾಯಾ ಸಾಮರ್ಥ್ಯವನ್ನುಳ್ಳ ಈ ಪತಂಗವನ್ನು ವಿಪಶ್ಚಿತರು ಭಾವ-ಬುದ್ಧಿಯ ಬಲದಿಂದ ಅಂತರಂಗದಲ್ಲಿ ಕಾಣಬಲ್ಲರು[೮]. ಇಂತಹ ಋತ ಸ್ವರೂಪದ : ವಿಶ್ವಧಾರಣ ಮಾಡುವ ಅರ್ಥ: ಮೂಲ್ಯ : ಸೌಂದರ್ಯದ ಹೆಣಿಕೆಯ ನಿಯಮಗಳನ್ನು :, 'ಸತ್ಯ' ದರ್ಶನ ಮಾಡಿಸುವ ಬೆಳಕನ್ನು ನೀಡು: ಭಾವ ಬುದ್ಧಿಯನ್ನು ಪ್ರೇರಿಸು ಹೇ ಸವಿತೃವೇ. 'ಧೀಯೋ ಯೋ ನಃ ಪ್ರಚೋದಯಾತ್' ಇದು ಸೌರಭೂಮಿಕೆಯ ಜೀವನ ದರ್ಶನಕ್ಕಾಗಿ ನಡೆವ ಪ್ರಾರ್ಥನೆ. ಹೇ ರುದ್ರ-ಶಿವನೆ/ವಿಷ್ಣು-ನಾರಾಯಣನೆ, ನಮ್ಮನ್ನು ನ-ಚಿಕೇತ: 'ಸ್ಥಿತ' ಪ್ರಜ್ಞಾವಸ್ಥೆಯಲ್ಲಿ : 'ತತ್' ಮಯಾನಂದದಲ್ಲಿ ಲೀನವಾಗಿಸು. ಈ ದಿಕ್ಕಾಲದ: ಭವದ ಬಂಧನದಿಂದ ಬಿಡುಗಡೆ ಮಾಡು ಎಂಬುದು ಇದು. ಅಪಾಂ-ನಪ್ತ' ದೇವ ದೇವನಲ್ಲಿ ಸಂಸಾರ ತಾಪದಿಂದ ಬೆಂದ ಜೀವದ, ಶಾಂತಿಗಾಗಿ ನಡೆವ ಪ್ರಾರ್ಥನೆ. ಇವೆರಡರಲ್ಲಿ, ಒಂದು ಜ್ಞಾನದ ಆಕೃತಿ, ವಿಶಾಲ ವಿಶ್ವವನ್ನು ವ್ಯಾಪಿಸಿ ಮಿಕ್ಕಿರುವುದು; ಇನ್ನೊಂದು ಜ್ಞಾನದ ಆಕೃತಿ, /ಒಂದೇ ಕೇಂದ್ರ ಬಿಂದುವಿನ ಏಕಂ : ತತ್ತಿನಲ್ಲಿ, ಏನೆಲ್ಲ ವಿಶ್ವವನ್ನೂ 'ನೇತಿ-ನೇತಿ' ಸ್ವರೂಪದಲ್ಲಿ ಸಾಕ್ಷಾತ್ಕರಿಸಿಕೊಳ್ಳಲು ಹಂಬಲಿಸುವುದು.

ಸೌರಭೂಮಿಕೆಯ ಋತ ಸ್ವರೂಪೀ ಸತ್ಯವು ಗುಹ್ಯವಾಗಿ ಉಳಿಯಬಯಸದು. 'ಗುಹ್ಯ': ಸತ್ಯ ಎಂಬುದು, 'ಸತ್ಯ'ವೋ? ಎಂಬ ಸಂದೇಹಕ್ಕೆ ಅವಕಾಶವನ್ನೀಯುತ್ತದೆ. ಮಹಾತ್ಮಾ ಗಾಂಧಿಜೀಯವರಂತೂ 'Secrecy is Sin' ಎನ್ನುತ್ತಿದ್ದರು. 'ಋತ' ಎಂದರೆ ಅರ್ಥ:ನಿಯಮ:ವ್ಯವಸ್ಥೆ:ಸಂಗತಿ; ಸಂ-ಗತಿ ಎಂದೂ ಏಕಾಕಿಯಾಗಿರದು. ವೈಯಕ್ತಿಕ ಅನುಭವಸ್ಥ ಸತ್ಯಾಂಶವು, ಪ್ರತಿಮಾ : ಸಂಕೇತದ ಹಂತದಲ್ಲಿ ವಿಶಿಷ್ಟ ಪಂಥೀಯರ 'ಸತ್ಯ' ಎನ್ನಲು ಬರದು. ತಟಸ್ಥ ವಿಮರ್ಶಕ 'ಧೀ' -ರರ ಒರೆಗೆ ನಿಂತ ಬಳಿಕವೆ ಅದು 'ಋತ'ದ ಹಂತಕ್ಕೆ ಬರಬಲ್ಲುದು. "ಸಕ್ತುಂ ಇವ ತಿತಉನಾ ಪುನಂತಃ ಯತ್ರ ಧೀರಾಃ ಮನಸಾ ವಾಚಂ ಅಕ್ರತ." ವಾಕ್ಕಿನಲ್ಲಿ ಎಂದರೆ ಮಾತಿನಲ್ಲಿ ಒಳಗೊಂಡ ಅರ್ಥದ: ಋತದ ಸತ್ಯತೆ, ಆ ಅರ್ಥ (: ಚಿತ್ರ)ದ ಸಂ-ಗತಿಯಲ್ಲಿಯೆ ನಿರ್ಧರಿಸಲ್ಪಡಬಲ್ಲದು. 'ಅಸುರ' ಮಾಯಾವೀ ಆವರಣದಲ್ಲಿ 'ಸತ್ಯ'ದ ಸಂಭ್ರಮವನ್ನುಂಟು ಮಾಡುವ ಶಬ್ದ-ಪ್ರತಿಮೆಗಳನ್ನು ಬೇರ್ಪಡಿಸಿ ಗುರುತಿಸಿಕೊಂಡಲ್ಲದೆ ವಿಶ್ವಸ್ಥ ಋತ: ಸತ್ಯವು ಅರಿಕೆಯ ಅಳವಿನಲ್ಲಿ ಬರಲಾರದು. ಸತ್ಯದ ಮಾಯಾವೀ ಆವರಣದಲ್ಲಿ, ಪಂಥೀಯ ಪಕ್ಷಾಭಿಮಾನ ಪ್ರಚೋದಿಸಲು ಮೈದಾಳಿದ ಶಬ್ದ-ಪ್ರತಿಮೆಗಳ ಮೂಲಕ ಆ ಭಾಷಿಕರ ಜೀವನದಲ್ಲಾದ ಏರಿಳಿತಗಳ ಕಾರಣಮೀಮಾಂಸೆಯು ತಿಳಿಯುತ್ತದೆ. ಬಾಳು ನಶ್ವರ-ಕ್ಷಣಿಕ; ಇದು ಭವ ಬಂಧನ;

ಪಾಪ ಮೂಲಕವಾಗಿ ಈ ಜನ್ಮ ಬರುತ್ತದೆ. ಪ್ರಪಂಚವನ್ನು ಮಾಯೆ ಅಥವಾ ಸ್ಮಶಾನ ಎಂಬ ಶ್ರದ್ಧೆಯಂತೆ ಮರಣವೇ ಮಹಾನವಮಿ, ಎಂದು ದೃಢವಾಗಿ ನಂಬಿ, ಪರಮಾತ್ಮನಲ್ಲಿ ಮನಸ್ಸನ್ನು ಲೀನವಾಗಿಸುವ ಆರಾಧನೆ - ಭಜನೆಯಲ್ಲಿ ಸದಾಕಾಲವೂ ಇರುವುದರಲ್ಲಿಯೆ ಐಹಿಕ ಜೀವನದ ಸಾರ್ಥಕ್ಯವಿದೆ.....' ಎಂಬೀ ಬಗೆಯ ಆಧ್ಯಾತ್ಮಿಕ ತತ್ : ಏಕಂ: ಸತ್ತನ್ನು ಮನಗಾಣಿಸಿಕೊಡಲು ಹೊರಟ ವೇದ ಪುರಾಣಾದಿಗಳು, ಜಾತಕ ಕಥೆಗಳು, ಧರ್ಮಾಮೃತಾದಿಗಳೊಳಗಿನ ದಿವ್ಯಕಥೆಗಳು ಇವೆಲ್ಲವೂ, ಭಾರತೀಯರ ಇತಿಹಾಸದ 'ಆ-ಕೃತಿ' ಹೀಗೆಯೇ ಏಕೆ? ಎಂಬುದನ್ನೇ ವಿವರಿಸುತ್ತಿರುವ ಮೌನ ವ್ಯಾಖ್ಯಾನವೇ ಅಲ್ಲವೆ, - ಭಾರತೀಯ ವಾಙ್ಮಯದೊಳಗಣ ನುಣ್ಣನೆಯ ಬಣ್ಣವಣ್ಣದ ಆಕರ್ಷಕ ಪವಾಡ ಕಥೆಗಳು! ಒಂದು ಜನದ ದೈವ (: ನಿಯತಿ) ಮತ್ತು ಅವರ ನಿಷ್ಠೆಯ ದೈವತದ ಆ-ಕೃತಿ (: ಅರ್ಥ) ಇವೆರಡೂ ಭಿನ್ನವಾಗಿರಲು ಶಕ್ಯವಿಲ್ಲ. ಪಾರಲೌಕಿಕ ಸಿದ್ಧಿಗಾಗಿ ಇರುವ ಆಂತರಿಕ ಶ್ರದ್ಧೆಯೆ ಒಂದು; ತದ್ವಿರುದ್ಧವಾಗಿ ಬಾಳಿನಲ್ಲಿ ಬಯಸುವುದು ಇನ್ನೊಂದು! ಇದು ಇನ್ನಾಲಗೆಯ ತಳಹದಿಯ ಮೇಲೆ ನಿಂತ ಶ್ರದ್ಧೆಯು : ಜ್ಞಾನದ ಅನಿವಾರ್ಯ ನಿಯತಿ: Mankind is under the rule of Logical Fate.'ಸರ್ವಾರಾಧನೆಯ ನಿಯತಿ (Logic) ಏನು ಇರಬಲ್ಲುದು? ಭಾರತವು ಗ್ರೀಕ್, ಶಕ, ಮೊಗಲ ಮೊದಲಾದ ಪರಕೀಯರ ತೊತ್ತಳದುಳಿತಕ್ಕೆ ಸಿಲುಕಿದ್ದೇಕೆ?

· ನಾಗ-ಪ್ರತಿಮಾ ಪೂಜಾ ವಿಚಾರದ ಆ-ಮೂಲಾಗ್ರ ಸಮೀಕ್ಷೆಯಲ್ಲಿ ಮಾನವ ಸಂಸ್ಕೃತಿಯ ಮೊದಲ ಹಂತದಿಂದ ತೊಡಗಿ ಇತಿಹಾಸವು - ಜೀವನದ ತತ್ತ್ವಜ್ಞಾನವು ಇವೆರಡೂ ಒಂದರೊಳಗೊಂದು, ಹಾಸು ಹೊಕ್ಕಾಗಿ ಬೆರೆತುಕೊಂಡಿರುವುದು ಗಮನಕ್ಕೆ ಬರುತ್ತದೆ. ಮೂಲ ನಾಗಾರಾಧಕರ ಜೀವನ ರೀತಿಯನ್ನು ರೂಪಿಸಲು ನಾಗಗಳ ಆದರ್ಶವೇ ಕಾರಣವಾಗಿರಲಿಕ್ಕೆ ಸಾಕು. 'ಯಾರು ಏನನ್ನು ಭಜಿಸುವರೊ, ಅವರು ಅದರಂತೆ ಆಗುತ್ತಾರೆ' : 'ಯೋ ಯತ್ ಶ್ರದ್ಧಃ' ಆ ಶ್ರದ್ಧೆಯೆ ಅವನ ಆಚರಣವಾಗಲೇಬೇಕು. ಏಕಾಂತವಾಸ; ಅಸಾಮಾಜಿಕ 'ಅಸಂಗ'ವೃತ್ತಿ; 'ಕೆಸರ ಕಮಲ'ದ ಮಾದರಿಯ ಜೀವನ! 'ಪರಲೋಕ-ಮೋಕ್ಷದ ತೀವ್ರಭಾವ ಹೆಚ್ಚಿಸಲು ಪ್ರಪಂಚ ಮರೆಯುವುದು. ಇಂತಹ ಜೀವಿಗಳಿಗೆ ಇಹದಲ್ಲಿಯ ನಿರಾಶೆಯನ್ನು ತುಂಬಿಕೊಳ್ಳಲು ಏನೆಲ್ಲ ಪಾರಲೌಕಿಕ ಆಮಿಷಗಳ ಸಿದ್ಧಿಯಾಗುವ ಪವಾಡ ಕಥೆ ಪುರಾಣಗಳು ಬೇಕೇಬೇಕು. ಬೇಡಿಕೆಯಂತೆ ಪೂರಯಿಕೆ!

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X. ೭೨.೩-೪; ೮೧.೪
೨. ***ಅದೇ*** X. ೭; ೮
೩. ***ಅದೇ*** I. ೨೪.೭
೪. ***ಅದೇ*** IV. ೫೮
೫. ***ಅದೇ*** I ೧೫೪
೬. Cassirer Ernst; ***Language and Myth,*** P. 9-10
೭. ***ಋಗ್ವೇದ ಸಂಹಿತೆ*** I ೧೫೪.೫
೮. 'ಪತಂಗಂ ಅಕ್ತಂ ಅಸುರಸ್ಯ ಮಾಯಯಾ ಹೃದಾ ಪಶ್ಯಂತಿ ಮನಸಾ ವಿಪಶ್ಚಿತಃ' ***ಋಗ್ವೇದ ಸಂಹಿತೆ*** X. ೧೭೭

ಭಾಗ - ೪

ನಾಗಶಕ್ತಿ ಮತ್ತು ಸಂಸ್ಕೃತಿ

ಪ್ರಕೃತಿಯಿಂದ ಸಂಸ್ಕೃತಿಯ ಕಡೆಗೆ

ನಾಗಾರಾಧನೆಯು ಮಾನವನ ಇತಿಹಾಸದ ಪೂರ್ವ-ಪೀಠಿಕೆಯಾಗಿದೆ. ಮಾನವರಲ್ಲಿ 'ವಸನ'ದ ಆವಶ್ಯಕತೆಯ ಅರಿವು ಮೂಡಿದಂದು ಆ ಜನದ ಸಂಸ್ಕೃತಿಯ ಇತಿಹಾಸದ ಶ್ರೀಕಾರ ಬರೆಯಲ್ಪಟ್ಟಿದೆ. 'ವಸನ' 'ವಾಸಸ್' ಎಂದರೆ ವಸ್ತ್ರವೂ ಅಹುದು; ವಾಸಸ್ಥಾನವೂ ಅಹುದು. ನಾಗಗಳಿಗೆ ಇವೆರಡರ ಆವಶ್ಯಕತೆಯೂ ಎನಿಸದು. ವಸನದೊಡನೆ ಮಾನವ ಸಂಸ್ಕೃತಿಯ ಅರುಣೋದಯವಾಗಿದೆ. ಒಂದೊಂದು ಜನದ ಮೂಲಿಗರ ಭಾಷಿಕ ಪ್ರತಿಮಾ : ಸಂಕೇತಗಳೆ ಇದಕ್ಕೆ ಪ್ರಮಾಣ. ಇಲ್ಲಿ ಮೂರು ಭಾಷೆಯ ಪ್ರಮಾಣಗಳುಂಟು. ಸಂಸ್ಕೃತದಲ್ಲಿ 'ವಸ್' (ಒಳಗೆ ಇರು, ಒಳಗೆ ನಿಂತು- ಬಾಳು) ಈ ಆಖ್ಯಾತ ಸಾಧಿತ ವಸನ, ವಾಸಸ್ ಈ ಪದಗಳಲ್ಲಿ ವಸ್ತ್ರ ವಾಚಕ ಅರ್ಥದೊಡನೆ ವಾಸಸೂಚಕ-ಸ್ಥಲವಾಚಕ ಛಾಯಾರ್ಥವೂ ಉಂಟು : ಅಶನ-ವಸನದ ವ್ಯವಸ್ಥೆ, ಎಂಬಲ್ಲಿ ಅನ್ನ-ವಸ್ತ್ರದಂತೆ ಅವರು 'ಇರುವ ಏರ್ಪಾಟು' ಎಂಬ ಅರ್ಥವೂ ಆಗುತ್ತದೆ. ಜೀರ್ಣ ವಸ್ತ್ರಗಳಿಗೆ, ಜೀರ್ಣ ದೇಹ ಹೋಲಿಸಿರುವ ಗೀತೆಯ ವಿಖ್ಯಾತ ಶ್ಲೋಕವು ಒಂದುಂಟು. ಜೀರ್ಣ ವಸನ ಬಿಟ್ಟುಬಿಡುವಂತೆ, ಜೀವದ ವಾಸಸ್ಥಾನವಾದ ಜೀರ್ಣ ದೇಹವನ್ನೂ ಬಿಡಬೇಕಾಗುತ್ತದೆ. ಜೀವವು ದೇಹ=ವಸನ, ಹೊದ್ದುಕೊಂಡು ಅಲೆದಾಡುತ್ತದೆ. ಈ ಸಂದರ್ಭದಿಂದ ಮಾನವ ಪ್ರಾಣಿಯ ಬಿಡಾರದ ಪೂರ್ವಕಥೆಯು ಬೆಳಕಿನಲ್ಲಿ ಬರುತ್ತಿದೆ. ಬಿಡಾರ: ಬಿಟ್ಟುಕೊಂಡು ಕೆಲಕಾಲ ನಿಂತಿರುವ ಎಡೆ. ಊರುಗಳಿಗೂ ಮೊದಲು ಬೀಡುಗಳೇ 'ಪಟ್ಟು' ಕೊಂಡಿರುವ ಬಿಡಾರದ ಎಡೆಗಳಾಗಿದ್ದುವು, ಕಂನಾಡಿನ ಬೀಡು-ಬೀಡಗಳು, ಪಾಡಿ, ಪಟ್ಟಿ, ಬಾಡಿ-ಬಾಡುಗಳು, ಹಟ್ಟಿ, ಹಾಟಗಳು ಈ ನಾಡಿನ ಮೂಲಿಗರ ಮೊದಲ ಹಂತದ ಬಾಳಿನ (: ಬಾಡಿನ) ನೆನಪು ತಂದುಕೊಡುತ್ತವೆ. 'ವಾಸ' ಸ್ಥಿರವಾಗುವ ಮೊದಲು, ಬಟ್ಟೆಯೆ ವಾಸಸ್ಥಾನವಾಗಿದ್ದ ಈ ಮಾನವ ಕುಲ; ಚರ- 'ಚರಂತೀ' ಅವಸ್ಥೆಯಿಂದ ಸ್ಥಿರ ಊರುಗಳಲ್ಲಿ ವಾಸಿಸುವದನ್ನು ಇದು ಅರಿತುಕೊಂಡಿತು ಎಂದು ನಿಶ್ಚಿತವಾಗಿ ಗೊತ್ತಾಗುತ್ತದೆ. ಆದರೆ ನಮ್ಮ ಪೂರ್ವಜರು ಎಂದೂ ಕಾಡಾಡಿಗಳೇ ಆಗಿದ್ದಿಲ್ಲ, ಎಂಬ ಹಾಗಿನ ನಾಗರಿಕತೆಯ ಹೆಮ್ಮೆಯು ಈ ಕಟು ಸತ್ಯವನ್ನು ಒಪ್ಪಲು ಮುರುಟಿಕೊಳ್ಳದೆ ಇರದು. ಕಂನುಡಿಯ ಮೂಲಿಗರು ಪಟ್ಟುಕೊಂಡಿದ್ದ ಮೂಲ 'ವಸನ', ಪಟ್ಟೆ (> ಬಟ್ಟೆ) = ಗಿಡದ ಒಳತೊಗಟೆ, 'ತೊಗಟಿಗ'ರ ಕಾಯಕದ ಫಲವಾಗಿ ಇದು ದೊರೆಯತೊಡಗಿತೆಂಬುದನ್ನು ಸೂಚಿಸುವ 'ತೊಗಟಿಗ' ಈ ಶಬ್ದ ಪ್ರತಿಮೆಯು ಜಾಡಕ್ಕೆ (ಝಾಡಕ್ಕೆ) ಸಂಬದ್ಧ ವೃತ್ತಿಯವರಾದ ಜಾಡರ ವರ್ಗದಲ್ಲಿ ಇಂದಿಗೂ ಉಳಿದಿದೆ. ಮಡಿಯ ಬಟ್ಟೆಯು ನಾರಿನ ಪಟ್ಟೆ>ಬಟ್ಟೆಯೆ, ಈಗಲೂ ಬಾಲ್ಯಸ್ಮೃತಿಯಲ್ಲಿ ಇರುವ ಆಸಕ್ತಿಯೆ, ಈ ಬಗೆಯ ಆಚಾರ - ಸ್ಮೃತಿಗಳನ್ನು ಉಳಿಸಿಕೊಂಡು ಬರುವ ಮನೋಭಾವಕ್ಕೆ ಪ್ರೇರಕವಾಗಿದೆ. ಸಂಸ್ಕೃತಿಯ ಪ್ರಾರಂಭ ಸೂಚಕವಾದ ಈ ಶಬ್ದ ಪ್ರತಿಮೆ ಸಂಸ್ಕೃತ ಹಾಗೂ ಕಂನುಡಿಯಂತೆ ಇಂಗ್ಲೀಷಿನಲ್ಲೂ

ಇದೆ : 'Habit' ಎಂಬ ಸಂಕೇತಕ್ಕೆ ಪ್ರಾಚೀನ ಇಂಗ್ಲೀಷಿನಲ್ಲಿ ವಸನವಾಚಕ ಅರ್ಥವು ಇರುವುದನ್ನು ಆಕ್ಸಫರ್ಡ್ ಕೋಶದಿಂದ ಮನಗಾಣಬಹುದು.

ನಮ್ಮ ದೈವತ ಪ್ರತಿಮೆಗಳ ಮೂಲಕವಾಗಿ ಬೆಳಕಿಗೆ ಬರುತ್ತಿರುವ ಸಂಗತಿಯೂ ಇದೆ! ಮಾನವನು ಬಟ್ಟೆ ಧರಿಸಿಕೊಂಡೇ ಹುಟ್ಟಿಲ್ಲ; ಅರಿವು ಮೂಡಿ ತಿಳುವಳಿಕೆ ಬೆಳೆದಂತೆ 'ವಸನ' ವಿಚಾರವೂ ವಿಕಾಸಗೊಳ್ಳುತ್ತಾ ಬಂದಿದೆ. ದಿಕ್ಕಾಲದ ಸಂದರ್ಭದೊಳಗಿನ ಪ್ರತಿಯೊಂದು ವಿಷಯಕ್ಕೂ 'ಇತಿಹಾಸ' ಎಂಬುದು ಉಂಟು. ಆದರೆ ಇತಿಹಾಸದ ಕಂನಡಿಯಲ್ಲಿ ಕಾಣುವ ತನ್ನ ಪ್ರತಿಮೆಯನ್ನು ನೋಡುವುದಕ್ಕೆ ಅಳುಕು, ಮಾನವರಿಗೆ! ತನ್ನ ಮೆಚ್ಚಿಕೆಯಂತೆ ತೆಗೆಸಿಕೊಂಡ ಫೋಟೋ, ಬರೆದ-ಬರೆಯಿಸಿದ ಚರಿತ್ರೆ ಹೊರತು ಇನ್ನುಳಿದ ಪ್ರಮಾಣಗಳನ್ನು ನಾಶಪಡಿಸುವುದಕ್ಕೂ ಹಿಂದೆಗೆಯದ ಕ್ಷುದ್ರಮಾನವ ಪ್ರವೃತ್ತಿಯಿಂದಾಗಿ, ದೊರೆಯುವ ಪ್ರಮಾಣಗಳ ವಿಶ್ವಾಸಾರ್ಹತೆಯನ್ನು ಪ್ರತಿಮಾ: ಸಂಕೇತಗಳ ಮೂಲಕ ನಿರ್ಧರಿಸಿಕೊಳ್ಳುವ ನೂತನ ಪದ್ಧತಿಯು ಹುಟ್ಟಿಕೊಂಡಿದೆ, ಆವಶ್ಯಕವೆನಿಸಿದೆ. ದಿಗಂಬರರಾಯರು 'ಅ-ಪರ್ಣಾ' ಬಾಯಿಯವರು, ಇಂದು ವಸ್ತ್ರಧಾರಿಗಳಾಗಿರುವುದು ನಿಜವಿದ್ದರೂ ಈ ಪ್ರತಿಮಾ : ಸಂಕೇತಗಳು ವಸ್ತ್ರಪೂರ್ವದ ಜೀವನ ರೀತಿಯ ಛಾಯೆಯುಳ್ಳವು ಆಗಿಲ್ಲವೆ?

ಜೈನರಲ್ಲಿ ದಿಗಂಬರ ಪಂಥಿಗಳಿಗಿಂತ ಶ್ವೇತಾಂಬರರು ಅರ್ವಾಚೀನರೆಂದು ಆ ಸಂಪ್ರದಾಯಗಳ ಇತಿಹಾಸ ದಿಂದಲೂ ತಿಳಿಯುವಂತಿದೆ. ಬೌದ್ಧಧರ್ಮದ ಒಟ್ಟಿನ ಆಚಾರ-ವಿಚಾರಗಳ ಆಕೃತಿ, ಜೈನ ಧರ್ಮಕ್ಕಿಂತ ಅರ್ವಾಚೀನ. ಗೌತಮ ಬುದ್ಧನಿಗೂ ಮೊದಲು ಪಾರ್ಶ್ವನಾಥನು ಆದುದಾಗಿ ಇತಿಹಾಸಕಾರರು ನಿರ್ಧರಿಸಿದ್ದಾರೆ. ಇಂದಿಗೂ ನಮ್ಮಲ್ಲಿ 'ಕೌಪೀನವಂತಃ ಖಲು ಭಾಗ್ಯವಂತಃ' ಎಂಬ ಆದರ್ಶ ಜೀವನದ ಮೇಲ್ಪಂಕ್ತಿಯಲ್ಲಿ ಶ್ರದ್ಧೆ. ಆದರೆ ಧನಕನಕ ಸಂಗ್ರಹದಲ್ಲೆ ಏನೆಲ್ಲ ಆಸಕ್ತಿ! ಬಾಳಿನಲ್ಲಿ ಈ ಬಗೆಯ ದ್ವಿಧಾವೃತ್ತಿಯ ಅನಿವಾರ್ಯತೆಗೆ ಕಾರಣವಾಗುವ ಆದರ್ಶಗಳು, ಮೊತ್ತಮೊದಲಲ್ಲಿ ಪ್ರಚಲಿತವಾದುದಕ್ಕೆ ಕಾರಣ, ಸಂಸ್ಕೃತಿಯ ಪ್ರಾರಂಭದ ಸರ್ಪರೂಪ ದೈವತಗಳ ಆರಾಧನೆಯೇ ಆಗಿದೆ. ಆಪ: ರಸದಲ್ಲಿ ಜನಿಸುವ ಗ್ರಿಕ್ ಅಫ್ರೊಡೈಟ್ ದೇವಿಯಂತೆ, ಭಾರತೀಯ ಆದಿಶಕ್ತಿ ಅಂಬಾ-ದುರ್ಗಾ ಅ-ಪರ್ಣೆಯರೆ, ಸರ್ಪ ಸ್ವರೂಪಿಣಿ! ನಾಗಮಣಿಯರಾಗಿ ಆಗಿದ್ದಾರೆ.

'ಅ-ಪರ್ಣಾ' ಎಂಬ ಸಂಕೇತದಿಂದ ಮರದ ಪಟ್ಟೆಗಳಿಗೂ ಮುಂಚಿನ ಉಡುಪಿನ ಸೂಚನೆ ದೊರೆಯುತ್ತದೆ. ಮೊದಲಲ್ಲಿ ಎಳೆಗಳಲ್ಲಿಯೆ ಮಾನವನ 'ವಸನ' ಉಡುವುದು ಪರ್ಣ; ಇರುವುದು ಪರ್ಣ-ಕುಟಿ! : ತಳಿರ್-ಜೋಂಪು-ಜೋಪಡಿ! ಎಲೆಮರೆಗೆ ಇರುವ ಸರೀಸೃಪಾದಿಗಳ ಅನುಕರಣ-ಅನುಸರಣ; ಇದರ ಮುಂದಿನ ಹಂತದಲ್ಲಿ ಹಕ್ಕಿಗಳ ಗೂಡುಗಳಂತಹ ಆಕೃತಿಯ ವಾಸಸ್ಥಾನ....ಈಗಲೂ, ಅ-ಪರ್ಣಾದೇವಿಯ ಆರಾಧನೆ ಇದ್ದರೂ ಮಾನವ ಭಕ್ತ 'ಪರ್ಣಧರಿಸಿ' ಬೇವಿನ ತೊಪ್ಪಲು ಉಟ್ಟು ಎಲ್ಲಮ್ಮನನ್ನು ಪೂಜಿಸುವಲ್ಲಿ ಈ ದೇವಿ ವೃಕ್ಷರೂಪಳು ಆಗಿರುವ ಸೂಚನೆಯು ಉಂಟು. ದೇವಿಗೆ ಹೂವು 'ಪತ್ರಿ'-'ಪತ್ರ' ಹಾಕುವಲ್ಲಿ ಮೊತ್ತ ಮೊದಲಿಗೆ ಈ ರೂಪದ ವಸ್ತ್ರ ಹೊದಿಸುವ ಕ್ರಿಯೆಯೆ ಇರಬಹುದು. 'ವಸ್ತ್ರಾಲಂಕಾರಾರ್ಥೇ' ಎಂಬ ಮಂತ್ರ ಭಾಗ ನೆನೆಯಬಹುದು.

'ಪರ್ಣ' - ವಸನದ ಸಂದರ್ಭದಿಂದ ಬೈಬಲ್ಲಿನಲ್ಲೂ ನಾಗನ ಒಂದು ಕತೆ ಉಂಟು! ಆದರೆ ಈ ಕಥೆಯ ಆಕೃತಿಯಲ್ಲಿ, ಭಾರತೀಯ ಅಥವಾ ಈಜಿಪ್ಟ್, ಗ್ರೀಕಿನ ಪುರಾತನ ಪವಾಡ ಕಥೆಗಳ ಚೈತನ್ಯ ಅಥವಾ ಸ್ವಾಭಾವಿಕತೆ ಸ್ವಲ್ಪವೂ ಇಲ್ಲ. 'ಆದಿ' ಸ್ತ್ರೀ ನೀರೆ: ನೀರೊಳಗಿಂದ ಹೊರಬರುವ ಪವಾಡವೆ ಬೈಬಲ್ಲಿನ ಈ ಕಥೆಯಲ್ಲಿ ಇಲ್ಲ! 'ಆದಿ' ಪುರುಷನ ಹಂತದ ಜೀವನ ರೀತಿಯ ಕಥೆಯೂ ಇವಲ್ಲ. ಈ ಕಥೆಯ ಆ್ಯಡಂ ಹಾಗೂ ಈವ್ಹ ಪ್ರತಿಮೆ ನಿರ್ಜೀವವೆನಿಸಲು ಕಾರಣವಿದೆ: ಧನ-ಋಣ ವಿದ್ಯುತ್ತು ಆದಿಯಲ್ಲಿ ಒಂದರೊಂದರ ಪಕ್ಕದಲ್ಲಿ ಇರುವಾಗ, ಅವುಗಳು ಆಕರ್ಷಿತವಾಗದೆ ದೂರವಿರುವ, ಸೃಷ್ಟಿಯ ಆದಿಯ ಈ ಕಥೆ ಕೃತ್ರಿಮವೆಂದು ಹೇಳುವ ಆವಶ್ಯಕತೆಯೆ ಇಲ್ಲ. ಆ್ಯಡಂ - ಈವ್ ನಂದನವನದಲ್ಲಿ ಇರುವಾಗ, ಅವರಿಗೆ ಜ್ಞಾನವೃಕ್ಷದ ಫಲದ ರುಚಿ ನೋಡದಿರಲು ದೇವರು ಆಜ್ಞೆ ಮಾಡಿದನಂತೆ. ಆದರೆ, ಜ್ಞಾನವೃಕ್ಷದ ಫಲವನ್ನು ತಿನ್ನಲು ಉಪದೇಶ ಮಾಡಿ, ಅವರ ಬಾಯಿಗೆ

ನೀರು ಊರುವಂತೆ ಮಾಡಿದ್ದು ಒಂದು ಹಾವು! ಇದು ಸೈತಾನೀ ಕೃತಿ! ಆ್ಯಡಂ - ಈವ್ ಹಾವಿನ ಬೋಧನೆಗೆ ಮರುಳಾಗಿ ಆ ಹಣ್ಣನ್ನು ಸವಿದರಂತೆ! ಕೂಡಲೆ, ತಾವು ವಸ್ತ್ರವಿಹೀನರಾಗಿರುವ ಅರಿವು ಮೂಡಿತಂತೆ. ಆಗ ಈವ್ ಹತ್ತಿರದ ಗಿಡಗಳ ಎಲೆಯನ್ನೆ ಉಟ್ಟಳಂತೆ. ಅಪರ್ಣೆ : ಈವ್ಹ, ಪರ್ಣವಸನ (habit) ಧರಿಸಿದಳು.

ಬೈಬಲ್ಲಿನ ಈ 'ಹಾವು', ಈಜಿಪ್ಟ್-ಗ್ರೀಸಿನ ಇದಕ್ಕೂ ಪುರಾತನ ಕಥೆಗಳ ಹಾವಿನ ಕಥೆಯು 'ಫಿಲ್ಟರ್' ಆದ ಸಂಕೇತ. ಈ ಹಾವು ದುಷ್ಟತನದ ಪ್ರತಿಮೆಯಾಗಿರುವುದು! ಆದಿಮಾತಾ ಸಂಪ್ರದಾಯಗಳಲ್ಲಿ ಸರ್ಪವು ಪ್ರಜಾಪತಿ: ಸೃಷ್ಟಿಕರ್ತನಾಗಿರುವುದು ಎಲ್ಲ ಜನಾಂಗಗಳಲ್ಲಿ ಕಾಣುತ್ತಿದ್ದು, ಕ್ರೈಸ್ತ ಪವಾಡಕಥೆಗಳಲ್ಲಿ ಸರ್ಪವನ್ನು ಈ ಸ್ಥಾನದಿಂದ ತಳ್ಳಿಬಿಡಲಾಗಿದೆ! ಸೌರ ಸಂಪ್ರದಾಯದ ಪವಾಡ ಕಥೆಗಳಲ್ಲಿ ಮಾತ್ರ ಹಾವು : ದುಷ್ಟತನ ಸಂಕಟಾದಿಗಳ ಸಂಕೇತವಿರುವುದು ಸುಸಂಗತ 'ಆಕೃತಿ' ಎನಿಸುತ್ತದೆ, ಆ ಹಿನ್ನೆಲೆಯಲ್ಲಿ. ಆದರೆ, ಆದಿಮಾತೆ ಮೇರಿಯ ಅಯೋನಿ ಸಂಭವ ಶಿಶುವಿನ ಅವತಾರದ-ಧಾರ್ಮಿಕ ಸಾಂಪ್ರದಾಯದ ಈ ಪವಾಡ ಕಥೆಯಲ್ಲಿ, ಹಾವಿಗೆ ನಿಜವಾಗಿ ಪ್ರಧಾನ ಪಾತ್ರವಿರಲಿಕ್ಕೆ ಬೇಕಿತ್ತು. ಈಗಿನ ಮೇರಿಯ ಸೌಮ್ಯ ಮಾರ್ದವತೆಯ ಪ್ರತಿಮೆ, ಅರ್ವಾಚೀನ. ಉಗ್ರಮೇರಿಯ ಪ್ರಾಚೀನ ಪ್ರತಿಮೆಗಳೂ ಇರುವುವು. ಆದರೆ ಪವಾಡ ಕಥೆಗಳಲ್ಲಿ, ಕಾಲಕ್ಕೆ ತಕ್ಕಂತೆ ಮಾರ್ಪಾಟಾಗುವುದುಂಟು. ಇದಕ್ಕೆ ಕ್ರೈಸ್ತಪವಾಡ ಕಥೆ ಅಪವಾದವಲ್ಲ. ಆದ ಮಾರ್ಪಾಟಿನ ಮೂಲಕ ಆ ಸ್ಥಿತ್ಯಂತರದಲ್ಲಿ ಧ್ವನಿತವಾಗುವ ಅರ್ಥವು ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ತುಂಬ ಉಪಯುಕ್ತವಿರುತ್ತದೆ.

ಸೃಷ್ಟಿಗೆ ಪ್ರಾರಂಭವಾದದ್ದು ಆದಿಮಾತೆಯಿಂದ ಅಥವಾ ಆದಿಶೇಷನಿಂದ. ಈ ಮಾತಿಗೆ ಇಜಿಪ್ಟ್-ಗ್ರೀಕ್ ಮೂಲದ ಪವಾಡ ಕಥೆಗಳಿಂದ, ಅದಿತಿಯ ಆದಿಮಾತೃತ್ವದ ಋಗ್ವೇದಸ್ಥ ಪವಾಡ ಕಥೆಗೆ ಪುಷ್ಟಿದೊರೆತಿದೆ; ಋಗ್ವೇದದ ಪ್ರಜಾಪತಿ-ವಿಶ್ವಕರ್ಮ-ದಕ್ಷರ ರಹಸ್ಯ ಬೆಳಕಿಗೆ ಬರುತ್ತದೆ. ಈ ಕಾರಣದಿಂದ ಆದಿಮಾತೆ ಮೇರಿಯ ಪವಾಡ ಕಥೆಯೊಳಗಿನ ಹಾವು, ದುಷ್ಟ ಶಕ್ತಿಯ ಸಂಕೇತವಾಗಿ ಪರಿಣಮಿಸಿದ್ದುದರಲ್ಲಿ ಅದು ತನ್ನ 'ಮೊದಲು-ತನಕ್ಕೆ' ಎರವಾಗಿದೆ. ಪುನರ್ವಿಮರ್ಶೆ-ವಿಚಾರದ ಕೈವಾಡವಿರುವುದಾಗಿ ಊಹಿಸಬೇಕಾಗುತ್ತದೆ. ಕ್ರೈಸ್ತಪಂಥೀಯ ನೂತನ ತಾತ್ತ್ವಿಕ ಭೂಮಿಕೆಯ ಸಲುವಾಗಿ, ತಳಪಾಯದ ಪವಾಡ ಕಥೆಯಲ್ಲಿ ವಿಶಿಷ್ಟ ಆಕೃತಿಯ ಈ ಬದಲಾವಣೆಯಾಗಿರುವುದೆಂದು ತೋರುತ್ತದೆ. ವಿಶ್ವದೊಳಗಿನ ದಿವ್ಯ ದೈವೀ ಪವಾಡಶಕ್ತಿ : ದೇವರು; ಪ್ರಪಂಚದೊಳಗಿನ ದುಷ್ಟಶಕ್ತಿ : ಸೈತಾನ ಮತ್ತು ದೇವರ ಮಗ (-ಮಕ್ಕಳು). ಈ ತ್ರಿಕೋನ ತತ್ತ್ವವು ಕ್ರೈಸ್ತಧರ್ಮದ ತಳಪಾಯದಲ್ಲಿ ಇದೆ. ಭಾರತೀಯ ಆಪ : ರಸ ಸಂಪ್ರದಾಯದ ದೈವತಸ್ಥ ಗರ್ಭಿತ ವಿಚಾರವನ್ನು (concept) ಕ್ರೈಸ್ತ ಪಂಥೀಯ ದೈವತಸ್ಥಗರ್ಭಿತ ವಿಚಾರದೊಡನೆ ಹೋಲಿಸುವಲ್ಲಿ ಒಂದು ವ್ಯತ್ಯಾಸವು ಸುಸ್ಪಷ್ಟವಾಗಲಿದೆ. 'ಅಮೃತಂ ಚೈವ ಮೃತ್ಯುಃ. ಇದು ಭಾರತೀಯ ದೈವತಗಳ ವೈಶಿಷ್ಟ್ಯವಾಗಿದೆ. ಈ ದೈವತದ ವಿಚಾರದಲ್ಲಿ 'ಸರ್ಪ'ದೊಡನೆ ಸಂಬದ್ಧವಿರುವುದನ್ನು ಸೂಚಿಸುವ ಸಂಕೇತವು ಇಲ್ಲದಿರುವ ದೈವತವೇ ದೊರೆಯದು! ಕ್ರೈಸ್ತ ಪಂಥವು ಆದಿಮಾತಾ ಸಂಪ್ರದಾಯದ ಶಾಖೆಯೇ ಆಗಿದ್ದರು, ಕ್ರೈಸ್ತ ಪಂಥಕ್ಕೂ ಪೂರ್ವದ ಪವಾಡ ಕಥೆಗಳಲ್ಲಿ, 'ಆದಿಮಾತೆ'ಯೊಡನೆ ಸರ್ಪ ಸಂಬದ್ಧವೇ ಇದ್ದರು, ಕ್ರೈಸ್ತಮತ ಪ್ರಸ್ಥಾಪಕರು, ಅದಕ್ಕೂ ಮುಂಚಿನ (ತಮ್ಮ) ಸಂಪ್ರದಾಯದೊಳಗಿನ 'ಸರ್ಪ' ಸಂಕೇತವನ್ನು, ಬಹು ಜಾಣ್ಮೆಯಿಂದ, ನೂತನ ದೈವತ ಪ್ರತಿಮೆಯಿಂದ ದೂರವಿರಿಸಿದ್ದು, ಈ ತುಲನೆಯಲ್ಲಿ ಬೆಳಕಿಗೆ ಬರುತ್ತದೆ! ಕ್ರೈಸ್ತ ಸಂಪ್ರದಾಯದ ತತ್-ತ್ವ ವಿಚಾರವು, ಚಾಂದ್ರ ಪಂಥೀಯ ಆಕೃತಿಯೆ ಆಗಿದೆ. ವಿರಕ್ತವಾದ; ಕುಮಾರೀ-ಕುಮಾರ ಸಂಪ್ರದಾಯದ ಆಚಾರನಿಷ್ಠೆ; ಭವ ಬಂಧನದಿಂದ ಬಿಡುಗಡೆಯ ಹಂಬಲ ಪಾರಲೌಕಿಕ ವೈಯಕ್ತಿಕ ಮುಕ್ತಿಯಲ್ಲಿ ಶ್ರದ್ಧೆ, ಜೀವನವನ್ನು ಕರಾಳ ಕಾಲ : ಸರ್ಪವು ಸುತ್ತಿಕೊಂಡಿದೆ. ಬಾಳು ಕ್ಷಣಿಕ; ಐಹಿಕ-ಜೀವನವು ಮೃತ್ಯು ಸ್ವರೂಪ ಎಂಬೀ ಬಗೆಯ ಏಕಾಂತಿಕ ಶ್ರದ್ಧೆಯನ್ನು ವಹಿಸದಿದ್ದರೆ ಜೀವನದಲ್ಲಿ ಆಮರಣ ಕುಮಾರ-ಕುಮಾರಿಯಾಗಿ- ದೇವಾರ್ಪಣ ಭಾಗದಿಂದ ಬದುಕುವ ಪ್ರೇರಣೆ ದೊರೆಯಲು ಶಕ್ಯವೆ ಇಲ್ಲ! ಕ್ರೈಸ್ತಮತದಲ್ಲಿ ದೇವರಿಂದ ಹಾವನ್ನು ದೂರವಿರಿಸಿದ್ದರೂ, ಬಾಳನ್ನು 'ಹಾವು' ಎಂಬ ರೂಪದಲ್ಲಿಯೆ ಕಾಣುತ್ತಿರುವುದನ್ನು ಅಲ್ಲಗಳೆಯಲು ಶಕ್ಯವಿಲ್ಲ!

ಭಾರತೀಯ ಇಂದಿನ ದೈವತ ಪ್ರತಿಮೆಗಳಲ್ಲಿ, ಹಾವಿನ ಸಂಕೇತಕ್ಕೆ ಪ್ರಾಧಾನ್ಯವಿರುವಂತೆ ಕಾಣದಿರುವ ಹಾಗೆ ಮಾಡಿಕೊಂಡಿರುವ 'ಸುಧಾರಣೆ'ಯೂ ಗಮನಾರ್ಹವಾಗಿದೆ. ಆದರು, 'ಸರ್‌ಪ' ವರ್ಗದ ಒಂದಿಲ್ಲೊಂದು ಸಂಕೇತವನ್ನು, ದೇವತಾ ಪ್ರತಿಮೆಯ ಸಂಗಡ ತೋರಿಸುವ ವಾಡಿಕೆಯನ್ನು ಭಾರತೀಯರು ಇಂದಿಗೂ ಸಂಪೂರ್ಣವಾಗಿ ನಿಷೇಧಿಸಿಲ್ಲ! ಕ್ರೈಸ್ತಪಂಥವು ದೇವರೊಳಗಿನ 'ಸರ್ಪ' ಶಕ್ತಿಯನ್ನು ಬೇರ್ಪಡಿಸಿದರೂ ಪ್ರತಿಮಾ ಪೂಜೆಗಾಗಿ ಇನ್ನೊಂದು ಪರ್ಯಾಯದ ಸಂಕೇತವನ್ನು ಸ್ವೀಕರಿಸಲೇಬೇಕಾಗಿದೆ. ಹಾವನ್ನು ಕೇವಲ ದುಷ್ಟಶಕ್ತಿಯೆಂದು ಕಲ್ಪಿಸಿ, ದೇವರೊಳಗಿನ ಮೃತ್ಯುಶಕ್ತಿಯನ್ನು ಬೇರ್ಪಡಿಸಿಕೊಂಡಿದ್ದಾಗಿದೆ. ಹಾವು ಸೈತಾನವಾಯಿತು, ಆದರೆ 'ಶಿಲುಬೆಗೆ ಏರಿಸಿದ ಕ್ರೈಸ್ತ'ನ ಪ್ರತಿಮೆಯೆ ಆದರ್ಶವಾಗಿರುವುದರ ಅರ್ಥವೇನು? ಕ್ರೈಸ್ತನನ್ನು ಶಿಲುಬೆಗೆ ಏರಿಸಿದ್ದು ಐತಿಹಾಸಿಕ-ಸತ್ಯವೊ? ಎಂದು ಪ್ರಶ್ನಿಸುವವರುಂಟು. ಸಾಂಪ್ರದಾಯಿಕ 'ಸನಾತನ' ಆಚಾರಗಳನ್ನು ಆ ಸಾಂಪ್ರದಾಯದ ಮೂಲ 'ದರ್ಶನ'ದ ಸಾಂಕೇತಿಕ ಪ್ರತಿಮೆಗಳನ್ನು, ಪಂಥ-ಪ್ರಸ್ಥಾಪಕವೀರ ಅಥವಾ ಪ್ರವಾದಿಯ ಚರಿತ್ರೆಯಲ್ಲಿ ಸೇರಿಸುವ ವಾಡಿಕೆಯು ಪ್ರತಿಯೊಂದು ಧರ್ಮಪಂಥದಲ್ಲೂ ಉಂಟು. ಕೃಷ್ಣನ ಚರಿತ್ರೆಯಲ್ಲಿ ಇಂತಹ ಸಾಂಕೇತಿಕ ಪ್ರತಿಮೆಗಳ ಇರುವುದಾಗಿ ಸಂಶೋಧಕರಿಗೆ ಕಂಡಿದೆ.[೧] ಧರ್ಮಪ್ರವರ್ತಕರು, ಧಾರ್ಮಿಕ ಶ್ರದ್ಧಾಭಾವನೆ ಉಳಿಸಿಕೊಂಡು ಬರಲು ಯೋಜಿಸುವ ತಂತ್ರವನ್ನು ಕುರಿತು ಶ್ರದ್ಧಾ ಭಾವನೆ ಉಳಿಸಿಕೊಂಡು ಬರಲು ಯೋಜಿಸುವ ತಂತ್ರವನ್ನು ಕುರಿತು ಹೇಳುವಾಗ ಮರ್ಸಿಯಾ ಇಲಿಯದೆ ಬರೆಯುತ್ತಾರೆ:

> Categories instead of historical personages. The historical personage is assimilated in his mythical model (hero, etc). While the event is identified with the category of mythical actions fights with a monster etc.[೨]

ವಿರಕ್ತ ಪಂಥೀಯ ಕುಮಾರ-ಕುಮಾರೀ ಸಂಪ್ರದಾಯಕ್ಕೆ, ಸಂಸಾರವನ್ನು ಶ್ಮಶಾನದಂತೆ ಕಾಣುವ ಆವಶ್ಯಕತೆಯಿದೆ; 'ಇಲ್ಲಿ ಸಾಯುವವನು, ಅಲ್ಲಿ (ದಿವ್ಯ ಲೋಕದಲ್ಲಿ) ಬದುಕುವನು' ಎಂಬರ್ಥದ ವಚನವೂ ಕ್ರೈಸ್ತಧರ್ಮದಲ್ಲಿದೆ. ನಾನಾ ವಿರಕ್ತ ಪಂಥಗಳು, ಕ್ರಿಸ್ತನಿಗೂ ಮುಂಚೆ ೩-೪ ಸಾವಿರ ವರುಷಗಳಿಂದ ಪ್ರಚಾರದಲ್ಲಿ ಇದ್ದೇ ಇದ್ದುವು. ಋಗ್ವೇದದಲ್ಲಿ ಹುದುಗಿಕೊಂಡಿರುವ 'ನಾಗ'-ಅಹಿ-ವೃತ್ರ ಪಂಥವು ಇದಕ್ಕೆ ನಿದರ್ಶನ. ವೃತ್ರಘ್ನ ಇಂದ್ರನು, ಯತಿಗಳನ್ನು ಸಂಹರಿಸಿದ ಘಟನೆಯ ಮಾರ್ದನಿ ವೈದಿಕ ಸಾಹಿತ್ಯದಲ್ಲಿ ನಿನದಿಸುತ್ತಿರುವುದಾಗಿ ಸಪ್ರಮಾಣವಾಗಿ ಬ್ರಾಹ್ಮಣಾದಿ ಗ್ರಂಥಗಳ ಉಲ್ಲೇಖಗಳಿಂದ ಸಿದ್ಧವಾಗಿದೆ ಜೀವನವನ್ನು ಶ್ಮಶಾನವೆಂದು ಬಗೆವವರು ಸಮಾಜ ಕಂಟಕರು; ಐಹಿಕ ಜೀವನದ ಶತ್ರುಗಳು, ಇವರು ಸರ್ಪ ಸ್ವರೂಪರು, ಎಂದು ಅಂದಿನ ಸೌರಪಂಥಿಗಳ ದೃಢವಾದ ಶ್ರದ್ಧೆಯಿದ್ದಿತು. ಈ ಕಾರಣದಿಂದಲೆ ಮೃತ್ಯುರೂಪ ದೈವತಗಳಿಗೆ ಋಗ್ವೇದದಲ್ಲಿ ಗೌರವದ ಸ್ಥಾನವಿದ್ದಿಲ್ಲ. ಪ್ರಚಲಿತ ಋಗ್ವೇದ - ಪಾಠದಲ್ಲಿ ಸಹ ಬರುವ ಕೊನೆಯ ಮಂಡದಲ್ಲಿ, "ಯಸ್ಯ ಛಾಯಾ ಅಮೃತಂ, ಯಸ್ಯ ಮೃತ್ಯುಃ" ಈ ಸ್ವರೂಪದ ದೈವತಗಳು ಬೇರೆ ಬೇರೆ ಮುಸುಕಿನಲ್ಲಿ, ತಲೆ ಮರೆಯಿಸಿಕೊಂಡು ಪ್ರವೇಶ ಪಡೆದಿರುವ ಕಾರಣವೇನು ಮತ್ತೆ? ಈ ಪ್ರಪಂಚವು, 'ಮೃತ್ಯುನಾ ಆವೃತಂ' ಎಂದು ಬೃಹದಾರಣ್ಯಕದ ವರೆಗೂ ಬಾಯ್ಬಿಟ್ಟು ಎಲ್ಲಿಯೂ ಹೇಳಿಲ್ಲ! ಈ ಪಂಥೀಯ ಪ್ರವೇಶವು ವೇದದಲ್ಲಿ ಮೆಲ್ಲನೆ ಗುಪ್ತವಾಗಿಯೇ ಆಗಿರುವುದು ಅಭ್ಯಸನೀಯವಾಗಿದೆ. 'ಅದಿತಿ', 'ಅತ್ರಿ' ಎಂಬ ಹಾಗಿನ ಇಬ್ಬಗೆಯ ಅರ್ಥದ ಮಾತಿನ ಮಾಟಗಾರಿಕೆಯಿಂದ ಈ ಸಂಕೇತಗಳು ತಮ್ಮ ನಿಜಸ್ವರೂಪವನ್ನು ಋಗ್ವೇದದಲ್ಲಿ ತೋರಗೊಡುವುದಿಲ್ಲ. ಆದರೂ, ಹಿಂದು-ಮುಂದಿನ ಸಂದರ್ಭದ ತುಲನಾತ್ಮಕ ವಿಮರ್ಶೆಯಲ್ಲಿ ಈ ಕವಡು ಬಯಲಿಗೆ ಬರುತ್ತಿದೆ. ಇದಕ್ಕೆ ಬ್ರಾಹ್ಮಣ, ಉಪನಿಷತ್ತು, ಪುರಾಣಾದಿಗಳೊಳಗಿನ ಪ್ರಮಾಣಗಳಿಂದ ಪುಷ್ಟಿ ದೊರೆಯುತ್ತದೆ. ಈ ಎಲ್ಲ ವಿವರದಿಂದ ಪ್ರಸ್ತುತ, ನಿದರ್ಶನಕ್ಕೆ ಬರುತ್ತಿರುವ ಸಂಗತಿಯೆಂದರೆ ಹಾವು ಮೃತ್ಯುವಿನ ಪ್ರತಿಮೆ. ಕ್ರಿಸ್ತ ಪೂರ್ವ ಪುರಾತನ ಪಂಥಗಳಲ್ಲಿಯ ಮೃತ್ಯುರೂಪ ಸರ್ಪಬಿಟ್ಟು ಕ್ರೈಸ್ತಪಂಥದಲ್ಲಿ ಶಿಲುಬೆಗೆ ಏರಿಸಿರುವ (ಕ್ರೈಸ್ತ) ಶವದ ಪ್ರತಿಮೆಯನ್ನೆ

ಸರ್ಪದ ಸ್ಥಳದಲ್ಲಿ ಉಪಯೋಗಿಸಿಕೊಂಡಿದ್ದಾಗಿದೆ. ಯುರೋಪಿನಲ್ಲೂ ಸರ್ಪವನ್ನು ತಿರಸ್ಕಾರದಿಂದ ಕಾಣುವ ಸಂಪ್ರದಾಯವಿದ್ದಿತೆಂದು ಬಗೆಯದೆ, ಆದಿಮಾತೆಯ ಕ್ರೈಸ್ತ ಪಂಥದಲ್ಲಿ, ಏನೆಲ್ಲ ಚಾಂದ್ರ ಭೂಮಿಕೆಯ ನಡೆವಳಿ ನುಡಿವಳಿಗಳು ಇದ್ದೂ, ಸರ್ಪವು ಮಾತ್ರ ಸ್ಥಾನ-ಭ್ರಷ್ಟವಾಗಿ, ಅದು 'ಸೈತಾನ'ದ ಸಂಕೇತವಾಗಿ ಪರಿಣಮಿಸಿರುವುದರ ಅರ್ಥವೇ ಆಗಲಾರದು. ಗ್ರೀಕ್-ಲ್ಯಾಟಿನ್ ಇವು ಯುರೋ-ಭಾರತೀಯ ಮೂಲದ ಆರ್ಯಭಾಷೆಯ ಶಾಖೆಗಳು. ಈ ಭಾಷಿಕರು ಪಿತೃಪ್ರಧಾನ ಕುಟುಂಬ ಪದ್ಧತಿಯ ಜನ. ಇವರು ಆಪ : ರಸ ಪಂಥೀಯರಲ್ಲ. ಇವರಲ್ಲಿ ಸ್ತ್ರೀದೈವತಕ್ಕೆ ಪ್ರಾಧ್ಯಾನ್ಯವಿಲ್ಲ, ಎಂಬ ಮಾತುಗಳ ಬಗೆಗೆ ಸಂದೇಹವು ಉಳಿದಿಲ್ಲ. ಗ್ರೀಕ್ ಸಂಸ್ಕೃತಿಯ ಸಂಶೋಧನೆಯಲ್ಲಿ ಈ ಚಾಂದ್ರ ಪಂಥೀಯ ರಾತ್ರೀ ಸಂಪ್ರದಾಯಗಳು ಇದ್ದುದು ಬೆಳಕಿಗೆ ಬಂದಿದೆ.[೩]

ಕ್ರೈಸ್ತ ಪಂಥೀಯ ತತ್ವಜ್ಞಾನ ಹಾಗೂ ಆಚಾರಾಂಗವನ್ನು ರೂಪಿಸುವಾಗ, ಹಾವಿನ ಮೂಲ ಪ್ರತಿಮೆಯನ್ನು ಮಾರ್ಪಡಿಸಿಕೊಳ್ಳಲು ಅಲ್ಲಿಯ ಗ್ರೀಕ್-ಲ್ಯಾಟಿನ್ ಭಾಷಿಕರ ವೈಚಾರಿಕ ಪ್ರಭಾವವೇ ಕಾರಣವಾಗಿರಬೇಕೆಂದು ತೋರುತ್ತದೆ. ಹಾವನ್ನು ಸೈತಾನ: ಬಾಳಿನೊಳಗಿನ ದುಷ್ಟಶಕ್ತಿಯ ಪ್ರತೀಕವಾಗಿ ಉಳಿಸಿಕೊಂಡಿದ್ದರೂ, 'ಸರ್-ಪ' ತತ್ತ್ವಜ್ಞಾನವನ್ನು ಆಮೂಲಾಗ್ರವಾಗಿ ಮಾರ್ಪಡಿಸಿಕೊಳ್ಳಲು ಶಕ್ಯವಾಗಿಲ್ಲ! ಸಂಸಾರವನ್ನು ಭವಪಾಶ ಎಂದು ಬಗೆದು ಮುಕ್ತಿಗಾಗಿ (Salvation) ಜೀವನವನ್ನು ದೇವರಿಗೆ ಮುಡಿಪುವ: ಸರ್ವ ಸಮರ್ಪಣ ಭಾವದ ಈ ಗುರುಪಂಥವು, ನಾಗ ಸಂಪ್ರದಾಯ ವೈಶಿಷ್ಟ್ಯವಾಗಿದೆ. 'ಪಾಶ' ಎಂಬ ಸಾಂಕೇತಿಕ ಚಿಹ್ನವನ್ನು ಭಾರತೀಯ ದೇವತಾಪ್ರತಿಮೆಗಳ ಕೈಯಲ್ಲಿ ತೋರಿಸಲಾಗುತ್ತದೆ. ಈ ಪಾಶವು ಮೂಲತಃ ಸರ್ಪವೇ ಆಗಿದೆ. ಕಾಲನ 'ಪಾಶ'ವು- ಸರ್ಪವು ಕೊರಳಿಗೆ ಸುತ್ತಿಕೊಂಡಿದೆ, ಎಂಬ ಜಾಗೃತ ಸ್ಮೃತಿಯು ಇಲ್ಲದೆ, ಮಾನವರ ಮನಸ್ಸು ಇಂದ್ರಿಯ ವೃತ್ತಿಗಳ ಬೆಂಬತ್ತಿ ಹೋಗದಿರಲು ಶಕ್ಯವಿಲ್ಲ. ಭಾರತೀಯ ವಿರಕ್ತ ಪಂಥವು, ಭಕ್ತವರ್ಗದಲ್ಲಿ ಪಾರಲೌಕಿಕ ದೃಷ್ಟಿಯನ್ನು ಸ್ಥಿರೀಕರಿಸುವುದಕ್ಕಾಗಿ ಸರ್ಪದ ಪ್ರಯೋಜನವನ್ನು ಪಡೆವಲ್ಲಿ ಎಳ್ಳಷ್ಟೂ ಸಂಕೋಚ ಪಟ್ಟುಕೊಂಡಿಲ್ಲ. ಅಂತರಿಕ್ಷದಲ್ಲಿ ಸರಿಯುತ್ತ ಹೊರಟ ಸೂರ್ಯನನ್ನೂ 'ಸರ್-ಪ' ರೂಪವಾಗಿಸಲು ಹಿಂದೆಗೆದಿಲ್ಲ. ಆಕಾಶಸ್ಥ 'ಗ್ರಹ' : 'ಗ್ರಾಹಿ' ನೆಗಳೆ-ಸರ್ಪ ಸ್ವರೂಪಿಗಳೆಂಬ ಗ್ರಹಿಕೆಯುಂಟು! ರಾಹು-ಕೇತು ಸರ್ಪರೂಪರೇ ಆಗಿದ್ದಾರೆ. ನಕ್ಷತ್ರ-ರಾಶಿ ಇವು ಮಾನವನನ್ನು ಹಿಡಿಯುತ್ತವೆ. ಇವೂ ವಿಶ್ವಸ್ಥ 'ಸರ್-ಪ' ಶಕ್ತಿಯ ಅಂಗಗಳೇ ಆಗಿವೆ. ಋಗ್ವೇದದ ಒಂದು ಸೂಕ್ತದ ದೈವತವು 'ಸಾರ್ಪರಾಜ್ಞೀ ಸೂರ್ಯೋವಾ' ಎಂದು ಹೇಳಿರುವಲ್ಲಿ ಈ ಮಾತು ನಿದರ್ಶನಕ್ಕೆ ಬರುತ್ತದೆ. ಆದರೆ, ಕ್ರೈಸ್ತಪಂಥವನ್ನು ರೂಪಿಸುವಲ್ಲಿ ಸರ್ಪ ಸಂಕೇತವನ್ನು ಇಷ್ಟು ಬಹಿರಂಗವಾಗಿ ಉಳಿಸಿಕೊಳ್ಳಲು ಧೈರ್ಯ ಸಾಲಲಿಲ್ಲವೆಂದು ತೋರುತ್ತದೆ. ಏಕೆಂದರೆ, ತತ್ವಜ್ಞಾನ ಹಾಗೂ ಆಚಾರಾಂಗದ ತಳಹದಿಯಲ್ಲಿ ನಾಗ-ಭೂಮಿಕೆಯೇ ಇರುವ ಈ ಪಂಥೀಯ ದೈವತ ಪ್ರತಿಮೆಯೊಡನೆ, ಅದರ ಅಂಗವಾಗಿಯೆ ಇರಬೇಕಾದ ಸರ್ಪವನ್ನು ಮಾತ್ರ ಮರೆಮಾಚಿದ್ದಾಗಿದೆ! 'ಸೈತಾನ' ಸಂಕೇತದಿಂದ ಉಳಿಸಿಕೊಳ್ಳಲಾಗಿದೆ. ಆದರೆ, ಸರ್ಪವನ್ನು ಪೂರ್ಣ ಹದ್ದುಪಾರು ಮಾಡಿದಲ್ಲಿ ಈ ತತ್ವಜ್ಞಾನದ ಆಕೃತಿಯೆ ಬೇರೆಯಾಗಬೇಕಾಗುತ್ತಿತ್ತು. ಅದರಿಂದ 'ಸೈತಾನ' ರೂಪದಲ್ಲಾಗಲಿ ನಾಗ-ಸಂಕೇತವು ಎಂತೂ ಉಳಿಯಲೇಬೇಕಾಗುತ್ತದೆ.

ಬಾಳನ್ನು ಅರ್ಥವಿಹೀನವೆಂದು ಅಥವಾ ಮೃತ್ಯುರೂಪವಾಗಿ ಎಂದರೆ ಸೈತಾನ=ಹಾವಿನ ರೂಪದಲ್ಲಿ ಕಾಣಬೇಕಾಗಿ ಶ್ರದ್ಧೆ ವಹಿಸಬೇಕಾಗುವ ಧರ್ಮ ಹಾಗೂ ತತ್ವಜ್ಞಾನಕ್ಕೆ, ಪಿಂಡ-ಬ್ರಹ್ಮಾಂಡ ವಿಚಾರವು ಅನಿವಾರ್ಯವಿದೆ. ಪಿಂಡದಲ್ಲಿ ಇಲ್ಲದ್ದು ಬ್ರಹ್ಮಾಂಡದಲ್ಲಿ ಇರಲಾರದು. ಬ್ರಹ್ಮಾಂಡದಲ್ಲಿ ಇದ್ದುದು-ಇರುವುದು ಎಲ್ಲವೂ ಪಿಂಡದಲ್ಲಿ ಇರಬೇಕಾಗುತ್ತದೆ. ಈ (ತನ್ನ) ದೇಹದಲ್ಲೆ ವಿಶ್ವದ ಏನೆಲ್ಲ ಅರ್ಥವನ್ನು ಕಾಣುವ ಈ ದೃಷ್ಟಿಗೆ ಸೈತಾನ ರೂಪ ಹಾವು ತನ್ನಲ್ಲಿಯೆ ಇರಬೇಕಾಯ್ತು. ಭಾರತೀಯ ವಿರಕ್ತ ಪಂಥೀಯ ದೃಷ್ಟಿಯಲ್ಲಿ ಮಾನವನ ಮನಸ್ಸೇ ಹಾವು. ಈ ಮನಸ್ಸೆ ಚಂದ್ರ : ಕಾಮ. ಇದುವೆ ಸ್ತ್ರೀ ಲಿಂಗಿಯಾದಲ್ಲಿ ಚಂದ್ರಾ=ಕಾಮಿ(ನಿ)! ವಿಶ್ವಸರ್ಜಕ ರೇತವೂ ಈ ಮನಸ್ಸೇ!

'ಕಾಮಃ ತತ್ ಅಗ್ರೇ ಸಮವರ್ತತ ಅಧಿ ಮನಸಃ ರೇತಃ ಪ್ರಥಮಂ ಯತ್ ಆಸೀತ್!'[೪]

ಈ ವೈಚಾರಿಕ ಆಕೃತಿಯ ಕೇಂದ್ರದಲ್ಲಿ, - ವಿಶ್ವಕರ್ಮ: ಪ್ರಜಾಪತಿ : ತ್ವಷ್ಟಾರ : ಹಿರಣ್ಯಗರ್ಭನು, ಆದಿ ಪುರುಷ ಈ ಬಗೆಯ ರೂಪದಲ್ಲಿ-ವಿರಾಜಮಾನವಾಗಿರುವ ಪ್ರತಿಮೆ. ನಾಗ-ಲಿಂಗನ ಸಂಕೇತವೆ ಹೊರತು ಬೇರೆ ಏನೂ ಅಲ್ಲ. ಆದುದರಿಂದ ಕ್ರೈಸ್ತ ಪಂಥವು, ವಿಶ್ವನಿರ್ಮಾಣ ಶಕ್ತಿರೂಪದ ಆದಿ ದೇವದೇವೇಶ್ವರನಿಂದ ಸರ್ಪವನ್ನು ಬೇರ್ಪಡಿಸಲು ಪಟ್ಟ ಪ್ರಯತ್ನವು ಕೇವಲ ಸಂಭ್ರಾಮಕವಿದೆ, ಎಂದು ಎನ್ನಬೇಕಾಗುವುದು.

ಆದಿಶೇಷ : ಸರ್ಪದ ಆಧಾರದ ಮೇಲೆ ನಿಲ್ಲುವ ತತ್ವಜ್ಞಾನವು ಇನ್ನಾಲಗೆಯದು ಆಗಬೇಕಾಗುವುದು ಅನಿವಾರ್ಯ (Logic of the premises)! ಪ್ರಪಂಚ ಅರ್ಥವಿಹೀನ - ಅಥವಾ ಮೃತ್ಯು ಸ್ವರೂಪ ಸೈತಾನ, - ಆದರೆ ತನ್ನನ್ನು ಮಾತ್ರ ಬಿಟ್ಟು! ಎಲ್ಲಿ ತನ್ನ ಪಿಂಡ=ದೇಹ ನಶ್ವರ ಎಂದರೂ ಈ ದೇಹದೊಳಗಿನ 'ತಾನು' ನಶ್ವರನಲ್ಲ, ಎಂಬ ಶ್ರದ್ಧೆವಹಿಸಬೇಕಾಗುತ್ತದೆ. ತನ್ನ ಹೊರತು ಉಳಿದೆಲ್ಲವೂ ಅರ್ಥವಿಹೀನ ಎನ್ನಲೇಬೇಕು! ಇಲ್ಲವೆ, ಪ್ರತಿದೇಹದೊಳಗಿನ 'ನಾಗ'ನ ಅಸ್ತಿತ್ವವನ್ನು ಒಪ್ಪಿ ಜೀವ-ಜೀವ ಭೇದದ ಭೂಮಿಕೆ ಸ್ವೀಕರಿಸಬೇಕು. ಎಷ್ಟು ನಾಗಗಳೊ ಅಷ್ಟೆಲ್ಲವೂ 'ಸತ್ಯ' ಅಥವಾ ಒಂದೇ (ಆದಿ) ನಾಗ ಸತ್ಯ; ಉಳಿದುವು ಎಲ್ಲವೂ ಸಂಭ್ರಾಮಕ ಎಂಬ ನಿಷ್ಠೆ ವಹಿಸಬೇಕು. ಇಲ್ಲವೆ 'ಲೌಕಿಕ (ವ್ಯಾವಹಾರಿಕ) ಸತ್ಯ'; 'ಆಧ್ಯಾತ್ಮಿಕ ಸತ್ಯ' ಎಂದು ಬಗೆಯಬೇಕು! ಲೌಕಿಕ 'ಸತ್ಯ' : ಅನೃತ; ನಿತ್ಯವಲ್ಲ! ಎನ್ನಬೇಕು. ಪ್ರಪಂಚ ಅರ್ಥವಿಹೀನವೆಂದರೆ ಲೌಕಿಕ ಸತ್ಯವೂ ಅರ್ಥವಿಹೀನ ಅಲ್ಲವೆ?

ಎಂದರೆ ಐಹಿಕ ಜೀವನ ಮೂಲ್ಯಗಳನ್ನು ಒಪ್ಪದಿರುವ, ವೈಯಕ್ತಿಕ ಮೋಕ್ಷವೇ ಗುರಿಯಾಗಿರುವ ಈ ವಿರಕ್ತ ಸಂಪ್ರದಾಯಗಳು ಸಾಮಾಜಿಕ ಜೀವನವನ್ನು ಅರ್ಥವಿಹೀನವಾಗಿಸುತ್ತಿರುವುದರಿಂದ ಸಂಸ್ಕೃತಿಯ ದಾರಿಯಲ್ಲಿ ಇವು ಪ್ರಗತಿ ಪಥದಲ್ಲಿ ಸಾಗಿರುವುದನ್ನು ಕಾಣುವುದು ಅಶಕ್ಯ. ಆದರೆ ಕೊನೆಯ ಒಂದು ಪಿಳ್ಳೆಯೂ ದುಃಖ ಪೀಡಿತವಾಗಿ ಈ ಭವಬಂಧನದಲ್ಲಿ ತೊಳಲುತ್ತಿರುವ ವರೆಗೆ ತನಗೆ ನಿರ್ವಾಣ (: ಮೋಕ್ಷ) ಬೇಡ, ಎಂದು ಸಾರುವ ಕರುಣಾಮೂರ್ತಿ ಲೋಕೋದ್ಧಾರಕ್ಕಾಗಿ ಭೂಲೋಕದಲ್ಲಿ ಅವತರಿಸುವ ಬೋಧಿಸತ್ವರು ಉಂಟಲ್ಲ ಈ ಬಗೆಯ ಆದರ್ಶದ ಬೋಧಿಸತ್ವರು-ಅವತಾರಿಗಳು, ಮಾನವ ಸಂಸ್ಕೃತಿಯ ಪರಮೋಚ್ಚ ವಿಚಾರದ ಸಾಕ್ಷಾತ್ ಮೂರ್ತರೂಪರೇ ಅಲ್ಲವೊ? ಆದರೆ, ಎಲ್ಲರನ್ನೂ ಮೋಕ್ಷಕ್ಕೊ-ವೈಕುಂಠಕ್ಕೊ-ಕೈಲಾಸಕ್ಕೊ ಒಯ್ಯುವ ಸಂಕಲ್ಪದ ಈ ಬೋಧಿಸತ್ವರು ಆಡುವ ಮಾತು ಮಂಗಳಕರವೊ? ಅಮಂಗಳಕರವೊ? ಐಹಿಕ ಜೀವನವಂತೂ ಸೈತಾನನ ರಾಜ್ಯ! ಆದಕಾರಣ, ಎಲ್ಲರನ್ನೂ ಕೈಲಾಸವಾಸಿಯಾಗಿಸುತ್ತೇನೆ ಎಂಬ ಪುರುಷೋತ್ತಮನು ಶೇಷ ದೇವರ ಅವತಾರನೆ ಆಗುತ್ತಾನೆ? 'ಶೇಷ'ನಲ್ಲದೆ ಭೂಲೋಕದಲ್ಲಿ ಉಳಿವವರಾರು?

ಬೈಬಲ್ಲು ಹೇಳುವ ಸೈತಾನನೆಂಬ ಶೇಷನು ವಹಿಸಿದ ಪಾತ್ರವು ಯಾವುದು? ಸೈತಾನನದೆ? ಜ್ಞಾನವೃಕ್ಷದ ಫಲವನ್ನು ಸವಿಯಲು ಹೇಳಿದ್ದು ದುರ್ಬೋಧೆಯೆ? ಜ್ಞಾನಫಲ ಸವಿಯುವುದು ಏಕೆ ನಿಷಿದ್ಧ? ಆ ಜ್ಞಾನಫಲವು ದುರ್ಬುದ್ಧಿಗೆ ಪ್ರೇರಿಸುವುದು ಏಂದು? ಹಾಗಾದರೆ, ಜ್ಞಾನವು ಪಾಪಕ್ಕೆ ಪ್ರಚೋದಿಸುವುದು ಎಂದರೆ ಏನು ಅರ್ಥ? ಅಜ್ಞಾನಿಯೆ ಸದಾನಂದೀ ಪುಣ್ಯವಂತ: Ignorance is bliss; ನಿಜವೆ? Where is bliss, it is folly to be wise! ಎಂದು ಎನ್ನಲಾದೀತೇ? ಬೈಬಲ್ಲಿನ ಶೇಷನು, ಆ್ಯಡಂ-ಈವ್‌ರಿಗೆ, ಜ್ಞಾನ ವೃಕ್ಷದ ಫಲವನ್ನು ತಿನ್ನಹೇಳದಿದ್ದರೆ ಏನಾಗಬಹುದಾಗಿತ್ತು? ಈ ಪ್ರಪಂಚದಲ್ಲಿ ಕ್ರೈಸ್ತನಂತಹ ಪವಾಡಿಗಳ ಅವತಾರದ ಆವಶ್ಯಕತೆಯೆ ಉಂಟಾಗುತ್ತಿದ್ದಿಲ್ಲ! ಸರಿ, ಅದರಿಂದಾಗಿ ವಿಶ್ವವು ಪರಿಪೂರ್ಣ 'O' ಅವಸ್ಥೆಯಲ್ಲೆ ಇರಬಹುದಿತ್ತು, ಎಂದರೂ, ನಾನು-ನೀನು-ಅವನು ಎಂಬೀ ಬಗೆಯ ತಾರತಮ್ಯದ ಈ 'ಜ್ಞಾನ'ವೇ ಅಂಕುರಿಸದಿದ್ದರೆ, ನಾನು ಇದ್ದೇನೆ ಅಥವಾ ನಾವು ಇದ್ದೇವೆ ಇದರ ಅರಿವೂ ಉಂಟಾಗುತ್ತಿದ್ದಿಲ್ಲ! ಈ ಕಾರಣದಿಂದಲೆ ಸ್ವರ್ಗದಲ್ಲಿ ಸುಖದಿಂದ ಇರುವರೆಂಬ ದೇವರು ಎಂಬವರು, ಸಹಮರ್ತ್ಯರಾಗಿ ಭೂಮಿಯ ಮೇಲೆ ಹುಟ್ಟಲು ಆಸೆಪಡುತ್ತಾರೆ-ಹುಟ್ಟುತ್ತಾರೆ, ಎಂಬ ಕಥೆಗಳೂ ಕೇಳಬರುತ್ತವೆ! ಭಾರತೀಯ ವಿರಕ್ತ ಪಂಥದಲ್ಲಿ ಈ ಕಾರಣದಿಂದಾಗಿ ಶೇಷನು, ಪೂರಾ ದುಷ್ಟನಲ್ಲ; ಇದು ಪ್ರಪಂಚದ ಮಾಯಾಶಕ್ತಿ; ವಿಷ್ಣುಮಾಯೆ ಎಂದರೇ ಇದು. ಇದು 'ಲೀಲಾವಾದ'ದ ಆಕೃತಿ!

ಕೆಸರಲ್ಲಿದ್ದು ನಗುತ್ತಿರುವ ಕಮಲ! ಅಥವಾ ಪ್ರಳಯ ತಾಂಡವದಲ್ಲಿ ಮಂದಹಾಸ ಸೂಸುತ್ತಿರುವ ಕಾಲಭೈರವ! ಇವೆರಡೂ, ನಾಗಭೂಮಿಕೆಯ ಆದರ್ಶ ಆಕೃತಿಗಳು! ಈ ನಾಗರಾಜನಿಗೆ ರಾಸಕ್ರೀಡಾ ವಿಹಾರ ಲೀಲೆ, ಅಥವಾ ತಾಂಡವ ಕೋಲಾಹಲಕ್ಕಾಗಿ ಪ್ರಳಯ ದುರಂತ ಕೃತ್ಯ ಇವೆರಡರಲ್ಲಿ ಯಾವುದಾದರೊಂದರಲ್ಲಿ ಇಷ್ಟ. ನಡುವಿನ ನೇರ ದಾರಿ ಹಾವಿಗೆ ಒಗ್ಗದು! ಇದು ಇದರ ಪ್ರಕೃತಿಸ್ವಭಾವ! ನಾಗನು 'ಕಪಟ ನಾಟಕ ಸೂತ್ರಧಾರಿ' ದೇವರು! ಎಂಬುದು ಭಾರತೀಯ ವಿರಕ್ತ ತತ್ವಜ್ಞಾನದ ಒಂದು ದೃಷ್ಟಿ. ಕಾಲೋಽಸ್ಮಿ ಲೋಕಕ್ಷಯ ಕೃತ್‌ಪ್ರವೃದ್ಧಃ' ಎಂಬ ವಿಷ್ಣುವೆ, ರಾಧಾಲೋಲ, ರಾಸಕ್ರೀಡಾರತ ಭಗವಾನ್ ಶ್ರೀ ಕೃಷ್ಣನೆಂಬ ಶ್ರದ್ಧೆಯುಂಟು! ಅಲ್ಲದೆ ಭೂಲೋಕದಲ್ಲಿ ಯಾರೂ ನರಳುತ್ತ ಉಳಿಯದಂತೆ ಎಲ್ಲರಿಗೂ 'ಕೇವಲಿ' ಅಥವಾ ನಿರ್ವಾಣ ಸಿದ್ಧಿಯ ದಾರಿಗೆ ಆಮಂತ್ರಿಸುವ ಭಗವಾನ್ ಬುದ್ಧನೂ ವಿಷ್ಣುವಿನ ಒಂದು ಅವತಾರವೇ ಎಂಬಲ್ಲಿ ಮಾರ್ಮಿಕ ಔಚಿತ್ಯವಿದೆ. ಇದು ಪ್ರಚಲಿತ ಯುಗದ ಉಪಾಂತ್ಯ ಅವತಾರ!

ನಾಗ-ಸಂಪ್ರದಾಯಕ್ಕೆ ಬೆಳಕಿನ ಅಳುಕು. ಸವಿತೃವನ್ನು 'ಅಪಾಂ-ನಪ್ತೃ'ವಿನ ಸಾಲಿನಲ್ಲಿ ಸೂಚಿಸಿರುವ ಸೂಕ್ತದ ಸಂಕಲನ ತಂತ್ರದಲ್ಲಿ ಸವಿತೃವಿನ ಪ್ರಕಾಶದ 'ಸ್ವತಂತ್ರ' ಅಸ್ತಿತ್ವದ ಪಾತಳಿಯನ್ನು ನಷ್ಟಪಡಿಸುವ ಹಂಚಿಕೆಯು ಒಳಗೊಂಡಿದೆ. ಇದನ್ನು ಈ ಮೊದಲು ಸೂಚಿಸಿ ಆಗಿದೆ. ನಿಯಮನಿರ್ಬಂಧಕ್ಕೆ ಒಗ್ಗದ ನಾಗ : ಚಾಂದ್ರ ಸಂಪ್ರದಾಯದ ಜೀವನ ರೀತಿಗೆ, ಸವಿತೃವಿನ ಪ್ರಕಾಶ - ಎಂದರೆ ಕಾರ್ಯ-ಕಾರಣ ಸಂಬಂಧದ ಮೀಮಾಂಸೆಯಿಂದ ದೊರೆವ, ಜೀವನದ ಅರ್ಥದ ಮೂಲಕ ಲಭಿಸುವ ಬೆಳಕು ಹಿಡಿಸದು, ಮಾತ್ರವಲ್ಲ ಈ ಪ್ರಕಾಶವು ಅಸಹ್ಯವಾಗುತ್ತದೆ. ಅಲ್ಲದೆ ಬಾಳಿನಲ್ಲಿ ವಿಚಾರ-ವಿವೇಕಯುಕ್ತ ಜೀವನವು ಸಂಯಮವನ್ನು ಅಪೇಕ್ಷಿಸುತ್ತದೆ. ಸಮಾಜಿಕ-ರಾಷ್ಟ್ರೀಯ ಹಾಗೂ ಜಾಗತಿಕ ಜೀವನ ಸಂದರ್ಭದಲ್ಲಿ ಮಾನವತೆಯ ಪ್ರಗತಿಗೆ ಬಾಧಕವಾಗದ ಪರಿಮಿತಿಯಲ್ಲಿ, ತನ್ನ 'ಸ್ವ'ದ ಅರ್ಥವನ್ನು ಸಾಧಿಸಲು ಈ ವ್ಯಕ್ತಿಯ ವಿವೇಕ ಅವನನ್ನು ಎಚ್ಚರಿಸುತ್ತದೆ. ಕೆಲಬಾರಿ ಒತ್ತಾಯಪಡಿಸುವುದೂ ಉಂಟು. ವ್ಯಕ್ತಿಯ 'ಸ್ವ'ದ ಅರ್ಥವು, ಆ ಜನಗಣದ ಇಡಿಯಾದ ಜೀವನದ (: ಅರ್ಥದ) ಅಂಗವಾಗಿದೆ, ಎಂಬುದನ್ನು ಮರೆವ ಜೀವಿ, ವಿವೇಕಿಯೆನಿಸದು. ಆದರೆ, ವೈಯಕ್ತಿಕ ಸ್ವಾರ್ಥ-ಪಕ್ಷಾಂಧತೆ, ಜಾತೀಯ ಹೆಮ್ಮೆ ಮೊದಲಾದ ಭಾವನೆಗಳ ಆವೇಶದಲ್ಲಿ, ಬಹುಸಂಖ್ಯ ವ್ಯಕ್ತಿಗಳಿಗೆ ತೆರೆದ ಕಣ್ಣಿನ ವಿವೇಕವನ್ನು ಉಳಿಸಿಕೊಳ್ಳುವುದು ಅಶಕ್ಯವಿರುತ್ತದೆ. ಆದುದರಿಂದ ಸಮಾಜದಲ್ಲಿ ಬಹು ಜನಕ್ಕೆ ಚಾಂದ್ರಸಾಂಪ್ರದಾಯದ ಬಗೆಗೆ ಇರುವ ಪ್ರಾಕೃತಿಕ ಆಕರ್ಷಣವು, ಸಾಂಸ್ಕೃತಿಕ ಪಾತಳಿಯ ಅಂತಃಸಾಕ್ಷಿಯ ಕಿವಿಮಾತಿನ ಬಗೆಗೆ ಇರುವುದಿಲ್ಲ. ಆದರೆ, ಇಂತಹ ಮಾನವ ಸಮಾಜವು, ತನ್ನ ನಡೆವಳಿಗಾಗಿ ತೆತ್ತಬೇಕಾದ ಬೆಲೆಯನ್ನು ಮರೆಯಲಿಕ್ಕಾಗದು! ಗ್ರೀಕ್‌ದೇಶದ ಯುರೋ - ಭಾರತೀಯ ಶಾಖೆಯ ಭಾಷಿಕ ಸಂಸ್ಕೃತಿಯು, ಆಪ : ರಸ ಪಂಥೀಯ 'Moon goddess serpent-goddess' ಪರಂಪರೆಯ ಬಹುಸಂಖ್ಯರ ಧಾರ್ಮಿಕ ವಿಚಾರಗಳ ಪರಿಣಾಮದಿಂದಾಗಿ ತನ್ನ-ತನಕ್ಕೆ ಎರವಾಯ್ತು. ಆ ಬಳಿಕ ಕ್ರೈಸ್ತ ಪಂಥೀಯ ಆದಿ-ಮಾತಾ ಸಂಪ್ರದಾಯವು ಯೂರೋಪ್ ಖಂಡವನ್ನು ವ್ಯಾಪಿಸಿತು. ತತ್ಪೂರ್ವದ ಆದಿಮಾತಾ-ಸಂಪ್ರದಾಯದ ಸುಧಾರಿಸಿದ ಆವೃತ್ತಿ ಇದು. ಪೋಪನ ಧಾರ್ಮಿಕ ಗುರು-ಸಾರ್ವಭೌಮತ್ವದ ಗೋರಿಯಾಗುವ ವರೆಗೆ ಯುರೋಪವು, ಮಬ್ಬುಗತ್ತಲೆಯಲ್ಲೇ ಇದ್ದಿತೆಂದು ಅಲ್ಲಿಯ ಇತಿಹಾಸಕಾರರೇ ಹೇಳುತ್ತಾರೆ. ಪ್ರೊಟೆಸ್ಟಂಟ್ ಮತವೂ ಚಾಂದ್ರ-ತತ್ವಜ್ಞಾನದ ತಿದ್ದಿ ಬೆಳಸಿದ ಇನೊಂದು ಆಕರ್ಷಕ ಆವೃತ್ತಿ! ಕ್ರೈಸ್ತಮತವನ್ನು ಜಾಗತಿಕ ಧರ್ಮವಾಗಿಸುವ ಮಹತ್ವಾಕಾಂಕ್ಷೆಯಿಂದ ಯುರೋಪ್-ಅಮೇರಿಕೆಯ ಕ್ರೈಸ್ತಧರ್ಮದ ಬೇರೆ ಬೇರೆ ಶಾಖೆಗಳ ಪ್ರಚಾರಕರು, ಭಾರತವನ್ನು ಆಕ್ರಮಿಸುವ ಹೊಂಚು ಹಾಕಿದ್ದರು. ಅಸ್ಸಾಮ್ ಮೊದಲಾದ ಪ್ರದೇಶದಲ್ಲಿ ಇಂದಿಗೂ ನಡೆದ ಘಟನೆಗಳಿಂದ ಇದು ಬೆಳಕಿಗೆ ಬರುತ್ತದೆ.

ಮಾನವತೆಯ ಸಂಸ್ಕೃತಿಯ ನಿಜವಾದ ಪ್ರಗತಿಗೆ, ಯುರೋಪಿನಲ್ಲಿ ಆರಂಭವಾದದ್ದು ಮಾನವಶಾಸ್ತ್ರದ ಉದಯದೊಂದಿಗೆ. ಗ್ರೀಕ್‌ದೇಶದ ಪ್ರಾಚೀನ ಸಂಸ್ಕೃತಿಯೊಳಗಿನ ಪ್ರಕಾಶ ಕಿರಣಗಳು, ಸಂಶೋಧನೆಯ ಮೂಲಕ ಕಾಣತೊಡಗಿದ ಬಳಿಕ! ಧಾರ್ಮಿಕ ಏಕಾಂತಿಕ ಶ್ರದ್ಧೆಯು, ಕಾರ್ಯಕಾರಣ ಸಂದರ್ಭದಿಂದ ಆಗಬೇಕಾಗುವ ವಿಶ್ಲೇಷಣಾತ್ಮಕ

ವಿಚಾರಪದ್ಧತಿಗೆ ಶತ್ರುಸ್ವರೂಪವಾಗಿದೆ. ಪವಾಡ-ಚಮತ್ಕಾರಗಳ ನಂಬುಗೆ ಕಾರ್ಯಕಾರಣ ಭಾವದ ವಿಚಾರಕ್ಕೆ ಮಾರಕ. ಆದರೂ ಯುರೋಪಿನಲ್ಲಿ ಆಧುನಿಕ ಶಾಸ್ತ್ರೀಯ ಸಂಶೋಧನವು ಪ್ರಾರಂಭವಾದದ್ದು ಹೇಗೆ? ಎಂಬ ಶಂಕೆಗೆ ಅಲ್ಲಿಯ ಸಂಶೋಧಕರೇ ಕಂಡುಹಿಡಿದ ಉತ್ತರವುಂಟು. 'ಝೂಊಸ್‌ನಂತಹ ದೇವಾಧಿದೇವನೆಂಬವನೂ ವಿಶ್ವ ನಿಯಮ: ನಿಯತಿಗೆ ಒಳಪಟ್ಟವನು ಆಗಿದ್ದಾನೆ;' ಎಂಬ ಈ ಬಗೆಯ ಪುರಾತನ ವರ್ಣನೆಗಳಿಂದ ಯುರೋಪಿನಲ್ಲಾದ ಅರ್ವಾಚೀನ ಪ್ರಗತಿಪರ ವಿಚಾರಗಳ ಪ್ರೇರಣೆಯ ಹಿನ್ನೆಲೆಯು ಎಲ್ಲಿದೆ? ಎಂಬುದರ ಕೇಂದ್ರಬಿಂದುವು ಗೊತ್ತಾಯಿತೆಂದು ಅವರೆ ಹೇಳಿದ್ದುಂಟು. ಈ ನಿಯತಿಯನ್ನು ಬರ್ಟರಾಂಡ್ ರಸೆಲ್ 'Fate' ಎನ್ನುತ್ತಾರೆ. ಗ್ರೀಕ್ ಭಾಷೆಯಲ್ಲಿ 'Moera' ಎಂಬ ಶಬ್ದಸಂಕೇತವುಂಟು. ಇಂದು ಚಾಂದ್ರಪಂಥೀಯ ಸಂಕೇತವಾದರೂ ಇದನ್ನು ಗ್ರೀಕರು ಮಾರ್ಪಡಿಸಿದರು. ಸರ್ವಶ್ರೇಷ್ಠನೆಂಬ ಝೂಊಸ್ ತಲೆವಾಗಿ ಅನುಸರಿಸಬೇಕಾಗುವ ಆ ವಿಶ್ವ-ನಿಯತಿ : ನಿಯಮ ಯಾವ ಬಗೆಯದು ಇರಬಹುದು? ವಿಶ್ವಕ್ಕೆ ಆಧಾರಭೂತವಾದ ಆ ನಿಯಮ : ನಿಯತಿಯನ್ನು ಕಂಡು ಹಿಡಿದು, ಅದನ್ನು ಜನಹಿತಕ್ಕಾಗಿ ಯಾಕೆ ಉಪಯೋಗಿಸಿಕೊಳ್ಳಬಾರದು? ಎಂಬೀ ಬಗೆಯ ಮನೋಭಾವಕ್ಕೆ ದೊರೆತ ಪ್ರೇರಣೆಯಿಂದ, ಅಲ್ಲಿ ಶಾಸ್ತ್ರೀಯ ಸಂಶೋಧನವು ಆರಂಭವಾಯಿತೆಂದು ಹೇಳಲಾಗುತ್ತದೆ. ಕ್ರೈಸ್ತಪಂಥೀಯ ಚಾಂದ್ರಭೂಮಿಕೆಯು 'ಸರ್ವಸಮರ್ಪಣ ಭಾವ'ವನ್ನು ಪ್ರೇರಿಸುವ ದೈವವಾದದ್ದು; ಆದುದರಿಂದ ಸ್ವಾವಲಂಬೀ ಅಂತಃಪ್ರೇರಣೆಯ ವಿಮರ್ಶಾತ್ಮಕ ವಿಚಾರ ಪದ್ಧತಿಯ ನೂತನ ಸಂಪ್ರದಾಯವು ತಲೆಯೆತ್ತದಿದ್ದರೆ ಯುರೋಪ (ಅಮೇರಿಕೆ) ಸಹ, ಚಾಂದ್ರಪಂಥೀಯ ಧರ್ಮದ ಏಶಿಯಾದ ರಾಷ್ಟ್ರಗಳ ಸಾಲಿನಲ್ಲೆ ಒಂದು ಆಗಿ ಇಂದಿಗೂ ಉಳಿಯಬಹುದಿತ್ತು.

ಮುಸಲ್ಮಾನೀ ಧರ್ಮವೂ ಚಾಂದ್ರಭೂಮಿಕೆಯ ವೈಚಾರಿಕ ಆಕೃತಿಯದೇ ಆಗಿದೆ. ಆದರೆ, ಕ್ರೈಸ್ತಮತವು ಹುಟ್ಟಿದ ಬಳಿಕ ಆರುಶತಕಗಳ ತರುವಾಯ ತಲೆಯೆತ್ತಿದ ಚಾಂದ್ರ ಸಂಪ್ರದಾಯವಿದು. ಹಿಂದಿನ ಅನುಭವದ ಲಾಭ ಪಡೆಯದಿರಲು ಶಕ್ಯವಿಲ್ಲ; ಭಾರತೀಯ ಚಾಂದ್ರಭೂಮಿಕೆಯಲ್ಲಿ, ಆದರ ಮೊದಲತನದ ಸ್ವರೂಪದಲ್ಲೆ, ಅಹಿಂಸೆ-ಕುಮಾರೀ ಕುಮಾರ ವೃತ್ತಿಯ ಜೀವನ ಸುಮಾರಾಗಿ ಇಂದಿಗೂ ಉಳಿದಿದೆ. ಆಮೇಲೆ ೩೦೦೦ ವರುಷಗಳ ತರುವಾಯ ಹೊರಟ ಕ್ರೈಸ್ತಪಂಥದ ಅಹಿಂಸೆಯಲ್ಲಿ, ಭಾರತೀಯ ಸ್ವರೂಪದ ತೀವ್ರತೆ ಇಲ್ಲ! ದೇವರ ಜಗಲಿಯಿಂದ ಸರ್ಪವನ್ನು ಕೆಳಕ್ಕೆ ತಳ್ಳಲಾಯಿತು. ಪ್ರೊಟೆಸ್ಟಂಟರು, ಧರ್ಮಗುರುಗಳ ವಿವಾಹಕ್ಕೂ ಸುಮ್ಮತಿಸಿದ್ದಾರೆ! ಕುಮಾರ-ಕುಮಾರೀ ಸಂಪ್ರದಾಯ ಹಳೆಕಥೆಯಾಯಿತು. ಮುಸಲ್ಮಾನೀ ಧರ್ಮದಲ್ಲಿ ಬಹುಪತ್ನಿಯರಿರುವ ರೂಢಿಯುಂಟು. ನಾಗನನ್ನು ಕೊಂದು ಬಿಡುವುದಕ್ಕೆ ಆತಂಕವಿಲ್ಲ. ಚಾಂದ್ರಭೂಮಿಕೆಯ ಅಹಿಂಸೆಯ ಆಕೃತಿಯು ಇಲ್ಲಿ ಪೂರ್ಣಮಾರ್ಪಟ್ಟಿದೆ. ಭೌತ ನಾಗನನ್ನು ಕೊಲ್ಲುವುದು ವಾಡಿಕೆಯಿದ್ದರೂ ಧಾರ್ಮಿಕ ಉಗ್ರಶ್ರದ್ಧೆಯಾಗಿ ಆ ನಾಗಶಕ್ತಿಯು, ಇನ್ನೊಂದು ರೂಪದಲ್ಲಿ ಉಳಿದೇ ಇದೆ. ಏಕಾಂತಿಕ ಸ್ವರೂಪದ ಅತ್ಯಂತ ಉಗ್ರ ಉನ್ಮನಸ್ಕ ಭಾವವು ಅಂಗವಾಗಿರುವ ಚಾಂದ್ರಭೂಮಿಕೆಯ ಆಚಾರ-ವಿಚಾರಗಳಲ್ಲಿ ಉನ್ಮದಿತ ಭಾವವನ್ನು ತೊಡೆದು ಹಾಕಲು ಶಕ್ಯವೇ ಇಲ್ಲ. ಒಟ್ಟಿನ ಜೀವಶಕ್ತಿಯಲ್ಲಿ, ಆತ್ಮ ಸಂರಕ್ಷಣೆಗಾಗಿ ನಿಸರ್ಗದಲ್ಲೇ ಇರುವ ಮೂಲಭೂತ ಪ್ರಕೃತಿ-ಧರ್ಮವಿದು. ಮಾನವ ಜೀವನ ಪಾತಳಿಯಲ್ಲಿ ಅಥವಾ ರಾಜಕೀಯ ಆದರ್ಶವಾದದ ಆವರಣ ತೊಟ್ಟುಕೊಂಡು ಸ್ವೈರ ಸ್ವಚ್ಛಂದ ರೀತಿಯಲ್ಲಿ ಈ 'ಮದಿಂತಮ' ಮನೋಭಾವವು ತಾನೇ ತಾನಾಗಿ ನರ್ತನಕ್ಕೆ ತೊಡಗುವಲ್ಲಿ, ಮಾನವೀಯ ಸಾಂಸ್ಕೃತಿಕ ಪ್ರಗತಿಯ ಆಶೆಯೆ ಇಲ್ಲ. ಮುಸಲ್ಮಾನೀ ಧರ್ಮದಲ್ಲಿ ಇರುವ ಸಾಂಪ್ರದಾಯಿಕ ಶ್ರದ್ಧೆಯ ತೀವ್ರ ಸ್ವರೂಪವನ್ನು ಅಲ್ಲಗಳೆಯಲು ಯಾರಿಂದಲೂ ಶಕ್ಯವಿಲ್ಲ. 'ಇಸ್ಲಾಂ' ಪಂಥದ ಬಗೆಗೆಯ ತಾತ್ವಿಕ ಅಥವಾ ಐತಿಹಾಸಿಕ ಸ್ವರೂಪದ ಏನಾದರೂ ಅನನುಕೂಲ ಪ್ರಶ್ನೆಗಳನ್ನು ಎತ್ತುವುದೂ ಅಶಕ್ಯ. ಇಷ್ಟು ಉಗ್ರ, ತೀವ್ರ ವಿರೋಧವು ಒಮ್ಮೆಲೆ ಹೆಡೆಯೆತ್ತಿ ನಿಲ್ಲುವುದು ಲೋಕಾನುಭವವಾಗಿದೆ. ಕ್ರೈಸ್ತನ ಜೀವನ ಚರಿತ್ರೆಯ ಬಗೆಗೆ, ಶ್ರೀಕೃಷ್ಣನ ಕಥೆಗಳ ಬಗೆಗೆ ಅನುಕೂಲ ಪ್ರತಿಕೂಲ ಅನೇಕಾನೇಕ ಗ್ರಂಥಗಳು ಪ್ರಕಟವಾಗಿವೆ. ಆದರೆ, ಇಸ್ಲಾಮ್ ಮತ ಸ್ಥಾಪಕನ ಕುರಿತು ಈವರೆಗಿನ ಪ್ರಕಟನೆಗಳಲ್ಲಿ ವಿಶ್ಲೇಷಣಾತ್ಮಕ ಐತಿಹಾಸಿಕ ಸ್ವರೂಪದ ಗ್ರಂಥಗಳು ಎಷ್ಟಿವೆ?

ಚಾಂದ್ರಭೂಮಿಕೆಯಿಂದ ಕಲೆ, ಸಾಹಿತ್ಯ, ಮಾನವ ಸಂಸ್ಕೃತಿಗೆ ದೊರೆತಿರುವ ಅಪೂರ್ವ ಕೊಡುಗೆ ಇದರ ಬಗೆಗೆ ಸಂದೇಹವೇ ಇಲ್ಲ. ಆದರೆ, ಏಕಾಂತಿಕ ವಿರಕ್ತವಾದ, ಉನ್ಮದಿತ ಮನೋಭಾವ, ಸಾಂಪ್ರದಾಯಿಕ ಅಂಧಶ್ರದ್ಧೆಗಾಗಿ ಚಾಂದ್ರಭೂಮಿಕೆಯ ಧರ್ಮಪಂಥೀಯ ಜನಗಣದಲ್ಲಿ, ಆಧುನಿಕ ಶಾಸ್ತ್ರೀಯ ವಿಚಾರಗಳು ಬೇರು ಹಿಡಿದು ಬೆಳೆಯುವದು ಅಶಕ್ಯವಾಗುತ್ತಿದೆ. ಇದನ್ನು ದುರ್ಲಕ್ಷಿಸಿ ನಡೆಯಲಾರದು. ಶಾಸ್ತ್ರೀಯ ಸಂಶೋಧಕನಲ್ಲಿ ಯುಕ್ತರೀತಿಯಲ್ಲಿ ಸಂದೇಹ-ಪ್ರಶ್ನೆಗಳನ್ನು ಎತ್ತುವ ಕಲೆ ಇರುವುದು ಆವಶ್ಯಕವಿದೆ. ಚಾಂದ್ರಭೂಮಿಕೆಯ ಸಾಂಪ್ರದಾಯಿಕ ಏಕಾಂತಿಕ ಶ್ರದ್ಧೆಗೆ, ಎಲ್ಲೆಲ್ಲೂ ಪವಾಡ-ಚಮತ್ಕಾರಗಳೆ ಕಾಣುತ್ತವೆ. ಆದರೆ 'ಪವಾಡ ಸತ್ಯ' ಮತ್ತು 'ವಿಶ್ಲೇಷಣಾತ್ಮ ಭೂಮಿಕೆಯ ಸತ್ಯ' ಇವೆರಡೂ ಒಂದೇ ವ್ಯಕ್ತಿಗೆ ಶಕ್ಯವಾಗುವುದು ತುಂಬ ತೊಂದರೆಯ ಮಾತು. ಭಾರತೀಯರಲ್ಲಿ ಒಬ್ಬ ಸಿ. ವಿ. ರಾಮನ್ ಅವರನ್ನು ಬಿಟ್ಟರೆ ಸೈನ್ಸಿನಲ್ಲಿ ನೋಬೆಲ್ ಪಾರಿತೋಷಕದ ಅರ್ಹತೆಯ ಶಾಸ್ತ್ರಜ್ಞರೇ ಹುಟ್ಟಬಾರದೇಕೆ? ಇಜಿಪ್ತದಿಂದ ತೊಡಗಿ ಪಾಕಿಸ್ತಾನದ ವರೆಗೆ ಮಲೇಶಿಯಾ ಇಂಡೋನೇಷಿಯಾ ಸಹಿತ, ನೋಬೆಲ್ ಪಾರಿತೋಷಕದ ಅರ್ಹತೆಯ ಸಂಶೋಧನ ಮಂದಿರಗಳು ಎಲ್ಲೆಲ್ಲಿವೆ? ಎಷ್ಟು ಇವೆ? ಈ ರಾಷ್ಟ್ರಗಳು ಶಾಸ್ತ್ರೀಯ ವೈಚಾರಿಕ ದೃಷ್ಟಿಯ ಬೆಲೆಯನ್ನು ತೆತ್ತು, ಏಕಾಂತಿಕ ಸನಾತನ ಶ್ರದ್ಧಾಮಯ ದೃಷ್ಟಿಯನ್ನು ಉಳಿಸಿಕೊಳ್ಳುತ್ತಿವೆ!

ಪ್ರಕೃತಿಯಿಂದ ಸಂಸ್ಕೃತಿಯ ಕಡೆಗಿನ ಪಯಣದಲ್ಲಿ, ಮಾನವ ಸಮಾಜದ ಪ್ರಗತಿಗೆ ಪೋಷಕವಾಗುವ ರೀತಿಯಲ್ಲಿ, ಈ ಚಾಂದ್ರಭೂಮಿಕೆಯ ಆಚಾರ ವಿಚಾರಗಳನ್ನು ರೂಪಿಸಿಕೊಳ್ಳಲು ಶಕ್ಯವಾಗುವ ವರೆಗೆ ಈ ಪ್ರಗತಿಯು ಹೀಗೆಯೆ ಕುಂಟುತ್ತ-ಎಡಹುತ್ತ ಸಾಗತಕ್ಕದ್ದೇ ಅಂತೂ ಈ ವರೆಗಣ ನಾಗಪ್ರತಿಮಾರಾಧನೆಯ ಈ ಸಮೀಕ್ಷೆಯಲ್ಲಿ ನಿಶ್ಚಿತವಾಗುತ್ತಿರುವ ಒಂದು ಮಹತ್ವದ ಸಂಗತಿಯೆಂದರೆ, ಈ ಮಾನವ ಪ್ರಪಂಚದಲ್ಲಿ ಎಲ್ಲಕ್ಕೂ ಪ್ರಾಚೀನ ಹಾಗೂ 'ಆದಿ' ದೈವತ ಎಂಬ ಅರ್ಹತೆ ದಿವ್ಯ ನಾಗಪ್ರತಿಮೆಗಳಿಗೆ ಇದೆ, ಅಥವಾ ಮಾತೃಸ್ಥಾನೀಯ ಆದಿ-ಶಕ್ತಿಗೆ ಇದೆ. ಇವೆರಡರಲ್ಲಿ ಯಾವುದು ಮೊದಲು? ಎಂಬ ಪ್ರಶ್ನೆಗೆ ಅವಕಾಶವೇ ಉಳಿಯದಿರುವ 'ಅಪಾಂನಪ್ತ್ರ' ದೈವತ ಪ್ರತಿಮಾ ಸಂಕೇತವು ಪುರಾತನ ಋಗ್ವೇದ ಹಾಗೂ ಅವೆಸ್ತಾ ಗ್ರಂಥಗಳಲ್ಲಿ ದೊರೆಯುತ್ತದೆ.

ಮಾನವನನ್ನು ಸಂಸ್ಕೃತಿಯ ದಾರಿಯಲ್ಲಿ ತಂದ ಶ್ರೇಯಸ್ಸು 'ಅ-ದಿತಿ' (ಅ-ಖಂಡಿತ-ಸಮಗ್ರ) ಸ್ವರೂಪದ ಸಾರ್ಪದೈವತಕ್ಕೆ ಇರುವುದು ಸುಳ್ಳಲ್ಲ. ಆದರೆ, ಅಪಾಂ-ನಪ್ತ್ರ : ಅ-ದಿತಿ ಸ್ವರೂಪವೇ ಸಾಂಸ್ಕೃತಿಕ ಮಟ್ಟದ ಜೀವನ ಪಾತಳಿಯ ಗುರಿ, ಆದರ್ಶ ಆಗಲಾರದು. ಈ 'ಆದರ್ಶ' ಅಮಾವಾಸ್ಯೆಯ ಪ್ರತಿಮೆಯ 'ಶೂನ್ಯ'. ಪ್ರ-ಲಯಯೋಗ! ಜೀವನದ ಅರ್ಥ: ಮೂಲ್ಯ: ಸೌಂದರ್ಯದ ಸಂದರ್ಭದ 'ಕೃತಿ' -ಆಚಾರ-ವಿಚಾರ ಇವುಗಳ ಮೂಲಕ ಮಾನವ 'ಸಂಸ್ಕೃತಿ' ಎಂಬುದು ಆಕಾರ ಪಡೆಯುತ್ತದೆ - ಆ-ಕೃತಿಯಾಗುತ್ತದೆ. ಸು-ಸಂಗತಿ ಸು-ಸಂಬದ್ಧತೆಯ ಅ-ಭಾವದಲ್ಲಿ, ಯಾವ ಆ-ಕೃತಿಯೂ 'ಕೃತಿ' ಎಂಬ ಅರ್ಹತೆಯದಾಗಲಾರದು. ಆದರೆ, ವಕೀಲನಂತೆ ಪಕ್ಷಮಂಡನೆಗಾಗಿ ಬುದ್ಧಿಯ ಪ್ರಯೋಜನ ಪಡೆದು ಬುದ್ಧಿಯ ಶಿರಚ್ಛೇದದ ಆವಶ್ಯಕತೆಯನ್ನೇ ಸಿದ್ಧಪಡಿಸಿರುವ ವಿರಕ್ತಪಂಥೀಯ ಮಹಾನ್ 'ನಾಗ' ದೇವಾಚಾರ್ಯರು ಕಾಲಕಾಲಕ್ಕೆ ಹುಟ್ಟುತ್ತ ಬಂದಿದ್ದಾರೆ. ಇಂತಹ ಮೇಧಾವಿಗಳು ಊಳಿಗದವರು ಇಲ್ಲದ ಅವತಾರೀ-ಪ್ರವಾದೀ ಸಂಪ್ರದಾಯವು ಜಗತ್ತಿನಲ್ಲಿ ಒಂದೂ ದೊರೆಯಲಾರದು. ಅರ್ಥ: ಮೂಲ್ಯ : ಸೌಂದರ್ಯಕ್ಕೆ ತಳಹದಿಯಲ್ಲಿ ಸು-ಸಂಗತ ಸುಸಂಬದ್ಧ ಕೃತಿಯ ಆವಶ್ಯಕತೆಯಿದೆ. ಆದರೆ ಸುಂದರ ಸಾಹಿತ್ಯ ಕಲಾಕೃತಿಯ ಮೂಲಕವಾಗಿಯೇ ವ್ಯವಸ್ಥೆಯ ಬಂಧುರತೆಯನ್ನು ಒಪ್ಪಿಕೊಳ್ಳುವಲ್ಲಿಯೇ ಮಾನವನು ಬಂಧನಕ್ಕೆ ಒಳಗಾಗುತ್ತಾನೆ ಎಂದು ಧ್ವನಿತಪಡಿಸಲಾಗುತ್ತದೆ! ನೈಸರ್ಗಿಕ ಸ್ವತ್ವಕ್ಕೆ ಎರವಾಗಿ (alienated) ಮನೋವಿಕೃತಿಯನ್ನು ತಂದುಕೊಳ್ಳುತ್ತಾನೆ; ಆದಕಾರಣ 'ಮರಳಿ ನಿಸರ್ಗಕ್ಕೆ ಎಂಬ ವ್ಯಕ್ತಾವ್ಯಕ್ತ ಸಂದೇಶ ಆದೇಶದ ಧ್ವನಿಯಿರುವ ಫ್ರೈಡ್ ಸಿದ್ಧಾಂತ, ಏಕಾಂತಿಕ ವ್ಯಕ್ತಿವಾದದ ಪ್ರಚೋದನೆಯ ಕಲಾ, ಸಾಹಿತ್ಯದ ಕೃತಿಗಳಲ್ಲದೆ, ಶಾಸ್ತ್ರೀಯ ಪದ್ಧತಿಯ ವೇಷ ಧರಿಸಿದ ಭೌತಿಕ ಸಿದ್ಧಾಂತಗಳಿಗೂ ಕೊರತೆಯಿಲ್ಲ! ಬಟ್ಟೆಗಳ ಮೂಲಕ ಲೈಂಗಿಕ ಆಕರ್ಷಣ ಬೆಳೆಯುತ್ತದೆ. ಆದಕಾರಣ, ಈ ವಸ್ತ್ರಗಳ ಬಣ್ಣದ ಆವರಣದಲ್ಲಿ ಬಚ್ಚಿ ಉಳಿವ ಈ ಅನೈಸರ್ಗಿಕ ಮನೋಭಾವಗಳನ್ನು ಪೋಷಿಸುವ 'ಸಂಸ್ಕೃತಿ' : ಸಾಮಾಜಿಕ ಮೂಲ್ಯ : ವ್ಯವಸ್ಥೆಯು ಬೇಗನೆ ಇಲ್ಲವಾಗದೆ ನೈಸರ್ಗಿಕ ಜೀವನವು ಅಶಕ್ಯ! ಸಾಮಾಜಿಕ ಭಯದಿಂದ ವ್ಯಕ್ತಿಯು ತನ್ನ ನೈಸರ್ಗಿಕ ಆಕಾಂಕ್ಷೆಗಳನ್ನು: ಪ್ರವೃತ್ತಿಗಳನ್ನು

ಹತ್ತಿಕ್ಕುತ್ತಿದೆ. ಇವೆಲ್ಲ ಆಶೋತ್ತರಗಳು ವಿಕೃತ ಸ್ವರೂಪದಲ್ಲಿ ಸುಪ್ತಚೇತನದಲ್ಲಿ : ನಾಗಲೋಕದಲ್ಲಿ ಅಡಗಿಕೊಂಡು ಉಳಿಯುವವು. ಆದುದರಿಂದ, ವ್ಯಕ್ತಿಯ ಜೀವನವನ್ನು ಬರಡುಗೊಳಿಸುವ ಈ ವೈವಾಹಿಕ ಕೃತ್ರಿಮ ಬಂಧನ-ಸಮಾಜ ವ್ಯವಸ್ಥೆ ಬದಲಾಗಲೇಬೇಕು, ಎಂಬ ಸಮತಾವಾದ ಒಂದೊಂದು ರೂಪ ಆಕಾರದಲ್ಲಿ ತಾಂಡವ ವಾಡುತ್ತಿರುವುದನ್ನು ಇಂದು ಕಾಣಬಹುದಾಗಿದೆ. 'ಅದಿತಿ' ಸ್ವರೂಪದ ಸಲಿಲದ ಸಮಪಾತಳಿಯ ಸತ್ವಪ್ರಣಾಲಿಯು, ಜೀವನದ ಯಾವುದೇ ಕ್ಷೇತ್ರದಲ್ಲಿ ತಲೆಯೆತ್ತಿದರೂ ಅದು ಅಮಾವಾಸ್ಯೆಯ ದಾರಿಯಲ್ಲಿ ಹೋಗಲೇಬೇಕಾದುದು ಅದರ ನಿಯತಿ (Logic) ಆಗಿದೆ.

ಜೀವನದೊಳಗಿನ ದಿಗ್ಭ್ರಮೆ-ಸಂಭ್ರಮಕ್ಕೆ ಮೂಲಕಾರಣವು, ವಿಚಾರದ ವಿಚಾರವನ್ನು ಕುರಿತು ಪಡಬೇಕಾಗಿರುವ ಎಚ್ಚರದ ಅಭಾವ. ಈವರೆಗಿನ ಸಮೀಕ್ಷೆಯಲ್ಲಿ 'ನಾಗ' ಪ್ರತಿಮೆಯು ಚಾಂದ್ರಸಂಕೇತದೊಡನೆ ಸಂ-ಬದ್ಧವಿರುವುದು ಒಂದಕ್ಕಿಂತ ಹೆಚ್ಚು ಬಗೆಗಳಿಂದ ಗಮನಕ್ಕೆ ಬಂದಿದೆ. ಅದರ ಪುನರುಕ್ತಿ ಮತ್ತೆ ಅನಾವಶ್ಯಕ. ಪುರಾತನ ಕಾಲದಲ್ಲಿ ಅಂದಿನವರಿಗೆ ಜೀವನ-ಪ್ರೇರಣೆ ದೊರೆಯಲು ಕಾರಣವಾದ ದಿವ್ಯ ದೈವತ ಪ್ರತಿಮೆಗಳು ಎರಡು: ಚಂದ್ರ ಮತ್ತು ಸೂರ್ಯ. ಋಗ್ವೇದದಲ್ಲಿ ಇದರ ಉಲ್ಲೇಖವಿಲ್ಲದಿಲ್ಲ! ವಿಶ್ವ ನಿರ್ಮಾಣ - ವಿಚಾರದ ತಳಹದಿಯಲ್ಲಿ ಸೂರ್ಯ-ಚಂದ್ರರೇ ಇರುವುದನ್ನು ಸೂಚಿಸುವ ಒಂದು ಸಣ್ಣಸೂಕ್ತವು ಋಗ್ವೇದದಲ್ಲಿದೆ.[೫] 'ಸೂರ್‍ಯಾ ಚಂದ್ರಮಸೌಧಾತಾಯಥಾ ಪೂರ್ವಂ ಅಕಲ್ಪಯತ'. ಆದರೆ, ಈವರೆಗೆ ಸೂರ್ಯ ಹಾಗೂ ಚಂದ್ರರ ಈ ಸಾಂಕೇತಿಕ ಪ್ರತಿಮೆಗಳ ಮೌಲಿಕತೆಯನ್ನೂ ಗುರುತಿಸಿರುವ ಸಂಶೋಧಕರು ವಿರಳ; ಇದು ಅವರ ತಪ್ಪಲ್ಲ. ಜ್ಞಾನೋಪಲಬ್ಧಿಯ ಬಗೆಗಿನ ಅರ್ವಾಚೀನ ಸಂಶೋಧನದಿಂದಾಗಿ, ಈ ಪ್ರತಿಮಾ: ಸಂಕೇತಗಳ ಅನಿವಾರ್ಯತೆಯು ಇದೀಗ ವಿಚಾರವಂತರ ಗಮನಕ್ಕೆ ಬರತೊಡಗಿದೆ. ಹಿರಿಯರ ತಲೆಯಮೇಲೆ ನಿಂತು 'ಕಾಕಾ ನಿನಗಿಂತ ನನಗೆ ಹೆಚ್ಚು ದೂರ ಕಾಣುತ್ತಿದೆ' ಎಂದು ತನ್ನ ಬುದ್ಧಿವಂತಿಕೆಯ ಪ್ರದರ್ಶನ ಮಾಡುವ ಮಗುವಿನ ಬಾಲಿಶತೆ; ಹಿಂದಿನವರಿಗಿಂತ ಇಂದಿನವರು ವಿಶೇಷ ವಿಚಾರವಂತರು, ಎಂಬಲ್ಲಿ ಉಂಟು.

ಆದರೆ, ಈವರೆಗೆ ಆಗುತ್ತ ಬಂದಿರುವ ಒಂದು ತಪ್ಪಿನಿಂದ ಸಂಸ್ಕೃತಿಯ ಪ್ರಗತಿಗೆ ಕಾಲಕಾಲಕ್ಕೆ ಆತಂಕ ಉಂಟಾಗುತ್ತ ಬಂದಿದೆ. ಈ ತಪ್ಪು ಎಂದರೆ ಸೌರ ಅಥವಾ ಚಾಂದ್ರಪಂಥೀಯ ಏಕಾಂತಿಕ ಶ್ರದ್ಧೆ. ಮಾನವ ಸಮಷ್ಟಿ ಪುರುಷನ ಎರಡು ಕಣ್ಣು : ಸೂರ್ಯ ಮತ್ತು ಚಂದ್ರ. ಇವೆರಡರಲ್ಲಿ ಯಾವುದೊಂದನ್ನೇ ಉಳಿಸಿಕೊಳ್ಳುವಲ್ಲಿ ಸ್ವಂತದ್ದೇ ಹಾನಿಯಿದೆ! ಆದರೆ, ಒಂದು ಕಣ್ಣಿನಿಂದ ಒಂದು ದೃಶ್ಯ; ಇನ್ನೊಂದು ಕಣ್ಣಿನಿಂದ ಇನ್ನೊಂದು ದೃಶ್ಯ; ಹೀಗೆ ಕಾಣತೊಡಗಿದರೆ ಆ ವ್ಯಕ್ತಿಯ ಅವಸ್ಥೆಗಾದ ಏನಾಗಬೇಕು! ಎರಡೂ ಕಣ್ಣಿನಿಂದ ಒಂದೇ ದೃಶ್ಯವು ಕಾಣಬೇಕಿದ್ದರೆ ಭಾಷಾ : ಮಾಧ್ಯಮದ ಇತಿ ಮಿತಿಗಳ ಬಗೆಗೆ ನಾಲ್ಕು ಮಾತು ಅವಶ್ಯವಾಗುತ್ತದೆ.

ಟಿಪ್ಪಣಿಗಳು

೧. J. Gonda ***Early Vishnuism***
೨. Mercia Eliade ***Myth of Eternal Return***; P. 43
೩. E. R. Dodds ***Greeks and the Irrational***
೪. ***ಋಗ್ವೇದ ಸಂಹಿತೆ*** X. ೧೨೯.೪
೫. ಅದೇ X. ೧೯೦

ಭಾಷಿಕ 'ಮಾಧ್ಯಮಾ' : 'ಪ್ರತಿಮಾ' ಇದರ ಪೂರ್ವೋತ್ತರ

ನಾಗಪ್ರತಿಮಾ ಆರಾಧನೆಯಲ್ಲಿ ಭಾರತೀಯ ಸಂಸ್ಕೃತಿಯ ಉದ್ಗಮ ವಿಕಾಸದ ಐತಿಹ್ಯವು ಒಳಗೊಂಡಿದ್ದುದು, ಈ ಸಮೀಕ್ಷೆಯಲ್ಲಿ ಅರಿಕೆಗೆ ಬರುತ್ತದೆ. ಕೇವಲ ಭಾರತೀಯ ಸಂಸ್ಕೃತಿಯ ಐತಿಹ್ಯವು ಮಾತ್ರವಲ್ಲ. ಗ್ರೀಕ್-ಈಜಿಪ್ಟ್ ಭಾಗದ ಈ ಬಗೆಯ ಪವಾಡ ಕಥೆಗಳಿಂದ, ಅಲ್ಲಿಯ ಸಾಂಸ್ಕೃತಿಕ ವಿಕಾಸದ ಆದಿಯಲ್ಲೂ ನಾಗಾರಾಧಕರ ಕೈವಾಡವೆ ಇರುವುದರ ಮನವರಿಕೆಯಾಗುತ್ತದೆ.

ಈ ಐತಿಹಾಸಿಕ ಪಾತಳಿಯ ಆಕೃತಿಗೆ, ತಾತ್ತ್ವಿಕ ಸಾಂಸ್ಕೃತಿಕ ಪಾತಳಿಯ ಆಕೃತಿಯ ಬೆಂಬಲವುಂಟು. ಸಂಸ್ಕೃತಿಯ ಉಗಮ ಎಂದರೆ ಮಾನವ ಭಾಷೆ : ಜ್ಞಾನದ ಉಗಮ, ಮಾನವರ ಭಾಷೆ ಹಾಗೂ ಜ್ಞಾನದ ಮೊದಲ ಹಂತದಲ್ಲಿ 'ನಾಗ' ಪ್ರತಿಮೆಗೆ ಸಂಬದ್ಧ ಪವಾಡಗಳಿವೆ. ಇದುವೆ ಇದಕ್ಕೆ ಪ್ರಮಾಣ! ಭಾಷಿಕ 'ಮಾಧ್ಯಮ'ದ ಈವರೆಗೂ ಸ್ಪಷ್ಟತೆಯನ್ನು ಪಡೆಯದಿರುವ ಪೂರ್ವವೃತ್ತವು ನಾಗಾರಾಧನೆಯ ಸಂದರ್ಭದಲ್ಲಿ ಬೆಳಕಿನಲ್ಲಿ ಬರುತ್ತದೆ. ಭಾಷೆಯು : ಭಾಷಿಕ ಪ್ರತಿಮೆಗಳು, ಸಂಭ್ರಮಕಾರಿಯಾಗುತ್ತಿರುವುದು ಏಕೆ? ಎಂಬುದು ಇದರ ಅನುಷಂಗದಿಂದ ಸ್ಪಷ್ಟವಾಗಲಿದೆ. ಇಷ್ಟ ಬಂದ ರೂಪ ಆಕೃತಿ ಆಗಬಲ್ಲ ಮಾಯಾಶಕ್ತಿಯುಳ್ಳದೆಂಬ ನಾಗ, ಇದುವೆ ಆದಿಪ್ರತಿಮೆ. ಮಾಧ್ಯಮವೆಂದ ಬಳಿಕ ಈ ಪಾತಳಿಯ ಜ್ಞಾನದ ಆಕೃತಿಯ ವೈಶಿಷ್ಟ್ಯವು 'ನೇತಿನೇತಿ' ಸ್ವರೂಪದ್ದೇ ಆಗಿರಬೇಕಷ್ಟೇ?

ಇನ್ನೊಂದು ಪ್ರಶ್ನೆ: ಭಾಷೆಗೆ 'ಮಾಧ್ಯಮ' ಎನ್ನುವ ಕಾರಣವೇನು? ಇದು ಇಂಗ್ಲೀಷಿನ ಸಂಪರ್ಕದಿಂದ ರೂಢವಾಗಿರುವ ಮಾತು ಎಂದು ಗ್ರಹಿಕೆಯಿದೆ. Medium of Instruction ಶಿಕ್ಷಣದ ಮಾಧ್ಯಮ; ಹಳೆಯ ಸಾಹಿತ್ಯದಲ್ಲಿ 'ಮಾಧ್ಯಮ' (medium) ಸಂಕೇತವು ಈ ಅರ್ಥದಲ್ಲಿ ಕಂನುಡಿಯಲ್ಲಾಗಲಿ, ಯಾವುದೆ ಪ್ರಾಂತ ಭಾಷೆಯಲ್ಲಾಗಲಿ, ದೊರೆಯದು. ಸಂಸ್ಕೃತ ಸಾಹಿತ್ಯದಲ್ಲಿಯೂ ವಿಶೇಷ ಪ್ರಚಲಿತವಿಲ್ಲದ್ದರಿಂದ ಹುಡುಕಿಕೊಂಡು ಹೋಗುವ ಆವಶ್ಯಕತೆಯಿದೆ. ಮೃತಾತ್ಮಕ ಸಂದೇಶ, ಇಚ್ಛೆ ಅರಿಯಲು ಅವರೊಡನೆ ಮಾತಾಡಲು ಶಕ್ಯವಿದೆ, ಎಂಬ ಒಂದು ವಿಚಾರದ ಪ್ರಯೋಗಗಳು ಹಿಂದೆ ಬಹಳ ಪ್ರಚಾರದಲ್ಲಿ ಇದ್ದವು. ಆಗ ಪ್ಲಾಂಚೆಟ್ಟ (Planchette) ಮೇಲೆ ಬೆರಳು ಇಟ್ಟರೆ ಸಾಕು, ನೀವು ಆಮಂತ್ರಿಸಿದ ಗತಜೀವವು ಬಂದು, ಅದರಲ್ಲಿ ಇಡಲಾದ ಪೆನ್ಸಿಲಿನಿಂದ ತನ್ನ ಮನೋಗತ ಬರೆಯುವುದು, ಎಂಬ ಗ್ರಹಿಕೆಯಿತ್ತು. ಆ ಪರಲೋಕದ ಜೀವ ಮತ್ತು ಭೂಮಿಯ ಮೇಲೆ ಆ ಜೀವದ ಇಚ್ಛೆ ಅರಿಯಲು ಅಪೇಕ್ಷೆ ಪಡುವುದು ವ್ಯಕ್ತಿ ಇವೆರಡು ಪಾತಳಿಗಳ ನಡುವಿನದು ಮಧ್ಯಸ್ಥ: ಮಾಧ್ಯಮ ಪ್ಲಾಂಚೆಟ್. ಇದು ನಿರ್ಜೀವ ಒಂದು ಯಾಂತ್ರಿಕ ಯೋಜನೆ. ಆದರೆ, ಸಂಮ್ಮೋಹನ ಶಕ್ತಿಯ ಮೂಲಕ (ಹಿಪ್ನೋಟಿಕ್) ಒಬ್ಬರಿಗೆ ಬಾಹ್ಯ-ಪ್ರಜ್ಞೆ ಇಲ್ಲದಂತೆ 'ನ-ಚಿಕೇತ' ಅವಸ್ಥೆಗೆ ಒಯ್ಯಲು ಶಕ್ಯವಿದೆ. ಈ ಬಗೆಯ ಸುಪ್ತಾವಸ್ಥೆಯಲ್ಲಿ, ಆ ವ್ಯಕ್ತಿಯ ಮನೋರೋಗಗಳ ಅಜ್ಞಾತ ಕಾರಣಗಳನ್ನು ಪ್ರಶ್ನೆಗಳ ಮೂಲಕ

ಹೊರಗೆ ತೆಗೆಯಲು, ಬೆಳಕಿಗೆ ತರಲು ಶಕ್ಯವಿದೆ. ಇಂತಹ ವ್ಯಕ್ತಿಗೆ ಮಧ್ಯಸ್ಥ : ಎಂದು ಹೇಳುವ ವಾಡಿಕೆಯಿದೆ. ಮೈಯಲ್ಲಿ ದೇವತಾ ಆವೇಶವಾಗಿದೆ. ಎಂಬ 'ಉನ್ಮದಿತ' ಉನ್ಮನಸ್ಕರಿಂದ ಭವಿಷ್ಯ - ತಮ್ಮ ಸಂದೇಹ, ಪ್ರಶ್ನೆ ಕೇಳಿ ಉತ್ತರವನ್ನು ಪಡೆವ ನಡೆವಳಿ, ಭಾರತದಲ್ಲಿ ಇಂದಿಗೂ ಪ್ರಚಲಿತವಿದೆ. ಮಾನವೇತಿಹಾಸದೊಳಗಿನ ಪ್ರತಿಮಾ : ಸಂಕೇತಾತ್ಮಕ ಭಾಷಾಮಾಧ್ಯಮವು ಆಕಾರ ಪಡೆವ ಮುಂಚಿನ ಆ ಜೀವನದ ಸಾಕ್ಷಾತ್ 'ಮಾಧ್ಯಮ'ದ ಅವಶಿಷ್ಟಪ್ರಕಾರವೆ ಇಂದಿನ 'ಕಣಿ' ದೇವಾ(ಹಾ)ರ - ದೇವರಾ ಹೇಳೋದು ಈ ಪವಾಡ ಜರುಗಿಸುವ 'ಮಾಧ್ಯಮ' ಆದಿ-ನಾಗಿ ಅಥವಾ ನಾಗ-ಆವೇಶದ ಈ ಪರಂಪರೆಯ ಉತ್ತರಾಧಿಕಾರಿಗಳೇ 'ಕೌಲೆತ್ತಿನ' ಹೋರಿ ಮೂಲಕ: 'ಬಸವಣ್ಣ'ನಿಂದ ದೇವರಾ ಹೇಳಿಸೋ ಕೆಲಸ ಮಾಡಿಸುವವರು, 'ಮೂಕಯ್ಯ' ನ ಮಠಗಳ ಪವಾಡ, ಪಕ್ಷಿ ಶಕುನ, ಲಕ್ಷ್ಮಿ ಮಾರಿ ಮೈಯಲ್ಲಿ ಬರುವ ದೇವದಾಸಿಯರು ಇತ್ಯಾದಿ ಪ್ರಕಾರಗಳು.

ಋಗ್ವೇದದ 'ಅಂಭೃಣಿ'ಯನ್ನು 'ಮಾಧ್ಯಮಿಕಾ' ವಾಕ್ ಎಂದುದು, ಬೃಹದ್ದೇವತಾದಿ ಪುರಾತನ ಗ್ರಂಥಗಳಲ್ಲಿ ಕಾಣದೊರೆಯುತ್ತದೆ. ಸಾಯಣಭಾಷ್ಯವು ಈ ಪರಿಭಾಷೆಯನ್ನು ಮಾನ್ಯಮಾಡಿ ರೂಢಿಸಿದೆ. ಅದಿತಿ, ಅಂಭೃಣಿ, ಸರಸ್ವತಿಯೆಂಬ ಆಪ : ರಸ (=ಸರ್‌ಪ್) ಶಕ್ತಿಯ ಆವೇಶವಾಗುವ ಕುಮಾರೀ: 'ಸತಿ' 'ಸೇತು' ಪರಂಪರೆಯು ಋಗ್ವೇದ ಕಾಲದಲ್ಲಿ ಪ್ರಚಲಿತವಿತ್ತು. ಆದರೆ, ಈ ಸಂಕಲನಕಾರನು ಇದನ್ನು ತೆರೆಯ ಮರೆಯ ದೃಶ್ಯವಾಗಿಯೆ ಉಳಿಸಿದ್ದಾನೆ. ಸಾಯಣರು, 'ಅಂಭೃಣಿ ಋಷಿಯ ಕನ್ಯೆಯ ಮೈಯಲ್ಲಿ ದೇವಿಯ ಆವೇಶವಾಗಿ ನಿರ್ಮಿತವಾದ ಸೂಕ್ತವಿದು' ಎಂದು ವಾಗಾಂಭೃಣೀ ಸೂಕ್ತ-ಭಾಷ್ಯದ ಮೊದಲಿಗೆ ಪ್ರಸ್ತಾಪ ಮಾಡಿದ್ದಾರೆ.[೧] ಗರ್ಭಸ್ಥ ವಾಮದೇವನು, ಇಂದ್ರ-ಅದಿತಿಯರ ಸಂವಾದ ಕೇಳುತ್ತಾನೆ; ತಾನೇ ಇಂದ್ರ, ಮನು, ಉಶನಾಕವಿ ಆಗುತ್ತಾನೆ.[೨] ಎಂಬ ಹಾಗಿನ ಈ ಮಾತುಗಳ ಮೇಲಿನ ಅದ್ಭುತತೆಯ ಆವರಣ ಬದಿಗೆ ಸರಿಸಿದಲ್ಲಿ ಕಾಣುವುದು ಏನು? ಗರ್ಭದಲ್ಲಿರುವ ಶಿಶುವು ಮಾತೂ ಕಲೆಯುವ ಮೊದಲೆ ಮಾತಾಡುತ್ತದೆ, ಎಂದರೇನು? ಭಾಷೆ ಕಲಿಯದೆ ಜನ್ಮದೊಡನೆಯೆ ಉಸಿರಾಟದಂತೆ ಮಾತು ಸಹ ಬರುವ ಈ ಅದ್ಭುತ ಘಟನೆ ಪ್ರಪಂಚದಲ್ಲಿ ಎಲ್ಲಿಯಾದರೂ ಸಂಭವಿಸಿದೆಯೇ? ಹೆಚ್ಚಾದರೆ ಈ ಪವಾಡಕಥೆಯ ಗರ್ಭಸ್ಥ ವಾಸುದೇವನ ತಾಯಿ 'ಮಧ್ಯಸ್ಥಳು' 'ಮಾಧ್ಯಮಿಕಾ-ವಾಕ್' ಆಗಿದ್ದಳು ಎನ್ನಬಹುದು. ಆದರೆ ಇಂಥ ಮಾಧ್ಯಮದ ಬೆಲೆಯೇನು? ಇದರ ವಿಶ್ವಾಸಾರ್ಹತೆ ಎಷ್ಟು? ಇದರ ವಿಮರ್ಶೆ ಅವಶ್ಯವಿಲ್ಲವೆ?

ಮಾಧ್ಯಮ : 'ಪ್ರತಿಮಾ' ಇದರ ವಿಶ್ವಾರ್ಹತೆಯು ಶಂಕಾಸ್ಪದವಾಗುತ್ತಿರುವುದೇಕೆ? ಎಂಬುದನ್ನು, ಇಲ್ಲಿ ಪರೀಕ್ಷಿಸಿಕೊಳ್ಳಿ : ವಾಗಾಂಭೃಣಿ ಸೂಕ್ತಕ್ಕಿಂತ ಆದಿಮಾತೆ - ಅದಿತಿಯ ಭಕ್ತಳಾದ ಗರ್ಭಸ್ಥ ವಾಮದೇವನ ಮಾತೆ, ಈ ಮಾಧ್ಯಮ: ಪ್ರತಿಮೆಯಿಂದ ಇದು, ಹೆಚ್ಚು ಬೇಗನೆ ಬಯಲಿಗೆ ಬರುವಂತಿದೆ. ಇಲ್ಲಿರುವ ತುಂಬ ಮಹತ್ವದ ವಾಸ್ತವಾಂಶಗಳಿಂದ ಇದನ್ನು ಖಾತ್ರಿಮಾಡಿಕೊಳ್ಳಬಹುದಾಗಿದೆ.

ಋಗ್ವೇದಸ್ಥ 'ಮಧ್ಯಮಾ' ವಾಕ್ಕುಗಳಲ್ಲಿ 'ಅದಿತಿ' 'ಸರಸ್ವತಿ' ಮತ್ತು 'ಅಂಭೃಣಿ'ಗಳಲ್ಲಿ ತತ್ತ್ವತಃ ವ್ಯತ್ಯಾಸವಿಲ್ಲದೆ ಇದ್ದರೂ 'ಅದಿತಿ'ಯನ್ನು, ಇಂದ್ರ; ಮಿತ್ರಾವರುಣಾದಿಗಳ 'ತಾಯಿ' ಎಂದು ವರ್ಣಿಸಲಾಗುತ್ತಿರುವುದರಿಂದ, ಈ ದೇವಿಯು 'ದೇವಮಾತೆ' ಎಂಬ ಸ್ಥಾನ-ಮಾನವು ಇನ್ನಾವ ಸ್ತ್ರೀ ದೈವತಕ್ಕೂ ಇಲ್ಲ. ಆದರೆ, ಅದಿತಿಯಷ್ಟು ಅನಿಶ್ಚಿತ-ಸಂಭ್ರಾಮಕ ಸ್ವರೂಪದ 'ಸ್ತ್ರೀ' (ತ್ವದ) ಸಂಕೇತವು ಇಡಿ ಋಗ್ವೇದದಲ್ಲಿಯೆ ಬೇರೊಂದಿಲ್ಲ! 'ಸ್ತ್ರೀ' ಎಂದರೆ ಮಾಯಾವೀ ರೂಪ - ಆಕೃತಿ ಎಂಬುದನ್ನು ಪ್ರಸ್ತಾಪಿಸುವುದಕ್ಕಾಗಿಯೆ 'ಅದಿತಿ' ಪಾತ್ರವನ್ನು ಸೃಜಿಸಿಲ್ಲವಷ್ಟೆ? ಎಂದು ಎನಿಸುವುದಕ್ಕೆ ಅವಕಾಶವಿದೆ. ಏಕೆಂದರೆ

೧. ಅದಿತಿಯು ಯಾರ ಮಡದಿಯಲ್ಲ! 'ಆದಿಮಾತೆ' ಯಾರೊಬ್ಬರ ಅರ್ಧಾಂಗಿನಿಯಲ್ಲ!
೨. 'ದೇವಮಾತೆ' ಎಂಬ ಈ ದೇವಿ ತನ್ನ ಏಳು ಮಕ್ಕಳೊಂದಿಗೆ ಜಲಸಮಾಧಿ ಹೊಂದುತ್ತಾಳೆ!

೩. ವೃತ್ರ:ಅಹಿಯ ಶತ್ರುವಾದ ಇಂದ್ರನ ತಾಯಿ ಎಂಬುವಳೇ 'ಸಾರ್ಪರಾಜ್ಞಿ = ಗೌಃ ಪೃಶ್ನಿಃ' ರೂಪಳಾಗುವುದೆಂದರೇನು?

೪. ಅಥರ್ವವೇದದಲ್ಲಿ ಈ 'ಅದಿತಿ'ಯ ದೇವಮಾತೃತ್ವವು ಕಣ್ಮರೆಯಾಗುತ್ತದೆ. 'ಸಪ್ತರ್ಷಿ'ಗಳೆಂಬ ಏಳುಮುನಿಗಳ ಸಂಗಾತಿಯಾಗಿ 'ಸಂತಾನಕಾಮಾ ಅದಿತಿ,' 'ಬ್ರಹ್ಮೌದನ' ಎಂಬ 'ದಾಸೋಽಹಂ' ಅಂತಹ ಒಂದು ಸಮಯಾಚಾರದಲ್ಲಿ ತೊಡಗಿದ್ದು ಕಾಣುತ್ತದೆ!

೫. ಉಪನಿಷತ್ತುಗಳಲ್ಲಿ 'ವಾಗಷ್ಟಮಿ' ಯಾಗುತ್ತಾಳೆ. ಈ ಬಗೆಗಿನ ವಿವರಣೆ ಬಹದಾರಣ್ಯಕ ಉಪನಿಷತ್ತು ೨.೨.೩.ದಲ್ಲಿ ಉಂಟು.

೬. ಇದರ ಮುಂದಿನ ಶ್ಲೋಕದಲ್ಲಿಯೆ 'ಅತ್ರಿ:' ವಾಕ್ ಪುಲ್ಲಿಂಗಿಯಾಗುತ್ತಾಳೆ

'ವಾಕ್' : ಜ್ಞಾನದ ಮಾಧ್ಯಮ : ಸೇತು : ಅಯನ 'ಸ್ತ್ರೀ' ಪ್ರತಿಮೆ ಋಗ್ವೇದದಲ್ಲಿಯೆ ಕೆಲವೆಡೆಗೆ 'ಧೇನು' ಎನಿಸತೊಡಗಿದ್ದೂ ಉಂಟು[೩] 'ಗೌರಿ' ಎಂಬ ನಾಮಾಂತರದ ವಾಕ್: ಧೇನುವಿನ ಸುಪ್ರಸಿದ್ಧ ಋಚೆಯು ಒಂದುಂಟು (I ೧೬೪, ೪೧) ರುದ್ರನ ಸಂಬಂಧದಲ್ಲಿ ಬರುವ 'ಗೌರಿ' ಈ ನಾಮಸಂಕೇತವು, 'ಗಂಗೆಯ ಅರ್ಥದ ಮೇಲೆಯೂ ಬೆಳಕು ಬೀರುವುದು. ಈಗ ಗೌರಿ-ಗಂಗೆ ಇಬ್ಬರೂ ರುದ್ರನ ಅರ್ಧಾಂಗಿಯರು. ಇವರು 'ಅದಿತಿ'ಯ ಸ್ಥಾನದಲ್ಲಿ ಬಂದವರು. ವಿಷ್ಣು ಅದಿತಿಯ ಸಂಬಂಧದಲ್ಲಿ ಅದಿತಿಯ ಬದಲು ಗಂಗೆ (ಪಾದಾಬ್ಜದಲ್ಲಿ) ಇರಬೇಕಿತ್ತು ; ಶ್ರೀಲಕ್ಷ್ಮಿ ಎಂಬ ಸಂಕೇತದ ಪ್ರತಿಮೆ, ವೇದದ ಅಂತ್ಯವಾದ ಮೇಲೆ ರೂಢಿಗೆ ಬಂದುದಾಗಿ ಕಾಣುತ್ತದೆ.* ಶ್ರೀ ದೇವಿಯೊಡನೆ ಭೂದೇವಿ ಅಥವಾ ಸರಸ್ವತಿಯ ಇನ್ನೊಂದು ಹೆಸರನ್ನು ವಿಷ್ಣುಪತ್ನಿಯ ಸ್ಥಳದಲ್ಲಿ ಹೇಳಲಾಗುತ್ತದೆ.

ಆಪ : ರಸಪಂಥೀಯ ಜೀವನ ರೀತಿಯಲ್ಲಿಯೂ ಧರ್ಮ-ಪತ್ನಿಯೆ ಗೃಹಸ್ಥನ (ಪಾರಲೌಕಿಕ) ಜ್ಞಾನ ಪ್ರಾಪ್ತಿಯ 'ಅಯನ' : 'ಸೇತು' : ವಾಕ್ ಆಗಿ ಪರಿಣಮಿಸಿದೆ. ಕಾಲಕ್ರಮದಲ್ಲಿ ಇದು 'ಹೇಳದೆ ವಿದ್ಯೆಯ ಕಲಿಸುವ' ಗುರು ದೇವಿ: ಪತ್ನಿ ಎಂಬ ಹಾಗಿನ ಸಾಂಸ್ಕೃತಿಕ ಪರಿವರ್ತನದ ಪೂರ್ವೇತಿಹಾಸವು, ಅದಿತಿ-ಊರ್ವಶಿ ಈ ನೀರೆಯರ ಪ್ರತಿಮಾ: ಸಂಕೇತದೊಡನೆ ಪ್ರಾರಂಭವಾಗುತ್ತದೆ. ಭಾರತೀಯ ಜೀವನ ರಂಗದಲ್ಲಿ ಮಾತೃಪ್ರಧಾನ ಕುಟುಂಬ ಪದ್ಧತಿಯ ಬದಲಾವಣೆಯೊಂದಿಗೆ ತನ್ನ ಉಪಾಸಕ ಭಕ್ತರಿಗೆ ಒಸೆದು ಆನಂದ-ಸಿದ್ಧಿಯನ್ನು ಅನುಗ್ರಹಿಸುವ ತಾನು ಮೆಚ್ಚಿದವರನ್ನು ಮೆಚ್ಚಿಸುವ (: ತೃಪ್ತಾಂ ತರ್ಪಯಂತೀಂ) ಈ ಸಹಜ ಹಕ್ಕಿಗೆ ದೇವಿ ಎರವಾಗಬೇಕಾಯಿತು. ಆದರೆ, ವಾಗಾಂಭೃಣಿಯ ಆವೇಶವಾದ ಮಾಧ್ಯಮಾ : ವಾಕ್ ಸಾರುತ್ತಾಳೆ

'ಯಂ ಕಾಮಯೇ ಉಗ್ರಂ ಕೃಣೋಮಿ; ಬ್ರಹ್ಮಾಣಂ ಕೃಣೋಮಿ;
ಋಷಿಂ (ಕವಿಂ) ಕೃಣೋಮಿ....!'

ಈ ವರಪ್ರದಾನ ಮಾಡುವ ಹಕ್ಕು ಪುರುಷ ಗುರುಪೀಠದ ಸ್ವತ್ತು ಆಗುತ್ತದೆ, ಋಗ್ವೇದದ ಅಂತ್ಯದಲ್ಲಿ. 'ಪುರುಷ' ಗುರುವಿನ ಉಪದೇಶ ಪಡೆದಿದ್ದರೂ ಒಬ್ಬ ಭೈರವಿಯ ವರದ ಹಸ್ತದಶಾಸ್ತ್ರ ಆಗಲೇಬೇಕೆಂಬ ಸಂಪ್ರದಾಯವು ಉಳಿದೇ ಇದೆ! ಪಾಂಡಿಚೇರಿ ಆಶ್ರಮ ಪರಂಪರೆಯಲ್ಲಿ ಶ್ರೀ ಅರವಿಂದರ ಅನುಜ್ಞೆಯ ಮೇರೆಗೆ ಅಧ್ಯಾತ್ಮ 'ಜ್ಞಾನ' ದೀಕ್ಷೆಯ ಶಾಸ್ತ್ರ 'ಅದಿತಿ' ಮಾತಾದೇವಿಯ ಮೂಲಕವೇ ನಡೆವ ವಾಡಿಕೆಯಿತ್ತು.

ಶ್ವೇತಕೇತುವು ಎಂಬುವನು ತನ್ನ ತಾಯಿಯ ನಡೆವಳಿಗೆ ಜುಗುಪ್ಸೆಗೊಂಡು ಶಾಪವಿತ್ತನಂತೆ : ಇನ್ನು ಹೆಣ್ಣು ಮಕ್ಕಳು ತಮ್ಮ ಗಂಡನ ಅರ್ಧಾಂಗಿಯರಾಗಿ ಬಾಳತಕ್ಕದ್ದು; ದೀರ್ಘತಮಸ್ ಈತನು ಸಹ ಸ್ತ್ರೀಯರಿಗೆ ಪುನರ್ವಿವಾಹದ ಹಕ್ಕು ಸಲ್ಲದು, ಎಂದು ವಿಧಿಸಿದನಂತೆ! ಹೀಗೆ ಒಬ್ಬೊಬ್ಬನ ಆದೇಶ, ಶಾಪ ಇಡೀ ಸಾಮಾಜಿಕ ಆಚಾರವಾಗಿ ಪರಿಣಮಿಸುತ್ತದೆ, ಎಂಬ ಹಾಗಿನ ಪುರಾಣ ಕಥಾನಿರೂಪಣ ರೀತಿ ವಿಶ್ವಾಸಾರ್ಹವಲ್ಲ.

* ಖಿಲಭಾಗದಲ್ಲಿ ಬರುವ ಶ್ರೀ ಸೂಕ್ತದ ಪಾಠಾಂತರದ ಹೆಚ್ಚಿನ ಶ್ಲೋಕಗಳಲ್ಲಿ ವಿಷ್ಣು, ನಾರಾಯಣ ನಾಮಗಳು ಬರುವುವು. ಮೂಲದ ೧೫ ಶ್ಲೋಕಗಳಲ್ಲಿ 'ಪುರುಷ'ರ ಉಲ್ಲೇಖವಿಲ್ಲದಿರುವುದನ್ನು ಗಮನಿಸುವುದು ಅವಶ್ಯ. (ಸಂ)

ಸಮಾಜಶಾಸ್ತ್ರದ-ಮಾನಸಶಾಸ್ತ್ರದ ಬೆಳಕಿನಲ್ಲಿ ಕಾಣುವ ಸಂಗತಿಯೆಂದರೆ : ಆಚಾರ-ವಿಚಾರಗಳಲ್ಲಿ ಆಗುವ ಪರಿವರ್ತನಗಳು ಕಾರ್ಯಕಾರಣ ಸಂದರ್ಭದಲ್ಲಿ ಸಂಭವಿಸುತ್ತವೆ. ಕ್ರಮಬದ್ಧವಾಗಿ ..... ಕ್ರಮವಾಗಿ ರೂಢಿಗೆ ಬರುತ್ತವೆ, ಮಾತೃಕುಟುಂಬ ಪದ್ಧತಿ ಲೋಕಪ್ರಿಯತೆಗೆ ಎರವಾಗಬೇಕು, ಬಹುಸಂಖ್ಯೆ ಸಂಪ್ರದಾಯಾದಿಗಳ ಟೀಕೆಗೆ ಗುರಿಯಾಗಿಯೂ ತಮಗೆ ಸರಿ ಎನಿಸುವುದನ್ನು ಆಚರಿಸುವ 'ಸಾಹಸಿ'ಗಳು ಮುಂದೆ ಬರಬೇಕು. ಇಂತಹರ ಪ್ರಮಾಣವು ಹೆಚ್ಚಾದ ಹಾಗೆ ಪಿತೃಪ್ರಧಾನ ಕುಟುಂಬ ಪದ್ಧತಿಯು ಗೌರವಾರ್ಹವಾಗುತ್ತದೆ. ಈ ಹಂತವಲ್ಲಿ ಸಹ ಹಿಂದಿನ ನಡೆವಳಿಯ ಕೆಲವೊಂದು ಅವಶೇಷಗಳು ವೇಷ ಬದಲಿಸಿ ರೂಢಿಯಲ್ಲಿ ಉಳಿಯುತ್ತವೆ. 'ಮುತ್ತು' ಮುಕ್ತ-ಸಂಗೀ: ಬಂಧನಾತೀತ ಜೀವನದ ಸಾಂಕೇತಿಕ ಪ್ರತಿಮೆ, ಸಂಸ್ಕೃತ 'ಮುಕ್ತಾ' - ಮೌಕ್ತಿಕ ಎಂಬ ಈ ಸಂಕೇತದಲ್ಲಿ ಈ ಪ್ರತಿಬಿಂಬಿತ ಸಾಮಾಜಿಕ ಚಿತ್ರ ಇಂದಿಗೂ ಅಭ್ಯಸನೀಯವಿದೆ. ಇದು ಮೂಲತಃ ಕಂದಮಿಳ ಮಾತು. ಸಂಸ್ಕೃತದವರು ಎತ್ತಿಕೊಂಡುದು[೪] ಮುನ್ನೀರೊಳಗಣ 'ಮುತ್ತು': ದಿವ್ಯಮಣಿ : 'ತಾಳಿ' ಆ ದಿವ್ಯಶಕ್ತಿ ಭಾಜನರಾಗುವ ನಡೆವಳಿ ಎಲ್ಲಮ್ಮ (ಅದಿತಿ) ಸಂಪ್ರದಾಯದಲ್ಲಿ ಇಂದಿಗೂ ಉಂಟು.

ಋಗ್ವೇದ ಕಾಲೀನ 'ಅದಿತಿ' (:ಎಲ್ಲಮ್ಮ : ಯೋಗಿನೀ) ಸಂಪ್ರದಾಯವನ್ನು ಇಂದಿಗೂ ಉಳಿಸಿಕೊಂಡು, ಅದನ್ನು ತೆರೆಯ ಮರೆಯಲ್ಲಿ ಇರಿಸಿರುವ ಈ ತಂತ್ರ=ಮಂತ್ರ; ಮಾಟದ ಅಂದ ವಿಭ್ರಮಕಾರಿಯಾಗಿದೆ -ಸೋಜಿಗದ್ದಾಗಿದೆ-ನೆನೆಸಿಕೊಂಡಷ್ಟೂ! ಅದಿತಿಯಿಂದ ದಕ್ಷ, ದಕ್ಷನಿಂದ ಅದಿತಿ ಇವರ ಜನ್ಮವಾಗುವ ಕಥಾಭಾಗವು ಒಂದೇ ಬಾರಿ ಋಗ್ವೇದದಲ್ಲಿ ಬರುತ್ತದೆ![೫] ಅದಿತಿಯ ಈ ನಾಮ ಸಂಕೇತವು ಪುರಾಣ ಕಥೆಗಳಲ್ಲಿ ಗೌಣವಾಗುತ್ತದೆ. ಆದರೆ, ದಾಕ್ಷಾಯಣಿ: ಸತಿ ನಾಮಸಂಕೇತವು ರೂಢಿಗೆ ಬಂದು ರುದ್ರ-ಶಿವನ ಸಂಪ್ರದಾಯಕ್ಕೇ ಸೀಮಿತವಾಗಿ ಉಳಿದರೂ, 'ಸತ್ಯವತಿ' ಎಂಬ ಪ್ರತಿಮಾ: ಸಂಕೇತದ ಮೂಲಕ ವಿಷ್ಣು-ಕೃಷ್ಣ ಸಂಪ್ರದಾಯವೂ ದಾಕ್ಷಾಯಣಿ, ಸತಿಪಂಥೀಯ ನಡೆವಳಿಯ ಕಕ್ಷೆಯ ಹೊರಗೆ ಇಲ್ಲ ಎಂಬುದು ಸಿದ್ಧವಾಗುತ್ತದೆ. ಮಹಾಭಾರತಕಾರ 'ವೇದ' ವ್ಯಾಸನು, 'ಸತ್ಯವತೀ' : ಗಂಗಾದೇವಿಯ ಮಗನು. ಶ್ರೀಕೃಷ್ಣನ ಪ್ರೇಯಸಿ 'ಸತ್ಯ'ಭಾಮೆ ! ಚೈತನ್ಯ ಸಂಪ್ರದಾಯದ 'ಗೋಪೀ ಪರಕೀಯಾ' ಒಬ್ಬ 'ಸತ್ಯ' : 'ಸತೀ' ಪಾತ್ರವೇ ಆಗಿದೆ. ಈ ಬಗೆಯ ನಾಮಾಂತರಗಳಿಂದ ಈ ಆಚಾರ-ಸಂಪ್ರದಾಯವನ್ನು ತೆರೆಯ ಮರೆಯಲ್ಲಿ ಉಳಿಸಿಕೊಂಡು ಬರುತ್ತಿರುವ ಪ್ರಯತ್ನದ ಕಾರಣವು ಸ್ಪಷ್ಟವೇ ಇದೆ. ಮಾತೃಪ್ರಧಾನ ಕುಟುಂಬಪದ್ಧತಿಯು ಪ್ರತಿಷ್ಠಿತವಿದ್ದಾಗಿನ ಆಚಾರ ಪದ್ಧತಿ-ನೈತಿಕ ಭಾವನೆ-ಪಿತೃಪ್ರಧಾನ ಕುಟುಂಬ ಪದ್ಧತಿಯು ವರ್ಚಸ್ವಿಯಾದ ಹಾಗೆ- ಅ-ನೈತಿಕ : ತಿರಸ್ಕಾರಾರ್ಹ ನಡೆವಳಿ ಎಂದು, ಜನ, ಬಗೆಯತೊಡಗಿತು! ಸಾಂಕೇತಿಕವಾಗಿ 'ಸತಿ' : 'ಸೇತು' ಪಾತ್ರವಹಿಸಿ ಅಂದು 'ಬ್ರಹ್ಮ-ಚರ್ಯ' ಸಿದ್ಧಿಯ ದೀಕ್ಷೆಯನ್ನೀಯುವ 'ಕುಮಾರೀ' ಸಂಪ್ರದಾಯವು, ಇಂದು ದೇವದಾಸೀ ವರ್ಗದ ರೂಪದಲ್ಲಿ ಎಂತೊ ಉಳಿದು ಬಂದಿದೆ!

'ಸತಿ' ಮತ್ತು 'ಸತ್ಯ' ಈ ಸಂಕೇತಗಳ ಹಿನ್ನೆಲೆಯು ಅಭ್ಯಸನೀಯವಿದೆ. 'ಸತ್ಯವ್ವ' ಎಂದು ಎಲ್ಲಮ್ಮನಿಗೆ ಹೆಸರಿದೆ. ದೇಮವ್ವನಿಗೂ ಈ ಹೆಸರು ಉಂಟು. ಜಾನಪದ ಗೀತೆಗಳಲ್ಲಿ ಇದನ್ನು ಇಂದಿಗೂ ಕಾಣಬಹುದು. ಈ 'ಸತ್ಯವ್ವ' ಸಂಕೇತದ ಔಚಿತ್ಯವೇನು? 'ಸತ್ಯ'ದ ಅನುಭವವನ್ನು ತಂದುಕೊಳ್ಳುವ - 'ಸತ್ಯ' ತೋರುವ ದೇವಿ. ಈ ದೇವೀಮಹಾತ್ಮ್ಯದ ಹಾಡುಗಳಲ್ಲಿ ಈ 'ಸತ್ಯ' =ಚಮತ್ಕಾರಗಳ ವಿವರ ಬರುತ್ತದೆ. ಸತ್ಯವ್ವ : ಮೈಯಲ್ಲಿ ಆವೇಶವಾಗಿ ಅಥವಾ ಕನಸಿನಲ್ಲಿ ಬಂದು ಇಲ್ಲವೆ ಸಂಕಟಾದಿ ವಿಪತ್ತುಗಳನ್ನು ತಂದು ಭಕ್ತರಿಗೆ 'ದರ್ಶನ' ಸಾಕ್ಷಾತ್ಕಾರವನ್ನೀಯುತ್ತಾಳೆ. ಹಾವು, ಬೇವಿನಮರ ಇವು ಈ ಹಾಡುಗಳಲ್ಲಿ ಇರುವುದು ವಾಡಿಕೆ. ಇಂದು ಲೋಕಗೀತೆಗಳಲ್ಲಿ ಉಳಿದಿರುವ ಈ ಸತ್ಯ : ಸತಿ ಸಂಕೇತಗಳು ; ಋಗ್ವೇದದ ವರೆಗೂ ಸುಮಾರಾಗಿ ಇದೇ ಬಗೆಯ ಸಮಯಾಚಾರಗಳ ಆವರಣದಲ್ಲಿ ಕಾಣದೊರೆಯುತ್ತವೆ. 'ಸತ್ಯವತಿ', ವಸಿಷ್ಠನ ಸಹೋದರ ಅಗಸ್ತಿಯ ಪತ್ನಿ ಲೋಪಾ ಮುದ್ರೆಯ ಇನ್ನೊಂದು ಹೆಸರು. ರೇಣುಕಾ ಪತಿ ಎಂಬ ಜಮದಗ್ನಿಯು ಸತ್ಯವತೀ ಪುತ್ರನಂತೆ!*

---

* 'ಸತ್ಯ' ಸಂಕೇತವನ್ನು ಒಳಗೊಂಡ ವಿವಿಧ ವ್ಯಕ್ತಿನಾಮಗಳು ಪ್ರಚಲಿತವಿದ್ದುದನ್ನು ವಿದ್ಯಾನಿಧಿ ಚಿತ್ರಾವಶಾಸ್ತ್ರಿಗಳ ಪ್ರಾಚೀನ ಕೋಶದಿಂದ ಮನಗಾಣಬಹುದು. ಶಂ. ಬಾ. ಜೋಶಿ ಅವರ ಈ ಬಗೆಗೆ ಪ್ರತ್ಯೇಕವಾಗಿ ಬರೆದಿರುವ 'ಸತ್ತ್ಯ - ಸತ್ಯ' ಎಂಬ ಕಿರುಪುಸ್ತಿಕೆ ಆಲೋಚನೀಯವಿದೆ. ಈ ಸಂಪುಟದ ಕೊನೆಯ ಪುಸ್ತಿಕೆ ಅದಾಗಿದೆ. (ಸಂ)

'ಸಂತ' (: ಸತ್ಯವಂತ) ಮತ್ತು 'ಸತಿ' ಈ ಸಂಕೇತಗಳು ಸಾಕ್ಷಾತ್ಕಾರೀ ಸತ್ ಪರಂಪರೆಯ ಅರ್ಹಂತರ ಮಹಂತರ ಸೂಚಕವಾಗಿವೆ. 'ಅನಿರ್ವಚನೀಯ' ಎಂದು ಹೇಳಲಾಗುವ ಆ 'ತತ್ 'ಏಕಂ' 'ಸಂತಂ' ಈ ಸಂಕೇತದಿಂದ ನಿರ್ದಿಷ್ಟವಾಗಿದೆ. 'ಏಕಂ ಸಂತಂ' ಬಹುಧಾಕಲ್ಪಯಂತಿ[೬] ಇಲ್ಲಿ 'ಸಂತ' ಎಂದರೆ 'ಸತ್' ಉಳ್ಳದ್ದು. 'ಸತ್' ಎಂಬುದಕ್ಕೆ ವಿಶ್ವದ ಆದಿ ದಿವ್ಯತತ್ತ್ವ : ದಿವ್ಯ ಆಪರಸ : ಸಲಿಲ, ಎಂದು ಅರ್ಥ. ಇದು ಉಪನಿಷತ್ತಿನ ಬ್ರಹ್ಮನ್‌ದಂತೆ ಏಕಕಾಲಕ್ಕೆ ಎರಡು ಪಾತಳಿಗಳ ಮೇಲಣ ಅರ್ಥದರ್ಶಕ ಸಂಕೇತ! ವಿಶ್ವಸ್ಥ ಅನಿರ್ವಚನೀಯ: ಅಚಿಂತ್ಯ ಎಂಬ ಅಮೂರ್ತ ತತ್ತ್ವವು (ನಪುಂಸಕ): ಇದು 'ಸಂತ' ಮತ್ತು ಇದೇ ಸಮಯದಲ್ಲಿ ಆ ಅಚಿಂತ್ಯದ ಪ್ರತ್ಯಕ್ಷ ಮೂರ್ತ ರೂಪ : ಇದೂ 'ಸಂತ' (ಪುಲ್ಲಿಂಗ) ಅಥವಾ 'ಸತಿ' (ಸ್ತ್ರೀಲಿಂಗ) ಆ ದಿವ್ಯತತ್ವದ ಪ್ರತೀಕ ಸಂಕೇತ. 'ದಿವ್ಯ' : ಪವಾಡ ಜರುಗಿಸಿ ತನ್ನ 'ಸತ್' ಸತ್ಯ ಪ್ರದರ್ಶಿಸಬೇಕಾಗುತ್ತಿರುತ್ತದೆ. ಅಗ್ನಿ : ದಿವ್ಯಸರ್ಪ ದಿವ್ಯದಿಂದ ತಮ್ಮ 'ಸತ್ಯತ್ವ'ವನ್ನು ಮನಗಾಣಿಸಿಕೊಡುವ "ಕಿಚ್ಚಿನ ಕೊಂಡಮಂ ಪುಗುವ ಮಹಾಸತಿ" (ಮಾಸತಿ) ವರ್ಗದ ಪುರಾತನ ಪರಂಪರೆ, ಋಗ್ವೇದಕ್ಕೂ ಪೂರ್ವಯುಗದ್ದಾಗಿದೆ. ಇಂಥ 'ಸತ್ಯವತಿ'ಯೇ ಸತಿ! ಸತಿ ಎಂಬ ಸಂಕೇತದ ಮೂಲಾರ್ಥವು ಪತ್ನಿವಾಚಕವಿಲ್ಲ ಅಥವಾ 'ಪುತ್ರಿ' ಎಂಬರ್ಥವೂ ಅಲ್ಲ. ಇದು ಆ ಬಳಿಕ ಅಂಟಿದ್ದು : ವಿಶಿಷ್ಟ ಜೀವನ ರೀತಿಯ ಸಾಮಾಜಿಕ ಪರಿಸರದಲ್ಲಿ, ಆನುಷಂಗಿಕವಾಗಿ ಬಂದ ಗೌಣ ಅರ್ಥ! ಈ ಅರ್ಥವು ಮೊದಲುಬಾರಿ ಪ್ರಚಲಿತವಾದ ಕಾಲ-ಪರಿಸರ (ಸ್ಥಳ) ತಿಳಿಯಲು ಶಕ್ಯವಾದರೆ, 'ದೇವರಾ ಹೇಳೋ' ಪವಾಡ : ಚಮತ್ಕಾರದ 'ಸತಿ'ಯರ ಇತಿಹಾಸ ಈ ಬೆಳಕಿನಲ್ಲಿ ಬರಬಹುದಾಗಿದೆ. 'ಸಂತ'ನಂತೆ, ಸತಿಯು ಮೊದಲಲ್ಲಿ ಚಮತ್ಕಾರ : ಪವಾಡ ಜರುಗಿಸುವ 'ಮಾಧ್ಯಮ' ಮಧ್ಯಮಾ: ವಾಕ್ ಆಗಬಲ್ಲ, ಕುಮಾರಿ ಪರಂಪರೆಯ ಅ-ವಿವಾಹಿತೆ: 'ಸತಿ'. ಅವಿವಾಹಿತ ಕನ್ಯೆ ಎಂಬ ಅರ್ಥದಲ್ಲಿ ಋಗ್ವೇದದ ಪ್ರಯೋಗವು ಒಂದುಂಟು[೭] ಮದುವೆಯಾಗದೆ ತಂದೆಯ ಮನೆಯಲ್ಲೆ ಮುಪ್ಪು ಬರುವ 'ಸತಿ' ಯಂತೆ ಎಂಬ ಈ ವರ್ಣನೆ ಅರ್ಥಪೂರ್ಣವಾಗಿದೆ. 'ಸತಿ' : ಕುಮಾರಿ, ಮೈಯಲ್ಲಿ ಆವೇಶ ವಾಗುವವಳು ಮದುವೆ ಕಾಣದೆ ಬಾಳಬೇಕಾಗುತ್ತಿದ್ದ ಸೂಚನೆಯು ಇಲ್ಲಿದೆ! ಮಡದಿಯಾದ ಬಳಿಕವೂ 'ಸತಿ' ಪರಂಪರೆ ನಡೆಸುವ ಯೋಗಿನೀ ಸಂಪ್ರದಾಯವೂ ಪ್ರಚಲಿತವಾಗುತ್ತದೆ. ಶ್ವೇತ ಕೇತುವಿನ 'ತಾಯಿ'ಯನ್ನು ಸತಿ: ಸೇತುವಾಗಲು ಕರೆಯಲಾಗಿತ್ತು. ದಕ್ಷಕನ್ಯೆಗೆ 'ಸತಿ' ಎಂದು ಹೇಳುವ ವಾಡಿಕೆಯಿದ್ದಿತೆಂದು ಪುರಾಣ ಕಥೆಗಳಿಂದ ನಿಶ್ಚಿತವಾಗುತ್ತದೆ. ಪುರಾಣಕಥೆಗಳಲ್ಲಿ ದಕ್ಷನೊಡನೆ ಪುತ್ರಿಯ ಸ್ವರೂಪದ ಸಂಬಂಧ ಸೂಚಕ ಸಂಕೇತವಾಗಿ ಸ್ಥಿರಗೊಳಿಸಲ್ಪಟ್ಟಿರುವ ದೇವಿಯ ಋಗ್ವೇದದಲ್ಲಿ ಅದಿತಿ : ದೇವ ಮಾತೆ, ವಿಶ್ವಜನನಿ ಎಂಬ ರೂಪದಲ್ಲಿ ಕಾಣಿಸಿಕೊಳ್ಳುತ್ತಾಳೆ; ಇವಳು ಮಾಧ್ಯಮಾ ವಾಕ್ ದೇವತೆಗಳನ್ನು 'ದಕ್ಷ ಪಿತರಃ' ಎಂದು ಸ್ಥೂಲ ಸಂದಿಗ್ಧ ರೀತಿಯಲ್ಲಿ ನಿರ್ದೇಶಿಸಿದ್ದೂ ಉಂಟು! ಆದರೆ, ಈ 'ದಕ್ಷ'ನು ಯಾರು ಎಂಬುದನ್ನು ಬುದ್ಧಿಪುರಸ್ಸರವಾಗಿಯೆ ಸಂದಿಗ್ಧವಾಗಿ ಇರಿಸಿರುವ - ಬಚ್ಚಿಟ್ಟಿರುವ ಸಂಶಯವು, ಈ ಬಗೆಯ ಸಿಂಹಾವಲೋಕನದಲ್ಲಿ ಪುಟದೇಳುತ್ತದೆ! ಋಗ್ವೇದದ ಅಂತ್ಯದಲ್ಲಿ ವಿಶ್ವದ ಪಿತನ ಸ್ಥಾನದಲ್ಲಿ - ದೇವತೆಗಳ ಜನಕನ ಭೂಮಿಕೆಯಲ್ಲಿ ಕಾಣುವ 'ದಕ್ಷ'ನನ್ನು ಮೊದಲು ಅದಿತಿ-ಪುತ್ರನು: ಆದಿತ್ಯನು! ಅವನೇ ಬಳಿಕ ಅದಿತಿಯ ಪಿತನು ಇರುವುದಾಗಿ ಹೇಳಲಾಗಿದೆ; ಪುರಾಣ ಕಥೆಗಳಲ್ಲಿ ಈ ಎರಡನೆಯ ಸಂಬಂಧವೇ ಉಳಿದು ಬರುತ್ತದೆ.[೮]

ನಿನ್ನೆಗಳೊಳಗಿಂದ ಆಕಾರ ಪಡೆವ 'ಇಂದಿನ' ಆಕೃತಿಯ ಪೂರ್ವರೂಪವು ನಿನ್ನೆಯ ಆಳದಲ್ಲಿ ಅಡಗಿರುತ್ತದೆ. ಇದು ನಿಜವಿದ್ದರೆ ಋಗ್ವೇದದಲ್ಲಿ ಅದಿತಿ - ದಕ್ಷ ಸಂಬಂಧದಲ್ಲಿ ಕಾಣಿಸಿಕೊಳ್ಳುವ ದೇವಿಯ ಪುರಾಣಕಥೆಗಳ 'ದಾಕ್ಷಾಯಣಿ, ಸತಿ; ಎಂದರೆ ಇವಳು ಅದಿತಿಯಲ್ಲದೆ ಬೇರೆ ಯಾರೂ ಅಲ್ಲ; ಇದನ್ನು ಅಲ್ಲಗಳೆಯಲಿಕ್ಕೆ ಆಗುವುದಿಲ್ಲ. ಋಗ್ವೇದದ ಸೌರ ತತ್ತ್ವಾಧಿಷ್ಠಿತ ಮಂಡಲದ ದೈವತಗಳನ್ನು, ಆಪ: ರಸ: ಸಲಿಲ ಸ್ವರೂಪ ಅದಿತಿಯ ಪುತ್ರರು: ಆದಿತ್ಯರು ಎಂದು ಹೇಳುವ ತಂತ್ರದಿಂದ ಒಂದು ಬಾಣದ ಮೂಲಕ ಎರಡು ಪಕ್ಷಿಗಳ ಗುರಿಸಾಧಿಸಿರುವ ಚಮತ್ಕಾರವು ಇಲ್ಲಿ ಕಾಣದೊರೆಯುತ್ತದೆ: 'ಆಪ : ರಸ' ತತ್ತ್ವದಲ್ಲಿ -ಅದಿತಿಯ ಒಡಲಲ್ಲಿ ಸೌರಮಂಡಲದ ದೈವತಗಳ ಅಡಗುವುದು[೯] ಎಂದರೆ ಹಗಲಿನ ಸಂಪ್ರದಾಯದ ಕಾಲವು ಮುಗಿದು ಇರುಳಿನ

'ಜಾಗೃವಾಂಸರ' ಸಮಯಾಚಾರಗಳ ಕಾಲವು ಉದಯವಾಗುತ್ತದೆ. 'ದಕ್ಷಪಿತರ ಎನ್ನುವುದರಿಂದ ಅಪಾಂ-ನಪ್ತ: ಅಜ-ಏಕಪಾತ್: ಅಹಿರ್ಬುಧ್ನ್ಯ: ಆಪೋವತ್ಸ ಮಕ್ಕಳು ಸೌರದೈವತಗಳು ಎಂದು ಸಿದ್ಧಪಡಿಸಿದ ಹಾಗೂ ಆಯ್ತು! ಹೇ ಪ್ರಜಾಪತೇ (: ಆಪೋವತ್ಸ)! ನ ತ್ವತ್ ಅನ್ಯಃ ವಿಶ್ವಾಜಾತಾನಿ ಪರಿತಾ ಬಭೂವ (ಈ ವಿಶ್ವವ್ಯಾಪಿಯಾಗಿ ಇರುವವನು ನೀನಲ್ಲದೆ ಬೇರಾರೂ ಇಲ್ಲ). ಈ ದಕ್ಷ-ಪ್ರಜಾಪತಿಯೆ, ಕೊನೆಗೆ, ಏಕಮೇವ ದೈವತವಾಗುವ ಹವಣಿಕೆಯಲ್ಲಿ ಇರುವುದರ ಸೂಚನೆಯು ಇಲ್ಲಿ ಉಂಟು![೧೦] ಆದರೆ, ಈ ನೀರನು : ಯಾರು? ಪುರುಷ ಯಾರು? ರುದ್ರ? ವಿಷ್ಣು? ಜಿನ? ಬುದ್ಧ? ಈ ನಾಮರೂಪಗಳ ದೇವತಾ ಸ್ಪರ್ಧೆಯ ವಿಸ್ತಾರವು ಈಗ ಅಪ್ರಸ್ತುತ. ಇವನು 'ನಾಗ'ನೆಂಬುದು ನಿಶ್ಚಿತ! ನಾಮರೂಪದ ಕಲಹದೊಳಗಿನ ದಕ್ಷ-ಪ್ರಜಾಪತಿ ಈ ಪ್ರತಿಮಾ: ಸಂಕೇತದ ಸುತ್ತಲಿನ ತ್ವೇಷವು ಇನ್ನೂ ಪೂರ್ಣ ನಂದಿಲ್ಲ! ಗುಗ್ಗಳ ಕಾರ್ಯದ ನಿಮಿತ್ತದಿಂದ ಭುಗಿಲ್ಲೆಂದು ಹೊತ್ತಿಕೊಂಬ ನಿನ್ನೆಗಳೊಳಗಿನ ನೆನಹುಗಳ ರೂಪದಲ್ಲಿ ಅಂದಿನ ಜೀವನ ನಾಟ್ಯದ ಅಸ್ಪಷ್ಟ 'ಆ-ಕೃತಿ', ವೀರ-ಭದ್ರನ ರೂಪದಲ್ಲಿ ಹಳ್ಳಿ-ಪಕ್ಷಿಗಳ ವೀರಭದ್ರನ ಉತ್ಸವಾದಿಗಳ ನೆಪದಿಂದ ಕಂನಾಡಿನಲ್ಲಿ ಇಂದಿಗೂ ಕಾಣದೊರೆಯುತ್ತದೆ! 'ಸತಿ'ಯ ಆವೇಶದ ಬದಲು ಆವೇಶದ 'ಸಂತ' - ಮಹಂತರ ಪರಂಪರೆಯು ಪ್ರಾರಂಭವಾಗುವ ಸಂಕ್ರಾಂತಿಯ ಸಂಧಿಕಾಲದ ಪ್ರತಿಮೆ ಇದು. ನಾಗಿಯ ಯುಗವು ಮುಗಿದು ನಾಗನ ಯುಗಾರಂಭವಾಗುತ್ತದೆ.

'ಜನಕ', ವಿ-ದೇಹ-ದೇಶಾಧಿಪತಿ ಎಂಬ ಸಾಂಕೇತಿಕ ಪ್ರತಿಮೆಯೊಂದು ಬೃಹದಾರಣ್ಯಕದಲ್ಲಿ ಕಾಣಿಸಿಕೊಳ್ಳುತ್ತದೆ! ಅ-ಯೋನಿಜೆ-ಸೀತೆ ಜಾನಕಿ : ಇವಳು ವಿದೇಹಿಯ ಪುತ್ರಿಯಂತೆ! ಇದು ಇನ್ನೂ ಒಂದು ಸಂಕೇತ: ಪ್ರಪಂಚವು ಮಾಯೆ, ಬಯಲು ಎಂದು ಸಿದ್ಧಪಡಿಸಲು ಹೊರಟ ಪ್ರತಿಮಾ: ಮಾಧ್ಯಮವು ಇದು! ಇದೆಲ್ಲದರ ಹಿಂದೆ ನಿಶ್ಚಿತ-ಶಾಶ್ವತ ಸತ್-ತ್ವಸ್ ಏನಾದರೂ ಇದ್ದರೆ ಅದು ಜನಕ-ಶಕ್ತಿ : ನಾಗಶಕ್ತಿ, ವಿಶಿಷ್ಟ ನಾಮ-ರೂಪಾತೀತ ವೈಶ್ವಕ ಸರ್ಜಕ=ಸರ್-ಪ ಶಕ್ತಿ. ಜನಕ=ಪ್ರಜಾಪತಿ=ದಕ್ಷ; ಇದು ವಿ-ದೇಹ ಶಕ್ತಿ. ಉಪನಿಷತ್ಕಾಲದ ತರುವಾಯ ಈ 'ಜನಕ' ಸಂಕೇತವನ್ನು ಶೈವ-ವೈಷ್ಣವ ಪರಂಪರೆಯಲ್ಲಿ ಇನ್ನೂ ಬೇರೆ ಬಗೆಯ ನಾಮರೂಪಗಳಲ್ಲಿ ಕಾಣಬಹುದು. : ನಾರಾಯಣ, ವಿಷ್ಣು, ಕೃಷ್ಣ ಪರಂಪರೆಯಲ್ಲಿ 'ಮಯಾಧ್ಯಕ್ಷೇಣ ಸೂಯತೇ ಸ ಚರಾಚರಂ': ನನ್ನ ಅಧ್ಯಕ್ಷತೆಯಲ್ಲಿ ಈ ಪ್ರಪಂಚದಲ್ಲಿ ಏನೆಲ್ಲ ಪ್ರಸವಕ್ರಿಯೆ ನಡೆದಿದೆ', ಎಂಬ ಗೀತೆಯ ಭಗವಂತನ 'ದಕ್ಷ'ತ್ವದ ಬಗೆಗೆ ಶಂಕಿಸಲು ಅವಕಾಶವುಂಟೆ? ಇವನು 'ನಾಗ'ನೆಂಬುದೂ ಸಂದೇಹಾತೀತವಿರುವುದನ್ನು ಈ ಮೊದಲು ಸಮೀಕ್ಷಿಸಿ ಆಗಿದೆ. ಶೈವಪರಂಪರೆಯ 'ಏಕೋ ಹಿ ರುದ್ರಃ ನ ದ್ವಿತಿಯಾಯ ತಸ್ಥುಃ' ಈ ಪ್ರಪಂಚದ ಆದಿ ಪುರುಷನು ಎಂದರೆ ರುದ್ರನೇ ಹೊರತು ಬೇರೆ ಯಾರೂ ಅಲ್ಲ, ಎಂದು ಶ್ವೇತಾಶ್ವತರ ಉಪನಿಷತ್ತು ಸಾರುತ್ತದೆ. ರುದ್ರನು ನಾಗನೆಂಬುದನ್ನು, ಸಾರ್ಪರಾಜ್ಞಿ : ಆದಿತಿ : ಪೃಶ್ನಿ ಮತ್ತು ರುದ್ರಿಯರೆಂಬ ಅಹಿಭಾನವಃ ಮರುತರ ಮೂಲಕ ಋಗ್ವೇದೀಯ ಸಂಕೇತಗಳೇ ಸಾರುತ್ತವೆ! ಋಗ್ವೇದೀಯ ಭೂಮಿಯಲ್ಲಿ, ರುದ್ರನೇ ದಕ್ಷನೆಂಬ ಹಾಗಿನ ಸಂಭ್ರಮಕ್ಕೂ ಅವಕಾಶವನ್ನು ಕಲ್ಪಿಸಿಕೊಡುವ ಪ್ರತಿಮೆಗಳೂ ಇಲ್ಲದಿಲ್ಲ! ರುದ್ರ-ವಿಷ್ಣು ಸಂಪ್ರದಾಯದ ಪ್ರಚ್ಛನ್ನ ಸ್ಪರ್ಧೆಯು, ಅಲ್ಲಲ್ಲಿ ಅರಿಕೆಗೆ ಬರುತ್ತಿದೆ. ಮೂಲ 'ನಾಗ' ಸಂಪ್ರದಾಯದ ಹಿನ್ನೆಲೆಯಲ್ಲಿ ಇದು ಚೆನ್ನಾಗಿ ವಿಶದವಾಗುತ್ತದೆ: 'ಕಸ್ಮೈದೇವಾಯ' - ಎಂಬುದು ವಿಧಿವಾಕ್ಯವಿರುವಂತೆ, ಪ್ರಶ್ನೆ - ಸಂದೇಹಾರ್ಥದ ವಾಕ್ಯವೂ ಆಗುತ್ತಿರುವ ಕಾರಣವೇ ಇದು!* 'ಯಸ್ಯ ಛಾಯಾ ಅಮೃತಂ' ಇದು ಶಿವಶಕ್ತಿ = ಸೃಜನ ಶಕ್ತಿ = ಹಿರಣ್ಯಗರ್ಭ ರೂಪ; 'ಯಸ್ಯ ಛಾಯಾ ಮೃತ್ಯುಃ' ಈ ಸೂಕ್ತದಲ್ಲಿ ('ಪ್ರಜಾಪತ್ಯ') 'ಯಜ್ಞ'ದ ಉಲ್ಲೇಖವಿದೆ! 'ದಕ್ಷ'ನ ಉಲ್ಲೇಖವಿದೆ 'ಜನಯಂತೀಃ' 'ಅಗ್ನಿ' ಸಂಕೇತ ಉಂಟು![೧೧] ಇವನು 'ಮಾಹಿಂಸೀತ್ ಜನಿತಾ'! 'ಸತ್ಯಧರ್ಮ'ನು! ಇದು 'ಚಂದ್ರಃ' ಆಪ : ರಸ ಸ್ವರೂಪೀ 'ಸತ್ಯ', ಎಂಬುದನ್ನು ಮರೆಯಲಾಗದು. ಈ 'ಆಪೋವತ್ಸನು' ವೃಷಭ ನಾಗಸ್ವರೂಪನೆ ಇರುವುದನ್ನು

---

* ಇದರ ವ್ಯಾಪಕ ವ್ಯಾಖ್ಯಾನ ಹಾಗೂ ವಿಶ್ಲೇಷಣೆಯನ್ನು ಶಂಬಾ ಅವರು 'ಹಾಲುಮತ ದರ್ಶನ' ಪುಸ್ತಕದಲ್ಲಿ ಮಾಡಿದ್ದಾರೆ. ಅವರು ಸಂಪೂರ್ಣ ಸೂಕ್ತ ನೀಡಿ ಅರ್ಥ ಬರೆದು, ವ್ಯಾಖ್ಯಾನ ಮಾಡಿದ್ದಾರೆ. (ಸಂ)

ನೆನೆದರೆ ಜೈನಬೌದ್ಧ ಪಂಥೀಯ ಆದಿನಾಥನ ಜನ್ಮಸೂಚನೆಯೂ ಇಲ್ಲಿ ಇಲ್ಲ ಎನ್ನಲು ಅವಕಾಶವಿಲ್ಲ. ಇದೆಲ್ಲವೂ ವಿದೇಹೀ ಸಿದ್ಧರ ಭೂಮಿಕೆಯ ದರ್ಶನ ಮಾಡಿಸುವ 'ಮಾಧ್ಯಮ'ವೆ ಆಗಿದೆ!

ಭಾರತೀಯ ಭಾಷಿಕ 'ಮಾಧ್ಯಮ' : ಪ್ರತಿಮಾ ವಿಚಾರದ ಈ ಸಮೀಕ್ಷೆಯಲ್ಲಿ ಈ ಮಾಧ್ಯಮಾ ಈ : ವಾಕ್ ಸರ್ವಪ್ರಥಮದಲ್ಲಿ, 'ನೀರೆ' (: ನಾರಿ: ನಾಗಿ) ಇದ್ದುದು ದೃಢ ಪಡುತ್ತಿದೆ. ಇದಕ್ಕೆ ಗ್ರೀಕ್‌ಪವಾಡ ಕಥೆಗಳಿಂದ ಬೆಂಬಲ ದೊರೆಯುತ್ತದೆ. ಈ ಮಾಧ್ಯಮಾ: ವಾಕ್ ಜನ್ಮತಾಳುವುದು ಅವಳ ತಂದೆಯ (ದ್ಯೌ:) ಮೂರ್ಧನ್ಯದಲ್ಲಿ, ಎಂಬುದು ಆ ಬಳಿಕನ ಹಂತದಲ್ಲಿ ಕಾಣಿಸಿಕೊಳ್ಳುವ ವಿಚಾರ; ವಾಗಾಂಭೃಣಿ ಹೇಳುತ್ತಾಳೆ : ತಂದೆಗೆ ಜನ್ಮವಿತ್ತವಳು ನಾನು; (: ಅಹಂ ಸುವೇ ಪಿತರಂ); ಇವನ ತಲೆಯಲ್ಲಿ ನಾನು ಹುಟ್ಟಿದ್ದು (: ಅಸ್ಯ ಮೂರ್ಧನ್ ಮಮ ಯೋನಿಃ); ಗ್ರೀಕ್ ಪವಾಡಕಥೆಯಲ್ಲೂ 'Athene's birth from Zeu's head' ಈ ಪ್ರತಿಮೆಯುಂಟು. ಇದರ ಅರ್ಥವು, ಎರಡು ಪಾತಳಿಗಳಲ್ಲಿ ಒಂದೊಂದು ಬಗೆಯಲ್ಲಿ ಪ್ರತೀತಿಗೆ ಬರುತ್ತದೆ: ಸಾಮಾಜಿಕ ಜೀವನದ ಪಾತಳಿಯಲ್ಲಿ 'ತಂದೆ' ಸಂಕೇತವು ಗೌರವ ಪ್ರತಿಷ್ಠೆ ಪಡೆದುದರ ಸೂಚನೆಯು ಇಲ್ಲಿ ಉಂಟು. ಇದಕ್ಕೂ ಮುಂಚಿನ ಜೀವನ ರೀತಿಯಲ್ಲಿ 'ಅಯೋನಿ' ಸಂಭವ ಜನ್ಮದ ಶ್ರದ್ಧೆಯು ಇತ್ತು. 'ಸರ್ಪ' ಸಂಪರ್ಕದಲ್ಲಿ ಕೂಸು ಸಂಭವಿಸಿತೆಂಬ ನಂಬುಗೆಯಿತ್ತು. 'ಅಥೆನೆಯು ತಂದೆಯ ತಲೆಯಿಂದ ಹುಟ್ಟಿದಳು' ಎಂಬ ಪವಾಡವನ್ನು

> 'a desperate theological expedient to rid of her matriarchal conditions. It is also a dogmatic insistence on wisdom as a male prerogative; hither to the goddess alone had been wise.'

ಎಂದು ಹೇಳುವಲ್ಲಿ ಜೇನ್ ಹ್ಯಾರಿಸನ್ ಅವರ ಬೆಂಬಲವೂ ತಮಗಿರುವುದಾಗಿ ರಾಬರ್ಟ್ ಗ್ರೇವ್ಸ್ ಹೇಳುತ್ತಾರೆ.[೧೨] ಭಾರತ ಹಾಗೂ ಭಾರತದ ಹೊರಗೂ ಭಾಷಿಕ 'ಮಾಧ್ಯಮ': ಪ್ರತಿಮೆಯ ವಿಕಾಸ ಕ್ರಮದಲ್ಲಿ ಇರುವ ಈ ಆಂತರಿಕ ಸಾಮ್ಯವು, ಮಾನವ ಸಂಸ್ಕೃತಿಯ ಉದ್ಗಮ ಹಾಗೂ ವಿಕಾಸದ ಹಿಂದಿನ ಪ್ರೇರಣೆಯೂ ಸಮಾನ ಸ್ವರೂಪದ್ದೇ ಇರುವ ಶಕ್ಯತೆಯನ್ನು ಗಮನಕ್ಕೆತರುತ್ತದೆ. ಈಜಿಪ್ಸ್ ಹಾಗೂ ಗ್ರೀಕ್ (ಕ್ರೀಟ್) ಸಂಸ್ಕೃತಿಕ ಸಾಂಸ್ಕೃತಿಯ ಪ್ರಾರಂಭದ ಪವಾಡ ಕಥೆಗಳಲ್ಲಿ ಇರುವ ಸಾಮ್ಯದ ಸಂಗಡ, ಐತಿಹಾಸಿಕ ಸ್ವರೂಪದ ಇನ್ನೂ ಬಲವಾದ ಪ್ರಮಾಣಗಳ ಬೆಂಬಲವು ದೊರೆಯುವ ಆವಶ್ಯಕತೆಯುಂಟು. ಆದರೂ ಗ್ರೀಕ್‌ಗಳಲ್ಲಿ ಇದ್ದ ಸಾಂಸ್ಕೃತಿಕ ಋಣಾನುಬಂಧವನ್ನು ಇತಿಹಾಸಕಾರರು ಲೆಕ್ಕಿಸುತ್ತಿರುವಂತೆ, ಇವೆರಡೂ ಪ್ರದೇಶಗಳೊಡನೆ ಪುರಾತನ ಭಾರತೀಯ ಸಾಂಸ್ಕೃತಿಕ ಸಂಬಂಧವು ಇದ್ದ-ಇರಬಹುದಾದ ಶಕ್ಯತೆಯನ್ನು ಸಹ ಒಮ್ಮೆಲೆ ತಿರಸ್ಕರಿಸಿ ಬಿಡುವ ಗಡಿಬಿಡಿಯು ಕೆಲವು ಲೇಖಕರಲ್ಲಿ ಕಾಣುತ್ತದೆ! ಪ್ಲೊಟಿನಸ್ ಇವನು ಭಾರತೀಯ ಅನುಭಾವಿಗಳ ದರ್ಶನ ಪಡೆಯಲು ಉತ್ಸುಕನಾಗಿ, ಆ ಕಾಲದಲ್ಲಿಯೂ, ಈಜಿಪ್ಟ್‌ನಿಂದ ಕಡಲ ಪಯಣದ ಸಾಹಸ ಮಾಡಿದ್ದಾಗಿ ಚಾರಿತ್ರಿಕ ಉಲ್ಲೇಖವಿದೆ; ಬಿರುಗಾಳಿಯ ಆಘಾತಕ್ಕೆ ಸಿಕ್ಕು ಎಂತೊ ಜೀವವುಳಿಸಿಕೊಂಡು ದೇಶಕ್ಕೆ ಮರಳಿದನಂತೆ.[೧೩]

ತೀರ ಆರಂಭದಲ್ಲಿ ಸತಿ: ಸತ್ಯವತಿಯಲ್ಲಿ ಆವೇಶವಾದ 'ಯತ್' ಪ್ರೈರತ' ಸ್ವರೂಪದ 'ವಾಕ್': ಮಾಧ್ಯಮ: ಪ್ರತಿಮೆಯು, ಬಳಿಕ 'ಪುರುಷ' ಆಕೃತಿಯದಾಗುತ್ತದೆ. ಈ ವಾಕ್ ಮಾಧ್ಯಮವು ಜನ್ಮತಾಳುವ ಎಡೆ ಮೂರ್ಧನ್ಯದಲ್ಲಿ-ಎಂದರೆ ಮೆದುಳಿನಲ್ಲಿ ಎಂಬುದರೊಡನೆ ಮಾನವ ವ್ಯಕ್ತಿಯ ಸ್ಥಳದಲ್ಲಿ ಮಂತ್ರ: ಶಬ್ದವು ಮಾಧ್ಯಮ: ಪ್ರತಿಮೆ ಆಗುವುದು. ಈ ಸ್ಥಿತ್ಯಂತರದಿಂದಾಗಿ ಮಾನವರ ಬಾಳಗುರಿಯ ದಿಕ್ಕೇ ಇಡಿಯಾಗಿ ಮಾರ್ಪಡುವ ಆವಶ್ಯಕತೆಯುಂಟಾಗುತ್ತದೆ! ಭಾಷಿಕ ಮಾಧ್ಯಮಕ್ಕೂ ಮೊದಲು, ಪಶುಗಳ ಸಂಗಾತಿಯಾಗಿದ್ದ ಈ ದ್ವಿಪಾದ ಪಶುವಿಗೆ ಮಾಧ್ಯಮ 'ಪ್ರತಿಮೆ' ಕಂಡ ಬಳಿಕ ಈ ವರ್ಗದ ಬಾಳುವೆಯ ಗೊತ್ತುಗುರಿಯ ದಿಕ್ಕೇ ಬದಲಾಯಿತು. ಆ ಬಳಿಕ ಕಾಡು ಬಿಟ್ಟು ಊರು ಸೇರಿತು. ಭಾಷಿಕ ಪ್ರತಿಮಾ : ಸಂಕೇತಗಳ ಸೇತುವೆಯ ಮೂಲಕ ಸಾಂಸ್ಕೃತಿಕ ಲೋಕದ

ನೂತನ ಜೀವನ ಕ್ಷೇತ್ರದಲ್ಲಿ ಪ್ರವೇಶವು ಶಕ್ಯಕೋಟಿಯದಾಗಿ ಕಾಣತೊಡಗಿತು. ಆದರೆ, ಮಂತ್ರ ಶಬ್ದಪ್ರತಿಮೆ ಮಾನವತೆಯ ವಿಚಾರಕ್ಕೆ-ಚಿಂತನಕ್ಕೆ ಸಾಧನವಾಗಬಹುದಾದಂತೆ, ಇದು ಮಾಟ-ಮೋಡಿಕಾರಿಕೆಯ-ಗಾರುಡಿಗ ವಿದ್ಯೆಯ ಸಾಧನವೂ ಆಗಬಲ್ಲುದು! ದಿಕ್ಕಾಲ ಪರಿಸರದ ಸಾಮಾಜಿಕ ಪ್ರಜ್ಞೆಯ ಅಭಾವದಲ್ಲಿ, ಆ ಭಾಷಿಕ ಮಾಧ್ಯಮದ ನಾಗ ಮೋಡಿಯು, ವಿಭ್ರಮಕಾರೀ ವಿನಾಶಕ ಶಕ್ತಿಯಾಗಿ ಪರಿಣಮಿಸುವುದು, ಇದರ ಅನಿವಾರ್ಯ ನಿಯತಿ (Logic) ಆಗಿದೆ. ಇದಕ್ಕೆ ಭಾರತೀಯ ಪ್ರತಿಮಾ : ಸಂಕೇತಗಳೇ ಸಾಕ್ಷಿ.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X. ೧೨೫.೧
೨. ***ಅದೇ*** IV ೧೮, ೨೬, ೨೭
೩. ***ಅದೇ*** I. ೧೬೪.೧೭
೪. ಡಾ. ಟಿ. ಬರೊ ***ದ್ರಾವಿಡ ವ್ಯುತ್ಪತ್ತಿಕೋಶ*** ೪೦೬೨ ಶಬ್ದನೋಡಿ
೫. ***ಋಗ್ವೇದ ಸಂಹಿತೆ*** X. ೭೨.೫-೫
೬. ***ಅದೇ*** X. ೧೧೪.೫
೭. ***ಅದೇ*** II. ೧೭.೭
೮. ***ಆದಿತ್ಯ ಪುರಾಣ*** ೭೨.೩-೪
೯. ***ಋಗ್ವೇದ ಸಂಹಿತೆ*** X. ೭೨.೮-೯
೧೦. ***ಅದೇ*** X. ೧೨೧.೧೦
೧೧. ***ಅದೇ*** X. ೧೨೧.೭; ೮
೧೨. Robert Graves, ***Mother Goddess*** P. 46
೧೩. 243 A D ***The Concise En. of Western Philosophy and Philosophers*** P. 317

ನಾಗಾರಾಧನೆಯು ಒತ್ತಾಯ-ಪಡಿಸುವ ಇಬ್ಬಗೆಯ ರೀತಿ

ನಾಗಾರಾಧನೆ ಎಂದರೇನು? ಇದರ ಸ್ವರೂಪ ಯಾವುದು? 'ನಾಗ' ಈ ಶಬ್ದ ಸಂಕೇತವು ವಿಶ್ವಸ್ಥ ಆಪ : ರಸ ಸ್ವರೂಪೀ ಸೃಜನ-ಶಕ್ತಿಯ ದ್ಯೋತಕವಾಗಿದೆ. 'ಆಪ ಏವ ಸಸರ್-ಜ ಆದೌ' ಎಂದು ಮನುವು ಇದರ ಸಾಕ್ಷಾತ್ಕಾರ ಮಾಡಿಸುತ್ತಾನೆ. ಈ ಆಪ : ರಸ ಮತ್ತು 'ಸೃ'ಪ್>ಸರ್-ಪ : ಸರೀ-ಸೃಪ : ನಾರ ಬೇರೆಯಲ್ಲ : ವಿಶ್ವಸ್ಥ 'ಶಾಶ್ವತ ಧರ್ಮಗೋಪ್ತಾ' ಎಂದು ಪುರಾತನರು ಇದರ ಸ್ತೋತ್ರ ಮಾಡಿದ್ದಾರೆ. ಚರಾಚರ ವಿಶ್ವ-ವ್ಯಾಪಿಯಾದ 'ದಿವ್ಯಸತ್ವ'ವಿದ್ದು. "ಸತ್ ಏವ ಇದಂ ಅಗ್ರ ಆಸೀತ್"[೧] 'ರಸೋ ವೈ ಸಃ'.[೨] 'ಬ್ರಹ್ಮ ರಸಃ'[೩] 'ಸಲಿಲ ಏಕಃ ದೃಷ್ಟಾ ಅದ್ವೈತಃ ಭವತಿ';.....ಏಷಃ ಪರಮಃ ಆ-ನಂದಃ[೪] ಈ 'ನಾಗ' ಶಕ್ತಿ ಮೂಲತಃ ಉಭಯಲಿಂಗಿಯಾಗಿದೆ.

'ಸಪ್ತಾರ್ಧ ಗರ್ಭಃ ಭುನಸ್ಯ ರೇತಃ' ಎಂಬಲ್ಲಿ ವಿಷ್ಣುವನ್ನು, 'ಅಂತಃಚಕ್ಷುಃ' ಎಂಬ ದೀರ್ಘತಮನು, 'ಅರ್ಧ-ಗರ್ಭ'ನೆಂದು ಚಿತ್ರಿಸಿದ್ದಾನೆ![೫] ವಿಷ್ಣುವು 'ಅರ್ಧ-ಗರ್ಭ'ನು, ಎಂದರೆ ಆಶ್ಚರ್ಯ ಪಟ್ಟುಕೊಳ್ಳುವ ಕಾರಣವಿಲ್ಲ; 'ಇಕಾರ-ರಹಿತ ಶಿವನು ಶವ' ಎಂಬ ಶೈವಪರಂಪರೆಯ ಶ್ರದ್ಧೆಯ ಮೂಲಕ ವಿಷ್ಣುವು ಅರ್ಧ-ಗರ್ಭ'ನು ಎಂದರೇನು ಇದರ ಸ್ಪಷ್ಟೀಕರಣವು ದೊರೆಯುತ್ತದೆ. ವಿಷ್ಣುವಾಗಲಿ, ಶಿವನಾಗಲಿ ಅವರವರ ಶಕ್ತಿ : ದೇವೀ ಸಹಿತರಿದ್ದಾಗಲೆ ಪೂಜಾರ್ಹ ಪ್ರತಿಮೆ ಆಗುತ್ತಾರೆ! ಈ ಮೊದಲ ವಿವರಣೆಯಲ್ಲಿ ಬಂದಿರುವ 'ಅಪಾಂ ನಪ್ತ' ಈ ಸಂಯುಕ್ತ ಪ್ರತಿಮೆಯಲ್ಲಿ ಇದು ಒಡಮೂಡಿ ನಿಂತಿದೆ. ಅರ್ಧ-ನಾರೀ ರೂಪದ ಈಶ್ವರ : ಶಿವನು ಸುವಿಖ್ಯಾತನಿದ್ದಾನೆ. ಆದರೆ, ಅರ್ಧ-ನಾರೀ ಆಕೃತಿಯ ವಿಷ್ಣು-ನಾರಾಯಣ-ಕೃಷ್ಣ ಪ್ರತಿಮೆ ಉಂಟು-ಇರಲೇಬೇಕು : ತತ್ತ್ವತಃ! ಆದರೂ ಇದನ್ನು ಬಚ್ಚಿಡುವ-ಮರೆಮಾಚುವ ಪ್ರಯತ್ನಗಳು ಆಗಿವೆ! ಮಹಾರಾಷ್ಟ್ರದಲ್ಲಿ 'ಮಾಳಚಿ' ದೇವಿಯನ್ನು "ಮೋಹಿನೀ ರಾಜ' ಹೆಸರಿನಲ್ಲಿ ಆರಾಧಿಸಲಾಗುತ್ತದೆ. ಸಮುದ್ರ ಮಂಥನ ಕಥೆಯ 'ಸಂಧಿ'ಯಲ್ಲಿ ವಿಷ್ಣುವು ಮೋಹಿನೀ ರೂಪ ತಾಳಿ ಅಮೃತ ಹಂಚಿದನೆಂಬ ಸೋಗಿನಲ್ಲಿ, ಈ ವಾಸ್ತವ : ಸತ್ಯವು ಸಾಂಕೇತಿಕ ರೂಪದಲ್ಲಿ ಬಯಲಿಗೆ ಬಾರದೇ ಇಲ್ಲ! 'ಅಪಾಂ-ನಪ್ತ' ಈ ಮೂಲ ಆಕೃತಿ ಸ್ಮರಿಸಿಕೊಂಡರೆ ಈ ದೈವತಗಳ ನಿಜಸ್ವರೂಪ ಗೊತ್ತಾಗಬಲ್ಲುದು.

ಆಪವು ಮೊದಲೊ? ನಪ್ತವು ಮೊದಲೊ? ಎಂಬ ಪ್ರಶ್ನೆಯೆ, ಮೂಲ ನಾಗಾರಾಧನೆಯ ಪರಿಸರದಲ್ಲಿ ಅ-ಸಂಬದ್ಧ. ಅ-ಜ್ಞಾನ-ಜನ್ಯ, ಭಾರತದಲ್ಲಿ ಇಂದಿಗೂ,ಆ ಮೂಲ-ಆಕೃತಿಯನ್ನು ಇಡಿಯಾಗಿ ಉಳಿಸಿಕೊಂಡು ಬರಲಾಗಿದೆ. 'ದಾಸೋಽಹಂ'; ಬ್ರಹ್ಮೌದನ' ಅನ್ನ ಸಂತರ್ಪಣೆಯ ಪ್ರಾರಂಭವು. 'ನಮಃ ಪಾರ್ವತೀ ಪತೇ.....', ಅಥವಾ 'ರಮಾ-ರಮಣ ಗೋವಿಂದಾ.......' ಎಂಬೀ ಬಗೆಯ ಉದ್ಘೋಷದಿಂದಲೇ ಆಗುವುದುಂಟು! ಶಕ್ತಿಸಹಿತ ಶಿವ, 'ಉಮಯಾ ಸಹಿತಃ ಸೋಮಃ' ಅಥವಾ ಲಕ್ಷ್ಮೀ ಸಹಿತ ವಿಷ್ಣು ಅಥವಾ ನಾರಾಯಣ,

ಪೂಜ್ಯ; ರಾಧಾರಹಿತ ದಾಮೋದರ-ಕೃಷ್ಣನನ್ನು : ಅರ್ಧಾಂಗ ದೇವನನ್ನು ಎಲ್ಲಿಯೂ ಸ್ಮರಿಸಲಾಗುವುದಿಲ್ಲ! ಅವೆಸ್ತಾ-ಋಗ್ವೇದಗಳಲ್ಲಿ ಬಂದಿರುವ 'ಅಪಾಂ-ನಪ್ತೃ'ವಿನ ಮೂಲ ಆಕೃತಿಯ ಸ್ಮೃತಿಯೆ, ಸಾಂಪ್ರದಾಯಿಕ ವಿಶಿಷ್ಟ ನಾಮಾಂತರಗಳಿಂದ ನಾನಾ ಪಂಥಗಳಲ್ಲಿ, ಈಗಲೂ ಅ-ದ್ಭುತ ರೀತಿಯಲ್ಲಿ ಉಳಿದು ಬಂದಿದೆ. ಸಿ. ಜಿ. ಯೂಂಗನು ಹೇಳುವ ಸುಪ್ತಚೇತನಸ್ಥ ಪರಂಪರೆಯ (Racial) ಸ್ಮೃತಿಗಳ ಮೂಲ ಮಾದರಿಗಳು arche types ಎಂದರೆ ಇವೆ : ಗಂಡಿಗೆ ಹೆಣ್ಣಿನ ಕನಸು; ಹೆಣ್ಣಿಗೆ ತಾಯ್ತನದ ಕನಸು!

'ಆಪದಿಂದ ನಪ್ತೃವೊ?' ಅಥವಾ 'ನಪ್ತೃವಿನಿಂದ ಆಪವೊ?' ಎಂಬ ಸಂದೇಹಕ್ಕೆ ಶುದ್ಧ ನಾಗಾರಾಧನೆಯ ಮೂಲ ಭೂಮಿಕೆಯಲ್ಲಿ ತಿಲಮಾತ್ರವೂ ಅವಕಾಶವಿಲ್ಲ. ಅಖಂಡಿತ 'ಅಪಾಂ ನಪ್ತೃ'ವಿನ ಸಮಗ್ರ ಪ್ರತಿಮೆಯೆ, ಇದು. ಆದರೆ, ಇದಕ್ಕಿಂತ ಭಿನ್ನ ಆಚಾರ-ವಿಚಾರಗಳ ಬೇರೊಂದು ಸಂಸ್ಕೃತಿಯ ಸಂಪರ್ಕದಲ್ಲಿಯೆ ಹುಟ್ಟಿ 'ಹೆಣ್ಣು ಮೊದಲೊ ಗಂಡು ಮೊದಲೊ' ಎಂಬ ಈ ಪ್ರತಿ-ಕೂಲ ಪ್ರಶ್ನೆಯು ತಲೆ ದೋರಿರಲಿಕ್ಕೇ ಬೇಕು. ಏಕೆಂದರೆ ಆಪ ಮತ್ತು ನಪ್ತೃ ಇವೆರಡರ ಸಂಯುಕ್ತ ಸಂಕೇತವೇ ಬಾಳಿನ ಆದರ್ಶ ದೈವತ ಪ್ರತಿಮೆಯಾಗಿದೆ. ಇಲ್ಲಿ ಈ 'ಪರಮ ಆ-ನಂದೀ ಒಂದೂ ಮೌಲಿಕ ಅರ್ಥ : ಸೌಂದರ್ಯ ಎಂಬುದೇ ಜೀವನದಲ್ಲಿ ಇರಲು ಶಕ್ಯವಿಲ್ಲ. 'ದೀರ್ಘತಮ' ಮುನಿಪೋತ್ತಮನು ವಿಷ್ಣುಸೂಕ್ತದಲ್ಲಿ ವರ್ಣಿಸಿರುವ 'ಮಧು-ರಸದ ಊಟೆಯ ಹತ್ತಿರದ'- ಪರಮೇ ಪದೇ ಮತ್ತು ದೇವಯವಃ ಮದಂತಿ'[೬] ಈ ಆ-ನಂದೀ ಲೋಕದ 'ಪರಮ' ಸಿದ್ಧಿಯು, ಸ-ವಿಕಲ್ಪ ಸಮಾಧಿಯೋ? ಸಾಲೋಕ್ಯ ಮುಕ್ತಿಯೋ? ಸಾರೂಪ್ಯ ಕೈವಲ್ಯ ಸ್ಥಿತಿಯೋ? ಇತ್ಯಾದಿ ಸಂಕೇತಗಳ ಹಾಗೂ ನಿರ್ವಾಣಿ ಕೇವಲಿ ಇಂತಹ ಮಾತುಗಳ ಅರ್ಥದ ಬಗೆಗೆ ಎಷ್ಟೇ ಅವಾಂತರ-ಮತಭೇದ ಇರಲಿ; ಆದರೂ 'ಅಪಾಂ ನಪ್ತೃ' ಪ್ರತಿಮಾರಾಧಕರು, ಐಹಿಕ ಜೀವನವು ಅರ್ಥವಿಹೀನ ಅಥವಾ ಅನರ್ಥಕಾರಿ ಎಂಬ ಏಕಾಂತಿಕ ಶ್ರದ್ಧೆಯವರಾಗುವುದು ಅನಿವಾರ್ಯವಿದೆ. ಇಂಥ ಧರ್ಮ-ಪಂಥಗಳೆಲ್ಲ ಪಾರಲೌಕಿಕ ಸಿದ್ಧಿಯ ಬೆಂಬತ್ತಿದ ವಿರಕ್ತ ಸಂನ್ಯಾಸ ಮಾರ್ಗವನ್ನೇ ಅನುಸರಿಸಬೇಕಾಗುತ್ತದೆ. ಆದರೆ, ಮರಣಾನಂತರದ 'ಪರಮ' ಸಿದ್ಧಿಯ ಶ್ರದ್ಧೆಯೆ, ಸಂನ್ಯಾಸ ಮಾರ್ಗೀಯ ಕೃತಿಗೆ - ಈ ಬಗೆಯ ಜೀವನದ ಆ-ಕೃತಿಗೆ-ಒತ್ತಾಯಪಡಿಸುತ್ತದೆ, ಎಂದು ಇದರ ಅರ್ಥವಲ್ಲ.

ಮರಣಾನಂತರದ ಮುಕ್ತಸ್ಥಿತಿಯ ಪರಮಾನಂದ ಸಿದ್ಧಿಯಲ್ಲಿ ಶ್ರದ್ಧೆಯಿರಲಿ, ಇಲ್ಲದಿರಲಿ; ಆದರೂ 'ಅಪಾಂ ನಪ್ತೃ'ವಿನ-ಎಂದರೆ, ಸೃಜನ ಶಕ್ತಿಯೇ ಬಾಳಗುರಿಯಾಗಿ, ಅದನ್ನು ಯಾವ ನಾಮಾಂತರದಲ್ಲಿಯೆ ಭಜಿಸುತ್ತಿರಲಿ, ಇಂತಹ ವ್ಯಕ್ತಿಯು ಅಥವಾ ಪಂಗಡಗಳು ಸಹ ತಮ್ಮ ಜ್ಞಾತಾಜ್ಞಾತ ಅಸಂಗತ 'ಕೃತಿ': ವಿಸಂಗತ ಆಚಾರ-ವಿಚಾರಗಳಿಂದ ಬಾಳುವೆ ಅರ್ಥಶೂನ್ಯ ಎಂಬುದರ ಪ್ರ-ದರ್ಶನ ಮಾಡಿಸುತ್ತಿರುವಲ್ಲಿಯೆ, ಒಂದು ಬಗೆಯ ಅಸಾಧಾರಣ (abnormal) ಆ-ನಂದ ವಿಶ್ವದಲ್ಲಿರುವ ಧನ್ಯತೆಯನ್ನು ಪಟ್ಟುಕೊಳ್ಳುವುದುಂಟು.

ಅಪಾಂ-ನಪ್ತೃವಿನ ಪ್ರೇರಣೆಗೆ-ಪ್ರಚೋದನೆಗೆ ಒಳಗಾಗದ ಯಾವ ಜೀವ-ಜಂತುಗಳೂ ತಮ್ಮ ಹಾಗೂ ತಮ್ಮ ವರ್ಗದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಶಕ್ಯವಿಲ್ಲ! ಮಾನವ ಪ್ರಾಣಿಗಳೊಳಗಿನ ಈ ಪ್ರಕೃತಿ-ಧರ್ಮವನ್ನು, ಬರ್ಟ್ರಾಂಡ್ ರಸೆಲ್, 'Instinct of self multi-plication' : 'ಸ್ವ' ಆಕೃತಿಯ ನಿರ್ಮಾಣದ ಸಹ-ಜ ಪ್ರವೃತ್ತಿ ಎಂದು ಹೆಸರಿಸಿದ್ದುಂಟು. ಈ ನಾಗಾರಾಧನೆಯನ್ನು, ಭೌತಶಾಸ್ತ್ರೀಯ ಭೂಮಿಕೆಯ ವಿಶಾಲ ತಾತ್ತ್ವಿಕ ತಳಹದಿಯ ಮೇಲೆ, ಮೊದಲಬಾರಿ ವಿವರಿಸಿ ಪ್ರತಿಪಾದಿಸಿದ ದ್ರಷ್ಟಾರ: ಫ್ರೈಡ್ ದೊರೆ. ಈತನು ಇದನ್ನು 'ಲಿಬಿಡೊ' ಸಂಕೇತದಿಂದ ನಿರ್ದೇಶಿಸುತ್ತಾನೆ. ಇದು ಶಾಶ್ವತ ಸನಾತನ ಶಕ್ತಿ; ಈ 'ಲಿಬಿಡೊ' ಧರ್ಮವನ್ನು ಮೀರಿ ಬಾಳುವ ವೃತ್ತಿಯ ಸಮಾಜವು ವಿಕೃತಮನೋವೃತ್ತಿಯವಾಗುತ್ತದೆ. ಇಂತಹ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿಯೆ ಅನಾಚಾರ ಹೆಚ್ಚಿ ಆ ಜನ ಆತ್ಮನಾಶದ ದಾರಿಯಲ್ಲಿ ಹೊರಡಲೇಬೇಕಾಗುವುದನ್ನು ಯಾರೂ ತಪ್ಪಿಸಲಾರರು ಎಂದು ಈ 'ಲಿಬಿಡೊ' ಮಹಾತ್ಮವನ್ನು ಆತನು ತುಂಬಾ ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾನೆ.

ಮಾನವ ಪ್ರಾಣಿಗಳ ಬಾಳಿನ ಪ್ರೇರಕ ಕೇಂದ್ರವು ಯಾವುದು? ಎಂಬ ಭೂಮಿಕೆಯಿಂದ ಆ್ಯಡ್ಲರನು, 'ಅಪಾಂ ನಪ್ತೃ' ಪ್ರೇರಣೆಯನ್ನು 'Superiority Complex' ಎಂಬ ಸಂಕೇತದಿಂದ ವಿವರಿಸುತ್ತಾನೆ. ಅಡ್ಲೆರನು, ಮೊದಲು ಫ್ರೈಡ್ ದೊರೆಯ ಸಹಪ್ರವಾಸಿಯೆ; ಯೂಂಗನೂ ಸರಿ. ಆದರೆ, ಫ್ರೈಡ್ ದೊರೆಯ 'ಲಿಬಿಡೊ' ಲಿಂಗವಾಚಕ ಸೂಚಕವಾದ ಜೀವನದ ಏಕಮೇವ ಅರ್ಥವು ಅವರಿಬ್ಬರಿಗೂ ಹಿಡಿಸಲಿಲ್ಲ. ಮಗು ಬೆರಳನ್ನು ಸೀಪುವುದು ಏಕೆ? ಲೈಂಗಿಕ ಆ-ನಂದದ ಪರ್ಯಾಯದ ಸುಖ ದೊರೆಯುವದೆಂದು; ತಾಯಿ ಕಂದಮ್ಮನಿಗೆ ಮೊಲೆ ಉಣಿಸುವುದು ಏಕೆ? 'ಆಪ: ಪಯಸ್ ಸಸರ್ಜನಾನಂದ' ಅನುಭವಿಸುವುದಕ್ಕಾಗಿ! 'ಕಂ' : 'ಚಂದ್ರಾಃ ಆಪಃ' ಇದಕ್ಕೆ ಸುಖವಾಚಕ ಅರ್ಥ ಕಲ್ಪಿಸಿರುವಲ್ಲಿ ಋಗ್ವೇದ ಕಾಲೀನ 'ಹಿರಣ್ಯಗರ್ಭ-ಪ್ರಜಾಪತಿ' ಸಂಪ್ರದಾಯವು ಫ್ರೈಡ್ ದೊರೆಯ ಗುರುಸ್ಥಾನದಲ್ಲಿದೆ! ತಾಯಿ ಎದೆಹಾಲಿಗಾಗಿ ಹಂಬಲಿಸಿ, ಬದೆಯತ್ತ, ತನ್ನ ಪುಟ್ಟಕೈಗಳನ್ನು ಚಾಚುವ ಮಗುವಿನ ಈ ಕೃತಿಗೆ, ಲೈಂಗಿಕ ಆ-ಲಿಂಗನದ ಆ-ನಂದದ ಆಕರ್ಷಣವೇ ಪ್ರೇರಕವಾಗಿರುತ್ತದೆ, ಎಂದು ಫ್ರೈಡ್ ಸಂಪ್ರದಾಯವು ಅರ್ಥವಿಸುವುದನ್ನು, ಸ್ವೀಕರಿಸಲು ಬರ್ಟ್ರಾಂಡ್ ರಸೆಲ್ಲ ಸಹ ಅಳುಕಿದ್ದಾನೆ! ಆ್ಯಡ್ಲರನಿಗೆ ಈ ಬಗೆಯ ಎಲ್ಲ ಕೃತಿಗಳಲ್ಲಿ ಕಾಣುವ ಅರ್ಥವು, ಫ್ರೈಡ್ ದೊರೆಗಿಂತ ಬೇರೆ ಸ್ವರೂಪದ್ದಾಗಿದೆ. 'ತಾನು ಬೆಳೆಯಬೇಕು' 'ಮಹತ್ತನ್ನು ಪಡೆಯಬೇಕು' ಎಂಬ ನೈಸರ್ಗಿಕ ವಿಕಾಸದತ್ತಣೆನ ಮಹತ್ತಿನ ಆಕಾಂಕ್ಷೆ : ಮಹತ್ವಾಕಾಂಕ್ಷೆ ಮಾನವರ ಸಹ-ಜ ಪ್ರವೃತ್ತಿಯಾಗಿದೆ ಎಂಬುದು, ಆ್ಯಡ್ಲರ್ ಪ್ರಣೀತ ಜೀವನ ಪ್ರೇರಕ ಪ್ರವೃತ್ತಿಗೆ ಅರ್ಥ.

ಫ್ರೈಡ್, ಆ್ಯಡ್ಲರ್, ಯೂಂಗ್ ಪ್ರಭೃತಿಗಳು ಹೇಳುವ ವ್ಯಕ್ತಿಗಳ ಜೀವನ ಪ್ರೇರಣೆಯ ಅರ್ಥವು, ತೋರಿಕೆಯಲ್ಲಿ ಬೇರೆ ಬೇರೆ ಎನಿಸುತ್ತದೆ. ಆದರೆ 'ತತ್' ತ್ವತಃ ಇವು ಮೂರು 'ಅಪಾಂ-ನಪ್ತೃ' ಪ್ರತಿಮಾ : ಸಂಕೇತದ ಮೂರು ಬಗೆಯ ಸ್ಪಷ್ಟೀಕರಣ. (Paraphrase) ಆಗಿವೆ. ಆಪ ಮತ್ತು ನಪ್ತೃ ಇವುಗಳ ಸಂ-ಯೋಗವನ್ನೇ, ಇಲ್ಲಿ ಜೀವನದ ಆದರ್ಶ ಪ್ರತಿಮೆಯನ್ನಾಗಿ ಗ್ರಹಿಸಲಾಗಿದೆ. ಆದರೆ, 'ಅಪಾಂ-ನಪ್ತೃ' ಪ್ರತಿಮಾರಾಧನೆಯು ಕೇವಲ ವ್ಯಕ್ತಿನಿಷ್ಠ ಜೀವನರೀತಿಗೆ ಪ್ರೇರಕ-ಪ್ರಚೋದಕನಾಗಬಲ್ಲುದು. ಆದುದರಿಂದ, 'ಅಪಾಂ-ನಪ್ತೃ' ಭೂಮಿಕೆಯ ಜೀವನದ ಆ-ಕೃತಿಯು, ಸಾಮಾಜಿಕ ಸಮಷ್ಟಿಯ ಆ-ಕೃತಿಗೆ ಶತ್ರುವಾಗಿ ಪರಿಣಮಿಸುವುದನ್ನು ತಪ್ಪಿಸುವುದು ಅಶಕ್ಯವಾಗಿದೆ. ವ್ಯಕ್ತಿನಿಷ್ಠ ಜೀವನರೀತಿಯ ಕೇವಲ Indivisuality Personality Cult: ವ್ಯಕ್ತಿತ್ವವಾದಗಳು ಯಾವ ಬಗೆಯವೇ ಇರಲಿ, ತೋರಿಕೆಯಲ್ಲಿ ವಿಭಿನ್ನವೆನಿಸಿದರೂ ತತ್ತ್ವತಃ ಅವೆಲ್ಲವೂ ನಾಗ-ಪ್ರತಿಮಾರಾಧನೆಯ ವಿವಿಧ ಪ್ರಕಾರಗಳೇ ಆಗುತ್ತವೆ. ಏಕೆಂದರೆ, ಇವೆಲ್ಲವುಗಳ ತಳಹದಿಯ ಆ-ಕೃತಿಯಲ್ಲಿ ಇದೀಗ ಹೇಳಿದ ಸಾಮ್ಯವಿರುತ್ತದೆ; ಆದುದರಿಂದ ಅವೆಲ್ಲವೂ ಪರ್ಯಾಯಾರ್ಥಗಳೇ ಆಗುತ್ತವೆ.

ಆ್ಯಡ್ಲರನು ಯೋಜಿಸಿರುವ ಪ್ರತಿಮಾ: ಸಂಕೇತದ ಆಕೃತಿಯು ಈ ಎಲ್ಲ ಪರ್ಯಾಯಗಳನ್ನೂ ಒಳಗೊಳ್ಳುತ್ತದೆ: Superiarity Complex : ಇದು ಆದರ್ಶ, ಅಪಾಂ-ನಪ್ತೃ ಸ್ಥಿತಿ : ಆಪವು ನಪ್ತೃವನ್ನು ಆವರಿಸಿರಲಿ; ಅಥವಾ ನಪ್ತೃವು ಆಪವನ್ನು ಆವರಿಸಿರಲಿ: ತತ್: ಏಕಂ: ಸತ್, ಈ ಆಕೃತಿಯು ನಿರ್ಮಾಣವಾಗಬೇಕು, ಇದು ಜೀವಿತದ ಗುರಿ. ಇಲ್ಲವಾದರೆ, ಇದರ ಪ್ರತಿಕ್ರಿಯೆ, Inferiority Complex! ನಿರಾಶೆಯ ಏಕಾಕೀ ಜೀವನ : ಸಂನ್ಯಾಸವಾದ! ಇದು 'ದಾಸಸ್ಯ ......ದಾಸೋಽಹಂ' ರೀತಿಯ ಜೀವನದ ಆಕೃತಿ. ಆದಕಾರಣ ಇವೆರಡೂ ಬೇರೆಯಲ್ಲ. ಒಂದು ಇನ್ನೊಂದರ ಪ್ರತಿಕ್ರಿಯೆ! 'ಸೋಽಹಂ' ನಾನೇ ಏನೆಲ್ಲ ಎಂಬ ಮಹತ್ತಿನ ಆಕಾಂಕ್ಷೆಯ ವೈಫಲ್ಯವನ್ನು ತುಂಬಿಕೊಳ್ಳಲು 'ದಾಸೋಽಹಂ'ದ ಗುರು ಪಾದೋದಕ ಪ್ರಸಾದ ಸಿದ್ಧಿಯಿಂದ ಏನೆಲ್ಲವೂ ಪಡೆವ ಆಶೆ! ಇವೆಲ್ಲವನ್ನು 'ಅಪಾಂ-ನಪ್ತೃ' ಅಥವಾ ನಾಗಾರಾಧಕರ ಜೀವನದ ಆ-ಕೃತಿಗಳೆಂದರೆ, ಕೆಲರಿಗೆ ಈ ಸಂಕೇತದ ಔಚಿತ್ಯದ ಬಗೆಗೆ ಸಂದೇಹವು ಉಂಟಾಗಬಹುದು. ಇದನ್ನು 'ಆಪ(: ರಸ)' ಪೂಜಕ ಸಂಪ್ರದಾಯಗಳೆಂದರೂ ಸರಿ. ಫ್ರೈಡ್, ಸಿ. ಜಿ. ಯೂಂಗ್ ಇವರ ತಾತ್ತ್ವಿಕ ವಿವೇಚನೆಯಲ್ಲಿ-ಕನಸುಗಳ ಪ್ರತಿಮಾ : ಸಂಕೇತಗಳಲ್ಲಿ-ನೀರು, ಹಾವು ಇರುವುದನ್ನು ಗಮನಿಸುವುದು ಅವಶ್ಯವಿದೆ. ಸಂಸ್ಕೃತ ಭಾಷಿಕರು ನೀರಿನಲ್ಲಿ ಸರ್ವವ್ಯಾಪಿತ್ವದ ಕಡೆಗಿನ ಅಂತರ್ಹಿತ ಆಕೃತಿಯನ್ನು ಗುರುತಿಸಿಯೆ

ಇದನ್ನು 'ಆಪ' ಎಂದು ಹೆಸರಿಸಿದ್ದು ಕಾಣುತ್ತದೆ; ಆ ನಿರುಕ್ತಕಾರರೆ ಹೇಳಿದ್ದಾರೆ. 'ಯತ್ ಇದಂ ಕಿಂಚ ಯತ್ ಆಪ್ನೋತ್, ತಸ್ಮಾತ್ ಆಪಃ'[೭] 'ಆಪ : ರಸ' ಇದುವೆ ವಿಶ್ವಸ್ಥ ಜೀವಜಂತುಗಳ ಸಾರ-'ತತ್'ತ್ವ.

೧. 'ಆಪ'ದ ಪ್ರೇರಣೆ: ವಿರಾಟ್-ವಿಶ್ವ ವ್ಯಾಪಿತ್ವದ ಕಡೆಗಿನ ಪ್ರಚೋದನೆ.

೨. ಈ 'ಆಪ'ವು ತನ್ನ ಸರ್ವವ್ಯಾಪಿತ್ವದ ಪ್ರವೃತ್ತಿಯಿಂದಾಗಿ ಸಮಪಾತಳಿಯನ್ನು ನಿರ್ಮಿಸುವ ಗುಣಧರ್ಮವುಳ್ಳದೂ ಉಂಟು. ಈ 'ಸಮತ್ವ' ಯೋಗ ಸಾಧನೆ ಮತ್ತು Death the Leveller ಬೇರೆ ಅಲ್ಲ! ಆದಕಾರಣ ಜಲ=ಜೀವನವೂ ಅಹುದು; ಮರಣವೂ ಅಹುದು!

ಅಪಾಂ-ನಪ್ತ: (ಫಾಲ್ಗುಣ:) ಪೌರ್ಣಮಾಂ: ಇದರ ಇನ್ನೊಂದು ತುದಿ (ಫಾಲ್ಗುಣ) ಅಮಾವಾಸ್ಯೆ ಮರಳಿ ಯುಗ-ಪ್ರತಿಪದೆಯ ಚಂದ್ರ (ಅಥವಾ ಚಂದ್ರಿಕಾ) ಪೂಜೆ=ಗುಡಿ: ನಂದಿಕೋಲು: ಸ್ಕಂಭ ನಿಲ್ಲಿಸಿ ಪ್ರಜಾ-ಪತಿ : ನಾಗ ಪ್ರತಿಮಾ ಆರಾಧನೆ. ಶುದ್ಧ ಪ್ರತಿಪದೆಯಿಂದ ವಿರಾಟ್ ಆಗುವ ಕಡೆಗಿನ ದಾರಿಯೆ, ಈ ದಾರಿಯೆ ಆ ಬಳಿಕ ಅಮಾವಾಸ್ಯೆಯ ಕಡೆಗಿನ ಓಟವಾಗಿ ಪರಿಣಮಿಸುವುದು. ಆದಕಾರಣ, ಈ ಬಗೆಯ ಜೀವನ ರೀತಿಗೆ ಪ್ರೇರಕವಾಗುವ ನಾಗಪ್ರತಿಮಾ-ವಿಚಾರವಾದ ಸಮೀಕ್ಷೆಯ ಈ ಹಂತದಲ್ಲಿ, 'ಮಾಧ್ಯಮಾ' : ಪ್ರತಿಮೆಯ ಬಗೆಗಿನ ಗ್ರಹಿಕೆಯ ಇನ್ನೂ ಆಳವಾದ ವಿಮರ್ಶೆ ಅವಶ್ಯವಾಗುತ್ತದೆ.

ಟಿಪ್ಪಣಿಗಳು

೧. *ಛಾಂದೋಗ್ಯ ಉಪನಿಷತ್ತು* ೬.೩.೧;೨; ಹೋಲಿಸು ನಾಸದೀಯ ಸೂಕ್ತ *ಋಗ್ವೇದ ಸಂಹಿತೆ* X. ೧೨೯.೧

೨. *ತೈತ್ತಿರೀಯ ಉಪನಿಷತ್ತು* ೨.೭

೩. *ಕೌಷೀತಕೀ ಉಪನಿಷತ್ತು* ೧.೫

೪. *ಬೃಹದಾರಣ್ಯಕೋಪನಿಷತ್ತು* ೪೨. ೩೨;.....

೫. *ಋಗ್ವೇದ ಸಂಹಿತೆ* I. ೧೬೪.೩೬

೬. *ಅದೇ* I ೧೫೪-೪

೭. *ಶತಪಥ ಬ್ರಾಹ್ಮಣ* ೬.೧.೧.೯

ಪ್ರತಿಮಾ : ಮಾಧ್ಯಮವು ಸಾಂಕೇತಿಕ

ಫ್ರೈಡ್, ಯೂಂಗ್ ಪ್ರಭೃತಿಗಳು. ಕಣಸಿನ ನೀರು, ಹಾವು, ನೀರೆ ಇಂತಹ ಚಿಹ್ನಗಳನ್ನು ಸಂಕೇತ (Symbol) ಎಂದೇ ಹೆಸರಿಸುವುದುಂಟು. ಆದರೆ, ಈ ವರ್ಗವು ಗ್ರಹಿಸಿಕೊಂಡಿರುವಂತೆ ಈ ಮಾಧ್ಯಮ : ಸಂಕೇತ ಏಕ ಮಾತ್ರ ಅರ್ಥದ ಚಿಹ್ನಗಳಾಗಿದ್ದುದು ಎಲ್ಲಿಯೂ ಕಂಡುಬರುತ್ತಿಲ್ಲ! ರೋಗ ನಿದಾನದಲ್ಲಿ ಕಾಣುವ ಚಿಹ್ನಗಳನ್ನು ಸಂಕೇತಗಳು ಎನ್ನುವ ಕಾರಣವಿಲ್ಲ. ನಿಸರ್ಗಸ್ಥ ಆಗು-ಹೋಗುಗಳಲ್ಲಿ, ಲಕ್ಷಣಾರ್ಥಕ ಧ್ವನ್ಯರ್ಥವು ಅಪೇಕ್ಷಿತವಿಲ್ಲದಿರುವಾಗ ಅವು ಸಂಕೇತಗಳೆಂದು ಎನಿಸುವುದಿಲ್ಲ. ಆದರೆ, ಮಾನವೀಯ ಸಂಬಂಧದ ಸಾಂಸ್ಕೃತಿಕ ಪಾತಳಿಯ ಮೇಲಣ ಘಟನೆಗಳು, ಪ್ರಾಕೃತಿಕ ಸ್ವರೂಪದ ಘಟನೆಗಳಂತೆ ಏಕಮೇವಾರ್ಥ ಸೂಚಕ ಅಥವಾ ಲಕ್ಷಣವಾಗಿರುವುದಿಲ್ಲ. ಮಿಂಚಿನೊಡಗೂಡಿ ಮಳೆಯು ಬರುವಾಗಿನ ಪ್ರಾಕೃತಿಕ ಘಟನೆಗಳನ್ನು ಸಾಂಸ್ಕೃತಿಯ ಪಾತಳಿಯ ಮೇಲಣ ಘಟನೆಯೆಂಬ ಹಾಗೆ ಗ್ರಹಿಸಿ ವರ್ಣಿಸುವಾಗ ಇದು ಕೇವಲ ಮಳೆಯ ನೈಸರ್ಗಿಕ ಚಿತ್ರವಾಗುವುದಿಲ್ಲ. 'ಆಷಾಡಸ್ಯ ಪ್ರಥಮ ದಿವಸೇ' ಎಂದು, ಮೇಘದೂತದ ಯಕ್ಷನು ಈ ಮಾಸ-ನಾಮವನ್ನು ಸ್ಮರಿಸಿಕೊಳ್ಳುವದರೊಳಗಿನ ಔಚಿತ್ಯವು ಕಂನಾಡ ಲೋಕೋಕ್ತಿಯ ಹಿನ್ನೆಲೆಯಲ್ಲಿ ಚೆನ್ನಾಗಿ ಅರಿಕೆಗೆ ಬರುತ್ತದೆ. ದಾಂಪತ್ಯ ಸಂಬಂಧದ ಪ್ರಥಮ ಸೇಚನ ಮುಹೂರ್ತಕ್ಕೆ 'ಆಷಾಢ ಕಾರ್ಯ' ಎಂಬ ಪಡೆನುಡಿಯುಂಟು. ಇಲ್ಲಿ 'ಆಷಾಢ' ಸಂಕೇತಕ್ಕೆ ಮಳೆ ಸುರಿಯುವುದೆಂಬ ಭೌತ ಒಂದೇ ಅರ್ಥವು ಅಭಿಪ್ರೇತವಿಲ್ಲ, ಕಾಲಿದಾಸನಿಗೆ! ಮಳೆ ಮತ್ತು ಸೃಜನ ಕಾರ್ಯ ಇವೆರಡರಲ್ಲಿ ಕಲ್ಪಿಸಲಾಗಿರುವ ಅನ್ಯೋನ್ಯ ಸಂಬಂಧವು 'ಆಷಾಢ' ಕಾರ್ಯ ಈ ಪ್ರತಿಮೆಯಲ್ಲಿ ಅಭಿಪ್ರೇತವಿದೆ. 'ಅಹಿಭಾನವಃ' ಎಂದು ವರ್ಣಿಸಲ್ಪಟ್ಟ ರುದ್ರಿಯ-ಮರುತರು 'ದ್ರಪ್ಸಿನಃ' ಎಂಬಲ್ಲಿರುವ ಅರ್ಥೌಚಿತ್ಯ ಬಿಡಿಸಿ ಹೇಳಬೇಕೆ? ಈ ಮಿಂಚಿನೊಡನೆ ಹನಿವ ಸೋನೆ : 'ಸಸರ್-ಜ ಆಪ' Fertilizing Waters ಎಂದು ಮೆಕಡೊನೆಲ್ಲರು ಋಗ್ವೇದ ಸೂಕ್ತಗಳ ಅರ್ಥದಲ್ಲಿ ಹೇಳುತ್ತಾರೆ. ಆದರೆ, ಮೆಕಡೊನೆಲ್ಲರಿಗೆ ಮಿಂಚು, ಅಲ್ಲಿ, ಹಾವಿನ ಪ್ರತಿಮೆ ಎಂಬುದು ಕಾಣಲಿಲ್ಲ! ಜಲಸೇಚನಗೈವ ಈ ಅಹಿ-ಭಾನು (ಮೋಡದೊಳಗಿನ) ನಾಗನಿಂದ ಭೂದೇವಿ ಪಚ್ಚೆಪಸುರಿನವಳು, ಬಸುರೆ ಆಗುತ್ತಾಳೆ, ಎಂಬುದು ಅಲ್ಲಿಯ ಆಶಯವಿರುತ್ತದೆ. ಇಲ್ಲಿ ಮೋಡ-ಮಳೆ-ಆಷಾಢ ಕಾರ್ಯ ಈ ಸಂಕೇತಗಳು ಏಕಾರ್ಥಿಗಳಲ್ಲ.

ಫ್ರೈಡನ Fixed Symbols ಯೂಂಗ Archetypes ಎಂಬ ಮಾತುಗಳಿಂದ ಸಾಂಕೇತಿಕ ಪ್ರತಿಮೆಗಳ ಸ್ವತಂತ್ರ ಅಸ್ತಿತ್ವವೆ ನಷ್ಟವಾಗುತ್ತಿದೆ. ಅವನ್ನು ಒಂದೊಂದು ವಿಶಿಷ್ಟ ಅರ್ಥಕ್ಕೇ ಬಿಗಿದು ಕಟ್ಟಿದಂತಾಗಿ, ಪ್ರತಿಮಾ : ಸಂಕೇತ ಹಾಗೂ ಅದರ ಅಂತಸ್ಥ ಅರ್ಥ ಇವೆರಡು ಸಮಾನ ವ್ಯಾಪ್ತಿಯವು (Co-extensive) ವೆಂಬ ಸಂಭ್ರಮಕ್ಕೆ ಅವಕಾಶ ದೊರೆಯುತ್ತದೆ. ಅಭಿವ್ಯಕ್ತವಾಗಬೇಕಾಗಿರುವ ಅರ್ಥ, ಆ ಅರ್ಥದ ಮಾಧ್ಯಮ : ಪ್ರತಿಮೆಯಷ್ಟೇ

ಪರಿಮಿತವಿರುತ್ತದೆಂದು ಗ್ರಹಿಸುವಲ್ಲಿ ಮಾನವ ಸ್ವಭಾವವನ್ನೆ ಕಡೆಗಣಿಸಿದಂತಾಗುತ್ತದೆ. ಅತಿಶಯೋಕ್ತಿಗಳಲ್ಲಿ ಅರ್ಥವು, ಸಾಂಕೇತಿಕ ಪ್ರತಿಮೆಗಿಂತ ಅಲ್ಪವಿರುವುದು ಸಾರ್ವತ್ರಿಕ ಅನುಭವವಾಗಿದೆ. ಉದಾ : ಆಮಂತ್ರಿತ ಅತಿಥಿಗಳ ಸ್ತೋತ್ರ, ಅವರ 'ಅಮೃತ ಹಸ್ತ' ಅವರ 'ಅಮೃತವಾಣಿ' ಇಂತಹ ಶಬ್ದ ಸಂಕೇತಗಳಿಂದ ಔಪಚಾರಿಕತೆಯ ಕೃತ್ರಿಮ ಡಂಭಾಚಾರದ ಪ್ರದರ್ಶನವಾಗುತ್ತಿರುತ್ತದೆ. ವಿಲಕ್ಷಣ ವಿಚಿತ್ರ ವಿಶಾಲ ಆಶಯ ಘನ ವಿಚಾರದ ವಾಹನವಾಗುವ 'ನಾಗ': ಆಪ: ರಸಾದಿಗಳು ಅರ್ಥದ ಭಾರದಿಂದ ಅಂಕುಡೊಂಕಾದ ಮೋಡಿಯ ಮಾಟದುವು ಆಗಿ, ಮಾಯಾ ವಿಭ್ರಮದಿಂದ ನೋಟಕರನ್ನು ದಿಗ್ಭ್ರಾಂತವಾಗಿಸುತ್ತವೆ! ಆದುದರಿಂದ, ಭಾಷಿಕ ಸಾಂಕೇತಿಕ ಪ್ರತಿಮೆಗಳು 'ಮಾಧ್ಯಮ' : ಮಧ್ಯಸ್ಥ ಎಂಬುದನ್ನು ಮರೆತು ನಡೆಯದು-ಸತ್ಯಾನ್ವೇಷಣೆಯಲ್ಲಿ. ಆದರೆ ಕ್ಷಣಕಾಲವೂ ಸುಖ-ಸಂಕಥಾ ವಿನೋದದ - ಕಾಲಕ್ಷೇಪದಲ್ಲಿ 'ಮಾಧ್ಯಮ'ದ ವಿಚಿಕಿತ್ಸೆ ರಸಹಾನಿಗೆ ಕಾರಣವಾಗುತ್ತದೆ. ಸೌಂದರ್ಯ-ಚಮತ್ಕಾರ-ಮೋಡಿಕಾರಿಕೆಯ ಮಾಟ ಈ ಜಾದು>ಯಾತು ಕ್ರೀಡೆಯಲ್ಲಿ ಮಾಧ್ಯಮ (Medium) ಏನು-ಎಂತು ಇದರ ವಿಶ್ಲೇಷಣದಿಂದ ಆ ಪವಾಡ : ಚಮತ್ಕಾರ : miracleದ ಸ್ಥಾಯಿಭಾವವಾಗಿರಬೇಕಾದ 'ಆಃ'! ಚರ್ಕಿಗೆ ಕೊಡಲಿಯ ಪೆಟ್ಟು ಬೀಳುತ್ತದೆ. ಆದುದರಿಂದ, ಸಾಂಸ್ಕೃತಿಕ ಪಾತಳಿಯ ಮೇಲಿನ ಸತ್ಯಾನ್ವೇಷಣೆಯ ಸಂದರ್ಭದಲ್ಲಿ, ಮಧ್ಯಮವನ್ನು ಪ್ರತಿಮಾ : ಸಂಕೇತ ಎಂದು ಬಗೆಯದೆ ಅದನ್ನು ಯಾವುದೊಂದು ವಿಶಿಷ್ಟಾರ್ಥದ ಕುರುಹು ಚಿಹ್ನ ಎಂದು ನಿರ್ಧರಿಸಿ ಬಿಡುವಲ್ಲಿ ಅದು ಮಾಧ್ಯಮ: ಮಧ್ಯಸ್ಥ ಎಂಬ ಹೆಸರಿನ ಅರ್ಹತೆಗೆ ಎರವಾಗುತ್ತದೆ! ಇದು ಇನ್ನೊಂದು ಬಗೆಯ ಚಮತ್ಕಾರಕ್ಕೆ ಕಾರಣವಾಗುತ್ತದೆ.

ಮಧ್ಯಸ್ಥ : ಮಾಧ್ಯಮದ ಅವಶ್ಯಕತೆಯು ಯಾವಾಗ? ಇನ್ನೊಬ್ಬ ಅಪರಿಚಿತನನ್ನು ಅರಿಯುವಾಗ ನಡುವಿನವನು ಬೇಕಾಗುತ್ತಾನೆ. ಆ ಅಪರಿಚಿತನ ನೆಲೆಯ ಅರಿಯದಿರುವಾಗಂತೂ, ಆತನ ಬಗೆಗೆ ಒಂದು ಗುಮ್ಮ: ಗೂಢ ಭಾವವು-ಅವನು ಎಂತಹನೋ ಎಂಬ ಸಂದೇಹ ಭೀತಿಯುಕ್ತ ಕುತೂಹಲವು-ಮನವನ್ನು ಆವರಿಸುತ್ತದೆ. ಇಂತಹ ಸಂದಿಗ್ಧ ಸಮಯದಲ್ಲಿ ಮಾಧ್ಯಮದ ನೆರವು ಪಡೆಯದೆ ಬೇರೊಂದು ಮಾರ್ಗವೇ ಇರುವುದಿಲ್ಲ. ಆದರೆ 'ಮಾಧ್ಯಮ'ವು ಆ ಅಪರಿಚಿತ ಆಶಯ-ಅರ್ಥವನ್ನು ಸೂಚಿಸಬಹುದು, ಹೆಚ್ಚಾದರೆ ಪ್ರತಿನಿಧೀಕರಿಸಬಹುದು. ಆದರೆ, ಮಧ್ಯದ ಸಾಂಕೇತಿಕ ಪ್ರತಿಮೆಯೆ, ಇಡಿ ವಿಶ್ವಸ್ಥ ಆಶಯ-ಅರ್ಥ ಆಗಿರಲು, ಯಾವ ಸಂದರ್ಭದಲ್ಲಿಯೂ ಶಕ್ಯವಿಲ್ಲ.

ತಲೆತಲಾಂತರಗಳಿಂದ, ಭಾಷೆಯನ್ನು 'ಮಾಧ್ಯಮ' ಎಂದು ಬಗೆಯಲಾಗುತ್ತ ಬಂದಿರುವುದರ ಕಾರಣವನ್ನು ಕಂಡುಹಿಡಿವ ಆವಶ್ಯಕತೆಯೆನಿಸಿರುವವರು, ವಿಚಾರವಂತರಲ್ಲಿಯೂ ಬಹಳ ಸ್ವಲ್ಪಜನ! "ದೇವೀಂ ವಾಚಂ ಅಜನಯಂತ ದೇವಾ........." ಎಂಬ ತೀರ ಪ್ರಾಥಮಿಕ ಶ್ರದ್ಧೆಯು ಹಿಂದೆ ಬಿದ್ದು, 'ಸಕ್ತುಂ ಇವ ತಿತಉನಾ ಪುನಂತಃ ಯತ್ರ ಧೀರಾಃ ಮನಸಾ ವಾಚಂ ಅಕ್ರತ' ಎಂಬ ಅತ್ಯಾಧುನಿಕ ವೈಚಾರಿಕ ಆಕೃತಿಯನ್ನು ಹೋಲುವ ಮಂತ್ರವೊಂದು ವೇದದಲ್ಲಿ ಉಂಟು! ವಿಮರ್ಶಾತ್ಮಕ ವಿಚಾರಗಳಿಂದ ಭಾಷೆಗೆ ಆಕಾರ ಬಂದಿದೆ, ಎಂಬ ಶ್ರದ್ಧೆಯ ವಿಚಾರವಂತರ ಒಂದು ವರ್ಗವೂ ಋಗ್ವೇದಕಾಲದಲ್ಲಿ ಅಸ್ತಿತ್ವದಲ್ಲಿ ಇದ್ದಿತೆಂಬುದು ಬೆಳಕಿಗೆ ಬಂದಿದೆ! ಆದರು 'ವೇದ ಅಪೌರುಷೇಯ' : ಏನೆಲ್ಲ ಪರಮಾತ್ಮನ ಸೃಷ್ಟಿ ಎಂಬ, ವಿಚಾರ-ವಿಮರ್ಶಾ-ಪರಂಪರೆಗೆ ಮಾರಕ ಶ್ರದ್ಧೆಯನ್ನೇ ಪೋಷಿಸಿ ಪುಷ್ಟವಾಗಿಸಿಕೊಂಡು ಬಂದವರು ಧೀ-ಉಪಾಸಕರೆಂಬ ಬ್ರಾಹ್ಮಣ ವರ್ಗದವರೇ! 'ಧಾನ್ಯವನ್ನು ಕೇರಿ ಪುನೀತವಾಗಿಸುವಂತೆ' ಎಂಬ ಈ ಉಪಮೆಯಲ್ಲಿ ಧೀರ ವಿಮರ್ಶಕರು ಮಾಡುವ ಕೆಲಸ, 'ಧಾನ್ಯ'; ಭಾಷಿಕ ಪ್ರತಿಮಾ : ಸಂಕೇತಗಳು ದೊರೆತ ಬಳಿಕಿನದು, ಎಂಬ ಒಪ್ಪಿಗೆಯು ಉಂಟೇ ಉಂಟು. ಆತನು ಜ್ಞಾನತಿತಿಕ್ಷುವು. ಭಾವಾವಿಷ್ಟ ಉನ್ಮನಸ್ಕತೆಯಲ್ಲಿ : ಪ್ರೇಷಿತನಂತೆ 'ಯತ್ ಪ್ರೈರತ ಪ್ರಥಮಂ ನಾಮಧೇಯಂ ದಧಾನಾಃ ಅಗ್ರಂ ವಾಚಃ (ಭವತಿ): ಆವಿಷ್ಟನಂತಾದಾಗ ತನಗೆ ಕಂಡಂತೆ ವಸ್ತುಗಳಿಗೆ ನಾಮಕರಣ ಮಾಡಲಾಗುವಲ್ಲಿ ಭಾಷಿಕ ಮೊದಲ ಹಂತದ ಸಂಕೇತ: ಪ್ರತಿಮೆಗಳು ತಲೆದೋರುತ್ತವೆ. ಆದರೆ, ಆವಿಷ್ಟ ಉನ್ಮದಿತಸ್ಥಿತಿಯಲ್ಲಿ ಕಂಡಂತೆ - ಕೇಳ ಬಂದಂತೆ ಎನಿಸಿದ್ದುದರಲ್ಲಿ ಆ

ವ್ಯಕ್ತಿಯ ಪೂರ್ವಗ್ರಹ-ಅಲ್ಪಜ್ಞತೆ-ಸ್ವಂತದ ಆಶೆ ಆಕಾಂಕ್ಷೆಗಳ ಕೈವಾಡವೂ ಇರುವ ಶಕ್ಯತೆ ಸಾಕಷ್ಟು ಉಂಟು. ಆದಕಾರಣ, ಪ್ರತಿಮಾ : ಸಂಕೇತ ರೂಪದಲ್ಲಿ ಕಂಡ-ಪಡೆದ 'ಮಾಧ್ಯಮ'ವನ್ನು ತಟಸ್ಥ ಮನೋಭಾವದ ಧೀರ ವಿಚಿಕಿತುಷಿಗಳು ಮರಳಿ ಬಗೆಬಗೆಯಿಂದ ವಿಮರ್ಶಿಸಿಕೊಂಡು ಆ ಪ್ರತಿಮಾ : ಸಂಕೇತಗಳನ್ನು ಪಾವನಗೊಳಿಸುವುದು ಅತ್ಯವಶ್ಯವಿರುತ್ತದೆ.

'ಮಾಧ್ಯಮ: (Medium) : ಪ್ರತಿಮೆಯ ಮೂಲಕ, ಮಾನವ ಪಂಗಡಗಳ ಭಾಷೆಯು ಮೂರ್ತ ಆಕೃತಿ ರೂಪದ್ದಾಗಿರುವುದನ್ನು ಕಾಣಬಹುದು. ಮಾತುಗಳ ಬರುವಳಿಯ ಕಾರಣವು ರೂಢಿ (: Convention), ಎಂದು ಗ್ರಹಿಸಿರುವುದೂ, ಭಾಷೆ ದೇವರಿಂದಾಯ್ತು ಎಂಬ ಶ್ರದ್ಧೆಯಷ್ಟೇ, ಅಪೂರ್ಣ-ಅಸಮರ್ಪಕ ವಿಚಾರ. ತರ್ಕದಿಂದ ಭಾಷೆ ರಚಿಸಲ್ಪಟ್ಟಿಲ್ಲ. ಭಾಷಾವಿಜ್ಞಾನಿ ಮ್ಯಾನ್ ಹಂಬೋಲ್ಟ್, ಭಾಷೆಗೆ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತಾನೆ : "Thanks to Language, Man became Man"! ಸಾಂಕೇತಿಕ ಪ್ರತಿಮಾ : ಮಾಧ್ಯಮ ಸ್ವರೂಪದ ಭಾಷೆಗೂ ಮೊದಲು ಈ ಮಾನವನು ಗೋರಿಲ್ಲಾ, ಓರಾಂಗ ಉಟಾಂಗ ವರ್ಗದ ಮಾನವಾಕಾರ ಕೋತಿಯಾಗಿದ್ದನು ಎಂಬುದು ಫ್ರೈಡ್, ಬರ್ಟ್ರಾಂಡ್ ರಸೆಲ್ ಪ್ರಭೃತಿಗಳಿಗೂ ಅಮಾನ್ಯವಿರಲಾರದು. ಆದರೂ ಭಾಷೆಯು 'ಮಾಧ್ಯಮ' ಎಂಬ ಮಾತಿಗೆ ಅವರು ಕಲ್ಪಿಸಿರುವ ಅರ್ಥವೇ ಬೇರೆ. ಒಂದು ಸಂಕೇತಕ್ಕೆ ಒಂದೇ ಅರ್ಥವು ಇರುವುದು ಅವಶ್ಯವಿದೆ. ಇಲ್ಲವಾದರೆ, ವಿಚಾರಗಳಿಗೆ ನಿಶ್ಚಿತತೆ-ಸುಸ್ಪಷ್ಟತೆ ಬರಲಾರದು. ವಿಶ್ವಸ್ಥ ವಾಸ್ತವ: ಸತ್ಯವನ್ನು ಗ್ರಹಿಸಿ ಹೇಳುವುದು ಶಕ್ಯವಾಗಲಾರದು. ಇದಕ್ಕಾಗಿ ಸಂಕೇತಕ್ಕೆ ಒಂದೇ ಅರ್ಥವು ಅಭಿಪ್ರೇತವಿರುವ ಹೊಸಭಾಷೆಯನ್ನೆ ಏಕೆ ನಿರ್ಮಿಸಬಾರದು? ಎಂಬ ವಿಚಾರದಿಂದ ಪ್ರೇರಿತರಾಗಿ ರಸೆಲ್ಲ ಆ ಬಗೆಯ ಪ್ರಚಾರೋಪನ್ಯಾಸ ಮಾಲೆಯನ್ನು ಪ್ರಾರಂಭಿಸಿದ್ದಾಯಿತು.

ಆಕ್ಸಫರ್ಡಿನ ಒಂದು ಸಭೆಯಲ್ಲಿ, ಇನ್ನೊಬ್ಬ ತತ್ವಜ್ಞಾನಿ ಶಿಲ್ಲರ್ (Schiller) ಕೇಳಿದ ಪ್ರಶ್ನೆಗಳಿಂದ ರಸೆಲ್ಲ ನಿರುತ್ತರರಾದಂತೆ ಕಾಣುತ್ತದೆ. ಒಂದೊಂದು ಅರ್ಥಕ್ಕೆ ಒಂದೊಂದು ಸಂಕೇತ, ಎಂದಲ್ಲಿ ಭಾಷೆಯಲ್ಲಿ ಆವಶ್ಯಕವಾಗುವ ಪದಗಳ ಸಂಖ್ಯೆ ಅಪರಿಮಿತವಾಗಿ ನೆನಪು ಉಳಿಯುವದೂ ಅಶಕ್ಯವಾಗಲಿದೆ. ಅಲ್ಲದೆ, ಹೀಗೆ ರೂಢಿಸಬೇಕೆಂಬ ಸಂಕೇತಗಳು ಒಮ್ಮೆಲೇ ಮಾನ್ಯವಾಗಬಲ್ಲವೆ? ಇತ್ಯಾದಿ. ಆ ಬಳಿಕ ರಸೆಲ್ಲರ ಈ ಪ್ರಯತ್ನ ಮುಂದುವರೆದುದು ಕೇಳಬಂದಿಲ್ಲ.

ಯುರೋಪಿನಲ್ಲಿ ಸ್ವತಂತ್ರ ವಿಚಾರ, ನಾನಾಮುಖವಾಗಿ ಹುಲುಸಾಗಿ ಬೆಳೆದಿದೆ-ಬೆಳೆಯುತ್ತಿದೆ, ಎಂಬ ಗ್ರಹಿಕೆಯಲ್ಲಿ ವಿಶೇಷ ತಥ್ಯಾಂಶವಿರುವಂತೆ ತೋರುವುದಿಲ್ಲ. ಈ ಮೊದಲು ಸೂಚಿಸಿರುವಂತೆ, ತತ್, ಏಕಂ: ಸತ್ ಈ ಭೂಮಿಕೆಯ ಆಚಾರ-ವಿಚಾರದ ಕ್ರಿಯೆ-ಪ್ರತಿಕ್ರಿಯೆಯ ದ್ವಿವಿಧ ಆಕೃತಿಗಳ ಹೋಲಿಕೆಯೇ ಈವರೆಗಿನ ವಿಚಾರ-ವಿಕಾಸದಲ್ಲಿ, ಪ್ರಾಧಾನ್ಯದಿಂದ, ಎಲ್ಲೆಲ್ಲೂ ಕಾಣುತ್ತದೆ. ಗ್ರೀಕ್-ಪವಾಡ ಕಥೆಗಳಲ್ಲಿ ಕಾಣುವ ಸರ್ಪಭೂಮಿಕೆಯ ಉಭಯ ಲಿಂಗೀ (ಸಂಯೋಗದ) ಆದರ್ಶ ಜೀವನದ ಆಕೃತಿ; ಇದರ ಜುಗುಪ್ಸೆ ಅಥವಾ ತೃಪ್ತಿಯಿಂದಾಗಿ ಬರುವ ಶೂನ್ಯ ಮನಸ್ಕ: ಸಂನ್ಯಸ್ತ ಜೀವನದ ಆಕೃತಿ. ಮೊದಲನೆಯದರ ಪ್ರತಿಕ್ರಿಯೆಯೆ ಎರಡನೆಯ ಆಕೃತಿ ಸ್ವತಂತ್ರ ಅಸ್ತಿತ್ವ ಇದಕ್ಕಿಲ್ಲ.

ಕ್ರೈಸ್ತಮತಕ್ಕೂ ಮುಂಚೆ ಇದ್ದ ಆಚಾರ: ವಿಚಾರದ ಆಕೃತಿಯನ್ನು ಲೆಕ್ಕಿಸದೆ, ಆ ಬಳಿಕಿನ ಜೀವನದ ಮೂರ್ತ ಹಾಗೂ ತಾತ್ವಿಕ ಆ-ಕೃತಿಯೊಳಗಿನ ಏರುಪೇರುಗಳ ಗಣಿತ ತಿಳಿಯಲಾರದು. ಕ್ರೈಸ್ತ ಪಂಥೀಯ ಪೂಜಾಪ್ರತೀಕಗಳನ್ನು ಗಮನಿಸಿದರೂ ಸಾಕು, ಇದು ತಿಳಿಯಲು:

೧. ಉಡಿಯಲ್ಲಿ ಅಥವಾ ತೊಡೆಯ ಮೇಲೆ 'ನಪ್ಪ'ವಿರುವ ಆದಿ ಮಾತೆಯ ಪ್ರತಿಮಾ: ಸಂಕೇತ, ಜೀವನ ರೀತಿಯ ಒಂದು ತುದಿ
೨. ಸಿಲುಬೆಗೆ ಏರಿಸಿದ 'ನಪ್ಪ': ಕುಮಾರನ ಪ್ರತಿಮಾ: ಸಂಕೇತ, ಜೀವನದ ಉಯ್ಯಲೆಯ ಪ್ರತಿಕ್ರಿಯಾರೂಪ ಇನ್ನೊಂದು ತುದಿ! ಈ ಮಹಾಮಾತೆ,

ಮೂಲದಲ್ಲಿ ಅ-ದಿತಿ ಸ್ವರೂಪಳು: ಜೀವನಮೃತ್ಯು ಈ ಖಂಡಿತ: ಸಮಗ್ರ ಸ್ವರೂಪಳೇ ಆಗಿದ್ದಾಳೆ.

ಆದರೆ, ಕೋಮಲ ಮಾತೃಭಾವದ ಅರ್ವಾಚೀನ ಪ್ರತಿಮೆಯ ಮೂಲಕ ಇದರ ಪತ್ತೆ ಆಗುವುದಿಲ್ಲ. ಇದಕ್ಕಾಗಿ ಮೇರೀ ಮಾತೆಯ ಪುರಾತನ ಪ್ರತಿಮೆಯ ದರ್ಶನಕ್ಕಾಗಿ ಹುಡಿಕಿಕೊಂಡು ಹೋಗುವ ಆವಶ್ಯಕತೆ ಇದೆ. ಆದರೂ 'ಸತ್ಯ' ಎಂಬುದು ಸಾಂಕೇತಿಕ ರೂಪದಲ್ಲಿ ಎಲ್ಲಾದರೂ ತಲೆಯೆತ್ತಿ ಉಸುರಾಡಿಸಲು ಪ್ರಯತ್ನ ಪಡುವುದು, ಅದರ 'ಸನಾತನ' ಧರ್ಮವಾಗಿದೆ! ರುದ್ರ-ಶಿವನೊಳಗಿಂದ ಶಿವಸ್ವರೂಪವನ್ನು ಲೋಕಕಲ್ಯಾಣಕಾರಿ ಮಂಗಲಧಾಮ ವಿಷ್ಣುವಾಗಿಸುವ ಒಂದು ಪ್ರಯತ್ನ ಆದುದು, ಈ ದೈವತ ಪ್ರತಿಮಾ: ಸಂಕೇತಗಳ ತುಲನಾತ್ಮಕ ಸಮೀಕ್ಷೆಯಲ್ಲಿ ದೃಢಪಟ್ಟಿದೆ. 'ಲಕ್ಷ್ಮೀ' ಎಂಬುದು, ಅಖಂಡಿತ ಅದಿತಿ ಸ್ವರೂಪದ ಸಮಗ್ರ ಪ್ರತಿಮೆಯ ಒಂದು ಕಾಲಕ್ಕೆ ಇತ್ತು. ಅಥರ್ವವೇದದಲ್ಲಿ ಇದು ಅಡಗಿ ಉಳಿದಿದೆ. ಮಹಾರಾಷ್ಟ್ರದಲ್ಲಿ 'ಕಡಕ' ಲಕ್ಷ್ಮೀ : ಜ್ಯೇಷ್ಠಾದೇವಿ ಉಂಟು, ಕಂನಾಡಿನಲ್ಲೂ ಉಂಟು. ಆದರೆ ಈ ಲಕ್ಷ್ಮೀ 'ಮಾಯವ್ವ;' ಮಾಯಾದೇವಿ ಎಂಬ ಹೆಸರಿನಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾಳೆ. ಮಹಾರಾಷ್ಟ್ರದಲ್ಲಿ 'ಮಮ್ಮಾಯಿ'-ಮಹಾ ಮಾಯಾ ಹೆಸರಿನಲ್ಲಿ ಉಂಟು. ಇವಳೇ ಮಹಾ-ಲಕ್ಷ್ಮೀಯೂ ಸರಿ! ಮಾಳಚಿ=ಮ್ಹಾಳಸಿ: ಮೋಹಿನೀ ರಾಜನೂ ಅಹುದು! ಶ್ರೀ (ಲಕ್ಷ್ಮೀ) ಸೂಕ್ತಸ್ಥ 'ಆರ್ದ್ರಾ' 'ಕಾ' ದೇವಿ: ಅಲಕ್ಷ್ಮಿ ಇವಳೇ; ಇವಳೇ ಕಾ-ಲಿ: ದುರ್ಗೆ. ಈ ಉಗ್ರರೂಪದಿಂದ ಬೇರ್‌ಪಟ್ಟು ಶ್ರೀ-ಲಕ್ಷ್ಮೀ, ವರ-ಮಹಾಲಕ್ಷ್ಮೀ, ಭದ್ರಾಲಕ್ಷ್ಮೀ[೧] ಇತ್ಯಾದಿ ನಾಮಾಂತರಗಳಿಂದ ಪೂಜೆಗೊಳ್ಳುವ ಜೀವನ ನಿಷ್ಠಾಸೂಚಕ ಪ್ರತಿಮೆಯೊಂದನ್ನು ಅಖಿಲಭಾರತೀಯ ಸ್ವರೂಪದಲ್ಲಿ ಕಾಣಬಹುದು. ಮೂಲದಲ್ಲಿ ಶ್ರೀ ಲಕ್ಷ್ಮೀ ಮತ್ತು ಕಾಲಿ: ದುರ್ಗಾ ಇವರ ಒಂದೇ ಸಮಗ್ರ ಪ್ರತಿಮೆ ಇದ್ದಿತು, ಎಂದರೆ ಶೈವ-ವೈಷ್ಣವ ಪರಂಪರೆಗೆ ಇದು ಸಹ್ಯವಾಗಬಹುದೋ, ಎಂಬ ಸಂದೇಹ! ಏಸು: ಕುಮಾರ: ನಪ್ಪವಿನ ಮಾತೆ ಮೇರೀದೇವಿಯ ಮೂಲ ಪ್ರತಿಮೆ ಉಗ್ರ ರೂಪದ್ದು ಏಕೆ? ಎಂಬುದರ ಅರ್ಥವು, ಭಾರತೀಯ ಪರಂಪರೆಯ ಅದಿತಿ ಹಾಗೂ ಲಕ್ಷ್ಮೀ ಈ ಪ್ರತಿಮಾ ಸಂಕೇತಗಳ ಅತಿ ಪ್ರಾಚೀನ ಉಲ್ಲೇಖಗಳ ಋಗ್ವೇದ, ಅಥರ್ವವೇದದ ಋಚೆಗಳ ಬೆಳಕಿನಲ್ಲಿ ಮಾತ್ರ ಸ್ಪಷ್ಟವಾಗಲಿದೆ.

'ಕುಮಾರಿ-ಉಡಿಯಲ್ಲಿ ನಪ್ಪ' ಈ ಪ್ರತಿಮೆಯಲ್ಲಿ ಒಂದು 'ಸಮಯ'ದ ಜೀವನದ ಆಕೃತಿ: ಅರ್ಥವು ಪ್ರತಿಬಿಂಬವಾಗಿದೆ. ಅಮೂರ್ತ ಜೀವನವು ಒಂದೊಂದು ಕಾಲದ 'ಸಮಯಕ್ಕೆ : ಆಚಾರ-ವಿಚಾರಕ್ಕೆ ಹೊಂದಿಕೊಂಡು ಪಡೆದ ಅರ್ಥದ ಆಕೃತಿಯು ಇಂತಹ (ಶಬ್ದ) ಪ್ರತಿಮಾ: ಮಾಧ್ಯಮದ ಮೂಲಕವಾಗಿ ಜನದ ಅರಿಕೆಗೆ-ಅನುಭವಕ್ಕೆ ಬರುತ್ತದೆ. ಇದು 'ಮಾಧ್ಯಮ'; ಏಕೆಂದರೆ ಇದು ಮಧ್ಯಸ್ಥವಾಗಿದೆ. ಅಂದಿನ ಜೀವನದ ಅರ್ಥಕ್ಕೂ ಆ ಅರ್ಥವನ್ನು ಅರಿಯಬೇಕೆಂಬ ಜಿಜ್ಞಾಸುಗಳಿಗೂ ಸೇತುವಿನಂತಿದೆ ಈ ಮಾಧ್ಯಮ. 'ಕುಮಾರಿ' ಕನ್ಯಕಾ-ಪರಮೇಶ್ವರಿ: ಲೋಕಮಾತೆ: ಜಗದಂಬೆ ಎಲ್ಲ(ರ) ಅಮ್ಮ ಇವಳ 'ನಪ್ಪ': ಕುಮಾರ, ಅಯೋನಿ ಸಂಭವ ಶಿಶು, ಎಂಬ ಪೂರಕ (Supplimentary) ಪವಾಡ ಕಥೆಯೂ ಪ್ರಚಾರದಲ್ಲಿ ಇರುವುದು ನಿಷ್ಕಾರಣವಲ್ಲ. ಅಂದಿನ-ಒಂದು ಶ್ರದ್ಧೆಯು ಆ 'ಸಮಯ'ವೆ ಒಡಮೂಡಿ ನಿಂತಿರುವ ಸಾಂಕೇತಿಕ ಪ್ರತಿಮೆ. ಕ್ರೈಸ್ತ ಸಂಪ್ರದಾಯವು ಆರಾಧಿಸುವ ಈ ಸಾಂಕೇತಿಕ ಪ್ರತಿಮೆಗಳು, ಏಕ ವೀರಾ: ಎಲ್ಲಮ್ಮ ಸಂಪ್ರದಾಯದಲ್ಲಿ ಸ್ವಲ್ಪ ತಿದ್ದುಪಡಿಯಾಗಿ ಇಂದಿಗೂ ಉಂಟು. "ಇಂದ್ರನ ತಾಯಿ"ಯನ್ನಾಗಿಸಿ ಅದಿತಿಯನ್ನು 'ಏಕವೀರಾ' ರೂಪದಲ್ಲಿ ತೋರಿಸುವ ಕಪಟ ಪ್ರಯತ್ನ ಒಂದಾಗಿದೆ. ಆದರೆ, ಈ ಅದಿತಿಯ ಖಾಸಾ 'ನಪ್ಪ': ಮಾರ್ತಾಂಡ: ಮೃತಾತ್ ಅಂಡಾತ್ ಜಾತ ಚಂದ್ರಮನೆ: (ಅಮಾವಾಸ್ಯೆಯ ಮರುದಿನ) ಪ್ರತಿಪದೆಯ ನಾಗರಮಿಡಿ 'ಬಾಲ'ಚಂದ್ರನೇ ಶಿಲುಬೆಗೆ ಏರಿಸಿದ ಕುಮಾರನ ಪ್ರತಿಮೆ: 'ಮಾರ್ತಾಂಡ' ಸಂಕೇತದ ಪ್ರತೀಕವೇ ಆಗುತ್ತದೆ! ಅಖಂಡಿತೆ: ಸಮಗ್ರ: ಅದಿತಿ, ಎಲ್ಲಮ್ಮ ನಾಮಾಂತರದಲ್ಲಿ ತನ್ನ ಮೃತ್ಯು-ರೂಪವನ್ನು ಕಾಲಿಯ ಪಾಲಿಗೇ ಇರಿಸಿದ್ದಾಳೆ. ಆದರೆ, ಏಳು ಹುತ್ತಿನೊಳಗಿಂದ ಬಂದವಳು-ಏಳುಕೊಳ್ಳದವಳು ಎಂಬ ಕೀರ್ತಿ ದುಂದುಭಿ ಮೊಳಗುತ್ತಲೇ ಇದೆ. ರೇಣು(ಕಾ)

ಕಥಾಬೀಜವು, ಮಾರ್ತಾಂಡ (:ರೇಣುಕಾ) ಜನನದ ಸೂಕ್ತದಲ್ಲಿಯೇ ಇದೆ. ನೀರಿನಲ್ಲಿ ಸುಸಂರಬ್ಧರಾಗಿ' 'ನೃತ್ಯತಾಂ ಇವ' ಇದ್ದ ಆ-ನಂದಲೋಕದೊಳಗಿಂದ ಒಂದು 'ತೀವ್ರೋ ರೇಣುಃ' ಹೊರಗೆ ನೆಗೆಯುತ್ತದೆ![೨] 'ಸಲಿಲ ಸ್ವರೂಪ ಅದಿತಿಯ ಉಡಿಯಲ್ಲಿಯ 'ನಪ್ತೃ' ಈ ತೀವ್ರ (ತೀಕ್ಷ್ಣ) ರೇಣುವೇ ಎಂದು ಸಿದ್ಧಪಡಿಸುವ ಆವಶ್ಯಕತೆ ತೋರದು. ಇವನು 'ಪ್ರಜಾಯೈ ಮೃತ್ಯವೇ' ಈ ಪ್ರಪಂಚದ ಅಧ್ಯಕ್ಷನಾಗಿದ್ದಾನೆ. ಎಂದರೆ ಇವನು ಸೃಜನದ ದೈವತನಾಗಿರುವಂತೆ ಮೃತ್ಯು ಸ್ವರೂಪನೂ ಆಗಿದ್ದಾನೆ. ಈ ಅಖಂಡ 'ಅದಿತಿ' ಸ್ವರೂಪದ ನಿಲುಮೆಯಲ್ಲಿ ತಾಯಿ ಮತ್ತು ಮಗು ಬೇರೆಯಲ್ಲ! ಇದು 'ಅಪಾಂ-ನಪ್ತೃ' ಸಮಗ್ರ ದೈವತ. ಎಲ್ಲಮ್ಮ ಮೃತ್ಯು ದೈವತವಲ್ಲದಿದ್ದರೂ ಅವಳ 'ನಪ್ತೃ' ಸರ್ಪಶಕ್ತಿಯ ಪರಶುಧರನು ಕಾಲಭೈರವನಂತೆ ಕೊಲೆಪಾತಕಿಯೆಂಬುದು, ಸುಪ್ರಸಿದ್ಧವಿದೆ. ಆದರೆ ಇದು ವಿವೇಕರಹಿತ ಸಂಹಾರಕ ಕೃತ್ಯ ಎನಿಸಬಾರದೆಂದು, ನಿಃಕ್ಷತ್ರಿಯ ಪೃಥವೀ ಮಾಡುವ ಪ್ರತಿಜ್ಞೆಯ ಒಂದು ಮೊಗವಾಡ ಹಾಕಿದ್ದಾಗಿದೆ! ಆದರೂ ಇದರ ಸುಳ್ಳುತನವನ್ನು '೨೧ ಸಾರೆ ನಿಃಕ್ಷತ್ರಿಯ ಪೃಥವೀ ಮಾಡಿದನೆಂಬ' ವದತೋ ವ್ಯಾಘಾತದ ಪುರಾಣಕರ್ತ ಹೇಳಿಕೆಯ ಬಯಲಿಗೆ ಎಳೆಯುತ್ತದೆ! ಈ ಪವಾಡದ ಮೂಲಕ, ಈ ಕಥೆಯ ರಚನಾ ಕಾಲದ ಬ್ರಾಹ್ಮಣ-ಕ್ಷತ್ರಿಯರೊಳಗಿನ ತ್ವೇಷ-ದ್ವೇಷದ ಐತಿಹ್ಯ: ಸ್ಮೃತಿಯು 'ಜಾಹೀರ' ಆಗುತ್ತಿರುವುದು ಮಾತ್ರ ನಿಜ! ಅಖಂಡಿತೆ: ಅದಿತಿಯನ್ನು 'ಪಸ್ತ್ಯಾ': 'ಮುಕ್ತಾ'ದೇವಿ: ವಿಶ್ವಜನನಿ=ಎಲ್ಲಮ್ಮ ಎಂದು ಋಗ್ವೇದದ ವರ್ಣನೆಯಿದೆ. ಇಂತಹ 'ಎಲ್ಲಮ್ಮ' ಯಾವನೊಬ್ಬ ಪುರುಷನು ಮೀಸಲದ ಹೆಣ್ಣು ಆಗಿ, ಭೋಗ್ಯ-ವಸ್ತು ಎಂದು ಕಲ್ಪಿಸುವಲ್ಲಿ ಆ ದೇವಿಯ ದಿವ್ಯತ್ವಕ್ಕೆ ಆ ಶಕ್ತಿಗೇ ಬಾಧಕ! ರೇಣುಕೆಯನ್ನು ಜಮದಗ್ನಿ ಎಂಬ ಒಬ್ಬ ಪುರುಷನ ಅರ್ಧಾಂಗಿಯಾಗಿ ಪವಾಡ ಕಥೆ ನಿರ್ಮಿಸುವ ಆವಶ್ಯಕತೆಯೇನಿತ್ತು! ಪರಶು-ಧರನು 'ಅಯೋನಿ ಸಂಭವ ಶಿಶು' ಎಂಬ ಹಾಗಿನ-'ಅಜ್ಞಾತ-ಪಿತನ' ಪುತ್ರನೆಂಬುದನ್ನು ಸೂಚಿಸುವ-ಜಾನಪದ ಗೀತಗಳನ್ನು ಕೆಲವಾದರೂ ಸಂಗ್ರಹಿಸಿ, ಪ್ರಸಿದ್ಧಿಸಿ ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರು ಉಪಕಾರ ಮಾಡಿದ್ದಾರೆ.

ಕಾಲಕ್ರಮದಲ್ಲಿ ಅಭಿರುಚಿ ಬದಲಾಗುತ್ತಿದೆ; ನೈತಿಕ ಮೂಲ್ಯಗಳನ್ನು ಲೆಕ್ಕಿಸದೆ ಬಾಳು ಅಶಕ್ಯವಾಗುತ್ತಿದೆ. ಆದರೆ, ಹಿಂದಿನ ಸಂಪ್ರದಾಯವನ್ನು ಸನಾತನವಾಗಿ ಉಳಿಸಿಕೊಳ್ಳಬೇಕೆಂಬ ನಿಷ್ಠೆಗೆ ಎರಡು ಬಗೆಯುವುದಕ್ಕೂ ಧಾರ್ಮಿಕ ಭಾವನೆ ಅಡ್ಡ ಬರುತ್ತಿದೆ. ಆದಕಾರಣ, ಧಾರ್ಮಿಕ ಶ್ರದ್ಧೆಯ ಮೂಲ ಆಕೃತಿ (Concept) ಉಳಿಸಿಕೊಂಡೂ ಇದನ್ನು ಆ ಸಮಯಕ್ಕೆ ಸರಿಹೋಗುವ ಬೇರೊಂದು ಶಬ್ದಪ್ರತಿಮೆಯಲ್ಲಿ ಹುದುಗಿಸಿ ಆ ಪರಂಪರಾಗತ ದೈವತ ಪ್ರತಿಮೆಯ ನೂತನೀಕರಣ ತಂತ್ರದ ಪ್ರಯೋಜನ ಪಡೆಯದೆ ಬೇರೆ ಉಪಾಯವೆ ಉಳಿಯದಾಗುತ್ತದೆ. ಆದರೆ ಇಂತಹ ಎಳೆದಾಟದಲ್ಲಿ, ನೂತನ ಪ್ರತಿಮಾ: ಸಂಕೇತವು ಮೊದಲಿನ ಪ್ರತಿಮೆಯಿಂದ ಕೆಲವು ಅಂಶಗಳಲ್ಲಿ ಬೇರೆಯಾಗುವುದನ್ನು ತಪ್ಪಿಸಲು ಯಾರಿಂದಲೂ ಶಕ್ಯವಿಲ್ಲ.

'ಅಪಾಂ-ನಪ್ತೃ' ಈ ಪ್ರತಿಮೆಯ ಮೂಲ ಆಕೃತಿಯ ಬಾಹ್ಯರೂಪದಲ್ಲಿ ಆಗುತ್ತ ಬಂದಿರುವ ವ್ಯತ್ಯಾಸಗಳಿಗೆ ಅಜ-ಏಕಪಾತ್, ಅಹಿ-ಬುಧ್ನ್ಯ' ತನೂನಪಾತ್ (:ಅಗ್ನಿ), ದಕ್ಷ, ಪುರುಷ, ತ್ವಷ್ಟೃ, ವಿಶ್ವಕರ್ಮ, ಪ್ರಜಾಪತಿ, ಕೊನೆಗೆ ಬ್ರಹ್ಮ ಈ ಒಂದು ಪರಂಪರೆ 'ನಪ್ತೃ ಪ್ರತಿಮೆಯು ತಾಳುತ್ತ ಬಂದ ವಿವಿಧ ಆಕೃತಿಗಳ ಸೂಚಕವಾಗಿದೆ. 'ಆಪ'ವು ಅದಿತಿ, ಸರಸ್ವತಿ, ಅಂಭೃಣೆ, ಲಕ್ಷ್ಮಿ, ಎಲ್ಲಮ್ಮ, ಮಾಯಮ್ಮ (ವರ) ನಂದಿ...ಇತ್ಯಾದಿ ಭಿನ್ನ ಶಬ್ದ ಪ್ರತಿಮೆಗಳಾಗಿ ಕಂಡರೂ ಆಂತರಿಕ ಅರ್ಥವು ಒಂದೇ ಇರುವುದನ್ನು ಅಲ್ಲಗಳೆಯಲು ಆಗುವುದಿಲ್ಲ: 'ಅಪಾಂ-ನಪ್ತೃ' ಇದು ಒಂದು ಆಕೃತಿ: ಇನ್ನು 'ಆಪ' ಮತ್ತು 'ನಪ್ತೃ' ಬೇರೆಯಾದಲ್ಲಿ ಆಪವು: ದೇವಮಾತಾ= ದ್ಯಾಮವ್ವ ದುರ್ಗಿಯ ಅಕ್ಕ, ಈ ನಾಮ ರೂಪಿ ಇರಬಲ್ಲದು; 'ಆಪ'ವು ಕೇವಲ 'ಮಾತೆ'ಯ ರೂಪವಾದಾಗ ನಪ್ತೃವು ಸಂಹಾರಕ ಶಕ್ತಿಯಾಗಬೇಕಾಗುತ್ತದೆ. ಜಗದಂಬೆ ಕುಮಾರ: ರುದ್ರ: ರುದ್ರ-ಕುಮಾರ: ಮುರುಗ. ಸುಬ್ರಹ್ಮಣ್ಯ (:ಸರ್ಪ); ಎಲ್ಲಮ್ಮ ಕುಮಾರ: ಪರಶುಧರ ಮೃತ್ಯುದೇವತೆ. ಮೇರಿ: ಮಾತೃದೈವತ ಕುಮಾರ ಶಿಲುಬೆಗೆ ಮತ್ತು ಮೃತ್ಯು ಪ್ರತಿಮೆ ಬೇರೆಯಲ್ಲ!

ನಿನ್ನೆ-ಇಂದು-ನಾಳೆಗಳ ದಿಕ್ಕಾಲ-ಪರಿಸರದ ಸಂದರ್ಭದಿಂದ ಮಾನವ ಸಂಸ್ಕೃತಿಯು ಪ್ರವಹಿಸುತ್ತ ಬಂದಿರುವ ಕ್ರಮವಿದು. ಇದು ನಿಜವಿದ್ದರೆ, ಆ ನಿನ್ನೆಗಳೊಳಗಿನ ಯಾವ ಯಾವ ಅಂಶಗಳು, ಆ ಬಳಿಕಿನ ಇಂದುಗಳಲ್ಲಿ ಯಾವ ಯಾವ ಕ್ರಮದಿಂದ ಬಂದವು ಎಂಬುದು ಸಂಶೋಧನಾರ್ಹ ವಿಷಯವಾಗುತ್ತದೆ ಅಥವಾ ಅನೇಕ ನಿನ್ನೆಗಳ ಹಿಂದೆ-ದ್ವಿಪಾದ ಪಶು ಮಾನವನು, ಇನ್ನುಳಿದ ಪಶುವರ್ಗದ ಪರಿಸರದಲ್ಲೆ, ಕಾಡಿನಲ್ಲಿ ಸಂಗಾತಿಯಾಗಿ ಜೀವಿಸುತ್ತಿದ್ದನು ಎಂಬುದು ನಿಜವಿದ್ದರೆ-ಆ ಹಂತದ ಜೀವನ ರೀತಿಯ ಏನಾದರೂ ಅಂಶಗಳು ಈವರೆಗೂ ಉಳಿದು ಬಂದಿರುವಂತಹವು ಉಂಟೆ? ಬೇರೆ ಬೇರೆ ಮಾನವ ಪಂಗಡಗಳಲ್ಲಿ ಇದಕ್ಕೆ ಆಧಾರವಿದೆಯೆ? ಇಲ್ಲವೆ ಈ ಪ್ರಶ್ನೆಯ ರೂಪವು ಹೀಗೂ ಆಗಬಹುದು: ಇಂದು ಇರುವ ಆಚಾರ-ವಿಚಾರದ ಆಕೃತಿಗಳಲ್ಲಿ, ಆ ಅನೇಕಾನೇಕ ನಿನ್ನೆಗಳ ತೀರ ಹಿಂದಿನ-ಅತಿಪುರಾತನ ಆಕೃತಿಯನ್ನು ಹೋಲುವ ಭಾಗವು ಏನೊಂದು ಉಂಟೊ? ಇದನ್ನು ನಿಷ್ಕರ್ಷಿಸಿಕೊಳ್ಳಲು ಸಾಧ್ಯವೆ? ಭಾರತೀಯ ಸಂಸ್ಕೃತಿಯಲ್ಲಿ, ಪುರಾತನ ಆಪ:ರಸ ಸಾಂಪ್ರದಾಯಕ್ಕೆ ಸಂಬಂಧಪಟ್ಟ ಜೀವನ ಆಕೃತಿ ಹಾಗೂ ಇಂದಿನ ಅವಶಿಷ್ಟ ಆಚಾರಗಳ ಆಕೃತಿ ಇವೆರಡೂ ಒಂದನ್ನೊಂದು ಹೋಲುತ್ತಿದ್ದು ಇದುವೆ ಅತಿಪುರಾತನ 'ನಿನ್ನೆ'ಯ ಜೀವನ ರೀತಿಯನ್ನು ಗಮನಕ್ಕೆ ತಂದುಕೊಡಬಲ್ಲುದಾಗಿದೆ ಎಂಬುದು ನಾಗಪ್ರತಿಮಾರಾಧನೆಯ ಸಮೀಕ್ಷೆಯಲ್ಲಿ ಅರಿಕೆಗೆ ಬಂದುದುಂಟು. ಈಜಿಪ್ಟ್-ಗ್ರೀಕಿನತ್ತಣೆನ ಪವಾಡ ಕಥೆಗಳಿಂದ ಇದಕ್ಕೆ ಪುಷ್ಟಿ ದೊರೆಯುತ್ತಿರುವುದನ್ನು ಈಗಾಗಲೆ ವಿವರಿಸಿ ಆಗಿದೆ:

ಯುರೋಪ್ ಖಂಡದ ಭಾಗವಾಗಿರುವ ಗ್ರೀಕ್ ದೇಶದೊಡನೆ ಸಾಂಸ್ಕೃತಿಕ ಸಂಬಂಧವಿದ್ದ ಈಜಿಪ್ಟ್-ಅರೇಬಿಯಾ-ಇರಾಕ್‌ಗಳ ವರೆಗೆ ಆಪ: ರಸ ಸಂಪ್ರದಾಯಕ್ಕೆ ಸಂಬಂಧಪಟ್ಟ ಕಥೆಗಳಿವೆ. ಗ್ರೀಸಿನ ಪವಾಡ ಕಥೆಗಳಲ್ಲಿ ಇವುಗಳ ಪ್ರಭಾವವಿದ್ದು, ಈ ಕಥೆಗಳ ಬಾಹ್ಯ ಶಬ್ದಪ್ರತಿಮೆ ಭಿನ್ನವಾಗಿ ತೋರಿದರೂ ಆಂತರಿಕ ವೈಚಾರಿಕ ಆಕೃತಿ, ಭಾರತೀಯ ಆಪಃ ರಸ ಪಂಥೀಯ ವೈಚಾರಿಕ ಆಕೃತಿಯನ್ನೇ ಹೋಲುತ್ತಿರುವುದರ ವಿವರವು ಹಿಂದೆ ಬಂದಿದೆ. ಕ್ರೈಸ್ತಪಂಥವು ಪಡೆದ ಆಚಾರ-ವಿಚಾರಗಳ ಆ-ಕೃತಿಗೆ, ಅದು ಹುಟ್ಟಿ-ಬೆಳೆಯತೊಡಗಿದ ಪರಿಸರದೊಳಗಿನ ನಿನ್ನೆಗಳ ಪ್ರಭಾವವು ತಟ್ಟದೆಯೆ ಅದು ನಿರ್ಲಿಪ್ತ ರೀತಿಯಲ್ಲಿ ತನ್ನದೆ ಆದ ಆಕೃತಿಯನ್ನು ನಿರ್ಮಿಸಿಕೊಂಡಿದೆ, ಎಂದು ಎನ್ನಲಾದೀತೆ? ಕ್ರೈಸ್ತನಿಗಿಂತ ಮುಂಚಿನ 'ನಿನ್ನೆ'ಯಲ್ಲಿ ಪ್ರಭಾವಶಾಲಿಯಾಗಿದ್ದ ಆಚಾರ-ವಿಚಾರಗಳು, ಸಂಸ್ಕಾರಗಳೇ ಏಸುವಿನ ಜೀವನ ರೀತಿಗೂ ವಿಚಾರಕ್ಕೂ ಪ್ರೇರಕವಾಗಿರಬೇಕಷ್ಟೆ? ಈ ಕಾರಣದಿಂದಾಗಿ ಭಾರತೀಯ ಹಾಗೂ ಇರಾಣದ ಅತಿ ಪುರಾತನ 'ಅಪಾಂ-ನಪ್ತೃ' ಪ್ರತಿಮಾ ಸಂಕೇತವನ್ನೇ ಹೋಲುವ 'ಕುಮಾರಿ ಮಾತೆ-ಉಡಿಯಲ್ಲಿ ಕಂದ' ಈ ವ್ಹರ್ಜಿನ್‌ಮೇರಿಯ ಪೂಜ್ಯ ಪ್ರತಿಮೆ, ಅಲ್ಲಿಯೂ ಕ್ರೈಸ್ತ ಪೂರ್ವ-ಸಾಕ್ರೆಟಿಸ್-ಪೂರ್ವದ-ಆಚಾರ-ಸೂಚಕ ಸಾಂಕೇತಿಕ ಮಾಧ್ಯಮವೆ ಆಗಿದೆ. ಇವೆರಡರೊಳಗಿನ ಆಂತರಿಕ ಸಮಾನ ಆಕೃತಿ (Concept) ಇದನ್ನೆ ಸಾರುತ್ತದೆ. ಈ ಆಕೃತಿ: ಅರ್ಥ, ದೇಶ ಕಾಲಾಧಿಷ್ಠಿತವಾದ ಸತ್ಯಸೂಚಕವಾಗಿರುತ್ತದೆ. ಕುಮಾರಿಯ ತಾಯ್ತನದ ಪ್ರತಿಮೆ, ಈ ಮಾಧ್ಯಮ. ಇದು ತೀರ ಆರಂಭದಲ್ಲಿ ಸಾಕ್ಷಾತ್ ಜೀವನದ ಅಂದಿನ ಏನೊಂದು 'ಸಮಯದ' (: ಆಚಾರದ) ಚಿತ್ರವೇ ಆಗಿದ್ದರೂ, ಈ ಶಬ್ದ ಪ್ರತಿಮೆಯು ಒಳಗೊಳ್ಳುವ ಸಾರ್ವಕಾಲಿಕ ಸಾಂಕೇತಿಕ ಸತ್ಯಾಂಶದ ಮೂಲಕ, ಅದು ಕೇವಲ ನಿಸರ್ಗದೊಡನೆ ಬದ್ಧ ಒಂದೇ ಅರ್ಥವುಳ್ಳುದಾಗಿರದೆ ಶಾಶ್ವತ ಸತ್ಯಸೂಚಕ ಸಂಕೇತವೂ ಆಗುತ್ತದೆ!

ಟಿಪ್ಪಣಿಗಳು

೧. *ಋಗ್ವೇದ ಸಂಹಿತೆ* X.೭೧.೨

೨. *ಅದೇ* X. ೭೨.೬

ಭಾಷಿಕ: 'ಮಾಧ್ಯಮ'ದ ಅಸುರತ್ವ

'ಮಾಧ್ಯಮಕ್ಕೆ ಮಿಕ್ಕಿ ಅರ್ಥವೇ ಇಲ್ಲ,' ಎಂದು ನಂಬುವಲ್ಲಿ ಮಾಧ್ಯಮ: ಪ್ರತಿಮೆ 'ಸಾಂಕೇತಿಕ' ಎಂಬ ಮಾತನ್ನು ಮರೆತಂತೆ ಅಥವಾ ಕಡೆಗಣಿಸಿದಂತೆ ಆಗುತ್ತದೆ. ಮಾಧ್ಯಮ: ಪ್ರತಿಮೆಯು 'ಅರುಂಧತೀ ನ್ಯಾಯದಂತೆ' ಅರ್ಥದ ಕೇವಲ ದಿಕ್ ಸೂಚಕವೆ ಹೊರತು, ಪ್ರತಿಮೆಯೆ ಅರ್ಥವಲ್ಲ. ವ್ಯಕ್ತಿಯ (ಅಥವಾ ವಿಶ್ವಸ್ಥ) ಆಶಯ; ಈ ಆಶಯವು ದಿಕ್ಕಾಲದ ಸಂದರ್ಭದ ಜೀವನ ರೀತಿಯಲ್ಲಿ ಎಂದರೆ ಆ ಸಮಯ: ಆಚಾರ ವಿಚಾರಗಳ ಮೂಲಕ ಪಡೆವ ಅರ್ಥ; ಮತ್ತು ಈ ಅರ್ಥವು ಪಡೆವ ಆವಿಷ್ಕಾರ ಅಥವಾ ಅಭಿವ್ಯಕ್ತಿ. ಈ ಮೂವರಲ್ಲಿ ನಿತ್ಯ ಶಾಶ್ವತ ಸಂಬಂಧ ಉಂಟು. ಈ ನಿತ್ಯಸಂಬಂಧವು ದುರ್ಲಕ್ಷಿಸಲ್ಪಟ್ಟಲ್ಲಿ ಅಥವಾ ಲೆಕ್ಕಕ್ಕೆ ಸಿಗದಿರುವಾಗ ಅಲ್ಲಿ ಜಾದೂ-ಚಮತ್ಕಾರದಿಂದ ಸಂಭ್ರಮಕ್ಕೆ, ಮೋಡಿಯ ಮಾಟಕ್ಕೆ ಅವಕಾಶ ದೊರೆಯುತ್ತದೆ.

ಮಾತನಾಡುವವನ ಕಡೆಯಿಂದ ಆಶಯ→ಅರ್ಥ→ಅಭಿವ್ಯಕ್ತಿ : ಈ ಕ್ರಮವು ಇದ್ದರೂ ಅಭಿವ್ಯಕ್ತಿಯ ಅರ್ಥಗ್ರಹಣದ ಕಡೆಯಿಂದ ನೋಡುವಾಗ ಈ ಕ್ರಮವು ಬದಲಾಗುತ್ತದೆ. ಆಶಯ ಮತ್ತು ಅರ್ಥ ಇವೆರಡರ ನಡುವಣ ಸಂಬಂಧವು ಪ್ರತಿಮೆಯ ಮೂಲಕವೇ ಗೊತ್ತಾಗಬಲ್ಲದು. ಆದಕಾರಣ, ಅಭಿವ್ಯಕ್ತ ಅಥವಾ ಆವಿಷ್ಕಾರ ಪಡೆದ ಪ್ರತಿಮಾ ಇದು ಮಧ್ಯಸ್ಥ: ಮಾಧ್ಯಮವು ಆಯಿತು. 'ಆಶಯ' ಎಂಬುದು ಎಂದೆಂದಿಗೂ ಪೂರ್ಣವಾಗಿ ಲೆಕ್ಕಕ್ಕೆ ನಿಲುಕದ ವಿಷಯ! ಅರ್ಥ ಮತ್ತು ಈ ಅರ್ಥವು ಪಡೆದ ಆಕೃತಿ ಇವೆರಡರ ಸಂಬಂಧದಲ್ಲಿ ಪ್ರತೀತಿಗೆ ಬರುವ-ಅಥವಾ ಅರಿಕೆಯ ಅಳವಿಗೆ ಒಳಗಾಗುವ ಮಟ್ಟಿಗಿನ 'ಆ-ಶಯ'ವನ್ನು ಊಹಿಸಿಕೊಳ್ಳಲು ಶಕ್ಯವಾಗುತ್ತದೆ. ಭಾಷೆಯು ಮೈದಳೆದಿರುವ ಪ್ರಮುಖ ಉದ್ದೇಶವೇನು? ನೆಲೆಗೆ ನಿಲುಕದೆ ಗೂಢ-ಗಂಭೀರ ಆಗಿರುವ ವಿಶ್ವಸ್ಥ 'ಸರ್ವಾಶ್ಚರ್ಯಮಯ'ವಾದ ಆ-ಶಯವು ಅರ್ಥವಾಗದೆ, ಇದು ಅಡಿಗಡಿಗೂ ಮಾನವನ ಚಿಂತೆಗೆ ಕಾರಣವಾಗುತ್ತಿದೆ. ಪ್ರಳಯವೇ ತನ್ನನ್ನು ಎದುರಿಸಿದೆಯೊ? ಎಂಬ ಹಾಗೆ ಭಯೋತ್ಪಾದಕವಾಗಿರುವ ಈ ವಿಶ್ವಸ್ಥ ಆ-ಶಯವನ್ನು ಅರ್ಥಯಿಸಿಕೊಳ್ಳುವ ಪ್ರಯತ್ನಗಳ ಫಲವಾಗಿ 'ಭಾಷೆ' ಎಂಬ ಮಾಧ್ಯಮವು ಆಕಾರ ಪಡೆದಿದೆ.

ಮಾನವ ವ್ಯಕ್ತಿ ಅಥವಾ ವ್ಯಕ್ತಿ-ಸಮೂಹ ಮತ್ತು ಇವರನ್ನು ಎದುರಿಸಿದ್ದ-ಎದುರಿಸಿರುವ ವಿಶ್ವಸ್ಥ ವಾಸ್ತವ ಸತ್ಯ, ಅಥವಾ ಜೀವನದ ಮೂಲಕ ಪ್ರತೀತಿಗೆ ಬರುತ್ತಿರುವ 'ಗುಮ್ಮ'-ಗೂಢ-ಗಂಭೀರ' 'ದಿವ್ಯ'ಭಾವ ಇವೆರಡರ ನಡುವೆ 'ಮಧ್ಯಸ್ಥ': ಭಾಷೆ ಅಥವಾ ಶಬ್ದ-'ಪ್ರತಿಮಾ' ಉಂಟೆಂದೇ ಇಂದು ಮಾನವ ಪಂಗಡಗಳಿಗೆ ವಿಶ್ವಸ್ಥ ಆ-ಶಯದ ಕೆಲವೊಂದು ಆಳದ ವರೆಗಿನ 'ಅರ್ಥ' ಎಂಬುದು ಆಗಿದೆ. 'ಅರ್ಥ ಆಗುವುದು' ಎಂದರೇನು? ಯಾವುದೊಂದು ಘಟನೆ, ವಿಷಯ ಅಥವಾ ವಸ್ತುವಿನ ಅಂತರ್ ಬಾಹ್ಯ ರಚನೆ ಗೊತ್ತಾದಾಗ ಗೊತ್ತಾದಂತೆ ಎನಿಸಿದಾಗ, ಅದರ 'ಅರ್ಥವು ತಿಳಿಯಿತು' ಎಂಬ ಸಮಾಧಾನವು ಉಂಟಾಗುತ್ತದೆ. ಆದರೆ, ಗೊತ್ತಾದ ಅರಿಕೆಗೆ

ಬಂದ 'ಅರ್ಥ'ವು ಅಪೂರ್ಣವಿದೆ ಅಥವಾ ತಪ್ಪು ಇದೆ ಎಂಬ ಅನುಭವದೊಡನೆ ಮರಳಿ ಅ-ಸಮಾಧಾನ-ಅನಿಶ್ಚಿತತೆಯ ಭಾವನೆ ಚಿಂತೆ' ಹೆದರಿಕೆ ಇವು ಕ್ರಮವಾಗಿ ತಲೆಯೆತ್ತುತ್ತವೆ. ಹಿಂದೊಮ್ಮೆ ಮಾನವನನ್ನು ಎಲ್ಲ ದಿಕ್ಕುಗಳಿಂದಲೂ ಆವರಿಸಿದ್ದ ಘೋರ ಭಯಾವಹ ಗುಮ್ಮು: ಅಜ್ಞಾನದ ಕತ್ತಲೆ, ಭಾಷೆಯು ಮೈದೋರಿದ ಹಾಗೆ ಆ ಗುಮ್ಮು: ಆ ಕತ್ತಲೆ ಕಡಿಮೆಯಾಗುತ್ತ ಬಂದಿದೆ, ಎಂದು ಇದರ ಅರ್ಥವಾಗುತ್ತದೆ. ಭಾಷಾ ಪ್ರತಿಮೆಗಳ ಬೆಳಕು ಇಲ್ಲದಾಗ, ಹಗಲಿನಲ್ಲಿಯೂ, ಎಲ್ಲೆಲ್ಲೂ ಕತ್ತಲಿನ ಅನುಭವವು ಬರುವುದು.

ಕಾಡಿನಲ್ಲಿ 'ಮೃಗಾಣಾಂ ಚರಣೇ ಚರನ್' ಈ ಹಂತದಲ್ಲಿ ಜೀವನ ನಡೆಸುತಿದ್ದಾಗ ಸಂಭವಿಸಿದ ಏನೊ ಒಂದು ಆಕಸ್ಮಿಕ ಅಪಘಾತ (accidence accidentia)ದಿಂದಾಗಿ-ಇದು 'ನಾಗ' ಸಂಪರ್ಕವೇ ಇರಲಿಕ್ಕೆ ಬೇಕೆಂದು ಬಗೆಬಗೆಯಿಂದ ಗೊತ್ತಾಗುತ್ತದೆ. ಅಂದು, ತಲೆದೋರಿದ ಅರಿಮೆಯ 'ಮಿಣಕು' ದೀಪದೊಡನೆ ಭಾಷಿಕ ಪ್ರತಿಮಾ: ಮಾಧ್ಯಮವು ಆಕಾರ ಪಡೆಯತೊಡಗಿತು. ಭಾಷಿಕ ಶಬ್ದ-ಪ್ರತಿಮೆಗಳೇ ಇಲ್ಲದೆ ಮಾನವ ದೇಹದ ಗೂಡಿನೊಳಗಿನ ಅರಿಮೆಯ ಮಿಣುಮಿಣು ದೀಪವೂ ನಂದುವುದರ ಅನುಭವವನ್ನು ಈಗಲೂ ಸಹ ಪ್ರತಿಯೊಂದು ವ್ಯಕ್ತಿಯೂ, ಯಾವ ಕ್ಷಣದಲ್ಲಿಯೂ ಪಡೆಯಬಹುದು! ಶಬ್ದ-ಪ್ರತಿಮೆಯೊಳಗಿನ 'ಅರ್ಥ'ವು ಪ್ರಕಾಶ ಕಿರಣ ರೂಪದ್ದಿರುವುದೇ, ಅಂತರಂಗದ ಪ್ರಜ್ಞೆಯ ಜ್ಯೋತಿಯು ಹೊತ್ತಿಕೊಳ್ಳುವ ಕಾರಣ. ಈ 'ಅರ್ಥ' ಧಾರಣೆಗೆ, ಮಾತ್ರಾಸ್ಪರ್ಶದ ಬಾಹ್ಯ ಆಕೃತಿ-ವಲಯದ ಪ್ರತಿಮೆಯೊಳಗಿನ ಗರ್ಭಿತಾರ್ಥದ ವಲಯ (Ideational pole) ಮತ್ತು ಮಾತ್ರಾಸ್ಪರ್ಶಕ್ಕೆ ಕಾರಣವಾಗುವ ಬಾಹ್ಯವಲಯ (Sensory pole), ಇವೆರಡೂ ಏಕಾತ್ಮಕವಾಗಿ ಬೆರೆತು ಬಿಡುವುದರಿಂದ ಈ ಮಾಧ್ಯಮ : ಪ್ರತಿಮೆಯಲ್ಲಿ ಒಂದನ್ನು ಇನ್ನೊಂದರಿಂದ ಬೇರ್ಪಡಿಸಿ ಗ್ರಹಿಸಿಕೊಳ್ಳುವುದು ತುಂಬ ಪ್ರಯತ್ನ ಸಾಧ್ಯವಾದ ವಿಷಯವಾಗಿದೆ. ಇದರಿಂದಾಗಿ, ಮಾಧ್ಯಮ : ಪ್ರತಿಮೆಯೇ, ತತ್ : ಏಕಂ, 'ಸತ್ಯ' ಎಂಬ ಶ್ರದ್ಧೆ ದೃಢಪಡಲು ಇಂಬು ದೊರೆಯಿತು; ದೊರೆತಿದೆ. ಏಕೆಂದರೆ, ಇಂದಿಗೂ ಈ ಬಗೆಯ ನಂಬುಗೆ ಅಥವಾ ಶ್ರದ್ಧೆಯು ಕೆಲವೊಂದು ವರ್ಗಗಳಲ್ಲಿ ಉಂಟು.

ಯಾವ ಬಗೆಯಲ್ಲಿಯೆ ಆಗಲಿ, 'ತತ್' ಇದು ಏಕಂ : ಸತ್ಯ ಆಗುವಲ್ಲಿ ಅಸುರತ್ವಕ್ಕೆ ಆಮಂತ್ರಣ ದೊರೆಯುವುದು. 'ಅಸುರತ್ವ' ಎಂದರೇನು? 'ತತ್ : ಏಕಂ : ಸತ್; 'ಏಕಂ ಸತ್ ಎಂದು ಋಗ್ವೇದದಲ್ಲಿಯೆ ಇದೆ. ಅಸುರತ್ವ ಈ ಸಂಕೇತಕ್ಕೆ ಇರುವ ಅರ್ಥವು ಏನೆಂಬುದು ಗೊತ್ತಾದಲ್ಲಿ, ಅದು ಹೆಚ್ಚು ಲೇಸು; ಅಸು+ರ ಈ ಶಬ್ದ ಸಂಕೇತದೊಳಗಿನ 'ಅಸು' ಎಂಬುದಕ್ಕೆ ಅರ್ಥ : 'ಪ್ರಾಣ, ಉಸಿರು, ವಾಯು. ಆದಕಾರಣ, ಅಸು-ರ ಎಂದರೆ ಪ್ರಾಣವನ್ನುಳ್ಳುದು 'ಪ್ರಾಣಿ' ಎಂದು ಅರ್ಥವಾಗಬೇಕು. ಆದರೆ, ಈ ಸಂಕೇತವು ಪಡೆದ ಅರ್ಥವು ಇವಕ್ಕೂ ತೀರ ಬೇರೆಯಾಗಿದೆ. 'ಧೀ' ವುಳ್ಳವ ಧೀ-ರ: ಧೀಮಂತ. ಹಾಗೆ 'ಅಸು-ರ' ಪ್ರತಿಮೆಯಲ್ಲಿ ಕೇವಲ 'ಪ್ರಾಣಿ'ಯ ಚಿತ್ರವಿಲ್ಲ. ವಿಶ್ವಸ್ಥ ಇಡೀ ಪ್ರಾಣಶಕ್ತಿ-ಪ್ರಪಂಚದೊಳಗಿನ ಏಕೈಕ ಜೀವಶಕ್ತಿ=ಪಶುಶಕ್ತಿ ಎಂಬ ಅರ್ಥದಲ್ಲಿ 'ಅಸುರ' ಪದವು ವ್ಯವಹರಿಸುತ್ತದೆ. ವಿಶ್ವಸ್ಥ ಏನೆಲ್ಲ ಪ್ರಾಣ-ಪಶು-ಶಕ್ತಿಯುಳ್ಳವನು ಅಸು-ರನು. ಇವನು ಯಾವ ಬೇಕಾದ ಸ್ವರೂಪದ (ಪ್ರಾಣ:) ಸಾಮರ್ಥ್ಯವುಳ್ಳವನು ಆಗುತ್ತಾನೆ; ಬೇಕಾದ ರೂಪ ಆಕಾರ ತಾಳ ಬಲ್ಲವನು ಆಗುತ್ತಾನೆ. ಈ ಅಸು-ರತ್ವವನ್ನೇ ಮಾಯಾಶಕ್ತಿ ಎಂದು ಕರೆಯಲಾಗುತ್ತದೆ. ಋಗ್ವೇದದಲ್ಲಿ 'ಅಸು-ರ' ಸಂಕೇತವು ನೇರವಾದ ಒಂದೇ ಬಗೆಯಲ್ಲಿ ಬಳಸಿದ್ದು ದೊರೆತರೆ ಈ ಸಂಹಿತೆಯ ರಚನಾ-ಕೌಶಲ ಶಿಲ್ಪಸೌಂದರ್ಯಕ್ಕೆ ಬಾಧೆ! ಪ್ರತಿಯೊಂದು ಪದ, ಪರಸ್ಪರ ವಿರೋಧಿ-ಅರ್ಥದ (ambivalent) ಪದವಾಗುವಂತೆ ಪ್ರಯೋಗ, ವರ್ಣನೆಗಳಿರುವುದು, ಈ ಸಂಹಿತೆಯ ಸೂಕ್ತ-ಸಂಯೋಜನೆಯ ವೈಶಿಷ್ಟ್ಯವಾಗಿದೆ! ಹದಕ್ಕೆ ಬಂದಿದೆಯೆ ಎಂದು, 'ಅಗುಳಿನಿಂದ ಅನ್ನದ ಪರೀಕ್ಷೆ' ಎಂಬ ಗಾದೆಯುಂಟು. ಹಾಗೆ ಋಗ್ವೇದದ 'ಹದ' ತಿಳಿಯಲು 'ಅಸುರ' ಈ ಸಂಕೇತದ ಸಮೀಕ್ಷೆಯೊಂದೇ ಸಾಕು. 'ಅಸು-ರ' ಎಂಬ ಪದವು, 'ಅ-ಸುರ', ಅ-ದೇವರು : ದೈತ್ಯರು ರಾಕ್ಷಸರು ಎಂಬ ಹಾಗೂ ಕಾಣಿಸಿಕೊಳ್ಳುತ್ತದೆ. ಅಲ್ಲದೆ, ಸರ್ವ ಸಮರ್ಥರು ಎಂಬರ್ಥದಲ್ಲಿ ಅಗ್ನಿ, ಇಂದ್ರ, ವರುಣಾದಿಗಳನ್ನು 'ಅಸು-ರ' ಎಂದಿದೆ. ಈ ದೈವತಗಳ ಪಂಕ್ತಿಯಿಂದ ದೂರವಿರಿಸಲಾದ ಯಜ್ಞದಲ್ಲಿ ಸೋಮಪಾನಕ್ಕೆ

ಅರ್ಹನಲ್ಲವೆಂದು ಬಗೆಯಲಾದ ರುದ್ರನಿಗೂ 'ಅಸುರ' ಎಂದುದುಂಟು! ಇಲ್ಲಿ 'ಅ-ಸುರ' ಎಂಬರ್ಥವೊ? ಆದರೆ, ಸೋಮಪಾನಕ್ಕೆ ಆಮಂತ್ರಿತನಾಗದ ರುದ್ರನು ಕೊನೆಗೆ 'ಸೋಮ' ರೂಪನೇ (ಉಮಯಾ ಸಹಿತಃ) ಎಂದು ಎಣಿಸಲ್ಪಟ್ಟಿದ್ದಾನೆ. ಋಗ್ವೇದದಲ್ಲಿಯೇ 'ಸೋಮಾ-ರುದ್ರಾ' ಎಂಬ ಸಂಯುಕ್ತ ದೇವತೆಯನ್ನು ಉದ್ದೇಶಿಸಿದ ಸೂಕ್ತವುಂಟು!

ಪ್ರಸ್ತುತ, ಮಾಧ್ಯಮ : ಪ್ರತಿಮೆಯ ವಿಚಾರ; ಸುತ್ತ ಮುತ್ತಲೂ ಏನು ಇದೆ-ಏನು ನಡೆದಿದೆ? ಇದಾವುದು ಗೊತ್ತಾಗದೆ ಉಂಟಾಗುವ ಮನೋ ವಿಪ್ಲವದಿಂದ ತಮ್ಮನ್ನು ಆವರಿಸಿದ ಭೀತಿಯಿಂದ ಮುಕ್ತವಾಗಲು ಆ ಗುಮ್ಮನ ಅರ್ಥಮಾಡಿಕೊಳ್ಳುವುದಕ್ಕಾಗಿ ಆದ ಒದ್ದಾಟದಲ್ಲಿ ಏನೊ ಪ್ರತಿಮಾ : ಸಂಕೇತದ ಮೂಲಕ ಹೊಳೆದಂತೆ ಎನಿಸಿದ ಅರ್ಥದ ಶಬ್ದರೂಪ-ಮಾಧ್ಯಮವೆ ಭಾಷೆಯಾಯಿತು. ಇದು ನಿಜವಿದ್ದರೆ, ಕೈಗೆ ಎಟಕದ ಈ ಭಾಷಾ-ಮಾಧ್ಯಮವನ್ನು ಮರಳಿ ನಿರುಪಯುಕ್ತಗೊಳಿಸುವ, ತತ್ : ಏಕಂ ಇದೇ ಸತ್ಯ ಎಂಬ ಹಾಗಿನ ಸಂ-ಭ್ರಾಮಕ ವರ್ಣನೆಗಳ 'ಮಾಧ್ಯಮ' ವನ್ನಾಗಿ ಮಾಡಿಕೊಳ್ಳುವುದು-ಮಾಡಿಕೊಂಡುದು ಎಷ್ಟರ ಮಟ್ಟಿಗೆ ಪ್ರಶಸ್ತ? ಎಂಬುದರ ಕೂಲಂಕಷ ವಿಚಾರವಾಗುವ ಆವಶ್ಯಕತೆ ಉಂಟಾಗಿದೆ. ಅಗ್ನಿಯ ಸರ್ವಭಕ್ಷತ್ವವನ್ನು ಅರಿತು, ಅದರೊಳಗಿನ ಮೃತ್ಯುರೂಪ ಕ್ರವ್ಯಾದ ಅಗ್ನಿಯನ್ನು-ಹೆಣದಿನಿಯನ್ನು ಸುಡುಗಾಡಿಗೇ ಸೀಮಿತವಾಗಿ ಇರಿಸಿದ್ದುದರಲ್ಲಿ ಒಂದು ವ್ಯವಸ್ಥೆಯೂ ಉಂಟು. ವಿಶ್ವಸ್ಥ ವಾಸ್ತವ ಸತ್ಯದಲ್ಲಿ-ಆ ಸಮಗ್ರ ಅದಿತಿ ಸ್ವರೂಪದಲ್ಲಿ, ಜೀವನ ಪ್ರೇರಕ, ಪೋಷಕ ಅಂಶಗಳನ್ನು ಆಯ್ದುಕೊಂಡು, ಮಾರಕ-ಸಂಹಾರಕ ಅಂಶಗಳನ್ನು ಬೇರ್ಪಡಿಸಿ ದೂರವಿರಿಸುವ ವಿವೇಕೋದಯವಾದುದಕ್ಕೆ, ಹವ್ಯವಾಹನ ಹಾಗು ಕ್ರವ್ಯಾದ ಎಂದು ಅಗ್ನಿಯಲ್ಲಿ ಈ ಭಿನ್ನ ನಿಲುಮೆಗಳನ್ನು ಗುರುತಿಸಿ ಬೇರ್ಪಡಿಸುವ ಮಾಧ್ಯಮ: ಪ್ರತಿಮೆಗಳೇ ಸಾಕ್ಷಿ. ಆದರೆ, ಈ ವ್ಯವಸ್ಥೆ: ಅರ್ಥ: ಋತ-ಸತ್ಯದರ್ಶಕ ಮಾಧ್ಯಮವನ್ನು, 'ತತ್:' ಏಕಂ : ಸತ್ ಈ ಅಸು-ರತ್ವದ ದರ್ಶನ ಮಾಡಿಸುವದಕ್ಕಾಗಿ ಈ ಸಂಕಲನಕಾರನು ದುಡಿಸಿಕೊಂಡಿರುವುದರ ಹಿಂದಿನ ಹೇತುವು ಯಾವುದು? ಇದನ್ನು ಮಾಡಿದ್ದುದರಲ್ಲಿಯೂ ಮಾಟಗಾರಿಕೆಯ ತಂತ್ರವಿದೆ. ಏಕೆಂದರೆ, ಇವೆಲ್ಲ ದ್ವ್ಯರ್ಥೀ ಭಾಷೆಯ ಪ್ರಯೋಗಗಳಾಗಿವೆ. ಈ ಮಾಧ್ಯಮ : ಪ್ರತಿಮೆ, ಒಂದು ನಿಲುಮೆಯಲ್ಲಿ ಸಾಧುವಾಗಿ ಕಂಡರೂ, ಇದು ಸೋಗು, ಎಂಬುದನ್ನು ಆ ಪ್ರತಿಮೆಯ ಇಬ್ಬಗೆಯ ಇನ್ನಾಲಗೆಯ ಅರ್ಥ, ಆ ಮಾತೇ ಬಹಿರಂಗಪಡಿಸುತ್ತವೆ!

ಮಂಗಲಧಾಮ 'ಜಾತವೇದ,' 'ದ್ರವಿಣೋದಾ' ಅಗ್ನಿಯ ಹವ್ಯವಾಹನ ಸ್ವರೂಪದ ವರ್ಣನೆಯಲ್ಲಿಯೆ 'ತ್ವಂ ಅಗ್ನೇ ಅದಿತಿಃ ದೇವಃ' ಎಂದುದುಂಟು. ಅದಿತಿ: ಸಮಗ್ರ-ಅವಿಚ್ಛಿನ್ನ ರೂಪ-ಆಕೃತಿ ಸೂಚಕ ಸಂಕೇತ, ಎಂಬುದು ವಾದಾತೀತವಿದೆ. ಆದಕಾರಣ, ಇಲ್ಲಿ ಅಗ್ನಿಯ ಉಭಯ ರೂಪಗಳೂ ಅಭಿಪ್ರೇತವಾಗಿರುತ್ತವೆ. ಕೌಟುಂಬಿಕ ಉನ್ನತಿಗಾಗಿ ಸಮಾಜ ಧಾರಣೆಗಾಗಿ ಪ್ರಾರ್ಥಿಸಲಾಗುವ ಮಾಧ್ಯಮ : ಪ್ರತಿಮೆ ಗೃಹ್ಯಾಗ್ನಿ. ಇದು ಹವ್ಯವಾಹನ ರೂಪವೇ ಇರಲಿಕ್ಕೆ ಬೇಕು. ಈ ಸಂದರ್ಭದಲ್ಲಿ ಕ್ರವ್ಯಾದ ರೂಪದ ಸಂದೇಹಕ್ಕೂ ಅವಕಾಶವಿರ ಕೂಡದು. ಇಂತಹ ಎಡೆಯಲ್ಲಿ, ಮಾತೃತ್ವ ಹಾಗೂ ಮೃತ್ಯು ಈ ಇಮ್ಮೊಗದ 'ಅದಿತಿ' ಸ್ವರೂಪನು ನೀನು, ಎಂದು ಅಗ್ನಿಗೆ ಹೇಳುವ ಈ ಕವಿ ನಿರ್ಬುದ್ಧನಿರುವನೆನ್ನುವದೊ ಅಥವಾ ಮೋಡಿಕಾರನಿರುವನೆನ್ನುವದೋ? ಏಕೆಂದರೆ ಹಾವು, ನೀರೊಳಗಿನ ಅಗ್ನಿಯು ಇಲ್ಲಿ ಅಭಿಪ್ರೇತವಿಲ್ಲ, ಎಂದು ಬಗೆಯಲಿಕ್ಕೆ ಆಗುವದಿಲ್ಲ; ಸಾರ್ಪರಾಜ್ಞಿಯು ಸೂರ್ಯನನ್ನು ಆವರಿಸಿ ಅಹಿಜಿತ್ ಇಂದ್ರನ ತೇಜೋವಧೆಯನ್ನು, ದ್ವ್ಯರ್ಥೀ ಶಬ್ದ ಪ್ರತಿಮೆಗಳಿಂದ ವರ್ಣಿಸುವ ಸೂಕ್ತಗಳು ಕೊನೆಗೆ ಬರುವ ಈ ಸಂಹಿತಾ ರಚನಾ ತಂತ್ರವನ್ನು ಇಡಿಯಾಗಿ ಲೆಕ್ಕಕ್ಕೆ ಹಿಡಿಯುವ ಆವಶ್ಯಕತೆಯಿದೆ.

ಅಗ್ನಿಗೆ 'ಅದಿತಿ' ಎಂದುದರ ಜೊತೆಗೆ, 'ವಿಪಶ್ಚಿತಾಂ ಅಸುರಃ' ಎಂದುದೂ ಉಂಟು. ಅದೇ ಮಂಡಲದಲ್ಲಿ[೨] ಇನ್ನೊಂದೆಡೆಯಲ್ಲಿ 'ಸಮ್ರಾಜಃ, ಅಸುರಸ್ಯ ಪುಂಸ್ಯಃ'[೩] ಎಂದುದುಂಟು. ಇಲ್ಲಿ ಅಗ್ನಿಯ ಪುಂಸ್ಯ (:ವೀರ್ಯ)ದ ಅಸುರ ಶಕ್ತಿಯ ಉಲ್ಲೇಖವಿದೆ. ನಾಗಶಕ್ತಿ ಎಂದರೂ ಇದೆ! ಎಂದರೆ ಈ ಕವಿಗಳಿಗೆ ಅಗ್ನಿಯಲ್ಲಿಯೂ ಕಾಣುತ್ತಿರುವುದು

ಸರ್ಜಕ: ಸೃಜನ ಶಕ್ತಿಯೆ! ಈ ಹಿನ್ನೆಲೆಯಲ್ಲಿ ಈ ಅಭಿಪ್ರಾಯದ ಅರ್ಥವನ್ನೇ ಧ್ವನಿತಪಡಿಸುವ ಅಗ್ನಿಯ ಧೂಮ-ಸ್ತಂಭದ ಈ ಉಲ್ಲೇಖವು ಅರ್ಥ ಪಡೆಯುತ್ತದೆ: ಉದ್ದಕ್ಕೆ ಮೇಟ-ಗಣೆಯಂತೆ ನಿಂತಿರುವ ಈ ಅಗ್ನಿ ಧೂಮವುದ್ಯು (ಲೋಕದ) ಮೇಲೆ ಇದೆ.[೪] ಇದು ಸೌಂದರ್ಯೋಪಾಸಕ ವಾಮದೇವನ ದರ್ಶನ! ಇದರ ವಾಸ್ತವ್ಯತೆಯನ್ನು ಮನಗಾಣಲು, ಛಾಂದೋಗ್ಯದಲ್ಲಿ ಮಿಥುನ-ಕ್ರಿಯೆಗೆ 'ವಾಮ ದೇವ್ಯಂ' ಎಂದಿರುವ ವರ್ಣನೆ ನೋಡಿರಿ.[೫] ಅಗ್ನಿಯ (ಹೊಗೆಯ) ಈ 'ಮೇತಾ,' ಈ ಮೊದಲು ಹೇಳಿರುವ 'ಸ್ಕಂಭ,' ವರುಣನ ವನ-ಸ್ತೂಪಗಳಿಗೆ ಹೋಲಿಸಿರಿ. ಅಥರ್ವ ವೇದದಲ್ಲಿ 'ಮೇಥೀ' ಎಂಬ ಪ್ರಯೋಗವಿರುವುದಾಗಿ ಮೋನಿಯರ್ ವಿಲಿಯಂಸ್ ಕೋಶದಿಂದ ಗೊತ್ತಾಗುತ್ತದೆ. ಕಂ-ನುಡಿಯ 'ಮೇಟಿ' ಕಣದೊಳಗಿನ ರಾಶಿಯ ಗಾಣದ ಗಣೆ : ಕಂಬ ಮೇತಾ-ಮೇಥೀ ಇವು ಕಂದಮಿಳ ಭಾಷೆಯವೊ? ಅಥವಾ ಮೇಢ್ರಕ್ಕೆ ಸಂಬಂಧಿಸಿದ್ದೊ? ತಿಳಿಯದು. ಒಟ್ಟಿನಲ್ಲಿ ಅಸು-ರತ್ವ ಏಕೈಕ ವೀರತ್ವ=ವೀರತ್ವ ಸೂಚಕವಿರುವುದು ನಿಶ್ಚಿತ. ಅಗ್ನಿಯನ್ನು 'ವಿಪಶ್ಚಿತಾಂ ಅಸುರಃ, ಎಂದಿರುವಲ್ಲಿ 'ವಿಪಶ್ಚಿತಾಂ' ಎಂಬ ಷಷ್ಠ್ಯಂತ ಪದವನ್ನು ಹೀಗೆಯೇ ಅರ್ಥಯಿಸಿ (ಸ್ತೋತ್ರಕಾರ)-ಧೀಮಂತರಿಗೆ, ಏನೆಲ್ಲ (ಬುದ್ಧಿವಂತಿಕೆಯ) ವೀರ್ಯ=ಅಸುರ ಸಾಮರ್ಥ್ಯವನ್ನೀ ಯುವವನು, ಎಂದು ಅರ್ಥ ಹೇಳಲಾಗಿದೆ. ಆದರೆ, ಸಪ್ತಮೀಕಾರಕಾರಾರ್ಥದಲ್ಲಿ, ಷಷ್ಠಿ ಇರುವುದೆಂದು ಗ್ರಹಿಸಿದಲ್ಲಿ, ಮೇಧಾವಿಗಳಲ್ಲಿ ಇವನಿಗೆ ಸಮಾನರು ಯಾರೂ ಇಲ್ಲ ಎಂಬ ಅರ್ಥವಾಗುತ್ತದೆ; 'ಜಾತವೇದ :' ಹುಟ್ಟಿನಿಂದಲೇ ಜ್ಞಾನಿ ಎಂಬವನು, ಅಸುರ : ಅನನ್ಯ ಸಾಧಾರಣ ಬುದ್ಧಿವಂತನು ಎಂಬಲ್ಲಿ ಇದುವೆ ಸಮರ್ಪಕವಾದ ಅರ್ಥವಾಗಲಿದೆ. ಈ ಕವಿ ಸಮಯವು, ಸವಿತೃವಿನ ಸ್ತೋತ್ರದಲ್ಲಿಯೂ ಪ್ರತ್ಯಯಕ್ಕೆ ಬರುತ್ತದೆ. ತತ್ ದೇವಸ್ಯ ಸವಿತುಃ ಅಸುರಸ್ಯ ಪ್ರೇಚೇತಸಃ'; ಸವಿತೃವು ಜ್ಞಾನಸ್ವರೂಪ ಸೂರ್ಯನು; ಇವನನ್ನು 'ಪ್ರ-ಚೇತಸಃ' ಪ್ರಕೃಷ್ಟ: ಅತಿಶಯ ತೇಜಸ್ವೀ ಜ್ಞಾನಿಃ' ಎಂಬಲ್ಲಿ ಔಚಿತ್ಯವೂ ಇದೆ. ಈ ಶಕ್ತಿಯು ಅತುಲನೀಯ ವಾಗಿದ್ದವನು ಎಂದು ಸೂಚಿಸಲು ಸವಿತೃವನ್ನು 'ಅಸುರ' ಎಂದ ಹಾಗಿದೆ. ಇಷ್ಟೆ ಅತಿಶಯೋಕ್ತಿ ಸಾಲದೆ ಈ ಏಕಾಂತಿಕ ಭಕ್ತನು ಸವಿತೃವನ್ನು 'ಮಹಾನ್‌ದೇವಃ' ಎಂದೂ ಹೊಗಳಿದ್ದಾನೆ.[೬] 'ಮಹತ್ ದೇವಾನಾಂ ಅಸುರತ್ವಂ ಏಕಮ್' ಎಂದರೆ ಇದು ತತ್ : ಸತ್ : ಏಕಂ ಆಯ್ತು!

ಅಗ್ನಿ, ಸವಿತೃ, ಇಂದ್ರಾದಿ ತಮ್ಮ ತಮ್ಮ ದೈವತಗಳನ್ನು ಈ ಬಗೆಯಲ್ಲಿ ತತ್: ಏಕಂ : ಸತ್ ಭೂಮಿಕೆಯ 'ಅಸು-ರ' : ಏಕಮೇವಾದ್ವಿತೀಯರನ್ನಾಗಿಸಿ ಈ ಸೂಕ್ತಕಾರರು ಸಾಧಿಸಿದ್ದೇನು? ನಿಜಕ್ಕೂ ಅಗ್ನಿ, ಸವಿತೃ, ಇಂದ್ರ ಈ ವರ್ಗದ ದೈವತಗಳು ತಾವೇ ಏಕಮೇವಾದ್ವಿತೀಯವೆಂದೆನ್ನಲು ಶಕ್ಯವಿಲ್ಲ. ಏಕೆಂದರೆ ಇವು ಋತ : ಸತ್ಯಾಧಿಷ್ಠಿತ ದೈವತಗಳು, ಮೂಲತಃ ಅಗ್ನಿಯನ್ನು 'ಋತಪ್ರಜಾತ' ಎಂದು ವರ್ಣಿಸಲಾಗಿದೆ. ಋತಃ ಅರ್ಥ=ನಿಯಮ=ಕಟ್ಟಳೆ. ಹವ್ಯವಾಹನ ಅಗ್ನಿ, ಕ್ರವ್ಯಾದ ಅಗ್ನಿ ಎಂಬ ಮೂಲಕಟ್ಟು, ಚೌಕಟ್ಟು ಆ-ಕೃತಿ ಭಗವಾಗದೆ ಅಥವಾ ಭಗ್ನಗೊಳಿಸದೆ ಈ ಅಗ್ನಿ, ಸವಿತೃ, ಇಂದ್ರ, ಸೂರ್ಯ, ಇವರನ್ನು 'ಅಸು-ರ' : ಅನನ್ಯ ಸಾಧಾರಣ ದೈವತಗಳು ಎನ್ನಲು ಅವಕಾಶವೇ ಇಲ್ಲ!

ಈ ವರ್ಣನೆಯಿಂದ ಮಾಧ್ಯಮ: ಪ್ರತಿಮೆ 'ಅಸು-ರ' ಸ್ವರೂಪದ್ದಾಗುತ್ತದೆ. ಅದು ಅ-ಸುರತ್ವರ ಆಚಾರ-ವಿಚಾರಗಳಿಗೆ ಪ್ರೇರಕವಾಗುವುದೂ ಅನಿವಾರ್ಯ, ಎಂಬುದು ಗಮನಕ್ಕೆ ಬರಬಲ್ಲುದು. ಬಾಳಿನ ಅರ್ಥ-ದರ್ಶನಕ್ಕಾಗಿ ಅವತರಿಸಿದ-ಅವತರಿಸುವ ಸಾಂಕೇತಿಕ ಪ್ರತಿಮಾ : ಮಾಧ್ಯಮವು, ಎರಡೂ ಬಾಯಿ ಯಿಂದಲೂ ಮಾತಾಡತೊಡಗಿದರೆ! ಅನ್ನವನ್ನು ಪಕ್ವವಾಗಿರಿಸುವುದಕ್ಕಾಗಿ, ಮನೆ ಬೆಳಕಿಗಾಗಿ ಆಮಂತ್ರಿತ ಪೂಜ್ಯ ಅಗ್ನಿ-ವಿದ್ಯುತ್ತು=ವೈದ್ಯುತಾಗ್ನಿಯನ್ನು, ಜೀವನ ವೃಕ್ಷದ ನಾಶದ ಸ್ವರೂಪದಲ್ಲಿ, ಎಂದರೆ ಅಸುರ ಶಕ್ತಿಯ ಸ್ವರೂಪದಲ್ಲೂ ಸ್ವಾಗತಿಸಿ ಆರಾಧಿಸುವುದು ಉಂಟೆ?

ಮಾಧ್ಯಮ : ಪ್ರತಿಮೆಯ ಮಾತ್ರಾಸ್ಪರ್ಶದ ವಲಯವು ಯಾವುದು? ಅದರ ಅಂತಸ್ಥ ಅರ್ಥ-ಗರ್ಭದ ಸ್ವರೂಪವೇನು? ಇದನ್ನು ವಿಶ್ವಸ್ಥ ಆಶಯದ ನಿನ್ನೆ ಇಂದುಗಳ ಸಂದರ್ಭದಿಂದ ಇಡಿಯಾಗಿ ಅರಿತುಕೊಂಡಲ್ಲಿ

ಅದರ ಯುಕ್ತಾಯುಕ್ತತೆಯು-ಬೆಲೆಯು ತನ್ನ ತಾನೇ ಗೊತ್ತಾಗುತ್ತದೆ. ಮಾಧ್ಯಮ: ಪ್ರತಿಮೆಯ ಅಸು-ರತ್ವ ಹಾಗೂ ತನ್ಮೂಲಕವಾಗಿ ಅದರಲ್ಲಿ ತಲೆದೋರುವ 'ಅ-ಸುರತ್ವ' ಇದರ ವಿಚಾರವೆ ಇಲ್ಲಿ ಪ್ರಸ್ತುತವಿದೆ. ಅ-ಸುರತ್ವ ಎಂಬುದು, ಸುರರಿಗೆ ಎಂದರೆ, ದೇವತೆಗಳಿಗೆ ಸಲ್ಲದ ಭೂತಾಟ : ಮಾಯಾವೀ ಪ್ರಕಾರ. ಈ ಮಾಯಾವಿ ಸಾಮರ್ಥ್ಯ-ಪ್ರಾಪ್ತಿಯೆ 'ಅಸು-ರತ್ವ' ಎಂದರೆ ಏಕಾಂತಿಕ ಪಾಶವೀ ಶಕ್ತಿ=ವೀರ್ಯಶಕ್ತಿ; ಇದನ್ನೇ ಪುರಾತನ ಪರಿಭಾಷೆಯಲ್ಲಿ ಹೇಳುವುದಾದರೆ ಸಮಗ್ರ-ಅದಿತಿ ಸ್ವರೂಪದ ಆಪ : ರಸ ಸಾಮರ್ಥ್ಯ=ನಾಗಶಕ್ತಿ. 'ಪತಂಗಂ ಅಕ್ತಂ ಅಸುರಸ್ಯ ಮಾಯಯಾ' ಎಂಬಲ್ಲಿ ಭಾಷಾ ಮಾಧ್ಯಮದ ಅಸು-ರತ್ವವೊ, ಅ-ಸುರತ್ವವೊ ಅಭಿಪ್ರೇತವಿರುವುದು ನಿಶ್ಚಿತ. ಯಾವ ಬೇಕಾದ ರೂಪ-ಆಕೃತಿಗೆ-ಎಂದರೆ ಅರ್ಥಕ್ಕೆ ತಿರುಗಬಲ್ಲ ಭಾಷಿಕ ಮಾಧ್ಯಮ, ಆಸುರೀ ಮಾಯಾವೀ ಅಲ್ಲದೆ ಮತ್ತೇನು? ಶಬ್ದ-ಪ್ರತಿಮೆಗಳಿಗೆ ಒಂದು ನಿಶ್ಚಿತಾರ್ಥವು ಇಲ್ಲದೆ, ಮಾಯಾವೀ ಯಾವ ಬೇಕಾದ ಅರ್ಥವೂ ಆಗುವ ಶಕ್ತಿಯು 'ಅಸುರತ್ವ' ಎಂದ ಹಾಗಾಯಿತು. ಒಂದು ಭಗವದ್ಗೀತೆಗೆ ಎಷ್ಟು ಅರ್ಥಗಳು! ವೇದದ ಪ್ರತಿಯೊಂದು ಸೂಕ್ತಕ್ಕೆ ಕನಿಷ್ಠ ೩-೪ ಅರ್ಥಗಳು ಇರುವುದಾಗಿ ಬಗೆಯಲಾಗುತ್ತದೆ! ಎಂದರೆ, ಇವು ಅಸುರತ್ವದ ಮಾಯಾ ಚಮತ್ಕಾರಯುಕ್ತ ಕೃತಿಗಳೆಂದು ಪರ್ಯಾಯದಿಂದ ಒಪ್ಪಿಕೊಂಡಂತಿದೆ.

ವಿಶ್ವವನ್ನು ವ್ಯಾಪಿಸಿ ತಾನೇ ತಾನಾಗಿ ಇರುವುದೆಂಬ ತತ್ : ಏಕಂ ಸ್ವರೂಪದ ದೈವತಗಳನ್ನು 'ಅಸು-ರ ಪ್ರತಿಮಾ-ಸಂಕೇತದಿಂದ ನಿರ್ದೇಶಿಸಿದ್ದುಂಟು. "ಮಹತ್ ದೇವಾನಾಂ ಅಸು-ರತ್ವಂ ಏಕಮ್" ಎಂಬ ಉದ್ಘೋಷದ ಪಲ್ಲವಿಯನ್ನುಳ್ಳ ಸುಂದರ ಸೂಕ್ತವೊಂದು ಮೂರನೆಯ ಮಂಡಲದಲ್ಲಿ ಇದೆ.[೬] ಇದು ಇಂದ್ರ-ಸವಿತೃಭಕ್ತನೆಂಬ ವಿಶ್ವಾಮಿತ್ರನ ಮನೆತನದ ಸೂಕ್ತ ಸಂಗ್ರಹ, ಎಂದು ಬಗೆಯಲಾಗುತ್ತದೆ! ಆದರೆ, ಮಹಾನ್ ದೇವರುಗಳು 'ಏಕಂ ಅಸುರತ್ವಂ' 'ಉಳ್ಳವರಾಗಿರುತ್ತಾರೆ, ಎಂಬ ಪಲ್ಲವಿಯಿಂದ ಋತ-ಬದ್ಧರು, ಋತ-ಗೋಪರು ಎಂಬ ದೈವತಗಳು 'ಋತ (:ಅರ್ಥ: ನಿಯಮ: ಕಟ್ಟಳೆ)' ಮೀರಿ ನಿಂತವರು ಆಗುತ್ತಿದ್ದಾರೆ! ನೀರು-ಆಪ: ರಸ: ಸರ್ಪಶಕ್ತಿ-ಎಲ್ಲೆ-ಕಟ್ಟು ಇಲ್ಲದೆ ಎತ್ತೆತ್ತಲೂ ಹರಿದಾಡಬಲ್ಲದು. ಆದರೆ, ಸವಿತೃ: ಸೂರ್ಯನೇ ಮನಬಂದಂತೆ ನಡೆದರೆ ಪ್ರಪಂಚದ ಗತಿಯೇನು? 'ವೃತ್ರ'ನನ್ನು ಎಂದರೆ ಏನೆಲ್ಲವನ್ನು ಆವರಿಸುವ ('ವೃ' ಆಖ್ಯಾತ) ಅಸು-ರನನ್ನು ಆಪ:ರಸ ಸ್ವರೂಪೀ 'ಅಹಿ': ನಾಗ ಎಂದಿರುವಲ್ಲಿ ಔಚಿತ್ಯವಿದೆ. ಆದರೆ, ಜೀವನದ ಏನೆಲ್ಲ ಕ್ಷೇತ್ರ ವ್ಯಾಪಿಸಿರುವ ಮೃತ್ಯು : ಆಪತ್ತುಗಳ ಸ್ವರೂಪಿಯಾದ ಕತ್ತಲೆಯ ಸಂಕೇತವಾದ ಅಹಿಯನ್ನು ಕೊಂದು ಪ್ರಪಂಚದಲ್ಲಿ ನಿಯಮ ಸುವ್ಯವಸ್ಥೆಯನ್ನು ಕಾಪಾಡತಕ್ಕವನೆಂಬ ಇಂದ್ರನು=ಶ್ರೇಷ್ಠನ ಆದರ್ಶ ಮಾಧ್ಯಮವು, ತಾನೇ ಏನೆಲ್ಲ ನಿಯಮ-ಬಂಧನಾ ತೀತನಾಗಬಯಸಿದರೆ? ಬೇಲಿ ಎದ್ದು ಹೊಲ ಮೇಯ್ದರೆ! ಋತ :ಸತ್ಯದ ಪ್ರತಿಮೆಯಾದ ಸವಿತೃ-ಸೂರ್ಯ ಸಂಕೇತಗಳನ್ನು ನೀರಲ್ಲಿ ನೂಕುವ, ಸೂರ್ಯನನ್ನು ಸರ್ಪ (: ನಾರಾಯಣ) ರೂಪವಾಗಿಸುವ ಈ ತಂತ್ರದ ಹಿಂದಿನ ಆಶಯವು ಯಾವುದು? ಈ ವಿಶ್ವದಲ್ಲಿ ಅರ್ಥವಿಲ್ಲ ವ್ಯವಸ್ಥೆಯಿಲ್ಲ; ಮೃತ್ಯುರೂಪೀ ಅಸುರ=ಸರ್ಪಶಕ್ತಿಯು ನುಂಗಿದಂತಿದೆ. ಈ ಪ್ರಪಂಚದ ಅಸ್ತಿತ್ವ! ಈ ಶ್ರದ್ಧೆಯನ್ನು ದೃಢಪಡಿಸಲು, ಭಾಷಾಮಾಧ್ಯಮದ ಈ ಋಗ್ವೇದ ಸಂಹಿತೆಯ ಪ್ರಯೋಜನ ಪಡೆವ ಪ್ರಯತ್ನವು ಸ್ಪಷ್ಟವಾಗಿ ಬಯಲಿಗೆ ಬರುತ್ತಿದೆ.

ಈ ಸಂದರ್ಭದಲ್ಲಿ, ಭಾಷಾ: ಮಾಧ್ಯಮ: ಪ್ರತಿಮೆಯಲ್ಲಿ ಅಸುರಮಾಯಾ ಶಕ್ತಿ ಕಾಣಿಸಿಕೊಳ್ಳುವ ಹಿನ್ನೆಲೆಯ ಸಂಶೋಧನವು ಅತ್ಯವಶ್ಯವಾಗುತ್ತದೆ. ಆದರೆ, ಇದಕ್ಕೂ ಮೊದಲು ಈ ವಿಶ್ವಸ್ಥ ವಾಸ್ತವ: 'ಸತ್ಯ' ಎಂಬುದು ಅರ್ಥಕ್ಕೆ ಎಟಕುತ್ತಿದೆಯೆ? ಎಟಕಿದೆಯೇ ಎಂಬ ಪ್ರಶ್ನೆಯೊಡನೆ ಈ ಪ್ರಪಂಚದಲ್ಲಿ ಅರ್ಥವೇ ಇಲ್ಲ-ಇದು ಅನರ್ಥಕಾರಿ, ಎಂಬ ಪಂಥವು, ಕೇವಲ ಕಾಲ್ಪನಿಕ ಎನ್ನಲಾದೀತೆ? ಎಂಬ ವಿಚಾರದ ಸಮೀಕ್ಷೆಯೂ ಆಗಲಿಕ್ಕೆ ಬೇಕು. ಏಕೆಂದರೆ, ಈ ಜಗತ್ತು ಏನೆಲ್ಲ ಆಕಸ್ಮಿಕ ಆಘಾತ, ಅಪಘಾತ-ಯೋಗಾಯೋಗಗಳ ಒತ್ತಡದಿಂದ ಮುಂದು ಮುಂದಕ್ಕೆ ತಳ್ಳಲ್ಪಡುತ್ತಿದೆ, ಇದರಲ್ಲಿ ಸುಸಂಗತಿ-ಸುಸಂಬದ್ಧತೆ ಎಲ್ಲಿದೆ? ಎಂಬುದೇ ನಾಗಾರಾಧನೆಯ ಭೂಮಿಕೆ. ನಾಗಶಕ್ತಿಯ ಪ್ರಭಾವದ ಸಮೀಕ್ಷೆಯಲ್ಲಿ ಈ ಭೂಮಿಕೆಯ ಇತಿಮಿತಿಗಳ ಇತ್ಯರ್ಥದ ಪ್ರಯತ್ನವೂ ಆಗಲೇಬೇಕಷ್ಟೆ?

ಟಿಪ್ಪಣಿಗಳು

೧. **ಋಗ್ವೇದ ಸಂಹಿತೆ** X. ೧೨೫. ಮೊದಲನೆಯ ಋಚೆಯ ಎರಡನೆ ಸಾಲು; ೧೮೯.೧ ಹಾಗೂ ಈ ಸೂಕ್ತದ ದೈವತವನ್ನು ಗಮನಿಸಿ

೨. ***ಅದೇ*** II. ೧.೧೧. ಮತ್ತು III. ೩. ೪

೩. ***ಅದೇ*** VII ೬.೧.

೪. 'ಊರ್ಧ್ವಂ ಅಶ್ರೇತ್ ಮೇತೇವ ಧೂಮಂದ್ಯಾಂ ಉಪಸ್ತಭ್ನಾಯತ್' ***ಋಗ್ವೇದ ಸಂಹಿತೆ*** IV. ೬. ೨

೫. ***ಛಾಂದೋಗ್ಯೋಪನಿಷತ್ತು*** ೨. ೧೩. ೧-೩

೬. ***ಋಗ್ವೇದ ಸಂಹಿತೆ*** IV. ೫೩.೧

ಜೀವನ ನಿಷ್ಠೆಯ ದ್ವಿ-ವಿಧ ಮಾದರಿ: ಪ್ರತಿಮೆಗಳು

ಋಗ್ವೇದದಲ್ಲಿ ಎರಡು ಬಗೆಯ 'ಅಗ್ನಿ'ಯ ಉಪಾಸಕ ಪಂಥಗಳು ಇದ್ದುದನ್ನು ಈಗಾಗಲೆ ವಿವರಿಸಲಾಗಿದೆ. ಭೌತ ಸಾಂಕೇತಿಕ ಅಗ್ನಿಯ ಮೂಲಕವಾಗಿ ಆ-ಕಾಶಸ್ಥ ತೇಜ ಪ್ರ-ಕಾಶ-ರೂಪ : ಜ್ಞಾನರೂಪ: ಶಕ್ತಿಯ ಉಪಾಸಕರು: ಋಷಿ ಎಂಬ ಸಂಕೇತದಿಂದ ಉಕ್ತವಾಗಿರುವ ಮಾದರಿ. ಇವರು ಕೌಟುಂಬಿಕರು 'ಸಂಗಚ್ಛಧ್ವಂ' ಎಂಬ ಸಾಮಾಜಿಕ ಪ್ರಜ್ಞೆಯ ಐಹಿಕ ಜೀವನದಲ್ಲಿ ಪುರುಷಾರ್ಥತ್ರಯ ಸಾಧಿಸುವ ಬಾಳಿನ ಗುರಿಯುಳ್ಳವರು. ಆಪ: ರಸಸ್ಥ ಸರ್ಜಕ 'ಅಗ್ನಿ' ಸರ್‌ಪ ಶಕ್ತಿಯನ್ನು ಸಾಕ್ಷಾತ್ಕರಿಸಿಕೊಂಡು 'ತತ್'ಮಯರಾಗಿ ಆ-ನಂದ ಲೋಕದಲ್ಲಿ ಮೈಮರೆವ-ಆಕಾಶ-ಗಮನಾದಿ ಪವಾಡ ಶಕ್ತಿಗಳಲ್ಲಿ ಆಸಕ್ತಿಯುಳ್ಳವರು. ಈ ಮತದವರು ಜೀವನದ ಬಗೆಗೆ ಜುಗುಪ್ಸೆಯುಂಟಾದ ನಿರ್-ವೇದಿಗಳು. ಇದು 'ತೀರ್ಥ'-ಕರ ವರ್ಗ; ಯತಿ-ಮುನಿ ಸಂಕೇತದಿಂದ ಉಕ್ತವಾಗಿರುವ ಮಾದರಿ.

ಮನು : ಮಾನವ ಸಂತಾನ

ಋಗ್ವೇದ ಸಂಹಿತೆಯ ಇಂದಿನ ಪಾಠವು ಮೂಲ ಅಗ್ನ್ಯಾರಾಧಕ ಸಂಪ್ರದಾಯಕ್ಕೆ ಪ್ರಾಧಾನ್ಯವಿತ್ತಂತೆ ಕಾಣುವ ಸಂಭ್ರಮಕಾರಿ ಶಿಲ್ಪ ಆಕೃತಿಯುಳ್ಳದ್ದಾಗಿದೆ. ಅಗ್ನ್ಯಾರಾಧಕ ಪಂಥೀಯ ಋತ: ಸತ್ಯದ ಭೂಮಿಕೆಯನ್ನು ತೀರ ಮುಳುಗಿಸಿ ಬಿಡದೇ ಹೊರವಲಯದ ಆಕೃತಿ ಅಗ್ನಿ-ಸೂರ್ಯ-ಇಂದ್ರ ಪಂಥೀಯ ಶೈಲಿಯದೇ ಕಂಡರೂ ಈ ವೇದದ ಸಂದೇಶದ ಸಾರವು: ಏಕಂ : ಸತ್ (ವಿಪ್ರಾಃ ಬಹುಧಾವದಂತಿ. ಎಂದರೆ ಇದು ಗೀತೆಯಂತೆಯೇ ವ್ಯಾಮಿಶ್ರ ಸಂಭ್ರಾಮಕ ನಾನಾರ್ಥಕ್ಕೆ ಆಸ್ಪದವಿರುವ ಶೈಲಿಯ ಆಕೃತಿಯಾಗಿದೆ ಎಂದು 'ಏಕಂ ಸಂತಂ ಬಹುಧಾಕಲ್ಪಯಂತಿ' ಎಂಬೀ ಘೋಷವಾಕ್ಯದಿಂದ ಸಿದ್ಧವಾಗುತ್ತಲೇ ಇದೆ.

ಆದರೆ, ಋಗ್ವೇದದಲ್ಲಿ ಋಷಿ-ಮುನಿ (ಯತಿ), ಅಗ್ನಿ-ಆಪ, ಐಹಿಕ ಜೀವನ-ಪರಮೇ ಪದೇ ಹೀಗೆ ಎರಡು ಭಿನ್ನ ವಿಚಾರಧಾರೆಗಳ ವಿಚಿತ್ರ ಸಂಭ್ರಾಮಕ ಹೆಣಿಕೆಯಿದೆ ಎಂಬ ಮಾತು ಪ್ರಾಜ್ಞರಿಂದ ಮನ್ನಣೆ ಪಡೆಯಬೇಕಾಗಿದೆ, ಎಂಬುದನ್ನು ಸ್ಪಷ್ಟಪಡಿಸುವುದು ಅವಶ್ಯವಿದೆ. ನಾಗ-ಪ್ರತಿಮೆಯ ಆ-ಮೂಲಾಗ್ರ ಸಮೀಕ್ಷೆಯ ಸಂದರ್ಭದಲ್ಲಿ, ಅರಿಕೆಗೆ ಬಂದಿರುವ ಈ ವ್ಯಾಮಿಶ್ರ ಶೈಲಿಯ ಅಸ್ತಿತ್ವವನ್ನು ದೃಢಪಡಿಸುತ್ತಿರುವ ಇನ್ನೂ ಒಂದು ಸಂಗತಿಯನ್ನು ಚಿಕಿತ್ಸುಷಿಗಳ ಪರಾಮರ್ಶೆಗಾಗಿ ನಿವೇದಿಸುವುದು ಅವಶ್ಯ ಎನಿಸುತ್ತಿದೆ. ಋಗ್ವೇದ ಸಂಕಲನಕಾರನಿಗೆ ಋಷಿ ಹಾಗು ಮುನಿ ಎಂಬ ಸ್ಥೂಲ ವರ್ಗೀಕರಣದಿಂದ ತೃಪ್ತಿಯಾಗದೆ, ಈ ಉಭಯವರ್ಗದ ಜೀವನ ನಿಷ್ಠೆಯನ್ನು ವೈಯಕ್ತಿಕ ಸ್ವರೂಪದ ಜೀವನ ರೀತಿಯ ಆಕೃತಿಯೆನಿಸುವಂತೆ, ಪ್ರಾತಿನಿಧಿಕ ಸ್ವರೂಪದ ಎರಡು

ವ್ಯಕ್ತಿನಾಮಗಳ ಉಲ್ಲೇಖಗಳನ್ನು-ಕಥಾಭಾಗಗಳನ್ನು ಅಲ್ಲಿ ಇಲ್ಲಿ ಸೂಚ್ಯವಾಗಿ ಸೇರಿಸಿಟ್ಟಿದ್ದಾನೆ. ಅವೇ 'ಮನು' ಮತ್ತು ಪುರೂರವಸ್.

ಮನು: ಮಾನವ-ವೈವಸ್ವತ: ಇದು ನಿಜಕ್ಕೂ ಕೇವಲ ಸಾಂಕೇತಿಕ :ರೂಪ ಐತಿಹಾಸಿಕ ಸ್ವರೂಪವು ತಿಲಮಾತ್ರವೂ ಇಲ್ಲ. ಆದರು, ದಿಕ್ಕಾಲದ ಸಂದರ್ಭದ ಸಂಭವಿಸಿದ ಒಂದು ವಿಶಿಷ್ಟ 'ವ್ಯಕ್ತಿ' ಎನ್ನುವ ಗ್ರಹಿಕೆಯಾದುದು ಕಾಣುತ್ತದೆ! ಇದೂ ಭಾಷಾ'ಪತಂಗ'ದ ಮಾಯಾ ನಿರ್ಮಾಣ ಶಕ್ತಿಯ ಒಂದು ಉತ್ತಮ ಉದಾಹರಣೆ. ಋಗ್ವೇದದ ಕವಿಗಳಲ್ಲಿ ಹಲವರು ಮನುವನ್ನು 'ಅಸ್ಮತ್ ಪಿತಾ' ಎಂದಿದ್ದಾರೆ.[೧] 'ಮನಃ ಪಿತಾ' ಎಂದಿದ್ದಾರೆ.[೨] 'ಮನುಪಿತಾ' ಎಂದುದುಂಟು.[೩] 'ಮನು'ವು ಎಂಬ ಸಂಕೇತ. ಏನೆಲ್ಲ 'ಮಾನವ'ರನ್ನು (ಮನಸ್ಸಿನಿಂದ-ದೇಹ ಮಾತ್ರದಿಂದಲ್ಲ ಜೀವಿಸುವವರನ್ನು) ಪ್ರತಿನಿಧೀಕರಿಸುತ್ತದೆ. ಮನುವು ವಿವಸ್ವಾನ್ (:ಸೂರ್ಯ) ಪುತ್ರನು, ಎಂಬಲ್ಲಿ ಈ ಪ್ರತಿಮೆಯ ಸಂಕೇತಾತ್ಮಕತೆಯು ನಿಃಸಂದಿಗ್ಧವಿದೆ. 'ವಿವಸ್ವತ' ಎಂದರೆ ಪ್ರಕಾಶವಂತ; ಸೂರ್ಯ-ಅಗ್ನಿಸ್ವರೂಪ ಪಿತನ ಪುತ್ರ ಮನು: ಮಾನವ. 'the ancestor of human race' ಎಂದು ವೈವಸ್ವತ ಹಾಗೂ ಮನು ಇಬ್ಬರ ಬಗೆಗೂ ಹೇಳಲಾಗುತ್ತದೆ.

ಇವು ಮಾನವನಲ್ಲಿ ವೈವಸ್ವತ-ತೇಜಸ್ಸಿನ ಅನುಭವವು ಬರುವುದು ಎಲ್ಲಿ? ಚಿತ್=ಚೇತನ; ಚಿಕೇತ=ಕೇತ ಮಣುಕು ದೀಪ, ಮನಸ್ಸಿನ ಹಣತೆಯಲ್ಲಿ ಪ್ರತೀತಿಗೆ ಬರುತ್ತಿರುವುದು; ಇವರು ದ್ವಿಪಾದ ಪಶುತ್ವದಿಂದ ಮನುವಂಶ ಕೇತುವಾಗುವ ದಾರಿಯಲ್ಲಿ ಹೊರಟಿರುವರೆಂದು ಬಗೆಯಬಹುದು. ಮನದ-ಶೀಲತೆ, ಚಿಂತನ ಶೀಲತೆಯಿಂದಾಗಿ, ಈ ಹಿಂದೊಮ್ಮೆ 'ಮೃಗಾಣಾಂ ಚರಣೇ ಚರನ್' ಹಂತದಲ್ಲಿದ್ದ ಈ 'ವೃಷಾ ಕಪಿ': ವಾ ನರ (ಅಥವಾಮನುಷ್ಯ) ಮನುಷ್ಯ ಕೋಟಿಯಲ್ಲಿ ಬಂದಿದ್ದಾನೆ. ಎಂದು ಈ 'ಮನು'-ಮಾನವ ಶಬ್ದಪ್ರತಿಮೆಯ ಮೂಲಕ ಜೀವನದ ಅರ್ಥವಾಗುತ್ತದೆ. ಇದಕ್ಕೆ ಪ್ರತಿಯಾಗಿ ಋಗ್ವೇದದಲ್ಲಿಯೆ "ಅಮೃತ ಬಾಂಧವಃ" ಎಂಬ ಸಾಂಕೇತಿಕ ಭಾಷೆಯಿಂದ ಏನೆಲ್ಲ 'ಅಪ್-ಜ' : ನಾರ-ನರವರ್ಗವನ್ನು ಸೂಚಿಸಲಾಗಿದೆ. ಅಪ್‌ಸ್ವರೂಪಿ ಅದಿತಿಯ ಸಂತಾನವೆಂದು.[೪] ಆಪೋ ವೈ ನರಸೂನವಃ' : ಇವರಲ್ಲಿ ದೇವಜನ (:ಸರ್ಪ), ಪುಣ್ಯಜನ (: ಯಕ್ಷ ಗಂಧರ್ವಾದಿ) ನರರು-ನಾರಕರು ಪ್ರಪಂಚದೊಳಗಿನ ಏನೆಲ್ಲ ಜೀವಜಂತುಗಳು ಒಳಗೊಳ್ಳುತ್ತಾರೆ.

'ಮನು' ಈ ಪ್ರತಿಮಾಸಂಕೇತವು ವೇದಕಾಲದ ತರುವಾಯವೂ ಕೆಲಕಾಲ ಪ್ರತಿಷ್ಠಿತವಿದ್ದಿತಾಗಿ ಕಾಣುತ್ತದೆ. ಈ ಮನು-ಮಾನವ ಪರಂಪರೆಗೆ ನಿನ್ನೆ→ಇಂದು→ನಾಳೆಗಳಲ್ಲಿ ಶ್ರದ್ಧೆಯಿದ್ದಿತೆಂಬುದನ್ನು ನಿದರ್ಶನಕ್ಕೆ ತರುವ 'ಸ್ಮೃತಿ'-ಸಂಪ್ರದಾಯ ಸ್ಮಾರ್ತ ಸಂಪ್ರದಾಯ. ಈ ಸಂಕೇತವು ಮೌಲಿಕ ಮಹತ್ವದ್ದಾಗಿದೆ. ಭಾರತೀಯ ಸಾಂಸ್ಕೃತಿಕ ರಚನೆಯೊಳಗಿನ ದುರ್ಲಕ್ಷಿತ ಒಂದು ಜೀವನ ರೀತಿಯ ಮೇಲೆ ಬೆಳಕು ಬೀರುತ್ತಿದೆ. 'ಸ್ಮಾರ್ತ'ರು ಯಾರು? ಈ ಪ್ರತಿಮೆಯಲ್ಲಿ ಒಳಗೊಂಡ ಜೀವನದ ವಾಸ್ತವಾಂಶವು ಯಾವುದು? ಇದೇ ಮರೆತು ಹೋಗಿದೆ. 'ಸ್ಮಾರ್ತ'ರು ಎಂದರೆ ಬ್ರಾಹ್ಮಣರೆಂಬುವರಲ್ಲಿ ವೀರ ವೈಷ್ಣವರಲ್ಲದವರು ಹೀಗೇನೋ ಒಂದು ಗ್ರಹಿಕೆಯಾಗಿದೆ!

ಸ್ಮೃತಿ>ಸ್ಮಾರ್ತರ ಸಂಕೇತದ ಅರ್ಥವು ಮಾಸಿ ವಿಕೃತವಾದುದಕ್ಕೆ ಮನು-ಮಾನವ ಪರಂಪರೆಯ ಭಾರತೀಯ ಶಾಖೆಯಲ್ಲಿ ಆದ ವ್ರತಸ್ಥ ಜೀವನ ರೀತಿಯೇ ಪ್ರಮುಖ ಕಾರಣ. 'ಸ್ಮೃತಿ' ಎಂದರೆ ನೆನಪು-ನೆನಹು. 'ನೆನಪು' ಎಂದರೇನು? ಸಂ-ಗತಿಗಳೊಳಗಿನ (ಕಾರ್ಯಕಾರಣ) ಸಂಬಂಧದ ಎಚ್ಚರ : ಅರಿವು. ಇದು ನಿನ್ನೆ ಇಂದುಗಳ ನಡುವಣ ಜೀವನ ಪ್ರವಾಹದೊಡನೆ ಸಂ-ಬದ್ಧವಿರುತ್ತದೆ. ಚಿಂತನ-ಮನನದಿಂದ ನಿನ್ನೆ ಇಂದುಗಳ ನಡುವಣ ಅರ್ಥವನ್ನು ಗ್ರಹಿಸಿಕೊಳ್ಳುವದಕ್ಕೆ ಸ್ಮೃತಿಯೆ ಆಧಾರ. ನಿನ್ನೆಗಳ ಅನುಭವದ ಬೆಳಕಿನಲ್ಲಿ ನಾಳೆಯ ಲೆಕ್ಕದಿಂದ ಇಂದನ್ನು ರೂಪಿಸುವಲ್ಲಿ ತತ್-ಪರತೆಯನ್ನು ವಹಿಸಲು ಮಾನವರಿಗೆ ಈ 'ಸ್ಮೃತಿ'ಯು ಪ್ರೇರಣೆಯನ್ನೀಯುವುದುಂಟು. 'ಸ್ಮೃತಿ'ಯನ್ನು 'ಮಾನವ ಧರ್ಮಶಾಸ್ತ್ರ' ಎಂದಿರುವುದರೊಳಗಿನ ಸ್ವಾರಸ್ಯವು, ಅರಿಕೆಗೆ ಬರಲು, ಒಂದು ವಿಶಿಷ್ಟ ಆ-ಕೃತಿಯ ಗ್ರಂಥದ ಅದೇ ನಾಮಸಂಕೇತದ ಮೂಲಕವಾಗಿ, ತುಂಬ ಆತಂಕವಾಗಿದೆ. 'ಮಾನವ-ಧರ್ಮಶಾಸ್ತ್ರ' ಎಂಬ ಗ್ರಂಥವು ಯಾವುದೆ ಒಂದು ಅಥವಾ ಕೆಲವೇ ಜಾತಿ ಮತಗಳ

ಏಳ್ಗೆಗೆ ಅನುಕೂಲವಾಗುವಂತೆ ರಚಿಸಲ್ಪಟ್ಟರೆ ಅದು ಕೆಲವೊಂದು ವರ್ಗದ ಸ್ವಾರ್ಥೀ ಶಿಷ್ಟರ-ಪ್ರತಿಷ್ಠಿತರ ಕುತಂತ್ರ, ಎಂದು ನಿಂದ್ಯಕೃತಿ ಎನಿಸಿದಲ್ಲಿ ತಪ್ಪೇನೂ ಇಲ್ಲ. ಆದರೆ, ಒಂದು ವಿಶಿಷ್ಟ ಆಕೃತಿಯ-ವಿಕೃತಿಯ ಸಲುವಾಗಿ ಇಡೀ 'ಸ್ಮೃತಿ' ಶಾಸ್ತ್ರವನ್ನೇ ತೆಗಳುವುದು-ತ್ಯಾಜ್ಯವೆನ್ನುವಲ್ಲಿ ಅನಾಚಾರ ಅವ್ಯಸ್ಥೆಯ ಆಸುರೀ ಕೃತಿಗಳಿಗೆ ಆಮಂತ್ರಣವಿತ್ತಂತೆಯೇ ಆಗಲಿದೆ. ಅಲ್ಲ, ಆಗಿ ಹೋಗಿದೆ. ನಮಗೆ ಇಚ್ಛೆ ಇಲ್ಲದಿದ್ದರೂ ವೇದಕಾಲದಿಂದ ತೊಡಗಿ ಇಳಿಗಾಲದ ದಾರಿಯಲ್ಲಿ ಹೊರಟ-ಪರಚಕ್ರಗಳನ್ನು ಸ್ವಾಗತಿಸಿದ-ಸಹಿಸಿಕೊಂಡು ಬಂದ ಭಾರತೀಯ ಸಾಮಾಜಿಕ ಇತಿಹಾಸವು ಇದನ್ನು ಸಾರುತ್ತಿದೆ. ಚೀನದೇಶದ ಜನತೆ ಪರಚಕ್ರ ಒಂದನ್ನು ಎಂದೂ ಸಹಿಸಿ ಸಹಕರಿಸಲಿಲ್ಲ. ಜಪಾನ್, ಪಕ್ಕದ ಅಫ್‌ಘಾನಿಸ್ತಾನ 'ನ-ಚಿಕೇತ' : 'ಸ್ಥಿತ' ಪ್ರಜ್ಞರಾಗಿ, ದಿಕ್ಕಾಲಾತೀತ ಅವಸ್ಥೆಯಲ್ಲಿ ತತ್-ಲೀನವಾಗಲು ಅಡ್ಡಬರುವ 'ಸ್ಮೃತಿ' ನಿನ್ನೆ ಇಂದುಗಳ ನೆನಹನ್ನು ದ್ವೇಷಿಸುವ-ತಿರಸ್ಕರಿಸುವ ಮೋಕ್ಷಾರ್ಥೀ ಭಾರತೀಯರ ಪಾಡು ಎಂತಹುದು ಆಗಿದೆ-ಆಗಬಲ್ಲುದು ಎಂಬುದನ್ನು ಇತಿಹಾಸವು ಹೇಳುತ್ತದೆ, ಕಿವಿಗೊಡುವ ಇಚ್ಛೆಯಿದ್ದರೆ.

ಭಾರತೀಯ ಸಾಂಸ್ಕೃತಿಕ ಪರಂಪರೆಗಳು ಬೆಳೆದುಬಂದ ಕ್ರಮವನ್ನು ಸಮೀಕ್ಷಿಸುವಾಗ ಅವುಗಳಲ್ಲಿ ಬುದ್ಧಿಪುರಸ್ಸರವಾಗಿಯೋ ಅಬುದ್ಧಿ ಪುರಸ್ಸರವಾಗಿಯೋ ಅಲ್ಲಲ್ಲಿ ತೀರ ವಿಸಂಗತ ಎರಡು ವಿಚಾರಧಾರೆಗಳ ಹೆಣಿಕೆಯು ಗಮನಕ್ಕೆ ಬರುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಪುರಾತನದಿಂದಲೇ 'ದ್ವಿ-ವಿಧಾ ನಿಷ್ಠಾ' ಜೀವನ ರೀತಿಗಳು ಇದ್ದುದನ್ನು ಗೀತೆ ಒಪ್ಪಿಕೊಳ್ಳುತ್ತದೆ. ಆ 'ಪುರಾಪ್ರೋಕ್ತಾ' ದ್ವಿವಿಧ ನಿಷ್ಠೆಗಳು ಋಗ್ವೇದದಲ್ಲೂ ದೊರೆಯುತ್ತವೆ. ಆದರೆ, ಇವು ಎರಡು ಭಿನ್ನ ಸ್ವರೂಪದ ಜೀವನ ನಿಷ್ಠೆಗಳು, ಎಂಬುದನ್ನು ಗಮನಿಸಿ ಈ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಅರ್ಥಯಿಸಿಕೊಳ್ಳಲು ಇನ್ನೂ ಪ್ರಯತ್ನಗಳೇ ಆಗಿಲ್ಲ. ಮನು-ಪರಂಪರೆಯನ್ನು ಕುರಿತು ವಿಚಾರಿಸುವಾಗ ಗೀತೆಯೊಳಗಿನ 'ಮಹರ್ಷಯಃ ಸಪ್ತ ಪೂರ್ವೇ ಚತ್ವಾರೋ ಮನವಃ ತಥಾ' ಎಂಬ ಈ ವಾಕ್ಯವನ್ನು ಸ್ಮರಿಸಿಕೊಳ್ಳುವುದು ಅವಶ್ಯವೇ ಇದೆ. ಗೀತೆಯ 'ಭಗವಂತ'ನು ಎಂದರೆ ವಿಷ್ಣುವು, ಈ ಹನ್ನೊಂದು (೭+೪) ಜನ 'ಮದ್ಭಾವಾಃ ಮಾನಸಾ ಜಾತಾಃ' ಎಂದು ಹೇಳುತ್ತಾನೆ! ವಿವಸ್ವಾನನ ಮಗ ತನ್ನ ಮಾನಸ ಪುತ್ರ ಎಂದು ಸಾಧಿಸುವಲ್ಲಿ ವಿಷ್ಣುವಿನ (ವೃತ್ರತ್ವವು) ಸರ್ವ ವ್ಯಾಪಕತ್ವದ : 'ಏಕಂ : ತತ್' ಎಂದರೆ ವಿಷ್ಣುವೆ: ಎಂದು ಪ್ರಸ್ತಾಪಿಸುವುದರ ಕಡೆಗಿನ ಪ್ರವೃತ್ತಿಯೂ ಬಯಲಿಗೆ ಬರುತ್ತಿದೆ! 'ವೃತ್ರತ್ವ'='ಅಸು-ರತ್ವ' ಎಂದು ಋಗ್ವೇದದ ಪುರಾತನ ಪರಿಭಾಷೆಯಲ್ಲಿ ಇದರ ಅರ್ಥ. ಮನುಗಳನ್ನು ನಾಲ್ವರನ್ನು, ಈ "ರಸೋಽಹಂ ಅಪ್ಸು" ಎಂಬ ಈ ದೈವತತ್ತ್ವವು, ನುಂಗಿತು! ಪ್ರಪಂಚದ ಸಮ-ಪಾತಳಿಯನ್ನು ನಿರ್ಮಿಸುವ ಈ ಸಾಮ್ಯವಾದೀ ತಂತ್ರದ ಪ್ರೇರಣೆಯ ಉಗಮಸ್ಥಾನವು ಭಾರತೀಯ ಪುರಾತನ ವೇದಾದಿ ಸಾಹಿತ್ಯದಲ್ಲಿಯೇ ಉಂಟು, ಎಂದು ಪ್ರತಿಪಾದಿಸುವ ಚಪಲವು ತಲೆದೋರುವಂತಿದೆ, ವಿವೇಕವು ಕಣ್ಣು ಮುಚ್ಚಿಕೊಂಡರೆ!

ಮನು ಪರಂಪರೆಯನ್ನು ಆಪಃರಸ ಸ್ವರೂಪಿಯಾಗಿಸುವ ಎಂದರೆ ಶೂನ್ಯಗೊಳಿಸುವ ಈ ಕ್ರಮದ ಇನ್ನು ಒಂದು ಬಗೆಯು, ಮಹಾಭಾರತದ ನಾರಾಯಣಾಖ್ಯಾನದಲ್ಲಿದೆ. ಅಲ್ಲಿ ನಾರಾಯಣನು 'ಸಪ್ತರ್ಷಯಃ' ಮತ್ತು ಒಬ್ಬ ಮನುವನ್ನು 'ಮಮ ಅಷ್ಟಪ್ರಕೃತಯಃ' ಎಂದುದುಂಟು! ನಾರಣನು-ಆಪಃರಸ ಸ್ವರೂಪಿಯಾಗಿರುವುದರಿಂದ ಈ ಸಪ್ತರ್ಷಿಗಳು ಆಪಃರಸಸ್ವರೂಪಿಗಳೇ ಆದರು. ಗೀತೆಯು 'ಚತ್ವಾರೋ ಮನವಃ' ಎಂದರೆ ಈ ಆಖ್ಯಾನದಲ್ಲಿ 'ಸ್ವಾಯಂಭುವೋ ಅಷ್ಟಮ' ಎಂದಿದೆ! ಇವನು ವಿವಸ್ವಾನನ ಮಗನೆಂಬ ಮಾನವನು ಅಲ್ಲ, ಎಂದು ಇಲ್ಲಿ ಬಯಲಿಗೆ ಬರುತ್ತದೆ! ವೈವಸ್ವತ ಮನುವಿನ ಪ್ರತಿಮೆಗೆ, ಪ್ರತಿಯಾಗಿ 'ಸ್ವಯಂ ಭೂ' ಇನ್ನೊಂದು ಪರಂಪರೆಯ ನಿರ್ದೇಶಕವಿರಬೇಕೆಂದು ತೋರುತ್ತದೆ. 'ಸ್ವಯಂ-ಭೂ' ಎಂಬುದು ಆಪಃರಸವೇ ನಾರಾಯಣ ಸಂಪ್ರದಾಯದಂತೆ! 'ಆಪೋ ವಾ ಇದಂ ಅಗ್ರೇ ಆಸೀತ್' ಎಂದರೆ ವೈವಸ್ವತ ಮನು ಪರಂಪರೆಯು ಅದೃಶ್ಯವಾಗಿ ಬೇರೆ ಮನ್ವಂತರ ಪ್ರಾರಂಭವಾದುದು, ಈ ಪ್ರತೀಕಾತ್ಮಕ ಸಂಕೇತಗಳ ತುಲನೆಯಲ್ಲಿ ಹೊರಡುತ್ತವೆ.

ಒಂದೇ ಆಕೃತಿಯ ಹಲವು ವಸ್ತುಗಳನ್ನು ಎದುರಿಗೆ ತಂದು, ಮೂಲವಸ್ತುವನ್ನು ಕಣ್ಮರೆಯಾಗಿಸುವ ಚಮತ್ಕಾರ ಮಾಡಿ ತೋರಿಸುವುದು ಮೋಡಿಕಾರ : ಮಾಟದ ಒಂದು ತಂತ್ರವಾಗಿದೆ. 'ಆದಿತ್ಯ' ಎಂಬ ಒಂದೇ

ನಾಮರೂಪದಲ್ಲಿ ಸೂರ್ಯ, ಇಂದ್ರ, ವರಣಾದಿಗಳನ್ನು ಅಡಗಿಸಿ ಕೊನೆಗೆ ವಿಷ್ಣುರೂಪೀ ಆದಿತ್ಯನಲ್ಲಿ ಎಲ್ಲರ ಸಮಾವೇಶವಾಗುವುದನ್ನು ಕಾಣಬಹುದು. 'ವರುಣೋ ಯಾದಸಾಂ ಅಹಮ್'! ಪ್ರಸ್ತುತ ೧೪ ಮನುಪ್ರತಿಮೆಗಳನ್ನು ಸೃಷ್ಟಿಸಿದ್ದಾಗಿದೆ. ನಿಜಕ್ಕೂ ಅವರು ಆಗಿಹೋದಂತೆ ಕಥೆ ನಿರ್ಮಿಸುವುದು! ವೈದೇಹಿ ಜನಕ! ಅವನ ಮಗಳು ಅಯೋನಿಜೆ (: ಸೀತೆ) ಇಂತಹ ಕಲ್ಪನಾರಮ್ಯ ಪಾತ್ರಗಳು ಕಾವ್ಯದಲ್ಲಿ ಚೆಂದ. ಉಪನಿಷತ್ತಿನಲ್ಲೂ ಇರಬೇಕೆ? ಮನುಗಳಲ್ಲಿ 'ತಾಮಸ'ಮನುವೂ ಆದನಂತೆ! ಐತಿಹಾಸಿಕ ಘಟನೆ ಎಂಬ ಸಂಭ್ರಮ ನಿರ್ಮಿತಿಯ ಈ ತಂತ್ರ : ಮೋಡಿ ಗಮನಾರ್ಹವಾಗಿದೆ. ಮಾಧ್ಯಮ : ಶಬ್ದ ಪ್ರತಿಮೆಯ ಮೂಲಕ ಪ್ರಪಂಚದೊಳಗಿನ ಏನೆಲ್ಲ ಘಟನೆಗಳು ಅರ್ಥಯುಕ್ತವಾಗುತ್ತವೆ. ಶಬ್ದ ಪ್ರತಿಮೆಯ ಕನ್ನಡಕದಿಂದ ಮಾತ್ರ ಕಾಣುವ ವಿಶ್ವವಿದು! 'ಏಕಂ : ಸತ್' ಎಂಬ ಬ್ರಹ್ಮ ಅಥವಾ ವಿಷ್ಣು ಇಲ್ಲವೆ ರುದ್ರ 'ತತ್' ಸ್ವರೂಪದ ಶಬ್ದಪ್ರತಿಮೆಯಲ್ಲಿ ಪ್ರಪಂಚವನ್ನೇ ಅಡಗಿಸಿ, ಕಾಣುತ್ತಿರುವ ವಿಶ್ವವು ಏನೆಲ್ಲವೂ 'ಮಾಯೆ', ಅನೃತ, ಅಥವಾ ಕ್ಷಣಿಕ ಎಂಬ ಸಂಭ್ರಮವನ್ನು ಉಂಟು ಮಾಡಲು ಪ್ರಯೋಗಿಸುತ್ತಿರುವ ಈ ಶಬ್ದಸಂಕೇತ ರಚನೆಯೊಳಗಿನ ಕವಡು ಬಯಲಿಗೆ ಬರುವುದು ಅವಶ್ಯವಿದೆ. ಈ ಗಾರುಡಿಗ ನಾಗ ಸಂಪ್ರದಾಯದ (ಭಾಷಿಕ) ಮಾಂತ್ರಿಕ ಮಾಯಾ ರಂಗಮಂಡಲದ ಸಂಮೋಹಕ ಶಕ್ತಿ ಎಲ್ಲಿದೆ, ಎಂಬುದು ತಿಳಿಯುವ ವಿಶ್ಲೇಷಣವು ಒಂದೇ ಉತ್ತಮ ಉಪಾಯ, ಭಾರತೀಯ ಭಾವ-ಬುದ್ಧಿಯನ್ನು ಈ ನಾಗಬಂಧದಿಂದ ಮುಕ್ತಗೊಳಿಸಲು.

'ನಾರ' :ಆಪ ಉಭಯಲಿಂಗ, 'ಅಪಾಂ-ನಪ್ತ' ಹಂತದಲ್ಲಿ ಈ ಸಂಗತಿ ಗೀತೆಯಲ್ಲಿ ಬಹಿರಂಗಕ್ಕೆ ಬರುವುದಿಲ್ಲ. ಅದರ ಸುಳಿವೂ ಕಾಣುವದಿಲ್ಲ . ಆದರೆ, ಗೀತೆಯಂತೆ ನಾರಾಯಣಾಖ್ಯಾನವೂ ಮಹಾಭಾರತದ ಅಂಗವೇ. ಗೀತೆಯ ಹಾಗೂ ನಾರಾಯಣಾಖ್ಯಾನದ ನಿವೇದನೆಯಲ್ಲಿ ಮನುವಿನ ಉಲ್ಲೇಖದಲ್ಲಿಯೇ ಅಂತರ! ಈ ಆಖ್ಯಾನದಲ್ಲಿ "ಸಪ್ತಋಷಿ" ಎಂಬವರನ್ನು 'ಶಿಖಂಡಿನಃ' ಎಂದು ಎರಡು ಬಾರಿ ಸ್ಪಷ್ಟಪಡಿಸಲಾಗಿದೆ ![೫೯] ಈ ಶಿಖಂಡಿ ಸಪ್ತಋಷಿಗಳೆಂಬವರನ್ನು ವೇದದಲ್ಲಿ 'ಭೂತಕೃತಃ' ಎನ್ನಲಾಗಿದೆ! ಎಂದರೆ ಬಯಲಿನಲ್ಲಿ, ಬಯಲು-ನಿರ್ವಯಲು!

ಮನು : ಮಾನವ, ಧರ್ಮಶಾಸ್ತ್ರಕಾರ ಸ್ಮೃತಿಕಾರ; ಸಮಾಜದ ಅಸ್ತಿತ್ವವನ್ನು ಒಪ್ಪಿದವನು. 'ಧಾರಣಾತ್ ಧರ್ಮ ಇತಿ ಆಹುಃ'; ಸಮಾಜಧಾರಣೆಗೆ, ವಿಕಾಸಕ್ಕೆ ಕಾರಣ, ಪ್ರೇರಕ ಆಗಿರುವಂತಹುದೇ ಧರ್ಮ ಎಂಬ ಈ ಶ್ರದ್ಧೆಯು ಸ್ಮಾರ್ತ (<ಸ್ಮೃತಿ) ಧರ್ಮದ ವೈಶಿಷ್ಟ್ಯ. ವೈಷ್ಣವರು ತಮ್ಮನ್ನು 'ಸ್ಮಾರ್ತ' ಎಂದುಕೊಳ್ಳುವುದಿಲ್ಲ! ಇಂತಹ ಸಾಂಕೇತಿಕ ಸೂಕ್ಷ್ಮಪ್ರಮಾಣಗಳ ಮೌಲಿಕತೆಯನ್ನು ಲೆಕ್ಕಿಸದೇ ಭಾರತೀಯ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಅರ್ಥಯಿಸಿಕೊಳ್ಳಲು ಶಕ್ಯವೇ ಇಲ್ಲ. ಶಿಲಾ ಶಾಸನಾದಿಗಳ ಮೇಲೆ ಲಿಖಿತ ಪ್ರಮಾಣಗಳ ಮೇಲೆ ಒಂದೊಂದು ವರ್ಗದ ವಿಶ್ವಾಸ. ಉತ್ಖನನದಲ್ಲಿ ದೊರೆವ ಪುರಾಣ ವಸ್ತುಗಳ ಮೂರ್ತಿ, ಚಿತ್ರ, ನಾಣ್ಯಾದಿ ರೂಪದ ಅವಶೇಷಗಳಲ್ಲದೆ ಇನ್ನಾವ ಲಿಖಿತ ಆಧಾರಗಳನ್ನು ತಾವು ನಂಬಲಾರೆವು, ಎಂಬ ಸರ್ ಊಲೇ ಪಂಥೀಯ 'ಆರ್ಕಿಮಾಲೋಸ್ಟ್' ವರ್ಗವೂ ಇದೆ! ಮಾನವ ಜೀವನದ ಒಂದು ಸಮಷ್ಟಿ ಸಾಮಾಜಿಕ-ಸಾಂಸ್ಕೃತಿಕ ಜೀವನದ ಆಕೃತಿ (form) ಅವಗಾಹನೆಗೆ ಬರಲು, ಭೌತಸ್ವರೂಪದ ಪಾತ್ರೆಪಡಗ, ಮೂರ್ತಿ, ನಾಣ್ಯ, ಗ್ರಹರಚನೆ, ವಸ್ತ್ರಾಲಂಕಾರ ಇಂತಹವುಗಳ ಆವಶ್ಯಕತೆ ಉಂಟೇ ಉಂಟು. ಆದರೆ, 'ಮಾತು' ಇದು ಆ ಜನಗಣ ಸಮಷ್ಟಿಯ ಉಸಿರು : ಪ್ರಾಣ. ಅಮೂರ್ತ ಜೀವ-ಆ ಭಾವ ಬುದ್ಧಿ ಸಂಸ್ಕಾರಪಡೆದು ಆದ ಆಕೃತಿ ಸ್ವರೂಪವು, ಆ ಸಮ-ಯ ಭಾಷಿಕ ಮಾಧ್ಯಮ: ಪ್ರತಿಮೆಯಾಗಿ ಆವಿಷ್ಕೃತವಾಗಿರುತ್ತದೆ. ವಸ್ತ್ರಾಲಂಕಾರಾದಿಗಳೂ ಮಾಧ್ಯಮ : ಪ್ರತಿಮೆಯೇ ಆದರೆ, ಭಾಷಿಕ ಪ್ರತಿಮೆ (ಇನ್ನೂ ಜೀವಂತ ಪರಂಪರೆಯ ಭಾಷೆಗಳಿಗೆ ಸಂಬಂಧವಿದ್ದರೆ), ಅದು ಒಳಗೊಳ್ಳುವ ನಾನಾ ಸೂಕ್ಷ್ಮಾರ್ಥದ ವಿವಿಧಾಂಗಗಳ (dimensions)ದರ್ಶನವು, ಬರಿ ಭೌತವಸ್ತು ಮಾತ್ರಗಳಿಂದ ಆಗಲು ಶಕ್ಯವಿಲ್ಲ. ವೈಷ್ಣವರು 'ಸ್ಮಾರ್ತರಲ್ಲಿ' "ಒಳಗೊಳ್ಳದಿರುವ ಈ ಸಮಯಾಚಾರವೇ ಇದಕ್ಕೆ ಸಾಕು."

ಭಾರತೀಯ ತತ್ತ್ವಜ್ಞಾನೇತಿಹಾಸದ ಮಹಾನ್ ಸಂಪುಟದಲ್ಲಿ ಡಾ. ಸುರೇಂದ್ರನಾಥ ದಾಸಗುಪ್ತ ಅವರು ವೈಷ್ಣವಸಾತ್ವತ-ಪಂಚರಾತ್ರ ಪಂಥವು ವೈದಿಕ ಪರಂಪರೆಯದೋ-ಅಲ್ಲವೋ ಎಂಬುದನ್ನು ಕುರಿತು ಹೇಳಿರುವ ಅನುಕೂಲ ಹಾಗೂ ಪ್ರತಿಕೂಲ ಉಭಯ ವಿಧದ ಪ್ರಮಾಣಗಳ ಅರಣ್ಯದೊಳಗಿಂದ ಹೊರಬೀಳುವಷ್ಟರಲ್ಲಿ ತಲೆ ಗಿರ್ಮ್ಮೆನ್ನುತ್ತದೆ. ಯಾವುದು ನಿಜ? ಈ ಲಿಖಿತ ಪ್ರಮಾಣಗಳಿಂದ ಹೇಳಲು ಧೈರ್ಯಸಾಲದಾಗುತ್ತದೆ. ಶ್ರೌತಮಾರ್ಗೀಯ ಸ್ಮೃತಿಗಳಿಗಿಂತ-ಆಗಮ-ಪಂಚರಾತ್ರಗಳೇ ಪ್ರಮಾಣವಾಗಿರುವ ಪಂಥಗಳು 'ಸ್ಮಾರ್ತ' ಮಾರ್ಗದುವಲ್ಲ.

ಶ್ರುತಿ-ಸ್ಮೃತಿ ಇವೆರಡೂ ಪರಸ್ಪರ ಪೂರಕ ಸಂಕೇತಗಳು ಇವನ್ನು ಅಮಾನ್ಯ ಮಾಡಲಿಕ್ಕೆ ಆಗುವುದಿಲ್ಲ. ಮನುವು ಯಜ್ಞಸಂಪ್ರದಾಯದ ಮೊದಲಿಗನೆಂದು ವೇದಗಳಲ್ಲಿಯೇ ಉಲ್ಲೇಖವಿದೆ. ಈ ಯಾಜಕ ಸಂಪ್ರದಾಯವು ಜೀವನನಿಷ್ಠೆಯ ಪರಂಪರೆಯುಳ್ಳದ್ದು. ಶ್ರೌತಸ್ಮಾರ್ತ ಪರಂಪರೆಯೆಂದರೆ ಇದು. ಮಂಡನಮಿಶ್ರನೆಂಬ ಶ್ರೌತಸ್ಮಾರ್ತ ಪರಂಪರೆಯ ಪಂಡಿತನನ್ನು ಸೋಲಿಸಿ ಶ್ರೀ ಶಂಕರಾಚಾರ್ಯರು ಸನ್ಯಾಸಪಂಥದ ಧ್ವಜ ಮೆರೆಯಿಸಿದ್ದಾಗಿ ಹೇಳಲಾಗುತ್ತದೆ. ಈ ಒಂದು ಘಟನೆಯ ಸೂಚ್ಯ ಅರ್ಥವೂ ಈವರೆಗೆ ಗಮನಕ್ಕೆ ಬರದೇ ಉಳಿಯುತ್ತಿತ್ತು. ಕುಮಾರಿಲಭಟ್ಟ-ಮಂಡನಮಿಶ್ರಾದಿ ಈ ಪರಂಪರೆಯ ಪಂಡಿತರಿಗೆ, ವೇದದಲ್ಲಿ ಜೀವನ ನಿಷ್ಠೆಯ ತತ್ತ್ವಜ್ಞಾನವಿದೆ. ಎಂಬ ಶ್ರದ್ಧೆ ಇದ್ದಿತೆಂಬುದು ಸರ್ವಮಾನ್ಯವೇ ಇದೆ. ಇಷ್ಟೇ ಅಲ್ಲ ಗೀತೆಯೂ ಸಹ ವೇದಗಳನ್ನು ಮೂದಲಿಸಿದೆ: ತ್ರೈಗುಣ್ಯಾ ವಿಷಯಾ ವೇದಾಃ ಎಂದು! ಹೀಗಿರುವಾಗ ನಮ್ಮ ಆಚಾರ್ಯ ಪುರುಷರಿಗೆ ಗೀತೆಯಲ್ಲಿ, ಬ್ರಹ್ಮಸೂತ್ರಗಳಲ್ಲಿ ಹೇಳಿದ್ದುದೇ ಋಗ್ ವೇದದಲ್ಲೂ ಉಂಟು ಎಂದು ಸಿದ್ಧಪಡಿಸಲು ಪ್ರಮಾಣಗಳು ದೊರೆಯುತ್ತವೆ! ಏನು ಈ ಜಾದು!

ಇಲ್ಲಿ ಎರಡೇ ಪ್ರಕಾರದ ಶಕ್ಯತೆಯಿದೆ. ಕುಮಾರಿಲ ಮಂಡನಮಿಶ್ರರು ನಂಬಿದ-ಭಗವದ್ಗೀತೆಯು ನಿರ್ದೇಶಿಸುವ ವೇದದ ಸಂಹಿತಾ-ಪಾಠವೇ ಬೇರೆ ಮತ್ತು ಆಚಾರ್ಯರು ತಮ್ಮ ಆಧಾರಕ್ಕಾಗಿ ಸ್ವೀಕರಿಸಿರುವ (ಇಂದಿನ) ಸಂಹಿತಾ ಪಾಠವೇ ಬೇರೆ, ಅಥವ ಇರಲಿಕ್ಕೇ ಬೇಕು, ಆ ಕಾಲದ ಅತ್ಯಂತ ಮೇಧಾವಿ ವಾದಪಟು ಹಾಗೂ ಪಂಡಿತವರೇಣ್ಯರೆನಿಸಿದ್ದ ಕುಮಾರಿಲ ಹಾಗೂ ಮಂಡನಮಿಶ್ರ ಪರಂಪರೆಯವರಿಗೆ ವೇದದ ಸಂಪೂರ್ಣ ಅಧ್ಯಯನವು ಆಗಿರದೆ, ತಮಗೆ ಎಂದರೆ ಯಾಜಕ ಪಂಥೀಯ ಪ್ರವೃತ್ತಿ ಮಾರ್ಗಿಗಳಿಗೆ ಅನುಕೂಲ ಭಾಗವನ್ನು ಮಾತ್ರ ಇವರು ಅರಿತಿರಬೇಕು. ಆದರೆ, ಈ ಬಗೆಯ ಸಮಾಧಾನವನ್ನು ತಂದುಕೊಳ್ಳಬೇಕೆಂದರೆ 'ಸರ್ವೋಪನಿಷತ್ ಸಾರ' ಎನಿಸುವ ಭಗವದ್ಗೀತೆಯು ವೇದವು ಐಹಿಕಜೀವನಕ್ಕೆ ಪ್ರೇರಿಸುವುದಾಗಿ ಟೀಕಿಸುವ ಕಾರಣವೇನು? ಈ ಕಾರಣದಿಂದ ಸನ್ಯಾಸಪಂಥೀಯರಿಗೆ ಅನೂಕೂಲವಾಗುವ ಸೂಕ್ತಗಳನ್ನು ಸೇರಿಸಿ ಇಂದಿನ ಸಂಹಿತಾ ಸಂಕಲನ ವಾಗಿರುವ ಶಕ್ಯತೆಯನ್ನು ಅಲ್ಲಗಳೆಯಲು ಆಗುವುದಿಲ್ಲ.

ಈ ಇಂದಿನ ಸಂಹಿತಾ ಪಾಠದ ಸೂಕ್ತ ಸಂಗ್ರಹದೊಳಗಿನ ವ್ಯಾಮಿಶ್ರಶೈಲಿಯ ಹೆಣಿಕೆಯು ಗೀತೆಯ ಹೆಣಿಕೆಯನ್ನೇ ಹೋಲುತ್ತಿರುವುದು ಇನ್ನೂ ವಿಶೇಷ. ತಮ್ಮನ್ನು ಶ್ರೌತ-ಸ್ಮಾರ್ತರೆಂದುಕೊಳ್ಳಲು ಅಳುಕುವ ಪಂಥೀಯರ ಕೈವಾಡವೇ ಇಂದಿನ ಸಂಹಿತಾರಚನೆಯಲ್ಲಿ ಇರಲಿಕ್ಕೆಬೇಕೆಂಬುದೂ ಈ ಹಿನ್ನೆಲೆಯಲ್ಲಿ ಅರಿಕೆಗೆ-ಬರುತ್ತದೆ. ಆಪ: ನಾರರೂಪಿ ನಾರಾಯಣನ ಪ್ರಕೃತಿ (: ಅಂಗ)ಗಳೆಂದು ಮಹಾಭಾರತದಲ್ಲಿ ಉಕ್ತರಾದ 'ಸಪ್ತ' ಎಂಬ ಋಷಿಸಂಕೇತವು ವೇದಗಳಲ್ಲಿದೆ. ಋಗ್ವೇದದಲ್ಲಿ, ವಿಶ್ವಕರ್ಮನ ಅಂಗವಾಗಿ ಇರುವ 'ಸಪ್ತರ್ಷಿ'ಗಳ ಉಲ್ಲೇಖವುಂಟು.[೬] ಆದರೆ, ಈ ಸಪ್ತರ್ಷಿ ಅಂಗಕ್ಕಿಂತಲೂ 'ಪರಃ ಏಕಂ' ಉಂಟು. ಅವನೇ ವಿಶ್ವಕರ್ಮನು. ಈ 'ಸಪ್ತ'ರ್ಷಿ ಎಂಬುದರೊಳಗಿನ ಸಂಖ್ಯಾವಾಚಕ ಸಂಕೇತವು ಸಂಭ್ರಾಮಕವಿದೆ. ಈ ಸೂಕ್ತಸ್ಥ ಉಲ್ಲೇಖಗಳ ಭಾಷ್ಯವು ಇದನ್ನೇ ಸೂಚಿಸುತ್ತದೆ. ಈ 'ಏಕಂ' ವಿಶ್ವಕರ್ಮನು ಆಪ:ರಸ ಸ್ವರೂಪಿಯು, 'ತಮಿತ್ ಗರ್ಭಂ ಪ್ರಥಮಂ ದಧ ಆಪಃ' ಎಂತು? ಸೃಷ್ಟಿಯ ಪ್ರಾರಂಭದಲ್ಲಿ ಆಪವು ಬಸುರಾದುದನ್ನು ವರ್ಣಿಸಲಾಗುತ್ತದೆ. ಈ ಧಾರಣೆಗೆ 'ಹಿರಣ್ಯಗರ್ಭ' (=ಪ್ರಜಾಪತಿ) ಕಾರಣ ಎಂದುದು ಇನ್ನೊಂದು ಸೂಕ್ತದಲ್ಲಿದೆ.[೭] ಇಲ್ಲಿ ಅವನನ್ನು 'ವಿಶ್ವಕರ್ಮ' ಎಂದಿದೆ. ಇವನು ಕೇವಲ

'ಸಾಕ್ಷಿ' (ಭೂತಾನಾಂ ದ್ರಷ್ಟಾ)![೮] ಹಾಗಾದರೆ, ಪ್ರತ್ಯಕ್ಷ ಕಾರಣನು ಯಾರು? ನಾರಣ: ಕೃಷ್ಣ 'ಸಾಕ್ಷಿ' ದೇಹರಥದಲ್ಲಿ ಇರುವವನು. ಆದ್ದರಿಂದ, ನರ (:ದೇಹ)ವೇ ಕ್ರಿಯೆಗೆ ಕಾರಣ. ನರ-ನಾರಣರ ಈ ಸಂಕೇತಾತ್ಮಕ ಜೋಡಿ ಇಲ್ಲಿಯೂ ಉಂಟು. ಈ ವಿಶ್ವಕರ್ಮನು ಆಪಸ್ವರೂಪೀ ನಾರಣನಂತೆ! ಈ ಹಿನ್ನೆಲೆಯಲ್ಲಿ 'ಸಪ್ತ' ಎಂಬ ಋಷಿಸಂಕೇತವು ನಾರಣ-ವಿಶ್ವಕರ್ಮರ ಪ್ರಕೃತಿ=ಅಂಗ ಎಂದರೇನಾಯ್ತು? ಪ್ರತಿಯೊಂದು ನರ-ಮಾನವನಲ್ಲಿ ಸಾಕ್ಷಿ, ವಿಶ್ವಕರ್ಮನಾದನು, ಮಾನವ ದೇಹ 'ಸಪ್ತ'ಋಷಿಯಾಯಿತು! ಆದಕಾರಣ ಋಷಿ=ದೇಹ=ನರ, ಇವನೊಳಗಿನ ಸಾಕ್ಷಿ: ಸಂದೃಕ್ ಇವನೇ 'ಪರಃ ಏಕಮ್'; ಇವಿಷ್ಟು ಈ ಸಂಕೇತಗಳ ನಿಶ್ಚಿತ ಅರ್ಥವಾದ ಬಳಿಕ, ಇನ್ನು 'ಸಪ್ತ' ಏನು? ಇದು ದೇಹ=ಅಂಗದ ವಿಶೇಷಣವಾಗಿದೆ. 'ಸಪ್ತ' (ಋಷಿ=ದೇಹ=ಅಂಗ) ಈ ಸಂಕೇತಕ್ಕೆ ಸಾಯಣರು 'ವಾ-ನವಾ' ಅರ್ಥ ಹೇಳಿದ್ದು ಹೀಗೆ. "ಸಪ್ತ ಸಂಖ್ಯಾಕೇಭಿಃ ವಾ ಸರ್‌ಪಣ ಸ್ವಭಾವ್ಯೇಭಿಃ", ಎಂದರೆ 'ಸರ್-ಪ' ಸ್ವಭಾವದ ಅಂಗವು ಯಾವುದು? 'ಸಪ್ತ'ಋಷಿ : 'ಭೂತಾನಿ' ಸಮಕೃಣ್ವಾನ್ 'ಪ್ರಾಣಿನಃ' ಜನನಕ್ಕೆ ಕಾರಣ, ಎಂಬ ವರ್ಣನೆಯೂ ಇಲ್ಲಿದೆ. ಈ ಸಪ್ತರ್ಷಿ ದ್ರವ್ಯ (:ದ್ರವ) ರೂಪ-ಹವಿ-ಅರ್ಪಿಸಿ ಪರಮಾತ್ಮನನ್ನು 'ಅಯಜಂತ' (ಯಜನದಿಂದ)-ಆರಾಧಿಸಿದರು! ಆಗ ಆಪವು ಮಾಡಿದ ಗರ್ಭಧಾರಣದ ಅದ್ಭುತವನ್ನು ಸಮೀಕ್ಷಿಸಲು ದೇವಾಧಿದೇವರೆಲ್ಲ ಸೇರಿದರು.

ವೈವಸ್ವತನ ತನಯನೆಂಬ ಮನು-ಮಾನವ ಈ ಶಬ್ದ ಸಂಕೇತದ ಮಾತ್ರಸ್ಪರ್ಶದ ವಲಯ ಹಾಗೂ ವಿವಸ್ವಂತ (Shiningforth-the brilliant one) ಈ ನಾಮರೂಪದ ಪಾರ್ಶ್ವಭೂಮಿಯನ್ನು ಗ್ರಹಿಸಿಕೊಂಡು, ನಿರ್ಮಿತವಾದ ಮಾನವ-ಮನುಷ್ಯ ಈ ಶಬ್ದ ಪ್ರತಿಮೆಯ ಸಾಂಸ್ಕೃತಿಕ ಹಿನ್ನೆಲೆ ಮತ್ತು ಆಪ: ರಸ ಸ್ವರೂಪೀ ವಿಶ್ವಕರ್ಮ-ಹಿರಣ್ಯಗರ್ಭ ನಾರಾಯಣಸೂನು ಎಂದು 'ಸಂ-ದೃಕ್' ಧಾರಣ ಮಾಡುವ ನರ ಈ ಸಂಕೇತ ಹಾಗೂ ಇದರ ಪಾರ್ಶ್ವ ಭೂಮಿಯನ್ನು ಲೆಕ್ಕಿಸಿ ಈ ದ್ವಿಪಾದ ಜೀವಿಗೆ ನರ: ನಾರನೆಂದು ನಾಮಕರಣ ಮಾಡಿದ ಸಾಂಸ್ಕೃತಿಕ ಹಿನ್ನೆಲೆ, ಇವೆರಡನ್ನು ಒಂದೇ ಸಾಂಸ್ಕೃತಿಕ ದೃಷ್ಟಿಕೋನದ ಬಾಳಿನ ರೀತಿಗಳು ಎನ್ನಲಾದೀತೆ? 'ಮನು' ಈ ಸಂಕೇತಕ್ಕೆ ಮೋನಿಯರ್ ವಿಲಿಯಂಸ್ ಕೋಶ ಹೇಳುವ ಈ ಅರ್ಥ ನೋಡಿ: thinking, wise, intelligent; Man; Mankind (ಋಗ್ವೇದ). ಕುಶಲ ಕಾರಾಗಿರಿಯ ಶಿಲ್ಪಿಗಳನ್ನು 'ಮನೋ ನಪಾತಃ' ಎಂದುದುಂಟು.[೯]

ಮನು-ಮಾನವ ಮನುಷ್ಯ ಈ ಶಬ್ದ ಸಂಕೇತಗಳ, ಸವಿತೃ-ಅಗ್ನಿ ಜಾತವೇದನ ಉಪಾಸನೆಯ ಹಿನ್ನೆಲೆಯು ಪ್ರತಿಬಿಂಬಿತವಾಗಿದೆ. ವಿವಸ್ವಾನನ ಸಂತಾನ: ಮನು-ಮಾನವ ಎಂಬ ಈ ಪ್ರತಿಮೆಯೂ ಇದನ್ನೇ ದೃಢಪಡಿಸುತ್ತದೆ. ನರ-ನಾರಣರ ಜೋಡಿ ನಾರ-ದನಿಗೆ ಬದರಿಯಲ್ಲಿ ತಪೋನಿರತರಾಗಿದ್ದುದು ಕಂಡಿತು ಎಂಬ ಮಹಾಭಾರತದ ಸಾಂಕೇತಿಕ ವರ್ಣನೆಯಲ್ಲಿ, ಇವು ತತ್-ಮಯಾನಂದದಲ್ಲಿ ಜೀವನ ಸಾರ್ಥಕ್ಯವನ್ನು ಕಾಣುವ ಪರಂಪರೆಯ ಆದರ್ಶ ಪ್ರತಿಮೆಗಳು ಎಂಬುದು ಅಭಿಪ್ರೇತವಿದೆ. ಒಂದು ಚಿತ್-ಪ್ರಚೇತಸನ ಆರಾಧನೆಯಾದರೆ ಇನ್ನೊಂದು ಆಪ:ರಸ ಸರ್-ಪಾರಾಧನೆಯಾಗಿದೆ. ಅರ್ಥ: ವಿಚಾರಕ್ಕೆ ಶಬ್ದ-ಪ್ರತಿಮೆಗೆ ಆ-ಕೃತಿ (form) ಇರುತ್ತದೆ. ಈ ಜೀವನ-ಆ-ಕೃತಿಗಳಲ್ಲಿ ಸಾಮ್ಯವಿಲ್ಲದೆ 'ಮಹರ್ಷಯಃ ಸಪ್ತಪೂರ್ವೇ ಚತ್ವಾರೋ ಮನವಃ ತಥಾ' ಹೀಗೆ ಭಿನ್ನ ಪಂಥೀಯ ನಾಮ-ಸಂಕೇತಗಳನ್ನು ಒಂದೇ ಸಾಲಿನಲ್ಲಿ ಉಚ್ಚರಿಸಿದರೆ ಅದೇನು ಸಮನ್ವಯವಾಯಿತೆ? ಈ ಸಂಕೇತಗಳಿಗೆ ಜನ್ಮವಿತ್ತ ವೈಚಾರಿಕ ಭೂಮಿಕೆಯಲ್ಲಿ ಹೊಂದಾಣಿಕೆಯಲ್ಲಿದೆ? 'ಯಂ ಶೈವಾಃ ಸಮುಪಾಸತೇ......' ಎಂದು ಕ್ರೈಸ್ತ, ರಾಮ-ರಹೀಮನ ವರೆಗಿನ ಏನೆಲ್ಲ ದೇವತಾನಾಮಗಳನ್ನು ಒಂದೇ ಉಸುರಿನಲ್ಲಿ ಹೇಳಿದ ಮಾತ್ರಕ್ಕೆ ಭಾವಾತ್ಮಕ ಐಕ್ಯವಾಗಲು ಶಕ್ಯವೇ? ಅವರವರ ಜೀವನ ರೀತಿಯಲ್ಲಿ ದೈವತಗಳ 'ಏಕಂ:ಸತ್' ಎಂಬ ಏಕಾಂತಿಕ ಶ್ರದ್ಧೆಯ ಅಬಾಧಿತ ಬಿಟ್ಟು ಆಗುವ ಸರ್ವಧರ್ಮ ಸಮನ್ವಯದ ಪ್ರಯತ್ನಗಳು. 'ಈಗ ಜಗಳಾಡೋಣ ಬೇಡ' ಎಂಬ ಮಟ್ಟಿಗಿನ ಒಪ್ಪಂದದಲ್ಲಿ ಪರಿಣಮಿಸಬಹುದು. ಅದೂ ಕೆಲಕಾಲ ಮಾತ್ರ: ತಮತಮಗೆ, ತಾವೇ 'ಏಕಂ:ತತ್' ಆಗಲು ಅನುಕೂಲ ಸಮಯ ಇನ್ನೂ ಬಂದಿಲ್ಲವೆ ಎಂಬುದು ಕಾಣುತ್ತಿರುವ ವರೆಗೆ! ತಮ್ಮ

ತಮ್ಮ-ಪ್ರತಿ-ಮಾರಾಧಾನೆಯೆ ತತ್: ಏಕಂ ಎಂದು ವೈಚಾರಿಕ ಭೂಮಿಕೆಯಲ್ಲಿ ಅನುಸ್ಯೂತವಿರುವ (implicit) ನಿಯತಿ (logic) ಇದು.

ಎರಡು 'ಅಗ್ನಿ'ಗಳಂತೆ ಒಂದಕ್ಕಿಂತ ಹೆಚ್ಚು ಮನು-ಮಾನವ (ಪರಂಪರೆಯ) ಸಂಕೇತಗಳೂ ಹುಟ್ಟಿಕೊಂಡಿವೆ! ಋಗ್ವೇದದಲ್ಲಿಯೇ ಇವಕ್ಕೆ ಸ್ಥಾನವನ್ನು ಕಲ್ಪಿಸಲಾಗಿದೆ! ಸೋಮ (:ರಸ) ಸೂಕ್ತಗಳಲ್ಲಿ ಒಬ್ಬ 'ಸಂವರಣಾಖ್ಯ' ಮನು;[೧೦] ಇನ್ನೊಬ್ಬನು 'ಅಪ್ಸು-ನಾಮ್ನಃ ಪುತ್ರಃ ಮನು!' ಈ ಎರಡನೆಯ ನಾಮಸಂಕೇತವು, 'ವಿವಸ್ವಾಂತ' ಸೌರ ಸಂಪ್ರದಾಯಕ್ಕೆ ಪ್ರತಿಯಾದ ಆಪಃರಸ ಪಂಥೀಯ ಆಕೃತಿಯುಳ್ಳದು ಇರುವುದರ ಸ್ವಾರಸ್ಯ ಎರಡು ಅಗ್ನಿಗಳ ಸ್ಪರ್ಧೆಯ ಹಿಂದಿನ ವಿವರಣೆಯಿಂದ ಗಮನಕ್ಕೆ ಬರಬಲ್ಲುದು, ಮತ್ತೆ ಇನ್ನೂ ಒಂದು ಶಿಲ್ಪಸೌಂದರ್ಯ ಇಲ್ಲಿ! ಈ ಪ್ರತಿಮೆಯನ್ನು, 'ಸೋಮ' ಈ ಸಂಕೇತದ ಸ್ತೋತ್ರಗಳಲ್ಲಿ ಪ್ರಚ್ಛನ್ನ ಚಂದ್ರನ ಮಹಿಮೆಯನ್ನು ಸಾರುವ ಕವಿ ಗಣ ಇಲ್ಲಿ ಸೇರಿಸಿದ್ದು ಔಚಿತ್ಯಪೂರ್ಣವಿದೆ. 'ರಸೋಽಹಂ ಅಪ್ಸು' ಎಂಬ ಸ್ವ-ಸ್ವರೂಪದರ್ಶನ ಮಾಡಿಸುವ, ವಿಷ್ಣುವಿನ ಅವತಾರ, ಎಂಬ ಗೀತೆಯ 'ಭಗವಂತನು', ವಿವಸ್ವಾನನಿಗೆ ಜ್ಞಾನ ಉಪದೇಶವಿತ್ತ ಪರಮ ಗುರುವು ತಾನೇ ಎಂದು ಹೇಳಿಕೊಂಡಿರುವುದೂ ನಿಷ್ಕಾರಣವಲ್ಲ ಎಂಬುದೂ ಆಪಃರಸ-ಪುತ್ರ ಮನು ಈ ಪ್ರತಿಮಾ ಸಂಕೇತದ ಮೂಲಕ ಮನದಟ್ಟಾಗುತ್ತದೆ. ಋಗ್ವೇದದ ಅಂತ್ಯದಲ್ಲಿ ಸಾರ್ಪರಾಜ್ಞಿಯು ಸೂರ್ಯಮಂಡಲವನ್ನು ಸುತ್ತಿ ಬಿಟ್ಟಿದ್ದು ಕಾಣುತ್ತಿದ್ದರೆ; ಶೇಷ: ನಾಗಸ್ವರೂಪೀ ವಿಷ್ಣುವಿನ ಅವತಾರನು-ಶೇಷ : ಬಲದೇವನ ತಮ್ಮನು ಎಂದು ಸಾಂಕೇತಿಕವಾಗಿ ಒಪ್ಪಿಕೊಳ್ಳಲಾಗಿರುವ ಕೃಷ್ಣಸರ್ಪವು ವಿವಸ್ವಾನನ ಗುರುವಾಗಿ ನಿಂತುದನ್ನು ಭಗವದ್ಗೀತೆಯಲ್ಲಿ ನೋಡಲು ದೊರೆಯುತ್ತಿದೆ!

'ಮಹರ್ಷಯಃ ಸಪ್ತ'. ಈ ಸಂಕೇತದ ರಹಸ್ಯಾರ್ಥವು ಮಹಾಭಾರತಸ್ಥ ಗೀತೆಗಿಂತ, ನಾರಾಯಣೀಯ ಆಖ್ಯಾನದಲ್ಲಿ ಹೆಚ್ಚು ಸ್ಪಷ್ಟತೆ ಪಡೆಯುತ್ತದೆ. ಇದರ ಕಾರಣವೇನು? ಗೀತೆಯ ಸಾಂಕೇತಿಕ ಪ್ರತಿಮೆಗಳ ನುಣ್ಪು (polish) ಸಂಮೋಹಕತೆ ನಾರಾಯಣಾಖ್ಯಾನದಲ್ಲಿ ಇಲ್ಲ. ಡಾ. ಎಸ್. ಕೆ. ಡೇ. ಅವರು ಇದನ್ನು 'a primitive floating myth' ಎಂದಿದ್ದಾರೆ. ಪ್ರತಿಮೆಗಳ ಮೊದಲುತನದಲ್ಲಿ ಅದರ ಮೂಲ ಸ್ವರೂಪವು ಹೆಚ್ಚು ಅರಿಕೆಗೆ ಬರಬಲ್ಲುದು. ಆದರೆ, ಸಪ್ತಋಷಿ ಹಾಗೂ 'ಸಪ್ತ' ಮರುತರು 'ಸಪ್ತ' ಸ್ವಸಾ ಅಥವಾ ಮಾತರಃ 'ಸಪ್ತ' ರಶ್ಮಯಃ ಈ ಎಲ್ಲ ಸಂಕೇತಗಳಲ್ಲಿ ಸಪ್ತ : ಸರಣ ಶೀಲ (ಆಪಃ ರಸಃ ಪ್ರಾಣ) ಇಷ್ಟೇ ಮುಖ್ಯ. ಸಂಕೇತ, ಒಂದೇ ಆದರೆ ಕಾಣುವುದು ವಿವಿಧ, ಎಂಬುದರ ಪ್ರತಿಪಾದನೆಗಾಗಿ ಈ ಅನೇಕ ಸಂಕೇತಗಳ ಜಂಜಾಲದ ಜಾದು ನಿರ್ಮಿಸಿದ್ದಾಗಿದೆ.

ನಿಜಕ್ಕೂ, ಈ ಏಕ: ಸತ್ ಭೂಮಿಕೆಯ ಆಶ್ರಯದಲ್ಲಿ 'ವ್ಯಕ್ತಿ'-ಪಿಂಡದಲ್ಲಿ ಬ್ರಹ್ಮಾಂಡವೆಲ್ಲವೂ ಸಮಾವಿಷ್ಟವಾಗಿದೆ (subsume). ಈ ಪಿಂಡದ ಹೊರಗೆ ಏನಿಲ್ಲ; ಸೋಽಹಂ; ಈ ಆಕೃತಿ ಒಂದು; ಅಥವಾ ಪ್ರತಿಯೊಂದು ಪಿಂಡವೂ ತನ್ನ ಪಾಲಿಗೆ ತತ್ : ಸತ್ ಆಗುವುದರಿಂದ, ಈ ಎಲ್ಲವೂ ಪ್ರತ್ಯೇಕವಾಗಿ ನಿತ್ಯ 'ಏಕಂ' ಆದ ಆಕೃತಿ ನಿರ್ಮಾಣವಾಗುವುದು. ಇವುಗಳಲ್ಲಿ ಯಾವ ಆಕೃತಿಯೇ ಆಗಲಿ; ತಳಪಾಯದಲ್ಲಿ ಒಂದು "ವ್ಯಕ್ತಿ" ರೂಪ ನಾಗ (:ನಾಗಿ) ಉಳಿಯುವುದು ನಿಶ್ಚಿತ. 'ಸತ್' ಏವ ಇದಂ ಅಗ್ರೇ ಆಸೀತ್ ಎಂಬ ಆಗ್ರಹದ ಸಾರವೇ ಇದು. ಈ 'ಸತ್' ಇದುವೇ 'ಸತಿ' ಅಥವಾ ಸಂತ ಇದೇ ದೈವತ ಇದರ ಇಂದ್ರಿಯಗಳೇ ಸಪ್ತರು! ಇದೇ ಸರ್ಪ:ಇಂದ್ರಿಯ, ಸ್ಪರ್ಶೇಂದ್ರಿಯ ಸೃಜನದ ದೈವತ! ಇದೇ ಪ್ರಜಾಪತಿ : ವಿಶ್ವಕರ್ಮ ದೈವತ! ಆದರೆ, ಮನು : ಮಾನವ, ವಿವಸ್ವಂತನ ಸಂತಾನ; ಆದಕಾರಣ, ಮಾನವ: ಮನುಷ್ಯರು ವಿವಸ್ವಂತ ಸ್ವರೂಪದ ತೇಜೋರೂಪ ವೈಶ್ವಾನರ (:ಪುರುಷ) ರೂಪದ ಒಂದು ದಿವ್ಯಪ್ರತಿಮೆಯು ಈ ಮನು ಮಾನವರ ಆ-ದರ್ಶ-ಆರಾಧ್ಯ ಸ್ಥಾನವಾಗುತ್ತದೆ. ವ್ಯಕ್ತಿ ಸಮಷ್ಟಿಯ ಅಂಗ. ವೈವಸ್ವತ-ಸವಿತೃ ಸಂಪ್ರದಾಯದ ಭೂಮಿಕೆಯ ಸೃಷ್ಟಿನಿರ್ಮಾಣ ವಿಚಾರದಲ್ಲಿ ಸ್ತ್ರೀ-ಪುರುಷ ಸಂಗದ ಅನುಸರಣದ (analogy) ಆಕೃತಿಗೆ ಅವಕಾಶವೇ ಇಲ್ಲ! ಅಸತಃ ಸತ್ ಅಜಾಯತ[೧೧] ಸತ್-ಸತ್ಯ ಎಂದರೆ ಅರ್ಥದ ಪ್ರಕಾಶದಲ್ಲಿ ಕಾಣುವ ಮೂರ್ತ ಸ್ವರೂಪ. ಆದಕಾರಣ 'ಅ-ಸತ್'

ಎಂಬ ಸಂಕೇತಕ್ಕೆ ಮೂಲದಲ್ಲಿ ಅ (ಮೂರ್ತ) ಸತ್ಯ, ಇನ್ನೂ (ಅರ್ಥದ) ಬೆಳಕಿನಲ್ಲಿ ಬರದೇ ಇದ್ದದ್ದು ಎಂದೇ ಅರ್ಥವಿದೆ. ಸಾಯಣಾದಿಗಳು 'ಅಸತಃ' ಎಂಬುದಕ್ಕೆ ಅ (ಮೂರ್ತ) ಸತ್-ಅ-ವ್ಯಾಕೃತ ರೂಪ ಎಂದೇ ಅರ್ಥ ಹೇಳಿದ್ದುಂಟು. ವ್ಯಾಕೃತ=ವಿ-ಆಕೃತ : ವಿಶಿಷ್ಟ ಆಕೃತಿಯುಕ್ತ: ಒಂದೊಂದು ಬಿಡಿ ಬಿಡಿಯಾಗಿದ್ದು. ಮೊತ್ತ ಮೊದಲಲ್ಲಿ ಭಾಷಾಪೂರ್ವದಲ್ಲಿ ಬಿಡಿಬಿಡಿ ರೂಪ-ಆ-ಕೃತಿಗಳ ಪ್ರಜ್ಞೆಯುಂಟಾಗುವುದೇ ಅಶಕ್ಯವಿತ್ತು. ಆದರೆ, ಸವಿತೃ (ಋತ : ಅರ್ಥ) ಪ್ರಕಾಶದಲ್ಲಿ (ಭಾಷಾ) ಪ್ರತಿಮಾ ಮಾಧ್ಯಮದಿಂದಾಗಿ ಸುತ್ತಲಿನ ಪ್ರಪಂಚವು ಅ(ಮೂರ್ತ) ಸತ್ತಿನಿಂದ ಸತ್ (ಮೂರ್ತ) ರೂಪದಲ್ಲಿ ಕಾಣತೊಡಗಿತು.

ಈ ಭೂಮಿಕೆಯಲ್ಲಿ ಸೃಷ್ಟಿಯ ಪ್ರಾರಂಭವು ಆದುದು ಹೇಗೆ? ಇದನ್ನು ಈ ಮೊದಲು ಹೇಳಿರುವ 'ದೇವತಾ (?) ಜನನ' ಸೂಕ್ತದಲ್ಲಿಯೇ ಆಪ-ರಸ ಪಂಥೀಯ ಸೃಷ್ಟಿ ನಿರ್ಮಾಣದ ವಿವರಣೆಯ ಸೂಕ್ತದಲ್ಲಿಯೆ ಸೂಚ್ಯವಾಗಿ, ತೀರ ಸಂಕ್ಷಿಪ್ತ ರೀತಿಯ ಒಂದೇ ವಾಕ್ಯದಲ್ಲಿ ಒಂದು ಸಾಂಕೇತಿಕ ಪ್ರತಿಮೆಯ ಮೂಲಕವಾಗಿ ನಿವೇದಿಸಲಾಗಿದೆ, 'ಅಸತಃ ಸತ್ ಅಜಾಯತ' ಎಂಬ ಮಾತು ವಿವರಿಸುವಾಗ; ತತ್ ಆಶಾ ಅನ್ವಜಾಯಂತ' ಎಂದುದುಂಟು. ಆದರೆ ಈ ಸಂಹಿತಾ ಸಂಕಲನದ ವ್ಯಾಮಿಶ್ರ, ಎಂದರೆ ಪರಸ್ಪರ ವಿ-ಸಂಗತ ಶೈಲಿಯ ಶಿಲ್ಪದ ವೈಶಿಷ್ಟ್ಯವನ್ನು ಇಲ್ಲಿಯೂ ಕಾಣಬಹುದು. 'ಅಸತಃ ಸತ್ ಅಜಾಯತ'; ತತ್ ಅನು (ಆ ಬಳಿಕ) "ಆಶಾಃ" (:ದಿಶಾ)=ಪ್ರಕಾಶ ಕಂಡಿತು ಅಥವಾ ಈ ದಿಶಾ=ಪ್ರಕಾಶದೊಡನೆ ಅ(ಮೂರ್ತ) ಸತ್ತಿನಲ್ಲಿ ಅಡಗಿದ್ದ 'ಸತ್' (ಮೂರ್ತ=ಬೇರೆ ಬೇರೆ) ಆಕೃತಿಗಳು ಈ ಪ್ರಪಂಚದಲ್ಲಿ ಒಂದೊಂದೇ ಅರಿಕೆಗೆ ಬರತೊಡಗಿದವು ಎಂಬ ಈ ವಿವರಣೆಯ ಮುಂದಿನ ಋಚೆಯಲ್ಲಿಯೇ 'ಆಶಾಃ' ಎಂಬ ಸಂಕೇತವನ್ನು ಆಪ: ರಸ ಪಂಥೀಯ ಅರ್ಥದಲ್ಲಿ ಬಳಸಿದ್ದುಂಟು! ಎಂದರೆ 'ಸಮಾನ' ರೂಪಾಲಂಕರಣದಲ್ಲಿ ಅವುಗಳೊಳಗಿನ ತಾರತಮ್ಯವು ಗಮನಕ್ಕೆ ಬರದೆ, ಸಂದಿಗ್ಧತೆಯಿಂದ ಈ ಪ್ರಪಂಚವು ಅರ್ಥವಿಹೀನವಾಗಿ ತೋರುವ 'ಮಾಧ್ಯಮ' ಪ್ರತಿಮೆಯಾಗುವ ತಂತ್ರವನ್ನು ಇಲ್ಲಿಯೂ ಬಳಸಲಾಗಿದೆ! ಆಪಃ ರಸ ಪಂಥೀಯ ಎಂದರೆ ಅದಿತಿ-ದಕ್ಷರ ಪ್ರಕೃತಿ-ಪುರುಷ ಸಂಗದಲ್ಲಿ ಈ ಸೃಷ್ಟಿ ನಿರ್ಮಾಣವಾಯಿತು, ಎಂದು ವಿವರಿಸುವ ಋಚೆಯ ಮೊದಲ ಪತ್ತಿಯಲ್ಲಿ ಬಳಸಿರುವ ಪ್ರತಿಮೆಗಳು ಇವು. ಭೂಃ (ಸ್ತ್ರೀ ಸೂಚಕ ಸಂಕೇತ) : ಉತ್ತಾನಪದ: (ವೃಕ್ಷಪುರುಷ ಸೂಚಕ ಸಂಕೇತ; ಮತ್ತೆ ಭೂಃ (ಪುರುಷ ಸೂಚಕ) ಆಶಾ (ಸ್ತ್ರೀಲಿಂಗ), ಈ ಸಾಂಕೇತಿಕ ಪ್ರತಿಮೆಗಳು ಸ್ತ್ರೀ=ಅದಿತಿ; ಪುರುಷ=ದಕ್ಷ ಸೂಚಕವಾಗಿರುವುವು ಎಂದು ಗ್ರಹಿಸಲು ಈ ಋಚೆಯ ಎರಡನೆಯ ಪಂಕ್ತಿಯೆ ಒತ್ತಾಯಪಡಿಸುತ್ತದೆ. ಈ ಋಚೆಯು ಹೀಗಿದೆ:

> ಭೂಃ ಜಜ್ಞೇ ಉತ್ತಾನ-ಪದಃ ಭುವಃ ಆಶಾ ಅಜಾಯಂತ।
> ಅದಿತೇ ದಕ್ಷಃ ಅಜಾಯತ ದಕ್ಷಾತ್ (ಊಂ ಇತಿ) ಅದಿತಿಃ ಪರಿ ।।

ಈ ಎರಡನೆಯ ಪ್ರಯೋಗದ 'ಆಶಾಃ', ಇದು ದಕ್ಷ ಪುತ್ರಿಯರು ಹಲರು 'ತಾರೆ'ಯರು ಎಂಬ ಪುರಾಣ ಕಥೆಯ ಹಿನ್ನೆಲೆಯಲ್ಲಿ ಮೊದಲನೆಯ 'ಆಶಾಃ' ಸಂಕೇತಕ್ಕಿಂತ ತೀರ ಭಿನ್ನವಾದ ಅರ್ಥವನ್ನು ಪಡೆಯುತ್ತದೆ. ಈ ಋಚೆಯೊಳಗಿನ 'ಉತ್ತಾನ-ಪದ'ವು ವೃಕ್ಷಸೂಚಕವೆಂದು ಸಾಂಪ್ರದಾಯಿಕ ಅರ್ಥವಿದೆ. ಇದು ಉಪನಿಷತ್ಕಾಲದ ವರೆಗಿನ ಸಾಂಕೇತಿಕ ಸಮಯಾರ್ಥವನ್ನುಳ್ಳದ್ದೂ ಕಾಣುತ್ತದೆ. ಆದರೆ, ಈ 'ಉತ್ತಾನ-ಪದ'ದಲ್ಲಿ ಅದಿತಿಯು ಹೆರಿಗೆಗಾಗಿ ಚಾಚಿದ (ಉತ್ತಾನ) ಪದ ಎಂಬ ಚಿತ್ರವು ಉಂಟೆಂದು ಗೆಲ್ಡನರ್ ಪ್ರಭೃತಿಗಳಿಗೆ ಎನಿಸಿದೆ. ಆದರೆ 'ಜಲಾಶಯ' ಮತ್ತು ಬದಿಗೆ 'ವೃಕ್ಷ' ಈ ಪ್ರತಿಮಾ ಸಂಕೇತವು ಹಲವೆಡೆಗೆ ಇದ್ದುದನ್ನು ವಿವರಿಸಿಯಾಗಿದೆ.[೧೨] ಪ್ರಸ್ತುತ ಸೂಕ್ತದಲ್ಲಿ ಸಹ ದಕ್ಷ (ಉತ್ತಾನ ಪದ ವೃಕ್ಷ), ಹಾಗೂ 'ಯತ್ ದೇವಾಃ ಸಲಿಲೇ ಅಬ್ದಃ' ಇರುವ ಜಲಾಶಯ (=ಅದಿತಿ) ಈ ಉಲ್ಲೇಖವು ಒಟ್ಟಿನ ಚಿತ್ರದಲ್ಲಿ ಉಂಟೇ ಉಂಟು. ಈ ಹಿನ್ನೆಲೆಯಲ್ಲಿ ಭುವಃ (ಸಂಭವ ಶಕ್ತಿಯಿಂದ) ಆಶಾಃ (ಕಾಮಿನಿಯರು) ಸಂಭವಿಸಿದರು ಎಂಬ ಅರ್ಥವೇ ಸರಿ ಹೋಗಬಲ್ಲದು.

ಆದರೆ, ಇದಕ್ಕೂ ಮುಂಚಿನ 'ಅಸತಃ ಸತ್ ಅಜಾಯತ' ಆ ಬಳಿಕ 'ಆಶಾಃ ಅನ್ವಜಾಯಂತ' ಎಂಬಲ್ಲಿ 'ಆಶಾ' ಸಂಕೇತಾತ್ಮಕ ಪ್ರತಿಮೆಯಲ್ಲಿ ಪ್ರತೀತಿಗೆ ಬರುವ ಅರ್ಥದ ಸೊಬಗೇ ಬೇರೆಯಾಗಿದೆ. ಈ ವೈಚಾರಿಕ ಆ-ಕೃತಿಯಲ್ಲಿ 'ಆಶಾ' ಸಂಕೇತಕ್ಕೆ, ಪ್ರಕೃತಿ-ಪುರುಷ ಸಂಬಂಧದ ಅರ್ಥವು (: lust or love) ಈ ಸುತರಾಂ

ಹಿಡಿಸುವುದೇ ಇಲ್ಲ! ಮೊದಲು ಗೋಚರಕ್ಕೆ ಬರದೆ ಇದ್ದ- 'ಅ (ಮೂರ್ತ) ಸತ್' ಒಳಗೊಂಡಿದ್ದ ಮೂರ್ತ ರೂಪಗಳು=ಸತ್=ಸತ್ಯ, ಬೆಳಕಿನಲ್ಲಿ ಬರತೊಡಗಿದುವು, ಎಂದು ಹೇಳುವಾಗ 'ಆಶಾಃ' ಉತ್ಪನ್ನವಾಯಿತು. ಇಲ್ಲಿ 'ಆಶಾ' ಸಂಕೇತಕ್ಕೆ ದಿಕ್ಕುಗಳು ಎಂದು ಸಂಪ್ರದಾಯದ ಅರ್ಥದ ಔಚಿತ್ಯವು ಸಿದ್ಧವಾಗುತ್ತದೆ. ದಿಕ್ಕು=ದಿಶಾ ಎಂಬ ಮಾತಿಗೆ (direction) ಎಂದು ಅರ್ಥ. ಮನುಷ್ಯನಿಗೆ ಹೊಳೆಯದೆ ದಿಙ್ಮೂಢತೆ ಕವಿಯುತ್ತದೆ. ಆಗ ದಿಕ್ಕು ತೋಚದಾಗುತ್ತದೆ. ಮನಸ್ಸನ್ನು ಕವಿದಿದ್ದ ಕತ್ತಲು, ಹೊಳೆ-ಹೊಳೆದಂತಾಗುವ ಅರ್ಥದ ಬೆಳಕಿನಲ್ಲಿ ಆಶಾ (ದಿಕ್ಕು) ಏನೊ ಕಂಡಂತೆ ಆಗುತ್ತದೆ. ಬೆಳಕು ಮತ್ತು ಆಶಾ=ದಿಕ್ಕು, ಇವುಗಳಲ್ಲಿ ಇರುವ ಅನ್ಯೋನ್ಯ ಅದೆಷ್ಟು ಹೃದ್ಯವಾಗಿದೆ! Ray of hope ಎಂಬಲ್ಲಿ ಆಂಗ್ಲ ಭಾಷಿಕರ ಅನುಭವದ ಬೆಂಬಲವೂ ದೊರೆಯುತ್ತಿದೆ. ನಿರೀಕ್ಷೆ : ಆಶಾ (hope) ಬೆಳಕಿನೊಡನೆ ತೊಡಕಿಕೊಂಡಿರುವುದನ್ನು ಮರೆಯಲಾಗದು. ಘೃಡನಿಗೆ 'ಆಶಾ' ಕೇವಲ ಉತ್ತಾನ-ಪದ ಅಥವಾ ಆಪ : ರಸಕ್ಕೆ ಸಂಬದ್ಧವಾಗಿ ಕಂಡದ್ದು ಏಕದೇಶೀಯ ಎಂಬುದು ಇಲ್ಲಿ ಸಿದ್ಧವಾಗುತ್ತಿಲ್ಲವೆ?

ಜ್ಞಾನೋಪಲಬ್ಧಿಯ ಭೂಮಿಕೆಯಿಂದ ಸಮೀಕ್ಷಿಸಿದಲ್ಲಿ ಸಹ ಇವೆರಡೂ ವೈಚಾರಿಕ ಆಕೃತಿಗಳ ಪಾತಳಿಯೇ ಬೇರೆ ಎಂಬುದು ಕಂಡು ಬರುತ್ತಿದೆ. ಅ(ಮೂರ್ತ) ಸತ್ತಿನೊಳಗಿಂದ ಮೂರ್ತ (ದಿಕ್ಕಾಲ ಪರಿಸರದ) ಸತ್ಯವು ಅರಿಕೆಗೆ ಬರತೊಡಗುತ್ತದೆ;.ಆಗ ಆಶಾ (: ದಿಕ್ಕು=ಪ್ರಕಾಶ) ಕಾಣುತ್ತದೆ. ಸುತ್ತಲಿನ ಸೃಷ್ಟಿಯ ಅರ್ಥವು ಅರಿಕೆಗೆ ಬರುತ್ತದೆ. ಈ ಭೂಮಿಕೆಯ ಜ್ಞಾನಸ್ವರೂಪದಲ್ಲಿ, ಸೃಷ್ಟಿಯ ನಿರ್ಮಾಣದ-ಪ್ರಕೃತಿ-ಪುರುಷ ಕಲ್ಪನೆಯ, ಈ ಬಗೆಯ ಪ್ರತಿಮಾ-ಸಂಕೇತಗಳ ಆವಶ್ಯಕತೆಯೆ ಉಂಟಾಗುವುದಿಲ್ಲ. ಇದು ಸೌರ ಪ್ರತಿಮಾರಾಧನೆಯ ಪರಿಸರದಲ್ಲಿ ಆಕಾರ ಪಡೆದ ಜ್ಞಾನ ಎಂಬುದನ್ನು ಇಲ್ಲಿಯ ಮಾಧ್ಯಮ : ಪ್ರತಿಮೆಗಳೇ ಹೇಳುತ್ತವೆ. ಆಶಾ : ದಿಶಾ; 'ಮೂರ್ತ' ಇದು ಕಣ್ಣಿನಿಂದ ಎಂದರೆ ಬೆಳಕಿನ ಮೂಲಕವೇ ಗಮನಕ್ಕೆ ಬರಬಲ್ಲುದು. ಅಗ್ನಿ : ಜಾತವೇದ; ಸವಿತೃ: ಧೀ ಪ್ರಚೋದಕ, ವಿಶ್ವರೂಪಾಣಿ ಪ್ರ-ಸವಿತಾ ಆದರೂ ಇಲ್ಲಿ ಹೆಣ್ಣಿನ ನಾತವಿಲ್ಲ. ಇದು ಋತ : ಸತ್ಯ. ಋತ=ಅರ್ಥ ನಿಯಮಕ್ಕೆ ಬದ್ಧವಾದ ಆಕೃತಿ : ದಿಕ್ಕಾಲಬದ್ಧ, ಋತ ದಿಕ್ಕಾಲಾತೀತ.

ಇದಕ್ಕೆ ಪ್ರತಿಯಾಗಿ ಏಕಂ-ಸತ್, ಈ ತತ್-ತ್ವ ಜ್ಞಾನದ ಮಾಧ್ಯಮ ಪ್ರತಿಮೆ. ಸಮಗ್ರ-ಅಖಂಡಿತಾ (undifferentiated whole) ಅದಿತಿ; ಅಥವಾ ಆದಿ ಪುರುಷ....ಈ ಭೂಮಿಕೆಯಲ್ಲಿ ಆಪಃರಸ, ತೀರ್ಥ, ಶಿಖರ, ಸ್ಕಂಭ, ಕುಂಭ, ಯಕ್ಷ, ಯಕ್ಷಿ, ಸರ್ಪ, ಚಂದ್ರ ಇತ್ಯಾದಿ. ಈ ಮಾಧ್ಯಮ ಪ್ರತಿಮೆಗಳ ಮೂಲಕ ಅರಿಕೆಗೆ ಬರುವ ಸತ್ಯ; ಜ್ಞಾನದ ಆಕೃತಿ ಸ್ವರೂಪವು ಸುಳ್ಳಲ್ಲ. ಆದರೆ, ಋತ : ಸತ್ಯ ಹಾಗೂ ಏಕಂ : ಸತ್ಯ ಇವೆರಡರ ಅನುಭವದ ಪಾತಳಿಗಳು ಭಿನ್ನಭಿನ್ನವಾಗಿರುವುದನ್ನು ಮರೆತು ನಡೆಯದು.

ಆದರೆ, ಇದು ನಿಜಸ್ಥಿತಿಯಿದ್ದು ಆಪ : ರಸ ಪಂಥೀಯ ತತ್-ತ್ವ ಪ್ರತಿಪಾದಕರು, ಸವಿತೃ-ವೈವಸ್ವತ ಪ್ರತಿಮೆಗಳನ್ನು ಸರ್‌ಪ ಶಕ್ತಿಯ ವೇಷ್ಟನದಲ್ಲಿ ಸಿಲುಕಿಸಿದ್ದು ಅಲ್ಲದೆ ವೈವಸ್ವತ ಪರಂಪರೆಯ ಮನು : ಮಾನವ ಪ್ರತಿಮೆಯನ್ನು 'ಮಹರ್ಷಯಃ 'ಸಪ್ತಪೂರ್ವೇ' ಈ 'ಪೂರ್ವೇ' ಎಂದರೆ 'ಸಪ್ತ'-ಸರ್‌ಪದ ಸಂಗಾತಿಯನ್ನಾಗಿಸಿ ಅದನ್ನು ತಮ್ಮ ಪಾತಳಿಗೆ ಎಳೆದು ತಂದುದು, ಮಾನವ ಸಂಸ್ಕೃತಿಯ ವಿಕಾಸಕ್ಕೆ ಪ್ರೇರಕವಾಯಿತೆ? ಮಾರಕವಾಯಿತೆ? ಇದನ್ನು ವಿಮರ್ಶಾ ವಿಚಕ್ಷಣ ಪ್ರಾಜ್ಞರು ನಿರ್ಧರಿಸಲಿ.

ಈ ವೈವಸ್ವತ ಮಾನವ ಪರಂಪರಾ ವಿಚ್ಛೇದಕ್ಕಾಗಿ, ಋಗ್ವೇದದಲ್ಲಿ ಅದೇ ವಿಕಾಸಗೊಳ್ಳುತ್ತಿದ್ದ 'ವೈಶ್ವಾನರ' (universal man) ಪ್ರತಿಮೆಯ ಉದಾತ್ತ-ಭವ್ಯವಾದ ಆಕರ್ಷಣವನ್ನು ನಷ್ಟಗೊಳಿಸುವ ಬುದ್ಧಿ ಪುರಸ್ಸರ ಪ್ರಯತ್ನವಾದುದನ್ನು ಸಪ್ರಮಾಣವಾಗಿ ತೋರಿಸಬಹುದಾಗಿದೆ. ಆದರೆ, ಆಪ: ರಸ ಪಂಥವು, ಐಹಿಕ ಜೀವನ ಉದಾತ್ತ ಪ್ರೇರಣೆಯ ಮಾಧ್ಯಮ ಪ್ರತಿಮೆಗಳನ್ನು ವಿಕೃತಗೊಳಿಸಲು ಮಾಡಿರುವ ಪ್ರಯತ್ನಗಳ ವಿವರಣೆಯೇ ಈ ಪ್ರಬಂಧದ ಮುಖ್ಯ ಉದ್ದೇಶವಲ್ಲ. ನಾಗ ಪ್ರತಿಮಾರಾಧನೆಯ ಸಂದರ್ಭದಿಂದ, ಈ ನಾಗಬಂಧದಲ್ಲಿ ಸಿಲುಕಿ ಇಂದು ಅದೃಶ್ಯವಾಗಿರುವ ಅಥವಾ ವಿಕೃತ ರೂಪದಲ್ಲಿ ಉಳಿದಿರುವ ಕೆಲವು ಸೌರಸಂಕೇತಗಳ ಸ್ವಲ್ಪವಾದರೂ ಪರಿಚಯವಾಗದೆ ಈ ನಾಗ ಮಹಿಮೆ ಅರಿಕೆಗೆ ಹೇಗೆ ಬಂದೀತು? ಎಂಬ ಕಾರಣದಿಂದ ಸೌರ ಸಂಕೇತಗಳನ್ನು ಕುರಿತು, ಓಘದೊಡನೆ ನಾಲ್ಕು ಮಾತು ಹೇಳುವುದೂ ಅವಶ್ಯವಾಗಿ ಬಂತು.

ಮಾನವರೊಳಗಿನ ಚಿತ್-ಚೈತನ್ಯ : ಪ್ರಜ್ಞೆ : ವಿಧಾಯಕ ಪ್ರಶ್ನೆ; ಋತಾಧಿಷ್ಠಿತ ಸತ್ಯದ ಆಕೃತಿಯೆಂದರೆ ವೈಶ್ವಾನರ ಮೂರ್ತಿ. ಸಮಾಜ: ಸಮಷ್ಟಿ ರೂಪದ 'ಸಹಸ್ರಶೀರ್ಷ' ಪುರುಷನ ಆರಾಧನೆಯಲ್ಲಿಯೆ, ಮಾನವ ಜೀವಿತ ಸಾರ್ಥಕ್ಯವಿರುವುದನ್ನು ಮನಗಾಣಿಸಿಕೊಡುವ ದಾರಿಯಲ್ಲಿ ವಿಕಾಸಗೊಳ್ಳುತ್ತಿದ್ದ ತತ್-ತ್ವಜ್ಞಾನದ ಆಕೃತಿಯು ಋಗ್ವೇದ ಕಾಲದಲ್ಲಿಯೆ ನಾಗಪಾಶದಲ್ಲಿ ಸಿಲುಕಿ, ಪುರುಷ-ಪ್ರಕೃತಿ ಪ್ರತಿಮೆಯ ಅಂಗವಾಗಿ ಬಳಿಕ ಕಾಣೆಯಾಗುತ್ತದೆ! ವಿಶ್ವಮಾನವ : ವೈಶ್ವಾನರ ಪ್ರತಿಮೆ; ಈ ಶಬ್ದ-ಪ್ರತಿಮೆಯ ಅರ್ಥವೇ ಸಾಕ್ಷಿ, ಇದರ ವೈಶ್ವಕ ಸ್ವರೂಪ ಮನಗಾಣಿಸಿಕೊಡಲು. ಆದರೆ, ಗೀತೆಯ ಭಗವಂತನು ಹೇಳುತ್ತಾನೆ 'ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ' ಎಂದರೆ ಇದು ವೈಯಕ್ತಿಕ ಸ್ವರೂಪದ್ದಾಯಿತು! ಸಾಮಾಜಿಕ : ಸಮಷ್ಟಿಯ ಅಸ್ತಿತ್ವದ ಪ್ರಜ್ಞೆ ಜಾಗ್ರತವಾಗಿ ಉಳಿಸಿಕೊಳ್ಳಲು ಸಾಧನವಾದ ಈ ಮಾಧ್ಯಮ: ಪ್ರತಿಮೆ ಭಗ್ನವಾಗಿ ನುಚ್ಚು ನೂರಾರಾಗಿ ಒಂದೊಂದು ವ್ಯಕ್ತಿಯ ಜಠರಾಗ್ನಿಯಾಯಿತು, ಆಪ: ರಸ ಪಂಥೀಯ ತತ್ವಜ್ಞಾನದಲ್ಲಿ!

ಇನ್ನೂ ಬಚ್ಚಿ ಉಳಿದಿರುವ ಈ ತಂತ್ರದ ಘೋರರೂಪ ಬಯಲಿಗೆ ಬರುವುದು ಅವಶ್ಯವಿದೆ. ಈ ವೈಶ್ವಾನರನನ್ನು ಜಠರಾಗ್ನಿ ಎಂದರೆ ಕ್ಷುಧೆ ಎಂಬ ರೂಪಕ್ಕೆ ತಿರುಗಿಸಿದ್ದಾಯಿತು. ಕ್ಷುಧೆ=ಮಾನವನಲ್ಲಿ ಅಡಗಿರುವ ಮೃತ್ಯು=ಹಾವು=ಕಾಲ=ಸರ್ಪ[೧೩] ಮೃತ್ಯು, ಕ್ಷುಧಾ ರೂಪದಿಂದ ಹುಟ್ಟಿನಿಂದಲೇ ಆವರಿಸಿದೆ! ಎಂದರೆ ವೈಶ್ವಾನರಾಗ್ನಿ ಮಾನವರಲ್ಲಿ ಅಡಗಿರುವ ಕಾಲ-ಸರ್ಪ. ಹೊತ್ತು (ಕಾಲ) ಬರುತ್ತಲೆ ಕಚ್ಚಿಬಿಡುವುದು. ಈ ಮೃತ್ಯುರೂಪ 'ಕ್ಷುಧಾ' ಸಂಕೇತವು ಋಗ್ವೇದದಲ್ಲಿಯೆ ತುಂಬ ಲಲಿತ ಸಂಮೋಹಕ ರೂಪದ ಪ್ರತಿಮೆಯಾಗಿ ಸ್ಥಾನ ಪಡೆದಿದೆ. 'ದಾನ ಸ್ತುತಿ' ಹೆಸರಿನ ಒಂದು ಸೂಕ್ತದಲ್ಲಿ 'ಕ್ಷುಧಮಿತ್ ವಧಮ್' ಎಂಬ ಸೂತ್ರವಾಕ್ಯವು ಕರಾಳ ಅರ್ಥಯುಕ್ತವಾಗಿದೆ. ಗೀತೆಯಲ್ಲಿ, ಇಲ್ಲಿಯ ಒಂದು ಶಬ್ದ ಪ್ರತಿಮೆಯ ಸುಧಾರಿಸಿದ ಆವೃತ್ತಿಯಿದೆ: ಕೇವಲಾಘೋ ಭವತಿ ಕೇವಲಾದೀ[೧೪] "ಭುಂಜತೇ ತು ಅಘಂ ಪಾಪಾಃ ಪಚಂತೇ ಯೇ ಆತ್ಮಕಾರಣಾತ್", ಎಷ್ಟು ಉದಾತ್ತ ವಿಚಾರವಿದು! ಆದರೆ, ಹಸಿವನ್ನು ಸಾವು ಎಂಬ ಶ್ರದ್ಧೆಯ ಈ ಸೂಕ್ತವು ಋಗ್ವೇದದಲ್ಲಿ ಹೇಗೆ? ಈ ಸೂಕ್ತಕಾರನು ಭಿಕ್ಷು ಆಂಗಿರಸನಂತೆ! ಋಷಿ: ಐಹಿಕ ಜೀವನ ಮೂಲ್ಯಗಳಲ್ಲಿ ನಿಷ್ಠೆಯಿದ್ದವನು. ಇಂತಹ ಋಷಿ-ಕವಿಗಳ ಸೂಕ್ತ ಸಂಗ್ರಹ ಎಂದು ನಂಬಿಸಿರುವ ಈ ಸಂಕಲನದಲ್ಲಿ 'ಭಿಕ್ಷು' (ಬೌದ್ಧ? ಜೈನ? ಅಥವಾ ಔಪನಿಷದಿಕ ಭೂಮಿಕೆಯ ಮುನಿ) ರಚಿತ ಸೂಕ್ತವೇ? 'ಹಸಿವೇ ಸಾವು' ಕ್ಷುಧಮಿತ್ ವಧಮ್! ಈ ಹಾಳು ಹಸಿವು! ಈ ಹಸಿವೇ ವೈಶ್ವಾನರ!

ಸಾವಿನ ಸ್ವರೂಪದ ಹಸಿವು ಎಂಬ ಸರ್ಪ ವೈಶ್ವಾನರನನ್ನು ಜಠರದಲ್ಲಿ ಸಾಕಿರುವ ಮನು-ಮಾನವನು 'ಸಪ್ತ' ಪೂರ್ವೇಗಳಿಂದ ಏನು ಬೇರೆ? ಈ ರೀತಿಯಲ್ಲಿ ಪೂರ್ವೇಸಪ್ತ ಸಂಗಾತಿಗಳೆಂದು ವರ್ಣಿತರಾಗಿ ವೈಶ್ವಾನರನೂ ಅದರ ಪೂಜಕ ಮಾನವನೂ ಇಬ್ಬರೂ ಬೆಲೆಗೇಡಾಗಿದ್ದಾರೆ-ವ್ಯಾಸಾದಿ ಗಂಗಾ-ಪುತ್ರರಿಂದ.

ಇನ್ನು 'ಸಪ್ತ' ಋಷಿಗಳ ಬಗೆಗಿನ ವಿವರ ಈ ಮೊದಲು ಸ್ವಲ್ಪ ಬಂದಿದೆ. ಕೊನೆಗೆ ಇವರು 'ಸಪ್ತ' ಪ್ರಾಣಾಃ ಆಗಿ ಮಾನವ ಶರೀರದ ಅಂಗವಾಗುತ್ತಾರೆ, ಅದಿತಿಸಹಿತ! ಎಂದರೆ ಪ್ರತಿಯೊಂದು ಮಾನವ ದೇಹದಲ್ಲಿ ಸ್ತ್ರೀ+ಪುರುಷ, ಈ ಉಭಯ ಶಕ್ತಿಗಳೂ ಉಂಟು. ಈ ಪೂರ್ಣಬ್ರಹ್ಮ(ಸ್ತ್ರೀ+ಪುರುಷ)ದ ಹೊರಗೆ ಪ್ರಪಂಚದಲ್ಲಿ ಏನೂ ಇಲ್ಲ! ಈ ಪಿಂಡ-ಬ್ರಹ್ಮಾಂಡ ನ್ಯಾಯವನ್ನು ಪ್ರತಿಪಾದಿಸುವ ಗುಹ್ಯತಂತ್ರವು ಅದ್ಭುತ ರಮ್ಯವಾಗಿದೆ. ಪ್ರಪಂಚದಲ್ಲಿ ತತ್: ಏಕಂ: ಸತ್, ಇದರ ತಾಳೆ ನೋಡಲು ಗೀತೆಯ ಪ್ರಮುಖ ಸಾಂಕೇತಿಕ ಪ್ರತಿಮೆಯೊಂದೇ ಸಾಕು : ಕುರುಕ್ಷೇತ್ರ (=ಕರ್ಮಭೂಮಿ, ಪ್ರಪಂಚ). ಅದರಲ್ಲಿ ನರನು ಹೋರಾಟಕ್ಕೆ ಅಣಿಯಾಗಿದ್ದಾನೆ. ಗೀತೆ ಹೇಳುವ ಪ್ರಭು-ಸಾಕ್ಷಿ (: ಸಂಭ್ರಾಮಕ) ತೇರಿನಲ್ಲಿ (=ನರನ ದೇಹದಲ್ಲಿ) ಕುಳಿತಿದ್ದಾನೆ! ಎಂದರೇನಾಯ್ತು? ಮಹಾಭಾರತವು ಒಂದು ಐತಿಹಾಸಿಕ ಕಾವ್ಯ ಎಂಬ ಹಾಗಿನ ಮೊಗವಾಡವೂ ಶುದ್ಧ ಸಂಭ್ರಾಮಕ. ನರ-ನಾರಾಯಣ ಹಾಗೂ ಕುರುಕ್ಷೇತ್ರದಲ್ಲಿ ನಿಂತ ನರನ ತೇರಿನಲ್ಲಿ ಕುಳಿತ ಪ್ರಭು-ಸಾಕ್ಷಿ ಇದು ಏನೆಲ್ಲವೂ ಸೇರಿ ಒಂದು ವ್ಯಕ್ತಿಯ ದಿವ್ಯ ಆಕೃತಿಯು ಮಾತ್ರ ತಳಪಾಯದಲ್ಲಿ ಉಳಿಯಿತು! ಪ್ರಪಂಚದ ನಾನಾತ್ವದಲ್ಲಿ ಏಕ (ತ್ವ)ದ ದರ್ಶನಕ್ಕೆ ಭಗವದ್ಗೀತೆಯ ಪ್ರಮುಖವಾದ ಈ ಪ್ರತಿಮೆಯೊಂದೇ ಸಾಕು. ಇನೂ ಬಲವಾದ ಪ್ರಮಾಣ

ಬೇಕಿದ್ದರೆ 'ಸಪ್ತ' ಪುತ್ರರನ್ನು ನೀರಿಗೆ ಹಾಕಿ ತಾನೂ ಜಲಸ್ವರೂಪಳಾದ ಶಂತನು ಪತ್ನಿ ಎಂಬ ಗಂಗೆ=ಪ್ರಚ್ಛನ್ನ ಅದಿತಿ! ಅದಿತಿಯ ಮೂಲಕ ಇಡೀ ಋಗ್ವೇದವೇ ಮಾಯಾಮಂದಿರವಾಗುವುದನ್ನು ನೆನೆಯಬೇಕು. ಆಪ : ಸಲಿಲ ಸ್ವರೂಪಿ ಅದಿತಿಯ ಪುತ್ರರು ಸೌರ ದೈವತಗಳೂ ಸಹ ಜಲರೂಪರಾದರು ಎಂದರೆ ಏನೆಲ್ಲವೂ ಜಲಮಯ. ಗೀತೆ ಹೇಳುವಂತೆ ಸರ್ವತಃ ಸಂಪ್ಲುತೋದಕ ಅವಸ್ಥೆಯಾದಾಗ ನಿರ್ಮಾಣವಾಗುವ ಆ ಕೃತಿಯು ಯಾವುದು? ಸಪಾಟು-ಸಮಪಾತಳಿ: Death the Leveller!

ಭಾರತೀಯ ಸಂಸ್ಕೃತಿ : ಜೀವನ ಈ ನಾಗಮುರಿಗೆಯಿಂದ ಅಲಂಕೃತವಾಗಿದೆ. ಆಚಾರ=ವಿಚಾರದ ಆಕೃತಿಯ ಅಲಂಕಾರ ರೂಪ ನಾಗಮುರಿಗೆಯು ಭಾರತೀಯ ಜೀವನವನ್ನು ತನ್ನ ಬಂಧುರ-ಬಂಧನದಲ್ಲಿ ಸೆರೆ ಹಿಡಿದಿದೆ. ಇದು ಅತಿಶಯೋಕ್ತಿಯೆಂಬ ಸಂದೇಹವನ್ನು ತೊಲಗಿಸುವ ಈ ಕೆಲವು ಆಚಾರ ವಿಚಾರಗಳ ಮಾದರಿ ಪರೀಕ್ಷಿಸಿಕೊಳ್ಳಿ. ಪ್ರಸ್ತುತ 'ಸಪ್ತ' ಎಂಬ ಋಷಿ (?) ನೋಡಿರಿ, ಭಾದ್ರಪದ ಶುದ್ಧ ಪಂಚಮಿಯೊಡನೆ ಸಂಬದ್ಧವಾಗಿದೆ, ಇದು. 'ಪುಣ್ಯ' ತಿಥಿ ಋಷಿ-ಪಂಚಮಿ. ಈ ಭಾದ್ರಪದ ಶುದ್ಧ ಪಂಚಮಿಯೊಡನೆ ಸಾಹಚರ್ಯವನ್ನು ಕಲ್ಪಿಸಲಾದ 'ಋಷಿ' ಅಗ್ನ್ಯಾರಾಧಕರ ವೈವಸ್ವತ ಮಾನವ ಪರಂಪರೆಯ ಪುರೋಹಿತ ಅನ್ವಯದ ಋಷಿಯಲ್ಲ. ಈ 'ಸಪ್ತ'-ಋಷಿ ಈ 'ಸಪ್ತ' ಪೂಜಿಸಲ್ಪಡುವುದು 'ಮುಟ್ಟುನಿಂತ', ವೃದ್ಧಾಪ್ಯದಲ್ಲಿ ಅಡಿಯಿಟ್ಟ ಪ್ರೌಢೆಯರಿಂದ! ಇನ್ನು, ಜೀವ: ಸರೀಸೃಪವನ್ನು ಭವಬಂಧನದಲ್ಲಿ ನೂಕುವ ಪಾಪಕರ್ಮದ ದಿನಗಳು ತೀರಿದುವು, ಎಂಬ ಸಂತೋಷದಿಂದ ಈ ವ್ರತದ ಉದ್ಯಾಪನೆ ಮಾಡಲಾಗುತ್ತದೆ. "ಕರ್ದಮೇನ ಪ್ರಜಾ ಭೂತಾಃ...." ಎಂದು ಶ್ರೀಸೂಕ್ತದಲ್ಲಿ ಸಂಸ್ತುತ (ಭೂ) ದೇವಿಯ ಕರ್ದಮ (: ಕೆಸರು) ಋಷಿ, ಪಂಚಮಿಯಂದು 'ಪಾಪದ ರಾಡಿ' ಎಂಬ ಭೂಮಿಕೆಯಿಂದ ಕಾಣುವುದು ನಾಗಾರಾಧನೆಯ ವೈಶಿಷ್ಟ್ಯವಾಗಿದೆ.

ಈ ಭಾದ್ರಪದ ಶುದ್ಧ ಪಂಚಮಿಯಂದು ಮುಟ್ಟು ನಿಂತವರಿಂದ ಪೂಜಿಸಲ್ಪಡುವ 'ಸಪ್ತ' ಇದು ಸರ್ಪ ಶಕ್ತಿಯ (ಶಬ್ದ) ಸಂಕೇತವೇ ಆಗಿರುವುದೆಂದು ಬಗೆಯದೆ ಈ ಪ್ರತಿಮೆಗೆ ಬೇರೊಂದು ಅರ್ಥವೇ ಅಶಕ್ಯವಿದೆ! ಋಗ್ವೇದದಲ್ಲಿ ಈ "ಸಪ್ತ" ಸಂಕೇತವು ನಾನಾ ಸಂಮೋಹಕ ರೂಪದಲ್ಲಿ ನಾಟ್ಯವಾಡಿದೆ! 'ಸಪ್ತ' ಋಷಿ ಎಂದಿರುವುದರಿಂದ ವೈವಸ್ವತ ಮಾನವ ಪರಂಪರೆಯ ಅಗ್ನ್ಯಾರಾಧಕ ಋಷಿಗಳಿಂದ ಭಿನ್ನ. ಈ 'ಸಪ್ತ' ಎಂಬ ಸಂಕೇತದೊಡನೆ ಸಂಬದ್ಧ ಋಷಿ (?) ವರ್ಗವು ಯಾವುದು, ಇದರ ಪತ್ತೆ ಆಗುವುದೇ ಅಶಕ್ಯ! ಆದರೂ ಈ 'ಸಪ್ತ' ಸಂಕೇತದೊಡನೆ ಉಚ್ಚರಿಸಲಾಗುವ 'ಋಷಿ' ಪ್ರತಿಮೆ...... Who are however only mentioned four times in Ring Veda ಎಂದು ಮ್ಯಾಕ್‌ಡೊನೆಲ್ಲರೇ ಕಂಡಿದ್ದಾರೆ! ಆದರೂ ಇವರಾರಿಗೂ ಸಂದೇಹ ಸೋಂಕಿಲ್ಲ! ಇನ್ನುಳಿದ ಋಷಿವರ್ಗದಿಂದ ಈ 'ಸಪ್ತ' ಸಂಕೇತದಿಂದ ಸೂಚಿಸಲ್ಪಡುವ ಜನ (?) ಇಷ್ಟು ಸ್ವಲ್ಪ ಸಲ ಏಕೆ? ಈ 'ಸಪ್ತ'ವು ಏನೋ ಗುಹ್ಯಾರ್ಥವನ್ನುಳ್ಳದ್ದು ಇರಲಾರದೆ? ಆದರೆ, ಈ ಸಂಹಿತಾಪಾಠದಲ್ಲಿ -ಋಷಿ-ಋಷಿಗಳಲ್ಲಿ 'ಏಕಂ: ತತ್ ಕಾಣುವುದಕ್ಕಾಗಿ ಮಾಡಿದ ಮಾಟವೇ 'ಸಪ್ತ'ದ ವಿಚಾರದಲ್ಲೂ ಉಂಟು. ಮ್ಯಾಕಡೊನೆಲ್ಲರೂ ಸಂಭ್ರಾಂತರಾಗದೇ ಇಲ್ಲ. 'ಸಪ್ತ' ವಿಪ್ರಾಃ 'ಸಪ್ತ' ಹೋತಾರಃ! ಎಂದರೆ ಈ 'ಸಪ್ತ' ಸಂಕೇತದ ಬಗೆಗಿನ ದಿಗ್ಭ್ರಾಂತಿವುಂಟಾಗದಿರಲು ಶಕ್ಯವೆ? ಆದರೆ, ಈ ಮೋಡಿಕಾರಿಕೆಯ ಗುಟ್ಟು ತಿಳಿದ ಬಳಿಕ, ವೈವಸ್ವತ ಮಾನವ ಪರಂಪರೆಯ ಆಚಾರ-ವಿಚಾರಕ್ಕೆ ಹೊಂದದ ಆಪಃ ರಸ ಪಂಥೀಯ ಜೀವನ ರೀತಿಯ 'ಸಪ್ತ' ಸಂಕೇತವನ್ನು ಗುರುತಿಸಿ ಬೇರ್ಪಡಿಸಿಕೊಳ್ಳಲು ತೊಂದರೆಯಾಗದು.

ಮನು-ಮಾನವನನ್ನು ತಮ್ಮ ಪೂರ್ವಜನು ಎಂದ ಹಾಗೆ ಈ 'ಸಪ್ತ' ಋಷಿ, ತಮ್ಮ ಅಸ್ಮಾಕಂ ಅತ್ರ ಪಿತರಃ ತೇ ಆಸನ್ ಒಬ್ಬ ಕವಿವರ್ಯನು ಹೇಳಿರುವುದನ್ನು ಮ್ಯಾಕಡೊನೆಲ್ಲರು ಸರಿಯಾಗಿ ಗುರುತಿಸಿದ್ದಾರೆ! ಈ ಉಲ್ಲೇಖವು 'ಮಧುರ' ವಾಮದೇವ ಋಷಿಯ ಮಂಡಲದಲ್ಲಿ ಬಂದಿದೆ. ಗರ್ಭಸ್ಥ ಹಸುಳೆ ಇದ್ದಾಗಲೇ 'ಜ್ಞಾನಿ (?)' ಆಗಿದ್ದನೆಂಬ ಈ ವಾಮದೇವನು, 'ಸಪ್ತ' ಋಷಿ ಪರಂಪರೆಯವನಿರುವುದು, ಹೀಗೆ ಇಲ್ಲಿ ಸೂಚಿತವಾಗುತ್ತದೆ. ವಾಮದೇವನ ತಾಯಿ 'ಅದಿತಿ'ದೇವಿಯ ಉಪಾಸಕಳಿದ್ದಳೆಂದು ಅವಳಲ್ಲಿ ಈ ದೇವಿಯ ಆವೇಶವಾಯಿತೆಂಬ

ಘಟನೆಯೇ ಹೇಳುತ್ತಿದೆ. ಈ ಸೂಕ್ತದಲ್ಲಿಯೆ, ಈ 'ಸಪ್ತ' ಋಷಿ ಕೃಪೆಯಿಂದ, ಗಂಡನು ಸೆರೆಮನೆಯಲ್ಲಿ ಇದ್ದಾಗ ಪುರುಕುತ್ಸನ ಹೆಂಡತಿಗೆ ಆ ರಾಜನ ದೇಶದಲ್ಲಿ ಅ-ರಾಜಕತ್ವವು ಉಂಟಾಗಬಾರದೆಂದು, ಒಂದು ಗಂಡು ಮಗುವು ಹುಟ್ಟಿತು! ಸಪ್ತಋಷಿಯ ಪೂಜೆಯಿಂದ ಸಂತತಿ ಸಂಭವಿಸುತ್ತಿದ್ದುದರ ಈ 'ಪುರಾವೆ' ಋಗ್ವೇದದ ವಾಮದೇವನ ಮಂಡಲದಲ್ಲಿ ದೊರೆಯುತ್ತಿರುವುದರ ಔಚಿತ್ಯ, ಭಾರಿ-ಭಾರಿ ಇದೆ!

ಭಾದ್ರಪದ ಶುದ್ಧ ೫, 'ಸಪ್ತ' (:ಸಪ್ರ) ಋಷಿ ಪಂಚಮಿ, ಇದಕ್ಕೂ ಮುಂಚೆ ಶ್ರಾವಣ ಶುದ್ಧ ೫. 'ನಾಗ ಪಂಚಮಿ'! ನಾಗಪಂಚಮಿಗೆ ಪಡುವಲಕಾಯಿ ನಿಷಿದ್ಧ! ಏಕೆ? ಹಾವಿನಂತಹ ಆಕೃತಿ!ಶಾವಿಗೆ (ಪಾಯಸ) ಸಹ ವರ್ಜ್ಯ. ಹಾವಿನ ಮಂತ್ರವನ್ನು ಕಲಿಯುವವರು ಪಾಲಿಸಬೇಕಾದ ನಿಯಮ. ಶ್ರಾವಣ, ಭಾದ್ರಪದಗಳ ಪಂಚಮಿಯಂತೆ ಆಶ್ವೀನ ಶುದ್ಧ ೫ ಲಲಿತಾದೇವಿಗೆ ಮೀಸಲು! ಲಲನೆ-ನೀರೆ=ಸೌಂದರ್ಯದೇವಿ, ನೀರೊಳಗಿಂದಲೇ ಬಂದವಳು; ನಾಗಸ್ವರೂಪಳೇ : ಈ ಹಿನ್ನೆಲೆಯಲ್ಲಿ ಹಾವು. ನೀರೆ ಮತ್ತು ಚಂದ್ರ ಇವರಲ್ಲಿರುವ ಅಂತರ್ಗತ ಸಂಬಂಧವನ್ನು ದೃಢಪಡಿಸುವ 'ಅಷ್ಟಮಿ' ಸಂಕೇತದ ಔಚಿತ್ಯ ಅರಿಕೆಗೆ ಬರಲಿದೆ. ನಾಗಚೌತಿಯೂ ಉಂಟು. ಚೌತಿ, ಪಂಚಮಿ, ಅಷ್ಟಮಿ, ಚತುರ್ದಶೀ ಇತ್ಯಾದಿ ಇವು ಚಾಂದ್ರಯೋಗಗಳು ಇದು ಗ್ರಹ=ಗ್ರಾಹಿ!

'ಅಷ್ಟಮೀ' ಈ ಸಂಕೇತದೊಡನೆ ಶಕ್ತಿದೇವಿಯ ಪ್ರತಿಮೆಯ ಸಾಹಚರ್ಯವನ್ನು ಕಲ್ಪಿಸಿದ್ದು ವಿಚಾರಾರ್ಹವಾಗಿದೆ. ದುರ್ಗಾ-ಕಾಲಾ-ಅಷ್ಟಮಿ ಈ 'ಎಂಟು' ಏನು? 'ಹದಿನೆಂಟು' ಎಂಬ ನಿಂದೆಯ ಸಂಕೇತ ಒಂದುಂಟು. ಹದಿನೆಂಟು ಈಸಂಖ್ಯೆ ಮಹಾಭಾರತ ಕಾಲದಲ್ಲಿ ಅಶುಭ ಸೂಚಕ ಸಂಖ್ಯೆಯಾಗಿರಬೇಕೇನೋ ತಿಳಿಯದು; ಉಪನಿಷತ್ತಿನಲ್ಲಿ 'ಹದಿನೆಂಟು' ಉಲ್ಲೇಖವಿದೆ. ಆದರೆ, ಈ ಸಂಕೇತಾರ್ಥವನ್ನು ಗುಪ್ತವಾಗಿಯೆ ಉಳಿಸಲಾಗಿದೆ.[೧೫] ಪ್ರಪಂಚವು ಒಂದು ಕಾಳಗದ ಕಣ=ಕುರುಕ್ಷೇತ್ರ, ಯಾದವಿ-ಕುಡಿದು ನಡುವೆ ಹೋಳಿ ಆಟವೆಂಬ ಪ್ರತಿಮಾ-ಸಂಕೇತಗಳೊಡನೆ ಕೊನೆಗೊಳ್ಳುವ ಮಹಾಭಾರತದ ಪರ್ವ : ೧೮; ಮಹಾಭಾರತದ ಹೃದಯಗೀತೆ; ಇದರಲ್ಲಿ ಅಧ್ಯಾಯ ೧೮; ಕುರುಕ್ಷೇತ್ರದಲ್ಲಿ ಕಾಳಗಕ್ಕೆ ಅಣೆಯಾದ ಸೈನ್ಯ ಅಕ್ಷೋಹಿಣಿ ೧೮! ಆದರೆ, ಈ (ಹದಿನೆಂಟರೊಳಗಿನ) 'ಎಂಟು' ಎಂಬುದರ ಹಿನ್ನೆಲೆಯು ಬೃಹದಾರಣ್ಯಕದ ಒಂದು ಉಲ್ಲೇಖದಿಂದ ಬಹಿರಂಗಕ್ಕೆ ಬರುತ್ತಿದೆ. ಸಪ್ತ ಪ್ರಾಣಗಳು=ಸಪ್ತ ಋಷಿಗಳು. ಈ ಸಪ್ತದೊಡನೆ ಇರುವವಳು 'ಎಂಟು', ಅರ್ಥವೇದದಿಂದ 'ಅದಿತಿ' ಎಂದೂ ಬೃಹದಾರಣ್ಯಕದಿಂದ 'ವಾಕ್' ಎಂದೂ ಗೊತ್ತಾಗುತ್ತದೆ.[೧೬] "ವಾಕ್‌ಅಷ್ಟಮಿ" ಇವಳು ಮಧ್ಯಮಾವಾಕ್: ಅಂಭೃಣ್ಯಾದಿ ಮಾನವೀ ಸ್ತ್ರೀಯರಲ್ಲಿ ಆಗುತ್ತಿರುವ ಆವೇಶವನ್ನು ಅದಿತಿ, ಸರಸ್ವತಿ, ಅಂಭೃಣೆ, ಇತ್ಯಾದಿ ಹೆಸರಿನಿಂದ ಗುರುತಿಸಿಕೊಳ್ಳುತ್ತಿದ್ದರು. ಆದರೆ, ಉಪನಿಷತ್ಕಾಲದಲ್ಲಿ ಈ 'ಆವೇಶ' ಬರುವ ದೃಶ್ಯವನ್ನು ಸ್ತ್ರೀಯರ ಸಂದರ್ಭದಲ್ಲಿ, ಅದು 'ಗಂಧರ್ವ' ಎಂಬ ಅದೃಶ್ಯಪುರುಷನ ಆವೇಶ ಎಂದು ಬಗೆಯಲಾಗುತ್ತಿತ್ತು.[೧೭]

ಈ ಅಷ್ಟಮಿ (ವಾಕ್:) ಆಧುನಿಕ ದುರ್ಗಾ: ಕಾಲೀ ಈ ಸಂಕೇತದ ದೇವಿಗೂ ಸಂಬದ್ಧವಿರುವುದರಿಂದ, ಉಪನಿಷತ್ತಿನ ವಾಕ್-ಅಷ್ಟಮಿಯು 'ಸಪ್ತ'ಸಂಗಾತಿ ಅದಿತಿಯೆಂಬುದು ನಿಶ್ಚಿತವಿರುವುದರಿಂದ ಈ ಶಾಕ್ತ ಸಂಪ್ರದಾಯವು ವೇದಕಾಲದಷ್ಟು ಪ್ರಾಚೀನ. 'ಅದಿತಿ'-ಸಂಪ್ರದಾಯದಷ್ಟು ಪುರಾತನ, ಎಂಬುದು ಸಂದೇಹಾತೀತ ಘಟನೆಯಾಗುತ್ತದೆ! ಋಗ್ವೇದದ ಪೃಶ್ನಿ: ಆದಿತಿ=ಸಾರ್ಪರಾಜ್ಞಿ, ಎಂಬ ಕಾರಣದಿಂದ ಈ (ವಾಕ್) ಅಷ್ಟಮಿಯನ್ನು ಸರ್ಪಶಕ್ತಿಯ ಆರಾಧನೆಯ ತಿಥಿಯಾಗಿ ಕಲ್ಪಿಸಿಕೊಂಡಿರುವಲ್ಲಿ ಇರುವ ಔಚಿತ್ಯವು ಬೆಳಕಿಗೆ ಬರುತ್ತದೆ. ಭಾದ್ರಪದ ಶುಕ್ಲ ೮ ದಿನ ದಾರದ (ಎಳೆಗಳ) ಗೌರೀ ಅಷ್ಟಮಿ ಎಂದು ಆಚರಿಸುವಲ್ಲಿ, ದಾರದ ಎಳೆ ಧರಿಸುವ ರೂಪದಿಂದ ಸಾಂಕೇತಿಕ ನಾಗ ಪ್ರತಿಮೆಯನ್ನೇ ಕೊರಳಲ್ಲಿ ತಾಳಿದಂತೆ ಆಗುತ್ತಿದೆ. ನಾಗ ಪಂಚಮಿಗೆ ಪಡುವಲ ಕಾಯಿ ವರ್ಜ್ಯವಿದ್ದರೂ, ಈ ಅಷ್ಟಮಿಯಂದು ಹಾಗೂ ದೇವೀ ಮಹಾಪೂಜಾದಿ ದಿನದಂತೆ ಪಡುವಲಕಾಯಿ ಅಡಿಗೆಯಲ್ಲಿ ಬೇಕೇಬೇಕು, ಎಂಬ ಸಂಪ್ರದಾಯವಿದೆ. 'ಅಷ್ಟಮಿ' ಬನದೇವಿ=ಮ್ಹಾಳಚಿಗೂ ಉಂಟು! 'ಬಂದಷ್ಟಮಿ' ನಡೆವಳಿ ಹಲವರಲ್ಲಿ ಉಂಟು. ಬಂದ=ಬನದ ಹುಣ್ಣಿವಿಗೆ ದೇವಿ ಜಾತ್ರೆ! ಹೀಗೆ ದೇವಿಗೆ ಸಂಬದ್ಧ ಅಷ್ಟಮಿಗಳು "ಸಪ್ತ ಮಾತೃಕೆಗಳು ಅಷ್ಟ" ಆದದ್ದೂ ಉಂಟು.

ಇನ್ನೂ ಈ ಒಂದು ಹೆಣಿಗೆಯ ಸೊಬಗು ನೋಡಿ: ಶ್ರಾವಣ ಕೃಷ್ಣಪಕ್ಷದ ಅಷ್ಟಮಿ ನೀಲಾಂಗ ವಿಷ್ಣು (ಶೇಷ?) ರೂಪನು ಎಂಬ ಕೃಷ್ಣನು ಭೂಲೋಕಕ್ಕೆ ಅವತರಿಸಿದ ದಿನ! ಈ ಕೂಸನ್ನು ಕತ್ತಲೆಯಲ್ಲಿ ಯಮುನಾ ನದಿ ದಾಟಿ ಆಚೆಯ ದಂಡೆಗೆ ಒಯ್ಯಲಾಗುತ್ತದೆ. ಯಮುನೆ ಮೃತ್ಯು: ಸರ್ಪಗಳ ತವರು. ಅಕ್ರೂರನಿಗೆ ನಾಗಲೋಕದ ದರ್ಶನವಾದುದು ಈ ನದೀ ತಳದಲ್ಲಿಯೇ! ಕೃಷ್ಣನ ಜೀವನದೊಡನೇ 'ಕಾಲಿಂದೀತಟ'ದ ಈ ಸಾಂಕೇತಿಕ ಸಂಬಂಧವು ಕಾಕತಾಲೀಯ ನ್ಯಾಯವೆನ್ನಲು ಆದೀತೆ? ಈ ಅಷ್ಟಮಿಗೆ ಹುಟ್ಟಿದ ಒಂದು ಹೆಣ್ಣು (ಶಿಶು) ಕಂಸನಿಗೆ ಒಪ್ಪಿಸಲಾಯಿತಂತೆ.... ಇಲ್ಲಿ ಶಕ್ತಿ (:ಸರ್ಪದ) ಅಷ್ಟಮಿಗೆ ಕೃಷ್ಣಜನ್ಮ! ಈ ಸಂಬಂಧ ಜೋಡಿಸಿರುವಲ್ಲಿಯೂ ಒಂದು ಯೋಜನೆಯು ಉಂಟೆಂದು ಬಗೆಯಲು ಸಾಕಷ್ಟು ಅವಕಾಶವಿದೆ. ಅಷ್ಟಮಿಯು, ಶಕ್ತಿ (:ಶಾಕ್ತ) ಸಂಪ್ರದಾಯದ ಒಂದು ಮಹತ್ವದ ಸಮಯ. ನವರಾತ್ರಿಯಲ್ಲಿ ಮಹಾನವಮಿಯ ಮುನ್ನಾ ದಿನ ಆಗುವ ಮಹಾರಾಷ್ಟ್ರ ಕರ್ನಾಟಕದ ಮಹಾಲಕ್ಷ್ಮೀ=ಮ್ಹಾಳಸೀ, (ಮಲ್ಲಯ್ಯ) ಆರಾಧನಾ ವೈಶಿಷ್ಟ್ಯವು, ಬಂಗಾಳದ ದುರ್ಗಾಪೂಜೆಗಿಂತ ತೀರ ಅಹಿಂಸಕ ಸ್ವರೂಪದ್ದಾಗಿದ್ದರೂ, ಸಾಂಸ್ಕೃತಿಕ ದೃಷ್ಟಿಯಿಂದ ಅಭ್ಯಸನೀಯವಿದೆ. ಈ 'ಭಗವತಿ'ಯ ಉತ್ಸವದ ತೀರ ಸಂಕ್ಷಿಪ್ತ ಸೂಚಕ ಉಲ್ಲೇಖವೊಂದು ಪಂಪಭಾರತದಲ್ಲಿ ಉಂಟು.

ಮನು-ಮಾನವ ವೈವಸ್ವತನ ಪರಂಪರೆಯು ಹೇಗೆ ಮುಳುಗಿತು-ಏಕೆ ಮುಳುಗಿತು. ಇದು 'ಸಪ್ತ' : ಸರ್ಪ ತಂತ್ರದ ಮೇಲಣ ವಿವರಣೆಯಿಂದ ಅರಿಕೆಗೆ ಬರುವಂತಿದೆ. ಋಗ್ವೇದದಲ್ಲಿ ಈ ಮನುವಿನ ಉಲ್ಲೇಖಗಳಷ್ಟು ಈ 'ಸಪ್ತ' (ಋಷಿ) ಜನದ ಸ್ಪಷ್ಟ ಉಲ್ಲೇಖಗಳಿಲ್ಲ. ಮೇಲ್ತೋರಿಕೆಯಲ್ಲಿ ಮನು: ವೈವಸ್ವತ ಪರಂಪರೆಯ ಮೇಲ್ಮೆಯನ್ನೇ ಸೂಚಿಸಿದಂತಾಯಿತು. ಆದರೆ ಸೌರ-ವೈವಸ್ವತ ಪ್ರತಿಮಾರಾಧಾಕರ ಜೀವನ ನಿಷ್ಠೆಯು ಮೆಲ್ಲನೆ ನಾಗ ಪ್ರತಿಮಾರಾಧಕರ ಜೀವನ ನಿಷ್ಠೆಯಲ್ಲಿ ಮಾರ್ಪಟ್ಟಿರುವುದನ್ನು 'ಸಪ್ತ'ರ್ಷಿಗಳೆಂಬುವರ ನೆಪದಿಂದ ನಾರಣ-ಕೃಷ್ಣರ ಅಂಗ=ಮಾನಸ ಪುತ್ರ ಎಂಬ ಮಟ್ಟದಲ್ಲಿ ವೈವಸ್ವತ ಮಾನವ ಪರಂಪರೆಯು ಆಪ:ರಸ ಪಂಥದಲ್ಲಿ ಅಡಗಿಸಿ ಬಿಟ್ಟುದ್ದನ್ನು ಕಂಡದ್ದಾಯಿತು. ಮೂಲ ಆಗ್ನ್ಯಾರಾಧಕ ಸಂಪ್ರದಾಯವನ್ನು ನಷ್ಟಗೊಳಿಸಲು ಆದ ಏನೆಲ್ಲ ಪ್ರಯತ್ನಗಳ ಕಥೆ ಬೆಳಕಿಗೆ ಬರಬೇಕಾಗಿದೆ. ಈಗ ಒಂದಕ್ಕಿಂತ ಹೆಚ್ಚು ಬಗೆಗಳಿಂದ, ಜೀವನದ ಅರ್ಥ : ಮೂಲ್ಯ : ಸೌಂದರ್ಯವನ್ನು ಮನಗಾಣಿಸಿ ಕೊಡುವ ಸೌರ ಪ್ರತಿಮೆಗಳ ಅವಮೂಲ್ಯನವು ಹೇಗೆ ಆಗಿದೆ ಎಂಬುದನ್ನು ಕೇವಲ ಸೂಚಿಸಿದ್ದಾಗಿದೆ. ಅಗ್ನಿ ನೀರಲ್ಲಿ ಅಡಗಿದ; ಜಾತವೇದ ಅಗ್ನಿಗೆ 'ಯಕ್ಷ'ದ ರಹಸ್ಯಾರ್ಥವೇ ತಿಳಿಯಲಿಲ್ಲ. ಈ ಅಗ್ನಿ ಆದಿತ್ಯರೂಪನು=ಹವ್ಯ+ಕ್ರವ್ಯ ಎರಡೂ ಬಗೆಯವನೂ......-, ಇಂದ್ರನ ತೇಜೋವಧೆಯ ತಂತ್ರ, ಪಿತೃ ಕೃಷ್ಣ (ಸರ್ಪ) ಹಂತಕ; ವೃತ್ರ=ಅಹಿ (:ನಾಗ=ಬ್ರಾಹ್ಮಣ) ಕೊಲೆ, ಬ್ರಹ್ಮಹತ್ಯಾಪಾತಕಿ ಅಂಭೃಣಿಯಿಂದ ಪೋಷಿತ; 'ಯಕ್ಷ'ರಹಸ್ಯ ತಿಳಿಯದೇ ಉಮಾದೇವೀ ಕೃಪೆಯಿಂದ 'ಜ್ಞಾನ' ಪಡೆದ. ಇದೇ ಬಗೆಯಲ್ಲಿ ಮನು-ವೈವಸ್ವತನ ಗತಿ. ವೈವಸ್ವತನಲ್ಲದೇ, 'ಅಪ್ಸು'-ಅಪ್ಸುಪುತ್ರನೆಂಬ ಮನು, ಸಂವರಣೆ ಎಂಬ ಮನು ಋಗ್ವೇದದಲ್ಲೇ ಇದ್ದಾರೆ! ಋಗ್ವೇದವು ಎಷ್ಟು ಮನ್ವಂತರಗಳ ಕಥಾಭಾಗದಿಂದ ಕೂಡಿದೆ ಎಂದಾಯ್ತು? ಇಷ್ಟೇ ಸಾಲದೇ ನಾರಣ-ಕೃಷ್ಣರ ಅಂಗವಾಗುತ್ತಾನೆ. ಈ ಮನು! ಮತ್ತೆ ಈ 'ಮನು'ವಿನಿಂದ ಕಾಲಗಣನೆಯನ್ನು ಮಾಡಲಾಗುತ್ತದೆ! ಈ ಯಾವ ವಿಸಂಗತಿಯೂ ತಿಳಿಯದಷ್ಟು ಶ್ರದ್ಧೆ ಸ್ಥಿತ: ಘನ (solid) ಆಗಿದೆ. ಗೀತೆಯ 'ಸ್ಥಿತ' ಪ್ರಜ್ಞೆ, ಪ್ರತಿಮೆಯಲ್ಲಿ ಬುದ್ಧಿಯನ್ನು ಸ್ಥಿರ-ಘನಸ್ಥಿತಿಗೆ ಒಯ್ಯುವ 'ಮಂತ್ರ' ಸಂಮೋಹಕ ಶಕ್ತಿಯುಳ್ಳದ್ದು ಉಂಟೆಂಬುದೇ ಇಲ್ಲಿ ನಿದರ್ಶನಕ್ಕೆ ಬರುತ್ತಿದೆ.

ನರ (: ನಾರ) : ವೀರ್ಯವಂತ; ಪೂರೂರವಸ್ : ಇಳಾಸಂತಾನ

ವೈವಸ್ವತ ಮನು-ಮಾನವ ಎಂಬ ಮಾದರಿಗಿಂತಲೂ ಇಳಾ ಸಂತಾನ : ಪುರೂರವ : ನರ ಎಂಬ ಜೀವನ ಮಾದರಿಯು ಅತಿ ಪುರಾತನದ್ದಾಗಿರಲಿಕ್ಕೆ ಬೇಕು. ಪೂರೂರವ ಐಲ (< ಇಳಾ=ಇರಾ) ಈ ಹೆಸರು ಋಗ್ವೇದದ ಅಂತ್ಯದಲ್ಲಿ ಬರುತ್ತದೆ.[೧೮] ಮನು: ಮಾನವನ ಉಲ್ಲೇಖಗಳು ಎಲ್ಲೆಲ್ಲೂ-ಎಂದಿನಿಂದಲೇ ಇವೆ. ಇದರಿಂದ ಐಲ, ಪೂರೂರವನು ಮನು-ಮಾನವನಿಗಿಂತ ತರುವಾಯದವನು ಎಂದು ಗ್ರಹಿಕೆಯಾಗುವಂತಿದೆ.

ಆದರೆ, ಸೌರ ಅಗ್ನ್ಯಾರಾಧಕರ ಹಾಗೂ ಚಂದ್ರ ಆಪಃರಸ ಪಂಥೀಯರ ಸಂಸ್ಕೃತಿ, ವೈಚಾರಿಕ ವಿ-ಕಾಸ ಕ್ರಮವನ್ನು ನಿರೀಕ್ಷಿಸಿದಲ್ಲಿ, ಸೌರ ಅಗ್ನ್ಯಾರಾಧಕರಿಗೂ ತೀರ ಮೊದಲಿಗರು ಚಾಂದ್ರ ಆಪ; ರಸೋಪಾಸಕರು ಎಂದು ಕಂಡುಬರುತ್ತದೆ.

ಪುರೂ-ರವಸ್ ಈ ಹೆಸರು, ಒಂದು ಐತಿಹಾಸಿಕ ಆಖ್ಯಾಯಿಕೆಯ (legend) ಸ್ವರೂಪವೆನಿಸುವಂತಿದೆ! ಮನು-ಮಾನವ ಈ ಹೆಸರಿನಂತೆಯೆ ಇದೂ ಒಂದು ಕಾಲ್ಪನಿಕ ವ್ಯಕ್ತಿನಾಮ. ಒಂದು ವಿಶಿಷ್ಟ ಜೀವನ ಮಾದರಿಯ (type) ಸಾಕ್ಷಾತ್ಕಾರ ಮೂಡಿಸುವ ಶಬ್ದ-ಪ್ರತಿಮಾ ಮಾಧ್ಯಮ. ಆದರು, ಈ ಮಹಾಪುರುಷನೆಂದು ಹೇಳಲಾಗುವ ವಂಶ-ವೃಕ್ಷವನ್ನು ನಂಬಿ ಕಾಲಗಣನೆ ಮಾಡುವ ಸಂಮೋಹವು ಸಂಶೋಧಕರನ್ನು ಕಚ್ಚದೇ ಬಿಟ್ಟಿಲ್ಲ! ಸರ್ಪಶಕ್ತಿಯ ಆಸುರೀ ಪ್ರತಿಮಾ ಮಾಧ್ಯಮದ ಮಂತ್ರ ಸಾಮರ್ಥ್ಯದ ಉತ್ತಮ ನಿದರ್ಶನವು ಇಲ್ಲಿದೆ. ಮನ್ವಂತರಗಳು ೧೪! ಪೂರ್ವೇ 'ಸಪ್ತ'ರ ಸಂಗಡ ಉಲ್ಲೇಖಿಸಲಾಗುವ ಮನು: ಮಾನವ ಸಂಕೇತವೂ, ಆ 'ಸಪ್ತ'ರಂತೆಯೇ ಸರಣಶೀಲ=ಸಾರ್ಪ ಪಾತಳಿಯ ಶುದ್ಧ ಸಾಂಕೇತಿಕ ಶಬ್ದ-ಪ್ರತಿಮೆಯೆ ಆಗಿರುವ ಶಕ್ಯತೆಯಿಲ್ಲವೆ? ಊರ್ವಶಿಯ ಪ್ರೇಮಪಾಶದಲ್ಲಿ ಸಿಲುಕಿ "ಯಾವಳ ನೋಟಕ್ಕಂ ಬೇಟಕ್ಕಂ ಹಾವಕ್ಕಂ ಭಾವಕ್ಕಂ-ಕೂಟಕ್ಕಂ" ಮಾರು ಹೋಗಿ, ಬಳಿಕ ಉಂಟಾದ ವಿರಹ ತಾಪ ತಾಳಲಾರದೆ ಆ ಯೋಗಾ-ಯೋಗದಲ್ಲಿ ಲಭಿಸಿದ ತತ್-ಮಯಾನಂದವನ್ನೇ ಮರಳಿ-ಮರಳಿ ಮೆಲುಕುತ್ತ ಇನ್ನಾವುದರಲ್ಲಿ ಅರ್ಥ ಕಾಣದೆ, ಆರ್ತಭಾವದಿಂದ ತುಂಬ ಒರಲುತ್ತಿರುವನು ಎಂಬ ಹಾಗಿನ ಈ ಪುರೂ-ರವ ಎಂಬ ನಾಮ ಸಂಕೇತವೊಂದೇ ಸಾಕು, ಇದರ ಅನೈತಿಹಾಸಿಕ (-historical) ಸ್ವರೂಪವನ್ನು ಮನಗಾಣಿಸಿ ಕೊಡಲು ಋಗ್ವೇದದಲ್ಲಿ ಸೂಚಿತವಾದ ಈ ಸಾಂಕೇತಿಕತೆಯನ್ನು ಕವಿ ಕುಲಗುರು ಕಾಲಿದಾಸನು ವಿಕ್ರಮೋರ್ವಶೀಯದಲ್ಲಿ ಪರಿಣತ ಸ್ಥಿತಿಗೆ ಒಯ್ದು ಈ ಪ್ರತಿಮಾ: ಸಂಕೇತಾರ್ಥ ಸಾರ-ರೂಪವಾದ ಅಮರ ಶ್ಲೋಕವನ್ನು ರಚಿಸಿದ್ದಾನೆ.

ಕಾಡಿನಲ್ಲಿ ಕೆಸರ-ಕಮಲದ ನರುಗಂಪಿಗೆ ಮರುಳಾಗಿ ಝೇಂಕರಿಸುತ್ತಿರುವ ದುಂಬಿಯನ್ನು ಕಂಡ ಪುರೂ-ರವನ ನಿಟ್ಟುಸಿರಿನೊಂದಿಗೆ ಹೊರಬಂದ ಶ್ಲೋಕ-ಭಾಗವು ಹೀಗಿದೆ: ನಿನಗೆ ಈ ಊರ್ವಶಿಯ ಪವಿತ್ರವೂ ಅಮೃತಸದೃಶವೂ ಆನಂದದಾಯಕವೂ ಆದ ನರುಗಂಪಿನ ಸೊಗಸು ಸೋಂಕಿದ್ದರೂ ಸಾಕಿತ್ತು, ನೀನು ಈ (ದೇಹ:) ಪುಂಡರೀಕ ಪುಷ್ಪದಲ್ಲಿ ಆಸಕ್ತನಾಗಲು ಶಕ್ಯವಿತ್ತೆ?* ಋಗ್ವೇದದೊಳಗಿನ ಪುರೂರವನು ಆಡಿದ ಮಾತುಗಳೂ ಮೂಲದಲ್ಲಿ ಅಭ್ಯಸನೀಯವಾಗಿವೆ. ಆದರೆ ಈ ಪವಾಡ ಕಥೆಯ ನಿಜವಾದ ಹಿನ್ನೆಲೆಯು ತಿಳಿಯಲು ಇದನ್ನು ಹೋಲುವ ಗ್ರೀಕ್ ಪವಾಡಗಳ ತುಲನಾತ್ಮಕ ವ್ಯಾಸಂಗವು-ಮಾನವ ಶಾಸ್ತ್ರದ ಬೆಳಕಿನಲ್ಲಿ ಅವಶ್ಯವಾಗುತ್ತದೆ. ಮೂಲತಃ ಇದು ಕೇವಲ ಭಾರತೀಯ ಜೀವನ ಪರಿಸರದ ಪವಾಡ ಕಥೆಯಲ್ಲ; ಆದರೂ ಕ್ರಮವಾಗಿ ಭಾರತೀಯ ಸಾಂಸ್ಕೃತಿಕ ಸಮಯಕ್ಕೆ ಸರಿಹೋಗುವ ಆಕಾರಕ್ಕೆ ತಿರುಗಿರುವುದು ನಿಜ.

ಒಬ್ಬ ನೀರೆಗೆ ಮನಸೋತು ಅವಳ ಬಾಹುಪಾಶದಲ್ಲಿಯೇ ಉಳಿಯಲಿಚ್ಛಿಸುವ ಒಬ್ಬ ವೀರ್ಯವಂತನ ಕಥೆ. ಇದು ಗ್ರೀಕ್‌ಕಥೆಯ ಈಗ ದೊರೆವ ಆ-ಕೃತಿ ರೂಪದಲ್ಲಿಯೂ ಸಾಕಷ್ಟು ಮಾರ್ಪಾಟುಗಳು ಆಗಿವೆ. ರಾಬರ್ಟ್ ಗ್ರೇವ್ಸ ಇದನ್ನು ಅಲ್ಲಲ್ಲಿ ಸೂಚಿಸುವುದೂ ಉಂಟು. ಊರ್ವಶಿ ಮತ್ತು ಪುರೂರವ ಇವರಲ್ಲಿ ಆದ ಕರಾರು ಒಂದಿತ್ತು. ಪುರೂರವನು ತಮ್ಮ ಹಾಸಿಗೆಯ ಹೊರಗೆ ನಗ್ನಸ್ಥಿತಿಯಲ್ಲಿ ತನ್ನ ಕಣ್ಣಿಗೆ ಎಂದೂ ಬೀಳಲಾಗದು. ಎಂಬದು ಊರ್ವಶಿಯ ಕರಾರು. ಈ ಕರಾರಿಗೆ ತಪ್ಪಿದನೆಂಬ ನೆಪದಿಂದ ಊರ್ವಶಿಯು ಪುರೂರವನಿಂದ ಹೊರಟು ಹೋಗುತ್ತಾಳೆ!

ಈ ನೀರೆ ಪರಿಣಾಮತಃ ಮೃತ್ಯು ಸ್ವರೂಪಿ: ಸರ್ಪಿಣಿ ಎಂಬ ಹಾಗಿನ ಅನುಭವವು ಉಂಟಾಗುತ್ತಿದ್ದುದು ಅಂದಿನ ಜೀವನ ರೀತಿಯ ಒಂದು ವೈಶಿಷ್ಟ್ಯವೇ ಆಗಿದ್ದಿತೆಂದು ತೋರುತ್ತದೆ. ಪುರೂರವನ ವಂಶಸ್ಥನೆಂಬ

---

* 'ಯದಿ ಸುರಭಿಂ ಅವಾಪ್ಸ್ಯತ್ ಪುಣ್ಯ-ಪೀಯೂಷಗಂಧಃ, ತವರತಿಃ ಅಭಿವಿಷ್ಯತ್ ಪುಂಡರೀಕೆ ಕಿಂ ಅಸ್ಮಿನ್?' ಎಂದು ಕಾಳಿದಾಸನು 'ವಿಕ್ರಮೋರ್ವಶೀಯ ನಾಟಕಂ'ದಲ್ಲಿ ಹೇಳುತ್ತಾನೆ. ಈ ಮಾತಿಗೂ ಋಗ್ವೇದದಲ್ಲಿ ಬರುವ ಮಾತಿಗೂ ಅರ್ಥಾಂತರಗಳು ಇರುವುದನ್ನು ಕುರಿತು ಚರ್ಚಿಸುತ್ತಾರೆ (ಸಂ)

ಶಂತನುವಿನ ಮಡದಿ ಒಬ್ಬ 'ಗಂಗಾ'ದೇವಿ;* ಇವು: ಅದಿತಿ (ಗಂಗೆ), ಉರ್ವಶಿಯರ ಪವಾಡ ಕಥಾಭಾಗದೊಳಗಿನ ಈ ಅಂಶವು ಮಾನವೇತಿಹಾಸದ ತೀರ ಆರಂಭದ ಪರಿಸರ ಸೂಚಕವಾಗಿವೆ. ಗ್ರೀಕ್ ಪುರಾತನ ಕಥೆಯಲ್ಲಿ ಬರುವ ಇದೇ ಬಗೆಯ ನಗ್ನ-ಸತ್ಯದ ದರ್ಶನದ ಒಂದು ಉಲ್ಲೇಖ ಹೀಗಿದೆ: ಇದು, ಅದಿತಿ-ಊರ್ವಶಿಯರನ್ನು ಹೋಲುವ ಅಫ್ರೋಡೈಟಳ ಕಥಾಭಾಗ! ಇವಳೂ ನೀರೆ! ಝೀವೂಸ್ ಎಂಬ ದೈವತ ಇವಳ ತಂದೆಯ ಸ್ಥಾನದಲ್ಲಿ; ಅದಿತಿ-ವರುಣರಲ್ಲಿ, ಅದಿತಿ ದಕ್ಷರಂತೆ (ತಾಯಿಮಗ) ಸಂಬಂಧವಿದ್ದು, ಇವರೊಳಗಿನ ದಕ್ಷ-ಅದಿತಿ ಸಂಬಂಧವನ್ನು ಗುಪ್ತವಾಗಿ ಉಳಿಸಲು ಊರ್ವಶಿ-ನಾರ (ನೀರೆ) ನಿರ್ಮಿತಳಾಗಿದ್ದಾಳೆಂದು ತೋರುತ್ತದೆ. ಗ್ರೀಕ್‌ಝೀವುಸ್ ಮತ್ತು ಅಫ್ರೋಡೈಟ ಗ್ರೀಕಿನ ಪುರಾತನ ಪರಂಪರೆಯ ದೇವಿ: ನೀರೆ ಇವರ ನಡುವಣ ಸಂಬಂಧದ ಕಥೆಯ ತುಲನೆಯಲ್ಲಿ ಬೆಳಕಿಗೆ ಬರುತ್ತಿದೆ ಎರಡು ಭಿನ್ನ ಸಾಂಸ್ಕೃತಿಕ ಸಂಗಮ ಸೂಚಕವಾಗಿದೆ.

ಭಾರತೀಯ ಕವಿಗಳು ಅದಿತಿಯನ್ನು ವರುಣಮಾತೆ ಎಂದು ಹೇಳಿ ವರುಣ-ಅದಿತಿಯರಲ್ಲಿ ದಕ್ಷ ಅದಿತಿಯರಂತೆ ತಂದೆ ಮಗಳು ಎಂಬ ಸಂಬಂಧವನ್ನು ವ್ಯಕ್ತವಾಗಿ ಚಿತ್ರಿಸಿಲ್ಲ. ಊರ್ವಶಿ ಮತ್ತು ಅಫ್ರೊಡೈಟ ಈ ಇಬ್ಬರ ಕಥೆಯಲ್ಲಿ ಒಂದು ಸಾಮ್ಯವುಂಟು ಝುವೂಸನಿಗೆ ಪುತ್ರೀಸ್ವರೂಪಿ ಅಫ್ರೊಡೈಟಳ ಬಗೆಗೆ ಕಾಮಭಾವನೆಯಿತ್ತು.

> through zews never lay with his adopted daughter. Aphrodite as some say that he did, the magic girdle put him under constant temptation, at last he decided to humiliate her by making her fall desperately in love with a mortal

ಇದಕ್ಕಾಗಿ ಸೇಡು ತೀರಿಸಿಕೊಳ್ಳಲು ಅಫ್ರೋಡೈಟಳು ಒಬ್ಬ ನರನ ನೀರನ (Handsome Anchises, King of the Dardanians) ಮೋಹಕ್ಕೆ ಒಳಗಾಗಿ ಮರ್ತ್ಯಳಾಗುವಂತೆ ಮಾಡಿದನಂತೆ.

ನೀರೆ ಊರ್ವಶಿಗೆ ಮಿತ್ರಾ ವರುಣನಿಂದ ಅಗಸ್ತ್ಯ ವಸಿಷ್ಠರು ಹುಟ್ಟಿದ ಕಥೆ ವೇದದಲ್ಲಿಯೆ ಇದೆ. ಇವಳಿಗೆ ವರುಣನು ಸಿಟ್ಟಿನಿಂದ ಒಬ್ಬ ನರನನ್ನು ಮೋಹಿಸುವ ಶಾಪವಿತ್ತ ಕಥಾಭಾಗ ಪುರಾಣಗಳಲ್ಲಿ ಬರುತ್ತದೆ. ದಿವ್ಯಲೋಕದ ಊರ್ವಶಿಯು, ಪುರೂ-ರವನಿಗೆ ಮರುಳಾಗಲು ಇದೇ ಕಾರಣವಂತೆ! ಈ ಕಥೆಗಳಲ್ಲಿ ಇನ್ನೂ ಒಂದೆರಡು ಸಾಮ್ಯಸ್ಥಳ ಇವೆ......

> "One night he (handsome king) was asleep....on trogan mountain Ida, Aphrodite visited with the skins of bears and lions... when they parted at dawn, she revealed her identity.....Anhises was horrified to learn that he had uncoved the nakedness of a goddess and begged her to spare his life. She assured him that he had nothing to fear, and that their son would be famous." ೧೯

ಊರ್ವಶೀ ಕಥೆಯಲ್ಲಿಯೂ ಮೋಹಿಸಿದ್ದು ಒಬ್ಬ ರಾಜನಿಗೆ; ಅವಳು ಆಗಲೆ ಬಸುರಿ. ಬೇಗನೆ ಸುವಿಖ್ಯಾತ ಮಗನ ತಾಯಿಯಾಗಲಿದ್ದಾಳೆ. ಗ್ರೀಕ್ ಕತೆಯಲ್ಲಿ ಸ್ತ್ರೀಯೆ ತಾನು ಮೋಹಿನೀ ಎಂಬುದನ್ನು ವ್ಯಕ್ತಪಡಿಸಿದಳೆಂಬ

---

* ಇಂದಿನ ಜೀವನ ರೀತಿಯಲ್ಲಿ ಅರ್ಥವಾಗದ ಕಾರಣಕ್ಕಾಗಿ ಬುದಿಂಗನೆ ಗಂಡನನ್ನು ಬಿಟ್ಟು ಹೊರಟು ಹೋಗುತ್ತಾಳೆ! ಸ್ತ್ರೀಯು ಪುರುಷನ ಸಹಚರಿಯಾಗಿ ಅಥವಾ ಸ್ತ್ರೀಯು ಪುರುಷನನ್ನು ಸಹ-ಚರನೆಂಬ ರೀತಿಯಲ್ಲಿ ಸ್ವೀಕರಿಸಿದ ಜೀವನ ರೀತಿಯಿಂದ ಬಳಿಕ ಕುಟುಂಬ ಸಂಸ್ಥೆಯ ಪ್ರಾರಂಭವಾಗುತ್ತದೆ. ಸ್ತ್ರೀ-ಪುರುಷರ ಒಗೆತನದ ಕಟ್ಟು-ಕಟ್ಟಳೆ ಇನ್ನೂ ಒಂದು ಆಕಾರಕ್ಕೆ ಬರದೇ ಇದ್ದ, ಎಂದರೆ ಜನ, ಸುಮಾರಾಗಿ ಭಾಷಾ-ಸಂಕೇತಗಳ ಪ್ರಭಾವಕ್ಕೆ ಒಳಗಾಗುವ ಮುಂಚಿನ ಹಂತದ ಜೀವನ ರೀತಿ ಸೂಚಕ ಘಟನೆಗಳಿರಬೇಕು. (ಸಂ)

ವರ್ಣನೆಯಿದ್ದರೆ ಭಾರತೀಯ ಕಥೆಯಲ್ಲಿ ನೀರನು ತನ್ನ ಶಕ್ತಿ-ಸ್ಥಾನದ ಪ್ರದರ್ಶನ ಮಾಡಿದ್ದಾನೆ. ಇವೆರಡರಲ್ಲಿ ಯಾವುದು ಹೆಚ್ಚು ಪ್ರಾಚೀನ?

ಆದಿಮಾತೆ : ಮಧ್ಯಮಾವಾಕ್ ಇವಳೇ ಆದಿಗುರು: ಬ್ರಹ್ಮಚರ್ಯದ ಅಥವಾ 'ಬ್ರಹ್ಮ' ಅಯನದ ಕೊನೆಯ ಆನಂದ-ಸಿದ್ಧಿಯನ್ನು ಕರುಣಿಸುವ ಮಹಾತಾಯಿ. ಅದಿತಿ : 'ವಾಕ್' ಅಂಭೃಣಿ (ಅಂಬೆ ಅಮ್ಮ) ದೇವಿಯೆ ಎಂದು ಋಗ್ವೇದಸ್ಥ ಪ್ರತಿಮಾ ಸಂಕೇತಗಳಿಂದ ದೃಢಪಡುತ್ತಿದೆ. ಆದರೆ, ಋಗ್ವೇದದ ಕೊನೆಯಲ್ಲಿ ಈ ಅಯನ : ಸೇತು ಬದಲಾಗುತ್ತದೆ. ಪಿಂಡ-ಬ್ರಹ್ಮಾಂಡ ನ್ಯಾಯದಂತೆ ಆದಿ-ಶಕ್ತಿಯ ವರ-ಪ್ರಸಾದಕ್ಕಾಗಿ, ಈ ಆಪಃ ಸಲಿಲವನ್ನು ಸತಿ : ಸೇತುವನ್ನು ಹುಡುಕುತ್ತ ಊರಿಂದೂರಿಗೆ ಎಲ್ಲಿಯೂ ಅಲೆವ-ತಿರಿವ ಕಾರಣವೇ ಇಲ್ಲ, ಎಂಬುದನ್ನು ಮನಗಾಣಿಸಿ ಕೊಡುವ ತಂತ್ರ-ಮಂತ್ರದ ದಾರಿಯ ಸಂಶೋಧನವಾದುದಾಗಿ ಕಂಡು ಬರುತ್ತದೆ. 'ಅಯಂ ಗೌಃ ಪೃಶ್ನಿಃ, ಎಂಬ ಸಾರ್ಪರಾಜ್ಞಿ ಸೂಕ್ತದಲ್ಲಿ ಪರಮ-ಆ-ನಂದ ಸಿದ್ಧಿಯ 'ಯೋಗ'ದ ಒಂದು ನೂತನ ಮಾರ್ಗವು ಸೂಚಿತವಾಗಿದೆ. ಅಥರ್ವವೇದದಲ್ಲಿ ಈ ಯೋಗದ ಸ್ವಲ್ಪ ಹೆಚ್ಚಿನ ವಿವರವಿದೆ. 'ನವದ್ವಾರ' ಪುರೇ ದೇಹೀ-ಹತ್ 'ಪುಂಡರೀಕ'ದಲ್ಲಿ, ಊರ್ಧ್ವರೇತರಾಗಿ ಆ ಸಂ-ಯೋಗಾನಂದವನ್ನು ಪಡೆಯಲು ಶಕ್ಯವಿರುವುದೆಂಬ ಈ ಮಾರ್ಗದರ್ಶನ ಮಾಡುವ ಸಿದ್ಧರ ಸಂಪ್ರದಾಯಗಳು ಬಳಿಕ ಅಸ್ತಿತ್ವದಲ್ಲಿ ಬರತೊಡಗುತ್ತವೆ.

ಪುರೂರವನ ಬಗೆಗಿನ ವಿವರಣೆಯಲ್ಲಿ ಈ 'ಯೋಗ' : ಸಂಯೋಗ ಸಿದ್ಧಿಯ ವಿಚಾರ ಯಾತಕ್ಕೆ? ಎಂದರೆ-ಪುರೂರವ ಐಲ ಈ ಪ್ರತಿಮೆಯ ಮಾದರಿಯನ್ನು ಗ್ರಹಿಸಿಕೊಳ್ಳಲು ಇಳಾ=ಅದಿತಿ ಸಂಪ್ರದಾಯದ ಪಾರ್ಶ್ವಭೂಮಿಯ ಪರಿಚಯವಿರುವ ಆವಶ್ಯಕತೆ ಇದೆ. ಪುರೂರವನ ತಾಯಿಯೆ ಅವನ ತಂದೆ ಎಂದರೆ 'ಇಳಾ' ಉಭಯ ಲಿಂಗಿಯಾದಳು. ಇದು ಹೇಗೆ ಶಕ್ಯ? ಪ್ರಾಚೀನ ಭಾರತೀಯ ಸಂಸ್ಕೃತಿಯನ್ನು ಅರ್ಥಯಿಸಿಕೊಳ್ಳುವಾಗ, ಈ 'ಉಭಯಲಿಂಗೀ' ಪ್ರತಿಮಾ : ಸಂಕೇತಗಳು ಆಗಾಗ ತೊಂದರೆ ಕೊಡುತ್ತವೆ. ಪುರುಷ-ಸಂಪರ್ಕವಿಲ್ಲದೆ ಸ್ತ್ರೀ : ಕುಮಾರಿ ತಾಯಿಯಾಗುತ್ತಾಳೆ, ಎಂಬ ಮೂಲಭೂತ ಶ್ರದ್ಧೆ ಇದ್ದ ಕಾಲವು ಒಂದಾಯಿತು; ಇದಕ್ಕೆ ಪ್ರತಿಯಾಗಿ ಪುರುಷ : ಕುಮಾರ ಸ್ತ್ರೀಯ ಆವಶ್ಯಕತೆ ಇಲ್ಲದೆ ಕನ್ಯೆಗೆ ಜನ್ಮಕೊಡಬಲ್ಲ! ಎಂದು ಜನ ನಂಬುವಂತೆ ಮಾಡಲಾಯಿತು! ಈ ಸೃಷ್ಟಿಯ ವಿಸ್ತಾರವನ್ನು ತುಂಬ ಕುತೂಹಲಕಾರಿಯಾಗಿ ಹೇಳಲಾಗುತ್ತದೆ. ಆದಿಪುರುಷನಿಗೆ ಮೊದಲು ತಾನು ಒಬ್ಬನೆ ಇದ್ದು ಬೇಸರವಾಯಿತು, ಎಂದು ಕೆಲರು; ಒಬ್ಬನೇ ಇರಲು ಅಂಜಿ ಅಳುಕಿದನಂತೆ ಎಂಬರು ಕೆಲರು. ಆಗ ಒಬ್ಬ ಸ್ತ್ರೀಯನ್ನು ಉತ್ಪನ್ನ ಮಾಡಿದನಂತೆ. ಆ ಬಳಿಕ ತನ್ನ ಈ ಕನ್ಯಾಮಣಿಯೊಡನೆ ಮಾಡಿದ ಸಂಸಾರದ ಫಲ ಈ (: ಮಾಯಾ) ಪ್ರಪಂಚ! ಈ ಸಂಸಾರವೇ ಸುಳ್ಳು : ಅನೃತ : ಬಯಲು, ಎನ್ನದಿದ್ದರೆ, ಈ ಪರಮಾತ್ಮನೆಂಬ ದೇವರಿಗೆ ಮಗಳ ಗಂಡನೆಂಬ ಆರೋಪ ಹೊರಬೇಕಾಗುತ್ತದೆ! ಈ ಬೌದ್ಧಿಕ ಹಾಗೂ ಭಾವನಿಕ ಪೇಚು-ಇಕ್ಕಟ್ಟು : 'ಆದಿಪುರುಷ' ಎಂದರೆ ಮಗಳ ಗಂಡನಾಗಬೇಕಾಗುತ್ತದೆ. 'ಆದಿಮಾತೆ'ಯು ಮಗನ 'ಸತಿ' ಆಗಬೇಕಾಗುತ್ತದೆ. ಇದನ್ನು ಒಪ್ಪಿಕೊಳ್ಳಬಾರದಾಗಿದ್ದರೆ ಈ ಸಂಸಾರ ಎಂಬುದೇ ಒಂದು ಭ್ರಮೆ. ನಿನ್ನೊಳಗೆ ನೀನು ನೋಡು; ನಿನ್ನ ನೀನು ಅರಿ; ನಿನ್ನಲ್ಲಿಯೇ ಪ್ರಪಂಚವಿದೆ! ನಿನ್ನನ್ನು ಉಭಯಲಿಂಗಿಯಾಗಿದ್ದೀಯೆ....ಎಂಬ ಈ ವೇದದ ಅತ್ಯಂತಿಕ ತತ್‌ತ್ವ ಸ್ವೀಕರಿಸಬೇಕು. ವೇದಾಂತಿಯಾಗಬೇಕು! ತತ್ : ಏಕಂ : ಸತ್ ಎಂದರೆ ಇಳೆಯು ಅ-ದಿತಿ (: ಸಮಗ್ರ) ರೂಪಳು. ಸಮಗ್ರತೆ : ಉಭಯ ಲಿಂಗೀ ಪ್ರತಿಮೆ : ಆಪ+ನಪ್ತ್ರ ರೂಪವೇ ಆಗಬೇಕು.

ಈ ಭೂಮಿಕೆಯಂತೆ 'ಸೋಽಹಂ' ನಾನೇ ಎಲ್ಲ, ಎನ್ನಬೇಕು. ಎಂದರೆ ಎರಡೇ ಪ್ರಮುಖ ಆಕೃತಿ ಶಕ್ಯ: ತನ್ನನ್ನುಳಿದು ಏನೆಲ್ಲವೂ ಶೂನ್ಯ (Monolithic structure);ಅಥವಾ ಪ್ರತಿಯೊಂದು ದೇಹಿಗಳೆಲ್ಲರ ಜೀವಜೀವ ನಿತ್ಯ (atomistic structure) ! ಅಥವಾ ಈ ತಾತ್ವಿಕ ಭೂಮಿಕೆ ಹಿಡಿಸದಿದ್ದರೆ ದೇವರೇ ಬೇಕಿದ್ದರೆ ಮಗನ ಸತಿ ಅಥವಾ ಮಗಳ ಗಂಡನೆಂಬ ಪವಾಡ: ಚಮತ್ಕಾರ ಯೋಗಸಿದ್ಧಿಯ 'ಸತ್ಯ'ದ ಅರ್ಥವನ್ನ ಗಟ್ಟಿಗೆ ಹಚ್ಚಿ ಅರಿಯುವ ಪ್ರಯತ್ನ ಮಾಡಿ ನೋಡಿ. ಸತ್ಯ=ದಿವ್ಯ-ಪವಾಡ ಚಮತ್ಕಾರ. ಎಂದೇ ಅರ್ಥವನ್ನು ನಂಬುತ್ತಿರುವುದನ್ನು

ಕಾಣಬಹುದು. 'ಸತ್ಯವೇ ದೇವರು'; 'ದೇವರೇ ಸತ್ಯ' ಎಂಬ ಮಹಾತ್ಮರು ಸಹ 'ಸತ್ಯ'ದ ಅರ್ಥ ಹೇಳಲಿಲ್ಲ. ಅರ್ಥವೇ ಆಗದ ಒಂದು ಸಂಕೇತಕ್ಕೆ ಅರ್ಥವೇ ತಿಳಿಯದ ಇನ್ನೊಂದು ಸಂಕೇತವನ್ನು ಅರ್ಥವೆಂಬ ಹಾಗೆ ಸ್ವೀಕರಿಸುವ ಬುದ್ಧಿಯು ಬುದ್ಧಿಯೊ? ಶುದ್ಧ ನಂಬುಗೆಯ ಪ್ರಕಾರವೋ? ಇದು ಮಾನಸಶಾಸ್ತ್ರಜ್ಞರ ಕ್ಷೇತ್ರದಲ್ಲಿ ಅಡಿಯಿಡುವ ಅನೌಚಿತ್ಯ ಬೇಡ!

ಐಲ ಪುರೂರವನ ಪ್ರೇಯಸಿ. ಭಾರತೀಯ ನೀರೆ : ಊರ್ವಶಿಯ ಕಥೆಯು ಋಗ್ವೇದದಲ್ಲಿಯೇ ಪುರುಷ ಪ್ರಧಾನ ಸಂಸ್ಕೃತಿಯ ಆಕಾರಕ್ಕೆ ತಿರುಗುತ್ತಿರುವುದನ್ನು ಕಾಣಬಹುದು. ಏಕೆಂದರೆ ಎಂದೆಂದಿಗೂ ನೆಲೆ ನಿಲುಕದ ಗೂಢ-ರಹಸ್ಯವೆ ಮೈವೆತ್ತು ಸ್ತ್ರೀರೂಪವಾಗಿದೆ, ಎಂಬುದು ನಿಸರ್ಗಸ್ಥ ಮೂಲ ಅನುಭಾವ: 'ಸ್ತ್ರೀಯಃ ಚರಿತ್ರಂ.....ದೇವೋ ನ ಜಾನಾತಿ'! ಮಹಾ ಮಹಾಪುರುಷರು ನೆಲಕ್ಕುರುಳಿದ್ದುಂಟು. ಊರ್ವಶಿಯೇ ಸಾಕ್ಷಾತ್ ಸಂಮೋಹನ ಮೂರ್ತಿ. ಅವಳ ಎದುರು ತನ್ನ 'ಶಕ್ತಿ' ಸ್ಥಾನ ದರ್ಶನದ ಪ್ರದರ್ಶನ ಮಾಡಿದನೆಂಬುದು ಅರ್ಥವಿಹೀನ. ಅವಳ ಸಂಗದಲ್ಲಿ ಬಾಹ್ಯಪ್ರಜ್ಞೆಗೆ ಎರವಾದ ಪುರೂರವನು ನಿರ್ವಿಣ್ಣನಾಗಿ ಒರಲುತ್ತಿರುವ ಚಿತ್ರವು ಋಗ್ವೇದದಲ್ಲಿದೆ.[೨೦] ಆದಕಾರಣ ಗ್ರೀಕ್‌ಕಥೆಯ ಆಕೃತಿಯು ಇದಕ್ಕಿಂತ ಹೆಚ್ಚು ಹಳತು ಇರಬೇಕು.

ಹೀಗೆ ಗ್ರಹಿಸಲು ಇನ್ನೂ ಒಂದು ಕಾರಣವಿದೆ. ದಿವ್ಯಲೋಕದ ದೇವಿಯರ ಸಂಗ ಮಾಡಿದ ಮರ್ತ್ಯನಿಗೆ ಮೃತ್ಯುವು ನಿಶ್ಚಿತ ಎಂಬ ಹಾಗಿನ ಒಂದು ಸೂಚನೆ, ಈ ಗ್ರೀಕ್‌ಕಥೆಯಲ್ಲಿದೆ. ತನ್ನ ಸಂಗಕ್ಕಾಗಿ ಮರಣದ ಶಿಕ್ಷೆಯಾದೀತೆಂಬ ಆ ರಾಜನ ಭೀತಿಯನ್ನು ಅಭಯ ವರದಾನದಿಂದ ಅಫ್ರೊಡೈಟ ದೂರ ಮಾಡಿದ್ದಾಳೆ. ಈ ಬಗೆಯ ಗ್ರೀಕ್ ಕಥೆಗಳ ಮೂಲಕ ಸ್ಪಷ್ಟವಾಗುವ ಸಂಗತಿಯಿಂದ ಅದಿತಿ (ಗಂಗಾ) ಊರ್ವಶ್ಯಾದಿಗಳು ದೇವಲೋಕದಿಂದ ಭೂಲೋಕದಲ್ಲಿ ಅವತರಿಸಿ, ಮರ್ತ್ಯರ ಮದುವೆಯಾಗುತ್ತಿದ್ದರು, ಎಂಬ ಹಾಗಿನ ಭಾರತೀಯ ಮೂಲದ ಪವಾಡ ಕಥೆಗಳ ನಿಜಸ್ವರೂಪವನ್ನು ಅರಿಯಲು ನೆರವು ದೊರೆಯುತ್ತಿದೆ.

ಸರ್ವ ಸಮರ್ಪಣ-ಭಾವದಿಂದ ಕಣ್ಣೆದುರು, ಚಂದ್ರ-ಸರ್ಪದೈವದ ಆರಾಧಕರಾದ ಕುಮಾರಿಯರ ಮೈಯಲ್ಲಿ ಆ ದಿವ್ಯಶಕ್ತಿಯ ಆವೇಶವಾಗುತ್ತಿತ್ತು. ಈ ದಿವ್ಯಪವಾಡ ಕುಮಾರಿಯರ ಸಹವಾಸ ಲಭಿಸಬೇಕೆಂದು ಅಂದಿನ ರಾಜ-ರಾಜರಲ್ಲಿ ಸ್ಪರ್ಧೆಯಿರುತ್ತಿತ್ತು. ಈ ಕುಮಾರಿಯರು ಮರ್ತ್ಯರ ಸಂಪರ್ಕದ ದೋಷ ಪರಿಹಾರಾರ್ಥವಾಗಿ ಪವಿತ್ರತೀರ್ಥದಲ್ಲಿ ಸ್ನಾನ ಮಾಡುತ್ತಲೇ ಅವರಿಗೆ ಮರಳಿ ಕೌಮಾರ್ಯವು ಲಭಿಸುತ್ತಿತ್ತು. ಈ ಶ್ರದ್ಧೆಯಿಂದಾಗಿ ನಿತ್ಯ 'ಕುಮಾರೀ' ಬಳಿಕ ನಿತ್ಯಕುಮಾರ ಸಂಪ್ರದಾಯವು ಅಂದು ಶಿಷ್ಟಮಾನ್ಯವೂ ಆಗಿತ್ತು. ಆದರು, ಕ್ರಮವಾಗಿ ಆಗತೊಡಗಿದ ಮಾನವರ ಸಾಮಾಜಿಕ ಪ್ರಜ್ಞೆಯ ಹಾಗೂ ವಿಚಾರದ ವಿಕಾಸದೊಡನೆ, ಈ ಧಾರ್ಮಿಕ ಆಚಾರಗಳಿಗೆ ತರ್ಕಶುದ್ಧ ತತ್ತ್ವಜ್ಞಾನದ ತಳಹದಿಯು ಆವಶ್ಯಕವೆನಿಸತೊಡಗಿ, ಆ ಬೆಳಕಿನಲ್ಲಿ ಈ ಕುಮಾರಿ-ಕುಮಾರ ಸಂಪ್ರದಾಯಗಳ ಆಚಾರ ಪ್ರಕಾರಗಳು ಮಾರ್ಪಡುವುದು ಅವಶ್ಯವಾಯಿತು. ಪುರೂರವನ ತಾಯಿ ಎಂಬ 'ಇಳಾ' ಹಾಗೂ ಪ್ರೇಯಸಿ ಎಂಬ ಊರ್ವಶಿ ಇವೆರಡೂ ಆಪಃ ರಸದ ಸಾಂಕೇತಿಕ ಪ್ರತೀಕಗಳೇ. ಇವುಗಳ ರಹಸ್ಯಾರ್ಥವು ಅರಿಕೆಗೆ ಬರಲು ಗ್ರೀಕ್ ಪುರಾತನ ಕಥೆಗಳ ನೆರವು ಅವಶ್ಯವೆನಿಸಿದೆ.

ಭಾರತೀಯ ಶಿಷ್ಟರು-ಪ್ರತಿಷ್ಠಿತ ವಿಚಾರವಂತರು, ಮಾರ್ಪಡಿಸುತ್ತ ರೂಪಿಸುತ್ತ ಬಂದ ಪವಾಡ ಕಥೆಗಳಲ್ಲಿ ಲುಪ್ತವಾಗಿರುವ ಕೆಲವೊಂದು ವಾಸ್ತವ ಘಟನೆಗಳನ್ನು, ಗ್ರೀಕ್ ಪುರಾತನ ಕಥೆಗಳಿಂದಲೂ, ಮಾನವಶಾಸ್ತ್ರಜ್ಞರ ಅನ್ವೇಷಣೆಗಳ ಆಧಾರದಿಂದಲೂ, ಮರಳಿ ಊಹಿಸಿಕೊಳ್ಳಲು ಶಕ್ಯವಿದೆ. ಋಗ್ವೇದದ ಕಥೆಗಳಲ್ಲಿ ಅಂಭೃಣಿ ನೀರೆ ಹೇಳುತ್ತಾಳೆ : 'ಅಹಂ ರುದ್ರೇಭಿಃ ಚರಾಮಿ'. ರುದ್ರರು ರುದ್ರಿಯರು ಎಂದರೆ ಮರುತರು; ಮರುತ=ಮಾರುತ-ಬಿರುಗಾಳಿ-ಸುಂಟುರಗಾಳಿ-ಚಕ್ರವಾತ. ಹಾವಿನಂತೆ ಭೋರಾಡುತ್ತ ಹರಿಯುವ ಶಕ್ತಿ. ಗ್ರೀಕ್ ಪವಾಡ ಕಥೆಗಳ ಬೆಂಬಲವು ಇದ್ದಿಲ್ಲವಾದರೆ ಗಾಳಿಯನ್ನು 'ಮಾರುತಿ'ಯನ್ನು ಸರ್-ಪ ರೂಪಿ ಎಂದು ಹೇಳುವುದನ್ನು ಕೇವಲ ಕಲ್ಪನಾ ವಿಲಾಸ, ಎಂದು ಆಕ್ಷೇಪಿಸಬಹುದಿತ್ತು. ಗ್ರೀಕ್ ಪವಾಡ ಕಥೆಗಳಲ್ಲಿ typhon ಮತ್ತು python ಬಿರುಗಾಳಿ ಮತ್ತು ಹಾವು ಅಭಿನ್ನವಾಗಿ ಬಗೆದುದನ್ನು ಕಾಣಲು ದೊರೆಯುತ್ತದೆ.

> pytho (serpent) personified the destructive North-Wind winds were habitually depicted with serpent tails-which whirls down...."

ಋಗ್ವೇದದ ಸರಸ್ವತಿಯು (ಮಧ್ಯಮಾ ವಾಕ್) ಮರುತರ ಸಂಗಾತಿ[೨೧] ಇವಳನ್ನು 'ಅಸುರಾ' ಎಂದುದೂ ಉಂಟು;[೨೨] ತತ್ : ಏಕಂ ಭೂಮಿಕೆಯದೇವಿ, 'ಅಹಂ' ಎಂಬ ಸಂಕೇತ ಅಂಭೃಣಿಯ ವರ್ಣನೆಯಲ್ಲಿದೆ! ಎಂದರೆ, ಈ ಕುಮಾರಿ ಮಧ್ಯಮಾವಾಕ್, (medium), ಗ್ರೀಕಿನ oracle Delphiಯ ಮೈಯಲ್ಲಿ ಆವೇಶವಾಗುತ್ತಿದ್ದ ಕುಮಾರಿಯನ್ನು ಹೋಲುತ್ತಿರುವಳು ಎನ್ನಲು ಏನು ಆಕ್ಷೇಪ? ಅದಿತಿ ಹಾಗೂ ಪೃಶ್ನಿ ಇವರು ಮರುತರ ತಾಯಂದಿರು! ಅದಿತಿ,ಅಂಭೃಣಿ ಸಂಪರ್ಕದ ವಿಷ್ಣುವು ಸರ್ಪ-ಶಕ್ತಿ, ಎಂಬುದು ಈ ಇನ್ನೂ ಒಂದು ನಿಟ್ಟಿನಿಂದ ದೃಢಪಡುತ್ತಿದೆ! ಸರಸ್ವತಿಯ ಸಂಗಾತಿ ಎಂದು ವರ್ಣಿಸಿ ಇಂದ್ರನನ್ನು ಸರ್ಪವಾಗಿಸುವ ತಂತ್ರವನ್ನು ಸಮೀಕ್ಷಿಸಬಹುದು.[೨೩] ಈ ಹಿನ್ನೆಲೆಯಲ್ಲಿ ಅಫ್ರೋಡೈಟಗೆ ಹೋಲುವ ಊರ್ವಶಿಯು ಮೆಚ್ಚಿದ ಪುರೂರವನು ಸರ್ಪಶಕ್ತಿಯ ಪ್ರತೀಕ : ನೀರನೆಂದು ಸಿದ್ಧವಾಗುತ್ತದೆ.

ಈ ಪುರಾತನ ಕಥೆಗಳ ಮಧ್ಯಮಾ ವಾಕ್ : ನೀರೆಯರು ಸರ್ಪರೂಪರು ಎಂಬುದನ್ನು ಖಾತ್ರೀ ಮಾಡಿಕೊಳ್ಳಲು ಇನ್ನೂ ಒಂದು ಉದಾಹರಣ ನೋಡಿರಿ. ಋಗ್ವೇದದ ಸರಸ್ವತಿಯ 'ಪತಿ' ಎಂಬ ಹಾಗಿನ 'ಸರಸ್ವಾನ್' ಈ ಸಾಂಕೇತಿಕ ಪ್ರತಿಮೆಯ ಮಾಟ ಪಾಶ್ಚಾತ್ಯ ಸಂಶೋಧಕರನ್ನೂ ದಿಗ್ಭ್ರಾಂತರನ್ನಾಗಿಸಿದೆ.

> Here (VII. 96) his fertilinging watess and even his exuberant breast are referred to[೨೪]

ಸರಸ್ವಂತನಲ್ಲಿ ಮಕ್ಕಳನ್ನೂ ಧನವನ್ನೂ ಬೇಡುವಾಗ ಈ ಪ್ರಾರ್ಥನೆ :

> 'ಹೇ ಸರಸ್ವನ್ ದೇವತೇ (ತ್ವದೀಯಾಃ) ಯೇ ಊರ್ಮಯಃ ಮಧುಮಂತಃ (ರಸ ವಂತಃ) ... ತೇಭೀ (ತ್ವೈಃ ಊರ್ಮಿಭಿಃ) ಅಸ್ಮಾಕಂ ರಕ್ಷಿತಾಭವ'

ಈ ಬಗೆಯಲ್ಲಿ ಸೃಜನ ಕಾರ್ಯಕ್ಕಾಗಿ ಮಧುಮಂತಹ ಘೃತಃ ಚ್ಯುತ ಊರ್ಮಿಯನ್ನು ಸುರಿಸುವ ಈ ಸುದಾನಿ ಸರಸ್ವಂತನು ಯಾರು? ಮರುತರ ಸಖಿ ಸರಸ್ವತಿಯೆಂದುದರಿಂದ ಮರುತರಂತೆ ಸ-ರಸ್ವನನೇ ಇವನೂ ಸರ್-ಪ ಸ್ವರೂಪನೇ ಇರಲಿಕ್ಕೆ ಬೇಕು. ಆದರೆ, ಇವನನ್ನು 'ಪಕ್ಷಿ' ಎಂಬ ಹಾಗೂ ವರ್ಣಿಸಿದ್ದುಂಟು.[೨೫] ಆದಕಾರಣ, ಇದು ಅಗ್ನಿ-ಪಕ್ಷಿ (Bird-Agni) ಇರಬೇಕೆ. ಎಂದು ಮ್ಯಾಕಡೊನೆಲ್ ಹೇಳುತ್ತಾರೆ! ರಾಥ್ ಮಹಾಶಯನಿಗೆ ಇಲ್ಲಿ guardian of Celestial waters who bestows fertility ಕಂಡಿದೆ. ಹಿಲ್ಲೆ ಬ್ರಾಂಟ್ ಮತ್ತು ಹಾರ್ಡಿ, ಇದು ಅಪಾ-ನಪಾತ್ (=ಸೋಮ=ಚಂದ್ರ) ದೈವತವಿರಬೇಕೆನ್ನುತ್ತಾರೆ.[೨೬]

ಈ ಸ-ರಸ್ವನ್, 'ಅಪಾಂ-ನಪ್ತಾ' ದೇವನೇ ಸರಿ. ಆದರೆ, ಇದು ಚಾಂದ್ರರೂಪವೇ ಹೊರತು; ಸೋಮ-ಸದೃಶ್ಯ ಆಕೃತಿಯೆಂದು ಗ್ರಹಿಸಲು ಮೂಲಭೂತ ಆತಂಕಗಳು ಅಡ್ಡಬರುತ್ತವೆ. ಋಗ್ವೇದದಲ್ಲಿ, ಅವೆಸ್ತಾದಲ್ಲಿ ಸೋಮವು ಒಂದು ಬಳ್ಳಿಯ ರಸ. ಇದನ್ನು ಹೋಮದಲ್ಲಿ ಆಗ್ನ್ಯಾರಾಧಕರು ಉಪಯೋಗಿಸುತ್ತಿದ್ದರು. ಆದರೆ, ಈ ಚಾಂದ್ರ 'ಸೋಮವು' ಮಾಯಾವಿ ಕೃತ್ರಿಮ ಪ್ರತಿಮಾ : ಸಂಕೇತ! ಸೋಮ ಎಂಬುದಕ್ಕೆ ಚಂದ್ರವಾಚಕ ಅರ್ಥವು ಕಾಣುವಂತೆ ಮಾಡಿರುವ ಮಾಟದಿಂದ ಸೋಮ ಸೌರ ಮತ್ತು ಚಾಂದ್ರ ಆಪ : ರಸ ಪಂಥಗಳೊಳಗಿನ ಅಂತರವನ್ನು ಶೂನ್ಯಗೊಳಿಸಲಾಗಿದೆ. ವಿಷ್ಣುವಿನ ಪದದಿಂದ ಸ್ರವಿಸುವ ಮಧುವು, ಸೋಮವಲ್ಲ. ಅದನ್ನು ಸೋಮವೆಂದು ಯಾರೂ ಹೇಳಿಲ್ಲ. ವಿಷ್ಣುರೂಪನೆಂಬ ಅಥವಾ ಎಲ್ಲ ದೈವತಗಳ ವಾಸಸ್ಥಾನ ವೆಂಬ 'ಅಶ್ವತ್ಥ'ವು ಸೋಮ ಸ್ರವಿಸುತ್ತದೆ ಎಂದು ಛಾಂದೋಗ್ಯದಲ್ಲಿ ಹೇಳಿದೆ-ಇದು ಶುದ್ಧ ಕವಡು. 'ಯತ್ ದೇವಾಃ ಸಲೀಲೇ ಅದಃ' ಇದ್ದಾರೆ ಎನ್ನುತ್ತಾರೋ ಆ ಸಲೀಲವು ದೇವಸದನ=ಅಶ್ವತ್ಥದೊಳಗಿಂದ ಸ್ರವಿಸುತ್ತಿರಬಲ್ಲುದೇ ಹೊರತು ಅದು ಸೋಮವಾಗಲಾರದು. ದೇಹವೇ ದೇವಸದನ=ದೇಗುಲ, ಪಿಂಡ ಬ್ರಹ್ಮಾಂಡ ನ್ಯಾಯದಂತೆ. ಶರೀರದಲ್ಲಿ ಸರಿಲ<ಸಲಿಲವಿದೆ; ಈ ಸಲಿಲದಲ್ಲಿಯೇ ಅದಿತಿಯು ತನ್ನ ಸಪ್ತಪುತ್ರರೊಂದಿಗೆ ತತ್ ಸ್ವರೂಪಿಯಾದಳು

ಎಂದು ಋಗ್ವೇದದಲ್ಲಿದೆ.[೨೭] ಈ ಅಂತರ್ಗತ ಪ್ರಮಾಣಗಳಿಗಾಗಿ ಸೋಮನೇ ಮೂಲತಃ ಚಂದ್ರನಾಗಲಾರ. ಆದರೆ, ಕಾಲಕ್ರಮದಲ್ಲಿ ಚಂದ್ರ ಸಂಕೇತ ಮತ್ತು ಸೋಮ ಸಂಕೇತ ಸಮಾನಾರ್ಥದುವು ಆದವು-ಆಗಿರಲಿಕ್ಕೆ ಶಕ್ಯ ಎಂಬುದನ್ನು ಒಪ್ಪಲೇಬೇಕು.

ಆದರೆ, ಸೋಮ ಮತ್ತು ಚಂದ್ರ ಇವು ಮೊದಲಿನಿಂದಲೂ ಅಭಿನ್ನ ಎಂದು ಗ್ರಹಿಸಿದಲ್ಲಿ, ಚಾಂದ್ರ ಪಂಥೀಯ ಗೀತೆಯ ಭಗವಂತನು ಸೋಮಪಾಯಿಗಳನ್ನೂ, ಅಯಾಜಕರನ್ನೂ ಅವರಿಗೆ ಮೋಕ್ಷವಿಲ್ಲ; 'ಕ್ಷೀಣೇ ಪುಣ್ಯೇ ಮೃತ್ಯುಲೋಕಂ ವಿಶಂತಿ' ಎಂದು ಟೀಕಿಸಿದ್ದೇಕೆ? ವೇದದ ಮೂಲ ಸೋಮಸಂಪ್ರದಾಯವು ಚಾಂದ್ರ ಸಂಪ್ರದಾಯದಲ್ಲಿ ಅಡಗಿ ಹೋಯಿತು. ಇದು ಒಂದು ಐತಿಹಾಸಿಕ ಘಟನೆಯಾಗುತ್ತದೆ. ಭಾರತೀಯ ಪವಾಡ ಕಥೆಗಳಲ್ಲಿ, (ಬುದ್ಧಿಪೂರ್ವಕವಾಗಿ, ಏಕಂ ತತ್ ಈ ಮತ ಪ್ರತಿಪಾದನೆಗಾಗಿ) ಈ ತಾರತಮ್ಯವನ್ನು ಬಚ್ಚಿಡಲಾಗಿದೆ. ಗ್ರೀಕ್ ಕಥೆಯಲ್ಲಿ ಅಫ್ರೊಡೈಟ್ ಝೀವುಸನ ಸಾಕುಮಗಳು (adopted daughter) ಎಂದಿರುವುದನ್ನು ಲೆಕ್ಕಿಸಿದರೂ ಯುರೋ-ಭಾರತೀಯ ಮೂಲದ ಝೀಊಸ್ (ದ್ಯೌಃ), ಸೋಮ ಇವು ಅಫ್ರೋಡೈಟ ಚಂದ್ರ ಈ ಎರಡೂ ಭಿನ್ನ ಪರಂಪರೆಗಳಿರಬೇಕೆಂಬುದರ ಸೂಚನೆ ದೊರೆಯಲಿದೆ.

ಸೌರ ಪ್ರತಿಮೆಗಳ ಅವಮೂಲ್ಯನ ಮಾಡುವ ತಂತ್ರದಲ್ಲಿ ಸೋಮ=ಚಂದ್ರವಾದಂತೆ ಸರಸ್ವನ್ ಸಂದರ್ಭದಲ್ಲಿ 'ದಿವ್ಯ ಸುಪರ್ಣಂ ಅಪಾಂ ಗರ್ಭಂ, ಆಗಿದೆ! ಇದು 'ದೀರ್ಘತಮಸ್' ಎಂಬ ಅಂಧನೆಂದು ಹೇಳ ಲಾಗುವ ಕವಿಯ ಸೂಕ್ತವು.[೨೮] ಈ ಋಚೆಯನ್ನು ಮೊದಲಬಾರಿ ಓದಿದಾಗ ಆದ ಆಶ್ಚರ್ಯವೆರಡು ಕಾರಣಕ್ಕಾಗಿ : ಸುಪರ್ಣ ಪಕ್ಷಿ, ಅಗ್ನಿ-ಸೂರ್ಯ ಸಂಬಂಧವನ್ನುಳ್ಳದ್ದು. ಆಪಸ್ಥ ಗರ್ಭವಾದುದು ಹೇಗೆ? ಇದು ಎಂತಹ ಪಕ್ಷಿ? ಮಾವನವರ ಅಂತರಂಗದಲ್ಲಿ ತೇಜೋರೂಪಿ ದ್ವಾ-ಸುಪರ್ಣಗಳು ಕುಳಿತಿವೆ. ಸೌರ ಸಂಪ್ರದಾಯದಂತೆ ಇದರ ಭವ್ಯವರ್ಣನೆ ಮುಂಚೆ ಬಂದಿದೆ. ಈ ಭವ್ಯ ಜೀವನದ ಸಮ್ಮುಖ ಅರ್ಥವನ್ನು ಮೊಟಕುಗೊಳಿಸುವ ತಂತ್ರವಿದ್ದರೂ ಒಟ್ಟಿನ ವಿಶಾಲ ಅರ್ಥವು ಉಕ್ಕಿಬರುತ್ತಿದೆ. ಆ ಸೂರ್ಯಪಕ್ಷಿ ನೀರಿನೊಳಗಿನ ಗರ್ಭವೆ? ಇದರೊಡನೆ ಇನ್ನೊಂದು ಕುರೂಪ ಪ್ರತಿಮೆ : ಸುಪರ್ಣಕ್ಕೆ 'ವಾಯಸ' ಎಂದುದು ವಿಚಿತ್ರವೆನಿಸಿತು. ಇಡೀ ಈ ವೇದದಲ್ಲೆ ಈ ಪಕ್ಷಿಯ ಹೆಸರು ಇಲ್ಲಿ ಬಂದುದು ಒಂದೇ ಬಾರಿ! ಈ ಕಾರಣಕ್ಕಾಗಿ ಇಲ್ಲಿ ಏನೋ ಬಿಚ್ಚಿಡುವ ಪ್ರಯತ್ನವಿರುವಂತೆ ತೋರಿತು.

ಅಪಾ ನಪಾತ್: ಸರ್ಪವಿರಬೇಕು ಎನ್ನಲು ಯಾವುದನ್ನು 'ಗರುಡ' ಎಂದು ಬಗೆಯಲಾಗಿದೆಯೋ ಆ ಸುಪರ್ಣ ಪಕ್ಷಿಯನ್ನು ಹಾವು ಎನ್ನುವುದೆ? ಆದರೆ ಯಕ್ಷಿಣಿ : ಪದ್ಮಾವತಿಯರು ಕುಕ್ಕುಟ ಸರ್ಪಗಳು ಮೇಲೆ ಕುಳಿತಿರುವ ಜೈನ ಪ್ರತಿಮೆಗಳಾಗಿವೆ! ಪದ್ಮದಲ್ಲಿ-ಸರ್ಪ; ಪದ್ಮ=ಆಪ! ಕುಕ್ಕುಟ=ಗರುತ್ಮನ್=ಸುಪರ್ಣ=ಗರುಡ= ಹಾವು! ಶೇಷಶಾಯಿ ವಿಷ್ಣುವಿನ ವಾಹನ ಗರುಡ ಎಂದರೆ ಅದು ಪ್ರಚ್ಛನ್ನ ಸರ್ಪವೇ. ಕೆಲವು ಚಿತ್ರಕಾರರು ಈ ವಾಹನ ಗರುಡವು ಹಾವನ್ನು ಕಾಲಲ್ಲಿ ಹಿಡಿದುದನ್ನು ತೋರಿಸುತ್ತಾರೆ! ಸರಿ, ಇನ್ನೂ ಒಂದು ಗುಹ್ಯಸಂಕೇತವು ಈ ಹಿನ್ನೆಲೆಯಲ್ಲಿ ಸಾರ್ಥಕವಾಗುತ್ತಿದೆ. ಇಲ್ಲಿ : ನದೀತನಯ : ಅಗ್ನಿಪುತ್ರ : ಕುಮಾರ ಎಂಬ ಷಾಣ್ಮಾತುರ ನಾಮಾಂತರದ ಒಬ್ಬ ರುದ್ರನ ವಾಹನವು ಒಂದು ಪಕ್ಷಿ ರೂಪದ್ದು! 'ಕುಕ್ಕುಟ' ವರ್ಗದ್ದು! ನವಿಲಾಗಿ ಅಹಿಶತ್ರುವಾಗಿ ಮಾರ್ಪಟ್ಟುದು! ಇಂದ್ರನ ರೂಪ ತಾಳಿತು! ಸರಿ. ಹೇಗಿದೆ ಈ ಗಾರುಡಿಗ ಮೋಡಿಕಾರರ ಮಾತಿನ ವಿದ್ಯೆ! ತತ್ ಏಕಂ! ಹಾವು=ವೃತ್ರ=ಗರುಡ=ಸುಪರ್ಣ=ಇಂದ್ರಾದಿಗಳೆಲ್ಲ ಸಮ, 'ಸಮತ್ವಂ'=ಯೋಗಸಿದ್ಧಿ, "ಏಕಂ ಸಂತಂ (=ಅಹಿಂ) ಬಹುಧಾ ಕಲ್ಪಯಂತಿ" ಅಗದೀಖರೆ ಎನಿಸಿದೆ.

ಈ 'ಅಪಾಂ ನಪ್ತ' ಮೂಲ ಮಾದರಿಯೇ, ಇಳಾ-ಪುರೂರವ-ಊರ್ವಶೀ ಈ ಪ್ರತಿಮಾ ಸೃಷ್ಟಿಯ ತಳಪಾಯದಲ್ಲಿ ಇದ್ದುದು ಹೀಗೆ ಹಲವು ಬಗೆಯಿಂದ ಅರಿಕೆಗೆ ಬರುತ್ತಿದೆ. ಇಂತಹ ಇನ್ನೂ ಒಂದು ದೃಷ್ಟಾಂತ ಮುಖ್ಯ-ಪ್ರಾಣ-ವಾಯುದೇವರ ಪ್ರಿಯತಮೆ ಭಾರತೀದೇವಿ ಎಂಬ ಒಂದು ಸಾಂಪ್ರದಾಯಿಕ ನಿತಾಂತ ಶ್ರದ್ಧೆ ಅಭ್ಯಸನೀಯವಿದೆ. ಪ್ರಾಣಾಃ ವೈ 'ಸಪ್ತ' ಋಷಯಃ! ಈ 'ಸಪ್ತ' ಎಂಬ ಗುಹ್ಯಸಂಕೇತವು ಸರ್ಪ ಸೂಚಕವಿದೆ!

ಭಾರತೀ=ವಾಕ್-ದೇವಿ, ದೇವತಾನಿವಾಸ=ದೇಹದ ಗರ್ಭಗುಡಿಯಲ್ಲಿ 'ಸಪ್ತ'ರೊಡನೆ ವಾಕ್ ಅಥವಾ ವಾಕ್ಕಿನೊಡನೆ ಸಪ್ತ (:ಸರ್ಪ) ತದ್ರೂಪವಿದೆ. ಇವರು ಆಪ + ನಪ್ತೃ ಒಬ್ಬರಿಂದೊಬ್ಬರು ಕದಲಿದರೆ ಅಗಲಿದರೆ ಅಳಲಿಗೆ ಆಮಂತ್ರಣ!

ಇಳಾ=ಉಭಯಲಿಂಗೀ ದೈವತ=ಅದಿತಿ=ಸಮಗ್ರಾ! 'ಅಖಂಡಿತಾ' ಎಂದು ಅದಿತಿ ಸಂಕೇತಕ್ಕೆ ಸಾಯಣರು ಅಲ್ಲಲ್ಲಿ ಹೇಳಿರುವ ಅರ್ಥದ ಸಾರ್ಥಕ್ಯ-ರಹಸ್ಯ ಇದು. ಇಳಾ=ಅದಿತಿ ಈ ಪ್ರತಿಮೆ ಕೇವಲ ಒಂದು ಸ್ತ್ರೀರೂಪವಲ್ಲ; ಇದು ಅಪಾಂ-ನಪ್ತೃರೂಪ. ಸಪ್ತಸಹಿತ ಆಪ; ಅಥವಾ ಆಪದಿಂದ ಹೊರಬಂದ ಈ ನಪ್ತೃ ಈ ಉಭಯ ರೂಪಗಳು ಇಲ್ಲಿವೆ. ಕ್ರೈಸ್ತ ಪಂಥೀಯ ಶಿಶುಸಹಿತ ಮಾತೆಯು ಅಪಾಂನಪ್ತೃ ರೂಪದ ಒಂದು ನಿಲುಮೆ ಬರಿ 'ಶಿಶು', ಒಂದು (ರಸ=ಆಲ್=ಪಾಲ್=ನೀರು) ಎಲೆಯಲ್ಲಿ ಇರುವ ಸನಾತನಶಿಶು[೨೯]

ಉಭಯ ಲಿಂಗೀ ಇಳಾ ಪುತ್ರನೆಂಬ ಪುರೂರವನು, ತುಂಬ ಸೂಚ್ಯಾರ್ಥದ ಪ್ರತಿಮೆ : ಅಪಾಂ ನಪ್ತೃ=ಇಳಾ (ಸಮಗ್ರ) ಈ ಹಿನ್ನೆಲೆಯಲ್ಲಿ ಆಪದಿಂದ ಅಗಲಿದ ನಪ್ತೃ 'ಶಿಶು' ಎಂದಾಗ ಆಪ=ಇಳಾ ಒಬ್ಬ ಸ್ತ್ರೀ, ಆದರೆ, ನಪ್ತೃವು ಚಂದ್ರಪುತ್ರ-ಬುಧನೂ ಆಗಬಲ್ಲ! ಆಪ=ಊರ್ವಶಿ ಆದಾಗ, ನಪ್ತೃ=ಆಪದಿಂದ ಹೊರಬರಬೇಕಾದ ವಿರಹ ವ್ಯಥೆಯ ಪುರೂರವನು ಆಗುತ್ತಾನೆ! ಬಸುರಿ ಊರ್ವಶಿಯ 'ಅಪಾಂನಪ್ತೃ'=ಅದಿತಿ=ಇಳಾ= ನಿತ್ಯಪೂರ್ಣಾ=ಪೂರ್ಣಿಮಾದೇವಿ+ರಾಕಾ ಶಕ್ತಿ=Life Force : Elan Vital.

ಪೂರ್ಣಮದಃ; ಪೂರ್ಣಂ ಇದಂ; ಪೂರ್ಣಾತ್ ಪೂರ್ಣಂ ಉದಚ್ಯತೇ। ಇದು ಶಾಶ್ವತ ಸನಾತನ ಸತ್ಯಧರ್ಮ, ಸರ್ಜಕ ಆಪ : ರಸ=ಸರ್‌ಪ: ವಿಶ್ವಸ್ಥ ಆದಿಶಕ್ತಿ! ಈ ದೃಶ್ಯ, ನಾಮರೂಪಾತ್ಮಕ ಪ್ರಪಂಚವೆಲ್ಲ ಶುದ್ಧಮಾಯೆ. ಈ ಹೊರಗಣ್ಣಿಗೆ ಕಾಣುವ ಈ 'ವಿಶ್ವಾರೂಪಾಣಿ'ಯ ಹಿಂದಿನ ಶಾಶ್ವತ ಸನಾತನ ಆಕೃತಿ ತತ್ : ಏಕಂ : ಸತ್=ಪೂರ್ಣ ! ತನ್ನ, ಆ ತತ್-ಪದ : 'ಪದ್ಮ'-ನಾಭಿಯ ಪರಮಾನಂದ ಸಿದ್ಧಿಯ=ತತ್‌ಮಯತೆಗೆ, ಎರವಾಗಬೇಕಾದ ಘೋರ ದುಃಖದಿಂದ ಅಳಲುವ ನಪ್ತೃ ಈ ನರ=ಪುರೂರವ. ಇಳಾ ಪುತ್ರ ನರರ ಸನಾತನ ಪ್ರತಿಮೆಯಿದು! ಆದರೆ, ಉಭಯಲಿಂಗೀ ಇಳಾ=ಅಪಾಂನಪ್ತೃ=ಪೂರ್ಣಿಮಾದೇವಿ; ಊರ್ವಶಿ + ಪೂರೂರವ=ಪೂರ್ಣಬ್ರಹ್ಮ. ಆದರೆ, ಊರ್ವಶಿ=ಆಪನ್ನ-ಸತ್ವಾ (ಆಗುತ್ತಲೆ)=ಪೂರ್ಣಿಮಾ ಆಗುತ್ತಾಳೆ. ಊರ್ವಶಿಯಿಂದ ಪರಿತ್ಯಕ್ತ=ಆಪದಿಂದ ದೂರವಾಗಬೇಕಾದ ನಪ್ತೃ=ಪುರೂ-ರವ=ಆಕ್ರಂದಿಸುವ ನರನ ಸಾಂಕೇತಿಕ ನಿತ್ಯ ಪ್ರತಿಮೆಯಾಗುತ್ತಾನೆ. ಈ ಆ-ಕ್ರಂದನ ಸಮಸ್ಯೆಯೇ ಇಂದಿನ ವೈಯಕ್ತಿಕ ಜೀವನರೀತಿಯೊಳಗಿನ "The problem of Alienation" ಎಂಬ ಅಸುರ (elan vital) ಪ್ರಶ್ನೆಯಾಗಿದೆ. ಸಮಾಜಶಾಸ್ತ್ರ, ಮಾನಸಶಾಸ್ತ್ರ, ಸಾಹಿತ್ಯ-ತತ್ತ್ವಜ್ಞಾನ ಕ್ಷೇತ್ರದಲ್ಲಿ.

ಆದರೆ, ಇದು ವಿಶಿಷ್ಟ ಭಾಷೆ-ದೇಶದ ಜನಗಣಕ್ಕೆ ಸೀಮಿತವಾದ ಸಮಸ್ಯೆಯಾಗಿ ಉಳಿದಿಲ್ಲ. ಹಿಂದಿನ ಉತ್ತರಗಳೇ ಈ ಸಮಸ್ಯೆಗೆ ಸ್ವಲ್ಪ ನೂತನ ವೇಷ ಆಕೃತಿಯಲ್ಲಿ ಮರಳಿ ಕಾಣಿಸಿಕೊಳ್ಳುತ್ತಿವೆ. 'ಇತಿಹಾಸದ ಪುನರಾವೃತ್ತಿ': "History repeats itself' ಎಂಬ ಹಾಗಿನ ಒಂದು ಮಾತಿನಿಂದ ಸಮಾಧಾನವನ್ನು ತಂದುಕೊಳ್ಳಲಾಗುವುದು ಉಂಟು. ಆದರೆ, 'ವಿಷ' (vicious) ಚಕ್ರದಂತೆ. 'ಇತಿಹಾಸವು' ತನ್ನ ಸುತ್ತಲು ತಾನೆ ತಿರುಗುತ್ತದೆ, ಎಂಬಲ್ಲಿ 'ಇತಿಹಾಸ'ದ ಬಗೆಗಿನ ಗ್ರಹಿಕೆಯು ಸಂಪೂರ್ಣ ಅಸಮಂಜಸವಿದೆ. ನಿಸರ್ಗದಲ್ಲಿ ಜೀವನ ಮರಣದ ಈ ಭೌತ ವಿಷಚಕ್ರವು ತನ್ನ ಸುತ್ತಲೂ ತಾನೇ ಚಕ್ರಾಕಾರವಾಗಿ ಸರ್ಪರೂಪದಲ್ಲಿ ಸುತ್ತುತ್ತಿದೆ; ನಿಜ. ಆದರೆ, ನೈಸರ್ಗಿಕ ಘಟನೆಗಳ ಆಗುಹೋಗುಗಳು, ಇತಿಹಾಸದ ವಿಷಯವಲ್ಲ. ಮಾನವ ಜೀವನ ಪಾತಳಿಯ ನಿನ್ನೆ ಇಂದುಗಳ ಸಂದರ್ಭದಿಂದ ಸಂಭವಿಸುತ್ತಿರುವ, ಭಾಷಿಕ ಅಥವಾ ಪ್ರಾದೇಶಿಕ ಜನಗಣದ ಆಗುಹೋಗುಗಳ ಕಾರ್ಯ-ಕಾರಣ ಸ್ವರೂಪದ ವಿವರಣಾತ್ಮಕ ಕಥೆಯ ಇತಿಹಾಸ, ನರ : ನಾರನಿಗೆ ತನ್ನೊಳಗಿನ ಸರ್ಜಕಶಕ್ತಿಯ ಸಾಕ್ಷಾತ್ಕಾರವಾಗಿದೆ. ನಾಗಸಂಪರ್ಕದಲ್ಲಿ ಇದರ ಇತಿ-ಮಿತಿಗಳ ಅರಿವಿನಲ್ಲಿ ತಾನು ಸತ್ವಭ್ರಷ್ಟನು (alienated) ಆಗುತ್ತಿರುವ ಪ್ರಜ್ಞೆ ಎಂದೊ ಮಾಡಿದ್ದೂ ಉಂಟು. ಈ ಪ್ರಜ್ಞೆ, ಮೊದಲು ಕೇವಲ 'ಸಂ-ದೃಕ್' ಇದ್ದುದು,

ಸಾಕ್ಷಿಯಾಗಿ ಪರಿಣಮಿಸುವ ಹಂತದ ಹತ್ತಿರಕ್ಕೂ ಬಂದುದುಂಟು. ವಿವಾಹ-ಸಂಸ್ಥೆಯು ಇತಿಹಾಸದ ಒಂದು ಉದಾಹರಣವೇ ಸಾಕು. ಇದು ಕೇವಲ ಭೌತ ಸ್ವರೂಪದ ಪುನರಾವೃತ್ತಿ ಅಲ್ಲ, ಎಂಬುದನ್ನು ಮನಗಾಣಲು. ಇಳಾಪುತ್ರ ಪುರೂರವ ನರನು; ವೈವಸ್ವತ-ಮನು-ಮಾನವನು, ಎಂದರೆ ಮನನ ಚೇತನದ ಚಿತ್‌ಪ್ರಕಾಶದಲ್ಲಿ ಮಾರ್ಗಕ್ರಮಿಸುವ ನೂತನ ಸಂಸ್ಕೃತಿ-ಸಮಾಜ ರಚಿಸಿಕೊಳ್ಳುವ ದಾರಿಯಲ್ಲಿ ಈತನು ರಾಷ್ಟ್ರ-ಸಂಘಾದಿಗಳ ಪ್ರಯೋಗ ನಡೆಸಿದ್ದು ಕಾಣುತ್ತಿದೆ. ಇದನ್ನು 'ಇತಿಹಾಸದ ಪುನರಾವೃತ್ತಿ' ಎನ್ನಲು ಆದೀತೆ? ಮದುವೆಯ 'ಶರೀರ' ಸಂಬಂಧಕ್ಕೇ ಕೇವಲ ಈಗ ಪ್ರಾಶಸ್ತ್ಯವು ಉಳಿದಿಲ್ಲ. ದೈಹಿಕ ಭೌತ-ಕ್ರಿಯೆಯಲ್ಲಿ ಇತಿಹಾಸದ ಪುನರಾವೃತ್ತಿ ಇದೆ. ಆದರೆ, ಮದುವೆಯ ಅರ್ಥದ ಪಾತಳಿಯು, ಆಯಾ ಜನದ ಸಾಂಸ್ಕೃತಿಕ ಮಟ್ಟಕ್ಕೆ ಸಮಾಂತರವಿರುತ್ತದೆ. ಈ 'ಅರ್ಥ', ಆಯಾ ಸಾಂಸ್ಕೃತಿಕ 'ಸಮಯ'ದ (: ಆಚಾರ ವಿಚಾರಗಳ) ಆಕೃತಿಗೆ ತೀರ ವಿಸಂಗತವಿರುವುದು ವಿರಳ ಮತ್ತು ಭೌತ ಕಾಲದ ಆಕೃತಿಯು 'ಶಶಿರ ವಸಂತೌ ಪುನರಾಯಾತಃ' ಎಂಬಂತೆ 'ಚಕ್ರನೇಮಿಕ್ರಮೇಣ' ತಿರುಗುವುದಾದರೂ ಅದು ಜನಗಳ ಭಾಷಿಕ-ಸಾಂಸ್ಕೃತಿಕ 'ಸಮಯ', ಭೌತಕಾಲ (physical time) ದಷ್ಟು, ಅದೇ ಅದೇ ಆಕೃತಿಯದಾಗುವುದಿಲ್ಲ. ಸೂರ್ಯನಿಗೆ ಕೇವಲ ವಿಷುವೃತ್ತದ ಗತಿಯೇ ಇದ್ದರೆ, ಜ್ಯೋತಿರ್ವಿದರಿಗೆ ವಿಶ್ವವು ಅಗಲ-ವಿಶಾಲವಾಗುತ್ತಿರುವ ಭೌತ ಅನುಭವವು (Expanding Universe) ಬರುವ ಆವಶ್ಯಕತೆಯಿದ್ದಿಲ್ಲ.

ಆದರೆ, ಇತಿಹಾಸ ಬೇಕು-ಯಾರಿಗೆ? ಚಿಂತನಶೀಲರಿಗೆ. ಇತಿಹಾಸ : ಅರ್ಥ : ಸ್ಮೃತಿಗಳು ಜೀವಕ್ಕೆ ಉರಲು ಎಂಬ ಅನುಭವದಿಂದಾಗಿ ಮಾನವನು ಶುದ್ಧ ನರನಾಗಿ, ಬಾಳಹಾದಿಯಲ್ಲಿ ಹೊರಟುದು--ಹೊರಡುವುದು ಉಂಟು. ಮನಸ್ಸಿನ ಬಗೆಗಿನ ಎರಡು ದೃಷ್ಟಿಕೋನ-ಮನಸ್ಸಿನ ಇಬ್ಬಗೆಯ ಅರ್ಥ ಇದರ ಕಾರಣವನ್ನು ಗಮನಕ್ಕೆ ತಂದು ಕೊಡಬಲ್ಲುದು. ಮನಸ್ಸನ್ನು 'ಚಿತ್' (ಪ್ರಕಾಶ) ಎಂದೆಂಬ ಭೂಮಿಕೆಯು ಒಂದು. ಮನಸ್ಸನ್ನು ಆಪ: ರೇತ: ಸರ್ಪ ಎಂದು ಬಗೆವ ಭೂಮಿಕೆಯೂ ಉಂಟು. 'ಅರ್ಥ'ವು ಪ್ರಕಾಶದಾಯಕ ನಿನ್ನೆಗಳ ಅನುಭವಾಲಂಬಿ. ಆದಕಾರಣ, ಚಿಂತಕ ಮನಸ್ಸಿಗೆ ಇತಿಹಾಸದ ಬೆಳಕು ಸ್ವಾಗತಾರ್ಹವೆನಿಸುತ್ತದೆ. ಆದರೆ, ಸ್ಮೃತಿ : ಅರ್ಥವು ಬಂಧನಕಾರಿ. ನಾಗ ಪ್ರತಿಮಾರಾಧನೆಯ ಭೂಮಿಕೆಯಲ್ಲಿ ಇತಿಹಾಸಕ್ಕೆ ಪ್ರವೇಶವಿಲ್ಲ! ಜಾದು-ಚಮತ್ಕಾರ-ಪವಾಡ-ಮಾಟ ಇವು ಅರ್ಥವನ್ನು ತುಚ್ಛವಾಗಿ ಬಗೆಯುತ್ತವೆ. ಅರ್ಥಕ್ಕೆ ಒಗ್ಗಿದರೆ ಬಗ್ಗಿದರೆ ಅದು ಪವಾಡವೆ? ಮಾಟವೆ? ಮೋಡಿಕಾರಿಕೆಯೆ? ಅರ್ಥಕ್ಕೆ ಎಟುಕುವ ದೇವರ ದೇವತ್ವ-ದಿವ್ಯತ್ವ ಎಲ್ಲಿ ಉಳಿಯಿತು? ಆದಕಾರಣ, ವಿಶಿಷ್ಟ ಅರ್ಥ : ಆಕೃತಿಗೆ ಮೀರಿ ನಿಲ್ಲುವ ನಾಗಶಕ್ತಿಯೇ ದೇವರು! ನಿಜವೆ? ದೇವರು ಅರ್ಥಕ್ಕೆ ಮೀರಿದ ಶಕ್ತಿ. ಪ್ರಪಂಚದಲ್ಲಿ ದೇವರನ್ನುಳಿದು ಏನೆಲ್ಲವೂ ಅರ್ಥವಿಹೀನ, ಎಂದರೆ ಮಾನವ ಸಮಷ್ಟಿ ಅವರು ಸೃಷ್ಟಿಸಿರುವ ಭಾಷೆ-ಶಾಸ್ತ್ರ-ಸಾಹಿತ್ಯ ಸಂಸ್ಕೃತಿಯ ಗತಿಯೇನು? ಅರ್ಥವನ್ನು ಅರಿವ ಪ್ರಯತ್ನದಲ್ಲಿ ಭಾಷೆ ಮೈದಾಳಿದೆ! ಶಾಸ್ತ್ರ ಸಾಹಿತ್ಯಾದಿಗಳು ನಿರ್ಮಾಣವಾಗಿವೆ. ಹಾಗಾದರೆ, ಇವನ್ನೆಲ್ಲ ಸುಳ್ಳು, ಅನರ್ಥಕಾರಿಯೆನ್ನುವುದೇ? ಈ ಭೂಮಿಕೆ ಸ್ವೀಕರಿಸಬೇಕಾಗುವ ಜೀವನವನ್ನು ಅರ್ಥವಿಹೀನ ಮೃತ್ಯು-ಸ್ವರೂಪ ಎಂಬ, ದೈವತಾವಾದದಲ್ಲಿಯೇ ಏನಾದರೂ ಕೊರತೆ ಇರಲಾರದೊ? ದಿಕ್ಕಾಲಾತೀತ ಪರಮಾನಂದ ಸಿದ್ಧಿಯ ವಿಚಾರವು ಜನ್ಮತಾಳಿದ ಪರಿಸರ. ಅದರ ಹಿನ್ನೆಲೆ ತಿಳಿಯಲು ಶಕ್ಯವಾದರೆ, ಈ ಕೊನೆಯ ಪ್ರಶ್ನೆಯ ಉತ್ತರವು ಕಣ್ಣಳತೆಯಲ್ಲಿ ಬರಬಹುದಾಗಿದೆ.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** II. ೩೩.೧೩;

೨. ***ಅದೇ*** I. ೮೦.೧೬.

೩. ***ಅದೇ*** I. ೧೧೪.೨, ಇತ್ಯಾದಿ

೪. ***ಅದೇ*** X. ೭೩.೪

೫. ***ಶ್ರೀಮನ್ಮಹಾಭಾರತ*** ಶಾಂತಿ ಪರ್ವ: ಮೋಕ್ಷಪರ್ವ ೩.೩೪೩.೨೮.೩೦

೬. ***ಋಗ್ವೇದ ಸಂಹಿತೆ*** X. ೮೨. ೨.

೭. ***ಅದೇ*** ೧೨೧. ೧

೮. ***ಅದೇ*** X. ೮೨.೨

೯. ***ಋಗ್ವೇದ ಸಂಹಿತೆ*** III ೬೦. ೩

೧೦. ***ಅದೇ*** X ೧೦೧

೧೧. ***ಅದೇ*** X. ೭೨.೨.೩

೧೨. ಅಲ್ಲದೆ ***ಋಗ್ವೇದ ಸಂಹಿತೆ*** X ೮೧ : ***ಕೇನೋಪನಿಷತ್*** 'ತತ್ವನಂ ಉಪಾಸೀತ; ***ಛಾಂದೋಗ್ಯ***, ಐರಂ ಮದೀಯಸರ, ಅಶ್ವತ್ಥ ವೃಕ್ಷ

೧೩. ***ಬೃಹದಾರಣ್ಯಕೋಪನಿಷತ್ತು*** ೧. ೨. ೧.

೧೪. ***ಋಗ್ವೇದ ಸಂಹಿತೆ*** X ೧೧೭.೬

೧೫. ***ಮುಂಡಕೋಪನಿಷತ್ತು*** ೧. ೨. ೭

೧೬. ***ಅಥರ್ವವೇದ*** ೧೧.೧.೬. ಬೃ. ವು. ೨. ೨. ೩

೧೭. ***ಬೃಹದಾರಣ್ಯಕೋಪನಿಷತ್ತು*** ೩. ೨. ೧; ೩. ೭. ೧

೧೮. ***ಋಗ್ವೇದ ಸಂಹಿತೆ*** X. ೯೫

೧೯. Robert Graves ***Greek Myths*** P. 69

೨೦. ***ಋಗ್ವೇದ ಸಂಹಿತೆ*** X. ೯೫. ೩

೨೧. ***ಅದೇ*** III ೫೪. ೧೩. VII. ೯. ೫. ಮುಂ.

೨೨. ***ಅದೇ*** VII. ೯೬. ೧

೨೩. ***ಅದೇ*** X. ೧೩೧. ೫

೨೪. Robert Graves, ***Greek Myths*** p. 88

೨೫. ***ಋಗ್ವೇದ ಸಂಹಿತೆ*** I. ೧೬೪. ೫೨

೨೬. Macdonell A. A.; ***Vedic Mythology*** p. 88

೨೭. **ಋಗ್ವೇದ ಸಂಹಿತೆ** X ೭೨. ೮. ೯.

೨೮. ***ಅದೇ*** I. ೧೬೪

೨೯. ***An Introduction to the Science of Mythology*** : yung and Kereney ಈ ಸಂಕೇತ ವಿವರಣೆ ನೋಡಿ.

(ನಾಗ:) ಶಕ್ತಿ ಉಪಾಸನೆಯ ಕ್ರಿಯೆ-ಪ್ರತಿಕ್ರಿಯೆ

'ಶಕ್ತಿ' ಆರಾಧಕರಿಗೆ 'ಶಾಕ್ತರು' ಎಂದು ಹೆಸರು. 'ಶಕ್ತಿ' ಈ ಪದದಿಂದ 'ಶಾಕ್ತ' ಎಂಬ ಶಬ್ದವು ರೂಢಿಗೆ ಬಂದಿದೆ. ಆದರೆ, ಇದಕ್ಕೆ ಅಪಾರ್ಥ ಬಂದಿದೆ. 'ಶಕ್ತಿ' (Power) ಈ ಸಂಕೇತದಲ್ಲಿ ಆಕ್ಷೇಪಾರ್ಹವೇನುಂಟು? ಶಕ್ತಿ-ಸಾಮರ್ಥ್ಯವು ಯಾರಿಗೆ ಬೇಡ? ಹಾಗಾದರೆ ಶಕ್ತಿಯ ಆರಾಧಕನು ಇವನು, ಎಂಬ ಅರ್ಥದ 'ಶಾಕ್ತ' ಸಂಕೇತದ ಬಗೆಗೆ ಜನಮನದಲ್ಲಿ ಅಸಡ್ಡೆ, ತಿರಸ್ಕಾರವು ಬೇರೂರಿರಲು ಕಾರಣವೇನು? ಇದು ಇಂಗ್ಲೀಷ್ ಭಾಷೆಯ 'Dramatic Irony' ಸ್ವರೂಪದ ಒಂದು ಸಾರ್ವಕಾಲಿಕ ಸತ್ಯವಾಗಿದೆ. ಪ್ರಪಂಚದಲ್ಲಿ ದುರ್ಬಲರು ಆಳಾಗಿ ತಲೆಯೆತ್ತಿ ಬಾಳಲು ಶಕ್ಯವಿಲ್ಲ. ಆದುದರಿಂದ, 'ಬಲಂ ಉಪಾಸ್ವ' ಎಂಬ ಆದೇಶವು ಎಂದಿನಿಂದಲೇ ವಿಧಿಸಲಾಗಿದೆ. ಆದರೆ, 'ಶಾಕ್ತ' : ಬಲದ ಉಪಾಸಕ, ಈ ಪ್ರತಿಮೆ ನಿಂದಾವ್ಯಂಜಕ ಅರ್ಥಯುಕ್ತ ಸಂಕೇತವಾಗಬೇಕೆ!

ಆದರೆ, ಬಲ : ಶಕ್ತಿಯನ್ನು ಏಕಂ ಸತ್ ಎಂದು ಬಗೆಯಲಿಕ್ಕಾದೀತೆ? 'ತತ್ : ಏಕಂ : ಸತ್' ಎಂಬ ಪ್ರತಿಮಾ ಆರಾಧನೆಯು ಒಟ್ಟಿನಲ್ಲಿ ಅಸುರತ್ವ ಸಿದ್ಧಿಯ ದಾರಿಯಾಗಿ ಪರಿಣಮಿಸುವುದಾಗಿ ಕಂಡುಬಂದಿದೆ! 'ಮಹತ್ ದೇವಾನಾಂ ಅಸುರತ್ವಂ ಏಕಮ್' ಎಂಬುದರ ವಿವರ ಈ ಮೊದಲು ಬಂದಿದೆ. 'ಸೋऽಹಂ' ವಾದಿಗಳನ್ನು 'ಅಸುರರು' ಎಂದು ನನ್ನ ಮಾಧ್ವ ಮಿತ್ರರು ಚಿಕ್ಕಂದಿನಿಂದಲೇ ಅಸಡ್ಡೆಯಿಂದ ಕಾಣುತ್ತಿದ್ದುದನ್ನು ಅರಿತಿದ್ದೆ. ಆದರೆ, ಇದರ ಆಳ, ಇಷ್ಟು ಇದ್ದೀತು: ಇಂದ್ರ-ವೃತ್ರ ಪ್ರತಿಮಾ : ಸಂಕೇತದಲ್ಲಿ ಇದರ ಉಗಮವಿದ್ದೀತು, ಎಂದು ತಿಳಿದಿರಲಿಲ್ಲ! ನಾಗ ಪ್ರತಿಮಾ ಸಮೀಕ್ಷೆಯಲ್ಲಿ ಅಪ : ರಸ ಸ್ವರೂಪೀ ಅಹಿ: ವೃತ್ರನು, ಅಸುರನೇಕೆ? ಹೇಗೆ ಎಂಬುದು ಅರಿಕೆಗೆ ಬಂದ ಬಳಿಕ ತತ್ : ಏಕಂ : ಸತ್ ಈ ಮಾಧ್ಯಮ ಪ್ರತಿಮೆಯ ಅಸುರೀ ವ್ಯಾಪ್ತಿಯ ಶಕ್ತಿಯ ಸ್ಪಷ್ಟಚಿತ್ರವು ಕಣ್ಣೆದುರು ನಿಂತಿತು. ಏಕೋವಿಷ್ಣುಃ ಮಹದ್-ಭೂತಾನ್ ಪೃಥಕ್-ಭೂತಾನ್ ಅನೇಕಶಃ....ವ್ಯಾಪಿಸಿ ತಾನೇ ಏನೆಲ್ಲ ತತ್ : ಏಕಂ : ಸತ್ ಆದ ವಿಷ್ಣುವೂ, 'ವೃ-ತ್ರ' ಎಂದರೆ ಏನೆಲ್ಲ ಜೀವನವನ್ನು ಆವರಿಸಿ ವ್ಯಾಪಿಸಿ ನಿಲ್ಲುವ ಅಹಿ : ನಾಗಶಕ್ತಿಯೇ ಆಗುತ್ತಿರುವನಲ್ಲ!

ರುದ್ರ-ವಿಷ್ಣು-ವೃತ್ರ ಇವರು 'ಶಕ್ತ'ರು; ಸರ್ವ ಸಮರ್ಥರು ಆದುದು 'ಶಕ್ತಿ'ರೂಪದೊಡನೆ ಸಾಮರಸ್ಯ ಹೊಂದಿದಾಗಲೇ, ಎಂದು ಸಂಪ್ರದಾಯವೇ ಹೇಳುತ್ತಿದೆ. ಶಕ್ತಿವಿರಹಿತ ಶಿವನು ಶವ ಎಂಬುದುಂಟು, "ಸಪ್ತಾರ್ಧ ಗರ್ಭಃ ಭುವನಸ್ಯ ರೇತಃ" ಎಂದು ಸ್ತೋತ್ರ ಮಾಡಿರುವಲ್ಲಿ ಈ ಸಪ್ತ=ಸರಣಶೀಲ : ಸರ್‌ಜಕ=ಸಪ್ತವು ಅರ್ಧ ಗರ್ಭ, ಎಂದರೆ ೧/೨ ಶಕ್ತಿ ಎಂದು ಒಪ್ಪಿಕೊಂಡಂತೆಯೇ ಇದೆ.[೧] ವಿಶ್ವಕರ್ಮ (ನಾರಣನ) ಅಂಗ (ಋಷಿ) ಎಂಬ 'ಸಪ್ತ'ರನ್ನು 'ಶಿಖಂಡಿ'ಗಳು ಎಂದಿರುವುದನ್ನು ನನೆಯಬೇಕು. ಈ ಸೃಷ್ಟಿ-ಕರ್ತರು 'ಶಕ್ತ'ರು ಆದುದು, ಅವರು ಶಕ್ತಿಯೊಡನೆ ತಾದಾತ್ಮ್ಯವನ್ನೂ ಹೊಂದಿ 'ತತ್ : ಏಕಂ'ರಾಗಿ ಸಮರಸರಾದಾಗಲೇ ತಾನೆ?

ತತ್ : ಏಕಂ ಇದೇ 'ಸತ್ಯ'. ಇದು ಅರ್ಥದ ಮಾಧ್ಯಮವು ಆಗುವಾಗ, ಅದು ಸುಷ್ಟ-ದುಷ್ಟ ಉಭಯ ಶಕ್ತಿಗಳನುಳ್ಳ ಅಸುರ ಶಕ್ತಿಯುಳ್ಳದ್ದಾಗುತ್ತದೆ, ಈ ಕಾರಣದಿಂದಲೇ 'ಶಾಕ್ತ'ರು ಎಂದರೆ, ಶಕ್ತಿಯನ್ನೆ ತತ್ : ಏಕಂ : ಸತ್ ಎಂಬ ಶ್ರದ್ಧೆಯವರು ಸಮಾಜದಲ್ಲಿ ನಿಂದೆಗೆ ಗುರಿಯಾಗುತ್ತ ಬಂದಿದ್ದಾರೆ.

ಬಾಳಿನಲ್ಲಿ 'ಸತ್ಯ'ವು ಯಾವಾಗಲೂ ಸಾಂಕೇತಿಕ (symbolic) ರೀತಿಯಿಂದ ಅರಿಕೆಗೆ ಬರುತ್ತದೆ. ಇದಕ್ಕೆ ಎರಡು ಕಾರಣಗಳು ಉಂಟು. ಸತ್ಯ ಎಂಬುದನ್ನು ಅರಿಕೆಗೆ ತಂದು ಕೊಡುವ ಮಾಧ್ಯಮ : ಪ್ರತಿಮೆಯ ಬಾಹ್ಯ ಆಕೃತಿಯು, ಸಮಾನ ಸ್ವರೂಪದ ಸಾರ್ವಕಾಲಿಕ ಸಂಕೇತವಿರುವುದಿಲ್ಲ. 'ಸತ್ಯವು ಸಾಂಕೇತಿಕವಿರುತ್ತದೆ ಎನ್ನಲು' ಇನ್ನೂ ಮಹತ್ವದ ಒಂದು ಕಾರಣವಿದೆ : ಕೆಲವೊಮ್ಮೆ ತನ್ನ ಅಭಿವ್ಯಕ್ತಿಯ ಮಾಧ್ಯಮದ ಮೂಲಕ ಅರಿಕೆಗೆ ಬರುತ್ತಿರುವ 'ಸತ್ಯ'ವು, ಆ ವ್ಯಕ್ತಿಗೇ ವ್ಯಕ್ತಿರೂಪ ಮಾಧ್ಯಮ : ಪ್ರತಿಮೆಗೂ ಗೊತ್ತಾಗುತ್ತಿರುವುದಿಲ್ಲ! ಇಂಗ್ಲೀಷಿನಲ್ಲಿ Dramatic irony ಎಂಬ ಮೂದಲಿಕೆಯ ಮಾತಿನ ಸತ್ಯಾಂಶವು ಈ ಬಗೆಯದಾಗಿರುತ್ತದೆ. ಒಂದು ವಿಶಿಷ್ಟ 'ಸಮಯ'ದಲ್ಲಿ ನಡೆದಿರುವ ಸಂಗತಿಯ ಸಾಮಾಜಿಕ ಅರ್ಥವು ಬೇರೆಯಾಗಿರುತ್ತದೆ.ಆದರೆ ಆ ಸಂಗತಿ-ಘಟನೆಗೆ ಸಂಭವಿಸುವ ಅರ್ಥವು, ಧ್ವನಿತವಾಗುವ ಸಾರ್ವಕಾಲಿಕ ಸತ್ಯಾಂಶವು ಇನ್ನೊಂದು! 'ಬಾಲಾತ್ ಅಪಿ ಸುಭಾಷಿತಂ ಗ್ರಾಹ್ಯಮ್' ಎಂಬ ಗಾದೆಯು ಪ್ರಚಲಿತವಾಗಿರಲು ಇದೇ ಕಾರಣ. ಚಿಕ್ಕ ಮಕ್ಕಳು ಥಕ್ಕನೆ ಆಡುವ ಮಾತಿನಲ್ಲಿ ಹುದುಗಿರುವ ವಾಸ್ತವಾಂಶದ ಅರಿವು ಅವಕ್ಕೆ ಸ್ವಲ್ಪವೂ ಇರುವುದಿಲ್ಲ. ಕೇಳುವವರಿಗೆ ಮಾತ್ರ ಅದು ಸೋಜಿಗ ತರುತ್ತದೆ. ಸಾಹಿತ್ಯ ಕಲಾಕೃತಿಯ ಮಾಧ್ಯಮ : ಪ್ರತಿಮೆಯ ಮೌಲಿಕತೆ, ಸೌಂದರ್ಯ, ಹಿರಿಮೆ ಅದರೊಳಗಿನ ಸಾಂಕೇತಿಕತೆಯ ಉಚ್ಚ-ನೀಚ ಮಟ್ಟವನ್ನು ಅವಲಂಬಿಸಿರುತ್ತದೆ.

ಅಭಿವ್ಯಕ್ತಿಯೊಳಗಿನ ಸತ್ಯಾಂಶವು ಸಾಂಕೇತಿಕವಿರುವುದರಿಂದ ಅದರ ಮಾಧ್ಯಮ : ಪ್ರತಿಮೆಯೂ ಸಾಂಕೇತಿಕ, ಎಂದು ಬಗೆಯುವುದೇ ಯಾವಾಗಲೂ ಸುರಕ್ಷಿತ. 'ನಾಗ' ಸಂಕೇತವನ್ನು=ಸಮೀಕ್ಷಿಸಿದರೂ ಈ ಮಾತಿನ ಸತ್ಯತೆಯು ಸ್ಪಷ್ಟವಾಗಲಿದೆ. ಇದು ಇಂದು-ನಿನ್ನೆಯ ಮಾಧ್ಯಮ : ಪ್ರತಿಮೆಯಲ್ಲ. ಪ್ರಪಂಚದಲ್ಲಿ ಪ್ರಚಲಿತವಿರುವ ಅತಿ ಪುರಾತನದುವು ಎಂದು ತಜ್ಞರು ನಿರ್ಣಯಿಸಿರುವ ಪವಾಡ ಕಥೆಗಳಲ್ಲಿ 'ನಾಗ' ಸಂಕೇತವಿದೆ. ಅಲ್ಲಿ ಇದು ಸೃಷ್ಟಿ ನಿರ್ಮಾಣದ ಸರ್‌ಜಕ ಶಕ್ತಿಯ ಪ್ರತಿಮೆಯಾಗಿದೆ! ಜನದ ಟೀಕೆಗೆ ಸತ್ಯವನ್ನು ಬಚ್ಚಿಡುವುದಕ್ಕಾಗಿ ಈ 'ನಾಗ' ಸಾಂಕೇತಿಕ ಪ್ರಚಾರಕ್ಕೆ ಬಂದಿತು, ಎನ್ನಲು ಅವಕಾಶವಿಲ್ಲ. ಈ ಪುರಾತನ ಪವಾಡ ಕಥೆಗಳ ಸಂದರ್ಭದಲ್ಲಿ ಅಂದು, ಟೀಕೆ-ನಿಂದೆ ಯಾರಿಂದಾಗುವುದು ಶಕ್ಯವಿತ್ತು? 'ಮೈಯಲ್ಲಿ ದೇವತಾ ಆವೇಶವಾಗಿದೆ' ಎಂಬ ಭಾವುಕ ಶ್ರದ್ಧೆಯು ರೂಪಿಸುವ ಈ ಪ್ರತಿಮಾ : ಸಂಕೇತಗಳ ಬಗೆಗೆ, ಆಗ ಅನನ್ಯ ಭಕ್ತಿಭಾವವು ಉಕ್ಕಿ ಬರುತ್ತಿರಲಿಕ್ಕೆ ಬೇಕೇ ಹೊರತು, ಅಸಡ್ಡೆ ತಿರಸ್ಕಾರದ ಲವಲೇಶವು, ಆ ಸಮಯಾಚಾರಗಳ ಆವರಣದಲ್ಲಿ ಒಳಗೆ ಸುಳಿಯಲು ಶಕ್ಯವಿಲ್ಲ.

ನಾಗ ಸಂಪರ್ಕದಿಂದ ವ್ಯಕ್ತಿಗಳಲ್ಲಿ ತಲೆಯೆತ್ತಿದ ಸಂ-ದೃಕ್ ಶಕ್ತಿಯ ಅರಿಮೆಯ ಮಿಣುಕು ದೀಪದ ಬೆಳಕಿನಲ್ಲಿ ಮಾನವರಲ್ಲಿ, ಮೊದಲ ಬಾರಿ, ವಸನ-ವಾಸಸ್ ಬೇಕು ಎಂಬ ಪ್ರಜ್ಞೆ ಮೂಡಿತು, ಎಂಬುದರ ವಿವರ ಹಿಂದೆ ಬಂದಿದೆ. ಬೈಬಲ್ಲಿನ ಈವಳ ಕಥೆ, ನೀರೊಳಗಿಂದ ಉದ್ಭವಿಸಿದ 'ಅ-ಪರ್ಣೆ': ಅಫ್ರೊಡೈಟ್ ದೇವಿಯ ಗ್ರೀಕ್‌ಪುರಾಣ ಕಥೆ,-ಬೈಬಲ್ಲಿಗಿಂತ ಪುರಾತನದ್ದು! ಅಲ್ಲದೆ, ಕುಮಾರಿ ದುರ್ಗೆಯ ಅಪರ್ಣಾ ಪರ್ಯಾಯ ನಾಮ, ಹುಟ್ಟಿಗೆಯ ನಡೆವಳಿ ದೇವಿಯ ಪೂಜೆ, ದಿಗಂಬರ : ಗುರು (:ದತ್ತ), ಪಾರ್ಶ್ವನಾಥಾದಿಗಳು ಇಂತಿವೆಲ್ಲ ದೇವತಾ ಪ್ರತಿಮಾ ಸಂಕೇತಗಳು, 'ನಾಗ' ರೂಪದ ಬಗೆಗಿನ ನಿಃಸಂಕೋಚ ಭಾವವನ್ನಲ್ಲದೆ ಅದರ ಬಗೆಗಿನ ಅಂದಿನ ಗೌರವಾದರದ ಭಾವವನ್ನು ನಿದರ್ಶನಕ್ಕೆ ತರುತ್ತಿವೆ. ಅಂದಿನ ಸಮಾಜದ, ಆಯಾ ಜನಗಣದ ಶಿಷ್ಟಮಾನ್ಯ ಸಮಯಾಚಾರಗಳ ಒಂದು ಕಾಲದ ಅಸ್ತಿತ್ವವನ್ನು ಇದು ಸಿದ್ಧಪಡಿಸುತ್ತಿವೆ. ಆದುದರಿಂದ, ನೆನೆಪಿನಲ್ಲಿ ಇಡಬೇಕಾದ ಸಂಗತಿಯೆಂದರೆ, ಫ್ರೈಡ್‌ಪಂಥೀಯ ಮಾನಸಶಾಸ್ತ್ರವು ನಂಬಲು ಹೇಳುವಂತೆ, ಸತ್ಯವನ್ನು ಬಚ್ಚಿಡುವ ಬುದ್ಧಿಯಿಂದಲೇ, ಈ ಬಗೆಯ ಪ್ರತಿಮಾ : ಸಂಕೇತಗಳು, ಮೊತ್ತಮೊದಲಿನಿಂದಲೂ ಮೈದಾಳಿವೆ ಎಂದು

ಬಗೆಯಲು ವಸ್ತು ಸ್ಥಿತಿಯು ಅಡ್ಡಬರುತ್ತಿರುವುದನ್ನು ಮರೆತಲ್ಲಿ ಸತ್ಯದ ಅವಜ್ಞೆಯಾಗಲಿದೆ. ನಾಗಾರಾಧನೆ ಯಿಂದ ಜನಗಣದಲ್ಲಿ ಕಾಣಿಸಿಕೊಂಡ ಆರಂಭದ ಸಂದೃಕ್ ಶಕ್ತಿ, ಅವರವರ ಅನುದಿನದ ಜೀವನದೊಳಗಿನ ಆಘಾತ ಪ್ರತ್ಯಾಘಾತಗಳಲ್ಲಿ ಬರುವ ಅನುಭವಗಳಿಂದ ಆ ಸಂದೃಕ್ 'ಸಾಕ್ಷಿ'ಯ ಹಂತಕ್ಕೆ ಏರತೊಡಗುತ್ತದೆ-ಇಂತಹ ಜಾಗೃತ ಸಾಕ್ಷಿಯ ಶಿಷ್ಯರು, ಪ್ರತಿಷ್ಠಿತರಾಗಿ ಇವರು ಆ ಜನಗಣದ 'ನೇತೃ'ವಾದಂತೆ ಈ ನೂತನ ಮಾಧ್ಯಮದ ಪ್ರಭಾವದಲ್ಲಿ ತತ್ಪೂರ್ವದ 'ನಾಗ' ಸಂಕೇತವು ಸ್ಥಾನಭ್ರಷ್ಟವಾದರೂ ಆಗಬೇಕಾಗುತ್ತದೆ. ಆಗಿನ ಸಮಯಾಚಾರಗಳ ಆಕೃತಿಗೆ : ಅಭಿರುಚಿಗೆ ಸರಿಹೋಗುವ ಕನಿಷ್ಠಪಕ್ಷ ಒಂದು ನೂತನ ರೂಪವನ್ನಾದರೂ ಅದು ತಾಳುವುದು ಅನಿವಾರ್ಯವಾಗುತ್ತದೆ. ಸಂ-ದೃಕ್ ಕೇವಲ ಅರಿಮೆ (cognition), ಸಾಕ್ಷಿಯೆನಿಸದು. ಸಂದೃಕ್ ಇದು ಒಂದು ಬಿಂದುವಿನಲ್ಲಿ ಕೇಂದ್ರೀಕೃತ (ಆತ್ಮ) ಶಕ್ತಿ. ಈ ಸಂದೃಕ್ : ದೀಪಕ್ಕೆ, ನಿನ್ನೆ-ಇಂದು-ನಾಳೆಗಳ ಗಾಳಿ ಸಹಿಸದು. ಈ ಆತ್ಮಕೇಂದ್ರಿತ ಸಂದೃಕ್ ಶಕ್ತಿ, ತನ್ನೊಳಗೇ, ಒಂದು ಬಿಂದುವಿನಲ್ಲಿ ಏನೆಲ್ಲ ವಿಶ್ವವನ್ನು ಕಾಣುವ ಸಾಹಸಿ! 'ಸುತ್ತಿ ಸುತ್ತಿ ಬಂದಡಿಲ್ಲ; ಲಕ್ಷಗಂಗೆಯ ಮಿಂದೊಡಿಲ್ಲ; ತನ್ನ ತಾನೇ ಮೆಟ್ಟಿ ನಿಂದಲ್ಲಿ' ಕಾಣುವ ಒಳ ಬೆಳಕಿನಲ್ಲಿ ಆಗುವ ಸಾಕ್ಷಾತ್ಕಾರಕ್ಕೆ ಏನೆಲ್ಲ ಬೆಲೆ. ಈ 'ಸಂದೃಕ್' ಭೂಮಿಕೆಯ 'ಜ್ಞಾನ'ದ ಸ್ವರೂಪವಿದು. ಗೀತೆಯು ಸಂದೃಕ್ ಇದನ್ನೇ 'ಸಾಕ್ಷಿ' ಎಂಬ ಸಂಕೇತದಿಂದ ನಿರ್ದೇಶಿಸಿದೆ! ಆದರೆ, ನಚಿಕೇತ : 'ಸ್ಥಿತ' ಪ್ರಜ್ಞಾವಸ್ಥೆಗೆ 'ಸಾಕ್ಷೀ' ಭೂಮಿಕೆ ಪೋಷಕ ಪ್ರೇರಕವಾಗದೇ ಮಾರಕವಾಗಬಲ್ಲದು! ಸಾಕ್ಷಿ ನಿಷ್ಪಕ್ಷಪಾತಿ, ತಟಸ್ಥನು ನಿಜ. ಆದರೆ ನಿನ್ನೆ-ಇಂದು-ನಾಳೆಗಳನ್ನು ತಟಸ್ಥಭಾವದಿಂದ ಸಮೀಕ್ಷಿಸಬಲ್ಲ ಸಮರ್ಥನೇ 'ಸಾಕ್ಷಿ'ಯಾಗುತ್ತಾನೆ, ತುಲನೆಗೆ-ಯುಕ್ತಾಯುಕ್ತ ನಿರ್ಣಯಕ್ಕೆ ಸಾಕ್ಷಿಯು ಮಾತ್ರ ಉಪಯುಕ್ತನಾಗಬಲ್ಲನು. ಆದರೆ, ನಿನ್ನೆ- ಇಂದುಗಳ ಘರ್ಷಣೆ ಬೇಡವೆಂದು ಜೀವನ ಪ್ರವಾಹದಿಂದ ದೂರ ಹೋಗಿ ಗುಹೆ ಅಥವಾ ಆಶ್ರಮ ಸೇರಿ ಏಕಾಂತ ಸೇವನೆಯಲ್ಲಿ ಹಿಗ್ಗುಗೋಬುವರ, 'ಬದ್ಧ ಪದ್ಮಾಸನಸ್ಥರಾಗಿ' ಅಥವಾ ಸಹ-ಜ ಭಾವದಲ್ಲಿ 'ಭ್ರೂಮಧ್ಯ ದೃಷ್ಟಿಯ' ಇಲ್ಲವೆ ಗೀತೆಯೇ ಬೋಧಿಸುವಂತೆ 'ನಾಸಿಕಾಗ್ರಂ ಸ್ವಂ' ನೆಟ್ಟದೃಷ್ಟಿಯಿಂದ ಕಾಣುತ್ತ ತತ್-ಏಕಂ-ಚಿತ್ತವಾಗುವ ಸಾಧನಾರತರ 'ಸಂದೃಕ್', ಇದಕ್ಕೆ 'ಸಾಕ್ಷಿ'ಯ ಅರ್ಹತೆಯು ಎಂದೂ ಬರಲಾರದು. ನ್ಯಾಯಾನ್ಯಾಯಾ ನಿರ್ಣಯದಲ್ಲಿ 'ಸಾಕ್ಷಿ'ಯ ಆವಶ್ಯಕತೆಯಿರುತ್ತದೆ. ಜೀವನವನ್ನು 'ಕಲಹ' ಕೋಲಾಹಲ ಎಂದು ನಿರ್ಣಯಿಸಿ ಬಿಟ್ಟಲ್ಲಿ ಆ ವೃತ್ತಿಯೊಳಗಿನ 'ಸಾಕ್ಷಿ'ಯ ಭೂಮಿಕೆಯು ಕೊನೆಗೊಳ್ಳುತ್ತದೆ. ಅದು ಬರಿ ಸಂ-ದೃಕ್ ಆಗಿ ಉಳಿಯುವುದು!

ಮಾನವನೊಳಗಿನ ಸಂ-ದೃಕ್ ಮತ್ತು ಸಾಕ್ಷಿ ಇವೆರಡೂ ಭಿನ್ನ ಸ್ವರೂಪದ ಆಕೃತಿಯ ಜ್ಞಾನ-ಪ್ರಕಾರಗಳು. ಸಂ-ದೃಕ್ ಹೊಳೆದು ಅದೃಶ್ಯವಾಗುವುದು. ಇದು Intuition ಎಂಬ ಆಂಗ್ಲ ಭಾಷಿಕ ಸಂಕೇತದ ಹತ್ತಿರದ ಅನುಭವ. ನಿಸರ್ಗಸ್ಥ ಜೀವಗಳ ಪಾತಳಿಯಲ್ಲಿ ಕಾಣುವ ಮಿಣುಕು; ಪ್ರಕೃತಿ-ಧರ್ಮದ ಪ್ರೇರಣೆಯ ಕೈವಾಡವೇ ಪ್ರ-ಮುಖ. ಇದರಲ್ಲಿ ಜೀವನಶಕ್ತಿ (: Life Force) ಎಂದರೇ ನಾಗಶಕ್ತಿ, ಫ್ರೆಂಚ್ ವಿಜ್ಞಾನಿ-ತತ್ತ್ವಜ್ಞನು ಪ್ರತಿಪಾದಿಸಿರುವ ವಿಶ್ವಶಕ್ತಿ : Elan (vital) vivacity : Impetuous Rush ಎಂಬುದೂ ಭೋರಾಡುತ್ತ ಮುನ್ನುಗ್ಗುತ್ತಿರುವ ಸರ್ಪ-ಶಕ್ತಿಯೇ. ಈ Elan-vital ತತ್-ತ್ವ ಪ್ರತಿಪಾದಕ ಬರ್ಗಸನ್, Intuition (: ಸಂದೃಕ್) ಪಂಥಿಯಾಗಿರುವುದನ್ನು ಗಮನಿಸಬೇಕು.

ಮಾನವರಲ್ಲಿ ಸಂದೃಕ್ ಹಾಗೂ ಸಾಕ್ಷಿ ಎರಡೂ ಕಣ್ಣುಗಳೂ ಉಂಟು. ನಾಗ ಸಂದರ್ಶನದಲ್ಲಿ ಮೊತ್ತಮೊದಲು ತಲೆದೋರುವುದು ಸಂದೃಕ್ : ದರ್ಶನ; ಕಣಿಯ ಕಣ್ಣು. ಆ ಬಳಿಕ ಬರುವ ನಾನಾವಿಧದ ಅಂತರ್‌ಬಾಹ್ಯ ಅನುಭವಗಳ ಮೂಲಕ ಯುಕ್ತಾಯುಕ್ತ ನಿರ್ಣಯಕ್ಕೆ ನೆರವಾಗುವ-ವಿವೇಕಶಕ್ತಿಯ ಸಹಕಾರಿ 'ಸಾಕ್ಷಿ' ಸ್ವರೂಪದ ಕಣ್ಣು ಒಂದು ಅರಳುತ್ತದೆ. ಒಂದು ಗಿಡದಲ್ಲಿ ಎರಡು ಸು-ಪರ್ಣ-ಪಕ್ಷಿ ಕುಳಿತಿವೆ, ಎಂಬ ವೇದದ ರೂಪಕದಲ್ಲಿ ಈ ಅನುಭವವೇ ಒಳಗೊಂಡಿದೆ.[೨] ಇವು. 'ಅಧಿ ವಿಶ್ವೇ ಸುವತೇ' (: ವಿಶ್ವಸ್ಯೋಪರಿ ಪ್ರಕಾಶಂ ಜನಯಂತಿ). ಹಗಲು ಬೆಳಕನ್ನು ನಿರ್ಮಿಸುತ್ತವೆ. (ಇರುಳು ಮರಳಿ ವಿಶ್ರಮಿಸಲು ಸೂರ್ಯ-ಸವಿತೃವಿನಲ್ಲಿ ಬರುತ್ತವೆ). ಈ ಬೆಳಕನ್ನು ನಿರ್ಮಿಸಲು ಒಂದೇ ಸುಪರ್ಣ ಸಾಲದು! ಈ ಋಚೆಯಲ್ಲಿ ಅಭಿಪ್ರೇತ ಪ್ರಕಾಶವು ಭೌತಸೂರ್ಯನಿಂದ

ದೊರೆವ ಬೆಳಕಿನಂತಹುದಲ್ಲ. ಇದು ಸವಿತೃವಿನ ಪ್ರಕಾಶ=ಭಾಷಾ (ಭಾ=ಪ್ರಕಾಶಿಸು): ಭಾನು ಪ್ರಕಾಶ=ಮಾಧ್ಯಮ ರೂಪೀ ಶಬ್ದಪ್ರತಿಮಾ : ಸಂಕೇತಾತ್ಮಕ ಪ್ರಕಾಶ! ಏಕಾಕಿಗೆ ಮಾತಿನ ಆವಶ್ಯಕತೆಯೇ ಇಲ್ಲ! ವ್ಯಕ್ತಿಯಲ್ಲೇ ಮನೋಮಥನಕ್ಕೆ ಕನಿಷ್ಠ ಎರಡರ ಆವಶ್ಯಕತೆಯಿದೆ! ಭಾಷೆ ಸಾಮೂಹಿಕ ಸಾಮಾಜಿಕ ಜೀವನದ ಫಲಿತ ಎಂಬುದನ್ನು ಗಮನಿಸಿದರೆ, ದಿಕ್ಕಾಲದ ಜೀವನದ ಪರಿಸರದಲ್ಲಿ ಈ ತತ್ : ಏಕಂ : ಸತ್ ಎಂಬ ಭೂಮಿಕೆಯ ಅವಾಸ್ತವತೆ, ಟೊಳ್ಳುತನ, ಸುಳ್ಳುತನದ ಮನವರಿಕೆಯು ಆಗದೆ ಇರಲಾರದು.

ಕೇವಲ ಸಂ-ದೃಕ್ (intuition) ಸ್ವರೂಪದ್ದೇ ಆದ 'ವಾಕ್', ಪ್ರತಿಮಾ : ಸಂಕೇತಗಳ ಅಭಾವದಲ್ಲಿ ಅದು ಕೇವಲ ಆ ಜೀವನದ ಖಾಸಗೀ ಅನುಭವ ವಿಶ್ವವಾಗಿಯೆ ಉಳಿಯಬಲ್ಲದು. ಈ ವಾಕ್ಕಿನ-ಕೂಗು, ಚೀರಾಟ, ನಗು, ಅಳು ಸ್ವರೂಪದ ಅಭಿವ್ಯಕ್ತಿ, ಸಂಕೇತಾತ್ಮಕ ಹಂತದ್ದಾಗದೆ, ನಿಸರ್ಗದೊಡನೆ ಸಂ-ಬದ್ಧವಾಗಿಯೆ ಉಳಿಯುತ್ತದೆ ಆದುದರಿಂದ, ಪ್ರತೀಕಾತ್ಮಕ ಸಾಂಕೇತಿಕ ಭಾಷೆ ಮೈದಾಳುವ ಮೊದಲಿನ ಹಾವಭಾವಾದಿಗಳೊಡನೆಯೆ ಹೊರೆಹೊಮ್ಮುವ ಹರ್ಷ-ವಿಷಾದ-ತಿರಸ್ಕಾರಾದಿ ಸೂಚ್ಯ ಶಬ್ದಗಳನ್ನು 'ಭಾಷೆ' 'ವಾಕ್' ಎನ್ನುವುದೇ ಆದರೆ ಅದನ್ನು 'ನಿಸರ್ಗದ ಭಾಷೆ' ಎಂದು ಕರೆಯಬಹುದು. ಋಗ್ವೇದದ ಒಂದು ಋಚೆಯಲ್ಲಿ ನಿಸರ್ಗಸ್ಥ ಈ ಭಾಷೆಯ ಸೊಗಸಾದ ವರ್ಣನೆಯಿದೆ :

ದೇವೀಂ ವಾಚಂ ಅಜನಯಂತ ದೇವಾಃ; ತಾಂ ವಿಶ್ವರೂಪಾಃ ಪಶವಃ ವದಂತಿ[೩]

ಈ ವಾಕ್, ಆಪ : ರಸಪಾತಳಿಯ ಜೀವನ ರೀತಿಯಲ್ಲಿ ಮೈದಾಳುತ್ತದೆ. ಎಂಬ ಸಾಂಕೇತಿಕ ಉಲ್ಲೇಖವು ಒಂದಕ್ಕಿಂತ ಹೆಚ್ಚು ರೀತಿಯ ವಾಸ್ತವಾಂಶವನ್ನು ಗಮನಕ್ಕೆ ತರುತ್ತದೆ. ಈ ವಾಕ್ಕನ್ನು ಧೇನು ಎಂದುದುಂಟು. ಧೇನು=ಮಧ್ಯಮಾ ವಾಕ್. ಆದಕಾರಣ, ಸರ್ಪಶಕ್ತಿ=ಸೃಜನ ಶಕ್ತಿಯ ನಿಶ್ಚಿತ ಸೂಚನೆ ಇಲ್ಲಿದೆ. ಈ ಧೇನುವು "ಗೌರೀಃ ಮಿಮಾಯ" (ಪ್ರೇಮಯುಕ್ತ ಶಬ್ದ ಮಾಡುತ್ತಾಳೆ); ಸಲಿಲಾನಿ ತಕ್ಷತಿ (ಪಯಸ್ : ಆಪ : ರಸ ಸ್ರವಿಸುತ್ತಾಳೆ.[೪] ಇದಕ್ಕೂ ಮುಂಚಿನ ಉಲ್ಲೇಖದಲ್ಲಿಯೂ ಮಂದ್ರಾ (ಮದನಾ-ಹರ್ಷಯಿತ್ರೀ).... ದುಹಾನಾ (ಹಾಲು-ದ್ರವ ಸ್ರವಿಸುವಳು) ಎಂಬ ವರ್ಣನೆಯಿದೆ. ಇದು 'ಸಂ-ದೃಕ್' ಹಂತದ ನೈಸರ್ಗಿಕ ವಾಕ್. ಇದರ ಮಾಧ್ಯಮ 'ಮಿಮಾಯ' ಹಂಬಾ-ಹೂಂಕಾರದಂತಹ ಶಬ್ದ. "ಹಿಂ-ಕೃಣ್ವಂತೀ ವಸುಪತ್ನಿ ವಸೂನಾಂ ವತ್ಸಂ ಇಚ್ಛಂತೀ......."[೫] ಕರುವನ್ನು ಬಯಸಿ ಹೂಂಕಾರ ಮಾಡುವ ಗೋವು ವಾಕ್ ನಿರ್ಮಿಸುತ್ತದೆಂಬ ಸಾಂಕೇತಿಕ ಪ್ರತಿಮೆ ತುಂಬ ಸೂಚಕವಾಗಿದೆ. ಗೋವಿನ ಈ 'ಬಯಕೆ'. ಈ ಬಯಕೆಯ ನೈಸರ್ಗಿಕ ಪ್ರೇರಣೆಯ ಮೂಲಕ ಆ ಗೋವು ಮಾಡುವ 'ಹುಂ'ಕಾರ ಎಂಬುದು ಒಂದು ಭಾಗ. ಹ್ರೀಂ ಹ್ರಾಂ ಎಂಬೀ ರೂಪದ ತಂತ್ರಮಾರ್ಗದಲ್ಲಿ ಇರುವ ಬೀಜಾಕ್ಷರಗಳ ಮೂಲವು ಹೀಗೆ ನಿರ್ಸಗದಲ್ಲಿ ಇರುವ ಸೂಚನೆ ಇಲ್ಲಿ, ಉಂಟು. ಪತಿ-ಪತ್ನೀಯೋಗದಲ್ಲಿ ವಸುಗಳ ಸರ್ಜಕ ಆಪ : ರಸದೊಡನೆ ಹೂಂಕಾರಾದಿ ವಾಣಿ, 'ಸಂದೃಕ್' ಪ್ರಕಾಶನಿರ್ಮಾಣ ಇವೆರಡೂ ಏಕಕಾಲದ ಕ್ರಿಯೆಗಳು. 'ಗರ್ಭಧಾರಣ ಮಾಡುವ' ಆಪಸೂಕ್ತದ ದೈವತ ವಿಶ್ವಕರ್ಮನ ಸ್ತೋತ್ರದಲ್ಲಿ ಈ ಸಂದೃಕ್ ಸಂಕೇತ ಮೊದಲ ಬಾರಿ ಬಂದಿದೆ.[೬] ಇದೇ ರೀತಿ, ಕರು ತಾಯತ್ತ ಬರುವಾಗ ಆಗುವ ಶಬ್ದದ (ಶಿಂಕೇನ) ಉಲ್ಲೇಖವಿದೆ.[೭] ತಾಯಿಯು ಕರುವನ್ನಪ್ಪಿದಾಗ ಆಗುವ ಶಬ್ದದ (ಮಾಯುಂ ಮಿಮಾತಿ) ನಿರ್ದೇಶವೂ ಉಂಟು. ಕರುವು ಬರುತ್ತಲೆ ಎದೆ ಹಾಲು ಚಿಮ್ಮುವುದು. ಆಪ : ರಸದೊಡನೆ ಸಂ-ಬದ್ಧ ವಾಕ್ : ಸಂದೃಕ್ ಇದು.

ಆಪ : ರಸದ ಪಾತಳಿಯ ಸಂದೃಕ್ ವಾಣಿಯ ಈ ವರ್ಣನೆಗಳಲ್ಲಿ ಶ್ಲೇಷಾರ್ಥಕ ದ್ವ್ಯರ್ಥೀ ಸಂಕೇತಗಳನ್ನು ಬಳಸುವ ಋಗ್ವೇದದ ಈ ರೀತಿಯು, ನಾಗಶಕ್ತಿಯ ಆರಾಧನೆಯನ್ನು ತಿರಸ್ಕಾರದಿಂದ ಕಾಣುತ್ತಿದ್ದ ಕವಿವರ್ಗವು ಆಗ ಇನ್ನೂ ಪೂರ್ಣವಾಗಿ ಪ್ರತಿಷ್ಠೆಗೆ ಎರವಾಗಿದ್ದಿಲ್ಲ, ಎಂಬುದನ್ನು ಮನಗಾಣಿಸಿಕೊಡುತ್ತಿದೆ. ಸಂದೃಕ್‌ದಂತೆ 'ಸಾಕ್ಷೀ' ಭೂಮಿಕೆಯಲ್ಲಿ ಆಕಾರ ಪಡೆವ 'ವಾಕ್' ಸ್ವರೂಪದ ನಿರ್ದೇಶವೂ ಈ ವೇದದಲ್ಲೇ, ಇದೆ. ಇದರ ಬಗೆಗೆ ಈ ಮೊದಲು ಸ್ವಲ್ಪ ವಿವರ ಬಂದಿದೆ. ಮಧ್ಯಮಾವಾಕ್ (ಆಪ ಸ್ವರೂಪಿ), ಮರುತರು (ಅಪಾಂ-ನಪ್ತ :

ಸರ್ಪ) ಇವರಿಬ್ಬರ ಸಂಪರ್ಕದಲ್ಲಿ ಎಂದರೆ ನಾರ : ಸರ್ಪ ಸಂಬಂಧದಲ್ಲಿ ಈ ಸಂದೃಕ್ ವಾಕ್ಕು ಶ್ರೀಕಾರ ಪಡೆದಿತ್ತು. ಇದು ಈ 'ಯತ್ ಪ್ರೈರತ' : ಸಂದೃಕ್ (:ದರ್ಶನ) ಭೂಮಿಕೆಯ ವಾಕ್ಕು; ವಿಮರ್ಶೆಗೆ ಒಗ್ಗಲಾರದ್ದು. ಈ ಕಾರಣದಿಂದ ವಿಮರ್ಶಕ : ಸಾಕ್ಷಿ 'ಯತ್ ಪ್ರೈರತ' ಸಂಪ್ರದಾಯದ ವಾಕ್ಕನ್ನು ಸಾಣೆಸಿ, ಕೇರಿ ಪವಿತ್ರಗೊಳಿಸಿ ಉಪಯೋಗಿಸಿಕೊಳ್ಳಬೇಕೆಂಬ ಮತದವನು.

ಈ ಸಂದರ್ಭದಿಂದ ಈ ಸಂದೃಕ್ ವಾಕ್ಕಿನ ಬಗೆಗೆ ಇನ್ನೂ ಹೆಚ್ಚಿನ ವಿವರಗಳು ಅರಿಕೆಗೆ ಬರುವ ಒಂದು ಸೂಕ್ತವೂ ಇಲ್ಲಿ ಸಮೀಕ್ಷಾರ್ಹವಾಗಿದೆ. ಇದು ಅದಿತಿಯ ಸ್ವರೂಪವನ್ನು ಬಯಲಿಗೆ ತರುತ್ತದೆ. ಅದಿತಿ : ಸರ್ಪಸ್ವರೂಪೀ ಮಧ್ಯಮಾವಾಕ್. ಇವಳನ್ನು 'ಕಾಣಾ' ಎಂದು ತಿರಸ್ಕರಿಸುವುದನ್ನು ಪರ್ಯಾಯದಿಂದ ಸೂಚಿಸುವ ದೂರಾನ್ವಯದ ಒಂದು ಋಚೆಯನ್ನು ಋಗ್ವೇದದಲ್ಲಿ ಸ್ವೀಕರಿಸಲಾಗಿದೆ.[೮] ಏಕಂ : ಸಂತಂ ಈ ತತ್-ತ್ವಾರಾಧಕರು, ಏಕಗ್ರಾಹಿಗಳು; ಏಕಾಂತಿಕರು; ಎಂದರೆ ಒಕ್ಕಣ್ಣರು. ಆತ್ಯಂತಿಕ ಶ್ರದ್ಧೆಗೆ, ತನ್ನ ಕಣ್ಣು ಅತ್ತಿತ್ತ ಹೊರಳಿ ಇಲ್ಲದ ಆಕರ್ಷಣಕ್ಕೆ ಒಳಗಾಗಬಾರದೆಂಬ ತೀವ್ರ ಇಚ್ಛೆ. ಆದುದರಿಂದ ಇಂತಹ ಭಕ್ತರು 'ಅತ್ತಿತ್ತ ನೋಡದಂತೆ ಅಂಧಕನ ಮಾಡಯ್ಯ ತಂದೆ' ಎಂದು ಆರ್ತಭಾವದಿಂದ ಬೇಡಿಕೊಳ್ಳುವುದು ಅವರ ಸ್ವ-ಭಾವವೇ ಆಗುತ್ತದೆ. 'ಸರ್ಪ ಕುಲದ ಮಾತೆ' ಎಂಬ ಕದ್ರುವು, 'ಕಾಣಾ' (ಏಕಾಕ್ಷಿ) ಆಗಬೇಕೆಂಬ ಶಾಪಕ್ಕೆ ಗುರಿಯಾದಳಂತೆ. ಯಜ್ಞದೊಳಗಿನ ತಪ್ಪಿಗಾಗಿ! ಎಂದರೆ ಈ ನಾಗ-ನಾಗೀ ವರ್ಗಕ್ಕೆ, 'ಕಾಣ'; ಏಕಾಕ್ಷರು ಎಂದವರು ಯಾರಿರಬಹುದು. ಯಾಜಕ ಪಂಥಿಗಳಲ್ಲದೆ! ಈ ಸೂಚನೆಯಲ್ಲಿ![೯] ಕದ್ರು ಮತ್ತು ಅದಿತಿ ಇವರು ತತ್-ತ್ವಃ ಒಂದೇ ಆಗಿದ್ದಾರೆ. ಆದರೆ, ನಾಮಸಂಕೇತ ಮಾತ್ರ ಬೇರೆ. ಅದಿತಿ : ನಾಗಿ ಇವಳೇ 'ಕಾಣಾ' ಆದಬಳಿಕ ಅಂಭೃಣೀ, ಸರಸ್ವತೀ, ಲಕ್ಷ್ಮೀದೇವಿ, ಇವರೆಲ್ಲರೂ ನಾಗಿಗಳೇ ಆಗುತ್ತಾರೆ. ಆದಕಾರಣ ಇವರೂ ಏಕಾಕ್ಷಿಯರೇ ಸರಿ.

ಋಗ್ವೇದದಲ್ಲಿ ಅ-ಲಕ್ಷ್ಮಿಯನ್ನು ಕುರಿತ ಒಂದು ಸೂಕ್ತವಿದೆ.[೧೦] ಈ 'ಅ-ಲಕ್ಷ್ಮಿ' ಎಂದು ಸಂಪ್ರದಾಯವು ಹೇಳುವ ದೇವಿಯನ್ನು ಈ ಸೂಕ್ತದಲ್ಲಿ ಹೇ 'ಅರಾಯಿ ಕಾಣೇ' ಎಂದು ಸಂಬೋಧಿಸಲಾಗಿದೆ. ಇಲ್ಲಿ ಸರ್ಪದ ಉಲ್ಲೇಖವು ಸ್ಪಷ್ಟವಿಲ್ಲ. ಅಲ್ಲದೆ, ವ್ಯಕ್ತ ರೀತಿಯಲ್ಲಿ ಅ-ಲಕ್ಷ್ಮಿಯ ಹೆಸರೂ ಇಲ್ಲ! ಆದರೆ ಇದಕ್ಕೆ ಪ್ರತಿಯಾಗಿ ಭದ್ರಾ ಲಕ್ಷ್ಮಿಯ ಸ್ಪಷ್ಟ ಉಲ್ಲೇಖವು ಒಂದುಂಟು.[೧೧] ಲಕ್ಷ್ಮಿ : ಅಲಕ್ಷ್ಮಿ, ಪಾಪಲಕ್ಷ್ಮಿ, ಪುಣ್ಯಲಕ್ಷ್ಮಿ ಈ ಬಗೆಯ ವಿವರವು ಅಥರ್ವವೇದದಲ್ಲಿದೆ. ಆದರೆ, ಅಲಕ್ಷ್ಮಿಯನ್ನು ಕುರಿತು ಇರುವುದೆಂದು ಪರಂಪರೆಯಿಂದ ನಂಬಲಾಗಿರುವ ಋಗ್ವೇದದ ಈ ಸೂಕ್ತದಲ್ಲಿ ಅಲಕ್ಷ್ಮಿಯ ಹೆಸರನ್ನು ಮಾತ್ರ ಉಚ್ಚರಿಸದಿರುವುದಕ್ಕೆ ಆ ಸಮಯದ ಶಿಷ್ಟಾಚಾರ ಭಂಗದ ಭೀತಿಯು ಕಾರಣವೆ? ಏಕೆಂದರೆ ಋಗ್ವೇದದ ಮೂಲಶ್ರದ್ಧೆಗೆ ಅಮಂಗಳ ದೈವತಗಳು ತ್ಯಾಜ್ಯವಿರುವುದನ್ನು ನೆನೆದುಕೊಳ್ಳಬೇಕು. ಈ 'ಅಲಕ್ಷ್ಮಿ' ವಿಚಾರವು, ಈ ನಾಗಪ್ರತಿಮಾ ಸಮೀಕ್ಷೆಯಲ್ಲಿ ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ ಮೌಲಿಕವೆನಿಸಿದೆ.

ವಿಷ್ಣು-ನಾರಾಯಣರ ಅರ್ಧಾಂಗಿಯೆಂದು ಬಹಿರಂಗವಾಗಿ ಪೂಜೆಗೊಂಬ ಲಕ್ಷ್ಮಿಯೂ ಸರ್ಪಸ್ವರೂಪಳಾಗಿ ಇರುವುದು, ಸರ್ವ ವಿಧದಲ್ಲಿಯೂ ಉಚಿತವಾಗಿದೆ. ನಾರಣನನ್ನು ಸರ್ಪರೂಪನೆಂದು, ಕುಲುಕೊಳ್ಳದ ಹಿಮಾಲಯಸ್ಥ ಜಾನಪದದವರು ಹೇಳುತ್ತಾರೆ. ಶೇಷಶಾಯಿ ಚಿತ್ರಗಳಂತೂ ಇದ್ದೇ ಇವೆ. ಇವರ ಮಡದಿ ಎಂಬ ಲಕ್ಷ್ಮಿಯು 'ಸಾಗರ ಕನ್ಯೆ' ಎಂದು ಹೇಳಲಾಗುತ್ತದೆ. ಸಮುದ್ರ ಮಂಥನದಲ್ಲಿ ಹೊರಬಂದ 'ರತ್ನಾ' ಇವಳು ಎಂಬ ಪವಾಡ ಕಥೆ ಹುಟ್ಟಿದೆ. ಆದರೆ, ಲಕ್ಷ್ಮಿ ಸರ್ಪರೂಪಳು ಎಂಬುದರ ಉಚ್ಚಾರವೇ ಎಲ್ಲೆಲ್ಲೂ ಆಗಿರದಿರುವಲ್ಲ. ಇದು ಈ ಆಪ : ರಸ ಪಂಥೀಯ ಶಿಷ್ಟರಲ್ಲಿ, ಇದನ್ನು ಗುಪ್ತ-ಗುಹ್ಯ ಭಾಷೆಯಲ್ಲೇ ಸೂಚಿಸಬೇಕೆಂಬ ತಲೆತಲಾಂತರಗಳ ಪೂರ್ವ ನಿಯೋಜಿತ ಯೋಜನೆ ತಂತ್ರವೇ ಇದ್ದೀತೋ? ಈ ಕಾರಣದಿಂದಾಗಿ 'ಕಾಣಾ' ಎಂಬ ನಿರ್ದೇಶದ 'ಅಲಕ್ಷ್ಮಿ'ಯನ್ನು ಕುರಿತಿದೆ, ಎಂಬ ಋಗ್ವೇದಸ್ಥ ಈ ವಿಶಿಷ್ಟ ಸೂಕ್ತದ ಮಹತ್ವವು ಅನನ್ಯ ಸಾಧಾರಣವಾದುದು, ಇದರಲ್ಲಿ ಸಂದೇಹವೇ ಇಲ್ಲ. ಅಲ್ಲದೆ, ಇನ್ನೂ ಒಂದೆರಡು ಕಾರಣಗಳಿಗಾಗಿಯೂ ಸರ್ಪ ಸಂಕೇತದ ಈ ನಿರ್ದೇಶವು ಮೌಲಿಕವೆನಿಸುತ್ತದೆ.

ಅಥರ್ವವೇದದಲ್ಲಿ ಲಕ್ಷ್ಮಿಯು 'ಗೋ' ಪ್ರತಿಮಾ ಸಂಕೇತದಿಂದ ಸೂಚಿತಳಾಗಿದ್ದಾಳೆ! 'ಶತ ಸಂಖ್ಯಕಾಃ' ಲಕ್ಷ್ಮಿಯರು ಗೋವುಗಳಲ್ಲಿ ಕೆಲವು ಕಲ್ಯಾಣಪ್ರದ ಲಕ್ಷಣಗಳನ್ನು ಉಳ್ಳವು, ಕೆಲವು ಅವಲಕ್ಷಣಯುಕ್ತ ಗೋವುಗಳು ಇರುವಂತೆ, ಲಕ್ಷ್ಮಿಯರಲ್ಲಿ ಕೆಲರು ಪುಣ್ಯಾಃ ಲಕ್ಷ್ಮಿಯರು, ಕೆಲರು ಪಾಪಾಃ ಲಕ್ಷ್ಮಿಯರು-ಅಲಕ್ಷ್ಮಿಯರು ಇದ್ದಾರೆ ಎಂಬ ಅಥರ್ವವೇದದ ವರ್ಣನೆಯನ್ನು ಓದಿದಾಗ ಈ 'ಗೋ' ಪ್ರತಿಮೆ ಸಾಂಕೇತಿಕವಾಗಿದೆ. ಯಥಾ-ಅರ್ಥವ್ದು (೧=೧, one to one) ಅಲ್ಲ ಎಂಬ ಸಂದೇಹವೂ ತಟ್ಟಲಿಲ್ಲ. ಆದರೂ 'ಲಕ್ಷ್ಮಿ' ಈ ನಾಮ ಸಂಕೇತದಲ್ಲಿ ಸೂಚಿತವಿರುವ 'ಲಕ್ಷ್ಮ' ಚಿನ್ಹ, ಲಾಂಛನ ಇದರ ಸ್ಪಷ್ಟೀಕರಣ ದೊರೆಯದ ಅಸಮಾಧಾನವು ಉಳಿದಿತ್ತು. ವಿಷ್ಣುವು ಲಾಂಛನ ಯುಕ್ತನಿರುವಂತೆ ಲಕ್ಷ್ಮಿಗೂ ಲಾಂಛನ-ವಿಶಿಷ್ಟ ಲಕ್ಷಣ ಇರಬಹುದು, ಎನಿಸಿತು. ವಿಷ್ಣು-ನಾರಾಯಣ ಆಪ : ರಸ ಸ್ವರೂಪಿಗಳೆಂಬುದು ವಾದಾತೀತವಿತ್ತು. ಲಕ್ಷ್ಮಿ ಕ್ಷೀರಾಬ್ಧಿ ಪುತ್ರಿ ಎಂಬ ಸಂಕೇತದಿಂದ ಈ ದಾಂಪತ್ಯದ ಸಾಮರಸ್ಯ ಅರಿಕೆಗೆ ಬಂದಿತ್ತು. ಆದರೆ 'ಗೋ' ಸಂಕೇತವು ಸರ್ಪಸೂಚಕವಾಗಿಯೂ ಇರುವುದರ, ಮೊದಲ ಬಾರಿ ಆಘಾತವು, 'ಅಯಂ ಗೌಃ ಪೃಶ್ನಿಃ'=ಅದಿತಿಯ ದರ್ಶನದ ಸಂದರ್ಭದಲ್ಲಿಯೆ ಸಂಭವಿಸಿದ್ದು. ಆಮೇಲೆ 'ಅಗ್ನಿ' ಸಂಕೇತದಲ್ಲೂ ಸರ್ಪತ್ವದ ಅರ್ಥ ಅಡಗಿಸಿಟ್ಟುದು ಕಂಡಿತು. 'ಸಪ್ತ' ಎಂಬ ಋಷಿ, ಮರುತರು 'ಸಪ್ತ' ಎಂಬ ಸ್ವ-ಸಾ ಮಾತರಃ ಈ ಪ್ರತಿಮೆಗಳು ಇವೆಲ್ಲ ಸರ್ಪ-ನಾಗ ಶಕ್ತಿ ಸೂಚಕ ಪ್ರತಿಮೆಗಳೇ ಎಂಬುದು ಒಂದೊಂದಾಗಿ ಅರಿಕೆಗೆ ಬರತೊಡಗಿತು. ತತ್: ಏಕಂ ಸತ್ವನ್ : ಬ್ರಹ್ಮನ್ ಸ್ವರೂಪವು ಬಯಲಿಗೆ ಬಂದಿತು. ಅದಿತಿ, ಅಂಭೃಣೆ, ಅದಿತಿಯ ಪಂಕ್ತಿಯ ಲಕ್ಷ್ಮಿಯೂ ಸರ್ಪರೂಪಳು ಎಂಬುದು ಗೊತ್ತಾಗುವುದರ ಜೊತೆಗೆ ಇದೆಲ್ಲ 'ಕಾಣ'ರ ಬಳಗ ಎಂಬ ಅ-ಪೂರ್ವ ಮಹತ್ವದ ಸಂ-ಗತಿಯೂ ಇಲ್ಲಿ ಬಹಿರಂಗಕ್ಕೆ ಬಂದಿತು!

ಋಗ್ವೇದದಲ್ಲಿ ವ್ಯಾಮಿಶ್ರಶೈಲಿಯ ಹೆಣಿಕೆಯುಂಟು. ಸೌರ ಮತ್ತು ಆಪ : ರಸ ಪಂಥೀಯ ವಿಚಾರಧಾರೆಗಳ ಸ್ಪರ್ಧೆ ಇರಬೇಕೆಂಬುದನ್ನು ಮನಗಾಣಿಸಿಕೊಡುವ ಸ್ವರೂಪದಲ್ಲಿ ಆಪ : ರಸ ಪಂಥೀಯ ಪ್ರತಿಮಾ ಸಂಕೇತಗಳ ಏರಾಟ; ಮೆಲ್ಲನೆ ಇವುಗಳ ಗೌರವ ಪ್ರತಿಷ್ಠೆಗಳು ಹೆಚ್ಚುತ್ತ, ಸೌರಪ್ರತಿಮೆಗಳ ತೇಜೋವಧೆ ನಡೆದುದು; ಇದೆಲ್ಲವನ್ನು ಗುಹ್ಯಾರ್ಥದ ಮುಸುಕಿನಲ್ಲಿ ಮೇಲ್ನೋಟಿಕೆಯ ಆಕರ್ಷಕ ಸುಂದರ ಪ್ರತಿಮಾ-ಸಂಕೇತಗಳ ಸಂದರ್ಭದಿಂದ ಸಾಧಿಸಿದ್ದಾಗಿದೆ. ಈ ಬಗೆಯ ದೃಶ್ಯಗಳಿಂದ ಆಪ : ರಸ ಪಂಥವು ಮೊದಲು ಗೌರವಕ್ಕೆ ಎರವಾದ ಅಪ್ರತಿಷ್ಠಿತರ ಸಂಪ್ರದಾಯವಿರಬೇಕು. ತಮ್ಮ ಏರಾಟದ ಸಮಯದಲ್ಲಿ ಸೌರ ಪಂಥೀಯರಿಂದ ಆದ ಅವಮಾನದ ಸೇಡು, ಮುಯ್ಯಕ್ಕೆ ಮುಯ್ಯ ಸೌರಪ್ರತಿಮೆಗಳ ಅವಮೂಲ್ಯನದ ರೂಪದಲ್ಲಿ ತೀರುತ್ತಿರುವುದು, ಈ ಸಂಹಿತೆಯ ವ್ಯಾಮಿಶ್ರ ಶೈಲಿಯಲ್ಲಿ ಚೆನ್ನಾಗಿ ಬಯಲಿಗೆ ಬರುತ್ತಿದೆ. ಅದಿತಿ, ಅಂಭೃಣೆ, ಸರಸ್ವತಿ=ಅಂಬಾ, ಲಕ್ಷ್ಮಿ=ಅಂಬಾ, ರುದ್ರ, ವಿಷ್ಣು ಇತ್ಯಾದಿ ಆಪ : ರಸ ಪಂಥೀಯ ಸಂಕೇತಗಳು ತಳಹದಿಯಲ್ಲಿ ಸರ್ಪ : ನಾಗ : ಶಕ್ತಿಯ (Elan-vital) ಪ್ರತಿಮೆಗಳೇ ಆಗಿರುವುವು ಎಂಬುದು ಬಗೆಬಗೆಯಾಗಿ ದೃಢಪಡುತ್ತಿರುವುದು ನಿಜವಿದ್ದಲ್ಲಿ ಒಂದು ಕಾಲಕ್ಕೆ ಊರ್ಜಿತ ಅವಸ್ಥೆಯಲ್ಲಿ ಇದ್ದ ಸೌರ ಪ್ರತಿಮಾರಾಧಕರ ಜೀವನ ಸಮ್ಮುಖ ಸಾಮಾಜಿಕ ಪ್ರಜ್ಞೆಯ ಶಿಷ್ಟ-ಪ್ರತಿಷ್ಠಿತ ಸಂಪ್ರದಾಯವು ಆಪ : ರಸ ಪಂಥದಲ್ಲಿ ವಿಲೀನವಾದುದು ವಾಸ್ತವ ಸ್ವರೂಪದ ಐತಿಹ್ಯವೆಂದೇ ಬಗೆಯಬೇಕಾಗುತ್ತದೆ.*

ಋಗ್ವೇದದೊಳಗಿನ 'ಕಾಣಾ' (: ಅಲಕ್ಷ್ಮಿಯ) ಶಬ್ದ ಪ್ರತಿಮೆಯ ಮೌಲಿಕತೆಯನ್ನು ಮರೆಯಲಿಕ್ಕಾಗದು. 'ಕಾಣಾ' ಎಂದಿರುವ ಈ ಋಚಿ[೧೨] ಸೌರಪಂಥೀಯ ದೃಷ್ಟಿಕೋನವನ್ನು ಗಮನಕ್ಕೆ ತರುತ್ತದೆ. ಕೇವಲ 'ಸಂ-ದೃಕ್' ಸ್ವರೂಪದ ಜಾಗೃತ್ ಪ್ರಜ್ಞೆ, ಸರ್ವತೋಮುಖದ ಪ್ರಚೇತಸ್ ಆಗಲು ಶಕ್ಯವಿಲ್ಲ, ಏಕಾಂತಿಕ ಮನೋಭಾವಕ್ಕೆ ತನ್ನ ಲಕ್ಷ್ಯದ ಹೊರತು ಬೇರಾವುದೂ ಕಾಣದು. ಆದರೆ, ಸಾಕ್ಷಿ : ಸರ್ವಸಾಕ್ಷಿಯೇ ಇರಬೇಕು. ಆಪ : ರಸ

---

* ನಾರಾಯಣ-ವಿಷ್ಣು-ವಾಸುದೇವ ಸಂಪ್ರದಾಯದ ಭಗವದ್ಗೀತೆಯ ವ್ಯಾಮಿಶ್ರ ಶೈಲಿಯು, ಋಗ್ವೇದದ ಹೆಣಿಗೆಯನ್ನೇ ಹೋಲುತ್ತಿರುವುದರ ಸೋಜಿಗವೂ ಅಭ್ಯಸನೀಯವಿದೆ. ಶಂಬಾ ಈ ಅಂಶವನ್ನು ಉದ್ದಕ್ಕೂ ಗಮನಿಸಿದ್ದಾರೆ (ಸಂ)

ಪಂಥೀಯರ 'ವತ್ಸಂ ಇಚ್ಛಂತೀ ವಸುಪತ್ನೀ', ವಸುವಿನ ಸಂಗತಿಯಲ್ಲಿ ಇದ್ದಾಗ ತಲೆಯೆತ್ತುವ 'ಸಂದೃಕ್' ಅಥವಾ 'ವತ್ಸವು ಸ್ತನಪಾನಕ್ಕೆ ತೊಡಗಿದಾಗಿನ 'ಸಂ-ದೃಕ್' ಈ ಮಧ್ಯಮಾ ವಾಕ್ಕಿನ ಮಾದರಿ, ಋಗ್ವೇದದಲ್ಲಿ ಆಪ : ರಸ ಪಂಥೀಯ ಕವಿಗಳಿಂದಲೇ ಉಕ್ತವಾಗಿದೆ. ಕಾಣಾ ವಾಕ್, ಅ-ಲಕ್ಷ್ಮಿಗೆ ಕಾರಣವಾಗುವಂತಹುದು ಎಂಬುದನ್ನು ಧ್ವನ್ಯರ್ಥದಿಂದ ಪ್ರತೀತಿಗೆ ತಂದು ಕೊಡುತ್ತಿರುವ ಈ ಸೂಕ್ತದ ಕೆಲವು ಋಚೆಗಳು ನಿಶ್ಚಿತವಾಗಿಯೂ ಐಹಿಕ ಜೀವನಮೂಲ್ಯಗಳ ಸಂರಕ್ಷಕ ವಿಚಾರವುಳ್ಳವುಗಳಾಗಿವೆ. ಆದರೆ ಮೂರನೆಯ ಋಚೆಯಲ್ಲಿ ಸ್ಪಷ್ಟವಾಗಿ ದ್ವಂದ್ವಾರ್ಥವನ್ನಿಟ್ಟುದಾಗಿದೆ. ಈ ಬಗೆಯ ವ್ಯಾಮಿಶ್ರ ಹೆಣಿಕೆ ಋಗ್ವೇದದ ವೈಶಿಷ್ಟ್ಯವೇ ಆಗಿದೆ!

ಹೇ "ಅ-ರಾಯಿ, ಕಾಣೇ, ವಿಕಟೇ ಗಿರಿಂ ಗಚ್ಛ" ಎಂದು ಅ-ಲಕ್ಷ್ಮಿಯನ್ನು ಪರ್ವತಕ್ಕೆ ಓಡಿಸುವ ಈ ಮಂತ್ರವೂ ಒಂದಕ್ಕಿಂತ ಹೆಚ್ಚು ದೃಷ್ಟಿಯಿಂದ ಪ್ರಯೋಜನಕಾರಿಯಾಗಿದೆ,-ನಮ್ಮ ಸಂಸ್ಕೃತಿಯ ಸಮಯಾಚಾರಗಳ ಪೂರ್ವೋತ್ತರಗಳನ್ನು ಗ್ರಹಿಸಿಕೊಳ್ಳಲು. ಈ ಶಬ್ದ ಪ್ರತಿಮೆಯೊಳಗಿನ ಬಿಡಿ ಬಿಡಿ ಒಂದೊಂದು ಶಬ್ದ ಸಂಕೇತವೂ ಮೌಲಿಕವಾಗಿದೆ. ಅ-ರಾಯಿ: ಕೊಡು, ನೀಡು, ಕೃಪೆಗೈಯ್ಯು ಎಂಬರ್ಥದ 'ರಾ' ಆಖ್ಯಾತವುಂಟು. ಅ-ರಾತಿ : ಅ-ದಾನಿ; ಇನ್ನೊಬ್ಬರಿಗೆ ಏನನ್ನೂ ನೀಡದವನು : ಸ್ವಾರ್ಥಿ; ಆದಕಾರಣ ಶತ್ರು. ಅ-ರಿ ಈ ಶಬ್ದಪ್ರತಿಮೆಯಲ್ಲಿ ಒಳಗೊಂಡಿರುವ ಶತ್ರುವಾಚಕ ಅರ್ಥದ ಹಿನ್ನೆಲೆಯೂ 'ಅ-ರಾತಿ'ಯಂತೆಯೇ ಇದೆ.

ರಾ-ಕಾ ದೇವಿಯ ಉಲ್ಲೇಖವು ಎರಡೇ ಬಾರಿ ಋಗ್ವೇದದಲ್ಲಿದೆ.[೧೩] ಹುಣ್ಣಿಮೆಯ ಪೂರ್ಣ ಚಂದ್ರಾದೇವಿಗೆ ರಾಕಾ ಎಂದು ಹೆಸರಿದೆ. ಆದ್ದರಿಂದ, ಹುಣ್ಣಿಮೆಗೆ ಬದ್ಧವಿರುವ ಉತ್ಸವಗಳ ಸ್ತ್ರೀ ದೈವತಗಳನ್ನು, ರಾಕಾ ದೇವಿಯ ಪರ್ಯಾಯ ಸಂಕೇತಗಳೆಂದೇ ಬಗೆಯಲು ಅಡ್ಡಿಯಿಲ್ಲ. ಚಂದ್ರನಿಗೆ ರಯಿ ಎಂದೂ ಹೇಳಲಾಗುತ್ತಿತ್ತು : 'ರಯಿಃ ಏವ ಚಂದ್ರಮಾಃ'[೧೪] ಈ 'ರಾಕಾ', ಶಕ್ತಿದೇವಿ. ಶಾಕ್ತಚಿತ್ರಗಳಲ್ಲಿ ಉಕ್ತಳಾಗಿದ್ದಾಳೆ. ವೇದಗಳಲ್ಲಿ ಇದರ ಸ್ಪಷ್ಟತೆಯು ಇಲ್ಲ. ಷಟ್-ಚಕ್ರ ನಿರೂಪಣ ತಂತ್ರದಲ್ಲಿ ಒಂದೊಂದು ಚಕ್ರದ ಒಬ್ಬೊಬ್ಬ ದೇವಿಯರ ಉಲ್ಲೇಖವುಂಟು.

ಕಿಣೇರಾಕಿಣೇ ಚೈವ ಲಾ-ಕಿಣೇ ಕಾಕಿನೀ ತಥಾ!
ಕಾ-ಕಿನೀ ಹಾ-ಕಿನೀ ಚೈವ ಷಟ್-ಪಂಕಜಾಧಿಪಾಃ

ಇವರ ನಾಮ ಸಂಕೇತಗಳಲ್ಲಿ ಪ್ರಥಮಾಕ್ಷರವೇ ಬೀಜರೂಪದ್ದು-ಮಹತ್ವದ್ದು. ಆದಕಾರಣ, ಋಗ್ವೇದದ 'ಕಾಣಾ ಅ-ರಾಯಿ ಈ ದೇವೀ ನಾಮದೊಳಗಿನ ಮೂಲ ಬೀಜಾಕ್ಷರವು 'ರಾ' ಎಂಬುದೇ ಇರುವುದು ನಿಶ್ಚಿತ. ಅಲ್ಲದೆ, ಈ ವೇದದಲ್ಲಿಯೆ 'ರಾ(ಕಾ)' ದೇವಿಯ ಸ್ತೋತ್ರ ಎರಡು ಬಾರಿ ಬಂದಿದೆ. ಇದರ ಅರ್ಥವು ಹೀಗೆ ರಾ(ಕಾ) ದೇವಿಯನ್ನು ಇಂದ್ರಾಗ್ನೀ ಪಂಥಿಗಳು ಸ್ವಾಗತಿಸಿದರೂ "ಅ-ರಾ(ಕಾ)" ದೇವಿಯ ಬಗೆಗೆ ಇವರಿಗೆ ತಿರಸ್ಕಾರವಿತ್ತು. ಆದುದರಿಂದಲೆ 'ಹೇ ವಿಕಟೇ'=ಕುಟಿಲೇ ಪರ್ವತಕ್ಕೆ ಓಡು; ನೀನು ಜನನಿವಾಸದಲ್ಲಿ ನಿಲ್ಲಬೇಡ ಎಂದು ಅ-ರಾಯಿಯನ್ನು ತಳ್ಳಿಬಿಡುವ ಪ್ರಯತ್ನವು ಇಲ್ಲಿ ಕಾಣುತ್ತಿದೆ.

ಇಂದ್ರಾಗ್ನೀ ಪಂಥೀಯರಿಗೆ 'ರಾ(ಕಾ)' ಬೇಕು, 'ಅ-ರಾ (ಯಿ)' ಮಾತ್ರ ಬೇಡ! 'ಶ್ರೀ'-ಲಕ್ಷ್ಮಿ ಬೇಕು; 'ಭ-ದ್ರಾ' ಲಕ್ಷ್ಮಿ ಬೇಕು. ಆದರೆ 'ಅ'-ಲಕ್ಷ್ಮಿ 'ಪಾಪಾ ಲಕ್ಷ್ಮಿ' ಮಾತ್ರ ಬೇಡ. ಈ ಭೂಮಿಕೆಯು ತಾರತಮ್ಯದ್ದಾಯಿತು! 'ಸಮ'ತ್ವಂ ಯೋಗಮುಚ್ಯತೇ ಎಂಬ ಶ್ರೀಮದ್ ಭಗವದ್ಗೀತೆಯ ಭಗವಂತನ ಮತಕ್ಕೆ ತೀರ ವಿರೋಧಿಯಾದ ಪಂಥವಾಯಿತು! 'ಅಮೃತಂ ಚೈವ ಮೃತುಃ ಚ', ಸತ್ಯ ಮತ್ತು ಅಸತ್ಯ' ಏನೆಲ್ಲ ಸಮ ಎಂಬ ಶ್ರದ್ಧೆವಹಿಸಲು ಉಪದೇಶ ಗೀತೆಯದು. ಆದುದರಿಂದಲೆ, ಈ 'ಸೋಮಪಾಯಿ'ಗಳಿಗೆ ಮೋಕ್ಷವಿಲ್ಲ; ಇವರು 'ಕ್ಷೀಣೇ ಪುಣ್ಯೆ' ಮರ್ತ್ಯಲೋಕಕ್ಕೆ ಮರಳಿ ಭವಬಂಧನದಲ್ಲಿ ಸಿಲುಕಿ, 'ಜನ್ಮ-ಮೃತ್ಯು-ಜರಾ-ವ್ಯಾಧಿ'ಗಳ ಚಕ್ರದಲ್ಲಿ ಕೊಳೆಯುವರಲ್ಲ, ಎಂಬ ಚಿಂತೆ, ಲೋಕೋದ್ಧಾರಕ ಗೀತೆಯ ಭಗವಾನನಿಗೆ!

ಆದರೂ ಈ ದೈವತ ಪ್ರತಿಮಾ ನಿರ್ಮಾಣದೊಳಗಿನ ಈ ಧೂರ್ತತನ ನೋಡಿ. 'ಅ-ದಿತಿ' : ಅ-ಖಂಡಿತಾ-ಸಮಗ್ರದೇವಿಯ ಮಕ್ಕಳು ಇಂದ್ರಾದಿಗಳು! ಸೌರ ದೈವತಗಳ ಮೇಲೆ 'ಅ-ದಿತಿಯ' ಮಾತೃತ್ವವನ್ನು ಹೇರಿದವರ, 'ದಿತಿ', ಇಂದ್ರ ಪಂಥೀಯರ ಶತ್ರು ಎಂಬ ಕಥೆಯನ್ನೂ ಸೃಷ್ಟಿಸಿರುವವರ ಈ ಪೇಚು : ಬಂಧ,

(Logic) ಬಂಧುರವಿಲ್ಲವೇ! 'ರಾ'ಕಾ ಸ್ವೀಕರಿಸುವ ಅ-ರಾ(ಯಿ : ಕಾ) ತ್ಯಜಿಸುವ ಸಂಪ್ರದಾಯವು ಅ-ಖಂಡಿತ ಅ-ದಿತಿ ಸ್ವರೂಪದ ಎಂದರೆ ಜೀವನ ಮತ್ತು ಮರಣ ಈ ಉಭಯ ಶಕ್ತಿಯ ದೇವಿಯನ್ನು, ತಮ್ಮ ಆರಾಧ್ಯ ದೈವತಗಳಾದ ಸೂರ್ಯ, ಅಗ್ನಿ, ಇಂದ್ರರ 'ತಾಯಿ' ಎಂದು ಸ್ವೀಕರಿಸಲು ಶಕ್ಯವೊ? ಈ ಸಂದೇಹವು ನಿಜ ಎಂದರೆ, ಇಂದ್ರಾದಿಗಳ ತಾಯಿಯೆಂದು ಕಲ್ಪಿಸಿದ-ಸಾರ್ಪಶಕ್ತಿಯ ಪ್ರತಿಮೆ 'ಅದಿತಿ'! ಈ ಪ್ರತಿಮೆಯನ್ನು ಸೃಷ್ಟಿಸಿರುವ ಸಂಪ್ರದಾಯವು, ಮೂಲ ಆಗ್ನ್ಯಾರಾಧಕರ ಪರಂಪರೆಯಾಗಿರಲು ಶಕ್ಯವಿಲ್ಲ! ರಯಿ ಮತ್ತು ಅ-ರಾಯಿ ಈ ಹಿನ್ನೆಲೆಯಲ್ಲಿ 'ದಿತಿ'-ಅ-ದಿತಿ ಸಂಕೇತಗಳ ಸಂಭ್ರಾಮಕತ್ವವು ಬೆಳಕಿಗೆ ಬರಲಿದೆ. ಅಲ್ಲದೆ 'ದಾ' (ಕೊಡು ಮತ್ತು ಬಂಧಿಸು) ಉಭಯಾರ್ಥಕ ಆಖ್ಯಾತವನ್ನು ಆಶ್ರಯಿಸಿಯೂ ದಿತಿ-ಅದಿತಿ ಈ ಸಂಕೇತಗಳ ಸಂಭ್ರಾಮಕತ್ವವನ್ನು ಹೆಚ್ಚಿಸಿ 'ನೇತಿ-ನೇತಿ' ಸ್ವರೂಪದ ಸಂದಿಗ್ಧತೆಯನ್ನು ನಿರ್ಮಿಸಲಾಗಿದೆ.

ಒಟ್ಟಿನಲ್ಲಿ ಈ ಸಂಹಿತಾ ಸಂಕಲನದ ಆ-ಕೃತಿಯು ತತ್ : ಏಕಂ: ಸತ್ ಈ ಆಶಯವನ್ನು ಚಿತ್ರಿಸುತ್ತಿರುವುದು ಮಾತ್ರ ನಿಜ. 'ಭದ್ರಾಲಕ್ಷ್ಮಿಯ' ಪ್ರತಿಮೆಯ ಉಲ್ಲೇಖವು ಬಂದಿದೆ.[೧೫] ಇದಕ್ಕೆ ಪ್ರತಿಯಾಗಿ ಅ(ಭದ್ರಾ)ಲಕ್ಷ್ಮಿಯ ಪ್ರತಿಮೆಗೂ, ಈ ಸಂಹಿತಾ ಸಂಕಲನದಲ್ಲಿ ಎಲ್ಲಿಯಾದರೂ ಜಾಗ ಕಲ್ಪಿಸಿಕೊಡಬೇಕಷ್ಟೆ? +ಋ ಎಂದೊಡನೆ, -ಋ ಬರದೆ ಇದ್ದರೆ ಅಮೃತಂ+ಮೃತುಃ; ಋತ:ಸತ್=ಅನೃತ: ಹೀಗೆ ಹೇಳಿದಾಗಲೆ ಇದು O(ಪೂರ್ಣ) ಆಕೃತಿಯಾಗಬಲ್ಲುದು. ಆಪ : ರಸ ಭೂಮಿಕೆಯ ದೃಷ್ಟಿಯಲ್ಲಿ, ಈ ಕಾರಣದಿಂದಲೂ 'ಅ-ರಾಯಿ' ದೇವಿಯ ಈ ಉಲ್ಲೇಖವು ಮಹತ್ವದ್ದಾಗಿದೆ.

'ಕಾಣೇ ವಿಕಟೇ ಗಿರಿಂ ಗಚ್ಛ' ಈ ಪ್ರತಿಮೆಯೊಳಗಿನ ವಿಕಟೇ ಸಂಕೇತದ ಅರ್ಥದ ಸ್ಪಷ್ಟೀಕರಣವಾಗದೇ 'ಕಾಣೇ' ಇದರ ಔಚಿತ್ಯವು ಗಮನಕ್ಕೆ ಬರಲಾರದು. 'ಅ-ರಾಯೀ' ಈ ಪ್ರತಿಮಾ ವಿಚಾರವು ಇನ್ನೂ ಸ್ವಲ್ಪ ಸ್ಪಷ್ಟೀಕರಣವನ್ನು ಅಪೇಕ್ಷಿಸುತ್ತದೆ. ಅ-ರಾಯಿಗೆ 'ಅ-ಲಕ್ಷ್ಮಿ' ದುರ್ಗಾವಾಚಕ ಅರ್ಥವಿರುವುದಾಗಿ ಋಗ್ವಿಧಾನದಿಂದ ಗೊತ್ತಾಗುತ್ತದೆ. 'ಅಲಕ್ಷ್ಮೀ ನಾಶನಾರ್ಥಂ' ಈ ಸೂಕ್ತವನ್ನು 'ಜಪೇತ್ ನಿತ್ಯಂ' ಎಂದು ಹೇಳಿದೆ. ಇದಕ್ಕಾಗಿ ಚಾಂದ್ರಾಯಣ ವ್ರತವನ್ನು ಸ್ವೀಕರಿಸಬೇಕು. ಇದಕ್ಕೆ ಮಾಡುವ ಹೋಮಕ್ಕಾಗಿ 'ಅಪಾ ಮಾರ್ಗಮಯೀ' ಶಾಖೆ (ಕೊಂಬೆ) ತರಬೇಕು ಎಂದೂ ಹೇಳಿದೆ.[೧೬] ಋಗ್ವೇದದ ಅನುಕ್ರಮಣಿಕೆಯಲ್ಲಿ ಈ ಸೂಕ್ತಕ್ಕೆ 'ಅಲಕ್ಷ್ಮಿಘ್ನ' (ದಾರಿದ್ರ್ಯನಾಶಕ) ದೈವತ ಎಂದು ಹೇಳಿದೆ. 'ಅಲಕ್ಷ್ಮೀ' ದೇವಿಯ ಶತ್ರುವಾದ ದೇವರು ಯಾರು? ಇದು ಒಂದು ಮಹತ್ವದ ಪ್ರಶ್ನೆ. ಸಾಂಪ್ರದಾಯಕ ಭಾಷ್ಯಗಳಲ್ಲಿ ಈ ಸ್ಪಷ್ಟೀಕರಣವು ದೊರೆಯುವುದಿಲ್ಲ.

ಆದರೆ, ಇದಕ್ಕಾಗಿ ವಿಶೇಷ ಶ್ರಮಪಡಬೇಕಾಗಿಲ್ಲ. ಏಕೆಂದರೆ, ಈ ಸೂಕ್ತದ ೨, ೩ ಋಚೆಯ ದೇವತೆ ಬ್ರಹ್ಮಣಸ್ಪತಿಯು. ಬೃಹಸ್ಪತಿ=ಬ್ರಹ್ಮಣಸ್ಪತಿ ಈ ಸಂಕೇತಗಳನ್ನು ವಾಕ್-ಪತಿ, ವಾಚಸ್‌ಪತಿ ಎಂಬರ್ಥದಲ್ಲೂ ಬಳಸಿದ್ದುಂಟು. 'ವಾಕ್' ದೇವಿಯನ್ನು ಕುರಿತ ಒಂದು ಸುವಿಖ್ಯಾತ ಸೂಕ್ತದ ದೈವತ 'ಬೃಹಸ್ಪತಿ'ಯಾಗಿದ್ದಾನೆ.[೧೭] ಈ ಸೂಕ್ತದಲ್ಲಿಯೇ 'ಭದ್ರಾಲಕ್ಷ್ಮೀ'ದೇವಿಯ ನಿರ್ದೇಶವಿದೆ. 'ಸಕ್ತುಂ ಇವ ತಿತ ಉನಾ ಪುನತಃ ವಾಕ್' ಯಾರು ಸೇವಿಸುವರೋ ಅವರಿಗೆ ಭದ್ರಾಲಕ್ಷ್ಮಿ ಒಲಿಯುತ್ತಾಳೆಂಬ ಈ ಋಚೆಯಂತೆ, ಕಣದಿಂದ ತಂದ ಧಾನ್ಯದಂತೆ ತೂರಿ, ಕೇರಿ ಹಸನಾಗಿಸಿ ಪವಿತ್ರಗೊಳಿಸಿದ ವಾಕ್ಕನ್ನು ಆರಾಧಿಸುವುದು ಶ್ರೀ ಲಕ್ಷ್ಮಿಯನ್ನು ಆರಾಧಿಸುವುದೂ ಬೇರೆಯಲ್ಲ, ಎಂಬ ಅರ್ಥವಾಗುತ್ತದೆ. ರಯಿ-ರಾಯ-ರಾಕಾ ಸ್ವರೂಪದ ಲಕ್ಷ್ಮಿಯಲ್ಲಿ ಇರುವ ಶ್ರೀತ್ವ : ಭದ್ರವಾದ ಮಂಗಲ ಕಲ್ಯಾಣಕಾರಕ ಗುಣವು ಶುದ್ಧವಾದ ಪವಿತ್ರ ವಾಕ್ಕಿನಲ್ಲಿಯು ಇರುತ್ತದೆ. ಆದಕಾರಣ ರಯಿ-ರಾಯಿ ದೇವಿಯ ಪಕ್ಷಪಾತಿಯಾದ ಬ್ರಹ್ಮಣಸ್ಪತಿಯು ಅ-ರಾಯಿಯ ಶತ್ರುವಾದನು. ಆದುದರಿಂದ ಬ್ರಹ್ಮಣಸ್ಪತಿಯನ್ನು ಬರಿ ಎರಡನೆಯ ಋಚೆಯಲ್ಲಿ ಉಲ್ಲೇಖಿತನೆಂದು ಅದಕ್ಕೆ ಮಾತ್ರ ದೈವತವೆಂದು ಬಗೆಯುವ ಆವಶ್ಯಕತೆಯು ಇಲ್ಲ. ಅ-ರಾಯಿಯನ್ನು ಗಿರಿಗೆ ಓಡಿಸುವ 'ಅಲಕ್ಷ್ಮೀಘ್ನ' ದೈವತವೇ ಬ್ರಹ್ಮಣಸ್ಪತಿ. 'ಕವೀಂ ಕವೀನಾಂ', ಕವಿಗಣದ ಅಧ್ಯಕ್ಷ ಎಂದು ಸಂಸ್ತುತ ಬ್ರಹ್ಮಣಸ್ಪತಿಯು ವೃತ್ರಹನನದಲ್ಲಿ ಇಂದ್ರನ ಸಹಕಾರಿಯೂ ಆಗಿದ್ದನ್ನು ನೆನೆದರೆ ಪ್ರಸ್ತುತ ಅರಾಯಿಘ್ನ=ಅಲಕ್ಷ್ಮೀಘ್ನ ದೈವತವೆಂದರೆ ಇಂದ್ರನ ಸಹಕಾರಿ ಶುದ್ಧವಾಕ್=ವಿದ್ಯಾಪತಿ ಬ್ರಹ್ಮಣಸ್ಪತಿಯೇ ಇರಲಿಕ್ಕೆಬೇಕೆಂದು ನಿಶ್ಚಿತಪಡಿಸಲು ಈ ಋಚೆಯಲ್ಲಿಯೆ ಇರುವ ಸಾಂಕೇತಿಕ ಪ್ರತಿಮೆ ನೋಡಿ..

ವಿಕಟೇ (ಅರಾಯಿ), ಪ್ರಾಚೀನ ಒಂದು ಅರ್ಥ : "ವಿಕ್ರಾಂತ ಗತಿಃ, ಇತಿ ಔಪಮನ್ಯವಃ". ಈ ಬಗೆಯ ಇನ್ನೂ ಒಂದು ವಿವರಣವು ಹೀಗಿದೆ: "ಕುಟತೇಃ, ವಾ ಸ್ಯಾತ್ ವಿಪರೀತಸ್ಯ ವಿಕುಟಿತಃ ಭವತಿ". ಆಧುನಿಕ ಪ್ರಯೋಗಗಳಲ್ಲಿ ಅ-ಕಟ, ವಿ-ಕಟ, ಹಾಸ್ಯ ಎಂಬ ಮಾತು ಉಂಟು. ಇಲ್ಲಿ ಕಟ=ಕಡೆ(ಗೆ) ಆ-ಕಡೆ, ಈ-ಕಡೆ, ಎಂಬ ಅರ್ಥವಿರುವುದಾಗಿಯೂ ತೋರುತ್ತದೆ. ವಿಕಟ ಹಾಸ್ಯ-ವಿಕಟ ವಿನೋದ ಎಂಬ ಪ್ರಯೋಗಗಳೂ ಇವೆ. ವಕ್ರತೆ-ಅಂಕು ಡೊಂಕು ಎಂಬ ಕುಟಿಲಗತಿ ಸೂಚನೆಯಂತೂ ಇಲ್ಲಿ ಇದ್ದೇ ಇದೆ. ಅಲ್ಲದೆ, ವಿಕಟೇ ಎಂಬಲ್ಲಿ ಚಂಚಲ ಲಕ್ಷ್ಮೀ ಯಾರಿಗೂ ಒಲಿಯುವ-ನ್ಯಾಯಾನ್ಯಾಯದ ವಿಚಾರ ವಿಹೀನ ದೇವಿ ಎಂಬ ಧ್ವನ್ಯರ್ಥವೂ ಉಂಟು. ಭದ್ರಾಲಕ್ಷ್ಮೀ=ವಾಕ್ ಹೀಗೆ ವಕ್ರಗತಿಯವಳಲ್ಲ. ಎರಡೂ ಕಡೆಗೆ ಮೆಚ್ಚಿದಂತೆ ಮಾತನಾಡುವ ವಾಗ್ಮಿ-ಬುದ್ಧಿವಂತರನ್ನು ಇಲ್ಲಿ ಅಲಕ್ಷ್ಮೀ ಕಾಲೀ ಸ್ವರೂಪರೆಂದು ಸೂಚಿಸಿದ್ದುಂಟು.

ವಿಕಟಗತಿಯ ಈ 'ಅಲಕ್ಷ್ಮೀ' ಪ್ರತಿಮಾ : ಸಂಕೇತದಿಂದ ಸರ್ಪವೇ ಸೂಚಿತವಾಗುತ್ತಿರುವಲ್ಲಿ ಸಂದೇಹಪಡಬೇಕಾಗಿಲ್ಲ. ಇದಕ್ಕೆ ಈ ಸೂಕ್ತಸ್ಥ 'ಪುರಾವೆ' ಎರಡನೆಯ ಋಚೆಯಲ್ಲಿ ಉಂಟು. ವೃತ್ರ ಸಂಹಾರಕ, ಅಹಿಜಿತ್ ಎಂದು ವರ್ಣಿತ ಇಂದ್ರನ ಸಹಕಾರಿ ಎಂಬ ಬ್ರಹಸ್ಪತಿಯು, ಅಲಕ್ಷ್ಮೀರೂಪ ಕುಟಿಲಗತಿಯ 'ವಿಕಟ' ಅರಾಯಿಯನ್ನು ಓಡಿಸುತ್ತಾನೆ; ಎಂದರೆ ಅದು ಸರ್ಪಸ್ವರೂಪಿ ದೈವತವೇ ಇರಲಿಕ್ಕೆ ಬೇಕು.

ಆದರೆ, 'ತತ್ ಏಕಂ' ಸ್ವರೂಪದ 'ವಿಕಟ' ಚಕ್ರಾಕಾರದ ಈ ಸಂಹಿತಾ ರಚನೆಯಲ್ಲಿ ಬ್ರಹ್ಮ(ಣಸ್ಪತಿಯ) 'ನೇತಿ-ನೇತಿ' ಸ್ವರೂಪಕ್ಕೆ ತಿರುಗಬೇಕಾಗುವುದು, ಈ ಭೂಮಿಕೆಯ ನಿಯತಿ (Logic) ಆಗಿರುವುದರಿಂದ 'ಬ್ರಹ್ಮಣಸ್ಪತಿ' ಈ ಪ್ರತಿಮೆಯೂ ಆಸುರೀ ಆಕೃತಿಯದಾಗಿದ್ದರೇ ಸೋಜಿಗ! ಈ ಸೂಕ್ತದಲ್ಲಿಯೇ ಒಳಗೊಂಡ 'ವಿಕಟ'ತೆಯೇ ಇದಕ್ಕೆ ನಿದರ್ಶನ. ಈ ಸೂಕ್ತದ ನಾಲ್ಕನೆಯ ಋಚೆಯಲ್ಲಿ 'ಇಂದ್ರಸ್ಯ ಸರ್ವೇ ಶತ್ರವಃ ಬುದ್ಬುದ ಯಾತವಃ ಹತಾಃ' ಇಂ-ದ್ರನ ಎನೆಲ್ಲ ಅರಾತಿಗಳು ನೀರಮೇಲಣ ಗುಳ್ಳೆಗಳಂತೆ ಹತರಾಗುತ್ತಾರೆ, ಎಂಬ ಉಲ್ಲೇಖವಿದೆ. ಅಹಿಜಿತ್ ಇಂದ್ರನು, ವೃತ್ರಘ್ನ ಇಂದ್ರನು ಎಂಬುದು ಸರ್ವಮಾನ್ಯವಿರುವುದರಿಂದಲೂ 'ಇಂದ್ರಸ್ಯ ಶತ್ರವಃ ಸರ್ವೇ' ಅಹಿ-ನಾಗಸ್ವರೂಪರೆ ಆಗಿರುವ ಬಗೆಗೆ ಭಿನ್ನಾಭಿಪ್ರಾಯಗಳಿರಲು ಕಾರಣವಿಲ್ಲ. ಈ ಕಾರಣದಿಂದಲೂ ವೃತ್ರಸಂಹಾರದಲ್ಲಿ ಇಂದ್ರನ ಸಹಕಾರಿಯಾದ ಬ್ರಹ್ಮಣಸ್ಪತಿಯು, ಗಿರಿಗೆ ಓಡಿಸುವ ವಿಕಟ ಅರಾಯಿ (=ಅಲಕ್ಷ್ಮಿ) ಎಂದರೆ ಸರ್ಪವೇ ಇರಲಿಕ್ಕೆ ಬೇಕು ತಾನೆ?

ಸರ್ಪವು ಸಂಕಟ ಹಾಗೂ ಮೃತ್ಯುವಿನ ಸೂಚಕ ಸಂಕೇತವು ಇಂದ್ರನು, ಮಾನವ ಜೀವನದಲ್ಲಿ ಒಳಗೊಂಡಿರುವ ಮೃತ್ಯು-ಸಂಕಟಗಳನ್ನು ಎದುರಿಸುವ ಅಂತಃಪ್ರೇರಣೆಯ ಮೂರ್ತರೂಪ ಪ್ರತಿಮೆ. ಈ ಸೂಕ್ತದ ನಾಲ್ಕನೆಯ ಋಚೆಯಲ್ಲಿ ಇರುವ 'ಇಂದ್ರಸ್ಯ ಶತ್ರವಃ' ಎಂಬ ಸಂಕೇತಕ್ಕೆ ಜನ-ಸಮಾಜದ ಎಂದೇ ಅರ್ಥವಾಗುತ್ತದೆ. ಹಾಗಿದ್ದೂ, ಮೂರನೆಯ ಋಚೆಯಲ್ಲಿಯೆ, (ಮೃತ್ಯುವಿನ) ಆಚೆಯ ('ಪರ-ಸ್ತರಂ') ಕಡೆಯ ಉಲ್ಲೇಖವಿದ್ದು 'ದುರ್ಹನಃ' ಈ ಸಂಕೇತದಲ್ಲಿ ಶ್ಲೇಷಾರ್ಥವನ್ನಿರಿಸಲಾಗಿದೆ! ಈ ಮಂತ್ರ ಪಾಠಕನಿಗೆ ಪರಲೋಕಕ್ಕೆ ಹೋಗಲು ಸೂಚಿಸಿದಂತೆಯೂ, ಅಲಕ್ಷ್ಮಿಗೇ ಅತ್ತಹೋಗಲು ಹೇಳಿದಂತೆಯೂ ಇರುವ ಈ ವಿಕಟ='ಸಾರ್ಪ' ನಾಗಶೈಲಿ ಅದ್ಭುತವಿದೆ.

ಈ ಸಂಹಿತೆಯ ಮಾಧ್ಯಮ : ಪ್ರತಿಮೆಯ ಹೀಗೆ ದ್ವಿಜಿಹ್ವ ನಾಗಸ್ವರೂಪಿಯಾಗಿರುವ : ಈ ಅದ್ಭುತ ದೃಶ್ಯವು ಋಗ್ವೇದದ ಉದ್ದಕ್ಕೂ ಸಮೀಕ್ಷಿಸಲು ದೊರೆಯುತ್ತದೆ. ಸಲಿಲದೊಳಗಿಂದ ಜನ್ಮತಾಳುವ ದೇವತಾ ಪವಾಡ ಕಥೆಯ ಸೂಕ್ತದ ಆರಂಭಕ್ಕೆ 'ಕರ್ಮಾರ ಇವ' ದೈವತ ಪ್ರತಿಮೆಗಳನ್ನು ಸೃಜಿಸುವ ಒಬ್ಬ 'ಬ್ರಹ್ಮಣಸ್ಪತಿಯ' ಉಲ್ಲೇಖವಿದೆ! ಈ 'ಕರ್ಮಾರನು' ವಿಶ್ವಕರ್ಮ-ಪ್ರಜಾ-ಪತಿಯ ಅಂಗವೆಂಬ 'ಸಪ್ತ' (=ಸರ್ಪ) ಋಷಿಯೆ ಇರುವ ಶಕ್ಯತೆಯಿದೆ![೧೮] ಈ ಸೂಕ್ತದಲ್ಲಿಯೆ ಬಂದಿರುವ ಸೌರ ಹಾಗೂ ಆಪ : ರಸ ಈ ಉಭಯ ಸಂಪ್ರದಾಯಗಳಿಗೂ ಅವರವರ ಅರ್ಥವು ಗೋಚರಕ್ಕೆ ಬರುವ 'ಅಸತಃ ಸತ್ ಅಜಾಯತ' ಮತ್ತು 'ಆಶಾಃ' (ಅನ್ವಜಾಯಂತ) ಈ ಸಂಕೇತಗಳನ್ನಿಟ್ಟಿರುವ ಈ 'ವಿಕಟತೆ'ಯ ವಿವರಣೆ ಹಿಂದೆ ಬಂದಿದೆ.

ಪ್ರಸ್ತುತ ಸೂಕ್ತಸ್ಥ ಸಂಕೇತಗಳಿಂದ ನಿಶ್ಚಿತವಾಗುತ್ತಿರುವ ಮುಖ್ಯಸಂಗತಿ : ವಿಕಟಾ ಅರಾಯಿ, ಅ-ಲಕ್ಷ್ಮಿಯು; ಈ 'ಲಕ್ಷ್ಮಿ'ಯು ಅಥರ್ವದಲ್ಲಿ 'ಗೋ' ಸಂಕೇತದಿಂದ ಸೂಚಿತಳಾಗಿದ್ದಾಳೆ. ಗೋ=ಗ್ನಾ, ಗಮನಶೀಲ ಪ್ರಾಣಿ ಎಂಬರ್ಥದಲ್ಲಿ ಸಾರ್ಪರಾಜ್ಞಿಯನ್ನು ಸೂಚಿಸುತ್ತಿದೆ.[೧೯] ಆದಕಾರಣ, ಇದೇ ವೇದದೊಳಗಿನ ಅ-ಲಕ್ಷ್ಮಿಯ ಸೂಚಕ ಅ-ರಾಯಿ ಸಂಕೇತಕ್ಕೂ ಸರ್ಪವಾಚಕ ಅರ್ಥವೇ ಇರಲಿಕ್ಕೆ ಬೇಕು. ವಿಕಟಗತಿಯ ಈ ಸಂಕೇತದಿಂದ ಈ ಮಾತಿಗೆ ಪುಷ್ಟಿಯೆ ದೊರೆಯುತ್ತಿದೆ. ಅಲ್ಲದೆ, ಶ್ರೀ ಸೂಕ್ತದೊಳಗಿನ 'ಅಲಕ್ಷ್ಮಿ'ಯ ಉಲ್ಲೇಖವನ್ನು ನೆನೆದರೆ ರಯಿ-ರಾಯಿ=ಶ್ರೀ ಲಕ್ಷ್ಮಿ ಅರಾಯಿ=ಅಲಕ್ಷ್ಮಿ ಎಂಬುದು ದೃಢಪಡುತ್ತದೆ. ಶ್ರೀಲಕ್ಷ್ಮಿಯನ್ನು ವಿಷ್ಣು ಪತ್ನಿಯನ್ನಾಗಿಸಿ, ದುರ್ಗಾ=ಕಾ=ಅಲಕ್ಷ್ಮಿ=ಜ್ಯೇಷ್ಠಾ ರುದ್ರಪತ್ನಿಯಾಗಿ ರೂಢಿಸಿದ್ದು ಕಾಣುತ್ತದೆ.

ಈ ಸಾಂಸ್ಕೃತಿಕ ಪಾರ್ಶ್ವಭೂಮಿಯಲ್ಲಿ ಈ ಋಚೆಯೊಳಗಿನ 'ಗಿರಿ' ಸಂಕೇತವು ತುಂಬ ಅರ್ಥದಾಯಕವಾಗುತ್ತಿದೆ. ಈ (ಅ)ಲಕ್ಷ್ಮಿ=ಸರ್ಪವನ್ನು ಓಡಿಸುತ್ತಿರುವುದು 'ಗಿರಿ'ಗೆ, ರುದ್ರ, ವಿಷ್ಣು ಈ ದೈವತಗಳ 'ಗಿರಿ'ಯೊಡನೆ ಇರುವ ಘನಿಷ್ಠ ಸಾಹಚರ್ಯವು ಉದ್ಬೋಧಕವಾಗಿದೆ. ಭಾರತೀಯ ಪ್ರತಿಮಾ : ಸಂಕೇತಗಳ ಬರುವಳಿ ಅವುಗಳಲ್ಲಿ ಆದ ಸಂಕೋಚ-ವಿಕಾಸ ಮಾರ್ಪಾಟುಗಳ ವ್ಯಾಸಂಗಕ್ಕೆ, ಈ ತುಲನಾತ್ಮಕ ಸಮೀಕ್ಷೆಯಿಂದ ಪ್ರಯೋಜನವಿರುವುದನ್ನು ಇಲ್ಲಿ ಮನಗಾಣಬಹುದು. ದೈವತ ಪ್ರತಿಮೆಗಳ ನಾಮಾಂತರಗಳಲ್ಲಿ ಮೂಲಭೂತ ಆಕೃತಿ (Basic Form)ಯಾವುದು, ಬಳಿಕ ಅನುಷಂಗಿಕವಾಗಿ ಸಾಹಚರ್ಯದಿಂದ, ಅವು ಬೇರಿನ್ನಾವ ಕಾರಣಗಳಿಂದ ಪ್ರಚಲಿತವಾದ ಸಂಕೇತಗಳು ಯಾವುವು ಇದರ ವಿಮರ್ಶೆಯು ಆಗದೆ ಅವುಗಳಲ್ಲಿ ಹಂತಗಳನ್ನು ಕಲ್ಪಿಸುವುದು (stratification) ಕಲ್ಪಿಸುವುದಕ್ಕೆ ಆಗುವುದಿಲ್ಲ. ವಿಷ್ಣುವು ಜಲಶಾಯಿ, ನಾಗಶಯನ, ಗಿರಿಕ್ಷಿತ್, ಗಿರಿಷ್ಠ ಕಂ. ಹಿರಣ್ಯಗರ್ಭ, ಶಿಪಿವಿಷ್ಟ, ಮಧು ಇತ್ಯಾದಿ ಪರ್ಯಾಯ ನಾಮಗಳೆಲ್ಲ ಒಂದೇ ಕಾಲಕ್ಕೆ ರೂಢವಾಗಿಲ್ಲ. ಇವುಗಳು ಮೈದಾಳಿದ ನಿಶ್ಚಿತ ಕಾಲಾವಧಿಯು ತಿಳಿಯಲು ಶಕ್ಯವಿಲ್ಲ. ಆದರೂ ಈಗ ಉಪಲಬ್ಧವಿರುವ ಉಲ್ಲೇಖಗಳಲ್ಲಿ ದೊರೆವ ನಾಮಾಂತರಗಳನ್ನು ಕಾಲಾನುಕ್ರಮದ ಹಂತದಲ್ಲಿ ಅವನ್ನು ಜೋಡಿಸಲು ಶಕ್ಯವಿದೆ. ಬಳಿಕ ಮಾನವೇತಿಹಾಸ-ಮಾನವ ಶಾಸ್ತ್ರ ಹಾಗೂ ತುಲನಾತ್ಮಕ ದೈವತ ಪವಾಡ ಕಥಾಸಮೀಕ್ಷೆಯ ಬೆಳಕಿನಲ್ಲಿ ಮತ್ತೊಮ್ಮೆ ಅವುಗಳ ತರಗತಿಯನ್ನು ನಿರ್ಣಯಿಸುವ ಪ್ರಯತ್ನವೂ ಆಗಬೇಕು.

ಪ್ರಸ್ತುತ ಗಿರಿ-ಶ, ರುದ್ರ, ಶಿವ, ಗಿರಿಕ್ಷಿತ್ ಅಥವಾ ಗರಿಷ್ಠ ವಿಷ್ಣು-ನಾರಾಯಣ; ಸರ್ಪ ಸಂಕೇತವೂ ಈ ಉಭಯ ದೈವತಕ್ಕೂ ಸಮಾನವಿದೆ. ಹಾಗಾದರೆ ಗಿರಿ ಹಾಗೂ ಸರ್ಪ ಇವೆರಡರಲ್ಲಿ ಮೂಲಭೂತ ಆಕೃತಿಯು ಯಾವುದಿರಬಲ್ಲುದು? ಗಿರಿಯು ಸರ್ಪ ನಿವಾಸಸ್ಥಾನ ಎಂಬುದನ್ನು ವಿವರಿಸಿ ಹೇಳುವದು ಅನಾವಶ್ಯಕ. ವೇದದೊಳಗಿನ ಸಂಕೇತಗಳಲ್ಲಿ ಗಿರಿ-ಶ, ಗಿರಿ-ಷ್ಠ ಎಂಬಲ್ಲೂ ಈ ಮಾತು ಸ್ಪಷ್ಟವಿರುವುದು ಕಾಣುತ್ತಲೆ ಇದೆ. ಈ ಹಿನ್ನೆಲೆಯಲ್ಲಿ ಋಗ್ವೇದದ ವಿಷ್ಣುಸ್ತೋತ್ರದೊಳಗಿನ ಯಾವ ಭಾಷ್ಯಗಳಿಗೂ ಅರ್ಥವಾಗದಿರುವ ಸಂಕೇತವು ಅರ್ಥಪಡೆಯುತ್ತಿದೆ. ವಿಷ್ಣುವಿಗೆ 'ಕು-ಚರಃ' ಎಂದುದುಂಟು! ಸರ್ಪವು ಗಿಡಗಂಟಿಗಳೊಳಗಿಂದ ಕಡಿವಾಡಿಯ ಏರಿನಲ್ಲಿ ಚರಿಸುವುದು- ಚಲಿಸುವುದು. ಈ ಕಾರಣದಿಂದ ವಿಷ್ಣುವಿಗೆ 'ಕುಚರಃ' ಎಂದುದು ಸಾರ್ಥವೇ ಸರಿ. ಅಲ್ಲದೆ 'ಶಿಪಿವಿಷ್ಟ' ಸ್ವರೂಪದ ವಿಷ್ಣುಗತಿಯನ್ನು 'ಕುಚರ' ಎಂಬ ಸಂಕೇತದಿಂದ ಸೂಚಿಸಿರುವ ಶಕ್ಯತೆಯೂ ಉಂಟು. 'ಭೀಮ' ಎಂದು ಇರುವ ನಾಮಾಂತರ ಸರ್ಪರೂಪದಲ್ಲಿಯೆ ರುದ್ರ ಮತ್ತು ವಿಷ್ಣು ಈ ಉಭಯ ದೈವತಕ್ಕೂ ಸರಿ ಹೋಗುತ್ತದೆ. ಇನ್ನು ಪ್ರಶ್ನೆ ಗಂಗಾಧರ-ಜಲಾಷರೂಪ ರುದ್ರ ಶಿವನ, ಜಲಶಾಯಿ ವಿಷ್ಣು ಈ ಪ್ರತಿಮೆಗಳ ಹಾಗೂ ಸರ್ಪತ್ವದ ಸಂಬಂಧವೇನು? ಈ ಪ್ರಶ್ನೆಗೆ ಉತ್ತರವು 'ಅಪಾಂ-ನಪ್ತ' ಈ ಸಂಯುಕ್ತ ಪ್ರತಿಮೆ. ಇಲ್ಲಿ ಪರಸ್ಪರ ಜನ್ಯ-ಜನಕ ಭಾವವನ್ನು ಪುರಾತನ ಕಾಲದಿಂದಲೇ ಕಲ್ಪಿಸಲಾಗಿರುವುದನ್ನು ಮರೆಯಲಾಗದು.

ಶ್ರೀ ಲಕ್ಷ್ಮಿ ಹಾಗೂ ಪವಿತ್ರ ವಾಕ್ ಇವೆರಡೂ ಪ್ರತಿಮಾ : ಸಂಕೇತಗಳ ಸಾಹಚರ್ಯವನ್ನು ಕಲ್ಪಿಸಿ ಆರಾಧಿಸಲಾಗುವ ನಡೆವಳಿಯಲ್ಲಿ ಜೀವನ ಸಮ್ಮುಖ ಆಚಾರ=ಸಮಯ ಉಳಿಸಿಕೊಳ್ಳುವ ಪ್ರಯತ್ನವು ಕಾಣುತ್ತಿದೆ. ದೀಪಾವಳಿಯಲ್ಲಿ ವರ್ತಕರು ಶ್ರೀ-ಲಕ್ಷ್ಮೀ ಪೂಜೆಯಂದು ಪಕ್ಕದಲ್ಲಿ ಶ್ರೀಸರಸ್ವತಿಯ ಪ್ರತಿಮಾ : ಚಿತ್ರವನ್ನು ಇಡುವ ನಡೆವಳಿಯುಂಟು! ನನಗೆ ಈ ಆಚಾರ ಸಂಪ್ರದಾಯದ ಅನ್ವಯಾರ್ಥವಾಗದೆ, ದಿಗಿಲುಗೊಂಡಿದ್ದೆ.

ಶೆಟ್ಟರಿಗೆ ಶ್ರೀ=ಸಂಪತ್ತಿನ ಅಪೇಕ್ಷೆ ಮುಖ್ಯ. ಇವರು ಶ್ರೀ ಲಕ್ಷ್ಮಿಯ ಬದಿಗೆ ಸರಸ್ವತಿಯನ್ನೂ ಇಟ್ಟು ಪೂಜಿಸುವ ಈ ವಾಡಿಕೆಯ ಅರ್ಥವೇನು? ಸರಸ್ವತಿಯ ಆರಾಧನೆಯ ಔಚಿತ್ಯವೆಲ್ಲಿದೆ? ಎಂಬ ಪ್ರಶ್ನೆ. ಈ ಹಟ್ಟಿಯ ಹಬ್ಬವನ್ನು ಕುರಿತು ಮೊದಲಬಾರಿ ವಿವರಿಸುವಾಗಿನಿಂದಲೂ ಪೀಡಿಸುತ್ತಿತ್ತು. ಅಲ್ಲದೆ, ಈ ಸ-ರಸವತೀ=ಸರಸ್ವತಿ, ತಂದೆಯನ್ನೇ ಪತಿಯಾಗಿ ಸ್ವೀಕರಿಸುವಳೆಂಬ ಕಥೆ ನೆನಪಾಗಿ ಈ ವಿಸಂಗತಿಯು ಇನ್ನೂ ತ್ರಾಸದಾಯಕವಾಗಿತ್ತು.

'ಗೋ'ರೂಪ ನಾನಾವಿಧ ಲಕ್ಷ್ಮಿಯರೂ ಇರುವರು; ಅವರಲ್ಲಿ ಪಾಪಾಃ ಲಕ್ಷ್ಮಿ. ಅಲಕ್ಷ್ಮಿಗಳಂತೆ ಪುಣಾಃ ಲಕ್ಷ್ಮಿ ಭದ್ರಾ ಲಕ್ಷ್ಮೀಗಳೂ ಇರುವುದಾಗಿ ಅಥರ್ವವೇದದೊಳಗಿನ ಉಲ್ಲೇಖ ಕಣ್ಣಿಗೆ ಬಿದ್ದಂದು 'ಲಕ್ಷ್ಮೀ' ದೇವಿಯ ತೊಡಕು, ಶ್ರೀ-ಸೂಕ್ತಸ್ಥ ಸಂಕೇತಗಳ ಔಚಿತ್ಯವು ಗಮನಕ್ಕೆ ಹಿಂದೆಯೇ ಬಂದಿತ್ತು. ಋಗ್ವೇದದಲ್ಲಿ ಕೇವಲ ಭದ್ರಾಲಕ್ಷ್ಮೀ ದೇವಿಯ ಉಲ್ಲೇಖವು ಇದ್ದುದನ್ನು ನೋಡಿದಾಗ ಒಂದು ಬಗೆಯ ಸಂತೋಷ ಹಾಗೂ ಸಂ-ಭ್ರಮ ಎರಡರಲ್ಲೂ ಸಿಕ್ಕಿಬಿದ್ದಿದ್ದೆ. ಋಗ್ವೇದದ ಸಾರವೆಂದು ಈವರೆಗಿನ ಸಂಶೋಧಕರು ಹೇಳಿರುವ ಮಾತು: 'ಈ ವೇದದಲ್ಲಿ ಅಮಂಗಲ ದೈವತಗಳಿಗೆ ಪೂಜ್ಯ ಸ್ಥಾನವಿಲ್ಲ;' ಅವುಗಳ ನಿರ್ದೇಶವು ಇದ್ದರೂ ಅದಕ್ಕೆ ಗೌಣ ಸ್ಥಾನವಿದೆ' ಎಂಬುದರ ಬಗೆಗೆ ಸಂದೇಹವು ಉಂಟಾಗಿದ್ದಿಲ್ಲ. ಆದರೂ ಲಕ್ಷ್ಮಿಯ ಉಲ್ಲೇಖಗಳಲ್ಲಿ ಕೆಲವೆಡೆಗೆ 'ಶ್ರೀ' ಇನ್ನು ಕೆಲವೆಡೆಗೆ 'ಭದ್ರಾ' ಎಂಬ ಪೂರ್ವಪದವನ್ನು ತಪ್ಪದೇ ಇಡುವ ಕಾರಣವೇನು? ಎಂಬುದರ ಕೊರೆ ಹಾಗೆಯೇ ಇತ್ತು. ವರ ಮಹಾಲಕ್ಷ್ಮಿಯ ಪೂಜಾ ಸಂಪ್ರದಾಯಸ್ಥರನ್ನು ಅಲ್ಲಲ್ಲಿ ಕೇಳಿದೆ. 'ವರ' ಇಷ್ಟೇ ಸಾಕಾಗದೇ 'ಮಹಾ' ಎಂಬ ವಿಶೇಷಣವೂ ಏನು ಕಾರಣ? 'ಶ್ರೀ'ಕಾರಪೂರ್ವಕವಾಗಿ ಲಕ್ಷ್ಮಿಯ ನಾಮೋಚ್ಚಾರ ಮಾಡುವ ಆವಶ್ಯಕತೆಯೇನು? ಎಂಬ ಪ್ರಶ್ನೆಗೆ ನಾನೇ ಒಂದು ಸಮಾಧಾನ ಹುಡುಕಿಕೊಂಡಿದ್ದೆ : ಗೃಹಸ್ಥರ ಹೆಸರಿನ ಮುಂದೆ ಶ್ರೀ ವಿಷ್ಣು ಭಟ್ಟ, ಶ್ರೀ ಮಾನ್ ರುದ್ರಪ್ಪನವರು ಎಂಬುದಾಗಿ ಸನಾರ್ಥಕ ಪದವನ್ನು ನಾಮ ಸಂಕೇತಗಳ ಆದಿ ಅಂತ್ಯದಲ್ಲಿ ಸೇರಿಸುವಂತೆ ದೇವಿಯ ನಾಮದ ಮುಂದೆಯೂ ಶ್ರೀಕಾರವು ಆದರಾರ್ಥಿಯಾಗಿ ಬರುತ್ತಿರಬೇಕು, ಎಂದು ಎನಿಸಿತ್ತು.

ಆದರೆ, ಅಥರ್ವವೇದದ 'ಗೋ'-ರೂಪ ನಾನಾ ಲಕ್ಷ್ಮಿಗಳು ಕಣ್ಣಳತೆಯಲ್ಲಿ ಬಂದಾಗ, ಆ ಹಿನ್ನೆಲೆಯಲ್ಲಿ ದೊರೆತ ವಿವರಣವು ಹೆಚ್ಚು ಸಮಾಧಾನಕರವಾಗಿ ಎನಿಸುತ್ತದೆ. ಇಂದಿಗೂ ಕುದುರೆ ದನಗಳನ್ನು ಕೊಳ್ಳುವಾಗ ಅವುಗಳ ಲಕ್ಷಣ-ಲಾಂಛನ-ಸಂಕೇತ ಚಿಹ್ನ ಪರೀಕ್ಷಿಸಿ ಹೇಳುವವರಿಗೆ ಸಮಾಜದಲ್ಲಿ ಒಂದು ಸ್ಥಾನವಿತ್ತು. ಮುತ್ತು ರತ್ನ ಪರೀಕ್ಷೆಯಲ್ಲೂ ಇದೇ ಮಾತು. ಕೆಲವು ಶುಭಸೂಚಕ ಸಂಕೇತಗಳುಳ್ಳವು ಇರುವಂತೆ ಕೆಲವು ಅಶುಭ ಸೂಚಕ ಸಂಕೇತಗಳು ಇರುತ್ತವೆ. ಮಾನವ ವ್ಯಕ್ತಿಗಳಲ್ಲೂ ಹೀಗೆಯೇ ಉಂಟು. ಹೆಣ್ಣಿನಲ್ಲಿ ಪದ್ಮಿನಿ, ಶಂಖಿನಿ, ಚಿತ್ರಿಣಿ, ಇತ್ಯಾದಿ ಭೇದಗಳನ್ನು ಕಲ್ಪಿಸಿದ್ದುಂಟು. ಹಾಗೆ ಗೋವುಗಳಲ್ಲಿ ಕೆಲವು ಕರಿಗಾಲಿನವು ಇರುವವು; ಅವನ್ನು ಮನೆಗೆ ತಂದರೆ ಆ ಮನೆಗೆ ಅಮಂಗಲಕರವಾಗುವುದು ನಿಶ್ಚಿತ ಎಂಬ ಶ್ರದ್ಧೆಯು ಇತ್ತು-ಇದೆ.*

ಈ ಹಿನ್ನೆಲೆಯಲ್ಲಿ, ಮಾನವನು ನಿರ್ಮಿಸಿಕೊಂಡಿರುವ ದೈವತ ಪ್ರತಿಮೆಗಳ ಅನ್ವಯಾರ್ಥವು ಚೆನ್ನಾಗಿ ತಿಳಿಯುವಂತಿದೆ. ಮೊತ್ತ ಮೊದಲಲ್ಲಿ ಎಂದರೆ ಆರಂಭಕ್ಕೆ ಶುಭ-ಅಶುಭ ಸಂಕೇತಗಳು ಗಮನಕ್ಕೆ ಬರಲು ಶಕ್ಯವೇ ಇಲ್ಲ. ಆಗ ಇಡಿಯಾದ ಅ-ಖಂಡಿತ ಅವಿಭಾಜಿತ ಸ್ವರೂಪದ ದೈವತಗಳ ಪೂಜೆಯೆ ಅನಿವಾರ್ಯವಿದೆ. ಈ ಕಾರಣದಿಂದ 'ಅ-ದಿತಿ'ಗೆ 'ಅ-ಖಂಡಿತಾ' ಎಂದು ಭಾಷ್ಯಕಾರರು ಹೇಳುವ ಅರ್ಥವು ಉಚಿತವೆನಿಸುವಂತಿದೆ. ಗೆಸ್ಟಾಲ್ಟ ಮಾನಸಶಾಸ್ತ್ರದಂತೆ, ಮಾನವರಿಗೆ 'ಇಡಿ'ಯಿಂದ ಬಿಡಿ-ಬಿಡಿ ಆ ಬಳಿಕ ತಿಳಿಯತೊಡಗುತ್ತದೆ. ದೇವ ಮತ್ತು ದೈವ ಇವೆರಡರ ಮೂಲ 'ದಿವ್' ಆಖ್ಯಾತವೇ ಇರುವ ಔಚಿತ್ಯವು ಗಮನಕ್ಕೆ ಬರುತ್ತದೆ. ಈ ಕಾರಣದಿಂದಾಗಿ 'ಲಕ್ಷ್ಮಿ' ಎಂದರೆ ಭದ್ರಾ-ಅಭದ್ರಾ ಉಭಯ ಸಂಯುಕ್ತ ರೂಪದ ದರ್ಶನ. ಇದರೊಳಗಿಂದ ಅನುಭವವು

---

* ಈ ವಿಚಾರಗಳ ಬಗೆಗೆ ಹೆಚ್ಚಿನ ಆಸಕ್ತಿ ಬಯಸುವವರು ಎರಡನೇ ಸೋಮೇಶ್ವರನ 'ಮಾನಸೋಲ್ಲಾಸ' ಹಾಗೂ ಬಸವರಾಜನ 'ಶಿವತತ್ತ್ವರತ್ನಾಕರ' ಈ ಎರಡೂ ವಿಶ್ವಕೋಶಗಳಲ್ಲಿ ಬರುವ 'ಗೋಶಾಸ್ತ್ರ'ದ ವಿವರಗಳನ್ನು ಗಮನಿಸಬಹುದು (ಸಂ)

ಬರತೊಡಗಿದಂತೆ ಇಂತಹ ವಿಶಿಷ್ಟ ಲಾಂಛನ-ಸಂಕೇತವಿದ್ದುದು ಶ್ರೀ ಭದ್ರಾ-ವರದಾ-ದೇವಿ ಎನಿಸುವುದು. ಮಾನಸಶಾಸ್ತ್ರದಂತೆ ವಿಚಾರ ವಿಕಾಸ ಕ್ರಮವು ಹೀಗೇ ಇರುವ ಶಕ್ಯತೆಯ ಮನವರಿಕೆಯಾದ ಬಳಿಕ ರುದ್ರ+ಶಿವ ಇವು ಮೂಲತಃ ಎರಡು ದೈವತಗಳಲ್ಲ, ಎಂಬ ಮನವರಿಕೆಯಾಯಿತು. ರುದ್ರ-ಶಿವ ಇದು ಮೂಲದಲ್ಲಿ ಅ-ದಿತಿರೂಪ. ಆ ಬಳಿಕ ಮುಂದಿನ ಹಂತದಲ್ಲಿ ರುದ್ರನಿಂದ ಶಿವರೂಪವನ್ನು, ಆರಾಧನೆಗಾಗಿ-ಶುಭಮಂಗಲ ಕಲ್ಯಾಣ ಪ್ರಾಪ್ತಿಗಾಗಿ-ಬೇರೆಯಾಗಿ ಪೂಜಿಸುವ ವಾಡಿಕೆಯು ತಲೆಯೆತ್ತಿರಲಿಕ್ಕೆಬೇಕು.

ಆದರೆ, ಈ ವೈಶಿಷ್ಟ್ಯವು ಇನ್ನೂ ಯಾರ ಗಮನಕ್ಕೂ ಬಂದಿಲ್ಲ! ಋಗ್ವೇದದಲ್ಲಿ ರುದ್ರನನ್ನು ಒಬ್ಬನನ್ನೇ ಉಲ್ಲೇಖಿಸಲಾಗುತ್ತದೆ. ಇದರಿಂದಾಗಿ ಎನೆಲ್ಲ ಪಾಶ್ಚಾತ್ಯ ಸಂಶೋಧಕರು ಭ್ರಮಿಸಿದ್ದುಥ: 'ಶಿವ' ಎಂಬುದು ರುದ್ರನಿಂದ ಭಿನ್ನವಾದ ಇನ್ನೊಂದು ದೈವತ! ಆದರೆ, ಇವರಾರಿಗೂ ಋಗ್ವೇದದ ಮೂಲ ದೈವತಗಳ ವೈಶಿಷ್ಟ್ಯವೆ ಹೊಳೆದುದು ಕಾಣುವುದಿಲ್ಲ! ಹವ್ಯವಾಹನ ಮಂಗಳಕರ ಅಗ್ನಿಯೇ ಆರಾಧ್ಯ ದೈವತವಾಗಿರುವದು ಮೂಲ ಋಗ್ವೇದದ ವೈಶಿಷ್ಟ್ಯವಾಗಿದೆ; ಇದನ್ನು ಮ್ಯಾಕಡೊನೆಲ್ ಪ್ರಭೃತಿಗಳು ಗುರುತಿಸದೆ ಇಲ್ಲ.......

> Sacrificial Agni who conveys the offering (ಹವ್ಯವಾಹನ) is distinguished **the Form of Fire** which is called corpse-devouring (ಕ್ರವ್ಯಾದ)[೨೦]

ನೃ-ಚಕ್ಷಾಸಃ ಮಾನವರ ನೇತ್ರ ಸ್ವರೂಪನಾದ ಸೂರ್ಯ-ಸವಿತೃಗಳಿಂದ ವಿಶ್ವಾರೂಪಾಣಿ ಕಾಣಿಸುತ್ತವೆ. : ಋತಾಧಿಷ್ಠಿತ ಎಂದರೆ ಅರ್ಥ-ನಿಯಮಕ್ಕೆ ಸುಸಂಗತ ಸುಸಂಬದ್ಧ 'ಸತ್ಯವು'. ಇದು ಈ ಸಾಮಾಜಿಕ ಜೀವನದಲ್ಲೇ ಅನುಭವಕ್ಕೆ ಬರಬಲ್ಲುದು. ವೈಯಕ್ತಿಕ ಸತ್ಯ ಕೇವಲ ಖಾಸಗಿ! ಎಂಬ ನಿಷ್ಠೆಯು ಈ ಅಗ್ನಿಯು ಸವಿತೃ ಆರಾಧಕರಿಗೆ ತತ್ : ಏಕಂ : ಸತ್ ಈ ಏಕಾಂತಿಕ ಸತ್ಯವು ಮಾನ್ಯವಿರಲು ಶಕ್ಯವೇ ಇಲ್ಲ. ನಿಸರ್ಗಸ್ಥ 'ತತ್ : ಏಕಂ', ಸತ್ಯವನ್ನು ಅರ್ಥಯಿಸಿಕೊಂಡು 'ಸಕ್ತುಂ ಇವ ತಿತಿಉನಾ ಪುನಂತಃ'=(ಋತ ಸತ್ಯದ) ವಾಕ್‌ಪೂಜಕರ ಗ್ರಂಥ, ಮೂಲ ಋಗ್ವೇದ. ಆದುದರಿಂದ, ಈ ವೈಚಾರಿಕ ಚೌಕಟ್ಟಿನಲ್ಲಿ 'ಯಸ್ಯ ಛಾಯಾ ಅಮೃತಂ, ಯಸ್ಯ ಮೃತ್ಯುಃ' ಎಂಬ ತತ್ : ಏಕಂ ಭೂಮಿಕೆಯ ದೈವತವು ಹೊರಗಿನದು; ಪರಕೀಯವಾಗುತ್ತದೆ. ಈ ದೇವರ ಹೆಸರು 'ಕ(ಃ)' ಪ್ರಶ್ನಾರ್ಥಕವಾದ ಧ್ವನ್ಯರ್ಥವನ್ನು ತಾಳುತ್ತಿರುವ ಕಾರಣವೇ ಇದು!

ಆದರೆ, ರಸವಾದಿಗಳ ಮೋಡಿಕಾರಿಕೆಯ ಮಾಟದಿಂದಾಗಿ ಋತ : ಸತ್ಯ ಆಪ : ರಸ : ರೇತ ಸ್ವರೂಪೀ ನಾಗ ಶಕ್ತಿ (Life Force Elan vital); ವಿಶ್ವಸರ್ಜಕ ಶಕ್ತಿ ಇದುವೇ ಏಕಂ:ಸತ್, ಎಂಬ ಶ್ರದ್ಧೆಯು ಪ್ರಭಾವಶಾಲಿಯಾದ ಹಾಗೆ ಮರಳಿ ಅದಿತಿ ಪಂಥೀಯ ಅ-ಖಂಡಿತ ದೈವತ ಪ್ರತಿಮೆಗಳು ಮರ್ಯಾದೆಯಿಂದ ಸಾಮಾಜಿಕ ಮಟ್ಟದಲ್ಲಿಯೂ ಪೂಜೆಗೊಳ್ಳತೊಡಗುತ್ತವೆ! ಈ ಇಡೀ ಹಿನ್ನೆಲೆಯ ಸ್ಥಿತ್ಯಂತರಗಳನ್ನು ಲೆಕ್ಕಿಸದೆ, ದೀಪಾವಳಿಯ ಶ್ರೀ ಲಕ್ಷ್ಮೀಪೂಜೆಯ ಕಾಲದ ಶ್ರೀ ಸರಸ್ವತಿಯ ಪ್ರತಿಮೆಯೂ ಪಕ್ಕಕ್ಕೆ ಇರುವ ಅರ್ಥವು ಗಮನಕ್ಕೆ ಬರಲಾರದು. ಮಂಗಳ ಹಾಗೂ ಅಮಂಗಳ ಲಕ್ಷ್ಮಿಗಳಿಂದ ಆಯ್ದು, ಜೀವನ ಮೂಲ್ಯಗಳ ಪೋಷಕ ಶ್ರೀ ಲಕ್ಷ್ಮಿಯನ್ನು ಬೇರ್ಪಡಿಸಿಕೊಳ್ಳುವಂತೆ ಸರಸ್ವತಿಯ ವ್ಯಭಿಚಾರಿ ಸ್ಥಾಯಿಭಾವವನ್ನು ದೂರವಿರಿಸಿ ಪವಿತ್ರಳಾದ ಶ್ರೀ ಸರಸ್ವತಿಯನ್ನು ಪೂಜೆಗೆ ಆಮಂತ್ರಿಸಲಾಗುತ್ತದೆ. 'ವಿದ್' ಆಖ್ಯಾತ ಸಾಧಿತ ವಿತ್ತ-ವಿದ್ಯಾ ಈ ಶಬ್ದ ಪ್ರತಿಮೆಯಲ್ಲಿ ಶ್ರೀ ಲಕ್ಷ್ಮಿ ಮತ್ತು ಶ್ರೀ ಸರಸ್ವತಿಯರು ಇಬ್ಬರೂ ಉಂಟು. 'ವಿದ್'=ಸಂಪಾದಿಸು, ಗಳಿಸು. 'ಸರ್ವಂ ಕರ್ಮ.....ಜ್ಞಾನೇ ಪರಿಸಮಾಪ್ಯತೇ' ಎಂದು, ನಾಗ ರೂಪ ಭಗವಂತನು ಒಂದು ನಾಲಗೆಯಿಂದ ಹೇಳಿದ್ದುಂಟು. ಜ್ಞಾನವು= ಅರ್ಥ=ವಿಚಾರ ನಿಷ್ಕ್ರಿಯವಲ್ಲ. ಕ್ರಿಯೆಗೆ-ಜೀವನಕ್ಕೆ (ಋತ-ಸತ್ಯದ) ಪ್ರೇರಣೆಯನ್ನೀಯದ ಅರ್ಥವು ಅರ್ಥವಲ್ಲ. ಅದು ಅನರ್ಥಕಾರೀ ವಿಚಾರ=ಜ್ಞಾನವಾಗಿ ಪರಿಣಮಿಸುವುದು. 'ವಿದ್' ಈ ಮೂಲ ಆಖ್ಯಾತ ದಿಂದಲೇ ಭೌತಸಂಪಾದನೆಯ ಸೂಚಕವಾಗಿ 'ವಿಂದ್' ಎಂಬ ನೂತನ ಸಾಧಿತ ರೂಪವು ಪ್ರಚಲಿತವಾಗಿರಬೇಕು ಈ ದೃಷ್ಟಿಯಿಂದ ಋತ : ಸತ್ಯದ ಭೂಮಿಕೆಯ 'ವಾಕ್' ಮಹಿಮಾ ಸೂಕ್ತದಲ್ಲಿ 'ಏಷಾಂ ಅಧಿವಾಚಿ ಭದ್ರಾಲಕ್ಷ್ಮೀಃ ನಿಹಿತಾ' ಎಂದು ಹೇಳಿರುವಲ್ಲಿ ತುಂಬ ಸಮರ್ಪಕತೆಯುಂಟು.

ಈ ದೃಷ್ಟಿಯಿಂದ ಶ್ರೀ ಲಕ್ಷ್ಮೀದೇವಿ 'ವಿಂದ್' ಕ್ರಿಯೆಯ ಫಲಿತವಾದರೆ ಶ್ರೀ ಸರಸ್ವತಿ ವಿದ್ ಕ್ರಿಯೆಯ ಪರಿಣಾಮ : ಸಿದ್ಧಿ ಆಗುತ್ತಾಳೆ. ಇಲ್ಲಿ ಚರ್ ಆಖ್ಯಾತದಿಂದ ಆಚಾರ, ಶ್ರೀ ಲಕ್ಷ್ಮಿಗೆ ಕಾರಣವಾಗುವ ದಾರಿ ಹೊರಡುತ್ತದೆ. ವಿಚಾರವು ಶ್ರೀ ಸರಸ್ವತಿಯ ಸನ್ನಿಧಿಗೆ ಒಯ್ಯುತ್ತದೆ. ವಿದ್ಯಾ-ವಿತ್ತ ಇವೆರಡು ಒಂದು ಇನ್ನೊಂದರಿಂದ ದೂರವಲ್ಲ-ಮೂರ್ಖ ಅರಿವುಗೇಡಿಗಳ ಪಾಲಿಗಲ್ಲದೆ. ಆದರೆ, ಈ ಮೂಲ್ಯಗಳ ಅರ್ಥದೃಷ್ಟಿಯು ತತ್ : ಏಕಂ ಭೂಮಿಕೆಯ ಅರ್ಥವಿಹೀನತೆ-ಅನರ್ಥಕಾರಿತ್ವವನ್ನು ಬಯಲಿಗೆ ತರುವ ಭೀತಿಯುಂಟು! ದೀವಳಿಗೆಯ ಶ್ರೀ ಲಕ್ಷ್ಮೀಪೂಜೆಯಲ್ಲಿ ಶ್ರೀ ಸರಸ್ವತಿಯ ಪ್ರತಿಮೆಯನ್ನು ಇಟ್ಟು ಈ ಅವಳಿ ದೇವಿಯರನ್ನು ವಿಜೃಂಭಣೆಯಿಂದ ಪೂಜಿಸಲಾಗುವುದು ನಿಜ. ಈ ದೈವತಗಳ ಪೀಠದ ಮೇಲ್ಗಡೆಯಲ್ಲಿ ಈ ದೈವತ ಪ್ರಸನ್ನವಾಗಲಿ, ಎಂಬರ್ಥದ ವಾಕ್ಯದಂತೆ ಹಲವರಲ್ಲಿ ಅಲ್ಲಿಯೆ 'ಲಾಭಾ ಲಾಭೌ, ಜಯಾ ಜಯೌ' ಎಂಬ ಮಹಾವಾಕ್ಯವೂ ಬರೆಯಲ್ಪಡುತ್ತದೆ! ಶ್ರೀಮದ್‌ಭಗವದ್ಗೀತೆಯ ನಿಷ್ಕಾಮ 'ಕರ್ಮ'ದ ಭೂಮಿಕೆಯ ಜೀವನ ರೀತಿಯ 'ನಿಶಾನಿ' ಇದು! ಜನ್ಮದಿನದಂತೆ ಮೃತ್ಯುವಿನ ಅಶೌಚವನ್ನೂ ಪಾಲಿಸಿ ಮರಣದಿನ ಹಬ್ಬದಂತೆ ಆಚರಿಸಿ, ಸುಖೇ-ದುಃಖ ಸಮೇಕೃತ್ವಾ, 'ಲಾಭಾ ಲಾಭೌ ಜಯಾ ಜಯೌ', ನಾವು ಈ 'ಸಮತ್ವ'ಯೋಗ ಸಾಧಕರಾಗಬೇಕೆಂದೂ ಗೀತೆಯಲ್ಲಿ ಇನ್ನೊಂದು ನಾಲಗೆಯಿಂದ ಪ್ರತಿಪಾದಿಸಲಾಗಿದೆ : 'ಅರ್ಥಂ ಅನರ್ಥ ಭಾವಯನಿತ್ಯಂ' ಎಂದು ಆಚಾರ್ಯವರೇಣ್ಯರ ಭಾಷ್ಯ ರೂಪ ಮಹಾವಾಕ್ಯವೂ ಇದರೊಡನೆ ಉಂಟು.

ಋತ : ಸತ್ಯ ಮತ್ತು ಏಕಂ : ಸತ್ಯ ಈ ಎರಡೂ ಭೂಮಿಕೆಗಳಲ್ಲಿ ಸ್ಪರ್ಧೆ ಇದ್ದುದನ್ನು ನಿದರ್ಶನಕ್ಕೆ ತರುವ 'ಆರಾಯಿ ಕಾಣೇ ವಿಕಟೇ ಗಿರಿಂಗಚ್ಛ' ಎಂಬ ಋಗ್ವೇದಸ್ಥ ಸೂಕ್ತವು ವಿವಿಧ ರೀತಿಯಲ್ಲಿ ಅಭ್ಯಸನೀಯವಾಗಿದೆ. ಈಗಾಗಲೆ ಇದರ ಸುಮಾರು ೧೦ ಕಾರಣಗಳನ್ನು ವಿವರಿಸಲಾಗಿದೆ. 'ಸಂದೃಕ್' ಈ ದೃಷ್ಟಿಯು ಉದಯವಾದುದು ಆಗುವುದೂ ನಾಗ-ಸಂಯೋಗದಲ್ಲಿ. 'ತತ್ : ಏಕಂ ಮಾತ್ರ ಸತ್ಯ ಉಳಿದುದೆಲ್ಲ ಮಿಥ್ಯ ಎಂಬ ಅನುಭಾವ ಈ ದೃಷ್ಟಿಯ ಲಕ್ಷಣ. ಈ ಅನುಭೂತಿಯ 'ಸಂದೃಕ್' : ದರ್ಶನವೇ ದರ್ಶನ. ಆದರೆ, ಈ ತತ್ : ಏಕಂ ಭೂಮಿಕೆಗೆ ಚ್ಯುತಿ ಬಂದೊಡನೆ ಈ ಜೀವ ಒರಲುತ್ತದೆ. 'ತತ್ : ಏಕಂ'ದಿಂದ ದೂರವಾದ ಈ ಜೀವ 'ಸ್ವ'-ತ್ವಚ್ಯುತವಾದ (alienated) ಅಳಲಿನಲ್ಲಿ ಬೆಂದು ಬೇಗುದಿಗೊಳ್ಳುತ್ತದೆ. ಋಗ್ವೇದದಲ್ಲಿ ಬರುವ ಇಳಾ ಪುತ್ರ ಪೂರೂರವನು, ನರನ ಈ ಜೀವನ ದೃಷ್ಟಿಯ ಒಂದು ಪ್ರತಿಮಾ : ಸಂಕೇತವಾಗಿದೆ. ಆದರೆ, ನರನ 'ಸಂದೃಕ್' ದೃಷ್ಟಿಯ ಉದಯದ ತರುವಾಯದಲ್ಲೂ 'ನೀಡ'-ನಾರನಾಗಿಯೆ ಉಳಿಯುತ್ತಾನೆ, ಎಂಬ ಸಿದ್ಧಾಂತ ಸುಳ್ಳು. 'ಅಪಾಂ-ಸಪ್ತ' ಯೋಗ, ಕೇವಲ ನೆಪ, 'ಸಂದೃಕ್' ಶಕ್ತಿ ಕಾಣಿಸಿಕೊಳ್ಳಲು. ಅದೇ ಆದಿ-ಅದೇ ಕೊನೆ, ಎಂಬ ಹಾಗಿನ ಆತ್ಯಂತಿಕ ಉನ್ಮನಸ್ಕ ಭಾವದಲ್ಲಿ ಇಡೀ ಜೀವನವೆಲ್ಲ, ಪ್ರಾಮಾಣಿಕವಾಗಿಯೂ ಅರ್ಥವಿಹೀನವಾಗಿ ಕಾಣುತ್ತಿರುವ ರೀತಿಯಲ್ಲಿ ಬದುಕುವ ಜೀವಗಳು ತೀರ ವಿರಳ. ಇದಕ್ಕಾಗಿ ಶುಕನಂತೆ ಕಾಡಿಗೆ ಹೋಗಬೇಕು. ಸಮಾಜ ಬಾಹಿರರಂತೆ ದ್ವಂದ್ವಾತೀತ ವೇಷ ತಾಳಿ ಜೀವಿಸಬೇಕು-ಇತ್ಯಾದಿ ಲೋಕ ವಿಲಕ್ಷಣ ನಡೆವಳಿಗಳೇ ತಮ್ಮ ವೈಶಿಷ್ಟ್ಯ ಎಂಬ ಹಾಗಿನ ಶ್ರದ್ಧೆಯ ಪಂಥ-ಪಂಗಡವನ್ನು ಕಟ್ಟಿಕೊಂಡು, ಈ ಏಕಂ : ಸತ್ ಪಂಥವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರುವ ನಾನಾ ವಿವಿಧ-ಯತ್ನಗಳು ಆಗಿವೆ, ಆಗುತ್ತಿವೆ.

ಆದರೆ, ಏನೇ 'ಪಂಥ' ಕಟ್ಟಿ ಬಾಳುವ ಈ ರೀತಿ ನಿಸರ್ಗಕ್ಕೆ ವಿದೂರ. ಇಂಥ ಪಂಥಗಳು ಆ ಸಂಸ್ಕೃತಿಯ ಸಾಮಾಜಿಕ ಕಟ್ಟಡದ ರಚನೆಯಲ್ಲಿ ಎಲ್ಲಿಯೋ ಬಿರುಕು ಬಿಟ್ಟಿದೆ-ತಾತ್ವಿಕ ತಳಹದಿಯು ಸದೋಷವಾಗಿದೆ, ಎಂಬುದರ ಎಚ್ಚರಿಕೆಯನ್ನೀವ ಸಂಕೇತಗಳು; ಆಗಾಮೀ ಪ್ರಳಯದ ಗಂಡಾಂತರವನ್ನು ಸೂಚಿಸುವ ಚೂಣಿಯ ಕೇತುಗಳು, ಎಂಬುದು ಮಾತ್ರ ನಿಶ್ಚಿತವಿದೆ. ಏಕೆಂದರೆ, ಜೀವನ ಪ್ರವಾಹದಲ್ಲಿ, ಮೊದಲ ಬಾರಿ ಮಜ್ಜನಗೈದ 'ಸುಮಜ್ಜಾನಿ'ತ್ವದ ಸರ್ವಪ್ರಥಮ ಅನುಭವವು ಎಷ್ಟೇ ಪ್ರಯತ್ನಪಟ್ಟರೂ ಅದರ ಅ-ಪೂರ್ವತ್ವವು ಉಳಿಯತಕ್ಕುದೇ. ಪ್ರಥಮಾನುಭವಗಳು ಅನುಪಮೇಯ, ಅನನ್ಯ ಸಾಧಾರಣವಾಗಿರುವುದು ನೈಸರ್ಗಿಕವೇ ಆಗಿದೆ. ಕಾಲವು ಪ್ರವಾಹ, ಮೊದಲ 'ಮಜ್ಜನ'ದ ಮೊದಲ ಪ್ರವಾಹ ಮರಳಿ ದೊರೆಯಬೇಕೆಂಬ ಹಂಬಲದಲ್ಲಿ ಬಾಲಭಾವವೋ-ಬಾಲಿಶತನವೋ ಒಳಗೊಂಡಿರುವುದರ ಎಚ್ಚರಿಕೆ ಹುಟ್ಟಿ 'ಸಂ-ದೃಕ್ ಸಾಕ್ಷಿಯ ಹಂತಕ್ಕೆ ಬರುತ್ತದೆ. ವ್ಯಕ್ತಿಯು

ತಾನು ಸತ್-ತ್ವ=ಸ್ವ-ತ್ವ ಭ್ರಷ್ಟ ಏಕಾಕಿ ಎಂಬ ಭಾವನೆಗೆ, ತನ್ನ ನಿಜಸ್ವರೂಪದ ಅಜ್ಞಾನವೇ ಕಾರಣ. ಮಾನವ ವ್ಯಕ್ತಿಗೆ ತನ್ನ ವ್ಯಕ್ತಿತ್ವವು ಪ್ರಾಪ್ತವಾದುದು, ಆ ವ್ಯಕ್ತಿಯ ಸಮಷ್ಟಿಯ ಸಾಂಸ್ಕೃತಿಕ ಪರಿಸರದಿಂದಾಗಿ.* ಇಡಿಯದರ ಹಿನ್ನೆಲೆಯಲ್ಲಿ ಬಿಡಿಯ ಅಂಗಾಂಗಗಳು ಅರ್ಥಪಡೆಯುವವು. ಸಾಮಾಜಿಕ ಜಾಗ್ರತ ಪ್ರಜ್ಞೆಗೆ ಎರವಾಗದೆ, ಆತ್ಯಂತಿಕ ವೈಯಕ್ತಿಕವಾದ-ವ್ಯಕ್ತಿ ಪೂಜೆ ಇಂಬುಗೊಳ್ಳಲು-ಪ್ರಭಾವಶಾಲಿಯಾಗಲು ಶಕ್ಯವಿಲ್ಲ. ಭಾಷಿಕ ಮಾಧ್ಯಮ : ಪ್ರತಿಮೆಗಳಿಂದ=ಸಾಮಾಜಿಕ ಸಂಪರ್ಕದಿಂದ, ವ್ಯಕ್ತಿಯ 'ಸಂದೃಕ್' ದರ್ಶನ ಸಾಕ್ಷಿಯ ಹಂತಕ್ಕೆ ಬರುತ್ತದೆ. ಆಗ ವ್ಯಕ್ತಿಗೆ, ತನ್ನ ಅರ್ಥವು-ಮೂಲ್ಯಗಳು-ಸೌಂದರ್ಯವು ಸಾಮಾಜಿಕ ಜೀವನದ ಆಧಾರ-ಭೂತ ಋತ:ಸತ್ಯದ ಕೇಂದ್ರದಿಂದ ಜೀವನ ಚೈತನ್ಯವನ್ನು ಪಡೆಯುತ್ತಿರುವುದರ ದರ್ಶನವಾಗುತ್ತಲೆ (alienated) ಇರದೆ ತಾನು ಏಕಾಕಿ ಮಾನವೀಯ ಜೀವನದ ಅರ್ಥದ (fabric of meaning) ಹಾಸು ಹೊಕ್ಕಿನಲ್ಲಿ ಒಂದು ಎಳೆಯ ಸಾರ್ಥಕತೆಯು ಎಲ್ಲಿ ಉಂಟು, ಎಂಬುದರ ಅರಿವಿನೊಂದಿಗೆ ಈ ಸಾಕ್ಷಿ, ತನ್ನ ಪಾಲಿನ ಕರ್ತವ್ಯದಲ್ಲಿ ಕೃತಾರ್ಥತೆಯ ಸಮಾಧಾನವನ್ನು ಹೊಂದುತ್ತಾನೆ.

ಋಗ್ವೇದ ಕಾಲದ ಋತ:ಸತ್ಯದ ಭೂಮಿಕೆಯ ತತ್ತ್ವಜ್ಞಾನದ ಪೂರ್ಣ ಆಕೃತಿಯು ಕಣ್ಣಳತೆಯಲ್ಲಿ ಬರುವುದಕ್ಕೆ ತೊಂದರೆಗಳಿವೆ. ಜೀವನದ ಅರ್ಥ : ಮೂಲ್ಯ : ಸೌಂದರ್ಯವನ್ನು ಗಮನಕ್ಕೆ ತಂದುಕೊಡುವ ಪ್ರತಿಮಾ : ಸಂಕೇತಗಳಲ್ಲಿ 'ವಿಕಟ' ವಿಕೃತ ರೂಪದತ್ತ ಒಲಿಯದೇ ಮೂಲ ಸ್ವರೂಪದಲ್ಲಿಯೆ ದೊರೆಯುವಂತಹವು ಇಲ್ಲವೆಂದರೂ ತಪ್ಪು ಆಗಲಾರದು. ಋಗ್ವೇದದ ಅರ್ಥ ಋಚೆಯಲ್ಲಿ ಜೀವನ ಮೂಲ್ಯಗಳ ಪ್ರತೀಕ ಎಂದು ಕಾಣುವುದರೊಳಗಾಗಿ ಮುಂದಿನ ಅರ್ಥಭಾಗವು ತತ್ : ಏಕಂ ಪಂಥೀಯ ವಕ್ರಗತಿಯುಳ್ಳದು ಆಗುತ್ತದೆ. ಶ್ರೀಮದ್ ಭಗವದ್ಗೀತೆಯ ಒಂದು ಮಾದರಿ : 'ಜಹಿ ಶತ್ರುಂ' ಅರಿಗಳನ್ನು ಗೆಲ್ಲು ಎಂಬ ವಾಕ್ಯವು, ಕೌರವರನ್ನು ಗೆಲ್ಲಲು ಹೇಳಿದ ಆದೇಶ ಎನ್ನುವಷ್ಟರಲ್ಲಿ ಈ ಶತ್ರುವು 'ಕಾಮರೂಪಂ ದುರಾಸದಂ' ಆಗಿಬಿಡುತ್ತಾನೆ! ಎಂದರೆ ಯುದ್ಧಭೂಮಿಯಲ್ಲಿ ನಿಂತ ಆ 'ನರ'ನು ಪ್ರತ್ಯಕ್ಷ ಕಾಳಗಕ್ಕೆ ಅಣಿಯಾಗುವುದೊ? ಅಥವಾ ಏಕಾಂತವಾಸಿಯಾಗಿ ಚಾಂದ್ರಾಯಣಾದಿ ವ್ರತಗಳನ್ನು ಕೈಕೊಂಡು ಕಾಮ ಕ್ರೋಧಾದಿ ಶತ್ರುಗಳನ್ನು ಗೆಲ್ಲುವುದಕ್ಕಾಗಿ ಒಂಟಿಗಾಲಿನ ಮೇಲೆ ನಿಂತು ಅಥವಾ ಮುಳ್ಳು ಹಾಸಿಗೆಯ ಮೇಲೆ ಮಲಗಿ ತನ್ನ ವೀರಕರ್ಮದ ಸಾಧನೆ ನಡೆಸುವುದೊ? 'ವಿಮೃಶ್ಯ ಏತತ್ ಅಶೇಷೇಣ, ಯಥೇಚ್ಛಸಿ ತಥಾ ಕುರು' ಎಂಬ ಅತ್ಯಂತ ಉದಾತ್ತ ಭವ್ಯ ವಿಚಾರ ಸ್ವಾತಂತ್ರ್ಯದ ಆದರ್ಶ ಉಪದೇಶ ಗೀತೆಯ ಅಮರ ವಾಣಿಯ ಅತ್ಯುಚ್ಚ ಉಕ್ತಿ. ಆದರೆ ವಿಚಾರಸ್ವಾತಂತ್ರ್ಯ, ನಿರ್ಣಯ ಸ್ವಾತಂತ್ರ್ಯವನ್ನು ಕೊಡುವ ವಾಕ್ಯವು ಮುಗಿಯುವುದರೊಳಗಾಗಿ ಅಲ್ಲಿಯೆ ಈ ಶ್ಲೋಕವು ಇದೆ : 'ಸರ್ವ ಧರ್ಮಾನ್ ಪರಿತ್ಯಜ್ಯ 'ಮಾಮ್ ಏಕಂ ಶರಣಂ ವ್ರಜ, ಈ ಏಕಂ : ಸತ್ತೆಗೆ ಶರಣು ಹೋಗುವ ಆದೇಶ! ಭಗವಂತನು 'ಕಪಟ ನಾಟಕ ಸೂತ್ರಧಾರಿ' ಎಂದು ಹರಿದಾಸರು ಭಕ್ತಿಯ ಉದ್ರೇಕದಲ್ಲಿ ಆಡುವ ಈ ಮಾತಿನಲ್ಲಿ (Dramatic irony) ಇಲ್ಲದಿಲ್ಲ. ಕೃಷ್ಣನು 'ಕಾರಸ್ಥಾನಿ' ಎಂಬುದು ಬಿಚ್ಚು ಮಾತಾಯಿತು. 'ವಿಕಟ' ಆಕೃತಿಯ ಶೈಲಿಯ ಇನ್ನಾಲಗೆಯ ಉಪದೇಶದ ರೀತಿ ಎಂಬಲ್ಲಿಯ 'ವಿಕಟ' ಸಂಕೇತಕ್ಕೆ ಋಗ್ವೇದದ ಆಧಾರವಿದೆ.

ವಿಚಾರಗಳಿಗೆ ನಿಶ್ಚಿತ ವಿಶಿಷ್ಟ ಆ-ಕೃತಿ ರೂಪವಿರುತ್ತದೆ. ಇದು ನಿಜವಿದ್ದರೆ ಓಡು ಮತ್ತು ಓಡಬೇಡ ಇವೆರಡೂ ಒಂದೇ ಬಗೆಯ ಆ-ಕೃತಿಗಳು ಆಗಲಾರವು. ಪ್ರಸ್ತುತ ಸಂದೃಕ್ ಭೂಮಿಕೆಯಲ್ಲಿ ಕಾಣುವ ದೃಶ್ಯ; ತತ್ : ಏಕಂ ಮತ್ತು ಸಾಕ್ಷಿಯ ಭೂಮಿಕೆಯ ಸಮೀಕ್ಷೆಯಲ್ಲಿ ಪ್ರತೀತಿಗೆ ಬರುವ ಋತ : ಸತ್ಯವು ಇವೆರಡೂ ಒಂದೇ ಕವನದ ವಿಷಯವಾಗುವಲ್ಲಿ 'ವಿಕಟ' ವಕ್ರತೆ ನಿರ್ಮಾಣವಾಗುವುದುಂಟು. ಕಾಣೇ ಅರಾಯಿ ವಿಕಟೇ ಗಿರಿಂ ಗಚ್ಛ, ಎಂದು ಮೊದಲ ಋಚೆಯಲ್ಲಿ ಓಡಿಸಿದ ದೇವಿಯನ್ನು ವೇಷಾಂತರದಲ್ಲಿ ಕೊನೆಯ ಋಚೆಯಲ್ಲಿ ಸ್ವಾಗತಿಸಿರುವ ಈ ರಚನಾ ಶೈಲಿಯ 'ವಿಕಟ' ಆಕೃತಿಯು ಇಲ್ಲಿ ಅಭ್ಯಸನೀಯವಿದೆ.

---

* ಇಂದು ಇನ್ನೊಂದು ಭಾಷಿಕ ಸಮಷ್ಟಿಯ ಪ್ರಭಾವಕ್ಕೆ ಒಳಗಾಗದೆ ಇರುವ ಒಂದೂ ಭಾಷಿಕ ಸಮಷ್ಟಿಯೂ ದೊರೆಯಲಾರದು. ಆಧುನಿಕ ಭಾಷಾವಿಜ್ಞಾನಿಗಳು ಈ ಅಂಶವನ್ನು ಚರ್ಚಿಸಿದ್ದಾರೆ. ಪ್ರೊ. ನೋಮ್ ಚೊಮ್‌ಸ್ಕಿ ಈ ಬಗೆಗೆ ಚರ್ಚೆ ಮಾಡಿದವರಲ್ಲಿ ಪ್ರಮುಖರು (ಸಂ)

ನಾಗ-ಶಕ್ತಿಯ ಈ ವಿಕಟಗತಿಯ ಸಮೀಕ್ಷೆಯಲ್ಲಿ, ಈ ಉಪಾಸನೆಯ ಗತಿ : ಕ್ರಿಯೆ-ಪ್ರತಿಕ್ರಿಯೆಗಳು ಚೆನ್ನಾಗಿ ಬೆಳಕಿಗೆ ಬರಬಲ್ಲವು. ಮೊದಲನೆಯ ಋಚೆಯೊಳಗಿನ 'ಅ-ರಾಯಿ' ಎಂಬ ಸಂಕೇತವು 'ಅಲಕ್ಷ್ಮೀ' ಜ್ಯೇಷ್ಠಾ ದೇವಿಯದು ಎಂದು ಸಂಪ್ರದಾಯವೇ ಹೇಳಿದೆ. ಈ 'ಲಕ್ಷ್ಮೀ' ದೇವಿಯ ಮೂಲ ಉಲ್ಲೇಖವು ಗೋ ಸಂಕೇತದಲ್ಲಿದೆ. ಆದರೆ, ಗೋ ಸಂಕೇತವು, 'ಸರ್ಪ' ಸ್ವರೂಪವನ್ನು ಬಚ್ಚಿಡುವುದಕ್ಕಾಗಿ ಬುದ್ಧಿಪೂರ್ವಕವಾಗಿ ಪ್ರಚಾರಕ್ಕೆ ಬಂದುದನ್ನು ವಿವರಿಸಿದ್ದಾಗಿದೆ. ಆದರೆ, ಗೋವಿಗೆ 'ವಿಕಟ' ಎನ್ನುವ ಕಾರಣವಿದ್ದಿಲ್ಲ; ಗೋವನ್ನು 'ಗಿರಿ'ಗೆ ಓಡಿಸುತ್ತಿರುವುದಿಲ್ಲ. ಮೊದಲನೆಯ ಋಚೆಯಲ್ಲಿ ಬಚ್ಚಿಟ್ಟ 'ಗೋ' ಸಂಕೇತವು, ಕೊನೆಯ ಋಚೆಯಲ್ಲಿ ಬಹಿರಂಗಕ್ಕೆ ಬಂದೇ ಓಡಿಸಿದ 'ದನ'=ಜಾನುವಾರು ಮರಳಿ ತರಲಾಗಿದೆ! ಆರಿಯ ಮಾತಿನಲ್ಲಿ ಹಾವಿಗೆ 'ಜನಾವರ' 'ದನ' ಎಂಬರ್ಥದ ಪದವನ್ನು ಇಂದಿಗೂ ಬಳಸುವ ವಾಡಿಕೆಯಿದೆ! ಸರ್ಪಗಳನ್ನು ದೇವ-ಜನ ಎಂಬ ಉಪನಿಷತ್ಕಾಲದ ವೇದ ಕಾಲದ ಸುಮಾರಿನ ರೂಢಿಯ ಬಗೆಗೆ ಈ ಮೊದಲು ಹೇಳಿದ್ದುಂಟು. ಈ 'ಜನಾವರ' ದನ ಎಂಬ ಸಂಕೇತದಿಂದಲೂ ಸರ್ಪಗಳು ಸಾಕುಪ್ರಾಣಿಗಳ ಮಟ್ಟದಲ್ಲಿ ಒಂದು ಕಾಲಕ್ಕೆ ಇದ್ದುವು-ಇರಬೇಕು ಎಂದು ಅನುಮಾನ ಹೊರಡುತ್ತದೆ. ಮನೆತನಕ್ಕೆ ಶುಭಕಾರಕ ಹಾವು ಎಂದು, ದೇವರ ಹಾವು ಎಂದು ಹಾವುಗಳನ್ನು ಭಕ್ತಿಯಿಂದ ಭಕ್ತಿಭಾವದಿಂದ ಕಂಡು ಅವುಗಳಿಗೆ ಆಹಾರ ಒದಗಿಸುವ ರೂಢಿಯು ಇಂದಿಗೂ ತೀರ ಲುಪ್ತವಾಗಿಲ್ಲ. ಫಿನ್‌ಲ್ಯಾಂಡಿನಲ್ಲಿ ಮನೆಯ ಹಾವು ಎಂದು ಸಾಕುತ್ತಿದ್ದರು.[೨೧] ಋಗ್ವೇದದೊಳಗಿನ ಕೆಲವೊಂದು ಸಂಕೇತಗಳಿಂದ ಈ ರೂಢಿಯು ಭಾರತದಲ್ಲಿಯೂ ಆಗ ಪ್ರಚಲಿತವಿರುವ ಶಕ್ಯತೆ ತೋರುತ್ತದೆ.

'ಹೇ ಕಾಣೇ ವಿಕಟೇ ಅರಾಯಿ ಗಿರಿಂ ಗಚ್ಛ' ಎಂಬ ಈ ಸೂಕ್ತದ ಕೊನೆಯ ಋಚೆಯ ಅರ್ಥವು ಹೀಗಿದೆ: (ವಿಶ್ವೇ ದೇವತೆಗಳು) ಗೋವುಗಳನ್ನು (ಗಾಂ) ಮರಳಿ ತಂದರು (ಪರಿ ಅನೇಷತ್) ಅಗ್ನಿಯನ್ನು ಅಲ್ಲಲ್ಲಿ ಸ್ಥಾಪಿಸಿದರು (ಅಗ್ನಿಂ ಪರಿ ಅಹೃಷತ). ದೇವರಿಗಾಗಿ (ದೇವೇಷು) ಹವಿಯನ್ನು ಅರ್ಪಿಸಲು (ಶ್ರವಃ) ಸಿದ್ಧಮಾಡಿದರು (ಅಕ್ರತ).

ಈ ಋಚೆಯಲ್ಲಿ ವಿಶ್ವೇ ದೇವರ ನಿರ್ದೇಶನವು ಸ್ಪಷ್ಟವಿಲ್ಲ. ಜನರಿಗೆ ವಿಶ್ವೇದೇವರು : ನೀರಿನ ಕುವರರು ಎಂದುದು ದೊರೆಯುತ್ತದೆ. ವಿಶ್ವೇದೇವ ಈ ಪದದ ಗುಹ್ಯಾರ್ಥದ ಚರ್ಚೆ ಅನಾವಶ್ಯಕ. ಹಾವನ್ನು ಅಗ್ನಿಯೆಂದು ಗ್ರಹಿಸಿ ವರ್ಣಿಸಿದ್ದುದರ ಚರ್ಚೆ ಆಗಿದೆ. ಈ ಕೊನೆಯ ಋಚೆಯ ಈ ವಾಕ್ಯ ನೋಡಿ. 'ಗೋವುಗಳನ್ನು ಗಿರಿಯಿಂದ ತಂದರು; ಅಗ್ನಿಯನ್ನು ಸ್ಥಾಪಿಸಿದರು.' ಇವೆರಡೂ ವಾಕ್ಯಗಳನ್ನು ಆಂತರಿಕ ಅರ್ಥ ಸಂಗತಿಯೇ ಇಲ್ಲದೆ ಆಡಿದ 'ವಿಕಟ' ಮಾತು ಎನ್ನಲಾದೀತೆ? ಒಟ್ಟಿನ 'ವಿಕಲ' ಆಕೃತಿಯು ಸಿದ್ಧವಾಗಬೇಕಾದರೆ 'ವಕ್ರ' ರೇಖೆಗಳು ಅದರಲ್ಲಿ ಕಾಣಿಸಿಕೊಳ್ಳಲೇ ಬೇಕಲ್ಲವೆ? ತಂದುದು ಗೋವು; ಸ್ಥಾಪಿಸಿದ್ದು ಅಗ್ನಿಯನ್ನು! ಎಂದರೆ ಈ ಗೋವು ಹಾವೇ ಇರಲಿಕ್ಕೇ ಬೇಕು. ಈ 'ಗೋವು' (ಹಾವು) 'ಅಶ್ವ' ರೂಪ ತಾಳಿದ್ದೂ ಉಂಟು! ನೀರೊಳಗಿಂದ ಹೊರಬಂದ ಮಹಾನ್ ಅಶ್ವದ ಸರ್ವಾಶ್ಚರ್ಯಮಯ ವರ್ಣನೆಯು ಋಗ್ವೇದದ ಕೊನೆಯಲ್ಲಿ ಆಕೃತಿ ಪಡೆದಿದೆ! ಇದು ಮಮತೆಯ ದೀರ್ಘತಮಸನ ಕೃತಿ ಮತ್ತು ಅಪ : ರಸ : ಪಂಥೀಯ 'ಅಶ್ವ' ಎಂಬ ಇಷ್ಟೇ ಸೂಚನೆ ಸಾಕು, ಇದರ ಸ್ವಾರಸ್ಯ ಗಮನಕ್ಕೆ ಬರಲು.[೨೨] ಏಕೆಂದರೆ ಕೊನೆಗೆ ತತ್ : ಏಕಂ: ಸತ್ ಆಕೃತಿಗೆ ತಿರುಗುತ್ತದೆ ಈ ಸಂಹಿತೆ. ಈ ನೀರ್-ಕುದುರೆ=ಅಪಾಂ ನಪ್ತ್ರ ನಾಮಾಂತರ ಆಂತರಿಕ ಅರ್ಥ-ಗರ್ಭ ಅದೇ. ಆದರೆ ಈ ಗರ್ಭಿತಾರ್ಥಧಾರಣ ಮಾಡಿರುವ ಶಬ್ದಮಯ ಬೇರೆ : ಕುದುರೆಯ ನೆನಪನ್ನು ತಂದು ಕೊಡುವಂತಹದು. ಇದುವೇ ಅಶ್ವಮೇಧ ಯಾಗದ ಕುದುರೆಯ ಸಂಕೇತವೂ ಆಗುತ್ತದೆ. ಅಶ್ವಮೇಧ ಯಾಗದ ಆಹ್ನಿಕಗಳಲ್ಲಿ, ಹೋಳಿ ಹಬ್ಬದಲ್ಲಿ ಇಂದಿಗೂ ಉಳಿದು ಬಂದಿರುವ ಕತ್ತೆಯ ಮೆರವಣಿಗೆಯಂತಹ ಬೀಭತ್ಸ ಅ-ಕೃತಿಯ ನಡೆವಳಿಗಳಿಗೆ ಶ್ರೀಮದ್ಗಾಂಭೀರ್ಯಯುಕ್ತ ಪ್ರಥಮ ಸ್ಥಾನವನ್ನು ಕಲ್ಪಿಸಿ ಕೊಡಲಾಗಿತ್ತು!*

---

* ನವಭಾರತ ಮಾಸಪತ್ರಿಕೆ, ಮುಂಬೈ, ದೀವಳಿಗೆ ವಿಶೇಷ ಸಂಚಿಕೆ ನವೆಂಬರ್ ೧೯೬೮, ನಾಗಪುರ ವಿಶ್ವವಿದ್ಯಾಲಯದ ಡಾ।। ಸದಾಶಿವ ಡಾಂಗೆ ಅವರ ಲೇಖನ; ಋಗ್ವೇದದೊಳಗಿನ ಹಟ್ಟಿಕಾರ : ದನಗಾರಿಕೆಯ ಕಾಲದ ಜೀವನ ರೀತಿಯ

ಎಂದರೆ ಈ ಮೇಧ (: ಯಜ್ಞ) 'ಅಶ್ವದ್ದು'; ಎಂದರೆ ಇದು ಸಾಂಕೇತಿಕವಾದ ಬೇರೊಂದು 'ಅಶ್ವ'ವೇ ಇರಲಿಕ್ಕೇ ಬೇಕು. ಈ ಅಶ್ವವು 'ಕತ್ತೆ'ಯನ್ನೇ ಹೋಲುತ್ತಿರಬಹುದು. ಈ 'ಅಶ್ವ'ದ ಸಾಮ್ಯದಿಂದ ಅರಿಕೆಗೆ ಬರುವ ಸಂಗತಿಯೆಂದರೆ 'ತಂದು ಸ್ಥಾಪಿಸಲಾದ ಅಗ್ನಿಯ ಸಂದರ್ಭದ ಈ ಗೋವುಗಳು ಆಗಿನ ಸಂಕೇತಗಳೇ ಇರಲಿಕ್ಕೆ ಬೇಕು. ಈ ಗೋವಿನ ವರ್ಣನೆಯ ತರುವಾಯ ಮುಂದಿನ ಸೂಕ್ತದ ಮೊದಲನೆಯ ರಚನೆಯಲ್ಲಿ ಕುದುರೆಯ ಪ್ರಚ್ಛನ್ನ ಉಲ್ಲೇಖವಿದೆ! 'ಸಪ್ತಿಂ ಅಗ್ನಿಂ' ಎಂಬ ಈ ರೂಪಕದಲ್ಲಿ 'ಸಪ್ತಿ' ಎಂಬುದಕ್ಕೆ ಕುದುರೆ ಎಂದು ಭಾಷ್ಯವಿದೆ! 'ಸಪ್ತ'=ಸರ್ಪ ಈ ಸಮೀಕರಣದ ವಿವರಣೆ ಈ ಮೊದಲು ಬಂದಿದೆ. ಎಂದರೆ ಈ 'ಸಪ್ತಿ' ಸರ್ಪರೂಪದ್ದೇ ಇರಲಿಕ್ಕೇಬೇಕು. ಅಗ್ನಿಸ್ವರೂಪ ಈ ಅಶ್ವ-ಸರ್ಪವನ್ನು ಪ್ರಚೋದಿಸಲು ಪ್ರಾರ್ಥಿಸಲಾಗಿದೆ![೨೩] ಕುಕ್ಕುಟ-ಸರ್ಪ, ಅಶ್ವ-ಸರ್ಪ ಈ ಶಿಲ್ಪದಲ್ಲಿ ಬಾಹ್ಯರೂಪವು ಬೇರೆಯಿದ್ದರೂ ಅಂತರ ಅರ್ಥ-ಗರ್ಭವು 'ಅಪಾಂ-ನಪ್ತ' ಸ್ವರೂಪವೇ ಎಂಬುದು ನಿಃಸಂದಿಗ್ಧವಾಗಿದೆ.

ಇನ್ನು ಮೋಡಿಯ ಮಾಟದ ಈ ವಿಕಟ : ಚಮತ್ಕೃತಿ ನೋಡಿ : ಹೇ 'ಕಾಣೇ ಅರಾಯಿ (: ಅಲಕ್ಷ್ಮಿ) ವಿಕಟೇ ಗಿರಿಂ ಗಚ್ಛ' ಎಂದು ಓಡಿಸಿದ್ದೇನು? ಮತ್ತು ಈ ಸೂಕ್ತದ ಕೊನೆಯ ಋಚೆಯಲ್ಲಿ (ಗಿರಿಯಿಂದ) 'ಗೋವು' ತಂದು 'ಅಗ್ನಿ' ಸ್ಥಾಪನೆ ಮಾಡಿದ್ದೇನು? ಈ ತತ್ಕಾಲೀನ ಘಟನೆಯ ಸಾಂಸ್ಕೃತಿಕ ಅರ್ಥವೇನು? ಈ ಅರ್ಥವನ್ನು ಹೊರಗಣಿಂದ ಹೇರಬೇಕಾಗಿಲ್ಲ. ಈ ಋಚೆಯಲ್ಲಿ ಇರುವ ದೇವಿ ಅ-ರಾಯಿ=ಅ-ಲಕ್ಷ್ಮೀಯ ಹೇ 'ಕಾಣೇ' ಎಂಬ ಸಂಬೋಧನವೇ ಸಾಕು; ಇದು ಆ 'ಸಮಯ'ಸ್ಥ ಆಚಾರ ವೈಶಿಷ್ಟ್ಯಗಳ ಚಿತ್ರವನ್ನು ಬಗೆಗಣ್ಣ ಎದುರು ತಂದು ನಿಲ್ಲಿಸಲು ಸಮರ್ಥವಿದೆ.

ಋಗ್ವೇದ ಸಂಹಿತೆಯೊಳಗಿನ ಅಪೂರ್ವ ಶಬ್ದಪ್ರತಿಮೆಗಳಲ್ಲಿ ಇದೂ ಒಂದು ಮೌಲಿಕ ಮಹತ್ವದ ಸಂಕೇತವಾಗಿದೆ. ತ್ವಷ್ಟಾರನನ್ನು 'ವಾಶೀ ಹಸ್ತ' ಎಂಬ ಈ ಪ್ರತಿಮೆಯ ವೈಶಿಷ್ಟ್ಯ ಸೂಚಕ ವಾಸೀ ಸಂಕೇತದಂತೆ ಲಕ್ಷ್ಮಿಗೆ ಕಾಣೇ ಎಂಬ ಈ ದೇವಿಯ ವೈಶಿಷ್ಟ್ಯ ಸಂಕೇತವು ಅಭ್ಯಸನೀಯವಿದೆ. 'ವಾಶಿ(ಸಿ)' ಇದರ ಅನಿಶ್ಚಿತ ಉಚ್ಚಾರವು, ಈ ಸಂಕೇತವು ಸಂಸ್ಕೃತ ಭಾಷಿಕ ಆಕೃತಿಗೆ ಸರಿ ಹೋಗದಿರುವುದನ್ನು ಗಮನಕ್ಕೆ ತಂದುಕೊಡುತ್ತಿದೆ. ಟಿ. ಬರೊ ಅವರ ಅಭಿಪ್ರಾಯದಂತೆ, ಇದು ಕಂದಮಿಳ ಭಾಷೆಯ ಕೊಡುಗೆ ಸಂಸ್ಕೃತ ಭಾಷಿಕರ ಸಂಸ್ಕೃತಿಗೆ.[೨೪] ಮರುತರೂ ವಾಶೀ ಹಸ್ತರು! ವಾಶೀ (ಬಾಚಿ) ಬಾಚಿ ಇದು ನಮ್ಮ ನಾಡಿನ ಬಡಿಗರ ಪ್ರಮುಖ ಉಪಕರಣ. ಬಾಚು, ಬಾಚಣಿಗೆ ಈ ಪದಗಳೂ ವಿಚಾರಾರ್ಹ, ತ್ವಷ್ಟಾರ ದೇವತೆಗಳ ಬಡಿಗನಂತೆ! ವಾಶೀ ಹಸ್ತನೆಂಬ ತ್ವಷ್ಟಾರನು ಅದಿತಿ (=ದೇಮಾಯಿ, ದ್ಯಾಮವ್ವ) ದೇವಿ ಪತಿ; ಮರುತರು ಅದಿತಿ ಪುತ್ರರು! ದೇಮಾದೇವಿಯ ಮೂರ್ತಿ ನಿರ್ಮಾಣದ ಹೊಣೆ ಕಂನಾಡಿನ ವಿಶ್ವಕರ್ಮ ಬ್ರಾಹ್ಮಣ ಪಾಂಚಾಳ-ಬಡಿಗರ ಕಡೆಗೆ ತಲೆತಲಾಂತರಗಳಿಂದ ನಡೆದು ಬಂದಿದೆ! ಕಾಳಮ್ಮನ ಅರ್ಚಕರು-ಭಕ್ತವರ್ಗ ಇವರೇ ಸರ್ಪ ಮಂತ್ರದ ಪರಂಪರೆಯು ಇದ್ದ (ಇರುವ) ಅಕ್ಕಸಾಲಿಗರ ಮನೆತನಗಳು ಇವೆ. 'ಕರ್ಮಾರ' ಬ್ರಹ್ಮಣಸ್ಪತಿಯ ವಿಚಾರ ಹಿಂದೆ ಬಂದುದುಂಟು. ಈ ಸಾಂಕೇತಿಕ ಸುಸಂಗತಿಯನ್ನು ಲೆಕ್ಕಿಸಬೇಡವೆ? ಕಂನುಡಿಯಲ್ಲಿ ಋಗ್ವೇದದ ಭಾಷಾಂತರದ ಪ್ರೇರಕರು: ಶ್ರೀ ನಾಗಲಿಂಗ ಪರಿವ್ರಾಜಕಾಚಾರ್ಯರು : ಶಿವಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳು!

ಲಕ್ಷ್ಮೀದೇವಿಯನ್ನು ಕಾಣೇ ಎಂದು ಸಂಬೋಧಿಸಿ ಅವಳನ್ನು ಗಿರಿಗೆ ಓಡಿಸಿದ ಹಾಗಿನ ಈ ಇಡೀ ವರ್ಣನೆಯು ಅಂದು ಸಂಭವಿಸಿದ ಸ್ಥಿತ್ಯಂತರದ ಮೇಲೆ ಹೊಸ ಬೆಳಕನ್ನು ನೀಡುತ್ತಿದೆ. ಕಾಣೇ=ಕಾಣಾ ಇದು ಸಂಸ್ಕೃತ ಪದವಲ್ಲ; ಸಂಸ್ಕೃತ ಸಾಹಿತ್ಯದಲ್ಲಿಯೇ ಅಪೂರ್ವವಿದೆ. ಇದು ನಿಶ್ಚಿತವಾಗಿಯೂ ಕಂದಮಿಳ ಭಾಷಿಕ ಸಂಕೇತವೆಂದು ಡಾ. ಟಿ. ಬರೋ ತಮ್ಮ ಕೋಶದಲ್ಲಿ ಸ್ಥಾನವಿತ್ತಿದ್ದಾರೆ. ಋಗ್ವೇದದ ಈ ಪದಕ್ಕೆ 'ಕಾಣಃ ವಿಕ್ರಾಂತ

ಪ್ರತಿಮಾ : ಸಂಕೇತಗಳು "Pastoral Symbolism from the Rigveda" ಎಂಬ ವಿಷಯವನ್ನು ಕುರಿತು ಮಾಡಿದ ಉಪನ್ಯಾಸಗಳಿಗೆ ಉಪಷ್ಟಂಭಕವಾಗಿ ಬರೆದ ಲೇಖನ : 'ಹೋಲಾಷ್ಟಕೋಪನಿಷದ್' ಎಂಬ ಒಂದು ಅದೇ ತಾನೆ ದೊರೆತ ಹಸ್ತಲಿಖಿತದ ಆಧಾರದಿಂದ ಈ ಅಂಶಗಳನ್ನು ಸಂಗ್ರಹಿಸಲಾಗಿದೆ.

ದರ್ಶನಃ' ಎಂದು ಔಪಮನ್ಯರ ಮತ. ನಿರುಕ್ತಕಾರರು ಹೇಳುವುದು "ಮೆತ್ತನೆಯ ಧ್ವನಿಯಲ್ಲಿ ಸೂಚಿಸುವುದು ಅಥವಾ ಸ್ವಲ್ಪವೂ ಕೇಳಿಸದಿರುವುದು" ಆದ ಮಾತು ಎಂದು ಅರ್ಥ ಹೇಳಿದ್ದರೂ 'ಕಾಣ' ಎಂಬುದಕ್ಕೆ ಒಕ್ಕಣ್ಣನು; ಅಂಧನು ಎಂಬ ಅರ್ಥಗಳು ಈಗ ಉಳಿದು ಬಂದಿದ್ದು, ಇವೆಲ್ಲವೂ ಸಮೀಕ್ಷಾರ್ಹವಾಗಿವೆ.

ವೇದಕಾಲೀನ ಸಂಸ್ಕೃತಿಯ ಆ-ಕೃತಿಯನ್ನು ಗ್ರಹಿಸಿಕೊಳ್ಳಲು, ಕಂನಾಡಿನಲ್ಲಿ ಈಗಲೂ ಉಳಿದಿರುವ ಕೆಲವೊಂದು ಅವಶಿಷ್ಟ ಆಚಾರಗಳು (Living past), ಅಂದಿನ 'ಸಮಯ'ದಲ್ಲಿ ನಮ್ಮನ್ನು ಕೊಂಡೊಯ್ಯುವ ಸೋಜಿಗದ ಪವಾಡ ಶಕ್ತಿಯುಳ್ಳವು ಆಗಿವೆ. 'ಕಾಣೇ ಕಾಣಾ-ಕಾಣ ಈ ಸಂಕೇತಕ್ಕೆ ಸಂಸ್ಕೃತ ಭಾಷಿಕರು, ಸಾಂಪ್ರದಾಯಿಕವಾಗಿ ಹೇಳಿದ ತಮ್ಮ ಅರಿಕೆಯ ಅರ್ಥಗಳನ್ನು ಮೇಲೆ ನಮೂದಿಸಿದ್ದುಂಟು. ಈ ಕೋಶಸ್ಥ ಅರ್ಥಗಳ ಆಶ್ರಯ ಪಡೆವ ಆವಶ್ಯಕತೆ, ಕಂನಾಡಿನಲ್ಲಿ 'ಕಣಿ' ಹೇಳುವ ಸಂಪ್ರದಾಯವನ್ನು ಕಂಡವರು ಅರಿತವರು ಆದವರಿಗೆ ಎಳ್ಳಷ್ಟೂ ಇಲ್ಲ. 'ಕಣಿ' ಕಾಣ್ (vision ominous sight, divinations), ದರ್ಶನ ಸೂಚಕ ಅರ್ಥಗಳಿವೆ. ಇದನ್ನು ನೆನೆದಲ್ಲಿ, ಔಪಮನ್ಯವರ ಅತಿ ಪ್ರಾಚೀನ ಅರ್ಥವು ಸಮರ್ಪಕವಿರುವುದಾಗಿ ಒಪ್ಪಿಕೊಳ್ಳಲೇಬೇಕಾಗುತ್ತದೆ. 'ಕವಯಃ ಕ್ರಾಂತ ದರ್ಶಿನಃ' ಎಂದು ಹೇಳಲಾಗುತ್ತದೆ. ಕವಿಗಳು 'ಕಣಿ'ಯರ ಬಳಗದವರೇ. 'ರವಿ ಕಾಣದ್ದನ್ನು ಕವಿ ಕಾಣುತ್ತಾನೆ' ಎಂದು ಹೇಳಲಾಗುತ್ತದೆ. ಔಪಮನ್ಯರು ವಿಕ್ರಾಂತ ದರ್ಶನ ಎಂದು ಹೇಳಿರುವ 'ಕಾಣಾ' ಈ ಸಂಕೇತವು ಕಂನುಡಿಯ 'ಕಣಿ'ಗೆ ಹತ್ತಿರದ್ದೇ. ಸಂಸ್ಕೃತ ಉಚ್ಚಾರದಲ್ಲಿ ಕಂದಮಿಳ ಮಾತಿನ ಅಂತ್ಯ ಇ, ಉಕಾರಗಳು ಆಕಾರಕ್ಕೆ ತಿರುಗುತ್ತವೆ. ನಿರುಕ್ತಕಾರರು ಹೇಳಿರುವ ವಿವರಣೆಯು 'ಕಣಿಯ ಇನ್ನೊಂದು ರೂಪವನ್ನು ಗಮನಕ್ಕೆ ತಂದು ಕೊಡುತ್ತದೆ. 'ಕಣಿ'ಯವರು ಈ 'ಅಡಿಕೆ' ಆಗುವ ಸಂದರ್ಭದಲ್ಲಿ ಆವೇಶಪೂರಿತ ಉನ್ಮನಸ್ಕ ಅವಸ್ಥೆಯಲ್ಲಿ ಇರುತ್ತಾರೆ. ದೇವಸ್ಥಾನಗಳಲ್ಲಿ ಈ ಸಮಯಾಚಾರಕ್ಕೆ ಪೂರ್ವಭಾವಿಯಾಗಿ-'ಕಣಿ'ಯ ಅರ್ಹತೆ ಬರಲು ಉಪವಾಸಾದಿ ವ್ರತ ಸ್ವೀಕರಿಸುವುದುಂಟು. ಇದರಿಂದಾಗಿ 'ಕಣಿ' ಆಗುವ ಆ ಸುಮಾರಿಗೆ ಈ ಅರ್ಹಂತರ ಮೈಯಲ್ಲಿ ಬಂದ ಆವೇಶ ಅರ್ಭಟೆಯಲ್ಲೂ ಆಯಾಸದಿಂದಲೂ ದೈಹಿಕ ದೌರ್ಬಲ್ಯ-ಮನೋ ವೈಕಲ್ಯವೂ ಕೆಲವೊಮ್ಮೆ ಕಾಣಿಸಿಕೊಳ್ಳುತ್ತದೆ. ಆದುದರಿಂದ ಅವರ ಬಾಯಿಂದ ಹೊರಬರುವ 'ವಾಕ್' (ವಾಣಿ) ಅಸ್ಪಷ್ಟವಾಗುವುದೂ ಉಂಟು. ಮಾತಿನ ಅಸ್ಪಷ್ಟತೆಗೆ ಇನ್ನೂ ಒಂದು ಪ್ರಮುಖ ಕಾರಣವೆಂದರೆ ಈ ಕಾಣ್ಕೆ ಸ್ವಪ್ನವತ್ ಒಂದು ಏನೋ ಮಿಂಚಿ ಹೋಗುವ ದೃಶ್ಯ. ಕೆಲವೊಮ್ಮೆ ಕಿವಿಯಲ್ಲಿ ಕೇಳ ಬಂದಂತೆ ಎನಿಸುವ ಮಾತು. ಇದು ಪಕ್ಕನೆ ಆಗಿಹೋಗುವ ಘಟನೆ. ಇದರಿಂದಾಗಿ ಅದು ಅಸ್ಪಷ್ಟವಿರದಿದ್ದರೇ ಸಂಶಯಕ್ಕೆ ಕಾರಣವಾಗುವ ಶಕ್ಯತೆಯಿದೆ! ದೈಹಿಕ ನಿರ್ವಿಣ್ಣತೆಯೇ ಕಾರಣವಿರುವ ಸಂಭವವೂ ಉಂಟು.[೨೫]

'ಕಣಿ' ಸಂಪ್ರದಾಯದ ಅಸ್ತಿತ್ವವನ್ನು ಲೆಕ್ಕಕ್ಕೆ ಹಿಡಿಯದೆ 'ಕಾಣಿಕೆ' : ಅರ್ಪಿತ, ಅರ್ಪಣ ಇದರ ಸಮರ್ಪಕತೆಯು ಗೊತ್ತಾಗಲಾರದು. ಇಂಗ್ಲೀಷಿನ Present, presence ಈ ಮಾತುಗಳಲ್ಲಿ "esse" to be ಇದು ಮುಖ್ಯ ಭಾಗ. ಯಾವುದು 'ಉಂಟು' ('esse') ಅದು ಕಾಣಿಸಿಕೊಂಡಾಗ ಅಥವಾ 'ಕಾಣುವುದು' ಎಂದಾಗ, ಉಂಟಾಗುವ ಕುತೂಹಲ ಪ್ರೇಮಾದರಗಳಿಂದ ಅರ್ಪಿಸಿದ್ದು-ಅರ್ಪಿಸಲಾಗುವದು, ಕಾಣಿಕೆ-Present. ವಿಶ್ವದಲ್ಲಿ 'ಉಂಟು' (Esse) ಎಂಬ ದಿವ್ಯಶಕ್ತಿ ಯಾರ ಮೈಯಲ್ಲಿ ಆವೇಶವಾದಾಗ, ಈ 'ಕಣಿ' ; ಪವಾಡದ ಮೂಲಕ ಅದನ್ನು ಕಾಣಹೋದಾಗ ಅಂತಃಪ್ರೇರಣೆಯಿಂದ ಸಲ್ಲಿಸಲಾಗುವ ವಸ್ತು. 'ಕಾಣಿಕೆ' 'ಕಣಿ' ಕಾಣಿ ಯಾಯಿತು; ಕಾಣಿಕೆಯ ಸಂಪ್ರದಾಯ ಮಾತ್ರ ಉಳಿಯಿತು!

ಕಣಿ ಸಂದೃಕ್ ಶಕ್ತಿಯ (intuition) ಫಲ ಅ-ಖಂಡಿತ ಜೀವಶಕ್ತಿಯ (Life Force ಅಥವಾ Elan vital) ಸಂಗಡ ಲಭಿಸುವ ಅನುಭಾವದಲ್ಲಿ (ಪುರಾತನ ಸಂಪ್ರದಾಯವನ್ನು ಬಲ್ಲ ಔಪಮನ್ಯರು ಹೇಳುವಂತೆ) ವಿಕ್ರಾಂತ ದರ್ಶನ : ಕಣಿಯ ಶಕ್ತಿ ಉಂಟಾಗುತ್ತಿತ್ತು-ನಾಗಾವೇಶದಲ್ಲಿ. ಮೊತ್ತಮೊದಲಲ್ಲಿ ಇದು ಕುಮಾರೀ ಸಂಪ್ರದಾಯವೇ ಆಗಿದ್ದು , ಕಣಿಯ ಶಕ್ತಿ ಪಡೆದ, ಈ ಶಕ್ತಿ ಉಂಟೆಂದು ಹೆಸರಾದ ಈ ಮಾಧ್ಯಮಾ (medium) : ಪ್ರತಿಮಾ (ದೇವಿ) ಪೂಜಾ ಸ್ಥಾನವಾಗುತ್ತದೆ. ಕಾಣಿಕೆ, ಮುಡುಪು ಪಡೆದು ಬೆಳೆಗಾಣುತ್ತದೆ

'ಯಂ ಕಾಮಯೇ ತಂ ಉಗ್ರಂ ಕೃಣೋಮಿ' (: ಯಾರನ್ನು ಮೆಚ್ಚುತ್ತೇನೊ ಅವರನ್ನು ಸಮರ್ಥರನ್ನು-ಆವೇಶವುಳ್ಳವರನ್ನು ಮಾಡುವೆ); ತಂ ಬ್ರಹ್ಮಾಣಂ ಕೃಣೋಮಿ; (ಬ್ರಹ್ಮ ಆನಂದ) ಸಿದ್ಧಿ ಪಡೆವಂತೆ ಮಾಡುವೆ); ತಂ ಋಷಿಂ ಕೃಣೋಮಿ (ಕವಿಯನ್ನಾಗಿ ಕಣಿಯವನನ್ನಾಗಿ ಮಾಡುವೆನು); ತಂ ಸುಮೇಧಾಂ ಕೃಣೋಮಿ (ತುಂಬ ವಿಚಾರವಂತನನ್ನಾಗಿ ಮಾಡುವೆನು.[೨೫]

ಈ ಬಗೆಯ ಕಣಿಯ ಸಾಮರ್ಥ್ಯವನ್ನುಳ್ಳವಳೆಂದು ಉಂಟು. ಋಗ್ವೇದ ಕಾಲದಲ್ಲಿಯೇ, ಅಂದಿನ ಲೋಕಾದರಕ್ಕೆ ಪಾತ್ರವಾದ 'ಕುಮಾರೀ' ಸಂಪದಾಯದ ಒಂದು ಉದಾಹರಣವು, ಇದು ವಾಗಾಂಭೃಣೀ ಸೂಕ್ತವೆಂಬ ಹೆಸರಿನಲ್ಲಿ ವಿಖ್ಯಾತವಿದೆ. 'ದಿವ್ಯಶಕ್ತಿ' ಸಂಪಾದಿಸಲು ಈ ಪ್ರತಿಮಾ : ಮಾಧ್ಯಮದ ಉಪಾಸನೆ ಇಂದಿಗೂ ಕೆಲವರಲ್ಲಿ ಉಂಟು. ಕಣಿಯ ಶಬ್ದಪ್ರತಿಮಾ ಮಾಧ್ಯಮವೇ ಉಪಾಸ್ಯ ದೈವತವಾಗುವಾಗ, ಸಾಕ್ಷಾತ್ ಈ ಕಣಿಯ (: ವಾಕ್) ಶಕ್ತಿಯ ಪವಾಡಸಿದ್ಧಿಯು ಉಂಟೆಂಬ ಖ್ಯಾತಿಯ ಆ 'ಕುಮಾರೀ' ದೇವಿಯ ಮಹಾತ್ಮ್ಯವು ಎಷ್ಟಿರಬೇಡ?

ಇನ್ನೂ ಒಂದು ವಿಶೇಷ : ಈ ವಾಗಾಂಭೃಣಿಯು, ವಿಷ್ಣುಪತ್ನಿ ಎಂಬ ಸಾಂಪ್ರದಾಯಕ ಶ್ರದ್ಧೆಯೊಂದುಂಟು. ಈ ಶ್ರದ್ಧೆಯಂತೆ ಈ ದೇವಿ 'ಲಕ್ಷ್ಮೀ' ಯೇ ಆಗುತ್ತಾಳೆ. 'ರುದ್ರೇಭಿಃ ಅಹಂ ಚರಾಮಿ' ಎಂದೂ 'ರುದ್ರಾಯ ಧನುಂ ಆತನೋಮಿ, ಎಂದೂ ಈ ದೇವಿಯೇ ಹೇಳಿದ್ದಾಳೆ. ಈ ಕಾರಣದಿಂದಾಗಿಯೂ ಮತ್ತು ಈ ಅಂಭೃಣಿಯು 'ಅಂಬು' (: ಆಪ : ರಸ) ದೇವಿ. ಈ ದೇವಿ ಆದಿಮಾತೆ : ಅಂಬೆ : ಭವಾನಿ : ದುರ್ಗೆ ಆಗುತ್ತಾಳೆ. 'ಅಹಂ' ಆದಿಕರ್ತ್ರೀ ಎಂಬುದರಿಂದ ಇವಳಲ್ಲಿ ಒಳಿತು-ಕೆಡುಕಿನ-ಜೀವನ ಮತ್ತು ಮೃತ್ಯು ಈ ಉಭಯ ಶಕ್ತಿಗಳೂ ಇರುವುದರಿಂದ ಈ ದೇವಿ ಅ-ಖಂಡಿತೆ : ಅದಿತಿಯಾಗುತ್ತಾಳೆ. 'ವಾಕ್' ಎನ್ನುವುದರಿಂದ-ಆಪ : ರಸ ಸ್ವರೂಪಿಯಾದ ಕಾರಣ (ಸರಸ್ವನ್ ಪತ್ನಿ) ಸರಸ್ವತಿಯ ಇನ್ನೊಂದು ನಾಮಾಂತರವಿದು. ಆದರೆ ಅಖಂಡಿತ 'ಲಕ್ಷ್ಮೀ' ವಿಚಾರವನ್ನು ಅಥರ್ವವೇದಕ್ಕೆ ಮೀಸಲಾಗಿರಿಸಿ, ಮಂಗಲಕರ ಮೇಲುದ ಹೊಚ್ಚಿ, ಅಖಂಡಿತ ಅದಿತಿ ರೂಪವನ್ನು ಋಗ್ವೇದದಲ್ಲಿ ತೋರಿಸಲಾಗಿದೆ. ಆದರೆ, ಋಗ್ವೇದದ ಕೊನೆಗೆ ಅದಿತಿಯು 'ಸಲಿಲ' ಸ್ವರೂಪಿಯಾಗಿ ಅದೃಶ್ಯಳಾಗುತ್ತಾಳೆ. 'ಭದ್ರಾಲಕ್ಷ್ಮಿ'ಯ ಒಂದು ಉಲ್ಲೇಖಕ್ಕೆ ಪ್ರತಿಯಾಗಿ ಅ-(ಭದ್ರಾ) ಲಕ್ಷ್ಮಿ=ಅ-ರಾಯಿ ರೂಪ ಸಂಕೇತದಲ್ಲಿ ಗಿರಿಗೆ ಓಡಿಸಲ್ಪಡುತ್ತಾಳೆ; ಆದರೆ, 'ಗೋ' ವೇಷದಲ್ಲಿ ಮರಳಿ ಮನೆಮನೆಗಳ ಕುಂಡದೊಳಗಿನ ಗುಪ್ತ ಅಗ್ನಿಯಾಗಿ ಸ್ಥಾಪಿಸಲ್ಪಡುತ್ತಾಳೆ.

ಈ (ನಾಗ)-ಶಕ್ತಿ ಉಪಾಸನೆಯ ಅಂತ್ಯದೊಡನೆ ಋಗ್ವೇದವು ಕೊನೆಗೊಳ್ಳುತ್ತದೆ! ದೇವಮಾತೆಯಾಗಿ ಪಾತ್ರವಹಿಸಿದ ಅದಿತಿ. ಸಪ್ತ (ಸರ್ಪ?) ಸಹಿತ ಸಲಿಲದಲ್ಲಿ ಸೇರಿ ತಾನು, ಮೃತ್ಯುರೂಪಳು ಎಂಬುದನ್ನು ಸೂಚಿಸುತ್ತಾಳೆ.[೨೬] ವಾಕ್ (ಅಂಭೃಣಿ) ಶಕ್ತಿ : ಕಾಣಾ ಲಕ್ಷ್ಮಿ (ಋಗ್ವೇದದ ರಾ-ಕಾ) ವಿಕಟಾ-ಅಲಕ್ಷ್ಮಿ ಎಂದು ದೂಷಿಸಿಕೊಂಡು ಬನಕ್ಕೆ-ಗುಡಕ್ಕೆ ತಳ್ಳಲ್ಪಡುತ್ತಾಳೆ. ಬನದಮ್ಮ ಮಾಳಮ್ಮ ಮಲೆ-ಮಲ್ಲಮ್ಮ-ಗಿರಿಯಮ್ಮ ಸ್ಮರಿಸಿಕೊಳ್ಳಿ. ಆದರೂ ಮೊದಲು 'ಅದಿತಿ' ಮೊದಲಾದ ನಾಮ ಸಂಕೇತದಿಂದ ಪ್ರತ್ಯಕ್ಷ ಮಾನವ ದೇವಿ ರೂಪದಲ್ಲಿ ಪೂಜೆಗೊಳ್ಳುತ್ತಿದ್ದ ನಾಗ-ಶಕ್ತಿ (Life-Force) ವೇಷಾಂತರ ಮಾಡುತ್ತ ಅಮರವಾಗಿ ಉಳಿದಿದೆ ಉಳಿಯಲಿದೆ! ಅದು ಹೇಗೆ? ಏಕೆ?

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** I ೧೬೪. ೩೬
೨. ***ಅದೇ*** I. ೧೬೪. ೨೨.
೩. ***ಅದೇ*** VIII. ೧೦೦. ೧೧೧
೪. ***ಅದೇ*** I. ೧೬೪. ೪೧
೫. ***ಅದೇ*** I. ೧೬೪. ೨೭. ೨೮
೬. ***ಅದೇ*** X. ೮೨.೨
೭. ***ಅದೇ*** I. ೧೬೪. ೨೯
೮. ***ಅದೇ*** X. ೧೫೫.೧
೯. ***Indian Serpent Lore*** p. 54
೧೦. ***ಋಗ್ವೇದ ಸಂಹಿತೆ*** X. ೧೫೫. ೧-೫
೧೧. ***ಅದೇ*** X. ೭೨.೨
೧೨. ***ಅದೇ*** X. ೧೫೫. ೧
೧೩. ***ಅದೇ*** II. ೩೨; X- -೧೮೪
೧೪. ***ಪ್ರಶ್ನೋಪನಿಷತ್ತು*** ೧. ೫
೧೫. ***ಋಗ್ವೇದ ಸಂಹಿತೆ*** X. ೭೧. ೨
೧೬. ***ಋಗ್ವೇದಾನುಕ್ರಮಣಿಕಾ*** ೪. ೭೮-೮೧
೧೭. ***ಅದೇ*** X. ೭೧
೧೮. ***ಅದೇ*** X. ೭೨. ೨
೧೯. ***ಅದೇ*** X. ೧೮೯.೧
೨೦. Macdonell A. A.; ***Vedic Mythology***. p. 97
೨೧. ***Ency. of Religion and Ethics*** Vol, XI,
೨೨. ***ಋಗ್ವೇದ ಸಂಹಿತೆ*** I. ೧೬೨; ೧೬೩ .
೨೩. ***ಅದೇ*** X. ೧೫೬.೧
೨೪. ಟಿ. ಬರೊ ಅವರ ***'ದ್ರಾವಿಡ ಜ್ಞಾತಿಕೋಶ'*** ನೋಡಬಹುದು ಶಬ್ದ ನಂ. ೪೩೭೫
೨೫. ***ಋಗ್ವೇದ ಸಂಹಿತೆ*** X. ೧೨೫. ೫
೨೬. ಬೃಹದಾರಣ್ಯಕದಲ್ಲಿ ಇದರ ಸ್ಪಷ್ಟೀಕರಣವುಂಟು. ಆಸಕ್ತರು ಈ ಮಂತ್ರ ಭಾಗವನ್ನು ನೋಡಬಹುದು. ೧-೨-೧

ನಾಗಶಕ್ತಿಯ ವೇಷಾಂತರ

ನಾಗ-ಶಕ್ತಿ : ವಿಶ್ವಸ್ಥ ಜೀವನಚೈತನ್ಯಯುಕ್ತ ಸರ್ಜಕ-ಶಕ್ತಿ. ಪಾಶ್ಚಾತ್ಯ ಪರಿಭಾಷೆಯಲ್ಲಿ Life Force ಅಥವಾ Elan vital ಎನ್ನಬಹುದು. Philosophy of Being ಎಂಬ ಮಾತಿನಲ್ಲಿ ಒಳಗೊಂಬುವ ಶಕ್ತಿಸಹಿತ ಈ ಏಕಶೇಷ ದ್ವಂದವು, ನಾಗಶಕ್ತಿಯ ದ್ಯೋತಕವೇ ಸರಿ. ನಾಗ ಈ ಶಬ್ದ-ಸಂಕೇತವು ಮೂಲತಃ ತಲೆದೋರಿದ್ದು ಎಂತು? ಇದು ಬೌದ್ಧಿಕ ವಿಶ್ಲೇಷಣದ ತರುವಾಯ ನಿರ್ಮಿತವಾದ ಸಂಕೇತವೆ? ಈ ನಾಗ ಶಬ್ದದ ನಿಶ್ಚಿತ ಅರ್ಥವೇನು? ಇದು ವಿಮರ್ಶಾಪೂರ್ವ-ಜೀವನ ರೀತಿಯಲ್ಲಿ ಕಾಣಿಸಿಕೊಂಡ ಪ್ರತಿಮಾ ಸಂಕೇತ ಎಂಬುದು ನಿಶ್ಚಿತ. ಆದರೂ ಇದರ ಬರುವಳಿಯ ಬಗೆಗೆ ತಜ್ಞರಲ್ಲಿ ಭಿನ್ನಾಭಿಪ್ರಾಯಗಳು ಇರುವುದಾಗಿ ಕಾಣುತ್ತದೆ. ಮೋನಿಯರ್ ವಿಲಿಯಂಸ್ ಕೋಶವು ಸೂಚಿಸಿದೆ : "ಬಹುತರವಾಗಿ ಇದು ನ-ಗ ಅಥವಾ ನಗ್ನ ಈ ಯಾವುದಕ್ಕೂ ಸಂಬಂಧಪಟ್ಟಂತೆ ಇಲ್ಲ" (: prob neither fr. ನ-ಗ nor fr. ನಗ್ನ) 'ನ ಇತಿ ನ ಇತಿ' ಎಂಬ ಭೂಮಿಕೆಯ ವಿಶ್ವ-ಶಕ್ತಿಯನ್ನು ಪ್ರತಿನಿಧೀಕರಿಸುವ 'ನಾಗ ಸಂಕೇತದ ನೆಲೆ, ಹೇಗೆ ತಿಳಿದೀತು, ತಿಳಿಯದೇ ಇರುವುದರಲ್ಲಿಯೇ ಔಚಿತ್ಯವಿದೆ, ಸಾರ್ಥಕ್ಯವೂ ಇದೆ' ತಾನೆ?

ಆದರೆ, ಭಾರತೀಯ ಜೀವನ ರೀತಿಯ ಹಿನ್ನೆಲೆಯಲ್ಲಿ ಇದರ ಆ-ಕೃತಿ-ರೂಪ-ವೈಶಿಷ್ಟ್ಯವು ಸರ್ವ-ಪರಿಚಿತ ಗುಪ್ತವಾಗಿದೆ. ಪವಿತ್ರ ಜಲಾ-ಶಯಗಳಲ್ಲಿ ಕುಂಭಮೇಳದಂತಹ ವಿಶಿಷ್ಟ ತಿಥಿಗಳಂದು. ಸು-ಮಜ್ಜನಕ್ಕಾಗಿ ಬರುವ ಲಕ್ಷಾಂತರ ವೈರಾಗ್ಯಮೂರ್ತಿ ಬೈರಾಗಿ (ನಾಗಾ<) ನಂಗಾ (> ನಗ್ನ) ಸಾಧುಗಳ ಹಲವಾರು ತಂಡಗಳೂ ಇರುತ್ತವೆ! ಹಿಮಾಲಯದ ನಂದಾದೇವಿ ಈ ಉತ್ತುಂಗ ಶಿಖರದ ಹೆಸರನ್ನು 'ನಂಗಾ' ಎಂದು ಉಚ್ಚರಿಸುವ ವಾಡಿಕೆಯೂ ಉಂಟು. ಲಂಗ(ಟ) : ಉಡುಪು; ಲಂಗರ (anchor)! ಲಾಂಗಲ > ನಾಂಗರ (: ನೇಗಿಲ); ಶೇಷನ ಅವತಾರವೆಂಬ ಬಲದೇವನ ಆಯುಧ ನೇಗಿಲು! ಲಾಂಗೂಲ : ವೃಷಾಕಪಿ ! (ಹನುಮ:) ಮಾರುತಿ. ಆದರೆ, ಸಂಸ್ಕೃತ ಭಾಷೆಯ ಚೌಕಟ್ಟಿನಲ್ಲಿ 'ನಗ್ನ' ಶಬ್ದವೂ ಹಿಡಿಸುವುದಿಲ್ಲವಾಗಿ ಮೋನಿಯರ್ ವಿಲಿಯಂಸ್ ಕೋಶವು ಸೂಚಿಸುತ್ತದೆ : 'ನಗ್ನ' ಈ ಶಬ್ದದ ಸಾಧುತ್ವವನ್ನು ಸಿದ್ಧಪಡಿಸಲು 'ನಜ್' ಎಂಬ ಕಾಲ್ಪನಿಕ ಆಖ್ಯಾತವನ್ನು ಸೃಷ್ಟಿಸಿದ್ದು ಕಾಣುತ್ತದೆ; (probably invented to explain ನಗ್ನ)! ಏಕೆಂದರೆ ಸಾಹಿತ್ಯದಲ್ಲಿ ಲಜ್ ಆಖ್ಯಾತದ ಪ್ರಯೋಗಗಳಾಗಲಿ ಅಥವಾ ಇದರ ಬೇರೆ ಸಾಧಿತ ಕೃದಂತಗಳಾಗಲಿ ದುರ್ಲಭ! ಲಗ್>ಲಗ್ನ; ಲಕ್ಷ(ಣ)-ಲಕ್ಷ್ಮ ಈ ಸಂಕೇತದಲ್ಲಿ (ಲಗ್:) ಅಂಟಿಕೊಂಡು-ಗಮನ ಸೆಳೆಯುವಂತಹದು ಎಂಬ ಅರ್ಥವುಂಟು. (ಲಗ್) ಲಕ್ಷಣ: ಲಿಂಗ=ಚಿಹ್ನ; ಲಕ್ಷಣ : ಲಕ್ಷ್ಮ : ಕುರುಹು ಉಳ್ಳದು. ಈ ಹಿನ್ನೆಲೆಯಲ್ಲಿ ಲಕ್ಷ್ಮ ಲಕ್ಷ್ಮಿ ಸಂಕೇತಗಳ ವಿಶೇಷ ಔಚಿತ್ಯವು ಅರಿಕೆಗೆ ಬರುತ್ತದೆ. ಆದಕಾರಣ, ಮೂಲ ಲಕ್ಷ್ಮಿ : ಅಪರ್ಣೆ (: ದುರ್ಗೆ)ಯೇ ಸರಿ! ನಾಚಿಕೆಪಡು ಎಂಬರ್ಥದ 'ಲಜ್ಜ್' ಆಖ್ಯಾತದೊಡನೆ 'ನಗ್ನ'ದ ಸಂಬಂಧವಿರುವ ಶಕ್ಯತೆಯನ್ನು, ಅಲ್ಲಿ ಸೂಚಿಸಲಾಗಿದೆ.

ಲಜ್ಜೆ=ನಾಚಿಕೆ ಮತ್ತು ನಗ್ನತೆ ಇವೆರಡರಲ್ಲಿ ಮಾನಸಶಾಸ್ತ್ರೀಯ ಸಂಬಂಧವಿರುವುದನ್ನು ಮಾನ್ಯ ಮಾಡಲು ಅಡ್ಡಿಯಿಲ್ಲ. ಆದರೆ, ಇದಕ್ಕೆ ವಿರೋಧವೂ ಉಂಟು. ಈ ಅಭಿಪ್ರಾಯದಂತೆ ಮಾನವನು ತನ್ನ ಮೂಲ ಸ್ವರೂಪದ ಪ್ರದರ್ಶನಕ್ಕೆ ಅಳುಕುವುದೂ-ನಾಚುವುದೂ ಹೇಡಿತನ. ಇಂತಹರು ಸಾಮಾಜಿಕ ಪ್ರತಿಷ್ಠೆಗೆ ಕೃತ್ರಿಮ ಮೂಲ್ಯಗಳ ಆಮಿಷಕ್ಕೆ-ಸಂಪ್ರದಾಯಕ್ಕೆ-ಹೆದರುವ ಪುಕ್ಕರು! ಇವರು ತಮ್ಮ ಇಚ್ಛೆಗಳನ್ನು ಹತ್ತಿಕ್ಕಿ 'ವಿಕೃತ' ಮನಸ್ಕರಾಗುತ್ತಾರೆ. ಅವರ ಸುಪ್ತ ಮನದಲ್ಲಿ ಈ ನೈಸರ್ಗಿಕ ಅಪೇಕ್ಷೆಗಳು ವಿಕೃತ ರೂಪ ತಾಳಿ ಆ ವ್ಯಕ್ತಿಯ ಜೀವನದಲ್ಲಿ ನಿರಾಶೆ ತರುತ್ತವೆ....."ಈ ವೈಚಾರಿಕ ಆವರಣದಲ್ಲಿ, (ಸಂಸ್ಕೃತಿಯು ಮರಳಿ ನಿಸರ್ಗವತ್ತ ಹೊರಡುವಲ್ಲಿ), ನಗ್ನತೆಯು ತತ್ವಜ್ಞಾನದ ಪೀಠದಲ್ಲಿ ವಿರಾಜಮಾನವಾಗುವಲ್ಲಿ, ಪ್ರಮುಖ ಪಾತ್ರವು ನಾಗನದೇ ಆಗಿದೆ. ಮೋನಿಯರ್ ವಿಲಿಯಂಸ್ ಕೋಶವು, 'ಲಜ್ಜ' ಮತ್ತು 'ಲಗ್ನ' ಈ ಶಬ್ದ ಸಂಕೇತಗಳ ಬರುವಳಿಯಲ್ಲಿಯೂ ಏನೊಂದು ಸಂಬಂಧವಿರಬೇಕೆಂದು ಸೂಚಿಸುತ್ತದೆ! ನಿರ್-ಲಜ್ಜರಾದರೆ ಲಗ್ನದ ಆವಶ್ಯಕತೆಯೇ ಉಳಿಯುವದಿಲ್ಲ! ವಿವಾಹ : ಬಂಧನ : ಕೃತ್ರಿಮ ಎಂಬುದೂ, ಈ ನಾಗ-ನಗ್ನ-ಲಗ್ನ ಈ ಶಬ್ದ ಸಂಕೇತಗಳ ಪೂರ್ವೋತ್ತರಗಳಲ್ಲಿ ಒಳಗೊಳ್ಳುತ್ತಿರುವುದು ಸೋಜಿಗದ್ದಿಲ್ಲವೆ? ಇದೆಲ್ಲವೂ 'ನಾಗ' ಸಂಪರ್ಕದಲ್ಲಿ ಜನ್ಮವಿರುವ ಸಂದ್ಯಕ್ಕು ಮತ್ತು ಸಾಮಾಜಿಕ : ಭಾಷಿಕ ಭೂಮಿಕೆಯಲ್ಲಿ ಜನ್ಮವಿರುವ ಅಂತಃಸಾಕ್ಷಿ ಇವೆರಡರ ನಡುವಣ ಸಂಘರ್ಷವೇ ಇಲ್ಲಿ ಇದೆ. ತತ್ ತ್ವತಃ, ಇಲ್ಲಿ ಸ್ಪಷ್ಟತೆ ಪಡೆವ ಸಂಗತಿ : ಅ-ಮೂರ್ತ ಜೀವನದ ಮೂರ್ತ ಪ್ರತಿಮಾ : ಸಂಕೇತಗಳೇ ಭಾಷೆ. ಆದರೆ ಅನೇಕರಿಗೆ ತಮ್ಮದ್ದೇ ಆದ ತರ್ಕ ಅಥವಾ ಕಲ್ಪಿತದಲ್ಲಿ ಇರುವ ವಿಶ್ವಾಸವು, ತಲೆತಲಾಂತರಗಳಿಂದ ಬಂದ ಜೀವನಾನುಭವದ ಮೂರ್ತ ಭಾಷಿಕ ಮಾಧ್ಯಮದಲ್ಲಿ ಇಲ್ಲ.

ಜೀವನಸ್ಥ ಗೂಢ ಆಕರ್ಷಣದ ಮೂರ್ತಿಮಂತ : ಆಕೃತಿ-ರೂಪವೇ ಸ್ತ್ರೀ ಪ್ರತಿಮೆ. ಆದರೆ, ಇವಳು 'ನಪ್ಪಸಹಿತ' ನೀರೆ, ಇದನ್ನು ಮರೆಮಾಡಲಾಗಿದೆ! ಬರಿ ಸ್ತ್ರೀ ಬಂಜೆ : ಬಂಜೆ=ಅಪೂಜ್ಯೆ, ಇಂದು ಗುರು ಸಾರ್ವಭೌಮನೆಂಬ ಠೀವಿಯಿಂದ ಮೆರೆದ 'ಪುರುಷನು', ಈ ಪೀಠದ ಮೂಲ ದೈವತವಾದ (ನಪ್ಪಯುಕ್ತ) 'ಶಕ್ತಿ' : ದೇವಿಯನ್ನು ಪದಭ್ರಷ್ಟಗೊಳಿಸಿ ತಾನೆ ಜಗದ್ಗುರು ವೇಷ ಧರಿಸಿರುವ ಆಕ್ರಮಕನು (usurper)! ಅಥವಾ ಪರಿಸ್ಥಿತಿಯು ಪುರುಷನ ಈ ಕೃತ್ಯಕ್ಕೆ ಅನುಕೂಲತೆಯನ್ನು ಒದಗಿಸಿಕೊಟ್ಟಿತು, ಎಂದರೂ ಸರಿ. ಆದಿಮಾತಾ ಸಂಪ್ರದಾಯವೇ ಪ್ರಾರಂಭದಲ್ಲಿ ಇದ್ದಿತೆಂಬುದು ನಿಶ್ಚಿತ. ಋಗ್ವೇದದ 'ಅದಿತಿ' ಎಲ್ಲ ದೇವರಿಗೆ ಮಾತೆ ಅಲ್ಲದೆ ಮಾನವರ ತಾಯಿಯೂ ಅಹುದು. 'ನರಾಃ' 'ಮಧ್ಯಾಃ' ಎಂಬ ಸಂಕೇತದ ಮರುತರು, ಸಹ ಅದಿತಿ-ಪುತ್ರರೇ ಸರಿ. ಬೌದ್ಧರಲ್ಲಿ ಗೌಣವಾಗಿ ಉಳಿದಿರುವ 'ತಾರಿಣೀ' ಭಗವತಿ ಇದ್ದಾಳೆ. ಜೈನರಲ್ಲಿ ಅವಶಿಷ್ಟ 'ಯಕ್ಷಿಣಿ'ಯನ್ನು ದುರ್ಲಕ್ಷಿಸಲಿಕ್ಕಾಗದು. ಕ್ರೈಸ್ತಪಂಥದಲ್ಲಿ ಆದಿ ಮಾತೆಗೆ ಇರುವ ಅನನ್ಯ ಸಾಧಾರಣ ಸ್ಥಾನವು, ಮರೆತು ಹೋಗತೊಡಗಿದೆ : ಇದನ್ನು ಕುರಿತು ಜರ್ಮನಿಯ ಆರ್‌ನ್ಸಟ್ ಹೆಕೆಲ್, ವಿಖ್ಯಾತ ತತ್ವಜ್ಞ-ವಿಜ್ಞಾನಿ ಬರೆಯುವುದೇನಂದರೆ :

> "......Virgin' mother of Christ plays an important part as a fourth deity; (: Father, Son, and Holy Ghost); in many catholic countries she is practically taken to be much more powerful and influential than the three male persons of the celestial administration. The Cult of Madonna has been developed to such an extent in these countries that we may oppose it to the usual masculine form of monotheism as one of a feminine type, "The Queen of Heavan" becomes so prominent, as is seen in so many pictures and legends of the Madonna, that the three male persons practically disappear.[೧]

ಮುಸಲ್ಮಾನೀ ಧರ್ಮದಲ್ಲಿ ಆದಿಮಾತೆಯ ಪ್ರತಿಮೆಗೆ ಸ್ಥಾನವಿಲ್ಲವಾದರೂ 'ಸ್ತ್ರೀ'ಯ ಬಗೆಗೆ, ಭಾರತೀಯ ಹಾಗೂ ಕ್ರೈಸ್ತ ಸನ್ಯಾಸ ಪಂಥೀಯ ಸ್ವರೂಪದ ವಿರೋಧಿ-ಭಕ್ತಿಯ ಪ್ರದರ್ಶನವು ಅಲ್ಲಿ ಇಲ್ಲ. ಸ್ತ್ರೀ ಲಂಪಟತೆಯ ಬಗೆಗೆ ಜಗತ್ತಿನ ಇನ್ನುಳಿದ ಧರ್ಮ-ಪಂಥಗಳಲ್ಲಿ ವ್ಯಕ್ತವಾಗಿರುವ ತಿರಸ್ಕಾರವು, ಮುಸಲ್ಮಾನೀ ಪಂಥದಲ್ಲಿ ಅಷ್ಟು ತೀವ್ರಸ್ವರೂಪದ್ದಾಗಿಲ್ಲ. ಒಬ್ಬನು ನಾಲ್ಕು ಹೆಣ್ಣು ಮದುವೆಯಾಗಬೇಕೆಂದು ಇರುವ ಧಾರ್ಮಿಕ ಅನುಮತಿಯೆ ಇದಕ್ಕೆ ಪ್ರಮಾಣ. ಮುಸಲ್ಮಾನ ಸಿರಿವಂತರ ಜನಾನಾ (ಅಂತಃಪುರ) ಸುಪ್ರಸಿದ್ಧವಾಗಿದೆ.

ಆಮರಣ 'ಬ್ರಹ್ಮ' ಚಾರಿ (: ದಾರಿ)ಯ ಜೀವನವೇ ಗುರಿಯಾಗಿರುವ ಕುಮಾರೀ ಹಾಗೂ ಕುಮಾರ ಸಂಪ್ರದಾಯಗಳು ತಲೆಯೆತ್ತಿದ ಪಾರ್ಶ್ವಭೂಮಿಯು ಯಾವುದು? ಇವು ಎಷ್ಟು ಪ್ರಾಚೀನ, ಈ ಪ್ರಶ್ನೆಗಳ ಉತ್ತರವು ಋಗ್ವೇದದ ಅದಿತಿ; ಸರಸ್ವತಿ; ಅಂಭೃಣೆ, ಲಕ್ಷ್ಮಿ ಈ ಆದಿಶಕ್ತಿಗಳ ಪವಾಡ ಕಥೆಗಳ ಹಾಗೂ ಗ್ರೀಕ್-ಈಜಿಪ್ಟ್ ಪುರಾತನ ಪವಾಡ ಕಥೆಗಳ ತುಲನಾತ್ಮಕ ಸಮೀಕ್ಷೆಯಲ್ಲಿ ಈ ನಡೆವಳಿಯ ಹಿನ್ನೆಲೆ ಬೆಳಕಿಗೆ ಬರುವ ಶಕ್ಯತೆ ಕಾಣುತ್ತಿದೆ. ವೈದಿಕ ದೈವತಗಳ ಪ್ರಸ್ತಾಪ ಮಾಡುವಾಗ ಮ್ಯಾಕಡೊನೆಲ್ಲರು, ತಮ್ಮ ವ್ಯಾಸಂಗದ-ಪರಿಶ್ರಮದ-ಸಾಫಲ್ಯವು ಎಲ್ಲಿದೆ, ಎಂಬುದನ್ನು ಸೂಚಿಸಿದ್ದಾರೆ :

> "Vedic-mythology occupies a very important position in the study, of the history of religions.[2]

ಏಶಿಯಾ ಹಾಗೂ ಯುರೋಪೀಯ ದೇಶಗಳಲ್ಲಿ ಪ್ರಚುರವಿರುವ ಇಂದಿನ ಸಂನ್ಯಾಸ ಪಂಥಗಳೆಲ್ಲ ಮೂಲತಃ, ಶಕ್ತಿಪೂಜೆಯ ಪ್ರತಿ-ಕ್ರಿಯೆಗಳು. ಇವು ಮೂಲದಲ್ಲಿ ಚಾಂದ್ರ-ಆಪ : ರಸ ಸಂಪ್ರದಾಯಗಳು ಆಗಿರುವ ಶಕ್ಯತೆಯು, 'ನಾಗ'ಪ್ರತಿಮಾ : ಸಂಕೇತಗಳ ಈವರೆಗಿನ ಸಮೀಕ್ಷೆಯಲ್ಲಿ ದೃಢಪಡುತ್ತದೆ.

ಆಮರಣ ಕುಮಾರೀ-ಕುಮಾರರಾಗಿ ಬಾಳುವ ಈ ನಡೆವಳಿ ಅ-ನೈಸರ್ಗಿಕ. ಆಮರಣ ಅವಿವಾಹಿತರಾಗಿರುವ ಪ್ರತಿಜ್ಞೆಯು ಅವಶ್ಯವಾಗುವ ಪರಿಸ್ಥಿತಿಯು ಯಾವುದಿರಬಲ್ಲದು? ಸ್ತ್ರೀ-ಪುರುಷರೊಳಗಿನ ಆಕರ್ಷಣವು ನೈಸರ್ಗಿಕ; ಇದು ಪ್ರಕೃತಿಧರ್ಮ. ಹೀಗಿರುವಾಗ ಕುಮಾರೀ-ಕುಮಾರ ಪರಂಪರೆಯ ಈ ಅವಿವಾಹಿತ ಜೀವನಕ್ಕೆ-ಈ ಅನೈಸರ್ಗಿಕ ಮಾರ್ಗಕ್ಕೆ ಒತ್ತಾಯಪಡಿಸಿದ್ದೇನು? ಯಾರು? ಸಂಪ್ರದಾಯವೇ? ಪಾರಲೌಕಿಕ ಆಮಿಷವೇ? ಮೋಕ್ಷ, ಅಮರ ಪದವಿ, ನಿತ್ಯಾನಂದ ಸಿದ್ಧಿ ಇಂತಹ ಆಮಿಷಗಳನ್ನು ಸಂಪ್ರದಾಯವೇ ನಿರ್ಮಿಸಿರಬಲ್ಲದು. ಆದರೆ, ಸಂಪ್ರದಾಯವು 'ಅನಾದಿ' ಎಂದರೂ, ಇದು ಹುಟ್ಟಿಕೊಳ್ಳುವ ಮುಂಚಿನ ಕಥೆಗಳು ಉಂಟು! ಆದುದರಿಂದ ಕುಮಾರೀ-ಕುಮಾರರ ಅಂದಿನ ಆ ಹಂತದ ಜೀವನ ಸೂಚಕ ಸಾಂಕೇತಿಕ ಪ್ರತಿಮೆಗಳು-ಈಗಲೂ ಪುರಾಣಾದಿಗಳಲ್ಲಿ ಕಾಣಲು ದೊರೆಯುತ್ತಿವೆ. ಇಂದು ಸತ್ತ ಬಳಿಕಿನ 'ಬ್ರಹ್ಮಾನಂದ' ಸಿದ್ಧಿಗಾಗಿ-ಆ ಅಮರ ಪದವಿಗಾಗಿ ಎಂದು ಆ ಕುಮಾರೀ-ಕುಮಾರ ಪರಂಪರೆಯಲ್ಲಿ ಆಚರಿಸಲಾಗುತ್ತಿರುವ ಅ-ವಿವಾಹಿತ ಜೀವನದ ಹಿನ್ನೆಲೆಯನ್ನು ಊಹಿಸಿಕೊಳ್ಳುವದು ತೀರ ಅಶಕ್ಯವೇನಲ್ಲ. ಆದಿಮಾತೆ ಕುಮಾರಿ; ನಿಜ. ಆದರೆ, ಅವಳು 'ಆಪನ್ನಸತ್ವಾ' 'ಸತ್' ಅನ್ನು ಧಾರಣ ಮಾಡುವ ಸ್ವಯಂ-ಭೂ ಶಕ್ತಿ ಸಂಪನ್ನೆ. ಆದರೆ, ಆದಿ ಎಂಬ ಪುರುಷನಲ್ಲಿ ಈ ನೈಸರ್ಗಿಕ ಶಕ್ತಿ ಅವನಲ್ಲೇ ಅಡಕವಾಗಿಲ್ಲ! ಇವನು 'ಪರ' ಅವಲಂಬಿ! ಹೀಗೆ 'ಪರ' ಅವಲಂಬಿಯಾಗಿರುವ ಪುರುಷನು, ಆದಿ (ಒಬ್ಬನೇ) ದೈವತವಾಗುವ ಅರ್ಹತೆಯನ್ನು ಪಡೆದುಬಂದಿಲ್ಲ, ಎಂಬುದು ಸ್ವತಃ ಸಿದ್ಧಸಂಗತಿಯಾಗಿದೆ! ಆದುದರಿಂದ, ಮೊದಲಲ್ಲಿ ಆದಿಪಿತ (ಒಬ್ಬನೇ) ಈತನೇ ದೇವ, ಎಂಬುದು ವಿಪರೀತ ವಿಚಾರ; ಆದಿಮಾತೆಯೇ ಮೊದಲಲ್ಲಿ; ಇದು ನಿಶ್ಚಿತ.

ಆದರು, ಆದಿಮಾತಾ ಸಂಪ್ರದಾಯವು ಮುಳುಗಿ ಹೋಗಿರುವ ಕಾರಣವೇನು? ಕುಲಾಚಾರ-ಕುಲಧರ್ಮ ಎಂಬ ಹೆಸರಿನಲ್ಲಿ ದೇವೀ ಸಂಪ್ರದಾಯವಿಲ್ಲದ ಮನೆತನಗಳು ವಿರಳ. ಇಂದು ಸಹ, ಕುಲ>ಕೌಲ; ಆದರೆ 'ಕೌಲ'-ಧರ್ಮ ಇಂದು ತಿರಸ್ಕೃತ! ಕೌಲ=ಶಾಕ್ತ ಎಂದು ತುಚ್ಛ, ಈಗ! ಹಳೆಯ ಕಾಗದ ಪತ್ರ ನಾಶಮಾಡಿದಲ್ಲಿ ಅಥವಾ ನಾಶವಾದುವು ಎಂದಲ್ಲಿ, ಮೊದಲು ರೂಢವಿದ್ದ ಶಾಕ್ತ, ಕೌಲ ಇಂತಹ ಶಬ್ದ ಪ್ರತಿಮೆ ಬಹಿಷ್ಕರಿಸಿದಲ್ಲಿ

ಮೊದಲು ಈ ಸಂಪ್ರದಾಯವು ರೂಢವಿದ್ದುದು ಸುಳ್ಳಾಗಲಿದೆಯೋ? ಗಂಡು ಜೀವಕ್ಕೆ ಹೆಣ್ಣಿನ ಬಗೆಗೆ ಇರುವ ನೈಸರ್ಗಿಕ ಆಕರ್ಷಣದ ಅತಿಪ್ರಸಂಗದಿಂದಾಗಿ ಸಂಭವಿಸಿರುವ ಅಪಘಾತದ ವಿಪರೀತ ಪರಿಣಾಮವೇ, ಈ ವಿಕರ್ಷಣಾತ್ಮ ಕುಮಾರ-ಕುಮಾರೀ ಸಂಪ್ರದಾಯದ ಸನ್ಯಾಸಪಂಥ. ಮೊತ್ತ ಮೊದಲಲ್ಲಿ ಇದಕ್ಕೆ ಪಂಥೀಯ ಧಾರ್ಮಿಕ ಸ್ವರೂಪವಿರದೆ ಕೇವಲ ಪ್ರತಿಕ್ರಿಯೆಯಂದೇ ಈ ವಿ-ರಕ್ತಿ ತಲೆಯೆತ್ತಿರುವುದಾಗಿ ಕಾಣುತ್ತಿದೆ; ಆ ಪ್ರತಿಕ್ರಿಯೆ (reaction) ಬಳಿಕ ಒಂದು ಧಾರ್ಮಿಕ ಪಂಥವಾಗುತ್ತದೆ. ಅದಕ್ಕೆ ಕವಲೊಡೆದು ಕಾಲಕ್ರಮದಲ್ಲಿ ಇನ್ನೂ ನಾನಾ ಶಾಖೆಗಳು ಕಾಣಿಸಿಕೊಳ್ಳುತ್ತವೆ. ಇವೆಲ್ಲ ಸಂಪ್ರದಾಯಗಳ ಮೂಲ ತಳಪಾಯದಲ್ಲಿ ಇರುವುದು 'ಅಪನ್ನಸತ್ವಾ' ಕುಮಾರೀ ದೇವಿಯ ಆಕೃತಿ. ಆದರೆ, ಅದನ್ನು ಬಿಚ್ಚಿಡುವ ಪ್ರಯತ್ನವಾದುದೂ ಬೆಳಕಿಗೆ ಬರತೊಡಗಿದೆ.

ಮುನಿಸು ತಲೆಯೆತ್ತುವುದು ಯಾವಾಗ? ನಿರಾಶೆಯಲ್ಲಿ-ಮನಸ್ಸಿನಂತೆ ಇಚ್ಛೆ, ಯಾರಾದರೂ ಎದುರಿಸಿ ವಿರೋಧಿಸುವಾಗ; ದ್ವೇಷ-ತುಚ್ಛಭಾವನೆ ಇದು ಕೆಲವೊಮ್ಮೆ ಆಕರ್ಷಣದ, ಅತಿಪ್ರೇಮದ ವಿಕೃತಿಯಾಗಿರುತ್ತದೆ. ಹೆಣ್ಣಿನ ಮೇಲಣ ಮುನಿಸಿನ ಪರಿಸರವೇ 'ಮುನಿ' ಪ್ರತಿಮೆಯ ಪಾರ್ಶ್ವಭೂಮಿಯಾಗಿದೆ. ಸ್ತ್ರೀಯನ್ನು ಮಾಯಾವಿ ಎಂದೂ, ಮೋಹ-ಪಾಶದಲ್ಲಿ ಕೆಡಹುವವಳು ಎಂದೂ ಹೆಣ್ಣನ್ನು ತಿರಸ್ಕಾರದಿಂದ ಕಾಣುವಲ್ಲಿ ವಿರಕ್ತ ಪಂಥೀಯ ಪುರುಷನ ಕಾಮುಕತೆಯ ಅತೃಪ್ತ ಭಾವನೆಯ ಪ್ರದರ್ಶನವೆ ಇದೆ. ಕ್ರೈಸ್ತಪಂಥೀಯ ಈ ಬಗೆಯ ಸ್ತ್ರೀ ದ್ವೇಷವನ್ನು, ಅ. ಹೆಕೆಲ್ ಸ್ಪಷ್ಟಶಬ್ದಗಳಿಂದ ಖಂಡಿಸಿದ್ದಾರೆ.

> ".....the most deplorable aspect of Christian morality is its belittlement of the life of the family, of that natural living together next kin which is just as necessary in the case of man as in the case of all the higher social animals. Family is justly regarded as the "foundation of society" and the health life of the family is a necessary condition of the prosperity of the State. Christ, however, was of a very different opinion : with his gaze ever directed to "the beyond", he thought as lightly of woman and family as of other goods of "this life". "Sexual love, the first foundation of the family union seem to have been regarded by jesus as a necessary evil. His most enthusiastic apostle, Paul went further in the same direction declaring it to be better not marry than to marry : It is good for a man not to touch a woman."
> (p. 29)

ಪ್ರಪಂಚದಲ್ಲಿ ಇಂತಹ ಬದ್ಧ ಪ್ರತಿಜ್ಞೆಯ ಪ್ರಾಮಾಣಿಕ ಕುಮಾರೀ-ಕುಮಾರರ ಸಂಖ್ಯೆ ಹೆಚ್ಚಾಗುತ್ತ ಬಂದಲ್ಲಿ, ಆ ಪರಮಾತ್ಮನೆಂಬುವನಿಗೆ ಅವತಾರ ತಾಳಿ, ಈ ಭವದಲ್ಲಿ ಬೀಳುವ ಶ್ರಮವಹಿಸುವ ಕಾರಣವೇ ಉಳಿಯಲಾರದು! 'ಜೀವನದಲ್ಲಿ ಶ್ರೀಯನ್ನೂ ವಿಜಯಶ್ರೀಯನ್ನೂ ಪಡೆದು ಬಾಳುವ ಹದವನ್ನು ಹೇಳುವುದಕ್ಕಾಗಿ' ಅವತರಿಸಿದೆ, ಎಂಬ ಶ್ರೀಮದ್‌ಭಗವದ್ಗೀತೆಯಲ್ಲಿಯೂ ಪ್ರವೃತ್ತಿಪರವೆಂಬ ಹಾಗಿನ ಮುಸುಕಿನಲ್ಲಿ ಕ್ರೈಸ್ತ, ಬುದ್ಧ ಜೈನ 'ನಿರ್ವೇದ' ಮಾರ್ಗದ ಉಪದೇಶವೆ ತುಂಬಿದೆ. ವೈವಾಹಿಕ ಜೀವನವನ್ನು 'ಭವ ಬಂಧನಕಾರಿ' ಎಂದು ಪರ್ಯಾಯದಿಂದ ಧ್ವನಿತಪಡಿಸುವ ಭಗವದ್ಗೀತೆಯಲ್ಲಿ, ಸ್ತ್ರೀ-ದ್ವೇಷೀ ತಾತ್ವಿಕ ಭೂಮಿಕೆಯೇ ಪ್ರತಿಪಾದಿತವಾಗಿದೆ. ರಾಸಕ್ರೀಡಾರತ, ಗೋಪಿಕಾವಲ್ಲಭ ಇತ್ಯಾದಿ ಪ್ರತಿಮಾ : ಸಂಕೇತಗಳ 'ಭಗ'ವಾನ್ ಶ್ರೀ ಕೃಷ್ಣನು, ವಿರಾಟ ವಿಶ್ವರೂಪದರ್ಶನದ ನೆಪದಿಂದ ಈ ಇಡೀ ಪ್ರಪಂಚವೇ ಶ್ಮಶಾನ ಭೂಮಿ ಎಂಬ ಹಾಗಿನ ಘೋರವಾದರೂ ಸುಂದರ ಚಿತ್ರವನ್ನು 'ನರ'ನಿಗೆ ತೋರಿಸಿದ್ದಾನೆ! ಇಷ್ಟಾಗಿಯೂ ಈ ಸಂಸಾರ ವೃಕ್ಷದ ಆಶ್ರಯ ಬಯಸುವವರಿಗೆ,

'ಅಸಂಗ ಶಸ್ತ್ರೇಣ ದೃಢೇನ' ಅದನ್ನು ಸಮೂಲ ನಾಶಪಡಿಸಲು, 'ಪುರುಷೋತ್ತಮ' ಯೋಗದಲ್ಲಿ ಈ ಭಗವಂತನು ಅಪ್ಪಣೆ ಕೊಡಿಸಿದ್ದಾನೆ!

ಆದರೆ, ಗೀತ-ಉಪನಿಷತ್ತುಗಳಲ್ಲಿ ಕಾಣಸಿಕೊಳ್ಳುವ ವಿರಕ್ತ ಪಂಥೀಯ ಈ ಸಂಪ್ರದಾಯವು, ಮೊತ್ತ ಮೊದಲಲ್ಲಿ, ಯಾವ ಬಗೆಯ ನಿರಾಶೆಯ ಹಿನ್ನೆಲೆಯಲ್ಲಿ ಆಕೃತಿಯನ್ನು ಪಡೆದಿದೆ ಎಂಬುದು ಇಂದು ಒಮ್ಮೆಲೆ ತಿಳಿಯುವಂತಿಲ್ಲ. ಆದರೆ, ಋಗ್ವೇದದ ಪವಾಡ ಕಥಾಸಂಕೇತಗಳಲ್ಲಿಯೂ ಈಜಿಪ್ತ್-ಗ್ರೀಕಿನ ಪುರಾತನ ಪವಾಡ ಕಥೆಗಳ ತುಲನೆಯಲ್ಲಿಯೂ ಈ ಅತೃಪ್ತ ನಿರಾಶಾವಾದಿ ಸಂಪ್ರದಾಯವು ಪಡೆದ ಆಕೃತಿಯ ಹಿನ್ನೆಲೆಯು, ನಿಶ್ಚಿತವಾಗಿಯೂ ಅರಿಕೆಗೆ ಬರುತ್ತಿದೆ. ಬಸುರಿ ಊರ್ವಶಿಗೆ ತನ್ನನ್ನು ತ್ಯಜಿಸದಿರಲು ದೈನ್ಯದಿಂದ ಬೇಡಿಕೊಳ್ಳುವ-ದೊಡ್ಡ ಧ್ವನಿಯಿಂದ ಕೂಗಿಕೊಳ್ಳುವ-ಪುರೂರವನು ಇಂತಹ ಒಂದು ದೃಷ್ಟಾಂತ. ಊರ್ವಶಿ ಬಸುರಿ ಆಗುತ್ತಲೇ, ಸ್ತ್ರೀ ಜೀವನವು ಕೃತಾರ್ಥವಾಯಿತು! ಆದರೆ, ಅದರೊಡನೆ ಪುರುಷ: ಪುರೂರವ ನಿರಾಶಾಮೂರ್ತಿಯಾದ! ಅನುರಕ್ತನು ವಿರಕ್ತನಾದ.

ಈ ವಿರಕ್ತಪಂಥೀಯ ಸನ್ಯಾಸವಾದವು, 'ದೇವರು' ಎಂಬ, ಅರ್ಥಕ್ಕೆ ಎಟುಕದ-ಒಂದು ಸಂಕೇತವನ್ನು ಸೃಷ್ಟಿಸಿ ಅದರ ಆಧಾರದಿಂದ ತನ್ನ ಸಂಪ್ರದಾಯವನ್ನು ಉಳಿಸಿಕೊಂಡು-ಪ್ರತಿಷ್ಠೆ ಬೆಳೆಸಿಕೊಂಡು ಹೊರಟಿದೆ! ಆದರೆ, Elan Vital : ಆಪ : ರಸ ಸ್ವರೂಪ ಅಗ್ನಿ-ತೇಜ ಶಕ್ತಿಯ ಪ್ರಕೃತಿದೇವಿಯ ಆಚೆಗೆ ಏನುಂಟು? ಈ ವಿ-ರಕ್ತಿಯ ಉಗಮ ಎಲ್ಲಿದೆ? ಸ್ವ-ತ್ವಕ್ಕೆ (ಎಂದರೆ Vital) ಎರವಾದ ಅನಾಥಭಾವವಿದು. ಸತ್-ತ್ವ (Vital) ದೊಡನೆ ತತ್‌ಮಯವಾಗುವಲ್ಲಿಯೇ ಏನೆಲ್ಲ ಜೀವಿತ ಸಾರ್ಥಕ್ಯವೆಂಬ ಪಾರ್ಶ್ವಭೂಮಿಯಲ್ಲಿ ದೇವರೆಲ್ಲಿ? ಆದರೂ ಲೌಕಿಕ ಜನವನ್ನು ಸಂಭ್ರಮದಲ್ಲಿರಿಸಿ, ತಾನೇ ಆ ಕಲ್ಪಿತ ದೇವತಾ ಸ್ಥಾನದಲ್ಲಿ ಪೂಜೆಗೊಳ್ಳುತ್ತ ಮೆರೆವ ತಂತ್ರವನ್ನು, ನಿರ್ಮಿಸಿಕೊಂಡಿದೆ! ಆದರೆ, ಗುರುವಿಗಿಂತ ಹಿರಿಯ ದೇವನಾರು? 'ಹರಮುನಿದರೆ ಗುರುಕಾಯ್ವ' ಎಂಬ ಶ್ರದ್ಧೆಯನ್ನು ನಿರ್ಮಿಸಿರುವ ಈ ವಿರಕ್ತ ಪಂಥಗಳಲ್ಲಿ 'ಪುರುಷ' (ಗುರುವಿ)ನ ಹೊರಗೆ ದೇವರು ಎಂಬುದೇನು ಉಳಿಯಬಲ್ಲುದು?* ದಿಕ್ಕಾಲಾತೀತ ದಿವ್ಯಾನುಭೂತಿಯ ಮೂಲ ದೀಕ್ಷೆಯನ್ನಿತ್ತ ಈಯಬಲ್ಲ-ಸಮರ್ಥಶಕ್ತಿ : ಕುಮಾರೀ ದೇವಿಯೆ ಆದಿಯಲ್ಲಿ. ಇದು (ನಾಗ:) ಶಕ್ತಿ ಸಂಪ್ರದಾಯ; ಇದು ನಿಶ್ಚಿತ. ಆದರೆ, 'ಆ' (ದಿಕ್ಕಾಲಾತೀತ) ನಂದ-ಸಿದ್ಧಿಗಾಗಿ, 'ತೃಪ್ತಾಂ ತರ್ಪಯಂತೀಂ' ದೇವಿಯನ್ನು ಪ್ರಸನ್ನೀಕರಿಸಿಕೊಳ್ಳುವಲ್ಲಿ ಒಂದು ಅಪ-ಘಾತವಾಗುವ ಹೆದರಿಕೆ ಬೆನ್ನಟ್ಟಿಕೊಂಡು ಹೊರಟಿದೆ! ಈ 'ನಾರ' ಅಯನವು ಹಲವು ಬಾರಿ, 'ವತ್ಸ' ಅಯನವಾಗಿ ಪರಿಣಮಿಸುವುದೂ ಅನಿವಾರ್ಯವಿರುವುದರಿಂದ, ಈ 'ಅಪೋವತ್ಸ'ನು ಮಾತಾ-ಸಂಪ್ರದಾಯಕ್ಕೇ ಅಭಿಶಾಪದಂತೆ ಹುಟ್ಟಿಕೊಳ್ಳುತ್ತಾನೆ! ಇದೂ ನಿಶ್ಚಿತವಿರುವುದರಿಂದ ಈ ಅಪ : ರಸ ಸಂಪ್ರದಾಯವು, ಆ 'ಒಂದು' ಅಮರ ಆ-ನಂದ ಸ್ಮೃತಿಯ ಸಂ-ಸ್ಮರಣೆಯಲ್ಲೇ ಆ-ಮರಣ, ವಿ-ರತಿಯಿಂದ ಉಳಿವ ಕುಮಾರೀ-ಕುಮಾರ ಸಂಪ್ರದಾಯ ವಾಗಿ ಪರಿಣಮಿಸಲೇಬೇಕಾದುದಾಗಿ ಕಂಡುಬರುತ್ತದೆ.

ಶಕ್ತಿವಿರಹಿತ ಶಿವ ಅಥವಾ ವಿಷ್ಣು ಇವರಿಗೆ ದೇವತ್ವವೇ ಇಲ್ಲ, ಎಂದು ಶಾಸ್ತ್ರಗಳೇ ಹೇಳಿವೆ! 'ಶಕ್ತಿ'ವಿರಹಿತ ಕೇವಲ ಪುರುಷ : ಶವ ಅಥವಾ ಶ್ಮಶಾನ ಸ್ವರೂಪ ಎಂದು ಪ್ರತಿಪಾದಿಸಲಾಗುವ ಈ ವಿರಕ್ತ ಪಂಥದಲ್ಲಿ, ಗುರುವೂ ಸಹ ನಿಜವಾಗಿ ಶಕ್ತಿಸಹಿತನಾಗಿ ತನ್ನ ಪೀಠದ ಮೇಲೆ ವಿರಾಜಮಾನನಾಗಬೇಕಿತ್ತು. ಆದರೆ, ಈ ಅಪೋವತ್ಸನು ಆಕ್ರಮಕನಾಗಿ ಶಕ್ತಿದೇವಿಯ ಪಟ್ಟ ಪಡೆದ ಬಳಿಕ, ಸದೇಹಶಕ್ತಿಯನ್ನು ದೂರ ಓಡಿಸಿದ್ದಾನೆ. ಆದರೆ 'ಯಥಾ ದೇವೇ ತಥಾ ಗುರೌ' ಕಾಣಲು ಹೇಳುತ್ತದೆ ಶಾಸ್ತ್ರ. ಆದಕಾರಣ ಶಕ್ತಿವಿರಹಿತ ಗುರುವು, ಶಿಖಂಡಿಯೇ ಸರಿ. ಈ ಶಕ್ತಿ ಸದೇಹಳು ಆಕ್ಷೇಪಕ್ಕೆ ಗುರಿಯಾಗಿ ಅದೃಶ್ಯಳಾದ ಬಳಿಕ; ಆ 'ಮಧ್ಯಮಾ'; ವಾಕ್ಕನ್ನು ಶಾಪಾನುಗ್ರಹ ಸಾಮರ್ಥ್ಯ ರೂಪದಲ್ಲಿ ಈ ಗುರು : ಪುರುಷನು ತನ್ನ ನಾಲಗೆಯಲ್ಲಿ, ದೃಷ್ಟಿಯಲ್ಲಿ, ಸ್ಪರ್ಶದ ಸೋಂಕಿನಲ್ಲಿ

---

* ಜೈನ-ಬೌದ್ಧಪಂಥದಲ್ಲಿ ಈ ಪ್ರಾಮಾಣಿಕತೆ ಉಂಟೇ ಉಂಟು. ದೇವರ ಹೆಸರೆತ್ತಿ, ಅವನು ಗುರುವಿಗಿಂತ ಕಿರಿಯನೆಂದು ವರ್ಣಿತನಾಗಿ ಅವಮಾನಿತನಾಗುವುದಿಲ್ಲ. ಈ ಅಂಶವನ್ನು ಗಮನಿಸಬೇಕು. (ಸಂ)

ಆಲಿಂಗಿಸಿಕೊಂಡು 'ವಾಗಾರ್ಥಾವಿವ ಸಂಪೃಕ್ತ'ನಾಗಿದ್ದಾನೆ ಎಂಬ ಶ್ರದ್ಧೆ ರೂಢಿಗೆ ಬಂದಿದೆ ಅಥವಾ ಮೂಲ ಆ ಶಕ್ತಿದೇವಿ, ಉಭಯಲಿಂಗಿ (ಅಪಾಂ-ನಪ್ತ್ರ). ಆದಕಾರಣ, ಈಗ ಅವಳೇ ಈ ಪುರುಷ ರೂಪದಲ್ಲಿ ಆಯಾ ಪಂಥೀಯ ಪೀಠ-ಅಲ್ಲ; ಸಿಂಹ (: ಶಕ್ತಿ) ಆಸನದ ಮೇಲೆ ಕುಳಿತು ಗುರು ಸಾರ್ವಭೌಮತ್ವದ ವರ್ಚಸ್ಸನ್ನು ಉಳಿಸಿಕೊಂಡು ಬಂದಿದ್ದಾಳೆ. ಈ ಪೀಠದ ವ್ಯಾಘ್ರ-ಸಿಂಹರೂಪ ಶಕ್ತಿಯ ಈ ಸಂಕೇತವು 'ನಾಗ'ಶಕ್ತಿ ಸಂಕೇತದಷ್ಟು ಪುರಾತನವಲ್ಲ! 'ಹಸ್ತಿ'; 'ಮತಂಗಜ'ವು ಪೀಠಸ್ಥರಿಗೆ ಇರುವ ವಾಡಿಕೆ. ಇದರಲ್ಲೂ ವಿಶೇಷ ಅರ್ಥವಿದೆ. ವ್ಯಾಘ್ರ, ಸಿಂಹ ಇವು, 'ನಾಗ', ಅ-ನಾಗರಕ ಎಂಬ ಅಪವಾದಕ್ಕೆ ಗುರಿಯಾದ ಬಳಿಕ, ಆ ಶಕ್ತಿಯು ಸ್ವೀಕರಿಸಿದ ನೂತನ ಆಕೃತಿಗಳು. ಪೈರಣು ಬನಿಯನ್, ಶರ್ಟ್, ಬುಸಕೋಟ ವರೆಗೆ ಆಕೃತಿ ಬದಲಿಸಿಕೊಂಡಿಲ್ಲವೆ? 'ನಾಗ' ಯಾವಾಗಲೂ ನೀರಲ್ಲಿ ಮೀವ 'ಮೀನ' ದೇವರು ಸುಮಜ್ಜಾನಿ : 'ಮತ್ಸ್ಯ' ಅವತಾರ ಧರಿಸಿ ಪೂಜ್ಯನಾಗಿದ್ದುಂಟು! ಮನು ಎಂಬ ನರನನ್ನು ನಾಶದಿಂದ ಉಳಿಸಿದವನೇ ಮತ್ಸ್ಯನಂತೆ! 'ಮತ್ಸ್ಯ' ಇಲ್ಲವಾಗಿದ್ದರೆ ಎಂದೋ ಪ್ರಳಯ ಸಂಭವಿಸುತ್ತಿತ್ತು! ಈ ಪ್ರಳಯದಲ್ಲಿ ಪಾರಾಗಲು ನೆರವಾದ 'ದೋಣಿ' ಪ್ರತಿಪದೆಯ ಚಂದ್ರನು ಎಂದು, ಗ್ರೀಕಿನ ಇದೇ ಆಕೃತಿಯ ಕಥೆಯಲ್ಲಿ ಹೇಳಿದೆ! ಈ ಚಂದ್ರ ರೂಪಕ್ಕೆ 'ಶಿನೀವಾಲೀ' ಎಂದು ಹೆಸರು. ಇಳಾ; ಚಂದ್ರೆ ಇರುವುದನ್ನು ಸ್ಮರಿಸಿಕೊಂಡರೆ, ವೈವಸ್ವತ ಮಾನವನನ್ನು ಪ್ರವಾಹ ದಾಟಿಸಲು ಆದ ದೋಣಿ ಅಥವಾ ಸೇತುವು ಇಳಾ ದೇವಿಯಾಗಿರುವ ಸೂಚನೆ ಇಲ್ಲಿದೆ.

ಆದರೆ 'ಸಂ-ದೃಕ್' ದೃಷ್ಟಿಯ (intuition) ಹಂತದ ಅದಿತಿ-ದಕ್ಷ ಪಂಥೀಯ ಈ ಪ್ರತಿಮೆ, 'ಸಾಕ್ಷಿ'ಯ ಹಂತದಲ್ಲಿ, ಸಾಮಾಜಿಕ-ಪ್ರಜ್ಞೆ ಚೇತರಿಸಿ, ಅದು ತಿರಸ್ಕಾರಕ್ಕೆ ಗುರಿಯಾಗುತ್ತದೆ. ಆಪ : ರಸದಲ್ಲಿ ಓಲಾಡುವ ಮೀವ: 'ಮೀನ', ಸರ್ಪ, ಅಪಾಂ ನಪ್ತ : ಶಕ್ತಿದೇವಿಯ ನೈವೇದ್ಯ-ಪ್ರಸಾದಕ್ಕೆ, ಮೀನು ಬೇಕು!* ಪಂಚ-'ಮ'ಕಾರಗಳಲ್ಲಿ ಮತ್ಸ್ಯಕ್ಕೆ (ವಿಷ್ಣುರೂಪ) ಅಗ್ರಸ್ಥಾನವಿದೆ. ಮೊದಲು ವಿಷ್ಣುವಿನ ಸಾಂಕೇತಿಕ ಪ್ರತಿಮೆಯಾಗಿದ್ದ 'ಮೀನ'ದ ಬಳಿಕ, ಕಾಮದೇವನ ಧ್ವಜ ಎಂದು ಬಗೆವ ರೂಢಿ ಪ್ರಾರಂಭವಾಗುತ್ತದೆ! ಅಥರ್ವವೇದದಲ್ಲಿ ಬಂದಿರುವ ಸೃಷ್ಟಿ ನಿರ್ಮಾಣದ ಬಗೆಗಿನ ಪವಾಡ ಕಥೆಗಳಲ್ಲಿ ಕಾಮನೇ ಆದ ದೇವನೆಂಬ ವರ್ಣನೆಯೂ ಉಂಟು! ಈ ಸ್ಥಾನವನ್ನು ನಾರಾಯಣ, ವಿಷ್ಣು ಕಸಿದುಕೊಂಡು, ತಮ್ಮ ನಾಭಿಕಮಲದಿಂದ ಹುಟ್ಟಿದ ಸೃಷ್ಟಿಕರ್ತನೆಂಬ ಬ್ರಹ್ಮನ ತಂದೆ ತಾವು ಆಗುತ್ತಾರೆ! 'ಮತ್ಸ್ಯ' ಪುರಾತನ ಸಂಕೇತ. ಬಳಿಕ ಆ ಸ್ಥಳದಲ್ಲಿ ಪುಷ್ಕರ-ನಾಭಿಪದ : ಪದ್ಮ ಎಂಬುವು ಬರುತ್ತವೆ. ಬಳಿಕ 'ಕಮಲ' ಎಲ್ಲ ದೇವರುಗಳ ಜನ್ಮಕೇಂದ್ರವಾಗುತ್ತದೆ. ಪದ್ಮ : ಕಮಲಾಸನಸ್ಥರಲ್ಲದ ದೇವರು ವಿರಳ. ಅಂತಃಸಾಕ್ಷಿಯು ಪ್ರಭಾವಶಾಲಿಯಾಗತೊಡಗಿದ ಕುರುಹು : ಈ ಎಲ್ಲ ಸಾಂಕೇತಿಕ ಪ್ರತಿಮಾ ಸ್ಥಿತ್ಯಂತರ. ಇದು ಒಳಿತೋ ಕೆಡುಕೋ? ಈ ಪ್ರಶ್ನೆ, ಇತಿಹಾಸಕ್ಕೆ ಸಂಬಂಧಿಸಿದ್ದಲ್ಲ. ಆದ ಸ್ಥಿತ್ಯಂತರ ಗುರುತಿಸಿ ಸಕಾರಣವಾಗಿ ವಿವರಿಸುವುದು ಇತಿಹಾಸದ ಮುಖ್ಯ ಕಾರ್ಯವಾಗಿದೆ.

ಸಗುಣ ಸಾಕಾರ ಶಕ್ತಿದೇವಿಯ ರತಿ ನಿಂದ್ಯವೆನಿಸತೊಡಗುವುದರೊಡನೆ, ರತಿ, ವಿ-ರತಿಯ ಪ್ರದರ್ಶನವು ಲೋಕಪ್ರತಿಷ್ಠೆಯ ವಿಷಯವಾಗುತ್ತದೆ! ಆದರೆ, 'ಶಕ್ತಿ' ವಿರಹಿತ ಅರ್ಧ ಪುರುಷ : ಗುರುವನ್ನು ಕೇಳುವವರಾರು? ಇದಕ್ಕಾಗಿ 'ಶಕ್ತಿ' ಸಾನ್ನಿಧ್ಯ ಪಡೆದ ಹೊಸ ಹಾದಿಯನ್ನು ನೂತನ 'ಅಯನವನ್ನು' ಹುಡುಕುವುದು ಅವಶ್ಯವೇ ಆಯ್ತು! ಭಾರತಕ್ಕೆ ಬರುವ ಪ್ರಾಚೀನ ಮಾರ್ಗ, ಅರಬರ ದೊಂಬಿಗಳಿಂದ ಕಟ್ಟಾಗುತ್ತಲೆ 'ಇಂಡಿಯಾ' ಹುಡುಕುವುದಕ್ಕೆ ಕೋಲಂಬಸನು ಕಡಲ-ಪಯಣ ಕೈಕೊಳ್ಳಲಿಲ್ಲವೆ? ಕುಮಾರಿ : ಕನ್ಯೆ : 'ಭಾರತಿ' ಶಕ್ತಿ-ಮೈಯಲ್ಲಿ ಆವೇಶವಾಗುವ ದೇವಿ, ಇವಳು ಜನನಿಂದೆಗೆ ಗುರಿಯಾಗುತ್ತಲೆ ಈ 'ನಾರ'-ಅಯನವು ತನ್ನ ಹೊಸ ದಾರಿಯನ್ನು ಕಂಡುಕೊಳ್ಳದೆ, ಈ ಹಂತದಿಂದ ಮುಂದೆ ಅದರ ಉಳಿಗಾಲವಿರಲಿಲ್ಲ. ಅನುಭವದ ಈ ಪಾತಳಿಯಲ್ಲಿ ದಿಕ್ಕಾಲಬದ್ಧ ಭೌತ ಸ್ವರೂಪದ 'ಮಾಧ್ಯಮ' ಪ್ರತಿಮೆಯಲ್ಲಿ ಹುದುಗಿದ್ದ ಸಾಂಕೇತಿಕ ಅರ್ಥಶಕ್ತಿಯು ಗೋಚರಕ್ಕೆ ಬರತೊಡಗುತ್ತದೆ.

---

* ಅಷ್ಟಮೀ ದೇವೀ ನೈವೇದ್ಯಕ್ಕೆ ಪಡುವಲಕಾಯಿಬೇಕು. ಈ ಎರಡರ ಅಂತಃಸಾಮ್ಯ ತುಲನೆ ಮಾಡುವುದು ಸಾಂಸ್ಕೃತಿಕವಾಗಿ ಅಗತ್ಯ. ಈ ವಿವರಗಳಿಗೆ ಬಸವರಾಜ ಭೂಪಾಲನ 'ಶ್ರೀಶಿವತತ್ವರತ್ನಾಕರ' ಸಂಸ್ಕೃತ ವಿಶ್ವಕೋಶದ ಮೂರನೆ ಹಾಗೂ ನಾಲ್ಕನೆಯ ಕಲ್ಲೋಲದಲ್ಲಿ ಈ ಬಗೆಗಿನ ವಿವರಗಳನ್ನು ಆಸಕ್ತರು ಗಮನಿಸಬಹುದು (ಸಂ)

'ಶಕ್ತಿ' ಸಾಧನೆಯ ಈ ದಿಕ್ಕಿನಲ್ಲಿ ಆ ಬಳಿಕ ಹಲವು ಹೊಸ ದಾರಿಗಳು ಕಾಣತೊಡಗುತ್ತವೆ. ಅವೆಲ್ಲವುಗಳಲ್ಲಿ 'ಯೋಗ' ಪದ್ಧತಿಯಿಂದ ಲಭಿಸುತ್ತಿದ್ದ 'ಶಕ್ತಿ' (ಸಂ-)ಯೋಗವು ವಿಶೇಷ ಮಹತ್ವದ್ದಾಗಿ ಪರಿಣಮಿಸಿದ್ದುಂಟು ಆರೋಗ್ಯಶಾಸ್ತ್ರ ಹಾಗೂ ಸುಪ್ತಚೇತನಶಾಸ್ತ್ರ (Depth Psychology) ಇವುಗಳಿಗೆ ಯೋಗ ಪದ್ಧತಿಯ ಮೂಲಕ ದೊರೆತಿರುವ ಮೌಲಿಕ ಕಾಣಿಕೆಯಿಂದಾಗಿ ಪಾಶ್ಚಾತ್ಯರೂ ಈ ಶಾಸ್ತ್ರದ ಕಡೆಗೆ ಆಕರ್ಷಿತರಾಗಿದ್ದಾರೆ. ಒಂದಕ್ಕಿಂತ ಹೆಚ್ಚು ಕಾರಣಗಳಿಂದಾಗಿ ಈ ಯೋಗದಲ್ಲಿ, ಕಾಲಕ್ರಮದಲ್ಲಿ ಎರಡು ಪ್ರಮುಖ ಶಾಖೆಗಳು ಸ್ವತಂತ್ರವಾಗಿ ವಿಕಾಸಗೊಳ್ಳತೊಡಗಿದ್ದು ಕಾಣುತ್ತದೆ. ಹಠಯೋಗ ಮತ್ತು ರಾಜಯೋಗ ಎಂಬಿವು 'ಶಕ್ತಿ' (ಸಂ) ಯೋಗ ಸಿದ್ಧಿಗಾಗಿಯೆ ಹೊರಟುವು. ಅವು ಒಂದೇ ಮೂಲದಿಂದ ಹೊರಟ ಎರಡು ಸ್ರೋತಗಳು. ಒಂದರಲ್ಲಿ ದೈಹಿಕ (: ಆರೋಗ್ಯ) ಶಕ್ತಿ ಉಪಾಸನೆಗೆ ಪ್ರಾಧಾನ್ಯವಿದೆ. ವಜ್ರಾಂಗ ದೇಹಿಯಾಗಿ, ತತ್ : ಏಕಂ : ಸತ್-ಸ್ವರೂಪನಾಗಿ ಮರಣರಹಿತನಾಗುವ ಗುರಿಯುಂಟು. ಈ ಸಾಧನೆಯಲ್ಲಿದ್ದನೆಂಬ ಒಬ್ಬ 'ಗೋ'ರಕ್ಷನ ಪ್ರತಿಮೆ ಮಧ್ಯಯುಗೀನ ಸಿದ್ಧ-ನಾಥ ಪರಂಪರೆಯಲ್ಲಿ ಕೇಳಬರುತ್ತದೆ; ರಾಜಯೋಗಿಗಳಲ್ಲಿ ಅಗ್ರಣಿ ಎಂಬ ಹಾಗಿನ ಇನ್ನೂ ಒಬ್ಬ 'ಗೋ'ರಕ್ಷನಿದ್ದು ಈತನು 'ಅ-ಲಕ್ಷ' (:ಶೂನ್ಯ) ದೃಷ್ಟಿ ಯೋಗವನ್ನು ಬೋಧಿಸಿದ 'ಅ-ಲಖs'ನಿರಂಜನ ಆದಿಗುರು ಎಂಬ ಹಾಗಿನ ಶ್ರದ್ಧೆಯು ಉಂಟು. ಆದರೆ, ನವ-ನಾಥ ಪರಂಪರೆಯಲ್ಲಿ ಮತ್ಸ್ಯ-ಇಂದ್ರನೋ-ಮೀನಾ-ನಾಥನೋ ಆದಿ-ಪುರುಷನೆಂದೂ ಬಗೆಯಲಾಗುತ್ತದೆ. ಈ ಸಂಪ್ರದಾಯದೊಳಗಿನ ಮೀನ=ಮತ್ಸ್ಯ ಮತ್ತು 'ಗೋ' (ಅಪಾಂ-ನಪ್ತೃ : ಸರ್-ಪ) ಈ ಸಾಂಕೇತಿಕ ಪ್ರತಿಮೆಗಳ ಅರ್ಥದ ಆಳದಲ್ಲಿ ಋಗ್ವೇದ-ಅವೆಸ್ತಾಗಳಲ್ಲಿ ಬರುವ 'ಅಪಾಂ-ನಪ್ತೃ'ವು ದರ್ಶನವನ್ನೀಯುತ್ತಿರುವುದು ಸೋಜಿಗದ್ದಾಗಿದೆ. ಈ ನಾಥಪಂಥೀಯ 'ಮೈನಾ-ವತಿ' ಎಂಬ ಸ್ತ್ರೀಯ ಹೆಸರೂ ಸುಪ್ರಸಿದ್ಧವಿದೆ. ಆ ಪವಾಡ ಕಥೆಗಳ 'ಮೈನಾ' ಗಿಳಿಯಂತೆ ಮಾತಾಡುವ ಒಂದು ಹಕ್ಕಿ ಅಲ್ಲ. ಆದರೆ, ಆ ಯೋಗಿನಿ 'ಮೈನಾ' ಗಿಳಿ ಗೊರವಂಕಗಳಂತೆ ಪಂಜರದ ಒಂದು ಹಕ್ಕಿ ಆಗಿರದೆ ಆಪ : ರಸ ಪಂಥೀಯ ಒಬ್ಬ ಯೋಗಿನಿ. ಇದು ಯೋಗಶಕ್ತಿ ಸಾಧನಾ ಮಾರ್ಗ; 'ಮತ್ಸ್ಯಾಯನ'ದ ಈ ಸಾಧಿಕೆ 'ಮೈನಾ'ದೇವಿ=ಮೀನಾದೇವಿಯೆ ಇರುವ ಶಕ್ಯತೆಯೆ ವಿಶೇಷ.

ಜಾಗತಿಕ ಜ್ಞಾನಭಂಡಾರಕ್ಕೆ ಭಾರತೀಯರಿಂದ ಸಂದ ಒಂದು ಮೌಲಿಕ ಕಾಣಿಕೆ. ಯೋಗಶಾಸ್ತ್ರ ಎಂದು ಮರ್ಸಿಯಾ ಇಲಿಯದೆ, ಹೇಳಿದ್ದಾರೆ. ಮಾನವಶಾಸ್ತ್ರ ಸಂಶೋಧಕರ ಇಂದಿನ ತಜ್ಞರಲ್ಲಿ ಇಲಿಯದೆ ಅವರಿಗೆ ಮೇಲಣ ಸ್ಥಾನವಿದೆ. ಮೂಲತಃ ಧಾರ್ಮಿಕ ಪ್ರವೃತ್ತಿಯ ಸಾಧಕರಾಗಿರುವುದಾಗಿ ಕಾಣುತ್ತದೆ. ಕಲಕತ್ತಾ ವಿಶ್ವವಿದ್ಯಾಲಯದ ಪದವೀಧರರು Yoga : Immortality and Freedom : ಎಂಬ ದೊಡ್ಡಗ್ರಂಥ ಬರೆದಿದ್ದಾರೆ. ಯೋಗದ ವಿವಿಧ ಮಾರ್ಗಗಳ ಸಾಧಾರ ಸಮಾಲೋಚನೆಯೂ ಈ ಗ್ರಂಥದಲ್ಲಿದೆ. ಭಾರತೀಯ ತತ್ತ್ವಜ್ಞಾನದ ಇತಿಹಾಸವನ್ನು, ಮಹಾನ್ ಸಂಪುಟಗಳಲ್ಲಿ ಸಂಗ್ರಹಿಸಿ, ಜಾಗತಿಕ ಕೀರ್ತಿ ಪಡೆದಿರುವ ಡಾ. ಸುರೇಂದ್ರನಾಥ ದಾಸಗುಪ್ತಾ ಅವರಿಗೆ, ಮರ್ಸಿಯಾ ಅವರು 'ಗುರುವಿಗೆ ಸಮರ್ಪಣ' ಎಂದು ತಮ್ಮ ಈ ಗ್ರಂಥವನ್ನು ಮುಡಿಪಿದ್ದಾರೆ. ಅನುಭಾವ ಸಿದ್ಧಿಗಾಗಿ ಯೋಗದಲ್ಲಿ 'ಸ್ತ್ರೀ' ರೂಪದ ದೈವತಕ್ಕೇ ಕೇಂದ್ರಸ್ಥಾನವು ಏಕೆ? ಎಂಬ ಪ್ರಶ್ನೆಯನ್ನು ಎತ್ತಿಕೊಂಡು, ಅವರು ತಾವೇ ಹೇಳಿರುವ ಈ ಉತ್ತರವು ಮನನೀಯವಿದೆ.[೩]

ಮಾನವನನ್ನು ಒಳಹೊರಗಣಿಂದ ಸುತ್ತಿಮುತ್ತಿಕೊಂಡು ಆತನನ್ನು ತನ್ನತ್ತ ಸೆಳೆಯುತ್ತಿರುವ, ಬಳಿಕ ಘೋರ ಉಗ್ರ ಆಕೃತಿಯಾಗಿ ನಿಂತು ಅವನ ಸರ್ವಸ್ವದ ಬಲಿದಾನ ಬೇಡುವ, ಈ ವಿಶ್ವಸ್ಥ ಅಗಾಧ ದಿವ್ಯಶಕ್ತಿಯ ಸಾಂಕೇತಿಕ ಪ್ರತಿಮೆಯೆ, ಈ ಸ್ತ್ರೀ ರೂಪ! ಆಪಾದಮಸ್ತಕ ವಕ್ರ-ವಕ್ರ ನಾನಾ ರೇಖಾಕೃತಿಯ ಅಂಗೋಪಾಂಗಗಳಿಂದ ಯುಕ್ತವಾದ ಈ ಪ್ರತಿಮೆಯ ಕುಡಿಹುಬ್ಬಿನ ಕುಡಿವಿಲ್ಲಿನಿಂದ ಹೊರಹೊಮ್ಮುವ ಕುಡುಮಿಂಚಿನ ಆಘಾತಕ್ಕೆ ಎಂತೆಂತಹ ಹೆಮ್ಮರಗಳೂ ನೆಲಕ್ಕುರುಳುತ್ತವೆ! ಪ್ರಪಂಚದಲ್ಲಿ ಈ ಹೆಣ್ಣಿನ ನೆಲೆ ತಿಳಿಯದು! ಈ ಗೂಢರಹಸ್ಯಕ್ಕೆ ಕೊನೆಯೆ ಇಲ್ಲ. ಸ್ತ್ರೀ ಸಾನ್ನಿಧ್ಯದಲ್ಲಿ ದೊರೆವ ಅಗಮ್ಯತೆಯ ಅನುಭವವು, ಈ 'ಪ್ರತಿಮೆ'ಯು ಒಳಗೊಂಡಿರುವ ಅದ್ಭುತ ಅಚಿಂತ್ಯಶಕ್ತಿಯ ಸಾಕ್ಷಾತ್ಕಾರಕ್ಕೆ ಕಾರಣವಾಗಬಲ್ಲುದು. ಕೈಗೆ ಎಟಕಿದಂತೆನಿಸಿಯೂ, ಕೈಗೆ ನಿಲುಕದೆ

ಅದೆಷ್ಟೋ ದೂರವಿರುವ ಭಾವನೆಯನ್ನು ಕೆರಳಿಸುವ ಈ ಸ್ತ್ರೀ ರೂಪ-ಆಕೃತಿ ಅದ್ಭುತ-ಭಯಾನಕ ಭಾವವನ್ನು ತರುತ್ತದೆ, ವಿಚಾರಿಸಿದಂತೆ! ಪ್ರಪಂಚಸ್ಥ ಅಚಿಂತ್ಯ ದಿವ್ಯತ್ವದ ಸಂಸ್ಪರ್ಶನದ ಭಾವನೆ ಮೂಡಿಸಬಲ್ಲ ಹಾಗೂ ತನ್ನ ಪ್ರಾಮಾಣಿಕ ಪ್ರೇಮದಿಂದ ಜೀವನದಲ್ಲಿ ಉದಾತ್ತ-ಪವಿತ್ರ ಭಾವವನ್ನು ಸ್ಫುರಿಸಬಲ್ಲ ಮತ್ತು ವಿಶ್ವಸ್ಥ ಅ-ಮರ ಸತ್ತ್ವದ ಹತ್ತಿರಕ್ಕೆ ಒಯ್ಯಬಲ್ಲ ಶಕ್ತಿಯೆಂದರೆ ಈ ಸ್ತ್ರೀ ಪ್ರತಿಮಾ-ಸಂಕೇತ. ವಿಶ್ವದ ಅಮರತ್ವಶಕ್ತಿಯೆಂದರೇ ಈ ದೇವಿ. ಏಕೆಂದರೆ, ಪ್ರಪಂಚಕ್ಕೆ ಅ-ಮರತ್ವದ ವರದಾನ ಮಾಡಲು ಈ ದೇವಿಯೆ ಸಮರ್ಥಳಲ್ಲದೆ, ಪುರುಷನಲ್ಲ! ಪುರುಷನು ನೆಪ! ವಿಷ್ಣುವನ್ನು "ಅರ್ಧ ಗರ್ಭಃ ಭುವನಸ್ಯ ಕೇತಃ" ಎಂದಿರುವಲ್ಲಿ ದೀರ್ಘತಮನು ತನ್ನ ವಾಸ್ತವ ಅನುಭವವನ್ನೇ ನಿವೇದಿಸಿರುವಂತೆ ತೋರುತ್ತದೆ. ನಿಜಕ್ಕೂ ಮಾನವರಿಗೆ ದಿಕ್ಕಾಲಾತೀತ 'ಪರಮ' ಆ-ನಂದದ ಸಂಸ್ಪರ್ಶನದ ದೀಕ್ಷೆ ದೊರೆಯಬಲ್ಲುದಾದುದು ಸ್ತ್ರೀ-ಶಕ್ತಿಯ ಅನುಗ್ರಹದಿಂದಲೇ. ಸಹಜವಾಗಿ, ಇದನ್ನೆ ಮರ್ಸಿಯಾ ಇಲಿಯದೆ ಹೇಳಿರುವುದು ಹೀಗೆ :

> Mystical emotion in the presence of the mystery of generation and fecundity-such it is in part. But it is also recognition of all that is remote "Transcendental", invulnerable in woman; and thus comes to symbolize the imperishable essence of the ultimate reality; Woman incarnates both the mystery of creation and mystery of Being of everything that is that incomprehensibly becomes and dies and is reborn.[೪]

ಆಸ್ತಿಕ್ಯ (Being) : ಶಕ್ತಿಯ ಆಕೃತಿ : ಪ್ರತೀಕ ಸ್ತ್ರೀ ರೂಪವೇ ಇರುವ ಕಾರಣವನ್ನು ವಿವರಿಸುವ ಮರ್ಸಿಯಾ ಬಿಳಿಯರು; ಭಾರತೀಯ ಸಂಪ್ರದಾಯ ರಹಸ್ಯ ಅವರೇನು ಬಲ್ಲರು? ಎಂದು ಆಕ್ಷೇಪಿಸುವ ಸನಾತನತ್ವದ ಊರ್ಮಿ ತಲೆಯೆತ್ತದಿರಲಿ. 'ಶಕ್ತಿ'ಸಿದ್ಧಿ ಪಡೆಯಲು 'ಶ್ರೀ' (ಸ್ತ್ರೀ) ಸಾಂಕೇತಿಕ ಪ್ರತಿಮಾ-ಚಕ್ರದ ಆರಾಧನೆಯನ್ನು ಇಂದಿಗೂ ನಡೆಸಿಕೊಂಡು ಬರಲಾಗಿದೆ. ಆದರೆ 'ಸ್ತ್ರೀ'ಯನ್ನು 'ಮಾಯೆ' ಎಂದು ಅವಳನ್ನು ಹೊರತಳ್ಳಿ ಬಿಡುವ ಸನ್ಯಾಸ ಪಂಥೀಯ ಆದರ್ಶಗಳಿಗೆ ಪಟ್ಟಗಟ್ಟಲಾಗಿದೆ! ಈ ಸ್ತ್ರೀಯೆ ಆದಿದೈವತ ಎಂಬುದನ್ನು ಕ್ರೈಸ್ತ ಪಂಥವೂ ಹಿಂದೊಮ್ಮೆ ಮಾನ್ಯಮಾಡಿತ್ತು. ತೊಡೆಯ ಮೇಲೆ ಮಗು ಮಲಗಿರುವ ಮಾತಾ : ಕುಮಾರಿ=ಕನ್ಯಕಾ ಪರಮೇಶ್ವರೀ, ಈ ಸಂಪ್ರದಾಯವು ಹಿಂದೊಮ್ಮೆ ಯುರೋಪದ ನಾನಾ ದೇಶಗಳಲ್ಲಿ ಇತ್ತು. ಆದರೆ, ಪುರುಷ ಪ್ರಧಾನ ಸಂಸ್ಕೃತಿಯು ಪ್ರಭಾವಶಾಲಿಯಾಗತೊಡಗಿದಂತೆ ಮಾತಾ ಸಂಪ್ರದಾಯದ ಪ್ರತಿಮಾ : ಸಂಕೇತಗಳು, ವಿವಿಧ ರೀತಿಯಲ್ಲಿ ಮಾರ್ಪಡುತ್ತ ಬಂದುದುಂಟು. ಆದರೆ, ಈ ಐತಿಹಾಸಿಕ ಹಿನ್ನೆಲೆಯನ್ನು ಅರಿಯದವರಿಗೆ ಕುಮಾರೀ-ಮಾತಾ ಪೂಜೆ, ಎಲ್ಲೋ ಹೊರಗಿನಿಂದ-ಹಿಂದಿನಿಂದ ಬಂದುದಾಗಿ ಎನಿಸುತ್ತದೆ! ಹೆಕೆಲ್ ಅವರೇ ಹೇಳಿರುವಂತೆ ಕ್ರೈಸ್ತ ಪಂಥೀಯ ಪ್ರಾಚೀನ (: ಕ್ಯಾಥೊಲಿಕ್) ಸಂಪ್ರದಾಯಗಳಲ್ಲಿ, ಮಾತೆಯ (ಮ್ಯಾಡೊನಾ) ಪ್ರತಿಮೆಯೇ ಏಕೈಕ ಮಹತ್ವದ್ದಾಗಿದೆ, ಈಗಲೂ ಹಲವೆಡೆಗೆ ಯುರೋಪಿನಲ್ಲೂ ಉಂಟು.

'ಶಕ್ತಿ' ವಿರಹಿತ ಶಿವ, ಶವ ಎಂದರೇನು ಅರ್ಥ? ಅರ್ಧಗರ್ಭ-ವಿಷ್ಣು' : ಅರ್ಧಾಂಗ ದೈವತ ತಾನೆ! ಎಂದರೆ 'ಸ್ತ್ರೀ' : ಶಕ್ತಿಯ ಮಹಾತ್ಮ್ಯವನ್ನು-ಅನಿವಾರ್ಯತೆಯನ್ನು ಪ್ರಾಂಜಲವಾಗಿ-ಮುಕ್ತಮನಸಿನಿಂದ ಈ ಪುರುಷ ವರ್ಗ ಒಪ್ಪಿಕೊಳ್ಳಲಾರದು, ಎಂದೇ ಇದರ ಅರ್ಥ. ಹೀಗೆ ಸುತ್ತುಮಾತಿನಿಂದ ಅದನ್ನೇ ಅರ್ಧನಾರೀಶ್ವರ, ಮೋಹಿನೀರಾಜ ಎಂದು ಪದರು ನುಡಿಯಿಂದ ಒಪ್ಪುವ ಭಾರತೀಯರ ಈ ಕವಡು ರೀತಿಯಿಂದಾಗಿ, ಅವರ ಮನೋರಚನೆಯಲ್ಲಿ ಒಂದು ದೋಷವು ತಲೆ ಎತ್ತಿಕೊಂಡಿದೆ; ಜೀವನ-ಸತ್ಯವನ್ನು ನೇರವಾಗಿ ಒಪ್ಪಿ, ಅದಕ್ಕೆ ತಲೆವಾಗುವ ನೈತಿಕ ಧೈರ್ಯವು ನಮ್ಮ ವಿಚಾರವಂತರೆಂಬವರಲ್ಲಿ ಸಹ ತೀರ ಅಲ್ಪ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿರುವ ಕಾರಣವೇ ಇದು. ಶಾಂಕರ ಮಠಗಳಲ್ಲಿ 'ಶಾರದಾಂಬಾ' ಹೆಸರಿನಲ್ಲಿ ಪೂಜೆಗೊಂಬ

ಸಾಂಕೇತಿಕ ಸ್ತ್ರೀ : ಶಕ್ತಿ ಪ್ರತಿಮೆಗೆ ಅನನ್ಯ ಸಾಧಾರಣ ಮಹತ್ವವಿದೆ. 'ಸರಸ್ವತಿ' ಸಂಕೇತವು ಹಿಂದೆಬಿದ್ದು. 'ಶಾರದಾ' ಎಂಬ ತತ್ಸಮ : ವಾಕ್‌ದೇವೀ ಸೂಚಕ ನೂತನ ಸಂಕೇತದ ಆವಶ್ಯಕತೆ ಏನಿತ್ತು? ವಸಂತ ಹಾಗೂ ವರ್ಷಋತುಗಳಲ್ಲಿ ಸೃಜನ-ಸಂವರ್ಧನ : ಶರತ್ (ಶಿಶಿರ)ದಲ್ಲಿ ವಿದೀರ್ಣ-ನಾಶಕ್ಕೆ ಪ್ರಾರಂಭ. ಸ-ರಸ ಸರಸ್ವತಿಯೆ ರಸ-ವರ್ಜ ಸಂಪ್ರದಾಯದ ಪ್ರತಿಮೆಯಾಗಿ ಶಾರದಾಂಬಾ ಆದುದಾಗಿ ಕಾಣುತ್ತದೆ. ಭಾರತೀಯ ಜೀವನ ರೀತಿಯಲ್ಲಿ ಶಾರದೆ, ಲಕ್ಷ್ಮಿ, ಭವಾನಿ (ಅಂಬಾ) ಇತ್ಯಾದಿ ವಿವಿಧ ಶಕ್ತಿದೇವಿಯರ ಕಲ್ಲು ಮೂರ್ತಿಗಳಿಗೆ ಇರುವ ಪ್ರತಿಷ್ಠೆ, ಜೀವಂತ ಸ್ತ್ರೀ : ಶಕ್ತಿಗೆ ಉಳಿದಿಲ್ಲ. ಹೆಣ್ಣನ್ನು ಮಾಯೆ-ಮೋಹದಲ್ಲಿ ಕೆಡಹುವವಳು ಎಂದು ತಿರಸ್ಕಾರದಿಂದ ನೋಡದಿದ್ದರೆ, ಆ-ಮರಣ ಕುಮಾರೀ, ಕುಮಾರ ವ್ರತದ ಪರಂಪರೆಯ ಸನ್ಯಾಸವು ಭಾರತೀಯರ ಸನಾತನ (? ರಾಷ್ಟ್ರೀಯ) ಧರ್ಮವಾಗಿ ಉಳಿಯ ಬಹುದಿತ್ತೆ?

ಪ್ರತಿಮಾ : ಸಂಕೇತಗಳ ಹಂತದ ಒಂದೊಂದು ಭಾಷೆಯ ತಳಪಾಯದಲ್ಲಿ, ಆಯಾ ಭಾಷಿಕರ ಮಧ್ಯಮಾ : ವಾಕ್ ಎಂದರೆ ಮೈಯಲ್ಲಿ ಆವೇಶವಾಗುವ ಕುಮಾರಿಯರೇ ಇರುವುದಾಗಿ ಕಾಣುತ್ತದೆ. ವಾಗಾಂಭೃಣಿಯಂತೆ ಅಥೆನೆ, ತಂದೆ ಝೂಉಸ್ (ದ್ಯೌಃ) ದೇವನ ಮೂರ್ಧ್ನದಿನಿಂದ ಹುಟ್ಟಿದ ಪವಾಡ ಕಥೆಯ ಉಲ್ಲೇಖ ಹಿಂದೆ ಬಂದಿದೆ. ಮೈಯಲ್ಲಿ ಆವೇಶವಾಗಿ ಆಡುವ ಮಾತಿನಲ್ಲಿ, ಕೆಲವೊಮ್ಮೆ ಆಗ ತೋರುವ ಅಥವಾ ಎನಿಸಿದುಕ್ಕಿಂತ ಆಳವಾದ ವಿಶಾಲವಾದ ಅರ್ಥವು ಹುದುಗಿಕೊಂಡಿರುವ ಅನುಭವವು ಆಗಾಗ ಬರುವುದುಂಟು. ಗ್ರೀಕ್ ಸಂಸ್ಕೃತಿಯ ಸಮೀಕ್ಷೆಯಲ್ಲಿ, ಈ ವಾಸ್ತವಾಂಶವನ್ನು ಡೊಡ್ಡಸ್ ಅವರು ಮೂಲ ಗ್ರೀಕ್‌ಭಾಷೆಯ ಅಧ್ಯಯನದ ಆಧಾರದಿಂದ ತಮ್ಮ ಒಂದು ಗ್ರಂಥದಲ್ಲಿ ಚೆನ್ನಾಗಿ ವಿವರಿಸಿದ್ದಾರೆ.[೫] ಸುಪ್ತ ಚೇತನವು ವಿಕೃತ ಭಾವನೆಗಳ ನೆಲಮನೆ ಎಂಬ ಸಿದ್ಧಾಂತವೊಂದುಂಟು! ಆದರೆ, ಇದು ಸದೋಷ ನಿರ್ಣಯ; ತೃಪ್ತ ಭಾವನೆಗಳು ಕನಸಿನಲ್ಲಿ ಬರುವವು, ನಿಜ. ಸಿಟ್ಟು ಬಂದಾಗ ಬಾಯಿಂದ ಫಕ್ಕನೆ ಬರುವ ಮಾತಿನಲ್ಲಿ ಬಚ್ಚಿಟ್ಟುದೇ ಹೊರಬರುವುದು, ಇದೂ ಸುಳ್ಳಲ್ಲ. ಆದರೂ, ಯಾವುದೊಂದು ವ್ಯಕ್ತಿಗೆ ತನಗೇ ಸ್ಪಷ್ಟತೆಯಿಲ್ಲದೆ ಅದೆಷ್ಟೊ ವಿಶಾಲ-ಭವ್ಯ ವಿಚಾರಾಂಶಗಳು ಉತ್ ಸ್ಫೂರ್ತ ಆವೇಶದಲ್ಲಿ ಫಕ್ಕನೆ ಹೊರಹೊಮ್ಮಿ ಬರುವುದನ್ನೂ ಅಮಾನ್ಯ ಮಾಡಲಿಕ್ಕೆ ಆಗುವುದಿಲ್ಲ. ಇವು ಎಲ್ಲಿಂದ ಉಕ್ಕಿ ಹೊರಹೊಮ್ಮಿದವು? ಆ ವ್ಯಕ್ತಿಯ ಸುಪ್ತಚೇತನದಿಂದಲೇ ತಾನೆ? ತೀರ ಲೈಂಗಿಕ ಪಾತಳಿಯಲ್ಲಿಯೇ ಓಡಾಡುವ ಜೀವ 'ನರ;' ಮನನ ಶೀಲನಾಗಿ ಮಾನವನ ಪಾತಳಿಗೆ ಬರಲಾರದೆ ಪ್ರಕೃತಿ ಧರ್ಮಪರಾಯಣತೆಯಲ್ಲೆ ಮೈಮರೆಯಲಿಚ್ಛಿಸುವಲ್ಲಿ ನಿರಾಶೆ: ಮನೋವಿಕೃತಿ ನಿಶ್ಚಿತವೇ ಇರುತ್ತದೆ. ಆದರೆ, ಎಲ್ಲ 'ಸುಪ್ತಚೇತನ', ವಿಕೃತ-ಮನೋಭಾವ ಎಂಬಲ್ಲಿ ತುಂಬ ಅನ್ಯಾಯವಾಗಿದ್ದುಂಟು. ಭಾಷಿಕ ಪ್ರತಿಮಾ ಸಂಕೇತಗಳಿಗೆ, (ತೀರ ಮೊದಲಹಂತದ-ವಿಶ್ವನಿರ್ಮಾಣ ಕ್ರಿಯೆಯನ್ನು ಚಿತ್ರಿಸುವ ಪವಾಡ ಕಥೆಗಳಲ್ಲಿ) ಮೈಯಲ್ಲಿ ಆವೇಶವಾದ ಸ್ತ್ರೀಯರಿಂದ ಸಂದಿರುವ ಕಾಣಿಕೆಯೂ ಮೌಲಿಕವಾಗಿದೆ. ಆವೇಶವಾಗಿ 'ಕಣಿ' ಹೇಳುವ ಸಂಪ್ರದಾಯದ ಮೊದಲಿಗರು ಕುಮಾರೀ ಸಂಪ್ರದಾಯದ 'ಸತಿ' : 'ಸತ್ಯ'ವತಿಯರೇ ಆಗಿದ್ದರು. ಇಂತಹ ಭಕ್ತಿಯರಲ್ಲಿ ಆವೇಶವಾದ ಅದಿತಿ, ಅಂಭೃಣಿಯರ 'ವಾಕ್ಕು' ಅಂದು ಕೇಳಲು ದೊರೆಯುತ್ತಿತ್ತು. ಆದರೆ, ಈ ಕಣಿ ಹೇಳುವ 'ದೇವಿ'ಯರ ಬಗೆಗೆ ಕೊನೆಗೆ ತಿರಸ್ಕಾರವುಂಟಾದುದೂ ಋಗ್ವೇದದಿಂದಲೇ ತಿಳಿಯುತ್ತದೆ!

ಟಿಪ್ಪಣಿಗಳು

೧. Ernest Hekel; ***The Riddle of the Universe***; Thinker's Library No 3, p. 232;

೨. Macdonell A. A., ***Vedic Mythology*** P. 2

೩. Mercia Eliade; *Yoga* : ***Immortality and Freedom*** - p. 202-203

೪. ***Ibid***, p 203

೫. Dodds; ***Greeks and the Irrational***

ಈ ಕೇಶಿ : ಪುರುಷನು ಯಾರು?

ಕಣಿಯನ್ನು ಹೇಳುವ ದೇವಾರ್ಪಿತೆಯರ ಕುಮಾರೀ ಪರಂಪರೆಯು ಋಗ್ವೇದಕಾಲದಲ್ಲಿಯೆ ಗೌರವಕ್ಕೆ ಎರವಾಯಿತು. ಈ ಸಂಪ್ರದಾಯದ ಜೀವನದ ಆಕೃತಿಯಲ್ಲಿಯೇ (Life Form) ಅನುಸ್ಯೂತವಿರುವ ನಿಯತಿಯಿಂದಲೆ (Logic of) ಅದು ಬೆಲೆಗಾಣುತ್ತದೆ. ಆ ಬಳಿಕ ಬೆಲೆ ಕಳೆದುಕೊಳ್ಳುತ್ತಲೂ ಇದೆ-ಆಗಲೂ! ಆದಕಾರಣ, ಈ ಸ್ಥಾನದಲ್ಲಿ 'ಪುರುಷ' ದೇವನು ವಿರಾಜಮಾನನಾಗಿ ಪೂಜೆಗೊಳ್ಳುತ್ತಿದ್ದಾನೆ, ಅಂದಿನಿಂದಲೆ! ಇದನ್ನು ತರ್ಕದಿಂದ ಊಹಿಸಿ ಹೇಳಬೇಕಾಗಿಲ್ಲ. ಋಗ್ವೇದದ ಚಿತ್ರಪಟದಲ್ಲಿಯೆ ಇದಕ್ಕೆ ಪ್ರಮಾಣಗಳಿವೆ. 'ಪುರುಷ' ಸೂಕ್ತವು, ಇಂತಹ ಒಂದು ಪ್ರಮಾಣ[1] ಕೇಶಿನ್ (: ಪುರುಷ) ಮುನಿಯ ವರ್ಣನೆ, ಇನ್ನೊಂದು ಪ್ರಮಾಣ[2] ತನ್ನನ್ನು ಅರ್ಪಿಸಿಕೊಂಡು; ಹೋಮಕುಂಡದಲ್ಲಿ ಮೊದಲು ಅವನು ಬಲಿ' ಆಗುತ್ತಾನೆ. ಗೀತೆಯ ಭಗವಂತನು ಹೇಳುವಂತೆ, 'ಪುರಾ, ಸಹಯಜ್ಞಾಃ ಸೃಷ್ಟ್ವಾ, ಪೂರ್ವದಲ್ಲಿ ಮೊದಲು ಆತ್ಮಾಹುತಿಯನ್ನಿತ್ತು ವಿಶ್ವನಿರ್ಮಾಣ ಮಾಡಿದ 'ಯಜ್ಞ-ಪುರುಷನೂ' ಈ ಕೇಶಿಯೇ. ಇದಕ್ಕೆ ವಿಶ್ವಕರ್ಮನ ವರ್ಣನೆಯೊಳಗಿನ ಒಂದಂಶ, ಇದು ಮಗುದೊಂದು ಪ್ರಮಾಣ.[3] ಆದರೆ, ಈ ಪ್ರಮಾಣಗಳನ್ನು ಒಪ್ಪಿದರೂ ದೇವ : ಪುರುಷ ಪೂಜೆ, ದೇವೀಶಕ್ತಿಯ ಪೂಜೆಯ ತರುವಾಯದ್ದು, ಎನ್ನಲು ಇಷ್ಟೇ ಆಧಾರ ಸಾಲದು. ಏಕೆಂದರೆ, ಇದರಲ್ಲಿ ಕಾಲಸೂಚಕ ಸಂಕೇತ ಒಂದೂ ಇಲ್ಲ! ಇದರ ನಿರ್ಣಯಕ್ಕಾಗಿ 'ಪುರುಷ' ಪ್ರತಿಮಾ ಸ್ತೋತ್ರ-ಸೂಕ್ತಗಳು ಎಷ್ಟು ಪ್ರಾಚೀನ ಎಂಬುದನ್ನು, ನಿರ್ಧರಿಸಿಕೊಳ್ಳುವುದು ಅವಶ್ಯವಿದೆ. ಅದಿತಿ, ಸರಸ್ವತಿಯರ ಸೂಕ್ತಗಳಷ್ಟು, ಮೇಲೆ ಹೇಳಿರುವ 'ಪುರುಷ' ಮಹಿಮಾ ಸೂಕ್ತಗಳು ಪುರಾತನವಲ್ಲ ಎಂಬುದು ಸರ್ವಮಾನ್ಯವಿದೆ. ಒಂದನೆಯ ಹಾಗೂ ಹತ್ತನೆಯ ಮಂಡಲದಲ್ಲಿ 'ನೂತನೈಃ' ಕವಿಕೃತಿಗಳು ಹೆಚ್ಚು ಇರುವುದನ್ನು, ಆ ಸ್ತೋತ್ರಗಳ ಭಾಷೆ ಹಾಗೂ ಆಶಯದ ಮೇಲಿಂದ ನಿರ್ಧರಿಸಲಾಗಿದೆ. 'ಪುರುಷ' ಎಂಬ ಈ ಶಬ್ದ-ಪ್ರತಿಮೆಯು ಪೂಜಾರ್ಹತೆಯನ್ನು ಪಡೆದುದು ಋಗ್ವೇದದ ಕೊನೆಯ ಮಂಡಲದಲ್ಲೇ. ಮೊದಲ ಬಾರಿ : ಈ 'ಪುರುಷ' ಸಂಕೇತವು ವೇದದ ಅಂತ್ಯವಾದ ಮೇಲೆ, ವೇದಾಂತದಲ್ಲಿ-ಎಂದರೆ ವಿರಕ್ತ ಪಂಥೀಯ ಭೂಮಿಕೆಯಲ್ಲಿ ಪ್ರಭಾವಶಾಲಿಯಾದುದುಂಟು. ಋಗ್ವೇದದ 'ಪುರುಷ': 'ಸಹಸ್ರಾಕ್ಷ'ನು, ಇದು ಸೂರ್ಯ : ಸೌರ ಪ್ರತಿಮಾ ಸದೃಶ ಸಂಕೇತವಾಗಿದೆ. 'ಸಂದೃಕ್' ಸಂಪ್ರದಾಯದ 'ಪುರುಷ'ನ ಆಕಾರಕ್ಕೆ ಇದು ಇನ್ನೂ ಪೂರ್ಣವಾಗಿ ಮಾರ್ಪಟ್ಟಿಲ್ಲ! 'ದೆಹಲೀ ದೀಪನ್ಯಾಯ'ದಂತೆ ಋಗ್ವೇದದ ಮೂಲ ಸೌರ ಆಕೃತಿಯ ಛಾಯೆಗಾಣಿಸಿ, ಆಪ : ರಸಪಂಥೀಯ 'ಯಜ್ಞೇನ ಯಜ್ಞಂ' ಜರುಗಿಸುವ ಪುರುಷನ ಯಜ್ಞಪುರುಷನ ದರ್ಶನವನ್ನು ಇಲ್ಲಿ ಮಾಡಿಸಲಾಗುತ್ತದೆ! 'ಅಪಾಂ-ನಪ್ತ'ವು ಇನ್ನೂ ಆಪದಿಂದ ಪೂರ್ಣ ಹೊರಗೆ ಬಂದಿಲ್ಲ! ಆದರೆ, ಅದಿತಿ : ಆಪನ್ನ ಸತ್ತ್ವಾ 'ಆದಿತ್ಯರ ತಾಯಿ' ಎಂಬ ರೂಪದಲ್ಲಿ, ಸರಸ್ವತ್ಯಾದಿ ನಾಮಾಂತರಗಳಿಂದ

'ಯತ್‌ಜಾತಂ, ಯತ್ ಜನಿತ್ವಂ' ಎಂಬ ಸಮಗ್ರ ರೂಪದಲ್ಲಿ ಋಗ್ವೇದದ ಉದ್ದಕ್ಕೂ ಮೆರೆಯುತ್ತಿದ್ದಾಳೆ. ಆದರೆ 'ಯತ್ ಭೂತಂ, ಯಚ್ಚ ಭವ್ಯಂ' ಎಂಬ ಹಾಗಿನ 'ಪುರುಷ'ನು ಅರ್ಧ ಸೌರ, ಅರ್ಧ ಆಪ : ರಸ ಪಂಥೀಯ ರೂಪದಲ್ಲಿ ಋಗ್ವೇದದ ಕೊನೆಗೆ ಇದೀಗ ಕಾಣುತ್ತಾನೆ!

ಕಣೆಯ ಅದಿತಿದೇವಿಯು, ಸಲಿಲದಲ್ಲಿ ತನ್ನ 'ಸಪ್ತ' ರೊಡನೆ ತತ್-ಸ್ವರೂಪಳಾದ ಬಳಿಕ[೪] ಆ ಸ್ಥಳದಲ್ಲಿ ಕಣೆಯ 'ಪುರುಷ'ನೊಬ್ಬನು ಬಂದುದು ಕಾಣತೊಡಗುತ್ತದೆ. ಈ ಸ್ಥಿತ್ಯಂತರದೊಡನೆಯೆ ಋಗ್ವೇದದ ಸಂಹಿತೆಯು ಒಂದು ತೆರನಾಗಿ ಕೊನೆಗೊಳ್ಳುತ್ತದೆ. ಎಂದರೆ, ಇಲ್ಲಿಗೆ ಋಗ್ವೇದದ 'ಚೌಕಟ್ಟು'-ಅಲ್ಲ-ವರ್ತುಳ ಅವು (: O :) ಪೂರ್ಣವಾಗುತ್ತದೆ. 'ದೇವಮಾತೆ' ಎಂಬ ಭೂಮಿಕೆಯ ಅದಿತಿಯು, 'ನಪ್ತೃ'ಗಳೆಂಬ ಸೂರ್ಯ ವರುಣಾದಿ 'ಸಪ್ತ'ರೊಡನೆ 'ಸಲಿಲ'ದಲ್ಲಿ ಸೇರುತ್ತಾಳೆ. ಸೌರಯುಗವು ಮುಗಿದು, ನೂತನ ಯುಗಪ್ರತಿಪದೆಯ ಚಂದ್ರನು ಉದಯವಾದುದರ ಸೂಚನೆಯು ಇಲ್ಲಿದೆ. ಈ ಚಂದ್ರಯುಗದ ದೇವತಾ ಮಂದಿರದೊಳಗಿನ ಗರ್ಭ-ಗುಡಿಯಲ್ಲಿ ಪೂಜೆಗೊಳ್ಳುತ್ತಿರುವ ಹಾಗೂ ಈ ಮಂದಿರದ ಶಿಖರ-ಸ್ತೂಪ, ಎರಡು ಈ ಪುರುಷ : ಕೇಶಿರೂಪ ಸಾಂಕೇತಿಕ ಪ್ರತಿಮೆಯೆ ಸರಿ.[೫] 'ಕೇಶಿನ್' ಎಂಬ ಶಬ್ದ ಪ್ರತಿಮೆ, ಈ ಮೊದಲು ಋಗ್ವೇದದಲ್ಲಿ, 'ಕಪರ್ದಿನ್' ಎಂಬ ರೂಪದಲ್ಲಿ ವ್ಯವಹರಿಸಿದ್ದುಂಟು. ಕಪರ್ದಿನ್ ಎಂದರೆ ಜಡೆಯನ್ನು ಬಿಟ್ಟ ವ್ಯಕ್ತಿ; ಈ ಜಡೆಯಲ್ಲಿ ಕವಡಿ (: ಕಪರ್ದ) ಇರುವ ವಾಡಿಕೆಯೂ ಇತ್ತು. ಕವಡಿ, ಮುತ್ತು, ಹವಳ, ಶಿಂಪು, ಶಂಖ ಇವನ್ನು ಮುನ್-ನೀರೊಳಗಿನ (: ಆಪ ಏವ ಇದಂ ಅಗ್ರೇ ಆಸೀತ್) ಯಾವ ನೀರು ಸೃಷ್ಟಿನಿರ್ಮಾಣಕ್ಕೆ ಕಾರಣವಾಯಿತೋ ಆ ನೀರಿನ ದಿವ್ಯ ಪವಾಡ ಶಕ್ತಿಯುತ 'ಮಣಿ'ಗಳು ಇವು, ಎಂಬ ಶ್ರದ್ಧೆಯಿಂದ ಇವನ್ನು ಧರಿಸಲಾಗುತ್ತಿತ್ತು. ಇವನ್ನು ತಲೆಯಲ್ಲೊ, ಕೊರಳಲ್ಲೊ ಕಟ್ಟಿಕೊಳ್ಳಲಾಗುತ್ತಿತ್ತು. 'ಕಪರ್ದಿ' ಸಂಕೇತದಿಂದ ಆ ವ್ಯಕ್ತಿ, ತಾಪಸಿ ಎಂದು ಸೂಚಿತವಾಗುತ್ತದೆ. ರುದ್ರನಂತೆ, ಪೂಷನ್ (ಸೌರ) ದೈವತಕ್ಕೂ ಕಪರ್ದಿ ಎಂಬ ಸಂಕೇತದಿಂದ ನಿರ್ದೇಶಿಸಲಾಗಿದೆ. ಅದಿತಿಯೂ ಕಪರ್ದಿ; ವಸಿಷ್ಠನನ್ನು 'ದಕ್ಷಿಣ ಕಪರ್ದಿ' (ಬಲಗಡೆಯ ಜಡೆಯವನು) ಎಂದು ವರ್ಣಿಸಿದ್ದುಂಟು. ಕಣೆಯವರು ವ್ರತಿಗಳು : ತಾಪಸರು: 'ತತ್'-ಮಯಾವಸ್ಥೆಯ ಸಂದೃಕ್-ದೃಷ್ಟಿಯವರಾಗಿ, ಅವರೇ 'ಮಧ್ಯಮಾ : ವಾಕ್' ಪ್ರತಿಮಾ ಸ್ವರೂಪರಾಗುತ್ತಿದ್ದರು. ಕಾರಣಾಂತರಗಳಿಂದ, ಕುಮಾರೀ ಸಂಪ್ರದಾಯದ ಕಣೆಯವರು, ಸಾಮಾಜಿಕ ನಿಂದೆಯ ವಿಷಯವಾಗತೊಡಗಿದರು. ಆದರೆ, ಕಣೆಯ ಮೂಲಕ ಆಗಾಮಿ ಸಂಗತಿಗಳನ್ನು ಅರಿಯುವ ಪಾರಂಪರಿಕ ಸಂಪ್ರದಾಯವು ಇನ್ನೂ ಶಿಷ್ಟಮಾನ್ಯತೆಯನ್ನು ಕಳೆದುಕೊಂಡಿರಲಿಲ್ಲ. ಶಿಷ್ಟ-ಪ್ರತಿಷ್ಠಿತರು ಇಂದಿಗೂ ಈ ವರ್ಗದಲ್ಲಿದ್ದಾರೆ. ಈ ಸಾಮಾಜಿಕ ಆವಶ್ಯಕತೆಯನ್ನು ಪೂರಯಿಸುವ ಒಂದು ವರ್ಗವು ಬೇಕೇ ಬೇಕಿತ್ತು. ಇಂದಿಗೂ ಅನೇಕ ಆರ್ತರು-ನಾನಾ ಆಶಾಪಾಶ-ಬದ್ಧರುಗಳಿಗೆ ತಮ್ಮ ಭವಿಷ್ಯ, ಭಾಗ್ಯ ಉಜ್ಜ್ವಲವಾಗಲು, ಪ್ರಾಮಾಣಿಕ ಆತ್ಮಶ್ರದ್ಧೆಯ ಸ್ವಪ್ರಯತ್ನಗಳಿಗಿಂತ, ಬಾಬಾ-ಬೈರಾಗಿಗಳ ಪ್ರಸಾದ ಪಾದೋದಕದಲ್ಲಿ ಹೆಚ್ಚು ಶ್ರದ್ಧೆಯುಂಟು. ಇಂತಹರಲ್ಲಿ ವಿಚಾರಶೀಲರೆಂಬುವರೂ ಹಲರು ಕಾಣುತ್ತಾರೆ! 'ಯತ್ ಪ್ರೈರತ'ಪ್ರೇರಣೆ ಆದ ಹಾಗೆ-ಕಣಿ ಹೇಳುವ ದೇವೇಷಿತ ಕುಮಾರೀ ತಾಪಸಿಯರ ಸ್ಥಳದಲ್ಲಿ, ದೇವಿ ನೀರೆಯರು, ಅಪ್ಸರೆಯಾಗಿ ಕಾಣತೊಡಗಿದಂತೆ ಕಣೆಯ ಕುಮಾರ ತಾಪಸರು ಆ ಸ್ಥಳದಲ್ಲಿ ಬರುತ್ತಾರೆ. ಋಗ್ವೇದದ ಅಂತ್ಯದಲ್ಲಿಯ ದೃಶ್ಯವಿದು.

ಆದರೆ, ಕಣೆಯಂತೆ, ಅಂದು ಪ್ರತಿಷ್ಠೆಯನ್ನು ಪಡೆದ ಇನ್ನೂ ಒಂದು ಬಗೆಯ ವಾಕ್ ಆರಾಧಕರ ಸಂಪ್ರದಾಯವೂ ಇತ್ತು. ವಾಕ್ಕನ್ನು ಕೇರಿ ಪುನೀತವಾಗಿಸಿ-ವಿಮರ್ಶಾಪೂರ್ವಕ ವಿಚಾರದಿಂದ ಉಪಯೋಗಿಸಿ ಕೊಳ್ಳಬೇಕು ಎಂಬ 'ಬೃಹಸ್ಪತಿ' ಸಂಪ್ರದಾಯವೂ ಒಂದು ಆ ಕಾಲದಲ್ಲಿ ಇದ್ದಿತೆಂಬುದನ್ನು ಮರೆಯಲಿಕ್ಕಾಗದು.[೬] ಆದರೆ, ವಿಮರ್ಶಾಯುಕ್ತ ಸುಸಂಬದ್ಧ ಅರ್ಥ : ವಿಚಾರದ ಸಂಪ್ರದಾಯ, ಚಾರು (: ಸುಂದರ) ವಾಕ್ಕಿನವರದು-ಚಾರ್ವಾಕರದು ಎಂದು, ಇದು ಗೇಲಿಗೆ ಕಾರಣವಾದುದರ ಸೂಚಕ ಧ್ವನ್ಯರ್ಥವೊಂದು ಉಳಿದಿದೆ. ಈ 'ಬೃಹಸ್ಪತಿ' ಎಂಬ ಶಬ್ದಾರ್ಥದಲ್ಲಿಯೂ ಅದು ಉಂಟು! ಚಾರುವಾಕ್ : ಚಾರ್ವಾಕರ ಅಗ್ರಣಿ ಎಂಬ ಪ್ರಚಾರಕ್ಕೆ ಬಲಿಯಾಗಿರುವ 'ಬೃಹಸ್ಪತಿ' ಈ ಶಬ್ದಪ್ರತಿಮೆಯಲ್ಲಿ ಅಂದಿನ ಒಂದು ಸಂಘರ್ಷದ ಸೂಚನೆಯು

ಇಲ್ಲದಿಲ್ಲ. 'ಯಾಂ ಇಮಾಂ ಪುಷ್ಪಿತಾಂ ವಾಚಂ' ಎಂಬಲ್ಲಿ ಗೀತೆಯ ಭಗವಾನನೇ, ಸುಂದರವಾದ (ಪುಷ್ಪಿತಾಂ) ವಾಕ್ಯನ್ನು ವಿಡಂಬಿಸಿದ್ದಾನೆ. ಇಂತಹ ವಾಕ್ಕಿನ 'ಮನೀಷೀ : ಧೀರ' ವರ್ಗದ ನಗೆಯಾಡಿದ್ದಾನೆ. ವಿಮರ್ಶಾಯುಕ್ತ ವಿಚಾರ ಎಂದರೆ ಜೀವನದ ಮೂಲ್ಯಗಳ ವಿಚಾರ; ಯುಕ್ತಾಯುಕ್ತ ವಿಚಾರ. ಜೀವನಮೂಲ್ಯಗಳ ವಿಚಾರವು ಬಂದೊಡನೆ, ನಿನ್ನೆ-ಇಂದು-ನಾಳೆಗಳ ಲೆಕ್ಕವು ಬಂದಿತು! ಆದರೆ, ಈ ನಾಗ-ಶಕ್ತಿಗೆ, ಮಾತ್ರಾಸ್ಪರ್ಶದೊಡನೆ ಅಂತರಂಗದಲ್ಲಿ ಮೂಡುವ 'ಸಂದೃಕ್' ದೃಷ್ಟಿಗಿಂತ ಬೇರೆಯಾದ ದೃಷ್ಟಿ ಬೇಕಾಗಿಲ್ಲ! ನಿನ್ನೆ-ನಾಳೆಗಳ ಸಂದರ್ಭದ ವಿಮರ್ಶಾ ವಿಚಾರವು-ಮೂಲ್ಯಗಳ ಪ್ರಜ್ಞೆ, ನಾಗ-ಶಕ್ತಿಯನ್ನು ಬಂಧನಕೊಳ್ಳಗಾಗಲು ಒತ್ತಾಯಪಡಿಸುತ್ತದೆ. ನಾಗನೊ, ಬಂಧನಾತೀತನಾಗಿರುವ ಹುಟ್ಟು ಪ್ರವೃತ್ತಿಯವನು! ಈ ಕಾರಣದಿಂದಲೆ 'ಯತ್ ಪ್ರೈರತ'ವಾದೀ ಪ್ರೇಷಿತ-ದೇವೇಷಿತ ಪಂಥಗಳಿಗೆ ಇತಿಹಾಸವು ಮಾನ್ಯವಿಲ್ಲ. ಜಗತ್ತಿನಲ್ಲಿಯೆ ಎಲ್ಲ ವಿರಕ್ತ ಪಂಥಗಳೂ, ಪ್ರಾಚೀನ ಕಾಲದಿಂದ, ಇತಿಹಾಸವನ್ನು ಕಡೆಗಣಿಸುತ್ತ ಬಂದಿರುವ ಕಾರಣವೇ ಇದು.

ದಿವ್ಯ ಸಂದೃಕ್ ಶಕ್ತಿ ಪ್ರಾಪ್ತವಾಗುವುದು, ಅಂಗೈನಲ್ಲಿಯಂತೆ, ನಿನೆ-ಇಂದು-ನಾಳೆಗಳನ್ನು ನಿಡಿದಾಗಿ ನೋಡಿ, ಪ್ರಪಂಚದ ಏನೆಲ್ಲ ರಹಸ್ಯಗಳನ್ನು ಅರಿತು ಹೇಳಬಲ್ಲರು. ಅವರು ತ್ರಿಕಾಲ ಜ್ಞಾನಿಗಳು, ಅಂತರ್-ಜ್ಞಾನಿಗಳು ಆದ ದಿವ್ಯ(ಸಂದೃಕ್) ದೃಷ್ಟಿಯ 'ಕಣಿ' (ಜ್ಞಾನಿ)ಗಳು ಇರುವಾಗ, ಮೇಧಾವಿ ಧೀರ ಮನೀಷಿಗಳ ವಿಮರ್ಶಾಯುಕ್ತ ವಿಚಾರವು ಯಾರಿಗೆ ಬೇಕು? ಆದರೂ ಗೀತೆಯ ಭಗವಂತನಿಗೆ ಮೊದಲು ನಗೆಯ ವಿಷಯವಾದ 'ಪುಷ್ಪಿತಾಂ ವಾಚಂ', ಗೀತೆಯ ಕೊನೆಯಲ್ಲಿ ಆ ಭಗವಂತನಿಂದಲೇ ಪ್ರಶಂಸಿತವಾಗಿದೆ! 'ಏತತ್ ವಿಮೃಶ್ಯ ಆಶೇಷೇಣ' ಎಂದು ವಿಮರ್ಶೆ ಮಾನ್ಯತೆ ಪಡೆದುದೂ ಉಂಟು! ಆದರೆ, ಒಂದು ನಾಲಗೆಯಿಂದ ವಿಮರ್ಶೆಯನ್ನು ಗೌರವಿಸಿದಂತೆ ಮಾತನಾಡುವ ಈ ಭಗವಂತನೇ 'ಸರ್ವಧರ್ಮಾನ್ ಪರಿತ್ಯಜ್ಯ, ಮಾಮ್ ಏಕಂ ಶರಣಂ ವ್ರಜ' ಎಂದೂ ಆಜ್ಞಾಪಿಸಿದ್ದಾನೆ. 'ನರ'ನಿಗೆ! ಮತ್ತೆ ತಾನೇ ಈ ಮೊದಲು ಹೇಳಿದ್ದಾನೆ : 'ತಾನು ಲೋಕ ಭಕ್ಷಕ ಕಾಳೋರಗನು' ಎಂದು! ಗೀತೆಯೊಳಗಿನ ಈ ಬಗೆಯ ಇನ್ನಾಲಗೆಯ ಮಾತುಗಳಿಂದ, ಈ ಗ್ರಂಥಸ್ಥ ವಿಚಾರಗಳು, ಆದಿಶೇಷನ 'ತತ್'ತ್ವ ಪ್ರಣಾಲಿ ಎಂಬುದನ್ನು ಸಿದ್ಧಪಡಿಸದೆಯೆ ಇದು ತನ್ನ ತಾನೆ ಗಮನಕ್ಕೂ ಬರಬಹುದಾಗಿದೆ.

ನಾಗ-ಶಕ್ತಿ : ನಿಸರ್ಗಸ್ಥ ಜೀವಶಕ್ತಿ. ಇದು ತಾನು ಉಳಿಯುವುದಕ್ಕಾಗಿ ಯಾವ ಬೇಕಾದ ರೂಪ ಆಕೃತಿಯನ್ನೂ, ನೋಡ-ನೋಡುವದರೊಳಗಾಗಿ ತಾಳುತ್ತದೆ. 'ವಿಮರ್ಶೆ ಬೇಕು' ಎಂಬ ಭೂಮಿಕೆಯು ಮುಗಿಯುವುದರೊಳಗೆ, 'ವಿಮರ್ಶೆಯ ಸುತ್ತು ದಾರಿ ನಿನಗೆ ಯಾತಕ್ಕೆ?' ಎನ್ನುತ್ತದೆ. 'ತಾವು ಬುದ್ಧಿವಂತರು' ಎಂದು ಬಗೆದ ತಿಳಿಗೇಡಿಗಳ ದಾರಿ ಇದು. ಆದಕಾರಣ, ಶರಣೆಂದು ದಾಸ್ಯಭಾವದಿಂದ ಸೇವಿಸಿ ಗುರು-ಕರುಣೆಗೆ ಪಾತ್ರರಾಗಿ ಸಿದ್ಧಿಯನ್ನು ಪಡೆಯುವುದೇ ಶ್ರೇಷ್ಠ ಮಾರ್ಗ, ಎಂದು ಮರುಕ್ಷಣದಲ್ಲಿಯೆ ಹೇಳುವ ಭಗವದ್ಗೀತೆಯ ಈ ತಂತ್ರ : ಮಂತ್ರ : ಮಾಟ ತುಂಬ ಸಂಭ್ರಮಕಾರಕವಿದೆ. ಋಗ್ವೇದದಲ್ಲಿ ಕುಮಾರೀ (ಸ್ತ್ರೀ) ರೂಪದಲ್ಲಿ ಇಂದ್ರಾದಿಗಳ ಮಾತೆ, ದೇವಮಾತೆಯಾಗಿ ಮೆರೆದ ಕಪರ್ದಿ : ಕೇಶಿ : ಅದಿತಿದೇವಿ, ಅದೃಶ್ಯಳಾಗುತ್ತಾಳೆ. ಆಗ ಆ ನಾಗಶಕ್ತಿಯ, ಕಪರ್ದಿ : ಕೇಶಿ : ಪುರುಷವೇಷಧಾರಿಯಾಗಿ ಆ ಲೋಕಮಾತೆಯ ಸ್ಥಳದಲ್ಲಿ ಬರುತ್ತಾಳೆ. ಅಖಂಡಿತ ನಾಗಶಕ್ತಿ ಉಭಯಲಿಂಗಿ, ಈ ಮೂಲಭೂತ ಸಂಗತಿ ಮರೆತರೆ ಲಿಂಗಪಲ್ಲಟದ ಈ ಚಮತ್ಕಾರದ ಅರ್ಥ : ಸ್ವಾರಸ್ಯ ತಿಳಿಯಲಾರದು. ಲೋಕಪಿತ=ಪ್ರಜಾಪತಿ ಎಂಬ ಸಂಕೇತದಿಂದ ಕಾಣಿಸಿಕೊಳ್ಳುವ ಈ ನಾಗಶಕ್ತಿ, ವಿಶ್ವಕರ್ಮ, ದಕ್ಷ, ಪುರುಷ ಎಂಬ ನಾಮರೂಪದಿಂದಲೂ ಹೊರಗೆ ಬಂದು ಇದೆಲ್ಲವೂ ಒಂದೆಯೊ ಬೇರೆಯೋ? ಎಂಬ ಸಂಭ್ರಮವನ್ನು ಉಂಟುಮಾಡುತ್ತಿದೆ. ಆದರೆ, ಮುಂದಿನಕಾಲದಲ್ಲಿ ವೇದದ ಹೊರಗೆ ವಿದೇಹೀ ಜನಕ, (ಜನಿ:) ಜನಕೀ=ಜಾನಕಿ (ಅಯೋನಿಸಂಭವೆ) ಈ ಸಂಕೇತಗಳ ಮೂಲಕ: ಈ ಕೇಶೀ (: ಪುರುಷ=ಸ್ತ್ರೀ) ನಾಗಶಕ್ತಿಯ (undifferentiated) ಮೂಲ 'ಅದಿತಿ' ಸ್ವರೂಪದ ದರ್ಶನವಾಗುತ್ತದೆ. ವಿಶ್ವದ ನಾಭಿ: ಮೂಲಸ್ಥಾನ-ಕ್ಷೇತ್ರಸ್ಥ ಆದಿ ದೈವತವೆ ಇದು, (: ಸಲಿಲಸ್ಥವೇತಸ : ಸ್ಕಂಭ) ಎಂಬ ಖಾತ್ರಿಯಾಗುತ್ತದೆ. 'ನನ್ನ ಅಧ್ಯಕ್ಷತೆಯಲ್ಲೇ ಈ ಚರಾಚರ ಪ್ರಪಂಚದ ಪ್ರಸವವು ನಡೆದಿದೆ.' : ಮಯಾಧ್ಯಕ್ಷೇಣ (ಪ್ರ) ಸೂಯತೇ ಸಚರಾಚರಮ್' ಎಂಬ 'ಭಗ'ವಂತನು ಸಾರಿದುದರಲ್ಲಿ ಎಳ್ಳನಿತೂ ಅತಿಶಯೋಕ್ತಿ ಇಲ್ಲ, ಎಂದು ಮನವರಿಕೆಯಾಗುತ್ತದೆ.

'ವಿಶ್ವಜನನಿ' (ನಪ್ತೃ : ಜನಕನಿಂದ ಯುಕ್ತಳಾದ): ಅಖಂಡಿತೆ: ಅದಿತಿ ಎಂದೂ 'ಯತ್ ಜಾತಂ ಯತ್ ಜನಿತ್ವಂ' ಎಂದೂ ಸಂಸ್ತುತ ಕಪರ್ದೀ (ಅದಿತಿ) ದೇವಿಯು ಲೋಕನಿಂದೆಗೆ ಅಳುಕಿ ಸಲಿಲರೂಪಿಯಾಗಿ ಪ್ರಪಂಚದ ಪಿಂಡಪಿಂಡಗಳಲ್ಲೆಲ್ಲ ತತ್-ತತ್ ಸ್ವರೂಪದಲ್ಲಿ ಅಡಗಿದ ಬಳಿಕ, ಆ ಕೇಶೀ-ಸ್ತ್ರೀ ಸಂಕೇತದ ಸ್ಥಳದಲ್ಲಿ ಕೇಶೀ-ಪುರುಷದೇವನು ಈ ಪ್ರಪಂಚ 'ಸ್ವಾಮಿ'ಯಾದನು. ಈ ಕೇಶೀ: ಪುರುಷನ ಮಹಾತ್ಮ್ಯ ನಿವೇದನೆಗೆ ಋಗ್ವೇದದಲ್ಲಿ ಒಂದು ಇಡೀ ಸೂಕ್ತವೇ ಮೀಸಲಾಗಿದೆ.[2] ಈ ಕೇಶಿಯು ಸಂದೃಕ್ : ಏಕಾಕ್ಷನು! 'ಸಹಸ್ರಾಕ್ಷ' ಪುರುಷನ ಸ್ತೋತ್ರದಲ್ಲಿ. ಈ ಏಕಾಕ್ಷ : ಕಾಣಾ ದೇವತೆಯ ಮಹಾತ್ಮ್ಯವು ಪೂರ್ಣವಾಗಿ ಹಿಡಿಸದ್ದರಿಂದ ಮಿಕ್ಕುಳಿದ ಆಶಯವನ್ನು ಈ ಕೇಶೀಸ್ತೋತ್ರದಲ್ಲಿ ಹುದುಗಿಸುವ ಪ್ರಯತ್ನವಾದುದು ಕಾಣುತ್ತದೆ.

ಈಗ ವಿವರಿಸಿದಂತೆ ಅದಿತಿಯು ಅದೃಶ್ಯವಾಗುವುದರೊಡನೆಯೆ, ಈ ಕೇಶೀ : ಪುರುಷನ ಉದಯವಾಯಿತು, ಎಂಬುದು ನಿಜವಿದ್ದರೆ, ಇವನು ನಾಗ:ಚಂದ್ರನೇ ಇರಲಿಕ್ಕೆ ಬೇಕಾಗುತ್ತದೆ. ಹಾಗಾದರೆ ಇದು, ಕೇಶೀ: ಮುನಿಯ ಸೂಕ್ತಸ್ಥ ವರ್ಣನೆಗೂ ಸರಿಹೋಗುತ್ತದೆಯೆ? ಅದಿತಿಯು ಕಪರ್ದಿ; ಸ್ತ್ರೀರೂಪಳು. ಆದಕಾರಣ, ಆ ದೇವಿ ಕೇಶಿನೀ ಆಗಿರುವುದೂ ನಿಜ. ಅದಿತಿಯು ಸಲಿಲದಲ್ಲಿ ಸೇರುತ್ತಲೆ ಆಗಲೆ, 'ಮಾರ್ತಾಂಡ' (ನಾಮಾನಂ) ಎಂಟನೇಯ ಪುತ್ರನನ್ನು ಹೆತ್ತಳು ಎಂಬ ಒಂದು ವರ್ಣನೆಯುಂಟು.[೮] ಅದಿತಿಯು 'ಸರ್ಪ' ಸ್ವರೂಪಳು ಎಂಬ ಹಾಗಿನ ಉಲ್ಲೇಖಗಳ ವಿಚಾರವು ಈ ಮೊದಲು ಆಗಿದೆ; ಅದಿತಿಯು ಸರ್ಪ ಸ್ವರೂಪಳೆಂದರೆ ಅವಳು ಜನ್ಮವಿತ್ತ ಶಿಶು ಸರ್ಪವೇ ಇರಬೇಕಾಯಿತು. ಸರ್ಪ ಮತ್ತು ವಾಯು (: ವಾತ) ಇವೆರಡರ ನಡುವಿನ ಅನ್ಯೋನ್ಯ ಸಂಬಂಧವನ್ನು ಸೂಚಿಸುವ ಋಗ್ವೇದದ ಉಲ್ಲೇಖಗಳನ್ನು, ಗ್ರೀಕ್ ಪವಾಡಕಥೆಗಳ ಆಧಾರದಿಂದಲೂ ಸ್ಪಷ್ಟೀಕರಿಸಿದ್ದಾಗಿದೆ. ವಾಕ್‌ದೇವಿಯರು ಚಂದ್ರಿಕಾ ಮತ್ತು ಸರ್ಪ ಸೂಚಕರು. ಇವರ ಸಂಗಾತಿ ಎಂಬ ಮರುತ: ಗಾಳಿ,' 'ಅಹಿ-ಭಾನವಃ' ಎಂದು ವರ್ಣಿತರು, ಸರ್ಪಸ್ವರೂಪರೇ ಅಹುದು. ಇವರನ್ನು ರುದ್ರಿಯರು ಎಂದುದರಲ್ಲೂ ಔಚಿತ್ಯವಿದೆ. ಅದಿತಿಯು ಸಲಿಲ ಸ್ವರೂಪಿ; ಅವಳ ಒಡಲೊಳಗಿಂದ ಹೊರಬಂದವನು: ಸರೀಸೃಪ ಇವನು ನೀರೊಳಗಿನ ಬೆಂಕಿ, 'ಸರ್ಪ' ಎಂಬ ಕಾರಣದಿಂದ ಮತ್ತು ಸಲಿಲ: ನೀರೊಳಗಿಂದ ಹೊರಬಂದ ಶಿಶುವಾದ ಕಾರಣ ಚಂದ್ರ.

ಮುನಿಸೂಕ್ತದ ಮೊದಲ ಋಚೆಯಲ್ಲಿ 'ಕೇಶೀ ಅಗ್ನಿಂ ಭಿಭರ್ತಿ'; 'ಕೇಶೀ ವಿಷಂ ಭಿಭರ್ತಿ ರೋದಸೀ' ಎಂದು ಮೊದಲ ಚರಣದಲ್ಲಿ ಹೇಳಿದೆ. ಇದರಲ್ಲಿ ಮೊದಲಿನ ಎರಡೂ ವಿಶೇಷಣಗಳು ನಾಗ ಮತ್ತು ಚಂದ್ರನಿಗೆ ಸಂಪೂರ್ಣವಾಗಿ ಸರಿ ಹೋಗುತ್ತವೆ. ಈ 'ನಾಗ': ಸಂಕೇತವು 'ಪುರುಷವಾಚಕವಿದೆ. ಆದುದರಿಂದ, ಇದು ಕೇಶಯುಕ್ತ; ಚಂದ್ರನು ಕಿರಣರೂಪೀ ಕೇಶಗಳುಳ್ಳವನು. ವೇದದಲ್ಲಿ 'ಸಪ್ತ' (: ಸರಣಶೀಲ) ರಶ್ಮಿ: ಕಿರಣ : ಕೇಶ ಇವನ್ನೆ ಸರ್ಪ=(ಸ್ತ್ರೀ ಹಾಗೂ ಪುಂ) ಉಭಯಲಿಂಗಿಯಾಗಿ ಕಂಡಿದ್ದುಂಟು. ಈ ಕಾರಣದಿಂದಾಗಿಯೂ ಈ 'ಕೇಶಿ' ಏಕಕಾಲಕ್ಕೆ ಕುಮಾರಿಯು ನಿಜ; ಕುಮಾರನೂ ನಿಜ. ಸಪ್ತ : ರಶ್ಮಯಃ=ಸಪ್ತ : ಋಷಯಃ ಎಂದುದುಂಟು. 'ಸಪ್ತ' ಇದನ್ನು ಸ್ವ-ಸಾ (: ತನ್ನ ಗತಿಯಿಂದ ತಾನೇ ಸರಿಯುವ ಸ್ವ-ಗತಿಮಂತ) ಎಂದಿರುವಂತೆ, ಸಪ್ತ : ಮಾತರಃ ಎಂದುದೂ ಉಂಟು! ಸಪ್ತ: ಸಿಂಧವಃ! ನದಿ : ಸ್ವಗತಿಯಿಂದ ನಡೆವುವು; ಆದ್ದರಿಂದ ಅವು ಸ್ವ-ಸೃ!

ಕೇಶ=ಕಿರಣ, ಇದು ವಾದತೀತ ಅರ್ಥ. ಇನ್ನು ಕಿರಣಗಳನ್ನು ಉಭಯಲಿಂಗಿಯಾಗಿ ವರ್ಣಿಸಿರುವ ದ್ವ್ಯರ್ಥೀ ಋಚೆಯು, ಋಗ್ವೇದದ 'ಮುಂಡಿಗೆ : ಕೂಟಪ್ರಶ್ನೆಗಳ ಒಂದು ಸೂಕ್ತದಲ್ಲಿ ಉಂಟು. ಕಾಲ (ಸರ್‌ಪ)ದ ಗತಿಯನ್ನು ನಾನಾ ರೀತಿಯಲ್ಲಿ ಚಿತ್ರಿಸುವ ಸಂದರ್ಭದಲ್ಲಿ, ಆದಿತ್ಯನ ಕಿರಣಗಳನ್ನು ಉಭಯಲಿಂಗಿಯಾಗಿ ಕಲ್ಪಿಸಿದ್ದಾಗಿದೆ.[೬] ಸ್ತ್ರಿಯಃ ಸತಿಃ, ತಾನ್ ಪುಂಸಃ ಆಹುಃ! ಇಲ್ಲಿ 'ರಶ್ಮಿ' (ಕಿರಣ) ಎಂಬ ಪದವು ಅಭಿಪ್ರೇತವಿದೆ. ಇದು ಉಭಯಲಿಂಗೀ ಸಂಕೇತವಾಗಿದೆ! 'ಅವಿಷ್ಟ ಲಿಂಗತ್ವಾತ್ ಸ್ತ್ರೀಲಿಂಗತಾ' ಎಂದು ಭಾಷ್ಯ ಹೇಳುತ್ತದೆ. ಕಿರಣವು ಭೂಮಿಯ ನೀರನ್ನು (ಗರ್ಭದಲ್ಲಿ) ಧಾರಣ ಮಾಡಿಕೊಂಡು ತರುತ್ತದೆ. ಈ ಸಂದರ್ಭದಿಂದ ರಶಿ ಸ್ತ್ರೀರೂಪಿ ಆಗುತ್ತದೆ. ವೃಷ್ಟಿರೂಪದಿಂದ ಸೇಚನಗೆಯ್ಯುವಾಗ ಈ ರಶ್ಮಿ ಪುಲ್ಲಿಂಗಿ! ಈ ಕಾರಣದಿಂದ 'ರಶ್ಮಿ'=ಕೇಶಿನ್

ಪುಂ-ಸ್ತ್ರೀಲಿಂಗಿ ತಾನೆ? ಈ ರಶ್ಮಿ : ಕೇಶಗಳನ್ನು ಸತಿಃ ಎಂದಿರುವಲ್ಲಿ ಮತ್ತೆ ಕಣ್ಣುಮುಚ್ಚಾಲೆ ಆಟವಿದೆ. ಸತ್ ಷಷ್ಠೀ (ವ್ಯಾಕರಣ) ಪ್ರಯೋಗದಂತೆ ತೋರುವ 'ಸತೀಃ', ಇದು ದೇವಾರ್ಪಿತ ಕುಮಾರೀ ವರ್ಗ ಸೂಚಕ ಸಂಕೇತವಾಗಿದೆ. ಈ ಅರ್ಥಧ್ವನಿ 'ಅಂಧರಿ'ಗೆ ಹೊಳೆಯಲಾರದು. ಈ ಅರ್ಥವನ್ನು ಅರಿತಲ್ಲಿ 'ಸಃ ಪಿತುಃ ಪಿತಾ ಅಸತ್' ! ಇದು ಫಲಶ್ರುತಿ. ಈ ಮುಂಡಿಗೆಗಳಲ್ಲಿಯೆ ಮುಂದೆ

'ಸಪ್ತಾರ್ಧ ಗರ್ಭಾಃ ಭುವನಸ್ಯರೇತಃ ವಿಷ್ಣೋಃ ವಿಧರ್ಮಣಿ ಪ್ರದಿಶಾ ತಿಷ್ಠಂತಿ'

ಎಂಬ ಕೂಟಪ್ರಶ್ನೆಯೂ ಉಂಟು.

ಪ್ರಸ್ತುತಃ ಈ ಸೂಕ್ತಸ್ಥ ಕೇಶೀಯ ಆಕೃತಿಯನ್ನು ಗ್ರಹಿಸಿಕೊಳ್ಳಲು 'ಕೇಶ' : ರಶ್ಮಿ ವಿಚಾರವು ಅವಶ್ಯವಿದೆ. ಏಕೆಂದರೆ ಈ ಸೂಕ್ತದ ಕೇಶಿಗಳನ್ನು ವಾತ-ರಶನಾಃ (ಮುನಯಃ) ಎಂದು ಹೇಳಲಾಗುತ್ತದೆ. 'ರಶ್ಮಿ ಉಭಯ ಲಿಂಗಿ ಎಂಬುದನ್ನು ಸದ್ಯಕ್ಕೆ ನೆನಪಿಟ್ಟರೂ ಸಾಕು. ರಶನ=ಹಗ್ಗ=ರಶ್ಮಿ ಎಂದೂ ಸೂಚಿಸುವ ಉದ್ದೇಶ ಕಾಣುತ್ತದೆ. ರಶ್ಮಿ ಹಾಗೂ ರಶನ ಇವೆರಡೂ ಒಂದೇ ಶಬ್ದಮೂಲದಿಂದ ನಿಷ್ಪನ್ನವಾಗಿರಬೇಕು ರಶನಕ್ಕೆ ರಶ್ಮಿ (ಕಿರಣ) ವಾಚಕ ಅರ್ಥವಿರುವ ಪ್ರಯೋಗಗಳೂ ಉಂಟು ಮೋನಿಯರ್ ವಿಲಿಯಂಸ್ ವಾತ-ರಶನ ಎಂದರೆ 'ಗಾಳಿಯ ಹಗ್ಗ' ಎಂದು ಅರ್ಥವಾಗುತ್ತದೆ. ಹಾವನ್ನು 'Biting Rope' ಎಂದು ವರ್ಣಿಸಿದ್ದನ್ನು, ವ್ಹೊಜೆಲ್ ಎತ್ತಿ ಹೇಳಿದ್ದಾರೆ. 'ಸಪ್ತ'; ಸರಣಶೀಲ ರಶ್ಮಿ ಇದನ್ನು ಸರ್ಪ ರೂಪದಲ್ಲಿ ಕಾಣುವ ಕವಿಗಳು ಇವರು. ಪ್ರಸ್ತುತ ಕೇಶಿನ್ ವಾತ-ರಶನರೂ, 'ಸಪ್ತ'ರೇ ಇದ್ದಾರೆ! ಅಂದಿನ ಈ ಸಮಯ'ವನ್ನೂ ಲೆಕ್ಕಿಸಿದಲ್ಲಿ ಈ ಕೇಶಿನಃ ನಾಗ: ಸರ್ಪ ಸ್ವರೂಪರೇ ಎಂಬ ಭಗೆಗೆ ಸಂದೇಹವೆ ಉಳಿಯುವುದಿಲ್ಲ. ಆದರೆ, ಇದನ್ನು ಬಾಯ್ಬಿಟ್ಟು ಹೇಳಿಲ್ಲ ಈ ವೇದ ಎಲ್ಲೆಲ್ಲೂ!

ಈ ಕೇಶಿಯ ಪ್ರತಿಮೆಯು ಎರಡು ಪಾತಳಿಯ ಮೇಲಿನ ಅರ್ಥಯುಕ್ತ ಶ್ಲಿಷ್ಟಪದಗಳುಳ್ಳದು ಆಗಿದೆ. ಈ ಕೇಶಿಯು (ಅದಿತಿಯ=) ಸಲಿಲ ಒಡಲೊಳಗಿಂದ ಹೊರ ಬಂದವನೆಂಬ ಕಾರಣದಿಂದ ಈತನು ಚಾದ್ರನೂ ನಿಜ ಅಂತರಿಕ್ಷದಲ್ಲಿ. ಅದರಂತೆ ಭೂಲೋಕದಲ್ಲಿ ಈ 'ಕೇಶಿನ್' ದೇವೇಷಿತ, (ವಾತ-ರಶನ: ವಾತ-ರಸನಾ) ವಾತ ಪ್ರೇರಿತ ವಾಕ್ಕಿನವನು (: ಕಣೆಯವನು) ಇದೂ ನಿಜ. ರಶನವು ರಸನಾ (ನಾಲಗೆ) ಎಂಬ ಶ್ಲೇಷಯುಕ್ತ ಅರ್ಥವಿರುವುದನ್ನು ಮೋನಿಯರ್ ವಿಲಿಯಂಸ್ ಕೋಶ ನಮೂದಿಸಿದೆ. ಕಪರ್ದಿ-ಅದಿತಿಯು 'ವಾಕ್'ದೇವಿ ಯಾದರೆ, ಈ ಕಪರ್ದಿ : ಕೇಶಿನ್ ಸಹ ವಾತರಸನನು; ವಾತದ ನಾಲಗೆಯವನು. ಗಾಳಿಸೇರಿ-ಆವೇಶಿತನಾಗಿ 'ಸತ್ಯ' ಕಾಣುವ ಶಕ್ತಿಯುಳ್ಳವನು.

ಈ ಕೇಶಿನ್ ರೋದಸಿಯ (ಭೂಮಿ-ಅಂತರಿಕ್ಷದ ನಡುವೆ) ಒಡಲಲ್ಲಿ 'ವಿಷಂ ಬಿಭರ್ತಿ' (ಚಂದ್ರನ ಪರವಾಗಿ) ಇವನು (ಅಮಾವಾಸ್ಯಾ ರೂಪದಲ್ಲಿ) ಪ್ರಳಯ : ಅಗ್ನಿ ಸ್ವರೂಪನು; ಬೆಳ್ದಿಂಗಳ ಮಧುಸ್ರವಿಸಿ ಸ್ತ್ರೀ ಪುರುಷರಲ್ಲಿ ಹುಚ್ಚು ತುಂಬುವನು; ನರರೂಪೀಕೇಶನ್ 'ನೀರ'ನು ನಾಗನು, ಸಲಿಲ (ವಿಷ)ವನ್ನು ಸೇಚನೆಗೆಯ್ಯುವನು. 'ಸೃಷ್ಟಿಗಿಂತ ಪ್ರಳಯ ಮೊದಲು' ಎಂಬ ಶ್ರದ್ಧೆಯು ಇಲ್ಲಿ ವ್ಯಕ್ತವಾಗಿದೆ. ಕೇಶಿಯ ಸ್ವರೂಪ-ಸಾಮರ್ಥ್ಯದ ವರ್ಣನೆಯ ಎರಡನೆಯ ಚರಣವು ಹೀಗಿದೆ ;

"ಕೇಶೀ ವಿಶ್ವಂ ಸ್ವಃ ದೃಶೇ, ಕೇಶೀ ಇದಂ ಜ್ಯೋತಿಃ ಉಚ್ಯತೇ"

ಚಂದ್ರನ ಪರವಾಗಿ, ಈತನು ತನ್ನ ಕಿರಣಗಳಿಂದ ಸ್ವರ್ ಲೋಕವು ಕಾಣುವಂತೆ ಮಾಡುತ್ತಾನೆ; ಆದುದರಿಂದ ಇದನ್ನು ಕಾಣುವಂತೆ ಮಾಡುವ ಈ ಬೆಳಕನ್ನು 'ಜ್ಯೋತಿ' ಎಂದು ಹೇಳಲಾಗುತ್ತದೆ. ಭೂಲೋಕದ ಕೇಶೀ : ಪುರುಷನು ತನ್ನ ಪುಂ ಶಕ್ತಿಯಿಂದ ಸ್ವರ್ಗ (: ಆ-ನಂದ) ಲೋಕ ಕಾಣಿಸುತ್ತಾನೆ. (ಕಣೆ) ಕಾಣುವ ಈ (ಸಂ-ದೃಕ್) ಶಕ್ತಿಯನುಳ್ಳ ಈ ಕೇಶಿಗೆ, 'ಜ್ಯೋತೀಃ' (ಸ್ವರೂಪನು) ಎಂದು ಬಗೆಯಲಾಗುತ್ತದೆ.

ಈ ಕೇಶಿಗಳು ವಾತರಶನರು : ಗಾಳಿಗುದುರೆಯನ್ನು ಏರುವವರು; 'ರೋದಸೀ' (ಒಡಲೊಳಗೆ)ಹೊಕ್ಕು ನೆಗೆದಾಡುವವರು.

"ಗಾಳಿ ಕುದುರೆಯನ್ನೇರಿದ್ದೇವೆ. (ವಾತಾನ್ ಆ ತಸ್ಥಿಮ). ನಮ್ಮ (ಹೊರ) ದೇಹವನ್ನು
ಮಾತ್ರ, ಎಲೈ ಮರ್ತ್ಯರೇ (ಮರ್ತಾ ಸಃ), ಕಾಣುತ್ತೀರಿ."

ಅಂತರಿಕ್ಷಸ್ಥ ನಮ್ಮನ್ನು ನೋಡಲಾರಿ ಈ ಋಚೆಯಲ್ಲಿ 'ವಾತ-ರಶನ' ಎಂಬ ಸಂಕೇತದ ಗುಹ್ಯಾರ್ಥವು 'ಮಾತು ಆಡಿದರೆ ಹೋಯಿತು; ಮುತ್ತು ಒಡೆದರೆ ಹೋಯಿತು' ಎಂಬ ಗಾದೆಯ ಸ್ವರೂಪದ್ದಾಗಿದೆ. ಗಾಳಿ ತುಂಬಿದ ಹಗ್ಗ (: ನಾಗ) ಆವೇಶಯುಕ್ತವಾದುದು. ಗಾಳಿಹೋದ ಟ್ಯೂಬ್ (ಸೈಕಲ್ಲು) ನಡೆಯಲಾರದು! ವಾತಸ್ಯ 'ಅಶ್ವ' ನೀರ್ಗುದುರೆ ಏರಿ 'ಅಪಾಂ ನಪ್ತ' 'ಅಂತರಿಕ್ಷ' ಹೊಕ್ಕಿದ್ದಾನೆ!

ಈ ಕೇಶಿಗಳ ಮಹಾತ್ಮ್ಯವನ್ನು ಹೀಗೆ ಪದರು ನುಡಿಗಳಲ್ಲಿ ಅಡಗಿಸಿ ಹೇಳುವ ಆವಶ್ಯಕತೆಯೇನು? ಅಂತರಿಕ್ಷಗಮನಾದಿ ಸಿದ್ಧಿಗಳನ್ನು ಪಡೆದವರೆಂಬ ಜಡೆ-ಸಿದ್ಧ-ಪುರುಷರ ಬಗೆಗೆ ಆದರ ಭಕ್ತಿಯು ಉಕ್ಕಿಬರುವಂತೆ ನೇರವಾದ ಪ್ರಾಂಜಲ ವರ್ಣನೆಯು ಇರಬೇಕಾದುದು ಅಗತ್ಯ. ಆದರೆ, ಹೀಗೆ ಇಬ್ಬಗೆಯ ಸಂದಿಗ್ಧಾರ್ಥದ ಪ್ರತಿಮಾ ಸಂಕೇತಗಳನ್ನು ಬಳಸುವಲ್ಲಿ, 'ಅ-ವಾಚ್ಯ' ವಿಚಾರಗಳೂ ಇದರಲ್ಲಿ ಅಭಿಪ್ರೇತವಿರುವವೊ, ಎಂಬ ಸಂದೇಹವುಂಟಾಗುತ್ತದೆ. ಅ-ನಿರ್ ವಾಚ್ಯವು, ಅ-ಚಿಂತ್ಯವೂ ಅ-ಗಮ್ಯವೂ ಇರಬಲ್ಲುದು. ಆದರೆ, ಅ-ನಿರ್‌ವಾಚ್ಯವು ಅ-ವಾಚ್ಯ ಸ್ವರೂಪದ್ದೂ ಇರುವ ಆವಶ್ಯಕತೆ ಏನುಂಟು? ನಿಜವಾಗಿಯೂ ನೇತಿ-ನೇತಿಯೆ ಇದ್ದರೆ ಈ ಸುತ್ತು-ಬಳಸಿನ ಮಾತು ಏತಕ್ಕೆ? ಅ-ವಾಚ್ಯವನ್ನು ಬಾಯಿಂದ ಉಚ್ಚರಿಸಿದ ಆ ರಸ ತತ್‌ತ್ವದ : 'ಸತ್' ರೂಪದ ಪ್ರತಿಮಾ: ಚಿತ್ರವು ಕಣ್ಣೆದುರು ನಿಲ್ಲಲು, ಆನಂದ 'ಕಂದದ': 'ಶಿಶು'ವಿನ ಸ್ಮೃತಿಯಂತೂ ಒತ್ತರಿಸಬೇಕು, ಎಂಬುದಕ್ಕಾಗಿ ಈ ಹಂಚಿಕೆಯಿದ್ದರೆ, ಈ ವಿಶ್ವ-ಮೂಲ ದರ್ಶನಕ್ಕಾಗಿ ಪ್ರಯೋಜನ ಪಡೆದಿರುವ ಈ 'ತಂತ್ರ'ವು ಅದ್ಭುತ ರಮ್ಯವೇ ಸರಿ! ಉದಾಹರಣೆಗಾಗಿ ಕೇಶಿಯ ನಡೆವಳಿಯನ್ನು ವರ್ಣಿಸುವ ಈ ಪ್ರತಿಮಾ ; ಸಂಕೇತ ನೋಡಿ : 'ಅಪ್ಸರಸಾಂ ಗಂಧರ್ವಾಣಾಂ ಮೃಗಾಣಾಂ ಚರಣೇ ಚರನ್' ಹೀಗೆಂದರೆ ಏನು?

'ಮಧ್ಯಮ' : ಪ್ರತಿಮಾ : ಸಂಕೇತದ ಮೂಲಕವಾಗಿ ಮಾನವನಿಗೆ ಪ್ರಪಂಚದ ಆಗು-ಹೋಗುಗಳ ಬಗೆಗೆ ಅರಿವು ಮೂಡಿದೆ. ಮಾಧ್ಯಮ : ಸಂಕೇತವೇ ಕಣ್ಣು. ಈ ಮಾನವ ವ್ಯಕ್ತಿಯೂ, ಒಂದು 'ಪ್ರತಿಮಾ' ಶಿಲ್ಪವೇ ಸರಿ. ತೀರ ಆರಂಭದಲ್ಲಿ ಈ ವ್ಯಕ್ತಿ, ತನ್ನಲ್ಲಿ ಆವಿರ್ಭವಿಸಿದ-ಆವೇಶವಾದ 'ಗಾಳಿ'-ಏನೊ ಒಂದು ಶಕ್ತಿ-ತನ್ನ ಮೂಲಕ ಪ್ರಾದುರ್ಭವಿಸುತ್ತದೆ, ಅದು ವ್ಯಕ್ತವಾಗತ್ತಿದೆ, ಎಂಬುದನ್ನು ಕ್ರಮವಾಗಿ ಅರಿತುಕೊಂಡಿತು. ಈ ವ್ಯಕ್ತಿಯಲ್ಲಿ ಸೇರಿದ 'ಗಾಳಿ'ಯ (ಅಥವಾ ಸರ್ಪ, ಚಂದ್ರ) ಉಪನಿಷತ್ತಿನಲ್ಲಿ ಗಂಧರ್ವ, ಏನೊಂದು ದೆವ್ವೊ (: ಅ-ಸುರ) ಅಥವಾ ದೇವತಾ ಶಕ್ತಿಯೊ ಮಾತನಾಡುತ್ತಿದೆ ಎಂದು. ಸುತ್ತಲಿನ ನೋಡುಗರಿಗೆ ಎನಿಸುತ್ತಿತ್ತು. ಆದರೆ, ಆ ವ್ಯಕ್ತಿಗೆ ತನ್ನ ಮೂಲಕ ಒಂದು 'ಕಣಿ' 'ಪವಾಡ' ನಡೆಯುತ್ತದೆ ಎಂಬ ಪ್ರಜ್ಞೆ, ಆ ಹಂತದಲ್ಲಿ ಸುತರಾಂ ಇರುತ್ತಿದ್ದಿಲ್ಲ. ಈಗ ಸಹ ಈ ಬಗೆಯ 'ಕಣಿ'ಯ ಪವಾಡ ಹಲಕೆಲವೆಡೆಗಳಲ್ಲಿ ನಡೆಯುತ್ತವೆ. ಆದರೆ ಇವು ಎಲ್ಲವೂ ಒಂದೇ ಆಕೃತಿಯವು ಇರುವುದಿಲ್ಲ.

ಮೈಲಾರದೇವರ ಜಾತ್ರೆಯಲ್ಲಿ 'ಕಣಿ'ಯ ಒಕ್ಕಣಿಕೆಯ 'ಸಮಯ'ದ ಆಚರಣೆ ಇಂದಿಗೂ ಹಲವು ಕ್ಷೇತ್ರಗಳಲ್ಲಿ ಜರುಗುತ್ತದೆ. ಅದು ನಡೆವ ಮುನ್ನ, ಏಳು ದಿನದಿಂದಲೆ ಆ ಒಕ್ಕಣಿಕೆಯ ಅರ್ಚಕ-ಭಕ್ತನು ಉಪವಾಸಾದಿ ವ್ರತಾಚಾರಣೆಯ ನಿರ್ಬಂಧ ಪಾಲಿಸುತ್ತಾನೆ. ಗೊತ್ತಾದ ಕ್ಷಣದ ಸುಮಾರಿಗೆ, ಆ ವ್ಯಕ್ತಿಯು ತನ್ಮಯತೆಯ ಭಾವನಿರ್ಭರದಿಂದ 'ಉನ್ಮದಿತ' ಮನಸ್ಕನಾಗಿ, ಆತನಲ್ಲಿ ಆವೇಶವು, ತಾನೆ ತಾನಾಗಿ ಹೊರಹೊಮ್ಮುವುದು ಕಾಣತೊಡಗುತ್ತದೆ. ಈ ವೇಳೆಗೆ, ಆ ಕಾರುಣಿಕ ಆಗುವ ಬಯಲಲ್ಲಿ ಲಕ್ಷಾಂತರ ಭಕ್ತಜನರು ಒಂದು ಗೂಡುತ್ತಿದ್ದರೂ ಗದ್ದಲ ಗಲಾಟೆ ಕೇಳಬರುವುದಿಲ್ಲ. ಎಲ್ಲರೂ ಆ ಕಾರುಣಿಕಕ್ಕಾಗಿ ಏರಿದ (ಬಿಲ್ಲ?) ಗಣೆಯ ಮೇಲಿನ ವ್ಯಕ್ತಿಯ ಒಕ್ಕಣೆಯನ್ನು ಕೇಳಲು ಏಕಾಗ್ರಚಿತ್ರದಿಂದ ಕೇಳುಗರಾಗಿ ನಿಂತಿರುತ್ತಾರೆ. ಆಗ ಆತನು, ತನಗೆ-ಸಂದ್ಯಕ್ಕಿಗೆ ತೋಚಿದ್ದನ್ನು ಒಡನುಡಿಯುವನು. ಇದೆ ಕಾರಣಿಕ : ಕಣಿ. ಇದು ಆದೊಡನೆ ಆ ಗಣೆಯಿಂದ ಅವನು ಜರಿಯುವನು-ಬೀಳುವನು. ಆಗ, ಅವನು ಇನ್ನು ಆವಿಷ್ಟನಂತೆಯೆ ಇರುವುದರಿಂದ, ಜನರು ಅವನನ್ನು : ದೇವಸ್ಥಾನಕ್ಕೆ ಎತ್ತಿ-ಕರೆದುಕೊಂಡು ಹೋಗಿ ಸಂತೈಸುವರು ಹಣ್ಣು ಹಾಲು ಕೊಡುವರು.

'ಕಣೆ' ಹೇಳುವ ಈ 'ಶಾಸ್ತ್ರ'ದ ನಡೆವಳಿಯ ಅರ್ಥವೇನು? ಎತ್ತರವಾದ 'ಗಣೆ' ಏರುವುದು ಏಕೆ? ಭೂಲೋಕದಿಂದ ಅಂತರಿಕ್ಷ ಲೋಕದಲ್ಲಿ ಸೇರುತ್ತಿರುವುದರ ಸಾಂಕೇತಿಕ ಆಚರಣೆ ಇದು. ಈ 'ಗಣೆ' ಕಣೆ, ಈ ಮೊದಲು ವಿವರಿಸಿರುವ ಸನಾತನ ಸ್ಕಂಭ : ಸ್ತಂಭದ ಪ್ರತೀಕವೇ ಸರಿ. ವ್ಯಕ್ತಿಗೆ 'ಕಣೆ'ಯ ಸಂದೃಕ್‌ದೃಷ್ಟಿ ಪ್ರಾಪ್ತವಾಗಲು ಗಣೆ ಏರುವ ಈ ಸಾಂಕೇತಿಕ ಆಚಾರ ವಿಧಾನವು ನಡೆಯುತ್ತದೆ. ಆ ಆಹ್ನಿಕ : ಕ್ರಿಯೆ, ಆಗ ನಮ್ಮನ್ನು, ಪುರಾತನ 'ಸಮಯ'ದ ಆವರಣದಲ್ಲಿ ಕೊಂಡೊಯ್ಯುವ ವಾತಾವರಣವನ್ನು ನಿರ್ಮಿಸುತ್ತದೆ. ಆ ಭಾವುಕತೆಯ ವಾತಾವರಣದಲ್ಲಿ ಧೂಪದೀಪಾದಿಗಳಿಂದಲೂ ಆ ದೇವತಾಮಹಾತ್ಮ್ಯದ ಪವಾಡ ಕಥೆಗಳಿಂದಲೂ ಉತ್ತೇಜಿತರಾದ ಪ್ರೇಕ್ಷಕರು ಆ ಸಂದರ್ಭದಲ್ಲಿ ದಿಕ್ಕಾಲದ ಆಚೆಗೆ ಹೋಗಿರುತ್ತಾರೆ. ವಾದ್ಯಗಳ ನಿನಾದದಿಂದ ವರ್ತಮಾನ-ಭೌತ (ಕಾಲದ) ಆವರಣ ಕಳಚಿ ಬೀಳುತ್ತದೆ. ಅಲ್ಲಿಯ ಒಟ್ಟಿನ ಆ ಏಕನಾದ ತತ್-ಮಯತೆಗೆ ಅನುಕೂಲವಾದ ಹಿನ್ನೆಲೆಯನ್ನು ನಿರ್ಮಿಸುತ್ತದೆ. ಈ 'ಗಣೆ'ಯನ್ನು ಏರುವ ಸಂಕೇತದಲ್ಲಿ ಎಷ್ಟೊಂದು ಅರ್ಥದ ಪದರಗಳು ಉಂಟು, ಎಂಬುದರ ಅರಿವು ಇಂದು ಉಳಿದಿಲ್ಲ! ಇದಕ್ಕೆ ಕಾರಣವಿದೆ; ಲೆವಿಸ್ಟ್ರಾಸ್ ಎಂಬ ತಜ್ಞನ ವಾಣಿಯಿಂದ ಇದನ್ನು ಕೇಳುವುದು ಲೇಸು:

> Those who ignore history condemn themselves not knowing the present; because historical development alone permits us to weigh and evaluate in their respective relation the elements present.[೧೦]

ಆದರೆ, ಇತಿಹಾಸಬೇಕು ಯಾರಿಗೆ? ಅರ್ಥದ ಸ್ಪಷ್ಟತೆ, ಅರ್ಥದ ಇತಿಮಿತಿ. ಅರ್ಥದ ಬೆಲೆ(: ಯೋಗ್ಯತೆ), ಅರ್ಥ-ಯುಕ್ತ ಸೌಂದರ್ಯ ಇವನ್ನು ಸ್ವಾಗತಿಸುವ 'ಸಾಕ್ಷಿ' ಭೂಮಿಕೆಯೆ ಮನು-ಕುಲಕ್ಕೆ ಇತಿಹಾಸವು ಬೇಕಾಗುತ್ತದೆ. ವಿಶ್ವಸ್ಥ ವಾಸ್ತವ 'ಸತ್ಯದ' ಹೆಣಿಕೆ ಅಥವಾ ಅದರ ರಚನೆ, ಕಟ್ಟಡವನ್ನು ಗ್ರಹಿಸಿಕೊಳ್ಳಲು-ಋತ : ಸತ್ಯದ ಸಮಗ್ರತೆಯ ಆಕಲನವಾಗಲು ಇತಿಹಾಸ ಬೇಕಾಗುತ್ತದೆ. ಆದರೆ, ಏನೊಂದು ಕ್ಷಣದ-ಅನುಪಮೇಯ ಎಂದು ಎನಿಸಿದ ಏನೊಂದು ಅನನ್ಯ ಸಾಧಾರಣ ಅಭಾವದ ಒಳಗೇ ಆಸಕ್ತಿ ಹೆಚ್ಚಿದವರಿಗೆ ಆ ನಿಗೂಢ ಏಕಾಂತಿಕ ಸ್ಮೃತಿಯ ಹೊರಗೆ ಏನೊಂದೂ ಬೇಡವೆನಿಸುತ್ತದೆ. ಈ ಗೂಢ ಅನುಭವಕ್ಕೆ ಕಾರಣವಾದ ಅನುಭವದ ಸ್ಮೃತಿಯ ಸಂದೃಕ್ಕಿನ ದೃಶ್ಯಕ್ಕೇ ಮಾರುಹೋದವರಿಗೆ, ಪ್ರಪಂಚವೆಲ್ಲ ಅರ್ಥಶೂನ್ಯ ಅಥವಾ ಮೃತವತ್ ಎಂಬ ಭಾವನೆ ಮೂಡಿ ಅದು ತಾನೇ ತಾನಾಗಿ ಆ ವ್ಯಕ್ತಿಯನ್ನು ಕವಿದದ್ದಾದರೆ ಈ ಪುರೂರವ-ಮಾದರಿಯ 'ನರ'ರಿಗೆ ಇತಿಹಾಸ ಅ-ಪಥ್ಯವಾಗಲೇ ಬೇಕಷ್ಟೆ? ಈ ಕಾರಣದಿಂದಲೆ ಈ ಸಂದೃಕ್ (intuition) ಭೂಮಿಕೆಯ ವಿಚಾರ-ತತ್ತ್ವಜ್ಞಾನದಲ್ಲಿ ಇತಿಹಾಸಕ್ಕೆ ಬೆಲೆ ಕಡಿಮೆ : ಧಾರ್ಮಿಕ ಶ್ರದ್ಧೆಗಳು ತಮ್ಮ ಅಭಿಪ್ರಾಯದ ಆಧಾರಕ್ಕಾಗಿ ಸಾಂಪ್ರದಾಯಿಕ ಪವಾಡ ಕಥೆಗಳನ್ನೆ ಇತಿಹಾಸದ ಮಟ್ಟಕ್ಕೆ ತಂದು ನಿಲ್ಲಿಸುವ ಹಂಚಿಕೆಗಳನ್ನು ಹುಡುಕಿಕೊಂಡಿರುವುದು ಕಾಣುತ್ತದೆ. ಪುರಾಣ ಮತ್ತು ಇತಿಹಾಸ ಇವೆರಡರ ನಿರ್ದೇಶವು ಅಧ್ಯಯನದ ವಿಷಯವೆಂದು ಅಥರ್ವವೇದದಿಂದ ಬೃಹದಾರಣ್ಯಕದ ವರೆಗೂ ಇದ್ದುದು ಕಾಣುತ್ತದೆ. ನಿರುಕ್ತಕಾರನ 'ಇತಿ ಐತಿಹಾಸಿಕಾಃ' ಎಂಬ ಉಲ್ಲೇಖಗಳಿಂದ, ವೇದಸೂಕ್ತಗಳನ್ನು ಐತಿಹಾಸಿಕ ಪದ್ಧತಿಯಿಂದ ಅರ್ಥಯಿಸುವ ಒಂದು ವಿಚಾರ ಶಾಖೆಯೂ ಇದ್ದಿತೆಂದು ನಿಶ್ಚಿತವಾಗಿ ಗೊತ್ತಾಗುತ್ತದೆ. ಆದರೆ, ಉಪನಿಷತ್ಕಾಲದಲ್ಲಿಯೇ ಭಕ್ತಿ ಹಾಗೂ ನಚಿಕೇತ ಸಿದ್ಧಿಯ-'ಸ್ಥಿತ' ಪ್ರಜ್ಞಾವಾದೀ ಅನುಭಾವಮಾರ್ಗದ ಪ್ರಭಾವವು ಹೆಚ್ಚಾಗತೊಡಗಿದ ಬಳಿಕ, ಇತಿಹಾಸದ ಹೆಸರು ಲುಪ್ತವಾಗುತ್ತದೆ. ಐತಿಹಾಸಿಕ ಸ್ವರೂಪದ ಗ್ರಂಥಗಳೆಂದು ಬಗೆಯಲಾಗುವ ಮಹಾಭಾರತ ರಾಮಾಯಣಗಳೂ ಇದಕ್ಕೆ ಅಪವಾದವಲ್ಲ. ಬಾಳುಹಾಳು ಎಂಬ ವೈಚಾರಿಕ ತಳಪಾಯ! ವಿವರಣಾದಿಗಳಲ್ಲಿ ಪ್ರಚಾರಕ ತಂತ್ರ! ಇದನ್ನೆಲ್ಲ ಬಳಸಿಯೂ ಐತಿಹಾಸಿಕ ಸ್ವರೂಪದ ಗ್ರಂಥ, 'ಪಂಚಮವೇದ' ಎಂಬ ಮಟ್ಟದಲ್ಲಿ, ಮಹಾಭಾರತದ ಪ್ರಭಾವವನ್ನು ಬೆಳಿಸಲಾಗಿದೆ. ತಳಪಾಯದಲ್ಲಿ ದಿವ್ಯ ಆಧ್ಯಾತ್ಮಿಕ ಪ್ರತಿಮಾ : ಸಂಕೇತಗಳನ್ನುಳ್ಳ ರಾಮಾಯಣವೂ ಐತಿಹಾಸಿಕ ಘಟನೆಯ

ಮೇಲೆ ರಚಿಸಲ್ಪಟ್ಟ ಶ್ರೇಷ್ಠ ಐಹಿಕ ಜೀವನಾದರ್ಶಗಳ ಮಾದರಿಗಳನ್ನುಳ್ಳ ಮಹಾಕಾವ್ಯ ಎಂದು ಬಗೆಯಲಾಗುತ್ತದೆ! ಇವೆರಡರಲ್ಲೂ ಅನ್ಯನ್ಯ ಸಾಧಾರಣ ಪ್ರತಿಭೆಯನ್ನು ವ್ಯಕ್ತಪಡಿಸುತ್ತಿರುವ ರಹಸ್ಯಾರ್ಥಯುಕ್ತ ಒಂದಕ್ಕಿಂತ ಹೆಚ್ಚು ಧ್ವನ್ಯರ್ಥವನ್ನುಳ್ಳ ಸಾಂಕೇತಿಕ ಪ್ರತಿಮಾಯುಕ್ತ ಅನೇಕ ಕಥೆಗಳು ಉಂಟು. ಇವುಗಳ ಶ್ರೇಷ್ಠ ಸಾಹಿತ್ಯಿಕ ಯೋಗ್ಯತೆಯ ಬಗೆಗೆ ಪ್ರಶ್ನೆಯೆ ಇಲ್ಲ. ಆದರೆ, ಇದು ನಾಗಮಹಾತ್ಮ್ಯ ನಿವೇದನಕ್ಕೇ ಮೀಸಲಾದ ಪ್ರತಿಭೆಯೇ ಆದುದು, ದೇಶದ ದುರ್ದೈವವಾಗಿದೆ. ಮಹಾಭಾರತವನ್ನು ನಾಲ್ಕು ವೇದಗಳ ಜೊತೆಗೆ ಅದೇ ಯೋಗ್ಯತೆಯ ಐದನೆಯ 'ಅಪೌರುಷೇಯ' ಗ್ರಂಥ, ಎಂದು ಹೇಳುವುದುಂಟು. ಆದರೆ, 'ತಾವು ಅಥರ್ವವೇದಿಗಳು' ಎಂದು ಬಹಿರಂಗವಾಗಿ ಹೇಳಿಕೊಳ್ಳಲು ಪ್ರತಿಷ್ಠೆ ಸಾಲದಿರುವ ಪರಿಸ್ಥಿತಿಯು ಒಂದು ಕಾಲಕ್ಕೆ ಇದ್ದಿತೆಂದು ಹಿಂದಿನ ಘಟನೆಗಳಿಂದ ಗೊತ್ತಾಗುವಂತಿದೆ. ಗೀತೆಯೆ, ಸೋಮಪಾಯಿಗಳ 'ತ್ರೈವಿದ್ಯ' ಉಲ್ಲೇಖಿಸಿದೆ. ಮಾಟ, ಮಂತ್ರ ಇತ್ಯಾದಿ ಯಾತು-ವಿದ್ಯೆಯ (Black magic) ಪವಾಡ ಚಮತ್ಕಾರಗಳು ನಿಂದ್ಯ, ಎಂದು ಬಗೆಯಲಾಗುತ್ತಿದ್ದ ಕಾಲದಲ್ಲಿ ಅಥರ್ವವೇದಿಗಳು ಆ ಸಾಮಾಜಿಕ ಬಹಿಷ್ಕಾರಕ್ಕೆ ಅಳುಕತೊಡಗಿ ಈ ವೇದಶಾಖೆಯ ಪರಂಪರೆಯು ಲುಪ್ತವಾಯಿತು. ಆದರು ಅಥರ್ವವೇದದಲ್ಲಿ ಸಹ, ಜೀವನೋಪಯೋಗೀ ವೈದ್ಯಕಾದಿ ಒಳ್ಳೆಯ ಮಂತ್ರ ಇಲ್ಲದಿಲ್ಲ. ಆದರೆ, ಋಗ್ವೇದವು ಮಾತ್ರ ಮಂತ್ರ-ಮಾಟದಿಂದ ದೂರವಿದೆ. ಐಹಿಕ ಜೀವನವನ್ನು ಮೆಚ್ಚಿಕೊಂಡ ವಿಚಾರಗಳ ಸೂಕ್ತಗಳೇ ಪ್ರಾಧಾನ್ಯದಿಂದ ಉಂಟು, ಎಂಬ ಒಂದು ಗ್ರಹಿಕೆ ಇತ್ತು ಇದೆ. ಆದರೆ, ಈ ನಂಬುಗೆಯೂ ಮೋಸಕ್ಕೆ ಕಾರಣವಾಗುತ್ತಿರುವುದೆಂದು, ಈ ನಾಗ-ಪ್ರತಿಮಾ ಸಮೀಕ್ಷೆಯಲ್ಲಿ ಕಾಣತೊಡಗಿದೆ! ವೇದಕ್ಕೆ ಸಮಾನವೆಂದು ಬಗೆಯಲಾಗುವ ಮಹಾಭಾರತವು ಶ್ರೀಕೃಷ್ಣ-ವಿಷ್ಣುಮಹಿಮೆಯ ಪ್ರಚಾರಕ್ಕಾಗಿ ಹುಟ್ಟಿರುತ್ತದೆ. ಇದೆಲ್ಲ ರಚನೆ ಕೇಶೀ-ಪುರುಷನ : ನಾರಣನ ಮಹಾತ್ಮ್ಯವನ್ನು ಬಿಂಬಿಸುವದಕ್ಕಾಗಿಯೆ ಇರಲಿಕ್ಕೆಬೇಕೆಂದು ಇದರ ಅರ್ಥವಾಗುತ್ತದೆ!

ಪ್ರಸ್ತುತ ನಿರ್ಧರಿಸಿಕೊಳ್ಳಬೇಕಾದುದು : ಈ 'ಕೇಶಿನ್' ಎಂಬ ಪುರುಷನು ಯಾರು, ಎಂಬುದನ್ನು ಅದಿತಿ : ಕಪರ್ದಿ (: ಕೇಶಿನೀ) ದೇವಿಯು ಜಲಸ್ವರೂಪಿ ಆದ ತರುವಾಯ, ಈ ತೆರವಾದ ಶಕ್ತಿ-ಪೀಠಕ್ಕೆ ಉತ್ತರಾಧಿಕಾರಿಯಾಗುವ ಹಕ್ಕು: ವಾರಸುದಾರಿಕೆ, ಇನ್ನೊಬ್ಬ ಕೇಶೀ : ಕಪರ್ದಿಗೇ ಇರಬಲ್ಲುದಷ್ಟೆ? ಮೋಕ್ಷ ಮಾರ್ಗ : ಆನಂದ ಸಿದ್ಧಿಯ ದಾರಿಯನ್ನು ತೋರುವ ಗುರು-ಸಾಮ್ರಾಟನಾಗಿ ಅದಿತಿದೇವಿಯ ತರುವಾಯ ಪ್ರಭಾವಶಾಲಿ ಆಗತೊಡಗಿದ ಪುರುಷನು ಅರ್ಥಾತ್ ಕೇಶಿಯೇ ಆಗಿದ್ದುದೂ ಉಂಟು! ಆದುದರಿಂದ, ಲೋಕೋದ್ಧಾರಕನಾದ ಈ ದಿವ್ಯ ಪವಾಡಿ : ಪುರುಷನು ಯಾರು ಇರಬೇಕೆಂದು ಹೆಸರಿಸುವ ಆವಶ್ಯಕತೆಯೆ ಇಲ್ಲ. ಅಲ್ಲದೆ, ದಿವ್ಯ ಮಹಾ-ಪುರುಷರ ನಾಮವನ್ನು ಸಿಕ್ಕಲ್ಲಿ-ಸಿಕ್ಕಾಗ ಥಕ್ಕನೆ ಉಚ್ಚರಿಸದಿರುವ ಪೂರ್ವ- ಪರಂಪರೆಯು, ಅರ್ಥವಿಹೀನವಿಲ್ಲ. ಮುಸಲ್ಮಾನೀ ಧರ್ಮದ ಪ್ರೇಷಿತನ ಉಚ್ಚರಿಸುವ ವಿಶಿಷ್ಟ ರೀತಿಯಿದೆ : ಆ ಒಕ್ಕಣಿಕೆಯೇ ಬೇರೆ. ಇವು 'ದಿವ್ಯ' ನಾಮ; ಗುಹ್ಯ-ನಾಮ. ಜೀವ-ಜೀವಾಳದೊಡನೆ ಏಕಾತ್ಮಕವಾದ 'ಸತ್'-ಸ್ವರೂಪದ ನಾಮ! ಸಂತೆಯ ಮಾತೆ ಇದು? ಗಂಡ-ಹೆಂಡಿರು : ನಲ್ಲ-ನಲ್ಲೆಯರು; ಪರಸ್ಪರರು ಆನಂದ-ಲೋಕ-ದರ್ಶನಕ್ಕೆ ಕಾರಣರಾದವರು. ಅಂಗಾಂಗೀ ಏಕಾತ್ಮ ಸಂಬಂಧದ ಇಂತಹರಲ್ಲಿ, ಒಬ್ಬರು ಇನ್ನೊಬ್ಬರನ್ನು ಹೆಸರು ಹಿಡಿದು ಕೂಗುವ-ಕರೆವ ಆ-ಪವಿತ್ರ ರೂಢಿಯೊಂದು, 'ನವ್ಯ'ರಿಂದ ಲೋಕಪ್ರಿಯವಾಗತೊಡಗಿದ್ದುಂಟು! ಈ ಅಪಚಾರದಿಂದಾಗಿ ನಮ್ಮ ನೇತಿ-ನೇತಿ ಸ್ವರೂಪದ ದಿವ್ಯ 'ಪವಾಡ' ಶಕ್ತಿಯ 'ಸತ್ಯ'-ವಂತ ದೇವರ-ನಾಮದ ಗುಹ್ಯಾರ್ಥವೂ, ನವ್ಯ-ಕವನಗಳ, ಕಥೆ-ಕಾದಂಬರಿಗಳ ಚಿತ್ರ-ಮೂರ್ತಿಶಿಲ್ಪದ ವರ್ಣ್ಯವಿಷಯವಾಗಿ ನಿಂತಿದೆ. (ಕಾಳ-) ಪುರುಷಾಯ ತಸ್ಮೈ ನಮಃ ಆಸ್ತಿಕ : ಕಾಳಭೈರವ! ಶಾಂತಿರಸ್ತು : 'ತತ್ ಜಲಾನಿತಿ' (:ತತ್ ಆಸೀತ್ ಆನೀತ್ ಅವಾತಂ : ಜಲಂ ಇತಿ) 'ಶಾಂತ ಉಪಾಸೀತ'.

ಋಗ್ವೇದದ ಕೊನೆಯಲ್ಲಿ ಹೊರಗೆ ಕಾಣಿಸಿಕೊಳ್ಳುವ ಕೇಶೀ (: ಪುರುಷ) ರೂಪೀ ನಾಗ ಶಕ್ತಿಯು ಉಪನಿಷತ್ಕಾಲದಲ್ಲಿ ಮತ್ತೆ ವೇಷಾಂತರದಲ್ಲಿ 'ಮುಂಡಿ''ಮುಂಡ' (: ಬರಿದಲೆ, ಬೊಕ್ಕ (: bald) ಅಥವಾ ಬೋಳುತಲೆ) ಎಂಬ ನಾಮಾಂತರದಿಂದಲೂ ಖ್ಯಾತಿಪಡೆದಿದೆ. ಮುಂಡಕ (ರ) ಉಪನಿಷನಿಷತ್ತಿಗೆ, ಈ

ಬಗೆಯ ದಶಗ್ರಂಥಗಳಲ್ಲಿ ಸನ್ಮಾನ್ಯ ಸ್ಥಾನವಿದೆ. ಆದರೆ, ಮುಂಡ ಕೃತಕರೂಪ; ಸಂಸ್ಕೃತ ಭಾಷಿಕ ಸಂಕೇತವಲ್ಲ ಎಂದು ಮೋನಿಯರ್ ವಿಲಿಯಂಸ್ ಕೋಶ ಸ್ಪಷ್ಟವಾಗಿ ಹೇಳುತ್ತದೆ. 'ಮುಂಡ' ರುಂಡವಿಲ್ಲದ್ದು, ಕಾಂಡ-ಗಣೆಯ ಆಕೃತಿಯ ದೇಹ (ಭಾಗ). ಹಾಗಾದರೆ ಕೇಶಿಪುರುಷನ ಪರ್ಯಾಯ ನಾಮವೇ ಮುಂಡ-ಮುಂಡಿ ಆಯ್ತು! ಪೂರ್ವಮೀಮಾಂಸಾಶಾಸ್ತ್ರ ಪರಿಣತರು; ವೇದಧರ್ಮಾಭಿಮಾನಿಗಳು ಎಂದು ಹೆಸರಾದ ಮಂಡನಮಿಶ್ರನ ಜೀವನ-ವಾದವನ್ನು ಖಂಡಿಸಲು ಅವನಲ್ಲಿ ಪ್ರವೇಶಿಸಿದಾಗ 'ಕುತಃ ಮುಂಡೀ'? (ಹೇ ಬೊಕ್ಕ-ಬೋಳ ತಲೆಯವನೇ [ಅಥವಾ ಸ್ತಂಭಾಕೃತಿಯವನೆ,] ಎಲ್ಲಿಂದ ಬಂದೆ?) ಎಂದು ಕೇಳಿದರಂತೆ. ಶ್ರೀ ಶಂಕರಾಚಾರ್ಯರು ಯತಿವರ್ಯರು, ಕಾವಿಶಾಟೀ ಹೊದ್ದವರು; 'ಅಗ್ನಿ' ಸ್ವರೂಪೀ 'ನಾರಾಯಣ' ಸಂಪ್ರದಾಯದವರು ಆದಕಾರಣ ಇವರು ನೀರೊಳಗಿನ ಬೆಂಕಿ : 'ಅಪೋವತ್ಸ'ರು ಆಗುತ್ತಾರೆ. ಆದುದರಿಂದ, ಕೇಶೀ : ಪುರುಷನಂತೆ ಈ 'ಮುಂಡ : ಮುಂಡಿಯನ್ನೂ' ಈ 'ಅಪಾಂ ನಪ್ತ' ದೇವನ ರೂಪದಲ್ಲೂ ಗುರುತಿಸಿಕೊಳ್ಳಬಹುದಾಗಿದೆ. ಕಪರ್ದಿ : ಕೇಶಿ : ಪುರುಷ : ಮುನಿ ಎಂಬ ನಾಮಾಂತರಗಳೊಂದಿಗೆ 'ಮುಂಡಿ' ಈ ಶಬ್ದ-ಪ್ರತಿಮೆಯೂ ಈ ದಿವ್ಯ ಪವಾಡಿಯು ಯಾರು, ಎಂಬುದನ್ನು ನಿರ್ಧರಿಸಿಕೊಳ್ಳಲು ಉಪಯುಕ್ತವಿದೆ. 'ಮುಂಡಿನ್' ಎಂದು ಸಂಬೋಧಿಸಲ್ಪಟ್ಟ ಆದ್ಯ ಶಂಕರಾಚಾರ್ಯರು ಮಹಾನ್ 'ಯತಿ'ಗಳು. 'ಯತಿ' ಶಬ್ದಸ್ಥ ಮೂಲಾರ್ಥದಂತೆ ಈ ಮುಂಡಿನ್ ಸಂಪ್ರದಾಯದವರು ಯಮ-ನಿಯಮಾಸಕ್ತ ಯೋಗಾಚಾರದವರಾಗಿರಬೇಕೆಂದು ಕಂಡುಬರುತ್ತದೆ. 'ಯತಿ'ಗಳು ಅಲೆದಾಟದ ಪರಿವ್ರಾಜಕ : ಜಂಗಮ ಜೀವಿಗಳು. ಮುನಿವರ್ಗವು ಆಶ್ರಮಕಟ್ಟಿ ಒಂದೆಡೆ ನಿಲ್ಲುವ ಪರಿಪಾಠವಿದ್ದವರು ಇದ್ದುದಾಗಿ ಕಾಣುತ್ತದೆ. ಗೀತೆಯಲ್ಲಿ ಬರುವ ಸಂನ್ಯಾಸ ಮತ್ತು ಯೋಗ ಇವುಗಳ ಸಾಹಚರ್ಯದಿಂದ ಇದೇ ಮಾತು ದೃಢಪಡುತ್ತದೆ. ಮುಂಡಿನ್; ಯತಿ ಯಾವ ಒಂದರಲ್ಲೂ ಸ್ಥಿರವಾಗಿ ನಿಲ್ಲಲಾಗದು. ಇವನು ಅ-ನಿಕೇತನು : ವಾಸಸ್ : ಸ್ಥಾನ ಇವನಿಗಿರಲಾಗದು. 'ಗುಹೆ'ಯೆ ಮುಂಡಿ, ಮುನಿವರ್ಗದ ನಿಜವಾದ ವಾಸ. ಬಳಿಕ 'ದೇಹವೇ ವಾಸಸ್' ಆಯಿತು! ವಾಸ : ಸು-ವಾಸ, ಬಟ್ಟೆ ಇವರ ಪಾಲಿಗೆ ಇಲ್ಲ, ಎಂಬುದರ ಸೂಚನೆಯೆ ಇಲ್ಲಿದೆ. 'ತತ್ ಜಲಾನಿತಿ-ಶಾಂತ ಉಪಾಸೀತ' ಈ ಶಾಂತಿ ಉಪಾಸಕರು (ದೇಹ) ಗುಹೆಯ (ಗರ್ಭಾಗಾರದ) ಏಕಾಂತದಲ್ಲೆ ತತ್-ಲೀನ ಅವಸ್ಥೆಯಲ್ಲಿ ಇರಬೇಕೆಂದು ಈ ಬಗೆಯ ಜೀವನ ರೀತಿಯೊಳಗಿನ ಆದರ್ಶ-ಸ್ಥಿತಿ. 'ಕುತಃ ಮುಂಡೀ' : ಹೇ ಮುಂಡನೆ ಬಂದುದೆಲ್ಲಿಂದ? ಎಂಬ ಪ್ರಶ್ನೆಗೆ. 'ಗವಾಕ್ಷ' (ಗೋವಿನ ಕಣ್ : ಬೆಳಕಿಂಡಿ) ಒಳಗಿಂದ, ಎಂದು ಆಚಾರ್ಯರು ಉತ್ತರವಿತ್ತರಂತೆ! ಈ ಪ್ರಶ್ನೆ, ಹಾಗೂ ಅದರ ಉತ್ತರ ಇವೆರಡರಲ್ಲಿಯೆ ಇಡೀ ವೇದಸಾರವು ಒಳಗೊಂಡಿದ್ದುಂಟು!

ಮುನಿ ಮೌನೇಯನು, ಸಮಾಜ-ಜೀವಿ ಆಗಲಾರ. 'ಮುನಿಃ ಮೋಕ್ಷಪರಾಯಣಃ' ಎಂಬ ಆದರ್ಶ ಸ್ಥಿತಿಯನ್ನು ಹೇಳುವ ಗೀತೆಯಲ್ಲಿ 'ಅರತಿಃ' ಜನ-ಸಂಸದಿ; ಸಂಸತ್ತು, ಸಭೆ, ಸಂಘಟನೆ ಇಂತಹ ಸಾಮಾಜಿಕ ಐಹಿಕ ಜೀವನ ಪ್ರೇರಕ ಯಾವ ಸಮಿತಿಗಳಲ್ಲೂ ಆಸಕ್ತಿ ಇರಕೂಡದು, ಎಂದು ಭಗವಾನ್ ಶ್ರೀಕೃಷ್ಣನ ಆದೇಶವುಂಟು! 'ಅನಿಕೇತ'ನಾಗು 'ಜನ-ಸಂಸದಿಗಳಲ್ಲಿ ಆಸಕ್ತಿ ಬೇಡ' ಎಂಬ ಈ ಉಪದೇಶವು ಮುನಿಯಂತೆ ಯತಿಗೂ ಅನ್ವಯಿಸುತ್ತದೆ. ಇವನು 'ಕೇಶಿನ್' ಇದ್ದರೂ ಸರಿ. 'ಮುಂಡೀ, ಎನಿಸಿದರೂ ಸರಿ. 'ನಿಹಿತಂ ಗುಹಾಯಾಂ ಪರಮೇ ವ್ಯೋಮನ್' ಈ ಪರಮ ಅವಸ್ಥೆಯಲ್ಲಿ ಇರುವುದೇ ಜೀವನದೊಳಗಿನ ಏಕೈಕ ಸಿದ್ಧಿ. ಆದಕಾರಣ ವಿದೇಹೀ : ನ ಚಿಕೇತ ಅವಸ್ಥೆಯಲ್ಲಿಯೆ ಯಾವಾಗಲೂ ಇರಬೇಕಾದುದು ಅವಶ್ಯವಾಗುತ್ತದೆ. ಮಧ್ಯಮಾ : ವಾಕ್-ನಿಂದೆ ಗೀಡಾದ ಬಳಿಕ ಈ ಅಯನ : ಯಾನ ಬೇರೆ ಹುಡುಕಿಕೊಳ್ಳಬೇಕಾಗುತ್ತದೆ, ಋಗ್ವೇದದ ಕೊನೆಯಲ್ಲಿ!

'ನಾಗ' ಪ್ರತಿಮಾ ಸಮೀಕ್ಷೆಯಲ್ಲಿ 'ಮುಂಡಿ'ಯ ವಿಚಾರವೇಕೆ? ಅದಿತಿ=ಸಾರ್ವರಾಜ್ಞೆ; ಅವಳು ಕಪರ್ದಿ=ಕೇಶಿನಿ; ಮುನಿಯನ್ನು ಋಗ್ವೇದವೇ ವಾತರಶನ: ವಾತಾಶ್ವಾರೋಹೀ ಪುರುಷಕೇಶಿನ್ ಎಂದು ಹೇಳುತ್ತಿರುವುದರಿಂದ ಈ ಕೇಶಿಯು 'ನಾಗ'ನೇ ಆಗಿರುವುದು ನಿಶ್ಚಿತ. ಆದರೆ, ಮುಂಡಿ: ಯತಿಯೂ ನಾಗಮಾರ್ಗಿಯೋ? 'ಮಂಡಕ'ವು ಅಥರ್ವವೇದ ಪರಂಪರೆಯ ಉಪನಿಷತ್ತು. ಅಥರ್ವವೇದವು ಆಪ : ರಸ ಪಂಥೀಯ ವೇದ. 'ಅಥರ್ವನ್' ವ್ಯಕ್ತಿನಾಮದ ಒಬ್ಬನಿಗೆ 'ಕಬಂಧ' (: ತಲೆ ಇಲ್ಲದ ದೇಹ : ನೀರಿನ ಕೊಳಗ,

ಕೊಳವಿ), ಎಂದು ಹೆಸರಿದ್ದುದಾಗಿ ಶತಪಥ ಬ್ರಾಹ್ಮಣ ಗ್ರಂಥದಿಂದ ಗೊತ್ತಾಗುತ್ತದೆ. ಅಲ್ಲಿ ಗಂಧರ್ವನಿಗೂ 'ಕಬಂಧ' ಎಂದಿರುವಲ್ಲಿ ಈ ಶಬ್ದಸಂಕೇತಸ್ಥ ಶಬ್ದಾತೀತ. 'ನೇತಿ'ಯ ಔಚಿತ್ಯವು ಇನ್ನೂ ವಿಶೇಷ! 'ಅಪ್ಸರಸಾಂ, ಗಂಧರ್ವಾಣಾಂ, ಮೃಗಾಣಾಂ ಚರಣೇ ಚರನ್' ಎಂದು ವೇದವು ವರ್ಣಿಸುವ ಕೇಶಿನ್‌ನಂತೆ 'ಕಬಂಧ'ನೂ ಆತನ ಸಂಗಾತಿಯೇ ಎಂಬುದನ್ನು ಸಿದ್ಧಪಡಿಸಲು ಇನ್ನೂ ಬಾಹ್ಯಪ್ರಮಾಣಗಳು ಬೇಕೆ? 'ಅಹಿ (-ಭಾನವಃ)' ಎಂಬ ಮರುತರನ್ನು, 'ಕಬಂಧಿನ್' ಎಂದಿರುವುದು, ಉದ್ದೇಶವಿರಹಿತ, ಸಾಂಕೇತಿಕ ಪ್ರತಿಮೆಯೆನ್ನಲಾದೀತೆ?[೧೧] ಅಹಿ:ಮರುತರು : ಕಬಂಧರೂಪರು! ಕಬಂಧ : ಗಂಧರ್ವ : ಅಪ್ಸರಸ್ ಇವರೆಲ್ಲ ನಾಗ ಆಕೃತಿಯವರೇ ಆಯಿತು.

ಈ ಅಹಿ : ಕಬಂಧಿ : ಮುಂಡಿ : ಕೇಶಿ, ಮುನಿ, ಯತಿಪಂಥಗಳ ಜೀವನಾದರ್ಶವೇನು? ಇವು ಜನಕ್ಕೆ ಬೋಧಿಸುವುದೇನು? ಪ್ರಪಂಚವು ಪ್ರಳಯ=ಕೋಲಾಹಲ; ಎಲ್ಲವೂ ಕ್ಷಣಿಕ; ಶಾಶ್ವತ ಸತ್ಯವೆಂಬುದು ಇಲ್ಲಿ ಇಲ್ಲ. ಈ ಬಾಳುವೆ ಅರ್ಥವಿಹೀನ-ಅನರ್ಥಕಾರಿ; ಇದನ್ನು ಸ್ಮಶಾನವತ್ ಬಗೆದು 'ಜನ್ಮ-ಮೃತ್ಯು-ಜರಾ-ವ್ಯಾಧಿ'ಗಳ ಭವಚಕ್ರದಲ್ಲಿ ಬಂಧಿಸಿಡುವ ಹೊನ್ನು, ಹೆಣ್ಣು, ಮಣ್ಣನ್ನು ನರಕಸಮಾನವಾಗಿ ತಿಳಿದು ಮೋಕ್ಷಾರ್ಥಿಗಳಾಗಿ, ಯತಿ-ಮುನಿ ಸಂಪ್ರದಾಯಕ್ಕೆ ಸರ್ವಾರ್ಪಣಭಾವದಿಂದ ಶರಣುಹೋಗಿರಿ, ಎಂದು ಮನಗಾಣಿಸಿಕೊಡಲು, ಋಗ್ವೇದದ ಇಂದಿನ ಪಾಠದಿಂದ ತೊಡಗಿ-ಭಗವದ್ಗೀತೆ, ಶರಣರು, ದಾಸರ ವರೆಗಿನ 'ದಿವ್ಯ' ಮಾರ್ಗಿಗಳು, ಉಪಯೋಗಿಸಿರುವ ಶಬ್ದಪ್ರತಿಮೆಗಳಲ್ಲಿ ಇರುವ ಅರ್ಥಸಂಗತಿ ಸೌಂದರ್ಯ ಅದೆಷ್ಟು ನಿತಾಂತ ಬಂಧುರವಾಗಿದೆಯಲ್ಲ, ಈ ಶಬ್ದಬಂಧ! ಪ್ರಪಂಚದ ಅನರ್ಥಕಾರೀ ಕ್ಷಣಿಕತ್ವದ ಪ್ರತಿಪಾದನೆಗಾಗಿ ಯೋಜಿಸಿರುವ ಸಾರ್ಥ-ಔಚಿತ್ಯಪೂರ್ಣ 'ಸನಾತನ' ಸ್ವರೂಪದ ಶಬ್ದ-ಪ್ರತಿಮೆಗಳನ್ನು ನಿರ್ಮಿಸುವ 'ದಿವ್ಯ' ದೃಷ್ಟಿಗೆ, ಬಾಳಿನಲ್ಲಿ ಮಾತ್ರ ಏನೆಲ್ಲವೂ ಕ್ಷಣಿಕ ಅನರ್ಥಕಾರಿ ಕಾಣುತ್ತಿರುವಲ್ಲಿ ಇರುವ ಈ ವಿಸಂಗತಿಯು, ವಿಶಿಷ್ಟ ಪಂಥಾಭಿನಿವೇಶದ ಭಾವಬುದ್ಧಿಗೆ ಕಾಣದಿದ್ದರೂ ಉಳಿದ ವಿಚಾರವಂತರೂ 'ಜನಮರುಳೊ ಜಾತ್ರೆ ಮರಳೊ.......' ದಾರಿಯಲ್ಲಿಯೇ ಹೋಗಬೇಕೆ? 'ಇಲ್ಲದಿದ್ದರೆ ನಮ್ಮ ಜಯಜಯಕಾರ ಮಾಡಿ ಗೌರವಿಸಿ ಪೂಜಿಸುವರಾರು?' ಎಂಬೀ ಬಗೆಯ ಕಾರಣದಿಂದಾಗಿಯೋ ಅಥವಾ 'ನ ಬುದ್ಧಿಭೇದಂ ಜನಯೇತ್ ಅಜ್ಞಾನಾಂ ಕರ್ಮಸಂಗಿನಾಮ್' ಎಂಬ ಧೂರ್ತ ಗೀತೋಪದೇಶವನ್ನು ಪ್ರಾಮಾಣಿಕವಾಗಿ ನಂಬಿಯೊ ಅದನ್ನು ಅನುಸರಿಸುತ್ತ ಬಂದಿರಬೇಕು. ಆದರೆ, ಒಂದು ಪ್ರಶ್ನೆ; ಆ ಧೀ ಉಪಾಸಕ ಸವಿತೃ ಪಂಥೀಯರೂ ಸೂರ್ಯನನ್ನು ನುಂಗಹೊರಟ ಅಹಿ : ವೃತ್ರ : ವಿಷ್ಣುಪಂಥೀಯ ಮಾರ್ಗದಲ್ಲೆ ಸೇರಿದ್ದು ಹೇಗೆ? ಋಗ್ವೇದದಲ್ಲಿ ಉಲ್ಲೇಖಿತ ಆ ವಿಮರ್ಶಾಯುಕ್ತ ಪುನೀತ ವಾಕ್ಕಿನ ಉಪಾಸಕ ಬೃಹಸ್ಪತಿ ಪರಂಪರೆಯು ನಷ್ಟವಾಗಲು ಕಾರಣವೇನು?

ಅದಿತಿ (: ಪೃಶ್ನಿ) ದೇವಿಯನ್ನು ಇಂದ್ರಾದಿ ಸೌರದೇವತೆಗಳ ತಾಯಿಯನ್ನಾಗಿ ಕಲ್ಪಿಸಿರುವುದನ್ನು, ಅಂದಿನ ಬೃಹಸ್ಪತೀ ಪರಂಪರೆಯ ಶ್ರೇಷ್ಠಿಗಳು ವಿರೋಧಿಸಿದರೊ ಇಲ್ಲವೊ ಎಂಬುದನ್ನು ಕಂಡುಹಿಡಿಯಲು ಸಾಕಷ್ಟು ಪ್ರಮಾಣಗಳು ಉಪಲಬ್ಧವಿಲ್ಲ. ಏನೂ ವಿರೋಧವೇ ಇಲ್ಲದೆ, ಈ ಆಪ : ರಸ ಪಂಥೀಯ ಯತಿ-ಮುನಿ ಸಂಪ್ರದಾಯವು ಒಮ್ಮೆಲೆ ಪ್ರಭಾವಶಾಲಿಯಾಗಿರಲಾರದು. ಏಕೆಂಬುದು ಮೇಲೆಯೆ ಕಾಣುವಂತಿದೆ. ಮೊದ ಮೊದಲು ತಲೆಮರೆಯಿಸಿಕೊಂಡು, ತೆರೆಮರೆಯಲ್ಲಿ, ನಾನಾ ಅನಿಶ್ಚಿತ ದ್ವಂದ್ವಾರ್ಥದ ನಾಮಸಂಕೇತಗಳಿಂದ ಕಾಣುವ ಆದಿತ್ಯಾದಿ 'ಅಹಿ'ವೃತನ ಆಕೃತಿರೂಪದ ಸಾಂಕೇತಿಕ ಪ್ರತಿಮೆಗಳು, ಋಗ್ವೇದದ ಕೊನೆಗೆ ತಲೆಯೆತ್ತಿ ನಿಲ್ಲುವುದರ ಕಾರಣವೇನು? ಮೊದಲು ದೇವಮಾತೆ, ತನಗೆ ಶರಣು ಬಂದ ಭಕ್ತವರ್ಗವನ್ನು ಸಂಸಾರ ಸಾಗರದಿಂದ ಸುರಕ್ಷಿತವಾಗಿ ಪಾರುಗಾಣಿಸುವ ಭದ್ರನೌಕಾಸ್ವರೂಪಳು, ಎಂದು ವರ್ಣಿಸಲ್ಪಟ್ಟ, ಲೋಕಜನನಿ ಎಂಬ ಈ ದೇವಿಯು, ಋಗ್ವೇದದ ಕೊನೆಯಲ್ಲಿ ತನ್ನ ನಿಜರೂಪದಲ್ಲಿ ಕಾಣಿಸಿಕೊಳ್ಳುತ್ತಾಳೆ. ದೇವಮಾತೆ ದ್ಯಾಮವ್ವನೆಂಬುದು, 'ಸಪ್ತ'ರೊಡನೆ ಸಲಿಲದಲ್ಲಿ ಸೇರುವಾಗ ಬಯಲಿಗೆ ಬರುತ್ತದೆ![೧೨] ಈ ದೇವಿ ಸಾರ್ಪ-ರಾಜ್ಞಿ ಎಂಬುದು, ಜೀವವು ದೇಹತ್ಯಾಗ ಮಾಡುವುದರ ಸಂದರ್ಭದ ವರ್ಣನೆಯಲ್ಲಿ ಸ್ಪಷ್ಟವಾಗುತ್ತದೆ. //

ಅಹಿ (-ಭಾನು) : ಮರುತರು : ಕಬಂಧರು! ಕಬಂಧೆ ಎಂದರೆ ಮುಂಡ. 'ಮುಂಡ'. ಇದಕ್ಕೆ ಎರಡು ಅರ್ಥಗಳಿವೆ. ಬೋಳು ತಲೆಯವನು : ಮುಂಡನ ಮಾಡಿಸಿಕೊಂಡವನು. ಅಥವಾ ಒಂದು ಕೊರಡಿನ ಆಕೃತಿಯವನು. ಮುಂಡ : ಶಿವ (ಮಹಾಭಾರತದಲ್ಲಿ), ಇದರ ಮೂಲಕ ರುದ್ರಿಯ ಮರುತರು ಯತಿ : ಮುನಿಪಂಥೀಯರು ಎಂದು ಸೂಚಿಸಲಾಗಿದೆ. ಮುನಿರಿವಧುನಿಃ[೧೪] ಎಂದು ಮರು-ತರ ವರ್ಣನೆ ಉಂಟು. ಇವರು 'ದುರ್ಮ್ರತಿಃ' (:ಕ್ರೂರಮತಿಃ) ಎಂಬ ನಿರ್ದೇಶವಿದೆ.[೧೫] ಇಂತಹ ಮರುತರ ತಾಯಿ ಅದಿತಿ (: ಪೃಶ್ನಿ). ಆದಕಾರಣ 'ಮಾತಾ ರುದ್ರಾಣಾಂ' ಎಂದು ವರ್ಣಿತ ಅದಿತಿಯನ್ನು ಕಪರ್ದಿ ಎಂದು ಸೂಚಿಸಲಾಗಿದೆ. ಕಪರ್ದಿ ರುದ್ರ-ಶಿವನು ಮಹಾಯೋಗೀಶ್ವರ. ಈತನ ಸಂಗಾತಿಯಾದ ಅದಿತಿಯೂ, ಮಹಾಯೋಗೇಶ್ವರಿಯೇ ಸರಿ. ಯೋಗೇಶ್ವರಿ ದೇವಸ್ಥಾನ, ಕ್ಷೇತ್ರ ಇವೆ. ಅಂಬೆ; ಜೋಗೇಶ್ವರಿ ಬೇರೆಯಲ್ಲ. ಅದಿತಿಯ ನಲ್ಲನೆಂಬ ವಿಷ್ಣುವೂ ಯೋಗೇಶ್ವರನು. 'ಯತ್ರ ಯೋಗೇಶ್ವರಃ ಕೃಷ್ಣಃ' ಎಂಬ ಗೀತೆಯ ಉಲ್ಲೇಖವು ಉಂಟು.

ಮಧ್ಯಯುಗದಲ್ಲಿ ನವನಾಥಯೋಗಿಗಳ ತಂಡಗಳಲ್ಲಿ ರುದ್ರಿಯರ ಪರಂಪರೆಯು ಇದ್ದ ಹಾಗೆ ವೈಷ್ಣವನಾಥರೂ ಇದ್ದರು. ಓರಿಸ್ಸಾದ ಜಗನ್ನಾಥ ವಿಷ್ಣುಪ್ರತಿಮೆಯಾಗಿದೆ. ಕಾಶೀ ವಿಶ್ವ-ನಾಥನು ರುದ್ರಿಯರ ಆದಿ-ನಾಥ, ಆದ್ಯದೈವತ ಎನಿಸುತ್ತಾನೆ. ನಿಜಕ್ಕೂ ಇದು ಗುರುಪೀಳಿಗೆಯ ಗುರು-'ದತ್ತ'-ಪರಂಪರೆ! ರೂಢಿಯಂತೆ, ಗುರು-ನಾಥನೆಂದರೆ ಶೈವ ಸಂಪ್ರದಾಯದ ಸಂಕೇತ ಎನಿಸುವುದು. ಇದೇ ಹೆಸರು ಗುರು-ರಾಜವಾದರೆ (ಮಾಧ್ವ) ವೈಷ್ಣವ ಪ್ರತಿಮೆ. ಈಗ ರಂಗ-ನಾಥರು ಮಾಧ್ವರಲ್ಲೂ ಕಾಣಿಸಿಕೊಳ್ಳುತ್ತಿದ್ದಾರೆ. 'ನಾಥ' ಸಂಕೇತದ ಬಗೆಗೆ ಶ್ರೀ ವೈಷ್ಣವರಲ್ಲಿ, ಮಾಧ್ವ ಸಂಪ್ರದಾಯದ (ಒಂದು ಕಾಲಕ್ಕೆ ಇದ್ದ) ತುಚ್ಛಭಾವವು ಇಲ್ಲ; ಶ್ರೀನಾಥ ರಾಮಾನುಜರಲ್ಲಿ ಪೂಜ್ಯವ್ಯಕ್ತಿ.

ಆದರು, ಮೂಲ ಮುಕ್ತಸಂಗೀ ಕೇಶೀ : (ಪುರುಷ :) ಗುರುಸಂಪ್ರದಾಯದಿಂದ ಎಂದರೆ ಗುರು : ದತ್ತ ಪಂಥದಿಂದ ಶೈವ, ವೀರಶೈವ, ಶ್ರೀ ವೈಷ್ಣವಾದಿ ಸಂಪ್ರದಾಯಗಳು ಎಷ್ಟು ದೂರ ಹೋಗಿವೆ. ಎಷ್ಟು ಸಮೀಪ ಇವೆ ಎಂಬುದನ್ನು ಋಗ್ವೇದದಿಂದ ತೊಡಗಿ ಸಮೀಕ್ಷಿಸಲು ಶಕ್ಯವಾದಲ್ಲಿ, ಅವರೊಳಗಿನ ಸಾಂಸ್ಕೃತಿಕ ಸ್ಥಿತ್ಯಂತರವು (Cultural distance), ಭಾರತೀಯ ಸಾಮಾಜಿಕ ಪ್ರಜ್ಞೆಯಲ್ಲಿ ಹಾಗೂ ಒಂದೊಂದು ಪಂಗಡದ ಸಮಷ್ಟಿ ಪುರುಷನ ಅಂತಃಸಾಕ್ಷಿಯಲ್ಲಿ ಆದ ಸಂಕೋಚವು, ವಿಕಾಸವು ಸ್ಪಷ್ಟವಾಗಲಿದೆ. ಏಕೆಂದರೆ, ಆಪ : ರಸ ಪಂಥೀಯ ಈ 'ಸಂದೃಕ್' ದೃಷ್ಟಿಕೋನದ ಮೂಲ ಜೀವನ ರೀತಿಯಲ್ಲಿ ನೈಸರ್ಗಿಕ ಅಂತಃಪ್ರೇರಣೆಗೇ ಏನೆಲ್ಲ ಮೂಲ್ಯ. ಸಮಾಜ ಧಾರಣೆಯ ದೃಷ್ಟಿಗೆ-ನಿನ್ನೆ-ನಾಳೆಗಳ ಸಮೀಕ್ಷೆ ಅತ್ಯವಶ್ಯ; ನಿನ್ನೆ-ನಾಳೆಗಳ ವಿಚಾರ ಎಂದರೆ ಅಲ್ಲಿ ತಾರತಮ್ಯ ವಿಚಾರ; ವಿವೇಕ ಬಂತು. ಆದರೆ, ವಿವೇಕಯುಕ್ತ ವಿಚಾರದಲ್ಲಿ ಮೌಲಿಕವೆಂದು ಕಂಡುಬರುವ ಆಚಾರ ವಿಚಾರಗಳು, ಸಂದೃಕ್-ಯೋಗದಲ್ಲಿ ಪ್ರೇರಿತರಿಗೆ, ಅವರ ಮುಕ್ತ-ಜೀವನ ರೀತಿಗೆ ಬಂಧನಕಾರಿ ಯೆನಿಸದಿರವು. ಆದರೆ, ತೀರ ಏಕಾಕೀ-ಏಕಾಂತವಾಸಿಯಾದರೆ ಬದುಕು ಅಶಕ್ಯ. ಈ ಕಾರಣದಿಂದಾಗಿ ಎಂತೂ ತಮ್ಮ ಪಂಥೀಯ ಗುಂಪಿನ-ಜಾತಿಯ ಆವರಣದಲ್ಲಿಯೆ ಉಳಿಯುತ್ತ ಬಂದಿದ್ದಾರೆ. ಆ ಆವರಣವನ್ನು ಉಳಿಸಿಕೊಳ್ಳುವ ಪ್ರಯತ್ನಗಳೂ ಅನಿವಾರ್ಯ ಆವಶ್ಯಕತೆಯಾಗಿ ಪರಿಣಮಿಸುತ್ತವೆ!

ಭಾರತೀಯ 'ದಿವ್ಯಾಧ್ಯಾತ್ಮ'ದ ಹುಟ್ಟು-ಬೆಳವಿಯನ್ನು ಅಭ್ಯಸಿಸುವದಕ್ಕೆ, ಈ ಕೇಶಿ : ಪುರುಷ ಮಹಿಮಾಸೂಕ್ತವು ಅತ್ಯಂತ ಮೌಲಿಕವಾಗಿದೆ. ಈ ಕೇಶಿನ್ : ಪುರುಷನು, ಆಪ : ರಸ ಪಂಥೀಯ ತತ್ವಸಾರದ ಪ್ರತ್ಯಕ್ಷ ದೈವತವಾಗಿದ್ದಾನೆ. ಈ ಕೇಶಿನ್ : ಪುರುಷ ಪ್ರತಿಮೆಯ ಪೂರ್ವಪೀಠಿಕೆಯನ್ನು ನಿರ್ಧರಿಸಿಕೊಳ್ಳಲು ಗ್ರೀಕಿನ ಪವಾಡ ಕಥೆಗಳು ಬಗೆಬಗೆಯಿಂದ ತುಲನಾರ್ಹವಾಗಿವೆ. ಗ್ರೀಕ್-ಪುರಾತನ ಸಂಸ್ಕೃತಿಯಲ್ಲಿ ಕಣೆಯನ್ನು ಹೇಳುವ, ಸರ್ಪ ಹಾಗೂ ಚಂದ್ರ ಉಪಾಸಕ ಕುಮಾರೀ (: ಅಪ್ಸರಾ) ಪರಂಪರೆಯು ಇದ್ದುದು ಅಲ್ಲಿಯ ದೈವತ ಪವಾಡ ಕಥೆಗಳಿಂದ ಗೊತ್ತಾಗುತ್ತದೆ. ರಾಬರ್ಟ್ ಗ್ರೇವ್ಸ ಇವರನ್ನು Maiden (: ಕುಮಾರಿ) ಮತ್ತು Nymph (: ಅಪ್ಸರೆ, ನೀರೆ) ಎಂದು ಅಂತರವನ್ನು ಇಟ್ಟು ಉಲ್ಲೇಖಿಸಿದ್ದಾರೆ. ಪವಿತ್ರತೀರ್ಥ ಸ್ನಾನಾಂತರ, ಶುದ್ಧಳಾದ ಅಪ್ಸರೆ, ಮರಳಿ ಕುಮಾರಿಯಾಗುವುದಾಗಿ ಅಂದಿನ 'ಸಮಯ'ಸ್ಥ ಸಾಂಪ್ರದಾಯಿಕ ಶ್ರದ್ಧೆಯಿತ್ತು. ರಾಬರ್ಟ್

ಗ್ರೇವ್ಸ ಹೇಳುವ ಮಾತಿನಿಂದ ಕುಮಾರಿ ಅದಿತಿ ಹಾಗೂ ಅಪ್ಸರೆ ಊರ್ವಶಿ ಇಬ್ಬರೂ ಆಪಸ್ವರೂಪಿಗಳೇ; ಅದಿತಿ ಶಕ್ತಿಸ್ವರೂಪಳು. ಊರ್ವಶಿ ನರರ ಪಾತಳಿಯ ಸೂತಕ ಸಂಕೇತ. ಋಗ್ವೇದದ ಅದಿತಿ ಮತ್ತು ಊರ್ವಶಿ, ಇಳಾ-ಊರ್ವಶಿ ಇವರೊಳಗಿನ ಅಂತರವು ಕಾಲ್ಪನಿಕ, ಎಂಬುದು ಸ್ಪಷ್ಟವಾಗಿ ಕಾಣತೊಡಗುವುದು. ಏಕೆಂದರೆ ಕುಮಾರಿಯ ಭೂಮಿಕೆಯಲ್ಲಿ ಅದಿತಿ ಆಗಿದ್ದವಳೇ, ವಸಿಷ್ಠ ಅಗಸ್ತ್ಯರ ಜನನಿಯ ಭೂಮಿಕೆಯಲ್ಲಿ ಅಪ್ಸರೆ ಆಗುವಳೆಂಬ ಗ್ರೀಕ್‌ಕಥೆಗಳಿಂದ ದೊರೆವ ಸ್ಪಷ್ಟೀಕರಣವು ಮೌಲಿಕವಾಗಿದೆ. ಆದರೆ, ಗ್ರೀಕ್ ಪವಾಡಕಥೆಗಳಲ್ಲಿ ಇರುವ ಈ ಅಸಂದಿಗ್ಧತೆ, ಭಾರತೀಯ ಪುರಾಣ ಕಥೆಗಳಲ್ಲಿ ಇಲ್ಲ, ಆದರೂ, ಸ್ವಲ್ಪ ಪರ್ಯಾಯದಿಂದ, ನಮ್ಮ ದೂರದೃಷ್ಟಿಯ ಮೇಧಾವಿಗಳು ಇದನ್ನು ಸೂಚಿಸದೇ ಇಲ್ಲ. ಅಪ್ಸರೆಯರಿಗೆ 'ಸದ್ಯೋಗರ್ಭ, ಸದ್ಯಃ ಪ್ರಸೂತಿ ಎಂದು ಹೇಳಲಾಗುವಲ್ಲಿ ಈ ಧ್ವನ್ಯರ್ಥವೇ ಉಂಟು! ವಸಿಷ್ಠ, ಶಕುಂತಲೆ, ವ್ಯಾಸಾದಿಗಳು 'ಸದ್ಯೋಜಾತರು' ಎಂಬ ಹಾಗಿನ ವರ್ಣನೆಗಳೆ ಇಲ್ಲವೆ? ವ್ಯಾಸರಿಗೆ ಜನ್ಮವಿತ್ತ, 'ಕುಮಾರೀ-ಮಾತೆ' ಶಂತನುವಿನ ಅರ್ಧಾಂಗಿಯಾದ ಘಟನೆ, ಅವಳಿಗೆ ಮರಳಿ ಕೌಮಾರ್ಯ ಲಭಿಸಿತು ಎಂಬ ಅರ್ಥವನ್ನೇ ಸೂಚಿಸುತ್ತಿಲ್ಲವೆ? ಕೃತ, ದ್ವಾಪರಯುಗದ ಆ ದಿವ್ಯ ದೇವತಾ ಸ್ತ್ರೀಯರಿಗಿದ್ದ ಆ ಅದ್ಭುತ ಶಕ್ತಿಗೆ ಇಲ್ಲವಾದ, ಆ ಬಳಿಕಿನ ಯುಗದ ದೇವಾರ್ಪಿತ-ಜೀವನದ ಕುಮಾರೀ ಸಂಪ್ರದಾಯವು, 'ಸಮಯ' ಬದಲಾದುದರ ಮೂಲಕ, ದುರ್ದೈವದಿಂದ ಅಪವಾದಕ್ಕೆ ಗುರಿಯಾಗುವ ಹೊತ್ತು ಬಂದಿರುವುದು ಕಾಣುತ್ತಲೆ ಇದೆ.

ಈ ಹಿನ್ನೆಲೆಯಲ್ಲಿ ಕಣಿ ಹೇಳುವ ಕುಮಾರೀ ಪರಂಪರೆಯು ಆಗಲೆ ಮುಗಿದು ಹೋಗದೆ ಅದನ್ನು ಮುನ್ನಡೆಸಿಕೊಂಡು ಹೋಗುವ ಹೊಣೆಗಾರಿಕೆ, ಕುಮಾರ : ಪುರುಷೋತ್ತಮರ ತಲೆಯ ಮೇಲೆಯೆ ಬಂದಿತ್ತು, ಬರುತ್ತದೆ. ಯುರೋಪಿನಲ್ಲಿ ಅಂದು ಈ ಮಹಾಕಾರ್ಯವನ್ನು ಯಶಸ್ವಿಯಾಗಿ ಜರುಗಿಸಿದವನು ಕುಮಾರ (ಏಸು) ಕ್ರಿಸ್ತ ಎಂದು ಬಗೆಯಲಾಗಿದೆ. ಭಾರತದಲ್ಲೂ ಗುರುಮಾರ್ಗದ ಅಗ್ರದೂತನೊಬ್ಬನ ಹೆಸರು ಅದೇ ಹೋಲಿಕೆಯದು : 'ಕೃಷ್ಣ' ಎಂದಿರಬೇಕು. ಆದರೆ, ಶ್ರೀಕೃಷ್ಣನದು, ಬಳಸಿ ಬ್ರಹ್ಮಚಾರಿ ಎಂಬ ಖ್ಯಾತಿ! ಈ ಗುರು (ದತ್ತ) ಮಾರ್ಗವನ್ನು ಶಿಷ್ಟಮಾನ್ಯವೆನಿಸುವ ರೀತಿಯಲ್ಲಿ ಉದಾತ್ತ ತಾತ್ತ್ವಿಕ ಭೂಮಿಕೆಯ ಮೇಲೆ ವಿವರಿಸಿ ಅದನ್ನು ಎಂತೂ ಉಳಿಸಿಕೊಂಡು ಬಂದಿರುವ ಶ್ರೇಯಸ್ಸು ನಿಜಕ್ಕೂ ಭಗವದ್ಗೀತೆಯ ಶ್ರೀಕೃಷ್ಣ ಪ್ರತಿಮೆಗೆ ಸಲ್ಲಲಿಕ್ಕೆ ಬೇಕು, ಸಲ್ಲುತ್ತಲೂ ಇದೆ. ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಯಾಗಿ ಉಳಿಯಬಲ್ಲ ಅದ್ಭುತ ನಿಷ್ಕಾಮ ಯೋಗವನ್ನು ಪ್ರಪಂಚಕ್ಕೆ ಬೋಧಿಸುತ್ತಿರುವ ಗೀತೆಯ ಅರ್ಥದ ಬಗೆಗೆ ಇಂದಿಗೂ ಏಕಾಭಿಪ್ರಾಯವಿಲ್ಲದಿರುವುದು, ಇದೂ ಒಂದು ಆ ಗ್ರಂಥದ ಪವಾಡ ಶಕ್ತಿಯ ಲಕ್ಷಣ. ಕ್ರಿಸ್ತ-ಕೃಷ್ಣ ಈ ನಾಮ ಸಾಮ್ಯವೂ, ಈ ಪವಾಡೀ ಸಂಪ್ರದಾಯದಲ್ಲಿ ಸಂಭವಿಸಿರುವ ಇದು ಒಂದು ಪವಾಡವೇ ಸರಿ. ಅದಿರಲಿ, ಸರ್ವಾರ್ಪಣಭಾವದ ಈ ಎಲ್ಲ ವಿರಕ್ತಪಂಥಗಳಲ್ಲಿ 'ತ್ವಂ ಏವ ಮಾತಾ ಪಿತಾ ತ್ವಮೇವ' ಎಂದು ಹೊಗಳಲ್ಪಡುವ ಈ ಜಗದ್ಗುರು-ವಿಶ್ವಗುರು ಯಾರು? ಅವನ ದರ್ಶನವು ಅವಶ್ಯವಿಲ್ಲವೆ?

ಅಗ್ನಿಯನ್ನು ಧಾರಣಮಾಡುವವನು, ವಿಷವನ್ನು 'ರೋದಸೀ'ಯಲ್ಲಿ ತುಂಬುವನು. ಸ್ವರ್‌ಲೋಕದ ಆನಂದಲೋಕದ ದರ್ಶನಮಾಡಿಸಬಲ್ಲವನು, (ಸಂದೃಕ್:) ಜ್ಯೋತಿಃ ಸ್ವರೂಪನು ಆಗಿರುವನೆಂಬ ಈ ಕೇಶಿನ್: ಮೌನೇಯನು, ಮುನಿ. ಮಾತಾಡಲು ಹೇಗೆ ಶಕ್ಯ? ಆದರೆ, ಇದನ್ನು ಅರಿಯಲು ಋಗ್ವೇದದ ಇದೇ ಸೂಕ್ತಸ್ಥ ಅರ್ಥಪೂರ್ಣ ಸಂಕೇತಗಳ ನೆರವು ದೊರೆಯಲು ಶಕ್ಯವಿದೆ. ಇಂತಹ ಸಾಂಕೇತಿಕ ಪ್ರತಿಮೆಗಳಲ್ಲಿ 'ವಾತ-ರಶನಃ' ಈ ಮುನಿವರ್ಗಕ್ಕೆ ಇರುವ ಹೆಸರು ಅತ್ಯಂತ ಮಹತ್ತ್ವದ್ದಾಗಿದೆ. ಅಲ್ಲದೆ, ಇವರನ್ನು 'ವಾತಸ್ಯ ಅಶ್ವಃ' 'ವಾಯೋಃ ಸಖಾ' ಎಂದೂ ಹೇಳಲಾಗಿದೆ. ಉಪ-ಮಂಥನ ಮಾಡುವನೆಂಬಲ್ಲಿಗೆ ಈ ಸೂಕ್ತವು ಕೊನೆಗೊಳ್ಳುತ್ತದೆ.

ವಾತ-ರಶನ ಈ ಶಬ್ದ-ಪ್ರತಿಮಾ ನಿರ್ಮಿತಿಯಲ್ಲಿ ಕವಡು ಇಲ್ಲ. 'ಮೊದಲುತನದ' ಆವರಣವು ಇನ್ನೂ ಉಂಟು. ಈ ಪ್ರತಿಮೆಯ ಆ-ಕೃತಿಯಲ್ಲಿ, ಅದು ಮೈದಾಳುವಾಗಿನ 'ಸಮಯ'ವು ಸಹ, ಅರ್ನೆಸ್ಟ್ ಕ್ಯಾಸಿರರ್ ಹೇಳುವಂತೆ ತುಂಬಿ ಹೊರಸೂಸುತ್ತಿದೆ. The primary experience is saturate with. ಆದರೂ, ಇದು

ಪ್ರಪ್ರಧಾನುಭವದ ಅನುಭೂತಿಯ ಶಬ್ದಪ್ರತಿಮೆ ಮಾತ್ರವಲ್ಲ. ಆದರೆ, ಆ ಸರ್ವ ಪ್ರಥಮ ಪ್ರಮಾಥೀ ಅನುಭೂತಿಗೆ ಕಾರಣವಾದ ಪ್ರಧಾನ ಇಂದ್ರಿಯವಿದು. ಇದನ್ನು ಗಾಳಿ ತುಂಬಿದ ಹಗ್ಗ ಎಂದಿದ್ದಾನೆ ಈ ಕವಿ. ವಾತರಶನ (-ಗಾಳಿ ತುಂಬಿದ-ಸೇರಿದ ಹಗ್ಗ); ಈ ರಶನ, ರಸನ (ರಸನಾ : ನಾಲಗೆ) ರೂಪದಲ್ಲಿ ಇದು ಗಾಳಿಯ ನಾಲಗೆ ವಾಣಿ ವಾತವು-ವಾಯು ವಾಣಿಯ ಸಾಧನವೂ ಆಗುತ್ತಿದೆ! ಹನುಮನು ಭಾರತೀಯ ದೇವೀಪತಿ; ಸರಸ್ವತೀ ಸಖ; ಮರುತ. ಗಾಳಿ ತುಂಬಿದ ಕೊಳಲು (: ಕಬಂಧ=ಕೊಳಾಯಿ) ನಾದವನ್ನು ನಿರ್ಮಿಸುತ್ತದೆ. ಋಗ್ವೇದದ ಆಪ : ರಸ ತತ್ತ್ವದ ಪ್ರತಿಮೆಗಳಲ್ಲಿ ಗಾಳಿ-ವಾತ-ವಾಯುವು ತಳಹದಿಯಲ್ಲಿ ಅದರೊಡನೆ ಬೆಂಕಿಯು ಸೇರಿದ್ದು ಹಲವು ಬಾರಿ ಕಾಣುತ್ತದೆ. ಈ ಬೆಂಕಿ, ಸಂಹಾರಕಾರೀ ಸರ್ಜಕಶಕ್ತಿ ಇದರ ದೃಷ್ಟಿಯಲ್ಲಿ. ಗಾಳಿ : ಗತಿ-ಚೈತನ್ಯ ಶಕ್ತಿ; ವಾಕ್‌ಪ್ರೇರಣೆಗೆ ವಾಯುದೇವರು ಕಾರಣ. 'ವಾತ' ಸೇರಿದ ರಶನವು 'ಅಶ್ವವು' ಗತಿಮಂತ ಚೈತನ್ಯ ನಿಜ! ಈ ವಾಡಬ 'ಅಶ್ವ'ಕ್ಕೆ ಇನ್ನೂ ಕೆಲವು ಧ್ವನ್ಯರ್ಥಗಳಿವೆ. ಈ ವಾತಾರಶನವು 'ಅಶ್ವ'ರೂಪದಲ್ಲಿ ನೆಗೆಯುತ್ತದೆ. ಈ ವಾತರಶನರು, ವಾಯುದೇವರ : ಮುಖ್ಯ-ಪ್ರಾಣನ ಜೀವದ ಗೆಳೆಯರು. (ವಾಯೋಃ ಸಖಾ), ಅಥವಾ ವಾಯುದೇವನೇ ಭೂಲೋಕದಲ್ಲಿ 'ವಾತ-ರಶ'ನ ಆಕೃತಿಯಾಗಿ ಅವತರಿಸಿದ್ದಾನೆ ಎಂದರೂ ಸರಿ. ಈ ವಾಯುವು (ಇವನಲ್ಲಿ ಆವೇಶವಾಗಿ), ಈ 'ರಶನ'ನ ಸಲುವಾಗಿ (ಅಸ್ಮೈ) (ಆಪ-ರಸ ಸ್ವರೂಪೀ ಮಧ್ಯಮಾ ವಾಕ್‌ನ್ನು) ಮೆತ್ತಗೆ (ಉಪ) ಮರ್ದಿಸುತ್ತಾನೆ-ಕಡೆಯುತ್ತಾನೆ (ಮಂಥಯತಿ), ವಾಯುವೇ ಮಾಡುತ್ತಾನೆ ಅಥವಾ ಮಾಡಿಸುತ್ತಾನೆಂಬ ಈ ವಾಕ್ಯವು ನರರು ಕೇವಲ ನಿಮಿತ್ತ ಮಾತ್ರರು. ಅವರಿಂದ ಮಾಡಿ ಮಾಡಿಸುತ್ತಾನೆ. ಎಂಬ ವಿಶ್ವಚೈತನ್ಯಶಕ್ತಿ (Elan vital) ಇದಕ್ಕೇ ನರನು ಶರಣು. ಸೃಜನ ಕರ್ತ: ವಿಶ್ವಸ್ಥ ಕೇಂದ್ರ 'ಪುರುಷ'ನು (Being) ಸಾಕ್ಷಾತ್ಕಾರ ಹೀಗೆ ಈ ಮದಿಂತಮ ಆನಂದಯೋಗ ಸಮಾಧಿಯಲ್ಲೆ ಉಂಟು. ನಿಜವಷ್ಟೆ?

ಈ ಕೇಶಿನ್ ಮೂರ್ತಿಯು ವಾತ-ರಶನನು : ಗಾಳಿಸೇರಿದ ಹಗ್ಗ. ಇದುವೆ ಸರ್ಪ ಸ್ವರೂಪ. (: ಸರ್ಪಗಳು ಗಾಳಿಯ ಮೇಲೆ ಬದುಕುತ್ತವೆ ಎಂಬ ನಂಬುಗೆಯು ಒಂದುಂಟು. 'ವಾತಸ್ಯಾಶ್ವಃ' ಎಂಬಲ್ಲಿ ಈ ಸೂಚನೆ ಉಂಟು) ಮೊದಲು, ಈತನು ವಿರಕ್ತನು : ಪ್ರಪಂಚಕ್ಕೆ ಮುನಿದವನು, ಮೌನಿಯು ಆಗಿದ್ದರೂ, ಗಾಳಿ ಸೇರುತ್ತಲೆ ಈ (ವಾತ-) ರಶನನ ವಾಣಿಯಿಂದ (ಅಂತಃಸ್ಫೂರ್ತಿಯಿಂದ) ಮಾತುಗಳೂ ಹೊರಬರುತ್ತವೆ ಎಂಬ ಧ್ವನ್ಯರ್ಥವೂ ಈ (ವಾತ ರಸ (ಶ)ನ) ಶಬ್ದಪ್ರತಿಮೆಯಲ್ಲಿ ಉಂಟು. ವಾತಾಶ್ವವನ್ನೇರಿ ಅಂತರಿಕ್ಷದಲ್ಲಿ ನೆಗೆದಾಡುತ್ತಿರುವಾಗ 'ಹೇ ಮಾರ್ತಾಸಃ......' ಎಂಬೀ ಬಗೆಯಲ್ಲಿ ಮರ್ತ್ಯರನ್ನು ಉದ್ದೇಶಿಸಿ, ಈ ವಾತರಶನ : ಕೇಶೀ : ಪುರುಷನಿಂದ ಹೊರ ಹೊಮ್ಮುವ ವಾಣಿಗೆ 'ಕಣಿ' ಎಂದು ಕಂದಮಿಳ ಭಾಷಿಕ ಪ್ರತಿಮಾ : ಸಂಕೇತವಿದೆ. 'ಕಣಿ' : ಕಣ್ ಈ ಸಂಕೇತದಲ್ಲಿ (ಕಾಣುವ) ಒಳಗಣ್ಣು (: ಸಂದೃಕ್) ಅರಳುವ ಯೋಗಸಾಧನದ ಸೂಚನೆಯೂ ಇಲ್ಲಿ ಉಂಟು.

ಪ್ರಚಲಿತ ಭಾಷೆಯಲ್ಲಿರುವ ಶಬ್ದ-ಪ್ರತಿಮೆಗಳೊಳಗೆ, ದಿಕ್ಕಾಲದ ಸಂದರ್ಭದಲ್ಲಿ ಸಂಭವಿಸಿರಬಹುದಾದ ವಾಸ್ತವ 'ಅರ್ಥ'ದ ಭಾಗವು ಎಷ್ಟು ಮತ್ತು ಆ ಅಮೂರ್ತ ವಾಸ್ತವ : ಸತ್ಯದ ಪ್ರಜ್ಞೆ ಮೂಡಲು ಅನಿವಾರ್ಯವಾದ ಅತ್ಯುಕ್ತಿ ('As if' ಎಂಬ ಭಾಗವು) ಎಷ್ಟು ಎಂಬುದನ್ನು ವರ್ತಮಾನ ಕಾಲದ ಜೀವಂತ ಮಾಧ್ಯಮ: ಪ್ರತಿಮೆಯಲ್ಲಿ ನಿರ್ಧರಿಸಿಕೊಳ್ಳುವುದು ಸಹ ತೊಂದರೆಯದಿರುವಾಗ ಪ್ರಾಚೀನ ಪ್ರಯೋಗಗಳಲ್ಲಿ ಇದನ್ನು ನಿರ್ಧರಿಸಿಕೊಳ್ಳಲು ಶಕ್ಯವೆ? ಎಂಬ ಸಂದೇಹಕ್ಕೆ ಅವಕಾಶವಿದ್ದರೂ, ಪ್ರತಿಮಾ : ಸಂಕೇತಶಾಸ್ತ್ರ, ಜ್ಞಾನೋಪಲಬ್ಧಿಯ ಹಿನ್ನೆಲೆ ಅರಿವ ವಿವಿಧ ತಂತ್ರಗಳ ನೆರವು ಶಕ್ಯವಿರುವ ಸತ್ಯಾನ್ವೇಷಣೆಯ ಇಂದಿನ ರೀತಿಯಲ್ಲಿ ಇದು ತೀರ ಅಶಕ್ಯವೇನಲ್ಲ. ಏಕೆಂದರೆ, ಶಬ್ದ-ಪ್ರತಿಮೆಗೆ, ಸಂಪ್ರದಾಯ ಅಥವಾ ಕೋಶವು ಏನೆ ಅರ್ಥವನ್ನು ಸೂಚಿಸುತ್ತಿದ್ದರೂ, ವರ್ತಮಾನ ಕಾಲದ ಆಚಾರ-ವಿಚಾರಗಳಲ್ಲಿ ಪ್ರತ್ಯಕ್ಷ (: ದಿಕ್ಕಾಲದ ಸಂದರ್ಭದಲ್ಲಿ-ಎಂದರೆ ಆ ಭಾಷಿಕರ ಸಾಮಾಜಿಕ ಜೀವನದ ಪರಿಸರದಲ್ಲಿ) ಪ್ರತೀತಿಗೆ ಬರುತ್ತಿರುವ ಅರ್ಥವೇ ನಿಜವಾದ ಅರ್ಥವು ತಾನೆ? 'ಗಾಂಧೀ ಟೋಪಿ' ಎಂಬ ಸಾಂಕೇತಿಕ ಮಾಧ್ಯಮವು ಗಾಂಧೀಯುಗದಲ್ಲಿ ಪಡೆದ ಅರ್ಥವೆ ಒಂದು. ಆ ಬಳಿಕ, ಎಲ್ಲೆಲ್ಲೂ ತಾನೆ ತಾನಾಗಿ ಭ್ರಷ್ಟಾಚಾರದ ನಗ್ನನೃತ್ಯ ನಡೆದ 'ಸಮಯ'ದಲ್ಲಿ 'ಗಾಂಧೀಟೋಪಿ' ಸಂಕೇತಕ್ಕೆ ಪ್ರಾಪ್ತವಾದ ಅರ್ಥವೆ

ಇನ್ನೊಂದು! ಇದರ ಮುಂಚಿನ 'ಸಮಯ'ದಲ್ಲಿ ರೂಢವಿದ್ದ ಅರ್ಥವು, ೧೦೦ಕ್ಕೆ ೫೦ ರಷ್ಟಾದರೂ ಇಂದು ಅನ್ವಯಿಸುತ್ತದೆಯೊ ಎಂದು ಗಾಂಧೀ ಭಕ್ತರೇ ಶಂಕಿಸುವಂತಾಗಿದೆ. ನಾಳೆ ಕೋಶದಲ್ಲಿ ಈ ಎರಡೂ ಅರ್ಥಗಳು ನಮೂದಿಸಲ್ಪಡಬಹುದು. ಯಾವುದೇ ಸಂಕೇತಕ್ಕೆ ಹುಟ್ಟುವಾಗಲೇ ಎರಡು ಅರ್ಥ ಆ ಮೂಲ ವ್ಯಕ್ತಿಗೆ ಕಾಣಿಸಿಕೊಳ್ಳುತ್ತಿರುವುದಿಲ್ಲ. ಸಾಹಿತ್ಯದಲ್ಲಿ ಬಂದ ಪ್ರಯೋಗದಲ್ಲಿ ಪ್ರತೀತಿಗೆ ಬರುವ ಸಮಯದ ಆವರಣದಿಂದ ಅದು ಯಾವ ಆಚಾರ-ವಿಚಾರ-ಸೂಚಕ ಸಂಕೇತ, ಎಂಬುದು ತಾನೆ ಗೊತ್ತಾಗಬಹುದು.

ಒಂದು ಸಮಯದಲ್ಲಿ ಶಿಷ್ಟಮಾನ್ಯವಿದ್ದ ಶಬ್ದಪ್ರತಿಮೆ, 'ಸಮಯ' ಬದಲಾದ ಬಳಿಕ ಅಶಿಷ್ಟವೆನಿಸಬಹುದು. ಅಥವಾ ಅದನ್ನೇ ರೂಢಿಸಿಕೊಂಡು ಹೋಗುವ ಸಾಂಪ್ರದಾಯಿಕ ಆವಶ್ಯಕತೆಯಿದ್ದರೆ, ಆ ಶಬ್ದ-ಪ್ರತಿಮೆಯು ಬದಲಾದ ನೂತನ ಸಮಯಾಚಾರಗಳಿಗೆ-ಅಭಿರುಚಿಗೆ ಸರಿಹೋಗುವ 'ಸಭ್ಯ' ವೇಷವನ್ನು ಧಾರಣ ಮಾಡಬೇಕಾಗುತ್ತದೆ. ಶಬ್ದ-ಪ್ರತಿಮೆಗಳಿಗೆ ಸಮಯದ (: ಆಗಿನ ನಡೆವಳಿ-ನುಡಿವಳಿಗಳ) ಹಿನ್ನೆಲೆಯಲ್ಲಿ ಅರ್ಥವು ಪ್ರಾಪ್ತವಾಗುತ್ತಿರುತ್ತದೆ. ಯಾವುದೊಂದು ಶಬ್ದಪ್ರತಿಮೆ ದಿಕ್ಕಾಲದ ಸಂದರ್ಭದ ಪ್ರಾಮಾಣಿಕ ಅನುಭವದಲ್ಲಿ ಆಕಾರಪಡೆದಿದ್ದರೆ ಇಲ್ಲಿ ಮೂಲತಃ ಒಂದು ಸಂಕೇತಕ್ಕೆ ಒಂದೇ ಅರ್ಥವು ಇರಬಲ್ಲುದು. ಮೊತ್ತಮೊದಲಿನಿಂದಲೇ ಶ್ಲೇಷಯುಕ್ತ ಒಂದಕ್ಕಿಂತ ಹೆಚ್ಚು ಅರ್ಥ ಛಾಯೆಗಳನ್ನುಳ್ಳ ಶಬ್ದ-ಪ್ರತಿಮೆ. 'ಕವಿ'ಯ ಸೃಷ್ಟಿಯೇ ಹೊರತು, ಜೀವನ-ಸಂದರ್ಭದ 'ತತ್'-ಮಯತೆಯ ಪ್ರಾಮಾಣಿಕ ಅನುಭೂತಿಯ ಹಿನ್ನೆಲೆಯಲ್ಲಿ ಆಕಾರ ಪಡೆದ ಶಬ್ದ ಪ್ರತಿಮೆ, ಅದು ಎಂದೆಂದಿಗೂ ಇರಲಾರದು. ಇಬ್ಬಗೆಯ ಅರ್ಥದ ಅರಿವು, ಹಿಂದುಗಡೆಗೆ ಮೂಡಬಲ್ಲದು. ನಿಜವಾದ ತತ್-ಮಯತೆಯು ತತ್-ರೂಪದಲ್ಲೇ ಶಕ್ಯ. 'ತತ್ : ಏಕಂ' ಇದು ನಾನಾ ವೇಷದ 'ನಾಗಶಕ್ತಿ', ಎಂಬುದು ಮೊತ್ತಮೊದಲೇ ತಿಳಿದಿರಲು ಅಶಕ್ಯ. ಇದು ನಾನಾ ಅನುಭವಗಳ ತರುವಾಯದ ನಿರ್ಣಯವಿರಲಿಕ್ಕೆ ಬೇಕು. ಮೂಲತಃ ತತ್-ಮಯತೆ ತದೇಕ ಧ್ಯಾನದಲ್ಲಿಯೆ ಶಕ್ಯ. ಆದಕಾರಣ, ಶಬ್ದ-ಪ್ರತಿಮೆಗಳಿಗೆ ಹಲವು ರೂಢಾರ್ಥಗಳು ಕಾಲಕ್ರಮದಲ್ಲಿ ತಲೆದೋರುವುವು ಎಂಬುದು ಸ್ಪಷ್ಟವಿದೆ. ಆ ಒಂದೊಂದು ಅರ್ಥದ ಶಕ್ಯತೆ ಸಮರ್ಪಕತೆ ಖಾತ್ರಿಯಾಗಲು, ಆ ಅರ್ಥವು ತಲೆಯೆತ್ತಿದ ಸಮಯ-ವಿಶೇಷವು ಕಣ್ಣಳತೆಯಲ್ಲಿ ಇರುವುದು ಅವಶ್ಯ. ಒಂದು ಸಂಕೇತಕ್ಕೆ ಇರುವ ಒಂದೊಂದು ಅರ್ಥವೂ ಬದಲಾಗುತ್ತ ಬಂದ ಒಂದೊಂದು 'ಸಮಯ'ದ ಸಾಕ್ಷಿಯಾಗಿರುತ್ತದೆ.

ಉದಾಹರಣೆಗಾಗಿ 'ಆ-ಲಿಂಗನ', ಈ ಶಬ್ದ-ಪ್ರತಿಮೆ ನೋಡಿ. 'ಆ' ಎಂಬ ಉಪಸರ್ಗವು ವರೆಗೆ-ತನಕ; ಎಂಬ ಅರ್ಥ-ಸೂಚಕ ಸಂಕೇತವಾಗಿದೆ. 'ಆ-ಲಿಂಗನ' ಸಂಕೇತದ ಮೂಲ ಅರ್ಥದಲ್ಲಿ ಆಗಿರುವ ಇಂದಿನ ಸೌಮ್ಯ ಮಾರ್ಪಾಟಕ್ಕೆ ಈ ಶಬ್ದ-ಪ್ರತಿಮೆಯು ಪ್ರಚಲಿತವಾದ ಬಳಿಕ ಆದ ಸಾಮಾಜಿಕ ಪ್ರಜೆಯ ಜಾಗ್ರತಿಯೆ ಕಾರಣವಿರಲಿಕ್ಕೆ ಬೇಕೆಂಬುದು ಸ್ಪಷ್ಟವಿದೆ. 'ಆ-ಲಿಂಗನ' ಈ ಇಡೀ ಶಬ್ದ-ಪ್ರತಿಮೆಯ ಅರ್ಥದಲ್ಲಿ, ಅಪ್ಪುಗೆಯು ಅಭಿಪ್ರೇತವಿದೆ; ನಿಜ. ಆದರೆ, ಈ ಅಪ್ಪುವ ಕ್ರಿಯೆಯ ಹಿಂದಿನ ಪಾರ್ಶ್ವಭೂಮಿಯಲ್ಲಿ, ಲೈಂಗಿಕ ಸಂಬಂಧದಲ್ಲಿ ಕಾಣದೊರೆವ ಸಂ-ಯೋಗದ ಆ-ಕೃತಿಯ ಸಾಮ್ಯವು ಉಂಟು. ಆ ಸಾಹಚರ್ಯದಿಂದಲೆ ಈ ಆ-ಲಿಂಗನ ಕ್ರಿಯೆಗೆ 'ಅಪ್ಪಿಕೊಳ್ಳು' ಎಂಬ ಅರ್ಥವು ಪ್ರಾಪ್ತವಾಗಿರುವ ಶಕ್ಯತೆಯನ್ನು ಅಲ್ಲಗಳೆಯಲಿಕ್ಕೆ ಆಗುವುದಿಲ್ಲ. ಬಾಹುಪಾಶದಲ್ಲಿ ಬಂಧಿಸುವ ಮತ್ತು ಆ-ಲಿಂಗಿಸುವ ಈ ಎರಡೂ ಅಪ್ಪುಗೆಗಳಲ್ಲಿ ಇರುವ ಅರ್ಥವು, ಇಂದು ಸ್ಥೂಲ ಹೊರನೋಟಕ್ಕೆ ಸಮಾನವೆನಿಸಿದರೂ, ಈ ಶಬ್ದ-ಪ್ರತಿಮೆಗಳು ಒಳಗೊಳ್ಳುವ ಗರ್ಭಿತ ಅರ್ಥ : ಚಿತ್ರವು (Conception) : 'ಧಾರಣೆ' ಒಂದೇ ಇಲ್ಲ. ಆ-ಲಿಂಗನ ಈ ಶಬ್ದ-ಸಂಕೇತವು ಮಹಾಭಾರತ, ಪಾಣಿನಿಯ ಗ್ರಂಥಗಳಷ್ಟು ಪ್ರಾಚೀನವಿದೆ. 'ನಿಯೋಗ' ಸಂಪ್ರದಾಯವು ಶಿಷ್ಟಮಾನ್ಯವಿದ್ದ ಮಹಾಭಾರತದ ಸಮಯಾಚಾರಗಳಲ್ಲಿ ಆ-ಲಿಂಗನದ ಪ್ರಕಾರವು ಮೂಲಾರ್ಥದಿಂದ ವಿಶೇಷ ದೂರವಿದ್ದೀತೆಂದು ಬಗೆಯಲು ಕಾರಣವಿಲ್ಲ.

'ಆ-ಲಿಂಗನ'ವು ಶಿಷ್ಟ ಸಮ್ಮತವಿದ್ದ 'ಸಮಯ'ವು ಕಾಲ್ಪನಿಕವೆಂದು ಬಗೆದಲ್ಲಿ 'ಶಿಶ್ನೋ' ದೇವಾಃ : ನಗ್ನದೇವರ ಋಗ್ವೇದಸ್ಥ ಉಲ್ಲೇಖಗಳು[೧೬] ಅರ್ಥವಿಹೀನವಾಗಲಿವೆ. ಋಗ್ವೇದದ 'ಶಿಶ್ನೋದೇವ' ಸ್ವರೂಪದ

ಅನೇಕ ಸಂಕೇತಗಳು, ಆಗಿನ ಸಾಮಾಜಿಕ ಪರಿಸರದಲ್ಲಿ ಆ-ಲಿಂಗನ ಕ್ರಿಯೆಯ ಮುಕ್ತಪ್ರಕಾರವನ್ನು ಒಪ್ಪಿಕೊಳ್ಳುವ ಮತ್ತು ಈ ಸಾಮಾಜಿಕ ಬಂಧನಾತೀತ ಮುಕ್ತ-ಸಂಗೀ ಜೀವನ ರೀತಿ ಅನಿಷ್ಟ- ಅನಾಚಾರ ಎಂದು ಅದನ್ನು ತೀವ್ರವಾಗಿ ನಿಷೇಧಿಸುವ, ಇದಕ್ಕಾಗಿ ಹಿಂಸೆಗೂ ಹಿಂಜರಿಯದ ಒಂದು ಪಂಗಡವು ಋಗ್ವೇದ ಕಾಲದಲ್ಲಿ ಇದ್ದಿತೆಂಬ ಈ ಬಗೆಯ ಸಮಯಾಚಾರಗಳ ಸಂಘರ್ಷದ ಪರಿಸರದಲ್ಲೆ ಋಗ್ವೇದವು ಅರ್ಥ ಪಡೆಯಬಲ್ಲುದು. ಋಗ್ವೇದದ ಸೂಕ್ತಗಳಲ್ಲಿ ನಾನಾವೇಷದ : ಶಾಬ್ದಿಕ ಸಂಭ್ರಾಮಕ ಬಾಹ್ಯ ಆವರಣದಲ್ಲಿ, ಆಪ: ರಸ ಪಂಥೀಯ ಸರ್ಜಕ : ಸೃಜನಶಕ್ತಿಯು, ಲೈಂಗಿಕ ಆಕೃತಿಯ ವಿವಿಧ ದೈವತ ಪ್ರತಿಮೆಗಳ ರೂಪದಲ್ಲಿ (Elan vital) ಪೂಜೆಗೊಳ್ಳುತ್ತಿರುವುದನ್ನು ಗಮನಿಸುವುದು ಅವಶ್ಯವಿದೆ. ಇಲ್ಲವಾದರೆ, ಆ ಮೌನೇಯನು ಕೇಶೀ : ಪುರುಷನು; ವಾತ-ರಶನನು; ವಾತಾಶ್ವವನ್ನು ಏರುವವನು; ವಾಯುದೇವರ ಸಹಕಾರದಿಂದ (ಮಧ್ಯಮಾ : ವಾಕ್ : ಆವೇಶವಾದ ಕುಮಾರೀ) ಉಪ-ಮಂಥನದಲ್ಲಿ 'ಮದಿಂತಮ' (ಆ-ನಂದ) ಸಿದ್ಧಿಯನ್ನು ಪಡೆವ ಮುನಿಪುಂಗವನೆಂಬ ಈ ಆಕೃತಿಯ ಅರ್ಥವಾಗುವುದೇ ಶಕ್ಯವಿಲ್ಲ. ಪ್ರಾಚೀನ ಪವಾಡಕಥೆಗಳನ್ನಾಗಲಿ, ಶಬ್ದ-ಪ್ರತಿಮೆಗಳನ್ನಾಗಲಿ ಕೋಶಗಳೊಳಗಿನ-ಎಂದರೆ ಹೊರಗಿನ ಅರ್ಥದ ನೆರವಿನಿಂದ ಅರ್ಥಯಿಸುವ ರೀತಿ ಎಂದೂ ಪ್ರಶಸ್ತವಲ್ಲ. ಕೋಶಸ್ಥ ಅರ್ಥ, ಲೇಖಕನ ತರ್ಕಪ್ರತಿಷ್ಠಿತ ಮಂಡನೆ : ವಕೀಲಿ ಇದಾವುದೂ ಶಾಸ್ತ್ರೀಯ ಅರ್ಥ-ಪದ್ಧತಿ ಎನಿಸದು. ಏಕೆಂದರೆ, ಭಾಷಿಕ ಪ್ರತಿಮಾ : ಸಂಕೇತಗಳು; ಆಯಾ ಸಮಯದ ವಿಶಿಷ್ಟ ನಡೆವಳಿ-ನುಡಿವಳಿಯ ಪ್ರಭಾವದಲ್ಲಿ ಆ ಅರ್ಥದ ವಿಶಿಷ್ಟ ಆಕೃತಿಗಳಾಗುತ್ತಿರುತ್ತವೆ. ಇಂತಹ ಪ್ರತಿಮಾ : ಸಂಕೇತಗಳ ಅರ್ಥಗ್ರಹಣಕ್ಕಾಗಿ ಆ ಆ ಬಗೆಯದೇ ಆದ ಸಮಯದ ಆವರಣ : ಆ-ಕೃತಿಯಲ್ಲಿ ಪ್ರವೇಶ ಪಡೆವ ಪ್ರಯತ್ನ ಪಡಬೇಕೇ ಹೊರತು ಆ ಸಮಯದ ಹೊರಗಣ ವೈಚಾರಿಕ ಅಥವಾ ಭಾವನಾತ್ಮಕ ದೃಷ್ಟಿಕೋನವು (attitude) ಆ ವಿಶಿಷ್ಟ 'ಸಮಯ'ವನ್ನು ತರ್ಕದಿಂದ ಕಲ್ಪಿಸಿಕೊಳ್ಳುವುದಕ್ಕೆ ಸಮರ್ಥವಾಗಲಾರದು. ವ್ಯಕ್ತಿಯು ತನ್ನ ದೃಷ್ಟಿಕೋನ (attitude) ಮರೆತು, ಆ ಆ ಪವಾಡ ಕಥೆಯನ್ನೊ, ಅಂದಿನ ಶಬ್ದ-ಪ್ರತಿಮೆಗಳನ್ನೊ ಅವುಗಳ ಹಿನ್ನೆಲೆಯಲ್ಲಿಯೆ ಕಾಣುವ ತಟಸ್ಥ ಮನೋಭಾವವನ್ನು (perspective) ಪಡೆಯುವುದು ಅವಶ್ಯವಿದೆ.

ಮೌನೇಯ ಕೇಶಿನ್ : 'ಪುರುಷನು'; ಇವನ ವಾತ-ರಶನನು, ಸ್ವರೂಪಿಯಾಗಿದ್ದಾನೆ, ಮೌನೇಯ ವಾತರಶನನು ವಾತಾಶ್ವನೂ ಸರಿ. ಈ ಅಶ್ವಾರೋಹಿಯಾಗಿ 'ರೋದಸಿ'ಯಲ್ಲಿ ನಗೆಯುತ್ತಾನೆಂದು ವರ್ಣಿತನಾದ ಈ ಕೇಶೀಪುರುಷನು ಯಾರು? ಇಲ್ಲಿಯ ವರೆಗೆ ಸ್ಪಷ್ಟವಾಗಿ ಅರ್ಥಕ್ಕೆ ನಿಲುಕದ್ದು, ಇವನು ಮದಿಂತಮನಾಗಿ ವಾಕ್ : ಜಲದ ಉಪಮಂಥನ ಕ್ರಿಯೆಯಲ್ಲಿ ತೊಡಗುತ್ತಾನೆ, ಎಂಬಲ್ಲಿ ಕೇಶೀ : ಪುರುಷನ ಸ್ಥೂಲ ಆಕೃತಿಯೊಂದು ನಿರ್ಮಾಣವಾಗುತ್ತದೆ ಇದು ವಿದೇಹಿಯಾಗಿದ್ದು ಸೃಜನದಲ್ಲಿ ತೊಡಗಿರುವ ಜನನೀ-ಜನಕರೂಪ ಸರ್ಪ-ಶಕ್ತಿಯ ಸಂಯುಕ್ತ ಪ್ರತೀಕವಾಗಿರಬೇಕೆಂದು ಕಾಣತೊಡಗುತ್ತದೆ.

ಈ ವಾತ-ರಶನನು-ವಾತರಸನನೂ ಆಗುವನೆಂಬಲ್ಲಿ, ಆಧುನಿಕ ಕಾಲದಲ್ಲಿ 'ಕಣಿ ದೃಷ್ಟಿಗಾಗಿ, ಗಣೆಯನ್ನೇರುವ ಮೈಲಾರ-ಲಿಂಗನ ಜಾತ್ರೆಯಲ್ಲಿಯ ಸಮಯಾಚಾರವು ನೆನಪಿಗೆ ಬರುತ್ತದೆ. ಧಾರ್ಮಿಕ 'ಸಮಯ'ದ ಆವರಣದೊಳಗಿನ ಆಚಾರ-ವಿಚಾರಗಳು, ಅವು ಮೈದಾಳಿದ ಕಾಲದ ಸ್ಮೃತಿಯ ವರ್ತಮಾನ ಕಾಲಸ್ಥ ಅವಶೇಷಗಳು ಆಗಿವೆ. ಇವನ್ನು ಒಂದು ಬಗೆಯಲ್ಲಿ 'living past' ಎನ್ನಬಹುದು. ಕೋಲಿಂಗವುಡ್ ತಮ್ಮ ಆತ್ಮಚರಿತ್ರೆಯಲ್ಲಿ ಬರೆಯುವುದೇನಂದರೆ :

> "The history of the past incapsulated in a context of present thought, and though, thus belongs to the present, it is separated from it". [೧೭]

---

* ಸಮುದ್ರ : ಆಪ-ರಸ ಮಂಥನದ ಕಥೆ ನೆನೆದುಕೊಳ್ಳಿ. ಆ ಮೇರುದಂಡವು ಈ ವಾತರಶನ ಸಂಕೇತದ ಸಮಾನ ಆಕೃತಿಯಲ್ಲವೆ ನೋಡಿ. (ಸಂ)

ಇತಿಹಾಸದ ತತ್ತ್ವಜ್ಞಾನಿಯ ಗಮನಕ್ಕೆ ಬಂದಿರುವ ಈ ಅಂಶವನ್ನೆ, ಮಾನವ ಶಾಸ್ತ್ರಜ್ಞನು, ಆಳವಾದ ವಿಶ್ಲೇಷಣಾತ್ಮಕ ವಿವರಣೆಯೊಂದಿಗೆ ಇನ್ನೂ ಪ್ರತ್ಯಯಕಾರಿಯಾಗುವಂತೆ ಹೇಳಬಲ್ಲನು. ಮರ್ಸಿಯಾ ಇಲಿಯದೆ ಇದನ್ನೇ ವಿವರಿಸುವುದು ಹೀಗೆ : ಆ ವಿಶಿಷ್ಟ ಸನಾತನ 'ಸಮಯ'ದ ನಿಮಿತ್ತದಿಂದ ಜರಗುವ ಸಾಂಪ್ರದಾಯಿಕ ಆಚಾರ : ಆಹ್ನಿಕಾದಿಗಳಲ್ಲಿ ಮೂಲ ಕೃತಿಯ ಮೇಲ್ಪಂಕ್ತಿಯ (ಮಾದರಿಯ archetype), ಪುನರಾವೃತ್ತಿಯು ನಡೆಯುತ್ತದೆ. ಏಕೆಂದರೆ, ನಿಯತಕಾಲಿಕವಾಗಿ ನಡೆವ ಧಾರ್ಮಿಕ ಸ್ವರೂಪದ ಪ್ರತಿಯೊಂದು ನಡೆವಳಿಯಲ್ಲಿ ಆ ಪುರಾತನ ಮೂಲ ಮೇಲ್ಪಂಕ್ತಿಯ ಪುನರಾನುಸರಣವೇ ಇರುತ್ತದೆ. ಇಂತಹ ಸಮಯಾಚಾರಗಳ ಆವರಣದಲ್ಲಿ ಭೌತಸ್ವರೂಪದ ವರ್ತಮಾನಕಾಲದ ಸ್ಮೃತಿಗಳೆಲ್ಲ ಕಳಚಿಬಿದ್ದಂತಾಗಿ, ಮೂಲ ಆ ದಿವ್ಯ ಪವಾಡವು ಈಗಲೆ ಜರುಗುತ್ತಿರುವ ಹಾಗಿನ, ಆ ಪುರಾತನ ಯುಗದಲ್ಲಿಯೆ ತಾವು ಇರುವ ಹಾಗಿನ ಕೆಲವೊಂದು ಅನುಭವವನ್ನು ತಂದುಕೊಡುವ ಸಾಮರ್ಥ್ಯವು, ಈ ಸಾಂಪ್ರದಾಯಿಕ ಆಚಾರ ವಿಧಿಗಳಲ್ಲಿ ಉಂಟು.[೧೮]

ಋಗ್ವೇದದಲ್ಲಿ ಬಂದಿರುವ ಈ ದಿವ್ಯ 'ಕೇಶಿ'ಯ ನೆಲೆಯನ್ನು ಅರಿಯಲು, ಮಾನವಶಾಸ್ತ್ರದಿಂದ ದೊರೆವ ನೆರವು ಅಪೂರ್ವವಾಗಿದೆ. ವೇದಾರ್ಥದ ಗ್ರಹಣಕ್ಕಾಗಿ ಆಯುಷ್ಯವನ್ನೆ ಮುಡುಪಿದ ಮ್ಯಾಕಡೊನೆಲ್, ಎ. ಬಿ. ಕೀತ್ ಪ್ರಭೃತಿಗಳ ತಲೆಮಾರಿನ ವರೆಗೆ ಆದ ಪ್ರಯತ್ನಗಳಲ್ಲಿ ಮಾನವಶಾಸ್ತ್ರದ ಭೂಮಿಕೆಯ ಮೂಲಗ್ರಾಹಿ ದೃಷ್ಟಿಯ ಅಭಾವವು ಕಾಣುತ್ತದೆ. ಈ ಕೇಶೀಮುನಿಯು, ಅನೇಕ ಅರಣ್ಯವಾಸೀ ತಂಡಗಳ ಧರ್ಮಗುರು-ಪುರೋಹಿತನಂತಿರುವ 'ಶಾಮನ್' (Shaman)ಹೋಲಿಕೆಯವನಿದ್ದಾನೆಂದು ಕೀತ್ ಹೇಳಿರುವುದು ಸರಿಯಾಗಿದೆ. ಆದರೆ, ಶಾಮನ್, ಮೆಡಿಸನ್-ಮ್ಯಾನ್ ಇವರನ್ನು ಕುರಿತು ಇತ್ತೀಚೆಗೆ ಆಗಿರುವ ಸಂಶೋಧನದಲ್ಲಿ ತುಂಬ ಮಹತ್ತ್ವದ ಸಂಗತಿಗಳು ಬೆಳಕಿಗೆ ಬಂದಿವೆ. ಸೈಬೀರಿಯಾದತ್ತಣಿನ ಈ ಶ್ರವಣ ಸಂಪ್ರದಾಯವನ್ನು ಕುರಿತು ಮರ್ಸಿಯ ಇಲಿಯದೆ ಬರೆದ ಗ್ರಂಥವು (Shamanism) ತುಂಬ ಉದ್ಬೋಧಕವಾಗಿದೆ. ಪ್ರಸ್ತುತ, 'ಕೇಶಿ'ಯನ್ನು ಅರ್ಥಯಿಸಿಕೊಳ್ಳಲು ಉಪಯುಕ್ತವಾದ ಸಂಗತಿಗಳಲ್ಲಿ ಈ ಶಾಮನ್ ವರ್ಗವು ಧರಿಸುವ 'ದಂಡ' (: ಕಣಿ>ಗಣಿ) ವಿಶೇಷ ಮಹತ್ತ್ವದ್ದಾಗಿದೆ.

ಭಾರತೀಯ ಯತಿ, ಮುನಿ, ಬೈರಾಗಿ ಸಂಪ್ರದಾಯಗಳಲ್ಲೂ ದಂಡವಿಶೇಷಗಳನ್ನು ಧಾರಣಮಾಡುವ ವಾಡಿಕೆ, ಎಂದಿನಿಂದಲೆ ಉಂಟು. ಆದರೆ, ಇದು ಏನು? ಏಕೆ? ಎಂಬುದನ್ನು ನಿರ್ಧರಿಸಿಕೊಳ್ಳುವ= ಆವಶ್ಯಕತೆ ಯೆನಿಸಿದವರು ವಿರಳ. 'ಅಯ್ಯಾಹೊಳೆಯ ಐಯ್ನೂರ್ವರ್ ಸ್ವಾಮಿಗಳ' 'ಮುಮ್ಮುರಿ' ದಂಡಗಳ ಹೆಸರು ಕಂನಾಡ ಮಧ್ಯಯುಗೀನ ಶಾಸನಗಳಲ್ಲಿ ಕೇಳಬರುತ್ತದೆ. ಇದರಂತೆ, 'ಭಲ್ಲೂಕ-ದಂಡಹಸ್ತರ್', ತಂಡ ತಂಡವಾಗಿ ಅಲೆಯುತ್ತಿದ್ದುದಾಗಿಯೂ ತಿಳಿಯುತ್ತದೆ. ಈ ಉಲ್ಲೇಖಗಳೊಳಗಿನ 'ಮುಮ್ಮುರಿ' ಏನು? ಭಲ್ಲೂಕ=ಕರಡೆ ಯಾವ ಅರ್ಥಸೂಚಕ ಸಂಕೇತ? 'ಭಲ್ಲೂಕ-ದಂಡ' ಭಾಲೆ-ಭರ್ಚೆ ಎಂಬ ಹೆಸರಿನಲ್ಲಿ ಕಾಣಿಸಿಕೊಳ್ಳುತ್ತದೆ. ಈ ಭಾಲಾಯಿತ : ಭರ್ಚೆಯ ಭಲ್ಲೂಕರು ಕರೆಕಂಬಳಿಯ ಉಡುಪುತೊಟ್ಟ-ಮೈಲಾರದೇವರ ಒಕ್ಕಲು. ಮರ್ಹಾಟಿಗಳಲ್ಲಿ ವಗ್ಗಯ್ಯ (:<ವ್ಯಾಘ್ರ) > ವಾಘ್ಯಾ ಎಂಬ ನಾಮಸಂಕೇತದಿಂದ ಗುರುತಿಸಲ್ಪಡುವವರು. ಭಲ್ಲೂಕ = ಕರಡಿ. ಆದಕಾರಣ, ಕೇಶಿನ್ ಪುರುಷನು ಭಲ್ಲೂಕ, 'ಶಿವಪೂಜೆಯಲ್ಲಿ ಕರಡೆ ಬಿಟ್ಟಂತೆ' ಎಂಬ ಗಾದೆಯುಂಟು! ಆದರೆ ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, 'ಕರಡೆ' ಎಂಬ ಅರ್ಥಸೂಚಕ ಭಲ್ಲೂಕ ಸಂಕೇತವು, ಸಂಸ್ಕೃತದಲ್ಲಿಯೆ ಅರ್ವಾಚೀನ. ಇದೇ ಅರ್ಥದ ಋಕ್ಷ ಎಂಬುದು ಋಗ್ವೇದದಷ್ಟು ಪ್ರಾಚೀನವಿದೆ. ಇನ್ನೊಂದು ಮಹತ್ವದ ಅಂಶವೆಂದರೆ ಭಲ್ಲ=ಮಲ್ಲ ರೂಪವೂ ಉಂಟಂತೆ! ಶಿವನಿಗೆ ಈ ಹೆಸರು ಇದ್ದುದನ್ನು ಕೋಶದಲ್ಲಿ ಕಾಣುವಾಗ, ಮೇಲಣ ಗಾದೆಯಲ್ಲಿ ಪ್ರತಿಬಿಂಬಿತವಾಗಿರುವ 'ಸಮಯ'ದ ವಾಸ್ತವತೆಯು ಗಮನಕ್ಕೆ ಬಂದಿತು! ಭಲ್ಲ=ದಂಡ ಎಂಬಲ್ಲಿ ಅದರ ಕೇಶಪುಂಜಕ್ಕೆ, ಪ್ರಾಶಸ್ತ್ಯವಿರುವುದಾಗಿ ಕಾಣುತ್ತದೆ, 'ಭಲ್ಲ' ಶಿವನ ಸಾಂಕೇತಿಕ ಪ್ರತೀಕವೆಂದು ಕೋಶವು ಸೂಚಿಸಿದೆ! ಭಲ್ಲ : ಕರಡೆ : ಕೇಶೀ-ದಂಡ (: ಕಣಿ :) ಶಿವ, ಏನೀ ಸಮೀಕರಣದ ಅರ್ಥ?

ಋಕ್ಷ : ಕರಡೆ : ಕಪಿ ಎಂಬ ಅರ್ಥವೂ ಒಂದುಂಟಂತೆ! ಸಪ್ತಋಷಿಗಳನ್ನು 'ಋಕ್ಷ' ಸಂಕೇತದಿಂದ ಋಗ್ವೇದದಲ್ಲಿ ಸೂಚಿಸಿದ್ದುಂಟು[೧೯] ಸಪ್ತಋಷಿಗಳು ಋಕ್ಷ : ಕರಡೆ ಎಂಬ ಕಾರಣದಿಂದ ಕೇಶೀ-ಪುರುಷಃ; ಕಪರ್ದಿ; ಮುನಿಪುಂಗವ ; 'ದಂಡ'ರೂಪ ಸಂಕೇತದಿಂದ ಇವನೇ ಲೋಕಜನಕ ಮೂಲಸ್ತಂಭನೂ ಎಂದು ಸೂಚಿತವಾಗುತ್ತಿರುವುದರ ಬಗೆಗೆ ಸಂದೇಹವೇ ಇಲ್ಲ. ಆದರೆ, ಋಷಿ ಮತ್ತು ಋಕ್ಷ ಇವೆರಡೂ ಶಬ್ದಗಳಲ್ಲಿ ಇರುವ ಉಚ್ಚಾರ ಸಾಮ್ಯದಿಂದ (ಸಪ್ತ) ಋಷಿ=ಋಕ್ಷ ಆಗಿರಬೇಕೆಂದು ಮ್ಯಾಕಡೊನೆಲ್ ಅವರಿಗೆ ತೋರಿದೆ![೨೦] 'ಋಕ್ಷ' ಪ್ರತಿಮೆಯ ಪ್ರಧಾನ ಸಂಕೇತ 'ಕೇಶರಾಶಿ' ಇದು ಮ್ಯಾಕಡೊನೆಲ್ಲ ಅವರ ಅರ್ಥದಲ್ಲಿ ಒಳಗೊಳ್ಳುವುದೇ ಇಲ್ಲ! ಯುರೋಪಿನಲ್ಲಿ 'ಸಪ್ತರ್ಷಿ' ಎಂಬ ತಾರಕಾವಲಯಕ್ಕೆ Great Bear ಬೃಹತ್-ಭಲ್ಲೂಕ ಎಂದೇ ಹೆಸರಿಸಿರುವ ಈ ಸಂಪ್ರದಾಯಗಳಲ್ಲಿ ಏನೊಂದು ಸಮಾನ ಶ್ರದ್ಧಾಸ್ಥಾನವಿರಬೇಕು. ಅಲ್ಲಿ ಇರುವ ಶಕ್ಯತೆ ಇದೆ-ಎಂದು ಸಂದೇಹಿಸಿ ಸ್ವಲ್ಪ ಆಳವಾಗಿ ವಿಮರ್ಶಿಸುವ ಆವಶ್ಯಕತೆಯಿತ್ತು. ನಾರ=ನೀರೆ : Water Nymph ಹಾಗೂ ಸರ್ಪ, ಚಂದ್ರ ಆವೇಶವಾಗುವ ಅರ್ಚಿಕೆಯರು ಗ್ರೀಕ್ ಪುರಾತನ ಕಥೆಗಳಲ್ಲೂ ಭಾರತೀಯ ವೈದಿಕಕಥೆಗಳಲ್ಲೂ ದೊರೆಯುತ್ತಾರೆ, ಎಂದು ನಿರ್ಧರಿಸಿಕೊಂಡು ಆಗಿದೆ. Phallic stones : ಲಿಂಗಶಿಲೆ ನೆಟ್ಟು ಪೂಜಿಸುವ ವಾಡಿಕೆ ಎರಡೂ ಕಡೆಗೆ ಇದ್ದುದು ಗ್ರೀಕ್ ಪವಾಡ ಕಥೆಗಳಲ್ಲಿ ಬಂದಿದೆ. ಅದೇ ಮೇರೆಗೆ ಕರಡೆಯ ಪ್ರತಿಮಾ ಸಂಕೇತವೂ ಉಂಟು! ಭಾರತೀಯ ಸಂಕೇತದಲ್ಲಿ ಬರಿ 'ಋಕ್ಷ' ಇದ್ದರೆ ಪಾಶ್ಚಾತ್ಯ ಸಂಕೇತದಲ್ಲಿ ಬೃಹತ್ 'Great' ಎಂಬ ಇನ್ನೂ ಒಂದು ಸೂಚಕತೆ ಹೆಚ್ಚಿಗೆ ಉಂಟು. ಬೃಹತ್, ಬೃಹತೀ ಎಂದೂ ಪ್ರಧಾನ ಎಂದೂ ಈ ಅಂಗಕ್ಕೇ ಹೆಸರು! ಆದರೆ, ಮ್ಯಾಕಡೊನೆಲ್ ಅವರಿಗೆ 'ಋಕ್ಷ' ಹಾಗೂ The Great Bear ಎಂಬಲ್ಲಿರುವ ಸಾಂಕೇತಿಕ ಗುಹ್ಯಾರ್ಥವಿರುವುದು ಗಮನಕ್ಕೆ ಬಂದಿಲ್ಲ! ಋಕ್ಷ: ಕರಡೆ=ಕೂದಲಿನ ಪ್ರತೀಕ. 'ಸರ್ಪ' ಸಂಕೇತವು, ಸರಣಶೀಲ=ಗತಿಮಂತ ಎಂಬ ಅರ್ಥದಲ್ಲಿ ಋಗ್ವೇದದಲ್ಲಿ ವ್ಯವಹರಿಸುತ್ತಿದ್ದುದನ್ನು ವಿವರಿಸಿ ಆಗಿದೆ. ಆದಕಾರಣ ಸಪ್ತಋಷಯಃ=ಸಪ್ತಕೇಶಿನಃ ಆಯಿತು. ಋಗ್ವೇದದಲ್ಲಿ 'ತತ್=ಏಕಂ : ಸತ್' ತತ್ವದ ಪ್ರತಿಪಾದನೆಯೂ ಉಂಟು ಎಂಬುದಕ್ಕೆ ಇದೂ ಒಂದು ನಿದರ್ಶನ. ಆಪ : ರಸ : ಪಯಸ್ : ಚಂದ್ರಾಃ ಆಪಃ ಸ್ವರೂಪೀ ಸತ್ ತತ್ : ಏಕಂ ಎಂದರೆ ಏನು? ಎಂಬುದೂ ಇಲ್ಲಿ ಬೆಳಕಿನಲ್ಲಿ ಬರುತ್ತದೆ.

(ಸಪ್ತ) ಕೇಶಿನ್ : ಪುರುಷ : ವಾತರಶನ ಇವನು ಮೌನೇಯನು ಇವನು (ಮಧ್ಯಮಾ; ವಾಕ್ ಅನ್ನು) ಉಪಮಂಥನ ಮಾಡುತ್ತಿರುವುದರ ವರ್ಣನೆಯು ಈ ಮೊದಲು ಬಂದಿದೆ. ಈ ಕ್ರಿಯೆಯು ಭೂಲೋಕದಲ್ಲಿ ಸಾರ್ವಕಾಲಿಕವಾಗಿ ನಡೆದಿದೆ. ಈ ಕೇಶೀ : ಪುರುಷನು ಈ ಪ್ರಪಂಚದ ಅಧ್ಯಕ್ಷನು : ಪ್ರಭು : ಸಾಕ್ಷಿಯಾಗಿ ಸಪ್ತರ್ಷಿ ನಾಮದಿಂದ, ಏನೆಲ್ಲ ಸಮೀಕ್ಷಿಸುತ್ತಿದ್ದಾನೆ, ಎಂಬ ಹಾಗಿನ ಒಂದು ಪ್ರತಿಮಾ-ಸೃಷ್ಟಿ ಬೃಹದಾರಣ್ಯಕದಲ್ಲಿದೆ.[೨೧] ಆದರೆ, ಇಲ್ಲಿಯೂ ಗುಹ್ಯಭಾಷೆಯಿಲ್ಲದಿಲ್ಲ. ಋಗ್ವೇದದ ಮುನಿಸೂಕ್ತದಲ್ಲಿ 'ವಿಷಸ್ಯ' ಪಾನಪಾತ್ರದಲ್ಲಿ ರುದ್ರನೊಡನೆ ಎಲ್ಲರೂ ಭಾಗವಹಿಸುತ್ತಿರುವ ಸೂಚಕ ವರ್ಣನೆಯುಂಟು. ವಾಕ್ಕಿನ ಸ್ಪಷ್ಟನಿರ್ದೇಶವಿಲ್ಲ. ಆದರೆ, ಭಾಷ್ಯಕಾರರು, ಮುನಿವಾಕ್ಕಿನ ಉಪಮಂಥನದಲ್ಲಿರುವುದಾಗಿ ಅರ್ಥ ಹೇಳಿದ್ದಾರೆ. ಬೃಹದಾರಣ್ಯಕದಲ್ಲಿ ವಾಕ್ಕಿನ ಸ್ಪಷ್ಟ ನಿರ್ದೇಶವಿದೆ. ಅಲ್ಲದೆ, 'ವಾಕ್=ಅತ್ರಿ' ಎಂದೂ ಅಲ್ಲಿ ಸೂಚಿಸಲಾಗಿದೆ. ಕೇಶಿ ಗುರುದತ್ತನು ಆತ್ರೇಯನು! ಇದರ ಸೂಚನೆಯೂ ಇಲ್ಲಿ ಉಂಟು. ಅಲ್ಲದೆ, ಈ ಸಪ್ತರು=ಸರ್ಪ 'ಬಿಲ' ಬದಿಗೆ ಇರುವ ಸೂಚಕ ವರ್ಣನೆಯುಂಟು. ಈ ಚಮಸ : ಪಾತ್ರೆ ಬಿಲದ ದ್ವಾರ ಭೂಮಿಯ ಕಡೆಗೆ ಇದೆ, ಎಂದರೆ 'ಊರ್ಧ್ವಮೂಲ'ವಿದೆ. ಆ ಸಂಕೇತ ಇಲ್ಲಿ 'ಅಷ್ಟಮೀ' (ದೇವಿ) ವಾಕ್ ಎಂಬ ಸಂಕೇತವು ಇದು ದುರ್ಗಾ : ಶಕ್ತಿಯ ಉಪಾಸನೆ ನಡೆದ ಸೂಚನೆ ಇರುವುದನ್ನು ಅಲ್ಲಗಳೆಯಲಿಕ್ಕಾದೀತೆ?

(ಸಪ್ತ:) ಕೇಶಿ : ಪುರುಷ ಮತ್ತು (ಸಪ್ತ :) ಋಷಿ ಈ ಸಂಕೇತಗಳು ನಾಗ ಸರ್ಪ-ಶಕ್ತಿಯ ಪ್ರತೀಕಗಳು ಎಂಬುದನ್ನು ಸ್ಮರಿಸಿಕೊಂಡರೆ ಬೃಹದಾರಣ್ಯಕದ, ವಾಕ್ (: ಅತ್ರಿ) ಸಹಿತ ಸಪ್ತರ್ಷಿಗಳು, ಋಗ್ವೇದ : ಈ ಕರಡಿ=ಋಕ್ಷ ಆಗಿರುವುದರ ಮನವರಿಕೆಯಾಗದಿರದು. ಈ ಸಪ್ತರ್ಷಿಗಳ ಸಂಗಾತಿ ವಾಕ್ : ಅದಿತಿಯೆಂದು

ಅಥರ್ವವೇದ ಹೇಳುತ್ತದೆ. ಈ ಕೇಶೀ : ಪುರುಷನಲ್ಲಿ ಎಂದರೆ ಸರ್ಪರೂಪ ವಿಶ್ವಸ್ಥ ಸೃಜನಶಕ್ತಿಯಲ್ಲಿ 'ಭೂತಕೃತಃ' ಎಂದು ವರ್ಣಿಸಲ್ಪಟ್ಟ 'ಸಪ್ತ' 'ಋಷಿ' ಎಂಬುವರ ಸಮಾವೇಶವೂ ಆಗುತ್ತದೆ, ಎಂದು ಸೂಚಿಸುವುದರೊಡನೆ ಪ್ರಪಂಚದಲ್ಲಿ ತತ್=ಏಕಂ ಮಾತ್ರ ಸತ್ಯ, ಉಳಿದುದೆಲ್ಲ ಮಿಥ್ಯ, ಎಂದು ಸೂಚಿಸಲಾಗಿದೆ. ಈ 'ಸಪ್ತ' ಋಷಿ='ಋಕ್ಷ'=ಕರಡೆ ಎಂಬುದನ್ನು ಸೂಚಿಸಿ, ಅವರೂ ಕೇಶಿನ್=ಪುರುಷಶಕ್ತಿ ಎಂಬುದನ್ನು ಬಹಿರಂಗ ಪಡಿಸದಿದ್ದರೆ[೨೨] ಈ ಆಂತರಿಕ ಏಕತ್ವ ತಿಳಿಯಲು ಅಶಕ್ಯವಿತ್ತು. ಈ ಋಕ್ಷ : ಕೇಶಿನ್ (: ಪುರುಷ) ಉಲ್ಲೇಖವು ವರುಣ (ರಸ-ದೇವ) ಸೂಕ್ತದಲ್ಲಿದೆ! ಶುನಃ 'ಶೇಪ'ನ 'ಬಲಿ' ದಾನದ ವರ್ಣನೆಯಲ್ಲಿದೆ. 'ಶೇಪ' ಸಂಕೇತವು ಇಲ್ಲಿ ವಿಶೇಷಾರ್ಥ ಪಡೆಯುತ್ತದೆ. ಈ ಕರಡೆ=ಋಕ್ಷ ಸಂಕೇತವು, ಮರುತರ ವರ್ಣನೆಯಲ್ಲೂ ಬಂದಿದೆ (V. ೫೬.೩). 'ಮರುತಃ ಋಕ್ಷಃ. ನ (=ಇವ), ಮರುತರನ್ನು ಉದ್ದೇಶಿಸಿ ಇರುವ ಈ ಸೂಕ್ತವು 'ಅಪಾಂ ನಪ್ತೃ': ಬಾಡಬ ಅಗ್ನಿಗೂ ಸರಿಹೋಗುತ್ತದೆ! ಈ ಕಾರಣದಿಂದ ಮೌನೇಯ ಸಪ್ತಕೇಶಿನ್=ಪುರುಷ=ಸಪ್ತರ್ಷಿ ಮರುತರು=ಅಪಾಂ-ನಪ್ತೃ=.ಆಪೋ-ವತ್ಸ ನೀರೊಳಗಿನ ಅಗ್ನಿ ಈ ಎಲ್ಲ ಪ್ರತಿಮೆಗಳು 'ತತ್'=ಏಕಂ ಎಂಬ 'ಸತ್ಯ' (=ಆಪ : ರಸ) ದರ್ಶನ ಮಾಡಿಸಲು ಅವತಾರ ತಾಳಿವೆ. ಈ ಪುರುಷ=ಕೇಶಿನ್ ಪ್ರತಿಮೆಯೆ ವಾಕ್ (=ಅತ್ರಿ) =ಅದಿತಿ ಸಹಿತ ಸಪ್ತರ್ಷಿಗಳ ರೂಪದಲ್ಲಿ, ಅಂತರಿಕ್ಷದಲ್ಲಿ-ವಿಶ್ವಾಧ್ಯಕ್ಷ ಸ್ಥಾನದಲ್ಲಿ ವಿರಾಜಮಾನವಾಗಿದೆ. ಎಂಬುದನ್ನು ನಿದರ್ಶನಕ್ಕೆ ತರುವ ಯೋಜನೆ ಇದ್ದುದು, ಬೃಹದಾರಣ್ಯಕದ ಉಲ್ಲೇಖದಿಂದ ಬಯಲಿಗೆ ಬರುತ್ತದೆ. ವಾಕ್ ಮತ್ತು ಅದಿತಿ ಸಂಕೇತಗಳು ಮಾಯವಾಗಿ ಸಪ್ತರ್ಷಿಗಳ ಸಂಗಾತಿ ಎಂದು 'ಅರುಂಧತಿ' ಎಂಬ ಹೊಸ ಸಂಕೇತವನ್ನು ರೂಢಿಸಲಾಗಿದೆ! ಅರುಂಧತಿ, ಸಪ್ತ (ಸರ್ಪ) ಸಂಗಾತಿ ಇದ್ದು ವಸಿಷ್ಠನ ಆದರ್ಶ ಧರ್ಮಪತ್ನಿ ಎಂಬ ಹಾಗೆ ನಂಬುಗೆ ಹುಟ್ಟಿಸುವ ಕತೆ ಮಹಾಭಾರತದಿಂದ ತೊಡಗಿ ಹುಟ್ಟತೊಡಗಿದ್ದುಂಟು! ನಿನ್ನೆ-ಇಂದುಗಳಲ್ಲಿ ಹರಿದುಬರುವ ಘಟನಾಪ್ರವಾಹದಲ್ಲಿ ಇರಲೇಬೇಕಾದ-ಇದ್ದೇ ತೀರುವ ಕಾರ್ಯ-ಕಾರಣ ಸಂಬಂಧವನ್ನು ತಪ್ಪಿಸಿ ದಿಗ್ಭ್ರಾಂತಿಯನ್ನು ತರುವ ಈ ಬಗೆಯ ಕಥಾರಚನೆಯಲ್ಲಿ ಉದ್ದೇಶವೆ ಇಲ್ಲ, ಎನ್ನಲಾದೀತೆ? ಇತಿಹಾಸ=ವಾಸ್ತವಸತ್ಯ ಬಚ್ಚಿಡುವ ಸ್ವ-ಕೃತಕ ಕಾಲ್ಪನಿಕಸತ್ಯ, ಜನ ನಂಬುವಂತೆ ಮಾಡುವ ಈ ಬಗೆಯ ಕೃತಿ ಶ್ಲಾಘ್ಯವೋ?

ಬಾಡಬ ಅಗ್ನಿಸ್ವರೂಪ ಋಕ್ಷ : ಮರುತ (=ರುದ್ರಿಯರ) ವರ್ಣನಾ ಸೂಕ್ತದಲ್ಲಿ ಬರುವ ರೋದಸಿ ದೇವಿಯ ಈ ಉಲ್ಲೇಖವು, ಈ ವಾಕ್ (: ಅತ್ರಿ) ಸಹಿತ ಸಪ್ತರ್ಷಿ=ಋಕ್ಷರ ನಿಜಸ್ವರೂಪ ದರ್ಶನಕ್ಕೆ ಅತ್ಯಂತ ಉಪಕಾರವಿದೆ.[೨೩] ಈ ರೋದಸಿಯನ್ನು 'ಮೀಳ್ಹುಷೀ' ಎನ್ನಲಾಗಿದೆ. 'ಮೀಢ್ವ' ಎಂದರೆ ರಸಸ್ವರೂಪಿ ಆಗಿರುವ ರೋದಸಿಯು ಇವಳು. ಸಾಯಣರ ಮತದಂತೆ 'ರೋದಸೀ ರುದ್ರಸ್ಯ ಪತ್ನೀ, ಮರುತಾಂ ಮಾತಾ। ಯದ್ವಾ ರುದ್ರೋ 'ವಾಯುಃ', ಎಂದರೆ ರೋದಸೀ ಸಂಗಾತಿಗಳು ಮರುತರು ಆಗಬಲ್ಲರು. ಇವಳೇ ರುದ್ರಿಯರ ಸಂಗಾತಿ ವಾಗಾಂಭ್ರಣೀ! ವಾತರಶನರು, ಇಲ್ಲಿ ವಾತಾಶ್ವವನ್ನು ಏರಿ ರೋದಸಿಯಲ್ಲಿ ಇರುವುದನ್ನು ಸ್ಮರಿಸಿಕೊಳ್ಳಬೇಕು. ಅಲ್ಲಿ ಅವರು ('ಮಧ್ಯಮಾ : ವಾಕ್ಕಿನ') ಉಪಮಂಥನದಲ್ಲಿ ತೊಡಗಿದ್ದನ್ನು ಸ್ಮರಿಸಿಕೊಳ್ಳಬೇಕು. ಇವನೇ ರೋದಸಿ ಎಂದರೆ (ಚಿತ್) ಅಂಬರಸ್ಥ ಕೇಶೀ ಪುರುಷನು: ಚಿದಂಬರ ಪುರುಷನು!

ಅಹಿ (ಭಾನು), ಸ್ವರೂಪೀ ಅಲ್ಲದೆ ಋಕ್ಷ=ಕೂದಲಿನವರಾದ ಮರುತರನ್ನು 'ಕಬಂಧ' : (ನೀರನ್ನು ಸೇಚನಗೆಯ್ವ) ಕೊಳಾಯಿ ಎಂದೂ ವರ್ಣಿಸಿದ್ದನ್ನು ಮರೆಯಲಾಗದು. ಅಲ್ಲದೆ, ಇವರು (ಗೌಃ ಇವ) ಗೂಳಿಯಂತೆ ಕಟ್ಟುಪಾಟಿನಲ್ಲಿಡಲು ಕಷ್ಟಕರರು-ದುರ್‌ಧರರು (ದುಧ್ರಃ) ಆಗಿದ್ದಾರೆ. ಭೀಮ=ಭೀಕರ ಬಲಶಾಲಿಗಳು. ಇದೇ ಮೇರೆಗೆ ಮರುತರು (ನೀರೊಳಗಿನ ಬೆಂಕಿ; ಆದಕಾರಣ) 'ವಾಜಿ' : ಕುದುರೆಯೂ ಆಗಿದ್ದಾರೆ. ಈ ವರ್ಣನೆಯ ಹಿನ್ನೆಲೆಯಲ್ಲಿ ಮರುತ : ಮಾರುತಿ (: ಹನುಮ) ದೇವರ ದೀರ್ಘ 'ಲಾಂಗೂಲ' ಈ ಸಂಕೇತಸ್ಥ ಗುಹ್ಯಾರ್ಥವು ಬೆಳಕಿನಲ್ಲಿ ಬರುತ್ತಿದೆ. ಸೆಳೆಮಿಂಚನ್ನು 'ಸಲಿಲ ಮಧ್ಯದ ವೇತಸ' (ಬೆತ್ತ : ಕೋಲು, ಹಾವು) ಎಂದುದೂ ತುಲನೀಯವಿದೆ.

ಈ ಎಲ್ಲ ವಿವರದಿಂದ ಕಂಡುಬರುವ ಸಂಗತಿ : 'ಕೇಶಿನ್' : ವಾತರಶನನು : ಪುರುಷನು. ಇವನೂ ಮರುತರ ಆ-ಕೃತಿಯವನೇ. 'ಸಪ್ತ' ಎಂಬ ಸಂಕೇತಿಕ ಶಬ್ದ ಪ್ರತಿಮೆಯ ಬಾಹ್ಯ ಆ-ಕೃತಿ : ಶಬ್ದರೂಪವು, ಭಿನ್ನವೆನಿಸಿದರೂ, ಈ ಪ್ರತಿಮೆಗಳ ಆಂತರಿಕ ಆಕೃತಿ : ಅರ್ಥಗರ್ಭ ಸಮಾನವೇ ಇದೆ. ಇದುವೆ 'ಅಪಾಂ ನಪ್ತ' ಸ್ವರೂಪದ ತತ್ : ಏಕಂ ವಿಶ್ವಮೂಲದ 'ಸತ್ಯ'. ಇದುವೆ ನಾನಾ ರೂಪದಲ್ಲಿ ಕಾಣಸಿಕೊಳ್ಳುತ್ತದೆ. ಈ ಕೇಶೀ ಪುರುಷ : ಸರ್ಪಶಕ್ತಿಯ ವಾಕ್ : ಅತ್ರಿಯ ಪಾತ್ರದ 'ಉಪಮಂಥನ'ದ ಕ್ರಿಯಾಸಂಕೇತದಿಂದ, ವಿಶ್ವಸ್ಥ ಸೃಜನ-ಮರಣ ಚಕ್ರದ ದರ್ಶನ ಮಾಡಿಸಲಾಗಿದೆ. ಈ ಗೃಹ-ಯಜ್ಞವು ಆಕಾಶದಲ್ಲೂ ನಡೆದುದನ್ನು ಸಪ್ತರ್ಷಿ-ಅರುಂಧತೀ, 'ಉತ್ತಾನಪದ'ಕುಮಾರ : ಅಕ್ಷ-ಧ್ರುವ ಇಂತಹ ತಾರಕಾಪುಂಜ ತಾರಾ-ನಾಥ ರೂಪೀ ಸಂಕೇತಗಳ ಮೂಲಕ ಸೂಚಿಸಲಾಗಿದೆ. ಚಂದ್ರನಿಗೂ ಋಕ್ಷ : ಕೇಶಿ ಎಂದಿರುವ ಸಂಕೇತವೂ ಇದಕ್ಕೆ ಸಾಕ್ಷಿ!

ಈ ಮೌನೇಯ (ಸಪ್ತ) ಕೇಶಿಯು ಯಾರು ಎಂಬುದನ್ನು ವಾತ-ರಶನಾದಿ ಆತನ ಸ್ತೋತ್ರದೊಳಗಿನ ಕೆಲವು ಪ್ರಮುಖ ಸಾಂಕೇತಿಕ ಪ್ರತಿಮೆಗಳಿಂದ ಗುರುತಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದಾಯಿತು. ಈ ವಾತ-ರಶನ, 'ವಾತಸ್ಯ ಅಶ್ವಾರೋಹಣ', 'ವಾತಸ್ಯ ಸಖ್ಯತ್ವ'ದಿಂದ ಮತ್ತು 'ಉಪಮಂಥನ' ಈ ಸಾಂಕೇತಿಕ ಆ-ಕೃತಿಗಳ ಸಂದರ್ಭದಿಂದ ಕೇಶಿನ್ : ಋಕ್ಷ (ಕರಡೆ) 'ಪುರುಷ' ಆಗಿರುವುದು ಕಂಡಿತು. 'ಋಕ್ಷ' ಸಂಕೇತವು 'ಸಪ್ತ' ಋಷಿಗಳನ್ನು ಸಪ್ತ-ಸಪ್ತ (೭X೭) ಮರುತರ (: ವಾತ : ವಾಯು) ಆಗಿರುವುದೂ ಕಂಡಿತು. ಇವರು 'ದ್ರಪ್ಸಿನಃ,' ಉಕ್ಷಣಃ (ಹನಿವ ಸೇಚನ ಗೆಯ್ವ) ಮರುತರು, (: 'ಆಪಸೇಚನೆಗೆಯ್ವ') 'ಕಬಂಧ' ಸ್ವರೂಪರು ಎಂಬ ಸಂಕೇತದ ಮೂಲಕ ಇವರೆಲ್ಲರ ತಳಪಾಯದ ಆ-ಕೃತಿಯ ಗುಹ್ಯಾರ್ಥವು ಸ್ಪಷ್ಟವಾಯಿತು. 'ವಾತಸ್ಯ' ಅಶ್ವನನ್ನು ಏರಿ, ರೋದಸಿಯಲ್ಲಿ ಎಂದರೆ ಅಂಬರದಲ್ಲಿ ನೆಗೆವ ಕೇಶೀ : ಪುರುಷನ ಅಶ್ವವು ಬಾಡಬಾಗ್ನಿಯಾಗಿರುವುದು ಕಂಡಿತು. ಇವೆಲ್ಲ ಸಂಕೇತಗಳಿಂದ ಈ 'ಅಂಬ-ರ' ಪುರುಷನು ಅಂಬ-ತನಯ : ತನೂನಪಾತ್ ಆಗುತ್ತಾನೆ! ಅಂಬ-ಪ್ರಿಯನೂ ಆಗುತ್ತಾನೆ. ಈ ಹಿನ್ನೆಲೆಯಲ್ಲಿ ಈ ರೋದಸೀ : ಮೀಢುಷಿ=ರಸ ದ್ರವಿಸುವ 'ಅಂಬ' : ಆಪ : ರಸವಿರಬೇಕಾಯ್ತು! 'ಅಂಬರಸ್ಥ'ನು ಎಂಬುದು ಅಪಾಂ ನಪ್ತುವಿನ ಪರ್ಯಾಯ ನಾಮರೂಪ ಆಗಿರುವುದು ನಿಶ್ಚಿತವಾಯಿತು.

ಇನ್ನು ಮೇಲೆ, ಕೇಶೀ : ಪುರುಷನ ಮಹಾತ್ಮಸೂಚಕ ಮೊದಲನೆಯ-ಋಚೆಯ ಅರ್ಥವು, ಈ ಹಿನ್ನೆಲೆಯಲ್ಲಿ ಇನ್ನಿಷ್ಟು ಸ್ಪಷ್ಟವಾಗಲಿದೆ : 'ಕೇಶೀ ಅಗ್ನಿಂ ಬಿಭರ್ತಿ' ಎಂದರೆ ಈ ಕೇಶಿಯು ಧಾರಣ ಮಾಡುವ 'ಅಗ್ನಿ' ಬಾಡವಾಗ್ನಿಯೆ ಹೊರತು, ಜಾತವೇದ ಅಗ್ನಿಯಲ್ಲ. ಇದು ಆಪ : ರಸ ಪಂಥೀಯ ತಾತ್ತ್ವಿಕ ಭೂಮಿಕೆಗೆ ಸಂಪೂರ್ಣ ಸುಸಂಗತವಿದೆ. ಬಾಡಬ ಅಗ್ನಿ : ಅಪಾಂ-ನಪ್ತುವು, ಅ-ದಿತಿ ಸ್ವರೂಪನು; 'ಅತ್ರಿ'ಯು ಋಗ್ವೇದದ ಮುಂಡಿಗೆಯ ಸೂಕ್ತದಲ್ಲಿ ಇದನ್ನು ಪುಷ್ಟೀಕರಿಸುವ ಋಚೆಯುಂಟು.[೨೪] 'ತ್ರಯಃ ಕೇಶಿನಃ ಋತುಥಾಭಿಚಕ್ಷತೇ 'ಸಂವತ್ಸರೇ ವಪತ ಏಕಃ ಏಷಾಮ್', ಮೂವರು ಕೇಶಿಗಳು ಋತುಕ್ರಮದಂತೆ (ಪ್ರಪಂಚವನ್ನು) ನೋಡಿಕೊಳ್ಳುತ್ತಾರೆ; ಅವರಲ್ಲಿ ಒಬ್ಬನು ಸಂವತ್ಸರವನ್ನು ಬೋಳಿಸುತ್ತಾನೆ (ವಪನ). ಆದರೆ 'ವಪ್' ಆಖ್ಯಾತಕ್ಕೆ ಚೆಲ್ಲು, ಬಿತ್ತು ಎಂಬ ಅರ್ಥಗಳೂ ಉಂಟು. (ಮುಂಗಾರಿಯ ಪಚ್ಚೆ-ಪೈರು ಒಕ್ಕುತ್ತಾರೆ. ಕೊಯ್ಲು ಆಗುತ್ತದೆ; ಹಿಂಗಾರಿಯ ಬಿತ್ತಿಗೆ ನಡೆಯುತ್ತದೆ. ಈ ಪರಸ್ಪರ ವಿರೋಧೀ ಕಾರ್ಯ ನಡೆವ ಋತು. ಆದರು ವರ್ಷಾಂತ್ಯದ ಕ್ರಿಯೆಗೆ ಪ್ರಾಶಸ್ತ್ಯವಿಲ್ಲದಿಲ್ಲ. ಇದು ರಂಡೆ : ಬೋಳ ಹುಣ್ಣಿವೆ; ಬೋಳು ಭೂಮಿ, ಪೈರಿಲ್ಲದೆ! ಹೋಳೀ ಹುಣ್ಣಿವೆ ವರೆಗೆ ಇದು 'ಅತ್ರಿ'ಯ ಅವಧಿ. ಶರತ್-ಶಿಶಿರ; 'ಫಲ್ಗು' ಮಾಸ. ಟಿ. ಬರೊ ಅವರು ಈ ಸಂಕೇತವು, ಕಂದಮಿಳ 'ಪೊಳ್ಳು' ಶಬ್ದದಿಂದ ಸಂಸ್ಕೃತರು ರೂಪಿಸಿಕೊಂಡ ಮಾತು, ಎಂದು ಸೂಚಿಸುತ್ತಾರೆ. ಅರ್ಜುನ : 'ನರ' (ಇಂದ್ರತನಯ)ನಿಗೆ 'ಫಲ್ಗುಣ' (ಟೊಳ್ಳು) ಎಂದು ಪರ್ಯಾಯನಾಮ! ಬೋಳುಹುಣ್ಣಿವೆ ಎಂಬ ಮಾರ್ಗಶೀರ್ಷ ಮಾಸದ ಪೌರ್ಣಿಮೆಗೆ 'ಗುರು'-ದತ್ತ : ಆತ್ರೇಯನ ಜನ್ಮ! ರೇಣುಕೆ ವಿ-ಧವೆ ಆಗುವಳೆಂಬ 'ಶಾಸ್ತ್ರ' ಎಲ್ಲಮ್ಮ ಕ್ಷೇತ್ರಗಳಲ್ಲಿ! ರೇಣುಕಾ ಕ್ಷೇತ್ರವು ದತ್ತಾತ್ರೇಯ ಕ್ಷೇತ್ರವೂ ಒಂದೆಡೆಗೇ ಇರುವ ಸಂಕೇತವು ಇತ್ತು. ವಿದರ್ಭಭಾಗದ ಪುರಾತನ 'ಕಂನಡದ' ತಾಲ್ಲೂಕಿನ ಮಾತಾ-ಪುರದಲ್ಲಿ ಇಂದಿಗೂ ಉಂಟು! ರೇಣುಕೆ ಅದಿತಿ; ಕೇಶಿಗುರು, ಅದಿತಿ ಪುತ್ರ. ಮಾತೆಯ 'ಪುರ'ದಲ್ಲಿ ಕೇಶೀಪುರುಷ ಎಂಬುದು ಗುಹ್ಯಾದ್ಗುಹ್ಯ ಸಂಕೇತ!

'ಕೇಶೀ ವಿಷಂ ಬಿಭರ್ತಿ ರೋದಸೀ ಈ ಕ್ರಿಯೆಯು ಸ್ಪಷ್ಟ ಅರಿಕೆಗೆ ಬರುವುದಿಲ್ಲ. ರೋದಸೀ ಅರ್ಥ ನಿಶ್ಚಿತವಾಗದೆ, 'ವಿಷ' ಇದನ್ನೆ 'ಉದಕ' ಎಂದು ಅರ್ಥ ಹೇಳುವ ವಾಡಿಕೆಯಿದೆ ಆದರೆ, ಈವರೆಗಿನ ಸಂಕೇತ ಸಮೀಕ್ಷೆಯ ಆಧಾರದಿಂದ ಈ ವಿಷವು ಉಭಯಾರ್ಥಿಯಾಗಿರುವಂತೆ ತೋರುತ್ತದೆ. ಸರ್ಪ ಸಂಕೇತದಂತೆ; ಜನನಕ್ಕೆ ಕಾರಣವಾಗುವುದೆಂದು ನಾಗ : ಸರ್ಪವು, 'ಅ-ಮೃತ'ವಾದರೆ-ಔಷಧಿಯಂತಾದರೆ-ಸೃಜನ ಶಕ್ತಿ, (ಕಾಲ=ಸರ್ಪಕಚ್ಚಿ) ಸಾಯುವುದಕ್ಕೂ ನಾಗಬಾಧೆ ಅಥವಾ ಕಚ್ಚಿದ್ದೇ ಕಾರಣವಾಗುತ್ತದೆ. ಈ ಕಾರಣದಿಂದ ನಾಗ-ಸರ್ಪವು ವಿಷವೆಂದು ಸಿದ್ಧಪಡಿಸುವ ಆವಶ್ಯಕತೆಯೆ ಇಲ್ಲ. ಕೇಶೀ : ನಾಗನು ವಿಷ=ಚಂದ್ರ-ಶಕ್ತಿ ಧಾರಣಮಾಡಿದವನು. ಸರ್ಜಕ ಮಧುಚಂದ್ರ (honey moon) ತಲೆಗೆ ಏರಿದರೆ ಐಹಿಕ ಜೀವಕ್ಕೆ ಸಂಚಕಾರ. ಈ 'ವಿಷ' ರೋದಸೀ ಎಂದರೆ ಅಂಬರದಲ್ಲಿ ತುಂಬುತ್ತಾನೆ. ಆಧುನಿಕ ಭಾಷೆಯಲ್ಲಿ ಅಂಬರ-ಖಾನೆ ಎಂದು ನೆಲಮನೆಗೆ ಹೆಸರು. ಹಸ್ತಿ (ನಾಗ) ಮೇಲಿನ ಅಂಬಾರಿ : ಅಂಬರ-ಡಂಬರ-ಟೊಳ್ಳು ಸ್ಥಳ-ಒಳಸೇರಿ ಕುಳ್ಳಿರುವ ಎಡೆ. ಈ ಅರ್ಥಗಳು ಅಂಬರ-ರೋದಸೀ ಆಕೃತಿ ಗ್ರಹಣಕ್ಕೆ ಉಪಯುಕ್ತವಾಗಲಿವೆ.

'ತ್ರಯಃ' ಕೇಶಿಗಳ ಮುಂಡಿಗೆಯ ಋಚೆಯಲ್ಲೂ ಇದರ ಇತ್ಯರ್ಥಕ್ಕೆ ವಿಶೇಷ ನೆರವು ದೊರೆಯುವುದಿಲ್ಲ. 'ವಿಶ್ವಂ ಏಕಃ ಅಭಿಚಷ್ಟೇ ಶಚೀಭಿಃ' ಈ ಏಕ : 'ಆದಿತ್ಯ' ಸೂಚಕ ಸಂಕೇತವೆಂದು ಸಂಪ್ರದಾಯ ಹೇಳುತ್ತದೆ. ಆದರೆ, 'ಆದಿತ್ಯ' ಎಂಬುದು ಮುಸುಕಿನ ಮಾತು! ಇಂದ್ರ, ಸೂರ್ಯ, ಚಂದ್ರ ಈ ಮೂವರೂ ಈ ಮುಸುಕಿನಲ್ಲಿ ಉಂಟು! ಬಚ್ಚಿಟ್ಟು ಹೇಳುವ ಮಾತಿನ ಮೋಡಿಕಾರಿಕೆಯ ಮಾಟಕ್ಕಾಗಿ 'ಆದಿತ್ಯ' ಈ ಕವಡಿನ ಪ್ರತಿಮೆಯನ್ನು ಆಪ : ರಸ ಪಂಥೀಯ ಪ್ರತಿಪಾದನೆಯಲ್ಲಿ ಆಗಾಗ ಬಳಸಲಾಗುತ್ತದೆ. ವಿಷ್ಣುವಿನ ಆದಿತ್ಯತತ್ತ್ವವು ಇದೇ ಬಗೆಯದಾಗಿದೆ! ಆದರೆ, ವಿಷ್ಣುವು ಸಲಿಲೋದ್ಭವನೆಂಬ 'ಸಮಯ'ಕ್ಕೆ ಅನುಸರಿಸಿ ಈತನು ಚಂದ್ರನೆಂಬುದು ತನ್ನ ತಾನೆ ಹೊರಬರುತ್ತದೆ. ಜಲಶಾಯಿ ಎಂಬ ವಿಷ್ಣುವೂ ಚಂದ್ರನೇ. ಚಂದ್ರ=ವಿಷ್ಣು, ಇವರೇ ನಿಜವಾದ ಆದಿತ್ಯರ ಪ್ರತಿಮೆ. ರುದ್ರರೂ ಆದಿತ್ಯರೇ. ಆದರೆ ಇದನ್ನು ಬಾಯ್ಬಿಟ್ಟು ಹೇಳಿಲ್ಲ! ಬಾಡಬ ಅಗ್ನಿತ್ವವು ಚಂದ್ರನಲ್ಲಿ ಉಂಟೇ ಉಂಟು. ರುದ್ರನೂ ಅಗ್ನಿಯೆ. ಪ್ರಸ್ತುತ, ಈ 'ಕೇಶೀ' ಪುರುಷನು ಶಚಿಯಿಂದೊಡಗೂಡಿ ಪ್ರಪಂಚವನ್ನು ಸಮೀಕ್ಷಿಸುವವನು, ಎಂಬಲ್ಲಿ ಇಂದ್ರನ ಸೂಚನೆಯೂ ಇಲ್ಲದಿಲ್ಲ! ಆದರೆ, ಇಂದ್ರನನ್ನು ಕೇಶೀ : ಪುರುಷನ ಆಕಾರಕ್ಕೆ ತಿರುಗಿಸುವ ಹೊಂಚು ಇನ್ನೂ ಪೂರ್ಣವಾಗಿಲ್ಲ. ಆದರು, ಇಂದ್ರ-ಪತ್ನಿಯ ಹೆಸರು ಎಂದು ವಿಖ್ಯಾತವಿರುವ 'ಶಚಿ'ಸಂಕೇತದ ಅವ-ಮೂಲ್ಯನವನ್ನು ಅಂಶತಃ ಸಾಧಿಸಿದಂತೆ ಆಗುತ್ತಿದೆ. 'ಶಚೀ' ಸಂಕೇತಕ್ಕೆ ಶಕ್ತಿ-ಸಾಮರ್ಥ್ಯ ಸೂಚಕ ಅರ್ಥವೂ ಉಂಟು. ವಾಕ್ಕಿಗೂ 'ಶಚಿ' ಸಂಕೇತ ಬಳಸಲಾಗುತ್ತದೆ. ರತಿಕ್ರೀಡೆಯ ಒಂದು ಪ್ರಕಾರಕ್ಕೂ ಈ ಹೆಸರಂತೆ! 'ಅಪ್ಸರಸಾಣಾಂ ಗಂಧರ್ವಾಣಾಂ ಚರಣೇ ಚರನ್' ಎಂಬ ಖ್ಯಾತಿಯ ಈ ಕೇಶಿನ್-ಪುರುಷನು ಶಚಿಸಹಿತನಾಗಿ ಅಂಬರದಲ್ಲಿ ನಿಂತು ಪ್ರಪಂಚವನ್ನು ಅವಲೋಕಿಸುತ್ತಾನೆ, ಎಂಬ ಈ ಆದಿತ್ಯನು ಚಂದ್ರನೇ ಇರಬೇಕೆಂದು ಹೇಳಬೇಕಾಗುತ್ತದೆ. ಅಗ್ನಿಯಿಂದ ದಗ್ಧ ಸೃಷ್ಟಿಯಲ್ಲಿ 'ಮಧುಕ್ರೀಡೆಯ ಪ್ರೇರಣೆ' ನೀಡುವ ನಿಶಾ-ಪತಿಯ ಋತುಕಾಲವು ಹೋಳಿಹುಣ್ಣಿವೆ (=ವಿಷಸ್ವರೂಪ) ಆಗುವ ವರೆಗೂ ಇರುತ್ತದೆ. ಇದು ಕೇಶೀ-ಪುರುಷನಲ್ಲಿರುವ ಇನ್ನೊಂದು ಶಕ್ತಿ. 'ಕೇಶೀ ವಿಷಂ ರೋದಸೀ ಬಿಭರ್ತಿ'ಯ ಈ ಚಿತ್ರ ನೋಡಿಕೊಳ್ಳಿ; ಅಹಿಭಾನು ಮರುತರು 'ಸುಭಗಾ ರೋದಶಿಯೊಡನೆ' ಒಂದೇ ತೇರಿನಲ್ಲಿ ಕುಳಿತು ವೇಗದಿಂದ ಹೊರಟಿದ್ದಾರೆ; ದಾರಿಯಲ್ಲಿ ಎಲ್ಲಿಯೂ ನಿಲ್ಲದೆ ತ್ವರೆಯಿಂದ ಬರಲು (ಭೂದೇವಿ) ಬೇಡಿಕೊಳ್ಳುವ ಸೂಕ್ತದ[೨೫] ಮೇಲಣ ಉಲ್ಲೇಖವು, ಇದು 'ಚಾಂದ್ರ' ಪ್ರತಿಮೆ ಎಂಬುದನ್ನೇ ದೃಢಪಡಿಸುತ್ತದೆ. ಕೇಶೀ : ಪುರುಷನು 'ಬಿರ್ಭರ್ತಿ ರೋದಶೀ'! ಈ ಕಾರಣದಿಂದ ಧ್ವನ್ಯರ್ಥದಿಂದ ಇಂದ್ರ-ಪತ್ನೀ ಸೂಚಕ ಶಚೀ ಸಂಕೇತವು ನಿಜವಾಗಿ ರುದ್ರಿಯರ ಪತ್ನಿ (: ಮಾತೆ) ಸೂಚಕವಾಗಿರುವುದು ಇಲ್ಲಿ ಬಯಲಿಗೆ ಬರುತ್ತಿದೆ.*

---

* ಈ 'ಮೀಳ್ಹುಷಿ'ಯ ಸಾಂಕೇತಿಕ ಮಾತಿನ ವಿಚಾರಕ್ಕಾಗಿ ಮೀಢುಷಿ ಎಂಬುದು ಕೈಯಲ್ಲಿ ಪಾನಪಾತ್ರ (: ಚಮಸ) ಹಿಡಿದ ದುರ್ಗೆಯ ಪರ್ಯಾಯ ನಾಮವೆಂದು ಕಂಡುಬರದೆ ಇರಲಾರದು.[೨೬]

'ಕೇಶೀ ವಿಶ್ವಂ ಸ್ವಃ ದೃಶೇ' ಎಂಬಲ್ಲಿ ಸೂಚಿತವಾಗುವ ಅರ್ಥದ ಸ್ಪಷ್ಟತೆಗೆ 'ತ್ರಯಃ ಕೇಶಿನಃ' ಇವರೊಳಗಿನ ಮೂರನೆಯವನಾದ 'ಏಕಸ್ಯ ಧ್ರಾಜೀ ದೃಶ್ಯತೇ' ಈತನ (ವಾಯು) ಗತಿ (ಧ್ರಾಜಿ) ಅರಿಕೆಗೆ ಬಡುವುದೇ ಹೊರತು 'ರೂಪಂ ನ' ಎಂದು ಆ ಋಚಿಯೇ 'ನೇತಿ ನೇತಿ'ಗೆ ಶರಣು ಹೋಗಿದೆ! ಕಂಡಂತೆ-ತಿಳಿದಂತೆ ಎನಿಸಿ, ಫಕ್ಕನೆ ಮಾಯವಾದ ಹಾಗಿನ 'ಅನುಭಾವ' (?) ತಂದುಕೊಡುವುದೇ ನೇತಿ-ನೇತಿವಾದೀ 'ರಸ' ಸಂಪ್ರದಾಯದ ಕೃತಿ. ಆ-ಕೃತಿಗಳ ವೈಶಿಷ್ಟವಾಗಿದೆ. ಆದರೆ, ದಿಕ್ಕಾಲದ ಸಂದರ್ಭದೊಳಗಿನ ಜೀವನದಲ್ಲಿ ನಿಜಕ್ಕೂ ದೊರೆವ (bonafide) ಅನುಭವದಲ್ಲಿ ಇರುವ ಪ್ರಮಾಣಿತ-ಪ್ರಾಮಾಣಿಕ ಅನುಭೂತಿಯ ಬೆಲೆ ಹಾಗೂ ಕೃತ್ರಿಮ ಕಟ್ಟು-ಕಥೆಗಳ, ಜಾದು-ಚಮತ್ಕಾರದ ಮೋಡಿಕಾರಿಕೆಯ ಪವಾಡ ಕೃತಿಗಳ ಬೆಲೆ, ಎರಡೂ ಸರಿ ಸಾಟಿಯೆ?

ಮೌನೇಯ ಕೇಶೀ : ಪುರುಷನಲ್ಲಿ ಒಳಗೊಂಡ ಶಕ್ತಿ-ತ್ರಯಗಳನ್ನು 'ತ್ರಯಃ ಕೇಶಿನಃ' ಎಂದು ಪುಲಿಂಗಿಯಾಗಿ ಹೆಸರಿಸಿರುವಲ್ಲಿ, 'ಅಪಾಂ-ನಪ್ತ' ಸಂಪ್ರದಾಯವು ಕವಲು ದಾರಿಯಲ್ಲಿ ನಿಂತಿರುವುದನ್ನು ಮನಗಾಣಬಹುದು. ಏಕೆಂದರೆ, ಈ ಕೇಶೀ ತ್ರಯ ಪ್ರತಿಮೆಗಳು, ನಿಜವಾಗಿ ತಿಸ್ರೋ ದೇವಿಯರವು ಇರಬೇಕಿತ್ತು. ಈ ಮುಂಚಿನ ಕ್ರಮದಂತೆ, 'ಆ-ಪ್ರೀ' ಸೂಕ್ತಗಳಲ್ಲಿ ಬರುವ ದೇವೀತ್ರಯರ ವಿಚಾರವು ಈ ಸಂದರ್ಭದಲ್ಲಿ ಅವಶ್ಯವಾಗುತ್ತದೆ. 'ತತ್ : ಏಕಂ' ಇದೇ ಸತ್ಯ, ಎಂದು ಪ್ರತಿಪಾದಿಸಲು, ನಾನಾ ನಾಮ-ಸಂಕೇತಗಳನ್ನು ಕಲ್ಪಿಸಿ, ಕಾಲ್ಪನಿಕ (ಕಲಾ) ಸೃಷ್ಟಿಯನ್ನು ನಿರ್ಮಿಸಿಕೊಂಡುದಾಗಿದೆ. ವಾಸ್ತವ : ಸತ್ಯದ-ದಿಕ್ಕಾಲದ ಸಂದರ್ಭದ ಜೀವನ ಪರಿಸರದಲ್ಲಿ ಪ್ರತೀತಿಗೆ ಬರುವ ಒಂದರ್ಧ ಅಂಶದ ಮೇಲೆ, ಆ ಸಾಹಿತ್ಯಿಕ ಏನೆಲ್ಲ ಪ್ರತಿಮಾ ಸೃಷ್ಟಿ ನಿಂತಿರುತ್ತದೆ. ಅದಿತಿ, ಸರಸ್ವತಿ, ಅಂಭೃಣಿ ಈ ಮೂವರು ಕುಮಾರೀ-ಪರಮೇಶ್ವರಿಯರು, ಆಪೋದೇವಿಯರೇ. ಇವರು ಮಧ್ಯಮಾ : ವಾಕ್: ಎಂದರೆ ಎರಡು ಪಾತಳಿಯ ದೇವಿಯರು :

೧. ದಿವ್ಯಲೋಕದ ಶಕ್ತಿ;
೨. ಈ ಶಕ್ತಿಗಳು ಭೂಲೋಕದ 'ದೇವೇಷಿತ' ಭಕ್ತರ ಮೂಲಕ-ವ್ಯಕ್ತಾದಿಗಳಲ್ಲಿ ಪ್ರಾದುರ್ಭವಿಸಿದ ಹಾಗಿನ ಅನುಭವಕ್ಕೆ ಕಾರಣವಾಗುವುವು ಎಂಬ ಶ್ರದ್ಧೆ ಅಂದಿನದು; ಈ ಶ್ರದ್ಧೆಯಂತೆ ಮಧ್ಯಮಾ : ವಾಕ್ ಎಂಬುದು ಮೈಯಲ್ಲಿ ಆವೇಶವಾದ ಆ ದಿವ್ಯಶಕ್ತಿಯ ಪ್ರತಿಮಾ : ಸಂಕೇತ : ಕೇಶೀ : ಮುನಿ ಎಂಬವರೂ ಎರಡು ಪಾತಳಿಯಲ್ಲಿ ಮೂಲ ದಿವ್ಯಶಕ್ತಿ; ಅದನ್ನು ಪ್ರತಿನಿಧೀಕರಿಸುವ ಭೂಲೋಕಸ್ಥ ಮಧ್ಯಮಾ, ಪ್ರತಿಮಾ : ಸಂಕೇತ.

ಋಗ್ವೇದದಲ್ಲಿ ಅದಿತಿ, ಸರಸ್ವತಿ, ಅಂಭೃಣೀ ಈ ದೇವಿತ್ರಯರಿಗೆ ಸಮಾಂತರವಾಗಿಯೇ ಇಡಾ, ಸರಸ್ವತಿ, ಭಾರತಿ ಅಥವಾ ಮಹೀ ಎಂಬ ತ್ರಿಸ್ರೋದೇವಿಯರೂ ಬರುತ್ತಾರೆ. ಈ ಎರಡೂ ಆಕೃತಿಗಳಿಗೆ ಸಮಾಂತರವಾಗಿ, ಬೇರೆ ಆಕಾರದ ನಾಮಸಂಕೇತಗಳಿಂದ ತಾವು ತೀರ ಪುರಾತನರು ಎಂದು ಸೂಚಿಸುತ್ತಿರುವ ಮೂವರೂ ದೇವಿಯರಿದ್ದಾರೆ, ರಾಕಾ, ಗುಂಗೂ, ಸಿನೀವಾಲೀ; ಈ ಸಂಕೇತಗಳಲ್ಲಿ ರಾಕಾ: ಹುಣ್ಣಿಮೆಯ ದೇವಿ, ಸಿನೀವಾಲೀ : ಶುದ್ಧ ಪ್ರತಿಪದೆಯ ಚಂದ್ರ : ಗುಂಗೂದೇವಿಯನ್ನು ಸರಸ್ವತೀ ರಾಕಾದೇವಿಯರೊಡನೆ ಸ್ಮರಿಸಿಕೊಂಡಿದ್ದುಂಟು. ಆದರೆ, ಇದರ ಅರ್ಥವು ಸ್ಪಷ್ಟವಿಲ್ಲ. ಈ ಸ್ಪಷ್ಟನೆ ದೊರೆತಾಗ ದೊರೆಯಲಿ; ತನ್ಮೂಲಕವಾಗಿ ದೊರೆವ ಬೆಳಕಿನಲ್ಲಿ, ಪ್ರಸ್ತುತ ವಿವರಣೆ ಆ ಮೂಲಾಗ್ರ ತಪ್ಪು ಆಗಿದೆ, ಎಂಬ ನೋಟವು ಕಾಣಲು ಶಕ್ಯವಿಲ್ಲ. 'ಗುಂಗೂ' ಚಂದ್ರಿಕಾ ದೇವಿಯ ಮೂಲಕ ದೊರೆವ 'ಸಾಕ್ಷಾತ್ಕಾರ' ತತ್-ಮಮತೆಯಲ್ಲಿ ಪ್ರಾಪ್ತವಾಗುವ ಆ 'ಸಂದೃಕ್' ಕಣ್ : ಕಣಿಯ ಮೂಲಕ ಆ ಅಂಬರದೊಳಗೆ (: ರೋದಸೀ) ಆಗುವ 'ಶೇಷ' ದರ್ಶನ ಸ್ವರೂಪವು ಇನ್ನುಳಿದ ಮಧ್ಯಮಾ : ವಾಕ್‌ದೇವಿಯರಿಂದ ದೊರೆವ ಸಾಕ್ಷಾತ್ಕಾರಕ್ಕಿಂತ ತೀರ ಭಿನ್ನವಾಗಿದೆ, ಎಂದು ಯಾರಾದರೂ ನ-ಚಿಕೇತ 'ಸಿದ್ಧ'ರು ಸಿದ್ಧಪಡಿಸಿದಲ್ಲಿ ಸತ್ಯಾನ್ವೇಷಿಗೆ ಅದು ಸಮಾಧಾನವನ್ನೇ ತಂದೀತು.

ಋಗ್ವೇದದ ಆಪ : ರಸ ಪಂಥೀಯ ಮಾಧ್ಯಮಹಲ್ಲಿ : ಮೋಡಿಕಾರಿಕೆಯ ಮಾಟವು=ಅಂದವು ಮೊದಲಿನಿಂದ ಕೊನೆಯ ವರೆಗೂ ತುಂಬಿ ತುಂಬಿ ಹೊರಸೂಸುತ್ತಿದೆ. ಬ್ರಾಹ್ಮಣ-ಉಪನಿಷತ್ತುಗಳೂ ಈ ಶೈಲಿಯನ್ನೇ ಅನುಸರಿಸಿವೆ. ವಾಸ್ತವ; ಸತ್ಯಕ್ಕೆ ಸಂಬದ್ಧವಾದ ಸಾಂಕೇತಿಕ ಪ್ರತಿಮೆ ಇರುವುದು 'ಒಂದೇ' ಒಂದು! ತತ್ : ಏಕಂ, ಮಾತ್ರ ಸತ್ಯ (: ಏಕಂ ಸತ್; ವಿಪ್ರಾ: ಬಹುಧಾ ವದಂತಿ) ಎಂಬ ಆಂತರಿಕ ಶ್ರದ್ಧೆಯ ಪ್ರಸ್ಥಾಪನೆಗಾಗಿ ನಿರ್ಮಿತವಾಗುವ ಈ ಬಗೆಯ ಸಾಹಿತ್ಯದಲ್ಲಿ ಏನೆಲ್ಲ ಉಳಿದ ಪ್ರತಿಮಾ : ಸಂಕೇತಗಳು ಅರ್ಥವಿಹೀನವಾಗುತ್ತವೆ. ಆ ತತ್ತಿನ ಪರ್ಯಾಯ ನಾಮಗಳೇ ಆಗುತ್ತವೆ ಎಂಬುದನ್ನು ಸಿದ್ಧಪಡಿಸುವ ಆವಶ್ಯಕತೆಯಿಲ್ಲ. ಇದು ನಿಜವಿದ್ದರೆ ಈ ಋಗ್ವೇದದಿಂದ ತೊಡಗಿ, ಶ್ರೀಮದ್ಭಗವದ್ಗೀತೆಯ ವರೆಗಿನ ಏನೆಲ್ಲ ವಿತರಣೆಯೊಳಗಿನ 'ಮಾಧ್ಯಮ'ವು (ಶಬ್ದ-ಪ್ರತಿಮೆಗಳು), ಯಾತು>ಜಾದುಶಕ್ತಿ : ಅಸುರ ಶಕ್ತಿಯನ್ನುಳ್ಳುದು ಆಗುತ್ತವೆ, ಎಂದು ಒಪ್ಪದಿದ್ದಲ್ಲಿ ಅದು ಪ್ರಾಮಾಣಿಕತೆಗೇ ಕೇಡು! 'ಮಾಧ್ಯಮ : ಪ್ರತಿಮೆ (Form)ಯ ಹೊರಗೆ ಅರ್ಥ-ಆಶಯವು (Content) ಉಳಿದಿರುವ ಅಭಿವ್ಯಕ್ತಿಯೊಳಗಿನ ಪ್ರತಿಮಾ : ಸಂಕೇತಗಳಲ್ಲಿ, ಅಸು-ರ (ಅಥವಾ ಅ-ಸುರ) ಶಕ್ತಿ ಪ್ರತೀತಿಗೆ ಬರುವುದುಂಟು. 'ಮಹದ್ದೇವಾನಾಂ ಅಸುರತ್ವಂ ಏಕಮ್' ಎಂಬುದು ಸುಳ್ಳಲ್ಲ.

ಮೌನೇಯ ಕೇಶೀ : ಪುರುಷನು 'ರೋದಸೀ ವಿಷಂ ಬಿಭರ್ತಿ'. ಇದು, ಪ್ರಪಂಚದ ತಳಹದಿಯಲ್ಲಿ ಇರುವ: 'ವಿಶ್ವದ ನಾಭಿ'ಯೊಳಗಿನ ತತ್ : ಏಕಂ ಸತ್ (: ಆಪ=ರಸ) ಸ್ವರೂಪ. ಇದುವೆ-ಏಕಮೇವ ಸತ್ (: Being)=ಸತ್ಯಸ್ವರೂಪವು. ಇದನ್ನು ಹೊರಗೆ ಹುಡುಕಿಕೊಂಡು ಹೋಗುವ ಆವಶ್ಯಕತೆಯೆ ಇಲ್ಲ. 'ನಿನ್ನೊಳಗೆ ನೀನು ನೋಡು' 'ತನ್ನ ತಾನರಿಯಬೇಕು' (Know thyself) : ನಿನ್ನ ಚಿದಂಬರ ಪುರುಷನ್ನು ಅರಿ. ಆತ್ಮಲಿಂಗದ ದರ್ಶನ ಪಡೆ. ಕೂಡಲೆ ಎಲ್ಲೆಲ್ಲೂ ಆ 'ಅ-ಪ್ರತಿಮೆ' ಎಂಬುವನ ಸಾಕ್ಷಾತ್ಕಾರವಾಗದಿರದು. ಈ ನೀರಸ ಆತ್ಮ-ಸ್ವರೂಪದ ಸಾಕ್ಷಾತ್ಕಾರವೂ, ಪುರುಷ ಮಧ್ಯಮಾ : ವಾಕ್ಕಿನ ಮೂಲಕವಾಗಿಯೆ ಆಗಿದೆ-ಆಗಲಿದೆ.

ನಾಗ : ಶೇಷ! 'ನಾಗ' ಪ್ರತಿಮಾ : ಸಂಕೇತಗಳ ಆ-ಮೂಲಾಗ್ರ-ನಿಃಶೇಷ ಸಮೀಕ್ಷೆಯ ಹಂಬಲವನ್ನು ಇಟ್ಟುಕೊಂಡಲ್ಲಿ, ಅದರಂತಹ ತಿಳಿಗೇಡಿ ಹುಂಬತನ ಬೇರೊಂದು ಇರಲಾರದು. 'ನಾಗ' ಶಕ್ತಿಯ ನೆಲೆ ತಿಳಿಯದೆಂಬುದನ್ನು ಒಪ್ಪಿಕೊಳ್ಳಲೇ ಬೇಕು. ಆದರೆ, ಏನೊ ತಿಳಿಯಲು ಅಶಕ್ಯವಾಗುವ 'ನೇತಿನೇತಿ' ವಾದ, ಮೈಗಳ್ಳತನ ಅಥವಾ ಆತ್ಮವಂಚನೆ; ಆದರೆ ತನ್ನ ನೆಲೆ ತನಗೆ ಪೂರ್ಣ ತಿಳಿದಿದೆ ಎಂಬುದು, 'ಜ್ಞಾನಿ' ಎಂಬ ಅಹಂಕಾರೀ- 'ಸೋऽಹಂ'ವಾದಿಯ ಅಥವಾ ತಿಳಿಗೇಡಿ ಮೂರ್ಖನ ಮಾತು. ಆದರು, ತಮ್ಮ 'ನೆಲೆಯನ್ನು'; ಎಂದರೆ ತಮ್ಮ ಇತಿಮಿತಿಗಳನ್ನು, ಸಾಮರ್ಥ್ಯ-ದೌರ್ಬಲ್ಯಗಳನ್ನು ಶಕ್ಯವಿರುವಷ್ಟೂ ಅರಿತು ಅರ್ಥಯಿಸಿಕೊಳ್ಳಲು ಪ್ರಯತ್ನ ಪಡುವಲ್ಲಿಯೆ 'ಶಿಕ್ಷಣ-ಸಂಸ್ಕೃತಿ' ಎಂಬ ಮಾತಿಗೆ ಬೆಲೆಯುಂಟಷ್ಟೆ? ಏನೆಲ್ಲ ಅಗಮ್ಯವೇ ಇದ್ದರೆ ಶಿಕ್ಷಣವೇತಕ್ಕೆ? ನಾಗ-ಶಕ್ತಿಯ ಇತಿ-ಮಿತಿಗಳನ್ನು ಅರ್ಥಯಿಸಿಕೊಂಡಿರುವ ಪ್ರಯತ್ನಗಳ ಫಲವಾಗಿಯೆ 'ಶೇಷ', 'ಅನಂತ' ಎಂಬ ಎರಡೂ ಶಬ್ದ-ಪ್ರತಿಮೆಗಳು ನಾಗನ ಪರ್ಯಾಯನಾಮಗಳಂತೆ ರೂಢಿಗೆ ಬಂದಿವೆ. 'ನಾಗ' ಶಕ್ತಿಯು ಇಷ್ಟಬಂದ ರೂಪ ತಾಳಬಲ್ಲದು; ಬೇಕಾದಾಗ ಬೇಕಾದಹಾಗೆ ಆಗಬಲ್ಲದು, ಎಂಬ ಶ್ರದ್ಧೆ, 'ನೇತಿ-ನೇತಿ' ಸ್ವರೂಪದ ತತ್ತ್ವಜ್ಞಾನಕ್ಕೆ ಪ್ರೇರಿಸುವಂತೆ, ದಿಕ್ಕಾಲದ ಸಂದರ್ಭದಲ್ಲಿ ನಾಗ-ಶಕ್ತಿಯ ಗತಿಯನ್ನು : ನಿನ್ನೆ-ಇಂದುಗಳ ಸಂದರ್ಭದ ಆಗುಹೋಗುಗಳನ್ನು ತೂಗಿ, ವಿಮರ್ಶಿಸಿ ಅರ್ಥಯಿಸಿಕೊಳ್ಳುವುದು ತೀರ ಅ-ಸಾಧ್ಯವೇನಲ್ಲ, ಎಂಬ ಅನುಭವದೊಡನೆ, ಇನ್ನೂ ಅರ್ಥವಾಗದೆ ಉಳಿವುದು 'ಶೇಷ' ಎನಿಸುವುದು. ನಾಳೆಯಲ್ಲಿ ಕಾಣುವ 'ಅತ್ಯತಿಷ್ಠತ್' ದಶಾಂಗುಲ ಭಾಗದ ಅನುಭವ ಇದು. ನಾಗಶಕ್ತಿಯ ಸಂದರ್ಭದಿಂದಲೇ ಈ ಇನ್ನೊಂದು ತತ್ತ್ವಜ್ಞಾನದ ಪ್ರೇರಣೆ ದೊರೆತುದುಂಟು. 'ನೇತಿ-ನೇತಿ' ಎಂಬ ಭಾವನೆ ಲೆಕ್ಕ-ಗಣಿತ ತಿಳಿವ ಮೊದಲಿನದು ಇರಬೇಕಾಗುತ್ತದೆ. ಶಿಲ್ಕು=ಶೇಷ, ಎಂಬುದು ಲೆಕ್ಕಾಚಾರದ ಕೊನೆಗೇ ತಿಳಿಯಬಲ್ಲದು. ಇದು ನೆಲೆಯನ್ನು ನೋಡುವ-ಕೊನೆಯನ್ನು ಮುಟ್ಟುವ ಪ್ರಯತ್ನದಲ್ಲಿ ಸೋಲನ್ನೊಪ್ಪಿ, 'ಅನಂತ' ಎಂದಲ್ಲಿ ಮಾತ್ರ ಆ ಮಾತಿಗೆ ಔಚಿತ್ಯವುಂಟಷ್ಟೆ?

ನಾಗ-ಪ್ರತಿಮಾರಾಧನೆಯ ಸಂದರ್ಭದ ಜೀವನ ರೀತಿಯಲ್ಲಿ ಪುರಾತನ ಕಾಲದಿಂದ ಕಂಡುಬರುವ ಕ್ರಿಯೆ-ಪ್ರತಿಕ್ರಿಯೆಗಳ ಸಮೀಕ್ಷೆಯಲ್ಲಿ, ಭಾರತೀಯ ಘಟನೆಗಳೊಂದಿಗೆ ಗ್ರೀಕ್-ಈಜಿಪ್ಟ್-ಇಸ್ರಾಯಿಲ್ ಭಾಗದ ಘಟನೆಗಳನ್ನು ಶಕ್ಯವಿರುವಷ್ಟೂ ತುಲನೆಗಾಗಿ ಆಗಾಗ ಎತ್ತಿಕೊಳ್ಳುವುದು ಅವಶ್ಯವಿದೆ. ಇವೆರಡೂ ಭಾಗದ ಸಾಮಾಜಿಕ ಜೀವನದ ಕ್ರಿಯೆ ಪ್ರತಿಕ್ರಿಯೆಗಳಲ್ಲಿ ಕಂಡುಬರುವ ನಾಗ-ಪ್ರತಿಮಾರಾಧನೆಯ ಪ್ರಭಾವದಲ್ಲಿ-ಪರಿಣಾಮದಲ್ಲಿ ತುಂಬ ಸಾಮ್ಯವು ಕಂಡುಬರುತ್ತಿದೆ. ಇಷ್ಟೆ ಅಲ್ಲ, ಈ ಬಗೆಯ ತುಲನಾತ್ಮಕ ವಿಮರ್ಶೆಯಲ್ಲಿ ಒಂದು ಭಾಗದ ಸಂದಿಗ್ಧ ಸಮಸ್ಯಾಪೂರ್ತಿಗೆ ಇನ್ನೊಂದು ಭಾಗದ ಪವಾಡಕಥೆಗಳಿಂದ ನೆರವು ದೊರೆಯುತ್ತಿರುವ ಅನುಭವವೂ ಬರುತ್ತದೆ. ಉದಾಹರಣಾರ್ಥವಾಗಿ

೧) ಮಧ್ಯಮಾ : ವಾಕ್ (medium) ಸಂಪ್ರದಾಯವು, ದೇವಾರ್ಪಿತ ಕುಮಾರೀ ವರ್ಗದ ಕೈಯಿಂದ, ಪುರುಷ ವರ್ಗದ ಕಡೆಗೆ ಬರುತ್ತದೆ.
೨) ಮಾಧ್ಯಮ : ಪ್ರತಿಮೆ (: ವಾಕ್) ಇದುವೆ ದೈವತ; ದೈವವನ್ನು ರೂಪಿಸುವ ದೈವತ : (ವಾಕ್)-ಶಕ್ತಿಯೇ ತತ್ : ಏಕಂ : ಸತ್.
೩) ಗ್ರೀಕ್ ಪವಾಡಕಥೆಗಳಲ್ಲೂ ಭಾರತೀಯ ಮಧ್ಯಮಾ: ವಾಕ್, ತಿಸ್ರೊ ದೇವಿಯರುಗಳನ್ನು ಹೋಲುವ ವಿಶ್ವಜೀವನ ನಿಯಂತ್ರಕ ಮೂವರು ದೇವಿಯರು (Three Fates; or Moerae) ಇದ್ದಾರೆ!
೪) ಚಂದ್ರಾದೇವಿಯರು-ಸರ್ಪದೇವಿಯರೆ! ಇವರಲ್ಲೂ ನಾನಾ ನಾಮರೂಪ ಭೇದಗಳಿದ್ದರೂ ತಳಪಾಯದ ಆ-ಕೃತಿ ತತ್ : ಏಕಂ!
೫) ಡೈಯೊನಿಸಸ್ (Dionysus) ಸಂಪ್ರದಾಯದ 'ನಾಭಿ' ಕೇಂದ್ರವು ಇಲ್ಲಿಯೂ ಉಂಟು. ಗ್ರೀಕ ಆಕೃತಿಯ ಡೈಯೊನಿಸಸ್ ಸಂಪ್ರದಾಯವೂ ನಮ್ಮಲ್ಲಿ ಉಂಟು. ಆದರೆ ಅದನ್ನು 'ಕಂಡೂ ಕಾಣದಂತೆ' ಹೇಳುವ-ಮಂತ್ರ ಮುಗ್ಧಮಾಡುವ ಅಪೂರ್ವ ವಾಕ್-ಶಕ್ತಿ ಭಾರತೀಯರ ವೈಶಿಷ್ಟ್ಯವಾಗಿದೆ.*
೬) ನಾನಾ ಆಕೃತಿಯ ಭಾರತೀಯ ಸಂನ್ಯಾಸ ಮಾರ್ಗಗಳಾಗಲಿ, ಪಶ್ಚಿಮದೇಶದ ಕ್ರೈಸ್ತ ಸಂನ್ಯಾಸ ಪಂಥವಾಗಲಿ, ಕನ್ಯಕಾಪರಮೇಶ್ವರಿ : ಆದಿಮಾತಾ ಸಂಪ್ರದಾಯದ ಶಾಕ್ತ ಆಚಾರ-ವಿಚಾರದ ಜುಗುಪ್ಸೆಯಲ್ಲಿ-ಪ್ರತಿಕ್ರಿಯಾರೂಪದಲ್ಲಿ ಆಕಾರ ಪಡೆದ ಧರ್ಮಪಂಥ ಗಳಾಗಿವೆ.
೭) ಇವು ಚಾಂದ್ರ ಪ್ರತಿಮಾರಾಧಕ ಪಂಥಗಳು.
೮) ಮೃತ್ಯುಪೂಜೆಯು ತಳಹದಿಯಲ್ಲಿ ಕಾಣುತ್ತದೆ. ಋಗ್ವೇದ ಕಾಲದಲ್ಲಿ ಕೌಲ ಸಂಪ್ರದಾಯವಿತ್ತು. ಆದರೆ ಇದರ ಬಗೆಗೆ ಸಂದೇಹಪಟ್ಟುಕೊಳ್ಳಲಾಗಿದೆ; ಬೆರಲಿಟ್ಟು, 'ಇಕೊ ಇಲ್ಲಿದೆ ಶಾಕ್ತ-ಪರಿಭಾಷೆ ಹಾಗೂ ಆಚಾರ ಪ್ರಕಾರ' ಎಂದು ಹೇಳಿರುವುದನ್ನು ಕಾಣದೊರತಿಲ್ಲ.*

ದಿವ್ಯಲೋಕದ ದೈವತಗಳ ಆಚಾರಗಳಲ್ಲಿ ತಾಯ್ಗಂಡತನದ ಕೃತಿಯನ್ನು ವರ್ಣಿಸಲು ಋಗ್ವೇದದ ಕವಿಗಳಿಗೆ ತಿಲಮಾತ್ರವೂ, ಎಲ್ಲಿಯೂ ಸಂಕೋಚವೆನಿಸಿಲ್ಲ! ಉಷೆಯು ಸೂರ್ಯನ ತಾಯಿ. ಉಷೆಯ ಒಡಲೊಳಗಿಂದ

---

* ಗ್ರೀಕ್ ಭಾಷೆ, ಸಂಸ್ಕೃತಿ ಹಾಗೂ ಸಂಸ್ಕೃತ ಮತ್ತು ಕಂದಮಿಳ ಭಾಷೆ ಹಾಗೂ ಸಂಸ್ಕೃತಿಯಲ್ಲಿ ಇರುವ ಆಪ : ರಸ ಪಂಥೀಯ ಈ ಪ್ರತಿಮಾ ಸಂಕೇತಗಳ ಆಳವಾದ ತುಲನಾತ್ಮಕ ವಿಮರ್ಶೆಯಾದಲ್ಲಿ ಆರ್ಯ-ಪೂರ್ವ ಭಾರತೀಯ ಸಂಸ್ಕೃತಿಯನ್ನು ಅರ್ಥಯಿಸಿಕೊಳ್ಳಲು ಇನ್ನೂ ಹೆಚ್ಚಿನ ಬೆಳಕು ದೊರೆಯಬಹುದೆಂದು ಈ ಸಮೀಕ್ಷೆಯಲ್ಲಿ ಎನಿಸತೊಡಗಿದೆ.

ಸೂರ್ಯನು ಉದಯವಾಗುವ ಸಂದರ್ಭದಲ್ಲಿ; ಪ್ರಾತಃಕಾಲದ ವರ್ಣನೆಯಲ್ಲಿ ಪ್ರೇಯಸಿ ಉಷೆಯನ್ನು ಅರಸಿಕೊಂಡು ಬರುವ ಗಂಧರ್ವನ ಭೂಮಿಕೆ ಸೂರ್ಯನದು! ಆಕೆಯ ಹಿಂದೆ ಇರುವುದರಿಂದ, ಆಪ : ರಸ ಸ್ವರೂಪೀ ಊರ್ವಶಿಯಂತೆ, ಸೌರ ತೇಜೋರೂಪ ಉಷೆಯೂ ಶಾಕ್ತ ಆಚಾರದೊಳಗಿನ ಒಂದು 'ಪಾತ್ರ'ವಾಗಿದ್ದಾಳೆ! ಸೂರ್ಯ ಇಂದ್ರಾದಿ ದೈವತಗಳು 'ಅಪ್ಸರಸಾಣಾಂ ಚರಣೇ ಚರನ್' ಗಂಧರ್ವರೇ, ಎನ್ನುವಂತೆ ಅವರೆಲ್ಲರ ವರ್ಣನೆಗಳಿವೆ. ಆಪ : ರಸದ ವಿಷ್ಣು, ಮರುತರು, ದಕ್ಷ ಇವರಂತೂ ಸರಿಯೇ. ಆದರೆ, ಅ-ಮಾನವೀಯ ಹಾಗೂ ದಿವ್ಯಲೋಕದ ದೈವತಗಳ ಕೃತಿಗಳಲ್ಲಿ 'ಅನೀತಿ'ಯನ್ನು ಕಾಣಲು ಆದೀತೆ! 'ಅಂಬತಮೆ': 'ಮಾತೃತಮೇ' ಎಂಬ ಸರಸ್ವತಿಯ ನದೀ (: ಪ್ರವಾಹ) ರೂಪದ ವರ್ಣನೆಯ ಸಂದರ್ಭದಲ್ಲಿ 'ವೇಶ್ಯೆ' ಎಂದರೆ ಅದರ ಅರ್ಥವೇನು? ಜಲಪ್ರವಾಹದಲ್ಲಿ ಯಾರಿಗೂ (ಪ್ರ)ವೇಶವು ಉಂಟೇ ಉಂಟಲ್ಲ! ನುಣುಚಿ-ಜಾರಿಕೊಳ್ಳುವ ಈ ಕುಟಿಲಗತಿಯ ಮಾತು ಕಾವ್ಯ-ಸಾಹಿತ್ಯಕ್ಕೆ ಒಪ್ಪುವುದು. ಆದರೆ, ಧಾರ್ಮಿಕ ಪವಿತ್ರ ಉದಾತ್ತ ಭಾವನೆಗಳನ್ನು ಪ್ರೇರಿಸಬೇಕಾದ ವೇದಸೂಕ್ತಗಳಲ್ಲಿ ಈ ಮೋಡಿಯ ಮಾಟ ಪ್ರಶಸ್ತವೊ?

ದಿವ್ಯಾಧ್ಯಾತ್ಮಿಕ ಶ್ರದ್ಧೆಯಂತೆ, ಭೂಲೋಕ ದಿವ್ಯಲೋಕದ ಪ್ರತಿಬಿಂಬ ಅಥವಾ ಛಾಯೆ, ಭೂಲೋಕಕ್ಕೆ ಸ್ವತಂತ್ರ ಅಸ್ತಿತ್ವವೆಲ್ಲಿದೆ? ಆ ದೈವತಗಳ ಪ್ರೇರಣೆ-ಪ್ರಚೋದನೆಗೆ ಹೊರತಾಗಿ? ಎಂಬೀ ನಿಷ್ಠೆಯು, ಐಹಿಕ ಜೀವನದಲ್ಲಿ ದಿವ್ಯಲೋಕದೊಳಗಿನ ದೈವತಗಳ ಮಾದರಿಗಳನ್ನು ನಿರ್ಮಿಸಿಕೊಂಡಿರುತ್ತದೆ. 'ತತ್' : ಏಕಂ ಇದುವೆ ಏನೆಲ್ಲ ವಿಶ್ವರೂಪವಾಗಿದೆ. ಬೀಜ-ವೃಕ್ಷ ಸಂಬಂಧದ ಈ 'ದರ್ಶನ'ದ ಮಂಡನದಲ್ಲಿ ವೆಚ್ಚವಾಗಿರುವ ಭಾರತೀಯರ ಬುದ್ಧಿ ವೈಭವದ ಇಡಿಯಾದ ಸಮೀಕ್ಷೆಯಾಗಬೇಕಾದರೆ, ಎಲ್ಲ ಬಗೆಯ ವಿರಕ್ತ ಸಂನ್ಯಾಸ ಪಂಥಗಳ ಆ ಮೂಲಾಗ್ರ ವಿಮರ್ಶೆ ಅವಶ್ಯ. ಆದರೆ, ಇವೆಲ್ಲ ಪಂಥಗಳ ತತ್ತ್ವಜ್ಞಾನ ಮೊದಲು ಹುಟ್ಟಿತೆ? ಆಚಾರಾಂಗದ ತತ್-ಸಮಯದ ದರ್ಶನ : ಸಾಕ್ಷಾತ್ಕಾರ ಮೊದಲೊ? ಎಂದರೆ ಆ-ಚಾರ ಹಾಗೂ ವಿ-ಚಾರಗಳಲ್ಲಿ, ಆಚಾರವೇ ಮೊದಲು ಮಾನವರ ಜೀವನೇತಿಹಾಸದಲ್ಲಿ, ಇದು ನಿಶ್ಚಿತವಿದ್ದರೆ, 'ಮಾತರಿಶ್ವನ್'; ಅ-ಜ ಏಕಪಾತ್ : ಅಹಿರ್ಬುಧ್ನ್ಯದ : ಕೇಶೀ : ಪುರುಷನೇ ಪ್ರಪಂಚದ ಮೂಲ : ಏಕಂ : ಸತ್ಯ ಎಂಬುದು, ಶಕ್ತಿ-ಸಂಗಮ ತಂತ್ರದ ಶಾಕ್ತ ಆಚಾರಣೆಯಲ್ಲಿ ಪ್ರತೀತಿಗೆ ಬಂದ 'ತತ್ತ್ವ'ವು ಎಂಬುದನ್ನು ಬಾಹ್ಯಪ್ರಮಾಣಗಳಿಂದ ಸಿದ್ಧಪಡಿಸುವ ಆವಶ್ಯಕತೆಯೇನು? ಸಂದೇಹಿಗಳು ಈ ದೈವತನಾಮ ಸಂಕೇತಗಳ ಲಲಾಟ ಲಿಖಿತವನ್ನು ಓದಿನೋಡಲಿ. ಬಾಹ್ಯ ಶಬ್ದವಲಯದ ಅರ್ಥವೂ, ಈ ಶಬ್ದಪ್ರತಿಮೆಯ ಅರ್ಥ-ಗರ್ಭವೂ ಸಮಾನವಿರುವುದು ಪ್ರತೀತಿಗೆ ಬಂದೀತು. ಇವೆಲ್ಲವೂ ಒಂದೇ ತತ್ತ್ವಿನ ಪರ್ಯಾಯ ನಾಮಗಳು. 'ಆತ್ಮಾ ವೈ ಪುರುಷ ವಿಧಃ' ಎಂಬುದರ ದರ್ಶನ ಪ್ರತಿಯೊಬ್ಬ ಪುರುಷ ನರ (ನಾರಣ)ನೂ ಇಚ್ಛಿಸಿದಾಗ ಪಡೆಯಬಲ್ಲ; ನರ-ನಾರಣರು, ಒಬ್ಬರೊಬ್ಬರ ಅಂಗಾಂಗಿಗಳಾಗಿ ಒಂದೇ ತೇರಿನಲ್ಲಿ ಎಂದಿನಿಂದಲೋ ಹೊರಟಿದ್ದಾರೆ. ಬಾಳ ಕೊನೆಯಾಗದೆ ಮೋಕ್ಷವಿಲ್ಲವೆಂದು 'ಅರಣ್ಯಾಯನ'ದ ದಾರಿಯನ್ನು[೨೭] ಹಿಡಿದಿದ್ದಾರೆ.

---

* ಶ್ರೀಗೋವರ್ಧನ ಪರೇಖ ಸಂಪಾದಕರಾಗಿರುವ, ತರ್ಕತೀರ್ಥ ಲಕ್ಷ್ಮಣಶಾಸ್ತ್ರಿ, ಜೋಶಿಯವರ ನೇತೃತ್ವದಲ್ಲಿ ನಡೆದಿರುವ ಮುಂಬೈ 'ನವಭಾರತ' ಮಾಸಪತ್ರಿಕೆಯಲ್ಲಿ, ಪುಣೆಯ ಶ್ರೀ ಮಹಾದೇವ ಸಾಠೆ, ಅವರು ವೇದಕಾಲದಲ್ಲಿ ಶಾಕ್ತ ಸಂಪ್ರದಾಯವಿರುವ ಶಕ್ಯತೆಯನ್ನು ಸೂಚಿಸಿದ್ದಾರೆ. ಸುಮಾರು ಎರಡು ತಲೆಮಾರಿನ ಹಿಂದಿನ ಮಹಾನ್ ಮೇಧಾವಿಗಳೂ, ವೇದವಿದ್ವಾಂಸರೂ, ವಿಖ್ಯಾತ ಷಟ್-ಶಾಸ್ತ್ರಪಂಡಿತರೆಂಬ ಖ್ಯಾತಿಯ ಪ್ರೊ. ವಾಸುದೇವ ಶಾಸ್ತ್ರೀ ಅಭ್ಯಂಕರರ ಶಿಷ್ಯವರ್ಗದಲ್ಲಿ ಸಾಠೆಯವರು ಒಬ್ಬರು. ಆದರೆ, ಅವರು ತಮ್ಮ ಸಂದೇಹವನ್ನು ದೃಢಪಡಿಸುವ ಆಂತರಿಕ ವಿಶೇಷ ಪ್ರಮಾಣಗಳನ್ನು ಹೇಳಿಲ್ಲ. ಅವರೇ ಸೂಚಿಸಿರುವಂತೆ, 'ಅಹಂ ರುದ್ರೇಭಿಃ, ಆದಿತ್ಯೈತಿಃ, ವಿಶ್ವೇದೇವೈ (ಸಹ) ಚರಾಮಿ', ಎಂಬ ವಾಗಾಂಭೃಣೀ ಸೂಕ್ತವು ಶಾಕ್ತವೈಚಾರಿಕ ಆಕೃತಿಯದಾಗಿರುವುದರಲ್ಲಿ ಸಂದೇಹವಿಲ್ಲ. ಅದಿತಿ ಸರಸ್ವತಿಯರ ವರ್ಣನೆಗಳು ಇದೇ ಮಾದರಿಯವು ಆಗಿವೆ. ಇವರ ವರ್ಣನೆ ಎರಡು ಪಾತಳಿಯ ಮೇಲಿನ ಅರ್ಥ ಸೂಚಕವಿರುವ ಎಚ್ಚರ ವಹಿಸಲಾಗಿದೆ. ಮೈಯಲ್ಲಿ ಆವೇಶವಾಗುವ ಕುಮಾರೀ ಸಂಪ್ರದಾಯದ ಅಸ್ತಿತ್ವವನ್ನು ಗೃಹೀತ ಹಿಡಿಯದೆ, ಈ ಶಾಕ್ತ ಆಚಾರಗಳು ಮಾನವ ಪಾತಳಿಯ ಮೇಲಿನ ಕೃತಿಗಳು, ಎನ್ನಲು ಬರುವುದಿಲ್ಲ.

ಆದರೆ, ಈ ಪುರುಷ : ಕೇಶಿಯ ಪೂರ್ಣ ಪರಿಚಯಕ್ಕಾಗಿ ಇವನು ಶಯನ ಮಾಡುವ 'ಪುರಿಯ'-ಇನ್ನೂ ಕೆಲವು ಶೇಷವಾಸಸ್ಸಿನ ಸಮೀಕ್ಷೆಯೂ ಸ್ವಲ್ಪ ಅವಶ್ಯವಿದೆ.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X. ೯೦
೨. ***ಅದೇ*** X. ೧೩೬
೩. ***ಅದೇ*** X. ೮೧. ೧
೪. ***ಅದೇ*** X. ೭೨. ೮. ೯.
೫. ***ಅದೇ*** X. ೯೦. ೮೧; ೧೩೬
೬. ***ಅದೇ*** X. ೭೧. ೧೨
೭. ***ಅದೇ*** X. ೧೩೬
೮. ***ಅದೇ*** X. ೭೨, ೮-೯
೯. ***ಅದೇ*** I. ೧೬೪. ೧೬
೧೦. Levey Strauss; ***Araw's***
೧೧. ***ಋಗ್ವೇದ ಸಂಹಿತೆ*** VIII. ೪೦.೧೦. ೧೧
೧೨. ***ಅದೇ*** X. ೭೨. ೮-೯
೧೩. ***ಅದೇ*** X-೧೮೯
೧೪. ***ಅದೇ*** VII - ೫೭.೮
೧೫. ***ಅದೇ*** VII - ೫೬. ೯
೧೬. ***ಅದೇ*** VII. ೨೧. ೫; X. ೧೦., ೩
೧೭. Colling Wood, ***History of Ideas***
೧೮. Mercia Eliade ***Myth of Eternal Return*** p. 35
೧೯. ***ಋಗ್ವೇದ ಸಂಹಿತೆ*** I. ೨೪. ೧೦
೨೦. Macdonell A.A.; ***Vedic Mythology*** p. 144
೨೧. ***ಬೃಹದಾರಣ್ಯಕೋಪನಿಷತ್ತು*** ೨.೨. ೧-೪
೨೨. ***ಋಗ್ವೇದ ಸಂಹಿತೆ*** I. ೨೪. ೧೦
೨೩. ***ಅದೇ*** V. ೫೬. ೮-೯
೨೪. ***ಅದೇ*** I. ೧೬೪. ೪೪
೨೫. ***ಅದೇ*** V. ೫೬ ೮-೯
೨೬. J.N. Banarjee; ***Development of Indian Iconography***
೨೭. ***ಛಾಂದೋಗ್ಯೋಪನಿಷತ್ತು*** ೮. ೫. ೩.

ಶೇಷ-ವಾಸಸ್ ವಿಹಂಗಮಾವಲೋಕನ

ವಿಶ್ವಸ್ಥ ನಾಗ-ಶಕ್ತಿಯ ಉಪಾಸನೆಯ ಹಿನ್ನೆಲೆಯಲ್ಲಿ, ಭಾರತೀಯರ ಆ-ಚಾರ ಹಾಗೂ ವಿಚಾರಗಳು ರೂಪುಗೊಂಡಿವೆ; ಆಕಾರ ಪಡೆದಿವೆ. ಆದಿಶೇಷನೆ ಸೃಷ್ಟಿಕರ್ತೃ, ಎಂಬುದು ಭಾರತೀಯರ ಮೂಲಭೂತ ಶ್ರದ್ಧೆ; ಆದರೆ ಆಶ್ಚರ್ಯದ ಸಂಗತಿ : ಅನುಚ್ಚಾರಿತವಿದ್ದರೂ ಸರ್ವಮಾನ್ಯವಿರುವ ಸರ್ವ-ಶ್ರುತ ನಂಬುಗೆ ಇದು! ನಾಗಮ್ಮ (ಅಮ್ಮ ಉಭಯಲಿಂಗಿ), ಓಣೆಯಲ್ಲಿ ಕಾಣದಾಗಿ ಎಷ್ಟೋ ಸಾವಿರ ವರುಷಗಳಾದುವು. 'ನಾಗ' ಅನು-ಷ್ಠಾ (ಸ್ಥಾ)ನದಲ್ಲೇ ಮಾನವರಿಗೆ ಮೊದಮೊದಲಬಾರಿ, ಆನಂದ-ಲೋಕ ದರ್ಶನವಾಗಿದೆ, ಎಂದರೆ ಒಪ್ಪಲು ಸಂಕೋಚ! 'ಅದೇಕೆ-ಕಣ್ಣೂ ಕೆಂಪಾಗುವುವು' ಕೆಲವೊಮ್ಮೆ! ಆದರೆ, ತಮ್ಮನ್ನುಳಿದು ಇತರ ಮಾನವ ಪಂಗಡಗಳ ಐತಿಹ್ಯ ಏನೇ ಇರಲಿ; ತಮ್ಮ (ವಿಶಿಷ್ಟ) ಧರ್ಮ ಹಾಗೂ ತತ್ತ್ವಜ್ಞಾನವು ಮಾತ್ರ, ನಾಗಶಕ್ತಿಯ ಅನುಷ್ಠಾನದ ಫಲವಾಗಿ ಮೈದಾಳಿ ನಿಂತುದಲ್ಲ, ಎಂಬ ಅಭಿನಿವೇಶದ ಮಾತುಗಳು ಕೇಳಬರುವುವು. ನಾಗ ಪ್ರತಿಮಾರಾಧನೆಯ ಈವರೆಗಿನ ಸಮೀಕ್ಷೆಯ ಕ್ರಮವನ್ನು ಇನ್ನು ನಿಲ್ಲಿಸುವುದು ಅವಶ್ಯವೆನಿಸಿದೆ. ಏಕೆಂದರೆ 'ಶೇಷ'ನಿಗೆ ಕೊನೆಯುಂಟೆ? ಆದರೂ ಈಗಲೂ ಗುರುತಿಸಿಕೊಳ್ಳಬಹುದಾದ ಕೆಲವೊಂದು, ಶೇಷ-ವಾಸಸ್ (: ಸ್ಥಾನ)' ಎಂದರೆ ನಾಗವು ಕಳಚಿಬಿಟ್ಟಿರುವ ಅವ-ಶಿಷ್ಟ 'ಪರೆ'ಗಳನ್ನು ಕೆಲವನ್ನು ಗಮನಕ್ಕೆ ತಂದುಕೊಟ್ಟು ಈ ಸಮೀಕ್ಷೆ ಮುಗಿಸುವುದು ಲೇಸೆಂದು ತೋರುತ್ತದೆ.

ಆದರೆ, ನಾಗನ ವಾಸಸ್ ಎಂದರೆ ಈ ಪರೆಗಳನ್ನು ಗುರುತಿಸಿ, ಇದುವೆ ನಾಗ 'ವಾಸಸ್' (ವಸನ-ವಸ್ತ್ರ ಬಿಡಾರವಿದ್ದ ಎಡೆ); ನಿಶ್ಚಿತ ಎಂದು ನಿರ್ಧರಿಸಿಕೊಳ್ಳುವ ಈವರೆಗಿನ ವಿಧಾನವನ್ನು ಇನ್ನು ಅನುಸರಿಸಲು ಅವಕಾಶವಿಲ್ಲ. ಸತ್ಯವು ಸಾಂಕೇತಿಕವಿರುತ್ತದೆ. ಸಾಂಕೇತಿಕ ಪ್ರತಿಮೆಗಳಿಗೆ, ಜೀವನದ ಸಂದರ್ಭಸ್ಥ ವಿಶಿಷ್ಟ 'ಸಮಯ'ದ (: ಆಚಾರ-ವಿಚಾರಗಳ) ಆವರಣದ ಮೂಲಕ ಅರ್ಥವು ಪ್ರತೀತಿಗೆ ಬರುತ್ತದೆ. ಆದಕಾರಣ, ಒಂದು ಪರಂಪರೆಯ ಶಬ್ದರೂಪ, ಸಾಂಕೇತಿಕ-ಪ್ರತಿಮೆಯ ಅರ್ಥ ನಿಶ್ಚಿತವಾಗಿ, ಅದನ್ನು ಆ ಒಂದು ವಿಶಿಷ್ಟ ಸಮಯದ ಪರಿಸರದಲ್ಲಿ ವಿವರಿಸುವುದು ಕರ್ತವ್ಯವಾಗುತ್ತದೆ. ಆದರೆ, ಈ ಪದ್ಧತಿಯನ್ನು ಸ್ವೀಕರಿಸುವುದರಿಂದ ದೂರಾನ್ವಯದ ದೋಷವು ನುಸುಳಿ ಒಳನುಗ್ಗುತ್ತದೆ! 'ಕಣ್' : ಕಣೆ : ಗಣೆ ಈ ಸಂಕೇತವು ನಾಗ ಸಂಪ್ರದಾಯದ ಜೀವಾಳದ ಪ್ರತಿಮೆಯಾಗಿದೆ. ಈ ಸಂಕೇತಕ್ಕೆ ಇದ್ದ ಮೂಲಾರ್ಥಗ್ರಹಣಕ್ಕೆ, ಆ 'ಸಮಯ'ದಲ್ಲಿ ಪ್ರವೇಶದೊರೆಯುವುದು ಅವಶ್ಯವಿದೆ. ಆದರೆ, ಋಗ್ವೇದ ಕಾಲಕ್ಕಿಂತಲೂ ಪೂರ್ವದ ಈ 'ಕಣೆ' ಸಂಪ್ರದಾಯದ ಸುತ್ತಲಿನ ಆವರಣವನ್ನು ಒಮ್ಮೆಲೆ ಗ್ರಹಿಸಿಕೊಳ್ಳುವುದು ಅಶಕ್ಯವಿದೆ. ಆದರು, 'ಕಣೆ'ಯ ಕಾರಣಿಕದ ಅವಶಿಷ್ಟ ಆಚರಣದ ಚಿತ್ರವು ಹಲಕೆಲವು ಕ್ಷೇತ್ರಗಳಲ್ಲಿ, ನೋಡಲು ಸಿಕ್ಕುವಂತಿದೆ. ಆ ಕಣೆಯವನು, ಶಿವನ-ಮೈಲಾರನ ಬಿಲ್ಲ ಗಣೆ ಏರಿ, 'ಮುಂಡಿಗೆ'ಯ ಸ್ವರೂಪದಲ್ಲಿ ನುಡಿವುದನ್ನು ಸ್ಮರಿಸಿಕೊಂಡುದಾಯಿತು.

ಈ ಬಿಲ್ಲು ಹಾಗೂ ಗಣೆ<ಕಣೆಯ ಸಂಕೇತವು ದಂಡದ ವಿಚಾರದತ್ತ ತಳ್ಳಿಕೊಂಡು ಹೋಯಿತು. ಮುಮ್ಮರ್ರಿ ದಂಡ, ಭಲ್ಲೂಕ-ದಂಡ (ಹಸ್ತರ್) ಈ ಪ್ರತಿಮೆಗಳಲ್ಲಿ ಭಲ್ಲೂಕ : ಕರಡೆ, ನಮ್ಮನ್ನು ಋಗ್ವೇದ ಕಾಲದ 'ಋಕ್ಷ' ಈ ಸಾಂಕೇತಿಕ-ಪ್ರತಿಮೆಯ ದರ್ಶನ ಮಾಡಿಸಿತು. ಬಲ್ಲೂಕ : ಕರಡೆ, ಶೈವ ಸಂಪ್ರದಾಯವ ಪ್ರತಿಮೆ; ಶಿವನ ಸಂಕೇತ ಎಂಬುದು ಕಂಡಿತು! ಕರಡೆ : ಕೂದಲಿನ ಪುರುಷ : ಕೇಶಿಯ ಪ್ರತಿಮೆ (ವಿಷಸ್ಯ' ಪಾನ ಪಾತ್ರದಲ್ಲಿ ರುದ್ರನೊಡನೆಯೆ ಭಾಗಿಗಳಾಗುವ 'ಕೇಶಿ' : ಮುನಿಯು ಕಾಣಿಸಿಕೊಂಡನು! ಈ 'ಪಾತ್ರ' : 'ವಿಷ' ಇವೆರಡರ ಆಶ್ಚರ್ಯಕರ ಸಾಹಚರ್ಯ ಇಂದಿಗೂ ಉಳಿದು ಬಂದಿದೆ! ಜೀವನ ನಾಟಕದ 'ಪಾತ್ರ' ಉಭಯಲಿಂಗಿ: ಸ್ತ್ರೀ-ಪಾತ್ರ, ಪುರುಷ ಪಾತ್ರ ಎಂಬ ವಾಡಿಕೆಯುಂಟಷ್ಟೆ? ಆದರೆ, ಮೂಲತಃ 'ಪಾನ' (ಕುಡಿವ) ಪಾತ್ರ ಸ್ತ್ರೀಲಿಂಗಿ ಯಾಗಿರುವುದನ್ನು ಇಲ್ಲಿ ಸೂಚಿಸಲಾಗಿದೆ. ಮರುತರ ಸ್ತೋತ್ರದೊಳಗಿನ ಕರಡೆ : ಋಕ್ಷ ಎಂಬುದು, ರುದ್ರಿಯರೆಂಬವರನ್ನು ಕಣ್ಣಳತೆಯಲ್ಲಿ ತಂದು ನಿಲ್ಲಿಸಿತು. ಸಪ್ತಋಷಿಗಳೆಂಬವರೂ 'ಋಕ್ಷ' : ಕರಡೆಯೆ ಎಂದು ವೇದ ಹೇಳುತ್ತದೆ! ಹೀಗೆ ಇವೆಲ್ಲ ಸಂಕೇತಗಳೂ 'ತತ್' : ಏಕಂ ಎಂಬ ವಿಶ್ವದ ತಳಹದಿಯ ಮೂಲ ಸತ್ತ್ವದ ದರ್ಶನ ಮಾಡಿಸುವ ಪರ್ಯಾಯ ನಾಮರೂಪಗಳ ಪ್ರತಿಮೆಗಳೇ ಇರುವುದಾಗಿ ಸಹಜ ರೀತಿಯಲ್ಲಿ ಸಿದ್ಧವಾಯಿತು. ಸಮಾನ ಸಮಯದ ಆವರಣದಲ್ಲಿ, ಹೊರಗಿನ ಯಾವ ತರ್ಕ. ಊಹೆ, ಅನುಮಾನಗಳ ಆವಶ್ಯಕತೆಯಿಲ್ಲದೆ, ಪ್ರತಿಮಾ : ಸಂಕೇತಸ್ಥ ಅರ್ಥಗರ್ಭದೊಳಗಿನ ಆಕೃತಿ : ಚಿತ್ರವೇ ಈ ಮಾತನ್ನು ಮನಗಾಣಿಸಿ ಕೊಡುತ್ತಿರುವ ಅಪೂರ್ವ ಶಕ್ತಿ ಸಮಸಾಮಯಿಕ ಸಾಂಕೇತಿಕ ಪ್ರತಿಮೆಗಳಲ್ಲಿ ಉಂಟು. ಇನ್ನು, ಈ ನಾಗವಾಸದ ಜಾಡುಹಿಡಿದು ಅವನ್ನು ಗುರುತಿಸುವ ವಿಧಾನವನ್ನು ಸಂಕ್ಷಿಪ್ತಗೊಳಿಸುವುದು ಅವಶ್ಯವಾಗುತ್ತಿರುವುದರಿಂದ ಈ ಶಬ್ದಪ್ರತಿಮೆಗಳನ್ನು ಬಿಡಿ ಬಿಡಿಯಾಗಿಯೆ ಎತ್ತಿಕೊಳ್ಳಬೇಕಾಗಿದೆ.

'ಬಲ್ಲೂಕ-ದಂಡ' ಎಂಬಲ್ಲಿ ಭಲ್ಲೂಕದ ದಂಡ ಎಂಬ ಸೂಚನೆಯಿದೆ. ಆದರೆ, ಭರ್ಚಿ-ಭಲ್ಲೆ ಕರಡೆಯ ಸಾಹಚರ್ಯವುಳ್ಳವು ಇದ್ದರೂ 'ಭಲ್ಲೂಕ-ದಂಡ' ಸಂಕೇತದ ಔಚಿತ್ಯಕ್ಕಾಗಿ ಇದನ್ನು ಕೇಶಪುಂಜಯುಕ್ತ ದಂಡ ಎಂದು ಹೇಳುವುದೇ ಲೇಸು. 'ಬಲ್ಲೂಕ-ದಂಡ ಹಸ್ತರ್' : ಮೈಲಾರ-ಮಲ್ಲಯ್ಯನ ಒಕ್ಕಲು; ಸರಿ, ಭಲ್ಲ=ಮಲ್ಲ ಸಂಬಂಧವಿರುವುದನ್ನು ಮೋನಿಯರ್ ವಿಲಿಯಂಸ್ ಕೋಶವು ಸೂಚಿಸಿರುವಲ್ಲಿ ಅನೌಚಿತ್ಯವೇನೂ ಇಲ್ಲ. ಮೈಲಾರ : ಗುಡ್ಡದ ದೇವರು; ಮಲೆ ಮಲಯ-ಮಲ್ಲಯ್ಯನೆಂದೂ ಮೈಲಾರನಿಗೆ ಕರೆವ ವಾಡಿಕೆಯು ಉಂಟು. ಮಲೆ, ವೃಕ್ಷರಾಜಿಯನ್ನುಳ್ಳ ಗಿರಿ, ವೃಕ್ಷಕೇಶಾಃ ಪರ್ವತ ಎಂಬ ಸಂಕೇತ ಇವೂ ಅರ್ಥಪೂರ್ಣವಾಗುತ್ತವೆ. ರುದ್ರನು, 'ಗಿರಿಶೋ, ಗಿರೀಶೋ ಮೃಡಃ'! ವಿಷ್ಣು ಗಿರಿಕ್ಷಿತ್ 'ಗಿರಿಷ್ಠ' ಪೆರುಮಾಳ'. ವಿಷ್ಣುಸ್ತೋತ್ರದಲ್ಲಿ ಇವನಿಗೆ 'ಕು-ಚರಃ' ಎಂದುದುಂಟು. ನೇರದಾರಿಯವನಲ್ಲ-ಸರ್ಪಗತಿ-ವಕ್ರಗತಿ ಎಂಬ ಸೂಚನೆಯೊ? ಗಿರಿಗಳಲ್ಲಿ ರಾಜಮಾರ್ಗಗಳೆಲ್ಲಿರಬಲ್ಲವು? ಅಡ-ತಿಡ್ಡದಾರಿ-ಗಿಡಗಂಟಿಗಳ ದಾರಿ-ಕಣಿವೆ-ಕಂಡಿಯೊಳಗಿನ ದಾರಿ ಕ್ರಮಿಸುವ ದೈವತ ಎಂದು ಅರ್ಥವೊ?...... ಇಂತು 'ಬಲ್ಲೂಕ ದಂಡ'ವು ಕೇಶೀ-ಪುರುಷನ : ನಾಗರಾಜನ ಒಂದು ನಿಲುಮೆಯ ದರ್ಶನ ಮಾಡಿಸುತ್ತಿದೆ: ಇದು ವಾಸ್ತವ ಸತ್ಯವೊ? ಅವಾಸ್ತವವೋ? ತಜ್ಞರೂ, ಸಾಕ್ಷಾತ್ಕಾರಗಳೂ ಸಂಪ್ರದಾಯಜ್ಞರೂ ತಮ್ಮ ತಮ್ಮ ಭೂಮಿಕೆಯಿಂದ ಸಮೀಕ್ಷಿಸಿ ಹೇಳಬೇಕು. ಶಬ್ದ-ಸಂಕೇತಸ್ಥ ಅರ್ಥಗರ್ಭವು, ಆ-ಶಬ್ದ-ಪ್ರತಿಮೆ ದಿಕ್ಕಾಲದ ಸಂದರ್ಭದ ಜೀವನ ಪರಿಸರದಲ್ಲಾದ ಪ್ರಾಮಾಣಿಕ ಸಂದೃಕ್ ಆಗಿದ್ದಲ್ಲಿ ಅದು ನಿಜವಾದ ಸಾಕ್ಷಾತ್-ಆಕಾರದ 'ದರ್ಶನ'ವಾಗಿರಲೇಬೇಕು. 'concepts without intuition are empty' ಎಂದು ತತ್ತ್ವಜ್ಞ ಕಾಂಟ್ ಹೇಳಿರುವ ಸೂತ್ರವನ್ನು ಇಲ್ಲಿ ಒರಗೆ ಹಚ್ಚಿ ನೋಡಿಕೊಳ್ಳಬಹುದು.

'ಮುಮ್ಮುರ್ರಿ ದಂಡ' ಈ ಸಂಕೇತವು, ಭಲ್ಲೂಕ ದಂಡಕ್ಕಿಂತ ಹೆಚ್ಚು ಪುರಾತನ ಕಾಲದ್ದೆಂದು ತೋರುತ್ತದೆ. ಮೂರು + ಮುರಿ (ಗೆ) ಯ ದಂಡವೆಂಬ ಏನೊ ಒಂದು ಅರ್ಥ ಸೂಚನೆಯಿದೆ. ತ್ರಿ=ಮೂರು ಈ ಸಂಕೇತದ ಗುಹ್ಯಾರ್ಥವು 'ಸಪ್ತ'ದಕ್ಕಿಂತಲೂ ಸ್ವಲ್ಪ ಬೇರೆ ಪಾತಳಿಯ ಅನುಭವದ ಹಿನ್ನೆಲೆಯಲ್ಲಿ ಆಕಾರಪಡೆದಿರುವುದಾಗಿ ಕಾಣುತ್ತದೆ. 'ಮೂರು' ಈ ಸಂಕೇತವು ಕಣ್ಣು, ಲೋಕ, ಪುರ ಇತ್ಯಾದಿ ಉತ್ತರಪದದೊಡನೆ ಬೆರೆತಿರುತ್ತದೆ.

ಇವೆಲ್ಲವುಗಳ ಸಮಾಲೋಚನೆ, ಈ ಗತಿ ಅನಾವಶ್ಯಕ. ಸಂನ್ಯಾಸಿಗಳು ಬೈರಾಗಿಗಳು ತಮ್ಮ ತಮ್ಮ ಪಂಥೀಯ ವೈಶಿಷ್ಟ್ಯದ 'ದಂಡ' ಧರಿಸುವ ವಾಡಿಕೆ ಭಾರತದಲ್ಲಿ ಮಾತ್ರವಲ್ಲ, ಸೈಬೇರಿಯಾದ ಶ್ರಮಣಕರಲ್ಲೂ ಇರುವುದು; ಜಾಗತಿಕ ದೃಶ್ಯವಿದು. ಈ ದಂಡವು ನಾಗಶಕ್ತಿಯ ಪ್ರತೀಕವಿರುತ್ತದೆ. ಕೋಲು : ಬಾಣ : ಕೊಲ್ಲುವ ಸಾಧನ. ಸರ್ಪವನ್ನೇ ಅಸ್ತ್ರ (=ಎಸೆವ ಶಸ್ತ್ರ) ಎಂದು ಯೋಜಿಸಲಾಗುತ್ತಿದ್ದ ಕಾಲದ ಸ್ಮೃತಿಯು ಇಲ್ಲಿದೆ. 'ಮಹಾನಾರಾಯಣಾಸ್ತ್ರ' ಎಂದರೆ ಹಾವಿನ 'ಕೋಲು'.

i) ಇಂದ್ರ ಪುತ್ರನೆಂಬ 'ನರ'ನನ್ನು ಕೊಲ್ಲಲು ಸರ್ಪ ಅಸ್ತ್ರ ಎಸೆದುದರ ಸಮಯಾರ್ಥವು, ಇಂದ್ರ-ವೃತ್ರ ಅಹಿ ಇವರ ಋಗ್ವೇದಕಾಲೀನ ಸಮಯದ ಹತ್ತಿರಕ್ಕೆ ಒಯ್ಯುವ ಸಾಮರ್ಥ್ಯವುಳ್ಳುದಾಗಿದೆ.

ii) ಸೇಡು ತೀರಿಸಲು, ಸರ್ಪವು ತನ್ನನ್ನು ಉಪಯೋಗಿಸಿಕೊಳ್ಳಲು ಕೇಳಿಕೊಂಡದ್ದು ಈ ಅಂಶಗಳು, ಋಗ್ವೇದದ ಕಾಲೀನ ಅಹಿ ವೃತ್ರ ಹಾಗೂ ಇಂದ್ರ ಇದರೊಳಗಿನ ಹಗೆಯ ಪುರಾತನ ನೆನಹಿನ ಪುನಃಸ್ಮೃತಿಯನ್ನು ತಂದುಕೊಡುತ್ತಿವೆ.

ಆದರೆ, ಕರ್ಣನು ಸೂರ್ಯಾಂಶ ಸಂಭೂತನೆಂಬಲ್ಲಿ ಪ್ರಾಮಾಣಿಕತೆಗೆ ಬಾಧೆ ಬರುತ್ತದೆ. ಏಕೆಂದರೆ ಇಂದ್ರ-ಸೂರ್ಯ ಬೇರೆಯಲ್ಲ. ಕರ್ಣನು 'ಆದಿತ್ಯ' ಪುತ್ರ : ಎಂದರೆ ಚಂದ್ರನಿಂದ ಕುಂತಿಯಲ್ಲಿ ಹುಟ್ಟಿದವನು ಎಂದಲ್ಲಿ, ಇದು ಸಮರ್ಪಕವಾಗಲಿದೆ. ಹಾವು-ಚಂದ್ರ ಇವೆರಡೂ ವಿಸಂಗತವಲ್ಲ. ಸೂರ್ಯ-ಇಂದ್ರ ಸರ್ಪ ಶತ್ರುಗಳು. ಕಾರಣ ಸೂರ್ಯಪುತ್ರನೆಂಬುದು ನಿಜವೆಂದಲ್ಲಿ ಕರ್ಣನು ಸರ್ಪಾಸ್ತ್ರವನ್ನು ಮೊದಲು ಬಾರಿ ಸ್ವೀಕರಿಸಲು ಶಕ್ಯವಿಲ್ಲ. ಸೌರ ಪ್ರತಿಮೆಗಳ ಪಾವಿತ್ರ್ಯಭಂಗದ ಸಂಧಿಯನ್ನು ಸಾಧಿಸಿರುವಂತೆ ಕಾಣುತ್ತದೆ. ಈ ಬಗೆಯ ಸಾಂಕೇತಿಕ ಘಟನೆಗಳ ಮಹಾಭಾರತವು ಐತಿಹಾಸಿಕ ಮಟ್ಟದ ಗ್ರಂಥ, ಎಂದು ಬಗೆವಲ್ಲಿ ಇತಿಹಾಸದ ವಿಡಂಬನವಿದೆ. 'ಬಾಣ' (ಲಿಂಗ) : ರೇವತಿ (ನರ್ಮದಾ) ನದಿಯಲ್ಲಿ ದೊರೆವ ಲಿಂಗಾಕಾರದ ಗಾರೆ-ಕಲ್ಲು: 'ಬಾಣ'. ಇದೇ ಮೇರೆಗೆ ಗಂಡ-ಕೀ ನದಿಯಲ್ಲಿ ದೊರೆವ ಕಪ್ಪುಬಾಣಗಳಿಗೆ ಶಾಲಿಗ್ರಾಮ (: ವಿಷ್ಣು ಪ್ರತಿಮಾ) ಎಂದು ಬಗೆಯಲಾಗುತ್ತದೆ.

ಯತಿಗಳು ಧಾರಣಮಾಡುವ 'ದಂಡ'ಕ್ಕೆ ಅವರವರ ಪಂಥಕ್ಕನುಸರಿಸಿ ಇಂತಿಷ್ಟು ಕಣ್ಣು (>ಗಣ್ಣು) ಇರಬೇಕೆಂಬ ಬೇರೆ ಬೇರೆ ರೂಢಿಗಳಿವೆ. ಸುಭದ್ರಾಹರಣಕ್ಕಾಗಿ ಬಂದ ನರನು ತ್ರಿದಂಡೀ ಸಂನ್ಯಾಸಿಯಾಗಿದ್ದನಂತೆ. ಇವನು ಮೂರು ಕಣ್ಣಿನ ಗಣೆ ಧರಿಸಿದ್ದನೆಂದು ತೋರುತ್ತದೆ. ನಾರದನ ಕೈಯಲ್ಲಿ ದಂಡವು ಇದ್ದು ಅವನದು 'ವೀಣಾ'-ಪಾಣೀ ಸಂಪ್ರದಾಯವಿರುವುದಾಗಿ ಕಾಣುತ್ತದೆ! ಋಗ್ವೇದದ ಮರುತರು ವಾಣ (>ಬಾಣ) ಧಾರಿಗಳು! ವಾಣ : ಕೊಳಲಿನಂತಹುದು : ವಂಶದ (ಬೆತ್ತದ) ತುಂಡು: 'ಬಾಣ'ವನ್ನು 'ವೇತಸ' (>ಬೆತ್ತ) ಸಂಕೇತದೊಡನೆ ಹೋಲಿಸಿದೆ. 'ವಾಣ'ಧಾರಿ ಮರುತರು 'ಕಬಂಧ' (ಕೊಳಾಯಿ) ಸಂಕೇತದಿಂದಲೂ ಸೂಚಿಸಲ್ಪಟ್ಟಿದ್ದಾರೆ! ಇಲ್ಲಿ ಒಂದು ಸೂಕ್ಷ್ಮ ತಾರತಮ್ಯ ಕಾಣುತ್ತಿದೆ. ವಾಣ (: ವಾಣಿ) : ವಾದ್ಯವಾಗುತ್ತಲೆ, ಮಧ್ಯಮಾ : ವಾಕ್ಕಿನ ಪ್ರತಿಮೆ ಆಗುತ್ತದೆ. ಈ ಸಂಕೇತ; ವಾಣ > ಬಾಣ ಅಸ್ತ್ರ ಆ ಗುತ್ತಲೆ ಕೋಲು ಹಾವು ಎನಿಸುತ್ತದೆ. ವಾಣಿ : ವಾಕ್‌ಯುಕ್ತ ದಂಡ (: ದೇಹ); ವಾಣಿ; ಕಣ್; ಕಣಿ; 'ಅಕ್ಷ' ಒಂದು ತುದಿದೇಹಕ್ಕೆ; ಗಣಿ, ಅಕ್ಷ : ಅಹಿ ಅದರ ಇನ್ನೊಂದು ತುದಿ! ವಾಣಧಾರಿ ಮರುತರನ್ನು ಅಹಿ (-ಭಾನು) ಎಂದುದನ್ನು ನೆನೆದುಕೊಳ್ಳಬೇಕು. ಈ ವಾಣವು 'ವಾಣಿ' (: ಮಧ್ಯಮಾ:) ವಾಕ್ ಆಗುತ್ತದೆ! 'ಸಪ್ತವಾಣೀ' ಎಂಬ ಶಬ್ದ-ಪ್ರತಿಮೆ, ಋಗ್ವೇದದಲ್ಲೇ ಉಂಟು! ಸಪ್ತ=ಸರ್ಪಣ ಸ್ವಭಾವದ ವಾಣೀ=ಗಾಳಿ=ಸರ್ಪ! ಈ ಹಿನ್ನೆಲೆಯಲ್ಲಿ ಆಪ : ರಸ ಪಂಥೀಯ 'ತ್ರಿ' (ಮೂರು) ಈ ಸಂಕೇತದಲ್ಲೂ ಹೀಗೆಯೆ ಏನೊಂದು ಗುಹ್ಯಾರ್ಥವು ಅಡಗಿರಲಿಕ್ಕೆ ಬೇಕು ಎಂದಲ್ಲಿ ಅಪ್ರಾಧವಾದೀತೆ? 'ತ್ರಿ-ದಂಡ' ಎಂದರೆ ಮೂರು ಕಣ್ಣಿನ ದಂಡ, ಇದಕ್ಕೂ ಮುಮ್ಮುರಿ ದಂಡಕ್ಕೂ ಏನಾದರೂ ಹೋಲಿಕೆಯು ಇದ್ದಿತೆ? ತಿಳಿಯದು.

ವೀಣಾ-ಪಾಣಿ, ನಾರದನು ಪ್ರಪಂಚದಲ್ಲಿ ಎಲ್ಲಿಂದೆಲ್ಲಿಗೂ ಹಾರಾಡಬಲ್ಲವನಾಗಿದ್ದನೆಂಬ ಪವಾಡ ಕಥೆಯು, ಋಗ್ವೇದದ ವಾತರಶನ ದಂಡಧಾರಿ ಕೇಶಿಯ ಪವಾಡವನ್ನು ನೆನೆಪಿಗೆ ತಂದುಕೊಡುತ್ತದೆ. ವಾತ-ರಶನ ಕೇಶಿಯು

ವಾತಾಶ್ವವನ್ನು ಏರಿ, ಅಂತರಿಕ್ಷದಲ್ಲಿ ಕಣ್ಣುಮುಚ್ಚಿ ಕಣ್ದೆರೆವುದರೊಳಗೆ ಎರಡೂ ಸಮುದ್ರಗಳ ವರೆಗೆ (ಉಭೌಸಮುದ್ರೌ), 'ಪೂರ್ವ' ಹಾಗೂ 'ಅಪರ' ದಿಕ್ಕಿನಲ್ಲಿ ಲೀಲೆಯಿಂದ ನಿಮಿರ್ದು ನೆಗೆಯುತ್ತಾನೆ ಎಂದರೆ, ಈ ಕಣೆ > ಗಣೆಯಲ್ಲಿರುವ ನಾಗದ (ಮಾತರಿಶ್ವ : ಅಗ್ನಿ-ವಾಯು ದೈವತದ) ಶಕ್ತಿಯು, ಆ ದಂಡಧಾರಿಗೆ ಎಲ್ಲಿಂದೆಲ್ಲಿಗೆ ಹಾರಾಡುವ (ಮನಸ್) ಸಾಮರ್ಥ್ಯವನ್ನು ಕೊಡುತ್ತದೆ. ಅಲ್ಲದೆ, ಈ 'ಕಣೆ' ಅವನಿಗೆ ಕಣ ಸಂದೃಕ್ : intuition ದಿವ್ಯದೃಷ್ಟಿ ಲಾಭಕ್ಕೂ ಕಾರಣವಾಗುತ್ತದೆ. ಈ ಬಗೆಯ ತದ್ರೂಪ ಅವಸ್ಥೆಯಲ್ಲಿ ಕಣೆಯ ಸೊಲ್ಲು ತನ್ನತಾನೆ ಹೊರ ಹೊಮ್ಮುತ್ತದೆ. 'ವಾಣೆ' ಪ್ರವಿಸುತ್ತದೆ. ('ಗೌರೀ ಮಿಮಾಯ ಸಲಿಲಾನಿ ತಕ್ಷತಿ') ಈ ಋಗ್ವಾಕ್ಯ ಸಮೀಕ್ಷಿಸಿರಿ.

ಮೂರು ಕಣ್ಣಿನ ದಂಡ : ತ್ರಿ-ದಂಡ-ಧಾರಿ ನರನು, ಸೌಭದ್ರ ನಾಟಕದ ಮುಖ್ಯಪಾತ್ರ, ಸು-ಭದ್ರಾ : ಸುಮಂಗಲೀ ದೇವಿಯನ್ನು ಪಡೆಯಲು ಸ್ವೀಕರಿಸಿದ ಸಂನ್ಯಾಸ. ಇದು 'ವೇಷ' ಎಂಬ ಸೂಚನೆಯೆ 'ತ್ರಿ-ದಂಡ' ಧಾರಣದ ಸಂಕೇತದಲ್ಲಿ ಇರುವ ಶಕ್ಯತೆಯೂ ಉಂಟು. ಋಗ್ವೇದದಲ್ಲಿ ಮೂರು 'ಚಕ್ರದ' ತೇರು (: ತ್ರಿ ಚಕ್ರಃ) ಎಂಬ ಸಾಂಕೇತಿಕ ಪ್ರತಿಮೆ ಇದೆ. ಈಗ ನರನು ಸುಭದ್ರೆಯನ್ನು ಹೊಂದಲು ಬಂದುದು 'ತ್ರಿದಂಡ'ರೂಪೀವಾಹನದ ಆಧಾರದಿಂದ. ಇವೆರಡೂ ವಾಹನಗಳಲ್ಲಿ ಭೇದವಿರುವಂತೆ ಕಾಣುತ್ತದೆ. ರಥದ 'ಚಕ್ರ'ದ 'ತ್ರಿ' ಸಂಕೇತವೇ. ಆ ಬಳಿಕ ಅಧ್ಯಾತ್ಮ ಸಾಧನೆಯ ಷಟ್‌ಚಕ್ರ, ಷಟ್‌ಸ್ಥಳವಾಗಿ ಪರಿಣಮಿಸಿರಲು ಸಾಕು. ಗಾಲಿ : O : ಕಣ್ : ಕಂಡಿ : ಬೆಳಕಂಡಿಗೆ 'ಗವಾಕ್ಷ' ಎಂದು ಹೆಸರು. 'ಗೋ' ಕಿರಣ; ರಶ್ಮಿ ರಶನ-ಸರ್ಪ; ಅಕ್ಷ ಕಣ್ಣು (: ರಂಧ್ರ) ಗೊ-ಅಕ್ಷ ಇದು 'ಚಕ್ರವೆ'ೀ ಇದರಂತೆ ಚಕ್ರವೆ 'ಪದ್ಮ': 'ಪದ' ರೂಪವಾದುದೂ ಉಂಟು.

'ಸಮಯ'ದ ಈ ಪರಿಸರದಲ್ಲೇ 'ಚಕ್ರ' ಎಂಬ ಸಾಂಕೇತಿಕ ಪಕ್ಷಿಮಿಥುನದ ಪ್ರತಿಮಾ-ಪ್ರಸವವಾದುದಾಗಿ ಕಂಡುಬರುತ್ತದೆ. 'ಚಕ್ರ'ವನ್ನೇ ಚಕ್ರ-ವಾಕ ಎಂದು ಹೇಳುವ ವಾಡಿಕೆ ಋಗ್ವೇದ ಕಾಲದಿಂದಲೇ ಉಂಟು. ವಾಣ=ಕೊಳಲಿನ ರಂಧ್ರದಿಂದ 'ವಾಕ್' ಹೊರಬರುವಂತೆ ಈ ಚಕ್ರವೂ ವಾಕ್-ವಾಕ : ವಾಣೆ ಎಂದು ಧ್ವನಿತ ಮಾಡುವ ಉದ್ದೇಶವು ಇರುವಂತೆ ತೋರುತ್ತದ. 'ಚಕ್ರ' ಮಿಥುನ ಪಕ್ಷಿ. ಸ್ತ್ರೀ-ಪುರುಷಯೋಗ ಇದು (ಎರಡು) ಚಕ್ರಯೋಗ ಎಂದು ಸೂಚಿಸುವುದಕ್ಕಾಗಿಯೆ ಈ ಸಾಂಕೇತಿಕ ಪ್ರತಿಮೆಯನ್ನು ನಿರ್ಮಿಸಿಕೊಂಡ ಹಾಗಿದೆ. ಯೋಗಸಿದ್ಧಿಗೆ ಷಟ್-ಚಕ್ರದೊಳಗಿಂದ (ಕುಂಡಿಲಿನೀ) ಸರ್ಪವು ಏರುತ್ತ 'ಸಹಸ್ರಾರ'ಕ್ಕೆ ಬಂದು ತಲುಪುದಾಗಿ ಹೇಳಲಾಗುತ್ತದೆ. ವಾಸ್ತವದಲ್ಲಿ ಈ 'ಚಕ್ರ' ಪಕ್ಷಿಯು ಉಂಟೆ, ಎಂಬುದೇ ಶಂಕಾಸ್ಪದವಿದೆ. ನಿಮಿತ್ತಕ್ಕಾಗಿ ಯಾವುದೇ ಪಕ್ಷಿಯನ್ನು ಬಿಟ್ಟಿ ಹಿಡಿದು, ಇದೇ ಚಕ್ರವಾಕ' ಎಂದು ತೋರಿಸಿದರೂ, 'ಚಕ್ರ' ಎಂಬ ಹೆಸರಿನ ಔಚಿತ್ಯ ವಿಶೇಷವೇನು, ಆ ಪಕ್ಷಿಯಲ್ಲಿ? ಎಂಬ ಪ್ರಶ್ನೆ ಅನುತ್ತರವಾಗಿ ಉಳಿಯುತ್ತದೆ. ಈ 'ಚಕ್ರ'ಕ್ಕೆ 'ರಥಾಂಗ' ಪಕ್ಷಿ ಎಂಬ ಇನ್ನೊಂದು ಹೆಸರು, ಸಂಸ್ಕೃತ ರಸಸಾಹಿತ್ಯದಲ್ಲಿ ಪ್ರಚಲಿತವಾಗುತ್ತದೆ! ದೇಹದ ಭಾಗ ಅಂಗವಾದರೆ ವಿಶಿಷ್ಟ ಅಂಗದಿಂದ ಆ ಇಡಿಯದಕ್ಕೆ ಹೆಸರು ಬರುವ ವಿಶೇಷ ಪ್ರಕಾರವನ್ನು ಇಲ್ಲಿ ಗುರುತಿಸಬಹುದು. ನಿತಂಬಿನೀ ಎಂದಂತೆ. ಆದರೆ 'ಚಕ್ರ' ಎಂಬುದು ದೇಹರಥದ ಯಾವ ಅಂಗ-ಅವಯವ? 'ಚಕ್ರ: ಎಂದರೇ ರಥವಲ್ಲ. ರಥವೇ ಅಂಗವಾಗಿ ಇರುವ ಪಕ್ಷಿ ರಥಾಂಗ ಸರಿ ಆದರೆ ಚಕ್ರ ಎಂದರೇನು? ಈ 'ಚಕ್ರ' ಸಂಕೇತ ತುಂಬ ಸಂಮೋಹಕವೇ ಸರಿ : ಮೋಹನಾಂಗ : ಮುರಲೀಧರ ಶಾರ್ಙ್ಗಪಾಣಿ. ಈತನೇ 'ಚಕ್ರ'ಧಾರಿ-ಸು-ದರ್ಶನ-ಚಕ್ರಧಾರಿಯೂ ಎಂಬ ತುಲನೆಯಲ್ಲಿ ಈ ದಿವ್ಯಚಕ್ರದ ಗುಹ್ಯಾರ್ಥವು ಬಯಲಿಗೆ ಬರುತ್ತದೆ. 'ರಥ'ದ ಹೊರಗೆ ಇಳಿಯದೆ ಅದರೊಳಗೇ (: ರೋದಸೀ) ಆಸೀನನಾಗಿ ನರನ ತೇರಿನ ಪ್ರೇರಕಶಕ್ತಿಯಾದ ಈ ದಿವ್ಯಚಕ್ರದ ಪುರುಷನು ಯಾರು? ಶ್ರೀಮದ್ ಭಗವದ್ಗೀತೆಯಲ್ಲೆ ಇದರ ಉತ್ತರವು ಉಂಟು-ಪುರುಷೋತ್ತಮ ಯೋಗದಲ್ಲಿ! ಊರ್ಧ್ವಮೂಲ ವೃಕ್ಷ'ವೇ ಈ ಉತ್ತಮ ಪುರುಷನು ಎಂದು ಗೀತೆಯಲ್ಲೆ ಹೇಳಿಲ್ಲವೆ? ಎಂದರೆ ಈ ವೃಕ್ಷ, ಚಕ್ರಯುಕ್ತವಿದೆ ನಿಜವೆ?

ಮಿಥುನವಾಗಿರಬೇಕಾದ ಪಕ್ಷಿ; ಚಕ್ರ; ಈ ಜೋಡಿ ಒಂದನ್ನೊಂದು ಆಗಲುತ್ತಲೆ, ಅಳಲು ಒತ್ತರಿಸುವುದೂ ಒರಲುವುದೂ ನೈಸರ್ಗಿಕ. ಊರ್ವಶೀ ಚಕ್ರವನ್ನಗಲಬೇಕಾದ ರಥಾಂಗನಿಗೆ ಆತನ ಒರಲುವಿಕೆಯಿಂದಲೇ 'ಪುರೂ-ರವ' ಎಂಬ ಹೆಸರು ರೂಢವಾದಂತೆ ಈ ಪವಾಡ ಕಥೆಯ ರಚನೆಯಿರುವುದಂತೂ ನಿಶ್ಚಿತ. 'ಚಕ್ರ'

ಇವು ಹಗಲಿನಲ್ಲಿ ಕೂಡಿ ಇರುವುವು! ಇರುಳಿನಲ್ಲಿ ವಿರಹ ವ್ಯಥೆಯಿಂದ ಬಳಲುವುವು ಎಂಬುದು ಕವಿ 'ಸಮಯ'. ಇವುಗಳಿಗೆ ರಾತ್ರಿಯ ಮಾನವರ ಹಗಲು! ಮಾನವರ ಇರುಳು ಈ ಚಕ್ರವಾಕಿಗಳ ಹಗಲು ಈ ಮಿಥುನ ಯೋಗದಲ್ಲಿ!

ಅಶ್ವಿನಿ ದೈವತದ ವರ್ಣನೆಯಲ್ಲಿ ಅವರಿಬ್ಬರನ್ನೂ 'ಚಕ್ರವಾಕೇವ' ಎಂದುದಾಗಿದೆ.[1] ಅಶ್ವ, ಹೋರಿ ಇವು ಈ ಅಶ್ವಿಗಳ ತೇರಿಗೆ ಹೂಡಲಾಗುವ ಪ್ರಾಣಿಗಳು ಗರ್ಭಾಧಾನ ಮಂತ್ರದಲ್ಲಿ ವಿಷ್ಣು, ಸರಸ್ವತಿ, ತ್ವಷ್ಟಾದಿಗಳೊಡನೆ 'ಪುರುಷರ' (ಪದ್ಮ) ಮಾಲಾಧಾರಿ ಅಶ್ವಿಗಳನ್ನು ಆಮಂತ್ರಿಸಲಾಗುತ್ತದೆ. ಈ ದೈವತದ 'ಅಶ್ವಿನ್' ಹೆಸರು ಅರ್ಥಪೂರ್ಣವಿದೆ. ಅಶ್ವ : ವಾಜಿ : ವಾಜ : ಶಕ್ತಿದಾಯಕ ವೀರ್ಯವರ್ಧಕ ಪೇಯ ಅಶ್ವಕ್ಕೆ 'ಸೈಂಧವ' ಸಿಂಧೂ : ಆಪ-ರಸದ ಪ್ರತೀಕ. 'ಸಮುದ್ರಯೋನಿಃ ಅಶ್ವಃ'! ಎಂದರೆ ಅಶ್ವಿ-ದ್ವಯ 'ಅಪಾಂ-ನಪ್ತ' ದೈವತದ ಸಾಲಿನ ಸಂಯುಕ್ತ ಶಕ್ತಿಯಾಗಿರುವ ಸೂಚನೆ ಈ ಜೋಡು ದೈವತ ನಾಮದಲ್ಲಿ ಹುದುಗಿದೆ. ಈ ಹಿನ್ನೆಲೆಯಲ್ಲಿ ಅಶ್ವಿದ್ವಯರ ಉಪ-ಮಾನವಾದ ಚಕ್ರಪಕ್ಷಿಯೂ ಪರ್ಯಾಯದಿಂದ 'ಅಪಾಂ-ನಪ್ತ' ದೈವತದ ಪ್ರತಿಮೆಯೇ ಸರಿ. ತ್ರಿ-ಚಕ್ರರಥಿ ಎಂದರೆ ಅಶ್ವಿಯೆ![2] ಇದರ ರಥದಿಂದ ಮಧು-ಸ್ರವಿಸುತ್ತಿರುತ್ತದೆ! ಇವರ ಕುದುರೆಯ 'ಪದ' (ಕಾಲ ಅಡಿ), ನೂರಾರು ಕೊಡ ಮಧು-ರಸ ಸುರಿಯುತ್ತಿದೆ! ತ್ರಿ ಚಕ್ರರಥಿ : ಈ ತೇರಿನ ಅಶ್ವದ ಕೊಳಗ ಮಧು ಸ್ರವಿಸುತ್ತದೆ. ವರ್ಷಯಿತೃ : ವೃಷಭ ಹೂಡಿದೆ. ಅಶ್ವನ್ ಪುಷ್ಕರಧಾರಿ; ಮಧುಯುಕ್ತರು ಇವೆಲ್ಲವೂ, ಋಗ್ವೇದದಲ್ಲಿ, ಅರ್ಥಪೂರ್ಣ ಪ್ರತಿಮಾಶಿಲ್ಪವಿರುವುದನ್ನು ಮನಗಾಣಿಸಿ ಕೊಡಬಲ್ಲ ಸಂಕೇತಗಳಾಗಿವೆ.

ತ್ರಿ ಚಕ್ರ ರಥ : ದೇಹ; 'ಋ' (ಹೋಗು, ಗಮನಿಸು) ಆಖ್ಯಾತ ಸಾಧಿತವಾದ ರಥ ಸಂಕೇತದ ಅಂತರಾರ್ಥವು, ಕಟ್ಟಿಗೆಯ ಭೌತಸ್ವರೂಪದ ತೇರು ಎಂಬರ್ಥದಿಂದ ತೊಡಗಿ, ದೇಹವೆ ರಥ, ಮನವೇ ರಥ, ಮಂತ್ರ=ವೇದವೇ ರಥ ಆಗುವ ವರೆಗೆ ಇದು ಬದಲಾಗುತ್ತ ಬಂದುದನ್ನು, ವಿವಿಧ ಪ್ರಯೋಗಗಳಿಂದ ನಿರ್ಧರಿಸಿಕೊಳ್ಳಲು ಶಕ್ಯವಿದೆ.. ಕಠೋಪನಿಷತ್ತಿನ 'ಶರೀರಂ ರಥಂ' ಎಂಬ ರೂಪಕವು ಋಗ್ವೇದದಷ್ಟು ಪುರಾತನವಿದೆ. ಆದರೆ, ಉಪ-ನಿಷತ್ತುಗಳ ಸಂಕಲನದಲ್ಲಿ ವ್ಯಕ್ತವಾಗುತ್ತಿರುವ ದಕ್ಷತೆ ಅಭ್ಯಸನೀಯವಿದೆ. ತತ್ಪೂರ್ವದ ಪ್ರತಿಮಾ : ಸಂಕೇತಗಳು ಇಲ್ಲಿ ಹೆಚ್ಚು ನುಣುಪಾಗುತ್ತವೆ. ಮೂಲಾರ್ಥವನ್ನು ಅಡಗಿಸಿಡುವ ಪ್ರಯತ್ನಕಾಣುತ್ತದೆ. ರಥದ ತ್ರಿಚಕ್ರಗಳು ಉಪನಿಷತ್ತುಗಳಲ್ಲಿ ಕಾಣೆಯಾಗುವ ಕಾರಣವೇನು?

ರಥವು ಮೂರು ಚಕ್ರವುಳ್ಳದು, ಆದಕಾರಣ ಇದು ತ್ರಿಕೋಣಾಕೃತಿಯದೇ ಆಗಿರಬೇಕಾಗುತ್ತದೆ. ಈ ಮೂರು ಗಾಲಿ (=ಕಣ್ಣಿನ) ರಥವು, ಅಚ್ಚು ಸೇರಿರುವ ಗಾಲಿಯ ನಿರ್ದೇಶವು ಅನುಚಿತವೆಂದು ಕಠೋಪನಿಷತ್ತಿನಲ್ಲಿ 'ಚಕ್ರ'ದ ಉಲ್ಲೇಖವಿಲ್ಲದೆ 'ರಥ' ಕಾಣಿಸಿಕೊಳ್ಳುತ್ತದೆ. ಋಗ್ವೇದಕ್ಕಿಂತ ಈ ರೂಪಕವು ಹೆಚ್ಚು ಸೊಬಗಿನದು, ಮೇಲಣ ಪಾತಳಿಯದೂ ಆಗಿದೆ. ಇಂದ್ರಿಯಗಳೆಂಬ ಕುದುರೆ ಹೂಡಿದ ತೇರಿಗೆ ಮನಸ್ಸೇ ಕಡಿವಾಣ. ಆತ್ಮನು ರಥಿಕನಾಗುತ್ತಾನೆ. ಆದರೆ 'ಆತ್ಮನ್' ಎಂಬ ವಿಚಾರಧಾರಣೆಗೆ ಪೂರ್ವಭಾವಿಯಾಗಿ 'ಪುರುಷ' ಸಂಕೇತವು ಆ ಸ್ಥಳದಲ್ಲಿದೆ. ರಥವೂ 'ಪುರ'ವಾಗಿ ಬಳಿಕ ಗುಹೆ: ಗರ್ಭ-ಗುಡಿ. ದೇಗುಲ, ಬಳಿಕ ಮಂದಿರವಾಗಿ ಮಾರ್ಪಟ್ಟಿರುವಂತೆ ಕಾಣುತ್ತದೆ. ಮೊದಲಲ್ಲಿ ಚಕ್ರಯೋಗದ ವಿವರಣೆ ಅದೃಶ್ಯವಿದ್ದರೂ ಮೂರು ಚಕ್ರಗಳ ಬದಲು ಆರು-ಚಕ್ರ, ಷಟ್-ಸ್ಥಲ ಈ ಪರಿಭಾಷೆ ಶಿಷ್ಟಮಾನ್ಯವಾಗುತ್ತದೆ.* ಆದರೆ, ಈ ಷಟ್-ಚಕ್ರಯೋಗವು ಋಗ್ವೇದ ಕಾಲೀನ ತ್ರಿಚಕ್ರಯೋಗಕ್ಕಿಂತ ತೀರ ಭಿನ್ನ ಎನ್ನಲಿಕ್ಕೆ ಆಗುವದಿಲ್ಲ. ಆದರು, ತ್ರಿಚಕ್ರಯೋಗದ ಅಥವಾ ಮೂಲಚಕ್ರ-(ವಾಕ)-ಯೋಗದ ಮೂಲಕ ಲಭಿಸುವ ಅಂತಿಮ ಪರಿಣಾಮ ಸಿದ್ಧಿಗಾಗಿಯೆ, ಬದಲಾದ ಸಮಯಾಚಾರಕ್ಕೆ ಸರಿಹೋಗುವಂತೆ ಮೊದಲಿನ ಸಾಧನ ಪ್ರಕಾರವು ಷಟ್-ಚಕ್ರಯೋಗವಾಗಿ ಮಾರ್ಪಟ್ಟಿರುವುದಾಗಿ ಕಾಣುತ್ತಿದೆ.

---

* ಕುಂಡಲೀನೀಯೋಗದ ಬಗೆಗೆ ತಿಳಿಯುವವರು 'ಷಟ್-ಚಕ್ರ ನಿರೂಪಣಂ' ಎಂಬ ಸಂಸ್ಕೃತ ಗ್ರಂಥವನ್ನು ನೋಡಬಹುದು. ಈ ವಿಷಯವನ್ನು : 'The Serpent Power' ಎಂಬ ಮಹಾಗ್ರಂಥದಲ್ಲಿ ಸರ್ ಜಾನ್ ಉಡ್ರೋಫ್ ಅಳವಡಿಸಿಕೊಂಡಿದ್ದಾರೆ. ಆಸಕ್ತರು ಈ ಗ್ರಂಥವನ್ನು ನೋಡಬಹುದು. (ಸಂ)

'ಅದಿತಿ' ಸಂಪ್ರದಾಯವು ತಿರಸ್ಕೃತವಾಗುವ ಮುಂಚಿನ ಷಟ್ (: ದ್ವಿ=ತ್ರಿ) ಚಕ್ರಯೋಗವು, ಈಗಿನಂತೆ ಏಕಾಂಗ ಸಾಧನ ಕ್ರಮವಾಗಿದ್ದಿಲ್ಲ.

'ತ್ರಿಚಕ್ರಂ ರಥಂ: ಈ ಸಾಧನಕ್ಕೆ ಅದರ ಆಕೃತಿ ವಿಶೇಷದಿಂದ ಹೆಸರು ಬಂದಿದೆ. ಅದೇ ಮೇರೆಗೆ ದ್ರೋಣಿ ಅಥವಾ ಡೋಣಿ. ನೌಕಾ, ಉಡುಪ=ತಾರೆ, ಪಾತ್ರ ಇವೂ, ನಾಮರೂಪಭೇದ ತೋರಿದರೂ ಆ ಸಿದ್ಧಿಯ ಸಾಧನಗಳೇ ಸರಿ. ಅದಿತಿಯನ್ನು ನೌಕೆಗೆ ಹೋಲಿಸಿದ್ದುಂಟು[೩] "ಅದಿತಿಂ ದೈವೀಂ ನಾವಂ.....ಆರು ಹೇಮ ಸ್ವಸ್ತಯೇ" ಸ್ವಸ್ತಯೇ (: ಸು ಅಸ್ತಿ (ಕ) : ಸ್ವಸ್ತಿ(ಕ) :) ಐಹಿಕ ಕಲ್ಯಾಣ ಮಂಗಳಕ್ಕಾಗಿ 'ಅದಿತಿ' ರೂಪೀ ದಿವ್ಯ ನೌಕೆಯನ್ನು ಆರೋಹಣ ಮಾಡೋಣ ಈ ನೌಕೆ, ಸುಪ್ರಣೇತಂ [-(ನೀ>ನಯ)] ಒಳ್ಳೇ ರೀತಿಯಿಂದ ನಮ್ಮ ಪ್ರಗತಿಗೆ ಕಾರಣವಾಗುವಂತಹುದು ಆಗಿದೆ ಎಂಬ ವರ್ಣನೆಯೂ ಉಂಟು. ಈ ಮೊದಲು ಸೂಚಿಸಿರುವಂತೆ ಇಲ್ಲಿ ಈ ದೇವಿಯ ಎರಡು ಪಾತಳಿಯ ಮೇಲಣ ಅಸ್ತಿತ್ವವನ್ನು ಅಂದಿನ ಆ ಶ್ರದ್ಧೆಯನ್ನು ನೆನಪಿಗೆ ತಂದುಕೊಳುವುದು ಅವಶ್ಯವಿದೆ. ದಿವ್ಯಲೋಕದ ಆದಿಶಕ್ತಿ : ಲೋಕಮಾತೆ ಅದಿತಿ. ಅಖಂಡಿತೆ ವಿಶ್ವರೂಪಿಯಾಗಿದ್ದಾಳೆ. ಭೂಲೋಕದಲ್ಲಿ ಈ ದೇವಿಯು ಎಲ್ಲಮ್ಮ : ಲೋಕಜನನಿ ತನ್ನ ಏಕಾಂತಿಕ ಭಜಕರ ಮೈಯಲ್ಲಿ (ಗಾಳಿಯಾಗಿ) ಸೇರಿ ಇನ್ನುಳಿದ ಸಾಮಾನ್ಯ ಸಾಧಕರ ಉದ್ಧಾರಕ್ಕಾಗಿ ಆಗಾಗ ಶುಕ್ರವಾರ, ಮಂಗಳವಾರ, ಹುಣ್ಣಿಮೆ ಅಮಾವಾಸ್ಯಾದಿ 'ಪರ್ವ'ಗಳಲ್ಲಿ ಕಾಣಿಸಿಕೊಳ್ಳುತ್ತಿರುತ್ತಾಳೆ. ಹೀಗೆ ಮೈಯಲ್ಲಿ ಆವೇಶವಾದ ಕುಮಾರಿ : ಯೋಗಿನಿಯನ್ನು ಮಧ್ಯಮಾ : ವಾಕ್ ಎಂದು ಬಗೆಯಲಾಗುತ್ತಿತ್ತು. ಮಾನವರು ತಮ್ಮ ಸ್ವಾಸ್ಥ್ಯಕ್ಕಾಗಿ (: ಸ್ವಸ್ತಯೇ). ಈ ಬಗೆಯ 'ನೌಕೆ'ಯನ್ನು ಏರುವ ವಾಡಿಕೆ ಋಗ್ವೇದ ಕಾಲದಲ್ಲಿ ಇತ್ತು. 'ಕುಲ' 'ಅಕುಲ' 'ವೀರ' ಈ ಶಾಕ್ತ ಪರಿಭಾಷೆಯ ಉಗಮ ಋಗ್ವೇದದಲ್ಲಿದೆ. ತ್ವಷ್ಟಾರನು ಮಹಾಕುಲನು[೪] ಇಲ್ಲಿಯೆ ಉಲ್ಲೇಖವಿರುವ ಚಮಸ : ಪಾತ್ರವು ಶ್ಲೇಷಾರ್ಥಯುಕ್ತವಾಗಿದೆ. ಅರ್ವಾಕ್ ಜಲ, ಆಕಾಶ, ಚಮಸ, ಸರ್ಪ : ಋಕ್ಷರೂಪ ಸಪ್ತರ್ಷಿಗಳು ಈ 'ಬಿಲ'ದಲ್ಲಿ ಸೇರುವ ಹೊಂಚಿನಲ್ಲಿ ದಂಡೆಯ ಮೇಲೆ ಕುಳಿತಿದ್ದಾರೆ.[೫] ಈ ಕ್ರಿಯೆಯೆ, 'ವಿಷಸ್ಯ ಪಾತ್ರೇ' ಉಪಮಂಥನ ನಡೆಸಿರುವ ಕೇಶೀಪುರುಷನ ವರ್ಣನೆಯಾಗಿದೆ.

'ಚಮಸ'=ಚಂದ್ರ ಎಂದರೆ ಚಂದ್ರಾ : ಅದಿತಿ, ಚಂದಲಾ ಪರಮೇಶ್ವರಿ. ದೇವತೆಗಳ ಭೋಗ : ಪಾನ ಪಾತ್ರವಿದು. ಇದರಿಂದ ಈ ಪಾತ್ರ : ಚಮಸ ಒಡೆದು ೩ ತುಂಡು (ಋತು) ಆಗುತ್ತದೆಂಬ ವರ್ಣನೆ ಇರುವುದಾಗಿ ಅಲ್ಲಿ ಧ್ವನ್ಯರ್ಥವಿದೆ. ಮರುತರು' ವೀರಾ ಆಗಿದ್ದಾರೆ. ಋಗ್ವೇದ 'ಸಮಯ'ದಂತೆ ವೀರ್ಯದಾನ ಮಾಡುವವರು : 'ಅದಿತಿ' ಪಾತ್ರ ರುದ್ರ, ವಿಷ್ಣು ಇವರು. ತ್ವಷ್ಟಾರನು ಮಹಾಕುಲರು, 'ವತ್ಸ'ನು 'ಸದ್ಯೋಜಾತನು' (ಆಗಲೇ ಹುಟ್ಟಿದವನು-ಗರ್ಭದ ಆಧಾನದೊಡನೆ). ಇದಕ್ಕೆ ಆ ಕತೆಯೆ ಸಾಕ್ಷಿ. 'ದ್ವೈಪಾಯನ' ಹೆಸರಿನಿಂದ ಇನ್ನೂ ಒಂದು ಗುಹ್ಯಾತ್ ಗುಹ್ಯತಮ ಸಂಕೇತಕ್ಕೆ ಇಲ್ಲಿ ಸ್ಪಷ್ಟೀಕರಣವು ದೊರೆಯುತ್ತದೆ. 'ತ್ರಿ-ಚಕ್ರ' ರಥ ಹಾಗೂ ನೌಕೆಯಂತೆ ಈ ಸಂಸಾರ ಸಾಗರಸ್ಥ ಗತಿಮಂತ 'ದ್ವೀಪ' (: ನಡುಗಡ್ಡೆ), ಸುತ್ತಲೂ ಹುಲ್ಲು (ಶಷ್ಪ) ಎಂಬ ಸಾಂಕೇತಿಕ ಪ್ರತಿಮೆಯೂ ಒಂದು. ಆ ಕಾಲಕ್ಕೆ ಪ್ರಚಲಿತವಿರಲಿಕ್ಕೇ ಬೇಕು. ಬೃಹದಾರಣ್ಯಕದ ಈ ವರ್ಣನೆ ನೋಡಿ : 'ಪುರಃ ದ್ವಿಪದಃ='ಪುರಃ....ಚತುಷ್ಪಃ'; 'ಪುರಃ ಪಕ್ಷೀ'.[೬] ಋಗ್ವೇದದಲ್ಲಿರುವ 'ಪುರ' ಗುಹ್ಯ ಸಂಕೇತದ ಕೀಲಿಯ 'ಕೈ', ಉಪನಿಷತ್ತಿನಲ್ಲಿಟ್ಟುದಾಗಿದೆ.

ಋಗ್ವೇದದಲ್ಲಿ 'ಪುರ', ನಡೆದಾಡುವುದಾಗಿ ಕೆಲವೊಮ್ಮೆ ವರ್ಣನೆಯುಂಟು. ನಡೆದಾಡುವ ಪುರದ ಈ ಉಲ್ಲೇಖದಂತೆ ದ್ವೈಪಾಯನನ ಜನ್ಮಸ್ಥಾನವಾದ 'ದ್ವೀಪ'ವು ಗತಿಮಂತವಿತ್ತು. ಮಹಾಭಾರತದ ಈ ನೌಕೆ, ದ್ವೀಪದ ಎರಡೂ ರೂಪ ಸ್ಪಷ್ಟವೆ ಇದೆ. ವೇದದಲ್ಲಿ "ಹೇ ಇಂದ್ರನೇ ಶುಷ್ಣನೆಂಬ ಅಹಿಯ 'ಚರಿಷ್ಣ್ವಂ ಪುರಂ' (ನಡೆದು ಮರೆ) ಸಂಪಿಣಕ್; (ಈ ಚೂರು ಮಾಡಿದೆ) ಎಂಬ ಉಲ್ಲೇಖವೂ ಮೌನಿಯಲ್ಲ![೭] 'ಪುರ' ಸಂಕೇತವು, ಎಲ್ಲೆಲ್ಲೂ ಇಂದ್ರಶತ್ರು ವೃತ್ರನ ಅಹಿವರ್ಗದ ನಿವಾಸಗಳು, ಎಂಬ ಅರ್ಥದಲ್ಲಿ ದೊರೆವಲ್ಲಿಯೆ, ಈ ಮಾತು-ತದಂತರ್ಗತದ ಅರ್ಥ ಇದು. ಮೂಲ ಸಂಸ್ಕೃತ ಭಾಷಾವರ್ಗದ ಶಬ್ದಪ್ರತಿಮೆಯು ಇರಲಾರವು,

ಎಂಬ ಸೂಚನೆಯು ಉಂಟೇ ಉಂಟು. ಸಂಶೋಧಕರು ಇದನ್ನು ಎಂದೋ ಸಂದೇಹಿಸಿದ್ದು ಉಂಟು. ಈಗ ಟಿ. ಬರೊ ಇವರು. ಈ ಸಂಕೇತವು ಕಂದಮಿಳ ಭಾಷಾವರ್ಗದ್ದೆಂದು ನಿರ್ಣಯಿಸಿದ್ದಾರೆ.[೮] ಈ ಹಿನ್ನೆಲೆಯಲ್ಲಿ 'ಪುರಿ ಶೇತೇ : ಪುರುಷಃ : ಸರ್ಪ, ಯಾರು ಆಯ್ತು? ಈ ಪುರ-ಸ್ಥ ಅಹಿ : ಶುಷ್ಣ, ಕೃಷ್ಣ ವೃತ್ರರೂಪನು : 'ತತ್ : ಏಕಂ' ಸ್ವರೂಪದ 'ಸತ್ಯ'ನು ಸತ್ವಾನನೇ ಆಗಿರಬೇಡವೆ?

ಈ ನಾಗ-ವಾಸಸ್ ಸಮೀಕ್ಷೆಯಲ್ಲಿ, ಈ ವೈಚಾರಿಕ ಭೂಮಿಕೆಗೆ ಶುಷನೆಂಬ ನಾಗನ ನಡೆದಾಡುವ 'ಪುರ': ನಿವಾಸಿ ಎಂಬ ಮಾತಿನ ಬೆಂಬಲ ಋಗ್ವೇದದಲ್ಲಿಯೆ ದೊರೆಯುತ್ತಿದೆ. ಇದರ ಮೌಲಿಕತೆ ಅನನ್ಯ ಸಾಧಾರಣವಿದೆ. ಇಷ್ಟೆ ಅಲ್ಲ; ಈ ಬಗೆಯ ಸಂಕೇತಗಳು, ಎರಡು ಭಿನ್ನ ಸಾಂಸ್ಕೃತಿಕ ಸಂಗಮದಲ್ಲಿ ಮೈದಾಳುವ ಶಬ್ದ ಪ್ರತಿಮೆಗಳೆ, ಎಂದು ತಜ್ಞರು ನಿರ್ಣಯಿಸಿದ್ದೂ ಉಂಟು. ಋಗ್ವೇದಕಾಲೀನ ನಾಗಾರಾಧಕರ ವಿವಿಧ ಶಾಖೆಗಳು ಒಂದೆಡೆಗೆ. ಸೌರಸಂಪ್ರದಾಯದ ಅಗ್ನ್ಯಾರಾಧಕರೊಳಗಿನ ವಿವಿಧ ಶಾಖೆಗಳು ಇನ್ನೊಂದು ಕಡೆಗೆ. ಈ ಬಗೆಯಲ್ಲಿ ಪ್ರಾರಂಭವಾದ ಸಾಂಸ್ಕೃತಿಕ ಸಂಘರ್ಷವು ಕೊನೆಗೆ ನಾಗಾರಾಧಕರ ವಿಜಯದಲ್ಲಿ ಪರಿಣಮಿಸಿದ್ದಾಗಿ ಋಗ್ವೇದದ ತರುವಾಯದ ಸಾಹಿತ್ಯ ಹಾಗೂ ಸಂಸ್ಕೃತಿಯ ಆ-ಕೃತಿ ಸ್ವರೂಪಗಳಿಂದಲೂ ದೃಢಪಡುತ್ತದೆ. ಎಲ್ಲಕ್ಕೂ ಮೊದಲು ಸೌರಪಂಥೀಯ ವರುಣದೈವತದ ಉಪಾಸಕರು ಆಪ: ರಸಪಂಥೀಯರಾಗುತ್ತ ವರುಣನೂ ಕೊನೆಗೆ ಅಬ್ಧಿಪನು : ಶೃಂಗಿ : 'ವನಸ್ಪಸ್ತೂಪ' ವೃಕ್ಷ : ಖಂಬದ ಆಕೃತಿ ಪುರುಷನು ಆಗುವುದು ಬಯಲಿಗೆ ಬರುತ್ತಿದೆ. ವರುಣನು ಮೋಹಿಸಿದ್ದು, ಅಪ್‌ಸರೆ ಉರ್ವಶಿಯನ್ನು, ನಾರ : ನಾಗನ ಮಗಳೆಂಬ ನೀರೆಯನ್ನು ವರುಣ ಪುತ್ರನೆಂಬ ವಸಿಷ್ಠನು. ಆತನ ಪೀಳಿಗೆಯ ವ್ಯಾಸನು, ನಾರಣ-ವಾಸದೇವ ಕೃಷ್ಣ-ವಿಷ್ಣು ದೈವತ ಸಂಪ್ರದಾಯದ ಪ್ರಣೇತಾರರು! ಈ ಸುಸಂಬದ್ಧ ಅರ್ಥದ ಹೆಣಿಕೆ (Fabric of meaning) ಅರ್ಥ-ವಿಹೀನವೊ? ಪುರ<ಪುರೈ ಈ ಸಂಕೇತದ ಸಂದರ್ಭದಿಂದ ಸ್ಪಷ್ಟೀಕರಣ ಪಡೆಯುತ್ತಿರುವ, ಇನ್ನೊಂದು ಮೂಲಭೂತ ಪ್ರಮಾಣಸದೃಶ ಶಬ್ದ-ಪ್ರತಿಮೆಯತ್ತ ಪ್ರಾಜ್ಞರ ಚಿತ್ತವನ್ನೆಳೆಯುವುದು ಅವಶ್ಯವೆನಿಸಿದೆ. ಭಾರತೀಯ ಸಾಂಸ್ಕೃತಿಕ ಸಂಘರ್ಷ-ಸಂಮಿಶ್ರಮಣದ ವಿಚಾರವು ಇದು 'ಕೂಡಲ-ಸಂಗಮ' ಸಂಸ್ಕೃತಿ ಎಂಬ ಮಾತು ಎಂದೊ ಗಮನಕ್ಕೆ ಬಂದಿದ್ದರೂ ಪುರೈ-ಪರೆ ಎಂಬುದಕ್ಕೆ ಕಂದಮಿಳ ಭಾಷಿಕ ಅಂತಸ್ಥ ಪ್ರಮಾಣವೇ ದೊರೆಯುತ್ತಿರುವುದರಿಂದ ವೇದಕಾಲೀನ ಸಾಂಸ್ಕೃತಿಕ ಸ್ಥಿತ್ಯಂತರವನ್ನು ನಿಶ್ಚಿತ ಸ್ವರೂಪದಲ್ಲಿ ಗ್ರಹಿಸಿಕೊಳ್ಳಲು ಒಂದು ಅಮೋಘವಾದ ಪ್ರಮಾಣವು ಬೆಳಕಿಗೆ ಬಂದಂತಾಗಿದೆ. ಟಿ. ಬರೊ ಅವರು ಪುರೈ (ತಮಿಳು) ಮತ್ತು ಪರೆ (ಕಂನುಡಿ) ಇವುಗಳೊಳಗಿನ ಆಂತರಿಕ ಸಂಬಂಧವನ್ನು ಅಲ್ಲಿಯೆ ಸೂಚಿಸುವುದೂ ಒಂದು ಮಹತ್ವದ ಸಂಗತಿ ಆಗಿದೆ.

ಈ 'ಪುರುಷ' ಎಂಬವನು ಅ-ಮರ; ಹೆರೆ ಬಿಟ್ಟ ಹಾವು ನಿತ್ಯ ತರುಣ; ನಾಗಾರಾಧಕರ ಶ್ರದ್ಧಾಸ್ಥಾನವಾದ ಅಮರತ್ವದ ವಿಚಾರವು ಇಲ್ಲಿಯೆ ಅಂಕುರಿಸಿದ್ದಾಗಿ ಕಾಣುತ್ತಿದೆ. 'ವಾಸಾಂಸಿ ಜೀರ್ಣಾನಿ' ಪರಿತ್ಯಜಿಸಲಾಗುವುದೆಂಬ ಗೀತೆಯ ಈ ರೂಪಕ್ಕೆ ಹಾವಿನ ಹೆರೆಯ ಮೂಲಾಧಾರವಾಗಿರುವಲ್ಲಿ ಸಂದೇಹವಿಲ್ಲ. ಇನ್ನೂ ವಲ್ಕಲ ಧರಿಸಿ ಅರ್ಧ ಮೈ ಮುಚ್ಚಿಕೊಳ್ಳಲಿಕ್ಕೂ ತೊಂದರೆ ಇದ್ದ ಆ ಯುಗದಲ್ಲಿ, ಜೀರ್ಣವಸನ ಪರಿತ್ಯಜಿಸುವ ಈ ರೂಪಕ್ಕೆ, ಅಂದಿನ ಸಾಮಾಜಿಕ ಪರಿಸರದಲ್ಲಿ, ಹಾವಿನ ಹೊರತು, ಬೇರೆ ಏನೊಂದೂ ಮಾನದಂಡ ದೊರೆಯಲು ಶಕ್ಯವಿಲ್ಲ. ಆಪ : ರಸ ಪಂಥೀಯ ಧಾರ್ಮಿಕ ಹಾಗೂ ತಾತ್ವಿಕ ಪ್ರತಿಮಾ : ಸಂಕೇತಗಳಲ್ಲಿ 'ನಾಗ' ಸಂಸ್ಕೃತಿಯ ಪರಿಸರವೆ ಅಚ್ಚೊತ್ತಿದಂತೆ ಒಡಮೂಡಿ ನಿಂತಿರದಿದ್ದರೇ ಸೋಜಿಗ![೯]

ಪುರೀ ಶೇತೇ ಇತಿ ಪುರುಷಃ : ಇದು ನಡೆದಾಡುವ 'ಪುರ'ವು=ದ್ವಿಪಾದ, ಚತುಷ್ಪಾದ ಬಿಲವು ಅಥವಾ ಹಾವಿನ ಹುತ್ತು. ಇದು ಅಹಿ : ಶುಷ್ಣನು ಇರುವ=ಅಹಿ-ವೃತ್ರಮಿತ್ರನ ಮಲಗುವ ಎಡೆ![೧೦] 'ಶುಷ್ಣ'ನು (ವೃತ್ರ) ಅರಿಯ ವರ್ಗದವನೇ. ಇವೆಲ್ಲವೂ ಅಮೂರ್ತವಾದ ಒಂದು ವಿಶಿಷ್ಟ ವಿಚಾರಕ್ಕೆ ಮೂರ್ತರೂಪ ಕೊಟ್ಟು ಸೃಜಿಸಲಾದ ಸಾಂಕೇತಿಕ ಪ್ರತಿಮೆ! ಸೂರ್ಯನನ್ನು ಆವರಿಸುವವನೆಂದು ವರ್ಣಿತ ಶುಷ್ಣನನ್ನು, ಇಂದ್ರನು ಎದುರಿಸುತ್ತಿದ್ದ ಹಾಗಿನ ವರ್ಣನೆಗಳಿವೆ. ಶುಷ್ಣನು ಅಂಡಜ ಪ್ರಾಣಿ ಎಂಬ ಹಾಗಿನ ಋಗ್ವೇದದ ವರ್ಣನೆಯಿಂದ ಇದನ್ನು ಹಾವು

ಎಂದು ಸೂಚಿಸಲಾಗಿದೆ.[೧೧] ಆದರೆ, 'ಅಹಿ' ಎಂದುದು ಇಷ್ಟೆ ಸಾಲದೆ ಈ ಶುಷ್ಣ ಸರ್ಪಕ್ಕೆ ಕೋಡು ಉಂಟಂತೆ! ಗ್ರೀಕ್-ಪವಾಡ ಕಥೆಯ ಸರ್ಪರೂಪ ಡೈಯೊನಿಸಸ್ 'ಪುರುಷ'ನಿಗೆ 'ಕೋಡೂ' Dionysus too was a horned serpent ಇತ್ತು! ಇದೇ ಮೇರೆಗೆ ಟಗರು, ಹೋತ (ಕುಂಟ!), ಕುದುರೆ ಮುಖ, ಹೋರಿ ಇತ್ಯಾದಿ ಆಕೃತಿಯ ಪ್ರತಿಮಾ ಸಂಕೇತಗಳಿಂದಲೂ ದೈಯೊನಿಸಸ್‌ನ ಉಲ್ಲೇಖಗಳಿವೆ. ಶುಷ್ಣನ 'ಶ್ವಸನ'ವನ್ನು ವರ್ಣಿಸಲಾಗಿದೆ. 'ಶುಷ್ಣ' ಎಂಬ ನಾಮ ಸಂಕೇತದಿಂದ ಇವನು ಶೋಷಕನು ಮೃತ್ಯುರೂಪನೆಂದು ಸೂಚಿಸಿದ್ದಾಗಿದೆ. ಋಗ್ವೇದದ ದೈವತಗಳ ಆಕೃತಿ : ಅರ್ಥಗ್ರಹಣದಲ್ಲಿ ಸಾಯಣರ ಜೊತೆಗೆ ಮ್ಯಾಕಡೊನೆಲ್ ಅವರು ಮಾಡಿರುವ ಪ್ರಯತ್ನವನ್ನು ಲೆಕ್ಕಕ್ಕೆ ಹಿಡಿಯದೆ, ಸಾಯಣರ ತರುವಾಯ ಅವರಿಗೆ ಮೊದಲು ವಂದಿಸದೆ ಈ ಕಾರ್ಯದಲ್ಲಿ ಮುಂದುವರಿಯಲು ಶಕ್ಯವಿಲ್ಲ. ಮೌನೇಯ ಕೇಶಿನ್ ಮತ್ತು 'ಪುರೀಶಯನ' ಪುರುಷನ 'ಗುಹ್ಯಾತ್ ಗುಹ್ಯತಮ' ಆ-ವಿಗಲಿತ ಸಂಬಂಧವು ಪ್ರತ್ಯಕ್ಷವಾಗಿ ಅವರ ಗಮನವನ್ನು ಸೆಳೆದಿಲ್ಲವಾದರು, ಇದನ್ನು ಸ್ಪಷ್ಟವಾಗಿ ಬೆಳಕಿನಲ್ಲೂ ತರಬಲ್ಲ ಪ್ರಮಾಣಗಳನ್ನು ಸಾಯಣ ಹಾಗೂ ಮ್ಯಾಕಡೊನೆಲ್ಲ ಅವರೇ ಒದಗಿಸಿಕೊಡುತ್ತಿರುವುದನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳದಿರಲಾರೆ. ಋಗ್ವೇದಸೂಕ್ತಗಳ ಸಂಕಲನಕಾರನ 'ಸಂಪಾದಕೀಯ ಧೂರ್ತಯೋಜನೆ'ಯಿಂದಾಗಿ, ಪುರೀಶಯನ ಮಾಡುವ ಶೃಂಗಿ ಅಹಿ : ಕೇಶಿ, ಪುರುಷ ಶೃಂಗಿ (ವಾತಾರಶನ ಋಷಿ : ವಿಭಾಂಡಕ ಪುತ್ರನಂತೆ); ಮತ್ತು (ವಿರಾಟ್) ಪುರಿಶಯನ ಮಾಡಿರುವ ಏಕಾಕ್ಷ ಏಕಪಾತ್ ಪುರುಷ ಇವರ ಸಾಂಕೇತಿಕ ಪ್ರತಿಮೆಗಳು ಒಂದಕ್ಕೊಂದು ಸಂ-ಬದ್ಧವಿರುವುದು ಗಮನಕ್ಕೆ ಬರದಂತೆ ದೂರದೂರ ಇರಿಸಲ್ಪಟ್ಟಿದ್ದರೂ ಈ ಸಾಂಕೇತಿಕ ಭೂಮಿಕೆಯಲ್ಲಿ ಅವುಗಳ ಅನ್ಯೋನ್ಯತೆಯು ಬಯಲಿಗೆ ಬರುತ್ತಿದೆ.

'ಸಹಸ್ರಶೀರ್ಷಃ ಪುರುಷಃ' ಇವನ ನಿಜಸ್ವರೂಪ ದರ್ಶನ ಮಾಡಿಸುವ ಮೂಲಭೂತ ಸಾಂಕೇತಿಕ ಪ್ರತಿಮೆ ಎಂದರೆ : ('ಸಹಸ್ರ') 'ಪಾತ್' > ಪಾದ : ('ತ್ರಿ-) ಪಾತ್' > ಪಾದೋऽಸ್ಯ-ಇಹ ಅಭವತ್ ಪುನಃ' ಇನ್ನುಳಿದ ಪ್ರತಿಮೆಗಳಲ್ಲಿ 'ಯಜ್ಞೇನ ಯಜ್ಞಂ ಅಯಜಂತ ದೇವಾಃ' ಈ 'ಯಜ್ಞ' ಮತ್ತು 'ದೇವಾಃ' ಈ ಸಾಂಕೇತಿಕ ಪ್ರತಿಮೆಗಳು ಮಹತ್ವದುವು. ಈ 'ಪುರುಷ' ಶಕ್ತಿಯ ಪ್ರಯೋಜನವು ಗಮನಕ್ಕೆ ಬರಲು, ಈ ಸಂಕೇತಗಳಲ್ಲಿ (ಯಜ್ಞಂ ಅಜಯಂತ) ಈ ದೇವಾಃ ಯಾರು? ಎಂಬುದನ್ನು ನಿಃಸಂದಿಗ್ಧ ರೀತಿಯಲ್ಲಿ ಹೇಳುತ್ತಿರುವ ಶ್ರೇಯಸ್ಸು ಮೆಕಡೊನೆಲ್ಲ ಅವರಿಗೆ ಸಲ್ಲಬೇಕು. ನನ್ನ ಪಾಡಿಗೆ ಸಾಯಣರೂ ಮರುತಾದಿಗಳ ಸಂದರ್ಭದಲ್ಲಿ ಮೆಕಡೊನೆಲ್ಲ ಅವರ ಹಾಗೆಯೆ ಅರ್ಥ ಹೇಳುತ್ತಾರೆ. ಮರುತರನ್ನು ನರಾಃ, ಮರ್ತ್ಯಃ ಎಂಬೀ ಬಗೆಯಲ್ಲಿ ವರ್ಣಿಸುವಾಗ ಅವರು ಮಾನವರ ಹಾಗೆ ಎನಿಸುವುದನ್ನು ಸಾಯಣರು ಸೂಚಿಸಿದ್ದಾರೆ. ಈ ದೇವಾಃ ಎಂದರೆ ಮಾನವರು!

> The true gods of Veda are glorified human-beings inspired with human motives and passions born like men born but immortal[೧೨]

ಈ ಕಾರಣದಿಂದ 'ಅಮರ' 'ಸನಾತನ'ನಾದ ಈ ಪುರುಷನು ಯಾರು? 'ಪುರುಷ' ಈ ಪ್ರತಿಮೆ ವೇದ-ಸಂಪ್ರದಾಯದಲ್ಲಿ ಇಂದಿಗೂ ಅನನ್ಯ ಸಾಧಾರಣ ಮಹತ್ವದ್ದಾಗಿದೆ. ಬ್ರಹ್ಮ ವಿಷ್ಣು, ಹಾಗೂ ರುದ್ರ ಈ ದೇವತಾ-ತ್ರಯ ಶಕ್ತಿಯು ಈ ಒಬ್ಬ 'ಪುರುಷ'ನಲ್ಲಿದೆ : ಎಂದರೆ ಭಾರತೀಯ ಪ್ರತಿಯೊಂದು ಧರ್ಮಪಂಥವೂ 'ಪುರುಷ' ಪ್ರತಿಮೆಯೊಡನೆ ತಮ್ಮ ದೈವತದ ತಾದಾತ್ಮ್ಯವನ್ನು ಪ್ರತಿಪಾದಿಸುತ್ತಿದೆ. ಬ್ರಾಹ್ಮಣರೆಂಬುವರು ಈ ವರೆಗೂ ಲೋಪವಾಗದಂತೆ, ಇಂದಿಗೂ ಉಳಿಸಿಕೊಂಡು ಬಂದಿರುವ ಹಾಗೂ ಮುಂದಿನ ಪೀಳಿಗೆಗೂ ಉಳಿಸಿಕೊಳ್ಳವ ಹೇಳುವ ಸಾಂಕೇತಿಕ ಪ್ರತಿಮೆಗಳಲ್ಲಿ 'ಪುರುಷ' ಸೂಕ್ತ ಮಂತ್ರಪಠಣಕ್ಕೆ ಮಹತ್ವದ ಸ್ಥಾನವಿದೆ. ಬ್ರಾಹ್ಮಣರೆಂಬುವರಿಗೆ ಪೂಜ್ಯವಿರುವ ಇನ್ನೂ ಎರಡು ಪ್ರತಿಮೆಗಳಲ್ಲಿ ಒಂದು ಗಾಯತ್ರೀ-ಮಂತ್ರ; ಇನ್ನೊಂದು ಸೂರ್ಯ (: ಅಗ್ನಿ) ಆರಾಧನೆ, ಎಂದರೆ ವೇದದ ಋಷಿಪರಂಪರೆಯವರೆಂಬ ಬ್ರಹ್ಮರಲ್ಲಿ 'ಪುರುಷ' ಪ್ರತಿಮೆಗೆ

ಸೂರ್ಯಾಗ್ನಿಗಳ ಪಾತಳಿಯಲ್ಲಿ ಸ್ಥಾನವು ದೊರೆತಿರುವುದಂತೂ ನಿಶ್ಚಿತವಿದೆ. ಈ ಕಾರಣದಿಂದಾಗಿ ಈ ದೇವ : 'ಪುರುಷ'ನು, ಮ್ಯಾಕಡೊನೆಲ್ ಅವರ ಮೇಲಣ ಸೂತ್ರದ ಮೇರೆಗೆ ಇರಲಿಕ್ಕೇ ಬೇಕಾಯಿತು. : ಅಲ್ಲದೆ, 'ಯಜ್ಞಂ ಅಯಜಂತ' ಎಂಬ 'ದೇವಾಃ' ಇವರೂ ಮಾನವ ಪ್ರಾಣಿಗಳೇ ಇರಬೇಕಾಯಿತು. ಆರಾಧ್ಯ 'ಪುರುಷ' ಮತ್ತು ಆರಾಧಕ : ಯಾಜಕ (ದೇವ-) ಮಾನವ ಇವೆರಡೂ ಸಂಕೇತಗಳಲ್ಲೂ ಅವಿಗಲಿತ ಸಂಬಂಧವು ಇರಲೇಬೇಕೆಂದು ಮ್ಯಾಕಡೊನೆಲ್ಲ ಸೂತ್ರದಿಂದಲೇ ಸಿದ್ಧವಾಗುತ್ತಿದೆ! 'ಪುರುಷನು' ತನ್ನನ್ನೇ 'ಅರ್ಪಿಸಿಕೊಂಡು'; 'ಬಲಿಯಿತ್ತು' ಮಾಡುವ 'ಪ್ರಾಜಾಪತ್ಯ' ಯಜ್ಞದ ಅದ್ಭುತ ವರ್ಣನೆಗಳು ಈ ಹಿನ್ನೆಲೆಯಲ್ಲಿ ಅಭ್ಯಸನೀಯವಾಗಿವೆ.[೧೩]

ಋಗ್ವೇದದ ಕೊನೆಗೆ ಕಾಣಿಸಿಕೊಂಡಿದ್ದರೂ ಈ 'ಪುರುಷ' ಸೂಕ್ತದ ಸಾಂಕೇತಿಕ ದೈವತವು, ಮ್ಯಾಕಡೊನೆಲ್ ಹೇಳುವಂತೆ 'The true god of Veda' ಇಷ್ಟೆ ಅಲ್ಲ; ಇವನೇ 'God of all gods' ಎಂದರೂ ಸರಿ. ಏಕೆಂದರೆ, ನಿಜವಾದ ದೈವತಗಳಲ್ಲಿ ಇದು 'ಒಂದು'. ಇಷ್ಟೆ ಅಲ್ಲ-ಈ ಪುರುಷನೇ 'ಯತ್ ಭೂತಂ, ಯತ್ ಚ ಭವ್ಯಂ' ಆಗುತ್ತಾನೆ. ಇಂದ್ರಾಗ್ನಿ ಮೊದಲಾದವರೆಲ್ಲ ಇವನ ಒಡಲೊಳಗೆ ಸೇರುತ್ತಾರೆ. ಅವನ ಅಂಗಾಂಗಗಳಾಗುತ್ತಾರೆ! ಚಕ್ಷುವಿನಲ್ಲಿ 'ಸೂರ್ಯ ಅಡಗಿದ್ದಾನೆ, ಮನೋರೂಪನಾಗಿ ಚಂದ್ರಮನು ವಾಸವಾಗಿದ್ದಾನೆ. ಪ್ರಾಣದಲ್ಲಿ ವಾಯು; ಮುಖದಲ್ಲಿ ಇಂದ್ರಾಗ್ನಿಗಳು! ಆದರೆ, ಇಂದ್ರಾಗ್ನಿ ಮತ್ತು ವಾಯು ಈ ಮೂರನ್ನೂ ಮುಖ ಪ್ರದೇಶದಲ್ಲಿ ಕಾಣಿಸಿರುವಲ್ಲಿ ಉದ್ದೇಶವಿರಬೇಕು. ಅಗ್ನಿ, ವಾಯು ಈ ಮೊದಲು ಹೇಳಿರುವ ಕೇಶೀ-ತ್ರಯರಲ್ಲಿ ಇಬ್ಬರು. ಅಲ್ಲದೆ, ಇನ್ನೊಂದು ಮಹತ್ವದ ದೃಶ್ಯವು ಇಲ್ಲಿದೆ. ಮುಖದಲ್ಲಿ ಅಗ್ನಿ-ವಾಯು ಇರುವರೆಂಬ ಸಂಕೇತದಿಂದ ಶುಷ್ಣ : ಸುಡುವ ವಾಯು ಉಚ್ಛ್ವಾಸವಿರುವ 'ಅಹಿ' ರೂಪವಿದು, ಎಂದು ಸೂಚಿಸಲಾಗಿದೆ. ಮುಖ : ವಾಕ್ : ಅತ್ರಿ : ಅಗ್ನಿ! ಈ ಮೂರೂ ಸಂಕೇತ ವಿವರಣೆ ಹಿಂದೆ ಬಂದಿದೆ. 'ಇಂದ್ರ'ನನ್ನೂ ಪುರುಷನ 'ಇಂದ್ರಿಯ'ದಿಂದ 'ಇಂದು' ಹನಿ-ಹನಿ ಸ್ರವಿಸುವವನು ಎಂಬ ಆಕಾರಕ್ಕೆ ತಿರುಗಿಸುವ ಹೊಂಚು ಇಲ್ಲಿದೆ! ಕೇಶಿತ್ರಯರಲ್ಲಿ ಮೂರನೆಯವನು, ಶಚೀ ಸಹಿತ ಆದಿತ್ಯನು ಎಂಬಲ್ಲಿ ಸೂರ್ಯರೂಪ ಇಂದ್ರನೇ ಅಭಿಪ್ರೇತವಿರುವ ಕವಡು ಇಲ್ಲಿ ಬಯಲಿಗೆ ಬರುತ್ತಿದೆ. ಈ ವಿಚಾರ ಈಗ ಇಷ್ಟೇ ಸಾಕು. ಋಗ್ವೇದದ ಪ್ರಮುಖ ದೈವತಗಳಾದ ಅಗ್ನಿ, ಸೂರ್ಯ, ಇಂದ್ರರನ್ನು ಆತ್ಮಸಾತ್ತಾಗಿಸಿಕೊಂಡ ತಂತ್ರವನ್ನು ಗಮನಿಸಿದರೆ ಋಗ್ವೇದ ಎಲ್ಲ ದೈವತಶಕ್ತಿಯ ಅರ್ಕ : ಸಾರ-ಸತ್ತ್ವವೇ ಈ ದಿವ್ಯ 'ಪುರುಷ' (ಶಕ್ತಿ) ಎಂಬ ಬಗೆಗೆ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಇಲ್ಲ. ಆದುದರಿಂದ 'ಸಹಸ್ರಶೀರ್ಷಃ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್' ಎಂಬ ವಿಖ್ಯಾತ ಸೂಕ್ತದ ವರ್ಣನಾ ವಿಷಯವಾದ ಈ 'ಪುರುಷ' : ದೇವನು ಮ್ಯಾಕಡೊನೆಲ್ ಅವರ ಸೂತ್ರದ ಮೇರೆಗೆ ಒಬ್ಬ 'glorified human-being', ಅಲ್ಲದೆ 'immortal' ಇರಬೇಕಾಗುತ್ತದೆ. ಹಾಗಾದರೆ, ಈ 'Human being' ಯಾರು? ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ. ಆದರೆ, ಮ್ಯಾಕಡೊನೆಲ್ ಸೂತ್ರವು ನಮ್ಮನ್ನು ಇದಕ್ಕೂ ಮುಂದೆ ಒಯ್ಯುವುದೆ ಇಲ್ಲ! ಮ್ಯಾಕಡೊನೆಲ್ ಒಬ್ಬರೇ ಅಲ್ಲ ; ಮ್ಯಾಕ್ಸಮುಲ್ಲರರಿಂದ ಈ ವರೆಗಿನ ಎಲ್ಲ ಸಂಶೋಧಕರೂ ಇಲ್ಲಿ ಸಂಭ್ರಮಿತರಾಗಿದ್ದಾರೆ. ಭಾರತೀಯ ಪರಂಪರಾಗತ ಭಾಷ್ಯಕಾರರೂ ಸುತ್ತು ಬಳಸಿ ಮಾತಾಡುವವರೆ ಹೊರತು ನೇರ ಏನೂ ಹೇಳರು! (ಅತ್ಯತಿಷ್ಠತ್) 'ದಶಾಂಗುಲಂ' ಎಂಬಲ್ಲಿಯ ಈ ಹತ್ತುಬೆರಳಿನ ಮಾಪಿನ ಪ್ರತಿಮೆ ಯಾವುದು? ಇದರ ಬಗೆಗೆ ಶ್ರೀ ರಾಮಾನುಜ ಮತ್ತು ಮಹೀಧರಭಟ್ಟ ಸುತ್ತುಬಳಸಿ, ಮಾತಾಡುವಂತೆ ಕಾಣುತ್ತದೆ! ಇಲ್ಲಿ ಸತ್ಯವನ್ನು ಪತ್ತೆಯಾಗದಂತೆ ಅಡಗಿಸಿ ಇಡುವ ಮೋಡಕಾರಿಕೆಯ ಮಾಟ-ಮಂತ್ರದ ಸಂಭ್ರಾಮಕ ಮಾತು-ಶಕ್ತಿಯೆ ಈ ಸೂಕ್ತದಲ್ಲಿ ಪ್ರದರ್ಶಿಸಲ್ಪಟ್ಟಿದೆ. ಇದೇ 'ನೇತಿ'=ಬ್ರಹ್ಮ! ಎಂದು ಬೆರಳಿಟ್ಟು, ಇದನ್ನು ನಿಷ್ಕರ್ಷಿಸಿ ಹೇಳಲು ಹೇಗೆ ಶಕ್ಯ? ಸತ್ಯಾನ್ವೇಷೀ ಸಂಶೋಧಕರ ದೋಷವು ಇಲ್ಲಿ ತೀರ ಅಲ್ಪ. ಏಕೆಂದರೆ 'ದಿವ್ಯಾಧ್ಯಾತ್ಮ'ದ ಸಾಕ್ಷಾತ್ಕಾರಕ್ಕೆ, ಅನುಭಾವಕ್ಕೆ ಕಾರಣವಾಗುವ ದೈವತಗಳ ಸ್ತೋತ್ರಗಳಲ್ಲಿ ಕವಡು-ಮೋಸ ಇದ್ದೀತೆಂದು ಬಗೆಯುವುದೂ ಹಾಗೆ ಸಂದೇಹ ಪಡುವುದೂ ಕೂಡ ಅತ್ಯಂತ ಹೀನ. ಇಲ್ಲಿ ಉದ್ವೇಗ-ತೀವ್ರತಮ ದುಃಖವು ಒತ್ತರಿಸದೆ ಇರಲಾರದೆಂದು ಎಂತಹ ಪಾಮರನೂ ಸ್ವಾನುಭವದಿಂದ ಹೇಳಬಹುದಾಗಿದೆ. ಈ ವೇದದಲ್ಲಿ

ಇರುವ 'ಬ್ರಹ್ಮ'ದ ಸ್ವರೂಪ ನಿಷ್ಕರ್ಷದ ಪ್ರಯತ್ನಗಳು ಪ್ರಾರಂಭವಾಗಿ ಶತಕ ಗತಿಸಿದೆ. 'Notes on Brahman' ಎಂಬ ಪುಸ್ತಿಕೆಯಲ್ಲಿ ಈ ಪ್ರಯತ್ನಗಳ ವಿವರ ದೊರೆಯಬಲ್ಲದು. ಆದರೆ, ಇಬ್ಬರೂ ಸಮಾನ ಆಕೃತಿ ರೂಪದವರೆಂಬ ಆಭಾಸವನ್ನುಂಟು ಮಾಡುವ ಬೃಹಸ್ಪತಿ ಸಂಕೇತಗಳಿಂದ ಅಗ್ನಿ ಸಂಪ್ರದಾಯದವನು ಯಾರು, ಅಪರಸದವನು ಯಾರು. ಇದು ತಿಳಿಯದಂತೆ ಬುದ್ಧಿಪೂರ್ವಕ ಸಂದಿಗ್ಧತೆ ನಿರ್ಮಿಸಲಾಗಿದೆ. ಆದರು, ಕರ್ತ್ರಾ ಇವ ಬ್ರಹ್ಮಣಸ್ಪತಿ ಬಯಲಿಗೆ ಬಂದೇ ಬಂದಿರುವನು.

ಭಾರತೀಯ ಸಂಸ್ಕೃತಿಯ ಹುಟ್ಟು ಬೆಳವಿಯನ್ನರಿಯ ಹೊರಟ ಈ ಅಲ್ಪಜ್ಞನಿಗೆ ಅಲ್ಲಲ್ಲಿ ಕವಡು ಇರುವುದನ್ನು ಕಂಡು ಆದ ತೀವ್ರ ವೇದನೆಗಳ ಬೆಲೆತೆತ್ತ ತರುವಾಯ. ಶ್ರೀಮದ್ಭಗವದ್ಗೀತೆ ಋಗ್ವೇದದ ಮಾಯಾಸುರ ಶಿಲ್ಪದ ಅಲ್ಪ ಸ್ವಲ್ಪಾದರೂ ಈ ಸಮೀಕ್ಷೆ ಶಕ್ಯವಾಯಿತು. ಈ ವೈಯಕ್ತಿಕ ವಿಚಾರ ಏನೇ ಇರಲಿ, ಪ್ರಸ್ತುತ ಹೇಳಬೇಕಾದ ಸಂಗತಿಯೆಂದರೆ 'ಪುರುಷ' ಸೂಕ್ತ ಎಂಬುದು 'glorified Human-being' ಅಲ್ಲ. ಶುದ್ಧ ಸನಾತನ 'Being' : Elan vital' ಆಗಿದೆ. 'ವಿರಾಜ್' ಸಹಿತ ವಿರಾಟ್ 'ಅಸು-ರ' ಶಕ್ತಿಯ ವರ್ಣನೆಯೆ ಉಂಟು ಇಲ್ಲಿ. 'ಪುರುಷ' ಎಂಬ ಮಾತಿನಿಂದ ಮಾನವರೂಪದ ಭ್ರಾಂತಿ ನಿರ್ಮಾಣ ಮಾಡುವ ಪ್ರಯತ್ನವಿದೆ: ಇಷ್ಟೇ ಅಲ್ಲ

'ನಽಮೋಸ್ತು ಅನಂತಾಯ : ಸಹಸ್ರ ಮೂರ್ತಯೇ ಸಹಸ್ರ ಪಾದಾಕ್ಷ-
ಶಿರೋರು ಬಾಹುವೇ ಸಹಸ್ರನಾಮ್ನೇ : ಪುರುಷಾಯ ಶಾಶ್ವತೇ'

ಎಂಬ ಈ ಶ್ಲೋಕದಲ್ಲಿ ನಾಮ-ರೂಪ (ಮೂರ್ತ)ದ ನಿಃಸಂದಿಗ್ಧ ಸ್ವರೂಪದಲ್ಲಿ ಇರುವ ನಿರ್ದೇಶನವು, ಮಾನವ ಸಮಷ್ಟಿರೂಪ : ವಿಶ್ವಾ-ನರ=ವೈಶ್ವಾನರ ಪ್ರತಿಮೆಯೆ ಆಗಿರುವುದನ್ನು ಸೂಚಿಸುತ್ತದೆ. ಆದರೆ, ಪುರುಷಸೂಕ್ತದ ಮಂತ್ರದಲ್ಲಿಯೂ ಹೀಗೆಯೆ ವಿಶ್ವಮಾನವನ ರೂಪಕ ಉಂಟು. ಎಂಬ ಹಾಗಿನ ಗ್ರಹಿಕೆಯಾಗಲು ವರ್ಣ-ವ್ಯವಸ್ಥೆಯಂತಹ ಸಾಮಾಜಿಕ ರೂಪ ಆ-ಕೃತಿಯ ಕೆಲವು ಸಂಕೇತಗಳನ್ನೂ ಈ ಸ್ತೋತ್ರದಲ್ಲಿ ಮೇಲ್ತೋರಿಕೆಗಾಗಿ ಇರಿಸಿದ್ದಾಗಿದೆ. ಈ (ಸಮಾಜ) ಪಶುವೂ ಬಲಿಗೊಡುವ ಪ್ರಾಣಿಯಂತೆ! ಪರ್ಯಾಯದಿಂದ ಗೀತೆಯ ವಿರಾಟ್ ರೂಪ-ಸ್ಮಶಾನದ ಸೂಕ್ಷ್ಮಚಿತ್ರವೇ ಇಲ್ಲಿಯೂ ಅಡಗಿದೆ! ಆ ವಿರಾಟ್ ಪುರುಷನ 'ತಲೆ' (: ಮುಖ : ಕಣ್ಣು) ಹಾರುವ! ತೋಳು : ಕ್ಷತ್ರಿಯ : ತೊಡೆ : 'ವಿಶ್'>ವೈಶ್ಯ : ಪಾದ : ಶೂದ್ರ, ಎಂಬ ಈ ನಾಲ್ಕ ಸಾಮಾಜಿಕ ವಿಭಾಗಗಳು 'ಗುಣ-ಕರ್ಮ-ವಿಭಾಗಶಃ' ಇರುವುದಾಗಿ ಗೀತೆಯ 'ಭಗವಂತನು' ಸಹ ನಂಬಲು ಹೇಳಿದ್ದಾನೆ! 'ವೇದ ವಾದರತಾಃ' ಎಂದು ವೇದಾಧ್ಯಯನವನ್ನು ತಿರಸ್ಕಾರದಿಂದ ಕಾಣುವ ಭಗವಾನನೇ, ಈ ಶ್ರಮವಿಭಾಗವು ತತ್ವಾನುಸಾರಿಯಾದುದೆಂಬ ಹಾಗಿನ ತೋರಿಕೆಯ ಋಗ್ವೇದದ 'ಪುರುಷ'ನಲ್ಲಿರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ಈ ವ್ಯವಸ್ಥೆಯನ್ನು ಒಪ್ಪಿಕೊಂಡಿರುವಲ್ಲಿ ಒಂದು ಬಗೆಯ ಸಮಾಧಾನ ಆದರೆ, ಅದೇ ಕಾಲಕ್ಕೆ ಒಂದು ಬಗೆಯ ಸಂಶಯ! ಹಲವು ದಿನಗಳಿಂದ ಈ ತಿಕ್ಕಾಟ ಮನದಲ್ಲಿತ್ತು. ಸಮಾಧಾನದ ಕಾರಣವೆಂದರೆ : ಬಾಳಿನಲ್ಲಿ 'ಅರ್ಥ' : 'ಮೂಲ್ಯ' ಉಂಟು, ಎಂದರೆ ಸಾಮಾಜಿಕ ವ್ಯವಸ್ಥೆಗಾಗಿ ಶ್ರಮವಿಭಾಗದ ತತ್ವಾಧಿಷ್ಠಿತ ಕೆಲವೊಂದು ವಿಭಾಗಗಳನ್ನು ಮಾನ್ಯ ಮಾಡಲೇಬೇಕಾಗುತ್ತದೆ. ಆದಕಾರಣ, 'ತತ್, ಏಕಂ' ಇದೇ 'ಸತ್ಯ' ಎಂದು ಪ್ರತಿಪಾದಿಸುವ ಗೀತೆಯೂ ಈ 'ಗುಣಕರ್ಮ ವಿಭಾಗ'ದ ತತ್ವವನ್ನು ಸ್ವೀಕರಿಸಿದೆಯಲ್ಲ ಎಂದು. ಜೀವನ ಸಮ್ಮುಖ ಭೂಮಿಕೆಯಿಂದ ಸಂತೋಷ : ಆದರೆ, ಈ ಪ್ರಪಂಚವು ಶ್ಮಶಾನದಂತೆ. ಇದೆ ಎಲ್ಲರೂ ಸಾವಿನ ಬಾಯಲ್ಲಿ ಹೊಕ್ಕು, ಈ ಭವಬಂಧನ ಕಳಚಿಕೊಳ್ಳಲು ತೀವ್ರ ಗತಿಯಂದ ಓಡುತ್ತಿದ್ದಾರೆ, ಎಂಬ ಹಾಗಿನ ವಿರಾಟ್-ವಿಶ್ವರೂಪ ದರ್ಶನ ಮಾಡಿಸುವ ಈ ಭಗವಂತನು, ಈ ಪ್ರಪಂಚದ ಸಮಾಜದ ಅಸ್ತಿತ್ವವನ್ನೂ ಒಪ್ಪುತ್ತಾನೆ. ಎಂದರೆ ಏನು ಅರ್ಥ? ಎಂದು ನನ್ನ ಸಾಕ್ಷಿ ಕೇಳುತ್ತಿದ್ದಾನೆ! ಏಕಕಾಲಕ್ಕೇ ಎರಡೂ ನಿಜವಿರಲು ಶಕ್ಯವಿಲ್ಲ! ಹಾಗಾದರೆ, ಇವೆರಡರಲ್ಲಿ ಯಾವುದು ಖರೆ? ಗೀತೆಯಲ್ಲಿ ಹುದುಗಿಸಿ ಇಡಲಾಗಿರುವ ಈ ಬಗೆಯ ಮೋಸದ ಎಡೆಗಳು ಒಂದೊಂದಾಗಿ ಹೆಚ್ಚು ಗಮನಕ್ಕೆ ಬರತೊಡಗಿದುವು. ಋಷಿ ಮತ್ತು ಯತಿ-ಮುನಿ ಸಂಪ್ರದಾಯಗಳ ಸ್ಪರ್ಧೆಯ ಬಗೆಗಿನ ಪುರಾವೆ ಹೆಚ್ಚು ಹೆಚ್ಚು ದೊರೆಯುತ್ತ ಬಂದಂತೆ!

ಗೀತೆಯ ಭಗವಂತನು, ಶೇಷನ ಅವತಾರಿ (ಎಂಬ) ಬಲರಾಮನ ತಮ್ಮನೇ ತಾನೆ? ಅಥವಾ ಸಾಕ್ಷಾತ್ 'ಕಾಲೋಽಸ್ಮಿ' ಎಂಬ ಕಾಳ(ಉರಗ) ಶ್ರೀಮನ್ ಮಹಾವಿಷ್ಣುವಿನ ಅವತಾರವೇ ಅಲ್ಲವೆ? ಈತನ ಕೃತಿಯಲ್ಲಿ 'ಕೃಷ್ಣ' ಕಾರಸ್ಥಾನವಿರುತ್ತದೆ. ಎಂದು ಭಾರತೀಯರಿಗೆ ಎಂದೋ ಸಂದೇಹವುಂಟಾಗಿರುವುದಕ್ಕೆ, ನಮ್ಮ ಭಾಷೆಗಳಲ್ಲೆಲ್ಲ ಪ್ರಚಲಿತವಿರುವ 'ಕೃಷ್ಣಕಾರಸ್ಥಾನ' ಎಂಬ ಪಡೆನುಡಿಯೇ ಸಾಕ್ಷಿ. ಭಾರತೀಯ ಸಂಸ್ಥೆ > ಸಂತೆ ಆಗುತ್ತವೆ. ಪಂಚಾಯತಿ 'ಪಂಚೇತಿ' ಎಂಬ ವಿಶೇಷಾರ್ಥ ಪಡೆಯುತ್ತದೆ : 'ನ್ಯಾಯ' (ಕಂನುಡಿಯಲ್ಲಿ) ಜಗಳ ಎಂಬ ಅರ್ಥವುಳ್ಳುದ್ದಾಗಿದೆ. ಜೀವನವನ್ನು ಒಂದು ಪ್ರಳಯ ಕೋಲಾಹಲ-ಶ್ಮಶಾನ ಎಂದು ಬಗೆಯ ಹೇಳಿರುವ ದಿವ್ಯಾಧ್ಯಾತ್ಮದ ಪ್ರಭಾವದಲ್ಲಿ ಪ್ರಪಂಚವು-ಎಂದರೆ ಪ್ರಪಂಚದ ಘಟನೆಗಳು. ಅರ್ಥವಿಹೀನ-ಅನರ್ಥಕಾರಿ ಎಂಬ ಅರ್ಥದ ಆಕೃತಿಯುಳ್ಳವು ಆಗಲೇಬೇಕಾದದ್ದು ಅದರ ಅನಿವಾರ್ಯ ನಿಯತಿ (inescapable logic) ಅಲ್ಲವೊ? ಅರ್ಥ : ವಿಚಾರಗಳಿಗೆ ಆಕೃತಿಯಿರುತ್ತದೆ. 'ಆಕೃತಿ'ಯಿಲ್ಲದ್ದು ಅರಿಕೆಗೆ ಬರಲಾರದು. ಈ (thought forms) ಭೂಮಿಕೆ ಸ್ಪಷ್ಟತೆ ಪಡೆಯುತ್ತ ಬಂದ ಹಾಗೆ ಗೀತೆಯ ಭಗವಂತನು ನಾಗರಾಜನೆಂಬುದು ಸ್ಪಷ್ಟವಾಗಲು ವಿಶೇಷ ತೊಂದರೆಯಾಗಲಿಲ್ಲ. ಆದರು ವಿಶ್ವಾಸದ ಆಶ್ರಯಸ್ಥಾನ ಎಂದು, ನಂಬಿದ್ದು ಹಾವನ್ನು, ಎಂದು ತಿಳಿದ ಬಳಿಕ ಆಗುವ ವ್ಯಥೆ, ಯಾವ ಶಬ್ದಗಳಿಂದ ಹೇಳಿ ತೀರೀತು?

ಜೀವನ ಸಮ್ಮುಖಿ ಬಾಳಿನ ರೀತಿಯ, ತತ್ತ್ವಪ್ರತಿಪಾದನೆಯೇ ಗೀತೆಯಲ್ಲಿ ಉಂಟೆಂದು ಇತ್ತೀಚಿ ಬಗೆಯಾಲಾಗುತ್ತಿರುವ ಶ್ರೀಮದ್ಭಗವದ್ಗೀತೆಯಲ್ಲಿ ಈ ಅರ್ಥವು, ಇಲ್ಲವೆ ಇಲ್ಲ. ಎಂಬ ಶ್ರೀ ಶಂಕರಾದಿ ಹಲವು ಆಚಾರ್ಯರು ಉಂಟೇ ಉಂಟೆಂದು ಹೇಳುತ್ತಾರೆ.* ಆದರೆ ಋಗ್ವೇದದ ರಚನೆಯಲ್ಲಿಯೂ, ಗೀತೆಯಂತೆ ವ್ಯಾಮಿಶ್ರ ಕವಡಿನ ಶೈಲಿಯ ಮಾಯಾಶಿಲ್ಪವೇ ಉಂಟೆಂದು ಸಂದೇಹಿಸುವರನ್ನು ನಾನು ಕಾಣೆ. 'ತ್ರೈಗುಣ್ಯಾಃ ವಿಷಯೋಃ ವೇದಾಃ' ಎಂದು 'ನಿಸ್ತ್ರೈಗುಣ್ಯವಾದೀ' 'ಮುಕ್ತ-ಸಂಗೀ' (ಪ್ರಚ್ಛನ್ನ ಅವಧೂತ) ಪಂಥೀಯ ಭಗವದ್ಗೀತೆಯೆ ಸಾರುತ್ತದೆ! ಅಲ್ಲದೆ ಡಾ. ವಿಂಟರ್‌ನಿಟ್ಸ ಪ್ರಭೃತಿ ಆಧುನಿಕ ಮೇಧಾವೀ ಸಂಶೋಧಕರೂ ವೇದದಲ್ಲಿ ಜೀವನದ ಬಗೆಗಿನ ತಿರಸ್ಕಾರ. ನಿರಾಶೆಯ ವಿಚಾರ ದೊರೆಯವು ಎಂದು ಹೇಳುತ್ತ ಬಂದಿದ್ದಾರೆ. ಈ ಕಾರಣಗಳಿಂದಾಗಿ ಋಗ್ವೇದದಲ್ಲಿ ಸಂನ್ಯಾಸವಾದಕ್ಕೆ ಅವಕಾಶವಿದ್ದೀತೆಂದು ಮೊದಲಲ್ಲಿ ನನಗೂ ಸಂದೇಹವುಂಟಾಗಿರಲಿಲ್ಲ. ಆದರು, ಎಲ್ಲಿಯೂ ಪರಿಹಾರ ದೊರೆಯದ ನನ್ನ ಕೆಲವೊಂದು ಪ್ರಶ್ನೆಗಳ ಉತ್ತರವನ್ನು ವೇದದಲ್ಲೆ ಕಂಡುಕೊಳ್ಳದೆ ನನಗೆ ಸಮಾಧಾನ ವಿರಲಿಲ್ಲ. ನಿನ್ನೆಗಳೊಳಗಿಂದಲೆ ಅಂಕುರಿಸಿ ಆಕಾರಪಡೆವ 'ಇಂದ್ಿನ' ಜೀವನದ ಆ-ಕೃತಿಯ ಹೊಳಹು (outline), ನಿನ್ನೆಯ ಗರ್ಭದಲ್ಲಿಯೇ, ಈ ಬಗೆಯಾಗಿ ರೂಪಗೊಳ್ಳತೊಡಗಿರಬೇಕಷ್ಟೆ? ಹಾಗಾದರೆ ಗೀತೆಯ ತಳಪಾಯ, ಉಪನಿಷತ್ತುಗಳಲ್ಲಿ ಇರುವಂತೆ, ಉಪನಿಷತ್ತುಗಳ ಪೂರ್ವಸಿದ್ಧತೆ ಬ್ರಾಹ್ಮಣಗಳಲ್ಲಿ ಇರಬೇಕು; ವೇದಗಳಲ್ಲೂ ಏನೊಂದು ರೂಪದಲ್ಲಿ ಇರಲೇಬೇಕು ತಾನೆ? ಋಗ್ವೇದದಲ್ಲಿ ಋಷಿಗಳ ಜೊತೆಗೆ ಯತಿ, ಮುನಿ, ಎಂಬ ವಿರಕ್ತಪಂಥೀಯರ ಉಲ್ಲೇಖವೂ ಇದೆ; ಇದು ಸರ್ವಮಾನ್ಯವಿದೆ. ಆದರೆ, ವೇದಕಾಲದ ತರುವಾಯ ಋಷಿಗಳ ಪರಂಪರೆ ನಷ್ಟವಾಗಿ ಮುನಿ-ಯತಿ ಪಂಥವೇ ಪ್ರಭಾವಶಾಲಿಯಾಗುತ್ತದೆ. ಋಷಿಪರಂಪರೆ ನಷ್ಟವಾಗತೊಡಗಿದ ಕಾರಣಗಳ ಬೇರು, ಈ ವೇದದಲ್ಲಿಯೆ ಹುದುಗಿರಬೇಕಷ್ಟೆ? ಋಗ್ವೇದದ ಅಂತ್ಯದಲ್ಲಿ 'ನ ಅಸದೀಯ' ಭೂಮಿಕೆಯು ಕಾಣತೊಡಗುತ್ತದೆ. ಆದರೆ, ಪ್ರಜಾಪತಿ ಪಂಥೀಯ ಈ 'ನ ಅಸತ್' ವಾದವು

---

* ಶ್ರೀಶಂಕರರು ಗೀತೆಯ ಪ್ರಾರಂಭಕ್ಕೆ ಹೇಳಿರುವ ಮಾತು ಗಮನಾರ್ಹ. "ಇದು ನಿವೃತ್ತಿಪರವಾದದ್ದು." ಹೀಗೆ ಗೀತೆಯ ಆಶಯವನ್ನು ಶಂಕರರು ಹೇಳಿದ್ದಾರೆ. ಆದರೆ, ಆಧುನಿಕರಲ್ಲಿ ತಿಲಕ್, ಗೋಖಲೆ, ಡಿ.ವಿಜಿ. ಮೊದಲಾದವರು ಇದು ಜೀವನ ಸಮ್ಮುಖಿಕೃತಿ ಎಂದಿದ್ದಾರೆ. ಆದರೆ, ಮೊದಲು ಇದು ಪ್ರವೃತ್ತಿಪರ, ಆಮೇಲೆ ನಿವೃತ್ತಿಪರ ಎಂದೂ ಹೇಳಿದ್ದಾರೆ. ಒಂದು ಕೃತಿಯಲ್ಲಿ ಎರಡು ಸತ್ಯಗಳು ಇರಲಾರವು. ಅವರು ಈ ಭೂಮಿಕೆಯನ್ನು ಸ್ವೀಕರಿಸಿ ಮುಂದೆ 'ಭಗವದ್ಗೀತೆಯೊಳಗಿನ ರಾಜಯೋಗದ ಗುಹ್ಯಜ್ಞಾನ' ಎಂಬ ಪುಸ್ತಕದಲ್ಲಿ ಈ ಅಂಶವನ್ನು ಹಲವು ಬಗೆಯ ವ್ಯಾಖ್ಯಾನಗಳಿಗೆ ಈಡುಮಾಡುತ್ತಾರೆ. (ಸಂ)

ವಿಜಯಿಯಾಗಿ.[೧೪] 'ಅಸತಃ ಸತ್ ಅಜಾಯತ' 'ಋತಂ ಚ ಸತ್ಯಂ ಚ....ತಪಸಃ ಅಜಾಯತ'. ಈ ವಿಶ್ವ, ಎಂಬ ಸವಿತೃಪಂಥೀಯ ಭೂಮಿಕೆಯು ಕುಸಿದುಬೀಳುವಲ್ಲಿ ಏನೊಂದು ಕ್ರಮವು ಇರಲೇಬೇಕಷ್ಟೆ? ಅದು ಯಾವುದು? ಈ ಸಂದೇಹಗಳ ಪರಿಹಾರಾರ್ಥವಾಗಿ ನಡೆದ ಪ್ರಯತ್ನಗಳಲ್ಲಿ ಸಾರ್ಪರಾಜ್ಞೀ : ಅದಿತಿಯ ಸ್ವರೂಪವು ಅರಿಕೆಗೆ ಬಂದ ಬಳಿಕ. ಇಂದಿನ ಋಗ್ವೇದ ಸಂಹಿತೆಯ ವಿಚಾರಚಕ್ರದ ಕೀಲವೆ ಕೈಗೆ ಎಟುಕಿದಂತೆ ನನಗೆ ಎನಿಸಿದೆ! ಇದು ನಿಜವೊ? ಅಥವಾ ಇದು ಒಂದು ನನ್ನ ಭ್ರಮಯೊ? ಎಂಬುದನ್ನು ಟೀಕೆಯ ಅಗ್ನಿದಿವ್ಯದಿಂದ ಪರೀಕ್ಷಿಸಿಕೊಳ್ಳಲು ಈ 'ನಾಗ' ಸ್ವರೂಪೀ 'ಕೀಲ'ವನ್ನು ವಿಚಿಕಿತ್ಸುಷೀ ವಿಮರ್ಶಕರ ಸಮ್ಮುಖದಲ್ಲಿ ಇರಿಸುವುದು ಕರ್ತವ್ಯವೆನಿಸಿತು.

ಋಗ್ವೇದದಲ್ಲಿ 'ಪ್ರಧಾನ' ಪಾತ್ರ, 'ಸರ್-ಪ'! ಎಂಬುದರ ಸಂದೇಹಕ್ಕೂ ಅವಕಾಶವಿರದಂತೆ ಶಕ್ಯವಿರುವ ಏನೆಲ್ಲ ದಕ್ಷತೆಯನ್ನು ವಹಿಸಲಾಗಿದೆ. ಋಗ್ವೇದಸ್ಥ ಗುಹ್ಯಸಂಕೇತಗಳ ಕೀಲಿಯ ಕೈ ಋಗ್ವೇದದಲ್ಲಿಯೆ ದೊರೆಯುವುದು ವಿರಳ. ಮುಖ್ಯ 'ಕೈ' ಬ್ರಾಹ್ಮಣ, ಉಪನಿಷತ್ತು ಪುರಾಣಕಥೆ ಹೀಗೆ ದೂರ ದೂರ; ಎಲ್ಲೆಲ್ಲೊ ಕಾಣದಂತೆ ಇರಿಸಲಾಗಿದೆ! ನಿಜ. ಆದರೆ, ಸತ್ಯದ ಸಾಂಕೇತಿಕ ಪ್ರತಿಮಾ ಸ್ವರೂಪದಲ್ಲಿ ಬಹಿರಂಗಕ್ಕೆ ಬರುತ್ತಿರುತ್ತದೆ. 'ದಕ್ಷ'-ಸದಾ 'ದಕ್ಷ', ಯಾವಾಗಲೂ ನಿಮಿರಿ ನಿಲ್ಲುವ ಈ ದೇವರು ಯಾರು? ದೇವರುಗಳೆಲ್ಲ 'ದಕ್ಷಪಿತರಃ' ಎಂದರೂ, ಈ ದಕ್ಷ ಶಕ್ತಿ (Elan vital) ಯಾರು? ಭೂಲೋಕದಲ್ಲಿ ಯಾವ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಎಂಬುದನ್ನು ಬಚ್ಚಿಡುವ ಪ್ರಯತ್ನ ಮಾಡಲಾಗಿದೆ. ಅದಿತಿ, (Life Force), ಮಾತೆಯಾಗಿರುವಂತೆ, ಮಾರಿ : ಮೃತ್ಯುದೇವತೆ: ಸರ್ಪರಾಜ್ಞಿ ಎಂಬುದೂ ನಿಜ. ಆದರೆ, ಜೀವನಮೂಲ್ಯಗಳನ್ನು ಗಾಳಿಗೆ ತೂರಿ ಈ ನಾಗಶಕ್ತಿಯನ್ನು ತಲೆಯ ಮೇಲಿರಿಸಿಕೊಳ್ಳಲು ಅಥವಾ ನಾಗದಾಸ್ಯವನ್ನು ಸ್ವೀಕರಿಸಲು ಯಾವ ವಿವೇಕವೂ ಒಪ್ಪಲಾರದು. ಜೀವನದಲ್ಲಿ ಅರ್ಥವಿಲ್ಲ ವ್ಯವಸ್ಥೆಯಿಲ್ಲ, ಏನೆಲ್ಲ ಹಾಳು ಎಂದು ಮೃತ್ಯುಪೂಜೆಗೆ ಪ್ರೇರಿಸುವ ಈ ನಾಗಸಂಪ್ರದಾಯದ 'ಸಾಧುತ್ವ'ವನ್ನು ಪ್ರಸ್ಥಾಪಿಸಲು ಹೊರಟ ಋಗ್ವೇದದ ಇಂದಿನ ಪಾಠ : ಈ ಕೃತಿ, ಒಂದು ಜಾದೂ ಆಟ ಎಂದು ಸಿದ್ಧವಾದಲ್ಲಿ, ವೇದವು ಈ ನಾಗ-ಪಂಥೀಯ ತತ್ತ್ವ ಪ್ರತಿಪಾದಿಸುತ್ತದೆಯೆಂಬುದು ಗೊತ್ತಿಲ್ಲದೆ, ಪಾಪ! ಹಲವೊಂದು ಪ್ರಾಮಾಣಿಕ ಜೀವಿಗಳು ವಿರಕ್ತ-ಸಂತ-ಸನ್ಯಾಸಿಗಳಾಗಿ ಆತ್ಮವಂಚನೆಗೊಳಗಾಗುತ್ತಿದ್ದಾರೆ! ಅಲ್ಲದೆ, ಈ ತತ್ತ್ವಜ್ಞಾನವು ಕಪಟನಾಟಕೀ ವೇದಾಂತಿಗಳ ಕೈಯ ಮೋಸದ ಸಾಧನ, ಎಂದು ಇದರ ಬೆಲೆ ಇನ್ನು ನಿಶ್ಚಿತವಾಗಲಿದೆ.

ಋಗ್ವೇದದ ಸಾರಸರ್ವಸ್ವ ಎಂಬಂತಿರುವ 'ಪುರುಷ' ಸೂಕ್ತವು ಸಾವಿರ ಹೆಡೆಯ : ಸಹಸ್ರಶೀರ್ಷನ ಪ್ರಚ್ಛನ್ನ ಆದಿಶೇಷನ ಮಹಿಮೆಯ ಸ್ತೋತ್ರವಾಗಿದೆ. ಇದು ಸೃಜನೇಂದ್ರಿಯದ ಮಹಿಮಾಸೂಕ್ತವಾಗಿದೆ. 'ಸಹಸ್ರ ಶೀರ್ಷಃ' ಎಂದು ಪ್ರಾರಂಭವಾಗುವ ಈ ಸೂಕ್ತದ ಈ 'ಪುರುಷನ' ನಿಜಸ್ವರೂಪವು ಪಾಠಕರ ಗಮನದಲ್ಲಿ ಬರದೆ ಬಚ್ಚಿ ಉಳಿಯಲು ಪ್ರಮುಖ ಕಾರಣವೆಂದರೆ ಈ 'ಪುರುಷ'ನಿಗೆ ಸಂಬದ್ಧ ಸೂಕ್ತಗಳು ಒಂದಕ್ಕೊಂದು ಸಂಬಂಧವಿಲ್ಲದುವು ಎಂಬ ಹಾಗೆ ಇವೆ. ಹತ್ತನೆಯ ಮಂಡಲದಲ್ಲಿಯೆ, ಅವನ್ನು ಅತ್ತಿತ್ತ ತೋರಿಸಲಾಗಿದೆ! ಇವೆಲ್ಲವುಗಳಲ್ಲಿಯೂ ಮೌನಿ-ರಾಜ ಕೇಶಿಯ ಸ್ತೋತ್ರವು ಅತ್ಯಂತ ಮಹತ್ವದ್ದು. ಆದರೆ, ಇದು ಋಗ್ವೇದದ 'ನಾಭಿ' ಎಂಬ ಸಂದೇಹವು ಸೋಂಕಲು ಶಕ್ಯವಿಲ್ಲ! ಈ ಪ್ರಬಂಧವನ್ನು ಮುಗಿಸುವಾಗ ವಾತರಶನ ಕೇಶಿ ಹಾಗೂ ಸಹಸ್ರಶೀರ್ಷ ಪುರುಷಃ ಇವರ ಅಂತಸ್ಥ ಆಕೃತಿ ಸಮಾನವೇ ಇರುವುದು ಥಕ್ಕನೆ ಹೊಳೆಯಿತು. 'ಅಪ್ಸರಸಾಣಾಂ ಗಂಧರ್ವಾಣಾಂ ಮೃಗಾಣಾಂ ಚರಣೇ ಚರನ್ ಕೇಶೀ. (ಮಧ್ಯಮಾ : ವಾಕ್ಕಿನ) ಉಪಮಂಥನ ನಡೆಸಿದ್ದಾನೆ : ಈ ಆಕೃತಿಯೊಡನೆ 'ಸಹಸ್ರಶೀರ್ಷ' : ಸಾವಿರ ತಲೆಯ ಪುರುಷರ ಈ ಕೃತಿ ಹೋಲಿಸಿರಿ : 'ಯತ್ ಪುರುಷೇಣ ಹವಿಷಾ ದೇವಾಃ ಯಜ್ಞಂ ಅತನ್ವತ'. ಈ ವಾಕ್ಯದಲ್ಲಿ ಬರುವ 'ದೇವಾಃ' ಸಂಕೇತವು ಮ್ಯಾಕಡೊನೆಲ್ ಹೇಳಿರುವಂತೆ Human beings - man in general ಎಂಬ ಅರ್ಥಸೂಚನೆ ಇದೆ. ಆದರೆ, ಈ ಪುರುಷನಿಂದ (ಪುರುಷೇಣ) ಹವಿರ್-'ದ್ರವ್ಯ' ಅರ್ಪಿಸಿ, ಮಾನವರು 'ಯಜ್ಞ' ಮಾಡುವರು, ಎಂದರೇನು? ಮತ್ತು ಈ ಪುರುಷನು ಪಶೂನ್ ತಾನ್ ಚಕ್ರೇ........(ಶ್ವಪದಾದಿ ಪಶುಗಳನ್ನು, ಪಕ್ಷಿಗಳನ್ನು, ದನಗಳನ್ನು)

ಹುಟ್ಟಿಸಿದನು......ಹೀಗೆ 'ಯಜ್ಞೇನ ಯಜ್ಞಮ್, ದೇವಾಃ (ಜನರು) ಅಜನಯಂತ' ಇದುವೆ ಅನಾದಿ ಕಾಲದಿಂದ ನಡೆದು ಬಂದ ಸನಾತನಧರ್ಮ (: ತಾನಿ ಧರ್ಮಾಣಿ ಪ್ರಥಮಾನಿ ಆಸನ್) ಎಂದರೇನು? ಈ ಪ್ರಾಜಾಪತ್ಯ ಯಜ್ಞಕ್ರಿಯೆಯ ಅರ್ಥವನ್ನು ಇನ್ನೂ ವಿವರಿಸಿ ಹೇಳುವ ಆವಶ್ಯಕತೆ ಕಾಣೆ. ಕೇಶಿಯ ಉಪಮಂಥನ, ಪುರುಷನ ಯಜ್ಞಕ್ರಿಯೆ ಇವೆರಡರ ಈ ಸಾಮ್ಯದಿಂದಾಗಿ ಕೇಶೀ-ಪುರುಷ ಮತ್ತು ಸಹಸ್ರಶೀರ್ಷ ಪುರುಷ ಇವರನ್ನು ಭಿನ್ನರೆಂದು ಗ್ರಹಿಸುವುದರಿಂದ ವೇದಾರ್ಥಕ್ಕೇ ಹಾನಿಯಿರುವುದಾಗಿ ಕಾಣತೊಡಗಿತು. ಕೇಶಿನ್ ಮತ್ತು ಪುರುಷನನ್ನು ಬೇರೆ ಬೇರೆ ಎಂದರೆ, ಯಾವುದನ್ನು ಅರುಹಲು ಈ ಸ್ತೋತ್ರಗಳು ಹುಟ್ಟಿವೆಯೊ ಅದನ್ನೇ ಅರಿಯದೆ ಹೋದರೆ ಕವಿಯ ಕೃತಿಗೆ ಕೇಡು!

ಈ ವಿಶ್ವ (ಯಜ್ಞ :) ಚಕ್ರದ (: ಚಕ್ರೇ), ಒಂದು ನೇಮಿ : ನಾಭಿ, ಕೇಶೀ ವಾತರಶನನಲ್ಲಿ ಇದ್ದರೆ, ಇನ್ನೊಂದು ಸಹಸ್ರ ಶೀರ್ಷ-ಪುರುಷನಲ್ಲಿದೆ! ಕೇಶಿನ್ ವಾತರಶನನು (: ಪುರುಷನು) 'ಮೃಗಾಣಾಂ ಚರಣೇ ಚರನ್' ಎಂಬುದರ ವಿವರಣೆಯೇ 'ಸಹಸ್ರ ಶೀರ್ಷನು' 'ಪಶೂನ್ ತಾನ್ ಚಕ್ರೇ, (ವಾಯವ್ಯಾನ್-ಆರಣ್ಯಾಕ್-ಗ್ರಾಮ್ಯಾನ್ ಚ ಯೇ') ಎಂಬಲ್ಲೂ ಉಂಟು. ಈ ವಾತರಶನ : (ಕೇಶಿನ್ :) ಪುರುಷನೇ ವಿಶ್ವ-'ಚಕ್ರ'ದ 'ಅಕ್ಷ' (: ಅಚ್ಚು) : ಇರಸು (axle)! ಎಂದರೆ ನೇಮಿ-ನಾಥ, ನಾಭಿ-ರಾಜ ಎಂಬ ಸಂಕೇತಗಳ ಗುಹ್ಯಾರ್ಥವು, ವಾತರಶನ-(ಕೇಶಿನ್) : ಪುರುಷ ಎಂದಿರುವಲ್ಲಿ ತನ್ನ ತಾನೆ ಹೊರವಡುತ್ತದೆ. ಪುರಾಣ ಕಥೆಯ ನಾಭಿ-ರಾಜನು ಋಷಭ-ದೇವನ ಜನಕನೆಂಬ ಕಥೆಯ ನಿವೇದನೆಯಲ್ಲಿ ಸಾಂಕೇತಿಕತೆಯಿರುವುದಾಗಿ ತೋರುತ್ತದೆ. ಈ 'ಸಹಸ್ರ' ಶೀರ್ಷ ಎಂಬ ಪುರುಷನಿಗೆ 'ಸಹಸ್ರ' ಅಕ್ಷಗಳೇ ಹೇಗೆ? ನಿಜವಾಗಿ ದ್ವಿಸಹಸ್ರ ಅಕ್ಷಗಳು ಇರಬೇಡವೆ? ಒಂದು ಶೀರ್ಷಕ್ಕೆ ಒಂದೇ 'ಅಕ್ಷ'ವಿರುವುದು ಇದಾವ ಪವಾಡ-ಚಮತ್ಕಾರ? ಎಂಬ ಪ್ರಶ್ನೆಗೆ ಈವರೆಗೆ ಸಮರ್ಪಕ ಉತ್ತರವೇ ಅಶಕ್ಯವಿತ್ತು. ಸಂಹಿತೆಯ ಹೊರಗಣ ವಿಚಾರ ತರ್ಕ, ವಾದಗಳ ಆಶ್ರಯ ಪಡೆಯದೆ, ಒಂದು ಶೀರ್ಷಕ್ಕೆ ಒಂದೇ 'ಅಕ್ಷ'ವಿರುವ ಈ ಪುರುಷನಾರು? ಈ ಪ್ರಶ್ನೆಗೆ ನೇರವಾದ ಉತ್ತರವು, ಕೇಶಿನ್ ವಾತರಶನನ ಮೂಲಕ ನಿಶ್ಚಿತವಾಗಿ ತಿಳಿಯಬಲ್ಲುದು. ನಮ್ಮ ದೈವತಗಳ ಅತ್ಯುಕ್ತಿ ಪೂರ್ಣ ವರ್ಣನೆಗಳಿಂದಾಗಿ ಈ 'ದಿವ್ಯ' ಶಕ್ತಿಗಳ ನಿಜವಾದ ಸ್ವರೂಪ ಆಕೃತಿಯನ್ನು ಗ್ರಹಿಸಿಕೊಳ್ಳುವುದು ಅಶಕ್ಯವಾಗಿದೆ. ಈ ದೈವತ ಶಕ್ತಿಗಳು 'ನೇತಿ ನೇತಿ' ಸ್ವರೂಪದುವು, ಎಂಬುದನ್ನು ಸಿದ್ಧಪಡಿಸಲು ಈ ಅತ್ಯುಕ್ತಿಯ ತಂತ್ರದ ಪ್ರಯೋಜನ ಪಡೆದುದನ್ನು, ಇನ್ನು ಮೇಲೆ ನಿಶ್ಚಿತವಾಗಿ ಬೆರಲಿಟ್ಟು ತೋರಿಸಬಹುದಾಗಿದೆ. ಈ ಸಂದರ್ಭದಲ್ಲಿ, 'ಅಕ್ಷ'ಗಳು ಸಹಸ್ರ-ಎಂಬ ಈ ಪುರುಷನು, ವಾತರಶನ : ಪುರುಷನೇ ಆಗಿರುವುದಾಗಿ 'ಅಕ್ಷ' (: ಅಚ್ಚು : ಗಣೆ) ಎಂಬ ಸಾಂಕೇತಿಕ ಪ್ರತಿಮೆಯ ಮೂಲಕ ನಿಶ್ಚಿತವಾಗುತ್ತದೆ. ಆದರೆ, ಇಲ್ಲಿ ಬುದ್ಧಿಪೂರ್ವಕವಾಗಿ ಬಳಸಿರುವ 'ಅಕ್ಷ' ಸಂಕೇತವು ತುಂಬ ಜಾದೂ : ಸಂಭ್ರಮ ಶಕ್ತಿಯದಾಗಿದೆ. 'ಅಕ್ಷವು' ಇಲ್ಲಿ ದ್ವಂದಾರ್ಥ ಯುಕ್ತವಾಗಿದೆ. ಸಂಸ್ಕೃತದ ಈ ಸಂಕೇತಕ್ಕೆ 'ಕಣ್ಣು' (ನೇತ್ರ) ಎಂಬ ಮೂಲಾರ್ಥವೆ ಇಲ್ಲ! ಹಿಂದುಗಡೆ ಸೇರಿದ ಛಾಯಾರ್ಥವಿದು!

ದೇಹವೆಂಬ ರಥದ ಇರಸು : ಅಚ್ಚು : ಕಣೆ : ಮೂಲಾಧಾರ, ಯಾವುದರ ಆಧಾರದ ಮೇಲೆ ಈ ದೇಹ-ರಥ ಇರುವುದೊ ಅವಲಂಬಿಸಿದೆಯೊ ಆ ಅಕ್ಷ (: axle, axis) ಆಕೃತಿಯ ಪುರುಷನು ಇವನೇ. 'ಅಕ್ಷ' ಯುರೋ ಭಾರತೀಯ ಮೂಲದ ಶಬ್ದ-ಸಂಕೇತ. ಆದಕಾರಣ, ಇದರ ಯುರೋಪೀಯ ಶಾಖೆಗಳಲ್ಲಿ 'ಅಕ್ಷ' ಸಂಕೇತಕ್ಕೆ ಇಲ್ಲದಿರುವ ಕಣ್ಣು (ನೇತ್ರ) ಎಂಬ ಅರ್ಥವು ಭಾರತೀಯ ಶಾಖೆಯಲ್ಲಿ-ಸಂಸ್ಕೃತದಲ್ಲಿ ಮಾತ್ರ ಗೋಚರಕ್ಕೆ ಬರುತ್ತಿರುವುದರಿಂದ ಈ 'ಅಕ್ಷ' ಸಂಕೇತಕ್ಕೆ (ಎರಡು ಚಕ್ರಗಳ ನಡುವಣ) ಗಣೆ ಎಂದೇ ಮೂಲಾರ್ಥ ವಿರಬೇಕೆಂಬುದು ನಿಶ್ಚಿತಪಡುತ್ತದೆ.

ಒಂದು ಸಂಕೇತಕ್ಕೆ ಪ್ರಾಪ್ತವಾದ ಬೇರೆ ಬೇರೆ ಛಾಯಾರ್ಥಗಳಿಂದ, ಆ ಸಂಕೇತವು ಯಾವ ಯಾವ ಆಕೃತಿಯ ಸಮಯಗಳೊಳಗಿಂದ ಹಾಯ್ದು ಬಂದಿದೆ ಎಂಬುದನ್ನು ಊಹಿಸಿಕೊಳ್ಳಬಹುದಾಗಿದೆ. 'ಅಕ್ಷ' ಸಂಕೇತದ ಪ್ರಧಾನ ಅರ್ಥದ ಹೊರತು ಅದರ ಛಾಯಾರ್ಥಗಳನ್ನೂ ಮೋನಿಯರ್ ವಿಲಿಯಂಸ್ ಕೋಶವು ಹೀಗೆ ನಮೂದಿಸಿದ್ದಾಗಿದೆ : a wheel, Car, the beam......ಅಲ್ಲದೆ a snake, ಸಹ!

ಹಾಗಾದರೆ, 'ಅಕ್ಷ' ಸಂಕೇತಕ್ಕೆ ಚಕ್ರ (ನಾಭಿ : ನೇಮಿ : ಬಿಲ :) ಅಲ್ಲದೆ, ಗುದ್ದು ಸೇರುವ ಸ್ವಭಾವದ 'ಹಾವು' ಎಂಬ ಅರ್ಥವೂ ರೂಢಿಗೆ ಬರುವ ಶಕ್ಯತೆಯನ್ನುಳ್ಳ ಸಮಯ (: ಆಚಾರ-ವಿಚಾರಗಳು) ಎಂದು ಇರಬಹುದು? ಎಂತಹುದು ಇರಬಹುದು? ಅಕ್ಷ : axle, ನೇಟಾಗಿ ನಿಲ್ಲುವ ಮೇಟಿ, ಇರಸು ಎಂದರೆ ಆಗಬಹುದು. ರಥಾಂಗವಾದ ಎರಡು ಚಕ್ರಗಳ ನಾಭಿಯಲ್ಲಿ ಸೇರಿ ಆ ರಥಕ್ಕೆ ಆಧಾರಭೂತವಾಗಬೇಕಾದುದು 'ಅಕ್ಷ' (: ಅಚ್ಚು). ಆದುದರಿಂದ, ಇರಸು : ಮೇಟಿ : ಸ್ತೂಪ : ಕಂಬದಂತೆ ಇರಬೇಕಾದ ವಸ್ತುವನ್ನು ಹಾವು ಎಂದಿರುವಲ್ಲಿ ಏನೊ 'ಗುಹಾನಿಹಿತ' ಅರ್ಥವು ಅಡಗಿರುವುದು ನಿಶ್ಚಿತ : ಆದರೆ, 'ಗುಹೆ'ಯಲ್ಲಿ: ಒಳಗೊಳಗೆ ಇರುವುದನ್ನು ಹೊರಗೆ ನಿಂತು ಅರ್ಥಯಿಸಿಕೊಳ್ಳುವುದು ಹೇಗೆ? ಹಾಗಾದರೆ 'ಹಾವು' ಎಂಬ ಗುಹ್ಯ-ಸಾಮಧಾರಕ ಈ 'ಅಕ್ಷ'ವು ಯಾವುದು? ಎಂತಹದು? ಹಾವು, ಸುಬ್ರಹ್ಮ(ಣ್ಯ)ದಿಂದ ಬೇರೆಯಲ್ಲ, ಎಂಬ ಶ್ರದ್ಧೆಯ ಗೋ+ಅಕ್ಷ:ಗವಾಕ್ಷ (ಕಂಡಿ : ಕಿಂಡಿ) ದೊಳಗಿಂದ ದೊರೆವ ರಶ್ಮಿ : ರಶನದ ಮೂಲಕವಾಗಿ ಅರಿಕೆಗೆ ಬರುವ ಆ-ಕೃತಿಯನ್ನು ಕಣ್+ಗಣ್=ಗಣೆ : ಅಕ್ಷ ಎಂದು ಗ್ರಹಿಸಿಕೊಳ್ಳಲು ಅಡ್ಡಿಯಿಲ್ಲವಷ್ಟೆ? ಒಳಗಣ್ಣಿನ ಬ್ರಹ್ಮ-ಜ್ಞರೆ ಇದರ ತೀರ್-ಪು ಕೊಡಲು ಸಮರ್ಥರು.

ಸಂಸ್ಕೃತದಲ್ಲಿ 'ಅಕ್ಷ'ವು ಮೂಲತಃ ಕಂಬದಾಕಾರದ ವಸ್ತು : ಇರಸು. ಆದರೆ, ಈ ಸಂಕೇತಕ್ಕೆ 'ಕಣ್ಣು' ಎಂಬ ಅರ್ಥವು ಹೇಗೆ ಬಂತು? ಕಂದಮಿಳ ಭಾಷಿಕ ಶಬ್ದಮೂಲದ 'ಕಣ್' ಎಂಬ ಸಂಕೇತದ ಅಭಿಧಾ-ಶಕ್ತಿಯಲ್ಲಿ ಮಾತ್ರ ಈ ಉಭಯಾರ್ಥ ದ್ಯೋತಕ ಸಾಮರ್ಥ್ಯವುಂಟು. ಕಣ್ಣು>ಗಣ್ಣು : ಒಂದಕ್ಕಿಂತ ಹೆಚ್ಚು ಗಣ್ಣುಗಳನ್ನುಳ್ಳ ಕೋಲು. ಬಾಣ ಒಂದೇ ಕಣೆ>ಗಣೆಯದು. ಕಬ್ಬಿಗೆ ಹಲವು ಗಣ್ಣು < ಕಣ್ಣು, (ನವಿಲುಗರಿಗೆ ಒಂದೇ ಕಣ್ಣು. ಇದಕ್ಕೆ 'ಶಿಖಿ' (: ಬೆಂಕಿ=ಅಗ್ನಿ) ಎಂದೂ ಹೆಸರು. ಈ ಏಕಾಕ್ಷ ಬೆಂಕಿ ಯಾವುದು?

ಶಿಖಿ ವಾಹನ : ಬಾಡಬಾಗ್ನಿ : ಷಣ್ಮಾತುರ (ನದೀಪುತ್ರ;) ಅಗ್ನಿ: ಕುಮಾರನೆಂಬ 'ಸ್ಕಂಧನು ಏರಿದ್ದು ಸಹಸ್ರ 'ಅಕ್ಷ'ದ ರಥ! ಮಯೂರ ಇವನು ಸನಾತನ ಕುಮಾರ. ವೇದ ಮರುತರನ್ನು ವೀರ ಎಂದಿದೆ ರಥ=ದೇಹ,'ದಶ'-ರಥ ಹತ್ತು ದೇಹಗಳ ಸಾಮರ್ಥ್ಯನ್ನುಳ್ಳ; ಇಂತಹನಿಗೆ ಮೂವರೇ ಮಡದಿಯರು, ಎಂದರೂ ಕಡಿಮೆಯೆ ಅಲ್ಲವೆ? 'ದಶ'-ಮುಖನ ಶಕ್ತಿಯೂ ಸಾಮಾನ್ಯವೆ? ದಶ-ಮುಖನು 'ದಶ' ಅಕ್ಷನಂತೂ- ಇರಲೇಬೇಕಷ್ಟೆ?-ಸಹಸ್ರ ಶೀರ್ಷನು ಸಹಸ್ರಾಕ್ಷ ಇದ್ದುದು ನಿಜವಿದ್ದರೆ ದಶ-ರಥ, ದಶ-ಮುಖ ಇವರು ಭೂಲೋಕದ ಚಿಕ್ಕ ಪ್ರಜಾಪತಿಗಳು. ವಿಶ್ವಕರ್ಮರು, ವಿದೇಹೀ ಜನಕನು (: Creative Force). ಇವನಿಗೆ 'ಫಕ್ತ' ಸಹಸ್ರ 'ಅಕ್ಷ' ಎಂದರೆ ನಗೆಗೀಡು! ಇಲ್ಲಿ 'ಸಹಸ್ರ' ಎಂಬುದು ನೇತಿ ನೇತಿ' ಎಂಬರ್ಥದ ಸಂಖ್ಯಾವಾಚಕವೆಂದು ಗ್ರಹಿಸುವುದು ಅವಶ್ಯ. ನಮ್ಮ ಸಾಹಿತ್ಯದೊಳಗಿನ ಸಾಂಕೇತಿಕ ಪ್ರತಿಮೆಗಳ ಶಿಲ್ಪ ಸೌಂದರ್ಯದ ಅಪೂರ್ವತೆಯನ್ನು ಗ್ರಹಿಸಿಕೊಳ್ಳುವ ಸೂಕ್ಷ್ಮ ದೃಷ್ಟಿ, 'ರಸವರ್ಜ' ಸಂಪ್ರದಾಯದ ಪ್ರಭಾವದಲ್ಲಿ ಕಂಗೆಟ್ಟು (ಕಣ್-ಕೆಟ್ಟು ನಮ್ಮಲ್ಲಿ ಇಂಗಿ ಹೋದಂತಾಗಿದೆ.) ಇದರಿಂದಾಗಿ, ದಶ-ರಥ, ದಶ-ಮುಖ ಬೃಹಲ್ಲಾಂಗೂಲ ಕಪಿವರ್ಗ, ಸಹಸ್ರಾಕ್ಷ ಪುರುಷ ಇತ್ಯಾದಿ ಪ್ರತಿಮಾರಹಸ್ಯ ಗ್ರಹಣದ ಸೂಕ್ಷ್ಮ ಸಂವೇದನಾ ಕ್ಷಮತೆ ನಷ್ಟವಾಗಿದೆ.

ಒಂದು ಸಂಕೇತದ ಮೂಲ ಅರ್ಥವು ಮಾರ್ಪಟ್ಟಲ್ಲಿ ಅಥವಾ ಅಲ್ಲಿ ಬೇರೆ ಬೇರೆ ಛಾಯಾರ್ಥಗಳು ಕಾಣತೊಡಗಿದಲ್ಲಿ ಇದು, ಆ ಭಾಷಿಕ ಜನ ಜೀವನ ರೀತಿಯಲ್ಲಿ, ಎಂದರೆ ಆಚಾರ-ವಿಚಾರಗಳಲ್ಲಿ (: ಸಮಯ) ಬದಲಾದುದರ ನಿಶ್ಚಿತ ಕುರುಹು ಎಂದು ಬಗೆಯಲು, ಯಾವ ಅಡ್ಡಿಯೂ ತೋರದು. ಈ ಬಗೆಯ ಅರ್ಥವ್ಯತ್ಯಾಸಕ್ಕೆ ಆಂತರಿಕ ಕಾರಣಗಳಿರಬಹುದು ಅಥವಾ ಹೊರಗಣ ಕಾರಣಗಳೂ ಇರಬಹುದು. ಶಬ್ದದ ಧಾತ್ವರ್ಥಕ್ಕೆ ಸರಿಹೋಗದ : ಅಭಿಧಾ ಶಕ್ತಿಯಿಂದ ನಿಷ್ಪನ್ನವಾಗದೆ ಇರುವ ಅರ್ಥವು, ಬಾಹ್ಯ ಕಾರಣಗಳಿಂದ ಸಂಭವಿಸಿರಲಿಕ್ಕೆ ಬೇಕು, ಎಂದು ಗ್ರಹಿಸಬೇಕಾಗುತ್ತದೆ. ಶಬ್ದಸಂಕೇತಗಳ ಅರ್ಥದ ಏರು-ಪೇರುಗಳನ್ನು ಕುರಿತ ಈ ಸೂತ್ರವು ತಪ್ಪಲ್ಲವಾದರೆ, ಯುರೋ-ಭಾರತೀಯ ಮೂಲದ 'ಅಕ್ಷ' ಸಂಕೇತಕ್ಕೆ ಇಲ್ಲದಿರುವ 'ಕಣ್'<ಗಣ್ ಎಂಬ ಆಕೃತಿಯ (form of) ಅರ್ಥವು, ಸಂಸ್ಕೃತ ಭಾಷೆಯಲ್ಲೂ ಕಾಣಿಸಿಕೊಳ್ಳಲು, ಕಾರಣವೇನಿರಬಲ್ಲುದು? ಅವರೊಡನೆಯೆ ಬಾಳುತ್ತಿದ್ದ ತತ್ಕಾಲೀನ ಸಂಸ್ಕೃತೇತರ ಭಾಷಿಕರ ಪ್ರಭಾವವಲ್ಲದೆ, ಬೇರೆ ಯಾವ ಬಗೆಯಲ್ಲಿ ಆ ಅರ್ಥಸಂಭವಿಸಲು ಶಕ್ಯ?

ಸಾಂಕೇತಿಕ ಪ್ರತಿಮೆಗಳ ಗರ್ಭಿತಾರ್ಥ (Concept) ಆಕೃತಿಯು, ಆ ಭಾಷಿಕ-ಜನದ ಜೀವನ ದೃಷ್ಟಿಯನ್ನು-ಅವರ ಸಂಸ್ಕಾರಗಳ ಆಕೃತಿಯನ್ನು ಸೂಚಿಸುತ್ತಿರುತ್ತದೆ. ಬಾಹ್ಯ ಆಕೃತಿ ಎಂದರೆ ಶಬ್ದ-ರೂಪವು ಒಂದು ಭಾಷಿಕರದು; ಅಂತಸ್ಥ ಅರ್ಥದ ಆಕೃತಿ ಇನ್ನೊಂದು (ಭಾಷಿಕ) ಸಂಸ್ಕೃತಿಯವರದು ಇರುವಲ್ಲಿ, ಆ ಭಾಷೆ, ಬೇರೊಂದು ಭಾಷಿಕ ಸಂಸ್ಕೃತಿಯ ಪ್ರಭಾವದಲ್ಲಿ ಇದ್ದುದನ್ನು ನಿಸಃದಿಗ್ಧ ರೀತಿಯಲ್ಲಿ ಗುರುತಿಸಿಕೊಳ್ಳ ಬಹುದಾಗಿದೆ. ವಾಶೀ-ಹಸ್ತನೆಂಬ ವೈಶಿಷ್ಟ್ಯದ ತ್ವಷ್ಟಾರನ (: ಬಡಿಗ) ಆಯುಧದ ಹೆಸರು ವಾಶೀ (ಸೀ) [<ವಾಚಿ>ಬಾಚಿ (ಕಂನುಡಿ)] ಕಂದಮಿಳ ಭಾಷೆಯದು ಎಂದು ಟಿ. ಬರೊ ನಿರ್ಣಯಿಸಿದ್ದಾರೆ.[೧೫] ಋಗ್ವೇದದ ತ್ವಷ್ಟಾರ : ವಿಶ್ವಕರ್ಮ 'ಕರ್ಮಾರ ಇವ' ಬ್ರಹ್ಮಣಸ್ಪತಿ ಈ ದೈವತ ಪ್ರತಿಮೆಗಳ ನಿಲುಮೆಯ 'ಆಕೃತಿ' ಆಪ : ರಸ ಪಂಥೀಯ ಭೂಮಿಕೆಯದು ಇರುವುದಾಗಿ, ಬೇರೆ ಪ್ರಮಾಣಗಳಿಂದ ಕಂಡುಬರುತ್ತಿರುವ ನಿರ್ಣಯಕ್ಕೆ, ತುಲನಾತ್ಮಕ ಭಾಷಾಶಾಸ್ತ್ರದ ಭೂಮಿಕೆಯಿಂದಲೂ ಹೀಗೆ ಪುಷ್ಟಿ ದೊರೆಯುತ್ತಿದೆ! ತ್ವಷ್ಟಾರನ ಆಯುಧದ 'ವಾಶೀ' ಎಂಬ ನಾಮ ಸಂಕೇತವು ಕಂದಮಿಳ ಭಾಷೆಯದು ಎಂದಲ್ಲಿ ಋಗ್ವೇದ ಸೂಕ್ತ ರಚನಾಕಾಲದಲ್ಲಿ ಈ ಬಾಚಿ>ವಾಶಿಯನ್ನು ಉಪಯೋಗಿಸುತ್ತಿದ್ದ ಬಡಿಗರು ಕಂದಮಿಳ ಭಾಷಿಕರಿರುವ ಶಕ್ಯತೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸಂಸ್ಕೃತಕ್ಕೆ ಇದು ಕಂದಮಿಳ ಭಾಷೆಯ ಕೊಡುಗೆ ಎಂದು ತಜ್ಞರು ನಿರ್ಣಯಿಸಿರುವ ಮಟಚಿ (ಮಿಡಿತೆ) ವಾಶಿ (: ಬಾಚಿ), ಉಲೂಖಲ (ಒನಕೆ) ಇಂತಹ ಅರ್ಥಪೂರ್ಣ ಶಬ್ದಗಳ ಮೂಲಕ, 'ಅಕ್ಷ' ಎಂಬುದಕ್ಕೆ 'ಕಣ್ಣು' ಎಂಬ ವಿಶೇಷಾರ್ಥ ಹೇಗೆ ಬಂದಿತು? ಈ ಸಾಂಸ್ಕೃತಿಕ ಆಕೃತಿ (Cultural form) ಯಾವ ಭಾಷಿಕರದು, ಎಂಬುದನ್ನು ನಿರ್ಧರಿಸಿಕೊಳ್ಳಲು ವಿಶೇಷ ಶ್ರಮಪಡಬೇಕಾಗಿಲ್ಲ.

ಈ ಪುರುಷನ ಸ್ತೋತ್ರದೊಳಗಿನ ಕಾವ್ಯಾತ್ಮಕ ವರ್ಣನಾ ವೈಖರಿಯ ಭಾಗವೆಂದು ಸಹಸ್ರ (ಶೀರ್ಷಃ) ಈ ಸಂಕೇತಕ್ಕೆ ಹೆಚ್ಚಿನ ಮಹತ್ವವಿಲ್ಲ ಎಂಬುದು ಇಲ್ಲಿ ತಾನೆ ಕಾಣುತ್ತಿದೆ. ಏಕೆಂದರೆ 'ಶೀರ್ಷ', 'ಅಕ್ಷ' ಮತ್ತು 'ಪಾದ' ಇವು ಪ್ರತಿಯೊಂದೂ ಸಾವಿರ ಇವೆ, ಎಂದರೆ ಮೂಲತಃ ಇವು ಮೂರೇ (ತಳಪಾಯದಲ್ಲಿ) ಉಂಟು ಎಂದೇ ಸೂಚಿಸಿದ ಹಾಗೆ ಇದೆ! ಇನ್ನೂ ಒಂದು ಬಗೆಯಿಂದ ಇದನ್ನು ಒರೆಗೆ ಹಚ್ಚಿಕೊಳ್ಳಬಹುದು. ಸಾವಿರ ತಲೆಯ ದೇವರಿಗೆ ಎರಡು ಸಾವಿರ ಕಣ್ಣು, ಎರಡು ಸಾವಿರ ಪಾದ ಇರಬೇಡವೆ? ಸಾವಿರ ತಲೆಯ ದೇವರಿಗೆ ಒಂದೇ ಸಾವಿರ ಕಣ್ಣು ಹೇಗೆ? ಈ ವರ್ಣನೆಯಲ್ಲಿ ಇನ್ನೂ ಒಂದು ಚಮತ್ಕಾರ ಹುದುಗಿದೆ. ವರ್ಣನೆಯಲ್ಲಿ ಬರಿ ಶೀರ್ಷ, ಅಕ್ಷ ಮತ್ತು ಪಾದ ಈ ಮೂರು ಮಾತನ್ನೇ ಹೇಳಿರುವ ರೀತಿ ಸೋಜಿಗದ್ದಾಗಿದೆ. ಮೊದಲು ಇವಷ್ಟನ್ನೇ ಎದ್ದಾಗಿ ಕಾಣುವಂತೆ ವರ್ಣಿಸಿರುವ ಕಾರಣವೇನು? ಹಾಗಾದರೆ ಈ ಪರಮ ಪುರುಷನು ಒಂದು ತಲೆಯವನು, ಒಂದು ಕಣ್ಣಿನವನು ಮತ್ತು ಒಂದು ಅಡಿ (ಪಾದ) ಉಳ್ಳವನು ಇರುವನೆಂದು ಬಗೆಯುವುದೊ ಎಂಬ ವಿಚಿತ್ರ ಪ್ರಶ್ನೆ ತಲೆಯೆತ್ತುತ್ತದೆ! 'ಅ-ಜ ಏಕಪಾತ್' ದೇವನ, ಹಿಂದಿನ ಉಲ್ಲೇಖವನ್ನು ಸ್ಮರಿಸಿಕೊಂಡರೆ ಪುರುಷ ಸೂಕ್ತದ ಈ ವರ್ಣನೆ (ವಿಶ್ವಸ್ಥ) ಒಂದು ಸನಾತನ ವಾಸ್ತವ: ಸತ್ಯದ ದರ್ಶನ ಮಾಡಿಸಹೊರಟಿದೆ ಎಂಬುದು ನಿಶ್ಚಿತ. ಏಕೆಂದರೆ ಈ ವಿರಾಟ್ ಪುರುಷನು ಸ್ವಯಂಭೂ ದೇವನೇ ಇರುವುದರಿಂದ, ಇವನೂ ಆ ಏಕಪಾದ ಮೂರ್ತಿಯಂತೆ, ಅ-ಜನು ಎಂಬುದು ನಿಶ್ಚಿತವಿದೇ. ಆದಕಾರಣ ಈ 'ಸಹಸ್ರ' ಎಂಬ ಸ್ತೋತ್ರ ವೈಖರಿಯ ಹಿಂದೆ, ಈ ದೇವನು ಒಕ್ಕಾಲಿನವನು ಆಗಿರುವುದನ್ನೇ ಹೇಳಲಾಗಿದೆಯೆಂದು ಒಪ್ಪಿಕೊಳ್ಳಲೇಬೇಕಾಗುತ್ತದೆ. ಅಲ್ಲದೆ, 'ಅಕ್ಷ' ಸಂಕೇತಕ್ಕೆ ಸರ್ಪವಾಚಕ ವಿಶೇಷಾರ್ಥವೂ ಒಂದು ಇರುವುದನ್ನು ಗಮನಿಸಿದರೆ ಇಲ್ಲಿ ಆ ಏಕಪಾತ್ ದೇವನಂತಹ, ಇವನೂ ಒಬ್ಬ 'ಅಹಿ' (: ಬುರ್ಧ್ನ) ದೇವರು ಇರುವ ಶಕ್ಯತೆಯು ಎದ್ದು ಕಾಣುತ್ತದೆ. ಏಕಪಾತ ಎಂದರೆ ಒಕ್ಕಾಲಿನ ದೇವನನ್ನು, ಕಾಲಿನಂತಹ ತೋಳಿನಿಂದ ಸಾರುತ್ತ ಬರುವ (ಸರ್‌ಪ=) ಭುಜ-ಗ, ಎಂಬ ಹೆಸರಿನಿಂದಲೂ ಕರೆಯಬಹುದು. ಇದೇ ಮಾದರಿಯಲ್ಲಿ ಈ ಪುರುಷನು ಈ ಸೂಕ್ತದಲ್ಲಿ 'ಬಾಹು' (: ಭುಜ) ಆಗಿರುವುದನ್ನು ಕಾಣಬಹುದು. ನಾಗನಿಗೆ ಭುಜ-ಗನಿಗೆ, ಊರು (ತೊಡೆ) ಎಂಬಲ್ಲಿರುವ ಔಚಿತ್ಯವನ್ನು ರಸಿಕರಿಗೆ ತಿಳಿಸಿ ಹೇಳುವುದರ ಆವಶ್ಯಕತೆಯುಂಟೆ? ಊರ್ವಶಿ ನಾರಣನ ತೊಡೆಯಿಂದ ಹುಟ್ಟಿದಳಂತೆ.

'ಬ್ರಹ್ಮಾನಂದ' ಸಹೋದರ ಕೃತಿಗಳನ್ನು ರಚಿಸಿರುವ ಹಾಗೂ ಆಸ್ವಾದಿಸಿರುವ ರಸಿಕ ವರ್ಗಕ್ಕೆ ಈ ಪ್ರತಿಮಾ ಸಂಕೇತವು ಅಪರಿಚಿತವಲ್ಲ. ವಸ್ತ್ರಾಹರಣದಲ್ಲಿ ಯಾಜ್ಞಸೇನಿಯನ್ನು (ಯಜ್ಞಕ್ಕೆ ಆಹ್ವಾನಿಸಿ) ತೊಡೆ ಚಪ್ಪರಿಸಿದ ದುರ್ಯೋಧನನ ಊರುಭಂಗ ಪ್ರತಿಜ್ಞೆಯ ನಾಟಕ ಸುಪ್ರಸಿದ್ಧವಿದೆ. ಆದರೆ, ಕರಾಳ ಕಾಳಹಸ್ತ (: ಸರ್ಪ) ದಂತೆ ತಲೆ ಕೆದುರಿನಿಂತ ಕೇಶಿನೀ ಕೃಷ್ಣೆಯು, ನಾಗಿಣಿಯ ಒಂದು ಸಂಕೇತವೇ ಆಗಿರುವುದನ್ನು ಗಮನಿಸಬೇಕು; ಊರುಭಂಗವಾದ ದುರ್ಯೋಧನನು, 'ಫಣಿಕೇತನ'! ಈ ಪ್ರಪಂಚವೂ ಹೀಗೆಯೆ. ಇದೆಲ್ಲ ಆದಿಶೇಷ ನಾಗನೆಂಬ ಗಾರುಡಿಗನ ಅಸು-ರ ಮಾಯಾವೀ ಪ್ರತಿಮಾ ಸೃಷ್ಟಿ! ತತ್ : ಏಕಂ ಮಾತ್ರ ಸತ್ಯ! ಈ ಸಾಹಿತ್ಯ : ಮಾಧ್ಯಮವು ಮಯಾ ವಿಭ್ರಮಕಾರಿಯಾಗಿರುವಂತೆ ಪ್ರಪಂಚವೂ 'ಅನೃತ'! ಇಲ್ಲಿ ಋತ : ಸತ್ಯವೇನೂ ಇಲ್ಲ ಎಂಬುದುದನ್ನು ಪ್ರಸ್ಥಾಪಿಸುವ ಉದ್ದೇಶದಿಂದಲೇ ಋಗ್ವೇದದ ಅರ್ಕ-ಕಷಾಯದಂತೆ ಸಾವಿರ ಹೆಡೆಯವನೆಂಬ ಆದಿ ನಾಗನನ್ನು 'ಸಹಸ್ರ' ಶಿರ್ಷೇತ್ಯಾದಿ ವಿವಿಧ ವಿಶೇಷಣಗಳಿಂದ ವರ್ಣಿಸಿದ್ದಾಗಿದೆ.

ಸರಿ. ಆದರೆ ಈ ಏಕಶೀರ್ಷ, ಏಕ ಅಕ್ಷ ಮತ್ತು ಏಕಪಾಕ್ ಆಗಿರುವ ಈ ಪುರುಷನು ತ್ರಿಪಾದಿಯಾಗಿರುವುದಾಗಿಯೂ ಹೇಳಲಾಗುತ್ತದೆ. ವಿಷ್ಣುವು ತ್ರಿಪಾದದಿಂದ ವಿಶ್ವವ್ಯಾಪಿಸಿನಿಂತ ಕಥೆ ಉಂಟಲ್ಲ. ಹಾಗೆ ಇಲ್ಲಿಯೂ ಏನೊಂದು ಗುಹ್ಯಸಂಕೇತವು ಇರುವಂತೆ ತೋರುತ್ತದೆ. ದೇಹ : ರಥ ಈ ಸಮೀಕರಣದ ವಿಚಾರ ಹಿಂದೆ ಬಂದಿದೆ. ಅಲ್ಲಿ ದೇಹರೂಪೀ ತೇರಿಗೆ ತ್ರಿ 'ಚಕ್ರ'ಗಳು ಇದ್ದುದು ಕಂಡಿತು. ಈಗ, ಇಲ್ಲಿ (ವಿರಾಟ್) 'ಪುರುಷ'ನ ದೇಹದ ವಿಚಾರವು ಬಂದಿದೆ. ಅದರಿಂದ 'ಚಕ್ರ'ದ ಬದಲು ಪಾತ್ : ಪಾದದ ಸಂಕೇತವನ್ನು ಬಳಸಿರುವುದಾಗಿ ಕಾಣುತ್ತದೆ. ಇಲ್ಲಿಯೂ ಒಂದು ಸೂಕ್ಷ್ಮ ವಿಚಾರವು ಇಲ್ಲದಿಲ್ಲ. ಆದಿಪುರುಷ ವಿಚಾರಕ್ಕಿಂತ ಪೂರ್ವದಲ್ಲಿ ಆದಿ ಮಾತಾಪೂಜೆ ರೂಢಿಯಲ್ಲಿತ್ತು. 'ನಾರ' (: ಸ್ತ್ರೀ) ಆಯನವು ನಿಂದ್ಯ. ನಾರಕಲೋಕದ ದಾರಿ, ಎಂದು ಲೌಕಿಕ ಬುದ್ಧಿಯ ಸಾಮಾಜಿಕ ಟೀಕೆಯಿಂದಾಗಿ ದಿವ್ಯಾಧ್ಯಾತ್ಮದ ಅನುಭಾವಧ ದಿಕ್ಕು ಬದಲಾಗಿ ಇಂದಿನ ನಾರ(ಪುರುಷನ) ಆಯನವು ರೂಢವಾಯಿತು, ಆದಿ ಮಾತಾ: ಆದಿಶಕ್ತಿಯ ಉಪಾಸನೆಯಲ್ಲಿ ಮಧ್ಯಮಾ ವಾಕ್‌ರೂಪದ ತ್ರಿಚಕ್ರದ ರಥವಿರಬೇಕು. ಈಗ ತ್ರಿದಂಡ : ಮೂರು ಕಣ್ಣಿನ(ಗಣ್ಣಿಗ), ಯೋಗ ದಂಡ ಧಾರಿಯಾದ ವಿರಾಟ್ ಪುರುಷೋಪಾಸನೆಯ : 'ಬ್ರಹ್ಮ'-ಚರ್ಯ(ದಾರಿ) ಪ್ರಚಲಿತವಾದುದಾಗಿ ಕಾಣುತ್ತದೆ.

ಈ 'ಬ್ರಹ್ಮ' ಚರ್ಯ (ಮಾರ್ಗ) ದಲ್ಲಿ ಷಟ್-ಚಕ್ರಯೋಗ ಸಿದ್ಧಿಯ ಸಾಧನದ ಮಾತು ಬರುತ್ತದೆ. ಈ ಸಂದರ್ಭದಲ್ಲಿ ಚಕ್ರ ಮತ್ತು ಕಣ್ಣು>ಗಣ್ಣು ಈ ಸಾಂಕೇತಿಕ ಪ್ರತಿಮೆಗಳ ಅರ್ಥದಲ್ಲಿ ಬುದ್ಧಿಪೂರ್ವಕವಾಗಿ ಸಂದಿಗ್ಧತೆ ಉಳಿದಿರುವಂತೆ ತೋರುತ್ತದೆ. 'ಚಕ್ರ' ಈ ಸಂಸ್ಕೃತ ಶಬ್ದ ಸಂಕೇತವು 'ಕೃ' ಆಖ್ಯಾತ ಸಾಧಿತ : ಎಂದು ಪಾಣಿನ್ಯಾದಿಗಳ ಕಾಲದಿಂದ ಬಗೆಯಲಾಗಿದೆ: ಇಂದು 'ಚಕ್ರ'ದ ನಿಜವಾದ ಪ್ರಯೋಜನವು ರಥವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ : ಚರಿಸುವುದಕ್ಕೆ ಚಲಿಸುವುದಕ್ಕೆ. ಈ ದೃಷ್ಟಿಯಿಂದ 'ಚಕ್ರ' ಶಬ್ದ-ಸಂಕೇತಕ್ಕೆ 'ಚರ್' ಆಖ್ಯಾತವು ಸಂಬದ್ಧವಿರಬೇಕಿತ್ತು. ಆದರೆ, ಕೃ (: ಮಾಡು) ಆಖ್ಯಾತ ಸಾಧಿತ 'ಚಕ್ರ', ಮಾಳ್ಕೆ-ಗೆಯ್ತದ ಸಾಧನವಾಗಿ ಮೊತ್ತ ಮೊದಲು ಉಪಯೋಗದಲ್ಲಿ ಇರುವ ಶಕ್ಯತೆಯಿದೆ. ಕುಂಬಾರರ ಪಾತ್ರೆ ನಿರ್ಮಾಣ ಸಾಧನವೆಂಬ ಅರ್ಥದ ಲೋಕವ್ಯವಹಾರದ ಹಿನ್ನೆಲೆಯಲ್ಲಿ 'ಚಕ್ರ'ವು, ರಥದ ನಿರ್ಮಿತಿಯೊಡನೆ ಚಲನ ಕ್ರಿಯೆಯ ಸಾಧನವೂ ಆಗಿರುವ ಶಕ್ಯತೆಯಿದೆ. 'ಚಕ್ರ', ಷಟ್‌ಚಕ್ರ ಮೊದಲು ಕೃತಿಗೆ ಸಂಬಂಧಿಸಿದ್ದು; ಬಳಿಕ ಪ್ರಗತಿಗೆ ಸಾಧನ ಎನಿಸತೊಡಗಿದ್ದು ಆಗಿದೆ.

ಆದರೆ, ಚಕ್ರ : O : ತೂತು : ಬಿಲ ಎಂಬ ಅರ್ಥದಲ್ಲಿ ಕಣ್>ಕಂಡಿ-ಕಿಂಡಿಯೆಂಬ ಕಂದಮಿಳ ಭಾಷಿಕ ಪ್ರತಿಮೆಯನ್ನು ಹೋಲುತ್ತದೆ! ಆದರೆ, 'ಅಕ್ಷ' ಎಂದರೆ ಅಚ್ಚು>ನೆಟ್ಟಗೆ ನಿಮಿರ್ದು-ನಿಗುರಿ ನಿಲ್ಲುವಂತಹದು; ಇರುಸು, ಇದು ತೇರಿನ ಅಚ್ಚಿನಂತೆ ಭೂಮಿಗೆ ಸಮಾಂತರವಿರಬಹುದು, ಮರದ ಬೊಡ್ಡೆಯಂತೆ ನೆಟ್ಟಗೆ ನಿಲ್ಲಬಹುದು. ಪೃಥ್ವಿಯ ಅಕ್ಷದ ತುದಿ=ಧ್ರುವ ಬಿಂದು ಈ 'ಅ-ಕ್ಷ' ಎಂಬ ಸಂಕೇತಕ್ಕೆ ಕ್ಷಯರಾಹಿತ್ಯದ-ಶಾಶ್ವತ ಅಸ್ತಿತ್ವದ ಅರ್ಥವಿದೆ. 'ಧ್ರುವ' ಎಂಬಲ್ಲಿಯೂ ಕ್ಷಣವಾದಕ್ಕೆ ಅಥವಾ ಕ್ಷಯವಾದಕ್ಕೆ ಆಸ್ಪದವಿಲ್ಲ. ಇಲ್ಲಿ ವಿಚಾರಾರ್ಹ

ಮಹತ್ವ ಸಮಸ್ಯೆಯೊಂದುಂಟು : 'ಅಕ್ಷ' ಸಂಕೇತ ಪ್ರತಿಮೆ ಉಭಯಾರ್ಥವುಳ್ಳದ್ದಾಯಿತು! ಎರಡೂ ಅರ್ಥದ ಆಕೃತಿ ತೀರ ಭಿನ್ನ! 'ಅ-ಕ್ಷ' ಮತ್ತು 'ಧ್ರುವ' (ನಿಶ್ಚಿತ, ಶಾಶ್ವತ) ಎಂಬ ಈ ಪ್ರತಿಮಾ : ಸಂಕೇತ ನಿರ್ಮಿತಿಯ ಸಾಂಸ್ಕೃತಿಕ ಪರಿಸರ ಹಾಗೂ ಪ್ರೇರಣೆಯು, 'ಅಕ್ಷ' ಇದಕ್ಕೆ ಕಣ್ಣು>ಗಣ್ಣು, ಮತ್ತು ಹಾವು ಎಂಬ ಅರ್ಥವು ಸಂಭವಿಸಿದ ಸಾಂಸ್ಕೃತಿಕ ಪರಿಸರ ಹಾಗೂ ಜೀವನಾನುಭವ ಇವೆರಡನ್ನೂ ಸಮಾನ ಸ್ವರೂಪದ ಸಂಸ್ಕಾರಗಳು : ಸಮಾನ ಸಾಂಸ್ಕೃತಿಕ ಸಮಯ (ಆಚಾರ-ವಿಚಾರಗಳು) ಎಂದು ಹೇಳಲು ಆದೀತೆ?

ಕಣ್>ಗಣ್ ಈ ಶಬ್ದಮೂಲದ ಹಿನ್ನೆಲೆಯು ಅರಿಕೆಗೆ ಬರಲು, ಕಂದಮಿಳ ಭಾಷಾಶಾಖೆಗಳಲ್ಲಿ ಪ್ರಚಲಿತವಿರುವ ಹಾಗೂ ಈಗ ಮರೆತಂತಾಗಿ ಹಿಂದೆ ಬಿದ್ದಿರುವ ಅರ್ಥವಲಯಗಳ ಸಮೀಕ್ಷೆಯು ಪ್ರಯೋಜನಕಾರಿಯಾಗದಿರದು. ಕಣ್ : (ಮೊದಲು ಮುಚ್ಚಿದ್ದು-) ತೆರೆದುದು; (: ವಿಜ್ : ಬಿಜ್) ಎಚ್ಚತ್ತು ತೆರದ ಕಣ್) ಕಣ್ಣಾಡಿ>ಕನ್ನಡಿ (ತೆರೆದ ಕಣ್ಣು ಎಂಬ ಆಶಯದ ಅರ್ಥವುಳ್ಳುದು), ತೆಂಗಿನಕಾಯ ಕಣ್ಣು; ನೀರು ಬರುವ ತೂತು, ಮೊಲೆ (Tamil Lexicon); ಮಲೆಯಾಳಂ, ತುಳು ಭಾಷೆಗಳಲ್ಲೂ Nipple, teat : ರಸಗ್ರಂಥಿ : ಆದಕಾರಣ, ಕಣ್ (: ಮೊಲೆ :) ಹಾಲು-ರಸ ಸ್ರವಿಸುವ ಗ್ರಂಥಿ, 'ಮೊಲೆ' ಎಂಬ ಮಾತಿಗಿಂತಲೂ 'Nipple'? ಸಂಕೇತದ ಮೂಲಕ 'ಕಣ್' (: ರಸ ಗ್ರಂಥಿಯ ರಂಧ್ರ) ಇದರ ಅರ್ಥವು ಹೆಚ್ಚು ಸ್ಪಷ್ಟವಾಗಲಿದೆ :

> "Small projection in which mammary ducts terminate in mammal of either sex.[೧೬]

'ಕಣ್' ಸಾಂಕೇತಿಕ ಪ್ರತಿಮೆಯಲ್ಲಿ ಪ್ರತಿಬಿಂಬಿತವಿರುವ ಈ ಅರ್ಥಗಳ ಹಿನ್ನೆಲೆಯಲ್ಲಿ ವೇದದೊಳಗಿನ ತ್ರಿ-ಚಕ್ರ ಹಾಗೂ ತ್ರಿ-ಪಾತ್ ಈ ಎರಡೂ ಶಬ್ದ ಪ್ರತಿಮೆಗಳ ಗುಹ್ಯಾರ್ಥವು ತನ್ನ ತಾನೆ ಬಯಲಿಗೆ ಬರುತ್ತಿದೆ. ವಾಶೀ; ಊಲೂಖಲ ಇತ್ಯಾದಿ ಕಂದಮಿಳ ಶಬ್ದಗಳ ಅಸ್ತಿತ್ವದ ಮೂಲಕವಾಗಿಯೂ 'ಅಕ್ಷ' (axle)ಯುರೋ ಭಾರತೀಯ ಮೂಲದ ಶಬ್ದದಲ್ಲಿ ಕಣ್ಣು>ಗಣ್ಣು ಈ ಉಭಯಾರ್ಥಗಳು ಸಂಭವಿಸಿದುದರ ಮೂಲಕವಾಗಿಯೂ ಋಗ್ವೇದದಲ್ಲಿ ಭಾಷಿಕ ಆಕೃತಿ ಹಾಗೂ ಸಾಂಸ್ಕೃತಿಕ ಆಕೃತಿ ವಿಭಿನ್ನವಿರುವ ಶಬ್ದ-ಪ್ರತಿಮೆಗಳು ಅಲ್ಲಲ್ಲಿ ಕಾಣಸಿಕೊಳ್ಳುತ್ತವೆ. ಈ ಸಂದರ್ಭದಲ್ಲಿ ಅಕ್ಷ : ತೂತು (ಕಣ್ಣು) ಮತ್ತು ಇರಸು ಇವೆರಡೂ ಅರ್ಥಗಳು ಹೇಗೆ, ಇದರ ಹಿನ್ನೆಲೆಯು ತಿಳಿಯಲಾರದು. ಆಗ, ಕಣ್>ಗಣ್ಣು ಕಂನುಡಿಯ ನೆರವು ಅವಶ್ಯವಾಗುತ್ತದೆ. ಈಗ! ಈ ಸಂದರ್ಭದಲ್ಲಿ ಇನ್ನೂ ಒಂದು ಮಾತಿನ ಸ್ಪಷ್ಟೀಕರಣವು ಅವಶ್ಯವಿದೆ. 'ಕಣ್' ಈ ಸಂಕೇತಕ್ಕೆ ಇರುವ ಅರ್ಥ ಸೂಚನೆಗಳಲ್ಲಿ ಮೊದಲು ಯಾವುದು ದೃಷ್ಟಿವಾಚಕವೊ? ಅಥವಾ ರಸ ಸ್ರಾವದ ಗ್ರಂಥಿ : ರಂಧ್ರವೊ! ಇವೆರಡರಲ್ಲೂ 'ತೂತು' ಇದು ಸಮಾನ ಆಕೃತಿ, ನಿಜ. ಆದರೆ, ಒಂದು ಪ್ರಕಾಶದ ಕಿರಣದ ಕಿಂಡಿ ಬೆಳಕಿಂಡಿ. ಇನ್ನೊಂದು ರಸದ್ರವಿಸುವ ರಂಧ್ರ! ಕಣ್. ಈ ಸಂಕೇತಕ್ಕೆ ಈ ಎರಡೂ ಅರ್ಥಗಳೂ ಏಕಕಾಲಕ್ಕೆ ಅರಿಕೆಗೆ ಬಂದಿರಲು ಶಕ್ಯವಿಲ್ಲ. ಆದುದರಿಂದ, ಇವುಗಳಲ್ಲಿ ಸರ್ವ ಪ್ರಥಮಾರ್ಥವು ಯಾವುದು? ತದನುಷಂಗದಿಂದ ಅರಿಕೆಗೆ ಬಂದ-ಬರುವ ಅರ್ಥವು ಯಾವುದು? ಇದನ್ನು ಸ್ಪಷ್ಟಪಡಿಸಿಕೊಳ್ಳುವುದು ಅವಶ್ಯವಾಗುತ್ತದೆ.

ರಸಸ್ರಾವದ (ಗ್ರಂಥಿ) 'ಪದ' ಅದೂ ಚಕ್ರ (: ನಾಭಿ : ನೇಮಿ) ಕಣ್ ಎಂಬುದೇ, ಬೆಳಕಿನ ಕಂಡಿ ಎಂಬುದಕ್ಕಿಂತ, ಸರ್ವ ಪ್ರಥಮಾನುಭವದ ಅರ್ಥ, ಪ್ರಧಾನ ಅರ್ಥ, ಇರಲಿಕ್ಕೆ ಬೇಕು. ಮೊದಲಲ್ಲಿ ತ್ರಿ-ಚಕ್ರ ಅಥವಾ ಷಟ್-ಚಕ್ರದ ಯೋಗದಲ್ಲಿ 'ರಸೋ ವೈ ಸಃ' ವೆಂಬ ದಿವ್ಯಾನುಭೂತಿಗೇ ಏನೆಲ್ಲ ಪ್ರಾಶಸ್ತ್ಯವಿರುವುದನ್ನು ವೇದೋಪನಿಷತ್ತುಗಳೇ ಹೇಳುತ್ತಿವೆ. ಅಶ್ವಿನಿಗಳ ಮಧುಸ್ರವಿಸುವ ತಿ-ಚಕ್ರ ರಥವು ಇದಕ್ಕೆ ನಿದರ್ಶನ. ವಿಷ್ಣುವಿನ ಮೂರನೆಯ ಪದ (ಪಾದ)ದಿಂದ ಮಧುಸ್ರವಿಸುತ್ತಿರುವುದಾಗಿ ವೇದದಲ್ಲೆ ಹೇಳಿದ್ದುಂಟು. (: ವಿಷ್ಣೋಃ ಪರಮೇ ಪದೇ ಮಧ್ವ ಉತ್ಸಃ[೧೭] ಅವನ ಈ ತ್ರಿಪದಗಳಿಂದಲೂ ಬರುವ ಮಧುವು, ಲೋಕ ಸರ್ಜಕ ಹಾಗೂ ಅನ್ನ ಶಕ್ತಿಯುಳ್ಳುದಾಗಿದೆ. ತ್ರಿ ಅಂಬಕನು ಮೂರು ಅಮ್ಮೆಗಳುಳ್ಳವನು ಮಧುಮತ್ ಪಯಸ್ ಸ್ರವಿಸುವ ಕಣ್ಣು>ಗಣ್ಣು ಒಟ್ಟು ಮೂರು, ಎಂದರ್ಥ. ಇದು ಪುಂ-ಸ್ತ್ರೀಲಿಂಗಿ (ಪ್ರತಿಮೆ). ಮಾನವನಿಗೆ ತ್ರಿ-ಚಕ್ರಯೋಗದ ರಸಾನುಭೂತಿಯೊಡನೆ

ಅರಳುವ ಕಣ್ಣು ಇದು. ಈ ರಸಾನುಭೂತಿಯ ಬೆಳಕು ಆಗುವ ಕಿಂಡಿ; ಈ ಷಡಂಗಯೋಗದಲ್ಲಿಯ ಅನುಭೂತಿಯೆ ಈ ನರನಿಗೆ ಆ 'ಜ್ಞಾನದ' ಪ್ರಕಾಶವು ಸಂದೃಕ್ ದೃಷ್ಟಿಯಾಗಿ ಪರಿಣಮಿಸುತ್ತದೆ. ಈ ರಸಾನುಭೂತಿ, ತತ್‌ಮಯಾನಂದದ ಅಭಾವದಲ್ಲಿ ಕಣ್ಣು : 'ದರ್ಶನ' ಶಕ್ತಿಯಿಲ್ಲದ ಬರಿ ತೂತು; ಎಂಬುದು ಈ ಸಂಕೇತದ ಉಭಯಾರ್ಥಗಳ ಒಟ್ಟಿನ ಆಶಯವಾಗಿದೆ. ದೃಷ್ಟಿ : ಬೆಳಕು ಇದು ಅಭೌತ ವಸ್ತು (Spiritual). ಭೌತರಸಾನುಭವ ಅದಕ್ಕೂ ಮೊದಲು!

'ಅಕ್ಷ' (: ಕಣ್ಣು), ಎಂಬಲ್ಲಿ ನೇತ್ರಕ್ಕಿಂತ ಭಿನ್ನ ಅರ್ಥವು ಅಭಿಪ್ರೇತವಿದೆ! ನೇತ್ರ, ನಯನ ಈ ಶಬ್ದ ಸಂಕೇತಗಳಲ್ಲಿ ಹುದುಗಿರುವ ನೀ>ನಯ್-(ಮುಂದೆ ಒಯ್ಯು) ಈ ಧಾತ್ವರ್ಥವೇ ಬೇರೆ; 'ಚಕ್ಷು' ಎಂಬಲ್ಲಿ ಬೆಳಕನ್ನು ಕಾಣುವ ಇಂದ್ರಿಯ ಎಂಬ ಅರ್ಥ ಸ್ಪಷ್ಟವಿದೆ. ಈ ಬೆಳಕೂ ಸಹ ಅಭೌತವೇ. ಆದರೆ ಕಣ್ಣು (>ಗಣ್ಣು ಗ್ರಂಥಿ ಅಥವಾ ತೂತು) ಮತ್ತು 'ಅಕ್ಷ', 'ಅಕ್ಷಿ' ಎಂಬಲ್ಲಿ (ಕ್ಷಯರಹಿತ ಜ್ಞಾನದ ದೃಷ್ಟಿ,) ಬೇರೊಂದು ಪಾತಳಿಯ ಅನುಭವ ಅಭಿಪ್ರೇತವಿದೆ. ನಯನ-ಚಕ್ಷು ಸವಿತೃ ಪ್ರಕಾಶಗ್ರಹಣದ ಇಂದ್ರಿಯ. ಆದರೆ, ಅಕ್ಷ : ಕಣ್ಣು : ತ್ರೀ (ಅಥವಾ ಷಟ್) ಚಕ್ರಯೋಗದ ದಿವ್ಯಾಧ್ಯಾತ್ಮದ ಅನುಭಾವದ ಮೂಲಕ ಉತ್ಪನ್ನವಾಗುವ 'ಶಾಶ್ವತ' ದೃಷ್ಟಿ ಎಂಬ ಧ್ವನ್ಯರ್ಥವು ಇಲ್ಲಿದೆ. ಆದರೆ, ಚಕ್ಷು ನೇತ್ರ, ನಯನವು ಲೌಕಿಕ ಜೀವನದ ಮಾರ್ಗಕ್ರಮಣದಲ್ಲಿ ಮಾತ್ರ ಉಪಯುಕ್ತ ದೃಷ್ಟಿ ಎಂದು ತತ್ : ಏಕಂ ಪಂಥೀಯ ಮತ! ಅಕ್ಷವಂತರು ದಿವ್ಯಅಕ್ಷರು : ಬಿಡುಗಣ್ಣವರು! ಈ ಒಮ್ಮೆ ತೆರೆದ ಕಣ್ಣು ಮುಚ್ಚುವುದಿಲ್ಲ! ಬಿಡುಗಣ್ಣರಿಗೆ-ಪಕ್ಷ್ಮಗಳು ಇರುವುದಿಲ್ಲ, ಎಂಬ ಸಾಂಪ್ರದಾಯಿಕ ನಂಬುಗೆಯುಂಟು! ಇವರಿಗೆ ನಿದ್ರೆಯಿಲ್ಲ ಈ ಕಾರಣದಿಂದಲೆ ಬಿಡುಗಣ್ಣರಿಗೆ ಹಗಲು-ಇರುಳು ಭೇದವಿಲ್ಲ! ಈ 'ಅಕ್ಷ' ಶಬ್ದ ಸಂಕೇತಕ್ಕೆ 'Knowledge, religious knowledge ಎಂಬ ಅರ್ಥವಿರುವುದಾಗಿ ಸೂಚಿಸಿ, ಈ ಪ್ರಯೋಗಗಳು ವಿರಳ ಎಂದೂ ಮೋನಿಯರ್ ವಿಲಿಯಂಸ್ ಕೋಶ ನಮೂದಿಸಿದೆ. 'ಜ್ಞಾನ'ವು, ತತ್‌ಮಯತೆಯ ರಸಾನಂದದಲ್ಲಿ ಆಕ್ಷದಿಂದ ಬರುವ 'ಆಕ್ಷ'-ರ ಒಳಗಣ್ಣು ಅರಳಿದಾಗ ಕಣೆಯ ಮೂಲಕ ಪ್ರಾಪ್ತವಾಗುವ 'ಜ್ಞಾನ' ವಿದ್ಯೆಯಿಂದ ಇದು ಬೇರೆ ಎಂದು ಉಪನಿಷತ್ತುಗಳು, ಗೀತೆ ಹೇಳಿರುವುದರ ಮರ್ಮವು ಹೀಗಿದೆ. ಈ ಒಳಕಣ್ : 'ಅಕ್ಷ' (: axle ಇರಸು) : ಇದರ ಮೂಲಕ ಆಗುವ ಜ್ಞಾನವು ಸ್ಪರ್ಶೇಂದ್ರಿಯ ಜನ್ಯ ಪ್ರಜ್ಞೆ. ಆದುದರಿಂದ ಈ ದಿವ್ಯಾಧ್ಯಾತ್ಮ ಜ್ಞಾನೋಪಲಬ್ಧಿಯ ಜೀವನ ಪರಿಸರವನ್ನು ಗ್ರಹಿಸಿಕೊಳ್ಳಲು ಶ್ರಮಪಡಬೇಕಾಗಿಲ್ಲ, 'ಸರ್-ಪ' : ನಾಗ ಎಂಬ ಸಾರ್ಥ ಅಕ್ಷವು ಸ್ಪರ್ಶಜ್ಞಾನದ ಕಣ್ಣು, ಎಂದಲ್ಲಿ ಅವಾಸ್ತವವೇನಿದೆ? ಈ ದೃಷ್ಟಿಯಿಂದ ಕಂದಮಿಳ ಕಣ್ಣು, ಕಣೆ>ಗಣೆ ಈ ಅಕ್ಷರ ಸಾಂಕೇತಿಕ ಪ್ರತಿಮೆಗಳು ಮಾನವರ ಜ್ಞಾನದ ವಿಕಾಸದ ಶ್ರೀಕಾರ : ಗಣ-ಪತಿಯೆ ಆಗಿರುವುದನ್ನು ನಿದರ್ಶನಕ್ಕೆ ತಂದುಕೊಡುತ್ತಿಲ್ಲವೆ? ಸರಸ್ವತಿಯನ್ನು 'ಅಂಬ, ಅಂಬಿತಮೆ' ಎಂದುದೂ[೧೮] ಅಂಬೆ=ಗೌರಿ : ಸಹಸ್ರಾಕ್ಷ ಎಂದುದೂ[೧೯] ಅರ್ಥಪೂರ್ಣವಿಲ್ಲವೆ? ಮೋನಿಯರ್ ವಿಲಿಯಂಸ್ ಕೋಶವು ನಮೂದಿಸಿರುವ ಈ ಅರ್ಥ ; ಆಕೃತಿ ಸಮೀಕ್ಷಾರ್ಹವಾಗಿವೆ: ೩ ಅಕ್ಷ : an organ of sense, Sensual perception, the soul; ಕಣ್ಣ್ > ಗಣ್ಣು=soul=ಜೀವಾಳ! 'ಅಕ್ಷವು', (ಬಾಡಬ ಅಗ್ನಿ) 'ಕುಮಾರ' ಶಕ್ತಿಯ ನಿತ್ಯ ಸನಾತನ ಪ್ರತಿಮೆ, ಎಂದರೆ ಅಪರಾಧವಾದೀತೆ? ಉತ್ತಾನ ಪದ (: ಅಕ್ಷ : ಬಡ್ಡಿ [ವೃಕ್ಷ]) ಮತ್ತು 'ಧ್ರುವ' (: ಕುಮಾರ) ಎರಡೂ ಏಕಕಾಲಕ್ಕೆ! ಈ ಪ್ರಾತಿನಿಧಿಕ ಸಂಕೇತವು ಒಂದು ನೈತಿಕಕಥೆ (Parable) ಮೂಲತಃ! ಆದರೆ, ಆಖ್ಯಾಯಿಕಾ (Legend) ಸ್ವರೂಪದ ಜರತಾರೀ ವಸನ ಧರಿಸದಿದ್ದರೆ, ಈ ನಾಗ : ಲಿಂಗನ ಪ್ರತಿಮೆಯನ್ನು ಈವರೆಗೆ ಉಳಿಸಿಕೊಳ್ಳಲು, ಸಾಮಾಜಿಕ ಪ್ರಜ್ಞೆ : ಮನುಜರ ಹಂತದ ಅಂತಃಸಾಕ್ಷಿ, ಒಪ್ಪಬಹುದಿತ್ತೆ ಎಂಬ ಸಂದೇಹಕ್ಕೆ ಅವಕಾಶವಿದೆ. 'ಉತ್ತಾನ-ಪದ' ಈ ಸಂಕೇತವು ನಿಗುರಿ ನಿಂತ : ದಕ್ಷ : ಬಡ್ಡಿ (ವೃಕ್ಷ) ಎಂಬರ್ಥದಲ್ಲೆ ಋಗ್ವೇದದಲ್ಲಿದೆ![೨೦] ಅಲ್ಲಿ ಈ ಉತ್ತಾನಪದ ಪ್ರಚ್ಛನ್ನ 'ದಕ್ಷ'ನೇ ಎಂದು ಸಿದ್ಧವಾಗುತ್ತದೆ. ವೃಕ್ಷ (ಬಡ್ಡಿ) : ಉತ್ತಾನಪದ ಇದು ದಕ್ಷವಿಲ್ಲದಾಗ-ಬರಿಕೊರಡು ಆದಾಗ, ಜಾತೀ-ಹೆಣ್ಣು ಒದ್ದಲ್ಲಿ ಅದು ಮರಳಿ ಚಿಗಿ (ಜಿಗಿ)ಯ ತೊಡಗುತ್ತದೆ, ಇದರ ಹೆಸರು ಅಶೋಕವೃಕ್ಷ! ಅಂದರೆ ಅ-ದಕ್ಷ

ಉತ್ತಾನಪದ ಶೋಕವೃಕ್ಷ ತಾನೆ, ಕಾಲಿದಾಸಾದಿ ಕವಿಪುಂಗವರು ಬಲ್ಲ ಈ 'ಸಮಯ'ದ ಅರ್ಥವು ದಿವ್ಯಾಕ್ಷದ ಸಂದರ್ಭದಲ್ಲಿ ಮಾತ್ರ ಗೋಚರಕ್ಕೆ ಬರುತ್ತಿರುವ ಈ ಸೋಜಿಗ ಅಭ್ಯಸನೀಯವಿದೆ.

ಪೃಥಿವಿಯನ್ನು ಸ್ಥಿರವಾಗಿ ನಿಲ್ಲಿಸಿರುವ-ಅದು ಕುಸಿದು ಕ್ಷಯಿಸದಂತೆ ಆಧಾರಭೂತವಾಗಿರುವುದೇ 'ಇರುಸು': 'ಅಕ್ಷ'. ಈ ಸ್ಥಿರವಾದ 'ಅ-ಕ್ಷ' ದ ಒಂದು ನಿತ್ಯ ಬಿಂದು: ಧ್ರುವ : 'ನಕ್ಷತ್ರ' ಎಂದಲ್ಲಿ ಧ್ರುವ ಸಂಕೇತಕ್ಕೆ ಇರುವ ಅವಿನಾಶಿ, ಶಾಶ್ವತ (ಸ್ಥಾನ) ಎಂಬ ಅರ್ಥವು ದಿವ್ಯಾಧ್ಯಾತ್ಮದ ಅನುಭೂತಿಯಲ್ಲಾದ ದಿವ್ಯಅಕ್ಷ (ಕಣ್>ಗಣ್ಣ) ದರ್ಶನದ ಫಲವಲ್ಲ, ಇದು ಸವಿತೃ ಭೂಮಿಕೆಯ ಅನು-ಭೂತಿ ಎಂಬುದು ಸ್ಪಷ್ಟವೆ ಇದೆ. ದಿಕ್ಕಾಲ ಪರಿಸರದ ಜೀವನ ಪ್ರವಾಹವು, ಮಾನವ-ಸಂತತಿ ರೂಪದಲ್ಲಿ ಸಂತತವಾಗಿ-ಅ-ಕ್ಷಯವಾಗಿ ಉಳಿಯುವುದು-ಉಳಿಯ ಬೇಕೆಂಬ ಶ್ರದ್ಧೆಯನ್ನು ಗಮನಕ್ಕೆ ತಂದುಕೊಡುವ ಈ ಪ್ರಾರ್ಥನೆಯೂ ಋಗ್ವೇದದಲ್ಲಿಯೇ ಉಂಟು. ಈ ಒಂದು ಋಚೆ ನೋಡಿ:

> ಧ್ರುವಾ ದ್ಯೌಃ, ಧ್ರುವಾ ಪೃಥ್ವೀ ಧ್ರುವಾಸಃ ಪರ್ವತಾಃ ಇಮೇ।
> ಧ್ರುವಂ ವಿಶ್ವಂ ಇದಂ ಜಗತ್, ಧ್ರುವಃ ರಾಜಾ ವಿಶಾಂ ಅಯಮ್॥[೨೧]

ಐಹಿಕ ಜೀವನದ ಬಗೆಗಿನ ಶ್ರದ್ಧೆ, ಆಕಾಂಕ್ಷೆಗಳನ್ನುಳ್ಳ ಸುಂದರವಾದ ಸೂಕ್ತಗಳನ್ನು ಅಲ್ಲಿ ಇಲ್ಲಿ ಎದ್ದುಕಾಣುವಂತೆ ಅಲ್ಲಲ್ಲಿ ಯೋಜಿಸುತ್ತಿರುವ ಈ ಸಂಕಲನಕಾರನ ಜಾಣ್ಮೆಯಿಂದಾಗಿ ಈ ವೇದವು ಪ್ರವೃತ್ತಿಪರ ಸೂಕ್ತಸಂಗ್ರಹ ಎನಿಸುವುದು. ಒಂದು ಬಗೆಯಲ್ಲಿ, (ತೋರಿಕೆಯಲ್ಲಿ) ಪ್ರವೃತ್ತಿಪರ ಮೊಗವಾಡದ ದೈವತಪ್ರತಿಮೆಗಳ ಸ್ತೋತ್ರಗಳನ್ನು ಸೇರಿಸಿಯೂ ಹಾಗೂ ದ್ವಂದ್ವಾರ್ಥದ ಅದ್ಭುತ ಪ್ರತಿಮಾ ಸಂಕೇತಗಳಿಂದ ಪವಾಡ ಚಮತ್ಕಾರಗಳ : ಸಂಭ್ರಾಮಕ ಆವರಣ ನಿರ್ಮಾಣದಿಂದಾಗಿ ಇನ್ನೊಂದು ಬಗೆಯಲ್ಲಿಯೂ ಈ ಋಗ್ವೇದದ ಏಕಶೀರ್ಷ, ಏಕಪಾದ, ಏಕಾಕ್ಷ: ವಾತರಶನ, ವಾತಾಶ್ವರೋಹಿ (ಕೇಶೀ) ಪುರುಷನು, ಮಧ್ಯಮಾವಾಕ್ (ಪಾನಪಾತ್ರೆ) ಸೇವನದ ಉಪಮಂಥದಲ್ಲಿ ತೊಡಗಿರುವನೆಂಬ ಈ ಪ್ರಧಾನ ಆ-ಕೃತಿಯನ್ನು ಗ್ರಹಿಸಿಕೊಳ್ಳುವುದು ತುಂಬ ದುಷ್ಕರವಾಗಿದೆ! 'ನಕ್ಷತ್ರ', ಒಂದು ಕಾಲದ ವೇದದ ಶ್ರದ್ಧೆಯಂತೆ ಮೃತಾತ್ಮಗಳ ಸ್ಥಿರವಾದ ವಾಸಸ್ ಸ್ಥಾನ. ಆದರೆ, ಚಾಂದ್ರ ಸಂಪ್ರದಾಯದಂತೆ ನಕ್ಷತ್ರ, 'ತಾರೆ' ಆಯ್ತು! ತಾರಾ : ಭಗವತೀ'; ಚಂದ್ರನ ಭೋಗಸ್ಥಾನವೆಂಬ ಹಾಗಿನ ಸಾಂಕೇತಿಕ ಪ್ರತಿಮೆ ನಿರ್ಮಿತವಾಯಿತು!

ಈ ಬಿಡುಗಣ್ಣಿನ ಏಕಪಾತ್ (ಅಜ) ಪುರುಷನ ಮೂಲ ಆಕೃತಿಯ ಕಡೆಗೆ ಗಮನವು ಹೋಗದಿರುವಂತೆ ಮಾಡಿರುವ ಈ ಹಂಚಿಕೆ ನೋಡಿ : ಯಾವ ಪುರುಷನನ್ನು ಯಾಜ್ಞೀಯ ಪಶುವಾಗಿ (ಬಲಿಗೊಡಲು) ನಿರ್ಮಿಸಲಾಗಿದೆಯೊ ಆತನ ಮುಖವು ಯಾವುದು? ಆತನ ಬಾಹುಗಳು ಯಾವುವು? ತೊಡೆಗಳು ಯಾವುವು? ಪಾದಗಳು ಯಾವುವು? ಈ ಪ್ರಶ್ನಾವಳಿಯಿಂದ 'ಪುರುಷ'ನತ್ತಣಿಂದ, ಸಮಾಜರೂಪೀ ಸಮಷ್ಟಿ ವೈಶ್ವಾನರ ರೂಪದ ಕಡೆಗೆ ಪಾಠಕರ ಗಮನವನ್ನು ಸೆಳೆಯಲಾಗಿದೆ ಮತ್ತು ಈ ಹಂಚಿಕೆಯಿಂದ ತ್ರಿಲೋಕವ್ಯಾಪೀ ವೈಶ್ವಾ-ನರನ ಎಂದರೆ (ಭೂಃ, ಭುಃ, ಸ್ವಃ ವ್ಯಾಪೀ) ತ್ರಿತನ (: ಮನು-ಜ) ನನ್ನು ಮೇಲಣ ಇಬ್ಬರಿಂದ ಬೇರ್ಪಡಿಸಿ 'ನರ'< ನಾರನನ್ನಾಗಿಸುವ ಸಂಧಿಯನ್ನೂ ಸಾಧಿಸಿದ್ದಾಗಿದೆ! ಏಕೆಂದರೆ ಈ ನಾರ : ಪುರುಷ, ಮೇಧದ ಪಶುವೇ ಹೌದು.

ಈ 'ಪುರುಷ' ಬಲಿ=ಪುರುಷ ಮೇಧ ಎಂದರೇನು, ಎಂಬ ಪ್ರಶ್ನೆಯು 'ಸರ್ಪ'ಯಾಗದ ಸಮಸ್ಯೆಯನ್ನೂ ಕೆದರುತ್ತಿದೆ! ಅಲ್ಲದೆ, ವರುಣನಿಗೆ ಬಲಿಕೊಡಲು ತಂದ (ಶುನಃ) ಶೇಪನ ಸಮಸ್ಯೆಗೆ ಪರಿಹಾರ ನೀಡುತ್ತಿದೆ. ರಾಜರ ಪಟ್ಟಬಂಧಮಹೋತ್ಸವದ ಕಾಲಕ್ಕೆ >ಶುನಃ ಶೇಪನ' ಈ ಬಲಿದಾನದ ಕಥಾಭಾಗವನ್ನು-ಈ ಮಂತ್ರಗಳನ್ನು ವಿನಿಯೋಗಿಸಿ ಆಶೀರ್ವದಿಸುವ ವಾಡಿಕೆಯಿದ್ದಿತು! ಈ ಬಗೆಯ 'ಪುರುಷ' ಬಲಿಯ ಒಂದು ಪ್ರಕಾರವು, ಗ್ರೀಕ್ ಪವಾಡಕಥೆಗಳಲ್ಲಿ ಚಿತ್ರಿತವಾಗಿದೆ.

ಗ್ರೀಕ್ ಪವಾಡ ಕಥೆಗಳಲ್ಲಿ ಬರುವ ಆಕಾಶವಾಚಕ ನಾಮದ Urenus (ಯುರೆನಸ್) ದೇವನು, ಭಾರತೀಯ ವರುಣನನ್ನು ಹೋಲುತ್ತಾನೆ, ಎಂದು ರಾಬರ್ಟ್ ಗ್ರೇವ್ಸ ಹೇಳುತ್ತಾರೆ.[೨೨] ಹಿಟಾಯಿಟ್ ಜನದ

ದೇವ 'ಕುಮರ್‌ಬಿ' (Kumarbi) ಹಿಟಾಯಿಟ್ ಆಕಾಶದ ದೈವತ ಅನು (=ಯುರೆನಸ್) ದೇವನ 'ಪುರುಷ'ನನ್ನು ಕತ್ತರಿಸುತ್ತಾನೆ; ಕೆಲವು ಬೀಜ ನುಂಗುತ್ತಾನೆ; ಕೆಲವು ಬೀಜ ಉಗುಳುತ್ತಾನೆ. ಉಗುಳಿದ ಎಡೆಯ ಆ ಗುಡ್ಡದ ಮೇಲೆ ದೇವಿಯು ಪ್ರಾದುರ್ಭಸುತ್ತಾಳೆ. ಅಫ್ರೋಡೈಟ ದೇವಿ ಭಾರತೀಯ 'ಆ-ಫ್ರೀ' ಸೂಕ್ತದ ತಿಸ್ರೋದೇವಿಯರನ್ನು ಹೋಲುವ ಗ್ರೀಕ್ ತಿಸ್ರೋದೇವಿಯರಲ್ಲಿ ಹಿರಿಯಳು. ಯುರೆನಸ್ (: ಅನು) ದೇವನ ಲಿಂಗ ಶೇಷದಿಂದ ಸಂಭವಿಸಿದಳು. ಕುಮರಬಿ ದೇವನಿಂದ ಶೃಂಗಿಸರ್ಪ ಸ್ವರೂಪ ಡೈಯೊನಿಸಸ್ ಹುಟ್ಟುತ್ತಾನೆ.

'ಯುರೇನಸ್ ದೈವತವು, ಪಿತೃಪ್ರಧಾನ ಕುಟುಂಬ ಪದ್ಧತಿಯ ಜನದ ಆರಾಧ್ಯ ಪ್ರತಿಮೆ. ಈ ಪ್ರತಿಮಾ : ಸಂಕೇತ ಪೂಜಾ ಸಂಪ್ರದಾಯವು ಗ್ರೀಸಿನಲ್ಲಿ ಬಂದು ಒಲಂಪಿಯಸ್ ಪಂಥದಲಿ ಶಿಷ್ಟಮಾನ್ಯವಾಯಿತು' ಎಂದು ರಾಬರ್ಟ್ ಗ್ರೇವ್ಸ ಹೇಳುವ ಮಾತು ಭಾರತೀಯ ವರುಣನಿಗೂ ಅನ್ವಯಿಸುತ್ತದೆ. ಭಾರತೀಯ ಆಪ : ರಸ ಪಂಥದಲ್ಲಿ, ಒಲಂಪಿಯಸ್ ಪಂಥವು ಆಪ : ರಸ ಭೂಮಿಕೆಯದೊ ಇಲ್ಲಿ ಸ್ಪಷ್ಟತೆಯಿಲ್ಲ. ಸೌರ ವರುಣನು ರಾಜ ಸಮ್ರಾಟ್ ಹಿರಿಯ ದೇವರಾಗಿ ಪೂಜೆಗೊಂಡಿದ್ದಾನೆ: ಆಪ : ನಾರಪುತ್ರಿ ಎಂಬ ಉರ್ವಶಿಯಲ್ಲಿ (ನಾರನ ತೊಡೆಯಿಂದ ಹುಟ್ಟಿದವಳೆಂಬ ಕೀರ್ತಿಯವಳು!). ವಸಿಷ್ಠ, ಅಗಸ್ತ್ಯ ನರೋತ್ತಮರು ಹುಟ್ಟುತ್ತಾರೆ. ಇವರು ಮಾತೃಪ್ರಧಾನ ಕುಟುಂಬ ಪದ್ಧತಿಯ ಅಭಿಮಾನಿಗಳು : 'ದತ್ತಕ ತೆಗೆದುಕೊಳ್ಳುವ ಹೊತ್ತು ತನಗೆ ಬರದಿರಲಿ' ಎಂಬ ವಶಿಷ್ಠನ ಪ್ರಾರ್ಥನೆ ಉಂಟು. ಇದು 'ಕ್ಷೇತ್ರ-ಜ' ಸಂತತಿಯ ಪರಂಪರಾಸೂಚಕವಾಗಿದೆ. ಇಲ್ಲಿ ಇನ್ನೂ ಒಂದು ಸಾಮ್ಯವಿದೆ. ಯುರೆನಸ್ ಈ ಹೆಸರು ಮೊದಲು ಸ್ತ್ರೀ ವಾಚಕವಂತೆ: 'Urana? ಎಂಬ ಸ್ತ್ರೀಲಿಂಗಿ ನಾಮವು (ಪರ್ವತದೇವಿ: queen of Mountains) ಗ್ರೀಕ್‌ಭಾಷೆಯಲ್ಲಿ ಪುಲ್ಲಿಂಗಿಯಾಗಿ ಆಕಾರದ ಆಕಾಶದ ದೈವತ ಎಂಬರ್ಥದ ನಾಮವಾಯಿತು, ಎಂದು ರಾಬರ್ಡ್ ಗ್ರೇವ್ಸ ಹೇಳಿದ್ದಾರೆ. ಆದರೆ, ಈ ಸ್ತ್ರೀ-ಪುಲ್ಲಿಂಗೀನಾಮಗಳ ಮೊದಲು ಎರಡು ಭಿನ್ನ ಭಾಷಿಕ ನಾಮಗಳೊ ತಿಳಿಯದು. ಅದೇನೇ ಇದ್ದರೂ, ಈ ಬಗೆಯಲ್ಲಿ ಮೂಲ ಸ್ತ್ರೀಲಿಂಗಿ ನಾಮ ಪುಲ್ಲಿಂಗಿಯಾಗಿರುವಲ್ಲಿ 'ನಾರ'ವೂ ಒಂದು. ಮರಾಠಿಯಲ್ಲಿ ಇಂದಿಗೂ ಸ್ತ್ರೀಲಿಂಗಿ. ಸಂಸ್ಕೃತದಲ್ಲಿ ವೇದಕಾಲದ ತರುವಾಯ ಸಾಹಿತ್ಯದಲ್ಲಿ ಬಂದು ಪುಲ್ಲಿಂಗಿಯಾಗಿದೆ. 'ಮಲ್ಲಿ' 'ನೇಮಿ' ಇವು ಮಲ್ಲಿ-ನಾಥ. ನೇಮಿ-ನಾಥ ರೂಪದಲ್ಲಿ ಪುಲ್ಲಿಂಗಿಯಾಗಿದೆ.

ಇನ್ನು ಈ ಸಾಂಕೇತಿಕ ಚಮತ್ಕಾರ ನೋಡಿರಿ : ತ್ರಿಪಾತ್ : ತ್ರ್ಯಂಬಕ : ಮೂರು ಕಣ್ (: ಅಕ್ಷ) : ತಾರೆ: ಇದು ನಿಜವಾಗಿ ಸ್ತ್ರೀ ರೂಪ; ತ್ರಿ-ಚಕ್ರ ರಥ : ದೇಹ ಸರಿ. ಈ ನಾಮ-ರೂಪವೆ ಮೂರುಗಣ್ಣಿನ (ಕಣ್ಣಿ) (ದೇಹ:) ದಂಡವೆಂದಾಗ ಪುಲ್ಲಿಂಗಿಯಾಗುತ್ತದೆ! 'ಶರಣ್ಯೇ ತ್ರ್ಯಂಬಕೇ ದೇವಿ'ಎಂಬಲ್ಲಿ ಈ ತ್ರಿಚಕ್ರ ದೇವಿಯ ಮೂಲದರ್ಶನವಾಗುತ್ತದೆ. ಇವಳೇ 'ನಾರಾಯಣಿ' ನಿಜ. ತ್ರಿ-ಅಂಬಕ ಕಣ್ಣು ಉಳ್ಳ ದೇವಿ ನಾರ : ಆಪ: ಪಯಸ್. ಮಧು ಸ್ರವಿಸುವ ನಾರಾಯಣಿಯೆ ಅಲ್ಲವೊ? 'ಆಪೋ ನಾರಾಃ' ಈ ಕಾರಣದಿಂದಾಗಿ ಈ ತ್ರ್ಯಂಬಕದೇವಿ ನಿತ್ಯ 'ಆರ್ದ್ರಾ'; ಆದಕಾರಣ 'ನಾರಾಯಣಿ'. ಇವಳ ಪುತ್ರರು 'ದ್ರಪ್ಸಿನಃ' : 'ದ್ರಪ್ಸಸ್ಕನ್ನಃ' ಈ ದಿವ್ಯ ಆಪ : ರಸ ಸ್ವರೂಪ ಶ್ರೀದೇವಿಯ ಕೃಪಾಪ್ರಸಾದ ಪೋಷಣೆಯಿಂದ ಲೌಕಿಕ ಪ್ರಪಂಚದ ಅಸ್ತಿತ್ವ ಹಾಗೂ ಪೋಷಣೆ, ಸಂವರ್ಧನೆ ಶಕ್ಯವಾಗಿದೆ. ಆದಕಾರಣ, ಶ್ರೀ-ದೇವಿ : ಭಗವತಿ ನಿತ್ಯಮುಕ್ಕಣ್ಣೆ. ಆದರೆ, ಪಿತೃಪ್ರಧಾನ ಕುಟುಂಬ ಪದ್ಧತಿಗೂ ಮೊದಲು, ಸ್ತ್ರೀ ಶಕ್ತಿಗೇ ಪರಮೋಚಿತವಾದ ಹಾಗೂ ಸಾರ್ಥವಾದ 'ಮುಕ್ಕಣ್ಣೆ' ಎಂಬ ಹೆಸರನ್ನು ಸ್ವ-ಅರ್ಥೀ ಪುರುಷನು ತನಗೆ ಅಪಹರಿಸಿಕೊಂಡನು! ಆದರೆ, ಅದು ಬರಿನಾಮ ಮಾತ್ರ! ಇವನ ಎರಡು ಕಣ್ಣು (Nipples) ಬರಡು ಎಂಬುದನ್ನು ಯಾವುದೇ ಪ್ರಾಮಾಣಿಕ ಗಂಡಸು ಒಪ್ಪದಿರಲಾರನು. ಕಣ್>ಗಣ್ ಇದು ಅಪ : ರಸ ಸರ್ಜಕ ಗ್ರಂಥಿ. ಗಂಡಸಿಗೆ, ಜ್ಞಾತ ಜೀವನ ರೀತಿಯಲ್ಲಿ, ಎಂದಿಗೇ ಆಗಲಿ, ಒಂದೇ ಒಂದು ಗಣ್ಣು. ಆದುದರಿಂದ ತಾನು 'ತ್ರಿಪಾದ'ನೆಂಬ ವಿಷ್ಣುವು, ಮಹಾರಾಷ್ಟ್ರಿಕ ಆರಿಯ ಸಂಪ್ರದಾಯವು ಹೇಳುವಂತೆ 'ಮೋಹಿನಿ' ರಾಜನೇ ನಿಜ! ಗಂಡಸಿನ ವೇಷದ ಸ್ತ್ರೀರೂಪ! ಮತ್ತು ಸ್ತ್ರೀ ವೇಷದ ಪುರುಷರೂಪ. ಇವು ಭಾರತೀಯ ಡೈಯೋನೇಸಿಸ್ ಸಂಪ್ರದಾಯದ ವೈಲಕ್ಷಣಗಳು.

ಗ್ರೀಕ್ ಪವಾಡಕಥೆಗಳ ತುಲನೆಯ ಮೂಲಕ, ಋಗ್ವೇದ ಕಾಲೀನ 'ಗುಹಾನಿಹಿತ', 'ಗುಹ್ಯಾತ್ ಗುಹ್ಯತಮ' ಸಾಂಕೇತಿಕ ಪ್ರತಿಮೆಗಳು ಕೆಲವೊಂದು ಅರ್ಥವನ್ನು ಪಡೆಯತೊಡಗುತ್ತವೆ. ಆದರೆ, ಇಂತಹ ತುಲನೆಯ ಈ ಪ್ರಬಂಧದ ವಿಷಯವಲ್ಲ. ಯುರೆನಸ್‌ನ ಕಥಾಭಾಗದಿಂದ ಋಗ್ವೇದಕಾಲೀನ ಮಾತ್ರವಲ್ಲ, ಇಂದಿಗೂ ಪ್ರಚಲಿತವಿರುವ ಕಥಾಭಾಗಗಳ ಅದೆಷ್ಟೋ ಸಂದಿಗ್ಧ ಸ್ಥಳಗಳು ಸ್ಪಷ್ಟತೆಯನ್ನು ಪಡೆಯುವ ಶಕ್ಯತೆಯು ಕಾಣುತ್ತಿದೆ. The castration of Urenus' ಈ ಕಥಾಭಾಗವನ್ನೇ ತಕ್ಕೊಳ್ಳಿ. ಋಗ್ವೇದದ ಪ್ರಜಾಪತಿ ಅಥವಾ ಪುರಾಣದಲ್ಲಿ ದಕ್ಷ (ಪ್ರ.ಪ್ರ)ನ ತಲೆ ಕತ್ತರಿಸಲಾದ ಕಥೆಯುಂಟು. ಇಲ್ಲಿ ಕತ್ತರಿಸಲ್ಪಟ್ಟದ್ದು ದೇಹದ ಶಿರಚ್ಛೇದವಿರದೆ 'ಪುರುಷನ' ಶಿರಸಿನ ಭಾಗವನ್ನು ಕತ್ತರಿಸಿ ರುಂಡವಿಲ್ಲದ 'ಮುಂಡ' ಅಥವಾ 'ಪಾದ' ಅಡಿಯ ಭಾಗ ಉಳಿಸಿರುವ ಸೂಚನೆಯುಂಟು. ಪುರುಷ ಸೂಕ್ತದಲ್ಲಿ 'ಶಿರ' ಮತ್ತು 'ಪಾದ' ಇವೆರಡನ್ನೂ 'ಅಕ್ಷ' (: ಕಣ್>ಗಣ್ಣು) ಸಂದರ್ಭದಿಂದ ಬೆಂಗಡಿಸಿ ವರ್ಣಿಸಿದ್ದುಂಟು. (ಸಹಸ್ರ) ಶೀರ್ಷ, (ಸಹಸ್ರ) ಅಕ್ಷ : (ಸಹಸ್ರ) ಪಾತ್ ಈ ಮೂರನ್ನೇ ನಿರ್ದಿಷ್ಟಪಡಿಸಿ ಹೇಳಿರುವಲ್ಲಿ 'ಪ್ರತಿಮಾ' ಇದು. ಇದನ್ನು ಅಳೆದು ನಿರ್ದಿಷ್ಟಪಡಿಸಿ 'ದಶಾಂಗುಲ' ಎಂಬಲ್ಲೂ ಈ ಪುರುಷನು ಇನ್ನೊಂದು ವಾಸ್ತವ ರೂಪದಲ್ಲಿ ದರ್ಶನವೀಯುತ್ತಾನೆ!

ಋಗ್ವೇದದ ಮಿತ್ರ (ಸೂರ್ಯ)ನ ಸಂಗಾತಿ ಎಂಬ ಹಾಗೆ ಚಿತ್ರಿತನಾಗಿರುವ ಸಮ್ರಾಟ್ 'ವರುಣ' ಎಂಬವನು, ವನಸ್ಯ (ಗಿಡದ) ಸ್ತೂಪಂ (ಬಡ್ಡಿ) ಆಕೃತಿಯ ತನ್ನ 'ಪುರುಷ'ನನ್ನು ಪ್ರಾರಂಭದಲ್ಲಿ ಬಚ್ಚಿಟ್ಟುಕೊಂಡಿದ್ದರೂ ಮೊದಲನೆಯ ಮಂಡಲದಲ್ಲಿ ಬಹಿರಂಗವಾಗಿಯೆ ಪ್ರದರ್ಶಿಸಿ, ತನ್ನ ಸಾರ್ವಭೌಮ ಶಕ್ತಿಯ ದಿವ್ಯದಂಡ (: ಖಡ್ಗ)ವನ್ನು ಝಳಪಿಸುತ್ತಿದ್ದಾನೆ! ಈ ಸೂಕ್ತರಚನೆಯಲ್ಲಿ ಒಂದು ಔಚಿತ್ಯವುಂಟು. ವರುಣನ ಈ 'ಪುರುಷ'ನು ಕಂಡುದು ಯಾರಿಗೆ? ತನ್ನ (ಭವ?) ಬಂಧನದ ಪಾಶ (?) ಕತ್ತರಿಸಿಬಿಡಲು ದೈನ್ಯದಿಂದ ಪ್ರಾರ್ಥಿಸುತ್ತಿರುವ ಶುನಃಶೇಪನಿಗೆ!

ವರುಣನನ್ನು 'ರಾಜಾ' 'ಸಮ್ರಾಟ್' ಎಂದು ಹೇಳುವುದಾದರೂ ಅವನನ್ನು ತ್ರಿತ : ಇಂದ್ರನ ಸಂಪ್ರದಾಯ ದವರು ಕೀಳ್ಗೆಗೆದಿರುವುದಾಗಿ ಅನೇಕ ಸಂಶೋಧಕರ ತಕರಾರು ಇದೆ. ಆದರೆ, ಇದರ ಕಾರಣವನ್ನು ಮಾತ್ರ ಹೇಳಲು ಈವರೆಗೆ ಶಕ್ಯವಾಗಿದ್ದಿಲ್ಲ. ವನಸ್ತೂಪ : (ಶುನಃ) ಶೇಪ ಈ ಸಂಪ್ರದಾಯದ 'ಪುರುಷ' ಪೂಜೆ ಅಮಾನ್ಯವಿರುವವರು ವರುಣನ 'ಸಮ್ರಾಟ್' ಪದವಿಯನ್ನು ಮನ್ನಿಸದಿರುವುದು ಸಹಜವೇ ಇದೆ. ಶುನಃಶೇಪನಿಂದ, ಈ ಸಂದರ್ಭದಲ್ಲಿ ಪ್ರಾರ್ಥಿಸಲಾದ 'ಅಗ್ನಿ', ಬಾಡಬನೇ ಇರಲಿಕ್ಕೆಬೇಕು. ಇವನು 'ಜಾತವೇದ' ಅಗ್ನಿಯಾಗಿರಲು ಶಕ್ಯವಿಲ್ಲ. ಜಲದೇವರನ್ನು ಒಲಿಸಿಕೊಳ್ಳಲು, ಜಲದಲ್ಲಿ ಅಡಗಿದ ಅಗ್ನಿಯನ್ನು ಪ್ರಾರ್ಥಿಸುವಲ್ಲಿಯೆ ಔಚಿತ್ಯವುಂಟಷ್ಟೆ? ಈ ಬಾಡಬನಿಗೆ 'ಗೌತಮಾಗ್ನಿ' ಎಂಬ ವಿಶಿಷ್ಟ ಹೆಸರಿದೆ.[೨೪] 'ಪುರುಷೋವಾವ ಗೌತಮಾಗ್ನಿಃ'; 'ಯೋಷಾವಾವ ಗೌತಮಾಗ್ನಿಃ' ಹೀಗೆ 'ಜಾತವೇದ' ಅಗ್ನಿಯ ಅವಮೂಲ್ಯವು ಕೊನೆಮುಟ್ಟಿದೆ. ಇನ್ನೂ ಒಂದು : 'ಧೀ' ಶಕ್ತಿಪ್ರಚೋದಕನೂ 'ಕವಿ'ಯೂ ಎಂದು ವರ್ಣಿಸಲ್ಪಟ್ಟ ಸವಿತೃವನ್ನೂ ಈ ಸಂದರ್ಭದಲ್ಲಿ ಸ್ಮರಿಸಿಕೊಂಡುದುಂಟು. ಈ ಹೊಂಚು ಅದಿತಿ. 'ಕ' ನಾಮಕ ಹಿರಣ್ಯ-ಗರ್ಭ : ಪ್ರಜಾಪತಿ, ಇವರ ಸರ್ವ ಪ್ರಥಮ ಸಂಸ್ಮರಣದಿಂದಲೇ ಪ್ರಾರಂಭವಾಗಿದೆ. ಮೂಲ 'ಅಗ್ನಿ' ಹಾಗೂ 'ಸವಿತೃ' ಈ ದೇವತೆಗಳು ಇಲ್ಲಿ ವಿಸಂಗತ; ಬರಿ ಶಬ್ದ-ಸಂಕೇತದಿಂದ ಸಂಭ್ರಮಕ್ಕೆ ಅವಕಾಶ ಕಲ್ಪಿಸಲಾಗಿದೆ! ನಿರಗ್ನಿಗಳ ಜಲಸೇಚಕ ವರುಣ : ಅಪ : ರಸ ಭೂಮಿಕೆಯ ಈ 'ಯಜ್ಞ'ದ ಸಂದರ್ಭದಲ್ಲಿ ಪ್ರಾರ್ಥಿತನಾದ ಸವಿತೃವು ಯಾರು? ಧೀಪ್ರಚೋದನೆಯ ಕಾರ್ಯ ಇದಲ್ಲ. ಅಕ್ಷರಶಃ 'ಸರ್ವಸ್ಯ ಪ್ರಸವದ' ಸಂದರ್ಭದಲ್ಲಿ ಎಂದರೆ ವಿಶ್ವದ ಹೆರಿಗೆಯ ಕಾಲದಲ್ಲಿ ಅಧ್ಯಕ್ಷನಾಗಿರತಕ್ಕ ರಸಾಧಿಪತಿಯೆ ಇವನು ಇರಲಿಕ್ಕೆ ಬೇಕು. ಇವನು 'ಯೋ ನಃ ಧಿಯಃ' ಪ್ರಚೋದಿಸುತ್ತಾನೊ, 'ಕವಿಯಂತೆ' ಮಾನವರಿಗೆ, ಯಾವನು

---

* ಸಂಸ್ಕೃತಿಯ ಪ್ರಾಥಮಿಕ ಹಂತದ ಈ ಕೃತಿ, ನಮ್ಮ ಗ್ರಾಮೀಣ ಭಾಗದ ಸ್ತ್ರೀ ವಿಷಯಕ ಈರ್ಷ್ಯೆ-ದ್ವೇಷಗಳ ಸಂದರ್ಭದಲ್ಲಿ ಇಂದಿಗೂ ಸಂಭವಿಸುತ್ತಲೆ ಇದೆ! 'ಪುರುಷ' ಛೇದದ ಸ್ಥಳದಲ್ಲಿ ಮೂಗು ಕೊಯ್ವ ವಾಡಿಕೆ ಪ್ರಚಲಿತವಾದುದನ್ನು ಮರೆಯಲಾಗದು. ಸಂ.

'ವಿಶ್ವಾ-ರೂಪಾಣಿ' ಕಾಣಿಸುತ್ತಾನೊ ಆ ಸೌರತತ್ತ್ವಾಧಿಷ್ಠಿತ 'ಭಾನು' ಮಂಡಲದ ಸವಿತೃವು ಆಗಿರಲು ಶಕ್ಯವೆ ಇಲ್ಲ. ಅಲ್ಲದೆ, ಇದು ಪಂಚರಾತ್ರ, ನವರಾತ್ರ ಸ್ವರೂಪದ ರಾತ್ರ-ಸತ್ತ್ರವಾಗಿರಲಿಕ್ಕೆ ಬೇಕು.

ಜನಕ್ಕೆ ಸಂಪತ್ತನ್ನು ವಿಭಜಿಸಿ ನೀಡುವನೆಂಬ ಸ್ವರೂಪದ 'ಭಗ' ಎಂಬ ದೈವತವನ್ನೂ ಇಲ್ಲಿ ಮುಗಿಸಿಬಿಟ್ಟಿದ್ದಾಗಿದೆ: (ಶುನಃ) ಶೇಪನನ್ನು ಭಗ-ಭಕ್ತ ಎಂದು ವರ್ಣಿಸಿರುವುದು ಸಾರ್ಥವಿರಲಿಕ್ಕೆಬೇಕು, ಈ 'ವನಸ್ತೂಪ'ದ ದೇವತಾ ಅಹ್ನಿಕದಲ್ಲಿ. ಈ 'ಶೇಪನು' ವರುಣನನ್ನು ನೆನೆವಾಗ 'ಅನಿಮಿಷಃ ಚರಂತೀ ಆಪಃ' ಎಂಬ ಶಬ್ದ ಪ್ರತಿಮೆಯನ್ನು ಬಳಸಿದ್ದಾನೆ! 'ವನಸ್ಯ ಸ್ತೂಪದ' ವರುಣನ ಸಂದರ್ಭದಲ್ಲಿ ಯೋಜಿಸಿರುವ ಸಂಕೇತದಲ್ಲಿ ಮೋಡಿಕಾರಿಕೆಯ ಗತ್ತು ಇದೆ. ಇಲ್ಲಿ ಎಂದೂ ಮುಚ್ಚದಿರುವ ಬಿಡಿಗಣ್ಣಿನ ಸೂಚನೆಯಿದೆ. 'ಅನಿಮಿಷ' (: ಅಕ್ಷದಿಂದ) ಪ್ರವಹಿಸುತಿರುವ ಆಪಕ್ಕಿಂತಲೂ, ಹೇ ವರುಣನೇ ನೀನು ಶ್ರೇಷ್ಠನಿದ್ದೀಯೆ ಎಂದು ಅಲ್ಲಿಯ ಅರ್ಥವಿದೆ. ರೇತಕ್ಕಿಂತ ಆ ದಿವ್ಯರೇತ ಸರ್ಜಕ 'ಪುರುಷನು' ಯಾವಾಗಲೂ ಶ್ರೇಷ್ಠನೆ, ಅಲ್ಲವೊ?

ಗ್ರೀಕ್ ಪವಾಡಕಥೆಯ 'ಯುರೆನಸ್' (: ಆಕಾಶರೂಪ) ದೈವತ; ಪಿತೃಪ್ರಧಾನ ಕುಟುಂಬ ಪದ್ಧತಿಯ ಸಂಪ್ರದಾಯವಂತರದು. ಭಾರತೀಯ ವರುಣನು ಮೂಲ ಸೌರಮಂಡಲದ ದೈವತವೆಂಬುದು ಸರ್ವಮಾನ್ಯ; ಇದು ಪಿತೃಪ್ರಧಾನ ಕುಟುಂಬ ಪದ್ಧತಿಯವರ ಸಂಪ್ರದಾಯ. ಆದರೆ, ಗ್ರೀಕ್‌ಯುರೆನಸನೂ ವರುಣನಂತೆ, 'ಪುರುಷ' ಆಕೃತಿಯ ದೈವತವಾಗುತ್ತಾನೆ! ಗ್ರೀಕ್ ಹಾಗೂ ಭಾರತೀಯ ಸಂಸ್ಕೃತಿಗಳಲ್ಲಾದ ಈ ಸ್ಥಿತ್ಯಂತರದೊಳಗಿನ ಸಮಾನ ಸ್ವರೂಪವು ಅಭ್ಯಸನೀಯವಿದೆ. ವರುಣನ ಪವಾಡ ಕಥೆಯ ಸಂದರ್ಭದಲ್ಲಿ ಈ ಸೂಕ್ತದಲ್ಲಿ ಉಕ್ತ ನಾಗ (:'ಪುರುಷ') ಶಕ್ತಿಯ ಪರ್ಯಾಯ ಆಕೃತಿಗಳು ಹಲವು, ಅದಿತಿಯೊಡನೆ ತಾನೇ ಅರ್ಥಪಡೆಯುತ್ತಿರುವುದು ವಿಶೇಷಃ. 'ಕ' ನಾಮಕ ಹಿರಣ್ಯಗರ್ಭ=ಚಂದ್ರಾಃ ಆಪ : ದೈವತ; ಆಪದೊಳಗಿನ ಅಗ್ನಿ, ಗರ್ಭಾಧಾನ ಮಂತ್ರದಲ್ಲಿ ಅಮಂತ್ರಿತ ಪ್ರಸವಕ್ರಿಯಾಧ್ಯಕ್ಷ ಸವಿತೃ=ಪ್ರಜಾಪತಿ, 'ಭಗ-ಭಕ್ತ' (: ಭಗ-ಭಾಕ್) ಶುನಃ ಶೇಪ, ಇದರೊಡನೆ ಈ (ಶು-) ಶೇಪನ ತಂದೆಯೆಂಬ (ಶುನಃ) ಲಾಂಗೂಲ! ಲಾಂಗೂಲ (: ನೇಗಿಲ)ದಂತೆ ಲಾಂಗೂಲವೂ 'ಪುರುಷ' ಪ್ರತಿಮೆಯಾಗಿರುವ ಗುಹ್ಯವು ಇಲ್ಲಿ ಬಯಲಿಗೆ ಬರುತ್ತಿದೆ!

ಋಗ್ವೇದದಲ್ಲಿ ಬರುವ ಶುನಃಶೇಪನ ಬಲಿದಾನವನ್ನು ಕುರಿತು, ವಿಂಟರ್‌ನಿಟ್ಸ ಮೊದಲಾದ ವಿದ್ವಾಂಸರು ತುಂಬ ಚಿಂತನಮಾಡಿದ್ದಾರೆ. ಆದರೆ, ಬಲಿಯ 'ಪುರುಷ'ನ ಈ 'ಆಕೃತಿ' ಬೆಳಕಿಗೆ ಬಂದಿರಲಿಲ್ಲ, ಅಂದು! ಈ ಆಚಾರ ಪದ್ಧತಿ ವೇದಕಾಲಕ್ಕಿಂತಲೂ ಅತಿಪುರಾತನ ನಡೆವಳಿ. ಅದರ ಅಸ್ಪಷ್ಟ ಮಾರ್ದನಿ ಇಲ್ಲಿ ಕೇಳಬರುತ್ತಿರಬೇಕಾಗಿ ಬಗೆಯಲಾಗಿದೆ. ಶತಪಥದ 'ಪುರುಷ'-ಮೇಧದ, ಪಂಚ-ರಾತ್ರ ಸತ್ರವು ಒಂದು ಕಾಲದ ನರಬಲಿಯ ರೂಢಿಯೊ? ಎಂಬ ಚರ್ಚೆಗಳಾಗಿವೆ.[೨೫] ಆದರೆ ಈ 'ಪುರುಷ' ಸಂಕೇತದ ಬೀಗದಕ್ಕೆ 'ಬ್ರಹ್ಮ'-ಚರ್ಯ: ಇದು ಛಾಂದೋಗ್ಯದ 'ಅರಣ್ಯಾಯನ'ದ ವಿವರಣೆಗಿಂತ ಸ್ವಲ್ಪ ಮೊದಲು ಬಂದಿದೆ. ವರುಣನ 'ವನ-ಸ್ತೂಪ' ಪುರುಷ-ಮೇಧ ಮತ್ತು ಅರಣ್ಯಾಯನದ ರಸಹನಿವ (: ದ್ರಪ್ಸಸ್ಕನ್ನಃ) ಅಶ್ವತ್ಥ, ಕಠ ಹಾಗೂ ಗೀತೆಯ ಊರ್ಧ್ವಮೂಲ ಅಶ್ವತ್ಥ ಈ ಸಮಾನ ಆಕೃತಿಗಳೆಲ್ಲವೂ ಪುರುಷನವೇ. ಯುರೆನಸನ 'ಪುರುಷ' ಛೇದ ಈ ಕಥಾಭಾಗಗಳಲ್ಲಿ ಇರುವ ಸಾಮ್ಯದ ಮೂಲಕ ಇದು ಆರ್ಯಪೂರ್ವ ಸಂಸ್ಕೃತಿಯ ಪ್ರಭಾವವನ್ನು ಸೂಚಿಸುತ್ತಿರುವ ಅಂಶವೆಂಬುದು ದೃಢಪಡಿಸುತ್ತಿದೆ.

ಪುರಾತನ ಗ್ರೀಕ್ ಪವಾಡ ಕಥೆಗಳ ಬೆಂಬಲವು ದೊರೆಯುತ್ತಿರುವುದರಿಂದ ಭಾರತೀಯ ಛಾಪಿನ, 'ಏಕಾಕ್ಷ' ಪುರುಷನ ಗ್ರೀಕ್‌ಪವಾಡ ಕಥೆಯನ್ನು ಅರ್ಥಯಿಸಿಕೊಳ್ಳುವಲ್ಲಿ ಹೆಚ್ಚಿನ ವಿಶ್ವಾಸವು ಉಂಟಾಗುತ್ತಿದೆ. ಸೈಕ್ಲೋಪಸ್‌ರೆಂಬ (Cyclopes) ನಾಮ ಸಂಕೇತದ ಏಕಾಕ್ಷ ಅಸುರನೊಬ್ಬನ ಗ್ರೀಕ್‌ಕಥೆ ಸುಪ್ರಸಿದ್ಧವಿದೆ! ಇವನು ಭಾರತೀಯ ಕಥೆಯ ಭೌಮಾಸುರನು (:ಭೂಮಿಪುತ್ರನು) 'ನಾರ'ಕನಂತೆ. ಯುರೆನಸ್‌ನ ಸರ್ಜಕ ಸಾಮರ್ಥ್ಯದ ಜಲವರ್ಷಣದಿಂದ ಭೂಮಾತೆಯು ಪಸುರೆಯಾದಳು-ಪಸುಳೆಗಳನ್ನೂ ಪಡೆದಳು. ಈ ವರ್ಷಯಿತೃ ವೃಷ್ಣಿಯೆ ಯುರೆನಸ್ ದೇವ : ಈ ತಾಯ್ಗಂಡನು ಸುರಿಸಿದ ಮಳೆಯಿಂದಾಗಿ ನಿದ್ದೆಯಲ್ಲಿದ್ದ ತಾಯಿ, ಬಳಿಕ ಸುಜಲೆ ಸುಫಲೆಯಾದಳಂತೆ. ಯುರೆನೆಸ್‌ನಿಂದಲೇ ನದಿಗಳು ತುಂಬಿ ಹರಿಯತೊಡಗಿದವು. ಇದೇ ಬಗೆಯ

ಜಲಸೇಚನ ಶಕ್ತಿ ವರುಣನಲ್ಲೂ ಉಂಟು. 'ವರುಣೋ ಯಾದಸಾಂ ಅಹಂ' ಎಂದು ಹೇಳುವ ವಿಷ್ಣು-ಕೃಷ್ಣರು ಭಾರತೀಯ ಯುರೇನಸರೂ ಅಹುದು. ಗೀತೆಯ ಭಾಗ-ವಂತನಾಗಲಿ, ವೇದದ ವರುಣನಾಗಲಿ ಇವರು ವೃತ್ರಾದಿಗಳ ತಂದೆ, ಎಂದು ಎಲ್ಲಿಯೂ ಸ್ಪಷ್ಟಪಡಿಸಿಲ್ಲ. ನೆಗಳೆಯ ವಾಹನವನ್ನುಳ್ಳ ವರುಣನು, ಸಮುದ್ರದ ಅಹಿಬುಧ್ನ್ಯ, ಶುಷ್ಣ, ಕೃಷ್ಣಾದಿ ಅಸುರರಿಗೆ ಜನ್ಮಕೊಟ್ಟನೆಂದು ಹೇಳದಿರುವ ಸಂಯಮದಲ್ಲಿ ಭಾರತೀಯ ಆಪ : ರಸ ಪಂಥೀಯ ಮೇಧಾವಿಗಳ ಧೂರ್ತತೆಯು ಚೆನ್ನಾಗಿಯೆ ವ್ಯಕ್ತವಾಗುತ್ತಿಲ್ಲವೆ?

'ಆರ್ದ್ರಾ' 'ಕ್ಲಿನ್ನಾ' ಭಾರತೀಯ ಭೂದೇವಿ, ಗ್ರೀಕ ಭೂಮಾತೆಯಂತೆಯೆ, ಮೊದಲು ನರರ ಹೋಲಿಕೆಯ (Semi human) ಮಕ್ಕಳನ್ನು ಹೆತ್ತಳು. ಗ್ರೀಸಿನಲ್ಲಿ ಇವರು ನೂರಾರು ಭುಜದವರು ಹಲರು ಇರುವಂತೆ, ಏಕಾಕ್ಷರೂ ಮೂವರು ಹುಟ್ಟಿದರು. ಭಾರತೀಯ ಕಾರ್ತವೀರ್ಯನು ಸಹಸ್ರಭುಜನು! 'ಪುರುಷ' ಆಕೃತಿಯ ಬ್ರಹ್ಮ ವಿಷ್ಣು ಮತ್ತು ರುದ್ರ ಇವರೂ ಮೂವರೆ ಇರುವುದನ್ನು ಸ್ಮರಿಸಿಕೊಳ್ಳಬೇಕು. ಮೊದಲಿನ (ತಲೆಮಾರಿನಲ್ಲಿ) ಇವರ ನಾಮ ಸಂಕೇತಗಳು ತ್ವಷ್ಟಾರ : ವಿಶ್ವಕರ್ಮ : ಕರ್ಮಾರ ಬ್ರಹ್ಮಣಸ್ಪತಿ ಎಂಬೀ ಆಕೃತಿಯವಾಗಿವೆ. ಇದಕ್ಕೂ ಮೊದಲಿನ ಆಕೃತಿಯೆ ವೃತ್ರ, ಶುಷ್ಣ, ಕೃಷ್ಣಾದಿ ಆಪ : ರಸದ ಅಹಿಸ್ವರೂಪದ ಆಕೃತಿಗಳಾಗಿವೆ. ಗ್ರೀಕ್ ಪವಾಡ ಕಥೆಗಳಲ್ಲಿ ಶತಬಾಹು ಹಾಗೂ ಏಕಾಕ್ಷರನ್ನು ನೇರವಾಗಿ ಆಪ : ರಸ ಸ್ವರೂಪರು ಎನ್ನದೆ, ಯುರೇನಸ್‌ನ ವೃಷ್ಟಿಯ ('ಆಪ ಏವ ಸಸರ್ಜ ಆದೌ') ಈ ಆಪದಿಂದ ಮೈದಾಳಿದವರು ಎಂಬ ಹಾಗಿನ ವರ್ಣನೆಯಿದೆ.[೨೬]

ಗ್ರೀಕ್ ಪವಾಡ ಕಥೆಗಳ ನೆರವಿನಿಂದ ಋಗ್ವೇದಕಾಲೀನ ಕಥೆಗಳಲ್ಲಿ ಸ್ಥೂಲ ಕಾಲಾನುಕ್ರಮದ ಪದರುಗಳನ್ನು ಕಂಡುಕೊಳ್ಳಲು (Stratification) ಶಕ್ಯವಾಗುತ್ತಿದೆ. ಗ್ರೇವ್ಸ ಹೇಳುವ (They were "builder of gigantic walls, and master-smiths..." ಎಂಬ ಸಂಗತಿಗೆ ಋಗ್ವೇದದ ಬಡಿಗ-ಕರ್ಮಾರ ವೃತ್ತಿಯ ಆಪ : ರಸ ಪಂಥೀಯ ತ್ವಷ್ಟಾರ, (: ವಿಶ್ವರೂಪ ಸೃಷ್ಟಾರ), ವಿಶ್ವಕರ್ಮಾ, ಸುಧನ್ವ-ಪುತ್ರರೆಂಬ 'ಋಭು'ಗಳ ಶಾಖೆ (ಆದರೆ 'ಋಭುಗಳಲ್ಲಿ' ಮನೋಃ ನಪ್ತ್ಯ=ವಿವಸ್ವಾನ ಸಂಪ್ರದಾಯದ ಮನು-ಜ ಆಕಾರರಾಗಿರುವವರು ಉಂಟು) ಈ ಓನ್ನೆಲೆಯಲ್ಲಿ ದೇವಜನನ ಸೂಕ್ತದಲ್ಲಿ ಬರುವ 'ಕರ್ಮಾರ ಇವ ಅಧಮತ್' ಎಂಬ ಬ್ರಹ್ಮಣಸ್ಪತಿ ಸಂಕೇತದ ಆಪ : ರಸ ಸ್ವರೂಪವು ಬಯಲಿಗೆ ಬರುತ್ತಿದೆ! ಈ 'ಕರ್ಮರ ದೇವ' 'Master smith' ಆಗಿರುವುದು ಗ್ರೀಕ್ ಪವಾಡ ಕಥೆಯಿಂದ ಗೊತ್ತಾಗುತ್ತದೆ. 'ಶಾಮನ್' ಗುರುವರ್ಗವು ಹಲವೆಡೆಗೆ smithy ತಜ್ಞರು ಇರುವುದಾಗಿ, ಮಾನವಶಾಸ್ತ್ರಜ್ಞ ಇಲಿಯದೆ 'Shamanism' ಗ್ರಂಥವಲ್ಲಿ ಬರೆಯುತ್ತಾರೆ. ಆಪ : ರಸ ಪಂಥೀಯ ಈ 'ಗುರು'ವರ್ಗವು, 'ಕವಿ : ಜಾತವೇದ ಅಗ್ನಿ' ಪೂಜಕಗುರುವರ್ಗಕ್ಕಿಂತ ತೀರ ಬೇರೆ. ಆದಿಯಲ್ಲಿ 'ಧನು=ಬಿಲ್ಲು: ಅಕ್ಷದ ಪರ್ಯಾಯ ಸಂಕೇತ. ರುದ್ರನ 'ಧನು'. 'ಶರ' ಬಹು ಭಯಾವಹವಾಗಿದ್ದುವಾಗಿ ಋಗ್ವೇದದಲ್ಲಿ ವರ್ಣನೆಯಿದೆ. ಸು-ಧನ್ವ ಪುತ್ರರೆಂಬ ಋಭುಗಳು ಆಪ : ರಸ ಪಂಥೀಯರದು. ಮನು-ಪುತ್ರರು ಇನ್ನೊಂದು ಪಂಗಡ ಸೌರರದು! ಸ್ವಯಂವರಗಳಲ್ಲಿ 'ಪುರುಷ' ಶಕ್ತಿಯನ್ನು ಸಿದ್ಧಪಡಿಸಲು ರುದ್ರನ 'ಧನು'ವಿಗೆ ಕಣ್ ಏರಿಸುವ ಪಣವನ್ನು ಗೆಲ್ಲಬೇಕೆಂಬ ವಾಡಿಕೆಯಿತ್ತು. ಸೀತೆ, ಜನಕನ ಮನೆಯಲ್ಲಿ ಇದ್ದಾಗ ಈ ಧನುಸ್ಸನ್ನು ಆಟದ ಕುದುರೆಯಾಗಿ ಮಾಡಿಕೊಳ್ಳುತ್ತಿದ್ದಳಂತೆ. ಧನು : ಅಕ್ಷ=ಕಣೆ=ಗಣೆ, ಈ ಸಮಯದ ಜೀವಂತ ಹಿನ್ನೆಲೆಯನ್ನರಿಯದ್ದಕ್ಕೆ ಧನುರ್ಭಂಗದ ಪಣವು ಅರ್ಥವಿಹೀನವಾಗಿ 'ಹೋತಿನ ಕೊರಳ ಮೊಲೆ'ಯಂತೆ ಎನಿಸತೊಡಗಿದೆ.

ಇದನ್ನೆಲ್ಲ ಲೆಕ್ಕಿಸಿದಲ್ಲಿ, 'ಅಜ : ಏಕಪಾತ್' ಪ್ರತಿಮೆ 'ಏಕಾಕ್ಷ' ದೈವತದ್ದೇ ಇರಲಿಕ್ಕೆ ಬೇಕಾಯ್ತು. 'ಅಜ' ಈ ನಾಮಸಂಕೇತದ ಮಾತ್ರಸ್ಪರ್ಶದ-ಬಾಹ್ಯ ಆಕೃತಿ ಹೋತು: ಗಂಡಾಡು. ಹೆಣ್ಣು ಬಲಿ-ಕೊಡತಕ್ಕದ್ದಲ್ಲ ಎಂಬ ವಾಡಿಕೆ. ಬಲಿಗೊಡುವುದು ಅಜಾಪುತ್ರನನ್ನೇ. 'ಅ-ಜಾಪುತ್ರನ 'ಬಲಿ' ಎಂದರೆ ಹುಟ್ಟದೆ ಇರುವವನ ಬಲಿ!! ಆದರೆ, ಪ್ರಪಂಚ ಮಾಯೆ! ಇಲ್ಲಿ ಒಡೆಸಿಸನು ತನ್ನ ಹೆಸರು : 'No-body' ಎಂದು ಸೈಕ್ಲೋಪಸನಿಗೆ ಹೇಳಿದ್ದನಂತೆ! 'ಅ-ಜಾಪುತ್ರನ ಬಲಿ' ಮತ್ತು 'Nobody' ವ್ಯಕ್ತಿನಾಮ ಇವೆರಡೂ ಶಬ್ದ-ಶಿಲ್ಪದ ಶೈಲಿಯಲ್ಲಿ ಸಾಮ್ಯವಿದೆ. ಈ ವಿನೋದಗರ್ಭ ಶಬ್ದಸಂಕೇತ ಸುಂದರವಿದೆ. ಗ್ರೀಕ್ ಸಂಕೇತ ಏಕಾಕ್ಷ ಸಂಹಾರಕ್ಕೆ ಪೋಷಕವಾಗಿ ಅವಶ್ಯವಿತ್ತು.

ಆದರೆ, ಭಾರತೀಯ ಈ ಸಂಕೇತದ ಪ್ರಯೋಜನವೇನು? ಆತ್ಮವಂಚನೆ? ಮಾಡಿಯೂ ತಾನು ಮಾಡಿಲ್ಲ' ಎಂಬ ನಿರ್ಲಿಪ್ತ-ನಿಷ್ಕಾಮಕರ್ಮದ ತತ್ವಜ್ಞಾನ ನಿರ್ಮಾಣದಲ್ಲೂ ಕಾಣುತ್ತಿರುವ ಶೈಲಿ ಇದೇ ಬಗೆಯದಿಲ್ಲವೆ? ಸಂಸ್ಕೃತ ಭಾಷೆಯ ವೈಶಿಷ್ಟ್ಯದಂತೆ 'ಅ-ಜ' ಈ ಸಂಕೇತವನ್ನು ಹುಟ್ಟು ಇಲ್ಲದ ದೈವತ: ಸ್ವಯಂ-ಭೂ ಎಂಬ ಅರ್ಥಕ್ಕೆ ತಿರುಗಿಸಿಕೊಂಡುದಾಯ್ತು. ಈ 'ಅಜ' ಸಂಕೇತಕ್ಕೆ ಸಂಬದ್ಧವಾಗಿರುವ ಗ್ರೀಕ ದೈವತದ ಹೆಸರು 'PAN'! ಈ ಸಂದರ್ಭದಿಂದ ಗ್ರೀಕ ಹಾಗೂ ಭಾರತೀಯ ಸಂಸ್ಕೃತಿಯ ಸಮಾನ 'ಸಮಯ' ಕೆಲವು ಬೆಳಕಿಗೆ ಬರುತ್ತಿವೆ.

ಗ್ರೀಕ್ ಪ್ಯಾನ್ ಮತ್ತು ಡೈಯೋನಿಸಸ್ ಇವು ಅಲ್ಲಿಯ ಶಾಕ್ತ ಆಚಾರದ ಕೇಂದ್ರಸ್ಥ ದೈವತಗಳು. 'ಪ್ಯಾನ'ನ ಜನ-ಕ-ತ್ವಕ್ಕೆ ಹಲರು ಕಾರಣವೆಂಬ ಹಾಗೆ ಕಥೆಯಿದೆ. ಹರಮೆನ್ ಎಂಬವನು, ಒಡೆಸಸ್‌ನ ಮಡದಿ ಪೆನೆಲೋಪಳನ್ನೊ ಟಗರು (Ram) ಆಗಿ, (Goat) ಅಥವಾ ಇನ್ನಾವಳನ್ನೋ ಹೋತು ರೂಪದಲ್ಲಿ ಕೂಡಿದನಂತೆ. ಪ್ಯಾನನು ಬೆನ್ನಟ್ಟಿ ಹೊರಟ ಒಬ್ಬ ನೀರೆ, ಲಾಡೊನ್ (Ladon), ನದಿ ತೀರಕ್ಕೆ ಬಂದಳು. ಅಲ್ಲಿ ಬಿದಿರಮೆಳೆಯಲ್ಲಿ ಸೇರಿ ತದ್ರೂಪಿಯಾದಳು. ಈ ಬಿದಿರುಗಳಲ್ಲಿ ತನ್ನ ಪ್ರೇಯಸಿಯಾರು ಎಂಬುದು ತಿಳಿಯದೆ. ಅನೇಕ ಬಿದಿರು ಕಡಿದು ತಂದ 'ವೇಣು' (ಕೊಳಲು) ಮಾಡಿದನಂತೆ. ಅದುವೆ 'ಪ್ಯಾನಸ್‌ಪೈಪ್' ಮಧ್ಯಮಾ : ವಾಕ್, ವಾದ್ಯವಾಯಿತು! 'ವೇಣು' ವೀಣಾ ಎಂಬ ಹೆಣ್ಣುಮಕ್ಕಳ ಹೆಸರು ನಮ್ಮಲ್ಲಿ ಉಂಟು. 'ವೇಣುಮಾಧವ'. ಪುರುಷರುಂಟು. ಮೋಹನನ ಮುರಲಿ : ವೇಣುಗಾನ ಮೆಚ್ಚಿ ವ್ರಜದ ಸ್ತ್ರೀಯರು ಕೃಷ್ಣನನ್ನು ಮುತ್ತುತ್ತಿದ್ದರೆಂಬ ಕಥೆಗಳೂ ಉಂಟು. ಋಗ್ವೇದದಲ್ಲಿ ಮರುತರ 'ವಾಣ' ವಾದ್ಯವಿಶೇಷ ಇದಕ್ಕೂ ಪೂರ್ವದ್ದು. ಮರುತರು 'ಕಬಂಧ' (ನೀರಿನ ಕೊಳಾಯಿ) ಆಕೃತಿಯವರೆಂಬುದು ಅರ್ಥಯುಕ್ತ ಸಂಕೇತ. ಇವರು ರೋದಸೀ ಪ್ರಿಯರು-ಸರಸ್ವತಿಯ ಸಖ-ಸರಸ್ವನ್‌ರೂ ಅಹುದು! ಗ್ರೀಕ್ ಪ್ಯಾನನು ವಶೀಕರಣ ವಿದ್ಯೆಯಲ್ಲಿ ನಿಷ್ಣಾತನಂತೆ!

> His greatest success in love was reduction of Selene, which he accomplished by distinguishing, his fairy black goatishness with well-washed white fleeces.[೨೭]

ಆದರೆ, ಈ 'ಅಜ' ದೇವರು ಬೇಗನೆ ಸತ್ತನೆಂದು ಗ್ರೀಸಿನಲ್ಲಿ ಪ್ರಚಾರವಾಯಿತು. ಪ್ಯಾನನು ಅವಧೂತ ಸಿದ್ಧರಂತೆ ಮುಕ್ತಸಂಗಿಯಾಗಿದ್ದನು. ಅವನು 'upright' 'ದಕ್ಷ' ಪುರುಷನೂ ಆಗಿದ್ದನಂತೆ! ಪ್ಯಾನ್ ಸಂಪ್ರದಾಯದಲ್ಲಿ ಅ-ಜ ಚರ್ಮಧಾರಿಯಾಗಿ ಮಧ್ಯಪಾನದಿಂದ 'ಮದಿಂತಮ'ರಾಗಿ ಗುಡ್ಡದ ಮೇಲೆ ಬಂಧನಾತೀತ ಮುಕ್ತಾಚಾರಿಗಳಾಗಿ ಗ್ರೀಸಿನಲ್ಲಿ ಈ ಸಮಯವನ್ನು ವಿಶಿಷ್ಟ ಪರ್ವಗಳಲ್ಲಿ ಆಚರಿಸುವ ವಾಡಿಕೆಯಿತ್ತು. ಈ ಸಂಪ್ರದಾಯದ ಕ್ಷೇತ್ರ ಗ್ರೀಸಿನಲ್ಲಿ, ಗುಡ್ಡದ ಪ್ರದೇಶವಿರುತ್ತಿದ್ದುದು ಅಭ್ಯಸನೀಯವಿದೆ. ಭಾರತೀಯ ಪರ್ವ-ತ-ದೇವದೇವಿಯರ ಸಂಪ್ರದಾಯಗಳ ಪೂರ್ವೋತ್ತರವನ್ನು ಕಂಡುಕೊಳ್ಳಲು ಮಾನವೇತಿಹಾಸದ ಪಾತಳಿಯ ಮೇಲಣ ಈ ವ್ಯಾಸಂಗವು ಸಂಸ್ಕೃತಿಯ ಉದ್ಗಮ-ವಿಕಾಸ ಕ್ರಮವನ್ನರಿಯಲು ಪ್ರಯೋಜನಕಾರಿಯಾಗದಿರದು. ಪ್ಯಾನನ ಜನಕನೆಂಬ ಹೆರ್‌ಮೆಸ್

> "Was the power resident in a phallic stone which formed the centre of those orgies."

ಶಿಲೆಯ ಆರಾಧನೆಯ ಕಾಲಕ್ಕೆ ದೇಹಾರದಲ್ಲಿ ಆಗಾಮಿ ಘಟನೆಯ ಸೂಚನೆಗಳು ದೊರೆಯುತ್ತಿದ್ದುವಂತೆ! 'ಕಾಲ'ಜ್ಞಾನದ ದಿವ್ಯದೃಷ್ಟಿ ಪ್ರಾಪ್ತವಾಗಿ ಕಣಿ ಹೇಳಲಾಗುತ್ತಿತ್ತು. ಭಾರತೀಯ 'ಕುಕ್ಕುಟ ಸರ್ಪ' ಜೈನ ತೀರ್ಥಂಕರ ಪ್ರತಿಮಾ ವಿಚಾರದಲ್ಲಿ ಬರುತ್ತದೆ, ಗ್ರೀಕ್ ಪವಾಡ ಕಥೆಯ Wrynec snake bird? ಹೋಲುತ್ತದೆ! ಈ ಪಕ್ಷಿಯು ಪ್ಯಾನನ ಪುತ್ರನೇ ಸರಿ.

ಪ್ಯಾನಸ್ ಸೆಲೆನೆ (Selene) ಯ ಏಕೀಕರಣಕ್ಕೆ ಸಾಂಕೇತಿಕ ಅರ್ಥವುಂಟು. 'ಸೆಲೆನೆ' ಎಂದರೆ ಚಂದ್ರ! ಈ ಆಚಾರಧರ್ಮ ಮೇ ತಿಂಗಳ ಬೆಳ್ದಿಂಗಳ ಇರುಳಿನ ಕಾಮಕೇಳಿಯ ಪ್ರತಿಮೆ ಇರುವುದಾಗಿ ರಾಬರ್ಟ್ ಗ್ರೇವ್ಸ

ಹೇಳಿದ್ದಾರೆ. ಈ ಡ್ಯಯೊನೆಸಿಸ್ ಹಾಗೂ ಪ್ಯಾನ್ ಸಂಪ್ರದಾಯವು ಚಾಂದ್ರ ಪಂಥವೆಂಬುದು ಸ್ಪಷ್ಟವಿದೆ. ಭಾರತದಲ್ಲಿ ಶರತ್ಕಾಲದಿಂದ ಬೆಳದಿಂಗಳ ಸೌಖ್ಯ. 'ಕಾರ್ತೀಕ : ರಾಧಾ ಮತ್ತು ದಾಮೋದರ ಪ್ರಸನ್ನ ಎಂಬ ಒಕ್ಕಣೆಯ ವಾಕ್ಯ ತುಲಸೀ ವೃಂದಾವನದ ಮೇಲೆ ಬರೆಯಲಾಗಿರುತ್ತದೆ. ತುಲಸಿ ಮತ್ತು ವೃಂದೆಯರ ಪವಾಡ ಕಥೆ ಓದುವಾಗ ವ್ಯಾಸಸಂಪ್ರದಾಯದ ಭಾರತೀಯ ಆವೃತ್ತಿಯೆ ಎನಿಸುವುದು. ಭಗ-ವಾನ್ ಶ್ರೀಕೃಷ್ಣನ ಪ್ರೇಯಸಿ 'ರಾ-ಧಾ' ಯಾರು, ಫಕ್ಕನೆ ನಡುವೆಯೆ ಪುರಾಣಕಥೆಯಾಗಿ ಎಲ್ಲಿಂದ ಇಳಿದಳು, ಇದರ ನೆಲೆ ತಿಳಿದಿಲ್ಲ! 'ರಾ' -ಕಾದೇವಿ ಹುಣ್ಣಿಮೆಯ ಚಂದ್ರ; 'ರಾ'-ಕಾ ಇದುವೆ 'ರಾ'-ಧಾ ಆಗಿರುವ ಶಕ್ಯತೆಯಿದೆ. ಕೃಷ್ಣನ ಬಾಲಕ್ರೀಡೆಯಲ್ಲಿ 'ದಾಮ' (: ರಶನ=ಹಗ್ಗ) ಉದರಕ್ಕೆ ಸುತ್ತಿದ ಒಂದು ಪವಾಡ ಕಥೆ ಇದೆ. ಈ ದಾಮ : ರಶನ, ಗೋ ಕಟ್ಟುವ ಕಣ್ಣಿ ಎಂದು ಹೇಳಲಾಗುತ್ತದೆ. ಆದರೆ, ಈತನು, 'ದಾಮ'ವೇ ಉದರವಾಗಿರುವ ಪುರುಷೋತ್ತಮನೆಂದರೆ ಅತಿಶಯೋಕ್ತಿಯಾಗದು. ಏಕೆಂದರೆ ದ್ರಪ್ಸಸ್ಕನ್ನ : 'ಪುರೋತ್ತಮ' ರೂಪದ 'ಕೃಷ್ಣ' ಕರಿಯನ ಚರಿತ್ರೆ ಇದು. ಈ ಪುರುಷೋತ್ತಮನ ಬಾಯಿಯಲ್ಲಿ (ಒಡಲಲ್ಲಿ) ಚತುರ್ದಶ ಲೋಕಗಳೆಲ್ಲವೂ ಇರುವುದಾಗಿ ಅವನ ತಾಯಿಗೆ ಅನುಭಾವದಲ್ಲಿ ಕಂಡಿತೆಂಬ ಪವಾಡ ಕಥೆಯ ಮೂಲದಲ್ಲಿ ಈ ಕೃಷ್ಣ : ಕರಿಯ ಪುರುಷನು ಸೃಷ್ಟಿನಿರ್ಮಾಪಕ ದೈವತ ಎಂಬ ನಾಗಮಹಾತ್ಮ್ಯವೇ ಒಳಗೊಂಡಿರುವುದು ಸ್ಪಷ್ಟವೆ ಇದೆ.

ಈವರೆಗೆ ಸಮೀಕ್ಷಿಸಿದ ಇವೆಲ್ಲ ಸಂಕೇತಗಳು, ನಾಗಶಕ್ತಿಯ (Elan vital) ಆಪ : ರಸ ಸ್ವರೂಪ ಸೂಚಕ ಏಕಂ : ತತ್ ಆಕೃತಿಯ ಪ್ರತಿಮೆಗಳೇ ಆಗಿವೆ. ಇವೆಲ್ಲವುಗಳ ತಳಪಾಯದ ಅಂತಸ್ಥ ಆ-ಕೃತಿ (Concept) ತತ್ : ಏಕಂ ಸ್ವರೂಪದ್ದೇ ಆಗಿದ್ದರು ಇವುಗಳ ಮಾತ್ರಾಸ್ಪರ್ಶದ ಬಾಹ್ಯಆಕೃತಿಯಲ್ಲಿ ಎಂದರೆ ಶಬ್ದ-ಪ್ರತಿಮೆಗಳಲ್ಲಿ ತುಂಬ ವೈವಿಧ್ಯವಿದೆ. ಈ ವೈವಿಧ್ಯವು ಎಷ್ಟೇ ಇದ್ದರೂ ಈ ಶಬ್ದ ಪ್ರತಿಮೆಗಳು ಒಂದು ವಿಶಿಷ್ಟ ಸಮಯಾಚಾರದ ಹಿನ್ನೆಲೆಯನ್ನು ಉಳ್ಳವು ಆಗಿವೆ. ಇಂದು ಸಂಸ್ಕೃತಿಗಳನ್ನು ಆಧುನಿಕ ದೃಷ್ಟಿಯಿಂದ ವಿಮರ್ಶಿಸುವಾಗ ಇಂದಿನ ದೈವತ ವಿಚಾರದಲ್ಲಿ ಆಚಾರಾದಿಗಳಲ್ಲಿ ಎರಡು ಪಾತಳಿಯ ಭಿನ್ನಸಂಸ್ಕೃತಿಗಳ ಸಂಮಿಶ್ರಣವಿರುವುದು ಅನುಭವಕ್ಕೆ ಬರುತ್ತಿದೆ. ಇದನ್ನು ಅರ್ಥಯಿಸಿಕೊಳ್ಳಲು ಇಂದಿನಿಂದ ನಿನ್ನೆಗಳತ್ತ ಸಾಗುವ ರೀತಿಯನ್ನು ಈಗ ಅನುಸರಿಸಲಾಗುತ್ತಿದೆ. ಮತ್ತು ಈ ಭೂಮಿಕೆಯಿಂದ ಗ್ರಾಮೀಣ ಜೀವನದ ಸಂಸ್ಕೃತಿ (Little Culture) ಮತ್ತು ನಾಗರಿಕ ಜೀವದ ಸಂಸ್ಕೃತಿ (Great Culture) ಎಂಬ ವಿಭಾಗಗಳನ್ನು ಕಲ್ಪಿಸಲಾಗಿದೆ. ಜಾನಪದ ಸಂಸ್ಕೃತಿಯ ಪರಿಣಾಮವು ಪಟ್ಟಣಿಗರ ಮಹಾ ಸಂಸ್ಕೃತಿಯ ಮೇಲೆ ಆಗಿದೆ, ಎಂಬ ಗ್ರಹಿಕೆಯು ಈ ವರ್ಗೀಕರಣದ ಹಿಂದೆ ಇರುವಂತೆ ತೋರುತ್ತದೆ! ಆದರೆ, 'ನಾಗರಿಕ' ಸಂಸ್ಕೃತಿಯೆಂಬುದು ಬಂದಿತೆಲ್ಲಿಂದ? ವೇದಕಾಲದ ಸಂಸ್ಕೃತಿಯ ವ್ಯಾಸಂಗಿಗಳಿಗೆ ಅಲ್ಲಿ ದನಗಾರಿಕೆಯ ಕಾಲದ-ಕೃಷೀವಲ ಸಂಸ್ಕೃತಿಯ-ಪ್ರಭಾವ-ಸೂಚಕ ಪ್ರತಿಮಾ ಸಂಕೇತಗಳಿರುವುದಾಗಿ ಎನಿಸಿದೆ.* ಆದರೆ, ಋಗ್ವೇದಕಾಲೀನ ಸಾಂಕೇತಿಕ ಪ್ರತಿಮೆಗಳು, ದನಗಾರಿಕೆ-ಕೃಷೀವಲ ಸಂಸ್ಕೃತಿಯ ಪ್ರಭಾವದಲ್ಲಿ, ನೂತನ ವರ್ಣ, ಆಕೃತಿಯವಾದುವೆ ಹೊರತು, ಅವುಗಳಲ್ಲಿ ಪ್ರಮುಖವಾದ ಕೆಲವು ಸಂಕೇತಗಳು ಮೂಲಾಧಾರ ಪ್ರತಿಮೆಗಳು-ದನಗಾರಿಕೆಗೂ ಮುಂಚಿನಂತಹ ಜೀವನರೀತಿಯಲ್ಲಿ ಮೈದಾಳಿದ್ದು ಉಂಟು. ಉದಾಹರಣಾರ್ಥವಾಗಿ 'ಏಕಾಕ್ಷ' (ಪುರುಷ) 'ಶೃಂಗ-(ಪುರುಷ) 'ಚಕ್ರ-ಪಕ್ಷಿ, ವೃಕ್ಷ (:ವನ : ಅದೇ ಮೇರೆಗೆ ನಾರ>ನಾರ). ವೃಕ್ಷ 'ರಸ,' ರೇತ, ಚಂದ್ರ, ಸರ್ಪ, ಇಂತಹ ಸಂಕೇತಗಳು ದನಗಾರಿಕೆಯ ಹಂತದ ಸಮಯಾಚಾರಗಳಲ್ಲಿ ಮೈದಾಳಿದ ಆಕೃತಿ : ಪ್ರತಿಮೆಗಳು ಎನ್ನಲು ಆದೀತೇ? ನಿಜವಾಗಿ ಮ್ಯಾನ್‌ಹ್ಯಾಮ್ ಹೇಳಿರುವಂತೆ ಇಲ್ಲಿ, ಸಾಂಸ್ಕೃತಿಕ ಜೀವನದ ಸಂಶೋಧನ ಪದ್ಧತಿಯು ಹೇಗೆ ಇರಬೇಕು, ಎಂಬುದನ್ನು ಮೊದಲು ನಿರ್ಧರಿಸುವುದು ಅವಶ್ಯವಿದೆ. ಇಡಿಯದರ ಹಿನ್ನೆಲೆಯಲ್ಲಿ ಆದರ ಅಂಗಾಂಗಗಳು ಅರ್ಥಪಡೆಯಬಲ್ಲವು. ಅಂಗಗಳ ಅರ್ಥನಿರ್ಧರಿಸಿ ಅವನ್ನು

---

* Pastoral symbolism from Rigveda-' ಎಂಬ ಹೆಸರಿನ ಡಾ. ಸ. ಅ. ಡಾಂಗೆಯವರ ಗ್ರಂಥವು ಬೇಗನೆಯೆ ಪ್ರಕಟವಾಗಲಿರುವುದಾಗಿ ಅವರ ಒಂದು ಬಿಡಿ ಲೇಖನದಿಂದ ತಿಳಿಯುತ್ತದೆ.

ಜೋಡಿಸಿದಲ್ಲಿ 'ಇಡಿ' ಜೀವಂತ ಪ್ರತಿಮೆ ಆಗಲಾರದು. ಅಂಗಾಂಗಗಳ ಬೇರೀಜಿಗಿಂತ ಇಡೀ (Whole) ಇದರ ಮೌಲ್ಯ ಎಂದೆಂದಿಗೂ ಮಿಗಿಲಾಗಿದೆ ಎಂಬ ಗೆಸ್ಟಾಲ್ಟಮಾನಸ ಶಾಸ್ತ್ರೀಯ ಸೂತ್ರವನ್ನು ಅನುಸರಿಸದೆ ಇದ್ದರೆ; ಆ ಸಂಸ್ಕೃತಿ ಸಂಶೋಧನ ಸದೋಷವಾಗದಿರದು. ಮೇಲೆ-ಮೇಲೆಯೆ ಕಾಣುವ ಆಪ : ರಸದ ಮಾಹಾತ್ಮ್ಯ ಸೂಚಕ ಪ್ರತಿಮಾ : ಸಂಕೇತಗಳು, ಸರ್ಪಯುಗದ ವರೆಗೆ ಅಕ್ಷ : ಕಣೆ ಯುಗದ ವರೆಗೆ ಒಯ್ಯಲು ಒಂದು ಬಗೆಯಿಂದ ಆತಂಕಕಾರಿಯಾಗುತ್ತಿವೆ! ದನಗಾರಿಕೆಯ ಕಾಲದವು ಎಂದು ಕಾಣುವ ಗೋ-ವೃಷಭ ಪ್ರತಿಮಾ ಸಂಕೇತಗಳ ಹಿಂದೆ ಸರ್ಪ-ಶೃಂಗಿ ಉಂಟೆಂಬ ಸಂದೇಹವೂ ಉಂಟಾಗುವುದಿಲ್ಲ! ಆದಕಾರಣ, ಇಂದಿನ ವರ್ಗೀಕರಣವು ಕಣೆಯ ಯುಗದ ಆವರಣವನ್ನು ಗ್ರಹಿಸಿಕೊಳ್ಳಲು ಉಪಕಾರಕವಾಗುತ್ತಿಲ್ಲ. ಗ್ರೀಕ್ ಪವಾಡಕಥೆಗಳ ಮೂಲಕ ಈ 'ಸಮಯ'ಗಳ ವರ್ಗೀಕರಣವು ಹೆಚ್ಚು ಸುಖಕರವಾಗುತ್ತಿದೆ. ಸೈಕ್ಲೊಪಸ್ ಎಂಬ ಏಕಾಕ್ಷ-ಪುರುಷನ ಈ ಪ್ರತಿಮಾ ಸಂಕೇತದ ಅರ್ಥವನ್ನು ಅರಿಯಲು, ಈ ಕಥಾಮೂಲವನ್ನು ಕಂಡುಹಿಡಿಯಲು ಆದ ಪ್ರಯತ್ನದ ಸ್ವಲ್ಪ ಉಲ್ಲೇಖ ಗ್ರೇವ್ಸರ ಗ್ರಂಥದಲ್ಲಿದೆ. ಇದು ಕಾಕೇಶಸ್ ಪ್ರಾದೇಶಿಕ ಕಥೆಯೊಂದು ಆದರೆ, ಇದು ಇಡಿ ಯುರೋಪಿಯ ಜಾನಪದ ಕಥೆಗಳಲ್ಲಿ ಉಂಟೆಂದೂ ಹೇಳಿದ್ದುಂಟು. (One eyed Polyphemus... occurs in folk tale throught europe) ಕಾಲಕ್ರಮದಲ್ಲಿ ಏಕಾಕ್ಷ ಸೈಕ್ಲೋಪಸ ಕಥೆಯಲ್ಲಿ ಪದರುಗಳು ಬೆಳೆದಿವೆ. ಅತಿಪುರಾತನ ಕಥೆಯು ಗ್ರೀಕ್ ಸಂಸ್ಕೃತಿಗೂ ಪೂರ್ವದ್ದು (pre-hellenic), ಇದು ಕರ್ಮಾರ ಸಂಸ್ಕೃತಿಗೆ (famous metal workers) ಸಂಬಂಧಿಸಿದ್ದೆಂದು ಸೂಚಿಸುತ್ತಾರೆ. ಈ ಸೈಕ್ಲೋಪಸ ಏಕಾಕ್ಷನ ಸಾಂಕೇತಿಕ ರಹಸ್ಯವು ಭಾರತೀಯ ಏಕಾಕ್ಷ ಪುರುಷ : ಕೇಶಿ ಹಾಗೂ ಕಬಂಧ ಯಾರ ಹೊಟ್ಟೆ (ನಾಭಿ) ಇದುವೆ ಕಣ್ಣು-ಬಾಯಿ ಇದ್ದಿತೆಂದು ವರ್ಣಿತವಾಗಿದೆಯೋ ಈ ಪ್ರತಿಮೆ ಇವೆರಡರ ತುಲನೆಯಿಂದಲೇ ಹೆಚ್ಚು ಸಮರ್ಪಕವಾದ ಅರ್ಥವನ್ನು ಪಡೆಯಬಲ್ಲದು.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** II. ೩೯. ೩
೨. ***ಅದೇ*** I.೧೮-೨
೩. ***ಅದೇ*** X. ೬೩.೧೦
೪. ***ಅದೇ*** I. ೧೬೦
೫. ***ಬೃಹದಾರಣ್ಯಕೋಪನಿಷತ್ತು*** ೨. ೨
೬. ***ಅದೇ*** ೨. ೫. ೧೮
೭. ***ಋಗ್ವೇದ ಸಂಹಿತೆ*** VIII. ೧. ೨೮
೮. ***Burrow T. Dravidian Etymological Dictionary*** ನಂ. ೩೫೨೩
೯. ***ಬೃಹದಾರಣ್ಯಕೋಪನಿಷತ್ತು*** ೪. ೪. ೮. ಪ್ರಾಣ ಅಮರ, ದೇಹ ಪರಹುತ್ತಿನ ಮೇಲೆ; ***ಪ್ರಶ್ನೋಪನಿಷತ್ತು*** ೫. ೫.
೧೦. ***ಋಗ್ವೇದ ಸಂಹಿತೆ*** VIII. ೧.೨೮
೧೧. ***ಅದೇ*** VIII. ೪೦.೧೦. ೧೧
೧೨. Macdonell A. A.; ***Vedic mythology***, P. 2
೧೩. ***ಋಗ್ವೇದ ಸಂಹಿತೆ*** X. ೮೧: ೮೨
೧೪. ***ಅದೇ*** X. ೧೨೯
೧೫. ***Burrow T. Dravidian Etymological Dictionary*** ನಂ. ೪೩೭೫
೧೬. ***Oxford Dictionary***

೧೭. ***ಋಗ್ವೇದ ಸಂಹಿತೆ*** I. ೧೫೪.೫
೧೮. ***ಅದೇ*** II. ೪೨.೧೬
೧೯. ***ಅದೇ*** I. ೧೬೪-೧೧
೨೦. ***ಅದೇ*** X. ೭೨.೩
೨೧. ***ಅದೇ*** V. ೧೭೩.೪
೨೨. Robert Graves; ***Greek Mythology*** Vol. I. P. 38
೨೩. Ibid I. 39
೨೪. ***ಛಾಂದೋಗ್ಯೋಪನಿಷತ್*** V - ೪-೯
೨೫. Keeth A. B. ; ***Religion and Philosophy of Veda***
೨೬. Robert Graves, ***Greek Mythology*** Vol. I. P. 31
೨೭. ***Ibid*** Vol I. pp. 101. 103

ಭಾಗ - ೫

ನಾಗಸಂಪ್ರದಾಯ ಮತ್ತು ತಂತ್ರ-ಮಂತ್ರ

ಆದಿಯುಗ : ಕಣಿಯ ಯುಗ

ಮಾನವ ಸಂಸ್ಕೃತಿಯ ಪ್ರಾರಂಭದಲ್ಲಿ ನಾಗನಿದ್ದಾನೆ. ಈ ಅರ್ಥದಿಂದ 'ಸತ್' (ಸತ್ವನ್ : ಸರೀಸೃಪ) 'ಏವ ಇವಂ ಅಗ್ರೇ ಆಸೀತ್' ಎಂಬ ಈ ಸೂತ್ರವು 'ಸತ್'-ಕಾರ್ಯವಾದವನ್ನೆ : ದಿಕ್ಕಾಲದ ಸಂದರ್ಭದಲ್ಲಿ ಸಂಭವಿಸುವ ಸೃಷ್ಟಿಕಾರ್ಯವನ್ನೇ ಹೀಗೆ ವಿವರಿಸಹೊರಟಿದೆ. ಒಂದು ಬೇರೆ ಪರಿಭಾಷೆಯಲ್ಲಿ, ಅದು ಅಭಿವ್ಯಕ್ತವಾದ ಸಿದ್ಧಾಂತವಾಗಿರುವುದು ನಿಜ. ಈ ಸೃಜನದ ಘಟನೆಗೆ ಕಣಿ : ಅಕ್ಷಯುಗದ ಅಸ್ತಿತ್ವಸೂಚಕ ಅನೇಕ ಸಾಂಕೇತಿಕ ಪ್ರತಿಮೆಗಳಿಂದಲೂ ಪುಷ್ಟಿದೊರೆಯುತ್ತಿರುವುದಾಗಿ ಗಮನಕ್ಕೆ ಬಂದಾಗ ಸೋಜಿಗವೆನಿಸಿತು! 'ಅಕ್ಷ' ಎಂಬುದು ದ್ಯೂತದ (ಜೂಜಿನ) ಆಟವಾಗಿತ್ತು, ಒಂದು ಕಾಲಕ್ಕೆ! "ನೆತ್ತಮನಾಡಿದರಾರ್, ಮುತ್ತಿನ ಲಂಬಣಂ ಪರಿಯೆ?" ಎಂಬ ಪಂಪಭಾರತದ ಮುಂಡಿಗೆಯ ವಾಕ್ಯಾರ್ಥಕ್ಕಾಗಿ ಸಾಹಿತ್ಯ ದಿಗ್ಗಜರಲ್ಲಿ ವಾಕೋವಾಕ್ಯ ನಡೆದುದುಂಟು, ಕೆಲವರುಷಗಳ ಹಿಂದೆ, 'ನೆತ್ತ' ಇದರ ಇಂದಿನ ಉಚ್ಚಾರ 'ಲೆತ್ತ'; ನೆತ್ತ<ನೇತ್ರ ಎಂಬುದು. ತತ್ಪೂರ್ವದ 'ಅಕ್ಷ'ದ ಬಾಹ್ಯ ಆಕೃತಿಯ ಭಾಷಾಂತರ! ಅಂತರಾಕೃತಿಯನ್ನು ಅರ್ಥ-ಗರ್ಭವನ್ನು ಉಳಿಸಿಕೊಂಡು, ಬಾಹ್ಯ ಆವರಣವನ್ನು ಮಾತ್ರ ಬದಲಿಸಿ, 'ಅಪ್-ಟು-ಡೇಟ್' ಆಗುವ ಟೆರಲಿನ್ ವಸನಧಾರೀ ಆಧುನಿಕ ಸನಾತನಿ : ಮಾತಾಪ್ರಸಾದಿ, ಗುರುಪಾದೋದಕ ಪ್ರಸಾದಿಗಳ ವೇಷಾಂತರವೂ ಹಾಗೂ-'ಅಕ್ಷ' ನಾಮರೂಪವು ನೇತ್ರ>ನೆತ್ತ (>ಲೆತ್ತ) ಆದುದೂ ಇವೆರಡರ ಹಿಂದಿನ ಮನೋಭೂಮಿ ಸಮಾನವೆ ಇದೆ. 'ಅಕ್ಷ' ಇದು, ಏಕಪಾತ್ 'ಅಹಿ' ದೈವತ-ಸ್ಮರಣ ಪೂರ್ವಕವಾದ ಕಣಿಯ 'ದಿವ್ಯ' ದ್ಯೂತ ಎಂದರೆ ದೈವಪರೀಕ್ಷೆಯ ಒಂದು ಸಾಧನವೆ ಎಂದು ಮೊತ್ತ ಮೊದಲಲ್ಲಿ ಬಗೆಯಲಾಗುತ್ತಿರಬೇಕು. ಆದರೆ, ಬಳಿಕ ಇದು ಜೂದು-ಜಿದ್ದಿನ ಕ್ರೀಡೆ-ಆಟವಾಗಿ ಏರಾಟದ ಸ್ಪರ್ಧೆಯ ಪ್ರಕಾರವಾಗಿ, ನಿನ್ನೆ ಮೊನ್ನೆಯ ವರೆಗೂ ಉಳಿದು ಬಂದಿತು. ಪಗಡೆಯ ಆಟವು ಲೆತ್ತದ ಇನ್ನೊಂದು ಪ್ರಕಾರವೆಂದು ತೋರುತ್ತದೆ. 'ಅಕ್ಷ'ದ ಆಟವು ಒಳಗೊಳ್ಳುವ ಅದರ ನಿಜವಾದ 'ಆಕೃತಿ'ಯ ಬೋಧವಾಗದ ಈ ಬಗೆಯ ಭಾಷಾಂತರದಲ್ಲಿ, ಅದರ ಮೂಲಾರ್ಥವು ಬಚ್ಚಿ ಉಳಿಯುತ್ತಿಲ್ಲವೆ? ಅಕ್ಷ : ಕಣಿ, ಎಂದರೆ ಗಣ್ಣು. ಈ ಅರ್ಥ, ಸುಸಂಸ್ಕೃತ ಮನಸ್ಸಿಗೆ ಅ-ಪ್ರಶಸ್ತವೆನಿಸಿ 'ಅಕ್ಷ'ವು ನೇತ್ರವಾಯಿತೊ? ಅಥವಾ ದೈವದ ದರ್ಶನ ಮಾಡಿಸುವ ನೇತ್ರವೇ 'ಅಕ್ಷ' ಎಂದು ಈ ಭಾಷಾಂತರದ ಅರ್ಥವೊ?

ಪಗಡೆಯ ಆಟದ 'ಸಮಯ', 'ಆಶ್ವ-ಯುಜ' ಮಾಸದ ಅಂತ್ಯ, ಕಾರ್ತಿಕ ಪ್ರಾರಂಭ : 'ಯಮ-ದ್ವಿತೀಯೆ' ಕಾರ್ತಿಕ; ಶು. ೨. ಪಾಂಡವ ಪಂಚಮೀ ಈ ಸಂಧಿಕಾಲದಲ್ಲಿ, ಮುಂಚೆ ವಸು-ದ್ವಾದಶಿ (ಆಗಲೇ ಗುರು-ದ್ವಾದಶಿ), ಧನತ್ರಯೋದಶಿ; 'ನೀರು' ತುಂಬಿದ (ಹಂಡೆ :) ಪಾತ್ರೆ : 'ಬ್ರಹ್ಮ'ದೇವರೆಂದು ಪೂಜೆ. ಈ ಪಾತ್ರೆ 'ಕಬಂಧ' ಆಕೃತಿಯನ್ನು ಸ್ಮರಣೆಗೆ ತಂದುಕೊಡುತ್ತದೆ; (: ಕಬಂಧ : ಜಲಸೇಚಕ ಕೊಳಾಯಿ). ಅಂದು ಪಾಯಸದ ಊಟ.

ಬಿರಮಾಡಿಕೊಂಡ ಅಳಿಯನಿಗೆ, ಶೃಂಗಿ ವೃಷ್ಣಿ-ವೃಷಭನ ಮೈತೊಳೆದು ಸಿಂಗರಿ ಪೂಜೆ; (ಮಹಾನವಮಿಯಿಂದೇ ಪ್ರಾರಂಭ ಎನ್ನಿ, ಕುರುಬರಲ್ಲಿ : ದನಗಾರರಲ್ಲಿ), ಮೆರವಣಿಗೆ. ಈ ಸಮಯಾಚಾರಗಳ ಈ ಹಬ್ಬಕ್ಕೆ 'ದೀಪಾವಲಿ' ಎಂಬ ಆಧುನಿಕ ಹೆಸರು ಇದ್ದರೂ ಮೂಲದಲ್ಲಿ ಇದು 'ಯಕ್ಷ-ರಾತ್ರಿ'ಯ ಉತ್ಸವ! ರಾತ್ರಿಯಲ್ಲಿ ಯಕ್ಷನ ಆರಾಧನೆಯ ಹಬ್ಬ ಇದು! ಹಾಗಾದರೆ : 'ಕಿಂ ಇದಂ ಯಕ್ಷಮ್'? ಈ 'ಯಕ್ಷ' ಸಂಕೇತದ ಪೂರ್ವಕಥೆ ವೇದೋಪನಿಷತ್ತುಳ್ಳಷ್ಟು ಪ್ರಾಚೀನವಿದೆ!

ಈ ಪರ್ವ (> ಹಬ್ಬ), 'ಯಕ್ಷ' ಈ ಸಂಕೇತದ ರಹಸ್ಯಾರ್ಥವನ್ನು ಚೆನ್ನಾಗಿ ಬೆಳಕಿನಲ್ಲಿ ತರುತ್ತಿದೆ. ಈ 'ಯಕ್ಷ'ನೇ ಕೇನೋಪನಿಷತ್ತಿನ ವರ್ಣ್ಯ 'ವಸ್ತು'-ಆಗಿರಲಿಕ್ಕೆ ಬೇಕು. ಜಲಪೂರ್ಣ ಕೊಳಗ 'ಬ್ರಹ್ಮ' ದೇವರೆಂದು ಪೂಜೆಗೊಂಬಲ್ಲಿ ಈ 'ಯಕ್ಷ' ಸಂಕೇತದ ಗುಹ್ಯಾರ್ಥ ಸ್ಪಷ್ಟೀಕರಣವುಂಟು. ಕೇನೋಪನಿಷತ್ತಿನಲ್ಲಿ, ಬರುವ 'ಯಕ್ಷ'ನು : 'ಪುರುಷನೇ' ಎಂಬಲ್ಲಿ ಸಂದೇಹವಿಲ್ಲ. 'ತತ್ : ವನಮ್ ಉಪಾಸೀತ' ಎಂಬುದು ಕೇನೋಪನಿಷತ್ತಿನ ಸಾರತತ್ತ್ವ. ವನ : ವೃಕ್ಷ : ಅಕ್ಷ !: ಪುರುಷ : ಕ್ಷ; ಇಲ್ಲಿ ಉಮಾ ಹೈಮವತಿಯ ಉಪಸ್ಥಿತಿಯುಂಟು! ಆದಕಾರಣ ಕಾಲಿದಾಸನ ಯಕ್ಷನು 'ಅಕ್ಷ' ಆಕೃತಿಯ ಪುರುಷನೇ ಸರಿ. ಇವನು ತನ್ನ 'ಪುರಿ'ಯಿಂದ ವಿ-ಗಲಿತನಾಗಿದ್ದಾನೆ. ಆದಕಾರಣ, 'ಪುರೂರವ'ತ್ವವು ಅವನ ಪಾಲಿಗೆ ಬಂದಿದೆ. ಪುರೂರವನ ಯಕ್ಷನ-'ಅಕ್ಷ'-ಪುರುಷನ ಕಂಬನಿಗಳೇ ಶಬ್ದರೂಪತಾಳಿ 'ಮೇಘದೂತ'ವೆಂಬ ದಿವ್ಯ ವಿರಹಗೀತವಾಗಿದೆ. ಅಕ್ಷ : ಪುರುಷ: ಯಕ್ಷನ 'ಪುರಿ', ಹೈಮವತಿಯೆ : ವನದ ನಾಭಿ ಆಗಿರುವ ಇದು ಸ-ರಸ ವಾಕ್ಯ; ಅಲ್ಲವೆ?

ಈ ಹಿನ್ನೆಲೆಯಲ್ಲಿ ಜೈನಪಂಥದ 'ಯಕ್ಷ'ನೂ ಅಕ್ಷ : ಪುರುಷನೇ ಆಗುತ್ತಾನೆ. ಯಕ್ಷಿ; ದಿವ್ಯಯಕ್ಷನ ಚಕ್ರವಾಕಿಯೇ ಆಗುತ್ತಾಳೆ. ಜೈನರು ಮಹಾವೀರನ ಉಪಾಸಕರು: ಪುಕ್ಕರಲ್ಲ. ಏಕೆಂದರೆ, ಇವರು 'ಅಕ್ಷ'ವನ್ನು ಹೇಡಿಗಳಂತೆ ಮರೆಮಾಜಿ ಪೂಜಿಸದೆ, ಅದನ್ನು ಮೂಲರೂಪದಲ್ಲಿಯೆ ಆರಾಧಿಸುವವರು. ಅವರ ತೀರ್ಥಂಕರರು, ದ್ಯಾವಾ-ಪೃಥಿವಿಯ ಆಧಾರಸ್ತಂಭದಂತೆ, ಪೃಥಿವೀ 'ಅಕ್ಷ'ದಂತೆ, ಸದ್ಧರ್ಮದ ವಿಜಯಸ್ತಂಭದಂತೆ ದಕ್ಷರಾಗಿ (upright) ನಿಂತಿರುವುದು ವಾಡಿಕೆ. ವೇದದ ದಕ್ಷ : ಬ್ರಹ್ಮಾಕ್ಷದ ಪ್ರತೀಕ ಪೂಜಕರೆ, ಜೈನಧರ್ಮವನ್ನು ವೇದವಿಹಿತ ಧರ್ಮವಲ್ಲ, ಎಂದು ನಿಂದಿಸುತ್ತಾರೆ! ಜೈನರು-ಬೌದ್ಧರು ವೇದಬಾಹಿರ ಧರ್ಮ-ಪಂಥವನ್ನು ಅನುಸರಿಸುವವರು ಎಂದು, ಎಂದಿನಿಂದಲೇ ಎಬ್ಬಿಸಿರುವ ಗುಲ್ಲು, ಎಷ್ಟು ಅನೃತದ ಮೊಟ್ಟೆ-ಸುಳ್ಳಿನಕಂತೆಯಾಗಿದೆ ಎಂಬುದನ್ನು ನೋಡುವಾಗ-(ಇದು ನಿಜವಿದ್ದರೆ) ಭಾರತೀಯರ ದುರ್ದೈವಕ್ಕೆ, ಸ್ವಾರ್ಥೀ ಪಕ್ಷಾಂಧರಾದ, ತಾವೇ ಮೇಧಾವಿಗಳೆಂಬ ಗುರುವರ್ಗವೇ ಎಂದಿನಿಂದಲೂ ಕಾರಣವಾಗುತ್ತ ಬಂದಿದೆ, ಎಂದು ಹೇಳಬೇಕಾಗುತ್ತದೆ. ಆದರೆ, ಈ ಗುರುವರ್ಗವು 'ಕಣ್'-ಕಳೆಯಬೇಕೆಂದರೂ, ಅವರ ಪಾದದಲ್ಲಿ ತಮ್ಮ 'ಅಕ್ಷ'ವನ್ನು ಅರ್ಪಿಸುವ, 'ಸರ್ವ-ಸಮರ್ಪಣ' ಯೋಗವನ್ನು ಸ್ವೀಕರಿಸುತ್ತ ಬಂದುದು ಯಾರ ತಪ್ಪು? ಸಹಸ್ರಾಕ್ಷ ದೇವನ ಪಾದಸೇವಕರಾದರೂ, ತಾತ್ತ್ವಿಕವಾಗಿ ಇವರು ಅಕ್ಷ-ರಸ್ಥರೋ? ಎಂಬ ಸಂದೇಹ ಉಂಟಾಗುವಂತಿದೆ. ಕೋಟಿ ಕೋಟಿ ಪ್ರಜಾಭಿವೃತ್ತಿಯು ನಡೆದಿರುವುದಾದರೂ ಭಾರತೀಯ ಕೊತ್ತಳದ ಮೇಲಿನ ಧ್ವಜ (ದ) ಅಕ್ಷದ ತಲೆ ತಗ್ಗಿದ್ದೇ ಇದೆ! ಪರಕೀಯರನ್ನು ಆಮಂತ್ರಿಸಿ ಸ್ವಾಗತಿಸುವ ಪರಂಪರೆ. ಗ್ರೀಕ್-ಭೂಪ ಅಲೆಕ್ಝಾಂಡರನು ಬರುವದಕ್ಕೆ ಮುಂಚೆಯಿಂದಲೆ ಇದೆ!

ಯಕ್ಷ-ಕಾಂಡದ ಆಧುನಿಕ ಪ್ರಕಾರದಲ್ಲಿ (: ದೀವಳಿಗೆಯಲ್ಲಿ) 'ಅಕ್ಷ'ದ ಬದಲು ಕವಡೆಯ (: ಪಗಡಿ) ಆಟವು ಪ್ರಾಶಸ್ತ್ಯ ಪಡೆದಿದೆ. ಅಕ್ಷ ಅಥವಾ ಕವಡೆ ಆಟವು ನಲ್ಲ-ನಲ್ಲೆಯರು ಇಬ್ಬರೊಳಗಿನ ಕಾಲಕ್ಷೇಪದ ಅಂಗವಾಗಿ ಒಂದು ಲೀಲಾವಿನೋದಯುಕ್ತ ಕ್ರೀಡೆಯಾಗಿರುವ ಶಕ್ಯತೆಯಿದೆ. 'ಮುತ್ತಿನ ಲಂಬಣವು' ಹರಿಯಲು ನೆಪವಾದ ನೆತ್ತದ ಆಟದಲ್ಲಿ, ಕರ್ಣ ಹಾಗೂ ಭಾನುಮತಿ (ಮಿತ್ರ ದುರ್ಯೋಧನನ ಪತ್ನಿ) ಇವರಿಬ್ಬರೇ ಇದ್ದುದಾಗಿ ಪಂಪನ ವರ್ಣನೆಯಿಂದ ಗೊತ್ತಾಗುತ್ತದೆ. ಗೆದ್ದವರಿಗೆ, ತಮ್ಮ ದಾಯವನ್ನು ಅರ್ಪಿಸಬೇಕಾದ ಹೊಣೆ, ಸೋತವರ ಮೇಲೆ ಇರುತ್ತದೆ. ಯಕ್ಷರಾತ್ರಿಯ ಕ್ರೀಡೆಯಿದು. ಈಗಿನ ಪಗಡೆಯಾಟ ಸ್ವಲ್ಪ ಬದಲಾಗಿದೆ. ಆದರೂ 'ಪಾಂಡವರು ಆಡಿದ ಆಟ ಎಂಬ ನೆನಹು ಇದ್ದೇ ಇದೆ. ಆದರ ಪಾಂಡವ-ಕೌರವರು ಅನುಸರಿಸಿದ್ದು, ತಮಗಿಂತಲೂ

ಪುರಾತನ ಕಾಲದಿಂದ ನಡೆದ ಸಂಪ್ರದಾಯವನ್ನೇ, ಎಂಬುದೂ ನಿಶ್ಚಿತವಿದೆ. ಈ ಅಕ್ಷದ್ಯೂತದ ದುಷ್ಪರಿಣಾಮವನ್ನು ವರ್ಣಿಸುವ ಸರ್ವೋತ್ಕೃಷ್ಟ ಕವನವು ಒಂದು ಋಗ್ವೇದದಲ್ಲಿಯೆ ಇದೆ. ಈ ಸೂಕ್ತವು ಮಾನವ ಸ್ವಭಾವವನ್ನು ಚಿತ್ರಿಸುವ ಹೃದ್ಯವಾದ ಉಚ್ಚಪಾತಳಿಯ ಶ್ರೇಷ್ಠ ಮೂಲ್ಯದ ಒಂದು ಭಾವಗೀತ ಎಂದು ಜಾಗತಿಕ ವಿದ್ವಾಂಸರ ಪ್ರಶಂಸೆಗೆ ಪಾತ್ರವಾಗಿದೆ, ಎಂದರೆ ಅಕ್ಷದ್ಯೂತವನ್ನು ನಿಂದ್ಯವೆಂದೂ ತ್ಯಾಜ್ಯವೆಂದೂ ಹೇಳುವ ವರ್ಗವು ಒಂದು, ಋಗ್ವೇದ ಕಾಲದಿಂದಲೇ ಭಾರತೀಯ ಸಾಮಾಜಿಕ ಜೀವನದಲ್ಲಿ ಇದ್ದುದು ನಿಜವಿರುವಂತೆ, 'ಸನಾತನ' ಸಂಪ್ರದಾಯವೆಂದು, ಇದನ್ನು ಒಪ್ಪಿ ಅಪ್ಪಿಕೊಂಡು ಬಂದ ಸಮಾಜವೂ ಇದ್ದಿತು-ಇದೆ ಎಂಬುದೂ ಅಷ್ಟೇ ನಿಜ.*

ಯಕ್ಷರಾತ್ರಿ : ದೀವಳಿಗೆಗೆ ಅಳಿಯತನಕ್ಕೆ ಕರೆಯಿಸುವ ವಾಡಿಕೆಯೊಡನೆ ಈ ಪರ್ವದ ಅಂಗವಾಗಿ ಯೋಜಿಸಿರುವ ಅಕ್ಷ-ದ್ಯೂತ ಅಥವಾ ಕವಡೆಗಳ ಆಟದ ಪ್ರಯೋಜನವು ಯಾವುದು ಇರಬಲ್ಲದು? ಇದರ

ಪ್ರಾವೇಪಾ ಮಾ ಬೃಹತೋ ಮಾದಯಂತೀ ಪ್ರವಾತೇಜಾ ಇರಿಣೇ ವರ್ವೃತಾನಾಃ ।
ಸೋಮಸ್ಯೇವ ಮೌಜವತಸ್ಯ ಭಕ್ಷೋ ವಿಭೀದಕೋ ಜಾಗೃವಿರ್ಮಹ್ಯಮಚ್ಛಾನ್ ॥ ೧॥
ನ ಮಾ ಮಿಮೇಥಾ ನ ಜಹೀಳ ಏಷಾ ಶಿವಾ ಸಖಿಭ್ಯಃ ಉತ ಮಹ್ಯಮಾಸೀತ್ ।
ಅಕ್ಷಸ್ಯಾಹಮೇಕಪರಸ್ಯ ಹೇತೋರನುವ್ರತಾಮಪಜಾಯಾಮರೋಧಂ ॥೨॥
ದ್ವೇಷ್ಟಿ ಶ್ವಶ್ರೂರಪ ಜಾಯಾ ರುಣದ್ಧಿ ನ ನಾಥಿತೋ ವಿಂದತೇ ಮರ್ಡಿತಾರಂ
ಅಶ್ವಸ್ಯೇವ ಜರತೋ ವಸ್ನ್ಯಸ್ಯ ನಾಹಂ ವಿಂದಾಮಿ ಕಿತವಸ್ಯ ಭೋಗಂ ॥೩॥
ಅನ್ಯೇ ಜಾಯಾಂ ಪರಿ ಮೃಶಂತ್ಯಸ್ಯ ಯಸ್ಯಾಗೃಧದ್ವೇದನೇ ವಾಜ್ಯಕ್ಷಃ
ಪಿತಾ ಮಾತಾ ಭ್ರಾತರ ಏನಮಾಹುರ್ನ ಜಾನೀಮೋ ನಯತಾ ಬದ್ಧಮೇತಂ ॥೪॥
ಯದಾದೀಧ್ಯೇ ನ ದವಿಷಾಣ್ಯೇಭಿಃ ಪರಾಯದ್ಭ್ಯೋಽವ ಹೀಯೇ ಸಖಿಭ್ಯಃ ।
ನ್ಯುಪ್ತಾಶ್ಚ ಬಭ್ರವೋ ವಾಚಮಕ್ರತ ಏಮೀದೇಷಾಂ ನಿಷ್ಕೃತಂ ಜಾರಿಣೀವ ॥೫॥
ಸಭಾಮೇತಿ ಕಿತವಃ ಪೃಚ್ಛಮಾನೋ ಜೇಷ್ಯಾಮೀತಿ ತನ್ವಾಶೂಶುಜಾನಃ ।
ಅಕ್ಷಾಸೋ ಅಸ್ಯ ವಿ ತಿರಂತಿ ಕಾಮಂ ಪ್ರತಿದೀವ್ನೇ ದಧತ ಆ ಕೃತಾನಿ ॥೬॥
ಅಕ್ಷಾಸ ಇದಂ ಕುಶಿನೋ ನಿತೋದಿನೋ ನಿಕೃತ್ವಾನಸ್ತಪನಾಸ್ತಾಪಯಿಷ್ಣವಃ ।
ಕುಮಾರದೇಷ್ಣಾ ಜಯತಃ ಪುನರ್ಹಣೋ ಮಧ್ವಾ ಸಂಪೃಕ್ತಾಃ ಕಿತವಸ್ಯ ಬರ್ಹಣಾ ॥೭॥
ತ್ರಿಪಂಚಾಶಃ ಕ್ರೀಳತಿ ವ್ರಾತ ಏಷಾಂ ದೇವ ಇವ ಸವಿತಾ ಸತ್ಯಧರ್ಮಾ ।
ಉಗ್ರಸ್ಯ ಚಿನ್ಮನ್ಯವೇ ನಾ ನಮಂತೇ ರಾಜಾ ಚಿದೇಭ್ಯೋ ನಮ ಇತ್ಕೃಣೋತಿ ॥೮॥
ನೀಚಾ ವರ್ತಂತ ಉಪರಿ ಸ್ಫುರಂತ್ಯಹಸ್ತಾಸೋ ಹಸ್ತವಂತಂ ಸಹಂತೇ ।
ದಿವ್ಯಾ ಅಂಗಾರಾ ಇರಿಣೇ ನ್ಯುಪ್ತಾಃ ಶೀತಾಃ ಸಂತೋ ಹೃದಯಂ ನಿರ್ದಹಂತಿ ॥೯॥
ಜಾಯಾ ತಪ್ಯತೇ ಕಿತವಸ್ಯ ಹೀನಾ ಮಾತಾ ಪುತ್ರಸ್ಯ ಚರತಃ ಕ್ವ ಸ್ವಿತ್ ।
ಋಣಾವಾ ಬಿಭ್ಯದ್ಧನಮಿಚ್ಛಮಾನೋಽನ್ಯೇಷಾಮಸ್ತಮುಪ ನಕ್ತಮೇತಿ ॥೧೦॥
ಸ್ತ್ರಿಯಂ ದೃಷ್ಟ್ವಾಯ ಕಿತವಂ ತತಾಪಾನ್ಯೇಷಾಂ ಜಾಯಾಂ ಸುಕೃತಂ ಚ ಯೋನಿಂ।
ಪೂರ್ವಾಹ್ಣೇ ಅಶ್ವಾನ್ಯುಯುಜೇ ಹಿ ಬಭ್ರೂನ್ಸೋ ಅಗ್ನೇರಂತೇ ವೃಷಲಃ ಪಪಾದ ॥೧೧॥
ಯೋ ವಃ ಸೇನಾನೀರ್ಮಹತೋ ಗಣಸ್ಯ ರಾಜಾ ವ್ರಾತಸ್ಯ ಪ್ರಥಮೋ ಬಭೂವ ।
ತಸ್ಮೈ ಕೃಣೋಮಿ ನ ಧನಾ ರುಣಧ್ಮಿ ದಶಾಹಂ ಪ್ರಾಚೀಸ್ತದೃತಂ ವದಾಮಿ ॥೧೨॥
ಅಕ್ಷೈರ್ಮಾ ದೀವ್ಯಃ ಕೃಷಿಮಿತ್ಕೃಷಸ್ವ ವಿತ್ತೇ ರಮಸ್ವ ಬಹುಮನ್ಯಮಾನಃ ।
ತತ್ರ ಗಾವಃ ಕಿತವ ತತ್ರ ಜಾಯಾ ತನ್ಮೇ ವಿ ಚಷ್ಟೇ ಸವಿತಾಯಮರ್ಯಃ ॥೧೩॥
ಮಿತ್ರಂ ಕೃಣುಧ್ವಂ ಖಲು ಮೃಳತಾ ನೋ ಮಾ ನೋ ಘೋರೇಣ ಚರತಾಭಿಧೃಷ್ಣು
ನಿ ವೋ ನು ಮನ್ಯುರ್ವಿಶತಾಮರಾತಿರನ್ಯೋ ಬಭ್ರೂಣಾಂ ಪ್ರಸಿತೌ ನ್ವಸ್ತು ॥೧೪॥

ಈ 'ಅಕ್ಷಸೂಕ್ತ'ವು ಸಾಮಾಜಿಕ - ಸಾಂಸ್ಕೃತಿಕ ಮನೋಧರ್ಮದ ಹಿನ್ನೆಲೆಯಲ್ಲಿ ಆಳವಾದ ನೆಲೆಯನ್ನು ಒಳಗೊಂಡಿದೆ. ಈ ಸೂಕ್ತವು ಕವಿ ಗೋಪಾಲಕೃಷ್ಣ ಅಡಿಗರಿಂದ ಕನ್ನಡಕ್ಕೆ ಅನುವಾದವೂ ಆಗಿದೆ. ಈ ಸೂಕ್ತದ ಬಗೆಗೆ ಇಲ್ಲಿ ಬರುವ ಕೆಲವು ಮುಖ್ಯ ಪರಿಭಾಷೆಗಳ ಬಗೆಗೆ ಶಂಬಾ ಈ ಗ್ರಂಥದ ಹಲವು ಭಾಗಗಳಲ್ಲಿ ವಿವರವಾದ ವ್ಯಾಖ್ಯಾನ ಮಾಡುತ್ತಾರೆ. ಈ ಸೂಕ್ತದ ಓದಿನ ಹಿನ್ನೆಲೆಯಲ್ಲಿ ಶಂಬಾ ವಿಚಾರಗಳನ್ನು ತಿಳಿಯಬಹುದು. (ಸಂ)

ವಿವರಣೆಯು ಅವಶ್ಯವೊ? ಈ ಸಮಯಾಚಾರದ ಆಕೃತಿ : ಅರ್ಥವನ್ನು ನಿರ್ಧರಿಸಿಕೊಳ್ಳಲು, ಈ ಪರ್ವದಲ್ಲಿ ಮಹಾಲಿಂಗ (ಬಳ್ಳಿಯ) ಸತ್ತ್ವವನ್ನುಳ್ಳ ಬ್ರಹ್ಮದೇವರ ಪೂಜೆಯ ಶಾಸ್ತ್ರಪೂತ (ತೇಜಸ್ವೀ) ನೀರ ಸ್ನಾನಭೋಗ, ಬಳಿಕ ಯಕ್ಷ-ಕರ್ದಮ : ಸುಗಂಧ ದ್ರವ್ಯಭೋಗ, ಶಾವಿಗೆ-ಪಾಯಸ (ಪಡುವಲದಂತೆ ಶಾವಿಗೆಯೂ ಸರ್ಪ ಮಂತ್ರವಾದಿಗಳಿಗೆ ನಿಷಿದ್ಧ) ಊಟಕ್ಕೆ........ಈ ಪಾರ್ಶ್ವಭೂಮಿಯ ಯಕ್ಷ-ರಾತ್ರಿಯ ಪರ್ವಕಾಲದಲ್ಲಿ ಅಕ್ಷ-ದ್ಯೂತದ ಸ-ಫಲತೆ : ಸ-ಅರ್ಥಕತೆ ಎಲ್ಲಿ? ಯಾತರಲ್ಲಿ ಇರಬಲ್ಲುದು? ಆದರೆ, ನಲ್ಲ-ನಲ್ಲೆಯರ ಕ್ರೀಡಾವಿನೋದದ ಈ ಆಟವು ಸಾಮಾಜಿಕ ಸಾಂಸ್ಕೃತಿಕ ಮಟ್ಟದಲ್ಲಿ ಆಪ್ತಸ್ವಕೀಯರ ಒಡನೆಯ ಆಟದ ಅರ್ಹತೆಯನ್ನು ಪಡೆಯಲು, ಈ ಅಕ್ಷದ್ಯೂತದ ಮೂಲ-ಆಕೃತಿಯಲ್ಲಿ ತುಂಬ ಮಾರ್ಪಾಟುಗಳು ಆಗುತ್ತ ಬಂದಿರಲು ಸಾಕು. ಮೂಲತಃ ಪುರುಷನು ತನ್ನ ಪುರಿಯೊಡನೆ ನಡೆಸುವ ಲೀಲಾವಿನೋದದ ಸಂದರ್ಭದಲ್ಲಿ ಅಂಕುರಿಸಿರಬೇಕಾದ ಈ 'ಅಕ್ಷ' ದ್ಯೂತವು, ಋಗ್ವೇದ ಕಾಲದಲ್ಲಿಯೆ ಅಂದಿನ ಸಾಮಾಜಿಕ ಜೀವನದೊಳಗಿನ ಒಂದು ಸಂಮೋಹಕ ಅಂಗವಾಗಿತ್ತೆಂಬುದರ ಬಗೆಗೆ ಸಂದೇಹವಿಲ್ಲ. 'ಸಭಾಂ ಏತಿ ಕಿತವಃ' ಎಂಬ ಉಲ್ಲೇಖದಿಂದ, ವೇದಕಾಲದಲ್ಲಿ ಅಕ್ಷ-ದ್ಯೂತದ ವ್ಯವಸ್ಥಿತ ವ್ಯವಹಾರವು ನಡೆಯುತ್ತಿರಬೇಕೆಂದು ಕಾಣುತ್ತದೆ.[೧] 'ತ್ರಿ-ಪಂಚಾಶಃ ಕ್ರೀಳತಿ ವ್ರಾತಃ' ಎಂಬ ಈ ಉಲ್ಲೇಖ, ಅಂದು ಆಟಗಾರರ ವ್ರಾತಗಳಿದ್ದುದಕ್ಕೆ ಸಾಕ್ಷಿ. ಇಂತಹ 'ವ್ರಾತ'ಗಳ 'ರಾಜಾ' 'ಮಹತಃ ಗಣಸ್ಯ ಸೇನಾನಿ' ಇದ್ದರು.

ಈ ಅಕ್ಷವನ್ನು 'ದಿವ್ಯ'ಕ್ಕೆ ಹೋಲಿಸಲಾಗಿದೆ. 'ದಿವ್ಯಾಃ ಅಂಗಾರಾಃ' ದೈವ ಪರೀಕ್ಷೆ: ತನಗೆ ಅನುಕೂಲ ಭಾಗ್ಯದ ಸಮಯದ ಸೂಚನೆ ಉಂಟೆ, ಎಂದು ನೋಡಿಕೊಳ್ಳಲು 'ಅಕ್ಷ'ದ ಆಟವನ್ನು ಆಡುವ ವಾಡಿಕೆಯು ಇರಬೇಕು. ಮಾರ್ಗಶೀರ್ಷ ಪೌರ್ಣಿಮೆಗೆ 'ದ್ಯೂತ-ಪೌರ್ಣಿಮಾ' ಎಂಬ ಹೆಸರಿದೆ. ಅಂದು ಶ್ರೀಲಕ್ಷ್ಮೀದೇವಿಯನ್ನು ಗೌರವಿಸಲು-ಒಲಿಸಿಕೊಳ್ಳಲು (in honour of) ಈ ಆಟವನ್ನಾಡುವರು ಎಂದು ಮೊನಿಯರ್ ವಿಲಿಯಂಸ್ ಹೇಳುತ್ತಾರೆ. 'ಧನ' ಎಂಬುದರ ಅರ್ಥ ಕಾಲಕಾಲಕ್ಕೆ ಬದಲಾಗಿವೆ. ಪಿತೃಪ್ರಧಾನ ಸಂಸ್ಕೃತಿಯ ಪ್ರಾರಂಭದಲ್ಲಿ 'ಸ್ತ್ರೀ'ಯೆ ಧನ: (ಭಗ) ಭಾಗ್ಯ ಎಂಬ ಗ್ರಹಿಕೆಯಿತ್ತು. 'ಅಕ್ಷ'ದ ಆಟದಲ್ಲಿ ಪಡೆಯಬೇಕಾದ 'ಭಾಗ್ಯ'ವು ಮಹಾಭಾರತದ ವಿಖ್ಯಾತ 'ಅಕ್ಷ'ದ ಜೂಜಿನಲ್ಲಿಯೂ ಕೂಡ ಇದಕ್ಕಿಂತ ಬೇರೆ ಇದ್ದಿತೆಂದು ಗ್ರಹಿಸಲಿಕ್ಕಾಗುವುದಿಲ್ಲ.

ಒಂದು ಸಂಸ್ಕೃತಿಯ ಇತಿಹಾಸ, ಆ ಜನ ಸಮಷ್ಟಿಯ ಪ್ರಜ್ಞೆಯ : ವ್ಯಕ್ತಿ-ವ್ಯಕ್ತಿಗಳೊಳಗಿವ ಅಂತಃಸಾಕ್ಷಿಯ ವಿಕಾಸ ಕ್ರಮದ ಇತಿಹಾಸ ಅಥವಾ ವ್ಯಕ್ತಿಯೊಳಗಿನ ಸಾಮಾಜಿಕ ಪ್ರಜ್ಞೆಯು ಎಚ್ಚತ್ತು, ಸುತ್ತಲಿನ ಜೀವನದ ಮೇಲೆ ಬೀರುವ ಪ್ರಭಾವದ ಸಮೀಕ್ಷೆಯು ಆ ಸಂಸ್ಕೃತಿಯ ಇತಿಹಾಸವಾಗುವುದು ಅಥವಾ ಸಮಷ್ಟಿಯ ಪ್ರಜ್ಞೆ ಎಚ್ಚತ್ತು, ಮರಳಿ ತೂಕಡಿಸುತ್ತ, ಇನ್ನೂ ಅರೆನಿದ್ರೆಯಲ್ಲಿ ಇದ್ದಿತೊ ಎಂಬುದರ ನಿರೀಕ್ಷಣೆಯೂ ಸಂಸ್ಕೃತಿಯ ಇತಿಹಾಸದ ಗುರಿಯಾಗಿದೆ. ದಿಕ್ಕಾಲದ ಪರಿಸರದಲ್ಲಿ ಸಂಭವಿಸುವ ಪ್ರಪಂಚದ ಪ್ರತಿಯೊಂದು ಘಟನೆಯೂ 'ಇತಿಹಾಸ'ಕ್ಕೆ ಒಳಗಾಗಿದೆ. ಅದಕ್ಕೆ ನಿನ್ನೆ-ಇಂದುಗಳೂ ಉಂಟು. ಮಾನವಪ್ರಾಣಿಗೆ 'ಸನಾತನ'ತ್ವದ ಬಗೆಗೆ ವಿಲಕ್ಷಣ ಆಕರ್ಷಣವಿರುತ್ತದೆ. ಆದರು, ಈ ಆಕರ್ಷಣವು ಎಷ್ಟೇ ವಿಪರೀತವಿದ್ದರೂ, ವ್ಯಕ್ತಿಶಃ ಕೆಲರು, ಅಥವಾ ಇಂತಹ ವ್ಯಕ್ತಿಗಳ ಪಂಗಡಗಳು, 'ನಿನ್ನೆ'ಯಲ್ಲಿಯೇ ಸನಾತನವಾಗಿ ಉಳಿಯಬಯಸಿದರೂ ತಮ್ಮ ಆತ್ಮವಂಚನೆಯನ್ನು ಮಾಡಿಕೊಂಡಲ್ಲದೆ, ಅಲ್ಲಿಯೆ ನಿಂತಿರಲು ಎಂದೆಂದಿಗೂ ಶಕ್ಯವಿಲ್ಲ. 'ನಿನ್ನೆ' ಸಂಪೂರ್ಣ. ನಿನ್ನೆಯ ರೂಪದಲ್ಲೇ 'ಇಂದು'ಗಳಲ್ಲಿ ಮಾರ್ಪಡಲಾರದು. ಅದೇಕೆ ತೀರ ಮರುದಿನದ 'ಇಂದಿ'ನಲ್ಲೂ ನಿನ್ನೆಯನ್ನೆ ಇಡಿಯಾಗಿ ಅನುಭವಿಸಬೇಕೆಂದರೂ ಅದು ಅಶಕ್ಯ. ಇಂದು ಇದ್ದಕಿದ್ದಂತೆ ನಾಳೆಯಲ್ಲಿ ಬರಲಾರದು. ಆದರೆ ಇದೂ ನಿಜ : ನಿನ್ನೆಯ ಸಂಬಂಧವನ್ನೇ ಪೂರ್ಣ ತಪ್ಪಿಸಿ ಬಿಡುವುದೂ ಅಶಕ್ಯ. ಈ ಬಗೆಯ ಹಟವಾದ, ಆತ್ಮಹಾನಿಗೆ ಕಾರಣವಾಗುತ್ತದೆ. ಏಕೆಂದರೆ ತಮ್ಮ ನಿನ್ನೆಗಳನ್ನೇ ಅರಿಯದವರಿಗೆ, ಅವರ ಇಂದುಗಳ ನಿಶ್ಚಿತ ಅರ್ಥವೇ ತಿಳಿಯಲು ಅಶಕ್ಯ. ಆದರೆ, ಪವಾಡ ಚಮತ್ಕಾರಗಳ ಮೂಲಕ, ಅಥವಾ 'ಚಾನ್ಸ' (Chunce) - ಕಾಂಟಿಂಜೆನಿಸ್ಸಿ (Contingency)ಗಳಲ್ಲಿ ಫಕ್ಕನೆ ಸಂಭವಿಸುವ ಅಪಘಾತ : ಧೂಮಕೇತು ಇಂತಹ

ಆಘಾತಗಳಿಂದಲೇ ಕಣ್ಣುತೆರೆವ-ವೃತ್ತಿಯ ಮನೋಭಾವಕ್ಕೆ ನಿನ್ನೆ-ಇಂದುಗಳಲ್ಲಿ ಕಾರ್ಯ-ಕಾರಣ ಸಂಬಂಧವುಂಟೆಂಬುದನ್ನು ಕಂಡುಕೊಳ್ಳುವುದು ವ್ಯರ್ಥ ಪರಿಶ್ರಮ ಎಂದು ಎನಿಸುತ್ತದೆ! ಆದರೆ, ವಿಶ್ವಸ್ಥ ವಾಸ್ತವ-ವಸ್ತುವು: ಅದು ನಿಸರ್ಗದ ಪಾತಳಿಯಲ್ಲಿ ಹಾಗೂ ಮಾನವ ಜೀವನದ ಪಾತಳಿಯಲ್ಲಿ ಕಾಣಿಸಿಕೊಳ್ಳುವುದರೊಳಗೆ ಕ್ರಮ : ವ್ಯವಸ್ಥೆ : ಅರ್ಥ ಇದು, ಮಾನವನು ಒಪ್ಪಿದರೇ ಉಂಟು, ಇಲ್ಲವಾದರೆ ಇಲ್ಲ, ಎಂದಲ್ಲ, 'ಸತ್ಯ' 'ಜ್ಞಾನ'- ಶಾಸ್ತ್ರಾದಿಗಳು ಮಾನವ ಕಲ್ಪಿತ-ಮಾನವ ಕಲ್ಪನೆ ಮಾತ್ರ ಎಂದೆನ್ನಲಿಕ್ಕಾಗುವುದಿಲ್ಲ. ದಿಕ್ಕಾಲದ ಸಂದರ್ಭದ ಸಾಮಾಜಿಕ ಜೀವನದ (: ಈ ವಾಸ್ತವ ವಸ್ತುವಿನ) ಆಧಾರವು ಇಲ್ಲದೆ ಮಾನವಕೃತ ರಚನೆ-'ಕೃತಿ' ಏನೆಲ್ಲವೂ ನೀರ ಮೇಲಣ ಬರೆಹವೇ ಆಗುತ್ತದೆ. ಮಾನವನ ಮೂಲಕ ಸತ್ಯ : ಜ್ಞಾನದ ಅರ್ಥವು ಆಕೃತಿ ಪಡೆದಿದೆಯಾದರೂ, ಅರ್ಥವು ಆತನಿಗೆ ಮೊದಲು ಹೊಳೆಯದೆ ಅವನು ಏನನ್ನೂ ಕಾಣಲಾರ. ಹೊಳೆದು ಕಂಡ ಭಾಗದ ಆಧಾರದ ಮೇಲೆ ಕವನ, ಕಥೆ, ಶಾಸ್ತ್ರಾದಿ ಎಲ್ಲವೂ ಆ ಬಳಿಕ ರಚಿತವಾದದ್ದು. ಆದರೆ, ಈ 'ಕಂಡು'ದರಲ್ಲೇ ಆ-ಭಾಸವಿದ್ದರೆ, ಆ ಭಾಗವು ಕುಪ್ಪಳಿಸಿ ನೆಲಕ್ಕುರುಳಲೇಬೇಕು. ಜ್ಞಾನ : ಸತ್ಯ ಇದು ಕಾಲ್ಪನಿಕವಲ್ಲ. ಕಾಲನ ಒರಗೆ ಹತ್ತಿ, ಅನೇಕರ ಒಪ್ಪಿಗೆ ಪಡೆದು ಉಳಿದಿರುವ ಭಾಗವೆ, ಇಂದು ಮಾನವರ ಪಾಲಿನ ಜ್ಞಾನರಾಶಿಯಾಗಿದೆ. ಮಾನವ ಸಂಸ್ಕೃತಿಯ ಇತಿಹಾಸದಲ್ಲಿ ಅರಿಕೆಗೆ ಬರುತ್ತಿರುವ ಸಂಗತಿಯಿದು.

ನಾಗಸಂಪರ್ಕದಲ್ಲಿ ಮಾನವನಿಗೆ ಸ್ಪರ್ಶಜ್ಞಾನೋದಯವಾಯಿತು. ಈ ನಿಮಿತ್ತದಿಂದ ಜಾಗ್ರತವಾದ ಸೂಕ್ಷ್ಮತಮ ಸಂವೇದನಾಕ್ಷಮತೆಯ ಮೂಲಕ ಕಣಿ : ವ್ಯಕ್ತಿಯ ಅಂತರಂಗದ ಕಣ್ಣು(intuition): ಸಂದೃಕ್-ದೃಷ್ಟಿ ವ್ಯಕ್ತಿಯಲ್ಲಿ ಅರಳಿತು. ಮಾನವ ಸಮಾಜಗಳು ಉಳಿಸಿಕೊಂಡು ಬಂದಿರುವ ಆದಿಯುಗದ ಅವಶಿಷ್ಟ ದಿವ್ಯ ಪವಾಡ ಕಥೆ ಹಾಗೂ ಆಚಾರ-ವಿಚಾರಗಳೊಳಗಿನ ಕೆಲವು ಸಮಯಾಚಾರಗಳ ಆಧಾರದಿಂದ ಈ ಮಾತು ಇಂದು ದೃಢಪಡುತ್ತದೆ 'ಅಕ್ಷ' ಹಾಗೂ ಕಣ್>ಗಣ್, ಕಣ್ ಈ ಸಾಂಕೇತಿಕ ಪ್ರತಿಮೆಗಳ ನಿನ್ನೆ-ಇಂದುಗಳ ಸಮೀಕ್ಷೆಯ ಇದಕ್ಕೆ ದೃಷ್ಟಾಂತ. ಋಗ್ವೇಧದಲ್ಲಿ 'ಕಾಣಾ', ಅ-ರಾಯಿ (ಅ-ಲಕ್ಷ್ಮಿ) ಗಿರಿಂ ಗಚ್ಛ'[೨] ಈ ಸೂಕ್ತದ ಸಮಾಲೋಚನೆ ಯಲ್ಲಿ 'ಕಾಣಾ' ಶಬ್ದಸಂಕೇತವು ಬೆಟ್ಟಯಾಯಿತು! ಅದಕ್ಕೂ ಮೊದಲು, ಸರ್ಪಗಳ ತಾಯಿ : ಕದ್ರು ಇವಳಿಗೆ 'ಕಾಣಾ' ಎಂಬ ನಾಮವಿಶೇಷವಿದ್ದುದು ತಿಳಿದಿತ್ತು. ಯಜ್ಞದ ಸಂದರ್ಭದಲ್ಲಾದ ಸ್ಖಾಲಿತ್ಯದಿಂದಾಗಿ ಕದ್ರುವಿಗೆ ನೀನು 'ಒಕ್ಕಣ್ಣಿಯಾಗು' : 'ಕಾಣಾ' ಎಂಬುದೇ ನಿನ್ನ ಹೆಸರಾಗಲಿ, ಎಂಬ ಶಾಪ ದೊರೆತಿತಂತೆ! ಅಂದು ಆಗ ಈ 'ಕಾಣಾ' ಸಂಕೇತದ ಆಳ-ಅಗಲ ಸ್ವಲ್ಪವೂ ಗಮನಕ್ಕೆ ಬಂದಿರಲಿಲ್ಲ! ಇದರ ಘನಸ್ವರೂಪ (dimensions) ತಿಳಿಯದು. ಅಕ್ಷ : ನಾಶರಹಿತ='ಅಕ್ಷ-ರ' (ಎಂದರೆ 'ಅಕ್ಷ'ವನ್ನುಳ್ಳ) ಪುರುಷನ ದರ್ಶನದ ತರುವಾಯ! 'ಕಾಣಾ ಅ-ರಾಯಿ (ಅ-ಲಕ್ಷ್ಮಿ)' ನೀನು ಗಿರಿಗಳಲ್ಲಿ ಹೋಗಿ ಅಡಗು ಎಂದು ಅವಳನ್ನು ತಳ್ಳಿಬಿಡುವ ಮಂತ್ರಭಾಗದಿಂದ ಆಪ : ರಸೋದ್ಭವೆ : ಕ್ಷೀರಾಬ್ಧಿ ಪುತ್ರಿಯ ಅಕ್ಕ : ಲಕ್ಷ್ಮೀ : ಜ್ಯೇಷ್ಠೆಯು ಸರ್ಪಸ್ವರೂಪಳೇ, ಎಂದು ನನ್ನ ಸಮಸ್ಯೆಗೆ ಉತ್ತರ ದೊರೆತಿತು! ಹೀಗೆಯೆ, ಇಲ್ಲಿ ಲಕ್ಷ್ಮೀದೇವಿ=ರಾ (ಕಾ) ದೇವಿ ಇವರೂ ಸರ್ಪಸ್ವರೂಪರೇ ಎಂಬುದು ಸ್ಪಷ್ಟವಾಯಿತು. ಸಾರ್ಪರಾಜ್ಞಿ ಎಂಬ ಅದಿತಿ : ಪೃಶ್ನಿ ಇವರ ಸರ್ಪತ್ವವು ಈ ಮೊದಲೆ ಒಂದು ಪ್ರಬಂಧ ಲೇಖನದಲ್ಲಿ ದೃಢಪಟ್ಟಿತ್ತು. ಈಗ ಅರಾಯಿಯ ವಿಶೇಷಣ 'ಕಾಣಾ', ಕಂದಮಿಳ 'ಕಣ್ಣು' ಇರುವ ಶಕ್ಯತೆ, ಮೊನಿಯರ್ ವಿಲಿಯಂಸ್‌ರ ಕೋಶದಿಂದ ಗಮನಕ್ಕೆ ಬಂದಿತ್ತು. 'ಇದರ ನಿರುಕ್ತವು ಸಂದಿಗ್ಧವಾಗಿದೆ' ಎಂಬ ಅವರ ಸೂಚಕ ಮಾತಿನಿಂದ ಪಾಣಿನ್ಯಾದಿಗಳ ಪಾರಂಪರಿಕ ನಿರ್ವಚನವು ಸದೋಷವಿರುವುದರ ಸಂದೇಹ ವುಂಟಾಗಿತ್ತು. ಆದರೆ, ಸಂಸ್ಕೃತದಲ್ಲಿ ಸೇರಿರುವ 'ಕಾಣಾ' ಈ ಸಂಕೇತವು ಕಂದಮಿಳ ಭಾಷಿಕರದೇ ಆಗಿರುವುದಾಗಿ ಬರೋ ಅವರ ಕೋಶದಿಂದ ದೃಢಪಟ್ಟಿತು. 'ಪುರ' (ಮತ್ತು 'ಪರೆ') ಈ ಸರ್ಪಕ್ಷೇತ್ರಕ್ಕೆ ಸಂಬದ್ಧವಾಗಿರುವ ಕಂದಮಿಳ ಭಾಷೆಯ ಸಂಕೇತದೊಡನೆ, 'ಕಾಣಾ' ಸಂಕೇತವು (ಒಕ್ಕಣ್ಣು : ಒಳಗಣ್ಣು : ಸಂದೃಕ್) ಸರ್ಪಕ್ಕೇ ಸಂಬಂಧಿಸಿರುವದಾಗಿ ಕದ್ರುವಿನ ಕಥೆಯ ಮೂಲಕ ನಿಶ್ಚಿತವಾಯಿತು. ಕಾಣಾ ಸಂಕೇತವೂ ವಾಶಿ, ಪುರಗಳಂತೆ ಋಗ್ವೇದದಲ್ಲಿಯೆ ದೊರೆಯುತ್ತಿರುವುದರಿಂದ, ಆ ಕಾಲದ ಅಹಿ : ವೃತ್ರ

ಪ್ರತಿಮಾ: ಸಂಕೇತದ, ಸಾಂಸ್ಕೃತಿಕ ಆಪ : ರಸ ಪಂಥೀಯ ಪರಿಸರವು ಸಂಸ್ಕೃತೇತರ ಭಾಷಿಕ ಸಂಪ್ರದಾಯವಿರಬೇಕು ಎಂಬುದು ದೃಢಪಟ್ಟಿತು.

ಜ್ಞಾನ ಅಥವಾ ಸಂಸ್ಕೃತಿಯ ಪ್ರಾರಂಭದ ಹಂತವನ್ನು ಗುರುತಿಸಿಕೊಳ್ಳುವ (Sociology of Knowledge of Culture) ದೃಷ್ಟಿಯಿಂದ ಅಕ್ಷ : ನಾಗ ಮತ್ತು ಕಾಣಾ (<ಕಾಣ್-ಕಣ್) ಈ ಶಬ್ದ-ಪ್ರತಿಮೆಗಳು ಅಖಿಲ ಭಾರತೀಯ ಮಹತ್ವದ ಐತಿಹಾಸಿಕ ಮೂಲ್ಯವನ್ನುಳ್ಳ ಸಂಕೇತಗಳಾಗುತ್ತವೆ. ಇಷ್ಟೆ ಅಲ್ಲ : ಋಗ್ವೇದದಷ್ಟು-ಪ್ರಾಚೀನ ಬೇರೊಂದು ಗ್ರಂಥವು ಇನ್ನೂ ದೊರೆತಿಲ್ಲವಾದ್ದರಿಂದ ಮಾನವನಲ್ಲಿ ಜ್ಞಾನದೃಷ್ಟಿ (ಸಂದೃಕ್ intuitiou) ಅರಳತೊಡಗಿದ ಹಿನ್ನೆಲೆಯನ್ನು ನಿರ್ಧರಿಸಿಕೊಳ್ಳಲು ಗ್ರೀಕಿನ ಇಜಿಪ್ತಿನ ಪವಾಡ ಕಥೆಗಳೊಡನೆ ಋಗ್ವೇದದೊಳಗಿನ 'ಕಾಣಾ' ಈ ಶಬ್ದ-ಪ್ರತಿಮೆ ಹಾಗೂ ಸರ್ಪಶಕ್ತಿ ಆವೇಶವಾಗುವ ಆದಿತಿ, ಸರಸ್ವತಿ , ಅಂಭೃಣ್ಯಾದಿ ಮಧ್ಯಮಾ : ವಾಕ್‌ದೇವಿಯರ ಕಥೆಗಳಿಗೆ ಮೌಲಿಕ ಮಹತ್ವವು ಬರಲಿದೆ.

ಮಾನವನಲ್ಲಿ ತಿಳುವಳಿಕೆಯು ಅಂಕುರಿಸಿದ್ದು ಅದು ತಲೆಯೆತ್ತಿ ವಿಕಾಸಗೊಳ್ಳತೊಡಗಿದುದು ಹೇಗೆ? ಯಾವ ಕ್ರಮದಲ್ಲಿ? ಮಾನಸಶಾಸ್ತ್ರಜ್ಞರು ತಮ್ಮ ಭೂಮಿಕೆಯಿಂದ ಇದರ ನಿಷ್ಕರ್ಷ ಮಾಡಬಹುದು. ಮಾನವ ಶಾಸ್ತ್ರಜ್ಞರ ಸಂಶೋಧನಗಳೂ ಇದಕ್ಕೆ ಉಪಯುಕ್ತವಾಗಬಲ್ಲವು. ಮಾನವ ಪಂಗಡಗಳ ತಿಳುವಳಿಕೆಯು ಬೆಳೆದ ಕ್ರಮವು, ಅವರ ಭಾಷೆ ಹಾಗೂ ಸಂಸ್ಕೃತಿಯ ವಿಶ್ಲೇಷಣದಿಂದಲೂ ಬೆಳಕಿಗೆ ಬರಬಲ್ಲದು. ಏಕೆಂದರೆ, ಮಾನವನ ಜ್ಞಾನದ ಆಧಾರ ಭಾಷೆಯೆ ತಾನೆ? ಹೀಗೆ ಬೇರೆ ಬೇರೆ ದಿಕ್ಕಿನಿಂದ ಸತ್ಯಾನ್ವೇಷಣೆಯಾದಲ್ಲಿ ಅದರೊಳಗೆ ತಾಳಮೇಳವು ಕಾಣಬಹುದೆಂಬ ನಿರೀಕ್ಷೆಯಿದೆ. ಭಾರತೀಯ ಮೂಲದ ಹಾಗೂ ಗ್ರೀಕ್-ಇಜಿಪ್ತಿನ ಪವಾಡ ಕಥೆ ಹಾಗೂ ಭಾರತೀಯ ಪ್ರಮುಖ ಭಾಷೆಗಳ ವಿಶ್ಲೇಷಣೆಯಲ್ಲಿ ದೊರೆತಿರುವ ಒಂದಕ್ಕೊಂದು ಸುಸಂಗತವಾದ ಪ್ರಮಾಣಗಳ ಮೂಲಕ ತಲೆದೋರಿರುವ ಈ ನಿರೀಕ್ಷೆ, ನಿರಾಧಾರವಲ್ಲ, ಎಂದು ಎನಿಸುತ್ತಿರುವಲ್ಲಿ ತಥ್ಯಾಂಶವುಂಟೊ? ಎಂಬುದನ್ನು ನಿರ್ಧರಿಸುವುದು, ಸಮರ್ಥ ವಿಮರ್ಶಕರಿಗೆ ಕೂಡಿದ್ದು.

'ಆದಿಶೇಷ' ವೆಂಬ ಶಬ್ದಪ್ರತಿಮೆ : ಭೂಮಿಯನ್ನು ತಲೆಯ ಮೇಲೆ ಹೊತ್ತು ನಿಲ್ಲಿಸಿರುವವನು ನಾಗದೇವನು ಎಂಬ ಸಾಂಪ್ರದಾಯಿಕ ಶ್ರದ್ಧೆಯನ್ನು ನೋಡಿದಲ್ಲಿ=ನಾಗನಿಗಿಂತ ಮುಂಚೆ ಪ್ರಪಂಚವೇ ಇಲ್ಲ ಎಂದಾಗ-ನಾಗ (: ಅಕ್ಷ) ವಿಚಾರವು, ಸಂಸ್ಕೃತಿ-ಪೂರ್ವದ ಹಂತದಿಂದಲೂ ಇದ್ದ ವಸ್ತುವು ಆಯಿತು. ಆದಕಾರಣ, 'ಅಕ್ಷ'-ದ್ಯೂತವು ಸಾಂಸ್ಕೃತಿಕ : ಸಾಮಾಜಿಕ ಪ್ರಜ್ಞೆಮೂಡುವ ಮುಂಚಿನ ಹಂತದ ಒಂದು ಆಚಾರವೊ-ಆಟವೊ ಆಗಿರುವುದು ನಿಶ್ಚಿತ. ತೀರ ಮೊದಲಲ್ಲಿ ಇದು ಕ್ರೀಡೆಯಾಗಿರದೆ ಒಂದು 'ದಿವ್ಯ' (ದೈವಪರೀಕ್ಷೆ) ಆಗಿರಲಿಕ್ಕಬೇಕೆಂದು ತೋರುತ್ತದೆ. ದಿವ್>ದೀವ್ ದಿವ್ಯ : ಇಂಗ್ಲಿಷಿನ by gove! ಹಿಬ್ರು Yahweh, : ಈ ಹಿಬ್ರೂ ಸಂಕೇತ 'ಯಕ್ಷ'ನ ಪತ್ರಿರದ್ದಾಗಿ ಕಾಣುತ್ತದೆ. ತಾನು 'ಸತ್ಯವಂತ' ಎನ್ನಲು, ಆಣೆ ಮಾಡುವ ರೂಢಿಯಿದೆ. ಇಂದು ಆಣೆ (: ಪ್ರತಿಜ್ಞೆ) ಮಾಡುವುದು 'ದೇವರಾ ಮುಟ್ಟಿ ಹೇಳುವುದು' ಇದು ಸೂಕ್ಷ್ಮರೂಪ ತಾಳಿದ ಆಧುನಿಕ 'ದಿವ್ಯ'. ತನ್ನ ದೈವ ಕಣ್ ತೆರೆದಿದೆಯೆ ಅಥವಾ ಕಣ್ಣು ಮುಚ್ಚಿದೆಯೆ-ತನಗೆ ದೇವರು ಅನುಕೂಲನಿದ್ದಾನೆಯೆ-ತನ್ನ ದಾರಿ 'ಸತ್ಯ'ವೆ? ಎಂಬುದನ್ನು ನಿರ್ಧರಿಸಿಕೊಳ್ಳಲು, 'ದಿವ್ಯ' ಮಾಡುವ ರೂಢಿಯೇ ಆ ಬಳಿಕ 'ಸತ್ಯ' ಪರೀಕ್ಷೆಗಾಗಿ 'ದಿವ್ಯ': ಅಗ್ನಿ-ಕುಂಡ ಪ್ರವೇಶ, ಸರ್ಪಹಿಡಿದು ತೋರಿಸುವುದು ಇತ್ಯಾದಿ ಪ್ರಕಾರದ ಆಚರಣೆಯಾಗಿ ಮಾರ್ಪಟ್ಟಿರಬೇಕು. 'ದಿವ್ಯಕ' ಎಂದೇ, ಒಂದು ಬಗೆಯ ಹಾವಿಗೆ ಹೆಸರಿದೆ! ತನ್ನಲ್ಲಿ ತಪಃಪ್ರಭಾವ, ದಿವ್ಯಶಕ್ತಿ ಉಂಟೆಂದು ಪ್ರದರ್ಶಿಸಲು ಹಾವು, ಹುಲಿಯ ಸಂಗಾತಿಗಳಾಗಿರುವ ಮಹಂತರುಂಟು. 'ಅಕ್ಷ'ವು ಕಂನುಡಿಯಲ್ಲಿ ನೆತ್ತ (<ನೇತ್ರ) ಎಂದೇ, ಭಾಷಾಂತರಿತವಾಗಿರುವದೇಕೆ? 'ಅಕ್ಷ' : ಕಣ್>ಗಣ್ಣ ಇದೇ ಪ್ರಪಂಚದ (ಜ್ಞಾನ) ಮಾಧ್ಯಮ ಎಂಬ ಶ್ರದ್ಧೆಯು ಇದರ ಹಿಂದೆ ಇದೆ.

---

* ಉದಾ : ಸರ್ಪ : ಚಂದ್ರಶಕ್ತಿಯ ಆವೇಶ, ನೀರೆ; Nymph : ಅಪ್ಸರೆ, ಏಕಾಕ್ಷ ಪುರುಷ, ಇತ್ಯಾದಿ

ಸರ್ಪ : ಅಕ್ಷ ಮತ್ತು ದಿವ್ಯಚಕ್ಷು ಇವುಗಳ ಸಾಹಚರ್ಯವು ಅಭ್ಯಸನೀಯವಿದೆ. 'ದಿವ್ಯಚಕ್ಷು' ಇದ್ದವನಿಗೆ ಲೌಕಿಕ-ದೃಷ್ಟಿ ಇರುವದಿಲ್ಲ. ಅವನು ಒಕ್ಕಣ್ಣನು : 'ಕಾಣ'ನು; ಸಂಸ್ಕೃತದಲ್ಲಿ ಸೇರಿರುವ 'ಕಾಣಾ' ಈ ಶಬ್ದ ಸಂಕೇತಕ್ಕೆ ಇರುವ ಅರ್ಥಗಳು : 'ಅಕ್ಷ್ಣಾಕಾಣಾ' : (ಪಾಣಿನಿ) blind of one eye; ಕಾಣಾ: pirced; perforated; having only loop or ring, one eyed, a crow; ಆದರೆ, 'ಕಾಣ-ಭೂತಿ' ಹೆಸರಿನ ಯಕ್ಷನ ಹೆಸರು ಹೇಳಿದ್ದರೂ ಸರ್ಪಕ್ಕೆ ಈ ಹೆಸರಿರುವುದನ್ನು ನಮೂದಿಸಿಲ್ಲ. ಆದರು, ಭಾರತೀಯ ನಾಗಸಂಪ್ರದಾಯದ ಗ್ರಂಥದಲ್ಲಿ ವ್ಹೊಗೆಲ್ ಇದನ್ನು ಹೇಳಿದ್ದಾರೆ. 'ಕಾಣಾ' ಈ ಪದ ಪ್ರಯೋಗವು ಋಗ್ವೇದದಂತೆ ಅಥರ್ವವೇದದಲ್ಲೂ ಉಂಟು! ತೈತ್ತಿರೀಯ ಸಂಹಿತೆ, ಮನುಸ್ಮೃತಿ, ಮಹಾಭಾರತದಲ್ಲಿಯೂ ಇದು ಉಂಟು. ಬೌದ್ಧಸಾಹಿತ್ಯದಲ್ಲಿ 'ಕಾಣ-ದೇವ' ವ್ಯಕ್ತಿಯ ನಾಮವುಂಟಂತೆ. ಕಾಣ-ಭೂತಿ ಎಂಬ ಯಕ್ಷನು ಕಥಾ ಸರಿತ್‌ಸಾಗರದಲ್ಲಿ! ಕೇನೋಪನಿಷತ್ತಿನ ದಿವ್ಯ ಯಕ್ಷನು, ದಿವ್ಯಚಕ್ಷುವು ಇರಲೇಬೇಕು ಎಂದರೆ ಅವನು ಕಾಣಾ : ಸರ್ಪನಿರಬೇಕು. ಋಗ್ವೇದದಲ್ಲಿ ಬಂದ 'ಬೃಹಂತಂ ವಾಯಸಂ ಅಪಾಂ ಗರ್ಭಂ' ಎಂಬ 'ಕಾಗೆ'ಯ ಉಲ್ಲೇಖ ಈ ಮೊದಲು ಬಂದಿದೆ: 'ಕುಕ್ಕುಟ-ಸರ್ಪ'ದ ಸಂದರ್ಭದಿಂದ 'ಕಾಣಾ' ಎಂದರೂ ಕಾಗೆ! 'ಕಾಣೂಕ' ಎಂದರೂ ಕಾಗೆ! 'ದಿವ್ಯಚಕ್ಷು'ವಿನ ಈ 'ಅಕ್ಷ', ಸರ್ಪಶಕ್ತಿ-ವಿಶೇಷ ಎಂದ ಹಾಗಾಯಿತು. ಜ್ಞಾನವು, ಅರ್ಥ : ಪ್ರಕಾಶದ ಮೂಲಕವಾಗಿ ಪ್ರಾಪ್ತವಾಗುವುದು. ಇದರ ಪಾತಳಿಯೆ ಒಂದು. ಆದರೆ, ಸಂ-ಸ್ಪರ್ಶನ ಸೂಕ್ಷ್ಮತಮ ಸಂ-ವೇದನಾಗ್ರಹಣ ಶಕ್ತಿ : ಸ್ಪರ್ಶಶಕ್ತಿಯ ಮೂಲಕ ಬರುವ ತತ್‌ಮಯತಾ ಭಾವನೆಯಲ್ಲಿ ತಲೆದೋರುವ ಜ್ಞಾನದ ಆಕೃತಿ ಹಾಗೂ ಪಾತಳಿಯೆ ಇನ್ನೊಂದು. ಈ ಸಂವೇದನಾಕ್ಷಮತೆಯು ಜಾಗೃತವಾಗುವುದು ಅಕ್ಷ : ಕಣ್>ಗಣ್ ಮೂಲಕವೆ ಶಕ್ಯವಾಗುತ್ತದೆ.

ಮಾಧ್ಯಮ : ಭಾಷೆ ಅಥವಾ ಭಾಷಾರೂಪ 'ಮಾಧ್ಯಮ' ಇನ್ನೂ ಮೈದಾಳದ ಮುಂಚಿನ, ಅಽಽಽಯುಗದಲ್ಲಿ, ಕಾಣಾದೇವಿಯ : ಸರ್ಪ ಆವೇಶವಾದ ಕುಮಾರಿಯರ ಹೊರತು ಜನಕ್ಕೆ ಬೇರೆ ಕಣ್ಣೆ ಇರಲಿಲ್ಲ! ಅರ್ಥದ ಪ್ರಕಾಶಯುಕ್ತ ಶಬ್ದ ಪ್ರತಿಮೆಗಳಿಗೂ ಮುಂಚೆ ಸ್ಪರ್ಶ : ಸಂವೇದನಾ ಶಕ್ತಿಯ ಮೂಲಕ ಪ್ರೇರಿತ ಶಬ್ದಗಳೇ ಭಾಷೆಯಲ್ಲಿ ತಲೆಯೆತ್ತಿದ್ದುಂಟು. ಇದರಿಂದಾಗಿ, ಮೈಯಲ್ಲಿ ಆವೇಶವಾಗಿ ತತ್-ಮಯತೆಯಲ್ಲಿ ಏನೊಂದು ವಿಚಾರವನ್ನು ಪ್ರತ್ಯಕ್ಷದರ್ಶಿಯಂತೆ ಹೇಳುವ 'ಕಾಣಾ' ಅಕ್ಷವನ್ನುಳ್ಳವರಿಗೆ ಪ್ರಾಧಾನ್ಯವಿತ್ತು ಗ್ರೀಕಿನ ಪವಾಡ ಕಥೆಗಳ ಮೂಲಕವೂ ಇದು ಚೆನ್ನಾಗಿ ತಿಳಿಯುವುದು. ಬಾಳಿನಲ್ಲಿ ಏನೊಂದಕ್ಕೂ 'ಡೆಲ್ಫಿ ಒರಾಕಲ್' ಹತ್ತಿರ ತಮ್ಮ ಸಮಸ್ಯೆಗಳಿಗೆ ಉತ್ತರಗಳನ್ನು ಪಡೆದುಕೊಳ್ಳುವ ವಾಡಿಕೆ ಸಾಕ್ರೆಟಿಸ್-ಪ್ಲೇಟೋಗಳ ಕಾಲದಲ್ಲಿ ಸಹ ಇದ್ದಿತು. ಭಾರತದಲ್ಲಿ ಇಂದಿಗೂ ಪ್ರಭಾವಶಾಲೀ ಸ್ಥಿತಿಯಲ್ಲಿ ಇರುವ ಈ 'ದಿವ್ಯಚಕ್ಷುಸ್ಸಿ'ನ : ಕಣಿಯ ಬಗೆಗಿನ-ಶ್ರದ್ಧೆಯು ಪುರಾತನ ಕಾಲದಿಂದಲೂ ಇರುವುದರ ಬಗೆಗೆ ಸಂಶಯವೇ ಇಲ್ಲ. ಋಗ್ವೇದ, ಉಪನಿಷತ್ತು, ಗೀತೆ ಇವು 'ದಿವ್ಯ' ಚಕ್ಷುಗಳಿಗೆ ಎಂದರೆ ಕಣಿಯ ಸಿದ್ಧರಿಗೆ ದರ್ಶನದಲ್ಲಿ ಲಭಿಸಿದ 'ಕೃತಿಗಳು' ಎಂದು ಸಂಪ್ರದಾಯ ಹೇಳುತ್ತದೆ. ನಿಜ. ಒಂದು ಬಗೆಯಲ್ಲಿ ಈ ಗ್ರಂಥಗಳಲ್ಲಿ ದಿವ್ಯ ಅಕ್ಷದ, ಕಾಣಾ ಭೂಮಿಕೆಯ ಜೀವನದ ಆಕೃತಿಯ ತತ್ವಜ್ಞಾನವೇ ಪ್ರಾಧಾನ್ಯದಿಂದ ಇದೆ. 'ಸಕ್ತುಂ ಇವ ತಿತ ಉನಾ ಪುನಂತಃ' ವಾಕ್ಕಿನ ಭೂಮಿಕೆಯು ಬುಡಮೇಲು ಆಗಿದೆ ಎಂಬುದರ ಒಪ್ಪಿಗೆಯೇ ಇದು. ವೇದ ದಿವ್ಯಚಕ್ಷರು ಕಂಡ ಗ್ರಂಥ ಎಂಬುದು. ಪ್ರಸಿದ್ಧವೇ ಇದೆ.

ಇದೇನೇ ಇರಲಿ; ಗ್ರೀಕಿನಲ್ಲೂ ಮೈಯಲ್ಲಿ ಆವೇಶವಾದ (ಸರ್ಪ : ಚಂದ್ರ) ಶಕ್ತಿ : ಕುಮಾರಿಯೆ, ಜನಗಳ ಸಮಸ್ಯಾಪರಿಹಾರದ 'ಕಣ್ಣು ಆಗಿದ್ದ ಕಾಲವನ್ನು 'ಅಕ್ಷಯುಗ' ಎಂದು ಹೆಸರಿಸಲು ಆತಂಕವಿರಬಾರದು. 'ಕಾಣಾ' ಎಂಬುದು ಕದ್ರು : ಸರ್ಪಮಾತೆಯ (: ಆದಿತಿ : ಆದಿಶಕ್ತಿ) ನಾಮವಿಶೇಷ. ಕದ್ರು ಸರ್ಪದೇವಿ; 'ಯಜ್ಞ'ದಲ್ಲಿ ಅವಳಿಂದ ಆ ಕ್ರಿಯಾಚರಣೆಯಲ್ಲಿ ತಪ್ಪಾಗುವುದು ಎಂದರೇನು? ಈ ಸಾಂಕೇತಿಕ ಮಾತಿನ ಆಳದಲ್ಲಿ, ಮಾನವ ಜೀವನದ ಪಾತಳಿಯ ಮೇಲಿನ ಏನೊಂದು ಘಟನೆಯ ಸಾಮಾನ್ಯ ಸ್ವರೂಪದ ವಿವರಣೆಯಿರಬೇಕೆಂಬುದು ನಿಶ್ಚಿತವಿದೆ. ಸರ್ಪವು. ಎಂದಾದರೂ ಒಕ್ಕಣ್ಣನದಿರಲು ಶಕ್ಯವೊ? ಹಾಗಾದರೆ ಸರ್ಪದ ಈ 'ಕಣ್ಣು' (ತೂತು) ಯಾತರ ಸೂಚಕವಿರಬಲ್ಲದು? ನೆತ್ತ>ನೇತ್ರ 'ಅಕ್ಷ' ಈ ದ್ಯೂತ=ಜದ್ದಿನ-ಜೂದಿನ

ಹಂತಕ್ಕೆ ಬರುವ ಮುಂಚಿನ 'ಅಕ್ಷ' ದಿವ್ಯದ ಆ-ಕೃತಿ ಯಾವ ಬಗೆಯದಿರಬಹುದು? 'ಅಕ್ಷ'ಕ್ಕೆ ಸರ್ಪವಾಚಕ ಅರ್ಥವೂ ಬಂದಿರುವುದು ಅಭಿವ್ಯಕ್ತಿಯ ಮಾಧ್ಯಮವಾಗಿ ಮಾನವರಿಗೆ ಭಾಷಿಕ ಸಾಂಕೇತಿಕ ಪ್ರತಿಮೆಗಳು ಮೊದಲಬಾರಿ ದೊರೆಯ ತೊಡಗಿದ್ದು (ಗ್ರೀಸಿನಲ್ಲಾಗಲಿ, ಭಾರತದಲ್ಲಾಗಲಿ,) ಸರ್ಪ (:ಅಕ್ಷ) ಶಕ್ತಿಯ ದೇವಿಯರಿಂದ ತಾನೆ? 'ಅ-ಪರ್ಣಾ'; ಅಫ್ರೊಡೈಟ : ಅಪರ್ಣಾ : ಅಮ್ಮ ಅಂಬಾ ಇವರು ಆದಿಕಣೆಯ ಶಕ್ತಿ : ಅಂಬೆ (>ಅಮ್ಮ) : ಕಣ್ಣು ಅಂಬ (: ಅಂಬು:) ರಸಸ್ರವಿಸುವ ಕಣ್>ಗಣ್ : ರಂಧ್ರ ಮತ್ತು ಗ್ರಂಥಿ, ಎರಡೂ! ಹೀಗೆ, ಇದು ಇನ್ನೊಂದು ಸ್ವತಂತ್ರ ದಿಕ್ಕಿನಿಂದ ಅಕ್ಷ, ಚಕ್ರ : ನಾಭಿ : ಕಣ್ : nipple ಎಂಬ ಶಬ್ದಪ್ರತಿಮೆ ಒಳಗೊಳ್ಳುವ ಮೂಲ ಸಮಯಸ್ಥ ಚಿತ್ರಪಟವು ಕಣ್ಣೆದುರು ಬರುತ್ತಿದೆ! ಅಂಬದೇವಿಗೆ, ಅ-ಪರ್ಣಾ ನಾಮ-ಸಂಕೇತವು ಎಂದು ಸಲ್ಲಬಹುದೊ-ಇದು ಎಷ್ಟು ಪ್ರಾಚೀವೊ ಅಷ್ಟೇ, ಕಣ್ ಗಣ್ ಈ ಮೂಲ ಸಾಂಕೇತಿಕ ಪ್ರತಿಮೆಯು ಭಾಷೆಯಲ್ಲಿ ಕಾಣಿಸಿಕೊಂಡ ಸಮಯವೂ ಪ್ರಾಚೀನವಾಗಿದೆ. ಈ ಕಾಣಾ : ಸರ್ಪ : ಅಕ್ಷ ಸಂಸ್ಕೃತಿಯು 'ವಸನ-ಜ್ಞಾನ' ಪೂರ್ವಜೀವನ ರೀತಿಯ ಸೂಚಕವಾಗಿದೆ. ಭಾಷಿಕ ಪ್ರತಿಮೆಗಳ ಅಂತಶ್ಚಿತ್ರವು ಬೇರೆ ೨-೩ ಬಗೆಗಳಿಂದಲೂ ತಾಳ-ಮೇಳವುಳ್ಳುದಾಗಿ ದೃಢಪಟ್ಟರೆ, ಆ ಚಿತ್ರದ 'ಸಮಯ'ದ ಆ-ಕೃತಿಯ ವಾಸ್ತವತೆಯನ್ನು ಬಾಹ್ಯ (ಗ್ರಂಥ) ಪ್ರಮಾಣಗಳ ಅಡಿಟಿಪ್ಪಣಿಗಳಿಂದ ಸಿದ್ಧಪಡಿಸುವುದು ಅನಾವಶ್ಯಕ.

'ಅಕ್ಷ' ಮೊದಲು ದಿವ್ಯ ದೈವತ. ಬಳಿಕ ಇದೇ ದ್ಯೂತ (ದಿವ್ಯ), ವಸನಧಾರಣದ ನಡೆವಳಿ ರೂಢಿಗೆ ಬರುವ ಮುಂಚಿನ ಯುಗದ 'ಸಮಯ'. ಆಧುನಿಕರಲ್ಲೂ ಹಲರು ದೇವತಾರಾಧನೆಗೆ ಕೌಪೀನ ಧರಿಸಿ ಮಡಿಯಿಂದ ಪೂಜಾ ಪುನಸ್ಕಾರಾದಿ ನಡಸುವ ವಾಡಿಕೆಯಿದೆ. ಪಾಂಡವರು ಅಕ್ಷ-ದ್ಯೂತದಲ್ಲಿ ಸೋತರು. ದ್ರೌಪದಿಯು ಅಕ್ಷ-ದಾಸಿಯಾದಳು. ಅವಳನ್ನು ಸಭೆಗೆ ಎಳೆದು ತಂದು, ದ್ಯೂತಗೆದ್ದ ಕೌರವರು, ಸೀರೆ-ಸೆಳೆದರೆಂಬ ಸಾಂಕೇತಿಕ ಒಂದು ಚಿತ್ರವನ್ನು ಭಾರತದಲ್ಲಿ ಅಮರವಾಗಿಸುವ ಕಾರಣವೇನಿತ್ತು? ಕೌರವರ ನೀಚಕೃತ್ಯವನ್ನು ಬಯಲಿಗೆಳಯಲಿಕ್ಕೊ? ಅಥವಾ ಅಕ್ಷ (: ಸರ್ಪ) ಸಂಪ್ರದಾಯದ ಪೂರ್ವಪರಂಪರೆಯ ಈ ಸನಾತನ : ಸ್ಮೃತಿಯನ್ನು ಉಳಿಸುವುದಕ್ಕೊ? ಕೌರವ-ಪಾಂಡವರು ಆಡಿದ 'ಅಕ್ಷ'ದ ಜೂಜಿನ ಆ ಯುಗಧರ್ಮವು ಈಗ ಬದಲಾಗುವ ಅಪೇಕ್ಷೆಯು ವ್ಯಕ್ತವಾಗಿದೆ. ದ್ರೌಪದಿಯ ಮುಖದಿಂದ, ಸೋತ ಗಂಡಂದಿರು ತಾವು ದಾಸರಾದ ಬಳಿಕವೂ ನಾನು ಈ ಗಂಡಂದಿರ ಮಡದಿಯೆ? ದಾಸರಾದವರಿಗೆ ಇನ್ನೊಬ್ಬ ವ್ಯಕ್ತಿಯನ್ನು ಪಣಕ್ಕೆ ಹಚ್ಚುವ ಹಕ್ಕು ಇದೆಯೆ? ಎಂಬೀ ಬಗೆಯ ಪ್ರಶ್ನೆಯನ್ನು ದ್ರೌಪದಿಯು ಆ ಸಭಿಕರಿಗೆ ಕೇಳಿದ್ದಾಳೆ. ಅಲ್ಲಿ ಕುಲಧರ್ಮ ಸನಾತನ ಪರಂಪರೆಯನ್ನೆಲ್ಲ ಬಲ್ಲ ವಯೋವೃದ್ಧ ಜ್ಞಾನವೃದ್ಧ ದೇವವ್ರತನು ಇದ್ದಾನೆ. ಗೆದ್ದ ಅಕ್ಷದ ಕೌರವರ ಕೈಯಿಂದ, ತನ್ನ ವಿನಯಭಂಗವಾಗದಿರುವ ಸಲುವಾಗಿ ದ್ರೌಪದಿ ಒರಲುತ್ತಿದ್ದಾಳೆ; ಒದ್ದಾಡುತ್ತಿದ್ದಾಳೆ!

ವಯೋವೃದ್ಧನೂ, ಪೂರ್ವಪರಂಪರೆಗಳನ್ನರಿತವನೂ, 'ಸನಾತನ' ಧರ್ಮ ನಿಷ್ಣಾತನೂ, 'ಸತ್ಯ' ಪಕ್ಷಪಾತಿ ಎಂಬ ಗಾಂಗೇಯನು, ಸಭೆಯಲ್ಲಿ ದ್ರೌಪದಿಯ ಬಗೆಗಿನ ಕೃತ್ಯವು ಅತ್ಯಾಚಾರ 'ಅಪರಾಧ'; ಅನ್ಯಾಯ ಎಂದು ನಿಷೇಧಿಸಲಿಲ್ಲವಲ್ಲ! ಶರಪಂಜರನಾಗಿ ಸ್ಮಶಾನದಲ್ಲಿ ಪ್ರಪಂಚಕ್ಕೆಲ್ಲ ನೀತಿಬೋಧಿಸಿದ 'ಶಾಂತಿಪರ್ವದ' ದಿವ್ಯಜ್ಞಾನಿ, ದೇವವ್ರತನಿಗೆ, ಆ ಅಕ್ಷದ್ಯೂತದ ಕಾಲದ ಮೌನವು ಆತನ ಶೀಲಕ್ಕೇ ಕಲಂಕ ತಂದಿದೆ; ಎಂಬ ಟೀಕೆ ಕೇಳಬರುತ್ತದೆ. ಇಲ್ಲಿ 'ಗಾಂಗೇಯ' ಭೀಷ್ಮ ಮತ್ತು ಗಾಂಗೇಯನೇ ಆದ ವ್ಯಾಸ: ಕೃಷ್ಣದ್ವೈಪಾಯನ ತತ್‌ತ್ವತಃ ಭಿನ್ನರಲ್ಲ! ಭೀಷ್ಮನು (ಸನಾತನ) 'ಸಪ್ತ' (: ಸರ್ಪ) ಅದಿತಿಪುತ್ರನು; ಋಗ್ವೇದದ ಅದಿತಿ ಮತ್ತು ಶಂತನು ಪತ್ನಿ (ದೇವ)ಗಂಗೆ ಅಭಿನ್ನರು. ಅದಿತಿ : ಸರ್ಪರಾಜ್ಞಿ, ಭೀಷ್ಮನು, ಅದಿತಿ (:ಗಂಗಾ) ಪುತ್ರನು. ಆದಕಾರಣ, ಅಪ:ರಸ ಪಂಥೀಯ ಸನಾತನ 'ಅಕ್ಷ'ದಲ್ಲಿ (:ಸರ್ಪ) ಧರ್ಮಕ್ಕೆ ವಿರುದ್ಧವಾಗಿ, ಪಿಟ್ಟೆನ್ನಲಿಕ್ಕೂ ಅಳುಕಿದ್ದು ಮೇಲೆಯೇ ಕಾಣುತ್ತಿದೆ! ದ್ವಾಪರಯುಗ ವಾದರೇನಾಯ್ತು? ಅದಕಾರಣ, 'ಅಕ್ಷ'ದಲ್ಲಿ ಗೆದ್ದ 'ಭಾಗ್ಯ'ವನ್ನು ಭೋಗಿಸುವ ಹಕ್ಕನ್ನು ನಿಷೇಧಿಸಿ ಅದು ಅಪರಾಧವೆಂದು, ನಿರ್ಣಯವನ್ನೀಯಲು, ಗಾಂಗೇಯನು (: ಚಂದ್ರಾದಿತ್ಯನು) ಹೇಗೆ ಸಮರ್ಥನಾದನು? ಸರ್ಪ : ನಾಗಪಂಥೀಯ ಧರ್ಮವನ್ನು ಸನಾತನವಾಗಿ ಉಳಿಸಿಕೊಂಡು ಭರುವ ಆಂತರಿಕ ಶ್ರದ್ಧೆಯನ್ನು ಲೆಕ್ಕಕ್ಕೆ

ಹಿಡಿದಲ್ಲಿ ಮಾತ್ರ ಈ ಜ್ಞಾನವೃದ್ಧನೂ ದಿವ್ಯಚಕ್ಷುವೂ ಎಂಬ ಭೀಷ್ಮನ ಈ ಮೌನದ ಅರ್ಥವಾಗಬಲ್ಲದು. ಈ ಕಾರಣದಿಂದಲೆ, ವ್ಯಾಸ-ವಾಲ್ಮೀಕಿಗಳು ನಿರ್ಮಿಸಿರುವ ಕಾವ್ಯಗಳಲ್ಲಿ, ಈ ಬಗೆಯಾಗಿ ಜೀವನ ಮೂಲ್ಯಗಳ ಅವಜ್ಞೆಯು ಆಗುತ್ತಿರುವ ಪ್ರಸಂಗಗಳಲ್ಲಿ, ಜಾರಿಕೊಳ್ಳಲು ಸಂದಿಗ್ಧ ಶಬ್ದ-ಪ್ರತಿಮೆಗಳ ಪ್ರಯೋಜನ ಅಲ್ಲಲ್ಲಿ ಪಡೆಯಲಾಗಿರುವುದು ಕಾಣುತ್ತದೆ. ಜಾಗತಿಕ ಕೀರ್ತಿಯ ಶ್ರೇಷ್ಠ ತಾತ್ತ್ವಿಕ ಗ್ರಂಥವೆನಿಸುವ ಭಗವದ್ಗೀತೆಯೂ ಇದಕ್ಕೆ ಅಪವಾದವಿಲ್ಲ.

ಅಪಿ ಚೇತ್ ಸುದುರಾಚಾರಃ, ಭಜತೇ ಮಾಮ್

ಅನನ್ಯ ಭಾಕ್, ಸಾಮಃ ಏವ ಸಃ ಮಂತವ್ಯಃ!

ದಿವ್ಯಚಕ್ಷುಗಳ ಈ ಕಾಣಾ ಸಂಪ್ರದಾಯದ ಸಿದ್ಧರು, ಮುಕ್ತಸಂಗೀ ಅನಿಕೇತರು ! ದ್ವಂದ್ವಾತೀತರು! ಅವರಿಗೆ ನೀತಿ-ಅನೀತಿಯ ಬಂಧನವಿಲ್ಲ. ನಿರ್ಲಿಪ್ತ ಜೀವನರೀತಿ ಇದು! ಗೀತೆ ಹೇಳುವಂತೆ ಸಂಪ್ರದಾಯವಿಹಿತ ಆಚರಣೆ 'ಸದೋಷಂ ಅಪಿ, ನತ್ಯಜೇತ್', ಎಂಬ ಕಾರಣದಿಂದ ಗೆದ್ದವರು ತಮ್ಮ ಅಕ್ಷ-ಭಾಗ್ಯದ ಭೋಗ ಪಡೆಯುವುದನ್ನು ಭೀಷ್ಮನು ನಿಷೇಧಿಸಿರಲಾರನು.

ಮಹಾಭಾರತಸ್ಥ ಅಕ್ಷ-ದ್ಯೂತ 'ಸಮಯ'ದ ಅರ್ಥವಾಗಲು, ಋಗ್ವೇದದೊಳಗಿನ 'ಅಕ್ಷದ್ಯೂತ' ಸೂಕ್ತದಿಂದ ಮೌಲಿಕ ಸಹಾಯವು ದೊರೆಯಲಿದೆ : 'ದ್ಯೂತದಲ್ಲಿ ಸೋತವನ ಜಾಯೆ, ಹೀನಳೆನಿಸಿ (ಹೀನಾ) ಅವನಿಂದ ತ್ಯಜಿಸಲ್ಪಟ್ಟವಳಾಗಿ ಪರಿತಾಪ ಪಡುತ್ತಾಳೆ (ತಪ್ಯತೇ) ಹೀಗೆ ಸೋತವನು, ದ್ಯೂತ ವ್ಯಸನವಿಲ್ಲದವರ ಸೌಭಾಗ್ಯವತಿಯರಾದ ಮಡದಿಯರನ್ನು ಕಂಡು (: ಅನ್ಯೇಷಾಂ ಜಾಯಂ ಸ್ತ್ರಿಯಂ ಸು-ಕೃತಂ ಯೋನಿಂ ಚ) ಕಂಡು ಸಂತಪ್ತನಾಗುತ್ತಾನೆ. (ದೃಷ್ಟ್ವಾ ತತಾಪ) ದರ್ಶನ ಪಡೆಯಲು ಉತ್ಸುಕರಾಗಿದ್ದರು....., ಆಗ ದ್ರೌಪದಿಗೆ ಇನ್ನು ತನ್ನ ಪಾಡು ನಾಯಿಯ ಪಾಡು ಆಗುವುದು ನಿಶ್ಚಿತ ಎಂದು ಕಂಡಿತು: ಸಿಡಿಮಿಡಿಗೊಂಡಳು : ಕಿಡಿಕಿಡಿಯಾದಳು. ಗಂಡಂದಿರೆಂಬ ಪಾಂಡವ ವೀರರಿಗೆ ತಮ್ಮ ಮಡದಿಯ ಗತಿಯೇನಾಗಲಿದೆ ಎಂಬುದು ಕಾಣುತ್ತಿತ್ತು : ಈ ಆಟದ ಫಲಿತ ಏನು-ಎಂತಹುದು, ಎಂಬುದನ್ನು : ತತ್ಪೂರ್ವದ ಸಂಪ್ರದಾಯವನ್ನು ಅವರು ಅರಿತಿರಲಿಕ್ಕೇಬೇಕು. ತಮ್ಮ ಮಡದಿ ದ್ಯೂತದಾಸಿಯಾದಲ್ಲಿ, ಅವಳು 'ಅಸುಕೃತ' ಯೋನಿಯಾಗುವುದನ್ನು: ಅರಿಯದಲೆಯೆ ಹೆಂಡತಿಯನ್ನು ಪಣಕ್ಕೆ ಹಚ್ಚಿದರೆಂದು ಬಗೆಯಲಿಕ್ಕೆ ಆಗುವುದಿಲ್ಲ. ಆದಕಾರಣ, ಹೆಂಡತಿಯ ಮೇಲಣ ಅತ್ಯಾಚಾರವು, ಧರ್ಮಜ್ಞರೆಂಬ ಯುಧಿಷ್ಠಿರ ಭೀಷ್ಮರಿಗೆ 'ಅತ್ಯಾಚಾರ' ಎಂದು ಎನಿಸದೆ ಅವರು ತೆಪ್ಪಗೆ ಇರುವಂತಾಗಿತ್ತು!

ಈ 'ಅಕ್ಷ' ದಿವ್ಯ : ದ್ಯೂತ ನಾಗಸಂಪ್ರದಾಯದ ವೈಶಿಷ್ಟ್ಯವಾಗಿ ಆ ವರೆಗೂ ನಡೆದು ಬಂದಿರಲಿಕ್ಕೆಬೇಕು. ಅಂದು ಈ ಆಟದಲ್ಲಿ ಇದ್ದ ಲೆತ್ತವು ಮೋಡಿ : ಮಾಟದ್ದೇ ಆಗಿತ್ತೆಂದು, ಕೌರವರೇ ಮಾಡಿಸಿ ಅದನ್ನು ತಂದಿದ್ದರೆಂದು ಸಂಪ್ರದಾಯ ಹೇಳುತ್ತದೆ. ಈ ಮಾಟ : ಯಾತು : ಸರ್ಪ-ಸಂಪ್ರದಾಯದ ವಿರೋಧಿಗಳ ಸದ್ದು ಆಗಲೆ ಅಡಗಿಹೋಗಿತ್ತು. ಋಗ್ವೇದ ಕಾಲದಲ್ಲಿಯೇ : ತ್ರಿತ, ಆಪ್ತ್ಯ ಮಾನವನು, ಇಂದ್ರನ ತೇಜೋವಧೆಯೊಡನೆ ತೃತೀಯ (ನಪುಂಸಕ) ಪುರುಷ : ನರನಾಗಿ ಪರಿವರ್ತಿತನಾದನು. ಜೀವನದೊಳಗಿನ ಸಾಮಾಜಿಕ ಹಾಗೂ ಕೌಟುಂಬಿಕ ನೈತಿಕಮೂಲ್ಯಗಳ ಸಲುವಾಗಿ. ಈ ಬಗೆಯ ಭ್ರಷ್ಟಾಚಾರದ ಸರ್ಪವು ಸರ್ವತ್ರ ವ್ಯಾಪಿಸದಂತೆ, ಕಣ್ಣೆದುರು ನಡೆದ ಅನ್ಯಾಯಗಳನ್ನು ವಿರೋಧಿಸಲು ಪ್ರಾಣಪಣದಿಂದ ಹೋರಾಟಕ್ಕೆ ಮುನ್ನುಗ್ಗುವ 'ಧೀರ' ವೀರರ ಸಂಪ್ರದಾಯವು, ಸಾರ್ಪರಾಜ್ಞಿ ಅದಿತಿಯ ವಿಜಯದೊಡನೆಯೆ ಮಣ್ಣು ಮುಕ್ಕಿದ್ದನ್ನು ಇಂದಿನ ಋಗ್ವೇದ ಸಂಹಿತೆಯೆ ಸಾರುತ್ತಿದೆ. ಅಕ್ಷ-ದ್ಯೂತದ ಬಗೆಗಿನ 'ಸಮಯ'ದ (:ಆಚಾರದ) ಆಕೃತಿಯು, ಮಹಾಭಾರತ ಕಾಲದಲ್ಲಿ ಸಹ ಋಗ್ವೇದ ಸೂಕ್ತದಲ್ಲಿ ವ್ಯಕ್ತವಾಗಿ ಕಾಣುತ್ತಿರುವ ಸಮಯಾಚಾರಕ್ಕಿಂತ ಭಿನ್ನವಾಗಿರಲಿಲ್ಲ ಎಂದೇ ಭೀಷ್ಮ ದ್ರೋಣಾದಿ ಧೀಮಂತರೂ, ಸಂಪ್ರದಾಯ ತಿಳಿದವರೂ ಎಂಬುವರ ತಟಸ್ಥವೃತ್ತಿಯ ನಡೆವಳಿಯಿಂದಲೂ ಸಿದ್ಧವಾಗುತ್ತಿದೆ.

ಪ್ರಹ್ಲಾದನೆಂಬುವನ ಸಲುವಾಗಿ ಕಂಬವನ್ನು ಸೀಳಿ ಹೊರಬಂದ ಭಗವಂತ : ನಾರಸಿಂಹನು, ಭಗಿನಿಯ ಸೀರೆ ಸೆಳೆಯುವಾಗಲಾದರೂ ಏಕೆ, ಥಕ್ಕನೆ ಬಂದು ಬಿಡಲಿಲ್ಲ, ಆ ಯಾಜ್ಞಸೇನಿಯ ಮೊರೆ ಕೇಳಿ? ಗಜೇಂದ್ರನನ್ನು ಮೊಸಳೆ ಕಚ್ಚಿದಾಗ ಆನೆಯನ್ನು ಉಳಿಸಿದನು, ಎಂಬ ಕೀರ್ತಿಯ ಶ್ರೀಮನ್ಮಮಹಾವಿಷ್ಣುವು, ಆ ಗುರುಡರೂಪೀ ಕುಕ್ಕುಟ ಸರ್ಪಾರೋಹಿಯು, ಆಗ ಎಲ್ಲಿದ್ದನು? ಶ್ರೀ ಕೃಷ್ಣರೂಪದಿಂದ ಯಾದವರಲ್ಲೆ ಅವತರಿಸಿದ್ದನೆಂದು ಕೃಷ್ಣದ್ವೈಪಾಯನ ನಂಬಿಸುತ್ತಿರುವನಲ್ಲ! ಒಬ್ಬ ನಾರಕನನ್ನು ಇನ್ನೊಬ್ಬ ನಾರಣ-ಕೃಷ್ಣನು ಕೊಲ್ಲುತ್ತಾನೆ. ಒಬ್ಬ ಹಯಗ್ರೀವನನ್ನು, ಇನ್ನೊಬ್ಬ ಹಯಗ್ರೀವ ಸಂಹರಿಸುತ್ತಾನೆ. ಒಬ್ಬ ಮಧು (ಕೈಟಭ)ನನ್ನು ಇನ್ನೊಂದು ಮಧುಸ್ರವಿಸುವ ಪಾದದ ದೈವತವು ಸಂಹರಿಸಿ ಮಧು-ಸೂದನ ಎಂಬ ನೂತನ ನಾಮದಿಂದ ಪ್ರಸಿದ್ಧವಾಗುತ್ತದೆ. ಒಬ್ಬ ಕಬಂಧನನ್ನು, ಶೇಷನ ಅವತಾರಿ ಲಕ್ಷ್ಮಣ 'ಆತನ ಅಣ್ಣ ರಾಮ ಕೊಲ್ಲುತ್ತಾನೆ. 'ಅಕ್ಷ' ದ್ಯೂತದ ಬಗೆಗೆ ತಿರಸ್ಕಾರ ಹುಟ್ಟುವಂತೆ ಋಗ್ವೇದದ ಸೂಕ್ತ ಬರೆಯಲಾಗುತ್ತದೆ. ಮಹಾಭಾರತಕಾರರೂ ಇದನ್ನೇ ಭಾರತೀಯ ಯುದ್ಧದ ಅನಾಹುತದ ಸಂಹಾರಕ ರೌದ್ರ - 'ಅಗನಿ ಬೀಜ' ಎಂಬ ಹಾಗೆ ಮಹಾಭಾರತದ ಕೇಂದ್ರ ಘಟನೆಯಾಗಿ ಸ್ವೀಕರಿಸುತ್ತಾರೆ! ಇದೆಲ್ಲ ವಿಸಂಗತಿಯನ್ನು ಎಷ್ಟು ಸುಸಂಗತವಾಗಿ ಬಳಸಿಕೊಂಡು: ಈ ಬಾಳೆಲ್ಲ ಹಾಳು : ಸ್ಮಶಾನ ಸ್ವರೂಪ ಎಂಬುದನ್ನು ಮನಗಾಣಿಸಿ ಕೊಡುವ ಸುರಮ್ಯ ಅಮೋಘ ಸಾಹಿತ್ಯಕೃತಿಯನ್ನು ರಚಿಸಿದ್ದಾರಲ್ಲ!

ಇಲ್ಲಿ ನೋಡಿ : ಈ ಪ್ರಪಂಚದ ಜನನಕ್ಕೆ ಕಾರಣವಾಗುವ ಅಕ್ಷ-ಸರ್ಪವೇ ಅದರ ವಿನಾಶಕ್ಕೂ ಪ್ರೇರಿಸುತ್ತದೆ. ಆದಕಾರಣ, ಈ ಜನನ-ಮರಣ ಚಕ್ರದೊಳಗಿಂದ ಮುಕ್ತರಾಗಬೇಕಿದ್ದರೆ, ಕಮಲಾಕ್ಷನನ್ನು :ಕಮಲಯುಕ್ತ ಅಕ್ಷವನ್ನು ಎಂದರೆ ವಾಕ್-ಅರ್ಥೌ ಇವ ಸಂಪೃಕ್ತ ಪರಬ್ರಹ್ಮಸ್ವರೂಪ ಅಪಾಂನಪ್ತ್ರವನ್ನು ಧ್ಯಾನಿಸುತ್ತ ತತ್‌ಸ್ವರೂಪಿಗಳಾಗುವುದು ಇದೊಂದೇ ದಾರಿ. ಎಂಬ ಬೋಧನೆಗಾಗಿ, ಈ ಪ್ರಪಂಚ', 'ಕುರು'ಕ್ಷೇತ್ರ : ಇದು ರುದ್ರಭೂಮಿ ಎಂಬುದನ್ನು ಪ್ರಸ್ಥಾಪಿಸುವುದಕ್ಕಾಗಿ ರಚಿಸಲ್ಪಟ್ಟಿರುವ ಈ ಭಾರತ ಕಥೆಯ ತಳದಿಂದ ತುದಿಯ ವರೆಗೆ ನಾಗಪ್ರತಿಮಾ ಸಂಕೇತವೇ ಇರುವುದನ್ನು ಗಮನಿಸುವುದು ಅವಶ್ಯವಿದೆ. ದ್ವಾಪರಯುಗದ ಕಥೆಯೆನಿಸಿದರೂ ಇದರ ತಳಹದಿಯಲ್ಲಿ 'ಕಣಿ'ಯ ಯುಗದ ವೈಚಾರಿಕ ಆಕೃತಿಯೆ ಉಂಟು! ಶಂತನು ಪತ್ನಿ ಗಂಗಾರೂಪ ಅದಿತಿ: ಸಾರ್ಪರಾಜ್ಞಿ! ಇನ್ನೊಬ್ಬ ಗಂಗೆ: ಕೃಷ್ಣದ್ವೀಪ ಇವಳ ಸಂತತಿಯೆ ಮಹಾಭಾರತದ ಕಥೆಯ ತಳಪಾಯದಲ್ಲಿದೆ. ಶಂತನು ನಹುಷ (: ಸರ್ಪ) ವಂಶದವನೆಂಬ ಭಾಗವೊಂದುಂಟು! 'ಯಯಾತಿ'-ಯಾ-ತಿ ಈ ವ್ಯಕ್ತಿನಾಮವನ್ನು ಯಾಯಾವರ ಪ್ರತಿಮಾ ಸಂಕೇತದೊಡನೆ ಹೋಲಿಸಿರಿ. ಯಯಾತಿಯ ಅಣ್ಣನು ಒಬ್ಬ-ಯತಿ ಯಾತಿ! ಪರಿವ್ರಾಜಕ ಸಂನ್ಯಾಸಿಯಾಗಿ ಹೋದನು! ಭೀಮನು ಯತಿ<ಯಾತಿಯಾಗಿ ಹೊರಗೆ ಹೋಗಲಿಲ್ಲವಾದರೂ ಇದ್ದಲ್ಲಿಂದಲೇ 'ನಾಗ' ಸಂಪ್ರದಾಯವನ್ನು ಮುನ್ನಡೆಸಿಕೊಂಡು ಹೋಗುತ್ತಾನೆ! ಯಯಾತಿಯ ಭೋಗಪ್ರಿಯತೆಯು ನಾಗಸಂಪ್ರದಾಯದ ಮೂಲ ಆಕೃತಿ. ಇದರ ಹೇಸಿಕೆ : ಪ್ರತಿಕ್ರಿಯೆ ಯತಿ<ಯಾತಿ : ಶುಕಮುನಿ! ಇದು ತತ್ : ಏಕಂ ಸತ್ಯದ ಜೀವನಾದರ್ಶ.

ಋಗ್ವೇದದಲ್ಲಿ ಈಗ ಮಸಕುಮಸಕಾಗಿ ಉಳಿದಿರುವ ವಿವಸ್ವಾನ್ : ಮನುಜ : ಮಾನವ ಜೀವನರೀತಿಯ ಆಕೃತಿಯನ್ನು ಸ್ಮರಿಸಿಕೊಂಡಲ್ಲದೆ, ವ್ಯಾಸನ 'ನರ'ನ ಪ್ರತಿಮಾಸೃಷ್ಟಿಯ ವೈಶಿಷ್ಟ್ಯವು ಅರಿಕೆಗೆ ಬರಲಾರದು. ಈ ವಿವಸ್ವಾನನಿಗೆ ಜ್ಞಾನೋಪದೇಶಮಾಡಿದವನು 'ನಾನು' ಎಂದು ಕೃಷ್ಣ ಹೇಳಿದ್ದನ್ನು ನೆನಪು ಮಾಡಿಕೊಳ್ಳಬೇಕು. ಋಗ್ವೇದದ ಇಂದ್ರನು ನಾಗಸಂಪ್ರದಾಯ ವಿರೋಧಿ ಒಂದು ಶಕ್ತಿ: ಮಾನವ ವ್ಯಕ್ತಿಗೆ, ನರ<ಪಾತಳಿಯಿಂದ ಮನುಜತ್ವದ ಪಾತಳಿಗೆ ಬರುವುದಕ್ಕಾಗಿ ನಾಗಶಕ್ತಿಯನ್ನು ಸಂಯಮದಲ್ಲಿ ತರಲು ಅದರೊಡನೆ ಮಾಡಬೇಕಾಗುವ ಕಾಳಗದಲ್ಲಿ ನೆರವಾಗುವ ದಿವ್ಯ ದೈವೀಶಕ್ತಿಯ : ಇಂದ್ರನು, ಈ ಮಾನವ ವ್ಯಕ್ತಿಯನ್ನು ಪ್ರತಿನಿಧೀಕರಿಸುವ ಋಗ್ವೇದದ ಸಾಂಕೇತಿಕ ಪ್ರತಿಮೆಯೆ ತ್ರಿತ ಆಪ್ತ್ಯನು. ಇವನು ಇಂದ್ರನ ಆಪ್ತನು. ಇಂದ್ರನೊಡನೆ ಮಾತ್ರವಲ್ಲ. ಅಗ್ನಿ ಸೋಮದೊಡನೆ ಸಹ 'ತ್ರಿತ' ಸಂಕೇತದ ಸಾಮರಸ್ಯವನ್ನು ಸೂಚಿಸಲಾಗಿದೆ. ಅಹಿ : ವೃತ್ರಸಂಹಾರದಲ್ಲಿ ಇಂದ್ರನೊಡನೆ ತ್ರಿತನು ಇದ್ದಾನೆ. 'ತ್ರಿತನು' (ಮಾನವ) ಇದ್ದಾನೆಂದು ಇಂದ್ರನೂ ಇದ್ದಾನೆ. ಈ ತ್ರಿತನು ಮಾನವ

ವ್ಯಕ್ತಿಯಾದರೂ ಇವರ ಮೂಲ ಆಕೃತಿ ಭೂಃ, ಭುವಃ, ಸ್ವಃ ಈ ಮೂರು ಲೋಕದಷ್ಟು ವಿಶಾಲವಿದೆ. ವೈಶ್ವಾನರ ಎಂಬುದು 'ತ್ರಿತ' ಸಂಕೇತದ ಇನ್ನೊಂದು ರೂಪ. ಆದರೆ, ಈ ತ್ರಿತನನ್ನು ಭುವಃ ಹಾಗೂ ಸ್ವಃದಿಂದ ಬೇರ್ಪಡಿಸಿದಲ್ಲಿ ಇದು ನೆಲದ ಮೇಲಣ ಸರೀಸೃಪವಾಗುವುದು! ಸಾವೆ ಇದರ ಗುರಿಯಾಗುತ್ತದೆ. ಮೃತ್ಯುವಿನ ಹೊರಗೆ ನಿಜವಾದ ಅಸ್ತಿತ್ವವು ಜೀವನ ಮೂಲ್ಯಗಳಲ್ಲಿ ಉಂಟು, ಎಂಬ ಪ್ರಜ್ಞೆ ಮೂಡದಿರಲು, ನಾಗಸಂಪ್ರದಾಯವು ವೈಯಕ್ತಿಕ ಮೋಕ್ಷದ ಆಮಿಷವನ್ನು ಒಡ್ಡಿ ವಿವಸ್ವಂತನ ಲೋಕದ ದಾರಿಯ ಭುವಃ, ಸ್ವಃ ಈ ಲೋಕಗಳ ಸಂಬಂಧವನ್ನು ತಪ್ಪಿಸಿದ್ದಾಗಿದೆ.

ಈ ಹಂತದಲ್ಲಿ ಇಂದ್ರನ ಮಿತ್ರ ಮನುಜ : ತ್ರಿತನು 'ನರ' ರೂಪದಲ್ಲಿ ನಾರಾಯಣನ ಸಂಗಾತಿಯಾಗುತ್ತಾನೆ. ನಾರದನಿಗೆ ಬದರೀ ಆಶ್ರಮದಲ್ಲಿ ಕಂಡ ಯುಗಲ, ನರ-ನಾರಾಯಣರದು. ಇಂದ್ರನ ಬೆಂಬಲದಿಂದ ಭಾಳಿನಲ್ಲಿ ಪುರುಷಾರ್ಥ ಸಿದ್ಧಿಗಾಗಿ ಹೋರಾಡುವ ಮನುಜನು ನಾರಣ : ಸರ್ಪ : ಮೃತ್ಯುಸಂಗಾತಿ: ಮಿತ್ರ 'ನರ'ನಾಗುತ್ತಾನೆ! ಈ ನರನು ಬೃಹನ್‌ನರ ಬೃಹನ್ನಳರೂಪ! ಈ ನರನು ಇಂದ್ರಾಂಶನೆಂಬಲ್ಲಿ ತ್ರಿತನು ತೃತೀಯ ಪುರುಷನಾದುದನ್ನು ಸೂಚಿಸಲಾಗಿದೆ. ಮಹಾಭಾರತದ ಪಾತ್ರಗಳು ನಾಗಪಂಥೀಯವು. ಅಲ್ಲದೆ, ಆ ಕಾವ್ಯದ ಗತಿಮಾನತೆಗೆ ಕಾರಣವಾಗಿರುವ 'ಅಕ್ಷ'ದ್ಯೂತವು 'ನಾಗ' : ಅಕ್ಷದ ಕ್ರೀಡೆ! ಗೌತಮಾಗ್ನಿ ಸ್ವರೂಪಳಾದ ಯಾಜ್ಞಸೇನಿ ದ್ರೌಪದಿಯ ಕಾಲಹಸ್ತ- ಸ್ವರೂಪಕೇಶ: ಕಪರ್ದಿ ಈ ಸಾಂಕೇತಿಕ ಪ್ರತಿಮೆ, ದ್ಯಾಮವ್ವ : ದುರ್ಗೆಯದೇ. ಅವಳೇ ಪರ್ಯಾಯದಿಂದ ಸರ್ವಭಕ್ಷಕಳು : ಅಕ್ಷಮಾಲಾಧಾರಿ! ಹೀಗೆ ಉದ್ದೇಶಪೂರ್ವಕವಾಗಿಯೆ, ಅಕ್ಷ : ನಾಗಪ್ರತಿಮಾ ಸಂಕೇತವನ್ನು ಯೋಜಿಸಿರುವ ಈ 'ಅಕ್ಷ'ದ ಆಟದಿಂದ ಲೈಂಗಿಕ ಆಕರ್ಷಣ ವಿಕರ್ಷಣದ ಕಾವ್ಯವಾಗದೆ, ಇದು ಸತ್ತಾಸ್ಪರ್ಧೆಯ ದುರಂತದ ನಾಟಕವಾಗಿರುವಲ್ಲಿ ಈ ಮಹಾಕವಿಯ ಅಪೂರ್ವ ಪ್ರತಿಭೆಯು ವ್ಯಕ್ತವಾಗಿದೆ. ಸಾಮಾಜಿಕ ಪ್ರಜ್ಞೆಯು ಪ್ರಭಾವಶಾಲಿಯಾಗತೊಡಗಿದಾಗ, ಋಗ್ವೇದಕಾಲದ 'ಅದಿತೇಃ ದಕ್ಷ ಅಜಾಯತ;' ಅಥವಾ 'ದಕ್ಷಾತ್ ಅದಿತಿಃ' ಎಂಬೀ ಬಗೆಯ ಜೀವನದ ಆಕೃತಿ (Life form) ತಿರಸ್ಕೃತವಾಗಿ, ಜೀವನದ ಸಾಂಸ್ಕೃತಿಕ ಹಿನ್ನೆಲೆಯು ಮಾರ್ಪಟ್ಟಾಗಲು ನಾಗಸಂಪ್ರದಾಯವನ್ನು ಉಳಿಸಿಕೊಂಡು ಮೋಕ್ಷಮಾರ್ಗದಲ್ಲಿ ಶ್ರದ್ಧೆ ದೃಢವಾಗಲು, ಈ ಮಹಾಭಾರತವು ಈ ಬಗೆಯ ದುರಂತ ಕಾವ್ಯವಾಗುವುದಕ್ಕಿಂತ ಬೇರೆ ಆಕಾರದ್ದಾಗಲು ಶಕ್ಯವೇ ಇರಲಿಲ್ಲ.

ವಿಚಾರ : ವಿಕಾಸದೊಡನೆ ದೇವತಾಸ್ವರೂಪದ ಧಾರಣೆಯನ್ನು (Concept) ಮಾರ್ಪಡಿಸಿಕೊಳ್ಳುವ ಅನಿವಾರ್ಯ ಕಷ್ಟವನ್ನು ಸ್ವಾಗತಿಸದಿರುವ ನರರು, ಮನುಜತ್ವದ ಸಾಂಸ್ಕೃತಿಕ ಪಾತಳಿಯ ಜೀವನವನ್ನು ರೂಪಿಸಿಕೊಳ್ಳುವ ಅರ್ಹತೆಯನ್ನು ತಾವಾಗಿಯೆ ಕಳೆದುಕೊಳ್ಳುತ್ತಾರೆ. ಭಾರತೀಯ ಸಾಂಸ್ಕೃತಿಕ ಸ್ಥಿತ್ಯಂತರದ ಅನಿವಾರ್ಯತೆಯ ಆ ಒಂದು ಸಂದರ್ಭವನ್ನು ಮಹಾಭಾರತಕಾರನು, ತನ್ನ 'ಕೃತಿ' ರಚನೆಯ ಮೂಲಕವಾಗಿ ಮಾನವರಿಗೆ ಮಾರ್ಗದರ್ಶಕನಾಗಬಹುದಾಗಿದ್ದ ಅಂತಹ ಒಂದು ಅಪೂರ್ವ ಸಂಧಿಯ ದುರುಪಯೋಗ ಮಾಡಿಕೊಂಡಿದ್ದಾನೆ. ವಸಿಷ್ಠ ಪ್ರಣೀತ ವಿಷ್ಣು-ಸಂಪ್ರದಾಯದ ಹೆಸರಿನಲ್ಲಿ ಗುಪ್ತವಾಗಿ ಪ್ರಚಾರ ಮಾಡಿರುವ ಶಿಪಿವಿಷ್ಟ: ಕೇಶೀಪುರುಷನು ರಸಸುರಿಸುವ ಊರ್ಧ್ವಮೂಲ ವೃಕ್ಷಪೂಜೆಯನ್ನು, ಎಂದರೆ ನಾಗಾರಾಧನೆಯನ್ನು ಪುನರುಜ್ಜೀವಿಸುವ ಸಂಪ್ರದಾಯ ಶರಣನ ಕಾರ್ಯವನ್ನೇ ಕೃಷ್ಣದ್ವೈಪಾಯನನು, ಬಹುಜಾಣ್ಮೆಯಿಂದ ಯಾರಿಗೂ ಪತ್ತೆಯಾಗದ ಹಾಗೆ ನೆರವೇರಿಸಿದ್ದಾನೆ.

ಕಾವ್ಯದ ಆಕೃತಿಯನ್ನು ನಿರ್ಧರಿಸಿಕೊಳ್ಳುವುದು ಕವಿಯ ಹಕ್ಕು. ಆದರೆ, ಆ ರಚನೆಯೊಳಗಿನ ಸುಸಂಗತಿ-ವಿಸಂಗತಿಗಳ ಮೂಲಕ ವ್ಯಕ್ತವಾಗುವ ಅರ್ಥ: ಪ್ರಾಮಾಣಿಕತೆಯ ಮೂಲ್ಯ ವಿಮರ್ಶಿಸುವ ಅಧಿಕಾರವು ಸಮೀಕ್ಷಕರಿಗಿದೆ. ಇದನ್ನು ಎರಡು ಬಗೆಯಿಂದಲೂ ಸಮೀಕ್ಷಿಸಬಹುದು. ಈ ಕೃತಿಯೊಳಗಿನ ಪ್ರತಿಮಾ: ಸಂಕೇತಗಳ ಬೆಲೆಯನ್ನು ಅವುಗಳ 'ನಿನ್ನೆ'ಗಳ ರೂಪ ಆಕೃತಿಯಿಂದ ಅರಿಯಲು ಬರುವುದು. ಅಲ್ಲದೆ, ಆ ಕೃತಿಯೊಳಗಿನ ಆಕೃತಿಯಲ್ಲೇ ಇರುವ ಘಟನೆಗಳ ಮೂಲಕವೂ ಆ ಕಾವ್ಯನಿವೇದನೆಯ ಗೊತ್ತುಗುರಿಗಳನ್ನು ಕಂಡುಕೊಳ್ಳಬಹುದು. ಭಗವದ್ಗೀತೆಯಲ್ಲಿ, ಕೃಷ್ಣನು ನಿಜವಾದ ಶಿಪಿವಿಷ್ಟ : ಅಕ್ಷಕಮಲನೇ ಇರುವುದಾಗಿ ಚಿತ್ರಿಸಿದ್ದಾಗಿದೆ. ಪ್ರಪಂಚವು ಸ್ಮಶಾನ,[೩] ಮತ್ತು ಊರ್ಧ್ವಮೂಲವೃಕ್ಷ : ಪುರುಷೋತ್ತಮ, ಎಂದು ಈ ಪರಮಾತ್ಮ ಶಕ್ತಿಯು ಹೇಳುತ್ತದೆ; 'ಮಯಾಧ್ಯಕ್ಷೇಣ ಸೂಯತೇ ಸಚರಾಚರಮ್' ಎಂದು![೪] ಈ 'ಅಧಿ ಅಕ್ಷ' ದೈವತವು ಬಾಳಗುರಿಯಾಗಿರುವಲ್ಲಿ

'ಅಕ್ಷ' ದಿವ್ಯ : ದ್ಯೂತ ಹೇಯವೆಂತು? ಈ ಬಾಳಿನಲ್ಲಿ ಬಿದ್ದ ಅಕ್ಷದವರು, ಗೆದ್ದ ಅಕ್ಷದವರನ್ನು ಹತ್ತಿಕ್ಕುವರು; ಹಣ್ಣುಮಾಡುವರು. ಈ ಬಗೆಯ ಕೋಲಾಹಲದ ಕೇಂದ್ರ ಈ ಪ್ರಪಂಚ. ಈ ದುಃಖಮಯ ಜೀವನದಿಂದ ಮುಕ್ತರಾಗಿರೆಂದು ಹೇಳುವುದಕ್ಕಾಗಿ ವಿರಕ್ತಪಂಥವು ಸಂಧಿಯನ್ನು ಕಾಯುತ್ತಿರುತ್ತದೆ. ಇದೇ ಅಕ್ಷದ್ಯೂತವನ್ನೇ ನೈತಿಕಮೂಲ್ಯ, ಸಾಮಾಜಿಕ ಭದ್ರತೆಯ ದೃಷ್ಟಿಯಿಂದ ಉಪಯೋಗಿಸಿಕೊಳ್ಳಲು ಹಳೆಯ ಸಂಪ್ರದಾಯದಂತೆ ಸಶಸ್ತ್ರ ಹೋರಾಟ ಅಥವಾ ನಿಃಶಸ್ತ್ರ ಅಹಿಂಸಕ ನೂತನ ಬಗೆಯ ಹೋರಾಟ ತೋರಿಸಿ ಅದನ್ನೇ ಒಂದು ದುರಂತ ನಾಟಕವಾಗಿ ರೂಪಿಸಲೂ ಬಹುದಿತ್ತು. ಆದರೆ, ವ್ಯಾಸ ವಾಲ್ಮೀಕಿಗಳು, ವಸಿಷ್ಠ ಪಂಥವು ಪಾತಾಳಕ್ಕೆ ಅಟ್ಟಿರುವ ಜೀವನಮೂಲ್ಯಕ್ಕಾಗಿ, ಹೋರಟೆಯ ಆದರ್ಶದ ತ್ರಿತ: ಇಂದ್ರಪಂಥವನ್ನು ಪುನರುಜ್ಜೀವಿಸುವ ಅನ್ಯಾಯ ಮಾಡಲು ಶಕ್ಯವೆ? ಋಗ್ವೇದದ ಅಕ್ಷದ್ಯೂತವು ತೆಗಳುವ ಶೈಲಿಯಲ್ಲಿ ರಚಿಸಲ್ಪಟ್ಟಂತೆ ಕಂಡರು ಅದು ಒಳಗೊಂಡಿರುವ ವ್ಯಾಮಿಶ್ರ ಶೈಲಿಯು ತುಂಬ ಜಾದೂಗಾರಿಕೆಯದಾಗಿದೆ.

ಋಗ್ವೇದದ ಅಕ್ಷಸೂಕ್ತದಲ್ಲಿ ಈ ಆಟದ ಇನ್ನೂ ಸ್ಪಷ್ಟ ವರ್ಣನೆ ಉಂಟು.

ಅನ್ಯೇ ಜಾಯಾಂ ಪರಿಮೃಶಂತಿ ಅಸ್ಯ, ಯಸ್ಯ ಅಗೃಧತ್ ವೇದನೇವಾಜೀ ಅಕ್ಷಃ![೫]

ಇದರೊಳಗಿನ ಪ್ರತಿಯೊಂದು ಶಬ್ದ-ಸಂಕೇತವೂ, ಔಚಿತ್ಯಪೂರ್ಣ. ಒಂದು ಆಕೃತಿ; ಅರ್ಥ ನಿರ್ಮಿಸಲು ಪ್ರಯೋಜನಕಾರಿಯಾಗಿದೆ. ಪ್ರತಿಪಕ್ಷಗಳು, (ಅನ್ಯೇ:) ಸೋತವನ (ಅಸ್ಯ) ಮಡದಿಯ ಪರಿಮರ್ಶನ ಮಾಡುತ್ತಾರೆ. ಋಗ್ವೇದದ ಕವಿಯು ಬಳಸಿರುವ ಮೃಶ್>ಮರ್ಶ್ ಆಖ್ಯಾತವು, ವರ್ಣನೆಯ ಸಾಂಸ್ಕೃತಿಕ ಮಟ್ಟದ ಎತ್ತರವನ್ನು ಸೂಚಿಸುತ್ತದೆ. ಪರಿಮರ್ಶೆ-ಪರಾಮರ್ಶೆ ಈ ರೂಪದಲ್ಲಿ ಇಂದಿಗೂ ಉಂಟು. ಒರೆಗಲ್ಲಿಗೆ ಹಚ್ಚಿ ನೋಡುವ ಕ್ರಿಯೆಯು ಇಲ್ಲಿ ಅಭಿಪ್ರೇತವಿದೆ. 'ಮೃಶ್' ಆಖ್ಯಾತವನ್ನು ಯೋಜಿಸುವಲ್ಲಿ, ಕವಿಯಲ್ಲಿ ಸೂಕ್ಷ್ಮ ಸೂಚಕ ಶಕ್ತಿಯ ವಿವೇಕವು ಜಾಗೃತವಾಗಿರುವುದು ಕಾಣುತ್ತದೆ. ಮೃಶ್ ಆಖ್ಯಾತವು ಒಳಗೊಳ್ಳುವ ಅರ್ಥದ ವಲಯವು, ಇನ್ನೂ ಕೆಲ ಛಾಯಾರ್ಥಗಳ ಬಣ್ಣಬಣ್ಣಗಳುಳ್ಳದಾಗಿದೆ. 'ಮೃಜ್' ಆಖ್ಯಾತದ ಹಿನ್ನೆಲೆಯಲ್ಲಿ ಮೃಶ್ ಸಂಕೇತವು ಇನ್ನೂ ವಿಶೇಷಾರ್ಥಗಳುಳ್ಳದ್ದಿರುವುದನ್ನು ಮನಗಾಣಬಹುದು; ಮೃಜ್ : to rule, cleanse, polish; make smooth carry (e. g. a horse or other animal); (ಈ ಋಚೆಯಲ್ಲಿ 'ವಾಜೀ' ಅಕ್ಷಃ ಉಂಟು!) ಈ ಅರ್ಥದ ಪ್ರಯೋಗಗಳು ಋಗ್ವೇದದಲ್ಲಿ ದೊರೆಯುವುವು; to carry away, win ಎಂಬ ಅರ್ಥದ ಪ್ರಯೋಗ ಅಥರ್ವವೇದದಲ್ಲಿ ದೊರೆಯುತ್ತದೆ. ಈ ಕಾರಣದಿಂದಾಗಿ ಮೃಶ್, 'ಮೃಜ್' ಇವೆರಡನ್ನು ತೂಗಿ ಅರ್ಥವನ್ನು ಅರಿಯಲು ಮೊನಿಯರ್ ವಿಲಿಯಂಸ್ ಸೂಚಿಸಿರುವಲ್ಲಿ ತುಂಬ ಔಚಿತ್ಯವಿದೆ.

ಈ ಅಕ್ಷದ್ಯೂತವು ಹೀನಕರ್ಮ, ಅದನ್ನು ತ್ಯಜಿಸುವುದು ಉತ್ತಮ, ಎಂಬ ಉಪದೇಶವು ಈ ಸೂಕ್ತದಲ್ಲಿಯೂ ಇಲ್ಲದಿಲ್ಲ. ಮೂಲತಃ ದೈವಪರೀಕ್ಷೆ, ಸತ್ವಪರೀಕ್ಷೆ ಎಂಬರ್ಥದ 'ದಿವ್ಯ' ಪದವು 'ದೀವ್ಯ' (ಜೂಜು) ಎಂದು ಋಗ್ವೇದದಲ್ಲಿಯೆ ತಿರಸ್ಕಾರಾರ್ಥಕ್ಕೆ ಮಾರ್ಪಟ್ಟಿದೆ. ಆದರೂ ಈ ಅಕ್ಷದ್ಯೂತವು ಮಹಾಭಾರತ ಕಾಲದ ವರೆಗೂ ಉಳಿಯುತ್ತದೆ. ಅಲ್ಲದೆ, ಸಮಾಜದ ಮೇಲ್ಪಟ್ಟದ ವರ್ಗದಲ್ಲಿ ರಾಜಾಧಿರಾಜರಲ್ಲಿ ಸಹ ಪ್ರತಿಷ್ಠೆ ಪಡೆದಿರುತ್ತದೆ. ಈ ಘಟನೆಯ ಅರ್ಥವೇನು? ಋಗ್ವೇದದಲ್ಲಿ ಅಕ್ಷದ್ಯೂತಕ್ಕೆ ಸ್ಥಾನವನ್ನು ಕೊಟ್ಟುದರಲ್ಲಿಯೂ ಈ ಸಂಕಲನಕಾರನ ತಂತ್ರ (technic) ವೈಶಿಷ್ಟ್ಯವು ವ್ಯಕ್ತವಾಗುತ್ತದೆ. ಪರಸ್ಪರ ವಿರೋಧೀ 'ವ್ಯಾಮಿಶ್ರ' ಪ್ರತಿಮೆಗಳ ಮೂಲಕ ಸಂಮೋಹಕ ಮೋಡಿಕಾರ ಮಾಟದ (hypnotic) ಪರಿಣಾಮವನ್ನು ನಿರ್ಮಿಸುವಲ್ಲಿ ಈ 'ವ್ಯಾಮಿಶ್ರ' ಶೈಲಿಯು ಯಶಸ್ವಿಯಾಗಿರುವುದಕ್ಕೆ ಗೀತೆಯ ಈ ಬಗೆಯ ಮಾಯಾ ಶಿಲ್ಪವೇ ಸಾಕ್ಷಿ. ಈ ಕವಿಗಳ ಶಿಪಿವಿಷ್ಟ : ಹಿರಣ್ಯಗರ್ಭ : ಪ್ರಜಾಪತಿ : ಕೇಶೀಪುರುಷ ಇಂತಹ ಪ್ರತಿಮಾ ಸ್ತೋತ್ರಗಳ ಬಗೆಗೆ ಸಂದೇಹವೆ ಉಂಟಾಗದಿರಲು, ಇಂದ್ರನು 'ಶಿಶ್ನೋದೇವಾಃ' ಪಂಥೀಯರನ್ನು ಕೊಂದನೆಂದು ವರ್ಣಿಸಿರುವುದು! ಹೇಗಿದೆ ಈ ವ್ಯಾಮಿಶ್ರ ತಂತ್ರ! ನಾಗಪೂಜಾ ಪುರಸ್ಕಾರದ ವೇದದಲ್ಲಿ, ನಾಗಸಂಹಾರದ ಪ್ರಶಂಸೆ!

'ಉದ್ಧರೇತ್ ಆತ್ಮನಾತ್ಮಾನಂ' ಎಂದು ಉಪದೇಶಿಸುವ ಗೀತೆಯ ಭಗವಂತನು, 'ಮಾಮ್ ಏಕಂ ಶರಣಂ ವ್ರಜ' ಎಂದೂ ಅಪ್ಪಣೆ ಕೊಡಿಸಿದ್ದಾನೆ! ಈ 'ವ್ಯಾಮಿಶ್ರ' ಶೈಲಿಯನ್ನು ತಾನು ಉಪಯೋಗಿಸುತ್ತಿರುವ ಅರಿವು ದ್ವೈಪಾಯನ ಕೃಷ್ಣನಿಗೆ ಇಲ್ಲದಿಲ್ಲ 'ವ್ಯಾಮಿಶ್ರೇಣ ಇವ' (ವ್ಯಾಮಿಶ್ರ ಎನಿಸುವಂತಹ) ವಾಕ್ಯಗಳಿಂದ ನನ್ನ ಬುದ್ಧಿಯನ್ನು 'ಮೋಹಿಸುತ್ತಿರುವಂತೆ ಕಾಣುತ್ತಿದೆ, ಎಂದು ನರನ ಬಾಯಲ್ಲಿ ಹಾಕಿರುವ ಮಾತುಗಳೇ ಇದಕ್ಕೆ ಸಾಕ್ಷಿ. ಆದರೆ, 'ಇವ' ಶಬ್ದದಿಂದ ವ್ಯಾಮಿಶ್ರ ಎನಿಸಿದರೂ ಅದು ಹಾಗಲ್ಲ, ಎಂದು ಜಾರಿಕೊಳ್ಳುವ ಪ್ರಯತ್ನಪಟ್ಟದ್ದೂ ಉಂಟು. ಗೀತೆಯಲ್ಲೇ ಅರ್ಧವಾಕ್ಯವು ಪ್ರವೃತ್ತಿ ಜೀವನ ಪರವಾಗಿದೆ ಎಂದು ತೋರುವುದರ ಮುಂದಿನ ಭಾಗವು ಅದಕ್ಕೆ ತಿರುವು ಮುರುವು! 'ಜಹಿ ಶತ್ರುಂ ಮಹಾಬಾಹೋ'! : ಹೇ ನರವೀರನೇ ಹಗೆಗಳನ್ನು ಗೆಲ್ಲು, (ಬಾಳಿನಲ್ಲಿ ವಿಜಯಿಯಾಗು) ಎಂಬ ಹಾಗಿನ ವೇಷದಲ್ಲಿ ಪ್ರಾರಂಭವಾಗುವ ಈ ಆಕರ್ಷಕ ವಾಕ್ಯವು 'ಕಾಮರೂಪಂ ದುರಾಸದಮ್' ಅಸತ್ ಸ್ವರೂಪೀ ದುಷ್ಟನಾದ ಕಾಮ (: ಸಂಕಲ್ಪ) ರೂಪ ಶತ್ರುವನ್ನು ಗೆಲ್ಲು! 'ಕಾಮಸಂಕಲ್ಪ ವಿವರ್ಜಿತನಾಗು'. ಆದರೆ, ಈ ಆದೇಶದೊಳಗಿನ ಆಶಯದ ಆಳವು ಗಮನಕ್ಕೆ ಬರಲು ಋಗ್ವೇದ ಹಾಗೂ ಉಪನಿಷತ್ತಿನಲ್ಲಿ ಬಂದಿರುವ ಅಸತ್ ಮತ್ತು ಸತ್ ಎಂದರೆ ಋತ : ಸತ್ಯ ಹಾಗೂ ಏಕಂ : ಸತ್ ಈ ಎರಡೂ ತಾತ್ವಿಕ ಭೂಮಿಕೆಗಳ ಸಂಘರ್ಷವನ್ನು ಗ್ರಹಿಸಿಕೊಳ್ಳುವುದು ಅವಶ್ಯವಾಗಿದೆ ಗೀತೆಯನ್ನೇ 'ಸ್ವಯಂಪೂರ್ಣ' ಗ್ರಂಥವೆಂದು ಬಗೆದಲ್ಲಿ ಇದು ತೀರ 'ಸಭ್ಯ' ವಾಕ್ಯ! ಆದರೆ, 'ದುರ್-ಅಸತ್' ಈ ಶಬ್ದಪ್ರತಿಮೆಯ ಹಿಂದೆ ಇತಿಹಾಸವಿದೆ. ಋಗ್ವೇದಕಾಲೀನ 'ಅಸದೀಯ' ಹಾಗೂ 'ನ ಅಸದೀಯ' ವಾದದ ಪಾರ್ಶ್ವಭೂಮಿಯನ್ನು ಲೆಕ್ಕಕೆ ಹಿಡಿಯದಿದ್ದರೆ, ಈ 'ಭಗ'ವಂತನಿಗೆ ಅನಿಷ್ಟವೆನಿಸಿದ ಶಕ್ತಿ ಯಾರು? ಯಾರನ್ನು ಮೆಟ್ಟಿನಿಲ್ಲಬೇಕಾಗಿದೆ ಎಂಬುದರ ಜ್ಞಾನೋದಯವು ಆಗಲು ಅಶಕ್ಯವಿದೆ. 'ಅಸತ್' (ಎಂದರೆ ಋತ : ಸತ್ಯ) ಪಂಥೀಯ ದುಷ್ಟರನ್ನು ಗೆಲ್ಲು (ಜಹಿ)! ಎಂದು ನರನಿಗೆ, ಈ ಕಾಲಪುರುಷ ಕೃಷ್ಣನ ಆದೇಶ! 'ಅಸತಃ ಸತ್ ಅಜಾಯತ್' ಎಂಬುದು, ಋತ : ಸತ್ಯದ ಭೂಮಿಕೆಯ 'ಸವಿತ್ರ' (ಸೂರ್ಯಾಗ್ನೀಂದ್ರ) ಪಂಥೀಯರ ವೈಚಾರಿಕ ಸೂತ್ರ, ಸವಿತೃ ಪ್ರಕಾಶ : ಹಗಲಿನ ದೈವತ! ಸರ್ಪ : ಅಕ್ಷ ಕಾಣಾ ಸಂಪ್ರದಾಯದ ಕಣೆಯವರಿಗೆ ಹಗಲು : ಪ್ರಕಾಶ ಶತ್ರು! ಹಗಲು : ಇರುಳು : 'ಸಮತ್ವಂ ಯೋಗಮುಚ್ಯತೇ' ಈ ಅಕ್ಷ-ಯೋಗ ಮಾರ್ಗಕ್ಕೆ ರಾತ್ರಿಯು ಬೇಕು. ಈ ವಾದವು ಋಗ್ವೇದದ ನಾಸದೀಯ ಸೂಕ್ತದಲ್ಲಿ ಸ್ಪಷ್ಟವಾಗಿ ಮೊದಲು ಕೇಳಬರುತ್ತದೆ.[೬] ಛಾಂದೋಗ್ಯದಲ್ಲೂ ಅದರ ಪ್ರತಿಧ್ವನಿಯಿದೆ. ಗೀತೆಯಲ್ಲಿಯೂ ಆ 'ಅಸತ್' ವಾದದ ಸ್ಮೃತಿಯೆ ಇರುವ ಮೌಲಿಕ ಪ್ರಮಾಣವು, ಇಲ್ಲಿ ದೊರೆಯುತ್ತಿದೆ!

ಗೀತೆಯಂ ಭಗವಂತನೇ ಸ್ವಯಂ (ಕಮಲ) ಅಕ್ಷನು; ಊರ್ಧ್ವಮೂಲ ವೃಕ್ಷನು, ಅಕ್ಷ : ಸರ್ಪ ಪಕ್ಷಪಾತಿಯಾಗಿರುವಂತೆ, ಋಗ್ವೇದ ಸಂಹಿತೆಯ ಇಂದಿನ ಆಕೃತಿಗೆ (from) ಕಾರಣನಾಗಿರುವ ಅದರ ಸಂಯೋಜಕನೂ, ಅಕ್ಷ: ಸರ್ಪ ಪಕ್ಷಪಾತಿಯಾಗಿದ್ದನು. ಇದಕ್ಕೆ 'ಅಕ್ಷ-ದ್ಯೂತ'ದ ಬಗೆಗೆ ಬಹಿರಂಗದಲ್ಲಿ ತಿರಸ್ಕಾರವನ್ನು ಪ್ರದರ್ಶಿಸುತ್ತಿರುವ ಈ ಸೂಕ್ತದ ವ್ಯಾಮಿಶ್ರ ಶಿಲ್ಪ ಕೌಶಲ್ಯವೇ ಸಾಕ್ಷಿ. 'ಅಕ್ಷ'-ದ್ಯೂತ,ಈ 'ದಿ(ೀ)ವ್ಯ' ಇದು ನಿಶಾ-ಕ್ರೀಡೆ. ಈ ಕಾರಣದಿಂದಾಗಿ 'ಜಾಗೃವಿಃ' (ಜಾಗರ-ಮಾಡುವವನು) ಎಂಬುದು ಜೂಜುಗಾರನ ಪರ್ಯಾಯನಾಮವು, ಅತ್ಯಂತ ಸಾರ್ಥವಿದೆ.* ಜೀವನ ಸೌಖ್ಯವನ್ನೇ ಭೇದಿಸಿ-ಛೇದಿಸಿ ಬಿಡುವ ಅಥವಾ ವಿಭೀತಕವಾದ 'ಅಕ್ಷ' : ಲೆತ್ತಕ್ಕೆ ವಿಭೀದಕಃ ಎಂದಿರುವುದು ಔಚಿತ್ಯಪೂರ್ಣವಿದೆ. ಇಂತಹ ಇನ್ನೂ ಹಲವು ಸುಂದರ ಶಿಲ್ಪದ ಮಾದರಿಗಳು ಈ ಸೂಕ್ತದಲ್ಲಿವೆ. ಈ ಬಗೆಯ ಕುಶಲ ಕಾರಾಗಿರಿಯ ಶಬ್ದ-ಶಿಲ್ಪಿಯಾದ ಈ ಕವಿಗೆ, 'ಸವಿತೃ' ಮತ್ತು 'ಸೋಮ' ಈ ಶಬ್ದ-ಪ್ರತಿಮೆಗಳ ಮೂಲ ಪರಂಪರೆ-ಅದರ ನಿಜವಾದ ಆಕೃತಿ :

---

* ಮಹಾಭಾರತದಲ್ಲಿ 'ಅಕ್ಷದ್ಯೂತ' ರಾತ್ರಿಯಲ್ಲಿ ಸಾಂಗವಾಯಿತೆ? ಅಥವಾ ಕೃಷ್ಣದ್ವೈಸಾಯನನು ಅದನ್ನು ಹೇಳಿಯೆ ಇಲ್ಲವೊ, ತಿಳಿದರೆ ಲೇಸು.

ಮೂಲ್ಯ : ಸೌಂದರ್ಯವು ಅವಗತವಿದ್ದಿಲ್ಲ, ಎನ್ನಲಾದೀತೆ? ಇಕೊ ನೋಡಿ ಈ ಉಪಮೆಯ ಯೋಜನೆ : (ಯಥಾ) "ಸತ್ಯ-ಧರ್ಮಾ ಸವಿತಾ ದೇವಃ ಇವ (ಜಗತಿ) ಕ್ರೀಳತಿ. (: ಸತ್ಯಧರ್ಮ ಸ್ವರೂಪಿಯಾದ ಸವಿತೃ ದೇವನು ಹೇಗೆ, ವಿಶ್ವದಲ್ಲಿ ಕ್ರೀಡಿಸುತ್ತಾನೊ ವಿಹರಿಸುತ್ತಾನೊ ಹಾಗೆ) ಐವತ್ತುಮೂರು ಜೂಜುಗಾರರ ತಂಡವು (ವ್ರಾತ:) ಅಕ್ಷಕ್ರೀಡೆಯನ್ನು ನಡೆಸುತ್ತದೆ. ಋಚೆಯೊಳಗೆ 'ಸವಿತೃ'ನಾಮಸಂಕೇತದ ದೈವತದ ನಿರ್ದೇಶವೇಕೆ? ಈ ದ್ಯೂತದ 'ಸತ್ಯ' 'ಧರ್ಮ'ಕ್ಕೂ 'ಸವಿತೃ'ವಿಗೂ ಸಂಬಂಧವೇನು?

ಈ ನಿಶಾಕಾಲದ ಆಚರಣಕ್ಕೆಲ್ಲ ನಿಶಾ-ನಾಥನು ಅಧ್ಯಕ್ಷನಾಗಿರುತ್ತಾನೆ ಎಂದರೆ, ಸಾರ್ಥತೆಯುಂಟು. ಆದರೆ, ಸವಿತೃವೊ, ಬೆಳಗಿನ ಜಾವದ ('ಸೂರ್ಯ'ನು ಮೂಡುವ ಮುಂಚಿನ ಸಂಧಿಕಾಲದ) ದೈವತ! ಸ-ಕಾಲದಲ್ಲಿ ಮಲಗಿ ಸ-ಕಾಲದಲ್ಲಿ ಏಳುವುದು, ಆರೋಗ್ಯಸಂಪತ್ತು, ಬುದ್ಧಿವಂತಿಕೆ ಪಡೆವದಾರಿ : Early to bed, & early to rise; it is the way to be healthy, wealthy & wise" ಎಂಬ ಗಾದೆಯು ಇಂಗ್ಲೀಷಿನಲ್ಲಿ ಉಂಟು. ಆರಿಯ ಮಾತಿನಲ್ಲಿ 'ಸಕಾಳ' ಎಂದರೆ, ನಸುಕುಹರಿವಾಗಿನ ಸಂಧಿಕಾಲ. ಉಷಃಕಾಲದ ಸೌಂದರ್ಯಕ್ಕೆ ಮೆಚ್ಚಿದ ಜನದ 'ಸಕಾಲವು' ಸವಿತೃವಿನ ಉದಯದ ಕಾಲವೇ. ಈ 'ಸವಿತೃವು ನಮ್ಮ ಧೀ ಶಕ್ತಿಯನ್ನು ಪ್ರೇರಿಸಲಿ' (: ಧಿಯೋ ಯೋ ನಃ ಪ್ರಚೋದಯಾತ್) ಎಂಬ ನಿತ್ಯ ಪ್ರಾರ್ಥನೆ-ಪ್ರಾತಃ ಸ್ನಾನಾನಂತರ! ಈ ಸವಿತೃವು 'ಸತ್ಯ-ಧರ್ಮ'ನು ಎಂದರೆ ಋತ : ಸತ್ಯದ ಸಾಕ್ಷಾತ್ಕಾರಕ್ಕೆ ಬೆಳಕನ್ನು ನೀಡುವ ಆಧಾರಶಕ್ತಿ (: ಧಾರಣಾತ್ ಧರ್ಮ ಇತಿ ಆಹುಃ) ಈ ಸೌರಪರಂಪರೆ : ಸಮಯಾಚಾರವನ್ನು ಬುಡಮೇಲು ಮಾಡದೆ, ಸವಿತೃವು 'ಜಾಗೃವಿಗಳ ಹಾಗೂ ಜಾಗೃವಾಂಸರ ರಾತ್ರಸತ್ರಗಳ ಸಾಕ್ಷಿಯಾಗಿ ಬರಲು ಹೇಗೆ ತಾನೆ ಶಕ್ಯವಿದೆ? ಅಕ್ಷದ್ಯೂತವನ್ನು ನಿಂದ್ಯವೆಂದು ಹೇಳುವ ಮಾತುಗಳು ಪ್ರಾಮಾಣಿಕವಾದುವೇ ಇದ್ದರೆ, ಸವಿತೃ ದೈವತಪ್ರತಿಮೆಯನ್ನು ಈ ಬಗೆಯು ಅವಮೂಲ್ಯನಗೊಳಿಸುವ ಈ ಪ್ರತಿಮಾಭಂಗದ ಕೃತಿ, ಕವಿಯ ನಾಲಗೆಯಿಂದ ಹೊರಬರಲು ಶಕ್ಯವಿದ್ದಿಲ್ಲ.

ಸವಿತೃವಿನಂತೆ 'ಸೋಮ' ಪ್ರತಿಮಾ ಸಂಕೇತದ ಯೋಜನೆಯಲ್ಲಿಯೂ ತತ್ಪೂರ್ವದ 'ಸಮಯ'-ಭಂಗದ ಅನೌಚಿತ್ಯವು ಪ್ರತೀತಿಗೆ ಬರುತ್ತದೆ : ಸೋಮಪಾನದಿಂದಲೂ ಮೈಮೇಲಣ ಎಚ್ಚರ ತಪ್ಪುತ್ತಿರಬೇಕು. ಅಪ : ರಸ ಸ್ವರೂಪೀ 'ಮಧುಮತ್ ಪಯಸ್', 'ಅಂಧಸ್' ಎಂಬ ಮಾದಕ ಪೇಯಗಳಿಂದಲೂ ಉನ್ಮನಸ್ಕ ಉತ್ತೇಜಿತ ಮನೋಭಾವವು ಉಂಟಾಗುತ್ತಿತ್ತು. ಋಗ್ವೇದದಲ್ಲಿ ಸೋಮಪೇಯದ ಬಗೆಗಿನ ಪಕ್ಷಪಾತವು ಎಲ್ಲೆಲ್ಲೂ ಕಂಡುಬರುತ್ತದೆ. ಆದರೆ, ಇದು ಬುದ್ಧಿಗೆ ಉತ್ತೇಜಕವೊ ಶಕ್ತಿವರ್ಧಕವೊ ಇದ್ದು ಶತ್ರುಗಳ ಮೇಲೆ ಏರಿಹೋಗುವ ವೀರ್ಯಧೈರ್ಯದಾಯಕವೊ ಎಂಬ ಹಾಗೆ ವರ್ಣನೆಗಳು ಉಂಟು. ಮದ್ಯದ ಬಗೆಗೆ ತಿರಸ್ಕಾರವಿದೆ. 'ಸೋಮ' ಅವೆಸ್ತಾದಲ್ಲಿಯೂ ಇದೆ, ಇದು 'ವಲ್ಲಿ' ಎಂದು ಹೇಳಲಾಗಿದೆ. ಸೋಮವು ದೊರೆಯದಾಗ ಅದರ ಸ್ಥಳದಲ್ಲಿ ಬೇರೆ ಪೇಯವು ಪ್ರಚಲಿತವಾದುದೂ ನಿಶ್ಚಿತವಿದೆ. 'ಮೌಜ ಪರ್ವತದಲ್ಲಿ' ದೊರೆವ ಸೋಮದ ಉಲ್ಲೇಖ ಋಗ್ವೇದದಲ್ಲಿ ಮೊದಲಬಾರಿ ಬರುತ್ತಿರುವುದು ಈ ಸೂಕ್ತದಲ್ಲಿಯೇ ಮುಂಜವತ್ ಪರ್ವತವು ರುದ್ರನ ವಾಸಸ್ಥಾನವೆಂಬ ಸಂಕೇತವೂ ಉಂಟು. ಮೌಜ ಹುಲ್ಲಿನ ರಸವನ್ನು 'ಸೋಮ' ಎಂದಿರುವಲ್ಲಿ ಔಚಿತ್ಯವೇನು? ಸೋಮಪಂಥೀಯ ಅಗ್ನಿಸಂಪ್ರದಾಯದ ಯಾಜಕರಿಗೆ ಅಮಾನ್ಯವಿದ್ದ ರುದ್ರನು ಸೋಮನಾಥನಾಗಿರುವುದನ್ನು ಗಮನಿಸಬೇಕು. ಸೋಮರುದ್ರಾಸೂಕ್ತ ಋಗ್ವೇದದಲ್ಲಿ ಇದೆ. ಇಲ್ಲಿ ಮೌಜ ಮತ್ತು ಸೋಮ ಇವೆರಡೂ ನಾಮಸಂಕೇತಗಳಲ್ಲಿ ಅದಲು ಬದಲು ಮಾಡಿರುವುದೂ ಸ್ಪಷ್ಟವಿದೆ. ಇದರಿಂದ ಸೋಮವು ಮೂಲಾರ್ಥಕ್ಕೆ ಎರವಾಗಿದೆ.

ಅಕ್ಷದ್ಯೂತ ಕ್ರೀಡೆಯ ಬಗೆಗೆ ಉಂಟಾಗುವ ಉತ್ಸಾಹ-ಉನ್ಮಾದವು 'ಮೌಜವತಃ ಸೋಮಸ್ಯ ಭಕ್ಷಃ ಇವ' ಎಂಬ ಈ ಉಪಮೆಯಲ್ಲಿ ಸೋಮವನ್ನು 'ಮಜವತ್' ಎಂದಿರುವುದರೊಳಗಿನ ಕವಡಿನ ಬಗೆಗೆ ಇನ್ನಿಷ್ಟು ಸಂಶಯ ಹೆಚ್ಚುತ್ತದೆ. ಸವಿತೃವು 'ಧೀ' ಪ್ರೇರಕನೆಂಬ ನಂಬುಗೆಯೇ' ಸೋಮವನ್ನು 'ವಾಚಸ್ಪತಿ' ಎಂದಿರುವಲ್ಲಿ ಇನ್ನಷ್ಟು ಸ್ಪಷ್ಟತೆಯನ್ನು ಪಡೆದಿದೆ. ಆದರೆ, ಬುದ್ಧಿಯನ್ನು ಚಂಚಲಗೊಳಿಸಿ, ಅವಿವೇಕದ ಆಟಕ್ಕೆ ಪ್ರೇರಿಸುವ ಪೇಯವನ್ನು 'ಸೋಮ' ಎಂದಿರುವಲ್ಲಿ ಸೋಮ=ಮದ್ಯ 'ತತ್ : ಏಕಂ' ಒಂದೇ ಆಗಿರಬೇಕು. ಯಾಜಕರನ್ನು

ಕೆಳಮಟ್ಟದವರನ್ನಾಗಿ ಸೂಚಿಸುವ ಸಂದರ್ಭದಲ್ಲಿ ಗೀತೆಯ ಭಗವಂತನು, ಅವರನ್ನು 'ಸೋಮಪಾಃ' ಎಂದಿದ್ದಾನೆ. ಸೋಮ : ಯಜ್ಞದ ಸಂದರ್ಭದ ಪೇಯ. ಆದರೆ, ಅಕ್ಷ-ದ್ಯೂತವೂ ಯಜ್ಞವೊ? ಇದು ರಾತ್ರೀ ಆಟ! ಒಟ್ಟಿನಲ್ಲಿ ಸವಿತೃ=ಸೋಮ ಈ ಸೌರಪಂಥೀಯ ಸಂಕೇತಗಳನ್ನು ಅರ್ಥಹೀನಗೊಳಿಸುವ ಈ ತಂತ್ರದ ನೆರವಿನಿಂದಲೇ ಋಗ್ವೇದದಲ್ಲಿ ಇಂದ್ರನು 'ಸೋಮ'ಪಾನದಿಂದ ಬುದ್ಧಿಗೇಡಿಯಾಗಿ ಬಾಯಿಗೆ ಬಂದಂತೆ ಗಳಹುವ ಒಬ್ಬ ಮದ್ಯಪಾಯಿಯಂತೆ ವರ್ತಿಸುತ್ತಿರುವುದನ್ನು ಚಿತ್ರಿಸುವ ಸೂಕ್ತವೂ ಒಂದುಂಟು![೭]

'ಸೋಮ'-ಪಾನಮತ್ತ ಇಂದ್ರನು ಬಡಬಡಿಸುತ್ತಾನೆ : 'ಅಹಂ ಅಸ್ಮಿಮಹಾಮಹಃ' (ಮಹತಾಂ ಅಪಿ ಮಹಾನ್ ಅಸ್ಮಿ) 'ನಾನು ಶ್ರೇಷ್ಠರಲ್ಲಿ ಶ್ರೇಷ್ಠನು' ಎಂದರೆ 'ನನ್ನಿಂದ ಮಿಗಿಲಾದವರು ಯಾರಿಲ್ಲ.'ಋ:೧.ಬ. ಇಂದ್ರನ ಮಾತು ವಿವೇಕ ರಹಿತವಾಗಿದೆ.[೮] ಋತ: ಸತ್ಯದ ಭೂಮಿಕೆಯನ್ನೇ ಬುಡಮೇಲು ಮಾಡುವಂತಹುದಾಗಿದೆ. ಋಗ್ವೇದದ ಮೂಲಭೂಮಿಕೆ. ಋತ ಸತ್ಯಾಧಿಷ್ಠಿತ ದೈವತಗಳ ಆರಾಧನೆಯದು. 'ಋತಸ್ಯ ಗೋಪಾಃ' ಎಂಬ ದೇವರುಗಳು ಋತಕ್ಕೆ : ವಿಶ್ವನಿಯಮ : ನೀತಿ : ಅರ್ಥಕ್ಕೆ ಈ ಇಂದ್ರವತರುಣಾದಿಗಳು ಅಧೀನರು. ಋತ-ಸಂರಕ್ಷಕರು ಇವರು. ಋತವು (=ವಿಶ್ವನಿಯಮ: ಜೀವನದ ಅರ್ಥ : ಮೂಲ): ಯಾವುದೇ ದೇವದೇವನಿಗಿಂತಲೂ ಮಿಗಿಲಾದುದು, ಎಂಬುದು ಮೂಲ ಋಗ್ವೇದದ ಭೂಮಿಕೆ. ವಿಶ್ವದ ಸಮ್ರಾಟನೆನಿಸಿದ ವರುಣನನ್ನು ಋತದ ಸಂರಕ್ಷಕ ಶಕ್ತಿ ಎಂದು ವರ್ಣಿಸಿದ್ದಾಗಿದೆ. ಅಗ್ನಿಯು ಋತ-ಪ್ರಜಾತನು! ದೇವತೆಗಳ ದಿವ್ಯತ್ವಕ್ಕೆ ಆಧಾರ ಋತ. ಹೀಗಿರುವಾಗ, 'ವಿಶ್ವದಲ್ಲಿ ನನ್ನಿಂದ ಯಾರೂ ಮಿಗಿಲಾದವರಿಲ್ಲ' ತತ್ : ಏಕಂ : ಸತ್ ಎಂದರೆ ಆ ವಿಶ್ವಶಕ್ತಿ : ಸತ್ಯ 'ನಾನೇ' ಎಂಬ ದೈವತಗಳು ಅಸು-ರ ಶಕ್ತಿ (Elanvital or Being) ಶಕ್ತಿಯಾಗುತ್ತವೆ. ಸಾಧಕರ ಪ್ರಪಂಚದಲ್ಲಿ ಅಕ್ಷ-ಶಕ್ತಿ (axle) ಸರ್ಪಶಕ್ತಿ ಪ್ರತಿಮಾ ಆಗುವುದು! ಈ 'ಅಕ್ಷ'ವೆ ವಿಶ್ವದ 'ಜ್ಞಾನ' ಮಾಧ್ಯಮವಾಗುತ್ತದೆ. ಜೀವನ-ಮರಣ ಕ್ಷೇತ್ರದ ಆಚೆಯ ದಿಕ್ಕಾಲಾತೀತ ನಿತ್ಯಾನಿರಾವಲಂಬ ತತ್=ಸವಿತುಃ (=ಜ್ಞಾನ ಸೂರ್ಯನ) ಶಕ್ತಿಯು ಈ ಸರ್ಪಶಕ್ತಿಯಿಂದ ಆವರಿಸಲ್ಪಟ್ಟು, ಪ್ರಪಂಚದಲ್ಲಿ ಹಗಲು-ಇರುಳಿನ ನಡುವಣ ಅಂತರವೆ ನಷ್ಟವಾಗುವುದು. ಜೀವನ ರಂಗದೊಳಗಣ 'ಪ್ರಳಯ' ಎಂದರೇ ಇದೇ.

ತತ್ : ಏಕಂ ಸತ್ ಎಂಬ ಭೂಮಿಕೆಯ ಪ್ರೇರಣೆಯು ಎರಡು ಬಗೆಯ ಜೀವನದ ಆಕೃತಿಗಳನ್ನು ರೂಪಿಸುತ್ತದೆ. ಏಕಂ : ಸತ್ ಎಂಬ ಪ್ರತಿಮಾ ಉಪಾಸನೆಯು

೧. ಆ ವ್ಯಕ್ತಿ ಅಥವಾ ಪಂಗಡವನ್ನು ಇಡಿಯದರಿಂದ (:ಭೂಃ-ಭುವಃ-ಸ್ವಃ ಈ ಅಂಗತ್ರಯದಿಂದ) ಬೇರ್ಪಡಿಸುತ್ತದೆ. ಭಾರತದಲ್ಲಿ ಜಾತೀಯ ಪಂಗಡ, ಭಾಷಿಕ ಪಂಗಡಗಳೆಲ್ಲ, ಪ್ರತಿಯೊಂದೂ ತನ್ನ ಪಾಡಿಗೆ ತಾನು 'ಸ್ವಯಂಪೂರ್ಣ'ವೆಂಬ ದಾರಿಯಲ್ಲಿ ಹೊರಟಿರುವದರ ಹಿಂದಿನ ಪ್ರೇರಣೆ, ಪುರಾತನವಿದೆ!

೨. ಮಹಾನ್ ಸಾಂಘಿಕ ಸಮಾಜವು, ಏಕಂ : ಸತ್ ಪ್ರತಿಮಾ ಉಪಾಸನೆಯಲ್ಲಿ ಜಾತಿ, ಮತ, ಪಂಥ ಮೊದಲಾದ ವಿಭಾಗಗಳಲ್ಲಿ ಒಡೆದುಹೋಗುತ್ತದೆ. ಇದರಲ್ಲಿ ಜೀವನ-ಮರಣದ ನಡುವಣ ಅಸ್ತಿತ್ವದ ಕ್ಷೇತ್ರವು ಮಾತ್ರ ಒಳಗೊಳ್ಳುವು ದರಿಂದ ಅದು ನಿಸರ್ಗಶಕ್ತಿ (Elanvital) ಮಾತ್ರ ಆಯಿತು. ಮನು-ಜ: ಮಾನವ ಜೀವನ ಪಾತಳಿಯಲ್ಲಿ ಸಾಂಸ್ಕೃತಿಕ ಮೂಲ್ಯಗಳು ಬರಿ ಜೀವನ ಮರಣದ ಘಟನೆಗಿಂತ ಮಿಗಿಲಾದ ಗಮ್ಯಸ್ಥಾನ : ಆದರ್ಶವಾಗಿರುವ ಆವಶ್ಯಕತೆಯಿರುತ್ತದೆ. ಐತಿಹಾಸಿಕ ಕಾರಣಗಳಿಂದಾಗಿ ವಿಭಾಗಗಳು ಇರತಕ್ಕುವೇ; ಆದರೆ, ಜೀವನವು ಒಟ್ಟಿನಲ್ಲಿ ಸುಸಂಗತ, ಸುಸಂಬದ್ಧ ಅರ್ಥದ ಒಂದು ಮಹಾವಸ್ತುವಾಗಿದೆ. ಈ ಆಂತರಿಕ ಶ್ರದ್ಧೆಯಿಲ್ಲದೆ, ಈ ಪ್ರಪಂಚವು ಮಾನವ ಸಂಸ್ಕೃತಿಯ ವಸನ್-ವಾಸಸ್ ಆಗುವ ಶಕ್ಯತೆಯಿಲ್ಲ. 'ಜೀವನದ ಅರ್ಥ' ಎಂದರೆ ಮಾನವೀಯ ಜೀವನದ

> ಅನ್ವಯಾರ್ಥ. ಆ ಅರ್ಥವು, ಶಕ್ಯವಿರುವಷ್ಟೂ ಹೆಚ್ಚಿನದರಲ್ಲಿ ಹೆಚ್ಚು ಮಾನವ ಜೀವನಕ್ಷೇತ್ರವನ್ನು ಒಳಗೊಳ್ಳುತ್ತಿರಬೇಕು. ಈ ಬಗೆಯ ವಿಶಾಲ ಜೀವನದ ಅರ್ಥಾಧಿಷ್ಠಿತ ಸತ್ಯವೆ ಋತಸ್ವರೂಪೀ ಸತ್ಯ. ಆದರೆ, 'ಏಕೋ ದೇವಃ' ಅಥವಾ ತತ್ : ಏಕಂ : ಸತ್ ಎಂದರೆ 'ಏಕಂ ಸಂತಂ ಬಹುಧಾ ಕಲ್ಪಯಂತಿ' ಎಂಬ ಹಾಗಿನ ನಿಲುಮೆಯ ದೇವತೆಗಳಿರುವಲ್ಲಿ ಸಾಮಾಜಿಕ ಕೋಲಾಹಲಗಳಿಗೆ ಕೊರತೆಯಿಲ್ಲ,-ಇರಲಾರದು.

ಋತ-ಸತ್ಯದ ಭೂಮಿಕೆಯ ಜೀವನ ರೀತಿಯನ್ನು ಉಪಹಾಸ್ಯಾಸ್ಪದವಾಗಿಸಿ ಅದನ್ನು ನಷ್ಟಗೊಳಿಸುವ ಮೂಲಕ ಭಾರತೀಯ ನಾಗಾರಾಧಕ ವಿರಕ್ತ ಪಂಥಗಳಿಂದ ಭಾರತಕ್ಕೆ ಮಾತ್ರವಲ್ಲ; ಮಾನವ ಸಮಾಜಕ್ಕೇ ಆಗಿರುವ ಹಾನಿ ಅಷ್ಟಿಷ್ಟಲ್ಲ. 'ಋತ (: ಸತ್ಯ)' ಎಂಬ ವಿಚಾರಧಾರಣೆಯ (concept) ಹಿರಿಮೆಯನ್ನು ಯುರೋಪು-ಅಮೇರಿಕೆಯ ಮಹಾನ್ ಸಂಶೋಧಕರೆ ಸ್ಪಷ್ಟಪಡಿಸಿದ್ದಾರೆ; ಎಗ್ಲಿಂಗ್ ಮಹಾಶಯರು ಹೇಳುವುದೇನೆಂದರೆ,

> 'Standing as it does inter-alia, for impersonal order or law, pervading the physical and moral world and sustaining alike the worlds of the gods and nature the concept of the ಋತ, may be said to have created a land-mrk in the history of Vedic thought and culture".[೯]

ಋತಸ್ವರೂಪೀ 'ಸತ್ಯ', ಎಂದರೆ ವಿಶ್ವಸ್ಥ ವಾಸ್ತವ ನಿಯಮಗಳ ಆಧಾರದ ಮೇಲೆ ನಿಂತಿರುವ ದಿಕ್ಕಾಲಬದ್ಧ ಘಟನೆ. ಒಂದೇ ಘಟನೆ 'ನಿಜ' (true) ಎನಿಸಬಹುದು. ಆದರೆ ಅದು 'ಸತ್ಯ' ಎಂಬ ಪಾತಳಿಯ ಅರ್ಥಪಡೆಯ ಬೇಕಾದರೆ ಅದಕ್ಕೆ ಆಧಾರಭೂತವಾದ ಅಥವಾ, ಅದರಲ್ಲಿ ಅಡಗಿರುವ ಸಾಮಾನ್ಯ ನಿಯಮ-ಸೂತ್ರವೊಂದು ಪ್ರತೀತಿಗೆ ಬರುತ್ತಿರಬೇಕು. ಆಗಲೆ, ಅದು 'ಸತ್ಯ'; ಎಂದರೆ 'ಸತ್ಯ' ಎಂಬುದು, ಋತ (: ನಿಯಮ)ದ ಒಂದು ಮೂರ್ತ ಆಕೃತಿ: ಘಟನೆ, ವಸ್ತು ಅಥವಾ ವಿಷಯ ಋತವು ಅ-ಮೂರ್ತ. ದಿಕ್ಕಾಲದ ಸಂದರ್ಭದ ಮೂರ್ತರೂಪದ ಋತವೇ 'ಸತ್ಯ'. ಈ ಕಾರಣದಿಂದ 'ಸತ್ಯ' ಎಂಬ ಸಂಕೇತವನ್ನು ಋತ : ಸತ್ಯ ಎಂಬೀ ಬಗೆಯಲ್ಲಿ ಹೇಳುವ ವಾಡಿಕೆ ಋಗ್ವೇದದಲ್ಲಿ ಹಲವೆಡೆಗೆ ಕಾಣುತ್ತದೆ. ಋತಾಧಿಷ್ಠಿತ ಈ 'ಸತ್ಯ'. ಚಿಂತಶೀಲ ಮನನ ಸ್ವಭಾವದ ಮನು-ಜರ ಪಾತಳಿಯ ಸಂಸ್ಕೃತಿಯಲ್ಲಿಯೆ ಆಕಾರ ಪಡೆಯಲು ಶಕ್ಯ. ಆದರೆ, ವೈಯಕ್ತಿಕ ಅನಾಥತೆಯ ನೋವಿನ ಅನುಭವವೇ 'ಸತ್ಯ' ಎಂಬ ಪುರೂರವ ಮಾದರಿಯ ನರರ ಪಾತಳಿಯಲ್ಲಿ ನಾಗರಾಧನೆಗೆ ಪ್ರಾಶಸ್ತ್ಯ ದೊರೆಯುವುದು ಅನಿವಾರ್ಯ.

ಬಾಳಿನಲ್ಲಿ ವ್ಯವಸ್ಥೆ : ನಿಯಮ ಎಂದರೆ ಕಾರ್ಯಕಾರಣ ಸಂಬಂಧಯುಕ್ತ ಅರ್ಥ ಉಂಟು. ಎಂದರೆ ಋತವು ಉಂಟು. ಭೌತಸೃಷ್ಟಿಯು ಒಂದು ಬಗೆಯ ನಿಯಮ-ವ್ಯವಸ್ಥೆಗೆ ಒಳಗಾಗಿರುವಂತೆ, ಮಾನವ ಸಾಂಸ್ಕೃತಿಕ ವಿಶ್ವವೂ ಆಯಾಭಾಷಿಕ ಪಂಗಡಗಳ ಪರಿಮಿತಿಯಲ್ಲಿ ತನ್ನದೇ ಆದ ಅರ್ಥ : ನಿಯಮ : ವ್ಯವಸ್ಥೆಯನ್ನು ಪಡೆದಿರುವುದನ್ನು ಖಾತ್ರೀ ಮಾಡಿಕೊಳ್ಳಬಹುದಾಗಿದೆ. ಏಕೆಂದರೆ, ಅಭಿವ್ಯಕ್ತಿಯ ಮಾಧ್ಯಮವಾದ ಪ್ರತಿಮಾ : ಸಂಕೇತಗಳು ಸುಸಂಗತ ಕಾರ್ಯಕಾರಣ ಸಂಬಂಧ ಸೂಚಕ ಅರ್ಥಯುಕ್ತ ಆಕೃತಿರೂಪವುಳ್ಳವು ಆಗದೆ ಇರುವ ಬಡವಡಿಕೆ, ಬರಿಯ ಬಡಬಡಿಕೆ, ಎನಿಸೀತೆ ಹೊರತು 'ಭಾಷೆ' ಎಂಬ ಹೆಸರಿನ ಅರ್ಹತೆ ಪಡೆಯಲಾರದು. ಮಾತುಗಳು, ಪ್ರತಿಮಾ : ಸಂಕೇತಗಳ ಪಾತಳಿಯ ಜೀವನ ವ್ಯವಹಾರಗಳ ಸೂಚಕವಾಗಿರದಿದ್ದರೆ ಮಾನವರು ಇಂದಿಗೂ ಚತುಷ್ಪಾದ ಶ್ವಪದಗಳ ಸಹಚರರಾಗಿರಬೇಕಾಗಿ ಅವರ ವನವಾಸವು ತಪ್ಪುತ್ತಿರಲಿಲ್ಲ.

ಋತದ ಈ ವಿಚಾರವು (concept) ಸ್ಥೂಲದಿಂದ ಸೂಕ್ಷ್ಮಮಟ್ಟದ ಉದಾತ್ತ ಅರ್ಥದವರೆಗೆ ವಿಕಾಸಗೊಂಡ ಕ್ರಮವನ್ನು ಮ್ಯಾಕ್ಸ್‌ಮುಲ್ಲರ್ ಸಮೀಕ್ಷಿಸಿ ಹೇಳಿದ್ದಾರೆ :

> In the physical world there are rules and regular order : ಋತ which is clearly an inheritence from physical; it is an easy step to the conception of ಋತ..........in the moral world...the term cosmic order ಋತ and its opposite ಅನೃತ express also moral order as in the dialogne of ಯಮ. and ಯಮ ಋತ forbids and doubtless also commends positive actions. n°yâ is more than truth : ಸತ್ಯ, Law is denoted by ಧರ್ಮ which denotes that which supports that which is supproted; it applies like ಋತ to all aspets of the world, to the sequence of events in Nature, to the Sacrifice to man's life"[೧೦]

ಆಶ್ಚರ್ಯದ ಮಾತು ಎಂದರೆ ಋತ (: ಸತ್ಯ)ದ ವಿಚಾರವು ಋಗ್ವೇದ ಕಾಲದಲ್ಲಿ ಪ್ರಚಲಿತವಿತ್ತು, ಎಂಬುದನ್ನು ಒಪ್ಪಲಾಗಿದೆ. ಸೂಕ್ಷ್ಮವಾದ ಶ್ರೇಷ್ಠವಾದ ಈ ತಾತ್ವಿಕ ಭೂಮಿಕೆ ವಿಚಾರವನ್ನು ಗ್ರಹಿಸಿಕೊಂಡು ಅದನ್ನು ಪ್ರತಿನಿಧಿಸುವ ಸಾಂಕೇತಿಕ ಪ್ರತಿಮೆಯಾಗಿ 'ಋತ' ಶಬ್ದವನ್ನು ನಿರ್ಮಿಸಿದ ಆ ಶಿಲ್ಪಿಯ ಪ್ರತಿಭೆಯು ಮಾನವೇತಿಹಾಸದಲ್ಲೆ ಲೋಕೋತ್ತರವಾದುದು ಎಂಬೀ ಹೊಗಳಿಕೆ ಕೇಳಬರುತ್ತದೆ. ಆದರೆ, ಋಗ್ವೇದ ಕಾಲದಲ್ಲಿಯೆ ಋತ (: ಸತ್ಯ) ಈ ಗರ್ಭಿತಾರ್ಥವನ್ನುಳ್ಳ 'ಶಬ್ದ' ಸಂಕೇತಕ್ಕೆ 'ಉದಕ' : ರೇತ : ಆರ್ತವ (ಋತದರ್ಶನ) ಎಂಬ ಅರ್ಥವೂ ಪ್ರಚಲಿತವಾದ ಈ ಚಮತ್ಕಾರ (: ಜಾದೂ) ಹೇಗೆ ಸಂಭವಿಸಿತು? ಇದನ್ನು ನಿರ್ಧರಿಸಿಕೊಳ್ಳುವ ಆವಶ್ಯಕತೆ ಈವರೆಗೆ ಯಾರಿಗೂ ತೋರದಿರುವಂತೆ ಮಾಡಲಾಗಿರುವ ಈ ಮಾಂತ್ರಿಕ ಶಕ್ತಿಯನ್ನು ಎಷ್ಟೆಂದು ಹೇಳಬೇಕು? ಸೂರ್ಯನನ್ನು, ಅಗ್ನಿಯನ್ನು 'ನಾರಣ'=ನೀರು : ಹಾವು ಎನ್ನುವಲ್ಲಿ ಇಂದಿಗೂ ವಿಸಂಗತಿ ಎನಿಸದಿರುವ ಈ ಚಮತ್ಕಾರವು ಇಪ್ಪತ್ತನೆಯ ಶತಕದಲ್ಲೆ ಸಂಭವಿಸುತ್ತಿಲ್ಲವೆ? ಇದರ ಹೆಸರು 'ಬ್ರೇನ್ ವಾಶಿಂಗ್' ಗಂಜೀ ಆದ ಬುದ್ಧಿ. ಋತಸಂಕೇತವು ಉಪನಿಷತ್ಕಾಲದಲ್ಲಂತೂ ಅದೃಶ್ಯ-ಅರ್ಥವಿಹೀನ-ಆಗುತ್ತದೆ! ಎಂದೊ ಒಂದು ಕಾಲದಲ್ಲಿ ಮಹೋನ್ನತರೆನಿಸಿ ಲೋಕದಲ್ಲೆಲ್ಲ ಕೀರ್ತಿವಂತರಾಗಿದ್ದ-ಸಿರಿವಂತರಾಗಿದ್ದ ಆ ಕನಸನ್ನೇ ನೆನೆವ ಅದಕ್ಕಾಗಿ ನವೆವ ವಿಚಾರವಂತರಿದ್ದಾರೆ. ಆದರೆ, ಹಿಂದೊಮ್ಮೆ ಇದ್ದಿತೆಂಬ ಋತ : ಸತ್ಯದ ಸ್ವರೂಪವೇನು? ಅದು ಕಾಣದಾಗಿರುವ ಕಾರಣವೇನು? ಆ ಋತ : ಸತ್ಯದ ಭೂಮಿಕೆಯ ವಿಚಾರಪದ್ಧತಿಯನ್ನೆ ಇಂದು ಮರಳಿ ಸ್ವೀಕರಿಸಿ ಅವನತಿಗೆ ಹೊರಟಿರುವ ನಮ್ಮ ದೇಶದ ಸಾಮಾಜಿಕ ರೋಗ ಪರಿಹಾರವಾಗಬಹುದೆ? ಎಂಬ ದಿಕ್ಕಿನಲ್ಲಿ ಪ್ರಾಜ್ಞರು ವಿಚಾರ ವಿಮರ್ಶೆ ಮುಂದುವರಿಸುವುದು ಕರ್ತವ್ಯವಾಗಿಲ್ಲವೆ? ಇದು ಒಂದು ಭಾಗ.

ಆದಿಯುಗ : ಕಣೆಯ ಯುಗ; ಇದು ವಿವಿಧ ರೀತಿಯಲ್ಲಿ ದೃಢಪಟ್ಟುದುಂಟು. ಮಾನವ ಸಂಸ್ಕೃತಿಯನ್ನು ಅರ್ಥಯಿಸಿಕೊಳ್ಳಲು, ಮನೋವಿಶ್ಲೇಷಣ ಶಾಸ್ತ್ರಜ್ಞರಿಂದ ಆಗಿರುವ ಪ್ರಯತ್ನಗಳು ಮೌಲಿಕವಾಗಿವೆ. ಈ ಕ್ಷೇತ್ರದೊಳಗಿನ ರತ್ನತ್ರಯರು ತಮ್ಮ ಸತ್ಯಾನ್ವೇಷಣೆಯ ಮೂಲಕ ಕೃತಾರ್ಥರಾಗಿದ್ದಾರೆ : ಅಮರರಾಗಿದ್ದಾರೆ. ಫ್ರೈಡ್, ಎಡ್ಲರ್ ಮತ್ತು ಯೂಂಗ್ ಈ ಮೂವರೂ ಯುಗಪುರುಷರೆ. ಫ್ರೈಡ್ ಆದಿಗುರು: ಈತನ ದರ್ಶನವು ಸುಳ್ಳಲ್ಲ. ಆದರು ಅದನ್ನು ನಿವೇದಿಸುವ ರೀತಿಯು ಸಮಾಜವಿಘಾತಕ ಪ್ರೇರಣೆಗಳನ್ನು ಪೋಷಿಸುತ್ತಿರುವುದಾಗಿ ಎಲ್ಲೆಲ್ಲೂ ಲೋಕಾನುಭವವುಂಟು. ಆದಿಯುಗ ಕಣೆ>ಗಣೆಯ ಯುಗ : ಏಕಾಕ್ಷ-ಅಜ- ಏಕಪಾದ : ಅಹಿರ್ಬುಧ್ನ್ಯದೈವತಯುಗ : ಎಂಬ ವಾಸ್ತವ ಸತ್ಯದ ಅಮೋಘ ದಾರ್ಶನಿಕನು ಫ್ರೈಡ್‌ದೊರೆ ಋಗ್ವೇದದಲ್ಲಿ ನಾನಾ ವೇಷಗಳಲ್ಲಿ ಅಡಗಿರುವ, ವಿವಿಧ ಶಬ್ದ ಪ್ರತಿಮೆಗಳು, ಬಾಹ್ಯ ಆಕೃತಿಯಿಂದ ಮೋಸಕ್ಕೆ ಕಾರಣವಾಗುತ್ತಿರುವ

ಸರ್ಪಗಳ ಪ್ರಕಾರಗಳು ಫ್ರೈಡ್ ಸಿದ್ಧಾಂತದ ಸತ್ಯತೆಗೆ ಸಾಕ್ಷಿಯಾಗಿವೆ. 'ಅಪಾಂ-ನಪ್ಪ'ದೇವನ ನಾಭಿಯಿಂದ ಇವೆಲ್ಲವೂ ಹೊರಟುದು ಕಾಣುತ್ತದೆ. ವೇದಕಾಲದ ತರುವಾಯ 'ಸರಸಿ-ಜ' ಅಪಾಂ-ನಪ್ಪ ಎಂದೇ ಅರ್ಥ! ಸರಸಿ-ಜ ಎಂಬುದಕ್ಕೆ 'ಕಮಲ' ಎಂಬ ಅರ್ಥವು ಬಂದುದರಿಂದ 'ಪುರುಷ' ಸೂಚಕ ಅರ್ಥವು ಕಾಣದಾಗುತ್ತದೆ. ಅದಕ್ಕಾಗಿ 'ಸರಸಿಜ + ಅಕ್ಷ' ಎಂಬ 'ಪೂರ್ಣ ಬ್ರಹ್ಮ' : 'ವಾಗಾರ್ಥಾವಿವ ಸಂಪೃಕ್ತೌ' ಪರಮಾತ್ಮಶಕ್ತಿಯ ದರ್ಶನ ಮಾಡಿಸುವ ನಾಮಸಂಕೇತ ಮೈದಾಳಿದ್ದುಂಟು.

ಫ್ರೈಡ್‌ದೊರೆಯ ಆಶಯದ ಸಾರವು ಸರಿಯಿದ್ದರೂ ಅದರ ಅಭಿವ್ಯಕ್ತಿಯ ರೀತಿಯ ಒಪ್ಪಿಗೆಯಾಗದ್ದಕ್ಕೇ ಎಡ್ಲರ್ ಮತ್ತು ಯೂಂಗ್ ಈ ಸಂಗಡಿಗರು ಗುರುವಿನಿಂದ ದೂರ ಸರಿದರು. ಆದರೆ, ಇವರ ಅಭಿವ್ಯಕ್ತಿಯ ತಳಪಾಯದಲ್ಲಿಯೂ ಸುಮಾರಾಗಿ ತತ್ : ಏಕಂ ಎಂಬ ಆಕೃತಿಯೇ ಇರುವುದು ವಿಷಾದದ ಸಂಗತಿ. ಪುರೀಶಯನು: ಈ ಅ-ವಿಗಲಿತ, ಏಕಾತ್ಮಕ ಸ್ಥಿತಿಯನ್ನು ಮಾನವ ಜೀವನದ ಅಥವಾ ನಂದಲೋಕದ ಆದರ್ಶವಾಗಿ ಕಲ್ಪಿಸಿದಲ್ಲಿ 'ಸಮಾಜ' ಎಂಬ ವಿಚಾರಧಾರಣೆ (concept) ಅರ್ಥವಿಹೀನವಾಗುತ್ತದೆ. ಏಕೆಂದರೆ, ಈ 'ಆನಂದ' ಸಿದ್ಧಿಗೆ ಈ 'ಯೋಗ'ಕ್ಕೆ ಏಕಾಂತ ಬೇಕು. ಹಗಲು-ಇರುಳು ಈ ಕಾಲವಿಭಾಗ ನಷ್ಟವಾಗಬೇಕು! ಇದು 'ಆತ್ಮಾರ್ಥೇ ಪೃಥಿವೀಂ ತ್ಯಜೇತ್' ಎಂಬವರ ದಾರಿ. ಇಲ್ಲಿ ಶಿಷ್ಟಾಚಾರ, ಜೀವನದ ನಿಯಮ : ಅರ್ಥ : ಮೂಲ್ಯ ಇವೆಲ್ಲವೂ ವ್ಯಕ್ತಿಯ (ಲೈಂಗಿಕ) ಸ್ವಾತಂತ್ರ್ಯಕ್ಕೆ ಅಡ್ಡಬರುವ ವಿರೋಧೀ ಶಕ್ತಿಗಳು ಎಂಬ ಗ್ರಹಿಕೆಯಾಗುವುದು ಅನಿವಾರ್ಯವೇ ಇದೆ. ವ್ಯಕ್ತಿ ಮತ್ತು ಸಮಾಜ ಇವೆರಡನ್ನೂ ವೈಯಕ್ತಿಕ ವಿಕಾಸದ ಪಂಥಿಗಳು ಒಂದಕ್ಕೊಂದು ಹಾವು-ಮುಂಗಲಿ, ಎಣ್ಣೆ-ಸೀಗೆ ಎಂಬಂತೆ ಗ್ರಹಿಸಿರುವಲ್ಲಿ ಬಾಳುವೆಯ ತಳಹದಿಯನ್ನೆ ಅಗೆದಂತಾಗಿದೆ. ಇದಿರಲಿ, ಋಗ್ವೇದ ಸೂಕ್ತಗಳ ಚಿತ್ರಣದಲ್ಲಿ ಫ್ರೈಡ್ ಮಹಾಶಯನ ಸಿದ್ಧಾಂತವನ್ನು ದೃಢಪಡಿಸುವ ಶುದ್ಧ ನಾಗಭೂಮಿಕೆಯ ಪ್ರತಿಮಾ ಸಂಕೇತಗಳೇ ಪ್ರಾಧಾನ್ಯದಿಂದ ಉಂಟು. ಇದು ಪೂರ್ಣ ನಿಜ. 'ಇಂದ್ರ'ನು ಇಂದ್ರಿಯ-ಪುರುಷ=ಪುರುಷೇಂದ್ರಿಯ ನಾಗುವನು. ಅಲ್ಲದೆ, ಸವಿತೃ, ಅಗ್ನಿ, ಉಷೆ (ಪ್ರಾತಃಕಾಲ) ಇವು ಸಹ ಲಿಂಗ, ಯೋನಿ ಸಂಕೇತಗಳಾಗುವವು! ಇದು ವೇದಯುಗ! ಫ್ರೈಡ್‌ದರ್ಶನದ ವಾಸ್ತವತೆಯನ್ನು ನಿದರ್ಶನಕ್ಕೆ ತರುತ್ತಿರುವ ಯುಗ. 'ಅದಿತಿಯಿಂದ ದಕ್ಷನಾದ;' 'ದಕ್ಷನಿಂದ ಅದಿತಿಯಾದಳು!' ಕಪರ್ದಿ ದಕ್ಷ-ಅದಿತಿಯುಗ!

ಇನ್ನು ಎರಡನೆಯದು : ಅಹಮಹಮಿಕೆಯ ಯುಗ : ಎಡ್ಲರನ, ದರ್ಶನದ ವಾಸ್ತವತೆಯನ್ನು ಪ್ರಸ್ಥಾಪಿಸುವ ಜೀವನ ಚಿತ್ರಗಳನ್ನು ಮಹಾಭಾರತ ಕಾವ್ಯವು ಪೂರಯಿಸುತ್ತದೆ: 'Superiority-inferiority complexes' ಗಳ ಯುಗ. ಇದು 'ಅಕ್ಷ' ದ್ಯೂತದ ಯುಗ. ಮಹಾಭಾರತದ ಏನೆಲ್ಲ ಪ್ರಮುಖ ಘಟನೆಗಳ 'ನಾಭಿ' ಎಂದರೆ ಇದು. ಕಣಿಯ : ದಿವ್ಯಾಕ್ಷದ ಯುಗವೇ; ತತ್ : ಏಕಂ ಸತ್! 'ನಾನು ವಾಸುದೇವ;' 'ನಾನೇ ವಾಸುದೇವ' ಎಂಬ ಈರ್ಷ್ಯೆಯು ಇದ್ದುದನ್ನು ಮಹಾಭಾರತ ಕಾಲದ ಸಾಮಾಜಿಕ ಜೀವನದ ಸಂಶೋಧಕರೇ ವಿವರಿಸಿ ಹೇಳಿದ್ದಾರೆ.[೧೧]

'ವಾಸುದೇವ' (:ಜಗದ್ಗುರು) ಪಟ್ಟದ ಬಗೆಗೆ ಧಾರ್ಮಿಕ ಸ್ಪರ್ಧೆಯಿರುವ ಸಮಾಜದಲ್ಲಿ, ಕರ್ಣಪಾರ್ಥರಂತಹ ವೀರರೊಳಗೂ ಅಹಮಹಮಿಕೆ ಇರುವುದು ಸ್ವಾಭಾವಿಕವೇ. ಮೂರನೆಯ ಯುಗ : ಗತಯುಗದ ಕನವರಿಕೆ (Recial subconcious Archetypes). ವಾಲ್ಮೀಕಿಯ ರಾಮ ಅಯನ: ಇದರಲ್ಲೂ ಸ್ಪಷ್ಟಾಸ್ಪಷ್ಟ ರೀತಿಯಲ್ಲಿ ವಿಶ್ವಸ್ಥ ಏಕಮೇವಾದ್ವಿತೀಯ ನಾಗ-ಶಕ್ತಿಗೆ ಶರಣು ಹೋಗಿ ತನ್ನ ಬಾಳನ್ನು ಸಾರ್ಥಗೊಳಿಸುವ ಉಪದೇಶ-ಆದೇಶವೇ ಪ್ರಧಾನವಾಗಿದೆ. ಇದು ಪುರೂ-ರವರ ಯುಗವೇ. ವೈಯಕ್ತಿಕ ದುಃಖ, ಸಂಕಟಗಳ ಎದುರು ಸಾಮಾಜಿಕ ಮೂಲ್ಯ : ಋತಸತ್ಯ ಮರೆತುಹೋದ ಯುಗ. ಮಹಾಭಾರತಕಾರನು ಕಾರ್ಯಕಾರಣಗಳ ಸಂದರ್ಭದಲ್ಲಿ ಶಕ್ಯವಿದ್ದಷ್ಟು ಕಥೆ ಹೆಣೆದಿದ್ದಾನೆ. ಸರಸಿಜಾಕ್ಷನ ಮಹಿಮೆಗಾಗಿ ಆಗಾಗ ಆಕಸ್ಮಿಕ ಪವಾಡ ಸಂಭವಿಸಿವೆ. ಆದರೆ, ರಾಮನ ಅಯನದಲ್ಲಿ ಏನೆಲ್ಲವೂ ಆಕಸ್ಮಿಕ : Chance 'ಧೂಮಕೇತು ಉದ್ಭವಿಸುವುದು'. ಇದರ ಮೇಲೆಯೇ ಇಡೀ ಕಥೆ ನಿಂತಿದೆ! ಅಪಾಂನಪ್ತ್ರುಯುಗಲ : ಮಿಥ್ಯನ ಪಕ್ಷಿಯು ಬೇಡನ ಬಾಣಕ್ಕೆ ಬಲಿಯಾಗುವುದರಿಂದ ಕಥಾಪ್ರಾರಂಭ!

ರಜಕನ ಮಾತಿನ ಬಾಣದಿಂದ ರಾಮ-ಸೀತಾವಿಯೋಗ! ಕೇವಲ 'ಕಾಂಟಿಜೆನ್ಸಿ' ಮೇಲೆ ನಿಂತ 'ನವ್ಯ' ಮಾದರಿಯ ರಚನೆ ಇದು! ತತ್ : ಏಕಂ : ಸತ್ ಭೂಮಿಕೆಯ ಶ್ರದ್ಧಾಮಯ ಜೀವನ ಆಕೃತಿಯು

೧. ಇಂದ್ರಿಯ ಪೂಜಕ ಆತ್ಮಕ್ರೀಡಾರತ ಸ್ವರೂಪದ್ದಾದೀತು, ವೈಯಕ್ತಿಕ ಪಾತಳಿಯಲ್ಲಿ.
೨. ಸಾಮಾಜಿಕ ಪಾತಳಿಯಲ್ಲಿ ತಮ್ಮ ಪಂಥೀಯ ನೇತಾರನ ನಾಗಶಕ್ತಿಯ ಹೊರಗೆ, ಏನೆಲ್ಲ ಬಾಳು ಅರ್ಥಶೂನ್ಯ; ಹಾಳು, ಎಂಬ ಆಕೃತಿಯದಾಗಬಲ್ಲದು; ಹೊತ್ತು ಬಂದಾಗ ಇನ್ನುಳಿದುವನ್ನು ಆಕ್ರಮಿಸುವ ಹೊಂಚು ಇಲ್ಲಿದೆ.
೩. ರಾಷ್ಟ್ರೀಯ ಪಾತಳಿಯಲ್ಲಿ ಸ್ಟಾಲಿನ್, ಹಿಟ್ಲರ್ ಮುಸಲೋಸಿ ಮಾದರಿ ಸರ್ವಾಧಿಕಾರೀ ವೃತ್ತಿಯದಾಗಬಲ್ಲದು
೪. ಇಂತಹ ವಿಪರೀತ ಸಮಯಗಳಲ್ಲಿ ಎಂತೂ ಬಾಳಲು -'ಎಂದುದನೆ ಎಂದು' ಬಾಳಲು, ಬೇಕಾದ ಸೋಗಿನ ಜೀವಿ ಆಗಲು ಈ ಜೀವನ ರೀತಿ ಒತ್ತಾಯ ಪಡಿಸುವುದು.

ಮಾನವೀಯ ಜೀವನ ಮೂಲ್ಯಗಳಿಗಾಗಿ ಸಾಮಾಜಿಕ ಆದರ್ಶಗಳಿಗಾಗಿ ತಮ್ಮ ಜೀವನವನ್ನು ಮುಡಿಪುವ ಪ್ರೇರಣೆಯ ಕೇಂದ್ರವು, ಋತ: ಸತ್ಯದ ಭೂಮಿಕೆಯಲ್ಲಿಯೇ ಇದ್ದೀತೇ ಹೊರತು, ತತ್ : ಏಕಂ: ಸತ್ ಭೂಮಿಕೆಯಲ್ಲಿ ಅದರ ಆಭಾಸವು ಮಾತ್ರ. ಆಗ-ಈಗ ಕಾಣದೊರೆಯುವುದು. ಮಹಾತ್ಮಾಜೀಯವರಂತಹ ಅದ್ಭುತ ಜೀವ ಮಿಂಚಿ ಮಾಯವಾಗುವುದು ಕೆಲವೊಮ್ಮೆ. ಆದರೆ, ತಳಪಾಯದಲ್ಲಿ ತತ್ : ಏಕಂ: 'ಸತ್ಯ'ದ ಆಕೃತಿಯೇ ಇದ್ದುದರಿಂದ, ಮಹಾತ್ಮಾಜೀ ಪ್ರಣೀತ ಪ್ರೇರಣೆ ಆಕಾಶ-ತತ್ವವಾಗಿಯೆ ಉಳಿಯುವುದು. ಅದರ ನಿಯತಿಯೆ ಆಗಿತ್ತು. 'ಸತ್ಯ'ದ ಪ್ರಯೋಗಗಳಿಂದ ಅದನ್ನು ಅರಿಯಲು ಹೊರಟ ಗಾಂಧೀಜಿ ಮೊತ್ತ ಮೊದಲಲ್ಲಿ 'ಸತ್ಯ'ದ ತಮ್ಮ ವ್ಯಾಖ್ಯೆಯನ್ನು ನಿರ್ಣಯಿಸಿಕೊಂಡೇ ಅದರ ಪ್ರಯೋಗಕ್ಕೆ ಪ್ರಾರಂಭಿಸಿದರು! Hyphothesis ಅಲ್ಲದ್ದು, ಸಿದ್ಧಾಂತವೆ ತಾನೆ? 'ಸಿದ್ಧಾಂತ'ವನ್ನು ಎಕ್ಸ್‌ಪರಿಮೆಂಟ್ ಎಂದೆನ್ನುವಲ್ಲಿ ವಿಸಂಗತಿಯಿಲ್ಲವೆ? ಸತ್ಯವು ವ್ಯಕ್ತಿಯ ಇಚ್ಛೆ ಹಾಗೂ ಅಪೇಕ್ಷೆಗಳನ್ನು ಅವಲಂಬಿಸುವಲ್ಲಿ ಅನಾಹುತಕ್ಕೇ ಆಮಂತ್ರಣ. ಸತ್ಯವು ಋತಾವಲಂಬಿ, ನಿಯಮಾಧಿಷ್ಠಿತವಿರಲಿಕ್ಕೇಬೇಕು.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X. ೩೪-೬
೨. ಅದೇ X. ೧೫೫.೧
೩. ***ಭಗವದ್ಗೀತೆ*** "ಊರ್ಧ್ವ ಮೂಲಮಧಶ್ಶಾಖಮಶ್ವತ್ಥಂ ಪ್ರಾಹುರವ್ಯಯಮ್" ೧೫-೧- ಮೇಲೆ ಬುಡವುಳ್ಳ ಕೆಳಗೆ ಶಾಖೆಗಳುಳ್ಳ ಅಶ್ವತ್ಥ ವೃಕ್ಷವು ಅವ್ಯಯವಾಗಿರುವುದು
೪. ***ಭಗವದ್ಗೀತೆ*** "ಮಾಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್" ೯-೧೧- ಅಧ್ಯಕ್ಷನಾದ ನನ್ನಿಂದ ಪ್ರಕೃತಿಯು ಚರಾಚರಾತ್ಮಕವಾದ ಜಗತ್ತನ್ನು ಉತ್ಪತ್ತಿ ಮಾಡುತ್ತದೆ.
೫. ಋಗ್ವೇದ ಸಂಹಿತೆಯ ಈ ಋಕ್ಕು ಬಹು ಗಮನೀಯ
೬. ***ಋಗ್ವೇದ ಸಂಹಿತೆ*** X. ೧೨೯;
೭. ***ಅದೇ*** X. ೧೧೯
೮. ***ಅದೇ*** X. ೧೧೯-೧೨
೯. ವೆಂಕಟರಾವ್ ಸಂ. ***ಋಗ್ವೇದ ಸಂಹಿತೆ*** ಸಂಪುಟ ೧೩, ಪುಟ ೪೭, ಮೈಸೂರು
೧೦. ಮೇಲಿನದೇ ಸಂಪುಟ ೧೩, ಪುಟ-೭೫, ಮೈಸೂರು
೧೧. Dr. Sudhakar Chattopadhaya, ***The Evolution of Theistic sects in Anccient India, up to Shankar,*** Shantiniketana, 1992, pp. 28-31).

ಕಣೆಯ : ದಿವ್ಯ ಚಕ್ಷುಪಂಥದ ಪ್ರಧಾನ ಲಕ್ಷಣ

ಭಾರತದ ಜನ-ಮನವನ್ನು, ಅದೇಕೆ ಜಗತ್ತನ್ನೇ ವರ್ಚಸ್ವಿಯಾಗಿ ಆಕರ್ಷಿಸಿಕೊಂಡು ಇಂದಿಗೂ ಆಳುತ್ತಿರುವುದು 'ಕಣೆ'ಯ: 'ದಿವ್ಯ' ಚಕ್ಷುಸ್ಸಿನ ಸಾಮರ್ಥ್ಯವೇ ಸರಿ. ಸುಧಾರಿಸಿದವರೆಂಬ ಪಾಶ್ಚಾತ್ಯರ ಧರ್ಮಪಂಥವೂ 'ಕಣೆ'ಯ ಮೂಲ ಪರಂಪರೆಯ ಶಾಖೆಯಾದ ಆದಿಮಾತೆಯ ಮಗುವಿನ-ಕ್ರಿಸ್ತನೆಂಬುವನ ಮತವೇ ಆಗಿದೆ! ಇದುವೇ ಅವರ ಜೀವನದ ಹಿನ್ನೆಲೆಯ ಪ್ರೇರಣೆಯಾಗಿರುವುದನ್ನು ಹಿಂದೆ ಸೂಚಿಸಲಾಗಿದೆ. ಕಣೆಯ : ದಿವ್ಯ ಚಕ್ಷು-ಪಂಥದ ಪ್ರಮುಖ ಲಕ್ಷಣವೆಂದರೆ, ಏಕೈಕ ಅಕ್ಷವೇ ಮಾಧ್ಯಮ ಎಂದರೆ ಪಂಥೀಯ ಗುರು : ದೇವ; ಅಥವಾ ಪಂಥೀಯ ಪವಿತ್ರ ಪೋಥಿ. ಇದುವೆ ಎನೆಲ್ಲ ಜೀವನದ ಅರ್ಥದ ದರ್ಶನ ಮೂಡಿಸುವ ಅಕ್ಷವಾಗಿರುವುದು. ಈ ಏಕಾಕ್ಷ-ವೃತ್ತಿಯ ಮನೋಭಾವವೇ ಮುಸಲ್ಮಾನೀ ಧರ್ಮದ ಅನುಯಾಯಿಗಳನ್ನು ಮಾತ್ರವಲ್ಲ ಸುಮಾರಾಗಿ ಪ್ರಪಂಚವನ್ನೇ ಆಳುತ್ತಿದೆ. ಜಗತ್ತಿನ ಅತ್ಯಾಧುನಿಕ ಶಾಸ್ತ್ರೀಯಮಟ್ಟದಲ್ಲಿ ಇರುವವರು ಎಂಬ ಜ್ಯೂಜನರ ಇಸ್ರಾಯಲಿ ದೇಶವು ಸಹ, ಮರೆತುಹೋದ 'ಹಿಬ್ರೂ'ವನ್ನೆ ತನ್ನ ಜನನದ ಏಕಮೇವ ಭಾಷಾಮಾಧ್ಯಮವಾಗಿಸಿಕೊಳ್ಳುವ ಹಟ ತೊಟ್ಟಿದೆ. ಆದರೆ, ಯಾವ ಒಂದು ಜನಕ್ಕೆ (: ಭಾಷೆಗೆ) ಸತ್ಯದ ಗುತ್ತಿಗೆ ಅಥವಾ ಮೀಸಲು ಇಲ್ಲದ್ದರಿಂದ ಒಂದೊಂದು ಜನವೂ ಪಡೆದಿರುವ ಭಾಷಿಕ ಮಾಧ್ಯಮದಿಂದ ಅರಿಕೆಗೆ ಬರುವ ಋತ : ಸತ್ಯದ ಪ್ರಯೋಜನ ಪಡೆಯುವುದು ಸತ್ಯಾನ್ವೇಷಿಗಳ ಕರ್ತವ್ಯವಾಗತೊಡಗಿದೆ. ಭಾಷಿಕ ವಿಚಾರಧಾರಣೆಯ ತುಲನಾತ್ಮಕ ವ್ಯಾಸಂಗ (Philosophy Language) ಇದು ವಿಶ್ವಾಸಾರ್ಹ ತತ್ತ್ವಜ್ಞಾನವಾಗಬಲ್ಲುದೆಂದು ತಜ್ಞರು ಕಂಡಿದ್ದಾರೆ. ಆದಕಾರಣ ಭಾಷಿಕ ಮಾಧ್ಯಮದ ಏಕಾಂತಿಕ ಪ್ರೇರಣೆಯ ಹಿಂದೆ ತಮ್ಮ 'ಸನಾ'ತನ ಧರ್ಮವೇ ಏಕಮಾತ್ರ ಸತ್ಯ ಎಂಬ ಅವಿಚಲ ನಿಷ್ಠೆಯು ಇರುವುದಾಗಿ ಬೆಳಕಿಗೆ ಬಂದಿದೆ! ಈ 'ಕಣೆ'ಯ ಶ್ರದ್ಧಾವಂತರು ತತ್ : ಏಕಂ ಸತ್ಯ ಎಂಬ ಏಕಾಂತಿಕ ಮನೋಭಾವದವರಾಗುತ್ತಾರೆ. ಸಂಸಾರಿಗಳಿದ್ದರೆ ಪ್ರತ್ಯಕ್ಷ ಅಥವಾ ಪ್ರಚ್ಛನ್ನವಾಗಿ ಇಂದ್ರಿಯಾರಾಧಕರಿರುತ್ತಾರೆ. ಐಹಿಕ ಸಾಮಾಜಿಕ ಮೂಲ್ಯ ಆದರ್ಶಗಳಲ್ಲಿ ಇವರ ಶ್ರದ್ಧೆ 'ನಾಸ್ತಿ'; ಇವರು ವಿರಕ್ತರಾಗಿದ್ದರೆ ಪ್ರಪಂಚವನ್ನು ಸ್ಮಶಾನವಾಗಿ ಭಾವಿಸುವ ಬಂಧನಾತೀತ 'ಮುಕ್ತ' ಸಂಗಿಗಳು ಇರುತ್ತಾರೆ. ವಿಶಿಷ್ಟ ಪಂಥ, ಪ್ರದೇಶದ ಅಭಿಮಾನದ ಏಕಂ : ತತ್ ಮಾರ್ಗವು, ಯಾವುದಾದರೊಂದು 'ಇಝಂ' ಆಕೃತಿಯಾಗಿ, ತನ್ನ ಹೊರಗೆ ಉಳಿದುದೆಲ್ಲ ಅರ್ಥ-ಶೂನ್ಯ ಎಂಬ ಶ್ರದ್ಧೆಗೆ ಪ್ರೇರಿಸುವುದು. ನಾಗ-ಶಕ್ತಿಯ ಆರಾಧಕರು ಮಹಾನ್ 'ಗಂಡ' ರಾಗುವರು; ಅಥವಾ ಊನ 'ಗಂಡ'ರಾಗುವರು. ಬಾಳಿನಲ್ಲಿ ವ್ಯವಸ್ಥೆ ನಿಯಮ ಅರ್ಥ ಎಂಬುದೇ ಇಲ್ಲ, ಎಂಬ ಶ್ರದ್ಧೆಯವರೂ ಇದೇ ವರ್ಗದವರೇ. ಇವರು 'ಚಾನ್ಸ' ಆಪತ್ತುಗಳಲ್ಲಿ ಶ್ರದ್ಧಾವಂತರು.

'ಅಂಧೇನೈವ ನೀಯಮಾನಾಃ ಯಥಾಂಧಾಃ' ! ತಾವು ಕಟ್ಟರ್ 'ಕಾಣಾ': ಏಕಾಕ್ಷ, 'ಸನಾತನಿಗಳು ಆಗಿರುವವರು, ತಮ್ಮ ಮಂಡನಕ್ಕಾಗಿ "ಸುಧಾರಿಸಿದವರೆಂಬ...' ಅವರೂ ಹೀಗೆಯೇ ಉಂಟಲ್ಲ? ಎನ್ನುವುದುಂಟು! ಕುರುಡನು, ಮೆಳ್ಳನನ್ನು ಗುರುಮಾಡಿಕೊಂಡ ಹಾಗೆ, ಈ ಬಾಳದಾರಿ ಸಾಗಿದೆ. ಮಾನವ ಸಂಸ್ಕೃತಿಯು 'ಯತ್ ಪ್ರೈರತ' ಕಣೆಯ 'ದಿವ್ಯ' ಜ್ಞಾನದ ಹಂತದಿಂದ ಹೊರಬಂದು ಋತ: ಸತ್ಯದ ಜೀವನ ರೀತಿಯ ಪಾತಳಿಯನ್ನು ಪ್ರವೇಶಿಸಬೇಕೊ ಬೇಡವೊ ಎಂದು ಇನ್ನೂ ಸಂದೇಹಿಸುತ್ತಲೇ ಇದೆ, ಈ ಲೋಕ! ಆದರೆ, ತತ್ : ಏಕಂ ಎಂಬೀ ಬಗೆಯ ಏಕಾಂತಿಕ ಶ್ರದ್ಧೆಯ ಬಾಳನ್ನು ಹದಗೆಡಿಸದಿರದು; 'Unanalysed life is not worth living' ಎಂದು ಪ್ರಪಂಚಕ್ಕೆ ಸಂದೇಶವನ್ನು ಅರುಹಿದ ಸಾಕ್ರೆಟೀಸನು ಗ್ರೀಕ್‌ದೇಶದಲ್ಲಿ ಅಪರಾಧಿಯಾಗಿ ಎಣಿಸಲ್ಪಟ್ಟನು. ಇದರ ಸಲುವಾಗಿ ಆದ ವಿಷ-ಪ್ರಾಷನದ ಶಿಕ್ಷೆಯನ್ನು ಆ ಮಹಾನುಭಾವನು ಪರಮ ಸಂತೋಷದಿಂದ ಸ್ವೀಕರಿಸಿದನು. ಸಾಕ್ರೆಟಿಸನಿಗೂ ಅನೇಕ ಶತಮಾನ ಮುಂಚೆ, ಇದೇ ಆಶಯವನ್ನೇ ಇದಕ್ಕೂ ವಿಧಾಯಕ ವಾಕ್ಯದಿಂದ ಹೇಳಿರುವ ಒಬ್ಬ ಬೃಹಸ್ಪತಿಯ ಪರಂಪರೆ ಭಾರತದಲ್ಲೂ ತಿರಸ್ಕೃತವಾಗಿದೆ! 'ಏಷಾಂ ವಾಚಿ ಭದ್ರಾ ಲಕ್ಷ್ಮೀ ನಿಹಿತಾ' ಎಂಬ ಆತ್ಮವಿಶ್ವಾಸದಿಂದ ಹೇಳಿದ್ದರೂ, ಈ ಶುಭಂಕರೀ ವಿಮರ್ಶಾ ವಾಕ್ ಬಿಟ್ಟು 'ಕಾಣಾ' ಮಧ್ಯಮಾ; ವಾಕ್ಕಿಗೇ ಶರಣು-ಹೋದುದರಿಂದ, ಮರಳಿ, 'ಕಣೆಯ' ಯುಗವೇ ಪ್ರಬಲವಾಗಿ 'ಆಸೇತು ಹಿಮಾಚಲ', ನಾನಾ 'ಜಗದ್ಗುರು' ಪೀಠಗಳ ಆಡಳಿತವೆ ಬೇರೂರಿತು, ಭದ್ರವಾಗಿ ನಿಂತಿತು! 'ಬೃಹಸ್ಪತಿ'ಯೊಬ್ಬನ ವಿಮರ್ಶಾ ಪಂಥವು 'ಚಾರು ವಾಕ್': ವಿಚಾರವಂತರನ್ನು ಮೆಚ್ಚಿಸುತ್ತದೆಂಬ ಕಾರಣದಿಂದ, ಈ ಪದವೆ 'ಚಾರ್ವಾಕ' ಆಗಿ ನಿಂದ್ಯ, ತ್ಯಾಜ್ಯವೆಂಬ ಹಾಗಿನ ವಿಡಂಬನಾರ್ಥಕ ಸಂಕೇತವಾಗಿ ಮಾರ್ಪಟ್ಟಿದೆ, ಭಾರತದಲ್ಲಿ! ಆದರೆ 'ಸಕ್ತುಂ ಇವ ತಿತ ಉನಾ ಪುನಂತಃ' ವಾಕ್ಕಿನ ರೀತಿಗಾಗಿ ತನ್ನ ಅಂತಃಸಾಕ್ಷಿಯು ಬೆಂಬಲಿಸುವ ವಿವೇಕಕ್ಕಾಗಿ ಪ್ರಾಣಕ್ಕೆ ಎರವಾಗಬೇಕಾದವರು, ಭಾರತದಲ್ಲಿ ಯಾರೂ ಆಗಲೇ ಇಲ್ಲವೊ? ಅಥವಾ ಆ ಬಲಿದಾನದ ದಿವ್ಯ ಪರಂಪರೆಯ ಹೆಸರೂ ಕೇಳಬರದಂತೆ-ಇತಿಹಾಸವನ್ನೇ-ಮುಳುಗಿಸಿಬಿಡುವ ಪ್ರಯತ್ನವಾಗಿರಲಿಕ್ಕಿಲ್ಲವಷ್ಟೆ? ವಾದದಲ್ಲಿ ತನ್ನ ಪ್ರಾಣಕಳಕೊಂಡ 'ಶಾಕಲ್ಯ' ಎಂಬ ನಾಮ ಸಂಕೇತದ ವ್ಯಕ್ತಿಯ ಹೆಸರೊಂದು ಬೃಹದಾರಣ್ಯಕದಲ್ಲಿ ಕೇಳಬರುತ್ತದೆ. ಈತನ ಎಲವುಗಳು ಸಹ ಸಿಕ್ಕಲಿಲ್ಲವಂತೆ![೧] ಯಾಜ್ಞವಲ್ಕ್ಯನ ಆಪ: ರಸ: ರೇತಸ್ವರೂಪ 'ಬ್ರಹ್ಮ' ಶಕ್ತಿಯ ಪ್ರತಿಪಾದನೆಯಲ್ಲಿ, ಶಾಕಲ್ಯನು ಅಡ್ಡಪ್ರಶ್ನೆ ಕೇಳಿದ್ದೇ ಅಪರಾಧ. "ದೇವತಾ ವಿಚಾರದಲ್ಲಿ ಹೀಗೆ ಅಸಡ್ಡೆಯಿಂದ ಪ್ರಶ್ನಿಸುವವರ ತಲೆ ನೆಲಕ್ಕೆ ಉರುಳುತ್ತದೆ, ಎಚ್ಚರ" ಎಂಬೀ ಬಗೆಯ ಶಾಪ ಭೀತಿಯನ್ನೊ ಅಥವಾ ದೇವತಾ ಕೋಪದ ಭೀತಿಯನ್ನೊ ಹೇಳಿ ಯಾಜ್ಞವಲ್ಕ್ಯನು ಎದುರಾಳಿಗಳಿಗೆ ದಾರಿಗೆ ಬರಲು ಆಗಾಗ 'ಎಚ್ಚರಿ'ಸಿದ್ದುಂಟು. "ತಲೆ ಉರುಳೀತು" (ಮೂರ್ಧಾತೇ ವಿಪತಿಷ್ಯತಿ) ಎಂದು ಹೇಳುವ ವಾಡಿಕೆ ಉಪನಿಷತ್ಕಾಲದಲ್ಲಿ ಇದ್ದಿತೆಂದು ಛಾಂದೋಗ್ಯದ ಉಲ್ಲೇಖಗಳಿಂದಲೂ ಗೊತ್ತಾಗುತ್ತದೆ.[೨]

ಋಗ್ವೇದದ ಕಣೆಯ ಸಂಪ್ರದಾಯವು 'ಸಕ್ತುಂ ಇವ ಪುನಂತಃ' ವಾಕ್ಕಿಗಿಂತ ಪ್ರಾಚೀನವಿರಲೇಬೇಕು. ವಿಮರ್ಶಾ ವಿಚಾರ, 'ಕಣೆ'ಯ ಅನುಭವಗಳ ತರುವಾಯದ್ದು ಎಂಬುದು ಮೇಲೆಯೆ ಕಾಣುತ್ತಿದೆ. ಆದಕಾರಣ ಋಗ್ವೇದಕಾಲದಲ್ಲಿ ಕಣೆಯ ಬಗೆಗಿನ ಪರಂಪರಾಗತ ಶ್ರದ್ಧೆಯೆ ವಿಶೇಷ ಪ್ರಭಾವಶಾಲಿಯಾಗಿರಲಿಕ್ಕೆ ಬೇಕು. ಅಲ್ಲವೆ, ಇದಕ್ಕೆ ಗ್ರೀಕ್-ಇಜಿಪ್ತ, ಬಾಬಿಲೋನಿನ ಆಪ : ರಸ ಪಂಥೀಯ ಪವಾಡ ಕಥೆಗಳಿಂದ ಪುಷ್ಟಿದೊರೆತಿದೆ. ಈ ಸಂಘರ್ಷದಲ್ಲಿ ಸೌರ ಸಂಪ್ರದಾಯವು ಮೊದಲು ವಿಜಯಿಯಾಗಿ ಆಪ : ರಸ ಪಂಥದ ಪ್ರಭಾವವನ್ನು ತಗ್ಗಿಸಿದ್ದರೂ, ಬೇಗನೆಯೆ ಅದು ತನ್ನ ಪ್ರಭಾವಕ್ಕೆ ಎರವಾಗಿ ಅಥವಾ ಅದರ ತೇಜೋವಧೆಯಾಗಿ ಕಣೆಯ ಸಂಪ್ರದಾಯವೇ ವರ್ಚಸ್ವಿಯಾದುದು ಕಾಣುತ್ತಿದೆ.

ಸತ್ಯವು ಸಾಂಕೇತಿಕವಾಗಿರುತ್ತದೆ. ಆದರೆ, ಒಂದೇ ಸಂಕೇತವು ಸತ್ಯವೆನಿಸದು. ಹತ್ತೆಂಟು ಸಂಕೇತಗಳಿಂದ ಅದರೊಳಗಿನ ಸತ್ಯಾಂಶವು ದೃಢಪಡಬೇಕಾಗುತ್ತದೆ. ಸಂಕೇತಾತ್ಮಕವಾಗಿ ಸತ್ಯವು ಕೆಲವೊಮ್ಮೆ ಫಕ್ಕನೆ ಹೊಳೆಯುವುದು. ಇದುವೆ ಒಂದು 'ಪವಾಡ'. ಇಂಗ್ಲಿಷಿನ 'Myth' ಎಂಬಲ್ಲಿ 'miracle'ವೂ ಒಳಗೊಳ್ಳುತ್ತದೆ. ವಿಶ್ವನಿರ್ಮಾಣದ

'ಪವಾಡ' ಕಥೆಗಳನ್ನೂ ಇದರ ಶಾಸ್ತ್ರವನ್ನೂ 'Mythology' ಎನ್ನಲಾಗುತ್ತದೆ. ಗಾಳಿಮಾತು-ಕೇಳಿಕೆ ಪ್ರವಾದ : 'ಅಂತೆ'ಯೂ 'Myth' ಎನಿಸುತ್ತದೆ. ಆದರೆ, ಇವನ್ನು 'ಮಿಥ್ಯಾಕಥಾ' ಎಂದರೂ ಕೇವಲ 'ಮಿಥ್ಯಾ'ಅಲ್ಲ. Mythical thinking ಎಂಬುದು ವಿಶ್ಲೇಷಣಾತ್ಮಕ-ವಿಮರ್ಶಾತ್ಮಕ ವಿಚಾರವಲ್ಲ. ಭಾವನೆಯ ಭಾಷೆ: ಕಾವ್ಯಾತ್ಮಕ ಅಥವಾ ಸಾಹಿತ್ಯಕ 'ಸತ್ಯ'. ಇದು 'ಪವಾಡ' ಸತ್ಯವೇ. 'ಪವಾಡ' ಕೇವಲ ಪ್ರವಾದವೂ ಇರಬಹುದು. ಋತ: ಸತ್ಯಕ್ಕಿಂತ ಇದು ಭಿನ್ನ ಸ್ವರೂಪದ್ದು. ದಿಕ್ಕಾಲದ ಸಂದರ್ಭದೊಳಗಿನ ಜೀವನದಲ್ಲಿ ಕಾಣುವ, ಸಂಭವಿಸುವ ಸಂಗತಿಯನ್ನು ಪ್ರತಿನಿಧಿಸುವ ಸಾಂಕೇತಿಕ ಚಿತ್ರವು ಪವಾಡ-ಸತ್ಯ. ಇದು ಶುದ್ಧ ಆಭಾಸಾತ್ಮಕವಿರಬಲ್ಲದು. ಕವಿಯು, ತನ್ನ ಪ್ರತಿಭಾಸಾಮರ್ಥ್ಯದಿಂದ ಅದನ್ನು ಸಂಭವಿಸಿದ ಆಖ್ಯಾಯಿಕೆಯ ಹಂತಕ್ಕೆ ತರಬಲ್ಲನು. ವಿದೇಹೀ ಜನಕ; (ಅಯೋನಿ ಸಂಭವೆ:) ಸೀತೆ, ಇವು ತೀರ 'ಮಿಥ್ಯಾ' ಕಥೆ, ಅಲ್ಲವೆಂದರೂ ಸಂಭ್ರಾಮಕ ಪ್ರತಿಮಾ : ಸಂಕೇತಗಳು. ಉದಾ: 'ಪುರುಷ', 'ಕೇಶಿ' ಮುಂ. ಸುಳ್ಳು ಹೇಳುವ ಸ್ವಭಾವ ಬೆಳೆದವನಿಂದಲೂ ಕೆಲವೊಮ್ಮೆ ಸತ್ಯವೂ ಹೊರಬರುವ ಶಕ್ಯತೆಯಿರುವುದರಿಂದ ಇಂತಹ 'ಏನೆಲ್ಲ ಸಂಕೇತಗಳೂ ತ್ಯಾಜ್ಯ' ಎಂದಲ್ಲಿ, ದೊರೆಯಬಹುದಾದ ಸತ್ಯಾಂಶಕ್ಕೆ ಎರವಾಗ ಬೇಕಾಗುತ್ತದೆ.

ಕಣಿ>ಗಣಿ (:ಏಕಾಕ್ಷ : ಅಕ್ಷದ) ಸಂದರ್ಭದಿಂದ ಮಾನವರಿಗೆ ಆದಿಯಲ್ಲಿ ಅಪೂರ್ವ 'ದಿವ್ಯ' ಅನನುಭೂತ ಸ್ವರೂಪದ ಜ್ಞಾನ ಲಭಿಸಿದ್ದು ನಿಜ. ಈ 'ಸನಾತ'ನ ಸಂಕೇತವು ಇಂದಿಗೂ ಉಳಿದು ಬಂದಿರುವುದೇ ಇದಕ್ಕೆ ಸಾಕ್ಷಿ. ಹಲವು ಕ್ಷೇತ್ರಗಳ ಜಾತ್ರಾದಿ ಸಮಯಾಚಾರದಲ್ಲಿ 'ದೇಹಾರ': ದೇವರು ಕೇಳೋದು ಶಿವ 'ಧನಸ್ಸು' ಏರುವ 'ಕಾರಣಿಕ' ಇಂತಹುಗಳಂತೂ ಸರಿ. ಇನ್ನು ಒಂದು ಬಗೆಯಲ್ಲಿ, ಆಷಾಢ-ಶ್ರಾವಣದ ಸಂದುಕಟ್ಟಿನ ಸ್ಪರ್ಧೆಗಳಲ್ಲಿ ಇರಸು (ಕಬ್ಬಿಣದ್ದು), ಗಾಣದ ಗಣಿ (ಕಟ್ಟಿಗೆ ಕೊರಡು) ಇವನ್ನು ನೆಗಹಿ ಹೆಗಲ ಮೇಲೆ ಹೊತ್ತು, ಪೌರುಷ ಪ್ರದರ್ಶಿಸುವುದಕ್ಕೆ ಆಹ್ವಾನಿಸುವ ವಾಡಿಕೆ, ನಮ್ಮ ಹಳ್ಳಿಗಳಲ್ಲಿ, ಈವರೆಗೂ ಉಂಟು. ಪೌರುಷ ಮತ್ತು ಜ್ಞಾನ ಇವನ್ನು ವಿಂಗಡಿಸಿ ಎರಡನ್ನೂ ಭಿನ್ನ ಪಾತಳಿಯ ಸಂಗತಿಗಳೆಂದು ಬಗೆದರೆ ಕಣಿಯ (Elanvital) ಭೂಮಿಕೆಗೆ ಕೇಡು! ಋಗ್ವೇದದ ವಿಷ್ಣುಸೂಕ್ತವು 'ವಿಷ್ಣೋಃ ನು ಕಂ ವೀರ್ಯಾಣಿ ಪ್ರವೋಚಮ್' ಈ ಮಾತಿನಲ್ಲೆ ಆರಂಭವಾಗಿದೆ. ವೀರಕಾರ್ಯ ಮತ್ತು ವೀರ್ಯ ಇವೆರಡನ್ನೂ ಇಲ್ಲಿ ಅಭಿನ್ನವಾಗಿ ಎಣಿಸಲಾಗಿದೆ. ಜ್ಞಾನದ ಮೊದಲ ಹಂತದಲ್ಲಿ ವಸ್ತುವಿನ ಗುಣ ಮತ್ತು ಆ ವಸ್ತು ಇವೆರಡನ್ನೂ ವಿಂಗಡಿಸಿ ಅರಿಯುವುದು ತಿಳಿದಿರಲಿಲ್ಲ. ಆತನಲ್ಲಿ 'ನೀರು' ಇಲ್ಲ, ಎಂಬಲ್ಲಿ ವಸ್ತು ಮತ್ತು ಗುಣ ಅಭೇದದಿಂದ ಕಾಣಲಾಗುತ್ತಿದೆ. ಗ್ರೀಕ್ ತತ್ತ್ವವಿದನೊರ್ವನು, ಸೂಕ್ಷ್ಮವಾಗಿ ಹೇಳಿರುವ 'ನದೀಸ್ನಾನದ' ಸಾಂಕೇತಿಕ ಶಬ್ದಪ್ರತಿಮೆ, ಒಂದು ಸಾರ್ವಕಾಲಿಕ ಅರ್ಥದ್ಯೋತಕವಾಗಿದೆ. ಜಲ (: ಜಿವನ) ಪ್ರವಾಹದಲ್ಲಿ ಒಮ್ಮೆ ಸ್ನಾನಮಾಡಿದ ನೀರಿನಲ್ಲಿಯೆ, ನಮಗೆ ಮರಳಿ ಮೀಯಲು ಶಕ್ಯವಿಲ್ಲ! ಪ್ರವಾಹದೊಡನೆ ಹೊಸ ನೀರು ಬಂದಿರುತ್ತದೆ! ಆದರೆ, ಮಾನವನೊಳಗಿನ ಕೃತ-'ಜ್ಞ'ತಾ ಭಾವನೆಯ ರೀತಿ ವಿಚಿತ್ರವಾಗಿವೆ. ಮಾನವನು ತನಗೆ ಜೀವನದ ಸರ್ವ ಪ್ರಥಮ ಹಂತದಲ್ಲಿ ದಿಕ್ಕಾಲಾತೀತ 'ದಿವ್ಯ' ಆನಂದಕ್ಕೆ ಕಾರಣವಾದ ಆ 'ನಂದ' ಕುಮಾರನನ್ನು ಸಾರ್ವಕಾಲಿಕ 'ದಿವ್ಯ' ದೈವತ ಶಕ್ತಿಯೆಂದು ಪೂಜಿಸುತ್ತ ಬಂದಿದ್ದಾನೆ! ಇದನ್ನು 'ಸನಾ'ತನ 'ಶಿಶು'ವಾಗಿ ಬಗೆದು ಸ್ತೋತ್ರಮಾಡುತ್ತಿದ್ದಾನೆ. 'Child is the Father of man:' ಮಗು ಮನುಜನ ತಂದೆ. ಈ 'ಮಗು', ಈ ಶಿಶು, ಸನಾತನ ಕುಮಾರ ಯಾರು? ಈ 'ಅ-ಜರ' 'ನಿತ್ಯಯುವಾ' ಕುವರನೇ ಮನುಜನ (ನಾ) ತಂದೆ (ಇಲ್ಲಿಗೆ) ಎನ್ನುತ್ತಾನೆ! ಇವನೇ ಪ್ರಪಂಚದ ಆದಿ ಪುರುಷ : ಪುರೀಶಯ ಪುರಿಯೊಡನೆ ವಾಗರ್ಥಾವಿವ ಸಂಪೃಕ್ತ ದೇವ. ಇವನೇ ದೇವರದೇವ ಎಂಬ ಶ್ರದ್ಧೆಗೆ, ಇದರ ಹೊರತು ಬಾಳಿನಲ್ಲಿ ಇನ್ನಾವ ಅರ್ಥ : ಮೂಲ್ಯ: ಸೌಂದರ್ಯ ಕಂಡೀತು?

ಋಗ್ವೇದದಲ್ಲಿ 'ಅಕ್ಷ'ದ ಆಟವನ್ನು ದ್ಯೂತ (>ಜೂಜು) ಎಂದು ಬಗೆಯಲಾಗಿದೆ. ಋಗ್ವೇದಕಾಲೀನ ಶಿಷ್ಟರು ಪ್ರತಿಷ್ಠಿತರು, ಜೂದು ಮತ್ತು ಜಾದು>ಯಾತು ಇವನ್ನು ನಿಂದ್ಯ, ತಾಜ್ಯ-ತಿರಸ್ಕಾರಾರ್ಹ ಎಂದು ಬಗೆದಿದರೆಂಬುದು ತೀರ ಸುಳ್ಳಲ್ಲ. ಆದರೆ, ಈ ಬಗೆಯ ಗ್ರಹಿಕೆಯಾಗುವುದಕ್ಕಾಗಿ ಬರೆದ 'ಅಕ್ಷದ್ಯೂತ'ದ

ಸೂಕ್ತದಲ್ಲಿಯೆ ಕವಡು ಇರುವುದನ್ನು ಕಾಣಬಹುದಾಗಿದೆ. 'ಅಕ್ಷ'ವು 'ಜ್ಞಾನ'ದೃಷ್ಟಿ ಎಂಬ ಅರ್ಥಪಡೆದ ಸಮಯದಲ್ಲಿ 'ಅಕ್ಷಣ್ವಾನ್,' 'ಅಕ್ಷಣ್ವಂತಃ' ಸ್ತೋತ್ರಾರ್ಹರಾದಾಗ 'ಅಕ್ಷ'ದ ಆಟ ತಿರಸ್ಕಾರಕ್ಕೆ ಪಾತ್ರವಾದ ಪರಿಸರವು, 'ಅಕ್ಷ'ಪಂಥದ ವಿರೋಧಿಗಳದಿರಬೇಕು. ವರುಣನ ಅಕ್ಷ : ವನಸ್ಪಸ್ತೋಪ; ವಿಷ್ಣುವಿನ ಪದ್ಮ-ಅಕ್ಷ : ಪರಮಪದ ಪೂಜಾರ್ಹವಿದ್ದಾಗಲೆ 'ಶಿಶ್ನ-ದೇವಾಃ' ಎಂಬ ವರ್ಗವೂ ಇದ್ದಿತೆಂಬುದು ಅತ್ಯಂತ ಸುಸಂಗತವೂ ಸುಸಂಬದ್ಧವೂ ಆದ ಘಟನೆಯಾಗಿದೆ. ಆದರೆ, ಈ ಕಾರಣದಿಂದಾಗಿಯೆ ಶಿಶ್ನ ದೇವರನ್ನು ಕೊಲ್ಲಲು ಇಂದ್ರನಿಗೆ ಬೇಡಿಕೊಂಡದ್ದು ಮೇಲ್ನೋರಿಕೆಯ ಮಾತು ಇರಲಾರದೇ ಎಂಬ ಸಂಶಯ ಹುಟ್ಟುವಂತಿದೆ. ಋಗ್ವೇದ ಕಾಲದ 'ಅಕ್ಷ' ಪೂಜಕರಲ್ಲಿ ಸನ್ಮಾನ್ಯರು, ಗೌರವಸ್ಥರು ಎಂಬವರು ಯಾರೂ ಇರಲಾರರು ಎಂಬ ಹಾಗಿನ ಗ್ರಹಿಕೆಯಾಗುವುದಕ್ಕೆ ಈ ಶಿಶ್ನದೇವರ ವಿಚಾರ ಹಾಕಿರುವ ಈ ಶಕ್ಯತೆಯಿದೆ. ಈ ಬಗೆಯಲ್ಲಿ ಸಂಹಿತಾ ಸಂಕಲನದ ಅದ್ಭುತ ಮೋಡಿಕಾರಿಗೆ ಇನ್ನೂ ಒಂದು ನಿದರ್ಶನ: ಮಹರ್ಷಿ ವಸಿಷ್ಠನ 'ಶಿಪಿವಿಷ್ಟ' ರೂಪದಲ್ಲಿ ವಿಷ್ಣು-ದರ್ಶನದ ಬಗೆಗಿನ ಆರ್ತ ಪ್ರಾರ್ಥನೆ.[೩]

ಶ್ರೀಮನ್ಮಹಾವಿಷ್ಣುವು, ವಸಿಷ್ಠನಿಗೆ, ಹಿಂದೊಮ್ಮೆ 'ಶಿಪಿವಿಷ್ಟಃ ಅಹಂ' ಎಂದು ಹೇಳಿದ್ದನಂತೆ. ಆ ಬಗೆಯ ಸಂಕೇತ; ಪ್ರತೀಕಾತ್ಮಕ ದರ್ಶನೆ ಅವರಿಗೆ ಲಭಿಸಿರಲಿಕ್ಕೆ ಸಾಕು. ಈ ಬಗೆಯಲ್ಲಿ 'ಶಿಪಿವಿಷ್ಟೋಽಹಂ' ಎಂದು ಸಾರಿ ಹೇಳುವ ಆತ್ಮಸಾಕ್ಷಾತ್ಕಾರೀ ದಿವ್ಯಸಿದ್ಧಪುರುಷರೂ ಆಗ ಇರಲಿಕ್ಕೆ ಬೇಕಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಮಾತ್ರ ವಸಿಷ್ಠನು ಎಷ್ಟು ಪ್ರಾರ್ಥಿಸಿದರೂ ಆ ಮೂಲ 'ಶಿಪಿವಿಷ್ಟ' ರೂಪದಲ್ಲಿ ವಿಷ್ಣುವಿನ ದರ್ಶನವು ದೊರೆಯಲೊಲ್ಲದ್ದಕ್ಕೆ ವಸಿಷ್ಠನಿಗೆ ತುಂಬ ವ್ಯಥೆಯಾಗುತ್ತಿರುವುದಾಗಿ ಈ ಋಚೆಗಳಿಂದ ಕಾಣುತ್ತಿದೆ. ಕದಾಚಿತ್ ಈ ಪ್ರಾರ್ಥನೆಯ ವಸಿಷ್ಠನು, ಮೂಲ ವಸಿಷ್ಠನ ತರುವಾಯದವನಿದ್ದು, ಹಿರಿಯರ ದರ್ಶನದ ಆಕೃತಿಯನ್ನು (arche type), ಮರಳಿ ತಾನೂ ಕಾಣಲು ಹಾರಯಿಸುತ್ತಿರಬೇಕು. ಏಕೆಂದರೆ, ಈ ಸ್ಥಿತ್ಯಂತರವು ಒಂದೇ ತಲೆಮಾರಿನಲ್ಲಿ ಆಗಿರುವ ಶಕ್ಯತೆಯಿಲ್ಲ. ಹೇ ವಿಷ್ಣುವೇ, ನೀನು ಹಿಂದೊಮ್ಮೆ 'ಶಿಪಿವಿಷ್ಟೋಽಸ್ಮಿ' ಎಂದು ಹೇಳುವ ಕಾರಣವೇನಿತ್ತು? (ಕಿಂ ಪರಿಚಕ್ಷ್ಯ ಭೂತ್ ?) ಇಂದು, ಆ ರೂಪವನ್ನು (ವರ್ಪಃ) ನಮ್ಮಿಂದ ಬಚ್ಚಿಡಬೇಡ. (ಮಾ ಅಪಗೂಹಃ),

ಆಪ : ರಸ ಪಂಥೀಯ ವೈಶಿಷ್ಟ್ಯದಂತೆ 'ಶಿಪಿವಿಷ್ಟ'ವು ಸಹ ಶ್ಲೇಷಯುಕ್ತ ಪದವಿರಬೇಕೆಂದು ಕೆಲರ ಅಭಿಪ್ರಾಯವಿದೆ. ಆದರೆ, ರುದ್ರಾಧ್ಯಾಯದಲ್ಲಿ ಬರುವ ಈ ಪ್ರತಿಮೆಯ ಅರ್ಥದಲ್ಲಿ ಸಂದಿಗ್ಧತೆಯ ಆರೋಪಕ್ಕೆ ಅವಕಾಶವೆ ಉಳಿಯುವುದಿಲ್ಲ. ಶೈವಪ್ರತಿಮೆಗಳೊಳಗಿನ ಅರ್ಥದಲ್ಲಿ ಬುದ್ಧಿಪೂರ್ವಕ ಬಚ್ಚಿಡುವ ಪ್ರಯತ್ನಗಳು ಬಹಳ ಕಡಿಮೆ. ಅವೇ ವೈಷ್ಣವ ಪರಂಪರೆಯಲ್ಲಿ ತುಂಬ ಮೋಡಿ: ಮಾಟದುವು ಆಗುವುದು ಕಾಣುತ್ತದೆ.

> '...ನೀಲಗ್ರೀವಾಯ ಚ, ಶಿತಿಕಂಠಾಯ ಚ! ನಮಃ ಕಪರ್ದಿನೇ ಚ, ವ್ಯುಪ್ತಕೇಶಾಯ
> ಚ, ನಮಃ ಸಹಸ್ರಾಕ್ಷಾಯ ಚ, ಶತಧನ್ವನೇ ಚ, ನಮಃ ಗಿರಿಶಾಯ ಚ, ಶಿಪಿವಿಷ್ಟಾಯ
> ಚ, ನಮಃ ಮೀಢುಷ್ಟಮ ತೇ ಚ॥ ನಮೋ ಹ್ರಸ್ವಾಯ ಚ, ವಾಮನಾಯ ಚ,
> ನಮೋ ಬೃಹತೇ ಚ, ವರ್ಷೀಯಸೇ ಚ, ನಮೋ ಅಗ್ರ್ಯಾಯ ಚ, ಪ್ರಥಮಾಯ ಚ.[೪]

ಈ 'ಶಿಪಿವಿಷ್ಟ' ದೈವತದ ಪರಿಚಯ ಮಾಡಿಕೊಡುವ ಮಹತ್ವದ ಕೆಲ ಸಂಕೇತಗಳೂ ಈ ಸ್ತೋತ್ರದಲ್ಲಿಯೆ ಇವೆ: ಈ ದೇವನು ಕೂದಲುಳ್ಳವನಾಗಿರುವಂತೆ (ಕಪರ್ದಿ), ಬಕ್ಕ ಬೋಳು ತಲೆಯವನೂ (ವ್ಯುಪ್ತಕೇಶ) ಅಹುದು, ಸಹಸ್ರ ಅಕ್ಷನು, ನೂರು ಬಿಲ್ಲಿನವನು : ಕಿರಿದಾಗ ಬಲ್ಲ (ಹ್ರಸ್ವ) ಚೆನ್ನಿಗನು (ವಾಮನ); ವರ್ಷಣಶೀಲನು-ದಾನಿ; ('ಮಗುವು ಮನುಜನ ತಂದೆ' ಎಂಬಂತೆ) ಇವನೆ ಪ್ರಪಂಚದಲ್ಲಿ 'ಅಗ್ರ್ಯ'ನು: ಪ್ರಥಮನು. ಕುಮಾರನು.

ಯಜುರ್ವೇದದ ವಾಜಸೇನೆಯ ಸಂಹಿತೆಯಲ್ಲಿ ಬಂದ ಈ ಪ್ರಾಂಜಲ ಸಂಕೇತಗಳೇ, ಋಗ್ವೇದದಲ್ಲಿ ಕಾಣಿಸಿಕೊಳ್ಳುವಾಗ ತುಂಬ 'ಯಾತು' ಶಕ್ತಿಯ ಶಬ್ದ-ಪ್ರತಿಮೆಗಳಾಗುತ್ತವೆ; ಪಾಠಕರನ್ನು ದಿಙ್ಮೂಢವಾಗಿಸುತ್ತವೆ! ವಕ್ರೋಕ್ತಿ; ಮುಸುಕಿನ ಮಾತು; ಇದು ಸಾಹಿತ್ಯಶಕ್ತಿ; ಇದು ದಿವ್ಯಾಧ್ಯಾತ್ಮದ 'ಮಂತ್ರ' ಶಕ್ತಿಯೂ ಆಗಿದೆ! ಆದರೆ

ದಿವ್ಯಾಧ್ಯಾತ್ಮವಾದಿಯು ಗಾರುಡಿಗ: ಮಾಂತ್ರಿಕನೊ? ಸಾಹಿತ್ಯವೂ ಗಾರುಡಿಗ ವಿದ್ಯೆಯೊ? "ಸಾಹಿತ್ಯವು ಮಂತ್ರವಾಗಬೇಕು;" "ಮಂತ್ರವು ಸಾಹಿತ್ಯವಾಗಬೇಕೆಂಬ" ಮಹತ್ವಾಕಾಂಕ್ಷೆಗೆ ಅರ್ಥವೇನು? ಸಾಹಿತ್ಯಾನಂದವು 'ಬ್ರಹ್ಮಾನಂದ-ಸಹೋದರ' ಎಂದರೇನು? ಬಾಳು ಹಾಳು, ಅರ್ಥಕ್ಕೆ ಎಟಕಲು ಶಕ್ಯವೆ ಇಲ್ಲ ಎಂದರ್ಥವೊ? ಅಥವಾ ನಾಗಾನಂದವೇ ಗುರಿ ಎಂದರ್ಥವೊ? 'ಶಿಪಿವಿಷ್ಟ' ಬ್ರಹ್ಮದರ್ಶನವೇ ಗುರಿಯಾಗಿರುವ ಆಧ್ಯಾತ್ಮಿಕ: ಸಾಹಿತ್ಯ : ಮಹಾಭಾರತ, ರಾಮಾಣದಲ್ಲಿ ಮಾನವ ಜೀವನಕ್ಕೆ ಅರ್ಥ ಏನುಂಟು?

ವಿಷ್ಣುವು ಮೂಲತಃ 'ಶಿಪಿವಿಷ್ಟ' ಆಕೃತಿ ಸ್ವರೂಪವನೇ ಆಗಿರಲಿಕ್ಕೆಬೇಕೆಂದು ಸಾಕ್ಷಾತ್ಕಾರೀ ವಸಿಷ್ಠನೇ ಹೇಳುತ್ತಿರುವಾಗ ವಿಷ್ಣುಪಂಥ ಹಾಗೂ ರುದ್ರಸಂಪ್ರದಾಯವು ಒಂದೇ ಮೂಲದುವು ಇರಬೇಕಾಯಿತು. ಆದರೂ ಈ ದೈವತಗಳಲ್ಲಿ ಬೆಳೆದ, ಸರ್ವೋತ್ತಮತ್ವದ ವಾದಕ್ಕೆ, ಐತಿಹಾಸಿಕ ಪರಂಪರೆಯನ್ನು ಬಚ್ಚಿಟ್ಟಿರುವುದೇ ಪ್ರಮುಖ ಕಾರಣವೆಂಬುದು ಮೇಲೆಯೆ ಕಾಣುತ್ತದೆ. 'ಶಿಪಿವಿಷ್ಟ' ಶಬ್ದದ ಅರ್ಥದ ಬಗೆಗೆ ಈವರೆಗಿನ ಎಲ್ಲ ಚರ್ಚೆಗಳನ್ನು ಕ್ರೋಢೀಕರಿಸಿ ಡಾ. ಆರ್. ಎನ್. ದಾಂಡೇಕರರು ಒಂದು ನಿರ್ಣಯಕ್ಕೆ ಬಂದಿದ್ದಾರೆ. (ವೈದಿಕ ದೇವತಾಂಚೀ ಅಭಿನವ ದರ್ಶನ 'ಶಿಪಿ ವಿಷ್ಟ ವಿಷ್ಣು' ನೋಡಿರಿ.) ಈ ಪದವು 'ಕುತ್ಸಿತಾರ್ಥೀಯ'ವಿರುವುದಾಗಿ ಔಪಮನ್ಯರು, ಪುರಾತನ ಕಾಲದಲ್ಲಿಯೇ ಹೇಳಿರುವುದನ್ನು ಭಾಷ್ಯದಲ್ಲಿ ಬಚ್ಚಿಟ್ಟಿಲ್ಲ. ರುದ್ರನ ವರ್ಣನೆಯಲ್ಲಿ ಬಂದಿರುವ 'ವಾಮನ' (ಸುಂದರಾಂಗ) ಎಂಬ ಶಬ್ದ-ಸಂಕೇತವನ್ನು ವೈಷ್ಣವ ಪಂಥೀಯರು ತಮ್ಮ ಪ್ರಚಾರತಂತ್ರಕ್ಕೆ ಉಪಯುಕ್ತವಾಗುವಂತೆ, ಒಂದು ಅವತಾರಿ ಪುರುಷನ ವೇಷ ಹಾಕಿ, ಐತಿಹಾಸಿಕ ಆಖ್ಯಾಯಿಕೆ ಎಂಬ ಹಂತದ ಪುರಾಣಕಥಾ ನಿರ್ಮಾಣಕ್ಕೆ ಉಪಯೋಗಿಸಿಕೊಂಡಿದ್ದಾರೆ! ಐತಿಹಾಸಿಕ ಹಿನ್ನೆಲೆಯ ಲವಲೇಶವೂ ಇಲ್ಲದೆ, ಇತಿಹಾಸದ ಅಭಾಸವನ್ನುಂಟು ಮಾಡುವ (legend) ವಾಮನ ಮತ್ತು ಬಲಿಯ ಕಥೆಯು ನಿರ್ಮಾಣವಾಗಿದೆ. ರುದ್ರನ ತ್ರಿಅಂಬಕಗಳಂತೆ ವಿಷ್ಣುವಿನ ತ್ರಿಪಾದ (ಅಡಿ=ಅಕ್ಷ) ಸುಪ್ರಸಿದ್ಧವಾಗಿದೆ. ಮಧುರ ಹನಿವ ಈ ಪದ : ಅಕ್ಷ 'ಮೂರು' ಇದರ ಅರ್ಥವು ಇನ್ನೂ ಗುಹ್ಯ-ಗೂಢವಾಗಿಡಲು ಈ 'ವಾಮನ'ನ ಸಂಕೇತ ಬಿಟ್ಟು ಹಿಡಿಯಲಾಗಿದೆ! ಈ 'ಅಗ್ರ್ಯ' 'ಪ್ರಥಮ' ವಾಮನ : ಶಿಪಿವಿಷ್ಟನ ಮೂಲಕ, ಗರ್ಭಸ್ಥನಿರುವಾಗಲೆ ಸಿದ್ಧಪುರುಷನಂತೆ ಪೂರ್ವಜನ್ಮಾಂತರದ ನೆನಹುಗಳನ್ನು ಹೇಳುವ ವಾಮ-ದೇವನ ನಿಜ ಸ್ವರೂಪವು ಬಯಲಿಗೆ ಬರುತ್ತಿದೆ! ವಾಮನ ಎಂದರೆ ಸೌಂದರ್ಯವಂತ; ವಾಮ-ದೇವ ಎಂದರೂ ಸುಂದರದೇವ. ಹೀಗೆ, ಸಮಾನ ಆಕೃತಿ ಅರ್ಥದ ಈ ತ್ರಿಪದ (ಚಕ್ರ)ದ ಈ ಪ್ರತಿಮೆಯು ಯಾವುದಿರಬಲ್ಲದು? ತನ್ನ ಸುಂದರಾಂಗದಿಂದ ವಿಶ್ವದ ಆಕರ್ಷಕನೆಂಬ ಖ್ಯಾತಿಯ ವಿಷ್ಣು-ಕೃಷ್ಣನದಲ್ಲದೆ? ಹ್ರಸ್ವ ವಾಮನ ವೃಷ್ಣಿ : ವರ್ಷಣಶೀಲ ರಸಸ್ರವಿಸುವ ಅಶ್ವತ್ಥ: ಸ್ತೂಪ-ಇತ್ಯಾದಿ ರೂಪನು ಈ ದೇವ!

ಋಗ್ವೇದ ಸಂಹಿತೆಯ ಈ ಆಕೃತಿ ರಚನೆಯಲ್ಲಿ ಕೆಡೆಲೆಸ್ಕೋಪದಂತೆ ನಾನಾವಿಧ ಅರ್ಥಛಾಯೆಗಳ ನಾನಾ ಆಕೃತಿಗಳ ಸೊಬಗನ್ನು ನೋಡಲು ದೊರೆಯುತ್ತದೆ. ಇದರ ಮಾಟ : ಜಾದೂ ವಸಿಷ್ಠಕೃತ ಇಂದ್ರಾ-ವಿಷ್ಣು ಜೋಡು ಸ್ತೋತ್ರದಲ್ಲೂ ಹುದುಗಿದೆ! 'ಶಿಶ್ನ' ದೇವರ ಹಂತಕನೆಂಬ ಇಂದ್ರನನ್ನು ಇದೇ ಸೂಕ್ತದಲ್ಲಿ 'ಶಿಪಿವಿಷ್ಟ' ವಿಷ್ಣುವಿನ ಸಂಗಾತಿಯಾದ ದೇವನನ್ನಾಗಿ ಕಲ್ಪಿಸಿರುವ ಈ ಮಾಟ, ಎಂತಹ ಚಮತ್ಕೃತಿ! ಏನೀ ಪ್ರಾಮಾಣಿಕತೆ? ಈ ಬಗೆಯ ಸ್ತೋತ್ರದ[೫] ಆ-ಕೃತಿಯೊಳಗಿನ ಅರ್ಥ ಸಂವಾದಿಯೊ-ವಿಸಂವಾದಿಯೊ, ವಿಮರ್ಶಕರು ನಿರ್ಧರಿಸಲಿ.

ಟಿಪ್ಪಣಿಗಳು

೧. *ಬೃಹದಾರಣ್ಯಕೋಪನಿಷತ್ತು* ೩-೯-೨೬

೨. *ಛಾಂದೋಗ್ಯೋಪನಿಷತ್ತು* ೧-೧೦-೯-೧೧ ಮತ್ತು ೧-೮-೬

೩. *ಋಗ್ವೇದ ಸಂಹಿತೆ* VII. ೯೯.೭; ೧೦೦. ೫-೬

೪. *ಯಜುರ್ವೇದ ವಾಜಸನೇಯ ಸಂಹಿತೆ* ೧೬. ೨೮. ೩೦

೫. *ಋಗ್ವೇದ ಸಂಹಿತೆ* VII. ೯೯.೪-೬

ಮೃತ್ಯುತತ್ತ್ವ : ಸಾಹಿತ್ಯಕ ತಂತ್ರ

ಋಗ್ವೇದದ ಈ ಇಂದ್ರಾ-ವಿಷ್ಣು, ಮಹಾಭಾರತದ ಕೃಷ್ಣಾರ್ಜುನರಾಗುತ್ತಾರೆ! ಆದರೆ, ಋಗ್ವೇದದ ಭೂಮಿಕೆಯಲ್ಲಿ ಇಂದ್ರನು ಪ್ರಧಾನ ದೈವತ. ಮಹಾಭಾರತದಲ್ಲಿ ಕೃಷ್ಣನಿಗೆ ಪ್ರಾಧಾನ್ಯ! ವಿಷ್ಣುವು ವೃತ್ರನನ್ನು ಹೋಲುತ್ತಿರುವ ವಿಚಾರವು ಹಿಂದೆ ಬಂದಿದೆ. ಆದರೆ, ಇಂದ್ರ ಮತ್ತು ವಿಷ್ಣು ಈ ಸಂಕೇತಗಳನ್ನು ಇಂದ್ರ: ಸೂರ್ಯಾಗ್ನಿ ರೂಪ : ಹಗಲು ವಿಷ್ಣು: ಮೃತ್ಯುರೂಪ ಇರುಳು ಹಗಲು : ಬೆಳ್ಳಗೆ : ಅರ್ಜುನ, ಇರುಳು ಕತ್ತಲು: ಕೃಷ್ಣ ಈ ಪ್ರತಿಮಾರೂಪಗಳನ್ನು ಋಗ್ವೇದಲ್ಲಿಯೇ ಹುದುಗಿಸಿಟ್ಟಿರುವ ಚಮತ್ಕಾರವನ್ನು ಗಮನಿಸುವುದು ಅವಶ್ಯ. 'ಅಹಃ ಚ ಕೃಷ್ಣಂ; ಅಹಃ ಅರ್ಜುನಂ ಚ!'[7] ಈ ಸಂಧಿಯನ್ನೇ ಸಾಧಿಸಿ ವೈಶ್ವಾನರನ ತ್ರಿಲೋಕತ್ವ ನಷ್ಟಪಡಿಸಿ, ಇರುಳಿನಲ್ಲಿ=ಮರ್ತ್ಯರಲ್ಲಿ ಜಠರಾಗ್ನಿ ಅಡಗಿಸಿದ್ದುಂಟು. ತ್ರಿತ, ತೃತೀಯ ಪುರುಷನಾದುದರ ಇನ್ನೂ ಒಂದು ಪ್ರಮಾಣ. ಕಾಲಸರ್ಪ : ವಿಷ್ಣುವು ಮತ್ತು ಬಲರಾಮ : ಶೇಷನ ತಮ್ಮ ಕೃಷ್ಣ ಅಭಿನ್ನರು. ಈ ಕಾರಣದಿಂದ ವಿಷ್ಣು-ಕೃಷ್ಣರಿಬ್ಬರೂ ಮೃತ್ಯುರೂಪರು. ಇವರು ವೃತ್ರನನ್ನು ಹೋಲುತ್ತಾರೆ. ಈ 'ರಸೋಽಹಂ ಅಪ್ಸು' ಎಂಬ ಗೀತೆಯ ಕೃಷ್ಣ (:ವಿಷ್ಣು) ಋಗ್ವೇದದಲ್ಲಿ ಅಂಶುಮತೀ ನದೀ ತೀರದ ಒಬ್ಬ- ಅ-ಸುರ ಕೃಷ್ಣನನ್ನು ಹೋಲುತ್ತಿದ್ದಾನೆ![8]

> 'ಉದಕ ಮಧ್ಯೇ ಸ್ಥಿತಂ ಕೃಷ್ಣಂ, ಇಂದ್ರಃ ಬೃಹಸ್ಪತಿನಾ ಸಹ ಅಗಚ್ಛತ್; 'ದಶಸಹಸ್ರ ಸಂಖ್ಯಾಕೈಃ ಅಸುರೈಃ ಪರಿವೃತಂ ಕೃಷ್ಣಂ, ತಸ್ಯ ಅನುಚರಾನ್ ಚ. ಬೃಹಸ್ಪತಿ ಸಹಾಯೋ ಇಂದ್ರಃ ಜಘಾನ, ಇತಿ

ಎಂದು ಸಾಯಣರು ಈ ಕಥಾಸಾರವನ್ನು ಹೇಳಿದ್ದಾರೆ. ಈ ಕೃಷ್ಣನು ವೃತ್ರನ ಮಿತ್ರ ಪರಿವಾರದ 'ಶುಷ್ಣ'ನೆಂಬ ಅಸು-ರನ ಒಡನಾಡಿಯೇ ಇರಲಿಕ್ಕೆಬೇಕೆಂಬುದನ್ನು ಈ ಸಂಹಿತಾ ಸಂಕಲನಕಾರನು ಸೂಚಿಸಿರುವ ರೀತಿ ಬಹು ಸ್ವಾರಸ್ಯವುಳ್ಳುದಾಗಿದೆ. ದ್ರಪ್ಸಃ ಕೃಷ್ಣನ ಸಂಹಾರದ ತರುವಾಯ ಶುಷ್ಣನ ವಧೆಯ ವರ್ಣನೆಯು ಇಲ್ಲಿಯೆ ಇದೆ! ಶುಷ್ಣಸಂಹಾರದ ವಿಚಾರವು ಋಗ್ವೇದದಲ್ಲಿ ಹಲವೆಡೆಗೆ ಬಂದಿದೆ.[9] ಹೀಗಿರುವಾಗ ಮರಳಿ ಕೃಷ್ಣ, ಶುಷ್ಣ ಒಂದೆಡೆಗೆ ಹೇಳಿರುವಲ್ಲಿ ಅವರು ಈರ್ವರೂ 'ಚರಿಷ್ಣಂ' ಪುರೀಶಯ ಅಸು-ರರು ಎಂಬುದನ್ನು ಸೂಚಿಸುವ ಉದ್ದೇಶವೇ ಇರಬೇಕು.

ಶುಷ್ಣ ಮತ್ತು ಕೃಷ್ಣ ಈ ಇಬ್ಬರು ಅ-ಸುರರು ಇಂದ್ರನಿಂದ ಹತರಾಗಿದ್ದಾರೆ. ಶುಷ್ಣನೊಡನೆ ಒಂದೇ ಸೂಕ್ತದಲ್ಲಿ ಉಕ್ತ ಅ-ಸುರ ಕೃಷ್ಣನ ನಾಮಸಂಕೇತ ರಹಸ್ಯವು, ಮಹಾಭಾರತ-ಗೀತೆಯ 'ಭಗ'ವಾನ್ ಕೃಷ್ಣನಾಮ ರಹಸ್ಯವನ್ನರಿಯಲು ನೆರವಾಗಲಿದೆ. ಶುಷ್ಣನು ಶೋಷಕನು, ದಾಹಕನು, ಉಸುರಿನೊಡನೆ ಉರಿಯನ್ನು ಉಗುಳುವವನು ಇದ್ದರೆ, ಅ-ಸುರ ಕೃಷ್ಣನು ಕರ್ಷಕ : ಕರ್ಷ್ಣುವು, (ಘರ್ಷ್ಣುವೂ ಸರಿ) ಎಂದರೆ ಸೆಳೆವವನು

ತೀಡುವವನು, ತಿಕ್ಕಿಮುಕ್ಕುವವನು - (ನೆಲ) ಉಳುವವನು ಆಗುತ್ತಾನೆ. ಈ ಕೃಷ್ಣ ನಾಮದಿಂದ ಇವನು ಇರುಳಿಗೆ ಸಂಬಂಧಿಸಿದವನೆಂದು ಸೂಚಿಸುವ ಉದ್ದೇಶವಿರಬೇಕು. ಶುಷ್ಣನು 'ಅಹಿ' ಶೃಂಗಿ ಎಂಬ ಕಾರಣದಿಂದ ಕೃಷ್ಣನೂ ಶೃಂಗಿ-ಅಹಿಯೆ ಆಗುತ್ತಾನೆ. ಗ್ರೀಕ್ ಪವಾಡ ಕಥೆಯ 'Horned Serpent' ಡೈಯೋನಿಸನ್‌ನ ಏನೆಲ್ಲ ಗುಣವಿಶೇಷಣಗಳೂ ಈ ಶೃಂಗಿ ಅಹಿವರ್ಗದ ಅ-ಸುರರಲ್ಲೂ ಇರಲಿಕ್ಕೆ ಸಾಕು. ಭಾಗವತಾದಿಗಳಲ್ಲಿ ಕೃಷ್ಣಲೀಲಾಮೃತವನ್ನೋದುವಾಗ ಎರಡು ಪಾತಳಿಯ ಮೇಲಿನ ಅರ್ಥ-ಸ್ವೀಕರಿಸದೆ ಸಭ್ಯಭೂಮಿಕೆಯಿಂದ ಆ ಕಥೆಗಳನ್ನು ಕೇಳಲು ಶಕ್ಯವೇ ಇಲ್ಲ. ನೀರಲ್ಲಿ ಮೀಯುತ್ತಿರುವ ನೀರೆಯರ ಸೀರೆಗಳನ್ನೆಲ್ಲ ಎತ್ತಿಕೊಂಡು ವೃಕ್ಷವನ್ನೇರಿ ಕುಳಿತನೆಂಬ ಕರ್ಷಕ ಕೃಷ್ಣನ ಚರಿತೆಯ ಸೊಬಗು ಎಷ್ಟೆಂದು ವರ್ಣಿಸುವುದು? ಈ ಅಂಶುಮತೀ ಉದಕಸ್ಥ ಕೃಷ್ಣನೂ ಶೃಂಗಿ : ಅಹಿ ಎಂಬುದನ್ನು ಮನಗಾಣಲು ಗೀತೆಯ 'ಊರ್ಧ್ವ, ಮೂಲ 'ಅಕ್ಷ' : ವೃಕ್ಷ : ಸರ್ಪಿ : ಪುರುಷನನ್ನು ಸ್ಮರಿಸಿಕೊಳ್ಳಿ. ಇಷ್ಟೆ ಸಾಲದಿದ್ದಲ್ಲಿ ಈ ಅಸುರನನ್ನು 'ದ್ರಪ್ಸ:' ಎಂದುದಾಗಿದೆ! 'ದ್ರಪ್ಸ': 'ಸ್ಕನ್ನ:' ಎಂದರೆ ಹನಿಯುತ್ತಿರುವ ಸ್ರವಿಸುತ್ತಿರುವ ಅ-ಸುರ ಕೃಷ್ಣನು, ಎಂದರ್ಥ. ತೊಟ್ಟು ತೊಟ್ಟಾಗಿ ತೊಟ್ಟಿಕ್ಕುತ್ತಿರುವ ಈ ಅಹಿಯು : ರಸಸ್ರವಿಸುವ ಅಶ್ವತ್ಥನು! ಮಧ್ರು ಸವಿಸುವ 'ಪದ' ಅಕ್ಷ : ಕಣ್ಣು (Nipple) ಸ್ವರೂಪನು. 'ಕೃಷ್ಣಾ ನಿನ್ನ ಜೇರ್‌ಕೊಳವೆ (ಜೀಕಳಿ) ಹಾರಿಸಬೇಡಯ್ಯಾ. ಸೀರೆ ತೊಯ್ಯುತ್ತದೆ; ಮನೆಯವರು ಏನೆಂದಾರು ಎಂಬ ಹಾಡು, 'ಮತ್‌ಮಾರೋ ಪಿಚಕಾರಿ' ಹಿಂದಿಯಲ್ಲೂ ಉಂಟು! 'ಕಬಂಧ' ಮರುತರನ್ನು 'ಜೇರ ದಾನವಃ' 'ದ್ರಪ್ಸಿನಃ' ಎಂದುದರ ಔಚಿತ್ಯವನ್ನೂ ನೆನೆಯಿರಿ. ಆದಕಾರಣ, ಈ ದ್ರಪ್ಸ : ಸ್ಕನ್ನ: ಆಗಿರುವನು. ಶೃಂಗಿ ಕೇಶಿ : ಕರಿಯನೇ ಸರಿ.

ಶುಷ್ಣನ 'ಚರಿಷ್ಣ್ವಂ' ಪುರಿಯ ನಾಮ ಸಂಕೇತವು, ಈ ಸಂಪ್ರದಾಯ ರಹಸ್ಯಾರ್ಥಕ್ಕೆ ಎರಡು ಬಗೆಯಿಂದ ಪ್ರಯೋಜನಕಾರಿಯಾಗಿದೆ.

೧) ಶಬ್ದದ ಬಾಹ್ಯ ಆಕೃತಿ : 'ಚರಿಷ್ಣು' ಈ ಪದದೊಳಗಿನ ಸ್ನ>ಷ್ಣು ಪ್ರತ್ಯಯವು ವಿ-ಷ್ಣು ನಾಮಸಂಕೇತದಲ್ಲೂ ಉಂಟು. ಇದರಿಂದ, ಈ ಶಿಲ್ಪಶೈಲಿಯ ಸಾಮ್ಯವು ಗಮನಕ್ಕೆ ಬರುವುದು.

೨) ಚರಿಷ್ಣು ಸಂಕೇತಕ್ಕೆ ಇತಿಹಾಸವೂ ಸ್ವಲ್ಪ ಉಂಟು. ಈ ಸಂಕೇತದ ಅರ್ಥ : moving locomotive. wandering about, ಋಗ್ವೇದದಿಂದ ಭವಿಷ್ಯ ಪುರಾಣದವರೆಗೂ ಈ ಪದ ಪ್ರಯೋಗಗಳು ಉಂಟು. ಮೊನಿಯರ್ ವಿಲಿಯಂಸ್ ಕೋಶವು ನಮೂದಿಸಿರುವ ಈ ಒಂದು ವಿಶೇಷಾರ್ಥವು ತುಂಬ ಮಹತ್ವದ್ದಾಗಿದೆ. With ಬೀಜ, the semen of [moving beings i. e. of. animals)[೪]

ಋಗ್ವೇದ ಸೂಕ್ತಸ್ಥ 'ಚರಿಷ್ಣು' : ಪುರಿಯ ರಹಸ್ಯಾರ್ಥಕ್ಕೆ ಮನುಸ್ಮೃತಿಯ ಪ್ರಯೋಗದ ಹಿನ್ನೆಲೆ ಅವಶ್ಯವಿದೆ! ಈ 'ಪುರ' ಸಂಕೇತದ ಬೀಗದ ಕೈ ಮನುಸ್ಮೃತಿಯಲ್ಲಿ ದೊರೆಯುತ್ತದೆ! ಇಳಾಪುತ್ರ ಐಲನ ವಿರಹತಾಪವು ಅಸಹ್ಯವಾಗಿ ಕೂಗಾಡುವ: ಪುರೂರವನಾಮ ಸಾರ್ಥಕ್ಯಕ್ಕೆ ಕಾರಣಳಾದ ಬಸುರೆ 'ನೀರೆ' ಊರ್ವಶಿಯೂ ಒಂದು ಚರಿಷ್ಣು-ಪುರವೇ ಸರಿ!

ವಿಷ್ಣುನಾಮಕ್ಕಿಂತ ಭಗ-ವಾನ್ ಕೃಷ್ಣ (: ಕಮಲ ಅಕ್ಷ) ಈ ನಾಮ ಸಂಕೇತವು ಅಪಾಂ-ನಪ್ತೃವಿನ ಮೂಲ 'ಸನಾ'ತನ 'ದಿವ್ಯ' ದರ್ಶನವನ್ನು ಸುಸ್ಪಷ್ಟವಾಗಿ ಪ್ರತಿನಿಧೀಕರಿಸುತ್ತದೆ. ಈ ಸಂಪ್ರದಾಯಗಳ ಮೂಲ ಸಾಂಕೇತಿಕ ಪ್ರತಿಮೆ : ಅಪಾಂ-ನೃಪ್ತೃ. ಇದು ಋಗ್ವೇದಕ್ಕೂ ಪೂರ್ವದ ಸಂಕೇತ. ಋಗ್ವೇದದಲ್ಲಿ ತನೂ-ನಪಾತ್, ಮಾತರಿ (ಪುರಿ) ಶ್ವನ್, ಅಹಿಬುಧ್ನ್ಯ ಮುಂತಾದ ರೂಪ ಆಕೃತಿಯಾಗುತ್ತ ಕೊನೆಗೆ 'ಪುರಿ'ಶಯ: ಪುರುಷ ಶಬ್ದ-ಪ್ರತಿಮೆ ಗರಿಷ್ಠ ವರಿಷ್ಠವೆಂದು ಸರ್ವಮಾನ್ಯವಾದುದಾಗಿ ಕಾಣುತ್ತದೆ. ಪ್ರಜಾಪತಿ : ಬ್ರಹ್ಮ ಈ ಸಂಕೇತಗಳಿಗೆ ಸಹ

'ಪುರುಷ' ಶಬ್ದಪ್ರತಿಮೆಯ ಲೋಕಪ್ರಿಯತೆ-ಸರ್ವ ಮಾನ್ಯತೆ ದೊರೆಯಲಿಲ್ಲ. ಆದರೆ, 'ಈ 'ಪುರುಷ' ಸಂಕೇತವೂ ಮಹಾಭಾರತ ಕಾಲದಿಂದ ತೊಡಗಿ ಹಿಂದೆ ಬೀಳುತ್ತದೆ. ಬರಿದೆ 'ಶ್ರೇಷ್ಠ' ಎಂಬರ್ಥದಲ್ಲಿ ಇದು ಲೌಕಿಕ ಪಾತಳಿಯಲ್ಲಿ ವ್ಯವಹರಿಸತೊಡಗುತ್ತದೆ. 'ಪುರುಷ' ಎಂಬ ಮೊದಲಿನ ಅರ್ಥಕ್ಕಾಗಿ 'ಪುರುಷೋತ್ತಮ' ಸಂಕೇತವು ನಿರ್ಮಾಣವಾಯಿತು. ಆದರೂ ಭಗ-ವಾನ್ ರೂಢಿಗೆ ಬಂತು. 'ಭಗ-ವಂತ'ನೆಂಬಲ್ಲಿ ಪುರಿಯನ್ನುಳ್ಳವ 'ಪುರಿ-'ಶಯ' ಎಂಬ ಅಥವೇ ಇದ್ದು, ಅಪಾಂ-ನಪ್ತ್ರ ಪರಂಪರೆಯ ಸನಾ-ತನತ್ವವನ್ನೂ ಉಳಿಸಿಕೊಂಡಂತಾಯಿತು!

ಆದರೆ, ಶೈವ-ವೈಷ್ಣವ ಉಭಯ ಪರಂಪರೆಗಳಿಗೂ ಸಮಾನವಿರುವ ಪ್ರಮುಖ ಪ್ರತಿಮಾ ಸಂಕೇತಗಳು, ಆಮೇಲೆ ವಿಷ್ಣುಪಂಥೀಯರ ಸೊತ್ತು ಆಗುವುದು ಕಾಣುತ್ತದೆ. ರುದ್ರಾಧ್ಯಾಯದ ಹ್ರಸ್ವ : ವಾಮ-ನ; ಈ ಹಿನ್ನೆಲೆಯಲ್ಲಿ 'ಗುಡ್ಡರು'.[೫] ಕುಟ್ಟಿ : ಕೊಟ್ಟರಿ... ಗುಡ್ಡ=ಗಿಡ್ಡ ಹ್ರಸ್ವ : ವಾಮನ ಸರಿ. ಆದರೆ, ಗುಡ್ಡ>ಗುಂಡ (<ಕುಂಡ) ಇಲ್ಲಿ ಪುಂ-ಸ್ತ್ರೀ ಉಭಯ ಸಂಕೇತವೂ ಆಗಬಲ್ಲುದು (ambivalent ಅರ್ಥವಾಗಿ). ಕುಂಭ, ಕೊಡ, ಕುಂಭೋದರಾದಿ 'ಗುಂಡು, ಹೊಟ್ಟೆಯ ಗಣಪತ್ಯಾದಿ ಕುಂಭೋದರನು, 'ವಕ್ರ' ಮುಖನು: ಹಸ್ತ ಮುಖನು, ಹೊಟ್ಟೆಗೆ ಸುತ್ತಿದ ಹಾವು, ದಾಮೋದರ ಕೃಷ್ಣನ ಹೋಲಿಕೆಯದಾಗಿದೆ. ಈ ಹಸ್ತಿನ್ ಏಕ 'ದಂತಿ' (: ಶೃಂಗಿ)ಯ ವಾಹನ ಇಲಿ. ಜಗದಾರಂಭ ಕಾರಣನು ಇವನೂ ಕುಮಾರನೇ. ಈತನ ಬೆಂಬಲವಿಲ್ಲದ ಕಾರ್ಯಗಳು (ಸಪ್ಪೆಯಾಗಿ) ಹಾಳಾಗುತ್ತವೆ. ಈ ಬಗೆಯ ಪ್ರತಿಮಾ ರಚನಾ ವೈಶಿಷ್ಟ್ಯಗಳ ಮೂಲ ಸ್ಫೂರ್ತಿ ಇಲ್ಲಿ ಇದೆ. ಆದರೆ, 'ವಾಮ-ನ' ಅವತಾರ ಎಂದರೆ ವಿಷ್ಣುವಿನದೇ, ಎಂಬ 'ಸಮಯ' ನಿರ್ಮಾಣವಾಗಿ ನಿಂತಿದೆ! 'ಪುರುಷ' ಸೂಕ್ತದ ಮೂಲಪಾಠದಲ್ಲಿ ವಿಷ್ಣುವಿನ ನಿರ್ದೇಶವಿಲ್ಲ. ಆದರೆ, ಈಗ 'ಪುರುಷ' ಸೂಕ್ತ, ವೈಷ್ಣವ ಪಂಥೀಯರದೇ ಎಂಬ ಗ್ರಹಿಕೆ ಅನೇಕ ವಿದ್ವಾಂಸರೆಂಬವರಲ್ಲಿಯೂ ಉಂಟು. 'ಭಗವಾನ್' ಎಂಬ ಸಂಕೇತವನ್ನು ಒಂದು ಕಾಲಕ್ಕೆ ಶಿವನಿಗೂ ಉಪಯೋಗಿಸಲಾಗುತ್ತಿದ್ದುದು ಪ್ರಾಚೀನ ನಾಣ್ಯಗಳ ಮೇಲಿನ ಉಲ್ಲೇಖದಿಂದ ತಿಳಿಯುತ್ತದೆ. ಆದರೆ, ಗೀತೆಯಂತಹ ಪ್ರಭಾವೀ ಗ್ರಂಥದಿಂದಾಗಿ-'ಭಗವಾನ್' ನಾಮ ವಿಶೇಷವು, ವಿಷ್ಣುವಿನ ಪ್ರತಿಮೆಗೇ ಸಲ್ಲುವಂತಾದುದು ಕಾಣುತ್ತದೆ! ಈ ಬಗೆಯ ಸಮಾನ ಸಂಕೇತಗಳ ಮೂಲಕ, ಇವೆರಡೂ ಸಂಪ್ರದಾಯಗಳ ಮೂಲವು ಬೇರೆ ಇನ್ನೊಂದೆಡೆಯಲ್ಲಿದೆ, ಎಂದು ಊಹಿಸುವುದು ಅನಿವಾರ್ಯವಾಗುತ್ತದೆ.

ಕಂನಾಡಿನಲ್ಲಿ 'ಕೃಷ್ಣೇಶ್ವರ;' ಹೆಸರಿನ ಶಿವಾಲಯಗಳೂ ಇರುವುದು ಕಂಡುಬಂದಾಗ, ಇದು ವಿಚಿತ್ರವೆನಿಸಿತು. ಕರ್ಣೇಶ್ವರ, ಕಣ್ಣೇಶ್ವರ ಹೆಸರಿನ ಶಿವಾಲಯಗಳಿವೆ, ಕಣ್ಣೂರುಗಳಿವೆ; ಕೃಷ್ಣ>ಕಣ್ಣ>ಕಣ್ಣ ಎಂಬ ರೀತಿಯ ವ್ಯತ್ಯಾಸಗೊಂಡುದರ ಶಕ್ಯತೆಯೂ ಇಲ್ಲದಿಲ್ಲ. ಕರ್ಣೇಶ್ವರನಂತೆ ಕಲ್ಲೇಶ್ವರನ ಗುಡಿಗಳೂ ಉಂಟು! ಈ ಸಂದರ್ಭದಲ್ಲಿ ಮೂಲಸ್ಥಾನ ಕಲ್ಲೇಶ್ವರ' ಎಂಬ ಒಕ್ಕಣಿಕೆಯ ಶಾಸನಗಳ ಮೂಲಕ ಈ ಸಮಸ್ಯೆ ಇನ್ನೂ ತೊಡಕಿನದೆನಿಸಿದರೂ, 'ಮೂಲಸ್ಥಾನ' ಸಂಕೇತದ ಮೂಲಕ ಕರ್ಣೇಶ್ವರಕ್ಕಿಂತ 'ಕಲ್ಲೇಶ್ವರ' ನಾಮವೇ ಪ್ರಾಚೀನವಿರುವ ಶಕ್ಯತೆ ಕಂಡಿತು. ಕರ್ಣ=ಕಲ್ಲ ಇವುಗಳಲ್ಲಿ ಲ=ಳಕಾರ ಅಭೇದ ತೋರಿ, ಕಳ್ : ಹಾಲು ಎಂಬರ್ಥವಲ್ಲಿ 'ಹಾಲ'ಪ್ಪ ದೇವರು, ಈತನು ಮೇಯಲು ಬಂದಿದ್ದ ಹಸುಗಳು ಹಾಲು ಕರೆವಲ್ಲಿ ಸಿಕ್ಕ ದೇವತಾ ಪ್ರತಿಮೆ ಎಂಬ ದಂತಕಥೆಗಳಿಂದ ಈ ಅರ್ಥವು ಅಂದು, ಮೊದಲು ಹೊಳೆದುದು. ಅದಂತಿರಲಿ, ಇಲ್ಲಿ ಸೋಜಿಗದ್ದೆನಿಸಿದ ಸತ್ಯಾಂಶವೆಂದರೆ : ಕಲ್ಲೇಶ್ವರ-ಕರ್ಣೇಶ್ವರ-ಕೃಷ್ಣೇಶ್ವರ ಹಾಲಿನವನೇ. ಅದರಂತೆ, ಯಾದವ ಗೋವಳರ 'ಕೃಷ್ಣ' ನೆಂಬವನೂ ಹಾಲಿನವನೇ ಆಗಿದ್ದಾನೆ! ಋಗ್ವೇದದ ಅಸುರ ಕೃಷ್ಣನು : ದ್ರಪ್ಸನು. ಈ ದ್ರಪ್ಸ : ಹನಿಯನ್ನು ಸೋಮರಸದ್ದೆಂದು ಸೂಚಿಸುವ ಪ್ರಯತ್ನವೂ ಅಲ್ಲಿದೆ! ಆದರೆ, ಕೃಷ್ಣನು 'ಸೋಮಪಾಯಿಗಳನ್ನು, ಗೀತೆಯಲ್ಲಿ ಕೀಳ್ಗಳೆದಿದ್ದಾನೆ. ಆದಕಾರಣ, ಈ 'ರಸ'ದ ವೈಶಿಷ್ಟ್ಯವೇ ಬೇರೆಯಿರಲಿಕ್ಕೆಬೇಕು. ಇಲ್ಲಿ ಸೋಜಿಗವೆಂದರೆ, ಶೈವ-ವೈಷ್ಣವ ಪರಂಪರೆಗಳ ಒಂದು ವರ್ತುಲವೇ ಹೀಗೆ ಪೂರ್ಣವಾಗುತ್ತಿರುವುದು, ಇದೂ ಸಂಪ್ರದಾಯಸ್ಥ ಆಂತರಿಕ ಪ್ರಮಾಣಗಳಿಂದ! ಋಗ್ವೇದದ ಅಂಶು-ಮತೀ ನೀರಲ್ಲಿರುವ ಅ-ಸುರ, ಕೃಷ್ಣನನ್ನು 'ದ್ರಪ್ಸ' 'ಪಯೋರೂಪದಲ್ಲಿ ಹನಿವವನು' ಎಂದು ದ್ರಪ್ಸ: ಸ್ಕನ್ನ: ಎಂಬ ಇನ್ನೊಂದು ಸಂಕೇತಕ್ಕೆ ಒಯ್ಯಲಾಗಿದೆ, ಸಂಭ್ರಮ ಹೆಚ್ಚಿಸುವ ತಂತ್ರದಂತೆ.[೬]

ಋಗ್ವೇದದ ವಸಿಷ್ಠನು ವರುಣ ಪುತ್ರನಾಗಿದ್ದಾನೆ. ಆದರೂ ವಿಷ್ಣುಭಕ್ತನು. 'ಹೇ, ವಿಷ್ಣೋ ಅವನು ತ್ವಂ ಪರಮಸ್ಯ ವಿತ್ಸೇ' (ಹೇ ವಿಷ್ಣುವೇ ನಿನ್ನ ಮಹಾತ್ಮ್ಯವು ಇನ್ನಾವ ದೇವರಿಗೂ ಬರಲಾರದು) ಎಂದು ವಸಿಷ್ಠ, ವಿಷ್ಣುವೇ ಸರ್ವೋತ್ತಮನೆಂದು ಸ್ತೋತ್ರಮಾಡುವ ಈ ಸೂಕ್ತದಲ್ಲಿಯೆ, 'ಹೇ ಇಂದ್ರಾ-ವಿಷ್ಣು ನೀವು ಶಂಬರಾದಿ ಅಸುರರ ತೊಂಬತ್ತೊಂಬತ್ತು ಪುರಗಳನ್ನು ನಾಶಮಾಡಿದ್ದೀರಿ? ಎಂದು ಹೊಗಳಿದವನೂ ವಸಿಷ್ಠನೇ![2] ಹಾಗಾದರೆ ಇಲ್ಲಿ ಇಂದ್ರನಿಗೆ ಏನು ಬೆಲೆ?

ಈ ಪರಸ್ಪರ ವಿಸಂಗತ ನಿಲುಮೆಗಳು, ಮೋಡಿಕಾರ, ಮಾಟಗಾರಿಕೆಗೆ ಮಾತ್ರ ಶಕ್ಯ! ಋಗ್ವೇದದ ದೈವತಗಳಲ್ಲಿ 'ಸಮ್ರಾಟ್' ಎಂದು ಹೊಗಳಿಸಿಕೊಳ್ಳುವ ಬಲಾಢ್ಯ ವರುಣನ ಪುತ್ರನಲ್ಲಿ, ಪಿತೃಭಕ್ತಿಗಿಂತ, ವಿಷ್ಣು-ಭಕ್ತಿ ಉಕ್ಕೇರಿದ್ದು ವಿಸಂಗತವೆನಿಸುವಂತಿದೆ. ವಸಿಷ್ಠನು ತಾಯಿಯ ಮಗನು. ತಂದೆಯೆಂಬ ವರುಣನು ಮೂಲತಃ ಸೌರಮಂಡಲದ ದೈವತ. ಇದು ಮುಖ್ಯ ಕಾರಣವಿರಬಹುದು. ಮಾತೃ-ಪ್ರಧಾನ ಕುಟುಂಬ ಪದ್ಧತಿಯಲ್ಲಿ ತಂದೆಗೆ ಪ್ರಾಶಸ್ತ್ಯವಿಲ್ಲ. ಈ ಕಾರಣದಿಂದ ಸೌರಪರಂಪರೆಯವನಾದ ತಂದೆ ವರುಣನಲ್ಲಿ 'ಶಿಪಿವಿಷ್ಟ' ವಿಷ್ಣುವಿನಷ್ಟು ಆತ್ಯಂತಿಕ ಭಕ್ತಿಯು ಸ್ಫುರಿಸದಿರುವುದು ಸ್ವಾಭಾವಿಕವಾಗಿದೆ. ಅಲ್ಲದೆ, (ಶಿಪಿವಿಷ್ಟ :) ವಿಷ್ಣು=ನಾರರೂಪ, ವಿಷ್ಣು-ನಾರಾಯಣರು ಅಭಿನ್ನರೆಂಬ ಸಾಂಪ್ರದಾಯಿಕ ರಹಸ್ಯವನ್ನು ಸ್ಮರಿಸಿಕೊಳ್ಳಬಹುದು. ಆಪಸ್ವರೂಪಿ ನಾರಣನ ತೊಡೆಯಿಂದ ಹುಟ್ಟಿದವಳೆಂಬ ಉರ್ವಶಿ ವಸಿಷ್ಠನ ತಾಯಿ! ನಲ್ಲೆಯ ಪ್ರಭಾವದಲ್ಲಿ ವರುಣನಲ್ಲೂ ಸ್ಥಿತ್ಯಂತರವಾಗಿ, ಅವನು ಆಪ : ರಸ ಸ್ವರೂಪಿಯಾಗುವನಲ್ಲದೆ 'ವನಸ್ಯ ಸ್ತೂಪ' (:ಸ್ಕಂಭ) ರೂಪನಾಗುವುದನ್ನು ಮರೆಯಲಾಗದು.

ಆದಕಾರಣ, ವಸಿಷ್ಠನ ಆತ್ಯಂತಿಕ ವಿಸಂಗತ ಕೃತಿಯು ಏನಾದರೂ ಇದ್ದರೆ, ವರುಣಪುತ್ರನು ವಿಷ್ಣುಭಕ್ತನಾಗುತ್ತಾನೆ, ಎಂಬುದಲ್ಲ. 'ಶಿಪಿವಿಷ್ಟ' : ಸ್ಕಂಭ: ಹ್ರಸ್ವವಾಮನ ತನುವಿನ 'ಪುರುಷ' ವಿಷ್ಣುವಿನ ಭಕ್ತನಾದ ವಸಿಷ್ಠನು ಇಂದ್ರನ ಸ್ತೋತ್ರಮಾಡುವಲ್ಲಿ ಪ್ರಾಮಾಣಿಕತೆಯೇನು? ಈ ಸ್ತೋತ್ರದಲ್ಲಿ ವಿಷ್ಣುವು (ತನ್ನ) 'ತನ್ವಾ ವಾವೃಧಾನ' (ಬೆಳೆದುಸಿಂತ ತನುವು) ಆದನೆಂದಿರುವ ಸಾಂಕೇತಿಕ ಪ್ರತಿಮೆ ಮೂಲ ಹ್ರಸ್ವ ಶಿವಿಷ್ಟವಿದ್ದ ಸೂಚಕವೇ ಆಗಿದೆ. ಹೀಗೆ 'ಶಿಪಿವಿಷ್ಟ' ರೂಪ ವಿಷ್ಣುಭಕ್ತನಾದ ಈ ವಸಿಷ್ಠನು, 'ಶಿಶ್ನ' ದೇವರನ್ನು ಕಂಡರಾಗದ, ಅಹಿ : ಶುಷ್ಣ, ಕೃಷ್ಣ, ಶಂಬರಾದಿ ವೃತಪರಿವಾರದ ವಿನಾಶಕ್ಕಾಗಿ ಬದ್ಧ ಪ್ರತಿಜ್ಞನಾಗಿರುವವನೆಂಬ ಖ್ಯಾತಿಯ ಇಂದ್ರನನ್ನು ನಿಜವಾಗಿಯೂ ಮೆಚ್ಚಿದ್ದಾನೆಯೆ? ಮೆಚ್ಚಲು ಶಕ್ಯವೆ? ಕೆಲಬಾರಿ ಮೇಲ್ತೋರಿಕೆಯಲ್ಲಿ ಹಲವೆಡೆಗಳಲ್ಲಿ ಹೊಗಳುವ ನೆಪದಲ್ಲೂ ಇಂದ್ರನನ್ನು ನಗೆಗೀಡು ಮಾಡುವ ಹೊಂಚು ಇದ್ದಿಲ್ಲವಾದರೆ, ಋಗ್ವೇದದಲ್ಲಿಯೆ, ಇಂದ್ರನನ್ನು ಏಕಾಕ್ಷ, ಏಕಪಾತ್ 'ಪುರುಷ'ನು ಹಿಂದಿಕ್ಕಿದ ದೃಶ್ಯವು ಕಾಣಲು ಶಕ್ಯವಿದ್ದಿತೆ? 'ಪುರುಷನ ಮುಖದಿಂದ ಇಂದ್ರಾಗ್ನಿಗಳು' (ಮುಖಾತ್ ಇಂದ್ರಶ್ಚ ಅಗ್ನಿಶ್ಚ) ಹುಟ್ಟಿದರು, ಎಂದರೇನು? ಎಂದರೆ ಇದೇ ಜಾದೂ<ಯಾತು! ಮೋಡಿಕಾರಿಕೆಯ ಮಾಟ! ಪಾಠಕರ ಬುದ್ಧಿ ಮಂಕಾಗಿಸುವ ತಂತ್ರ!

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** VI ೯.೧
೨. ***ಅದೇ*** VIII. ೯೬. ೧೩-೧೬
೩. ***ಅದೇ*** IV, I, VIII. ೧೬.೧೨. ೧೦೩. ೮ ೧.೩೮ ಇತ್ಯಾದಿ
೪. ***ಮನುಸ್ಮೃತಿ*** ೧.೫೬.
೫. ಟಿ. ಬರೋ 'ದ್ರಾವಿಡ ಜ್ಞಾತಿಕೋಶ' ಶಬ್ದ ನಂ. ೧೪೦೨; ೧೩೯೦
೬. ***ಮಹಾಭಾರತ*** X. ೧೭. ೧೧-೧೩; ೧೮೧.೩
೭. ***ಋಗ್ವೇದ ಸಂಹಿತೆ*** VII. ೯೯.೫

ಮೋಡಿ : ಮಾಟಗಾರ ವಸಿಷ್ಠ

ವಸಿಷ್ಠ ಮನೆತನದ ಸೂಕ್ತಸಂಗ್ರಹಗಳ ಕೊನೆಯ ಮಂತ್ರದಲ್ಲಿ ವಸಿಷ್ಠನು ವ್ಯಕ್ತಪಡಿಸಿರುವ ಆ ಕೋಪಾಟೋಪ, ಆ ಶಾಪವಾಣಿ ಹೆದರಿಕೆಯನ್ನುಂಟು ಮಾಡುವಂತಹುದಿದೆ. ಅವನ ಸಿಟ್ಟಿನ ಕಾರಣವು : ವಸಿಷ್ಠನನ್ನು ಯಾರೊ ಮಾಟಗಾರನೆಂದು, ಸುಳ್ಳುಗಾರನೆಂದು ಆರೋಪ ಹೊರಿಸಿದ್ದಾರೆ.[1] ವಸಿಷ್ಠನು 'ಅನೃತ' ದೇವರನ್ನು ಆರಾಧಿಸುತ್ತಾನೆ. ವಸಿಷ್ಠನು ಯಾತುಗಾರ (=ಯಾತುಧಾನ) ಇದ್ದಾನೆ. ಅವನು ಮಾಟಮಾಡಿ ಬೇರೆಯವರನ್ನು ಹಿಂಸಿಸುತ್ತಾನೆ.

ತನ್ನ ಮೇಲೆ ಈ ಆರೋಪ ಮಾಡಿದವರನ್ನು ಹಾಗೂ ತನ್ನ ಮೇಲೆ ಮಾಟಮಾಡುವವರನ್ನು ನಾಶ ಮಾಡಲು ವಸಿಷ್ಠ ಮಾಡಿರುವ ದೇವತಾ ಪ್ರಾರ್ಥನೆಯಲ್ಲಿ ಈ ಅಂಶಗಳು ಬೆಳಕಿಗೆ ಬರುತ್ತಿವೆ. ವಸಿಷ್ಠನು ತನ್ನನ್ನು ರಕ್ಷಿಸಲು ಬೇಡಿಕೊಂಡ ದೈವತಗಳು : ಇಂದ್ರಾಸೋಮರು; ಜಾತವೇದ ಅಗ್ನಿ; ಮರುತರು ಆಗಿದ್ದಾರೆ. ಸೋಜಿಗದ ಸಂಗತಿಯೆಂದರೆ : ಇದರಲ್ಲಿ ಸಮ್ರಾಟ್ ತಂದೆ : ವರುಣನು. ಪ್ರಪಂಚವೆ ಯಾರ ಕೋಪಕ್ಕೆ ಹೆದರುವುದೆಂದು ಹೇಳಲಾಗಿದೆಯೊ ಆ ವರುಣನ ಹೆಸರಿಲ್ಲ! 'ನಿನ್ನ ಮಹಿಮೆ ಯಾರಿಗೆ ಬಂದೀತು!' ಎಂದು ಹೊಗಳಿದ ವಿಷ್ಣುವಿಲ್ಲ! ಮರುತರಿದ್ದರೆ, ರುದ್ರನಿಲ್ಲ! ಇದು ಹಾಗಿರಲಿ.

ವಸಿಷ್ಠ ವ್ಯಥಿತನಾಗಿ ಎನ್ನುತ್ತಾನೆ: 'ಯದಿ ವಾ ಅಹಂ ಅನೃತ ದೇವಃ ಆಸ' (ನಾನು, ಋತಸ್ವರೂಪಿಯಲ್ಲದ= ಅನೃತ ದೈವತಗಳನ್ನು ಪೂಜಿಸುತ್ತಿದ್ದರೆ,) ನನ್ನನ್ನು ಜಾತವೇದ ಅಗ್ನಿಯೆ ಶಿಕ್ಷಿಸು. ಈ ಸುಮಾರಿಗೆ ಋಗ್ವೇದದ ಮೂಲ ಭೂಮಿಕೆಯ 'ಋತ'ದ 'ಅರ್ಥ'ವು ಬದಲಾಗಿ ಬಿಟ್ಟಿದೆ! ವಿಶ್ವನಿಯಮ: ವ್ಯವಸ್ಥೆ ಈ ಅರ್ಥದ ಸ್ಥಳದಲ್ಲಿ ಋತ ಸಂಕೇತಕ್ಕೆ ರಸ-ರೇತವಾಚಕ ಅರ್ಥವು ಬಂದು ಬಿಡುತ್ತದೆ. ವರುಣ, ವಿಷ್ಣುಗಳು ಆಪ : ರಸ ಸ್ವರೂಪರು; ವನಸ್ಪೂಪ: ಅಶ್ವತ್ಥ : ಶಿಪಿವಿಷ್ಟರೂಪರು ಆಗುವರು. ವಸಿಷ್ಠನು ಇಂದ್ರನನ್ನೂ, ಸೋಮನನ್ನೂ ಜಾತವೇದ ಅಗ್ನಿಯನ್ನೂ, ರಕ್ಷಿಸಲು ಪ್ರಾರ್ಥಿಸುತ್ತಿರುವುದು ನಿಜವಿದ್ದರೂ ಈ ವರುಣಪುತ್ರನು, ವಿಷ್ಣುಭಕ್ತನೆಂಬುದು ಸುಳ್ಳೊ? ವಸಿಷ್ಠನು ಪೂಜಿಸುವ ವಿಷ್ಣುವನ್ನು 'ಅನೃತದೇವ' ಎಂದವರು ಸುಳ್ಳೋ? ಯಾರಾದರೂ ಇದ್ದರೆ ಅವರು, ಅಹಿ : ವೃತ್ರವಿರೋಧೀ ಸವಿತೃ-ಸೂರ್ಯಾಗ್ನಿ ಆರಾಧಕರೇ ಇರಲಿಕ್ಕೆ ಬೇಕು.

ವಸಿಷ್ಠನು ಈ ಸೂಕ್ತದಲ್ಲಿ ತನ್ನ ಮೇಲಣ ಆರೋಪಗಳನ್ನು ಅಲ್ಲಗಳೆಯಲು ಯೋಜಿಸಿದ್ದಾನೆ. ಈ ತಂತ್ರವು, ವೇದದಲ್ಲಿ ಒಳಪದರು ಉಂಟೆಂದು ಅರಿಯದವರಿಗೆ ಮೋಸದ್ದಾಗಿಲ್ಲವೆ? ಶಿಪಿವಿಷ್ಟ ಪೂಜಕನು ಶಿಶ್ನದೇವರ ವಿರೋಧೀ ಇಂದ್ರನನ್ನು ಹೊಗಳುತ್ತಾನೆ! ಸಹಾಯಮಾಡಲು ಬೇಡುತ್ತಾನೆ. ಈ ಪಂಥೀಯ ಈ ಬಗೆಯ ತಂತ್ರವು ಅಭ್ಯಸನೀಯವಿದೆ. ರುದ್ರನಂತೆ ವಿಷ್ಣುವೂ 'ಶಿಪಿವಿಷ್ಟ'ನೇ ಆಗಿರುವಾಗ, ಮಹಾಭಾರತ, ಭಾಗವತಗಳಲ್ಲಿ ಶೈವಪಂಥೀಯ ದೈವತ ಹಾಗೂ ಆಚಾರ-ವಿಚಾರದ ಬಗೆಗೆ ತಿರಸ್ಕಾರವನ್ನು ಹುಟ್ಟಿಸುವ

ಪ್ರಕರಣಗಳನ್ನು ಸೇರಿಸಿರುವಲ್ಲಿಯೂ ಈ ಬಗೆಯ ಗತ್ತುಗಾರಿಕೆಯೇ ಉಂಟು! ಲಿಂಗಪೂಜಕರನ್ನು ನಿಂದಿಸಿದರೆ. ಶಿಪಿವಿಷ್ಟ ವಿಷ್ಣು, ಊರ್ಧ್ವಮೂಲ ವೃಕ್ಷದ ವಿಷ್ಣು ಕೃಷ್ಣ, ರಸಸ್ರವಿಸುವ ಅಶ್ವತ್ಥ, ದ್ರಪ್ಸ-ಸ್ಕನ್ನ ಕೃಷ್ಣ ಈ ಆಕೃತಿಗಳು ಬಯಲಿಗೆ ಬರಲಾರವು, ಈ ಹೊಂಚೇ, ತಿಳಿಯದು.

ಇನ್ನೂ ಒಂದು 'ಯಾತು' ನೋಡಿ: 'ಅದಿತಿ' ಮುಂತಾದ ಮಧ್ಯಮಾ: ವಾಕ್ಕಿನ ಮೂಲಕ 'ದಿವ್ಯ'ಜ್ಞಾನ ಲಭಿಸುವ ಯುಗವು ಮುಗಿವ ಸಂಧಿಕಾಲದ ಚಿತ್ರವು ಋಗ್ವೇದದಲ್ಲಿದೆ. 'ಕಪರ್ದಿ' ಅದಿತಿ : ಆದಿಶಕ್ತಿಯು ಸಲಿಲದಲ್ಲಿ 'ತತ್' ಸ್ವರೂಪಿಯಾಗುವುದರಿಂದ, ಮಧ್ಯಮಾ: ವಾಕ್; ಶಕ್ತಿಯ ಸ್ಥಾನದಲ್ಲಿ ಕಪರ್ದಿ : ಕೇಶೀ; ಪುರುಷನೇ 'ದಿವ್ಯ' ಜ್ಞಾನೋಪದೇಶದ 'ಮಾಧ್ಯಮ;' 'ಅಕ್ಷ' ಆಗುವುದು ಅನಿವಾರ್ಯ ನಿಯತಿಯಾಗುತ್ತದೆ. 'ದಿವ್ಯಾನುಭಾವ' ಮಾರ್ಗದ ಈ ಆ-ಕೃತಿಯ ಜೀವನರೀತಿಯಲ್ಲಿ ; 'ಅದಿತಿಂ ದಿವ್ಯಂ ನಾವಂ ಆರುಹೇಮ ಸಲ್ವಸ್ತಯೇ' ಎಂಬಲ್ಲಿ ಇರುವ ನೈಸರ್ಗಿಕತೆ, 'ಪುರುಷ'ರೂಪೀ 'ದಿವ್ಯ' ನೌಕೆಯನ್ನೇರುವಲ್ಲೂ ಉಂಟೆಂದು ಒಪ್ಪಲು, 'ಕಾಣಾ'; ದಿವ್ಯಾಕ್ಷ ಪಂಥೀಯ ಶ್ರದ್ಧೆಯ ವರಲ್ಲದೆ ಬೇರಾರೂ ಅಳುಕಿ ಹಿಂದೆಗೆಯದೆ ಇರಲಾರರು. ಈ ದಿವ್ಯಾನಂದೀ ಸಂದರ್ಭದಲ್ಲಿ ಈ ಅನೈಸರ್ಗಿಕ ಸಂಬಂಧದ ಪ್ರಕಾರವು ಪ್ರಚಲಿತವಾದುದನ್ನು ಸೂಚಿಸುವ ಪುರಾತನ ಪವಾಡ ಕಥೆ ಗ್ರೀಕಿನಲ್ಲೂ ಇದ್ದುದನು ರಾಬರ್ಟ್ ಗ್ರೇವ್ಸ್ ಸೂಚಿಸದೆ ಇಲ್ಲ!

ಅಕ್ಷ-ದ್ಯೂತದ ಸೂಕ್ತದಲ್ಲಿಯೂ ಇದರ ಸೂಚಕ ಸಂಕೇತಗಳು ಉಂಟು. 'ಅಕ್ಷ'- ದ್ಯೂತದಲ್ಲಿ ಗೆದ್ದವನಿಗೆ ದೊರೆಯಬೇಕಾದ 'ಭೋಗ', ಉದ್ರಿ ಮಾತು ಅಲ್ಲ. ಇದು ಅಂದಿನ 'ಸಮಯ'ದಲ್ಲೂ ಪ್ರಚಲಿತವಿತ್ತು. 'ಅಶ್ವಸ್ಯ ಇವ ಕಿತ ವಸ್ಯ ಭೋಗಂ' ಇಲ್ಲಿರುವ 'ಅಶತ್ಥ' ಸಂಕೇತವು 'ಪುರುಷ' ಪ್ರತಿಮೆಯಾಗಿದೆ. ಈ ಕಣ; ಅಕ್ಷದ ಆಟದಲ್ಲಿ ಸೋತವನು ಗೆದ್ದವನ ದಾಸ್ಯವನ್ನು ಒಪ್ಪಿ, ಅವನ 'ಪರಿ-ಮರ್ಶನಕ್ಕೆ ಒಪ್ಪಲೇಬೇಕಾಗುತ್ತದೆ. 'ಅಕ್ಷ'-ದಾಸಿಯಂತೆ ಅಂದು ಅಕ್ಷ-ದಾಸರೂ ಇರುತ್ತಿದ್ದರು. ಪಣದಲ್ಲಿ ಸ್ತ್ರೀಯಳನ್ನು ಗೆದ್ದಲ್ಲಿ ದೊರೆವ 'ಅಶ್ವಸ್ಯ ಭೋಗ' ಮತ್ತು ಗಂಡು (?) ಗೆದ್ದಲ್ಲಿ ದೊರೆವ 'ಅಶ್ವತ್ಥ ಭೋಗ' ಒಂದೇ ಮಟ್ಟದ್ದು, ಎನ್ನಲಾದೀತೆ?

ವಸಿಷ್ಠನ ಕಾಮಧೇನುವನ್ನು ಅಪಹರಿಸಲು ವಿಶ್ವಾಮಿತ್ರನು ಮಾಡಿದನೆಂಬ ದುಷ್ಟ ಪ್ರಯತ್ನದ ಒಂದು ಪವಾಡಕಥೆಯು ಪುರಾಣಗಳಲ್ಲಿ ಕೇಳಬರುತ್ತದೆ. ಈ ಕಥೆ ವೇದದಲ್ಲಿಲ್ಲ. ವಸಿಷ್ಠನು ಸಪ್ತರ್ಷಿಗಳಲ್ಲಿ ಒಬ್ಬ. ಸಪ್ತರ್ಷಿಗಳ ಹೆಂಡತಿಯ ಹೆಸರು ವೇದದಲ್ಲಿಲ್ಲ, ಅಥರ್ವದಲ್ಲಿ ಸಪ್ತರ್ಷಿಗಳ ಸಂಗಾತಿಯೆಂದು ಅದಿತಿಯೊಬ್ಬಳ ಹೆಸರು ಉಂಟು. ವಸಿಷ್ಠನ 'ಪತ್ನಿ' ಅರುಂಧತಿಯು ನಡುವೆಯೆ ಎಲ್ಲಿಯೊ ನೆಗೆದು ಬಂದವಳು! ಬೃಹದಾರಣ್ಯಕ ಉಪನಿಷತ್ತಿನ 'ಸಪ್ತ'ರ್ಷಿಗಳ ಸಂಗಾತಿ ವಾಕ್ : ಅಷ್ಟಮೀ (= ದುರ್ಗೆ ಅಷ್ಟಮೀ ತಿಥಿ) ಇದ್ದಾಳೆ! ಇಲ್ಲಿಯೆ ಕೊನೆಗೆ, ವಾಕ್ : ಅತ್ರಿ ಆದ ಜಾದೂ ನೋಡಲು ದೊರೆಯುತ್ತದೆ! ಇದರ ಹಿಂದೆ, ಸುಸಂಗತಿ ಇಲ್ಲದಿಲ್ಲ ಮತ್ತೆ : ವಾಕ್=ಮುಖ ಅತ್ರಿಯು (ಪುರುಷೋತ್ತಮನ ಮುಖದಿಂದ ಇಂದ್ರನೊಡನೆ ಅಗ್ನಿಯೂ ಹುಟ್ಟಿದ್ದಾನೆ.) ಅಗ್ನಿ='ಅತ್ರಿ' ಸರ್ವಂ ವಾ ಅತ್ತಿ : ಅದಿತಿ! ಹೇಗಿದೆ ಈ ಲಾಗ! ಅಥರ್ವ ವೇದದಲ್ಲಿ ಈ 'ಸಪ್ತ' (:ಸರ್ಪ) ರೊಡನೆ ಬ್ರಹ್ಮೌದನದಲ್ಲಿ ಪಾಕಸಿದ್ಧಿಗೆ 'ಅದಿತಿ' (ಕುಂಭ) ಉಂಟು. (ಋಗ್ವೇದದ ದೇವಮಾತೆ ಇವಳು!) ಅದಿತಿ ಸಲಿಲ ಸ್ವರೂಪಿಯಾಗಿ ಪುರುಷ ದೇಹದಲ್ಲಿ ಅಡಗಿದ್ದಾಳೆ. 'ತಸ್ಮಾತ್ ವಿರಾಟ್ ಅಜಾಯತ'; ಏಕಾಕ್ಷ : ಏಕಪಾದನಿಂದ ವಿರಾಟ್ : (ವಿರಾಜ್ ಆಪ: ರಸ) ಉತ್ಪನ್ನವಾಗಿ, ಅದೇ ಸ್ತ್ರೀಶಕ್ತಿ ಆಯಿತು. ಆ ಬಳಿಕ ಈ ವಿಶ್ವಸ್ಥ ನರರು!- ಪುರುಷ ಸೂಕ್ತದಲ್ಲಿ ಹೇಳಿರುವ ಈ ಕ್ರಮದಂತೆ.[೨] ಆದರೆ, ಆದಿಶಕ್ತಿ (:ಸ್ತ್ರೀ) ಇರಲೇ ಇಲ್ಲದ ಪ್ರಪಂಚದ 'ಸ್ತ್ರೀಯರು' ಅವತರಿಸಿದ್ದು ಹೇಗೆ, ಎಂಬುದನ್ನು ವಿವರಿಸಲು, 'ಪುರುಷನೇ' ಸ್ತ್ರೀಯನ್ನು ಹಡೆದ ಪವಾಡ ಕತೆ ರಚಿಸುವ ಆಪತ್ತನ್ನು ಬರಮಾಡಿಕೊಂಡಂತಾಗಿದೆ; ಈ ವೇದಜ್ಞರು! ಅಲ್ಲದೆ, ಇನ್ನು ಕುಮಾರಿ (ಸ್ತ್ರೀ)ಯು ಮಧ್ಯಮಾ : ವಾಕ್ ಆಗುವ ವಾಡಿಕೆ ಬಿಡಬೇಕಾದಾಗ ದೀಕ್ಷಾಗುರು ಸ್ತ್ರೀ ಶಕ್ತಿಯ ಸ್ಥಳದಲ್ಲಿ 'ಜ್ಞಾನ' ಸಿದ್ಧಿಗಾಗಿ: 'ದಿವ್ಯ' ದರ್ಶನಕ್ಕಾಗಿ, ಕಮಲಾಕ್ಷ : ಭಾಲಾಕ್ಷರಿಗೆ ಶರಣುಹೋಗುವುದು ಒಂದೇ ದಾರಿ ಉಳಿಯುತ್ತದೆ. ಈ 'ದಿವ್ಯಜ್ಞಾನ' ಪಂಥವನ್ನು ಉಳಿಸಿಕೊಳ್ಳುವುದಿದ್ದರೆ ಮಾತ್ರ. ಆದರೆ, ಈ ದಿವ್ಯಾಕ್ಷ ಸಿದ್ಧಿಯ ಪುರುಷ-ಪುರುಷಯೋಗ, ಕನಿಷ್ಠ,

ಋಗ್ವೇದಕಾಲದಲ್ಲಾದ ಈ ಸಾಮಾಜಿಕ ಕ್ರಾಂತಿಯ ಸೂಚಕವಾಗಿದೆ.* ವಸಿಷ್ಠನ ಶಿಪಿವಿಷ್ಟ : ವಿಷ್ಣುದರ್ಶನದ ಹಂಬಲದಲ್ಲಿ 'ಅದಿತಿ: ವಾಕ್' ಸಂಪ್ರದಾಯವು ತಿರಸ್ಕೃತವಾದ ಬಳಿಕಿನ ಸಂಕ್ರಾಂತಿಯ ಚಿತ್ರವು ಒಡಮೂಡಿನಿಂತಿದೆ! ಆದರೂ ವಸಿಷ್ಠನಿಗೆ ಅವನ ಮಧ್ಯಮಾ: ವಾಕ್‌ದೇವಿ ಇದ್ದಳಲ್ಲ!

ಪುರಾಣ ಕಥೆಯಲ್ಲಿ ಸೂಚಿತವಾಗುತ್ತಿರುವ ವಸಿಷ್ಠನ (ಕಾಮ-) 'ಧೇನು' (: ವಾಕ್) ಋಗ್ವೇದದಲ್ಲಿಯೂ ಇದ್ದಾಳೆ. 'ಅಂಬೆ' 'ಅಂಬಿತಮೆ' ಎಂದು ಸಂಸ್ತುತಳಾದ ಸರಸ್ವತಿಯೇ, ವಸಿಷ್ಠನ ವಾಕ್‌ಧೇನು ಇರಬೇಕೆಂದು ಹೇಳುವುದಕ್ಕೆ ಅವಕಾಶವಿದೆ. ಎರಡು ಸಂಸ್ಕೃತಿಗಳ ಸಂಘರ್ಷದ ಸೂಚನೆ ಹಾಗೂ ತನ್ಮೂಲಕವಾಗಿ ಆಗಿರುವ ಸ್ಥಿತ್ಯಂತರ ಸೂಚಕ ಸೂಕ್ತಗಳನ್ನುಳ್ಳ ಋಗ್ವೇದದಲ್ಲಿ, ಮಧ್ಯಮಾ: ವಾಕ್-ಸರಸ್ವತಿ ದೇವಿಯನ್ನು 'ಅಂಬಿ'; ಅಂಬಿತಮೆ ಎಂದು ವರ್ಣಿಸಿರುವ ಈ ಯೋಗಾಯೋಗ, ಸತ್ಯವು ಸಾಂಕೇತಿಕ ಇರುವುದರ ಒಂದು ಸರ್ವೋತ್ಕೃಷ್ಟ ದೃಷ್ಟಾಂತವಾಗಿದೆ! ಜಗದಂಬೆ ಅದಿತಿ-ಪತಿ ಎಂಬ ತ್ವಷ್ಟಾರನ ವಾಶೀ ಆಯುಧ, ವೃತ್ರ : ಅಹಿಗಳ ಪುರ (ಪರಿ), ಮಧ್ಯಮಾ ವಾಕ್: ಅಂಬೆ, ಅಮ್ಮ ಇವು, ಕಂದಮಿಳ ಭಾಷೆಯ ಪ್ರತಿಮಾ: ಸಂಕೇತಗಳೇ ಆಗಿದ್ದಲ್ಲಿ, ಇವು ಆಪ : ರಸ ಪಂಥೀಯ ಸಾಂಸ್ಕೃತಿಕ ವಲಯ ಸೂಚಕ ಋಗ್ವೇದದ ವರ್ಣನೆಯಲ್ಲಿ ಬರುತ್ತಿರುವುದು ಪವಾಡ ಸತ್ಯಮಾತ್ರವಲ್ಲ; ಸತ್ಯದ ಪವಾಡವೇ ಆಗಿದೆ.

ವಿಶ್ವಾಮಿತ್ರನು, ವಸಿಷ್ಠನ (ಕಾಮ-) ಧೇನುವಿನ ಅಪಹಾರ ಮಾಡಿದನೆಂಬ ಕಥಾ ಸಂದರ್ಭದಿಂದ ಬೆಳಕಿಗೆ ಬರುತ್ತಿರುವ ಅಂಶಗಳನ್ನು ಇಲ್ಲಿ ಗಮನಿಸುವುದು ಅವಶ್ಯ. ಮೊದಲು 'ನದಿ': ಆಪ ಸ್ವರೂಪವಾಗಿದ್ದ ವಾಕನ್ನು, 'ಧೇನು' ಸಂಕೇತದಿಂದ ಸೂಚಿಸುವ ವಾಡಿಕೆ, ಋಗ್ವೇದದಲ್ಲಿಯೆ ತಲೆದೋರಿದ್ದುಂಟು. 'ಅದಿತಿ' ಸಂಪ್ರದಾಯ ಬಚ್ಚಿಡಲು ಕೊನೆಗೆ (ಶಾಸ್ತ್ರಕ್ಕೆ) ಸಾಂಕೇತಿಕ ನಾಲ್ಕು ಸ್ತನಗಳ ಪ್ರಾಣಿಯಾದರೂ, ಮೊದಲಲ್ಲಿ ಈ ವಾಕ್ಕು. ಎರಡೇ ಸ್ತನದ ದೇವಿಯೆ ಇಳುವಳು! ಸರಸ್ವತೀ ದೇವಿಯ ಈ ಬಗೆಯ ಸ್ತೋತ್ರ ಒಂದು ಈಗಲೂ ಉಳಿದಿದೆ![೩]

> ಹೇ ಸರಸ್ವತಿಯೆ, ನೀನು ಒಂದು ಸ್ತನದಿಂದ ಮಾನವರಿಗೆ ಅಪೇಕ್ಷಿತ ಧನಕನಕಾದಿಗಳನ್ನು
> ಇತ್ತು ಪೋಷಿಸುವೆ; ಇನ್ನೊಂದರಿಂದ ಧನಕನಕಾದಿ ಸಂಪಾದಿಸಿ ಬಾಳುವ
> ಕಲ್ಯಾಣಕರವಾದ ತಿಳುವಳಿಕೆಯನ್ನು ನೀಡುತ್ತಿಯೆ,

ಆದರೆ, ನಾಲ್ಕು ಮೊಲೆಯ (:ಚತ್ವಾರಃ ಸ್ತನಾಃ) ಧೇನುವಿನ ಉಪಾಸನೆ ಮಾಡುವ ವಾಡಿಕೆಯೇ ಎಂದಿನಿಂದಲೂ ಇದ್ದಿತು ಎಂಬ ಹಾಗಿನ ಸಂಭ್ರಮ ಹುಟ್ಟಿಸುವ ವೇದೋಪನಿಷತ್ತಿನ ಕೊನೆಯ ಪ್ರಯತ್ನವು ಈ 'ಧೇನು' ಪ್ರತಿಮೆಯ ರೂಪದಲ್ಲಿ ಬಯಲಿಗೆ ಬರುತ್ತಿದೆ. ಋಗ್ವೇದ ಉಪನಿಷತ್ತುಗಳಲ್ಲಿ ತುಂಬಿರುವ ಮೋಡಿಕಾರಿಕೆ 'ಯಾತು' ಎಂದರೆ ಇದೇ ಆಗಿದೆ.

ಈ ಹಿನ್ನೆಲೆಯಲ್ಲಿ, ವಿಶ್ವಾಮಿತ್ರನು ವಸಿಷ್ಠನ ಮಧ್ಯಮಾ: ವಾಕ್: ಸರಸ್ವತೀ ರೂಪ 'ಧೇನವನ್ನು ಕಾಮಿಸಿದ್ದು ನಿಜವಿದ್ದರೆ, ಇದು ಮೈಯಲ್ಲಿ ದೇವತಾ ಆವೇಶವಾಗುತ್ತಿದ್ದ ಕುಮಾರೀ ಸಂಪ್ರದಾಯದ ಒಬ್ಬ ನೀರೆಯನ್ನು ಕುರಿತು ಇದ್ದ ಸೆಣಸಾಟವು ಎಂದು, ಈ ಪುರಾಣ ಕಥೆಯ ಅರ್ಥವಾಗುತ್ತದೆ. ವಸಿಷ್ಠನ ಆಶ್ರಮದೊಳಗಿನ ದೇವಾರ್ಪಿತ ಕುಮಾರೀ ವಾಕ್ಕನ್ನು ವಿಶ್ವಾಮಿತ್ರನು ಕಾಮಿಸಲೇ ಇಲ್ಲವೆಂದು ಹೇಳುವುದಕ್ಕೆ ಪ್ರಮಾಣಗಳಿಲ್ಲ. ಅವರಿಬ್ಬರ ವೈಮನಸ್ಸಿಗೆ ಹೆಣ್ಣೆ ಕಾರಣವಿರಲೂಬಹುದು. ಗ್ರೀಕ್ ಕಥೆಗಳ ಮೂಲಕವಾಗಿ ದೇವಾರ್ಪಿತ ಕುಮಾರಿಯರ ಬಗೆಗಿನ ಈ ರೀತಿಯು ದೃಢಡುತ್ತದೆ. ಅಲ್ಲಿಯೂ ದೇವಾರ್ಪಿತ ಕುಮಾರೀ ವರ್ಗದ ಬಗೆಗೆ ಅಂದಿನ ಶಿಷ್ಟರಲ್ಲಿ ಸ್ಪರ್ಧೆಯಿರುತ್ತಿತ್ತು. ನಮ್ಮ ಭಾಷೆಯಲ್ಲಿರುವ ಬಸವಿ (<ವೃಷಭಿ) ಶಬ್ದಪ್ರತಿಮೆಯಲ್ಲಿ ಕಾಣುವ ಈ ಅರ್ಥ

* ಶಂಬಾ ಈ ವಿಚಾರಗಳ ತಾತ್ತ್ವಿಕ ಸರಣಿಯನ್ನು 'ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ' ಗ್ರಂಥದಲ್ಲಿ ಆಳವಾಗಿ ಚರ್ಚಿಸಿದ್ದರು. ಆ ಮಾದರಿಯೇ ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲೂ ಅನುಸರಿಸುತ್ತಾರೆ. ಈ ಅನುಸರಣವು ಹೆಚ್ಚು ತಾತ್ವಿಕವೂ ಸಾಂಸ್ಕೃತಿಕವೂ ಆಗಿದೆ (ಸಂ)

ಸಂಭವಕ್ಕೆ ಕಾರಣವಾದ ಜೀವನ ಪರಿಸರವು ಯಾವುದು? 'ಧೇನು' ರೂಪ ಮಧ್ಯಮಾ : ವಾಕ್ ಸಂಸ್ಥೆಯ ಅಧಃಪತನದ ಐತಿಹಾಸಿಕ ಅಂಶವೆ ಅಲ್ಲಿ ಕಾಣದೊರೆಯುತ್ತದೆ.

ಒರ್ವ ವಿಶ್ವಾಮಿತ್ರನಿಂದ ಮೇನಕೆಯಲ್ಲಿ 'ಸದ್ಯೋಜಾತ' ತ್ರಿಭುವನ ಸುಂದರಿ ಶಕುಂತಲೆ ಜನ್ಮತಾಳಿದ ಕಥೆಯುಂಟು. ಅದು ನಿಜವಿರಲೂ ಸಾಕು. ಆದರೆ, ಋಗ್ವೇದದ ವಸಿಷ್ಠನೊಡನೆ ಸ್ಪರ್ಧೆಯಿದ್ದಿತೆಂಬ ವಿಶ್ವಾಮಿತ್ರನು, ವಸಿಷ್ಠನಂತೆ 'ಜ್ಞಾನಿ'ಯಲ್ಲ, ಎಂದು ಹೇಳುವುದು ಆ ಪುರಾಣ ಕಥೆಯ ಮುಖ್ಯೋದ್ದೇಶವಾಗಿದೆ. ಆ ಪವಾಡಕಥೆಯಲ್ಲಿ. ವಿಶ್ವಾಮಿತ್ರನು 'ಕಾಮ'ಧೇನುವಿಗಾಗಿ ಬಂದವನಲ್ಲ. ಋಷಿ-ಮುನಿ ಪಂಥೀಯ ಮೂಲಸ್ಪರ್ಧೆ ಅವರವರ 'ಜ್ಞಾನ' ಸ್ವರೂಪದ ಬಗೆಗೆ ಇತ್ತು. ಮೂಲ ವಿಶ್ವಾಮಿತ್ರನದು ತನ್ನ 'ತತ್ : ಸವಿತುಃ ವರೇಣ್ಯಮ್...' ಉಪಾಸನೆಯ ಶ್ರದ್ಧೆ ಇರಲಿಕ್ಕೆ ಬೇಕು. ಆಪ: ರಸ ಪಂಥೀಯನಿಗೆ 'ಕಮಲಾಕ್ಷ': ವಿಷ್ಣುವಿನ 'ಶಿಪಿವಿಷ್ಟ' ದರ್ಶನಕ್ಕಾಗಿ ಪರಿತಪಿಸುವ 'ಜಾಗರ'ದ ವಸಿಷ್ಠನಿಗೆ ಸವಿತೃವಿನ ಬಗೆಗೆ ಶ್ರದ್ಧೆಯಿರಲು ಶಕ್ಯವಿಲ್ಲ. ಇವನು ರಾತ್ರೀ ಸಂಪ್ರದಾಯದವನು. ಆಕಾಶದ 'ಸಪ್ತ'ರೂಪ ಋಕ್ಷದ (ಕರಡೆಯ) ಪ್ರತಿಮೆಯಾಗಿ ವಸಿಷ್ಠನು. ಇಂದಿಗೂ ಇರುಳಿನಲ್ಲಿ ಇರುವವನು, ಈ ಮದುವೆಯಲ್ಲಿ ಮೊದಲು 'ಸಪ್ತ' (ಸರ್ಪ) ಪದಿಯಾಗಿ ಲಗ್ನ-ಬಂಧದಲ್ಲಿ ಸೇರುವ ಮುನ್ನ ಅರುಂಧತೀ-ವಸಿಷ್ಠರ ನಿಮಿತ್ತದಿಂದ ಅ ಋಕ್ಷ : (Great Bear) ಮತ್ತು ಧ್ರುವರೂಪ ಅನಿಮಿಷ ಅಕ್ಷ ದರ್ಶನ ಮಾಡಿಸುವ ವಿಧಿ ಉಂಟು. ಬ್ರಾಹ್ಮಣವಿವಾಹದ ಪ್ರಮುಖ ಅಂಗವಾಗಿ ಇಂದಿಗೂ ಇದು ಉಳಿದಿದೆ! ವಶಿಷ್ಠರ ಪತ್ನಿ ಎಂಬ ಅರುಂಧತಿಗೆ, ಅಕ್ಷ-ಮಾಲಾ' (:ಧಾರಿಣಿ) ಎಂದಿರುವ ನಾಮವಿಶೇಷವು, ವಸಿಷ್ಠ ಸಂಪ್ರದಾಯದ ಇಡಿಯಾದ ಚಿತ್ರ ದರ್ಶನ ಮೂಡಿಸಬಲ್ಲದು. ಇದು ದುಗಾಶಕ್ತಿಯ ಪರ್ಯಾಯನಾಮ. ವಸಿಷ್ಠ ಪಂಥೀಯ ಜ್ಞಾನವು, 'ದಿವ್ಯಚಕ್ಷು'ವಿಸ: ಕಣೆಯ, ಪವಾಡ: ಸತ್ಯ ಮರೆಯಿಸುವ ಸಂತ-ಮಹಂತರ ದಾರಿಯದು: 'ಸವಿತೃ'ವಿನ ಉಪಾಸನೆಯ ಫಲವಾಗಿ ದೊರವ 'ಜ್ಞಾನ'ವನ್ನು ಅವಿದ್ಯೆ ಎಂದು ನಗೆಯಾಡುವ ವಾಡಿಕೆ ಇಂದಿಗೂ ವಸಿಷ್ಠ ಪರಂಪರೆಯ ವೈಶಿಷ್ಟ್ಯವಾಗಿದೆ.

'ವಸಿಷ್ಠನು ಸಾವಿತ್ರಿ-ಗಾಯತ್ರಿಯ ಉಪಾಸಕನೊ?' ಎಂಬ ಸಮಸ್ಯೆಯನ್ನು ಕುರಿತು ಡಾ. ಸದಾಶಿವರಾವ್ ಡಾಂಗೆ ಅವರು ಒಂದು ಲೇಖನ ಪ್ರಕಟಿಸಿದ್ದರು ಅದಕ್ಕೆ ಡಾ. ವ. ನಾ. ದೇಶಪಾಂಡೆ ಮತ್ತು ಶಂ. ಬಾ. ಜೋಶಿ ಕಳಿಸಿದ ಟಿಪ್ಪಣಿ ಹೀಗಿತ್ತು: ಉಪನಿಷತ್ತುಗಳಲ್ಲಿ ವಾಕ್ ಸ್ವರೂಪೀ ಧೇನುವನ್ನು ಆರಾಧಿಸಲು ಹೇಳಿದ್ದುಂಟು. 'ವಾಚಂ ಧೇನುಂ ಉಪಾಸೀತ ತಸ್ಯಾಃ ಚತ್ವಾರಾಃ ಸ್ತನಾಃ' ಇತ್ಯಾದಿ. ಈ ಬಗೆಯ ವಿವರಣೆಯು ವೇದ ಉಪನಿಷತ್ತುಗಳಲ್ಲಿ ಹಿಂದುಗಡೆಗೆ ಬರುತ್ತದೆ. ಆದರೆ, ಮೈಯಲ್ಲಿ (ವಾಕ್) ದೇವಿಯ ಆವೇಶವಾಗುತ್ತಿದ್ದ ಸ್ತ್ರೀ-ಕುಮಾರಿಯನ್ನು ಆರಾಧಿಸುವ-ಪರಂಪರೆಯ ಪತ್ತೆಹತ್ತದಂತೆ. 'ಧೇನು' ಶಬ್ದ-ಪ್ರತಿಮೆಯ ಅಡಿಯಲ್ಲಿ ಹಿಂದಿನ ನಡೆವಳಿ ಹುಗಿದು ಸಮಾಧಿ ಕಟ್ಟಿರುವುದು ಇಲ್ಲಿ ಬಯಲಿಗೆ ಬರುತ್ತದೆ. ಅದಿತಿ : ಸ್ತ್ರೀ : ಪ್ರತಿಮೆಯನ್ನು 'ಗೌಃ, ಅಮೃತಸ್ಯ ನಾಭಿಃ' ಬಳಿಕ 'ಸಲಿಲ' ಈ ಸಂಕೇತಗಳಲ್ಲಿ ಅಡಗಿಸಿಬಿಡಲಾಗುತ್ತದೆ. ವಸಿಷ್ಠನ 'ಕಾಮಧೇನುವನ್ನು' ವಿಶ್ವಾಮಿತ್ರನು, ಅಪೇಕ್ಷಿಸಿದನು, ಎಂಬ ಸಾಂಕೇತಿಕ ಕಥೆಯಲ್ಲಿ ವೇದಕಾಲದ ಭಿನ್ನಾಭಿಪ್ರಾಯದ ನಿಜಸ್ವರೂಪವು ಬಯಲಿಗೆ ಬರುತ್ತಿದೆ. ಈ ವಾಕ್ : ಧೇನು ಇವು ಆಪ; ರಸದ ಸಾಂಕೇತಿಕ ಆಕೃತಿಗಳು. ತತ್‌ಮಯಾನಂದ ಸಿದ್ಧಿಗೆ. ಜ್ಞಾನಸಿದ್ಧಿಗೆ ಈ ವಾಕ್ ಸಾಧನವಾಗಿತ್ತು. ಆದಕಾರಣ, ವಸಿಷ್ಠನ ಸೂಕ್ತಗಳಲ್ಲಿಯೆ ಕಾಣುತ್ತಿರುವಂತೆ; ಸರಸ್ವತಿಯು ಆತನ ಉಪಾಸನಾದೈವತವಿರಲಿಕ್ಕೆ ಬೇಕು. ತತ್ : ಏಕಂ: ಸತ್, ಇದು ವಸಿಷ್ಠನ ಜ್ಞಾನದ ಆಕೃತಿ ಸ್ವರೂಪವು ಇದ್ದರೆ, ತತ್ : ಸವಿತು: (ಪ್ರಕಾಶ) : ಅಥವಾ ಋತ: ಸತ್ಯ ಇದು ವಿಶ್ವಾಮಿತ್ರನ ಜ್ಞಾನದ ಸ್ವರೂಪವು ಆಗಿದ್ದಿತು.*

---

* ವಿಶ್ವಾಮಿತ್ರ ಮತ್ತು ವಸಿಷ್ಠರು ಋಗ್ವೇದ ಸೂಕ್ತಗಳ ಮುಖ್ಯ ದ್ರಷ್ಟಾರರು. ಋಗ್ವೇದದ ಒಟ್ಟು ಹತ್ತು ಮಂಡಲಗಳಲ್ಲಿ ವಿಶ್ವಾಮಿತ್ರ ಮತ್ತು ವಸಿಷ್ಠರ ಮುಖ್ಯ ಧೋರಣೆಗಳು, ವಿಚಾರಗಳು ಅಭಿವ್ಯಕ್ತಗೊಂಡಿವೆ. ಗಾಯತ್ರಿ ಸೂಕ್ತದ ದ್ರಷ್ಟಾರ ವಿಶ್ವಾಮಿತ್ರ. ಈ ವಿಶ್ವಾಮಿತ್ರ ಹಾಗೂ ಪುರಾಣಗಳಲ್ಲಿ ಪ್ರಸ್ತಾಪಗೊಂಡಿರುವ ವಿಶ್ವಾಮಿತ್ರ ಬೇರೆ ಬೇರೆ ಎಂಬ ಚರ್ಚೆ ಉಂಟು. ಶಂಬಾ ಅವರು 'ವಿಶ್ವಾಮಿತ್ರ' ಎಂಬುದನ್ನು ಸಂಕೇತಪ್ರತಿಮೆಯಾಗಿ ಗ್ರಹಿಸುತ್ತಾರೆ. ಆ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ತಿಳಿಯುತ್ತಾರೆ (ಸಂ)

ಜ್ಞಾನಸ್ವರೂಪ ಪ್ರಕಾಶರೂಪ 'ಸತ್ಯಧರ್ಮನ್' ಸವಿತೃದೇವನನ್ನು, ಗರ್ಭಾಧಾನ-ಪ್ರಸವದ ಸಂದರ್ಭದ ದೈವತವೆಂಬ ಹಾಗೆ ಸದ್ದಿಲ್ಲದಂತೆ-ಎಂದರೆ ಋಗ್ವೇದದಲ್ಲಿಯೆ ತಿರುವು ಮುರುವಾಗಿಸಿದ ದೃಶ್ಯವು ಕಾಣುತ್ತಿದೆ. ಇದು ಯಾತು>ಜಾದೂ ಅಲ್ಲದೆ ಮತ್ತೇನು? ಸೂರ್ಯ-ಸವಿತೃದೈವತ, ಆಪ: ರಸ ಸ್ವರೂಪಿಯೂ ಆಹುದು, ಎಂಬ ಹಾಗಿನ ಈ ಸಂಭ್ರಮದಲ್ಲಿ ಭಾರತೀಯರು ಇಂದಿಗೂ ಮುಳುಗಿದ್ದಾರೆ. 'ಸೂರ್ಯ : ನಾರಾಯಣ', ಅಗ್ನಿ; ನಾರಾಯಣ ಎಂದರೇನು? ಈ ಶಬ್ದ ಪ್ರತಿಮೆಗಳಲ್ಲಿ ಹುದುಗಿರುವ ಮೋಡಿಕಾರಿಕೆಯ ಮಾಟದ ಪ್ರಜ್ಞೆ: ಎಚ್ಚರ ಉಂಟೆ? ಅಗ್ನಿ ಮತ್ತು ನಾರ (=ಆಪ) ದೇವ ಅಭಿನ್ನರು ಎಂದರೇನಂತೆ? ಸತ್ತವನು ಮತ್ತು ಜೀವವಿದ್ದವನು ಏಕಕಾಲಕ್ಕೇ ನಿಜವಿದ್ದಲ್ಲಿ ಅವನು ಜೀವನ್ಮೃತನೇ ಆಗಿರಬಲ್ಲನು. ಜೀವನ್ಮೃತ ಚೈತನ್ಯದ ಪ್ರತಿಮೆ ಮಾತ್ರ ಎಂದೂ ಆಗಲಾರ ! ನಿಜವೊ?

ಸವಿತೃ ಸಂಪ್ರದಾಯವು ಇರುಳಿನ ಸಂಪ್ರದಾಯವಾಗಿ ಮಾರ್ಪಟ್ಟುದನ್ನು ಕಂಡ ಋಗ್ವೇದಕಾಲೀನ ವಿಚಾರವಂತರು; 'ಸಕ್ತುಂ ಇವ ತಿತ ಉನ ಪುನಂತಃ' ವಾಕ್ ಉಪಾಸಕರು. ಈ ಸ್ಥಿತ್ಯಂತರಕ್ಕೆ ಕಾರಣವಾದ ರೀತಿಯನ್ನು 'ಯಾತು' (: ಮಾಟ: ಮೋಡಿಕಾರಿಕೆ) ಎಂದೂ ಇದಕ್ಕೆ ಕಾರಣರಾದವರನ್ನು 'ಯಾತುಧಾನ'ರೆಂದೂ ಟೀಕಿಸಿರಲಿಕ್ಕೆ ಸಾಕು. ಹಗಲನ್ನು ಇರುಳಾಗಿಸಿರುವ ಜಾದೂ ಋಗ್ವೇದದಲ್ಲೆ ಆರಂಭವಾಗಿದೆ. ರಾತ್ರಿಯ ಪುತ್ರನು ಸೂರ್ಯ[೪]. ಅಹಃ ಚ ಕೃಷ್ಣಂ ಅಹಃ ಅರ್ಜುನಂ ಚ! ಅಹಸ್ : ಸಂಕೇತಕ್ಕೆ ಹಗಲು ಎಂಬರ್ಥವಿದ್ದರೂ ಬುದ್ಧಿ ಪೂರ್ವಕವಾಗಿ ಇರುಳಿನ ಅರ್ಥ ರೂಢಿಸುವುದಕ್ಕಾಗಿ ಮಾಡಿದ ಯತ್ನವಾಗಿದೆ. ವೈಶ್ವಾನರಾಗ್ನಿಯ ಆಜ್ಞೆಯಿಂದ ಕೃಷ್ಣ (ಇರುಳು) ಅರ್ಜುನ (ಹಗಲು) ಒಬ್ಬರೊಬ್ಬರ ಹಿಂದೆ ತಿರುಗುತ್ತಿದ್ದಾರೆ. ಈ ಚಕ್ರಾಕಾರದಲ್ಲಿ ಜನ್ಯಂ-ಜನಕ ಸಂಬಂಧ ಸೂಚಿಸಿ ಇರುಳಿನಿಂದ ಹಗಲು : ಮೃತ್ಯುವಿನಿಂದ ಜೀವಸೃಷ್ಟಿ ಎಂಬ ಸಿದ್ಧಾಂತಕ್ಕೆ ಜಿಗಿಯುವುದು ಅಲ್ಲಲ್ಲಿ ಕಾಣುತ್ತದೆ! ವೈಶ್ವಾನರ: (:ತ್ರಿತನಲ್ಲಿ) ಇವನೇ ಪ್ರಥಮ ಮನುಜ; ಎಂದು ಅರ್ಥವಾಗುವುದನ್ನು ಈ ಸೂಕ್ತದಲ್ಲೆ ತಪ್ಪಿಸಿ ಬಿಡಲಾಗಿದೆ. ಈ ತ್ರಿಲೋಕವ್ಯಾಪಿ ವೈಶ್ವಾನರ; ಮರ್ತ್ಯನ ಜಠರಾಗ್ನಿ ಮಾಡಿ. ಅವನ ಭುವಃ, ಸ್ವಃ ಸಂಬಂಧ ತಪ್ಪಿಸಿ, ನರ: ಅರ್ಜುನನೂ ರೇತನಾದು! ಜಾಗುತ್ತಾನೆಗಾರ ಅನ್ಯತದೇವ ಪೂಜಕ ಎಂಬವರ ಟೀಕೆಯಿಂದ ವಸಿಷ್ಠ ಕುಲದ ಒಬ್ಬ ವಾಸಿಷ್ಠನು ಸಂತೃಪ್ತನಾಗಿ, ನನ್ನನ್ನು 'ಯಾತುಧಾನು' ಎಂದವರನ್ನು, ಹೇ ಇಂದ್ರಾ-ಸೋಮ, ಅಗ್ನ್ಯಾದಿ ದೈವತಗಳೇ ಸುಟ್ಟು ಬಿಡಿರಿ, ನಾಶಮಾಡಿರಿ ಎಂದು ಶಪಿಸುವ ಸೂಕ್ತವೊಂದನ್ನು ವಸಿಷ್ಠಕುಲದ ಮಂತ್ರಸಂಗ್ರಹದ ಕೊನೆಯಲ್ಲಿ ಸೇರಿಸಲಾಗಿದೆ. ಆದರೆ, ಈ ಶಾಪವಾಣಿ ಆದಿವಸಿಷ್ಠನದೊ, ಎಂಬ ಪ್ರಶ್ನೆಗೆ ಅವಕಾಶವಿದೆ. ಋಗ್ವೇದ ಕಾಲದಲ್ಲಿ ಪ್ರಚಲಿತವಿದ್ದ ಋತ: ಸತ್ಯದ ಭೂಮಿಕೆಯ ದೈವತಗಳು ಬೆಲೆಗೇಡಾಗಿ, ಆಪ : ರಸ ಪಂಥೀಯ 'ಹಿರಣ್ಯಗರ್ಭ'. 'ವಿಶ್ವಕರ್ಮ': ಕೇಶೀ: ಪುರುಷಾದಿ ಹೆಸರಿನ ದೈವತ ಪ್ರತಿಮೆಗಳು ಪ್ರತಿಷ್ಠೆ ಪಡೆಯಲು ಅದೆಷ್ಟೊ ಶತಮಾನಗಳು ಸಂದಿರಬಹುದು. ಈ ತಿರುವು ಮುರುವು ಒಂದೇ ತಲೆಮಾರಿನಲ್ಲಿ ಆಗಲು ಶಕ್ಯವಿಲ್ಲ. ಮಿಶ್ರವಿವಾಹದ ಸಂತತಿಯವರು ಶಿಷ್ಟಪ್ರತಿಷ್ಠಿತರಾಗತೊಡಗಿದ ಕ್ರಮದಲ್ಲಿ ಸವಿತೃ, ಅಗ್ನಿ, ಇಂದ್ರಾದಿಗಳ ಅವಮೂಲ್ಯನ ವೇಗವು ಹೆಚ್ಚುತ್ತ ಬರುವುದು ಸ್ವಾಭಾವಿಕವಾಗಿದೆ. ಆದಕಾರಣ, ಶಾಪವಾಣಿಯ ಸೂಕ್ತವು ಮೊದಲನೆಯ ವಸಿಷ್ಠನದೇ ಇರುವ ಶಕ್ಯತೆಯು ಕಡಿಮೆ. ಈ ಮಾತು ಯಾತಕ್ಕೆ ಎಂದರೆ ಇನ್ನೊಂದು ವಿಚಿತ್ರ ಇಲ್ಲಿದೆ! ತನ್ನನು "ಯಾತುಧಾನ" ಎನ್ನುವವರನ್ನು ಶಪಿಸಲು ಬಳಸಿರುವ ಈ ಮಂತ್ರಗಳೇ ಈ ಮಹಾಮಹಿಮನು ಮಾಟಗಾರನಿರುವುದನ್ನು ಸಿದ್ಧಪಡಿಸುತ್ತವೆ. ಇವನು ಬೇಡಿಕೊಳ್ಳುತ್ತಿರುವುದು ಸೌರ ಇಂದ್ರ-ಸೋಮ, ಜಾತವೇದ ಅಗ್ನಿಯನ್ನು! ಹಗಲನ್ನು ಕೃಷ್ಣರೂಪವಾಗಿ ಪರಿವರ್ತಿಸುವ ಜಾದುವಿಗೆ, ಋತ: ಸತ್ಯವು ವಿರೋಧಿಯಾದುದು. ವಿಶ್ವನಿಯಮ ಭಂಗ ಮಾಡಿದವರನ್ನು ಮಾತ್ರ ಹವ್ಯವಾಹನ ಶಿಕ್ಷಿಸಬಲ್ಲ. ಋತ : ಸತ್ಯಾಧಿಷ್ಠಿತ ದೈವತಗಳಲ್ಲಿ ಜಾರಣ ಮಾರಣ ಶಕ್ತಿಯು ಇರಲಾರದು! ಶತ್ರುಹನನ ಮಂತ್ರಗಳನ್ನು ಪಠಿಸುವುದು ಇದೇ ಆ ಮಾಟ ಅಲ್ಲವೆ? ಈ ವಸಿಷ್ಠನು ಅಗ್ನಿಯನ್ನು 'ಜಾತವೇದ' ಹೆಸರಿನಲ್ಲಿ ಮಾರಣಕ್ರಿಯೆಗೆ ಆಮಂತ್ರಿಸುವಲ್ಲಿ ಹವ್ಯವಾಹನ, ಕವಿ, ಪ್ರಚೇತಸ ಅಗ್ನಿಯ ಕೊಲೆಯಾಗುತ್ತಿದೆ! ಋತ ಪ್ರಜಾತನೆಂಬ ಅಗ್ನಿ.

ಸಂಹಾರ ಕ್ರಿಯಾಸಕ್ತನಾಗಿರಲಾರ. ವಶಿಷ್ಠ ವಂಶೀಯ ಕೃಷ್ಣದ್ವೈಪಾಯನನು ಖಾಂಡವವನ ದಹನಕ್ರಿಯೆ ನಡೆಸುವಲ್ಲಿ ಜಾತವೇದನ ವಿಡಂಬನವೇ ಆಗಿದೆ! ಅಲ್ಲಿ ಕಟ್ಟಲಾದ ಇಂದ್ರ ಪ್ರಸ್ಥ ರುದ್ರಭೂಮಿಯ ಮೇಲೆ! ಋಗ್ವೇದ ಕಾಲದ ಪ್ರಾರಂಭದಲ್ಲಿ ಹವ್ಯವಾಹನ ಅಗ್ನಿಕ್ರವ್ಯಾದ ಅಗ್ನಿಯಿಂದ ಭಿನ್ನನಾಗಿದ್ದನೆಂಬುದನ್ನು ಅಮಾನ್ಯ ಮಾಡುವವರನ್ನು ಕಾಣೆ. ಈ ಕಾರಣದಿಂದ ಮೊದಲನೆಯ ವಸಿಷ್ಠನೇ ಹೀಗೆ ಅಗ್ನಿಯನ್ನು ಜಾತವೇದ ಹೆಸರಿನಲ್ಲಿ ಬಹಿರಂಗವಾಗಿ ಮಾರಣಕ್ರಿಯೆಗೆ ಪ್ರಾರ್ಥಿಸುತ್ತಿರಬಹುದೆ, ಎಂಬ ಸಂದೇಹವುಂಟು. ಒಂದು ವೇಳೆ ಇದು ಆ ಮೂಲ ವಸಿಷ್ಠನದೇ ಆಗಿದ್ದಲ್ಲಿ ಅವನು ಮಾಂತ್ರಿಕ ಮಾಟಗಾರನೆಂಬುದು ತನ್ನ ತಾನೇ ಸಿದ್ಧವಾಗುತ್ತಿದೆ. ಋಗ್ವೇದದ ಇಂದಿನ ಸಂಹಿತೆಯಲ್ಲಿ ತೀರ ಪ್ರಾಚೀನವೆಂಬ ಗೃತ್ಸಮದನ ಎರಡನೆಯ ಮಂಡಲದಲ್ಲಿಯೆ, ಅಗ್ನಿಯನ್ನು 'ಅದಿತಿ', 'ಅತ್ರಿ' ನಾಮದಿಂದ ನಿರ್ದೇಶಿಸಿದ್ದು ಒಂದು ಮಾಟವೇ; ಇದನ್ನು ನೋಡಿದಾಗ ಆದಿ ವಸಿಷ್ಠನೇ ಈ ಎಲ್ಲ ಕ್ರಾಂತಿಯ ತಳಹದಿಯಲ್ಲಿರುವ ಶಕ್ಯತೆ ಕಾಣುತ್ತದೆ. ಋತ : ಸತ್ಯವನ್ನು ಆಪ: ರೇತ : ರಸವಾಗಿ ಬದಲಿಸಿದ ಈ ಮಾಂತ್ರಿಕ ಶಕ್ತಿಯು ಭಾರತೀಯರ ಬೌದ್ಧಿಕ ವಿಕಾಸಕ್ಕೇ ಮಾರಕವಾಗಿ ಪರಿಣಮಿಸಿರುವುದು ಕಾಣುತ್ತಿದೆ. ಜಾದೂ<ಯಾತು ಶಕ್ತಿಯಲ್ಲಿ ಶ್ರದ್ಧೆ ಮತ್ತು ಋತ : ಸತ್ಯದಲ್ಲೂ ಶ್ರದ್ಧೆ ಇದು ಶಕ್ಯವೊ? ವಿಚಾರಿಸಬೇಕಾದ ಸಂಗತಿ.

ನಾಗ-ಪ್ರತಿಮಾ ಪೂಜೆಯ ಪೂರ್ವೋತ್ತರದ ಸಮೀಕ್ಷೆಯಿದು. ಪ್ರೊ. ಮ್ಯಾಕಡೊನೆಲ್ಲ ಅವರ ಅಭಿಪ್ರಾಯದಂತೆ, ಋಗ್ವೇದದಲ್ಲಿ ನಾಗ-ಸಂಪ್ರದಾಯವು ಕಾಣುವುದಿಲ್ಲ. ಆದರೆ, ಯರ್ಜುರ್ವೇದದಿಂದ ಉಂಟು ಎಂದು ಅವರ ಮತ. ಆದರೆ, ಹಾವುಗಳನ್ನು ದೇವ-ಜನರೆಂಬ ಮಟ್ಟದಲ್ಲಿ ಪೂಜಿಸುವುದು ಕಂಡುಬರುತ್ತದೆ. ಅಹಿ:ನಾಗ ಈ ಸಂಕೇತವು ತತ್ಕಾಲೀನ ಯತಿ-ಮುನಿ ಸಂಪ್ರದಾಯ ಅಸ್ತಿತ್ವ ಸೂಚಕ ಪ್ರತಿಮೆ ಆಗಿದೆ; ಎಂಬ ಮಾತು ಮ್ಯಾಕಡೊನೆಲ್ ಅವರ ಗಮನಕ್ಕೆ ಬಂದಿಲ್ಲ.

> 'it *does not seem likely* that later serpent worship had any *con*nection with myth of the ವತ್ರ; serpent; but, for its development was probably due rather to the influence of aborigines.[೫]

ಆದರೆ, ಈ ಅಹಿ: ಶೃಂಗಿ : ಪುರುಷ ಈ ಸಂಕೇತವು, ಕೇವಲ ಋಗ್ವೇದ ಕಾಲೀನ ಭಾರತೀಯ ಕಥೆಗಳ ವೈಶಿಷ್ಟ್ಯವಾಗಿರದೆ, ಇದೇ ಅರ್ಥದ ಆಕೃತಿಯ ಗ್ರೀಕ್‌ಭಾಷಿಕ ನಾಮಸಂಕೇತದ ಪ್ರತಿಮೆಗಳು ಆಗಿವೆ. ಅಲ್ಲಿಯ ಪುರಾತನ ಪವಾಡಕತೆಗಳಲ್ಲೂ ಇವು ಇರುತ್ತವೆ. ಆ ಮಹತ್ವದ ಪ್ರಮಾಣವು ಮ್ಯಾಕಡೊನೆಲ್ ಅವರ ದೃಷ್ಟಿಪಥದಲ್ಲಿ ಬಂದಂತೆ ತೋರುವುದಿಲ್ಲ. ಅಲ್ಲದೆ, ಗ್ರೀಕ್ ಹಾಗೂ ಭಾರತೀಯ ಮೂಲದ 'ಅಹಿ'ಗಳ ಪವಾಡ ಕಥೆಗಳ ತುಲನಾತ್ಮಕ ಸಮೀಕ್ಷೆಯು ಕೆಲವರಿಂದ ಇತ್ತೀಚೆಗೆ ಪ್ರಾರಂಭವಾದದ್ದು ಕಾಣುತ್ತದೆ. ಆದರೂ ವಿಶೇಷ ಆಳಕ್ಕೆ ಹೋದವರು ವಿರಳ. ಆದರೆ, ಪ್ರೊ. ಮ್ಯಾಕಡೊನೆಲ್‌ರವರ ಮುಂದಿನ ತಲೆಮಾರಿನ ತರುಣ ಸಂಶೋಧಕರಲ್ಲಿ ಹಾಲೆಂಡಿನ ಡಾ. ವೊಗೆಲ್ ಅವರಿಗೆ ಈ ಸರ್ಪ ಸಂಕೇತವು, ಭಾರತೀಯ ಸಾಹಿತ್ಯದಲ್ಲಿ ಸಹೇತುಕವಿರುವುದಾಗಿ ಕಂಡುಬಂದಿದೆ. ಸರ್ಪವಿಷಯಕವಾಗಿ ಆ ಸೇತು- ಹಿಮಾಚಲದ ಬೇರೆ ಬೇರೆ ಜನಗಳಲ್ಲಿ ಇಂದಿಗೂ ಇರುವ ನಂಬುಗೆಗಳನ್ನು ಸಂಗ್ರಹಿಸಿ, ಮಹಾಭಾರತದಿಂದ ತೊಡಗಿ, ಭಾರತೀಯ ಸಾಹಿತ್ಯದಲ್ಲಿ ದೊರೆವ ಸರ್ಪ ಸಂಬಂಧದ ಕಥೆಗಳನ್ನು ತುಲನಾತ್ಮಕವಾಗಿ ವಿಮರ್ಶಿಸಿ ಬರೆದ ಗ್ರಂಥದಲ್ಲಿ ಸರ್ಪಪ್ರತಿಮಾ ಪೂಜೆಯ ಹಿಂದೆ ನಿವೃತ್ತಿ ಮಾರ್ಗೀಯ ಸಂನ್ಯಾಸವಾದದ ಪ್ರೇರಣೆಯಿರುವುದಾಗಿ ಸ್ಪಷ್ಟಪಡಿಸಿದ್ದಾರೆ.

ನಾಗ-ಪ್ರತಿಮಾರಾಧನೆಯು, ಮ್ಯಾಕಡೊನೆಲ್ ಹೇಳುತ್ತಿರುವಂತೆ, ಋಗ್ವೇದ ಕಾಲದಲ್ಲಿ ಇದ್ದಿಲ್ಲವೆಂದು ಬಗೆದರೆ ಯಜುರ್ವೇದದಿಂದ ತೊಡಗಿ ಕಾಣತೊಡಗುವ ಈ ಸಮಯಾಚಾರವು, ಭಾರತದಲ್ಲಿ, ಆಗ ಯಜುರ್ವೇದದ ಕಾಲಕ್ಕೇ ಫಕ್ಕನೆ ಎಲ್ಲಿಂದ ಬಂದು ಇಳಿದಿತು ಎಂಬ ಪ್ರಶ್ನೆಯು ತಲೆಯೆತ್ತುತ್ತದೆ! ಈ ಪ್ರಶ್ನೆಗೆ, ಯಜುರ್ವೇದಕ್ಕೂ ಮುಂಚಿನದೆಂಬ ಋಗ್ವೇದದಲ್ಲಿ, ಎಂದರೆ ಯಜುರ್ವೇದದ ನಿನ್ನೆಯಲ್ಲಿ ಇದರ ಅಸ್ತಿತ್ವವು

ಇರಲೇಬೇಕೆಂದು ಲೆಕ್ಕದಿಂದ ದೊರೆವ ಉತ್ತರವು ಸರಿಯೋ, ಎಂಬುದನ್ನು ಸಂಮರ್ಶಿಸುವುದು ಪ್ರಾಪ್ತ ಕರ್ತವ್ಯವಾಗುತ್ತದೆ. ನಾನಾ ಮಾಯಾವಿ ನಾಮಸಂಕೇತಗಳಿಂದ ಜಾಗತಿಕ ಕೀರ್ತಿಯ ಮಹಾನ್ ಸಂಶೋಧಕರಿಗೆ ದಿಗ್ಭ್ರಾಂತಿಯನ್ನುಂಟುಮಾಡುತ್ತಿರುವ ಅಹಿ; ವೃತ್ರ: ಮೌನೇಯ, ವಾತರಶನ : ಕೇಶೀ : ಪುರುಷ: ಕಾಣಾ: ಏಕಾಕ್ಷರ ಸಂಕೇತ ಸಮಸ್ಯೆಯ ನೆಲೆಯು, ಕಣ್ಣಳತೆಯಲ್ಲಿ ಬರುವುದಾಗಿ ಗ್ರೀಕ್ ಪವಾಡ ಕಥೆಗಳ ತುಲನೆಯಲ್ಲಿ ದೃಢಪಡುತ್ತದೆ.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** VII. ೧೦೪
೨. ***ಅದೇ*** X. ೯೦-೫
೩. ***ಅದೇ*** I. ೧೬.೪೯
೪. ***ಅದೇ*** I. ೯೫.೧
೫. Macdonell; ***Vedic Mythology*** p. 153

ಗ್ರೀಕ್ : ಚಾಂದ್ರಸಂಪ್ರದಾಯದ ಅಸ್ತಿತ್ವ

ಮೋಹನ ಮುರಲಿ: ನಾಗ- ಸ್ವರ ! ವಿಶ್ವಮೋಹಕ 'ಸಪ್ತ' ಸ್ವರದ 'ಸಪ್ತವಾಣಿ' ಇದು! ಈ ಮಾಧ್ಯಮವು ಚೇತೋಹಾರಿ : ಪ್ರಾಣಹಾರಿ! ಹಿಡಿದರೆ ಕಚ್ಚುತ್ತದೆ ಬಿಟ್ಟರೆ ಓಡುತ್ತದೆ! ಅಹಿ: ವೃತ್ರಘ್ನನೆಂಬ ಬಿರುದಿನ ಇಂದ್ರ: ನಿಜವಾಗಿ ಸೂರ್ಯನೇ ಇವನು ವಸಿಷ್ಠ ಪರಂಪರೆಯ ಸಾಹಿತ್ಯ ಕೃತಿಗಳಲ್ಲಿ ನಗೆಯ ವಿಷಯವಾಗುತ್ತಾನೆ! ಖಲನಾಯಕನೂ ಆಗಿದ್ದಾನೆ; ಸ್ತ್ರೀರೂಪಕ್ಕೂ ತಿರುಗಿದ್ದಾನೆ. ವಸಿಷ್ಠನ ಮಾಟದಿಂದ! ಇದು ಸರಿಯೊ? ತಪ್ಪೊ? ಏಕೆಂದರೆ, ಆದಿಶೇಷ: ನಾಗನೇ ನಿಃಶೇಷನಾದರೆ! ಸೂರ್ಯಾದೇವಿಗೆ 'ಪುರುಷ' ನಾರು, ಸೃಜನಕಾರ್ಯಕ್ಕೆ?

ಗ್ರೀಕ್ ಪವಾಡಕಥೆಗಳಿಂದ ಅಲ್ಲಿಯ ಚಾಂದ್ರ ಸಂಪ್ರದಾಯದ ಅಸ್ತಿತ್ವವು ಸಿದ್ಧವಾಗಲು ತೊಂದರೆಗಳಿಲ್ಲ. ಆ ಪ್ರತಿಮೆಗಳಲ್ಲಿ ಕವಡು ಕಡಿಮೆ. ಭಾರತದಲ್ಲೂ ಸರ್ಪ (: ನಾಗ : ಅಹಿ) ಇದ್ದಾನೆ: ಋಕ್ಷ : ಕೇಶೀ ಪುರುಷ; ಕಬಂಧ; ಅಕ್ಷ; ಉತ್ತಾನಪದ ಇತ್ಯಾದಿ ಅರ್ಥಪೂರ್ಣ ಶಬ್ದಪ್ರತಿಮೆಗಳಿವೆ. ಆದರೆ, ಇವು ಆಪ : ರಸಕ್ಕೆ ಸಂಬಂಧಪಟ್ಟ ಪ್ರತಿಮೆಗಳೆಂಬುದನ್ನು ಸಹ ಅರಿಯಲು ತೊಂದರೆಗಳಿವೆ. ಅಹಿ : ವೃತ್ರ ನೀರಲ್ಲೆ ಇದ್ದಾನೆ. ಆದರೆ, ಇವು ಚಾಂದ್ರ ಪ್ರತಿಮೆಗಳೆಂಬುದನ್ನು 'ಅ-ಗಮ್ಯ' ವಾಗಿಸಿದ್ದಾಗಿದೆ! 'ನೇತಿ ನೇತಿ' ಎನಿಸುವ ರೀತಿಯಲ್ಲಿ ಮೋಡಿಯ ಮಾಟದ ಸಂಕೇತಗಳನ್ನಾಗಿಸಿರುವುದಾಗಿ ಕಂಡುಬರುತ್ತಿದೆ! ಅಹಿ : ವೃತ್ರನು, ಋಗ್ವೇದದ, ಸೌರ ದೈವತ ಮಂಡಲದಲ್ಲೆ, ಅಗ್ನ್ಯಾರಾಧನೆಯ ಪರಿಸರದಲ್ಲಿ ಮೆಲ್ಲನೆ ನುಸುಳಿ ಬಂದುದನ್ನು ವೇದಜ್ಞ ಮ್ಯಾಕಡೊನೆಲ್ ಕಂಡುಹಿಡಿದಿದ್ದಾರೆ :

> Thus it my be surmised that was originally not different from
> Ahivrutra though he is inevoked as a divine being

ಈ ಅಹಿಯೇ ಆ ಬಳಿಕ 'ಅಗ್ನಿ- ಗಾರ್ಹಪತ್ಯ'ನಾಗಿದ್ದೂ ಉಂಟು! ಅಪಾಂನಪ್ತ್ರ ಮತ್ತು ವೃತ್ರರಲ್ಲಿ ಸಾಮ್ಯವಿದೆಯೆಂದು ಮ್ಯಾಕಡೊನೆಲ್ ಸಹ ಒಪ್ಪಿರುವುದನ್ನು ಗಮನಿಸಬೇಕು! ಈ ಅಪಾಂ ನಪ್ತೃವೇ ಆಪೋವತ್ಸ : ವಿಷ್ಣು-ನಾರಾಯಣ! ಎಂದರೆ ವೃತ್ರನು ವಿಷ್ಣುವು ಅಭಿನ್ನರಾದರು! ಹಾಗಾದರೆ, ನಾನೇ 'ಯಜ್ಞ'ನು ಎಂಬ 'ವಿಷ್ಣು'; ರೂಪದ ಅರ್ಥವೇನಾಯಿತು? 'ಅಹಿ'ಯೇ ಗಾರ್ಹಪತ್ಯಾಗ್ನಿ ಎಂದರೆ ಗೃಹಪತಿಯ ಉಪಾಸನಾ ದೈವತಅಗ್ನಿಯು, 'ಅಹಿ' ರೂಪಿಯಾಗುವ ಈ 'ಮಾಟ'ವೇ, ಯಜ್ಞವು ಒಂದು ಸಂಭೋಗಕ್ರಿಯೆಯಾಗಿ ಮಾರ್ಪಟ್ಟುದಕ್ಕೆ ಸಾಕ್ಷಿಯಾಗಿದೆ. ಅಪ: ರಸ ಪಂಥೀಯ ಸಮಯಾಚಾರಗಳ ಪ್ರಭಾವದಲ್ಲಿಯೇ 'ಯಜ್ಞ'ವು ಹೀಗೆ ದೈಹಿಕ ಆಕೃತಿಯಾಯಿತು ಎಂಬುದು ಬಯಲಿಗೆ ಬರುತ್ತದೆ!

'ತತ್ : ಏಕಂ : ಸತ್ಯ' ಎಂಬ ಭೂಮಿಕೆಯಂತೆ ಬ್ರಹ್ಮಾಂಡದಲ್ಲಿ ಇದ್ದುದು ಪಿಂಡದಲ್ಲಿ, ಪಿಂಡದಲ್ಲಿರುವುದು 'ಬ್ರಹ್ಮಾಂಡದಲ್ಲಿ' ಇರಲೇಬೇಕು ಎಂಬ ವೈಚಾರಿಕ 'ಆಕೃತಿ' ಈ ಬಗೆಯ ಆಚಾರಧರ್ಮವಾಗುವುದು ಅನಿವಾರ್ಯವಿದೆ.

ಈ ತಾತ್ವಿಕ ಆಕೃತಿಯು ಒತ್ತಾಯದಲ್ಲಿ (force of logical form) ವ್ಯಕ್ತಿಗೆ, ತನ್ನ (ಸ್ತ್ರೀ ಪುರುಷ) ಸಂಯುಕ್ತ ಅಥವಾ ಯೋಗಾರೂಢ ಅವಸ್ಥೆಯೇ ಬಾಳಿನ ಪರಮೋಚ್ಚ ಸಿದ್ಧಿ, ಎಂಬ ಈ 'ಜ್ಞಾನ' (ಅರಿವು) ವು; ಇದರ ಸಾಧುತ್ವವು (?) ಪ್ರತೀತಿಗೆ ಬರತೊಡಗುತ್ತದೆ! ಈ ಅಪಾಂ-ನಪ್ತೃಸಿದ್ಧಿಯ ಸಾಧನೆಯ ತತ್‌ತ್ವ ಪ್ರಣಾಲಿಗೆ-ಇದರ ಸಮಯಾಚಾರಗಳಿಗೆ' (ಸಂ) 'ಯೋಗ' ಸಿದ್ಧಿಯ ಹೊರಗೆ ಯಾವ ಅರ್ಥ : ಮೂಲ್ಯ : ಸೌಂದರ್ಯವೂ ಬಾಳಿನಲ್ಲಿ ಇಲ್ಲ ಎಂಬ ಮನೋಭಾವದ-ಶ್ರದ್ಧೆಯು ಅನಿವಾರ್ಯ. ಆದುದರಿಂದ, ನೈತಿಕಮೂಲ್ಯಗಳು : ತಾಯಿ-ತಂದೆ, ಅಣ್ಣ-ತಮ್ಮ ಇತ್ಯಾದಿ ಭಾವನಾತ್ಮಕ ತಾರತಮ್ಯ ಸೂಚಕ ಶಬ್ದಸಂಕೇತಗಳು, ತತ್-ಏಕಂ ಭೂಮಿಕೆಯ 'ಅನುಭವ'ಕ್ಕೆ (?) ಮಾರಕವಾಗುವುದರಿಂದ ನೈತಿಕ ಮೌಲ್ಯಾತೀತ (value neutral) 'ನಿಷ್ಕಾಮ' ಕರ್ಮದ ತತ್‌ತ್ವ ಜ್ಞಾನವು ಅನಿವಾರ್ಯವಾಗುತ್ತದೆ.

ಈ ಬಗೆಯ ಯಾವುದೊಂದು ವೈಚಾರಿಕ ಹಿನ್ನೆಲೆಯ ತತ್-ತ್ವ ಪ್ರಣಾಲಿಯ ಜ್ಞಾತಜ್ಞಾತ ಬೆಂಬಲವು ಇಲ್ಲದೆ, ದೇವಾರ್ಪಿತ ಕುಮಾರೀ-ಕುಮಾರ ಸಂಪ್ರದಾಯದ ಅಸ್ತಿತ್ವವು ಅಸಂಭವ. 'ನಾಗ' ಸಂಪರ್ಕದಲ್ಲಿ ಸಂಸ್ಕೃತಿಯ ಶ್ರೀಕಾರದೊಡನೆ, ವ್ಯವಸ್ಥಿತ ಕುಟುಂಬ ಪದ್ಧತಿಯು ಆಕಾರ ಪಡೆದವ ವರೆಗಿನ ಸಂಧಿಕಾಲದಲ್ಲಿ, ಈ ಕುಮಾರೀ-ಕುಮಾರ ಜೀವನರೀತಿಯು ಯಾವ ಬಗೆಯದು ಇದ್ದಿತು? ಇದನ್ನು ಮನಗಾಣಿಸಿಕೊಳ್ಳಲು, 'ಆದಿಮಾತಾ' ಸಂಪ್ರದಾಯವು ತಿರಸ್ಕೃತವಾಗಿ 'ಕುಮಾರ' ಪೂಜಾ ಸಂಪ್ರದಾಯವು ತಲೆ ಎತ್ತಲು ಕಾರಣವಾದ ಸಂಗತಿಗಳನ್ನು ಲೆಕ್ಕಿಸಬೇಕು. ಇದು ಋಗ್ವೇದದೊಳಗಿನ ಹಾಗೂ ಈಜಿಪ್ಟ್-ಗ್ರೀಕಿನೊಳಗಿನ ವಿಶ್ವನಿರ್ಮಾಣದ ಮೊದಲ ಹಂತದ ಕಥೆಗಳ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಬೆಳಕಿಗೆ ಬಂದಿದೆ. ಮಾನವೇತಿಹಾಸದಲ್ಲಿ ಈಜಿಪ್ಟ್ ಗ್ರೀಕ್‌ನಲ್ಲಿಯಂತೆ, ಭಾರತದಲ್ಲೂ ಆಯಾ ಸಮಯಾಚಾರಗಳಲ್ಲಿ ಕಾಣಿಸಿಕೊಂಡ ಆ ವಿಶಿಷ್ಟ ಐತಿಹಾಸಿಕ ಘಟನಾಪ್ರವಾಹವೇ ಆಧುನಿಕ ವಿರಕ್ತಪಂಥಗಳ ಉಗಮ ಸ್ಥಾನದಲ್ಲಿದೆ. ಮೊದಲುತನದ ಆ ಮುಕ್ತ-ಸಂಗೀ ಜೀವನದಲ್ಲಿ ಉಂಟಾದ ಜುಗುಪ್ಸೆಯ ಕ್ರೂರ ಪ್ರತಿಕ್ರಿಯೆಯೆಂದರೆ ಈ ಬಾಳಿನ ಸಂನ್ಯಾಸವಾದೀ 'ಪರಮ ಅರ್ಥ'. ಆ ದಿವ್ಯಾಧ್ಯಾತ್ಮಿಕ ಪರಮಾರ್ಥದ ಪ್ರೇರಣೆಯ ಪರಿಣಾಮಃ ಫಲಿತವೇ, ಇಂದಿಗೂ ಉಳಿದು ಬಂದಿರುವ ಸಂನ್ಯಾಸವ್ರತಧಾರೀ ಕುಮಾರ-ಕುಮಾರೀ ಪರಂಪರೆಯ ಗುರುಪೀಠಗಳು ಹಾಗೂ ಅಂತಹ ನಾನಾ ವಿಧದ ಸಂಪ್ರದಾಯಗಳು.

ಆದರೆ, ಯುರೋಪ್ ಹಾಗೂ ಭಾರತ ಈ ಎರಡೂ ಭೂಖಂಡಗಳಲ್ಲಿ ಕಂಡುಬರುತ್ತಿರುವ ಆದಿಯುಗದ ಮಾತಾ-ಸಂಪ್ರದಾಯದ ಪ್ರತಿಕ್ರಿಯೆಯ ಆಕೃತಿಯಲ್ಲಿ ಇರುವ ವ್ಯತ್ಯಾಸವು ಭಾರತೀಯರಿಗೆ ಬೋಧಪ್ರದವಿದೆ. ಋಗ್ವೇದದ ಮೂಲ ಸೌರ : ಇಂದ್ರಾಗ್ನೀ- ಸಂಪ್ರದಾಯದ ಪವಾಡ ಕಥೆಗಳಲ್ಲಿ ಸ್ಪಷ್ಟವಾಗಿ ಅರಿಕೆಗೆ ಬರುತ್ತಿರುವ ಋತ : ಸತ್ಯದ ಭೂಮಿಕೆಯು, ಗ್ರೀಕ್ ಪವಾಡ ಕಥೆಗಳಲ್ಲಿ ಸ್ಪಷ್ಟತೆಯನ್ನು ಪಡೆದಿಲ್ಲ. ಗ್ರೀಕಿನ ಚಾಂದ್ರತಿಸ್ರೋ ದೇವಿಯರ ಮೂಲಕ ಅರಿಕೆಗೆ ಬರುವ 'ನಿಯತಿ' : Fate ಅಥವಾ moera ಎಂಬುದು ಋತದಷ್ಟು ಉನ್ನತಮಟ್ಟದ ವಿಚಾರಧಾರಣೆ (concept) ಅಲ್ಲ, ಎಂಬುದನ್ನು ಯುರೋಪೀಯರೂ ಬಲ್ಲರು. ಆದರೆ, ಇದ್ದ ಅಸಮರ್ಪಕ ವಿಚಾರ ಧಾರಣೆಯನ್ನೇ ಪಾಶ್ಚಾತ್ಯರು ಮೇಲಟ್ಟಕ್ಕೆ ಒಯ್ದು, ಆದಿಮಾತಾ : ಕುಮಾರ ಪೂಜೆಯ ವಿರಕ್ತ ಪಂಥೀಯ ಜೀವನರೀತಿಯ ದುಷ್ಪರಿಣಾಮಗಳೊಳಗಿಂದ ಹೊರಬರುವ ದಾರಿಯನ್ನು ಹುಡುಕಿಕೊಂಡರು : ಗ್ರೀಕ್-ರೋಮನ್ ಸಂಸ್ಕೃತಿಯ ಕೊಡುಗೆ (legacy) ಯ ಬೆಳಕಿನಲ್ಲಿ ತಮ್ಮ ಸಂಸ್ಕೃತಿಯ ಪುನರುತ್ಥಾನದ (renaissance) ಪ್ರಯತ್ನ ಮಾಡಿದರು. ಆದರೆ, ವಿಶ್ವವು ನಿಯಮ ಬದ್ಧವಾಗಿ ನಡೆದಿದೆ ಎಂಬ ಋತ (: ಸತ್ಯ)ದಲ್ಲಿ ಶ್ರದ್ಧೆಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿರುವ ಭಾರತೀಯ ಧೀಉಪಾಸಕರೂ ಪವಾಡ-ಚಮತ್ಕಾರಗಳ ಭೂಮಿಕೆಯ 'ಆಧ್ಯಾತ್ಮಿಕ' ಎಂಬ ಪಾರಮಾರ್ಥಿಕ ಸತ್ಯದ ಪ್ರತಿಷ್ಠೆ ಬೆಳೆಸಲು 'ಋತ'ದ ಪ್ರತಿಮಾ ಸಂಕೇತಗಳನ್ನು ನಷ್ಟಗೊಳಿಸಿದರು. ಋತ ಸಂಕೇತದ ಆರ್ತವ-ರೇತ ಎಂಬ ಅರ್ಥ ಸ್ವೀಕರಿಸಿದರು, ಆದರೆ ಮೇಲ್ತೋರಿಕೆಯಲ್ಲಿ ಭಾರತೀಯ 'ಧೀ' ಉಪಾಸನಾ ಪರಂಪರೆ ಉಳಿದುಬಂದಂತೆ ಎನಿಸುತ್ತಿದ್ದರೂ 'ಯಜ್ಞ', 'ಅಗ್ನಿ', ಇಂದ್ರ.

ಸವಿತೃ ಈ ಪ್ರತಿಮೆಗಳನ್ನೂ ಲೈಂಗಿಕ ಪಾತಳಿಯ ಮೇಲೆ ತಂದು ನಿಲ್ಲಿಸಿರುವ ಮೇಧಾವಿಗಳು, ಆ ಋಷಿ ಪರಂಪರೆಯವರೆಂಬ ಹೆಮ್ಮೆಯ 'ಬ್ರಾಹ್ಮಣ' ರೆಂಬ ವೇದೋನಾರಾಯಣರೇ ಇಂದಿಗೂ ಈ ಯಾತು ಜಾದು, ಮೋಡಿಕಾರಿಕೆಯನ್ನು ಹತಪ್ರಭವಾಗದಂತೆ, ತಮ್ಮ ಬುದ್ಧಿಸರ್ವಸ್ವವನ್ನು ಪಣಕ್ಕೆ ಹಚ್ಚಿ ದಿಙ್ನಾಗರಾಗಿ ಕಾಪಾಡುತ್ತಿರುವವರಲ್ಲಿ ಪ್ರಮುಖರು ಬ್ರಾಹ್ಮಣರೆಂಬವರೇ!

ಗ್ರೀಕ್ ಪವಾಡಕಥೆಗಳಲ್ಲಿ ಋತ : ಸತ್ಯದ ಭೂಮಿಕೆಯು ಸ್ಪಷ್ಟವಿಲ್ಲದಿದ್ದರೂ 'ವಿಮರ್ಶಾವಿರಹಿತ ಬಾಳು ಹಾಳು'! ಎಂದು ಸಾರುವ ಅದಕ್ಕಾಗಿ ತನ್ನ ಪ್ರಾಣದ ಬೆಲೆತೆತ್ತ ಮಹಾತ್ಮನ ಗ್ರೀಕ್ ಸಂಸ್ಕೃತಿಯಲ್ಲಿ ಹುಟ್ಟುತ್ತಾನೆ. ಸುಮಾರು ಸಾಕ್ರೆಟಿಸನಿಗೆ ಸಮಕಾಲೀನ ಅಥವಾ ೧-೨ ಶತಮಾನ ಮುಂಚೆಯೆ ಕಠೋಪನಿಷತ್ತು ಸಾರುತ್ತದೆ : ನ - ಚಿಕೇತ ಸಿದ್ಧಿಯೇ ಬಾಳಿಗುರಿ ಎಂದು! ಬಾಳಿನಲ್ಲಿ ಈ ಗುರಿ ಮುಟ್ಟಲು ದಾರಿ-'ನ ಮೇಧಯಾ ನ ಬಹುನಾ ಶ್ರುತೇನ'; ಗುರು ಕೃಪಾ ಪ್ರಸಾದೇನ ಎಂದು! ಸಾಕ್ರೆಟಿಸನಿಗೂ ಮುಂಚೆ, ಹಲವು ಶತಮಾನ ಮೊದಲೆ ಅಭಿವ್ಯಕ್ತಿಯನ್ನು ಪಡೆದಿದ್ದ 'ಸಕ್ತುಂ ಇವ ತಿತಉನಾ ಪುನಂತಃ' ವಾಕ್ಕಿನ ಸಂಪ್ರದಾಯವು ತಿರಸ್ಕೃತವಾಗುತ್ತದೆ, ಭಾರತದಲ್ಲಿ! 'ದಾಸಸ್ಯ ದಾಸಸ್ಯ ದಾಸೋಽಹ' ಪಂಥಗಳು ಪ್ರವರ್ಧಮಾನವಾಗುತ್ತವೆ*!

ಪುರಾತನ ಗ್ರೀಕ್ ಪವಾಡ ಕಥೆಗಳ ಪ್ರತಿಮಾಶಿಲ್ಪದಲ್ಲಿ, ಭಾರತೀಯ ಶೈಲಿಯ ಈ ಮೋಹಿನೀ ಮಾಟ : ಅಂದ ಇಲ್ಲ. ಸವಿತೃವಿನ ಉಪಾಸನಾ ಪರಂಪರೆಯ 'ಧಿಯೋ ಯೋ ನಃ ಪ್ರಚೋದಯಾತ್' ಎಂಬ ಮಂತ್ರೋಪಾಸನೆಯಿಂದ ಪಡೆವ ಶಕ್ತಿಯ ದುರುಪಯೋಗವಾದದ್ದು ಕಾಣುತ್ತದೆ : ಸೌರಪರಂಪರೆಯ ಯಜ್ಞಕ್ರಿಯೆಯನ್ನು ಶಾಕ್ತಯಜ್ಞದ ಆಕೃತಿಗೆ ತಿರುಗಿಸಿಕೊಂಡು, 'ಅಗ್ನಿ' 'ಯಜ್ಞ' 'ಸವಿತೃ' ಈ ಬಾಹ್ಯಾಕೃತಿಯನ್ನು ಉಳಿಸಿಕೊಂಡರೂ ಅರ್ಥಗರ್ಭವು (Concept) ಅಹಿ : ವೃತ್ರ ಸಂಪ್ರದಾಯದ್ದಾಗಿ ಮಾರ್ಪಟ್ಟು, ಅದುವೆ ಪೋಷಣೆ ಪಡೆದು ಪುಷ್ಟವಾದುದು ಕಾಣುತ್ತದೆ ಈಗ. ಅಗ್ನಿ-ಸೂರ್ಯೋಪಾಸಕರ ಪರಂಪರೆಯವರು ಭಾರತದಲ್ಲಿ ಸ್ವೀಕರಿಸಿದ್ದುದು ಚಾಂದ್ರಮಾನವನ್ನು ! ಆದರೆ, ಚಾಂದ್ರ-ಸರ್ಪ ಪ್ರತಿಮಾ ಸಂಕೇತಗಳ ಪವಾಡ ಕಥೆಯ ಗ್ರೀಕ್‌ಸಂಸ್ಕೃತಿಯ ಉತ್ತರಾಧಿಕಾರೀ ಪಾಶ್ಚಾತ್ಯ ದೇಶಗಳಲ್ಲಿ ಪ್ರಚಲಿತವಿರುವುದು ಸೌರ-ಪಂಚಾಂಗ! ನಾವು ತೋರಿಕೆಗೆ ಮಾತ್ರ ಸೌರರು!

ಗ್ರೀಕ್ ಮತ್ತು ಭಾರತೀಯ ಸಾಮಾಜಿಕ ಸಮಷ್ಟಿಯ ಪ್ರಜ್ಞೆ ತೋರಿದ ಪ್ರತಿಕ್ರಿಯೆಯಲ್ಲಿ ಇರುವ ವ್ಯತ್ಯಾಸವೂ ಅಭ್ಯಸನೀಯವಿದೆ. ಏಕಾಕ್ಷ : ಶೃಂಗ ಸರ್ಪ : ಅಸು-ರ ಈ ಪ್ರತಿಮೆಗೆ ಸಂಬಂಧಪಟ್ಟ ಪವಾಡ ಕಥೆಗಳ ಮೂಲಕವಾಗಿ ಈ ವ್ಯತ್ಯಾಸವನ್ನು ಅರಿಯಬಹುದಾಗಿದೆ. ಭಾರತದಲ್ಲಿ ಸರ್ಪದೈವತಗಳು ಇಂದಿಗೂ ಉಳಿದಿವೆ. ಇವು ಮೇಲಲ್ಪಟ್ಟದವರೆಂಬುವರಿಂದಲೂ ಆರಾಧಿಸಲ್ಪಡುತ್ತವೆ. ಯುರೋಪೀಯ ಪ್ರತಿಕ್ರಿಯೆಗಳಲ್ಲಿ 'ಸರ್ಪ'ವು ಆದಿಮಾತೆ. ಕುಮಾರ ಸಂಪ್ರದಾಯದ ಉಚ್ಚಮಟ್ಟದಲ್ಲೆ ತಳ್ಳಲ್ಪಟ್ಟಿದೆ ! ಕೆಲವೊಂದು ಸಮಯಾಚಾರಗಳ ತುಲನೆಯಲ್ಲಿಯೂ ಈ ವ್ಯತ್ಯಾಸವು ಚೆನ್ನಾಗಿ ನಿದರ್ಶನಕ್ಕೆ ಬರಬಲ್ಲುದಾಗಿದೆ. 'ತತ್ : ಏಕಂ' ಎಂಬ ಭೂಮಿಕೆಯ ಧಾರ್ಮಿಕಭಾವನೆ ಯುರೋಪದಲ್ಲಿ ಹಬ್ಬಿ 'ಕ್ರೈಸ್ತರು' ಎಂಬ ಹೆಸರಿನಲ್ಲಿ ಏಕಾತ್ಮಭಾವಕ್ಕೆ ಎಡೆಮಾಡಿಕೊಟ್ಟಿತು. ಭಾರತೀಯ ಭೂಮಿಯಲ್ಲಿ ತತ್ : ಸತ್ ಎಂಬ ಪರಲೋಕವಾದೀ ಪ್ರತಿಯೊಂದು ವಿರಕ್ತಪಂಥವೂ ತನ್ನದೇ ಆದ ಜಗದ್ಗುರು ಪೀಠ ನಿರ್ಮಿಸಿಕೊಳ್ಳುವ ಪ್ರಯತ್ನಪಟ್ಟಿದೆ! ಏಕಾಕ್ಷ: ಪುರುಷನ ವಿಚಾರದಲ್ಲಿ ವ್ಯಕ್ತವಾಗಿರುವ ಭಾವನೆಗಳ ತುಲನೆಯೂ ಉದ್ಬೋಧಕವಿದೆ. ಭಾರತದಲ್ಲಿ ಈ ಪುರುಷೋತ್ತಮನು ಆರಾಧ್ಯದೈವತವಾಗಿದ್ದಾನೆ.

---

* ವೈದಿಕ ಸಾಹಿತ್ಯವು ಋಕ್ಕು, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳೆಂಬ ನಾಲ್ಕು ಪ್ರಕಾರಗಳಿಂದ ಕೂಡಿದೆ. ಋಕ್ಕೆಂಬುದು ವೇದಗಳ ಮಂತ್ರಭಾಗ. ಬ್ರಾಹ್ಮಣ ಎಂಬುದು ಆ ಮಂತ್ರಗಳ ಬ್ರಹ್ಮವಿಧಿಗಳ ಬಗೆಗೆ ವಿಚಾರಿಸುತ್ತದೆ. ಆರಣ್ಯಕವು ಮಂತ್ರಗಳ ವಿನಿಯೋಗ, ಯಜ್ಞ-ಯಾಗಗಳ ವಿವರಣೆ ಹಾಗೂ ಅನೇಕ ಪೂರ್ವೋತ್ತರಗಳನ್ನು ಕುರಿತಿರುತ್ತದೆ. ಉಪನಿಷತ್ತು ವೇದಾಂತವಾಗಿದೆ. ಹೀಗಾಗಿ, ಬಾಳನ್ನು ಆರಾಧಿಸುವ ಸವಿತೃಪರಂಪರೆ ಮೊದಲು, ಇದು ಪ್ರವೃತ್ತಿಪರ. ಬಾಳು ಹಾಳು ಎಂಬುದು ನಿವೃತ್ತಿಪರಂಪರೆ. ಶಂಬಾ ಈ ಅಂಶಗಳ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ (ಸಂ)

ಆದರೆ, ಗ್ರೀಕ್‌ದೇಶದ ಸೈಕ್ಲೋಪಸನಿಗೆ ದೊರೆತ ಸತ್ಕಾರವು ಇದಕ್ಕಿಂತ ತೀರ ಬೇರೆ ಆಗಿದೆ. ಗ್ರೀಕ್ ಸೈಕ್ಲೋಪಸ್‌ನ ಕಥೆಯನ್ನು ರಾಬರ್ಟ್ ಗ್ರೇವ್ಸ ಹೀಗೆ ನಿವೇದಿಸುತ್ತಾರೆ:

> ಆ ಬಳಿಕ ಒಡೆಸಿಸ್ ಒಳ್ಳೆ ಫಲವತ್ತಾದ ಭೂಪ್ರದೇಶಕ್ಕೆ ಬಂದನು; ಹುಲುಸಾದ ಕಾಡು. ಅಸಂಖ್ಯವಾದ ಕಾಡ ಆಡುಗಳು, ಅಲ್ಲಿ ಕಂಡವು. ಆಹಾರಕ್ಕಾಗಿ ಕೆಲವನ್ನು ಕೊಂದನು. ಕೆಲ ಹೊತ್ತಿನ ಮೇಲೆ ಇದು ಏಕಾಕ್ಷ ಅಸುರರ ನಾಡಾಗಿತ್ತು, ಎಂಬುದು ಅವನಿಗೆ ತಿಳಿಯಿತು. ಈ ವಿಚಿತ್ರ ಮಾನವಾಕೃತಿಗಳಿಗೆ ಹಣೆಯ ಮೇಲೆ, ದುಂಡನ್ನ ಒಂದೇ ದೊಡ್ಡ ಕಣ್ಣು! ಇವರ ಪೂರ್ವಜರು, ಝುಉಸನಿಗಾಗಿ ಮಾಡುತ್ತಿದ್ದ ಕಮ್ಮಾರಿಕೆಯನ್ನು ಈ ಏಕಾಕ್ಷರು ಬಿಟ್ಟುಕೊಟ್ಟಿದ್ದರು. ಹೊಟ್ಟೆಗಾಗಿ ಕುರಿಸಾಕಿ ಯಾವ ಕಟ್ಟುಕಟ್ಟಳೆ ಇಲ್ಲದೆ (Without Laws) ವ್ಯವಹರಿಸುತ್ತಿದ್ದರು. ಇವರಲ್ಲಿ ಸಂಘಟನೆ ಇಲ್ಲ; ವಾಣಿಜ್ಯ ವ್ಯವಹಾರವಿಲ್ಲ; ಒಕ್ಕಲತನವಿಲ್ಲ. ಇವರಲ್ಲಿ ಪ್ರತಿಯೊಬ್ಬರೂ ಬೇರೆ ಬೇರೆ! ನಿರಾಶಾಮಯ, ಔದ್ಧತ್ಯಪೂರ್ಣಮನೋಭಾವದವರಾಗಿ (living sullenly a part) ಬಾಳುತ್ತಿದ್ದರು. ಇವರ ಬೀಡಾರ ಒಂದೊಂದು ಗುಹೆ! ಇವರು ಭಾಲಲೋಚನರು (: Large round eye).

ಸೈಕ್ಲೋಪಸ್ ದುಂಡನ್ನ ಹಣೆಗಣ್ಣಿನ ಸಾಂಕೇತಿಕ ಆಕೃತಿ, ನಡೆದಾಡುವ ಒಕ್ಕಣ್ಣಿನ ಕಂಬವನ್ನು ಹೋಲುತ್ತಿದೆ. ಇದು ಸುಮಾರಾಗಿ, ಗ್ರೀಕ್ ಪವಾಡಕಥೆಗಳ ಕೊನೆಯ ಹಂತದ ಸಂಕೇತಗಳ ಪಾತಳಿಯದಾಗಿದೆ. ಆದರೆ, ಇದಕ್ಕೂ ಪೂರ್ವದಿಂದಲೆ ಈ ಸ್ಲೈಕೋಪಸ್ ಪಂಥೀಯರ ಅಸ್ತಿತ್ವವಿದ್ದುದಾಗಿ ತಿಳಿಯುತ್ತದೆ. ಭಾರತೀಯ ಪ್ರತಿಮಾ: ಸಂಕೇತಗಳಲ್ಲಿ ವೇದದ ಕಬಂಧಕ್ಕೆ : ಮುಂಡಿಗೆಗೆ ಹೋಲುತ್ತದೆ. ಮರುತರಿಗೆ 'ಕಬಂಧ' ಎಂದುದುಂಟು! ಸ್ಲೈಕೋಪಸರು ಹೊಲಗೆಲಸ ಬಿಟ್ಟು ನೈಷ್ಕರ್ಮ್ಯ ಜೀವನರೀತಿಯವರಾಗಿದ್ದರು. ಗ್ರೇವ್ಸ ಹೇಳುವ ಈ ಸಂಗತಿಯಿಂದ ಇವರು ವಿರಕ್ತಪಂಥಿಗಳೆಂಬುದು ಸೂಚಿತವಾಗುತ್ತಿದೆ. ಭಾರತೀಯ ಮುಂಡ, ಮುಂಡಿ : ಬೋಳುತಲೆಯವ: ಸಂನ್ಯಾಸಿ ಎಂಬ ಅರ್ಥದ ಸಂಕೇತದ ಆಕೃತಿಯ ಹೋಲಿಕೆ ಇದೆ. ಈ ಸೈ ಕ್ಲೋಪಸರು ಒಂದೊಂದು ಗುಹೆಯಲ್ಲಿ ವಾಸವಾಗುತ್ತಿದ್ದ ವಿರಕ್ತ-ಯತಿಪಂಥಿಗಳು ಇರಬೇಕೆಂದು ಈ ತುಲನೆ ಹೇಳುತ್ತಿದೆ. ಪ್ರತಿಯೊಬ್ಬರೂ ಬೇರೆ ಬೇರೆ ಇರುವುದು, ಇವರು ಯಾಯಾವರ : ಯತಿ<ಯಾತಿ ವರ್ಗದವರಾಗಿರುವ ಸೂಚಕವಾಗಿದೆ. ಒಬ್ಬ ಸೈಕ್ಲೊಪಸನು ಒಬ್ಬ ಸಾಗರಕನ್ಯೆ (sea nymph) ಅಪೇಕ್ಷಿಸಿ ಅವಳನ್ನು ಮೆಚ್ಚಿಸಿ ಒಲಿಸಿ ಕೊಳ್ಳಲು ಅಸಮರ್ಥನಾದನಂತೆ. ಭಾರತೀಯ ತಪಸ್ವಿಗಳ ಹಾಗೂ ಅಪ್ಸರೆಯರ ಕಥೆ ಇಲ್ಲಿ ನೆನಪಿಗೆ ಬರುತ್ತದೆ, ಸೈಕ್ಲೋಪಸರ ಬಗೆಗಿನ ಅರ್ಥದ ಪ್ರಯತ್ನಗಳನ್ನು ಸಮೀಕ್ಷಿಸಲು ಗ್ರಂಥಗಳು ದೊರೆಯಲಿಲ್ಲ. ಗ್ರೇವ್ಸರ ಕಥಾಭಾಗದಿಂದಲೆ ಅಲ್ಲಿಯ ಸೂಚ್ಯ ಸಂಕೇತಗಳಿಂದ ಈ ಸೈಕ್ಲೋಪಸರು ಯೋಗ-ಸಾಧಕ ಪಂಥದವರಾಗಿರಲಿಕ್ಕೆ ಬೇಕೆಂದು ಕಾಣುತ್ತದೆ. ಸೈಕ್ಲೊಪಸಿಸ್ ಇದು ಬಹುವಚನಾಂತ ಪದವಿದೆ. ಇದು ಈ ಪಂಥದ ಹೆಸರು ಇರಬೇಕು. ಒಬ್ಬೊಬ್ಬರಿಗೂ ವೈಯಕ್ತಿಕ ಬೇರೆ ಬೇರೆ ಹೆಸರಿರಬೇಕೆಂದು, 'ಪೊಲಿಫೆಮುಸ್' ಈ ಅಂಕಿತನಾಮವೊಂದರಿಂದ ಸೂಚಿತವಾಗುತ್ತದೆ. ಈ ಜನವು ತಮ್ಮ ಪೂರ್ವಜರ ಕಮ್ಮಾರಿಕೆಯ ಕಲೆಯನ್ನು (art of smith craft) ಬಿಟ್ಟುಕೊಟ್ಟಿದ್ದಿತು ಎಂದರೆ ಇವರು ಭಾರತೀಯ ತ್ವಷ್ಟಾರ : ವಿಶ್ವಕರ್ಮ : ಕರ್ಮಾರ ಬ್ರಹ್ಮಣಸ್ಪತಿಯ ವರ್ಗದ ಕುಶಲ ಕಾರಾಗಿರಿಯ ಜಕ್ಕಣ (<ಯಕ್ಷ [ಣ್ಣ])ರ ಬಂಧುಗಳು ಆಗಿರಬೇಕು. ಮೂಲತಃ; ಇವರಿದ್ದ 'ಸುಜಲಾಂ ಸುಫಲಾಂ' ಭೂಮಾತೆ. ಕೃಷಿಯನ್ನು ಬಿಟ್ಟಿದ್ದುದರಿಂದ ಬಂಜೆಯಾಗಿದ್ದಳು. (ಇವರಲ್ಲಿ ಸ್ತ್ರೀಯರೂ ವಾಸವಾಗಿದ್ದರೆಂಬ ಅಂಶದ ಸೂಚನೆಯು ಇಲ್ಲ!) ಅವರ ಪೂರ್ವಜರು ಝುವೂಸ್ (ದ್ಯೌಃ) ದೇವರಿಗಾಗಿ ತಮ್ಮ ಕೈಗಾರಿಕೆಯನ್ನು ನಡೆಸುತ್ತಿದ್ದರು ಈಗ ಈ ಸೈಕ್ಲೊಪಸರು 'ಅನ್ಯದೇವಾಃ' ಉಪಾಸಕರಾಗಿದ್ದರು. ಇವರು ದುಃಖಿತಪ್ತರಂತೆ (Sullenly) ಒಬ್ಬೊಬ್ಬರೇ ಜೀವನ ನಡೆಸುತ್ತಿದ್ದರು. ಈ ನಿರ್ವೇದ-ರಸವರ್ಜ ಜೀವನ ರೀತಿಯು ಐಹಿಕ ಜೀವನವನ್ನು ದುರ್ಲಕ್ಷಿಸುವ ಸಂನ್ಯಾಸ

ಪಂಥೀಯರರದೇ ಇರಲಿಕ್ಕೆಬೇಕು. ಆದುದರಿಂದ, ಇದೆಲ್ಲವನ್ನೂ ಗಮನಿಸಿದರೆ ಈ ಹಣೆಗಣ್ಣ : ಸೈಕ್ಲೊಪಸರು 'ಭ್ರೂಮಧ್ಯ' ದೃಷ್ಟಿಯನ್ನು ಪಡೆವ ಸಿದ್ಧಿಯ ಸಾಧನೆಯಲ್ಲಿ ಇರುವ ಭಾರತೀಯ ಸ್ವರೂಪದ ಯೋಗ್ಯ ಸಾಧಕರೇ ಇರಬೇಕೆಂದು ಎನಿಸುತ್ತದೆ. ನಚಿಕೇತ ಸ್ಥಿತಿಯ ಸಿದ್ಧಿಗೆ ಭ್ರೂಮಧ್ಯ ಏಕಾಗ್ರದೃಷ್ಟಿಯ ಸಾಧನೆ ಅತ್ಯವಶ್ಯವಿರುತ್ತದೆ. ಈ ಸೈಕ್ಲೋಪಸರಿಗೆ ಸುತ್ತಲಿನದೇನೂ ಕಾಣುತ್ತಿದಿಲ್ಲ; ತಮ್ಮ ಕುರಿಗಳನ್ನು ಸಹ ಸ್ಪರ್ಶದಿಂದ ಅರಿಯುತ್ತಿದ್ದರು!

ಈ ಸೈಕ್ಲೊಪಸ್‌ರಲ್ಲಿ ವಿಖ್ಯಾತನೊಬ್ಬನು ಪೊಸೆಡೊನ್ ಎಂಬವನು 'ಚಂಚಲೆ' ನಾಮಸಂಕೇತದ ಒಬ್ಬ ನೀರೆಯ (Nymph) ಮಗ. 'ಪೊಸೆಡೊನ್' ನಾಮಕ್ಕೆ, 'ಮಲೆಗಳಲ್ಲಿ ವೃಕ್ಷರಸ (ಪೇಯ) ದಾನಮಾಡುವವ' ಎಂಬ ಅರ್ಥ ಉಂಟಂತೆ. ಎಂದರೆ, ಈ ಭಾಲಲೋಚನ; ಸೈಕ್ಲೋಪಸರು 'ರಸೋ ವೈ ಸಃ' ತತ್-ಮಯಾನಂದ ವಾದೀ ಸಂಪ್ರದಾಯದ ಒಂದು ಶಾಖೆಯ ಯೋಗೀಜನವಾಗಿರಲು ಬೇಕು. 'ಭಾಲಲೋಚನ' ಸಿದ್ಧಿಗಾಗಿ ಯೋಗಮಾರ್ಗವು ಅವಶ್ಯವಾಗಲು ಭಾರತದಲ್ಲಿಯೂ ತತ್ಕಾಲೀನ ಸಾಮಾಜಿಕ ಜೀವನರೀತಿಯಲ್ಲಾದ ಸ್ಥಿತ್ಯಂತರಗಳೇ ಕಾರಣ, ಎಂಬುದನ್ನು ಈ ಮೊದಲು ಸಮೀಕ್ಷಿಸಿದ್ದಾಗಿದೆ. ಮೈಯಲ್ಲಿ ಆವೇಶವಾಗುತ್ತಿದ್ದ ಕುಮಾರೀ ದೇವಿಯರ ಮೂಲಕ ದೊರೆಯುತ್ತಿದ್ದ 'ಬ್ರಹ್ಮ'ಸಿದ್ಧಿಯ ಈ 'ನಾರ' ಅಯನ (ದಾರಿ), ಲೋಕಲಜ್ಜೆಯಿಂದ ಕಟ್ಟಾಯಿತು. ಆದರೆ 'ತತ್' ಮಯತೆಯೇ ಬಾಳಿನ ಗುರಿ ಎಂಬ ಶ್ರದ್ಧೆಯನ್ನು ಉಳಿಸಿಕೊಳ್ಳುವುದಾದಲ್ಲಿ, ಈ ಭವಬಂಧದ ಆಚೆಯ 'ದಿವ್ಯ' ಜ್ಞಾನಾನಂದ ಸ್ಥಿತಿಗೆ ಮುಟ್ಟಲು, ಬೇರೆ ದಾರಿಗಳನ್ನು ಕಂಡುಕೊಳ್ಳುವುದು ಕ್ರಮಪ್ರಾಪ್ತವಾದ ಕರ್ತವ್ಯವಾಗುತ್ತದೆ.

ಅಂಬಾ : ಸರಸ್ವತಿಯ : ವಾಕ್-ಧೇನು ಉಪಾಸಕನಾದ ವಸಿಷ್ಠನು 'ಶಿಪಿವಿಷ್ಟ' ವಿಷ್ಣುಭಕ್ತನಾಗುವ ಚಿತ್ರವೂ ಋಗ್ವೇದದಲ್ಲಿದೆ. ನಾರದನು ನಾರಣನ ದರ್ಶನಾರ್ಥಿಯಾಗಿ ಬದರಿಗೆ ಹೋದಾಗ, ಆಶ್ರಮದಲ್ಲಿ ತಪೋನಿರತ ನರ-ನಾರಣರ ಜೋಡಿಯು ಕಾಣಿಸಿದ್ದಾಗಿ ಮಹಾಭಾರತದಲ್ಲಿಯೆ ವರ್ಣನೆಯುಂಟು! ಅಲ್ಲಿ ಮಧ್ಯಮಾ ವಾಕ್ : ಧೇನು ಇದ್ದುದರ ಉಲ್ಲೇಖವೇ ಇಲ್ಲ! ನರನಿಗೆ ನಾರಣ : ಪುಂಡರೀಕಾಕ್ಷನೇ ಜ್ಞಾನದ ಮಾಧ್ಯಮ ಆಗಿದ್ದಾನೆ. ವಸಿಷ್ಠನ ತಂದೆ ಉರ್ವಶೀ ಪ್ರಿಯ-ವರುಣನು ಒಬ್ಬನೇ ಕಾಣುವುದು ಅಪ-ರೂಪವೆಂದು ತಜ್ಞರು ಸೋಜಿಗಪಟ್ಟಿದ್ದಾರೆ. ಮಿತ್ರಾವರುಣ ಈ ಜೋಡು ರೂಪದ ವಿಖ್ಯಾತ ಸಂಯುಕ್ತ ದೈವತವು ಋಗ್ವೇದದಲ್ಲೆ ಮೊತ್ತಮೊದಲು! ಆದರೆ, ಈ ಬಗೆಯ ಪುಲ್ಲಿಂಗೀ ಸಂಯುಕ್ತ ಪ್ರತಿಮಾ: ಸಂಕೇತಗಳ ಸಂಖ್ಯೆ, ಋಗ್ವೇದದ ಕೊನೆಕೊನೆಗೆ ಹೆಚ್ಚುತ್ತ ಬರುತ್ತದೆ! ಇದರ ಹಿಂದೆ, ಒಂದಕ್ಕಿಂತ ಹೆಚ್ಚು ಕಾರಣಗಳಿವೆ. ಆದರೆ, ಈ ಚರ್ಚೆ ಇಲ್ಲಿ ಅನಾವಶ್ಯಕ. ಪುರಾಣಕಾಲದ ಈ ಸಂಯೋಗ ನೋಡಿರಿ: ನಾರಣನು ಸೂರ್ಯನಲ್ಲಿ; ಸೂರ್ಯನು ನಾರಾಯಣನಲ್ಲಿ ಐಕ್ಯವಾದನೆಂಬಲ್ಲಿ ಅನೈಸರ್ಗಿಕ ತತ್-ಮಯತೆಯ ಪರಮಾವಧಿಯುಂಟು! ಅಗ್ನಿ-ನಾರಾಯಣ ಇನ್ನೂ ಒಂದು ಅದೇ ಬಗೆಯ ಅನೈಸರ್ಗಿಕ ಏಕಾತ್ಮತೆ! ಬಾದರಾಯಣ ಸಂಬಂಧ!

ಕುಂಡಲಿನೀಯೋಗದ (Serpent Power) ದಾರಿಯ ಸೂಚಕ 'ಸಾರ್ಪರಾಜ್ಞೆ' ದೇವತೆಯ ಸ್ತೋತ್ರವೊಂದು ಋಗ್ವೇದದಲ್ಲಿ ಇದ್ದುದರ ಉಲ್ಲೇಖ ಹಿಂದೆ* ಬಂದಿದೆ. ತ್ರಿಚಕ್ರಯೋಗ : (ದ್ವಿ) ಚಕ್ರವಾಕ ಯೋಗದಲ್ಲಿ, ಷಟ್-ಚಕ್ರ-ಯೋಗವು ನೈಸರ್ಗಿಕ ರೀತಿಯಲ್ಲಿ (೩+೩) ತನ್ನ ತಾನೆ ಫಲಿಸುತ್ತಿತ್ತು. ಆದರೆ, ಮಧ್ಯಮಾ: ವಾಕ್ : ಕುಮಾರೀ ಸಂಪ್ರದಾಯವು, ನಿಜವಾಗಿಯೂ ವಾಮ (ಸುಂದರ) ಮಾರ್ಗ, ಅಕ್ಷರಶಃ ಅರ್ಥದಲ್ಲಿ. ಆದರೆ, ಈ ಕಣೆಯ ಕಾಣಾ: ಅಕ್ಷವು ಸಾಮಾಜಿಕ ಜೀವನದ ಸಂದರ್ಭದಲ್ಲಿ ಸಮಾಜಧಾರಣೆಯ ದೃಷ್ಟಿಯಿಂದ 'ವಾಮ' ಮಾರ್ಗ. ಇದಕ್ಕೆ, ವ್ಯಭಿಚಾರದ ದಾರಿ. 'ವಾಮದೇವ್ಯ' ಎಂಬ ಹೆಸರು ಪ್ರಾಪ್ತವಾದುದರಲ್ಲೆ, ಅದರ ಆತ್ಮಚರಿತ್ರವು ಅಳವಟ್ಟಿದೆ. ವಾಮ-ನ, ವಾಮ-ದೇವರು : ದಿವ್ಯಾಕ್ಷರು, ದಿವ್ಯಾಂಗಿಗಳು; ಎಂದರೆ ದಿವ್ಯಚಕ್ಷುಗಳು 'ಕಾಣ'ರು.

---

* ವೇದದೊಳಗಿನ ಯೋಗಸಂಪ್ರದಾಯ ಸೂಚಕ ಇನ್ನೂ ಕೆಲ ಉಲ್ಲೇಖಗಳನ್ನು ವಿಸ್ತಾರಭಯದಿಂದ ಎತ್ತಿ ವಿವರಿಸಲು ಶಕ್ಯವಾಗುತ್ತಿಲ್ಲ.

'ಕಾಣ' ಎಂಬುದಕ್ಕೆ ಸಂಸ್ಕೃತ ಸಾಹಿತ್ಯದಲ್ಲಿ ಸಂಭವಿಸಿರುವ 'having only one loope or ring, & 'one eyed' ಆದುದರಿಂದ, ಗ್ರೀಕಿನ ಸೈಕ್ಲೊಪಸರೂ 'ಕಾಣರು'. 'ಕಾಣೇಯ ವಿಧ' a country inhabited by ಕಾಣೆಯ ಭಾರತದಲ್ಲೂ ಕಾಣೇಯ ಸೈಕ್ಲೊಪಸರ ದೇಶವೆ? 'ಕಾಣೋಲೀ-ಮಾತೃ': ಕುಮಾರೀ-ಪುತ್ರ, ಮೃಚ್ಛಕಟಿಕದಲ್ಲಿ ಉಂಟು. ಸುಮಾರು ಕ್ರಿಸ್ತಾಬ್ದದ ೨-ಣನೆಯ ಶತಕದವರೆಗೂ, 'ಕಾಣಾ' ಕುಮಾರಿ ಶಬ್ದಾರ್ಥವು ವೇದಕಾಲೀನ ಸಮಯದ ಆವರಣದ ಸೂಚನೆಯನ್ನುಳ್ಳುದಾಗಿತ್ತು!

ಗಂಡು ಅಥವಾ ಹೆಣ್ಣು ಇದು ಅಪೂರ್ಣ ಆಕೃತಿ. ಇದು 'ಅರ್ಧಗರ್ಭ': ಅಪೂರ್ಣ ಜೀವಿ. ಋಗ್ವೇದದಲ್ಲಿ ವಿಷ್ಣುವಿಗೆ ('ಸಪ್ತ' : ಸರ್ಪ) 'ಅರ್ಧ ಗರ್ಭಃ' ಎಂದಿದೆ, ಆದುದರಿಂದ, ವಾಮಾಂಗೀ ಯೋಗವಿಲ್ಲದೆ, ಗಂಡು 'ಅನಾಥ' (alienated): ವಾಮನಾಂಗ-ಯೋಗವಿಲ್ಲದೆ ಹೆಣ್ಣು ಅನಾಥೆ! ಈ 'ಅಪಾಂ ನಪಾತ್' ಆದರ್ಶದ ಪೂರ್ಣ-ಯೋಗ ಸಾಧನೆಗೆ ಆತಂಕಕಾರಿಯಾದ ಸಾಮಾಜಿಕ ಪ್ರಜ್ಞೆ-ಎಂದರೆ 'ಸಮಾಜ', 'ಶತು,-ಇದುವೆ ವ್ಯಕ್ತಿಗಳ ಕಾಮನಾ ಅತೃಪ್ತಿಗೆ, ಅನಾಥತೆಗೆ ಕಾರಣವಾಗುತ್ತಿರುವುದರಿಂದಾಗಿ! ಆದರೆ, 'ನಾಗ' ಸಂಪರ್ಕದ ನಿಮಿತ್ತದಿಂದಾಗಿ ಚೇತರಿಸಿದ 'ಸಂದೃಕ್', ಭಾಷಿಕಪ್ರತಿಮಾ : ಸಂಕೇತಗಳ ನಿರ್ಮಿತಿಗೂ ಕಾರಣವಾಗಿ (ಅಂತಃ) 'ಸಾಕ್ಷಿ'ಯ ಉದಯಕ್ಕೆ ಪೀಠಿಕೆಯಾಯಿತು. ಇದೂ ನಿಜ. ಸಂದೃಕ್ಕಿನ ಏಕಮೇವಾದ್ವಿತೀಯ 'ಕಾಣಾ' ಶಕ್ತಿಯು, ತನ್ನ ದುರ್ಧರ ಶತ್ರು, ತಾನೇ ನಿರ್ಮಿಸಿಕೊಂಡಂತಾಯ್ತು! ಈ ಕಾರಣದಿಂದ ಭಾಷೆಯ 'ಅರ್ಥಂ' 'ಅನರ್ಥಂ ಭಾವಯ ನಿತ್ಯಂ:' ಎಂಬ ವಿಚಾರ ಮಾಡಿ ಭಾಷೆಯೆಂಬುದೂ ಸೂತಕವಾಯ್ತು. ಈ ಕಾಣಾ: ದಿವ್ಯ ಅಕ್ಷ ಸಾಧನಾ ಮಾರ್ಗದಲ್ಲಿ ಇದು ಉಂಟು. ಈ ಹಾಳು ಸಮಾಜ ತ್ಯಜಿಸಿ 'ಗುಹೆ' ಸೇರಿ ಕುಳಿತುಕೊಳ್ಳುವ ಹಾದಿಗಳನ್ನು 'ದಿವ್ಯ' ಮಾರ್ಗಿಗಳು ಹುಡುಕಿ ಕೊಂಡರು. 'ಯಾ-ಯಾವರ': ಯಾತಿ>ಯತಿ ಮಾರ್ಗವು ಇದಕ್ಕೆ ನಿದರ್ಶನವಾಗಿದೆ.

ಋಗ್ವೇದದಲ್ಲಿಯೆ ಸೂಚಿತವಾಗಿರುವ ದೇವತಾ 'ಚಾರುನಾಮ' ಸ್ಮರಣೆ, ಅಂದಿನ 'ಜಾಗೃವಾಂಸರು' ಕಂಡುಹಿಡಿದ ತತ್-ಮಯತೆಯ ಸಾಧನೆಯ ಇನ್ನೂ ಒಂದು ದಾರಿ ಆಗಿದೆ. ಈ ಸಾಧನೆಗೆ ಪ್ರೇರಕ, ಪೋಷಕವಾಗಿ 'ಅಕ್ಷ' ಅಥವಾ ಪುಷ್ಪ' ಮಾಲಾಧಾರಣದಲ್ಲಿಯೂ, ಸ್ತ್ರೀ-ಪುರುಷರಿಗೆ ಸಾಂಕೇತವಾಗಿ, ತಮ್ಮ ಅನಾಥತೆಯಿಂದ ಮುಕ್ತರಾದ ಮನೋಭಾವ ತಂದುಕೊಳ್ಳಲು ಬರುವುದರ ಸೂಚನೆಗಳೂ ಉಂಟು. ಅಶ್ವಿನಿಗಳನ್ನು 'ಪುಷ್ಕರ ಸ್ರಜ': ಕಮಲ ಮಾಲಾಧಾರಿ ಎಂದುದರಲ್ಲಿ ಔಚಿತ್ಯವಿದೆ. ಆರುಂಧತಿಗೆ 'ಅಕ್ಷಮಾಲಾ' ಎಂದೇ ಪರ್ಯಾಯ ನಾಮವಿದೆ! ಈ ಹಿನ್ನೆಲೆಯಲ್ಲಿ ದುರ್ಗೆಯು ಧರಿಸುವುದು, 'ರುಂಡ' ಮಾಲೆಯಾಗಿರದೆ ಅದು 'ಮುಂಡ' ಮಾಲೆಯೆ ಆಗಿರಲಿಕ್ಕೆ ಬೇಕೆಂದು ಸ್ಪಷ್ಟವಾಗುತ್ತದೆ. ಆದರೆ, 'ಪೂರ್ವದ್ವಾರ'ವೇನು? 'ಅಪರದ್ವಾರ'ವೇನು? ಯೋಗ-ಸಿದ್ಧರಿಗೆ ಎರಡೂ ಸಮವೇ. 'ಸಮತ್ವಂ ಯೋಗ ಉಚ್ಯತೇ! ಬಾಳನ್ನು 'ತತ್: ಏಕಂ' ಸ್ವರೂಪದ್ದಾಗಿ ಭಾವಿಸುವಲ್ಲಿ ಜೀವನದೊಳಗೆ ತಾರತಮ್ಯ ಕೂಡದು. ಔಚಿತ್ಯ-ನೈತಿಕ-ಮೂಲ್ಯಾದಿಗಳ ಲೆಕ್ಕ ಸಲ್ಲದು. ಕಮಲ : ಅಕ್ಷಧ್ಯಾನಾನಂದನದಲ್ಲಿ ಸುತ್ತಲಿನ ಪ್ರಪಂಚದ ವಿಸ್ಮೃತಿ ನಿರ್ಮಿಸಿದಾಗಲೆ ಆ (ದಿವ್ಯ) ನಂದಲೋಕಸಿದ್ಧಿ ತಾನೆ?

ಆದರೆ, 'ಅಕ್ಷ' ಸಂಕೇತವನ್ನು ರುಂಡ ಮತ್ತು ಮುಂಡ ಎರಡೂ ಅರ್ಥದಲ್ಲಿ ಬಳಸುವುದರಿಂದ 'ದಿವ್ಯ' ಆಧ್ಯಾತಿಕ ಮೂಲ್ಯಗಳ ಹಾನಿಯೂ ಆಗದೆ ಇಲ್ಲ. ಬಾಣಕವಿಯ ಕಾದಂಬರಿಯ ಪಾತ್ರ ಹಾಗೂ ಘಟನಾ ಸಂಕೇತಗಳು ವೇದಕಾಲೀನ ಆಪ: ರಸ ಪಂಥೀಯ ಸಮಯದ ಹಿನ್ನಲೆಯಲ್ಲಿ ವಿಶೇಷಾರ್ಥಾದಾಯಕವಾಗುವುದಾಗಿ ಕಾಣುತ್ತದೆ. ಮಹಾಶ್ವೇತೆ ಹಾಗೂ ಅವಳ ಮನೋವಲ್ಲಭನ ಮೊದಲ ಸಂದರ್ಶನವನ್ನು ವರ್ಣಿಸಿದ್ದು ಹೀಗಿದೆ :

> ಪ್ರಪ್ರಥಮ ಸ್ಪರ್ಶಸುಖದ ಸೌಭಾಗ್ಯ ಅವನನ್ನೂ ನನ್ನನ್ನೂ ಮೈ ಮರೆವಂತೆ ಮಾಡಿತು.
> ಅವನ ಕರ, ಕಂಪಿಸತೊಡಗಿ 'ಅಕ್ಷದ' ಮಾಲೆ ಕೆಳಗೆ ಬೀಳಲು, ಕೊಡಲೇ ಅದನ್ನು
> ನಾನು ಕೊರಳಲ್ಲಿ ಹಾಕಿಕೊಂಡು ಅವನ ಆಲಿಂಗನ ಸುಖವನ್ನೇ ಅನುಭವಿಸುವಷ್ಟು

ಪರವಶಳಾದೆ.[೨] ಚಂದ್ರಾಪೀಡನಿಗೆ ಕಾದಂಬರಿ 'ಶೇಷ' ಹಾರ ಅರ್ಪಿಸಿದಳೆಂಬಲ್ಲಿಯೂ ವೇದಕಾಲೀನ ಸಾಂಕೇತಿಕ ಪ್ರತಿಮೆಯೆ ಉಂಟು. ಆದರೆ, 'ಶೇಷ' ಹಾರದ ಆಕೃತಿಯ ಬಗೆಗೆ, ಇನ್ನೂ ಹಲವಾರು ಬೇರೆ ಪ್ರಯೋಗಗಳಿಂದ ಸ್ಪಷ್ಟೀಕರಣವು ಅವಶ್ಯವಿದೆ. ಬಾಣನ ಪಾತ್ರಗಳಲ್ಲಿ ಪುರಾತನ ಚಾಂದ್ರಸಂಕೇತಗಳು ಪುನರುಜ್ಜೀವಿತವಾದಂತಿವೆ. ಚಂದ್ರಾಪೀಡಿತನು ಕಥಾನಾಯಕ: ಇನ್ನೊಂದು ಪಾತ್ರ ತಾರಾ-ಪೀಡ. ಕಾದಂಬರೀ: ಮಧುರ ಪೇಯವೆ ಮೈವೆತ್ತ ದಿವ್ಯರೂಪ. ಇವುಗಳಲ್ಲೇ 'ಇಂದ್ರಾಯುಧ! ಗಾಳಿಯನ್ನೂ ಹಿಂದಿಕ್ಕುವ ಅಶ್ವಸಂಕೇತವು ಪ್ರಸ್ತುತ ಮಹತ್ವದ್ದು. ಕವಿನಾಮ ಬಾಣ: ರುದ್ರಶಿವನ ಕೋಲು; 'ವಜ್ರ': ಇಂದ್ರನ ಕೋಲು: ಇಂದ್ರಾಯುಧ. ಇದೂ ನೀರೊಳಗಿಂದ ಹುಟ್ಟಿದ್ದು : ಸಮುದ್ರಯೋನಿಃ! ಅಪೋವತ್ಸ! ಬೌದ್ಧ ಅನುಭಾವಮಾರ್ಗದಲ್ಲಿ 'ವಜ್ರಯಾನೀ'; ಸಂಪ್ರದಾಯವಿದೆ. ಬಾಣನು ಪಂಚಮರನ್ನು ಮರೆತಿಲ್ಲ. 'ಅದಿತಿ' : ಎಲ್ಲಮ್ಮ ಸಂಪ್ರದಾಯದಲ್ಲಿ, 'ಪಂಚ-ಜನಾಃ' ಏನೆಲ್ಲ ಒಳಗೊಳ್ಳುವುದುಂಟು. 'ಪಂಚಮ'ರೆಂಬ ಮಾತಂಗರಿಗೂ, ಈ ಕಾದಂಬರಿಯಲ್ಲಿ ಒಂದು ಸ್ಥಾನವಿದೆ. ಎಲ್ಲಮ್ಮ ಮೈಲಾರಿ ಕ್ಷೇತ್ರಗಳಲ್ಲಿ, ಹನುಮನ ಸೇವಕರಲ್ಲಿ 'ಮಾತಂಗಿ'ಯನ್ನು ಮರೆತಿಲ್ಲ, ಸಂಸ್ಕೃತ ಸಾಹಿತ್ಯದಲ್ಲಿ ಬಾಣಕಾದಂಬರಿಯ ವೈಶಿಷ್ಟ್ಯವೆಂದರೆ ಮಾತಂಗಿಯ ಚಿತ್ತಾಕರ್ಷಕ ಪಾತ್ರ. ಎಲ್ಲ ಸಾಹಿತ್ಯಿಕರು ದುರ್ಲಕ್ಷಿಸಿದ ವರ್ಗಕ್ಕೂ ಬಾಣನು ಸ್ಥಾನ ಕಲ್ಪಿಸಿಕೊಟ್ಟಿದ್ದಾನೆ, ಎಂದು ಡಾ. ಬಾಷಾಮ ಹೇಳುವುದು ಆಧುನಿಕ ದೃಷ್ಟಿಯಿಂದ ಸರಿ. ಆದರೆ, ಐತಿಹಾಸಿಕ ಪರಂಪರೆಯ ದೃಷ್ಟಿಯಿಂದ ಈ 'ಸಮಯ' ವೇದದಷ್ಟು ಪುರಾತನವಿದೆ. 'ಅದಿತಿಃ ಪಂಚ ಜನಾಃ'[೪] ಶಾಕ್ತಸಾಧನಯಲ್ಲಿ ಮಾತಂಗಿಯ ಪಾತ್ರಕ್ಕೂ ಒಂದು ವಿಶೇಷ ಸ್ಥಾನವಿದೆ.

ಟಿಪ್ಪಣಿಗಳು

೧. Macdonell, ***Vedic Mythology*** p. 73

೨. Robert Graves, ***Greek Myths.*** Vol. II, P. 354

೩. ಪ್ರೊ. ಟಿ. ಎಸ್. ಕೃಷ್ಣಮೂರ್ತಿ, ***ಬಾಣಕಾದಂಬರೀ***, ಮೈಸೂರ ವಿ. ವಿ, ಪ್ರಚಾರೋಪನ್ಯಾಸ ಮಾಲೆ, ಪು. ೨೭

೪. ***ಋಗ್ವೇದ ಸಂಹಿತೆ*** I. ೮೯. ೧೦

ಅದಿತಿ ಸಿದ್ಧಿ : ಸಮತ್ವಯೋಗದ ನಾನಾತ್ವ

'ದಿವ್ಯ' ಜ್ಞಾನದೀಕ್ಷೆಯನ್ನು ದೇವೇಷಿತ ಕುಮಾರಿಯಿಂದ ಲಭಿಸುವ ಸಹಜಯೋಗದ ದಾರಿ, ನಿಂದ್ಯವೆಂದು ಅದನ್ನು ಬಿಡಬೇಕಾಯಿತು. ಆ ಬಳಿಕ 'ಅಪಾಂ-ನಪ್ತ್ರ' ಪೂರ್ಣತ್ವ ಸಿದ್ಧಿಗಾಗಿ 'ಪಿಂಡ ಬ್ರಹ್ಮಾಂಡ' ನ್ಯಾಯದಂತೆ, ಪ್ರತಿವ್ಯಕ್ತಿಗೂ ತನ್ನಲ್ಲಿಯೆ ಅಡಗಿರುವ ಆ 'ತತ್: ಏಕಂ' ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದರ ಹೊರತು ಬೇರೆ ಮಾರ್ಗವು ಉಳಿಯಲಿಲ್ಲ! ಪ್ರತಿ ಘಟಸ್ಥ ದಿವ್ಯ ಆಪ : ಸರ್ವಶಕ್ತಿಯ ಬಗೆಗಿನ ಶ್ರದ್ಧೆಯು ಹಠ-ರಾಜಯೋಗದ ದಾರಿಗೆ ತಿರುಗಿತು. ಕಾಷ್ಠದೊಳಗಿನ ಬೆಂಕಿಯಂತೆ, ಕರ್ಪುರದೊಳಗಿನ ಜ್ವಾಲೆಯಂತೆ.... ಅಡಗಿರುವ ತನ್ನೊಳಗಿನ ಪರಮಾನಂದ 'ತತ್'ದೊಡನೆ ಬೆರೆಯುವ ನಾನಾ ಉಪಾಸನಾ ಪದ್ಧತಿಗಳು ಆಕಾರ ಪಡೆದುವು. ಮನುಷ್ಯ ಉಭಯಲಿಂಗಿಯೂ ಆಗಿದ್ದಾನೆಂದು, ಆಧುನಿಕ ಪ್ರಾಣಿಶಾಸ್ತ್ರದಿಂದ ಬೆಂಬಲ ದೊರೆತುದು ಇತ್ತೀಚೆಗೆ ಆದರೆ ವೇದದಲ್ಲೇ, ಅದಿತಿ. 'ಇಳಾ' ಉಭಯಲಿಂಗಿ! ನಾರದನು ನಾರದಿಯಾಗುತ್ತಾನೆ! 'ಪರ್ವತ-ನಾರದೌ' ಇಬ್ಬರೂ ಅಪ್ಸರಸಿಯರಂತೆ! ನರನು ಬೃಹತ್-ನಳೆ (ನಲ್ಲೆ); 'ನಳ' (ದಮಯಂತೀ ನಲ್ಲ), ಈ ಶಬ್ದಪ್ರತಿಯೆ ಮೂಲ ಕಂದಮಿಳ ಭಾಷೆಯ ಹಿನ್ನೆಲೆಯದು![1] ಗಂಡು, ಹೆಣ್ಣಿನ ಪಾತ್ರ ವಹಿಸಿ, ಹೆಣ್ಣು ಗಂಡಿನ ಭೂಮಿಕೆ ಸ್ವೀಕರಿಸಿ ಜೀವನಾನುಭವ ಪಡೆವಾಗ ಈ 'ಅರ್ಧ-ಗರ್ಭ' ಜೀವಿಗಳಿಗೆ, ಪೂರ್ಣತ್ವದ ಆ ನಂದದ-ಇದು, ಆನಂದ-ಪೂರ್ಣ ವಿಶ್ವವಿರುವ; 'ಬ್ರಹ್ಮ' ಸ್ವರೂಪವಿರುವ ಅನುಭಾವ ಬರಬಲ್ಲದು. ನರನ ಪುರೂರವತ್ವ: ಅನಾಥತೆ ಅವನಿಂದ ದೂರ ಓಡಿಹೋಗಬಲ್ಲದೆಂಬುದು ಈ ಮಾರ್ಗೀಯ ತಾತ್ವಿಕ ಭೂಮಿಕೆ ಆಗಿದೆ. ಉತ್ತರ ಭಾರತದಲ್ಲಿ 'ತಾನು ರಾಧೆ' ಎಂಬ ಸಾಧನೆಯ ಅನುಭಾವ ಮಾರ್ಗೀ ಗಂಡಸರೆಂಬುವರು, ಚಾಂದ್ರಮಾನದ ಮೂರು ದಿನ: ಯಾರನ್ನೂ ಮುಟ್ಟದೆ 'ಮುಟ್ಟು' : ಋತು ('ಋತ ಅಲ್ಲ) ಪಾಲಿಸುವರಂತೆ. ಸುಶಿಕ್ಷಿತ ಪದವೀಧರರಲ್ಲೂ!* 'ಗಂಡಿಗೆ ಹೆಣ್ಣಾಗಿ ಕಾಡಿತ್ತು ಮಾಯೆ: ಹೆಣ್ಣಿಗೆ ಗಂಡಾಗಿ ಬೆಂಬತ್ತಿತ್ತು ಮಾಯೆ'! ಸಿನೇ ನಟ-ನಟಿಯರ ಚಿತ್ರ, ಒಳಜೇಬಿನಲ್ಲಿ ಇರಿಸಿಕೊಂಡು ಈ ಮಾಯಾಕಾಟ ತಪ್ಪಿಸಿಕೊಳ್ಳುವ ಅರ್ವಾಚೀನ ತಂತ್ರವೂ ಇಂದು ಅಭ್ಯಸನೀಯವಿದೆ. ಈ ದುಷ್ಟ ಮಾಯಾಪಾಶದ ಭವಬಂಧನದಿಂದ ಮುಕ್ತವಾಗುವ ಮಾರ್ಗ ಕಂಡುಹಿಡಿವ ಪ್ರಯತ್ನಗಳ ಫಲಿತವೇ 'ಯೋಗ ಮಾರ್ಗ ಎಂದು 'Yoga' ಈ ಗ್ರಂಥದಲ್ಲಿ ಮರ್ಸಿಯ ಇಲಿಯದೆ ಹೇಳುತ್ತಾರೆ.[2]

---

* ಹಲವು ವರುಷ ಆರಾ (ಬಿಹಾರ) ಗ್ರಂಥಾಲಯದಲ್ಲಿ ಇದ್ದ ಶ್ರೀ ಕೆ. ಭುಜಬಲಿ ಶಾಸ್ತ್ರಿಗಳಿಂದ ಈ ಸಂಗತಿ ತಿಳಿಯಿತು

ಭಾಲಲೋಚನ ಸಿದ್ಧಯೋಗಿಗಳ ಸಂಪ್ರದಾಯವು ಪ್ರಭಾವಶಾಲಿಯಾದದ್ದು, ಕುಮಾರೀ ಮಧ್ಯಮಾ : ವಾಕ್ ಸಂಪ್ರದಾಯವು ತಿರಸ್ಕೃತವಾಗತೊಡಗಿದ ಈ ಸಂಧಿಕಾಲದಲ್ಲಿಯೇ. 'ಅದಿತಿ' : ಸತಿ: ದಾಕ್ಷಾಯಣೀ ಸಂಪ್ರದಾಯದ ಅಂತ್ಯದಲ್ಲಿ; 'ದಕ್ಷಬ್ರಹ್ಮ'ನಿಗೆ ತನ್ನ ಅತಿಪ್ರಸಂಗಕ್ಕಾಗಿ 'ಅಕ್ಷ'ವನ್ನು, ರುದ್ರನ ವೀರಭದ್ರನ ಅಡಿದಾವರೆಗೆ ಅರ್ಪಿಸಬೇಕಾದ ಪವಾಡಕಥೆ, ಈ ಸಾಮಾಜಿಕ ಸ್ಥಿತ್ಯಂತರದ ಸ್ಮಾರಕ ಶಿಲೆಯಂತಿದೆ. 'ಭಗ' ಎಂಬ ಹೆಸರಿನ ದೇವನ 'ಕಣ್ಣು' ಕಿತ್ತಿದ ಹಾಗೂ ಈ ಕಥೆಯ ಒಂದು ಭಾಗವುಂಟು. ಇಲ್ಲಿ ಕಣ್ಣು (: ಅಕ್ಷ) ಈ ಸಂಕೇತ, ದ್ವ್ಯರ್ಥಿಯಾಗಿರುವಂತೆ ತೋರುತ್ತದೆ. ಕಣ್ಣಪ್ಪ ನಾಮಸಂಕೇತದ ಒಬ್ಬ ಭಕ್ತನು ತನ್ನ ದೈವತಕ್ಕೆ ಕಣ್ಣನ್ನೇ ಕಿತ್ತಿ ಅರ್ಪಿಸಿದನೆಂಬ ಹಾಗಿನ ಅರ್ವಾಚೀನ ಕಾಲದ ಪವಾಡ ಕಥೆಯೊಂದು ಪ್ರಚಾರದಲ್ಲಿ ಉಂಟು. ಪುರಾತನ ಸಂಪ್ರದಾಯವನ್ನು, ಇಲ್ಲಿ ಬದಲಾದ 'ಸಮಯ'ಕ್ಕೆ ಸರಿಹೋಗುವಂತೆ, ಈ ಅರ್ಥಸಂದಿಗ್ಧತೆಯಿಂದ ಬುದ್ಧಿ ಪುರಸ್ಸರವಾಗಿ ಉಳಿಸಿಕೊಂಡು ಬಂದಿರುವ ಶಕ್ಯತೆಯುಂಟು, 'ಅಕ್ಷ'ವು 'ಕಣ್ಣು' ಆಗಿದ್ದರೂ 'ರುದ್ರಾಕ್ಷ' ಸಂಕೇತದೊಳಗಿನ ರುದ್ರನ 'ಅಕ್ಷ' ಈ ಪದಕ್ಕೆ ಗ್ರಹಿಸಬೇಕಾದ ಪ್ರಮಾಣಿತ ಅರ್ಥವು ಯಾವುದು?

ಊರ್ಧ್ವರೇತರು, ಅಥವಾ ಉತ್ಥಿತ ಕುಂಡಲೀ ಶಕ್ತಿಯ (ಸರ್ಪ) ಯೋಗ ಸಾಧಕರು. ಭಾಲಲೋಚನರು : ದಿವ್ಯಅಕ್ಷರು ಆಗುತ್ತಾರೆ, ಎಂಬ ಶ್ರದ್ಧೆಯುಂಟು. 'ವಜ್ರೋಲಿ' (ಆಸನ) ಸಿದ್ಧಿಯು, 'ಅಕ್ಷ' ದಿ(ೀ)ವ್ಯದ ಕ್ರೀಡೆಯಲ್ಲಿಯೇ ಗೊತ್ತಾಗಿ ಈ ಅನುಷ್ಠಾನವು ಪ್ರಚಲಿತವಾಗಿರಲಿಕ್ಕೆಬೇಕು. ಈ ಶಕ್ತಿಯೋಗದ ಸಂಪ್ರದಾಯದಲ್ಲಿ ಕೆಲರು ಭ್ರೂಮಧ್ಯದಲ್ಲಿ ಹಣೆಗೆ ಹಚ್ಚಿಕೊಳ್ಳುವ ಕುಂಕುಮದ ಬಟ್ಟು ಹಣೆಗಣ್ಣ ಸಂಕೇತವೆ ಆಗಿದೆ. 'ಅಕ್ಷ-ರ (: ಅಕ್ಷವುಳ್ಳುದು), ಅಕ್ಷರಕ್ಕೆ ಜಲವಾಚಕ ಅರ್ಥವೂ ಇದೆ! ಇದರ ಹಿನ್ನೆಲೆಯನ್ನು ಅರಿಯಲು 'ಕಣ್' (nipple) : ಗಣ್ : ಅಕ್ಷ ಸಂಬಂಧ ಸ್ಮರಿಸಿಕೊಳ್ಳಬೇಕು. 'ಅ-ಕ್ಷರ' ಎಂದಾಗ ಇದರ ಹಿನ್ನೆಲೆಯ ಬದಲಾಗಿ ಅವಿನಾಶಿ, ಶಾಶ್ವತ ಎಂಬ ಅರ್ಥವು ಕಾಣಿಸಿಕೊಳ್ಳುತ್ತದೆ. ಹಣೆಗೆ ಹಚ್ಚಿಕೊಳ್ಳುವ ಚಂದನ ತಿಲಕಕ್ಕೆ 'ಅಕ್ಷ(ಂ)ತಿ' ಎಂಬ ರೂಢ ಹೆಸರು, ಬ್ರಾಹ್ಮಣರಲ್ಲಿ. ಅ-ಕ್ಷತ : ಇಡಿ ಅಕ್ಕಿಕಾಳು, ಒಡಕಲ್ಲದ ಧಾನ್ಯ : ಕೌಮಾರ್ಯಸೂಚಕವಾಗಿ ಹಣೆಗೆ ಹಚ್ಚಿಕೊಳ್ಳಲಾಗುತ್ತದೆ; ಮದುವೆಯಲ್ಲಿ ಸೇಸೆ ಹಾಕಲಾಗುತ್ತದೆ. ಇದೆಲ್ಲದರ ಸಾಂಸ್ಕೃತಿಕ ಪರಿಸರವು ಗಮನಕ್ಕೆ ಬರಲು ಅಕ್ಷ : ಕಣ್ : ಚಕ್ರ ಈ ಯೋಗ ಸಾಧನಾಕ್ಷೇತ್ರದ ಪರಿಚಯವು ಅವಶ್ಯವಿದೆ.

ಭಾರತೀಯ ಸ್ತ್ರೀ-ವರ್ಗದಲ್ಲಿ ಹುಬ್ಬುಗಳ ನಡುವೆ ಹಣೆಯ ಮೇಲೆ ಕುಂಕುಮ ತಿಲಕವನ್ನು ಧರಿಸುವ ವಾಡಿಕೆಯ ರಹಸ್ಯಾರ್ಥವು, ಋಗ್ವೇದ ಕಾಲದ 'ರಾ-ಕಾ' (ಪೂರ್ಣಚಂದ್ರ) ಸಂಪ್ರದಾಯದ ಹಿನ್ನೆಲೆಯಲ್ಲಿ ಹೀಗೆ ಸ್ಪಷ್ಟತೆಯನ್ನು ಪಡೆಯುತ್ತದೆ. 'ರಂ' ಬೀಜಾಕ್ಷರವು ರಕ್ತವರ್ಣ ಯುಕ್ತವಾದುದೆಂದು ಸಾಂಪ್ರದಾಯಿಕ ಶ್ರದ್ಧೆಯಿದೆ. ದಿವ್ಯಾಕ್ಷ ಸಿದ್ಧಿಯ ಸಾಧನೆಯೆ - 'ಕಾಣಾ' ಅದಿತಿ ಶಕ್ತಿಯ ಉಪಾಸನೆ ಆಗಿದೆ. ಎಲ್ಲಮ್ಮ ಮಹಾಲಕ್ಷ್ಮಿ ಮಾಯಮ್ಮ ಇತ್ಯಾದಿ ದೇವೀ ಉಪಾಸಕರು ಪೂರ್ಣಚಂದ್ರನಷ್ಟು ದೊಡ್ಡ ವರ್ತುಲ ಹಚ್ಚುತ್ತಾರೆ. ಕೆಲವೊಮ್ಮೆ ಹಣೆತುಂಬ ಹಚ್ಚಿಕೊಳ್ಳುವರು. ಹೊನ್ನ ಬಣ್ಣದ ಭಂಡಾರ (: ಹಿರಣ್ಯರೇತಃ Pollen) ಹಚ್ಚಿಕೊಳ್ಳುವ ವಾಡಿಕೆಯ ಔಚಿತ್ಯವೂ ಈ 'ಸಮಯ'ದ ಆವರಣದಲ್ಲೆ ತಿಳಿಯಬಲ್ಲುದಾಗಿದೆ. ಗಂಡಸರಲ್ಲಿ ಚೆಂದನ (ಚೆನ್-ಕೆನ್-ಶೆನ್ ಚೆಂದಿರ-'ಶ್ಚಂದ್ರ ನೋಡು) ತಿಲಕವನ್ನು - 'ಅಕ್ಷತಾ' (ಅಕ್ಷತ=ಕುಮಾರ-ಕುಮಾರಿ) ಹೆಸರಿನಲ್ಲಿ ಧರಿಸುವುದುಂಟು. ಇಲ್ಲಿ ಇವೆರಡೂ ಸಂಕೇತಗಳು ಒಂದು ಇನ್ನೊಂದನ್ನು ಸ್ಪಷ್ಟೀಕರಿಸುತ್ತಿರುವ ಸಂಗತಿಯಲ್ಲಿ, ತಾಳಮೇಳ (corroboration) ದೊರೆಯುತ್ತಿರುವ ಸೋಜಿಗ ನೋಡುವಂತಿದೆ.

ಹಣೆಗಣ್ಣರ ದಿವ್ಯಾಕ್ಷರ ಸಂಪ್ರದಾಯವು, ಭಾರತದಲ್ಲಿ ಪ್ರಚಲಿತವಿದ್ದ ಬಗೆಗೆ ತಿಲಮಾತ್ರವೂ ಸಂದೇಹಕ್ಕೆ ಎಡೆಯಿಲ್ಲ ಮೇಲೆ ನಮೂದಿಸಿರುವ ಹಲವು ಕಾರಣಗಳಿಂದಾಗಿ. ಪುರಾತನ ಕಾಲದಲ್ಲಿ ಈ ಏಕಾಕ್ಷ: ಹಣೆಗಣ್ಣರ ಪಂಥವು ಗ್ರೀಕ್‌ದೇಶದ ಕಡೆಗೂ ಇದ್ದಿತೆಂಬುದು ಸೈಕ್ಲೋಪಸ್ : "Ring eyed one": ಏಕಾಕ್ಷ ಪುರುಷನ ಪ್ರಾತಿನಿಧಿಕ ಸಾಂಕೇತಿಕ ಕಥೆಯಿಂದಲೂ ಅರಿಕೆಗೆ ಬರುತ್ತದೆ. ಭಾರತದಲ್ಲಿ ಕಪರ್ದಿ (: ಕೇಶಿನೀ) 'ಅದಿತಿ' ಆದಿಶಕ್ತಿಯಿದ್ದರೆ, ಗ್ರೀಕ್ ಪವಾಡಕಥೆಗಳಲ್ಲಿ ಸಿಬೆಲೆ (: Cybele 'She of the hair') ಇದ್ದಾಳೆ! ಸಿಬೆಲೆ ಮತ್ತು

ಫ್ರಿಜಿಯಸ್ ಇಡಾ ಗುಡ್ಡದ ದೇವಿ ಅಫ್ರೊಡೈಟ್ ಇವರು ಅಭಿನ್ನರಂತೆ![೩] ಅಫ್ರೊಡೈಟ, ವೈಶಾಖ (mid summer) ಋತುಕಾಲದ ಕುಮಾರೀದೇವಿ.

> "She destroyed the sacred king, who mated with her on a mountain top by tearing out his sexual organs...." "and the ecstatic self castration of her priests in memory of her lover Attis....."

ಎಂದರೆ ಈ 'ಅಕ್ಷಮಾಲಾ' ಧಾರಿಣೀ-ದೇವಿ, ದುರ್ಗೆಯನ್ನು ಹೋಲುವಳೊ? ಈ ಆಫ್ರೊಡೈಟ್ : ಸಿಬೆಲೆ ಎಂದರೆ ಅದಿತಿ (: ದೇವಮಾತಾ) ದ್ಯಾಮವ್ವ : ದುರ್ಗೆಯು ಅಕ್ಕ ಈ ಎಲ್ಲ ಸಂಕೇತಗಳ ಪ್ರತೀಕವು ಆಫ್ರೊಡೈಟ-ಸಿಬೆಲೆ ! ದುರ್ಗೆ 'ಅಕ್ಷಮಾಲಾ' ಧಾರಿ ಹೇಗೆ ಎಂಬುದು ಈ ಗ್ರೀಕ್ ಕಥೆಯಿಂದ ಗೊತ್ತಾಗಲಿದೆ. ಈ ಆದಿಶಕ್ತಿಗಾಗಿ, ಮಾತಾ ಸಂಪ್ರದಾಯದ 'ಪುರುಷ' ಉಪಾಸಕರು, ವಿವಾಹದ ಅಪೇಕ್ಷೆಯನ್ನೇ ಇಲ್ಲವಾಗಿಸಲು ತಮ್ಮ 'ಪುರುಷ' ಮೇಧ ಆಚರಿಸುತ್ತಿದ್ದರು. ಈ 'ಪ್ರಕಾರವು' ಪುರಾತನ ಕಾಲದಲ್ಲಿ ಪ್ರಾರಂಭವಾದ ಈ ಅಜರ-ಅಮರ ಕುಮಾರ ವ್ರತಧಾರಣೆಯ ನಡೆವಳಿಯ ಮೇಲೆಯೂ ಬೆಳಕನ್ನು ಬೀರ ಬಲ್ಲುದಾಗಿದೆ. ಪರಿವ್ರಾಜಕ : ಜಂಗಮನಾಗಿ-ಭವಬಂಧನದಿಂಡ ಮುಕ್ತನಾಗಿ ಹೊರಟ ನಾರಣನೆಂಬವನು, ಪಂಚರಾತ್ರ-ಸತ್ರ ಜರುಗಿಸಿ 'ಪುರುಷಮೇಧ' ಮಾಡಿದನೆಂಬ ಕಥೆ, ಶತಪಥ ಬ್ರಾಹ್ಮಣದಲ್ಲಿದೆ. ಈ 'ಮೇಧ'ದ ನಿಜ ಸ್ವರೂಪ ಭಾರತೀಯ ಸಾಹಿತ್ಯದಲ್ಲಿ ಏನೂ ತಿಳಿಯದು. ಆದರೂ ಪುರುಷ ಸೂಕ್ತದಲ್ಲಿ 'ಪುರುಷ ಪಶು' ಬಲಿ ಎದಂರೆ ಏಕಶೀರ್ಷ : ಏಕಾಕ್ಷ : ಏಕ್‌ಪಾತ್ 'ಪುರುಷ ಮೇಧವೂ', ಮೇಲಣ ಗ್ರೀಕಕಥೆಯು ಆತ್ಮಲಿಂಗ ದಾನದ ಮಾದರಿಯಂತೆ ಇರಲಿಕ್ಕೆ ಬೇಕು. ರಾವಣನ ಆತ್ಮಲಿಂಗದ ಕಥೆಯು ಈ ಸಂದರ್ಭದಲ್ಲಿ ಅರ್ಥಪೂರ್ಣವಿರುವುದಾಗಿ ಅರಿಕೆಗೆ ಬರುತ್ತಿದೆ. ಶಿವನು ಭಕ್ತನಿಗೆ ತನ್ನ ಆತ್ಮಲಿಂಗವನ್ನು ಕೊಟ್ಟನಂತೆ. ದಾರಿಯಲ್ಲಿ ಅದನ್ನು ಕೆಳಗೆ ಇಡುವ ಪ್ರಸಂಗ ಬಂತು! ಅದುವೆ 'ಗೋ-ಕರ್ಣ' ಕ್ಷೇತ್ರ ಎಂದು ಕಥೆಯುಂಟು. ಆದರೆ ಈ ಕರ್ಣ>'ಕಣ್ಣ'ವೇ ಇರಬೇಕು. ಗೋಕರ್ಣೇಶ್ವರನ ಭಕ್ತರಲ್ಲಿ ಸರ್ಪಕರ್ಣೇಶ್ವರರೂ ಉಂಟು! ಈ ಕಾರಣದಿಂದಾಗಿ ಇದು ಸರ್ಪ ಗಣ್ಣೇ ಆಗಿರಲಿಕ್ಕೆ ಬೇಕು. ಈ ಬಗೆಯಲ್ಲಿ ವೇದ-ಬ್ರಾಹ್ಮಣಗಳೊಳಗಿನ ಭಾರತೀಯ ಪವಾಡ ಕಥೆಗಳು ಮತ್ತು ಗ್ರೀಕಿನ ಪುರಾತನ ಪವಾಡ ಕಥೆಗಳು ಇವುಗಳಲ್ಲಿ ಇರುವ ಈ ಸಾಮ್ಯದ ಆಧಾರದಿಂದ, ಸಿಬೆಲೆ, ಅಪ್ರೊಡೈಟ ಈ ಆದಿಮಾತಾ ಉಪಾಸನೆಯ ಒಂದು ಶಾಖೆಯೆ ಸೈಕ್ಲೊಪಸ್ : 'Ring eyed one' ಪಂಥವಾಗಿ ಪರಿಣಮಿಸಿರಲಿಕ್ಕೆ ಬೇಕೆಂದು ಹೇಳಬಹುದಾಗಿದೆ. ಏಕೆಂದರೆ, ಹಣೆಗಣ್ಣ ಸಂಕೇತದ ಒಂದು ಪಂಥ ಎಂದು ಗ್ರಹಿಸದೆ ಈ ಹೆಸರನ್ನು ಅಂಕಿತನಾಮವೆಂದರೆ ಸೈಕ್ಲೊಪಸ್ ಇದರ ಬಹುವಚನ ಪ್ರಯೋಗವೂ ಅರ್ಥವಿಹೀನ ವಾಗುತ್ತದೆ. ಅಲ್ಲದೆ, ಪೊಲಿಫೆಮುಸಮ್ (Pholiphemus) ಎಂದು ಅವರಲ್ಲಿ ಒಬ್ಬ ವ್ಯಕ್ತಿಯೂ ಸೈಕ್ಲೊಪಸ್ (: ಹಣೆಗಣ್ಣನು) ಆಗಿದ್ದನೆಂದು ಹೇಳುವ ಕಾರಣವಿದ್ದಿಲ್ಲ.

ಸೈಕ್ಲೋಪಸ್ ವರ್ಗವು ಯುರೆನಸ್ ದೈವತದ ಸಂತಾನವಂತೆ. ಇವರನ್ನು ಬಂಡುಗಾರರು (Rebellious sons) ಎಂದುದುಂಟು. ಇವರನ್ನು 'ಟಿಟಾನ್ಸ್' ಎಂದುದುಂಟು. ಇಂದ್ರಿಯಾರಾಧಕರು ಎಂಬರ್ಥದಲ್ಲಿ 'ಟಿಟಾನ್ ಪೂಜಕರು' ಈ ಮಾತು ತಿರಸ್ಕಾರಾರ್ಥದ ಪಡೆಮಾತಾಗಿದೆ. ಯುರೆನಸ್ ಪುತ್ರರಲ್ಲಿ ಕ್ರೋನಸ್ (Cronus) ಎಂಬ ನಾಮ ಸಂಕೇತದ ಪ್ರತಿಮೆಯೂ ಒಂದು ಉಂಟು ! ಈ ಸಂದರ್ಭದಲ್ಲಿ ಕ್ರೋನಸ್‌ನನ್ನು ನೆನೆಸಿಕೊಳ್ಳಲು ಕಾರಣವಿದೆ. ಕ್ರೋನಸ್ : ಕಾಗೆ: ಏಕಾಕ್ಷನೆಂದು ಭಾರತೀಯ ಪವಾಡ ಕಥೆಯುಂಟು! ಸರ್ಪವೂ ಕಾಣಾ: ಏಕಾಕ್ಷ! 'ಬೃಹಂತಂ ವಾಯಸಂ ಅಪಾಂ ಗರ್ಭಂ' ಎಂಬ ಋಗ್ವೇದದ ಸೂಕ್ತವು ಒಬ್ಬ ಅನಾದಿ ಏಕಾಕ್ಷ=ಪುರುಷ= ಸರ್ಪನದು![೪] ಅಪಾಂಗರ್ಭ=ಅಪಾಂನಪ್ತ್ರುವಾದ, ಈ ದಿವ್ಯವಾಯಸ ಸೌರ ಪಂಥೀಯ ದಿವ್ಯ ಸುವರ್ಣದ ಅವಮೂಲ್ಯನಕ್ಕಾಗಿ ಬಳಸಿರುವ ವಿಚಾರವು ಹಿಂದೆ ಬಂದಿದೆ. ಈ ಹಿನ್ನೆಲೆಯಲ್ಲಿ ಯುರೆನಸ್‌ನ ವರ್ಷಣ ಸೇಚನದಿಂದ ಹುಟ್ಟಿದರೆಂಬ ಏಕಾಕ್ಷ ಸೈಕ್ಲೊಪಸ್‌ರು ನಾಗರೇ ಎಂದಂತಾಯಿತು! ಇವರು ಅಪ್-ಸರೆ-ನೀರೆಯನ್ನು ಕಾಮಿಸುತ್ತಿದ್ದರೆಂಬುದೂ ಇದಕ್ಕೆ ಪ್ರಮಾಣವಾಗಿದೆ.

ಈ ನಾಗ : ಏಕಾಕ್ಷ ಸಂಪ್ರದಾಯಕ್ಕೆ ಗ್ರೀಕ್ ಸಾಮಾಜಿಕ ಪ್ರಜ್ಞೆಯು ತೋರಿಸಿರುವ ಪ್ರತಿಕ್ರಿಯೆಯು ಒಡೆಸಸ್‌ನ ಕಥೆಯ ರೂಪತಾಳಿ ಇಂದಿಗೂ ಬೋಧಪ್ರದವಾಗಿ ನಿಂತಿದೆ. ಒಬ್ಬ ಪ್ರಸಿದ್ಧ ಸೈಕ್ಲೊಪಸ್‌ನ ಗುಹೆಯನ್ನು ಹೊಕ್ಕು ಅಡಗಿ ಕುಳಿತು ಒಡೆಸಿಸ್‌ನು ಅನುಕೂಲ ವೇಳೆ ಸಾಧಿಸಿ ಆ ಏಕಾಕ್ಷನ ಆ ಒಂಟಿಗಣ್ಣಲ್ಲಿಯೆ ಕಾಯ್ಸು ಬೆಣೆ ಜಡಿದನಂತೆ! ಕಥೆಯ ಈ ಭಾಗ ಸುಪ್ರಸಿದ್ಧವಿದೆ-ಇಂಗ್ಲೀಷಿನಲ್ಲಿ ಸಹ.

ಗ್ರೀಕ್‌ದೇಶದಲ್ಲಿ 'ಏಕಾಕ್ಷ' ಸಂಪ್ರದಾಯದ ಬಗೆಗೆ ಅಂದು ವ್ಯಕ್ತವಾಗಿರುವ ತೀವ್ರ ಸ್ವರೂಪದ ಪ್ರತಿಕ್ರಿಯಾ-ಸೂಚಕವಾದ ಈ ಕಥೆಯು ಸಾಂಸ್ಕೃತಿಕ ತುಲನಾತ್ಮಕ ವಿಮರ್ಶೆಯಲ್ಲಿ ಅತ್ಯಂತ ಮೌಲಿಕವಾಗಿದೆ. ಯುರೋಪಿನಲ್ಲಿ ನಾಗ ಸಂಪ್ರದಾಯವು ತನ್ನ ಮರ್ಯಾದೆಯನ್ನು ಕಳಕೊಳ್ಳುತ್ತದೆ. ಭಾರತದಲ್ಲಿ ನಾಗ ಸಂಪ್ರದಾಯವನ್ನು ಶಾಶ್ವತವಾಗಿ ಸನಾತನವಾಗಿ (ಶಕ್ಯವಾದಷ್ಟೂ) ಆ ಮೂಲ ರೀತಿಯಲ್ಲಿಯೆ ಉಳಿಸಿಕೊಳ್ಳುವ ಪ್ರಯತ್ನಗಳು ಆಗುತ್ತ ಬಂದಿವೆ! ಆದರೆ, ಆಪ : ರಸ ಪಂಥೀಯ ಸಂದ್ಯಕ್ ; ಏಕಾಕ್ಷ: ದಿವ್ಯಜ್ಞಾನ ಮಾರ್ಗಿಗಳ ದುರ್ದೈವ! ಎಂತೇ ಆಗಲಿ, ವ್ಯಕ್ತಿಗಳೊಳಗಿನ ಸಾಕ್ಷಿ: ಸಾಮಾಜಿಕ ಪ್ರಜ್ಞೆ ತಲೆಯೆತ್ತುತ್ತಲೆ ಇದೆ! 'ದಿವ್ಯಚಕ್ಷು' ಅಂತರ್ಜ್ಞಾನಿಗಳೆಂಬವರ 'ಜ್ಞಾನ' ಫಲಿಸದಿರುವ ಕಲಿಯುಗ ಪ್ರವರ್ಧ-ಮಾನವಾಗುತ್ತಲಿದೆ! ಪುರಾತನ ಏಕಾಕ್ಷ ಸಂಪ್ರದಾಯದ ಅಸ್ತಿತ್ವವನ್ನು ಸಿದ್ಧಪಡಿಸುವ ಪ್ರಮಾಣಗಳು ದೊರೆಯುತ್ತಲೆ ಇವೆ! ಇಲಿಯದೆಯು, 'ಯೋಗ' ವಿಚಾರದ ಮಹಾಪ್ರಬಂಧದಲ್ಲಿ ಎತ್ತಿ ಹೇಳಿರುವ ಉದಾಹರಣದಿಂದ, ನಮ್ಮಲ್ಲಿದ್ದ ಏಕಾಕ್ಷ ಸಂಪ್ರದಾಯದ ಹಿಂದಿನ ಒಂದು ಮಾದರಿಯು ಬೆಳಕಿಗೆ ಬರುತ್ತಲಿದೆ.... "an ascetic wearing a golden ring on his penis" ಒಬ್ಬ ಪ್ರವಾಸಿಯು ಕಂಡು ಬರೆದ ಲೇಖವಿದು. ಸಮುದ್ರದೊಳಗಿಂದ ಬಂದ 'ಹಿರಣ್ಯಶೃಂಗ' ಅಶ್ವದ ಸನಾತನ ಪ್ರತಿಮೆ ಇದು! ಬಂಗಾರದ ಬೆಳೆ ಕೋಡಿಗೆ ಹಾಕುವ ವಾಡಿಕೆ ಋಗ್ವೇದಷ್ಟು ಪ್ರಾಚೀನ! ಡಾ. ಬೊಯಿಸ್ ಎಂಬ ಫ್ರೆಂಚ್ ಪ್ರವಾಸಿಯು ಕಣ್ಣಾರೆ ಕಂಡು ಬರೆದು ಭಾರತೀಯ ಧರ್ಮಪಂಥಗಳ ನಡೆವಳಿಯ ಮಾದರಿಗಳೂ ಪ್ರಾಮಾಣಿಕವಾಗಿ ಆತ್ಮಪರೀಕ್ಷೆಮಾಡಿಕೊಳ್ಳಬೇಕೆಂಬ ಭಾರತೀಯ ವಿಚಾರವಂತ ಧಾರ್ಮಿಕ-ವೃತ್ತಿಯವರಿಗೆ. ನಿಶ್ಚಿತವಾಗಿಯೂ ಉದ್ಬೋಧಕವಾಗಿವೆ. ಅವು ನಮ್ಮ ನಡೆದುಬಂದ ದಾರಿಯೆ ನಿಜವಾದ ದರ್ಶನ ಮಾಡಿಸಬಲ್ಲವು. ಗ್ರೀಕ್ ಪವಾಡಗಳ ಸೈಕ್ಲೊಪಸ್ : ಏಕಾಕ್ಷ ಪುರುಷ ಎಂದೋ ಹತನಾದ! ಆದರೆ ಭಾರತದ ಏಕಾಕ್ಷನು 'ಪುಂಡರೀಕಾಕ್ಷ' : 'ಭಾಲ' ಲೋಚನಾದಿ ನಾಮರೂಪ ಧಾರಣಮಾಡಿ ನಿತ್ಯಪೂಜಾ ಪ್ರತಿಮೆಯಾಗಿದ್ದಾನೆ! ಈತನನ್ನು 'ಸಹಸ್ರಶೀರ್ಷಃ ಪುರುಷಃ, ಸಹಸ್ರಾಕ್ಷಃ ಸಹಸ್ರಪಾತ್' ಎಂದು ನಿತ್ಯಪೂಜಾ ಸಮಯದಲ್ಲಿ ಪದ್ಮಾಸನಸ್ಥರಾಗಿ ಕುಳಿತು, ಅಥವಾ ಪುಷ್ಕರಿಣಿಯಲ್ಲಿ ಮುಳುಗಿ, ಸಚೈಲ ಸ್ನಾನಮಾಡಿ ನಾಭಿ ವರೆಗಿನ ಆಳದಲ್ಲಿ ನಿಂತು, ಇಂದು ಎಷ್ಟೇ ನೆನೆದರೂ ಆ ವಿಶ್ವಾಧಾರಕ ಶಕ್ತಿ: 'ಆಪೋವತ್ಸ'ನ ಸಾಕ್ಷಾತ್ಕಾರವಾಗುವುದು ಅಶಕ್ಯವಾಗಿದೆ!

'ಅಪವಿತ್ರ : ಪವಿತ್ರೋ ವಾ...ಯಃ, ಸ್ಮರೇತ್ ಪುಂಡರೀಕಾಕ್ಷಂ ಸಃ ಬಾಹ್ಯಾಭ್ಯಂತರಃ ಶುಚಿಃ!

ಏಕಾಕ್ಷ: ಆಪೋವತ್ಸನ ನಾಮಸ್ಮರಣದಲ್ಲಿ ಪ್ರಪಂಚವನ್ನೇ ಪಾವನವಾಗಿಸುವ ದಿವ್ಯಾದ್ಭುತ ಶಕ್ತಿಯು ಉಂಟೆಂದೇ ಅವನು ಆಗಾಗ ಹತನಾಗಲಿ ಅಥವಾ ಪುರುಷಮೇಧವಾಗಲಿ, ಇವನು ಅಮರನೇ!

> ಈ ಊರ್ಧ್ವಮೂಲ ದಿವ್ಯ ಪುರುಷೋತ್ತಮನ ಕೀರ್ತಿದುಂದುಭಿ ಲೋಕದಲ್ಲಿ ಚಿರಕಾಲ
> ಮೊಳಗಲಿ! ಚಿಃ! ಮೊಳಗಲೇ ಬೇಕು. ಎನ್ನಿ! ಇಲ್ಲವಾದರೆ ಈ ನರಲೋಕದ ವಿನಾಶ,
> ನಿಶ್ಚಿತ! ಮೂರ್ಖ ಒಡೆಸಿಸ್, ಒಬ್ಬ ಏಕಾಕ್ಷನ ಕಣ್ಣು ಕಳೆದರೂ ಆತನ ನೆತ್ತರಿನ
> ಹನಿಹನಿಗೂ ಅವನ ಪೀಳಿಗೆ ಬೆಳೆಯಲಿದೆ, ಇದನ್ನರಿಯನು ಆತನು!

ಈ ದೃಷ್ಟಿಯಿಂದ ಭಾರತೀಯ ಮೇಧಾವಿಗಳು ದೂರದೃಷ್ಟಿಯವರು! ಇವರು ಧೋರಣ ಮಿಗಿಲಾದುದಾಗಿದೆ. ಆದರೆ, ಋಗ್ವೇದಕಾಲದಲ್ಲಿಯೆ 'ಅಹಿಜಿತ್ ಎಂಬ ಇಂದ್ರನ ತೇಜೋವಧೆ ಹಲವು ಬಗೆಗಳಿಂದ ಮಾಡಿದ್ದುಂಟು. ವರುಣನನ್ನು ಆಪ: ರಸ ಪಂಥೀಯ 'ಸ್ತೂಪ'ವಾಗಿಸಿದ ಮತ್ತು ಊರ್ವಶಿಯನ್ನು ನಾರಣನು ಕೊನೆಯಲ್ಲಿ ಇಂದ್ರನಿಗೇ ಇಟ್ಟುಕೊಳ್ಳಲು ಕೊಟ್ಟ ಹಾಗಿನ ಪುರಾಣ ಕಥೆಗಳುಂಟು! ನಾರಣ (: ನಾಗ), ಕನ್ಯೆಯನ್ನು ಕಳುಹಿಸಿ

ಮಿತ್ರ (ಸೂರ್ಯ)ನ ಸಂಗಾತಿ ವರುಣನನ್ನು ತನ್ನವನನ್ನಾಗಿ ಮಾಡಿಕೊಂಡ ಬಳಿಕ. ಅವಳನ್ನು ಇಂದ್ರನಿಗೆ ಕೊಟ್ಟುದರಿಂದ ಇಂದ್ರನು 'ಅಹಿಜಿತ್' ಎಂಬ ಭೂಮಿಕೆಯ ವೃತ್ರಘ್ನದೇವನಾಗಿ ಉಳಿಯಲು ಹೇಗೆ ಶಕ್ಯ? ಅಂದು ಬಾಳನೊಳಗಿನ ಜೀವನ-ಮೂಲ್ಯಗಳಾಗಿ 'ಅಹಿ' ಸ್ವರೂಪೀ ಶತ್ರುವನ್ನು ಎದುರಿಸುವವನೆಂಬ ದೈವತ ಪ್ರತಿಮೆಯನ್ನು ಎಂದರೆ ಇಂದ್ರನನ್ನು, ಭ್ರಷ್ಟಗೊಳಿಸಿದ ಈ ನಾರಾಯಣೀಯ ಅಸ್ತ್ರ : ವಿಷ್ಣುಮಾಯೆ ಅಮೋಘವಲ್ಲವೆ? ಭಾರತೀಯ ಮೂಲದ ಪುರುಷ-ಮೇಧ, ಸರ್ಪ-ಮೇಧ : ಮತ್ತು ಅಶ್ವ-ಮೇಧ. ಈ ಮೂರು ಕಥೆಗಳು, ಒಂದು ಇನ್ನೊಂದಕ್ಕೆ ಉಪ-ಷ್ಟಂಭಕವಾಗಿರುವಂತೆ ತೋರುತ್ತವೆ :

ಪುರುಷಮೇಧೀ ಸಂಪ್ರದಾಯ

ಸಾವಿರ-ಸಾವಿರಕ್ಕೂ ಮಿಕ್ಕಿ ಇರುವ ನಾಗಾಸಾಧುಗಳ ತಂಡಗಳು ಭಾರತದಲ್ಲಿ ಆಸೇತು ಹಿಮಾಚಲ ಅಲೆದಾಡುತ್ತಿದ್ದ ಯುಗವು ಒಂದಾಯ್ತು. ಅಲೆಕ್ಸಾಂಡರನು ಬಂದಾಗ, ಆ ವಿಶ್ವವಿಜೇತನನ್ನೂ ತುಚ್ಛತೆಯಿಂದ ಕಂಡ ಕೌಪೀನವಂತರೊ ಅಥವಾ ಅಪರ್ಣರೋ ಆದ ಸಾವಿರಾರು ಪರಿವ್ರಾಜಕರ 'ಏಕಂ: ಸಂತರ:' ತತ್-ಪುರುಷನ ಉಪಾಸಕರ ತಂಡಗಳು, ಭಾರತದಲ್ಲಿ ಇದ್ದುವು. ಕ್ಷುದ್ರ ಹೊನ್ನು-ಮಣ್ಣಿಗಾಗಿ ಆಸೆ ಪಟ್ಟು ಬಂದಿದ್ದ ಧಾಳಿಗಾರರ ಅಜ್ಞಾನದ ಬಗೆಗೆ ಅವರು ದುಃಖಿಸಿದರೆ ಹೊರತು ಭಾರತಮಾತೆಯ ಮೇಲೆ ಪರಪುರುಷರು ಏರಿಬಂದು ದಾಳೀ ಮಾಡುತ್ತಿರುವ ಆದಿಭೌತಿಕ ಮೂರ್ಖಕೃತಿಯ ಬಗೆಗೆ ರೊಚ್ಚಿಗೆ ಏಳಲಿಲ್ಲ! ಇದೆಲ್ಲವೂ ಗೀತಾ ಧರ್ಮಾನುಸಾರಿ ವರ್ತನವೇ. ಏಕೆಂದರೆ 'ಹೇ ಭರತ ಶ್ರೇಷ್ಠನೆ. ಯುದ್ಧಕ್ಕೆ ಅಣಿಯಾಗು (.....ಯುಧ್ಯಸ್ವ ಭಾರತ) ಎಂದು ನರನಿಗೆ ಸಂಗ್ರಾಮಕ್ಕೆ ಬೋಧಿಸುವುದು ನಿಜ, ತೋರಿಕೆಯಲ್ಲಿ. ಆದರೆ, ಗೀತೆ ಪ್ರೇರಿಸುವ ಯುದ್ಧ ಎಂತಹುದು? ಗೆಲ್ಲಹೇಳಿದ ಶತ್ರುಗಳು ಯಾರು? ಈ ಭಗ-ವಂತನ ಗೀತೆ, ಅಲೆಕ್ಸಾಂಡರ್ ಬರುವ ಸುಮಾರಿಗೆ ಮೈದಾಳಿತ್ತು. ಆಗ ಕ್ಷತ್ರಿಯರು ಸಂನ್ಯಾಸಧರ್ಮ ಪ್ರವರ್ತಕರಾಗತೊಡಗಿದ್ದು ಕಾಣುತ್ತಿದೆ! ಗೀತೆ ಹೇಳುತ್ತದೆ, "ಜಯಿ ಶತ್ರುಂ ಮಹಾಬಾಹೋ!" ನಿಜ. ಈ ಶತ್ರು ಯಾರು 'ಕಾಮರೂಪಂ ದುರ್ ಅಸತಮ್' ! ಎಂಬ ಗೀತೆಯ ಆದೇಶದ ಅಂತಸ್ಥ ಅರ್ಥವು ಅರಿಕೆಗೆ ಬರಲು, ಗೀತೆ ಮೈದಾಳುವ ಹಿನ್ನೆಲೆಯ ವೈಚಾರಿಕ ಸಂಘರ್ಷವು ಗೊತ್ತಿರುವುದು ಅವಶ್ಯವಿದೆ. ಋತ : ಸತ್ಯದ ಭೂಮಿಕೆಯ 'ಅಸತಃಸತ್' ('ಅಜಾಯತ') ಎಂಬ ಶ್ರದ್ಧೆಯ ಜೀವನ ರೀತಿಯನ್ನು ನಷ್ಟಪಡಿಸಲು ಈ ಆದೇಶವು ಇದ್ದಿತೇ. ಹೊರತು, ಈ ಪ್ರಪಂಚದಲ್ಲಿ ಆಸಕ್ತಿಯನ್ನು ಹೆಚ್ಚಿಸುವ, ಜೀವನದ ನೆಮ್ಮದಿಗೆ ಕಾರಣವಾಗುವ ಹೋರಟಾದಲ್ಲಿ ತೊಡಗಲು, ಗೀತೆ ಎಲ್ಲಿಯೂ ಪ್ರಾಮಾಣಿಕವಾಗಿ ಹೇಳಿಲ್ಲ. ಹಾಗಿದ್ದರೆ, ಜೀವನದೊಳಗಿನ ಅನ್ಯಾಯಗಳನ್ನು ಎದುರಿಸಿ ಹೋರಾಡುವ ಪ್ರೇರಣೆ ಪಡೆದವರ ಪರಂಪರೆ, ಕ್ರೈಸ್ತರು, ಸಂನ್ಯಾಸ ಪಂಥೀಯರು ಎಂದರೂ ಆ ಪಾಶ್ಚಾತ್ಯರ ಶಿಕ್ಷಣದಿಂದ ಜೀವನ ಸಮ್ಮುಖ ಪ್ರೇರಣೆಯನ್ನು ಪಡೆದ ವಂದ್ಯ ವಿವೇಕಾನಂದ, ಲೋಕಮಾನ್ಯ ತಿಲಕ್, ಮಹಾತ್ಮಾ ಗಾಂಧೀಜಿಯವರಿಗಿಂತ ಮುಂಚಿನ ಪೀಳಿಗೆಯಿಂದಲೇ ನಡೆದು ಬರಬೇಕಾಗಿತ್ತಲ್ಲ! 'ಪುರುಷ'ನ ಮೇಧವು, ಐಹಿಕ ಪೌರುಷದ ಲೌಕಿಕ ಜೀವನವನ್ನು ಹೋಮ ಮಾಡಿದ ಸಾಂಕೇತಿಕ ಸಂಸ್ಕಾರವಾಗಿದೆ. 'ಸರ್ಪ : ಸೈತಾನ' ಎಂದಾಗಲೆ ಕ್ರೈಸ್ತ ಪಂಥೀಯ ಭೂಮಿಕೆಯಲ್ಲಿ ಪುರುಷಮೇಧ ಅಂದೇ, ಒಂದು ಬಾರಿ ಆಗಿ ಬಿಟ್ಟಿದೆ. ಗ್ರೀಕ್-ಪವಾಡ ಕಥೆಗಳ ಮೂಲಕ ಅಲ್ಲಿದ್ದಿತೆಂದು ಗಮನಕ್ಕೆ ಬರುವ, ಸ್ವಲಿಂಗಚ್ಛೇದಿಗಳ ಜೀವನದ ಆಕೃತಿಯೆ, ಬಳಿಕಿನ ಕ್ರೈಸ್ತ ಪಂಥೀಯ ಕುಮಾರ-ಕುಮಾರೀ ಜೀವರೀತಿಯಾಗಿ-ಅಂದಿನ 'ಸಮಯ'ಕ್ಕೆ ರುಚಿಸುವ ತಕ್ಕ ಆಕೃತಿಯಾಗಿ ರೂಢಿಗೆ ಬಂದಿರಲಿಕ್ಕೆಬೇಕು. ದಿವ್ಯ ಪವಾಡ ಕಥೆಗಳ ಮೂಲಕ ಜನಮನದ ಮೇಲೆ ಪ್ರಭಾವ ಬೀರಿರಲಿಕ್ಕೆ ಬೇಕು. ನಿನ್ನೆಯೇ ಕೆಲವೊಂದು ಮಾರ್ಪಾಟಗಳಾಗಿ 'ಇಂದು' ಆಗುವುದು ಉಂಟಷ್ಟೆ? ಆದರೆ, ಇದನ್ನು ನಿನ್ನೆ-ಇಂದುಗಳೊಳಗೆ ಇರುವ ಅವಿಚ್ಛಿನ್ನ ಸಂಬಂಧವನ್ನು ತಿಳಿಯದವರು ಅಥವಾ 'ಇತಿಹಾಸ' ಎಂಬುದನ್ನೇ ಅಮಾನ್ಯ ಮಾಡುವವರು ಮಾತ್ರ ಒಪ್ಪಿ ಕೊಳ್ಳಲಾರರು. ಬಾಳಿನೊಳಗೆ ಕಾರ್ಯ-ಕಾರಣ ಸಂಬಂಧದಲ್ಲಿ ಜನದ ಆಚಾರ-ವಿಚಾರಗಳು ಆಕಾರ ಪಡೆಯುತ್ತವೆ.

ದಿಕ್ಕಾಲ ಪರಿಸರದ ಘಟನೆಗಳು ಐತಿಹಾಸಿಕ ನಿಯತಿಗೆ ಒಳಗಾಗಿವೆ ಎಂಬುದೇ ಮಾನ್ಯವಿರದ ಹಲವು ಒಳಭೇದಗಳು ನಾಗಪಂಥದಲ್ಲಿ ಉಂಟೆಂಬ ಕಾರಣದಿಂದ ಈ ಮಾತನ್ನು ಹೇಳಲಾಯಿತು.

ಸರ್ಪಮೇಧ ಮತ್ತು ಪುರುಷಮೇಧ ಭಿನ್ನವಲ್ಲ!

ಇಂದಿನ ಪಾಠದ ಋಗ್ವೇದ ಸಂಹಿತೆಯಲ್ಲಿ ವಸಿಷ್ಠಾದಿಗಳಿಂದ ಆಗಿರುವ ಇಂದ್ರನ ತೇಜೋವಧೆಯು ಸಾಕಾಗದೆ, ಮಾನವ ಜೀವನ ಮೂಲ್ಯಗಳಿಗಾಗಿ ಹೋರಾಡುವ ವೀರನ-ಪ್ರತೀಕವಾದ 'ಇಂದ್ರ' ಸಂಕೇತವನ್ನು ಇನ್ನೂ ನಿಷ್ಪ್ರಭವಾಗಿಸುವುದಕ್ಕೆ ಸರ್ಪಯಾಗದ ಒಂದು ನೆಪವನ್ನು ಕಲ್ಪಿಸಿಕೊಂಡಿರುವುದಾಗಿ ಕಾಣುತ್ತದೆ. ಕೃಷ್ಣ ದ್ವೈಪಾಯನನು! ಈ ಕಥೆಯನ್ನು ಮಹಾಭಾರತದ ಅಂಗವಾಗಿಸುವುದಕ್ಕಾಗಿ, 'ಪರೀಕ್ಷಿತ'ನೆಂಬ ಒಂದು ಪಾತ್ರದೊಡನೆ ಸರ್ಪದ ಕಥೆಯನ್ನು ಅಂಟಿಸಿರುವುದಾಗಿ ಮೇಲೆಯೆ ತೋರುವಂತಿದೆ. ಈ ವಿಚಾರಕ್ಕೆ ಮೊದಲು ಸರ್ಪ ಸಂಕೇತದ ಅರ್ಥದ ಬಗೆಗೆ ಇಲ್ಲಿ ಸ್ವಲ್ಪ ಸ್ಪಷ್ಟೀಕರಣವೂ ಅವಶ್ಯವಿದೆ. ನಾಗ : ಸರ್ಪ ಈ ಸಂಕೇತವು ಒಂದಕ್ಕಿಂತ ಹೆಚ್ಚು ಪಾತಳಿಗಳ ಮೇಲೆ ವ್ಯವಹರಿಸುತ್ತದೆ. 'ಸರ್ಜಕ ಶಕ್ತಿ'ಯ ಸಂಕೇತ ಎಂಬ ರೂಪದಲ್ಲಿ ಇಂದ್ರ-ಸರ್ಪ ಸಂಬಂಧವೇ ಬರುವುದಿಲ್ಲ. ಸವಿತೃ (: ಇಂದ್ರ) ಭೂಮಿಕೆಯ 'ಸೃಷ್ಟಿ', ಜ್ಞಾನ: ಪ್ರಕಾಶದ ಮೂಲಕ ಅರಿಕೆಗೆ ಬರುವುದೇ ಹೊರತು; ಅದು ಆಪ : ರಸ ಪಂಥೀಯ ಗರ್ಭಧಾರಣಾ, ಮಾರ್ಗದಿಂದ ಹುಟ್ಟುವುದೆಂಬ ವಿಚಾರಕ್ಕೆ 'ಧೀ'-ರ ದೃಷ್ಟಿಯಲ್ಲಿ ಅವಕಾಶವಿಲ್ಲ. ಸವಿತೃ: ಇಂದ್ರಪಂಥೀಯ ದೃಷ್ಟಿಯಲ್ಲಿ ಸರ್ಪ ಎಂದರೆ ಆಪತ್ತು, ಆಕಸ್ಮಿಕ ಗಂಡಾಂತರ, ಅಜ್ಞಾನ-ಕತ್ತಲೆ, ಜೀವನ ಶೋಷಕ ಘಟನೆಗಳು, ಹೊರತು ನೈಸರ್ಗಿಕ-ಸಾವು, 'ಉರ್ವಾರುಕಂ ಇವ' ತುಂಬಿನಿಂದ ಕಳಚಿ ಬೀಳುವ ಪಕ್ವಫಲದಂತೆ, ಸ್ವಾಗತಾರ್ಹವೇ. ಆದಕಾರಣ ಇದು ಸರ್ಪ-ಅಪಮೃತ್ಯು ಮಾತ್ರ. ಇಂತಹ ಸರ್ಪ: ಅಹಿಯ ನಾಶವೇ ತನ್ನ ಜೀವಿನದ-ಕಾರ್ಯವೆಂಬ ಹಾಗಿನ ದಿವ್ಯದೈವತ ಶಕ್ತಿ ಇಂದ್ರನು, ಸೂರ್ಯನ ಇನ್ನೊಂದು ನಿಲುಮೆ ಆಗಿದೆ.

ಆದಿತಿ: ಆದಿಶಕ್ತಿ: ಸಲಿಲ ಸ್ವರೂಪಿ: ಸರ್ಪಸ್ವರೂಪಿ-ಇವಳದೇ ಪರ್ಯಾಯ ರೂಪ. ಶಂತನುವಿನ ಕೈಹಿಡಿದ ದೇವಲೋಕದ ಗಂಗೆ ಎಂಬ ಪ್ರೇಯಸಿ ಇವಳು. ಈ ಪಾತ್ರಗಳು ಮೂಲತಃ ಸಾಂಕೇತಿಕ! ಶಂ-ತನುವಿಗೆ ಗಂಗೆಯಲ್ಲಿ ಆದ ಎಂಟು ಮಕ್ಕಳು ಅಷ್ಟ-ವಸುಗಳ ಕೃಪಾಪ್ರಸಾದ, ಎಂದು ಕೃಷ್ಣದ್ವೈಪಾಯನ-ಪ್ರಣೀತವೆಂಬ ಮಹಾಭಾರತದಲ್ಲೇ ಹೇಳಿದೆ! ಹೀಗೆ ಪ್ರಚ್ಛನ್ನವಾಗಿ 'ಅದಿತಿ' ಸಂಪ್ರದಾಯದ ಪ್ರಚಾರಕ್ಕಾಗಿ ಮೈದಾಳಿದ ಕಥೆ, ಮಹಾಭಾರತ ಎಂದು ಕೌರವ-ಪಾಂಡವರ ಈ ಜನ್ಮದ ಮೂಲ-ಪೀಠಿಕೆಯೇ ಹೇಳುತ್ತಿದೆ. ಆದಕಾರಣ, ಈ ಕಾವ್ಯದಲ್ಲಿ ದಿಕ್ಕಾಲದ ಸಂದರ್ಭದಲ್ಲಿ ಸಂಭವಿಸಿದ ಐತಿಹಾಸಿಕ ಸ್ವರೂಪದ್ದೆಂದು ಗ್ರಹಿಸಬಹುದಾದ ಅಂಶವು ತೀರ ತುಸು ಇರಲಿಕ್ಕೆ ಬೇಕು, ಎಂಬುದನ್ನು ಅಲ್ಲಗಳೆಯಲಿಕ್ಕಾಗುವುದೆ?

'ದ್ರಪ್ಸ' : (ಸ್ಕನ್ನ ಃ) ಕೃಷ್ಣ! ಅಂಶುಮಂತೀ ನದಿನೀರಿನಲ್ಲಿದ್ದವನು. ಅವನು ಶೃಂಗಯುಕ್ತ ಸರ್ಪಶುಷ್ಣ: ಕೃಷ್ಣ: ದ್ರಪ್ಸನು ಎಂದರೇನು? ಇದು ಯಾವ ಆಕೃತಿ? ಅಜ-ಏಕಪಾತ್ ಅಹಿರ್ಬುಧ್ನ್ಯ ರಸಹನಿವ ಅಶ್ವತ್ಥ, ಪೃಷತ್ (ಹನಿವ) ಅಶ್ವ ಅನಿಮಿಷ (ರಸಸ್ರಾವದ ವರುಣನ) ಅಕ್ಷ ಈ ತುಲನೆಯಲ್ಲಿ ಈ ಹನಿವ: ದ್ರಪ್ಸಿ ಕರಿಯನು, ಹ್ರಸ್ವ : ವಾಮದೇವನ ನೆನಪು ತಂದುಕೊಡುತ್ತಾನೆ ಕರಿಯ ಕೃಷ್ಣ. ನೀಲಾಂಗ ಶಿಪಿವಿಷ್ಟ ವಿಷ್ಣು ಇವರು ಏಕರೂಪರೆಂದು ಇರುವ ಸನಾತನ ಶ್ರದ್ಧೆಯು 'ಅಂಧ' ಶ್ರದ್ಧೆಯಲ್ಲ. ದಿವ್ಯಾಕ್ಷದರ್ಶನ ಸಿದ್ಧಿಯವರ ಶ್ರದ್ಧೆ. ಋಗ್ವೇದದ ಕಥೆಯಲ್ಲಿ ಇಂದ್ರ-ಬೃಹಸ್ಪತಿಯರಿಂದ ಹತನಾದವನು ಈ 'ದ್ರಪ್ಸಃ ಕೃಷ್ಣಃ'! 'ಚರಿಷ್ಣುವಂ'* ಪುರದ ಶುಷ್ಣನಂತೆ ಜಲಾಶಯಸ್ಥ ಅಸುರನೊಬ್ಬನು ಇವರಿಬ್ಬರೂ ಒಂದೇ ಸೂಕ್ತದಲ್ಲಿ ಉಕ್ತರಾಗಿದ್ದಾರೆ. ಇವರು ಅಪಾಂ-ನಪ್ತ್ರುರು! ಅಪಾಂ ನಪ್ತ : ಕೃಷ್ಣನೇ 'ಚರಿಷ್ಣುಂ' ಪುರದ ಬದಲು, (ಕೃಷ್ಣ) ದ್ವೀಪದಲ್ಲಿ ಹುಟ್ಟಿದ ಮಹಾಭಾರತದ ಕರ್ತೃ ಮತ್ತು ಮಹಾಭಾರತ

---

* 'ಚರಿಷ್ಣು' ಎಂಬ ಪದಕ್ಕೆ 'ತಿರುಗಾಡುವಂಥ' ಎಂಬ ಅರ್ಥವಿದೆ. ಈ ಅರ್ಥವನ್ನು ಕನ್ನಡ-ಸಂಸ್ಕೃತ ಶಬ್ದಕೋಶಗಳು ಹೇಳುತ್ತವೆ. (ಸಂ)

ಕಥೆಯ ಕೇಂದ್ರಪಾತ್ರ, ಈ ಉಭಯ 'ಕೃತಿ'ಗಳ ದಿವ್ಯಪುರುಷನ ರೂಪದಲ್ಲಿ ಅಮರನಾಗಿ ಇಂದಿಗೂ ದರ್ಶನ ಸುಲಭನಾಗಿದ್ದಾನೆ, ಅಮರನಾಗಿದ್ದಾನೆ ಈ ಮಹಾಕವಿ! ವ್ಯಾಸನೂ ಶ್ರೀಮನ್ನಾರಾಯಣನ ಅವತಾರವೇ ಎಂದು ಸಾಂಪ್ರದಾಯಿಕ ಶ್ರದ್ಧೆಯುಂಟು! ಏಳು ಹುತ್ತಿನ ಎಲ್ಲಮ್ಮನ ಮಗ: ಪರಶು (ಧರ)ರಾಮನೂ ಸರ್ಪರೂಪನಾಗುತ್ತಾನೆ. ಸಪ್ತವಲ್ಮೀಕಿ ಪುತ್ರ! ಇವನು ಹಾಗೂ ಶಿವ-ಧನುಷ್ಯ ಎತ್ತಿದ ಕೋದಂಡ-ರಾಮನೂ ಒಂದೇ ಅವತಾರ. ತತ್ : ಏಕಂ ಸಂತಂ ಬಹುಧಾ ಕಲ್ಪಯಂತಿ! ರಾಮನು ಶೇಷಾವತಾರನೆಂಬ 'ಲಕ್ಷ್ಮಣ'ನ ಅಣ್ಣ! ಎಂದರೇನಾಯ್ತು? ಪರಶು-ಧರ : ರೇಣು-ಪುತ್ರನು: ಈ ಮೊದಲು ಹೇಳಿರುವ ಎಲ್ಲಮ್ಮ: ಆದಿಯ ಒಡಲೊಳಗಿಂದ (ಸಲಿಲದಿಂದ) 'ತೀವ್ರೋ ರೇಣುಃ' ಒಂದು ಹೊರ ನೆಗೆದಿತು ಎಂಬ ಆ 'ತೀವ್ರ' ಮನೋಭಾವದ ಲೋಕಸಂಹಾರಿ ಸತ್ಪುತ್ರ ಪರಶು-ಧರ ರಾಮನೇ ಇವನು.

ಲೋಕದುಃಖದಿಂದ ಮರುಗಿ ಅಲ್ಲ: ಪಕ್ಷಿ-ಮಿಥುನದ ದುರಂತ ನೋಡಿ ವಿಹ್ವಲನಾಗಿ. ಮಮ್ಮಲನೆ ಮರುಗುವಾಗ ಹೊರಬಿದ್ದ ದಿವ್ಯವಾಣಿಯೇ, ರಾಮನ ಅಯನದ ದರ್ಶನ ಮಾಡಿಸಿದೆ, ಎಂಬಲ್ಲಿ 'ಅಪಾಂ-ನಪ್ತ್ರ' ಪಂಥೀಯ ರಹಸ್ಯ ಅಡಗಿದೆ. ಈ ಕರುಣಾಮಯ ಪಾರ್ಶ್ವಭೂಮಿಯಲ್ಲಿ ಆಕಾರ ಪಡೆದ ಜಾನಕೀರಮಣ ರಾಮನು, ಪರಶುಧರ-ರಾಮನು ಎಂದರೆ, ಆ ತತ್=ಏಕಂ : ಸಂತನ ಇನ್ನೊಂದು ಆವೃತ್ತಿಯೆಂಬುದು ನಿಜವಿದ್ದರೂ ಇದು ಎಂತಹ ಅಹಿಂಸಕ ಪ್ರತಿಮೆ! ಈ ವ್ಯತ್ಯಾಸವು ಹೇಗೆ? ಪರಶುಧರನಿಗೆ ಅವನ 'ಪುರಿ'ಯೆ ಇಲ್ಲದ್ದರಿಂದ ಇವನು ಸದಾ ಸಂತಪ್ತನೇ ಸರಿ! ಆಪದಿಂದ ಹೊರಬಿದ್ದ ವಾಡಬ ಅಗ್ನಿ! ಅಪೋವತ್ಸ ಪರಂಪರೆಯ 'ಪುರುಷ'; ವೃಷಭರ ಚಿತ್ರಗಳು, ಬದಲಾಗುತ್ತ ನಡೆದ ಸಾಮಾಜಿಕ 'ಸಮಯ'ದ ಆಚಾರ, ಅಭಿರುಚಿಗೆ ಸರಿಹೋಗುವಂತೆ, ಹೊಂದಿಕೊಳ್ಳದೆ ಇದ್ದರೆ, ಈ ಆಪ : ರಸ ಸಂಪ್ರದಾಯದ ಪರಂಪರೆಯೇ ನಷ್ಟವಾಗಬಹುದಲ್ಲ! ಶೇಷನ ಅವತಾರವೆಂಬ ಬಲರಾಮ ಹಾಗೂ ಲಕ್ಷ್ಮಣನ ಆಕೃತಿಗಳಲ್ಲಿ ಸಾಮ್ಯ ಹುಡುಕಬೇಕು! ಬಲದೇವನಿಗ ತಾಳೆಮರ ಧ್ವಜ: ಲಾಂಗೂಲ ನೇಗಿಲು ಕೈಯಲ್ಲಿ! ಬಲದೇವನಲ್ಲಿ ರಸ, ಸರ್ಪ ಎರಡೂ ಜೀವಂತ ಕಾಣುತ್ತವೆ. ಇವನೆದುರು ಶೇಷನೆಂಬ ಲಕ್ಷ್ಮಣ ಸಪ್ಪೆ ! ನಾಗರೇ ಪ್ರಮುಖ ಶಿಷ್ಯರಾದ ಬುದ್ಧನು ಐದು ಹೆಡೆ ಸರ್ಪ ಚಿಹ್ನದ ತೀರ್ಥಂಕರರು ಅಹಿಂಸಕರಾಗಿಲ್ಲವೆ? 'ದ್ರಪ್ಸಃ' 'ಸ್ಕನ್ನಃ' ಭಗ-ವಾನ್ ಶ್ರೀಕೃಷ್ಣನ ರಾಸಕ್ರೀಡೆ, ಗೋಪಿಯರೊಡನೆಯ ಲೀಲೆಗಳ ಕಥೆಗಳ ಮೂಲಕ ಸಾಮಾಜಿಕ ಪ್ರಜ್ಞೆಯ ಜನಮನದಲ್ಲಿ 'ಅಪಾಂ-ನಪ್ತ' ಸಂಪ್ರದಾಯದ ಬಗೆಗೆ ತಿರಸ್ಕಾರವು ಹುಟ್ಟಿಕೊಂಡಿತು. ಶ್ರೀಕೃಷ್ಣನ ರಾಸಕ್ರೀಡಾದಿಗಳಲ್ಲಿ ದಿವ್ಯಾಧ್ಯಾತ್ಮದ ಉದಾತ್ತ ಅರ್ಥವುಂಟೆಂದು ಮಹಾಮಹಾ ಮೇಧಾವಿಗಳು ಎಷ್ಟೇ ಪ್ರತಿಪಾದಿಸಿದರೂ, ಜನದಲ್ಲಿ ಉಂಟಾದ ಈ ದುರ್ಭಾವನ್ನು ತೆಗೆದು ಹಾಕಿ, ಮರಳಿ ಶೇಷ : ನಾಗ ದೈವತದ ಭಕ್ತಿ ಪರಂಪರೆಯನ್ನು ಉಳಿಸಿಕೊಳ್ಳಲು ವಲ್ಮೀಕದಿಂದ ಓರ್ವವಾಲ್ಮೀಕಿ (:ನಾಗ) ಅವತರಿಸಲೇ ಬೇಕಾಯಿತು.

ಸಾಂಪ್ರದಾಯಿಕ ಗ್ರಹಿಕೆಯಂತೆ, ಶ್ರೀರಾಮಾವತಾರ, ಕೃಷ್ಣನಿಗಿಂತಲೂ ಮುಂಚಿನದು. ಆದರೆ, ಈ ಸಂಭ್ರಮಕ್ಕೆ ಅವಕಾಶವನ್ನು ಕಲ್ಪಿಸಲಾಗಿದ್ದರೂ ರಾಮಾಯಣ ಕಾವ್ಯದ ಅಲಂಕರಣ, ಭಾಷೆ ಅರ್ವಾಚೀನ, ಎಂಬುದು ಬಚ್ಚಿ ಉಳಿಯಲು ಶಕ್ಯವಿಲ್ಲವಾಗಿದೆ. ಶ್ರೀರಾಮಭಕ್ತಿಯ ಪ್ರಚಾರವು, ಶ್ರೀ ಕೃಷ್ಣಭಕ್ತಿಯ ತರುವಾಯದ ಘಟನೆಯಾಗಿರುವುದು ಐತಿಹಾಸಿಕ ಸ್ವರೂಪದ ಪ್ರಮಾಣಗಳಿಂದಲೇ ಸಿದ್ಧವಾಗಿದೆ. ಬಂಗಾಳದ ಶ್ರೇಷ್ಠ ಸಂಶೋಧಕರೊಬ್ಬರು ಭಕ್ತಿ ಸಂಪ್ರದಾಯದ ಸಮಾಲೋಚನೆಯಲ್ಲಿ ಈ ಮಾತನ್ನು ಸ್ಪಷ್ಟಪಡಿಸಿದ್ದಾರೆ. ಶ್ರೀಕೃಷ್ಣ ಭಕ್ತಿಯ ದುಷ್ಪರಿಣಾಮಗಳನ್ನು ದೂರ ಮಾಡಲು ಶ್ರೀರಾಮಚರಿತದ ಆದರ್ಶವನ್ನು ಜನಕ್ಕೆ ಬೋಧಿಸುವ ಆವಶ್ಯಕತೆ ತೀವ್ರವಾಯಿತು, ಎಂದು ಅವರು ಹೇಳಿದ್ದು ಸಮರ್ಪಕವೇನೋ ಇದೆ. ಅಲ್ಲದೆ, ಲಕ್ಷ್ಮಣ ಬಲದೇವ ಇಬ್ಬರೂ ನಾಗರೇ ಆಗಿದ್ದಾರೆ. ಆದರೂ ಲಕ್ಷ್ಮಣನ ಪಾತ್ರ ನಿರ್ಮಾಣವು ನಿಶ್ಚಿತವಾಗಿಯೂ ಬಲರಾಮನಿಗಿಂತ ಅರ್ವಾಚೀನ ಅಭಿರುಚಿಗೆ ಸರಿ ಹೋಗುವಂತಹುದು. ರಾಮ ಹಾಗೂ ಕೃಷ್ಣರ ಆಕೃತಿಯಲ್ಲೂ ಹಿಂದಿನ ದೋಷ ಮುಚ್ಚಿಕೊಂಡು, ಆದರೂ ಮುಸುಕಿನೊಳಗೇ ಸರ್ಪಸಂಪ್ರದಾಯದ ಗುಹ್ಯಸಂಕೇತ ಉಳಿಸಿಕೊಂಡು ಬರೆದ ಮಹಾಕಾವ್ಯ ರಾಮಾಯಣವಾಗಿದೆ.

'ದ್ರಪ್ಸಃ' ಶ್ರೀ ಕೃಷ್ಣನ ಚರಿತೆಯೆ ಮೂಲತಃ ಸಾಂಕೇತಿಕವಿರುವಾಗ, ಮಹಾಭಾರತದೊಳಗಿನ ಸರ್ಪ-ಯಾಗದ ಕಥೆಯು ಕೇವಲ ಪ್ರಚಾರಾರ್ಥವಾಗಿ ನಿರ್ಮಿತವಾದುದು, ಎಂದು ತನ್ನತಾನೆ ಸಿದ್ಧವಾಗುತ್ತದೆ ಅಲ್ಲವೆ?

ಮಹಾಭಾರತದಲ್ಲಿ ಸರ್ಪಯಾಗದಂತೆ 'ಅಶ್ವ'- ಮೇಧಯಾಗವೂ ಅರ್ಥವಿಹೀನ ಕೃತಿಯೆನಿಸುವಂತಿದೆ. ದಾಯಾದಿಗಳ ಸಂಹಾರದಿಂದ ವಿಹ್ವಲನಾದನೆಂಬ 'ಧರ್ಮ'-ರಾಜನು ಕಾಲ್ಕೆದರಿ ಯುದ್ಧವನ್ನು ಆಮಂತ್ರಿಸುವ ಸ್ವರೂಪದ ಅಶ್ವಮೇಧದ ಸಂಕಲ್ಪ ಮಾಡುತ್ತಾನೆ, ಎಂದರೆ ನಂಬುವುದು ಹೇಗೆ? 'ಅಶ್ವ'ವೂ ಆಪ : ರಸ ಪಂಥೀಯ ರಹಸ್ಯಾರ್ಥವನ್ನುಳ್ಳ ಒಂದು 'ಗುಹ್ಯ' ಪ್ರತಿಮೆ! 'ಅಶ್ವಃ ಸಮುದ್ರಯೋನಿಃ' ಎಂದರೆ ಇದೂ ಒಂದು ಸರ್ಪ-ಬಂಧುವಿನ ಸಂಕೇತವೇ ಅಲ್ಲವೆ! ಮಹಾಭಾರತದ ಸರ್ಪಯಾಗವೆಂಬುದು ಕೇವಲ ಪ್ರಚಾರಕ ತಂತ್ರದ ಕಥೆ ಎಂಬುದನ್ನು ಮನಗಾಣಲು, 'ಅಶ್ವ' ಸಂಕೇತದ ಅಂತರಾರ್ಥವನ್ನು ಸ್ಮರಿಸಿಕೊಳ್ಳುವುದು ಅವಶ್ಯವಾಗುತ್ತದೆ.

ಗಂಗಾಪುತ್ರ : ಕೃಷ್ಣದ್ವೈಪಾಯನ ರಚಿತ ಮಹಾಭಾರತವು ತನ್ನ ಪಾಡಿಗೆ ಅದೇ ಒಂದು ಇಡಿ ಪ್ರತಿಮೆ ಆಗಿದೆ. ಆಪ: ರಸಪುತ್ರನ ಈ ಮಹಾಕಾವ್ಯವು, ನಾನಾ ನಾಮರೂಪಗಳಲ್ಲಿ 'ಅಪಾಂ-ನಪ್ತೃ' ದೈವತದ ಸಾಕ್ಷಾತ್ಕಾರ ಮೂಡಿಸುವ ಅಮೋಘವಾದ ಸಾಹಿತ್ಯಕೃತಿಯೇ ಆಗಿರುವುದು ಸ್ವಾಭಾವಿಕವೇ ಸರಿ.

ವಿಖ್ಯಾತ ಸಂಶೋಧಕರಾದ ವಿಂಟನಿಟ್ಜರು, ಮಹಾಭಾರತವನ್ನು ಪ್ರವೃತ್ತಿಪರ ಜೀವನದ ವೀರಗಾಥೆ ಎಂದು ಗ್ರಹಿಸಿ ಮೋಸ ಹೋದುದುಂಟು. ಡಾ. ವಿ. ಎಸ್, ಸುಕಥನಕರರ ಕೊನೆಯ ನಿರಾಶಾವಾದದಿಂದ ಇದು ಸ್ಪಷ್ಟವಾಗಿ ತಿಳಿಯುವಂತಿದೆ. ಮಹಾಭಾರತದೊಳಗಿನ ನಳದಮಂತೀ ಕಥೆ, ಯುರೋಪಿಯ ವಿದ್ವಾಂಸ ರಸಿಕರ ಚಿತ್ತವನ್ನು ಮೊದಲು ಸೆರೆಹಿಡಿಯಿತು. ಹಲವು ವಿದ್ವಾಂಸರು ಮಹಾಭಾರತದ ವ್ಯಾಸಂಗಿಗಳಾದರು. ಈ ಮಹಾಕಾವ್ಯವನ್ನೋದಿ ಹರ್ಷಚಿತ್ತರಾದ ವಿಂಟರ್‌ನಿಟ್ಸ್, ಒಂದು ಮಾತಿಗಾಗಿ ವ್ಯಥೆಪಟ್ಟುದೂ ಉಂಟು. ಅವರು ಬರೆದ ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ ಈ ಮಾತನ್ನು ವಿವರಿಸಿದ್ದಾರೆ:

> ಎಷ್ಟು ಸುಂದರ ಕಾವ್ಯ! ಆದರೆ, ಇದರಲ್ಲಿ ಸ್ವಾರ್ಥೀ ಬ್ರಾಹ್ಮಣರ ಕೈಯಾಡಿ, ತೀರ್ಥ-ಮಹಾತ್ಮ್ಯಾದಿಗಳು ಸೇರಿ, ಸುವರ್ಣ ಪುಷ್ಪ ದಕ್ಷಿಣಾದಿಗಳನ್ನು ಸಂಪಾದಿಸುವ ಹಂಚಿಕೆ ಇರುವ ಕಥೆಗಳೂ ಉಂಟು. ಜೈನ-ಬೌದ್ಧ ಧರ್ಮದ ನಿರಾಶಾವಾದದ ಪ್ರಚಾರಕ ಕಥೆಗಳೂ ಅಲ್ಲಲ್ಲಿ ಸೇರಿ, ಪ್ರವೃತ್ತಿಪರ ಜೀವನದ ಆ ಸುರಮ್ಯ ಕಥೆಯನ್ನು ಅಂದಗೆಡಿಸುತ್ತವೆ. ಇಂತಹ ಬೊಜ್ಜು ಬೆಳೆದು ಮೂಲ 'ಜಯ' ಎಂಬ ಗ್ರಂಥವು, ಮಹಾಭಾರತದ ಇಂದಿನ ಹೆಬ್ಬೊತ್ತಿಗೆಯಾಗಿದೆ.

ಎಂದು ಅವರು ವಿಷಾದಿಸಿದ್ದುಂಟು. ಮಹಾಭಾರತದ ಸಂಶೋಧಿತ ಶುದ್ಧಪ್ರತಿಯನ್ನು ಸಿದ್ಧಪಡಿಸುವ ವಿಚಾರಕ್ಕೆ ಪ್ರೇರಿಸಿದ್ದುಂಟು.

ಆಧುನಿಕ ಸಂಶೋಧನ ಶಾಸ್ತ್ರದಲ್ಲಿ ಪಳಗಿದವರೆಂದು ಹೆಸರಾದ ಡಾ. ವಿ. ಎಸ್. ಸುಕಥನಕರರು. ಈ ಕಾರ್ಯಕ್ಕಾಗಿ ತಮ್ಮ ಆಯುಷ್ಯವನ್ನೇ ಧಾರೆ ಎರೆದರು. ಮಹಾಭಾರತದ ಸಂಶೋಧಿತ ಸಂಪುಟಗಳು ಹಲವು ಪ್ರಕಟವಾದವು. ಡಾ. ಸುಕಥನಕರಿಗೆ ಈ ಸಂಶೋಧನದ ಅವಿಶ್ರಾಂತ ಪರಿಶ್ರಮ ಹಾಗೂ ಸಾಂಸಾರಿಕ ಅವಾಂತರದ ತಾಪದಿಂದಾಗಿ ಆರೋಗ್ಯ ಇಲ್ಲವಾಯಿತು. ಮುಂಬೈ ವಿಶ್ವವಿದ್ಯಾನಿಲಯದವರು ಡಾ. ಸುಕಥನಕರರಿಂದ ಮಾಡಿಸಿದ ನಾಲ್ಕು ಉಪನ್ಯಾಸಗಳೇ ಅವರ ಕೊನೆಯ ಉಸಿರಾಯಿತು. ಮಹಾಭಾರತದ ಆಶಯವನ್ನು ಕುರಿತು (Meaning of Mahabharata) ಅವರು ಹೇಳುವಾಗ, ತಾವು ಈ ವರೆಗೆ 'ಪಾಠಾಂತರ ಭಾಗವು ಇದು,' 'ಮೂಲ ಮಹಾಭಾರತಕ್ಕೆ ಸಂಬಂಧಿಸಿದ್ದು ಇದಲ್ಲ' ಎಂಬ ವಿಚಾರದಿಂದ ಮಾಡಿದ ಇಡೀ ಕಾರ್ಯದ ಬಗೆಗೇ ಸಂದೇಹವುಂಟಾದುದನ್ನು ಅವರು ಬಾಯ್ಬಿಟ್ಟು ಹೇಳಿದ್ದಾರೆ! ಹೀಗೆಯೆ, ನಾವು ಈ ಮಹಾಭಾರತದಿಂದ ಒಂದೊಂದು ವಿಸಂಗತಿಗಾಗಿ ಒಂದೊಂದು ಕಥೆ-ಇತ್ಯಾದಿ ತೆಗೆಯುತ್ತ ಹೋದರೆ, ಮಹಾಭಾರತದಲ್ಲಿ ಏನೂ ಕೈಗೆ ಹತ್ತದೆ ಹೋದೀತು! ಎಂಬ ಭೀತಿಯನ್ನು ವ್ಯಕ್ತಪಡಿಸಿದ್ದಾರೆ! ಸೂಕ್ಷ್ಮ ವಿಚಾರವಂತರು, ಸಂಶೋಧಕರು

ಆದ ಡಾ. ಸುಕಥನಕರರಿಗೆ ತಮ್ಮ ಕಾರ್ಯವು, ಅಸಫಲವಾದ ಅನುಭವವು ಬರಲು ಕಾರಣವೇನು? 'ಮಹಾಭಾರತವು ಪ್ರವೃತ್ತಿಪರ ಜೀವನಗಾಥೆಯಾಗಿರಲಿಕ್ಕೆ ಬೇಕು' ಎಂಬ ಮೂಲ ಗ್ರಹಿಕೆಯು ಸರಿಯಿದ್ದರೆ ಈ ನಿರಾಶೆಯುಂಟಾಗುವ ಕಾರಣವೇ ಇದ್ದಿಲ್ಲ. ವಿಂಟರ್‌ನಿಟ್ಸ್ ಪ್ರಭೃತಿಗಳ, ಗ್ರಹಿಕೆಯೇ ಮೂಲತಃ ತಪ್ಪಾಗಿದೆ, ಎಂಬುದು, ಈ ವಂಶವೃತ್ತದ ಆರಂಭದ ಭೀಷ್ಮನ ತಾಯಿಯ ಕಥೆಯಿಂದಲೇ ತಿಳಿಯುವಂತಿದೆ! ಋಗ್ವೇದದ 'ಅದಿತಿ' ಎಂಬ ಲೋಕಮಾತೆ, ನಿಜವಾಗಿ ಕಾಲಿ: ಮೃತ್ಯು ದೇವತೆಯಾಗಿದ್ದಾಳೆ. ಈ ಅದಿತಿಯ ಇನ್ನೊಂದು ಅವತಾರವೇ, ಶಂತನುವಿನ ಪ್ರೇಯಸಿ ಗಂಗಾದೇವಿ! ಮೃತ್ಯುದೇವಿಯ ಅಂಶ : ಭೀಷ್ಮ, ಚಿತ್ರವೀರ್‍ಯಾದಿ ಏನೆಲ್ಲ ಪೀಳಿಗೆ! ಎಂದರೆ ಇದರ ಅರ್ಥ : 'ಪ್ರಪಂಚವು ಮೃತ್ಯುವಿನಿಂದ ಆವೃತವಾಗಿದೆ' ಎಂಬ ನಾಗಪಂಥೀಯ ಮೂಲಭೂತ ಶ್ರದ್ಧೆಯನ್ನು ಬೆಂಬಲಿಸುವ ಒಂದು ಶ್ರೇಷ್ಠ ಸಾಹಿತ್ಯ ಕೃತಿ, ಈ ಮಹಾಭಾರತ! ಬೃಹದಾರಣ್ಯಕದಲ್ಲಿ ಪ್ರಪಂಚಕ್ಕೆ ಈ ಅರ್ಥವೇ ಉಂಟು[೬] ಭಾರತಾಂತರ್ಗತ ಗೀತೆಯಲ್ಲೇ ಹೇಳಿರುವಂತೆ 'ಅಜ್ಞಾನಾಂ ಕರ್ಮಸಂಗಿನಾಂ' ಬುದ್ಧಿಭೇದವಾಗಬಾರದು. ಅವರ ಮನರಂಜನೆ ಮಾಡಮಾಡುತ್ತಲೆ 'ಈ ಸಂಸಾರವು ಒಂದು ಮಾಯೆ' ಎಂಬುದನ್ನು ಮನಗಾಣಿಸಿಕೊಡುವ ಧೂರ್ತತೆಯಿಂದ ಬರೆದ, ಮೋಕ್ಷಾರ್ಥಿಗಳ ಪ್ರಯೋಜನಕ್ಕಾಗಿ ಇರುವ ಮಹಾಕೃತಿ ಈ ಮಹಾಭಾರತ. ಗೀತೆಯು ಮಹಾಭಾರತದ ಅಂಗ. ಆದಕಾರಣ, ಗೀತೆಯ ಕವಡು ವ್ಯಾಮಿಶ್ರಶೈಲಿಯೆ ಮಹಾಭಾರತದಲ್ಲಿಯೂ ಇರಲೇಬೇಕು. "ಗೀತೆಯಲ್ಲಿ ಪಾಠಾಂತರಗಳಿವೆ, ೨-೩ ಭಿನ್ನ ಮತಗಳ ಹೆಣಿಕೆಯಿದೆ" ಎಂದು ಮುಂತಾಗಿ ಸಂಶಯಪಟ್ಟುಕೊಳ್ಳಲಾಗುತ್ತದೆ! ಇದರೊಳಗಿನ ಪಾಠಾಂತರವೆಂದು ಒಂದೊಂದು ಶ್ಲೋಕತೆಗೆದು ಬಿಡುವುದೆ ಅಶಕ್ಯವಿದೆ. 'ಏತತ್ ವಿಮೃಶ್ಯ ಅಶೇಷೇಣ ಯಥೇಚ್ಛಸಿ ತಥಾಕುರು' ಎಂಬ ಮಾತಿನ ಮುಂದೆಯೆ, 'ಸರ್ವಧರ್ಮಾನ್ ಪರಿತ್ಯಜ್ಯ ಮಾಮ್ ಏಕಂ ಶರಣಂ ವ್ರಜ' ಎಂಬ ಶ್ಲೋಕವಿದೆ! ಇವೆರಡೂ ಪರಸ್ಪರ ವಿಸಂಗತ! ಯಾವುದನ್ನು ಎತ್ತಿ ಹಾಕುವುದು? 'ವಿಮರ್ಶೆಯೆ ಬೇಡ' ಎಂದು ನೇರವಾಗಿ ಹೇಳಿದರೆ ಈ 'ಬುದ್ಧಿ'ವಂತರೆಂಬ ಜನ, ಗೀತೆಗೆ ಕಿವಿಗೊಡಲು ಶಕ್ಯವೊ?. ಜೈನ-ಬೌದ್ಧಪಂಥೀಯ ನಿರ್ವೇದೀ ತತ್ತ್ವ ಪ್ರತಿಪಾದನೆಯ ಕಥೆಗಳು, ಮಹಾಭಾರತದ ಮೂಲರಚನೆಗೆ ವಿಸಂಗತವಾಗಿವೆ, ಎಂಬ ಗ್ರಹಿಕೆಯೆ ಮೊದಲು ಸರ್ವಥಾ ತಪ್ಪು. ಇದರಿಂದ ಸಂಶೋಧಕರಿಗೆ ತಮ್ಮ ಏನೆಲ್ಲ ಪರಿಶ್ರಮ ವ್ಯರ್ಥವಾದಂತೆ ಎನಿಸಿದ್ದಾಯಿತು.

ಆದರೆ, ಮಹಾಭಾರತದ ಸಾಹಿತ್ಯಕೃತಿ: ಕಟ್ಟಡ ಮಯಸಭೆಯ ಶೈಲಿಯಾಗಿರುವುದಾದರೂ ಮಹಾಭಾರತ ತಾತ್ಪರ್ಯ ರೂಪ ನಿರ್ಣಯ : ಫಲಶ್ರುತಿ ಆಗಿದೆ. ಅದು ಸರ್ಪಯಾಗದ ನಿಃಸಂದಿಗ್ಧಾರ್ಥದ ಕಥಾರೂಪದಲ್ಲಿ ಮೈದಾಳಿ ನಿಂತಿದೆ. ಇಂದ್ರನು ತಕ್ಷಕ : ನಾಗನ ಮಿತ್ರ. ಅವನು ವೃತ್ರ ಹಂತಕನಲ್ಲ ನಾಗರಕ್ಷ. "ಅಹಿಂಸಾ ಪರಮೋಧರ್ಮಃ" 'ಪರೋಪಕಾರಾಯ ಪುಣ್ಯಾಯ; ಪಾಪಾಯ ಪರಪೀಡನಮ್' ಭಾರತೀಯರಿಗೆ ಈ ಬಗೆಯ ದಿವ್ಯಜೀವನ ಸ್ಫೂರ್ತಿಯನ್ನೀಯುತ್ತ ಬಂದ ಅಮೋಘವಾಣಿಯ ಗ್ರಂಥ ಮಹಾಭಾರತ! ಈ ಶ್ರೇಷ್ಠ ಗ್ರಂಥದ ದಿವ್ಯೋಪದೇಶ : ಶರಣಾಗತರನ್ನು ರಕ್ಷಿಸುವುದು. ಭಾರತದ ರಾಜಪುತ್ರರು, ಮಹಾಭಾರತದ ಆದೇಶಕ್ಕನುಸರಿಸಿ ತಮ್ಮ ಕೈಯಲ್ಲಿ ಸಿಕ್ಕ ಶತ್ರು 'ಶರಣು' ಎಂದೊಡನೆ ಅವರನ್ನು ಬಿಟ್ಟುಬಿಡುವುದು; ಅವರಿಗೇ ಮರಳಿ ಪಟ್ಟಕ್ಕೆ ಕೂರಿಸುವುದು; ಅವರೇ ನಾಳೆ ಇಮ್ಮಡಿ ಬಲ ಪಡೆದು ಏರಿಬರುವರೆಂಬುದನ್ನು ಅರಿತರೂ ಶರಣಾಗತರೆಂಬ ಕಾರಣದಿಂದ ಅವರಿಗೆ ನಿರಾತಂಕವಾಗಿ ಬಿಟ್ಟುಕೊಡುತ್ತಿದ್ದಂತಹ, ಅಪೂರ್ವವಾದ ಉದಾಹರಣಗಳು ಭಾರತದ ಗತೇತಿಹಾಸದಲ್ಲಿವೆ. ಸಿಕ್ಕ ಹಾವು ದೂರ ಅಡವಿಯಲ್ಲಿ ಬಿಟ್ಟುಬರುವ ವ್ರತಧಾರಿಗಳು ಇಲ್ಲವೋ ಇಂದಿಗೂ! ಭೂಲೋಕದಲ್ಲಿ ಅಪೌರುಷೇಯ ಪರಮಾತ್ಮ ಶಕ್ತಿಯ ಸಾಕ್ಷಾತ್ಕಾರಕ್ಕೆ ಆದಿಕಾರಣವಾದ ಪ್ರತಿಮಾನಾಗ : ಸರ್ಪ : ಎಂದೇ ಹಾವುಗಳಿಗೆ 'ದೇವ-ಜನ' ಎಂದು ನಾಮಸಂಕೇತ! ಈ 'ದೇವ-ಜನ-ವಿದ್ಯೆಯೆ' ವಿದ್ಯೆ; ಇದೇ ಜ್ಞಾನ. ಒಂದು ಕಾಲದ ಶ್ರದ್ಧೆಯುಳ್ಳ ಈ ಸಂಪ್ರದಾಯವು ರೂಪಿಸಿದ ಸಂಸ್ಕೃತಿಯಲ್ಲಿ ಹಾವಿನ ದ್ವೇಷ, ಕೃತಘ್ನತೆಯ ಲಕ್ಷಣವಾಗಲಾರದೆ?

ಸರ್ಪಯಾಗದ ಪವಾಡಕಥೆಯ ಪಾತ್ರಗಳು ಮಹಾಭಾರತಕ್ಕೂ ಮುಂಚಿನವು! 'ಯಾಯಾವರ' ತೈತ್ತಿರೀಯ ಸಂಹಿತೆ! ಜರತ್ಕಾರು ಬೃಹದಾರಣ್ಯಕ! ಅಲ್ಲದೆ, ಇವು ಶುದ್ಧ ಸಾಂಕೇತಿಕ ಪ್ರತಿಮೆಗಳು! ಸರ್ಪ-ಯಾಗದ ಮುಖ್ಯ ಪಾತ್ರ ಜರತ್ಕಾರು: ಸರ್ಪನ ಪುತ್ರ 'ಆಸ್ತಿಕ' ಇದು ಆಸ್ತಿಕತ್ವದ ಬಗೆಗಿನ ಒಂದು ಭಾವನೆ : ಆಸ್ತಿಕ: ಶ್ರದ್ಧಾವಂತ, ಇದು ವ್ಯಕ್ತಿ ಅಲ್ಲವೆಂಬ ಸಂಗತಿ 'ಆಸ್ತಿಕನ' 'ತಾಯಿ' ಎಂಬವಳ ನಾಮಸಂಕೇತದಿಂದ ದೃಢಪಡುತ್ತದೆ. ಆಸ್ತಿಕನ ತಾಯಿ ಹೆಸರೊ 'ಜರತ್ಕಾರು' ಎಂದೇ ಸಂಪ್ರದಾಯ! ಆದರೆ, ತಕ್ಷಕ : ನಾಗನ ಈ ಸಹೋದರಿಗೆ 'ಮಾನಸೀ' ಎಂದು ಹೆಸರು ಇರುವುದಾಗಿಯೂ ಪುರಾಣ ಕಥೆಗಳಿವೆ! ಜರತ್-ಕಾರು, ಮಾನಸಿ ಇದು ಒಂದೇ ಶಬ್ದಪ್ರತಿಮೆಯ ಸಂಕೇತವಾಗಿ ಇರುವುದರ ಔಚಿತ್ಯ ತಿಳಿಯಲು ಇನ್ನೂ ಆಳಕ್ಕೆ ಇಳಿಯಬೇಕು. ಈ 'ಮಾನಸೀ'ದೇವಿಯು ತನ್ನಂತೆಯೆ ಹೆಸರಿರುವ 'ಜರತ್ಕಾರು' ಎಂಬ ಹೆಸರಿನ ಗಂಡನ ಅರ್ಧಾಂಗಿ! ಪತಿ-ಪತ್ನಿಯರಿಗೆ ಒಂದೇ ಹೆಸರು ಏಕೆ? ಎಂಬ ಪ್ರಶ್ನೆ ಈ ನಾಗ ಸಂಪ್ರದಾಯದ ಪೂರ್ವ-ಪರಂಪರೆ ಹಾಗೂ ಜೀವನಾದರ್ಶದ ಅಜ್ಞಾನದಿಂದಾಗಿ ತಲೆಯೆತ್ತುತ್ತದೆ. ಗಂಡು+ಹೆಣ್ಣು ಕೂಡಿದಾಗ ಪೂರ್ಣ-(ವ್ಯಕ್ತಿ) ತ್ವ ತಾನೆ? 'ಅಪಾಂ-ನಪ್ತ್ರು' ಪ್ರತಿಮೆ-ಅಖಂಡಿತ 'ಅದಿತಿ' ಸ್ವರೂಪದ ಜೀವನ ದರ್ಶನ ಮಾಡಿಸುತ್ತದೆ. ಆಪವು ಇಲ್ಲದೆ ನಪ್ತೃವು ಅಶಕ್ಯ. ನಪ್ತೃವಿನೊಡನೆ ಆಪದ ಅಸ್ತಿತ್ವವನ್ನು ಒಪ್ಪಿಕೊಂಡಂತೆಯೇ. ಅದೇ ಮೇರೆಗೆ ನಪ್ತೃವಿಲ್ಲದ (ಸೃಜನ ಶಕ್ತಿ-ಬೀಜ ಇಲ್ಲದ) ಆಪ ಬಂಜೆ! ಆದುದರಿಂದ, ಸ್ತ್ರೀ-ಪುರುಷರಿಬ್ಬರಿಗೂ ಸಮಾನ ನಾಮಸಂಕೇತವಿರುವುದೇ ಸೂಕ್ತ ಕ್ರಮ. ಆದರೆ, ಪಿತೃಪ್ರಧಾನ ಕುಟುಂಬ ಪದ್ಧತಿಯವರ ವಿಶ್ಲೇಷಣಾತ್ಮಕ ಭಾಷೆಯಲ್ಲಿ 'ಎಲ್ಲ'-ಪ್ಪ 'ಎಲ್ಲವ್ವ' ಮಾದರಿಯ ಹೆಸರುಗಳು ಅ-ಸಂಸ್ಕೃತ ಛಾಪಿನವು ಎಂದು ದೂಷಿಸಲ್ಪಡುತ್ತವೆ! ಆದರು, 'ಕುಮಾರ-ದೇವಿ' ಎಂಬ ವಿಖ್ಯಾತ ರಾಜ್ಞಿಯೋರ್ವಳು ಗುಪ್ತ ಮನೆತನಲ್ಲಿ ಆಗಿದ್ದಾಳೆ! ಗೋವೆಯಲ್ಲಿ ದೊರೆತಿರುವ ಕ್ರಿಸ್ತಾಬ್ದದ ೪ನೆಯ ಶತಕದ ಸುಮಾರಿನ ಸಂಸ್ಕೃತ ಶಾಸನ ಉಂಟು. ಅಲ್ಲಿ ಗೀರ್ವಾಣ ಭಾಷೆಗೆ ಅ-ಬದ್ಧವಾದ ಇಂತಹ ವ್ಯಕ್ತಿ ನಾಮಗಳಿವೆ! ಅದಂತಿರಲಿ.

ಟಿಪ್ಪಣಿಗಳು

೧. ಟಿ. ಬರೊ, ***'ದ್ರಾವಿಡ ಜ್ಞಾತಿಕೋಶ'*** ಶ. ಸಂಖ್ಯೆ ೨೯೬೮

೨. Mercia Eliade; ***Freedom and Immortality***

೩. Robert Graves, ***Greek Myths*** , Vol. P. 71

೪. ***ಋಗ್ವೇದ ಸಂಹಿತೆ*** I. ೧೬೮-೫೨

೫. ಅದೇ ೭೨-೫

೬. ***ಬೃಹದಾರಣ್ಯಕೋಪನಿಷತ್ತು*** ೧-೨-೧

ಜರತ್‌ಕಾರು : ಪ್ರತಿಮಾ ಸಂಕೇತ

ಜರತ್-ಕಾರು ನಾಮಸಂಕೇತವು ಒಳಗೊಳ್ಳುವ ಅರ್ಥವಿಶೇಷವು ಅಭ್ಯಸನೀಯವಿದೆ. ಜರತ್ ಎಂದರೆ ವೃದ್ಧ-ಮುಪ್ಪೆಂದು ಅರ್ಥ. 'ಕಾರು'* ಎಂಬುದಕ್ಕೆ ಇಲ್ಲಿ ದೇಹವಾಚಕ ಅರ್ಥವಾಗುತ್ತದೆ. ಕೈಗಾರಿಕೆಯ ಕೆಲಸ 'ರಥ'. ಈ ಕಾರುವಿನಲ್ಲಿ ಇರುವ ಜರತ್ : ಅನಾದಿ ಜೀವ. ಇದರಿಂದಾಗಿ ಜರತ್-ಕಾರು, ಪ್ರತಿಯೊಂದು ನರಪಿಳ್ಳೆಯೂ ಜರತ್ ಕಾರು! ಈ ನರ-ಪಿಳ್ಳೆಯೊಳಗಿನ ಜೀವ, ಇಂದು ನಿನ್ನೆಯದಲ್ಲ, ಎಂದು ಸೂಚಿಸುವ ಉದ್ದೇಶವು ಈ ಸಂಕೇತ ಸೃಷ್ಟಿಯಲ್ಲಿ ಇರುವುದಾಗಿ ಕಾಣುತ್ತದೆ. ನಾಗ : ಶೇಷ : ಜೀವ : ಇದು ಅಮರ ತಾನೇ? ತನೂ-ನಪಾತ್: ತನ್ನ ತನುವಿನ ಮಗು. ತಾನೇ ಈ ನಾಗ-ಪುರುಷ. 'ತನು' ಯಾರು ನಿರ್ಮಿಸಿದರು? ಇದು ಸಲಿಲಸ್ಥ ಸ್ವಯಂಭೂ ಮೂಲಸ್ತಂಭ. ತನು ಮತ್ತು ನಪ್ತೃ ಬೇರೆ ಬೇರೆಯಲ್ಲ. ಪರಸ್ಪರರಲ್ಲಿ ಜನ್ಯ ಜನಕ ಭಾವವುಂಟೆಂಬುದು ಮೂಲ ಶ್ರದ್ಧೆ ಉಂಟು. ಋಗ್ವೇದದ ಅದಿತಿ... ದಕ್ಷರ ಯುಗದಿಂದ ಅದಕ್ಕೂ ಮುಂಚಿನಿಂದ, ಅವೆಸ್ತಾದಲ್ಲೂ ಇರುವ 'ಅಪಾಂ-ನಪ್ತ್ಯ' ಪ್ರತಿಮಾ ಸಂಕೇತದ ಕಾಲದಿಂದ ಇದು ನಡೆದು ಬಂದಿದೆ. ಆದರೆ, 'ಸಮಯ' ಬದಲಾದುದರಿಂದ ಅಪಾಂ-ನಪ್ತೃ: ತನೂನಪಾತ್ : ಅಹಿರ್ಬುಧ್ನ್ಯ ಈ ಬಗೆಯ ಸಾಂಕೇತಿಕ ದೈವತದ ವೇದಕಾಲದ ಕಥೆಯನ್ನೆ, ವೇದಕಾಲದ ಅಂತ್ಯದಿಂದ ಹೊಸ ಪರಿಭಾಷೆಯಲ್ಲಿ ಹೇಳಬೇಕಾಯಿತು. ಪಿಂಡದಲ್ಲೆ ಬ್ರಹ್ಮಾಂಡವುಂಟು, ಎಂಬ ಶ್ರದ್ಧೆಯನ್ನು ದೃಢಪಡಿಸಲು : ಅಪಾಂ-ನಪ್ತೃ' ಪ್ರತಿಮಾ ಸಂಕೇತವನ್ನೇ ಅ-ವಿಚ್ಛಿನ್ನ ರೀತಿಯಲ್ಲಿ ಸಂರಕ್ಷಿಸಿಕೊಂಡು ಬರಲು ಈ 'ಜರತ್-ಕಾರು' ಎಂಬ ಸ್ತ್ರೀ+ಪುರುಷ ವಾಚಕ (ಸಂಯುಕ್ತ) ಒಂದೇ ನಾಮಸಂಕೇತವನ್ನು ರೂಢಿಸುವ ಪ್ರಯತ್ನ ಒಂದಾಯಿತು. ಜರತ್‌ಕಾರು ಎಂಬ 'ವಾಕ್' ಅರ್ಥೌ ಇವ ಸಂಪೃಕ್ತ' 'ಪೂರ್ಣ-ಬ್ರಹ್ಮ' ಸೂಚಕ ಒಂದೇ ಸಂಕೇತ ನಿರ್ಮಿತಿಯಲ್ಲಿ ಈ ಉದ್ದೇಶವೇ ಉಂಟು. ಬೃಹದಾರಣ್ಯಕದಲ್ಲಿ 'ಕತಿ ಗ್ರಹಾಃ' : (ರಾಹು ಕೇತುಗಳಂತಹ ಸರ್ಪಗಳು:) ಗ್ರಹಗಳು ಎಷ್ಟು ಎಂದು ಯಾಜ್ಞವಲ್ಕ್ಯನಿಗೆ ಪ್ರಶ್ನಿಸುವ ಈ ಜರತ್ಕಾರು, ಸರ್ಪಸಂಪ್ರದಾಯದವನೇ ಇರುವುದು ಸ್ಪಷ್ಟವಿದೆ! ಜರತ್ಕಾರುವಿನ ಸ್ತ್ರೀ, ಮಾನಸೀ; ಎಂದರೆ ದೇಹದೊಳಗಿನ ಅನಾದಿ ಜೀವದ ಸಹ-ಚರಿ ಮನಸ್ಸು : ಹಾವೂ ಆಯಿತು. ಮನಸ್ಸು ಚಂದ್ರ; ಮನೋ-ಜ : ಕಾಮ; ಕೊಂಬಿರುವ ಸರ್ಪ=ಡೈಯೊನೆಸಿಸ್ : ಗ್ರೀಕ್ ಕಥೆಗಳ ಕಾಮದೇವ! ಶುಷ್ಣ-ಕೊಂಬಿರುವ ಸರ್ಪ! ಚರಿಷ್ಣುಪುರ ಅವನದು! ದ್ರಪ್ಸಃ : ಹನಿವ ಕರಿಯ ಕೃಷ್ಣನು, ಪುರುಷೋತ್ತಮನು! 'ಊರ್ಧ್ವಮೂಲ ಅಶ್ವತ್ಥ'!

---

* 'ಕಾರು' ಎಂಬುದು ಸಂಸ್ಕೃತದ ನಾಮಪದ. ಈ ಪದಕ್ಕೆ ಬಡಿಗ, ಜೇಡ, ನಾವಲಿಗ ಅಗಸ, ಸಮಗಾರ ಇವರು ಐದು ಮಂದಿ ಶಿಲ್ಪಿಗಳನ್ನು ಕುರಿತು ಹೇಳುವಂಥ ಶಬ್ದ ಸಂಕೇತ ಇದಾಗಿದೆ. ಈ ಅರ್ಥವಲ್ಲದೆ 'ಮುಪ್ಪಾದ' ಎಂಬ ಅರ್ಥವೂ ಉಂಟು. (ಸಂ)

'ಜಾಂಬುವತಿ' ಎಂಬ ಕರಡಿ : ಕೇಶಿನಿ : ಕಪರ್ದಿನಿ ಅರ್ಧಾಂಗಿ ಎಂಬ ಸಂಕೇತದ ಪವಾಡ ಕಥೆಯಿಂದ, ಈ ಪುರುಷೋತ್ತಮನು ಕೇಶೀಪುರುಷ : 'ಋಕ್ಷ': ಸರ್ಪ ಸ್ವರೂಪನೆಂದೂ ಸೂಚಿಸಿದಂತಾಗಿದೆ. 'ಸತ್ಯ'-ಭಾಮಾ ಸಂಕೇತದಿಂದ ಅದೇ ಆಶಯವೇ ಇನ್ನೊಂದು ಬಗೆಯಲ್ಲಿ ವ್ಯಕ್ತವಾಗಿದೆ. ಸತ್ಯವ್ವ ಸತಿ: ಅದಿತಿಯ ಪತಿ, 'ದಕ್ಷ'ನೇ ಈ ಕೃಷ್ಣನು ಎಂದು ಧ್ವನಿತಪಡಿಸಲಾಗಿದೆ. ಇದೆಲ್ಲವು ತತ್: ಏಕಂ ಸತ್ಯದ ಸಾಕ್ಷಾತ್ಕಾರ ಮಾಡಿಸುವ ಪ್ರಾಮಾಣಿಕ ಪ್ರಯತ್ನದ ಫಲ. ಈ ಪುರುಷೋತ್ತಮನು ಕೆಳಗೆ ಇಳಿಯದೆ ರಥದಲ್ಲೇ ಕುಳಿತು, 'ನರ'ನ (: ದೇಹದ) ಸಾರಥಿ! ಈತನು ಜರತ್-ಕಾರುವೂ ಆಗುತ್ತಾನೆ! ಈ ಪುರಿಶಯ ದೇವನ ರಾಜಧಾನಿ, ಬಾಗಿಲ-ಪುರ(ಕೋಟೆ): ದ್ವಾರಕಾ-ಪತಿ; ಇದು ಸಮುದ್ರ ತಟಾಕ. ಯಮುನಾ ತೀರದ ಮಧು-ರೆಗಿಂತ ಔಚಿತ್ಯಪೂರ್ಣ ವಾಸಸ್-ಸ್ಥಾನವಿದು. ಇದು ಹಾಗಿರಲಿ.

'ಜರತ್-ಕಾರು' ಎಂಬ ಅರ್ಧ-ಗರ್ಭನು, ಯಾಯಾ-ವರ ತನಯನಂತೆ! 'ಯಾಯಾವರ' ಸಂಕೇತವು ತೈತ್ತಿರೀಯ ಸಂಹಿತೆಯಷ್ಟು ಪ್ರಾಚೀನ! 'ಯಾ' ಎಂದರೆ ಹೋಗು, ಗಮನಿಸು; 'ಯಾಯಾ' ಇದೇ ಅತಿಶಯಾರ್ಥದ ದ್ವಿರುಕ್ತಿ. ಇಷ್ಟೇ ಸಾಲದೆ ಇಂತಹ 'ಯಾಯಾ' ಎಂದರೆ ಜಂಗಮ ಪ್ರಾಣಿಗಳಲ್ಲಿ ಇವನು 'ವರ' (ಶ್ರೇಷ್ಠ) ! 'ಯಾಯಾ-ವರ' ಎಲ್ಲೆಲ್ಲೂ ತಡೆಯದೆ ಅಖಂಡವಾಗಿ ಗಮನಿಸುವ ಜಂಗಮ : ಕಾಲ : ಸರ್ಪವು! ಈ ಕಾಲ ಸರ್ಪದ (: ಸರ್ಪ=ನಾರ) ಪುತ್ರರು ನರರು! 'ನರ' ಎಂಬ ಸಾಮಾನ್ಯ ಮಟ್ಟದಲ್ಲಿ ಇವನು ಜರತ್-ಕಾರು: ಅನಾದಿ ಜೀವ! ಈ ಪ್ರಪಂಚಕ್ಕೆ, ಜರತ್ಕಾರುವಿನ ಅರ್ಧಾಂಗಿ ಮನ=ಮಾನಸಿಯೆ ಕಾರಣ! ಎಂದರೆ ಈ ಪ್ರಪಂಚ 'ಬಯಲು' ಎಂಬಲ್ಲಿ ಶೂನ್ಯಸಿದ್ಧಿಯ ದರ್ಶನವಿದೆ.

ಜರತ್ಕಾರುವಿನ ಕಥೆಯಲ್ಲಿ, ಅವನು ಮುಪ್ಪಿನವನಾದರೂ ಮದುವೆಯಾಗಲಿಲ್ಲವಂತೆ! ಏನು ಕಾರಣ-ಎಂದರೆ ತನ್ನ ಹೆಸರಿನ ಹೆಣ್ಣೇ ಆತನಿಗೆ ಬೇಕಿತ್ತಂತೆ! ಈ ಏಕನಾಮ ಪತಿ-ಪತ್ನೀ ಸಂಪ್ರದಾಯವು ರೂಢಿಗೆ ಬಂದುದರ ಹಿನ್ನೆಲೆ ಹೀಗಿದೆ : ಪ್ರಪಂಚವು 'ತತ್ : ಏಕಂ : ಸತ್' ಸ್ವರೂಪಿಯಾಗಿದೆ, ಎಂಬ ಶ್ರದ್ಧೆಯನ್ನು ಬಿಂಬಿಸುವ ತಂತ್ರವಿದು! ಒಂದೇ 'ತನು'ವಿನಿಂದಾದ ತನೂನ ಪಾತ್, ಅ-ಜ ಏಕಪಾತ್ ; ಅಹಿರ್ಬುಧ್ನ್ಯದಿಂದ ಆದ ಸೃಷ್ಟಿ, ಎಂದರೆ ಪ್ರಪಂಚವೆಂಬುದು ಏನೆಲ್ಲ 'ಮಾಯೆ' ಎಂದು ಮನಗಾಣಿಸಲು ಹೊರಟ ಕಥೆ ಈ ಸರ್ಪ: ಯಾಯಾವರ ಪುತ್ರನದು. 'ಜರತ್ಕಾರು' ಎಂಬ ಒಂದೇ ನಾಮರೂಪದ ಸ್ತ್ರೀಪುರುಷ ಸಂಯುಕ್ತ ಸಂಕೇತದ ಪ್ರತಿಮೆಯನ್ನು ಉದ್ದೇಶಪೂರ್ವಕವಾಗಿ ನಿರ್ಮಿಸುವುದರಲ್ಲಿ ಇದಕ್ಕಿಂತ ಬೇರೆ ಏನು ಕಾರಣವಿರಬಲ್ಲುದು? ಬಲ್ಲಿದರು ಹೇಳಬೇಕು.

ಮಹಾಭಾರತದ ವಿಸ್ತಾರವಾದ ಕಥೆಯನ್ನು ಬರೆದೂ ಬಾಯ್ಬಿಟ್ಟು ಸ್ಪಷ್ಟವಾಗಿ ಹೇಳಲು ಆಗದೆ ಉಳಿದ, ಹಾಗೂ ಧ್ವನ್ಯರ್ಥದಿಂದ ಹೇಳಿದ್ದನ್ನೆ ಇನ್ನೂ ಒಂದು ಬಗೆಯಲ್ಲಿ ಸೂಚಿಸುವ ಉದ್ದೇಶವು ಈ ಯಾಯಾವರ-ಪುತ್ರ ಜರತ್ಕಾರು ಹಾಗೂ ಅವನ ಮಗನೆಂಬ 'ಆಸ್ತಿಕ'ನ ನೆಪದ ಈ ಕಥಾರಚನೆಯಲ್ಲಿ ಕಾಣುತ್ತಿದೆ. ಆಪ : ರಸ ಪಂಥೀಯ ಪ್ರತಿಮಾಶಿಲ್ಪದ ಈ ವೈಶಿಷ್ಟ್ಯ ನೋಡಿ : ಇಳಾ ಹಾಗೂ ಜರತ್ಕಾರು, ಅದಿತಿಯಂತೆ ಉಭಯಲಿಂಗೀ ಪ್ರತಿಮಾ ಸಂಕೇತದ ವ್ಯಕ್ತಿಗಳೇ ಆಗಿದ್ದಾರೆ. ಸ್ತ್ರೀಯಿರಲಿ ಪುರುಷನಿರಲಿ 'ಅರ್ಧಗರ್ಭ' ಎಂಬ ಮಾತಿನ ಅನುಭವದ ಹಿನ್ನೆಲೆ ತಿಳಿಯುವಂತೆಯಿದೆ. ಇಡಿ, ಎಂದರೆ ಸ್ತ್ರೀಪುರುಷ ಸಂಯುಕ್ತ: ತತ್‌ಮಯಾವಸ್ಥೆಯ ಏಕಾತ್ಮದ ಸ್ಥಿತಿ; ದಿಕ್ಕಾಲಾತೀತ ಪರಮ ಆನಂದಲೋಕದ ಅನುಭೂತಿ. 'ಪಿಂಡದಲ್ಲೇ ಬ್ರಹ್ಮಾಂಡ' ಎಂಬ ಸೂತ್ರದಂತೆ ಪ್ರತಿವ್ಯಕ್ತಿಯಲ್ಲಿ ಸುಪ್ತಸ್ತ್ರೀ ಅಥವಾ ಪುರುಷಶಕ್ತಿ ಉಂಟೇ ಉಂಟು. ಇಳಾ > ಇರಾ ಪುತ್ರ ಐಲ : ಪುರೂರವನು; ಆಪೋವತ್ಸನು. ಸಮುದ್ರಮಥನದಲ್ಲಿ ಹೊರಬಂದ ಆನೆಯ ಹೆಸರು ಐರಾವತ<ಇರಾವತ), ಇಳಾ>ಇರಾ=ಆಪ=ನಾರ : ನಾರಣ=ಸರ್ಪ! ಜರತ್ಕಾರುವಿನ ಮಡದಿ ಮಾನಸಿಯು ನಾಗಿ : ತಕ್ಷ (: ವೇದದ ತ್ವಷ್ಟ್ರುವಿನ) ಸಹೋದರಿ; ಆದಕಾರಣ ಜರತ್ಕಾರುವು ಸರ್ಪರೂಪನೇ ಆಯ್ತು! ಇಳಾಪುತ್ರನೆಂಬ ಪುರೂರವನ ಮೊಮ್ಮಗನು ನಹುಷ : ಸರ್ಪವೇ ಆಗಿದ್ದಾನೆ. ಈ ಇಂದ್ರ-ಸರ್ಪ ಸ್ಪರ್ಧೆ ಇಲ್ಲಿ ಗಮನಾರ್ಹವಿದೆ. ಪ್ರಚ್ಛನ್ನ ಸರ್ಪ: ನಹುಷನ ಇಂದ್ರಪಟ್ಟಕ್ಕೆ

ಬರುವುದು, ಎಂದರೇನು? ಇಂದ್ರಿಯಾರಾಧನೆಯ ಹೊರಗೆ ಜೀವನವಿಲ್ಲ; ಜೀವನ ಮೂಲ್ಯಗಳು ಶೂನ್ಯವಾಗುವುದು, ಸಂಸ್ಕೃತಿಯ ವಿನಾಶ. ನಹುಷನು, ಕೌರವ ಪಾಂಡವರ ಪೂರ್ವಜ. ಈ ನಾಗ : ಚಂದ್ರ ವಂಶದ ಚರಿತೆಯಲ್ಲಿ ಸಮಾಜಧಾರಣೆಯ ವಿಚಾರಕ್ಕೆ ಸ್ಥಾನವೆಲ್ಲಿ? ಊರ್ವಶಿ ಪ್ರೇಯಸಿ, ಬಸುರೆಯಾಗುತ್ತಲೆ, ಪುರೂರವನ ಕೊರಗು ಹೆಚ್ಚುತ್ತದೆ! ಅವಳು ಆತನನ್ನು ತ್ಯಜಿಸುತ್ತಾಳೆ. ನಪ್ತೃವು ಇನ್ನೊರ್ವನು. ಆಪದಲ್ಲಿ ಕಾಣಿಸಿಕೊಳ್ಳುತ್ತಲೆ, ಜರತ್ಕಾರುವೂ ಯಾಯಾವರ ಸಂಚಾರಕ್ಕೆ ಹೊರಡುತ್ತಾನೆ. 'ಅನಿಕೇತ'ನಾಗಿ- ಸಂಸಾರತೊರೆದು! ನಾಗಕನ್ಯೆ ಉಲೂಪಿ ಹಾಗೂ ಪೃಥಾಪುತ್ರನ ಸಂಬಂಧವು ಹೀಗೆಯೇ ಉಂಟು. ಪುತ್ರಜನ್ಮದ ಮಟ್ಟಿಗೇ ಉಂಟು ಇದು. 'ಅಪಾಂ-ನಪ್ತೃ'ವಿನ ಅಥವಾ ನಾಗಶಕ್ತಿಯ ವೈಶಿಷ್ಟ್ಯವೆಂದು ತೋರಿಸುವ ಉದ್ದೇಶ ವಿರುವಂತೆ ಕಾಣುತ್ತದೆ. ವಾಲ್ಮೀಕಿ (: ನಾಗ) ರಚಿತ ಮಹಾಕಾವ್ಯದ ನಾಯಕ ರಾಮನ ಅಯನ (: ದಾರಿ) ಈ ಆಕೃತಿಯನ್ನೇ ಹೋಲುತ್ತಿರುವುದು, ಕಾಕ-ತಾಲ ನ್ಯಾಯವೆ? ಅಥವಾ ನಾಗ ಸಂಪ್ರದಾಯದ ಜೀವನ ರೀತಿಯ ವೈಶಿಷ್ಟ್ಯವೆ? ಬದಲಾದ 'ಸಮಯ'ಕ್ಕೆ ಅನುಸರಿಸಿ, ಆ ಅಪಾಂ-ನಪ್ತೃ ಸಂಪ್ರದಾಯದ ನಡೆವಳಿಯನ್ನೇ 'ರಾಜನ ಕರ್ತವ್ಯ' ಎಂಬ ಸ್ವರೂಪದ ಆಕೃತಿಯಾಗುವಂತೆ ಮಾರ್ಪಡಿಸಿರುವಲ್ಲಿ ಈ ಕವಿಯ ಅಸದೃಶ ಪ್ರತಿಭೆ ವ್ಯಕ್ತವಾಗುತ್ತದೆ. ದುಷ್ಯಂತನು ದೂಷ್ಯನಾಗಬಾರದೆಂದು, ಕಾಲಿದಾಸನು ಉಂಗುರದ ಕಥಾಭಾಗವನ್ನು ನೂತನವಾಗಿ ಕಲ್ಪಿಸಿದ್ದುಂಟಷ್ಟೆ! ಶಕುಂತಲೆಯೂ ಬಸುರೆಯಾಗಿರುವ ಘಟನೆ ಮೌಲಿಕವಾಗಿದೆ!

ಅಶ್ವ-ಮೇಧ, ಪ್ರತಿಮಾ : ಸಂಕೇತವು, ನಾಗ ಸಂಪ್ರದಾಯದ ಇನ್ನೂ ಒಂದು ವೈಶಿಷ್ಟ್ಯವನ್ನು ವಿಶದಪಡಿಸುತ್ತದೆ. 'ಯಾಯಾ' ಈ ಶಬ್ದ ಸಂಕೇತದಿಂದ ನಿಷ್ಪನ್ನವಾಗಿರುವ ಜಾ-ಜಾ (=ಝಾ-ಝಾ =ಕುದುರೆ), ಮತ್ತು ಜಾಯಿಲ ಇವು ಸಹ ತುಂಬ ವೈಶಿಷ್ಟ್ಯಪೂರ್ಣ ಸಂಕೇತಗಳಾಗಿವೆ. ಜಾಯಿಲ-ಗಮನಿಸುವ ಸ್ವಭಾವವುಳ್ಳದು ನಾಯಿ, ಕುದುರೆ ಎರಡೂ ಸರಿ! ನಾಯಿಯೂ ಸರ್ಪಶಕ್ತಿಯ ಸಂಕೇತವೇ ಆಗಿದೆ. ಇಂಗ್ಲಿಷಿನಲ್ಲಂತೂ (Bitch ನೋಡಿ!) ಅಶ್ವ=ವಾಜಿ: 'ವಾಜೀ ರಣ' : ನಾಗಶಕ್ತಿಯನ್ನು ಸ್ಥಿರಪಡಿಸಿಕೊಳ್ಳುವುದು. ಭೀಮನಿಗೆ ನಾಗಕನ್ನೆಯರಿಂದ ಸಹಸ್ರ ನಾಗಗಳ ಶಕ್ತಿ ದೊರೆತಿತಂತೆ! ಆ ನಾಗ, ಆನೆಯಲ್ಲ, ಎಂಬುದನ್ನು ಸಿದ್ಧಪಡಿಸುವ ಆವಶ್ಯಕತೆಯುಂಟೆ?

ನಮ್ಮ ಸಾಹಿತ್ಯ ಹಾಗು ಸಂಸ್ಕೃತಿಯ : ಸಮಯಾಚಾರಗಳ ಹಿನ್ನೆಲೆಯನ್ನು ಸ್ಪಷ್ಟವಾಗಿ ನಿರ್ಧರಿಸಿಕೊಳ್ಳಲು ಅದರೊಳಗಿನ ಪ್ರತಿಮಾ : ಸಂಕೇತಗಳ 'ನಿನ್ನೆ'ಗಳು ಗೊತ್ತಿರುವ ಆವಶ್ಯಕತೆಯಿದೆ. ನಿನ್ನೆಗಳನ್ನು ಮರೆತವರಿಗೆ 'ಇಂದು' ಅರ್ಥವಿಹೀನ! ನಿರರ್ಥಕ. ಭಾರತೀಯ ದಿವ್ಯಾಧ್ಯಾತ್ಮ ಸಂಪ್ರದಾಯದ ಸಂಯೋಜಕರು, ಬಹು ಧೂರ್ತತನದಿಂದ ನಮ್ಮ ನಿನ್ನೆಗಳನ್ನು ತಮಗೆ ಇಷ್ಟಸ್ವರೂಪದಲ್ಲಿ ರೂಪಾಂತರಿಸಿ ಪರಿವರ್ತಿಸಿದ್ದಾರೆ. ಇದರ ಸಲುವಾಗಿ ಅವುಗಳ ನೂತನ ಅರ್ಥದಾಯಕ ಪವಾಡಕಥೆಯ ಪುರಾಣಗಳನ್ನು ಕಾಲಕಾಲಕ್ಕೆ ಬದಲಿಸುತ್ತ ಬಂದಿದ್ದಾರೆ. ಇದಕ್ಕೆ ನಮ್ಮ ದೈವತ ಪ್ರತಿಮೆಗಳ ನಿನ್ನೆಗಳೇ ಸಾಕ್ಷಿ. ಋಗ್ವೇದ-ಅವೆಸ್ತಾಗ್ರಂಥದ ತಳದಲ್ಲಿ ಹುದುಗಿರುವ 'ಅಪಾಂ ನಪ್ತೃ' ದೈವತವು, ಜಾಗತಿಕ ಪುರಾತನ ಸಂಸ್ಕೃತಿಯ ಉಗಮಸ್ಥಾನದ ದರ್ಶನಮಾಡಿಸ ಬಲ್ಲುದಾಗಿದೆ: ಈ ಪ್ರತಿಮಾ ಸಂಕೇತವು ಭಾರತೀಯವೆ ಏಕೆ, ಇಜಿಪ್ತ-ಗ್ರೀಕಿನತ್ತಣಿಂದ ಭಾರತದ ವರೆಗಂತೂ ಸರಿ, ಇದ್ದ ಪುರಾತನ ಸಂಸ್ಕೃತಿಯ ತಿರುಳಾಗಿದೆ. ಈ ಭೂಖಂಡದಲ್ಲಿ ಇರುವ ಆಪ : ರಸ ತತ್ವದ ಅಥವಾ ಚಾಂದ್ರಸಂಸ್ಕೃತಿಯ ಶಾಖೋಪಶಾಖೆಗಳು ಹೊರಟಿರುವುದೇ ಈ ನಾಭಿಕಮಲದಿಂದ. ಇದು ಬೆಳಕಿಗೆ ಬಂದಲ್ಲದೆ ಜಗತ್ತಿನಲ್ಲಿ ನಾನಾರೂಪದಲ್ಲಿರುವ ಚಾಂದ್ರಪೂಜೆಯ ಅನ್ವಯಾರ್ಥವೇ ಆಗಲಾರದು. ಋಗ್ವೇದದಿಂದ ತೊಡಗಿ ಮಹಾಭಾರತ-ರಾಮಾಯಣ ಹಾಗೂ ನಾನಾ ಪುರಾಣಕಥೆಗಳಲ್ಲಿ, ಪ್ರತಿಮಾ : ಸಂಕೇತಾತ್ಮಕ ಗುಹ್ಯಭಾಷೆಯಲ್ಲಿ ಸುಸಂಗತವಾಗಿ ಸುಸಂಬದ್ಧವಾಗಿ ಅಡಗಿ ಉಳಿದಿರುವಷ್ಟು ವಿಪುಲಸಾಹಿತ್ಯವು ಜಗತ್ತಿನ ಇನ್ನಾವ ಜನಾಂಗಗಳಲ್ಲಿ ಉಂಟೆ, ಎಂಬ ಸಂದೇಹವಿದೆ.

ಜೀವನದ ಮೊದಲ ಹಂತದ ಪ್ರಥಮಾನುಭವವು, ಅ-ತುಲನೀಯ-ಅ-ಪೂರ್ವ-ಅನನ್ಯ ಸಾಧಾರಣ 'ದಿವ್ಯ' ಸ್ವರೂಪದ ಆನಂದದಾಯಕವಿರುವುದು ನೈಸರ್ಗಿಕವೇ ಇದೆ. ಆ ಬಳಿಕ ಅದರೊಳಗಿನ ಅನನ್ಯತೆ,

ಅಸಾಧಾರಣತೆಯ ಬಣ್ಣವು ಕುಂದತೊಡಗುವುದು; ಇದೂ ಕ್ರಮಪ್ರಾಪ್ತ, ಸ್ವಾಭಾವಿಕ ಅನುಭವವೇ ಸರಿ. ನಿನ್ನೆಯ-ಬಾಲ್ಯದಲ್ಲಿ ಬಂದ-ಆ ಅತುಲನೀಯ ದಿವ್ಯಾನುಭೂತಿಯ ನೆನಹನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ತಪ್ಪು ಎನ್ನಲಿಕ್ಕೂ ಆಗುವುದಿಲ್ಲ. ಈ 'ದಿವ್ಯಾನಂದ ಸಿದ್ಧಿ' ಅನಿಮಿತ್ತ, ಬಾಳಿನ ಸಂಬಂಧವಿಲ್ಲದೆ ದೊರೆತದ್ದು ಎಂಬ ಸಂಭ್ರಮ ನಿರ್ಮಾಣದ ಪ್ರಯತ್ನ ನಿಂದ್ಯ, ತ್ಯಾಜ್ಯ. 'ದಿವ್ಯ'ವಾದ ಅರ್ಥ : ಆನಂದ ಸೌಂದರ್ಯ ಜೀವನ ಸಂದರ್ಭದ ಅನುಭವಗಳ ಮೂಲಕ ಅರಿಕೆಗೆ ಬರುತ್ತದೆ. ಆ ಅನುಭೂತಿಗೆ ಕಾರಣವಾದ ಮಾತ್ರಾಸ್ಪರ್ಶದ ಆಕೃತಿಯು, ಅರ್ಥದೊಡನೆ ನೆಳಲಿನಂತೆ ಬೆಂಬತ್ತಿ ಬರುವುದುಂಟು. 'ವಾಗರ್ಥಾವಿವ ಸಂಪೃಕ್ತ' ಸಂಯುಕ್ತ ಸ್ವರೂಪದಲ್ಲಿಯೆ ಆ ದಿವ್ಯ ಅರ್ಥಗರ್ಭವು, ಮಾತ್ರಾಸ್ಪರ್ಶದ ವಸ್ತುಸ್ಥಿತಿಯ ಪರಿಚಯ ಮಾಡಿಕೊಡುವ ಶಬ್ದಸಂಕೇತದ ಆವರಣದಲ್ಲಿ ಹುದುಗಿರುತ್ತದೆ. 'ಅಪಾಂ-ನಪ್ತ್ರ'; ಆಪದಲ್ಲಿರುವ ವತ್ಸ: ಸ್ಕಂಭ=ಪೂರ್ಣಬ್ರಹ್ಮ! ಇಜಿಪ್ತಿನ ಪಿರಾಮಿಡ್ಡುಗಳೊಳಗಿನ ಸಂರಕ್ಷಿತ ದೇಹಗಳಂತೆ ನಮ್ಮ ದಿವ್ಯ ದೇವತಾನಾಮ ಸಂಕೇತಗಳ ಮಾತಾಸ್ಪರ್ಶ ಆವರಣಯುಕ್ತ ಆ ಶಬ್ದ ಪ್ರತಿಮೆಗಳು ಆ ಹಳೆಯ ಯುಗದ ಪರಿವರ್ತನದ ತರುವಾಯದಲ್ಲೂ ಬೆನ್ನಟ್ಟಿಕೊಂಡು ಬರುವುದು ಅನಿವಾರ್ಯವಾಗಿದೆ. ಆದರೆ, ಮಾನವನೊಳಗಿನ ಸನಾತನತ್ವದ ಅಭಿಮಾನವು, ಆ ದಿವ್ಯ ದೇವತಾಶಕ್ತಿಯ ಬಗೆಗಿನ ಮಿತಿಮೀರಿದ ಶ್ರದ್ಧೆಯಿಂದಾಗಿ ಆ ಮೊದಲ ಅನುಭವವನ್ನು ಅನುಭಾವದ ಮೊದಲತನ ಎನ್ನಲು ಸಿದ್ಧವಿರುವುದಿಲ್ಲ. ಆದರೆ, ಆ ಮೊದಲುತನವು ಬಯಲಿಗೆ ಬರಬಾರದೆಂದು ತನ್ನ ಶಾಬ್ದಿಕ ಗಾರುಡಿಗ ಶಕ್ತಿಯಿಂದ ನಾನಾ ಮಂತ್ರಮಾಟದಿಂದ= ಮಾತಾ-ಕುಮಾರಿ, ಅಯೋನಿಸಂಭವ ಶಿಶು, ಇಂತಹ ಸಂಭ್ರಾಮಕ ಸಂಕೇತಗಳ ಮೂಲಕ ಇತಿಹಾಸ ಕಾಲದಲ್ಲೂ ಅದನ್ನು ಬಚ್ಚಿಡಲು ನಡೆದಿರುವ ಮಾನವನ ಒದ್ದಾಟವು ಬಾಲಿಶವೂ ಹಾಸ್ಯಾಸ್ಪದವೂ ಎನಿಸದಿರದು.

ನೀರಿನೊಳಗಣ 'ಅಶ್ವ' ಸಂಕೇತವು, ಋಗ್ವೇದದಲ್ಲಿ ಪ್ರಾಚೀನತಮವೆಂದು ಬಗೆಯಲಾಗುವ ಗೃತ್ಸಮದಕುಲದ ಎರಡನೆಯ ಮಂಡಲದಲ್ಲಿ ಬರುವ ಅಪಾಂ ನಪ್ತೃ ದೇವನ ಸ್ತೋತ್ರದಲ್ಲಿಯೆ ಉಂಟು! ಒಬ್ಬ 'ವಾಜಯುಃ' (ಅಶ್ವವಾಗುವ ಇಚ್ಛೆಯವನು), ಗೃತ್ಸಮದಕುಲಜನು ಈ ಸ್ತೋತ್ರವನ್ನು ಮಾಡಿದ್ದಾನೆ! ಈ 'ಅಸುರ ಅಪಾಂ ನಪ್ತ್ರ'ವು ತನ್ನ ಮಹಿಮೆಯಿಂದ 'ವಿಶ್ವಾನಿ ಭುವನಾ ಜಜಾನ'. "ತೇಜಸ್ವಿಯಾದ ಈ ನಪ್ತ್ರ" ದೇವನನ್ನು 'ಆಪ'ಗಳು ಆಲಂಗಿಸಿವೆ. (ಪರಿತಸ್ಥು : ೩). ಈ ತರುಣ (ಯುವಾನಂ) ನಪ್ತೃವನ್ನು 'ಅಸ್ಮೇರಾ ಯುವತಯಃ ಮಮೃಜ್ಯಮಾನಾಃ ಪರಿಯಂತಿ' ಈ ನಪ್ತೃವು, ಇಂಧನರಹಿತ ದಿವ್ಯ ತೇಜಸ್ಸನ್ನು (ಶುಕ್ರೇಭಿಃ) ಬೆಳಗಿದನು (ದೀದಾಯ); ಇದಕ್ಕೆ ಪ್ರತಿಯಾಗಿ ತಿಸ್ರೋ ದೇವಿಯರು (: ಇಳಾಸರಸ್ವತೀ ಭಾರತೀ ಇಖ್ಯಾ). ಈ ದೇವನಿಗೆ ಅನ್ನರೂಪ ಪೀಯೂಷವನ್ನು ಹನಿಸಿದರು-ಕುಡಿಸಿದರು.

ಈ ವಿವರವು ಯಾತಕ್ಕೆ ಎಂದರೆ 'ಅಶ್ವಸ್ಯ ಅತ್ರ ಜನಿಮ' (:ಅಶ್ವವು ಇಲ್ಲಿ ಜನ್ಮತಾಳಿತು). ಈ ಗುಹ್ಯಾತ್ ಗುಹ್ಯತಮ 'ಅಶ್ವ' ಸಂಭವದ ರಹಸ್ಯಾತ್ಮಕ 'ದಿವ್ಯ' ಕಥೆಯು ಈ ಸೂಕ್ತದ ೧೫ ಋಚೆಗಳಲ್ಲಿ ಉಕ್ತವಾಗಿದೆ. ಋಗ್ವೇದದ ಪ್ರಾಚೀನವೆಂಬ ಸೂಕ್ತಗಳಲ್ಲಿ ಬರುವ ಈ ಅಶ್ವಜನ್ಮದ ಇನ್ನೂ ಅದ್ಭುತ ಸ್ತೋತ್ರವು ಅರ್ವಾಚೀನ 'ನೂತನೈಃ' ಕವಿಗಳಿಂದ ರಚಿತ ಸೂಕ್ತಗಳಲ್ಲಿ ಬರುತ್ತದೆ, ರಚ್ಚೆ ರಂಪು ಮಾಡುತ್ತ ಕೂಗಾಡುತ್ತಲೆ ಸಮುದ್ರದಿಂದ ಹೊರಬಂದ ಅಶ್ವದ (ಯತ್ ಅಕ್ರಂದಃ ಪ್ರಥಮಂ ಜಾಯಮಾನಃ ಉದ್ಯನ್ ಸಮುದ್ರಾತ್) ಇನ್ನೊಂದು ಸುದೀರ್ಘ ವರ್ಣನೆ ಮೊದಲನೆಯ ಮಂಡಲದಲ್ಲಿದೆ.[೨] ಇದು ಮಾಮತೇಯನೆಂಬ, ಅಂಧನೂ ಇದ್ದನೆಂಬ, ದೀರ್ಘತಮ ಕವಿಯ ಕೃತಿ: ದಿವ್ಯಾಕ್ಷ : ಅಂತರ್‌ಜ್ಞಾನಿಗಳಿಗಲ್ಲದೆ, ಬಾಹ್ಯದೃಷ್ಟಿಯ ಕುರುಡರಿಗೆ ಈ ವಿಶ್ವದಲ್ಲಿ ಅದೇ ಮೇರೆಗೆ ಇವನ ಕವನಗಳಲ್ಲಿ ಏನೂ ಅರ್ಥವು ಕಾಣಲಾರದು; ಎಂದು ಈ ಕವಿನಾಮ ಸಂಕೇತವು ಸೂಚಿಸುತ್ತಿದೆ. ಈ ಕವಿಯು ಅಂಧನಿದ್ದನೆಂದರೂ ಇವನ ಕಿವಿ ಹರಿತಾದುವು ಇರಲಿಕ್ಕೆಬೇಕು. ಈ ನೀರ್ಗುದುರೆಯ ವರ್ತನೆಯ ಬಗೆಗೆ ಜನ ಟೀಕಿಸಿದ್ದುದರ ಸೂಚಕ ವಾಕ್ಯ, ಈ ಸೂಕ್ತದಲ್ಲಿದೆ. ಆ ಟೀಕೆಗೆ ಸಮಾಧಾನ ತಂದುಕೊಂಡ ರೀತಿಯೂ ಇಲ್ಲಿದೆ. ಈ 'ನೀರ್ಗುದುರೆ'ಯ ಪೂಜಾ ಸಂಪ್ರದಾಯ ವಿರೋಧಿಗಳ ಅಂದಿನ ಅಸ್ತಿತ್ವವು, ಇದರಿಂದ

ಸಿದ್ಧವಾಗುತ್ತಿದೆ. ಈ ಕವಿಗೂ ಈ ಕುದುರೆಯ ವರ್ಣನೆ ಅವಾಚ್ಯ-ದೈವತ-ಸ್ತೋತ್ರ ಎಂಬ ಸಂದೇಹ ಬಂದಿರಲು ಬೇಕು. ಇಲ್ಲವಾದರೆ, ಈ ಮಿತ್ರ, ವರುಣ, ಅರ್ಯಮನ್, ಆಯುಃ ಇಂದ್ರಾದಿಗಳು' ನಾನು ಈ 'ಸಪ್ತೇ (: ಸರ್ಪಣಶೀಲ ಅಶ್ವಸ್ಯ) ವೀರ್ಯಾಣಿ' ಹೊಗಳುತ್ತಿರುವುದಕ್ಕಾಗಿ ನಿಂದಿಸದಿರಲಿ (ಮಾ ಪರಿಖ್ಯನ್) ಎಂಬ ಪ್ರಸ್ತಾವನೆಯಿಂದಲೇ, ಕವಿಯು ಈ ಸ್ತೋತ್ರವನ್ನು ಪ್ರಾರಂಭಿಸುವ ಕಾರಣವೇ ಇದ್ದಿಲ್ಲ.

ಅಪಾಂ ನಪ್ತ್ರು : ಸಮುದ್ರೋದ್ಭವ 'ಅಶ್ವ'ದ ಈ ವರ್ಣನೆಯ ಕವಿಯು ಅಂಧನಾದರೂ 'ದೀರ್ಘತಮ' ನಾಮ ಧರಿಸಿದ್ದರೂ ಈ ಸೂಕ್ತಗಳ 'ದರ್ಶನ'ವಾದ ಕಾರಣದಿಂದ ಇವನು 'ದಿವ್ಯಾಕ್ಷ'ನಿರಲಿಕ್ಕೇಬೇಕು. ಇವನು ಪೂರ್ವಸಂಪ್ರದಾಯ ಬಲ್ಲವನಾಗಿದ್ದನು: ಈ ಅಶ್ವದೇವನನ್ನು 'ಭಾಗಃ' ಎಂದಿದ್ದಾನೆ; ಭಾಗ (=ಹೋಂತು=) ಅಜ-(:ಏಕಪಾತ್) ದೇವನ ಸೂಚಕ ಸಂಕೇತ! ಈ 'ಅಶ್ವ'ವನ್ನು ಕೊನೆಗೆ ಅದಿತಿ ಸ್ವರೂಪ ದೈವತವಾಗಿಯೂ ಕಂಡಿದ್ದಾಗಿದೆ. ಈ ಅಶ್ವವು ಇಂದ್ರನದಂತೆ![೩] ಚಂದ್ರಾಪೀಡನನ್ನು (ಚಂದನಿಂದ ಪೀಡಿತನನ್ನು) ಇಂದ್ರಾಯುಧ=ಕುದುರೆ ಗಂಧರ್ವಾಪ್ಸರೆ ಕಾದಂಬರಿ ಹತ್ತಿರ ಕೊಂಡೊಯ್ದಿತು! ಹೀಗೆ, ಇಂದ್ರನ ವಾಹನ ಈ ಅಶ್ವ : ಶೃಂಗ ಸರ್ಪ, ನೀರೆಯರತ್ತ ಧಾವಿಸುವ ಸಾಧನ ಎಂಬ ಮಾತಿನಿಂದ ಇಂದ್ರನ ಅಹಿ : ವೃತ್ರಹನನ ಕಾರ್ಯದ ಅವಮೂಲ್ಯನವನ್ನು ಪೂರ್ಣ ಮುಗಿಸಿದಂತಾಯಿತು! ಈ ಬಾಡಬ : ಅಶ್ವಯಜ್ಞದ ಕುದುರೆಯೆಂಬ ವಿಚಾರವು ಬಂದುದು ಇಲ್ಲಿಯೆ ಮೊದಲ ಬಾರಿ! ಇಂದ್ರನ ಕುದುರೆ ಎಂಬುದೂ ಇಲ್ಲಿಯೇ ಮೊದಲಬಾರಿ! ಈ ಅಪಾಂ ನಪ್ತ್ರು ಸಮುದ್ರಯೋನಿ ಅಶ್ವವು, ಸಮ್ರಾಟ್‌ಪದವನ್ನಿಚ್ಛಿಸಿ ಮಾಡುವ ಯಾಗದಲ್ಲಿ ರಾಜರು ಬಲಿ ಕೊಡುವ ಪ್ರಾಣಿಯಂತೆ! ಮಾತಿನ ಈ ಮಾಟ: ಮೋಡಿಕಾರಿಕೆ 'ದೇವಜನ ವಿದ್ಯೆ'ಯ ಪರಮೋಚ್ಚಬಿಂದು!

ಈ ಸಮುದ್ರಯೋನಿ ಅಶ್ವವು; ಸೂರ್ಯ, ಉಷಾದಿ ಸಂಕೇತಗಳೊಡನೆ ಸಂಬದ್ಧವಿರುವುದಾಗಿ ವರ್ಣಿಸಿರುವ ತಂತ್ರವು ಎಷ್ಟು ಜುಗುಪ್ಸೆ ಹುಟ್ಟಿಸುವಂತಿದೆ, ಎಂಬುದನ್ನು ಮನಗಾಣಲು ದೀರ್ಘತಮನ ಸೂಕ್ತ ಮತ್ತು ಬೃಹದಾರಣ್ಯಕದಲ್ಲಿ ಬಂದಿರುವ ಈ ಅಶ್ವವಿಚ್ಛೇದನ ಕ್ರಿಯೆಯ ವರ್ಣನೆಯನ್ನು ಓದಬೇಕು.[೪] ಋಗ್ವೇದದಲ್ಲಿ ಹೇಳಿದ ಮೇರೆಗೆ ಈ ಕುದುರೆ, ಸೂರ್ಯಾತ್ (ಆದಿತ್ಯಾತ್) ಏವಂ ಮಹಾನುಭಾವಂ ಅಶ್ವಂ ನಿರತಷ್ಟ'! ಇದು ಸೂರ್ಯನಿಂದ ನಿರ್ಮಿತವಂತೆ! ಈ ಕವಿಯು ಈ ಕುದುರೆಯನ್ನು ಪಕ್ಷಿಗೊ-ಪತಂಗಕ್ಕೊ ಹೋಲಿಸಿದ್ದಾನೆ. ಅಂತರಿಕ್ಷದಲ್ಲಿ ನೆಗೆವಾಗ (ಈ ಕುದುರೆಯ) ತಲೆಯ (ಶಿರಃ) ಕಂಡೆನು! ಎನ್ನುತ್ತಾನೆ ಈ ಕವಿ. ವಿರಾಟ್ ಪುರುಷನ ವರ್ಣನೆಯಲ್ಲೂ 'ಶೀರ್ಷ'ದ ಉಲ್ಲೇಖ ಮೊದಲು ಉಂಟು[೫]. ಈ 'ಯಜ್ಞ'ದಲ್ಲಿ ಓಡುವಾಗಿನ ಸುಂದರ ರೂಪವನ್ನು ಕಂಡನಂತೆ ಈ ಕವಿ! (ಅತ್ರ ತೇ ರೂಪಂ ಉತ್ತಮಂ ಅಪಶ್ಯಂ) ಆಪ : ರಸ ಸಂಪ್ರದಾಯದ ಶ್ರದ್ಧೆಯ ಆಪ : (ಸಮುದ್ರ) ಯೋನಿಯಾದ ಈ 'ಅಶ್ವ'ದ ಸಂದರ್ಭದ 'ಯಜ್ಞ' ಯಾವ ಬಗೆಯದು ಇರಬಹುದು? ಈ ಯಜ್ಞಕಾಲದಲ್ಲಿ ಎಲ್ಲೆಲ್ಲೂ 'ಗಂತುಕಾಮ' ಕುದುರೆ ಎಂದರೇನು? ಇದು ವಿಚಾರಾರ್ಹವಾಗಿದೆ. ಹೇ ಅಶ್ವವೇ ನಿನ್ನನ್ನು ಅನುಸರಿ ಈ ರಥವು (ದೇಹವು). ಹೋಗುತ್ತದೆ: ನಿನ್ನನು ಅನುಸರಿಸಿ ನಡೆದೂ ಹೋಗುತ್ತಾನೆ ನರನು (: ಅನುತ್ವಾ ರಥಃ ಅನುಮರ್ಯಃ); ಇಷ್ಟೇ ಅಲ್ಲ 'ಅನುಗಾವಃ' (ಗೋವು ನಿನ್ನತ್ತ ಆಕರ್ಷಿಸಲ್ಪಡುತ್ತದೆ!) : ಇದೇ ಮೇರೆಗೆ 'ಕನೀನಾಂ' (ಕನ್ಯಕಾಣಾಂ ಸ್ತ್ರೀಣಾಂ) ಭಗಃ ಅನು!...... ಹೀಗೆ ಪ್ರಪಂಚವೇ, ಹೇ ಅಶ್ವವೆ, ನಿನ್ನ ಸಖ್ಯವನ್ನು ಅಪೇಕ್ಷಿಸುತ್ತದೆ. ನಿನ್ನ ವೀರ್ಯವನ್ನು ಸ್ತುತಿಸುತ್ತದೆ! (ತೇ ವೀರ್ಯಂ ಮಮಿರೇ)

ಈ 'ಸಮುದ್ರಯೋನಿ' ಅಶ್ವದ 'ಹಿರಣ್ಯಶೃಂಗ'ವನ್ನು ವರ್ಣಿಸಿದ್ದುಂಟು! ಈ ಶೃಂಗ ಸಂಕೇತವು ಮೂಲಗಾಮೀ ಅರ್ಥದಾಯಕವಾಗಿದೆ. ಶೃಂಗಸರ್ಪ: ಶುಷ್ಣ, ಚರಿಷ್ಣುಂಪುರದವನು, ಈ ಪ್ರತಿಮೆಯನ್ನು ಸ್ಮರಿಸಿಕೊಳ್ಳಬೇಕು. ಇದರೊಡನೆ ಶೃಂಗಸರ್ಪ ಡೈಯೋನಿಸಸ್‌ನ ನೆನಪೂ ಆಗದಿರದು, ಈ ಅಶ್ವದ 'ಪಾದ'ವು (ಅಡಿ), (ಆಯಃ ಪಿಂಡ ಸದೃಶ) ಉಕ್ಕಿನಂತಿದೆ. ಈ ಕುದುರೆ ಮನೋಜವಾಃ ಎಂದಿರುವಲ್ಲಿ ವಾತರಶನ ಕೇಶೀಪುರುಷನ 'ವಾತಾಶ್ವ'ವು ಸ್ಮರಣೆಗೆ ಬರುತ್ತದೆ. ಈ 'ಅಶ್ವ'ವು (ಒಡೆಯನೆಂಬ) ಇಂದ್ರನಿಗಿಂತಲೂ ಶ್ರೇಷ್ಠ! ಎಂದರೆ ಉಳಿದ ಇಂದ್ರಿಯಗಳಲ್ಲಿ ಇದೇ ಪ್ರಧಾನ![೬]

"ಹೇ ಅಶ್ವವೆ ನಿನ್ನ ಶರೀರವು ಪತನಶೀಲವಾಗಿದೆ!" (: ಹೇ ಅಶ್ವನ್ ತವ ಶರೀರಂ ಪತಯಿಷ್ಣುಃ) 'ನಿನ್ನ ಶೃಂಗಸ್ಥಾನೀಯ ಕೇಶಗಳು ಮನೋಹರವಾಗಿ ಪುರದಲ್ಲಿ ಸುತ್ತಲೂ ಅರಣ್ಯದಂತೆ ಸೌಮ್ಯವಾಗಿ ಹರಡಿಕೊಂಡಿವೆ. "ತವ ಶೃಂಗಾಣಿ : ಶೃಂಗಸ್ಥಾನೀಯಾಃ ಕೇಶಾಃ, ಪುರುತ್ರಾಃ ವಿತಿಷ್ಠಿತಾ ಅರಣ್ಯೇಷು ಜಾರ್ಭುರಾಣಾ ಚರಂತಿ" ಈ ಬಗೆಯಲ್ಲಿ ಸ್ತೋತ್ರ ಮಾಡಿಸಿಕೊಂಡ ಈ ಅಶ್ವವು ಬಳಿಕ ಯಜ್ಞಪಶುವಾಗಿ ಕತ್ತರಿಸಲ್ಪಟ್ಟು ದೇವರ ಬಳಿಗೆ ಹೋಗುತ್ತದೆ! ದೇವಾನ್ ಗಮ್ಯಾಃ[೨] ಈ 'ಅಶ್ವ': ಯಜ್ಞಪಶು, ಎಂದರೆ ಅಪಾಂ ನಪ್ತೃವು; ಗೃತ್ಸಮದ ಕವಿಯ ಸ್ತೋತ್ರ ವಿಷಯವಾದ ಆ ಪದಲ್ಲಿ ಜನ್ಮತಾಳಿದ ಅಶ್ವವು ಮತ್ತು ದೀರ್ಘತಮ ಕವಿಯ ವರ್ಣನಾವಿಷಯವಾದ ಸಮುದ್ರಯೋನಿ ಅಶ್ವವು ಬೇರೆಯಲ್ಲ. ಓಲ್ಡೆನ್‌ಬರ್ಗ್ ಊಹಿಸಿದಂತೆ ಅಪಾಂನಪ್ತೃವು ಇದು Water genie ಆಗಿದೆ.[೮] ನೀರೊಳಗಿನ ಬೆಂಕೆ=ವಡವಾನಲ=ಬಾಡಬ=ನೀರಕುದುರೆ! ವಿಶ್ವೋತ್ಪತ್ತಿಗೆ ಕಾರಣವಾದ ಶಕ್ತಿ: ಪುರುಷರೂಪ : ಅಶ್ವ : ನಾಗ : ಋಕ್ಷ (ಕರಡೆ): ಕೇಶಿನ್ : ಕಪರ್ದಿ: ಪುರುಷ ಇತ್ಯಾದಿ.

ಭಾರತೀಯ ಸೂಕ್ಷ್ಮಪ್ರತಿಭೆಯು ನಿರ್ಮಿಸಿರುವ ಶಬ್ದಶಿಲ್ಪದ ಪದರಿನೊಳಗಿನ ಒಳಪದರು ಆಶ್ಚರ್ಯಕರವಾಗಿವೆ. ಈ ಅಶ್ವ ಮತ್ತು ಅಶ್ವ-ತ್ಥ ಒಂದು ಅಭ್ಯಸನೀಯ ಮಾದರಿ! 'ಅಶ್ವತ್ಥಃ ದೇವಸದನಃ' ಎಂಬ ಅಥರ್ವವೇದ ವಚನದಲ್ಲಿ ಹೇಳಿದ್ದು ಈ ಏಕಂ : ತತ್: ಸತ್ಯವನ್ನೇ 'ಅಶ್ವ'ತ್ಥ (ಸ್ಥಃ) ಪ್ರತಿಮೆ ಗಂಡುಮಾತ್ರವಲ್ಲ ಹೆಣ್ಣು ದೈವತಗಳ ಸಂಕೇತವೂ ಆಗುತ್ತದೆ. ಪಕ್ಕಕ್ಕೆ ಬನ್ನಿ ಅಥವಾ ಬೇವು ಬೇಕು ಮಾತ್ರ ! ವಾತಾಶ್ವ: ಮನೋಜವ ಈ ಸಂಕೇತ ಬೆಳೆದ ದಿಕ್ಕು; ಇನ್ನೊಂದು. ಅಶ್ವಿನಿಗಳು : ಅವರ ಮಧು ಸ್ರವಿಸುವ ರಥ, ಈ ರಥಕ್ಕೆ ಕುದುರೆ, ಕತ್ತೆ, ಹೋರಿ, ಮೊಸಳೆ ವಾಹನ... ಈ ಸಂಕೇತಗಳು ಬೆಳೆದ ದಾರಿ ಇನ್ನೂ ಒಂದು ಉಂಟು. ಆದರೆ, ವಿಶ್ವಜನಕನ ಈ ಗುಹ್ಯ ನಾಮದ ಚಕ್ರವ್ಯೂಹದ ಇನ್ನೂ ಒಂದು ವಲಯ : ದಧ್ಯಂಕ, ದಧಿಕ್ರಾ, ದಧಿಕ್ರಾವ್ಣ ಈ ನಾಮಸಂಕೇತವರ್ಗ ಮತ್ತು ಹಯಗ್ರೀವ, ಈ ನಾಮ ಸಂಕೇತಗಳ ಕಥೆಗಳಲ್ಲಿ ಇರುವ ಆಂತರಿಕ ಸಮಾನ ಆಕೃತಿಯನ್ನು ಕಂಡುಕೊಳ್ಳುವಲ್ಲಿ ಆಟಮಟದ ಮಾಟಗಾರಿಕೆ ತುಂಬ ಪ್ರತ್ಯಯಕ್ಕೆ ಬರುತ್ತದೆ! ಈ ಕುದುರೆ ಮುಖದ ದೈವತ ಕತೆಗಳಲ್ಲಿ ಇಂದ್ರನನ್ನು ತಳಕು ಹಾಕಿರುವುದು ಇನ್ನೂ ಒಂದು ವಿಶೇಷ!

'ಮಧು' ವಿದ್ಯೆಯ ರಹಸ್ಯವನ್ನು ಯಾರಿಗಾದರೂ ಹೇಳಿದರೆ ಶಿರಚ್ಛೇದ ಮಾಡುವುದಾಗಿ ಇಂದ್ರನು ಹೇಳಿದನಂತೆ! ಈ ಆದೇಶ ಕಡೆಗಣಿಸಿ, ದಧ್ಯಂಕನು ಅಶ್ವಿನಿಗಳಿಗೆ ಆ ವಿದ್ಯೆಯನ್ನು ಬೋಧಿಸಿದನಂತೆ. ಇದರಿಂದಾಗಿ ಆ ದಿವ್ಯ ಜ್ಞಾನಿಯು ತಲೆದಂಡ ತೆತ್ತುದಕ್ಕೆ ಕುದುರೆಯ ರುಂಡ ಬಂದಿತಂತೆ! ಈ ಕಥೆಯಲ್ಲಿ ಒಳಗೊಂಡಿರುವ 'ತೊಡಳ್ನುಡಿ' ಇದರ ವಿವಿಧ ಪಾಠಾಂತರಗಳಲ್ಲಿ ಬಯಲಿಗೆ ಬರುತ್ತದೆ! ಇಲ್ಲಿ ಸರ್ಜಕ ದೈವತದ 'ತಲೆ'ಯ ದರ್ಶನ ಮಾಡಿಸಬೇಕಾಗಿದೆ. ಈ ದಿವ್ಯಾಕ್ಷ ಸಂಪ್ರದಾಯಕ್ಕೆ. ಈ ದೇವಾಧಿದೇವನ 'ಶೀರ್ಷ' ವೈಚಿತ್ರ್ಯವು 'ನೇತಿ ನೇತಿ' ಸ್ವರೂಪದ್ದಾಗಿದೆ. ನೆತ್ತಿಗೆ ಕಣ್ಣು! ಬಿಡುಗಣ್ಣು 'ಸಹಸ್ರಶೀರ್ಷಃ=ಸಹಸ್ರಾಕ್ಷಃ' ಎಂದು ಒಮ್ಮೆಲೆ ಹೇಳಬೇಕಾದ ಕಾರಣವಿದು! ಈ ಶೀರ್ಷವು 'ಶೃಂಗ'ವಾಗಿ ಕಂಡಿದೆ, ಭಾರತದ ಸಾಕ್ಷಾತ್ಕಾರಿಗಳಿಗೆ ಮಾತ್ರವಲ್ಲ ಗ್ರೀಕ್‌ದೇಶದ ಜ್ಞಾನಿಗಳಿಗೂ ಸಹ! ಈ ಶೀರ್ಷ ಕೂದಲಿಲ್ಲದ 'ಮುಂಡ', ರುಂಡ! 'ಕುದುರೆ ಮುಖ' ಎಂದರೂ ಸರಿಯೆ! ಈ ಮಧುಮಂತ: ದಧಿ-ಮಧುಮಂತ ಪುರುಷ: ದಧ್ಯಂಕನಿಗೆ ಕುದುರೆ ತಲೆ ಹೇಗೆ! ಸರಿ, ಇಂದ್ರಾಯುಧದ ಕುತ್ತಿಗೆ ಇದು! ಈ ಕಥೆ ಒಳಗೊಂಡಿರುವ ಅಪಲಾಪ ಮೇಲೆಯೇ ಕಾಣುವಂತಿದೆ. ವೇದ ಕಾಲದಲ್ಲಿ ಸೋಮವಿದ್ಯೆ= ಪ್ರಾವರ್ಗ್ಯವಿದ್ಯೆ ಹಾಗೂ ಮಧುವಿದ್ಯೆ ಎಂದು ಜ್ಞಾನದ ಎರಡು ಭಿನ್ನ ಪ್ರಕಾರಗಳು ಇದ್ದುವು. ಸೋಮವಿದ್ಯೆ ಅಗ್ನಿ, ಸೂರ್ಯ ಮತ್ತು ಇಂದ್ರ ಪಂಥಿಗಳ ಸಂಪ್ರದಾಯಕ್ಕೆ ಸಂಬಂಧಿಸಿದ್ದು. ಮಧು ವಿದ್ಯೆಯು ಆಪ : ರಸ ಪಂಥಿಗಳ ನಿರಗ್ನಿ ಸಂಪ್ರದಾಯದ ತತ್-ಮಯಾನಂದೀ ಸಾಧನ ಮಾರ್ಗದ ವಿದ್ಯೆಗೆ ಸಂಬಂಧಿಸದ್ದು. ಇಂದ್ರನು ದಧೀಚಿ-ದಧ್ಯಂಕನ ಬೆನ್ನೆಲುಬಿನಿಂದ ವಜ್ರಾಯುಧ ಮಾಡಿಸಿಕೊಂಡ: ತ್ವಷ್ಟಾರನು ಅದನ್ನು ನಿರ್ಮಿಸಿದನು ಎಂಬ ಕಥೆಯೂ ಒಂದುಂಟು! ಇಂದ್ರನು ತ್ವಷ್ಟಾರನನ್ನು ಜನ್ಮತಾಳುತ್ತಲೆ ಕೊಂದನೆಂಬ ಋಗ್ವೇದದ ಕಥೆಯನ್ನು ನೆನೆಸಿಕೊಂಡರೆ

ಇವು ಪ್ರಚಾರಕ್ಕಾಗಿ ಹೊರಟ ಬುಡವಿಲ್ಲದ ಕಥೆಗಳು ಎಂಬುದು ಸ್ಪಷ್ಟವಾಗುತ್ತದೆ. ಹಯಗ್ರೀವ ದೈವತದ ಕಥೆಯ ಸಾಂಕೇತಿಕ ಕತೆಯಲ್ಲಿ ಇನ್ನೂ ಅತ್ಯಂತ ಮಹತ್ವದ ಬಚ್ಚಿ ಉಳಿದಿರುವ ಒಂದು ಗುಟ್ಟು ರಟ್ಟಾಗುತ್ತದೆ: ಹಯಗ್ರೀವನೆಂಬ ಒಬ್ಬ ದೈತ್ಯನು ವೇದಗಳನ್ನು ಕದ್ದನಂತೆ! ಈ ವೇದಚೋರ ಹಯಗ್ರೀವನನ್ನು ಹಯಗ್ರೀವ ರೂಪಧಾರಿ ವಿಷ್ಣುವೇ ಕೊಂದನಂತೆ![೯]

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ***, ಛಾಂದೋಗ್ಯದ ಉಲ್ಲೇಖದಂತೆ ರಸ ಹನಿವ ವೃಕ್ಷ-ಐರಂಮದೀಯ ಸರದ ತೀರದಲ್ಲಿ; ದ್ರಪ್ಸ : ಕೃಷ್ಣ : ಅಂಶುಮತೀ ನದೀ ತೀರದಲ್ಲಿ! ಎಷ್ಟು ಅಂತರ್ಗತ ಅರ್ಥದ ಸುಸಂಬದ್ಧ ಹೆಣಿಕೆ! II-೩೫೧

೨. ***ಋಗ್ವೇದ ಸಂಹಿತೆ*** I. ೧೬೨. ೧೬೩

೩. ***ಅದೇ*** I. ೬೩-೨

೪. ***ಬೃಹದಾರಣ್ಯಕೋಪನಿಷತ್ತು*** ೧.೧.೧

೫. ***ಅದೇ*** ೧೬೩.೮

೬. ***ಅದೇ*** ೭೨-೫

೭. ***ಬೃಹದಾರಣ್ಯಕೋಪನಿಷತ್ತು*** ೧-೨-೧

೮. Macdonell A.A.; ***Vedic Mythology*** p. 99, 114

೯. ***ದೇವೀಭಾಗವತ*** ೧೦೫; ಚಿತ್ರಾವಶಾಸ್ತ್ರಿಗಳ ಪ್ರಾಚೀನ ಚರಿತ್ರ ಕೋಶವನ್ನು ನೋಡಿ

ಇಂದಿನ ಋಕ್‌ಸಂಹಿತೆ

ಇಂದಿನ ಸಂಹಿತೆಯು ಋಗ್ವೇದದ ಮೂಲ ಪಾಠವಲ್ಲ, ಎಂಬುದು ಬಗೆಬಗೆಯಿಂದ ಅರಿಕೆಗೆ ಬರುತ್ತಿರುವುದನ್ನು ಈ ಮೊದಲು ಅಲ್ಲಲ್ಲಿ ಸೂಚಿಸಿದ್ದಾಗಿದೆ. ದನುಜ ಹಯಗ್ರೀವ (: ಏಕಾಕ್ಷ) ಅಸುರನು ವೇದವನ್ನು ಕದ್ದೊಯ್ದನೆಂಬ ಪವಾಡಕಥೆ ಈ ದೃಷ್ಟಿಯಿಂದ ಅತ್ಯಂತ ಉದ್ಬೋಧಕವಾಗಿದೆ. ಸವಿತೃ-ಸೂರ್ಯ ಇಂದ್ರಾಗ್ನಿ ಸಂಪ್ರದಾಯವು, ಈ (ಹಿರಣ್ಯಶೃಂಗಿ) ಅಶ್ವಗ್ರೀವ ಸಂಪ್ರದಾಯಕ್ಕೆ ಮಾನ್ಯವಿದ್ದಿಲ್ಲ ಎಂಬ ಇನ್ನೂ ಒಂದು ಸಾಂಕೇತಿಕ ಸತ್ಯ ಇಲ್ಲಿ ಬೆಳಕಿಗೆ ಬಂದಿದೆ. ಕದ್ದೊಯ್ದ ವೇದ ಹಯಗ್ರೀವ ವಿಷ್ಣು ತಂದನಂತೆ! ಸರಿ: ಆಪ: ರಸ ಪಂಥೀಯ 'ಶಿಪಿವಿಷ್ಟ':* ಮಧುಸ್ರವಿಸುವ ಪಾದದ ವಿಷ್ಣುವು ತಂದ ವೇದವು, ತತ್ : ಏಕಂ: ಸತ್ ಭೂಮಿಕೆಯ ಸಂಹಿತೆಯೆ ಇರಲಿಕ್ಕಬೇಕೆಂಬುದೂ ಆದರಿಂದ ಸೂಚಿತವಾಗುತ್ತದೆ. ವಿಷ್ಣುವು ಕುದುರೆ ಕತ್ತಿನವನಾದ ಕಾರಣಗಳನ್ನು ಹೇಳಲು ಹೊರಟ ಕಥೆಗಳಲ್ಲಿಯೂ ಸುಸಂಗತಿಯಿಲ್ಲ! ಯಜ್ಞ- ಪುರುಷನು ಹವಿರ್ಭಾಗವನ್ನು ತಾನೇ ಎತ್ತಿಹಾಕಿದ್ದಕ್ಕಾಗಿ ಇಂದ್ರಾಗ್ನಿಗಳು ಆತನ ಶಿರಚ್ಛೇದ ಮಾಡಿದರು. ಅಶ್ವಿಗಳಿಂದ ಕುದುರೆ ತಲೆಯನ್ನು ಜೋಡಿಸಲಾಯಿತು! ಈ 'ಯಜ್ಞಪುರುಷ' ಎಂದರೆ ವಿಷ್ಣುವು ಎಂದು ತೈತ್ತಿರೀಯ ಆರಣ್ಯಕದಲ್ಲಿ ಹೇಳಿದೆ!

ಈ ಹಯಶಿರ ದೇವರು ವಿಷ್ಣುವು, ಎಂಬ ರಹಸ್ಯವು ಹೀಗೆ ಹೊರಗೆ ಬರುತ್ತಿರುವುದರಿಂದ, ಈ 'ಯಜ್ಞ'-ಪುರುಷ: ವಿಷ್ಣುವು, ಶಿಪಿವಿಷ್ಟ: ಕೇಶೀಪುರುಷನಲ್ಲದೆ ಬೇರೆ ಯಾರೂ ಅಲ್ಲ ಎಂಬುದು ತನ್ನ ತಾನೆ ಬಯಲಿಗೆ ಬರುತ್ತಿದೆ! ಈ ಹಯಶಿರದ ಪುರುಷನು 'ದಧಿ'-ಅಂಕನು! ದಧಿ-ಕ್ರಾ, ದಧಿ-ಕ್ರಾವನ್: ಹಯದ ಈ 'ದಧಿ' ಸಂಕೇತದ ಅರ್ಥಕ್ಕಾಗಿ (ದಧಿ ಪಯಸ್ : ಮಧು) ದ್ರಪ್ಸ : ಸ್ಕಂದ ನಾಮಸಂಕೇತದೊಡನೆ ಹೋಲಿಸಿ ನೋಡಬೇಕು. ಆಪ:ರಸ, ಚಂದ್ರಾಃ ಆಪಃ, ಹಿರಣ್ಯರೇತಃ, ಮಧು-ಮತ್ ಪಯಸ್ ಈ ಬಗೆಯ ವಿಶ್ವಸರ್ಜಕ 'ದ್ರವ್ಯ' (ದ್ರವ)ದ ಇನ್ನೊಂದು ಪರ್ಯಾಯ ಸಂಕೇತವೇ 'ದಧಿ' ಇರಬೇಕೆಂಬುದು ಊಹಿಸಲು ಅವಕಾಶವಿದೆ. ಇದಂತೂ ಆಯ್ತು, ಈ ಅಶ್ವವನ್ನು ಅಗ್ನಿ, ಸೂರ್ಯ (: ಆದಿತ್ಯ) ಸ್ವರೂಪಿಯಾಗಿ ಕಲ್ಪಿಸಿದ್ದು, ಇಂದ್ರನ ವಾಹನ, ವಜ್ರವೆಂಬ ಹಾಗಿನ ಕಥೆ ನಿರ್ಮಿಸಿದ್ದು ಈ ಮಾಟದ ಮಾತಿನ ಮೋಡಿಕಾರಿಕೆಯೂ ಅಭ್ಯಸನೀಯ ವಿಷಯವಾಗಬಲ್ಲುದು.

---

* ಈ ಪದವು 'ಶಿಪವಿಷ್ಟ' ಎಂಬ ರೂಪದಲ್ಲೂ ಉಂಟು. ಇದು ಸಂಸ್ಕೃತದ ನಾಮಪದ. ಈ ಪದಕ್ಕೆ ಎರಡು ಬಗೆಯ ಅರ್ಥಗಳುಂಟು. ಮೊದಲನೆಯದು 'ಶಿವ' ಎಂಬುದು. ಇದು ಸಾಂಪ್ರದಾಯಿಕ ಅರ್ಥ. ಇನ್ನೊಂದು ಬೇರೆಯಿಂದ ಯಾವನ ತಲೆಯ ಮೇಲಿನ ಕೂದಲುಗಳು ಇಲ್ಲದ ಹಾಗೆ ಆಗುತ್ತವೋ ಅಂಥವನ್ನು ಶಿಪ(ಪಿ)ವಿಷ್ಟ ಎಂದು ಕರೆಯುತ್ತಾರೆ. ಈ ಅಂಶವು ಪ್ರಾಚೀನ ಸಂಸ್ಕೃತ ಶಬ್ದಕೋಶಗಳಲ್ಲಿ ಉಕ್ತವಾಗಿದೆ (ಸಂ)

ಭಾರತೀಯರು ಸೂಕ್ಷ್ಮಮತಿಗಳು, ಎಂದು ವರ್ಣಿಸುವಾಗ ನಮ್ಮ ವಿಚಾರ ಪದ್ಧತಿಯೊಳಗಿನ ರಾಷ್ಟ್ರೀಯ ವೈಶಿಷ್ಟ್ಯವನ್ನು ಕುರಿತು ಬರೆಯುವಾಗ ವಿಚಾರವಂತ ಪಾಶ್ಚಾತ್ಯ ವಿಮರ್ಶಕನೊಬ್ಬನು, ಗುಣಪ್ರಶಂಸೆಯೊಡನೆ, ಒಂದು ಸೂಕ್ಷ್ಮದೋಷವನ್ನು ತೋರಿಸಿದ್ದಾನೆ. ಭಾರತೀಯರು ಸೂಕ್ಷ್ಮತರ-ಸೂಕ್ಷ್ಮತಮ ವಿಚಾರವಂತರು. ಇವರಿಗೆ ವಿಶ್ಲೇಷಣಾತ್ಮಕ ವಿಚಾರಪದ್ಧತಿಯು ಗೊತ್ತಿಲ್ಲವೆಂದಲ್ಲ; ಆದರೆ ಒಂದು ಮಾತು ಮಾತ್ರ ನಿಜ; ಅವರು ಮೂಲಭೂತವಾಗಿ ಇಟ್ಟುಕೊಂಡ ವಿಚಾರ : ಶ್ರದ್ಧೆ, ಎಷ್ಟರಮಟ್ಟಿಗೆ ಯುಕ್ತ ಅಥವಾ ಸಮರ್ಪಕ ಎಂಬ ಪ್ರಶ್ನೆಯೊಂದನ್ನು ಬಿಟ್ಟರೆ, ಮುಂದಿನ ಹಂತಗಳ ವೈಚಾರಿಕ ಕಟ್ಟಡದಲ್ಲಿ ವ್ಯಕ್ತವಾಗುವ ಅವರ ಪ್ರತಿಭಾಶಕ್ತಿ ಅನನ್ಯ ಸಾಧಾರಣವಿರುತ್ತದೆ. ಈ ಭಾಗದಲ್ಲಿ ಭಾರತೀಯರನ್ನು ಮೀರಿಸುವ ಸೂಕ್ಷ್ಮ ವಿಚಾರವಂತಿಕೆ ಜಗತ್ತಿನ ಯಾವ ಜನಾಂಗದಲ್ಲಿಯೂ ತುಲನೆಗೆ ಸಹ ದೊರೆಯಲಾರದು. ಆ ವಿಮರ್ಶಕನ ಹೊಗಳಿಕೆ ಎಷ್ಟು ಯಥಾರ್ಥವೆಂಬುದನ್ನು ಮನಗಾಣಲು, ಈಗ ಈ ಪುರುಷ: ಬ್ರಹ್ಮನ್ ವಿಚಾರವನ್ನೆ ನೋಡಿ; ಋಗ್ವೇದದ ನಾಸದೀಯ ಸೂಕ್ತದ ಆಶಯ ಮತ್ತು ಅದರ ರಚನಾಶಿಲ್ಪ ಎರಡನ್ನೂ ಮೆಚ್ಚಿಕೊಳ್ಳದ ಪಾಶ್ಚಾತ್ಯ ವಿಮರ್ಶಕರಿಲ್ಲ. ಬ್ಲೂಮ್‌ಫೀಲ್ಡನಂತಹ ನಿಸ್ಪೃಹ ಸ್ಪಷ್ಟವಾದಿ, ಅಥರ್ವವೇದದೊಳಗಿನ ತತ್ವಜ್ಞಾನದ ಸೂಕ್ತಗಳನ್ನು 'ಸ್ಯೂಡೊ ಫಿಲೊಸೊಫಿಕಲ್ ಹಿಮ್ನಸ್' ಎಂದಿದ್ದಾನೆ. ಆದರೆ, ಅಥರ್ವವೇದದ ಸ್ಯೂಡೋಫಿಲಾಸಫಿಯ ಸೂಕ್ತಸ್ಥ ಆಶಯವೇ ನಾಸದೀಯ ಸೂಕ್ತದಲ್ಲೂ ಇದೆ. ಆದರೆ, ಇದರ ಪತ್ತೆ ಹತ್ತಲಿಲ್ಲ, ವಿಮರ್ಶಾವಿಚಕ್ಷಣ ಬ್ಲೂಮಫೀಲ್ಡರಿಗೆ! ಅಥರ್ವವೇದದ ಸ್ಕಂಭ-ಸಲಿಲಸ್ಥ ಹಾಗೂ 'ಸತ್ ಏವ ಇದಂ ಅಗ್ರೇ ಆಸೀತ್' ಎಂಬ 'ತುಚ್ಛೇನ ಆವೃತ ಆ-ಭು' ಬೇರೆ ಇದೇ ವಿಶ್ವದ 'ಅಧಿ ಅಕ್ಷ' ಎಂಬುದನ್ನು ಆ ಕವನದ ಮೋಡಿ ಮರೆಮಾಚಿಸಿ ಬಿಡುತ್ತದೆ! ಅಥರ್ವದ ಸೂಕ್ತ ಟೀಕಿಸಿದ ಈ ವಿಮರ್ಶಾ ವಿಚಕ್ಷಣ ವಿದ್ವಾಂಸನೇ ನಾಸದೀಯ ಸೂಕ್ತವನ್ನೋದಿ, ಹಿಗ್ಗಿ ತಲೆಯ ಮೇಲೆ ಇಟ್ಟುಕೊಂಡಿದ್ದಾನೆ! ಬ್ಲೂಮಫೀಲ್ಡನಿಗೆ ತುಂಬ ಸೋಜಿಗಕ್ಕೆ ಕಾರಣವಾದ ಸಂಗತಿಯೆಂದರೆ. ಋಗ್ವೇದ ಕಾಲದಷ್ಟು ಪ್ರಾಚೀನ ಒಬ್ಬ ಕವಿ, ದೇವರ ಬಗೆಗೆ ಅದೆಷ್ಟು ಭಯಪಡಬೇಕು. ಆದರೆ ಈತನ ವೈಚಾರಿಕ ಧೈರ್ಯ ಪ್ರತಿಭೆ ಅದೆಷ್ಟು ವಿಲಕ್ಷಣ! ಏಕೆಂದರೆ 'ಅರ್ವಾಕ್ ದೇವಾಃ' (ದೇವರುಗಳು ಹುಟ್ಟುವದಕ್ಕೂ ಮುನ್ನ) ದೇವರು ಹುಟ್ಟುವ ಮುಂಚಿನ ವಿಶ್ವವನ್ನು ಗ್ರಹಿಸಿಕೊಳ್ಳುವುದಕ್ಕೆ ಧಾವಿಸುವ ಈ 'ಧೀ'ರನ ನೈತಿಕ ಧೈರ್ಯವು ಅತುಲನೀಯ. ದೇವರು ಹುಟ್ಟುವ ಮುನ್ನ ಈ ಬ್ರಹ್ಮ (: ಪುರುಷ) ಒಂದೇ ಇತ್ತು! ಅಧಿ-ಅಕ್ಷ ಆಗ! ಇದು ತತ್ : ಏಕಂ! ವಿಶ್ವಾರಂಭದ 'ತತ್' ಇದನ್ನು ನಪುಂಸಕಲಿಂಗಿ : ಏಕಂ ಎಂದು ಗ್ರಹಿಸಿಕೊಂಡುದು ಇನ್ನೂ ಸೋಜಿಗವನ್ನುಂಟು ಮಾಡಿದೆ-ಬ್ಲೂಮಫೀಲ್ಡ ಪ್ರಭೃತಿಗಳಿಗೆ! ಆದರೆ, ಈ ಸೂಕ್ತದಲ್ಲಿಯ ಅಧಿ 'ಅಕ್ಷವು' ಪುಲ್ಲಿಂಗಿಯಾಗಿ ದಕ್ಷನಂತೆ ಎದ್ದುನಿಂತಿದ್ದು ಮಾತ್ರ ಬ್ಲೂಮಫೀಲ್ಡ್ ಕಾಣಲಿಲ್ಲ! ಅಹಹ! ಏನು ಮಾಟವೋ! 'ಯಃ ಅಧ್ಯಕ್ಷಃ ಪರಮೇ ವ್ಯೋಮನ್,' ಇದು 'ನೇತಿನೇತಿ' ಸಃ ಅಂಗ ವೇದ, ಯದಿ ವಾ ನ ವೇದ!.

ಈ ನಾಸದೀಯ ಸೂಕ್ತದಲ್ಲಿ ಕಂಡೂ ಕಾಣದಂತೆ ಇರುವ ಪುಲ್ಲಿಂಗೀ ಅಧಿ ಅಕ್ಷನು (:ಯಃ ಅಧ್ಯಕ್ಷಃ) ಬ್ಲೂಮಫೀಲ್ಡರಿಗೂ, ಚಳ್ಳೆ-ಹಣ್ಣು ತಿನ್ನಿಸಿದ್ದಾನೆ! ಇದೇ ಜಾದು > ಯಾತು! ಈ 'ಬ್ರಹ್ಮನ್' ಪುಲ್ಲಿಂಗಿ-ನಪುಂಸಕಲಿಂಗಿ, ಎರಡೂ ಏಕಕಾಲಕ್ಕೆ! ಆಪ : ರಸ ಪಂಥೀಯ ಈ ಯದಿ ವಾ ವೇದ, ಯದಿ ವಾ ನ ವೇದ' ಸ್ವರೂಪ ಬ್ರಹ್ಮನ್ ನಪುಂಸಕನು ಯಾವಾಗ? ಪುಂಸಕನು ಯಾವಾಗ? ಪೂರ್ಣಬ್ರಹ್ಮ(:೦:) ಸನಾತನತ್ವದ ಪಾತಳಿಯಲ್ಲಿ ಎಂದರೆ ನಪ್ತ್ರುವು ಆಪದಲ್ಲಿ ಇರುವಾಗ: 'ವಾಗರ್ಥಾವಿವ ಸಂಪೃಕ್ತ' ಹಂತದಲ್ಲಿ. ಇದು ಲಿಂಗಾತೀತ ಸ್ಥಿತಿ: ಅಥವಾ ಉಭಯಲಿಂಗೀ : ಅರ್ಧನಾರೀಶ್ವರ : ಮೋಹಿನೀರಾಜ : ಪುಲ್ಲಿಂಗೀರೂಪದ ದುರ್ಗಿ: ಕುಮಾರದೇವಿ ಅಥವಾ ಕುಮಾರೀದೇವನಾದಾಗ ನ ಸ್ತ್ರೀ, ನ ಪುಮಾನ್. ಇದು ಪರಿಪೂರ್ಣ ತೃಪ್ತಾತ್ಮಸ್ಥಿತಿ. ಈ ನಪ್ತ್ರು : ಅಕ್ಷ, ಆಪದಿಂದ ಅಗಲಿತೊ ಆಯ್ತು : ಕೋಲಾಹಲಕ್ಕೆ ಆಮಂತ್ರಣವಿದೆ. ಆದಕಾರಣ, ಸಮುದ್ರಯೋನೀ ಅಶ್ವವು ಹೊರಬರುವಾಗ ಪ್ರಳಯ ಭಯಂಕರವಾದ ಆಕ್ರಂದನ![೧] ಅಂಧನಾದರೂ ದಿವ್ಯಚಕ್ಷುವಾದ ದೀರ್ಘತಮನ 'ಅಶ್ವ' ಸೂಕ್ತದಲ್ಲಿ ಈ ಮಾತಿನ ಸೂಚನೆ ಇಲ್ಲದೆ ಇಲ್ಲ. ಸಮುದ್ರದಿಂದ ಹೊರಬರುವಾಗ ಈ ಅಶ್ವವು ಯತ್

ಅಕ್ರಂದಃ ಪ್ರಥಮಂ ಜಾಯಮಾನಃ ಎಂಬ ಈ ಋಚೆಯಲ್ಲಿಯೆ ಈ ಅಶ್ವವನ್ನು 'ಹಿರಣ್ಯಬಾಹೂ' ಎಂದಿದೆ! ಹಿರಣ್ಯ ಹಸ್ತಿನ್ (: ನಾಗ : ಅಕ್ಷ) ಈ ಅಶ್ವ! ಈ ಅಶ್ವವು 'ಯಮೇನ ದತ್ತಂ' ಎಂದೂ ಈ ಮಹಾಕವಿ ಹೇಳಿರುವ ಸಂಗತಿಯು ಮಹತ್ವದ್ದಾಗಿದೆ. 'ಸಮುದ್ರ ಯೋನಿಃ ಅಶ್ವಃ' ಅಲ್ಲಿಂದ ಹೊರ ಬರಬೇಕಾಯಿತಲ್ಲ, ಎಂಬ ಕಾರಣದಿಂದ ಕ್ರೋಧಾವಿಷ್ಟವಾಗಿ ಆಕ್ರಂದಿಸುತ್ತದೆ-ರೌದ್ರ ಅವತಾರ ತಾಳುತ್ತದೆ. 'ರುದ್ರ'ಪದದ ನಿರುಕ್ತದಂತೆ 'ಅರೋದೀತ್' ಹುಟ್ಟಿದೊಡನೆ ರೌದ್ರ ಶಬ್ದಮಾಡಿದನಂತೆ! 'ಅಶ್ವ'-ತ್ಥಾಮನ್ ಈ ಸಂಕೇತದ ಗುಹ್ಯಾರ್ಥವು ಇಲ್ಲಿ ಬಯಲಿಗೆ ಬರುತ್ತದೆ. ಈ ಅಶ್ವತ್ಥಾಮ 'ದ್ರೋಣ' (೦)-ಪುತ್ರ! ಈ ಶಿಶು ಹುಟ್ಟಿದೊಡನೆ ಕುದುರೆಯಂತೆ ಹೇಕರಿಸಿತಂತೆ!* ಈ ಕಾರಣದಿಂದ ಆ ಕಂದಮ್ಮ 'ಅಶ್ವ'ತ್ಥಾಮ ಎಂದು ಹೆಸರು ಪಡೆಯಿತಂತೆ! ಅಶ್ವತ್ಥಾಮನು ರುದ್ರಾಂಶ ಸುಭೂತನೆಂಬ ಸಾಂಪ್ರದಾಯಿಕ ನಂಬುಗೆಯ ಹಿನ್ನೆಲೆಯೂ ಇಲ್ಲಿ ಚೆನ್ನಾಗಿ ವಿಶದವಾಗುತ್ತಿದೆ. ಸನಾತನವಾಗಿ 'ಅ-ಭು' (Being) ಆಗಿಯೇ ಉಳಿಯಬೇಕಾಗಿದ್ದ ಆ ಗರ್ಭ: ಸರೀಸೃಪ, ಗರ್ಭದಿಂದ ಹೊರಬರುತ್ತಲೆ ಆಕ್ರಂದಿಸುವ ಕಾರಣವು, ಆಪ : ರಸಪಂಥೀಯ 'ದಿವ್ಯ' ದೃಷ್ಟಿಯಂತೆ, ತಾಯ ಉಡಿ (ಒಡಲು) ತೊರೆದು ಹೊರಬರಬೇಕಾಯಿತಲ್ಲ ಎಂದು 'ಅ-ಭು' ತತ್ತ್ವವು ಸಿಡಿಮಿಡಿಗೊಂಡು ಒರಲುತ್ತದೆ!

ಗರ್ಭಸ್ಥ ಶಿಶುವನ್ನು 'ಸರೀಸೃಪ' (: ನಪ್ತೃ: ಅ-ಭು) ರೂಪದಲ್ಲಿ ಕಂಡ ಆಪ: ರಸ ಪಂಥೀಯ ಭೂಮಿಕೆಯ ದ್ರಷ್ಟಾರರು, ದಿವ್ಯಾಕ್ಷರು, ನರನನ್ನು, ಯಾಯಾವರ-ಪುತ್ರ ಜರತ್ಕಾರುವಾಗಿ ಹೆಸರಿಸಿರುವಲ್ಲಿರುವ ಆಳವಾದ ಅರ್ಥವನ್ನು ಅಶ್ವದ ರೌದ್ರ ಆಕ್ರಂದನದ ಸಂದರ್ಭದಿಂದ ಹೆಚ್ಚು ಸುಲಭವಾಗಿ ಅವಗಾಹಿಸಲು ಶಕ್ಯವಿದೆ. ಈ 'ಅಶ್ವ'ವು=ಯಾಯಾವರ ಪರಿವ್ರಾಜಕ: ಜಂಗಮ, ಸದಾ ಗತಿಮಂತ ಚೈತನ್ಯ ಸ್ವರೂಪ! ವಿಶ್ವಶಕ್ತಿ : Elan vital ತಾನೆ! ಇದರ ನಿಲುಮೆಗಳು (strands) ಎರಡೇ ಉಂಟು. ಆಪದಲ್ಲಿ ಲೀನವಾಗಿ ಇದ್ದೀತು; ಇಲ್ಲವೆ ಏನೆಲ್ಲವನ್ನು ತೊತ್ತಳದುಳಿಯುತ್ತ ಹೊರಟೀತು. ಇದು ಅಶ್ವಮೇಧ ಕುದುರೆ, ಇದನ್ನು ಮರಳಿ ಕುಂಡದಲ್ಲಿ ಕಳಿಸಿದಾಗಲೆ ಇದು 'ಸ್ವ'-ಸ್ಥವಾದೀತು. ಈ ನಿಲುಮೆಯಲ್ಲಿ, ತತ್ : ಏಕಂ; 'ಪೂರ್ಣ ಬ್ರಹ್ಮ'. ಇದು ನಪುಂಸಕ. ಆದರೆ, ಇದು 'ಅಧಿ-ಅಕ್ಷ'ವಾಗಿ ಎದ್ದು ನಿಂತಾಗ, ಇದು ಭೈರವಾವತಾರ, ಪ್ರಳಯ ತಾಂಡವಕ್ಕೆ ಪ್ರಾರಂಭ; ಎಂದರೇನೇ ಸೃಜನ! ನಾಸದೀಯ ಸೂಕ್ತದ ಕವಿಯು ತುಂಬ ಕೌಶಲದಿಂದ ಈ 'ಅಧಿ ಅಕ್ಷ' ಪ್ರತಿಮೆಯನ್ನು ಯೋಜಿಸಿರುವ ಋಚೆಯಲ್ಲಿಯೇ 'ಯತಃ ಇಯಂ ವಿಸೃಷ್ಟಿಃ ಆ-ಬಭೂವ' ಎಂಬುದರ ನಿರ್ದೇಶವನ್ನೂ ಮರೆತಿಲ್ಲ! ಗೀತೆಯ ಭಗ-ವಂತನೂ ಈ 'ಅಕ್ಷ' ಸಂಕೇತ ರಹಸ್ಯವನ್ನರಿತಿರಲೇಬೇಕು ಎಂಬುದಕ್ಕೆ 'ಮಯಾ ಅಧಿ ಅಕ್ಷೇಣ ಸೂಯತೇ ಸ ಚರಾಚರಮ್' ಎಂಬ ಗೀತೆಯ ಪ್ರತಿಮಾ ಯೋಜನೆಯೆ ಇದಕ್ಕೆ ಪ್ರಮಾಣ. ವೈಷ್ಣವ ಗೀತೆಯ 'ಅಧಿ (ಸಲಿಲೇ)-ಅಕ್ಷ' ಈ ಪ್ರತಿಮೆಗೆ ಸರಿದೊರೆಯಾದ ಶೈವಪ್ರತಿಮೆಯು ಪಶು-ಪತಿ: ಮಹಾಯೋಗಿ. ಜೀವಗಳೆಲ್ಲ 'ಪಶು' ಇವೆಲ್ಲವುಗಳ ಇರಿಸುವವನು ಪತಿ : ವಿಶ್ವ-ನಾಥ. ಪೃಥಿ= 'ಗೋ' ಎಂದರೆ ಇವನು ಗೋ-ಸ್ವಾಮೀ: ಇನ್ನೊಬ್ಬ ಗೋ-ವಿಂದ. ಪ್ರಳಯ ಕಾಲಾನಲ: ಜನಯಂತೀಃ ಅಗ್ನಿಂ ಎಂದರೇ ಸೃಜನ; ಪ್ರಜಾನಿರ್ಮಾಣವು ಪ್ರಳಯದಿಂದ (ಜೀವನ=ಮರಣ) ಬೇರೆ ಅಲ್ಲ: ಎಂಬುದನ್ನು ಸೂಚಿಸುವುದಕ್ಕಾಗಿಯೇ ಗೀತೆಯು 'ವಿಶ್ವರೂಪ' ದರ್ಶನ ಎಂಬಲ್ಲಿ ಶ್ಮಶಾನ ದರ್ಶನ ಮಾಡಿಸುತ್ತದೆ. ಆಪ (: ಅಪ್-ಸರೆ : ನೀರೆ ಊರ್ವಶಿಯು) ಬಸುರೆಯಾಗುತ್ತಲೆ ಆ ನಪ್ತೃ : ಪುರೂ-ರವನಾದ, ಆ-ಕ್ರಂದನವನ್ನಾರಂಭಿಸಿದ. ಮಾನಸಿ (: ಜರತ್ಕಾರು) ಬಸಿರಾಗುತ್ತಲೆ ಪುರುಷನು ಹೊರಬಿದ್ದು ಯಾಯಾವರ : ಯಾತಿ=ಯತಿಯಾಗಿ ಹೊರಟ! ಈ ಆಪ : ರಸ ಪಂಥೀಯ ಜೀವನದ ಆಕೃತಿಯ ಅಂತರ್ಹಿತ ನಿಯತಿಗೆ (=logic) ಅನುಸರಿಸಿ ಸೀತೆಗೆ ಬಸಿರಿನೊಂದಿಗೇ ಅರಣ್ಯವಾಸವು ನಿಶ್ಚಿತವೆ ಇತ್ತು! ಸೀತಾವಿರಹಿತ ರಾಮನು ಯಾಯಾವರ: ಇವನು (ಶೃಂಗಿ) ಅಶ್ವದ ಬಲಿಕೊಡುವ ಇಚ್ಛೆಯಿಂದ 'ಅಶ್ವ' (: ಸರ್ಪ:

---

* ಈತ ದ್ರೋಣಾಚಾರ್ಯರ ಮಗ, ಇವನ ತಾಯಿ ಗೌತಮೀಕೃಪಿ. ಇವನು ಹುಟ್ಟಿದ ಕೂಡಲೆ ಉಚ್ಚೈಶ್ರವಸ್ಸೆಂಬ ಕುದುರೆಯಂತೆ ಕೆನೆದುದರಿಂದ, ಈತನಿಗೆ 'ಅಶ್ವತ್ಥಾಮ' ಎಂಬ ಹೆಸರನ್ನು ಇಡಬೇಕೆಂದು ಆಕಾಶವಾಣಿ ಸೂಚಿಸಿತು. ಈ ವಿಚಾರವು ಮಹಾಭಾರತದ ಶಲ್ಯಪರ್ವದಲ್ಲಿ ಬರುತ್ತದೆ (ಸಂ)

ಪುರುಷ) ಮೇಧದ ಸಂಕಲ್ಪ ಮಾಡುತ್ತಾನೆ! ಈ 'ಹಿರಣ್ಯ ಶೃಂಗ'- ಅಶ್ವದ ಮೇಧ ಎಂಬುದರ ಮೂಲಸಮಯವು ಋಗ್ವೇದದಲ್ಲಿದೆ. ಸೀತೆ ಹಾಗೂ ಲವ-ಕುಶರು, ಈ ಯಾಯಾವರದ ದಾರಿಯಲ್ಲಿ-ವಲ್ಮೀಕ-ಪುತ್ರ (: ನಾಗ :). ನ-ವಾಲ್ಮೀಕಿ ಮುನಿಯ-ಆಶ್ರಮದಲ್ಲಿ-ರಾಮನಿಗೆ ಸಿಗುತ್ತಾರಂತೆ! ವಾಲ್ಮೀಕಿಯು ಆಗ 'ಅಬ್ಧಿಪ' ವರುಣನನ್ನು ಸಂದರ್ಶಿಸಲು ಹೋಗಿರುತ್ತಾನೆ!

ಈ ಸಂದರ್ಭದಲ್ಲಿ ರಾಮ ಅಯನದ ಇನ್ನೊಂದು ರಹಸ್ಯವು ಬೆಳಕಿನಲ್ಲಿ ಬರುತ್ತದೆ. ವಲ್ಮೀಕ (ಹುತ್ತಿನ) ಪುತ್ರ=ಸರ್ಪ: ವಾಲ್ಮಿಕಿ ವರುಣನಲ್ಲಿ ಹೋಗಿದ್ದನೆಂದು ಸೂಚಿಸಿರುವಲ್ಲಿ ಇದು ದೃಢಪಡುತ್ತಿದೆ. ಸರ್ಪಕ್ಕೆ ಕೊಂಬು ಇರುವ ಕವಿಸಮಯ ಋಗ್ವೇದದಲ್ಲಿಯೇ ಉಂಟು: ಅಹಿ ಶುಷ್ಣನ ವರ್ಣನೆ ನೋಡಿರಿ.[೨] 'ಸಪ್ತ' ಋಷಿ: ಸರ್ಪ, ಎಂಬ ವಿವರ ಹಿಂದೆ ಬಂದಿದೆ. 'ಸಪ್ತ' ಕೇಶಿ=ಮುನಿ ಸರ್ಪ; ಈ 'ಸಪ್ತ'ರಲ್ಲಿ 'ಶೃಂಗ' ಋಷಿ ಒಬ್ಬನಿದ್ದಾನೆ! ಮಕ್ಕಳಿಲ್ಲದ್ದಕ್ಕೆ ಹತಾಶನಾದ 'ದಶ'ರಥನು ಈ ಶೃಂಗಿಯನ್ನೇ ಕರೆಸಿಕೊಳ್ಳಬೇಕಾಯಿತು, ತನ್ನ ಪುತ್ರಕಾಮ-ಇಷ್ಟಿಗಾಗಿ! ದಶ-ರಥ ಈ ಹೆಸರೇ ಸೂಚಿಸುವಂತೆ ಅವನು ಸ್ತ್ರೈಣನಿದ್ದ. ಇಂತಹನಿಗೆ ಮಕ್ಕಳು ಆಗದಿರುವುದು ಅಸಹಜವೇನಲ್ಲ. ಪುತ್ರಕಾಮೇಷ್ಟಿಯಲ್ಲಿ ದೊರೆತ 'ಪಾಯಸ' ಪ್ರಸಾದದಿಂದ ದಶರಥನಿಗೆ ಸಂತಾನ ಲಭಿಸಿದ್ದು. ಈ ಪಾಯಸದ ಒಂದಂಶವೇ ಮಾರುತಿಯ ಜನ್ಮಕ್ಕೂ ಕಾರಣವಂತೆ! ತಪೋನಿರತ ತಾಯಿ ಅಂಜಲಿಯ ಬೊಗಸೆಯಲ್ಲೂ ಒಂದು ಅಂಶ, ಗರುಡನ (: ಕುಕ್ಕಟ ಸರ್ಪವಿರಬೇಕು) ಕೃಪೆಯಿಂದ ಬಂದು ಬಿದ್ದಿತು, ಎಂಬ ಪವಾಡಕಥೆಯೂ ಉಂಟು. ಋಷಿ ಎಂಬ 'ಸಪ್ತ'ರ (:ಸರ್ಪ) ವರಪ್ರಸಾದದಿಂದ ಸಂತಾನ ಲಭಿಸುತ್ತಿದ್ದಿತಾಗಿ. ಋಗ್ವೇದದ ವಾಮದೇವ ಮನೆತನದ ಸೂಕ್ತಗಳಲ್ಲಿಯೆ ಒಂದು ಉದಾಹರಣವುಂಟು. ಪುರುಕುತ್ಸನನ್ನು, ಶತ್ರುರಾಜರು ಸೆರೆಯಲ್ಲಿಟ್ಟಿದ್ದರು ಸಂತಾನವಿಲ್ಲದ್ದರಿಂದ, ರಾಜ್ಯದಲ್ಲಿ ಅರಾಜಕವುಂಟಾಗುವ ಭೀತಿಯಿತ್ತು. ಆಗ ಪುರುಕುತ್ಸಾನಿಗೆ ಸಪ್ತ'ರ ಕೃಪೆಯಿಂದ ಪುತ್ರರತ್ನವು ಲಭಿಸಿತು![೩] ಇದು ಹಾಗಿರಲಿ.

ದಶರಥನಿಗೆ ಸಂತಾನಲಾಭವಾದುದು, ಒಬ್ಬ ಶೃಂಗಮುನಿಯ ಕೃಪೆಯಿಂದ; ಈತನು ಅಧ್ವರ್ಯುವಾಗಿ ನೆರವೇರಿಸಿದ 'ಪುತ್ರಕಾಮೇಷ್ಟಿ' ಯಜ್ಞದಿಂದ! ಸರಿ. ಪತಿಯಿಂದ ಪರಿತ್ಯಕ್ತ ಗರ್ಭಿಣಿ ಸೀತೆಗೆ ವನದಲ್ಲಿ ಆಶ್ರಯ ದೊರೆತುದೂ ಒಬ್ಬ ವಲ್ಮೀಕನಿಂದ! ವಲ್ಮೀಕ : ಹುತ್ತ; ಹುತ್ತಿನ ಈ ಸರ್ಪವು ಶೃಂಗಿಯಾಗಿರಲೇಬೇಕು. ವಾಲ್ಮೀಕಿ, ಸೀತೆಗೆ ನೆರವಾದದ್ದು ಹಾಗೂ ರಾಮನ (ಮನೆತನದ) ಇಡೀ ಚರಿತ್ರೆಯನ್ನು ಕಾವ್ಯರೂಪದಲ್ಲಿ ರಚಿಸಿದ್ದು, ಬಳಿಕ ಲವಕುಶರಿಗೆ ಬೋಧಿಸಿದ್ದು ಈ ಘಟನೆಗಳೊಳಗಿನ ಅನ್ವಯಾರ್ಥವು, ಈ ಶ್ರೀರಾಮನು ವಲ್ಮೀಕನ ವರಪ್ರಸಾದ-ಲಬ್ಧ-ಸತ್ಪುತ್ರನೆಂದಾಗಲೆ, ಔಚಿತ್ಯಪೂರ್ಣವಾಗಲಿದೆ.

ರವಿ ಕಾಣದ್ದನ್ನೂ ಕವಿ ತನ್ನ ಪ್ರತಿಭೆಯಿಂದ ಕಾಣಬಲ್ಲನು. "ಕಟ್ಟುಗೆ ಕಟ್ಟದಿರ್ಕೆ ಕಪಿಸಂತತಿ, ಸೇತುವಂ", ಹನುಮನು ಸಮುದ್ರವನ್ನು ಹಾರಿಹೋಗಿರಲಿ ಬಿಡಲಿ. ಇವೆಲ್ಲ (ಕಟ್ಟುಕತೆ;) ಜನ ನಂಬುವಂತೆ : ಮಾಡುವ ಈ ಜಾದೂ < ಯಾತೂ : ಮೋಡಿಕಾರಿಕೆ ಶಕ್ತಿಕವಿಯ ನಾಲಗೆಯಲ್ಲಿರುವುದು ಮಾತ್ರ ನಿಜ. ವಾಕ್ : ಅದಿತಿ : ಅತ್ರಿ! ಎಂದು ಆಪ : ರಸ ಪಂಥೀಯ ಈ ಕವಿಗಳೇ ಹೇಳಿಲ್ಲವೇ? ಕೃಷ್ಣದ್ವೈಪಾಯನನ ಮಹಾಭಾರತವು ಮೃತ್ಯುದೈವತ-ಮಾಹಾತ್ಮವೇ ತಾನೆ? ಆಪ : ರಸ ಪಂಥೀಯ ಈ ವಾಗ್ದೇವಿಯೇ ಭಾರತೀಯರಿಗೆ ಪ್ರಪಂಚದ ಅರ್ಥವನ್ನು ವಿಶದಪಡಿಸುವ ಮಧ್ಯಮಾ ವಾಕ್, ನಿಜವಷ್ಟೆ? ಇದುವೆ ನಮ್ಮ('ಜ್ಞಾನ') ಮಾಧ್ಯಮ: ಪ್ರತಿಮೆಯಾಗಿದೆ. ಬಾಳೆಲ್ಲ ಹಾಳು, ಬರಡು ಎಂಬ 'ಶ್ರದ್ಧೆ' ದೃಢಮೂಲವಾಗಿದೆ. ಈ ಎಲ್ಲ ಶ್ರೇಯಸ್ಸು ಸಂಪೂರ್ಣವಾಗಿ ಋಗ್ವೇದದ ವಸಿಷ್ಠನಿಗೆ ಹಾಗೂ ಆತನ ಪೀಳಿಗೆಯ ಕೃಷ್ಣದ್ವೈಪಾಯನ ಹಾಗೂ ವಲ್ಮೀಕಸಂಭವ ಇಂತಹ ಮಹಾಕವಿಗಳ ಪ್ರತಿಭೆಗೆ ನಿಶ್ಚಿತವಾಗಿ ಸಲ್ಲುತ್ತದೆ. ಇಂದಿನ ಋಗ್ವೇದ ಸಂಹಿತೆಯನ್ನು ಹಯಗ್ರೀವ ಅವತಾರದಲ್ಲಿ ಮನ್ಮಹಾವಿಷ್ಣುವೇ ಸಮುದ್ರ ತಳದೊಳಗಿಂದ (ಏಕೆಂದರೆ ಸಮುದ್ರಯೋನಿ : ಹಯಃ) ತಂದನೆಂದು ಆ ಸಂಪ್ರದಾಯದಿಂದಲೇ ತಿಳಿಯುತ್ತದೆ! ಇದರಿಂದಾಗಿ ಈ ವಿಶ್ವಕ್ಕೆ ಶ್ರೀ ವಿಷ್ಣುವೆ ಅಧಿ ಅಕ್ಷನಾಗಿರುವುದನ್ನು ಪ್ರತಿಪಾದಿಸುವ ಹಾಗೂ, ಇಂದ್ರನು (ಸೂರ್ಯನು) ಸಾರ್ವರಾಜ್ಞಿ : ಅದಿತಿಯಿಂದ ನುಂಗಲ್ಪಟ್ಟವನು ಎಂಬ ಹಾಗಿನ ಅಂತರಾರ್ಥವುಳ್ಳ ಈ

ಸಂಹಿತೆಯು, ಸೂರ್ಯರೂಪ ಇಂದ್ರನೇ ಚಂದ್ರದೈವತವಾಗುವವನೆಂಬ ಈ ವೇದವು ಮೂಲಸಂಹಿತೆ ಹೇಗೆ ಆಗಬಲ್ಲುದು? ಈ ಸಂಹಿತೆಯಲ್ಲಿ ಕೊನೆಗೆ ಇಂದ್ರನ ತೇಜೋವಧೆಯಾದುದೇ ಕಂಡುಬರುವ ಕಾರಣವೇನು? ಅಥರ್ವವೇದದೊಳಗಿನ 'ವೃತ್ರಾತ್ ಜಾತೋ ದಿವಾಕರಃ' ಈ ವಾಕ್ಯದ ಅರ್ಥವೇನು? ದಿವಾಕರ=ಸೂರ್ಯ=ಇಂದ್ರ: ವೃತ್ರ : ಅಹಿಪುತ್ರರೆಂಬ ಸಂಭ್ರಮ ನಿರ್ಮಿಸುವ ಈ ತಂತ್ರವು ಬೇಗನೆ ಬೆಳಕಿನಲ್ಲಿ ಬಂದಷ್ಟು. ಭಾರತಕ್ಕೆ ಮಾತ್ರವಲ್ಲ, ಮಾನವ ಪ್ರಪಂಚಕ್ಕೇ ಕ್ಷೇಮವಾಗಲಿದೆ.

ಋಗ್ವೇದದಲ್ಲಿ ಎಷ್ಟು ಬಗೆಯಿಂದ ಇಂದ್ರನ ತೇಜೋಭಂಗ ಮಾಡಲಾಗಿದೆ ಎಂಬ ಸಮಗ್ರ ವಿವರಣೆಗೆ ಇದು ಸಮಯವಲ್ಲ. ಇಂದ್ರನೇ ಋಗ್ವೇದದ ಪ್ರಮುಖ ಹಾಗೂ ಶ್ರೇಷ್ಠದೈವತ. ಈ ರೂಢ ಕಲ್ಪನೆಗೆ ಬಾಧೆಬರದಂತೆ, ಈ ವೇದದಲ್ಲಿಯೆ 'ಅಹಿಜಿತ್', 'ವೃತ್ರಘ್ನ', ಎಂಬ ಇಂದ್ರನೂ ಸರ್ಪಸ್ವರೂಪನೇ ಎಂಬುದನ್ನು ಹೇಳಿರುವ ಈ ಮಾಯಾವೀ ಪ್ರತಿಮಾ : ಸಂಕೇತಗಳನ್ನು ಆಮೂಲಾಗ್ರ ವಿಮರ್ಶಿಸಿಕೊಳ್ಳುವ ಆವಶ್ಯಕತೆಯಿದೆ!

ಋಗ್ವೇದದ ವಾಕ್ ಅಂಭೃಣಿಯು ತಾನು ಇಂದ್ರನ ಪೋಷಕಳು ಎಂದು ಹೇಳಿದ್ದಾಳೆ. ಕೇನೋಪನಿಷತ್ತಿನ ಉಮಾದೇವಿ, ಅಜ್ಞಾನಿ ಇಂದ್ರನಿಗೆ ಜ್ಞಾನದೀಕ್ಷೆ ಕೊಡುತ್ತಾಳೆ. ಮಹಾಭಾರತ, ರಾಮಾಯಣಗಳಲ್ಲಿ ಆಗಿರುವ ಇಂದ್ರನ ಪ್ರತಿಮೆಯ ಅವಮೂಲ್ಯನವು ಒಂದು ಸ್ವತಂತ್ರ ಪ್ರಬಂಧದ ವಿಷಯವೇ ಆಗಬಲ್ಲುದು. ಪುರಾಣಕಥೆಗಳ ಮೇರೆಗೆ ಇಂದ್ರನ ವ್ಯಭಿಚಾರದ ದುಷ್ಪರಿಣಾಮಗಳಿಂದಾಗಿ ಅವನ ಮೈಯಲ್ಲೆ ಜನನೇಂದ್ರಿಯದ ರೋಗ ಕಾಣಿಸಿಕೊಳ್ಳುತ್ತದಂತೆ. ಆದರೆ, ಋಗ್ವೇದದ ಇಂದಿನ ಪಾಠದಲ್ಲಿಯ 'ಭಗಸ್ಯೇವ ಕಾರಿಣಃ' ಆಗಿರುವ ವಿಷ್ಣುವು ಪೂರ್ವೀಃ ಜನಿತ್ರೀಃ ಯುವತಯಃ ನ ಮರ್ಧಂತಿ': Vishnu to whom young women, the mother are not remiss"[೩] ಹೀಗೆ ವಿಷ್ಣುವಿನ ಸ್ತ್ರೈಣವೃತ್ತಿಯ ಸ್ಪಷ್ಟ ಉಲ್ಲೇಖವಿದೆ. ಗರ್ಭಾಧಾನ ಸೂಕ್ತದಲ್ಲಿ 'ವಿಷ್ಣುಃ ಯೋನಿಂ ಕಲ್ಪಯತು' ಎಂದು, ವಿಶೇಷ ಆಮಂತ್ರಣವಿರುವ ಈ ಭಗ-ವಂತನ ಉಪಾಸಕರು, ಇಂದ್ರನನ್ನು ಸ್ತ್ರೀಲೋಲುಪನೆಂದು ವರ್ಣಿಸಿದ್ದನ್ನು ಕಾಣುವಾಗ, ಕಳ್ಳನ ತಿರುಬೊಬ್ಬೆಯಂತೆ ಈ ಕೃತಿ ಕಾಣತೊಡಗುತ್ತದೆ. 'ಅಪಾಂನಪ್ತ್ರ: ಆಪದಲ್ಲೆ ಇರುವ "ವತ್ಸ" ವಿಷ್ಣು ಎಂಬುದು ಇವನ ಪ್ರತಿಮಾ : ಸಂಕೇತಗಳೆ ಹೇಳುತ್ತಿವೆ. ತನ್ನ ತನುವನ್ನು ವೃದ್ಧಿಂಗತವಾಗಿಸುವ ಹ್ರಸ್ವ : ವಾಮನನು : 'ತನ್ವಾ ವಾವೃಧಾನ' ಎಂದು ವಸಿಷ್ಠನು ಹೊಗಳುತ್ತಾನೆ. ಹೆ ವಿಷ್ಣುವೆ ನಿನ್ನ ಪರಮ ಪದದ (?) ಎತ್ತರಕ್ಕೆ ಯಾರು ಬಂದಾರು? ಎಂಬ ಸ್ತೋತ್ರ, ಋಗ್ವೇದದಲ್ಲೆ ಕೇಳಬರುತ್ತದೆ! ಆದರೆ, ಯಾರ ಸ್ಕಂಭ ಅತ್ಯುನ್ನತ? ಎಂಬ ಸ್ಪರ್ಧೆಯಲ್ಲಿ ರುದ್ರನೇ ಗೆದ್ದುದಾಗಿ ಪುರಾಣ ಕಥೆಯಿದೆ. ಇದೇನೇ ಇದ್ದರೂ 'ನಾಗ' ಅಹಿ ಸಂಪ್ರದಾಯ ವಿರೋಧಿ ಇಂದ್ರನನ್ನು ನಾಗಲಿಂಗ ಸ್ವರೂಪಿಯಾಗಿ ಮಾರ್ಪಡಿಸಿ, ಅವನನ್ನು ಒಬ್ಬ 'ಭೋಗಿ'ಯಾಗಿ ಚಿತ್ರಿಸುವುದರಿಂದ ಆಗಿರುವ ಸಾಮಾಜಿಕ-ಹಾನಿ ಎಷ್ಟೆಂದು ಹೇಳಬೇಕು? ಸಮಾಜ ಸಮಷ್ಟಿಯ ಜೀವನ ಮೂಲ್ಯಗಳ ಸಂರಕ್ಷಣೆಗಾಗಿ, 'ಭೋಗಿ': ಸರ್ಪಗಳು ತಮ್ಮ ನಿಶಾಚರ ವೃತ್ತಿಯನ್ನು ನಕ್ತಾಚಾರಗಳನ್ನು ಹಗಲಿನಲ್ಲಿ ಆಚರಿಸದಿರುವಂತೆ ದಕ್ಷನಾಗಿರಬೇಕಾದ : ಅಹಿ-ಜಿತ್ ಇಂದ್ರನು ಅಹಿ=ಭೋಗಿಯಾದ ಬಳಿಕ ಭಾರತದಲ್ಲಿ ಸೂರ್ಯಪ್ರಕಾಶವು ಎಲ್ಲಿ ಉಳಿಯಬಲ್ಲುದು? ವಸಿಷ್ಠ, ವ್ಯಾಸ ಮತ್ತು ವಾಲ್ಮೀಕಿ ಪರಂಪರೆಯ ಈ ಪ್ರಚಾರ ಪದ್ಧತಿಯು ಎಷ್ಟರಮಟ್ಟಿಗೆ ಸಭ್ಯ-ಪ್ರಶಸ್ತ, ಎಂಬುದನ್ನು ಬಲ್ಲಿದರೆ ನಿರ್ಣಯಿಸಲಿ?

ಇಂದ್ರಾಗ್ನೀ-ಸೂರ್ಯ ಪೂಜಕರು ಲೈಂಗಿಕ ಭೂಮಿಕೆಯ ಪ್ರಾಥಮಿಕ ಸ್ವರೂಪದ ಪ್ರತಿಮಾ : ಸಂಕೇತಗಳನ್ನು ಆರಾಧಿಸಿರಲಿಕ್ಕೆ ಸಾಕು. ಅವರು ಈ ಹಂತದಿಂದ ವೇದದಲ್ಲಿ ಈಗ ಕಾಣುವ ಋತ : ಸತ್ಯದ ವೈಚಾರಿಕ ಪಾತಳಿಯ ಜೀವನರೀತಿಯ ವರೆಗೆ ಬಂದು ತಲುಪಿದ ವಿಕಾಸಕ್ರಮವೂ ಬೆಳಕಿಗೆ ಬರಲೇಬೇಕು. ಯುರೋಭಾರತೀಯ ಮೂಲದ ಆರ್ಯಭಾಷೆಯ ಏನೆಲ್ಲ ಶಾಖೆಗಳ ಮಾತಿನವರ ಜೀವನ ಹಾಗೂ ಆಚಾರ ವಿಚಾರಗಳ ತುಲನಾತ್ಮಕ ವಿಮರ್ಶೆಯಲ್ಲಿಯೆ ಇದು ಶಕ್ಯವಾಗಬಲ್ಲುದು. ಯಾವುದೇ ಜನದ ಪ್ರಾಥಮಿಕ-ಹಂತದ ಸಂಸ್ಕೃತಿಗೆ ಆಕಾರವು ಬರಲು ಕಾರಣವಾಗುವ ದಿವ್ಯಪುರುಷ : ಶಾಮನ್ (ಶ್ರಮಣ) ಹಾಗೂ ಮೆಡಿಸನ್

ಮ್ಯಾನ್ (: ಬೈದ್ಯ<ವೈದ್ಯ<ವಿದ್) ಇದರಂತೆ ಮಳೆ ತರಿಸುವ ಮೋಡಿಕಾರ, ವೀರ Cultural Hero ಹೀಗೆ ಕೆಲವು ಪ್ರಮುಖ ಪ್ರತಿಮೆಗಳನ್ನು. ಮಾನವ ಸಂಸ್ಕೃತಿಯ ಪ್ರಾರಂಭದ ಆಕೃತಿಗಳಲ್ಲಿ ಮಾನವ ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ. ಸರ್ಪನೃತ್ಯದ ಸಂದರ್ಭದಲ್ಲಿ ಅದನ್ನು ನೆರವೇರಿಸುವ ಸಂಪ್ರದಾಯವಂತ ಮನೆತನಗಳು, ದಕ್ಷಿಣ ಕನ್ನಡದಲ್ಲಿ ನಿನ್ನೆ ಮೊನ್ನೆಯ ವರೆಗೂ 'ಬೈದ್ಯ'ರವೇ ಇದ್ದುದು ಡಾ. ಕೊ. ಶಿವರಾಮ ಕಾರಂತರಿಂದ ಬೆಳಕಿಗೆ ಬಂದಿದೆ. ಋಗ್ವೇದದ ಇಂದ್ರನಲ್ಲಿ, ಮಳೆ ತರಿಸುವ ಒಬ್ಬ ಪ್ರಾಥಮಿಕ ಮಾಂತ್ರಿಕನ ಆಕೃತಿಯ ಹೋಲಿಕೆಯಿದೆ. ಜೀವನ ಪರಿಸರದೊಳಗಿನ ಘಟನೆಯೇ ದೇವತ್ವದ ಪಾತಳಿಗೆ ಮುಟ್ಟಿ ದಿವ್ಯ ಆದರ್ಶ; ಆರಾಧ್ಯ ಪ್ರತಿಮೆ ಆಗುತ್ತದೆ. ಆದರೆ, ಇದಕ್ಕಿಂತ, ಇನ್ನೊಂದು ಬಗೆಯ ದೃಷ್ಟಿ ಲೇಸು : ಸಮಕಾಲೀನರಿಗೆ, ಆ ವ್ಯಕ್ತಿಯಲ್ಲಿ ಕಂಡ ದಿವ್ಯ-ಪವಾಡಶಕ್ತಿಯ ಪ್ರಭಾವದಿಂದಾಗಿ ಅಲ್ಲಿ ಅವರಿಗೆ ದೈವತ್ವದ ದಿವ್ಯಾನುಭವ ಬಂದಿರುವುದು-ಬರುವುದು ಶಕ್ಯವಿದೆ.

ಋಗ್ವೇದದ ದೈವತಗಳ ಪ್ರಸ್ತುತ ವಿಶ್ಲೇಷಣದಲ್ಲಿ ಕಾಣುತ್ತಿರುವಂತೆ, ಅಗ್ನ್ಯಾರಾಧಕರ ಪ್ರತಿಮಾ : ಸಂಕೇತಗಳ ಹಿನ್ನೆಲೆ, ಆಪ : ರಸ ಪಂಥೀಯ ಪ್ರತಿಮಾ : ಸಂಕೇತಗಳ ಹಿನ್ನೆಲೆಗಿಂತ ತೀರ ಭಿನ್ನವಿದೆ. ಇಂದ್ರನು ಮೋಡಗಳನ್ನು ತುಂಡರಿಸಿ ಮಳೆ ಸುರಿಸುತ್ತಿದ್ದನೆಂದು ವರ್ಣಿಸುವಾಗ, ಮಳೆಸುರಿಸುವ ಮೋಡಗಳ ಸೂಚಕ ಸಂಕೇತವೆಂದು ಪರ್ವತ ಪ್ರತಿಮೆಯನ್ನು ಬಳಸುತ್ತಿದ್ದರು. 'ಪರ್ವತ' ಸಂಕೇತ ರಹಸ್ಯವಾದದ್ದು. ಇದು ಕಾಂಡ : ಕಣೆ>ಗಣೆ ಸಂಕೇತದ ತುಲನೆಯಲ್ಲಿ ಮಾತ್ರ ಅರಿಕೆಗೆ ಬರಬಲ್ಲುದು. 'ಪ್ರತಿಪರ್ವ ರಸೋದಯ:' ಕಾವ್ಯವಾದ ಮಹಾಭಾರತದಲ್ಲಿ 'ಪರ್ವ' ಪ್ರತಿಮೆ ಇದ್ದರೆ, ರಾಮಾಯಣದಲ್ಲಿ 'ಕಾಂಡ' ಉಂಟು ! ಪರ್ವ : ಕಾಂಡ ರಸಯುಕ್ತ : ಸ-ರಸ ಗ್ರಂಥಿ. ಅನೇಕ ಪರ್ವಗಳ ಪರ್ವ-ತ ಪ್ರಾಯ ಇಡಿ ಮಹಾಭಾರತ ಕೃತಿ : ಮಹಾವಿಷ್ಣುವಿನ ವಿಶ್ವರೂಪ ಆ-ಕೃತಿ! ರಸೋ ವೈ ಸಃ! 'ವಿಷ್ಣುಃ ಪರ್ವತಾನಾಂ ಪತಿ' ಇದರಂತೆ ನಾನಾ ಕಾಂಡ : ಪರ್ವ, ಕಾಂಡ=ಗಣ್ಣು : ಕಣ್ಣು : ಅಕ್ಷ! ವಿಷ್ಣುವಿನ ಪರ್ವತ; ಅಡವಿ ಅರಣ್ಯ. ಈ ಸಂಕೇತಗಳು ಅರ್ಥಪೂರ್ಣವಾಗಿವೆ! 'ಅಕ್ಷ' (axle) ದಂತೆ ಪರ್ವ-ತವು ಭೂಮಿಯ ಸ್ಕಂಭಃ ಆಧಾರಸ್ತಂಭವೂ ನಿಜ! ಶ್ರೀವಿಷ್ಣುಪತ್ನಿಯರಲ್ಲಿ ಭೂದೇವಿ ಇದ್ದಾಳೆ. ಪರ್ವ=ಹಬ್ಬಿ ವ್ಯಾಪಿಸುವ ವೃ-ತ್ರ ಗುಣಸ್ವಭಾವಸೂಚಕ ಸಂಕೇತ. 'ತಾನೇ ಏನೆಲ್ಲ' ಎಂಬ ಪಂಥೀಯ ಶತ್ರು ವೃತ್ರಹನ್ ಇಂದ್ರನು! ಜೀವನವನ್ನು ಇಡಿಯಾಗಿ ತಾನೇ ವ್ಯಾಪಿಸಿ-ಏಕಂ: ತತ್ ಆಗಿ-ಬಿಡುವ ಏನೆಲ್ಲ ಅ-ಸುರ-ಶಕ್ತಿಯ ವೈರಿ ಇಂದ್ರನು. ಆದಕಾರಣ ಪರ್ವತ : ಕಾಂಡ : ಶಿಶ್ನದೇವ ಶತ್ರು ಇಂದ್ರನು. ಋತಾಧಿಷ್ಠಿತ ನಿಯಮಬದ್ಧ ಜೀವನದಲ್ಲಿ, ಪ್ರತಿಯೊಂದಕ್ಕೂ ಅದರ ಸಲುವಾಗಿಯೆ ಇರುವ ವಿಶಿಷ್ಟ ಸ್ಥಾನ. ಕಾರ್ಯವು ಒಂದು ಇರುತ್ತದೆ. ಜೀವನದಲ್ಲಿ ಯಾವುದೇ ವಿಶಿಷ್ಟ ಶಕ್ತಿಗೂ ತಾನೇ ತಾನಾಗಿ ಬೆಳೆದು, ಏನೆಲ್ಲವನ್ನೂ ವ್ಯಾಪಿಸಿಬಿಡುವುದಕ್ಕೆ ಅವಕಾಶವು ಇರಲಾಗದು. ಬಾಳಿನಲ್ಲಿ ಆಯಾ ಜೀವನರಂಗದ ಋತ : ನಿಯಮ ವ್ಯವಸ್ಥೆಯನ್ನು ಕಾಯ್ದುಕೊಳ್ಳುವುದಕ್ಕೆ ಒಂದೊಂದು ದೇವತಾ ಶಕ್ತಿ ಉಂಟೆಂಬ ಶ್ರದ್ಧೆಯಲ್ಲಿ ಶ್ರಮ ವಿಭಾಗ ತತ್ತ್ವಾನುಸಾರಿ ಹಲವು ದೇವರುಗಳು, ಋತದ ಆಧಾರದಿಂದ ಉಳಿಯುತ್ತವೆ; ಪೂಜ್ಯವಾಗುತ್ತವೆ; ನಿಜವಾದ ದೇವತಾ ಪೂಜೆ ಎಂದರೆ ಋತ : ಸತ್ಯದ ಆರಾಧನೆಯಾಗಿದೆ. ವಿಶಿಷ್ಟ ದೈವತನಾಮ ಸಂಕೇತವೇ ದೈವತವಲ್ಲ; ಯಾವ ದೇವರೂ ಸ್ವೈರ-ಸ್ವಾತಂತ್ರ್ಯ ಪಡೆದಿಲ್ಲ; ಇವರು ಋತಕ್ಕೆ ಅಧೀನರು.

ವೃತ್ರಹನ್ ಇಂದ್ರನನ್ನು 'ಹೇ ಇಂದ್ರ (ತ್ವಂ) ಸುಬ್ರಹ್ಮಾಣಂ, ಬೃಹಂತಂ ಪೃಥು ಬುಧ್ನಂ....' ಆದ ನಿನ್ನನ್ನು ಎಂದು ವರ್ಣಿಸಿ ಅವನನ್ನು Elan vital ರೂಪದಲ್ಲಿ ಋತಕ್ಕೂ ಮಿಗಿಲಾದವನೆಂದು ಮುಗಿಲಿಗೆ ಏರಿಸಲಾಗಿದೆ![೪] ಈ ಏಕಂ : ತತ್ ಆಕೃತಿಯಲ್ಲಿ ಇಂದ್ರನನ್ನು ಕಂಡು ಹೊಗಳಿದ ಕವಿ ಸಪ್ತ-ಗು! ಇಂದ್ರನು ತನ್ನ ಭಕ್ತರಿಗೆ ಅಮರ ಪದವಿಯನ್ನು ಅನುಗ್ರಹಿಸಬಲ್ಲನು.[೫] 'ಇಂದ್ರ-ಭಕ್ತಾಃ ನ ಮೃತ್ಯುಭಾಜೋ ಭವಂತಿ' ಎಂಬ ಭಾಷ್ಯವನ್ನು ನೋಡಿ! ಆದರೆ, ಆಯುರ್ಮಾನದ ಇತಿ-ಮಿತಿಗಳ ನಿಯಾಮಕ ದೇವನು ಯಮ : ಧರ್ಮನು; ಇಂದ್ರನಲ್ಲ! ಋತ : ಸತ್ಯದಲ್ಲಿ ಶ್ರದ್ಧಾವಂತರು ವಿಶ್ವನಿಯಮಕ್ಕೆ ವಿಪರೀತವಾಗಿ ಆಯುಷ್ಯ ಅಪೇಕ್ಷಿಸಲಾರರು. ಸದೇಹಿ ಅಮರನಾಗುವ ಆಮಿಷ,

ಮರಣಾನಂತರದ ಅಮರ ರೂಪದ-ಮೋಕ್ಷ ಇವು ಋತ : ಸತ್ಯದ ಚೌಕಟ್ಟಿನಲ್ಲಿ ಸರಿಹೊಂದುವುದೇ ಇಲ್ಲ. ಈ ಅಮರತ್ವದ ಆಮಿಷ, ವೈಯಕ್ತಿಕ ಜೀವನ ರೀತಿಗೆ ಪ್ರೇರಕವಾಗಿ ಸಾಮಾಜಿಕ ಜೀವನದ ರೀತಿಗೆ ಮಾರಕವಾಗುವುದು; ನಾಗಪೂಜೆ, ವಿರಕ್ತ-ಸಂನ್ಯಾಸ ವಾದಕ್ಕೆ ಪ್ರಬೋಧಕ ಅಥವಾ ಇಂದ್ರಿಯಭೋಗಕ್ಕೆ ಪ್ರೇರಕವಾಗುವುದು ನಿಶ್ಚಿತ. ಆದಕಾರಣ, ತತ್ : 'ಏಕಂ ಸ್ವರೂಪದ 'ಮಹದ್ದೇವ'ನು ಅಸು-ರ : ವೃತ್ರನೇ ಹೊರತು; 'ಋತ' ಸಂರಕ್ಷಕ ಇಂದ್ರ ನಾಗನು, ವಜ್ರಾಂಗದೇಹಿಯಾಗಿ (ಹಠಯೋಗದಿಂದ) ಅಮರಜೀವಿಯಾಗುವ ಮಹತ್ವಾಕಾಂಕ್ಷೆ, 'ಅಸುರತ್ವಂ ಏಕಂ' ಶಕ್ತಿಯ ಲಕ್ಷಣ ಎನಿಸುತ್ತದೆ. ಇದೇ ಮೇರೆಗೆ ಮೋಕ್ಷದ ಹೆಸರಿನಲ್ಲಿ ವಿಶ್ವವ್ಯವಸ್ಥೆಯ ಆಚೆಗೆ ಅಮರ : ಪರಮ ಪದವನ್ನು ಪಡೆವ ಆಶೆ ಋತಾಧಿಷ್ಠಿತ ನಿಯಮ-ವ್ಯವಸ್ಥೆಗೆ ಸರಿಹೋಗಬ ಮಾತು ಆಗಿದೆ. ವಿಶ್ವದಲ್ಲಿ ಋತಂ (: ಸತ್ಯಂ) ಬೃಹತ್; ಋತವನ್ನು ಭಗ್ನಗೊಳಿಸಿ ವಿಶ್ವಕಾರ್ಯದಲ್ಲಿ ತಾನೇ ಸರ್ವಾಧಿಕಾರಿಯೆಂಬ, ಜೀವನ ಹಾಗೂ ಮರಣಗಳನ್ನು ಆಳುವುದೆಂಬ ದೈವತಶಕ್ತಿ, ಜೀವನ ಮೂಲ್ಯಗಳನ್ನು ಪಾತಾಳಕ್ಕೆ ಮೆಟ್ಟಿ ವಾಮ-ನನಾಗಿ ನಿಲ್ಲುವ ಶಕ್ತಿ : ಶಿಪಿವಿಷ್ಟ ದೈವತ : Elan vital ಆಗಬಲ್ಲುದು. ಅದು ವೃತ್ರಹನ್ ಅಥವಾ ಅಹಿಜಿತ್ ಎಂದರೆ ಋತದ ಸಂರಕ್ಷಣಕ್ಕೆ ನಿರ್ಮಿತವಾದ ದಿವ್ಯ ದೈವತಶಕ್ತಿ : ಇಂದ್ರಶಕ್ತಿ ಎನಿಸಲಾರದು.

ವೃತ್ರಘ್ನ ಇಂದ್ರನನ್ನು ಹೊಗಳಿ ಹೊನ್ನಶೂಲಕ್ಕೆ ಏರಿಸುವ ಈ ತಂತ್ರ, ಈ ಗತ್ತುಗಾರಿಕೆಯ ಮಾಟ, ಯಾರದು-ಎಂಬುದು ಈ ಸೂಕ್ತಗಳಿಗೆ[೬] ಸಂಬಂಧಿಸಿದ ಪಾರಂಪರಿಕ ಪವಾಡ ಕಥೆಯ ಮೂಲಕ ಬಚ್ಚಿ ಉಳಿಯುತ್ತಿಲ್ಲ! ಈ ಮೂರೂ ಸೂಕ್ತಗಳಲ್ಲಿ ಮೊದಲನೆಯದನ್ನು ಆಂಗಿರಸ 'ಸಪ್ತ'-ಗು ಎಂಬ ಸಾಂಕೇತಿಕ ನಾಮಧಾರಿ ಕವಿಯು ರಚಿಸಿದ್ದಾನೆ. ಇನ್ನುಳಿದ ಎರಡೂ ಕವನಗಳು ವೈಕುಂಠನೆಂಬ ಇಂದ್ರಕೃತವಂತೆ. ಈ ಮೂರು ಸೂಕ್ತಗಳ ಸ್ತೋತ್ರ ವಿಷಯವೂ ವೈಕುಂಠನೆಂಬ ಇಂದ್ರನೇ ಆಗಿದ್ದಾನೆ. ಆಂಗಿರ, ಸಪ್ತ ಈ ಶಬ್ದಪ್ರತಿಮೆಯು ಒಳಗೊಳ್ಳುವ ಅರ್ಥಚಿತ್ರವನ್ನು ಕಾಣದೆ, ಈತನ ಇಂದ್ರಭಕ್ತಿಯು ಅರ್ಥವಾಗಲಾರದು. ಆಂಗಿರಸನೆಂದೇ ಅಗ್ನಿಗೆ ಮೊದಲು ಹೆಸರಿತ್ತು. ಹೀಗೆಯೆ, ಮೊದಲು (ಭ್ರಾಜ್>) ಭೃಗು ಅಗ್ನ್ಯಾರಾಧಕರ ಮನೆತನ. ಆದರೆ, ಭೃಗುಗಳು ವಾರುಣೀ ವಿದ್ಯೆಯ ರಸ-ಪಂಥಿಗಳಾದರು. ಸಾಯಣಾದಿ ಸಂಪ್ರದಾಯವಂತರು, ಮ್ಯಾಕಡೊನೆಲ್ ಪ್ರಭೃತಿ ಆಧುನಿಕರು ಸಹ ಭೃಗು-ಅಂಗಿರಸ ಕುಲಗಳು ಮೂಲತಃ ಅಗ್ನ್ಯಾರಾಧಕರವು ಎಂದು ಹೇಳುತ್ತಾರೆ. ಆಂಗಿರಸ ಕುಲಜರು ಆ ಬಳಿಕ ಆಪ : ರಸವಾದಿಗಳಾದುದುಂಟು. ಅಥರ್ವವೇದಕ್ಕೆ ಭೃಗ್ವಂ-ಗಿರಸ(ರ) ವೇದ ಎಂದೂ ಹೇಳಲಾಗುತ್ತದೆ. ಅಂಗಾಂಗಗಳಲ್ಲಿ ಇರುವ 'ರಸ' ವು : ಅಂಗಿರಸ, ಎಂದು ಉಪನಿಷದಾದಿಗಳಲ್ಲಿ ಇದರ ಅರ್ಥವನ್ನು ವಿವರಿಸಲಾಗಿದೆ! ಅಂಗಾಂಗಗಳಲ್ಲಿ ಚೈತನ್ಯದಾಯೀ ಅಗ್ನಿ=ರಸ ಎಂದರೆ ರೇತ! ಈ ಭೂಮಿಕೆಯ ಒಬ್ಬ ಆಂಗಿರಸ ಪುತ್ರನು 'ಸಪ್ತ-ಗು; 'ಸಪ್ತ' ಸಂಕೇತವು ಸರ್ಪ ಸೂಚಕವಿದ್ದುದು ಹಲವೆಡೆಗೆ ದೃಢಪಟ್ಟಿದೆ! ಅಲ್ಲದೆ, ಈ ಸ್ತೋತ್ರದಲ್ಲಿ ಇಂದ್ರನನ್ನು 'ಸುಬ್ರಹ್ಮಾಣಂ' ಎಂದಿರುವಲ್ಲಿ, ಸುಬ್ರಹ್ಮಣ್ಯ : ಆದಿಶೇಷನ ಆಧುನಿಕ ಅವಶಿಷ್ಟ ಸ್ಮೃತಿಯು ಜಾಗ್ರತವಾಗುತ್ತದೆ! ಈ 'ಸಪ್ತ'-ಗು ಕವಿಯು 'ಸಬ್ರಹ್ಮನ್' ಇಂದ್ರನನ್ನು ಸ್ತುತಿಸುವುದರಲ್ಲಿ ವಿಸಂಗತಿಯೇನೂ ಇಲ್ಲ!

ಮೂಲತಃ ಋತ: ಸತ್ಯದ ಭೂಮಿಕೆಯ ದೈವತವಾದ ಇಂದ್ರನ ಆಕೃತಿಯನ್ನು ತತ್ : ಏಕಂ : ಸತ್ಯದ ಭೂಮಿಕೆಗೆ ಸರಿಹೋಗುವಂತೆ ಬದಲಿಸಿಕೊಳ್ಳಲು ಋಗ್ವೇದದಲ್ಲಿಯೇ ಆಗಿರುವ ಪ್ರಯತ್ನಗಳನ್ನು ಸಮೀಕ್ಷಿಸಿ ಸಂಗ್ರಹಿಸುವುದು ಸ್ವತಂತ್ರ ಪ್ರಬಂಧದ ವಿಷಯವಾಗುತ್ತದೆ. ಇಂದ್ರನು 'ಸೋಮ' ಎಂಬ ಪೇಯ ಕುಡಿದು ಉನ್ಮತ್ತನಾಗಿ ತಾನೇ ಈ ವಿಶ್ವದ ಕೇಂದ್ರ ಎಂಬ ಹಾಗೆ ಗಳುಹ ತೊಡಗಿದನೆಂದು ವರ್ಣಿಸುವ ಒಂದು ಸೂಕ್ತದ ಉಲ್ಲೇಖ ಹಿಂದೆ ಬಂದಿದೆ. ಆದರೆ ಈ ಆರೋಪವೂ ಇಂದ್ರನು ಘಟಿಂಗನೆಂಬ ಆರೋಪದ ಯೋಗ್ಯತೆಯದೇ ಇರುವುದಾಗಿ ಕಾಣುತ್ತದೆ. ವೈದಿಕ ದೇವತಾ ಕಥೆಗಳ ಸಮಾಲೋಚಕರಾದ ಮ್ಯಾಕಡೊನೆಲ್ ಬರೆಯುದೇನಂದರೆ, ಸೋಮಪಾನದ ಅತಿರೇಕದ ದೋಷವನ್ನು ಒಪ್ಪಿದರೂ Amorours adventures, on the other hand, are entirely absent from the exploits of Indra in R. V.[೨]

ಮೂಲತಃ ಇಂದ್ರನು ಋತ ಸಂರಕ್ಷಕ ಶಕ್ತಿ ಆಗಿದ್ದಾನೆ. 'ತ್ರಿತ' ಸಂಕೇತದ ಮನುಜ ವ್ಯಕ್ತಿಗೆ ಋತ ಸತ್ಯ ರಕ್ಷಣಾಕ್ಕಾಗಿ ವೃತ್ರ: ಅಹಿಯೊಡನೆಯ ಹೋರಾಟದಲ್ಲಿ ನೆರವಾಗುವ ಶಕ್ತಿ, ಮಾನವ ಜೀವನವು ಆಕಸ್ಮಿಕ ಆಪತ್ತು, ಅಜ್ಞಾನದ ಕತ್ತಲೆ ಆವರಿಸಿ ನಿಷ್ಪ್ರಯೋಜಕವಾಗುವ ಹೆದರಿಕೆ ಎಂದೆಂದಿಗೂ ಉಂಟು. ಇದಕ್ಕಾಗಿ, 'ಏನೆಲ್ಲ ತಾನೇ' ಎಂಬ ಹಾಗೆ ಬಾಳನ್ನು ಕವಿವ ಕತ್ತಲೆ ಮತ್ತು ಆಪ : ರಸ ಸ್ವರೂಪೀ 'ಅಹಂ' 'ವೃತ್ರ' (ಅವರಕ) ರೂಪೀ ಅಹಿಯ ನಾಶದಲ್ಲಿ ಅಖಂಡವಾಗಿ ತೊಡಗಿರುವ ಒಂದು ದೈವೀಶಕ್ತಿಯ ಸಂಕೇತವೇ ಇಂದ್ರ. ಈ ಋತ, ಸಂರಕ್ಷನೆಂಬ ಇಂದ್ರ ಸಂಕೇತವು ಧೀ-ಪ್ರೇರಕವೆಂಬಸೋಮ ಪಾನದಿಂದಲೇ ತನ್ನ ಜಾಗೃತಪ್ರಜ್ಞೆಗೆ ಎರವಾಗಿ, ತಾನೇ 'ವಿಶ್ವಾಧಾರಕ ಏಕಮೇವ ಶಕ್ತಿ' ತನ್ನ ಮಹಿಮೆಯಿಂದಲೇ ಈ ವಿಶ್ವ ನಡೆದಿದೆ, ಎಂದು ಬಡಬಡಿಸ ತೊಡಗುತ್ತಾನಂತೆ![೮] ಆಗಲೆ ಇಂದ್ರನ ಇಂದ್ರತ್ವವು ನಷ್ಟವಾಗುತ್ತದೆ. ಆದರೆ, ಅಷ್ಟೇ ಸಾಲದೆ ಇಂದ್ರನನ್ನು 'ವಿಕುಂಠಾ' ಎಂಬ ಒಬ್ಬ ಅಸುರ ಸ್ತ್ರೀಯ ಪುತ್ರನನ್ನಾಗಿ ಕಲ್ಪಿಸಿ ಅವನ ತೇಜೋವಧೆಯನ್ನು ಮಾಡಲಾಗಿದೆ! 'ಸಪ್ತ' (ಸಪ್ರ) ಮರುತರ ಜನ್ಮದ ನೆಪದಿಂದ, 'ದಿತಿ' ಎಂಬುವಳು ಬಸುರೆಯಿದ್ದಾಗಲೇ ಅವಳ ಗರ್ಭಭೇದ ಮಾಡಿದ ಪಾತಕಿ ಇಂದ್ರನು, ಎಂಬ ಕಥೆಯನ್ನು ಹುಟ್ಟಿಸಿದ್ದಾಗಿದೆ! ರುದ್ರಿಯರೆಂಬ ಮರುತರನ್ನು 'ದಿತಿಯ' ಗರ್ಭ-ಸಂಭವರು, ಎಂದು ಸೂಚಿಸಿ ರುದ್ರನೂ ಆತನ ಮಕ್ಕಳೂ ದೈತ್ಯರೆಂದು ಪರ್ಯಾಯದಿಂದ ಧ್ವನಿತಪಡಿಸಿದ್ದಾಗಿದೆ! ಇದು ವೈಷ್ಣವ ಸಂಪ್ರದಾಯದ ತಂತ್ರವೆಂಬುದು ಮೇಲೆಯೇ ಕಾಣುವಂತಿದೆ! ಇಂದ್ರನು ಹುಟ್ಟಿದೊಡನೆ, ತಂದೆ ತ್ವಷ್ಟಾರನ ಕೊಲೆ ಮಾಡಿದನಂತೆ! ಆಕಸ್ಮಿಕ ಆಪತ್ತುಗಳ ಸಾಂಕೇತಿಕ ಪ್ರತಿಮೆ: ವೃತ್ರ, ಏಕಾಕ್ಷ, ಸರ್ಪ; ಇವನನ್ನು 'ಬ್ರಾಹ್ಮಣ'ನನ್ನಾಗಿ ಕಲ್ಪಿಸಿ, ಇಂದ್ರನು 'ವೃತ್ರಘ್ನ ಎಂದರೆ ಬ್ರಹ್ಮಹತ್ಯಾ ಪಾತಕಿ! ಎಂಬ ಅರ್ಥವು ತನ್ನ ತಾನೆ ಆಗಿಬಿಡುವಂತೆ ಮಾಡಿದ ತಂತ್ರವಂತೂ ಅಪೂರ್ವ! ಏಕಾಕ್ಷ ಸೈಕ್ಲೊಪಸನ ಸಂಹಾರಕ ಒಡೆಸಿಸ್‌ನು ಪಾಶ್ಚಾತ್ಯ ಸಾಹಿತ್ಯದಲ್ಲಿ ಇದೇ ಬಗೆಯ ನಿಂದೆಯ ವಿಷಯವಾಗಿರುವನೊ ನಾನರಿಯೆ!

ಇಂದ್ರಹನನ ಸಮರ್ಥನಾದ ಪುತ್ರಕಾಮಿ ದಿತಿಯು ಜನ್ಮಕೊಟ್ಟ 'ಸಪ್ತ'- 'ಸಪ್ತರು' (: ಸರ್ಪ) ಮರುತರು ಎಂಬ ಒಂದೇ ಸಂಕೇತದಲ್ಲಿಯೆ ಒಳಪದರುಗಳನ್ನು ಇರಿಸಲಾಗಿದೆ. ಮ್ಯಾಕಡೊನೆಲ್ಲ, ಮರುತರ ಸ್ವಭಾವಾದಿ ವಿವರಿಸುವಾಗ ತಾವು ಕಂಡ ಒಂದು ಸೂಕ್ಷ್ಮ ತಾರತಮ್ಯವನ್ನು ಎತ್ತಿಹೇಳಿದ್ದಾರೆ:

> When not associated with Indra the Maruts occasionally exibit malevolent traits[೯]

'ಮರುತರು' ಎಂಬ ಒಂದೇ ಶಬ್ದಸಂಕೇತದಲ್ಲಿ ಎರಡು ಭಿನ್ನ ಅರ್ಥದ ಆಕೃತಿಗಳನ್ನು ಕಲ್ಪಿಸಿ ನಿರ್ಮಿಸಿರುವ ಈ ಮೋಡಿಕಾರ ಮಾಟದಿಂದ ಆಪ : ರಸ ಪಂಥೀಯ ಜೀವನ ಹಾಗೂ ಮರಣ ಈ ಉಭಯ ಶಕ್ತಿಯ 'ಸಪ್ತ' (ಸರ್ಪ) ಮರುತರು (ಬಾಡಬರು) ಯಾರು ಮತ್ತು ಇಂದ್ರಾಗ್ನಿ ಸಂಪ್ರದಾಯದ ಜೀವನ ಪೋಷಕ ಹಾಗೂ ಸಂರಕ್ಷಕ ಸ್ವರೂಪದ 'ಸಪ್ತ' ಮರುತರು ಯಾರು? ಇದನ್ನು ವಿಂಗಡಿಸಿ ಅರಿಯುವುದೇ ಅಶಕ್ಯವಾಗುತ್ತದೆ! ಆದರೆ, ಇಂದ್ರನಿಗೆ ವೃತ್ರಹನನದಲ್ಲಿ ನೆರವಾಗುವ ಮರುತರು, ದಿತಿಪುತ್ರ 'ಸಪ್ತ' (ಸರ್ಪ)ರು ಇರಲು ಶಕ್ಯವಿಲ್ಲ; ಈ ಸಾಂಕೇತಿಕ ರಹಸ್ಯದ ನೆರವಿನಿಂದ ಇದನ್ನು ಅರಿಯಬಹುದು. ಇಂದ್ರನೊಡನೆ ಜಗಳ ಹೂಡಿದರೆಂಬ ಮರುತರೂ ಋಗ್ವೇದದಲ್ಲಿಯೆ ಉಂಟು. ದಿತಿಯು 'ಇಂದ್ರ ಹನನ ಸಮರ್ಥ' ಪುತ್ರಕಾಮಿಯಾಗಿ ಮಾಡಿದ ತಪಸ್ಸಿನ ಫಲವಾಗಿ ಹುಟ್ಟಿದ ಈ ಗರ್ಭ: ಶಿಶುವು ಯಾವುದು ಇರಬಲ್ಲುದು?

ಜೀವನದ ಸ್ವಸ್ತಿ : ಕಲ್ಯಾಣಕ್ಕಾಗಿ ಇರುವನೆಂಬ ಇಂದ್ರನು, ಪಥ,(ದ)-ಭ್ರಷ್ಟನಾದುದು ಯಾರಿಂದ? ಇಂದ್ರನ ಸಖನೆಂಬ ಹಾಗೆ ವೇದಗಳಲ್ಲಿ ವರ್ಣಿತನಾದ, ಪುರಾಣ ಕಥೆಗಳಲ್ಲಿ 'ಉಪೇಂದ್ರ'ನಾಮ ಸಂಕೇತದಿಂದ ವಿಖ್ಯಾತನಾದವನು. ಆದರೆ, ಬಳಿಕ ತಾನೇ ಈ ವಿಶ್ವದ ಕೇಂದ್ರಶಕ್ತಿ ಎಂದು ಪೂಜೆಗೊಂಬವನು ಆದ ಶ್ರೀ ಮನ್ಮಹಾ ವಿಷ್ಣುವೇ ಈ 'ದಿತಿ'ಯ ಪುತ್ರನಿರುವ ಶಕ್ಯತೆ, ಅನಿರೀಕ್ಷಿತವಾಗಿ ಈ ಪಾರ್ಶ್ವಭೂಮಿಯಲ್ಲಿ ಕಾಣತೊಡಗಿದೆ! ಈ ಸಾಂಕೇತಿಕ ಸತ್ಯವು ಯಾರನ್ನೂ ಚಕಿತಗೊಳಿಸದಿರದು. ಪ್ರಾಚೀನ ಬೃಹದ್ದೇವತಾ ಗ್ರಂಥದಲ್ಲಿ ಹೇಳಿರುವ

ಮತ್ತು ಭಾಷ್ಯಕಾರರು ಬೆಂಬಲಿಸುತ್ತಿರುವ 'ವಿಕುಂಠಾನಾಮ ಅಸುರ ಸ್ತ್ರೀ'ಯ ಈ ನಾಮಸಂಕೇತದಿಂದ ಅರಿಕೆಗೆ ಬರುತ್ತಿರುವ ಸಂ-ಗತಿಯಿಂದಲೂ, ಇಂದ್ರನನ್ನು ನೆಲಕ್ಕುರುಳಿಸುವ ವಿಷ್ಣುಪಂಥೀಯ ಮಾಟಗಾರಿಕೆಯೆ ಬಯಲಿಗೆ ಬರುತ್ತಿದೆ! ವಿಕುಂಠಾ : ಆಸುರಿಯ ಪುತ್ರನೆಂಬ ನಾಮಸಂಕೇತದಿಂದ ವೈಕುಂಠ (ಇಂದ್ರ)ನು ಮೂರು ಸೂಕ್ತಗಳ ದೈವತವಾಗುತ್ತಾನೆ. ಆದರೆ 'ವೈಕುಂಠ' ಶಬ್ದದ ಗುತ್ತಿಗೆ ವಿಷ್ಣುವಿಗೆ ಉಂಟಲ್ಲವೆ ಇಂದಿಗೂ! ಈ ಪೂರ್ವಾಪರ ಸಂಬಂಧದಂತೆ ವಿಕುಂಠಾ ಪುತ್ರನೆಂಬವನು ವಿಷ್ಣುವೇ ಇರಬೇಕಾಗುತ್ತದೆ! ಈ ವಿಕುಂಠೆಯೂ, ದಿತಿಯಂತೆ 'ಇಂದ್ರ-ಸದೃಶಂ ಪುತ್ರಂ ಕಾಮಾಯಮಾನಾ' ಅಸುರ ಸ್ತ್ರೀ! ಎಷ್ಟು ಹೋಲಿಕೆ! ಪವಾಡ ಕಥೆಯ ಅರ್ಥದೊಡನೆ, ನಡೆವಳಿ ನುಡಿವಳಿಗಳ ತಾಳಮೇಳವಿರುವ ಅರ್ಥವೇ ವಿಶ್ವಾಸಾರ್ಹ ಅರ್ಥ; ಅದುವೆ ವಾಸ್ತವ: ಸತ್ಯದ ಹತ್ತಿರ ಒಯ್ಯುವ ಅರ್ಥ. ಈ ದೃಷ್ಟಿಯಿಂದ ವೈಕುಂಠ ಚತುರ್ದಶಿ (ಕಾರ್ತಿಕ ಶು. ೧೪) ಆಚರಣೆ ವಿಷ್ಣು ಸಂಪ್ರದಾಯದೊಡನೆ ನಿಬದ್ಧವಾಗಿರುವುದರ ಕಾರಣವೂ ಅಭ್ಯಸನೀಯವಿದೆ! ಮರಣಾನಂತರ ಶೈವರಿಗೆ ಕೈಲಾಸಲೋಕ, ವೈಷ್ಣವರಿಗೆ ವೈಕುಂಠ ಲೋಕದಲ್ಲಿ ಸ್ಥಳವನ್ನು ಕಾದಿಟ್ಟಿರುವ ಹಾಗಿನ ಏಕಾಂತಿಕ ಶ್ರದ್ಧಾವಂತರುಂಟು! ಈ ಹಿನ್ನೆಲೆಯಲ್ಲಿ 'ವೈಕುಂಠ'ನೆಂಬ ಪದವಿಯು ಮೂಲತಃ ಇಂದ್ರನದಾಗಿರದೆ, ವಿಷ್ಣುವಿನ ಪೂರ್ವಚರಿತೆಯನ್ನು ಬೆಳಕಿನಲ್ಲಿ ತರುತ್ತಿರುವ ಒಂದು ಮೌಲಿಕ ಸಂಕೇತವೆಂದು ಕಂಡುಬರುತ್ತಿದೆ. ಈ ವಿಕುಂಠ ಆಸುರಿ ಇಂದ್ರಶತ್ರು ಎಂಬ ಕಾರಣದಿಂದ ವೈಕುಂಠ ವಿಷ್ಣುವು ಅಸುರನಾಗುತ್ತಾನೆ. ಇವನು ವೃತ್ರನನ್ನು ಹೋಲುತ್ತಿರುವನೆಂದು ಈ ಮೊದಲೊಮ್ಮೆ ಗಮನಕ್ಕೆ ಬಂದಿರುವ ಮಾತಿಗೆ, ಇಲ್ಲಿ ಇನ್ನೊಂದು ಬಗೆಯಿಂದ ಪುಷ್ಟಿ ದೊರೆಯುತ್ತಿದೆ ಮತ್ತು ವೃತ್ರಹನನದಲ್ಲಿ ಇಂದ್ರನ ಸಹಕಾರಿಯಾಗಲು, ಕೆಲವೊಂದು ಕರಾರುಹಾಕಿ ಒಪ್ಪಿದ ವಿಷ್ಣು ದೈವತದ ಈ ಕೃತಿ ನಾರಕನನ್ನು ಕೊಂದನೆಂಬ ನಾರಣ. ಕೃಷ್ಣ, ಮಧುವನ್ನು ಕೊಂದನೆಂಬ ಮಧು ಮಾಧವ; ದನುಜ ಹಯಗ್ರೀವನನ್ನು ಕೊಂದನೆಂಬ ಹಯಗ್ರೀವ ವಿಷ್ಣು, ಈ ಬಗೆಯ ಕಪಟನಾಟಕೀಯ ಒಂದು ಅನೃತಾಚರಣೆ ಎಂಬುದೇ ಸಿದ್ಧವಾಗುತ್ತದೆ.*

ಅಸುರ ಸ್ತ್ರೀ ವಿಕುಂಠೆ, ಇಂದ್ರನ ಎದುರಾಳಿಯಾದ ಮಗನನ್ನು ಪಡೆಯಲು 'ಕೃಚ್ಛ್ರ ಚಾಂದ್ರಾಯಣಾದಿಕಂ ತಪಃ ತೇಪೇ,' ಎಂದು ಸಾಂಪ್ರದಾಯಿಕ ಕಥೆಯಿದೆ. ಈ ನಡೆವಳಿ, ಸೌರವ್ರತಗಳಲ್ಲ! ವಿಷ್ಣುವು ಚಾಂದ್ರ ದೈವತವೆಂಬುದನ್ನು ಸಮೀಕ್ಷಿಸಿ ಆಗಿದೆ. ಈ ಕಾರಣದಿಂದ ವಿಕುಂಠಾಪುತ್ರ: ವೈಕುಂಠನು ವಿಷ್ಣುಪರಂಪರೆಯ ಒಂದು ವ್ಯಕ್ತಿ. ಇವನು ಇಂದ್ರನ ಆವೇಶ ತಂದುಕೊಂಡು, ತಾನೇ ಇಂದ್ರನ ಅವತಾರ, ಎಂದು ಗ್ರಹಿಸಿದುದರ ಸಂದೇಹಕ್ಕೆ ಎಡೆಯುಂಟು. ಏಕೆಂದರೆ, ಅಗ್ನಿ, ಸೂರ್ಯ, ಸವಿತೃ ಪಙ್ಕ್ತಿಯ ಇಂದ್ರನು ಅವತರಿಸುವನೆಂಬುದು, ಅರ್ಥವಾಗದ ಮಾತು. ಋತ : ಸತ್ಯದ ಭೂಮಿಕೆಯಲ್ಲಿ, ಋತ ಪಾಲನೆಯ ಸಂದರ್ಭದಿಂದ ದಿಕ್ಕಾಲದ ಪರಿಸರದಲ್ಲಿ ಕಾಣಿಸಿಕೊಳ್ಳುವ ಘಟನೆ ಸತ್ಯ : ಮೂರ್ತ ಆಕೃತಿ. ಇದು ನವಮಾಸ ತುಂಬಿ ಆಗುವ 'ಹಿರಣ್ಯಗರ್ಭ' ಸಂಪ್ರದಾಯದ ಮಾದರಿಯ ಅವತಾರವಲ್ಲ. ತ್ರಿತಆಪ್ತ್ಯನ ಸಂದರ್ಭದಿಂದ ಇಂದ್ರನ ಮೂಲ ಆಕೃತಿಯು ಹೆಚ್ಚು ಸರಿಯಾಗಿ ಗಮನಕ್ಕೆ ಬರಬಲ್ಲುದು.

ಇದಕ್ಕೂ ಮೊದಲು, ಇಂದ್ರನನ್ನು, ಆಪ : ರಸ ಪಂಥೀಯ ಪಾತಳಿಗೆ ತರುವ ಹೊಂಚಿನಲ್ಲಿರುವ ಸಂಪ್ರದಾಯದ ವಿಷ್ಣುದೇವತಾ ಸ್ವರೂಪದ ಬಗೆಗೆ ಇನ್ನೊಂದೆರಡು ಸಂಗತಿಗಳನ್ನು ಗಮನಿಸುವುದು ಲೇಸು. 'ವಾತ್ಸಪ್ರಿ' ಋಷಿರಚಿತ[೧೦] ಸೂಕ್ತಗಳ ಬಗೆಗೆ ಅದರ ಪೀಠಿಕಾರೂಪದಲ್ಲಿ ಇರುವ ವಿವರವು ಸಮೀಕ್ಷಾರ್ಹವಾಗಿದೆ

> ಪ್ರಜಾಪತಿಯು, ವಿಷ್ಣುವಿನ ಪಾದ-ವಿಕ್ಷೇಪರೂಪವಾದ ಸಾಧನದಿಂದ ಸಕಲ
> ಭೂತಗಳನ್ನೂ ಸೃಷ್ಟಿಸಿದನು; ವಾತ್ಸ-ಪ್ರಕ್ರಿಯೆಯಿಂದ ಆ ಪ್ರಜೆಗಳಿಗೆ ಉಪಯುಕ್ತವಾದ

---

* ಕೃಷ್ಣ, ಮಾಧವ ಮತ್ತು ಹಯಗ್ರೀವ ವಿಷ್ಣು - ಈ ಮೂರು ಶಬ್ದಸಂಕೇತಗಳು ಒಂದೇ ದೈವತದ ಮೂರು ಮುಖಗಳೆಂದು ಸಂಪ್ರದಾಯವು ಹೇಳುತ್ತದೆ. ಆದರೆ, ಈ ಮೂರೂ ಶಬ್ದಸಂಕೇತಗಳು 'ವಿಷ್ಣುದೈವತ'ದ ಮೂಲ ಸ್ವರೂಪವನ್ನು ಹೇಳುತ್ತದೆಂಬ ಆಶಯ ಶಂಬಾ ಅವರದು. ವೇದಕಾಲೀನ 'ವಿಷ್ಣು', ಪುರಾಣ, ಭಾಗವತ ಕಾಲೀನ ಕೃಷ್ಣ-ಮಾಧವ ಇವರು ಸಾಂಸ್ಕೃತಿಕವಾಗಿ ಒಂದೇ ಆಶಯದ ಮೂರು ಭಿನ್ನಪ್ರತಿಮೆಗಳಾಗಿವೆ. (ಸಂ)

ಚೈತನ್ಯವನ್ನು ಉತ್ಪನ್ನ ಮಾಡಿದನು. ಈ 'ವಾತ್ಸಪ್ರೇಣಾಗ್ನಿ' ವಿಷ್ಣು ಕ್ರಮ್ಯೈ ಪ್ರಜಾಪತಿಃ ಅಸೃಜತ....'

ಬ್ರಾಹ್ಮಣಾದಿಗಳಲ್ಲಿ ಬರುವ ಈ ವಿವರಣೆಯು (ಆಪೋ) 'ವತ್ಸ ಅಯನ' ಸಂಪ್ರದಾಯವನ್ನು ಕುರಿತು ಈ ಮೊದಲು ಬಂದ ಸಂಗತಿಗಳನ್ನೇ ಪುಷ್ಟೀಕರಿಸುತ್ತದೆ. ಇಲ್ಲಿ ಅಗ್ನಿ=ಪ್ರಜಾಪತಿ=ವಿಷ್ಣು...... ಏಕಂ: ತತ್ ಭೂಮಿಕೆಯ ಪ್ರತಿಮಾ: ಸಂಕೇತಗಳಾಗಿವೆ! ಈ 'ವತ್ಸಪ್ರಿ' ಅಗ್ನಿಪಂಥೀಯರಿಗೆ ವತ್ಸ ಅಯನದ ಅನುಷಂಗದಿಂದ ಬಂದ ಆ ಅನುಭವದ ಬೆಳಕಿನಲ್ಲಿ ಆ ಬಳಿಕ ವಾತ್ಸ್ಯಾಯನಕಾಮಶಾಸ್ತ್ರವು ರಚಿಸಲ್ಪಡಲು ಶಕ್ಯವಾಗಿರಲಿಕ್ಕೇಬೇಕೆಂದು ಇಲ್ಲಿ ವ್ಯಕ್ತವಾಗುತ್ತದೆ. ವಜ್ರೋಲಿ ಮುಂತಾದ ಯೋಗಸಾಧನ ತಂತ್ರಗಳು ಯಶಸ್ವಿಯಾಗಿ ಸಿದ್ಧಿಸಲು ಈ ಕ್ಷೇತ್ರದಲ್ಲಿ, ತತ್ಪೂರ್ವದಲ್ಲಿ ಅದೆಷ್ಟು ಉದ್ದೇಶಪೂರ್ವಕ ಪ್ರಯೋಗಗಳು ನಡೆದಿರಬೇಡ? ವಿಚಾರವಂತರು ಅರಿತುಕೊಳ್ಳಬೇಕಾದ ಸಂಗತಿ. ಸಾಮಾಜಿಕ ಪ್ರಜ್ಞೆಯ ಜೀವನರೀತಿ. ಜೀವನಮೂಲ್ಯಗಳು ಬೆಲೆಗೇಡಾಗಿ ಆತ್ಮಕ್ರೀಡೆ-ಆತ್ಮರತಿಯ ಪಂಥವೇ ಪ್ರಬಲವಾಗಲು ಇಂದ್ರಸಖ ತ್ರಿತ ಆಪ್ತ್ಯನನ್ನೂ ಅಪಾಂ-ನಪ್ತ್ರನ ಇದು ವಿಚಾರವನ್ನೂ ಪಾತಳಿಗೆ ತಂದುನಿಲ್ಲಿಸಿದ ತಂತ್ರವೂ ಇಲ್ಲಿ ಬೆಳಕಿಗೆ ಬರುತ್ತಿದೆ. ತ್ರಿತಆಪ್ತ್ಯನ ಬಗೆಗೆ ಮ್ಯಾಕಡೊನೆಲ್ಲ ಸುಂದರವಾಗಿ ಸಂಗ್ರಹಿಸಿ ಹೇಳಿದ್ದಾರೆ.[೧೧] ಮೂಲತಃ ಇಂದ್ರನು ಆಮೂರ್ತಶಕ್ತಿ; ತ್ರಿತನು ವ್ಯಕ್ತಿ ಎಂಬ ಹಾಗಿನ ಸಂಬಂಧವು ಈ ಉಭಯತರಲ್ಲಿ ಉಂಟು. ಈ ಪ್ರತಿಮಾ ಸಂಕೇತಗಳ ಘನತೆ (dimensions) ಗಮನಕ್ಕೆ ಬರಲು, ಸೌರಭೂಮಿಕೆಯ ಋತ : ಸತ್ಯದ ವ್ಯಾಪ್ತಿಯ ಜೀವನದ ಆಕೃತಿಯನ್ನು ಮೊದಲು ಅರಿಯ ಬೇಕು. ಭೂಃ-ಭುವಃ-ಸುವಃ (ಸ್ವಃ) ಎಂಬ ಈ ಮೂರೂ, ಮೂಲ 'ವ್ಯಾಹೃತಿ'ಗಳು : ಇವು ಇಡಿಯ ವಿಶ್ವದ ಅಂಗಗಳು, ಈ (ವಿ+ಆ+ಹೃ) ವ್ಯಾಹೃತಿಯೊಳಗಿಂದ ಹೊರಬಂದಿದೆ, ಸಾಂಸ್ಕೃತಿಕ ಪ್ರಪಂಚ. ಇದು ಭೌತಲೋಕದ ಚಿತ್ರವಲ್ಲ. ಇಡಿಯದರ ಹಿನ್ನೆಲೆಯಲ್ಲೆ ಅದರ ಅಂಗಗಳ ಅರ್ಥವಾಗಬಲ್ಲವು; ಬಿಡಿ ಅಂಗಗಳಿಗೆ ಸ್ವತಂತ್ರ ಅರ್ಥವಿದ್ದಂತೆ ಎನಿಸಿದರೂ, ಅದು ಹಿಂದುಮುಂದಿನ ಸಂದರ್ಭವನ್ನು ಅಪೇಕ್ಷಿಸುತ್ತಿರುತ್ತದೆ. ಅರ್ಥವು ಯಾವಾಗಲೂ ಸಾಪೇಕ್ಷವಾಗಿದೆ. ಆಕೃತಿ (Form) ಮತ್ತು (Content) ಅರ್ಥ ಏಕಾತ್ಮವಾಗಿರುವಲ್ಲಿ ಆ ಪ್ರತಿಮಾ : ಸಂಕೇತವು, ತನ್ನ ಪಾಡಿಗೆ ತಾನು ಸ್ವಯಂಪೂರ್ಣವೆಂಬ ಅಭಾಸವು ಉಂಟಾಗುತ್ತದೆ. ಆದರೆ, ಅದರ ನಿಜವಾದ ಮೂಲ್ಯ : ಸೌಂದರ್ಯವು ಗಮನಕ್ಕೆ ಬರಲು, ಆ ಪ್ರತಿಮೆಯು ಪಡೆದ ವಿಶಿಷ್ಟ ಸಮಯಾಧಿಷ್ಠಿತ ಅರ್ಥಕ್ಕೆ, ಆಧಾರಭೂತ ಆಶಯದ ಸಂದರ್ಭದಿಂದ ಅದರ ಸಮೀಕ್ಷೆ-ವಿಮರ್ಶೆ ಆಗುವುದು ಅತ್ಯವಶ್ಯವಿರುತ್ತದೆ. ಆಶಯದ, ಅಪೇಕ್ಷೆಯಿಲ್ಲದ ಸ್ವಯಂಭೂತ ಸ್ವಧಾಶಕ್ತಿಯ ಮಾಧ್ಯಮ : ಪ್ರತಿಮೆ. ಇದು ನಾನಾರ್ಥದ ವಿಭ್ರಮಕಾರಕ ಪವಾಡಶಕ್ತಿಯುಳ್ಳದ್ದಾಗುತ್ತದೆ. 'ತತ್ : ಏಕಂ' ಸತ್ಯದ ಭೂಮಿಕೆ ಇದು.

ಆಪ : ರಸ ಪಂಥೀಯರು ವೇದಕಾಲದಲ್ಲಿ ತತ್ : ಏಕಂ ಇದು ಮಾತ್ರ 'ಸತ್ಯ'ವೆಂದು ಸಾಧಿಸಲು ಮಾಡಿದ ನಾನಾ ಹಂಚಿಕೆಗಳು ಬೆಳಕಿನಲ್ಲಿ ಬರುವುದು ಅವಶ್ಯವಿದೆ. 'ಭೂಃ-ಭುವಃ* ವ್ಯಾಹೃತಿಗಳನ್ನು ಶಿಥಿಲಗೊಳಿಸಲು ಅವನ್ನು ನಾಲ್ಕು ವ್ಯಾಹೃತಿಗಳಾಗಿ ಒಮ್ಮೆ ಕಲ್ಪಿಸುತ್ತಾರೆ, ಭೂಃ, ಭುವಃ, ಸ್ವಃ, ಮಹಃ ಮಹಃ ಚಂದ್ರಮಾ!' (ತೈ. ಉ); ಇನ್ನೊಮ್ಮೆ ಸಪ್ತ : ಸರ್ಪ ವ್ಯಾಹೃತಿ! 'ಸತ್ಯಂ' ಕೊನೆಯದು! ಆದರೆ, ಈ ಸಂಪ್ರದಾಯದಲ್ಲಿ ಸತ್ಯದ ಸಾಂಕೇತಿಕ ಅರ್ಥವು ಆಪ-ರೇತ-ಮಧು! ಎಂದರೆ ಪರ್ಯಾಯದಿಂದ ಚಂದ್ರಲೋಕವೇ ಆಯ್ತು! ಸೌರವ್ಯೂಹದ ವಿಡಂಬನವು ಇಷ್ಟೇ ಸಾಕಾಗಲಿಲ್ಲ, ಋತ: ಸತ್ಯದ ಭೂಮಿಕೆಯನ್ನು ನಿಷ್ಪ್ರಯೋಜಕ ವಾಗಿಸಲು ಚಂದ್ರನನ್ನೇ ಮಹರ್‌ಲೋಕವಾಗಿಸಿ ಸೂರ್ಯನ್ನು ಅಡಗಿಸಿದಂತಾಯಿತು. ಸೂರ್ಯನ ಪರ್ಯಾಯವೇ ಎಂಬ ಇಂದ್ರನೂ ಹತನಾದ! 'ಅಹಃ ಚ ಕೃಷ್ಣಂ! ಅಹಃ ಅರ್ಜುನಂ ಚ' ಎಂಬ ಕವಡಿನ ಮಾತಿನಲ್ಲಿ ಹಗಲನ್ನು ಇರುಳಿನ ಒಡಲೊಳಗೆ ಅಡಗಿಸಿದ ಮಾಟದ ಮಂತ್ರವನ್ನು ಸ್ಮರಿಸಿಕೊಳ್ಳಬೇಕು.[೧೨] ಇದೇ ಬಗೆಯ ಇನ್ನೂ

---

* ಈ ವಿಚಾರವು ಇದೇ ಸಂಪುಟದ ಕೊನೆಯ 'ಸತ್‌ತ್ಯ-ಸತ್ಯ' ಪುಸ್ತಿಕೆಯಲ್ಲಿ ತಾತ್ವಿಕವಾಗಿ ಶಂಬಾ ಮಂಡಿಸಿದ್ದಾರೆ (ಸಂ)

ಒಂದು ತಂತ್ರ ಭೂಃ, ಭುವಃ ಮತ್ತು ಸ್ವಃ ಈ ಮೂರೂ ಲೋಕದ ಜೀವನದೊಡನೆ ಸಂಬದ್ಧ, ತ್ರಿತ (: ಮಾನವ) ನನ್ನು ಮೇಲಣ ಏಕ, ದ್ವಿ, ತ್ರಯ ವಿಭಾಗದಿಂದ ಬೇರ್ಪಡಿಸಿ, ಅವನನ್ನು ತೃತೀಯನಾಗಿಸಿದ್ದುಂಟು! ಇಲ್ಲಿ ಇಂದ್ರನ ಸಂಗಾತಿಯ ಈ ವಿಚ್ಛೇದನದಿಂದ ಇಂದ್ರನನ್ನೇ ಮೂರು ತುಂಡುಗಳನ್ನಾಗಿ ವಿಭಾಗಿಸಿದಂತಾಗಿದೆ. ಇಂದ್ರನ ಆಪ್ತನ=ಆಪ್ತ್ಯತ್ರಿತನ ಭುವಃ, ಸ್ವಃ ಈ ಅಂತಸ್ತಿನ ಸಂಬಂಧವನ್ನು ತಪ್ಪಿಸಿ ಕೇವಲ ಭೂಃ ಸುಬಂಧಿಯಾದ ಇಂದ್ರ ಹಾಗೂ ಆಪ್ತ್ಯ ತ್ರಿತನ ಮೂರನೆಯ ಭಾಗದ ನೆಲದ ಮೇಲಣ ಚಿತ್ರಕ್ಕೇ ಪ್ರಾಶಸ್ತ್ಯವನ್ನೀಯಲಾಗಿದೆ. ಈ ಭೂಃ-ಲೋಕವು ಆಪ : ರಸ ವಿಶ್ವ. 'ರಸಾ' ಎಂದು ಪೃಥಿವಿಗೂ ಹೆಸರು 'ಭುವನಂ' 'ವನಂ' ಎಂಬ ಸಂಕೇತಗಳಲ್ಲೂ ಈ ಅರ್ಥ ತುಂಬಿದೆ. ಇದುವೆ 'ಆಪ ಏವ ಸಸರ್ಜ ಆದೌ' ಸೃಷ್ಟಿ! ನಿಸರ್ಗ: Elan vital ಸ್ವಯಂ-ಭೂ-ಶಕ್ತಿ! ಈ ಹಂತದಲ್ಲಿ ಇಂದ್ರಾಯುಧ ವಜ್ರ=ಸಮುದ್ರಯೋನಿ ಅಶ್ವ: ಇಂದ್ರನೂ ಒಬ್ಬ ಅವತಾರಿ; ಸ್ತ್ರೈಣ..... ಏನೆಲ್ಲ ಶಕ್ಯ! ತ್ರಿತನು 'ಕೂಪ'ದಲ್ಲಿ ಬಿದ್ದು ಒದ್ದಾಡುವ ಸಾಂಕೇತಿಕ ಚಿತ್ರವುಂಟು[೧೩] ಭುವಃ ಮತ್ತು ಸ್ವಃ ಈ ಅವಿಭಾಜ್ಯ ಅಂಶಗಳ ಸಂಬಂಧವು ತಪ್ಪಿದ ತ್ರಿತನಿಗೆ ಈ ಸಂಸಾರ ಕೂಪದಲ್ಲಿ ಬಿದ್ದು ತೊಳಲಾಡುತ್ತಿರುವ, ದುಃಸ್ವಪ್ನಗಳಂತಹ ಅಪವಿತ್ರ ವಿಚಾರ ಹಾಗೂ ಪರಿಸರದಲ್ಲಿ ಸಿಕ್ಕಿಬಿದ್ದಿರುವ[೧೪] ತ್ರಿತನಿಗೆ ತನ್ನ ಇನ್ನುಳಿದ ಅಂಗದ ಸಂಬಂಧಕ್ಕಾಗಿ ಈ ಕೂಪದಿಂದ ಹೊರಬರಲು ಮಾಡುತ್ತಿರುವ ದೇವತಾ ಪ್ರಾರ್ಥನೆ ಉದ್ಬೋಧಕವಾಗಿದೆ. ಆಚೆಯ ದಂಡೆಯ ಮೇಲಿರುವವನು (ಕೂಲಾತ್ ಅಧಿ) ಎಂಬ ಮಾತು ಮಾರ್ಮಿಕವಾಗಿದೆ.

ಭುವಃ ಮತ್ತು ಸ್ವಃ ದಿಂದ 'ಭೂಃ' ಬೇರ್ಪಡಿಸಿದ್ದರಿಂದ ತ್ರಿತನು=ಅಪಾಂ ನಪ್ತ್ರ ಆಗುತ್ತಾನೆ. ಈ ಸಮೀಕರಣವು ಸಂಪೂರ್ಣ ಅರ್ಥಪೂರ್ಣವಾಗುವುದಕ್ಕೆ ಆಪ್ತ್ಯ=ಆಪಪುತ್ರನು ಆಗಿಬಿಡುತ್ತಾನೆ, ಸಮುದ್ರಯೋನಿ: ಹಿರಣ್ಯಶೃಂಗ ಅಶ್ವ ಇದು 'ತ್ರಿತ' ಆಗಲು ಆತಂಕವೇ ಉಳಿಯುವುದಿಲ್ಲ![೧೫] ಇದು ಇಂದ್ರನ 'ಅಶ್ವ' ಎಂಬ ವರ್ಣನೆಯಿಂದ ಇಂದ್ರನೂ 'ಹಿರಣ್ಯಶೃಂಗ' ಶಿಪಿವಿಷ್ಟ ರೂಪನಾದನು! ಶಿಪಿವಿಷ್ಟ : ಪುರುಷ; ಊರ್ಧ್ವಮೂಲವೃಕ್ಷ; Life Force : Elan vital ಪೂಜೆ ಎಂದರೆ ಇಂದ್ರಿಯ ಪೂಜೆ=ಪತಿತ ಇಂದ್ರನ ಪೂಜೆ! ರೇತಾರಾಧನೆಗೆ ಅವಕಾಶ ದೊರೆಯದಾಗುತ್ತಲೆ, ಬಾಳನ್ನು ಹಾಳೆಂದು ಬಗೆದು ಆಮರಣ ಕುಮಾರ-ಕುಮಾರೀ ಆಗಿ ಬದುಕಲು ಸಂನ್ಯಾಸ ಸ್ವೀಕಾರ! ಇವೆರಡೂ ಒಂದು ಇನ್ನೊಂದರ ಪ್ರತಿಕ್ರಿಯೆಯೇ ಆಗಿದೆ.

ಆದರೆ, ಈ ಮಾಟದ ಉದ್ದೇಶ, ಏಕ, ದ್ವಿತ ಈ ಸಾರ್ಥ ಪ್ರತಿಮಾ: ಸಂಕೇತಗಳ ಮೂಲಕ ಬಯಲಿಗೆ ಬರುತ್ತಿದೆ. ತ್ರಿತನನ್ನು ಉಳಿದೆರಡು ಭಾಗಗಳಿಂದ ಬುದ್ಧಿಪೂರ್ವಕವಾಗಿ ಬೇರ್ಪಡಿಸಿದ್ದನ್ನು ಎರಡು ಬಗೆಯಿಂದ ಅರಿಯಲು ಬರುತ್ತದೆ.

೧. ತ್ರಿತನು ಬಾವಿಯಲ್ಲಿ ಬಿದ್ದಿರುವ ಆ ಸನ್ನಿವೇಶ, ಈ ಕಪಟವನ್ನು ಮುಚ್ಚಿ ಕೊಳ್ಳುವುದಕ್ಕಾಗಿ ಪ್ರಚಾರ ಮಾಡಿರುವ ಕಥೆ. ಕಥೆಗಳೊಳಗಿನ ವ್ಯತ್ಯಾಸದಿಂದಾಗಿ ಈ ಕಥೆಗಳ ಟೊಳ್ಳುತನ ಹಾಗೂ ಅವಾಸ್ತವತೆಯು ಬಚ್ಚಿ ಉಳಿಯುತ್ತಿಲ್ಲ.
೨. ವೇದದಲ್ಲಿ ಸೂಚಿತವಾದಂತೆ ತ್ರಿತನು ಅಗ್ನಿ ರೂಪನೇ ನಿಜನೇ ಆದರೆ, ಇದು ವೈಶ್ವಾನರ ಸ್ವರೂಪ. ವಿಶ್ವವ್ಯಾಪಕ ವಿವಸ್ವಂತನ ತೇಜ. ಮನು-(ಜ): ವೈವಸ್ವತನು ಎಂಬ ಹೃದ್ಯ ಪ್ರತಿಮಾ ಸಂಕೇತವೇ ಇದಕ್ಕೆ ನಿದರ್ಶನವಾಗಿದೆ. ಇಂದ್ರನ ಸಂಗಾತಿ ಯಾದರೂ ತ್ರಿತನನ್ನು ಯಾಸ್ಕರು ದೈವತಗಳ ಪಟ್ಟಿಯಲ್ಲಿ ಸೇರಿಸಿಲ್ಲ (: ತ್ರಿತ is not in the list of deities) ಎಂದು ಮ್ಯಾಕಡೊನೆಲ್ಲ ಹೇಳಿರುವ ಮಾತಿನಿಂದ; 'ತ್ರಿತ' ಎಂಬುದು ಮಾವನ ವ್ಯಕ್ತಿ ಸಂಕೇತ ಎಂಬ ಸಂಗತಿಯೇ ದೃಢಪಡುತ್ತದೆ.

ಇಡೀ ಮಾನವ ವಿಶ್ವನರ = ವಿವಸ್ವಂತನ ಸರಿದೊರೆ, ಭೂಲೋಕದ ವ್ಯಕ್ತಿ : ತ್ರಿತ, ಇನ್ನಿಬ್ಬರ ಸಂಬಂಧ ತಪ್ಪಿ ಹೋಗಿದೆ. 'ಕೂಪ'ದಲ್ಲಿ ಬಿದ್ದ ತ್ರಿತ (:ಮಾನವ), ಬೃಹಸ್ಪತಿ (:ವಾಕ್‌ಪತಿ)ಯನ್ನು ಮೇಲೆತ್ತಲು ಬೇಡಿಕೊಳ್ಳುತ್ತಾನೆ, ಉತ್-ಹಾರಕ್ಕಾಗಿ; ಬೃಹಸ್ಪತಿಯು, ತ್ರಿತನ ಪ್ರಾರ್ಥನೆಯ ಮೇರೆಗೆ, ಆತನನ್ನು ಮೇಲೆ ಎತ್ತುತ್ತಾನೆ. ಆದರೆ,

ಈ 'ಬೃಹಸ್ಪತಿ', ಕರ್ಮಾರ ಇವ ಬ್ರಹ್ಮಣಸ್ಪತಿಯಿಂದ ಬೇರೆ. 'ಸಕ್ತುಂ ಇವ ತಿತಉನಾ' ವಾಕ್ಕನ್ನು ಪಾವನಗೊಳಿಸುವ ಸೂಕ್ತದ ಮೂಲಕ. ಇದು ಈ ಮೊದಲು ಕಂಡಿತ್ತು.[೧೬] ಬಾಳ ಬಾವಿಯಲ್ಲಿ ಬಿದ್ದು ಒದ್ದಾಡುವ ತ್ರಿತನಿಗೆ ಮಾರ್ಗದರ್ಶಕನಾದ ಈ ಬೃಹಸ್ಪತಿ ಇಂದ್ರಮಿತ್ರನು ಅಸುರ: ಅಹಿಸಂಹಾರದಲ್ಲಿ ಇಂದ್ರನ ಸಹಾಯಕನೇ ಆಗಿದ್ದಾನೆ. ಋತಾಧಿಷ್ಠಿತ, 'ಧೀ' ಶಕ್ತಿಯಾಗಿದ್ದಾನೆ. ತ್ರಿತ ಮತ್ತು ಇಂದ್ರ ಇಬ್ಬರಿಬ್ಬರು ಅಭಿನ್ನರು ಎನ್ನುವಷ್ಟು ಅವರಲ್ಲಿ ಹಲವೆಡೆಗೆ ಏಕಾತ್ಮತೆಯನ್ನು ಸೂಚಿಸುವ ಉಲ್ಲೇಖಗಳು ಇರುವುದನ್ನು ತಜ್ಞರು ಗುರುತಿಸಿದ್ದಾರೆ. ತ್ರಿತನು, ಇಂದ್ರನಿಗೆ ವೃತ್ರ : ಅಹಿಸಂಹಾರದಲ್ಲಿ ನೆರವಾಗುತ್ತಾನೆ.[೧೭] ಕೇವಲ ತಪೋಬಲದಿಂದಲೇ ಸಿದ್ಧಿಗಳನ್ನು ಪಡೆದು ಪವಾಡ ಜರುಗಿಸುವ ಏಕಾಂತಿಕ ಶ್ರದ್ಧಾಶಕ್ತಿಯ ಸಂಪ್ರದಾಯದವನು ತ್ರಿತನಲ್ಲ. ತ್ರಿತ : ಮನುಜ; ಬಾಳಿನಲ್ಲಿ ಇರುವ ಸಂಕಟರೂಪೀ ಅಹಿ-ಗಳೊಡನೆ ಹೋರಾಡುವ ವೀರ. ತ್ರಿತನ ಮಿತ್ರನಾಗಿರುವ ಇಂದ್ರ : ವೃತ್ರಘ್ನ; ಇವೆರಡೂ ವೀರರ ಸಂಕೇತವೇ. ಇವರ ನೆರವಿಗೆ 'ಸಕ್ತುಂ ಇವ ತಿತಉನಾ ಪುನಂತಃ' ವಾಕ್-ಪತಿ : ಬೃಹಸ್ಪತಿ (: ಸವಿತೃವಿನ ಇನ್ನೊಂದು ಪ್ರತೀಕ!) ಉಂಟು.

ತ್ರಿತ ಸಂಕೇತ ರಹಸ್ಯ

'ತ್ರಿತ' ಈ ಸಂಕೇತದ ರಹಸ್ಯವನ್ನರಿಯಲು, ಮ್ಯಾಕಡೊನೆಲ್ ಅವರು ಗುರುತಿಸಿ ಹೇಳಿರುವ ಒಂದು ವರ್ಣನೆ[೧೮] ಮೂಲಗಾಮೀ ಅರ್ಥದ್ಯೋತಕವಾಗಿದೆ : "ತ್ರಿತ is described as one in whom all wisdom is central as the navel in the wheel. "ಯಸ್ಮಿನ್ ವಿಶ್ವಾನಿ ಕಾವ್ಯಾಚಕ್ರೇ ನಾಭಿಃ ಇವ ಸ್ರೀತಾಃ" ಇಲ್ಲಿ ಯೋಚಿಸಿರುವ 'ಕಾವ್ಯಾ'? ಎಂಬ ಸಂಕೇತವು 'ಕೃತಿ' (ವಿಚಾರಯುಕ್ತ ಆಚಾರ) ಎಂಬರ್ಥವುಳ್ಳುದಾಗಿದೆ. ಮನು-ಜ: ವೈವಸ್ವತನ 'ಕೃತಿ' ಮನ-ನ ಯುಕ್ತವಿರಬೇಕು, ಸಾರ್ಥವಿರಬೇಕು, ಎಂಬುದು ಅಪೇಕ್ಷಿತವಷ್ಟೆ? 'ತ್ರಿತ'ನ ಈ ರೀತಿ ಮೌನೇಯ ಮಾರ್ಗದ 'ತತ್'ಮಯ ಪಂಥೀಯ ಆ-ಕೃತಿಯದಲ್ಲ. ಆದರೆ ಇಂಥ ಮಿತ್ರ ತ್ರಿತನನ್ನು ವಾರುಣಾಶ್ವ: ಹಿರಣ್ಯಶೃಂಗ ರೂಪದವನನ್ನಾಗಿಸಿರುವ.[೧೯] ಈ ಕವಡು ಅಭ್ಯಸನೀಯವಿದೆ. ತ್ರಿತನನ್ನು ಅಪ ; ರಸ ಪಂಥೀಯ ಕೇಶೀ ಅಶ್ವವನ್ನಾಗಿಸಿರುವ ಈ ಜಾದು, ಮ್ಯಾಕಡೊನೆಲ್ಲರ ಗಮನಕ್ಕೆ ಬಂದಿಲ್ಲ. ಏಕಂ; ಸತ್ ಪಂಥೀಯ ಈ ದೈವತಗಳೆಲ್ಲ ಸೃಜನದ ಪ್ರತೀಕಗಳಾಗಿರುವುದನ್ನು ತಿಳಿಯಗೊಡವಂತೆ ಮಾಡಲು ಬಳಸಿರುವ ಪದರು ನುಡಿಗಳು ಗರ್ಭಿತಾರ್ಥದ ತುಲನೆಯಲ್ಲಿ ನಿಷ್ಪ್ರಯೋಜಕವಾಗುತ್ತವೆ. ಸೌರಭೂಮಿಕೆಯ ಜೀವನ ಸಮ್ಮುಖ ಪ್ರತಿಯೊಂದು ಪ್ರತಿಮಾ : ಸಂಕೇತವನ್ನು ಆಪ : ಸರ್‌ಪವು ಸುತ್ತುವರಿದು ಅದನ್ನು ರಾತ್ರೀಸತ್ರದ : ಯಜ್ಞದ ಸಂಕೇತವಾಗುವಂತೆ ಮಾಡದೆ ಬಿಟ್ಟಿಲ್ಲ, ಎಂಬುದಕ್ಕೆ ತ್ರಿತನೂ ಒಂದು ನಿದರ್ಶನ. ಆದರೆ, ಬಾಳಿನಲ್ಲಿ ಅಹಿಸ್ವರೂಪ ಸಂಕಟ : ಕತ್ತಲೆ: ಭ್ರಷ್ಟಾಚಾರಗಳೊಡನೆ ಹೋರಾಡುವ ಮನು-ಜ: ತ್ರಿತ; ಇವನಿಗೆ ವಿಶ್ವಸ್ಥ ವೃತ್ರಘ್ನ ಇಂದ್ರಶಕ್ತಿ, ಧೀ (: ಬೃಹಸ್ಪತಿ) ಶಕ್ತಿ ಯಾವಾಗಲೂ ಬೆಂಬಲಕ್ಕಿವೆ. ನ ಋತೇ ಶ್ರಾಂತಸ್ಯ ಸಖ್ಯಾಯ ದೇವಾಃ;[೨೦] God helps to those who help themselves ಎಂಬುದನ್ನು ನಿದರ್ಶನಕ್ಕೆ ತರುವ ಮನು-ಜ ಈ ತ್ರಿತ, 'ಮನು (ಜ)' ವಿವಸ್ವನ್ (ಸೂರ್ಯ) ಪುತ್ರನು, ಮನನ ಶೀಲನು.* 'ತ್ರಿತ' ಈ

---

* ತ್ರಿತಃ - ಈ ಶಬ್ದಸಂಕೇತವು ಋಗ್ವೇದದ ಒಂದನೇ ಮಂಡಲದ ನೂರಐದನೆಯ ಸೂಕ್ತದಲ್ಲಿ ಪ್ರಯುಕ್ತಗೊಂಡಿದೆ. ಇವನು ಜಲದ ಪುತ್ರ. ಇವನು ಉದಕಗಳ ಪುತ್ರ ಹೇಗಾದನೆಂಬ ವಿಷಯ ತೈತ್ತಿರೀಯ ಬ್ರಾಹ್ಮಣದಲ್ಲಿ ಹೇಳಿದೆ. ಶಾಟ್ಯಾಯನ ಶಾಖಿಗಳು ಒಂದು ಉಪಾಖ್ಯಾನವನ್ನು ಹೇಳುತ್ತಾರೆ. ಏಕತ, ದ್ವಿತ, ತ್ರಿತ ಇವರು ಋಷಿಗಳು ಮರುಭೂಮಿಯಲ್ಲಿ ಓಡಾಡುವಾಗ ಬಾಯಾರಿಕೆ ಆಯಿತು. ಬಾವಿಯ ಸಮೀಪ ಬಂದರು. ಅವರಲ್ಲಿ 'ತ್ರಿತ' ನೀರು ಕುಡಿಯಲು ಬಾವಿಯೊಳಕ್ಕೆ ಇಳಿದನು. ಅವನು ನೀರು ಕುಡಿದು ಉಳಿದವರಿಗೂ ನೀರನ್ನು ತಂದುಕೊಟ್ಟನು. ಆದರೆ, ಏಕತ, ದ್ವಿತ ಇವರಿಬ್ಬರು ತ್ರಿತ ತಂದುಕೊಟ್ಟ ನೀರನ್ನು ಕುಡಿದು ಅವನನ್ನು ಬಾವಿಗೆ ತಳ್ಳಿದರು. ಅವನ ಬಳಿಯಿದ್ದ ಹಣ ಅಪಹರಿಸಿ ಬಾವಿಯ ಮೇಲೆ ರಥದ ಚಕ್ರ ಮುಚ್ಚಿದರು. ಆಗ ಅವನು ವಿಶ್ವೇದೇವತೆಗಳನ್ನು ಸ್ತುತಿಸಿದನು. ಇದಿಷ್ಟು ಕತೆ. ಈ ಹಿನ್ನೆಲೆಯಲ್ಲಿ ತ್ರಿತ ಅಪ್ತ್ಯನ ಬಗೆಗೆ ಶಂಬಾ ಚರ್ಚಿಸುತ್ತಾರೆ. (ಸಂ)

ನಾಮರಹಸ್ಯವನ್ನು ವಿವರಿಸುವಾಗ, ಯಾಸ್ಕರು, ಇದು ತೃ (: ದಾಟು, ಪಾರಾಗು) ಎಂಬ ಆಖ್ಯಾತ ಸಾಧಿತವೆಂದು ಹೇಳಿದ್ದಾರೆ. ಬಾಳಕಡಲಿನಲ್ಲಿ ತನ್ನ ನೌಕೆಯನ್ನು ಯಶಸ್ವಿಯಾಗಿ ಆಚೆಯ ತೀರಕ್ಕೆ ಒಯ್ಯಲು ಕಟಿಬದ್ಧ ವ್ಯಕ್ತಿ : ತ್ರಿತ. ಇದರಿಂದ ತ್ರಿತನು 'ಧೀ-ರ; ವೈಚಾರಿಕ ನೈತಿಕ ಧೈರ್ಯ : ದಾರ್ಢ್ಯವನ್ನುಳ್ಳ ವ್ಯಕ್ತಿ ಈ ತ್ರಿತನು ಎಂದು ಯಾಸ್ಕರಿಗೆ ಸೂಚಿಸಬೇಕಾಗಿದೆ: Very proficient in wisdom ಎಂದು, ಅದನ್ನೇ ಮ್ಯಾಕಡೊನೆಲ್ಲ ಹೇಳಿದ್ದು.

ತ್ರಿತನ ಕಾಲು ನೆಲದ ಮೇಲಿವೆ; 'ಮಗುವು,' ಮನುಜನ ತಂದೆ. ನರಪ್ರಾಣಿ: ತ್ರಿತನೂ ಇದಕ್ಕೆ ಅಪವಾದವಲ್ಲ. ಈ ಕಾರಣದಿಂದ ತ್ರಿತನೂ ಆಪ-ಪುತ್ರನೇ, (ಆಪ್ತ್ಯ) ಸರಿ: ಆದರೆ, ಈತನದು ವಿಶ್ವಮಾನವನಾಗುವ ದಾರಿ. 'ಅಪ್ಸರಸಾಂ, ಗಂಧರ್ವಾಣಾಂ, ಮೃಗಾಣಾಂ ಚರಣೇ ಚರನ್' ಕೇಶೀಪುರುಷನ 'ಅಯನ'. ಇವನದಲ್ಲ. ಇವನು ಆಪ:ರಸ ಭೂಮಿಕೆಯನ್ನರಿತ ಸಮೀಕ್ಷನೂ-ವಿಮರ್ಶಕನು ಆಗಿರುತ್ತಾನೆ. ಆದಕಾರಣ, ತತ್-ಮಯಾನಂದೀ ಭೂಮಿಕೆಯ ಸಂದೃಕ್ಕಿನ ಬರಿ ಏಕಾಕ್ಷನಾಗಿರುವಲ್ಲಿ ತ್ರಿತನಿಗೆ ತೃಪ್ತಿಯಿಲ್ಲ. ಋಗ್ವೇದದಲ್ಲಿಯೆ ಇವನು ಸಪಿತೃ-ಸೂರ್ಯಲೋಕದವನು ಎಂಬ ಹಾಗಿನ ಸೂಚಕ ಉಲ್ಲೇಖಗಳಿವೆ. ಸೋಮ ಮತ್ತು ಸುಪರ್ಣ ಈ ಸೌರ ಸಂಕೇತಗಳ ಸಾಲಿನಲ್ಲಿ ತ್ರಿತನು ಇದ್ದಾನೆ. ಆದರೆ, ಆಪ : ರಸ ಪಂಥೀಯ ಮಾತಿನ ಮಾಟಗಾರಿಕೆಯಲ್ಲಿ ಸೋಮನೂ (ಮಧು=) ಚಂದ್ರ ಸ್ವರೂಪನಾಗಿದ್ದಾನೆ! ಸುಪರ್ಣ: ಸೂರ್ಯಪಕ್ಷಿ: ಇದು ಕೊನೆಗೆ 'ಅಪಾಂ ಗರ್ಭ' ವಾಯಸ; ಏಕಾಕ್ಷ ಪಕ್ಷಿಯಾಗಿ ಮಾರ್ಪಟ್ಟಿದ್ದನ್ನು ಸಾಧಾರವಾಗಿ ವಿವರಿಸಿ ಆಗಿದೆ. ಇದೇ ಮೇರೆಗೆ, ಏಕ, ದ್ವಿತರಿಂದ ಅಗಲಿಸಲ್ಪಡುವ ತ್ರಿತನೂ 'ಹಿರಣ್ಯಶೃಂಗ ಅಶ್ವವಾಗುತ್ತಾನೆ!)

ಅವೆಸ್ತಾ ಗ್ರಂಥದಲ್ಲಿ ತ್ರಿತನು ಒಬ್ಬ ಮಾನವ![೨೧] ಆದರೆ, ತ್ರಿತನು ಮಾನವನಾದರೂ ಈತನು ಭೌತ ವಿಶ್ವದ (ಭೂಃ) ಆಚೆಗಿನ ಭುವಃ ಮತ್ತು ಸುವಃ ಈ ಅಂಗದೊಡನೆ ತನ್ನ ಚೈನತ್ಯಪೂರ್ಣ ಸಂಬಂಧವನ್ನು ಉಳಿಸಿಕೊಳ್ಳುವುದಕ್ಕೆ (in tune with infinite) ಕ್ಷಣಕಾಲವೂ ತಪ್ಪಲಾರನು. ಈ ಸಂಬಂಧವು ತಪ್ಪಿದ ಕ್ಷಣವೇ ಈ ತ್ರಿತನು; ತೃತೀಯನು ಆಗುತ್ತಾನೆ. ತಾತ್ವಿಕ ಭೂಮಿಕೆಯಲ್ಲಿ, ತನ್ನನ್ನು ತಾನು ನೋಡಬೇಕಾದರೆ ತನ್ನ ಹೊರಗೆ ಎತ್ತರದಲ್ಲಿ ಸಿಲ್ಲುವುದನ್ನು ಅರಿತಿರಲೇಬೇಕು. ಬಾಳಿನೊಳಗಿನ ಭುವಃ - ಸ್ವಃ ಭೂಮಿಕೆಯ ಅಂಗವನ್ನು ಕಾಣುತ್ತಿರಬೇಕು. ಈ ಭೂಃ, ಭುವಃ ಮತ್ತು ಸ್ವಃ ಎಂಬ ಪರಿಭಾಷೆಯು, ಇಂದು ಹಲವರಿಗೆ ಹಿಡಿಸಲಿಕ್ಕಿಲ್ಲ. ಆದರೆ, ಸಾಮಾಜಿಕ ಭೂಮಿಕೆಯಲ್ಲಿ ಪ್ರತಿಯೊಬ್ಬ ಪ್ರಾಮಾಣಿಕ ವಿಚಾರವಂತನೂ ತಾನು 'ತ್ರಿತ'ನೆಂಬ ಅನುಭವ ಪಡೆಯಬಹುದಾಗಿದೆ. ನಾನು-ನೀನು ಮತ್ತು ಅದು (: ಅವನು); ಏಕ, ದ್ವಿತ ಮತ್ತು ತ್ರಿತ, ಎಂದಲ್ಲಿ 'ಇದು' ಆ 'ನಾನು' ಆಗದೆ ಈ ನರನು ಜೀವಂತ ಸಾಮಾಜಿಕ ಪ್ರಜ್ಞೆಯ ಮನು-ಜನಾಗಲಾರನು. ಆದರೆ, ವಿದೇಹೀ ಜನಕನ ಓಲಗದ ಯಾಜ್ಞವಲ್ಕ್ಯನು ಉಪದೇಶಿಸುವುದು 'ಯಾಯಾವರ' ಪರಂಪರೆಯ ಭೈಕ್ಷಚರ್ಯದ ಪರಿವ್ರಾಜಕ ಪಂಥೀಯ ಜ್ಞಾನ:

'ನ ಪುತ್ರಸ್ಯ ಕಾಮಾಯ ಪುತ್ರಃ ಪ್ರಿಯಂ ಭವತಿ; ಆತ್ಮನಸ್ತು ಕಾಮಾಯ ಪುತ್ರಃ ಪ್ರಿಯಂ ಭವತಿ'

ಎಂಬಲ್ಲಿ ವೇದದ ಅಂತ್ಯದ ಏಕಂ: ತತ್ ಪಂಥೀಯ ವ್ಯಕ್ತಿವಾದೀ ತತ್ವಪ್ರಣಾಲಿಯು ಪ್ರಭಾವಶಾಲಿಯಾದುದು ಕಾಣುತ್ತಲಿದೆ. ಋಗ್ವೇದದ 'ಸಂ ಗಚ್ಛಧ್ವಂ ಸಂ ವದಧ್ವಂ' ಈ ಭೂಮಿಕೆಯ ಇಂದ್ರ-ಆಪ್ತ್ಯ ತ್ರಿತನ ಜೀವನ ರೀತಿ ನಷ್ಟವಾಗಲು ಕಾರಣವೇನು? ಆತ್ಮಕ್ರೀಡರು-ಆತ್ಮಕೇಂದ್ರಿತರು ಇರುವಲ್ಲಿ ಸಂಸ್ಥೆ, ಸಮಾಜ ಎಂಬುದು ನಿರ್ಮಾಣವಾಗಲಾರದು. ತತ್ : ಸತ್ ಭೂಮಿಕೆಯಲ್ಲಿ 'ಡಿಕ್ಟೇಟರ್' ವೃತ್ತಿಯ ಜೀವನದ ಆಕೃತಿಯೇ ಅಲ್ಲಿ ಮೈದೋರಬೇಕು. ಪ್ರಜಾಪ್ರಭುತ್ವದ ಸಾಂಘಿಕ ದೃಷ್ಟಿ, ತತ್ : ಏಕಂ ಭೂಮಿಕೆಗೆ ವಿರೋಧಿಯಾಗಿದೆ. ತತ್ : ಸತ್ ಭೂಮಿಕೆಯ ಐಹಿಕ ಜೀವನ ರೀತಿ ಇಂದ್ರಿಯ ಪೂಜೆಗೆ ಒತ್ತಾಯಪಡಿಸೀತು. ಇಲ್ಲವೆ ಜೀವನವು ಅರ್ಥವಿಹೀನವೆಂಬ ಶ್ರದ್ಧೆಬೆಳೆದು ಮೃತ್ಯುಪೂಜೆ ಪ್ರಾರಂಭವಾಗಬೇಕು. ಸತ್ತಮೇಲಿನ ಮೋಕ್ಷ ಬಾಳಗುರಿಯಾಗಬೇಕು. ಆದಕಾರಣ, ಮೋಕ್ಷವಾದೀ ಪಾರಲೌಕಿಕ ದೃಷ್ಟಿಯ ತತ್ : ಏಕಂ ಪಂಥೀಯ ರೀತ 'ಸತ್ಯ'ವು ತನ್ನ ಅಸ್ತಿತ್ವಕ್ಕಾಗಿ ಭುವಃ ಸ್ವಃ ಕತ್ತರಿಸಿ ಅಂಗತ್ರಯದ ತ್ರಿತನನ್ನು ತುಂಡರಿಸಿ, ವ್ಯಕ್ತಿಯನ್ನು ತೃತೀಯ ಪುರುಷನನ್ನಾಗಿಸಿದ್ದು ಕಾಣುತ್ತದೆ.

ಎಲ್ಲೆಲ್ಲೂ ಇದೆಲ್ಲವೂ ಬುದ್ಧಿಪೂರ್ವಕವಾಗಿ ಆದ ಘಟನೆಯೊ ಎಂಬ ಬಲವಾದ ಸಂದೇಹವನ್ನು ಉಂಟುಮಾಡುವ ಉಲ್ಲೇಖಗಳು ಈ ಋಗ್ವೇದದ ಸಂಹಿತೆಯಲ್ಲೇ ಉಂಟು!

'ಅಗ್ನೇಃ ಪೂರ್ವೇ ಭ್ರಾತರಃ (ಹತಃ)' ಎಂಬ ಈ ಋಚೆಯು ಇರುವ ಸೂಕ್ತದಲ್ಲಿ ಬರುವ ಪವಾಡ ಕಥೆಯಲ್ಲಿ ತ್ರಿತನ ವಧೆಯ ಪ್ರತಿಧ್ವನಿಯೇ ಕೇಳಬರುತ್ತಿರುವುದು ಸ್ಪಷ್ಟವಿದೆ.[೨೨] ಇಂದ್ರ-ಸೂರ್ಯ ಸಂಪ್ರದಾಯದ ಅಗ್ನಿಯು ಭಯಗ್ರಸ್ತನಾಗಿ (ಬಿಭ್ಯತ್), ವರುಣನ (ಜಲಾಶಯದ) ಆಶ್ರಯಕ್ಕೆ ಬಂದು ನೀರಲ್ಲಿ ಅಡಗಿರುವ ಚಿತ್ರವು ಇಲ್ಲಿದೆ. ಅಗ್ನಿಯು ತಾನು 'ನ-ಚಿಕೇತ'ನಾದ, ಎಂದರೆ ತನ್ನ ತೇಜೋವಧೆಯಾಗಿ: ತಾನು ಪ್ರಕಾಶಮಾನನಾಗಿ ಕಾಣದೆ ಇರುವ ಕಾರಣವನ್ನು ವಿವರಿಸುತ್ತಾನೆ. ತ್ರಿತನನ್ನು ಅಗ್ನಿ ರೂಪದಲ್ಲಿ ಕಂಡ, ತಾದಾತ್ಮ್ಯವನ್ನು ಕೆಲವೆಡೆಯಲ್ಲಿ ಹೇಳಲಾಗಿದೆ. ವೈಶ್ವಾನರಾಗ್ನಿಯು ಭೂಃ ಭುವಃ ಮತ್ತು ಸ್ವಃ ಈ ಮೂರು ಲೋಕವ್ಯಾಪಿಸಿದ್ದಾನೆ. ಆದರೆ, ಈ ವೈಶ್ವಾನರನು ನಾಮ-ಮಾತ್ರಕ್ಕೆ 'ವಿಶ್ವ' ನರನಾಗಿ ಜೀವಿಗಳ ದೇಹಸ್ಥ ಹಸಿವಿನ ರೂಪದ ಜಠರಾಗ್ನಿಯಾಗಿ ಉಳಿಯುತ್ತಾನೆ! ಹಸಿವೆ ಸಾವು 'ಕ್ಷುಧಮಿತ್ ವಧಂ' ಎಂದು ಆ ಪವಿತ್ರ ವಿಶ್ವರೂಪ ಚೈತನ್ಯಶಕ್ತಿಯನ್ನು ಸುಡುಗಾಡಬೆಂಕಿಯನ್ನಾಗಿ ಮಾರ್ಪಡಿಸಿರುವ ತಂತ್ರವು ಅದ್ಭುತವಿದೆ! ವಿಶ್ವರೂಪಕ ಅಗ್ನಿಯನ್ನು ಭೂಲೋಕಕ್ಕೆ ಸೀಮಿತಪಡಿಸಿ ನೀರಲ್ಲಿ ಅಗ್ನಿ=ರಸ-ರೇತ ರೂಪಕ್ಕೆ ತಿರುಗಿಸಲಾಗಿದೆ! ಇದರಿಂದ ಭುವಃ ಮತ್ತು ಸ್ವಃ ಇವು ನಷ್ಟವಾದುವು! ಭೂಃ=ಭುವನಂ=ವನಂ, ರಸ ಸ್ವರೂಪಿಯಾಯ್ತು. ಇನ್ನು ಅಗ್ನಿಯು, 'ಪಯಸ್ವಾನ್ ಅಗ್ನೇ' =ಚಂದ್ರಾಃ ಆಪಃ=ಸಲಿಲಸ್ಥ (ದೇಹಸ್ಥ ರೇತಸ್ಥ) ಅಗ್ನಿಯು ಮಾತ್ರ ಆಗಿ ಉಳಿಯುತ್ತಾನೆ!

ಆದರೆ, ಮೋಡಿಗಾರಿಕೆಯ ಮಾಟದ ಈ ಮಂತ್ರಗಳಲ್ಲಿ ಈ ರೇತ ಸ್ವರೂಪ ಅಗ್ನಿಯನ್ನೇ, ಮೂಲ ಋಗ್ವೇದದ ಚೌಕಟ್ಟಿನೊಳಗಿನ ಹವ್ಯವಾಹನ ಜಾತವೇದ ಅಗ್ನಿ, ಮತ್ತು ಅಪ್ಸು, 'ಓಷಧಿಷು ಬಹುಧಾ ಪ್ರವಿಷ್ಟಂ ತಂ ಐಚ್ಛಾಮ' ಎಂಬ ಪ್ರಾರ್ಥನೆಯಲ್ಲಿ ಕಾಣಿಸಿಕೊಳ್ಳುತ್ತಿರುವ ಅಗ್ನಿಯು, ಒಂದೇ ಅಲ್ಲ. ಈ ಭೇದ ಕಾಣದಿರಲು ಕವಿಯ ಮಂಕು ಕಾರಣವೊ? ಅಥವಾ ಕೊಂಕು ಮನೀಷೆಯು ಕಾರಣವೋ? ಅಗ್ನಿಯು ಹವ್ಯವಾಹನನ ಕಾರ್ಯಮಾಡಲು ಹೆದರಿದ್ದೇಕೆ? ಅಗ್ನ್ಯಾರಾಧನೆಯಲ್ಲಿ, ಅಹಿ : ವೃತ್ರಸಂಹಾರ ಕಾರ್ಯನಿರತ ಇಂದ್ರನನ್ನು, ಬೃಹಸ್ಪತಿಯನ್ನು ಆಮಂತ್ರಿಸಿ ಆರಾಧಿಸುವ ತನ್ನ 'ಪೂರ್ವೇ ಭ್ರಾತರಃ' ಹತರಾದುದನ್ನು ಕಂಡು ಇನ್ನು ತನ್ನ ಪಾಡು ಏನು ಎಂದು ಅಗ್ನಿ ಹೆದರಿದನು, ಎಂದು ಈ ಸಂಹಿತಾಪಾಠದಲ್ಲಿಯೆ ಉಕ್ತವಾಗಿದೆ! ಹವ್ಯವಾಹನನು ನೀರಲ್ಲಿ ಇಳಿದರೆ ಆ ಅಗ್ನಿ ಇದ್ದಿಲು ಆದೀತೇ ಹೊರತು 'ಅಗ್ನಿ' ಎನಿಸದು. ಆದಕಾರಣ, ಇಲ್ಲಿ ವರ್ಣಿತನಾದ ನ 'ಚಿಕೇತ' ಅಗ್ನಿಯು ದಿಕ್ಕಾಲದ ಸಂದರ್ಭದಲ್ಲಿ ಪ್ರತೀತಿಗೆ ಬರುವ ಅಗ್ನಿಯೇ ಅಲ್ಲ. ಇವನು 'ಜಾದೂ' ಅಗ್ನಿ. ಈ ಸೂಕ್ತದಲ್ಲಿ ನಚಿಕೇತ ಅಗ್ನಿ ಎಂದು ಮೆಲ್ಲನೆ ನಮೂದಿಸಿದ್ದೂ ಉಂಟು! ಸೂಚಿಕ>ಸೌಚಿಕ, ಸೂಚಿ>ಸೂಜಿ! ಸೂಜಿಯಿಂದ ಹೊರಬಂದು ಉಲ್ಬ (ಗರ್ಭ)ದಲ್ಲಿ ಸೇರುವ ಅಗ್ನಿ ಇವನು ಎಂದರೆ ವಿಶೇಷ ತಪ್ಪಲ್ಲ! ಏಕೆಂದರೆ ಈ ಸೂಕ್ತದ ಆರಂಭವೆ ಹೀಗಿದೆ : ಎಲೈ ಅಗ್ನಿಯೇ 'ಸ್ಥವಿರಂ ಮಹತ್ ಉಲ್ಬಂ' ಹೊಕ್ಕು (ಬಸುರಿಯ) ಆಪ : ರಸದಲ್ಲಿ (ಪೋಷಿಸಲ್ಪಡುತ್ತ) ಕುಳಿತಿದ್ದೀಯೆ!

ಉಲ್ಬಸ್ಥ ಅಗ್ನಿಯು, ಋಗ್ವೇದದ ಪರಿಭಾಷೆಯಲ್ಲಿಯೇ 'ಸರೀಸೃಪ' ಆಗುತ್ತಾನೆ! ಎಂದರೆ, ಈ ಅಗ್ನಿಯು ನಾರ(ಣ) ನೆಂದರೇ, ಈ ವಿಶ್ವಾಧಾರಕ ಪರಮಾತ್ಮಶಕ್ತಿ! 'ನ ಅಸತ್' ಪಂಥೀಯ ಸಾಕಾತ್ಕಾರದ ಸೂಕ್ತದೊಳಗಿನ, 'ತುಚ್ಛೇನ' (ಜಲೇನ) ಆವೃತನಾದ (ಒಡಲ) ಕಗ್ಗತ್ತಲಲ್ಲಿ ಎಲ್ಲೆಲ್ಲೂ ತುಂಬಿರುವ ಸಲಿಲದಲ್ಲಿ 'ಅವಾತಂ' ಇರುವಲ್ಲಿ ಉಸಿರಾಡಿಸುವ (ಅನೀತ್) ಪವಾಡ ಜರುಗಿಸುತ್ತ ನರನ ಆಕಾರಪಡೆದು ವೃದ್ಧಿಂಗತವಾಗುತ್ತಿರುವ 'ಅ-ಭೂ' (Being & Becomming) ಆಗಾಮೀ 'ಸಂತ' ದರ್ಶನದಲ್ಲಿಯೂ ಈ ಅಗ್ನಿ-ನಾರ(ಣ)ದರ್ಶನವೇ ಲಭಿಸಬಲ್ಲದು. ಇವನು ಸೌಚಿಕ ಎಂದರೆ ಕೇವಲ ಸೂಚನಾತ್ಮಕ : ಸಾಂಕೇತಿಕ ಅಗ್ನಿ : ನಿಜವಾದ ಅಗ್ನಿಯಲ್ಲ, ಎಂದೇ ಇದರ ಅರ್ಥವಿರುವುದು ಸ್ಪಷ್ಟವಿದೆ. ಈ ಮೊದಲ ಸಮೀಕ್ಷೆಯಲ್ಲಿ ಕಂಡಿರುವಂತೆ ಋಗ್ವೇದದಲ್ಲಿ ಇಬ್ಬರು ಅಗ್ನಿಗಳಿದ್ದಾರೆ! ಹೊರಗೆ ತೋರಿಕೆಯಲ್ಲಿ ಪೂಜೆಗೊಳ್ಳುತ್ತಿರುವ ಜಾತವೇದ ಕವಿ, ಪ್ರಚೇತಸ ಅಗ್ನಿಯ ಹಿಂದೆ,

ತಲೆ ಮರೆಯಿಸಿಕೊಂಡು ಅಡಗಿರುವ 'ಬಾಡಬ' : ಸರ್ಪ, ಮೆಲ್ಲಮೆಲ್ಲನೆ ತಲೆಯೆತ್ತುತ್ತ ಜಾತವೇದ, ಕವಿ, ಪ್ರಚೇತಸನ್ನು ತ್ರಿತನೊಡನೆಯೆ ಮುಗಿಸಿಬಿಡುತ್ತಾನೆ, ಅಹಿಂಸಕ ರೀತಿಯಿಂದಲೇ! ಮೂಲ ಅಗ್ನಿಯನ್ನು ಇದ್ದಿಲು : ನಚಿಕೇತನನ್ನಾಗಿಸಿ ಆ ಸ್ಥಳದಲ್ಲಿ ತಾನೇ ಪೂಜೆಗೊಳ್ಳತೊಡಗುವ ಈ ಪುರುಷ : ಯೋಷಾರೂಪ ಗೌತಮದೇವನ ಪೂಜೆಯ ಯುಗವು ಆರಂಭವಾಗುವುದು. ಇದು ಶಿಲಾಪ್ರತಿಮೆಯಾದಾಗ ಅನೇಕ 'ಗರ್ಭ-ಗುಡಿ'ಯ ಅಗ್ನಿ-ನಾರಾಯಣನೇ, ಭಾರತೀಯರಿಗೆ ದಿಕ್ಕಾಲಾತೀತ ದಿವ್ಯಾನಂದ ಸಿದ್ಧಿಯನ್ನೀವ ಭವಬಂಧನದಿಂದ ಮುಕ್ತವಾಗಿಸುವ ಆರಾಧ್ಯ ದೈವತವಾಗುತ್ತಾನೆ! ಈ ತಾತ್ತ್ವಿಕ ಭೂಮಿಕೆಯ ಶಬ್ದ-ಪ್ರತಿಮೆಯು ದಿಕ್ಕಾಲದ ಸಂದರ್ಭದಲ್ಲಿ ನಡು-ನೀರಲ್ಲೆ ಇರುವ 'ರಂಗನಾಥ'ನ 'ಸನಾ'ತನ ಸಂಪ್ರದಾಯವು ಈ ಹಿನ್ನೆಲೆಯಲ್ಲಿ ಅರ್ಥದಾಯಕವಾಗುತ್ತಿದೆ. ಆಪ : ರಸ : ರೇತಸ್ಥ ದಿವ್ಯಶಕ್ತಿ ಈ ನಾಗದೈವತ ಆಗಿದೆ.

ಹಿರಣ್ಯಶೃಂಗೀ ಅಶ್ವ

ಸಮುದ್ರಯೋನಿ : ಹಿರಣ್ಯಶೃಂಗೀ ಅಶ್ವವು, 'ಯಜ್ಞ'ದಲ್ಲಿ ಬಲಿ ಆಗ ತಕ್ಕ ಕುದುರೆ. ಆದರೆ, ಇದು ಆಪ; ರಸ ಪಂಥೀಯ ಯಜ್ಞ-ವಿಶೇಷ. ಇದನ್ನು ಮರೆತರೆ, 'ಅಶ್ವ-ಮೇಧ'ವೂ ಸವಿತೃ, ಸೋಮ, ತ್ರಿತ, ಇಂದ್ರ ಈ ಪ್ರತಿಮಾ : ಸಂಕೇತಗಳಂತೆ ವಿಕೃತ ರೂಪಿಯಾದುದನ್ನು ಗ್ರಹಿಸಿಕೊಳ್ಳುವುದು ಅಶಕ್ಯವಾಗುತ್ತದೆ. ಆದರೆ, ಈ ಸಮುದ್ರಯೋನಿ ಜಾತ್ಯಶ್ವದ ಮೂಲಕ ನರ-ಮಾನವರಿಗೆ, ತಮ್ಮ ಮೂಲ ಸ್ವರೂಪ-ದರ್ಶನ ಮಾಡಿಕೊಳ್ಳಲು ಪ್ರಯೋಜನಕಾರಿಯಾಗಲೆಂದು ನಿರ್ಮಿತವಾದ ಶಬ್ದ-ಶಿಲ್ಪ-ಸೌಂದರ್ಯವನ್ನು ಸಮೀಕ್ಷಿಸದೆ, ಇದನ್ನು ಹೋಮ ಮಾಡಿದರೆ 'ಆತ್ಮ' ದರ್ಶನ ಆಗದೆ ಹೋದೀತು ಮತ್ತೆ! ಈ 'ಪುರುಷ' ಯಾರು? ಪುರೀಶಯ ಪುರುಷಃ:! 'ಪುರಿ' ಯಾವುದು? 'ನವದ್ವಾರೇ ಪುರೇ ದೇಹೇ' ಇಲ್ಲಿ ಶಯನ ಮಾವ 'ಶೃಂಗಿ ಅಹಿ'ಯೆ ಪುರುಷ. ಇವನು ಅಂಗುಷ್ಠ ಮಾತ್ರಃ ಪುರುಷಃ. ಆದರೆ, 'ತನ್ವಾ'ವಾವ್ಯಧಾನ'ನಾಗಿ, ಯಾವಾಗಲೂ 'ಅತ್ಯತಿಷ್ಠತ್ ದಶಾಂಗುಲಂ,' ಸ್ವರೂಪನು! ಇವನು ಕೇಶಿಪುರುಷ ಆಗಿದ್ದಾನೆ. ವಾತರಶನ ಇವನು ವಾತ್ವಾರೋಹಿ, ಮತ್ತು ಸಮುದ್ರಯೋನೀ ಅಶ್ವ ಆರೋಹಿ ಬೇರಾರಲ್ಲ. ಈ ಪುರುಷನು ಮುಂಡಿಗೆ; ಕಬಂಧ ಕೊಳಾಯಿ ಆಕೃತಿಯವನು, ಬೋಡು ತಲೆಯಿಂದಾಗಿ ಮುಂಡ (ಮುಂಡಿ), ಈ - ಪುರುಷನ ಶರೀರ ಮತ್ತು ತಲೆ ಇವೆರಡರ ಆಕೃತಿಯಲ್ಲಿರುವ ವಿಸಂಗತಿಯ ಕಾರಣವನ್ನು ವಿವರಿಸುವ ಕೆಲವು ಪವಾಡ ಕಥೆಗಳು ಇವೆ. ಇವಿಲ್ಲದಿದ್ದರೆ ಈ 'ಪುರುಷ' : 'ಅಶ್ವ' ಶಬ್ದ ಪ್ರತಿಮಾ ಶಿಲ್ಪವು ಪೂರ್ಣವಾಗುತ್ತಿದ್ದಿಲ್ಲ.

'ಮಧು' ವಿದ್ಯೆಯನ್ನು ಇತರರಿಗೆ ಬೋಧಿಸಿದ ಅಪರಾಧಕ್ಕಾಗಿ ಇಂದ್ರನು (ಪಾಪಿ?) ಕತ್ತರಿಸಿದ ತಲೆಯ-ಸ್ಥಳ ದಲ್ಲಿ ಅಶ್ವಶಿರ, ಅಶ್ವಿನಿಗಳಿಂದ ಬಂತು, ಯಜ್ಞಪುರುಷ (:ವಿಷ್ಣು) ತಾನೇ ಹವಿರ್ಭಾಗ ಸ್ವೀಕರಿಸಿದ್ದಕ್ಕಾಗಿ ಆತನಿಗೆ ತಲೆದಂಡ ತೆತ್ತಬೇಕಾಯಿತು. ಇದು ಸೂರ್ಯನ ತಲೆಯೇ. ಆತನ ರಥದ ಚಕ್ರ ಎಂಬ ಹಾಗಿನ ಸಂದಿಗ್ಧ ಕಥೆಯೂ ತಲೆಯೆತ್ತದೆ ಇಲ್ಲ. ಇವೆಲ್ಲಕ್ಕಿಂತ ಈ ಸಂಕೇತ ಅಶ್ವಿನಿಗಳ ಅಶ್ವ, ರಾಸಭದ ಕಾಲ-'ಕೊಳಗ' ಎಂದೂ ಅದು ಆಪ: ರಸಸ್ರವಿಸುವುದು ಎಂದೂ ಹೇಳಿರುವ ಸಂಕೇತಾತ್ಮಕ ಪವಾಡ ಹೆಚ್ಚು ವಾಸ್ತವವೆನ್ನಬಹುದು. ಇದು ವರ್ಷಣಶೀಲ ವೃಷಭ ಮತ್ತು ನೀರಲ್ಲೇ ಇರುವ ಮೊಸಳೆ (ಗ್ರಹ =ಹಾವು ಎಂದೂ ಆಗಬಹುದು) ಇವೂ ಅಶ್ವಿಗಳ ವಾಹನಗಳು! (ಧನುಸ್ಸಿನ) 'ಬಾಣ' ಎಂದಲ್ಲಿ ಅಯಸ್ (ಉಕ್ಕಿನ) ತಲೆಯ ಆಕೃತಿ. ಭಲ್ಲೂಕರ ದಂಡದ ತುದಿ ನೆನೆಯಬೇಕು. 'ಶೃಂಗಿ' ಅಹಿ ಎಂಬ ರೂಪಕವು ಋಕ್ಷ (ಕರಡಿ)ದಂತೆ ಋಗ್ವೇದದಲ್ಲೇ ಇದೆ. ಅಂಧನಾದರೂ ದಿವ್ಯಾಕ್ಷನಾದ ದೀರ್ಘತಮನು ಮಾಡಿರುವ ಶೃಂಗಾಶ್ವದ ವರ್ಣನೆಯಲ್ಲಿ 'ಶಫ' (ಗೊರಸು-ಕೊಳಗ)ದ ಸಂಕೇತವು ಇದೇ ಬಗೆಯದಾಗಿದೆ.[೨೩] ಇಷ್ಟೆ ಸಾಲದೆ ಹಿರಣ್ಯಶೃಂಗನ ಪಾದ (ಕೊಳಗ : hoof) ಅಯುಸ್ಸಿನದು ಎಂದಿರುವುದು ಉದ್ದೇಶವಿರಹಿತವೆನ್ನಲಿಕ್ಕಾಗುವುದಿಲ್ಲ.

ಮಾರುತಿ : ಹನೂ-ಮಾನ್ ಏಕೆ? ಹೇಗೆ? ಎಂಬುದಕ್ಕೆ ಅಂಜನಾಸುತನೆಂಬ ಸರ್ಪ : ಮೂರ್ತಿಯು ಇವನು, ಸೂರ್ಯನಿಂದ ತಾಡಿತನು, ಎಂಬ ಕಥೆ ಹುಟ್ಟಿಸಿ, ಸೂರ್ಯನ ಅವಮೂಲ್ಯನ ಸಾಧಿಸುವುದರೊಡನೆ ಈ

ಪುರುಷನ ಮೋರೆ ವಕ್ರವೇಕೆ? ಎಂಬುದಕ್ಕೂ ಕಾರಣವನ್ನು ಹೇಳುವ ಕಾರ್ಯವನ್ನೂ ಸಾಧಿಸಿರುವುದಾಗಿ ಕಾಣುತ್ತದೆ. ಇಲ್ಲಿ ಇನ್ನೂ ಒಂದು ಪವಾಡ ಕಥೆಯಿಂದ ದೊರೆವ ಬೆಳಕು ಸಹ ಉಪಯುಕ್ತವಾಗಿದೆ. ಶೃಂಗಋಷಿಯಿಂದ ನೆರವೇರಿದ ದಶರಥನ ಪುತ್ರಕಾಮೇಷ್ಟಿ ಯಜ್ಞ ಫಲವಾದ ಪಾಯಸದಲ್ಲಿ ಒಂದಂಶವಾಗಿದೆ. ಪುತ್ರಾರ್ಥಿಯಾಗಿ ತಪಂಗೆಯ್ಯುತ್ತಿದ್ದ ಮಾರುತಿಯ ತಾಯಿ ಅಂಜನಾದೇವಿಯ ಬೊಗಸೆಯಲ್ಲೂ ಬಿದ್ದಿತಂತೆ! ಈ ಕಥಾಭಾಗದಿಂದ ಮಾರುತಿಯ ಮುಖವು; ಸೊಂಡೆ; ಶೃಂಗಸದೃಶವೇಕೆ? ಎಂಬ ಪ್ರಶ್ನೆಗೆ ಉತ್ತರವು ದೊರೆಯುತ್ತಿದೆ. ಇಲ್ಲಿ ಮರಾಠಿ ತೋಂಡ, ಸಂಸ್ಕೃತ ತುಂಡ, ಶುಂಡಾಲ, ಆನೆಯ ಸೊಂಡಿಲು ಇವು 'ಹನೂ'ಮಂತನ ಮೋರೆಯ ಮೂಲ ಆಕೃತಿಯನ್ನು ಗ್ರಹಿಸಿಕೊಳ್ಳಲು ಉಪಯುಕ್ತವಾಗಿವೆ. ಅಲ್ಲದೆ ಟಿ. ಬರೊ ಸೂಚಿಸುವಂತೆ (ತುಂಡಿಸು) ಕಂದಮಿಳ 'ತುಣಿ' ಈ ಪದಗಳೂ ತುಲನಾರ್ಹವಾಗಿವೆ. 'ಊರು ಸುಟ್ಟರೂ ಹನುಮಂತಪ್ಪ ಹೊರಗೇ' ಎಂದು ಕಂನುಡಿಯ ಗಾದೆಯುಂಟು. ಗಾದೆಯೆ ವೇದ ಎಂಬುದನ್ನು ಈ ಲೋಕೋಕ್ತಿ ನಿದರ್ಶನಕ್ಕೆ ತರುತ್ತಿದೆ. ಈ ಹನುಮನು ಶೇಷನೆ ಇರಬೇಕಾಯಿತು! ಈತನೇ ಆದಿ ಶೇಷನು; ಪ್ರಳಯದ ತರುವಾಯದ ಪುನಃ ಸೃಜನದ ಹೊಣೆ ಇರುವ ಆದಿ ದೈವತವು ಶೇಷ : ಸರ್ಪನೆ, ಎಂಬ ಧ್ವನ್ಯರ್ಥಕ್ಕೆ ಇಲ್ಲಿ ಎಡೆಯಿದೆ : ತತ್ : ಏಕಂ, ಇದು '(ಅ)ದಿತಿ' ಗರ್ಭ; ಇಂದ್ರನು ತುಂಡರಿಸಿ ನಾನಾರೂಪವಾಗಿಸಿದ ಮರುತರು 'ಸಮಾನ ರೂಪ ಆಕೃತಿಯವರು', 'ಅವರೆಲ್ಲ ಸಮಯಸ್ಕರು' ಎಂಬ ವೇದದ ಆಶಯದಂತೆ ಆ ಮರುತರ ತಳಹದಿಯ ಆಕೃತಿ ಎಂದರೆ ಈ ಲಾಂಗೂಲನು: ಹನೂಮಂತನೇ ಆಗುತ್ತಾನೆ!

ಈ ಸೊಂಡೆಯ ಗಣಪ : ಸೊಂಡೆ-ಇಲಿದೇರನು ಆದಿದೈವತ; ಅಂಬಾ : ಅದಿತಿಪುತ್ರ! ಆದಿಶೇಷ ವಿಷ್ಣುವಿನ ಅವತಾರವೇ ರಾಮನೆಂದಾಗ, ಹನುಮಂತನು ಸರ್ಪಸ್ವರೂಪನೆಂಬುದನ್ನು ಆಕ್ಷೇಪಿಸಲು ಬರಲಾರದು; ಇದು ಹಾಗಿರಲಿ. ಮಾನವ ಮಂಗನಿಂದಾಗಿದ್ದಾನೆ, ಎಂಬ ಡಾರ್ವಿನನ ಸಿದ್ಧಾಂತದ ಭೂಮಿಕೆಯು ಒಂದು ಬಗೆಯದಾದರೆ, ಇದನ್ನೇ ದಿವ್ಯಾಧ್ಯಾತ್ಮದ ಭೂಮಿಕೆಯಿಂದ ಹೀಗೆ ಹೇಳಲಾಗುತ್ತಿದೆಃ 'ಮಗುವು ಮಾನವನ ತಂದೆ' ಎಂಬಲ್ಲಿ ಈ ಮಗು, 'ಹನೂ-ಮಂತ'ನು ಎಂಬುದು ದಿವ್ಯಾಕ್ಷರ ಸಾಕ್ಷಾತ್ಕಾರವು. ಸತ್ಯವು ಸಾಂಕೇತಿಕವಿರುತ್ತದೆ! ಡಾರ್ವಿನನು ಹೇಳಿದ ಮರ್ಕಟ ವಿಚಾರ ಸರಿಯೇ? ಎಂಬುದನ್ನು ಆಕ್ಷೇಪಿಸಿ, ಬೈಬಲ್ಲಿಗೆ ವಿರೋಧಿಯಾದ ಈ ಸಿದ್ಧಾಂತವನ್ನು ನಿಷೇಧಿಸುವವರೂ ಉಂಟು. ಹಲಕೆಲವು ಪಾದ್ರಿಶಾಲೆಗಳಲ್ಲಿ ಇದನ್ನು ಕಲಿಸಲಾಗುವುದಿಲ್ಲ! ಆದರೆ ಪ್ರಪಂಚದಲ್ಲಿ ಜೀವಸೃಷ್ಟಿಯ ಹುಟ್ಟಿಗೆ ಕಾರಣನು, 'ಹನೂ'ಮಂತನು: ಆದಿಶೇಷನು, ಎಂಬುದನ್ನು ಮಾತ್ರ ಯಾರಿಗೂ ಅಲ್ಲಗಳೆಯಲು ಆಗುವುದಿಲ್ಲ. ಮಾನವ ಪ್ರಪಂಚದಲ್ಲಿ ನಾನಾಮೂರ್ತಿಗಳಿದ್ದರೂ ಈ 'ಮಾರುತಿ'ಗಳೆಲ್ಲ ಸಮಾನ ಆಕೃತಿ: ರೂಪವುಳ್ಳವರು ಆಗಿರುವರೆಂಬ 'ಗುಹ್ಯಾತ್ ಗುಹ್ಯತಮ' ಈ ಮೂಲ ದರ್ಶನವೂ ದಿವ್ಯಾಕ್ಷರಿಗಲ್ಲದೆ ಬೇರೆಯವರಿಗೆ ಆಗಲು ಶಕ್ಯವಿಲ್ಲ.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** I. ೧೬೩-೧
೨. Macdonell A. A.; ***Vedic Mythology*** Pp. 160-61
೩. ***ಋಗ್ವೇದ ಸಂಹಿತೆ*** IV ೪. ೨೮
೪. ***ಅದೇ*** I. ೪೭-೫೦
೫. ***ಅದೇ*** ೪೮-೫
೬. ***ಅದೇ*** ೪೭-೫೦
೭. Macdonell A. A.; ***Vedic Mythology*** p. 65
೮. ***ಋಗ್ವೇದ ಸಂಹಿತೆ*** X. ೧೧೯

೯. ***Ibid,*** P. 81
೧೦. ***ಋಗ್ವೇದ ಸಂಹಿತೆ*** X. ೪೫-೪೬
೧೧. Macdonell A.A.; Vedic Mythology Pp. 67-69
೧೨. ***ಋಗ್ವೇದ ಸಂಹಿತೆ*** VI. ೯.೧
೧೩. ***ಅದೇ*** I ೧೦೫.೧೭
೧೪. ***ಅದೇ*** VIII. ೪೭.೧೫.೧೬
೧೫. ***ಅದೇ*** I. ೧೬೩.೨
೧೬. ***ಅದೇ*** X. ೭೧-೨
೧೭. ***ಅದೇ*** I. ೧೦೫-೧೭
೧೮. ***ಅದೇ*** VIII. ೪೧.೬
೧೯. ***ಅದೇ*** I. ೧೬೩
೨೦. ***ಅದೇ*** IV. ೩೩. ೧೧
೨೧. 'We find Thrita who is a man', ***Vedic Mythology*** P. 68
೨೨. ***ಋಗ್ವೇದ ಸಂಹಿತೆ*** X. ೫೧
೨೩. ***ಅದೇ*** I. ೧೬೩.೫

ಅಶ್ವಮೇಧದ ವಿಚಾರ

ಯಜ್ಞದ ಪ್ರಕಾರಗಳಲ್ಲೂ ಅಗ್ನಿ ಪ್ರಕಾರಗಳಂತೆ ಎರಡು ಬಗೆಗಳಿರುವುದನ್ನು ಈ ಮೊದಲು ನೋಡಿದ್ದಾಗಿದೆ. ಆದಕಾರಣ, ಅಶ್ವಮೇಧಯಾಗದಲ್ಲೂ ಎರಡು ಪ್ರಕಾರಗಳು ಇರುವುದು ಅಶಕ್ಯವಲ್ಲ. ಭಾರತದಲ್ಲಿ ಐತಿಹಾಸಿಕ ಕಾಲದಿಂದ ಕಾಣಿಸಿಕೊಂಡ ಅಶ್ವಮೇಧಗಳನ್ನು ಈ ಎರಡರಲ್ಲಿ ಯಾವ ಬಗೆಯಿಂದ ಜರುಗಿಸಲಾಯಿತೋ ನಿಶ್ಚಿತ ತಿಳಿಯದು. ಸುಮಾರು ಏಳನೆಯ ಶತಕದ ವರೆಗೆ ಇವು ಜರುಗಿವೆ. ನೂರು ಅಶ್ವಮೇಧ ಜರುಗಿಸುವವನಿಗೆ ಇಂದ್ರಪಟ್ಟವು ದೊರೆಯುತ್ತದೆ, ಎಂಬ ಒಂದು ವಾಕ್ಪ್ರಚಾರವುಂಟು. ಆದರೆ, ಮೂಲವೇದದ ಭೂಮಿಕೆಯಂತೆ, ವೃತ್ರಹನನವು: ಸಮಾಜ ಕಂಟಕನ ವಿನಾಶವು : ಇದು 'ತ್ರಿತ್ರ': ಮಾನವನ ಸಲುವಾಗಿ ಇದ್ದಿತು. ವೃತ್ರಹನನವು ಇಂದ್ರನ ಕರ್ತವ್ಯವೇ ಹೊರತು ಈ ಕೃತಿ ರಾಜ್ಯಸಂಪಾದನೆಗಾಗಿ ಎಂಬ ಕಲ್ಪನೆಯೇ ಅಲ್ಲಿ ವಿಸಂಗತವಿದೆ. ವೃತ್ರಾದಿಗಳ ನೂರು ಪುರಗಳನ್ನು ನಾಶಮಾಡಿದನೆಂಬ ಪುರಾತನ ಕಥೆಯೇ ನೂರು ಅಶ್ವಮೇಧದ ಕಥೆಯಾಗಿ ಮಾರ್ಪಟ್ಟಿರಬೇಕು. ಇದು ಏನೆ ಇದ್ದರೂ ರಾಜಾಧಿರಾಜನು ತನ್ನ ಸಾಮ್ರಾಟ ಪದವಿಯ ಅರ್ಹತೆಯನ್ನು ಪ್ರಸ್ಥಾಪಿಸಲು, ಅಶ್ವಮೇಧಯಾಗ ಮಾಡುವ ವಾಡಿಕೆಯಿದ್ದಿತು. ಆದರೆ, ಇದು ವೇದದಲ್ಲಿ ಇಲ್ಲ.

ಅಶ್ವಮೇಧ ಹಾಗೂ ಹೋಳಿಯ ಆಚರಣೆ ಇವೆರಡರಲ್ಲೂ ತುಂಬ ಸಾಮ್ಯವಿರುವುದಾಗಿ ಸಂಶೋಧಕರು ಹೇಳುತ್ತಿದ್ದಾರೆ! ಬೃಹದಾರಣ್ಯಕದ ಪ್ರಾರಂಭದಲ್ಲಿಯೆ ಇರುವ ಅಶ್ವ-ವಿಚ್ಛೇದನದಲ್ಲಿಯೇ, ಆ ಅಶ್ವವಿಚ್ಛೇದನವು ಸೌರಪ್ರತಿಮಾ ವಿಡಂಬಕವಾಗಿರುವ ಸಂದೇಹ ವುಂಟಾಗುವಂತಿದೆ. ಈ ಅಶ್ವವಿಚ್ಛೇದವು ಐಹಿಕ ಜೀವನದ ಪ್ರವೃತ್ತಿಯ ವಿಜಿಗೀಷು ಭಾವನಾ ಸೂಚಕ ಕಾರ್ಯವಾಗಿರದೆ, ಅದರ ಬಗೆಗೆ ಜುಗುಪ್ಸೆಯನ್ನುಂಟುಮಾಡುವ ಕರ್ಮವಿರುವುದಾಗಿ ಮೇಲೆಯೆ ತೋರುತ್ತದೆ. ಹೋಳಿಯೊಳಗಿನ ಆಚಾರ ಧರ್ಮ ಮತ್ತು ಅಶ್ವ-ಮೇಧದೊಳಗಿನ 'ಸಮಯ' ಇವೆರಡರಲ್ಲೂ ಸಾಮ್ಯವಿರುವುದನ್ನು ಸಂಶೋಧಕರು ಸಪ್ರಮಾಣವಾಗಿ ಸಿದ್ಧಪಡಿಸಿರುವುದು ಸುಳ್ಳಲ್ಲ, ಸೌರಪರಂಪರೆಯ ವಿಜುಗೀಷು ವೃತ್ತಿಯ ಅಶ್ವಮೇಧ ಹಾಗೂ 'ಸಮುದ್ರಯೋನಿ' ದೈವತ ಅಶ್ವಮೇಧ ಇವೆರಡೂ ಸಂಪ್ರದಾಯಗಳ 'ಸಮನ್ವಯ (?)' ಸಂಮಿಶ್ರಣ ಇಲ್ಲಿ ಆಗಿರಬೇಕೆಂದು ಬಗೆಯಬೇಕಾಗುತ್ತದೆ. ಇದೇ ಬಗೆಯ ಇನ್ನೊಂದು ಸಮನ್ವಯದ ಮಾದರಿ ಇಲ್ಲಿಯೆ ಇದೆ. ಅದು 'ಪುರುಷಾರ್ಥ ಚತುಷ್ಟಯ'! ವ್ಯಾಹೃತಿಗಳು, ಚತುರ್ವ್ಯಾಹೃತಿಗಳಾದಂತೆ, ಮೊದಲು ಮೂರೇ ಇರಬೇಕಾದ ಪುರುಷಾರ್ಥಗಳು ನಾಲ್ಕಾಗಿವೆ! ಪುರುಷನು ಸಾಧಿಸಬೇಕಾದ 'ಅರ್ಥ'ಗಳಲ್ಲಿ ನಿಜವಾಗಿಯೂ 'ಅರ್ಥ'ವೇ ಆಗದ 'ಮೋಕ್ಷ' ಎಂಬ ಒಂದು 'ಸಮಯ'ವನ್ನು ಭಾರತೀಯ ಧೀಮಂತರು 'ಮನು'ಗಳೆಂಬವರೇ ಸ್ವೀಕರಿಸಿಲ್ಲವೆ? ನಿಜವಾಗಿಯೂ ಈ 'ಮೋಕ್ಷ'ವಾದವು ಅಸಾಮಾಜಿಕ ಪ್ರವೃತ್ತಿಗೆ ಪುಟಕೊಡುತ್ತದೆ. ಸಾಮಾಜಿಕ ಜೀವನ ರೀತಿಯ 'ಧಾರಣಾತ್ ಧರ್ಮ ಇತಿ ಆಹುಃ'

ಎಂಬ ಜೀವನ-ಧರ್ಮದ ತಳಪಾಯದಲ್ಲಿಯೇ ಇರಿಸಲಾಗಿರುವ ಟೈಮ್-ಬಾಂಬು ಈ ನಿರ್-ವೇದೀ ಸಂನ್ಯಾಸವಾದ. 'ಬಂಧಮುಕ್ತ'ರಾಗಿ ನಿತ್ಯಾನಂದ ಸಿದ್ಧಿಗಾಗಿ ಸಂಸಾರ ಒದ್ದು 'ಆತ್ಮಾರ್ಥೇ ಪೃಥಿವೀಂ ತ್ಯಜೇತ್' ಎಂದು ಹೊರಡುವುದೇ ಬಾಳಿನಲ್ಲಿ ಶ್ರೇಷ್ಠಕ್ರಿಯೆ ಎಂಬ ಪಾರಲೌಕಿಕ ಸಿದ್ಧಿಯ ಆದರ್ಶವಾದವು, ಸಮಾಜದಲ್ಲಿ ಗೃಹಸ್ಥಾಶ್ರಮದ ಬೆಲೆಯನ್ನೇ ಇಲ್ಲವಾಗಿಸುತ್ತಿದೆ. ಮದುವೆಯಾಗುವವರು ಯಾರು? ಸಂನ್ಯಾಸ ಸ್ವೀಕರಿಸಿ ಮೋಕ್ಷಾರ್ಥಿಯಾಗಿ ತಪಂಗೆಯ್ಯಲು ಹೆದರುವ ಹೇಡಿಗಳು, ಮದುವೆಗೆ ಸಿದ್ಧರಾಗುವವರು, ಸಂನ್ಯಾಸ ಮೆಚ್ಚದೆ ಸಂಸಾರಿಗಳಾಗಿಯೇ ಉಳಿಯುವವರು ಇಂದ್ರಿಯ ಸುಖಲೋಲುಪರು, ಎಂದು ಅರ್ಥವಾಗುತ್ತದೆ. ಜೀವನ ರಂಗದಲ್ಲಿ ಮೋಕ್ಷವಾದಿ, ಪರಲೋಕಸಿದ್ಧಿ-ಪವಾಡಸಿದ್ಧಿವಾದೀ ಸಂಪ್ರದಾಯಗಳೇ ಶ್ರೇಷ್ಠ ಪೂಜ್ಯವಿರುವ ಸಮಾಜದಲ್ಲಿ, ತದಿತರ ಸಮಾಜ ಸಮ್ಮುಖ ಜೀವನದ, ವಸುಧೈವ ಕುಟುಂಬವಾದದ ಬಾಳಿಗೆ ಏನು ಅರ್ಥ : ಮೂಲ್ಯ ಇರಬಲ್ಲುದು? ಅಲ್ಲದೆ, ಪುರುಷಾರ್ಥ ಎಂಬುದರೊಳಗಿನ ಸಮನ್ವಯದ ಈ ಅನುಕ್ರಮವೇ ಎಷ್ಟು ಸುಳ್ಳು-ತಪ್ಪು ಇದೆ ಎಂಬುದರ ಅರಿವು ಕೂಡ ನಮಗೆ ಇಲ್ಲ! ಧರ್ಮ, ಅರ್ಥ, ಕಾಮ, ಆಮೇಲೆ ಮೋಕ್ಷ! ಇಲ್ಲಿರುವ ವಿಸಂಗತಿ ಅಪೂರ್ವವಿದೆ. ಮೊತ್ತಮೊದಲಲ್ಲಿ 'ಧರ್ಮ' ಎಂಬ ಪುರುಷಾರ್ಥ ವಿರುವಾಗ ಕೊನೆಗೂ ಸುಮಾರಾಗಿ ಅದೇ ಆಶಯದ 'ಮೋಕ್ಷ' ಎಂಬ ಮಾತು ಇರುವುದು ಅರ್ಥವಿಹೀನ, ಅಥವಾ ಅ-ಸಂಬದ್ಧ! ಅಥವಾ ಪ್ರಥಮಸ್ಥಾನವು ದೊರೆತ 'ಧರ್ಮ' ಮತ್ತು ಕೊನೆಯ 'ಮೋಕ್ಷ': ಧರ್ಮ ಇವು ಒಂದಕ್ಕೊಂದು ಸಂಬಂಧವಿಲ್ಲದ ಎರಡು ಭಿನ್ನ ವಿಚಾರಗರ್ಭಗಳು, (Concepts) ಇರಲಿಕ್ಕೆ ಬೇಕು!

ಆದರೆ, "ಅರ್ಥದ ಮರ್ಮವನರಿಯದೆ ಪದ-ಪದ್ಯಗಳನ್ನು" ಬಳಸಿ ಎಂತೂ ಬಾಳುವುದೇ ಜೀವನ ರೀತಿಯಾಗಿರುವ ಸಮಾಜದಲ್ಲಿ, ತಾನು ಹೊರಟ ದಾರಿ ಸಮಾಜದ ನಾಳಿನ ಉನ್ನತಿಗೆ ಕಾರಣವೋ, ಅವನತಿಗೆ ಕಾರಣವೋ, ಈ ವಿಚಾರ ಮಾಡುವವರಾರು? ತನ್ನ ವೈಯಕ್ತಿಕ ಬಾಳಿನ ಬಗೆಯ ಆಶೆ-ಆಕಾಂಕ್ಷೆಗಳಿಂದ ಭಾವೀ ಪೀಳಿಗೆಯ ಹಾನಿಯಾಗಬಹುದೆ? ತಮ್ಮ ಸಾಮಾಜಿಕ ಜೀವನದ ವಿಚ್ಛಿ.ವನೆಗೆ ತಾನೇ ಕಾರಣವಾಗಲಾರನೆ? ಆದರೆ, ತನ್ನ ವಿಚಾರ ಶಕ್ತಿಗೇ ಮಾರಕವಾದ ಮಾತ್ರೆ-ಗುಟಿಕೆಗಳನ್ನು ಸೇವಿಸುವ ಚಟವು ಒಮ್ಮೆ ಹತ್ತಿದ ಬಳಿಕ ಆ ಜನಕ್ಕೆ ತಾವು ಜೀವನವನ್ನೇ ಮೃತ್ಯುರೂಪವೆಂದು ಭಾವಿಸಿ ಬಾಳುತ್ತಿರುವ ಎಚ್ಚರವು ಉಂಟಾಗಲು ಹೇಗೆ ಶಕ್ಯ? ಮೋಕ್ಷವೇ ಗುರಿ, ಎಂದರೆ ಜೀವನವು ಸ್ಮಶಾನದಂತೆ ಅಲ್ಲವೆ? ಪುರುಷಾರ್ಥಗಳಲ್ಲಿ 'ಧರ್ಮ'ಕ್ಕೆ ಸರ್ವಪ್ರಥಮಸ್ಥಾನವಿದ್ದ ಬಳಿಕ 'ಅರ್ಥ' ಎಂಬುದೂ ಅರ್ಥವಿಹೀನವೆ ಉಭಯಾರ್ಥಗಳಲ್ಲೂ! ಬಾಳಿನಲ್ಲಿ ಅನುಭವದಿಂದ ಅರಿಯ ಬೇಕಾದ 'ಅರ್ಥ' ಎಂದರೇ ಆಗುತ್ತದೆ. ಅದು 'ಧರ್ಮ(ದ ಅರ್ಥ)': 'ಧರ್ಮ' ಎಂಬುದು ತಿಳಿವು ಬಂದ ಬಳಿಕ ತಿಳಿಯಬೇಕಾದ ಅರ್ಥವಲ್ಲವೇ? ಬಾಳಿನಲ್ಲಿ ಋತಸತ್ಯಧರ್ಮ ಇದು ಒಮ್ಮೆಲೆ ತಿಳಿಯದು. ಇದು ಅತ್ಯಂತ ಸೂಕ್ಷ್ಮ ಸಂಗತಿ. ಇದು ಕಾಣಲು ಆ ಮೊದಲು ಬಾಳಿನ ಸಿಹಿ-ಕಹಿಯ ಸಾಕಷ್ಟು ಅನುಭವ ಅವಶ್ಯ. ಈ ಕಾರಣದಿಂದ ಧರ್ಮ ಎಂಬುದನ್ನು ಮೊದಲಲ್ಲಿ ಸೇರಿಸಿರುವಲ್ಲಿ ಬುದ್ಧಿವಂತಿಕೆಯಿಲ್ಲ. ಅಥವಾ ಏನಾದರೂ ಕಪಟವಿರಬೇಕು. 'ಧರ್ಮ'ದ ತರುವಾಯ ಬರುವ 'ಅರ್ಥ', ದುಡ್ಡು: ಸಂಪತ್ತು ಎಂದಲ್ಲಿ ಅದೂ ವಿಪರೀತವೇ! ಧರ್ಮ, ಅರ್ಥ, ಇದಾದ ಬಳಿಕ ಕಾಮ! ಏನು ಅನುಕ್ರಮವಿದು! ಯಾವ ಮೇಧಾವಂತ='ಧೀ' ಉಪಾಸಕನು ಈ ಕ್ರಮವನ್ನು ನಿರ್ಣಯಿಸಿದ್ದಾನು! ಅಥವಾ ಇದೊಂದು ಸ್ವೈರವಿಚಾರವೊ?

ಜೀವನಾನುಭವದ ಹಂತಗಳನ್ನು ಗಮನಿಸಿದರೆ ಕಾಮ ಅರ್ಥ ಈ ಹಿನ್ನೆಲೆಯ ಜೀವನದಲ್ಲಿ ಬರುವ ಅನುಭವಗಳ ಅರ್ಥ : ಋತ: ಸತ್ಯಾಧಿಷ್ಠಿತ ಧರ್ಮದ ದೃಷ್ಟಿ ಉದಯವಾಗುವ ಶಕ್ಯತೆಯಿದೆ. 'ನಾರ'>ನರನು ರೇತಜನು; ಮನುಜನಾಗುವ ಸಂಕಲ್ಪವುಳ್ಳವನಾಗಿದ್ದರೆ ಮಾತ್ರ ಈ ಪುರುಷಾರ್ಥತ್ರಯ ಶಕ್ಯ. ಜೀವನ-ಮರಣದ ಈ ವಿಷಚಕ್ರದ ವಿಚಾರ ಪದ್ಧತಿಯನ್ನು (Circular thinking) ಭೇದಿಸಿ ನಾಗಲೋಕದ (Elan vital) ಹೊರಗೂ ಇರುವ ವೈಶ್ವಾನರ : ಅಖಂಡಿತ ತ್ರಿತನ ದಾರಿಯಲ್ಲಿ ಸಾಗುವುದನ್ನು ನಿರ್ಧರಿಸಿರುವ ಆದರ್ಶ ಅನುಸರಿಸುವ ನೂತನ ಜೀವನರೀತಿಯು ಒಂದು, ಸಮಾಜದಲ್ಲಿ ಕಾಣಿಸಿಕೊಳ್ಳುವ ಆವಶ್ಯಕತೆಯುಂಟು. ಬಾಳಿನ ಅನುಭವಗಳ

ಬೆಳಕಿನಲ್ಲಿ ಮಾನವ ಜೀವನದಲ್ಲಿ ಏನೊಂದು ಸೂತ್ರ-ನಿಯಮ ವ್ಯವಸ್ಥೆ ಉಂಟೆಂದು ಶ್ರದ್ಧೆಯುಂಟಾಗದ ನೀತಿವಾದ ಮತ್ತು ಋತ-ಅರ್ಥ ಯುಕ್ತವ್ಯವಸ್ಥೆಯ-ಜೀವನವಾದ ಇವೆರಡರಲ್ಲಿ ಅಂತರವನ್ನೇ ಕಾಣದಲ್ಲಿ ಈ ಬಾಳೊಂದು ಚಕ್ರನೇಮಿಕ್ರಮ (: ವಿಷಚಕ್ರ)ವಾಗಿ ಪರಿಣಮಿಸಿದರೆ ಸೋಜಿಗವೇನಲ್ಲ. ಈ ಚಕ್ರನೇಮಿಕ್ರಮದಲ್ಲಿ ಪ್ರತಿವಾರ್ಷಿಕ ಹೋಳಿಹಬ್ಬ (ಪ್ರ ಲಯಮಾಸ) ಬರತಕ್ಕುದೇ. ಆಮೇಲೆ (ಗರ್ಭ) ಗುಡಿ ನಿಲ್ಲಿಸಿ ಯುಗ-ಪ್ರತಿಪದೆಯು ಆಚರಿಸಲ್ಪಡತಕ್ಕುದೇ ಶಿಶಿರ-ವಸಂತೌ ಪುನರಾಯಾತಃ! ಭಜ ಗೋವಿಂದಂ, ಭಜ ಗೋವಿಂದಂ। ಮೂಢಮತೇ!

ಅಶ್ವಮೇಧಯಾಗದ ಪೂರ್ಣಾಹುತಿಯು ಫಾಲ್ಗುಣದಲ್ಲಿಯೇ ಏಕೆ? ಎಂಬುದರ ಔಚಿತ್ಯವನ್ನು ಅರಿಯುವ ಪ್ರಯತ್ನದಲ್ಲಿ, ಡಾ. ಡಾಂಗೆ ಸದಾಶಿವರಾಯರಿಗೆ, ಇದೇ 'ಸಮಯ'ದ ಹೋಲಿಕಾಧರ್ಮದ ಆಚರಣೆ ಮತ್ತು ಅಶ್ವಮೇಧ ಪ್ರಕ್ರಿಯೆ ಇವೆರಡರಲ್ಲೂ ಸಾಮ್ಯವಿದ್ದುದು ಕಂಡುಬಂದಿದೆ. ಋಗ್ವೇದದೊಳಗಿನ ಹಟ್ಟಿಕಾರ : ದನಗಾರಿಕೆಯ ಹಿನ್ನೆಲೆಯ ಸಾಂಕೇತಿಕ ಪ್ರತಿಮೆಗಳು (: Pastoral Symbolism from the Rigveda') ಎಂಬ ವಿಷಯವನ್ನು ಕುರಿತು, ಪುಣೆಯ ವಿದ್ಯಾಪೀಠದ ವಿಶೇಷೋಪನ್ಯಾಸ ಮಾಲೆಯಲ್ಲಿ ಅವರು ಮಾತನಾಡಿದ್ದು, ಇದು ಈಗ ಅಚ್ಚಿನಲ್ಲಿ ಉಂಟು. ಈ ಉಪನ್ಯಾಸದೊಳಗಿನ ಕೆಲವು ಸಂಗತಿಗಳನ್ನು ಪುಷ್ಟೀಕರಿಸುವ 'ಹೋಲಾಷ್ಟಕೋಪನಿಷದ್' ಎಂಬ ಕೈಬರೆಹದ ಚಿಕ್ಕ ಪುಸ್ತಕವೊಂದು, ಆ ಬಳಿಕ ಡಾ. ಡಾಂಗೆ ಅವರ ಕೈಗೆ ಬಂತು. ವಾರಣಾಶಿಯಲ್ಲಾದ ಅಖಿಲ ಭಾರತೀಯ ಪ್ರಾಚ್ಯಪರಿಷತ್ತಿನಲ್ಲಿ (All India Oriental Conference) ವಿದ್ವಾಂಸರ ಎದುರು ಈ ವಿಷಯದ ಪ್ರಬಂಧವನ್ನು ಓದಿದ್ದಾಯ್ತು.[೧] ಮೊದಲು ಆ ಹಸ್ತಲಿಖಿತದ ಮುಖ್ಯಾಂಶ ಹೇಳಿ ಬಳಿಕ ಅಶ್ವಮೇಧದ ಕೆಲವೊಂದು ಸಾಮ್ಯವನ್ನು ನಿವೇದಿಸಿದ್ದಾರೆ ಅದರ ಸಾರಾಂಶವು ಹೀಗಿದೆ:

ಇದು 'ರಸದ್ ವಾಮದೇವೇನ' ಬರೆಯಲ್ಪಟ್ಟಿದೆ. ಇವನು 'ಸರಸ್ವತೀ ವಂಶ' ಭೂಷಣನು ತಾನು ಎಂದು ಹೇಳಿಕೊಳ್ಳುತ್ತಾನೆ. 'ರಸದ್ವಾಮದೇವ ಸರಸ್ವತೀ' ಇದೂ ಒಂದು ಆತನು ಸ್ವೀಕರಿಸಿದ ಹೆಸರು ಇರಬೇಕು. ೧೫೦ ವರುಷಗಳ ಹಿಂದಿನ ಗ್ರಂಥವಾದರೂ ಕೆಲವೊಂದು ಪ್ರಾಚೀನ ಹಾಗೂ ಅರ್ವಾಚೀನ 'ಸಮಯ'ಗಳೊಳಗಿನ ಸಾಮ್ಯವು ಇಲ್ಲಿ ಪ್ರತೀತಿಗೆ ಬರುತ್ತದೆ. ಈ ಕಾರಣದಿಂದ ಪುರಾತನ ಆಚಾರ-ವಿಚಾರಗಳನ್ನು ಗ್ರಹಿಸಿಕೊಳ್ಳುವವರಿಗೆ ಈ ಪುಸ್ತಕವು ಮೌಲಿಕವಾಗುತ್ತದೆ. ಇದರೊಳಗಿನ 'ಇಲ್ಲಾ' 'ಇಲ್ಲೆ' ಪದ ಪ್ರಯೋಗಗಳಿಂದ ಇವನು ಕರ್ನಾಟ ಅಥವಾ ಆಂಧ್ರ, ಇಲ್ಲವೆ ನೆರೆಯ ಪ್ರಾಂತದವನಿರಬೇಕು. 'ಅಲ್ಲಾ' 'ಖುದಾ' ಎಂಬ ಮಾತುಗಳನ್ನು ಬಳಸಿದ್ದಾನೆ.

ಹೋಲಿಕಾದೇವಿ ಪರ್ವದಲ್ಲಿ 'ಸಾರ್ವಜನೀನ ರತಿ'ಗೆ ಪ್ರಾಧಾನ್ಯವಿದೆ. ಒಂದಿಲ್ಲೊಂದು ಒಗೆಯಲ್ಲಿ 'ರೇತೋದಾನ' ಆಗಬೇಕು. ಹೀಗೆ, ಸ್ತ್ರೀ-ಪುರುಷ ಸಂಯೋಗ-ಫಲ ಕೈಗೂಡಿಸಿಕೊಳ್ಳಬೇಕು. 'ಸಾರ್ವಜನೀನ ರತಿ' ಪ್ರಸಂಗದಲ್ಲಿ ಭಾಗವಹಿಸಲು ಅಶಕ್ಯವಿದ್ದರೆ ಏಕಾಂತರತರಾಗಬೇಕು. ಈ ಗ್ರಂಥದಲ್ಲಿ ಬರುವ ಬೇರೆ ಬೇರೆ ಪ್ರಾಂತಗಳ ಸ್ತ್ರೀ-ವೈಶಿಷ್ಟ್ಯ ಹಾಗೂ ಅವರ ಸಹವಾಸಸುಖ-ವರ್ಣನೆ ಕಾಮಶಾಸ್ತ್ರವನ್ನು ಹೋಲುತ್ತದೆ. 'ಸೌರವ ಧರ್ಮ'ದ ವಿವಿಧ-ಪ್ರಕಾರಗಳಲ್ಲಿ ನಾಲ್ಕು ಪ್ರಮುಖ ವಿಭಾಗ ಹೇಳುತ್ತಾನೆ :

೧. ಸಮಲಿಂಗೀ ಸುರತ;

೨. ವಿಷಮಲಿಂಗೀ ಸುರತ

೩. ಪುಂ-ಮೈಥುನ

೪. ವಿಷಮ ಯೋನೀ ಸುರತ (ಅಶ್ವ-ಮಾನವ : ಅಜ - ಮಾನವ ಇತ್ಯಾದಿ)

ಡಾ. ಡಾಂಗೆ ಬರೆಯುತ್ತಾರೆ : ಈ ಎಲ್ಲ ಪ್ರಕಾರಗಳು ತೀರ ಅಸಂಸ್ಕೃತವೆನಿಸಿದರೂ ಹೋಳೀಹಬ್ಬದಲ್ಲಿ ನಾನಾವಿಧದ ಕಾಮಾಲಾಪದ ವಾಡಿಕೆ ಇಂದಿಗೂ ಉಂಟು. ಇದು ಅರ್ವಾಚೀನ ಪುಸ್ತಕವಾದರೂ ಇದರ ಪರಿಭಾಷೆಯಲ್ಲಿ ವೇದಕಾಲೀನ ಛಾಯೆಯುಂಟು. 'ಹೋಲಾಷ್ಟ-ಕಲ್ಪ' ಇದರೊಳಗಿನ 'ಕಲ್ಪ'ವು ಅಥರ್ವವೇದೀಯ 'ಜನಕಲ್ಪ'ವನ್ನು ನೆನಪಿಗೆ ತರುತ್ತದೆ.[೨] ವೇದಕಾಲದಲ್ಲಿ ಜನನ ಧರ್ಮಕ್ಕಾಗಿ ಪ್ರಸಿದ್ಧವಿರುವ ಕಾಮಾಲಾಪಗಳು ಇದೇ ಬಗೆಯ 'ಕಲ್ಪ'ಗಳಾಗಿವೆ. ಅಶ್ವಮೇಧದಲ್ಲಿ ಈ ಬಗೆಯ ಮಂತ್ರಗಳನ್ನು ಹೇಳುವ ವಾಡಿಕೆಯಿತ್ತು! ಋಗ್ವೇದದ

'ಆ-ಹನಸ್ಯಾಃ' ಹೆಸರಿನ ಮಂತ್ರಗಳು ಇದೇ ವರ್ಗದುವು[೩] 'ಆ ಹನಸ್ಯಾಃ' ಮಂತ್ರಗಳು ಎಂದರೆ ಸಾಕ್ಷಾತ್ ರೇತವೇ ಸರಿ.

'ಆ ಹನಸ್ಯಾತ್ ವೈ ರೇತಃ ಸಿಚ್ಯತೇ' 'ಆ ಘಾತಃ
ಆ-ಹನಃ ತತ್ರ ಸಾಧುಃ ಯತ್ ಮೈಥುನಂ ಹಿ ತತ್!

ಷಡ್ಗುರು ಶಿಷ್ಯ, ಪುರಾತನ 'ಮಹಾವ್ರತ'ದಲ್ಲಿ ಕಾಮಕೇಳಿ, ಕಾಮಾಲಾಪಗಳಿಗೇ ಪ್ರಾಧಾನ್ಯವಿತ್ತು, ಮತ್ತು 'ಭೂತಾನಾಮ್ ಮೈಥುನಮ್' ಎಂಬ ವಿಧಿ ಪೂರ್ಣವಾಗದೆ ಆ ವ್ರತವು ಸಾಂಗವಾಗುವುದಿಲ್ಲ!

ಹೋಲಿಕಾ ಮತ್ತು ಅಶ್ವಮೇಧ ಇವೆರಡರ 'ಸಮಯ'ಗಳ ಸಾಮ್ಯದಲ್ಲಿ, ಆಚಾರ ಸಾಮ್ಯದಂತೆ ಭೌತ ಕಾಲದ ಸಾಮ್ಯವೂ ಉಂಟು. 'ಘಟಸ್ಥೇ ಮಾರ್ತಾಂಡೇ' 'ಘಟಸ್ಥೇ ರವೌ' ಈ ಲೆಕ್ಕದಿಂದ ಇದು ಮಾಘ-ಫಾಲ್ಗುಣ ಮಾಸದ ಸುಮಾರಿನ 'ಗ್ರಹ' ಸ್ಥಾನ ಸೂಚಕ ಸಂಕೇತ. ಘಟಸ್ಥ ಈ 'ಘಟ' ಕುಂಭ, ಕಲಶ ಇವು ಸ್ತ್ರೀಯೋನಿ ಪ್ರತೀಕಗಳಾಗಿವೆ. 'ಘಟ ಸ್ಥಾಪನೆ, 'ಕಲಶ' (ಕಳಸ) ಸ್ಥಾಪನೆ, ಈ ಪರಿಭಾಷೆ ಉದ್ಬೋಧಕವಿದೆ. ಕುಳ್ಳಿ, ಗಡಿಗೆ, ಕೊಡ ಮಕರ ಸಂಕ್ರಮಣದಲ್ಲಿ ಧಾನ್ಯ, ಫಲಹಾಕಿ ಮುತ್ತೈದೆಯರಿಗೆ, ಕುಮಾರಿಯರಿಗೆ ಕೊಡುವ ವಾಡಿಕೆಯಿದೆ. 'ಉಡಿ' ತುಂಬಲ್ಲಿರುವ ಸಾಂಕೇತಿಕತೆಯನ್ನು ನೆನೆಯಬಹುದು.

ಮಕರ ಸಂಕ್ರಮಣವು ಈಗ ಪೌಷ್ಯಮಾಸದ ಪರ್ವವಾಗಿದ್ದರೂ ಅದು ಮಾಘ ಅಮವಾಸ್ಯೆಗೆ ಇದ್ದುದರ ಉಲ್ಲೇಖವಿದೆ.[೪] ಇನ್ನೊಂದು ಮತದಂತೆ ಫಾಲ್ಗುಣ ಪೌರ್ಣಿಮೆಯ ಚಂದ್ರನೇ ವರ್ಷಮುಖವೆಂದು ಬಗೆಯಲಾಗಿತ್ತು.[೫] ಫಾಲ್ಗುಣ ಮಾಸವನ್ನೆ 'ವರ್ಷಮುಖ'ವೆಂದು ಬಗೆಯುವವರಿದ್ದರು. ಇದು ವಸಂತ, ಕಾಮನ ಸಂಗಾತಿಯ ಮಾಸ. ಇದು 'ಕುಂಭ' ರಾಶಿಯ ಮಾಸ. 'ಘಟೇ ಅರ್ಕಃ' ಭೂಮಿಯೆ ಘಟ. ಸೂರ್ಯನಿಂದ ಬೀಜಾರೋಪಣ, ಎಂಬ ಸಮೀಕರಣವು ಅಂದು ನಿಶ್ಚಿತವಾಗಿರಬೇಕು. ಅಶ್ವಮೇಧವು ಮಾಘದಲ್ಲಿ ಅಥವಾ ಇನ್ನೊಂದು ಅಭಿಪ್ರಾಯದಂತೆ ವಸಂತದಲ್ಲಿ ಆಗುತ್ತಿತ್ತು.[೬]

ಪ್ರಾಚೀನ 'ಮಹಾವ್ರತ'ದಲ್ಲಿ ಹೇಳಿರುವ ಒಂದು ಆಚರಣೆಯ ಉಲ್ಲೇಖವು, ಹೋಲಾಷ್ಟಕೋಪನಿಷತ್ತಿನಲ್ಲೂ ಉಂಟು. ೧೨-೨೦ ವಯಸ್ಸಿನೊಳಗಿನ ಸ್ತ್ರೀವೇಷಧಾರೀ ವಟು ಹಾಗೂ, ಗಡ್ಡದ ಬಾಬಾಜಿ ಇವರೊಳಗಿನ ಸಾಂಕೇತಿಕ ಸಂವಾದವನ್ನು ಇಲ್ಲಿ ಹೇಳಲಾಗಿದೆ. ಮಹಾವ್ರತ ಗ್ರಂಥದಲ್ಲಿ ವಟುವಿನ ಬದಲು ವೇಶ್ಯೆಯಿದ್ದಾಳೆ. ಉತ್ತರ ಭಾರತದ ಹಲವು ಪ್ರಾಂತಗಳಲ್ಲಿ ಈ ನಡೆವಳಿ ಈಗಲೂ ಉಂಟು.

ಹೋಳೀಕೇಳಿಯ ಇನ್ನೊಂದು ಆಚಾರ ವಿಧಿ: ಚೌರಸ್ತೆ: ಬೀದಿಯಲ್ಲಿ ನಿಂತು, ಅವಾಚ್ಯ ಶಬ್ದೋಚ್ಚಾರಮಾಡುತ್ತ ಎದೆ ಬಡಿದುಕೊಳ್ಳುವದು. ವಕ್ಷಸ್ಥಲಂ ಸ್ವಕೀಯಂ ತು ಭಗಂ ಉಚ್ಚಾರ್ಯ ತಾಡಯೇತ್ (ಅ.೩) ಈ ಸಂದರ್ಭದ ಇನ್ನೊಂದು ಸಮಯಾಚಾರ ಹೀಗಿದೆ : ಕತ್ತೆಗೆ ಪೊರಿಕೆ ಚಾಮರ ಕಟ್ಟಿ, ಅದರ ಮೈಮೇಲೆ ಮುದಿಗೂಬೆಯ ಚಿತ್ರಬರೆದು ಆ ಗಂಡು ಕತ್ತೆಯನ್ನು ಬೊಬ್ಬೆಗಳೊಡನೆ ಓಣಿಗಳಲ್ಲೆಲ್ಲ ಮೆರೆಯಿಸಿ ಮಧ್ಯಾಹ್ನದ ಸುಮಾರಿಗೆ ಊರಹೊರಗೆ ತಳ್ಳಬೇಕು. ಇದರ ಹೆಸರು ಭಗೋತ್ಸವ! ಈ ಉತ್ಸವ ಮುಗಿಸಿ, ಬಳಿಕ ಭಗೇಂದ್ರಿಯದ ಸ್ತೋತ್ರಮಾಡಿ ಜಲಾಶಯಗಳಲ್ಲಿ ಮಿಂದು ಶುಚಿಯಾಗಬೇಕು; ಮೌನಿಗಳಾಗಬೇಕು. ಆಮೇಲೆ ಕಾಮಾಲಾಪ ಉಚ್ಚರಿಸಲಾಗದು: ಮನೆಯ ಹೊರಗೆ ಬರಲಾಗದು. ಇದೆಲ್ಲವು 'ಸುಫಲೀಕರಣ' ತಂತ್ರ: ಚೆನ್ನಾಗಿ ಮಳೆ, ಬೆಳೆ ಬರಲು ಮಾಡಲಾಗುತ್ತಿತ್ತು.[೮] ಹೋಲಾಷ್ಟಕೋಪನಿಷತ್ತಿನ ಹಾಗೂ ಅಶ್ವ-ಮೇಧದ 'ಸಮಯ'ದೊಳಗಿನ ಸಾಮ್ಯವನ್ನು ಕುರಿತು ಡಾ. ಡಾಂಗೆ ಬರೆದ ಲೇಖವು. ಅವರು ಎಣಿಸಿರುವದಕ್ಕಿಂತ ಆಳಕ್ಕೆ ಒಯ್ಯುತ್ತದೆ! ಇದು ಮೂಲತಃ ಚಾಂದ್ರಸಂಪ್ರದಾಯ ಎಂಬುದು ಅವರ ಗಮನಕ್ಕೆ ಬಂದಂತಿಲ್ಲ! ಅವರು ಹೇಳಿರುವ 'ವಿಷಮ ಯೋನೀ ಸುರತ'ವು ಮೌನೇಯ ಕೇಶೀ: ಪುರುಷ ಸಂಪ್ರದಾಯದ ವೈಶಿಷ್ಟ್ಯವಾಗಿದೆ. ಮುನಿಸೂಕ್ತದೊಳಗಿನ '......ಮೃಗಾಣಾಂ ಚರಣೇ ಚರನ್' ಎಂಬ ವಾಕ್ಯಕ್ಕೆ ಭಾಷ್ಯಕಾರರು ತೇಲಿಸಿ ಏನೇ ಅರ್ಥ ಹೇಳಿದರೂ ಈ ವಿಕೃತಾಚಾರವಿಧಿಯು ಸಾಧನವಾಗಿರುವ ಅವಧೂತ ಗುರು (ದತ್ತ) ಪಂಥದಲ್ಲಿ ಈ ಗುಹ್ಯಮಾರ್ಗವನ್ನು

ಅಪ್ರಶಸ್ತವೆಂದು ಬಗೆಯಲಾಗಿಲ್ಲ. 'ವಾತರಶನ'ರೆಂಬ ಮುನಿ 'ಸಪ್ತ'ರಲ್ಲಿ ಬರುವ ಶೃಂಗಿ ಋಷಿಯು ವಿ-ಭಾಂಡಕನ ಪುತ್ರನು: ಹರಿಣಿಯಲ್ಲಿ ಹುಟ್ಟಿದವನು, ಎಂದು ಹೇಳಲಾಗುವ ಪವಾಡ ಕಥೆಯೆ ಇದಕ್ಕೆ ನಿದರ್ಶನವಾಗಿದೆ. ಪ್ರತಿಮಾ: ಸಂಕೇತ ಸೃಜಿಸುವುದರೊಳಗಿನ ಪ್ರತಿಭೆಯ ಸೂಕ್ಷ್ಮತೆ, 'ವಿ-ಭಾಡಂಕ' ಈ ಶಬ್ದಶಿಲ್ಪದಲ್ಲೂ ಒಡಮೂಡಿ ನಿಂತಿದೆ! 'ಶೃಂಗಿ' ಹುಟ್ಟಿದ ಭಾಂಡ : ಪಾತ್ರ : ಕುಂಭ: ಘಟ ಇದು ವಿ (ಶೇಷ) ಪ್ರಕಾರದ್ದು, ಎಂದು ಸೂಚಿಸುವ ಉದ್ದೇಶದಿಂದಲೆ ವಿ-ಭಾಂಡಕ ಪುತ್ರ: ವಾಲ್ಮೀಕಿಯೂ ಈ ಅರ್ಥದಿಂದ ವಿ-ಭಾಂಡಕನೆ! ಈ ಅ(ತಿ) ಮಾನುಷ ನಾಮ ಸಂಕೇತದ ವ್ಯಕ್ತಿ, ಋಗ್ವೇದ ಕಾಲದಲ್ಲೂ ಇದ್ದಿತೇ? ಅಥವಾ ಇದು ಕೇವಲ ಅತಿಶಯೋಕ್ತಿಯೆ ಎಂಬ ವಿವಾದ ಹಾಗಿರಲಿ; ಪುರಾತನ ಕಾಲದಿಂದ ಶೃಂಗಿ (: ಸರ್ಪ) ನಾಮ ಸಂಕೇತವು ಪ್ರಚಾರದಲ್ಲಿ ಇದ್ದಿತೆಂಬುದು ಮಾತ್ರ ನಿಜ. ಶುಷ್ಣ: ಅಹಿಯೂ ಶೃಂಗಿ ಋಗ್ವೇದದಲ್ಲಿ. 'ಹಿರಣ್ಯಶೃಂಗಿ' ಅಶ್ವವೂ ಅಗ! ಗ್ರೀಕ್ ಪುರಾಣಗಳಲ್ಲಿ ಡೈಯೋನಿಸಸ್‌ನ ಆಕೃತಿಯೂ ಇದೇ ಬಗೆಯದು. ಶೃಂಗಿ ಋಷಿಯ ತಾಯಿ, ಹರಿಣಿ ಇರಲಿ, ಇಲ್ಲದಿರಲಿ, ಪಶು-ಮೃಗಗಳೊಡನೆ ಶರೀರ ಸಂಬಂಧವಿರಿಸುವ 'ಶಾಸ್ತ್ರ' ನಡೆಯುತ್ತ ಇದ್ದಿತೆಂಬುದು ನಿಜ. ಋಗ್ವೇದ ಸೂಕ್ತಕಾರರಲ್ಲಿ ವಿಖ್ಯಾತ ಮುಂಡಿಗೆ-ವಚನಕಾರನಾದ ದೀರ್ಘತಮಸನು, ಆ ಕಾಲದಲ್ಲಿ ಅವಧೂತ ಪಂಥೀಯ ಮುಕ್ತಸಂಗೀ 'ಗುರು' ದೇವ: ಸಿದ್ಧರ ರಾಜ ಅಥವಾ ನಾಥನಾಗಿರಬೇಕು. ಈ ಪಂಥವಿಶಿಷ್ಟ ಸಂಕೇತಗಳು ಮೈದಾಳುವ ಮುಂಚಿನ ವಿಷ್ಣು-ಸರ್ವೋತ್ತಮವಾದೀ ಏಕಾಂತಿಕ ಭಕ್ತನೆಂಬ ದೀರ್ಘತಮಸನು ಒಬ್ಬ ಜೀವಂತ ವ್ಯಕ್ತಿಯಿರಬೇಕು. ಋಗ್ವೇದದಲ್ಲಿ, ಇದು ಕಾಲ್ಪನಿಕ ಪಾತ್ರವೊ, ಎನ್ನಲು ಅವಕಾಶವಿಲ್ಲ. ಈತನ ಇಡೀ ಚರಿತ್ರೆ, ಹುಟ್ಟಿನಿಂದ ತೊಡಗಿ ಅ-ವಾಚ್ಯವಿದೆ; ಇವನು ಕೊನೆಗೆ 'ಪಶು' ಧರ್ಮಾಚಾರ ಮಹಾವ್ರತ ಸ್ವೀಕರಿಸಿದ್ದರಿಂದ, ಪ್ರಾಪ್ತ ಗೌತಮ (ಗೋತಮ=ಚಂದ್ರ) ಎಂಬ ನಾಮಾಂತರವೂ ಇವನಿಗುಂಟು. ಅ-ವಾಚ್ಯ- (ಅನಿರ್ವಚನೀಯ) ತತ್ವವನ್ನು ಅರ್ಥಕ್ಕೆ ಎಟಕದ ಮುಂಡಿಗೆ ಮಾತಿನಲ್ಲಿ ಹೇಳುವ ವಾಡಿಕೆಯುಂಟು. ಅವಾಚ್ಯ ಆಶಯವು ಒಳಗೊಂಡಿರುವುದೇ, ಅನಿರ್ವಾಚ್ಯದ ಮುಖ್ಯ ಲಕ್ಷಣವೊ ತಿಳಿಯದು! ಏಕೆಂದರೆ

"ಅಪಿ ಚೇತ್ ಸುದುರಾಚಾರಃ ಭಜತೇ ಮಾಮ್ ಅನನ್ಯ ಭಾಕ್।
ಸಾಧುರೇವ ಸಃ ಮಂತವ್ಯಃ...." ಎಂದು.

ಗೀತೆಯಲ್ಲಿ ಪರ್ಯಾಯದಿಂದ ಅನಾಚಾರದ ಮಂಡನೆಯನ್ನೇ ಮಾಡಿರುವುದರ ಕಾರಣವೂ ಇಲ್ಲಿ ಅರಿಕೆಗೆ ಬರುವಂತಿದೆ.

ಭಾರತೀಯ ಹಾಗೂ ಗ್ರೀಕ್-ರೋಮ್ ಸಂಸ್ಕೃತಿಯ ಪುರಾತನ ಪವಾಡಕಥೆಗಳ ತುಲನೆಯಿಂದ ಈ ನಾಗಪ್ರತಿಮೆಯು ಮಾರ್ಪಡುತ್ತ ಬಂದ ಒಂದು ಸ್ಥೂಲಕ್ರಮವು ಅರಿಕೆಗೆ ಬರುತ್ತದೆ. ಆಪ : ರಸ, ವೃಕ್ಷ, ಚಂದ್ರ ಇವುಗಳೊಡನೆ ವೇದದಲ್ಲಿ ಸರ್‌ಪ; ಸರ್ಪ-ಪಕ್ಷಿ : ಕುಕ್ಕುಟಸರ್ಪ, (Cronus ಮು.). ಆಮೆ, ಮೀನ ಮುಂ. ಅಜ, ಮೇಷ, ಕರಡಿ, ಇಲಿ ಸಹ. ವೃಷಭ : ಬಳಿಕ ಅಶ್ವ : ಭಾರತೀಯ ಪ್ರತಿಮಾ : ಸಂಕೇತಗಳ ಇತಿಹಾಸದಲ್ಲಿ ಗವಾಲಂಬಕ್ಕಿಂತ ಅಶ್ವಮೇಧವು ಅರ್ವಾಚೀನ ಕಾಲದವರೆಗೂ ಉಳಿದುದಾಗಿ ಕಾಣುತ್ತದೆ. 'ವೃಷಭ'ನ ಬಲಿ: ಗವಾಲಂಬ ಬ್ರಾಹ್ಮಣಗ್ರಂಥಗಳ ಸುಮಾರಿಗೇ ನಿಂತಿರಬೇಕು. 'ಅಶ್ವ'ವು ಭಾರತೀಯ ಮೂಲದ ಪ್ರಾಣಿಯೊ, ಎಂಬ ಸಂದೇಹಕ್ಕೆ ಅವಕಾಶವಿದೆ.* 'ಸೈಂಧವ' ನಾಮಸಂಕೇತ, ಕುದುರೆಗೆ, ಅರಬ್ಬಿ, ಕಾಠೇವಾಡೀ ಈ ಬಗೆಯ ಹೆಸರು ಉಂಟು. ಕುದುರೆಗಳನ್ನು ಪಡೆವ ಆಸೆಯಿಂದ ರಾಷ್ಟ್ರಕೂಟರು ಅರಬರಿಗೆ ಕೊಟ್ಟ ಮಿತಿಮೀರಿದ

---

* ಈ ಬಗೆಗೆ ತೀ.ನಂ.ಶ್ರೀ 'ಸಮಾಲೋಕನ' ವಿಮರ್ಶಾ ಸಂಕಲನದಲ್ಲಿ 'ಕುದುರೆ', 'ಅಶ್ವ', 'ಹಯ' ಈ ಪದಗಳ ಬಗೆಗೆ ಆಳವಾಗಿ ಚರ್ಚಿಸಿದ್ದಾರೆ. ಅಶ್ವಗಳ ಬಗೆಗಿನ ಪುರಾಣೋಲ್ಲೇಖನಗಳಿಗೂ ಅಶ್ವಶಾಸ್ತ್ರಗಳಲ್ಲಿ ಬಂದಿರುವ ವಿವರಗಳಿಗೂ ಬಹುತೇಕ ಸಾಮ್ಯವುಂಟು. ಆದರೆ, ವೇದಗಳಲ್ಲಿ ಬಳಕೆಗೊಂಡಿರುವ 'ಅಶ್ವ' ಶಬ್ದಸಂಕೇತವು ಕುದುರೆಯೊ ಅಥವಾ ಇಂದ್ರಿಯರೂಪವೊ ಖಚಿತವಾಗಿ ತಿಳಿಯದು. ಆದರೆ, ಶಂಬಾ ಇದನ್ನು ಇಂದ್ರಿಯರೂಪೀ ಸಾಂಕೇತಿಕ ಆಶಯದಲ್ಲಿ ಗ್ರಹಿಸುತ್ತಾರೆ. (ಸಂ)

ಸವಲತ್ತುಗಳ ಕಥೆ ಅಭ್ಯಸನೀಯವಿದೆ. ಕಂನಾಡು ಗುಜರಾತಿಗೆ ದೂರವಾದ ಬಳಿಕ ಕಂನಾಡಿಗೆ ಭಟಕಳವೇ, ವೀರಭಟರಿಗೆ ಕುದುರೆ ಪೂರಯಿಸುವ ಬಂದರವಾಯಿತು. ಅದರೊಡನೆ 'ನವಾಯತ'ರೆಂಬ ಹೊಸಜಾತಿ ಅಲ್ಲಿ ನಿರ್ಮಾಣವಾಯಿತು. ಈ ಕಥೆ ಯಾತಕ್ಕೆ ಎಂದರೆ ಕುದುರೆ ಹೊರಗಿನಿಂದ ಬರಬೇಕಾಗುತ್ತಿತ್ತು ನಮ್ಮ ಸೈನಿಕರಿಗೆ! ಇಂದ್ರ ಸಂಪ್ರದಾಯದ ವಿಜುಗೀಷುವೃತ್ತಿಯ ಪ್ರೇರಕ ಪ್ರತಿಮಾ ಸಂಕೇತವಾದ 'ಅಶ್ವ-ಮೇಧ' ಯಾಗದ ಮೂಲ ಧಾರಣೆಯು ಯತಿ, ತವಸಿ ಪಂಥಕ್ಕೆ ಹಿಡಿಸಿರಲಾರದು. ವಿರಕ್ತ ಪಂಥೀಯ 'ಪುರುಷ-ಮೇಧಿ'ಗಳು, ಈ ಐಹಿಕಜೀವನ ಪ್ರೇರಕ ರೀತಿಯ ಪೌರುಷ ಸೂಚಕ ಯಜ್ಞವನ್ನು ಖಂಡಿಸುವ ನಿಮಿತ್ತದಿಂದ ಹೀಗೆ ಈ ಹೋಳಿಹುಣ್ಣಿಮೆಯ ರೂಪಕೊಟ್ಟಿರುವಲ್ಲಿ ಆ ಮೂಲ ಅಶ್ವ-ಮೇಧವು ಒಂದು ವಿಡಂಬಕ ವಿಧಿಯಾದುದಾಗಿ ಕಾಣುತ್ತದೆ!

ಹವ್ಯವಾಹನ ಗೃಹ್ಯಾಗ್ನಿಯು. ಆಪಾಂ ನಪ್ತೃ: ಗೌತಮಾಗ್ನಿಯಾಗಿ ಮಾರ್ಪಟ್ಟಿರುವುದನ್ನೂ ಇಲ್ಲಿ ಸ್ಮರಿಸಿಕೊಳ್ಳಬೇಕು : "ಪುರುಷೋವಾದ ಗೌತಮಾಗ್ನಿಃ" 'ಯೋಷಾವಾವ ಗೌತಮಾಗ್ನಿಃ'* ಈ ಭೂಮಿಕೆಯಿಂದ ದೀರ್ಘತಮನು, ಸಾಕ್ಷಾತ್ ಚರಂತೀ 'ಗೌತಮಾಗ್ನಿ'ಯೇ ಅದುದಾಗಿ ಸಂಪ್ರದಾಯವೇ ಹೇಳುವ ಆತನ ಚರಿತ್ರೆಯಿಂದ ತಿಳಿಯುತ್ತದೆ! ಚರಂತಿ ಗೌತಮಾಗ್ನಿ, ಸರ್ಪಯಾಗ ಹಾಗೂ ಯಾಯಾವರ ಜರತ್ಕಾರು ಹಾಗೂ ಆತನ ಪುತ್ರ ಆಸ್ತಿಕ ಬೇರೆಯಲ್ಲ!

ನಮ್ಮ ಪುರಾತನರು, ಭಾರತೀಯ ಸಂಸ್ಕೃತಿ ಸಂರಕ್ಷಕರು. ಇವರು ಒಂದು (ಸಂ)ವತ್ಸರವೇ ಇಡಿಯಾಗಿ 'ಫಾಲ್ಗುಣ'=೦ ಆಗಬಾರದೆಂದು, ಅದನ್ನು ವರುಷದ ಕೊನೆಯಲ್ಲೆ ಇರಿಸಿ ಉಪಕಾರ ಮಾಡಿದ್ದಾರೆ! ಈ 'ಋತು' ದರ್ಶನ, ಅಂತ್ಯಭಾಗದಲ್ಲಿ-ಶಿಶಿರದಲ್ಲೆ ಆಗತಕ್ಕದ್ದೆಂದು ವಿಚಾರ ಪೂರ್ವಕವಾಗಿ ನಿಯೋಜಿಸಿದ್ದಾರೆ. ಇದಕ್ಕೆ ಪ್ರಮಾಣ ಚೈತ್ರಮಾಸದ ವಾಡಿಕೆಗಳು (Rituals): ರಂಡೆ-ಹುಣ್ಣಿವೆಯ ಪ್ರಭಾವದ ಅವಧಿಯು ಮುಗಿದು, ಇನ್ನು ಮುತ್ತೈದೆ ಹುಣ್ಣಿವೆಯ 'ಸಮಯ' (: ಆಚಾರ) ಪ್ರಾರಂಭವಾಗುತ್ತವೆ; ಇದಕ್ಕೆ ದವನದ ಹುಣ್ಣಿವೆ ಎಂದೂ ಹೆಸರುಂಟು. ಹನೂಮಾನ್ ಜನ್ಮ ಈ ಹುಣ್ಣಿವೆಗೇ. ಸಭ್ಯಗೃಹಸ್ಥರಾಗಿ ಬಾಳುವ ಮನುಜರ ಆದರ್ಶ ದೈವತವಾಗಲು, 'ಸುಮಜ್ಜಾನಿ' ಭಗ-ವಂತ ಶ್ರೀ ಮನ್ಮಹಾವಿಷ್ಣುವಿಗೆ ಈ ಮಾಸದಲ್ಲಿಯೆ 'ದಮನ' (ದವನ) ಪುಷ್ಪಾರ್ಚನೆ ಮಾಡುವ ಸಂಪ್ರದಾಯವುಂಟು! ದೇವರಿಗೆ ದಮನ ಯುಕ್ತನಾಗಲು ಸಂಯಮಿಯಾಗಲು ಪ್ರಾರ್ಥಿಸುವ ಸಂಕೇತ; ದಮನಪುಷ್ಪ! ಎಲ್ಲ ದೈವತಗಳೂ ಮೂಲತಃ 'ಆಪಾಂ ನಪ್ತೃ' ದೈವತದ ವಿವಿಧ ನಾಮಾಂತರಗಳೇ ಆಗಿರುವುದರಿಂದ ಈ ತಿಂಗಳ ಒಂದೊಂದು ತಿಥಿ, ಒಂದೊಂದು ದೈವತದ ದಮನ ಪುಷ್ಪಾರ್ಚನೆಗೆ ಮೀಸಲಾಗಿದೆ: ಶುದ್ಧ ದ್ವಿತಿಯಾ, ತೃತೀಯ-ಗೌರಿ: ಷಷ್ಠಿ ಸ್ಕಂದ: ಸಪ್ತಮೀ-ಸೂರ್ಯ ಅಷ್ಟಮೀ-ಭವಾನಿ: ನವಮಿ-ಶ್ರೀರಾಮ, ದ್ವಾದಶಿ-ವಿಷ್ಣು: ತ್ರಯೋದಶೀ ನರ-ಸಿಂಹ, ಪೌರ್ಣಿಮೆ ಸರ್ವದೈವತಕ್ಕೂ ಸಲ್ಲಬೇಕು. ಮಾಸದ ಒಂದೊಂದು ಆಧಿದೈವತಗಳ ಯೋಜನೆಯೂ ತುಂಬ ವಿಚಾರಪೂರ್ವಕವಾಗಿ ಆಗಿರುವಂತಿದೆ. ಮಾದರಿಗಾಗಿ: ವೈಶಾಖ; ಮಧು (ಸೂದನ) ಆಷಾಢ : ವಾಮನ : ಮಾಘ ಮಾಧವ : ಫಾಲ್ಗುಣ : ಗೋ-ವಿಂದ! (ಗೌತಮಾಗ್ನಿ?) ಕೊನೆ!

ಯುರೋಪೀಯ ಸಂಸ್ಕೃತಿಯಲ್ಲಿರುವ ಅಪಾಂ ನಪ್ತೃ ಸಂಪ್ರದಾಯದ ಆಚಾರಾಂಗದೊಳಗಿನ ಅವಶೇಷವನ್ನು ಇಂದಿನ ಕ್ರಿಸ್ತಮಾಸದ 'ನಿನ್ನೆ'ಗಳಲ್ಲಿ ನೋಡಲು ಸಿಕ್ಕುತ್ತದೆ. ಕ್ರಿಸ್ತಮಾಸವು ಶಿಶಿರಋತು : ಅವರ ಕೊನೆಯ ತಿಂಗಳು! ಈ ಸಮಯಾಚಾರಗಳಲ್ಲಿ ಶನಿ (: ಹನೂಮಂತ) ದೈವತದ ಪರ್ವೋತ್ಸವ! Saturnalia : ಶನಿ: ಮಾರುತಿ (:ಹನೂ-ಮಾನ್): ಒಂದೇ ರಥದಲ್ಲಿ 'ರೋದಸೀ' ಕ್ರೀಡಿಸುವವ: ಕಬಂಧ : ಏಕಾಕ್ಷ: ವಾಯಸ: ಗ್ರಹ: ಸರ್‌ಪ! ಉಭಯ ಸಂಸ್ಕೃತಿಯೊಳಗಿನ ಈ ಸಾಂಕೇತಿಕ ಪ್ರತಿಮೆಗಳ ಭಾಷಿಕ ಬಾಹ್ಯಆಕೃತಿಯು ಬೇರೆ ಎನಿಸಿದರೂ, ಇವುಗಳೊಳಗಿನ ಅರ್ಥ-ಗರ್ಭ (Concept) ಸಮಾನವಿರುವುದನ್ನು ಅಲ್ಲಗಳೆಯಲು ಆಗುವುದಿಲ್ಲ!

---

* ಇಂದ್ರಾಂಶನೆಂಬ ನರ: ಅರ್ಜುನನಿಗೆ ಫಲ್ಗುಣ ಎಂದೂ ಹೆಸರಿಸಿ, ನಮ್ಮ ಪೂರ್ವಜರು, ಮನು ಜವ ಬೆಲೆ ಎಂದೂ ನಿರ್ಧರಿಸಿದ್ದಾರೆ!

Saturn : Italic god of agriculture, late, identified with Cronus, father of zeus. ruler of the world in a golden age of innocence and plenty.... (this planet is) credited with producing cold, sluggish, gloomy temperament in those born under its influence."
Saturnalia : Ancient Roman festival in December, observed as time of unrestrained merry-making (predecessor of modern Christmas tide;) scene or time of wild revelry or tumult

ಭಾರತೀಯ ಪುರಾತನ ಕಥೆಗಳ ವರುಣ: ಊರ್ಧ್ವಮೂಲ ಸ್ತೂಪ, (ಕಂಬ) ವುಳ್ಳವ: ಅಪ್-ಧಿಪ ಇವನೇ ವಿಷ್ಣು-ಕೃಷ್ಣನಲ್ಲಿ ವಿಲೀನನಾಗುತ್ತಾನೆ. ಈ ದೈವತ ಹಾಗೂ ಗ್ರೀಕ್ ಪುರಾತನ ಕಥೆಗಳ ಯುರೆನಸ್ ಇವರಲ್ಲಿ ತುಂಬ ಹೋಲಿಕೆಯಿದೆ. ಯುರೆನಸನೂ ವೃಷ್ಣಿ : ವರ್ಷಣಶೀಲ ದೈವತ. ಇದು ಸುರಿಸಿದ ಮಳೆಯಿಂದ ಏಕಾಕ್ಷ, ಸೈಕ್ಲೊಪಸ್, ಕ್ರೋನಸ್ (ಕಾಗೆ=ಏಕಾಕ್ಷ) ಇಂತಹರ ಸೃಷ್ಟಿಯಾಯ್ತು. ಭಾರತೀಯ ವರುಣನ 'ವರ್ಷಣ' ದಿಂದ ಅಪಾಂ-ಗರ್ಭವೆಂಬ ವಾಯಸ, ಶೃಂಗಿಸರ್ಪ, ಶುಷ್ಣ, ವೃತ್ರಾದಿಗಳ ಸೃಷ್ಟಿಯಿತೆಂದು ಹೇಳಲಾಗಿಲ್ಲ. ಆದರೆ ವಾಯಸ, ಶೃಂಗಿ ಅಹಿ, ದ್ರಪ್ಸ ಕೃಷ್ಣ ಇವರೆಲ್ಲ ಆಪ : ರಸ ಸ್ವರೂಪ ದೈವತಗಳು ಎಂಬುದು ಸುಪ್ರಸಿದ್ಧವಿದೆ. ವೃಷ್ಣಿ: ವಿಷ್ಣು ಅಥವಾ ವರುಣನಿಗೆ ಈ ಜನಕತ್ವದಿಂದ ದೂರವಿರಿಸಿ ವೃತ್ರ, ಶುಷ್ಣಾದಿಗಳನ್ನು 'ದುಷ್ಟ'ರೆಂದು ವರ್ಣಿಸಲು ಅನುಕೂಲವಾಗಿದೆ! ಆದರು ಇವರ ಹೋಲಿಕೆಯು ಅಭ್ಯಸನೀಯವಿದೆ. ಭಾರತೀಯ ಹಾಗೂ ಯುರೋಪೀಯ ಇಂದಿನ ಧಾರ್ಮಿಕ ಪಂಥಗಳ ನಿನ್ನೆಗಳಲ್ಲಿ ಇರುವ ಈ ಸಮಾನ ಆಕೃತಿಯು ಸಂಸ್ಮರಣೀಯವಿದೆ. ಆ ಅವಶೇಷವೇ, ಎರಡೂ ಜನಗಳಲ್ಲಿ ಇಂದಿಗೂ ಇರುವ ಫಾಲ್ಗುಣ-ಪರ್ವದ ನಡೆವಳಿ. ಆದರೆ, ವ್ಯತ್ಯಾಸವು ಇಷ್ಟೆ : ಪಾಶ್ಚಾತ್ಯರು ಅದನ್ನು ಭಾರತೀಯ ಮೇಧಾವಿಗಳ ಮಟ್ಟದಲ್ಲಿ ಮಾಟದ ಮಾತುಗಳಿಂದ ಬಚ್ಚಿಡಲು ಸಮರ್ಥರಾಗಿಲ್ಲ. ನಮ್ಮಷ್ಟು ಆತ್ಮವಂಚನೆಗೆ ಕಾರಣವಾಗುವಂತೆ ಮರೆಮಾಜಲು ಪ್ರಯತ್ನಪಟ್ಟಿಲ್ಲ.

ಪುರುಷಮೇಧ, ಸರ್ಪಮೇಧ ಮತ್ತು ಅಶ್ವಮೇಧ ಇವುಗಳಲ್ಲಿರುವ ಪುರುಷ : ಸರ್ಪ : ಅಶ್ವ ಈ ಸಾಂಕೇತಿಕ ಪ್ರತಿಮೆ ಸಮಾನವಿರುವುದರಿಂದ ಇವು ಅಪ : ರಸ ಪಂಥೀಯ 'ಗೌತಮಾಗ್ನೀ' ಕುಂಡದಲ್ಲಿ ='ಆಪ'ದಲ್ಲಿ ನಡೆವ ಹೋಮದ ಪ್ರಕಾರಗಳೇ ಎಂದಲ್ಲಿ ತಪ್ಪಾಗಲಾರದಷ್ಟೆ. ಮೊದಲನೆಯದು ವಿರಾಟ್-ಸಿದ್ಧಿಗಾಗಿ ಪರಿವ್ರಾಜಕ : ಜಂಗಮ ದೀಕ್ಷೆ ಪಡೆವಾಗಿನ 'ಸತ್ರ'; ಶತಪಥದ 'ಪುರುಷ ಮೇಧೀ' ನಾರಾಯಣನೇ ಸಾಕ್ಷಿ. ಇದಕ್ಕೆ, ಎರಡನೆಯದು ಸರ್ಪ-ಸತ್ರ; ಇದು ಕೇವಲ ಕಾಲ್ಪನಿಕ. ಇಂದ್ರನು ಅಹಿ ತಕ್ಷಕನ ಮಿತ್ರನೆಂದು ಪ್ರಸ್ಥಾಪಿಸಲು, ಆತನ ವೃತಘ್ನನೆಂಬ ಬಿರುದು ವ್ಯರ್ಥ ಪ್ರೌಢಿಮೆ; ಅವನು ಅಹಿ : ವೃತ್ರ ಸ್ವರೂಪೀ ತಕ್ಷಕನ ಸಂಗಾತಿ ಎಂದು ತೋರಿಸಲು ಕಲ್ಪಿಸಿದ ಕಥೆಯಾಗಿದೆ. ಇಂದ್ರನು ಉಳಿಯಬೇಕಿದ್ದರೆ ತಕ್ಷಕನೂ ಉಳಿಯಲೇ ಬೇಕು, ಎಂಬ ನೀತಿಬೋಧಕ ಕಟ್ಟುಕಥೆ (Fable)! ಇನ್ನು ಅಶ್ವಮೇಧ ವಿಚಾರ : ಸಂನ್ಯಾಸ ಪಂಥೀಯ ಭೂಮಿಕೆಯಿಂದ ಮಾಡಲಾಗಿರುವ ವಿಜಗೀಷು ವೃತ್ತಿಯ ವಿಡಂಬನ: ಈ ಅಶ್ವಮೇಧ ಆಚಾರವಿಧಿ. ಕ್ಷತ್ರಿಯ ವೃತ್ತಿಯ ಮೂಲಪ್ರೇರಣೆಯಾದ ಪೌರುಷವನ್ನೇ ತುಂಡರಿಸಿ ಬಿಡುವ ಅಶ್ವಮೇಧದ ಈ ಕೃತಿಯು, ಆ ಯಜಮಾನನಿಗೆ ಸಮ್ರಾಟ್ ಪದವಿಯ ಅರ್ಹತೆಯನ್ನು ತರಲು ಶಕ್ಯವಿಲ್ಲ. ಆದುದರಿಂದ, ಈ ಅಶ್ವಮೇಧವು ಸಹ, ಇಂದ್ರ-ತ್ರಿತ ಸಂಪ್ರದಾಯದ ಆ ಮೂಲ ಸಮಯದ ವಿಕೃತಿಯೆ ಇರಲಿಕ್ಕೆ ಬೇಕೆಂದು ಊಹಿಸಬೇಕಾಗುತ್ತದೆ. ಕುರುಕ್ಷೇತ್ರದ ಘೋರ ಸಂಗ್ರಾಮವಾಗಿ ಆ ದುಷ್ಪರಿಣಾಮಗಳ ತೀವ್ರತೆ ಇನ್ನೂ ಕಡಿಮೆಯಾಗದಿರುವಾಗಲೆ, ಪಾಂಡವರು -ಹೋಗಲಿ, ಧರ್ಮನೆಂಬವನೂ 'ಅಶ್ವಮೇಧ'ಕ್ಕೆ ಅಣಿಯಾಗುತ್ತಾನೆ, ಎಂದರೆ ನಂಬುವುದು ಹೇಗೆ? ರಾವಣನನ್ನು ಗೆದ್ದ ಬಳಿಕ ರಾಮನ ಮಹಾ ಶತ್ರುಗಳು ಉಳಿದವರಾರು? ಆದರು ಅವನು ಸಹ ನೆರವೇರಿಸಿದನೆಂಬ ಅಶ್ವಮೇಧವು

ಅರ್ಥವಿಹೀನವೇ ತಾನೆ? ಆದಕಾರಣ, ಯುಧಿಷ್ಠಿರ ಮತ್ತು ರಾಮನಂಬುವರು ಮಾಡಿದ 'ಅಶ್ವ'-ಮೇಧವು ವಿಜುಗೀಷು ಸಂಪ್ರದಾಯದ ಸಮಯಾಚಾರವೆಂದು ಬಗೆಯಲಿಕ್ಕೆ ಆಗುವುದಿಲ್ಲ.

ವ್ಯಾಸ-ವಾಲ್ಮೀಕಿಗಳಂತಹ ತಪೋಧನರೆಂಬವರ ಕೃತಿಯಲ್ಲಿ, ಹೀಗೆ ಕವಡು-ವಿಡಂಬನ ಇದ್ದೀತೆಂದು ಸಂದೇಹ ಪಡುವುದೂ ದುರ್ಬುದ್ಧಿ ಎಂಬ ಕಾರಣದಿಂದ. ಆಗಾಗ ಈ ಆಕ್ಷೇಪಗಳನ್ನು ಒರೆಗೆ ಹಚ್ಚಿ ಒಂದಕ್ಕಿಂತ ಹೆಚ್ಚು ಬಗೆಯಿಂದ ತಾಳಮೇಳವು ದೊರೆಯದೆ ಒಂದು ವಾಕ್ಯವನ್ನು ಬರೆಯುವುದಕ್ಕೂ ಅಳುಕಿದ್ದೇನೆ-ಹಿಂದೆಗೆದಿದ್ದೇನೆ. ಆದರೆ, ಋಗ್ವೇದದ ಇಂದಿನ ಸಂಹಿತಾಪಾಠದಿಂದ ತೊಡಗಿ ವ್ಯಾಸ ವಾಲ್ಮೀಕಿಗಳ ಕೃತಿಗಳ ವರೆಗೂ ಇರುವ ಈ ವ್ಯಾಮಿಶ್ರ ಶಿಲ್ಪದೊಳಗಿನ ಸಮಾನ ಶೈಲಿಯು ಬೆರಗುಗೊಳಿಸುವಂತಹುದಾಗಿದೆ. ಇದರೊಳಗಿನ ಸಾಹಿತ್ಯಿಕ ಸೌಂದರ್ಯದ ಮೂಲಕ, ಇಲ್ಲಿ ಜೀವನ ಮೂಲ್ಯಗಳನ್ನು ಮಣ್ಣುಗೂಡಿಸುವ ವ್ಯವಸ್ಥಿತ ಪ್ರಯತ್ನವಿದ್ದುದರ ಕಡೆಗೆ ಗಮನವೇ ಹೋಗುವುದಿಲ್ಲ! ಸೂರ್ಯನನ್ನು (ನಾರ: ಆಪ ಸ್ವರೂಪೀ) ನಾರಾಯಣನೆಂದು, ಅಗ್ನಿಯನ್ನೂ ನಾರಾಯಣ ನೆಂದೂ ಪೂಜಿಸುವಂತೆ ಮಾಡಲಾಗಿರುವ ಈ ಒಂದು ಸ್ಥಿತ್ಯಂತರವನ್ನು ಆ ಮೂಲಾಗ್ರ ಗ್ರಹಿಸಿಕೊಳ್ಳುವ ಪ್ರಯತ್ನದಲ್ಲಿ, ಕಂಡುಬರುವ ಸಂಗತಿಗಳನ್ನು ಮಾಟ; ಕವಡು, ಪಂಥಾಭಿಮಾನದ ಈರ್ಷ್ಯೆ ಎನ್ನದೆ ಬೇರೆ ಬಗೆಯಲ್ಲಿ ಹೇಳಲು ಶಕ್ಯವಾದರೆ ನನಗೆ ಸಂತೋಷವೇ ಇದೆ.

ಈ ಕೆಲವು ಸ್ಥಿತ್ಯಂತರಗಳನ್ನು ಆ ಮೂಲಾಗ್ರ ಸಮೀಕ್ಷಿಸಿ ಗ್ರಹಿಸಿಕೊಳ್ಳುವ ಆವಶ್ಯಕತೆಯಿದೆ :

೧. ಪ್ರವೃತ್ತಿಪರ ಜೀವನದ ಪ್ರತಿಮೆ ಎಂಬ ಇಂದ್ರನು ಕ್ರಮವಾಗಿ ಖಲನಾಯಕ ನಾಗುತ್ತಾನೆ: ಇವನ ಸಂಗಾತಿ ತ್ರಿತನು ಏಕತ-ದ್ವಿತನಿಂದ ಅಗಲುತ್ತಾನೆ.

೨. ಸವಿತೃ ಉಪಾಸನೆಯ ಗಾಯತ್ರೀ ಮಂತ್ರ-ದ್ರಷ್ಟಾರನೆಂಬ ವಿಶ್ವಾಮಿತ್ರನು, ಹರಿಶ್ಚಂದ್ರನ ಕಥೆಯಲ್ಲಿ ನರಾಧಮ ವ್ಯಕ್ತಿಯಾಗಿ ಚಿತ್ರಿಸಲ್ಪಡುತ್ತಾನೆ.

೩. ವರುಣನಿಗೆ ಬೇಡಿಕೊಂಡುದ್ದನ್ನು ಕೊಡದೆ ಸುಳ್ಳುಗಾರನೆಂದು ಇಂದಿನ ಪಾಠದ ವೇದಗಳಲ್ಲಿ ಸಹ ಖ್ಯಾತಿಪಡೆದಿರುವ ಹರಿಶ್ಚಂದ್ರನು, ಕನಸಿನಲ್ಲಿ ಕೊಟ್ಟ ವಚನವನ್ನು ಪಾಲಿಸುವ, ಜಾಗತಿಕ ಸಾಹಿತ್ಯದಲ್ಲಿಯೇ ಅಪೂರ್ವವಿರುವ ಆದರ್ಶ 'ಸತ್ಯ' ವಂತನಾಗುತ್ತಾನೆ ಪುರಾಣ ಕಥೆಗಳಲ್ಲಿ!

೪. ವಿಶ್ವ-ನರಃ ವೈಶ್ವಾ=ನರನ ಆಜ್ಞೆಯಂತೆ ಅಹಃ ಚ ಕೃಷ್ಣಂ (ರಾತ್ರಿ), ಅಹಃ ಅರ್ಜುನಂ ಚ (ಹಗಲು) ನಡೆಯುತ್ತವೆ ಎಂಬ ಈ ವಿಶ್ವಚೈತನ್ಯಶಕ್ತಿಯನ್ನು ಮೃತ್ಯುರೂಪ ಜಠರಾಗ್ನಿ: ಕ್ಷುಧೆಯನ್ನಾಗಿ ಮಾರ್ಪಡಿಸಲಾಗಿದೆ! ಏಕೆ?

ಇನ್ನು ಗೌತಮಪತ್ನಿ ಎಂಬ ಅಹಲ್ಯೆ ಮತ್ತು ಇಂದ್ರನ ಸಂಬಂಧದ ಕಥೆ. ಇಂದ್ರನು ಅಹಲ್ಯಾಜಾರನು; ಇದು ಇಂದ್ರನ ಅತ್ಯಂತ ಹೀನಸ್ವರೂಪದ ನೀಚ ಕೃತಿ, ಎಂಬ ರೂಪದಲ್ಲಿ ಈ ಕಥೆ ಸರ್ವಶ್ರುತವಿದೆ. ಇದು ಪುರಾಣಕಥೆ, ವ್ಯಾಸ-ವಾಲ್ಮೀಕಿಗಳ ಕೃತಿಗಳಲ್ಲೂ ಇದಕ್ಕೆ ಸ್ಥಾನ ದೊರೆತಿದೆ. ಆದರೆ, ಪುರಾಣ-ಪುರಾಣಗಳಲ್ಲಿಯೆ ವ್ಯತ್ಯಾಸವಿರುವುದು ಬೆಳಕಿಗೆ ಬಂದಿದೆ. 'ಪೌರಾಣಿಕ (ಕೆಲ) ಕಥೆಗಳನ್ನು ಬರೆದಿರುವ ಶ್ರೀ ತಿ. ಶ್ರೀನಿವಾಸ ಆಚಾರ್ಯರು ಇದನ್ನು ಬಯಲಿಗೆ ಎಳೆದಿದ್ದಾರೆ. ಸ್ಕಂದಪುರಾಣದ ಚಿರಕಾರಿ, ಇಂದ್ರನು ಅಹಲ್ಯಾಜಾರನೆಂದು ಹೇಳಿಲ್ಲ! ಮಹಾಭಾರತದ ಕಥೆಯ ಧಾಟಿಯೆ ಬೇರೆ : ಆಶ್ರಮಕ್ಕೆ ಬಂದ ಇಂದ್ರನಿಗೆ, ಗೌತಮನು ಸರ್ವಸಮರ್ಪಣ ಭಾವದಿಂದ ಆತಿಥ್ಯ ನೀಡಿದಾಗ, ಅಹಲ್ಯಾ-ಇಂದ್ರರಲ್ಲಿ ಸಂಬಂಧವು ಬಂತು. ಇದು 'ಧರ್ಮಕ್ಕೆ ಅಂಟಿದ ಪ್ರಮಾದ' ಎಂದು ಆ ಕಥೆ ಹೇಳುತ್ತದೆ! ಗುರುವಿಗೆ, ಪೂಜ್ಯ ಅತಿಥಿಗೆ, ಸ್ವಾಗತಿಸಿ ಸತ್ಕರಿಸುವ ವಾಡಿಕೆಯಲ್ಲಿ, ಅವರಿಗೆ ಏನೆಲ್ಲ ಭೋಗಾನುಕೂಲ ಮಾಡಿಕೊಡುವುದೂ ಗೃಹಸ್ಥ-ಧರ್ಮ ಎಂದು ಆಗ ಬಗೆಯಲಾಗುತ್ತಿತ್ತೆಂದು ಮಹಾಭಾರತದಿಂದ ಬೆಳಕಿಗೆ ಬರುತ್ತದೆ. ಸಂಸ್ಕೃತಿಯ ಪ್ರಾಥಮಿಕ ಹಂತದ ತಂಡಗಳಲ್ಲಿ ಈ ನಡೆವಳಿ ಇಂದಿಗೂ ಇದೆ.

ಆದರೆ, ವಾಲ್ಮೀಕಿಯು ಬರೆದ ಕಥೆಯಂತೆ, ಕಲ್ಲಾಗಿ (ಕಲ್ಲಾದಂತೆ) ಇದ್ದ ಅಹಲ್ಯೆಗೆ, ರಾಮಪಾದ ಸ್ಪರ್ಶದಿಂದ ಮರಳಿ ಸ್ತ್ರೀತ್ವ ಜಾಗೃತವಾಗುತ್ತದೆ! ಈ ಭಾಗವೂ ಒಂದು, ವಿಚಾರಾರ್ಹವಿದೆ. ಇದು ಹಾಗಿರಲಿ. ಇಂದ್ರನು ಬುದ್ಧಿಪೂರ್ವಕವಾಗಿ ಮೋಸಮಾಡಿ ಪತಿವ್ರತೆಯಾದ ಅಹಲ್ಯೆಯ ಸಂಗ ಮಾಡಿದನು, ಎಂದು ವರ್ಣಿಸುವ ಪುರಾಣಕಥೆಗಳ ರೀತಿಯಲ್ಲಿಯೇ ವಾಲ್ಮೀಕಿಯು ಈ ಕಥೆಯನ್ನು ನಿವೇದಿಸಿದ್ದಾನೆ! ದಿವ್ಯಚಕ್ಷು ವಾಲ್ಮೀಕಿ ಮುನಿಪೋತ್ತಮನಿಗೆ ಈ ಅಹಲ್ಯಾ-ಇಂದ್ರರ ಸಂಬಂಧದ ವೇದಕಾಲೀನ 'ಸಮಯ'ವೇ ತಿಳಿದಿರಲಿಲ್ಲವೊ? ಅಥವಾ ಲೋಕವು ಇಂದ್ರನನ್ನು ಮಹಾಪಾತಕಿಯೆಂದು ಬಗೆಯುವುದಕ್ಕಾಗಿ ಬುದ್ಧಿಪೂರ್ವಕವಾಗಿ ಈ ಕಥೆಗೆ ರಾಮಾಯಣದಲ್ಲಿ ಸ್ಥಾನವನ್ನು ಕಲ್ಪಿಸಲಾಯಿತೆ?

ಅಹಲ್ಯಾ-ಗೌತಮರ ಕಥೆಯು ಸಾಂಕೇತಿಕವಿದೆ, ಎಂದು ವಿಶೇಷ ವ್ಯಾಸಂಗವಿಲ್ಲದೆ, ಮೇಲೆಯೆ ಕಾಣುತ್ತಿದೆ. ಕರ್ಣಾಟ ಸಂಸ್ಕೃತಿಯ ಪೂರ್ವಪೀಠಿಕೆಯ ಸಂದರ್ಭದ ಸಮೀಕ್ಷೆಯಲ್ಲಿ ಕಂಡುಬಂದ ಕೆಲವೊಂದು ಸ್ಥೂಲ ಆಕೃತಿಯನ್ನು ಈ ಮೊದಲು ವಿವರಿಸಿದ್ದುಂಟು. ವೇದಕಾಲದಿಂದ ತೊಡಗಿ ಕಂಡು ಬರುವ ಹಿನ್ನೆಲೆಯಲ್ಲಿ, ಈ ಮೊದಲು ಬರೆದುದು ದೃಢಪಡುತ್ತದೆ. ಗೌತಮ ಮತ್ತು ಅಹಲ್ಯೆ ಇವೆರಡೂ ಶುದ್ಧ ಸಾಂಕೇತಿಕ ಪ್ರತಿಮೆಗಳಾಗಿವೆ! ದಕ್ಷಿಣಾಪಥದಲ್ಲಿ ಜನಸ್ಥಾನ ನಿರ್ಮಿತಿಯ ಸಂದರ್ಭದ ಹಿನ್ನೆಲೆಯನ್ನು ಹೇಳುವಾಗ, ಈ ಪವಾಡಕಥೆ ಗೋದಾ-ತೀರದಲ್ಲಿ ಸಂಭವಿಸಿದ ಹಾಗೆ ಆಭಾಸವನ್ನು ನಿರ್ಮಿಸುವ ಉದ್ದೇಶವಿದ್ದುದು ಈಗ ಸ್ಪಷ್ಟವೇ ಕಾಣುತ್ತಿದೆ. ಯಾವ ಕಥೆಗೆ ಐತಿಹಾಸಿಕ ನೆಲೆಯೆ ಇಲ್ಲವೊ ಅದನ್ನು ಆಖ್ಯಾಯಿಕೆ (legend) ಸ್ವರೂಪಕೊಟ್ಟು ನಿವೇದಿಸುವ ರಾಮಾಯಣ, ಮಹಾಭಾರತಸ್ಥ ಪವಾಡ ಕಥೆಗಳಿಂದಾಗಿ ನಮ್ಮ ಜನದ ವೈಚಾರಿಕ ಸೂಕ್ಷ್ಮ ತಾರತಮ್ಯವೇ ಬರಡಾಗಿ ಹೋಗಿದೆ! ಈ ಅಹಲ್ಯಾ ಸಂಕೇತವು ಮೊದಲಬಾರಿ ಬ್ರಾಹ್ಮಣಗಳಲ್ಲಿ ಕಣ್ಣಿಗೆ ಬೀಳುತ್ತದೆ.[೧೦] ಅಲ್ಲಿ ಅಹಲ್ಯೆ ರಾತ್ರಿಯ ಪ್ರತಿಮೆ! ಈ ಇರುಳೆಂಬ ಅಹಲ್ಯೆಯ ಪತಿ ಗೌತಮನೆಂಬವನು ಚಂದ್ರನು! ಇವನು, ಇರುಳಲ್ಲಿ ಅಲೆದಾಡುವ ಯಾಯಾವರ : ಪುರುಷ : ಪರಿವ್ರಾಜಕ ಅಗ್ನಿಯಾಗಿರಲಿಕ್ಕೆ ಬೇಕು. ಈ ಯಾಯಾವರ: ಸರ್ಪ ಎಂದರೇ ಚಂದ್ರ: ನಿಶಾನಾಥ! ರಾತ್ರೀ-ಸತ್ರ ಸಂಪ್ರದಾಯದ ಕುಮಾರಿ: ರಾತ್ರೀದೇವಿಯ ಪ್ರತಿಮೆ ಅಹಲ್ಯೆ! ನಿತ್ಯಕುಮಾರಿ ಇವಳು. ಬ್ರಾಹ್ಮಣ, ಹಾಗೂ ಜೈಮಿನೀಯ ಸೂತ್ರಗಳಲ್ಲಿ ಅಹಲ್ಯಾಜಾರ ಎಂಬ ಇಂದ್ರನ ಈ ರೂಪಕ ಕಥೆಯ ಅರ್ಥವನ್ನು ವಿವರಿಸಿ ಹೇಳಲಾಗಿದೆ. ಬೆಳಗಿನಲ್ಲಿ ಚಂದ್ರಮನು ಮರೆಯಾಗುತ್ತಲೆ, ಸೂರ್ಯರೂಪೀ ಇಂದ್ರನು ಒಳಹೊಕ್ಕು ಇರುಳನ್ನು=ಅಹಲ್ಯೆಯನ್ನು ಭ್ರಷ್ಟಗೊಳಿಸಿದನು; ಪಾತಿವ್ರತ್ಯಭಂಗ ಮಾಡಿದನು! ಮ್ಯಾಕಡೊನೆಲ್ ಸಹ ಇದನ್ನು ಶುದ್ಧರೂಪಕವೆಂದಿದ್ದಾರೆ.[೧೧]

ಇದೇ ಮೇರೆಗೆ, ತ್ರಿತ ಹಾಗೂ ಇಂದ್ರ ಇವು ಶುದ್ಧ ಸಾಂಕೇತಿಕ ಪ್ರತಿಮೆಗಳಿರುವಾಗ, ಅವನ್ನು ಐತಿಹಾಸಿಕ ಸ್ವರೂಪದ ಆಖ್ಯಾಯಿಕೆಗಳ (Legend) ಹಂತಕ್ಕೆ ತರಲಾಗಿದೆ! ವಿಕುಂಠಾ ಪುತ್ರನಾಗಿ ಇಂದ್ರ ಹುಟ್ಟಿದ್ದಾನೆ! ತ್ರಿತನನ್ನು ಅಣ್ಣ ಬಾವಿಗೆ ತಳ್ಳುತ್ತಾನೆ! ಆ ಪ್ರತಿಮೆಗಳನ್ನು ಈ ರೀತಿಯಲ್ಲಿ ಅಪವಿತ್ರಗೊಳಿಸುವ-ಭಗ್ನವಾಗಿಸುವ ಈ ಮೂರ್ತಿಭಂಜಕ ಕಾರ್ಯವು ಗಝನೀಮಹಮ್ಮೂದ, ಮಲಿಕಾಫೂರರಿಗಿಂತಲೂ ಮುಂಚೆ, ನಮ್ಮ ಮಹಾಕವಿಗಳಿಂದ ಋಗ್ವೇದ ಕಾಲದಿಂದಲೇ ಆಗುತ್ತ ಬಂದಿರುವುದು ಸುಳ್ಳೊ?

ಇಂದ್ರಹನನದ ಇನ್ನೂ ಒಂದು ಬಗೆ : ಅಹಲ್ಯಾಜಾರನೆಂಬ ಆರೋಪದಿಂದ ಇಂದ್ರನು ನೀತಿ ಹೀನ, ವ್ಯಭಿಚಾರಿಯೆಂಬುದನ್ನು ಸಿದ್ಧಪಡಿಸುವ ಪ್ರಯತ್ನವಿರುವಂತೆ, ಮೇಘನಾದನೆಂಬ ರಾವಣನ ಪುತ್ರನನ್ನು 'ಇಂದ್ರ-ಜಿತ್' ಎಂದು ಹೆಸರಿಸಿರುವಲ್ಲಿ, ಇಂದ್ರನು ಪರಾಕ್ರಮಿ ಎಂಬುದೂ ಸುಳ್ಳು-ಎಂದು ಪ್ರಸ್ಥಾಪಿಸುವ ಉದ್ದೇಶವುಂಟೇನೊ ಎಂಬ ಸಂದೇಹಕ್ಕೆ ಅವಕಾಶವಿದೆ. 'ಇಂದ್ರಜಿತ್' ಈ ಪಾತ್ರ ಸೃಜಿಸಿದವನು ರಾಮಾಯಣ ಕರ್ತೃ ವಾಲ್ಮೀಕಿಯೆ ತಾನೆ? ಇನ್ನೂ ಒಂದು ಈ ಮಾತಿನೊಳಗಿನ ಜಾಲ ನೋಡಿ : ಇಂದ್ರ-ಜಿತ್, ಅಹಿ; ಶೇಷನ ಅಳಿಯನಂತೆ! ಎಂದರೆ 'ಅಹಿ-ಜಿತ್' ಎಂಬ ಇಂದ್ರನನ್ನು ಇನ್ನೊಬ್ಬ ಅಹಿ (ಅಳಿಯ) ಸೋಲಿಸಿದನು! ಈ ಕಪಟನಾಟಕ ಇಷ್ಟಕ್ಕೆ ಮುಗಿದಿಲ್ಲ; ಶ್ರೀರಾಮಚಂದ್ರನ ತಮ್ಮ 'ಲಕ್ಷ್ಮ'ಣನು ಶೇಷನ ಅವತಾರ! ಆದಕಾರಣ, ಇಂದ್ರಜಿತನು ಲಕ್ಷ್ಮಣನಿಗೂ

ಅಳಿಯ! ಆದರೆ, ಲಕ್ಷ್ಮಣನು ತನ್ನ ಎದುರಾಳಿ ಇಂದ್ರಜಿತನ-ಮರಣಕ್ಕೆ ಕಾರಣನಾಗುತ್ತಾನೆ! ಲಕ್ಷ್ಮಣನಿಗೆ ತುಂಬ ದುಃಖ ಅಳಿಯನ ಮರಣಕ್ಕೆ ತಾನು ಕಾರಣನೆಂದು: ಪಾಪ ಪರಿಹಾರಕ್ಕಾಗಿ ಲಕ್ಷ್ಮಣನು ಹಿಮಾಲಯದಲ್ಲಿ ಉಗ್ರತಪಶ್ಚರ್ಯ ಮಾಡಿದನಂತೆ! ಹಿಮಾಲಯದೊಳಗಿನ ಲಕ್ಷ್ಮಣಝೂಲಾ ಎಂಬ ವಿಖ್ಯಾತ ಕೊಳ್ಳವು ಆ ತಪಸ್ಸಿನ ಸ್ಮಾರಕವಾಗಿ ಇಂದಿಗೂ ಉಳಿದಿದೆಯಂತೆ! ಈ ಕೃತಿಗೆ ಪ್ರೇರಣೆ, ಕಾರಣವು ಯಾವುದು? ಇಂದ್ರ-ದ್ವೇಷ, ಎಂದರೆ ಐಹಿಕ ಜೀವನಮೌಲ್ಯಗಳ ತಾತ್ವಿಕ ಭೂಮಿಕೆಯ ದ್ವೇಷವೋ? ಅಹಿ : ನಾಗ ಸಂಪ್ರದಾಯದ ಶ್ರದ್ಧೆ ಬಾಳಿನಲ್ಲಿ ಅರ್ಥವಿಲ್ಲ; ಯಾವಕಾಲಕ್ಕೆ ಯಾವ ಗಂಡಾಂತರ ಬಂದೀತೆಂಬ ನೆಚ್ಚಿಕೆಯಿಲ್ಲ; ಆದಕಾರಣ, ಈ ಕ್ಷಣ ಬಂಗಾರ ಬಾಳನ್ನು ಮರೆತು ಸಂಸಾರವೆಂಬ ಕಪಟನಾಟಕದ ಸೂತ್ರಧಾರಿಯಾದ ಆ ಭಗವಂತನಿಗೆ ಶರಣು ಹೋಗಿರಿ ಎಂಬ ಶ್ರದ್ಧೆ ನಿರ್ಮಿಸುವ ಅಭಿನಿವೇಶವೊಂದನ್ನು ವ್ಯಾಸ ವಾಲ್ಮೀಕಿಗಳ ಈ ಇಂದ್ರ ದ್ವೇಷಸೂಚಕ ಕೃತಿಗಳ ಅರ್ಥವೇನು?

ಇಗೊ, ಇನ್ನೊಂದು ಮೋಡಿಕಾರ ಮಾಟ : ಶ್ರೀರಾಮನದು ಸೂರ್ಯವಂಶವೊ? ಚಂದ್ರವಂಶವೊ? ಈ ಪ್ರಶ್ನೆ ಏಕೆ? ಎಂದರೆ ಶೇಷಾವತಾರಿ ಲಕ್ಷ್ಮಣನ ಅಣ್ಣ, ರಾಮನು ಸಹ ಅಹಿ : ನಾಗ ಕುಲದ ಬಳಗದವನೇ ಆಗುತ್ತಾನೆ! ಸೀತೆಯು ರಾವಣನ ಮಗಳೊ ಎಂಬ ಹಾಗಿನ ಏನೊಂದು ಕಥೆ, ಬೇರೊಂದು ಸಂಪ್ರದಾಯದಲ್ಲಿ ಉಂಟು! ಈ ಭಾಗವನ್ನುಳಿದರೂ ಶೇಷಾವತಾರಿ ಲಕ್ಷ್ಮಣನ ಅಣ್ಣನು, ಆ ಶೇಷವಂಶದ ನಾಯಕನೇ ಆಗುತ್ತಾನೆ. ವಲ್ಮೀಕದಿಂದ ಹೊರಗೆ ಬಂದ ಕವಿಯು ಮಾಡುವ ಕಾವ್ಯ, ಸರ್ಪಕುಲ ಸಮ್ರಾಟನದೇ ಇರುವ ಶಕ್ಯತೆ ಇಲ್ಲವೆ? ಅನಂತ : ನಾಗನೆಂಬ ವಿಷ್ಣುವಿನ ಇನ್ನೊಂದು ಅವತಾರವೆಂಬ ರಾಮನು ಹಾವಲ್ಲದೆ ಮತ್ತೇನು ಇರಬಲ್ಲ? ಆದರು, ಇದು ಸೂರ್ಯವಂಶವಂತೆ! 'ಕ್ವ ಸೂರ್ಯಃ ಪ್ರಭವೊ ವಂಶಃ! ಕ್ವ ಚ ಅಲ್ಪಮತಿಃ' ಈ ಇಕ್ಷು-ವಾಕ್ಕು : ಮಧುರ ಜಿಹ್ವೆಯ ವಾಲ್ಮೀಕಿ! ಮಾತಿನ ಮಾಟದಿಂದ ಏನನ್ನೂ ನಂಬಲು ಹಚ್ಚುವ ಜಾದೂ: ಮಾಂತ್ರಿಕ ಸಾಮರ್ಥ್ಯ ಪಡೆದಿದ್ದನೆಂಬಲ್ಲಿ ಸಂದೇಹವೆ ಇಲ್ಲ. 'ಇಕ್ಷು' ದಂಡ ಯಾರದು? ಮನ್ಮಥನದಷ್ಟೆ? ಮನ್ಮಥ, ಚಂದ್ರ ಬೇರೆ ಅಲ್ಲ.

ಹಾಂ! ಬೇರೊಂದು ಜಾದು ಇದು : 'ಮೃತಾತ್ ಅಂಡಾತ್' ಹೊರಬಂದವನೆಂಬ 'ಮಾರ್ತಾಂಡ' ನಾಮವು ಪ್ರಾಪ್ತವಾದ ಸೂರ್ಯ (ನಾಮಾನಂ), ಒಂದು ಸಾಂಕೇತಿಕ ಪ್ರತಿಮೆ ಋಗ್ವೇದದಲ್ಲಿಯೆ ಮೈದಾಳಿದೆ![೧೨] ಹೀಗೆಯೇ ಸೂರ್ಯನಾದ 'ನಾರಾಯಣ' ಒಬ್ಬ! ಸಲಿಲೋದ್ಭವ! ಇಂಥ ನಾರಾಯಣ ವಿಷ್ಣುಪರಂಪರೆಯ ಶ್ರೀರಾಮಚಂದ್ರನೂ ಸೂರ್ಯನೇ ಸರಿ! ಈಶಾವಾಸ್ಯದಲ್ಲೂ 'ಪ್ರಾಜಾಪತ್ಯ' ಸೂರ್ಯನಿದ್ದಾನೆ! ಗೌತಮಾಗ್ನಿ! ಪ್ರಾಜಾಪತ್ಯ ಅಗ್ನಿ! ಏನೀ ಶಬ್ದಶಿಲ್ಪದ ಮಾಯೆ! ನೀರೊಳಗಿನ (ಸರ್ಪ) ಸೂರ್ಯ ಈ ವಿಚಾರ ಧಾರಣೆ ಈಜಿಪ್ತಿನ ಪುರಾತನ ಪವಾಡಕಥೆಗಳಲ್ಲಿ ದೊರೆಯುತ್ತದೆ. Cobra a symbol of fire or solar disk. ಅಲ್ಲಿಯ ರಾಜರು ಸೂರ್ಯವಂಶಿಗಳೆಂದು ಅವರ ಕಿರೀಟದಲ್ಲಿನ ನಾಗಸಂಕೇತದಿಂದ ಸೂಚಿಸಲಾಗುತ್ತಿತ್ತು.[೧೩]

ಟಿಪ್ಪಣಿಗಳು

೧. ಇದನ್ನು ಕುರಿತು ಮುಂಬೈ *ನವಭಾರತ*ದ ನವೆಂಬರ ೫ ೧೯೬೮ರ ಮಾಸಪತ್ರಿಕೆಯಲ್ಲಿ ಒಂದು ಲೇಖನವು ಬಂದಿದೆ.
೨. ***ಹೋಲಾಷ್ಟಕೋಪನಿಷದ್*** XX-೧೨೮. ೬-೧೧
೩. ***ಋಗ್ವೇದ ಸಂಹಿತೆ*** V.೫.೨೨
೪. ***ಐತರೇಯ ಬ್ರಾಹ್ಮಣ*** ೬. ೧೧ ಮತ್ತು ಇದನ್ನು ಕುರಿತ ಷಡ್ಗುರುಶಿಷ್ಯನ ಪ್ರಾಚೀನ ಟೀಕೆ ನೋಡಿ
೫. ***ಕೌಷೀತಕೀ ಬ್ರಾಹ್ಮಣ*** ೧೯,೩
೬. ***ತೈತ್ತಿರೀಯ ಸಂಹಿತೆ.*** ೭-೪-೮-೧; ಮತ್ತು ***ಪಂಚವಿಂಶ ಬ್ರಾಹ್ಮಣ*** ೫-೯-೯-ಇತ್ಯಾದಿ
೭. ಇದೇ ಲೇಖಕರ ***A. Folk custom in the Ashwamedha,*** J. Oriental Institute Baroda Vol XVI 4 ನೋಡಿ

೮. ಇಂತಹ ಆಚಾರ ಪ್ರಕಾರಗಳಿಗಾಗಿ. Frazer, ***The Golden Bough***; A Virility Charm in R.V.; J. Nagpur University, p. 210, 1913 etc. ನೋಡಿರಿ.

೯. ***ಛಾಂದೋಗ್ಯೋಪನಿಷತ್ತು*** ೫-೪-೭-೮

೧೦. ***ಶತಪಥ ಬ್ರಾಹ್ಮಣ*** ೬.೩ ೮. ೧೮; ***ಜೈಮಿನೀಯ ಬ್ರಾಹ್ಮಣ*** ೨-೭೯ ***ಷಡ್ವಿಂಶ ಬ್ರಾಹ್ಮಣ*** ೧.೧

೧೧. Macdonell A. A.; ***Vedic Mythology*** P. 65

೧೨. ***ಋಗ್ವೇದ ಸಂಹಿತೆ*** X. ೭೨. ೮-೬

೧೩. ***Ency. of Religion and Ethics*** Vol. XI P. 4. 2

ಭಾಗ - ೬

ಸಮೀಕ್ಷಾ ಸಾರ

ಭಾಗ - ೬

ಸಮೀಕ್ಷಾ ಸಾರ

ಸಮೀಕ್ಷಾ ಸಾರ

ಮಹಾಭಾರತದ ಮಹಾಕವಿ ವೇದ (ಜ್ಞ) ವ್ಯಾಸನು ಈ ಕತೆ ಪಂಚಮವೇದ ಎಂಬ ಶ್ರದ್ಧೆ. ಆದಕಾರಣ, ಮಹಾಭಾರತದ ಆಶಯವು, ವೇದದ ಆಶಯಕ್ಕಿಂತ ಬೇರೆ ಇರಲಾರದು..ಕೃಷ್ಣ ದ್ವೈಪಾಯನನೇ ವ್ಯಾಸನಂತೆ, ವಲ್ಮೀಕ-ಜಾತ ವಾಲ್ಮೀಕಿ ದಿವ್ಯಾಕ್ಷನು! ಇವರು ವಿಷ್ಣು ನಾರಾಯಣ ಪರಂಪರೆಯ 'ಗುಹ್ಯ' ಸಂಕೇತಜ್ಞರು ಇರಲೇಬೇಕಾಯಿತು. ಮಹಾಭಾರತದಂತೆ ರಾಮಾಯಣವೂ ವೇದವಿಹಿತ ಸಂಪ್ರದಾಯವನ್ನೇ ಪ್ರತಿಪಾದಿಸಿರಲಿಕ್ಕೆ ಬೇಕು. ಈ ಕಾರಣದಿಂದ ಋಗ್ವೇದಸಾರವು ಎಂದರೆ ನಾಗಪ್ರತಿಮಾರಾಧನೆಯ ಆಗಿರಲಿಕ್ಕೆ ಬೇಕು. ಈ ಪ್ರಬಂಧದಲ್ಲಿ ಮೊದಲು ವಿವರಿಸಿದ ಕಾರಣಗಳಿಂದಲ್ಲದೆ-ನಮ್ಮ ಸನಾತನ ಪಾರಂಪರಿಕ ಶ್ರದ್ಧಾಪ್ರಕಾರ ಗಳಿಂದಲೂ ಸಿದ್ಧವಾಗುತ್ತಿದೆ!

ಸವಿತೃವು 'ಧೀ' ಮೇಧಾಶಕ್ತಿಯ ಪ್ರತೀಕ. 'ನ ಮೇಧಯಾ ನ ಬಹುನಾಶ್ರುತೇನ' ಎಂಬ ಶ್ರದ್ಧೆಗೆ, ಸವಿತೃವಿನ ಆರಾಧನೆ ಸೊಗಸದು. ಸೂರ್ಯನು ಪ್ರಕಾಶದ ದೈವತ. ರಾತ್ರೀ ಸಂಪ್ರದಾಯದ ಜಾಗೃವಾಂಸರ ಆಚಾರ ವಿಚಾರಗಳಿಗೆ ಸೌರಭೂಮಿಕೆಯ ವಿಚಾರಗಳು ಆತಂಕಕಾರಿ. ಆದಕಾರಣ, ಹಗಲು-ಇರುಳು ಆಗುವ, ಅಹಸ್ ಕೃಷ್ಣರೂಪದ್ದಾಗುವ, ಅರ್ಜುನನು (ಶುಭ್ರ) ಕೃಷ್ಣನಲ್ಲಿ ಅಡಗುವ ಆವಶ್ಯಕತೆಯಿದೆ. ಸೂರ್ಯನು ರಾತ್ರಿಯ ಪುತ್ರನೆಂದು ವರ್ಣಿಸುವ ವೇದದ ಕವಿಯು, ಸೂರ್ಯ=ಚಂದ್ರ, ಇವರಿಬ್ಬರೊಳಗಿನ ಅಂತರವನ್ನು ಮೊದಲೇ ಶೂನ್ಯಗೊಳಿಸಿದ್ದಾನೆ! ಅಲ್ಲದೆ ಆದಿತ್ಯ, ಮಾರ್ತಾಂಡ, ನಾರಾಯಣ ಇಂತಹ ಮಾತಿನ ಮಾಟದಿಂದಲೂ ಸೂರ್ಯನು ಚಂದ್ರನಾಗಿ ಬಿಡುತ್ತಾನೆ. ಶೇಷಲಕ್ಷ್ಮಣನ ಅಣ್ಣ ಶ್ರೀರಾಮಚಂದ್ರನು ಸೌರನು! ಮಾತಿನ ಮಾಟದ ಪರಮೋಚ್ಚ ಬಿಂದು ಇದು! ನವರಾತ್ರಿ : ಘಟ-ಸ್ಥಾಪನೆ, ರಾತ್ರೀ ಪರ್ವ. ಆದರೂ ಹಗಲಿನಲ್ಲಿಯೆ ನವ-ರಾತ್ರಿ ಆಚರಿಸುವ ವಿಸಂಗತ ಆಕೃತಿಯು ಇಂದು ರೂಢಿಯಲ್ಲಿ ಕಾಣುತ್ತದೆ. ಇದರ ಮೂಲ ಸಮಯಾಚಾರ ಶಕ್ತಿಪೂಜೆಯ ವಿಧಿ-ವಿಧಾನಗಳು, ಯಾವ ಬಗೆಯವು ಇದ್ದುವೊ, ಅದನ್ನು ಗ್ರಹಿಸಿಕೊಳ್ಳುವುದು ಸಹ ತೊಂದರೆಯ ವಿಷಯವಾಗಿದೆ!

ವಿಭಿನ್ನ ಸಮಯಾಚಾರಗಳು ಒಂದನ್ನೊಂದು ಎದುರಿಸಿದಾಗ ಒಂದು ಇನ್ನೊಂದರ ಮೇಲೆ ಪ್ರಭಾವ ಬೀರುತ್ತ ಅವೆರಡರ ಸಮ್ಮಿಶ್ರ-ಸಂಗಮ-ಸಂಸ್ಕೃತಿಯೊಂದು ತಲೆದೋರುವುದು ಲೋಕರೂಢಿಯೆ ಆಗಿದೆ. ಈ ಸಂಘರ್ಷದೊಳಗಿನ ಸಾಂಕೇತಿಕ ಮುಖ್ಯಪಾತ್ರ, ಋಗ್ವೇದ ಸಂಹಿತೆಯಲ್ಲಿ ಕಾಣುತ್ತಿರುವಂತೆ, ಅಗ್ನ್ಯಾರಾಧಕ-ತ್ರಿತ ಆಪ್ತ್ಯ ಹಾಗೂ ಆತನ ಬೆಂಬಲದ ದಿವ್ಯಶಕ್ತಿ, ವೃತ್ರಘ್ನ ಇಂದ್ರ, ಒಂದು ಕಡೆಗೆ. ಆಪ : ರಸ ಪಂಥೀಯ ದಿವ್ಯಾಧ್ಯಾತ್ಮವಾದದ ಯತಿ-ಮುನಿ ಸಂಪ್ರದಾಯ ಹಾಗೂ ಅಪಾಂ-ನಪ್ತ್ರ : ಅಹಿಸ್ವರೂಪಿ ವೃತ್ರಾದಿ ದಿವ್ಯಶಕ್ತಿಗಳು ಇನ್ನೊಂದು ಕಡೆಗೆ. 'ಸಂಗಚ್ಛಧ್ವ, ಸಂವದಧ್ವಂ...' ಎಂಬೀ ಬಗೆಯಲ್ಲಿ ಜೀವನಮೌಲ್ಯಗಳಿಗಾಗಿ, ಋತ: ಸತ್ಯದ

ಭೂಮಿಕೆಯ ವೈಚಾರಿಕ ಸಾಮಾಜಿಕ ಜೀವನ ನಿಷ್ಠೆಯ ಬಾಳಿನ ಬಗೆ ಒಂದು. ಯತ್‌ದೇವಾಃ ಸಲಿಲೇ ಅದಃ ಸುಸರಂಬ್ಧಾಃ ನೃತ್ಯತಾಂ ಇವ ಅತಿಷ್ಠತ (ನೀರಿನಲ್ಲಿ ಇರುವಾಗ ಆನಂದದಲ್ಲಿ ನಲಿಯುತ್ತ ಕುಣಿಯುತ್ತಿರುವಂತೆ ಇದ್ದ) ದೇವರು, ನೀರಿನ ಹೊರಗೆ ಬಂದು ಭವಚಕ್ರದಲ್ಲಿ-ಜನನ-ಮರಣ ದುಃಖದಲ್ಲಿ ಸಿಲುಕಿದರು,[೧] ಎಂಬ ಬಗೆಯಲ್ಲಿ ಬಾಳನ್ನು ಮೃತ್ಯುಸ್ವರೂಪದಲ್ಲಿ ಕಾಣುವ ವಿರಕ್ತಪಂಥೀಯ ಜೀವನರೀತಿ ಇನ್ನೊಂದು. ಋತ : ಸತ್ಯದಲ್ಲಿ ನಿಷ್ಠೆಯು ಒಂದು ಕಡೆ; ತತ್: ಏಕಂ: ಸತ್ ನಿಷ್ಠೆಯು ಇನ್ನೊಂದು ಕಡೆ. ಇವೆರಡರ ಸಂಘರ್ಷದಲ್ಲಿ ಲೋಕಕ್ಕೆ ಬೇಗನೆ ಹಿಡಿಸುವಂತಹುದೂ, ಪವಾಡ-ಚಮತ್ಕಾರದ ಯತಿಮುನಿಗಳ ಬೆಂಬಲವುಳ್ಳದ್ದೂ ಆದ 'ತತ್ : ಏಕಂ' ಎಂಬ ಸತ್ಯವೇ ಗೆದ್ದಿತು. ಋತ : ಸತ್ಯದ ವೈಚಾರಿಕ ಭೂಮಿಕೆಯು ಒಂದು ಕಾಲಕ್ಕೆ ಭಾರತದಲ್ಲಿ ಇದ್ದಿತು ಎಂಬುದರ ನೆನೆಪು ಸಹ ಉಳಿಯದಷ್ಟು ಅದು ಇಂದು ಮರೆವಿನ ಆಳದಲ್ಲಿ ಹೋಗಿ ಬಿದ್ದಿದೆ.

ಋಗ್ವೇದದ ಕೇಂದ್ರಸ್ಥ ಪಾತ್ರದ ಎಂದರೆ ತ್ರಿತ : ಇಂದ್ರರ ತೇಜೋವಧೆ, ಋಗ್ವೇದ ಕಾಲದಲ್ಲಿಯೆ ಬಗೆ ಬಗೆಯಿಂದ ಆಗಿದ್ದುಂಟು. ಆದರೂ ಪುರಾಣ ಕಥೆಗಳು, ಮಹಾಭಾರತ-ರಾಮಾಯಣಾದಿ ಊರ್ವಶೀರೂಪ ಲೋಕಮೋಹಕ ಕಥಾಸಾಹಿತ್ಯವನ್ನು ಆಗಾಗ ನಿರ್ಮಿಸಿ, ಅಲ್ಲಿಯೂ ವ್ಯಕ್ತಾವ್ಯಕ್ತರೀತಿಯಿಂದ ಇಂದ್ರನನ್ನು ನಷ್ಟಪಡಿಸುವ ಹಾಗೂ ಇಂದ್ರ ಸಂಪ್ರದಾಯದ ಪ್ರತಿಮಾ ಸಂಕೇತಗಳ ಬಗೆಗೆ ತಿರಸ್ಕಾರವನ್ನುಂಟುಮಾಡುವ ಆವಶ್ಯಕತೆ ಏನಿದ್ದಿತು? ಇದರ ಉತ್ತರವು ಇಂದ್ರಸಂಕೇತದ ಅರ್ಥವನ್ನು ಗಮನಿಸದೆ ತಿಳಿಯಲು ಶಕ್ಯವಿಲ್ಲ. ಯಾತುಪ್ರಧಾನ ಈ ಸಂಹಿತೆಯು ಮನಗಾಣಿಸಿ ಕೊಡಬೇಕೆಂದಿರುವ, ಉಪನಿಷತ್ತು, ಮಹಾಭಾರತ-ರಾಮಾಯಣ. ನಾನಾ ಪುರಾಣಾದಿಗಳಿಂದ ವೇದದೊಳಗಿನ ಈ ಅಭಿಚಾರ ಮಂತ್ರಕ್ಕೆ ವಜ್ರಕವಚ ಹೊದಿಸಬೇಕೆಂದು ಆಗಿರುವ ಪ್ರಯತ್ನಗಳೆಲ್ಲ ಕಾಲಕಾಲಕ್ಕೆ ವ್ಯರ್ಥವಾಗುತ್ತಿರುವುದು, ಈ ಮೃತ್ಯುಪೂಜಕ ಪವಾಡಸಿದ್ಧರಿಗೆ ಕಾಲಕಾಲಕ್ಕೆ ಕಾಣುತ್ತಬಂದಿದೆ! ಅಥರ್ವವೇದವು ಯಾತುಪ್ರಧಾನವೆಂಬ ಅಪಖ್ಯಾತಿಯಿಂದಾಗಿ ಅದರ ಉದ್ದೇಶವು ವಿಫಲವಾಗುವುದೆಂದು ಕಂಡು ಬಂದುದರಿಂದಲೆ ಇಂದಿನ ಋಗ್ವೇದರೂಪೀ ಪ್ರಚ್ಛನ್ನ ಅಥರ್ವವೇದ ಸಂಹಿತಾ ನಿರ್ಮಿತಿಯು ಅವಶ್ಯವಾಗಿರಬೇಕು. ವೇದಕಾಲದ ತರುವಾಯ ಕಾಣತೊಡಗುವ, ಜನದೊಳಗೆ ಹುಟ್ಟಿನಿಂದಲೆ ಅಂಕುರಿಸುವ 'ಜೀವನ್ ಭದ್ರಾಣಿ ಪಶ್ಯತಿ' ಎಂಬೀ ಬಗೆಯ ಬಾಳ್ವಾಸೆ ಚಿಗುರುವ ಲಕ್ಷಣಗಳನ್ನು ಸಮೂಲ ನಷ್ಟಪಡಿಸಲು, ನಾನಾ ಉಪನಿಷತ್ತುಗಳು ಪ್ರಾದುರ್ಭಾವವಾಗುತ್ತವೆ. ಆದರೆ, ಆ ಬಳಿಕ ಮತ್ತೆ 'ಪಂಚಮ' ವೇದವು, ಆ ಯುಗದ ಸಮಾಜ-ಸಮ್ಮುಖ ಜೀವನ ಪ್ರವೃತ್ತಿಯನ್ನು ಕಮರಿಸಿಬಿಡಲು ಮಹಾಭಾರತದ ರೂಪದಲ್ಲಿ ಮರಳಿ ಅವತಾರವಾಗುತ್ತದೆ! 'ಸರ್ವೋಪನಿಷತ್ತುಗಳ ಸಾರ'ವಾದ ಗೀತಾರೂಪ ನೂತನ ಉಪನಿಷತ್ತು : ಸಾಮವೇದ. ಇಂಥ ಗೀತೆ, ಮಹಾಭಾರತದ 'ಅಮೃತ (?) ನಾಭಿ! ಆದರೆ, ಆ ಬಳಿಕ 'ಭಗ'ವಾನ್ ಕೃಷ್ಣನ ಭಗ-ವಂತಿಕೆಯು ಬೆಳಕಿನಲ್ಲಿ ಬರತೊಡಗುತ್ತದೆ. ಆಗ ರಾಮ-ಚಂದ್ರಾಯಣ ಮೈದಾಳುತ್ತದೆ. ಆಶಯವು 'ಮೃತ್ಯುವೇ ಸಾರ್ವಭೌಮ ಶಕ್ತಿ' ಎಂಬುದೇ ಆದರೂ ಈ ಸಾಹಿತ್ಯಿಕ ಆಕೃತಿ ಗರತಿಯದು! ಈ ಕೃತಿಯ ನಿತಾಂತ ರಮಣೀಯ ಸು-ಭಗತ್ವದ ಬಗೆಗೆ ಶಂಕಿಸುವವನಿಗೆ 'ತಾನೇ ಪಾಪಿ' ಎಂಬ ಪಶ್ಚಾತ್ತಾಪವಾಗಬೇಕು! ಆದರೆ, ಈ ಯಾತುಕೃತಿ: ಅಭಿಚಾರ ಮಂತ್ರಶಕ್ತಿಯೂ ಹತಬಲವಾಗದೆ ಇಲ್ಲ! ಅಹಲ್ಯಾ ದ್ರೌಪದಿಯರೊಡನೆ ನಿತ್ಯಸ್ಮರಣೀಯ ಕನ್ಯಾಮಣಿಗಳಲ್ಲಿ ಸೀತೆಯನ್ನೂ ಸೇರಿಸಲಾಗಿದೆ! ಪಂಚ 'ಕಂ' : ಕುಮಾರಿಯರು ಅದಿತಿ ಸಂಪ್ರದಾಯದ ಪರ್ಯಾಯ ಪ್ರತಿಮೆಗಳಾಗಿದ್ದಾರೆ. ಇವರಲ್ಲಿ 'ಅಯೋನಿ ಸಂಭವೆ' ಎಂಬ 'ಜಾನಕಿ'ಯ ಸಮಾವೇಶವೂ ಆಗುವಲ್ಲಿ, ಈ 'ಭಗವಂತ' ಸಂಪ್ರದಾಯದ ಭಾಗವತಿಕೆ ಬಯಲಿಗೆ ಬರದೆ ಉಳಿದಿಲ್ಲ! ದಕ್ಷ : (ಆದಿತಿ=) ದಾಕ್ಷಾಯಣಿಗಳಲ್ಲಿರುವ ಸಂಬಂಧವೇ ವಿದೇಹೀ ಜನಕ-ಜಾನಕಿಯಲ್ಲೂ ಉಂಟಲ್ಲ? 'ಅದಿತೇಃ ದಕ್ಷಃ ಅಜಾಯತ ದಕ್ಷಾತ್ ಆದಿತಿಃ'[೨] 'ವಾಸಾಂಸಿ ಜೀರ್ಣಾನಿ' ಸಾಹಿತ್ಯ ಕೃತಿರೂಪ ದೇಹತ್ಯಾಗ ಮಾಡಿ ಈ ಸಮ್ರಾಟ್ ವೃತ್ರಶಕ್ತಿ, 'ನವತರಂ' 'ನವ್ಯತರಂ' ರೂಪ ಧರಿಸಿ ಕಾಲಕಾಲಕ್ಕೆ ಹೀಗೆ ಅವತಾರ ತಾಳುವ ಆವಶ್ಯಕತೆ ಏನಿರಬೇಕು?

ಆಪ: ರಸ ಪಂಥೀಯ 'ತತ್ : ಏಕಂ' ಸ್ವರೂಪೀ ವೃತ್ರ, ಸತ್ಯ=ರೇತ ಸತ್ಯವು, ಈ ವೃತ್ತಾಕೃತಿ ವಿಷಚಕ್ರವು, ಸಮ್ರಾಟ್ ಮೃತ್ಯುಶಕ್ತಿ ಸ್ವರೂಪದ ವೃತ್ರಶಕ್ತಿ, ಎಂಬುದು ಹೇಗೆ ಈ ವಿಶ್ವಸ್ಥ ಜೀವನ-ಮರಣ ರೂಪದ ಸನಾತನ ಆಕೃತಿಯ ಸತ್ಯವೋ ಹಾಗೆಯೆ ಆ ವಿಶ್ವದಲ್ಲಿ ಇನ್ನೂ ಒಂದು ಸತ್ಯವಿದೆ. ಮನು-ಜನೊಳಗಿನ ವೈಶ್ವಾನರ ಪುರುಷನ (Universal Man) ಪ್ರಜ್ಞೆ ಜಾಗ್ರತವಾಗುತ್ತದೆ. ಇದು ತನ್ನ ಈ ಅರಿವಿನ ಬೆಳಕಿನಲ್ಲಿ ಸಮಾಜ ಸಮ್ಮುಖಿ ಪ್ರವೃ-ತ್ತಿ ಪರ ಜೀವಿಯಾಗಿ, ಮಾನವ ಸಂಸ್ಕೃತಿವಿಕಾಸಕ್ಕೆ ತನ್ನ ಶಕ್ಯವಿರುವ ಮುಡಿಪನ್ನು ಸಲ್ಲಿಸಿ ಕೃತಾರ್ಥನಾಗಬೇಕು ಎಂಬ ಹುಮ್ಮಸವಾಗುತ್ತದೆ. ಅರ್ಥ : ನಿಯಮಾಧಿಷ್ಠಿತ (ಋತ:) ಸತ್ಯದ ಬೆಳಕು ಎಂದರೆ ಭೂಃ ಭುವಃ, ಸ್ವಃ ವ್ಯಾಪಿಸಿರುವ ವಿವಸ್ವಾನ್ 'ವೈಶ್ವಾನರನ' ಪ್ರೇರಣೆಯ ಬೆಳಕು. ಆದರೆ, 'ಯತ್ ಪ್ರೈರತ' ಸ್ವರೂಪದ ದಿವ್ಯಾಕ್ಷರ 'ಏಕೇಷ' ಸಿದ್ಧಿಯ ಬೆಳಕು ಇದು ಮಾಂತ್ರಿಕ ಶಕ್ತಿಯ ಮೋಡಿಕಾರ-ಮಾಟದ ಬೆಳಕು ಪ್ರೇರಣೆ ಆಗುವ ಶಕ್ಯತೆಯೇ ವಿಶೇಷವಿದೆ. ಆದುದರಿಂದ, ಪ್ರೇಷಿತ : ದೇವೇಷಿತರು, ಎಂಬ ಸಂತ-ಮಹಂತ- ಮಹಾತ್ಮರ 'ಪ್ರೈರತ' ಅಂತರ್‌ಜ್ಞಾನ ಎಂಬುದನ್ನು ಮರಳಿಮರಳಿ ವಿಮರ್ಶಿಸಿ ಪರಿಶುದ್ಧಗೊಳಿಸುವ ಆವಶ್ಯಕತೆಯಿರುತ್ತದೆ. 'ಸಕ್ತುಂ ಇವ ತಿತ ಉನಾ ಪುನಂತಃ' ವಾಕ್. ಇದು ವಿಶ್ವಸ್ಥ ಶಾಶ್ವತ ಸನಾತನ ಅರ್ಥ : ನಿಯಮರೂಪೀ ಸತ್ಯಾಂಶವನ್ನು ಮನಗಾಣಿಸಿಕೊಡಬಲ್ಲ ವಾಕ್ಕು ಆಗಿದೆ. ಇದು ವಿಮರ್ಶೆಗೆ ಅಳುಕುವ 'ಏಕಂ' ಸ್ವರೂಪೀ ಸತ್ಯದಿಂದ ತೀರ ಭಿನ್ನವಾಗಿದೆ.

ಮೃತ್ಯುಶಕ್ತಿಯ ಮಾಹಾತ್ಮ್ಯಸೂಚಕ 'ಪವಿತ್ರ'ವೆಂಬ ಸಾಹಿತ್ಯಕೃತಿಗಳನ್ನು ಸೃಜಿಸಿ ಪ್ರಪಂಚವು ಒಂದು ಪ್ರಳಯ ಕೋಲಾಹಲ ಇದು ಉರಿಯುತ್ತಿರುವ ಶ್ಮಶಾನವೇ ಎಂಬ ಹಾಗಿನ ವಿರಾಟ್ ವಿಶ್ವರೂಪ ದರ್ಶನ ಮಾಡಿಸಿದ್ದರೂ, ಜೀವಂತ ಚೈತನ್ಯದ ಪ್ರತಿಯೊಂದು ವ್ಯಕ್ತಿಯಲ್ಲಿಯೂ "ಬೆಚ್ಚನ್ನ ಮನೆಯಾಗೆ, ಇಚ್ಛೆಯನರಿವ ಸತಿಯಾಗೆ, ವೆಚ್ಚಕ್ಕೆ ಹೊನ್ನಾಗೆ ಸ್ವರ್ಗಕ್ಕೆ ಕಿಚ್ಚು ಇಕ್ಕು" ಎಂಬ ಪ್ರವೃತ್ತಿ ಅಳಿದಿಲ್ಲವೆಂದು ಆಧುನಿಕ ಕಾಲದ ಯತಿಪಂಥೀಯನಾದರು ನಿಸ್ಪೃಹವಾದಿ ಸರ್ವಜ್ಞನು ಹಿಂದೆಯೆ ಹೇಳಿದ್ದಾನೆ. 'ಈ ಹಾಳು ಬಾಳು ಅರ್ಥವಿಹೀನ' 'ಮರಣವೇ ಮಹಾನವಮಿ' ಎಂಬುವರು ಹುಟ್ಟಲಾರರೆಂದಲ್ಲ. ಸಂಪ್ರದಾಯಕ್ಕೆ ಶರಣುಹೋಗಿ ಸ್ವಂತದ ಕಣ್ಣಿಗೆ ಎರವಾದ 'ನೂತನೈಃ' ಕವಿವಿಪ್ರರಿಂದಲೇ ಇಂದಿನ ಈ 'ಋಕ್-ಸಾಮ' ಅಥವಾ ಸಾಮಯುಕ್ತ ಋಕ್ ಪರಿಷ್ಕೃತವಾಗಿ, 'ಋತಂ ಚ ಸತ್ಯಂ ಚ ಅಭೀದ್ಧಾತ್ ತಪಸಃ ಅಜಾಯತ' ಎಂಬ ಭೂಮಿಕೆಯ ವೃತ್ರಹನ್ ಇಂದ್ರಪರಂಪರೆಯ ಸಂಹಿತೆ ಕಾಣೆಯಾಗಿದೆ. 'ಋಷಿಭಿಃ ಪೂರ್ವೇಭಿಃ' 'ಉತ ನೂತನೈಃ' ಸೂಕ್ತಗಳು ಇರುವ ಒಪ್ಪಿಗೆ ಋಗ್ವೇದದಲ್ಲಿಯೇ ಇದೆ. ಋತ ಸತ್ಯಾಧಿಷ್ಠಿತ ಸಮಾಜ ಸಮಷ್ಟಿಯ ಅನುಸಂಧಾನದ ಜೀವನ ಪ್ರವೃತ್ತಿಯನ್ನು ಗೇಲಿಮಾಡುವ ನೂತನ ನವ್ಯರ ಅಮರ ಪರಂಪರೆಯೂ ಸನಾತನ ಸತ್ಯವೇ ಸರಿ! 'ಏಕಂ' ಸ್ವರೂಪೀ ಸತ್ಯದ ಶ್ರದ್ಧೆಯು, ತಾನೇ ತಾನಾಗಿ ತಲೆಯೆತ್ತಿ ನಿಲ್ಲಲು ಕಾರಣವಾದ ದಿಕ್ಕಾಲ ಪರಿಸರದ ಅನುಭೂತಿಯ ಸ್ವರೂಪವು ಸ್ಪಷ್ಟವಾದಲ್ಲಿ, ಈ 'ಸತ್ಯ'ದ ಪ್ರೇರಣೆಯ ಪಾರ್ಶ್ವಭೂಮಿಯು ಕಣ್ಣಳತೆಯಲ್ಲಿ ಬರಬಲ್ಲುದು. ಈ 'ಸತ್ಯ'ದ ಪ್ರತಿಪಾದನೆಯು, ಪವಾಡ : ಚಮತ್ಕಾರ-ಜಾದುಶಕ್ತಿಯ ಪ್ರಯೋಜನ ಪಡೆದಲ್ಲದೆ ಶಕ್ಯವಿಲ್ಲ. ಮೃತ್ಯುಶಕ್ತಿಯ ಭೀತಿಯ ಭೂತಕ್ಕೆ ಆಮಂತ್ರಿಸದೆ, ಇದನ್ನು ಲೋಕಪ್ರಿಯವಾಗಿಸಲು ಅಶಕ್ಯ. ಏಕಂ : 'ಸತ್ಯ' ಸಿದ್ಧಿಗಾಗಿ, ಮೃತ್ಯುಶಕ್ತಿ, ಅನುಷ್ಠಾನವು, ಆವಾಹನವು ಅವಶ್ಯವೆಂಬುದು ಈ ಸನಾತನ ಸತ್ಯದ ಇನ್ನೊಂದು ಲಕ್ಷಣ. ಈ ಸನಾತನ ಸತ್ಯವು ಋಗ್ವೇದದ ದೈವತ ಸಮೀಕ್ಷೆಯಲ್ಲಿ ಸ್ಪಷ್ಟವಾಗಿ ಬೆಳಕಿಗೆ ಬರುತ್ತಿದೆ.

ಋಗ್ವೇದಸ್ಥ ಪ್ರಧಾನ ಪಾತ್ರವು ಯಾವುದು? ಅಹಿರೂಪೀ ವೃತ್ರಹಂತಕನೆಂಬ ಇಂದ್ರನೊ? ಅಥವಾ 'ಸಾರ್ಪರಾಜ್ಞೀ ಸೂರ್ಯೋ ವಾ' ದೈವತವೊ? ವೃತ್ರಹಂತಕನೆಂಬ ಇಂದ್ರನು ಸೂರ್ಯನ ಪರ್ಯಾಯ ಸಂಕೇತ ಎಂದು ವೇದವೇ ಹೇಳುತ್ತದೆ. ಆದರೆ, ಈ ವೇದದ ಅಂತ್ಯದಲ್ಲಿ ಸೂರ್ಯನೇ ಸರ್ಪವಾಗಿ ಮಾರ್ಪಡುವುದರಿಂದ ಇಂದ್ರನೂ ಸರ್ಪವೇ ಆದ ಹಾಗಾಯಿತು! ವೃತ್ರನು ಚಂದ್ರನ ಪರ್ಯಾಯ ಸಂಕೇತವೆಂದೂ ಈ ವೇದದಲ್ಲಿಯೆ ಹೇಳಿದೆ!

ಇಂದ್ರ=ಸೂರ್ಯ=ಸರ್ಪ : ಸರ್ಪ=ವೃತ್ರ=ಚಂದ್ರ, ಆದ್ದರಿಂದ ವೃತ್ರಾತ್ ಜಾತೋ ದಿವಾಕರಃ ಎಂದು ಅಥರ್ವವೇದ ಹೇಳುವುದು ಸರಿಯಾಗಿದೆ.

೧. ಸೂರ್ಯ-ಚಂದ್ರರಲ್ಲಿ ಜನ್ಯಜನಕಭಾವ ಸಂಭವಿಸುತ್ತದೆ. ಸರ್ಪ-ಸೂರ್ಯರು ಒಬ್ಬರೊಬ್ಬರಿಗೆ ಜನ್ಮಕೊಡಬಲ್ಲರು.

೨. ರಾತ್ರಿ-ಸೂರ್ಯನಿಗೆ ತಾಯಿ : ಸೂರ್ಯ ರಾತ್ರಿಗೆ ತಂದೆ ಅಥವಾ ಸೂರ್ಯನು ರಾತ್ರಿ-ಪತಿಯಾಗಲು 'ಪಡುವ' ದಿಕ್ಕಿಗೆ ಹೋಗುತ್ತಾನೆ!

೩. ತಾಯಿ : ಅದಿತಿ, ಮಗ-ದಕ್ಷನಿಗೆ ಜನ್ಮವೀಯುತ್ತಾಳೆ ಅಥವಾ ದಕ್ಷನು ಅದಿತಿಗೆ ಜನ್ಮವಿತ್ತನು. ಮಗಳ ಸಂಗದಿಂದ ಸೃಷ್ಟಿಮಾಡಿದನು. 'ದಕ್ಷಸ್ಯ ದುಹಿತಾ ಅಜನಿಷ್ಟ ಭುವನಾನಿ ವಿಶ್ವಾ! ವಿಪ್ರಾಃ, ಏಕಂ ಸಂತಂ ಬಹುದಾ, ಕಲ್ಪಯಂತಿ[೩] ಏಕಂ ಸತ್, ವಿಪ್ರಾ ಬಹುಧಾ ಕಲ್ಪಯಂತಿ.[೪]

ಈ 'ತತ್ ಏಕಂ ಸತ್' (: ಬ್ರಹ್ಮನು) ಕಂಡದ್ದು ಯಾರಿಗೆ? ಯಾವ ಅವಸ್ಥೆಯಲ್ಲಿ? ಈ ಪ್ರಶ್ನೆಗೆ ಮೇಲಣ ಎರಡೂ ಉಲ್ಲೇಖಗಳ 'ವಿಪ್ರ' ಈ ಸಾಂಕೇತಿಕ ಪ್ರತಿಮೆಯಿಂದ ಉತ್ತರವು ದೊರೆಯುತ್ತಿದೆ. ವೇದವ್ಯಾಸಂಗಿ ಎಂದು ಹೆಸರಾದ ಫ್ರಾನ್ಸಿನ ಡಾ. ರೆನು 'ವಿಪ್ರ' ಸಂಕೇತಸ್ಥ ಮೂಲಚಿತ್ರವನ್ನು ಬೆಳಕಿಗೆ ತಂದಿದ್ದಾರೆ. ವಿಪ್ > ವೇಪ್ ಎಂಬ ಅಖ್ಯಾತ ಸಾಧಿತ ಪದವು 'ವಿಪ್ರ'. ಆದುದರಿಂದ, ಈ ಸಂಕೇತಸ್ಥ ಧಾತುಶಕ್ತಿಯನ್ನು ಗಮನಿಸಿದರೆ 'ವಿಪ್ರ' ತ್ವದಲ್ಲಿ ಭಾವೋತ್ಕಟ-ಉನ್ಮನಸ್ಕ ಅವಸ್ಥೆಯ ಸೂಚನೆಯಿದೆ. ಪ್ರೇಮ-ಭಕ್ತಿಯ ಉದ್ರಿಕ್ತ ಮನೋಭಾವದಲ್ಲಿ-ಆ ತತ್-ಮನೋಭಾವದ ಆವೇಶದಲ್ಲಿ ಮೈಮರೆತು, ಬಾಹ್ಯಪ್ರಜ್ಞೆಗೆ ಎರವಾದಾಗ-'ವೇಪಥುಃ ಚ ಶರೀರೇ ಮೇ ರೋಮಹರ್ಷಃ ಚ ಜಾಯತೇ' (ಗೀತಾ) ಈ ಅವಸ್ಥೆಯ ನರನು : ವಿಪ್ರನು. ಈ ಅನುಭಾವದ ಬಗೆಗೆ ಬ್ರಹ್ಮಜ್ಞನೆಂದು ವಿಖ್ಯಾತನಾದ ಯಾಜ್ಞವಲ್ಕನೇ ವಿವರಿಸಿರುವಂತೆ-

ತತ್ ಯಥಾ ಪ್ರಿಯಯಾ ಸ್ತ್ರೀಯಾ ಸಂಪರಿಷ್ವಕ್ತಃ ನ ಬಾಹ್ಯಂ ಕಿಂಚ ನ ವೇದ ನ ಅಂತರಂ...[೫]

ತೈತ್ತಿರೀಯದ 'ರಸೋ ವೈ ಸಃ' = ಅಧರ-ಬಿಂಬದ ರಸಪಾನದ 'ಮಂಡಲೇ ಪುರುಷಃ' ಅನುಭೂತಿಯಲ್ಲಿ, ತತ್-ಏಕಂ ಇದುಮಾತ್ರ ಸತ್ಯ ಎಂಬ ಶ್ರದ್ಧೆ ದೃಢಪಡಿಸುವ ತತ್-ಮಯಸ್ಥಿತಿಯ ಅನುಭಾವ ಸೂಚಕ ಅರ್ಥವೆ ಇದೆ. ಏಕ : ಸತ್ ಪಾತಳಿಯ ವಿರಾಟ್=ವೃತ್ರತ್ವದ ಚಾಂದ್ರ ಶಕ್ತಿದಾಯಕ ಈ ಅನುಭಾವದ ಅರ್ಹಂತ : ವಿಪ್ರನಾಗಲು-ಬಾಹ್ಯಪ್ರಜ್ಞೆಯ ಕವಚ ಕಳಚಿ ಬೀಳಬೇಕು. ಇದಕ್ಕೆ ಶಕ್ತಿದೇವಿ ಯಾ ಅನು-ಸ್ಥಾನ ಬೇಕು.

ಸೂರ್ಯನನ್ನು ಸಹ ಚಂದ್ರನಾಗಿ ಮಾರ್ಪಡಿಸಿದ, ಸರ್ಪ-ವೃತ್ರನಿಂದ ದಿವಾಕರನು ಹೊರಬಂದ. ಸೂರ್ಯನನ್ನು 'ಮೃತಾತ್ ಅಂಡಾತ್ ಜಾತನು' ಎಂದು ತೋರಿಸಿದ, ಆ ದಿವ್ಯ ಪವಾಡಗಳ ಯಾತು > ಜಾದುಶಕ್ತಿಯ ಸಾಮರ್ಥ್ಯಧಾತೆ ರಾ-ಕಾ ಶಕ್ತಿ. ಈ ದೇವಮಾತೆ ವಿಶ್ವಜನನಿಯನ್ನು ಲೆಕ್ಕಿಸದಿದ್ದರೆ ಋಗ್ವೇದಾದಿ ಪುರಾತನ ಗ್ರಂಥಗಳಲ್ಲಿ ಉಕ್ತ ಚಮತ್ಕಾರಸಿದ್ಧಿಗಳ ಕೇಂದ್ರವು ಎಲ್ಲಿದೆ ಎಂಬುದೇ ಗಮನಕ್ಕೆ ಬರಲಾರದು.

ಋಗ್ವೇದಸಾರ

ರಾ-ಕಾ : (ಪೌರ್ಣಿಮಾ+ಅಮಾಸ್ಯಾ) ಶಕ್ತಿ : 'ವಾಗರ್ಥಾವಿವ' ಸಂಪೃಕ್ತ (ಪುಂ-ಸ್ತ್ರೀ) ಚಂದ್ರಶಕ್ತಿ : ವಿಶ್ವಮೋಹಿನೀ ತ್ರಿಪುರ ಸುಂದರಿ; ಮಾಯಾದೇವಿ ಇವಳು.

ಈ ಋಗ್ವೇದ ಕೃತ ಸಂಸ್ಕೃತಿ ಉಪ-ಸಂಹಾರಕ ಯಾತು ತಂತ್ರ : ರಾ-ಕಾ ಬೀಜಾಕ್ಷರ ಮಂತ್ರ.

ಈ ಸಂಹಿತೆಯ ಋತ್ ಈ ನಾಮಸಂಕೇತದ ಅರ್ಥ, ಯಮನತ್ತ ಒಯ್ಯುವ (ಮಂತ್ರ ಶಕ್ತಿಯ) ರಥ.[೬] ರಥ ರೂಪ ಈ ಸಂಹಿತೆ : ಇದನ್ನು ಪಠಿಸಿದವನೂ ರ-ಥನೆ ಆಗುತ್ತಾನೆ.

ಈ ವೇದ-ಮಂತ್ರರೂಪೀ ರಥಕ್ಕೆ ಗಾಲಿಯಿಲ್ಲ. (ಅ-ಚಕ್ರಂ ರಥಂ) 'ಋ' ಗತ್ಯರ್ಥಕ ಶಕ್ತಿಯ ಧಾತು ಇದು 'ಏಕೇಷಃ' (:ಏಕಂ: ಸತ್-ಸರ್‌ಪಶಕ್ತಿಯುತ) ರಥವು; 'ಏಕೇಷ' ಎಂದರೆ ಇಚ್ಛಿಸಿದತ್ತ ತಿರುಗಬಲ್ಲ (ಯಾತುಶಕ್ತಿಯ) ರಥ (ವಿಶ್ವತಃ ಪ್ರಾಂಚಂ). ಇದನ್ನು ಪಠಿಸಿದವರು ತಮಗೆ ಅರಿಯದೆಯೆ ಈ (ಮಾತಿನ) ಶಕ್ತಿರಥದಲ್ಲಿ ಕುಳಿತು ಯಥಾಕಾಮ ಸಂಚರಿಸುವ ಬಂಧನಾತೀತರಾಗುವ ಸಾಮರ್ಥ್ಯ ಪಡೆಯುತ್ತಾರೆ. ಈ 'ಏಕೇಷ'ವೇ ಅವರ ಮಾತಿನ ಮಾಧ್ಯಮ : 'ನಾಳೆ' ಆಗಿ ಪರಿಣಮಿಸುತ್ತದೆ.

ರ-ಥದ ಈ ರೂಪಕವು ಪ್ರತಿ 'ನರ'ನಿಗೂ ಅನ್ವಯಿಸುತ್ತದೆ. ಕುರುಕ್ಷೇತ್ರದಲ್ಲಿ ಕಾಳಗಕ್ಕೆ ನಿಂತ 'ನರ' : (ಅವನ) ರಥ ಬೇರೆ ಅಲ್ಲ . ಆದರೆ, ಅವನು 'ಅಜ್ಞಾನಿ'. ತಾನೇ 'ರಥ' ಎಂಬುದನ್ನು ಅರಿಯ. ಆದರೆ, ಇವನ ನ-'ರ'! ಜ್ಞಾನ=ರಥ! ಈ ರಥದಿಂದ ಹೊರಗೆ ಇಳಿಯಲಾರದ ಸಾರಥಿಯುಳ್ಳ ರಥ ಇದು! ನರದೇಹರೂಪೀ ಈ ರಥವು ಸಾರಥಿ ವಿರಹಿತ ನಡೆದೀತೇ? ನರನು ಯುದ್ಧಕ್ಕೆ ನಿಂತುದು 'ಕುರು' (ಕರ್ಮ) ಭೂಮಿಯ ಮೇಲೆ! ಈ ಹಿನ್ನೆಲೆಯಲ್ಲಿ ಗೀತೆಯ ಮಾತಿನ ಯಾತುಶಕ್ತಿಯು, ಕಣ್ಣ ಅರಿಕೆಯ ಅಳವಿನಲ್ಲಿ ಬರುತ್ತಿದೆ! ಕೌರವ-ಪಾಂಡವರ ಕಾಳಗ ಎಂಬುದೆಲ್ಲ ಮಾಯೆ! ನರ : ರಥ ಕರ್ಮಭೂಮಿಯಲ್ಲಿ ಜೀವನರಂಗದ ಹೋರಟೆಗೆ ನಿಂತಿದೆ. ಈ ಬಗೆಯ ರೂಪಕ ಕಾವ್ಯದ ಕಥೆ ಐತಿಹಾಸಿಕ ಗ್ರಂಥವೆಂಬ ನಂಬುಗೆ!

ಪ್ರಸ್ತುತ, ಈ ದೇಹ-ರಥವೂ 'ಅಚಕ್ರಂ' [(೦) ಇಲ್ಲದ್ದು]. ಏಕೆಂದರೆ ಯಮನಲ್ಲಿ 'ಜ್ಞಾನ' ದೀಕ್ಷೆಗಾಗಿ ಬಂದವನು, ಒಬ್ಬ ಕುಮಾರ. ಈ ರಥವು ಅ-ಚಕ್ರಂ. ಆದರೂ ಕುಮಾರನ ತೇರಿಗೆ 'ಏಕೇಷ'- ಒಂದೇ ಈಸು (Pole) ಉಂಟೇ ಉಂಟು. ನರ : ರಥದ 'ಈಸು' ಅವನ ಸಂಸಾರನೌಕೆಯ ಚುಕ್ಕಾಣಿ. ದಿವ್ಯಜ್ಞಾನ ಸಾಧನದ ಉಪಕರಣ. ಅವನ ಆವಿಷ್ಕಾರ, ಅಭಿವ್ಯಕ್ತಿಯ ಮಾಧ್ಯಮ. ಕೊನೆಗೆ ಒಂದು ಋಚೆಯಲ್ಲಿ ಅದು ಕೈಯೊಳಗಿನ ನಾಳೀ (Pipe) ಆಗುತ್ತದೆ.

ರ(೦) ಬೀಜಾಕ್ಷರ ಜನ್ಯ ಶಕ್ತಿಸೂಚಕ ವಿವರಣೆಯಲ್ಲಿ, ಕಂ ಶಕ್ತಿ ಬೀಜದ ವಿಚಾರವು ತನ್ನ ತಾನೇ ಬಂದು ಬಿಡುತ್ತದೆ! ಭೋಗ ಅಥವಾ ತ್ಯಾಗ ಈ ಯೋಗ-ಭೂಮಿಯ ತಳಹದಿಯಲ್ಲಿ ರಾ-ಕಾ ಅನುಷ್ಠಾನವು ಇದ್ದೇ ಇರಬೇಕಾಗುತ್ತದೆ. ಆತ್ಯಂತಿಕ ಭೋಗವಾದದ ದುಷ್ಪರಿಣಾಮಗಳ ಪ್ರತಿಕ್ರಿಯೆಯೇ ತ್ಯಾಗ-ಯೋಗಾದಿ ಸಿದ್ಧವಾಗದ; ಹೊರತು ಮೊದಲಿನಿಂದಲೇ (ವಿ)ಯೋಗೀ ಸಿದ್ಧರು ಹುಟ್ಟಿಕೊಳ್ಳುವ ಆವಶ್ಯಕತೆಯಿಲ್ಲ, ಶಕ್ಯತೆಯೂ ಇಲ್ಲ. ಈ ಸಂಪ್ರದಾಯಗಳೊಳಗಿನ ಪರಿಭಾಷೆಯೆ ಇದಕ್ಕೆ ಸಾಕ್ಷಿ.

ರಂ ರಕ್ತ ಬೀಜಂ; ರಂ 'ರಾ-ಜನ್ಯ ಶಕ್ತಿ! ರಾ-ಜನ್ ಎಂದರೆ ಋಗ್ವೇದದಲ್ಲಿ ನಿಜವಾಗಿಯೂ ಚಂದ್ರನೇ! ಆದರೆ, ಅಲ್ಲಿ ವರುಣನನ್ನು ರಾ-ಜನ್, ಸಮ್ರಾಟ್ ಎಂದು ಹೊಗಳಿದ್ದಾಗಿದೆ! ವರುಣನು, ಏಕಾಕಿ ದೊರೆಯುವುದು ತೀರ ವಿರಳ. ಋಗ್ವೇದದೊಳಗಿನ ಸಂಯುಕ್ತ ದೈವತಪ್ರತಿಮೆಗಳಲ್ಲಿ ಮಿತ್ರಾ-ವರುಣರ ಜೋಡಿಯೇ ಅತಿ ಪುರಾತನಕಾಲದ್ದು. ಈ ವೇದದ ಕೊನೆಕೊನೆಗೆ ಸಂಯುಕ್ತ ದೈವತಗಳ ಸಂಖ್ಯೆ ಬೆಳೆಯುತ್ತ ಬರುತ್ತದೆ. ಏನೆಲ್ಲ ಜೋಡುದೈವತಗಳಲ್ಲಿ ಮಿತ್ರಾವರುಣ ಯುಗಲದ ಖ್ಯಾತಿ ಬೇರಾವ ಜೋಡಿಗೂ ಇಲ್ಲ.

ರಂ ಬೀಜಾಕ್ಷರ ಸಾಮರ್ಥ್ಯದ ರಾಜನ್ ಶಕ್ತಿಯವನೆಂಬ 'ವರುಣ'ನು, ಚಂದ್ರನೇ ಇರಬೇಕಾಗುತ್ತದೆ. ಆದರೆ, ಋಗ್ವೇದ ಮಂತ್ರಗಳ ಯಾತು ಸಾಮರ್ಥ್ಯದಿಂದಾಗಿ, ಈ ವರುಣನು ಚಂದ್ರನೇ ಆಗಿದ್ದಾನೆಂದು ಹೇಳುವುದು ಸಾಹಸದ ಮಾತು, ಎಂದು ಬಗೆಯಲಾಗುತ್ತದೆ! ಆದರು, ಈ ವರುಣನು ಆಪ: ರಸ ವಿಶ್ವದ ಅಧಿಪತಿ, ಎಂಬ ಬಗೆಗೆ ಭಿನ್ನಾಭಿಪ್ರಾಯವಿಲ್ಲ! ಓಲ್ಡೆನ್‌ಬರ್ಗ್ ಪ್ರಭೃತಿಗಳು ವರುಣನು ಪ್ರಚ್ಛನ್ನ ಚಂದ್ರನೇ ಆಗಿದ್ದಾನೆಂದು ಧೈರ್ಯದಿಂದ ಹೇಳಿದ್ದೂ ಉಂಟು. ಈ ಸಂಹಿತಾರಚನೆಯೊಳಗಿನ ಹಾಗೂ ಸ್ತೋತ್ರಗಳ ವರ್ಣನೆಯೊಳಗಿನ ಕಸಬು ಗಮನಕ್ಕೆ ಬರದೆ ಅಲ್ಲಲ್ಲಿ ಎಡಹುವುದುಂಟು. ವರುಣನು ರಾತ್ರಿಯ ದೇವರೆಂದು, ಭಾಷ್ಯಕಾರರೇ ಹೇಳುತ್ತಾರೆ. ರಾ-ತ್ರಿಯ ದೇವರು ರಾಜನ್ ಚಂದ್ರಮನ ಹೊರತು ಬೇರಾರು ಇರಬಲ್ಲರು? ರಾತ್ರಿಗೆ ರಜನಿ ಎಂಬ ಪರ್ಯಾಯನಾಮವಿದೆ. ರಜನಿ-ನಾಥನು, ರಾ-ಜನ್ ಚಂದ್ರಮನೇ. ರಜಸ್ಸಿನ ಸ್ವಾಮಿ, ರಜಸ್ಸು ಪ್ರೇರಿಸುವವನು, ಸೃಜಿಸುವವನು ಚಂದ್ರನು

ರಾ-ಜನ್. 'ಹೆಣ್ಣು ಮಕ್ಕಳ ಮುಟ್ಟು 'ತಿಂಗಳಿ'ನೊಡನೆ ಸಂಬದ್ಧವಿದೆ. ಅಂತೇ ಇವನು 'ಪ್ರಜಾ-ಪತಿ' 'ಬೃಹತೀ' ಶಕ್ತಿ : ಸೃಷ್ಟಿಯ ಆದಿಕಾರಣ. ರಾ-ಕಾ ಶಕ್ತಿಯ ಕೇಂದ್ರವೇ ಈ 'ಪಲಾಶ-ವೃಕ್ಷ' ಸಂಕೇತದ ಚಂದ್ರ-ಮಂಡಲದ ಸಾಂಕೇತಿಕ ಪ್ರತಿಮೆ! ಪೂರ್ಣ 'ಸುಪಲಾಶೇ' ಇರುವ ವೃಕ್ಷದ ಪ್ರತಿಮೆ ಹುಣ್ಣಿಮೆಯಂತೆ ಅಮವಾಸ್ಯೆಯ ಸೂಚಕವೂ ಆಗಬಲ್ಲುದು. ಆದರೆ, ಮಿತ್ರ (: ಸೂರ್ಯ) + ವರುಣ (: ಚಂದ್ರ) ಎಂದರೆ ಮಿತ್ರಾ-ವರುಣಾ ಜೋಡಿ ಅಮವಾಸ್ಯೆ ಅಥವಾ ಸೂರ್ಯಗ್ರಹಣದ ಮೃತ್ಯುತಿಥಿ; ಸರ್ವಪಿತೃಗಳಿಗೆ ತಿಲತರ್ಪಣದ ಎಳ್ಳುಹಬ್ಬ. ಆದುದರಿಂದ, ರಾಜನ್ ಸಮ್ರಾಟ ಆಗಿರುವ ಮಿತ್ರಾ-ವರುಣ ಸ್ತೋತ್ರಗಳಿಂದ ತುಂಬಿರುವ ಎಲ್ಲ ಮಂಡಲಗಳೂ ಈ ಋಗ್ವೇದದ ರಥ ಯಮನತ್ತ=ಮೃತ್ಯುವಿನ ಕಡೆಗೇ ಒಯ್ಯುತ್ತದೆಂಬ[2] ಬಗೆಗೆ ಸಂದೇಹಿಸಲು ಅವಕಾಶವಿಲ್ಲ.

ಪ್ರಚ್ಛನ್ನ ಚಂದ್ರರೂಪ ವರುಣನನ್ನು ಮಿತ್ರಾ-ವರುಣ ಜೋಡಿಯಾಗಿ ಕಲ್ಪಿಸಿರುವ ಔಚಿತ್ಯವೇನು? ಈ ಔಚಿತ್ಯವು ಗಮನಕ್ಕೆ ಬರಬಹುದೊ, ಇಲ್ಲವೊ ಎಂಬ ಸಂದೇಹವುಂಟಾಗಿಯೆ, ಈ ಸಮಸ್ಯಾ ಪರಿಹಾರದ ಇನ್ನೊಂದು ತಂತ್ರವೂ ಇಲ್ಲಿಯೆ ಉಂಟು! 'ಸೂರ್ಯ'ನು ಮಿತ್ರಾ-ವರುಣರ 'ಚಕ್ಷು' ಎಂಬ ಮಾತು ಬಗೆಬಗೆಯಿಂದ ಬರುತ್ತದೆ! 'ಮಿತ್ರ' ಸಂಕೇತವೇ ಸೂರ್ಯವಾಚಕ. ಆದರೂ ಮಿತ್ರರೂಪ ಸೂರ್ಯನಿಂದ ಯುಕ್ತನೇ ವರುಣನು ಇರುವಾಗ ಇವನಿಗೆ 'ಸೂರ್ಯ' ಎಂಬ ಇನ್ನೂ ಒಂದು 'ಕಣ್ಣಿ'ನ ಆವಶ್ಯಕತೆ ಉಂಟಾಗುವ ಕಾರಣವಿದ್ದಿಲ್ಲ. ಆದರೂ 'ಮಿತ್ರಸ್ಯ, ವರುಣಸ್ಯ ಚಕ್ಷುಃ' ಎಂಬ ಈ ಸಾಂಕೇತಿಕ ಪ್ರತಿಮೆ ನಾಲ್ಕೈದು ಎಡೆಗಳಲ್ಲಿ ಬರುತ್ತದೆ.

ಈ ಚಕ್ಷು, ಈ ಕಣ್ಣು, ಯಾತರ ಪ್ರತಿಮಾ ರೂಪ? ಇದು ತೀರ ಸಂದಿಗ್ಧವಿಲ್ಲ. ಆದರು, ಪದರುಮಾತಿನಿಂದ ಜಾರಿಕೊಳ್ಳುವ ಹಂಚಿಕೆಯೂ ಅಲ್ಲಿ ಇಲ್ಲದಿಲ್ಲ. ವರುಣಪುತ್ರನೆಂಬ ವಸಿಷ್ಠನಕುಲದ ಮಂಡಲದಲ್ಲಿ ಬರುವ 'ಚಕ್ಷು' ರೂಪೀ ಸೂರ್ಯನ ವರ್ಣನೆ ಹೀಗಿದೆ:

ಪ್ರಸವಿತಾ ಜನಾನಾಂ ಮಹಾನ್..... ಅರ್ಣವಃ ಸಮಾನಂ ಚಕ್ರಂ[೮]

ಚಕ್ಷುರೂಪೀ (೦) ಸೂರ್ಯನನ್ನು 'ಅರ್ಣವಃ' (ಜಲಾಶಯ) ಮತ್ತು 'ಚಕ್ರಂ' ಎಂದು ವರ್ಣಿಸಿರುವಲ್ಲಿ, ಆರಂಭದಲ್ಲೆ ಇರುವ 'ಪ್ರಸವಿತಾ ಜನಾನಾಂ' (ಲೋಕವನ್ನು ಪ್ರಸವಿಸುವ) ಈ ಪದಪ್ರಯೋಗವನ್ನು ಲೆಕ್ಕಿಸಿದರೆ, ಇಲ್ಲಿ, ಸೂರ್ಯಮಂಡಲ (೦) ಇದನ್ನು ವಿಶ್ವಪ್ರಸವಸ್ಥಾನದ ಯೋನಿಸ್ವರೂಪವಾಗಿ ಬಗೆಯಲಾಗಿದೆಯೆಂದು ಅರ್ಥವಾಗುತ್ತದೆ!

ಋಗ್ವೇದರೂಪೀ ರಥದ 'ಏಕೇಷಃ' ಇದರೊಳಗಿನ ಪದರು ಮಾತಿನ ಅರ್ಥ, ಸ್ಪಷ್ಟಪಡಿಸುವ ಸಂಕೇತವೂ ಇಲ್ಲಿದೆ. ಈ ರಥದ ಪಕ್ಕಕ್ಕೇ ಸಾಮ (ವೇದ) ರೂಪೀ ಡೋಣೆಯೂ ಉಂಟೆಂಬಲ್ಲಿ ಈ ಅರ್ಥ ಬಯಲಿಗೆ ಬರುತ್ತದೆ. (: ರಥಂ ಸಾಮ ಅನು ಪ್ರಾವರ್ತತ); ನೌಕೆ (ನಾವಿ) ಸಹಿತ ಏಕೇಷ (ಒಂದೇ ಈಸಿನ) ರಥ ಎಂದರೇನು? ಋಕ್ಕು ಇಲ್ಲದೆ ಸಾಮ (ಗಾನ) ಅಶಕ್ಯ. ಆದ್ದರಿಂದ 'ಏಕೇಷಃ' (: ತತ್ : ಏಕಂ : ಸತ್) ಇದೆ ಗಾನ ಸಾಧನ. [ಕೊಳವೆ=ನಾಳಿ : ನಾಗ (ಈಸು : Pole : Pipe)] ಮತ್ತು ಏಕೇಷವೇ ಗಾನವಿಷಯವೂ ಆಗುತ್ತದೆ! ಸ್ಕನ್ನಃ, ದ್ರಪ್ಸಃ ಕೃಷ್ಣನ ಲೋಕಮೋಹಕ ಮುರಲಿ, ನಾಳೆ, ಮತ್ತು ಅರಿಗಳಿಗೆ ಭಯಜ್ವರ ತರುವ ಪಾಂಚಜನ್ಯ 'ಶಂ-ಖಂ' ಬೇರೆ ಅಲ್ಲ!

'ಸಾಮ' ಶಬ್ದಪ್ರತಿಮೆಯ ಸಂಮೋಹಕ ಸಾಮರ್ಥ್ಯವು, ಅಹಿಮಾಯೆಯ ಅದ್ಭುತ ಭಯಾವಹ ಸ್ವರೂಪವನ್ನು ಇನ್ನೂ ಹೆಚ್ಚು ಮನಗಾಣಿಸಿಕೊಡುತ್ತದೆ. ಈ ಸಂಕೇತದ ವಿವಿಧ ಸ್ಪಷ್ಟೀಕರಣಗಳಿವೆ. ಇಲ್ಲಿ ಯಮನ ಸನ್ನಿಧಾನಕ್ಕೆ ಒಯ್ಯುವ ಡೋಣೆ=ಸಾಮ: ಗಾನ ಎಂಬ ಈ ಸಂದರ್ಭಕ್ಕೆ ಸುಸಂಗತ ಸುಸಂಬದ್ಧ ಅರ್ಥವು ಮಾತ್ರ ಸ್ವೀಕಾರಾರ್ಹವೆನಿಸಬಲ್ಲದು. ಈ ದೃಷ್ಟಿಯಿಂದ ಅಥರ್ವವೇದದಲ್ಲಿ ಹೇಳಿರುವ ನಿರುಕ್ತವು ಉದ್ಬೋಧಕವಿದೆ :

ಅಮಃ ಅಹಂ ಅಸ್ಮಿ ಸಾ ತ್ವಮ್[೯]

ಈ ಅಮಃ ಪುರುಷಃ (ಅಹಃ); ಸಾ: ಪ್ರಕೃತಿಃ (ತ್ವಮ್); ಇಬ್ಬರೂ ಒಂದೂಗೂಡವಲ್ಲಿ (ಏಕೇಷ+ನೌ ಒಂದರೊಡನೊಂದು ಸೇರುವಲ್ಲಿ) 'ಸಾಮ' (: ಸಮಪಾತಳಿ) ಆಗುತ್ತದೆ. ಛಾಂದೋಗ್ಯದ ಈ ವಿವರಣವು,

ಇನ್ನೊಂದು ಬಗೆಯಿಂದ ಈ 'ಸಮತ್ವ' ಯೋಗದ ದರ್ಶನ ಮಾಡಿಸುತ್ತದೆ. ಇಲ್ಲಿ ಚಂದ್ರಮಂಡಲ ಸ್ಮರಿಸಿಕೊಳ್ಳುವ ಆವಶ್ಯಕತೆಯಿದೆ. 'ಮಂಡ' ಎಂದರೆ ಕಾಂಜಿ=ಗಂಜಿಯಂತಹ ಬೆಳ್ಳನ್ನದ್ರವ್ಯ. 'ಮಂಡ'ವುಳ್ಳದ್ದು ಮಂಡಲ : O ಚಂದ್ರಮಂಡಲದಲ್ಲಿಯ ಕಪ್ಪು : 'ಮೃಗಾಂಕ' ಎಂಬ ಭಾಗ, ಬಿಳಿಯದರ ನಡುವೆ ಇರುತ್ತದೆ. ಛಾಂದೋಗ್ಯವು ಹೇಳುವ 'ಸಾಮ'ದ ವಿವರಣೆ ಹೀಗೆ: ಯತ್ ನೀಲಂ, ಪರಃ ಕೃಷ್ಣಂ ತತ್ ಅಮಃ ಶುಕ್ಲಂ ಸಾ. ಇವೆರಡರ ಏಕಾತ್ಮಕ : ಏಕಂ ತತ್ ಇದೇ ಸತ್ಯ=ಸಾಮ (ಸಮತ್ವ=ಸಮತಾ)[೧೦] ಇನ್ನೊಂದೆಡೆಗೆ ಇಯಂ ಏವ ಸಾ ಅಗ್ನಿಃ ಅಮಃ ಎಂದರೆ ಕಪ್ಪುಭಾಗವನ್ನು ಅಗ್ನಿ ಎಂದು ಬಗೆಯಲಾಗುತ್ತಿತ್ತು.[೧೧] 'ಕಮಲದಲ್ಲಿ ಅಗ್ನಿಜ್ವಾಲೆ' ಈ ಪ್ರತಿಮಾ ಸಂಕೇತವು, ಚಂದ್ರಮಂಡಲದ ಆಧಾರದಿಂದ ಪ್ರಚಲಿತವಾದುದು ಎಂಬಲ್ಲಿ ಸಂದೇಹವಿಲ್ಲ.[೧೨] ಕಂ-ಜ : ಕಮಲ: ಪುಂಡರೀಕ. ವಿಷ್ಣುಸಂಪ್ರದಾಯದ ಕೊಡುಗೆ ದಿವ್ಯಾಧ್ಯಾತ್ಮಕ್ಕೆ. ರುದ್ರನು ಶಿಖಿನೇತ್ರನಾದರೆ, ವಿಷ್ಣುವು ಪುಂಡರೀಕಾಕ್ಷ! ಎರಡೂ ಸಮಾನ ಸಂಕೇತಗಳೇ. ಆದರೂ ಇವೆರಡೂ ಸಂಪ್ರದಾಯಗಳ ದೃಷ್ಟಿಕೋನದಲ್ಲಿರುವ ಭೇದವು ಇಲ್ಲಿ ಅರಿಕೆಗೆ ಬರುತ್ತದೆ.

ಕ (ಂ) ದೈವತಮಹಾತ್ಮ್ಯದಲ್ಲಿ ಬರುವ ಮಹತ್ವದ ಸಂಕೇತಗಳ ಸ್ಪಷ್ಟೀಕರಣವು ಇಲ್ಲಿ ದೊರೆಯುತ್ತದೆ ! 'ಕ' ಶಕ್ತಿ, 'ಜಜಾನ ಚಂದ್ರಾಃ ಆಪಃ'[೧೩] ಮತ್ತು, 'ಬೃಹತೀ ಅಗ್ನಿಃ ಗರ್ಭಂ ದಧಾನಾಃ...' ಎಲ್ಲ ದೇವರುಗಳ, ಎಲ್ಲ ಪ್ರಾಣಿಗಳ ಉದ್ಗಮ ಕೇಂದ್ರವೇ ಈ 'ಕಂ' ಚಂದ್ರ : ಪ್ರಜಾಪತಿ ಶಕ್ತಿ ಆಯ್ತು. ಹಾಗಾದರೆ, ಈ 'ಕಂ' ನಿಜಕ್ಕೂ ಯಾರು? ಮೊದಲು ರುದ್ರನ ಸಂಕೇತ. ಬಳಿಕ 'ಹಿರಣ್ಯಗರ್ಭ' ನೆಂದರೆ ವಿಷ್ಣುವೇ ಎಂಬ ರೂಢಿ ಬೆಳೆಯುತ್ತದೆ. ಕ (ಂ) ದೈವತದಲ್ಲಿ 'ಅಮೃತಂ' 'ಮೃತ್ಯುಃ' ಈ ಉಭಯ ಶಕ್ತಿಗಳೂ ಒಳಗೊಂಡಿ ರುವುದಾಗಿ ವರ್ಣನೆಯುಂಟು. ಗೀತೆಯ 'ಭಗ'ವಂತನಲ್ಲೂ ಈ ಶಕ್ತಿಯುಂಟೆಂದು ಅಲ್ಲಿ ಹೇಳಿದೆ. ಅಲ್ಲದೆ, 'ಅಹಂ ಕಾಲಃ ಅಸ್ಮಿ' ಎಂಬ ಆ 'ಭಗ-ವಂತನು 'ಕಂ'=ಚಾಂದ್ರಶಕ್ತಿಯ ಪ್ರತಿಮೆಯೂ ಆಗುತ್ತಾನೆ. 'ವೇದಾನಾಂ ಸಾಮವೇದಃ ಅಹಂ' ಎಂಬ ಗೀತೋಕ್ತಿಯ ಅರ್ಥವು, ಯಮನೇ ಹೇಳಿರುವಂತೆ, 'ಸಾಮಯುಕ್ತ ಋಕ್', ಮತ್ತು ಗೀತೆಯ ಆಶಯವೂ ಒಂದೇ ಆಗುತ್ತದೆ. ಗೀತೆಯ ವ್ಯಾಸಂಗ, ಮನನ, ನಿದಿಧ್ಯಾಸವು ಯಮನಲ್ಲಿಗೆ ಒಯ್ಯುವ ದಿವ್ಯ ರ-ಥ ಶಕ್ತಿಯುಳ್ಳ ಅಪೂರ್ವ ಪವಿತ್ರಗ್ರಂಥವೆ ಎಂದ ಹಾಗಾಯ್ತು!

ಆದ್ದರಿಂದ, ಅಹಂ ಕಾಲೋಽಸ್ಮಿ ಎಂಬ ಭಗವಂತ=(ಊರ್ಧ್ವಮೂಲ) ವೃಕ್ಷ ಮತ್ತು 'ಯಸ್ಮಿನ್ ವೃಕ್ಷೇ ಸುಪಲಾಶೇ ಸಂಪಿಬತೇ' ಎಂಬ ಯಮರಾಜನು ಅಭಿನ್ನರು. ಇದು ತತ್ : ಏಕಂ ಸತ್ ಸ್ವರೂಪಿ ಉಭಯಲಿಂಗೀ ಕ (ಂ) : ಚಂದ್ರದೈವತವೇ ಇರಬೇಕಾಯ್ತು! 'ಭಗ'ವಂತನು 'ಅಶ್ವತ್ಥ' 'ವೃಕ್' ಸಂಕೇತದಿಂದ, ಸೂಚಿತನಾಗಿದ್ದಾನೆ. ಯಮನನ್ನು 'ಸುಪಲಾಶದಲ್ಲಿ ರಸಾಸ್ವಾದನ ಮಾಡುತ್ತಿರುವ ವೃಕ್ಷ' ಎಂಬ ಸಂಕೇತದಿಂದ ಉಲ್ಲೇಖಿಸಲಾಗಿದೆ. ಇವೆರಡರ ತುಲನೆಯಲ್ಲಿ 'ಪಲಾಶವ'ಂತ ಯಮ (ವೃಕ್ಷ) ಮತ್ತು 'ಭಗ'ವಂತ ಕೃಷ್ಣ: (ಅಶ್ವತ್ಥವೃಕ್ಷ) ಎಂಬ ಸಮಾನ ಆಕೃತಿ : ಪ್ರತಿಮೆ ಕಾಣತೊಡಗುತ್ತದೆ.

ಆದಕಾರಣ, ಪಲಾಶ=ಭಗ ಆಯ್ತು! 'ಪಲಾಶವೃಕ್ಷ'=ಪ್ರಜಾಪತಿ=ಚಂದ್ರಬಿಂಬ ಪ್ರತಿಮೆ ಆಗಿರುವುದರಿಂದ ಇಲ್ಲಿ ಪಲಾಶ=ಶುಕ್ಲ, ವೃಕ್ಷ : ಕೃಷ್ಣ ನೀಲಸಂಕೇತವಾಗಿ 'ಸಾ ಅಮ' : 'ಸಾಮ', ಸಮತಾಯೋಗದ ತತ್ : ಏಕಂ ಸತ್ಯವು ಕಾಣಬಲ್ಲದು! ಇಲ್ಲಿ ಅಶ್ವ-ತ್ಥ (<ಸ್ಥ) ಈ ಉಭಯ ಸಂಕೇತಗಳೂ ಅರ್ಥ ಪಡೆಯುತ್ತವೆ. ಅಶ್ವ=ವೃಕ್ಷ=ಪುರುಷ=ಪ್ರಜಾಪತಿ; ಮತ್ತು ತ್ಥ (<ಸ್ಥ)=ಪಲಾಶ, ಭಗ ಆಯಿತು. ಈ ಕಾರಣದಿಂದಲೆ ಭಗವಂತ=ಕೃಷ್ಣ=ತ್ಥ (ಸ್ಥ) ಯುಕ್ತ ಅಶ್ವ=ಅಶ್ವತ್ಥ ! ಪಲಾಶ=ಭಗಸ್ಥ ವೃಕ್ಷ, ಕೃಷ್ಣ=ಯಮ ಇಬ್ಬರು ಕರಿಯರು. ನೀಲ (<ನೀರ) ಅಂಗರು!

ಕ (ಂ) =ಪೌಂಸ್ಯ ಶಕ್ತಿ ; ಕಾ : ಸ್ತ್ರೀಶಕ್ತಿ. ಕಂ : ಮೂಲಸ್ಥಾನ ಕಲ್ಲೇಶ್ವರ=ವಿಶ್ವದ ಮೂಲಾಧಾರ ಸ್ತಂಭ, ಅಥರ್ವವೇದದ ಸ್ಕಂಭ; 'ನಂ ಕಂ ವಿಷ್ಣೋಃ ವೀರ್ಯಾಣಿ ಪ್ರವೋಚಂ' ಈ ಸ್ತೋತ್ರದ ವಿಷ್ಣುಪದ-(ಪಾದ:) ಈ ಪದದಿಂದ ಸ್ರವಿಸುವ ಮಧು. ರುದ್ರ-ಶಿವನ ತಲೆಯಿಂದ ಗಂಗಾಸ್ತೋತ್ರ ಹೊರಟರೆ, 'ವಿಷ್ಣು ಪಾದಾಬ್ಜ

ಸಂಭೂತಾ ಗಂಗಾ!' 'ಪರಮೇ ಪದೇ'[೧೪] ಮಧ್ವ ಉತ್ಸಃ (ಕಾಲಿ) ರುದ್ರಾಣಿ; 'ಕಾಂ ಸಸ್ಮಿತಾಂ'-ಶ್ರೀಸೂಕ್ತದಲ್ಲಿ ಲಕ್ಷ್ಮೀಪರ ಅರ್ಥ : ಪದ್‌ಮಾಕ್ಷಿ!

ಈ ಹಿನ್ನೆಲೆಯಲ್ಲಿ ವರುಣನನೊಡನೆ ಇರುವ 'ಮಿತ್ರಾ (ವರುಣಾ)' ಇದು ದ್ವಂದ್ವಸಮಾಸದ ನಾಮಸಂಕೇತವು ಪುಲ್ಲಿಂಗಿಯೊ? ಸ್ತ್ರೀಲಿಂಗಿಯೊ? ಋಗ್ವೇದದ ದಿವ್ಯದೈವತಶಕ್ತಿಗಳು ಯಾವಾಗ ಯಾವ ಲಿಂಗ-ಶಕ್ತಿಯವು ಆಗುವವೊ ಇದು ತಿಳಿಯದು! ತಿಳಿದರೆ, ಅರ್ಥಕ್ಕೆ ಎಟಕಿದರೆ ದಿವ್ಯತ್ವವೆಲ್ಲಿ ಉಳಿದೀತು? ಅದು ಭಯಾವಹ ದೇವತಾಶಕ್ತಿ ಹೇಗೆ ಆದೀತು? ಮಿತ್ರ ಯಾವ ಲಿಂಗಿಯಾದರೂ ಸರಿ; ಸಹಯೋಗಿಯಾಗಿ ಉಂಟಲ್ಲ; ಸಾಕು. ಈ ಮಿತ್ರ (ಸೂರ್ಯ) ಯಾವ ಲಿಂಗಿಯಾದರೂ ಅಶ್ವ : ವೃಕ್ಷರೂಪ ವರುಣನಿಗೆ ಸೂರ್ಯರೂಪೀ ಚಕ್ರ : ಅರ್ಣ: ಕಣ್ಣು ಉಂಟು ಎಂಬ ಮಾತು ನಿಶ್ಚಿತ! ಮಿತ್ರಾ-ವರುಣ (ಚಂದ್ರ) ಎಂದರೆ ಅಮಾವಾಸ್ಯಾ ಅಥವಾ ಸೂರ್ಯಗ್ರಹಣ ವಾಗಲೇಬೇಕು. ಕಾಳ್ಗತ್ತಲೆಯ ಸೂಚಕ ಸಂಕೇತವೆಂಬುದನ್ನು ಇನ್ನೂ ನಿಃಸಂದಿಗ್ಧವಾಗಿ ಸೂಚಿಸಲು ಸೂರ್ಯರೂಪೀ 'ಚಕ್ರ' ಧಾರಿಯು ಈ ರಾಜನ್ ಚಂದ್ರಮನು ಎಂದು ತೋರಿಸಲಾಗಿದೆ. 'ಅಕ್ಷಿ' ಸೂರ್ಯನು; ಅಕ್ಷಯುಕ್ತ 'ಅಕ್ಷ'ನ (ಕಣ್ಣು>ಗಣ್ಣು) ಈ ಪ್ರತಿಮೆಯ ಮೂಲಕ ಪರಬ್ರಹ್ಮ ಸಾಕ್ಷಾತ್ಕಾರ ಮಾಡಿಸಲಾಗಿದೆ. ಇಲ್ಲಿ !

ಕ್ಷೀರಾಬ್ಧಿ ಪುತ್ರಿ (: ಚಂದ್ರಮಂಡಲಸ್ಥ ಶುಕ್ಲ=ಶುಕ್ರ ಸಂಕೇತ) 'ಕಾ' ದೇವಿಯು ವಿಶ್ವಜನನಿ; ಜಗದಂಬೆ ಎಂಬ ಸಂಕೇತವು ರೂಢವಿರುವಾಗ, ಈ '(ರಾ) ಕಾ ದೇವಿ 'ಸೂರ್ಯಾ' ಆಗುವ ಅಥವಾ ಸೂರ್ಯನನ್ನು ಸೂರ್ಯಳನ್ನಾಗಿ-ಸೂರ್ಯಾದೇವಿಯಾಗಿ ಮಾರ್ಪಡಿಸಿರುವ ಈ ಯಾತುಶಕ್ತಿಯ ಹಿರಿಮೆಯನ್ನು ಎಷ್ಟೆಂದು ಹೇಳಬೇಕು! ಕಂ-ಜ: ನೀರೊಳಗಿನ ಪುಷ್ಪ : ಚಂದ್ರಪ್ರತಿಮೆ ಪುಂಡರೀಕ (: 'ಪಾಂಡು'-ರಂಗ) ಇದು ಸೂರ್ಯಕಮಲವಾಗುವ ಆವಶ್ಯಕತೆಯುಂಟಾದುದು ಈ ಹಂತದಲ್ಲಿಯೇ. ಪಂಢರಿಯ ವಿಠ್ಠಲ=ಕರಿಯ ನೀಲಾಂಗ ಚಂದ್ರ-ಭಾಗಾ ತೀರ್ಥದ=ಜಲಸ್ರೋತದ ತೀರದಲ್ಲಿ! ಇದು ಮೊದಲು 'ಪಾಂಡುರಂಗ' ಕ್ಷೇತ್ರ. 'ಪುಂಡರೀಕ'=ಕಮಲ ಅಯನ,=ನಾರ ಅಯನ ಸಂಪ್ರದಾಯದ ಕ್ಷೇತ್ರವಾಗಿ, ವಿಷ್ಣು-ಪಂಥೀಯ ಭಕ್ತರ ಮಂಡಲವಾಗುತ್ತದೆ. 'ಚಂದ್ರ-ಭಾಗಾ' ನಾಮಸಂಕೇತವು ಪಂಚನದ ದೇಶದ 'ಚೇನಾಬ್' (ಚಿನ್=ಶಿನ್=ಕೆನ್) ನದೀತೀರದ ನೆನಹನ್ನು ಪ್ರಚೋದಿಸುತ್ತದೆ! ಪಂಢರಿಯ ಚಂದ್ರಭಾಗೆಯ ಪಾತ್ರದ-ಪುಳಿನದಲ್ಲಿ 'ಅಯೋನಿ ಸಂಭವ' ಶಿಶುಗಳು ದೊರೆಯುವ ವಾಡಿಕೆ; ೫೦-೬೦ ವರುಷಗಳ ಹಿಂದಿನ ವರೆಗೂ ಇದು ಸರ್ವಶ್ರುತವಿತ್ತು.

ಪಂಢ-ರಿಯು, ದೇವಾರ್ಪಿತ ಜೀವನದ 'ಚಿತ್ರಶಿಖಂಡಿನಃ' ಪರಂಪರೆಯ ಯಾತ್ರಾಕ್ಷೇತ್ರವಿರುವ ಶಕ್ಯತೆಯಿದೆ. ಶ್ರೀಮನ್ನಾರಾಯಣನು ನಾರ-ದನಿಗೆ ಸ್ವಯಂ ಹೇಳಿದ ಆತ್ಮಕಥೆಯಲ್ಲಿ, ವಸಿಷ್ಠಾದಿ 'ಅಷ್ಟ' ಪ್ರಕೃತಿರೂಪ ತನ್ನವರನ್ನು 'ಚಿತ್ರಶಿಖಂಡಿ'ಗಳು ಎಂದು ಸೂಚಿಸಿದ್ದಾನೆ. ಈ 'ಚಿತ್ರಶಿಖಂಡಿ'ಗಳ ಸಂಪ್ರದಾಯವು ಯುರೋಪಿನಲ್ಲಿಯೂ ಇದ್ದಿತು. ಇದುವೆ ಯೋಗಿ, ಯೋಗಿನಿ ಹೆಸರಿನ ಸಂಪ್ರದಾಯವಾಗುತ್ತವೆ, ಕಾಲಾಂತರದಲ್ಲಿ, ಎಲ್ಲಮ್ಮಾದಿ ಕ್ಷೇತ್ರಗಳ ಜೋಗಪ್ಪ-ಜೋಗವ್ವ ಪರಂಪರೆಯು ಇದರದೆ ಪ್ರಾಕೃತ ಅಥವಾ ದೇಶೀರೂಪ ತಾಳಿದ ನಡೆವಳಿ. ಸ್ತ್ರೀ+ಪುಂ ಸಂಯೋಗಸ್ಥಿತಿ, ವಿಶಿಷ್ಟ ಲಿಂಗಾತೀತ=ಪೂರ್ಣ ಬ್ರಹ್ಮಸೂಚಕ. ಆದ್ದರಿಂದ, ಯಾವ ಲಿಂಗಿಯೂ ಅಲ್ಲವಾಗುವ 'ಚಿತ್ರಶಿಖಂಡಿ' ಸಿದ್ಧಿಯ ನಡೆವಳಿ ರೂಢಿಗೆ ಬಂದಿರುವುದಾಗಿ ಕಾಣುತ್ತದೆ:

ಇಷ್ಟೆಲ್ಲ ಸುತ್ತು ಮಾತೇಕೆ? ಕಣ್ಣುಮುಚ್ಚಾಲೆಯೇಕೆ? ವೇದದ ವರ್ಣನೆಯೊಳಗಿನ ಈ ಅಹಿಮಾಯೆಯನ್ನು ಬದಿಗೆ ಸರಿಸಿದರೆ ಸ್ವಚ್ಛವಾಗಿ ಕಾಣತೊಡಗುವುದು ಏಕವೀರಾ 'ರಾಕಾ' ಶಕ್ತಿಯ ಸಂಪ್ರದಾಯ ಹಾಗೂ ಇದರ ಸ್ಥಿತ್ಯಂತರಗಳು. 'ಏಕವೀರಾ' ಸಂಪ್ರದಾಯವು ಭಾರತಕ್ಕೆ ಮಾತ್ರ ಸೀಮಿತ ಅಥವಾ ಋಗ್ವೇದದ ವೈಶಿಷ್ಟ್ಯ ಎಂಬ ಗ್ರಹಿಕೆಯು ನಿರಾಧಾರವಾಗಿದೆ. ಸುಮೇರು-ಅಸ್ಸೀರಿಯಾ ಭಾಗದಲ್ಲಿ ದೊರೆವ ಪುರಾತನ ಉಲ್ಲೇಖಗಳ ನೆರವು ಪಡೆದು, ಕ್ರೀಟ್-ಗ್ರೀಕಿನತ್ತಣೆನ ಆದಿದೈವತ ಕತೆಗಳ ಸಮೀಕ್ಷೆಯೊಡನೆ ಇಜಿಪ್ತಿನ ಪುರಾತನ ಸಂಸ್ಕೃತಿಯ ಆದಿ ದೈವತ ಕಥೆಗಳ ಸಂಗಡದ ತುಲನಾತ್ಮಕ ವಿಮರ್ಶೆಯಿಂದ ದೊರೆವ ಬೆಳಕಿನಲ್ಲಿ ಋಗ್ವೇದದ ಏಕವೀರಾ : 'ರಾ-ಕಾ' ದೇವಿಯ ಸುಸಂಗತವಾದ ಸಮ್ಯಕ್ ಸ್ವರೂಪದ ಕಥೆಯೊಂದು ಕಣ್ಣಳತೆಯಲ್ಲಿ ಬರಬಲ್ಲದು ಬರುತ್ತದೆ, ಎಂಬ ಆತ್ಮವಿಶ್ವಾಸ ಕುದುರುವಷ್ಟು ಪ್ರಮಾಣಗಳು ಉಪಲಬ್ಧವಾಗುತ್ತಿವೆ.

ಮೊದಲ ಹಂತದಲ್ಲಿ ಈ ಲೋಕಮಾತೆ, 'ದೇವಜನನಿ' ಪೂರ್ಣಮಾದೇವಿ ಏಕಮಾತ್ರವೀರೆ ಸುಮೇರಿನ ಡುಮುಝು; ಕುರುಂಬ ರಾಜನ ಪ್ರೇಯಸಿ ಇನನ್ನಾದೇವಿ, 'ಡುಮುಝು' ದೈವತ ಪ್ರತಿಮೆಯು ತಾನು ಸಸ್ಯವೃಕ್ಷಾದಿ ರೂಪನಾಗಿ ಕೊನೆಗೊಳ್ಳಲು ಅಪೇಕ್ಷಿಸುವ ಸಾಂಕೇತಿಕ ವರ್ಣನೆಯುಂಟು. ಕುರುಂಬ ಡುಮುಝುನ ನಲ್ಲೆ, ಆ ಬಳಿಕ (ತೋಟ :) ಪಟ್ಟಿಯ ರಾಜ : ಪಟ್ಟೆಲ=ಗೌಡ=ಒಕ್ಕಲಿಗನನ್ನು ಮೆಚ್ಚುವುದನ್ನು ಕಂಡು ಕುರುಂಬ ರಾಜನಿಗೆ ದುಃಖ. ಆ ಬಳಿಕ ತನ್ನ ಜೀವಕ್ಕೇ ಗಂಡಾಂತರವುಂಟಾಗುವ ಭೀತಿ! ಈ ಹಂತದಲ್ಲಿ ಕುರುಂಬರ*ರಾಜನು ತನ್ನ ನಲ್ಲೆಯ ಸಹೋದರ 'ಉತು'=ಸೂರ್ಯದೇವನಿಗೆ ಬೇಡಿಕೊಳ್ಳುತ್ತಾನೆ. ತನ್ನನ್ನು 'ಸರ್ಪ'ವಾಗಿಸು ಎಂದು. ಆದರೆ ಇನ್ನೊಮ್ಮೆ ಹರಿಣ=ಮೃಗ (: ಮೊಲವೂ) ರೂಪಕ್ಕೆ ಮಾರ್ಪಡಿಸಲು ಬೇಡುತ್ತಾನೆ. ಅಷ್ಟರಲ್ಲಿ ವೈರಿಗಳು ಬಂದು ಅವನನ್ನು ಇಲ್ಲವಾಗಿಸುತ್ತಾರೆ! ಚಂದ್ರಬಿಂಬದೊಳಗಿನ 'ಮೃಗ', ಮೊದಲನೆಯ ಪ್ರಿಯಕರ ಕುರುಂಬ ರಾಜನ ಐಕ್ಯ=ನಲ್ಲೆಯೊಡನೆ ಆಗಿರುವ ಏಕಾತ್ಮಕಸ್ಥಿತಿಯ ಸಂಕೇತವಾಗುತ್ತಿದೆ. ಈ ಆದಿ ವೀರ>ಬೀರ ಕುರುಂಬ=ಹಾಲು ಮತದವನೇ ಆಗಿರುವನೆಂಬ ಭಾರತೀಯ ನಂಬುಗೆಗೆ, ಸುಮೇರು ಪುರಾತನ ಕಾವ್ಯದಿಂದಲೂ ಪುಷ್ಟಿ ದೊರೆಯುತ್ತಿದೆ.

ಬೀರ ಕುರುಂಬರಾಜನನ್ನು ಸ್ಪರ್ಧಿಸಿ ಇನನ್ನಳನ್ನು ತನ್ನವಳನ್ನಾಗಿಸಿಕೊಳ್ಳುವಲ್ಲಿ, ರಾಜನ್ ಒಕ್ಕಲಿಗ; ಎಂಕಿಮಾಡುವು ಯಶಸ್ವಿಯಾದ ಸೂಚಕಕಥೆಯೂ ಇಲ್ಲಿ ಮೈತಾಳಿದೆ. ಈ ಸಾಂಕೇತಿಕತೆ ಸಮಾಜಜೀವನದ ವಿಕಾಸ-ಕ್ರಮಕ್ಕೂ ಸುಸಂಗತವಾಗಿದೆ. ಕುರುಂಬಿಕೆ-ದನಗಾರಿಕೆಯ ಹಂತವು ಕೊನೆಗೊಂಡು ತೋಟ-ಪಟ್ಟಿಯ ಪಟ್ಟಿ-ಪಾಡಿನಾಡಿನ ಕೃಷೀವಲ ಸಂಸ್ಕೃತಿಯ ಉದಯವಾಗುವ ಈ ಸ್ಥಿತ್ಯಂತರ ಸೂಚಕ ಜೀವನ ಘಟ್ಟದ ಪ್ರತಿಬಿಂಬವೂ ಈ ಪ್ರೇಮಕಥೆಯ ಹಿನ್ನೆಲೆಯಲ್ಲಿ ಕಾಣದೊರೆಯುತ್ತದೆ.

ಋಗ್ವೇದದ (ರಜನಿ=) 'ಋತಾವರೀ' ಎಂಬ ಅದಿತಿ, 'ರಾ-ಕಾ'ದೇವಿ ಆಗಿರುವ ಬಗೆಗೆ ಸಂದೇಹವಿಲ್ಲ. 'ಮಾತಾ ರುದ್ರಾಣಾಂ' ಎಂಬಲ್ಲಿ ಅದಿತಿಯು ರುದ್ರನಿಂದ, ಮರುತರ ತಾಯಿಯಾಗುತ್ತಾಳೆ. ಮರುತಗರ್ಭ ಮೂಲತಃ ಒಂದೇ ಒಂದು. ಆದರೆ, ವರ್ಣನಾ ಸೌಕರ್ಯಕ್ಕಾಗಿ ಏಕಂ : ಸತ್' ಸ್ವರೂಪದ ಈ ಸಂಕೇತವನ್ನು ೭x೭ ಆಗಿ ಕಲ್ಪಿಸಿದ್ದುಂಟು. 'ಒಂದು ಹಲವಾಯ್ತು : ಹಲವು ಒಂದಾಯ್ತು' ಈ ವಿಶ್ವರೂಪವಾಗುವ ಶಕ್ತಿಯು ಮೂಲತಃ 'ಏಕಂ' ಉಂಟು, ಎಂದು ಸಿದ್ಧಪಡಿಸಲು ತಾವೇ ಸೃಜಿಸಿದ ಕಾಲ್ಪನಿಕ ಸೃಷ್ಟಿ ಇದು. 'ಗಣಂ ಗಣಂ' ಎಂದು ವರ್ಣಿಸಲಾಗುವ ನಾನಾ ಮರುತರು ಉಂಟು. ಆದರೆ ಇದೆಲ್ಲ ಭ್ರಮೆ ಎಂಬುದಕ್ಕೆ, ಈಗ ಉಳಿದಿರುವ 'ಮಹಾವೀರ'ನೆಂಬ ಮಾರುತಿ : ಹನೂಮಂತನೇ ಸಾಕ್ಷಿ. ರಾಮ-ಚಂದ್ರನ ಕಥೆಯಲ್ಲಿ ಕಾಣುವ "ಬೃಹಲ್ಲಾಂಗೂಲ ಮಾರುತಿ" ಒಬ್ಬನೇ; ವಾ-ನರರು ಅನೇಕರು. ಈ ಸಾಂಕೇತಿಕತೆಯಲ್ಲಿ ಅದಿತಿಯ 'ವೀರ'ನು ಒಬ್ಬನೇ ಎಂಬುದೇ ಎದ್ದುಕಾಣುತ್ತಿದೆ. ಇದಕ್ಕೆ ಉಪಷ್ಟಂಭಕವಾಗಿ ಅದಿತಿ-ದಕ್ಷ (: ವೀರ) ಈ ಜೋಡಿ! ಇದಕ್ಕೂ ಮುಂಚಿನ ಹಂತದಲ್ಲಿ 'ಅಪಾಂನಪ್ತೃ' ಎಂಬ ಸಂಯುಕ್ತ ಪ್ರತಿಮೆ. ಇದರಲ್ಲಿ ಆಪೋ ದೇವಿ : ಚಂದ್ರಾ : ಅದಿತಿ; ಅವಳ ನಪ್ತೃ=ವೀರನು ಏಕೈಕನು!

ಆದುದರಿಂದ, ವೃತ್ರ-ತ್ವಷ್ಟಾರ ಹಂತದ ವರ್ಣನೆಯ ತರುವಾಯ ಅದಿತಿಯ ಸಂಗಾತಿ ಎಂದು ಕಣ್ಣಳತೆಯಲ್ಲಿ ಬರುವ ರುದ್ರನೇ ಮೊದಲನೆಯ ವೀರ. ಇವನ ಪ್ರತಿಸ್ಪರ್ಧಿಯಂತೆ ವಿಷ್ಣುವಿನ ಚಿತ್ರವು ಒಡಮೂಡಿನಿಂತಿದೆ. 'ವಿಷ್ಣೋಃ ವೇಶ್ಯಾ' ಎಂದು ಸೂಚಿತಳಾಗುವ ಅದಿತಿಯೇ ಬಳಿಕ 'ವಿಷ್ಣುಪತ್ನಿ' ಎಂಬ ನಿಲುಮೆಯಲ್ಲಿ ಕಾಣತೊಡಗುತ್ತಾಳೆ! ರಾ-ಕಾ ಲೋಕಮಾತೆ ಆದಿಶಕ್ತಿಯ ಸಂದರ್ಭದ ಸಂಕೇತಗಳಲ್ಲಿ ಇದು ಇಂದಿಗೂ ಸೂಕ್ಷ್ಮವಾಗಿ ಉಳಿದಿದೆ: ಕೊಲ್ಲಾಪುರದ ದೇವಿ ಒಬ್ಬಳೇ. ಅವಳು 'ಜಗದಂಬೆ' ಎಂದೊಡನೆ ರುದ್ರನ ಪ್ರಿಯೆಯಾಗಿ ಕಾಣುತ್ತಾಳೆ; ಲಕ್ಷ್ಮೀದೇವಿ ಎಂದೊಡನೆ ವಿಷ್ಣುಪ್ರಿಯೆ ಎನಿಸುತ್ತಾಳೆ! ರುದ್ರನೇ 'ಪಶುಪತಿ', ಸುಮೇರಿನತ್ತಣಿನ ದನಗಾರ-ಕುರಿಗಾರ

---

* ಇವಳಿಗೇ ನನಾ, ಇಷ್ಟಾರ, ಅನಥಾ-ಅನಾ ಹತಾ: ಅರೇದ್ವೀ ಸೂರಾ ಇತ್ಯಾದಿ ನಾಮಾಂತರಗಳು ದೇಶಭೇದ, ಜನಾಂಗ ಭೇದದಿಂದ ಪ್ರಚಲಿತವಾಗಿವೆ.

ಡುಮುರ್ಝುನ ಹೋಲಿಕೆಯನ್ನು ಅಲ್ಲಗಳೆಯಲು ಆಗುವುದಿಲ್ಲ. ವಿಷ್ಣುವೂ ಗೋವಿಂದ-ಗೋಪಾಲ, 'ಭೂರಿಶೃಂಗಾಃ ಗಾವಃ' ಇರುವ 'ಗೋ ಕುಲ' ನಿವಾಸಿ ನಿಜ. ಆದರು ಕೃಷಿಸಂಸ್ಕೃತಿಯ ಸಾಂಕೇತಿಕತೆಯನ್ನು ಗಮನಿಸದಿರಲಾಗದು. ಆಷಾಢದಲ್ಲಿ ಶಯನೀ (ಏಕಾದಶೀ ತಿಥಿ) ಕಾರ್ತೀಕ ಮಾಸದ ಉತ್ಥಾನ (ದ್ವಾದಶೀ ತಿಥಿ). ಈ ಸಾಂಕೇತಿಕತೆಯಲ್ಲಿ ಮೊದಲನೆಯದು ವೃಷ್>ವರ್ಷ-ವೃಷ್ಣಿ ವೃಷಣ-ವರ್ಷಣ ಕಾರ್ಯದ ಸಮಯ ಸೂಚಕವಾಗಿದೆ. 'ಆಷಾಢಸ್ಯ ಪ್ರಥಮದಿವಸೇ' ವಿರಹಿ ಯಕ್ಷ (=ಬ್ರಹ್ಮಶ್ರಕ್ತಿ) ಅರ್ಧಾಂಗಿಯನ್ನು ಆ-ಲಿಂಗಿಸಲು ಆಗದೆ ಗೋಗರೆಯುವುದನ್ನೂ ಅದರಂತೆ ಪುರೂ-ರವನಾಗಿ ಒರಲುತ್ತಿರುವುದನ್ನೂ ಕಾಲಿದಾಸನು ವರ್ಣಿಸಿರುವುದರೊಳಗಿನ ಸಾಂಕೇತಿಕತೆ, ಋಗ್ವೇದದಷ್ಟು ಪ್ರಾಚೀನವಿದೆ. 'ಆಷಾಢಕಾರ್ಯ' ಮುಗಿದು ಬೆಳೆಯ ಕುಯ್ಲು ಆಗುವ ಸುಮಾರಿಗೆ, ಏಳುವ-ಮರಳಿ ಕೃಷಿಗೆ ಭೂಮಿಯು ಹದವಾಗಿಸುವ ಸಿದ್ಧತೆಗೆ ತೊಡಗುವ ಈ 'ಉತ್ಥಾನ'ಕ್ರಿಯೆಯಲ್ಲಿ ಒಳಗೊಳ್ಳುವ ಜೀವನ ಚಿತ್ರವು ಅಭ್ಯಸನೀಯವಿದೆ.

ರುದ್ರ-ವಿಷ್ಣುಗಳ ಸ್ಪರ್ಧೆಯಲ್ಲಿ ಹುಣ್ಣಿಮೆ, ಪ್ರಾಧಾನ್ಯದಿಂದ ಶೈವಪಂಥೀಯ ದೇವೀ ಆರಾಧಕರ ಸಮಯಾಚಾರಕ್ಕೆ, ಅಮಾವಾಸ್ಯೆ ಕರಿಯ-ನೀಲಾಂಗ ಕೃಷ್ಣವಿಷ್ಣು ಸಂಪ್ರದಾಯದವರ ದೇವೀ ಸಮಯಾಚಾರ ಎಂಬ ರೂಢಿ ಬೆಳೆದುಬಂದಂತೆ ತೋರುತ್ತದೆ. ಎಲ್ಲಮ್ಮಾದಿ ಜಾತ್ರೆಗಳು ಹುಣ್ಣಿಮೆಗೆ ಆಗುತ್ತವೆ. ಕಾಳಮ್ಮ-ಕರಿಯವ್ವನ ಆರಾಧಕರಲ್ಲಿ ಅಮಾವಾಸ್ಯೆಯ ಆಚಾರಾಂಗಕ್ಕೆ ಪ್ರಾಶಸ್ತ್ಯವುಂಟು. ಕಂನಾಡಿನ ವಿಶ್ವಕರ್ಮಬ್ರಾಹ್ಮಣರ ಶಿರಸಂಗೀ ಕಾಳಮ್ಮನ ತೇರು 'ಯುಗ' ಪ್ರತಿಪದೆಗೆ. ಆದರೂ ವ್ರತೋಪವಾಸಾದಿ ಪ್ರಧಾನ ಆಚಾರ ವಿಧಿ ಮುನ್ನಾದಿನ: ಅಮಾವಾಸ್ಯೆಯಂದೇ ನಡೆಯಬೇಕು. ಈ ಕ್ಷೇತ್ರಕ್ಕೂ ದಕ್ಷಿಣದ ಕಾಂಚೀ ಕಾಮಾಕ್ಷಿದೇವಿಗೂ ನಿಕಟ ಸಂಬಂಧವಿರುವ ಶ್ರದ್ಧೆಯುಂಟು. ಶಿರಸಂಗೀ ಕಾಳಮ್ಮನ ತೇರಿನ ಮುಂದೆ ತೂರುವ ಬುತ್ತಿಯ ಉಂಡೆ ಕಾಂಚೀ ಉತ್ಸವದ ಈ ಸಂದರ್ಭದಲ್ಲಿ ಹೋಗಿ ಬೀಳುವುದೆಂಬ ನಂಬುಗೆಯ ಒಂದು ಸಮಯಾಚಾರವು ಇಲ್ಲಿ ನಡೆಯುತ್ತದೆ.

ಈಜಿಪ್ಟ್ ಇಸಿಸ್, ಸೆಟ್ / ಹೊರಸ್-ಒಸಿರಿಸ್ ಈ ಸಾಂಕೇತಿಕ ಪ್ರತಿಮೆಗಳು, ಭಾರತೀಯ ಅದಿತಿ ರುದ್ರ ವಾಸುದೇವ-ವಿಷ್ಣು ದೈವತೆಗಳನ್ನು ಹೋಲುತ್ತಿವೆ. ಈಜಿಪ್ಟ್‌ನಲ್ಲಿ ಈ ದೈವತವು 'Bull of his mother' ಆಗಿರುವುದರಿಂದ, ಅಲ್ಲಿಯೂ ಅದಿತಿ. ಅವಳ ವೀರ=ವೃಷಭನ ನಡುವಿನ ಸಂಬಂಧವೇ ಇದ್ದ ಹಾಗಾಯಿತು. ಈಜಿಪ್ಟ್ ಹಾಗೂ ಭಾರತೀಯ ಪುರಾತನ ಉಲ್ಲೇಖಗಳಲ್ಲಿ ಭಾರತೀಯ ಮೂಲದ್ದುವು ಈಜಿಪ್ಟ್ ವೈವಿಧ್ಯವುಳ್ಳವುಗಳಲ್ಲ. ಈಜಿಪ್ಟ್ ಅವಶೇಷಗಳಲ್ಲಿ ಕಾಲಮಿತಿ ಸಹ ದೊರೆಯುವುದರಿಂದ ಅವುಗಳ ಈ ಅನನ್ಯ ಸಾಧಾರಣ ಅಪೂರ್ವತೆ, ಹಿರಿಮೆ ಭಾರತೀಯ ಉಲ್ಲೇಖಗಳಿಗೆ ಬರಲಾರದು. ಆದರೆ, ಋಗ್ವೇದಾದಿಗಳಲ್ಲಿ ದೊರೆವ ಶಬ್ದ-ಪ್ರತಿಮೆಗಳ ಅಪೂರ್ವತೆ ಇನ್ನೊಂದು ಬಗೆಯದಾಗಿದೆ. ವಿಷ್ಣು-ಕೃಷ್ಣ ಹಂತಕ್ಕಿಂತ ಮುಂಚಿನ ಐತಿಹ್ಯ ಭಾರತೀಯ ಉಲ್ಲೇಖಗಳಲ್ಲಿ ನಿಃಸಂದಿಗ್ಧವಾಗಿ ಕಾಣದೊರೆಯುವಂತೆ, ಹೊರೆಸ್-ಒಸಿರಿಸ್ ಪೂರ್ವದ ಹಂತದ ಕಥೆಯಲ್ಲಿ ಸ್ಪಷ್ಟತೆಯಿಲ್ಲ. ವಿಶೇಷವಾಗಿ 'ಸೆಟ್' ಇವನು, ಪಟ್ಟಕ್ಕೆ ಎರವಾದವನು ಹೊರೆಸ್-ಒಸಿರಿಸ್ಸಿನ ಪ್ರತಿಸ್ಪರ್ಧಿ ಎಂಬ ಭೂಮಿಕೆಯಲ್ಲಿ ಮಾತ್ರ ಕಾಣದೊರೆಯುತ್ತಾನೆ. ಆಳುವ ರಾಜನ ಪರವಾಗಿ ಸಾಹಿತ್ಯಕೃತಿಯು ಹುಟ್ಟಿದ್ದರಿಂದ ಸೆಟ ಖಲನಾಯನಂತೆ ಚಿತ್ರಿಸಲ್ಪಟ್ಟಿದ್ದಾನೆ; ಭಾರತೀಯ ಸಾಹಿತ್ಯದಲ್ಲಿಯೂ ಈ ತಾರತಮ್ಯವು ಇಲ್ಲದಿಲ್ಲ!

'ನಾವಿಷ್ಣುಃ ಪೃಥಿವೀಪತಿಃ' ವಿಷ್ಣುತ್ವವಿಲ್ಲದವನು 'ರಾಜನ್' ಪದವಿಗೆ ಅರ್ಹನಲ್ಲ ಎಂದು ಮನುಸ್ಮೃತಿ ಹೇಳುತ್ತದೆ. ಈ ಸ್ಥಾನ-ಮಾನ ರುದ್ರನಿಗೆ ದೊರೆತಂತಿಲ್ಲ! ವಿಷ್ಣು 'ಪದವು' ವೈಕುಂಠದಲ್ಲಿಯೂ ಭೂಲೋಕದಲ್ಲಿ ಆತನ ಪ್ರತೀಕವೂ 'ವಾಸುದೇವ', 'ವಸು' ಸಂಕೇತವನ್ನು ಪ್ರತಿಷ್ಠಿತಗೊಳಿಸಲು ಋಗ್ವೇದದಲ್ಲಿ ಮಾಡಲಾಗಿರುವ ಯಾತುಕೃತಿ ಅಭ್ಯಸನೀಯವಿದೆ. ನಾರ್-ಮರನೆಂಬ ಇಂದ್ರಶತ್ರುವಿನ ಸಂಗಾತಿ ಸಹ-ವಸು.[೧೫] 'ವಸು'=ವಾಸವ! ಆಪ : ರಸಸ್ವರೂಪೀ (=ಸರ್‌ಪ) ದೈವತಗಳೂ 'ವಸು'ಗಳ. : 'ವಾಸು'-ಕಿ: ಕೃಷ್ಣನ ತಂದೆ 'ವಸು'- ದೇವ!

ವಾಗಾಂಭೃಣಿ, ತನ್ನಿಂದ ಪೋಷಿತರು ಇಂದ್ರಾಗ್ನೀ ವರುಣಾದಿಗಳು ಎಂಬ ವೀರೆ. 'ಅಹಂ ರುದ್ರೇಭಿಃ ವಸುಭಿಃ... ಚರಾಮಿ' ವಸುಗಳು ತನ್ನ ಸಹ-ಚರರು ಎಂದು ಸಾರುತ್ತಾಳೆ! ಹೀಗೆ ಋಗ್ವೇದದಲ್ಲಿ 'ಡಬಲ್' ದೈವತ : ಬೃಹಸ್ಪತಿ-ಬ್ರಹ್ಮಣ-ಸ್ಪತಿ, ಸೂರ್ಯ-(ಪ್ರಾಜಾಸತ್ಯ) ಸೂರ್ಯ; ಅಗ್ನಿ (ಹವ್ಯವಾಹನ) ಅಗ್ನಿ, (ಆಪ-ಸಲಿಲಸ್ಥ) ಇತ್ಯಾದಿ! ವೇದಕಾಲದಿಂದಲೇ ವಿಷ್ಣುಪಂಥೀಯ 'ವಸು' ಮೆಲ್ಲನೆ ಪ್ರತಿಷ್ಠೆ ಪಡೆಯುತ್ತ - ನಾರ್=ನಾರ(ಣ)ನ ಸಂಗಾತಿ-ಭಕ್ತ ಉಪಚರಿವಸು ಒಬ್ಬ ಮಹಾಭಾರತದಲ್ಲಿ ಬರುತ್ತಾನೆ. 'ವಾಸು ದೇವ' ಇದು ಒಂದು ಶ್ರೇಷ್ಠ ಪದವಿ ಇರಬೇಕೆಂದು ಮಹಾಭಾರತದೊಳಗಿನ ಕೆಲ ಪ್ರಸಂಗಗಳಿಂದ ಗೊತ್ತಾಗುತ್ತದೆ. ತಾನೇ 'ವಾಸುದೇವ': ಕೃಷ್ಣನ ವಾಸುದೇವತ್ವ ನಾವು ಒಪ್ಪಲಾರೆವು ಎಂಬ ವಿರೋಧಿಗಳು ಅಂದು ಇದ್ದರು. ವಾಸುದೇವತ್ವದ ಮೂದಲಿಕೆ, ಬ್ರಹ್ಮಶಿವನ ಸಮಯಪರೀಕ್ಷೆಯಲ್ಲೂ ಉಂಟು!

ಈಜಿಪ್ಪಿನ ಸೆಟ್-ಹೊರೆಸ್-ಒಸಿರಿಸ್‌ರಲ್ಲಿ 'ಹೊರೆಸ್' ಪದಕ್ಕಾಗಿ, ಸೆಟ್ ಕಾದುತ್ತಿದ್ದನೆಂಬ ಒಂದು 'ಸಮಯಾಚಾರ' ಅಲ್ಲಿ ಉಳಿದಿದ್ದು ಪುರಾತನ ಉಲ್ಲೇಖಗಳಿಂದ ಗೊತ್ತಾಗುತ್ತದೆ. ಸತ್ತಬಳಿಕ ಒಸಿರಿಸ್=ವಿಷ್ಣು (ಲೋಕ): ಜೀವಂತವಿರುವ ವರೆಗೆ ಇರತಕ್ಕ ವಾಸುದೇವ ಪದವಿಯು, ಈಜಿಪ್ಪಿನ 'ಹೊರಸ್' ಪದವಿಯನ್ನು ನೆನಪಿಗೆ ತಂದುಕೊಡುತ್ತದೆ. ಕೃಷ್ಣನು ತಾನೇ 'ವಾಸುದೇವ'ನೆಂದು ಪೂಜೆ ಪಡೆಯುತ್ತಿದ್ದನು. ಪ್ರತಿವಾರ್ಷಿಕ ತುಳಸಿ ಮದುವೆಯ 'ವರ'ನಾಗುವ ಕೃಷ್ಣನ ನಾಮಾಂತರಗಳಲ್ಲಿ 'ದಾಮೋದರ'ದಂತೆ 'ವಾಸುದೇವ' ಎಂಬುದೂ ಕೇಳಬರುತ್ತದೆ.

ಕೌರವ ಪಾಂಡವರ ಸ್ಪರ್ಧೆಯಲ್ಲಿ, 'ವಾಸುದೇವ' ಪಕ್ಷ : ವಿಷ್ಣು ಪಂಥದ ಪಾಂಡವರು ಗೆಲ್ಲುತ್ತಾರೆ. ಅ-ವಾಸುದೇವರು=ಶೈವರು (: ಸೆಟ್) ಸೋಲುತ್ತಾರೆ. ರಾಮ-ರಾವಣರ ದ್ವಂದ್ವದಲ್ಲಿ ರಾಮಚಂದ್ರ: ವಿಷ್ಣು (ಒಸಿರಸ್) ಗೆಲ್ಲುತ್ತಾನೆ. ರಾವಣ: ಶೈವ (: ಸೆಟ್) ಸೋಲುತ್ತಾನೆ. ಇಜಿಪ್ತಿನಲ್ಲಿ ಬರಿಗಣ್ಣಿಗೂ ಮನಗಾಣಿಸಿ ಕೊಡುವ ಅತಿ ಪುರಾತನ ಶಿಲ್ಪವೈಭವ, ವರ್ಣಚಿತ್ರಗಳು, ನಾನಾವಿಧ ಮೂರ್ತಿಗಳು ಉಂಟು. ಪಿರಾಮಿಡ್ಡು. ಅವುಗಳಲ್ಲಿ ತಮ್ಮ ಪುರಾತನರನ್ನು ಅಮರರನ್ನಾಗಿಸಲು ಅಚ್ಚಳಿಯದೆ ಉಳಿಯಲು ಕಲ್ಪಿಸಿರುವ ಶವರಕ್ಷಣ ತಂತ್ರವು ಆಧುನಿಕ ಶಾಸ್ತ್ರಜ್ಞರನ್ನೆಲ್ಲ ಬೆರಗುಗೊಳಿಸಿದೆ. ಆದರೆ, ಪುರಾತನ ಭಾರತೀಯರು ನಿರ್ಮಿಸಿರುವ ವಿಭ್ರಮಕಾರಕ 'ಏಕೇಷ' ಶಕ್ತಿಯ 'ಶಬ್ದಪ್ರತಿಮಾ' ಶಿಲ್ಪಸೌಂದರ್ಯದ ಅಪೂರ್ವತೆ ಅನನ್ಯ ಸಾಧಾರಣವಿರುವುದು ಸುಳ್ಳಲ್ಲ. ಋಗ್ವೇದ, ಉಪನಿಷತ್ತು, ವ್ಯಾಸ-ವಾಲ್ಮೀಕಿಗಳ ಕೃತಿಗಳ 'ಅಹಿಮಾಯೆ' ಬದಿಗೆ ಸರಿಸಿ ಅವುಗಳ ನಿಜಸ್ವರೂಪವನ್ನು ಅರಿಯಲು ಪಾಶ್ಚಾತ್ಯ ಅತಿರಥಿ-ಮಹಾರಥಿ ಸಂಶೋಧಕರು ಸಹ ವಿಫಲ ಪ್ರಯತ್ನರಾದುದಕ್ಕಿಂತ, ಈ ಶಿಲ್ಪದ ಸಂಮೋಹ ಶಕ್ತಿಯ ಬಗೆಗಿನ ಹೆಚ್ಚಿನ ಪ್ರಮಾಣ ಪತ್ರ ಬೇರಾವುದು ಬೇಕು? ಅಥವಾ ಹೀಗೂ ಶಕ್ಯವಿದೆ; ಈಜಿಪ್ಟ್-ಸುಮೇರು-ಅಸ್ಸೀರಿಯಾ ಭಾಗದ ಪುರಾತನ ಸಂಸ್ಕೃತಿಯು ಆಕರ್ಷಿಸಿಕೊಂಡಷ್ಟು ಮಹಾಮೇಧಾವಿಗಳ ಸಂಖ್ಯೆ ಮತ್ತು ಪರಿಶ್ರಮ ಭಾರತದ ಪಾಲಿಗೆ ಲಭಿಸಿದಂತಿಲ್ಲ. ಏಕೆಂದರೆ ಈಜಿಪ್ಪಿನಲ್ಲಿಯೂ 'a Kaleido-scopic and intricate appearance' ಇರುವ ಶಿಲ್ಪ-ಶಬ್ದಶಿಲ್ಪ ಉಂಟು ಎಂದು ರುಡಾಲ್ಫ್ ಅಂಥೆಸ್ ತಮ್ಮ ಅನುಭವ ಹೇಳಿದ್ದಾರೆ. 'Punning is a popular feature in Egyptian mythology'.[೧೬]

ಈಜಿಪ್ಪಿನಲ್ಲಿ ಕಣ್ಣಿಗೆ ಅಪ್ಪಳಿಸಿ ತಮ್ಮ ಅಸ್ತಿತ್ವ ಸಿದ್ಧಪಡಿಸುವ ಘನೀಭೂತ ಶಬ್ದಪ್ರತಿಮೆಗಳೂ ಇವೆ. ಭಾರತದಲ್ಲಿ ಕೇವಲ 'ಅಂತರಿಕ್ಷ ರೋದಸೀ' ರಜಸ್ ಲೋಕದ, ದ್ಯಾವಾ-ಭೂಮಿಗಳ ನಡುವಣ-ಮಧ್ಯಮ ಲೋಕಸ್ಥ 'ದಿವ್ಯ' 'ರಾಕಾ' ಶಕ್ತಿಯ ಧ್ಯಾನ-ಧಾರಣ-ಸಮಾಧಿಯಲ್ಲಿಯೆ ತೃಪ್ತಿಪಡುವ ಆದರ್ಶವೇ ವಿಶೇಷ ಪ್ರಭಾವಶಾಲಿಯಾದುದರಿಂದ ಇಲ್ಲಿ ಶಬ್ದರೂಪ, 'ಮಯಸಭಾ' ಮಂದಿರದ-ಬಯಲಿನಲ್ಲಿ ನಿರ್ವಯಲ ಸುರಮ್ಯ ಹರ್ಮ್ಯ ರಚಿಸುವ-ಕಲೆಯು, ಅನನ್ಯ ಸಾಧಾರಣವಾದ ವ್ಯಾಮಿಶ್ರ ಶೈಲಿಯ 'ವಾ ನ ವಾ' ಶಬ್ದಶಿಲ್ಪವು ಬೆಳೆದು ನಿಂತಿದೆ. ರಚಿಸಿದವರ ವಂಶಜರು ಅಥವಾ ಪರಂಪರೆಯವರು ಎಂಬುವರಿಗೂ ಅರ್ಥವಾಗದ 'ಮುಂಡಿ'ಗೆಯಾಗಿ! 'ಏಕೇಷ' ಸಿದ್ಧಿಯ ಮಾತು 'ನೇತಿ ನೇತಿ' ಸ್ವರೂಪಕ್ಕೆ ತಿರುಗದಿದ್ದರೆ, ಅದು ಆ ಗುರುಸಿದ್ಧ ಪರಂಪರೆಗೆ ಕುಂದು!

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** I ೭೨. ೫-
೨. ***ಅದೇ*** X. ೭೨
೩. ***ಅದೇ*** X ೧೧೨. ೫
೪. ***ಅದೇ*** I. ೧೬೪. ೪೬
೫. ***ಬೃಹದಾರಣ್ಯಕೋಪನಿಷತ್ತು*** ೪. ೩. ೨೧
೬. ***ಋಗ್ವೇದ ಸಂಹಿತೆ*** X. ೧೩೫ ೩-೪
೭. ***ಅದೇ*** X. ೧೩೫ ೩-೪
೮. ***ಅದೇ*** VII.೬೩.೨.
೯. ***ಅಥರ್ವವೇದ ಸಂಹಿತೆ*** ೧೪.೨.೭೧
೧೦. ***ಛಾಂದೋಗ್ಯೋಪನಿಷತ್ತು*** ೧,೬,೬
೧೧. Macdonell A. A.; ***Vedic Mythology*** P. 65
೧೨. ***ಋಗ್ವೇದ ಸಂಹಿತೆ*** X. ೭೨. ೮-೬
೧೩. ***ಅದೇ*** X. ೧೨೧. ೯
೧೪. ***ಅದೇ*** I. ೧೫೪
೧೫. ***ಅದೇ*** II. ೧೩.೮
೧೬. S. N. Kramer, Editor : ***Mythologies of the Ancient World,*** Anchor Books, N.Y.' 61, p. 26; 19

ದಿವ್ಯಶಕ್ತಿಸೂಚಕ ಸಾಂಕೇತಿಕ ಪ್ರತಿಮೆಗಳು

ಪುರಾತನ ಈಜಿಪ್ಟ್ ಹಾಗೂ ಪುರಾತನ ಭಾರತೀಯ ಸಂಸ್ಕೃತಿಗಳೆರಡರಲ್ಲೂ ಇರುವ ಸಮಾನ ಅಂಶವೆಂದರೆ ದೈವತ 'ದಿವ್ಯ' ಶಕ್ತಿಸೂಚಕ ನಾನಾ ಪ್ರಾಣಿಗಳ ಸಾಂಕೇತಿಕ ಪ್ರತಿಮೆಗಳು ! ಹಾವು, ಕಪ್ಪೆ, ಪತಂಗ - Beetle, ಕತ್ತೆ, ಕುದುರೆ- ನೀರ್‌ಕುದುರೆ, ಪಕ್ಷಿ ನಾನಾವಿಧ, ಇಲಿ, ಇತ್ಯಾದಿ ಇತ್ಯಾದಿ. ಋಗ್ವೇದಾದಿಗಳಲ್ಲಿ ಶಬ್ದ-ಪ್ರತಿಮೆಗಳು ಇರುವುದರಿಂದ ಏಕಾಕ್ಷರೀಕೋಶದ* ಬಲದಿಂದ ಪ್ರತಿಕೂಲ ಅರ್ಥವನ್ನು ಅಲ್ಲಗಳೆದು, ಇಷ್ಟವಾದ ಅರ್ಥವನ್ನು ಕಲ್ಪಿಸಿಕೊಳ್ಳಲು ಅನುಕೂಲವಾಗಿದೆ. ಈ ಕಾರಣದಿಂದಾಗಿ ಭಾರತೀಯರಿಗೆ ಸನಾತನಾಭಿಮಾನದಲ್ಲಿ ನಿತ್ಯ ತೃಪ್ತಿ, ಸಮಾಧಾನ ಪಡೆವ ಶಾಸ್ತ್ರ-ಶಸ್ತ್ರವೇ ಕೈಗೆ ಎಟುಕಿದಂತಾಗಿದೆ! ಇಂತಹ 'ವಿಶೇಷ' ಶಕ್ತಿದಾಯಕ 'ದಿವ್ಯಾಕ್ಷ' ಸಿದ್ಧಿಯು ಈಜಿಪ್ಟಿನ ಪುರಾತನರಿಗೆ ಲಭಿಸಿರಲಾರದು! ಉದಾ : ಋಗ್ವೇದದಲ್ಲಿ 'ಅಪಾಂಗರ್ಭಂ ಬೃಹಂತ ವಾಯಸಂ' ಬರುತ್ತದೆ. ಇಜಿಪ್ತಿನಲ್ಲೂ ಕಾಗೆ ಉಂಟು. ಗ್ರೀಕ್-ರೋಮನ್ ಸಂಸ್ಕೃತಿಗಳಲ್ಲಿ ಕ್ರೋನಸ್-ಸ್ಯಾಟರ್ನ (ಕಾಗೆ:ಶನಿ) ಇದ್ದಾರೆ. ಆದರೆ, ಋಗ್ವೇದದ 'ವಾಯಸ' 'ಸುಪರ್ಣ' ಪಕ್ಷಿ (ಸೌರ) ಎನಿಸುವಂತೆ ಮಾತಿನ ಮಾಟಗಾರಿಕೆಯಿದೆ. ಭಾಷ್ಯಕಾರರು ಅದನ್ನು 'ಕಾಗೆ' ಎಂದು ಹೇಳಿಲ್ಲ! ಆದರೆ, 'ಅಪದ ಗರ್ಭ-ಆಧಾನ'ಕ್ಕೆ ಕಾರಣವಾಗುವ ನೀರೊಳಗಿನ ಈ ವಾಯಸ : ಕುಕ್ಕುಟ ಸರ್ಪ, ಆದಿಶೇಷನ ಬಳಗದ್ದೇ ಇರಬೇಕಾಗುತ್ತದೆ! ಕಾಕ ರಕ್ಕಸವೆಂದಾಗ ಅದನ್ನು 'ಏಕಾಕ್ಷ' ಎಂದು ಬಗೆವ ವಾಡಿಕೆ ಭಾರತದಲ್ಲಿದೆ! ಆದರೆ, ದಿವ್ಯಶಕ್ತಿಯ ಪ್ರಾಣಿ ಸಂಕೇತಗಳು ಏಕ ಅಕ್ಷ (: ಚಕ್ರ) ಉಳ್ಳುವು ಎಂಬುದೇ ಆ 'ಸಮಯ'ದ ಆಕೃತಿ : ಅರ್ಥ ಹೇಳುತ್ತದೆ! ಆದರೆ ಸರ್ಪವೂ ಏಕಾಕ್ಷ ಎಂಬುದನ್ನು ಮಿತ್ರಾಯುಕ್ತ ವರುಣ (=ಚಂದ್ರ : ಸರ್ಪ) ಏಕಾಕ್ಷ ಎಂಬುದರ ವಿವರಣೆ ಋಗ್ವೇದದ ಆಧಾರದಿಂದಲೇ, ಸ್ವಲ್ಪ ಮಾದರಿಗಾಗಿ, ಮಾಡಿ ಆಗಿದೆ!

'ಚಕ್ಷುಃ ಮಿತ್ರಸ್ಯ ವರುಣಾಸ್ಯ' ಎಂಬ ಸೂರ್ಯ (: ಸೂರ್ಯಾ) ಜನಾನಾಂ ಪ್ರಸವಿಸುವ 'ಚಕ್ರ' : 'ಅರ್ಣವ'-ಈ ಸಾಂಕೇತಿಕ ಪ್ರತಿಮೆಯನ್ನು ಹೋಲುವ ರಾ-ಅಟು (R-Atum) ದೈವತವು ಈಜಿಪ್ಟ್‌ನಲ್ಲೂ ಉಂಟು! 'Ee was closely connected with the idea of Kingship' ಎಂಬ ಮಾತು ಈಜಿಪ್ಟ್‌ನಂತೆ ಭಾರತೀಯ ದೈವತ ವಿಚಾರದಲ್ಲಿಯೂ ಸರಿಯಿದೆ. ಈ 'ಚಕ್ರ' ಇಲ್ಲದವನು 'ಚಕ್ರವರ್ತಿನ್' ಆಗಲು ಶಕ್ಯವಿಲ್ಲ! ಭಗ-ವಾನ್

---

* ಸಂಸ್ಕೃತದಲ್ಲಿ ಹಲವು ಬಗೆಯ ಕೋಶಗಳಿವೆ. ಶಬ್ದಕೋಶಗಳಿಂದ ಹಿಡಿದು ಅವ್ಯಯಕೋಶ, ಸಮಾನಾರ್ಥಕೋಶ, ವಿರುದ್ಧಾರ್ಥಕೋಶ, ಮೊದಲಾದುವು ಉಂಟು. ಅವುಗಳಲ್ಲಿ ಏಕಾಕ್ಷರೀಕೋಶವೂ ಒಂದು. ಈ ಕೋಶವು ಸ್ವರ ಮತ್ತು ವ್ಯಂಜನಗಳಲ್ಲಿ ಇರುವ ಎಲ್ಲ ಅಕ್ಷರಗಳಿಗೂ ಇರುವ ಗೂಢಾರ್ಥ-ಛಾಯಾರ್ಥಗಳನ್ನು ತಿಳಿಸಿಕೊಡುತ್ತದೆ. ಪಾರಂಪರಿಕ ಗೂಡಾರ್ಥಗಳನ್ನು ಹಾಗೂ ದೈವಿಕನೆಲೆಗಳನ್ನು ತಿಳಿಯುವವರು ಈ ಕೋಶವನ್ನು ಅಗತ್ಯವಾಗಿ ಗಮನಿಸಬೇಕು. (ಸಂ)

ಪದವಿಯ ಅರ್ಹತೆಯು ಶ್ರೀಕೃಷ್ಣನ ಸುದರ್ಶನ: ಚಕ್ರದ ಮೂಲಕವೇ. ವಿಷ್ಣುಪ್ರತಿಮೆಯಲ್ಲಿ ತೋರಿಸಲಾಗುವ 'ಚಕ್ರ' ಸೂರ್ಯನ ಸಂಕೇತವೇ ಎಂದು ಮ್ಯಾಕಡೊನೆಲ್ಲ ಪ್ರಭೃತಿ ಹೇಳಿದ್ದಾರೆ.[೧] ವಿಷ್ಣು-ಕೃಷ್ಣ-ವಾಸುದೇವ ಮತ್ತು ಹೊರಸ್-ಒಸಿರಿಸ್ಸರ ನಡುವಣ ಹೋಲಿಕೆ ಇಲ್ಲಿ ಇನ್ನಷ್ಟು ದೃಢಪಡುತ್ತದೆ : ರಾ-ಅಟುಂ 'ಕಣ್ಣು' (Eye of Ra-Atum) ಇದು ಹೊರಸನ ಕಿರೀಟದಲ್ಲಿ, ಒಸಿರಿಸಿನಲ್ಲಿ ಇರಲೇಬೇಕು ಎಂಬ ವಾಡಿಕೆಯಿತ್ತು. ಮಾನವಸೃಷ್ಟಿ ಈ ಕಣ್ಣಿನಿಂದ ಆಯ್ತು ಎಂಬ ಕಥೆಯೂ ಅಲ್ಲಿ ಉಂಟು!

ಈಜಿಪ್ಟ್ ಹಾಗೂ ಭಾರತೀಯ ದೈವತ ಸಂಪ್ರದಾಯದ ತುಲನಾತ್ಮಕ ಸಮೀಕ್ಷೆಯಲ್ಲಿ ಒಂದೆಡೆಯ ಸಂದಿಗ್ಧತೆಯು ಇನ್ನೊಂದೆಡೆಯ ಉಲ್ಲೇಖಗಳಿಂದ ಸ್ಪಷ್ಟತೆ ಪಡೆಯುತ್ತದೆ. ವರುಣನ 'ಚಕ್ಷು' 'ಸೂರ್ಯಚಕ್ರ' ವಿಷ್ಣುವು ಕಸಿದು ಕೊಳ್ಳುತ್ತಾನೆ. 'ವರುಣೋ ಯಾದಸಾಂ ಅಹಮ್' ತಾನೆ ಪ್ರಪಂಚದ 'ಸರ್ವಶ್ರೇಷ್ಠ' ಅದ್ವಿತೀಯ ದೇವರು ಎನಿಸುತ್ತಾನೆ! 'ವಿಷ್ಣು ಸರ್ವೋತ್ತಮತ್ವ'ವಾದದ ಮೂಲಬೇರು ಇಲ್ಲಿದೆ! ರುದ್ರನು ಕೇವಲ 'ಶಿಖಿ' ನೇತ್ರನಾದ! 'ಸೂರ್ಯಾಕ್ಷ' ನೆಂಬ ರೂಪದಲ್ಲಿ ಚಿತ್ರಿತನಾಗಲೇ ಇಲ್ಲವೆಂದು ಬಗೆಯಲಿಕ್ಕೆ ಆಗುವುದಿಲ್ಲ. ಏಕೆಂದರೆ 'ಸೂರ್ಯ' (ರ್‍ಯಾ) ಪೀಠದ ವೀರ-ಶೈವ ಜಗದ್ಗುರು ಪರಂಪರೆಯೂ ಒಂದು ಇಲ್ಲದಿಲ್ಲ! ಬುದ್ಧನೂ 'ಭಗ'-ವಾನ್ ಎಂಬ ಮಾತು, ಆತನಿಂದ ಪ್ರವರ್ತಿತ ಧರ್ಮ-ಚಕ್ರ(?)ದಿಂದ ಸಾರ್ಥಕವಾಗುತ್ತದೆ. ಭಾರತೀಯ ದೈವತಗಳ ಮುಖ 'ಪ್ರಭಾ-ಮಂಡಲ'ದಲ್ಲಿ ತೊಳಗಿ ಬೆಳಗುತ್ತಿರುವಂತೆ ಚಿತ್ರಿಸುವುದುಂಟು. ಈ ಭಗ-ವಂತಿಕೆಯ ಸಿದ್ಧಿಗಾಗಿ, ತಿಬೇಟಿನಲ್ಲಿ, ಮಣಿ(ಃ)ಪದ್ಮೋಽಹಂ' ನಾನು (ಆತ್ಮನ್) ಪದ್ಮಸ್ಥ 'ಮಣಿ' ಎಂಬ ಮಂತ್ರಜಪವು (ರಾಕಾ ಧ್ಯಾನ) ಅವಶ್ಯ ಎಂಬ ಶ್ರದ್ಧೆಯುಂಟು. ನಾಗನ ಹೆಡೆಯ ಈ 'ಮಣಿ'ಯ ನಿರ್ದೇಶವು ಋಗ್ವೇದದಲ್ಲಿದೆ.[೨] ಮಾತರಿ-ಶ್ವನ್ (: ತಾಯ ಉಡಿಯಲ್ಲಿ ಶ್ವಸನಮಾಡುವ) ಈ ದೈವತವನ್ನು a raging serpent ; rushing wind ವರ್ಣಿಸುವಾಗ 'ಸರೀಮಣಿ = ಸೃ>ಸರ್-ಸರಿದಾಡುವ ಹರಿದಾಡುವ 'ಮಣಿ' 'ದಿವ್ಯ' ಶಕ್ತಿಯ 'ಮಣಿ' ಎಂದು ಯುರೋಪಿನಲ್ಲಿ, ಕೊರಳೊಳಗೆ ಕಟ್ಟಿಕೊಳ್ಳುವ ವಾಡಿಕೆಯಿದ್ದಿತೆಂದು 'Worship of Priapus' ಪ್ರಬಂಧದ ಲೇಖಕನು ಹೇಳಿದ್ದಾನೆ. ಯುರೆನಸ್ಸಿನ ಪುತ್ರನೆಂಬ ಕ್ರೋನಸ್, ತಂದೆಯ ಲಿಂಗಚ್ಛೇದ ಮಾಡುತ್ತಾನೆ! ಆತನನ್ನು ಪದಭ್ರಷ್ಟ ಮಾಡಿದ ಲಕ್ಷಣವಿದು, ಬಳಿಕ ತಾನೇ ಸಮ್ರಾಟನಾಗುತ್ತಾನೆ!

ಪುರುಷ ಶಕ್ತಿಯು ವೃಕ್ಷ, ಸರ್ಪ, ಹಂಸ, ವೃಷಭ, ಮಹಿಷಾದಿ ಮಾನದಂಡದಿಂದ ಸೂಚಿತವಾಗುತ್ತಿದ್ದಂತೆ ಅಜ=ಹೋಂತು, ಮೊಸಳೆ, ಮೀನು, ಕತ್ತೆಯಾಗಿಯೂ ಬಗೆಯಲಾಗುತ್ತಿದ್ದಿತು. ಈ ಸಂಕೇತಗಳ ಕಾಲ-ಪರಿಸರ ಮತ್ತು ಅನುಕ್ರಮ ಗೊತ್ತುಪಡಿಸಲು ಶಕ್ಯವಾದರೆ ನರನ ಪ್ರಜ್ಞಾವಿಕಾಸದ ಹಂತಗಳನ್ನು ಕಂಡುಕೊಳ್ಳಬಹುದಾಗಿದೆ. ವರುಣ=ವಾರುಣವು 'ಸಮುದ್ರಯೋನಿಃ' ಅಶ್ವದ ಸಂದರ್ಭದಲ್ಲಿ ಛಾಗದಂತೆ ರಾಸಭದ ಉಲ್ಲೇಖವೂ ದೂರಾನ್ವಯದಿಂದ ಉಂಟು.[೩] ಅಶ್ವಿನಿಗಳ ರಥದ ಈಸಿಗೆ ಕುದುರೆ, ವೃಷಭಾದಿಗಳಂತೆ ರಾಸಭವೂ ಇದ್ದಿತು. ಉಪನಿಷತ್ತಿನಲ್ಲಿ 'ಗಾರ್ದಭೀ ವಿಪಿತೋ ಭಾರದ್ವಾಜ' ಇದ್ದಾನೆ. ಅಶ್ವಸಂಕೇತಕ್ಕೆ ಪ್ರಾಧಾನ್ಯವಿರುವ ಸಂಪ್ರದಾಯದ, 'ಸರ್ವೋತ್ತಮತ್ವ'ವಾದದ ಹೆಮ್ಮೆ ಉರ್ಬಟೆ ತಡೆಯಲಾರದೆ 'ಅಶ್ವಕ್ಕಿಂತ ಮಿಗಿಲು 'ಅಶ್ವತರ' ಎಂಬ ಹಾಗಿನ ಸ್ಪರ್ಧೆಯೂ ಒಂದು 'ಸಮಯ'ದಲ್ಲಿ ಆಗಿಹೋದುದನ್ನು, (ಶ್ವೇತ-) ಅಶ್ವತರ' ನಾಮಸಂಕೇತವೇ ಹೇಳುತ್ತಿಲ್ಲವೆ? ತರ-'ತಮ' ಪ್ರತ್ಯಯವು ಸೂಚಿಸುವ ಈ ಸಾಂಕೇತಿಕ ಸತ್ಯವನ್ನು ಅಲ್ಲಗಳೆಯಲು ಆಗುವುದಿಲ್ಲ. ಇದಕ್ಕೆ ಉಪಸ್ತಂಭಕ ಬೇರೆ ಪ್ರಮಾಣಗಳೂ ದೊರೆಯುತ್ತಿರುವುದರಿಂದ! ಈಜಿಪ್ಟಿನ ಸೆಟ್ ದೈವತದ ಸಂದರ್ಭದಿಂದ ಈ ವಿವರಣೆ ದೊರೆಯಲಿದೆ.

ಈಜಿಪ್ಟ್ ಹಾಗೂ ಭಾರತೀಯ ದೈವತಪರಂಪರೆಯೊಳಗಿನ ಇನ್ನೂ ಒಂದು ಮಹತ್ತ್ವದ ಸಾಮ್ಯವೆಂದರೆ 'ಕಮಲ' ಸಂಕೇತ! ಕಮಲ ಹೊರಸ (ಒಸಿರಿಸಿನ) ಸಂಬಂಧದಲ್ಲಿ ಮಾತ್ರ ಉಂಟು. ಹೊರಸನನ್ನು ಕಮಲೋದ್ಭವನಂತೆ ಚಿತ್ರಿಸಲಾಗಿದೆ. ಅವನು ಕಮಲ ಮೂಸಿ (ನೂತನ) ಚೈತನ್ಯ ಪಡೆಯುತ್ತಿದ್ದಾನೆ ಎಂಬ ಹಾಗೆ ತೋರಿಸಲಾಗುತ್ತದೆ. 'ಕಮಲ', ಈಜಿಪ್ಟ್-ಭಾರತದ ವೈಶಿಷ್ಟ್ಯವಾಗಿರುವಂತೆ, ಇನ್ನಾವ ಕಡೆಯಲ್ಲಿ ಇದು ಕಾಣದೊರೆಯುತ್ತಿಲ್ಲ! ಈಜಿಪ್ಟ್‌ನ

ಉಲ್ಲೇಖಗಳಲ್ಲಿ ಕಾಲಮಿತಿ ದೊರೆಯುತ್ತಿರುವುದರಿಂದ ಆ ಬೆಳಕಿನಲ್ಲಿ. (ಋಗ್ವೇದ ಸಂಹಿತೆ ಅರ್ವಾಚೀನವಿದ್ದರೂ,) ಈ ಉಲ್ಲೇಖಗಳಲ್ಲಿಯ ಶಬ್ದ-ಪ್ರತಿಮೆಗಳ ಪ್ರಾಚೀನತೆಯನ್ನು ಗ್ರಹಿಸಿಕೊಳ್ಳಲು ಶಕ್ಯವಾಗುತ್ತಿದೆ. ಈಜಿಪ್ಟ್‌ನಲ್ಲಿಯೂ ಕಮಲಸೂರ್ಯನ ಸಂಕೇತವಾಗುತ್ತದೆ. ಆದರೆ, ನೆಫೆರಟೆಮ್ (Nefertem) ಕಮಲವು ಸೂರ್ಯಕಮಲಕ್ಕಿಂತ ಭಿನ್ನ ಮತ್ತು ತುಂಬ ಪುರಾತನದ್ದು. ಇದು ಕ್ರಿ. ಪೂ. ೨೫೫೦ ಸುಮಾರಿನದು. ಸೂರ್ಯಕಮಲವು ಕ್ರಿ. ಪೂ. ೧೫೦೦ಕ್ಕೆ ಮೊದಲು ಎಲ್ಲಿಯೂ ಕಾಣದೊರೆಯದು.[೪]

ಜಲಶಾಯಿ=ಕಂ=ಹಿರಣ್ಯಗರ್ಭ : ಕಂಜ: ಕಮಲೋದ್ಭವ ಅಥವಾ ಕಮಲಾಕ್ಷ ಆಗುತ್ತಾನೆ. ಈ-ಬಿಲ್ಲುಮಯ ವಿಷ್ಣುವು, ಆದಿತ್ಯ : ಸೂರ್ಯ-ಪುರುಷನಾಗುವ ಹಂತಕ್ಕೂ ಪ್ರಾಚೀನವೆಂದು ಬಗೆಯಬೇಕಾಗುತ್ತದೆ. ಇದರ ಅರ್ಥ: ರುದ್ರ-ವಿಷ್ಣುಗಳು, ಭಾರತದಲ್ಲಿ ಸೌರಸಂಪ್ರದಾಯವು ಪ್ರವೇಶಿಸುವುದಕ್ಕೂ ಮುಂಚಿನವರು ಆಗಿರಬೇಕು. 'ಪ್ರಿಯಪಸ್' ಆರಾಧನೆಯನ್ನು ಕುರಿತು ಬರೆದ ಗ್ರಂಥದಲ್ಲಿ, ಆ ಲೇಖಕನು ವಿವಿಧ ಪ್ರತಿಮೆಗಳ ಚಿತ್ರಕೊಟ್ಟು ವಿವರಿಸಿದ್ದಾನೆ. ಋಗ್ವೇದದ ದೈವತಪ್ರತಿಮೆಗಳ ಹೆಸರನ್ನು ಅರಿಯದ ಕಾಲ ಅದು! ಕ್ರಿ. ಶ. ೧೭೮೧. ಅಂದು ಬರೆದ ಆ ಪ್ರಬಂಧದಲ್ಲಿ ! ಗೀತೆಯ ನಿರ್ದೇಶ ಮಾತ್ರ ಉಂಟು. ಅಜ (ಏಕಪಾತ್), ಹಕ್ಕಿ ಮುಂತಾದ ರೂಪದಲ್ಲಿ 'ಪುರುಷ' ಶಕ್ತಿ. 'ಸ್ತ್ರೀ' ಶಕ್ತಿ ಆರಾಧನೆ ನಡೆಯುತ್ತಿದ್ದುದನ್ನು ಸಾಧಾರಕವಾಗಿ ವಿವರಿಸಿದ್ದಾಗಿದೆ.[೫] 'ಸೂರ್ಯ' ನಾಮ ಸಂಕೇತವು ತಡವಾಗಿ ಪ್ರವೇಶ ಪಡೆದುದು ಈ ಗ್ರಂಥದಲ್ಲಿಯೂ ಕಾಣುತ್ತದೆ. ಚಂದ್ರನನ್ನು 'ರಾತ್ರೀ ಸೂರ್ಯ' (Nocturnal Sun) ಎಂಬ ಅರ್ಥದಲ್ಲಿ ಸೂರ್ಯನೆಂದು ಅಲ್ಲಿ ಪೂಜಿಸಲಾಗುತ್ತಿತ್ತು! ಹೀಗೆಯೆ, ಸೂರ್ಯ, ಸವಿತೃ ಸಂಕೇತಗಳು, ಋಗ್ವೇದದಲ್ಲಿಯೂ, ಪ್ರಚ್ಛನ್ನ ಚಂದ್ರವಾಚಕವೇ ಇರುವುದಾಗಿ ಬಗೆಯಲು ಅವಕಾಶವಿದೆ! ಈಜಿಪ್ಟಿನ ಆದಿಪುರುಷ ಮಿಡಿನಾಗ (Asp or Uraeus Viper) ಆದಿಜಲದಿಂದ ಬಂದವನು! ಕಪ್ಪೆಯೂ ನೀರೊಳಗಿನದೆ. ಈ 'ಅಪಾಂನಪ್ತೃ' ದೈವತ ಚಾಂದ್ರವೇ ಇರಬೇಕು. ಹೊರಸ್-ಒಸಿರಿಸ್ ಸೆಟ್ ಹಾಗೂ ಇಸಿಸ್ ಇವರು ಸಹೋದರರು! ಎಂದರೆ ಇವರೂ ಮೂಲತಃ ಚಾಂದ್ರರೇ.

ಈ ತುಲನೆಯಲ್ಲಿ, ಋಗ್ವೇದದಲ್ಲೂ ಕಾಣುವ ರಾ, ಕಂ, ಖಂ, ಬೀಜಾಕ್ಷರಗಳೇ ಇಜಿಪ್ತಿನ ವಿಧಿಲಿಖಿತಕ್ಕೆ ಕಾರಣವಾಗಿರುವ ಮೌಲಿಕ ಸಂಗತಿಯೊಂದು ಬೆಳಕಿಗೆ ಬರುತ್ತಿದೆ! ಸೂರ್ಯವಾಚಕವೆಂಬ 'ರಾ' ನಾಮಸಂಕೇತದ ದೈವತವು, ತನ್ನ ವಿಶ್ವಪ್ರಸವಶಕ್ತಿಯ ಕಣ್ಣಿನ (O) ಮೂಲಕ, ಅದು ನಿಜಕ್ಕೂ ಚಂದ್ರಶಕ್ತಿಯೆ ಆಗುತ್ತದೆ. ಈ 'ರಾ', ಹಾಥೋರ್=ಗೋವು ಆಗಿ ಮಾರ್ಪಟ್ಟ ಕಥೆಯುಂಟು! ಅದಿತಿ-ಗೌ, ಇಸಿಸ್=ಹಾಥೋರ್-ಗೌ। ಗೌ-ತಮ=ಚಂದ್ರ. ಭಾರತೀಯ ಸಂಪ್ರದಾಯದಲ್ಲಿ ಗರ್ಭಸ್ಥ (ಅಂತರಿಕ್ಷಸ್ಥ) ಆಗಿರುವಾಗಲೇ ಮಾತಾಡುವ 'ವಾಮ'-ದೇವನೂ- 'ಗೌತಮ ಪುತ್ರ'ನೆಂದು ಸೂಚಿಸಿರುವಲ್ಲಿ ಬಾಲಚಂದ್ರನೆಂದೇ ಅರ್ಥವಾಗುತ್ತದೆ. ಚಂದ್ರನೇ ಪುಂಡರೀಕ : ಪುಂಡರೀಕಸ್ಥ ಹೊರಸ್! ಗೌತಮಬುದ್ಧನ ಸಂಪ್ರದಾಯದ ಗ್ರಂಥ 'ಸತ್'-ಧರ್ಮ-ಪುಂಡರೀಕ! 'ಪದ್ಮಪಾಣಿ' ಬುದ್ಧನು, ಹೋರಸನನ್ನು ಹೋಲುತ್ತಾನೆ. 'ಪದ್ಮಾ'ವತಿ : ಯಕ್ಷಿಣಿಯರು, ಕುಕ್ಕುಟಸರ್ಪ, ವೃಷಭ ಜೈನ-ಸಂಪ್ರದಾಯದ ದಿವ್ಯ ಸಂಕೇತಗಳು. ಜಗತ್ತಿನಲ್ಲಿ ಆತ್ಯಂತಿಕ ವಿ-ರತಿಯ ಕುಮಾರೀ-ಕುಮಾರ ಸಂಪ್ರದಾಯಗಳು 'ಬೀಜ-ವೃಕ್ಷ' ನ್ಯಾಯದ (O) ತತ್-ತ್ವದ : ನಾಭಿ ಕೇಂದ್ರದಿಂದಲೇ ಅಂಕುರಿಸಿರುವಲ್ಲಿ ಸಂದೇಹವೇ ಇಲ್ಲ. ಮೊದಲು ಆ ಶಕ್ತಿ, ಆತ್ಯಂತಿಕ ಆ-ರಕ್ತಿ ಸ್ವರೂಪದ್ದು; ಬಳಿಕ ಇದರ ವಿಪರೀತ ಪ್ರತಿ-ಕ್ರಿಯೆಯೆ ವಿ-ರಕ್ತಿ! ಈ ವಿ-ರಕ್ತಿಯಲ್ಲೂ 'ಆ': 'ತತ್' ರಕ್ತ=ಆ-ರಕ್ತತೆ ಉಂಟೇ ಉಂಟು. ದಿಕ್ಕಾಲ ಪರಿಸರಸ್ಥ ಆ-ಸಕ್ತಿ ನಿಂದೆಗೆ ಕಾರಣವಾದ ಬಳಿಕ ಆದಲ್ಲಿ = ಆ-ಭು (Being) ತತ್-ತ್ವದಲ್ಲಿ : ಚಂದ್ರಲೋಕವೇ ಏಕಮೇವ ಮಹಾನ್ ವ್ಯಾಹೃತಿಯಾಗಿ ಪರಿಣಮಿಸಿದ್ದುಂಟು. 'ರಸೋ ವೈ ಸಃ' ಆನಂದಂ=ಬ್ರಹ್ಮವಾದೀ 'ವಾರುಣೀ' ವಿದ್ಯೆಯ ಉಪನಿಷತ್ತು. ಈ 'ತುರೀಯಂ ಬ್ರಹ್ಮ' ಪ್ರತಿಪಾದಕವೇ ಆಗಿರುವುದು ಇದಕ್ಕೆ ಪ್ರಮಾಣ. 'ಸ್ವರ್-ಭಾನು' ನಾಮಧಾರೀ 'ಅಹಿ-ಭಾನು' ಹನೂ-ಮಾನ್ : ಸರ್ಪ ಆಗಿದೆ. ಸೂರ್ಯನನ್ನು ನುಂಗಿದ ಅದ್ಭುತ ರಮ್ಯದೃಶ್ಯವೊಂದು ಋಗ್ವೇದದ ಮಾಯಾವೀ ಶಬ್ದಪ್ರತಿಮೆಯಾಗಿ ಅನೇಕ ಸಂಶೋಧಕರ ಜಿಜ್ಞಾಸೆಯನ್ನು ಕೆರಳಿಸದೆ ಇಲ್ಲ.[೬] ಸೂರ್ಯನನ್ನು ನುಂಗಿದ ಈ 'ಸ್ವರ್‌ಭಾನು'

ನಾಮಧಾರೀ ಶಕ್ತಿ ರಾ-ಹು, ರಾಕಾ ಶಕ್ತಿಯೆ: ಈ ವರ್ಣನೆಯನ್ನು 'ಅತ್ರಿ' (=ಅದಿತಿ ರೂಪ) ಮಂಡಲದಲ್ಲಿ ಇರಿಸಿರುವ ಈ ಕಸುಬು ಕೌತುಕಾಸ್ಪದವಾಗಿದೆ. ಪ್ರಪಂಚದಲ್ಲಿ ಕಾಣೆಯಾದ ಈ ತಮಸಾ ಆವೃತೇನ ಗೂಳ್ಹಂ ಸೂರ್ಯಂ, 'ಅತ್ರಿಃ ತುರೀಯೇಣ ಬ್ರಹ್ಮಣಾ ಅವಿಂದನ್.[೭] 'ಅತ್ರಿ' ಎಂಬ ಮುನಿಪೋತ್ತಮನು ಕಾಣೆಯಾದ ಸೂರ್ಯನನ್ನು ಕಂಡದ್ದು ಹೇಗೆ? 'ತುರೀಯೇಣ ಬ್ರಹ್ಮಣಾ' ಸಿದ್ಧಿಯಿಂದ! ಈ 'ತುರೀಯ' ಶಬ್ದಪ್ರತಿಮೆ ಯೋಗಾಚಾರ 'ಸಮಯ'ದೊಳಗೆ ಪಾರಿಭಾಷಿಕ ಸಂಕೇತವಾಗಿ ಇಂದಿಗೂ ಭೂತ-ಸ್ಮೃತಿಯ, ವರ್ತಮಾನ ಕಾಲದ ಜೀವಂತ (Living Past) ಪ್ರತಿ-ಮಾ: ಸಂಕೇತವಾಗಿದೆ. ಜಾಗ್ರತ, ಸ್ವಪ್ನ, ಮತ್ತು ಸುಷುಪ್ತಿಯ ಆಚೆಗಿನ ಹಂತವೇ 'ತುರೀಯ' ಅವಸ್ಥೆ. ನ-ಚಿಕೇತ : ಬಾಹ್ಯ ಪ್ರಜ್ಞೆಗೆ ಎರವಾಗಿಸುವ, 'ಸ್ಥಿತ' ಪ್ರಜ್ಞಸ್ಥಿತಿ, ಎಂಬ ಗೀತೆಯ ನುಣುಪಾದ ಶಬ್ದ-ಪ್ರತಿಮೆಯಲ್ಲಿ ನಿಜವಾಗಿಯೂ ಪ್ರತಿ-ಬಿಂಬಿತವಾಗಿರುವ ಈ ಅವಸ್ಥೆಯಲ್ಲಿ 'ಬ್ರಹ್ಮಣಾ'=ಮಂತ್ರಸಾಮರ್ಥ್ಯದಿಂದ ಕಾಣಲು ಶಕ್ಯವಾಯಿತೆಂಬ 'ಸೂರ್ಯ' ಇವನು! ಇವನು ಭೌತಸೂರ್ಯನಲ್ಲ; ಅಥವಾ ಶುದ್ಧ ತಾತ್ತ್ವಿಕಸ್ವರೂಪದ ಜ್ಞಾನಪ್ರಕಾಶ ಪ್ರೇರಕ ('ಸತ್ಯ) ಸವಿತೃವೂ ಅಲ್ಲ. ಖೇ-ಚರಸಿದ್ಧಿ=ಖರಯೋಗಧಿಂದ ಅಥವಾ ಕುಂಡಲೀಸರ್ಪವು ಜಾಗೃತವಾಗಿ=ದಕ್ಷವಾಗಿ, ಉತ್ತಾನಪದವಾಗಿ, 'ಸಹಸ್ರಾರ' ಪುಂಡರೀಕದಲ್ಲಿ ಸೇರಿ ಕುಳಿತಾಗ ಅನುಭಾವಿಗೆ ಆತನ 'ದಿವ್ಯಾಕ್ಷ'ದಿಂದ ಪ್ರತೀತಿಗೆ ಬರುವ ಸೂರ್ಯನು ಇವನು. ಪದ್ಮಾಕ್ಷ, ಪುಂಡರೀಕಾಕ್ಷ: 'ಸೂರ್ಯೇ ಪುರುಷ' ಅಥವಾ 'ಪುರುಷಯುಕ್ತ ಸೂರ್ಯ' ಸಾಕ್ಷಾತ್ಕಾರ ಯೋಗದ ನಿರೂಪಣೆ ಇಲ್ಲಿ ಉಂಟು.

ಈ ದರ್ಶನ : ಸಾಕ್ಷಾತ್ಕಾರ 'ಅತ್ರಿ' ತ್ವ ಪಡೆಯದವನಿಗೆ ಶಕ್ಯವಿಲ್ಲ. ಏನೆಲ್ಲವನ್ನು ತಿಂದು=ಸರ್ವಭಕ್ಷಕ ಅಗ್ನಿಗೆ ಆಹುತಿಯಾಗಿಸಿ=ಸರ್ವಾರ್ಪಣ ಮಾಡಿ-ಪೂರ್ಣಾಹುತಿ ಅರ್ಪಿಸಿ, ಈ ಭಸಿತ ಅಥವಾ ಈ ಅಂಗಾರ ಧಾರಣ ಮಾಡಿ ನ-ಚಿಕೇತ=ಅ-ದಿತಿ ಸ್ವರೂಪನಾಗದವನು ಸೂರ್ಯನಿಲ್ಲದ ಕತ್ತಲೆಯ ಲೋಕದಲ್ಲಿ ತೊಳಲಾಡುತ್ತಿರುತ್ತಾನೆ. ಇಕೊ ನೋಡಿ, ಈ ಋಗ್ವೇದ ಯಮನ ಕಡೆಗೇ ಒಯ್ಯುವ ರಥ ಹೇಗೆ; ನೋಡಿಕೊಳ್ಳಿ. ಈ ಋಗ್ವೇದದಲ್ಲಿ ಕೇಂದ್ರಸ್ಥ ಪ್ರಧಾನ ದೈವತವು ಸೂರ್ಯರೂಪೀ ಇಂದ್ರನೊ? ಚಂದ್ರರೂಪೀ ಸೂರ್ಯನೊ? ನಿರ್ಧರಿಸಿ ಹೇಳಿ ಇಲ್ಲಿ. ಈ ಸಂಹಿತಾ ಯೋಜನೆಯೊಳಗಿನ ಅಗಾಧ 'ಮಾಯಾ'ಶಕ್ತಿಯಿಂದಾಗಿ, ತೀರ ಪ್ರಾಚೀನವೆಂಬ ಅಗ್ನಿಸ್ತೋತ್ರದಲ್ಲಿಯೆ, ಹವ್ಯವಾಹನ, ಜಾತವೇದ, ಪ್ರಾಚೇತಸ ಎಂಬೀ ಬಗೆಯಲ್ಲಿ ಗುರುತಿಸಲಾಗುವ ಅಗ್ನಿಯನ್ನು 'ತ್ವಂ' ಅಗ್ನೇ ಅತ್ರಿಃ ಅಸಿ; ಅದಿತಿಃ' 'ಅಸಿ' ಎಂಬ ಮಂತ್ರದಿಂದ ಆ ಅಗ್ನಿಯನ್ನು ಸಲಿಲಸ್ಥ-ಸರಿರಸ್ಥ- ಶರೀರಸ್ಥ-ರೇತಸ್ಥ ಅಗ್ನಿಯನ್ನಾಗಿ ಮಾರ್ಪಡಿಸಿರುವುದನ್ನು ಗುರುತಿಸುವುದು ಅಶಕ್ಯವಾಗಿದೆ!

ಈಜಿಪ್ಟಿನಲ್ಲಿಯೂ 'ಗುಹಾಹಿತ' 'ಗುಹ್ಯಾತ್‌ಗುಹ್ಯ'ವಿರುವ 'ತತ್' ಏಕಂ ಸ್ವರೂಪೀ ಸತ್ಯಸಾಕ್ಷಾತ್ಕಾರ : ದರ್ಶನ ಮಾಡಿಸಬಲ್ಲ 'ಕಂ-'ಖಂ' ಬೀಜಾಕ್ಷರಗಳ ಬಗೆಗಿನ ಶ್ರದ್ಧೆ ಪ್ರಭಾವಶಾಲಿಯಾಗಿದ್ದುದು ಬೆಳಕಿಗೆ ಬಂದಿದೆ. ಕ (Ka) : ಜೀವ (Spirit). ಖು (Khu) : ಆ-ತ್ಮನ್ (Soul) ಮತ್ತು ಖಟ್ Khat): ದೇಹ ಸೂಚಕ ಶಬ್ದಸಂಕೇತಗಳು ಪ್ರಚಲಿತವಿದ್ದುವು.[೮] 'ಖು' ಸಂಕೇತವನ್ನು ಅಖ (Akh) ಎಂಬ ರೂಪದಲ್ಲೂ ಹೇಳಿದ್ದೂ ಉಂಟು.[೯] ಇಜಿಪ್ತಿನವರ ಜೀವನದ ಸಿದ್ಧಿಯ ಬಗೆಗಿನ ನಂಬುಗೆಯಲ್ಲಿಯೂ, 'ಅಮರಪದ'ದ (Which knows no destruction) ಬಗೆಗಿನ ಶ್ರದ್ಧೆಯು ಭಾರತೀಯ ವಿರಕ್ತ ಪಂಥೀಯ ಶ್ರದ್ಧೆಯನ್ನು ಹೋಲುತ್ತದೆ. ಮೃತಾತ್ಮನ ಜೀವವು 'ಅಖ' ದಿವ್ಯಲೋಕದಲ್ಲಿ ಸ್ಥಾನ ಪಡೆಯುತ್ತದೆ. ಉತ್ತರ ದಿಕ್ಕಿನಲ್ಲಿರುವ ಈ ಅಮರ ಲೋಕಕ್ಕೆ 'ದಾತ್' (Dat) ಎಂದು ಹೆಸರು.

ಮೃತನು 'ಕ', ದಿವ್ಯಲೋಕದ ಅಖ (ಅಥವಾ ಖು) ಆಗಿ ಪರಮಪದದಲ್ಲಿ ಅಮರತ್ವ ಪಡೆಯುತ್ತದೆ, ಇದನ್ನು ಸೂಚಿಸುವ ಪ್ರತಿಮೆ ಇಜಿಪ್ತಿನ ಅವಶೇಷಗಳಲ್ಲಿ ಉಂಟು. ದಿವ್ಯಾತ್ಮರ ವಿಭಾಗದಲ್ಲಿ (Elysian Field), ವೇತಸ (ಗಳ =Reeds) ಬೆಳೆದು ನಿಂತುದುದನ್ನು ಚಿತ್ರಿಸಿ ಆ ಮೃತನು ಅಖ (Akh) = ಸಿದ್ಧನಾಗಿ (An effective spirit) ಅಮರತ್ವ ಪಡೆಯುತ್ತಾನೆ; ಎಂದು ಸೂಚಿಸಲಾಗಿದೆ.[೧೦] ಎಂದರೆ ಈ ಚಿತ್ರ ಹೀಗಾಗಬಲ್ಲದು; ಅಖ ಒಸಿರಿಸ್ 'ವೃಕ್ಷ' (ಸ್ತಂಭ)ನಾದ ಕಥೆಯಿದೆ 'ಹೀರಣ್ಯವೇತಸ್ಥ' ಅಂತರಿಕ್ಷ ಸ್ಕಂಭ=ನಂದೀ-

ಕೋಲು=ವೇತಸ ಈ ಸಂಕೇತಗಳು ತುಲನೀಯವಾಗಿವೆ. ವೇದೋಪನಿಷತ್ತುಗಳಲ್ಲಿ ಬರುವ 'ಖಂ' ಆಕಾಶ: ಈ ವಚನವು, ಇಜಿಪ್ತಿನ ಅಖ ಅಥವಾ ಖು ಅಭಿನ್ನ ಎಂದೇ ಹೇಳುತ್ತದೆ. ಈಜಿಪ್ಪಿನ ಅಖ ಅಥವಾ ಖು ಸಂಕೇತದ ಗರ್ಭಿತಾರ್ಥವನ್ನು ಕುರಿತು ತಜ್ಞರು ಬರೆಯುವುದೇನೆಂದರೆ;

> The khu or soul was a vague conception. It was really another form of the Ka, but it was the "double" of the intellect, will and intuitions, rather than the 'double" of the physical body. The Khu was dedicted as a bird, and was called the bright one or the glorious one.[೧೧]

ಭಾರತೀಯ ಖ=ಅಂತರಿಕ್ಷ. ಆದ್ದರಿಂದ ಖ-ಚರ=ಪಕ್ಷಿ! ಇಜಿಪ್ತಿನ ಖು (: ಅಖ): 'ದಿವ್ಯ' ಪಕ್ಷಿ=ದೇಹಸ್ಥ 'ಪಕ್ಷಿ: 'ಕ' ಖು ಅಂತರಿಕ್ಷಸ್ಥ (ಗುಹಾನಿಹಿತ) ದಿವ್ಯಪಕ್ಷಿ! ಇವೆರಡೂ ಭಾರತೀಯ ಈ ದೇಹಸ್ಥ-ತ್ಮನ್, ಅಂತರಿಕ್ಷಸ್ಥ ಆ-ತ್ಮನ್ ಅಥವಾ ಆತ್ಮ-ಪರಮ-ಆತ್ಮತತ್ತ್ವವನ್ನು ಹೋಲುತ್ತಿವೆ. ಅಲ್ಲದೆ, ಒಂದು 'ಹಂಸ'ವೆಂದರೆ ಇನ್ನೊಂದು ಪರಮ ಹಂಸ! 'ಪರಮಹಂಸ' ಪದವಿಗಿಂತ ಮಿಗಿಲಾದ ಸಿದ್ಧಿಯಾವುದು, ಭಾರತೀಯ ಆದರ್ಶದಲ್ಲಾದರೂ? ಕ(೦)=ಹಿರಣ್ಯಗರ್ಭವೇ : ಅಂಗುಷ್ಠ ಮಾತ್ರ. ಜನಾನಾಂ ಹೃದಯೇ ಸನ್ನಿವಿಷ್ಟಃ ! ಈಜಿಪ್ಪಿನ ಪುರಾತನ ಉಲ್ಲೇಖಗಳಲ್ಲೂ ಇದೇ ಅರ್ಥವೇ ಕ (Ka) ಸಂಕೇತಕ್ಕೆ ಉಂಟು! ಹಾಗಾದರೆ ಇಷ್ಟೊಂದು ಈ ಸಾಮ್ಯವು ಹೇಗೆ? ಇಜಿಪ್ತ ಎತ್ತ? ಭಾರತ ಎತ್ತ? ಎಂದು ಈ ಸಮಾನ ಅಂಶಗಳನ್ನು ಸುಳ್ಳೆನ್ನುವುದೇ? ಅಥವಾ ಒಪ್ಪುವುದೆ? ವಿವೇಕಿಗಳಾದ ಸೂಜ್ಞ ವಿಮರ್ಶಕರು ನಿಷ್ಕರ್ಷಿಸಿ ಹೇಳಲಿ!

ಈ ಸಂದರ್ಭದ ಇನ್ನೊಂದು ಪ್ರಶ್ನೆ ಹೀಗೆ: ಈಜಿಪ್ಟ್ ಮತ್ತು ಭಾರತದ ಪುರಾತನ ಸಂಸ್ಕೃತಿಯ ವೈಚಾರಿಕ ಆಕೃತಿಯಲ್ಲಿ ಇರುವ ಸಾಮ್ಯವು, ಅತಿ ಪುರಾತನ ಕಾಲದ್ದಾಗಿದೆ. ಕ-ಖು ಇವು ಮೊದಲನೆಯ, ಎರಡನೆ ಅರಸು ಮನೆತನಗಳ ಕಾಲದ ಗೋರಿಗಳ ಕಲ್ಬರೆಹಗಳಲ್ಲೂ ಉಂಟು,[೧೨] ಭಾರತೀಯ 'ಹಿರಣ್ಯಗರ್ಭ' : ಕಸ್ಮೈದೇವನು ಈಜಿಪ್ಪಿಗಿಂತ ಪ್ರಾಚೀನನೆ, ಅರ್ವಾಚೀನನೇ ಎಂಬುದನ್ನು ಸಮರ್ಥ ತಜ್ಞರು ನಿರ್ಧರಿಸಬೇಕು. ಇಲ್ಲಿಯ ಪ್ರಶ್ನೆ ಎಂದರೆ 'ಕ-ಖು' ಈ ವೈಚಾರಿಕ ಆಕೃತಿಯೇ (: ರಾಕಾ ಶಕ್ತಿ), ಇಜಿಪ್ತಿನಲ್ಲಿ ಲೋಕದಲ್ಲಿಯೆ ಆಶ್ಚರ್ಯಕಾರಕ ಪಿರಾಮಿಡ್ಡು ಶಿಲ್ಪ-ಕಲಾವೈಭವದ ನಿರ್ಮಿತಿಗೆ ಪ್ರೇರಿಸಿತು. ಆದರೆ, ಭಾರತದಲ್ಲಿ ಆ ಬಗೆಯ ಅವಶೇಷಗಳು ಉಳಿಯದಿರಲು ಕಾರಣವೇನು? ಸೈಂಧವಸಂಸ್ಕೃತಿಯ ಭವ್ಯ ಅವಶೇಷಗಳು, ಇಜಿಪ್ತಿನ ಸರಿದೊರೆಯವಾಗಲಾರವು ಎಂದರೂ, ಯಾರಿಗೂ ಸೋಜಿಗವಾಗುವಷ್ಟು ಅಪೂರ್ವವಾದುವು ಉಂಟು. ಆದರೆ, ಸೈಂಧವ ಸಂಸ್ಕೃತಿಯ ಲಿಪಿ ಅರ್ಥವಾಗದೆ ಅದರ ಕರ್ತೃಗಳ ಬಗೆಗೆ ಏನನ್ನೂ ಹೇಳಲು ಆಗುತ್ತಿಲ್ಲ. ಈಜಿಪ್ಪಿನಲ್ಲಿಯೂ ಆ ಸಂಸ್ಕೃತಿಯ ವಿನಾಶಕ್ಕೆ. ಕ-ಖು ದೈವತ (: ರಾಕಾ) ಉಪಾಸನೆಯ ವಿಪರೀತ ಪರಿಣಾಮಗಳೇ ಪ್ರಾಧಾನ್ಯದಿಂದ ಕಾರಣವಾಗಿರಬೇಕೆಂದು ಡಾ. ಫ್ರಾಂಕಫೋರ್ಟ ಪ್ರಭೃತಿಗಳ ಅಭಿಪ್ರಾಯವಿದೆ.

ಭಾರತೀಯ ಹಾಗೂ ಈಜಿಪ್ಪಿನ ಕ-ಖು (:ರಾಕಾ) ಶಕ್ತಿ ಉಪಾಸನೆಯೊಳಗಿನ ಒಂದು ಭೇದವು, ಈ ತುಲನಾತ್ಮಕ ವಿಮರ್ಶೆಯಲ್ಲಿ ಎದ್ದು ಕಾಣುತ್ತಿದೆ. 'ರಾಕಾ' ಎರಡೂ ಸಂಸ್ಕೃತಿಯ ಇಳಿಗಾಲದ ಕಾರಣ ಆಗುತ್ತದೆ. ಇಜಿಪ್ತಿನಲ್ಲಿ 'ರಾ'- ಸೂರ್ಯಾಕ್ಷ ಧಾರಣ (:ಸಿದ್ಧಿ) ಅಧಿಕಾರ ರಾಜನಿಗೆ ಒಬ್ಬನಿಗೇ ಸಲ್ಲಬೇಕಾದುದು. ಎಲ್ಲರೂ 'ರಾ' (ಅಕ್ಷ ಸಿದ್ಧಿ) ಪಡೆದವರಾದರೆ ರಾ-ಜನ್ ಪೀಠಕ್ಕೆ ಬೆಲೆ ಏನು ಉಳಿದೀತು? ಆದರೆ, ಈ ಕ-ಖ (: ರಾಕಾ ದೇವಿ) ಉಪಾಸನೆ, ಆ ಬಳಿಕ ಸರ್ವರ ಹಕ್ಕು ಆಯಿತು. ಹುಟ್ಟಿನೊಡನೆ ಪ್ರತಿಯೊಬ್ಬರಿಗೂ ಅವರವರ ಕ (ಖ) ಬೆನ್ನಿಗೆ ಬಂದೇ ಬರುತ್ತವೆ, ಎಂಬ ಸಿದ್ಧಾಂತವು - (ಹೃದಯ ಪುಂಡರೀಕಸ್ಥ ಹಿರಣ್ಯ ಗರ್ಭಶಕ್ತಿ) ಈ ವಿಚಾರ ಋಗ್ವೇದದಲ್ಲೆ ಉಂಟು! ಈಜಿಪ್ಪಿನಲ್ಲಿ ಇದು ಸರ್ವಜನದ ಉಪಾಸನಾ ಮಾರ್ಗವಾದುದು ಪಿರಮಿಡ್ಡುಗಳ ಯುಗದ ಕೊನೆಯಿಂದ ಇರಬಹುದೆಂದು ಎನಿಸುತ್ತದೆ. ಆದರೆ, ಇದು ಪ್ರತಿಯೊಂದು ವ್ಯಕ್ತಿಯ ಹಕ್ಕು, ಆದರೂ,

ರಾಜನ ಸ್ಥಾನಮಾನ-ಏಕಮೇವಾಽದ್ವಿತೀಯತ್ವದ ಹಕ್ಕು. ಮಾನವರೂಪೀ 'ಗುರು' (magician) ಶಕ್ತಿಯ ಹಕ್ಕು ಆಗುತ್ತದೆ. ಭಾರತೀಯ ಸಂಸ್ಕೃತಿಯ ಇತಿಹಾಸವು, ಈ ಘಟ್ಟದಿಂದ ಕಣ್ಣಳತೆಯಲ್ಲಿ ಬರುತ್ತಿದೆ.

ಭಾರತೀಯ ದಿವ್ಯಾಧ್ಯಾತ್ಮದ ಆರಂಭದ ಇತಿಹಾಸದಲ್ಲಿ ಕೇಳಬರುವ ಅನಿರ್ಣೀತವಾಗಿ ಉಳಿದಿರುವ ಇನ್ನೊಂದು ವಾದವು, ಇಲ್ಲಿ ಉತ್ತರವನ್ನು ಪಡೆಯುತ್ತದೆ. ದಿವ್ಯಾಧ್ಯಾತ್ಮ-ಶಾಸ್ತ್ರವು ಮೂಲತಃ 'ಬ್ರಾಹ್ಮಣ' ರೆಂಬುವರದು ಅಲ್ಲ. ಗೌತಮಬುದ್ಧನು ರಾ-ಜನ್ ಕುಲದವನು ಮಹಾವೀರ ಪರಂಪರೆಯೂ ಇದಕ್ಕೆ ಅಪವಾದವಲ್ಲ. ಉಪನಿಷತ್ತಿನ ಜನಕ ರಾಜನೆಂದೇ ಸಂಪ್ರದಾಯ ಹೇಳುತ್ತದೆ. ಆದರೆ, ದೀಕ್ಷಾಗುರುತ್ವ ಬ್ರಾಹ್ಮಣ ಪರಂಪರೆಯದಾದು ಹೇಗೆ? ಎಂದಿನಿಂದ? ಎ. ಬಿ. ಕೀಥ್, ವೇದದೊಳಗಿನ ಧರ್ಮ ಹಾಗೂ ತತ್ತ್ವಜ್ಞಾನವನ್ನು ಕುರಿತು ಬರೆದ ಗ್ರಂಥದಲ್ಲಿ ಈ ಮಾತನ್ನು ಎತ್ತಿದ್ದುಂಟು. ಆದರೆ, ಆತನಿಂದ ಈ ಸಮಸ್ಯೆಗೆ ಪರಿಹಾರ ದೊರೆತಿಲ್ಲ. ಈಗ ಈಜಿಪ್ತಿನ ತುಲನೆಯಲ್ಲಿ ದೊರೆಯುವ ಸಾಂಕೇತಿಕ ಶಬ್ದ ಪ್ರತಿಮೆಯ ಆಂತರಿಕ ಅರ್ಥವು ಬೆಳಕಿನಲ್ಲಿ ಬರುತ್ತಿದೆ. ರಾ-ಅಟುಂ : ಸರ್ಪಾಕ್ಷ ಧಾರಣಮಾಡುವ ಹೋರಸ್ (ಒಸಿರಿಸ್), ಇಸಿಸ್ ಅಧಿ-ಸ್ಥಾನದಲ್ಲಿ ಕುಳ್ಳಿರುವ ಬಾಧ್ಯಸ್ಥನು: ಇವನು 'ಪದ್ಮಪಾಣಿ' ಅಥವಾ ಪದ್ಮಾಸನ-ಪದ್ಮೋದ್ಭವನಂತೆ ಚಿತ್ರಿತನಾಗಿದ್ದಾನೆ. ಋಗ್ವೇದದ ರಾ-ಜನ್ ಸಮ್ರಾಟ್ 'ಮಿತ್ರಾ'-ವರುಣನು 'ಸೂರ್ಯ'-'ಚಕ್ಷು' ಧಾರಿ : ಚಕ್ರ-ಧಾರಿ, ಚಕ್ರವರ್ತಿನ್ ಎಂದರೆ ಇವನೇ! ಎಂಬುದನ್ನು ವಿವರಿಸಿ ಆಗಿದೆ.

'ಚಕ್ರ'-ವರ್ತಿನ್ ಯಾರು? ರಾಜನ್- ಸಮ್ರಾಟ್ ಈ ಸಾಂಕೇತಿಕ ಪ್ರತಿಮೆಯ ಹಿನ್ನೆಲೆಯನ್ನು ಮರೆಯಲಿಕ್ಕಾಗದು. 'ಸಮ್ರಾಟ್' ರಾಜನ್ 'ಪಟ್ಟ=(ಇಸಿಸ್ : ಅಧಿ-ಸ್ಥಾನ)ದಲ್ಲಿ 'ಅಭಿಷಿಕ್ತ'ನಾಗುವಾಗ ಶುನಃ-ಶೇಫನ ಆಖ್ಯಾನದ 'ಸಮಯಾಚಾರ' ನಡೆವ ವಾಡಿಕೆ ಸಂಶೋಧಕರ ಜಿಜ್ಞಾಸೆಯನ್ನು ಕೆರಳಿಸಿ ಹಲವು ದಶಕಗಳು ಉರುಳಿವೆ! ಅಶ್ವ-ಮೇಧಯಾಗದಲ್ಲಿ 'ಮಹಿಷ್ಯಾಃ ಉಪಸ್ಥೇ ಅಶ್ವಸ್ಯ ಶಿಶ್ನಂ ನಿಧತ್ತೇ' ಈ 'ಶಾಸ್ತ್ರ' ನಡೆಯಲೇ ಬೇಕಿತ್ತು! ಶತಪಥ ಬ್ರಾಹ್ಮಣದಲ್ಲಿ ಈ ಸಮಯಾಚಾರ ಹೇಳಿದೆ! ಈ 'ಅಶ್ವ'ಯಜ್ಞವು, ಭಗವತಿಯೇ ಸಮ್ರಾಜ್ಞೀ : ಮಹಿಷೀ ಆಗುವ ಆರಂಭದ ನಾಗಸಂಪ್ರದಾಯದ ನಡೆವಳಿಯ ಅವಶೇಷ ಈ ಸಮಯ : ಆಚಾರ. ಆದರೆ, ಈಜಿಪ್ತಿನ 'ಇಸಿಸ್' ದೇವಿ ಇವಳು, ಪಟ್ಟ=ಆಸನದ ಪ್ರತೀಕವಾಗುವ ಯುಗದಲ್ಲಿ, 'ಪುರುಷ'=ಹೋರಸ್ ಇವನೇ ವಸುಂ-ಧರೆಯ ಅಧಿ-ಪತಿ : ಸಕಲ ಪ್ರಜಾ-ಪತಿ ಎನಿಸುವ ಯುಗಸೂಚಕ ಸಾಂಕೇತಿಕ ಪ್ರತಿಮೆಯಾಗಿದ್ದಾನೆ. ಭಾರತದಲ್ಲಿ ಇವನೇ 'ಚಕ್ರ' (: ಇಸಿಸ್) ವರ್ತಿನ್ ಎನಿಸುತ್ತಾನೆ, 'ಚಕ್ರ' : ಚಕ್ರ-ಧರ=ಚಕವರ್ತಿನ್, ಇಲ್ಲಿ ಅರ್ಥಗರ್ಭ ಒಂದೇ. ಆದರೆ, ಏಕಂ : ಸತ್ ವಿವಿಧ ನಾಮಾಂತರಗಳಿಂದ ಅಜ್ಞರಿಗೆ (?) ಸಂಭ್ರಮ ಕಾರಕವಾಗಿ ಪರಿಣಮಿಸುತ್ತದೆ!

ಋಗ್ವೇದ ಕಾಲದಿಂದ 'ಚಕ್ರ' ಹಾಗೂ ವೃತ್<ವರ್ತ್, ವರ್ತನ ವರ್ತನಿ, ವೃತ್ತ, ವೃತ್ತಿ, ವೃ-ತ್ತ : ವರ್ತುಲ, ವರ್ತಿ, ವರ್ತ-ಕ ಈ ಶಬ್ದ ಸಂಕೇತಗಳು ಪಡೆದಿರುವ ಅರ್ಥಛಾಯೆಗಳು ಅಭ್ಯಸನೀಯವಾಗಿವೆ. ಈ ಬಣ್ಣವಣ್ಣದಿಂದ ಒಂದು ಕಾಮನ ಬಿಲ್ಲು ಸಿದ್ಧವಾಗಿ ಕಾಣಿಸಿದ ಅರ್ಥದ ಬಾಣ=ಏಕೇಷ ಹೂಡಿ ಯಾವ ಬೇಕಾದ ಅರ್ಥದ ದೃಶ್ಯವನ್ನೂ ಸೃಷ್ಟಿಸಬಹುದು. ಈ 'ನಾಳಿ'ಯಿಂದ! ವಿಶೇಷ ರ-ಥಸ್ಥ ಸಿದ್ಧನು ನಾಳೀಬಲದಿಂದ ಬೇಕಾದ ತತ್-ತ್ವಜ್ಞಾನದ 'ವರ್ತ-ಕ ನಾಗುವ ಸಿದ್ಧಪುರುಷನಾಗುತ್ತಾನೆ. ವರ್ತ್ (: ವರ್ತಿ) urethra : Duct by which urine is discharged...... = ನಾರ (:ಅಪ) ಅಯನ: ವರ್ತಿ>ಬತ್ತಿ : ದೀಪ ! ಇದು candle ದೀಪ ಅಥವಾ ಹಣತೆಯ ದೀಪ : ಗರ್ಭಗುಡಿಯೊಳಗಿನ ಆನಂದ ದೀಪ. ಉಮರ ಖಯ್ಯಾಮನ 'ಕುರುಡು ದೀಪ! ಋಗ್ವೇದದಲ್ಲಿ 'ಅಪಾಂ ನಪಾತ್ ' = ಆಪೋದೇವರ ವರ್ಣನೆಯಲ್ಲಿ ಬರುವ ಸಂ-ದೃಕ್-ಹಿರಣ್ಯ ಸಂದೃಕ್ ಈ ಶಬ್ದ ಪ್ರತಿಮೆ ಈ 'ದಾರಿ'ಯೊಳಗಿನ 'ಪ್ರಕಾಶ' ಸೂಚಕವಾಗಿದೆ!

'ವರ್ತನ' (=ವರ್ತಿಷ್ಣು) ಕಾಣಲು ಎಷ್ಟು ಸಭ್ಯಸಂಕೇತ! ಆದರೆ, ಈ ಛಾಯಾರ್ಥನೋಡಿ :

೧) setting in motion! (Applied to Vishnu)

೨) a dwarf! ಹ್ರಸ್ವಾಯ ಚ ವಾಮನಾಯ ಚ!

೩) a way, a road = ವರ್ತನೀ, ಅಶ್ವಿನಿಗಳು 'ರುದ್ರವರ್ತನಿ' ಹೋಗುತ್ತಿದ್ದರು.

4) Grinding
5) Spindlle or distaff; rolling or rolling on
6) Commerce, inter-course with
7) a place where a horse rolls.

ಸಾಂಕೇತಿಕ ಪ್ರತಿಮೆಗಳಲ್ಲಿ ಕಾಣುವ ಅರ್ಥಗಳ ಬರುವಳಿಯನ್ನು ಕಂಡು ಹಿಡಿಯದೆ, ಒಮ್ಮೆಲೆ ಕೋಶ ನೋಡಿ 'ಚಕ್ರವರ್ತಿನ್' ಪದಕ್ಕೆ ಪ್ರತಿಪದಾರ್ಥ ಸ್ವೀಕರಿಸುವಲ್ಲಿ ಆ ಶಬ್ದ ಪ್ರತಿಮೆಯಲ್ಲಿ ಪ್ರತಿಬಿಂಬಿತವಾಗಿರುವ ದಿಕ್ಕಾಲ ಪರಿಸರದ ಜೀವನ ಚಿತ್ರವನ್ನು ಗ್ರಹಿಸಿಕೊಳ್ಳುವ ಸೌಭಾಗ್ಯಕ್ಕೆ ಎರವಾಗ ಬೇಕಾಗುತ್ತದೆ. 'ಚಕ್ರ' ಸಂಕೇತವು ಒಳಗೊಳ್ಳುತ್ತಿರುವ ಅರ್ಥಛಾಯೆಗಳ ವಿವಿರ ಹಿಂದೆಯೆ ಬಂದಿದೆ. 'ಏಕೇಷ' ರಥ; 'ಏಕಚಕ್ರ' ರಥ! 'ಒಂದೇ ಗಾಲಿ'ಯ ಸೂರ್ಯನ ರಥದ ವರ್ಣನೆ, ಕಂನುಡಿಯ ಹರಿದಾಸರಲ್ಲಿದೆ. ಆದರೆ, ಈ ಕಾಲಿ ಸ್ವಯಂಚಾಲಿತ ರಥ ಯಮನಲ್ಲಿಗೇ ನೇರವಾಗಿ ಒಯ್ಯುವ ರಥ ಎಂಬುದರ ನೆನಹನ್ನು ಮರೆಯಲಾಗಿದೆ, ಮರೆಮಾಜಲಾಗಿದೆ. ಭಗವಂತನ ಗೀತೆ : ನಾಳೀ=ಸಂಗೀತ! 'ಏಕೇಷ' ರಥ! ಎತ್ತಬೇಕಾದತ್ತ ಸ಼ಡೆವ ರಥ! 'ಚಕ್ರಿ'ಯ ರಥ! ಎಂದ ಮೇಲೆ ಈ ದಿವ್ಯ ರಥ ಶಂ-ಖಂ ನಿನಾದದೊಡನೆ ಶಂ=ಸು-ಖಂ ಆಕಾಶಮಾರ್ಗದಲ್ಲಿ ಪಾತಕರನ್ನು ಎತ್ತಿ ಕೊಂಡೊಯ್ಯದಿದ್ದರೆ ಇದು ಭಗ-ವಂತನ ನಾಲಗೆಗೇ ಕೇಡು! ಋಗ್ವೇದಸ್ಥ 'ಚಕ್ರ'- ಏಕಚಕ್ರ. 'ತ್ರಿ-ಚಕ್ರಂ' ಬಂಧುರಂ ರಥಂ, ಇವುಗಳ 'ಗುಹಾನಿಹಿತ' ಅರ್ಥವನ್ನು ಲೆಕ್ಕಿಸದೆ, ದೇವರ ತೇರುಗಳಲ್ಲಿ ಮಿಥುನ- ಯುಗಗಳ ಚಿತ್ರಗಳು ಇರುವ ವೈಶಿಷ್ಟ್ಯವೇನು? ಇದರ ರಹಸ್ಯವೇ ತಿಳಿಯಲಾರದು!

ಉದಾತ್ತ ದಿವ್ಯಭವ್ಯ ಭಾರತೀಯ ಪುರಾತನ 'ಸನಾತನ' ಸಂಸ್ಕೃತಿಯ ಹೆಮ್ಮೆಗೆ ಕೊರತೆಯಿಲ್ಲ. ಆದರೆ, ಅದರ ಮೂಲಾರ್ಥವನ್ನು ಕಣ್ತೆರೆದು ನೋಡುವ ಇಚ್ಛೆಯ ಅಭಾವ, ಎಲ್ಲೆಲ್ಲೂ, ಏನೆಲ್ಲವನ್ನೂ ಮರೆಮಾಜಿ 'ಪೀತಾಂಬರಧಾರೀ' 'ಶ್ವೇತಾಂಬರಧಾರೀ' ರೂಪದಲ್ಲೆ ಕಾಣುವ ಹಂಬಲ ಕೆಡಕೇನೂ ಅಲ್ಲ. ಆದರೆ, ಈ ಮೇಲ್ತೋರಿಕೆಯ ಅಹಿಮಾಯಾ ಮಂಡನೆಯ ದೃಶ್ಯವೇ ಮೂಲ ವಾಸ್ತವಸತ್ಯ ಎಂದು ನೆರೆನೆಮ್ಮುವಲ್ಲಿ, ಹಾಗೆ ನೆಮ್ಮಿಸುವಲ್ಲಿ ಆತ್ಮವಂಚನೆ, ಪರವಂಚನೆಯಾಗುತ್ತದೆ.

'ಚಕ್ರ' ಸಂಕೇತದಂತೆ, ವೃತ್ತಿ, ವೃತ್ತ, ವರ್ತನಿ, ವರ್ತನಾದಿ ಸಂಕೇತಗಳೂ ಭಾರತೀಯ ಪುರಾತನರ ಪ್ರತಿಭಾ-ಶಕ್ತಿ ಯಾವ ಕ್ಷೇತ್ರದಲ್ಲಿ ಕೇಂದ್ರೀಕೃತವಾಗಿತ್ತು, ಎಂಬುದನ್ನು ಮನಗಾಣಿಸಿಕೊಡುತ್ತಿದೆ. ವೃತ್>ವರ್ತ್ ಈ ಅಖ್ಯಾತದ ಅರ್ಥದ ವ್ಯಾಪ್ತಿಯನ್ನು ಅರಿತರೂ ಸಾಕು; ಆ ಧಾ-ತು ಶಕ್ತಿಯ ವಿವಿಧ ರೂಪಗಳು ಇದರ ಸಾಧಿತ ರೂಪಗಳಲ್ಲಿ ಪ್ರತಿಬಿಂಬಿತವಾಗಿರುವುದನ್ನು ಗ್ರಹಿಸಿಕೊಳ್ಳಬಹುದು. ಮೋನಿಯರ್ ವಿಲಿಯಂಸ್ ಕೋಶವು ವೇದಕಾಲದಿಂದ ತೊಡಗಿ ಮಧ್ಯಯುಗೀನ ಪ್ರಯೋಗಗಳ ವರೆಗಿನ ಅರ್ಥಗಳನ್ನು ಸಂಗ್ರಹಿಸಿ ಹೇಳಿ ಉಪಕಾರಮಾಡಿದೆ. ಮಾದರಿಗಾಗಿ ನೋಡಿ : 'ಏಕೇಷ' ಪ್ರತಿಮಾ ನಿರ್ಮಾಣ ಶಕ್ತಿ, ಎಂದರೆ, 'ವೃ'-ತ್ರ ಶಕ್ತಿ=ಅಸುರ ಯಮಶಕ್ತಿ! 'ವೃ' ಆಖ್ಯಾತ : ಆವರಿಸು : ಮತ್ತು ವೃತ್ ಹೋಲಿಸು ವೃತ್ to turn, turn round, revolve, roll* to move or go on, get along... to be, live, exist Existentialism : ಆಪ : ರಸ ಪಂಥೀಯ ವೃತ್ರಶಕ್ತಿಯನ್ನು ಹೋಲುತ್ತಿದ್ದಲ್ಲಿ ಸೋಜಿಗಪಡಬೇಕಾಗಿಲ್ಲ. ವೇದದಲ್ಲಿ ಹಾಗೂ ಈಜಿಪ್ಟಿನಲ್ಲಿ ಆರಾಧ್ಯ ಶಕ್ತಿಯಾಗಿದ್ದ 'ರಾ (ಜನ್). ಕಾ' : ಹಿರಣ್ಯ ಗರ್ಭ ಶಕ್ತಿ, ವೃತ್ರ ವೃತ್ತಿಯುಕ್ತವಾಗಿದೆ. ಸು-ಖಂ=ಕಂ ಶಂ=ಸುಖಂ=ಜಲಂ ಉಭಯಾರ್ಥವಿರುವುದಾಗಿ ನಿರುಕ್ತ, ನಿಘಂಟಗಳು ಹೇಳುತ್ತವೆ.※

---

* ವೃ-ತ್ರ ಶಕ್ತಿ ಎಂಬುದು encircling ಸುತ್ತುವರಿವ-ಸುತ್ತಿ-ಮುತ್ತಿಕೊಳ್ಳುವ, ಅಪ್ಪುವ, ಆ-ಲಿಂಗಿಸಿ, ಮೆಟ್ಟನಿಲ್ಲುವ ಶಕ್ತಿ, ಎಂಬ ಅರ್ಥವೇ ಸಾಂಸ್ಕೃತಿಕವಾಗಿ ಪ್ರಧಾನ. ಶಂಬಾ ಈ ಸಾಂಕೇತಿಕ ಅರ್ಥದ ಪಾತಳಿಯಲ್ಲೇ ಈ ಶಬ್ದಸಂಕೇತವನ್ನು ವ್ಯಾಖ್ಯಾನಿಸುತ್ತಾರೆ.

※ ಸತ್ತ ಮೇಲಿನ 'ಸುಖ', ಆನಂದ ಬ್ರಹ್ಮ ಸಿದ್ಧಿಯಂತೂ ಸರಿ, ಇಹದಲ್ಲಿಯೆ ಫಾಲ್ಗುಣೀ ನಿತ್ಯ ರಂಗಪಂಚಮಿ : ಓಕುಳಿ ಆಟದ ಅನುಕೂಲತೆಯು ಸಿನಿಮಾ ಸಾಹಿತ್ಯಾದಿ ನವ್ಯತಂತ್ರಗಳಿಂದ ಈ 'ವೃತ್ರ'ಶಕ್ತಿ ವಿಶ್ವವ್ಯಾಪಕವಾಗಿ ಕಾಳ್ಗಿಚ್ಚಿನಂತೆ ಹಬ್ಬುತ್ತಿಲ್ಲವೆ? ಈ ಪ್ರಶ್ನೆ ಶಂಬಾ ಅವರನ್ನು ತುಂಬಾ ಕಾಡಿದೆ. (ಸಂ)

ವೃತ್ತಿ, ಪ್ರ-ವೃತ್ತಿ-ಇನ್ನೊಂದು ಬಾಹ್ಯಶಕ್ತಿಯ ಪ್ರೇರಣೆಯ ಅಸ್ತಿತ್ವ ಸೂಚಕ ಅರ್ಥವೂ ಈ ವೃತ್ ಆಖ್ಯಾತದಲ್ಲಿದೆ! ಪರಾಜ್ಞಯಾ ವರ್ತತೇ ! ಅಥವಾ 'ಪ್ರ-ಜಾ'ರೂಪೇಣ ವರ್ತತೇ! ಆದುದರಿಂದ, ವೃತ್ರ =ಸರ್-ಪ! ಗರ್ಭವನ್ನು 'ಸರೀಸೃಪ' ವೃತ್ರನ ಸಂತಾನ, ಎಂದು ಸೂಚಿಸಿರುವ ಋಗ್ವೇದದ ಕವಿಯು ಮೃತ್ಯುಶಕ್ತಿಯ ಸಾಕ್ಷಾತ್ಕಾರವಾದವನೆಂಬಲ್ಲಿ ಈ ಸಂದೇಹವೇ ಇಲ್ಲ!. 'ವೃತ್' ಇದು ವೃತ್ತಾಕೃತಿಯದಾಗಿರುವುದರಿಂದ ಇದರಲ್ಲಿ ಉಗ್ರ-ಕ್ರೂರ-ಮೃತ್ಯುಸೂಚಕ ಅರ್ಥದಂತೆ. ಪ್ರಿಯದರ್ಶನ (ನೀ) ರೂಪದ ಅರ್ಥವೂ ಒಳಗೊಂಡಿದೆ. 'ಕಿಂ ಇದಂ ವರ್ತಸೇ'? ಹೀಗೇನು ನಡೆದುಕೊಳ್ಳುತ್ತಿ? ವೃತ್-ವರ್ತ್-ಇರುವುದು, ಎಂಬಲ್ಲಿ 'ಸಂಗಾತಿ'ಯ ಅಸ್ತಿತ್ವವು ಅಭಿಪ್ರೇತವಿದೆ! 'ಸಹ' ಯಾರೂ ಆಗಬಹುದು. ಆದಕಾರಣ

1. to have illicit intercourse with (loc.);
2. revolve whirl; hurl;
3. to make anything round,

ಏಕಂ ಸತ್, ಈ ವೈಚಾರಿಕ ಭೂಮಿಕೆ = ವೃತ್ರ ಭೂಮಿಕೆ; ಈ ಭೂಮಿಕೆಯ ವರ್ಣನೆಯಲ್ಲಿ ಸೂರ್ಯ, ಸವಿತ್ರ ಅಗ್ನಿ, ವೃತ್ರಹನ್ ಎಂಬ ಇಂದ್ರ (=ಸೂರ್ಯ) ಏನೆಲ್ಲವೂ O ಅಥವಾ ↑ (ಈ ಕೋಶ ಹೇಳಿದಂತೆ : Pill or thunder -bolt!) ಈ ವೃತ್ತಿಯದಾಗಲೇಬೇಕು! ವೃತ್ತಿ : ಯಮನು (O) ಆಗುತ್ತಾನೆ! ಶೂನ್ಯಗೊಳಿಸುತ್ತಾನೆ. ಎಂತೂ ಬದುಕಲು ಎಂದು, ಹೀಗೆ `O' ಇರು ವರ್ತಿಸು!

ಸೂರ್ಯಾಕ್ಷ : ಚಕಧರ : ಏಕ-ಚಕ್ರ : ವಿಶ್ವಸ್ಯ-ಅಧಿ ಅಕ್ಷ ; ಭಗವಾನ್ : ಚಕ್ರವರ್ತಿನ್ ಈ ಸಾಂಕೇತಿಕ ಪ್ರತಿಮೆ, ತನ್ನ 'ಭಗವಂತಿಕೆ'ಯು ಜನಕ್ಕೆ ತಿಳಿಯು ಸುಮಾರಿಗೆ, ಇದು ಛತ್ರ=(ಛತ್ರ=ಖಂ=ಅಂತರಿಕ್ಷ) ಪತಿ ಪದವಿ ರೂಪದ್ದಾಗಿ ಈ ವಿಶ್ವಸ್ಥ ಏಕಂ : ಸತ್ ಸ್ವರೂಪೀ ನಾಗತತ್ವ : ವೃತ್ರಾಕೃತಿ ಪ್ರಪಂಚವನ್ನು ಆಳತೊಡಗುತ್ತದೆ! ರಾಜನ ಕೃಪಾಛತ್ರಪೋಷಿತರಾಗಿ ಪ್ರಜಾವರ್ಗ ಬದುಕಿ ಇರಬೇಕು. 'ಛತ್ರ'='ಖಂ' ತಲೆಯ ಮೇಲೆ ಇರುವುದು ಎಂದರೆ ಸ್ವಾಮಿ ಶಕ್ತಿ, ರಾಜನ್=ರಜಸ್ : ರೋದಸೀ : ಅಂತರಿಕ್ಷದ ಸ್ವಾಮಿ; ಛತ್ರದಂತೆ 'ಧ್ವಜ- ದಂಡ (: ನಂದಿಕೋಲು) ಸಮ್ರಾಟ್ ಪದವಿಯ ಸಂಕೇತ. ದುರ್ಯೋಧನ ನಾಗ ಧ್ವಜ; ನರ, ಬೃಹಲ್ಲಾಂಗೂಲ ವೃಷಾ : ಕಪಿಧ್ವಜ; ಹೋಮಕುಂಡ ಧ್ವಜ ಕೆಲವರದು. ಇತ್ಯಾದಿ. ಕಂನಾಡ ಇತಿಹಾಸದಲ್ಲಿ 'ಪಾಳಿ' ಧ್ವಜ ಸಮ್ರಾಟ ಸಂಕೇತವಿತ್ತು. ಒಂದು ಕಾಲಕ್ಕೆ ಪಾಳಿ >ಪಾಡಿ, ಇರುವ ಎಡೆ : ಪೀಠ : ಭೂಮಿ=(ಇಸಿಸ್, ಇಜಿಪ್ತಿನಲ್ಲಿ); ಈ ಪಾಳಿಧ್ವಜದೊಡನೆ 'ಗಂಗಾ' 'ಯಮುನಾ' ಸಂಕೇತ (ಜೀವನ-ಮರಣ ಶಕ್ತಿ=ಹಿರಣ್ಯಗರ್ಭ : ಪ್ರಜಾಪ್ರತಿ=ನಾಗಶಕ್ತಿ) ವೃತ್ರಶಕ್ತಿಯ ಪ್ರತಿಮೆ!

(ಅಹಿ) 'ಛತ್ರ-ಪತಿ' ತ್ವ ಮೊದಲು. ರಾಜನ್ : ಆಳುವ ಶಕ್ತಿ ಪೀಠಸ್ಥನದು ಬಳಿಕ. ಈ 'ಛತ್ರ' ಗುರು-ಸಂಪ್ರದಾಯದ (ಅನ್ನ) ಛತ್ರವಾಗಿ ಆಶ್ರಯ ಸ್ಥಾನದ ಸಂಕೇತವಾಗುತ್ತದೆ. ಗುರು ಸಾರ್ವಭೌಮ 'ಚಕ್ರ'ವರ್ತಿನ್ ಆಗುವಾಗ, ಬಳಿಕ ಪವಾಡಿ : ಸಿದ್ಧರ ಛತ್ರಧಾರೀ ಪಂಗಡವು ತಲೆಯೆತ್ತಿರಬೇಕು. ಈ ಬಗೆಯ 'ಕಾಲಜ್ಞಾನ ಸಿದ್ಧಿಯ' (?) ಸಾರುವ ವಿರಕ್ತರು ಕಂನಾಡಿನಲ್ಲಿ ಇಂದಿಗೂ ಉಂಟು. ಖಂ ಸಿದ್ಧಿಯ ಸೂಚಕ ಈ ಛತ್ರ : ಛತ್ರದ ದಂಡ ಕಂ : ಹಿರಣ್ಯಗರ್ಭ ಶಕ್ತಿಸೂಚಕ ದಂಡ, ಅಂತರಿಕ್ಷ ಅಥವಾ ಸಮುದ್ರ (ಯೋನಿ) ಸೂಚಕ-ಮೇಲಣ ಆವರಣ : ಊರ್ಧ್ವಬುಧ್ನ ಚಮಸ ಇದು.

ಋಗ್ವೇದದಲ್ಲಿ ರಾಜನ್ : ಸಮ್ರಾಟ್ (=ಚಕ್ರವರ್ತಿ) : 'ಸೂರ್ಯಚಕ್ರ' (=ಚಕ್ಷು) ಧಾರಿ ಎಂದರೆ ವರುಣನೇ. ಈ ವರುಣನನ್ನು 'ಚಕ್ರವರ್ತಿ' ಪದದಿಂದ ತಳ್ಳಿ. ಅಹಿಜಿತ್, ವೃತ್ರಹಂತಕನೆಂಬ ಇಂದ್ರನನ್ನು ಏಕವೇವ ಶ್ರೇಷ್ಠ ದೈವತವಾಗಿ ಎತ್ತಿಹಿಡಿಯುವ ಒಳಸಂಚು ಇರಬೇಕು ಎಂದು ತರ್ಕಿಸಿದ ಪಾಶ್ಚಾತ್ಯ ಸಂಶೋಧಕರಿಗೆ, ವರುಣನು ಸಮ್ರಾಟ ಪದದಿಂದ ಚ್ಯುತನಾಗಲು 'ಅ-ಚ್ಯುತ' ಭಜಕನಾದ ವಸಿಷ್ಠನೇ ಕಾರಣನೆಂಬುದರ ಸಂದೇಹವು ಕೂಡ ಸೋಂಕಿಲ್ಲ! ಆದರೆ, ಮ್ಯಾಕಡೊನೆಲ್ಲ ಹೇಳಿರುವ ಒಂದು ಮಾತಿನಲ್ಲಿ, ದೂರಾನ್ವಯದಿಂದ, ಈ ವಸ್ತುಸ್ಥಿತಿಯ ಚಿತ್ರವೇ ಉಂಟು. 'ಪ್ರಜಾಪತಿ : ಕಸ್ಮೈ ದೇವನು' ತಾನೇ ಏಕಮೇವಾದ್ವಿತೀಯನಾಗುತ್ತಾನೆ. ಆಗ ವರುಣನು

ಅಮುಖ್ಯದೈವತವಾದನು. ಆದರ, ಕಂ. (ಜ) : ಹಿರಣ್ಯಗರ್ಭನು 'ಪ್ರಜಾಪತಿ' ಎಂಬ ಮಾತು ಒಂದು ಸಾರ್ವತ್ರಿಕ ಸ್ವರೂಪದ ಸೂತ್ರ =ನಿಯಮ ರೂಪದ್ದು! 'ಕಮಲ ಸಂಭವನೆಂಬ ಸೂಚನೆಯಲ್ಲಿ ಕಮಲ (=ಸೂರ್ಯಚಕ್ಷು : ರಾ-ಅಟುಂ ಕಣ್ಣು) ಪೀಠನು ಅಥವಾ ಕಮಲ ಸಂಭವನು ಈಜಿಪ್ಟಿನ ಹೋರಸ್ ಸರ್ವಾಧಿಕಾರಿ, ಭೂಲೋಕದ ಪ್ರಜಾಪತಿ : ಹಾಗೆ ಪುಷ್ಕರ-ಜನು ವಸಿಷ್ಠ ಎಂಬಲ್ಲಿ, ರಾಜನ್ ಸಮ್ರಾಟ್ ವರುಣನ ತರುವಾಯ ಆತನ ಪಟ್ಟಕ್ಕೆ ವಸಿಷ್ಠನೇ ಬಂದ ಸೂಚನೆಯಿದೆ. ರಾಜನ್ ಪರಂಪರೆಯ ಶಕ್ತಿಪೀಠವು, ವರುಣನ ತರುವಾಯ ಭಾರತದಲ್ಲಿ ಗುರುದೇವನ ಕಡೆಗೆ ಬರುವುದನ್ನು ಋಗ್ವೇದದ ಪುಷ್ಕರ-ಸಂಭವ ವಸಿಷ್ಠನ ಸಾಂಕೇತಿಕ ಪ್ರತಿಮೆಯು ಬಯಲಿಗೆ ತರುತ್ತಿದೆ.

ಈ ರಾಜನ್ ವರುಣನಿಗೆ, ಊರ್ವಶಿಯಿಂದ ಹುಟ್ಟಿದ ವಸಿಷ್ಠನನ್ನು ತತ್=ಏಕಂ : ಸತ್ : ಕಂಜ ಪೀಠಾಧಿಕಾರಿಯಾಗಿ ಈ ಸಂಹಿತೆಯಲ್ಲಿ ಕಲ್ಪಿಸಲಾಗಿದೆ. ಈತನ ಜನ್ಮಸನ್ನಿವೇಶವನ್ನು ಅದೆಷ್ಟು ನಾಟಕೀಯ (mock) ಶ್ರೀಮದ್ಗಾಂಭೀರ್ಯದಿಂದ ವರ್ಣಿಸಲಾಗಿದೆ ಎಂಬುದು ಸಮೀಕ್ಷಾರ್ಹವಾಗಿದೆ. ದೇವಾರ್ಪಿತ ಕುಮಾರಿ (:ಅದಿತಿ ಸಂಪ್ರದಾಯದ) ಊರ್ವಶಿಯಲ್ಲಿ ಹುಟ್ಟಿದನೆಂದು ಹೇಳಿಯು, ಇವನು 'ಪುಷ್ಕರ' ಸಂಭವನು ಎಂಬ ಮಾತಿನ ಆವಶ್ಯಕತೆಯೇನಿದ್ದಿತು? ಈ ಸಾಂಕೇತಿಕತೆಯ ಗುಹ್ಯಾರ್ಥವು ಒಮ್ಮೆಲೆ ಗಮನಕ್ಕೆ ಬರುವುದಿಲ್ಲ. 'ಪದ್ಮ' -ಆಸನ, ಇದು ಭಗ-ವಂತಿಕೆಯ ಮುಖ್ಯ ಲಕ್ಷಣ. ಪುಂಡರೀಕ ಅಕ್ಷ, ಅಥವಾ ಸು-ದರ್ಶನ ಚಕ್ರ ಇಲ್ಲದೆ ಭಗ-ವಂತತ್ವವಿಲ್ಲ. 'ರಮಾರಮಣ ಗೋವಿಂದ' 'ಪಾರ್ವತೀ-ಪರಮೇಶ್ವರ' ಎಂಬ ಈ ನೂತನ ಆಕೃತಿಯಲ್ಲಿ ಪದ್ಮ, ಚಕ್ರ ಅಥವಾ ನಾಗ, ಇಂತಹ ಸಂಕೇತವಿಲ್ಲವಾದರೂ ಆಶಯವು ಅದೇ. ತತ್ : ಏಕಂ ಇದೊಂದೇ ಸತ್ಯ! ಉಳಿದುದೆಲ್ಲವೂ ಮಿಥ್ಯ! ಇಜಿಪ್ತಿನ ಜನಗಣಕ್ಕೆಲ್ಲ ಇಡಿಯಾದ ಕಂ-ಖಂ ಶಕ್ತಿ ಪ್ರತೀಕ ಏಕಮೇವ ರಾಜನ್ ಹೊರಸನೇ ಭಾರತದಲ್ಲಿ ಈ ಕಂ-ಖಂ', ಗುರುಪೀಠದ ಹಕ್ಕು ಆಯಿತು. 'ಕಂ-ಖಂ' ಬ್ರಹ್ಮನ್ ದೀಕ್ಷಾವಿಧಿ! ಈ ಕ್ರಾಂತಿ ಪುರುಷ : ಕಾರಣಪುರುಷ ಪವಾಡಿ ಭಾರತದಲ್ಲಿ ಪುಷ್ಕರ ಸಂಭವ ವಸಿಷ್ಠನೇ. ತಾನು ರಾಜನ್ (ವರುಣ) ಪುತ್ರನಾಗಿದ್ದು, ರಾಜನ್ ಪೀಠಕ್ಕೆ ಇದ್ದ ಹಕ್ಕನ್ನು ತಾನು ಆಕ್ರಮಿಸಿದ ಈ ವರುಣ ಹಾಗೂ ಅವನ ಪುತ್ರನ ಈ ಚಿತ್ರವು, ಗ್ರೀಕಿನ ಯುರೆನಸ್-ಕ್ರೋನಸ್ ಪಿತಾ-ಪುತ್ರರ ಪ್ರತಿಮೆಯನ್ನು ಹೋಲುತ್ತದೆ!

ಭಾರತೀಯ ಇತಿಹಾಸದಲ್ಲಿ ರಾಜಶಕ್ತಿ, 'ಗುರುಪಾದೋದಕ ಪ್ರಸಾದೋಪಜೀವಿಯಾಗಿಯೆ ಪ್ರಾಧಾನ್ಯದಿಂದ ಉಳಿದುಕೊಂಡು ಬಂದುದು ಕಾಣುತ್ತದೆ. 'ನಾಗಶಕ್ತಿ' ತಾನು ಅಹಿಂಸಕ ಕುಮಾರ : ವಿರಕ್ತ ಚಕ್ರಾಧಿಪತಿ ವೇಷಧಾರಿಯಾಗಿ ಪ್ರಜಾ-ಪತಿತ್ವದ ಅಧಿಕಾರವುಳ್ಳದಾಗಿತ್ತು. 'ಅಜಾತಶತ್ರು' ನಾಮಧಾರಿಯ ವಂಶದಲ್ಲಿ ಪಿತೃಹಂತಕ ಐವರು ರಾಜರು, ಗೌತಮ-ಮಹಾವೀರರಿಂದ ಉಭಯ ಗುರುಪರಂಪರೆಯಿಂದ ಅನುಗ್ರಹೀತರಾಗಿದ್ದರು! ರಾಜಗುರುತ್ವ ಯಾರಿಗೆ, ಎಂಬ ಬಗೆಗೆ ಅಂದಿನ ಜಗದ್ಗುರು, ಗುರುಸಾರ್ವಭೌಮರಲ್ಲಿ ಸ್ಪರ್ಧೆಯಿತ್ತು. ಅನೇಕ ರಾಜಪೀಠಗಳು ಉರುಳಿ ಬೇರೆ ಅರಸುಮನೆತನ ಬರುವಲ್ಲಿ, ಈ ವಿರಕ್ತಪೀಠಗಳ ಶಾಪಾನುಗ್ರಹದ ಕೈವಾಡವಿರುವುದು ಐತಿಹಾಸಿಕ ಸತ್ಯವಾಗಿದೆ.

'ಆದಿಪುರುಷ' ; ಸೂರ್ಯಾಕ್ಷ : ಪದ್ಮಾಕ್ಷ, ಅಗ್ನಿನೇತ್ರ-ತಾನೇ ಭಗವಂತ ಎಂದು ಪೂಜೆಗೊಳ್ಳತೊಡಗಿದ್ದು ನಿಜ. ಆದರೆ, 'ಭಗವತಿ' ಪ್ರತಿಮಾ: ಸಂಕೇತದೊಳಗಿನ ನೈಸರ್ಗಿಕತೆಯ ಸೊಬಗು. 'ಭಗ-ವಂತ' ರೂಪ ಪೂಜೆಗೊಂಬಲ್ಲಿ ಉಂಟೆ? ಭಗವತಿ ಪ್ರತಿಮೆಯಂತೆ 'ಭಗ'ವಂತ ಪುರು-ಷ ಪ್ರತಿಮೆಗೂ 'ಹುಟ್ಟಿಗೆ' ಪೂಜೆ, ನಿಜವಾಗಿ ನಡೆಯಬೇಕು ಗುಹ್ಯವಾಗಿಯೇ ಹಗಲನ್ನು ಇರುಳಾಗಿಸಲು ಸೂರ್ಯನನ್ನು 'ನಾರಾಯಣ' ರೂಪಕ್ಕೆ ತಿರುಗಿಸಿದ್ದಾಯಿತು; ಆದರು ಭಗವತಿ, ಭಗವಂತ ಪ್ರತಿಮೆ 'ಗುಹಾಹಿತ' ಸತ್ಯವಾಗಿ ಗುಪ್ತವಾಗಿಯೆ ಬಾಳುವ ದೇವರ ಈ ವನ-ವಾಸ ಕರುಣಾಸ್ಪದವಾಗಿದೆ! ಈ ಭಗ-ವಂತನಿಗೆ ಪವಾಡ ಚಮತ್ಕಾರಗಳ ಬಲವಿಲ್ಲದೆ ಪೂಜೆ ದೊರೆಯುವುದು ಕಷ್ಟ! ಆದಿಮಾತಾ ಸಂಪ್ರದಾಯ ಹಿಂದೆಬಿದ್ದು, ಆದಿಪುರುಷ, ವೃಷಭಾದಿಗಳ ಆರಾಧನಾ ಸಂಪ್ರದಾಯವು ರೂಢಿಗೆ ಬಂದಿದೆ.

ನಾಗ-ಶಕ್ತಿ ಪೀಠಾರೋಹಣಕ್ಕಾಗಿ ಹೀಗೆಲ್ಲ ಸ್ಪರ್ಧೆಯ ಕಾರಣವು: ಪಸಾಯ > ಪ್ರ-ಸಾದ, ಪ್ರ-ಸೀದ ದಾನ=ಅನು-ಗ್ರಹಿಸುವ ಹಕ್ಕು, ತನ್ನದೇ ಎಂಬ ಈರ್ಷ್ಯ. ಅಸ್ಸೀರಿಯದ ದೈವತಕಥೆಯಿಂದ ಮೇಲಣ ಲೋಕದ ಜಲ, ಕೆಳಗಣ ಜಲ ಎಂಬ ನಿತ್ಯಭೇದವು ಇದ್ದುದು ತಿಳಿಯುತ್ತದೆ. ವೇದದಲ್ಲಿಯೂ ಅಂಬು-ಅಂಭಸ್ ಹಾಗೂ ಆಪದಲ್ಲಿ ತಾರತಮ್ಯ ಕಲ್ಪಿಸಿದ್ದು ಉಂಟು. 'ಅಂಭಃ ಪರೇಣ ದಿವ್ಯಂ', 'ಅಧಸ್ತಾತ್ ಆಪಃ'! ರಾಜನ್, ಅಥವಾ ಗುರು ಇವರಿಗಿಂತ ಮುಂಚೆ ಅಂಭೃಣೀ (< ಅಂಭಸ್‌ದೇವಿ) ಈ ಕೃಪಾಪ್ರಸಾದ ದಾನಶಕ್ತಿ ತನ್ನದೇ ಎನ್ನುತಿದ್ದಳು. 'ಅಹಂ ರಾಷ್ಟ್ರೀ, ಸಂಗಮನೀ...'! ಈ ದೇವಿ, ಅರ್ಪಿತ ಕುಮಾರಿಯರಲ್ಲಿ ಆವೇಶವಾಗುವ ಪಾಡಿಕೆ : ಆವಿಷ್ಟ ಕುಮಾರಿ, ಅನು-ಗ್ರಾಹಿ ಆಗಿ. ಆ ಅನು-ಗ್ರಹಪಡೆಯಲು ಅನೇಕ ಕುಮಾರರು-ಗಂಡಸರು ಸ್ಪರ್ಧಿಸುತ್ತಿದ್ದರು. ಈ ಹಂತದಲ್ಲಿ ಈ ದೇವಿಗೆ 'ಪುರುಷ=ಪಶು.' ಯಜ್ಞಕ್ಕಾಗಿ ಬಲಿಗೊಡಬೇಕಾಗುತ್ತಿತ್ತು. ಯುರೋಪಿನಲ್ಲಿ ಅರ್ಟಿಮಿಸ್-ಸಿಬೆಲೆ-ಅಸ್ಟಾರ್ಟೆ ಮತ್ತು ಇವಳ ಸಹ-ಚರ ಅಟ್ಟಿಸ್ ಈ ದೈವತಗಳ ಸಮಯಾಚಾರಗಳಲ್ಲಿ (Emasculating themselves) ಈ ನಡೆವಳಿ ಇತ್ತು, ರೋಮನ್ ಸಾಮ್ರಾಜ್ಯದಲ್ಲಿ ಅಗಸ್ಟಸನವರೆಗೂ ಈ ನಡೆವಳಿ ರೂಢಿಯಲ್ಲಿತ್ತು. ಅಲ್ಲಿ ಪ್ರಚಲಿತವಿದ್ದ ಆಮರಣ ಕುಮಾರೀ ವ್ರತಧಾರಿಯಾಗಿ ದೇವಾರ್ಪಿತ ಜೀವನ ನಡೆಸುವ ಸಂಕಲ್ಪದ ದೀಕ್ಷಾ ವಿಧಿಯೂ ಇತ್ತು. ಅಲ್ಲಿಯ ಪ್ರಾಚೀನ ಅರ್ವಾಚೀನ ಲೇಖನಗಳಿಂದ ಇದು ಬೆಳಕಿಗೆ ಬಂದಿದೆ. 'ವೆಸ್ಟಲ್ ವರ್ಜಿನ್ಸ' ಎಂಬ ಈ ಸಾಂಕೇತಿಕ ಪ್ರತಿಮೆಯನ್ನು ವೇದೋಪನಿಷತ್ತಿನ ಪರಿಭಾಷೆಯಲ್ಲಿ ತನ್ನೊಳಗಿನ 'ಗೌತಮಾಗ್ನೀ' ಪಾವಿತ್ರ್ಯ ರಕ್ಷಣದ ಪ್ರತಿಜ್ಞೆಮಾಡಿ ದೀಕ್ಷೆಪಡೆದ 'ಕಂ' ಅಥವಾ 'ಕಾ' ದೇವಿ : ದೇವಾರ್ಪಿತ ಕುಮಾರಿ.

> '....Oddly enough, the widespread sacred prostitution was an act of piety to Great Mother Goddess, who was herself a virgin"

ಈ ಲೇಖಕರ 'ಮಹಾತಾಯಿ' ಎಂದ ನಾಮಸಂಕೇತಕ್ಕಿಂತ 'ಅ-ದಿತಿ' ಕುಮಾರೀ : ಕನ್ಯಕಾ 'ದೇವಾ ಜನನಿ', (: ದೇವ ಜನಕ್ಕೆ ಜನ್ಮದಾತೆ) ಎಂಬ ಎರಡೂ ಸಂಕೇತಗಳು ಹೆಚ್ಚು ಅರ್ಥಪೂರ್ಣವಾಗಿವೆ. 'ಅದಿತಿ' ಇವಳು ಸಮಗ್ರಾ-ಪೂರ್ಣಾದೇವಿ. ವಿಶ್ವವನ್ನು ತನ್ನಲ್ಲಿ ಸ್ವೀಕರಿಸುವ ಶಕ್ತಿ. ಅದೇ ಮೇರೆಗೆ ದೇವತಾ (ಸ್ತ್ರೀ) ಪುರುಷ ಮತ್ತು ಸಾಮಾನ್ಯ ಸಂತಾನ ನಿರ್ಮಿಸುವವಳು, ತನ್ನ ಮೆಚ್ಚಿಕೆಯ (ಯಂ ಕಾಮಯೇ) ಸಂಗಾತಿಗೆ 'ಆನಂದ : ಬ್ರಹ್ಮ' ಸಾಕ್ಷಾತ್ಕಾರವನ್ನೀವ 'ತೃಪ್ತಾ, ತರ್ಪಯಂತೀ' ಮಹಾದೇವಿ, ಈ ನಿತ್ಯ ಕನ್ಯಾ : ಕುಮಾರಿ.

ಒಂದು ಕಾಲದ ಈ 'ಮುಕ್ತಾ'ದೇವಿ. ಆಬಳಿಕ ಲೋಕನಿಂದೆ ತಪ್ಪಿಸಲು, ಸನಾತನ ಸಂಪ್ರದಾಯ ಉಳಿಸಲು ತನ್ನ ಸು-'ಖಂ' ತನ್ನಲ್ಲಿಯೇ ಹೋಮಮಾಡಿ ಆ ಮರಣ ಕನ್ಯಾಮಣಿಯಾಗಿ, ದೇವಾರ್ಪಿತ ಜೀವನದ ಕಂಕಣಕಟ್ಟಿ ಕೊಳ್ಳುತ್ತಾಳೆ!

> "It is thus that the folly of mankind finds vent in opposite extremes alike harmful and deplorable".[೧೩]

ಡಾ. ಫ್ರಾಂಕಫೋರ್ಟ್ ಗ್ರಹಿಸಿಕೊಂಡಂತೆ, ಪುರಾತನರ ಈ ಆಚಾರ ಸಂಪ್ರದಾಯಕ್ಕೆ, ಆ ಯುಗದಲ್ಲಿ, ಸಣ್ಣ ಸಣ್ಣ ಒಂದು ವಂಶ=(ಬದಿರ ಮಳೆಯಂತೆ ಗಡ್ಡೆಯಾಗಿ) 'ಕುಲ'ವಾಗಿ ಒಕ್ಕೂಟದಿಂದ 'ಗಣ' ಜೀವಿಯಾಗಿ ಬಾಳುತ್ತಿದ್ದ ಜೀವನ ರೀತಿಯೂ ಒಂದು ಕಾರಣವಾಗಿರಬೇಕು. 'ಗಣ'ರಾಜ್ಯಗಳಲ್ಲಿ ಐಕ್ಯ -ಏಕಾತ್ಮತೆ ಉಳಿಯಲು, 'ಏಕಪಾತ್ರ ಭೋಜನ ' ಸಾಂಕೇತಿಕ ಕ್ರಿಯೆ, ಪ್ರಯೋಜನಕಾರಿಯಾದುದು ನಿಜ. 'ವಿಷಸ್ಯ ಪಾನಪಾತ್ರೇ ರುದ್ರೇಣ ಸಹ' ಉಳಿದ ದೇವೇಷಿತರು ಒಂದೇ ಕುಡಿಕೆಯಲ್ಲಿ ಕುಡಿದುದರ ಸಾಂಕೇತಿಕ ವರ್ಣನೆ ದೊರೆಯುತ್ತದೆ. ದ್ರೌಪದಿಯ ಸಾಂಕೇತಿಕ ಪ್ರತಿಮೆ, ಕುಂತೀದೇವಿ 'ದೇವ ಜನ' ಮಕ್ಕಳನ್ನು ಪಡೆದುದು, ಈ 'ನಿಯೋಗ ತಂತ್ರ'ವು 'ದೇವಜನವಿದ್ಯೆ'- 'ಸರ್ಪವಿದ್ಯೆ' ಎಂದು ಉಪನಿಷತ್ತಿನಲ್ಲಿ ಸಾಂಕೇತಿಕವಾಗಿ ಸೂಚಿಸಲ್ಪಡದೆ ಇಲ್ಲ. ಆದರೆ, ಬಳಿಕ 'ಆದಿಮಾತಾ' ಕುಮಾರೀ ಸಂಪ್ರದಾಯವು ಬದಲಾಗುತ್ತದೆ. ಮೆಲ್ಲನೆ ದೇವಿಯ ಪ್ರತಿನಿಧಿಯಾಗಿ ಆಳತೊಡಗಿದ 'ಪುರುಷ'ನ ಸೊತ್ತಾಗಿ, ಸ್ತ್ರೀಯು ಆತನ ಅರ್ಧಾಂಗ : ಶಕ್ತಿಪೀಠ=ಅಧಿ-ಸ್ಥಾನವಾಗಿ ಮಾರ್ಪಟ್ಟಳು.

ಈ ಎರಡನೆಯ ಹಂತದ ಸಾಮಾಜಿಕ ಜೀವನ ಚಿತ್ರವನ್ನು, ಫ್ರಾಂಕ್‌ಫೋರ್ಟನು ಅಸ್ಸೀರಿಯ ಭಾಗದ ಪುರಾತನ ಉಲ್ಲೇಖಗಳಿಂದ ಗ್ರಹಿಸಿಕೊಂಡುದು ಮನನೀಯವಾಗಿದೆ. ವೇದಕಾಲೀನ ಉಲ್ಲೇಖಗಳ ಬೆಳಕಿನಲ್ಲಿ ಫ್ರಾಂಕ್‌ಫೋರ್ಟರ ಅಂದಿನ ರಾಜ್ಯ, 'ಗಣ'ರಾಜ್ಯದ ಪ್ರತಿಮೆಗೆ ಸರಿಹೋಗುತ್ತಿದೆ. ಋಗ್ವೇದದ 'ವಿರಾಟ್ ಪುರುಷನ' ಚಿತ್ರದಲ್ಲಿ ಅಂದಿನ ಸಾಮಾಜಿಕ ಆಕೃತಿಯು ಒಡಮೂಡಿ ನಿಂತಿದೆ. ಸಮಾಜವನ್ನು ಒಬ್ಬ ಮಹಾಪುರುಷನ ರೂಪಕದಿಂದ ಕಲ್ಪಿಸಿರುವಲ್ಲಿ 'ಕಂ-ಖಂ' (: ರಾ-ಕಾ) ಶಕ್ತಿಯನ್ನುಳ್ಳ 'ಚಕ್ರವರ್ತಿ'ರೂಪ ಒಬ್ಬನ ಅಸ್ತಿತ್ವವು ಸೂಚಿತವಾಗುತ್ತದೆ. ಅಧ್ಯಕ್ಷ ಸಮಿತಿ, ಸಭಾ ಇಂತಹ ಪದಗಳಿಂದ ಅಂದು ಪ್ರಮುಖರ ಸಂಘವೊಂದು ಸರ್ವಾಧಿಕಾರವುಳ್ಳದು, ರಾಜನ ಅಷ್ಟ ಪ್ರಕೃತಿ=ಅಂಗ ಎಂಬ ರೀತಿಯದು ಇರಲೇಬೇಕು. ಇದು ಈಜಿಪ್ಪಿನ 'ದೇವಸಮಿತಿ'ಯನ್ನು (Ennead) ಸಂಪೂರ್ಣ ಹೋಲುತ್ತದೆ. ನಾರಾಯಣ (: ವಾಸು ದೇವ), ಇವನ ಅಷ್ಟ ಪ್ರಕೃತಿ=ಹೀಗೆ (೯) ಇದನ್ನು a primeval entity' ಎಂದು ಅಲ್ಲಿ ಬಗೆಯಲಾಗಿತ್ತು! ಈ 'ನವನ್' ಸಂಖ್ಯೆ ಚಾಂದ್ರ ಸಂಪ್ರದಾಯ ವೈಶಿಷ್ಟ್ಯಸೂಚಕ ಸಂಕೇತವಾಗಿದೆ, ಈಜಿಪ್ಪಿನಲ್ಲೂ. ಆದರೆ, ಮೂಲತಃ 'ನಾಲ್ಕು' ಇದೇ Cardinal ಸಂಖ್ಯೆ ಎಂಬುದನ್ನೂ ಅವರು ಸ್ಪಷ್ಟಪಡಿಸದೆ ಇಲ್ಲ![೧೫] ಈ ನಾಲ್ಕೂ ಸೇರಿ, 'ಒಂದು' not each one in his own right. ಋಗ್ವೇದದ 'ವಿಶ್ವಕರ್ಮನ್' 'ಸಪ್ತ'+ಏಕ: 'ಪರ ಏಕಂ ಆಹುಃ' ಹೀಗೆ ಮೆಲ್ಲನೆ 'ಎಂಟು' ಸಂಖ್ಯೆ ಸೂಚಿಸಿದ್ದಾಗಿದೆ. ಆದರೆ, ಮಹಾಭಾರತದ ನಾರಾಯಣಾಖ್ಯಾನದಲ್ಲಿ ಏಕಾತ್ಮಕ ಸಂಖ್ಯೆ 'ಒಂಬತ್ತಾಗಿದೆ' ಭಗವದ್ಗೀತೆ ಮಹಾಭಾರತದ ಭಾಗವೆಂದರೂ ಆ ಭಗವಂತನು 'ಮಹರ್ಷಯಃ ಸಪ್ತಪೂರ್ವೇ' ಎಂದು, 'ಚತ್ವಾರ' ಮನುಗಳನ್ನು ಸೇರಿಸಿ '೧೧' - ಏಕಾದಶ (: ರುದ್ರ) ಸಂಖ್ಯೆ ಹೇಳಿದ್ದಾನೆ. ಆದರೆ, ಇಲ್ಲಿಯೂ 'ಜಾದು'! ಹನ್ನೊಂದು ಅಂಗಗಳ ಅಧಿಅಕ್ಷ ತಾನು ಎಂಬಲ್ಲಿ ಆದಿತ್ಯ=ದ್ವಾದಶ ಸಂಖ್ಯಾಸೂಚನೆಯೂ ಅಲ್ಲಿ ಉಂಟು. ಇದೆಲ್ಲ ವಿವರಣದಿಂದ ಅಂದಿನವರ ಏಕಂ : ಸತ್ ಇದೇ ಸೃಜನ ಶಕ್ತಿ : ವಿಶ್ವಸ್ಥ ಜೀವನಮರಣ ಚಕ್ರದ ಸಂಚಾಲಕ ಶಕ್ತಿ, ಎಂಬ ಮೂಲಭೂತ ಶ್ರದ್ಧೆಯು ದೃಢಪಡುತ್ತದೆ. ಆದರೆ, ಈ ಏಕಂ ಸತ್‌ಶಕ್ತಿಯು ತನಗೆ ನಾಲ್ಕು ಹಾಗೂ ಎಂಟು ಸಮಿತಿಯ ಬೆಂಬಲ ಪಡೆಯುವುದೂ ಅವಶ್ಯವಿತ್ತು!

'ಏಕೈಕ ವಿರಾಟ್ ಪುರುಷ', ಇಡೀ ಭೂ : ಚಕ್ರವರ್ತಿ ಆಗಿ = 'ಸಃ ಭೂಮಿಂ ವಿಶ್ವತೋ ವೃತ್ವಾ' = ಭೂಮಿಯನ್ನು ಮೆಟ್ಟಿ, ಮೇಟೀ ಒಕ್ಕಲು ಆಗಿ, 'ದಶಾಂಗುಲ' ರೂಪದಲ್ಲಿ, ಮತ್ತೆ ದಕ್ಷ: ಉತ್ತಾನಪದವಾಗಿ ಎದ್ದು ನಿಲ್ಲುತ್ತಾನೆ! ಆಹಾ! ಎಂತಹ ಹನೂಮಾನ್=ಮಹಾವೀರ=ಬಲಿಷ್ಠ 'ಬಾಹುಪುರುಷ, ಈತ! 'ರಸೋ ವೈ ಸಃ' ಈ ಅನುಭಾವಿ ಹೇಳುತ್ತಾನೆ. 'ಅಹಂ ವೃಕ್ಷಸ್ಯ ರೇರಿವಾ' ('ರೇರಿವಾ, ಆರ್ಷ ಪ್ರಯೋಗ; 'ಪ್ರೇರಯಿತಾ' ಎಂದು ಶಾಂಕರಭಾಷ್ಯ); 'ಗಿರಿಶಿಖರ'ದಂತೆ ಎದ್ದುನಿಂತ 'ಬಾಹು': ಪುರುಷ. ಈ 'ಬಾಹು' ಯಜ್ಞಪಶು : 'ಬಲಿ' ಈತನೇ! ಪದ್ಮಾಸನದಲ್ಲಿ ತತ್‌ಮಯತೆಯೊಳಗಿನ ಪ್ರ-ಬುದ್ಧ : ಮಹಾಯೋಗೇಶ್ವರ=ಶ್ರೀ ಕೃಷ್ಣ ಮೂರ್ತಿ; ಹ್ರಸ್ವ; ವಾಮನ 'ವಿಶ್ವತಃ ವೃತ್ವಾ' ಆಗಿ ತಾನೇ ಪ್ರಪಂಚದ ಮೇಟಿ! ತನ್ನ ಸುತ್ತಲೂ ಸೂರ್ಯ-ಚಂದ್ರರು ಸುತ್ತುತ್ತಾರೆ, ಎಂಬ ಏಕಂ=ಸತ್ ಸ್ವರೂಪೀ 'ವೃತ್ರ' ಶಕ್ತಿಯೆಂದರೇ 'ಹಿರಣ್ಯಗರ್ಭ'; ದೇವನ ರಾ-ಕಾ ಶಕ್ತಿ=ಕಂ=ಸು-ಖಂ ಸಂಯುಕ್ತಶಕ್ತಿ.

ಈ ರೂಪಕಕ್ಕೆ, ಈ ತತ್‌ತ್ವ ದರ್ಶನಕ್ಕೆ ಕಾರಣವಾದ ದಿಕ್ಕಾಲ-ಪರಿಸರಸ್ಥ ಜೀವನ ರೀತಿ=ಸಮಯಾಚಾರ ಒಂದು ಆ ಕಾಲದಲ್ಲಿ ಇತ್ತು. ಇದು ಅಂತರಿಕ್ಷದಲ್ಲಿ ಕಾಣಿಸಿಕೊಳ್ಳುವ ಸ್ವರೂಪದ ಚಿತ್ರವಾಗಿ ಕಂಡರೂ ಜಾಗತಿಕ ರಂಗದಲ್ಲಿ, ಮನುಜ ಸಂಸ್ಕೃತಿಯ ಆರಂಭದಲ್ಲಿ ಅನೇಕ ಭಾಷಿಕ ಜನಪಂಗಡಗಳಲ್ಲಿ ಇದ್ದ ನಡೆವಳಿಯೆ, ಆಯಾ ಭಾಷಿಕ ಪ್ರತಿಮಾ ಸಂಕೇತಗಳಲ್ಲಿ, ವೇದದ 'ಪುರುಷ'ನನ್ನು ಸುಮಾರಾಗಿ ಹೋಲುವ ವಿರಾಟ್ ಪುರುಷಶಕ್ತಿಯ ವರ್ಣನೆಗಳು ಕಾಣಿಸಿಕೊಳ್ಳುತ್ತವೆ. ಸುಮೇರು ಅಸ್ಸೀರಿಯಾ ಭಾಗದ ಪುರಾತನ ಉಲ್ಲೇಖಗಳ ಆಧಾರದಿಂದ 'ಭೂ-ಚಕ್ರವರ್ತಿನ್' ಭೂಪತಿ=ಪ್ರಜಾಪತಿ=ಪುರುಷ ವಿರಾಟ್ ಕಲ್ಪನೆಯ ಹಿನ್ನೆಲೆಯನ್ನು ಬಲ್ಲವರು ಬೆಳಕಿಗೆ ತಂದಿದ್ದಾರೆ. ಅದು 'ನಗರ' 'ಪುರ' ಸಂಸ್ಕೃತಿಯ ಕಾಲ.

> "Around the end of the third millennium the city, celebrated yearly the marriage of the goddes Inanna to the God Dumuzi.. in the view of the universe as a state-since the goddess is an incarnation of the fertility nature, and her husband the shepherd god Dumuzi, incarnates the creative Power of spring, it is understandable that this annual union of god and goddess signifies and is the reawakening of nature in spring.
> A priestess, transcend their human status, take on the identity of the deities, Dumuzi and Inanna and go through their marriage... our text clearly states this, their marriage is the marriage of the creative powers of spring.[೧೬]

ಮದುವೆಯಂತೆ, ಪ್ರ-ಲಯ ಮತ್ತು ಪುನರ್ ಉದ್ಭವದ ಸಮಯಾಚಾರಗಳು ಆ ಯುಗದಲ್ಲಿ ರೂಢವಿದ್ದವು. 'ತುಳಸೀ ವಿವಾಹ' ಪ್ರತಿವಾರ್ಷಿಕ ಸಮಯಾಚಾರ! 'ತುಳಸಿ (ತುಳಜಾ=ಭವಾನಿ) ದೇವಿಯ ಚರಿತ್ರ, ಅದರಲ್ಲಿ ವಿಷ್ಣುವಿನ ಪಾತ್ರ ಓದಿ ಅರಿಯಬೇಕಾದುದು. ರಂಡೆ ಹುಣ್ಣಿವೆ, ಹೋಳಿಹಬ್ಬ, ಬಳಿಕ ಮುತ್ತೈದೆ ಹುಣ್ಣಿವೆ ಈ ಸಮಯಾಚಾರಗಳ ಮೂಲ ಆಕೃತಿ ಈಗ ಗ್ರಹಿಸಿಕೊಳ್ಳಲು ತೊಂದರೆಯಿದೆ. ಆದರು, ಇವು 'ಜನಕಲ್ಪ' ಸಾಮೂಹಿಕ ಸಹ-ವಾಸದ ಆಚರಣೆಯ ರೂಢಿಯಾಗಿದ್ದುವು. 'ನವರಾತ್ರ'ದಲ್ಲಿ 'ಘಟ'ರೂಪದೇವಿಯ ಮುಂದೆ ಮಣ್ಣು ತುಂಬಿದ ಬಾನಿಯಲ್ಲಿ ಧಾನ್ಯಬಿತ್ತಿ 'ಅಂಕುರಾರೋಪಣ' ಮಾಡಲಾಗುವ ಸಾಂಕೇತಿಕ ವಿಧಿಯುಂಟು. ಚೈತ್ರಗೌರಿಯ ಎದುರು ಸಹ ಈ ಬಗೆಯ ನಾಟಿಕೆ-ಅಂಕುರ ಬೆಳೆಯಿಸುವ ವಾಡಿಕೆಯಿದೆ. ಹುಣ್ಣಿಮೆಯ 'ಬೀರ'ನಂತೆ ಅಮಾವಾಸ್ಯೆಯ ಬೀರನೂ ಇದ್ದಾನೆ. ಆದರೆ, ಇವನು 'ಸೂರಾದೇವಿ' ಮಗನೆಂಬ ಕಥೆ ಮಾತ್ರ ಅರ್ವಾಚೀನ. ಸೂರ್ಯನು ಬೀರ : ಡುಮುಝಿಗೆ ನೆರವಾದನೆಂದು, ಅವನು ಇನನ್ನಾ (: ಚಂದ್ರಾ) ದೇವೀ ಸಹೋದರನೆಂದು ಸುಮೇರಿನ ಕಥೆಯಿದೆ. ಸೂರ್ಯ=ಚಂದ್ರ ಆದುದು, ಕ್ರಿ. ಪೂ. ೧೫೦೦ ಸುಮಾರಿಗೆ, ಎಂದು ಈಜಿಪ್ಟಿನ ಉಲ್ಲೇಖಗಳಿಂದ ಸಿದ್ಧವಾಗಿದೆ.

ಭೂ-ಚಕ್ರವರ್ತಿನ್ ಆಗುವ='ದೇವಜನನಿ'ಯ ಕೈಹಿಡಿಯುವ ಹಕ್ಕು=ಯಾಜಮಾನ್ಯ, ಮೊದಲು ರಾ-ಜನ್ ಪಟ್ಟದ ಅಧಿಕಾರವಾಗಿತ್ತು. ಋಗ್ವೇದದೊಳಗಿನ ಉಲ್ಲೇಖ ಗಳಿಂದಲೂ 'ದೇವಜನನಿ' : ಪಾತ್ರ = ಚಮಸ ಭೋಗವು ಸಾಮೂಹಿಕ ಆಚರಣವಾಗಿದ್ದುದಾಗಿ ಕಂಡು ಬರುತ್ತದೆ ಮಳೆ-ಬೆಳೆ ಚೆನ್ನಾಗಿ ಬರುವುದಕ್ಕಾಗಿ ಈ ಸಮಯಯಚಾರವಿದ್ದುದರ ಸೂಚನೆಯೂ ಅಲ್ಲಿ ಉಂಟು ಪುರುಷಸೂಕ್ತದ 'ಯಜ್ಞೇನ ಯಜ್ಞಂ ಅಯಜಂತ ದೇವಾಃ' ಈ ಋಚೆಯಲ್ಲಿ ಉಕ್ತ 'ಯಜ್ಞ' ಕ್ರಿಯೆ ವೈಶ್ವಕ (: ಸಾಮೂಹಿಕ) ಸೃಜನದ ಸೂಚಕವಾಗಿದೆ. 'ಭಗ'-ವಂತ ಕೃಷ್ಣನು 'ಮಯಾ ಅಧ್ಯಕ್ಷೇಣ (ಅಧಿ-ಅಕ್ಷೇಣ) ಸೂಯತೇ ಸಚರಾಚರೌ' ಎಂಬಲ್ಲಿ, ಹಿಂದಿನ ಕಾಲದ ಸಾಮೂಹಿಕ ಸಮಯಾಚಾರದ ಸೂಕ್ಷ್ಮ ಚಿತ್ರವೇ ಉಂಟು. ಪುರುಷ : ರಾಜನ್ ವಸು (ಧಾ)-ದೇವ =ವಾಸುದೇವ ಅಧ್ಯಕ್ಷನು ! ಭೂ-ದೇವಿ 'ವಸುಂ'-ಧರಾ! ಆದಿಶೇಷ ಆಸ-ನಲ್ಲಿ!

ಆದರೆ, ಈ 'ಭೂ-ಚಕ್ರಾಧಿಪತ್ಯ ': ಕಂ-ಸುಖಂ; ಅನುಭವಿಸುವ 'ರಾಜನ್' ಶಕ್ತಿಯು, ಬೇಗನೆಯೆ ವಿಚ್ಛಿನ್ನವಾಗುತ್ತದೆ. ಅಂಗಾಂಗಗಳು, ಸ್ವತಂತ್ರ ಅಸ್ತಿತ್ವಕ್ಕಾಗಿ ಬಂಡು ಹೂಡುವುದಕ್ಕೆ ಪ್ರಾರಂಭವಾಗುತ್ತದೆ! ಇದರ ಸೂಚನೆ, ರಾಜನ ಅಷ್ಟ ಅಂಗಗಳಲ್ಲಿ 'ಪ್ರಧಾನ ಅಂಗ' ಯಾರು? ಎಂಬ ಕಲಹದಲ್ಲಿ ಉಂಟು. ನಗರ=ನಾಗರ ಸಂಸ್ಕೃತಿ ಅಥವಾ 'ಪುರ' ಸಂಸ್ಕೃತಿಯಲ್ಲಿ ಇಡೀ 'ಪುರ'ದ ಅಧಿಕಾರ 'ಕುಲ'-ಪತಿ=ಮಹಾಕುಲ ತ್ವಷ್ಟಾರನಾಗನದೇ.[೧೭] ಅವನೇ ಸರ್ವಂ ವೃತ್ವಾ (Cover ಮಾಡಿ) ಅತ್ಯತಿಷ್ಠತ್. ಇದು ಸರಿಹೋಯಿತು. ಆದರೆ ಪ್ರಧಾನಾಂಗ ಯಾರು? ಎಂಬ ಕಲಹ ಆರಂಭವಾಗುತ್ತದೆ! 'ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ' ಎಂಬ ಕಾಲ-ಪರಿಸ್ಥಿತಿ

ಸನ್ನಿಹಿತವಾಗುತ್ತದೆ! ಈ ಹಂತದ ಸಾಂಸ್ಕೃತಿಕ ಸ್ಥಿತ್ಯಂತರದಲ್ಲಿ 'ನಾಗ'ಲೋಕವು, 'ವಸನ' ತಿಳಿದ ಬಳಿಕ ಅಧೋಭಾಗವಾಗಿ ಅದೃಶ್ಯವಾಗುತ್ತದೆ. 'ಅಪರ್ಣಾ'ದೇವಿ ಯುಗ, ಭಗ-ವತೀ ಅನುಗ್ರಹದ ಯುಗ ಹೋಗಿ; ಭಗ-ವಂತ: ಸಂತನು ಆಳುವ ಶಕ್ತಿಯಾಗುತ್ತಾನೆ. 'ಪುರೀಶಯ' - 'ನವದ್ವಾರ' ಪುರಗಳ ಸ್ವಾಮಿತ್ವ=ಗಣ-ಪತಿ ಪದಸ್ಥ ನಾಗನದೇ ಆಗಿದೆ. 'ಗಂ' : 'ಗಣಪತಯೇ ನಮಃ', 'ಗಣ-ಪತಿ' 'ಆದಿದೇವ' < ಎಂದರೆ ಆದಿಶೇಷನೇ ಆದ : ಗಂ; ಕಂ ಬೀಜಾಕ್ಷರದಿಂದ ನಿರ್ಮಿತ ಗಂಗಾ=ಅಂಬಿಕಾದೇವಿಯ ಮೈಮಣ್ಣಿನಿಂದ ಆದ ಕುಮಾರ! 'ಅದಿತಿ' ಸಂಪ್ರದಾಯದ ದೇವರು. ಚತುರ್ಥಿ, ಚಂದ್ರನ ಪ್ರಿಯತಿಥಿ. ಆದರೆ, ಇವನ ಚಂದ್ರತ್ವ ಮರೆಯಾಗಲು, ಚಂದ್ರದ್ವೇಷದ ಕಥೆ ಹುಟ್ಟಿಸಲಾಗಿದೆ! ಆದರು, ಭಾಲ (: ಬಾಲ) ಚಂದ್ರೋ ಗಜಾನನಃ ಎಂಬ ಶ್ಲೋಕವೂ ಇದೆ! ಈ ಗತ್ತುಗಾರಿಕೆಗೆ ಕಾರಣವಿದೆ, ಇವನೂ ಸರ್ಪದೇವನೇ! 'ಇಲಿ' ಈ ದೇವನ ವಾಹನ! 'ಹೇರಂಬ'=ಮಹಿಷನೆಂಬ ಪರ್ಯಾಯನಾಮ ಇವನಿಗೆ. 'ಮಹಿಷಃ ಮೃಗಾಣಾಂ' ಎಂದು, ಸೋಮನಾಮದ ಪ್ರಚ್ಛನ್ನ ಚಂದ್ರನ ಸ್ತೋತ್ರವಿದೆ! ಕೋಣ ಅಪಾಂನಪ್ತ್ರ =ಸರ್ಪ ! ಆದರೆ 'ಹಿರಣ್ಯಗರ್ಭ'=ಕಂ-ಸುಖಂ ಸೃಜನ ಶಕ್ತಿಗೆ, ತನ್ನ 'ಗಣಪತಿ' ಪಟ್ಟಕ್ಕೆ ರಾಜನ್ ಆಗುವ ಸ್ಥಾನಕ್ಕೆ ಪ್ರಧಾನ ಅಂಗ ಪದವಿಗೆ ಎರವಾಗುವ ಕಾಲ ಬಂತು. ಸಾಮಾಜಿಕ ಸಮಷ್ಟಿಯ ಪ್ರಜ್ಞೋದಯವಾಗಿ! 'ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ' ಎಂದು ಒಪ್ಪದಿರಲು ಅಶಕ್ಯವಾಗುವ ಹೊತ್ತು ಬಂತು!

'ಗಣ-ಪತಿ' : ಪುರುಷ; ಗಣ=ಪಶು; ಈ 'ಸತಿ-ಪತಿ ಭೂಮಿಕೆಯ ಮಧು-ರ ಭಾವದ, ಈ ಉಪಾಸನಾ ಸಂಪ್ರದಾಯದ ಬೇರುಗಳು 'ವೃತ್ರ' ಸಂಪ್ರದಾಯದ ಮೂಲ ಭೂಮಿಕೆಯಲ್ಲಿ ಕಾಣದೊರೆಯುತ್ತವೆ. 'ವೃತ್ರ': ಅಹಿಯು, ಜೀವನ ಜಲ=ಪ್ರ-ಲಯಕ್ಕೆ ಕಾರಣನು ಅಥವಾ ಇವನು ಜೀವನ ಜಲ ನಿರೋಧಕನು-ಶೋಷಕನೂ ಅಹುದು. ಅಲ್ಲದೆ, ವೃತ್ರನು ಪ್ರಕಾಶದ ಶತ್ರುವು. ವೃತ್ರನು ಕಗ್ಗತ್ತಲೆಯನ್ನು ಉಂಟುಮಾಡುವ ಅಸುರ ಶಕ್ತಿ. ಅಹಿ-ಸಂಹಾರಕನೆಂಬ ಇಂದ್ರನು ಇಲ್ಲವಾದರೆ ಬಾಳಿನಲ್ಲಿ ಕಗ್ಗತ್ತಲೆಯು ಆವರಿಸುತ್ತದೆ. 'ವೃತ್ರ' ಅಹಿಯನ್ನು ಸಂಹರಿಸಿ ಭೂಮಿಗೆ 'ಬೆಳಕು' (: ಜೀವನ) ದೊರೆಯುವಂತೆ ಮಾಡುವ ಶಕ್ತಿಯೇ ಅಹಿಜಿತ್ ಇಂದ್ರ ಎಂಬ ಸಾಂಕೇತಿಕ ಪ್ರತಿಮೆ. ಈ ನಾಗಸ್ಸಂಸ್ಕೃತಿಯಲ್ಲಿ ಇದನ್ನು ವಿಕೃತಗೊಳಿಸಲಾಗಿದೆ. ಸರ್ಪಪೂಜೆ ಅಬಾಧಿತಸಾಗಲು ಗ್ರೀಕಿನ ಪವಾಡ ಕಥೆಗಳಲ್ಲಿ ಬರುವ ಏಕಾಕ್ಷ : ಭಾಲ ಲೋಚನ, ಸೈಕ್ಲೋಪಸ್ ಸಂಪ್ರದಾಯದ ತುಲನೆಯಲ್ಲಿ ಇದು ಸ್ಪಷ್ಟವಾಗುತ್ತದೆ. ಭಾರತೀಯ ದಿವ್ಯಾಧ್ಯಾತ್ಮದ 'ತುರೀಯೇಣ ಬ್ರಹ್ಮಣಾ', ದಿವ್ಯಚಕ್ಷುತ್ವ ಪಡೆದು, 'ಭಗ'ವಂತ ಪದಕ್ಕೇರುವ ದಿವ್ಯಚಕ್ಷು ಸಂಪ್ರದಾಯವು, ಸೈಕ್ಲೋಪಸ್ ಪಂಥವನ್ನೆ ಪೂರ್ಣ ಹೋಲುತ್ತದೆ. 'ತುರೀಯ' ಅವಸ್ಥೆಯಲ್ಲಿ, ಇದ್ದು ಬ್ರಹ್ಮಾನಂದಿಗಳಾಗುವ ಈ ಸಂಪ್ರದಾಯವು ನ-ಚಿಕೇತ : ಸ್ಥಿತ-ಪ್ರಜ್ಞರದು ಇರಲೇಬೇಕಾಗುತ್ತದೆ. ಇವರು 'ನಾಂತಃ ಪ್ರಜ್ಞಃ ನೋ ಬಹಿ ಪ್ರಜ್ಞಃ' ಎಂಬ ಹಾಗಿನ ನಿತ್ಯಯೋಗಸಾಧನೆಯಲ್ಲಿ ಇರುವವರು; ಬಾಹ್ಯ ಪ್ರಪಂಚ ಮರೆತವರು, ಮನೆಯಿರಲಾಗದು, ಎಂದೇ 'ಅನಿಕೇತಃ' 'ಸ್ಥಿರಮತಿಃ' ಎಂದು ಇವರನ್ನು ವರ್ಣಿಸಿದೆ, ಭಗ-ವಂತನ ಗೀತೆ.

ಗ್ರೀಕಿನ ಪವಾಡ ಕಥೆಯ ಒಡೆಸಿಸ್, ಪ್ರಯಾಣದಲ್ಲಿರುವಾಗ 'Land of Lotus eaters' (ಪುಂಡರೀಕ-ಮಧುಪಾನಾಸಕ್ತರು ಅಥವಾ ಭ್ರಮರಾಂಬಾ ಉಪಾಸಕರು) ಇರುವ ಒಂದು ಭೂಪ್ರದೇಶಕ್ಕೆ, ತಾನು ಬಂದಿರುವುದಾಗಿ ಅವನಿಗೆ ಗೊತ್ತಾಯಿತಂತೆ! ಈ ಉಪಾಸನೆಯು ಆ ಸಾಧಕರಿಗೆ ಮನೆಯನ್ನೂ ಮರೆಯಿಸಿತ್ತು (Whose fruit makes a man forget about home). ಗ್ರೀಕಿನಲ್ಲಿ ಈ ಸಾಧನಾ ಯೋಗವು ಅನೇಕರನ್ನು ಮರುಳುಗೊಳಿಸಿತ್ತು. (ultimate madness for Greeks!). ಜೀವನದ ಸಾರ್ಥಕ್ಯವೇ ಇಲ್ಲಿ ಉಂಟೆಂಬ ನಂಬಿಕೆ ಪ್ರಭಾವಶಾಲಿಯಾಗಿತ್ತು.[೧೮] ಹೋಮರ್ ಕವಿಯ ಒಡೆಸಿಸ್ ವೀರನು, ಈ ಏಕಾಕ್ಷ : ಭಾಲಲೋಚನನ್ನು ಸಾಂಕೇತಿಕವಾಗಿ ಒಬ್ಬನನ್ನು ಕೊಂದುಬಿಟ್ಟ ವೀರಗಾಥೆ ಯುರೋಪಿನಲ್ಲಿ ಲೋಕಪ್ರಿಯವಾಗಿದೆ. ಆದರೆ ಇಂದಿನ

ಋಗ್ವೇದ ಸಂಹಿತೆಯೊಳಗಿನ ಇಂದ್ರನು ಏಕಾಕ್ಷ-ಸರ್ಪಗಳನ್ನು, ಅವರ ಪುರಗಳನ್ನು, ಶಿಶ್ನೋ ದೇವರನ್ನು ಯತಿಗಳನ್ನು ನಾಶಮಾಡುತ್ತಿದ್ದನೆಂಬ ಅಪರಾಧಕ್ಕೆ ಅವನ ತೇಜೋವಧೆ ಆಗುತ್ತದೆ. ರಾಮಾಯಣಾದಿ 'ಸತ್- ಕಾವ್ಯಗಳಲ್ಲಿ ಆ ಬಳಿಕ ಅವನು ಬಹಿರಂಗವಾಗಿಯೆ ಖಲನಾಯಕನು ಆಗಿದ್ದು ಉಂಟು.

ಅಹಿಜಿತ್ ಅಥವಾ ವೃತ್ರಹನ್ ಎಂಬ ಇಂದ್ರನು 'ಸರ್ಪವಿದ್ಯೆ'='ದೇವಜನವಿದ್ಯಾ' ಶತ್ರುವು ಆಗಿದ್ದನೆಂದು ಸಿದ್ಧಪಡಿಸುವ ಆವಶ್ಯಕತೆ ತೋರದು. 'ದೇವಜನ' ವಿದ್ಯಾಪಾರಂಗತ ಶೃಂಗಿ (: ಸರ್ಪ) ಮುನಿ, ದಶರಥನಿಗಾಗಿ ಪುತ್ರಕಾಮೇಷ್ಠಿ ಯಜ್ಞ ಜರುಗಿಸಿ, ಭೂಲೋಕದ ಉದ್ಧಾರಕ್ಕಾಗಿ ಶ್ರೀರಾಮಚಂದ್ರನ ಅವತಾರಕ್ಕೆ ಕಾರಣನಾಗಿಲ್ಲವೆ? ಈ ನಡೆವಳಿ, ಹಿಂದಿನ ಯುಗದಲ್ಲಿ ಮೊದಲು, ಸಮ್ರಾಟ್: 'ಚಕ್ರ'ವರ್ತಿಗಳ ಹಾಗೂ ಬಳಿಕ ಗುರು-ಪುಂಗವರ ವಿಶೇಷ ಹಕ್ಕೇ ಆಗಿತ್ತು. ಭಾರತದಲ್ಲಿ - ಇಜಿಪ್ತಿನಲ್ಲಿ ಅಥವಾ ಸುಮೇರು, ಅಸ್ಸೀರಿಯದಲ್ಲಿ ಮಾತ್ರವಲ್ಲ, ಯುರೋಪಿನಲ್ಲೂ, ರಾಜಪಟ್ಟಕ್ಕೆ, ಗುರು-ಪೀಠಕ್ಕೆ ಇಂತಹ 'ಕಸಿ' ಮಾಡಿದ ಸಂತತಿಯೆ ಶ್ರೇಷ್ಠವೆಂಬ ನಂಬುಗೆಯೂ ಒಂದು ಕಾಲಕ್ಕೆ ಅಲ್ಲಿ ಪ್ರಚಲಿತವಿತ್ತು. ಈ ಹಿನ್ನೆಲೆಯಲ್ಲಿ ಆಧುನಿಕ ಮಾನವ ಶಾಸ್ತ್ರಜ್ಞರು, 'ಸಹಯಜ್ಞಾಃ ಪ್ರಜಾಃ, ಸೃಷ್ಟಿಸುವ ಪ್ರಾಚೀನ ನಡೆವಳಿಯನ್ನು ಕೇವಲ 'ಸಫಲೀಕರಣ' ಸಂಪ್ರದಾಯ (Fertility cult) ಎಂದು ಹೇಳುವಲ್ಲಿ ಈ ನಡೆವಳಿಯೊಳಗಿನ ಇನ್ನೊಂದು ಮೌಲಿಕ ಸತ್ಯಾಂಶವು ಕಣ್ಣಳತೆಯಲ್ಲಿ ಬರದೆ, ಹೊರಗೇ ಉಳಿಯುತ್ತಿದೆ.

ಆಧುನಿಕ 'ಸುಪ್ರಜಾ-ಜನನ'ಶಾಸ್ತ್ರ (Eugenics) ಎಂದು ಹೇಳಲಾಗುವ ಈ ವಿಚಾರದ ಬೇರುಗಳು, 'ಸುಫಲೀಕರಣ' ಸಂಪ್ರದಾಯ ಎಂದು ಬಗೆಯಲಾಗುವ ಪಂಥದಲ್ಲಿಯೇ ಉಂಟು. ಈ ಸಂ-ಗತಿ, ಋಗ್ವೇದದ ಪರಿಭಾಷೆಯಲ್ಲಿ ಸುಸ್ಪಷ್ಟವಾಗಿ ಕಾಣುವಂತಿದೆ. 'ಅದಿತಿ' ಸಂಪ್ರದಾಯದ ದೇವಾರ್ಪಿತ 'ಕಂ'= ಕನ್ಯಾಮಣಿ (ನಾರ:) ಆಪ-ಪುತ್ರಿ ವಸಿಷ್ಠ, ಅಗಸ್ತ್ಯನಂತಹ ಅಮೋಘ ಪವಾಡ ಶಕ್ತಿಯ ಯಾತು-ಪತಿಗೆ ಜನ್ಮಕೊಟ್ಟ 'ದೇವಜನನಿ'ಯೆ ಅಲ್ಲವೆ? ಪುರೂ-ರವ-ಊರ್ವಶೀ ಸಂಬಂಧದಲ್ಲಿಯೇ ಭಾರತೀಯ ಅರಸುಕುಲ ಅಂಕುರಿಸಿದ್ದು. ಯುರೋಪಿನಲ್ಲಿ ಈ ಸಂಪ್ರದಾಯವು ಪ್ರಚಲಿತವಿದ್ದುದು ಪ್ಲೇಟೋನ 'ರಿಪಬ್ಲಿಕ್' ಗ್ರಂಥದಿಂದ ಬೆಳಕಿಗೆ ಬರುತ್ತಿದೆ. ಆದರ್ಶರಾಜ್ಯದ ತನ್ನ ಸಂಕಲ್ಪನೆ (Concept) ವಿವರಿಸುವಾಗ ಪ್ಲೇಟೊ ಅಲ್ಲಿ 'ಸುಪ್ರಜಾ ನಿರ್ಮಾಣ'ದ ಒಂದು ಯೋಜನೆಯನ್ನು (Plan) ಹೇಳುತ್ತಾನೆ. ವಿರಾಗಿಗಳೂ ಅನಿಕೇತರೂ ಧನಕನಕದ ಬೆಂಬತ್ತಿ ಸಂಸಾರದಲ್ಲಿ ಹೊರಳಾಡುತ್ತಿರುವವರು, ಸ್ಥಿರಮತಿಗಳು, ಸಂಯಮಿಗಳು ಆದ ಲೋಕ-ಹಿತೈಷೀ ವಿರಕ್ತರಿಂದ ರಾಜ್ಯದ ಆದರ್ಶ ಪ್ರಜಾನಿರ್ಮಾಣದ ಯೋಜನೆಯೊಂದು ಅತ್ಯವಶ್ಯ ಎಂದು ಆ ಮಹಾಮೇಧಾವಿ ಪ್ರತಿಪಾದಿಸಿದ್ದಾನೆ. ಈ ವಿಚಾರವು ಪ್ಲೇಟೊನಿಗೆ ಹೊಳೆದ ಅಥವಾ ಅವನೆ ಮೊದಲಬಾರಿ ಕಲ್ಪಿಸಿದನೆಂಬ ಗ್ರಹಿಕೆಗೆ ಅವಕಾಶವಿಲ್ಲ. ಹಿಂದಿನ ನಡೆವಳಿಯ-ಶ್ರದ್ಧೆಯ ನೂತನೀಕರಣವಿದು. ಪ್ಲೇಟೋನು ಜನಸಾಮಾನ್ಯರೊಳಗಿನ ಅನೇಕ ಪ್ರಾಥಮಿಕ ಸ್ವರೂಪದ ಗ್ರಹಿಕೆಗಳನ್ನು ಎತ್ತಿ, ತನ್ನ ಪ್ರತಿಭೆಯಿಂದ ಅವನ್ನು ಸ್ವೀಕಾರಾರ್ಹವೆನಿಸುವಂತೆ ಸುಂದರವಾಗಿ ಪ್ರತಿಪಾದಿಸಿರುವುದನ್ನು ಅಲ್ಲಿಯ ಸಂಶೋಧಕರು ಬೆಳಕಿಗೆ ತಂದಿದ್ದಾರೆ. ಪ್ಲೇಟೋನ ಈ ವಿಚಾರ: Old wine in a new botle ಆಗಿದೆ ಎಂದು ಹೇಳುವವರು ಇದ್ದಾರೆ. ಪ್ರಸ್ತುತ ಭಾರತೀಯ 'ನಿಯೋಗ'ವು ಪ್ಲೇಟೊ ಹೇಳಿರುವ 'ದೇವಜನ' ನಿರ್ಮಾಣದ ತಂತ್ರವೇ ಆಗಿದೆ.

ಅಂದು ರಾಜನ 'ಚಕ್ರವರ್ತಿ' ಪಟ್ಟ, ತಲೆಯಾಳು ವಸಿಷ್ಠ (=ವಸುಗಳಲ್ಲಿ ಶ್ರೇಷ್ಠ) ಎಂಬ ಸಾಮಧಾರಣ ಮಾಡಿದ ಗುರುವಿನ ಕಡೆಗೆ ಬರುತ್ತದೆ! 'ನಾಲಗೆ' (=ನಾಳಿ) ಪ್ರಧಾನಾಂಗವಾಗಿ ಸರ್ಪಶಕ್ತಿ ಪಡೆಯುತ್ತದೆ! ಇದೇ 'ಏಕೇಷ'ವಾಗುತ್ತದೆ; ನರ-ನರರಥ, ಯಮನತ್ತ ಕೊಂಡೊಯ್ವ ವಾಕ್ (:ಅತ್ರಿ,) ಶಕ್ತಿಯು ನಾಳಿ! ಶಿರಸ್ಸಿನೊಳಗಿನ ಸಹಸ್ರಾರ (:ಮಿದುಳು ಬುದ್ಧಿಯ ಸ್ಥಾನ): ಪುಂಡರೀಕ ಕಮಲವಾಗಿ, ಮೂಲಾಧಾರ ಚಕ್ರ = ಸರ್ಪ (= ಪ್ರಧಾನಾಂಗ) = ದೇಹಕುಂಡಸ್ಥ ಸರ್ಪ ಮೇಲೆದ್ದು ತಲೆಯೇ ಸರ್ಪದ 'ಪುರ'ವಾಗಿ ಪರಿಣಮಿಸುತ್ತದೆ ಯೋಗವಿದ್ಯೆಯಲ್ಲಿ! ಹೀಗೆ, ಭಾರತೀಯ ಜನಗಣದ 'ಗಣ-ಪತಿ' ; ಗುರುವರ್ಗ, 'ದೇವಜನ' ಸರ್ಪವಿದ್ಯಾ ಪರಿಣತರಾಗಿ ಪ್ರಪಂಚಕ್ಕೆ ಯೋಗದೀಕ್ಷೆ ಕೊಡುವ 'ನಾಥ' ಸಿದ್ಧರು, ಸಿದ್ಧನಾಥರು ಆಗಿ ಭಾರತಮಾತೆಯ

ಕೀರ್ತಿಯನ್ನು ಅಮರವಾಗಿಸಿದ್ದಾರೆ. ಈ ಗುರು ಸಂಪ್ರದಾಯದಲ್ಲಿ ಸ್ಥೂಲವಾಗಿ ಎರಡು ಪ್ರಕಾರವಾಗುತ್ತವೆ : ಎಲ್ಲರೂ ವಿರಕ್ತ ಪಂಥೀಯರು, ಪರಲೋಕನಿಷ್ಠರೇ. ಆದರೂ ಈಶೋಪನಿಷತ್ತು ಹೇಳುವಂತೆ ಕೆಲರು 'ಸಂಭೂತಿ' (Becoming) ಶಕ್ತಿ ಉಪಾಸಕರು, ಇನ್ನು ಕೆಲರು ಅ-ಸಂಭೂತಿಯನ್ನು ಎಂದರೆ ನಿತ್ಯ ಅ-ಭು (Being) ಶಕ್ತಿ ಉಪಾಸಕರು. ಭಾರತದಲ್ಲಿ ಈ ಎರಡನೆಯ ಪಂಥೀಯ ವೈಚಾರಿಕ ಪ್ರಭಾವವೇ ವಿಶೇಷವಿರುವುದು ಸ್ಪಷ್ಟವೆ. ಇದೆ, ಈಜಿಪ್ಟಿನಲ್ಲಿ, ಸಂಭೂತಿ ಉಪಾಸಕ ಪಂಥದ ಪ್ರಭಾವದಿಂದಾಗಿ, ಅಲ್ಲಿ ವೈಭವಶಾಲೀ ಪಿರಾಮಿಡ್ ಸಂಸ್ಕೃತಿ ಕಾಣಿಸಿಕೊಂಡಿತು. ಆದರೆ, 'ರಾ-ಕಾ' ಶಕ್ತಿ, ಸಾರ್ವಭೌಮ ಶಕ್ತಿಯಾಗಿ ಹೊರಸನಿಗೇ ಉಳಿಯದೆ, ಪಿಂಡ ಬ್ರಹ್ಮಾಂಡ ನ್ಯಾಯದಿಂದ, ಪ್ರತಿವ್ಯಕ್ತಿಯೂ 'ಪರಬ್ರಹ್ಮ'ನಾಗುವ ದಾರಿಗೆ ಹೊರಟದ್ದು ಅಂತ್ಯದಲ್ಲಿ ಕಾಣುತ್ತದೆ.

ಈಜಿಪ್ಟ್‌ನಲ್ಲಿ ಸಹ ಆ ಸಂಸ್ಕೃತಿಯ ಮೋಕ್ಷಕ್ಕೂ 'ರಾ-ಕಾ' ಉಪಾಸನೆ, ಕಂ ಸುಖಂ ಮಾರ್ಗವೇ ಕಾರಣವಾಗಿರುವ ಶಕ್ಯತೆ ಫ್ರಾಂಕ್‌ಫೋರ್ಟ್ ಸೂಚಿಸಿದ್ದು ಹೀಗೆ:

> The priesthood of Egypt was still growing in power and control, and demanded blind conformance to the system that gave the temples power and control, individual man was caught in a strait jacket of rites and obligations and his only comfort lay in soothing words and distant promises. He turned from a lusty appreciation of this life to means of escape from his life [೧೯]

ಬಳಿಕ 'ಕ' ದೈವತದೊಡನೆ, ದೇಹ ದಹನಮಾಡಿಕೊಳ್ಳುವಷ್ಟು ನಿರಾಶಾಮಯ ಪರಿಸ್ಥಿತಿ ಜೀವನದಲ್ಲಿ ಎಲ್ಲೆಲ್ಲೂ ಕಾಣತೊಡಗುತ್ತದೆ. 'Ra-is-my-ka'; 'Path is-~~my-ka~~' ಎಂಬೀ ಬಗೆಯ ಮಾತುಗಳು ಇಜಿಪ್ಟಿನಲ್ಲಿ 'ರಾ, ಕಾ' ಶ್ರದ್ಧೆಯು ಅದೆಷ್ಟು ಮೂಲ ದೃಢವಾಯಿತು ಎಂಬುದನ್ನು ನಿದರ್ಶನಕ್ಕೆ ತರುತ್ತಿವೆ.

'ಏಕಂ' ಸಂತ ತತ್‌ತ್ವವನ್ನು, ಅನೃತ ತತ್ ತ್ವ ಎಂದು ಹೇಳಿದ್ದಕ್ಕೆ ವಸಿಷ್ಠನ ಪಿತ್ತತಲೆಗೇರಿ ಶಪಿಸಿದ್ದರ ವಿಚಾರ ಬಂದಿದೆ. 'ಏಕಂ' ಸ್ವರೂಪದ 'ಸತ್ಯ' ಸತ್ಯವೇ ಅಲ್ಲ; ಇದು 'ಅನೃತ' ಎಂದು ಪ್ರತಿಪಾದಿಸುವ ವೈಚಾರಿಕ ಭೂಮಿಕೆಯ ಋಗ್ವೇದ ಪಾಠವು ಬೇರೊಂದು ಇರಬೇಕೆಂದು ಧ್ವನಿತಪಡಿಸುವ ಪ್ರಮಾಣಗಳು ಈ ಸಂಹಿತೆಯಲ್ಲಿಯೇ ಅಲ್ಲಲ್ಲಿ ಉಂಟು. 'ಏಕಂ' ಇದು ಸತ್-ಸತ್ಯವೇ ಅಲ್ಲ, ಎನ್ನಲು ಕಾರಣಗಳಿವೆ. ನಿಜವಾಗಿ ಈ 'ಏಕಂ' ಅರ್ಥವಿಹೀನ, 'ಏಕ' (೧) ಈ ಸಂಖ್ಯೆ ತನ್ನ ಹಿಂದೆ O (ಶೂನ್ಯ) ಹಾಗೂ ತನ್ನ ಮುಂದಿನ ಕ್ರಮಾಂಕ (೨,೩) ಅಪೇಕ್ಷಿಸುತ್ತದೆ. ಏನೂ ಹಿಂದಿಲ್ಲ; ಮುಂದೆಯೂ ಇಲ್ಲ! ಇಂತಹ 'ಏಕಂ' ಎಂಬುದು ಜಾದು < ಯಾತು (magic) ಸಂಖ್ಯೆ . ಇದು ಯಾತು ಇದ್ದುದೂ ಸುಳ್ಳಲ್ಲ; ಸ್ತ್ರೀ+ಪುರುಷ ಈ ಎರಡೂ ಶಕ್ತಿಗಳ ಏಕಾತ್ಮಕ ಆದರ್ಶ ಸ್ಥಿತಿಯನ್ನು : (ವಾಗರ್ಥಾವಿವ ಸಂಪೃಕ್ತೌ) ಜಗತಃ ಪಿತರೌ ಈ ದ್ವಿವಚನವನ್ನು ಏಕವಚನ ರೂಪದಲ್ಲಿ ನಂಬ ಹೇಳುವಲ್ಲಿ ಮೋಸವಿದೆ! ಮಾತಿನ ಈ ಮೋಡಿಕಾರಿಕೆಯು ಇಂದಿನ ಋಗ್ವೇದಪಾಠದ ವೈಶಿಷ್ಟ್ಯವಾಗಿದೆ. ಈ ಸಂಹಿತೆಯ ಮರಿಗಳಾದ ಉಪನಿಷತ್ತು, ಪಂಚಮವೇದ: ಮಹಾಭಾರತ, ವಾಲ್ಮೀಕಿಕೃತ ರಾಮಾಯಣ ಇವುಗಳಲ್ಲಿ ಇರುವ ಅಹಿಮಾಯಾ ಸಂಮೋಹಕತೆ, ಜನ್ಮತಃ ಮನುಜರಲ್ಲಿರುವ ಸಮಾಜ ಸಮಷ್ಟಿಯ ಪ್ರವೃತ್ತಿಪರ ಜೀವನ ದೃಷ್ಟಿಯನ್ನೇ ವಿಕೃತಗೊಳಿಸಿ, ಭಾರತೀಯರನ್ನು ಮೋಕ್ಷ ಸಿದ್ಧಿಯದೆಂಬ ಮೃತ್ಯುಪೂಜೆಗೆ ಪ್ರೇರಿಸುತ್ತಿದೆ!

ಅರ್ಥಕ್ಕೆ ಎಟುಕದ್ದನ್ನು ವಿಶ್ವಸ್ಥ ನಿಯಮಕ್ಕೆ ಒಗ್ಗದನ್ನು 'ಸತ್ಯ' ಎಂದು ಪೂಜಿಸುವಲ್ಲಿ ಮಾನವ ಜೀವನಕ್ಕೇ ಗಂಡಾಂತರವಿದೆ. ಸತ್ಯವೇ ದೇವರು : ದೇವರೇ ಸತ್ಯ ಎಂದರೇನು? ವಿಶ್ವಸ್ಥನಿಯಮ : ಋತ ಆಗಿದೆ. ಭೌತಸ್ವರೂಪದ ನಿಯಮರೂಪ ಈ ಋತವು ಪ್ರಕೃತಿಧರ್ಮ ವಾಸ್ತವ: ಸತ್ಯದ ದರ್ಶನ ಮಾಡಿಸುತ್ತದೆ. ಸಾಂಸ್ಕೃತಿಕ

ಜೀವನ ಪಾತಳಿಯಲ್ಲಿ ಸಮಯ : ಆಚಾರದ-ವಿಚಾರ ಶಿಷ್ಟಮಾನ್ಯ ಅರ್ಥವೂ: ನಿಯಮಾನುಸಾರಿಯೇ ಇರಬೇಕಾಗುತ್ತದೆ. ಇದು ಸಾಂಸ್ಕೃತಿಕ ಋತ : ಸತ್ಯ. ಆದರೆ, ಸಮಷ್ಟಿಯು ಆಚರಿಸುವ 'ಸಮಯ' ಋತಾಧಿಷ್ಠಿತ ಆಕೃತಿಯಾಗಿರದ ಅನುಭವವು, ಸಮಕಾಲೀನ ಭ್ರಷ್ಟಾಚಾರಗಳ ಮೂಲಕ ಜೀವನದಲ್ಲಿ ಬರತೊಡಗುತ್ತವೆ. ಇದು 'ಸಮಯ'ವು ಬದಲಾಗುವ ಹೊತ್ತು ಬಂದುದನ್ನು ಸೂಚಿಸುತ್ತದೆ. ಜೀವನವು ಒಂದು ಪ್ರಯೋಗ . ಬಾಳಿನಲ್ಲಿ ಸಮಷ್ಟಿಸ್ವರೂಪದ ಸಹ ಜೀವನಕ್ಕೆ 'ಸಂಗಚ್ಛಧ್ವಂ' ಸ್ವರೂಪದ ಇರವಿಗೆ ಪೋಷಕವಾಗುವ ಆ 'ವಿಶಿಷ್ಟ ಸಮಯಸ್ಥ' ವೈಚಾರಿಕ ಆಕೃತಿ, ಋತಾಧಿಷ್ಠಿತ ಸತ್ಯದ ಸೂಚಕ ಪ್ರಜ್ಞಾವಿಕಾಸದೊಡನೆ, ಅಂದಿನ ಸಮಯ : ಆಚಾರ ಮಾರ್ಪಡಲೇ ಬೇಕಾಗುತ್ತದೆ. ಆದರೆ, ಏಕಂ: ಭೂಮಿಕೆಗೇ ಅಂಟಿಕೊಂಡಲ್ಲಿ ಅದು ಪ್ರಳಯಕ್ಕೆ ಆಮಂತ್ರಣವಾಗದೆ ಇರದು.

'ಏಕಂ' : ಸತ್ ಇದು ಅಪ : ರಸ: ರೇತಸತ್ಯ. ಜೀವನ-ಮರಣದ-ಬೀಜವೃಕ್ಷ ನ್ಯಾಯದ-ವಿಷಚಕ್ರ; ವಿಷೂಚೀಗತಿ. ಋಗ್ವೇದದಲ್ಲಿಯೆ ಋತ: ಸತ್ಯದಂತೆ, ಇನ್ನೂ ಉಳಿದಿರುವ ಕೆಲವೊಂದು ಮೌಲಿಕ ಶಬ್ದಪ್ರತಿಮೆಗಳಿವೆ. ಅವುಗಳಲ್ಲಿ 'ಸಧ್ರೀಚೀ'ಗತಿ, ಈ ಶಬ್ದಪ್ರತಿಮೆಯು ಒಂದು. ವಿಷೂಚಿ, ಹುಣ್ಣಿಮೆ ಅಮಾವಾಸ್ಯೆಗಳ ಚಕ್ರನೇಮಿಕ್ರಮ ವಿಚಾರ ಪದ್ಧತಿ. ಆದರೆ, ಸಧ್ರೀಚೀಗತಿಯು ಗುರಿಯತ್ತ ಹೊರಟ ಜೀವನ ರೀತಿಗೆ ಸಂಬದ್ಧವಿದೆ. ವಿಷೂಚೀಗತಿಗೆ ಬಾಳಿನಲ್ಲಿ ಅರ್ಥ : ಗುರಿ, ನಿಯಮ ಯಾವುದೂ ಬೇಕಿಲ್ಲ! ಅದು ಸರ್ವತಂತ್ರ ಸ್ವತಂತ್ರ ಸ್ವೈರ ಸರ್ವ : ವೃತ್ರಶಕ್ತಿ. ಆದರೆ, ಸಧ್ರೀಚೀಗತಿಯ ಅಸ್ತಿತ್ವವನ್ನು ಲೆಕ್ಕಕ್ಕೆ ಹಿಡಿಯದೆ ಇದ್ದರೆ, ವಿಕಸನದ ಕಡೆಗಿನ ವಿಶ್ವದ ಪ್ರವೃತ್ತಿ (: Expanding Universe) ಅರ್ಥವೇ ಆಗಲಾರದು. ವಿಶ್ವಸ್ಥ ಸಧ್ರೀಚೀಗತಿಯ ಆಗಾಮೀ ಅರ್ಥ : ನಿಯಮವನ್ನು ಅರಿತು, ಬಾಳಿನೊಳಗಿನ ಅರ್ಥ : ಮೂಲ್ಯ: ಸೌಂದರ್ಯ ರಕ್ಷಣೆಗಾಗಿ ಬಾಳ ಹಗಲನ್ನು ಇರುಳು ಆಗಿಸಲು, ಅಂಕುಡೊಂಕು ಮಾರ್ಗದಿಂದ ಒಳನುಗ್ಗಿ ಬರುವ ವೃತ್ರ : ಅಹಿಯನ್ನು ಹೊಡೆಯಲು ಜಾಗೃತ ಪ್ರಜ್ಞರಾಗಿರಲು ಪ್ರೇರಿಸುವ ಮನು-ಜನ ಅಂತಃಶಕ್ತಿಯೆ ವೃತ್ರಘ್ನ ಇಂದ್ರಶಕ್ತಿ. ಆದರೆ, ಪ್ರಜಾಪ್ರಭುತ್ವದ ಸಂರಕ್ಷಣೆಗೆಂದು ಮುಂದಾಗುವ ಮಹಾವೀರ ನೆಪೋಲಿಯನ್, ತಾನೇ ಪಟ್ಟ-ಭೋಗಕ್ಕೆ ಮನಸೋಲುವುದು, ಸಾರ್ವಜನಿಕ ಹಿತದ ವಿಶ್ವಸ್ಥನಿಧಿ ತನ್ನ ಸಂತಾನದ ಕೈಯಲ್ಲೇ ಉಳಿಯಲೆಂದು ಹೊಂಚುಹಾಕುವುದು : Careerist ಆಗುವುದು. ಇದು, ಅಹಿಜಿತ್, ವೃತ್ರಘ್ನ ಇಂದ್ರನೇ ಭೋಗಿ=(ಸರ್ಪ)=ವೃತ್ರನಾದಂತೆ! ಹವ್ಯವಾಹನ ಜಾತವೇದ ಅಗ್ನಿಯು, ಅಪಾಂ ನಪಾತ್ ಸ್ವಯಂಭೂ ಸ್ಕಂಭದೇವನಾದಂತೆ! ಅರ್ಥ : ನಿಯಮ; ಸೌಂದರ್ಯ ದರ್ಶನ ಮಾಡಿಸುವ ಸವಿತೃವು 'ಕ' ದೇವತಾ ಪ್ರಜಾಪತಿ=ಪ್ರಸವಿತಾ ದೇವನಾಗಿ ಮಾರ್ಪಟ್ಟಂತೆ! ಆಗ ಸೂರ್ಯ=ಸರ್ಪ ಬೇರೆ ಅಲ್ಲ. 'ವೃತ್ರಾತ್ ಜಾತೋ ದಿವಾಕಾರಃ' ಎಂಬ ಅಥರ್ವವೇದಿಯ ಯಾತು: ಭಾನಾಮತೀ ಪ್ರಯೋಗ ಪ್ರಚ್ಛನ್ನವಾಗಿ ಋಗ್ವೇದದಲ್ಲಿಯೇ ಇದೆ, ಎಂಬುದಕ್ಕೆ ಬೇರೆ ಬಾಹ್ಯ ಪ್ರಮಾಣಗಳೂ ಬೇಕಿಲ್ಲ.

ಟಿಪ್ಪಣಿಗಳು

೧. Macdonell A.A.; ***Vedic Mythology*** P. 33
೨. ***ಋಗ್ವೇದ ಸಂಹಿತೆ*** I. ೭೯-೧
೩. ***ಅದೇ*** I. ೧೬೨
೩. ***ಅದೇ*** X ೧೧೨. ೫
೪. ***ಅಂಥೆಸ್*** P. ೪೩-೪
೫. Richord Payne Knight & T. Wright. ***Sexual Symbolism***, The Julian Press N. Y. , 1962
೬. ಎಚ್. ವೆಂಕಟರಾವ್ (ಸಂ) ***ಋಗ್ವೇದ ಸಂಹಿತೆ*** ಸಂಪುಟ IX. p. ೩೩೦
೭. ***ಋಗ್ವೇದ ಸಂಹಿತೆ*** V. ೪೦.೬

೮. Donald Meckenzie Egyptian Myth & Legnd, P. 87

೯. H. Frankfort ; ***Before Philosophy A Pelican Book***, ಮುಂ : P. 57

೧೦. ***Ibid*** p. 57

೧೧, Egyptian Myth & Legend L. p. 90

೧೨. Ibid, p. 92

೧೩. Dr. W. A, Brend, M. A. (Cantb.) M. D. B. Sc. (London). ***Sacrifice to Attice***, Pp. 107-108 ; 307

೧೪. ***ಋಗ್ವೇದ ಸಂಹಿತೆ*** X. ೩೬-೭

೧೫. Authors p. 20, 32

೧೬. Frankfort, ***Before Philosophy*** Pp. 214-15

೧೭. ***ಋಗ್ವೇದ ಸಂಹಿತೆ***. V, ೧೬೧-೧

೧೮. ***Mythologies of Ancient World***, P. 230

೧೯. Frankfortt, ***Before philosophy*** p. 129

ಇಂದಿನ ಸಂಹಿತೆಯೊಳಗಿನ ಭಗ್ನವೃತ್ರ : ಅಹಿ-ಹನ್

ಇಂದಿನ ಋಕ್‌ಸಂಹಿತೆಯು ಸೌರ ಸಂಪ್ರದಾಯದ ಪಾಠವಿರುವಂತೆ ಕಾಣುತ್ತದೆ. ಆದರೆ, ನಿಜವಾಗಿ ಇದು ಇಡಿಯಾಗಿ ಆಪ : ರಸ ಪಂಥೀಯ ಚಾಂದ್ರಸಂಪ್ರದಾಯದ ಯಾತುಪ್ರಧಾನ ಸೂಕ್ತಗಳ ಸಂಗ್ರಹವಾಗಿದೆ! ಇದು ಅಮಾವಾಸ್ಯಾ ಸಂಪ್ರದಾಯದ ಮೃತ್ಯುಪೂಜಕರ ಸಂಹಿತೆ. ಅ-ಸಂಭೂತಿ ಮಟ್ಟದ ಆ-ಭು (:ಅ-ಭವ) ತತ್‌ತ್ವದ ಸಾಕ್ಷಾತ್ಕಾರ ಮಾಡಿಸುವ ಸಂಹಿತೆ. ಇಂತಹ ಮಾಯಾ-ಶಕ್ತಿಯುತ ಸಾಹಿತ್ಯಕೃತಿ, ಜಾಗತಿಕ ಸಾಹಿತ್ಯದಲ್ಲಿಯೆ ಬೇರೊಂದು ಉಂಟೆ, ನಾನರಿಯೆ! ಋತ: ಸತ್ಯದ ಭೂಮಿಕೆಯ ಇಂದ್ರನ ತೇಜೋವಧೆಯ ಈ ಋಕ್ಕುಗಳೊಳಗಿನ ಮಾತಿನ ಮೋಡಿಯ ಯಾತು ಸ್ವರೂಪದ ಸಪ್ರಮಾಣ ವಿವರಣೆ ಈ ಪ್ರಕಟನೆಯ ಮೂರೂ ವಿಭಾಗಗಳಲ್ಲಿ ಬಂದಿದೆ.* ಇಬ್ಬಗೆಯ ಆರ್ಥದ ಈ ಸಂಹಿತೆಯಲ್ಲಿ ಒಂದೇದೈವತ ಎನಿಸುವಂತೆ ಎರಡು ಅಗ್ನಿಗಳು : ಹವ್ಯವಾಹನ, ಮತ್ತು ನಚಿಕೇತ: ಅ-ಬೋಧಿ 'ಯಜ್ಞ' : ಹವ್ಯವಾಹನ ಅಗ್ನ್ಯಾರಾಧನೆಯ-ಜಾತವೇದ ಅಗ್ನಿ ಆರಾಧನೆ ಮತ್ತು ನಚಿಕೇತ-ಅಬೋಧಿ ಅಗ್ನಿಕುಂಡ : ಯೋಷಾ ವಾ ಅಗ್ನಿಃ (Vestal Fire) ಮತ್ತು ಪುರುಷೋ ವಾ ಅಗ್ನಿಃ..... ಪ್ರಥಮಂ ಗರ್ಭಂ ದಧ್ರೇ ಆಪಃ ಸ್ವರೂಪದ ಪುರುಷ ಯಜ್ಞ ಹೀಗೆ ಇಬ್ಬಗೆಯ ದೈವತಮಂಡಲಗಳು ಇವೆ. ೧. ಸವಿತೃ ಸೂರ್ಯ, ಅಗ್ನಿ ಇಂದ್ರ ಮುಂ. ಹಾಗೂ ೨. ಚಾಂದ್ರ ಆಪ : ರಸ ಪಂಥೀಯ : ಅದಿತಿ, ಸರಸ್ವತಿ, ಅಂಭೃಣಿ, ದಕ್ಷ, ಪ್ರಜಾಪತಿ, ವಿಷ್ಣು, ರುದ್ರ ಮುಂ. ಇಬ್ಬಗೆಯ ನೇತಾರ ವರ್ಗ ೧. ಋಷಿ ಮತ್ತು ೨. ಮುನಿ; ಇಬ್ಬಗೆಯ ಜೀವನಾದರ್ಶಗಳು ೧. ವೈಶ್ವಾನರನ ಆದರ್ಶ : ಮತ್ತು ೨. ಪಿಂಡ ಬ್ರಹ್ಮಾಂಡ ಐಕ್ಯ ಆದರ್ಶ. ಇಬ್ಬರು ಗುರುಗಳು ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿ. ಇಬ್ಬಗೆ ತಾತ್ತ್ವಿಕ ಭೂಮಿಕೆ : ೧. ಋತಃ ಸತ್ಯ; ೨. ಏಕಂ: ಸತ್.

ಈ ಕ್ರಮದ ವೇದದಲ್ಲಿ ಇಂದ್ರರು ಇಬ್ಬರು ಉಂಟು! ಒಬ್ಬ ಇಂದ್ರನು ಸವಿತೃ :ಸೂರ್ಯನ ಪರ್ಯಾಯ ಪ್ರತಿಮೆಯಾದ ಇಂದ್ರ. ಇವನು ಅಹಿ=ವೃತ್ತಹಂತಕನು. ವೃತ್ರ : ಅಹಿ, ಕತ್ತಲೆಯ ಸಂಕೇತ; ಈ ಕಾರಣದಿಂದ ಸೂರ್ಯನ ಪರ್ಯಾಯ ಇಂದ್ರನು ಅಹಿ : ವೃತ್ರ (=ಕತ್ತಲೆಯ) ಶತ್ರು; ಇದರಲ್ಲಿ ವಕ್ರೋಕ್ತಿಯಿಲ್ಲ. ವೃತ್ರಹಂತಕ ಎಂಬಲ್ಲಿ ಸಹಜ ಔಚಿತ್ಯವಿದೆ. ಈ ಇಂದ್ರನು ಸುಮೇರು-ಅಕ್ಕಡ ದೈವತಕಥೆಯ ಪಿತೃಹಂತಕ ಎಂಕಿ=ಜ್ಞಾನ

---

* ಮೊದಲಭಾಗದ ಪ್ರಾರಂಭದಲ್ಲಿ ತಿಳಿಸಿರುವಂತೆ ನಾನು ಇಡಿಪುಸ್ತಕವನ್ನು ಏಳುಭಾಗಗಳಾಗಿ ವಿಂಗಡಿಸಿದ್ದೇನೆ. ಈ ಬರೆಹವು 'ಪರಿಶಿಷ್ಟ' ಭಾಗವೆಂದು ಹೆಸರಿಸಿ ಪುಸ್ತಕದ ಕೊನೆಗೆ ಸೇರಿಸಿದ್ದರು. ಆದರೆ, ಆರನೆಯ ಭಾಗದ ಕೊನೆಗೆ ಈ ಬರೆಹವನ್ನು ಸೇರಿಸಿದ್ದೇನೆ (ಸಂ)

ಮೂರ್ತಿ ಸಂಕೇತ ಹೋಲುತ್ತಾನೆ. ಸೋಮ>ಹೋಮ ಸಂಪ್ರದಾಯ, ಮತ್ತು ಭಾಷಿಕ ಆಕೃತಿ ಸುಮಾರಾಗಿ ಸಮಾನವೇ ಇರುವ ಅವೆಸ್ತಾದಂತೆ ಋಗ್‌ವೇದದಲ್ಲಿಯೂ ಪ್ರಕಾಶರೂಪ ದೈವತವೇ ಪ್ರಧಾನವಿರಬೇಕಿತ್ತು. ಅವೆಸ್ತಾದಲ್ಲಿ ಬಾಳಿನೊಳಗಿನ ಪ್ರಕಾಶರೂಪ ಕಲ್ಯಾಣಕಾರೀ ಶಕ್ತಿ ಅಹುರ್‌ಮಝ್ದ ಮತ್ತು ಬಾಳಿನೊಳಗಿನ ಕತ್ತಲೆಯ ಸ್ವರೂಪದ ದುಷ್ಟಶಕ್ತಿ ಅರ್ಹಿಮನ್ ಇವರ ಹೋರಟೆ ನಡೆದುದರ ವರ್ಣನೆ ಬರುತ್ತದೆ. ಕೆಲಕಾಲ ಕತ್ತಲೆಯು ಬೆಳಕನ್ನು ಸೋಲಿಸಿದರೂ ಕೊನೆಗೆ ಬೆಳಕಿಗೇ ಗೆಲುವು, ಎಂದು ಅವೆಸ್ತಾ ಹೇಳುತ್ತದೆ.

ಆದರೆ ಇಂದಿನ ಋಕ್‌ಸಂಹಿತೆಯ ಉದ್ದಕ್ಕೂ ಪ್ರಚ್ಛನ್ನವಾಗಿ ಸೌರತೇಜದ ಇಂದ್ರನ ತೇಜೋವಧೆಯಾಗುತ್ತಿರುವುದು ಪ್ರತೀತಿಗೆ ಬರುತ್ತಿದೆ:

i) ಗರ್ಭಸ್ಥ ವಾಮದೇವನ ಮಾತುಗಳು. ಈ ಇಂದ್ರನು ಸವಿತೃ : ಸೂರ್ಯ ರೂಪನು. ಆದಕಾರಣ ಸವಿತೃ : ಸೂರ್ಯ ಪ್ರತಿಮಾ ವಿಡಂಬನೆಯೊಡನೆ ವೃತ್ರ : ಅಹಿ (ಕತ್ತಲೆ) ನಾಶಮಾಡುವವನೆಂಬ ಇಂದ್ರನ ಪ್ರತಿಮೆಯೂ ಭಗ್ನ-ವಾಗುತ್ತದೆ.

ii) ಸೌರದೈವತಗಳು 'ಋತ-ಪ್ರಜಾತ' ಎಂದು ಬಗೆಯಲಾಗುತ್ತದೆ. ಆದರೆ 'ಋತ' ಸಂಕೇತಕ್ಕೆ ಮೂಲ ಸೌರಪಂಥೀಯ ನಿಯಮ, ಸುಸಂಗತ: ಅರ್ಥಯುಕ್ತ ಆಚಾರ-ವಿಚಾರ, ಆಹ್ನಿಕ ಎಂಬ ಅರ್ಥವುಂಟು,

ಅದರೆ, ಆಪ : ರಸ ಪಂಥೀಯ ಚಾಂದ್ರಸಂಪ್ರದಾಯದ 'ಸಮಯ'ದ ಆಚಾರ-ವಿಚಾರಗಳಲ್ಲಿ (ಸೌರ) 'ಋತ' ಸಂಕೇತಕ್ಕೆ ಆಪ : ರಸ=ರೇತ (ಚಂದ್ರಾಃ ಅಪಃ) ಎಂಬ ಅರ್ಥವು ರೂಢವಾಗುತ್ತದೆ! ಈ ಕಾರಣದಿಂದ 'ಋತ-ಪ್ರಜಾತ' ಎಂದು ವರ್ಣಿಸಲ್ಪಡುವ ಅಗ್ನಿಯು ಸೌರದೃಷ್ಟಿಯಲ್ಲಿ ಜಾತವೇದ ಹವ್ಯವಾಹನ ಅಗ್ನಿ ಆಗುತ್ತಾನೆ. ಆದರೆ, ಆಪ: ರಸ ಸಂಪ್ರದಾಯದ ದೃಷ್ಟಿಯಲ್ಲಿ ಋತಪ್ರಜಾತ=ರೇತಜಾತನು! ರೇತಃರಸದೊಳಗಿನ = ನಚಿಕೇತ = ಅಬೋಧಿ ಚಾಂದ್ರಅಗ್ನಿ ಆಗುತ್ತಾನೆ! ಏಕಕಾಲಕ್ಕೇ ಹೀಗೆ, ಪರಸ್ಪರ ವಿರೋಧೀ ಇಬ್ಬಗೆಯ ಅರ್ಥವನ್ನು ಧ್ವನಿತಪಡಿಸುವ ಈ ಋಕ್ ಸೂಕ್ತಸ್ಥ ಅಮೋಘಶಕ್ತಿ ಪಾಠಕರ ದಿಗ್‌ಭ್ರಮೆಗೆ ಕಾರಣವಾಗುತ್ತಿದೆ.

ಸೌರ ಪ್ರತಿಮಾಭಂಜನ ತಂತ್ರದ ಮಾದರಿ

'ಸೌರ' ದೈವತ ಪ್ರತಿಮೆಗಳನ್ನು 'ಚಾಂದ್ರ' (=ಅಪ ; ರಸ; ರೇತ) ಪ್ರತಿಮೆಗಳನ್ನಾಗಿ ಮಾರ್ಪಡಿಸುವ ತಂತ್ರದ ವಿವಿಧ ಮಾದರಿಗಳು ಅಭ್ಯಸನೀಯವಾಗಿವೆ. ಇದರ ಒಂದು ಪ್ರಕಾರವನ್ನು ಮೇಲೆ ಸೂಚಿಸಿದ್ದಾಗಿದೆ. 'ಋತ' ಸಂಕೇತದ ಮೂಲಾರ್ಥವು, ಸೌರದೈವತ ಆರಾಧನೆಯ ಸಂದರ್ಭದಲ್ಲಿ ಮೊದಲು ಅರಿಕೆಗೆ ಬಂದದ್ದು. 'ಋತ'ಎಂದರೆ ವಿಶ್ವ ನಿಯಮ, ವ್ಯವಸ್ಥೆ : ಜೀವನದಲ್ಲಿ 'ಋತ' ಸ್ವರೂಪೀ ಸತ್ಯದ ಭೂಮಿಕೆಯ ಮೇಲೆ ಬಾಳಲು ಪ್ರೇರಿಸುವ ಪ್ರತೀಕಗಳು, ಸವಿತೃ (ಸೂರ್ಯ); 'ಜಾತವೇದ ಅಗ್ನಿ; ವೃತ್ರಹನ್ ಇಂದ್ರ ಮುಂತಾದುವು. ಆದರೆ, ಏಕಂ ಸತ್ ಭೂಮಿಕೆಯ ವರ್ಚಸ್ಸಿನಿಂದ ಆದ ಸಾಮಾಜಿಕ ಸ್ಥಿತ್ಯಂತರದೊಡನೆ ಮೊದಲಿನ ಸೌರ 'ಸಮಯ' = ಆಚಾರ ಸಂಪ್ರದಾಯ ಬದಲಾಗುತ್ತದೆ. ಹೀಗೆ, ಬದಲಾದ 'ಸಮಾಯ' ಆಚಾರಕ್ಕೆ ಸುಸಂಗತವಾಗುವಂತೆ ಋತ: ಸತ್ಯದ ಅರ್ಥವೂ ಬದಲಾಗುತ್ತದೆ! 'ಋತ' ಸಂಕೇತಕ್ಕೆ ಆಪ; ರಸ; ರೇತಸೂಚಕ ಚಾಂದ್ರ ಭೂಮಿಕೆಯ ಜೀವನರೀತಿ ಸೂಚಕವಾದ ತೀರ ಭಿನ್ನವಾದ ಅರ್ಥವು ರೂಢವಾಗುತ್ತದೆ!

ಹೀಗೆ, ಈ ವೇದದಲ್ಲಿ ಇದ್ದ 'ಋತ (ನಿಯಮ : ಅಂತಃಸಂಗತಿ)' ಸೂಚಕ ಸತ್ಯವು, 'ಋತ'ದ ಅರ್ಥವು ಬದಲಾಗುವುದರೊಡನೆ, ಈ ಸತ್ಯವು ಆಪ : ರಸ: ರೇತಸ್ವರೂಪೀ ಸತ್ ರೂಪದ್ದಾಯ್ತು! ಹೀಗೆ, ಈ ವೇದದಲ್ಲಿ ಏಕಕಾಲಕ್ಕೆ ಇಬ್ಬಗೆಯ 'ಸತ್ಯ'ವು ಕಾಣದೊರೆಯುತ್ತದೆ! ಋತ : ಸತ್ಯದ ಉಲ್ಲೇಖಗಳು ಇಡೀ ವೇದದಲ್ಲಿವೆ. ಋತಕ್ಕೆ ರೇತವಾಚಕ ಅರ್ಥವಾಗುದರೊಡನೆ ಮೊದಲಿನಿಂದ ಕೊನೆಯ ವರೆಗೂ ಈ ವೇದವು ಏಕಂ: ಸತ್ ರಸಮಹಾತ್ಮ್ಯ ಸೂಚಕ ಉದ್ಗ್ರಂಥವಾಗಿ ಪರಿಣಮಿಸಿದೆ! ವಿಶ್ವಜನನಿ ಅದಿತಿಯನ್ನು 'ದೇವಮಾತೆ' ಆದಿತ್ಯರ ತಾಯಿ ಎಂದು ಈ ವೇದ ಹೇಳುತ್ತದೆ. 'ಅದಿತಿ'ಯನ್ನು ಋತಾವರಿ ಎಂದು ವರ್ಣಿಸಲಾಗಿದೆ! ಸಲಿಲ

ಸ್ವರೂಪೀ ಅದಿತಿ: ಋತಾವರಿ' ಎಂದರೆ ಆರ್ತವ ಸೃಜನ ಜಲದ ಪ್ರತಿಮೆಯಾದಳು. ಆದಕಾರಣ, ಅದಿತಿಪುತ್ರರೆಂಬ ವರುಣ, ಇಂದ್ರ, ಸೂರ್ಯಾದಿಗಳೆಲ್ಲರೂ ಆಪ : ರಸ: ರೇತದ ಪ್ರತಿಮೆಗಳೇ ಆಗುತ್ತಾರೆ!

ಋಗ್‌ವೇದದಲ್ಲಿ ಏನೆಲ್ಲ ದೈವತಗಳನ್ನೂ ಒಂದೇ ಬಗೆಯಲ್ಲಿ ಹೊಗಳಿದ್ದಾಗಿದೆ. ಇದರಿಂದಾಗಿ, ಸೌರ =ಚಾಂದ್ರ ದೈವತ ಆದುವು! ಪ್ರಾಮಾಣಿಕ ಭಕ್ತಿಭಾವಕ್ಕೆ ಯಾವುದಾದರೊಂದು ವಿಶಿಷ್ಟ ನಾಮರೂಪದ ತನ್ನ ದೈವತದ ಬಗೆಗಿನ ಪಕ್ಷಪಾತವಿರುವುದು ಸಹ-ಜ. ಆದರು, ಮ್ಯಾಕಡೊನೆಲ್ಲ ಪ್ರಭೃತಿಗಳಿಗೆ, ಈ ವೇದದಲ್ಲಿ ಇಂದ್ರನೇ ಸರ್ವಶ್ರೇಷ್ಠನೆಂದು ಕಾಣುತ್ತಿದೆ! ಈ ಭಕ್ತಿ ಪ್ರಕಾರವನ್ನು ಅರಿತೂ ಮ್ಯಾಕಡೊನೆಲ್ಲರಿಗೆ, ಇಂದ್ರನು ಈ ವೇದದಲ್ಲಿ ಕೇಂದ್ರದೈವತವೆಂದು ಎನಿಸಬೇಕಾದರೆ, ಈ ಸಂಹಿತೆಯೊಳಗಿನ ವರ್ಣಾನಾವೈಖರಿಯೊಳಗಿನ ಸಂಭ್ರಾಮಕತೆ, ಎಷ್ಟೆಂದು ಹೇಳಬೇಕು! ಪಾಶ್ಚಾತ್ಯ ಸಂಶೋಧಕರಿಗೆ ಋಗ್ ವೇದದೊಳಗಿನ ಈ ಹೊಗಳಿಕೆಯ ಈ ವೈಶಿಷ್ಟ್ಯವು ಗಮನಕ್ಕೆ ಬರದೆ ಇಲ್ಲ. ಈ ಪ್ರಕಾರಕ್ಕೆ Heno-theism ಎಂದು ಹೆಸರಿಸಿದವರು ಪಾಶ್ಚಾತ್ಯರೇ!

ಆದರೆ, ಎಲ್ಲ ದೈವತಗಳನ್ನು ಒಂದೇ ಬಗೆಯಲ್ಲಿ ಹೊಗಳುವುದರ ಅರ್ಥವನ್ನು ಗ್ರಹಿಸಿಕೊಳ್ಳುವ ಪ್ರಯತ್ನವು ಮಾತ್ರ ಈವರೆಗೆ ಆಗಿಲ್ಲ! 'ಸಮತ್ವಂ ಯೋಗಮುಚ್ಯತೇ' ಎಂಬ ವಾಕ್ಯವು ಹೀಗೆಯ ಮೋಸ ತರುತ್ತಿದೆ. ಆತ್ಯಂತಿಕ ಸಮತ್ವಯೋಗದ ಏಕಂ: ಸತ್ ಭೂಮಿಕೆಯ ತಾರತಮ್ಯರಹಿತ ಜೀವನ-ಜಗತ್ತು ಎಂದರೆ ಅದು ='ಸ್ಮಶಾನ ರೂಪದ್ದೇ ಇರಬಲ್ಲುದು! 'ಅಪೋವಾ ಇದಮಗ್ರ ಆಸೀತ್', 'ಆದಿಜಲ' ಈ ಸಾಂಕೇತಿಕ ಪ್ರತಿಮೆ ಸಮಪಾತಳಿ O, ಅಥವಾ ಮೃತ್ಯುವಿಚಾರದ ಪ್ರತೀಕವಾಗಿದೆ, 'ಅಮೃತಂ ಚೈವ ಮೃತ್ಯುಃ ಚ' ತಾನು, ಎಂದೆಂಬ 'ಕೃಷ್ಣ' ರೂಪ ವಿಷ್ಣುವು ನೀಲಾಂಗನು ಜಲಶಾಯಿ = - ನಾಗಶಯನ: ನಾಗ, ಮೃತ್ಯುಸ್ವರೂಪ ಮತ್ತು ಅಮೂರ್ತ ಸೃಜನಶಕ್ತಿಯ ಮೂರ್ತ (ಉಭಯಲಿಂಗೀ) ಪ್ರತಿಮೆ.

ಸೂರ್ಯನು ಪ್ರಕಾಶತತ್ತ್ವದ ಪ್ರತೀಕ. ಚಂದ್ರನು ರಜ-ನೀನಾಥ : ರಾತ್ರೀ ತತ್ತ್ವದ ಮೂರ್ತರೂಪ. ರಾತ್ರಿ=ಕತ್ತಲೆ ಸರ್ಪದಂತೆ ಸದ್ದಿಲ್ಲದೆ ಒಳನುಗ್ಗಿ ಪ್ರಕಾಶವನ್ನು ಆವರಿಸಬಲ್ಲುದು. ಸೂರ್ಯ-ಗ್ರಹಣ ಚಂದ್ರನು ಸೂರ್ಯನನ್ನು ಅಪ್ಪುವಲ್ಲಿ ಕತ್ತಲೆ ನಿರ್ಮಾಣವಾಗುತ್ತದೆ. ಸೂರ್ಯಗ್ರಹಣಕ್ಕೆ ಸರ್ಪರೂಪೀ ರಾಹುವೇ ಕಾರಣ ಎಂದು ಹೇಳಲಾಗುತ್ತದೆ. ಈ ರಾಹು=ಚಂದ್ರ, ಋಗ್‌ವೇದದಲ್ಲಿ ಈ ರಾಹುವನ್ನು 'ಸ್ವರ್‌ಭಾನು' - ಸ್ವರ್ ಲೋಕದ ಸೂರ್ಯ ಎಂದು ಹೆಸರಿಸಲಾಗಿದೆ! ಇದು ಅತ್ರಿ (=ಅದಿತಿ) ಮಂಡಲ! ಈ ಋಗ್‌ವೇದ ಸಂಕಲನಕಾರನು ಸರ್ಪ=ರಾತ್ರಿ=ಚಂದ್ರ=ಮೃತ್ಯು ಪಕ್ಷಪಾತಿಯಾಗಿದ್ದನೆಂಬುದು ಇಲ್ಲಿ ಹೊರಪಡುತ್ತಿದೆ. 'ಸಾರ್ಪರಾಜ್ಞೀ ಸೂರ್ಯೋ ವಾ' ಈ ದೈವತಸೂಕ್ತಕ್ಕೆ ಈ ಸಂಹಿತೆಯ ಮುಕ್ತಾಯ ಭಾಗದಲ್ಲಿ ಸ್ಥಾನವನ್ನೀಯಲಾಗಿದೆ! 'ಸರ್ಪವೊ ಸೂರ್ಯನೊ'? ಎಂಬ ಹಾಗಿನ ಈ ಸಾಂಕೇತಿಕ ಪ್ರತಿಮೆಯ ಮೂಲಕ, ಈ ವೇದ, ಅಹಿ→ಸರ್ಪ ವೃತ್ರಹನ್ ಎಂಬ ಇಂದ್ರನ-ಇಂದ್ರ ಸ್ವರೂಪಿ ಸೂರ್ಯನ ತೇಜೋವಧೆಯಾದುದನ್ನು ಸಾರುತ್ತಿದೆಯಲ್ಲದೆ, ಈ ಲೋಕದಲ್ಲಿ ವೃತ್ರ (ಅಹಿ=ಹಾವು=ಮೃತ್ಯು) ವಿಜಯ ಎಂಬುದನ್ನು ವ್ಯಂಗ್ಯಧ್ವನಿಯಿಂದ ಸೂಚಿಸುತ್ತಿದೆ.

ಎರಡು ಭಿನ್ನಭಾಷಿಕ ಸಂಸ್ಕೃತಿಗಳ ಸಂಘರ್ಷ

ಈ ಸಂಹಿತೆಯಲ್ಲಿ ಇಬ್ಬರು ಇಂದ್ರರಿದ್ದಾರೆ. ಇವರಲ್ಲಿ ಸೌರ 'ವೃತ್ರಹನ್' ಎಂಬ ಬಿರುದಿನ ಇಂದ್ರನ ಸೋಲು ಸೂಚಿತವಾಗಿದೆ. ಇನ್ನೊಬ್ಬ ಚಾಂದ್ರ ಸುಸ್ಪಷ್ಟವಾಗಿ ಛಾಂದೋಗ್ಯ ಉಪನಿಷತ್ತಿನ ಉಲ್ಲೇಖದ ಮೂಲಕ ಬೆಳಕಿನಲ್ಲಿ ಬರುತ್ತಿದ್ದಾನೆ. ಈ ಇಂದ್ರನು ಭೋಗಿ (: ನಾಗ) ಪವಮಾನ ಸೋಮಸೂಕ್ತಗಳಲ್ಲಿ 'ಇಂದ್ರಾಯ ಇದೋಃ ಪರಿಸ್ರವ' ಎಂಬ ಪಲ್ಲವಿಯ ಸ್ತೋತ್ರವು ಸೃಜನ ಇಂದ್ರಿಯರೂಪ ಇಂದ್ರನದಾಗಿದೆ. ಈತನೇ ತ್ಯಾಗಿಯಾಗಿ ಚಾಕ್ಷುಷೀ ಬ್ರಹ್ಮಸಿದ್ಧಿಯ ಸಾಕ್ಷಾತ್ಕಾರಕ್ಕಾಗಿ ಪ್ರಜಾಪತಿ (=ಚಂದ್ರನ ಪರ್ಯಾಯ) ಗುರುವಿನಲ್ಲಿ ಜ್ಞಾನದೀಕ್ಷೆಗಾಗಿ ಬಂದುದರ ವರ್ಣನೆ ಅಲ್ಲಿ ಉಂಟು.

ಇಬ್ಬರು ಇಂದ್ರರ ಪೂರ್ವಪೀಠಿಕೆ

ತಂದೆ ತ್ವಷ್ಟಾರ, ವೃತ್ರಹನ್ ಇಂದ್ರನು, ಸುಮೇರಿನ ಅಪ್ಸುಹಂತಕ ಎಂಕಿಯನ್ನು ನೂರಕ್ಕೆ ಹೋಲುತ್ತಾನೆ.

ಇದೇ ಮೇರೆಗೆ ಭೋಗಿಚಾಂದ್ರ್ಇಂದ್ರನು ಹಿಟ್ಟೈಟ್ (-ಕ್ಯಾನಾನ್) ಭಾಗದ (ಮಿತ್ರ-ವರುಣ). ಇಂದ್ರ (ನಾಸತ್ಯ)ನ ಪ್ರತಿರೂಪವಾಗಿರುವ ಶಕ್ಯತೆಯಿದೆ. ಈಜಿಪ್ಟ್‌ನಿಂದ ಭಾರತದ ವರೆಗೂ ಪುರಾತನಕಾಲದಲ್ಲಿ ಆಪ : ರಸ ಪಂಥೀಯ ಆದಿಮಾತಾ ಸಂಪ್ರದಾಯವು ಪ್ರಭಾವಶಾಲಿಯಾಗಿದ್ದುದನ್ನು ಮಾರ್ಶಲ್ ಪ್ರಭೃತಿ ತಜ್ಞರೇ ಹೇಳುತ್ತಾರೆ. ಯುರೋಭಾರತೀಯ-ಸಂಸ್ಕೃತ ಸಂಹೋದರ ಭಾಷಿಕರು ಭಾರತಕ್ಕೆ ಮಧ್ಯ ಏಶಿಯದತ್ತಣಿಂದ ಬಂದುದರ ಬಗೆಗೆ ಬಹುಸಂಖ್ಯ ತಜ್ಞರಲ್ಲಿ ಏಕಮತ್ಯವಿದೆ. ಹಿಟ್ಟೈಟ್ ಕ್ಯಾನಾನ್ ಭಾಗದಲ್ಲಿ ಈ ಭಾಷಿಕ ಜನ ಸಾಕಷ್ಟು ಕಾಲ ತಂಗಿದ್ದುದು ಅಲ್ಲಿಯ ಉತ್ಖನನದಲ್ಲಿ ದೊರೆತ ಲಿಖಿತ ಆಧಾರಗಳಿಂದ ಸಿದ್ಧವಾಗಿದೆ. ಈ ಜನ ಇರಾಣಿನಲ್ಲಿ ತಂಗಿದ ಬಳಿಕ ಒಂದು ಶಾಖೆ ಭಾರತಕ್ಕೆ ಬಂದುದಾಗಿ ಮಾತ್ರ ಈ ವರೆಗೆ ತಿಳಿದಿತ್ತು.

ಇಂದ್ರನು ದೂರದಿಂದ ಯದು-ತುರ್ವಶರನ್ನು ತಂದನು ಎಂಬ ಋಗ್‌ವೇದೀಯ ಉಲ್ಲೇಖವು ಅಭ್ಯಸನೀಯವಿದೆ. ಹೊರಗಣಿಂದ ಭಾರತಕ್ಕೆ ಸಂಸ್ಕೃತ ಭಾಷಿಕ ಪಂಗಡಗಳು ಎರಡು ಬಾರಿ ಬಂದಿರಬೇಕೆಂದು ಈಗಾಗಲೇ ತಜ್ಞರು ಊಹಿಸಿದ್ದಾರೆ. ಸುಮೇರಿನ ಎಂಕಿ ಮತ್ತು ವೃತ್ರಹನ್ ಇಂದ್ರರಲ್ಲಿರುವ ಸಾಮ್ಯದ ಮೂಲಕ ಅತಿ ಪ್ರಾಚೀನ ಮೊದಲನೆಯ ಪಂಗಡವು ಸುಮೇರಿನತ್ತಣಿನದಿರಬೇಕೆಂದು ತೋರುತ್ತದೆ. ಡಾ. ಹಾಲ್ ಅವರ ಅಭಿಪ್ರಾಯದಂತೆ ದ್ರಾವಿಡ ಎಂಬ ಜನ ಸುಮೇರಿನತ್ತಣನದೇ ಇರಬೇಕು. ಮಾರ್ಶಲ್ ಇದನ್ನು ಎತ್ತಿ ಹೇಳಿದ್ದಾರೆ. ಆದರೂ ಇದನ್ನು ತೀರ ಆಲ್ಲ ಎನ್ನಲು ಸಿದ್ಧರಿಲ್ಲ.

ಸಂಸ್ಕೃತ ಭಾಷಿಕ ಆರ್ಯರು ಎಂಬುವರು ನೇರವಾಗಿ ಭಾರತಕ್ಕೆ ಬಂದಿಲ್ಲ. ಇದು ನಿಜವೆಂದರೆ, ಈ ಜನ ಕ್ಯಾನಾನ್, ಹಿಟ್ಟೈಟ್, ಇರಾಣದಲ್ಲಿ ತಂಗಿ, ಬಳಿಕ ಕೆಲವೊಂದು ಪಂಗಡಗಳು ಭಾರತಕ್ಕೆ ಬಂದಿರಬೇಕಾಯಿತು. ಆದಕಾರಣ, ಆರ್ಯರು ಮತ್ತು ಸಂಸ್ಕೃತ ಭಾಷೆ ಭಾರತದಲ್ಲಿ ಬರುವ ಪೂರ್ವದಲ್ಲಿಯೇ ಆಪ ; ರಸ ಪಂಥೀಯ ಪ್ರಭಾವಕ್ಕೆ ಒಳಗಾಗಿರಲಿಕ್ಕೆ ಬೇಕಾಯಿತು. ಶುದ್ಧಆರ್ಯ ಎಂಬ ಜನಾಂಗದ ಅಸ್ತಿತ್ವವು ಆಗಲೇ ನಷ್ಟವಾಗ ತೊಡಗಿರಬೇಕಾಯಿತು.

ಮೂಲತಃ ಆಪ: ರಸ ಸಂಪ್ರದಾಯವು ಸಂಸ್ಕೃತ ಭಾಷಿಕರದಲ್ಲ, ಇದು ನಿಶ್ಚಿತ. ಅಗ್ನಿ-ಸೂರ್ಯಾರಾಧಕರು ಯುರೋ. ಭಾರತೀಯ ಭಾಷಿಕರಿದ್ದರೆಂಬ ಬಗೆಗೆ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ. ಆದರೆ, ವೇದದಲ್ಲಿ ಕಾಣುವ ಆಪ; ರಸ ಪಂಥೀಯ ನೇತಾರ ವರ್ಗದ ವಸಿಷ್ಠ ಕಶ್ಯಪಾದಿಗಳು, ಮೂಲತಃ ಸಂಸ್ಕೃತ ಭಾಷಿಕರರಿರಲಾರರು. ಸಂದೇಹಕ್ಕೆ ಇನ್ನು ಅವಕಾಶವಿದೆ. ಯುರೋ ಭಾರತೀಯ ಸಂಸ್ಕೃತ ಸದೃಶ ಭಾಷಿಕರು ಪಿತೃಪ್ರಧಾನ ಕುಟುಂಬ ಪದ್ಧತಿಯವರಾಗಿದ್ದರೆಂದು ತಜ್ಞರ ಮತ. ವಸಿಷ್ಠ-ವ್ಯಾಸಾದಿಗಳು ಅದಿತ್ಯಪೂಜಕರು; ಮಾತೃಪರಂಪರೆಯವರು; ಅದಿತಿ ಸಂಪ್ರದಾಯದವರು. ಆದಿತ್ಯ ಮಾತೃವಂಶೀಯ ಸಂಪ್ರದಾಯ ಸೂಚಕ ಸಂಕೇತ! ಆಪ: ರಸ ಪಂಥೀಯ ಸಂಸ್ಕೃತ ಭಾಷಿಕರು ರೂಪಿಸಿರುವ ಸಂಸ್ಕೃತಿ, ನಿರ್ಮಿಸಿರುವ ಸಂಸ್ಕೃತ ಸಾಹಿತ್ಯವು ಸೌರಸವಿತೃ ಉಪಾಸನೆಯ ದಾರಿಯಿಂದ, ಸೂರ್ಯ-ನಾರಾಯಣನ ಆರಾಧನೆಯತ್ತ ಹೊರಳಿದ್ದುದು ಕಾಣುತ್ತಲೆ ಇದೆ. ಈ ಹಿನ್ನೆಲೆಯಲ್ಲಿ ದ್ರಾವಿಡ ಎಂಬ ಜನಾಂಗವಾಚಕ ಸಂಕೇತವೂ ಅರ್ಥವಿಹೀನವಾಗುತ್ತಿದೆ! ನಾಗಆರಾಧನೆ ದ್ರಾವಿಡರದು ಎಂದು ಬಗೆವವರು ಉಂಟು. ಈಜಿಪ್ಟಿನಿಂದ ಭಾರತದ ವರೆಗೆ ಪುರಾತನ ಆದಿದೈವತವು ನಾಗ! ಅಶ್ವ-ತ್ಥ= ನಾರಾಯಣ=ನಾಗ ಪರಂಪರೆಯನ್ನು ಲೋಕಪ್ರಿಯವಾಗಿಸಿದ ವಸಿಷ್ಠ, ವ್ಯಾಸ, ವಾಲ್ಮೀಕಿಗಳ ಈ ಸಂಪ್ರದಾಯದ ಬೇರುಗಳು ಋಗ್‌ವೇದದಲ್ಲಿವೆ; ಅಥರ್ವವೇದದಲ್ಲೂ ಇವೆ. ಇಷ್ಟೇ ಅಲ್ಲ, ಸೈಂಧವ ಸಂಸ್ಕೃತಿಯಲ್ಲೂ ಇವೆ! ಅದು 'ಪಿಪ್ಪಲ' ಎಂಬ ಸಾಂಕೇತಿಕ ವೃಕ್ಷ (= ಅಶ್ವತ್ಥ) ಪೂಜಾ ಸಂಪ್ರದಾಯ ಎಂದು ಮಾರ್ಶಲ್ ವರದಿಯ ಬೆಳಕಿನಲ್ಲಿ ಬಂದಿದೆ.

ಅಶ್ವತ್ಥ : ನಾರಾಯಣ ಸಂಪ್ರದಾಯ ಪ್ರಚಾರ

ಆದರೆ 'ಅಶ್ವ' ವೃಕ್ಷವಾದದ್ದು ಎಂದು? ಎಂಬ ಪ್ರಶ್ನೆಯಿದೆ. ಋಗ್‌ವೇದದಲ್ಲಿ ಅಶ್ವ-ತ್ಥ ಉಂಟು. ಸೈಂಧವ ಸಂಸ್ಕೃತಿಯಲ್ಲಿ 'ಅಶ್ವ' ಇರಲಿಲ್ಲ ಎನ್ನಲು ಆಕ್ಷೇಪಿಸಲಾಗುತ್ತಿದೆ. ಆದರೆ, ಕೆಲರ ಅಭಿಪ್ರಾಯದಂತೆ ಆ ಸಂಸ್ಕೃತಿಯ ಕೊನೆಯ ಭಾಗದಲ್ಲಿ 'ಅಶ್ವ' ಬಂದಿರುವ ಶಕ್ಯತೆಯುಂಟು. 'ಅಶ್ವಿನಿ' ಗಳೆಂಬ ದೈವತಗಳನ್ನು ಹಿಟ್ಟೈಟಿನಲ್ಲಿ

'ನಾಸತ್ಯ' ಎಂಬ ತತ್ಪೂರ್ವದ ಸಂಕೇತದಿಂದಲೇ ಗುರುತಿಸಲಾಗಿದೆ. ಗಾರ್ದಭದ ಸ್ಥಳದಲ್ಲಿ 'ಅಶ್ವ' ಆದೆ ತಾನೆ ಪ್ರತಿಷ್ಠೆ ಪಡೆಯತೊಡಗಿತ್ತು. ಈ ಜನವು ಭಾರತದಿಂದಲೇ ಇರಾಣ, ಹಿಟ್ಟೈಟ್, ಕ್ಯಾನಾನದ ಕಡೆಗೆ ಹೋಗಿರಲಿ, ಅತ್ತಣಿಂದ ಭಾರತಕ್ಕೆ ಬಂದಿರಲಿ, ಈ ಭಾಗಗಳೊಡನೆ ಭಾರತದ ಸಾಂಸ್ಕೃತಿಕ ನಿಕಟ ಸಂಬಂಧವಿತ್ತು. ಇದನ್ನು ಸಿದ್ಧಪಡಿಸುವ ಪ್ರಮಾಣಗಳು ದೊರೆಯುತ್ತಿವೆ. ಇವನ್ನೇ ಸುಳ್ಳು ಎಂದವರು ಇಲ್ಲ.

ಹಿಟ್ಟೈಟ್-ಕ್ಯಾನಾನ್ ಭಾಗದೊಡನೆ ಭಾರತದಂತೆ, ಗ್ರೀಕ್ ಈಜಿಪ್ಟಿನ ನಿಕಟ ಸಂಬಂಧವೂ ಇತ್ತು, ಸುಮೇರು ಬ್ಯಾಬಿಲೋನ ಇವುಗಳೊಡನೆ ಹಿಟ್ಟೈಟ್ ಕ್ಯಾನಾನ್‌ಗಳಲ್ಲಿ ಅಂಗಾಂಗೀ ಭಾವದಷ್ಟು ಸಂಬಂಧ! ಇವೆಲ್ಲವುಗಳಲ್ಲಿ ಸುಮೇರು ಸಂಸ್ಕೃತಿಯೆ ಪುರಾತನ. 'ಮೇರುಃ ಸುಮಾರುಃ ಹೇಮಾದ್ರೀರತ್ನಸಾನುಃ ಸುರಾಲಯಃ' ಈ ಅಮರವಾಣಿಯಲ್ಲಿ ಭಾರತ-ಸುಮೇರು ಸಂಬಂಧದ ಸೂಚನೆಯಿದೆ! ಸುಮೇರಿನ 'ಝಿಗುರ್ತ'=ಕೃತಕಾದ್ರಿಯ ಮೇಲೆ ದೇವತಾಮಂದಿರವಿರುವ ವೈಶಿಷ್ಟ್ಯದ ಸೂಚನೆಯೂ ಇಲ್ಲಿದೆ. ಸುಮೇರಿನಲ್ಲಿ ಅಪ್ಸು=ಹಂತಕ ಎಂಕಿ, ಆದಿಮಾತಾ ಸಂಪ್ರದಾಯ ಭಂಜಕರ ಆದಿಪುರುಷ ಉಂಟು. ಸುಮೇರಿನ ತರುವಾಯ ಕ್ಯಾನಾನ್ ಮೊದಲಾದ ಭಾಗಗಳಲ್ಲಿ ಅನಥಾ : ಆದಿಮಾತಾ ಸಂಪ್ರದಾಯವು ನಾಮಮಾತ್ರ ಉಳಿದು, ಬಾಽಲ=ಬಲ್ಲಾಳ ಪುರುಷನು ಪ್ರಭಾವಶಾಲಿಯಾಗುತ್ತಾನೆ.

ಸುಫಲೀಕರಣ ಸಂಪ್ರದಾಯದ ಇಂದ್ರ ಮತ್ತು ಸಪ್ತಶೀರ್ಷಸರ್ಪದ ಹಿನ್ನೆಲೆ

ಈ ಭಾಗದ ಕುಮರಬಿ, ಬಾಽಲ, ಅನಥಾ ಮುಂತಾದ ದೈವತಗಳು ಗ್ರೀಕಿನಲ್ಲಿ ಕ್ರೋನಸ್, ಅಥೆನೆ, ಮುಂತಾದ ಬೇರೆ ರೂಪದಲ್ಲಿ ಕಾಣುತ್ತವೆ. ನಾಸತ್ಯರು ಭಾರತದಲ್ಲಿ ಅಶ್ವಿನಿಗಳಾಗಿದ್ದರೆ ಗ್ರೀಸಿನಲ್ಲಿ 'dioscuri' ನಾಮಸಂಕೇತದ ದೈವತಗಳಾದುದನ್ನು ತಜ್ಞರು ಕಂಡುಹಿಡಿದಿದ್ದಾರೆ! Indian Mythology ಭಾಗ ಬರೆವ ನಾರ್ಮನ್ ಬ್ರೌನರು, ಭಾರತೀಯ ಆದಿಮಾತಾ ಸಂಪ್ರದಾಯದೊಡನೆ ಈಜಿಪ್ಟ್ ಗ್ರೀಕಿನ ವರೆಗೂ ಸಾಂಸ್ಕೃತಿಕ ಸಂಬಂಧವಿದ್ದುದನ್ನು ಹೇಳುತ್ತಾರೆ. ಇವರಿಗೆ ಹಿಟ್ಟೈಟ್ ಭಾಗದಲ್ಲಿದ್ದ ಇಂದ್ರಾದಿ ದೈವತಗಳ ಬಗೆಗೂ ಗೊತ್ತು. ಆದರೆ, ಆದಿಮಾತಾ ಸಂಪ್ರದಾಯದ ಪ್ರಭಾವದಲ್ಲಿ ವರುಣನು ಚಾಂದ್ರನಾದುದು ಇಂದಿನ ಸಂಹಿತೆಯಿಂದ ಕಾಣುತ್ತಿದ್ದು ಆರ್. ಗ್ರೇವ್ಸ ಬಿಟ್ಟರೆ, ಇದನ್ನು ಎತ್ತಿ ಹೇಳಿದವರು ಒಬ್ಬರೂ ಇಲ್ಲ. ವರುಣನಂತೆ ಹೀಗೆಯೇ ಅಲ್ಲಿಯ ಇಂದ್ರನೂ ಚಾಂದ್ರನಾಗಿರಲೇಬೇಕು. ಸುಫಲೀಕರಣ ಸಂಪ್ರದಾಯದ ಈ ಇಂದ್ರನೇ ಛಾಂದೋಗ್ಯದ 'ಅಸುರಾಣಾಂ' ವಿರೋಚನನ ಸತೀರ್ಥನಾಗಿ ಚಾಕ್ಷುಷೀ ಬ್ರಹ್ಮಜ್ಞನಾಗಲು ಬಂದಿದ್ದು ಕಾಣುತ್ತಿದೆ.

ಋಗ್‌ವೇದದಲ್ಲಿ, ಹಿಟ್ಟೈಟ್-ಕ್ಯಾನಾನ್ ಭಾಗದ ಪ್ರಭಾವ ಸೂಚಕ ಇನ್ನೂ ಒಂದು ಮೌಲಿಕ ಸಂಕೇತವು ಇತ್ತೀಚಿನ ಉತ್ಖನನದಲ್ಲಿ ಬೆಳಕಿಗೆ ಬಂದಿದೆ. 'Canan was already influenced by Indo-Europeans, prior to Amarna age' ಇದು ಅಲ್ಲಿಯ ಭಾಷಿಕ ಅವಶಿಷ್ಟ ಪ್ರತಿಮೆಗಳಲ್ಲಿ ಎದ್ದು ಕಾಣುತ್ತಿದೆ. ಸಂಸ್ಕೃತ ಭಾಷಿಕರು ಸಹ ಆಪ: ರಸಪಂಥೀಯ ಪ್ರಭಾವಕ್ಕೆ ಒಳಗಾದುದನ್ನು ಸೂಚಿಸುವ 'ಸಪ್ತ' ಈ ಶಬ್ದ ಪ್ರತಿಮೆ ಅಪೂರ್ವವಾಗಿದೆ. The Seven motif, as we shall see permeates the text[೩] 'ಮೂರು' ಇದು ಸೌರ ಸಂಪ್ರದಾಯದ ತಳಪಾಯದ ಮೌಲಿಕ ಗೂಢಸಂಖ್ಯೆ* ಚಾಂದ್ರ ಸಂಪ್ರದಾಯದ್ದಲ್ಲ; ಏಕಾತ್ಮಕ ಏಕಂದಲ್ಲಿ

---

* ಸಂಖ್ಯಾವಿಶಿಷ್ಟಗಳನ್ನು ಹಿಡಿದು ಅಭ್ಯಾಸ ನಡೆಸಿರುವುದು ಕರ್ನಾಟಕದಲ್ಲಿ ಇಲ್ಲವೇ ಇಲ್ಲ. ಸಂಸ್ಕೃತಿಯ ಪುನಾರಚನೆಗೆ 'ಸಂಖ್ಯಾಶಾಸ್ತ್ರ'ದ ಅಥವಾ ಸಂಖ್ಯಾ ಸಂಕೇತಗಳ ಅಭ್ಯಾಸ ಅಗತ್ಯ. ಸಂಸ್ಕೃತಿಯು 'ಮೂರು' ಎಂಬುವರಿಂದ ಉಗಮಗೊಂಡಿದೆ. ಜೀವನ ಪಟವು ಮೂರು ಎಂಬ ಸಂಖ್ಯೆಯ ವಸ್ತುವಿಶೇಷಗಳಿಂದ ನಿರ್ಮಿತವಾಗಿದೆ. ಕಾಲ, ವಚನ, ದೈವತ, ಸ್ವರ, ಹೀಗೆ ಈ ವಸ್ತುಪ್ರಪಂಚವು ತ್ರಯಸಂಖ್ಯಾತ್ಮಕವಾಗಿ ಬೆಳೆಯುತ್ತವೆ. ಶಂಬಾ ಅವರು ಮೂರು ಸಂಖ್ಯೆಯ ಸಂಕೇತ ಪ್ರತಿಮೆಗಳ ಆಳಕ್ಕೆ ಇಳಿಯುವುದಿಲ್ಲ. ಅವರು ತಮ್ಮ ವಿಚಾರಕ್ಕೆ ಬೇಕಾದ ಮಾತ್ರ ಸಂಗತಿಗಳನ್ನು ಆಯ್ದುಕೊಳ್ಳುತ್ತಾರೆ ಈ ಅಂಶವು ಗಮನಾರ್ಹ. (ಸಂ)

ಎರಡರಿಂದ, ಏನೆಲ್ಲ ಸಂಖ್ಯೆಗಳನ್ನೂ (ಏಕದಲ್ಲಿ) ಆತ್ಮಸತ್ತಾಗಿಸಿಕೊಳ್ಳುವ ವೈಶಿಷ್ಟ್ಯವಿದೆ! ಆದಿನಾಗ ಏಳು (ಒಂಬತ್ತು ಸಹ) ಹೆಡೆಗಳದು, (ಅನಂತ ಹೆಡೆಗಳಂತೂ ಸರಿಯೆ). 'ನಾಗ' ಇದು ಒಂದೇ ಹೆಡೆ ಎಷ್ಟೇ ಇರಲಿ!

ದೈವತ ಕಥೆಗಳೊಳಗಿನ ಸರ್ಪ : ಅಹಿ ಮತ್ತು ಇದರ ಶತ್ರುತ್ವ ಸೂಚಕ ವಿಶಿಷ್ಟಸಂಕೇತ (motif) ಸುಮೇರು, ಹಿಟ್ಟೈಟ್, ಕ್ಯಾನಾನ್, ಗ್ರೀಕ್‌ಭಾಗದ ಪುರಾತನ ಕಥಗಳಲ್ಲೆ ಉಂಟು. ಇದೇ ಇರಾಣಿನ ಅವೆಸ್ತಾದ ಈ ಬಗೆಯ ವೈಶಿಷ್ಟಸೂಚಕ ಸಾಂಕೇತಿಕತೆಗೆ ಹಾಗೂ ಋಗ್‌ವೇದದ ಅಹಿ ಮತ್ತು ಅಹಿಹಂತಕ ಇಂದ್ರರ ಸಾಂಕೇತಿಕತೆಗೆ ಕಾರಣವಿರಲಿಕ್ಕೆ ಬೇಕು. ಋಗ್‌ವೇದದ ಹತ್ತೂ ಮಂಡಲಗಳಲ್ಲಿ ವ್ಯಾಪಿಸಿರುವ 'ಸಪ್ತ' ಈ ಸಾಂಕೇತಿಕತೆ ನಿಶ್ಚಿತವಾಗಿಯೂ ಸಂಪೂರ್ಣವಾಗಿ ಕ್ಯಾನಾನ್ ಭಾಗದ ಹೋಲಿಕೆಯದಾಗಿದೆ. ಭಾಲಾಕ್ಷ; ಏಕಾಕ್ಷ ಸೈಕ್ಲೊಪಸನ್ನು ಒಡೆಸಿಸ್ ಕೊಲ್ಲುವಂತೆ ಹಿರಾಕ್ಲಿಸನು ಏಳು (ಅಥವಾ ಒಂಬತ್ತು) ಹೆಡೆಯ ಹೈಡ್ರಾ (ಸರ್ಪ) ಸಂಹರಿಸಿದ ಕಥೆಯುಂಟು. ಈ ಮೂಲಕಥೆ ಕ್ರಿ. ಪೂ. ೩೦೦೦ ವರುಷಗಳಷ್ಟು ಪ್ರಾಚೀನ. ಸುಮೇರಿನ ಭಾಗದ ಪ್ರಭಾವ ಸೂಚಕ ಎಂದು ಕ್ಯಾನಾನ್ ದೈವತ ಕಥಾಲೇಖಕನು ಬರೆಯುತ್ತಾನೆ. ಇದೇ ಮೇರೆಗೆ, ಗ್ರೀಕಿನ ಹಿರಾಕ್ಲಿಸನ ಕಥೆಯಂತೆ, ಭಾರತೀಯ ವೃತ್ರಹನ್ ಇಂದ್ರನ ಕಥಾಮೂಲವೂ ಸುಮೇರಿನಲ್ಲಿ ಇರುವ ಶಕ್ಯತೆ ಇದೆ.

'ಏಳು' ಹೆಡೆಯ ಹಾವು ಕೊಂದದ್ದರಿಂದ ಈ ಏಳೂ ಹೆಡೆಗಳು ವಾರದ ಒಂದೊಂದು ದಿನವಾಗಿ ಪರಿಣಮಿಸಿರುವುದಾಗಿ ಭಾರತೀಯ ಸಾಂಪ್ರದಾಯಿಕ ಕಥೆಗಳಿಂದ ಬಯಲಿಗೆ ಬರುತ್ತಿದೆ! ಯುರೋಪೀಯ ಹಿರಾಕ್ಲಿಸನ ಕಥೆಯಲ್ಲಿ ಈ ಸಾಂಕೇತಿಕತೆ ಇದ್ದುದನ್ನು ಸೂಚಿಸುವ ಪವಾಡ ಕಥೆಗಳು ಬೆಳಕಿಗೆ ಬಂದಿಲ್ಲ. ಭಾರತೀಯ ಸಾಂಪ್ರದಾಯಿಕ ಕಥಗಳಿಂದ ಕ್ಯಾನಾನ್-ಗ್ರೀಕಿನ ಕಥೆಗಳ ಸಂದಿಗ್ಧತೆಯೂ ದೂರವಾಗುವ ಅಪೂರ್ವ ಪ್ರಕಾಶ ಇಲ್ಲಿದೆ. ಹಿಟ್ಟೈಟ್-ಕ್ಯಾನಾನ್ ಭಾಗದ 'ಸಪ್ತ' ಹೆಡೆಯ ನಾಗ, ಆ ಭಾಗದ ಬಿರು-ಗಾಳಿದೇವ (Storm God) ಇವೆರಡೂ ಸಾಂಕೇತಿಕತೆ ಸಮಾನ ಗರ್ಭಿತಾರ್ಥವೆಂಬುದು ಗ್ರೀಸಿನ Python=Typhon ಸೂಚಕ ಕಥೆಗಳಿಂದ ಬೆಳಕಿಗೆ ಬರುತ್ತದೆ. ಚಾಂದ್ರಶಕ್ತಿಯ ಪವಾಡ ಕಥಾರಹಸ್ಯಜ್ಞನಾದ ಕವಿ ರಾಬರ್ಟ್ ಗ್ರೇವ್ಸನಿಗೆ ಈ ಹೋಲಿಕೆಯು ಇಜಿಪ್ತಿನ ಸೆಟ್ ಮತ್ತು ಭಾರತೀಯ ರುದ್ರ-ಮರುತರಲ್ಲಿ ಸಹ ಕಾಣುತ್ತಿದೆ! ಋಗ್‌ವೇದದ ಮರುತರಲ್ಲಿ ಇಬ್ಬಗೆ! ಅಹಿಹನ್ ಇಂದ್ರನ ಮರುತರು, ರುದ್ರಿಯ ಮರುತರಂತೆ 'ಉಗ್ರ' 'ಘೋರ' ಮೂರ್ತಿಗಳಲ್ಲ ಎಂದು ಮ್ಯಾಕಡೊನೆಲ್ಲ ಹೇಳಿದ್ದಾರೆ! ವೇದದಲ್ಲಿ ಅಹಿ-ಭಾನವಃ ಸಂಕೇತದಿಂದ ನಿರ್ದಿಷ್ಟ ಮರುತರು ಚಾಂದ್ರರೇ ಇರಲಿಕ್ಕೆ ಬೇಕು. ಚಂದ್ರನನ್ನು ಸ್ವರ್‌ಭಾನು ರೂಪದಲ್ಲಿ ಕಂಡ ಕವಿ 'ಸಮಯ'ದ ಉಲ್ಲೇಖ ಹಿಂದೊಮ್ಮೆ ಬಂದಿದೆ.

ಅಹಿಹನ್-ಇಂದ್ರದ್ವೇಷದ ಮಾದರಿ

(ಅ)ದಿತಿಯ ಗರ್ಭದಲ್ಲಿ ಇದ್ದಾಗಲೆ ಮರುತರನ್ನು ೭x೭ ಭಾಗವಾಗಿ ತುಂಡರಿಸಿದ 'ಭ್ರೂಣಹತ್ಯಾ' ಮಹಾಪಾತಕಿಯು (ಸೂರ್ಯರೂಪೀ) ಇಂದ್ರನೇ ಎಂಬ ಈ ಸಾಂಕೇತಿಕ ಕಥೆ ಉಂಟಷ್ಟೆ. ಪುರಾತನ ಚಾಂದ್ರ ಸಂಪ್ರದಾಯವ ರಾತ್ರೀ ಉಪಾಸಕರಲ್ಲಿದ್ದ ಸೌರ ಸಂಪ್ರದಾಯದ ಬಗೆಗಿನ ತಿರಸ್ಕಾರ-ದ್ವೇಷ ಸೂಚಕ ಲೋಕಕಥೆ ಹೀಗೆ ಇಂದಿಗೂ ನೋಡಲು ದೊರೆಯುತ್ತಿದೆ. ಋಗ್‌ವೇದದಲ್ಲಿ ಬರುವ 'ಸಪ್ತ' ಸಂಕೇತದಲ್ಲಿ ಹುದುಗಿರುವ ಸರ್ಪಣಶೀಲ-ಸರ್ಪಸೂಚಕ ಅರ್ಥದ ಹಿನ್ನೆಲೆಯ ಈ 'ಸಮಯ' ಎಲ್ಲಿ ಎಂಬುದು ತಿಳಿಯದಾಗಿತ್ತು. (ಅ)ದಿತಿಯ ಗರ್ಭಚ್ಛೇದದ ಕಥೆ ಮರುತರ ಜನ್ಮಕ್ಕೆ ಸಂಬಂಧಿಸಿದೆ. ಮಾತಾರುದ್ರಾಣಾಂ (=ಮರುತಾನಾಂ) ಎಂಬ ಸ್ತೋತ್ರದಲ್ಲಿ ಮರುತರ ತಾಯಿ ಅದಿತಿಯೇ ಎಂದು ಋಗ್‌ವೇದವೇ ಹೇಳುತ್ತಿದೆ! ಹೀಗಿರುವಾಗ, 'ದಿತಿ' ಎಂಬ ಇನ್ನೊಂದು ಪಾತ್ರ ಕಲ್ಪಿಸಿರುವ ಈ ಮಾಯಾತಂತ್ರದ ಹಿಂದೆ ಉದ್ದೇಶವೇನಿರಬಹುದು? ಅದಿತಿ ಸಾರ್ಪರಾಜ್ಞೀ-ಹಗಲು-ರಾತ್ರಿ ಈ ಭೇದವಿಲ್ಲದ ಅ-ಖಂಡಿತ ರೂಪದ ದೇವಿ. ಈ ಸಾಂಕೇತಿಕತೆಯನ್ನು ಸ್ಮರಿಸಿದರೆ ಹಗಲು-ಇರುಳಿನ=ಏಕಂ ಸತ್=ಅಖಂಡಿತ ರೂಪ ಎಂದರೆ ಸರ್ಪರೂಪ! ಇದು ಸ್ಪಷ್ಟವಾಗುತ್ತದೆ.

ಸೌರಸವಿತೃ (=ಇಂದ್ರ) ದೇವನ ಎಂದರೆ ಅಂತಃಪ್ರಜ್ಞೆಯ ಉದಯದೊಡನೆ ಮಾನವರಿಗೆ ಹಗಲು-ರಾತ್ರಿಗಳ ಅಂತರದ ಅರಿವು ಮೂಡಿತು! ಮೊದಲಿನ ಅ-ಖಂಡಿತ ಅದಿತಿ, ಖಂಡಿತಳಾಗಿ 'ದಿತಿ' (ಎರಡು ಭಾಗ)

ಆದಳು! ಇಂದ್ರ (ಸವಿತೃ ಹನನಕ್ಕೆ ಸಮರ್ಥ ಪುತ್ರನನ್ನು ಅಖಂಡಿತ ಕಾಲವನ್ನು) ಹಡೆಯ ಬಯಸಿದವಳ ಗರ್ಭವು ಛೇದಿಸಲ್ಪಟ್ಟು ಈ ಕಾಲಸರ್ಪದಲ್ಲಿ ಏಳುವಾರಗಳ (ಹಗಲು=ಇರುಳು=) ತುಂಡುಗಳಾಗುತ್ತವೆ! ಆದರೆ, ಸೂರ್ಯನನ್ನು ಅದಿತಿ ಪುತ್ರ=ಆದಿತ್ಯ =(ಚಂದ್ರ) ರೂಪಕ್ಕೆ ತಿರುಗಿಸಿ, ಹಗಲನ್ನು ಇರುಳಾಗಿಸುವ ಪ್ರಯತ್ನವಾಗುತ್ತದೆ. ಇದು ವಿಫಲವಾದುದು ಕಾಣತೊಡಗುವಾಗ ನಾರಾಯಣ: ಆಪೋವತ್ಸನನ್ನು ಸೂರ್ಯನೆಂದು ಹೆಸರಿಸಿ ರೂಢಿಸಿದ್ದಾಯ್ತು! ಹಿಬ್ರುಗಳು, ಲೆವಿಥಾನ್ ಸರ್ಪ ನಾಶಮಾಡಿದ ಕಥೆ ನಿರ್ಮಿಸಿಯೂ ಅವರು ಆಪ : ರಸ ಸ್ವರೂಪೀ ದೈವತ ಸಂಪ್ರದಾಯದವರೇ ಉಳಿದರು! ಸಬಾತ್ (= ಸಪ್ತಮ) ದಿನವೆಂದು Saturn : Cronus = ಶನಿ=ಕಾಕವ್ರತಿಗಳಾಗಿದ್ದಾರೆ. ಆದಿಮಾತಾ ಪುತ್ರ ಕ್ರೈಸ್ತಪಂಥವು Sunday ಎಂದರೂ ಇದು ಆದಿತ್ಯವಾರ! ಇಲ್ಲಿ ಆದಿಮಾತಾ ಸ್ಮೃತಿಯುಂಟು! ಭಾರತೀಯರಲ್ಲಿ ಭಾನುವಾರವನ್ನು ಆದಿತ್ಯವಾರ ಎಂದು ಕರೆಯುವ ಸಂಪ್ರದಾಯವಿದೆ, 'ಆದಿತ್ಯಾನಾಂ ಅಹಂ' ಎಂಬ ವಿಷ್ಣು (=ಇಂದ್ರನನ್ನು ತಳ್ಳಿದ ಉಪೇಂದ್ರ!) ಸೂರ್ಯನೆಂಬ ಭ್ರಾಂತಿ ನಿರ್ಮಿಸಲು ರವಿವಾರವೂ ಆದಿತ್ಯವಾರವಾಯ್ತು! ನಿಜವಾಗಿ ಚಂದ್ರವಾರವಿದ್ದರೂ ಅದು ಸೋಮವಾರ ಎನಿಸಿದೆ. ಸೂರ್ಯ ಸಂಪ್ರದಾಯದ ವೇಷಧರಿಸಿ ಎಂದರೆ ವಾರದ ಕೊನೆಯ ಶನಿ-ಆದಿತ್ಯ ಇವು ಚಾಂದ್ರ ಹೆಸರು; ವಾರದ ಪ್ರಾರಂಭವು ಚಂದ್ರ (:ಸೋಮ) ನಾಮದಿಂದ! ಎಂದರೆ ಏಳೂ ದಿನ ಹಗಲು=ರಾತ್ರಿ : ನಿಶಾನಾಥನ ಯಾಜಮಾನ್ಯಕ್ಕೆ ಒಳಗಾದಂತೆ ಆಯಿತು ಭಾರತ ಮತ್ತು ಯುರೋಪ್ ಎರಡೂ ಕಡೆಯ ಚಾಂದ್ರ ಸಂಪ್ರದಾಯದವೇ ಈ ಸಂಸ್ಕೃತಿಗಳನ್ನು ರೂಪಿಸಿದೆ: ಇಂತು ಹಗಲಿನ ಅವಜ್ಞೆ ಮಾಡಿದೆ!

ಕ್ಯಾನಾನ್ ಭಾಗದ ಸಮಯಾಚಾರಗಳಲ್ಲಿ ಮೃತ್ಯುಸ್ವರೂಪ ಸರ್ಪಹನನದ ಪ್ರತಿವಾರ್ಷಿಕ ನಡೆವಳಿ ಇದ್ದಿತು! ಇಜಿಪ್ತಿನಲ್ಲಿಯೂ ಪ್ರತಿವಾರ್ಷಿಕ 'ಸೆಟ್'ನ ಸಂಹಾರದ ಸಮಯಾಚಾರ, ಹೋಳಿಹಬ್ಬದಂತೆ ಆಚರಿಸಲ್ಪಡುತ್ತಿತ್ತು! ಮಹಾಭಾರತದ ಇಂದ್ರ-ತಕ್ಷಕ ಅಥವಾ ಸರ್ಪಯಾಗದ ಕಥೆಯು ಈಜಿಪ್ಟ್-ಕ್ಯಾನಾನ್ ಭಾಗದ ಮೂಲಕಥೆಯ ತಿದ್ದಿ ಬೆಳಸಿದ ಪ್ರತಿರೂಪವಾಗಿದೆ. ಮಳೆ-ಬೆಳೆಗಾಗಿ (Fertility Cult.) ಸುಫಲೀಕರಣ ಸಂಪ್ರದಾಯ ಅಂಗವಿದು! ಕಾಮದಹನ (ಸರ್ಪಹನದ) ಬಳಿಕ ಕಾಮನ ಕಣ್ಣೀರು (=ಮಳೆ) ಬರುತ್ತದೆ, ಎಂಬ ನಂಬುಗೆಯಿದೆ. ಆ ಸುಮಾರಿಗೆ ಅಲ್ಪಸ್ವಲ್ಪ ಮಳೆ ಹನಿಯುವುದೂ ಉಂಟು. ಆದರೆ, 'ಸರ್ಪ ಸಂಹಾರದ ಈ ಕೃತಿ 'ಕೃಷ್ಣ'ನು ಕಾಲಿಯನನ್ನು ಮರ್ದಿಸಿದನೆಂಬ ಹಾಗಿನ ಕೃತಕ ನಾಟಕೀಯ (mock) ಆಚಾರ ಉಂಟು. ಇಂತು ವೇದದ ಇಂದ್ರನ ಕಥೆಗಳಲ್ಲಿ ಸೌರ ಹಾಗೂ ಚಾಂದ್ರ ಈ ಎರಡೂ ಬಗೆಯ ಕಥೆಗಳ ಪ್ರತಿಬಿಂಬವು ಉಂಟು. ಮಹಾಭಾರತಸ್ಥ ಸರ್ಪಯಾಗದ ಇಂದ್ರ-ತ್ವಷ್ಟಾರ ಕಥೆಯು ಸುಫಲೀಕರಣ ಸಂಪ್ರದಾಯದ ಕಥೆಯಾಗಿದೆ. ಇದು ಹಿಟ್ಟೈಟ್ ಕ್ಯಾನಾನ್ ಇಜಿಪ್ತದತ್ತಣೆನ ಕಥೆಯನ್ನು ಹೋಲುತ್ತದೆ, ಕ್ಯಾನಾನ ಭಾಗದ ಕಥೆ ಕ್ರಿ. ಪೂ. ೧೪೦೦-೧೮೦೦ ಸುಮಾರಿನದು. ಆದರೆ, ಮೂಲ ಋಗ್ವೇದದ ವೃತ್ರಹನ್ ಇಂದ್ರನ ಕಥೆ ಗ್ರೀಕಿನ ಸೈಕ್ಲೋಪಸ್ ಸಂಹಾರಿ ಒಡೆಸಿಸ್, ಹಾಗೂ ಹೈಡ್ರಾ ಏಳುಹೆಡೆ ನಾಗನನ್ನು ಕೊಂದ ಹಿರಾಕ್ಲಿಸ್ ಹೋಲಿಕೆಯದು. ಇದು ಸುಮೇರಿನ ಅಪ್ಸುಹಂತಕ ಎಂಕಿ ಕಥೆಯ ಹೋಲಿಕೆಯದೇ ಆಗಿದೆ. ಹಿರಾಕ್ಲಿಸನ ಕಥೆ ಸುಮೇರಿನ ೫೦೦೦ ವರುಷಗಳ ಹಿಂದಿನ ಕಥೆ ಆಗಿದೆ ಎಂದು ಅಲ್ಲಿಯ ತಜ್ಞರು ಹೇಳಿದ್ದಾರೆ.

ಆದರೆ, ಹಿರಾಕ್ಲಿಸ್, ಒಡೆಸಿಸ್, ಅಹುರ್‌ಮಝ್ದ ಈ ಪಾತ್ರಗಳಿಗಿಂತ ಮೂಲ ಋಗ್ವೇದದ ಅಹಿಹನ್ ಇಂದ್ರನ ಪಾತ್ರ ರಚನೆಯ ವೈಶಿಷ್ಟ್ಯವು ಬೇರೆಯಿದೆ. ಈ ಇಂದ್ರನು 'ಸವಿತೃ' (ಸೂರ್ಯನ) ಪರ್ಯಾಯ: ಋತಸ್ವರೂಪೀ ಸತ್ಯದ ಭೂಮಿಕೆಯ ಪ್ರತಿಮೆ. ಅಹುರ್‌ಮಝ್ದನು ಕೇವಲ ಅಶ=ಋತದೊಡನೆ ಸಂಬದ್ಧನಿದ್ದಾನೆ. ಆದರೆ ಋತ: ಸತ್ಯದ ಭೂಮಿಕೆಯಲ್ಲಿ ಹಗಲಿನಂತೆ ಇರುಳಿಗೂ ಸ್ಥಾನವಿದೆ! ಕೇವಲ ಋತ ಹಗಲು ಎಂದಲ್ಲಿ ಇದೂ ಏಕಂ ಸತ್ ಸ್ವರೂಪೀ ಮೃತ್ಯುದೇವತೆಯ ಆರಾಧನೆಯೆ ಆಗುತ್ತದೆ. ಇಲ್ಲಿ ಇನ್ನೂ ಒಂದು ವೈಶಿಷ್ಟ್ಯ : ಸೌರ ಅಥವಾ ಪ್ರಕಾಶ ದೈವತಗಳು ಹಿರಣ್ಯಗರ್ಭದೇವನಂತಹ ಸೃಜನದ ಸೇಚನದ ದೈವತಗಳಲ್ಲ.

---

* ಮಹಾಭಾರತದ ಅಹಲ್ಯೆಯ ಕಥೆಯ ಆಕೃತಿ ಇದಕ್ಕೆ ಸಾಕ್ಷಿ. ಮನೆಗೆ ಬಂದ ಅತಿಥಿಗೆ, ಗುರುವಿಗೆ, ಪತ್ನಿ (ಅಥವಾ) ಸ್ತ್ರೀ ಅರ್ಪಿಸಿ ಗೌರವಿಸುವ ಕಥೆ ಅದು. ಇಂಥ ನಡೆವಳಿ ಇರುವ ಪ್ರಾಥಮಿಕ ಜನಾಂಗಗಳು ಈಗಲೂ ಇದ್ದುದನ್ನು ಮಾನವ ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ. (ಸಂ)

ಭಾಗ - ೭

ನಾಗಪ್ರತಿಮಾರಾಧನೆಯ ವಿಹಂಗಮಾವಲೋಕನ

ಸಾಂಕೇತಿಕ ಚಿತ್ರಸೂಚಿ

ಸಾಂಕೇತಿಕ ಪ್ರತಿಮಾ : ಚಿತ್ರಗಳ ವಿವರಣೆ

ಚಿತ್ರ ನಂ. ೧

ಮನು-ಜತ್ವಕ್ಕೂ ಮುಂಚಿನ ಹಂತದ ನರ-ನಾರ(ಣ)

ಶ್ರಾವಣ ಶು. ಪಂಚಮೀ ನಾಗಾರಾಧನೆಗೆ ಮೀಸಲು. ಆದರೂ ನಿಜವಾಗಿ, 'ಚೌತಿ'ಯಂದೇ ನಾಗನ ಪೂಜೆ! ಆದರೆ, ಗಣ-ಪತಿಯ ಅನುಷ್ಠಾನಕ್ಕೆ ಚತುರ್ಥಿಯೇ ಯುಕ್ತವೆಂದು ಬಗೆವ ವಾಡಿಕೆ ಪ್ರಭಾವಶಾಲಿಯಾಯ್ತು. ನಾಗನ ಪಾಲಿಗೆ 'ಪಂಚಮಿ' ಬಂತು. ಆದರೆ ಈ 'ಪಂಚತ್ವ'ದಲ್ಲಿಯೂ ಔಚಿತ್ಯವನ್ನು ಕಲ್ಪಸಲಾಗಿದೆ. ಗಣ-ಪತಿ: ಚತುರ್ಥಿ : ನಾಗ ಮತ್ತು ಚಂದ್ರ ಇವುಗಳೊಳಗಿನ ಅನ್ಯೋನ್ಯ ಸಂಬಂಧವು ಸಂಸ್ಮರಣೀಯವಿದೆ. ಗಣೇಶ ಚತುರ್ಥಿಯಂದು, ಚಂದ್ರನ ಮೋರೆ ನೋಡಲಾಗದೆಂಬ ನಡೆವಳಿಯಿದೆ! ಚಂದ್ರನಿಗೂ ಗಣ-ಪತಿಗೂ ಹಗೆತನ ಸೂಚಿಸುವ ಕಥೆ ನಿರ್ಮಿಸಲಾಗಿದೆ! ಆದರೆ 'ಭಾಲ (: ಬಾಲ) ಚಂದ್ರೋ ಗಜಾನನಃ' ಎಂಬ ಸಾಂಪ್ರದಾಯಿಕ ಶ್ಲೋಕವೂ ಇದೆ! ಭಾಲದಲ್ಲಿ ಚಂದ್ರ ಎಂಬಲ್ಲಿಯೂ ಮೂಲ ಸಂಕೇತ ಮಸುಕಾಗಿದೆ. ನಿಜವಾಗಿ ಗಣಪತಿಯನ್ನು ಏಕ-ದಂತನಾಗಿ ಕಲ್ಪಿಸಿದ್ದು ಚಂದ್ರನ ಬಾಲ : ಕು-ಮಾರ ರೂಪವನ್ನು ಕಂಡು. ಆದರೆ ಗಣಪತಿ ಮತ್ತು ಚಂದ್ರ ಇವರಲ್ಲಿ ವೈರ ಎಂಬ ಭಾವನೆ ಹುಟ್ಟಿಸಲಾಗಿದೆ!

ಏನೆಲ್ಲಕ್ಕೂ ಪ್ರಾರಂಭ ಗಣಪತಿ ಪೂಜೆಯಿಂದ. ಆದಿ-ದೈವತ-ಶಕ್ತಿ 'ಗಣಪತಿ'ಯೇ ಎಂಬ ಶ್ರದ್ಧೆಯಿದೆ. 'ಗಣಾನಾಂ ತ್ವಾಂ ಗಣಪತಿಂ ಹವಾಮಹೇ'.... ಎಂಬ ಋಕ್ಕು, ಬ್ರಹ್ಮಣಸ್ಪತಿ - ಗಣಪತಿ ಇವರಲ್ಲಿ ಐಕ್ಯ ಸೂಚಕವಿದೆ. 'ಬ್ರಹ್ಮಾದ್ರೇವಾನಾಂ' ಎಂದು ಸ್ತೋತ್ರಮಾಡಿದ ಸೋಮನಾಮಾಂತರದ ದೇವರು ಚಂದ್ರನು! 'ಆದಿ-ಗಣಪತಿ' ಎಂಬಲ್ಲಿ ಈ ದೇವರು 'ಆದಿಶೇಷ' ಎಂದು ಒಪ್ಪಿದಂತಿದೆ ! ಗಣಪತಿಯ ಪ್ರತಿಮಾ ನಿರ್ಮಿತಿಯಲ್ಲಿ ನಾಗಶಕ್ತಿ ಸೂಚಕ ಸಂಕೇತಗಳೇ ಹೆಚ್ಚು! ಗಣ-ಪತಿಯೆ ಮೂರ್ತಿಮಂತ ನಾಗ-ಶಕ್ತಿ. ಕೆಡುಕಿನಿಂದ ಕೂಡಿದ ಒಳಿತಿನ ಕೃತಿ ನಾಗಶಕ್ತಿಯ ವೈಶಿಷ್ಟ್ಯ. 'ಅಮೃತಂ ಚೈವ ಮೃತ್ಯುಃ ಚ' ಈ ಉಭಯ ಶಕ್ತಿಸೂಚಕ ಇನ್ನಾಲಗೆಯ ಅಥವಾ ಇಬ್ಬಗೆಯ ಏಕಾತ್ಮಕ ಶಕ್ತಿಯೆ ನಾಗದೈವತ. ಈ ದೃಷ್ಟಿಯಿಂದ 'ವಿಘ್ನ - ಕರ್ತನೂ' 'ವಿಘ್ನಹರ್ತನೂ' ಎಂಬ ಗಣ-ಪತಿ ನಾಗದೇವನು ಅಲ್ಲ, ಎಂದು ಹೇಳುವವರು ತಾವೂ ಇನ್ನಾಲಗೆಯವರೇ, ಎಂಬುದನ್ನು ಪರ್ಯಾಯದಿಂದ ವ್ಯಕ್ತಪಡಿಸುತ್ತಾರೆ.

ನರ-ಸಂತಾನ ನೀರಿನ ಜಂತು: ಆಪೋ ವೈ ನರಸೂನವಃ ! ಗರ್ಭಸ್ಥ ಹಸುಳೆಯನ್ನು ಸರೀ-ಸೃಪ : ನಾಗಮರಿ ಎಂದು ಬಗೆಯುತ್ತಿದ್ದ ಯುಗದ ದೈವತಗಳು ಇವು. ಜರತ್ಕಾರು : ನಾಗ; ಜರತ್ಕಾರು ಪತ್ನಿ = ಮಾನಸಿ : ನಾಗಿ ಇವರ ಸುಪುತ್ರ ಆಸ್ತಿಕ ! ಎಂಬ ಕಥೆ ಸೃಜಿಸಿರುವಲ್ಲಿ ನರನ ಜಂತುತ್ವದ- ಸರ್ಪತ್ವದ ನೆನಹನ್ನೇ ದೃಢಪಡಿಸುವ ಉದ್ದೇಶ ಮೇಲೆಯೆ ಕಾಣುತ್ತಿದೆ. 'ಕಾಲೋಽಸ್ಮಿ' ಎಂದು ಸಾರುವ ಭಗ-ವಂತ (ನಾಗ-ಶಯನ ವಿಷ್ಣು:) ಕೃಷ್ಣನು ಗೀತೆಯ ಮೂಲಕ ಬೋಧಿಸಿದ್ದುದು 'ನರ'ನಿಗೆ! ನಾಗ: ನಾರಾಯಣ. ಅಶ್ವತ್ಥ : ಪುರುಷನು ಮೃತ್ಯು ಆಗಿರುವಂತೆ, ಸಂತಾನ

ಕರುಣಿಸುವ ದೇವರೂ ಈತನೇ! 'ವಾಗರ್ಥಾವಿವ' ಸಂಪೃಕ್ತ ನಾಗಮಿಥುನಗಳ ಕಲ್ಲುಗಳನ್ನು ಭಾವುಕರು ಹರಕೆ ತೀರಿಸಲು, ಅಶ್ವತ್ಥದ ಕೆಳಗೆ ಇರಿಸುವ ವಾಡಿಕೆ, ಈ ಚಿತ್ರದಲ್ಲಿ ನೋಡಲು ದೊರೆಯುತ್ತಿದೆ.

ಮೃತ್ಯುಶಕ್ತಿಯ ಪ್ರತೀಕ ಸರ್ಪವನ್ನು = ವಿಘ್ನಕರ್ತನೂ ಆಗಿರುವ ಗಣಪತಿಯನ್ನು, ದೈವತ ಎಂದು ಆರಾಧಿಸಲು, ಮನು-ಜನ ವಿವೇಕಶಕ್ತಿ-ವಿಚಾರ ಶಕ್ತಿ ಆಕ್ಷೇಪಿಸದೆ ಇರಲು ಅಶಕ್ಯ. ವಿಶ್ವಸ್ಥ ದುಷ್ಟಶಕ್ತಿಯ ದಮನ ಮಾಡುವುದಕ್ಕಾಗಿ ಹೋರುವಲ್ಲಿ ಮನುಷ್ಯತ್ವವು ಪ್ರತೀತಿಗೆ ಬರುತ್ತದೆ. ವೈಯಕ್ತಿಕ ಸ್ವಾರ್ಥಕ್ಕಾಗಿ ಯಾರಿಗೂ ದಮ್ಮಯ್ಯ ಎನ್ನಲು ಸಿದ್ಧವಿರುವ ಜೀವಿ, ಸರ ಜಂತುವು. ವಿನಾಶಕ ಶಕ್ತಿಗೆ ಹೆದರಿ ಅದಕ್ಕೆ ತಲೆಬಾಗುವಲ್ಲಿ ವಿವೇಕಕ್ಕೂ - ಮನು-ಜತ್ವಕ್ಕೂ ತಿಲಾಂಜಲಿಯನ್ನಿತ್ತಂತೆಯೆ ಸರಿ. ನಿಸರ್ಗದಲ್ಲಿ 'ಅಮೃತ - ಮೃತ್ಯು' ಎರಡೂ ಬೆರೆತಿವೆ. ಆದರೆ, ಅದಿರಿನೊಳಗಿಂದ ಮೌಲಿಕ ಬಂಗಾರ ಬೇರ್ಪಡಿಸುವಂತೆ, ಜೀವನದೊಳಗಿನ ಮೃತ್ಯುವಿನ ಭಾಗವನ್ನು ಶಕ್ಯವಿರುವಷ್ಟು ದೂರವಿರಿಸಿ, ಅಮೃತವನ್ನು ಸ್ವಾಗತಿಸುವಲ್ಲಿಯೆ ಮನು-ಜನ ಸಂಸ್ಕೃತಿಯ ಏಳ್ಗೆಯಿದೆ. ಆದರೆ ನಮ್ಮ ಪುರಾತನರು ಕಲ್ಪಿಸಿರುವ ದಿವ್ಯಾಧ್ಯಾತ್ಮ-ದೈವತ ವಿಚಾರವು, ಮನು-ಜತ್ವದ ದಾರಿಯಲ್ಲಿ ಮುನ್ನಡೆಯಲು ಆತಂಕಕಾರಿಯಾದ 'ಅರಣ್ಯಾಯನ'ದ 'ಅಶ್ವ-ತ್ಥ! ಸಿದ್ಧಿಯ ಆಮಿಷ ಒಡ್ಡಿದೆ!

ಚಿತ್ರ ನಂ. ೨

ವಿಶ್ವದ ಅಧಿ-ಅಕ್ಷ: ಚಕ್ರ-ವರ್ತಿನ್ : ನಾಗ ರಾ-ಜನ್

ವಾತಾಪೀ ಪುರವರಾಧೀಶ್ವರರು ದಕ್ಷಿಣಾಪಥ ಚಕ್ರವರ್ತಿಗಳು. ಇವರು ಸಪ್ತಮಾತೃಕೆಗಳಿಂದಲೂ, ಕಾರ್ತಿಕೇಯ ನಿಂದಲೂ ಪರಿರಕ್ಷಿತರು ಭಗವನ್ನಾರಾಯಣ ಪ್ರಸಾದಲಬ್ಧರು ಆದ ಚಳುಕ್ಯರು ನಿರ್ಮಿಸಿದ ಮೊದಲ ಗುಹೆಯ ಛತ್ತಿನಲ್ಲಿ ಈ ಪಂಚಮುಖ ನಾಗ ಪ್ರತಿಮೆಯಿದೆ! ಈ ಪ್ರಪಂಚವೆ ಒಂದು 'ಅಹಿಛತ್ರ' ಎಂಬ ಹಾಗಿನ ಸಾಂಕೇತಿಕತೆ ಇಲ್ಲಿದೆ. ಬನವಾಸಿಯಲ್ಲಿ ಹೆಡೆಯೆತ್ತಿನಿಂತ ದಕ್ಷ : ಪಂಚ-ಮುಖ ನಾಗನ ಪ್ರತಿಮೆಯಿರುವ ಪ್ರಾಕೃತ ಭಾಷೆಯ ಪುರಾತನ ಶಾಸನವಿದೆ. ಬಾದಾಮಿಯದೂ ಪಂಚಮುಖ ನಾಗ. ನಿಜವಾಗಿ ಇದುವೆ ಪಂಚಮೀ ನಾಗ. ವಿಶ್ವದ ಅಧಿ-ಅಕ್ಷ : ಭಗ-ವಂತ ಎಂದರೆ ನಾಗನೇ, ಎಂದು ಏಕಂ: ಸತ್ ಸಂಪ್ರದಾಯದ ಮೂಲಭೂತ ಶ್ರದ್ಧೆ. ನಾಲ್ಕೂ ದಿಕ್ಕುಗಳನ್ನು ದಿಗಂಗನೆಯರನ್ನಾಗಿ ಭಾವಿಸಲಾಗಿದ್ದೂ ಉಂಟು. 'ಚತುಷ್-ಕಪರ್ದಾ ಯುವತಿ' ಎಂಬ ರೂಪಕ ಋ. ವೇದದಲ್ಲಿದೆ; 'ಏಕಂ ಸತಂ' ಶಕ್ತಿಯ ಮಾಹಾತ್ಮ್ಯ ವರ್ಣನೆಯ ಸೂಕ್ತದಲ್ಲಿ ಈ ರೂಪಕವಿದೆ. ತಾನು ರಾಜ-ರಾಜನೆಂದು ಹೇಳಿಕೊಳ್ಳಲು ಭೂ-ಮಂಡಲ-ಚಕ್ರವರ್ತಿ, ಚತುಃಸಮುದ್ರವಲಯಾಂಕಿತ ಪೃಥಿವೀ ವಲ್ಲಭ.... ಎಂದು ಹೇಳಿಕೊಳ್ಳುತ್ತಿದ್ದ ಈ ಸಾಂಪ್ರದಾಯಿಕ ಶಬ್ದ-ಪ್ರತಿಮೆಗಳ ಗರ್ಭಿತಾರ್ಥದ ಆಕೃತಿಯು, ಋಗ್ವೇದದ 'ಅಪಾಂನಪ್ತ್ರ'ದೇವನ ಅಥವಾ 'ಪವಮಾನ ಸೋಮನ' ಆಕೃತಿಯನ್ನು ಹೋಲುತ್ತಿದೆ. ಇಜಿಪ್ತಿನಲ್ಲಿಯೂ 'ನಾಲ್ಕು' ಈ ಸಂಖ್ಯೆಯು ರಹಸ್ಯಾರ್ಥಯುಕ್ತವಿತ್ತು.

ಅಮೂರ್ತ 'ರಾ-ಜನ್' ಎಂದರೆ, ಅದು ಚಂದ್ರ (: ಚಂದಾಃ ಆಪಃ) ಶಕ್ತಿಯ ಮೂರ್ತರೂಪ. ಇದು 'ತತ್' - ಮಯತೆಗೆ ಆಮಂತ್ರಿಸುವ ಶಕ್ತಿ; ಆದಕಾರಣ; ಪರಿಣಾಮತಃ 'ರಾತ್ರೀ' ಸಮಯ : ಆಚಾರ ಪ್ರೇರಕ ಶಕ್ತಿ, ಭಯಾವಹ, ಆ-ಕರ್ಷಕ ಶಕ್ತಿ. ಪ್ರತಿ ತಿಂಗಳ ವದ್ಯ ಚತುರ್ಥಿಗೆ (: ಚಂದ್ರ ಶಕ್ತಿ) 'ಸಂಕಷ್ಟಿ' ಎಂದು ಹೆಸರು ಬಂದಿದೆ! 'ಚತುಷ್ಪಯರು' ಎಂಬಲ್ಲಿ ದುಷ್ಟರು ಎಂಬ ಧ್ವನ್ಯರ್ಥವಿದೆ! ಏಕಾತ್ಮಕ ನಾಲ್ಕು ದಿಕ್ಕು= ಏಕಂ ಸತ್ : ಪ್ರಳಯ ಬೇರೆ ಅಲ್ಲ! 'ಶ್ವೇತದೀಪಸ್ಥ (ಚಂದ್ರ) ನಾರಾಯಣನು ಚತುಷ್ಕ ಮುಷ್ಕನೆಂದು ವರ್ಣಿತನಾಗಿದ್ದಾನೆ

ನಾಲ್ಕರಂತೆ, ಇದರ ಇಮ್ಮಡಿ ('ಅಷ್ಟ' :) ಎಂಟರ ಬಗೆಗಿನ ಗ್ರಹಿಕೆಗಳೂ ಅಭ್ಯಸನೀಯವಾಗಿವೆ.ನಾಲ್ಕೂ ದಿಕ್ಕುಗಳ ಅಧಿಪತಿ ಇವನೇ. ಅಧಿ ಅಕ್ಷ ಲೋಕಕ್ಕೆ! ಇದು 'ಅಂತರಿಕ್ಷ' : ಚಕ್ಷು (: ಚಂದ್ರ) ಆಗುತ್ತದೆ: 'ದಿವೀವ ಚಕ್ಷುಃ ಆತತಂ'! ದಿಕ್-ಗಜ ಎಂಬುದು ವ್ಯತ್ಯಸ್ತ ಸಂಕೇತ. ಪುರಾತನ ಸಂಪ್ರದಾಯದಂತೆ ಇದು ನಾಗ (: ಸರ್ಪ)ವೇ; 'ನಾಗ'ದ ಬಗೆಗಿನ ತಿರಸ್ಕಾರ ಹೆಚ್ಚಾಗಲು 'ನಾಗ' 'ಹಸ್ತಿನ್' ಆದ! 'ಅಳಿಯನಲ್ಲ, ಮಗಳಗಂಡ' ಎಂಬ ಜಾನಪದವಿನೋದ ಈ (ಚಂದ್ರ-)ಮಾಮ ಬಗೆಗೆ ಉಂಟು. ದಿಕ್ಕು ನಾಲ್ಕು; ಉಪದಿಕ್ಕು ನಾಲ್ಕು = 'ಅಷ್ಟ'ದಿಕ್ಪಾಲಕರು ! ಅಂತರಿಕ್ಷ ಸೇರಿ ೯ ದಿಕ್ಕು; ಭೂಮಿ ಸೇರಿ 'ದಶ'ದಿಕ್ಕು ! ಈ ವೃತ್ತಿಯನ್ನು, ವೃತ್ರಾ ಕೃತಿಯಾಗಿ ಎಲ್ಲವನ್ನೂ ತಾನೇ ನುಂಗುವ ಪ್ರವೃತ್ತಿಯನ್ನು ಅಸುರ 'ವೃತ್ರ'ನೆಂಬ ಮೂರ್ತ ಪ್ರತಿಮೆಯಾಗಿ ಕಲ್ಪಿಸಿರುವಲ್ಲಿ ತುಂಬ ಔಚಿತ್ಯವಿದೆ. ಸರ್ವಾವರಕ 'ವೃತ್ರ'ನು, ಕತ್ತಲೆಯನ್ನುಂಟುಮಾಡುವ 'ಅಹಿ'=ಪಾಪಿ ಎಂದು ಬಗೆಯಲಾಗಿತ್ತು. ವೃತ್ರಶಕ್ತಿ : ಏಕಂ : ಸತ್ (ಸತ್ವನ್) ಇವು ಒಂದೇ ಆಶಯದ ಎರಡು ಪರ್ಯಾಯ ನಾಮಗಳು. ಇದು ಉಭಯಲಿಂಗೀ 'ವಾಗರ್ಥಾವಿವ ಸಂಪೃಕ್ತ' ನಿತ್ಯ ಏಕಾತ್ಮಕಶಕ್ತಿ.

ಚಿತ್ರ ನಂ. ೩

ಆದಿಶಕ್ತಿ ರೂಪಗಳಲ್ಲಿ ಅಗ್ರಜಳು : ಅಂತರಿಕ್ಷದೇವಿ (ಇಜಿಪ್ತಿನ ನಟ್, ಋ. ವೇದದ ದ್ಯೌಃ)

ಈಜಿಪ್ಟ್‌ನ ನಟ್ (: Sky-Goddess) ಪ್ರತಿಮಾ ಚಿತ್ರವು. ಋಗ್ ವೇದದ ದೇವಿಯರ ರೂಪ ಆಕೃತಿಯ ಬಗೆಗಿನ ಸಾಂಕೇತಿಕತೆಯನ್ನು ಗ್ರಹಿಸಿಕೊಳ್ಳಲು ತುಂಬ ಪ್ರಯೋಜನಕಾರಿಯಾಗಿದೆ. ಋಗ್ ವೇದದಲ್ಲಿ ದ್ಯಾವಾ-ಭೂಮಿ ಇದು ಸಂಯುಕ್ತ. 'ವಾಗರ್ಥಾವಿವ ಸಂಪೃಕ್ತ' ದೈವತ; ಇಜಿಪ್ತಿನಲ್ಲಿಯೂ ಆದಿಯಲ್ಲಿ ನಟ್-ಗೆಬ್ ಸಂಯುಕ್ತ ದೈವತವೇ ಇದರ ಅಗಲುವಿಕೆಗೆ ಕಾರಣನು, ಇಜಿಪ್ತಿನಲ್ಲಿ 'ಶು'ದೇವ (: ಟೆಫ್ನ ನಟ್ ಸ್ತ್ರೀ.). 'ಶು'ದೈತವು ವಾತ-ಶಲಿಲಿರೂಪ- (Air and moisture). ಭಾರತೀಯ ಆರ್ದ್ರ (: ಸೋಮ) ಪವಮಾನ: ಮಾತರಿ-ಶ್ವನ್ (ತಾಯ ಒಡಲಲ್ಲಿ ಉಸಿರಾಡಿಸುವ) ಸರೀಸೃಪ ಶಕ್ತಿ. ಈ ಮುಖ್ಯ ಪ್ರಾಣನು ಸುಮೇರಿನ ಎನಲಿಲ್ (=ಅನಿಲ); ಅಸು (ಅಂತರಿಕ್ಷ) ಪುತ್ರ. ಭಾರತದ ದ್ಯಾವಾ-ಪ್ರಥಿವೀ ಮತ್ತು ಇಜಿಪ್ತಿನ ನಟ್-ಗೆಬ್ ಈ ಜೋಡಿಗಳಲ್ಲಿ ಇನ್ನೊಂದು ಸಾಮ್ಯವಿದೆ. ದ್ಯೌಃ ಈಗ ಪುಲ್ಲಿಂಗೀ, ಝೀವುಸ್-ಜ್ಯು-ಪಿತರ್ ಎನಿಸಿದರೂ, ಮೊದಲಲ್ಲಿ, ಮಾತೃಸ್ಥಾನದಲ್ಲಿ ಎಣಿಸಲ್ಪಟ್ಟಿತ್ತು! ಆದರೆ, ಈಜಿಪ್ಟಿನಲ್ಲಿ ಮಾತ್ರ ನಟ್, ಎಂದೂ ಪುಲ್ಲಿಂಗಿಯಾಗಿ ಮಾರ್ಪಡಲಿಲ್ಲ. ಭಾರತದಲ್ಲಿ 'ದೌಃ' ಆಪ: ರಸಯುಕ್ತ 'ಅಂತರಿಕ್ಷ' ರೋದಸೀ ಸಂಜ್ಞೆಯ ಲೋಕ.

ಸೌರ ತಾತ್ವಿಕ ಭೂಮಿಕೆಯಂತೆ ಆ-ಕಾಶ, ಅಂತರಿಕ್ಷವಲ್ಲ. ಪ್ರಮುಖ ವ್ಯಾಹೃತಿಗಳು ಮೂರೇ ಮೂರು, ಭೂಃ, ಭುವಃ ಮತ್ತು ಸುವಃ ಆಕಾಶ = ಪ್ರಕಾಶಲೋಕ. ಇವುಗಳಲ್ಲಿ ಮೊದಲಿನ ಎರಡರಲ್ಲಿ ಅಂಗಾಂಗೀ ಭಾವವಿದೆ. ಆದರೆ, ಸುವಃ ಇದು ತೇಜ: ಪ್ರಕಾಶ ತತ್ತ್ವ, ನಿರಾಲಂಬ; ಜ್ಞಾನ ಸ್ವರೂಪ : ಸ್ವಯಂ ಪ್ರಕಾಶರೂಪ. ಆಕಾಶಾತ್ (: ಅಂತರಿಕ್ಷಾತ್) ವಾಯುಃ, ವಾಯೋಃ ಅಗ್ನಿ, ಅಗ್ನೇಃ ಆಪಃ, ಅದ್ಭ್ಯಃ ಪೃಥಿವೀ ಈ ಬಗೆಯ ಜನ್ಯ-ಜನಕ ಸಂಬಂಧವು ಸುವಃ ಭೂಮಿಕೆಯಲ್ಲಿ ಇಲ್ಲ. ಆದರೆ, ಆಪ : ರಸ ಪಂಥೀಯ ಇಂದಿನ ಪಾಠದಲ್ಲಿ, ದಿವ್ಯಲೋಕವು, ಮಧ್ಯಲೋಕ ಭುವಃ ಮತ್ತು ಭೂಲೋಕದಿಂದ ಸ್ವತಂತ್ರವಿರುವ ಹಾಗಿನ ಭೂಮಿಕೆಯೇ ಉಳಿದಿಲ್ಲ! ವಿವಸ್ವಂತ ಲೋಕದ ವರ್ಣನೆ ಮೃತಾತ್ಮಗಳ ಲೋಕವೆಂಬ ಹಾಗಿನ ವರ್ಣನೆ ಆಗಿದೆ ಇದನ್ನು ಸೋಮ (: ಚಂದ್ರ) ಸೂಕ್ತಗಳ ಮಂಡಲದಲ್ಲಿ ಸೇರಿಸಲಾಗಿದೆ! ಎಂದರೆ ಇದು ಚಂದ್ರಲೋಕವೇ ಆಯ್ತು ! ಈ ಕಾರಣದಿಂದಾಗಿ 'ಅಂತರಿಕ್ಷ' = ಮಧ್ಯಲೋಕ (O) ಈ ಬಗೆಯ ವೈಚಾರಿಕ ಆಕೃತಿಗೆ, ಸೌರಭೂಮಿಕೆಯ ವ್ಯಾಹೃತಿತ್ರಯದ ವಿಭಜನೆಯಲ್ಲಿ ಅವಕಾಶವೆ ಇಲ್ಲ. ಆಪ ಸಂಪ್ರದಾಯವು ಮೂರೂ ವ್ಯಾಹೃತಿಗಳಲ್ಲಿ ಅಂಗಾಂಗೀ ಸಂಬಂಧ ಕಲ್ಪಿಸಲು ಕಾರಣವಿದೆ. ವಿಶ್ವದೇಹದ ಮಧ್ಯ ಭಾಗವು, ಪಿಂಡ-ಬ್ರಹ್ಮಾಂಡ-ಸಂಬಂಧದಲ್ಲಿ ಮಾನವ ದೇಹದ ಮಧ್ಯಭಾಗವಾಗುತ್ತದೆ. ದಿವ್ಯದೈವತಗಳು ಅಂತರಿಕ್ಷ: ಸಲಿಲ = ಮಧ್ಯದಲ್ಲಿ ವಾಸವಾಗಿರುತ್ತವೆ, ಎಂಬ ವರ್ಣನೆ ಮಾನವರ ಗುಹ್ಯಾಂಗದ ವರ್ಣನೆಯೂ ಆಗಿಬಿಡುತ್ತದೆ! ಇಂದಿನ ಸಂಹಿತೆಯೊಳಗಿನ ಈ ತಂತ್ರ ಬೆಳಕಿಗೆ ಬರಬೇಕಾಗಿದೆ.

'ಏಕಂ : ಸತ್ ಬಹುಧಾ ವದಂತಿ' ಈ ಶ್ರದ್ಧಾಮಯ ದೃಷ್ಟಿಗೆ ಆ-ಕಾಶ ಮತ್ತು ಅಂತರಿಕ್ಷ (ಅಂತರ್-ಇಕ್ಷ) ಬೇರೆ ಇರಲಾರದು. ಆದರೆ, ಈ ಶಬ್ದ ಪ್ರತಿಮೆಗಳು ಒಳಗೊಳ್ಳುವ ಚಿತ್ರ=ಅರ್ಥವು ಸಮಾನ ಆಕೃತಿ ರೂಪದ್ದು ಇಲ್ಲ. ಆ-ಕಾಶ ಎಂಬಲ್ಲಿ ಪ್ರಕಾಶತತ್ತ್ವವು ಅಭಿಪ್ರೇತವಿದೆ. 'ಅಂತರಿಕ್ಷ' ಈ ಪದ ಪ್ರಯೋಗಗಳಲ್ಲಿ ಅಭಿಪ್ರೇತವಿರುವ ಅರ್ಥದಲ್ಲಿ ಅಂತರ್-ಅಂಗದ ಸೂಚಕತೆಯಿದೆ. ವಾಗಾಂಭೃಣೆಯು ತಾನು 'ಅಪ್ಸು' (ನೀರಲ್ಲಿ) ಹುಟ್ಟಿದೆ, ಎಂದು ಇಷ್ಟೆ ಹೇಳಿದ್ದರೂ ಆಗಬಹುದಿತ್ತು; 'ಅಪ್ಸು' - ಅಂತಃ ಸಮುದ್ರೇ ಮಮ. ಯೋನಿಃ ಎಂದು ವಿವರಿಸಿದ್ದಾಳೆ. ಈ 'ಅಂತಃ ಸಮುದ್ರ'ವೇ : 'ಅಂತರಿಕ್ಷ' ಭಾಷ್ಯಕಾರರು 'ಸಮುದ್ರ' ಪದವನ್ನು ಪೃಥಕ್ಕರಿಸುತ್ತಾರೆ: ಸಮ್-ಉತ್-ದ್ರವ (: ಸಮ್ಯಕ್ ದ್ರವವು : ಸಲಿಲವು, 'ಉತ್ ' ಮೇಲಕ್ಕೆ ಚಿಮ್ಮುತ್ತದೆ), ಎಂಬ ಗರ್ಭಿತಾರ್ಥವಾಗುವಂತೆ ಬಿಡಿಸಿ ಹೇಳುತ್ತಾರೆ.

ಆದಕಾರಣ 'ಅಂತಃಸಮುದ್ರ' ಅಥವಾ 'ಅಂತರಿಕ್ಷ'ದ ಈ ದೇವಿಯನ್ನು ('ಮಧ್ಯಮಾ'): ವಾಕ್ (:ಬಾಯಿ?) ದೇವಿ ಎಂದು ಅಂದಿನ ಕವಿ 'ಸಮಯ' ಗ್ರಹಿಸಿತ್ತು! 'ಸಮುದ್ರ ಜ್ಯೇಷ್ಠಾಃ (ಆಪಃ), ಸಲಿಲಸ್ಯ ಮಧ್ಯಾತ್ ಯಂತಿ'. ಈ ಸಂ ಉತ್ ದ್ರವಯುಕ್ತ ಆಪ = ಸಲಿಲ ಇದುವೆ ಜ್ಯೇಷ್ಠ=ಆದಿಮ, ಶ್ರೇಷ್ಠ. ಇದು 'ಸಲಿಲ'ದ ಮಧ್ಯದಿಂದ ಹೊರಡುತ್ತದೆ. ಈ ಕವಿಯು (: ವಸಿಷ್ಠನು - ವಸುಶ್ರೇಷ್ಠನು) ಬಳಸಿರುವ 'ಸಲಿಲ' ಪ್ರತಿಮೆ ಒಳಗೊಂಡಿರುವ ಅರ್ಥವು, ಭಾಷ್ಯದ ಮೇರೆಗೆ 'ಅಂತರಿಕ್ಷ' ಎಂದು ಉಂಟು. ಅಲ್ಲದೆ ಇನ್ನೂ ಒಂದು ಧ್ವನ್ಯರ್ಥವೂ ಇಲ್ಲಿ ಇದೆ. 'ಸಲಿಲ' ವಾಸನೇಯ ಸಂಹಿತೆಯಲ್ಲಿ ಸರಿಲ, - ಬಳಿಕ ಸರಿರ, ಆಮೇಲೆ ಶರೀರ ಎಂಬ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಋಕ್ಕಿನ 'ಸಲಿಲಸ್ಯ (: ಸರಿರಸ್ಯ) ಮಧ್ಯಾತ್' ಹೊರಬರುವ ಆಪ=ಈ ಮಧ್ಯಮಾ ವಾಕ್ ಪ್ರತಿಮಾ: ಚಿತ್ರ, ಮತ್ತು ಈಜಿಪ್ಟ್‌ನ 'ಅಂತರಿಕ್ಷ' ದೇವಿಯ ಚಿತ್ರ ಇವೆರಡೂ ಅ-ಭಿನ್ನವಿರುವ ಈ ಆಃ ಚರ್ಯೆಯ ಕಾರಣವು ಏನು? ತಜ್ಞರೇ ಹೇಳಬಹುದು.

ಸುಮೇರು ಹಾಗೂ ಭಾರತದ ಅಂತರಿಕ್ಷದೇವಿಯರ ಮೂಲಕ ಸುಮೇರಿನಲ್ಲಿ ಮೇಲಣ ದಿವ್ಯಜಲ (Upper water) ಮತ್ತು ಕೆಳಗಣ ದಿವ್ಯಜಲ (Lower water) ಎಂಬುದರ ಮೂಲಕ ಅರ್ಥವು, ದ್ಯಾವಾ-ಪೃಥಿವೀ ದೈವತದ ಪುರಾತನ ಸಾಂಕೇತಿಕತೆಯ ಹಿನ್ನೆಲೆಯಲ್ಲಿಯೆ ಆಗಬಲ್ಲದು. ಆದರೆ, ಸ್ತ್ರೀಯು ಪಾಪಿ, ಕೆಳಗಿನವಳು ಎಂಬ ಭಾವನೆಯು ಪ್ರಭಾವಶಾಲಿಯಾಗುವುದರೊಡನೆ 'ವರ'ನು (ಪುಂ.) ಮೇಲಣ ಜಲವಾದದ್ದು ಕಾಣುತ್ತದೆ. ಮೇಲಣ ನೀರು (ಅಂಭಸ್, ಕೆಳಗಣ ನೀರು (ಆಪಃ) ಈ ವಿಚಾರ ಸುಮೇರಿನಂತೆ ಭಾರತೀಯ ಸಂಪ್ರದಾಯದಲ್ಲೂ ಇದೇ ಶಿವನ ತಲೆಯ ಮೇಲೆ ಗಂಗೆ (; ಅಂತರಿಕ ಗಂಗೆ); ಈ ಪ್ರತಿಮೆ, ಝುವ್ಹೂಸ್ : ತಂದೆಯ ತಲೆಯಿಂದ ಹುಟ್ಟುವಳೆಂಬ ಅಥೆನೆ ವಾಗಾಂಭೃಣಿಯರ ಪ್ರತಿಮೆಗಳಲ್ಲಿ ಸ್ವಲ್ಪ ಒಡಮೂಡಿದೆ; ಇವು ವಿಷ್ಣುಪಾದದ ಪ್ರತಿಮೆಗೂ ಮುಂಚಿನ ಹಂತದುವು. ಶಂತನುವಿನ ಮೊದಲ ಪ್ರೇಯಸಿ (ಕಂ>) ಗಂಗೆ ದೇವಲೋಕದವಳು. ಇವಳು ವರಿಷ್ಠಳಾಗಿಯೆ ಶಂತನುವನ್ನು ಆಳಿದಳು. ಶಂ ಪತ್ನಿ, ಕಂ=ಚಂದ್ರಾ ಎಂದು ಮಧ್ವಾಚಾರ್ಯ ಹೇಳಿದ್ದಾರೆ. ಎರಡನೆಯ ಸಂಬಂಧದ ಗಂಗೆ ಕೆಳಗಣ ನೀರು! ಶಂತನುವಿನಿಂದಾದ ಚಿತ್ರವೀರ್ಯ ವಿಚಿತ್ರವೀರ್ಯರು ಅಲ್ಪಜೀವಿ ಮರ್ತ್ಯರು! ಈ ಗಂಗೆಯಿಂದಲೇ ಪರಾ-ಶರ (: ಮೇಲಣ) ನೀರಿಂದಾದ ಕೃಷ್ಣದ್ವೈಪಾಯನನನ್ನು ದಿವ್ಯಪುರುಷನಾಗಿ ಚಿತ್ರಿಸಿದ್ದಾಗಿದೆ. ಮೇಲಣ ನೀರು ಕೆಳಗಣ ನೀರು ಈ ಸಂಕೇತಗಳು, ದಿವ್ಯ ಪುರುಷರ=ಗುರುವರ್ಗ ಮತ್ತು ಪಾಮರ ಕಿರುಕುಳ ನರ-ಜಂತುಗಳ ಭಕ್ತವರ್ಗದ ಸೂಚಕವಾಗುತ್ತವೆ. ಕೊನೆಗೆ ಜಾತಿ, ವರ್ಣಭೇದದ ವಿಷ ವಿಚಾರವಾಗಿ ಸಾಮಾಜಿಕ ಜೀವನವನ್ನು ಕಹಿಯಾಗಿಸಿದೆ.

'ಅಂತರಿಕ್ಷ'ದ ಇನ್ನೂ ಕೆಲ ಪರ್ಯಾಯ ಪ್ರತಿಮೆಗಳು ಈ ವೇದದಲ್ಲಿವೆ. ನಭಸ್ (ಮೂಲಾರ್ಥಕ್ಕಾಗಿ ಮೋಯರ್ ವಿಲಿಯಂಸ್ ಕೋಶ ನೋಡಿ); ಇದನ್ನೆ ನಾಭಿಃ ಅಮೃತಸ್ಯ ಎಂದು (ಆದಿತಿ=ಗೌ) ವರ್ಣಿಸಲಾಗಿದೆ. ಆದರೆ 'ನಾಭಿ'ಯ ಹೊಕ್ಕಳು ಎಂಬ ಇತ್ತೀಚಿನ ಅರ್ಥ, ಉಡುಪಿನ ಯುಗದ್ದು. 'ಉಡಿ' ತುಂಬುವಲ್ಲಿ ಸಾಂಕೇತಿಕತೆ ಉಂಟು. ನಾಭಿ-ರಾಜ=ಅಂತರಿಕ್ಷ-ಪತಿ ಚಂದ್ರಮನು! ರೋದಸಿ, ಅಂಬರ (ಡಂಬರ) ಖ(ದ) ಈ ಸಂಕೇತಗಳೂ ತುಲನಾರ್ಹವಾಗಿವೆ. ಚಾಮಸ (: ಪಾನ ಪಾತ್ರೆ) ಊರ್ಧ್ವ ಬುಧ್ನ, ಬಿಲ ಇದರೊಡನೆ ಬಾಸ್ (: ಬಾನಿ) ಹೋ. 'ರಾಜನ್' ಪದವಿಯ ಸಂಕೇತಗಳೆಂದು ಅಬ್ಧಿ ಗಿರಿ(O) ಮತ್ತು ಚಾಮರ=ಕುಚ್ಚು-ಮಯೂರ ಪುಚ್ಛ ತಲೆಯ ಮೇಲೆ ಹಿಡಿವ ವಾಡಿಕೆ ಇಲ್ಲಿ ಅರ್ಥ ಪಡೆಯುತ್ತದೆ. ಕುಂಡ, ಗುಂಡಿ, ಕುಚ್ಚು >ಗುಚ್ಛ-ಕೂರ್ಚ. ಇವುಗಳೊಡನೆ (ಸು)ಖಂ ಮೂಲಾರ್ಥ ವಿಮರ್ಶಿಸಿಕೊಳ್ಳಿ.

ಚಿತ್ರ ನಂ. ೪

ದಿವ್ಯಲೋಕದ ಗೋವು: ಆದಿಮಾತಾರೂಪದಲ್ಲಿ

ಇಜಿಪ್ತಿನ ಹ್ಯಾಥೋರ, ಋಗ್ ವೇದದ ಆದಿತಿಯನ್ನು ಹೋಲುತ್ತಾಳೆ. 'ಅದಿತಿಃ ಗೌಃ, ಅದಿತಿಃ ಅಂತರಿಕ್ಷಂ'. ಅಂತರಿಕ್ಷದೇವಿ ನಟ್ ಬಳಿಕ ಈ ದೇವಿ ದಿವ್ಯಗೋವು : ಹ್ಯಾಥೋರ ರೂಪತಾಳಿದ್ದು ಅಲ್ಲಿಯ ಉಲ್ಲೇಖಗಳಿಂದ ಬೆಳಕಿಗೆ ಬರುತ್ತದೆ. ಆದರೆ ಆದಿತಿಯು ಅ-ಖಂಡಿತ (undifferentiated whole) : ಸಮಗ್ರ ಸ್ವರೂಪದ ಏಕಂ: ಸತ್ ರೂಪಳು. ಈ ಹಂತದ ಈ ವಿಚಾರದಲ್ಲಿ, ಇಜಿಪ್ತಿನ ಮೊದಲ ತನವಿಲ್ಲ. ಈಜಿಪ್ಪಿನ ಗೋರೂಪ ಶಕ್ತಿಯೂ ಆದಿತಿಯಂತೆ ಮೃತ್ಯುದೇವಿಯಾಗಿದ್ದುದರ ಉಲ್ಲೇಖವಿದೆ. ಹ್ಯಾಥೋರ ಗೋವು, 'ರಾ' (ಸೂರ್ಯ) ದೇವನ 'ಕಣ್ಣು' (O) ಆಗುತ್ತಾಳೆ, ಎಂಬ ಈ ಸಾಂಕೇತಿಕತೆ, ಸಾರ್ಪರಾಜ್ಞೀ (: ಗೌ=ಪೃಶ್ನಿ=ಅದಿತಿ) ದೇವಿ 'ಸೂರ್ಯ' (=ಚಕ್ಷು: O) ಆದಳೆಂದು ಋ. ವೇದದ ಸಾಂಕೇತಿಕತೆಯನ್ನು ಹೋಲುತ್ತಿದೆ!

'ಗಾಂ, ಅನಾಗಾಂ ಆದಿತಿಂ, ಮಾ ವಧಿಷ್ಠ . ಗೋಹತ್ಯೆಯನ್ನು ಮಾಡಬೇಡ' ಎಂಬ ಆದೇಶದ ಋಗ್ವವಚನವಿದು. 'ಗೋ' ಎಂಬ ಈ ಸಾಂಕೇತಿಕ ಪ್ರತಿಮೆಯು ಒಳಗೊಂಡಿರುವ ನಿಜವಾದ ಅರ್ಥ=ಚಿತ್ರ, ಚತುಷ್ಪಾದ ಪಶು ಗೋವು ಅಲ್ಲ! ಆದರೆ 'ಗಾಂ.... ಮಾವಧಿಷ್ಠ' ಎಂಬ ಈ ವೇದವು, 'ಪುರಂ-ದರ'ನನ್ನೂ ವೀರ (ವಿಠ್ಠಲ : ವಿಷ್ಣು) ರೂಪದಲ್ಲಿ ಸ್ತೋತ್ರಮಾಡಿದೆ! ಇಲ್ಲದಿದ್ದರೆ 'ಏಕಂ ಸತ್' ತತ್ತ್ವಕ್ಕೇ ಚ್ಯುತಿ ಬರಲಿದೆ! ಅಂತರಿಕ್ಷದ ಈ ದಿವ್ಯಗೋವನ್ನು ಗೌತಮ (ಗೋ-ತಮ), ಗೌತಮಾಗ್ನಿ, ಕಾಮ-ಧೇನು ಎಂದು ಮುಂತಾಗಿ ಬಗೆ ಬಗೆಯ ರೂಪದಲ್ಲಿ ಕಲ್ಪಿಸಲಾಗಿದೆ! ಅಹಲ್ಯಾ-ಗೌತಮರ ರೂಪಕದ ಈ ಮೋಡಿಕಾರ ಮಾಟ ಸೋಜಿಗದ್ದಾಗಿದೆ!

ಗೋ ಪೂಜೆ ಮತ್ತು ವೃಷಭ ಪೂಜೆ ಎರಡೂ ಏಕಕಾಲಕ್ಕೇ ಮೈವೆತ್ತ ಸಮ-ಸಾಮಯಿಕ ಆಚಾರಗಳಲ್ಲ. ಗೋ ರೂಪಳೆಂಬ ಅದಿತಿಯ ಸ್ತೋತ್ರಗಳು ಋಗ್ವೇದದ ಎಲ್ಲ ಮಂಡಲಗಳಲ್ಲಿಯೂ ಇವೆ. ಆದರೆ 'ಪುರುಷ' (: ವೃಷಭ)ನೇ

'ಏಕಂ ಏವ' ಅದ್ವಿತೀಯನು ಎಂದು ವರ್ಣಿತನಾದದ್ದು ಈ ವೇದದ ಅಂತ್ಯದಲ್ಲಿ; ಒಂದೇ ಸೂಕ್ತದಲ್ಲಿ! ಅಂತರಿಕ್ಷಸ್ಥ ಗೋವು ಎಂದರೆ ಮೊದಲಲ್ಲಿ ಚಂದ್ರಳೇ. ತಿಂಗಳು: ಚಂದ್ರ (moon) ಮತ್ತು ತಿಂಗಳ ಮುಟ್ಟಿನ ವಿಚಾರವು, ಮೊದಲು ಕಂಡದ್ದು ಚಂದ್ರ (O) (ಸ್ತ್ರೀ) ರೂಪದಲ್ಲೇ ಎಂಬುದು ನಿರ್ವಿವಾದ. ಬಳಿಕ ಚಂದ್ರ ಉಭಯಲಿಂಗಿಯಾಗುತ್ತಾನೆ. ಇದರ ಮುಂದಿನ ಹಂತದಲ್ಲಿ ಈ 'ಪುರುಷ'ನಿಂದ 'ಸೂರ್ಯ (ಸ್ತ್ರೀ)' ನಾಮ ಸಾರ್ಥಕವಿದ್ದುದನ್ನು ಸಿದ್ಧಪಡಿಸುವ ಪ್ರಯತ್ನವಾದುದೂ ಉಂಟು. ಈಜಿಪ್ಟ್ ಹಾಗೂ ಭಾರತದಲ್ಲಿ ತೆರೆಯ ಮರೆಯಲ್ಲಿ! ಶಶ್ವತ್ ಸೂಯಮಾನತ್ವಾತ್ ಸೂರ್ಯಃ. ಸೂ-ರ್ಯ ವಿಶ್ವ ಜನನಿ ಆಗುವುದರಿಂದ ಸವಿತೃವೂ ಪ್ರಸವ ಕ್ರಿಯೆಯ ಸಾಂಕೇತಿಕ ಪ್ರತಿಮೆಯೇ ಆಗುತ್ತದೆ. 'ಸವಿತಾ ವೈ ಪ್ರಸವಾನಾಂ ಈಶೇ; 'ಸವಿತಾ' ವೈ ದೈವಾನಾಂ ಪ್ರಸವಿತಾ 'ಸವಿತಾ' 'ಪ್ರಸೂತಾ' ರೂಪದಲ್ಲಿ ಕಂಡದ್ದು ವಸಿಷ್ಠ ಪ್ರಣೀತ ಸಂಪ್ರದಾಯಕ್ಕೆ; ಇದರ ಸೂಚನೆಯೂ ಇಲ್ಲಿದೆ.

ಚಂದ್ರನನ್ನು (ಇರುಳಿನಲ್ಲಿ) ಅಂತರಿಕ್ಷದ ಕಣ್ಣು ಎಂಬ ರೂಪದಲ್ಲಿ ಕಂಡು ವರ್ಣಿಸಿದ್ದಾಗಿದೆ. 'ದಿವೀ ಆತತಂ ಚಕ್ಷುಃ ಇವ'. ಆಶಯವನ್ನು ಮುಸುಕಿನ ಮಾತಿನಲ್ಲಿ ಅಡಗಿಸುವುದು ಋಗ್ವೇದದ್ದೇ ಏಕೆ, ಭಾರತೀಯ ಸಾಹಿತ್ಯದ ಒಂದು ವಿಶೇಷ. 'ದಿವೀವ ಚಕ್ಷುಃ' ಎಂಬಲ್ಲಿ ಚಂದ್ರನೇ ಇರುವುದನ್ನು ಹೊರಗೆಡಹುವ ಸೂಚಕಮಾತು ಅಲ್ಲಿಯೆ ಇವೆ. 'ತತ್ ವಿಪ್ರಾಸಃ' ಈ 'ವಿಪ್ರ' ಪ್ರತಿಮೆ 'ಏಕಂ ಸಂತ (: ಸತ್)' ದರ್ಶನ ಪಡೆವ ಅರ್ಹತೆಯ ಭಕ್ತಶಿಖಾಮಣಿ ಎಂಬ ಮೂಲಾರ್ಥದಲ್ಲಿ ಇಲ್ಲಿ ಬಂದಿದೆ ಮತ್ತು 'ದಿವೀವ ಚಕ್ಷುಃ' ಕಾಣುವ ವಿಪ್ರರನ್ನು 'ಜಾಗೃವಾಂಸಃ' - ಜಾಗರದವರು ಎಂದು ನಿರ್ದೇಶಿಸಿದ್ದಾಗಿದೆ.

ಸುಮೇರಿನ ಇನನ್ನದೇವಿಯು ಚಂದ್ರ ಸ್ವರೂಪಳು. ಇವಳು ಏಕವೀರಾ ದೇವಿ, ಸುಮೇರಿನಲ್ಲಿ, ಪುರಾಣ ವಸ್ತು ಸಂಶೋಧಕರಿಗೆ, 'ಕಣ್ಣಮ್ಮ'ನ (ಉಭಯಲಿಂಗೀ) ಪ್ರತಿಮೆಗಳು ದೊರೆತಿವೆ!

ಸುಮೇರು, ಈಜಿಪ್ಟ್ ಹಾಗೂ ಭಾರತ ಈ ಮೂರು ಸಂಸ್ಕೃತಿಗಳಲ್ಲಿ ಕೆಲವೊಂದು ಪುರಾತನ ಸಮಾನ ಸಮಯಗಳು ಇದ್ದುದು ಕಂಡು ಬರುತ್ತಿದೆ, ಇಜಿಪ್ತಿನ 'ಕ' 'ಖ' ಸಾಂಕೇತಿಕ ದಿವ್ಯಶಕ್ತಿಯ ಬಗೆಗಿನ ಶ್ರದ್ಧೆ ಮತ್ತು ಋಗ್ ವೇದದ 'ಕಂ(o) ಖ(o) ಈ ಬೀಜಾಕ್ಷರದಿಂದ ಸೂಚಿತ ದೈವತಗಳ ಬಗೆಗಿನ ಶ್ರದ್ಧೆ ಸಮಾನ ಆಕೃತಿಯದಾಗಿದೆ. ಇಸಿಸ್ ಮತ್ತು ಹೋರಸ್-ಒಸಿರಿಸ್ ಸೆಟ್ ಇವರಲ್ಲಿ ಸೋದರಿ-ಸೋದರ ಸಂಬಂಧ ಅದು ಇಲ್ಲಿ 'ಇಲ್ಲ' ಎಂಬ ಹಾಗಿನ ಸಂಭ್ರಮ ನಿರ್ಮಿಸಲ್ಪಟ್ಟಿರಬಹುದು. ಆದರೆ, ಈ ಸಂಭ್ರಮಕ್ಕೆ ಕಾರಣವಾಗಿರಬಲ್ಲ ಆದಿಮಾತಾ ಸಂಪ್ರದಾಯವಿರೋಧೀ ಸಂಪ್ರದಾಯವೂ ಒಂದು ಆಗ ಇರಲೇಬೇಕು. ಅದು ನೆಲಕ್ಕುರುಳಿರುವ ದೃಶ್ಯ ಇಂದಿನ ಈ ಸಂಹಿತಾಪಾಠದ ಉದ್ದಕ್ಕೂ ಕಾಣದೊರೆಯುತ್ತಿದೆ.

ಚಿತ್ರ ನಂ. ೫

'ಅಮೃತಂ ಚೈವ ಮೃತ್ಯುಃ ಚ' ನಿಲುಮೆಯಲ್ಲಿ ಆದಿಮಾತೆ

ಕ್ರಿ.ಪೂ. ಸುಮಾರು ೩೦೦೦ ವರುಷಗಳ ಹಿಂದಿನ (ಕ್ರೀಟಿನತ್ತಣಿನ ಪ್ರತಿಮೆ) ಒಂದು ಕಾಲಕ್ಕೆ, ಆದಿಮಾತಾ ಸಂಪ್ರದಾಯವು ಈಜಿಪ್ಟಿನಿಂದ ಭಾರತದ ವರೆಗಿನ ಪ್ರದೇಶದಲ್ಲಿ ಎಲ್ಲೆಡೆಗೂ ಹಬ್ಬಿತ್ತು. ಆದರೆ ಋಗ್‌ವೇದದಲ್ಲಿ ಮಾತ್ರ ಆದಿಮಾತಾ ಸಂಪ್ರದಾಯವಿಲ್ಲ ಎಂಬ ಗ್ರಹಿಕೆ ಮಾರ್ಶಲ್ ಪ್ರಭೃತಿಗಳದು! ಈ ವೇದದಲ್ಲಿ ಆದಿತಿ ನಾಮ ಸಂಕೇತದ ರೂಪವನ್ನು ತತ್ವತಃ ಉಭಯಲಿಂಗಿ ಕಲ್ಪಿಸಲಾಗಿದ್ದರೂ ಇದರ ಸ್ತ್ರೀತ್ವದ ನಿಲುಮೆಗೇ ಏನೆಲ್ಲ ಪ್ರಾಶಸ್ತ್ಯವಿದೆ, ಏನೆಲ್ಲ ಮಂಡಲಗಳಲ್ಲೂ! ಮಾರ್ಶಲ್ ಹೇಳುವ ಆದಿಶಕ್ತಿ : ಆದಿಮಾತಾ ಸಂಪ್ರದಾಯದ ಎಲ್ಲ ಲಕ್ಷಣಗಳೂ ಋಗ್‌ವೇದದ ಅದಿತಿ (: ಅಂಭೃಣಿ, ಸರಸ್ವತಿ) ದೇವಿಯಲ್ಲಿದ್ದೆ: ೧) 'ವಾಗರ್ಥಾವಿವಸಂಪೃಕ್ತ' ದೈವತ ತಾಯ್ತಂದೆಯ ರೂಪದಲ್ಲಿ ಇರಬೇಕು (Unity in duality); ೨) ಈ ದೈವತವೇ ಸ್ತ್ರೀ-ಶಕ್ತಿರೂಪದಲ್ಲಿ ಪೂಜೆಗೊಳ್ಳಬೇಕು. ೩) ಇದು ವಿಶ್ವದ ಪ್ರಕೃತಿ=ಅಧಿಸ್ಥಾನ ಎನಿಸುತ್ತಿರಬೇಕು. ೪) ಜಗನ್ಮಾತ್ರೆಯೆಂದು ಪೂಜೆಗೊಳ್ಳುತ್ತಿರಬೇಕು; ಯತ್ ಜಾತಂ ಯತ್ ಜನಿತ್ವಂ ಅದಿತಿಃ' ಎಂದರೇನು? ೫) ಗಂಡನೆಂಬುವನಿಗೆ ಅವಳೇ ಜನನಿಯೂ ಆಗಿರಬೇಕು. 'ಅದಿತೇಃ ದಕ್ಷಃ ಅಜಾಯತ' ಇದು ಪಾಶ್ಚಾತ್ಯ ಸಂಶೋಧಕರ ಸೂಕ್ಷ್ಮದೃಷ್ಟಿಗೂ ಕಾಣದೆ ಹೋಗಿರುವಲ್ಲಿ, ಈ ಸಂಹಿತಾ ರಚನೆಯೊಳಗಿನ 'ಅಹಿಮಾಯಾ' ಶಕ್ತಿಯ ಪ್ರಭಾವವೊ? ಅಥವಾ ಸತ್ಯಾನ್ವೇಷಣೆಯ ಸದೋಷ ಪದ್ಧತಿಯೊ? ೬) ಅವಳು ಜೀವನ-ಮರಣ ಎರಡೂ ಶಕ್ತಿಯುಳ್ಳವಳಾಗಿರಬೇಕು. ೭) ಆದಿಶಕ್ತಿ : ನಿತ್ಯಕುಮಾರೀ, ಮಾತೆ, ಎಲ್ಲ ದೇಶಗಳಲ್ಲೂ ೮) ಆದರೆ ಪರಪುರುಷ ಸಂಪರ್ಕದ ಕಲಂಕ (!) ವಿಲ್ಲದ ಬಸಿರು ಇವಳದು (immaculate conception ೮) ಈ ಸಂಪ್ರದಾಯದ

ವೈಶಿಷ್ಟ್ಯ : ವಿವಾಹ ಸಂಸ್ಥೆಯ ಅಭಾವ (: negation of true marriage) ಲಿಂಗ -ನಾಶ (: obliteration of sex) ಈ ವಿವರಣೆಗಾಗಿ ಈ ಲಕ್ಷಣ ಪಾಶ್ಚಾತ್ಯರಿಗೆ ಕಾಣಲಿಲ್ಲ.

ಈಜಿಪ್ತಿನಿಂದ ಸಿಂಧೂತೀರದ ವರೆಗಿನ ಆದಿಮಾತಾ ಸಂಪ್ರದಾಯದಲ್ಲಿ ಉಂಟೆಂದು ಮಾರ್ಶಲ್ ಹೇಳುವ ಮೇಲಣ ಏನೆಲ್ಲ ಲಕ್ಷಣಗಳೂ, ಈಜಿಪ್ಟ್, ಕ್ರೀಟ್, ಸುಮೇರದತ್ತಣೆನ ಆದಿಮಾತಾ ಸಂಪ್ರದಾಯದ ಸಾಂಕೇತಿಕ ಪ್ರತಿಮೆಗಳ ಪ್ರತಿರೂಪಗಳು ಋಗ್ವೇದದಲ್ಲೂ ದೊರೆಯಲೇ ಬೇಕಾಯ್ತು! ಆದರೆ, ಇವು ಮೋಡಿಯ ಮಾಟದ ಮಾತಿನ ಮುಸುಕಿನಲ್ಲಿವೆ. ಆದುದರಿಂದ ಸಂಭ್ರಮಕ್ಕೆ ಅವಕಾಶ ದೊರೆತಿದೆ. ಕ್ರೀಟಿನ ಆದಿಮಾತೆಯ ಪ್ರತಿಮೆಯೊಳಗಿನ ಪಾರಿವಾಳದ ಸಂಕೇತವೊಂದೇ ಸಾಕು, ಈ ಸಂಹಿತೆಯ ರಚನೆಯೊಳಗಿನ ಮಾಯಾತಂತ್ರದ ಮನವರಿಕೆಯಾಗಲು. ಕ್ರೀಟಿನ ಪ್ರತಿಮೆಯ ಎರಡೂ ಕೈಯಲ್ಲಿ ಹಾವುಗಳಿವೆ. ಹಾವು 'ಅಹಿಮಾಯೆ'ಯ ಪಾಶರೂಪ ಶಕ್ತಿ. ಹಾವು ಬಣ್ಣವಣ್ಣದಿಂದ ಚಪಲ ವಕ್ರಗತಿಯಿಂದ ಆಕರ್ಷಕವೂ ಸರಿ. ಮೃತ್ಯುರೂಪವೂ ಸರಿ. ಈ ದೇವಿಯ ತಲೆಯ ಮೇಲೆ ತೋರಿಸಿರುವ ಪಕ್ಷಿ-ಪಾರಿವಾಳ, ಯಾವಾಗಲೂ ಸಂಗಾತಿಯನ್ನು ಆರ್ತತೆಯಿಂದ ಹಾರಯಿಸುವ ಪಕ್ಷಿ: ಗೆಡೆವಕ್ಕಿ-ಗೆಣೆಯ ಪಕ್ಷಿ. ಆದಿಮಾತಾ ಸಂಪ್ರದಾಯ ವೈಶಿಷ್ಟ್ಯಸೂಚಕ ಇಂತಹ ಪ್ರತೀಕ ಬೇರೊಂದಿಲ್ಲ, 'ಅಮೃತಂ ಚೈವ ಮೃತ್ಯುಃ ಚ' ಈ ಉಭಯ ಶಕ್ತಿಗಳ ಸಂಕೇತವೆಂದು ಬಗೆಯಲಾಗುತ್ತದೆ. ಪಾರಿವಾಳವನ್ನು 'ಶಾಂತಿ'ಯ ದೂತನೆಂದು ಬಗೆವ ಸಂಪ್ರದಾಯ ಭಾರತದಲ್ಲಿ ಸ್ಪಷ್ಟರೂಪದಲ್ಲಿ ಇಲ್ಲ. ಆದರೆ ಅಹಿಂಸಾವ್ರತ ಪ್ರಧಾನ ಸಂಪ್ರದಾಯದ ಸಿರಿವಂತರಲ್ಲಿ ಪಾರಿವಾಳ ಹಿಂಡಿಗೆ ಧಾನ್ಯಹಾಕುವಲ್ಲಿ ಪುಣ್ಯಕಾರ್ಯ ಮಾಡಿದ ಭಾವನೆಯುಂಟು. ಆದರೆ, ಪಾರಿವಾಳವನ್ನು ಮೃತ್ಯುರೂಪದಲ್ಲಿ ಬಗೆಯುತ್ತಿದ್ದ ಸಂಪ್ರದಾಯವೂ ಒಂದು ಇದ್ದುದಾಗಿ ಋಗ್ ವೇದಸ್ಥ ಪ್ರಮಾಣದಿಂದಲೇ ತಿಳಿಯುತ್ತದೆ!

ಋಗ್ವೇದದಲ್ಲಿ ಕ-ಪೋತ ಎಂದು ಪಾರಿವಾಳದ ಸಾಂಕೇತಿಕ ನಾಮ. 'ಪಾರಿವಾಳ ಹೊಕ್ಕ ಮನೆ ಹಾಳು' ಎಂಬ ಭಾವನೆಯ ಮೂಲಕ, ಈ ಪಕ್ಷಿಯನ್ನೂ ಆಗಮನ ವಿನಾಶದ ಸಂಕೇತ. ಮೃತ್ಯುವಿನ ಸೂಚಕ ಎಂದು ಬಗೆಯಲಾಗಿತ್ತು. ಈ ಕಾರಣದಿಂದ ಪಾರಿವಾಳ ಹೊಕ್ಕ ಮನೆಯವರು ಈ ಅರಿಷ್ಟ ಪರಿಹಾರಕ್ಕಾಗಿ ಮಾಡಿಸಬೇಕಾದ ವಿಧಿಯ ಮಂತ್ರವು ಋಗ್ವೇದದಲ್ಲಿದೆ. ಕಪೋತವನ್ನು ತಿರಸ್ಕಾರದಿಂದ ಕಾಣುವ ಸಂಪ್ರದಾಯದ ಈ ಸೂಕ್ತದ ಮೂಲಕ, ಕಪೋತ ಸಂಕೇತಾಧಾರೀ ಆದಿಮಾತಾ ಸಂಪ್ರದಾಯವು ಈ ವೇದದಲ್ಲಿ ಇರಲು ಶಕ್ಯವಿಲ್ಲ, ಎಂಬ ಗ್ರಹಿಕೆಯಾಗುತ್ತದೆ. ಆದರೆ, ಈ ಬಗೆಯ ಗ್ರಹಿಕೆಗಳ ನಿರ್ಮಾಣ ತಂತ್ರವೇ ಈ ವೇದರಚನೆಯ ವೈಶಿಷ್ಟ್ಯ! ಈ ವೈಶಿಷ್ಟ್ಯ ಗಮನಕ್ಕೆ ಬರದೆ ಈ ವೇದದ ನೆಲೆ ತಿಳಿಯದು; ಮೋಸವಾಗುವುದೂ ತಪ್ಪಲಾರದು.

ಇಂಥ ಒಂದೆರಡು ಮಾದರಿ ನೋಡಿ: 'ಶಿಶ್ನೋದೇವಾಃ' ಜನವನ್ನು ಸಂಹರಿಸುವವನೆಂಬ ಇಂದ್ರನು, ಇದೇ ಸಂಪ್ರದಾಯದ ನೇತಾರನೂ ಇದ್ದಾನೆ! ಒಂಬತ್ತನೆಯ ಮಂಡಲದ ಸೋಮನು ಚಂದ್ರನು ಇದ್ದಾನೆ, ಎಂದು ತಜ್ಞರು ಹೇಳುತ್ತಾರೆ. ಆದಕಾರಣ ಈ ಸೋಮಯಾಗ ರಾತ್ರೀ ಸಂಪ್ರದಾಯವಾಯ್ತು! 'ಇಂದ್ರಾಯ ಇಂದೋಃ ಪರಿಸ್ರವ' ಇಂದ್ರನಿಗಾಗಿ (=ಇಂದ್ರಿಯಕ್ಕಾಗಿ, ಚಾಂದ್ರ ಮಧುವನ್ನು) ಸ್ರವಿಸಲು ಇರುವ ಪ್ರಾರ್ಥನಾ ಮಂತ್ರದಲ್ಲಿ ಶಿಶ್ನಪೂಜೆಯೆ ಅಭಿಪ್ರೇತವಿದೆ; ಯತಿಗಳನ್ನು ಸಂಹರಿಸುವವ-ಪುರಾಣ ಕಥೆಗಳಲ್ಲಿ ಮುನಿಗಳ ತಪೋಭಂಗ ಮಾಡುವವನೆಂಬ ವರ್ಣಿತ ಇಂದ್ರನು, ವಿರಕ್ತ ಬ್ರಹ್ಮವಾದೀ ಸಂಪ್ರದಾಯದ ವಿರೋಧಿಯಾಗುತ್ತಾನೆ; ಆದರೆ ಈ ಇಂದ್ರನು, ವಾಗಾಂಭೃಣಿ ಭಗ-ವತೀ ಭಜಕನೂ ಆಗಿದ್ದಾನೆಂದು ವರ್ಣನೆಯಿದೆ.

ಕ-ಪೋತದ ಬಗೆಗೆ ಈ ಸಂಹಿತೆಯಲ್ಲಿ ಸೂಚಿತ ತಿರಸ್ಕಾರವೂ ಹೀಗೆಯೇ ಮೇಲ್ತೋರಿಕೆಯದು. ಇದು, ಎರಡು-ಮೂರು ಬಗೆಗಳಿಂದ ಅರಿಕೆಗೆ ಬರುತ್ತದೆ. ಪಂಚಮ ವೇದವೆಂಬ ಮ. ಭಾರತವು ಋಗ್ವೇದದಲ್ಲಿ ಹುದುಗಿರುವ ರಹಸ್ಯಾರ್ಥನ್ನು ವಿವರಿಸುತ್ತದೆ, ಎಂಬ ಶ್ರದ್ಧೆಯಿದೆ. ಇದನ್ನು ನಿದರ್ಶನಕ್ಕೆ ತರುವ ಹಲವು ಉದಾ. ಗಳಿವೆ. ಪ್ರಸ್ತುತ ಕಪೋತಾಖ್ಯಾನವೂ ಇಂತಹ ಒಂದು ದೃಷ್ಟಾಂತ. ಮ. ಭಾರತಸ್ಥ 'ಚಕ್ರವರ್ತಿ' ಎಂಬ ಶಿಬಿ, ಅವನಿಗೆ ಶರಣು ಬಂದ ಕಪೋತದ ಕಥೆ ಸುಪ್ರಸಿದ್ಧವಿದೆ. ಇಲ್ಲಿ ಅಗ್ನಿದೇವನನ್ನೇ ಕಪೋತ ಎಂದು ಕಲ್ಪಿಸಲಾಗಿದೆ; ಕೊಲ್ಲಲ್ಲು ಈ ಕಪೋತ ಬೆನ್ನಟ್ಟುವವನನ್ನು ಇಂದ್ರ ಎಂದು ಚಿತ್ರಿಸಲಾಗಿದೆ! ಕಪೋತ ಜೀವಭಯದಿಂದ ಶಿಬಿಗೆ ಶರಣುಬರುತ್ತದೆ. ಶರಣಾಗತ ರಕ್ಷಣೆಯ ಬಾಳಗುರಿಯಾದ ಶಿಬಿಯಿಂದ, ಕಪೋತದಷ್ಟು, ಆತನ ದೇಹದ (ತೊಡೆ?) ಮಾಂಸಪಡೆದು, ಇಂದ್ರನು ಆ ಪಕ್ಷಿ (: ಅಗ್ನಿ) ಉಳಿಸಿದನಂತೆ! ಶಿಬಿ ದೇಹದಿಂದ ಕಪೋತದಷ್ಟು ಮಾಂಸ ಬೇಡುವ ಇಂದ್ರನ ಪಾತ್ರ ನಿರ್ಮಿಸಿರುವ ಈ ಕವಿ ಪ್ರತಿಭೆ, ಇಂಥ ಜ್ಯೂ ಪಾತ್ರ ರಚಿಸಿದ ಶೆಕ್ಸಪಿಯರನನ್ನೂ ಮೀರಿಸಿದೆ! ಇದು ಏನೆ ಇರಲಿ, ಅಗ್ನಿ ಇಂದ್ರರೊಳಗಿನ ದ್ವೇಷದ ಸೂಚನೆ ಈ ಕಥೆಯಲ್ಲಿದೆ. ಇಂದ್ರನು ದ್ವೇಷಿಸುವ ಈ ಅಗ್ನಿಯು, ಜಾತವೇದ, ಹವ್ಯವಾಹನ ಅಗ್ನಿಯು ಇರಲು ಅಶಕ್ಯ!

ಋಗ್‌ವೇದದಲ್ಲಿ ಇಬ್ಬರು ಅಗ್ನಿಗಳಿದ್ದಾರೆ. ಜಾತವೇದ ಅಗ್ನಿ, ಸವಿತೃ, ಪೂಷನ್.... ಇವರು ವೃತ್ರ: ಅಹಿಹನ್ ಇಂದ್ರನಂತೆ ಜೀವನ ಸಮ್ಮುಖ ಪ್ರೇರಣೆಯ ದೈವತಗಳು. ಇವಕ್ಕೆ ವಿಪರೀತವಾಗಿ, ಜೀವನವು ಮೃತ್ಯು ಸ್ವರೂಪವಿದೆ ಎಂಬುದನ್ನು ಪ್ರಸ್ಥಾಪಿಸುವ ಅಗ್ನಿಶಕ್ತಿ ಇದೆ. ಅದು ಅಬೋಧ್ಯಗ್ನಿ: ನಚಿಕೇತಾಗ್ನಿ: ಅಥವಾ ಆಪ: ರಸ: ರೇಕ್ತ್ ಸ್ವರೂಪ = ಹಿರಣ್ಯಗರ್ಭ=ಕ(ಂ) ನಾಮಕ (: ಚಾಂದ್ರ) ಅಗ್ನಿ. 'ಕಪೋತ' ರೂಪ ತಾಳಿದ ಅಗ್ನಿಯು ಅಮಂಗಳ : ಕ(ಂ) ರೂಪ ಅಗ್ನಿ ಎಂಬುದನ್ನು ಗಮನಿಸುವುದು ಅವಶ್ಯವಿದೆ. ಕಪೋತ ನಿಷೇಧಿಸಿದ್ದರೂ ಈ ವೇದದಲ್ಲೇ ಕ(ಂ) ದೈವತ ಸ್ತೋತ್ರ ಇದ್ದೇ ಇದೆ!

ಕವಿಗಳು ಕೇವಲ ತಮ್ಮ ಇಷ್ಟಾರ್ಥ ಪ್ರತಿಪಾದನೆಗಾಗಿಯೇ 'ಕ-ಪೋತ' (='ಕ' (ದೈವತದ ಪೋತ=) ಮರಿ) ಇಂಥ ಕೃತ್ರಿಮ ಸಂಕೇತಗಳನ್ನು ನಿರ್ಮಿಸಿ ಲೋಕದ ಕಣ್ಣು ಕಳೆಯುವ ಶಕ್ಯತೆಯಿದೆ. 'ಆದಿಮಾತಾ' ಸಂಪ್ರದಾಯದ ದೇವಿಯನ್ನು, 'ಪಾರಿವಾಳ' : ಸಂಗಮೋತ್ಸುಕ ಭೋಗಪಾತ್ರ ರೂಪದಲ್ಲಿ ಕಲ್ಪಿಸಿದ್ದುದರಲ್ಲಿ ಸಂಪೂರ್ಣ ಔಚಿತ್ಯವಿದೆ. ವಾಸ್ತವ ಸತ್ಯವು ಪ್ರತಿಬಿಂಬಿತವಾಗಿದೆ. ಆದರೆ 'ಕ-ಪೋತ' ಈ ಸಂಕೇತ ನಿರ್ಮಿತಿಯಲ್ಲಿ ಈ ಹೆಸರಿನಿಂದ ಅರ್ಥರೂಪೀ ಪ್ರಕಾಶ ದೊರೆಯದೆ-ಒಮ್ಮೆಲೆ ಏನೂ ಬೋಧವಾಗದೆ ಕತ್ತಲು ಉಂಟು ಮಾಡಿದ ಅನ್ಯಾಯದ ಕೃತ್ಯಮಾತ್ರ ಈ ಸಂಕೇತ ನಿರ್ಮಿತಿಯಲ್ಲಿ ಸಂಭವಿಸಿದೆ.

'ಪಾರಿವಾಳ ಹೊಕ್ಕಮನೆ ಹಾಳು' ಎಂಬ ಭಾವನೆ ಬೆಳೆಯುಬೇಕಾಗಿದ್ದರೆ, ಆ ಕಾಲಕ್ಕೆ ಈ ಪಾರಿವಾಳ (=ಭೋಗಪಾತ್ರದ) ಸಂಪ್ರದಾಯದ ದುಷ್ಪರಿಣಾಮಗಳು ಎದ್ದು ಕಾಣತೊಡಗಿರಲೇಬೇಕು 'ಪಾರಿವಾಳ ಮನೆಹೊಗುವುದು' ಎಂದರೆ ಇಲ್ಲಿಯ ಸಂಕೇತಾರ್ಥವು ಬೇರೆಯಿದೆ. 'ಏಕಂ ಸತ್ ' ಈ 'ಸತ್ಯ'ದ ಅನುಭಾವಕ್ಕೆ ಸಾಧನ=ಪಾತ್ರ ಎಂದು 'ಸತಿ' (=ಕನ್ಯಾ-ಕುಮಾರಿ) ಆಮಂತ್ರಿಸಿ, ಆ ಪಾತ್ರದ ಅನು-ಸ್ಥಾನದಲ್ಲಿ ಕೆಲವೊಂದು ವಿಧಿ-ವಿಧಾನ ನಡೆಯಬೇಕಿತ್ತು, ಸ-ತಿ(ೀ)-ಯಂ ವ್ರತ-ಉಪ-ಆಸನದ ತೀರ ಸೂಚಕ ಉಲ್ಲೇಖ ಛಾಂದೋಗ್ಯ, ಬೃಹದಾರಣ್ಯಕದಲ್ಲಿದೆ. ಈ 'ಪಾತ್ರ' : ಸೇತು = ಅಯನದ ಈ ಪಾರಿವಾಳ (ಸಂಪ್ರದಾಯ), ಯುರೋಪಿನ ಆರ್ಫಿಕ್-ಬಚ್ಚೊ ಪಂಥದ ಮಾಧ್ಯಮ: ಪ್ರತಿಮಾ; ಶಾಂತಿ, ಆನಂದದಾಯಕ ಅನುಭಾವದ ಸಾಧನವಾಗುವಂತೆ, ಜೀವನ ವಿನಾಶಕ ಶಕ್ತಿಯೂ ಆಗಿರುವ ಅನುಭವವು ಬಂದು, ಆ ಅನುಭಾವದ ಹಿನ್ನೆಲೆಯಲ್ಲಿಯೆ: ಆದಿಮಾತೆ ಅಮೃತ ಮತ್ತು ವಿಷ ಈ ಉಭಯರೂಪೀ ದೇವಿಯಾಗಿ ನಿರ್ಮಿತಳಾಗಿದ್ದಾಳೆ.

ಕಪೋತ ಸಂಪ್ರದಾಯದ ಋಗ್‌ವೇದದ ಕವಿಗಳು, 'ಕಪೋತ' ಸಂಕೇತವು ತಿರಸ್ಕಾರಕ್ಕೆ ಲೋಕನಿಂದೆಗೆ ಕಾರಣವಾಗುತ್ತಲೆ, 'ಸಂಗಮೋತ್ಸುಕ' ಆರ್ತಭಾವ ಸೂಚಕ ಬೇರೆ 'ಪಕ್ಷಿ'ಗಳನ್ನು ಸೃಷ್ಟಿಸಿ ಅವನ್ನು ನಿಂದೆಗೆ ಒಳಗಾಗಗೊಟ್ಟಿಲ್ಲ. ಬರಬರುತ್ತ 'ಕಪೋತ' ಸಂಪ್ರದಾಯವೇ ಪ್ರಭಾವಶಾಲಿಯಾಗಿರಲಿಕ್ಕೂ ಸಾಕು; ಏಕೆಂದರೆ ಚಕ್ರ-ವಾಕ (: ಚಕ್ರ-ಬಾಯಿ : 0!) ಎಂಬ ಯುಗಲದ ಕವಿ-ಸಮಯ ಬೆಳೆಯುತ್ತಲೆ ಬಂದಿದೆ. ಚಕ್ರ-ವಾಕ ಇನ್ನೂ ಅರ್ಥದಾಯಕವಾಗಲು ಇದು ರಥಾಂಗ ಪಕ್ಷಿಯಾಗುತ್ತದೆ! 'ರಥ (= ದೇಹ) 'ಅಂಗ' ಇಂಥ ಪಕ್ಷಿ, ಎಂದರೆ ಎಂತಹದು? ಇದರ ವಿಚಾರ ವಿಮರ್ಶೆ ಎಲ್ಲಿ ಆದಂತಿಲ್ಲ! ಈ ವೇದದಲ್ಲೆ 'ಕಪೋತ' ಸಂಪ್ರದಾಯವು ನಿರ್ಮಿಸಿರುವ 'ತಾರ್ಕ್ಷ್ಯ ಅರಿಷ್ಟ ನೇಮಿ'ಯ ಪ್ರಶಂಸಿದ 'ಪಕ್ಕ' 'ಅರಿಷ್ಟ' ಖೋಡಿ ಎಂದು ಜನ ಅದನ್ನು ತ್ಯಜಿಸಿದೆ! ವೇದದಲ್ಲಿ ಇವು ಮೌಲಿಕ ಮಹತ್ವದ ಪಕ್ಷಿ ಸು-ಪರ್ಣ! ಆದರೆ ಈ 'ಎಲೆ' 'ಪರ್ಣ' ಎಂದರೇನು?

'ಪರ್ಣ' ಸಂಕೇತಕ್ಕೆ ಎಲೆ, ಯಾವಾಗಲೂ ಹಸಿರು ಇರುವ (ever green: ಜೀವನದಲ್ಲಿ ಆಸ್ಥೆ) ಎಲೆ; ಪಕ್ಷ : ಪುಚ್ಛ < ಪುಚ್ಛ ಹೀಗೆ ಹಲವು ಛಾಯಾರ್ಥಗಳೊಡನೆ ನಾನಾರ್ಥಕ್ಕೆ ಅವಕಾಶ ಕಲ್ಪಿಸಿದ ಪದಪ್ರಯೋಗಗಳು ಋಗ್‌ವೇದದಲ್ಲೇ ಇವೆ! ನಾನಾರ್ಥಗಳು ಶಾಬ್ದಿಕ ಜಾದೂ ನಿರ್ಮಿತಿಯ ಮೋಡಿಕಾರಿಕೆಗೆ ಆವಶ್ಯಕ ದ್ರವ್ಯ! 'ಪರ್ಣ' ಸು-ಪರ್ಣ ಪಕ್ಷಿಯಾಗಿ, ಕಪೋತದ ಸ್ಥಾನದಲ್ಲಿ ಕಾಣಿಸಿಕೊಳ್ಳುತ್ತದೆ! ದ್ವಾ-ಸುಪರ್ಣಾ ಸಯುಜಾ ಸಖಾಯಾ' ನಿತ್ಯ ಹಸುರಿನ ಹಕ್ಕಿ: ಸಂಗಮ ಪಕ್ಷಿ- (ಸ-ಖಾಯೌ), ಇಲ್ಲಿಯ ಖಾ<ಖ>ಖಿ. ಈ 'ಕ(ಂ' ಸಂಪ್ರದಾಯದ ಸಾಂಕೇತಿಕತೆ ಭಯಾವಹವಾಗಿದೆ!) ಈ ಸಂಗಮ ಪಕ್ಷಿಗಳು ಆಶ್ರಯಿಸಿರುವ 'ವೃಕ್ಷ' ಸಮಾನವಿದೆ ಎಂದು ವೇದ ಹೇಳಿದೆ! 'ಸಮಾನಂ ವೃಕ್ಷಂ ಪರಿಷಸ್ವಜಾತೇ'; ಈ 'ವೃಕ್ಷ' ನಾಮ 'ಪಿಪ್ಪಲ'! ಇದೂ ಶುದ್ಧ ಸಾಂಕೇತಿಕ ! ಸೀಪಿ ರಸ್ವಾದಿಸುವ ಸಾಂಕೇತಿಕತೆ ಇಲ್ಲಿ ಅಭಿಪ್ರೇತವಿದೆ. 'ಪಿಪ್ಪಲಂ ಸ್ವಾದು ಅತ್ತಿ' ಆ-ಸ್ವಾದಿಸಿ ಸು ಖಂ ಪಡಲು ಪ್ರಯೋಜನಕಾರಿ ವೃಕ್ಷ ಈ 'ಪಿಪ್ಪಲ' (: a mythical tree).

ಈ ಸು-ಪರ್ಣಕ್ಕೆ ಪ್ರತಿಯಾದ ಪರ್ಣ=ಪತ್ರ ಸು-ಪಲಾಶ. ಈ 'ವೃಕ್ಷೇ ಸುಪಲಾಶೇ ಸಂ ಪಿಬತೇ ಯಮಃ'. ಸ್ವಾದು-ಮಧುಯುಕ್ತ ಪಿಪ್ಪಲ, ಪರಿಣಾಮವಲ್ಲಿ ಪಲಾಶ ವೃಕ್ಷವೇ ಸರಿ! ಪಲಾಶ (ವೃಕ್ಷ) ರೇತಹೀರುವ 'ಪರ್ಣ'. ಮಾಂಸಭಕ್ಷಕ; ಆದಕಾರಣ ಶ್ಮಶಾನ ವೃಕ್ಷ! ಯಮನ 'ವೃಕ್ಷ' ಋ. ವೇದದಲ್ಲಿ!

ಪಿಪ್ಪಲ+ಪಲಾಶ=ಅಶ್ವತ್ಥ (ಜೀವನ+ಮರಣಕ್ಕೆ ಕಾರಣ) ವೃಕ್ಷ ಇದು. ಅಬೋಧಿ-ಅಗ್ನಿವೃಕ್ಷ-ಸಾಮಾನ್ಯ ಸಂಸಾರಿಗಳ ಪಾಲಿಗೆ; ಇದರಿಂದ ಬುದ್ಧಕಲಿವವರ 'ಬೋಧಿ' ವೃಕ್ಷವು ಇದು! ಈ 'ಅಶ್ವತ್ಥ' ವೃಕ್ಷವು, ಸೈಂಧವ ಸಂಸ್ಕೃತಿಯ ಮಣಕ್ಕೆ ಸಾಕ್ಷಿಯಾಗಿತ್ತು ಎಂಬುದು ಅಲ್ಲಿ ದೊರೆತ ಅವಶೇಷಗಳಿಂದ ದೃಢಪಡುತ್ತದೆ. ಈ ಅಶ್ವತ್ಥ ವೃಕ್ಷವೇ ಶ್ರೀಮತ್ ಭಗವದ್ ಗೀತೆಯ ಉಪದೇಶದ ಭಗ-ವಂತನ ಸಾಕಾರ ಸಗುಣರೂಪ; 'ಪುರುಷ'ರೂಪ!

ಸಿಂಧೂತೀರದ ಅವಶೇಷಗಳಲ್ಲಿ ಪಕ್ಕಬಿಚ್ಚಿ ಹಾರುವ ಶೀವಿಯ ಪಾರಿವಾಳದ ಪ್ರತಿಮೆ ಸಿಕ್ಕಿದೆ. This bird with similar birds of Neolithic date found by A. Evans in Crete!

ಕ್ರಿಟ್, ಇಜಿಪ್ತಗಳತ್ತಣನಂತಹ ಮಾತಾ ಸಂಪ್ರದಾಯ, ಸಿಂಧೂತೀರದ ಸಂಸ್ಕೃತಿಯಲ್ಲಿ ಮಾತ್ರ ಕಾಣುತ್ತಿರುವ ಮಾರ್ಶಲ್ ಪ್ರಭೃತಿಗಳಿಗೆ ವೇದದಲ್ಲಿ ಇದು ಕಾಣದಿರಲು 'ವೇದಿಝುಂ', 'ಬ್ರಾಹ್ಮ್ಯನಿಝುಂ'ದ ಬಗೆಗಿನ ಅವರ ಪೂರ್ವಗ್ರಹಿಕೆಗಳೇ ಪ್ರಮುಖ ಕಾರಣ. ನಿನ್ನೆಗಳಲ್ಲಿ ಇದ್ದುದು, ನಾಳೆಗಳಲ್ಲೂ ಹರಿದು ಬಂದುದು ನಡುವಣ 'ಇಂದಿ'ನಲ್ಲಿ ಮಾತ್ರ ಇರದೆ ಇರಲು ಶಕ್ಯವೊ? ಕಥಾ ವೈಶಿಷ್ಟ್ಯ. ಇದು.... 'bears specific Egyptian characteristics and must not be generalized upon....' ಎಂದು ಇಜಿಪ್ತಿನ ಏಕಮೇವಾಽ ದ್ವಿತೀಯ ಸಾಂಸ್ಕೃತಿಕ ವೈಭವಕ್ಕೆ ಮಾರುಹೋದ ಡಾ. ಸು. ಅಂಥೆಸ್ ಹೇಳುತ್ತಾರೆ! ವೇದದ ದೈವತ ಕಥೆಯ ಪ್ರಖ್ಯಾತ ಲೇಖರಾದ ಮ್ಯಾಕ್‌ಡೊನೆಲ್ 'ಮಿತ್ರಸ್ಯ ವರುಣಸ್ಯ ಚಕ್ಷು' ಎಂದು ಪ್ರಾರಂಭವಾಗುವ ಸೂಕ್ತ ವೈಶಿಷ್ಟ್ಯ ಗಮನಿಸಿದ್ದುಂಟು. ಆದರೆ, ಅವರ ವಿಶಿಷ್ಟ (attitude) ಮೂಲಕ ಈ 'ಚಕ್ಷು' =Eye ಸ್ವರೂಪೀ, ಚಾಕ್ಷಪೀ ಪುರುಷ = ಬ್ರಹ್ಮನ್ ಜ್ಞಾನವು ಲೋಕದ ಎದುರು ಬೆಳಕಿನಲ್ಲಿ ಬರದೆ 'ರಾತ್ರೀ ಸಮಯ'ವಾ[illegible]ೀ ಉಳಿದುಬಿಡುತ್ತಿದೆ!

ಇರಾಕ್ ಭಾಗದ ಉತ್ಖನನದಲ್ಲಿ ಕಣ್ಣಮ್ಮನ ಪ್ರತಿಮೆಗಳು ದೊರೆತಿವೆ.

> ...'a number of figures with large eyes delineated have been found in abundence at a site excavated by prof. Mallown. which he has called the Eye Temple, dated at about 3000 B. C.

ಇವುಗಳ ಅರ್ಥವನ್ನು ಗ್ರಹಿಸಿಕೊಳ್ಳುವಲ್ಲಿ ಸಂದಿಗ್ಧತೆಯು ಅಡ್ಡಬಂದಿಲ್ಲ. ಆ ಸಂಶೋಧಕರಿಗೆ ಇಲ್ಲಿ ದೊರೆತ ಪ್ರತಿಮೆಗಳೆಲ್ಲ. ಒಂದೇ ಆಕೃತಿ ರೂಪದವು ಇಲ್ಲ! ಇವು ಆ ಭಾಗದ ಪುರಾತನ ಆದಿಮಾತೆ: ಇನನ್ನಳ ಸಾಂಕೇತಿಕ ಕಣ್ಣ ಪ್ರತಿಮೆಗಳಿರಬೇಕು, ಎಂದು ಬಗೆಯಲಾಗಿದೆ. ಇನ್ನೊಂದು ಆಕೃತಿಯು

> ....'the smaller figure with which she is some times accompanied in front of her body many be that of her son and consort Dumuzi the Young God.

ಇಲ್ಲಿಯ ತಾಯಿ-ಮಗ/ಗಂಡ ಈ ಸಂಬಂಧವು ಸುಮೇರು ಭಾಗದ ಚಾಂದ್ರಸಂಪ್ರದಾಯದ ವೈಶಿಷ್ಟ್ಯ; ಪುರಾತನ ಭಾರತ ಮತ್ತು ಇಜಿಪ್ತಿನಲ್ಲೂ ಈ ವೈಶಿಷ್ಟ್ಯವಿದ್ದುದನ್ನು ಸಮೀಕ್ಷಿಸಿ ಆಗಿದೆ. ಋ. ವೇದದಲ್ಲಿ "ಪೂರ್ವಾಯ ವೇಧಸೇ ನವೀಯಸೇ ಸುಮಜ್ಜಾನವೇ ವಿಷ್ಣವೇ" ಎಂದು ವರ್ಣಿಸಲಾಗಿದೆ. ಇವನು ಅದಿತಿ ಪುತ್ರ ಆದಿತ್ಯನು ಎಂಬುದು ನಿಃಸಂದಿಗ್ಧವಾಗಿ ಹೊರವಡುತ್ತಿದೆ. ಅದಿತಿಯನ್ನು ಸಲಿಲ ಅಥವಾ ರಾತ್ರಿ ಎಂದರೆ ಆದಿತ್ಯ ವಿಷ್ಣುವು ಚಂದ್ರನಾಗುತ್ತಾನೆ (ಉಭಯಲಿಂಗೀ). 'ಚಂದ್ರ' ಇದು ಸಂಯುಕ್ತ ಪ್ರತಿಮೆ : ಇದರ ಶ್ವೇತ (ದ್ವೀಪ=ಮಂಡಲ : ಪತ್ರ=ಪರ್ಣ) ಭಾಗ ಸ್ತ್ರೀ (O) ಸಂಕೇತ ಮತ್ತು ನಡುವಣ ಕಪ್ಪುಭಾಗ 'ಪುರುಷ' ಸಂಕೇತ. ಈ ಪುರುಷ : ವಿಷ್ಣು = ಹೊರಸ್ ನಿತ್ಯ ನವೀನ ಕುಮಾರ; (ರುದ್ರಶಿವನೂ ಕುಮಾರ). ವಿಷ್ಣುವಿನ 'ಸುಮಜ್ಜಾನಿ'ತ್ವ ಇವನು 'ಅಪಾಂ ನಪ್ತ್ರು' (ಸಮುದ್ರ : ಜಲಶಾಯಿ-) ಸಲಿಲರತನೆಂಬುದರ ಸೂಚಕವಾಗಿದೆ. ಬಾಲರೂಪದಲ್ಲಿ ವಿಷ್ಣುವು ಕೃಷ್ಣ ಅಥವಾ ರಂಗ ನಾಮರೂಪದವನಾಗುತ್ತಾನೆ. ಡುಮುಝಿಯನ್ನು 'the Young God' ಎಂದಿರುವಲ್ಲಿ, ಸುಮೇರ ಮತ್ತು ಭಾರತೀಯ ಪುರಾತನ ಸಾಂಪ್ರದಾಯಿಕ ಭಾವುಕತೆಯೊಳಗಿನ ಸಾಮ್ಯವು ಅರಿಕೆಗೆ ಬರುತ್ತದೆ.

ಒಂದು ಅಂಗವನ್ನು ಇಡೀ ಶರೀರವಾಗಿ ಅಥವಾ ಇಡೀ ಶರೀರವನ್ನು ಒಂದು ಅಂಗವಾಗಿ ವರ್ಣಿಸುವ ಋಗ್‌ವೇದದ ವೈಶಿಷ್ಟ್ಯವು ಸುಮೇರಿನಲ್ಲೂ ಇರುವುದಾಗಿ ಕಾಣುತ್ತದೆ. ಆದರೆ, ಈ ವೈಶಿಷ್ಟ್ಯವು ಗಮನಕ್ಕೆ ಬರದೆ, ವೈದಿಕ ದೈವತಗಳ ರೂಪ-ಆಕೃತಿಗಳ ವರ್ಣನೆಯಲ್ಲಿ ಇದನ್ನು ಕೊರತೆಯೆಂದು ಸೂಚಿಸಿದ್ದುಂಟು. ತ್ವಷ್ಟಾರನನ್ನು ಇಡಿಯಾಗಿ ವರ್ಣಿಸದೆ 'ವಾಶೀ ಹಸ್ತಃ' ಎಂದು ಕೈಯನ್ನು ಮಾತ್ರ ಹೆಸರಿಸಲಾಗುವ ಈ ರೀತಿ ವಿಚಿತ್ರವೆನಿಸಿದೆ. ಇನ್ನು ಕೆಲವರ ಪ್ರಶ್ನೆ. 'ಸಹಸ್ರಶಿರ್ಷ' ಇರುವ ಪುರುಷನಿಗೆ ಸಹಸ್ರ ಕಣ್ಣು ಹೇಗೆ? ಎರಡು ಸಾವಿರ ಇರಬೇಡವೆ? ಮತ್ತು ಸಹಸ್ರಶೀರ್ಷನು 'ಸಹಸ್ರಪಾತ್' ಹೇಗೆ? ಆದರೆ 'ಪುರುಷ' ಈ ಸಂಕೇತದ ನಿಜವಾದ ಆಕೃತಿಯನ್ನು ಗ್ರಹಿಸಿಕೊಳ್ಳಲು ಆಗದ್ದರಿಂದ ಈ ಎಲ್ಲ ಸಂದೇಹಗಳು ತಲೆಯೆತ್ತಿದ್ದು!

ಸುಮೇರಿನಲ್ಲಿ ದೊರೆತ ಕಣ್ಣಮ್ಮ (ಉಭಯಲಿಂಗೀ), ಮೂಲದಲ್ಲಿ ಇನನ್ನಳ ಪರ್ಯಾಯ ಪ್ರತಿಮೆ. ಇನನ್ನಾ ಎಂದರೆ ಚಂದ್ರಾದೇವಿ. ಚಂದ್ರಬಿಂಬದಲ್ಲಿ 'ಪುರುಷ' ಸಂಕೇತದ ಕೃಷ್ಣವರ್ಣದ ಪ್ರತಿಮೆಗೆ ತೀರ ಗೌಣಸ್ಥಾನ. ಇನನ್ನಾ ಅಥವಾ ಚಂದ್ರಾ (O) ಈ ದೈವತವು ದಿವ್ಯ ಆಕರ್ಷಕಶಕ್ತಿ : ಏಕಮೇವ ಅದ್ವಿತೀಯ ಶಕ್ತಿಯೆಂದರೆ ಇದುವೆ ಮಾತ್ರ ಎಂಬ ಭಾವನೆಯು ತಾನೆ ತಾನಾಗಿ ಆವರಿಸಿದ ಸಮಯದಲ್ಲಿ 'ಪುರುಷ' ಅಸಿತತೆಗೆ ಸ್ಥಾನವೆಲ್ಲಿ? 'ಪುರುಷನಿ'ಗೆ ತನ್ನತನದ ಅರಿವು ತಲೆದೋರಿದ ಬಳಿಕ ತಾನೆ 'ಪುರುಷ'ನ ಸ್ವತಂತ್ರ ಅಸ್ತಿತ್ವದ ಚಿತ್ರ? ಏಕೆಂದರೆ (ಚಂದ್ರ :) ಮಂಡಲ-ರತ ಪುರುಷನ: 'ಅಪಾಂನಪ್ತ್ರನ ಬಾಡಬ ಅಗ್ನಿ=ಸರ್ಪ : ಮೊಸಳೆ, ಕೋಣ, ಕಾಗೆ ಅಶ್ವತರ, ಅಶ್ವ-ವೃಕ್ಷ ಇತ್ಯಾದಿ ನಾಮಾಂತರಗಳಿಂದ ಸ್ವತಂತ್ರ ಅಸ್ತಿತ್ವವು ಪ್ರಾಪ್ತವಾದುದು ಉಭಯಲಿಂಗೀ ಕಣ್ಣಮ್ಮ ಏಕಲಿಂಗೀ ಆದ ಬಳಿಕವೇ.

ಭಾಷೆಯ ಪ್ರಾಚೀನ ಪ್ರಯೋಗಗಳ ಮೂಲಕ, 'ಅಮ್ಮ' ಶಬ್ದಪ್ರತಿಮೆ, ಉಭಯಲಿಂಗೀ ಇರಬೇಕೆಂದು ಕಾಣುತ್ತದೆ. ಇಂದು 'ಅಮ್ಮ' ಅಮ್ಮನವರ ದೇವಸ್ಥಾನ ಆದಿಶಕ್ತಿಯ ದೇವಸ್ಥಾನವೇ. ಆದರೂ, ಪ್ರಾಚೀನ ಮಹಾಕವಿಗಳು ಪೂಜ್ಯ ಗುರು-ಹಿರಿಯರನ್ನು 'ಅಮ್ಮ' ಸಂಕೇತದಿಂದ ಉಲ್ಲೇಖಿಸಿದ್ದು ಉಂಟು. ಆದಕಾರಣ ಸ್ತ್ರೀ-ಪುರುಷರಿಗೆ ಸಮಾನನಾಮ ಸಂಕೇತವಿರುವ ವಾಡಿಕೆ, ನಿಶ್ಚಿತವಾಗಿ, ಚಾಂದ್ರಭೂಮಿಕೆಯಲ್ಲಿಯೇ ಪೋಷಿತವಾಗಿರಲಿಕ್ಕೆ ಬೇಕು. ಆದಕಾರಣ, 'ಕಣ್ಣ' ಸಮಸ್ಯೆಯ ಮತ್ತು 'ಅಮ್ಮ' ಸಮಸ್ಯೆಯ ಪರಿಹಾರವಾಗಬೇಕಿದ್ದರೆ ಚಾಂದ್ರ ಸಮಯಾಚಾರಗಳ ಹಿನ್ನೆಲೆಯನ್ನು ಲೆಕ್ಕಕ್ಕೆ ಹಿಡಿಯುವುದು ಅವಶ್ಯವಾಗುತ್ತದೆ. ಡಾ. ಅಂಥೆಸ್ ಪ್ರಭೃತಿಗಳು ಪುರಾತನ ಸಂಸ್ಕೃತಿಗಳ ಅರ್ಥಗ್ರಹಣದಲ್ಲಿ, ಅರ್ಥ-ತತ್ವದ ಆಕೃತಿಗೆ : ಸಮಯ : ಆಚಾರಕ್ಕೆ ಪ್ರಾಶಸ್ತ್ಯವನ್ನು ಕೊಡದೆ, ಅಲ್ಲಿಯ ಭೌಗೋಲಿಕ ಪರಿಸರಕ್ಕೇ ಪ್ರಾಧಾನ್ಯವನ್ನಿತ್ತಿದ್ದಾರೆ. ಬಾಹ್ಯಘಟನೆ-ಪರಿಸ್ಥಿತಿಯ ನೆರವಿನಿಂದ ಅಲ್ಲಿಯ (Specific) ವಿಶಿಷ್ಟ ಅರ್ಥವನ್ನು ನಿರ್ಧರಿಸಿಬಿಡುವ ರೀತಿ ಸದೋಷವಿದೆ. ಸಂಸ್ಕೃತಿ ನಿರ್ಮಾಣದಲ್ಲಿ ಭೌಗೋಲಿಕ ಪರಿಸರಕ್ಕೆ, ಬಾಹ್ಯ ಘಟನೆಗಳಿಗೆ ಸ್ಥಾನವು ಇದ್ದೇ ಇದೆ. ಆದರೆ, ಸಂಸ್ಕೃತಿಯ ಜೀವಾಳವಾದ ವಿಚಾರ : ಆಚಾರ-ಪ್ರೇರಕ ಗರ್ಭಿತಾರ್ಥದ ಶಬ್ದ ಪ್ರತಿಮೆಗಳ ಅರ್ಥ: ವಿಚಾರಕ್ಕೆ, ಅದರದೇ ಆದ ಸಾರ್ವಕಾಲಿಕ ಆಕೃತಿಯಿರುತ್ತದೆ. ಈ ಆಕೃತಿ (: ವಿಚಾರ ಸಾರ) ಕಾಲ ಪರಿಸ್ಥಿತಿಗೆ ಅನುಗುಣವಾಗಿ ಬಾಹ್ಯರೂಪ-ಆಕೃತಿಯನ್ನು ಧರಿಸುವುದುಂಟು.

'ವಾಗರ್ಥಾವಿವ ಸಂಪೃಕ್ತೌ ಜಗತಃ ಪಿತರೌ' ಎಂಬ ಕಾಲಿದಾಸನ ಪ್ರಾರ್ಥನಾ ಶ್ಲೋಕಸ್ಥ ಅರ್ಥಗರ್ಭದ ಆಕೃತಿ ಈ ಸತ್ಯಾನ್ವೇಷಣೆಯಲ್ಲಿ ಅನೇಕ ಸಂದೇಹಗಳನ್ನು ದೂರವಾಗಿಸಿದೆ. 'ಏಕಂ ಸತ್ ' ತತ್ವದ ಸಾಂಕೇತಿಕ ಆಕೃತಿ ಇಲ್ಲಿದೆ. ಉಪನಿಷತ್ತುಗಳಲ್ಲಿ ಬರುವ 'ಅಕ್ಷಿಣಿ ಪುರುಷ', 'ಚಾಕ್ಷುಷೀ ಪುರುಷ' ಈ ಸಾಂಕೇತಿಕ ಪ್ರತಿಮೆಗಳಲ್ಲಿ ವಾಗರ್ಥಾವಿವ ಸಂಪೃಕ್ತ' 'ಪಿತರೌ' ಇರುವುದೇ ಕಾಣುತ್ತಿದೆ. ಆದರೂ ಶಂಕೆ ಉಂಟು. ಇಲ್ಲಿ ಸ್ತ್ರೀ-ಪುರುಷಯೋಗದ ಅರ್ಥವಿದೆ, ಎಂದು ಹೇಳಲು ಕಣ್ಣನ್ನು ಸ್ತ್ರೀರೂಪವಾಗಿ ಬಗೆಯಬೇಕಾಗುತ್ತದಲ್ಲ, ಎಂಬ ಅಳುಕು! ಋಗ್‌ವೇದದಲ್ಲಿ ಮಿತ್ರಸ್ಯ ವರುಣಸ್ಯ 'ಚಕ್ಷು'=ಸೂರ್ಯನನ್ನು 'ಅರ್ಣವಃ' ಆಕೃತಿಯಾಗಿ ಕಲ್ಪಿಸಿರುವಲ್ಲಿ ಸ್ತ್ರೀತ್ವದ ಸೂಚನೆಯಿದ್ದುದು ಕಂಡಿತು. 'ಪ್ರಸವಿತಾ' (ಹಡೆವ) ಚಕ್ಷು (: ಕಣ್ಣು) ಎಂದರೆ ಇದು ಯೋನಿ ಸ್ವರೂಪವೇ ಆಗುವಲ್ಲಿ ಸಂದೇಹವಿಲ್ಲ. ಆದರೆ, ಇಲ್ಲಿ ತಲೆದೋರುವ ಪ್ರಶ್ನೆ ಹೀಗೆ : ಜಗನ್ಮಾತೆಯರೆಂಬ ದೇವಿಯರು ಎಲ್ಲರೂ, ಸುಮಾರಾಗಿ, ಹುಣ್ಣಿವೆ (O) ಚಂದ್ರನ ರೂಪದಲ್ಲಿ ಪೂಜೆಗೊಳ್ಳುತ್ತಾರೆ. ಹೀಗಿರುವಾಗ ಜಗನ್ಮಾತೃತ್ವವು ಸೂರ್ಯ (: ಸೂರ್ಯಾ) ದೈವತಕ್ಕೆ ಬಂದದ್ದು ಎಂದು?

ಸುಮೇರಿನತ್ತ ದೊರೆತಿರುವ ಕಣ್ಣಮ್ಮ=ಚಾಕ್ಷುಷೀ ದೇವೀ (: ಪುರುಷ) ಇನನ್ನಳು ಎಂದರೆ ಚಂದ್ರಾದೇವಿಯೆ ಆಗಿರುವುದು ನಿಶ್ಚಿತವಿದೆ. ಆದರೆ, ಈ ಮೊದಲತನ ಭಾರತ ಮತ್ತು ಈಜಿಪ್ಪಿನಲ್ಲಿ ಇಲ್ಲ. ವೇದದಲ್ಲಿ ೧) 'ವರುಣಸ್ಯ ಚಕ್ಷು ಸೂರ್ಯ'; ೨) ಈ ಸೂರ್ಯ : ಗೌಃ ಪೃಶ್ನಿಃ (ಅದಿತಿಃ) ಆಗುವಲ್ಲಿ ಇದು ಗೋ-ಅಕ್ಷವಾಗುತ್ತದೆ (ಸಾರ್ಪರಾಜ್ಞೀ ಸೂರ್ಯೋ ವಾ) i) ಈ 'ಗೌ' (ಗೋ) ಸಂಕೇತಕ್ಕೆ 'ಅಂತರಿಕ್ಷ' (ಇಜಿಪ್ತಿನ ನಟ್, ಚಿತ್ರ ೩ ನೋಡಿ) ಎಂಬ ಅರ್ಥವಿದೆ!

ಈ ಕಾರಣದಿಂದ ಅಂತರಿಕ್ಷದ 'ಚಕ್ಷು' (O) ಎಂದರೆ ಅ) ಹಗಲು 'ಸೂರ್ಯ' ಆಗುವಂತೆ, ಬ) ಇರುಳು ಚಂದ್ರನು! ii) 'ಗೋ'=ಕಿರಣಗಳು=ರಶ್ಮಿ=ಸರ್ಪ, ಈ ಬೇಕಾದ ಅರ್ಥ! ii) ಗೋ=ಅಮೃತಸ್ಯ ನಾಭಿಃ : (O) ಹಾಲಿನ ಹೊಂಡ! (ಆರ್ದ್ರಾಂ ಪುಷ್ಕರಿಣೀಂ, ಕ್ಷೀರಸಾಗರ!) ಇಜಿಪ್ತಿನಲ್ಲಿ ಸಹ ಈ ಸ್ಥಿತ್ಯಂತರಗಳೇ ಉಂಟು. ಆದರೆ, ಈಜಿಪ್ಟಿನ ವಿವರಣೆಗೂ ಮುಂಚೆ ಋಗ್‌ವೇದದ ವರುಣನ ರೂಪಾಂತರ ಗಳನ್ನು ಅರಿಯುವುದು ಲೇಸು.

ಋಗ್‌ವೇದದ i) ವರುಣನು, ಮ್ಯಾಕಡೊನೆಲ್ ಹೇಳುವಂತೆ, 'ಪ್ರಜಾಪತಿ'. ಈ ಪ್ರತಿಮಾ: ಸಂಕೇತವು ಪ್ರಭಾವಶಾಲಿಯಾಗುವುದರೊಡನೆ ತನ್ನ ಸಮ್ರಾಟ-ರಾ-ಜನ್ ಪದವಿಗೆ ಎರವಾಗುತ್ತಾನೆ! ಹಿರಣ್ಯಗರ್ಭ : 'ಕಂ' ದೈವತ 'ಪ್ರಜಾಪತಿ' ನಾಮದಿಂದ ವಿಶ್ವವ್ಯಾಪೀ ವಿಶ್ವಧಾರಕ ದೈವತ ಶಕ್ತಿಯಾಗುತ್ತದೆ. (ಅಲ್ಲದೆ ಪವಮಾನ) ಸೋಮ ರಾಜನ್ ಆಗುತ್ತಾನೆ; ವೇದದ ಅಂತ್ಯದಲ್ಲಿ ವಿರಾಟ ಪುರುಷನೇ ಸಮ್ರಾಟ್ ಆಗುತ್ತಾನೆ. ಈತನ ವಾಸಸ್ಥಾನ ಪುರ. ಇದೇ ಚಕ್ಷು. ಉಪನಿಷತ್ತಿನ ಚಾಕ್ಷುಷೀ ಪುರುಷ= ಬ್ರಹ್ಮನ್‌ಜ್ಞಾನದಲ್ಲಿ ಚಕ್ಷು (ಪುರ :) ಮತ್ತು ಅದರಲ್ಲಿ (ಪುರಿಯಲ್ಲಿ) ಶಯನಿ=ಪುರುಷ ಸಾಕ್ಷಾತ್ಕಾರ ಮಾಡಿಸಲಾಗುತ್ತದೆ. ವೇದದ ವರುಣನನ್ನು ಹಿಮ್ಮೆಟ್ಟಿಸಿ ಆ ಸ್ಥಾನವನ್ನು ವಿಷ್ಣು (ಕೃಷ್ಣ) ಆಕ್ರಮಿಸಿದ್ದುಂಟು. 'ವರುಣೋ ಅಹಂ' ಎಂಬ ವಿಷ್ಣು ಕೃಷ್ಣನ (ಸು-ದರ್ಶನ) 'ಚಕ್ರ' ಎಂದರೆ ಸೂರ್ಯ (=ವರುಣಸ್ಯ ಚಕ್ಷು,) ವರುಣನಿಂದ ಕಸಿದುಕೊಂಡ, - ಭಗವಂತಿಕೆ ಸೂಚಕ-'ಚಕ್ರ' ವರ್ತಿನ್' ಪದದ ಸಂಕೇತವು ಇದು. ಗೀತೆಯ ಭಗ-ವಂತನು ಈ ಘಟನೆಯನ್ನು ಇನ್ನೂ ಒಂದು ಬಗೆಯಲ್ಲಿ ತೇಲಿಸಿ ಹೇಳುತ್ತಾನೆ: 'ಇಮಂ (ಸಂ)ಯೋಗಂ, ವಿವಸ್ವತೇ' (=ಸೂರ್ಯನಿಗೆ) ಕಲಿಸಿದವನು ನಾನೇ! ಇಲ್ಲಿ ವಿಷ್ಣು-ಕೃಷ್ಣ, ಚಂದ್ರರೂಪ ಪುರುಷ=ಸರ್ಪ; ಮತ್ತು ವಿವಸ್ವಾನ್ ಸೂರ್ಯ (O) ; ಇವೆರಡರ ಸಂಯುಕ್ತ ಪ್ರತಿಮೆ: 'ಧರ್ಮ-ಚಕ್ರ' ಪ್ರವರ್ತಕ ಗೀತೋಪದೇಶಕ 'ಭಗವಂತ' ಶ್ರೀಕೃಷ್ಣನದು.

ಇಜಿಪ್ತಿನ ಅಟುಂ-ರಾ-ಚಕ್ಷು ಸಮಸ್ಯೆ ಭಾರತೀಯ ವರುಣಚಕ್ಷು ಸೂರ್ಯಸಮಸ್ಯೆಯನ್ನು ಪೂರ್ಣ ಹೋಲುತ್ತಿರುವ ಈ ಆಶ್ಚರ್ಯದ ಕಡೆಗೆ, ಈಜಿಪ್ಟ್ ಸಂಸ್ಕೃತಿಯ ತಜ್ಞರ ಗಮನ ಸೆಳೆವ ಆವಶ್ಯಕತೆಯಿದೆ. ಈ ಕೆಲಸ ಇನ್ನೂ ಆದುದನ್ನು ಕಂಡಿಲ್ಲ, ಅಲ್ಪ ವಾಚನದಲ್ಲಿ. ಈ 'ಚಕ್ಷು' ಸಮಸ್ಯೆ ಕ್ರಿ.ಪೂ. ೩೦೦೦ ವರುಷಗಳಷ್ಟು ಪ್ರಾಚೀನ ಎಂದು ಅಂಥೆಸ್ ಹೇಳುತ್ತಾರೆ, ಆದರೆ, ಸೌರ ಸಂಪ್ರದಾಯವು, ಹಿಟ್ಟೈಟ್ ಭಾಗದಲ್ಲಿ ಕಾಣಿಸಿಕೊಂಡದ್ದು ಕ್ರಿ. ಪೂ. ೧೮೦೦-೧೪೨೦ ವರುಷಗಳ ಮಧ್ಯೆ. ಇಜಿಪ್ತಿನ 'ಕಮಲ' ಋಗ್‌ವೇದದ ಪುಷ್ಕರ ಇವುಗಳ ತುಲನೆಯಲ್ಲಿ ಭಾರತೀಯ ಹಾಗೂ ಇಜಿಪ್ತಿನ ಸಾಂಸ್ಕೃತಿಕ ವಿಚಾರದೊಳಗೆ ಸಮಾನ ಅಂತಃಸೂತ್ರವಿರುವುದು ಅರಿಕೆಗೆ ಬರುತ್ತದೆ. ಈ ಸಂಪೂರ್ಣ ವಿವರಣೆ ಇಲ್ಲಿ ಅಪ್ರಸ್ತುತ. ಸುಮೇರಿನ ಕಣ್ಣಮ್ಮನ ಪ್ರತಿಮೆಗಳ ವಿಚಾರ ಮೊದಲೇ ಓದಲು ದೊರೆತಿದ್ದರೆ ಹೆಚ್ಚು ಚೆನ್ನು ಇತ್ತು. ಪುರಾತನ ಸಿಂಧೂತೀರದ ಪ್ರತಿಮೆಗಳಲ್ಲಿ ಸಹ ಕಣ್ಣುಗುಡ್ಡೆ ಎದ್ದಾಗಿ ಕಾಣುವ, ಕಣ್ಣೇ ಪ್ರಧಾನಾಂಗವೆನಿಸುವ ಹಾಗಿನ ಪ್ರತಿಮೆಗಳು ಇವೆ. ಮಾರ್ಶಲ್ ವರದಿ ೧೯೩೧ರಲ್ಲಿ ಪ್ರಕಟವಾಗಿದೆ. ಆದರೆ, ಇರಾಕಿನ ಪ್ರತಿಮೆಗಳ ಬಗೆಗೆ. ವಿವರಣೆ ಸಿಗದೆ ಹೋಗಿದೆ. ಯುಫ್ರೆಟಿಸ್ ತೀರದಲ್ಲಿ ದೊರೆತ ಪುರಾತನ ತಮ ಅವಶೇಷಗಳಲ್ಲಿ ಕಲಾತ್ಮಕತೆ ಇಲ್ಲದಿದ್ದರೂ ಅವು ಕೆಲವೊಂದು ವೈಶಿಷ್ಟ್ಯಪೂರ್ಣ ಅಂಗಾಂಗಗಳುಳ್ಳವು ಆಗಿರುವುದನ್ನು ತಜ್ಞರು ಗುರುತಿಸಿದ್ದಾರೆ. ಸಂಸ್ಕೃತ ಕವಿಗಳ 'ಪಯೋಧರೆ', 'ನಿತಂಬಿನಿ' ಇಂತಹ ಅಂಗವಿಶೇಷತ್ವ ಸೂಚಕ ಸಾಂಕೇತಿಕ ಶಬ್ದಶಿಲ್ಪದ ಸಾರ್ಥಕ್ಯ ಸೂಚಕ ಪ್ರತಿಮೆಗಳು, ಕೋನಾರ್ಕ (ಕೊನ-ಅರ್ಕ) ಪ್ರತಿಮೆಗಳ ಮೂಲ ಮಾದರಿಗಳೇ ಎಂಬಂತೆ ಅಲ್ಲಿ ಇವೆ! ಇಂದಿಗೂ ನಡೆದು ಬಂದಿರುವ, 'ವಿಶಾಲಾಕ್ಷಮ್ಮ' ಶಬ್ದ ಪ್ರತಿಮೆಯ 'ಗುಹಾನಿಹಿತ' ರಹಸ್ಯಾರ್ಥವು ಸಿಂಧೂತೀರದ ಪ್ರತಿಮೆಗಳಿಂದ ತಿಳಿಯಲಿದೆ. 'ಮದಿರಾಕ್ಷಿ' ಭ್ರಮರ (ನೇತ್ರಾ) ಅಂಬೆ ಇವುಗಳ ಹಿನ್ನೆಲೆ ತಿಳಿಯಬಲ್ಲದು, (ಪ್ರಾಚೀನ) 'ನಾಭಿ'ಯ ಕೆಳಗಡೆಯಲ್ಲಿ 'a sexual triangle marked by incised lines' & 'with almond eyes' ಅಮಲಕ ನೇತ್ರೆಯರ ಪ್ರತಿಮೆ ಸಹ ಇವೆ. ಶ್ರೀ ಚಕ್ರದ ತ್ರಿಕೋಣದ ಉಗಮ ಇಲ್ಲಿ ಚಿತ್ರಿತವಾಗಿದೆ.

ಇಂದಿನ ಋಕ್ ಸಂಹಿತೆ 'ಬ್ರಹ್ಮ್ಯನಿಝಿಂ' ಪಂಥದ್ದೆಂಬ ಗ್ರಹಿಕೆ ಬದಿಗಿರಿಸಿ ಇದರ ನೆರವು ಪಡೆದಿದ್ದರೆ, ಸೈಂಧವ ಸಂಸ್ಕೃತಿಯ ಅವಶೇಷಗಳ ಗುಹಾನಿಹಿತ ಅರ್ಥ ಸುಲಭವಾಗಬಹುದಿತ್ತು. 'ವಿಶ್ವ ಚಕ್ಷು' : (ವಿಶ್ವಸ್ಯ ಪ್ರಸವಿತಾ=) 'ಸವಿತಾ=ಸೂ-ರ್ಯ ದೈವತದಿಂದ ಸಿಂಧೂತೀರದ 'ಆಮಲಕ'ನೇತ್ರೆಯರ ಶಿಲ್ಪರಹಸ್ಯ ತಿಳಿಯಬಹುದಿತ್ತು. ಇಷ್ಟೆ ಅಲ್ಲ. ಅಚ್ಚಾಗಿರುವ ಅಲ್ಲಿಯ ಚಿತ್ರಪಟ್ಟಿಯ ಕಿವಿಯಲ್ಲಿ ವಿಚಿತ್ರವೆನಿಸುವಷ್ಟು ಎದ್ದು ಕಾಣುವ ತೂತು (: ಪ್ರಸವ ಕೇಂದ್ರ) ಈ ಸಾಂಕೇತಿಕತೆಯೂ ಅಲ್ಲಿರುವುದು ಕಾಣಬಹುದಿತ್ತು. ಪುರಾತನ ಪ್ರಸವದ 'ಚಕ್ಷು'ವಿನ ಬಲದಿಂದ. ಇಲ್ಲಿ, ಪ್ರಸವದ ಇಂದ್ರಿಯ ಕಣ್ಣು ಚಿತ್ರಿತವಿರಲೇಬೇಕೆಂದು ನನಗಂತೂ ಎನಿಸಿದೆ. ಇದನ್ನು ಪುಷ್ಟೀಕರಿಸುವ ವೇದವಾಕ್ಯವನ್ನು ಅಲ್ಲಗಳೆವ ಸಾಹಸನನ್ನಿಂದಂತೂ ಆಗಲಾರದು! 'ವಿಶ್ವತಃ ಚಕ್ಷುಃ ಉತ ವಿಶ್ವತೋ ಮುಖಃ ವಿಶ್ವತೋ ಬಾಹುಃ...ಎಂಬ ಈ

ಋಚೆಯನ್ನು ವಿವರಿಸುವಾಗ ('ವಿಶ್ವವೇ ಒಂದು ಕಣ್ಣು, ವಿಶ್ವವೇ ಒಂದು ಮುಖ....' ಎಂಬ ವಿಚಿತ್ರವೆನಿಸುವ ಹಾಗಿನ ಈ ಋಚೆಯ) ಪ್ರಸ್ತಾವನಾ ರೂಪವಾಗಿ ಭಾಷ್ಯಕಾರರು ನಿವೇದಿಸಿರುವ ರಹಸ್ಯಾರ್ಥವು ಮೌಲಿಕವಿದೆ. 'ಅಧಿ-ಸ್ಥಾನಾದಿ ಅಭಾವೇ ಅಪಿ ಸ್ರಷ್ಟುಂ ಶಕ್ನೋತಿ' .... ಸೃಷ್ಟಿನಿಯಮಗಳಿಗೆ (= ಋತಸ್ವರೂಪೀ ಸತ್ಯಕ್ಕೆ) ಅಧೀನನಾಗಿರುವ ದೇವನು ಇವನಲ್ಲ! ಯಾವುದೇ ಇಂದ್ರಿಯದಿಂದಲೂ ಈ ವಿಶ್ವವನ್ನು ಅವನು ಹುಟ್ಟಿಸಬಲ್ಲನು. ವಿರಾಟ ಸರ್ವಾವರ್ತಕ 'ಬ್ರಹ್ಮನ್' ಪುರುಷನು ಮುಖದಿಂದಲೇ ಅಗ್ನಿಗೆ ಇಂದ್ರನಿಗೆ ಹಡೆದಿಲ್ಲವೆ? ಆದಕಾರಣ ದಿವ್ಯಪುರುಷನ ಎಲ್ಲ ಅಂಗಗಳಲ್ಲೂ 'ಬ್ರಹ್ಮ' =ಸೃಜನಶಕ್ತಿಯಿದೆ ಎಂಬ ಈ ಮೂಲಭೂತ ಶ್ರದ್ಧೆಯನ್ನು ಲೆಕ್ಕಿಸಿದ್ದರಿಂದ ಕುಂತಿಯ ಕಿವಿಯಿಂದ 'ಕರ್ಣ'ನು ಹುಟ್ಟುತ್ತಾನೆ, ಎಂದರೇನು? ಎಂದು ಪ್ರಶ್ನಿಸುವ ಮೌಢ್ಯ, ಭಾರತೀಯರನ್ನು ಕವಿದಿದೆ! ಅಥವಾ ಜೀವನದ ಅರ್ಥವಾಗದೆ 'ತಮಃ ಆಸೀತ್ ತಮಸಾಗೂಳ್ಹಂ' ಕತ್ತಲನ್ನಪ್ಪಿದ ಕತ್ತಲೆಯೆ ಎಲ್ಲೆಲ್ಲೂ ವ್ಯಾಪಿಸಿರುವ ಅನುಭವ ಜನಕ್ಕೆ ಬರಬೇಕೆಂದೇ, ಕಾರ್ಯಕಾರಣ ಸಂಬಂಧ ತಪ್ಪಿಸಿ, ಈ ಬಗೆಯ ಅಗಮ್ಯ ಅಂಚಿಂತ್ಯ ಶಕ್ತಿಯ ನೆನಹು ಒತ್ತರಿಸುವಂತೆ ಮಾಡಿರಬೇಕು. ಕಾರ್ಯಕಾರಣ ಭಾವ ತಿಳಿದರೆ 'ತಾನು ತಿಳಿಗೇಡಿ' 'ಪಾಮರ' 'ಪಾಪಿ' ಎಂಬ ಭಾವನೆ ಉಕ್ಕಿಬರಲಾರದು; ನಿಜವಷ್ಟೆ?

ಈ ಋಕ್‌ಸಂಹಿತೆಯ ರಚನಾಕೌಶಲ್ಯದ ಅಪೂರ್ವತೆಯನ್ನು ಎಷ್ಟು ಹೇಳಿದರೂ ತೀರದು. ಈ ಸಂಹಿತೆಯ ಕೇಂದ್ರಸ್ಥ ಸರ್ವಶ್ರೇಷ್ಠ ದೈವತವು ವೃತ್ರ : ಅಹಿ-ಹನ್ ಇಂದ್ರನು ಎಂಬ ಸಂಭ್ರಮಕ್ಕೆ ಅವಕಾಶವನ್ನು ಕಲ್ಪಿಸಿ; ಆ ವಿಶ್ವಾಪಕ ವಿರಾಟ್ ಶಕ್ತಿ ವೃತ್ರನೇ ಇಂದ್ರನನ್ನು ನುಂಗಿರುವುದನ್ನು ಈ ವೇದ ಅಮೋಘರೀತಿಯಲ್ಲಿ ಸಾರುತ್ತಿದೆ! ಇಂಥ ಸೂಕ್ತಗಳ ಈ ಸಂಗ್ರಹದ ಅದ್ಭುತತೆಯನ್ನು ಎಷ್ಟೆಂದು ಹೇಳಬೇಕು! ವೃ-ತ್ರ ಎಂದರೆ ಯಾರು? ಏನೆಲ್ಲವನ್ನೂ ವ್ಯಾಪಿಸಿ, 'ಮೆಟ್ಟಿ' ಮೇಟಿಯಂತೆ ಮೇಲೆ ನಿಲ್ಲುವುದು. ಈ ವಿರಾಟ್ ಪುರುಷನು 'ಭೂಮಿಂ ವಿಶ್ವತಃ ವೃತ್ವಾ' ಹತ್ತು ಬೆರಲಿನಷ್ಟು ಮೇಲೆ ನಿಲ್ಲುತ್ತಾನೆ' ಎಂಬ ಈ ಸ್ತೋತ್ರದಲ್ಲಿಯೆ ಈತನನ್ನು 'ಸೂರ್ಯ' ಚಕ್ಷು ಎಂದು ಚಿತ್ರಿಸಲಾಗಿದೆ. 'ಸೂರ್ಯ' ರೂಪ 'ಪುರಿ ' (0) ಯಾವನ ಶಯ(ನ) ಸ್ಥಾನವೊ ಆತನು 'ಪುರುಷ'ನು='ಬ್ರಹ್ಮ'ನು. ಉಪನಿಷತ್ತಿನ ಚಾಕ್ಷುಷೀ ಪುರುಷನು ಈತನೆ! 'ವಿಶ್ವತೋ ವೃತ್ವಾ ನಿಂತಿರುವ ಈ (ವೃತ್ರ) ಪುರುಷನ 'ಮುಖಾತ್' ಇಂದ್ರಃ ಅಜಾಯತ ಎಂದರೆ ಇಂದ್ರನ ತಂದೆ 'ವೃತ್ರನು' ಅರ್ಥಾತ್ ತ್ವಷ್ಟಾರನೇ ಎಂದಂತೆಯೆ ಆಗುತ್ತಿಲ್ಲವೊ? ಅಥರ್ವವೇದದಲ್ಲಿ 'ವೃತ್ರಾತ್ ಜಾತಃ ದಿವಾಕರಃ' ಎಂದಿರುವ ಬಿಚ್ಚು ಮಾತು, ಋಗ್‌ವೇದದಲ್ಲಿ 'ಸಂತ' ವಾಣಿಯ ಮುಸುಕು ಮಾತಿನಲ್ಲಿದೆ; ಇಷ್ಟೇ ಭೇದ. ಇಂದ್ರನು ಸೂರ್ಯ (: ಸವಿತೃ) ದೈವತದ ಪರ್ಯಾಯ ಎಂದರೆ ದಿವಾಕರನನ್ನು ಪ್ರಸವಿಸಿದ ಸರ್ಪ ವೃತ್ರನು ಇಂದ್ರನನ್ನೂ ಹಡೆದನು; ಮುಖಾತ್ ಇಂದ್ರಃ ಅಜಾಯತ ಇದೂ ಸರಿ.

ಈ 'ಪುರುಷ'ನೇ 'ಕಣ್ಣು' ಆಗಿರುವ ಭಾರತೀಯರು, ತಮ್ಮ ಸ್ವಂತದ ನಯ-ನಗಳಿಗೆ ಎಂದಿನಿಂದಲೇ ಎರವಾಗಿದ್ದಾರೆ! ಈ ಕಣ್ಣಾ>ಗಣ್ಣನ ವಿವರಣೆ ಮತ್ತೆ ಅನವಶ್ಯಕ ಈ 'ದಿವ್ಯ ಚಕ್ಷು' ಅಥವಾ ಕಣ್ಣಾ>ಗಣ್ಣಾ ಅನುಷ್ಠಾನದ ಸಮಯಾಚಾರವು, ಮೊತ್ತಮೊದಲಲ್ಲಿ ಸುಮೇರ ಅಸ್ಸೀರಿಯಾ ಹಾಗೂ ಭಾರತ ಈ ಉಭಯ ಪ್ರದೇಶದ ಆಪ: ರಸ ಪಂಥೀಯರ ಸಮಾನ ಸ್ವರೂಪದ ಆಚಾರಾಂಗವೇ ಆಗಿರಬೇಕು. ಆ ಬಳಿಕ ಇಂದಿನ ವೇದೋಪನಿಷತ್ತುಗಳ ಕ್ರೋಡೀಕರಣದ ಸುಮಾರಿಗೆ ಅಥವಾ ಸೈಂಧವ ಸಂಸ್ಕೃತಿಯ ಕೊನೆಯ ಹಂತದಲ್ಲಿ 'ದಿವ್ಯಚಕ್ಷು ಸಿದ್ಧಿಯ' ಅನುಷ್ಠಾನವು ಭಾರತದಲ್ಲಿ ತೀರ ಭಿನ್ನಸ್ವರೂಪದ್ದು ಆಗುತ್ತದೆ. ಇದು, ಅಸ್ಸೀರಿಯಾದತ್ತಣಿನ ಆಚಾರ-ಕ್ರಿಯೆಯ ಪ್ರತಿಕ್ರಿಯಾ-ರೂಪದಲ್ಲಿ ಆತ್ಯಂತಿಕ ವಿರಕ್ತಪಂಥೀಯ ಕುಮಾರ-ಕುಮಾರೀ ಸಂಪ್ರದಾಯವಾಗಿ ಮಾರ್ಪಟ್ಟಂತೆ ಕಾಣುತ್ತದೆ. ಇದನ್ನು ಸೂಚಿಸುವ ಪ್ರಮಾಣಗಳಲ್ಲಿ ಸೈಂಧವ ಸಂಸ್ಕೃತಿಯ ಪುರಾತನ ಮುನಿ, ಪಶುಪತಿ, ನಾಗ-ಪುರುಷ, ಇಂಥ ಪ್ರತಿಮೆಗಳು ಮತ್ತು ಏಕಶೃಂಗ ಪುರುಷ (ಪಶು) ಪ್ರತಿಮೆಗಳು, ಹಾಗೂ ಅರಳೆಲೆ ಸಾಂಕೇತಿಕ ಗಿಡ: 'ಪಿಪ್ಪಲ' ಎಂಬ ಅಶ್ವತ್ಥ 'ವೃಕ್ಷ'ದ ಪ್ರತಿಮೆ, ಇದನ್ನು ಆಲಿಂಗಿಸಿರುವ ಎರಡು ಏಕಶೃಂಗಿ ಪ್ರಾಣಿಗಳು ಮುಖ್ಯವಾಗಿ ಋಗ್‌ವೇದದಲ್ಲಿ 'ಸರ್ಪ' ದೇವ-ಜನ ಎಂದುದು; 'ಸರ್ಪ';ಹನನ ಬ್ರಹ್ಮಹತ್ಯಾ ಪಾತಕ : ಅರ್ಥಾತ್ ಸರ್ಪ=(ಸು) ಬ್ರಹ್ಮ(ಣ್ಯ)! ಸರ್ಪಹನನ ನಿಷೇಧರೂಪ ಆತ್ಯಂತಿಕ ಅಹಿಂಸೆಯ ಪ್ರತಿಪಾದನೆ-ಎಂದರೆ ಆಮರಣ ಕುಮಾರೀ ಕುಮಾರ ವ್ರತಧಾರಣದ ಅನಿವಾರ್ಯತೆ!

ಚಿತ್ರ ನಂ. ೬

ನಾಗಸಂಪ್ರದಾಯ ಸೂಚಕ ಪುರಾತನ ಪ್ರತಿಮೆಗಳು

ಋಗ್ ವೇದದಲ್ಲಿ ನಾಗಪ್ರತಿಮಾ ಪೂಜೆಯಿತ್ತು, ಎಂಬುದನ್ನು ಮನಗಾಣಿಸಿ ಕೊಡಲು ಸೈಂಧವ ಸಂಸ್ಕೃತಿಯ ಅವಶೇಷಗಳ ಪ್ರಯೋಜನವೇನು? ಎರಡೂ ಕಡೆಗಳಲ್ಲಿ ಸಮಾನ ಸಾಂಕೇತಿಕ ಸಮಯ : ಪ್ರತಿಮಾರಾಧನೆ ಇದೆಯೆಂದು

ಕಂಡುಬಂದರೆ, (ಇವೆರಡರಲ್ಲಿ ಯಾವುದು ಪ್ರಾಚೀನ? ಎಂಬ ಪ್ರಶ್ನೆ ಬೇರೆ) ಇವೆರಡೂ ಸಂಸ್ಕೃತಿಗಳಲ್ಲಿ ಸಾಮ್ಯವು ಇತ್ತು, ಎಂಬುದು ಸಿದ್ಧವಾಗಬಹುದಲ್ಲವೆ?

ಸ್ಯೆಂಧವ ಸಂಸ್ಕೃತಿಯಲ್ಲಿ 'Water Worship' ಇತ್ತು ಎಂದು ಹೇಳುವ ಮಾರ್ಶಲ್, "ಆಪೋಮಾತರಃ ಸಪ್ತ ತಸ್ಥುಃ ಸಿಂಧವಃ' ಈ ಋಗ್ವಾಕ್ಯದಲ್ಲಿ, 'ಆಪೋ ವಾ ಅಸ್ಮಾನ್ ಮಾತರಃ' ಎಂಬ ಇನ್ನೊಂದು ವೇದವಾಕ್ಯದ ಆಶಯವೆ ಇದೆ. ಅಲ್ಲದೆ, 'ಸಪ್ತ-ಸಿಂಧೂ' ಈ ಮಹತ್ವದ ಸಂಕೇತವೂ ಉಂಟು. ಮೇಲಣ ಉಲ್ಲೇಖದೊಳಗಿನ 'ಸಪ್ತ' ಸಂಕೇತದಲ್ಲಿ, ಪರ್ಯಾಯದಿಂದ 'ಸರ್ಪ'ವಾಚಕ ಅರ್ಥವೂ ಉಂಟು. ಸರ್ಪಸೂಚಕ ಸಪ್ತದ ಹಲವು ಪ್ರಯೋಗಗಳು ಇವೆ. ಆಪ: ರಸಪೂಜೆ ಎಂದರೆ ಆಪಸ್ವರೂಪೀ ಆದಿಮಾತೆ (ಅದಿತಿ) ಪೂಜೆ, ಅಲ್ಲದೆ ಆಪ ಮತ್ತು ಸರ್ಪ ಇವೆರಡರೊಳಗಿನ ಅನ್ಯೋನ್ಯ ಸಂಬಂಧವನ್ನು ಮಾರ್ಶಲ್ ಅರಿಯದೆ ಇಲ್ಲ; ವ್ಹೊಗೆಲ್ ಬರೆದ ನಾಗ ಸಂಪ್ರದಾಯದ ಗ್ರಂಥದ ನಿರ್ದೇಶವಿದೆ. ನಾಗನು ನೀರು ಎರಚುತ್ತಾನೆ; ನೀರು ನಾಗನಿಗೆ ಜನ್ಮಕೊಡುತ್ತದೆ, ಎಂಬ ವಿಚಾರ ವ್ಹೊಗೆಲ್ ಹಲವೆಡೆಗೆ ಹೇಳಿದ್ದುಂಟು. ನಾರ=ನೀರು, ನಾರಾಯಣ=ಸರ್ಪ ಇದನ್ನೂ ಅವನು ಹೇಳಿದ್ದಾನೆ. ಆದರೆ, ಈ ಸಾಂಕೇತಿಕ ಮಟ್ಟದ ಅರ್ಥವು ಅಗ್ರಾಹ್ಯವಿರುವವರಿಗೆ, ಸಲಿಲರೂಪೀ ಅದಿತಿ= ಸರ್ಪಸ್ವರೂಪಳೂ ಆಗುತ್ತಾಳೆ, ಎಂಬುದು ಕಾಣಲು ಅಶಕ್ಯ. ಆದರೆ, ವಿಶೇಷ ಆಳಕ್ಕೆ ಇಳಿಯದೆಯೂ ವ್ಹೊಗೆಲ್ ಅದಿತಿ ಮತ್ತು ನಾಗಗಳ ತಾಯಿ ಕದ್ರು ಒಂದೇ ಇರುವುದಾಗಿ ಹೇಳುತ್ತಾನೆ! 'ಸಾರ್ಪರಾಜ್ಞೀ ಸೂರ್ಯೋ ವಾ' 'ಗೌ' ಮತ್ತು ಪೃಶ್ನಿ (= ಅದಿತಿ) ಈ ಶಬ್ದ ಪ್ರತಿಮೆಗಳ ಮೇಲು ಮೇಲಿನ ಅರ್ಥ ಮತ್ತು ಈ ಅರ್ಥದಿಂದ ಯಾವ ದೈವತದ ದರ್ಶನ ಮಾಡಿಸುವ ಉದ್ದೇಶವಿದೆಯೊ ಆ.ಸರ್ಪ=ಸೂರ್ಯ ಈ ದೈವತದ ಆಕೃತಿ, ಇವೆರಡರೊಳಗಿನ ಅಂತಃಸಂಗತಿಃ (self-consistency) ಏನೂ ಇದು ತಿಳಿಯದಾಗುತ್ತದೆ. ಆದಕಾರಣ, ಇಲ್ಲಿ ಅರ್ಥದ ಸಾಂಕೇತಿಕ ಮಟ್ಟವನ್ನು ಸ್ವೀಕರಿಸದೆ ಬೇರೆ ಉಪಾಯವಿಲ್ಲ. ಗೌ ಮತ್ತು ಪೃಶ್ನಿ, ಎರಡು ಸಂಕೇತಗಳಿದ್ದರೂ ಅವು ಮೂಲತಃ ಸಮಾನಾರ್ಥಿಯೆ ಇವೆ. 'ಪೃಶ್ನಿಮಾತರಃ' ಮರುತರನ್ನು 'ಗೋಮಾತರಃ', 'ಸಿಂಧು ಮಾತರಃ' ಎಂದೂ ಹೇಳಿದ್ದಾಗಿದೆ. 'ಗೋ'ವನ್ನು 'ಅಮೃತಸ್ಯ ನಾಭಿ' (O) ಎಂದಿರುವಲ್ಲಿ ಈ ಆಕೃತಿಯು ಸೂರ್ಯನ ಸೂಚಕವಾಗುತ್ತದೆ. 'O' ಇದು ಸರ್ಪದ ಹೆಡೆಯ ಆಕೃತಿಯೂ ಸರಿ! ನಾಗ: ಸರ್ಪ ಭೋಗಿ ಎಂಬ ಪರ್ಯಾಯ ನಾಮವು, ಅದರ ಭೋಗ= ಹೆಡೆ(O)ಯ ಮೂಲಕವಾಗಿಯೇ ಬಂದಿದೆ. ಭೋಗ (ಭೋಗ್ಯ) ಉಳ್ಳದ್ದು ಭೋಗಿ. ಭೋಗ-ಭೋಗ್ಯ ಇಂಥ ಪ್ರಯೋಗಗಳು ವೇದದಲ್ಲಿ ಇನ್ನೂ ಕಣ್ಣಿಗೆ ಬಿದ್ದಿಲ್ಲ. ಆದರೂ ಉಪನಿಷತ್ತುಗಳಲ್ಲಿ ಇಂಥ ನಿರ್ದೇಶ ಉಂಟು. ಆದಕಾರಣ ನಾಗ-ಸರ್ಪವನ್ನು ಉಭಯಲಿಂಗಿಯಾಗಿಯೇ ಉಲ್ಲೇಖಿಸುವುದು ಹೆಚ್ಚು. ಆದರೂ 'ಶಾರದಾ : ಭುಜಂಗ' (ಸ್ತೋತ್ರ) ಇಂತಹ ಪ್ರತಿಮೆಗಳಲ್ಲಿ ಸ್ತ್ರೀ ರೂಪವು ಸ್ಪಷ್ಟವೆ ಇರುತ್ತದೆ.

ಋಗ್ ವೇದದ ಸಾರ್ಪರಾಜ್ಞಿಯನ್ನು 'ಸೂರ್ಯಾ' ಎನ್ನುವಲ್ಲಿಯೆ ಔಚಿತ್ಯವಿತ್ತು. ಆದರೆ ಇಲ್ಲಿ 'ಸೂರ್ಯಃ' ಎಂಬ ಪುಲ್ಲಿಂಗೀ ಪ್ರಯೋಗವಿದೆ! ಇದಕ್ಕೆ ಕಾರಣವೂ ಉಂಟು. ಈ 'ಸೂರ್ಯ' ಪ್ರತಿಮೆಯನ್ನೇ ಸೋಮ (ನಾಮಾಂತರದ ಚಂದ್ರನ) ಪ್ರತ್ನಿಯನ್ನಾಗಿಸಿರುವ ಸೂಕ್ತವೊಂದಿದೆ! ಆದಕಾರಣ, ಇಲ್ಲೂ 'ಸೂರ್ಯಾ' ಎಂಬ ಪ್ರತಿಮೆಯನ್ನು ಉಪಯೋಗಿಸಿದರೆ, ಈ (ಸೂರ್ಯರೂಪ) ಸರ್ಪವು, 'ಚಂದ್ರ' ಅಥವಾ 'ರಾಹು' ಎಂಬ ಗುಟ್ಟು ರಟ್ಟಾಗದೆ ಇರಲು ಶಕ್ಯವಿಲ್ಲ! ಹೀಗಾದಲ್ಲಿ ಈ 'ಏಕಂ' : ಸಂತಂ' 'ಅಪಾಂಗರ್ಭಂ ಬೃಹಂತಂ ವಾಯಸಂ' ಸ್ವರೂಪೀ ('ಶನಿ'=Cronus= Saturnalia) ಅರಿಷ್ಟ-ನೇಮಿ (=ಚಂದ್ರ;) ತಾರ್ಕ್ಷ್ಯ ಶಕ್ತಿಯಾವು ದೆಂಬುದು ಲೋಕಕ್ಕೆ ಗೊತ್ತಾಗಿ, ಜನದಲ್ಲಿ ಈ ದಿವ್ಯಾಧ್ಯಾತ್ಮ ಮಾರ್ಗದಲ್ಲಿ ಶ್ರದ್ಧೆ ಕಡಿಮೆಯಾಗುವ ಭೀತಿಯಿದೆ! ಆದುದರಿಂದ, 'ನ ಬುದ್ಧಿ ಭೇದಂ ಜನಯೇತ್ ಅಜ್ಞಾನಾಂ' ಎಂಬ ದೂರ ಧೋರಣದ ಲೋಕಹಿತೈಕ ದೃಷ್ಟಿಯಿಂದ, ಪುಲ್ಲಿಂಗಿ ರೂಪವಾಗಿದ್ದರೂ ಸ್ತ್ರೀಲಿಂಗೀ ಅರ್ಥದ್ಯೋತಕ 'ಸೂರ್ಯ' ಪದವನ್ನು ಉಪಯೋಗಿಸಿ, ಇದನ್ನು ಜನ ನಂಬುವಂತೆ 'ಪವಾಡ' ಕೃತ್ಯ, ಇಲ್ಲಿ ಅನಿವಾರ್ಯವೇ ಆಯ್ತು! 'ಅಸ್ಯ ವಾಮ(ನ)ಸ್ಯ' ಮುಂಡಿಗೆಗಳಲ್ಲಿ 'ಕೃಷ್ಣಂ ನಿರಯಣಂ'= 'ರಾತ್ರಿರಾದಿತ್ಯಸ್ಯ (nocturnal) ಆದಿತ್ಯ ರೂಪ ಸೂರ್ಯನ (O) ಉಲ್ಲೇಖವಿದೆ. ಇಲ್ಲಿಯೆ ಅಪದಲ್ಲಿ ವಾಸಿಸುವ ಸುಪರ್ಣದ ಹೆಸರೂ ಬಂದಿದೆ! ಇದೇ ಇನ್ನೊಂದೆಡೆಗೆ, ದಿವ್ಯ ವಾಯಸ = ಸುಪರ್ಣವಾಗಿದೆ! 'ಸಮು'ದ್ರದಲ್ಲಿ ಹೊಕ್ಕಿರುವ 'ಏಕಃ ಸುಪರ್ಣ'ದ ರಮಣೀಯ ವರ್ಣನೆ, 'ಏಕಂ ಸಂತ' ಮಹಿಮೆಯ ಸೂಕ್ತದಲ್ಲೆ ಇದೆ.

ಸ್ಯೆಂಧವ ಸಂಸ್ಕೃತಿಯ ಅವಶೇಷಗಳಲ್ಲಿ ದೊರೆತ ಪೂಜಾರತ ನಾಗಸರ್ಪ ಸೂಚಕ ಪ್ರತಿಮೆಯ ಅರ್ಥವನ್ನು ಸಂಪೂರ್ಣ ಗ್ರಹಿಸಿಕೊಳ್ಳಲು ಆಗುವುದಿಲ್ಲ. ಈ ಪ್ರತಿಮೆಯ ಕೆಳಭಾಗದ ಲಿಪಿ ಓದಲು ಆಗಿಲ್ಲ. ಸರ್ಪವು

ಸಂತರೂಪತಾಳುವ ವೈಸಿಷ್ಟ್ಯವನ್ನು, ವೊಗೆಲ್ ತನ್ನ ಇಡೀ ಸಮೀಕ್ಷೆಯ ಸಾರ, ಎಂಬಂತೆ ಗ್ರಂಥಾರಂಭದಲ್ಲಿಯೆ ಹೇಳಿದ್ದಾನೆ. ಸರ್ಪವು ಗೋ-ತಮ=ಗೌತಮ ರೂಪ ಧರಿಸುವುದು, ಭಾರತದಂತೆ ಇಜಿಪ್ತಿನ ಹ್ಯಾಥೋರ ಪ್ರತಿಮೆಯಿಂದಲೂ ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಎಡಬಲದಲ್ಲಿ ಹೆಡೆಯೆತ್ತಿರುವ ನಾಗಗಳ ಬಳಿಯ ಪೂಜಾರತ ವ್ಯಕ್ತಿಗಳಿಂದ ಆರಾಧಿಸಲ್ಪಡುತ್ತಿರುವ ಪ್ರತಿಮೆ ಸಂತಮಹಾಂತರೂಪ ಶ್ರೇಷ್ಠನಾಗಶಕ್ತಿಯೆ ಇರಬೇಕು. ಗದ್ದುಗೆಯ ಈ ದೈವತ, ಪೀಠಾರೋಹಣ-ಮಾಡಿರುವ ಸಾಂಕೇತಿಕತೆಯು, ಆದಿನಾಗ ದೈವತ ಪ್ರತಿಮೆಗಳ ವರ್ಣನೆಯ ಅರ್ಥ ಗ್ರಹಣಕ್ಕೆ ಪ್ರಯೋಜನಕಾರಿಯಾಗಿದೆ.

ಇಜಿಪ್ತಿನಲ್ಲಿ, ಆದಿಪುರುಷ: ಮಿಡಿನಾಗ (uraeus viper) ಉತ್‌ಜ್ವಲ ಮಾಳದ ಮೇಲೆ (flaming hill) ಕುಳಿತಿದ್ದಾನೆ. ಈ ಮಾಳ: ಪರ್ವತ ಅದೆ ತಾನೆ ಮುನ್ನೀರೊಳಗಿಂದ (primeval ocean) ಹೊರಬಂದಿರುತ್ತದೆ. ವೇದದಲ್ಲಿ ರುದ್ರನು ಗಿರಿಶನು. ವಿಷ್ಣುವು ಗಿರಿಷ್ಠನು! ಇವೆರಡೂ ದೈವತಗಳ ಮೂಲದಲ್ಲಿ ಹಿರಣ್ಯಗರ್ಭಃ (ಸಮವರ್ತತ ಅಗ್ರೇ) ದೈವತವಿದೆ. ಇದನ್ನು 'ಕ(ಂ)' ಎಂದರೇ ಲೇಸು. ಈ 'ಕ(ಂ)' ಸಾಂಕೇತಿಕ ಪ್ರತಿಮೆ ಇಜಿಪ್ತಿನಲ್ಲೂ ಇದೆ! ರುದ್ರ ಮತ್ತು ವಿಷ್ಣು ಇಬ್ಬರನ್ನೂ ಅವರವರ ಸಂಪ್ರದಾಯವು ಆದಿಪುರುಷ ಎಂದೇ ಬಗೆಯುತ್ತದೆ. ಇದರಲ್ಲಿ ಒಬ್ಬನು ನಾಗಭೂಷಣನಾದರೆ, ಇನ್ನೊಬ್ಬನು ನಾಗಶಯನನು. ಇಬ್ಬರೂ ಗಂ(<ಕಂ)ಗಾ: ಸಲಿಲದೇವಿಯೊಡನೆ ಅವಿಗಲಿತ ಸಂಬಂಧವಿರುವವರು, ಈ ಕಂ (ಉಭಯಲಿಂಗೀ) ದೈವತ ಸ್ತೋತ್ರದಲ್ಲಿ 'ಹಿಮವಂತ' (= ಹಿಮವತ್) ಪರ್ವತದ ಉಲ್ಲೇಖವಿದೆ! ಈ ಸೂಕ್ತವು ಇಡಿಯಾಗಿ ಸಾಂಕೇತಿಕ ಅರ್ಥವನ್ನುಳ್ಳುದಾಗಿದೆ. ಆದಕಾರಣ, ಇಲ್ಲಿಯ 'ಹಿಮವಂತ'ದ ಉಲ್ಲೇಖವು ಭೌತಪರ್ವತವಲ್ಲ. ಇದು ಆಪ : ರಸ ಸ್ತೋತ್ರದ ಮೂಲ ಗಣ್ಣು (< ಕಣ್ಣು) ಎಂಬ ಅರ್ಥದ 'ಪರ್ವ'-ತ. ಸರಸ ಕಾಂಡ-ದಂಡ, ಎಂಬರ್ಥ ಸೂಚನೆ ಇಲ್ಲಿದೆ. ಕೇನೋಪನಿಷತ್ತಿನ ಉಮಾ (ಕೆಲ ತಜ್ಞರ ದೃಷ್ಟಿಯಲ್ಲಿ 'ಅಮ್ಮಾ' ಸಂಕೇತದಿಂದ ಸಾಧಿತ) ದೇವಿಯನ್ನು 'ಹೈಮವತೀ' ಎಂದಿರುವಲ್ಲಿ, ಈ ದೇವಿ 'ಅದ್ರ್ಯಾ' : ರಸವತಿ:ಸರಸ್ವತಿ ರಸ-(ಜ್ಞಾನದಾತಾರಳು) ಎಂಬ ಗರ್ಭಿತಾರ್ಥವೆ ಇರುವುದನ್ನು ಸಂದೇಹಿಸಲು ಅವಕಾಶವಿಲ್ಲ. ಏಕೆಂದರೆ ಈ ದೇವಿಯೇ ಬ್ರಹತ್ತ್ವಸಿದ್ಧಿಗಾಗಿ 'ತತ್ ವನಂ' : ತೀರ್ಥದ ಅನು-ಸ್ಥಾನ : ಉಪಆಸನ ಹೇಳಿದ್ದಾಳೆ.

ಗ್ರೀಸಿನ ಕಥೆಗಳಲ್ಲಿ, ಅಪ : ರಸತತ್ತ್ವದ ದೇವಿಯರನ್ನು ಗುಡ್ಡದ ಅಮ್ಮನವರಾಗಿ ಬಗೆಯಲಾಗಿತ್ತು. ಭಾರತದಲ್ಲಿಯೂ ಮಾಳ: ಗುಡ್ಡ: ಪರ್ವತದೇವಿಯರು ಉಂಟು. ಸಂಸ್ಕೃತ ಭಾಷೆಯ ಮೂಲ ಚೌಕಟ್ಟಿನಲ್ಲಿ ಉಭಯಲಿಂಗೀ ಸಂಕೇತ ಸರಿಹೊಂದದ್ದರಿಂದ 'ಪರ್ವತ' ಸ್ತ್ರೀಲಿಂಗಿಯಾಗಲು 'ಪರ್ವತಿ' ಆಗಲೇಬೇಕು. ಜಲಪೂಜಕ ಸಂಪ್ರದಾಯದ ಮೂಲಭೂತ ವೈಶಿಷ್ಟ್ಯದಂತೆ, ಈ ಏಕಂಸತ್ ದೈವತವು ಉಭಯಲಿಂಗಿ-ಏಕಕಾಲಕ್ಕೇ! (unity in duality ie diversity) ಋಗ್ವೇದದ 'ಅಪಾಂನಪ್ತ್ರ ಈ ಪ್ರತಿಮೆ ಇದಕ್ಕೆ ನಿದರ್ಶನ. ಈ ನಪ್ತ್ರ=ನಾಗನು ಹೊರಗೆ ಅವತರಿಸುವಾಗ ತನ್ನ ಅಪ=ಪುರವನ್ನು ಮಾಳ-ಪರ್ವತವಾಗಿಸುತ್ತಾನೆ. ಇಜಿಪ್ತಿನಲ್ಲಿ (ಇಸಿಸಪುತ್ರ) ಹೊರಸ್-ರಾಜನ ಅಧಿ-ಸ್ಥಾನ=ಪಟ್ಟ= ಪೀಠವೇ ಇಸಿಸ್ ಎಂದು ಬಗೆಯಲಾಗುತ್ತಿತ್ತು. ಈಜಿಪ್ತಿನಿಂದ ಭಾರತದ ವರೆಗೂ ಇದ್ದ 'ಆದಿಪುರುಷ' ನ ಅಧಿಷ್ಠಾನ=ಪಟ್ಟು ಕೊಂಡಿರುವ ಎಡೆ=ಪಟ್ಟ, ಇದು'ಸ್ತ್ರೀ' ಶಕ್ತಿಯ ಸಾಂಕೇತಿಕ ಪ್ರತಿಮೆಯಾಗಿದ್ದುದು ಈ ಗರ್ಭಿತಾರ್ಥಗಳ=ಸಾಂಕೇತಿಕ ಪ್ರತಿಮೆಗಳ ತುಲನಾತ್ಮಕ ಸಮೀಕ್ಷೆಯಲ್ಲಿ ಹೀಗೆ ಹೊರವಡುತ್ತಿದೆ. ಆಸ-ನ 'ವಜ್ರ', 'ಪದ್ಮ' ಎಂಬೀ ಬಗೆಯ ಸಂಕೇತಗಳಿಂದ ಸೂಚಿಸಲಾಗುತ್ತಿರುವ ಈ ಪ್ರತಿಮೆಗಳ ಬರುವಳಿ ಅದೆಷ್ಟು ಪುರಾತನವಿದೆ ಎಂಬುದು ಇಲ್ಲಿ ಬೆಳಕಿಗೆ ಬರುತ್ತದೆ.

ಚಿತ್ರ ನಂ. ೭

ವಿದೇಹೀ ಜನಿತ್ರೀ

ಸಾಂಕೇತಿಕ ಪಾತ್ರದ (ಕ್ರಿ.ಪೂ. ೨೦೦೦ ವರುಷ, ಪಾಲಿಸ್ತೈನದತ್ತ ದೊರೆತದ್ದು) ಪ್ರಾಚೀನ ಪರಂಪರೆ ಅಭ್ಯಸಸೀಯವಿದೆ. ಪುರುಷ: ಸಮಾಜ ('ಏಕ') ಅಕ್ಷ, ಶೀರ್ಷ, ಪಾದ ಉಳ್ಳವ; ಅಜ-ಏಕಪಾತ್ ಇಂತಹ ಸಾಂಕೇತಿಕತೆಯ ಜೊತೆಗೆ, ನೌಕೆ, ತಾರಿಣೀ=ತಾರಾ:ಭಗವತೀ; ಅರ್ಣವ, ಸರ ಇಂತಹ ಸಂಕೇತಗಳನ್ನು ಸ್ಮರಿಸಿಕೊಳ್ಳಬೇಕು. ವಿಶಿಷ್ಟ ಅಂಗದಿಂದ ಇಡೀ ಶರೀರವನ್ನು, ಅಥವಾ ಶರೀರವನ್ನೂ ಅಂಗವನ್ನಾಗಿ ಕಲ್ಪಿಸಿ ರೂಢಿಸಿರುವ ಪಡೆನುಡಿಗಳು ಉಂಟೇ ಉಂಟು. ಅಂಗನಾ; ವೈವಾಹಿಕ 'ಶರೀರ ಸಂಬಂಧ' ಮುಂತಾದ ವಿಶಿಷ್ಟ ವ್ಯಕ್ತಿಸೂಚಕ ಮುಖವನ್ನು ನಿರ್ಮಿಸದೆ ಉಳಿದ ಅಂಗಪ್ರತಿಮೆಗಳಿದ್ದು ಮುಖವಿಲ್ಲದ ನಗ್ನಸ್ತ್ರೀ ಪ್ರತಿಮೆಗಳು ಪಾಲಿಸ್ತೈನ್ ಭಾಗದ

ಪುರಾತನ ಅವಶೇಷಗಳಲ್ಲಿ ದೊರೆತಿವೆ. ಭಾರತದಲ್ಲಿಯೂ ಇವು ಇಲ್ಲದಿಲ್ಲ. ಮುಖವು ಕತ್ತರಿಸಲ್ಪಟ್ಟಿರಬೇಕೆಂಬ ಒಂದು ಊಹೆ ಇದೆ. ಆದರೆ ಏಕಂ: ಸತ್ ತತ್ವ ಸಾಕ್ಷಾತ್ಕಾರದಲ್ಲಿ ವಿಶಿಷ್ಟ ಅಂಗ ಅರ್ಥವಿಹೀನ.

ಚಮಸೋಪಸ್ಥಾನದಲ್ಲಿ, 'ಕುಮಾರೀ' ದೇವಿಯ ಪಾತ್ರವಾದ "ಕನ್ಯಾ ಏನಾನ್ ನರಾನ್ ಅನ್ಯೈಃ ನಾಮಭಿಃ ಸ್ಫುರತ್ (ಪ್ರೀಣಯತಿ)" ಎಂಬ ಈ ಪುರಾತನ ನಡೆವಳಿ ವಿಚಾರಾರ್ಹವಿದೆ 'ಸಲೀಲೇ ಏಕಃ ದೃಷ್ಟಾ ಅದ್ವೈತೀ ಭವತಿ', ಅಥವಾ 'ಸಲೀಲೇ ಸಂನಿವಿಷ್ಟಃ ಏಕಃ ಹಂಸಃ' ಭೂಮಿಕೆಯ ಅನುಭಾವದಲ್ಲಿ 'ಅತ್ರ ಪಿತಾ ಅಪಿತಾಭವತಿ.... ಚಾಂಡಾಲಃ ಅಚಾಂಡಾಲಃ' 'ಏಷಃ ಅಸ್ಯ ಪರಮ ಆನಂದಃ..... ಪರಮಾಗತಿಃ! ಉಪನಿಷತ್ತುಗಳಲ್ಲಿ ಬರುವ 'ಸೇತುಃ ವಿಧರಣ' ಸಂಸ್ಕಾರವು ಹಿಂದುಮುಂದಿನ ಸಂದರ್ಭದ ಉಲ್ಲೇಖಗಳೂ ಅಭ್ಯಸನೀಯವಿದೆ. ಆಮರಣ ಕುಮಾರೀ ವ್ರತಧರಿಸುವ ಕನ್ಯೆಗೆ, 'Vestal Fire' (ಗೌತಮಾಗ್ನಿಯ) ಪಾವಿತ್ರ ರಕ್ಷಣದ ದೀಕ್ಷೆಯನ್ನೀವ ಕ್ರೈಸ್ತ ಪಂಥೀಯ ಸಂಸ್ಕಾರವೂ ಒಂದು ಉಂಟು. ಏನೆಲ್ಲ ವಿರಕ್ತ ಪಂಥೀಯ ಆಮರಣ ಕುಮಾರೀ, ಕುಮಾರ ವ್ರತಧಾರಣೆಯ ಸಂಸ್ಕಾರಗಳ ತೌಲನಿಕ-ವ್ಯಾಸಂಗವು, ದಿವ್ಯಾಧ್ಯಾತ್ಮದ ಪೂರ್ವೋತ್ತರಗಳ ಇತಿಹಾಸ ಬೆಳಕಿನಲ್ಲಿ ಬರಲು ಮೌಲಿಕ ಮಹತ್ವದ್ದಾಗಲಿದೆ.

ಚಿತ್ರ ನಂ. ೮

ಸರ್ಪ : ಕೌಟುಂಬಿಕ ಜೀವನದ ಶತ್ರು

ಕ (೦) (: ಹಿರಣ್ಯಗರ್ಭ) ದೈವತ : 'ಯಸ್ಯ ಛಾಯಾ ಅಮೃತಂ ಯಸ್ಯ' ಮೃತ್ಯುಃ' ಎಂಬ ಮಹಿಮೆಯ ವಿಶ್ವವನ್ನು ಆಳುತ್ತಿರುವ ಈ ಶಕ್ತಿಯ ಪೂಜೆ ಇಜಿಪ್ತಿನಲ್ಲೂ ಇತ್ತು. 'ಸಪ್ತಗೋ (ಮಾತರಃ): ಹ್ಯಾಥೋರ ವಿಧಿಲಿಖಿತದ ದೇವಿ, ಹುಟ್ಟುವ ಶಿಶುಗಳ ಹಣೆಬರಹ ಬರೆಯುತ್ತಿದ್ದಳು. ನರರನ್ನು ಬೆಂಬತ್ತಿರುವ ಕ (ರ್ಮ)ದ ಬಗೆಗಿನ ನಂಬುಗೆಯನ್ನು ನಿರೂಪಿಸುವ ಕಥೆಯ ಒಂದು ಮಾದರಿ ಇಲ್ಲಿದೆ. ಅಪಮೃತ್ಯುವಿಗೆ ಈಡಾಗುವನೆಂದು ಮೊದಲೇ ತಿಳಿದ ತನ್ನ ಗಂಡನ ಜೀವ ಹೀರುವ ಒಂದು ಸರ್ಪವಿರುವುದಾಗಿ, ಪತ್ನಿಗೆ ತಿಳಿದಿತ್ತು. ಆದಕಾರಣ, ಯಾವಾಗಲೂ ಪತಿಯ ರಕ್ಷಣೆಯಲ್ಲಿ ದಕ್ಷಳಾಗಿದ್ದಳು. ಗಂಡ ನಿದ್ದೆಯಲ್ಲಿದ್ದಾಗ ಒಂದು ಸರ್ಪ ಕೋಣೆಯಲ್ಲಿ ಬಂತು. ಅಲ್ಲಿಯೆ ಇದ್ದ ಪತ್ನಿ ಅದನ್ನು ಹಿಡಿದು ಕೊಲ್ಲುವ ಹಂಚಿಕೆ ಮಾಡಿದಳು. ಹಾಲು, ಜೇನು, ಮದ್ಯ ಕುಡಿವಂತೆ ರಮಿಸಿದಳು. ಆ ಸಂಧಿ ಸಾಧಿಸಿ ಅದನ್ನು ಕೊಂದಳು:... ಈ ಕಥೆಯ ಹಸ್ತಲಿಖಿತ ಅಪೂರ್ಣ ದೊರೆತಿದೆ. ಸರ್ಪವು ಸತ್ತರೂ ಮೊಸಳೆಯಿಂದ ಆತನ ಜೀವಕ್ಕೆ ಗಂಡಾಂತರವಿತ್ತು.... ಎಂಬಲ್ಲಿಗೆ ಕಥೆ ನಿಂತಿದೆ.

ಕರ್ಮ =ವಿಧಿಲಿಖಿತದ ಬಗೆಗಿನ ನಂಬುಗೆಯ ಈ ರೀತಿ ಭಾರತೀಯರಲ್ಲೂ ಉಂಟು. ಮಿಡಿನಾಗ ಆದಿಪುರುಷ (:ಹೊರಸ್) ಎಂಬ ಶ್ರದ್ಧೆಯ ಇಜಿಪ್ತಿನಲ್ಲಿ ಸರ್ಪವನ್ನು ದುಷ್ಟಶಕ್ತಿ, ಎಂದು ಬಗೆವ ವಾಡಿಕೆಯೂ ಪ್ರಭಾವಶಾಲಿಯಾದದ್ದು ಅಭ್ಯಸನೀಯವಿದೆ. ಸರ್ಪ ಕೊಲ್ಲುವುದನ್ನು ಪಾತಕವೆಂದು ಬಗೆದಂತೆ ಕಾಣುವುದಿಲ್ಲ. ಇದಕ್ಕೆ ಪ್ರತಿಯಾಗಿ ಭಾರತೀಯ ಜೀವನ ರೀತಿಯಲ್ಲಿ ಅಹಿಂಸಾತತ್ವದ ಪ್ರಚಾರವು ಋಗ್ವೇದದಲ್ಲೇ ಕಾಣುತ್ತಿದೆ! ವೃತ್ರ : ಅಹಿಯನ್ನು ಕೊಂದ 'ಬ್ರಹ್ಮ-ಹತ್ಯಾ' ಮಹಾಪಾತಕಿ ಇಂದ್ರನು ಎಂದು ಗರ್ಭಸ್ಥ ದಿವ್ಯಜ್ಞಾನಿ ವಾಮದೇವನು ಸಾರಿದ್ದು, ಈ ಸಂಹಿತೆಯಲ್ಲಿಯೇ ಉಂಟು! 'ನಾಗನನ್ನು ಕೊಂದರೆ ಬ್ರಾಹ್ಮಣನನ್ನು ಕೊಂದ ಪಾಪ' ಎಂಬ ಗ್ರಹಿಕೆ ಇಂದಿಗೂ ಇದೆ! ಹಾವು ಕೊಲ್ಲಲಾಗದೆಂಬ ವ್ರತಿಗಳು ಭಾರತದಲ್ಲಿ ಇಂದಿಗೂ ಇದ್ದಾರೆ.

ಸರ್ಪದ ಬಗೆಗಿನ ನಂಬುಗೆಗಳ ತುಲನಾತ್ಮಕ ಸಮೀಕ್ಷೆಯ ಮಾನವ-ಸಂಸ್ಕೃತಿಯ ಉದ್ಗಮ-ವಿಕಾಸದ ದೃಷ್ಟಿಯಿಂದ ಉದ್ಬೋಧಕವಾಗಲಿದೆ. 'ದೇವ ಜನ', 'ದೈವ್ಯಂಜನಂ' ಎಂಬ ಸಂಕೇತದಿಂದ ವೇದದಲ್ಲಿ ಸರ್ಪಗಳ ನಿರ್ದೇಶವಿದೆ. ಉಪನಿಷತ್ತಿನ 'ಸರ್ಪ-ದೇವಜನ ವಿದ್ಯೆ'ಯ ಉಲ್ಲೇಖದಲ್ಲಿ ಈ ಗುಹ್ಯಸಂಕೇತವು ಬಯಲಿಗೆ ಬರುತ್ತದೆ. ಈ 'ದೇವಜನ ವಿದ್ಯಾಪಾರಂಗತ' ಸಪ್ತಋಷಿಗಳು, ಪುತ್ರಾರ್ಥಿಗಳಿಗೆ ಅವರ ಇಷ್ಟವನ್ನು ಕರುಣಿಸುವ ವರ್ಗದವರು, ಈ ಸಂಪ್ರದಾಯ ಈಜಿಪ್ಟ್ ಯುರೋಪಗಳಲ್ಲೂ ಇತ್ತು ಅಶ್ವತ್ಥ: ನಾರಾಯಣ (:ಸರ್ಪ) ಉಪಾಸನೆಯಲ್ಲಿ, ಸಂತಾನದಾಯಕ ದಿವ್ಯ ಸಾಮರ್ಥ್ಯವಿದೆ ಎಂಬ ನಂಬುಗೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ವಿಖ್ಯಾತ ಅಲೆಕ್ಸಾಂಡರನು ತಾನು ದೇವರ ಅವತಾರ-ದೇವಪುರುಷ ಎಂದು ನೆರೆನಂಬಿದ್ದಾಗಿ ಹೇಳಲಾಗುತ್ತದೆ. ಈತನ ತಾಯಿಯು ಮೆಚ್ಚಿ, ಸಂಗಾತಿಯಾಗಿ ಮಾಡಿಕೊಂಡ ಒಂದು ದೇವತಾಸ್ವರೂಪ ಸರ್ಪವಿತ್ತು, ಇವಳು ಅಲೆಕ್ಸಾಂಡರನಿಗೆ ನೀನು 'ದೇವ-ಪುತ್ರನು', ನಿನ್ನ ತಂದೆ ಫಿಲಿಪ್‌ನಲ್ಲಿ ಎಂದು ಹೇಳಿರಬೇಕು.

> The pet snake that shered her bed incarnated a god, and she may have given the young Alexander the idea that his father was the god, not Philip.

ಶೇಷ : ನಾಗನ ಅವತಾರ ಎಂಬ ಮಹಾಪುರುಷರ ಕಥೆಗಳು ನಮ್ಮಲ್ಲಿ ಹಲವು ದೊರೆಯುತ್ತವೆ. ದುರ್ಗಸಿಂಹನ ಪಂಚತಂತ್ರದಲ್ಲಿ ಬರುವ ಒಂದು ಕಥೆ, ಕಾಮಶಾಸ್ತ್ರಕ್ಕೆ ಸಂಬಂಧಿಸಿರುವ ಈ ವಿಚಾರವನ್ನು ಇನ್ನೂ ಆಳವಾಗಿ ಅಭ್ಯಸಿಸಲು ಉಪಯುಕ್ತವಿದೆ. ಒಬ್ಬ ಅರಸನು 'ಗಾಡಿಕಾತಿ ಯರಂ ಕಾಡಲ್' ಎಂದು ಕಾಮಕೇಳಿಯ ಜಲಕ್ರಿಡೆಯ ಕೊಳದಲ್ಲಿ 'ಒಳ್ಳೆಗಳಂ' ಸಾಕಿದ್ದನಂತೆ!

ಚಿತ್ರ ನಂ. ೯

ಜೀವನ ನೌಕಾಚಾಲಕ ದಿವ್ಯಶಕ್ತಿ

ಋಗ್ ವೇದದಲ್ಲಿ 'ಅದಿತಿ' ಆದಿಮಾತೆ (: ಪ್ರಕೃತಿ) ದೇವಿಯನ್ನು ನೌಕೆಯ ರೂಪಕದಿಂದ ವರ್ಣಿಸಿದ ಒಂದು ಸುಂದರ ಋಚೆಯಿದೆ. ಈ ನುಡಿಯಲ್ಲಿ ಅದಿತಿಯ ಕೇವಲ ಅ-ಮೃತ ಸ್ವರೂಪದ ನಿರ್ದೇಶವು ಮಾತ್ರ ಉಂಟು! ಆದರೆ, ಈ ಮಹಾದೇವಿ ಮೃತ್ಯು ಸ್ವರೂಪಳೂ ಆಗಿದ್ದಾಳೆಂಬುದನ್ನು ತೀರ ಸೂಕ್ಷ್ಮ ವ್ಯಂಗ್ಯಧ್ವನಿಯಿಂದ ಸೂಚಿಸಲಾಗಿದೆ, ದೂರದಲ್ಲಿ!

ಈಜಿಪ್ಟಿನ (ಮೇಲಣ) ಪ್ರತಿಮೆ, ಋಗ್ ವೇದದ ಅದಿತಿರೂಪ ನೌಕೆಯ ನೆನಪನ್ನು ತಂದುಕೊಡುತ್ತಿದೆ. ಈ ನೌಕೆಯ ಅಧಿದೇವತೆಯ ತಲೆಯ ಮೇಲಿನ ಸಾಂಕೇತಿಕ ಕಿರೀಟವು ಅಭ್ಯಸನೀಯವಿದೆ. ಹ್ಯಾಥೋರ ಗೋವೂ ಈ ಕಿರೀಟಧಾರೀ ಪ್ರತಿಮೆ. 'ತ್ರಿಪರ್ಣ' ಸಂಕೇತದಂತೆ ಈ ಕಿರೀಟವೂ ಇಜಿಪ್ತಿನ ಪುರಾತನರ ಶ್ರದ್ಧಾಸ್ಥಾನವಾದ ಅಗಮ್ಯ ದಿವ್ಯಶಕ್ತಿಯ ಸೂಚಕವಾಗಿದೆ. ಇಲ್ಲಿ ಸರ್ಪವು ಸ್ಪಷ್ಟವಿದೆ. ಈ ಸರ್ಪವು ಆಲಿಂಗಿಸಿರುವ ಆಕೃತಿಯನ್ನು 'ರಾ' ದೈವತದ (ಸೂರ್ಯ ?) ಕಣ್ಣು ಎಂದು ಹೇಳಲಾಗುತ್ತದೆ. ಇಲ್ಲಿ ಸೂರ್ಯನನ್ನೇ 'ಕಣ್ಣಿನ' ರೂಪದಲ್ಲಿ ಕಲ್ಪಿಸಿದ್ದಾಗಿದೆ. ಆದರೆ ಕಣ್ಣು ಮತ್ತು ಸೂರ್ಯ (Ra) ಎರಡನ್ನೂ ಸ್ವತಂತ್ರವಾಗಿ ಬಗೆವವರೂ ಉಂಟು, ಈ 'ಕಣ್ಣು' ಕೆಲ ಸಮಯ ಹ್ಯಾಥೋರ=ಗೋವು, ಆಗಿದ್ದೂ ಉಂಟು. ಸೂರ್ಯನ ಕಣ್ಣು ಆಗುವ ಈಜಿಪ್ಟಿನ (ಹ್ಯಾಥೋರ) ಗೋವು, ಋಗ್ ವೇದದ 'ಅಯಂ ಗೌಃ ಪೃಶ್ನಿಃ' (= ಅದಿತಿಃ) ಸಾರ್ವರಾಜ್ಞೀ ಸೂರ್ಯೋವಾ' ರೂಪಧಾರಿಯಾದ ರಹಸ್ಯವನ್ನು ಗ್ರಹಿಸಿಕೊಳ್ಳಲು ಉಪಕಾರಕವಾಗುತ್ತಿದೆ. ಋಗ್ ವೇದದ ಈ ಸಾಂಕೇತಿಕ ಪರಿಭಾಷೆಯನ್ನು ಗ್ರಹಿಸಿಕೊಳ್ಳುವುದಕ್ಕೆ ಉಪಯುಕ್ತವಾದ ಈ ಭಾಗ ಇಂಗ್ಲೀಷ ಮೂಲದಲ್ಲಿಯೆ ನೋಡಿ:

> "... the great cow in the water" (ಅಂತರಿಕ್ಷ); The idea of the heavenly cow appears to have survived in her name a 'Gold' the 'golden one'... (in the third millenimm). She was identified with Hathor.

(ಹಾಥೋರ ಅರ್ಥ ಹೊರಸ್ ಈಜಿಪ್ಟಿನ ರಾಜಕುಮಾರನು ಇರುವ ಮನೆ)" ಈ ಗೋವು, 'ಪರ್ವತದಲ್ಲಿದ್ದು ಮೃತಾತ್ಮಗಳನ್ನು ಬರಮಾಡಿಕೊಳ್ಳುತ್ತದೆ' ಎಂಬ ವರ್ಣನೆಯೂ ಉಂಟು. ಭಾರತೀಯ ಸಂಪ್ರದಾಯದಲ್ಲಿ, ಮೃತಾತ್ಮರು ವೈತರಣೀ ನದಿಯನ್ನು ಗೋವಿನ ಬಾಲ ಹಿಡಿದು ಪಾರಾಗಬಲ್ಲರು ಎಂಬ ನಂಬುಗೆಯಿದೆ. ಈ ಪಿತೃಲೋಕ, ಗೋವು ಇದು ಚಂದ್ರ(ಲೋಕ) ಸೂಚಕ ಸಂಕೇತ!

'ಸಪ್ತ' ಮಾತೃರೂಪ ಗೌ, ಇದು ಜಲಸ್ವರೂಪಿಯೂ ಇದೆಯೆಂದು ಇಜಿಪ್ತಿನ ಪುರಾತನ ಲಿಪಿಯನ್ನೋದಿ ಹೇಳಲಾಗುತ್ತದೆ. ಋಗ್ವೇದದ ಸಪ್ತ (ಸಿಂಧವಃ) ಮಾತರಃ, ಇದರೊಂದಿಗೆ ಸಪ್ತ ಸ್ವಸಾ ಇವುಗಳಲ್ಲಿ ಬರುವ 'ಸಪ್ತ' ಸಂಕೇತವು (Seven) ಇಜಿಪ್ತಿನಲ್ಲೂ ಇದೆ! ಗ್ರೀಸಿನ ಥ್ಯಾಲೆಸ್ ಪ್ರಭೃತಿ ಏಕಂ: ಸತ್ ತತ್ತ್ವಜ್ಞಾನ ಶಾಖೆಗಳ ಋಷಿಗಳು (Sages) 'ಸಪ್ತ'ರೇ ಇದ್ದುದು ಏಕೆ? ಋ. ವೇದದ ಗೌ (: ಪೃಶ್ನಿ=ಅದಿತಿ) 'ಸೂರ್ಯ'ರೂಪಳು ಎಂದು ಇರುವಾಗ, ಇಜಿಪ್ತಿನ ಗೌ, ಸೂರ್ಯನ 'ಕಣ್ಣು' ಮಾತ್ರ (ಸೂರ್ಯನಲ್ಲ) ಎಂದು ಅಂಥೆಸ್ ಹೇಳುವಲ್ಲಿ, ಅವರು ಸಂಭ್ರಮಿತರಾಗಿರುವ ಶಕ್ಯತೆಯಿದೆ. ಇಜಿಪ್ತಿನ 'ಚಕ್ರವರ್ತಿ'ತ್ವದ-ಸಮ್ರಾಟ್ ಶಕ್ತಿಯ ಸಂಕೇತದಲ್ಲಿ ಸೂರ್ಯನ ಕಣ್ಣು (O) ಇದ್ದು, ಅದನ್ನು ಸರ್ಪವು ಆಲಿಂಗಿಸಿ-ಆವರಿಸಿ ಕುಳಿತಿದೆ, ಎಂಬ ಹಾಗಿನ ಆಕೃತಿಯಿದೆ. ಆದರೆ ಈ 'ಕಣ್ಣು' ಸೂರ್ಯ ಆ-ಕೃತಿಯ ಪ್ರತಿರೂಪ ಎಂಬ ಮತಕ್ಕೇ ಋಗ್ ವೇದದ ಉಲ್ಲೇಖಗಳಿಂದಲೂ ಪುಷ್ಟಿ ದೊರೆಯುತ್ತಿದೆ. ಈ ಕಣ್ಣು=ಗೋವು

ಮೂಲತಃ 'ರಾ' (:ಸೂರ್ಯ) ರೂಪವಲ್ಲ; ಈ ರೂಪದಲ್ಲಿ ಕಂಡದ್ದು ಚಂದ್ರಬಿಂಬ. ಮೃತಾತ್ಮರನ್ನು ಪಿತೃಲೋಕಕ್ಕೆ ಒಯ್ಯುವ ಗೋವು ಚಂದ್ರ; ಚಂದ್ರನೇ ಪಿತೃಲೋಕ ಎಂದು ಬಗೆಯಲಾಗಿದೆ. 'ಹೋರಸನ-ಮನೆ' ಎಂಬ ಗೋವು ಚಂದ್ರನೇ; ಚಂದ್ರಬಿಂಬದೊಳಗಿನ ಕಪ್ಪು ಭಾಗವನ್ನು ಪುರುಷ, ಅಗ್ನಿ, ಶಶ, ಮೃಗ ಇತ್ಯಾದಿ ರೂಪದಲ್ಲಿ ಬಗೆವ ಈ ಪುರಾತನವಾಡಿಕೆ, ವೇದೋಪನಿಷತ್ತುಗಳಲ್ಲಿಯೂ ಉಂಟು. ನಿಜವಾಗಿ 'ಏಕವೀರಾ'ದೇವಿ ಎಂದರೆ ಚಂದ್ರಾ; ಏಕೈಕವೀರನೆಂದರೆ ಚಂದ್ರಸ್ಥ 'ಪುರುಷ' ಸಾಂಕೇತಿಕ ಪ್ರತಿಮೆ. ಇವನೆ ಇಜಿಪ್ತಿನಲ್ಲಿ ಹೋರಸ; (ಸೆಟ್‌ನು ಸಹ), ಭಾರತದಲ್ಲಿ ವಿಷ್ಣುರುದ್ರ ಮುಂತಾದುವು. ಆದರೆ, ಸೌರ ಸಂಪ್ರದಾಯವು ಎದುರಾದಾಗ ಚಂದ್ರನ ಬದಲು ಆ ಕಣ್ಣು ಸೂರ್ಯ ಸಂಕೇತ ಆಗುತ್ತದೆ.

ಗೋವು (: ಕಣ್ಣು) ಭವಸಾಗರದಿಂದ ಆಚೆಯ ತೀರಕ್ಕೆ ಮುಟ್ಟಿಸುವ ತೀರ್ಥ-ಕ ಸ್ವರೂಪದ ಪ್ರತಿಮೆ, ಇದೇ ನೌಕೆ; ಸೇತುವೆಯೂ ಸರಿ. 'ಗೌ' ಅದಿತಿಯನ್ನು ನೌಕೆಯಾಗಿ ಕಲ್ಪಿಸಿ ಮಾಡಿರುವ ವರ್ಣನೆ ಹೃದ್ಯವಿದೆ:

ಸುತ್ರಾಮಾಣಂ (ಸುಷ್ಟು ತ್ರಾಯಂತೀಂ), ಪೃಥಿವೀಂ (ವಿಸ್ತೃತಾಂ) ಅನೇಹಸಾಂ (ಪಾಪರಹಿತಾಂ), ಸುಶರ್ಮಾಣಂ (ಶೋಭನ ಸು-ಖಯುಕ್ತಾಂ), ಅದಿತಿಂ, ಸುಪ್ರಣೀತಿಂ (ಸು ಪ್ರ-ನೇತ್ರೀಂ) ದೈವೀಂ, ಸ್ವರಿತ್ರಾಂ (ಹುಟ್ಟು ಕಡಿಯುವವಳೂ), ಅನಾಗಸಂ (ಪಾಪರಹಿತಾಂ), ಅಸ್ರವಂತೀಂ (ಅ ನಶ್ವರೀಂ; ಒಡಕು ಇಲ್ಲದವಳು) ನಾವಂ ದ್ಯಾಂ (ದ್ಯೌರೂಪನೌಕೆಯನ್ನು), ಸ್ವಸ್ತಯೇ ಆರುಹೇಮ. "ಸ್ವಾಸ್ಥ್ಯಕ್ಕಾಗಿ (ಸು ಅಸ್ತಯೇ) ಈ ನೌಕೆಯ ಆರೋಹಣ ಮಾಡೋಣ" ಎಂಬ ಸಂಕಲ್ಪದಿಂದ ಏರುವ ಈ ನೌಕೆ, ನಮ್ಮನ್ನು ವಿನಾಶದ ಕಡೆಗೇ ಒಯ್ಯುತ್ತದೆ, ಎಂದು ಹೇಳುವುದೂ, ರಸೋಪಾಸಕ ಚಾಂದ್ರ ಸಂಪ್ರದಾಯದವರ ಉದ್ದೇಶವಿರಬೇಕು. ಈಜಿಪ್ತಿನಲ್ಲಿ 'ಸೂರ್ಯಾಕ್ಷ ಸರ್ಪ'ದ ಸಂಕೇತದಲ್ಲಿ ಈ ಧ್ವನ್ಯರ್ಥವುಂಟು. ಋ. ವೇದದ ಮೇಲಣ ಋಕ್ಕಿನಲ್ಲಿ ಎಲ್ಲಿಯೂ ಅಮಂಗಲ ಅರ್ಥಕ್ಕೆ ಇಂಬಿಲ್ಲ, ಎಂದರೂ 'ಸ್ವರಿತ್ರಾಂ' ಎಂಬಲ್ಲಿ ಗೌಣಾರ್ಥ ಸೂಚಕತೆ, ಪಾಠಾಂತರದಲ್ಲಿ ಕೊಟ್ಟ 'ಅಲ್ಪ ರಕ್ಷಣಶೀಲ' ಈ ಮಾತಿನಲ್ಲಿ ಉಂಟು!

ಚಿತ್ರ ನಂ. ೧೦

ಅಮ್ಮ : (> ಅಂಬೆ,-ಅಂಬಿಕೆ) ಲೋಕಮಾತೆ : ವಿಶ್ವಜನನಿ

ಈಜಿಪ್ತಿನ ಇಸಿಸ್, 'ಆದಿಮಾತೆ', ಎಂದು ಯುರೋಪೀಯ ದಿವ್ಯಾಧ್ಯಾತ್ಮದ ಪರಂಪರೆ ದೃಢಪಡಿಸುತ್ತದೆ. ಆದರೆ ಇಜಿಪ್ತಿನಲ್ಲಿ ಈ ಮಾತು ಅಸ್ಪಷ್ಟವಿದೆ. 'ಹ್ಯಾಥೋರ' ಗೋವಿನ 'ಒಡಲು' (ಇವಳ ಕುಮಾರ) ಹೊರಸನ ಮನೆ, ಎಂಬ ಉಲ್ಲೇಖವಿದೆ. ಶಿಶುಸಹಿತಳಾದ ಈ ಏಕ ವೀರಾದೇವಿ, ಆದಿಮಾತೆಯ ಇರುವುದನ್ನು ನಿದರ್ಶನಕ್ಕೆ ತರುವ ಈ ಹ್ಯಾಥೋರ ಗೋವಿನ ಪ್ರತಿಮೆ, ಮೌಲಿಕ ಮಹತ್ವದ್ದು. ಹೋರಸ್ : ಕುಮಾರ, ಇವಳ 'ವೃಷಭ' ಎಂಬ ಉಲ್ಲೇಖವು, 'ಅದಿತೇಃ ದಕ್ಷಃ ಅಜಾಯತ' ಎಂಬ ಋಗ್ವಚನಕ್ಕಿಂತ ಭಿನ್ನಾರ್ಥದ್ದಲ್ಲ.

ಹೋರಸ್ : ಕುಮಾರನಿಗೆ ಮೊಲೆಯೂಡುತ್ತಿರುವ ಇಸಿಸಳ ಈ ಮೂರ್ತಿ ಬಹಳ ಪ್ರಾಚೀನವಲ್ಲ (ಕ್ರಿ. ಪೂ. ೫೦೦-೨೦೦). ಆದರೆ, ಈಜಿಪ್ತಿನ ಇಸಿಸ್ : ಆದಿಮಾತಾ ಸಂಪ್ರದಾಯವು ಕ್ರಿ. ಪೂ. ೩೦೦೦ ವರುಷಗಳಿಗೂ ಮುಂಚಿನದು! ಚಾಂದ್ರ ಸಂಪ್ರದಾಯದ ರಾತ್ರೀ ಸಮಯಾಚಾರದ ನಡೆವಳಿಯ ಹಿನ್ನೆಲೆಯಲ್ಲಿ ಮೈದಾಳಿದ ಜೀವನ ತತ್ವಜ್ಞಾನವಿದು. ಇದನ್ನು ನಿದರ್ಶನಕ್ಕೆ ತರುವ ಪ್ರಮಾಣಗಳನ್ನು, ಡೊನಾಲ್ಡ ಮೆಕೆಂಝಿ ಎತ್ತಿ ವಿವರಿಸಿದ್ದಾನೆ: "Who cometh to us as a babe each month"; ಆದಕಾರಣ 'He is thus the moon child: a manyfestation of ever young, and every renewing moon god'. ಈ ಕುಮಾರನನ್ನೇ ತಾಯ ಒಡಲಲ್ಲಿ ಇದ್ದಾಗ 'ಅ-ಭು' ರೂಪದಲ್ಲಿ (ಅಮಾವಾಸ್ಯೆಯ ಮರುಕ್ಷಣ) ಕಂಡ ಒಬ್ಬ ಋ. ವೇದದ ಕವಿ, ಒಂದು ಅಮರ ಕವನ ರಚಿಸಿದ್ದಾನೆ. ಈ 'ಅ-ಭು' ಋಗ್‌ವೇದದಲ್ಲಿಯೆ ಮೊತ್ತ ಮೊದಲು ಕುಮಾರಿ : ಶಿನೀವಾಲೀ ರೂಪದಲ್ಲಿದ್ದಾಳೆ. ಈ ಹಂತದ ಆದಿಶಕ್ತಿ: ಕು-ಮಾರಿ=ಆದಿಮಾತೆಯ, ಯುಗದ ಸ್ಮೃತಿಗಳು ಇಜಿಪ್ತಿನಲ್ಲಿ ಕಾಣದೊರೆಯುತ್ತಿಲ್ಲ, ಜಲಸ್ವರೂಪ ಗೋವು=ತಾಯಿ, ಹ್ಯಾಥೋರಳ ಒಡಲೊಳಗಿನ ಕುಮಾರ : ಹೊರಸ್ ಮತ್ತು ಋಗ್‌ವೇದದ ಅಪಾಂ-ನಪ್ಪ ಬೇರೆ ಅಲ್ಲ!

ಮಾನವ ಜನಾಂಗದಲ್ಲಿ ಆಗಿರುವ ವಿಚಾರವಿಕಾಸಕ್ಕೂ ಒಂದು ಕ್ರಮವಿದೆ ಎಂಬುದು ನಿಜವಿದ್ದರೆ, ದೇವತಾ ವಿಚಾರದೊಳಗಿನ 'ಅಪಾಂನಪ್ತ್ರ' ಈ ಪ್ರತಿಮೆಯ ಮೂಲಕ ಸೂಚಿತವಾಗುವ ಅರ್ಥವು 'ಆದಿಪುರುಷ' ಸಂಪ್ರದಾಯಕ್ಕೂ ಮುಂಚಿನ ಹಂತದ್ದು. ಕನ್ಯಾ: ಕುಮಾರಿ 'ಆಪನ್ನಸತ್ವಾ' ಆಗುವಳೆಂಬ ಹಂತದ್ದು ಆಗುತ್ತದೆ. ಈ ಸಂಕೇತವು ಅವೆಸ್ತಾದಲ್ಲೂ ಇದೆ. 'ಅದಿತೇಃ ದಕ್ಷಃ ಅಜಾಯತ'; ಅಪೋದೇವೀ ಪ್ರಸವ 'ಅಪಾಂನಪ್ಪ'ವಿಗೂ ಮುಂಚಿನ ಹಂತದ ಸೂಚಕವಾಗಿದೆ;

ಋಗ್‌ವೇದದಲ್ಲಿ 'ದಾಕ್ಷಾತ್ ಅದಿತಿಃ' ಆದ ಉಲ್ಲೇಖವೂ ಉಂಟು. ಈಜಿಪ್ಟ್‌ನಲ್ಲಿ ಈ ಹಂತಸೂಚಕ ಮಾತು ನನ್ನ ಅಲ್ಪಸಮೀಕ್ಷೆಯಲ್ಲಿ ಇನ್ನೂ ಕಂಡಿಲ್ಲ. ಆದರೆ, ಇಸಿಸ್, ಹೋರಸ್=ಒಸಿರಿಸ್, ಮತ್ತು ಸೆಟ್ ಈ ಮೂವರೂ ಒಂದೇ ಹೊಟ್ಟೆಯವರು, ಎಂಬ ಹಂತದಿಂದ ಅಲ್ಲಿಯ ದೈವತ ಕಥೆಯು ಎದ್ದು ಕಾಣುತ್ತದೆ. ವೇದಡಲ್ಲಿ ಈ ಹಂತದ ಅಸ್ಪಷ್ಟ ಸೂಚನೆಗಳೂ ಇವೆ! ಯಮೀ-ಯಮ ಈ ಯಮಳರ ಕಥೆ ಸ್ಪಷ್ಟವಿದೆ ಆದಿತ್ಯನೆಂಬ ವಿಷ್ಣುವು ಅದಿತಿಪುತ್ರನಂತೂ ಸರಿಯೆ, ಆದಿಯ್ಕ ಇದು ಮಾತೆಯ ಮೇಲಿಂದ ಬಂದ ಹೆಸರೆಂಬ ಕಾರಣದಿಂದ, ಅಲ್ಲದೆ 'ಮಾತಾ ಋದ್ರಾಣಾಂ' ಎಂದು ಹೇಳುವಾಗ 'ಸ್ವಸಾ ಆದಿತ್ಯಾನಾಂ' ಎಂಬ ಉಲ್ಲೇಖದಿಂದ, ಅದಿತಿ ವಿಷ್ಣುಗಳಲ್ಲಿ ಸಹೋದರ ಸಂಬಂಧವು ಸಿದ್ಧವಾಗುತ್ತದೆ. ಸೂಕ್ಷ್ಮವಾಗಿ ಸಮೀಕ್ಷಿಸಿದರೆ ಈಜಿಪ್ಟ್‌ನಂತೆ ಭಾರತದಲ್ಲಿಯೂ ಅದಿತಿ (ಇಸಿಸ್) ರುದ್ರ (ಸೆಟ್), ವಿಷ್ಣು (ಹೊರಸ್=ಒಸಿರಿಸ್) ಇವರೂ ಸಹೋದರೇ ಆಗುತ್ತಿದ್ದಾರೆ! ಆದರೆ, ಈಜಿಪ್ಟಿನಂತೆ, ಇಲ್ಲಿ ಇದು ಸ್ಪಷ್ಟವಾಗಿಲ್ಲ. 'ಹರಿ-ಹರರನ್ನು ಸಮಾನವಾಗಿ ಕಾಣಲು ಹೇಳುವ ಸಂಪ್ರದಾಯವು ಮಾತ್ರ ಉಂಟು.

ಒಟ್ಟಿನಲ್ಲಿ ಈಜಿಪ್ಟ್-ಭಾರತಗಳ ಪುರಾತನ ದೈವತ ವಿಚಾರದಲ್ಲಿರುವ ಸಮಾನ ಅಂಶಗಳನ್ನು ಇನ್ನೂ ಒಮ್ಮೆ ಸ್ಮರಿಸಿಕೊಳ್ಳಬಹುದು: ೧) ಕ-ಖ ದೈವತ : ವಿಧಿಲಿಖಿತ ಶಕ್ತಿ ೨) ಸಪ್ತ ಮಾತೃಕೆ ಗೌ ೩) ಅಂತರಿಕ್ಷ=ಗೌ=O ಚಂದ್ರಾ; ೪) ಪವಮಾನ-ಸೋಮ=ಳು= Air & moisture =(ಸೃಜನ) ಆರ್ದ್ರ ಜಲಯುಕ್ತ ವಾತ ೫) ಆದಿಮಾತೆ-ಕುಮಾರ; ತಾಯ್ಗಂಡ ೬) ಸೋದರ ಸೋದರೀ ಸಂಬಂಧ. ೭) ಅದಿತಿ-ವಾಸುದೇವ ವಿಷ್ಣು ರುದ್ರ ಹೊರಸ್-ಒಸಿರಿಸ್/ಸೆಟ್ ಮುಂ. ೮) ಈಜಿಪ್ಟಿನ ಲೋಕಜನನಿ ಅಂಬೆ 'ಅಮೃತಂ ಚೈವ ಮೃತ್ಯುಃ ಚ' ಹೀಗೆ ಉಭಯರೂಪೀ ಇರುವುದನ್ನು ಸ್ಪಷ್ಟಪಡಿಸಿಲ್ಲ; ತೀರ ಹೇಳದೆಯೂ ಇಲ್ಲ! ಋಗ್ ವೇದದಲ್ಲಿಯೂ ಹೀಗೆಯೆ! ಬೃ. ಉಪನಿಷತ್ತಿನಲ್ಲಿ ಇದರ ಸ್ಪಷ್ಟೀಕರಣ! ಈಜಿಪ್ಟಿನಲ್ಲಿ ಉಭಯವಿಧ ಶಕ್ತಿಯುತ 'ಕ' ದೈವತ ಪೂಜೆ, ಮೃತ್ಯುಪೂಜೆಯಾಗಿ ಪರಿಣಮಿಸಿದ್ದನ್ನು, ಡಾ. ಫ್ರಾಂಕಫೋರ್ಟ ಊಹಿಸಿದ್ದಾರೆ. 'ಪಿಂಡ ಬ್ರಹ್ಮಾಂಡ ತತ್ವಕ್ಕೆ ಒತ್ತಾಯ ಪಡಿಸುವ ಭೂಮಿಕೆ ಕೊನೆಗೆ ಇದಕ್ಕೂ ತಾತ್ತಿಕ ವಿವರಣೆ ಡೊನಾಲ್ಡ ಮೆಕೆಝಿಯಲ್ಲಿದೆ.

> 'At the beginning there was naught save ii) darkness and water, the spirit of night was Great Mother, and iii) her first born was the moon child [Life came from death and light from darkness. Such appears to have been the conception of worshippers of the sky and water goddess and the Lunar God] (p. 281).

ಇಂಗ್ಲಿಷಿನ ಈ ಆಶಯವು ಋಗ್‌ವೇದದ 'ನಾಸದೀಯ ಸೂಕ್ತ'ದ ಭಾಷೆಯಂತಿದೆ! i) 'ನ ಅಸತ್ ಆಸೀತ್; ನೋ ಸತ್ ಆಸೀತ್ ತದಾನೀಂ' ii) ತಮಃ ಆಸೀತ್ ತಮಸಾ ಗೂಳ್ಹಂ, ಅಗ್ರೇ ಅಪ್ರಕೇತಂ ಸಲಿಲ ಸರ್ವಂ ಆಃ! ಇದಂ; iii) ತುಚ್ಛೇನ (ಜಲೇನ) ಆಭು ಅಪಿಹಿತಂ ಯತ್ ಆಸೀತ್ (ಆನೀತ್ ಅವಾತಂ ಸ್ವಧಯಾ ತತ್ : ಏಕಂ; ತತ್‌ಪರಂಃ ನ ಕಿಂಚನ ಆಸೀತ್=ಅವಾತಸ್ಥಾನದಲ್ಲಿ [: ಮಾತರಿ-ಶ್ವನ್. ತಾಯ ಒಡಲಲ್ಲಿ] ಅದು ಏಕಂ ಉಸಿರಾಡಿಸುತ್ತಿದೆ! ಇದನ್ನು ಮಿಕ್ಕಿ ಈ ಪ್ರಪಂಚದಲ್ಲಿ ಬೇರಿನ್ನೇನೂ ಬೆಲೆಯುಳ್ಳದಿಲ್ಲ! ಆರಂಭವೇ 'O' : (Naught =ಕತ್ತಲೆಯನ್ನು ಆಲಿಂಗಿಸಿರುವ ಕತ್ತಲೆ! ವಾಗರ್ಥಾವಿವ ಸಂಪೃಕ್ತ ಸ್ತ್ರೀ ಪುರುಷಶಕ್ತಿ, ಶೂನ್ಯ ಎಂದರೆ ಮೃತ್ಯುವೇ ಪ್ರಾರಂಭ-ಮೃತ್ಯುವೆ ಕೊನೆ. ಈಜಿಪ್ಟ್ ಹಾಗೂ ಭಾರತೀಯ ಪುರಾತನ ದೈವತ ಕಥೆಯ ಈ ಸಾಮ್ಯ ಉದ್ಬೋಧಕವಿಲ್ಲವೆ?

ಚಿತ್ರ ನಂ. ೧೧

ಸುಮೇರಿನತ್ತಣಿನ ಕಣ್ಣಮ್ಮ (: ಉಭಯಲಿಂಗೀ) ದೈವತದ ಪ್ರತಿಮೆಗಳು

ಸುಮೇರಿನತ್ತಣಿನ ಸಂಶೋಧನದಲ್ಲಿ ಬೆಳಕಿಗೆ ಬಂದಿರುವ ಕಣ್ಣಮ್ಮ (: ಉಭಯಲಿಂಗೀ) ದೈವತ ಪ್ರತಿಮೆಗಳಲ್ಲಿ ಎದ್ದು ಕಾಣುವ ಸರಳತೆ ಈಜಿಪ್ಟಿನ 'ರಾ' ದೈವತದ ಕಣ್ಣೊ ಅಥವಾ ಅಟುಂ (: ಮಿಡಿನಾಗನ) ಕಣ್ಣೊ ಇಲ್ಲವೆ ಹ್ಯಾಥೋರ (ಗೋವಿನ) ಕಣ್ಣೊ ಇವಾವುದರಲ್ಲೂ ಇಲ್ಲ. ಇದರಂತೆ, ಋಗ್‌ವೇದದ 'ಮಿತ್ರಸ್ಯ ವರುಣಸ್ಯ "ಚಕ್ಷು=ಸೂರ್ಯ" ಪ್ರತಿಮೆಯೂ ಸಮಸ್ಯಾತ್ಮಕವೇ. ಉಪನಿಷತ್ತುಗಳಲ್ಲಿ 'ಅಕ್ಷಿಣಿ ಪುರುಷ', 'ಚಾಕ್ಷುಷೀ ಪುರುಷ' ಇವು ವೇದದ ಸಂಕೇತಗಳಿಗಿಂತ ಇನ್ನೂ ಸಂಭ್ರಾಮಕ ವಕ್ರೋಕ್ತಿಯುಕ್ತ! 'ಕಣ್ಣ'ನ ಈ ಸಮಸ್ಯೆ ಫಕ್ತ ಈಜಿಪ್ಟಿನ ದೈವತವಿದೆ. ಅಂಬಾರುದ್ರಸ್ಯ

ಸ್ವಸಾ, ಈ 'ಸ್ವಸಾ ಆದಿತ್ಯಾನಾಂ' ಎಂಬ ದೇವಿ ಅದಿತಿ, ಆದಿತ್ಯನೆಂಬ ವಿಷ್ಣು-ಪತ್ನಿ ಸಹೋದರಿ; ಯಮ-ಯಮಿ; ಈ ಯವಳರಲ್ಲಿ ಪತಿ-ಪತ್ನೀ ಸಂಬಂಧ ಸೂಚಕ ಕಥೆ ಉಂಟು! iii) ಹೊರಸ/ಒಸಿರಿಸ್ ತನ್ನ ತಾಯಿಯ ವೃಷಭನೆಂದಿರುವಲ್ಲಿ ಋಗ್ವೇದದ ಅದಿತಿ-ದಕ್ಷ ಸಂಬಂಧವು ಪ್ರತಿಬಿಂಬಿತವಾಗಿದೆ. ಈ ಬಗೆಯ ಸ್ತ್ರೀ-ಪುರುಷ ಸಂಬಂಧಗಳ ಭೂಮಿಕೆಯ ಹಿನ್ನೆಲೆಯಲ್ಲಿ ಚಾಂದ್ರ: ಆಪ-ರಸ ತತ್ವಜ್ಞಾನವೆ ಅಭಿಪ್ರೇತವಿರುತ್ತದೆ. ಋಗ್ವೇದದ 'ಜಾಗೃವಾಂಸರ' ಜಾಗರದ ಆರಾಧ್ಯ ದೈವತವು 'ದಿವೀವ ಚಕ್ಷುಃ ಆತತಂ' ಎಂದರೂ ಈ ಚಂದ್ರರೂಪೀ ಕಣ್ಣರು (: ಚಕ್ಷು) ಇದೇ ಸರಿ! ಈ ಕಾರಣದಿಂದಾಗಿ ಸುಮೇರು, ಈಜಿಪ್ಟ್ ಮತ್ತು ಭಾರತ ಈ ಮೂರುರಲ್ಲೂ ಚಾಂದ್ರ ಸಂಪ್ರದಾಯ ಇತ್ತು. ಪುರಾತನ ಸಂಸ್ಕೃತಿಗಳಲ್ಲಿ ಇತ್ತು ಆದಿಮಾತಾ ಪೂಜೆಯ ನಡೆವಳಿಯ iv) ಈಜಿಪ್ಟಿನ ಹ್ಯಾಥೋರ ಗೋವಿನ ಮೈಮೇಲೆ ಇರುವ ತ್ರಿಪರ್ಣ (trefoil) ಮುದ್ರೆಗಳು, ಸುಮೇರಿನ ದಿವ್ಯವೃಷಭಗಳ ಮೇಲೆ ಅಲ್ಲದೆ ನಾಗನ (dragon) ಮೇಲೆ ಸಹ ಉಂಟು; ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿಯೂ ಈ ತ್ರಿಪರ್ಣ ಮುದ್ರೆಯ ವೈಶಿಷ್ಟ್ಯವು ಬೆಳಕಿಗೆ ಬಂದಿದೆ. ಇವುಗಳಲ್ಲಿ ನಾಸಿಕಾಗ್ರದೃಷ್ಟಿಯ ಧ್ಯಾನಮಗ್ನ ಯೋಗಿಯು ಹೊದ್ದುಕೊಂಡ ಶಾಲಿನ ಮೇಲಿರುವ ಮುದ್ರೆ ವಿಶೇಷ ಮಹತ್ವದುವು. ಈ ಸಮಾನ ಸಮಯ, ಆಚಾರ, ಯಾರಿಂದ ಯಾರು ಸ್ವೀಕರಿಸಿದರು? ಅಥವಾ ಸ್ವಸ್ತಿಕದ ಆಕೃತಿಯಂತೆ, ಅವರವರಿಗೇ ಆದ ಸ್ಫೂರ್ತಿ ಎನ್ನುವುದೆ?

ಈ ತ್ರಿ-ಪರ್ಣವು ಮೂಲತಃ ಏಕ 'ಪರ್ಣ' (೦)! = ವಟಪತ್ರ! ಈ ಆಲದ ಎಲೆಯಲ್ಲಿ ಒರಗಿರುವ (ಕೃಷ್ಣವರ್ಣದ) ಶಿಶು: ಅಂತರಿಕ್ಷ : ಸಮುದ್ರದಲ್ಲಿ ತೇಲುತ್ತಿರುವ ಸನಾತನ ಶಿಶು! ದಾಸರಾಯರ ಹಾಡಿನ 'ಒಂದಾಲದೆಲೆಯ ಮೇಲೆ ಮಲಗಿರುವ ರಂಗ' ಈತನೇ. ಈ ತ್ರಿಪತ್ರ ತ್ರಿಅಂಬಕ (: ಕಣ್ಣು) ಆಗುವ ಚಮತ್ಕಾರವು ಗ್ರೀಸಿನಲ್ಲೂ ಕಂಡಿದೆ! ಭಾರತೀಯ ತ್ರ್ಯಂಬಕನಂತೆ. ಝುಉಸನನ್ನು ಮುಕ್ಕಣ್ಣನೆಂದು ಬಗೆಯಲಾಗಿತ್ತು! 'ಅಂಬ(ಕ)' ಇದರ ಮೂಲಾರ್ಥವು ತಾಯಿ=ಅಮ್ಮ ಎಂದು ಉಂಟೆ ಹೊರತು 'ಕಣ್ಣು' ನೇತ್ರ ಎಂಬ ಅರ್ಥವು ಅಲ್ಲಿ ಇಲ್ಲ! ತ್ರಿ-ಪರ್ಣವು : 'ಸು-ಪರ್ಣ'=ಪಕ್ಷಿ; 'ತ್ರಿ ಸು-ಪರ್ಣ' ಮಧುವಿಚಾರದ ಮಂತ್ರಪಾಠ! 'ಮಧುವಾತಾಋತಾಯತೇ, ಮಧುಕ್ಷರಂತಿ ಸಿಂಧವಃ, ಮಧು ದ್ಯೌಃ ಅಸ್ತು ನಃ! ಎಂದರೆ ಇದು 'ಮಧು'ಯುಕ್ತ 'ಪರ್ಣ' ವಾಯ್ತು; ಮಧುಯುಕ್ತ ಅಂಬ=ಕಣ್ಣು ಎಂದರೇನು? 'ಆರ್ದ್ರಾಂ' ಎಂದು ಸ್ತೋತ್ರಮಾಡಿದ ಶ್ರೀ ಸೂಕ್ತದ ದೇವಿಯನ್ನು ತ್ರ್ಯಂಬಕೇ ಎಂದು ಸಂಬೋಧಿಸಿದೆ. ಈ ದೇವಿಗೆ, ನಾರಾಯಣಿ ಎಂದಿರುವಲ್ಲಿ, ಈ ತ್ರಿ-ಅಂಬಕಗಳು, ಮಧುಯುಕ್ತ 'ಸು-ಪರ್ಣ'ಗಳು ಆಗಿವೆ ಎಂಬುದರ ವಿರಣೆಯೆ ಉಂಟು. 'ಸುಪರ್ಣ'ವು ಪಿಪ್ಪಲವೃಕ್ಷ (ಫಲ) ಆಸ್ವಾದಿಸುತ್ತಿರುವ ಹಾಗಿನ ವರ್ಣನೆ, ಇದೆ. ತ್ರ್ಯಂಬಕ=ತ್ರಿಸುಪರ್ಣ ಎಂಬುದನ್ನೆ ಪುಷ್ಟೀಕರಿಸುತ್ತಿದೆ.

ಈ 'ದಿವ್ಯ ಅಂಬಕ' ವಿಚಾರವೇ ಉಪನಿಷತ್ತಿನಲ್ಲಿ 'ಅಕ್ಷಿಣಿ-ಪುರುಷ' 'ಚಾಕ್ಷುಷೀ ಪುರುಷ' ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಬ್ರಹ್ಮಜ್ಞಾನರೂಪೀ ಈ 'ಗೋವಿನ' ನಿತ್ಯದ ಅನು-ಸ್ಥಾನದಲ್ಲಿರಲು ಅಪ್ಪಣೆ ಕೊಡಿಸಿದ್ದಾಗಿದೆ: 'ವಾಚಂ ಧೇನುಂ ಉಪಾಸೀತ'. 'ಧೇನು'ವನ್ನು ಗಾಯತ್ರೀ ಎಂಬ ರೂಪಕ್ಕೆ ತಿರುಗಿಸಿ ಗಾಯತ್ರಿ=ಸಾವಿತ್ರೀ= ಸವಿತೃ-ಸೂರ್ಯ (0) ಈ ಸಂಕೇತಗಳನ್ನು ಸ್ತ್ರೀ ಪ್ರತೀಕಗಳನ್ನಾಗಿಸಿದ್ದುಂಟು! 'ಆದಿತ್ಯ' ಈ ಸ್ಥೂಲ ಸಂಕೇತವನ್ನು ಬಳಸಿ ಸೂರ್ಯ=ಚಂದ್ರ ಈ 'ಏಕಂ ಸತ್' ಸಿದ್ಧಾಂತ ಪ್ರಸ್ಥಾಪಿಸಲು 'ಗೋ-ಅಕ್ಷ'ದ ಲಾಭ ಪಡೆಯಲಾಗಿದೆ! ವಿಶ್ವದ 'ಗವಾಕ್ಷ' (ಬೆಳಕಂಡಿ) =ಕಣ್ಣು=ಸೂರ್ಯ; ವಿಶ್ವ ಪ್ರಸವ ಶಕ್ತಿ: ಆದಿಮಾತೆ ಸೂರ್ಯ ಎಂದು ಹೇಳಲು ಹೊರಟು ನಾಲಗೆ ಹೇಳದೆ ಒಮ್ಮೆಲೆ ಒಳಸೇರಿದೆ!

ಚಿತ್ರ ನಂ. ೧೨

ಶ್ರೀ (: ದೇವೀ): ಚಕ್ರಪೂಜೆ

ತಕ್ಷ(ಕ) ಶಿಲಾನಗರದಲ್ಲಿ ಅಗಿಯುವಾಗ ದೊರೆತ ಚಕ್ರ ಇಲ್ಲಿದೆ. ಇದರ ಜೊತೆಗೆ ಪಿಕಳಿ-ಹಾಳದಲ್ಲಿ (ಕರ್ನಾಟ) ದೊರೆತ ಶಾತವಾಹನರ ಕಾಲದ ಸುಮಾರಿನ ಚಕ್ರವೂ ಇಲ್ಲಿ ಇದೆ.

ಶ್ರೀ'ಚಕ್ರ' ಪೂಜೆ ವೇದಕ್ಕಿಂತ ಪುರಾತನ ಸಂಪ್ರದಾಯ, ಮೂಲದಲ್ಲಿದ 'ಚಕ್ರ' : 'ಚಕ್ಷು' ಅಭಿನ್ನ, ಋಗ್ವೇದದೊಳಗಿನ 'ದಿವೀವ ಚಕ್ಷುಃ ಆತತಂ'; ಉಲ್ಲೇಖದ ಚಕ್ಷುವು ದಿವ್ಯಚಕ್ರವೇ. 'ದಿವೀವ ಆತತಂ ಚಕ್ಷುಃ' ಜಾಗ್ರವಾಸರು, ಜಾಗರದಲ್ಲಿ ಆರಾಧಿಸುವ ಚಕ್ರ ; ಎಂದರೆ ಇದು ರಾತ್ರಿ 'ಸಮಯ' : ಆಚಾರ. ಆದರೆ, ರಾತ್ರಿ

ಮತ್ತು ಹಗಲು ಈ ಭೇದವು-ಕಾಲದ ಅರಿವು-ತತ್-ಮಯತೆಯ ಆ ನಂದಲೋಕದ ಅನುಭಾವಕ್ಕೆ ಆತಂಕಕಾರಿ. ಆದಕಾರಣ ಅಹಃ (ಹಗಲನ್ನೂ) 'ಕೃಷ್ಣ'ರೂಪದ್ದಾಗಿ ಬಗೆಯುತ್ತಿದ್ದ ವಾಡಿಕೆಯ ಸೂಚನೆ ಋಗ್‌ವೇದದಲ್ಲೆ ಇದೆ.

ಸಿಂಧೂ ತೀರದ 'ಪುರ' ಸಂಸ್ಕೃತಿಯ ಅವಶೇಷಗಳಲ್ಲಿ ದೊರೆತ ಕಣ್ಣ (0) : ಕಂಕಣ ಆಕೃತಿಯ ಪ್ರತಿಮೆಗಳು ಸಾಕಷ್ಟಿವೆ. ಈ ಪ್ರತಿಮೆಗಳ ಅರ್ಥವು ಏನು ಎಂದು ಸಂದೇಹಪಡಬೇಕಾಗಿಲ್ಲ, ಲಿಂಗದ ಪ್ರತೀಕಗಳೂ ಈ ಉತ್ಖನನದಲ್ಲಿ ಹೊರಬಂದಿವೆ. 'ವಿಶ್ವಚಕ್ಷು' ಎಂಬ ಸೂರ್ಯನನ್ನು (ಏಕ) 'ಚಕ್ರ' ರೂಪ ರಥ (=ದೇಹ) ಆಗಿರುವ ವಿಶ್ವಪ್ರಸವ ಶಕ್ತಿ, ಎಂಬ ರೂಪದಲ್ಲಿ ಕಾಣುತ್ತಿದ್ದ ಋಗ್ ವೇದದ ಕವಿಗಳು ಅಪ : ರಸ ಪಂಥೀಯ 'ಚಕ್ರ' ಪೂಜಕರೇ ಆಗಿದ್ದರೆಂದು ಸಿದ್ಧಪಡಿಸುವ ಆವಶ್ಯಕತೆಯಿಲ್ಲ.

'ಚಕ್ರ' ಮತ್ತು 'ಯಜ್ಞ' ಈ ಸಂಕೇತಗಳ ನಿರುಕ್ತದಲ್ಲಿ ಪದರುಯಿದೆ. 'ಚಕ್ರ' ಇದು 'ಚರ್' ಗಮನಾರ್ಥಕವೊ (ಗಾಲಿ<ಕಾಲಿ?) ಅಥವಾ 'ಕೃ' : ಗೆಯ್ತದ ಸೂಚಕವೊ? ಎಂಬ ಹಾಗಿನ ಸಂದಿಗ್ಧತೆ ಇದೆ. ಉದಾ: ಯಜ್ಞಂ ಚಕ್ರೇ ಏಕೆಂದರೆ ಯಜ್>ಯಜ್ಞ ಇದು ಸಾಧು ಪ್ರಯೋಗ. ಆದರೆ 'ಕಸ್ಮೈ ದೇವಾಯ' 'ಯಜ್ಞ' 'ಗರ್ಭ ದಧ್ರೇ ಆಪಃ' 'ಯಜ್ಞ 'ಪುರುಷಯಜ್ಞ'. ಉಪನಿಷತ್ತಿನ 'ಗೌತಮಾಗ್ನಿಯಜ್ಞ, 'ವಾಮದೇವ್ಯ' ಈ ಬಗೆಯ ಯಜ್ಞವಿಧಾನಕ್ಕೆ ಸರಿಹೋಗುವಂತೆ 'ಯಜ್ಞ'ಪದದ 'ನವ್ಯ' ನಿರುಕ್ತವೊಂದು ಬ್ರಾಹ್ಮಣಾದಿಗಳಲ್ಲಿ ಬರುತ್ತದೆ; ಇಜ್>ಯಜ್ಞದಲ್ಲಿ ಗಮನಾರ್ಥ ಆಚರಣ ಸೂಚಕ ಅರ್ಥವಿದೆ. 'ಯಃ ಜ್ಞಃ, (ಯಾವನು ತನ್ನ ಆತ್ಮನ್ ಅರಿತನೊ) ಅವನು ಸ್ವತಃ ಯಜ್ಞಸ್ವರೂಪನೇ ಎಂಬ ಸಂತಮಾರ್ಗೀಯ ಅರ್ಥವು ಕೊನೆಗೆ ತಲೆಯೆತ್ತಿದೆ. ಈ ಶುದ್ಧ ಸಾಂಕೇತಿಕ ಶ್ರೀ ಚಕ್ರಪೂಜೆ, ವಾಮದೇವ್ಯ' ಮಾರ್ಗದಿಂದ ಬೇರೆ ದಾರಿಯಲ್ಲಿ ಹೊರಡುತ್ತದೆ. ಆದರೂ ಇದು 'ಸುಫಲೀಕರಣ' (Fertility) ತಂತ್ರದ ವಿಧಿಯೊಳಗಿಂದಲೇ ನಿಷ್ಪನ್ನ ಆಚಾರಾಂಗವೆಂಬುದು ಮೇಲೆಯೆ ಕಾಣುತ್ತಿದೆ. ವಿಶ್ವದ ಮೂಲಾಧಾರ ಚಕ್ರ: ಜಾಗರದ 'ದಿವ್ಯಚಕ್ಷು' ಒಂದೇ 'ಕಣ್ಣು'. ಆದರೆ, ಏಕಂ ಸತ್ → Unity in duality, ಇದು ಜೀವನದ ಆದರ್ಶವಾಗುವಾಗ ಅದಿತಿ, ಇಳಾ ಇಂತಹ ಉಭಯಲಿಂಗಿ 'ವಾಗರ್ಥಾವಿವ ಸಂಪೃಕ್ತ' ಏಕಾತ್ಮಕ ಭೂಮಿಕೆಯ ದೈವತಗಳು ಪ್ರಚಲಿತವಾದದ್ದು ಉಂಟು.

ಏಕ 'ಚಕ್ರ' ಅಥವಾ ಏಕ 'ಚಕ್ಷು' ದೇವಿಯನ್ನು ತ್ರಿಚಕ್ರದೇವಿ ಅಥವಾ ತ್ರಿ ಅಂಬಕದೇವಿ ಎಂದು ಕಾಣುವ ಸಂಪ್ರದಾಯವು ತಲೆದೋರಿದು ಋಗ್ ವೇದದ 'ತ್ರಿ ಚಕ್ರಂ ಬಂಧುರಂ ರಥಂ' (=ದೇಹಂ) ವರ್ಣಿಸಿರುವಲ್ಲಿ ಬಯಲಿಗೆ ಬರುತ್ತದೆ. ಈ ಚಕ್ರವನ್ನೇ 'ಪದ' 'ತ್ರಿಪದ' ಎಂದುದೂ ಉಂಟು. ಪದ ಇದರ 'ಪದ್' ಪ್ರಯೋಗ ಗಮನಿಸಿದರೆ ಪದ್-ಮ (ಕಮಲ)ದ ನಿಜರೂಪ ತಿಳಿಯಬಲ್ಲುದು. ಪದ=ಪದ್‌ಮ, ಇದೇ ಕಾರಣದಿಂದ ಪದ್ಮ ಅಕ್ಷ. ಪದ್ಮವತಿ = ಪದ್ಮಾವತಿ, ತ್ರಿ ಅಂಬಕಿ ಎಂದು ಶ್ರೀಲಕ್ಷ್ಮೀದೇವಿಗೆ ಹೇಳಿರುವಲ್ಲಿ ಔಚಿತ್ಯವಿದೆ. ನಾರ-ಅಯನಿ=ನಾರಯಣಿ ಎಂಬುದೂ ಸಾರ್ಥನಾಮ. ದೇವರ ಹರಕೆಗಾಗಿ ಕಣ್-ಬಟ್ಟು, ಪಾದ ಮಾಡಿಸಿಕೊಡುವ ಸಂಪ್ರದಾಯವು, ಕಣ್ಣಮ್ಮ ಅಥವಾ ಚಾಕ್ಷುಷೀ ಪುರುಷನನ್ನು ಪ್ರಸನ್ನ ಮಾಡಿಕೊಳ್ಳುವುದಕ್ಕಾಗಿಯೆ ಅಲ್ಲವೆ?

ಸುಮೇರಿನ ಕಣ್ಣಮ್ಮನೇ ಅಲ್ಲಿಯ ಇನನ್ನಳು ನನಾ ನಾನೀ ಈ ಹೆಸರಿನಲ್ಲಿ ಪ್ರಾಚೀನ ಭಾರತದಲ್ಲೂ ಪೂಜೆಗೊಳ್ಳುತ್ತಿದ್ದಳು! ಋಗ್‌ವೇದದ ಚಂದ್ರನ ಸ್ತೋತ್ರಮಂಡಲದಲ್ಲಿ ಮಾತೃ ಅಥವಾ ಕನ್ಯಾ : ಕುಮಾರೀ ವಾಚಕ 'ನನಾ' ಶಬ್ದಪ್ರತಿಮೆ ಇದೆ! ಗೋವಿನಂತೆ ರಸ ಸ್ರವಿಸುವ ಸಾಂಕೇತಿಕ ಅರ್ಥದಲ್ಲಿ 'ನನಾ' ಶಬ್ದ ಪ್ರತಿಮೆಯ ಪ್ರಯೋಜನ ಪಡೆಯಲಾಗಿದೆ! ಇಂದೋಃ ಇಂದ್ರಾಯ (ಇಂದ್ರಿಯಕ್ಕೆ) ಪರಿಸ್ರವ! ಋಗ್ವೇದದಲ್ಲೆ ಇರುವ 'ಶಿನಿವಾಲಿ' = ಪ್ರತಿಪದ : ಚಂದ್ರ

'ನನಾ' : Crescant moon : ಇನನ್ನಳ ನಾಡಿನಿಂದ ಬಂದ ದೇವೀ ನಾಮ ಎಂದು ಸಿದ್ಧವಾಗಿದೆ! ಈ ಬಾಲಚಂದ್ರ (ಮುಂಚೆ ಚಂದ್ರಿ) ಧ್ವಜದ ರಾಷ್ಟ್ರ ಎಂದು ಆ ಭಾಗದ ಪುರಾತನ ಸಂಸ್ಕೃತಿಯನ್ನು ನಿರ್ದೇಶಿಸಲಾಗುತ್ತದೆ. ಇಂದು ಸಹ!

ಸಿಂಧೂನದಿಯ ಮುಖದ ಪ್ರದೇಶಕ್ಕೆ ತಾಗಿ ಪಶ್ಚಿಮಕ್ಕೆ ಇರುವ ಹಿಂಗುಲಜಾ ದೇವಿಗೆ ನಾನಿ, ನನಾದೇವಿ ಎಂಬ ಹೆಸರಿದೆ. 'ಕೆಟ್ಟರಮ್ಮಾ' ದೇವಿ ಎಂಬ ಪರ್ಯಾಯ ನಾಮದಿಂದಲೂ ವಿಖ್ಯಾತಳಿದ್ದಳು. ಶ್ರೀ ಕಪಟ್ರಾಳ ಕೃಷ್ಣರಾಯರು, ಸನ್ನತಿಗೆಯ ಚಂದ್ರಲಾ ಪರಮೇಶ್ವರಿ ಮತ್ತು ಹಿಂಗುಲಜಾ ಸಂಬಂಧದ ಮೇಲೆ ಹೊಸ ಬೆಳಕು ನೀಡಿದ್ದಾರೆ. 'ನನಾ'ದೇವಿ=ನಂದಿ(ನೀ), ವರನಂದಿ ಹೆಸರಿನಲ್ಲಿ ಕಂನಾಡ ಜಾನಪದ ಗೀತದಲ್ಲಿ, ಮೇಲುಕೋಟೆ ನಾರಾಯಣನನ್ನು ಮೆಚ್ಚಿದ ಹಾಡು ಉಂಟು. ನನ್ನರಾಜ, ನನ್ನಯಭಟ್ಟ ಈ ವ್ಯಕ್ತಿನಾಮ ವಿಚಾರಾರ್ಹವಾಗಿವೆ. 'ನನಾ'ದೇವಿ ಚಂದ್ರ

ಸ್ವಸಾ, ಈ 'ಸ್ವಸಾ ಆದಿತ್ಯಾನಾಂ' ಎಂಬ ದೇವಿ ಅದಿತಿ, ಆದಿತ್ಯನೆಂಬ ವಿಷ್ಣು-ಪತ್ನಿ ಸಹೋದರಿ; ಯಮ-ಯಮಿ; ಈ ಯವಳರಲ್ಲಿ ಪತಿ-ಪತ್ನೀ ಸಂಬಂಧ ಸೂಚಕ ಕಥೆ ಉಂಟು! iii) ಹೊರಸ/ಒಸಿರಿಸ್ ತನ್ನ ತಾಯಿಯ ವೃಷಭನೆಂದಿರುವಲ್ಲಿ ಋಗ್ವೇದದ ಅದಿತಿ-ದಕ್ಷ ಸಂಬಂಧವು ಪ್ರತಿಬಿಂಬಿತವಾಗಿದೆ. ಈ ಬಗೆಯ ಸ್ತ್ರೀ-ಪುರುಷ ಸಂಬಂಧಗಳ ಭೂಮಿಕೆಯ ಹಿನ್ನೆಲೆಯಲ್ಲಿ ಚಾಂದ್ರ: ಆಪ-ರಸ ತತ್ವಜ್ಞಾನವೆ ಅಭಿಪ್ರೇತವಿರುತ್ತದೆ. ಋಗ್ವೇದದ 'ಜಾಗ್ರವಾಂಸರ' ಜಾಗರದ ಆರಾಧ್ಯ ದೈವತವು 'ದಿವೀವ ಚಕ್ಷುಃ ಆತತಂ' ಎಂದರೂ ಈ ಚಂದ್ರರೂಪೀ ಕಣ್ಣರು (: ಚಕ್ಷು) ಇದೇ ಸರಿ! ಈ ಕಾರಣದಿಂದಾಗಿ ಸುಮೇರು, ಈಜಿಪ್ಟ್ ಮತ್ತು ಭಾರತ ಈ ಮೂರುರಲ್ಲೂ ಚಾಂದ್ರ ಸಂಪ್ರದಾಯ ಇತ್ತು. ಪುರಾತನ ಸಂಸ್ಕೃತಿಗಳಲ್ಲಿ ಇತ್ತು ಆದಿಮಾತಾ ಪೂಜೆಯ ನಡವಳಿಯ iv) ಈಜಿಪ್ಟಿನ ಹ್ಯಾಥೋರ ಗೋವಿನ ಮೈಮೇಲೆ ಇರುವ ತ್ರಿಪರ್ಣ (trefoil) ಮುದ್ರೆಗಳು, ಸುಮೇರಿನ ದಿವ್ಯವೃಷಭಗಳ ಮೇಲೆ ಅಲ್ಲದೆ ನಾಗನ (dragon) ಮೇಲೆ ಸಹ ಉಂಟು; ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿಯೂ ಈ ತ್ರಿಪರ್ಣ ಮುದ್ರೆಯ ವೈಶಿಷ್ಟ್ಯವು ಬೆಳಕಿಗೆ ಬಂದಿದೆ. ಇವುಗಳಲ್ಲಿ ನಾಸಿಕಾಗ್ರದೃಷ್ಟಿಯ ಧ್ಯಾನಮಗ್ನ ಯೋಗಿಯು ಹೊದ್ದುಕೊಂಡ ಶಾಲಿನ ಮೇಲಿರುವ ಮುದ್ರೆ ವಿಶೇಷ ಮಹತ್ವದುವು. ಈ ಸಮಾನ ಸಮಯ, ಆಚಾರ, ಯಾರಿಂದ ಯಾರು ಸ್ವೀಕರಿಸಿದರು? ಅಥವಾ ಸ್ವಸ್ತಿಕದ ಆಕೃತಿಯಂತೆ, ಅವರವರಿಗೇ ಆದ ಸ್ಫೂರ್ತಿ ಎನ್ನುವುದೆ?

ಈ ತ್ರಿ-ಪರ್ಣವು ಮೂಲತಃ ಏಕ 'ಪರ್ಣ' (o)! = ವಟಪತ್ರ! ಈ ಆಲದ ಎಲೆಯಲ್ಲಿ ಒರಗಿರುವ (ಕೃಷ್ಣವರ್ಣದ) ಶಿಶು: ಅಂತರಿಕ್ಷ : ಸಮುದ್ರದಲ್ಲಿ ತೇಲುತ್ತಿರುವ ಸನಾತನ ಶಿಶು! ದಾಸರಾಯರ ಹಾಡಿನ 'ಒಂದಾಲದೆಲೆಯ ಮೇಲೆ ಮಲಗಿರುವ ರಂಗ' ಈತನೇ. ಈ ತ್ರಿಪತ್ರ ತ್ರಿಅಂಬಕ (: ಕಣ್ಣು) ಆಗುವ ಚಮತ್ಕಾರವು ಗ್ರೀಸಿನಲ್ಲೂ ಕಂಡಿದೆ! ಭಾರತೀಯ ತ್ರ್ಯಂಬಕನಂತೆ. ಝುಉಸನನ್ನು ಮುಕ್ಕಣ್ಣನೆಂದು ಬಗೆಯಲಾಗಿತ್ತು! 'ಅಂಬ(ಕ)' ಇದರ ಮೂಲಾರ್ಥವು ತಾಯಿ=ಅಮ್ಮ ಎಂದು ಉಂಟೆ ಹೊರತು 'ಕಣ್ಣು' ನೇತ್ರ ಎಂಬ ಅರ್ಥವು ಅಲ್ಲಿ ಇಲ್ಲ! ತ್ರಿ-ಪರ್ಣವು : 'ಸು-ಪರ್ಣ'=ಪಕ್ಷಿ; 'ತ್ರಿ ಸು-ಪರ್ಣ' ಮಧುವಿಚಾರದ ಮಂತ್ರಪಾಠ! 'ಮಧುವಾತಾಋತಾಯತೇ, ಮಧುಕ್ಷರಂತಿ ಸಿಂಧವಃ, ಮಧು ದ್ಯೌಃ ಅಸ್ತು ನಃ! ಎಂದರೆ ಇದು 'ಮಧು'ಯುಕ್ತ 'ಪರ್ಣ' ವಾಯ್ತು; ಮಧುಯುಕ್ತ ಅಂಬ=ಕಣ್ಣು ಎಂದರೇನು? 'ಆರ್ದ್ರಾಂ' ಎಂದು ಸ್ತೋತ್ರಮಾಡಿದ ಶ್ರೀ ಸೂಕ್ತದ ದೇವಿಯನ್ನು ತ್ರ್ಯಂಬಕೇ ಎಂದು ಸಂಬೋಧಿಸಿದೆ. ಈ ದೇವಿಗೆ, ನಾರಾಯಣಿ ಎಂದಿರುವಲ್ಲಿ, ಈ ತ್ರಿ-ಅಂಬಕಗಳು, ಮಧುಯುಕ್ತ 'ಸು-ಪರ್ಣ'ಗಳು ಆಗಿವೆ ಎಂಬುದರ ವಿರಣೆಯೆ ಉಂಟು. 'ಸುಪರ್ಣ'ವು ಪಿಪ್ಪಲವೃಕ್ಷ (ಫಲ) ಆಸ್ವಾದಿಸುತ್ತಿರುವ ಹಾಗಿನ ವರ್ಣನೆ, ಇದೆ. ತ್ರ್ಯಂಬಕ=ತ್ರಿಸುಪರ್ಣ ಎಂಬುದನ್ನೆ ಪುಷ್ಟೀಕರಿಸುತ್ತಿದೆ.

ಈ 'ದಿವ್ಯ ಅಂಬಕ' ವಿಚಾರವೇ ಉಪನಿಷತ್ತಿನಲ್ಲಿ 'ಅಕ್ಷಿಣಿ-ಪುರುಷ' 'ಚಾಕ್ಷುಷೀ ಪುರುಷ' ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಬ್ರಹ್ಮಜ್ಞಾನರೂಪೀ ಈ 'ಗೋವಿನ' ನಿತ್ಯದ ಅನು-ಸ್ಥಾನದಲ್ಲಿರಲು ಅಪ್ಪಣೆ ಕೊಡಿಸಿದ್ದಾಗಿದೆ: 'ವಾಚಂ ಧೇನುಂ ಉಪಾಸೀತ'. 'ಧೇನು'ವನ್ನು ಗಾಯತ್ರೀ ಎಂಬ ರೂಪಕ್ಕೆ ತಿರುಗಿಸಿ ಗಾಯತ್ರಿ=ಸಾವಿತ್ರೀ= ಸವಿತೃ-ಸೂರ್ಯ (0) ಈ ಸಂಕೇತಗಳನ್ನು ಸ್ತ್ರೀ ಪ್ರತೀಕಗಳನ್ನಾಗಿಸಿದ್ದುಂಟು! 'ಆದಿತ್ಯ' ಈ ಸ್ಥೂಲ ಸಂಕೇತವನ್ನು ಬಳಸಿ ಸೂರ್ಯ=ಚಂದ್ರ ಈ 'ಏಕಂ ಸತ್' ಸಿದ್ಧಾಂತ ಪ್ರಸ್ಥಾಪಿಸಲು 'ಗೋ-ಅಕ್ಷ'ದ ಲಾಭ ಪಡೆಯಲಾಗಿದೆ! ವಿಶ್ವದ 'ಗವಾಕ್ಷ' (ಬೆಳಕಂಡಿ) =ಕಣ್ಣು=ಸೂರ್ಯ; ವಿಶ್ವ ಪ್ರಸವ ಶಕ್ತಿ: ಆದಿಮಾತೆ ಸೂರ್ಯ ಎಂದು ಹೇಳಲು ಹೊರಟು ನಾಲಗೆ ಹೇಳದೆ ಒಮ್ಮೆಲೆ ಒಳಸೇರಿದೆ!

ಚಿತ್ರ ನಂ. ೧೨

ಶ್ರೀ (: ದೇವೀ): ಚಕ್ರಪೂಜೆ

ತಕ್ಷ(ಕ) ಶಿಲಾನಗರದಲ್ಲಿ ಅಗಿಯುವಾಗ ದೊರೆತ ಚಕ್ರ ಇಲ್ಲಿದೆ. ಇದರ ಜೊತೆಗೆ ಪಿಕಳಿ-ಹಾಳದಲ್ಲಿ (ಕರ್ನಾಟ) ದೊರೆತ ಶಾತವಾಹನರ ಕಾಲದ ಸುಮಾರಿನ ಚಕ್ರವೂ ಇಲ್ಲಿ ಇದೆ.

ಶ್ರೀ'ಚಕ್ರ' ಪೂಜೆ ವೇದಕ್ಕಿಂತ ಪುರಾತನ ಸಂಪ್ರದಾಯ, ಮೂಲದಲ್ಲಿದ 'ಚಕ್ರ' : 'ಚಕ್ಷು' ಅಭಿನ್ನ, ಋಗ್ವೇದದೊಳಗಿನ 'ದಿವೀವ ಚಕ್ಷುಃ ಆತತಂ'; ಉಲ್ಲೇಖದ ಚಕ್ಷುವು ದಿವ್ಯಚಕ್ರವೇ. 'ದಿವೀವ ಆತತಂ ಚಕ್ಷುಃ' ಜಾಗ್ರವಾಸರು, ಜಾಗರದಲ್ಲಿ ಆರಾಧಿಸುವ ಚಕ್ರ ; ಎಂದರೆ ಇದು ರಾತ್ರಿ 'ಸಮಯ' : ಆಚಾರ. ಆದರೆ, ರಾತ್ರಿ

ಮತ್ತು ಹಗಲು ಈ ಭೇದವು-ಕಾಲದ ಅರಿವು-ತತ್-ಮಯತೆಯ ಆ ನಂದಲೋಕದ ಅನುಭಾವಕ್ಕೆ ಆತಂಕಕಾರಿ. ಆದಕಾರಣ ಅಹಃ (ಹಗಲನ್ನೂ) 'ಕೃಷ್ಣ'ರೂಪದ್ದಾಗಿ ಬಗೆಯುತ್ತಿದ್ದ ವಾಡಿಕೆಯ ಸೂಚನೆ ಋಗ್‌ವೇದದಲ್ಲೆ ಇದೆ.

ಸಿಂಧೂ ತೀರದ 'ಪುರ' ಸಂಸ್ಕೃತಿಯ ಅವಶೇಷಗಳಲ್ಲಿ ದೊರೆತ ಕಣ್ಣು (0) : ಕಂಕಣ ಆಕೃತಿಯ ಪ್ರತಿಮೆಗಳು ಸಾಕಷ್ಟಿವೆ. ಈ ಪ್ರತಿಮೆಗಳ ಅರ್ಥವು ಏನು ಎಂದು ಸಂದೇಹಪಡಬೇಕಾಗಿಲ್ಲ, ಲಿಂಗದ ಪ್ರತೀಕಗಳೂ ಈ ಉತ್ಖನನದಲ್ಲಿ ಹೊರಬಂದಿವೆ. 'ವಿಶ್ವಚಕ್ಷು' ಎಂಬ ಸೂರ್ಯನನ್ನು (ಏಕ) 'ಚಕ್ರ' ರೂಪ ರಥ (=ದೇಹ) ಆಗಿರುವ ವಿಶ್ವಪ್ರಸವ ಶಕ್ತಿ, ಎಂಬ ರೂಪದಲ್ಲಿ ಕಾಣುತ್ತಿದ್ದ ಋಗ್ ವೇದದ ಕವಿಗಳು ಆಪ : ರಸ ಪಂಥೀಯ 'ಚಕ್ರ' ಪೂಜಕರೇ ಆಗಿದ್ದರೆಂದು ಸಿದ್ಧಪಡಿಸುವ ಆವಶ್ಯಕತೆಯಿಲ್ಲ.

'ಚಕ್ರ' ಮತ್ತು 'ಯಜ್ಞ' ಈ ಸಂಕೇತಗಳ ನಿರುಕ್ತದಲ್ಲಿ ಪದರುಯಿದೆ. 'ಚಕ್ರ' ಇದು 'ಚರ್' ಗಮನಾರ್ಥಕವೊ (ಗಾಲಿ<ಕಾಲಿ?) ಅಥವಾ 'ಕೃ' : ಗೆಯ್ತದ ಸೂಚಕವೊ? ಎಂಬ ಹಾಗಿನ ಸಂದಿಗ್ಧತೆ ಇದೆ. ಉದಾ: ಯಜ್ಞಂ ಚಕ್ರೇ ಏಕೆಂದರೆ ಯಜ್>ಯಜ್ಞ ಇದು ಸಾಧು ಪ್ರಯೋಗ. ಆದರೆ 'ಕಸ್ಮೈ ದೇವಾಯ' 'ಯಜ್ಞ' 'ಗರ್ಭ ದಧ್ರೇ ಆಪಃ' 'ಯಜ್ಞ 'ಪುರುಷಯಜ್ಞ'. ಉಪನಿಷತ್ತಿನ 'ಗೌತಮಾಗ್ನಿಯಜ್ಞ, 'ವಾಮದೇವ್ಯ' ಈ ಬಗೆಯ ಯಜ್ಞವಿಧಾನಕ್ಕೆ ಸರಿಹೋಗುವಂತೆ 'ಯಜ್ಞ'ಪದದ 'ನವ್ಯ' ನಿರುಕ್ತವೊಂದು ಬ್ರಾಹ್ಮಣಾದಿಗಳಲ್ಲಿ ಬರುತ್ತದೆ; ಇಜ್>ಯಜ್ಞದಲ್ಲಿ ಗಮನಾರ್ಥ ಆಚರಣ ಸೂಚಕ ಅರ್ಥವಿದೆ. 'ಯಃ ಜ್ಞಃ, (ಯಾವನು ತನ್ನ ಆತ್ಮನ್ ಅರಿತನೊ) ಅವನು ಸ್ವತಃ ಯಜ್ಞಸ್ವರೂಪನೇ ಎಂಬ ಸಂತಮಾರ್ಗೀಯ ಅರ್ಥವು ಕೊನೆಗೆ ತಲೆಯೆತ್ತಿದೆ. ಈ ಶುದ್ಧ ಸಾಂಕೇತಿಕ ಶ್ರೀ ಚಕ್ರಪೂಜೆ, ವಾಮದೇವ್ಯ' ಮಾರ್ಗದಿಂದ ಬೇರೆ ದಾರಿಯಲ್ಲಿ ಹೊರಡುತ್ತದೆ. ಆದರೂ ಇದು 'ಸುಫಲೀಕರಣ' (Fertility) ತಂತ್ರದ ವಿಧಿಯೊಳಗಿಂದಲೇ ನಿಷ್ಪನ್ನ ಆಚಾರಾಂಗವೆಂಬುದು ಮೇಲೆಯೆ ಕಾಣುತ್ತಿದೆ. ವಿಶ್ವದ ಮೂಲಾಧಾರ ಚಕ್ರ: ಜಾಗರದ 'ದಿವ್ಯಚಕ್ಷು' ಒಂದೇ 'ಕಣ್ಣು'. ಆದರೆ, ಏಕಂ ಸತ್ → Unity in duality, ಇದು ಜೀವನದ ಆದರ್ಶವಾಗುವಾಗ ಅದಿತಿ, ಇಳಾ ಇಂತಹ ಉಭಯಲಿಂಗಿ 'ವಾಗರ್ಥಾವಿವ ಸಂಪೃಕ್ತ' ಏಕಾತ್ಮಕ ಭೂಮಿಕೆಯ ದೈವತಗಳು ಪ್ರಚಲಿತವಾದದ್ದು ಉಂಟು.

ಏಕ 'ಚಕ್ರ' ಅಥವಾ ಏಕ 'ಚಕ್ಷು' ದೇವಿಯನ್ನು ತ್ರಿಚಕ್ರದೇವಿ ಅಥವಾ ತ್ರಿ ಅಂಬಕದೇವಿ ಎಂದು ಕಾಣುವ ಸಂಪ್ರದಾಯವು ತಲೆದೋರಿದು ಋಗ್ ವೇದದ 'ತ್ರಿ ಚಕ್ರಂ ಬಂಧುರಂ ರಥಂ' (=ದೇಹಂ) ವರ್ಣಿಸಿರುವಲ್ಲಿ ಬಯಲಿಗೆ ಬರುತ್ತದೆ. ಈ ಚಕ್ರವನ್ನೇ 'ಪದ' 'ತ್ರಿಪದ' ಎಂದುದೂ ಉಂಟು. ಪದ ಇದರ 'ಪದ್' ಪ್ರಯೋಗ ಗಮನಿಸಿದರೆ ಪದ್-ಮ (ಕಮಲ)ದ ನಿಜರೂಪ ತಿಳಿಯಬಲ್ಲುದು. ಪದ=ಪದ್‌ಮ, ಇದೇ ಕಾರಣದಿಂದ ಪದ್ಮ ಅಕ್ಷ. ಪದ್ಮವತಿ = ಪದ್ಮಾವತಿ, ತ್ರಿ ಅಂಬಕಿ ಎಂದು ಶ್ರೀಲಕ್ಷ್ಮೀದೇವಿಗೆ ಹೇಳಿರುವಲ್ಲಿ ಔಚಿತ್ಯವಿದೆ. ನಾರ-ಅಯನಿ=ನಾರಯಣಿ ಎಂಬುದೂ ಸಾರ್ಥನಾಮ. ದೇವರ ಹರಕೆಗಾಗಿ ಕಣ್-ಬಟ್ಟು, ಪಾದ ಮಾಡಿಸಿಕೊಡುವ ಸಂಪ್ರದಾಯವು, ಕಣ್ಣಮ್ಮ ಅಥವಾ ಚಾಕ್ಷುಷೀ ಪುರುಷನನ್ನು ಪ್ರಸನ್ನ ಮಾಡಿಕೊಳ್ಳುವುದಕ್ಕಾಗಿಯೆ ಅಲ್ಲವೆ?

ಸುಮೇರಿನ ಕಣ್ಣಮ್ಮನ್ನೇ ಅಲ್ಲಿಯ ಇನನ್ನಳು ನನಾ ನಾನೀ ಈ ಹೆಸರಿನಲ್ಲಿ ಪ್ರಾಚೀನ ಭಾರತದಲ್ಲೂ ಪೂಜೆಗಳ್ಳುತ್ತಿದ್ದಳು! ಋಗ್‌ವೇದದ ಚಂದ್ರನ ಸ್ತೋತ್ರಮಂಡಲದಲ್ಲಿ ಮಾತೃ ಅಥವಾ ಕನ್ಯಾ : ಕುಮಾರೀ ವಾಚಕ 'ನನಾ' ಶಬ್ದಪ್ರತಿಮೆ ಇದೆ! ಗೋವಿನಂತೆ ರಸ ಸ್ರವಿಸುವ ಸಾಂಕೇತಿಕ ಅರ್ಥದಲ್ಲಿ 'ನನಾ' ಶಬ್ದ ಪ್ರತಿಮೆಯ ಪ್ರಯೋಜನ ಪಡೆಯಲಾಗಿದೆ! ಇಂದೋಃ ಇಂದ್ರಾಯ (ಇಂದ್ರಿಯಕ್ಕೆ) ಪರಿಸ್ರವ! ಋಗ್ವೇದದಲ್ಲೆ ಇರುವ 'ಶಿನಿವಾಲಿ' = ಪ್ರತಿಪದ : ಚಂದ್ರ

'ನನಾ' : Crescant moon : ಇನನ್ನಳ ನಾಡಿನಿಂದ ಬಂದ ದೇವೀ ನಾಮ ಎಂದು ಸಿದ್ಧವಾಗಿದೆ! ಈ ಬಾಲಚಂದ್ರ (ಮುಂಚೆ ಚಂದ್ರಿ) ಧ್ವಜದ ರಾಷ್ಟ್ರ ಎಂದು ಆ ಭಾಗದ ಪುರಾತನ ಸಂಸ್ಕೃತಿಯನ್ನು ನಿರ್ದೇಶಿಸಲಾಗುತ್ತದೆ. ಇಂದು ಸಹ!

ಸಿಂಧೂನದಿಯ ಮುಖದ ಪ್ರದೇಶಕ್ಕೆ ತಾಗಿ ಪಶ್ಚಿಮಕ್ಕೆ ಇರುವ ಹಿಂಗುಲಜಾ ದೇವಿಗೆ ನಾನಿ, ನನಾದೇವಿ ಎಂಬ ಹೆಸರಿದೆ. 'ಕೆಟ್ಟರಮ್ಮಾ' ದೇವಿ ಎಂಬ ಪರ್ಯಾಯ ನಾಮದಿಂದಲೂ ವಿಖ್ಯಾತಳಿದ್ದಳು. ಶ್ರೀ ಕಪಟ್ರಾಳ ಕೃಷ್ಣರಾಯರು, ಸನ್ನತಿಗೆಯ ಚಂದ್ರಲಾ ಪರಮೇಶ್ವರಿ ಮತ್ತು ಹಿಂಗುಲಜಾ ಸಂಬಂಧದ ಮೇಲೆ ಹೊಸ ಬೆಳಕು ನೀಡಿದ್ದಾರೆ. 'ನನಾ'ದೇವಿ=ನಂದಿ(ನೀ), ವರನಂದಿ ಹೆಸರಿನಲ್ಲಿ ಕಂನಾಡ ಜಾನಪದ ಗೀತದಲ್ಲಿ, ಮೇಲುಕೋಟೆ ನಾರಾಯಣನನ್ನು ಮೆಚ್ಚಿದ ಹಾಡು ಉಂಟು. ನನ್ನರಾಜ, ನನ್ನಯಭಟ್ಟ ಈ ವ್ಯಕ್ತಿನಾಮ ವಿಚಾರಾರ್ಹವಾಗಿವೆ. 'ನನಾ'ದೇವಿ ಚಂದ್ರ

ಅಂತರಿಕ್ಷದ ತೆರೆದ (ಹಿಗ್ಗಿದ) ಕಣ್ಣೊ (: ದಿವೀವ ಚಕ್ಷುಃ ಆತತಂ) ಚಂದ್ರ ವಿಷ್ಣುಪದ; 'ಮಧು'ಶ್ರವಿಸುವ ಪರಮಪದ! ಇವು ಋಗ್ ವೇದದ ಪ್ರಮಾಣ!

ಹಿಮಾಲಯದ 'ನನಾ' ನೈನಾ (ನಯನ) ಹೆಸರಿನಲ್ಲೆ ಪೂಜೆಗೊಳ್ಳುತ್ತಿರುವುದು ಒಂದು ಚಮತ್ಕಾರ ! ಚಾಕ್ಷುಷ ಶಕ್ತಿ : ಸಂದೃಕ್=ಅಂತರ್ ಜ್ಞಾನದೃಷ್ಟಿ ಸಿದ್ಧಿಯ ಬಗೆಗಿನ ಪುರಾತನ ಸಮಯ : ಆಚಾರದ ಅಸ್ತಿತ್ವವನ್ನು ನೈನಾ ಸಿದ್ಧಪಡಿಸುತ್ತಿದ್ದಾಳೆ. ಅಲ್ಲದೆ, ಸುಮೇರು, ಭಾರತ, 'ಮಧ್ಯಮಾ' : ಉಪಾಸನೆ; ದಿವ್ಯ ಜ್ಞಾನದೃಷ್ಟಿಯ ತೃತೀಯ ಚಕ್ಷು; ಭಾಲಲೋಚನ ಸಿದ್ಧಿಯನ್ನು ಪಡೆವ ಅನುಸ್ಥಾನ : ಉಪ ಆಸನವ್ರತವಾಗಿತ್ತು ಎಂಬುದು ಬೆಳಕಿಗೆ ಬರುತ್ತಿದೆ. ನೈನಾದೇವೀ ಸಂಪ್ರದಾಯ, ಗಂಗಾ-ಯುಫ್ರೆಟಿಸ್ ನದಿಗಳ ನಡುವಣ ಪ್ರದೇಶದಲ್ಲಿ ಪ್ರಭಾವಶಾಲಿಯಾಗಿತ್ತು. ಖಾಲ್ಡಿಯಾ, ಪರ್ಶಿಯಾದಲ್ಲಿ

'... was very old dating perhaps a thousand years before Abraham

ಏಕಾಕಿ ಇದ್ದರೆ ಅದು ಸಂ-ಗತಿ : ಸುಸಂಗತಿ ಎನಿಸದು. ನೈನಾ ಸಂಪ್ರದಾಯದ ಪುರಾತನ ಸಂ-ಬಂಧವು ನಿಜವಿದ್ದರೆ ಇಂತಹ ಇನ್ನೂ ಕೆಲವು ಸಂಬಂಧಗಳು ಇದ್ದುದು ಸಿದ್ಧವಾಗುತ್ತಿರಬೇಕು. ಇದನ್ನು ಸಿದ್ಧಪಡಿಸುವ ಮೂರು ಅಮೋಘ ಪ್ರಮಾಣಗಳು ಈಗಲೆ ಉಂಟು: ಮೊದಲನೆಯ ಸಂ-ಗತಿ 'ಅಕ್ಷಿಣಿ-ಪುರುಷ' ಸಾಕ್ಷಾತ್ಕಾರ. ಜ್ಞಾನದೀಕ್ಷೆ ಪಡೆಯಲು 'ಆಸುರಾಣಾಂ' (ಜನಾಂಗದ) ವಿರೋಚನನೆಂಬ ಜಿಜ್ಞಾಸುವು ಉಪನಿಷತ್ಕಾಲದಲ್ಲಿ ಬಂದಿದ್ದನು. ವೇದೋಪನಿಷದಾದಿ ಗ್ರಂಥಗಳಲ್ಲಿ ಬರುವ ಐತಿಹಾಸಿಕ ಸ್ವರೂಪದ ಉಲ್ಲೇಖಗಳು, ಹಲವು ಬಾರಿ ಮೋಸಕ್ಕೆ ಕಾರಣವಾಗುತ್ತವೆ. ಆದಕಾರಣ, ಇನ್ನೂ ಬೇರೆ ಪ್ರಮಾಣಗಳಿಂದ ಈ ಅರ್ಥವು ದೃಢಪಡುತ್ತಿದ್ದರೆ, 'ಐತಿಹಾಸಿಕ'ವೆಂಬ ಇಂತಹ ಅಂಶವು ವಿಶ್ವಾಸಾರ್ಹವೆನಿಸಬಲ್ಲದು. ಪ್ರಸ್ತುತ ವಿರೋಚನ ನಾಮದ ವಿಶಿಷ್ಟ ವ್ಯಕ್ತಿಯು ನಿಜವೇ, ಕಾಲ್ಪನಿಕನೇ ಈ ಪಶ್ನೆ ಇಲ್ಲ. ವಿರೋಚನನ್ನು 'ಅಸುರಾಣಾಂ' ಎಂದು ಹೇಳಿರುವಲ್ಲಿ ಈ 'ಅಸುರ' ಎಂಬ ಜನ=ದೇಶ ವಾಸ್ತವವೊ ಅಥವಾ ವಿದೇಹ, ಅಂಗ ಎಂಬ ಹಾಗಿನ ಪ್ರಾಧಾನ್ಯದಿಂದ ಸಾಂಕೇತಿಕವೊ? ಎಂಬ ಪ್ರಶ್ನೆ ವಿಮರ್ಶಾರ್ಹವಾಗಿದೆ. ಸುಮೇರಿನ ತರುವಾಯ ಪ್ರಬಲ ಜನಾಂಗವೆನಿಸಿ ಸಾಮ್ರಾಜ್ಯವಾಳಿದ ಅಸ್ಸೀರಿಯ ಹೆಸರಿನ ಜನ=ದೇಶ ಒಂದು ಇತ್ತು. ಅಸ್ಸೀರಿಯವು, ಬಳಿಕ ಬ್ಯಾಬಿಲೋನ-ಖಾಲ್ಡಿಯಾ ಹೆಸರಿನಲ್ಲಿ ಕ್ರಿ. ಪೂ. ಎಂಟನೆಯ ಶತಮಾನದಿಂದ ಸುಮಾರು ಇನ್ನೂರು ವರುಷ (ಕ್ರಿ. ಪೂ. ೫೬೨), ಪ್ರಬಲ ರಾಷ್ಟ್ರವಾಗಿತ್ತು. ಛಾಂದೋಗ್ಯ ಉಪನಿಷತ್ತಿನ ಕಾಲವನ್ನು ಸುಮಾರಾಗಿ ಕ್ರಿಸ್ತಪೂರ್ವ ೮೦೦ ರಿಂದ ೫೦೦ ಕ್ಕೂ (ಬುದ್ಧನಿಗೂ) ಮುಂಚೆ ಎಂದು ಬಗೆಯಲಾಗುತ್ತದೆ. ಈ ಕಾರಣದಿಂದ ಈ ಉಪನಿಷತ್ ಕಾಲದಲ್ಲಿ ಭಾರತೀಯರೊಡನೆ ಅಸ್ಸೀರರ ಒಂದಿಲ್ಲೊಂದು ಬಗೆಯ ಸಾಂಸ್ಕೃತಿಕ ಸಂಬಂಧವು ಇರುವ ಶಕ್ಯತೆಯನ್ನು ತೊಡೆದು ಹಾಕಲು ಆಗುವುದಿಲ್ಲ. ಅಸ್ಸೀರಿಯಕ್ಕಿಂತಲೂ ಪೂರ್ವದ ಸುಮೇರಿನ ಯುಗದ ತೈಮತ್ ನಾಗಿ (dragon) ಹೆಸರು ಅಥರ್ವವೇದದಲ್ಲಿ ಬಂದಿದೆ. ಕಪ್ಪಿಹಂತಕನಾದ (ತೈಮತ್ ಪುತ್ರನೆಂಬ) ಎಂಕಿ (=ಈ) ದೇವನು, ಋಗ್‌ವೇದದ ಪಿತೃಹಂತಕ ಇಂದ್ರನನ್ನು ಹೋಲುತ್ತಾನೆ! ವಿರೋಚನನು ಕಲಿಯ ಬಂದಿದ್ದನೆಂಬ ಅಕ್ಷಿ-ಪುರುಷಯೋಗದ ಅನುಭಾವ ಮಾರ್ಗವು, ಮೊದಲ ಹಂತದಲ್ಲಿ (ಕಣ್ಣು>ಗಣ್ಣು ಏಕಾತ್ಮಕವಾಗುವ ರೂಢಿ) ಅಲ್ಲಿ ಇದ್ದೇ ಇತ್ತು. ಉಪನಿಷತ್ತಿನಲ್ಲಿ ಇದು ಸಾಂಕೇತಿಕ ಸಂಸ್ಕಾರದ ಮಟ್ಟಕ್ಕೆ ಬಂದಿತ್ತು. ಲಕ್ಷಣಾರ್ಥದಲ್ಲಿ ಆಚರಿಸಲ್ಪಡುತ್ತಿತ್ತು. ಈ ನಾಲ್ಕೂ ಸಂಗತಿಗಳಲ್ಲಿರುವ ಅಂತಃಸೂತ್ರ ಒಂದೇ ಆಗಿದೆ.

ಭಾರತೀಯ ತತ್ತ್ವಜ್ಞಾನದ ಇತಿಹಾಸದಲ್ಲಿ ಡಾ. ಸುರೇಂದ್ರನಾಥ ದಾಸಗುಪ್ತರೂ ಈ ಘಟನೆಯಲ್ಲಿ ಐತಿಹಾಸಿಕ ಸತ್ಯಾಂಶವಿರಬೇಕೆಂದು ಅಭಿಪ್ರಾಯಪಡಲು ಕಾರಣ ತಿಳಿಸಿದ್ದಾರೆ. ಅಸುರ ಎಂಬ ಜನದ್ದೆಂದು ಹೇಳಿರುವ ಉತ್ತರ ಕ್ರಿಯೆಯ ವೈಶಿಷ್ಟ್ಯವು ಅಸ್ಸೀರಿಯದಲ್ಲಿ ಇತ್ತು. ಸತ್ತವನು ಬಡವನಿದ್ದಲ್ಲಿ ಭಿಕ್ಷೆಬೇಡಿಯಾದರೂ ತಂದು ವಸ್ತ್ರಾಲಂಕಾರಯುಕ್ತರನ್ನಾಗಿ ಅವರನ್ನು ಹುಗಿಯಲಾಗುತ್ತಿತ್ತು. ಇದು ತರ್ಕವಲ್ಲ. ಐತಿಹಾಸಿಕ ಸತ್ಯವೆಂದು ಅರ್ವಾಚೀನ ಉತ್ಖನನದಲ್ಲಿ ಸಿದ್ಧವಾಗಿದೆ; ಊರ್ (ಪುರದ) ರಾಜರ ರುದ್ರಭೂಮಿಯಲ್ಲಿ ಪುರಾತನ ವೀರರ ಬಂಗಾರದ ಕಿರೀಟ ಸಿಕ್ಕಿದೆ. ಇದರೊಡನೆ ವೃಷಭನ ಸುಂದರ ಪ್ರತಿಮೆಯೂ ಸಿಕ್ಕಿದೆ. ಕ್ರಿ. ಪೂ. ೨೨೫೦. ಇನನ್ನಳ ಅಕ್ಷ-ಪುರುಷಯೋಗದ ಆಚರಣೆಯ ಸಹ-ಯಜ್ಞದ ಒಂದು ಪ್ರಕಾರವು, ಈಗಾಗಲೇ ಬೆಳಕಿಗೆ ಬಂದಿದೆ, ಅಲ್ಲಿಯ ಲೇಖನಗಳಿಂದಲೇ ಶೃಂಗಪುರುಷ : ಆದಿಮರ್ತ್ಯ=ಎಂಕಿಡುಪ್ರತಿಮೆ ಸುಮೇರ ಹಾಗೂ ಸಿಂಧೂತೀರದ್ದು ೧೦೦೮ ಸಾಮ್ಯ! ಸುಮೇರಿನ ಪ್ರತಿಮೆ ಕ್ರಿ. ಪೂ. ೪೦೦೦ ವರುಷದ್ದು! ಸಿಂಧೂತೀರದ ಪ್ರತಿಮೆ ಕಾಲ ತಿಳಿಯದು.

ಚಿತ್ರ ನಂ. ೧೩

ಲೆತ್ತ (ನೆತ್ತ ನೇತ್ರ) : ಅಕ್ಷ-ದ್ಯೂತ

ಋಗ್ವೇದದಲ್ಲಿ ಅಕ್ಷದ್ಯೂತದ ಸುಂದರ ಭಾವಗೀತವಿದೆ! ಧಾರ್ಮಿಕ ಆಚಾರಾಂಗಕ್ಕೆ ಸಂಬಂಧಿಸಿದ ಈ ಕ್ರೀಡೆಗೆ, 'ಯಜ್ಞವಿಧಾನಕ್ಕೆ ಮೀಸಲಾದ ಈ ಸಂಹಿತೆಯಲ್ಲಿ ಸ್ಥಾನದೊರೆಯಲು ಕಾರಣವು ತಿಳಿಯದು!' ಎಂದು ವಿಚಾರಕ್ಕೆ ಒಳಗಾದ ಸಂಶೋಧಕರು ಇದ್ದಾರೆ. ನಿನ್ನೆ-ಇಂದುಗಳ ಸಂದರ್ಭದಲ್ಲಿ ಸುಮೇರು-ಅಸ್ಸೀರಿಯ ಮತ್ತು ಭಾರತದ ಜೀವನ: ಸಂಸ್ಕೃತಿಯ ಪ್ರವಾಹವನ್ನು ಸಮೀಕ್ಷಿಸಿದರೆ ಇದರ ಉತ್ತರ, ಅಲ್ಲಿಯೆ ಇದ್ದುದನ್ನು ಕಾಣಬಹುದು. ಛಾಂದೋಗ್ಯದ ವಿರೋಚನನು 'ಅಸುರಾಣಾಂ' ದೇಶದಿಂದ ಅಂದು ಭಾರತಕ್ಕೆ ಬಂದದ್ದು 'ಅಕ್ಷಿ-ಅಕ್ಷ' ಜ್ಞಾನದ ಸಲುವಾಗಿಯೆ, ಛಾಂದೋಗ್ಯಕಾರನು, ಈ 'ಅಕ್ಷ' ವಿದ್ಯೆಯ ಅಸ್ಸೀರಿಯದವರಿಗಿಂತ ಬೇರೆ ಆಕಾರಕ್ಕೆ ತಿರುಗಿದ್ದನ್ನು ಬಹಿರಂಗಪಡಿಸಲು ಅದನ್ನು ರಚಿಸಿದ್ದಾನೆ. ಈಶೋಪನಿಷತ್ತಿನ ಅಸುರ್ಯಾನಾಮ ತೇ ಲೋಕಾಃ ಈ ಉಲ್ಲೇಖವು ಕಣ್ಣಿಗೆ ಸಂಬಂಧಿಸಿದ್ದೇ ಇದೆ. ಅಸ್ಸೀರಿಯರು ಅಂಧೇನ ತಮಸಾ ವ್ರತಾಃ ಆಗಿದ್ದಾರೆ. ಅವರು ಕಣ್ಣಿಲ್ಲದವರು! ಏಕೆಂದರೆ, ಅವರು 'ತಮಃ ಆಸೀತ್ ತಮಸಾ ಗೂಳ್ಹಂ' ಸ್ವರೂಪದ ಈ ಜೀವನದಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ! ಭಾರತೀಯರಾದ ನಾವು ಬಾಳನ್ನು ಕತ್ತಲೆಯೆಂದು ಬಗೆದು, ತುರಿಯೇಣ ಬ್ರಹ್ಮಣಾ ಗೂಳ್ಹಂ ಸೂರ್ಯಂ ಪಡೆದವರು ಭೌತ ದಿಕ್ಕಾಲ ಪರಿಸರದ ಆಚೆಯ ದಿವ್ಯ ಶಾಶ್ವತಪ್ರಕಾಶದ ವಿಶ್ವಚಕ್ಷುವಿನ ಆ-ನಂದ ಬ್ರಹ್ಮಲೋಕದಲ್ಲಿ ವಿಹರಿಸುವವರು ತಾವು, ಎಂಬುದು ವೇದೋಪನಿಷತ್ತಿನ ಚಾಕ್ಷುಷೀಯೋಗ ಸಂಪ್ರದಾಯಿಯ ಶ್ರದ್ಧೆ. ಆದುದರಿಂದ, ಋಗ್ವೇದದಲ್ಲಿ ಅಕ್ಷದ್ಯೂತಕ್ಕೆ ಸ್ಥಾನವನ್ನಿತ್ತಿರುವ ಉದ್ದೇಶವು ಇಲ್ಲಿ ಗಮನಕ್ಕೆ ಬರಬಲ್ಲುದು. ಮೇಲ್-ಮಟ್ಟದ ಅಕ್ಷ-ಪುರುಷ ಯೋಗದಲ್ಲಿ ಆಸ್ಥೆಯಿಲ್ಲದ ಪಾಮರರು ಅಕ್ಷ-ದ್ಯೂತ-ರತರಾಗುತ್ತಾರೆಂದು ಸೂಚಿಸುವ ಉದ್ದೇಶವು ಇಲ್ಲಿ ಕಾಣುತ್ತಿದೆ. ಈ ಅಕ್ಷದ ಆಕರ್ಷಣವು ಜೀವನದಲ್ಲಿ ಆಸಕ್ತಿ ನಿರ್ಮಿಸುವಂತೆ ವಿನಾಶ=ಮೃತ್ಯುವಿಗೆ ಆಮಂತ್ರಣವೂ ಸರಿ. ಪರಸ್ಪರ ವಿರೋಧೀ ಗುಣದ ಈ ಆಟವನ್ನು ಕಪೋತದಂತೆ ತೋರಗಾಣಿಕೆಯಲ್ಲಿ ನಿಂದಿಸಿ ಅದನ್ನು ಯಕ್ಷ ರಾತ್ರೀ ಪರ್ವದ ಸನಾತನ ರೂಢಿಯಾಗುವಂತೆ ಸಮಯಾಚಾರ ನಿರ್ಮಿಸಿರುವ ಈ ಮಾಯಾ-ತಂತ್ರವು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ.

ಸಿಂಧೂತೀರದಲ್ಲಿ ದೊರೆತ ಲೆತ್ತ ೧.೨ ಅಥವಾ ೧.೫ ಅಳತೆಯ ಘನ ಆಕೃತಿ. ಇವು ಕುಂಬಾರನು ಮಾಡಿದುವು. ೧ ವ್ಯಾಸದ ತೂತು (ಕಣ್ಣು) ಉಳ್ಳವು. ೧-೨; ೩-೪; ಮತ್ತು ೫-೬ ಈ ಸಂಖ್ಯೆಯಲ್ಲಿ ಎದುರು ಬದುರು ಬರುತ್ತವೆ. ಯುರೋಪೀಯ dice ಇದೂ ಈ ಆಕೃತಿಯದೇ; ೧-೬ ವರೆಗಿನ ಸಂಖ್ಯೆಯ ಎರಡು ಲೆತ್ತಗಳಿಂದ ಆಡುವಾಗ ಬೇರೀಜು ೭ ಸಪ್ತ ಆಗಬೇಕು. ಈ ಸಪ್ತ ಸರ್ಪದ ಸಂಕೇತವಿರುವ ಶಕ್ಯತೆಯಿದೆ. ಈ ಆಟದಲ್ಲಿ ದಾಯ ಎಂಬ ಸಂಕೇತ, ಬೀಳುವ ಆಟಕ್ಕೆ ದಾನ ಎನ್ನುವುದು ಸಕಾರಣವಿದೆ. ಇಂಗ್ಲಿಷಿನ 'Die'ದಲ್ಲಿರುವ ಮೂಲಾರ್ಥ ಛಾಯೆಗಳು ಉಭಯವಿಧವಾಗಿವೆ. ಕೊಡು-ಸಾಯು ಇಲ್ಲಿ ಲೈಂಗಿಕ ದಾಯ-ದಾನದ ಪರಿಣಾಮದ ಸೂಚನೆಯಿರುವ ಶಕ್ಯತೆಯಿದೆ. ಈ ದಾಯ ಬೇಡಿ, ಸೋತ ಪಾಂಡವರ ಪತ್ನಿಗೆ ತೊಡೆಯ ಮೇಲೆ ಕುಳ್ಳಿರಲು ಆಮಂತ್ರಿಸಿದ್ದು, ಭೀಮನು ಈ ತೊಡೆಯನ್ನೇ ಭೇದಿಸಿದ್ದು ಈ ಸಾಂಕೇತಿಕತೆ ಇದಕ್ಕೆ ಪ್ರಮಾಣ.

ಮೂಲ ಪ್ರಬಂಧ ಬರೆವಾಗ, ಲೆತ್ತದ ಸಿಂಧೂತೀರದ ಆಕೃತಿ ಗೊತ್ತಿರಲಿಲ್ಲ. ಲೆತ್ತವೆಂದು ಸುಮಾರು ೩ ಹಸ್ತಿದಂತದ ಗಣ್ಣಿನ ಆಟ ಮಾತ್ರ ಗೊತ್ತಿತ್ತು ! ಸಿಂಧೂಸಂಸ್ಕೃತಿಯಲ್ಲಿ ಎಲುವಿನ ಇಂಥ ಗಣ್ಣುಗಳ ಮೂಲಕವೂ ಈ ಆಟವಾಡುವ ರೂಢಿಯಿತ್ತು ಗಣ್ಣಿನ ಆಕೃತಿಗೆ, ಸಂಸ್ಕೃತ ಅಕ್ಷ (: axle) ಹೆಸರು ಉಚಿತವೇ ಸರಿ. ಆದರೆ, ಸಂಸ್ಕೃತದಲ್ಲಿ ಅಕ್ಷ ಸಂಕೇತಕ್ಕೆ ಕಣ್ಣು, ಸರ್ಪ, ಜ್ಞಾನ ಈ ಅರ್ಥಗಳೂ ಬಂದ ಹಿನ್ನೆಲೆ ಯಾವುದು, ಎಂಬ ಪ್ರಶ್ನೆ ತುಂಬ ಕಾಡಿತು! ಭಾಷಿಕ ಆಕೃತಿ ಮತ್ತು ಸಾಂಸ್ಕೃತಿಕ ಆಕೃತಿಗಳಲ್ಲಿ ಅಂತರವು ಭಿನ್ನತೆ ಕಾಣುವಲ್ಲಿ ಎರಡು ಭಿನ್ನಭಾಷಿಕ ಜನಗಣದ ಸಮ್ಮಿಶ್ರಣವಾಗಿದೆ ಎಂದು ನಿಃಸಂದೇಹವಾಗಿ ಹೇಳಬಹುದು. ಮಾರುಕಟ್ಟೆ (market), ಅಚ್ಚ ಕಂನುಡಿ, ಬಾಹ್ಯವಲಯ. ಆದರೆ ಅರ್ಥರೂಪ ಅಂತರ್‌ವಲಯ ಸಾಂಸ್ಕೃತಿಕ ಆಕೃತಿ ಇಂಗ್ಲಿಷಿನದು! ಆದಕಾರಣ ಅಕ್ಷದ್ಯೂತ (ಕಣ್ಣು>ಗಣ್ಣು) ಈ ಅರ್ಥವು ವೇದಕಾಲೀನ ಎರಡು ಭಿನ್ನಭಾಷಿಕ ಗಣದ ಸಂಗಮಸೂಚಕ ಶಬ್ದ-ಪ್ರತಿಮೆಯಾಗುತ್ತದೆ. ಈ ಲೆತ್ತ-ಅಕ್ಷಕ್ರೀಡೆ ಸೈಂಧವ ಸಂಸ್ಕೃತಿಯಿಂದ ಇಂದಿನತನಕವೂ ಸನಾತನವಾಗಿ ಉಳಿದು ಬಂದಿದೆ. ಅಕ್ಷ-ಲೆತ್ತ ಎರಡೂ ಹಿಂದೆ ಬಿದ್ದು 'ಕವಡೆ' ಆ ಸ್ಥಳದಲ್ಲಿ ಬಂತು! ಆದರೂ 'ಸನಾತನತ್ವ'ಕ್ಕೆ ಚ್ಯುತಿ ಬರಗೊಟ್ಟಿಲ್ಲ ನಮ್ಮ ಪುರಾತನರು ! ಕಪರ್ದ-ಕವಡೆ ! ಕಪರ್ದ= (ಬಾಚದೆ ಇರುವ) ಕೂದಲು! ಕವಡೆ, ಶಂಖ, ಶಿಂಪುಗಳ ವರ್ಗದ್ದು! ಜಲಕ್ಕೆ ಸಂಬಂಧಿಸಿದ್ದು ಸರಿ. ಆದರೆ ಈ ಕೂದಲು ಕಪರ್ದ-ಕವಡೆ ಏನು ಸಂಬಂಧ? ಈ ಕಪರ್ದ ಯೋಗಿ-ಯೋಗಿನೀ ವರ್ಗಕ್ಕೆ (ಅಕ್ಷಕ್ಕೆ) ಸಂಬಂಧಪಟ್ಟದ್ದು

ತಾನೆ? ಉತ್ತಾನ ಕವಡೆಯೊಳಗಿನ ರೇಖೆ ಕಣ್ಣಿನ ಸಂಕೇತವಾಗುತ್ತದೆ. ಇದರ ಬಗೆಗಿನ ಹೆಚ್ಚಿನ ಪ್ರಮಾಣಕ್ಕಾಗಿ ಈ ಸಂಹಿತೆಯ ಚಂದ್ರ (O) ಮಂಡಲದ ಸೂಕ್ತಗಳಲ್ಲಿ ಬರುವ ಪವಿತ್ರದ ಆಕೃತಿಯನ್ನು ಗ್ರಹಿಸಿಕೊಳ್ಳಲು ಶಕ್ಯವೊ ನೋಡಿ-ಮಾತಿನ ಮೋಡಿಯನ್ನು ಬದಿಗೆ ಸರಿಸಿ.

ಚಿತ್ರ ನಂ. ೧೪

ಮುಕ್ಕಣ್ಣ : ಯೋಗಿವರೇಣ್ಯ

ಋಗ್ವೇದ ಸಂಹಿತೆಗಿಂತಲೂ, ಸಿಂಧೂತೀರದ ಪುರಸಂಸ್ಕೃತಿ ನಿಶ್ಚಿತವಾಗಿ ಪ್ರಾಚೀನ. ಇದನ್ನು ಒಂದಕ್ಕಿಂತ ಹೆಚ್ಚು ಬಗೆಗಳಿಂದ ದೃಢಪಡಿಸುತ್ತಿರುವ ಪ್ರಮಾಣಗಳಲ್ಲಿ, ಅಲ್ಲಿ ದೊರೆತ, ಧ್ಯಾನಮಗ್ನ ಯೋಗಿವರೇಣ್ಯನ ಪ್ರತಿಮೆಯು, ಸಾಂಕೇತಿಕ ಸತ್ಯದ ಒಂದು ಮಾದರಿ. ಇದುವೆ ವಾಸ್ತವ ಸ್ವರೂಪದ ಸತ್ಯ. ಆದರೆ, ಏಕಂ : ಸತ್ ದಂತೆ, ಇದು ಏಕಾಕಿ ಪವಾಡ ಸತ್ಯವಲ್ಲ. ಅಥವಾ ಪಾಶ್ಚಾತ್ಯ Truth ಈ ಶಬ್ದಪ್ರತಿಮೆ ಒಳಗೊಳ್ಳುವ ಒಪ್ಪಂದದ (: social contract or compromise) ಆಕೃತಿಯ ಸತ್ಯವೂ ಅಲ್ಲ. ಇದು ಋತ ಸ್ವರೂಪೀ ಸತ್ಯ. ಎಂದರೆ, ಇದು ವಾಸ್ತವ ಸತ್ಯ : ಸಂ-ಗತಿಯಾಗಿದ್ದಲ್ಲಿ, ಈ ಸಾಂಕೇತಿಕ ಘಟನೆಯು; ಅಂದಿನ ಜೀವನ ಸಮಯದ ಚಿತ್ರದ ಒಂದು ಅಂಗವಾಗಿರಲಿಕ್ಕೆ ಬೇಕು. ಇದರ ಪೋಷಕ ಪೂರಕ ಅರ್ಥದ ಇನ್ನೂ ಕೆಲವು ಸಮಸಾಮಯಿಕ ಸಂಗತಿಗಳ ದೊರೆಯುತ್ತಿರಬೇಕು. ಇದೆ ಬಗೆಯ ಪಶುಪತಿ : ಮಹಾಯೋಗಿಯ ಪ್ರತಿಮೆ ಇಲ್ಲಿ ದೊರೆತಿದೆ. ಇಲ್ಲಿ ಬೆಳಕಿಗೆ ಬಂದ ಅಶ್ವ-ತ್ಥ ಅಥವಾ ಪಿಪ್ಪಲ ಎಂಬ ವೃಕ್ಷವಂತೂ ಏಕಂ ಸತ್ ಪಂಥೀಯ ವಾಗರ್ಥಾವಿವ ಸಂಪೃಕ್ತ ಏಕಾತ್ಮಕ ಎರಡು ಜೀವಗಳ (Unity in duality) ಮೂರ್ತಿ ಮಂತ ಚಿತ್ರವೇ ಆಗಿದೆ!

ಈ ಯೋಗಿವರ್ಯನು, ಭಗವದ್ಗೀತೆಯ 'ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ' ಈ ಉಕ್ತಿಯ ಅನುಸ್ಥಾನದಲ್ಲಿ ಇರುವುದನ್ನು ನೋಡುವಾಗ, ಸೈಂಧವ ಸಂಸ್ಕೃತಿಯ ಜೀವನ ಆದರ್ಶ : ಜೀವನ ರೀತಿಯನ್ನು ಶ್ರೀ ಭಗವದ್ಗೀತೆಯು ವಿವರಿಸಿದೆ ಎಂದು ಹೇಳಬೇಕಾಗುತ್ತದೆ. ಇಷ್ಟೇ ಅಲ್ಲ, ಋಗ್ವೇದ ಸಂಹಿತೆಯ ಆಶಯವೂ ಇದಕ್ಕಿಂತ ಬೇರೆಯಿಲ್ಲ ಎಂಬುದು ಬಯಲಿಗೆ ಬರುತ್ತಿದೆ. ಆದರೆ, ಬ್ರಾಹ್ಮನಿರ್ಘುಂದ ಪೂರ್ವಗ್ರಹದಿಂದಾಗಿ ಮ್ಯಾಕಡೊನೆಲ್ಲ ಪ್ರಭೃತಿಗಳಿಗೆ ಇದು ಕಾಣಲಿಲ್ಲ! ನಾಸಿಕಾಗ್ರ ದೃಷ್ಟಿ ಅಥವಾ ಭ್ರೂಮಧ್ಯ ದೃಷ್ಟಿಯ ಸಾಧನೆ ಯಾತಕ್ಕಾಗಿ? ಹೊರಗಿನ ಜಗತ್ತಿನೊಡನೆ ಇರುವ ಸಂಬಂಧವನ್ನು ಕಡಿದುಕೊಳ್ಳುವ ಒಂದು ಸಾಧನ ಇದು. ಮೂಗಿನ ತುದಿಯಲ್ಲೇ ನೆಟ್ಟ ದೃಷ್ಟಿಯವನಾಗಿ ಪ್ರಪಂಚ ಒಂದು ಮಾಯಾ ಕೋಲಾಹಲ ಎಂಬ ನೆನಹಿನಲ್ಲಿ ಮೈಮರೆಯುವುದು, ಅನಾಹತ ನಾದಾನುಸಂಧಾನಿಯಾಗುವುದು : ನಚಿಕೇತ ಸಿದ್ಧಿಗಾಗಿ. ಬಳಿಕ ಏನು? ಇದರ ಉತ್ತರ ಈ ಸಂಹಿತೆಯಲ್ಲಿದೆ. ನಚಿಕೇತರಾಗಿ ಅತ್ರಿ ಸಿದ್ಧಿ ಪಡೆದು (=ಪ್ರಪಂಚದ ಹೋಳೀ ಮಾಡಿ=ಭಸ್ಮಧರಿಸಿ), ನಿದ್ರಾ ಸ್ವಪ್ನ ಸುಷುಪ್ತಿ ಆಚೆಗಿನ ನಾಲ್ಕನೆಯ=ತುರೀಯೇಣ ಬ್ರಹ್ಮಣಾ ಗೂಳ್ಹಂ ಸೂರ್ಯ ಪಡೆಯುವುದು.

ಸಿಂಧೂತೀರದ ಪುರಾತನ ಮುನಿವರೇಣ್ಯನು, ಮುಕ್ಕಣ್ಣನಾಗುವ ಬಾಳಗುರಿಯವನಾಗಿದ್ದಾನೆ. ಈ ಪ್ರತಿಮೆಯ ಹಣೆಯ ಮೇಲಣ ಕಣ್ಣಿನ (O) ಆಕೃತಿಯ ಸಂಕೇತ ಇದಕ್ಕೆ ಪ್ರಮಾಣ. ಮೂರನೆಯ ದಿವ್ಯಕಣ್ಣಿನ ಸಿದ್ಧಿಯು ಪ್ರಾಪ್ತವಾಗಲು, ಹುಟ್ಟಿನೊಡನೆ ಬಂದ ಎರಡೂ ಕಣ್ಣುಗಳನ್ನು ಮುಚ್ಚಿಕೊಳ್ಳುವ ನಾನಾ ಮಾರ್ಗಗಳುಂಟು. ಈ ವಿಚಾರವು ಇಲ್ಲಿ ಅಪ್ರಸ್ತುತ. ಸೈಂಧವಸಂಸ್ಕೃತಿಯಲ್ಲಿ ಶಿಷ್ಟಮಾನ್ಯವಾಗಿದ್ದ ಮೂರನೆಯ ಕಣ್ಣಿನ ಈ ವಿಚಾರವು, ಸುಮೇರು-ಅಸ್ಸೀರಿಯದಲ್ಲಿ ಬೇರು ಹಿಡಿದು ಬೆಳೆದಂತೆ ಕಾಣುವುದಿಲ್ಲ. ಅನೈಸರ್ಗಿಕ ಮಾರ್ಗ ಎಂದು ಅವರು ಇದನ್ನು ತುಚ್ಛೀಕರಿಸಿರಲಿಕ್ಕೂ ಸಾಕು. ಅಸುರ ಜನದ ವಿರೋಚನನನ್ನು ಕೀಳ್ಗಳೆದ ಛಾಂದೋಗ್ಯದ ಉಲ್ಲೇಖ ವಿಚಾರಾರ್ಹವಿದೆ. ವಿರೋಚನನ ಸಂಗಡವೇ ಬಂದು, ಚಾಕ್ಷುಷೀ ಪುರುಷ ಸಾಕ್ಷಾತ್ಕಾರ ಪಡೆದ ಹಾಗೆ ಚಿತ್ರಿತ ಒಬ್ಬ ಇಂದ್ರನುಂಟು. ಇದು ಋಕ್ ಸಂಹಿತೆಯ ಚಂದ್ರ ಮಂಡಲದಲ್ಲಿ ಸಂಸ್ತುತ ಇಂದ್ರನ ಪಾತ್ರವೇ ಆಗಿರಲಿಕ್ಕೆ ಸಾಕು. ಮೂರನೆಯ ಕಣ್ಣಿನ ಸಿದ್ಧಿಯ ಆಕರ್ಷಣ ಕೇವಲ ಭಾರತೀಯ ದಿವ್ಯಜ್ಞಾನಿಗಳ ವೈಶಿಷ್ಟ್ಯವೆಂದರೆ ನಂಬಲು ಅಶಕ್ಯವಾದ ಮಾತು. ಅರ್ಥವು ಸಾಮಾಜಿಕ ಜೀವನ ಸಂದರ್ಭದಲ್ಲಿಯೇ ಪ್ರತೀತಿಗೆ ಬರಬಲ್ಲುದು. ದಿಕ್ಕಾಲ-ಪರಿಸರದಲ್ಲಿ ಪ್ರತೀತಿಗೆ ಬಂದಿದ್ದ ಅರ್ಥವು ಮೂರ್ತ=ಸತ್ಯ ರೂಪದಲ್ಲಿ ಒಂದಕ್ಕಿಂತ ಹೆಚ್ಚು ಕಡೆಗೆ ಇಲ್ಲದ್ದು ಅದು ಅರ್ಥ=meaning ಎನಿಸಲಾರದು. ಈ ಕಾರಣದಿಂದ ಗ್ರೀಸಿನ ಸೈಕ್ಲೋಪಸ್ ಏಕಾಕ್ಷ ಪುರುಷನ ಸಾಂಕೇತಿಕತೆಯಲ್ಲಿ, ಅಕ್ಷಿಣಿ ಪುರುಷಯೋಗ ಸಾಧನೆಯ ಪ್ರತಿಬಿಂಬವೇ ಇರಬೇಕೆಂದು ಎನಿಸಿ ಬರೆದದ್ದಾಯ್ತು ಅಂದು ಸಿಂಧೂತೀರದ ಮುನಿಯ ಪ್ರತಿಮೆಯ ಹಣೆಯ ಮೇಲಣ ಕಣ್ಣಿನ ಸಂಕೇತ ನೋಡಲು

ಸಿಕ್ಕಿರಲಿಲ್ಲ. ಋಗ್‌ವೇದದ ಉಲ್ಲೇಖದ ಮೇಲೆಯೇ ಅವಲಂಬಿಸಿ ಗ್ರಹಿಸಿಕೊಂಡ ಅರ್ಥದ ಬಲದಿಂದ ಮಾಡಿದ ಗ್ರೀಸಿನ ಸೆಕ್ಲೊಪಸನ ಅರ್ಥದ ಪ್ರಯತ್ನವು ಸಾಹಸ ಎಂದು ನಾನೇ ಅಳುಕಿದ್ದೇನೆ.

ಆದರೆ, ಮೂರನೆಯ ಕಣ್ಣಿನ ವಿಚಾರವು ಇಜಿಪ್ತಿನಲ್ಲಿಯೂ ಇರಲೇಬೇಕೆಂದು ಡಾ. ಅಂಥೆಸ್ ಕೊನೆಯಲ್ಲಿ ನಿರ್ಣಯಕ್ಕೆ ಬಂದದ್ದು ಓದಲು ದೊರೆತಾಗ, ಇಲ್ಲಿ ಅನುಸರಿಸಿರುವ ಅರ್ಥಗ್ರಹಣ ಪದ್ಧತಿಯ ಬಗೆಗಿನ ವಿಶ್ವಾಸ ಇಮ್ಮಡಿಸಿತು. ಇಜಿಪ್ತಿನ ಸರ್ಪಾಕ್ಷ-ಸೂರ್ಯ ಅಥವಾ ಸೂರ್ಯಾಕ್ಷ ಸರ್ಪ ಈ ಸಾಂಕೇತಿಕತೆಯನ್ನು ಗ್ರಹಿಸಿಕೊಳ್ಳುವ ಪ್ರಯತ್ನಗಳನ್ನು ವಿವರಿಸುವಾಗ ಬರೆದುದು ಹೀಗೆ :

> The idea of the Eye came into existence as the Eye of Horus. This was a third eye in addition to the natural pair of either falcon or king

ಇಜಿಪ್ತಿನ ರಾಜನ್=ಚಕ್ರವರ್ತಿನ್ ಹೊರಸನ ತೃತೀಯ ಅಕ್ಷ ಎಂಬರ್ಥದಿಂದ ಮೂರನೆಯ ಕಣ್ಣಿ ವಿಚಾರವು ರೂಢಿಗೆ ಬಂದಿತೆಂಬ ಈ ವಿವರಣೆಯಲ್ಲಿ ಅಂಥೆಸ್ ಹೇಳಿದ್ದು ಈ ಕಣ್ಣು ಮೂಲತಃ (basically) ಮಿಡಿನಾಗನೇ identical with the Uraeus viper ಎಂದು!

ಪಾಪ! ಡಾ. ಅಂಥೆಸ್, ಡಾ. ಡೊನಾಲ್ಡ್ ಮ್ಯಾಕೆಂಝಿಯಂತೆ ಸಾಂಕೇತಿಕ ಮಟ್ಟದ ಅರ್ಥ (: ಸತ್ಯ) ಗ್ರಹಣದ ರೀತಿಯನ್ನು ಅನುಸರಿಸಿದ್ದರೆ! ಮಿಡಿನಾಗರೂಪದ ಈ ತೃತೀಯ ಅಕ್ಷ (: ಬಾಲ) ಹೊರಸ್ ಕುಮಾರ ಭೂಪತಿ ಹಣೆಗಣ್ಣು ಅಂತರಿಕ್ಷಸ್ಥ ಮೂಲ (ಆದಿ) ಸರ್ಪದ-ಎಂದರೆ ಚಂದ್ರನ ಸಾಂಕೇತಿಕ ಪ್ರತಿಮೆ ಎಂದು ಹೊಳೆಯದೆ ಇರುತ್ತಿದ್ದಿಲ್ಲ. ಅಂಥೆಸ್ ಇದನ್ನು Both the Uraeus and Eye appear to have originated in the idea of that divine zet-Serpant. ಎಂದು ಬೇರೆ ಶಬ್ದಗಳಿಂದ ಹೇಳಿದ್ದು. ಇದರ ಗರ್ಭಿತಾರ್ಥದಲ್ಲಿ ಚಂದ್ರನೇ ಅಡಗಿರುವುದು ಕಂಡಿಲ್ಲ! ಈ ದಿವ್ಯ ಘಟ ಸರ್ಪವು embodiment of gods, and simultaneously, a form of the primeval and serpent....' ಎಂದು ವಿವರಿಸುವಲ್ಲಿ ಇದು ಏನೆಲ್ಲ ದೈವತ (ಶಕ್ತಿ)ಗಳನ್ನು ಒಳಗೊಳ್ಳುವ ಏಕಂ : ಸತ್ ರೂಪೀ ಆದಿ ಮಹಾಶೇಷನೇ ಎಂದು ಪ್ರಚ್ಛನ್ನ ಚಂದ್ರನನ್ನು ಕುರಿತ ಈ ಸಂಹಿತೆಯು ಮಾಡಿರುವ ಪರ್ಯಾಯಸ್ತೋತ್ರವೇ ಆಗಿದೆ! ದಿವ್ಯ ಆಕರ್ಷಣದ ಮೂರನೆಯ ಕಣ್ಣು ಮತ್ತು ಕಂ = ಹಿರಣ್ಯ ಗರ್ಭದೈವತ ಶಕ್ತಿಕೇಂದ್ರ ಇವು ಬೇರೆ ಅಲ್ಲ. ಇಜಿಪ್ತಿನಲ್ಲೂ 'ಕ' ದೈವತವಿತ್ತು, ಇಸ್ರಾಯಲಿಗಳ ಕಬ್ಬಾಲಿಝಂ ಅರಬರ ಕಾ ಅಬ್ಬಾ ಭಕ್ತಿ ಸಂಪ್ರದಾಯ ಇವು ಮೂರನೆಯ ಕಣ್ಣಿನ : ಚಂದ್ರ ಅರ್ಚನೆಯ ಸಂಪ್ರದಾಯಗಳೇ.

ಇಕೊ, ನೋಡಿ! ಸೈಂಧವ ಸಂಸ್ಕೃತಿಯ ಪುರಾತನ ಮುನಿಯ ಹಣೆಯ ಮೇಲಣ ಸಂಕೇತವು, ಚಂದ್ರ (O) ಬಿಂಬ ಸೂಚಕವೇ ಇದೆ! ಎಂದರೆ, ಈ ಮುನಿ ನಾಗ-ಸಂಪ್ರದಾಯದವನೇ ಇರಬೇಕಾಯ್ತು! ಹಣೆಯ 'ಕಣ್ಣು'ಅಲ್ಲದೆ ಇವನ ಶಾಲಿನ ಮೇಲಿನ ತ್ರಿ-ಪರ್ಣದ ಸಂಕೇತಗಳಿಂದ ಇವನು ಮುಕ್ಕಣ್ಣ=ಚಕ್ರ-ನೇಮಿ ಅಥವಾ ಅಕ್ಷ-ಪುರುಷ ಯೋಗಸಿದ್ಧಿಯ ಬಾಳಗುರಿಯ ಧ್ಯಾನಯೋಗಿ ಎಂಬುದು ದೃಢಪಡುತ್ತಿದೆ. ಈ ತ್ರಿಪರ್ಣ ಸಂಕೇತವು, ಇಜಿಪ್ತಿನ ಹ್ಯಾಥೋರ=ಗೋವು (=ಅದಿತಿಃ ಗೌ) ಮೈಮೇಲಿದೆ. ದಿವ್ಯಜೀವನ ನೌಕಾ (=ಸೇತು=ತೀರ್ಥಿಕೆ) ರೂಪ ದೈವತ ಶಕ್ತಿಯ ಕೈಯಲ್ಲೂ ಇದೆ. ಸುಮೇರಿನ ನಾಗನ (dragon) ಮೈಮೇಲೆ ಈ ಸಂಕೇತವುಂಟು. ಆದಿವೀರ ಡುಮುಝೀ ಕೈಯಲ್ಲೂ ಇದೆ. ಈ ತ್ರಿಪರ್ಣ (= ತ್ರಿಚಕ್ರ= ತ್ರಿನೇತ್ರ) ಸಂಕೇತವು ಈಜಿಪ್ಟ್, ಭಾರತ ಮತ್ತು ಸುಮೇರಿನ ದಿವ್ಯಮಾರ್ಗಿಗಳ ಸಮಾನ ಸಂಕೇತವಾಯಿತು.

ಚಿತ್ರ ನಂ. ೧೫

ಅ) ಶೃಂಗಿವೃಷಭ ಬ) ಶೃಂಗತ್ರಯವುಳ್ಳದೇವತೆ ಕ) ಏಕಶೃಂಗಿ ಪುರುಷಪಶು

ಅ) ದಿವ್ಯಜಲಸೇಚಕ ವೃಷಭನ ಸ್ತೋತ್ರಸಂಗ್ರಹವೇ ಋಗ್ವೇದ! ಆದರೆ, ಈ ವೃಷಭನಿಗೂ ಮುಂಚೆ ಗೌ(ರಿ) ಅಮೃತಸ್ಯನಾಭಿಯ ಅದಿತಿಯೆಂದು ಪೂಜೆಗೊಳ್ಳುತ್ತಿದ್ದಳು. ಇದನ್ನು ಸಂಹಿತೆಯೇ ಸೂಚಿಸುತ್ತಿದೆ! ಈಜಿಪ್ಪಿನಲ್ಲೂ ಆದಿಮಾತೆ ಉಂಟು! ವೃಷಭಪೂಜೆ, ಆದಿಪುರುಷ ವಿಚಾರದೊಡನೆ ಬೆಸೆದುಕೊಂಡಿದೆ. ಸೃಷ್ಟಿಗೆ ಕಾರಣನಾದ ವೃಷಭ ಆದಿಶೇಷ. ಮತ್ತು ಏಕಾಕ್ಷ ಪುರುಷ ಒಂದೇ ಈ ದೇವನಿಗೆ ವೃಷಭ=ವರ್ಷಯಿತೃ ವರ್ಷಣಶೀಲ ದಿವ್ಯಶಕ್ತಿ, ವೃಷ್ಣಿ ಎಂಬ ಅನಂತ ನಾಮಾಂತರಗಳಿದ್ದರೂ ಇದು ಏಕಂ: ಸಂತ ಚಾಂದ್ರಶಕ್ತಿ.

ಭಾರತೀಯ ದೈವತ ಪ್ರತಿಮಾರಹಸ್ಯವನ್ನರಿಯುವಾಗ ತಳಪಾಯದಲ್ಲಿ ಚಂದ್ರ ಚಾಂದ್ರಭೂಮಿಕೆಯ ಸಂಕೇತಗಳು ಇರುವುದಾಗಿ ಖಾತ್ರಿ ಆಗುವ ವರೆಗೂ ತುಂಬ ಸುತ್ತಾಟ ಒದ್ದಾಟವಾಗುತ್ತದೆ. ಉದಾ : ಶೃಂಗಪೂಜೆಯ

ಹಿನ್ನೆಲೆಯನ್ನರಿಯಲಿಕ್ಕೂ ಒಂದು ಕಾಲಕ್ಕೆ ಜಾಗತಿಕ ಸ್ವರೂಪದ್ದಾಗಿ ಇದ್ದ ಆಪೋ ವಾ ಇದಂ ಅಗ್ರ ಆಸೀತ್ ಎಂಬ ಮೂಲಭೂತ ಶ್ರದ್ಧೆಯ ನೆರವು ಅವಶ್ಯ! ಶೃಂಗ ಕೋಡು ಮತ್ತು ಆಪ ರಸಕ್ಕೂ ಏನು ಸಂಬಂಧ? ಇಲ್ಲಿ ಸಂಭ್ರಮ ಹುಟ್ಟುತ್ತದೆ. ಆದರೆ ಈ ದೃಷ್ಟಿಕೋನವು ಅಪೇಕ್ಷಿಸುವ ಕಾರ್ಯಕಾರಣ ಸಂಬಂಧದ ರೀತಿಯೇ ಬೇರೆ. ಇದರಲ್ಲಿ ಭಾವುಕತೆ, ಬೌದ್ಧಿಕ ವಿಶ್ಲೇಷಣಕ್ಕಿಂತ ವಿಶೇಷವಿರುತ್ತದೆ. ಭಾವುಕ ದೃಷ್ಟಿಕೋನದಲ್ಲಿ ಸಾಹಚರ್ಯ (association) ಮೂಲಕವಾದ ಒಂದು ಬಗೆಯ ಕಾರ್ಯಕಾರಣ ಭಾವವು ಕಾಣಸಿಕೊಳ್ಳುತ್ತದೆ. ಒಂದು ಅಂಗದಿಂದ ಇಡೀ ಶರೀರವನ್ನು ಸೂಚಿಸುವ ರೀತಿಯು ಇಂಥ ಒಂದು ಮಾದರಿ.

ಚಂದ್ರಬಿಂಬವು ಶೃಂಗ ಅಥವಾ ಪಾತ್ರರೂಪದಲ್ಲಿ ಕಾಣಸಿಕೊಳ್ಳುತ್ತದೆ. ಪ್ರಾಚೀನರಿಂದ ಇದು ಪೂಜೆ ಪಡೆದದ್ದು, ಶುಕ್ಲಪಕ್ಷದ ವೃದ್ಧಿಂಗತ ಹಂತದಲ್ಲಿಯೇ. ಮೊದಲು ಹುಣ್ಣಿವೆಗಳ ಸಮಯಾಚಾರಗಳೇ ಪ್ರಚಾರದಲ್ಲಿದ್ದುವು. ಆದರೆ, ಕೊನೆಗೆ ಹುಣ್ಣಿಮೆಯ ತರುವಾಯದ ಪ್ರಲಯ, ಪೂರ್ಣ ಇಲ್ಲವಾಗುವ =ಅಮಾವಾಸ್ಯೆಯೇ ಜೀವನದ ಸ್ಥಾಯೀಭಾವ ಎಂಬ ಹಾಗಿನ ಶ್ರದ್ಧೆಯು, ಅಪರಸ ಪಂಥೀಯ ದೇವತಾ ಉಪಾಸಕರ ಜೀವನದ ಮೇಲೆ ತುಂಬ ವಿಚಿತ್ರ ಪರಿಣಾಮ ಮಾಡಿದ್ದು ಕಾಣುತ್ತದೆ. ಈಜಿಪ್ಟ್ ಸಂಸ್ಕೃತಿಯಲ್ಲಿ ಜನ ಕೊನೆಗೆ ಈ ಬಾಳಿನ ಗೋಳು ನೋಡಲಾರದೆ ಆತ್ಮದಹನವೇ ಲೇಸು ಎಂದು ಬಗೆದುದರ ಪುರಾವೆ ಅಲ್ಲಿಯ ಪುರಾತನ ಲೇಖನಗಳಲ್ಲಿಯೆ ದೊರೆತಿವೆ. ಈಜಿಪ್ಟ್ ಸುಮೇರ, ಅಸ್ಸೀರಿಯಗಳಂತೆ ಸೈಂಧವ ಸಂಸ್ಕೃತಿಯೂ ಆಪೋದೇವಿಯ ಆರಾಧನಾ ವೈಶಿಷ್ಟ್ಯದ ಸಮಯ ಆಚಾರ-ವಿಚಾರ ಉಳ್ಳದ್ದೇ ಆಗಿದ್ದಿತು. ಪ್ರಪಂಚವನ್ನು ಕಡೆಗಣಿಸಿ ನಾಸಿಕಾಗ್ರದ ದೃಷ್ಟಿಯ ಧ್ಯಾನಮಗ್ನಯೋಗಿಯ ಪ್ರತಿಮೆಯಿಂದ ಅರಿಕೆಗೆ ಬರುವ ಈ ಸಂಗತಿ ಶೃಂಗಾರಾಧನಾ ವೈಶಿಷ್ಟ್ಯದಿಂದಲೂ ದೃಢಪಡುತ್ತಿದೆ. ಆಪೋದೈವತದ ಉಪಾಸನೆ ಏಕಂ=ಸತ್ತಿನ ಶ್ರದ್ಧೆ ಪ್ರಳಯಕ್ಕೆ ಆಮಂತ್ರಣ. ಜಗತ್ತನ್ನು ಮರೆತು ತುರಿಯೇಣ ಬ್ರಹ್ಮಣಾ ದಿವ್ಯಜ್ಞಾನಸಿದ್ಧಿ=ತೃತೀಯ ಅಕ್ಷಸಿದ್ಧಿಯನ್ನು ಪಡೆವ ಆದರ್ಶವನ್ನು ಅನುಸರಿಸುವುದು ಅಮಾವಾಸ್ಯಾ ಸಂಪ್ರದಾಯ. ಸಹಯಜ್ಞದ ಸಂಭೂತಿಯ ಉಪಾಸನೆಯು, ಪ್ರಳಯದ ಒಂದು ಮಾರ್ಗವಾದರೆ. ಆ ಮರಣ ಕುಮಾರ ಕುಮಾರೀ ಜೀವನ ರೀತಿಯ ವ್ರತಧಾರಿಗಳಾಗುವ ಆದರ್ಶವು ಗೌರವಾರ್ಹವೆನಿಸಿದರೂ ಪ್ರಳಯದ ಇನ್ನೊಂದು ಮಾರ್ಗ ಈ ಪ್ರಲಯದ ಅನಿವಾರ್ಯ ವಿಧಿಲಿಖಿತವನ್ನು ಗ್ರೀಕಿನ ವಿಖ್ಯಾತ ದ್ರಷ್ಟಾರ ಹಿರಾಕ್ಲಿಟಸನೂ ಹೇಳುತ್ತಾನೆ.

ಸಂಸ್ಕೃತಿಯು ಉನ್ನತಿ ಮತ್ತು ಅವನತಿ ಎರಡೂ ಆ ಸಾಂಸ್ಕೃತಿಕ ಸಮಯ ಆಚಾರ-ವಿಚಾರಗಳನ್ನು ಅವಲಂಬಿಸಿರುವ ಸಂಗತಿಗಳು. ಆದರೆ, ಈ ತಳಪಾಯದ ವಿಚಾರವೇ ದುರ್ಲಕ್ಷಿಸಲ್ಪಟ್ಟು, ಆ ಸಂಸ್ಕೃತಿಯ ಮೇಲೆ ಆದ ಪರಕೀಯರ ಆಘಾತ, ಸುಲಿಗೆ ಇಂತಹ ನಿಮಿತ್ತಮಾತ್ರ ಬಾಹ್ಯ ಘಟನೆಗಳಿಗೇ ಹೆಚ್ಚಿನ ಮಹತ್ತ್ವ ಕೊಟ್ಟು ಯಾವುದೊಂದು ಜನ, ದೇಶದ ಇತಿಹಾಸ-ಸಂಸ್ಕೃತಿಯನ್ನು ವಿವರಿಸಲಾಗುತ್ತಿದೆ! ಅರ್ಥ : ವಿಚಾರ ಇದರ ಆಕೃತಿ (thought forms), ಇದೇ ಮನುಜರ ಆಚಾರಗಳ ಪ್ರೇರಕ ಕೇಂದ್ರ-ಜ್ಞಾತಾಜ್ಞಾತ ರೀತಿಯಲ್ಲಿ, ಉಡಿಯಲ್ಲಿ ಕಟ್ಟಿಕೊಂಡ ಬೆಂಕಿಯಂತಿದೆ ಈ ಅಬೋಧಿ ಅಗ್ನಿಯ ಉಪಾಸನಾ-ಪರಿಣಾಮ. ಆಪ: ರಸ ಭೂಮಿಕೆ : ಚಾಂದ್ರ ಸಂಪ್ರದಾಯವು ಮೃತ್ಯುಪೂಜೆ. ಇದನ್ನು ಡೊ. ಮ್ಯಾಕೆಂಝಿ ಹೇಳಿದ್ದುದು, ಸರ್ಪಪೂಜಕ ಇಜಿಪ್ತಿನ ವಿಧಿಲಿಖಿತ ಹೇಳಿದಂತೆ ಇದೆ. ಮೃತ್ಯುಪೂಜೆಯ ಸಮಯಾಚಾರಗಳ ಸಿಂಧೂಸಂಸ್ಕೃತಿಯ ವಿನಾಶದ ನೈಮಿತ್ತಿಕ ಬಾಹ್ಯಕಾರಣಗಳನ್ನು ಕಂಡು ಹಿಡಿಯುವುದು ಅವಶ್ಯವೇ ಸರಿ.

ಆದರೆ ಏಕಂ ಸತ್ ಪಂಥೀಯ ನಾಗ=ಶೃಂಗ ದೈವತದ ಉಪಾಸನೆಯೇ ಇದರ ವಿನಾಶದ ಮೂಲಭೂತ ಕಾರಣ ಎಂದು ಗಣಿತ ಪದ್ಧತಿಯ ಲೆಕ್ಕದಿಂದ ಹೊರಡುತ್ತಿದೆ.

ಮಾರ್ಶಲ್ ವರದಿಯಲ್ಲಿಯೂ ಪರ್ಯಾಯದಿಂದ ಇದಕ್ಕೆ ಪುಷ್ಟಿ ಇದೆ. ಮನೆಮನೆಗಳಲ್ಲಿ ಪಾತ್ರೆ-ಪಡಗ, ಆಟಿಗೆಯ ವಸ್ತು ಇತ್ಯಾದಿ ಒಡೆದು ತುಂಡಾಗಿ ಬಿದ್ದಿರುವುದರ ಅರ್ಥವೇನು? ಎಂದು ಮಾರ್ಶಲ್ ಪ್ರಶ್ನೆ. ಧಾಳಿಯಾಗಿ ಹಾಳಾದ ಲಕ್ಷಣವಿದಲ್ಲ; ಲೂಟಿಗೆ ಬಂದ ದಾಳಿಯವರು, ಪ್ರತಿಯೊಂದು ಮನೆಯಲ್ಲೂ ಹೊಕ್ಕು ಹೀಗೆ ಗಡಿಗೆ ಮಡಿಕೆ ಒಡೆದರೆಂದು ಬಗೆಯಲು ಆಗುವುದಿಲ್ಲ, ಎಂದು ಹೇಳಿದ್ದೂ ಮಾರ್ಶಲ್ ಸಾಹೇಬರೆ! ಇಂತಹ ಆತ್ಮ-ದಹನದ ಹಿಂದಿನ ಪ್ರೇರಣೆ ಯಾವುದು? ಏಕಂ ಸಂತ ಸಿದ್ಧಾಂತ ! ಈ ಜೀವನದಲ್ಲಿ ಅರ್ಥವಿದೆ= ವ್ಯವಸ್ಥೆಯಿದೆ ಜೀವನ ನಿಯಮಬದ್ಧವಿದೆ. ಸತ್ಯ-ಸ್ವೇಚ್ಛಾಚಾರ ಒಂದೇ ಅಲ್ಲ. ಈ ಜೀವನಸ್ಥ ಈ ನಿಯಮ ಅರಿತು ಆಚಾರಿಸುವಲ್ಲಿ ಜೀವನದ ಒಂದೇ ಅಲ್ಲ; ಈ ಜೀವನಸ್ಥ ಈ ನಿಯಮ ಅರಿತು ಆಚರಿಸುವಲ್ಲಿ ಜೀವನದ ಸ್ವಾರ್ಥಕ್ಯವಿದೆಯೆಂಬ ಋತಾಧಿಷ್ಠಿತ ಸತ್ಯದ ಪ್ರಜ್ಞೆಯಿರುವ ಸಮಾಜವಾಗಿದ್ದರೆ, ಸೈಂಧವ ಸಂಸ್ಕೃತಿಯ ಮನೆಮನೆಗಳಲ್ಲೂ ಗಡಿಗೆ ಮಡಿಕೆ, ಜೀವನೋಪಯೋಗೀ ವಸ್ತುಗಳು ಬುದ್ಧಿಪೂರ್ವಕ ನಾಶಮಾಡಿರುವ ರೀತಿಯಲ್ಲಿ ಹಾಳಾದುದನ್ನು ಸಾರುತ್ತಿರುವಂತೆ ಬಿದ್ದಿರಲು ಶಕ್ಯವಿಲ್ಲ.

ಸೈಂಧವ ಸಂಸ್ಕೃತಿಯೊಳಗಿನ ಶೃಂಗ ದೈವತಗಳ ಬಗೆಗೆ ಮಾರ್ಶಲ್ ವರದಿಯಲ್ಲಿ ಸಾಕಷ್ಟು ವಿವರವಿದೆ. ಚಿತ್ರಗಳೂ ಇವೆ. ಆದರೆ, ಶೃಂಗ ಈ ಸಾಂಕೇತಿಕ ಪ್ರತಿಮೆಯ ಗರ್ಭಿತಾರ್ಥವನ್ನು ವಿವರಿಸುವ ಪ್ರಯತ್ನ ಮಾತ್ರ ಆಗಿಲ್ಲ! ಕೋಡುಳ್ಳ ಅನೇಕ ಪ್ರತಿಮೆಗಳ ಮೂಲಕ "there can be litle doubt that horns have a special sacred significance" ಈ ಸಾಂಕೇತಿಕತೆಯಲ್ಲಿ ಏನೊಂದು ಪವಿತ್ರ (Sacred),. ಅರ್ಥವು ಇದೆಯೆಂಬುದು ನಿಃಸಂದಿಗ್ಧ ಎಂದು ಮಾರ್ಶಲ್ ಹೇಳಿದ. ಆದರೆ, Sacred, Sacrifice, Sacrum ಈ ಸಂಕೇತಗಳ ಅರ್ಥದ ಆಕೃತಿಗಳ ಅನುರೋಧದಿಂದ ಕೋಡು - horn ಶೃಂಗ ಈ ಸಂಕೇತದ ಮೂಲ ಅರ್ಥವು ಯಜ್ಞಕ್ಕೆ (=Sacrifice) ಸಂಬಂಧಿಸಿದ್ದೇ ಇರುವ ಶಕ್ಯತೆ ಮಾರ್ಶಲ್ ದುರ್ಲಕ್ಷಿಸಿದ್ದಾಗಿದೆ. ಈ ಶೃಂಗ ಪಶು = ಹಿರಣ್ಯಶೃಂಗ ಅಶ್ವ (?) ಯಜ್ಞ ಪಶು ದೇವಿ ಸಿಬಿಲೆ (of hair) ಪವಿತ್ರ ಸನ್ನಿಧಿಯಲ್ಲಿ ಶೃಂಗ ದಾನಾಮುಡವ ಸಂಪ್ರದಾಯ ಯುರೋಪಿನಲ್ಲೂ ಹಿಂದೊಮ್ಮೆ ಇತ್ತು.

ತ್ರಿಶೂಲ ಇದು ಮೂರು ಕೋಡಿನ ಪ್ರತೀಕ ಎಂದು ಮಾರ್ಶಲ್ ಹೇಳಿದ್ದು ಸರಿ ಆದರೆ, ಆದಿ ಪುರುಷ ಯುಗದಲ್ಲಿ ಪ್ರತಿಷ್ಠೆಪಡೆದ ಕೋಡು=ಶೃಂಗ ಇದರ ಪೂರ್ವರೂಪವು ಆದಿಮಾತಾಸಂಪ್ರದಾಯದ ಯುಗದಲ್ಲಿ ಪರ್ಣ (ಪತ್ರ=ಪಾತ್ರ) ಚಕ್ರ=ಅಂಬ (ಕ) ರೂಪದ್ದಾಗಿತ್ತು. ಯುರೋಪಿನ Grail (holy) ಮತ್ತು Lance ಇವುಗಳ ಬಗೆಗೆ ಅಲ್ಲಿಯ ಸಂಪ್ರದಾಯ ತಜ್ಞರು ಹೇಳುವ ಅರ್ಥದಿಂದ ಪಾತ್ರ-ದಂಡ (=ಶೃಂಗ) ಇವುಗಳ ಅನ್ಯೋನ್ಯವು ಬೆಳಕಿನಲ್ಲಿ ಬರಬಲ್ಲುದು. ಶೃಂಗ ಕುರಿತು ಬರೆಯುವಾಗ, ವೇದದ ಶೃಂಗಿ ಅಹಿ : ಶುಷ್ಣನ ಸಾಂಕೇತಿಕ ಪ್ರತಿಮೆಯ ನೆನಪು ಆಗದೆ ಇಲ್ಲ. ಮಾರ್ಶಲ್ಲರಿಗೆ. ಡೈಯೋನಿ ಸಸ್‌ನ (Horned serpent) ಈ ಶೃಂಗ ಪುರುಷ : ಲಿಂಗ ಸೂಚಕವಾಗಿರುವುದನ್ನು ಗ್ರೀಕಿನ ಕಥೆಗಳಿಂದ ಗ್ರಹಿಸಿಕೊಳ್ಳಬಹುದಿತ್ತು. ಇದರಿಂದಾಗಿ ತ್ರಿಪರ್ಣ (trefoil) ಮತ್ತು ತ್ರಿಶೃಂಗ (=ತ್ರಿಶೂಲ) ಇವು ತೀರ ಭಿನ್ನವಲ್ಲ. ಅವರೇ ಹೇಳಿದ Unity in duality ಅಥವಾ ಅ-ವಿಭಕ್ತಂ ವಿಭಕ್ತೇಷು, ಆದರೆ ಶೃಂಗಾರ (ರಸ) ಯುಕ್ತ ಶೃಂಗಾ, ಶೂಲ ಆಗುವಾಗ ಅದು ಸರ್ವಸ್ವನಾಶದ ಪ್ರಲಯತಾಂಡವ ಭೈರವನ ಮೃತ್ಯುದೈವತದ ಸಂಕೇತವಾಗುತ್ತದೆ! ಸೈಂಧವ ಸಂಸ್ಕೃತಿಯ, ಕ್ರಮಿಸತೊಡಗಿದ ವಿನಾಶದ ದಾರಿಯ ಸೂಚನೆಯು ಈ ತ್ರಿಶೂಲದ ಪೂರ್ವರೂಪವಾದ ತ್ರಿ-ಶೂಲ : ತ್ರಿಶೃಂಗ ಸಂಕೇತದಲ್ಲಿದೆ.

ಬ) ಚಿತ್ರವು ತುಂಬ ಮೌಲಿಕ ಸಂಕೇತಯುಕ್ತವಾಗಿದೆ ಆರಳೆ ಎಳೆಗಳ ಸಂಕೇತಯುಕ್ತ ಎರಡು ವೃಕ್ಷಗಳ ನಡುವೆ ತ್ರಿಶೃಂಗಧಾರೀ ದೇವಿ ನಿಂತಿದ್ದಾಳೆ. ನೀಳಕೂದಲು, ಅರ್ಪಣೆ, ವೃಕ್ಷದ ಎದುರು ಉದ್ದಕೂದಲಿನ ವ್ಯಕ್ತಿ ಮೊಳಕಾಲು ಊರಿ ವಂದಿಸುತ್ತಿದೆ. ಇದಕ್ಕೂ ತೋಳಬಳೆ ಉಂಟು. ಪಕ್ಕದಲ್ಲಿಯೆ ಸಂಮಿಶ್ರ ಸಂಕೇತಗಳಿಂದ ರಚಿತ ಒಂದು ಪಾಶುವಿದೆ. ಒಟ್ಟಿನಲ್ಲಿ ವೃಷಭನ ಆಕೃತಿ ಹೋತಿನ ಆಕೃತಿ. ನರನಮುಖ! ಸಿಂಧೂ ಸಂಸ್ಕೃತಿಯಲ್ಲಿ ಇಂಥ ವೈಶಿಷ್ಟ್ಯಪೂರ್ಣ ಪಶುಗಳು ಹಲವೆಡೆಗೆ ದೊರೆತಿವೆ.

ಈ ಚಿತ್ರದ ಇನ್ನೊಂದು ಮೌಲಿಕ ಸಂಕೇತ : ಸಾಧ್ಯ. (?ಸಿದ್ಧ)ರ ಚಿತ್ರವು; ಇವು ಋ ವೇದದ ಸಪ್ತ ಋಷಿ (?) ಸಂಕೇತದ ನೆನಪನ್ನು ತರುತ್ತದೆ. ಈ ಸಪ್ತರು ಕೊಂಬಿನವರು! ದೀರ್ಘಕೇಶಿಗಳು! ಕೇಶಿನ್ ಮುನಿಸೂಕ್ತದಲ್ಲಿ ಶೃಂಗಿಯೂ ಅಭಿಪ್ರೇತನಿರುವುದಾಗಿ ಸಾಯಣಭಾಷ್ಯ ಹೇಳುತ್ತದೆ! ಋ. ವೇದದ ಸಪ್ತರು ಸರ್ಪ ಸಂಪ್ರದಾಯದವರೆಂಬುದರ ವಿವರಣೆ ಸಿಂಧೂತೀರದ ಈ ಸಪ್ತರು, ಈ ಗ್ರಂಥ ದೊರೆವ ಮುಂಚೆ ಬಂದಿದೆ. ವೃಕ್ಷದಲ್ಲಿ ಸ್ತ್ರೀಶಕ್ತಿ ಇರುತ್ತಾಳೆ ಎಂಬ ಈ ನಂಬುಗೆ ಯಕ್ಷಿ-ಯಕ್ಷ ಸಂಪ್ರದಾಯವಾಗಿ ಪರಿಣಮಿಸಿತು. ಬಾರಹಟ್ಟ, ಸಾಂಚಿಗಳಲ್ಲಿ ವೃಕ್ಷಕ್ಕೆ ಆತುನಿಂತ ಸ್ತ್ರೀಪ್ರತಿಮೆಗಳನ್ನು ಯಕ್ಷಿಣಿಗಳೆಂದು ಗುರುತಿಸಲಾಗಿದೆ.

ಕೊಂಬಿನ ದೇವಿಯರು ಪರ್ವತ-ಮಾಳದೇವಿಯರಾಗುತ್ತಾರೆ. ಉದಾ : ಉಚ್ಚಂಗಿ<ಉಚ್ಚಶೃಂಗಿ: ಚತುಃ ಶೃಂಗಿ, ಸಪ್ತ ಶೃಂಗಿ ಪುಣೆಯತ್ತ: ಏಳುಕೊಳ್ಳ, ಏಳು ಹುತ್ತುಗಳ ಎಲ್ಲಮ್ಮನು, ಮೂರುಕೋಡು<ಮುರಗೋಡು ಪ್ರಾಚೀನ ಸೊಗಲ ಸೋಮೇಶ್ವರನ ಸ್ಥಳ; ಏಳು ಕೋಟಿ(?ಪುರ) ಮಲ್ಲಯ್ಯನು ಹೀಗೆ ಈ ಶೃಂಗ ಶಿಖರ=ಬೆಟ್ಟ ಉಭಯಲಿಂಗಿಯಾಗಿ ಪರಿಣಮಿಸುತ್ತದೆ. ಏಕಂ ಸತ್ತಿನಲ್ಲಿ!

ಕ) ಏಕಶೃಂಗ : ಏಕಪಾತ್ (ಚಂದ್ರ)! ರುದ್ರ-ವಿಷ್ಣು ; ಏಕದಂತ ಎಂದರೆ (ಆದಿ) ಗಣ-ಪತಿ! ಪರ್ಣ ಶೃಂಗಗಳ ನಾನಾತ್ವವೆಲ್ಲ ಮಾಯೆ. ಶಾಶ್ವತ ಸತ್ಯ : ಸಸುಪಲಾಶೇ ವೃಕ್ಷೇ ಅಥವಾ ವೃಕ್ಷೇ ಸುಪಲಾಶೇ ಸಂಪಿಬತೇ ಯಮಃ (=ಕುಮಾರಃ) ಇಷ್ಟೆ ಎಂಬುದು ಆಪ:ರಸ ಪಂಥೀಯ ಚಾಂದ್ರದರ್ಶನ (ಸಿದ್ಧಾಂತ) (X-೧೩೫)

ಚಿತ್ರ ನಂ. ೧೬

ಪುರಾತನ ಯಕ್ಷ ಸಂಪ್ರದಾಯ ಸೂಚಕ ನಾಗಧಾರಿಣೀ : ತೀರ್ಥಿಕೆ

ಈ ಮೂರ್ತಿ ಅರ್ವಾಚೀನ. (ಜಕ್ಕ [ಪ್ರ] ನ ಸಿಂದಿಗೆಯಲ್ಲಿ ದೊರೆತುದು) ಆದರೆ, ಈ ಪ್ರತಿಮೆ ಪ್ರತಿನಿಧೀಕರಿಸುತ್ತಿರುವ ಆಚಾರ : ಸಮಯ ವೇದಕ್ಕೂ ಪುರಾತನ. ಈ ಪ್ರತಿಮೆ ದೊರೆತ ಸ್ಥಳ ನಾಮ ವಿಚಾರಾರ್ಹವಿದೆ. : ಸಿಂದಿಗೆ ಸಿಂಧೂತೀರದ ಸ್ಮೃತಿಯನ್ನೊಳಗೊಂಡಿದೆ. ಕರ್ನಾಟ-ಸಿಂಧಪ್ರಾಂತದ ಸಾಂಸ್ಕೃತಿಕ ಸಂಬಂಧವು, ಕೊಟ್ಟಿರಿ: ನನಾದೇವಿಯ ಮೂಲಕವೂ ಸಿದ್ಧವಾಗಿದೆ. ಪುರಾತನ ಸಾಂಸ್ಕೃತಿಕ ಮಹತ್ವದ ಇನ್ನೊಂದು ಅಂಶವು ಈ ಸಿಂದಿಗೆ ನಾಮ ಸಂಕೇತದೊಡನೆ ಹೆಣೆದುಕೊಂಡಿದೆ. ಇಲ್ಲಿಯ ಒಂದು ಸಾಂಪ್ರದಾಯಿಕ ಮಠಕ್ಕೆ ಜಕ್ಕ (<ಯಕ್ಷ) ಪುರುಷನ ನಾಮವಿದೆ! ಈ ವ್ಯಕ್ತಿನಾಮ ೧೦-೧೨ನೆಯ ಶತಕಕ್ಕಿಂತ ಹಿಂದೆ ಇರಲಾರದೆ. ಎಂದರೂ ಸಿಂದಿಗೆಯ ಈ ಸಂಪ್ರದಾಯದ ಬೇರುಗಳು ಸಿಂಧೂ ಸಂಸ್ಕೃತಿಯಲ್ಲಿ ದೊರೆವ ಈ ಸಂ-ಗತಿ, ಸತ್ಯ ಸಾಂಕೇತಿಕ ಎಂಬುದನ್ನು ಮನಗಾಣಿಸಿ ಕೊಡುತ್ತಿದೆ.

ಕೇನೋ ಪನಿಷತ್ತಿನ ಯಕ್ಷ=ಬ್ರಹ್ಮನ್ ಬೇರೆ ಅಲ್ಲ. ಕುಂದ-ಗೋಳ ಗ್ರಾಮದ (ಧಾರವಾಡ ಜಿ) ಬ್ರಹ್ಮದೇವನು ನಿನ್ನೆ ಮೊನ್ನೆಯವರೆಗೆ ಖ್ಯಾತಿವಂತನಾಗಿದ್ದನು. ಈ ಸ್ಥಲನಾಮದೊಳಗಿನ ಕುಂದ : ಕುಂಡ ಮೂಲಾಧಾರ ಚಕ್ರ ಸೂಚಕವಿರಬೇಕು. ಕುಂಡ-ಗೋಳಕರೆಂದು (ಎರಡೂ O ಒಂದೇ ಅರ್ಥ ಸೂಚಕ!) ಹೆಸರಿರುವ ವರ್ಗದ ಬಗೆಗೆ ಧರ್ಮಶಾಸ್ತ್ರವು ಕೀಳುಭಾವನೆ ತಾಳಿದ್ದುಂಟು! ಜಬಾಲ ಪುತ್ರನನ್ನು ಸತ್ಯಕಾಮನೆಂದು ಪ್ರಶಂಸಿರುವ ಔಪನಿಷದಿಕ ಕಾಮಲಾಯನ ಸಂಪ್ರದಾಯ, ಮನು ವಿವಸ್ವಂತನ ಸಂಪ್ರದಾಯ ಇವೆರಡೂ ಭಿನ್ನ ದೃಷ್ಟಿಕೋನದ ಜೀವನ ರೀತಿಗಳು ಎಂಬುದರ ಪ್ರಮಾಣವುಂಟು. ಸೂಕ್ಷ್ಮ ಸಾಂಕೇತಿಕವಾಗಿ ಇಲ್ಲಿದೆ. ಕುಂದ-ಗೋಳದಂತೆ ಈ ಭಾಗದಲ್ಲಿಯೇ ಕರ್ಜಗಿ ಗ್ರಾಮದ ಬ್ರಹ್ಮನೂ ಕಂನಾಡಿನ ಯಕ್ಷ=ಬ್ರಹ್ಮ ಸಂಪ್ರದಾಯದ ಒಂದು ಕಾಲದ ಸಮಯಕ್ಕೆ ಸಾಕ್ಷಿ. ಇವೆರಡೂ ಬ್ರಹ್ಮ ಸಂಪ್ರದಾಯದಲ್ಲಿ ಒಬ್ಬನು ಘೃತಪ್ರಿಯ! ಇನ್ನೊಬ್ಬನು ಕಡಲೆಯ ಹೂರಣ=ಹಯಗ್ರೀವ ಭಕ್ತ! ಹಿರಣ್ಮಯೋ ವೇತಸಃ ವೃದ್ಧಿಂಗತವಾಗಲು ತುಪ್ಪಬೇಕೆಂಬ ನಂಬುಗೆ ಅಂದಿನದು. ಹಯ-ಗ್ರೀವ ಮಾಹಾತ್ಮ್ಯ, ಈ ಪ್ರಬಂಧದಲ್ಲಿ ಬಂದಿದೆ. ಇದು ವಾಜಿ ಅನ್ನ ವಾಜೀಕರಣದ ಶಕ್ಯತೆ ಎನಿಸಿತ್ತು. ಇದಕ್ಕೆ 'Horse gram' ಎಂದಿರುವುದಕ್ಕೂ ಇತಿಹಾಸವಿದೆ! ಈ ಯಕ್ಷ : ಬ್ರಹ್ಮ ಸಮಯಾಚಾರದ ಹಿನ್ನೆಲೆಯನ್ನು ಗಮನಕ್ಕೆ ತಂದು ಕೊಡುವ ಪ್ರತಿ-ಮೆಯೆ ಎನ್ನುವಂತೆ ಸಿಂದಿಗೆಯಲ್ಲಿ ಇರುವ ಈ ತೀರ್ಥಿಕೆಯ ಮೂರ್ತಿಯಿದೆ. ಈ ಸಾಧಿಕೆ ಜಡೆ ಕಟ್ಟಿದ ಆಕೃತಿಯು ಪುರಾತನ ಶೃಂಗ ಸಂಪ್ರದಾಯದ ಸಾಂಕೇತಿಕ ಪ್ರತಿಮೆಯಾಗಿದೆ.

ಚಿತ್ರ ನಂ. ೧೭

ಎಂಕಿಡು, ಆದಿಮರ್ತ್ಯ : ಶೃಂಗಿಪುರುಷ : ಮಾತಾಪ್ರಸಾದಿ

ಸಿಂಧೂ ತೀರದಲ್ಲಿ ದೊರೆತ ಈ ಸಾಂಕೇತಿಕ ಪ್ರತಿಮೆಯ ಅರ್ಥಗ್ರಹಣದ ಪ್ರಯತ್ನ ಆಗಿದೆ. ಈ ಸಾಂಕೇತಿಕತೆ ಕ್ರಿ. ಪೂ. ೪೦೦೦ ವರುಷಗಳಷ್ಟು ಪ್ರಾಚೀನ. ಆದರೆ ಸಿಂಧೂತೀರದ ಪ್ರತಿಮೆಯು ಎಷ್ಟು ಪುರಾತನ ಎಂಬ ಬಗೆಗೆ ವಾದವಿರುವುದು ಕಾಣುತ್ತದೆ. ಈ ಪ್ರತಿಮೆಯ ಅರ್ಥಗ್ರಹಣದಲ್ಲಿ ಧಾರ್ಮಿಕ ಸಂಪ್ರದಾಯಗಳ ಉಲ್ಲೇಖಗಳೊಳಗಿನ ಸಂಕೇತಗಳ ತುಲನಾತ್ಮಕ ವಿಮರ್ಶೆಯ ರೀತಿ ಸದೋಷವಾಗಿದೆ. ಋಗ್‌ವೇದದೊಳಗಿನ ಶೃಂಗಗಳನ್ನು ಲೆಕ್ಕಿಸುವ ಆವಶ್ಯಕತೆಯೂ ತೋರಿಲ್ಲ! ಇದು more than usual interest ಉಳ್ಳುದಾಗಿದೆ. resemblence it bears to the Sumerian Eaboni or Enkidu is undeniable;' ಎಂದು ಆ ತಜ್ಞರು ಏಕಾಭಿಪ್ರಾಯವುಳ್ಳವರಾಗಿದಿದ್ದಾರೆ. ಆದರೆ ಎರಡೂ ಶೃಂಗಿಗಳಲ್ಲಿ ವಿಪರೀತ ಅಂತರವಿದೆ!

ಸುಮೇರಿನ ಸಾಂಕೇತಿಕ ಕಥಾತಜ್ಞರ ದೃಷ್ಟಿಯಲ್ಲಿ, ಎಂಕಿಡು ಆದಿನರನ=ಮನುಜತ್ವದ ಹಂತಕ್ಕೆ ಬಂದ ಮರ್ತ್ಯ-ನರನ ಪ್ರತೀಕ, ಮಾನವಕುಲದ ಏಳ್ಗೆಗಾಗಿ ಹೋರಾಡುವ ಅಭೌತ ದಿವ್ಯಶಕ್ತಿಯ ಸಂಕೇತ ಗಿಲ್ಗಮೇಶ. ಈ ಶಕ್ತಿಯ ಸಹ-ಚರ ಎಂಕಿಡು ಎಂಬ ಹಾಗಿನ ಒಂದು ಸ್ಪಷ್ಟ ನಿಲುಮೆ ಈ ಕವನದಲ್ಲಿದೆ : The two swear eternal comradeship. ಇದರಲ್ಲಿ ಋಗ್‌ವೇದದ ವೃತ್ರಹನ್ ಇಂದ್ರ ಮತ್ತು ಅವನ ಸಂಗಾತಿ ತ್ರಿತನ (ಮಾರ್ತ್ಯ) ಜೋಡಿಯ ಹೋಲಿಕೆಯಿದೆ.

> The purerpose of enterprise is, as Gilgamesh says to Enkidu, that all evil from the land we may banish' evil =

ಕತ್ತಲೆಯನ್ನು ಓಡಿಸುವ, ಪ್ರಕಾಶರೂಪ ಸತ್ಯದ ಸಲುವಾಗಿ ಹೋರುವ ಪ್ರತಿಜ್ಞೆಯ ಗಿಲ್ಗಮೇಶ-ಎಂಕಿಡು ಜೋಡಿ ಮತ್ತು ಕೃಷ್ಣ (ಶಕ್ತಿ) ತತ್ತ್ವಕ್ಕೆ ಶರಣು ಹೋದ (ಅರ್ಜುನ=ಶುಭ್ರ : ಇಂದ್ರನ ಅಂಶ ಎಂಬ) ನರ, ಈ ಕೃಷ್ಣದ್ವೈಪಾಯನ ನಿರ್ಮಿತ ಜೋಡಿ ತುಲನಾರ್ಹವಾಗಿವೆ.

ಸುಮೇರಿನತ್ತಣನ ಆಪ : ರಸ ಸಂಪ್ರದಾಯ ಮತ್ತು ಭಾರತೀಯ ಆಪ : ರಸ ಸಂಪ್ರದಾಯ ಇವು ಎರಡೂ ಮೂಲದಲ್ಲಿ ಚಾಂದ್ರ ಉಪಾಸನೆಗಳೇ ಆದರೆ ಸುಮೇರಿನ ಚಾಂದ್ರ ಸಂಪ್ರದಾಯವು. ಸೌರ ಭೂಮಿಕೆಯ ಪ್ರತೀಕಗಳ ಆಕೃತಿಯ ಪೂರ್ವಪೀಠಿಕೆಯೇ ಆಗಿರುವ ಶಕ್ಯತೆ ಕಾಣುತ್ತಿದೆ. ಧೀ ತತ್ತ್ವದ ಮೂರ್ತರೂಪ ಎಂಕಿ ಇದರ ಉತ್ಕೃಷ್ಟ ಉದಾಹರಣ. ಆದರೆ, ಭಾರತೀಯ ಆಪ=ರಸ ಪಂಥೀಯರಲ್ಲಿ ಈ ಪ್ರ-ಗತ ವಿಚಾರ ಸರಣಿ ಮಾನ್ಯವಿದ್ದಿಲ್ಲ! ವೇದದಲ್ಲೆ (ಎಂಕಿ=) ಇಂದ್ರನ ತೇಜೋವಧೆ, ಮಾಡಿ, ಕೊನೆಗೆ ಖಲನಾಯಕನನ್ನಾಗಿಸಿದ್ದೂ ಕಾಣುತ್ತಿದೆ! ಸುಮೇರಿನ ಆಪ : ರಸ ಪಂಥವು ಧೀ (ಪ್ರಕಾಶ) ದೈವತ ಪೂಜಿಸುತ್ತದೆ ಎಂಕಿ ರೂಪದಲ್ಲಿ. ಭಾರತೀಯ ಸಂಪ್ರದಾಯವೊ? ಸಂಸಾರವು ತಮಃ ಆಸೀತ್ ತಮಸಾಗೂಳಂ ಸ್ವರೂಪದ್ದು ಎಂದು ನಿತ್ಯ ಕಾಳ-ರಾತ್ರಿಯ ಉಪಾಸನೆಯನ್ನು ಬೋಧಿಸುತ್ತಿದೆ!

ಭಾರತೀಯ ಶೃಂಗ ಸಂಪ್ರದಾಯದ ನೇತಾರ : ವಸಿಷ್ಠ! ತಲೆತಲಾಂತರದಿಂದ ಬಂದ ಕತೆ, ಏನೊಂದೂ ತಿಳಿಯದು ಆ ಲಿಪಿ ಓದಲು ಆಗುವ ವರೆಗಂತೂ! ಆದರೆ ಋವೇದದಲ್ಲಿ ಹಿರಣ್ಯ ಶೃಂಗಿ (ಅಶ್ವ ಹೆಸರಿನ) ಪಶು (ಇದರ ಪೂರ್ವರೂಪ ರಾಸಭ): ಸಮುದ್ರಯೋನಿಃ ಇದು. ಶುಷ್ಣ=ಶೃಂಗಿ ಅಹಿ (ಇವನು ಸಲಿಲಸ್ಥ!) ದ್ರಪ್ಸಃ ಕೃಷ್ಣನ ಸಂಗಾತಿ. ಕೇಶಿನ್ ಮುನಿಗಳಲ್ಲಿ ಶೃಂಗಿಯು ಅಭಿಪ್ರೇತನಿದ್ದಾನೆ. ಸಿಂಧೂತೀರದಲ್ಲಿ ದೊರೆತ ಏಕ ಶೃಂಗಿ ಪ್ರತಿಮೆಗಳ ವೈಪುಲ್ಯದಿಂದಾಗಿ, ಈ ಸಂಸ್ಕೃತಿಯು ಪ್ರಾಧಾನ್ಯದಿಂದ, ಆದಿ ಪುರುಷಯುಗ ಪ್ರತಿನಿಧೀಕರಿಸುತ್ತಿದೆ. ಆದಿಮಾತಾ ಸಂಪ್ರದಾಯದ ಅಮೃತಸ್ಯ ನಾಭಿ- ಗೌಃ ಪೂಜೆ ಇಲ್ಲಿ ಇಲ್ಲ! ಏಕಶೃಂಗ ದಿವ್ಯಪುರುಷ ಶಕ್ತಿಯ ಅನುಸ್ಥಾನರತ ಸಮಯ : ಆಚಾರಗಳ ಸೂಚಕ ವಿವಿಧ ಪ್ರತೀಕಗಳು ಹೆಚ್ಚು ಪ್ರಮಾಣದಲ್ಲಿ ಬೆಳಕಿಗೆ ಬಂದುದರ ಅರ್ಥವು ಇದಕ್ಕಿಂತ ಬೇರೆ ಆಗಲಾರದು. ಶೃಂಗ ಅಶ್ವ : ರಾಸಭ ಇದು ಅಪಾಂನಪ್ತ್ಯ ನಪ್ತ್ಯ: ಶೃಂಗಿ ಮೊದಲು ಆಪದಲ್ಲಿತ್ತು. ಮೊದಲ ಹಂತದ ಆ ಜೀವನರೀತಿಯ ತರುವಾಯ ಇದು ತನ್ನದೇ ಆದ ಸ್ವಂತ ಅಸ್ತಿತ್ವ ಪಡೆದು, ಆಪವನ್ನು ತನ್ನೊಳಗೆ ಅಡಗಿಸಿಕೊಂಡಿತು. ಎರಡನೆಯ ಹಂತದ ಜೀವನ ಸಮಯ : ಆಚಾರಗಳ ಯುಗವು ಇಲ್ಲಿ ಸೂಚಿತವಿದೆ. ಆದಿಮಾತಾ : ದೇವಿ ಸಂಪ್ರದಾಯ ಅಳಿದು ಆದಿಪುರುಷ : ದೇವನೇ ಸೃಷ್ಟಿಕರ್ತನು, ಎಂಬ ಸಂಪ್ರದಾಯವು ಪ್ರಾರಂಭವಾಗುತ್ತದೆ. ಈ ಹಂತದ ಕೆಲವು ಜಾಗತಿಕ ಕಥೆಗಳಲ್ಲಿ ಇರುವ ಸಾಮ್ಯ ಅಭ್ಯಸನೀಯುವಿದೆ. ಆದಿ ಪಿತನನ್ನು ಹಿಟ್ಟೈಟಿನಲ್ಲಿ ಅಲಲು ಪುತ್ರ ಕುಮರಬಿ ಅನು : ಆದಿಪಿತನನ್ನು ತಳ್ಳಿ ತಾನೇ ಆ ಶಕ್ತಿಪೀಠ ಆಕ್ರಮಣ ಮಾಡುತ್ತಾನೆ. ಕ್ಯಾನಾನದಲ್ಲಿ ಆದಿಪಿತ (EL) ದೇವನು ಹಿಂದೆ ಬಿದ್ದು, ಬಾಅಲ: ವೀರ್ಯವಂತ : ಬಲ್ಲಾಳು ಸರ್ವಾಧಿಕಾರಿಯಾಗುತ್ತಾನೆ. ಗ್ರೀಸಿನ ಅನು=ಯುರೆನಸ್ ಪುತ್ರ ಕ್ರೋನಸ್ (ಕಾಗೆ-ವಾಯಸ, ಬಳಿಕ ಶನಿ=ಸ್ಯಾಟರ್ನ) ದೇವನು ತಂದೆಯ ಪುರುಷಚ್ಛೇದ ಮಾಡುತ್ತಾನೆ. ಋಗ್‌ವೇದದ ವರುಣ (=ಪ್ರಜಾಪತಿ) ದೇವನನ್ನು ಕ(೦) = ಹಿರಣ್ಯಗರ್ಭನು ಹಿಂದಿಕ್ಕಿದಂತೆ ದೃಶ್ಯವಿದೆ. ಆದರೆ, ರಾಜನ್= ಕ್ಷತ್ರಿಯ ವರುಣನನ್ನು ತಳ್ಳಿ ತಾನೇ ಪ್ರಜಾಪತಿಯಾದ ಬ್ರಹ್ಮನ್ ಸಿದ್ಧಿಯವನೆಂಬ ವಸಿಷ್ಠನೇ, ವರುಣನ ಪರಂಪರೆಯನ್ನು ನಷ್ಟಮಾಡುತ್ತಾನೆ. ಭಾರತೀಯ ಶಾಸನಾದಿಗಳಲ್ಲಿ ಕಾಣುವ (ಬ್ರಹ್ಮಕ್ಷತ್ರ ಪರಂಪರೆಯ ಉದ್ಗಮ ಇಲ್ಲಿದೆ. ವಸಿಷ್ಠ ಶಿಪಿವಿಷ್ಟ=ಏಕಶೃಂಗಿ ವಿಷ್ಣುಸಂಪ್ರದಾಯದ ಆದಿಪ್ರಚಾರಕನೆಂದು ವಸಿಷ್ಠನ ಸೂಕ್ತಗಳಿಂದಲೇ ಬಯಲಿಗೆ ಬರುತ್ತದೆ. ವನಸ್ತೂಪ (ಸಲಿಲಸ್ಥ ಸ್ಕಂಭ) ಸಂಕೇತ ವೈಶಿಷ್ಟ್ಯದ ವರುಣನನ್ನು ಹಿಂದಿಕ್ಕಿದ ಶಿಪಿವಿಷ್ಟ ವಿಷ್ಣು-ಕೃಷ್ಣರು ಊರ್ಧ್ವಮೂಲ ಅಶ್ವ-ತ್ಥರು! ರಾಜನ್ : ವರುಣ ಪುತ್ರ ವಸಿಷ್ಠನನ್ನು ಬ್ರಹ್ಮ-ಕ್ಷತ್ರ ಪರಂಪರೆಯ ಈ ಆದಿಪುರುಷನನ್ನು, ಋಕ್ಷ (=ಕರಡ-ಭಲ್ಲೂಕ ದಂಡ Great Bear) : ಸಪ್ತರ್ಷಿಸಂಕೇತದಿಂದ ಕುಮಾರಿ (ಅರುಂಧತಿ) ಒಡಗೂಡಿ ಅಂತರಿಕ್ಷದ ಅಮರ ಪದದಲ್ಲಿ ಇಂದಿಗೂ ಉಳಿಸಿಕೊಂಡು ಬಂದದ್ದಾಗಿದೆ! ಆಪ : ರಸ ಪಂಥದ ಭಾರತೀಯ ಸಂಸ್ಕೃತಿಯನ್ನು ರೂಪಿಸಿದ ಈ ವಸಿಷ್ಠನು ಶೃಂಗಪೂಜಾ ಸಂಪ್ರದಾಯದ ಪ್ರಸ್ಥಾಪಕನು.

ಅಗಸ್ತ್ಯ-ವಸಿಷ್ಠ ಈ ಪ್ರತಿಮಾ ನಿರ್ಮಾಣದ ಸಾಂಕೇತಿಕತೆಯಲ್ಲಿ ಅಗಸ್ತ್ಯ ಕಥೆಯ ಒಂದು ವಿಶೇಷವು ಸಂಸ್ಮರಣೀಯವಿದೆ. ಅಗಸ್ತ್ಯನು ಸಮುದ್ರ ಜಲವನ್ನು ಶೋಷಿಸಿಕೊಂಡನಂತೆ! ಒಂದೇ ಪ್ರತಿಮೆಯ ಇಮ್ಮೈ ಗಳಂತಿರುವ ಈ ನಾಮಸಂಕೇತಗಳಲ್ಲಿ ವಸಿಷ್ಠನಿಗೆ ದಕ್ಷಿಣ ಕಪರ್ದ ಎಂದು ಈತನ ವೈಶಿಷ್ಟ್ಯವನ್ನು ಹೇಳಲಾಗಿದೆ! ಕಪರ್ದ ಈ ಜಡೆ

(ಕವಡೆ) ಅಕ್ಷ=ಕಣ್ಣು ಈ ಸಂಕೇತದ ಸಾಹಚರ್ಯಸೂಚಕ ಪ್ರತಿಮೆ! ಎಂದರೆ ಋಗ್ವೇದಸ್ಥ ಶೃಂಗಿ ಮುನಿ ಈತನೇ ಎಂಬುದು ಇಲ್ಲಿ ನಿಶ್ಚಿತವಾಗುತ್ತದೆ. ಇವನ ಪತ್ನಿ ಎಂಬ ಅರುಂಧತಿಗೆ ಅಕ್ಷ (ಮಾಲಾ) ಧಾರಿಣಿ ಎಂಬ ವಿಶೇಷ ಹೆಸರು ಉಂಟು! ಈ ದಕ್ಷಿಣಕಪರ್ದ=ಅಕ್ಷ=ಕೇಶೀ ಪುರುಷ ಸಪ್ತರ್ಷಿಋಕ್ಷ (ಕರಡೆ) ಎಂಬ ಸಂಕೇತದಿಂದ ಸೂಚಿತನಾಗಿದ್ದಾನೆ. ಭಲ್ಲೂಕದಂಡ ಈ ಸಂಕೇತವು ಇಂದಿನ ವರೆಗೂ ಕಂನಾಡಿನಲ್ಲಿ ಜೀವಂತವಿದೆ! ಶ್ರೀರಾಮ-ಚಂದ್ರನು ಕೋ-ದಂಡಧಾರಿ! ಕಃ ದಂಡವಿಮ! ಕ(೦) ಹಿರಣ್ಯ ಗರ್ಭ : ಹಿರಣ್ಯ ಗರ್ಭ : ಪ್ರಜಾಪತಿ : ಕ(೦)=ಬ್ರಹ್ಮ!

ಸುಮೇರಿನ ಎಂಕಿಡು ಮತ್ತು ಭಾರತೀಯ (ವೇದಕಾಲೀನ) ಎಂಕಿಡು (ವಸಿಷ್ಠ) ಇಬ್ಬರಲ್ಲೂ ಸಾಮ್ಯವು ಇರಬೇಕೆಂದು ಮೇಲೆ ಸೂಚಿಸಿರುವ ನಾಲ್ಕೂ ಸಂಗತಿಗಳಿಂದ ಅರಿಕೆಗೆ ಬರುತ್ತದೆ. ಇನ್ನೂ ಈ ಹೆಚ್ಚಿನ ಅಂಶಗಳನ್ನು ನೋಡಿ : ಇಬ್ಬರೂ ಮಾತಾಪ್ರಸಾದಿಗಳು ಅ) ಎಂಕಿಡು, ಸುಮೇರಿನ ಆದಿಮಾತೆ ಅರರು ದೇವಿಯ (ಆವೇಶವಾಗುವ) ಒಬ್ಬ ದೇವಾರ್ಪಿತ ಜೀವನದ ಕುಮಾರಿಯಿಂದ ಜ್ಞಾನದೀಕ್ಷೆ ಪಡೆದ ಮಾತಾಪ್ರಸಾದಿ. ಇವನ ತಾಯ್ತಂದೆಗಳ ಹೆಸರು ತಿಳಿಯದು. ಆ) ಋಗ್‌ವೇದದ ವಸಿಷ್ಠನೂ ಮಾತಾ-ಪ್ರಸಾದಿ, ಕ್ಷೇತ್ರಜ ಸಂತತಿಯ ಸಂಪ್ರದಾಯ ಮಾನ್ಯವಿದ್ದು. ದತ್ತಕಪುತ್ರ ಸಂಪ್ರದಾಯ ತಿರಸ್ಕರಿಸಿದ್ದು ವಸಿಷ್ಠಸೂಕ್ತಗಳಲ್ಲೆ ಉಂಟು. ಇವನು ವಾಕ್=ಧೇನು ಉಪಾಸನಾ ಸಂಪ್ರದಾಯಿ ಅ) ಎಂಕಿಡು ಕೊಂಬು ಉಳ್ಳವನಾಗಿದ್ದ ಚಿತ್ರವಿದೆ. ಬ) ವಸಿಷ್ಠನು ದಕ್ಷಿಣ ಕಪರ್ದನೆಂಬಲ್ಲಿ ಶೃಂಗವೇ ಅಭಿಪ್ರೇತವಿರುವಲ್ಲಿ ಸಂದೇಹವಿಲ್ಲ. ಕೇಶಿನ್ (ಶೃಂಗಿ) ಮುನಿ, ವಾಲ್ಮೀಕಿ ನಾಮಧಾರಿ ಕವಿ ರಾಮ ಅಯನದಲ್ಲಿ ಶೃಂಗಋಷಿಯ ಕಥೆ ಉಳಿಸಿದ್ದಾನೆ. ಈ ತುಲನೆಯ ಮೂಲಕವಾಗಿ, ಆಪ : ರಸ ಸಂಪ್ರದಾಯದಲ್ಲಿ ಅಂದು, ಉತ್ತರ ಶೃಂಗಿ ಎಂಕಿಡು ಮತ್ತು ದಕ್ಷಿಣ (ಕಪರ್ದ=) ಶೃಂಗಿ ವಸಿಷ್ಠ ಎಂಬ ಎರಡು ಸಾಂಕೇತಿಕ ಸಂಪ್ರದಾಯಗಳು ತಲೆಯೆತ್ತಿದ್ದುದು ಸ್ಪಷ್ಟವಾಗುತ್ತದೆ. ಸುಮೇರು-ಅಸ್ಸೀರಿಯಾ ಮತ್ತು ಭಾರತ (ಸಿಂಧೂಸಂಸ್ಕೃತಿ) ಇವೆರಡರ ಸಮಯಾಚಾರಗಳಲ್ಲಿ ದಕ್ಷಿಣೋತ್ತರದಷ್ಟು ಇರುವ ಮಾರ್ಗಭೇದವು, ಅವರೊಳಗಿನ ಸ್ಪರ್ಧೆಯ ದ್ಯೋತಕವಾಗಿರಲಿಕ್ಕೆ ಬೇಕು.

ಸುಮೇರು ಅಸ್ಸೀರಿಯ ಮತ್ತು ಭಾರತ ಇವೆರಡರಲ್ಲಿಯೂ ಮೊತ್ತಮೊದಲಲ್ಲಿ ಆಪಸಂಪ್ರದಾಯದ ಪ್ರವೃತ್ತಿಪರ ಅಥವಾ ಪೌರ್ಣಿಮಾಂತ ಮಾಸದ ಪಂಗಡಗಳೇ ಪ್ರಭಾವಶಾಲಿಯಾಗಿರಲಿಕ್ಕೆ ಬೇಕು. ಆದರೆ, ಆದಿಮಾತಾ ಸಂಪ್ರದಾಯದಲ್ಲಿ ಕ್ರಾಂತಿಯು ತಲೆದೋರಿ ಧೀಪ್ರತೀಕ ಎಂಕಿ ಪಕ್ಷವು ಪಿತೃಪ್ರಧಾನ ಕುಟುಂಬ ಪದ್ಧತಿಯನ್ನು ಸ್ವೀಕರಿಸಿದ್ದು ಅಲ್ಲಿಯ ದೈವತ ಕಥೆಗಳಿಂದ ಗೊತ್ತಾಗುತ್ತದೆ. ಭಾರತದಲ್ಲಿಯೂ ಪೌರ್ಣಿಮಾಂತಮಾಸದ ಪ್ರವೃತ್ತಿಮಾರ್ಗೀ ಆಪಸಂಪ್ರದಾಯ ಇರಲೇಬೇಕು. ಪೌರ್ಣಿಮಾಂತ ಮಾಸದ ಕಾಲಗಣನೆ ಉತ್ತರ ಭಾರತದಲ್ಲಿ ಇಂದಿಗೂ ಉಳಿದಿದೆ. ದಕ್ಷಿಣದಲ್ಲಿಯೂ ದೇವಿಉತ್ಸವಾದಿಗಳು ಪೌರ್ಣಿಮೆಯೊಡನೆ ನಿಬದ್ಧವಾಗಿವೆ.

ಪಿತೃಪ್ರಧಾನ ಕುಟುಂಬ ಪದ್ಧತಿಯ ಪ್ರಭಾವದಲ್ಲಿ ಸುಮೇರಿನ ಆದಿಮಾತೆ, ತೈಮತಳು ಅಲ್ಲಿಂದ ಓಡಿಸಲ್ಪಟ್ಟಳೇನೊ-ಸಾಂಕೇತಿಕವಾಗಿ ಕೊಲ್ಲಲ್ಪಟ್ಟ ಕಥೆಯೆ ಇದೆ. ಕವಡು ಮಾತಿನಿಂದ ಆಪರಸ ಪಂಥೀಯ ಮತ ಪ್ರತಿಪಾದಿಸುವ ಋಗ್‌ಸಂಹಿತೆಯಲ್ಲಿ ಅಲ್ಲದೆ ಇದ್ದರೂ ಅಥರ್ವವೇದದಲ್ಲಿ ಪೈಮತಳ ಹೆಸರಿಗೆ ಸ್ಥಾನ ದೊರೆತಿದೆ. ಆದಕಾರಣ, ಭಾರತದಲ್ಲಿ ಮಾತೃಪ್ರಧಾನ ಕುಟುಂಬಪದ್ಧತಿ ಪ್ರಿಯ ಸನಾತನವಾದವೇ ಹೆಚ್ಚು ಲೋಕಪ್ರಿಯವಿರಲಿಕ್ಕೆ ಬೇಕು. ಆದರೆ, ಈ ಸುಮಾರಿಗೆ (ಎಂದರೆ ಸು. ಕ್ರಿ. ಪೂ. ೨೦೦೦-೧೮೦೦) ಇನ್ನೊಂದು ಕ್ರಾಂತಿ ಸಂಭವಿಸುತ್ತದೆ. ಹಿಟ್ಟೈಟ್ ಹಾಗೂ ಇರಾಣಿನ ಮೂಲಕ ಈ ಸಂಗತಿ ಬೆಳಕಿಗೆ ಬರುತ್ತಿದೆ. ಇರಾಣಿನ ಅವೆಸ್ತಾ ಹಾಗೂ ಋಗ್ವೇದದ ಭಾಷಿಕ ಹೋಲಿಕೆಯಿಂದ ಸಂಸ್ಕೃತ ಭಾಷಿಕರ ಮತ್ತು ಪ್ರಕಾಶ ಉಪಾಸಕರ ಪಂಗಡಗಳು ಆಗ ಪ್ರಬಲವಾಗತೊಡಗಿದ್ದು ದೃಢಪಡುತ್ತದೆ.

ಹಿಟ್ಟೈಟ್ ಸುಮೇರಿನ ಉತ್ತರ ಭಾಗದಲ್ಲಿಯೂ ಸಂಸ್ಕೃತ ಹಾಗೂ ಅವೆಸ್ಥಾ ಭಾಷೆಗೆ ಸರಿಹೋಗುವ ಮಾತುಗಳು ಆ ಭಾಷೆಯಲ್ಲಿ ದೊರೆತಿವೆ. ಇದರಂತೆ ಗ್ರೀಕಿನ ಭಾಷೆಯ ರೂಪಗಳೂ ಅಲ್ಲಿ ದೊರೆತಿವೆ. ಹಿಟ್ಟೈಟ್ ಭಾಗ ಸುಮೇರ ಅಸ್ಸೀರಿಯದಷ್ಟು ಪ್ರಗತಿಪಥದಲ್ಲಿದ್ದುದಾಗಿ ಯಾವ ತಜ್ಞನೂ ಹೇಳುವುದಿಲ್ಲ. ಈ ಭಾಗದಲ್ಲಿ ಋಗ್ವೇದದ ಮಿತ್ರ, ವರುಣ, ಇಂದ್ರ ನಾಸತ್ಯ (ಅಶ್ವಿಗಳು) ಪ್ರಭಾವಶಾಲಿ ದೈವತವಾಗಿದ್ದುವು. ಸಂಸ್ಕೃತಭಾಷೆಯ ಅಶ್ವದ ಉಲ್ಲೇಖ ಇಲ್ಲಿಯೇ ದೊರೆಯುತ್ತದೆ. ಮೊದಲು ಕುದುರೆಗೆ mountain Ass ಎಂದು ಹೇಳಲಾಗುತ್ತಿದ್ದುದನ್ನು ಸ್ಮರಿಸಿದರೆ ಅಶ್ವಕ್ಕಿಂತ ಗಾರ್ದಭವು ಮೊದಲು ಇರಲಿಕ್ಕೆ ಬೇಕು. ನಾಸತ್ಯರು (= ನ ಅಸತ್ಯ = ಸತ್ ಏವ ಇದಂ ಅಗ್ರೇ ಆಸೀತ್ ಎಂದು ಸಂಪ್ರದಾಯದ ಯುಂಗಲ, ಅಶ್ವಿಗಳಾಗುವ ಮೊದಲು ರಾಸಭ ರೂಪರೇ ಆಗಿರಲಿಕ್ಕೆ ಬೇಕು. ಕ್ಯಾನಾನ್, ಹಿಟ್ಟೈಟನತ್ತ ಇರುವಾಗಲೇ ಸಂಸ್ಕೃತ ಭಾಷಿಕರು ಅಲ್ಲಿಯ ಆಪ : ರಸಪಂಥೀಯ ವೈಚಾರಿಕ ಪ್ರಭಾವಕ್ಕೆ

ಒಳಗಾಗಿರಲಿಕ್ಕೆ-ಬೇಕು. ಋಗ್‌ವೇದದ ನಾಸತ್ಯರು=ಅಶ್ವಿಗಳೆನಿಸಿ ಮಧುವಿದ್ಯಾ ಪಾರಂಗತರು ತ್ರಿಚಕ್ರಂ ಬಂಧುರಂ ರಥಂ ಆರೋಹಿಗಳೂ ಆಗಿದ್ದಾರೆ. ಅಲ್ಲದೆ, ಈ ಅಶ್ವಿಗಳ ಸಂಕೇತವೆಂದು (ವರ್ಷಣಶೀಲ) ವೃಷಭನಲ್ಲದೆ ರಾಸಭವೂ ಉಂಟು. ಈ ನ ಅಸತ್ ಸಂಪ್ರದಾಯವು ಹಿಟ್ಟೈಟಿನತ್ತಣಿಂದಲೂ ಬಂದಿರಲಿಕ್ಕೆ ಬೇಕು. ಋಗ್‌ವೇದದ ವರುಣನು ಸೌರನು ಪ್ರಕಾಶ ರೂಪನಿರಬೇಕು. ಅವೆಸ್ತಾದ ಅಹುರ್‌ಮಝ್ದನಂತೆ. ಆದರೆ, ರಾತ್ರೀ ದೈವತವಾಗಿರುವುದನ್ನು ನೋಡಿದರೆ ಈ ಸ್ಥಿತ್ಯಂತರವು ಹಿಟ್ಟೈಟಿನಲ್ಲೇ ಆಗಿರುವ ಶಕ್ಯತೆಯಿದೆ. ಸಂಸ್ಕೃತ ಭಾಷಿಕರಲ್ಲಿ ಸೇರಿದ ಆಪ-ಸಂಪ್ರದಾಯಿಗಳು. ಆ ಪಂಗಡದಲ್ಲಿ ಪ್ರಭಾವಶಾಲಿಯಾಗುವ ಸ್ಪರ್ಧೆಯಲ್ಲಿ ಸೇರಿರಲೇಬೇಕು. ಅವೆಸ್ತಾದಲ್ಲಿ ಅಪಾಂ ನ ಪಾತ್ ದೈವತವಿದೆ. ಅರೇದ್ವಿ ಸೂರಾ ಅನಾಹಿತ ಎಂಬ ಲಲನಾಮಣಿ ಆಪೋದೇವಿಯೂ ಇದ್ದಾಳೆ. ಆದರೆ, ಈ ಆಪತತ್ತ್ವವು ಅವೆಸ್ತಾದಲ್ಲಿ ಮರ್ಯಾದೆ ಮೀರಿ ಪ್ರಕಾಶತತ್ತ್ವವನ್ನು ಆವರಿಸುವ ವೃತ್ರಶಕ್ತಿಯಾಗಿ ಪರಿಣಮಿಸಿಲ್ಲ. ಆದರೆ, ಪ್ರಕಾಶತತ್ತ್ವಪೂಜಕ ಸಂಸ್ಕೃತ ಭಾಷಿಕರ ದೈವತಗಳು, ಇಂದಿನ ಋಗ್‌ವೇದದಲ್ಲಿ ಆಪ:ರಸ ತತ್ತ್ವದ ಪ್ರಭಾವಕ್ಕೆ ಒಳಗಾಗಿದ್ದುದು ಕಾಣುತ್ತಿರುವುದಂತೂ ನಿಜ! ಆದಕಾರಣ, ಭಾರತದಲ್ಲಿ ಕಾಣುವ ಈ ಸ್ಥಿತ್ಯಂತರದ ಕೊನೆಯ ಹಂತಕ್ಕೂ ಮುಂಚಿನ ಭಾಗವು, ಹಿಟ್ಟೈಟ್ ಪರಿಸರದಲ್ಲೆ ಪ್ರಾರಂಭವಾಗಿರುವ ಶಕ್ಯತೆಯಿದೆ.

ಈ ಶಕ್ಯತೆಯು, ಅವೆಸ್ತಾದ ಅರೇದ್ವೀ ಸೂರಾ ಅನಾಹಿತಾ ಎಂಬ ಆಪೋದೇವಿಯ ಪೂರ್ವರೂಪವಾದ ಅನಹಿತಾ, ಅನಹಿತ ಮತ್ತು ಅನತ್‌ನಾಮ ಸಂಕೇತದ, ಹಿಟ್ಟೈಟ್ ಕ್ಯಾನನ್ ಭಾಗದ ಆದಿಮಾತೆಯಿಂದ ಸೂಚಿತವಾಗುತ್ತಿದೆ. ರುಂಡಮಾಲಾಧಾರಿ ದುರ್ಗಾಕಾಲಿಯನ್ನು ಹೋಲುವ ಮೃತ್ಯುಶಕ್ತಿ ಆಪೋದೇವಿ : ಅನತ್-ಅನಹಿತಳನ್ನು ಅವೆಸ್ತದ ಕವಿಗಳು ಒಬ್ಬ ಆದರ್ಶ ಕಲ್ಯಾಣಕಾರಕ ಶಕ್ತಿರೂಪಕ್ಕೆ ಮಾರ್ಪಡಿಸಿಕೊಂಡುದುಂಟು ! ಋಗ್‌ವೇದದ ಪ್ರಧಾನ ಆಪೋದೇವಿ ಅದಿತಿ, ಪ್ರಚ್ಛನ್ನಕಾಲಿಯಾಗಿದ್ದಾಳೆ. ಈ ಸಂಹಿತೆಯಲ್ಲಿ! ಅದಿತಿ ಹೋಲುವ ಪಾತ್ರವು ಅವೆಸ್ತಾದಲ್ಲಿ ಇಲ್ಲ, ಎಂಬುದು ತೀರ ಸ್ಥೂಲವಿಮರ್ಶೆ, ಅರೇದ್ವೀ ಸೂರಾ ಅನಾಹಿತಾ ಪಾತ್ರದ ಮೂಲದ್ರವ್ಯ ಆಪತತ್ತ್ವ. ಈ ಆಪತತ್ತ್ವದ ಇಡಿಯಾದ ಅರ್ಥದ ಆಕೃತಿ, ಜೀವನ ಮತ್ತು ಮೃತ್ಯು ಸ್ವರೂಪವೇ ಪ್ರಧಾನ್ಯದಿಂದ. ಋಗ್‌ವೇದದಲ್ಲಿ ಮೃತ್ಯುಶಕ್ತಿಯ ದೈವತಗಳು ಅಮೃತಸ್ವರೂಪದ ವೇಷತಾಳುವ ಕಾರಣವೇನಿರಬಹುದು?

ಅವೆಸ್ತಾಗ್ರಂಥಸ್ಥ ಪ್ರಮಾಣಗಳಿಂದ ಭಾರತದಲ್ಲಿ ಸಹ ಇರಾಣಿನಂತೆ ಪ್ರಕಾಶತತ್ತ್ವ ಪೂಜಕ-ಸಂಸ್ಕೃತ ಭಾಷಿಕರ ಪಂಗಡವು ಇತ್ತು ಎಂದು ದೃಢಪಟ್ಟಿದೆ. ಋಗ್‌ವೇದದಲ್ಲಿ ಧೀಪ್ರೇರಕ ಸವಿತೃ (: ಸೂರ್ಯ), ಪ್ರಕಾಶ ಮಾರ್ಗ ಸೂಚಕ ಪೂಷನ್, ವೃತ್ರ ಅಹಿಹನ್ ಇಂದ್ರ ಇಂಥ ಪ್ರಕಾಶತತ್ತ್ವದ ದೈವತಗಳಿರುವುದಾಗಿ ಇಂದಿನ ಸಂಹಿತೆಯಲ್ಲಿ ಹಾಗೂ ಇಂದಿನ ವರೆಗಿನ ಸಂಪ್ರದಾಯದಲ್ಲಿ ಇರುವ ಅವಶೇಷಗಳಿಂದಲೂ ಅರಿಕೆಗೆ ಬರುತ್ತಿದೆ. ಈ ಪ್ರಕಾಶತತ್ತ್ವದ ಸೌರ ದೈವತಗಳನ್ನು ಒಮ್ಮೆಲೆ ರಾತ್ರೀ ಸಂಪ್ರದಾಯದ ಚಾಂದ್ರದೈವತಗಳನ್ನಾಗಿ ಮಾರ್ಪಡಿಸುವುದು ಅಶಕ್ಯವಾಗಿ, ಈ ವಾ ನ ವಾ ಶೈಲಿಯ ಪ್ರಚ್ಛನ್ನವರ್ಣನಾ ತಂತ್ರವನ್ನು ಸ್ವೀಕರಿಸಿದ್ದು ಕಾಣುತ್ತಿದೆ.

ಕ್ರೀಟ್, ಈಜಿಪ್ಟ್, ಹಿಟ್ಟೈಟ್, ಸುಮೇರು ಅಸ್ಸೀರಿಯಾ ಇರಾಣ ಭಾಗದ ಸಾಂಸ್ಕೃತಿಕ ಸಂಬಂಧ ಲೆಕ್ಕಿಸದೆ ನಮ್ಮ ಸಂಸ್ಕೃತಿಯ ಅರ್ಥವಾಗದು. ಸುಮೇರಿನ ಧೀ (: ಪ್ರಕಾಶ) ದೈವತ ಎಂಕಿ, ಋಗ್‌ವೇದದ ವೃತ್ರ : ಅಹಿಹನ್ ಇಂದ್ರ (ಸವಿತೃ-ಸೂರ್ಯ) ದೈವತ ಹೋಲುತ್ತಾನೆ. ಭಾರತದಲ್ಲಿ ಇದ್ದ ಆಪ: ರಸ ಪಂಥೀಯರಲ್ಲಿ, ಸುಮೇರಿನಂತೆ, (ಎಂಕಿಯ) ಪ್ರವೃತ್ತಿಪರ ಜೀವನರೀತಿಯನ್ನು ಮೆಚ್ಚಿಕೊಂಡ ಶಾಖೆಯೂ ಇರುವ ಶಕ್ಯತೆಯಿದೆ. ಇರಾಣಿನ ಅವೆಸ್ತಾ ಗ್ರಂಥದ ಮೂಲಕ ಗೊತ್ತಾಗುವ ಋಗ್‌ವೇದದ ಸೋಮ > ಹೋಮ, (ಜಾತವೇದ) ಅಗ್ನ್ಯಾರಾಧಕರ ಪಂಗಡವು ಇಲ್ಲಿಯ ಪ್ರವೃತ್ತಿಪರ ಆಪ : ರಸ ಸಂಪ್ರದಾಯಿಗಳ ಶಾಖೆಯೊಡನೆ ಒಂದು ಗೂಡಿರಲಿಕ್ಕೆ ಬೇಕು. ಆದರೆ, ಪಾಶ್ಚಾತ್ಯ ಸಂಶೋಧಕರು ನಿರ್ಮಿಸಿದ ಆರ್ಯ-ದ್ರಾವಿಡ ಇಂತಹ ಶಬ್ದಪ್ರತಿಮೆಗಳ ಕನ್ನಡಕದೊಳಗಿಂದಲೇ ನೋಡುವ ಮೂಲಕ ಆ ಪುರಾತನ ಕಾಲದ ಬೇರೆಬೇರೆ ಪ್ರದೇಶಗಳ ಸಾಂಸ್ಕೃತಿಕ ಘಟನೆಗಳ ಆಘಾತ-ಪ್ರತ್ಯಾಘಾತಗಳನ್ನು ಲೆಕ್ಕಿಸುವ ಆವಶ್ಯಕತೆಯೂ ಎನಿಸದಾಗಿದೆ-ನಮ್ಮ ತಜ್ಞರೆಂಬುವರಿಗೂ! ಆದರೆ, ಸುಮೇರು-ಅಕ್ಕಡ ಸಂಸ್ಕೃತಿಯ ಪುರಾತನ ಉಲ್ಲೇಖಗಳ ಮೇಲಿಂದ, ಸುಮೇರಿನ ಪುರಾತನರು, 'ಸ್ವರ್ಗೀಯ ನಂದನವನ (Paradise land Dilmun) ಎಂದರೆ ಅದು ಭಾರತವೇ ಎಂದು ಬಗೆದ ಹಾಗಿನ ಒಂದು ಉಲ್ಲೇಖ ದೊರೆಯುತ್ತಿದೆ ಎಂದು ಡಾ. ಕ್ರ್ಯಾಮರ ಬರೆಯುತ್ತಾರೆ.

ಧೀ (ಪ್ರಕಾಶ) ದೈವತ ಎಂಕಿ ಸಂಪ್ರದಾಯವು ಪ್ರಭಾವಶಾಲಿಯಾಗಿದ್ದ ಸುಮೇರಿನ ಪುರಾತನರಿಗೆ, ಆದರ್ಶ ನಂದನವನ ಎನಿಸಬೇಕಾದರೆ, ಭಾರತದಲ್ಲಿ, ಅಂದು, ಪ್ರಕಾಶರೂಪ (ಸವಿತೃ) ದೈವತದ ಸಂಪ್ರದಾಯದ ಸಮಯ :

ಆಚಾರ-ವಿಚಾರಗಳಿಗೆ ಪ್ರಾಶಸ್ತ್ಯವಿದ್ದಿತೆಂದು ಅರ್ಥ ಹೊರಡುತ್ತದೆ. ಸದಾ (ಸಂ) ಯೋಗಾಸಕ್ತ ತ್ರೈಮತ್-ಅಪ್ಪುಗಳನ್ನು ನಿರ್ನಾಮಮಾಡಿದ ಎಂಕಿ ಸಂಪ್ರದಾಯದ ವಿಚಾರವಂತರಿಗೆ, ಭಾರತೀಯ ಜೀವನರೀತಿಯಲ್ಲಿಯೂ ತಮ್ಮ ಮೆಚ್ಚುಗೆಯ ಅಂಕಿಯನ್ನು ಹೋಲುವ ದೈವತ ಸಂಪ್ರದಾಯವು ಇದ್ದುದನ್ನು ಕಾಣಲು ದೊರೆಯುತ್ತಿರುವ ಶಕ್ಯತೆ ಇದೆ. ಇಂದಿನ ಸಂಹಿತೆಯಲ್ಲಿಯೂ ಉಳಿದಿರುವ ಎಂಕಿ ಸದೃಶನು, ಪಿತೃಹಂತಕನೆಂಬ ವೃತ್ರಹನ್ ಇಂದ್ರ ಈ ಪಾತ್ರವೇ ಇದಕ್ಕೆ ಪ್ರಮಾಣ.

ಆಪ : ರಸಪಂಥೀಯ ಎರಡು ಶಾಖೆಗಳ ಅಸ್ತಿತ್ವವನ್ನು ಗೃಹೀತ ಹಿಡಿಯದೆ ಋಗ್ವೇದದಲ್ಲಿ ಇರುವ ಇಬ್ಬಗೆಯ ಇಂದ್ರರ ಪ್ರತಿಮೆಗಳ ತೊಡಕಿನ ಅರ್ಥ. ಆಗುವುದಿಲ್ಲ. ವೃತ್ರಹನ್ ಇಂದ್ರನು ಶಿಶ್ನೋದೇವರನ್ನು ಮತ್ತು, ಯತಿಗಳನ್ನು ಸಂಹರಿಸಿದವನು. ಇವನಿಗೆ ಏಕಾಕ್ಷ ಪುರುಷ=ಸರ್ಪ ಅಥವಾ ಚಾಕ್ಷುಷೀ ಪುರುಷಯೋಗ ಇದು ಮಾನ್ಯವಿರಲು ಶಕ್ಯವಿಲ್ಲ. ಆದರೆ, ಛಾಂದೋಗ್ಯದಲ್ಲಿ ಅಸುರ ವಿರೋಚನನ ಸಂಗಡ ಬ್ರಹ್ಮಜ್ಞಾನಕ್ಕಾಗಿ ಗುರು=ಪ್ರಜಾಪತಿಯಲ್ಲಿ ಬರುವ ಇಂದ್ರನು ಸಂಸಾರತ್ಯಾಗ ಮಾಡಿದವನು : ಸತಿ =ಸೇತು, ಮಾರ್ಗಿ ಸ-ತೀ-ಯ ಉಪಾಸನೆಯ ಮೂಲಕ ಚಾಕ್ಷುಷೀ ಪುರುಷನಾಗಿ ವಿಶ್ವದ ಅಧಿ ಅಕ್ಷ ಸಿದ್ಧಿಪಡೆವ ಭಗ-ವಂತ ಪದವಿಯ ಹಂಬಲಿಗನಾಗಿರುವುದು ಕಾಣುತ್ತದೆ. ದಿವೀವ ಚಕ್ಷುತ್ತ ಜಾಗೃವಾಂಸರ ರಾತ್ರೀ ಸಮಯಾಚಾರ. ಆದರೆ, ಪ್ರಕಾಶ ತತ್ತ್ವದ ಸೂರ್ಯರೂಪನೆಂಬ ಇಂದ್ರನು; ರಾತ್ರೀ-ಸಂಪ್ರದಾಯದ ಶತ್ರುವು, ಮೂರನೆಯ ಕಣ್ಣಿನ ಸಿದ್ಧಿಯ ಯೋಗದ ಸರ್ಪಾಕ್ಷಸೂರ್ಯ ಸಿದ್ಧಿ ಈಜಿಪ್ಷಿನ ಆಪ:ರಸದ ಹೋಲಿಕಯದೂ ಆಗಿದೆ.

ಸುಮೇರಿನ ಶೃಂಗಿ:ಪುರುಷ ವೀರನು, ಗಿಲ್ಗಮೇಶನ ಸಂಗಾತಿಯಾಗಿ, ಲೋಕದಲ್ಲಿ ಕೆಡಕು (evil) ಉಳಿಯಗೊಡದಿರುವ ಹೋರಾಟದಲ್ಲಿ, ವೀರಮರಣವನ್ನು ಸ್ವಾಗತಿಸಿದ್ದಾನೆ. ಆದರೆ, ಭಾರತೀಯ ಶೃಂಗಿಪುರುಷನು ಇಂದಿಗೂ ಅಮರನು! ಶೃಂಗವೇ ಈ ವಿಶ್ವಸ್ಥ ವಿದೇಹಿ ಜನಸಶಕ್ತಿ ಇದೇ ಬ್ರಹ್ಮನ ತತ್ತ್ವ. ಆದುದರಿಂದ. ಪರಮೇ ಪದೇ ಅಮರರಾಗಿ ಇರಬಯಸುವವರು ಸ್ವಯಂ ಶೃಂಗಸ್ವರೂಪರಾಗಿ ಚಾಕ್ಷುಷೀಪುರುಷ ಸಿದ್ಧಿಯನ್ನು ಪಡೆಯುವುದು ಒಂದೇ ಉಪಾಯ. ಸೈಂಧವ ಸಂಸ್ಕೃತಿಯಲ್ಲಿ ದೊರೆವ ಸಾಂಕೇತಿಕ ಪ್ರತಿಮೆಗಳು ಈ ಹಂತದ ಜೀವನರೀತಿಯ ಸೂಚಕವಾಗಿವೆ. ಇಂದಿನ ಋಕ್‌ಸಂಹಿತೆ ಉಪನಿಷದಾದಿಗಳಿಂದ ಈ ಅರ್ಥಕ್ಕೆ ಪುಷ್ಟಿ ದೊರೆಯುತ್ತದೆ.

ಈ ಪ್ರತಿಮೆಯ ಕೋಡುಗಳು ಕೋಣನವು. ಸುಮೇರಿನ ಆ ಸಾಂಸ್ಕೃತಿಕ ಪ್ರಾಚೀನ ಪರಂಪರೆ, ವೈಭವದ ಹಿರಿಮೆ, ಸೈಂಧವ ಸಂಸ್ಕೃತಿಯಲ್ಲಿ ಕಾಣುವುದಿಲ್ಲ. ಆದಕಾರಣ, ಈ ಶೃಂಗಿಪುರುಷನ ವಿಚಾರ, ಮೂಲ ಅಲ್ಲಿಯದೇ ಇರಬೇಕು, ಎಂದು ಹೇಳುವ ಒಲವು ಇದ್ದರೂ, ಸಂಶೋಧಕರಿಗೆ ಒಂದು ಮಾತು ಅಡ್ಡಬರುತ್ತಿದೆ. ಸುಮೇರ ಭಾಗದಲ್ಲಿ ಕಾಡುಕೋಣಗಳು ಇಲ್ಲ! ಆದಕಾರಣ ಕೋಣನ ಕೊಂಬು ಪೂಜ್ಯವಿರುವ ಭಾಗದಲ್ಲೇ ಮೊದಲು ಈ ಕೊಂಬಿನ ದಿವ್ಯಪುರುಷನ ಪ್ರತಿಮೆ ನಿರ್ಮಿತವಾಗಿರಲಿಕ್ಕೆ ಬೇಕು. ಭಾರತದಲ್ಲಿ ಕೋಣಗಳಿಗೆ ಕೊರತೆ ಇಲ್ಲ. ಆದರೆ, ಭಾರತವು ಈ ಪ್ರತಿಮೆ ಸೃಷ್ಟಿಸಿತು, ಎಂದು ಹೇಳಲು ಇಷ್ಟವಿಲ್ಲ! ಆದರೆ, ಇದರಕಾರಣಗಳು ಮಾರ್ಶಲ್ ವರದಿಯಲ್ಲಿ ಇಲ್ಲ.

ಕೋಣನ ಬಗೆಗೆ ಭಾರತದಲ್ಲಿ ಉಪಲಬ್ಧ ಪುರಾತನ ಉಲ್ಲೇಖ ಮತ್ತು ಸನಾತನ ಸಂಪ್ರದಾಯದ ವಿಚಾರ ಬೆಳಕಿನಲ್ಲಿ ತರುವ ಆವಶ್ಯಕತೆ ಕಾಣುತ್ತದೆ. ಮಹಿಷಿ ಎಂದರೆ ಪಟ್ಟದ ಅರಸಿಯೇ : ಮಹಾರಾಜ್ಞಿ. ಈ ಹಿರಿಮೆಯ ಅರ್ಥವು, ಆಪ:ರಸ ಸಂಪ್ರದಾಯದ ಕೋಣನ ಬ್ರಹ್ಮಶಕ್ತಿಯ ಬಗೆಗಿನ ಶ್ರದ್ಧೆಯನ್ನು ಬಹಿರಂಗಪಡಿಸುತ್ತದೆ. ಚಂದ್ರ (ಸೋಮ : ರೇತ) ಶಕ್ತಿಯ ಸ್ತೋತ್ರದಲ್ಲಿ ಬ್ರಹ್ಮಾದೇವಾನಾಂ ಪದವೀ ಕವೀನಾಂ, ಮಹಿಷಃ ಮೃಗಾಣಾಂ ಎಂದು ಋಗ್ವೇದವು ವರ್ಣಿಸಿದೆ! ದೇಮಮ್ಮನಿಗೆ (ದುರ್ಗೆಯ ಅಕ್ಕ) ಮೀಸಲು ಬಿಡುವುದು ಕೋಣನನ್ನೇ ! ಈ ದೇವಿಯನ್ನು ಮಹಿಷಾಸುರಮರ್ದಿನಿ ಎಂದುದು ಮಾತಾಸಂಪ್ರದಾಯದ ಕಾಲದ ನಡೆವಳಿ ಸೂಚಕವಾಗಿದೆ. ಅಂದು ರಾಜನ್ ಪಟ್ಟದ ಪುರುಷ, ಪಶುವಿನಂತೆ ವರ್ಷಕ್ಕೊಮ್ಮೆ ವಧಿಸಲ್ಪಡುತ್ತಿದ್ದಿತು ! ಅದಿರಲಿ, ಆದಿಮಾತೆ ಕೋಣ=ಪುರುಷ ಪಶುಪ್ರಿಯೆ ಎಂಬ ಸಂಪ್ರದಾಯ ಭಾರತದಲ್ಲಿ-ಕಂನಾಡಿನಲ್ಲಂತೂ ಇಂದಿಗೂ ಇದೆ! ಮಹಿಷಿಯ ಪ್ರತಿ ಮಹಿಷನು, ಮಹಿಷೋ ಮೃಗಾಣಾಂ ಎಂಬ ಚಂದ್ರನೇ; ಮೂಲ ಮಹಿಷಿ=ಚಂದ್ರಾದೇವಿ. ಈ ಚಂದ್ರಾಂಬೆ=ಮಹಿಷಿ, (ತನ್ನ ಪತಿ) ಮಹಿಷಾಸುರರನ್ನು ಕೊಲ್ಲುತ್ತಾಳೆ! ಹಯಗ್ರೀವ ವಿಷ್ಣು, ಹಯಗ್ರೀವ ದೈತ್ಯನ ಸಂಹರಿಸಿದ ಕಥೆಯೂ ಇದೇ ಮಾದರಿಯ ತಂತ್ರವಾಗಿದೆ.

ಸುಮೇರಿನ ಎಂಕಿಡು ಮಹಿಷಶೃಂಗಧಾರಿ ಆಗುವ ಈ ರೀತಿ, (ಭಾರತೀಯ ಮೂಲದ್ದೊ?) ತಿಳಿಯದಿದ್ದರೂ ಉಳಿದ ರೂಪ ನೂರಕ್ಕೆ ನೂರರಷ್ಟು ಹೋಲುತ್ತಿದೆ! ಆದರೆ, ಏಕ-ಶೃಂಗ ಪಶುವಿನ (unicorn) ಕಲ್ಪನೆ, ಭಾರತೀಯ ಮೂಲದ್ದೇ ಇರಬೇಕೆಂದು ಮಾರ್ಶಲ್ ವರದಿಯಲ್ಲೆ ಸೂಚಿತವಾಗಿದೆ! ಆದರೂ ಈ ವಿಚಾರವು ಇನ್ನೂ ಅನಿರ್ಣಿತವಾಗಿಯೇ ಉಳಿದಿದೆ!

ಚಿತ್ರ ನಂ. ೧೮

ಕುರುಂಬ ರಾಜ, ಆದಿವೀರ : ತಿಪರ್ಣದಂಡಧಾರೀ ಪುರುಷ

ಸುಮೇರಿನ ಡುಮುಝಿ ಪ್ರತಿಮೆಯ ವೈಶಿಷ್ಟ್ಯವೆಂದರೆ ಇವನು ಐತಿಹಾಸಿಕ ಸ್ವರೂಪದ ಮಹಾಪುರುಷ. ಮಡಿದ ಬಳಿಕ ವಿಶಿಷ್ಟ ಸಮಯ : ಆಚಾರದ ಮಾನದಂಡನಾಗಿ ಅಮರದೇವತಾ ಪದವಿ ಪ್ರಾಪ್ತವಾದ ಮನುಜ. ಯದು-ತುರ್ವಸು ವಂಶ ಐತಿಹಾಸಿಕ ಸ್ವರೂಪದ ಮನೆತನ. ಯಾದವ ಕೃಷ್ಣನನ್ನು ಡುಮುಝಿ-ಮಾದರಿಯ ಮಹಾಪುರುಷ ಎನ್ನಬಹುದು. ಆದರೆ, ಕೃಷ್ಣನ ಸಾಂಕೇತಿಕತೆಯಲ್ಲಿ ದಿಕ್ಕಾಲ ಪರಿಸರದ ವಾಸ್ತವ : ಸತ್ಯದ ಭಾಗವು, ಗ್ರಹಿಸಿಕೊಳ್ಳಲು ಆಗದಷ್ಟು ತೀರ ವಿರಲವಾಗಿದೆ! ಋಗ್ವೇದಸ್ಥ 'ದ್ರಪ್ಸಃ ಕೃಷ್ಣ ಸಂಕೇತವು ನೀರು ಹನಿವ ಕರಿಯ ಎಂಬ ಅರ್ಥದಿಂದಾಗಿ, ಇದು ಹಿರಣ್ಯಗರ್ಭದ ಕ(ಂ) ದೈವತದ ಪರ್ಯಾಯ ಪ್ರತಿಮೆಯಾಗುತ್ತದೆ. ಗೀತೆಯ ಊರ್ಧ್ವಮೂಲ ಅಶ್ವತ್ಥ=ವೃಕ್ಷರೂಪ ಪುರುಷ ರೂಪನೆಂಬ ಸಾಂಕೇತಿಕತೆಯಿಂದ ಋಗ್‌ವೇದಸ್ಥ ದ್ರಪ್ಸಃ ಕೃಷ್ಣ ಈ ನಾಮರೂಪದ ಅರ್ಥವು ದೃಢಪಡುತ್ತದೆ. ಈ ಭಗವಂತನ ಕೊನೆ ವೃಕ್ಷದ ಅಡಿಯಲ್ಲಿಯೇ ಆದುದಾಗಿ ಕಥೆ! ಈ ಭಗವಂತನ ಪಾದಕ್ಕೆ ತಾಗಿ ಆ ಬಾಣದಿಂದ ಸಾವು ಬಂದುದಾಗಿ ಹೇಳಲಾಗುತ್ತದೆ. ಯಾದವ ಕೃಷ್ಣನ ಕೊನೆಯಲ್ಲಿ ಹೇಳುವ ಈ ಘಟನೆಯಲ್ಲಿ ಮಾತ್ರ ವಾಸ್ತವಾಂಶವು ಇರುವ ಶಕ್ಯತೆಯಿದೆ.

ಕುರುಂಬ ರಾಜನೆಂಬ ಡುಮುಝಿಯ ಸಂದರ್ಭದಲ್ಲಿ ಯಾದವ ಕೃಷ್ಣನ ನೆನಪು ಅನಿವಾರ್ಯವಿದೆ. ಈ ದುಗ್ಧಾಬ್ಧಿಚಂದ್ರ ಹಾಲುಮತದ ಅಸದೃಶ ಮಹಾವೀರ. ಕಡೆಗೋಲ ಕೃಷ್ಣ ಈ ಪ್ರತಿಮಾ ನಿರ್ಮಿತಿಯೊಳಗಿನ ಸಾಂಕೇತಿಕತೆ, ಪೌರ್ಣಿಮಾಂತ ಸಮಯಾಚಾರದ ಹಾಲುಮತದ ದರ್ಶನವಿದೆ. ಶ್ರೀಲಕ್ಷ್ಮೀ ರಮಣನೆಂಬುದು ಕಾಲೋsಸ್ಮಿ ಎಂಬ ಮೃತ್ಯುಸ್ವರೂಪ ನಿಲುಮೆಗೆ ವಿಪರೀತ. ಆದರೆ, ಅಶ್ವತ್ಥವೃಕ್ಷದ ಸುವಿರೂಢ ಮೂಲವನ್ನು ಅಸಂಗಶಸ್ತ್ರದಿಂದ, ದೃಢಭಾವದಿಂದ ಛೇದಿಸಲು ಅಪ್ಪಣೆಯನ್ನೀವ ಕೃಷ್ಣನು ಮೃತ್ಯುರೂಪನು. ಈತನೇ ಚಂದ್ರಭಾಗಾತೀರದ ವೀರ ಪುರಂದರವಿಠಲನು ಆದರೆ, ಪುರಗಳನ್ನು ಭಂಗಮಾಡಿದನೆಂಬ ಸಂದೇಹವೂ ಉಂಟಾಗಲಾರದ ಅ-ಭಂಗ (ವಿಠಲ) ನಾಮ ರೂಢಿಸಿರುವ ಕೌಶಲ, ವೇದೋಪನಿಷತ್ತುಗಳಲ್ಲಿ ಪ್ರತೀತಿಗೆ ಬರುವ ವಾ ನ ವಾ ಶೈಲಿಯ ಅಹಿಮಾಯಾ ಶಕ್ತಿಯುತವಾಗಿದೆ ! ಇಂದ್ರನೆಂಬ ಒಂದು ಪ್ರತಿಮೆ ಪುರಗಳನ್ನು ನಾಶಮಾಡಿದ ಆರೋಪಕ್ಕೆ ಒಳಗಾಗುವಂತೆ ಸಂಭ್ರಮ ನಿರ್ಮಿಸಲಾಗಿದೆ ! ಒಂದೇ ಏಕಂ ಸತ್ ಶಕ್ತಿ, ಹಲವು ನಾಮಧಾರಣ ಮಾಡುವ ಮಾದರಿ ಇದು! ಋಗ್‌ವೇದದ ಪುರಂದರನೆಂಬ ಇಂದ್ರಸಂಕೇತದ ವಿಷ್ಣು ಶಕ್ತಿಯೆ, ಕೊನೆಗೆ ವಿಠ್ಠಲನಾಮಾಂತರದಿಂದ ಪೂಜೆಗೊಳ್ಳುತ್ತದೆ! ಈ ಹೇಳಿತದ ಬಗೆಗಿನ ಸಂದೇಹ ನಿವಾರಣೆಗಾಗಿ ಋಗ್‌ವೇದದೊಳಗಿನ, ವಜ್ರಸಂಕೇತ ಮತ್ತು ಆಹನಸ್ಯ ಸಾಧನ ವಧರ್ಯಂತೀ ಸಂಕೇತ ಇವೆರಡೂ ಒಂದೇ ಎಂದು ನಿರುಕ್ತಕಾರ ಮತ್ತು ಭಾಷ್ಯಕಾರ ಹೇಳುತ್ತಿರುವುದನ್ನು ಅವಲೋಕಿಸಬೇಕು ಇಂಥ ಇನ್ನೂ ಹಲವು ಪ್ರಯೋಗಗಳಿವೆ. (ಇಲ್ಲಿ ಇಷ್ಟೆ ಸಾಕು). ಪ್ರಸ್ತುತ ಗಮನ ಸೆಳೆಯಬೇಕಾದ ಸಂಗತಿ : ವೇದದಲ್ಲಿ ಸೂಚಿತ ವಿಷ್ಣು ಕೃಷ್ಣ ಸಂಪ್ರದಾಯವು, ಅಮಾವಾಸ್ಯಾಂತ ಜೀವನ ರೀತಿಯ ಉಪಾಸಕರ ದೈವತ. ಆದರೆ, ಕಡೆಗೋಲ ಕೃಷ್ಣ ಗೋಪೀವಲ್ಲಭ ಕೃಷ್ಣನು, ಪೌರ್ಣಿಮಾಂತ ಸಮಯಾಚಾರದ ರಾಸಕ್ರೀಡಾಲೋಲನು. ಏಕಂ ಸತ್ ತತ್ತ್ವದ ಸನಾತನ ಆಕೃತಿಗಳು ಎರಡು : ೧) ರಾಸಕ್ರೀಡೆ ೨) ತಾಂಡವ ನೃತ್ಯ!

ಪಂಡರಿಗೆಯ ಪುರಂದರ ವಿಠ್ಠಲ ಪ್ರತಿಮೆಯ ಕಿರೀಟದ ಆಕೃತಿಯನ್ನು ಸಾಂಪ್ರದಾಯಿಕರು ಲಿಂಗದ ಸಂಕೇತವೆಂದು ಹೇಳಿದ್ದಾರೆ! ಈ ಏಕಶೃಂಗಿದೇವ ಭಾರತೀಯ ಎಂಕಿಡು! ಲಿಂಗ ಈ ನಾಮಸಂಕೇತ ತೀರ ಅರ್ವಾಚೀನ. ವೇದಕಾಲೀನ ಪರಿಭಾಷೆಯಲ್ಲಿ ಇದು ಅಕ್ಷ ಸ್ತೂಪ ಸ್ಕಂಭ, ಶೃಂಗ ಆಕೃತಿ, ಇದು ಅಪಾಂನಪ್ತೃಶಕ್ತಿ; ಹಾಲಿನ ಅಭಿಷೇಕ! ಈ ಹಯವದನ ಶೃಂಗದೇವನಿಗೆ ದುಗ್ಧಾಭಿಷೇಕ! ಅದ್ಭುತರಮ್ಯ ಸಾಂಕೇತಿಕತೆ! ವಿಷ್ಣೋಃ ನು ಕಂ ವೀರ್ಯಾಣಿ ಪ್ರವೋಚಂ ಕ(ಂ) ಚಂದ್ರಾಃ ಆಪಃ ಶಕ್ತಿತತ್ತ್ವ ಕಣ್ಣಮ್ಮ (ಉಭಯಲಿಂಗೀ) ದೈವತದ ಏಕಂಸತ್ ರೂಪವು ಪೃಥಕ್ ರೂಪವಾಗಲು (ಎರಡು) ಕಣ್ಣುಗಳಲ್ಲಿ ಒಂದು ಕಣ್ಣೇಶ್ವರ: ಕೃಷ್ಣೇಶ್ವರ ರೂಪದಲ್ಲಿ ಕಂನಾಡಿನಲ್ಲಿ ಉಂಟು ! ಶೈವ ವೈಷ್ಣವರೊಪಗಳ ಮಧ್ಯಸ್ಥ ಸಾಂಕೇತಿಕ ಪ್ರತಿಮೆ ಇಲ್ಲಿದೆ. ನಿಜವೇ? ತಜ್ಞರು ಹೇಳಬೇಕು?

ಮಹಾರಾಷ್ಟ್ರದಲ್ಲಿ ವೀರವಿಠ್ಠಲನ ಸಂಪ್ರದಾಯವು ಇತ್ತು. ಆದರೆ, ಈ ವೀರ ಸಂಪ್ರದಾಯ ಮೂಲತಃ ರಾತ್ರೀಸಮಯಾಚಾರ. ಪುರಾತನ ಪಂಚರಾತ್ರ, ನವರಾತ್ರಾದಿಗಳು ವೀರ ಸಂಪ್ರದಾಯ ಪ್ರಕಾರಗಳೇ. ಆದರೆ ಕಾಲಪ್ರವಾಹದ ಒತ್ತಾಯದಲ್ಲಿ ಮಾನವಪ್ರಜ್ಞಾವಿಕಾಸದ ಹಿನ್ನಲೆಯಲ್ಲಿ ಈ ಸಂಪ್ರದಾಯ, ಶಿಷ್ಟಮಾನ್ಯವಾಗಿ ಉಳಿಯಬೇಕಿದ್ದರೆ ಅದು ಆ ಸಮಯಕ್ಕೆ ಸುಸಂಗತವಾದ ನೂತನ ಆಕಾರ ಪಡೆಯಲೇಬೇಕಾಗುತ್ತದೆ. ನಾರಾಯಣ (ನಾರ-ಅಯನ) ಅನು-ಸ್ಥಾನವೂ ವೀರಧರ್ಮವಾಗಿತ್ತು. ಗದುಗಿನಲ್ಲಿ ಮಾತ್ರ 'ವೀರನಾರಾಯಣ' ನಾಮಸಂಕೇತವು, ಎಂತೂ ಜೀವಂತ ಉಳಿದಿದೆ! ಜ್ಞಾನೇಶ್ವರನಿಗೂ ಸ್ವಲ್ಪ ಮುಂಚಿನ ಚಕ್ರಧರನು: ಮಹಾನುಭಾವ ಸಂಪ್ರದಾಯದ ಶ್ರದ್ಧೆಯಂತೆ ಶ್ರೀಕೃಷ್ಣನ ಅವತಾರಿ. ಈತ ಸ್ವತಃ ಹೇಳಿದ ವಿಠ್ಠಲು ವೀರ ಕುರಿತ ಕಥೆ, ಈತನ ಲೀಳಾಚರಿತ್ರದಲ್ಲಿದೆ. ಆದರೆ, ಜ್ಞಾ ನೇಶ್ವರನಿಂದ ಪ್ರಚಲಿತ ಪರಿಶೋಧಿತ ಸಂತವಿಠ್ಠಲ ಪಂಥವು, ಪಂಡರಿಗೆಯನ್ನು ತನ್ನದಾಗಿಸಿಕೊಳ್ಳುತ್ತದೆ. ಆಗ, ಈ ವೀರನು ವಿಜಯವಿಠ್ಠಲ ನಾಮಾಂತರದಿಂದ ಚಂದ್ರಭಾಗೆಯಿಂದ ತುಂಗೆಯ ತಡಿಗೆ ಆಶ್ರಯಕ್ಕೆ ಬರುತ್ತಾನೆ, ವಿಠ್ಠಲನನ್ನು ವೀರ ಬೀರನ ರೂಪದಲ್ಲಿ ಭಜಿಸುವ ಕುರುಬ=ಧನಗರ (ದನಗಾರ) ಪಂಗಡ ಕರ್ಣಾಟ ಮರ್‍ಹಾಟದ ಗಡಿಯಲ್ಲಿ ಇಂದಿಗೂ, ನೋಡಲು ದೊರೆಯುತ್ತದೆ! ನಿಪ್ಪಾಣಿಯ ಹತ್ತರದ ಅಪ್ಪಾನ (ಅಪ್ಪಾಜೀ) ವಾಡಿಗ್ರಾಮ ವೀರವಿಠ್ಠಲನ ಕ್ಷೇತ್ರ ! ಸೂರಾ ದೇವೀ ಮಗ ಬೀರ ಎಂಬ ಶ್ರದ್ಧೆಯ ಕುರುಬ-ಧನಗರ ಪರಂಪರೆಯೂ ಈ ಭಾಗದಲ್ಲೇ ಉಂಟು! ಇದು ಅಮಾವಾಸ್ಯಾರಾಧನೆಯ ಸೂಚಕ ಸಂಪ್ರದಾಯ.

ಹಾಲುಮತವು, ಮೊದಲಲ್ಲಿ ನಿಜವಾಗಿ, ಕುರುಬ : ದನಗಾರರು ರೂಪಿಸಿದ ಸಮಯಾಚಾರ, ಸುಮೇರಿನ ಆದಿವೀರ ಡುಮುಝಿಯ ಬಗೆಗೆ ಬೆಳಕಿನಲ್ಲಿ ಬಂದಿರುವ ಸಂಗತಿಗಳಿಂದಲೂ ಇದು ದೃಢಪಡುತ್ತಿದೆ, ಕ್ರಿ. ಪೂ. ೩೦೦೦ ವರುಷಕ್ಕೂ ಪುರಾತನ ಲಿಖಿತ ಆಧಾರಗಳಿಂದ ಗೊತ್ತಾದ ಸಂಗತಿ; ತಜ್ಞರು ವಿವರಿಸಿದ್ದಾರೆ. ಇದು ಮೊದಲಲ್ಲಿ ಹುಣ್ಣಿಮೆ ನಡವಳಿ; ಕೊನೆಗೆ ಅಮವಾಸ್ಯೆಯೇ ಜೀವನದ ಸ್ಥಾಯೀಭಾವ ಎಂಬ ಜ್ಞಾನೋದಯವಾಗುತ್ತದೆ ಋಗ್‌ವೇದ ಹೇಳುವ ವಿಶ್ವದ ಆರಂಭಣಂ (ಅಥವಾ ಕಠದ ಪರಿಭಾಷೆಯ ಆ-ಲಂಬನಂ) ಸ್ವರೂಪೀ ವೃಕ್ಷವು=ಪ್ರಪಂಚರೂಪೀ ವೃಕ್ಷವು, ಕೊನೆಗೆ ಬೋಧಿವೃಕ್ಷವಾಗಿದೆ! ಈ ಸ್ಥಿತ್ಯಂತರವಾದುದು ಏಕೆ? ಹೇಗೆ? ಇದು ಬೆಳಕಿನಲ್ಲಿ ಬರಬೇಡವೆ?

ಚಿತ್ರ ನಂ. ೧೯

ಮಹಾಯೋಗೀ : ಈಶ್ವರ-ಕೃಷ್ಣ ಅಥವಾ ಕೃಷ್ಣೇಶ್ವರ

ಸಿಂಧೂತೀರದ ಅಗೆತದಲ್ಲಿ ದೊರೆತ ಈ ಪ್ರತಿಮಯ ಮೂಲ ವಿವರಣೆ ಮಾರ್ಶಲ್ ವರದಿ ನೀಡಿದೆ. ಮಹಾತಪ ಮಹಾಯೋಗಿ ಎಂಬ ಸಾಂಕೇತಿಕತೆಯ ಸಾಕ್ಷಾತ್‌ಮೂರ್ತಿ ಇದು. ಸೈಂಧವ ಸಂಸ್ಕೃತಿಯ ಅಂದಿನ ಸಮಯದ ಆಕೃತಿಯನ್ನು ಗ್ರಹಿಸಿಕೊಳ್ಳಲು ಈ ಒಂದು ಪ್ರತಿಮೆಯೂ ಸಾಕು. ಇಜಿಪ್ತಿನ ಜೀವನ ನೌಕಾಚಾಲಕ ದಿವ್ಯದೇವತೆಯ ಶಿರೋಭೂಷಣ ಸೂರ್ಯಾಕ್ಷ : ಸರ್ಪಯುಕ್ತವಿದೆ. ಆದರು, ಕೈಯೊಳಗಿನ ತ್ರಿಪರ್ಣ ಸಂಕೇತವು, ಇನ್ನೂ ತ್ರಿಶೂಲವಾಗಿ ಪರಿಣಮಿಸಿಲ್ಲ. ಸುಮೇರಿನ ಆದಿವೀರ ಡುಮುಝಿ ಕೈಯಲ್ಲಿ ತ್ರಿಪರ್ಣ ದಂಡವಿದೆ; ಅಕ್ಕಪಕ್ಕಗಳಲ್ಲಿ ತ್ರಿಪರ್ಣಸೂಚಕ ಸಂಕೇತ ತೋರಿಸಲಾಗಿದೆ. ಆದರೆ, ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿ ತ್ರಿಶೂಲವುಂಟು!

ತ್ರಿಪರ್ಣದ ಅರ್ಥ ಭಾರತೀಯ ಸಂಪ್ರದಾಯವೇ ಹೇಳುವುದು ತ್ರಿ ದಲಂ ತ್ರಿ ಗುಣಾಕಾರಂ ತ್ರಿ ನೇತ್ರಂ ಚ... ಈ ಕ್ರಮದಲ್ಲಿ ತ್ರಿಪರ್ಣವು ತ್ರಿ ಶೂಲವಾಗುತ್ತದೆ! ತ್ರಿ ಶೃಂಗ, ತ್ರಿ ಶಿಖರ, ತ್ರಿಪರ್ವತ; ತ್ರಿ ಪುರ ಸಹ ಈ ಏಕಂ : ಸತ್-ರೂಪವೇ ! ತ್ರಿಪುರ ದಹನ ಮಾಡುವನೆಂಬಲ್ಲಿ ಇದು ಒಳಗೊಂಬ ವೈಚಾರಿಕ ಆಕೃತಿಯ ಅರ್ಥ (form of thought) ಯಾವುದು? ಸ್ವ-ದೇಹ ದಹನಕ್ರಿಯೆ! ಇದರಂತೆ, ಪುರಂದರತ್ವದಲ್ಲಿ ಸ್ವ-ಶಿರಚ್ಛೇದ ಸ್ವರೂಪದ ಸಾಂಕೇತಿಕತೆಯೇ ಒಳಗೊಂಡಿದೆ. ತ್ರಿಗುಣಾಕಾರ ಬೆಳೆಯುತ್ತ ಹೋಗುವುದು ಪ್ರಳಯಕ್ಕೆ ಆಮಂತ್ರಣ. ಪ್ರಜಾಕೋಟಿ ಬೆಳೆದು ; ಹಾಗಾದರೆ ಜನ್ಮ ಮೃತ್ಯು ಜರಾ ವ್ಯಾಧಿಯ ಕೋಟಲೆಗೆ ಒಳಗಾಗಿಸುವ ಪ್ರಜಾನಿರ್ಮಾಣದ ಪಾಪ ಕೃತ್ಯಬೇಡ. ಈ ದೇಹಸ್ಥ ವಾಯುರನಿಲಂ ಅಮೃತಂ ಭಸ್ಮಾಂತಂ ಶರೀರಂ. ಇದನ್ನು ಪ್ರತಿಕ್ಷಣವೂ ಸ್ಮರಿಸುತ್ತ ಮೃಗ ಭಸ್ಮಲೇಪನ ಮಾಡುವ ಆಹ್ನಿಕ ಅನುದಿನವೂ ನಡೆವ ತ್ರಿಪುರದಹನದ ಸಾಂಕೇತಿಕ ವಿಧಾನವೇ ಸರಿ. ಆದರೆ ಈ ತ್ರಿ-ಗುಣಾಕಾರದ ಲೆಕ್ಕ ಶೂನ್ಯಸಿದ್ಧಿಯ ತಂತ್ರ! ಈ ಏಕಂ ಸತ್ತಿನ ಲೆಕ್ಕದಲ್ಲಿ, ಋತ : ಸತ್ಯವು ರೇತಸತ್ಯವಾಗಿ ಮಾರ್ಪಟ್ಟಿಲ್ಲವೆ? ಏಕಂಸತ್ತಿನ ಇಂದಿನ ಸಂಹಿತೆಯ ಮಾಯಾವೀ ತಂತ್ರವಿದು!

ಸಿಂಧೂತೀರದ ಪುರಸಂಸ್ಕೃತಿಯ ವಿನಾಶದ ಬೀಜ ಎಲ್ಲಿದೆ? ತ್ರಿ-ಪುರ ತ್ರಿ ಪರ್ಣ ಸಂಕೇತಗಳು, ತ್ರಿ ಶೃಂಗ, ತ್ರಿಶಿಖರ ರೂಪೀ ಕೇವಲ ಪುರುಷ : ಕು-ಮಾರ ಸಂಪ್ರದಾಯದ ಪ್ರತೀಕಗಳಾಗಿ ಮಾರ್ಪಡುವಲ್ಲಿ ಈ ವಿನಾಶದ

ಬೀಜವಿದೆ. ತ್ರಿ-ಗುಣಾಕಾರದ ಪೌರ್ಣಮಾ ಸಮಯಾಚಾರವು ಬರಮಾಡಿಕೊಳ್ಳುವ ಆಪತ್ತಿ ಒಂದು ಬಗೆಯದು. ಇದಕ್ಕೆ ತಿರುವುಮುರುವಾಗಿ ಅನೈಸರ್ಗಿಕ ಸಮಯಾಚಾರಗಳಿಗೂ ಅವಕಾಶ ಕಲ್ಪಿಸುವ ಅಮಾವಾಸ್ಯಾ ರೂಪ : ಕು-ಮಾರ ಸಂಪ್ರದಾಯವು ಆಮಂತ್ರಿಸುವ ಪ್ರಳಯದ ಪ್ರಕಾರವು ಇನ್ನೊಂದು ಬಗೆಯದು. ಮಾನವ ಸಂಸ್ಕೃತಿಯ ಆತ್ಮನಾಶದ ಕವಲುದಾರಿಯಲ್ಲಿ ಹೊರಟುದನ್ನು ತೋರುವ ಕೈಮರ ತ್ರಿ-ಶೂಲದಂಡ!

ಮಹಾವ್ರತ=ಮಹಾಯೋಗ ವಿಕೃತಾಚರಣ : ಮುಕ್ತಸಂಗೀ ಜೀವನರೀತಿ. ಮಹಾಯೋಗ ಶೈವರಂತೆ ವೈಷ್ಣವ ಪಂಥೀಯ ಸಂಕೇತವೂ ಸರಿ. ಆದರೆ, ಈ ಶಬ್ದ ಪ್ರತಿಮೆ, ಶಿವ-ರುದ್ರನ ಸಂದರ್ಭದಲ್ಲಿ ರೂಢವಿರುವಷ್ಟು, ವಿಷ್ಣು-ಕೃಷ್ಣ-ವಾಸುದೇವ ಸಂದರ್ಭದಲ್ಲಿ ಇಲ್ಲ! ಋ. ವೇದದ ಮುನಿಸೂಕ್ತದಲ್ಲಿ ರುದ್ರನ ಹೆಸರು ಸೇರಿಸಲಾಗಿದೆ ಶೈವಸಂಕೇತಗಳಲ್ಲಿ ಇರುವ ಸರಳತನವು. ವಿಷ್ಣು-ಕೃಷ್ಣಪರ ಸಂಕೇತಗಳಲ್ಲಿ ಅ-ಭಾವದ ಮೂಲಕ ಎದ್ದು ಕಾಣುತ್ತದೆ! ಜಗದ್ವಿಖ್ಯಾತ ಭಗವದ್ಗೀತೆಯ ಅಂತ್ಯದಲ್ಲಿ ಒಂದೇ ಒಂದು ಸಲ ಕೃಷ್ಣನನ್ನು ಯೋಗೇಶ್ವರನೆಂದು ಹೇಳಲಾಗಿದೆ! ಇಮಂ (ವಿವಸ್ವತೇಃ) ಯೋಗಂ ಪ್ರೋಕ್ತವಾನ್ ಅಹಂ ಎಂಬ ಈ ಭಗ-ವಂತನು ವಿವಸ್ವತ (=ಸವಿತೃ ರೂಪೀ ಸೂರ್ಯ [O] ದೈವತಕ್ಕೆ ಬೋಧಿಸಿದ ಯೋಗ ಯಾವುದು? ಇದರ ನಿರ್ದೇಶ ಗೀತೆಯಲ್ಲಿ ಇಲ್ಲ. ಯೋಗೀಶ್ವರನೆಂಬ ನಿಲುಮೆಯ ಶಿವನ ಪ್ರತಿಮೆಗಳು ಇವೆ. ಆದರೆ, ಕೃಷ್ಣ-ವಿಷ್ಣು ಸಂಪ್ರದಾಯದ ಯೋಗದ ಸ್ವರೂಪ ದರ್ಶನ ಮಾಡಿಸುವ ಮೂರ್ತಿಚಿತ್ರಗಳು ಉಂಟೆ? ಎಂಬುದೇ ಸಂದೇಹಾಸ್ಪದವಿದೆ. ಈ ಭಗ-ವನ್ ಕೃಷ್ಣನು ಭೋಗಯೋಗಿಯೆ ಹೊರತು ಯೋಗ-ಭೋಗಿಯಾಗುವ ಹಾಗಿನ ಚಿತ್ರಗಳು ಇಲ್ಲದಿರುವ ಕಾರಣವೇನು?

ಕೃಷ್ಣ ಈ ಸಾಂಕೇತಿಕ ಪ್ರತಿಮೆ ಸುಮೇರಿನ ಕಣ್ಣಮ್ಮನ (ಪುಂ) ಆಕೃತಿಯನ್ನು ಹೋಲುವುದು, ಋಗ್ವೇದದ ಸಾಂಕೇತಿಕತೆಯಿಂದ ಅರಿಕೆಗೆ ಬರುತ್ತಿದೆ. ಕೃಷ್ಣನಾಮ ಸಂಕೇತವು ಕಪ್ಪು ಎಂಬ ಅರ್ಥ ಸೂಚಕವಿದೆ. ಆದರೆ, ಸುಮೇರಿನ ಸಾಂಕೇತಿಕ ಕತೆಯಲ್ಲಿ ಈ ಕಪ್ಪು ಪುಲ್ಲಿಂಗ ಚಂದ್ರಮಂಡಲಸ್ಥ ಪುರುಷ ಪ್ರತಿಮಾಸೂಚಕವಾಗಿದೆ. ಅಮಾವಾಸ್ಯೆಯ ಕೃಷ್ಣತ್ವವು ವೇದದಲ್ಲಿ ಬೃಹಂತಂ ವಾಯಸಂ ಏಕಾಕ್ಷ ಕಾಗೆ ಆಗಿದೆ. ಋಗ್‌ವೇದದ ಈ ವಾಯಸಕ್ಕೆ ಸಮಾಂತರವಾಗಿ ಗ್ರೀಸಿನ Cronus ದೈವತವುಂಟು. ಸೂರ್ಯ (-ರ್ಯಾ?) ಪುತ್ರ ಶನಿ=ಎಂದರೆ ಇವನೇ ಮಾರುತಿ (ಮರುತ) ದೇವರು ಶನಿ ಆದುದು ಎಂದು? ಹೇಗೆ? ಇದು ಬೆಳಕಿಗೆ ಬರಬೇಕಾಗಿದೆ. ಸೂರ್ಯಾ-ಚಂದ್ರಮಸೌ ಯೋಗಜನ್ಯ ಪುತ್ರ ಶನಿ! ಮಾರುತಿ ಹನುಮಂತನು ಹುಟ್ಟಿದ್ದು ಹುಣ್ಣಿಮೆಗೆ! ಚೈತ್ರಪೌರ್ಣಿಮೆ ಎಂದು ಬಗೆವ ವಾಡಿಕೆ ಇದೆ. ಈ ಮಾರುತಿ ಹುಟ್ಟುತ್ತಲೆ ಸೂರ್ಯಬಿಂಬಕ್ಕೇ ನೆಗೆದನೆಂಬ ಕಥೆ ಬೇರೆ! ಆಗ ಸೂರ್ಯನು ಕೊಟ್ಟ ಏಟಿನಿಂದ ಮಾರುತಿ ಮೋರೆ ವಕ್ರವಾಯಿತೆಂಬ ಕಥೆ ಹುಟ್ಟಿದೆ. ಪ್ರಸ್ತುತ ಆವಶ್ಯಕ ಸಂಗತಿಯೆಂದರೆ ಚಂದ್ರಬಿಂಬದೊಳಗಿನ 'ಪುರುಷ' : ಅಪಾಂ ನಪ್ತ್ರ ಸುಮೇರಿನಲ್ಲಿ ಅಮಾವಾಸ್ಯಾ ಸಂಪ್ರದಾಯದವನಾಗಿ ಮಾರ್ಪಡಲಿಲ್ಲ. ಭಗ-ವಾನ್ ಕೃಷ್ಣನಲ್ಲಿ ಹುಣ್ಣಿಮೆ-ಅಮಾವಾಸ್ಯೆ ಎರಡರ ಬೆರಕೆಯಿದ್ದು, ಇವೆರಡರಲ್ಲಿ ಹುಣ್ಣಿಮೆಯ ಕೃಷ್ಣನು ಪ್ರಾಚೀನನು ಮತ್ತು ಸುಮೇರಿನ (ಪುಲ್ಲಿಂಗೀ) ಕಣ್ಣಮ್ಮನ ಹೋಲಿಕೆಯವರು ಆಗಿದ್ದಾರೆ. ರಾ-ಧಾ ಕೃಷ್ಣ ಈ ಸಾಂಕೇತಿಕತೆಯಲ್ಲಿ ರಾ-ಇದು ಚಾಂದ್ರತತ್ತ್ವಸ್ಥ ಸ್ತ್ರೀ ಶಕ್ತಿ. ಈ ರಾ-ಧಾರಕಳು ರಾಧಾ=ಸುಮೇರಿನ ಇನನ್ನಾ; ಪೌರ್ಣಮಾದೇವಿ ಕೃಷ್ಣ=ಕುರುಂಬವೀರ ಅಮೃತಂ ಚೈವ ಮೃತ್ಯುಃ ಚ ಇದರೊಳಗಿನ ಅಮೃತಾಂಶು (ಡುಮುಝಿ) ಆಗುತ್ತಾನೆ. ಆದರೆ, ಭಗವದ್ಗೀತೆಯಲ್ಲಿ, ಕಾಲೋಽಸ್ಮಿ ಎಂದು ಸಾರುವ ಮೃತ್ಯುಸ್ವರೂಪ ಅಮಾಶಿ ಕೃಷ್ಣನಿದ್ದಾನೆ !

ಭಾರತೀಯ ಸಂಸ್ಕೃತಿಯೊಳಗಿನ ಈ ಕೃಷ್ಣ ಸಮಸ್ಯೆ ಅತ್ಯಂತ ತೊಡಕಿನದಾಗಿದೆ. ಸತ್ಯಾನ್ವೇಷಣೆಯಲ್ಲಿ, ಇಡಿಯನ್ನು ಗಮನಿಸಿ, ಅದರ ಬಿಡಿಬಿಡಿ ಅಂಗಾಂಗಗಳ ಅರ್ಥಗ್ರಹಿಸಿಕೊಳ್ಳುವ ಪದ್ಧತಿಯನ್ನು ಸ್ವೀಕರಿಸಲಿಕ್ಕೆ ಬೇಕು. ಆದರೆ, ಇಡಿಯದರ ಸ್ಥೂಲ ಅಂದಾಜು ಸಹ ಇಲ್ಲದಿರುವಾಗ, ಎದುರು ಬರುವ ಅಂಗವಿಭಾಗಗಳ ಅರ್ಥವನ್ನು ತೀರ ದುರ್ಲಕ್ಷಿಸಿ ನಡೆಯುವುದಿಲ್ಲ! ಕೆಲವೊಮ್ಮೆ ಒಮ್ಮೆಲೆ ಇಡಿಯ ಆಕಲನವಾಗಲು ಅಶಕ್ಯವಿರುತ್ತದೆ. ಅಥವಾ ಒಂದೊಂದು ಅಂಗದ ಆಳವಾದ ವಿಮರ್ಶೆಗಾಗಿ. ವಿಶಿಷ್ಟ ಕ್ಷೇತ್ರವೇ (field) ಅಭ್ಯಾಸದ ವಿಷಯವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ವಿಭಾಗಶಃ ಆದ ವ್ಯಾಸಂಗದ ಆಧಾರದಿಂದ ಮಾಡಲಾದ ಒಟ್ಟು ಸಮೀಕ್ಷೆಯು, ಇಡಿಯೇ (whole) ಕಣ್ಣಳತೆಯಲ್ಲಿ ಬರುವಾಗ ಸದೋಷವಿರುವುದಾಗಿ ಕಾಣತೊಡಗುತ್ತದೆ! ಭಾರತೀಯ ಕೃಷ್ಣ ದೈವತ ಸಮಸ್ಯೆಯು, ಅನೇಕ ಸಂಶೋಧಕರ ಚರ್ಚೆಯ ವಿಷಯವಾಗಿದೆ. ಕೃಷ್ಣ-ವಿಷ್ಣು ಸೂರ್ಯಸ್ವರೂಪರು ಎಂದು ಬಗೆಯಲಾಗಿತ್ತು! ಇದನ್ನು ಕೀಥ ನಕ್ಕಿದ್ದಾನೆ! "Dark sun required more explanation than it seems likely to receive". ಈ ಕೃಷ್ಣನು, ಕಾದಿ ಕಂಸನಿಂದ ಸೂರ್ಯ (?ಕಣ್ಣು) ಕಸಿದುಕೊಂಡನು ಎಂಬಲ್ಲಿ ಈ ಕೃಷ್ಣ ಸುಫಲೀಕರಣ ದೈವತವಿರಬೇಕು ಎಂದು ತೋರುವುದಾಗಿ ಅಭಿಪ್ರಾಯಪಟ್ಟವರು ಇದ್ದಾರೆ.

ಕಂನಡದ ನೆಲೆಯನ್ನು ಅರಿವ ಪ್ರಯತ್ನದಲ್ಲಿ (೧೯೩೯), ಈ ಕೃಷ್ಣ ಸಮಸ್ಯೆ ಅನಿರೀಕ್ಷಿತವಾದ ವಿಚಿತ್ರ ದಿಕ್ಕಿನಿಂದ ಎದುರು ಬಂತು! ಕರ್ಣಾಟಕದ ಮೂಲಸ್ಥಾನ ಕಲ್ಲೇಶ್ವರ ಈ ದೈವತದ ಪೂರ್ವೋತ್ತರ ಸಮೀಕ್ಷೆಯಲ್ಲಿ ಕಲ್ಲ (ಈಶ್ವರ) ಈ ನಾಮಸಂಕೇತಕ್ಕೆ ಸಂಬಂಧ ಕನ್ನ ಕಣ್ಣ, ಕಣ್ಹ, ಕರ್ಣ, ಕೃಷ್ಣ ಈ ಪೂರ್ವಪದವಿರುವ ಈಶ್ವರನ ದೇವಸ್ಥಾನಗಳು ಇದ್ದುದಾಗಿ ಗಮನಕ್ಕೆ ಬಂತು. ಮಹಾರಾಷ್ಟ್ರದಲ್ಲಿ ಕಲ್ಲೇಶ್ವರ ಕಲ್ಮೇಶ ಕಲ್ಲಿನಾಥ, ನಾಗಪುರದತ್ತ! ಉಜ್ಜಯಿನಿ (ಮಧ್ಯಭಾರತ) ವರೆಗೆ ಕಾಣಿಸಿಕೊಂಡುದರಿಂದ ಕಲ್ಲಿನಾಥ ಕಾಲಿನಾಥ, ಕಾಲಕಾಲೇಶ್ವರನೂ ಈ ಸಮಸ್ಯೆಯ ವಿಷಯವಾದನು! ಕೃಷ್ಣೇಶ್ವರ ಮತ್ತು ಕಾಲೇಶ್ವರ ಈ ರೂಪಗಳ ಮೇಲಿಂದ, ಗೀತೆಯ ಕಾಲೋಽಸ್ಮಿ ಎಂಬ ಕೃಷ್ಣನಿಂದ, ಕೃಷ್ಣ-ವಿಷ್ಣು ಸಂಪ್ರದಾಯದ ತಳಪಾಯದಲ್ಲಿ ಶೈವ ಪ್ರತಿಮೆಗಳೇ ಇರುವ ಮಾತು ಕಣ್ಣಳತೆಯಲ್ಲಿ ಬರುತ್ತದೆ! ಕಲ್ಲ ನಾಮ ಸಂಕೇತದಲ್ಲಿ ಕಲ್<ಕಳ್ (ಹಾಲು) ರಸವಾಚಕ ಅರ್ಥವಿರುವುದಾಗಿ, ಕಂಡಿತು. ಅಂದಿನ ಸಮೀಕ್ಷೆಯ ಆ ಬೆಳಕೇ ನಾರ : ಆಪ : ರಸ ದೈವತವಿಚಾರಕ್ಕೆ ನಾಂದಿಯಾಯಿತು.

ಕರ್ಣಾಟ ಸಂಸ್ಕೃತಿಯ ಪೂರ್ವಪೀಠಿಕೆಯನ್ನು ಕುರಿತು ವಿಚಾರಿಸುವಾಗ ದೃಷ್ಟಿಪಥದಲ್ಲಿ ಬಂದ ಹಿಂಗುಲಜಾ= ಕೊಟ್ಟರಿ=ನನಾದೇವಿಯ ಮೂಲಕ ಈ ಸಮಸ್ಯೆ ಇಂದಿನ ಭಾರತದ ಗಡಿಯ ಹೊರಗೆ ತಳ್ಳಿಕೊಂಡ ಹೊರಡುತ್ತಿರುವ ಭಾಸವಾಯಿತು. ನಾಗಪ್ರತಿಮಾ ಆರಾಧನೆಯನ್ನು ಕುರಿತು ವಿಮರ್ಶೆಯಲ್ಲಿ, ಈ ಹಿಂಗುಲಜಾ=ನನಾದೇವಿ ಸುಮೇರಿನ ಇನನ್ನಳೇ ಆಗಿರುವುದು ತಿಳಿದು ಬಂತು! ಕೃಷ್ಣ<ಕಣ್ಹ<ಕಣ್ಣ ನಾಮ, ಸುಮೇರಿನ ಕಣ್ಣಮ್ಮನ ಹತ್ತಿರ ಒಯ್ಯುತ್ತದೆ. ನನಾ=ಇನನ್ನಳ ಒಂದು ರೂಪ : ಕಣ್ಣಮ್ಮ=ನೈನಾ (ಹಿಮಾಲಯದಲ್ಲಿ)! ಈ ವಿಚಿತ್ರ ವೃತ್ತಾಕೃತಿ ಸಂಭ್ರಮಕಾರಿಯಾಗಿದೆ! ಏಕಂ ಸತ್ತಿನ ವೈಚಾರಿಕ ಆಕೃತಿಯ ವೈಶಿಷ್ಟ್ಯವು ಇಲ್ಲಿ ಪ್ರತೀತಿಗೆ ಬರುತ್ತಿದೆ. ವರನಂದಿ ನಾರಾಯಣ ಸಂಬಂಧ! ನಂದಿ ಉಭಯಲಿಂಗೀ ! ನಂದಿ(ನಿ) ಗೋವು. ವೃಷಭ! ಕಂನಾಡ ನಂದೀಬೆಟ್ಟದಿಂದ ಹೊರಟ ಸ್ರೋತ್ರಕ್ಕೆ ಪಾಲಾರ್ ನಾಮ ಸಂಕೇತ! ಇದು ಆಪ : ರಸ ಸಂಪ್ರದಾಯ. ಆದರೆ, ಅಭಿವ್ಯಕ್ತಿಯಲ್ಲಿ ಈ ತತ್ತ್ವ ಧಾರಣಮಾಡುವ ನಾಮರೂಪಗಳು ಮಾತ್ರ ವಿಚಿತ್ರ ನಾನಾ ರೂಪ ! ಕಲ್ಲೇಶ್ವರ, ಕನ್ನೇಶ್ವರ, ಕಣ್ಣೇಶ್ವರ, ಕರ್ಣೇಶ್ವರ, ಕೃಷ್ಣೇಶ್ವರ! ಗೋ-ಕರ್ಣೇಶ್ವರ, ಸರ್ಪ ಕರ್ಣೇಶ್ವರ ಈ ಹೆಸರಿನ ಕುಲದೈವತಗಳು ಇರುವವರು ಉಂಟು! ಇಲ್ಲಿ ಗೋ=ಸರ್ಪ! ನಂಬುವುದು ಹೇಗೆ? (ಅದಿತಿಃ) ಗೌಃ ಪೃಶ್ನಿಃ, ಸಾರ್ಪರಾಜ್ಞೀ ಸೂರ್ಯೋ ವಾ ರೂಪದಲ್ಲಿ ಕಾಣಿಸಿಕೊಂಡಾಗ ಉಂಟಾದ ದಿಗ್ಭ್ರಾಂತಿ ತೊಲಗಲಿಲ್ಲ. ಇಜಿಪ್ತಿನ ದಿವ್ಯಗೋವು= ಹ್ಯಾಥೋರ್ ಸರ್ಪವಾದ ನಿಶ್ಚಿತ ಉಲ್ಲೇಖ ಓದಲು ದೊರೆವ ವರೆಗೆ!

ಕೃಷ್ಣ (-ಈಶ್ವರ) ಈ ಶಬ್ದ ಪ್ರತಿಮೆಯು, ಮೂಲತಃ ಕಣ್ಣ (ಈಶ್ವರ) ಎಂದೇ ಇರಬೇಕೆಂದು ಮೇಲಣ ವಿವರಣದ ಹಿನ್ನೆಲೆಯಲ್ಲಿ ಅರಿಕೆಗೆ ಬರುತ್ತದೆ. ಸಂಸ್ಕೃತ ಭಾಷಿಕರ ಸಂಪರ್ಕದಲ್ಲಿ ಕಣ್ಮ, ಕರ್ಣ ಮತ್ತು ಕೃಷ್ಣ ಈ ಉಭಯವಿಧ ರೂಪಕ್ಕೂ ತಿರುಗಿರುವಂತೆ ತೋರುತ್ತದೆ. ಈ 'ಏಕಂ' ಸಂತ ದೈವತಗಳ ಬಾಹ್ಯ-ನಾಮರೂಪವು ಯಾವ ಬಗೆಯದೆ ಇರಲಿ, ಆಂತರಿಕ ಅರ್ಥಗರ್ಭವು ಸಮಾನ ರೂಪದ್ದೇ ಇರುತ್ತದೆ-ಇರಲೇಬೇಕು. ವೇದೋಪನಿಷತ್ತುಗಳೇ ಹೇಳುವ ಮಾತಿದು! ಆದಕಾರಣ, ಕಲ್ಲ-ಕನ್ನ ಕಣ್ಣ-ಕರ್ಣ ಅಥವಾ ಕೃಷ್ಣ ಇಂಥ ಯಾವ ನಾಮಸಂಕೇತದ ಹೊದಿಕೆಯೇ ಇರಲಿ ಇದರ ಒಳಗೆ (ಶಿವ-) ಲಿಂಗ ರೂಪದ ಸತ್-ವಸ್ತುವೇ ಇರಲಿಕ್ಕೆಬೇಕು; ಈ ನಾನಾ ನಾಮದ ಶಿವಾಲಯಗಳೇ ಇದಕ್ಕೆ ಪ್ರಮಾಣ. ಕಣ್ಣು >ಗಣ್ಣು, ಈ ಭಾಷಿಕ ಮೂಲ ಆಕೃತಿಯಿಂದಲೂ ಹೊರಪಡುತ್ತಿರುವ ಅರ್ಥವು ಇದಕ್ಕಿಂತ ಬೇರೆ ಇಲ್ಲ!

ಕಣ್ಣು>ಗಣ್ಣು ರೂಪಿನ ಮಾಯವೀ ಕೃಷ್ಣ : ಚಾಕ್ಷುಷೀ ಪುರುಷ. ಚಕ್ಷುಃ ವೈ ಸತ್ಯಂ ಮಾತ್ರ ಈ ವಿಶ್ವಸ್ಥ ಶಾಶ್ವತ ಸನಾತನ ಸತ್ಯ ಎಂದು ಉಪನಿಷತ್ತು ಸಾರಿದ್ದಕ್ಕೆ, ಐತರೇಯ ಬ್ರಾಹ್ಮಣ್ಯದ ಬೆಂಬಲವಿದೆ. ಏತತ್ ಹ ವೈ ಮನುಷ್ಯೇಷು ಸತ್ಯಂ ನಿಹಿತಂ ಯತ್ ಚಕ್ಷುಃ. ಉಪನಿಷತ್ತಿನಲ್ಲಿ ಅಕ್ಷಿಣಿ ಪುರುಷ ಚಾಕ್ಷುಷೀ ಪುರುಷ ಎಂಬ ಮಾತುಗಳಲ್ಲಿ ಸಂದಿಗ್ಧತೆ ಇದೆ. ಅಕ್ಷಿ, ಚಕ್ಷು ಮತ್ತು ಪುರುಷ ಎರಡನ್ನು ಬೇರೆ ಹೇಳುವಲ್ಲಿ ಕಣ್ಣ (> ಗಣ್ಣ) ಎಂಬಲ್ಲಿ (Unity in duality) ದ್ವೈತಕಾಣುತ್ತದೆ! ಏಕಾತ್ಮಕ ಏಕಂ ಸತ್ ಪ್ರತ್ಯಯಕಾರಿಯಾಗಿಲ್ಲ. ಆದರೆ, 'ಚಕ್ಷುವೇ ಸತ್ಯ' ಎಂಬಲ್ಲಿ ದೈವತವು ಬಯಲಿಗೆ ಬರುವುದಿಲ್ಲ. ಐತರೇಯದ ಉಲ್ಲೇಖ ಇನ್ನೂ ಮೇಲು. ಮನುಷ್ಯರಲ್ಲಿ ಸತ್ಯ ಎಂಬುದು ಯಾವುದು ಇದೆಯೊ, ಅದು ಕಣ್ಣು (ಮಾತ್ರ)! ಉಪನಿಷತ್ತು ಬ್ರಾಹ್ಮಣಗಳಲ್ಲಿ ಹೇಳಿರುವ ಈ ಮಾತು ಇಂದಿನ ಋಕ್‌ಸಂಹಿತೆಯ ಸಾರ ಸರ್ವಸ್ವವಾಗಿದೆ. ಬೃಹದಾರಣ್ಯಕವು ಇದನ್ನು ವಿವರಿಸಲು ಪ್ರಯತ್ನಪಟ್ಟಿದೆ. ಈ ಕಣ್ಣು ವಿಶ್ವಚಕ್ಷು (O) ಎಂಬ (ಸರ್ವಸ್ಯ ಪ್ರಸವಿತಾ) ಸವಿತಾ = ಸಾವಿತ್ರೀ ಈ ಉಪಸ್ಥಾನದ ವಿವರಣೆ ಸಂದರ್ಭದಲ್ಲೇ ಅಶ್ವತರ ಆಶ್ವಿಃ ಬುಡಿಲನೆಂಬ ಬ್ರಹ್ಮಜ್ಞನ ಉಲ್ಲೇಖವಿರುವ ಔಚಿತ್ಯವು ಪ್ರತಿಮಾ : ಸಂಕೇತದ ಭೂಮಿಕೆಯಿಂದಲೆ ಅರಿಕೆಗೆ ಬರಬಲ್ಲುದು. ಈ

ಬ್ರಹ್ಮಜ್ಞರನ್ನು ಸತ್ಯ-ಯಜ್ಞರು ಎಂದು ಹೇಳಲಾಗಿದೆ. ಆದಕಾರಣ, ಈ ಯಜ್ಞ ಕಾರ್ಯ ನಡೆಯಬೇಕಾದ ಸತ್ಯರೂಪೀ ಯಜ್ಞಕುಂಡದ ಎಂದರೆ (ಕಣ್ಣು>ಗಣ್ಣು ರೂಪೀ) ಸತ್ಯಂ ಏತ್ಯ - ಸತ್ಯದ ಹತ್ತಿರ ಬಂದು, ಮೀಮಾಂಸಾಂ ಚಕ್ರುಃ ಕಃ ನಃ ಆತ್ಮಾ ? ಕಿಂ ಬ್ರಹ್ಮ ಇತಿ ಸತ್ಯವೇ ಗೆಲ್ಲುತ್ತದೆ ಅನೃತವಲ್ಲ ಈ ವೇದೋಪನಿಷತ್ ವಾಕ್ಯದೊಳಗಿನ ಸತ್ಯ=ಕಣ್ಣು>ಗಣ್ಣು=ಚಕ್ಷು.

ವಾಸ್ತವ ಸತ್ಯ, (ಚಕ್ಷುಃ=ಕಣ್ಣ >ಗಣ್ಣ ಸತ್ಯ. ರೇತಸತ್ಯ =ಏಕಂ ಸತ್ಯ ಅಲ್ಲ ಮತ್ತೆ), ಇದು ಇಡಿಯದರ ಮಾನವ ಜೀವನದ ಹಿನ್ನೆಲೆಯಲ್ಲಿ ತಿಳಿಯಬಲ್ಲದು. ಅದರ ವಿಭಾಗದ ಅರ್ಥ ಗ್ರಹಿಸಿಕೊಳ್ಳುವಾಗ ಇಡಿಯನ್ನು ನೆನೆಯಬೇಕು. ಇದು ಯುಕ್ತ ಪದ್ಧತಿ. ಈ ದೃಷ್ಟಿಯಿಂದ ಸೈಂಧವ ಸಂಸ್ಕೃತಿಯೊಡನೆ ಸುಮೇರು-ಅಸ್ಸೀರಿಯಾ, (ಇಜಿಪ್ತ ಸಹ) ಇವುಗಳ ಸಂಗಡ ಇದ್ದ ನಿಕಟ ಸಂಬಂಧವನ್ನು ಲೆಕ್ಕಿಸಿ, ಆ ಬಳಿಕಿನ ಜೀವನ ಪರಿಸರದಲ್ಲಿ ರಚಿತ, ಇಂದಿನ ಸಂಹಿತೆ-ಉಪನಿಷದಾದಿಗಳನ್ನು ಸಮ್ಯಕ್ ರೀತಿಯಲ್ಲಿ ಗ್ರಹಿಸಿಕೊಳ್ಳುವುದು ಕರ್ತವ್ಯ. ಅಂದು ಕಣ್ಣಮ್ಮನ ಸಹಯಜ್ಞದ ನಡೆವಳಿ ಇತ್ತು. ಭಾರತದಲ್ಲಿ ಸಹ ಯಜ್ಞಾಃ ಪ್ರಜಾಃ ಸೃಷ್ಟ್ವಾ ಇಂಥ ಲಾಕ್ಷಣಿಕ ಉಲ್ಲೇಖ ಇವೆ. ಪ್ರತ್ಯಕ್ಷದ ಹಿನ್ನೆಲೆಯಿಲ್ಲದೆ ಯಾವ ಲಕ್ಷಣಾರ್ಥ - ಸಾಂಕೇತಿಕ ಅರ್ಥ ತಲೆದೋರಲು ಶಕ್ಯವಿಲ್ಲ. ಇಂದಿನ ವೇದೋಪನಿಷತ್ತಿನೊಳಗಿನ ಪುರುಷ ಮೇಧ, ಸತ್ಯ (=ಚಕ್ಷು) ಯಜ್ಞ ಇವು ಸಾಂಕೇತಿಕ ಮಟ್ಟದ ಕ್ರಿಯೆಗಳು ಆಗತೊಡಗಿದ್ದುದರಲ್ಲಿ ಸಂದೇಹವಿಲ್ಲ. ಆದರೆ ಅಸ್ಸೀರಿಯ ಜನದ (ಅಸುರಾಣಾಂ) ನಡೆವಳಿಯಲ್ಲಿ , ಇನ್ನೂ ಭೌತ ಸ್ವರೂಪದ ಯಜ್ಞವೇ ನಡೆಯುತ್ತಿದ್ದಿತು, ಎಂದು ಛಾಂದೋಗ್ಯದ ಉಲ್ಲೇಖದಿಂದ ಗೊತ್ತಾಗುತ್ತದೆ. ಹೆಣಗಳನ್ನು ಸಾಲಂಕೃತ ಹುಗಿವ ಪದ್ಧತಿಯೂ ಭಾರತ (ಸುಮೇರ) ಅಸ್ಸೀರಿಯಗಳ ನಡುವ ಸಮಾನ ಆಚಾರ ಸಮಯದ ಸೂಚಕವಾಗಿದೆ. ಆದರೆ, ಭಾಲಾಕ್ಷ ಸಿದ್ಧಿಯ ಮಾರ್ಗದಲ್ಲಿ ಹೊರಟ ಭಾರತೀಯರಲ್ಲಿ, ಉತ್ತರಕ್ರಿಯಾ ಪದ್ಧತಿಯೂ ಬೇರೆ ಬಗೆಯದಾಗಲೇಬೇಕು. ಮೂಲ ಆಪಃರಸಪಂಥೀಯಂ ಕಣ್ಣು>ಗಣ್ಣು ಸಂಪ್ರದಾಯದ ಆರಂಭವು ಒಂದೇ ಬಗೆಯಾಗಿದ್ದರೂ ಕೊನೆಯ ಭಾಗದಲ್ಲಿ, ಸೈಂಧವ ಸಂಸ್ಕೃತಿಯಲ್ಲಿ ಕಾಣಿಸಿಕೊಳ್ಳುವ ಅಭಿವ್ಯಕ್ತ ಪ್ರಕಾರಗಳಿಂದ ಈ ಸಂಪ್ರದಾಯವು ಭಾರತದಲ್ಲಿ ತೀರ ಬೇರೆ ಆಗಿದ್ದು ಕಾಣುತ್ತಿದೆ. ಭಾರತದಲ್ಲಿ, ಅ-ಸಂಭೂತಿ ಮಾರ್ಗದ ಆದಿಪುರುಷನು ಜೀವನಾದರ್ಶವಾಗುತ್ತಾನೆ. ಆಮರಣ ಕುಮಾರ, ಕುಮಾರೀ ವ್ರತಧಾರಿಯಾಗುವ ಜೀವನರೀತಿ ಪ್ರಭಾವಶಾಲಿಯಾಗುತ್ತದೆ.

ಚಾಂದ್ರ ಸಂಪ್ರದಾಯದ ಸಾಂಕೇತಿಕ ಪ್ರತಿಮಾಯುಕ್ತ ನಾಣ್ಯಗಳಿಂದ ಇಂದಿನ ಋಗ್ವೇದದ ಅರ್ಥ ಬಯಲಿಗೆ ಬರುತ್ತಿದೆ. ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿ ದೊರೆತ ಪಶುಪತಿಯು ಮಹಿಷ ಶೃಂಗಯೋಗಿ! ಧ್ಯಾನಮಗ್ನ ಮುನಿ, ಹಣೆಗಣ್ಣು ಧಾರಣಮಾಡಿದ್ದು ಇದು ಮಹಿಷನ ಸಂಕೇತ ಋಗ್ ವೇದದಲ್ಲಿ, ತ್ರಿಪರ್ಣ ಸಂಕೇತದ ಬಟ್ಟೆ ಹೊದ್ದುಕೊಂಡಿದ್ದು ಈ ಸಂಕೇತಗಳಿಂದ ಇವನು ಶೃಂಗಾರಾಧಕ ಸಾಧು ಎಂದು ಸೂಚಿತವಾಗಿದೆ. ಶೃಂಗ=ಅಥವಾ ಪರ್ಣ=ಚಂದ್ರ, ಈ ಅರ್ಥ ಮರೆಯಲಾಗದು. ಈ ಸಾಂಕೇತಿಕತೆ ೨ನೆಯ ಶತಕದ ಸುಮಾರಿನ ನಾಣ್ಯಗಳಿಂದಲೂ ದೃಢಪಡುತ್ತದೆ. ಉಜ್ಜಯಿನೀ ಸಂಕೇತ ಎಂಬ Three peaked hill, surounded by crescent ಪುರಾತನ ನಾಣ್ಯಗಳ ಮೇಲಣ ವಿವಿಧ ಸಂಕೇತಗಳನ್ನು ಇಲ್ಲಿ ಸಚಿತ್ರ ಕೊಟ್ಟಿದೆ, ಏಣಿಯಗೂಳಿ, ಅದರ ಮುಂದೆ ಭಲ್ಲೆ=ದಂಡ; ಸ್ವಸ್ತಿಕ, ನಾಲ್ಕು (ಬಾಲ) ಚಂದ್ರ ಸಂಕೇತ, ಕಮಲ ಸದೃಶ ಆಕೃತಿ, ಮೂರು ಛತ್ರ! ಪಂಚಪತ್ರ; Palmtree ಪರಶು. ಸರ್ಪ, ನದಿ, ಸಂಕೇತ, (ಕ್ರಿ. ಶ. ೨೦೦). ಅಷ್ಟದಳ ಕಮಲ, ವೃಕ್ಷ, ತ್ರಿಕೋಣಾಕೃತಿ; ಎರಡು ಪರ್ಣಗಳ ನಡುವೆ ವೃಕ್ಷ, ವೃಷಭ ಅಥವಾ ಸ್ವಸ್ತಿಕ ಇಲ್ಲವೆ ನದಿ! ತ್ರಿರತ್ನ, ಚಕ್ಷು, ಪರ್ಣ-ವೃಕ್ಷ, ತ್ರಿರತ್ನಲಿಂಗ ಸರ್ಪಯುಕ್ತ, ಕೆಲವೊಮ್ಮೆ ಸರ್ಪವು ಅಕ್ಕ-ಪಕ್ಕಕ್ಕೆ ! ಕಮಲೋದ್ಭವೆ-ಲಕ್ಷ್ಮಿ; ಗಣಪತಿ ನಾಗ-ಮನೆತನದ ರಾಜನ ಹೆಸರು (ಕ್ರಿ. ಶ. ೪೦೦). ವೃಕ್ಷ, ಸರ್ಪ, ಮುಕಲಿಂಗ; ಹಿಮ್ಮಗ್ಗಲು ಅಗ್ನಿಕುಂಡ, ಈ ಸಂಕೇತಯುಕ್ತ ನಾಣ್ಯಗಳು ಇಂದಿನ ಋಕ್ ಸಂಹಿತೆಯ ಸಾರವಾಗಿವೆ. ಅಲ್ಲದೆ ಇವು ತತ್ಪೂರ್ವದ ಸೈಂಧವ ಸಂಸ್ಕೃತಿಯ ಸಮಯಾಚಾರಗಳನ್ನು ಉಳಿಸಿಕೊಂಡು ಬರಲು ಆದ ಪ್ರಯತ್ನಕ್ಕೆ ಸಾಕ್ಷಿಯಾಗಿವೆ. ಈ ನಾಣ್ಯಗಳು ಪ್ರಾರಂಭದಲ್ಲಿದ್ದ (ಸು. ೧೮೭-೭೫) ಅಗ್ನಿಮಿತ್ರ, ಭಾನುಮಿತ್ರ ಹೆಸರಿನ ರಾಜರ ಕಾಲದವು.

ಭಾರತೀಯ ಪರಂಪರೆಯ ಪುರಾತನ ನಾಣ್ಯಗಳ ಮೂಲಕ ಭಾನು ಮಿತ್ರನಾಮಧಾರಿಯು, ಸಾರ್ಪರಾಜ್ಞೀ ಸೂರ್ಯೋ ವಾ =ಚಾಂದ್ರ ಸಂಪ್ರದಾಯವನೇ ಇದ್ದುದು ಗೊತ್ತಾಗುತ್ತದೆ. ಇಂದಿನ ಋಕ್‌ಸಂಹಿತೆಯೊಳಗಿನ ಅಗ್ನಿ=ಸರ್ಪದ ಸೂರ್ಯಾಪ್ರತಿಮೆ; ಇವನೇ ಅಪಾಂ ನಪ್ತೃ=ಚಂದ್ರ ಎಂಬುದು ಪ್ರಾಚೀನ ನಾಣ್ಯಗಳ ಮೇಲಿನ ತ್ರಿಶೃಂಗ ವೃಕ್ಷಾದಿ ಏನೆಲ್ಲ ಸಂಕೇತಗಳಿಂದಲೂ ದೃಢಪಡುತ್ತಿದೆ.

ಮಾರ್ಶಲ್ ವರದಿಯಲ್ಲಿ ಸುಮೇರ ಸಂಸ್ಕೃತಿಯ ಹೋಲಿಕೆಯ ಒಪ್ಪಿಗೆಯಿದೆ. ಕ್ರೀಟ್ ಸಂಸ್ಕೃತಿಯಲ್ಲಿ An instructive parallel to this aspect of deity ಹೋಲಿಕೆಯಿರುವ ನಿರ್ದೇಶವಿದೆ, ('ಶೃಂಗ' ಭಕ್ತಿಯು Pricisely the same practice at this period in sumer and Babylonia ಗಳಲ್ಲಿ ಇದ್ದುದನ್ನು ವಿಶದಪಡಿಸಲಾಗಿದೆ. ದಿವ್ಯದೇವತಾಶಕ್ತಿಯ ಈ ಕೊಂಬುಧರಿಸುವ ವಾಡಿಕೆ ರಾಜರಲ್ಲಿ, ಗುರುವರ್ಗದಲ್ಲಿ ಸಹ ಇತ್ತು! ಎಂದಿದ್ದಾರೆ. ಈ 'ಶೃಂಗ' ಅಥವಾ ಚಕ್ಷು (೦)=ಚಂದ್ರ (ಬಳಿಕ ಸೂರ್ಯ) ಈ ಸಂಕೇತ ತಲೆಯ ಮೇಲೆ ಅಥವಾ ಹಣೆಯ ಮೇಲೆ ಬಂದುದು ಏಕೆ? ಈ ವಿಚಾರವೂ ಅವಶ್ಯ. ದಿವ್ಯದೈವತದ ಮೊಗವಾಡ, ವಸ್ತ್ರಾದಿ ಧಾರಣ ಮಾಡುವುದರಿಂದ ಆ ದೈವತಶಕ್ತಿಯ ಆವೇಶ-ಅಂಶ ಆ ವ್ಯಕ್ತಿಯಲ್ಲಿ ಬರುತ್ತದೆ, ಎಂಬ ನಂಬುಗೆ ಇಂದಿಗೂ ಕೆಲಕಡೆಗೆ ಇದೆ. ಶಂಕರ ದಾಸಿಮಯ್ಯನ ರಗಳೆಯಲ್ಲಿ ಶಿವ ಮತ್ತು ಮೈಲಾರ ದೈವತಶಕ್ತಿಯ ಇಂಥ ಮಾದರಿ ಹರಿಹರನು ಚಿತ್ರಿಸಿದ್ದಾನೆ.

ಶೃಂಗದ ಅಥವಾ ಚಂದ್ರ-ಸೂರ್ಯ ಸಂಕೇತದ ಬಗೆಗಿನ ಗೂಢ ಅಗಮ್ಯ ಭಾವನೆಯನ್ನು ಮಾನವಶಾಸ್ತ್ರಜ್ಞರಷ್ಟು ಪುರಾತನ ವಸ್ತುಶಾಸ್ತ್ರಜರು ವಿಶೇಷ ಆಸ್ಥೆಯಿಂದ ಅಭ್ಯಸಿಸಿದ್ದು ಕಾಣುವುದಿಲ್ಲ. ಸರ್ವೇಷು ಗಾತ್ರೇಷು ಶಿರಃ ಪ್ರಧಾನ ಆದುವುದರೊಡನೆ, ವಸ್ತ್ರಪೂರ್ವ ಜೀವನ ರೀತಿಯಲ್ಲೂ ಬದಲಾಗುತ್ತದೆ. ದಿವ್ಯ ಮಧ್ಯಮಾ-ವಾಕ್ ಅಥವಾ ದಿವ್ಯ ಚಕ್ಷುಃ (ಆಗುವಾಗ) ತಲೆಯಮೇಲೆ ಕೊಂಬು ಅಥವಾ ಹಣೆಯ ಮೇಲೆ 'ಕಣ್ಣು' ಮೂಡುತ್ತದೆ!

ಮನುಜನಾಗುವ ದಿಶೆಯಲ್ಲಿ ಹೊರಟ ನರನು, ಈ ಹಂತದಲ್ಲಿ ಪರಮಪದಸಿದ್ಧಿ ಚಾಕ್ಷುಷೀ-ಪುರುಷ ಯೋಗ ಸಮಾಧಿಯೇ ಜೀವನದ ಪರಮ ಆದರ್ಶ ಪದಸ್ಥಿಕೆ ಎಂಬ ನಿರ್ಣಯಕ್ಕೆ ಬಂದುದು ಕಾಣದೊರೆಯುತ್ತದೆ. ಸೈಂಧವ ಸಂಸ್ಕೃತಿಯ ಮುನಿ: ಪಾಶುಪತ ಮಹಾವ್ರತಿ ಇದಕ್ಕೆ ಸಾಕ್ಷಿ. ಸಾಮರೂಪೀ ದ್ರೋಣಿ ಸಹಿತ ಈ ಋಕ್ ರಥ ಪಾಠಕನ್ನು ತನ್ನೆಡೆಗೆ ತರುತ್ತದೆ ಎಂದು ಯಮನೇ ಹೇಳಿದ್ದಾನೆ, ಋಗ್‌ವೇದದಲ್ಲಿ ತುರೀಯ ಬ್ರಹ್ಮದ ನಿರ್ದೇಶವಿದೆ; ವಾತಾಶ್ವವನ್ನೇರಿ ಅಂತರಿಕ್ಷದಲ್ಲಿ ನೆಗೆವ ಕೇಶೀ ಪುರುಷನ ಆದರ್ಶ ವರ್ಣಿತವಾಗಿದೆ. ತೃತೀಯ ಪರಮೇಪದೇ ಮಧುಸ್ರೋತ ವಿರುವ ಎಡೆಯಲ್ಲಿ. ದೇವಯವೋ ಮದಂತಿ ಎಂಬ ಸಾಕ್ಷೀ ಚಿತ್ರ ಉಂಟು. ಈ ಏನೆಲ್ಲ ಸಂಕೇತಾರ್ಥಗಳ ಎರಕಹೊಯ್ದು ನಿರ್ಮಿಸಲ್ಪಟ್ಟ ವಿಚಾರಸ್ತಂಭವೇ ಸೋಮಸ್ರವಿಸುವ ವೃಕ್ಷ, ಐರ ಮದೀಯ ಸರದ ತೀರದಲ್ಲಿದೆ. ಎಂದು ಛಾಂದೋಗ್ಯ ಸಾರುತ್ತಿದೆ. ಚಾಕ್ಷುಷೀಪುರುಷ (ಕಣ್ಣು>ಗಣ್ಣು) ಯೋಗ ಸಿದ್ಧ=ವಿಶ್ವಸ್ಥ ಪೂರ್ಣಬ್ರಹ್ಮ ಸ್ವರೂಪಸಿದ್ಧಿ. ಏತತ್ ವೈ ತತ್ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ. ಈ ಸಿದ್ಧನು ಸಾಕ್ಷಾತ್ ದೇವತಾಸ್ವರೂಪನೇ ಆಗುವುದರಿಂದ ಇವನು ಸೃಷ್ಟಿಕರ್ತ ಆದಿಪುರುಷನ ಪ್ರತಿರೂಪವೇ ಸರಿ.

ಚಿತ್ರ ನಂ. ೨೦

ಜರತ್ -ಕಾರು ಉಭಯಲಿಂಗೀ ಶಕ್ತಿ

ಆದಿ ಮಾತೆಯಿಂದ ವಿಶ್ವಾರಂಭವಾಯಿತು ಎಂಬ ನಂಬುಗೆಯಲ್ಲಿ ತಿಲಮಾತ್ರವೂ ಅನೈಸರ್ಗಿಕತೆಯಿಲ್ಲ. ಆದರೆ ಆದಿಶಕ್ತಿಯ ಸ್ಥಳದಲ್ಲಿ, ಆದಿಪುರುಷನೇ ಈ ವಿಶ್ವದ ಅಧಿಸ್ಥಾನ ಅಧಿಅಕ್ಷ ಎಂಬಲ್ಲಿ ಏನೆಲ್ಲ ಬಗೆಯ ಆತ್ಮವಂಚನೆ ಪರವಂಚನೆಗೆ ಆಮಂತ್ರಣವಿತ್ತಂತೆಯೆ ಆಗಿದೆ. ದಿವ್ಯಾಧ್ಯಾತ್ಮ ಸಂಪ್ರದಾಯವು, ಮೊದಲಲ್ಲಿ, ಏಕಂ: ಸತ್ ಈ ವಾಗರ್ಥಾವಿವ ಸಂಪೃಕ್ತ ನಿತ್ಯ (ಸಂ) ಯೋಗಸ್ಥ ದೈವತವನ್ನು ಆದರ್ಶವಾಗಿ ಕಲ್ಪಿಸಿಕೊಂಡಿತ್ತು. ಆದರೆ, ಈ ಆದರ್ಶವನ್ನು ಸ್ಪಷ್ಟಶಬ್ದಗಳಿಂದ ವಿವರಿಸುವುದು ಅನುಚಿತ, ಅವಾಚ್ಯ, ಎಂಬ ಭಾವನೆ ಮೂಡಿದ ಬಳಿಕ, ಸುಮೇರಿನತ್ತಣನ ಪುರಾತನರು ತಮ್ಮ ತೈಮತ್-ಅಪ್ಷು ಈ ನಾಮಸಂಕೇತದ ಸಂಯುಕ್ತ ದೈವತ ಪ್ರತಿಮೆಯನ್ನು ತ್ಯಜಿಸಿಬಿಟ್ಟರು. ಭಾರತೀಯ ಆಪ : ರಸ ಪಂಥೀಯ ಪ್ರತಿಭೆ, ಈ ಆದರ್ಶವನ್ನು ಬುದ್ಧಿಗೂ ಸಹ್ಯವಾಗುವ ಭಾಷೆಯ ವಸನಾಲಂಕರಣಗಳಿಂದ ಅಂದಗೊಳಿಸಿ, ಮೂಲ ವೈಚಾರಿಕ ಆಕೃತಿಯನ್ನೇ ಸನಾತನವಾಗಿ ಉಳಿಸಿಕೊಳ್ಳಲು ನಾನಾಕಥೆಗಳನ್ನು ನಿರ್ಮಿಸಿದ್ದುಂಟು.

ಜರತ್-ಕಾರುವಿನ ಕತೆ, ಇಂತಹ ಪ್ರಯತ್ನದ ಒಂದು ನಿದರ್ಶನ, ಜರತ್-ಕಾರು ಇದು ಶುದ್ಧ ಸಾಂಕೇತಿಕ ಪ್ರತಿಮೆ ! ರವಿಕಾಣದ್ದನ್ನು ತಾನು ಕಾಣಬಲ್ಲೆ ಎಂಬ ಆಪ : ರಸ ಪಂಥೀಯ ಕೃತಿಯ ಮಾದರಿಯಿದು. ಜರತ್-ಕಾರು ಈ ಜೋಡು ಸಂಕೇತಗಳಲ್ಲಿ ಕಾರು ಪ್ರದಾನ ಸಂಕೇತ. ಕಾರು ಎಂದರೆ ಬಡಿಗ (ತ್ವಷ್ಟಾರ=ತಕ್ಷಕ). ಅಥವಾ ಕರ್-ಮಾರ (: ಬ್ರಹ್ಮಣಸ್ಪತಿ-ಬಾಂಧವ). ಜರತ್ ಎಂದರೆ ವೃದ್ಧ=ಅನಾದಿಕಾಲದವ. ಈತನು ತಕ್ಷಕ-ವಾಸುಕಿ=ನಾಗರ ಬಳಗದವನೆಂದು ಮಹಾಭಾರತದ ಕಥೆ ಹೇಳುತ್ತದೆ! ಆದಕಾರಣ, ಜರತ್-ಕಾರು ಎಂದರೆ ಅನಂತಕಾಲದ ವೃದ್ಧ (ಏಕಾಕ್ಷ) ಸರ್ಪ, ಅರ್ಥಾತ್ ಆದಿಶೇಷ=ಸೃಷ್ಟಿಕರ್ತ! ಎಂದರೆ ವಿಶ್ವಕರ್ಮ ಪರಂಪರೆಯ ಕರ್ಮಾರ. ಕಾರು=ಬಡಿಗ, (ಕೆತ್ರಿ)

ಗುಡಿನಿರ್ಮಿಸುವ ಗುಡಿಕಾರ ಈ ಜರತ್‌ಕಾರು! ಯುರೋಪಿನತ್ತಣಿನ ಕಥೆಗಳಲ್ಲೂ ಏಕಾಕ್ಷ ಗುಡಿಕಾರನ ಸಾಂಕೇತಿಕ ಪ್ರತಿಮೆ ಇದೆ. Cyclopean masonry ಎಂಬ ಮಾತಿನ ಬರುವಳಿಯಲ್ಲಿ ಅಮರವಾಗಿರುವ ಸೈಕ್ಲೋಪ್ಸ್ ಏಕಾಕ್ಷ ಪುರುಷನು ಕಂಚಿನ ಯುಗಾರಂಭದ ಕಮ್ಮಾರಿಕೆಯ ಆದಿಪುರುಷ ನಂತಿರುವುದಾಗಿ ತಿಳಿಯುತ್ತದೆ. ಇಜಿಪ್ತಿನ ಆದಿದೈವತ ಕಥೆಗಳ ಹೊರಸ್‌ನ ತೃತೀಯಾಕ್ಷದ ಬಗೆಗಿನ ಶ್ರದ್ಧೆ, ಗ್ರೀಕಿನ ಮೇಲೂ ಪ್ರಭಾವ ಬೀರಿರಲು ಸಾಕು.

ಗಲಗಿನ ಆಕೃತಿಯ ಜಪಾನಿನ ಆದಿಪುರುಷ, ಸೃಷ್ಟಿಕರ್ತ, ಸುಮೇರಿನ ಸಾಹಿತ್ಯ ಸೃಷ್ಟಿಯ ಗಲಗು-ಈಜಿಪ್ತಿನ ಆದಿಪುರುಷ ಮಿಡಿನಾಗ ಇಂಥ ಪ್ರತಿಮೆಗಳು ಯುರೋಪಿನಲ್ಲಿ ಮಾತ್ರ ಇದ್ದಿಲ್ಲ ಎನ್ನಲು ಬರಲಾರದು. Smith ಎಂದಿರುವ ಏಕಾಕ್ಷ ಸೈಕ್ಲೋಪಸ್, ಋಗ್‌ವೇದದ ದೇವಜನನ ಸೂಕ್ತದ ಕರ್ಮಾರ ಇವ ಬ್ರಹ್ಮಣಸ್ಪತಿ ಇಬ್ಬರ ಆಕೃತಿರೂಪ ಸಮಾನವೇ ಇದೆ.

ಜರತ್ (ಪುರಾತನ) ಕಾರುವಿನ ಆಕೃತಿ ಸ್ವರೂಪ ಗ್ರಹಣಕ್ಕೆ ಇವನ ಹೆಂಡತಿ ಎಂಬ ಜರತ್-ಕಾರುನಾಮಸಂಕೇತದ ಮಾನಸೀದೇವಿಯ ಸಾಂಕೇತಿಕತೆಯಿಂದಲೂ ನೆರವು ದೊರೆಯಲಿದೆ. ಮಾನಸಿಯು ತಕ್ಷಕ ನಾಗನ ಸಹೋದರಿಯಂತೆ! ಮಾನಸಿ ನಾಗಿಯ ಪ್ರತಿಮೆ ದೊರೆಯುತ್ತದೆ. ದೇವಿಯ ಹಿಮ್ಮಗ್ಗುಲು ಪಂಚ ಫಣಾಯುಕ್ತ ಸರ್ಪ ತಲೆಯ ಮೇಲೆ ಹೆಡೆಯೆತ್ತಿ ನಿಂತಿದೆ. ಏಕನಾಮದ ಬಗೆಗಿನ ಆಗ್ರಹ ಏಕಂ ಸತ್ (Unity in duality) ಭೂಮಿಕೆಯನ್ನು ಬಯಲಿಗೆ ತರುತ್ತಿದೆ. ಜರತ್ ಕಾರು, ಅವನ ಸ್ತ್ರೀ ಎಂಬ ಮಾನಸಿ ಬೇರೆಯಲ್ಲ. ಕಾರು (ಕರ್ತೃವು) ತನ್ನ ಮಾನಸಿಯ (ಪ್ರತಿಭೆಯ) (ಸಂ)ಯೋಗದಿಂದಲೇ ಸೃಷ್ಟಿಸುತ್ತಾನೆ; ಸ್ತ್ರೀ ಎಂಬ ತತ್ತ್ವವು ಪುರುಷನಿಂದ ಬೇರೆಯಿಲ್ಲ. ಆದಿಮಾತಾ ಸಂಪ್ರದಾಯ ಬೆಲೆಗೇಡು ಆದಬಳಿಕ ರೂಢಿಗೆ ಬಂದ ಸಮಯಾಚಾರಗಳ ಕಾಲದಲ್ಲಿ ಹುಟ್ಟಿದ ಕತೆಗಳಿವು. ಆದಿಪುರುಷನೇ ಸ್ತ್ರೀ ಶಕ್ತಿಗೆ ಜನ್ಮವಿತ್ತನು, ಎಂಬ ಕಥೆ ಜನ ನಂಬುವಂತೆ ಮಾಡುವ ಅವಶ್ಯಕತೆ ಉಂಟಾಯಿತು. ಈ ಸೃಷ್ಟಿ ರಚನಾಕ್ರಮ ತಿಳಿಸಿಹೇಳಲು ! ಇಂಥ ಕಥೆಗಳೇ ಆ ಬಳಿಕಿನ ತತ್ತ್ವಜ್ಞಾನಕ್ಕೆ ಜನ್ಮಕೊಟ್ಟಿವೆ. ಆದಿಪುರುಷ ಸಂಕೇತದ ಸ್ಥಳದಲ್ಲಿ ಆ-ತ್ಮನ್ ಎಂಬ ತೀರ ಅಮೂರ್ತ ತತ್ತ್ವದ ಕೃತ್ರಿಮ ಈ ಸಂಕೇತವನ್ನು ರೂಡಿಸಲಾಯಿತು. ಆತ್ಮಾ ವಾ ಇದಂ ಅಗ್ರೇ ಆಸೀತ್ ಎಂಬ ತತ್ತ್ವಸೂತ್ರ ಪ್ರಚಾರಕ್ಕೆ ಬಂತು. ಯುರೋಪಿನತ್ತ ಸುಮಾರಾಗಿ ಇದೇಬಗೆಯ ಒಂದು ಕಥೆ, ಆದಂ ಆದಿ ನರ ಮತ್ತು ಅವನಿಂದಾದ ಈವ್ ರೂಪದಲ್ಲಿ ಪ್ರಚಲಿತವಾಗುತ್ತದೆ.

ಚಿತ್ರ ನಂ. ೨೧

ಆದಂ ಮತ್ತು ಈವ್ಹ, ಸ್ತ್ರೀರೂಪ ಹೋಲುವ ನಾಮಸಹಿತ

ಹಿಬ್ರೂ ಹಾಗೂ ಕ್ರೈಸ್ತ ಪಂಥೀಯ ಧರ್ಮಗ್ರಂಥಗಳಲ್ಲಿ ಬರುವ ಆದಂ ಈವ್ ಈ ಗಂಡು ಹೆಣ್ಣಿನ ಕಥಾವಸ್ತುವು ಎಷ್ಟು ಪ್ರಾಚೀನ. ಯಾವ ಪುರಾತನ ಸಂಸ್ಕೃತಿಗಳ ಕಥಾಭಾಗಗಳ ಹಿನ್ನೆಲೆಯಲ್ಲಿ ಈ ಪಾತ್ರ ಸೃಷ್ಟಿಯಾಗಿದೆ ಎಂಬುದರ ಬಗೆಗೆ ಆಗಿರುವ ಆಳವಾದ ಸಂಶೋಧನವು, ಭಾರತೀಯ ಸಂಸ್ಕೃತಿಯ ದೈವತಕಥೆಗಳ ವ್ಯಾಸಂಗಿಗಳಿಗೆ ತುಂಬ ಉದ್ಬೋಧಕವೂ ಮಾರ್ಗದರ್ಶಕವೂ ಆಗಬಹುದು.

ಆದಿಪುರುಷನ ವಿಚಾರವು ಪ್ರಭಾವಶಾಲಿಯಾಗುವುದರ ಸಂಗಡ ಮಾನವನ ಅಧಃಪಾತಕ್ಕೆ ಸ್ತ್ರೀಯೇ ಕಾರಣ, ಎಂಬ ಸಿದ್ಧಾಂತವು ಪ್ರಚಾರಕ್ಕೆ ಬಂತು. ಈವ್ : ವಿಶ್ವಜನನಿ ಎಂಬ ಶ್ರದ್ಧೆ ಮೊದಲಿನದು! ಆದರೆ ಇದನ್ನು ಮರೆಮಾಜಲು ಮಾಡಲಾದ ತಂತ್ರ ಈಗ ಬೆಳಕಿಗೆ ಬಂದಿದೆ. ದಿವ್ಯ ಸಲಿಲದಲ್ಲಿ, ಮೇಲಣ ಲೋಕದ್ದು, ಕೆಳಗಣ ಲೋಕದ್ದು, ಎಂದು ಇದ್ದ ಮೂಲ ಸುಮೇರಿನತ್ತಣಿನ ದ್ವೈತ ವಿಚಾರವು ದೇವಪುರುಷರು ಪಾಮರ ನರ ಜಂತುಗಳು ಎಂಬ ವಿಭೇದ ಸೂಚಕವಿರಬೇಕು. ಆದಿಪುರುಷನ ಯುಗದಲ್ಲಿ ಸ್ತ್ರೀಯರನ್ನು ಕೀಳ್ಗೆಯುವದಕ್ಕೆ ಆ ತತ್ತ್ವವನ್ನೇ ಉಪಯೋಗಿಸಿರಬೇಕು. ಭಾರತೀಯ ಸಂಪ್ರದಾಯವು ಸ್ತ್ರೀಯನ್ನು ಮಾನಸಿ=ನಾಗಿ ಮಾಡಿರುವಲ್ಲಿ ಮಾಯಾವಿ ಎಂದರೆ ಸ್ತ್ರೀಯೇ, ಎಂಬ ಧ್ವನ್ಯರ್ಥವಿದೆ! ಜರತ್‌ಕಾರುವು ನಾಗನಿರದೆ, ಅವನ ಅರ್ಧಾಂಗಿ ಮಾತ್ರ ನಾಗಿಯಾಗಲು ಹೇಗೆ ಶಕ್ಯ? ಆದಂ-ಈವ್ಹರ ಹಿಬ್ರೂ ಪರಂಪರೆಯ ಚಿತ್ರದಲ್ಲಿ ಇವರ ಪಕ್ಕಕ್ಕೆ ನಿಂತ ಸರ್ಪವು ಸ್ತ್ರೀ ಸದೃಶವಿದೆ ! ಈವ್ಹಳನ್ನೇ ಸರ್ಪ ಎನ್ನಲಿಲ್ಲ! ಆದರೂ ಕುಮಾರ ವ್ರತಿಯಾಗುವ ಸಂಕಲ್ಪಧಾರಿ ಪುರುಷ (?) ಈವ್ಹಳಿಂದ ಹಾವಿನಂತೆ ದೂರವಿರಬೇಕೆಂಬ ಕೃತನಿಶ್ಚಯದವನಾಗಬೇಕಾಗುತ್ತದೆ! ನಾಗ (: ಚಂದ್ರ) ಆದಿಶೇಷ (ಉಭಯಲಿಂಗೀ) ಸೃಷ್ಟಿಕರ್ತ, ಎಂಬ ಮೂಲಶ್ರದ್ಧೆಯನ್ನು ಆಪ : ರಸ ಪಂಥಗಳು, ಹೀಗೆ ಒಂದಿಲ್ಲೊಂದು ಬಗೆಯಿಂದ ವ್ಯತ್ಯಸ್ತಗೊಳಿಸಿ, ಮೂಲ ಆಕೃತಿಯ ಪತ್ತೆ ಹತ್ತಬಾರದೆಂಬ ಪ್ರಯತ್ನದಲ್ಲಿ ತೊಡಗಿದುದು, ಪುರಾತನ ಎಲ್ಲ ಸಂಸ್ಕೃತಿಗಳಲ್ಲೂ ಬಹಿರಂಗಕ್ಕೆ ಬರುತ್ತಿದೆ.

ಆದಿ ನರ ಆದಂ ಪಾತ್ರಸೃಷ್ಟಿಯಲ್ಲಿ ಸುಮೇರಿನ ಎಂಕಿಡು ಪ್ರತಿಮೆಯ ಹೋಲಿಕೆಯಿದ್ದುದು ತಜ್ಞರ ಗಮನಕ್ಕೆ ಬಂದಿದೆ. ಭಾರತೀಯ ಆದಿ ನರ: ಎಂಕಿಡು ಪರಂಪರೆಯವನೇ ಇರಲಿಕ್ಕೆಬೇಕೆಂದು ಸಿಂಧೂ ತೀರದಲ್ಲಿ ದೊರೆತ ಪ್ರಮಾಣಗಳಿಂದ ನಿಶ್ಚಿತವಿದೆ. ಆದರೆ, ಕೋಣನ ಕೊಂಬಿನ, (ಚಾಂದ್ರ) ಶೃಂಗಿಯನ್ನು ಋಷಿ ಪದವಿಗೆ ಏರಿಸಿ ಸಪ್ತ-ಋಷಿ=ಋಕ್ಷ= Great Bear ಈ ಲೈಂಗಿಕ ಸಾಂಕೇತಿಕ ಪ್ರತಿಮೆಯನ್ನಾಗಿಸಿದ್ದಾಗಿದೆ! 'ಅಕ್ಷ' ಮಾಲಾಧಾರಿ ತಾರಾ-ಭಗವತಿಯೊಡನೆ ಭಾರತೀಯರ ಐಹಿಕ ಜೀವನ ರೀತಿಯ ಅಮರ ಆದರ್ಶವಾಗಿಸಿ ಇಟ್ಟುದಾಗಿದೆ!

ಚಿತ್ರ ನಂ. ೨೨

ಪಿಪ್ಪಲ ಎಂಬ ಅಶ್ವ-ತ್ಥ : ವೃಕ್ಷ (ಭಾರತೀಯ (ಸನಾತನ) ಸಂಸ್ಕೃತಿಯ ಸಾರ)

ಸೈಂಧವ ಸಂಸ್ಕೃತಿಯ ಕೊಡುಗೆ, ಭಾರತಕ್ಕೆ, 'ಅತ್ವ-ತ್ಥ' ವೃಕ್ಷ ಉಪಾಸನಾ ಸಂಪ್ರದಾಯ. ಅಂದಿನಿಂದ ಇಂದಿನವರೆಗೆ ಅವಿಚ್ಛಿನ್ನತಿಯಲ್ಲಿ ಉಳಿದು ಬಂದಿರುವ ಈ ಸಂಪ್ರದಾಯಸ್ಥ ಗುಹಾನಿಹಿತ ಅರ್ಥವು, ಜಾಗತಿಕ ಪುರಾತನ ಸಂಸ್ಕೃತಿಗಳ ಪ್ರತಿಮಾ : ಸಂಕೇತಗಳ ತುಲನಾತ್ಮಕ ಸಮೀಕ್ಷೆಯಿಂದ ದೃಢಪಡುತ್ತಿದೆ. ಬ್ರಾಹ್ಮಾನಿಝಂದ ಬಗೆಗಿನ ಪೂರ್ವಗ್ರಹಿಕೆಯಿಂದಾಗಿ, ಆರ್ಯ-ದಸ್ಯು (ದ್ರಾವಿಡ) ಸಮಸ್ಯೆಯ ಕಲ್ಪನಾರಮ್ಯ ಹಿನ್ನೆಲೆಯಲ್ಲಿ ಮಾರ್ಶಲ್ ಪ್ರಭೃತಿಗಳಿಗೆ, ಸೈಂಧವ ಸಂಸ್ಕೃತಿಯಲ್ಲಿ ಕಂಡ ಪಿಪ್ಪಲ = ಅಶ್ವತ್ಥವು, ಆರ್ಯರದು (?) ಎಂಬ ಋ. ವೇದದಲ್ಲಿಯೂ ಇದ್ದುದು ಅವರ ಗಮನಕ್ಕೆ ಬಂದೇ ಇಲ್ಲ!

ಇದಕ್ಕೆ ಕಾರಣವೂ ಉಂಟು: ಈ ಸಂಹಿತೆಯ ಕಟ್ಟಡ, ವ್ಯಾಸ ಕಲ್ಪಿತ ಮಯ-ಸಭೆಯನ್ನು ಮೀರಿಸಿದೆ! ಅಲ್ಲಿ ಇರೋದೇ ಒಂದು ಆದರೆ, ತೋರುವುದು ಇನ್ನೊಂದು! ಏಕಂ ಸತ್ತಿನ ಮಾಯಾವೀಶಕ್ತಿ, ಎಂದರೆ ಇದು! ಈ ವೇದದಲ್ಲಿರುವ ಜಾಯವಃ ಯಂ ಅಶ್ವತ್ಥಂ ಉಪತಿಷ್ಠಂತ ಈ ವೃಕ್ಷ. ಇದು ಸಂಶೋಧಕರಿಗೆ ಕಾಣಬೇಕಿತ್ತು. ಅಶ್ವತ್ಥವನ್ನು ಪಿಪ್ಪಲವೃಕ್ಷ ಎಂದು, ಮಾರ್ಶಲ್ ಗ್ರಹಿಸಿದ್ದಾಗಿದೆ. ಆದರೆ ಇದೂ ಈ ವೇದಲ್ಲಿದೆ! ದ್ವಾ ಸುಪರ್ಣಾ ಸ-ಯುಜಾ ಸ-ಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇತಯೋಃ ಅನ್ಯಃ ಪಿಪ್ಪಲಂ ಸ್ವಾದು ಅತ್ತಿ -ಸಿಂಧೂತೀರದಲ್ಲಿ ದೊರೆತ ಪಿಪ್ಪಲ ಎಂಬ ವೃಕ್ಷಕ್ಕೆ ಏಕಶೃಂಗಿ ಎರಡು ಪ್ರಾಣಿ ಆಲಿಂಗಿಸಿವೆ. ವೇದದ ಉಲ್ಲೇಖದಲ್ಲಿ ದ್ವೌ ಸುಪರ್ಣೌ ಸಂಯೋಗದಲ್ಲಿವೆ. ಪಿಪ್ಪಲಕ್ಕೆ ಅಪ್ಪಿರುವ ಈ ಪ್ರಾಣಿಗಳ ಮೂಲರೂಪದಲ್ಲಿ ವ್ಯತ್ಯಾಸವಿದೆಯೆ ಅಥವಾ ಇವು ಒಂದೇ ಬಗೆಯವಿದ್ದು ನಾಮಸಂಕೇತ ಮಾತ್ರ ಬೇರೆಯೇ? ಇದು ತಿಳಿಯಬೇಕಾದ ಸಂಗತಿ. ಆದರೂ ಸೈಂಧವ ಸಂಸ್ಕೃತಿಯ ಹಾಗೂ ಇಂದಿನ ಋಕ್‌ಸಂಹಿತೆಯ ವೃಕ್ಷ=ಪರ್ಣ ಸಮಾನವೆ ಇವೆ ಎಂದು ಈಗ ಬಗೆಯಬಹುದು. ಋಗ್‌ವೇದದ ಸು-ಪರ್ಣ ಇದು 'ಪಕ್ಷಿ'ಸೂಚಕ ಸಂಕೇತ; ಆದರೆ, ಸಿಂಧೂತೀರದ ಪ್ರತಿಮೆಯಲ್ಲಿ ಏಕ-ಶೃಂಗ ಪ್ರಾಣಿ (ಪಕ್ಷಿ ಇರಲಾರದು). ಇದು ಎಂಥ ಪ್ರಾಣಿ ಇದ್ದರೂ ಒಂದೇ ಕೋಡಿನಿಂದಾಗಿ ಇದು ಗಂಡು ಪ್ರಾಣಿ ಇರಬೇಕು. ಅಲ್ಲಿಯೆ ದೊರೆತ ಈ ಸಂಕೇತದ ಸಮಸಾಮಯಿಕ ಒಂದೇ ಕೊಂಬಿನ ಬೇರೆ ಪ್ರತಿಮೆಗಳಿವೆ. ಇವು ನೂರಾರೂ ಗಂಡು ಇರುವುದನ್ನು ಸಪ್ಪಪಡಿಸುವ ಗ್ರಂಥಿ- ಗಣ್ಣು>ಕಣ್ಣು ಎದ್ದು ಕಾಣುವಂತೆ ಈ ಪ್ರತಿಮಾರಚನೆಯಿದೆ. ಈ ಕಾರಣದಿಂದ, ಸಂಕೇತಗಳ ತಲೆಯ ಮೇಲಣ ಕೋಡು ಅದು ಪುಲ್ಲಿಂಗೀಶಕ್ತಿ ಎಂದು ಸೂಚಿಸುವ ಸಂಕೇತ ಎಂಬುದರ ಬಗೆಗೆ ಸಂದೇಹಿಸಲು ಅವಕಾಶವಿಲ್ಲ. ಆದರೆ, ಪಿಪ್ಪಲ ಅಶ್ವತ್ಥ, ಸುಪರ್ಣ ಇಂತಹ ನಾನಾರ್ಥಕ್ಕೆ ಅವಕಾಶವಿರುವ ಕೃತ್ರಿಮ ಶಬ್ದಪ್ರತಿಮಾ ನಿರ್ಮಾಣವು ಹೆಚ್ಚುವುದು ಶ್ಲಾಘ್ಯವೊ? ಇದರ ಕಾರಣವೇನು?

ಶ್ಲೇಷಾಲಂಕಾರವು ಯಾಯಾವರ : ನಾಗಪೂಜಕರಿಗೆ ಅಚ್ಚುಮೆಚ್ಚು. ದಿಕ್ಕಾಲ ಪರಿಸರದ ಸಮಷ್ಟಿ ಜೀವನದೊಡನೆ ಸಂಬಂಧವಿರುವ ಅನುಭವ (ವಿಚಾರ: ಭಾವನೆ) ವಿಶದಪಡಿಸುವಾಗ ಕೃತ್ರಿಮ ನಾನಾರ್ಥದ ಪದ ಪ್ರಯೋಗಗಳಿಗೆ ಪ್ರಾಶಸ್ತ್ಯವಿರಲಾರದು. ಸೂಕ್ಷ್ಮ ಹಾಗೂ ಆಳವಾದ ಜೀವನಾನುಭವದ ತಾತ್ತ್ವಿಕ ವಿವೇಚನೆಯಲ್ಲಿ ಬುದ್ಧಿ ಪೂರ್ವಕವಾಗಿ ಶ್ಲೇಷಯುಕ್ತ ಅಥವಾ ವಾ ನ ವಾ ಶೈಲಿ ಅಪ್ರಶಸ್ತ, ತ್ಯಾಜ್ಯವೆನಿಸದಿರಲಾರದು. ಸಹ-ಜ ಸುಂದರ ಸಹಜೋಕ್ತಿಯ ಅಲಂಕರಣದ ರೀತಿಯ ಬದಲು ಕೃತ್ರಿಮ ವಕ್ರೋಕ್ತಿಗೆ, ಇಂದಿನ ಋಗ್ವೇದ ಸಂಹಿತೆಯ ಕಾಲದಿಂದ ಪಟ್ಟ ದೊರೆತುದು ಕಾಣುತ್ತದೆ. ಕುರೂಪವನ್ನು ಮರೆಮಾಜಲು, ನಿಂದ್ಯವನ್ನು ಅನಿಂದ್ಯವೆಂದು ಎನಿಸುವಂತೆ ಮಾಡಲು, ಇಂದಿನ ಸಂಹಿತೆಯಲ್ಲಿ ಈ ಬಗೆಯ ಮಾತಿನ ಲಾಗಹಾಕುವ ಒದ್ದಾಟ ನಡೆದುದರ ಸಂದೇಹಕ್ಕೆ ಅವಕಾಶವಿದೆ. ಈ ಸಂಹಿತೆಯಲ್ಲಿಯೆ ಚಮಸ ಪಾನ (ಅಥವಾ ಚಾಕ್ಷುಷೀ ಪುರುಷಯೋಗ) ದೀಕ್ಷೆಯ ವರ್ಣನೆ, ಇದರಲ್ಲಿ ಒಳಗೊಂಡ ತತ್ತ್ವದ ಛಾಂದೋಗ್ಯದಲ್ಲಿ ನಿರ್ದಿಷ್ಟಮೀಮಾಂಸೆಯ ಸೂಕ್ತದಲ್ಲಿ ಪ್ರಾರಂಭಕ್ಕೇ 'ನ ನಿಂದಿಮ' ಎಂಬ ಧೂರ್ತ ಸೂಚನೆಯಿದೆ. ಸಿಂಧೂ ತೀರದಲ್ಲಿ

ದೊರೆತಿರುವ ಏಕಶೃಂಗ ಪಶುವಿನ ಹೋಲಿಕೆಯ ಹಿರಣ್ಯಶೃಂಗ ಅಶ್ವದ ಜನ್ಮ ಹೇಳುವಾಗ ಮಾ ಪರಿಖ್ಯನ್ (ತುಚ್ಛಂ ಮಾ ಕುರ್ವಂತು) ಎಂದು ಬಿನ್ನವಿಸಲಾಗಿದೆ. ಪ್ರಸ್ತುತ ಪಿಪ್ಪಲ ಅಶ್ವತ್ಥ ಸು-ಪರ್ಣದ ವಿಚಾರವನ್ನು ಅವಾಚ್ಯ ಎಂದು ತಿರಸ್ಕರಿಸಿದರೆ, ಬ್ರಹ್ಮಪುಚ್ಛದ ದಿವ್ಯ ಬ್ರಹ್ಮ -ಆನಂದ-ರಸ ಜ್ಞಾನವಾಗಲಾರದು.

ಅಶ್ವ-ತ್ಥ ಇದು ಪೂರ್ಣ ಬ್ರಹ್ಮ: ಸನಾತನ ವೃಕ್ಷ ಎಂದು ಬಗೆಯ ಲಾಗುತ್ತಿದೆ. ಆದಕಾರಣ ಇದರಲ್ಲಿ ಪಿಪ್ಪಲ, ಸು-ಪರ್ಣ.... ಇತ್ಯಾದಿ ಏನೆಲ್ಲವೂ ಒಳಗೊಳ್ಳಲಿದೆ. ಪಿಪ್ಪಲ ಇದು ಮಧುರವೃಕ್ಷ ಯಥಾ ವೃಕ್ಷಃ ... ಪುರುಷಃ ಮೃಷಾ. ಈ ವಾಕ್ಯದಲ್ಲಿ ವೃಕ್ಷವು ಪುರುಷ (ಲಿಂಗ) ನಂತೆ ಮೃಷಾ ಆಗಿದೆ ಈ ಸಂಕೇತ ತುಂಬ ಮೋಸಕ್ಕೆ ಎಡೆಕೊಡುವಂತಹದಾಗಿದೆ! ಮೃಷ ಎಂದರೆ ಸುಳ್ಳು, ವ್ಯರ್ಥ; ವೃಕ್ಷವನ್ನು ಪುರುಷನಿಗೆ ಸುಮ್ಮನೆ (ವ್ಯರ್ಥ) ಹೋಲಿಸಿದೆ; ಎಂಬ ಅರ್ಥಕ್ಕೆ ಅವಕಾಶವಿದೆ. ಆದರೆ ಮೃಷ್ (pour out, sprinkle) ಎರೆ, ಸುರಿ, ಸೇಚನಮಾಡು ಎಂಬ ಅರ್ಥವೇ ಇಲ್ಲಿ ಅಭಿಪ್ರೇತವಿರಬೇಕು. ಮೃಜ್; ಮೃಷ್ಟ ಎಂಬ ಅರ್ಥಛಾಯೆಗೂ ಅವಕಾಶವಿದೆ! ಮೃಷ್ಟಾನ್ನ : ಸ್ವಾದು ಅನ್ನ! ಪಿಪ್ಪಲಂ ಸ್ವಾದು ಅತ್ತಿ ಎಂಬಲ್ಲಿ ಸುಪರ್ಣ ಆ-ಲಿಂಗಿಸಿದ ಈ ಸ್ವಾದು: ಮೃಷಾವೃಕ್ಷವು ಯಾವುದು, ಎಂದು ವಿವರಿಸುವ ಆವಶ್ಯಕತೆ ಇಲ್ಲ. ಆದಕಾರಣ, ಪಿಪ್ಪಲವನ್ನು ಅರಳಿಯಮರ ಎಂದು ಬಗೆಯಲಾಗುತ್ತಿರುವಲ್ಲಿ ಸಂಪೂರ್ಣ ಆತ್ಮವಂಚನೆಯಾಗುತ್ತಿದೆ! ಏಕೆಂದರೆ ಈ ಪಿಪ್ಪಲವು ದಿಕ್ಕಾಲ ಪರಿಸರದಲ್ಲಿ ಕಾಣುವ ವೃಕ್ಷವೇ ಅಲ್ಲ, ಈ ವೇದಜ್ಞರಲ್ಲಿ ಪಿಪ್ಪಲಾದಃ ಎಂಬ ಸಮಯಾಚಾರದ ಒಂದು ಶಾಖೆಯೂ ಇತ್ತು! ಅಶ್ವತ್ಥವು ಪಿಪ್ಪಲ (ಎಂದರೆ ಮಧು(ರ) ರಸ ಸೇಚನ ಮಾಡುವ ಬ್ರಹ್ಮ) ವೃಕ್ಷವೂ ಸರಿ. ಪಿಪ್ಪಲವು ದ್ವಾಸುಪರ್ಣಾ ಪಕ್ಷಿ ಮಿಥುನ ಆ-ಲಿಂಗಿಸಿರುವ ವೃಕ್ಷ, ಎಂದುದು ವೇದವೇ ಹೇಳಿದೆ.

ಈ ಹಿನ್ನೆಲೆಯು, ಪಿಪ್ಪಲವನ್ನು ಆಸ್ವಾದಿಸುವ ಈ ಸು-ಪರ್ಣ ಎಂಬ ಉಭಯ ಪಕ್ಷಿಗಳ ನಿಜಸ್ವರೂಪವನ್ನು ತಾನೆ ಬಹಿರಂಗಪಡಿಸುತ್ತಿದೆ : ಇದು ಮಿಥುನ ಯುಗಲ; ಅರ್ಥಾತ್ ಒಂದು ಸ್ತ್ರೀಶಕ್ತಿ ಸೂಚಕ ಸಂಕೇತ. ಇನ್ನೊಂದು ಪುಂಶಕ್ತಿ ಸೂಚಕ ಸಂಕೇತ ಇರಬೇಕು. ಆದರೆ, ಸೈಂಧವ ಸಂಸ್ಕೃತಿಯ ಪಿಪ್ಪಲ ಎಂಬ ವೃಕ್ಷವನ್ನು ಅಪ್ಪಿರುವ ಎರಡೂ ಸಾಂಕೇತಿಕ ಪ್ರತಿಮೆಗಳ ಏಶೃಂಗಿ (ಎಂದರೆ ಸಮಾನಲಿಂಗೀ) ಪ್ರಾಣಿಗಳು ! ಋಗ್‌ವೇದದ ಪಿಪ್ಪಲ ರಸಾಸ್ವಾದನರತ ಪಕ್ಷಿಗಳನ್ನು ಸುಪರ್ಣೌ ಎಂದಿರುವಲ್ಲೂ ಲಿಂಗದ ಸ್ಪಷ್ಟತೆ ಇಲ್ಲ! ನಾಸತ್ಯೌ=ಅಶ್ವಿನೌ ಎಂಬ ಮಿಥುನತ್ವವೂ ಹೀಗೆಯೆ ಅಸ್ಪಷ್ಟ! ಈ ಸಂದೇಹಕ್ಕೆ ಕಾರಣವಿದೆ : ಮಧು ಆಸ್ವಾದಿಸುವಲ್ಲಿಯೆ ಜೀವನದೊಳಗಿನ ಕೃತಾರ್ಥತೆಯು ಉಂಟು ಎಂಬ ಚಾಂದ್ರ ಸಮಯಾಚಾರಗಳಲ್ಲಿ ವಿಕೃತಾಚರಣವೂ ಶಿಷ್ಟಮಾನ್ಯವಾಗಿತ್ತು! ಋಗ್‌ವೇದದ ಮುನಿಸೂಕ್ತದಲ್ಲಿ ಬರುವ, "ಅಪ್ಸರಸಾಣಾಂ ಗಂಧರ್ವಾಣಾಂ ಮೃಗಾಣಾಂ ಚರಣೇ ಚರನ್" ಎಂಬಲ್ಲಿ ಪಶುಧರ್ಮ : ಸತ್-ತ್ವನ್>ಸಾತ್ವತಧರ್ಮ ಆಚರಣೆಗೆ ಈ ವೇದದಲ್ಲಿಯೆ ಆಧಾರ ಕಲ್ಪಿಸಿ ಇಡಲಾಗಿದೆ! ವಿ-ಭಾಂಡಕನೆಂಬವನು ಜಿಂಕೆ : ಶೃಂಗಿ ಶಿಶು ಪಡೆದಿದ್ದನಂತೆ ಮುಕ್ತಸಂಗಿಯು ಪಾಲಿಸುವುದು ಋತರೇತ ಸತ್ಕದ ಅನುಭಾವ ಮಾರ್ಗ; ಋತ ಸತ್ಕದ ಪಂಥವು ಭವಬಂಧನಕಾರಿ ಎಂದು ತಿರಸ್ಕೃತವಾದುದು ಕಾಣುತ್ತದೆ. ಸಿರಿಯಾ ಪಾಲಿಸ್ಟೈನದತ್ತಣಿನ ಒಂದು ಕಾಲದ ಸಮಯಾಚಾರಗಳಲ್ಲಿ ಈ ಬಗೆಯ ನಡೆವಳಿ ಇತ್ತು; "... the organized sodomy in the temples of the Syrian Moon goddess, though dogs and doves also associated with her worship, are credited with the same habit, ಬ್ರಹ್ಮ-ಶಿವನು ಸಮಯ ಪರೀಕ್ಷೆಯಲ್ಲಿ ವರ್ಣಿಸಿರುವ ಮೈಲಾರ ಮಲ್ಲಯ್ಯನ ಸಂಪ್ರದಾಯದಲ್ಲಿ ನಾಯಿಗಳಿಗೆ ಸ್ಥಾನವಿದೆ. ಅವಧೂತ ದತ್ತ-ಗುರುವಿನೊಡನೆ ಇರುವ ನಾಯಿಗಳಿಗೆ ತೀರ ಸಾಧುಅರ್ಥ ಕಲ್ಪಿಸಲಾಗಿದೆ! ಬೃಹಂತಂ ವಾಯಸಂ, ರಥಾಂಗ : ಚಕ್ರವಾಕ ವೇದದಲ್ಲೇ ಇದೆ.

ಪ್ರಸ್ತುತ ಋಗ್‌ವೇದದ ಪಿಪ್ಪಲಾದೀ ಸುಪರ್ಣೌ ಸಮಾನಲಿಂಗಿಯೊ, ವಿಷಮಲಿಂಗಿಯೊ ಎಂಬುದು ಸ್ಪಷ್ಟವಿಲ್ಲ. ಆದರು, ಹೋಳಿಹಬ್ಬವನ್ನು ಆಚರಿಸುವ ಬಗೆಗಿನ ವಿವರಣೆಯಲ್ಲಿ ಬರುವ ಈ ಸಂಬಂಧದ ಉಲ್ಲೇಖಗಳು, ಪಿಪ್ಪಲದ ಬಗೆಗಿನ ಸಂದೇಹವನ್ನು ಬಲಪಡಿಸುತ್ತವೆ. ಸೂರ್ಯನಿಗೆ ಜನ್ಮವಿತ್ತವಳು ರಾತ್ರಿ! ಪ್ರಳಯದ ನಂತರ 'ನವ' ಸೃಷ್ಟಿ! ಶುದ್ಧ ಪ್ರತಿಪದೆಯ ಚಂದ್ರೋದಯಕ್ಕೆ ಅಮಾವಾಸ್ಯೆ ಅವಶ್ಯ; ಯುಗಾದಿಗೆ ಮೊದಲು ಹೋಳೀ ಹುಣ್ಣಿವೆ ! ಫಾಲ್ಗುಣ ಮಾಸ ಅಂತ್ಯವಾಸವಾಗಿ ಕಲ್ಪಿಸಿರುವಲ್ಲಿ ಮೃತ್ಯುವಿನಿಂದ ಜೀವನಕ್ಕೆ ಪ್ರಾರಂಭ ಎಂಬ ಶ್ರದ್ಧೆಯೆ ಒಳಗೊಂಡಿದೆ. ಇದು ಭಾರತಕ್ಕೆ ಸೀಮಿತ ಶ್ರದ್ಧೆಯಲ್ಲ, ಈಜಿಪ್ಟಿನಿಂದ ಭಾರತದ ವರೆಗೂ ಈ ನಂಬುಗೆಯು ಒಂದು ಕಾಲಕ್ಕೆ ಜನಮನವನ್ನು ಆಳುತ್ತಿತ್ತು! ಆದಿಯಲ್ಲಿ ಸ್ತ್ರೀ ಶಕ್ತಿ ಅಲ್ಲ; ಆದಿ ಪುರುಷನೇ ತನ್ನ ಸ್ತ್ರೀಯನ್ನು ಸೃಷ್ಟಿಸಿದನು ಎಂಬ ಅನೈಸರ್ಗಿಕ ವೈಚಾರಿಕ ಆಕೃತಿಯು ಶ್ರದ್ಧಾಸ್ಥಾನವಾಗುವಾಗ ಪುರುಷ ಪೌಂಸ್ಯಶಕ್ತಿ ಏನನ್ನೂ ಸೃಜಿಸಬಲ್ಲದು. ಎಂಬ ಹಾಗಿನ ಕಲ್ಪಿತಕಥೆಗಳು ಪ್ರಚಾರಕ್ಕೆ ಬರುತ್ತವೆ. ರವಿ ಕಾಣದ್ದನ್ನು ತಾವು ಕಾಣಬಲ್ಲೆವೆಂಬ ಕವ್ಯ (ಅಗ್ನಿ) ಸಂಪ್ರದಾಯದ ಶಬ್ದ-ಬ್ರಹ್ಮಣಸ್ಪತಿಗಳು ನಿರ್ಮಿಸಿದ ಸಾಂಕೇತಿಕ ಪ್ರತಿಮೆಗಳು ಎಲ್ಲ ಭಾಷೆಗಳಲ್ಲಿಯೂ ಸಮಾನ ಆಕೃತಿ ರೂಪದವು ಇರುವುದರ ಅರ್ಥವೇನು?

ಅಶ್ವತ್ಥವನ್ನು ಹೋಲುವ, (ನಾರ್ವೇ ದೇಶದ) ಯಗ್ಗ್ರಸಿಲ್ ವೃಕ್ಷವು ಇಂತಹ ಒಂದು ಉದಾಹರಣ. ಹಿರಾಕ್ಲಿಟಸ್ ಹೇಳುವ War; ಎಗ್ಗ್ರಸಿಲ್ (ವೃಕ್ಷ) ತತ್ತ್ವಜ್ಞಾನವು ಸಾರುವ Eternal conflict ಇದರ ಕುರು-ಭೂಮಿ ಯಾವುದು? ಋ. ವೇದಸ್ಥ ದಕ್ಷಿಣ ಕಪರ್ದ ವಸಿಷ್ಠನ ಇನ್ನೊಂದು ನಿಲುಮೆ : ಅಗಸ್ತ್ಯ : ಸಮುದ್ರ ಶೋಷಕ ಬಾಡಬ ಅಶ್ವ. ಈತನ ಸೂಕ್ತದಲ್ಲಿ ಲೋಪಾಮುದ್ರೆ-ಅಗಸ್ತ್ಯರ ಕಥಾಭಾಗವಿದೆ. ವಾಸ್ತವಕ್ಕೆ ಬಹಳ ಹತ್ತಿರದ ವರ್ಣನೆಯಿದು. ಈ ಸಂಹಿತೆಯಲ್ಲಿರುವ War : Eternal conflictದ Battle ground ಸಮರಭೂಮಿ ಕುರು-ಭೂಮಿಯು ಅಲ್ಲಿ ವರ್ಣಿತ ಸುರತ-ಸಂಗ್ರಾಮ ಭೂಮಿಯ ಮೂಲಕ, ಈ ವೇದದ ಇಂದ್ರನು ಮಾಡಿದ ಸಂ-ಗ್ರಾಮ ಭೂಮಿ ಯಾವುದು ಇದು ಸ್ಪಷ್ಟವಾಗಲಿದೆ. ಭಾಷ್ಯಕಾರರೇ 'ಸುರತ ಸಂ-ಗ್ರಮ' (ಇಂದ್ರಿಯಗ್ರಾಮ ಹೋ.) ಈ ಶಬ್ದಪ್ರತಿಮೆ ಅಲ್ಲಿ ಉಪಯೋಗಿಸಿದ್ದಾರೆ.

ಸುಪರ್ಣ ಏನು? ಅಶ್ವ-ತ್ಥ ಎಂಬ ಈ ವೃಕ್ಷದ ನೆಲೆ ತಿಳಿಯಲು ಸು-ಪರ್ಣ ರಹಸ್ಯವೂ ಗೊತ್ತಾಗಬೇಕು. ಪಿಪ್ಪಲಕ್ಕೆ ಅಪ್ಪಿರುವ ಸು-ಪರ್ಣೌ ಎಂದರೇನು? ಪರ್ಣ : ಪತ್ರ = ಪಾತ್ರ ಈ ಸಂಕೇತಗಳ ಹಿನ್ನೆಲೆ ಗಮನಿಸಿದರೆ ಇದು ಮೂಲತಃ ಸ್ತ್ರೀರೂಪ ಸೂಚಕ ಸಂಕೇತವಿದೆ. ಆದಂ-ಈವ್ಹ ಇದರಲ್ಲಿ ಪರ್ಣ ಉಡಿಗೆಯವಳು ಈವ್ಹಳು! ಆದರೆ, ಮೂಲ ಸ್ತ್ರೀ ಸಂಕೇತಗಳನ್ನು ಉಭಯಲಿಂಗೀ-ಪುಲ್ಲಿಂಗಿಯಾಗಿ ಮಾರ್ಪಡಿಸಿಕೊಳ್ಳುವುದು ಒಂದು ಹಂತದಲ್ಲಿ ಅನಿವಾರ್ಯವೇ ಆಗುತ್ತದೆ. ಪುರಾತನ ದೈವತಕಥೆಗಳಲ್ಲಿ. ಆದಿಪುರುಷ ವಿಚಾರವು ತಲೆಯೆತ್ತಿದ ಬಳಿಕ ಈ ಸ್ಥಿತ್ಯಂತರವು ಕಾಣಿಸಿಕೊಂಡಿದೆ ದ್ರೋಣ ಪುಲ್ಲಿಂಗೀ ಪ್ರತಿಮೆ ! ಈ ದ್ರೋಣ ಜನ್ಮಕೊಟ್ಟದ್ದು ಅಶ್ವತ್ಥಾಮನ್ ನಾಮಸಂಕೇತದ ಕೂಸಿಗೆ! ಅಶ್ವತ್ಥಾಮನ ತಾಯಿ ಕೃಪಿ, ಮಾವ ಕೃಪ ಇಬ್ಬರೂ (ಶರದ್ವತ್ ಎಂಬವನ ಅಯೋನಿಜರು (ಎಂದರೆ ಶರ-ಸ್ತಂಭೇ) ಹುಟ್ಟಿದವರು! ಈ ಸ್ತಂಭ ಶರ ಮತ್ತು ವ್ಯಾಸನ ತಂದೆಯು ಪರಾ-ಶರ. ಹೋಲಿಸು.) ಕೃಪನಿಗೆ ಇದ್ದ ಗೌತಮ ಎಂಬ ಪರ್ಯಾಯನಾಮವು, ಇವು ಚಾಂದ್ರ ಮಾಯಾವೀ ಸಂಕೇತಗಳು ಎಂಬುದನ್ನು ಬಹಿರಂಗಪಡಿಸುತ್ತಿದೆ! ಗರ್ಭಸ್ಥನಿಗಿದ್ದಾಗಲೇ ಜ್ಞಾನಿ; ದಿವ್ಯಚಕ್ಷು ಆಗಿದ್ದನೆಂಬ ವಾಮದೇವನೂ ಗೌತಮ ಪುತ್ರನು!

ಪರ್ಣವು ಪಕ್ಕ ಎಂಬ ಅರ್ಥದ್ಯೋತಕವೂ ಆಗಿದೆ. ಸುಪರ್ಣ ಸುಂದರ ಗರಿಗಳ ಹಕ್ಕಿ! ಹಕ್ಕಿ=ಪಾರಿವಾಳದ ಬಗೆಗೆ ಹಿಂದೆ ಹೇಳಿದೆ ಪಾರಿವಾಳ, ಕೋಳಿ ಇವು ಸದಾ ಸಂಯೋಗಾತುರ ಪಕ್ಷಿ.

ಪಿಪ್ಪಲ=ಮಧುರವೃಕ್ಷ, ಸಂಯೋಗಾತುರ ಸುಪರ್ಣೌ, ಎಂದರೆ ಇದು ಮೃತ್ಯುಯೋಗವೇ. ಈ ಕಾರಣದಿಂದ ಈ ಸುಪರ್ಣೌ ಯುಕ್ತ ಪಿಪ್ಪಲವು ಸುಪಲಾಶವೃಕ್ಷ ಯಮನ ವೃಕ್ಷವಾಗಿ ಪರಿಣಮಿಸಲೇಬೇಕು. ಈ ಸಾಂಕೇತಿಕತೆಯು ರೇತಸತ್ಯದ ಎರಡೂ ಭೂಮಿಕೆಗಳನ್ನು ಒಳಗೊಂಡಿದೆ. ಪಿಪ್ಪಲ + ಸುಪಲಾಶ ಎರಡೂ ಸೇರಿ ಅಶ್ವ-ತ್ಥ ವೃಕ್ಷವಾಗಿದೆ. ಅಶ್ವತ್ಥ : ನಾರಾಯಣ; ಆದಿನಾರಾಯಣ ಸೃಷ್ಟಿಕರ್ತ! ಆದಕಾರಣ, ಇದು ಸೃಜನಶಕ್ತಿ ಸೂಚಕ ವೃಕ್ಷ. ವಿಶ್ವರೂಪ ವೃಕ್ಷ ನಾರಾಯಣ=ಸರ್ಪ. ಈ ಕಾರಣದಿಂದ ಅಶ್ವತ್ಥ ಅಮೃತಂ ಚೈ ಮೃತ್ಯುಃ. ಉಭಯ ಸ್ವರೂಪ, ಆದಿನಾರಾಯಣ ಸೃಷ್ಟಿ ಕರ್ತನು ನರನಿಂದೊಡಗೂಡಿ ತಪೋನಿರತನು! ಬದರಿಕಾಶ್ರಮದಲ್ಲಿ. ಇಲ್ಲಿ ಶ್ರೀ ಲಕ್ಷ್ಮಿಯು ಇದ್ದುದರ ಉಲ್ಲೇಖವಿಲ್ಲ. ಮ ಭಾರದ ನಾರಾಯಣೋ ಪಾಖ್ಯಾನದಲ್ಲಿ!

ಯಗ್ಗ್ರಸಿಲ್ ಇದೂ ಅಶ್ವ-ವೃಕ್ಷ; ಯಗ್ಗ್ರ ಎಂದರೆ ವೊಡೆನ್ (woden) ದೇವನ ಹೆಸರು; Yagdarsil the Ash tree that is the horse of yaggra. ಇದರ ಬೇರುಗಳು, ಶಾಖೋಪಶಾಖೆಗಳು ವಿಶ್ವವ್ಯಾಪಿಸಿವೆ! "Sure hoofed is my stecd in the day of battle...." ಋಗ್ವೇದದ ಹಿರಣ್ಯಶೃಂಗ ಅಶ್ವದ ಶೃಂಗಸ್ಥಾನೀಯಾಃ ಕೇಶಾಃ ಸೌಂದರ್ಯವನ್ನು ವರ್ಣಿಸಲಾಗಿದೆ! ಹೋಲಿಸಿನೋಡಿ 'Battle Trees' ವೃಕ್ಷ-ಸಂಗ್ರಾಮದಲ್ಲಿ ಆ ದೇವನು ಯಗ್ಗ್ರಸಿಲ್ ಕುದುರೆ ಉಪಯೋಗಿಸುತ್ತಿದ್ದನಂತೆ. ಭಾರತೀಯ ಅಶ್ವ-ತ್ಥ ಸಂಕೇತವು ಸ್ವಯಂ ಪೂರ್ಣವಿದೆ. ಈ ಅಶ್ವವೃಕ್ಷವು ಲೋಕವಿನಾಶಕಾರೀ ಉಗ್ರ ನರ-ಸಿಂಹ ರೂಪ ಧರಿಸಬಾರದೆಂದು ತೀರ್ಥ : ಜಲಾಶಯದ ತಡೆಯಲ್ಲೆ ಅಶ್ವತ್ಥವೃಕ್ಷ ಸ್ಥಾಪಿಸುವ ವಾಡಿಕೆಯಿದೆ. ನಾಗಪ್ರತಿಮೆ ಮಾಡಿಸುವವರು ನಾಗಬಂಧದೊಳಿರುವ ಯುಗಲದ ಸಾಂಕೇತಿಕ ಪ್ರತಿಮೆಗಳನ್ನು ಇರಿಸುವುದು ಅಶ್ವ-ತ್ಥದ ಕೆಳಗೇ ಗರ್ಭಧಾರಣೆಯ : 'ಪುಂಸವನ' ಸಂಸ್ಕಾರವು ಶಮೀ ಆರೂಢ ಅಶ್ವತ್ಥದ ಅಡಿಯಲ್ಲೇ ನಡೆಯಬೇಕು ಎಂದು ಅಥರ್ವವೇದ ವಿಧಿಸುತ್ತದೆ.

ಪ್ರತಿಯೊಂದು ಜೀವಯೂ ಸ್ವಯಂ-ಪೂರ್ಣ ಅಶ್ವ-ತ್ಥ ಉಭಯಲಿಂಗೀ ಪ್ರಾಣಿಯಾಗಿದೆ. 'ತನ್ನನ್ನು ತಾನು ಅರಿತರೆ' ಈ ಅಗ್ನಿವೃಕ್ಷವು ಜ್ಯೋತಿಃ ಸ್ವರೂಪ ಬೋಧಿವೃಕ್ಷವಾಗಿ ಪರಿಣಮಿಸುತ್ತದೆ, ಎಂಬ ದಿವ್ಯಾಧ್ಯಾತ್ಮದ ಸಂದೇಶ ಸೈಂಧವ ಸಂಸ್ಕೃತಿಯ ಅವಶೇಷಗಳೊಳಗಿಂದಲೂ ನಿನದಿಸುತ್ತಿದೆ. ಏಕಾಂಗೀ ಅರ್ಧ ಗರ್ಭವ್ಯಕ್ತಿ ನಿತ್ಯ ಅತೃಪ್ತ; ಅನಾಥ.

ತಾನು ಉಭಯಾಂಗಿಯಾಗುವ ಸಾಧನದಲ್ಲಿದ್ದುದರ ಸೂಚಕ ಪ್ರತಿಮೆಗಳಲ್ಲಿ ಭಾಲಾಕ್ಷಧಾರಿ ಧ್ಯಾನಮಗ್ನಮುನಿಯುಂಟು. ಇಲ್ಲಿ ಪ್ರತಿಮೆಗಳಲ್ಲಿ ಗಂಡಸರು ಹೆಣ್ಣುಮಕ್ಕಳಂತೆ ಉದ್ದಕೂದಲು ಬೆಳಸುವ ವಾಡಿಕೆಯಿತ್ತು! ಋವೇದದಲ್ಲಿ ಕೇಶಿನ್ ಮುನಿವರ್ಗವಿದೆ. ಅಪ್ಸರಸೌ: ಪರ್ವತ ನಾರದೌ : ಶಿಖಂಡಿನೌ ಸೂಕ್ತಕಾರಿರಿದ್ದಾರೆ. ಇವರು ಬೃಹನ್ನಳ(ಲೆ) ಸಂಪ್ರದಾಯೀ ಅಯನದ ಯೋಗಪ್ಪ ಜೋಗಪ್ಪನ ನೆನಪು ತರುತ್ತಾರೆ.

ಅಶ್ವತ್ಥವನ್ನು ಮರಾಠಿಗರು ಪಿಂಪಳ ಎನ್ನುತ್ತಾರೆ; ಪಿಪ್ಪಲ>ಪಿಂಪಳ ಈ ಹೆಸರು ಅಶ್ವತ್ಥದಷ್ಟೆ ಕಾಲ್ಪನಿಕ ಸಂಕೇತ. ಪಿಂಪಳ>ಪಿಪ್ಪಲ ಈ ಮಾತು ಕಂನುಡಿಯಲ್ಲಿ ಸ್ಥಾನ ಪಡೆಯಲಿಲ್ಲ. ಅರಳೆಯ ಮರಕ್ಕೇ ಅಶ್ವತ್ಥ ಎಂದೆಂಬ ರೂಢಿಯಿದೆ. ಆದರೆ, ಅರಳೆಯ ಮರವನ್ನು ಅಶ್ವ-ತ್ಥ ಎಂಬಲ್ಲಿ ವಿಡಂಬನೆಯಿದೆ ; ಅಶ್ವತ್ಥಂ ಸು-ವಿರೂಢ ಮೂಲಂ ಎಂದು ಹೇಳಲಾಗುತ್ತದೆ. ಅತ್ವತ್ಥಃ ಅಯಂ ಸನಾತನಃ ಅಶ್ವತ್ಥಂ ಪ್ರಾಹುಃ ಅವ್ಯಯಂ ಎಂದೂ ವರ್ಣಿಸಲಾಗಿದೆ ಇದನ್ನು ಪ್ರಪಂಚರೂಪ ವೃಕ್ಷ ಎಂದೂ ಹೇಳುವರು. ಆದರೆ, ಅರಳೆಯ ಮರ ಟೊಳ್ಳು : ಬಿರುಗಾಳಿಗೆ ಬೇರು ಸಹಿತ ಕಿತ್ತಿ ಬೀಳುವ ಮರ : ಪಿಪ್ಪಲ : ಸ-ರಸ ಅಥವಾ ರಸಯುಕ್ತ ವೃಕ್ಷವಿರಬೇಕು. ಇದನ್ನು ಕ್ಷೀರ ವೃಕ್ಷಗಳಲ್ಲಿ ಎಣಿಸಿದರೂ ಆಲದಂತೆ ಹಾಲಿನ ಗುಣ ಅರಳೆಯಲ್ಲಿಲ್ಲ. ಅಶ್ವತ್ಥ ಶಬ್ದದ ನಿರುಕ್ತವನ್ನು ನ ಶ್ವಃ ಅಶ್ವಃ (=ನಾಳೆ ಎಂಬುದೇ ಇಲ್ಲದೆ ಇರುವ ಎಂದರೆ) ಕ್ಷಣಭಂಗುರ ವೃಕ್ಷ ಎಂದೂ ಹೇಳಲಾಗುತ್ತದೆ! ಆದಕಾರಣ ಅಶಾಶ್ವತ ವೃಕ್ಷ ಎಂಬರ್ಥದಲ್ಲಿ ಇಂದಿನ ಅರಳೆಯ ಮರಕ್ಕೆ ಅಶ್ವ-ತ್ಥ ವೃಕ್ಷದ ಪಟ್ಟ ಬಂದಿದೆ. ಆಲ=ವಟದ ಸಾಂಪ್ರದಾಯಿಕ ಸ್ಥಾನ-ಮಾನವನ್ನು ಲೆಕ್ಕಿಸಿದರೆ ಈ ಸಂದೇಹವು ಸಾಧಾರಣವಾಗಿ ದೃಢಪಡುತ್ತದೆ) ಸನಾತನ ಶಿಶು (: ಅ-ಭು [Being]) ಧಾರಣ ಮಾಡಿದ ಪತ್ರ, ವಟ ಈ ಸಾಂಕೇತಿಕನಾಮದ್ದು! ಒಂದಾಲದೆಲೆಯ ಮೇಲೆ ಮಲಗಿರುವ ರಂಗ. ಗೊ-ಪಾಲ, ಬಾಲ ಈ ಹಾಡಿನೊಳಗಿನ ಗುಹಾತೀತಂ ಗುವ್ಹ ರೇಣ್ಯಂ ಗುಹ್ಯ: ಅರ್ಥಧಾರಣ ಮಾಡುವ ಪ್ರತಿಮೆಗಳು ವೇದವಿಹಿತವಾಗಿದೆ. ವಿಷ್ಣು ಸದೃಶ ಗುಹ್ಯಂ ಪದಂ =ಪತ್ರವು ಇದು! ಇದು ಅಂತರಿಕ್ಷ ಆಪ : ರಸಗಳ (=ಗೋನಾಂ) ಗುಹ್ಯವು (ತುಚ್ಯೇನ ಅಪಿಹಿತಂ) ಇಲ್ಲಿ ರಕ್ಷಿಸಲ್ಪಟ್ಟಿದೆ. ಈ ಕಾರಣದಿಂದ ಸನಾತನ ಶಿಶುವನ್ನು ಧಾರಣ ಮಾಡುವ ಪತ್ರ : ಸು-ಪರ್ಣ (: ಪಾತ್ರ) ಆಲವು ಇರಬಲ್ಲುದೆ ಹೊರತು ಅರಳೆಲೆಯಲ್ಲ; ಅರಳೆಲೆಯ ರೂಢಿ, ಜಗನ್ಮಿಥ್ಯಾವಾದದ ಪ್ರಭಾವ ಸೂಚಕ ಸಮಯ ನಿದರ್ಶಕವಾಗಿದೆ.

ಆಲದ ಮರಕ್ಕೆ ನೀಲ (:ರ) ವೃಕ್ಷ ಎಂದು ಹೆಸರು! ಆಲ್ : ಪಾಲ್: ಆಲ್=ಜಲ: ರಸವಾಚಕ ಸಂಕೇತ: ಆಲವನ್=ವಿಷ್ಣು. ರುದ್ರನೂ ಸರಿ ವೃಕ್ಷೋಃ ವಟತರೋಃ ಮೂಲೇ ವೃದ್ಧಾ ಶಿಷ್ಯಾಃ ಗುರೋ ರ್ಯುವಾ ಆದ್ಯ ಶಂಕಾರಾಚಾರ್ಯರ ರೂಪಕ ರಹಸ್ಯವಿದು. ಬೋಧಿವೃಕ್ಷ ಎಂದರೆ ಈ ಸ-ರಸ ಆಲದೇ ಎಂದು ಸಾರುತ್ತದೆ. ಆಚಾರ್ಯರ ಅಗಾಧ ಅರ್ಥಯುಕ್ತ "ಗುರೋಃ ತು ಮೌನಂ ವ್ಯಾಖ್ಯಾನಂ ಶಿಷ್ಯಾಃ ತು ಛಿನ್ನ ಸಂಶಯಾಃ" ಎಂಬ ಈ ಒಂದು ವಾಕ್ಯವೂ ಸಾಕು. ಬೋಧಿವೃಕ್ಷ ಯಾವುದು ಎಂಬುದನ್ನು ಸಿದ್ಧಪಡಿಸಲು! ಈ ಬೋಧಿಗುರುವು (ನಿತ್ಯ) ಮೌನಿ! ಮೌನ ವ್ಯಾಖ್ಯಾನಕಾರನೆಂಬ ಈ ಮುನಿವರನೇ ಗುರುದೇವ. ಋ. ವೇದದ ಕೇಶೀ : ಪುರುಷ (: ಏಕಾಕ್ಷ ಸರ್ಪ)! ಅಶ್ವತ್ಥ=ಬೋಧಿ=ವೃಕ್ಷ ಈ ಸಮೀಕರಣವನ್ನು ಚಿತ್ರಿಸಿರುವ ಬೌದ್ಧಕಾಲದ ಸಾಕ್ಷೀ ಚಿತ್ರಗಳು ಉಂಟು.

ವಿಶ್ವೇಶ್ವರ : ಶಿವನು ಕಲ್ಲಾಲ್ (Banyan tree) ಅಡಿಯಲ್ಲಿ ಕುಳಿತ ವರ್ಣನೆ ತಮಿಳು ಪ್ರಾಚೀನ ಕಾವ್ಯದಲ್ಲಿದೆ. ಬೌದ್ಧ ಸಂಪ್ರದಾಯದಲ್ಲಿ ಅರಳೆಯಂತೆ ಆಲವೂ, ಬೋಧಿವೃಕ್ಷವಾಗಿ ಎಣಿಸಲ್ಪಡುತ್ತಿತ್ತು. ಯಕ್ಷಕಿನ್ನರಾಧಿಪತಿ ಕುಬೇರನು: ಧನಪತಿ : ಕಲ್ಪವೃಕ್ಷ ಎಂದು ಆಲದ ಮರವನ್ನು ಸ್ತಂಭಗಳ ಮೇಲೆ ಚಿತ್ರಿಸುವ ವಾಡಿಕೆಯಿತ್ತು! ವಿಷ್ಣು-ಪದ=ಪಾದ ಎಂದು ಕಂಬ ನಿಲ್ಲಿಸುವ ಈ ವಾಡಿಕೆ ವೃಕ್ಷಪೂಜೆಯ ಪರ್ಯಾಯ! ಅಶ್ವತ್ಥ ಸಂಕೇತವು ವಿಷ್ಣು-ಸ್ತಂಭ! ಈ ಹಿನ್ನೆಲೆಯಲ್ಲಿ ಆಲವನ್ನು, ಅಶ್ವತ್ಥ ಅಲ್ಲ, ಎನ್ನಲು ಅವಕಾಶವಿಲ್ಲ. ಈ ಆಲ: ವಟ-ಪತ್ರ=ಸುಪರ್ಣ (0) ಸ್ತ್ರೀತ್ವದ ಸಾಂಕೇತಿಕ ಪ್ರತಿಮೆ ಎಂಬುದು. ವಟಪತ್ರಶಾಯಿ ಸನಾತನ ಶಿಶು ಈ ಸಂಕೇತದ ಮೂಲಕ ಪ್ರತೀತಿಗೆ ಬರುತ್ತದೆ. ಆದಕಾರಣ, ವಟವೃಕ್ಷ ಸ್ತ್ರೀ ಶಕ್ತಿಯ ವಾಸಸ್ಥಾನ ಎಂಬುದು, ನಿಶ್ಚಿತ.

ಈ ಸಂದರ್ಭದಿಂದ ನಿಶ್ಚಿತವಾಗುತ್ತಿರುವ ಒಂದು ಮೌಲಿಕ ಸಂಗತಿ : ವೃಕ್ಷಗಳು ಮೊತ್ತಮೊದಲಲ್ಲಿ ಅವುಗಳ ಎಲೆಗಳ (ವೃತ್ತಾ ಕೃತಿಯ) ಮೂಲಕ ಸ್ತ್ರೀ ಶಕ್ತಿತತ್ವದ ನಿಧಾನ ಎನಿಸುತ್ತಿರಬೇಕು. ಈ ನಿರ್ಣಯಕ್ಕೆ ಯುರೋಪಿನತ್ತಣಿನ ಪುರಾತನ ನಂಬುಗೆಯ ಬೆಂಬಲವಿದೆ. In ancient Greece and Italy the tree spirit was essentially female ಆದಕಾರಣ, ಕಾಂಡ=ಬಡ್ಡೆ ಮಹತ್ವದ್ದೆಂದು ಎನಿಸಿದ್ದು ಎರಡನೆಯ ಹಂತದಲ್ಲಿ.

ಸತ್ಯಾನ್ವೇಷಣೆಯಲ್ಲಿ ಉಂಟಾಗುವ ದಿಗ್ಭ್ರಮೆಗೆ ಕಾರಣವಿರುತ್ತದೆ. ಸಾಂಸ್ಕೃತಿಕ: ವೈಚಾರಿಕ ಸ್ಥಿತ್ಯಂತರಗಳ ಅನುಕ್ರಮವನ್ನು ಗಮನಿಸದೆ ಇದ್ದರೆ ಈ ದಿಗ್ಭ್ರಮೆ ದೂರವಾಗಲು ಶಕ್ಯವಿಲ್ಲ. ಸಂಸ್ಕೃತಿಯ ಪ್ರಾರಂಭವು ಆದಿಪುರುಷನಿಂದ

ಎಂಬ ಗ್ರಹಿಕೆಯಿಂದಾಗಿ ಈ ದಿಗ್ಭ್ರಮೆ ವಿಪರೀತವಾಗಿದ್ದುಂಟು. ಗೋವುಗಳು ಪೂಜ್ಯವಿದ್ದು ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿ ವೃಷಭ, ಪುಲ್ಲಿಂಗೀ ಏಕಶೃಂಗ ಪಶುಪ್ರತಿಮೆಗಳು ಹೆಚ್ಚಾಗಿ ದೊರೆತ ಕಾರಣವೇನು? ಮಾರ್ಶಲ್ ಈ ಗೋವಿನ ಸಮಸ್ಯೆಯನ್ನು ಎತ್ತಿ ಉತ್ತರ ಹೇಳಲಾರದೆ ಬಿಟ್ಟುದುಂಟು. ಪುರುಷ ಪೂಜಾಯುಗದೊಡನೆ ಆದ ಸ್ಥಿತ್ಯಂತರಗಳಲ್ಲಿ ವೃಕ್ಷವಂತೂ ಸರಿ, ಪರ್ಣ (ದ್ರೋಣ) ಸಹ ಪುಲ್ಲಿಂಗಿ ಆಗಿದ್ದುಂಟು! ಆದಿಯಲ್ಲಿ ಮಾತೆಯೆ ದೇವರೆಂದು ಪೂಜೆಗೊಳ್ಳುತ್ತಿದ್ದಳು ಎಂದು ಹೇಗೆ ಹೇಳುವುದು? ಎಷ್ಟೊ ಸಾವಿರ ವರುಷಗಳ ಹಿಂದಿನ ಸಂಗತಿ: ಇದು ಹೀಗೆಯೆ ಎಂದು ನಿಶ್ಚಿತವಾಗಿ ಹೇಳುವುದು ಅಶಕ್ಯವೆಂಬ ವಿವೇಕವು ತಪ್ಪು ಅಲ್ಲ. ಆದರೆ, ಸಂಶೋಧನದ ಉದ್ದೇಶವು ಏನು? ಸಂಶಯ-ಸಂದಿಗ್ಧತೆ ಕ್ರಮವಾಗಿ ಕಡಿಮೆಯಾಗುತ್ತ ಕೊನೆಗೆ ಒಂದು ನಿಶ್ಚಿತಕ್ಕೆ ಬರಲೇಬೇಕು. ಇಲ್ಲವಾದರೆ. ಅದು ಸತ್ಯದ ಅನ್ವೇಷಣೆಯೆನಿಸೀತೆ? ಆದಿಮಾತೆಯ ವೈಚಾರಿಕ ಭೂಮಿಕೆಯೂ ಸರಿ. ಆದಿಪುರುಷನ ಭೂಮಿಕೆಯನ್ನು ಅಲ್ಲಗಳೆಯಲು ಆಗುವುದಿಲ್ಲ ಇಷ್ಟೆ ಏಕೆ? ಅಯೋನಿ ಸಂಭವತ್ವವೂ ಅಸಂಭವವಲ್ಲ! ಹೀಗೆ ಎರಡು-ಮೂರು ಶಕ್ಯತೆಗಳನ್ನು ಒಪ್ಪಿ ಸಂದೇಹ ಹೆಚ್ಚಿಸುವ ಸತ್ಯಾನ್ವೇಷಣೆ ಏಕಂ ಸತ್ ಪಂಥೀಯ ನೇತಿ ನೇತಿ ವಾದಿಗಳ ವೈಶಿಷ್ಟ್ಯ. ಆದರೆ, ಋತ ಎಂದರೆ ನಿಯಮಾವಲಂಬೀ ಶಾಸ್ತ್ರೀಯ ಸ್ವರೂಪದ ಸತ್ಯವು ಈ ಮಾನವ ಜೀವನದಲ್ಲಿ ಉಂಟು. ಹಲವು ಘಟನೆಗಳಲ್ಲಿ ಹುದುಗಿರುವ ಗರ್ಭಿತಾರ್ಥಯುಕ್ತ ಅಂತಃಸಂಗತಿಯ (Self consisten) ಹೆಣಿಕೆಯ ಜೀವನ ಪಟವು ದೃಗ್ಗೋಚರವಾಗುವಲ್ಲಿ ಐತಿಹಾಸಿಕ ಸ್ವರೂಪದ ವಾಸ್ತವ ಸತ್ಯವೂ ಉಂಟು ಎಂದು ಬಗೆಯುವಲ್ಲಿ ಅಳುಕಬೇಕಾದ ಕಾರಣವು ಕಾಣುವುದಿಲ್ಲ.

ವೃಕ್ಷಪೂಜೆಯಲ್ಲಿ ಸ್ತ್ರೀಶಕ್ತಿಯ ಭಾವನೆಯೇ ಮೊತ್ತ ಮೊದಲಲ್ಲಿ ಇರಬೇಕು. ಈ ಬಗೆಯ ಸ್ತ್ರೀತ್ವದ ಆರೋಪಕ್ಕೆ ಪರ್ಣ: ಪತ್ರಗಳೇ ಕಾರಣವಿದ್ದುದು ಬೆಳಕಿಗೆ ಬಂದಿದೆ! ವಟ-ಪತ್ರಸ್ಥ ಶಾಶ್ವತ ಶಿಶು ಇದಕ್ಕೆ ನಿದರ್ಶನ. ತ್ರಿಪರ್ಣ-ತ್ರಿಪತ್ರ=ಭಾರತೀಯ ಬಿಲ್ವಪತ್ರ. ಇಂಥ ಇನ್ನೊಂದು ಉದಾಹರಣ: ತ್ರಿಪತ್ರ ಸಂಕೇತ ಮುನಿಯ ಮೈಮೇಲೆ ಇದೆ! ಅರ್ಧಗರ್ಭ ಮುನಿ ಪೂರ್ಣ-ಪುರುಷನಾಗಲು=ಅಶ್ವ. ಅಶ್ವ-ತ್ಥವಾಗಲು ಪತ್ರ=ಪಾತ್ರ ಅವಶ್ಯ. ಡುಮುಝಿ ತ್ರಿಪರ್ಣಧಾರಿ. ಆದರೆ, ತ್ರಿಪರ್ಣ (೦) ತ್ರಿ-ಅಂಬಕ ಈ ಸಂಕೇತ ಮೂಲದಲ್ಲಿ ಪುರುಷನದೊ ಸ್ತ್ರೀಯಳದೊ? ಬಿಲ್ವಪ್ರಿಯಳು=ತ್ರಿಪತ್ರಳು ಎಂಬ ಶ್ರೀ ಲಕ್ಷ್ಮೀ-ಸ್ತೋತ್ರದಲ್ಲಿತ್ರ್ಯಂಬಕೀ ದೇವೀ ನಾರಾಯಣೀ ಎಂದು ಹೇಳಿದೆ. ನಾರ ನೀರೇ : ಮರಾಠಿ, ಹಿಂದಿಗಳಲ್ಲಿ ಸ್ತ್ರೀವಾಚಕ! ನಾರಾಯಣ ಸಂಸ್ಕೃತದಲ್ಲಿ ಸೇರಿದ ದೇಶೀಮಾತು! ಈ ನಾರ-ಅಯನಿಯನ್ನು ತ್ರ್ಯಂಬಕಿ ಎನ್ನುವಲ್ಲಿ ಔಚಿತ್ಯವಿದೆ. ಆದರೆ, ಸ್ತಂಭ: ಸ್ಕಂಭ=ವೇತಸ (ಗಲಗು: Reed) ರೂಪೀ (ಪುರಿ-ಶಯ) ಪುರುಷನನ್ನೂ ನಾರ ಅಯನಿ ಎಂದರೂ ಇದು ಏಕೈಕ ಮಾರ್ಗ. ಜೀವನ ಪೋಷಕ ಎರಡು ಅಂಬಕಗಳ ವರದಾನವಿಲ್ಲದವನನ್ನು ತ್ರ್ಯಂಬಕ ಎನ್ನುವಲ್ಲಿ ಸತ್ಯ-ಭ್ರಷ್ಟತೆಯ ಅಪರಾಧ ಸಂಭವಿಸುತ್ತಿದೆ! ಮೂರೆಲೆಯ ಬಿಲ್ವ : ತ್ರ್ಯಂಬಕವೆಂದು ನಂಬಿಸಲಾಗಿರುವ ರುದ್ರ-ಶಿವನ ಪ್ರೀತಿಯ ಪತ್ರ ಎಂದು ಹೇಳಲಾಗಿದೆ. ಡುಮುಝಿಯಂತೆ ರುದ್ರಶಿವನೂ ತ್ರಿ ಪತ್ರ ಪ್ರಿಯನಿರಬೇಕು; ಇದ್ದಾನೆ. ಆದರೆ, ತ್ರಿ ಅಂಬಕತ್ವ ಪುರುಷನಿಗೆ ಇಲ್ಲ. ಇಲ್ಲಿಯೂ ಕವಡು! (ತ್ರಿ) ಪಾತ್ : ಪದ (೦) ಈ ವತ್ಸ (ಅಯನ) ಲಾಂಛನದ ದೈವತವು, ಮತ್ತು (ತ್ರಿ) ಪರ್ಣ (0) ಧಾರಿ ದೈವತವು ಇವು ಎರಡೂ ಶಿಪಿವಿಷ್ಟ ಪ್ರತಿಮೆಗಳೇ! ಆದರೆ, ಒಂದನ್ನು ರುದ್ರ ಉಗ್ರ ರೂಪವೆಂದು ಡಂಗುರಸಾರಿ, ತಾನು ಪೀತಾಂಬರಧಾರೀ (ಹಿರಣ್ಯಗರ್ಭ) ಪತ್ರ ಎಂಬ ಗ್ರಹಿಕೆ ಪ್ರಚಲಿತವಾಗಿಸಿರುವ ಈ ಶಬ್ದ-ಬ್ರಹ್ಮರ ನಾಲಗೆಯ ಗೈಯ್ತು ಬಯಲಿಗೆ ಬರದೆ ಉಳಿದಿದೆ!

ಬೆಸ್ನ ನಗರದಲ್ಲಿ ದೊರೆತ ಆಲ (: ಸ-ರಸ ಪರ್ಣ) ವೃಕ್ಷವನ್ನು ಆಶ್ರಯಿಸಿ ನಿಂತಿರುವ ಒಂದು ಸ್ತ್ರೀ ಪ್ರತಿಮೆ ಯಕ್ಷಿಣಿಯದು ಎಂದು ಒಬ್ಬ ಸಂಶೋಧಕನ ಮತ. ಆದರೆ, ಇನ್ನೊಬ್ಬನಿಗೆ ಇದು ಶ್ರೀದೇವೀ ಪ್ರತಿಮೆ ಎಂದು ಕಾಣುತ್ತಿದೆ! ಪಂಚ-ರಾತ್ರ ಸಂಪ್ರದಾಯದ ವೈಷ್ಣವ ಸಮಯಾಚಾರದಲ್ಲಿ ಪರ-ವಾಸುದೇವನ ಪ್ರಧಾನ ಅಂಗನೆ ಶ್ರೀದೇವಿ ಎಂದು ಇವರ ಪ್ರತಿಪಾದನೆ. ಇಲ್ಲಿ ಮತ್ತೆ, ಯಕ್ಷಿ ಮತ್ತು ಲಕ್ಷಿ-ಲಕ್ಕಿ ಇವೆರಡೂ ಪ್ರತಿಮೆಗಳಲ್ಲಿ ಮೊದಲು ಯಾವ ಸಂಪ್ರದಾಯ ಎಂಬ ಪ್ರಶ್ನೆ ಮಹತ್ವದ್ದು. ಏಕಂ ಸತ್ತಿನ ನಾಮ-ರೂಪಗಳು ಬದಲಾಗುತ್ತ ನಾನಾ ದೈವತ ನಿರ್ಮಾಣವಾಗಿವೆ. ಆಲವು ಯಕ್ಷ-ಯಕ್ಷಿ ಸಂಪ್ರದಾಯದಂತೆ, ರುದ್ರ-ವಿಷ್ಣು. ಈ ಉಭಯ ಸಂಪ್ರದಾಯಕ್ಕೂ ಸಂಬಂಧಿಸಿದ್ದುದಾಗಿ ಕಾಣುತ್ತಿದೆ. ಕೊನೆಯಲ್ಲಿ ಈಗ ಈ ವಟವನ್ನು ಸಾವಿತ್ರೀ (=ಸವಿತೃ : ಸೂರ್ಯ) ಈ ನಾಮ ಸಂಕೇತದೊಡನೆ ಜೋಡಿಸಿ, ಇನ್ನೂ ಹೆಚ್ಚಿನ ದಿಗ್ಭ್ರಾಂತಿಯನ್ನು ನಿರ್ಮಿಸಿ ಇಡಲಾಗಿದೆ! ಸವಿತಾ (ಸೂರ್ಯ) ಭಗಃ: ಭಗಃ ಸವಿತಾ (ವೇದ): ಇದು ಉಪನಿಷತ್ತಿನ ಚಕ್ಷುಃ ವೈ ಸತ್ಯಂ : ಸ-ತಿ(ೀ)ಯಂ ಸಿದ್ಧಾಂತದ ಮೂರ್ತ ಪ್ರತಿ-ಮಾ ರೂಪ! ವಟಪತ್ರ=ಸರ್ವಸ್ಯ

ಪ್ರಸವಿತಾ=ಸವಿತಾ=ಸಾವಿತ್ರೀ (ವಿಶ್ವ) ಚಕ್ಷು=ಕಣ್ಣು (0) + ವಟ ಪತ್ರರೂಪ ವೃಕ್ಷ=ಪುರಿಶಯ=ಪುರುಷ ಗಣ್ಣು (I) = ಪುರಂ-ದರ ಶಕ್ತಿಯ ವಜ್ರ ಏಕಂ ಸಂತಂ ಬಹುಧಾ ಕಲ್ಪಯಂತಿ! ಹೀಗಿಲ್ಲಿ ಭಗ-ವಂತನ ಸಾಕ್ಷಾತ್ ಆ-ಕೃತಿ ನಿಂತಿದೆ!

ಈ ಅ-ಕ್ಷಯಃ ಅಥವಾ ಅಕ್ಷ-ಯ(ಃ)=ವಟ ಇದೇ ನಿಜರೂಪ! ಈ ನಿಜರೂಪ ದರ್ಶನಕ್ಕಾಗಿ ಪಾಮರ ಜನ ಪ್ರ-ಯಾಗಕ್ಕೆ : ತ್ರಿ-ವೇಣೀ ಸಂಗಮಕ್ಕೆ ಹಾಗೂ ವಾರುಣೀ=(ಅಶ್ವಿ; ಬಾಡಬ ಅಗ್ನಿ) ನದಿಸ್ರೋತದ ತೀರ್ಥಕ್ಕೆ ಧಾವಿಸುವ ವಾಡಿಕೆ ತಲೆತಲಾಂತರಗಳಿಂದ ಬಂದಿದೆ. ಆದರೆ, ಬ್ರಹ್ಮಜ್ಞ : ಗುಹೇಶ್ವರೋಪಾಸಕ ಸಿದ್ಧ ಪ್ರಭು-ದೇವ ಹೇಳುತ್ತಾನೆ: ಸುತ್ತಿಸುತ್ತಿ ಬಂದೊಡೆ ಇಲ್ಲ! ಲಕ್ಷ (ಕಂ>) ಗಂ-ಗೆಯ ಮಿಂದೊಡೆ ಇಲ್ಲ. ಸತ್- ವಸ್ತುವು ನಿನ್ನಲ್ಲಿಯೆ ಇದೆ. ತನೂ-ನಪಾತ್ ದೇವ -ಆತ್ಮನ್ ದರ್ಶನಕ್ಕಾಗಿ ಸಾವಿರಾರು ಹರದಾರಿ ಹರಿದಾಡುವ ಕಾರಣವಿಲ್ಲ. ಕಾದಿವಿದ್ಯಾ ರಹಸ್ಯ ತಿಳಿದರೆ ಸಾಕು : ಕಾ ಶೀತಲವಾಹೀನೀ ಕಂ-ಗಾ? ಈ ಶಾಂತಿ ಶೀತಲ ದಾಯಿನೀ (ಕಂ)=ಕಾ ದೇವತಾ ಆರ್-ಚನ ವಿಧಾನ ಬೃಹದಾರಣ್ಯಕದಲ್ಲಿ ಹೇಳದೆ ಇಲ್ಲ. ನೈವೇಹ ಕಿಂಚನ ಅಗ್ರೇ ಆಸೀತ್। ಮೃತ್ಯುನಾ ಏವ ಇದಂ ಆವೃತಂ ಆಸೀತ್....। ಸಃ ಅರ್-ಚನ್ ಆಚರತ್। ತಸ್ಯ ಅರ್ಚತಃ ಆಪಃ [: ಕಂ] ಅಜಾಯಂತ। ಅರ್ಚತೇ ವೈ ಮೇ ಕಂ ಅಭೂತ್ ಇತಿ। ತತ್ ಏವ ಅರ್ಕಸ್ಯ [: ರಸಸ್ಯ] ಅರ್ಕತ್ವಮ್। ...

ಆಲ : ವಟ-ಪತ್ರ (೦) ಚಂದ್ರ: ಆದಕಾರಣ ಈ ವೃಕ್ಷ : ಚಂದ್ರಸ್ಥ ಪುರುಷವೃಕ್ಷ ಎಂಬ ಈ ಸಾಂಕೇತಿಕತೆಯೇ ವಟಪತ್ರಸ್ಥ ಸನಾತನ ಶಿಶುವಿನ ರೂಪಕದಿಂದಲೂ ವ್ಯಕ್ತವಾಗುತ್ತಿದೆ ಈ ಪತ್ರ=ಪಾತ್ರ=ಅದಿತಿ=ಸಲಿಲ=ಅಪ ಈ ಅಪಸ್ಥ ಶಿಶು=ನಪ್ತೃ ಇವೆರಡರ ಸಂಯೋಗದಲ್ಲಿ ಅಪಾಂ ನಪ್ತೃ ದೈವತ ಪ್ರತಿಮೆ ನಿರ್ಮಿತವಾಗಿದೆ. ಈ ನಪ್ತೃವಿನ ನಾನಾರೂಪ ಆಕೃತಿಗಳ ಹೊರಗೆ ವಿಷ್ಣು ಕೃಷ್ಣ ಪುರಾಣ ಎಂಬುದು ಏನೂ ಇಲ್ಲ. ಆದರೆ ಈ ಕೃಷ್ಣ =ನೀಲಾ (ರಾ) ಂಗ=ಸಲಿಲಸ್ಥ (ಶರೀರಸ್ಥ)=ವಿಷ್ಣು: ಈ ದೇವವನ್ನು ಸೂರ್ಯನನ್ನಾಗಿ ಭಾವಿಸಿದ ವಿದ್ವಾಂಸರಿದ್ದಾರೆ! ಕೀತ್ ಇದನ್ನು ವಿಡಂಬಸದೆ ಇಲ್ಲ. ಈ ಕರಿಯ=ಸೂರ್ಯ ನಿಶಾ-ನಾಥ; ಇಜಿಪ್ತಿನ ರಾಜ ಧಾರಣ ಮಾಡುತ್ತಿದ್ದ ಸೂರ್ಯ ಮಂಡಲಸ್ಥ ಸರ್ಪದ ಸಾಂಕೇತಿಕತೆಯೆ ವಿವಸ್ವನ್-ಸೂರ್ಯನಿಗೆ ಯೋಗಮಂತ್ರ ಬೋಧಿಸಿದೆನೆಂಬ ಅಹಿಸ್ವರೂಪೀ ಭಗ-ವಂತನು ಧರಿಸಿರುವ ಸು-ದರ್ಶನ ಎಂಬ ಚಕ್ರ (೦)ದಲ್ಲೂ ಉಂಟು! ಈ ಚಕ್ರ-ನೇಮಿ : ರಥಾಂಗನೇ ಅಶ್ವ-ತ್ಥ=ಪುರುಷ=ಪುರಿಶಯ='ವಾಗರ್ಥಾವಿವ ಸಂಪೃಕ್ತೌ ಜಗತಃ ಪಿತರೌ' ಇಕೊ ಇಲ್ಲಿ ಇದ್ದಾರೆ!

ಸೂರ್ಯನ ಸಂಪರ್ಕ ಸೂಚಕ ಚಂದ್ರನ ಸಾಂಕೇತಿಕ ಪ್ರತಿಮೆ. ವನಸ್ಪಸ್ಥೂಪ ಸ್ವರೂಪ ಪ್ರಚ್ಛನ್ನಚಂದ್ರ: ವರುಣನ=ಚಕ್ಷು=ಮಿತ್ರಸ್ಯ-ವರುಣಕ್ಕೆ ಚಕ್ಷುವು ಎಂಬ ಸೂರ್ಯನು ಎಂಬ ವೈಚಾರಿಕ ಆಕೃತಿ ಅಮಾವಾಸ್ಯಾ ಅಥವಾ ಸೂರ್ಯಗ್ರಹಣ ಸೂಚಕ : ಪ್ರಲಯ ಸೂಚಕವಾಗಿದೆ. ಋ ವೇದದ ಸಾರ್ಪರಾಜ್ಞೀ ಸೂರ್ಯೋ ವಾ ಪ್ರತಿಮೆ ಇದೇ ಆಶಯದ ಇನ್ನೊಂದು ಸಂಕೇತ: ಸೋಮನಾಮಾಂತರದ ಪ್ರಚ್ಛನ್ನ ಚಂದ್ರನು ಸೂರ್ಯಾ ದೇವಿಯೊಡನೆ (ಸಂ) ಲಗ್ನವಾಗುತ್ತಾನೆ ಎಂಬುದು ತ್ರಿವಾರ ಸತ್ಯ! ಪ್ರ-ಲಯದ ತರುವಾಯ ಸೃಷ್ಟಿ ಎಂಬ ಸಾಂಕೇತಿಕತೆ ಇಲ್ಲಿದೆ. ಮೃತ್ಯುವು ಜೀವನ ಸೃಜಿಸಿತು! ಕತ್ತಲೆ (ರಾತ್ರಿ) ಪ್ರಕಾಶ (ಸೂರ್ಯ) ಹಡೆಯಿತು ಇದು ಏಕಂ-ಸತ್ ಭೂಮಿಕೆ! ಜೀವನ ನಶ್ವರ; ಇದಕ್ಕೆ ನಾಳೆ ಇಲ್ಲ : ನ ಶ್ವ(ಃ) ಅಶ್ವ (:) ತ್ಥ ಅರಳೆಮರ ಕ್ಷಣಭಂಗುರ ತತ್ವದ ಮೂರ್ತ ಪ್ರತಿಮೆ. ಅಮಾವಾಸ್ಯಾಂತ ಮಾಸದ ತಾತ್ವಿಕ ಭೂಮಿಕೆ. ಇದು ಸೌರ ಸಂಪ್ರದಾಯದೊಡನೆ ಬಂದ ಸಂಬಂಧದಲ್ಲಿ ಮೈದಾಳಿದ್ದು. ಆದರೆ ಇದಕ್ಕೂ ಪೂರ್ವದ್ದು ವಟರೂಪೀ ಅಶ್ವತ್ಥ. ಪೌರ್ಣಿಮಾಂತ ಮಾಸದ ಸಮಯಾಚಾರ ಸಂಭೂತಿ ಉಪಾಸನೆಗೆ ಪ್ರಾಧಾನ್ಯವಿದ್ದ ಯುಗದ ಸಮಯಾಚಾರ. ಡುಮುರ್ಝೀ ಸಂಪ್ರದಾಯದಲ್ಲಿ ಇದು ಪ್ರತೀತಿಗೆ ಬರುತ್ತದೆ.

ಚಿತ್ರ ನಂ. ೨೩

ಕಾ(ಯಾ) ರೋಹಿ : ಲಗುಡೀಶ : ನಕುಲೀಶ

ಲಕುಲೀಶ:ನಕುಲೀಶ ಎಂಬೀ ಬಗೆಯ ನಾಮಸಂಕೇತಧಾರಿ ಐತಿಹಾಸಿಕ ಸ್ವರೂಪದ ಒಬ್ಬ ಮಹಾತ್ಮ ಆಗಿ ಹೋಗಿರಲಿಕ್ಕೆ ಬೇಕು. ಇತಿಹಾಸ ಲೇಖಕರಲ್ಲಿ ಇದರ ಬಗೆಗೆ ಭಿನ್ನಾಭಿಪ್ರಾಯವಿಲ್ಲ. ಆದರೆ, ಈ ಹೆಸರು ಕೇವಲ ವ್ಯಕ್ತಿನಾಮವಲ್ಲ; ಭಾರತೀಯ ದಿವ್ಯಾಧ್ಯಾತ್ಮ ಸಂಪ್ರದಾಯದ ನಡೆವಳಿಗಳ ಸಮಯಾಚಾರದ ಸಾರರೂಪ ಶಬ್ದಪ್ರತಿಮೆಯಾಗಿದೆ. ಅದನ್ನೇ ಈ ಮಹಾತ್ಮನ ನಾಮ-ರೂಪವಾಗಿ ರೂಢಿಸಲಾಗಿದೆ. ಈತನು ಕ್ರಿ. ಶ. ೨೦೦ ಒಳಗಾಗಿ ಆಗಿ ಹೋದ್ದುದಾಗಿ ಕಾಣುತ್ತದೆ. ಈ ಮಹಾಪುರುಷನ ನಾಮ-ಸಂಕೇತಗಳಲ್ಲಿ ಹುದುಗಿರುವ ಅರ್ಥವು,

ಋ ವೇದದ ದೈವತ ಪ್ರತಿಮೆಗಳ ಹಿನ್ನೆಲೆಯಲ್ಲಿ ಸ್ಪಷ್ಟೀಕರಣ ಪಡೆಯುತ್ತದೆ. ಆದರೆ ಆ ವೇದಕಾಲೀನ, ಅದೇಕೆ ವೇದಪೂರ್ವಕಾಲೀನ ನಿನ್ನೆಗಳೇ ಕ್ರಿ.ಶ. ೨೦೦ ಸುಮಾರಿನ ಲಕುಲೀಶನ ಕಾಲಕ್ಕೂ ಏನೂ ಮಾರ್ಪಡದೆ (ಅಂದಿನ) ಇಡಿಯಾದ ಇಂದು ಆಗಿವೆ ಎಂದು ಇದರ ಅರ್ಥವಲ್ಲ. ಜೀವಂತ ಎನಿಸುವಂತೆ ಉಳಿಸಿಕೊಳ್ಳಲಾಗುವ ನಿನ್ನೆಗಳೊಳಗಿನ ಅಂಶಗಳೊಡನೆ ಅನಿವಾರ್ಯ ಸಮಕಾಲೀನ ಅಂಶಗಳೂ ಬೆರೆತಿರುವುದನ್ನು ಈ ಪ್ರತಿಮೆಗಳೊಳಗಿನ ಸಂಕೇತಗಳ ತುಲನೆಯಲ್ಲಿ ಕಾಣಬಹುದಾಗಿದೆ. ಅಶ್ವತ್ಥವೃಕ್ಷ ಪೂಜೆಯಲ್ಲಿ ಸೈಂಧವ ಸಂಸ್ಕೃತಿಯ ಸ್ಥೂಲ ಆಕೃತಿಯೇ ಇಂದಿನ ವರೆಗೂ ಉಳಿದು ಬಂದುದನ್ನು ಕಾಣಬಹುದು. ಆದರೆ, ಸಿಂಧೂತೀರದ ಏಕಶೃಂಗ ಪ್ರಾಣಿಯುಗಲ ಋಗ್ವೇದದಲ್ಲಿ ದ್ವಾ-ಸುಪರ್ಣಾ ಆಗಿದೆ. ಅಥರ್ವದಲ್ಲಿ, ಇದು ದೇವತಾಪ್ರತಿಷ್ಠಾನವೆನಿಸಿದೆ. ಗೀತೆಯಲ್ಲಿ ಕೇವಲ ಪುರುಷೋತ್ತಮ ರೂಪ ಊರ್ಧ್ವಮೂಲ ವ್ಯಕ್ತವಾಗಿದೆ. ಇಂದು ಇದು ಅಶ್ವತ್ಥ-ನಾರಾಯಣ (ಸೂರ್ಯ ನಾರಾಯಣ) ರೂಪವೃಕ್ಷ! ಏಕಕಾಲಕ್ಕೇ ಮೃತ್ಯುರೂಪ ವೃಕ್ಷ : ಅರಳಿ ಅಶ್ವತ್ಥ : ಅಮಾವಾಸ್ಯಾ ಸಂಕೇತ. ಸನಾತನ ವೃಕ್ಷರೂಪೀ ವಟ (ಪತ್ರಕಾಶಿ ಶಿಶು) ವೃಕ್ಷ : ಪೌರ್ಣಿಮೆ! ಆದರೆ, ವಟ=ಸಾವಿತ್ರಿಯಾಗಿಸಿದ ಈ ಪೌರ್ಣಿಮೆಯ ಚಾಂದ್ರ ವೃಕ್ಷವು, ಅದೇ ಕಾಲಕ್ಕೆ ಸೂರ್ಯಾರೋಹೀ ನಾರಾಯಣ ವೃಕ್ಷ! ಪೌರ್ಣಿಮೆ=ಅಮಾವಾಸ್ಯೆ! ಈ ಏನೆಲ್ಲ ಬಾಹ್ಯ ಮಾರ್ಪಾಟಗಳಲ್ಲೂ ಅರ್ಥ-ಗರ್ಭದಲ್ಲಿ ಆಪೋವತ್ಸ;=ಏಕಂ ಸಂತ ಇದ್ದೇ ಇದ್ದಾನೆ!

ಭಾರತೀಯ ದಿವ್ಯಾಧ್ಯಾತ್ಮಿಕ ವೈಚಾರಿಕ ಜೀವನ ಪ್ರ (?) ಗತಿಯ ಈ ವೈಶಿಷ್ಟ್ಯದಿಂದಾಗಿ, ಈ ಸಂಸ್ಕೃತಿಯು, ನಿತ್ಯ ಸನಾತನ ಶಾಶ್ವತ ರೂಪದ್ದೂ, ಅದೇ ಕಾಲಕ್ಕೆ ಆಗಾಗಿನ ವರ್ತಮಾನ ಜೀವಕ್ಕೂ, ಸಂಬಂಧವನ್ನು ಇಟ್ಟು ಕೊಳ್ಳುವ ಒದ್ದಾಟ ನಡೆಸಿದ್ದು. ಈ ಇಬ್ಬಗೆಯ ಕ್ರಿಯೆಗಳು ಇಲ್ಲಿ ಏಕಕಾಲಕ್ಕೇ ಕಾಣದೊರೆಯುತ್ತಿವೆ! ಭಾರತೀಯ ಸಂಸ್ಕೃತಿಯ ವಿಮರ್ಶಕ ಒಬ್ಬ ಫ್ರೆಂಚ್ ವಿದ್ವಾಂಸನು ಹೇಳುವಂತೆ, we are confronted with a jaxta position of customs belonging to different levels of evolution, in which the most ancient customs surivive alongside the most resent without mutual hostility.

ಪ್ರಸ್ತುತ ಲಕುಲೀಶ ನಾಮ ಸಂಕೇತಾರ್ಥವು ಇಂತಹ ಒಂದು ದೃಷ್ಟಾಂತ, ಕೈಯಲ್ಲಿಯ ಲಕುಲದಿಂದಲೆ, ಇಡೀ ವ್ಯಕ್ತಿಗೂ ಹೆಸರು! ಲಕುಲ=ಲಗುಡ, ಇದು ಬಡಿ-ಗೆ! ಬಡಿ-ಗ: ಗುಡಿಕಾರ. ವೇದದ ಸೃಷ್ಟಿಕರ್ತನೆಂಬ ತ್ವಷ್ಟಾರನೂ ಬಡಿ-ಗನೇ ! ಇವನು ವಾಶೀ ಹಸ್ತನು; ಈ ಲಗುಡ: ಬಡಿಗೆ, ದಂಡ ವೇದಕಾಲದಿಂದ ನಾನಾ ರೂಪಗಳಲ್ಲಿ ಕಾಣಿಸಿಕೊಳ್ಳುತ್ತ ಬಂದಿದೆ. ಕೇಶ, ರಶನ, ರಶ್ಮಿ ತಂತು, ಸೂತ್ರ=ಬ್ರಹ್ಮ=ಸರ್ಪ=ವೃಕ್ಷ..... ಹೇ ವಜ್ರವೀರನ ಹೆಸರೂ ಇದೇ ಮಾದರಿಯದು.

ಈತನು : ಲಗುಡ: ಆದಕಾರಣ ಈತನು : ಪ್ರಭು. ಲಗುಡ ಈತ. ಎಂದರೆ ಈ ತನು (ಇಂದ್ರಿಯದ) ನಾಥನು. ಉತ್ತರಾಪಥದಲ್ಲಿ ಉದಯಪುರದ ಹತ್ತಿರದ ಏಕ-ಲಿಂಗೇಶನ ಸಮೀಪದ ನಾಥ ಮಂದಿರದಲ್ಲಿ ಶಿವನ ಅವತಾರ ಎಂಬ ಈ ಲಕುಲೀಶನ ಕುರಿತ ಶಿಲಾಲೇಖವಿದೆ (ಕ್ರಿ.ಶ. ೯೭೧) ಕಾ. (ಯಾ) ರೋಹಣ ಎಂಬ ಈತನ ನಾಮಸಂಕೇತದಿಂದ ಇವನು, ಹಿರಣ್ಯಗರ್ಭ ದೈವತದ ಕಾದಿವಿದ್ಯಾ ಉಪಾಸಕ ಒಬ್ಬ ಸಿದ್ಧನೆಂದು ಸೂಚಿತವಾಗುತ್ತಿದೆ. ಆರೋಹಣ ಎಂಬ ಉತ್ತರಪದದ ಅರ್ಥವು ಸ್ಪಷ್ಟವಿದೆ. ಈತನು ಆರೋಹಣ ಮಾಡಿದ್ದು ಏನು? ಶ್ಮಶಾನದೊಳಗಿನ ಒಂದು ಮೃತಶರೀರದಲ್ಲಿ ಪ್ರವೇಶಿಸಿದನೆಂದು ಹೇಳಲಾಗುತ್ತದೆ. ಆದರೆ ಕಾದಿವಿದ್ಯಾ ಉಪಾಸಕರು, ಹಿರಣ್ಯಗರ್ಭದೇವನ ಸಾಕ್ಷಾತ್ಕಾರಕ್ಕಾಗಿ ಮೃಷಾ ಏನೊಂದು ಸಂಸ್ಕಾರವನ್ನು ಪಡೆಯುವುದಿರುತ್ತದೆ. ಇದು ದೇವ-ಯಾನಿ ಗಳ ಪರಂಪರೆಯ ದೀಕ್ಷೆ ಕಾಯಾ-ಆರೋಹಣ ಎಂಬಂತೆ, ಬರಿ ಕಾರೋಹಣ ಎಂಬ ಉಲ್ಲೇಖವೂ ಉಂಟು. ಮೊದಲನೆಯ ಸಂಕೇತಕ್ಕೆ ಶ್ಮಶಾನ ಭೂಮಿ ಎಂದು ಅರ್ಥ ಹೇಳಲಾಗುತ್ತದೆ. ಆದರೆ, ಇನ್ನೊಂದು ಲಾಟ ದೇಶದೊಳಗಿನ ಒಂದು ಸ್ಥಲನಾಮ ಎಂಬ ರೂಢಿಯಿದೆ. ಆದರೆ, ಇಲ್ಲಿ ಸಾಂಪ್ರದಾಯಿಕ ಪರಂಪರಾ ವಿಚ್ಛೇದವು ಇರಬೇಕು. ವಸ್ತುಸ್ಥಿತಿಯನ್ನು ಮರೆಮಾಚುವ ಪ್ರಯತ್ನವಿರಬೇಕು. ಕಾ (ಯ) ಇದನ್ನು ಯಾವ ಬಗೆಯಲ್ಲಿಯೆ ಸ್ವೀಕರಿಸಿದರೂ ಇಲ್ಲಿ ಸ್ಥಲವಾಚಕ ಅರ್ಥವಿರುವುದನ್ನು ಅಮಾನ್ಯ ಮಾಡಲು ಆಗುವುದಿಲ್ಲ.

ಆರೋಹಣ ಮಾಡಿದ್ದು ಮೃತ ಕಾಯ ಎಂಬ ಅರ್ಥವು ಬೀಭತ್ಸವಿದೆ. ಈ ಕಾರಣದಿಂದಲೆ ಕಾ ಆರೋಹಣ ಎಂಬ ಇನ್ನೊಂದು ಸಂಕೇತವು ರೂಢವಾಗುತ್ತದೆ. ಆದರೆ, ಇದನ್ನು ಭೌಗೋಲಿಕ ಸ್ಥಳ ಮಾಡಿರುವಲ್ಲಿ ವಿದೇಹ ಅಂಗ ಈ ಸಂಕೇತಗಳಲ್ಲಿ ಪುರಾತನರು ಯೋಜಿಸಿದ ತಂತ್ರವೇ ಒಳಗೊಂಡಿದೆ! ಆದರೆ, ಇಲ್ಲಿರುವ ಅರ್ಥವು ಕಾದಿವಿದ್ಯಾ ಪಂಥೀಯ ಸಮಯಾಚಾರಕ್ಕೆ ಸಂಬಂಧಿಸಿದ್ದು. ದಿಕ್ಕಾಲಾತೀತ ಯಂ ಅಥವಾ ತ್ಯಂ ಇಲ್ಲವೆ ತತ್ ಈ ಸತ್ಯ ಸ್ವರೂಪ

ಪರಮಪದದ ದಿವ್ಯಾನುಭೂತಿಗಾಗಿ ಸ-ತಿ (೯)ಯಂ ಉಪಸ್ಥಾನವನ್ನು ಹೇಳಲಾಗಿದೆ. ಇದುವೆ ಉಪನಿಷತ್ತುಗಳ ಭಾಷೆಯಲ್ಲಿ ಸೇತುವಿಧರಣಂ ಸಂಸ್ಮರಣ. ಸರ್ವಸ್ಯ ಈಶಾನಃ, ಸರ್ವಸ್ಯ ಅಧಿಪತಿಃ.... ಸರ್ವೇಶ್ವರಃ ಸ್ಥಿತಿ ಪ್ರಾಪ್ತವಾಗಲು ಪಡೆಯಬೇಕಾದ ಸಂಸ್ಕಾರ; ಇದು ಗುಹ್ಯಮಾರ್ಗ! ಈ ಅತಿಪುರಾತನ ಅಶ್ವ-ತ್ಥ (ವೃಕ್ಷಂ-ವನಂ) ಸಂಪ್ರದಾಯದ ಸಾಂಕೇತಿಕತೆ, ಇಲ್ಲಿ, ಮೊದಲಿನ ನಾಮರೂಪ ಬದಲಿಸಿ ನೂತನ ಸಂಕೇತ ಸ್ವೀಕರಿಸಿದೆ. ಅರ್ಥಾತ್ ಗುಹಾನಿಹಿತ ಅರ್ಥ-ಗರ್ಭವು ಮೊದಲಿನದೇ! ಈ ಕಾ(ಯಾ) ಆರೋಹಣವನ್ನು ಪರ-ಕಾಯ-ಪ್ರವೇಶ ಎಂದರೂ ಸರಿ. ಇದನ್ನು ಮೃತಕಾಯ ಎನ್ನುವ ಬದಲು ಮೃತ್ ಕಾಯ : (ಮಣ್ಣಿನ ಪಾತ್ರ) : ಮರ್ತ್ಯ ಕಾಯ ಎಂದರೆ ಸರಿಯಾದೀತು. ಚಮಸ ಪಾತ್ರೆ ಒಡೆದು ತುಂಡಾಗಿಸುವ ಪುರಂ-ದರತ್ವದ ವಿಚಾರವು ಋ. ವೇದದಲ್ಲಿದೆ.

ಲಗುಡೀಶನ ಲಗುಡ ಪ್ರಹಾರದಿಂದ (ಅಹನಸ್ಕದ ಆಘಾತದಿಂದ) ಆತನು ಆರೋಹಣ ಮಾಡಿದ ಕಾಯ (ಪಾತ್ರ) ಗತಪ್ರಾಣವಾದುದನ್ನು ಸೂಚಿಸುವ ಸಾಂಕೇತಿಕತೆಯನ್ನು ಈ ಪ್ರತಿಮೆಯಲ್ಲಿ ಕಾಣಬಹುದೇ. ವೃಕ್ಷ: ಅಶ್ವ ನಿಂತ ಸ್ಥಲ ಎರಡೂ ಸ್ಪಷ್ಟವಿರುವ ಈ ಪ್ರತಿಮೆಯು ನಡೆದಾಡುವ ವೃಕ್ಷ : ಅಶ್ವತ್ಥ ಮೂರ್ತಿಯೇ ಸರಿ. ಅಹಂ ವೃಕ್ಷಸ್ಯ ರೇರಿವಾ.

ಕಾಯ ಸಂಕೇತದ ಅರ್ಥಗಳು ಎರಡು : ಕಾಯ ಎಂದರೆ ಕ(ಂ) ಹಿರಣ್ಯಗರ್ಭ ದೈವತಕ್ಕೆ ಅರ್ಪಿತ ಅಥವಾ ಅದಕ್ಕೆ ಸಂಬದ್ಧವಾದುದು ಕಾಯ; ಆದಕಾರಣ ಅಮೃತಂ ಚೈವ ಮೃತ್ಯುಃ ಚ' ಈ ಉಭಯ ಲಗುಡ ಈಶ್ವನು =ರುದ್ರ=ಶಿವನು ಕಾಯ ಎಂದರೆ Trunk of Tree = ವೃಕ್ಷ = ಕಾಂಡ. ಆದಕಾರಣ ಕಾಯಾ ರೋಹಿಯು ನಡೆದಾಡುವ ವೃಕ್ಷವೇ ಆದನು.

ಇವನನ್ನು ನ-ಕುಲೀಶನೆಂಬಲ್ಲಿ ಈತನು 'ಅದಿತಿ' ಸಂಪ್ರದಾಯಿಯಾಗಿದ್ದುದರ ಸೂಚನೆಯಿದೆ. ಕುಲದ ಬಂಧನವು ಇಲ್ಲದವನು. ಸತ್ವನ್, ಸಾತ್ವತ್ ಹಾಗೂ ಪಾಶುಪತ ಧರ್ಮದಲ್ಲಿ ಏನೆಲ್ಲ ಸತ್ವ ಪಶುಕೋಟಿಯ ಪತಿ ಪಶುಪತಿ ಪಂಚಜನಾಃ ಅದಿತಿಃ ಮುಂದಿನ ಕಾಲದ ನಾಥಸಂಪ್ರದಾಯದಲ್ಲೂ ಕುಲಗೋತ್ರಗಳ ಭೇದವು ಇರಲಿಲ್ಲ. ಪಂಚ (ಮ) ಮತ್ತು ಅಗ್ರಜ ಜಾತಿಯೊಳಗಿನ ವೈವಾಹಿಕ ಸಂಬಂಧವು ಹೀಗೆ ಅದಿತಿ ಸಂಪ್ರದಾಯದಂತೆ ವೇದವಿಹಿತವೇ ಸರಿ. ಆದರೆ, ಈ ಜಾತ್ಯತೀತ ದಿವ್ಯಸಿದ್ಧಿ ಸಾಧನೆಯ ದಾರಿಯೊಳಗಿನ ಒಂದು ಘಟನೆ ಮಾತ್ರ ಆಗಿತ್ತು. ಐಹಿಕ ಸ್ವರೂಪದ ಸಾಮಾಜಿಕ ಜೀವನ ರೀತಿಯ ನಡವಳಿಯ ವೈಚಾರಿಕ ಹಿನ್ನೆಲೆ ಎಂದೂ ಇದರಲ್ಲಿ ಇರಲಿಲ್ಲ.

ಚಿತ್ರ ನಂ. ೨೪

ವೀರ ಹೇವಜ್ರ (: ವಜ್ರವಾರಾಹೀಶಕ್ತಿ-ಸಂಗಮದಲ್ಲಿ)

ಈ ಶಕ್ತಿ-ಸಂಗಮ ತಂತ್ರಕ್ಕೆ "ಯಬ್-ಯುಮ್ ಯೋಗ" ಎಂದೂ ಹೆಸರಿದೆ. ಇದೂ ದಿಕ್ಕಾಲಾತೀತ ತತ್-ಮಯಾನಂದೀ ವಿಪ್ರ ಸಂಪ್ರದಾಯ, ಋ. ವೇದದ ಪರಿಭಾಷೆಯಲ್ಲಿ ಈ ಸಂಪ್ರದಾಯವನ್ನು ಕುರಿತ ಚಿತ್ರ ಗ್ರಂಥಗಳು ಪ್ರಕಟವಾಗಿವೆ. ಇದೂ ಚಾಂದ್ರ ಸಂಪ್ರದಾಯ. ಈ ಸಾಧಕನು ಷೋಡಶ ಬಾಹು, ಷೋಡಶ ವರುಷದ (ಎಂದರೆ ಚಂದ್ರನ ಷೋಡಕೆ ಕಲಾಪೂರ್ಣ) ವೀರನಿರಬೇಕೆಂಬ ಈ ಸಾಂಕೇತಿಕತೆಯು ಇದಕ್ಕೆ ನಿದರ್ಶನ. ಭಾರತೀಯ ಪರಂಪರೆಯಲ್ಲಿ ಷೋಡಶೀ ಯುವತಿಯ ಸಾಂಕೇತಿಕ ಅನುಸ್ಥಾನ ಹೇಳಿದೆ. ವೀರನು ವ್ಯಾಘ್ರಾಂಬರ ಧಾರಿ, ಉಗ್ರಮುಖನು ಎಂಬಲ್ಲಿ, ಇದು ಇಂದಿನ ಋಕ್‌ಸಂಹಿತೆಯ ಪುರಂ-ದರ ವಜ್ರ (ವರ್ಧ್ಮಂತೀ ಸ್ವಧಿತಿಃ ವನಾನಾಂ) ಸಂಪ್ರದಾಯವಾಗಿದ್ದುದನ್ನು ಮನಗಾಣಬಹುದು. ಕಾಯ ಆರೋಹಿ ಲಗುಡೀಶನು ಧರಿಸಿದ ಲಗುಡವೇ ವಜ್ರ. ಋಗ್‌ವೇದದ ದೃಷ್ಟಿಯಲ್ಲಿ ಲಕುಲ (ಲಗುಡ) ಈ ಕೈಯೊಳಗಿನ ಆಯುಧವೇ, ಆ ವ್ಯಕ್ತಿ ನಾಮವಾಗಿರುವಂತೆ ವೀರನ ಸಾಧನ : ಮಾಧ್ಯಮವೇ ಈ ಸಾಧ್ಯನ ವೈಯಕ್ತಿಕ ನಾಮವೂ ಆಗುವ ಈ ರೂಢಿ ಏಕಂ; ಸತ್ ಭೂಮಿಕೆಯ ವೈಶಿಷ್ಟ್ಯಸೂಚಕವಾಗಿದೆ. ಸಾಧ್ಯಂ ಸಾಧನ ಮತ್ತು ಸಿದ್ಧಿ ಇವು ಒಂದರಲ್ಲೆ ಒಳಗೊಂಡಿರುತ್ತವೆ. ಇಲ್ಲಿ ಪಿಂಡ-ಬ್ರಹ್ಮಾಂಡಗಳ ಏಕಾತ್ಮಕತ್ವವು ಅಭಿಪ್ರೇತವಿದೆ. ಸಾಧ್ಯಾಃ ಎಂಬ ವಿಶಿಷ್ಟವರ್ಗದ ನಿರ್ದೇಶವು ಋಗ್ವೇದದಲ್ಲಿದೆ. ಪುರುಷಯಜ್ಞದ ಸಾಂಕೇತಿಕ ವರ್ಣನೆಯಲ್ಲಿ ಮಾತ್ರ ಭೋಕ್ತಾರನ (=ಸಾಧ್ಯನ),. ಭೋಗ (=ಸಾಧನ) ಮತ್ತು ಭೋಗ್ಯ (ವಿಷಯ) ಇವೆರಡೂ ಒಂದೇ ಆಗಿರುವಲ್ಲಿ ಪ್ರಪಂಚವು (=ಜೀವನ ಮೂಲ್ಯಗಳು) ಶೂನ್ಯವಾಗುತ್ತವೆ! ಇದು ಜೀವನದ short circuit. ನಿಜವಾಗಿ ಜ್ಞಾತೃವಿನಿರದೆ ಜ್ಞಾನ ಮತ್ತು ಜ್ಞೇಯ ಇವು ಬೇರೆ ಇವೆ. ಇರಲೇಬೇಕು. ಸಮಷ್ಟಿ : ಸಾಮಾಜಿಕ ಜೀವನ ಸಂದರ್ಭದ ಮೂಲಕ ನಿಷ್ಪನ್ನಜ್ಞಾನ ಮತ್ತು ಜ್ಞಾತೃ-ಜ್ಞಾನದ ಯುಕ್ತ ಸಂಬಂಧದಲ್ಲಿ ಜ್ಞೇಯವು ಸರಿಯಾಗಿ ಅರಿಕೆಗೆ ಬರಬಲ್ಲದು. ಯಕ್ಷಸಂಕೇತದಂತೆ ಸಾಧ್ಯಾಃ ಸಂಕೇತವು ಮೂಲೆಗುಂಪಾಗಲೇಬೇಕಾಯ್ತು!

ವೀರ ಹೇವಜ್ರನ ಪ್ರತಿಮೆ ಇದೇ ಬಗೆಯಲ್ಲಿರಬೇಕೆಂಬ ವಿಧಿಯಿದೆ. ಹದಿನಾರು ಕೈಗಳಲ್ಲಿ ಎಡದ ಎಂಟು ಕೈಗಳಲ್ಲಿ ಕಪಾಲ : ಪಾತ್ರವಿರಬೇಕು. ಈ ಪಾತ್ರಸ್ಥ ಪುರುಷ-ದೈವತ : ವರುಣ, ವಾಯು, ಅಗ್ನಿ, ಚಂದ್ರ, ಸೂರ್ಯ. ಯಮ, ವಸುಂಧರ, ವಸ್ತುಪತಿ, ಬಲದ ಪಾತ್ರ ವಾಮ-ದೈವತಗಳ ವಾಹನಗಳು, ಆನೆ, ಕುದುರೆ, ಕತ್ತೆ, ಗೂಳಿ, ಒಂಟೆ, ಮುಂಗುಲಿ, ಒಬ್ಬ ನರನೂ (ಕು-ಬೇರ=ನರವಾಹನ!)

ವಜ್ರವಾರಾಹಿ=ಶಕ್ತಿದೇವಿ ಅಷ್ಟ-ಮಾತೃಕೆಯರ ಸಂಯುಕ್ತ ಪ್ರತಿಮೆ! ಆದರೆ, ಒಬ್ಬ ವೀರ, ಒಬ್ಬ ಮಾತೃಕೆ (ಅಪೋದೇವಿ :ನೀರೆ) ಬಿಡಿಬಿಡಿ ಯಬ್‌ಯುಮ್ ಯೋಗಾರೂಢರಾಗಿರುವ ಮೂರ್ತಿಗಳೂ ದೊರೆತಿವೆ. ಈ ಶಕ್ತಿಗಳು ಶವದ ಮೇಲೆ ಕುಣಿಯುತ್ತಿರುವಂತೆ ಚಿತ್ರಿಸಲಾಗುತ್ತದೆ ದೇಹ=ಶವ; ಈ ದೇಹಸ್ಥ ಉಭಯಲಿಂಗೀ ಶಕ್ತಿ, ಈ ಶವದ ಆಧಾರದಿಂದ ಪ್ರಪಂಚದಲ್ಲಿ ಕುಣಿಯುತ್ತದೆ-ಕೋಲಾಹಲ ನಡೆಸಿರುತ್ತದೆ).

ಚಿತ್ತ-ಶುದ್ಧಿಗಾಗಿ, ಧ್ಯಾನ ಸಿದ್ಧಿಗಾಗಿ ಈ ಸಾಧನೆ ಹೇಳಲಾಗಿದೆ. ಈ ಸಾಧನಾನುಷ್ಠಾನದ ಬಾಹ್ಯ ಆಕೃತಿಯ ಅರ್ಥವು, ಲಾಕ್ಷಣಿಕ ಗರ್ಭಿತಾರ್ಥದಿಂದ ತೀರ ವಿಪರೀತ. ಈಬಗೆಯ ಶಕ್ತಿ-ಸಂಗಮ ತಂತ್ರದೊಳಗಿನ ಪಂಚಮಕಾರಗಳ ಮೂಲಾರ್ಥ ಮತ್ತು ಸಾಂಕೇತಿಕ ಅರ್ಥ ಇವು ಬೇರೆಯಿವೆ. ಈ ಯೋಗದ ತಾತ್ತ್ವಿಕ ಅರ್ಥ

> The two prompting elements of creation, which were believed to form a polrity such as male-female, fire-water etc. Both elements are in complate union is an equilibrium to be found and thus the highest state of Bliss is reached

ಏಕಂ : ಸತ್ ಮಾರ್ಗೀಯ ಮಿಥುನಯೋಗದ ಈ ಸಮಯಾಚಾರದ ಮಂಡನವು ಏನೆ ಇರಲಿ; ಈ ಏಕಂ ಎಂಬ ಸತ್ತಿನ ಹೊರಗೆ ಪ್ರಪಂಚವೆಲ್ಲ ಶೂನ್ಯ ಕತ್ತಲೆ. ಇದು ರಾತ್ರಿ ಸಮಯಾಚಾರವಾಗಿ ಪರಿಣಮಿಸಲೇಬೇಕು. ಈ ವೈಚಾರಿಕ ಆಕೃತಿ ಸನಾತನ ಎಂಬುದನ್ನು ಇರ್ಝುಂ ವಾದಗಳು ಇಂದು ಮನಗಾಣಿಸಿ ಕೊಡುತ್ತಲೆ ಇವೆ.




ಚಿತ್ರ ನಂ. ೧

ಮನು-ಜತ್ವಕ್ಕೂ ಮುಂಚಿನ ಹಂತದ ನರ-ನಾರ(ಣ)




ಚಿತ್ರ ನಂ. ೨

ವಿಶ್ವದ ಅಧಿ-ಅಕ್ಷ: ಚಕ್ರ-ವರ್ತಿನ್ : ನಾಗ ರಾ-ಜನ್



ಚಿತ್ರ ನಂ. ೩

ಆದಿಶಕ್ತಿ ರೂಪಗಳಲ್ಲಿ ಅಗ್ರಜಳು : ಅಂತರಿಕ್ಷದೇವಿ (ಇಜಿಪ್ತಿನ ನಟ್, ಋ. ವೇದದ ದ್ಯೌಃ




ಚಿತ್ರ ನಂ. ೪


ದಿವ್ಯಲೋಕದ ಗೋವು: ಆದಿಮಾತಾರೂಪದಲ್ಲಿ



ಚಿತ್ರ ನಂ. ೫
'ಅಮೃತಂ ಚೈವ ಮೃತ್ಯುಃ ಚ' ನಿಲುಮೆಯಲ್ಲಿ ಆದಿಮಾತೆ




ಚಿತ್ರ ನಂ. ೬
ನಾಗಸಂಪ್ರದಾಯ ಸೂಚಕ ಪುರಾತನ ಪ್ರತಿಮೆಗಳು



ಚಿತ್ರ ನಂ. ೭
ವಿದೇಹೀ ಜನಿತ್ರೀ



ಚಿತ್ರ ನಂ. ೮
ಸರ್ಪ : ಕೌಟುಂಬಿಕ ಜೀವನದ ಶತ್ರು




ಚಿತ್ರ ನಂ. ೯
ಜೀವನ ನೌಕಾಚಾಲಕ ದಿವ್ಯಶಕ್ತಿ



ಚಿತ್ರ ನಂ. ೧೦
ಅಮ್ಮೆ : (> ಆಂಬೆ,-ಅಂಬಿಕೆ) ಲೋಕಮಾತೆ : ವಿಶ್ವಜನನಿ



ಚಿತ್ರ ನಂ. ೧೧
ಸುಮೇರಿನತ್ತಣಿನ ಕಣ್ಣಮ್ಮ (: ಉಭಯಲಿಂಗೀ) ದೈವತದ ಪ್ರತಿಮೆಗಳು




ಚಿತ್ರ ನಂ. ೧೨
ಶ್ರೀ (: ದೇವೀ): ಚಕ್ರಪೂಜೆ



ಚಿತ್ರ ನಂ. ೧೩
ಲೆತ್ತ (ನೆತ್ತ ನೇತ್ರ) : ಅಕ್ಷ-ದ್ಯೂತ



ಚಿತ್ರ ನಂ. ೧೪
ಮುಕ್ಕಣ್ಣ : ಯೋಗಿವರೇಣ್ಯ





ಬ) ಶೃಂಗತ್ರಯವುಳ್ಳದೇವತೆ





ಅ) ಶೃಂಗಿವೃಷಭ ಚಿತ್ರ ನಂ. ೧೫ ಕ) ಏಕಶೃಂಗಿ ಪುರುಷಪಶು



ಚಿತ್ರ ನಂ. ೧೬.

ಪುರಾತನ ಯಕ್ಷ ಸಂಪ್ರದಾಯ ಸೂಚಕ ನಾಗಧಾರಿಣೀ : ತೀರ್ಥಿಕೆ



ಚಿತ್ರ ನಂ. ೧೭
ಎಂಕಿಡು, ಆದಿಮರ್ತ್ಯ : ಶೃಂಗಿಪುರುಷ : ಮಾತಾಪ್ರಸಾದಿ




ಚಿತ್ರ ನಂ. ೧೮
ಕುರುಂಬ ರಾಜ, ಆದಿವೀರ : ತ್ರಿಪರ್ಣದಂಡಧಾರೀ ಪುರುಷ




ಚಿತ್ರ ನಂ. ೧೯
ಮಹಾಯೋಗೀ : ಈಶ್ವರ-ಕೃಷ್ಣ ಅಥವಾ ಕೃಷ್ಣೇಶ್ವರ



ಚಿತ್ರ ನಂ. ೨೦
ಜರತ್ -ಕಾರು ಉಭಯಲಿಂಗೀ ಶಕ್ತಿ




ಚಿತ್ರ ನಂ. ೨೧
ಆದಂ ಮತ್ತು ಈವ್ಹ, ಸ್ತ್ರೀರೂಪ ಹೋಲುವ ನಾಮಸಹಿತ



ಚಿತ್ರ ನಂ. ೨೨

ಪಿಪ್ಪಲ ಎಂಬ ಅಶ್ವ-ತ್ಥ : ವೃಕ್ಷ (ಭಾರತೀಯ (ಸನಾತನ) ಸಂಸ್ಕೃತಿಯ ಸಾರ)



ಚಿತ್ರ ನಂ. ೨೩
ಕಾ(ಯಾ) ರೋಹಿ : ಲಗುಡೀಶ : ನಕುಲೀಶ



ಚಿತ್ರ ನಂ. ೨೪
ವೀರ ಹೇವಜ್ರ (: ವಜ್ರವಾರಾಹೀಶಕ್ತಿ-ಸಂಗಮದಲ್ಲಿ)

ಭಾಷೆ ಮತ್ತು ಸಂಸ್ಕೃತಿ

ಸಂಘದ ಪರವಾಗಿ....

೧೮೮೦, ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆ ಅಖಿಲ ಕರ್ನಾಟಕದ ಪ್ರಾಚೀನತಮ ಈ ಸಾಂಸ್ಕೃತಿಕ ಸಂಸ್ಥೆ ಆಗ ದಕ್ಷಿಣ ಮಹಾರಾಷ್ಟ್ರವಾಗುವುದರಲ್ಲಿದ್ದ ಉತ್ತರ ಕರ್ನಾಟಕದಲ್ಲಿ ಕನ್ನಡವನ್ನು, ಕನ್ನಡತ್ವವನ್ನು ಬಿತ್ತಿ ಬೆಳೆಯುತ್ತ ಕರ್ನಾಟಕದ ತುಂಬ ಚೈತನ್ಯವನ್ನು ತುಂಬಿತು. ಕರ್ನಾಟಕದ ಏಕೀಕರಣ, ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತಿನ ಉದಯ, ಕನ್ನಡ ಆಕಾಶವಾಣಿಯ ಆರಂಭ, ಕನ್ನಡ ಸಾಹಿತ್ಯ ಸಮ್ಮೇಳನಗಳ ಉಪಕ್ರಮ-ಈ ಸಂಘದ ಸಂಕಲ್ಪಗಳು, ಸಾಧನೆಗಳು. ಕನ್ನಡ ಬೆಳವಣಿಗೆಯ ಈ ಹತ್ತಾರು ಹೊಸಹಾದಿಗಳನ್ನು ತೆಗೆದುಕೊಟ್ಟ ಕೀರ್ತಿ ಈ ಸಂಸ್ಥೆಯದು.

ಕಳೆದುಕೊಂಡ ಇಂಥ ಧವಲಕೀರ್ತಿಯನ್ನು ತಿರುಗಿ ಸಂಪಾದಿಸಲು ಸಂಘ ಕಷ್ಟಪಟ್ಟು ಹೋರಾಡುತ್ತಲಿದೆ. ಈ ಹೋರಾಟದ ಒಂದು ಸಾಧನೆ "ಸಾಹಿತ್ಯ ತರಂಗ". ಸಂಘದಲ್ಲಿ ವಿದ್ವಜ್ಜನರು ನೀಡಿದ ಉಪನ್ಯಾಸಗಳ ಗ್ರಂಥರೂಪವಿದು. ನೂರಾರು ವಿದ್ವಾಂಸರು, ಸಾವಿರಾರು ವಿಷಯಗಳನ್ನು ಕುರಿತು ಲಕ್ಷೋಪಲಕ್ಷ ಕೃತಿಗಳನ್ನು ರಚಿಸುವುದರತ್ತ ಗುರಿಯಿಟ್ಟು ನಡೆದಿದೆ ಈ ತರಂಗ. ಕನ್ನಡ ಪ್ರಜ್ಞೆ, ಕನ್ನಡ ಮಾಧ್ಯಮ, ಕನ್ನಡ ವ್ಯಾಸಂಗ - ಈ ಮೂರು ಸ್ತರಗಳಲ್ಲಿ ನಡೆಯಬೇಕಾದ ಕನ್ನಡದ ಕಾರ್ಯಕ್ಕೆ ಅರ್ಥ ತುಂಬುವುದು ಇಂದು ತೀರ ಅವಶ್ಯವಿದೆ. ಕಾರಣ ಇವು ಕೇವಲ ಪ್ರಚಾರಪುಸ್ತಕಗಳಾಗದೆ ವಿಚಾರಪುಸ್ತಕಗಳೂ ಆಗಬೇಕೆಂಬ ಹಂಬಲ ನಮ್ಮದು. ಈ ಧೋರಣೆಗೆ ತಕ್ಕಂತೆ ಜನಪ್ರಿಯವೂ, ವಿದ್ವಜ್ಜನಪ್ರಿಯವೂ ಆದ ಸಾಹಿತ್ಯವನ್ನು ಹೊತ್ತುತರುವ ಈ ತರಂಗವನ್ನು ಕನ್ನಡಿಗರು ತಮ್ಮ ಅಂತರಂಗಕ್ಕೆ ಆಹ್ವಾನಿಸಿಕೊಳ್ಳುವರೆಂದು ನಂಬಿದ್ದೇವೆ.

ಒಂದು ಜನಾಂಗದ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳುವಲ್ಲಿ ಅದರ ಭಾಷೆಯೂ ಒಂದು ಸಾಧನ. ಭಾಷೆ ಮತ್ತು ಸಂಸ್ಕೃತಿ ಸಂಬಂಧವೆನ್ನುವುದು ಆಲಿಕಲ್ಲು ಮತ್ತು ನೀರುಗಳ ಸಂಬಂಧದಂತೆ. ಈ ಸಂಬಂಧದ ರಹಸ್ಯವನ್ನು ಭಾಷೆ-ಸಂಸ್ಕೃತಿಗಳ ಪರಮ ಆರಾಧಕರಾದ ಡಾ|| ಶಂ. ಬಾ. ಜೋಶಿ ಅವರು ಪ್ರಸ್ತುತ ಪುಸ್ತಿಕೆಯಲ್ಲಿ ವಿವೇಚಿಸಿದ್ದಾರೆ. ತಾತ್ವಿಕ ತಳಗಟ್ಟಿನ ಮೇಲೆ ನಿಂತು ಅದರ ಆಂತರ್ಯವನ್ನು ಅನ್ವೇಷಿಸಿದ ಅವರಿಗೆ ಸಂಘದ ಕೃತಜ್ಞತೆಗಳು.

ಈ 'ತರಂಗ'ದ ಪ್ರವಹನಕ್ಕೆ ಹರಿಗಡಿದ ಸಂಘದ ಅಧ್ಯಕ್ಷ ಶ್ರೀ ಪಾಟೀಲ ಪುಟ್ಟಪ್ಪ, ಕಾರ್ಯಾಧ್ಯಕ್ಷ ಶ್ರೀ ಕೆ.ಎಸ್. ದೇಶಪಾಂಡೆ, ಸಹಕಾರ್ಯದರ್ಶಿ ಶ್ರೀ ಸಂಗನಬಸವ ಮಟ್ಟಿ ಮತ್ತು ಕಾರ್ಯಕಾರಿ ಮಂಡಲದ ಸದಸ್ಯರು ಮೊದಲಾದವರಿಗೆ ವಂದನೆಗಳು. ಈ 'ಸಾಹಿತ್ಯ ತರಂಗ' ಮಾಲೆಯ ನಿರ್ವಹಣೆಯನ್ನೂ, ಸಂಪೂರ್ಣ ಮರಾಟ ವ್ಯವಸ್ಥೆಯ ಹೊಣೆಯನ್ನೂ ಹೊತ್ತ ಸಮಾಜ ಪುಸ್ತಕಾಲಯದ ಶ್ರೀ ಘಾಣೇಕರ ಅವರಿಗೆ ನಮ್ಮ ಕೃತಜ್ಞತೆಗಳು.

ಅರಿಕೆ

'ಪ್ರಜ್ಞಾ - ನೇತ್ರೋ ಲೋಕಃ'
'ಅರಿವಿನ ಅರಿವು ಮನು-ಜ ಕಣ್ಣು' - ವೇದ

ಈ ಜೀವನದಲ್ಲಿ ವ್ಯಕ್ತಿ ವೈಶಿಷ್ಟ್ಯವನ್ನು ಮಾನ್ಯ ಮಾಡಲೇಬೇಕು. ಆದರೆ ಕೇವಲ ವೈಶಿಷ್ಟ್ಯವಾದವು ಕತ್ತಲೆಯ ಪೂಜೆ, ಅಥವಾ ಇಂದ್ರಿಯಪೂಜೆ, ಇಲ್ಲವೆ ಮೃತ್ಯುಪೂಜೆಯಾಗಿ ಪರಿಣಮಿಸಲೇಬೇಕು. ಸಮಾನಧಾರಣೆ : ವಿಚಾರದ (Concept) ಆಧಾರವಿಲ್ಲದ "ಭಾಷೆ" (ವೈಯಕ್ತಿಕ ಸಾಂಕೇತಿಕತೆಯ ಅತಿರೇಕದಿಂದಾಗಿ) 'ಭಾಷೆ'ಯೆಂಬ ಹೆಸರಿನ ಅರ್ಹತೆಯ ಭಾನ (=ಪ್ರಕಾಶದಾಯಕ ಬಾಳದಾರಿಯ ಬೆಳಕು) ತರದೆ ಕತ್ತಲೆಯನ್ನೇ ಹೆಚ್ಚಿಸೀತು. ಸಮಾನಧಾರಣೆಯಿಂದ ಸಂಕಲ್ಪನೆ ತೀರ ಭಿನ್ನ; ಸಮಾನಧಾರಣೆಗೆ (: ಪ್ರಕಾಶಕ್ಕೆ) ವಿಪರೀತವಾದ ಸಂಕಲ್ಪನೆ (Creativity) ಕತ್ತಲೆಯ ಪರ್ಯಾಯ. ಸಂಕಲ್ಪನೆ ಇದು ನಿಜ; ಮೂರ್ತ ಪಾತಳಿಯ 'ಸತ್-ತ್ಯಂ' ಇರುವಂತೆ. ಧಾರಣೆ, ಪ್ರಜ್ಞಾ : ಪ್ರಕಾಶ ಪಾತಳಿಯ 'ಸತ್ಯ'. ಇದು ವಿಶ್ವನಿಯಮ, ವ್ಯವಸ್ಥೆಯನ್ನು ಅರಿಕೆಯ ಅಳವಿನಲ್ಲಿ ತಂದು ಕೊಡಬಲ್ಲ ಅಮೂರ್ತ ತತ್ವವಿರಬಲ್ಲದು.

ವಿಮರ್ಶೆಯ ಒರೆಗಲ್ಲಿಗೂ ಹತ್ತಿರುವ "Thoughts have perennial forms" ಎಂಬ ಸೂತ್ರವನ್ನು ಒಪ್ಪಿದಲ್ಲಿ, ಅರ್ಥ: ವಿಚಾರ: ಜ್ಞಾನ ಇದು ಯಾವ ಜಾತಿಮತದ ಸೊತ್ತಲ್ಲ. ಯಾವುದೇ ದೇಶ, ಭಾಷೆ, ಜನ ಪಂಗಡಕ್ಕೆ ಸತ್ಯ : ಜ್ಞಾನದ ಗುತ್ತಿಗೆ ದೊರೆತಿಲ್ಲ. ಆದಕಾರಣ 'ಧರ್ಮ' ಮತ್ತು 'ಸಂಸ್ಕೃತಿ' ಎಂಬುವು ಉಂಟು ಎಂದಲ್ಲಿ ಇದು ಮಾನವಧರ್ಮವೇ ಆಗಬಲ್ಲದು; ಮತ್ತು ಇದು 'ಮಾನವ ಸಂಸ್ಕೃತಿ'ಯೇ ಇದ್ದೀತು.

ಭಾಷೆ : ಸಂಸ್ಕೃತಿ-ತನ್ಮೂಲಕ ಜ್ಞಾನ-ಇದಕ್ಕೆ ಯಾವುದೊಂದು ಬಗೆಯ ಸಾಮಾಜಿಕ, ಧಾರ್ಮಿಕ ಅಥವಾ ರಾಜಕೀಯ ನರುಗು ಎನ್ನಿ ಅಥವಾ ನಾತ ಎನ್ನಿ; ಇದಕ್ಕೆ ಸೋಂಕಿರುವ ಶಕ್ಯತೆಯನ್ನು ಅಲ್ಲಗಳೆವಲ್ಲಿ ಈ ಐತಿಹಾಸಿಕ ನಿಯತಿಯ ಅಜ್ಞಾನ ವ್ಯಕ್ತವಾಗುತ್ತದೆ. ಕಲ್ಲಿದ್ದಲಿಂದ ವಿವಿಧ ಬಣ್ಣಗಳನ್ನು, ಸುಗಂಧವನ್ನು ನಿರ್ಮಿಸಬಲ್ಲ ಈ ಮಾನವ ಪ್ರಜ್ಞೆ, ಲೋಗರ ಭಾಷೆ : ಸಂಸ್ಕೃತಿಯ (ನುಡಿವಳಿ-ನಡೆ-ವಳಿಯ) ಮೂಲಕ ಮಾನವ ಸಂಸ್ಕೃತಿಯ ಮಟ್ಟವನ್ನು ಎತ್ತರಿಸಿಕೊಳ್ಳಲು ಸಮರ್ಥವಾಗಲಾರದೊ? ಯಾವುದೊಂದು ಜನ : ಪಂಗಡವು ತನ್ನ ವಿಶಿಷ್ಟದ-ವೈಶಿಷ್ಟ್ಯದ ಅಭಿನಿವೇಶದಲ್ಲಿ ಯಾವುದೇ ಭಾಷೆ : ಸಂಸ್ಕೃತಿ (ತನ್ಮೂಲಕ ವಿಚಾರ : ಜ್ಞಾನ), ಇದನ್ನು 'ಪರಕೀಯ' ಎಂದು ಕಡೆಗಣಿಸಿದಲ್ಲಿ ಇಂತಹ ನೇತಾರರು, ತಮ್ಮ (ಪಂಗಡದ) ಹಾನಿಯನ್ನು ತಾವೇ ಆಮಂತ್ರಿಸುತ್ತಿರುತ್ತಾರೆ. 'ಸ್ವಯಂಪೂರ್ಣತೆ'ಯ ಹೆಮ್ಮೆಯಲ್ಲಿ ಸಮುದ್ರಯಾನವನ್ನು ಬಹಿಷ್ಕರಿಸಿದ್ದ ಭಾರತೀಯ ಸನಾತನಿಗಳಿಂದ ರಾಷ್ಟ್ರಕ್ಕೆ ಆಗಿರುವ-ಎಂದೂ ತುಂಬಿ ಬರಲಾರದ-ದುಷ್ಪರಿಣಾಮಗಳನ್ನು ನಾವೆಲ್ಲ ಇಂದಿಗೂ ಅನುಭವಿಸುತ್ತಿದ್ದೇವೆ.

ವಿಕಾಸವಾದದ ಸಿದ್ಧಾಂತದೊಳಗಿನ ಪ್ರಾದುರ್ಭಾವದು ಸ್ವರೂಪವನ್ನು ಗಮನಿಸಿದಲ್ಲಿ ಪ್ರಾಣಿವರ್ಗದೊಳಗಿಂದ ವಾನರ-ನರನ ವರೆಗಿನ 'ಪ್ರಾದುರ್ಭಾವ'ವನ್ನು ಲೆಕ್ಕಿಸುವುದು ಅವಶ್ಯ. ಈ ಹಿನ್ನೆಲೆಯಲ್ಲಿ ಪ್ರಜ್ಞಾಪ್ರಾದುರ್ಭಾವವಾದ ಮನುಜ, ಮರಳಿ ವಾನರ-ನರ(ಳ)ನ ಹಂತಕ್ಕೆ ತಿರುಗಲು ಅಶಕ್ಯವಿದೆ. ಆದರೆ, 'ಜಾತವೇದ ಅಗ್ನಿ' ('ಜಾತ-ಪ್ರಜ್ಞೆ' ಎಂದರೆ ಉದಯವಾದ Wisdom.). ಈ ತತ್ವವು ಅಬೋಧಿ (Unconscious)=ನಚಿಕೇತಾಗ್ನಿಯಲ್ಲಿ ಅಡಗುವುದು, ಎಂಬ ವಿವರಣಾತ್ಮಕ ಸ್ವರೂಪದ (Aetiological) ಪವಾಡ ಕಥೆ, ಋಗ್ವೇದದಲ್ಲಿಯೇ ಇದೆ. ಪ್ರಜ್ಞಾ-ಪ್ರಾದುರ್ಭಾವವನ್ನು ನಿರರ್ಥಕವಾಗಿಸಲು ಅಂದು ಆದ ಒಂದು ಘೋರಕೃತ್ಯದ ಈ ದಾಖಲೆ ಇಂದು ಬೆಳಕಿನಲ್ಲಿ ಬಂದಿದೆ!

ಈ ಸ್ಥಿತ್ಯಂತರವನ್ನು ಭಾರತೀಯ ಪುರಾತನ ಪರಿಭಾಷೆಯಲ್ಲಿ ಹೀಗೆ ಹೇಳಬಹುದು: 'ಭಗ'-ವಂತ ಸಿದ್ಧಿಯ ಸಂಪ್ರದಾಯವು ವಿವಸ್ವನ್ ಪ್ರೇರಣೆಯ 'ಮನು': 'ಮಾನವ ಧರ್ಮ' ಪರಂಪರೆಯನ್ನು ವ್ಯತ್ಯಸ್ತವಾಗಿಸಿ ಮರಳಿ ನಾರ-ಅಯನ ಪ್ರೇರಣೆಯ 'ನರ'ರ ಪಾತಳಿಯ ಜೀವನರೀತಿಯ ಆಚಾರ=ಸಂಪ್ರದಾಯ (Religion) ಬೇರೂರಿ ಉಳಿಯುವಂತೆ ಮಾಡಿದೆ! ಆ ನಿನ್ನೆಗಳ ಆಕರ್ಷಣ ತಗ್ಗಿಸಿಕೊಳ್ಳಲಾರದೆ 'ಪ್ರಾಣ' ದೇವರನ್ನು : ಮಹಾ-ವೀರ : ಬೃಹಲ್ಲಾಂಗೂಲ ವೃಷಾಕಪಿಯನ್ನು : ವೃಷಭ-ಶಕ್ತಿಯನ್ನು ಭಜಿಸಲು ಪ್ರೇರಿಸಲಾಗಿದೆ! ಇದು, ಮರಳಿ, 'ವೃಕ್ಷ-ವನ'ದ : 'ಅರಣ್ಯಾಯನ'ದ (ಛಾ. ಉ. ೮. ೬.೩) ದಾರಿಯೇ ಆಗುತ್ತಿದೆ! 'ನಿನ್ನೆ-ಇಂದು'ಗಳ ಆಗಾಮೀ ನಾಳೆಯತ್ತಣ ಪ್ರೇರಣೆಯ ಸಮಯಾಚಾರಗಳ ಬದಲು, 'ಕಲಿಯುಗ'ವನ್ನು ಆಮಂತ್ರಿಸುವ ಸ್ತಂಭ-ವೃತ್ತಾಕೃತಿಯ=ವೃತ್ರ (ಕೃಷ್ಣ) ಕಾವನ್ನೇ ಪೂಜಿಸುತ್ತಿರುವಲ್ಲಿ ತಾನು ಒಂದು ವಿಷಚಕ್ರದಲ್ಲಿ ಸಿಕ್ಕುತ್ತಿದ್ದೇನೆ ಎಂಬ 'ಪ್ರಜ್ಞೆ' ಬಧಿರವಾಗಿದ್ದುದು ಗೋಚರಕ್ಕೆ ಬರುತ್ತಿದೆ! ಆದರೆ, ಪಿರ್ರೆ ಟೈಲಾರ್ಡ್ ಡಿ ಚಾರ್ಡಿನ್ - ಜಾಗತಿಕ ವಿಜ್ಞಾನಿಗಳಿಂದ ಮನ್ನಣೆಪಡೆದ ಶಾಸ್ತ್ರಜ್ಞನು ಹೇಳುತ್ತಾನೆ: ಈ ಮನುಜ (Reflective thinking ಶಕ್ತಿ ಉದಯವಾದವನು) ಮರಳಿ ಪ್ರಜ್ಞೋದಯ ಪೂರ್ವ 'ನರ'ನ ಪಾತಳಿಗೆ ಮರಳಲಾರನು! ಈ ನರನು 'ಮನುಜತ್ವದ ಪಾತಳಿಯ ಹೊಸ ಹಂತದ ಹೊಸತಿಲಲ್ಲಿ ಅಡಿಯಿಟ್ಟಿದ್ದಾನೆ. 'The threshold of Reflection' ಪಾತಳಿಯನ್ನು ಪ್ರವೇಶಿಸಿದ್ದಾನೆ. ಅಮೃತ (ಜೀವನ) ಮತ್ತು ಮೃತ್ಯು ಇವೆರಡನ್ನೂ ಸಮವೆಂದು ಶ್ರದ್ಧೆ ವಹಿಸಲು ಬೋಧಿಸುವ 'ಭಗವಂತ'ನ ಉಪದೇಶಕ್ಕೆ ತಲೆವಾಗಬೇಕಿದ್ದರೆ, ಮನುಜತ್ವವನ್ನು ದಯಪಾಲಿಸಿರುವ ಪ್ರಜ್ಞಾ- ವಿವೇಕ ಬಧಿರ ಮಾಡಿಕೊಳ್ಳಬೇಕು. ವಿಸಂಗತಿಯಲ್ಲಿಯೇ ಸುಸಂಗತಿಯನ್ನು ಕಾಣಲು ಪ್ರಾಮಾಣಿಕತನದ ಬೆಲೆ ತೆತ್ತಬೇಕು. ಬಹುಮುಖ ಪ್ರಜ್ಞೆಯನ್ನು 'ಸ್ಥಿತ' (ಸ್ಥಿರ) ಪ್ರಜ್ಞೆಯಾಗಿಸಿರುವ ಮಾಟದ ಮೂಲಕ, ಈ 'ಭಗ-ವಂತ'ನು ನರನನ್ನು ನಾರ-ಅಯನದ 'ಏಕಾಯನ' ಮಾರ್ಗಕ್ಕೆ ತಳ್ಳುವ ಮಾಯಾಜಾಲ ಮಂತ್ರಗಳ ಸಂಗ್ರಹ, ಈ 'ಭಗವತ್' ಗೀತೆ. 'ಸಂಜ್ಞಾ ಪ್ರವಾಹ'ದಲ್ಲಿ ಪ್ರವಾಹಪತಿತರಂತೆ ಹೊರಡುವ ನೂತನ ತಂತ್ರವು, ಈ ನರ(ಳ)ನ ಪ್ರಮಾಥೀ ಪ್ರಾಥಮಿಕ ಇಂದ್ರಿಯ ಪೂಜೆಯ ಜೀವಿತದ ದಿಕ್ಕಿನಲ್ಲಿ ಹೊರಟಿರುವುದನ್ನು ಸೂಚಿಸುತ್ತಿದೆ.

ಇದೀಗ ಸಾಂಸ್ಕೃತಿಕ ಕ್ರಾಂತಿಯ ಮಾರ್ದನಿ ಕೇಳಬರುತ್ತಿದೆ. ಆಗಾಮೀ ಕ್ರಾಂತಿಯ ಸ್ವರೂಪವು ಯಾವ ಬಗೆಯದು ಇರಬೇಕು ಎಂಬುದನ್ನು ಮುಂಗಂಡು ಗೊತ್ತು ಮಾಡಿಕೊಳ್ಳಲು ವಿಚಾರ ಚರ್ಚೆ ಅವಶ್ಯವಾಗುತ್ತಿದೆ. ಈ ಸಂಧಿಕಾಲದಲ್ಲಿ 'ಭಾಷೆ ಹಾಗು ಸಂಸ್ಕೃತಿ' ಇವೆರಡರೊಳಗಿನ ಅನ್ಯೋನ್ಯವನ್ನು ಕುರಿತು ಬರೆಯಲು ಪ್ರೇರಿಸಿದ ಡಾ. ಕಲ್ಬುರ್ಗಿ ಅವರ ದೂರದೃಷ್ಟಿ ಪ್ರಶಂಸನೀಯವಿದೆ. 'ವಿದ್ಯಾವರ್ಧಕ' ಸಂಘವು ತನ್ನ ಹೆಸರನ್ನು ಸಾರ್ಥಕಗೊಳಿಸುವ ದಿಕ್ಕಿನಲ್ಲಿ ಅಡಿಯಿಟ್ಟು ಸಾಹಿತ್ಯ ತರಂಗಮಾಲೆಯನ್ನು ಹೊರಡಿಸುವ ಸಂಕಲ್ಪಮಾಡಿದ್ದು ಪ್ರಶಂಸಾರ್ಹಕೃತಿ. ಪ್ರಸ್ತುತ ಪ್ರಕಟಣೆಯೊಡನೆ ಈ ಮಾಲೆಯನ್ನು ಪ್ರಾರಂಭಿಸುತ್ತಿರುವುದಕ್ಕಾಗಿ ಇದರ ಸಂಚಾಲಕರಿಗೆ ವಂದನೆಗಳು. ಹಸ್ತಪ್ರತಿಯನ್ನು ಓದಿ ಗ್ರಹಿಸಿಕೊಳ್ಳಲು ಸುಕರವಾಗುವಂತೆ ಮಾರ್ಪಾಡುಗಳನ್ನು ಸೂಚಿಸಿದ ಶ್ರೀ ಕುಲಕರ್ಣಿ ಶ್ರೀನಿವಾಸ, ಎಂ.ಎ., ಇವರಿಗೆ ಧನ್ಯವಾದಗಳು.

– ಶಂ. ಬಾ. ಜೋಶಿ

ಸಂಸ್ಕೃತಿ ಎಂದರೇನು?

"ಆತ್ಮಸಂಸ್ಕೃತಿಃ ವೈ ಶಿಲ್ಪಾನಿ" ಎಂಬಲ್ಲಿ ಪುರಾತನ ಭಾರತೀಯರು 'ಸಂಸ್ಕೃತಿ' ಮತ್ತು 'ಶಿಲ್ಪ' ಇವೆರಡನ್ನು ಸುಮಾರಾಗಿ ಸಮವೆಂದು ಕಂಡಿದ್ದಾರೆ. ಶಿಲ್ಪದಲ್ಲಿ ಕಲಾ-ಕುಸುರಿಯ ಸೌಂದರ್ಯವು ಸ್ಪಷ್ಟವಿದೆ. ಸಂಸ್ಕಾರ, ಸಂಸ್ಕರಣದಿಂದ ಶಿಲಾಪ್ರತಿಮೆ ಶಿಲ್ಪಕಲಾಕೃತಿಯಾಗುತ್ತದೆ. ಶಿಲೆಯೇ ಪ್ರಕೃತಿ; ಸಂಸ್ಕಾರದಿಂದಾಗಿ ಅದು ಶಿಲ್ಪಕೃತಿಯಾಗುತ್ತದೆ. ಇದೇ ರೀತಿ, ಮಾನವ ಪ್ರಜ್ಞಾ: ಪ್ರಾತಿಭ ದೃಷ್ಟಿಯಿಂದಾಗಿ, ಪ್ರಾಕೃತ ಮಾನವ ಜೀವನವು 'ಸಂಸ್ಕೃತಿ'ಯಾಗಿ ಪರಿಣಮಿಸಿದೆ. ನಿಸರ್ಗದಲ್ಲಿ ಇರುವುದು 'ಪ್ರಕೃತಿ', ಎಂದಲ್ಲಿ-ಸಂಸ್ಕೃತಿಯು ನಿಸರ್ಗಕ್ಕೆ ಹೊರಗಿನದೇ? ನಿಸರ್ಗಕ್ಕೆ ಹೊರತಾದುದೇ? ಎಂಬ ಪ್ರಶ್ನೆ ಏಳುವುದು ಸಹಜ. ಭೌತಶಾಸ್ತ್ರದ ಪರಿಮಿತ ಭೂಮಿಕೆಯಿಂದ 'ಸಂಸ್ಕೃತಿ'ಯನ್ನು ಅನೈಸರ್ಗಿಕ ಎಂದು ಬಗೆಯುವ ವಾಡಿಕೆ ಇತ್ತು. ಹಲಕೆಲವರಲ್ಲಿ ಇಂದಿಗೂ ಈ ಅಭಿಪ್ರಾಯವಿದೆ. ಭೌತ ಭೂಮಿಕೆಯಂತೆ ಈ ಪ್ರಪಂಚದಲ್ಲಿ ಎರಡೇ ಪಾತಳಿಗಳು ಉಂಟು. ೧. ದೃಶ್ಯ ಸೃಷ್ಟಿ (Phenomena) ಮತ್ತು ೨. ದೃಶ್ಯಸೃಷ್ಟಿಗೆ ಆಧಾರಭೂತ ಅಮೂರ್ತ ನಿಸರ್ಗ (Nature).

ಆದರೆ, ಮಾನವಜೀವನ ಪಾತಳಿಯ ಮೇಲಿನ ಆಗು-ಹೋಗುಗಳನ್ನು ಅರ್ಥೈಸಿಕೊಳ್ಳಲು, ಈ ವಿಶ್ವಸ್ಥ ಮೂರ್ತ ದೃಶ್ಯ (Phenomena) ಮತ್ತು ಈ ಮೂರ್ತಗಳಿಗೆ ಆಧಾರಭೂತ ನಿಸರ್ಗ (Nature) ಇವೆರಡೇ ಪಾತಳಿಗಳು ಸಾಕಾಗುವುದಿಲ್ಲ. ಮಾನವನಿಗೆ ತನ್ನ ಭಾಷೆ ಮತ್ತು ಸಂಸ್ಕೃತಿಗಳನ್ನು ರೂಪಿಸಿಕೊಳ್ಳಲು ದೊರೆವ ಪ್ರೇರಣಾ ಕೇಂದ್ರವು ಈ ಮೂರ್ತಾಮೂರ್ತ ಭೌತಪಾತಳಿಗಳೆರಡರ ಆಚೆಗೆ ಇದೆ ಎಂದು ತಿಳಿಯುವುದು ಅವಶ್ಯ. ಇದನ್ನೇ ಪುರಾತನರು 'ಸ್ವರ್ ಪಾತಳಿ' ಎಂದಿದ್ದಾರೆ.

ಮಾನವನ ಜೀವನ ಪಾತಳಿಯ ಮೇಲೆ ಆಕಾರ ಪಡೆದಿರುವ ಭಾಷೆ, ಸಂಸ್ಕೃತಿಯನ್ನು ಸಮೀಕ್ಷಿಸಿ, ವಿಶ್ಲೇಷಿಸಿ ನೋಡಿಕೊಳ್ಳಿ. ಈ ಭಾಷೆ, ಸಂಸ್ಕೃತಿಗಳು ಕೇವಲ ಇಂದ್ರಿಯ ಗೋಚರ ಪಾತಳಿಗೇ ಸೀಮಿತವಿಲ್ಲ. ಇವು Super organic ಆಗಿರುವುದಾಗಿ ಡಾ. ಎ. ಎಲ್. ಕ್ರೋಬರ್, ಹಕ್ಸ್ಲೇ ಹೇಳುತ್ತಾರೆ. ತೀರ ಪ್ರಾಥಮಿಕ ಹಂತದ ಜನ-ಪಂಗಡಗಳ ನಡೆವಳಿ-ನುಡಿವಳಿಗಳನ್ನು ಅಭ್ಯಸಿಸುವುದಕ್ಕಾಗಿ ಮಾನವಶಾಸ್ತ್ರಜ್ಞರು ಹಲವು ಕಾನನ, ಕೊಳ್ಳ, ಕಂದರಗಳನ್ನು ಅಲೆದರು. ಸುಧಾರಿಸಿದ್ದೆಂಬ ನಾಗರಿಕ ಜನಸಂಪರ್ಕದಿಂದ ತುಂಬ ದೂರವಿರುವ ಯಾವ ಕಾಡು ಮಾನವರೇ ಇರಲಿ, ಅವರು ತಮ್ಮದೇ ಆದ ಒಂದು ಸಾಂಕೇತಿಕ ಭಾಷೆಯನ್ನು ಬಳಸುವುದು ಕಂಡುಬರುವುದು. ಯಾವುದೇ ಬಗೆಯ ಮದುವೆಯ ಕಟ್ಟಳೆಯೇ ಇಲ್ಲದ ಜನ ಹುಡುಕಿದರೂ ಸಿಕ್ಕಲಿಲ್ಲ. 'ತಾಯ್ಗಂಡತನ'ದಂಥ (Incest) ಜೀವನ ರೀತಿಯನ್ನು ತ್ಯಾಜ್ಯ, ತುಚ್ಛವೆಂದು ಎಲ್ಲ ಪಂಗಡಗಳೂ ಬಗೆಯುತ್ತವೆ. ವನಗಳ ಮಧ್ಯದಲ್ಲಿ ಇದ್ದರೂ ವನ್ಯ ಪಶುಗಳ ಭಾಷೆಗಿಂತ ಬೇರೆ ಪಾತಳಿಯ, ತಮ್ಮದೇ ಆದ ಮಾತಿನ

ರೀತಿಯನ್ನು ಇವರು ರೂಪಿಸಿಕೊಂಡದ್ದು ಹೇಗೆ? ಈ ಭಾಷೆಗಳಲ್ಲಿ ಇರುವ ತಾಯಿ, ತಂದೆ, ಮಗಳು, ಮಗ, ಸ್ನೇಹಿತ ಎಂಬೀ ಬಗೆಯ ಸಂಬಂಧದ ತಾರತಮ್ಯ : ಮೂಲ್ಯಗಳ ಪ್ರಜ್ಞೆ, ಕಾಡುಪ್ರಾಣಿಗಳಲ್ಲಿ ಇಲ್ಲ. ಆದರೆ ಕಾಡಾಡಿಗಳೆಂಬವರಲ್ಲಿ, ಕೆಲಮಟ್ಟಿಗಾದರೂ ಈ ನೈತಿಕ ಮೌಲ್ಯಗಳ ಪ್ರಜ್ಞೆ ಉಂಟಾದುದು ಹೇಗೆ? ವಾನರ ಹಂತದ ವರೆಗೆ ಇಲ್ಲದ ಈ ತಾರ-ತಮ್ಯದ ಎಂದರೆ ಅರ್ಥ: ಮೌಲ್ಯಗಳ ಪ್ರಜ್ಞೆ (Consciousness of consciousness) ಎಲ್ಲಿಂದ ಚಿಗಿತುಕೊಂಡಿತು? ವಾನರ ಹಂತದ ತರುವಾಯ ಪ್ರಾದುರ್ಭವಿಸಿದ 'ಪ್ರಜ್ಞಾ' ವಿಶೇಷದಿಂದಾಗಿ, ನರವರ್ಗದ ಜೀವನ ರೀತಿಯು, ಇನ್ನುಳಿದ ಪ್ರಾಣಿವರ್ಗದಿಂದ ಬೇರೆಯೇ ಆಗತೊಡಗುತ್ತದೆ. ನರರು, ತತ್ಪೂರ್ವದ ಪ್ರಮಾಥೀ (Primary, Primeval) ಪ್ರಾಣಚೇತಸದ ಇಂದ್ರಿಯ-ಗೋಚರ ಪಾತಳಿಯ ಈ ಸತ್ತ್ಯ (Truth)ಕ್ಕೆ ಎರವಾಗದೇ, ಈ ಐಂದ್ರಿಯಕ ಪಾತಳಿಯ ಆಚೆಗಿನ (Super organic) ಪಾತಳಿಯ ಮೇಲಿನ ತಾತ್ತ್ವಿಕ ಸ್ವರೂಪದ ಸತ್ಯವನ್ನೂ[೧] (Reality), ಸಂಕೇತಗಳ ಮೂಲಕವಾಗಿ ಗ್ರಹಿಸಿಕೊಳ್ಳುವ ಅಂತಃಸಾಮರ್ಥ್ಯ ಉಳ್ಳವರೂ ಆಗಿದ್ದಾರೆ.

ಮನುಷ್ಯರಲ್ಲಿ ಎರಡು ಶಕ್ತಿಗಳಿವೆ. ಒಂದು: ಪ್ರಮಾಥೀ ಪ್ರಾಣಶಕ್ತಿ ಆಧುನಿಕರು ಇದನ್ನು 'Sub-conscious State' ಎಂದು ಕರೆಯುತ್ತಾರೆ. ಉಪನಿಷತ್ತಿನ ಪರಿಭಾಷೆಯಲ್ಲಿ ಈ ಪ್ರಾಣಚೇತನದ ಪ್ರೇರಣಾಕೇಂದ್ರವು 'ಅಂಗಾನಾಂ ರಸ'ದಲ್ಲಿದೆ. ಇನ್ನೊಂದು: ಪ್ರಜ್ಞಾ : ಪ್ರಾತಿಭಶಕ್ತಿ ಇದು ಜೀವನವಿಶ್ವಸ್ಥ ನೈಸರ್ಗಿಕ ಶಕ್ತಿ. ಇದನ್ನು ಆಧುನಿಕರು ಗಮನಿಸಿಲ್ಲ. ಸ್ವತಂತ್ರ ಸ್ಥಾನವನ್ನಿತ್ತಿಲ್ಲ. ಆದರೆ ಸಾಕ್ರೆಟೀಸನು Wisdom ಎಂಬ ಹೆಸರಿನಲ್ಲಿ ಮನುಷ್ಯನ ಈ ಶಕ್ತಿಯನ್ನು ಗುರುತಿಸಿದ್ದಾನೆ.[೨] ನಮ್ಮಲ್ಲಿಯೇ ಇರುವ ಪ್ರಜ್ಞಾ ವಿವೇಕದ ಅರಿವು ನಮಗಿರುವುದಿಲ್ಲ. ಇದು ಅಸ್ವಯಂವೇದ್ಯ, ಪ್ರಯತ್ನಪಟ್ಟು ತಿಳಿದುಕೊಳ್ಳುವ ವರೆಗೆ. ತಿಳಿದ ಮೇಲೆ ಮಾರ್ಗದರ್ಶನ ಮಾಡುವ ತಿಳಿ(ವಿನ) ಬೆಳಕಾಗಿ ಪರಿಣಮಿಸುವುದು. ಈಗ ದಿವ್ಯಾಧ್ಯಾತ್ಮದ 'ಜ್ಞಾ(ನ)' ಪಾಶ್ಚಾತ್ಯ ಪರಂಪರೆಯ 'Gnosticism' ಮತ್ತು ನಮ್ಮ 'ತನ್ನ ತಾನರಿದಡೆ, ತನ್ನರಿವೇ ಗುರು' ಎಂಬಲ್ಲಿಯ 'ಅರಿವು'. ಇದು ಒಂದೇ ಬಿಂದುವಿನಲ್ಲಿ ಉಳಿಯುವಂತಹುದು. ಇದಕ್ಕೆ ನಿನ್ನೆ ಇಂದು ನಾಳೆಗಳ ಅರಿವು ಸಹಿಸುವುದಿಲ್ಲ. ಆದರೆ, ಸಾಂಸ್ಕೃತಿಕ ಮಟ್ಟದ ಅರಿವು; ಇದು 'ಅರಿವಿನ ಅರಿವು' = ಪ್ರಜ್ಞೆ (Consciousness of consciousness) - ಇದು ಬಹುಮುಖ; ವಿಶ್ವತೋಮುಖ. ಆದಕಾರಣ, ದಿಕ್ ಕಾಲಾತೀತ. ನಿನ್ನೆ ನಾಳೆಗಳನ್ನು ಸಮಗ್ರ ಗ್ರಹಿಸಿಕೊಳ್ಳಬಲ್ಲ, ಸಮೀಕ್ಷಿಸಬಲ್ಲ, ಶಕ್ತಿತತ್ತ್ವ.[೩]

ಮಾನವ ಸಂಸ್ಕೃತಿಯ ಉದ್ಗಮ 'ಸಮಯ'ದಲ್ಲಿ ಸಂಭವಿಸಿರಬಹುದಾದ ಇಂಥ ಸಂಧಿಕಾಲದ ಕ್ರಾಂತಿಕಾರೀ ಅರಿವು ತಲೆಯೆತ್ತಿದ ಪ್ರಸಂಗವನ್ನು ಸೂಚಿಸುವ ದಿವ್ಯ ಪವಾಡಕಥೆಗಳು (Myths) ಜಾಗತಿಕ ಸಾಹಿತ್ಯದಲ್ಲಿ ದೊರೆಯುತ್ತವೆ. ವ್ಯಕ್ತಿ-ವ್ಯಕ್ತಿಗಳಲ್ಲಿ ಪ್ರಾದುರ್ಭವಿಸಿರುವ, ಆತನಿಗೆ ಸ್ವಯಂವೇದ್ಯವಾಗುವ ಈ ತಿಳಿಬೆಳಕು ಸ್ವೋಪಜ್ಞೆ (Wisdom) ಆ ವ್ಯಕ್ತಿಯನ್ನು ಸುಸಂಸ್ಕೃತನನ್ನಾಗಿ ಮಾರ್ಪಡಿಸುತ್ತದೆ. ಮಾನವನ ಲಕ್ಷಣವನ್ನು ಕುರಿತ ಮಾತು ಬಂದಾಗ Wisdom ಉಳ್ಳವನು, 'ಮನು'ಜನು ಎಂದು ಸಾಕ್ರೇಟೀಸನು ಹೇಳಿದ್ದಾನೆ. ಕಾರ್ಲ್‌ಪೊಪ್ಪರ್ ಈ Wisdomದ ಸ್ಪಷ್ಟೀಕರಣವನ್ನು ಸಾಕ್ರೇಟೀಸನ ಪರಿಭಾಷೆಯಲ್ಲಿಯೇ ನೀಡಿದ್ದಾನೆ. ಸುತ್ತಲಿನ ಆಗು-ಹೋಗುಗಳನ್ನು ಗ್ರಹಿಸಿಕೊಂಡು, ಅದರ ಮೌಲ್ಯಗಳನ್ನು, ತಾರತಮ್ಯಗಳನ್ನು ಅರಿಯುವ ಈ ಪ್ರಜ್ಞೆಗೆ ಆ ವ್ಯಕ್ತಿಯ ಇತಿಮಿತಿಗಳೂ, ಕೊರತೆ - ದೋಷಗಳೂ ಕಾಣುತ್ತಿರುತ್ತವೆ! ಇಂಥ ಪ್ರಜ್ಞೆ (Wisdom) ಅಮಂದವಾಗಿ ಅಂತರಂಗದಲ್ಲಿ ಬೆಳಗತೊಡಗುವುದೇ ಸಂಸ್ಕೃತಿಯ ಲಕ್ಷಣವಾಗಿದೆ. 'ಆತ್ಮ ಸಂಸ್ಕೃತಿಃ ವೈ ಶಿಲ್ಪಾನಿ' ಎಂದರೆ, ಆತ್ಮಶಿಲ್ಪವು ಸಂಸ್ಕೃತಿಯ ಲಕ್ಷಣ ಎಂದಿರುವಲ್ಲಿ ಸಂಸ್ಕೃತಿ ಬಾಹ್ಯಪ್ರದರ್ಶನಕ್ಕಾಗಿ ಅಲ್ಲ ಎಂಬುದು ಸ್ಪಷ್ಟವಿದೆ. ಮಾನವೀಯ ಪಾತಳಿಯ ಮೇಲಣ ಪ್ರಜ್ಞಾರೂಪ ಗ್ರಹಣಶಕ್ತಿಯು ಪಾಂಡಿತ್ಯದ ಫಲವಲ್ಲ. ಬೌದ್ಧಿಕ ಕ್ರಿಯೆಯೂ ಅಲ್ಲ. ಇದು ಸಹಜಪ್ರವೃತ್ತಿ (Instinct, propensity) ಅಥವಾ ಸಹಜಜ್ಞಾನ (Intuition) ಆಗಿದೆ.

ಆತ್ಮಶಿಲ್ಪವು ಸಾಧ್ಯವಾಗಲು ಜಾಗೃತಪ್ರಜ್ಞೆ ಅವಶ್ಯ. ಆತ್ಮನ್ ಎಂಬುದು ಪ್ರಜ್ಞೆಯಲ್ಲ. ಪ್ರಜ್ಞೆ: ಸ್ವಯಂಪ್ರಕಾಶ. ಸಂಸ್ಕೃತಿಯನ್ನು ರೂಪಿಸುತ್ತ ಹೋಗುವ ಮಾನವ, ತನ್ನನ್ನೇ ತಾನು ರೂಪಿಸಿಕೊಳ್ಳುತ್ತಾನೆ. ಏಕೆಂದರೆ ಸಂಸ್ಕೃತಿ ಬರೀ ಫಲಿತರೂಪವಲ್ಲ; ಅದು ಪ್ರಕ್ರಿಯಾ ಸ್ವರೂಪದ್ದೂ ಆಗಿದೆ. ಆದುದರಿಂದ, ಮಾನವನು ತಾನು ರೂಪಿಸಿದ ಈ ಸಂಸ್ಕೃತಿಯಿಂದ ತನ್ನ ಸ್ವರೂಪದರ್ಶನ ಮಾಡಿಕೊಳ್ಳುತ್ತಾನೆ. 'ಕಪಟ ನಾಟಕ ಸೂತ್ರಧಾರೀ' ದೇವರನ್ನು ಸೃಷ್ಟಿಸಿದ ಹಾಗೂ ಪೂಜಿಸುವ ಪಂಗಡ ತನ್ನ ಇತಿಮಿತಿಗಳನ್ನೇ ಲೋಕಕ್ಕೆ ಪ್ರದರ್ಶಿಸುತ್ತದೆ.

ಮಾನವನೊಳಗಿನ ಆತ್ಮನ್ ಮತ್ತು ಅವನೊಳಗಿನ ಪ್ರಜ್ಞೆ - ಇವೆರಡೂ ಒಂದೇ ಅಲ್ಲ. ಪ್ರಜ್ಞೆಯ ಬೆಳಕಿನಲ್ಲಿ, ಆ ವ್ಯಕ್ತಿಗೆ ತನ್ನ 'ಆತ್ಮನ್' ತಿಳಿಯುತ್ತದೆ. ಆದಕಾರಣ, ಆತ್ಮನ್ ಇದು ಪ್ರಜ್ಞೆಯಿಂದ ಭಿನ್ನವಿರಲೇಬೇಕು. ನಿಜಗುಣಶಿವಯೋಗಿಗಳು ತಮ್ಮ 'ತತ್-ತ್ವ-ದರ್ಶನ' ಗ್ರಂಥಕ್ಕೆ 'ವಿವೇಕ ಚಿಂತಾಮಣಿ' ಎಂದು ಹೆಸರಿಸಿದುದು ಔಚಿತ್ಯಪೂರ್ಣವಿದೆ. ವಿವೇಕದ ಚಿಂತನದಲ್ಲಿ ಕಾಣುವ ಮಣಿ-ಚಿಂತಾಮಣಿ-ಚಿಂತಾರತ್ನ; ಕತ್ತಲೆಯ ಪ್ರತೀಕವಾಗಿರುವ ದೇಹವು ತಿಳಿಯಬೇಕಾದರೆ, ಮಾನವನ ಪ್ರಜ್ಞಾ-ಪ್ರಕಾಶ ಬಹು ಅವಶ್ಯ. 'ಆತ್ಮನ್' ಇದರ ಹಿನ್ನೆಲೆಯನ್ನೂ, ಪರ್ಯಾಯ ಪದಗಳನ್ನೂ ಗಮನಿಸಿದರೆ, ಆತ್ಮನ್‌ವು ತನುವಿನ ಸೂಕ್ಷ್ಮರೂಪವೇ ಆಗಿದೆಯೆಂಬುದರ ಖಾತ್ರಿ ಆಗಬಲ್ಲುದು. ಸಂಸ್ಕೃತ ಪದಗಳ ಸೃಷ್ಟಿಯಲ್ಲಿ ಕಾಣದೊರೆಯುವ ಅನಿರ್ದೇಶ್ಯ-ಸಂದಿಗ್ಧ ಪಾತಳಿಯ ಸೂಚಕ 'ಆ (ತತ್)' ಇದನ್ನು ಗುರುತಿಸಿ ಅರಿಯುವ ಆವಶ್ಯಕತೆಯಿದೆ. ಇಂಥ ತತ್-ಆ, ಇದರ ಉತ್ತಮ ಮಾದರಿಯು 'ಆ-ದರ್ಶ' (ಕನ್ನಡಿ) Elorado ಇಲ್ಲಿ ಕಾಣಬಲ್ಲುದು! ಈ ಆತ್ಮನ್ ಸಹ ಆದರ್ಶದ ಸ್ವರೂಪದ್ದೇ ಆಗಿದೆ.

ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಆತ್ಮನ್, ಇದನ್ನೇ ಕೇಂದ್ರವಾಗಿ ಕಲ್ಪಿಸಿ ನಿರ್ಮಾಣವಾಗಿರುವ ಸಾಂಸ್ಕೃತಿಕ ಪರಂಪರೆಯೊಂದು ಇರುವಂತೆ; ಪ್ರಜ್ಞಾಪಾತಳಿಯ ಸಂಸ್ಕೃತಿಯ ಪರಂಪರೆಯೂ ಒಂದು ಇತ್ತು. ಇದು ಈಗಲೂ 'ಉಂಟು'. ಆದರೆ, 'ದಗ್ಧಪಟ'ದಂತೆ 'ಜೀವನ್ಮೃತ' ಅವಸ್ಥೆಯಲ್ಲಿ ಉಂಟು. ಇವರೆಡೂ-ಸಾಂಸ್ಕೃತಿಕ ಪರಂಪರೆಗಳಲ್ಲಿ ಕತ್ತಲೆ (ಆತ್ಮನ್) ಮತ್ತು ಬೆಳಕು (ಪ್ರಜ್ಞಾ) - ಇವೆರಡರಲ್ಲಿ ಇರುವಷ್ಟು ಅಂತರವಿದೆ.

ಟಿಪ್ಪಣಿಗಳು

೧. 'ಸತ್ವ' ಇದು ಮೂರನೆಯ 'ಸ್ವರ್' ಪಾತಳಿಯದು. ಆದರೆ 'ಸತ್ವ'; ರಸಸ್ವರೂಪ; ಇದು ಮೂರ್ತಾಽಮೂರ್ತ ಎರಡು ಪಾತಳಿಗಳ ನಡುವಣದು; ಪಿಂಡ-ಬ್ರಹ್ಮಾಂಡದ ಏಕಾತ್ಮಕತೆಯಲ್ಲಿ ಕಾಣಿಸಿಕೊಳ್ಳುವ ಸ-ರಸ 'ಸತ್ವ' ಇದು.

೨. ***The Open Society and its Enemies***. Vol. I P. 128.

೩. "One of man's major property is that he is always evaluating and creating values. How has this function of valuing developed? How and why his values evolved in his relatively brief psychological existence". ***Man and His Future***. CIBA Foundation Volume London P. 373

ಸಂಸ್ಕೃತಿ ಮತ್ತು ಧರ್ಮ

ಸಂಸ್ಕೃತಿ ಮತ್ತು ಧರ್ಮ ಇವೆರಡೂ ಮಾನವ ಜೀವನದಷ್ಟು ವ್ಯಾಪ್ತಿಯುಳ್ಳವು. ಸಂಸ್ಕೃತಿಗೆ ಸ್ಥಾನವಿಲ್ಲದ (ಅ-ಸಂಸ್ಕೃತ) ಧರ್ಮ ಇರಲಾರದು. ಇದೇ ರೀತಿ ಧಾರ್ಮಿಕ ಭಾವನೆಗೆ ಎಂದರೆ ಜೀವನದಲ್ಲಿ ಪ್ರಾಮಾಣಿಕತೆ ಮತ್ತು ಶ್ರದ್ಧೆಗೆ ಸ್ಥಾನವಿಲ್ಲದ 'ಸಂಸ್ಕೃತಿ', ತನ್ನ ಸಂಸ್ಕೃತಿ ಹೆಸರಿಗೇ ಅನರ್ಹವಾಗುತ್ತದೆ. ಇದರಂತೆ ಸಂಸ್ಕೃತಿಯ ಅಭಾವವಿರುವ ಧರ್ಮವು 'Religion' ಎನಿಸುತ್ತದೆ. ಇದು ಜೀವನ ಮೌಲ್ಯಗಳನ್ನೊಳಗೊಳ್ಳದ ಮೋಕ್ಷಕಾಮೀ ಸಂಪ್ರದಾಯವಾಗ ಬಲ್ಲುದು. ಇದು ಸಾಮಾಜಿಕ ಶೈಥಿಲ್ಯ ಮತ್ತು ಭ್ರಷ್ಟಾಚಾರಕ್ಕೆ ಆಮಂತ್ರಿಸದಿದ್ದರೆ ಸೋಜಿಗ! ಸಂಸ್ಕೃತಿಯನ್ನು ಕುರಿತು ಪಾಶ್ಚಾತ್ಯರಲ್ಲಿ ವಿವಿಧಾಂಗಗಳಿಂದ ಚರ್ಚೆ, ವಿಮರ್ಶೆಗಳು ನಡೆಯುತ್ತ ಬಂದಿವೆ. ಹಿಂದಿನ ತಲೆಮಾರಿನ ಮ್ಯಾಥ್ಯೂ ಅರ್ನಾಲ್ಡ್, ಜಾನ್ ಕಾಪಲ್, ಪೋವೀಸರಂತಹರಿಗೆ, ಸಂಸ್ಕೃತಿಯಲ್ಲಿ ತಮ್ಮ 'ಧರ್ಮ'ಕ್ಕೂ (ಕ್ರೈಸ್ತ) ಸ್ಥಾನ ಕಲ್ಪಿಸಿಕೊಡುವ ಇಚ್ಛೆಯಿದೆ. ಆದರೆ ಈ ಮಾತನ್ನು ನೇರವಾಗಿ ಹೇಳಲು ಸಂಕೋಚಪಟ್ಟುಕೊಂಡಿದ್ದಾರೆ. 'ಪರಿಪೂರ್ಣತಯೇ ಗುರಿ' (A persuit of total; perfection) ಎಂದು ಪ್ರತಿಪಾದಿಸಿರುವ ಆರ್ನಾಲ್ಡನು, 'ಸಂಸ್ಕೃತಿ' ಸ್ವರೂಪವನ್ನೇ ಗಮನಿಸಿಲ್ಲ. ಸಂಸ್ಕೃತಿಯು ಪರಿಪೂರ್ಣ ಫಲಿತ (finished product) ಸ್ವರೂಪದ್ದಲ್ಲ; ಪ್ರಕ್ರಿಯಾ (Process) ಸ್ವರೂಪದ್ದೂ ಆಗಿದೆ, ಎಂಬ ಮೂಲಭೂತ ವಿಚಾರವನ್ನೇ ಕಡೆಗಣಿಸಿರುವುದು ದುರ್ದೈವದ ಸಂಗತಿ.

ಜಾನ್ ಕಾಪರ್, ಪೋವಿಸ್ ಇವರು, ಜನನ- ಮರಣದ ಆಚೆಗಿನ ಮೂರನೆಯ, ಇನ್ನೂ ಅಗಮ್ಯವಿರುವ (A third thing, more incomprehensible still) 'ನಿಃಶಬ್ದಂ ಬ್ರಹ್ಮ' ರೂಪೀ (The great perhaps of silence) ಮಹಾನ್ ತತ್ವದ ಮಾತನ್ನು ಈ ಸಂಸ್ಕೃತಿಯ ವಿವೇಚನೆಯಲ್ಲಿ ಎತ್ತುತ್ತಾರೆ. ಸಂಸ್ಕೃತಿ ಮತ್ತು ಭಾಷೆ ಇವೆರಡರ ಅನ್ಯೋನ್ಯವನ್ನು ಮರೆತ ಕಾರಣ ಸಂಸ್ಕೃತಿಯ ಅರ್ಥ ವಿವರಿಸಲು ಗ್ರಂಥ ಬರೆದ ಪೋವಿಸರಿಂದ ಸಂಸ್ಕೃತಿಯ ಮೂಲಾರ್ಥಕ್ಕೆ ಕೊಡಲಿಯ ಪೆಟ್ಟು ಬಿದ್ದಿದೆ! ಜನನ-ಮರಣಗಳ ಆಚೆಗಿನ ಮೂರನೆಯ ವಸ್ತುವೇ 'ಮಹಾನ್' (Great) ಆಗುವಲ್ಲಿ ಐಹಿಕ ಜೀವನವು ದುರ್ಲಕ್ಷಿತವಾಗುತ್ತದೆ. ಸಂಸ್ಕೃತಿ ಮತ್ತು ಭಾಷೆ ಇವು ಮೈವೆತ್ತು ಆಕಾರ ಪಡೆದದ್ದು ಸಾಮಾಜಿಕ ಜೀವನದ ಪರಿಸರದಲ್ಲಿ. ಐಹಿಕ ಜೀವನದಲ್ಲಿ ತಾನೇ? ಇದು ನಿಜವಿದ್ದಲ್ಲಿ, ಮರಣಾನಂತರದ ಆ ಪರಮಪದವೇ ಬಾಳಗುರಿಯಾದರೆ, ಐಹಿಕ ಜೀವನವನ್ನು ಪರಿಷ್ಕರಿಸಲೆಂದು ಆವಿಷ್ಕರಿಸಿರುವ ಸಂಸ್ಕೃತಿಯ ಮೂಲೋದ್ದೇಶಕ್ಕೇ ಬಾಧೆ ಬರುತ್ತದೆ.

ಸಂಸ್ಕೃತಿ ಮತ್ತು ಧರ್ಮ ಇವೆರಡೂ ತತ್ವತಃ ಸಮಾನ ವ್ಯಾಪ್ತಿಯವು ಎಂಬ ಮಾತನ್ನು ಸರಳವಾಗಿ ಒಪ್ಪಿಕೊಂಡಿರುವ ಆಧುನಿಕ ಸಾಹಿತ್ಯಿಕರಲ್ಲಿ ಟಿ. ಎಸ್. ಎಲಿಯೆಟ್ ಮಹಾಶಯನು ಪ್ರಮುಖ.

"We can see a religion as the whole way of life of a people from birth to the grave, from morning and night and even to sleep and that way of life has also its culture...."

ಎಂಬ ಮಾತುಗಳಲ್ಲಿ ಎಲಿಯಟ್‌ನು, ಭಾರತೀಯ ಪುರಾತನ ಪರಂಪರೆಯ ಮನು ಪ್ರಣೀತ 'ಮಾನವ ಧರ್ಮ'ದ ಲಕ್ಷಣವನ್ನು ಪರ್ಯಾಯವಾಗಿ ಸೂಚಿಸಿದ್ದಾನೆ. ಧರ್ಮವು ಒಂದು ಜನಗಣದ ಸಮಗ್ರಜೀವನ ರೀತಿಯನ್ನು ವ್ಯಾಪಿಸಿರುತ್ತದೆ; ವ್ಯಾಪಿಸಿರಲಿಕ್ಕೇಬೇಕು. ಆದರೆ, ಪ್ರಚಲಿತ ಪ್ರಭಾವಶಾಲೀ ಧರ್ಮಗಳಲ್ಲಿ ಯಾವ ಧರ್ಮಪಂಥವೂ ಎಲಿಯಟ್‌ನು ಹೇಳಿರುವ ಲಕ್ಷಣಕ್ಕೆ ಸರಿಹೋಗುವುದಿಲ್ಲ. ಎಲಿಯಟ್‌ನು ಜನ್ಮದಿಂದ ಅಮೇರಿಕೆಯವ, ನಾಗರಿಕನೆನಿಸಿ, ರಾಜಕವಿಯೆನಿಸಿದ್ದು (Poet Laurate) ಇಂಗ್ಲಂಡಿನಲ್ಲಿ. ಈ ಕಾರಣದಿಂದ ಇವನು ಎಲ್ಲ ಪಾಶ್ಚಾತ್ಯ ದೇಶಗಳ ಧರ್ಮ ಮತ್ತು ಸಂಸ್ಕೃತಿ ಇವೆರಡನ್ನೂ ಚೆನ್ನಾಗಿ ಬಲ್ಲವನೆಂದು ಗ್ರಹಿಸಬಹುದಾಗಿದೆ. ಆದರೆ, 'Culture'ದ ವ್ಯಾಪಕ ಅರ್ಥವು 'Religion' (Becoming monk or nun) ನಡೆವಳಿಯಲ್ಲಿ ಇದೆ, ಎಂಬ ಈತನ ಗ್ರಹಿಕೆ ಸಮಂಜಸವೇ? ಎಂಬ ಬಲವಾದಸಂದೇಹ ತಲೆಯೆತ್ತುತ್ತದೆ. ಪಾಶ್ಚಾತ್ಯ ಪರಿಭಾಷೆಯ 'Religion' ಇದರಲ್ಲಿ 'ಧರ್ಮ' ಪದದಷ್ಟು ವಿಶಾಲಾರ್ಥವಿಲ್ಲ.

ಆದರೆ, Religion ಪದಕ್ಕೆ ಇರುವ ಪ್ರಚಲಿತ ಅರ್ಥವೂ ತೀರ ಸಂಕುಚಿತವಿರುವುದನ್ನು ಎಲಿಯಟ್ಟನು ತಿಳಿಯನೇ? ಎಂಬ ಸೋಜಿಗವುಂಟಾಗುವಂತಿದೆ. ಮಾದರಿಗಾಗಿ ಆಕ್ಸಫರ್ಡ್ ಕೋಶವು ಸೂಚಿಸುವ ಅರ್ಥವು ಗಮನಾರ್ಹವಾಗಿದೆ. 'Religion' ಇದರ ಮೂಲಾರ್ಥದಲ್ಲಿ 'ಬಂಧನ' (Binding) ಸೂಚಕ ಭಾವವಿದೆ. ಈ 'ಬಂಧನ' ಎಂದರೆ ಭವಬಂಧನವೇ ಸರಿ. ಭವದ ಬಂಧನ ಕಡಿದು ಒಗೆಯಲು ಕ್ರೈಸ್ತ ಸಂಪ್ರದಾಯವು ಕಲ್ಪಿಸಿರುವ ನಡೆವಳಿ-ನುಡಿವಳಿಗಳು ಐಹಿಕ ಜೀವನಕ್ಕೆ ಪೋಷಕ, ಪೂರಕ ಆಗಿಲ್ಲ. ಪ್ರತಿಯಾಗಿ ಈ ಬಾಳು ಹಾಳು, ಇದು ಒಂದು ಗೋಳು; ಈ ಗೋಳಾಟದಿಂದ ಮುಕ್ತರಾಗಲು ಸನ್ಯಾಸ ಸ್ವೀಕರಿಸಬೇಕು- ಎಂದು ಬೋಧಿಸುವ ಈ ಕ್ರೈಸ್ತಪಂಥಕ್ಕೆ ಸುಸಂಗತವಾದ ಸಂಸ್ಕೃತಿಯು ಸಹ ಕ್ರೈಸ್ತಧರ್ಮದಂತೆ ಏಕಾಂಗಿಯಾಗಿಯೇ ಇರಬಲ್ಲುದಷ್ಟೇ? ಎಲಿಯಟ್‌ನು ಮೇಧಾವಿ. ಮೇಲಾಗಿ ಮಹಾಕವಿ ಎಂಬ ಖ್ಯಾತಿ ಬೇರೆ! ಇಂತಹರು 'ಮೃತ್ಯು' ಸಂಕೇತ 'ಶಿಲುಬೆ' ಪೂಜಕರ ಕ್ರೈಸ್ತಪಂಥವನ್ನು ನುಣ್ಣನೆಯ ಬಣ್ಣದ ಭಾಷೆಯಿಂದ ಬಣ್ಣಿಸಿ, ಈ ಕ್ರೈಸ್ತಪಂಥವು ಒಂದು ಪರಿಪೂರ್ಣ, ನಿರ್ದುಷ್ಟಧರ್ಮ ಎಂಬ ನಂಬಿಕೆಯನ್ನು ಜನಸಾಮಾನ್ಯರಲ್ಲಿ ಹೆಚ್ಚಿಸಲು ಪ್ರಯತ್ನಿಸಿದ್ದಾರೆ.

ಆದರೆ, ಪಾಶ್ಚಾತ್ಯ ಪ್ರತಿಭಾಶಾಲೀ ವಿದ್ವಾಂಸರು ಅನೇಕರು ಸತ್ಯಪಕ್ಷಪಾತಿಗಳಾಗಿ ಕಾಲಕಾಲಕ್ಕೆ ಕ್ರೈಸ್ತ ಪಂಥೀಯ ಏಕಾಂತಿಕ ಬೋಧನೆಗಳಿಂದ ಸಮಾಜದ ಮೇಲೆ ಆಗುತ್ತ ಬಂದಿರುವ ದುಷ್ಪರಿಣಾಮಗಳನ್ನು ಬಯಲಿಗೆಳೆಯುತ್ತ ಬಂದಿದ್ದಾರೆ. ಕ್ರಿಸ್ತನು ಪ್ರವಾದಿ, ಅವನಿಗಾದ 'Revelation' ತ್ರಿಕಾಲಾಬಾಧಿತ ಸತ್ಯ ಎಂದು ನಂಬಿಸುವಲ್ಲಿ, ಮಾನವನಲ್ಲಿರುವ ತಿಳಿಬೆಳಕಿನ ಅವಜ್ಞೆಯಾಗುತ್ತದೆ. ಮಾನವ ಸಂಸ್ಕೃತಿಯ ಪ್ರಗತಿಯ ದೃಷ್ಟಿಯಿಂದ, ಈ ಕ್ರೈಸ್ತ ಪಂಥೀಯ ಮೋಕ್ಷಕಾಮೀ ಧರ್ಮಬೋಧನೆ ಅಸಮರ್ಪಕ ಹಾಗೂ ದೋಷಪೂರ್ಣವೆಂದು ಪಾಶ್ಚಾತ್ಯ ವಿದ್ವಾಂಸರೇ ಸಾರಿದ್ದಾರೆ. ಮಾನವಪ್ರಾಣಿಗೆ ಶ್ರದ್ಧೆ ಬೇಕು, ಧರ್ಮವೂ ಬೇಕು. ಆದರೆ, ಈ ಕ್ರೈಸ್ತಪಂಥದ ಮಾದರಿಯ ಪ್ರವಾದಿಗಳಿಂದ ಸ್ಥಾಪಿತ ಧರ್ಮವು ಮಾತ್ರ ಅನುಸರಣ ಯೋಗ್ಯವಲ್ಲ - ಎಂಬ ಅಭಿಪ್ರಾಯವನ್ನು ತಾಳಿದ ಡಾ. ಜೂಲಿಯನ್ ಹಕ್ಸ್ಲೇ, ಧರ್ಮದ ಬಗೆಗಿನ ತಮ್ಮ ವಿಚಾರ ವಿವರಿಸುವುದಕ್ಕಾಗಿಯೇ 'Religion without Revelation' ಎಂಬ ಗ್ರಂಥವನ್ನು ಬರೆದಿದ್ದಾರೆ. ಮಾನವ ಸಂಸ್ಕೃತಿಯನ್ನು ಕುರಿತು ವಿಚಾರಿಸುವಾಗ ಧರ್ಮದ ವಿಚಾರಮಾಡುವುದೂ ಅನಿವಾರ್ಯ. ಆರ್ನಾಲ್ಡ್ ಮತ್ತು ಪೋವಿಸರ ವಿಚಾರಗಳಿಗಿಂತ ಈಲಿಯಟ್‌ನ ವಿಚಾರಗಳು ಹೆಚ್ಚು ಸಮಂಜಸವೆನಿಸುತ್ತವೆ. ಇವನು ಮಾನವ ಸಂಸ್ಕೃತಿಗೆ ಸಮಾನ ವ್ಯಾಪ್ತಿಯ ಧರ್ಮವು ತನಗೆ ಅಭಿಪ್ರೇತವಿದೆ ಎಂಬುದನ್ನು ಇನ್ನಷ್ಟು ವಿವರವಾಗಿ ವಿಶದಪಡಿಸಿದ್ದರೆ ಚೆನ್ನಾಗಿತ್ತು! ಸಂಸ್ಕೃತಿ ಎಂಬ ಮಾತು, ಆಧುನಿಕ ಅರ್ಥದಲ್ಲಿ ಪ್ರಚಲಿತವಾದದ್ದು ತೀರ ಇತ್ತೀಚೆಗೆ. Religion, ಧರ್ಮ ಈ ಪದಗಳು ಕ್ರಿಸ್ತಪೂರ್ವ ಕಾಲದಿಂದಲೂ ಉಂಟು!

ಆದರೆ, ಇತ್ತೀಚೆಗೆ Religion - ಧರ್ಮ ಈ ಪದಗಳು ತಮ್ಮ ಮೊದಲಿನ ಪ್ರತಿಷ್ಠೆಯನ್ನು ಕಳೆದುಕೊಂಡಿವೆ. 'ಧರ್ಮ' ಎಂಬ ಹೆಸರಿನಲ್ಲಿ, ರಾತ್ರಸಮಯಾಚಾರಗಳ ಫಲವಾಗಿ, ಪ್ರತಿಕ್ರಿಯಾ ಸ್ವರೂಪದಲ್ಲಿ ಇದು ಸ್ತ್ರೀ-ದ್ವೇಷದ ನಡೆವಳಿಯಾಗಿ ಪರಿಣಮಿಸಿದೆ. ಇಂತಹ ಹಿನ್ನೆಲೆಯ ಕ್ರೈಸ್ತಪಂಥೀಯ ಧರ್ಮವಾಗಲಿ ಇಂದಿನ ಇದು, ಮಾನವ ಸಂಸ್ಕೃತಿಗೆ ಸಮಾನ ವ್ಯಾಪ್ತಿಯದು, ಸಮಾನ ಯೋಗ್ಯತೆಯವು, ಎಂಬ ಆಭಾಸ ನಿರ್ಮಿಸುವ ಪೌರಾತ್ಯ ಪಾಶ್ಚಾತ್ಯರ ಪ್ರಯತ್ನಗಳು ಶ್ಲಾಘ್ಯವೆ? ಎಂಬ ಪ್ರಶ್ನೆ ಏಳುವುದು ಸಹಜ.

ಭಾರತೀಯ ಪುರಾತನ ಪರಂಪರೆಯ 'ಪ್ರಕಾಶ' ತತ್ವಪೂಜಕರ ಮಾನವ ಧರ್ಮವು ಮರೆತು ಹೋಗಿ, 'ವಿಶಿಷ್ಟ'ದ ಆರಾಧಕ ಮೋಕ್ಷಕಾಮೀ ಮತ-ಪಂಥಗಳು ಬೆಳೆದು ನಿಂತಿರುವುದೇ ಇಂದಿನ ಪ್ರಪಂಚದ ಏನೆಲ್ಲ ಅನವಸ್ಥೆಯ ಮುಖ್ಯ ಕಾರಣ. ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ 'ಮಾನವ ಧರ್ಮ' ಮತ್ತು 'ಆತ್ಮಸಂಸ್ಕೃತಿಯ ಶಿಲ್ಪ' ಈ ವಿಚಾರಗಳೆರಡೂ ವೇದಕಾಲದಷ್ಟು ಪುರಾತನವೆಂದು ಕಾಣುತ್ತದೆ. ಈ ವಿಚಾರವು, ಭಾಷೆ ಮತ್ತು ಸಂಸ್ಕೃತಿ ಇವೆರಡರೊಳಗಿನ ಅಂತಃಸಂಗತಿಯನ್ನು ಅರಿಯುವ ಮೂಲಕ ದೃಢಪಡುತ್ತದೆ. ಇಲ್ಲಿ ಒಂದು ಸೂಕ್ಷ್ಮ ಪ್ರಶ್ನೆ ತಲೆಯೆತ್ತುತ್ತದೆ : ಧರ್ಮ ಮತ್ತು ಸಂಸ್ಕೃತಿ ಇವೆರಡೂ ಜೀವನದಷ್ಟು ವಿಶಾಲ ಎಂಬಲ್ಲಿ ಇವು ಸಮಾನ ವ್ಯಾಪ್ತಿಯವಾದುವು. ಆದರೆ, ಇವೆರಡರ ಅರ್ಥದಲ್ಲಿ ಏನಾದರೂ ವ್ಯತ್ಯಾಸವು ಇಲ್ಲದೆಯೆ, ಇವೆರಡೂ ರೂಢಿಯಲ್ಲಿ ಇರಲಾರವು. ಇದು ನಿಜವಿದ್ದರೆ, ಇವೆರಡರ ಅರ್ಥದಲ್ಲಿ ಇರುವ ತಾರತಮ್ಯವೇನು?

'ಧಾರಣಾತ್' ಧರ್ಮಂ ಇತಿ ಆಹುಃ; ಧರ್ಮೋ ಧಾರಯತೇ ಪ್ರಜಾಃ' ಎಂಬ ಈ ಪುರಾತನರ ವಿವರಣೆಯಂತೆ, 'ಧರ್ಮ' ಎಂಬ ಈ ಮಾತಿನಲ್ಲಿ ಕೇವಲ ವೈಯಕ್ತಿಕ ಧರ್ಮವು (Religion) ಅಭಿಪ್ರೇತವಿಲ್ಲ. 'ಪ್ರಜಾ-ಧಾರಣ ಮಾಡುವ' ಎಂದರೆ ಸಮಾಜ : ಸಮಷ್ಟಿಯ ಸ್ಥಿರತೆಗೆ, ಭದ್ರತೆಗೆ ಕಾರಣವಾಗುವ ಸಾಮಾಜಿಕ ಸ್ವರೂಪದ ಈ 'ನಡೆವಳಿ'ಯೇ ಧರ್ಮವಾಯ್ತು; 'ಆಚಾರ ಪ್ರಭವೋ ಧರ್ಮಃ', ಸಮಾಜ : ಸಮಷ್ಟಿಮಾನ್ಯ 'ಸಮಯಾಚಾರವೇ ಧರ್ಮ' ಎಂದು ಅಪಸ್ತಂಭ ಧರ್ಮಸೂತ್ರವೂ ಹೇಳುತ್ತದೆ. 'ಸಂಸ್ಕೃತಿ'ಗೂ ನಡೆವಳಿಯ ಎಂದರೆ ಧರ್ಮದ ಆಧಾರವು ಇರಲೇಬೇಕು. ಆದರು, 'ಸಂಸ್ಕೃತಿ'ಯಲ್ಲಿ ಮಾನವಜೀವನದ ತಾತ್ವಿಕ ಭೂಮಿಕೆಯ ಜ್ಞಾನ, ಈ ಜ್ಞಾನೋಪಾಸನೆಯ ಕ್ಷೇತ್ರವು ಪ್ರಾಧಾನ್ಯದಿಂದ ಒಳಗೊಳ್ಳುತ್ತದೆ. 'ಶಾಸ್ತ್ರಾತ್ ರೂಢಿಃ ಬಲೀಯಸಿ' ಆದಕಾರಣ ಜೀವನದ ಸಂಬಂಧದಿಂದ ದೂರ ಹೋಗದಂತೆ, ಧಾರ್ಮಿಕ ರೂಢಿಗಳನ್ನು ಕಾಲಕಾಲಕ್ಕೆ ಸಂಸ್ಕರಿಸುವ ಆವಶ್ಯಕತೆಯು ಇರುತ್ತದೆ. ಆದಕಾರಣ, ಸಮಾಜಿಕ ಶಿಷ್ಟಾಚಾರಗಳನ್ನು ಜೀವಂತವಾಗಿ ಮೇಲಟ್ಟದಲ್ಲಿ ಉಳಿಸಿಕೊಳ್ಳುವ ಕರ್ತವ್ಯವು ಸಂಸ್ಕಾರವಂತರೆಂಬ ಸುಸಂಸ್ಕೃತರದು. ಮೋಕ್ಷಕಾಮೀ ಸಂಪ್ರದಾಯಗಳು (Religions) ತಮ್ಮದೇ ಆದ ಗುರು-ಪುರೋಹಿತ ವರ್ಗವನ್ನು ಪೋಷಿಸಿಕೊಂಡು ಬಂದಿವೆ. ಅವುಗಳು ಮಠಗಳನ್ನು ಸ್ಥಾಪಿಸಿವೆ. ಆದರೆ ಈ ಪುರೋಹಿತ=ಗುರು ವರ್ಗವು ಜನಸಾಮಾನ್ಯರನ್ನು ಅಜ್ಞಾನದಲ್ಲಿ ಉಳಿಸಿ ಸ್ವಾರ್ಥ ಸಾಧನೆಯಲ್ಲಿ ಮಗ್ನವಾಗಿದೆ. "ಸಂಗಚ್ಛಧ್ವಂ...." ಎಂಬ ಸಾಮಾಜಿಕ ಪ್ರಜ್ಞೆಯ[೧] ವೈಶ್ವಾನರಾಗ್ನಿ (Folkwisdom) ಉಪಾಸಕ ಮಾನವ ಧರ್ಮದಲ್ಲಿ ಗುರು=ಪುರೋಹಿತ ಧಂದೆ ನಷ್ಟವಾಗಿ, ಪ್ರತಿಯೊಬ್ಬ ಸುಸಂಸ್ಕೃತನೂ ಸಾಮಾಜಿಕ ಪ್ರಜ್ಞೆಯನ್ನು ಜಾಗೃತವಾಗಿಸುವ ಹೊಣೆ ಸ್ವೀಕರಿಸಬೇಕಾಗುತ್ತದೆ; ಮೋಕ್ಷಕಾಮಿಗಳಲ್ಲಿ ಸಾಮಾಜಿಕ ಪ್ರಜ್ಞೆ ಬಧಿರವಾಗುತ್ತ, ಪರಲೋಕ ಸಿದ್ಧಿಯ ಹುಚ್ಚು ಹೆಚ್ಚುತ್ತದೆ.

ಟಿಪ್ಪಣಿ

೧. *ಋಗ್ವೇದ ಸಂಹಿತೆ* X ೧೮೧

ಭಾಷೆ ಮತ್ತು ಸಂಸ್ಕೃತಿ

ಭಾಷೆಗಾಗಿ ಭಾಷೆ : ಮೋಜಿನ ಭಾಷೆ. ಇದು ಕಾಲಕ್ಷೇಪದ ಭಾಷೆ; ಸುಖಸಂಕಥಾವಿನೋದದ ಸಾಹಿತ್ಯ. ತಾಯಿಯು ತನ್ನ ಮಗುವನ್ನು ಮುದ್ದಿಸುವಾಗ ಅಕ್ಕರೆಯು ಹೊರಸೂಸಿ ಬಗೆಬಗೆಯ ಶಬ್ದೋಚ್ಚಾರ ಕಿವಿದೆರೆಗೆ ಬರುತ್ತದೆ. ಭಾವಾವಿಷ್ಟ ಅವಸ್ಥೆಯ ಶಬ್ದೋಚ್ಚಾರದ ಹಿಂದೆ ಸಹ, ಆ ಭಾವ ನಿರ್ಭರಸೂಚಕ ಒಂದು 'ವಿಶಿಷ್ಟ ಸಮಯ' (Duration of time), ಪರಿಸರದ ಆಧಾರವು ಇದ್ದೇ ಇರುತ್ತದೆ. ಈ ಬಗೆಯ ಶಬ್ದೋಚ್ಚಾರ, ಇದರ ಗತಿ: ಛಂದ, 'ಅರ್ಥವಿಹೀನ' ಎನ್ನಲು ಬಾರದು. ಇದು 'ಸ್ತಂಭ'ರೂಪ ಸಮಯದ ಆಧಾರದಮೇಲೆ ಬದುಕುವ ಭಾಷೆ. ಸಂಗೀತದಲ್ಲಿ, ತಾಳ-ಲಯದಿಂದಾಗಿ ಕಾಲವು ಗತಿಮಂತ ಎನಿಸಿದರೂ, ಪಲ್ಲವಿಯ ವೃತ್ತಾಕೃತಿಯಲ್ಲಿ ಸ್ತಬ್ಧವಿರುವ ಕಾಲವು ಸ್ತಂಭಕಾಲವೇ ಸರಿ. ಸಾಹಿತ್ಯ, ಸಂಗೀತ, ಕಲಾಕೃತಿಗಳ ಹಿನ್ನೆಲೆಯ ಕಾಲದ ಈ ಆಕೃತಿ ವೈಶಿಷ್ಟ್ಯವನ್ನು ಮರೆತರೆ, ಸಂಸ್ಕೃತಿಯ ಈ ಅಂಗದ ಸ್ವಾರಸ್ಯವು ಸ್ಪಷ್ಟವಾಗುವುದಿಲ್ಲ. ಈ ಸ್ತಂಭ-ವೃತ್ತಾಕೃತಿ ಕಾಲದ ಹಿನ್ನೆಲೆಯ ಕೃತಿಗಳ ಅರ್ಥ, 'ತತ್' ಮಯತೆಯಲ್ಲಿಯೇ ಇದೆ. ಲಯ (O) ಕಾಲವು ಪ್ರಲಯದ ಸೂಚಕವೂ ಇರಬಲ್ಲದು. ಶೂನ್ಯವೂ, ಕ್ರಮಾಂಕಗಳ ಮುಂದೆ ಇದ್ದರೆ. ಅದಕ್ಕೆ ಬೆಲೆ, ಕೇವಲ ಸಾಹಿತ್ಯ, ಸಂಗೀತ, ಕಲಾಧಿಷ್ಠಿತ 'ಸಂಸ್ಕೃತಿ' ಇದು 'ಅಮೃತಂ ಚೈವ ಮೃತ್ಯುಃ' ಉಭಯಸ್ವರೂಪಿಯಾಗಿದೆ. ಪ್ರಜ್ಞೆ (Wisdom) ಯ ಅಭಾವದಲ್ಲಿ, 'ಕಲೆಗಾಗಿ ಕಲೆ' 'ಸಾಹಿತ್ಯಕ್ಕಾಗಿ ಸಾಹಿತ್ಯ' ಎಂಬ ಕೂಗು ಏಳುವಾಗ ಆ ಸಮಾಜದಲ್ಲಿ 'ನನಗಾಗಿ ನಾನು' ಎಂಬೀ ಬಗೆಯ ಮನೋಧರ್ಮವೇ ಪ್ರಭಾವಶಾಲಿಯಾಗತೊಡಗಿರಲಿಕ್ಕೇ ಬೇಕು. ವೃತ್ತಾಕೃತಿಗೆ (ಸ್ತಬ್ಧಕಾಲಕ್ಕೆ) ಮಾರುಹೋಗುವ ಚಟ, ಪರ್ಯಾಯದಿಂದ ಮೃತ್ಯುವಿನ ಉಪಾಸನೆಯೇ ಸರಿ!

ಸಂಸ್ಕೃತಿಗಾಗಿ ಭಾಷೆ : ಸಂಸ್ಕೃತಿಯಲ್ಲಿ 'ಭಾಷೆಗಾಗಿ ಭಾಷೆ'ಗೂ ಒಂದು ಯುಕ್ತಸ್ಥಾನವು ಇರಲೇಬೇಕು. 'ಸಾಹಿತ್ಯ, ಸಂಗೀತ, ಕಲಾವಿಹೀನಃ ಸಾಕ್ಷಾತ್ ಪಶುಃ, ಪುಚ್ಛ-ವಿಷಾಣ ಹೀನಃ' (ಬಾಲ, ಕೊಂಬು ಇಲ್ಲದ ಪಶು, ಈ ಮಾನವ), ಎಂಬ ಸುಭಾಷಿತ ಉಂಟು. ಆದರೆ, ಸಂಸ್ಕೃತಿ ಸಾಹಿತ್ಯ, ಸಂಗೀತ, ಕಲೆಗಳ ಮಟ್ಟಿಗೇ ಸೀಮಿತವಿಲ್ಲ. ಆಚಾರ - ವಿಚಾರಗಳ ಅನುಸಂಧಾನದಲ್ಲಿ, ಆ ಜನದ ಸಂಸ್ಕಾರ, ಸಂಸ್ಕೃತಿಯ ಸ್ವರೂಪವು ತಿಳಿಯುತ್ತದೆ. ಭಾಷೆ ಮೈ ಪಡೆದುದು ಜನರ ನಡೆವಳಿ ಮತ್ತು ನುಡಿವಳಿಗಳ ಹಿನ್ನೆಲೆಯಲ್ಲಿಯೇ. ಭಾಷೆಯ ಮೂಲಕ, ಆ ಭಾಷಿಕರ ಸಂಸ್ಕೃತಿಯ ಇತಿಹಾಸ ಮತ್ತು ಆ ಸಂಸ್ಕೃತಿಯ ಸ್ವರೂಪ ಬೆಳಕಿನಲ್ಲಿ ಬರುವುದು ಇದೇ ಕಾರಣದಿಂದ

ಈ ಮಾನವ ಜೀವನದಲ್ಲಿ, ಏನೊಂದು ಸಮಯ ಪರಿಸರದ ಆಧಾರವಿಲ್ಲದಿರುವ, ಯಾವುದೇ ಬಗೆಯ ಆವಿಷ್ಕಾರ, ಅಥವಾ ಅಭಿವ್ಯಕ್ತಿ ಸಾಧ್ಯವಿಲ್ಲ. ಈ ಸಮಯವು ಎರಡು ಬಗೆಯಾಗಿರಬಲ್ಲುದು. ವೃತ್ತಾಕೃತಿ

ಸ್ತಬ್ಧರೂಪದು ವೃತ್ತಾಕೃತಿಯ ಕಾಲದ ಪ್ರೇರಣೆಯಲ್ಲಿ ನಿನ್ನೆಯೇ 'ಇಂದು' ಆಗುತ್ತದೆ. ಈ ದೃಷ್ಟಿಗೆ 'ನಾಳೆ' ಎಂಬುದೇ ಇಲ್ಲ. 'ಇಂದ'ನ್ನೇ 'ಸ್ಥಿರ' ಬಿಂದುವಾಗಿ ಕಲ್ಪಿಸಿದರೆ ಇದು ನಿತ್ಯ ವರ್ತಮಾನ ಕಾಲ='ಸ್ತಂಭ' ಕಾಲ! ಇವರ ಪಾಲಿಗೆ ನಿನ್ನೆ ನಾಳೆಗಳೆಲ್ಲವೂ ಮಾನವ ಕಲ್ಪಿತ! "ಬಡಿಗಂಡುದಿಲ್ಲ; ಪಾಲನೇ ಕಂಡ' ಬೆಕ್ಕು, ಸ್ತಂಭ ಹೂಜಃ ಈ ಹಿಂದೂ ಜನ! ಆದರೆ, ವೃತ್ತಾಕೃತಿರೂಪ (Circular) ಕಾಲವು, ಮನುಜಪೂರ್ವ ವಾನರ-ನರ(ಳ)ರ ಹಂತದ ವರೆಗೆ ಮಾತ್ರ ಸಾರ್ವ 'ಭೌಮ' ಶಕ್ತಿ! ಪ್ರಜ್ಞೋದಯವಾದ ಮಾನವಜೀವನ : ಸಂಸ್ಕೃತಿಯನ್ನು ಆ ಭಾಷಿಕ ಸಮಷ್ಟಿಯಿಂದ ನಿರ್ಮಿತ 'ಸಮಯ' (ಆಚಾರ) ರೂಪೀ ಇನ್ನೊಂದು ಕಾಲ ತತ್ತ್ವವು ಆಳುತ್ತದೆ. ಇದು ನಿನ್ನೆ-ನಾಳೆಗಳ ರೂಪದ್ದು. ಆದರೆ, ವಿಶ್ವಸ್ಥ ವ್ಯವಸ್ಥೆಗೆ ಸುಸಂಗತವಲ್ಲದೆ ಸಂ-ಕಲ್ಪನೆಗಳು (Creativity Inventions) ಎಂಥ ಮಹಾಪುರುಷರ ಸಂಕಲ್ಪನೆಗಳೇ ಇರಲಿ, ಮಾನವ ಸಂಸ್ಕೃತಿಗೆ ಪೋಷಕವಾಗಿ ಪರಿಣಮಿಸಲಾರವು. 'ಸ್ತಂಭ ವೃತ್ತಾಕೃತಿ'ಯ='ವ್ಯಾಸ' ನಿರ್ಮಿತ 'ಕೃಷ್ಣ' ಕಾಲತತ್ತ್ವ ನಂಬಿ, 'ಹಿಂದುಗಳು' ಪ್ರವಾಹ ಪತಿತ ವೃತ್ತಿಯವರಾಗಿದ್ದಾರೆ. ನಿನ್ನೆ ಇಂದು ಇವೆರಡೂ ಆಗಾಮೀ "ನಾಳೆ"ಯತ್ತ ಅವ್ಯಾಹತವಾಗಿ ಸಾಗಿವೆ-ಇದನ್ನು ಲೆಕ್ಕಿಸದಿರುವಲ್ಲಿ ಆತ್ಮಹಾನಿಯಿದೆ. ಬಾಳಿನಲ್ಲಿ ಅರ್ಥ : ವಿಚಾರ ಹುದುಗಿದೆ. ಇದು, ನಿನ್ನೆ-ನಾಳೆಗಳ ಸಮಯಾಚಾರಗಳ ಸಂದರ್ಭದಿಂದಲೇ ಅರಿಕೆಗೆ ಬರಬಲ್ಲುದು.

ನಿನ್ನೆ ಇಂದು ನಾಳೆ ಈ ಮೂರೂ ಅವಿಚ್ಛಿನ್ನವಾಗಿ ಅವ್ಯಾಹತವಾಗಿ ಸಾಗಿವೆ. ಅನುದಿನವೂ ಬರುವ 'ನಾಳೆ'ಯಲ್ಲಿ ನಿಜವಾಗಿಯೂ ಇರಬೇಕಾದ ನಾಳೆಯ ಅಂಶವು ಅತ್ಯಂತ ಸೂಕ್ಷ್ಮಸ್ವರೂಪದಲ್ಲಿರುವುದು ಶಕ್ಯವಿದ್ದರೂ ಇದು ನಮಗೆ ಕಾಣಲಾರದು. 'ನಿನ್ನೆ'ಯೇ ಬಹ್ವಂಶದಲ್ಲಿ 'ಇಂದು' ಆಗಿ ಪರಿಣಮಿಸುವುದುಂಟು. ನಿನ್ನೆಗಳ ಬಹ್ವಂಶವುಳ್ಳ 'ಇಂದು', ಇದು ನಿಜವಾದ 'ನಾಳೆ'ಯಾಗುವುದಿಲ್ಲ. ಆದರೆ ಇಡಿಯಾಗಿ ಈ ಜೀವನದಲ್ಲಿ ಇಂಥ ವೃತ್ತಾಕೃತಿಯ ಕಾಲವೇ ಉಂಟು ಎಂಬ ಶ್ರದ್ಧೆಯು, ವಾಸ್ತವಅಸ್ತಿತ್ವದ ದರ್ಶನವನ್ನು ಮಾಡಿಸದೆ ಮೋಸಕ್ಕೆ ಕಾರಣವಾಗುತ್ತ ಬಂದಿದೆ! ಕೃತ, ತ್ರೇತ, ದ್ವಾಪರ ಮತ್ತು ಕಲಿ ಎಂಬ ಈ ಚತುರ್ಯುಗದ ಕಾಲಚಕ್ರದ ಕಲ್ಪನೆಯು ಕೇವಲ ಕಾಲ್ಪನಿಕವಿದೆ. ಈ ವೃತ್ತಾಕೃತಿಯ ಕಾಲವನ್ನೇ ಸ್ಥಾಯೀ ಸ್ವರೂಪದಲ್ಲಿ ಕಲ್ಪಿಸುವುದರಿಂದ ಮಾನವ ಜೀವನದ ಇತಿಹಾಸವನ್ನು ಗ್ರಹಿಸಿಕೊಳ್ಳುವಲ್ಲಿ, ಸಂಸ್ಕೃತಿಯನ್ನು ಅರ್ಥೈಸಿಕೊಳ್ಳುವಲ್ಲಿ ಅಡಿಗಡಿಗೂ ಅಸಮರ್ಪಕತೆ ತಲೆದೋರುತ್ತದೆ. ಇಲ್ಲಿ ಇಬ್ಬಗೆಯ ದೋಷಕ್ಕೆ ಅವಕಾಶ ದೊರೆಯುತ್ತದೆ. ಚಕ್ರಾ-ಕಾರದ (Circular) ಕಾಲ ತನ್ನ ಕೇಂದ್ರಸ್ಥ ಅಕ್ಷದ ಸುತ್ತ ತಿರುಗುವುದರಿಂದ ಇದು ಶೂನ್ಯಕಾಲವಾಗುತ್ತದೆ. ಇದು ಜೀವನ ಮಾದರಿ (Type, category) ನಿರ್ಮಿಸಬಲ್ಲದು. Arch type, category ಇವು ಮೂಲ ಮಾದರಿಗಳೇ ಹೊರತು 'ಇತಿ ಹ ಆಸ'ವಲ್ಲ. ಮಹಾಭಾರತವು 'ಇತಿಹಾಸ' ಎಂಬ ಹೆಸರಿಗೆ ಅನರ್ಹವಾಗುತ್ತಿರುವ ಕಾರಣವೇ ಇದು!

ಅಚೇತನ ಜಡಸೃಷ್ಟಿಯಲ್ಲಿ ಆದ ಸಚೇತನ ಸೃಷ್ಟಿಯೂ ಪ್ರಾದುರ್ಭಾವವು, ಅಂದಿನ ಒಂದು ಅನನ್ಯ ಸಾಧಾರಣ 'ನಾಳೆ'ಯನ್ನು ಗಮನಕ್ಕೆ ತರುತ್ತದೆ. ಇತಿಹಾಸ-ಪೂರ್ವ ಕಾಲದಲ್ಲಿ 'ಬೆಂಕಿ' ತಿಳಿದಂದು ಒಂದು ಅನನ್ಯ ಸಾಧಾರಣ 'ನಾಳೆ' ಸಂಭವಿಸಿತೆಂದು ಒಪ್ಪಲೇಬೇಕು. 'ಪ್ರಜ್ಞೆ'ಗೆ 'ಜಾತವೇದ ಅಗ್ನಿ' ಎಂದು ಹೆಸರಿಸಿರುವುದರ ಔಚಿತ್ಯ ಇಲ್ಲಿ ಇದೆ! ಪ್ರಜ್ಞಾಪ್ರಾದುರ್ಭಾವದಿಂದಾಗಿ ನರನು ಬೆಂಕಿಯ ಪ್ರಯೋಜನ ಪಡೆಯುತ್ತಾನೆ! ಮಾನವನೊಳಗಿನ 'ತಿಳಿ'ವನ್ನು 'ಬೆಳಕು' ಎಂದು ಹೆಸರಿಸಿದ ಪ್ರಜ್ಞೆಯಿಂದಾಗಿ, ನಿನ್ನೆ ಇಂದುಗಳಲ್ಲಿ, ಮತ್ತು ಆಗಾಮೀ ನಾಳೆಯಲ್ಲಿ ಇರುವ ಅಂತರವನ್ನು ಗ್ರಹಿಸಿಕೊಳ್ಳಲು ಶಕ್ಯವಾಗಿದೆ. ಚಿಕ್ಕಂದಿನಲ್ಲಿ ನಿನ್ನೆ ನಾಳೆಗಳೊಳಗಿನ ಸೂಕ್ಷ್ಮಅಂತರವು ಬೇಗನೆ ತಿಳಿಯುವುದಿಲ್ಲ. 'ನಿನ್ನೆ, ನಾಳೆ' ಇವು ಸ್ಪಷ್ಟಗೊತ್ತಾಗಲು 'ಇಂದು' ಇದರ ನಿಶ್ಚಿತ-ಪರಿಮಿತಿ ಮೊದಲು ಅರಿಕೆಗೆ ಬರಬೇಕು. ಅಮೂರ್ತಕಾಲ ತತ್ತ್ವವನ್ನು (ಎಂದರೆ ಸ್ಥಳ, ಕಾಲ ಇವೆರಡರ ನಿಕಟ ಸಂಬಂಧವನ್ನು) ಸರಿಯಾಗಿ ಅರಿಯುವುದು ಎಂಥವರಿಗೂ ಕಷ್ಟ. ಆದರೆ ಸ್ಥಳ ಹಾಗೂ ಕಾಲ ಇವೆರಡರೊಳಗಿನ ಅನ್ಯೋನ್ಯಗಳನ್ನು ನಿಶ್ಚಿತವಾಗಿ ಸೂಚಿಸುವ ಭಾಷಿಕ ಸಂಕೇತಗಳನ್ನು ಪ್ರಾಚೀನ ಕಾಲದಿಂದಲೇ ಕಾಣುವಾಗ ಇದನ್ನು, ಅಂದು, ಆ ಪುರಾತನರು ಹೇಗೆ ಗ್ರಹಿಸಿರಬಹುದು ಎಂದು ಆಶ್ಚರ್ಯವಾಗುತ್ತದೆ. 'ಆ' ಮತ್ತು 'ಈ'ಗಳು; ದೂರ ಮತ್ತು

ಸಮೀಪ ಸ್ಥಳಸೂಚಕ ಸರ್ವನಾಮಗಳು. ಆ>ಅದು+ದು=ಅಂದು; ಈ>ಇದು+ದು=ಇಂದು. ಹೀಗೆ ಈ ಕಾಲಸೂಚಕ ಸಂಕೇತವು ಸ್ಥಳವಾಚಕದೊಡನೆ ಅವಿಗಲಿತ ಸಂಬದ್ಧವಿರುವುದನ್ನು ಗಮನಿಸುವುದು ಅವಶ್ಯವಿದೆ. ಈ 'ಸಹಜ' ಪ್ರವೃತ್ತಿ, 'ಸಹಜ' ಪ್ರೇರಣೆ ಮಾನವ ಪಾತಳಿಯ ಮೇಲೆಯೇ ಕಾಣಲು ದೊರೆಯುತ್ತದೆ. ಇದನ್ನು ಇನ್ನುಳಿದ ಭಾಷೆಗಳಲ್ಲಿಯೂ ಕಾಣಬಹುದು.

ಮಾನವ ಜೀವನವು ಅರ್ಥವನ್ನು ಒಳಗೊಂಡಿದೆ. ಮೂಲದಲ್ಲೇ 'ಅರ್ಥ' ವಿಚಾರವು ಇಲ್ಲಧಿದ್ದರೆ ಈ ಮನುಜರಿಗೆ ಆ ಅರ್ಥವನ್ನು ಗ್ರಹಿಸಿಕೊಳ್ಳಲು ಹೇಗೆ ಸಾಧ್ಯ? ಹಂತ-ಹಂತವಾಗಿ ಅರ್ಧವು ತಿಳಿಯುತ್ತದೆ. ಈ ಹಂತ, ಕ್ರಮ ಭಾಷೆಯಲ್ಲಿಯೂ ಇದೆ. ಪ್ರಜ್ಞಾಪ್ರಾದುರ್ಭಾವವನ್ನು ಪುರಾತನರು 'ಪ್ರಕಾಶ ತತ್ತ್ವ'ವೆಂದು ಬಗೆದಿದ್ದರು. ಅರ್ಥದ ಮೂಲಕ ಸಂದೇಹ ರೂಪೀ 'ಕತ್ತಲು' ದೂರವಾಗುತ್ತದೆ. ಈ ಅರ್ಥ, ಪ್ರಜ್ಞಾವಿವೇಕದ ಫಲ. ಆದಕಾರಣ, ಬಾಳಿನೊಳಗಿನ, ಸ್ಥಲ-ಕಾಲಗಳ ಸಂದರ್ಭದ ಆಗು-ಹೋಗುಗಳ 'ಅರ್ಥ' ಗೋಚರವಾಗುವ ಪ್ರಜ್ಞೆಯನ್ನು ಜೀವನದಲ್ಲಿ ಪ್ರಕಾಶತತ್ತ್ವದ ಪಾತಳಿಯ ಮೇಲಿದೆಯೆಂದು ಪುರಾತನ ಕಾಲದಿಂದಲೇ ತಿಳಿಯಲಾಗಿದೆ. ಉದಾ: ಬೆಳ್>ಬೆಳ್ಳಿ; ಇದು ಭೌತ ಪಾತಳಿಯ ಮೇಲಿನ ಮೂರ್ತ ಪದಾರ್ಥ; ಈ 'ಬೆಳಕು'- ಈ 'ದೀಪ'- ಇದೂ ಭೌತಪಾತಳಿಯದೇ. ಆದರೆ, ಅಂತರಂಗದ ಸಂಶಯವನ್ನು ಕಳೆಯುವ ತಿಳಿ(ವಿನ) 'ಬೆಳಕು', ಭೌತ (ಕಣ್ಣಿಗೆ ಕಾಣುವ) ಬೆಳಕಲ್ಲ, ಕಣ್ಣಿಗೆ ಕಾಣುವ 'ಜ್ಞಾತ' ಬೆಳಕಿನ ಹೋಲಿಕೆಯಿಂದಾಗಿ ತಿಳಿದ, ತಾತ್ತ್ವಿಕ ಸ್ವರೂಪದ ಬೆಳಕಿದು. ದೀಪದ ಬೆಳಕಿಗೂ ಈ ತಿಳಿ(ವಿನ) ಬೆಳಕಿಗೂ ಏನೂ ಸಂಬಂಧವಿಲ್ಲ. ಈ 'ತಿಳಿ-ಬೆಳಕು' ಇಂದ್ರಿಯ ಪಾತಳಿಯ ಆಗಿನದು; ಈ ತಿಳಿ ಬೆಳಕಿನ ಮೂಲಕ ಭೂಮಿಯ ಮೇಲಿನ ಬೆಳಕು ಆದಕಾರಣ, ಇದು Super organic ಜ್ಞಾನದ ಪಾತಳಿ.

ಮಾನವನಿಗೆ ಈ ಬಗೆಯಲ್ಲಿ ಕೆಲವೊಂದು 'ಅರ್ಥ' ಗ್ರಹಿಸಿಕೊಂಡು, ವಿಶ್ವಸ್ಥ ವ್ಯವಸ್ಥೆಯನ್ನು ತಿಳಿದುಕೊಳ್ಳಲು ಸಾಧ್ಯವಾದುದರಿಂದ ಹಲವಾರು ಶಾಸ್ತ್ರಗಳು ಹುಟ್ಟಿವೆ. ಸಾಹಿತ್ಯ, ಸಂಗೀತ ಮುಂತಾದ ಕಲೆಗಳ ವಿಕಾಸವಾಗಿದೆ. ಮೂಲದಲ್ಲಿ ಅಭಿಜಾತ (Genuine) ಭಾಷಾಮಾಧ್ಯಮವು ಲಭ್ಯವಾದುದರಿಂದ ಈ ವಿವಿಧ ಸಾಂಸ್ಕೃತಿಕ ಕ್ಷೇತ್ರಗಳ ಶೋಧನೆ ಸಾಧ್ಯವಾಗಿದೆ. 'ಅರ್ಥ'ದಂತೆ, ಮೂಲ ಭಾಷಾ ಮಾಧ್ಯಮವೂ ಮಾನವ ಕಲ್ಪಿತವಲ್ಲ, ಮಾನವನಿಗೆ ಲಭ್ಯವಾದ ಸಂಗತಿ! ಅರ್ಥವು ಎರಡು ಬಗೆಯದಾಗಿದೆ. ಸಂಕಲ್ಪ-ನಾತ್ಮಕ (Invention) ಮತ್ತು ಸಂಶೋಧನಾತ್ಮಕ (Discovery); ಇದು ವಾಸ್ತವವು (Real). ಸಂಕಲ್ಪಿತದಿಂದ ಭಿನ್ನ, ಈ ಜೀವನದಲ್ಲಿ ತತ್ತ್ವತಃ ನಾಶವಾಗುವುದು ಯಾವುದೂ ಇಲ್ಲ. ನಿಸರ್ಗಸ್ಥ ಶಾಶ್ವತ ತತ್ತ್ವದ ಆಧಾರವಿಲ್ಲದುದು, ಯಾವುದೂ ಬಹುಕಾಲ ಉಳಿಯಲಾರದು. ಈ ವಿಶ್ವಸ್ಥ ಆಶ್ಯಯವನ್ನು, 'ಮಾ-ಪು' ಮಾಡಲು - ತಿಳಿಯಲು, ಪಂಚೇಂದ್ರಿಯಗಳ ನೆರವು ದೊರೆಯುತ್ತ ಬಂದಿದೆ. ಇಂದ್ರಿಯ ಅಥವಾ ಯಾವುದೇ ಬೇರೆ 'ಮಾಧ್ಯಮ' ಇದು ಭೌತಪಾತಳಿ. ಆದರೆ, ಈ ಮಾಧ್ಯಮದ ಮೂಲಕ ಅರಿಕೆಗೆ ಬರುವ ಅರ್ಥ : ಆಶಯ ಇದು ಅಭೌತ, ತಾತ್ತ್ವಿಕಪಾತಳಿ.

ಸಂಕಲ್ಪನಾತ್ಮಕ (Invention) ಮತ್ತು ವಾಸ್ತವ ; ಸಂಶೋಧನಾತ್ಮಕ (Discovery) ಇವೆರಡೂ ಅರ್ಧಗಳ ಬಂಧದಲ್ಲಿ (Structure of texture) ಅಂತರವಿದೆ. ಪ್ರಕಾಶ ಪಾತಳಿಯ ಮೇಲಿನ 'ಅರ್ಧ' ಫಕ್ಕನೆ ಹೊಳೆಯುತ್ತದೆ. ಫಕ್ಕನೆ ಹೊಳೆದು ತಿಳಿಯುವ ಅರ್ಧವು ತರ್ಕಾನುಗಾಮಿ (Logical Continuum) ಅಲ್ಲ. ಆದರೆ, ಶ್ರುತಿ ತರ್ಕಾನುಗಾಮಿಯಾಗಿ ಸಾಗಬಲ್ಲುದು. ವಾಕ್ಪ್ರವಾಹ, ವಾಗ್ಮಿಯನ್ನು ತನ್ನೊಡನೆ ತೇಲಿಸಿಕೊಂಡು ಹೋಗುತ್ತದೆ. ಪ್ರವಹಿಸುವ ಬೆಳಕು (ಅಪ್ಪು ಜ್ಯೋತಿ:) ಬೇರೆ; ಇದು ಸ್ಪರ್ಶಜನ್ಯ ಜ್ಞಾನ; ಮೂರ್ತಾS ಮೂರ್ತ ಎರಡು ಪಾತಳಿಯದು. 'ಫಕ್ಕನೆ' ಮಿಂಚಿ ಮಿನುಗುವ ಬೆಳಕು ಬೇರೆ; ಇದನ್ನು ಪುರಾತನರು 'ಪ್ರಕಾಶ' ಎಂದು ಕರೆದಿದ್ದಾರೆ. 'ಜ್ಯೋತಿ' (ದೀಪ ಅಥವಾ ಚಂದ್ರ) 'ರಾತ್ರಿ'ಯ ಸೂಚಕವಿದೆ! ಪ್ರಕಾಶ=ಹಗಲು!

ಭಾಷೆಯಲ್ಲಿ ಈ ಉಭಯ ವಿಧಗಳೂ ಉಂಟು. 'ಜ್ಯೋತಿಃ ಸ್ವರೂಪ ಭಾಷೆ' ಪುರಾತನ ಚಾಂದ್ರಸಂಪ್ರದಾಯಗಳಿಗೆ ಅಚ್ಚುಮೆಚ್ಚು. 'ಪ್ರಕಾಶರೂಪೀ ಭಾಷೆ' ಸೂರ್ಯಾರಾಧಕರ ವೈಶಿಷ್ಟ್ಯ. ಅಮೇರಿಕೆಯ

ಒಬ್ಬ ತತ್ತ್ವಜ್ಞನು ಇದನ್ನೇ 'Language of Logic and Language of Magic' ಎಂದು ಹೆಸರಿಸಿದ್ದಾನೆ. ಈ 'Magic': ಚಮತ್ಕಾರಜನಕ (ಸಾಹಿತ್ತಿಕ) ಭಾಷೆ 'Nocturnal Language' ಎಂದೂ ಆತ ಹೇಳುತ್ತಾನೆ!- 'Language of magic' ಎಂಬ ಈ ಹೆಸರು, ಇದು ಜಾದು, ಚಮತ್ಕಾರ, ಸಂಭ್ರಮವನ್ನು ಉಂಟುಮಾಡುವ ಭಾಷೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಭಾಷೆ 'ಜಾದೂ' ಮಾಡಬಲ್ಲುದು. ಆದರೆ 'ತರ್ಕ'ದ ಭಾಷೆ ಇದು ಜ್ಞಾನ ಸಾಧನವೇ ಹೊರತು, ಜ್ಞಾನಸ್ವರೂಪವಲ್ಲ; ತರ್ಕವೇ ಜ್ಞಾನವಲ್ಲ! ಯಾತು (Black magic) ಇದು ಜಾದು, ಚಮತ್ಕೃತಿಯಿಂದ ಬೇರೆ; ಗೋಗಾಪಾಶಾ, ರಘುವೀರ ಮುಂತಾದವರು ಲೋಕರಂಜನೆಗಾಗಿ 'ಜಾದು' ಪ್ರಯೋಗ ಮಾಡುತ್ತಾರೆ. ಸಾಹಿತ್ಯದಲ್ಲಿಯೂ ಈ ಪ್ರಕಾರವಿದೆ. ಆದರೆ 'ಯಾತು' ಸ್ವರೂಪ ಕೃತಿ ಅನೈಸರ್ಗಿಕವನ್ನು ನೈಸರ್ಗಿಕವೆಂಬಂತೆ ನಂಬಲುಹಚ್ಚುತ್ತದೆ. ಇದು ಶ್ರದ್ಧೆಯ ವಿಷಯವಾಗುತ್ತದೆ. ಉದಾ : 'ಸೂರ್ಯ-ನಾರಾಯಣ' 'ರಾಮ-ಚಂದ್ರ' ಸೂರ್ಯವಂಶಲಲಾಮ! ಯಾತು ಹಾಗೂ ಜಾದು-ಚಮತ್ಕಾರ ಇದು ಸ್ತಂಭಕಾಲದ ಹಿನ್ನಲೆಯಲ್ಲಿ ರೂಪತಾಳಿಹುದು. ಅಂತೆಯೇ, ಇದು ಸಂಭ್ರಮ-ಸುಷುಪ್ತಿಯನ್ನು ಪ್ರೇರಿಸುವ ಸಾಮರ್ಥ್ಯ ಪಡೆದಿದೆ. ಇದು ಪ್ರಶಸ್ತ ಮಾರ್ಗವಲ್ಲ, ಪ್ರಕಾಶ ತತ್ತ್ವಾಧಿಷ್ಠಿತ ಭಾಷೆ. ಹಗಲಿನ ಜೀವನ ರೀತಿಯನ್ನು ಪ್ರೇರಿಸುವ ಅಂತಃಶಕ್ತಿಯುಳ್ಳುದು. ಸಮಾಜಸೇವೆಯ ಮೂಲಕ ವೈಶ್ವಾನರಾಗ್ನಿಯನ್ನು ಆರಾಧಿಸಬೇಕೆಂಬ ಜೀವನದ ಆದರ್ಶವು ನಮ್ಮ ಪುರಾತನ ಸಂಸ್ಕೃತಿಯಲ್ಲಿ ಇತ್ತು, ಆ ಸಂಸ್ಕೃತಿಯ ಅಸ್ತಿತ್ವಸೂಚಕ ಅವಶೇಷಗಳು ಇಂದಿಗೂ ಉಳಿದು ಬಂದಿರವುದೇ ಇದಕ್ಕೆ ಪ್ರಮಾಣ. ಜಾದು<ಯಾತು ಸ್ವರೂಪ ಭಾಷಿಕ ಶಬ್ದ-ಪ್ರತಿಮಾಪೂಜಕರು, ಮೋಕ್ಷಕಾಮೀ ಸಂಪ್ರದಾಯ (: Religion) ಅನುಸರಿಸುತ್ತಿರುವುದು ನಿಶ್ಚಿತವಿದೆ! ಆದರೆ, ಮನು-ಜತ್ವದ ಪಾತಳಿಯ ಧರ್ಮ : ಸಂಸ್ಕೃತಿ, ಇದು, ಬಂಧು-ರ : ಸ-ರಸ 'ಸತ್ತ್ವ' ತಿರಸ್ಕರಿಸದೆ, ಸಮಷ್ಟಿ : ಸಮಾಜದ ಜಾಗೃತ ಪ್ರಜ್ಞಾಪ್ರೇರಕ 'ಪ್ರಕಾಶ' ತತ್ತ್ವದ ಪ್ರತಿಮಾ ಪೂಜೆಯನ್ನು ಅಪೇಕ್ಷಿಸುತ್ತದೆ.

ಅಭಿಜಾತಭಾಷೆ ಮತ್ತು ಅಭಿಜಾತಸಂಸ್ಕೃತಿ

By the virtue of language man has become Man.
- *Humbolt*

"ಆಹಾರ ನಿದ್ರಾ ಭಯ ಮೈಥುನಂ ಚ। ಸಮಾನಂ ಏತತ್ ಪಶುಭಿಃ ನರಾಣಾಮ್"

ನರನಿಗೆ ಮನುಜತ್ವವು ಪ್ರಾಪ್ತವಾಗಲು ಅಭಿಜಾತ ಭಾಷೆ ಹಾಗೂ ಅಭಿಜಾತ ಸಂಸ್ಕೃತಿಯೇ ಮುಖ್ಯ ಕಾರಣ. 'ನರ' ಮತ್ತು 'ಮನುಜ' ಎಂಬೀ ಸಂಕೇತಗಳಲ್ಲಿರುವ ತಾರ ತಮ್ಯವು ಅಭ್ಯಸನೀಯವಿದೆ. ದೈಹಿಕ ಆಕೃತಿಯ ವಿಕಾಸಕ್ರಮವನ್ನು ಅನುಲಕ್ಷಿಸಿ, ವಾನರ-ನರರ ವರೆಗಿನ ಪ್ರಾಣದೇಹಗಳ ವಿಕಾಸದ ಸಿದ್ಧಾಂತವನ್ನು ಮಂಡಿಸಿದವನು, ಡಾರ್ವಿನ್. ಆದರೆ, ಸೋಜಗವೆಂದರೆ, ಪುರಾತನ ಅಭಿಜಾತ (Genuine) ಭಾಷೆಯಲ್ಲಿ ಡಾರ್ವಿನ್ನನ ಸಿದ್ಧಾಂತವನ್ನು ಹೋಲುವ ನರ (Creature) ಮತ್ತು ಮಾನವ (Man) ಎಂಬ ತಾರತಮ್ಯ ವೇದಕಾಲದಿಂದಲೇ! ಉಳಿದು ಬಂದಿದೆ, ಡಾರ್ವಿನ್ ಶೋಧವು ಭೌತಪಾತಳಿಯದು. ಆದರೆ 'ನರ'(ಳ) ಮತ್ತು 'ಮನು-ಜ' ಈ.ಅಭಿಜಾತ ಪರಿಭಾಷೆಯಲ್ಲಿ ಪ್ರತಿ-ಬಿಂಬಿತವಾಗಿರುವ ಮನುಜ ಸಂಸ್ಕೃತಿಯ ಈ ವಿಕಾಸ ಕ್ರಮವು: ವಾನರ ನರ, 'ಮನು'ಜ (: ಮಾನವ), ಈ ಪರಿಭಾಷೆ ತುಂಬ ಆಶ್ಚರ್ಯಕರವಾಗಿದೆ! ಮೇಲಿನ ಸುಭಾಷಿತಕಾರನ ದೃಷ್ಟಿಯಲ್ಲಿ ನರ(ಳ)ನು, 'ಪುಚ್ಛ - ವಿಷಾಣ' ಪ್ರಾಣಿಗಳ ಹತ್ತಿರದವನು ಆಗಿದ್ದಾನೆ. ಸೋಜಿಗದ ಸಂಗತಿಯೆಂದರೆ ಈ ಪ್ರಾಥಮಿಕ ಹಂತದ ನರರಲ್ಲಿ ಅಂದು ನಮ್ಮ ಪೌಂಸ್ಯಶಕ್ತಿಯ ಪ್ರದರ್ಶನಕ್ಕಾಗಿ ಕೊಂಬು-ಬಾಲಗಳನ್ನು ಧರಿಸುವ ವಾಡಿಕೆ ಪ್ರತಿಷ್ಠಿತವಾಗಿತ್ತು! ಸೈಂಧವ ಸಂಸ್ಕೃತಿಯಲ್ಲಿ ಇಂಥ ಪ್ರತಿಮೆಗಳು ದೊರೆತಿವೆ. ಈ ಕೊಂಬುಗಳಲ್ಲಿಯೂ ಕೋಣನ ಕೊಂಬಿನ ಪ್ರತಿಷ್ಠೆ ವಿಶೇಷವಿತ್ತು, ಎಂದು ಸರ್ ಜಾನ್ ಮಾರ್ಶಲ್‌ನ ವರದಿಯಿಂದ ತಿಳಿಯುತ್ತದೆ! ಜಗತ್ತಿನಲ್ಲಿಯೇ ಅತಿ ಪುರಾತನವೆಂದು ಬಗೆಯಲಾದ ಸುಮೇರ (ಅಕ್ಕಡ) ಸಂಸ್ಕೃತಿಯಲ್ಲಿಯೂ ಈ ರೂಢಿ ಇತ್ತು! ಪುರಾತನ ಸೈಂಧವ ಸಂಸ್ಕೃತಿಯಲ್ಲಿ ಬೆಳಕಿಗೆ ಬಂದಿರುವ ಕೊಂಬು, ಬಾಲ ಧರಿಸಿದ ನರನ ಪ್ರತಿಮೆ ಸುಮೇರು ಭಾಗದಲ್ಲಿಯೂ ದೊರೆತಿದೆ.

ಆದಕಾರಣ, ನಮ್ಮ ಪುರಾಣ ಸಾಹಿತ್ಯದೊಳಗಿನ 'ಶೃಂಗಮುನಿ' ಎಂಬುವನ ಕಥೆ ತೀರ ಕಾಲ್ಪನಿಕವಲ್ಲ. ಋಗ್ವೇದದಲ್ಲಿ 'ವಿಷಾಣಿನ್' ಎಂಬ ಸಾರ್ಥನಾಮದ ಯೋಧರೇ ಇದ್ದುದು ಬೆಳಕಿಗೆ ಬಂದಿದೆ. ಆದಿಯುಗದಲ್ಲಿ ವಾನರಾದಿ ಪಶುಗಳ ಸಂಗಾತಿಯಾಗಿದ್ದ ಈ ನರ, ತಾನೂ ಅವರ ಬಳಗದವನೆಂದೇ ಬಗೆದಿರಲು ಸಾಕು. ಸುಮೇರು ಸಂಸ್ಕೃತಿಯಲ್ಲಿ ದೊರೆತಿರುವ 'ಎಂಕಿಡು' ಎಂಬ ವ್ಯಕ್ತಿಯ ಕಥೆ ಇದಕ್ಕೆ ಸಾಕ್ಷಿ. ಈ ಪ್ರತಿಮೆಗಳು ಕ್ರಿ. ಪೂ. ೫೦೦೦ಕ್ಕೆ ಮುಂಚಿನವು ಎಂದು ತಜ್ಞರು ಗೊತ್ತುಪಡಿಸಿದ್ದಾರೆ. ಸುಮೇರಿನ ಈ 'ಎಂಕಿಡು' ಹೋಲಿಕೆಯ

ಅನೇಕ ಪ್ರತಿಮೆಗಳು ಸಿಂಧೂತೀರದ 'ಪುರ' ಸಂಸ್ಕೃತಿಯ ಅವಶೇಷಗಳಲ್ಲಿಯೂ ಬೆಳಕಿಗೆ ಬಂದಿವೆ. ಈ ಪ್ರತಿಮೆಗೆ ಕೊಂಬು ಮತ್ತು ಬಾಲ ಎರಡೂ ಉಂಟು. ಆದಕಾರಣ, ಇದು ಆದಿನರವರ್ಗದ ಪ್ರತೀಕವೆನ್ನಲು ಅಡ್ಡಿಯಿಲ್ಲ. ಭಾಷೆಯೊಡನೆ ಸಂಸ್ಕೃತಿ ಕಾಣಿಸಿಕೊಂಡಿದೆ. 'ಸಂಸ್ಕೃತಿ' ಎಂಬುದು, ಆಚಾರ-ವಿಚಾರಗಳ ಸಂಬಂಧದಲ್ಲಿ ವ್ಯಕ್ತವಾಗುತ್ತದೆ. ಆಚಾರ, ಇತಿಹಾಸದ ಕಕ್ಷೆಯ ವಿಷಯ. ವಿಚಾರವು ಸಾಂಸ್ಕೃತಿಕ ಕ್ಷೇತ್ರದ (ತತ್ವಜ್ಞಾನ) ವಿಷಯವಾಗುತ್ತದೆ. ಭಾಷೆಯ ಶಬ್ದರೂಪ ಬಾಹ್ಯವಲಯವು 'ಇತಿಹಾಸ' ಸೂಚಕವಿರುವಂತೆ, ಅದರ ಗರ್ಭಿತಾರ್ಥವು(Concept), ಆ ಜೀವನಸಂದರ್ಭದ ಇತಿಹಾಸವನ್ನು ರೂಪಿಸಿದ, ಪ್ರೇರಿಸಿದ ತಾತ್ವಿಕ ಪಾತಳಿಯ ವಾಸ್ತವ ಸ್ವರೂಪವನ್ನು ಗಮನಕ್ಕೆ ತಂದು ಕೊಡುತ್ತದೆ. ಭಾಷೆಯೊಡನೆಯೇ ಸಂಸ್ಕೃತಿ ಕಾಣಿಸಿಕೊಂಡಿದ್ದುದು ನಿಜವಿದ್ದರೆ, ಯಾವುದೊಂದು ಜನಗಣದ ಸಾಂಸ್ಕೃತಿಕ ಇತಿಹಾಸವು ಆ ಜನ-ಭಾಷೆಯಲ್ಲಿ ಪ್ರತಿಬಿಂಬಿತವಾಗಿರಲೇ ಬೇಕು.

ಭಾಷಿಕ ಶಬ್ದಪ್ರತಿಮೆಗಳಿಗೆ ಆಧಾರಭೂತ 'ಸಮಯ'ದ ಆಕೃತಿಯನ್ನು ಗ್ರಹಿಸಿಕೊಳ್ಳಲು ಶಕ್ಯವಾದರೆ, ಇದರ ಆಕೃತಿ ವೈಶಿಷ್ಟ್ಯದಿಂದ ಆ ಸಂಸ್ಕೃತಿಯ ಕಾಲಸ್ವರೂಪ ಮತ್ತು ಮಟ್ಟ ಎರಡನ್ನೂ ನಿಷ್ಕರ್ಷಿಸಲು ಸಾಧ್ಯವಾಗುತ್ತದೆ. ಇಂತಹ ನಿಷ್ಕರ್ಷಕ್ಕೆ ಮಾನವೇತಿಹಾಸದಲ್ಲಿ ವಿಭಿನ್ನ ಸಂಸ್ಕೃತಿಗಳ ಬೆಂಬಲ ದೊರೆಯುತ್ತಿರಬೇಕು. ಉದಾ : ಕೊಂಬು(ಬಾಲ) ಹಚ್ಚಿಕೊಳ್ಳುವ ಆ 'ಸಮಯ' ಪರಿಸರದಲ್ಲಿಯೇ 'ವೃಕ್ಷ'ಪೂಜೆಯ ಅವಶೇಷಗಳು ದೊರೆತಿವೆ! ಪುರಾತನ ಅವಶೇಷಗಳಲ್ಲಿ ದೊರೆತ ಅರಳಿ ಮರಕ್ಕೆ, ಒಂಬತ್ತೇ ಎಲೆಗಳನ್ನು ಚಿತ್ರಿಸಿರುವದರಿಂದ ಇಲ್ಲಿ ಗೂಢಾರ್ಥವು ಅಭಿಪ್ರೇತವಿರಲೇಬೇಕು. ಈ ಮರಕ್ಕೆ, ಎರಡು ಪ್ರಾಣಿಗಳು ಆ-ಲಿಂಗಿಸಿವೆ! ಈ ಅರಳಿಯ ಮರವು ಪಿಪ್ಪಲ ಮತ್ತು ಅಶ್ವತ್ಥ ಎಂಬ ಎರಡೂ ಹೆಸರಿನಿಂದ ಋಗ್ವೇದದಲ್ಲಿ ವರ್ಣಿಸಲ್ಪಟ್ಟಿದೆ!* ಈ ಮರವು ಎರಡು ಸುಪರ್ಣಗಳು ಆ-ಲಿಂಗನದಲ್ಲಿ ಇರುವಂತೆ ವರ್ಣಿತವಿದೆ. ಸಾಯಣರು ಇದನ್ನು 'ಆದಿತ್ಯವೃಕ್ಷ' ಎಂದಿದ್ದಾರೆ.

ಈ ಅಶ್ವ-ತ್ಥವನ್ನು ಸಂತಾನ ಪ್ರಾಪ್ತಿಗಾಗಿ ಪೂಜಿಸುವ ವಾಡಿಕೆ ಇಂದಿಗೂ ಉಳಿದು ಬಂದಿದೆ! ಈ ಕಾರಣದಿಂದ ಈ ಪದ್ಧತಿ ಸೈಂಧವ ಸಂಸ್ಕೃತಿಯಷ್ಟು ಪುರಾತನ ಎಂದು ಹೇಳಲು ಯಾವ ಆತಂಕವೂ ತೋರದು. "ಒಂಬತ್ತೇ ಎಲೆ" ಇರುವ (ಹೆರಿಗೆಯ ಕಾಲಾವಧಿಯ ಸೂಚಕ ಸ್ತ್ರೀ), ಅಂದಿನ ಈ 'ಅಶ್ವತ್ಥ' ಹೆಸರಿನ ಈ ಆದಿಮಾತೆ : ಜಗದಂಬೆಯ ರೂಪದ ಪ್ರತೀಕವಾಗಿರಲಿಕ್ಕೆ ಬೇಕು! ಸ್ತ್ರೀರೂಪೀ ವೃಕ್ಷ, ಬಳಿಕ ಪುಲ್ಲಿಂಗಿಯಾಗುತ್ತದೆ. ವೃಕ್ಷದ ಬದಲು ಸ್ಕಂಭ, (ಸ್ತಂಭ)ದ ಪೂಜೆಯೂ ರೂಢಿಗೆ ಬಂದುದು ವೇದದೊಳಗಿನ ವರ್ಣನೆಗಳಿಂದ ದೃಢಪಡುತ್ತದೆ. ಸ್ತಂಭದೊಳಗಿಂದ ಹೊರಗೆ ಬಂದ ನರಸಿಂಹನನ್ನು, ಅಶ್ವತ್ಥ ನರಸಿಂಹನೆಂದು ಕರೆಯುವ ವಾಡಿಕೆ ಇದೆ! 'ಒಂಬತ್ತೇ' ಎಲೆ: ಬಸುರಿಯ ಪ್ರತೀಕ, ಇದು 'ಸ್ತ್ರೀ'ರೂಪೀ ಮರವಾಯ್ತು. ಆದರೆ 'ಅಶ್ವತ್ಥ' ಇದರೊಳಗಿನ 'ತ್ಥ'(ಸ್ಥಲ) ಇದಕ್ಕೆ ಇದ್ದ ಮೊದಲಿನ ಪ್ರಾಧಾನ್ಯವು ಅಮಾನ್ಯವಾಗಿ, 'ಅಶ್ವ'='ವೃಷಭ'ಕ್ಕೇ (ವರ್ಷಣಶೀಲ, ವೃಷಣಕ್ಕೆ) ಪ್ರಾಧಾನ್ಯ ಬರುತ್ತದೆ; ಆಗ ಈ ಮರವು 'ಪುರಿಶಯ(ನ)' 'ಪುರುಷ'ನ ಪ್ರತೀಕವಾಗುತ್ತದೆ. 'ಮರದಾಗ ಮರಚಕ್ರ ಕಾಯಿ' ಆಗೋ, ಈ 'ವೃಕ್ಷ' ಪುರುಷ ವೃಕ್ಷವಿರಲಾರದು. ಈ 'ಆದಿತ್ಯ' ವೃಕ್ಷವನ್ನು ಕಂನಾಡ ಜಾನಪದರೂ ಬಲ್ಲರು. 'ತಿನ್ನಲಾಗದ ಈ ಹಣ್ಣು ಬಲು ಸಿಹಿ', : 'ಚಂದಪ್ಪ'ನ ಈ ಬಾರೀಕಾಯಿಯ ಗಿಡ ಬದರೀ (ನಾರಾಯಣ) ವೃಕ್ಷ=ಆದಿತ್ಯವೃಕ್ಷ! ಚಂದ್ರನು ಆದಿತ್ಯನೇ? 'ಆದಿತ್ಯ'(ವಾರ), ರವಿ(ವಾರ) ತಾನೇ? ಸೂರ್ಯನಾಗಬಯಸಿದ 'ಕಳ್ಳಚಂದ್ರ'ನ ಗತ್ತುಗಾರಿಕೆಯು ಇಲ್ಲಿ ಬಯಲಿಗೆ ಬರುತ್ತಿದೆ! ಈ ವಿಸಂಗತಿಯಲ್ಲಿ ವೇದಕಾಲೀನ ಆ ಸಾಂಸ್ಕೃತಿಕ ಸ್ಥಿತ್ಯಂತರವು ಪ್ರತಿಬಿಂಬಿತವಾಗಿರಲೇಬೇಕು! ಈ ಸ್ಥಿತ್ಯಂತರಕ್ಕೆ ಇನ್ನೊಂದು ದಿಕ್ಕಿನಿಂದಲೂ ಪುಷ್ಟಿ ದೊರೆಯುತ್ತಿದೆ! ಶಬ್ದಪ್ರತಿಮೆಗಳಲ್ಲಿ ಹುದುಗಿರುವ ಸಾಂಸ್ಕೃತಿಕ ಇತಿಹಾಸದ ಒಂದು ಮಾದರಿ ಇದು.

---

* ಋಗ್ವೇದಸಾರ ನಾಗಪ್ರತಿಮಾ ವಿಚಾರ - ಬೃಹದ್‌ಗ್ರಂಥದಲ್ಲಿ ಈ ವಿಚಾರವು ಸಾಕಷ್ಟು ವಿವರವಾಗಿ ಬಂದಿದೆ. ಅಶ್ವತ್ಥ, ಅರಳಿ, ಆಲ, ಈ ಬಗೆಯ ವೃಕ್ಷಪೂಜೆಯ ಪೂರ್ವೋತ್ತರಗಳ ಸಾಂಕೇತಿಕ ವಿವರಗಳನ್ನು ಗಮನಾರ್ಹವಾಗಿವೆ. ಇದೇ ಸಂಪುಟದ 'ಸಾಂಕೇತಿಕ ಚಿತ್ರಸೂಚಿ' ಭಾಗದಲ್ಲಿ ವೃಕ್ಷಪೂಜೆಯ ವಿಭಿನ್ನ ನೆಲೆಗಳನ್ನು ಚರ್ಚಿಸಿದ್ದಾರೆ. ಅವರ ವಿಚಾರಗಳಿಗೆ ಪೋಷಕ ಪ್ರಮಾಣಗಳು ದೊರೆತಾಗ ಪುನರ್ವ್ಯಾಖ್ಯಾನಕ್ಕೆ ತೊಡಗುತ್ತಾರೆ. ಆ ಅಂಶ ಛಾಯೆ ಇಲ್ಲಿಯೂ ಉಂಟು (ಸಂ)

ಋಗ್ವೇದದಲ್ಲಿ ಸೋಮನಾಮಾಂತರದ ಚಂದ್ರನ ಸ್ತೋತ್ರಗಳಿವೆ. ಸೋಮಸೂಕ್ತಗಳೆಲ್ಲವೂ ಹೆಚ್ಚಾಗಿ ಈ ಚಂದ್ರ ಮಂಡಲದಲ್ಲಿಯೇ ಇರುವಲ್ಲಿ ಔಚಿತ್ಯವಿದೆ. ವೇದದಲ್ಲಿ ಇದು 'ನವ'ಮ ಮಂಡಲವಿರುವಲ್ಲಿ ಇನ್ನೂ ಹೆಚ್ಚಿನ ಸೊಗಸಿದೆ. ಸಿಂಧೂತೀರದ ಚಂದ್ರವೃಕ್ಷಕ್ಕೆ ಒಂಬತ್ತೇ ಎಲೆಗಳು ಉಂಟಷ್ಟೇ! 'ನವ' ವತ್ಸ ಪ್ರಸವ ಸೂಚಕ ತಿಂಗಳು 'ನವಮ!' 'ಸಂ-ವತ್ಸರೋ ವೈ ಪ್ರಜಾಪತಿಃ-ಈ 'ಪ್ರಜಾಪತಿಃ', ಪ್ರಜಾನಿರ್ಮಾಣ ಪ್ರೇರಕ ಸಂವತ್ಸರಕ್ಕೆ ಕಾರಣಶಕ್ತಿ! ಇದು 'ಚಂದ್ರಾ' ಶಕ್ತಿ-ಚಂದ್ರಶಕ್ತಿ! ಇದನ್ನೇ ಆದಿತ್ಯ=ಪುರುಷ ಎಂದು ಹೆಸರಿಸಲಾಗಿದೆ. ಆದಕಾರಣ, 'ಆದಿತ್ಯಾನಾಂ ಅಹಂ ವಿಷ್ಣುಃ' ಎನ್ನುವ 'ಭಗವಂತ' ಕೃಷ್ಣನು ಚಂದ್ರನೇ ಇರಬೇಕಾಯಿತು. ಹೀಗಿದ್ದೂ 'ವಿಷ್ಣು-ಕೃಷ್ಣನ ಅವತಾರ' ಎಂಬ, ರಾಮಚಂದ್ರನನ್ನು ಸೂರ್ಯವಂಶಲಲಾಮ ಎಂದು ನಂಬಿಸುವ ಪ್ರಯತ್ನ ಶ್ಲಾಘ್ಯವೇ? ಎಂಬ ಪ್ರಶ್ನೆ ಏಳುತ್ತದೆ. ಇದು ಹಾಗಿರಲಿ, ಚಂದ್ರನನ್ನು ಆದಿತ್ಯನನ್ನಾಗಿ ಮಾರ್ಪಡಿಸಿ, ಅಥವಾ ಸೂರ್ಯನನ್ನು ಚಂದ್ರನ ಮಟ್ಟಕ್ಕೆ ತಂದು, ಸೌರ ಸಂಪ್ರದಾಯವನ್ನು ಇಂದು ಬೆಲೆಗೇಡಾಗಿಸಿದವರು ಯಾರು? ಇದು ಸ್ಪಷ್ಟವೇ ಇದೆ. ವಿಷ್ಣು-ಕೃಷ್ಣ-ನಾರಾಯಣೋಪಾಸಕರ ಸಂಪ್ರದಾಯವೇ, 'ರಾಮ' ಹೆಸರಿನ ಚಂದ್ರನನ್ನು 'ಸೂರ್ಯ'ವಂಶದ ಕೇತುವನ್ನಾಗಿಸಬೇಕಷ್ಟೆ! ಆದರೆ, ಚಂದ್ರನನ್ನು (ರಾತ್ರಿ) ಸೂರ್ಯನನ್ನಾಗಿ ಮಾಡಿರುವ ಈ ಸಂಪ್ರದಾಯದ ಪುರಾತನರಿಂದ ಮಾನವಕೋಟಿಗೆ ಆಗಿರುವ ಅನ್ಯಾಯವು ಎಷ್ಟು ಭಯಂಕರ! ಚಂದ್ರನೇ, ಸೂರ್ಯ ಎಂದಲ್ಲಿ ಇರುಳು ಮತ್ತು ಹಗಲು-ಇವೆರಡರೊಳಗಿನ ತಾರತಮ್ಯ ನಷ್ಟವಾಗಿದೆ. ಮಾನವ ಜೀವನ ಹಾಗು ಸಂಸ್ಕೃತಿಯನ್ನು ಬೆಲೆಗೇಡಾಗಿಸಿ ಜನವನ್ನು ಅನಾಚಾರ, ಭ್ರಷ್ಟಾಚಾರಗಳ ದಾರಿಗೆ ತಳ್ಳಿದೆ, ಎಂದರೆ 'ಕಲಿಯುಗ'ದ ಕಡೆಗೆ ತಿರುಗಿಸಿರುವ ಈ ಕೃತ್ಯಕ್ಕೆ ಮೋಕ್ಷಕಾಮೀ ಸನ್ಯಾಸ ಧರ್ಮದ ಸಂಪ್ರದಾಯಗಳೇ ಕಾರಣವೆಂದು, ಯುಗಚಕ್ರ ಕ್ರಮದ ಮೂಲಕವೂ ಹೊರಪಡುತ್ತಿದೆ.

ಭಾಷೆಯೊಡನೆ ಸಂಸ್ಕೃತಿಯು ಆರಂಭವಾಗಿದೆ. ಭಾಷೆಯಲ್ಲಿ ಆ ಭಾಷಿಕರ ಪ್ರಜ್ಞೆ (Awareness) ಏಕಾತ್ಮಕವಾಗಿ ಬೆರೆತುಕೊಂಡಿದೆ. ಇದರ ಮೂಲಕವಾಗಿ ವಸ್ತ್ರಪೂರ್ವ, ವಸತಿಪೂರ್ವ, ಭಾಷಾಪೂರ್ವ 'ನರ' ವರ್ಗದ ಜೀವನರೀತಿಯೂ ಈ ಭಾಷಿಕ ಪ್ರತಿಮೆಗಳಲ್ಲಿ ಪ್ರತಿಬಿಂಬಿತವಾಗಿರುವುದು ಸಾಧ್ಯವಿದೆ. ಕೊಂಬು, ಬಾಲಹಚ್ಚಿಕೊಂಡ ಸುಮೇರಿನತ್ತಣ ಎಂಕಿಡು ಎಂಬುವನ ಉದಾಹರಣೆ ಇದಕ್ಕೆ ಪ್ರಮಾಣ. ಸುಮೇರಿನ ಎಂಕಿಡು ಕಥೆ, ಭಾರತದ ಶೃಂಗಮುನಿಯ ಕಥೆಯನ್ನು ಹೋಲುತ್ತದೆ! ಸುಮೇರಿನ 'ಎಂಕಿಡು' ಸಾಮಾಜಿಕ ಪ್ರಜ್ಞೆಯಿಂದಾಗಿ ಮನುಜತ್ವದ ಮಾರ್ಗದಲ್ಲಿ ಹೊರಟಿದ್ದಾನೆ. ಆದರೆ ಸುಮೇರಿನ 'ಎಂಕಿಡು' ಶೃಂಗಿಯ ಕಥೆಯನ್ನೇ ಒಪ್ಪಹಾಕಿ ವರ್ಣರಂಜಿತವಾಗಿಸಿ, ಆ ಪಾಶುಪತ (ಪರಂಪರೆಯ) ನಡೆವಳಿಯನ್ನು ಎಂದೆಂದಿಗೂ ಉಳಿಸಿಕೊಳ್ಳುವ ಪ್ರಯತ್ನ ನಮ್ಮ 'ಶೃಂಗಿ'ಯಲ್ಲಿ ಕಾಣುತ್ತದೆ! ಆದಿಮಾತಾದೇವಿಯ ಅರ್ಚಕಿಯು ಕರುಣಿಸಿ 'ಎಂಕಿಡು'ವಿಗೆ 'ನರತ್ವ'ದ ಜ್ಞಾನದಾನ ಮಾಡುತ್ತಾಳೆ. ಎಂಕಿಡುವಿಗೆ ತಾನು 'ನರ'ನು ಎಂಬ ಪ್ರಜ್ಞೋದಯವಾಗುವ ಮೊದಲು ಈತನು ಪಶುಗಳ ಸಂಗಾತಿಯಾಗಿ ಜೀವಿಸುತ್ತಿರುತ್ತಾನೆ. ದನಗಳ ಹಿಂಡಿನಲ್ಲಿ, ನೀರು ಕುಡಿಯಲು ಬಂದಾಗ, ಅರ್ಚಕಿಯು ಇವನನ್ನು ಗುರುತಿಸುತ್ತಾಳೆ. ಈ ಅರ್ಚಕಿಯಿಂದ ಪಡೆದ 'ಜ್ಞಾನ'ದೀಕ್ಷೆಯಿಂದಾಗಿ, ಆತನು ಒಂದು ವಾರದವರೆಗೂ 'ತತ್'ಮಯಾನಂದದಲ್ಲಿದ್ದನಂತೆ. ಎಚ್ಚರುವ ಹೊತ್ತಿಗೆ ತನ್ನತನದ ಅರಿವು ಮೂಡಿದ್ದರಿಂದ, ಆತನಿಂದ ಮರಲಿ ಪಶುಗಳ ಸಂಗಾತಿಯಾಗುವ ಇಚ್ಛೆ ತೊಲಗಿತು. ಸುಮೇರಿನ ಎಂಕಿಡು ಹಾಗೂ ಈತನ ನೇತಾರ ಗಿಲ್ಗಿಮೇಶರ ಈ ಕಥೆಯು ಮಾನವೇತಿಹಾಸದ ಪೀಠಿಕಾ ಪ್ರಕರಣದಂತಿದೆ.

ಆದರೆ ವೇದವು ಹೇಳಿರುವ ಕೇಶೀ : ಮುನಿಗಳ ಜೀವನಾದರ್ಶ ನೋಡಿ: "ಅಪ್ಸರಸಾಂ, ಗಂಧರ್ವಾಣಾಂ, ಮೃಗಾಣಾಂ ಚರಣೇ ಚರನ್"[೨] ಎಂಬ ಪಾಶುಪತ ಜೀವನ ರೀತಿಯನ್ನು-"ಮುಕ್ತಸಂಗಃ ಸಮಾಚರೇತ್" ಎಂಬ ಮೇಲ್ಪಂಕ್ತಿಯನ್ನು- ಬಾಳಗುರಿಯಾಗಿರಿಸಿಕೊಳ್ಳಲು 'ಭಗವತ್' ಗೀತೆ ಹೇಳಿದೆ! ಪಾರಲೌಕಿಕ ಸಿದ್ಧಿಯಲ್ಲಿ ಶ್ರದ್ಧೆ ಇರುವ ಈ ಮೋಕ್ಷಕಾಮೀ ಸಂಪ್ರದಾಯಗಳು ಮಾನವ ಸಂಸ್ಕೃತಿಯ ಪ್ರಗತಿಗೆ ಆತಂಕಕಾರಿಯಾಗಿರುವುದು ಕಾಣುತ್ತಿದ್ದರೂ ಇವು ನಾನಾ-ನಾಮಾಂತರಗಳಿಂದ ಇಂದಿಗೂ ಉಳಿದುಬಂದಿರುವುದು ಹೇಗೆ? 'ನಬ್ರೂಯಾತ್

ಸತ್ಯಮಪ್ರಿಯಂ' ಎಂಬ ಬೋಧನೆಯೇ ಇದಕ್ಕೆ ಕಾರಣವಿರಬಹುದೆ? ಮೋಕ್ಷಕಾಮೀ ಕುಮಾರ, ಕುಮಾರಿ ಸಂಪ್ರದಾಯವು ಮೈವೆತ್ತ ಜೀವನರೀತಿಯ ಹಿನ್ನೆಲೆ ಯಾವುದು? ಈ ಪ್ರಶ್ನೆಯ ಉತ್ತರವು, ಅಭಿಜಾತ ಭಾಷೆ ಹಾಗೂ ಈ ಭಾಷೆಯ ಮೂಲಕ ಆ ಭಾಷಿಕರ ಸಂಸ್ಕೃತಿ - ಇವೆರಡರೊಳಗಿನ ಅಂತಃಸಂಗತಿಯಲ್ಲಿಯೇ ಹುದುಗಿದೆ.

ವನ್ಯಪಶುಗಳ ಸಂಗಾತಿಯಾಗಿದ್ದ ವಾನರ ಹಂತದ ನರನಿಗೆ 'ತಾನು ಇನ್ನುಳಿದ ವನ್ಯಪ್ರಾಣಿಗಳಿಂದ ಭಿನ್ನನಾಗಿದ್ದೇನೆ' ಎಂಬ 'ಪ್ರಜ್ಞೆ' (Consciousness of Consciousness ಮತ್ತು Conscience) ಮೂಡಿದ್ದು ಮೊದಲ ಬಾರಿ, ಸ್ತ್ರೀ ಸಂಪರ್ಕದಲ್ಲಿ ಎಂಬುದು ಮೇಲಿನಂಥ ಪುರಾತನ ಪವಾಡ ಕಥಾರೂಪದಿಂದ ಸೂಚಿತವಾಗುತ್ತದೆ. ಎಂಕಿಡುವಿನ ಕಥೆಗೆ, ಭಾರತೀಯ 'ಶೃಂಗಿ', ಮೌನೇಯ ಕೇಶಿ 'ಮುನಿ'ಯ ವರ್ಣನೆಯಿಂದ ಬೆಂಬಲ ದೊರೆಯುತ್ತದೆ. ಸುಮೇರಿನ ಎಂಕಿಡು ಸೃಜನಕ್ರಿಯೆಯ 'ಶೃಂಗಿ'ಯ ಹಂತದಲ್ಲಿಯೇ ಉಳಿಯದೇ, ಗಿಲ್ಗಿಮೇಶನೆಂಬ ದಿವ್ಯನೇತಾರನ ಸಂಗಾತಿಯಾಗಿ, ಈ ಮಾನವಲೋಕದೊಳಗಿನ ಅನ್ಯಾಯಗಳನ್ನು, ಅಜ್ಞಾನದ ಕತ್ತಲೆಯನ್ನು ದೂರಮಾಡುವ ಸಂಕಲ್ಪಬದ್ಧನಾಗಿ ಜೀವನರಂಗದ ಹೋರಟೆಯಲ್ಲಿ ತೊಡಗುತ್ತಾನೆ. ಅಮೃತಸಿದ್ಧಿಯ ಸಲುವಾಗಿ ಹೊರಟ ಗಿಲ್ಗಿಮೇಶನ ಸಂಗಾತಿ 'ಎಂಕಿಡು' ಕರ್ತವ್ಯಕ್ಕಾಗಿ ಪ್ರಾಣಾರ್ಪಣ ಮಾಡಿದನೆಂಬ ಕಥೆಯಿದೆ.* ಭಾರತೀಯ 'ಶೃಂಗಿಮುನಿ' ಪರಂಪರೆಯ ಇತಿಹಾಸ, ಎಂದರೆ ಇದು, ಮೋಕ್ಷಕಾಮೀ ನಿರಂಜನ ಸಿದ್ಧರ, ಅವಧೂತರ, ನಾಥರ, ಯೋಗಿಗಳ ಸಂಪ್ರದಾಯದ ಇತಿಹಾಸವಾಗುತ್ತದೆ. 'ಪ್ರಜ್ಞೋದಯ'ದ ಹಾಗೂ ಅದರ ವಿಕಾಸ-ಸಂಕೋಚದ ಇತಿಹಾಸ, ಎಂದರೇ ಇದು ಆ ಭಾಷಿಕರ ಸಂಸ್ಕೃತಿಯ ಇತಿಹಾಸವಾಗುತ್ತದೆ. ಒಂದು ಏಕಾಯನ=ಅರಣ್ಯಾಯನವಾದರೆ ಇನ್ನೊಂದು, ಲೋಕಾಯನ=ವೈಶ್ವಾನರಾಯಣವಾಗುತ್ತದೆ.

ನರನಿಗೆ, ತನ್ನತನದ ಪ್ರಜ್ಞೋದಯವಾದುದನ್ನು ಸೂಚಿಸುವ ಇನ್ನೂ ಎರಡು, ಮೂರು ಪುರಾತನ ಕಥೆಗಳನ್ನು ಇಲ್ಲಿ ನೆನೆಸಿಕೊಳ್ಳಬಹುದು. ಇವುಗಳಲ್ಲಿ ಎಲ್ಲಕ್ಕಿಂತ ಸುಮೇರಿನ 'ಎಂಕಿ'ಯ ಕತೆ, ಅತಿ ಪುರಾತನದ್ದಾಗಿದೆ. ಭಾಷಾಪೂರ್ವ ಅವಸ್ಥೆಯು, 'ಕತ್ತಲೆಕವಿದ' ಕಾಲವೆಂದು ಈ ಎರಡೂ ಪವಾಡಕಥೆಗಳಲ್ಲಿ ವರ್ಣಿತವಾಗಿದೆ.

> 'At the beginning there was naught save darkness and water
> spirit of night was great mother........'

ಈಜಿಪ್ತಿನ ಕಥೆಯ ಈ ಪ್ರಾರಂಭವು ಸುಮೇರಿನ ಆದಿಮಾತೆ ತೈಮತ್‌ಳ ವರ್ಣನೆಗೂ ಸರಿಹೋಗುತ್ತದೆ. ಸುಮೇರಿನ 'ಎನುಮಾ ಎಲಿಶ್' ಇದು ಪ್ರಪಂಚದಲ್ಲಿಯೇ ಅತಿ ಪುರಾತನಕಾವ್ಯ, ಎಂದು ತಜ್ಞರು ಗೊತ್ತುಪಡಿಸಿದ್ದಾರೆ. ಈ ಕಾವ್ಯದಲ್ಲಿ,

> "When as yet the heavens had not been named on high" and
> "the earth not been called by name below" there existed only
> the primordial oceans Tiamat and Apsu'[೩]

ಋಗ್ವೇದದಲ್ಲಿ 'ತಮಃಅಸೀತ್ ತಮಸಾಗೂಳ್ಹಂ, ಅಗ್ರೇ ಅಪ್ರಕೇತಂ ಸಲಿಲಂ'-ಎಂಬಲ್ಲಿ ಸೃಷ್ಟಿಯ ಪ್ರಾರಂಭದ ಕತ್ತಲೆಯು, ಕತ್ತಲೆಯನ್ನು ಆಲಂಗಿಸಿರುವಾಗಿನ ವರ್ಣನೆಯೇ ಉಂಟು ದಿಕ್ಕಾಲ ಪರಿಸರದ 'ಪ್ರಜ್ಞೆ' ಇಲ್ಲದ 'ಆ-ಲಿಂಗನ' ಸ್ಥಿತಿ,=ಕತ್ತಲೆಯನ್ನು ಕತ್ತಲೆ ಆವರಿಸಿದ ಸ್ಥಿತಿ, ಇವೆರಡೂ ಬೇರೆ ಅಲ್ಲ.

ಆದಿಯುಗದ ಹೆಣ್ಣು-ಗಂಡಿನ ಸ್ವೈರಭೋಗದ ಚಿತ್ರವು ಸುಮೇರಿನ ತೈಮತ್ (ಸ್ತ್ರೀ), ಅಪ್ಸು (ಪುರುಷ) ಇವರಿಬ್ಬರಲ್ಲಿ ಕಾಣದೊರೆಯುತ್ತದೆ. 'ಹಿಬ್ರೂ-ಬೈಬಲ್' ಸಂಪಾದಕ ರಾಬರ್ಟ್ ಗ್ರೇವ್ಸ್ ಇದನ್ನು ಕುರಿತು:

---

* ಅಮೃತಸಿದ್ಧಿಗಾಗಿ ಹೊರಟ ಗಿಲ್ಗಿಮೇಶನ ಕತೆ, ಭಾರತೀಯ ಉತ್ತಂಕ ಕಥೆಯನ್ನು ಕೆಲಮಟ್ಟಿಗೆ ಹೋಲುತ್ತದೆ. ಆದರ ಆ ತುಲನೆ ಇಲ್ಲಿ ಅನಾವಶ್ಯಕ.

"In (the) myth -chaotic co-mingling of two sexes which delays the establishment of.... Social order, like rain pouring down into the sea, which delays the appearance of dry land. Thus male and female principles must be decently separated"

ಎಂದು ಬರೆಯುತ್ತಾನೆ. ಆದರೆ "ವಾಕ್ ಅರ್ಥೌ ಇವ ಸಂಪೃಕ್ತೌ ಜಗತಃ ಪಿತರೌ" ನಿತ್ಯ ಮಿಥುನಯೋಗವಿದು. ಭಾರತೀಯ ಮೋಕ್ಷಕಾಮೀ ಸಂಪ್ರದಾಯಗಳ ಆರಾಧ್ಯ ದೈವತ! ಇದು 'ಕತ್ತಲೆ'ಯ ಮೃತ್ಯುವಿನ ಉಪಾಸನೆ. ಸುಮೇರಿನ ತೈಮತ್ - ಅಪ್ಸುಗಳ ಭೋಗವಿಲಾಸಕ್ಕೆ ಅವರಿಗಾದ ಮಕ್ಕಳೂ ಹೇಸಿಕೊಳ್ಳುವಂತಾಯಿತು. 'ಎಂಕಿ' ಎಂಬುವವನು, ತಂದೆ ಅಪ್ಸುವನ್ನು ಕೊಂದನು. ತೈಮತಳು ಆಗ 'ಕಿಂಗು' ಎಂಬ ತನ್ನ ಮಗನನ್ನೇ ಗಂಡನನ್ನಾಗಿ ಸ್ವೀಕರಿಸಿದಳು! ತೈಮತ್ ಮತ್ತು ಕಿಂಗು ಸೇರಿ ಎಂಕಿಯ ಸೇಡು ತೀರಿಸಿಕೊಳ್ಳುವ ಪ್ರಯತ್ನ ನಡೆಸಿದರು. ಇದು ಎಂಕಿಯ ಮಗ ಮರ್ಡೂಕನಿಗೆ ಗೊತ್ತಾಗಿ ತೈಮತಳನ್ನು ಕೊಲ್ಲುತ್ತಾನೆ.

ಈ ಕಥೆಯ 'ಎಂಕಿ'ಯನ್ನು 'God of wisdom' (ಪ್ರಜ್ಞಾರೂಪ ದೈವತ) ಎಂದು ಸುಮೇರಿಯನ್ನರು ತಿಳಿದಿದ್ದಾರೆ. ಸುಮೇರಿನ ಆದಿ 'ನರ' 'ಎಂಕಿಡು' ಹೆಸರಿನೊಳಗಿನ 'ಎಂಕಿ' ಎಂಬುದೂ ಪ್ರಜ್ಞಾಸೂಚಕವಿರಬೇಕು. ಸುಮೇರಿನಲ್ಲಿ 'ಭೋಗಿ'ಯಾಗಿ ತೈಮತಳು ಸ್ಥಾನಭ್ರಷ್ಟಳಾಗುತ್ತಾಳೆ. ಆದರೆ, ಭಾರತದ ಅಥರ್ವವೇದದಲ್ಲಿ 'ತೈಮಾತ' ಕಾಣುತ್ತಾಳೆ! ನಾಗವಿಷಹರಣ ಮಂತ್ರದಲ್ಲಿ ಸ್ಮರಿಸಿಕೊಳ್ಳಬೇಕೆಂಬ ನಾಗನಾಮಗಳಲ್ಲಿ ತೈಮಾತೆಯೂ ಉಂಟು! 'ಪ್ರಕಾಶ' ತತ್ತ್ವವನ್ನು ತೊರೆದು ಕತ್ತಲೆಯ, ಆದಿತ್ಯನ ಉಪಾಸಕರಾದ ಭಾರತೀಯ ಪರಂಪರೆಯ ಅಂತಃಸ್ವರೂಪ ಸೂಚಕ ಕೃತಿ ಇದು. ಇನ್ನೂ ಒಂದು ಸೋಜಿಗ ಋಗ್ವೇದದ ಅಹಿ : ವೃತ್ರಹಂತಕ ಇಂದ್ರನು, ಸುಮೇರಿನ ಪಿತೃಹಂತಕ ಎಂಕಿಯನ್ನು ೯೯% ಹೋಲುತ್ತಾನೆ. ಇಂದ್ರನು ಆದಿಮಾತೆ ಅದಿತಿ ಮತ್ತು ತ್ವಷ್ಟಾರ ಇವರ ಮಗನೆಂದು ಋಗ್ವೇದ ಹೇಳುತ್ತದೆ. ಭಾರತೀಯ ಪರಂಪರೆಯಲ್ಲಿ ಇಂದ್ರನ ಅಪಮೂಲ್ಯವಾದಂತೆ ಸುಮೇರಿನಲ್ಲಿ ಎಂಕಿಯಬೆಲೆ ತಗ್ಗಿಲ್ಲ! ವಿಷ್ಣುಪಂಥೀಯ ಪುರಾಣಾದಿಗಳಲ್ಲಿ, ರಾಮಾಯಣ ಮಹಾಭಾರತದಲ್ಲಿ ಇಂದ್ರನು ಖಲನಾಯಕ! 'ಶಿಶ್ನೋ ದೇವಾಃ' ಸಂಪ್ರದಾಯದ ಶತ್ರುವಾಗಿರುವ ಇಂದ್ರನು 'ಅಹಲ್ಯಾಜಾರನು=ಘಟಿಂಗನೆಂದು ಕಥೆ ಹುಟ್ಟಿಸಲಾಗಿದೆ. ಈ ತಿರು-ಬೊಬ್ಬೆ, ನಮ್ಮ ಸಂಸ್ಕೃತಿಯಲ್ಲಾದ ತಿರುವುಮುರುವಿನ ಒಂದು ಉತ್ಕೃಷ್ಟ ಮಾದರಿ. ಎಂಕಿಯು 'God of wisdom', ಇರುವಂತೆ ಇಂದ್ರನು 'ಧೀ' ಪ್ರೇರಕ ಸವಿತೃ ದೈವತದ ಪರ್ಯಾಯ! ಆದುದರಿಂದ, ಪ್ರಕಾಶ ತತ್ತ್ವದ ಈ ಇಂದ್ರನೂ ಎಂಕಿಯಂತೆ ಜ್ಞಾನದ ಪ್ರತೀಕನಾಗುತ್ತಾನೆ. ಆದರೆ ಮೋಕ್ಷಕಾಮೀ ಸಂಪ್ರದಾಯವು ಇಂದ್ರನಿಗಿಂತ 'ಉಪೇಂದ್ರ' ಎಂಬ ಬಿರುದಿನ ಆದಿತ್ಯ ವಿಷ್ಣುವೆ ಶ್ರೇಷ್ಠನೆಂದು ಎತ್ತಿಹಿಡಿದಿದೆ! ಈ 'ಅಂತರ್‌ಲಾಗ'ವನ್ನು, ಲೋಕಹೃದಯವು 'ಕೃಷ್ಣ ಕಾರಸ್ಥಾನ' ಎಂದು ಹೆಸರಿಸಿದೆ.

ಮಾನವೇತಿಹಾಸದಲ್ಲಿ ನರರಲ್ಲಿ ಪ್ರಜ್ಞೋದಯವಾದುದನ್ನು ಸೂಚಿಸುವ ಇನ್ನೊಂದು ಕಥೆ, ಬೈಬಲ್ಲಿನ ಆ್ಯಡಂ ಮತ್ತು ಈವ್ಹರದು. ಈ ಕಥೆಯ 'ಜ್ಞಾನ' ವೃಕ್ಷದ ಮೂಲಕ, ಮೋಕ್ಷ 'ಕಾಮಿ'ಗಳ ನಿಜಸ್ವರೂಪ ಬಯಲಿಗೆ ಬರುತ್ತದೆ. ಸ್ತ್ರೀ-ಪುರುಷರ ಲೈಂಗಿಕ ಸಂಪರ್ಕ, ಮತ್ತು ನರರಿಗೆ ಫಕ್ಕನೆ ಉಂಟಾಗುವ 'ಪ್ರಜ್ಞೆ'-ಇವೆರಡರಲ್ಲಿ ಕಾರ್ಯ-ಕಾರಣ ಸಂಬಂಧವನ್ನು ಕಾಣುವ ಈ ಮೋಕ್ಷಕಾಮೀ ಸಂಪ್ರದಾಯಗಳ ಒಲವು ಎಂಥದೆಂಬುದು ಇಲ್ಲಿ ಗೊತ್ತಾಗುತ್ತದೆ. ಇಲ್ಲಿ 'ಲಿಂಗ'ವು 'ಜ್ಞಾನವೃಕ್ಷ'ವಾಗಿ ಕಂಡಿದೆ. ಇದು ಆ ಕತೆ ರಚಿಸಿದ ಆ ವ್ಯಕ್ತಿಯ ಪಕ್ಷಪಾತ ಹೊರತು ಇದು ವಸ್ತುಸ್ಥಿತಿಯಲ್ಲ. ನರವರ್ಗಕ್ಕೂ ಮುಂಚಿನ ಹಂತದ ವಾನರವರ್ಗದ ಸ್ತ್ರೀ-ಪುಂ ಯೋಗದಲ್ಲಿ, 'ಪ್ರಜ್ಞೆ' ತಲೆ ಎತ್ತುವ ಈ ಘಟನೆ ಸಂಭವಿಸಿಲ್ಲ! ಲೈಂಗಿಕ ಸಂಬಂಧಕ್ಕೂ ಜ್ಞಾನಪ್ರಾಪ್ತಿಗೂ ಕಾರ್ಯಕಾರಣ ಸಂಬಂಧವನ್ನು ಕಲ್ಪಿಸಿದುದು ತಪ್ಪು. ಈ ಬಗೆಯ ದೈವತ ಪ್ರತಿಮೆಗಳನ್ನು ನಿರ್ಮಿಸಿ ಅವುಗಳ ಉಪಾಸನೆಯ ಮೂಲಕ ಈ ಮಾನವರು ನರ(ಳ)ರ ಹಂತದಲ್ಲಿ ಉಳಿಯುವಂತೆ ಮಾಡಲು ಮೋಕ್ಷಕಾಮಿಗಳು ಮಾಟ, ತಂತ್ರ, ಮಂತ್ರಗಳ ಪ್ರಯೋಜನ ಪಡೆಯುತ್ತ ಬಂದಿದ್ದಾರೆ. ಆ್ಯಡಂ ಮತ್ತು ಈವ್ಹರ ಕಥೆಯಲ್ಲಿ ಪುರುಷನು ತನ್ನ ಹೆಣ್ಣನ್ನು ತಾನೇ

ಹಡೆದನಂತೆ! ಆ್ಯಡಂನು ತನ್ನ ಪಕ್ಕೆಯ ಎಲುವಿನಿಂದ ಈವ್ಹಳನ್ನು ನಿರ್ಮಿಸಿದನು ಎಂಬ ಗ್ರಹಿಕೆ ಸಂಪೂರ್ಣ ನಿರಾಧಾರ; ಕಾಲ್ಪನಿಕ. ಇದನ್ನು ಸಂಶೋಧಕರು ಸಂದೇಹಿಸಿದ್ದಾರೆ. ಸುಮೇರಿನ ಕಥೆಯ ಆಧಾರದಿಂದ ಇಲ್ಲಿಯ ಕೃತಕತೆ (Puzzling motive) ಬೆಳಕಿಗೆ ಬಂದಿದೆ. 'ಎಲುಬು' ಎಂಬ ಮೂಲಶಬ್ದವು ಆ ಮಾತಿನಲ್ಲಿ ಶ್ಲೇಷಾರ್ಥ ಯುಕ್ತವಿರುವದೇ ಇದಕ್ಕೆ ಕಾರಣ.[೪]

ಮೋಕ್ಷಕಾಮೀ ಸಂಪ್ರದಾಯಗಳು ಉಳಿಸಿಕೊಂಡು ಬಂದಿರುವ ಈ ಬಗೆಯ ಕತೆಗಳಲ್ಲಿ ಆ್ಯಡಂ-ಈವ್ಹರ ಸ್ವರೂಪದ ಕಥೆ ಅತಿಪ್ರಾಚೀನವಲ್ಲ; ಎರಡನ್ ಹಂತದ್ದು; ಅರ್ವಾಚೀನ. ವೇದದಲ್ಲಿ ನಿರ್ದಿಷ್ಟವಿರುವ, ಮಾನವ ಪ್ರಜ್ಞಾವಿಕಾಸಕ್ಕೂ ಮುಂಚಿನ ಹಂತಗಳು ಗಮನಾರ್ಹವಾಗಿವೆ. 'ಅದಿತೇಃ ದಕ್ಷಃ ಅಜಾಯತಃ'[೫] ಇಲ್ಲಿ ಆದಿಮಾತೆ-ತನ್ನ ಗಂಡನಿಗೆ ಜನ್ಮವಿತ್ತಳು ಎಂಬ ಗ್ರಹಿಕೆಯಿದೆ. ಕುಮಾರಿಮಾತೆ (Virgin Mary) ಪುತ್ರ, ಇವನು 'ದಕ್ಷನೇ' ಸರಿ! ಇವಳು ಏಕವೀರಾದೇವಿ ಎಂಬ ಹೆಸರು ಒಂದಕ್ಕಿಂತ ಹೆಚ್ಚು ಬಗೆಯಾದ ಸಾರ್ಥವಿದೆ. ತರುವಾಯ, ದಕ್ಷಾತ್ ಅದಿತಿಃ ಆದಿಪುರುಷನು ತನ್ನ ಸ್ತ್ರೀಯನ್ನು ತಾನೇ ನಿರ್ಮಿಸಿರುತ್ತಾನೆ ಎಂಬ ಕಥೆ, ಋಗ್ವೇದದ ಆದಿಪುರುಷನು, ಆ್ಯಡಂನಂತೆ ತನ್ನ ಸ್ತ್ರೀ 'ವಿರಾಜ'ಳಿಗೆ ತಾನೇ ಜನ್ಮವಿತ್ತನಂತೆ! ಉಪನಿಷತ್ತಿನಲ್ಲಿ 'ಆತ್ಮ'ನು ತನ್ನ ಸ್ತ್ರೀಯನ್ನು ತಾನೇ ಹುಟ್ಟಿಸಿದ ಕಥೆಯುಂಟು. ಈಜಿಪ್ಟಿನಲ್ಲಿ ದೊರೆವ ಪ್ರಮಾಣಗಳಲ್ಲಿ ಸಂಶೋಧಕರಿಗೆ, 'Performing creation by masturbation', ಆದಿತತ್ತ್ವವು ಸ್ವರತಿಯಿಂದ ಸೃಷ್ಟಿಯನ್ನು ನಿರ್ಮಿಸಿದೆ ಎಂಬ ವರ್ಣನೆಯು ದೊರೆತಿದೆ. ಋಗ್ವೇದದೊಳಗಿನ 'ತನೂ'-'ನಪಾತ್' ಎಂಬಲ್ಲಿ (Son of himself) ಆ ಸ್ವರತಿಯೇ ಇಲ್ಲಿಯೂ ಅಭಿಪ್ರೇತವಿಲ್ಲವೋ?

ಆದಿಯಲ್ಲಿ ಸ್ತ್ರೀ (ಮಾತೆ) ಎಂಬ ಶ್ರದ್ಧೆಯೇ ಮೊದಲು ಇರಬೇಕು. 'ಈವ್ಹ' ಆದಿಮಾತೆಯೇ ಇದ್ದಳು. ಆದರೆ, ಪುರುಷಪ್ರಧಾನ ಸಂಸ್ಕೃತಿಯ ಪುನಾರಚನೆಯಲ್ಲಿ ಆ್ಯಡಂನಿಂದ ಈವ್ಹ ಹುಟ್ಟಿದಳೆಂಬ ಕಥೆ ಪ್ರಚಾರಕ್ಕೆ ಬರುತ್ತದೆ. ಮೂಲ 'ಸ್ತ್ರೀ' ವೃಕ್ಷವು ಮುಂದಿನ ಹಂತದಲ್ಲಿ 'ಪುರುಷ'='ಆದಿತ್ಯ' ವೃಕ್ಷವಾದುದನ್ನು ಸಮೀಕ್ಷಿಸಿ ಆಗಿದೆ. ಆದರೆ, ಈ ಮೂರನೆಯ ಹಂತದಲ್ಲಿ, 'ದೇವ'ನೆಂಬ ಮೂರನೆಯ ತತ್ತ್ವವನ್ನು ಗ್ರಹಿಸಲಾಗಿದೆ. 'ಈ ದೇವನಿಂದ ಪುರುಷ-ಸ್ತ್ರೀ-ಸೃಷ್ಟಿಯಾಗಿದೆ,' ಎಂಬ ನಂಬಿಕೆಯು ಕಾಣಿಸಿಕೊಳ್ಳುತ್ತದೆ. ಋಗ್ವೇದದ ಯಮ-ಯಮೀ ಮತ್ತು ಯಜುರ್ವೇದದ 'ಅಂಬಾರುದ್ರಸ್ವಸ್ಸಾ ಮಾತಾರುದ್ರಾಣಾಂ' ಮತ್ತು ಮಾತಾ ಆದಿತ್ಯಾನಾಂ' ಎಂಬ ರುದ್ರ(ದಕ್ಷ)ನ, ಅದಿತಿಯ ಬಳಿಕ ಆದಿತ್ಯನೆಂಬ ವಿಷ್ಣುವಿನ ಮಾತೆ, ಸೋದರಿ, ಅಲ್ಲದೆ ಪತ್ನಿಯೂ ಆಗುತ್ತಾಳೆ! 'ಅದಿತ್ಯೈಃ ವಿಷ್ಣುಪತ್ನ್ಯೈಃ ಚರುಃ, ಎಂದು ಯಜುರ್ವೇದ ಹೇಳುತ್ತದೆ. ಮೋಕ್ಷಾಕಾಮೀ ಸಂಪ್ರದಾಯಗಳ ಉದ್ಗಮ ಕೇಂದ್ರವೇ ಈ ಅದಿತಿ=ಆದಿತ್ಯರು!

ಭಾರತದಂತೆ ಈಜಿಪ್ಟಿನ ಪುರಾತನ ಉಲ್ಲೇಖಗಳಲ್ಲಿ ಇವೆಲ್ಲ ಪ್ರಕಾರಗಳ ನಿರ್ದೇಶಗಳೂ ಉಂಟು. ಆದರೆ, ಇಲ್ಲಿ ತಲೆಯೆತ್ತುವ ಮೌಲಿಕ ಪ್ರಶ್ನೆ: ಜೀವನದಲ್ಲಿ ಅರ್ಥ: ಮೂಲ್ಯ ಉಂಟು, ಎಂಬ ಅನುಭವ, ಶ್ರದ್ಧೆಯ ಅಭಾವದಲ್ಲಿ, ಭಾಷೆಯಾಗಲಿ, ಸಂಸ್ಕೃತಿಯಾಗಲಿ ಮೈದಾಳಿ ಆಕಾರ ಪಡೆಯಲು ಶಕ್ಯವೇ ಇಲ್ಲ! ಆದರೆ, ಯಾವ ಒಂದೂ ಮೋಕ್ಷಕಾಮೀ ಸಂಪ್ರದಾಯದಲ್ಲಿಯೂ ಜೀವನದ ಬಗೆಗೆ ಆಸ್ಥೆ ಇಲ್ಲ. ಇವೆಲ್ಲವೂ, ಮೌನೇಯ ವಿರಕ್ತ ಗುರುಪರಂಪರೆಯಲ್ಲಿ ಅಂಕುರಿಸಿ ಬೆಳೆದು ನಿಂತಿವೆ! ಆದುದರಿಂದ, ಭಾಷೆ ಸೂತಕವೆಂಬ ಶ್ರದ್ಧೆಯ ಸನ್ಯಾಸಮಾರ್ಗೀಯ ಪಂಥಗಳು, ಸಂಸ್ಕೃತಿಯು ಹುಟ್ಟಿದ ಬಳಿಕ ಅದಕ್ಕೆ ಅಂಟಿಕೊಂಡ 'ಬಾಲಗ್ರಹ' ರೋಗವೇ ಈ ಮೋಕ್ಷಕಾಮೀ ಮೃತ್ಯುಪೂಜಕರ ಧರ್ಮ; ಈ ಸಂನ್ಯಾಸ ಪಂಥ, ಎಂದು ಬಗೆಯುವುದು ಅನಿವಾರ್ಯವಾಗುತ್ತಿದೆ. Genuine language and genuine culture these two are gifts ಎಂದು ಹೇಳಿದ ಶ್ರೇಯಸ್ಸು ಮಾನವ ಶಾಸ್ತ್ರಜ್ಞ ಡಾ. ಎ. ಎಲ್. ಕ್ರೋಬರನದು. ಇದು ನಿಜವಿದ್ದರೆ, ಅಭಿಜಾತ (Genuine) ಭಾಷೆಯನ್ನು ಕೃತಕಭಾಷೆಯಿಂದ ಬೇರ್ಪಡಿಸಿ ತಿಳಿಯಲು ಏನಾದರೂ ಒರೆಗಲ್ಲು ಇರಲೇಬೇಕಾಯಿತು. ಆದಿಪುರುಷನು ಶೇಷ : ನಾಗ! ಆದಿಗುರುವೂ ಈತನೆ! ಹೀಗೆ ನಾಗ (: ಚಂದ್ರ)ನೇ ಗುರುಪಟ್ಟಕ್ಕೆ ಬರುವಲ್ಲಿ

'ಕೃತಕ' ಇರಲೇಬೇಕು. ಸರ್ಪವೇ ಸಂತನವೇಷ ಧರಿಸುವಲ್ಲಿ, 'ಧರ್ಮ ಮತ್ತು ಸಂಸ್ಕೃತಿಗಳಿಗೆ ಉಳಿಗಾಲವಿಲ್ಲ' ಎಂಬ ನಿರಾಶೆ ತಲೆದೋರುವ ಶಕ್ಯತೆ ಇದ್ದರೆ ಆದಕ್ಕೆ 'ಕೃತಕ' ಕೃತ್ಯ ಬೆಳಕಿಗೆ ಬರಲೇಬೇಕು. ಪ್ರಜ್ಞೆ(Wisdom)ಯ ಸೂಕ್ಷ್ಮ ಪ್ರಾತಿಭ ದೃಷ್ಟಿಯಿಂದಾಗಿ, ಕೊನೆಯಲ್ಲಿ 'ಬೆಳಕಿಗೇ ಗೆಲುವು; ಹೊರತು ಕತ್ತಲೆಗಲ್ಲ.' ಇಕೊ ನೋಡಿ : ಈ 'ಕೃತಕ' (Black magic); 'ಸತ್ಯಮೇವ ಜಯತೆ, ನಾನೃತಂ' ಎಂದು ಪುರಾತನರೇ ಹೇಳಿದ್ದಾರೆ. ಆದರೆ ಇದನ್ನು 'ಸತ್ಯೇನ ಪಂಥಾಃ ವಿತತೋ ದೇವಯಾನಃ' ಎಂಬಲ್ಲಿ 'ರೇತಸತ್ವಕ್ಕೇ ಗೆಲುವು' ಎಂಥು ತಿದ್ದಿದ್ದೂ ಬೆಳಕಿಗೆ ಬರದೆ ಇಲ್ಲ!

ಭಾಷೆಯು, ಜ್ಞಾನ ಪ್ರಕಾಶದಾಯಕ ಅಂತಃಶಕ್ತಿಯುಳ್ಳುದು

ಕತ್ತಲೆಯನ್ನು ಹೆಚ್ಚಿಸುವ ಮೋಡಿಯ ಮಾಟವನ್ನು (Black Magic) ಮಾಡುವ ಶಕ್ತಿಯೂ ಈ ಭಾಷೆಯಲ್ಲಿದೆ. ಆದರೆ 'ಭಾ (ಪ್ರಕಾಶ)' ಯುಕ್ತ 'ಭಾಷೆ' ಮತ್ತು ಸಂದಿಗ್ಧತೆಯನ್ನು ಹೆಚ್ಚಿಸಿ ಕತ್ತಲನ್ನು ನಿರ್ಮಿಸುವ 'ಆದಿತ್ಯ' ಪುರುಷ ಪೂಜಕರ, ಭಾಷೆ ಇವೆರಡನ್ನೂ ವಿಂಗಡಿಸಿ ಅರಿಯಬಲ್ಲ ಪ್ರಜ್ಞಾ: ಪ್ರಾತಿಭದೃಷ್ಟಿಯ ವರವನ್ನೂ ಈ ಮಾನವನು ಪಡೆದು ಬಂದಿದ್ದಾನೆ. ಪ್ರಜ್ಞಾ-ಜಾಗೃತಿಗೆ ನೆರವಾಗುವ ಬದಲು, 'ಗುಂಗುಂ' ಗಾನದ ಗುಂಗಿನಲ್ಲಿ ತಳ್ಳುವ ಭಾಷೆಯಲ್ಲಿ 'ಕೃತಕ' ಇರಲೇಬೇಕಷ್ಟೆ? ಮಿತಿ ಮೀರಿ, 'ಶ್ಲೇಷ' ವಿರೋಧಾಭಾಸಗಳ ಮೇಲೆ ನಿಂತ ಭಾಷೆ, ಶೇಷ(ನಾಗ) ಸಂಪ್ರದಾಯಯದ ಭಾಷೆಯೇ ಇರಬಲ್ಲದು; ಉದಾ : 'ಭಗವತ್' ಗೀತೆಯ 'ಭಗವಂತ'ನು ತನ್ನ ಭಾಷೆಯಲ್ಲಿ 'ಗುಹ್ಯಾತ್ ಗುಹ್ಯತಮ' ರಹಸ್ಯಾರ್ಥವು ಅಡಗಿದೆ ಎಂದು ತಾನೇ ಒಪ್ಪಿಕೊಂಡಿದ್ದಾನೆ. ಮಹಾತ್ಮಾಜೀಯವರ ಸೂತ್ರದಂತೆ, Secrecy is Sin! ಈ ಗುಹ್ಯತಮ 'ಗುಟ್ಟೆ'ನಲ್ಲಿ ಇರುವ ಗುಹ್ಯಜ್ಞಾನದ ಉಪಾಸನೆಯಲ್ಲಿ ಇರಬಲ್ಲ 'ಪಾಪ'ವೂ ಈ 'ಭಗವತ್' ಸಂಪ್ರದಾಯದಲ್ಲಿ ಇರಬೇಕಾಯ್ತು! ಈ ಗುಹ್ಯ ಜ್ಞಾನ ಬೋಧಕ ಗುರು ಯಾರು? 'ಕೃಷ್ಣ'! ಎಷ್ಟು ಹೃದ್ಯ ಅಂತಃಸಂಗತಿ! ಈ ಕೃಷ್ಣನು ನಾಗಶಯನ ವಿಷ್ಣುವಿನ ಪರ್ಯಾಯ! 'ಭಗವತ್' ತತ್ವದ ಉಪಾಸನೆಯಲ್ಲಿ 'Sin'=ಇಂಪಿನ ಕರ್ಮ ಕತ್ತಲೆ, ಗುಹ್ಯ, 'ಕೃಷ್ಣ' ಭಕ್ತಿ! ಈ ಸಮೀಕರಣವು ಒಳಗೊಂಡಿರುವ ವಾಸ್ತವ ಸತ್ಯವನ್ನು ಬಚ್ಚಿಡಲು ಯಾರಿಂದ ಶಕ್ಯ? 'ಭಗವತ್' ಗೀತೆಯ 'ಭಗವಂತ'ನ ಉಪಾಸನೆ 'ಸ-ರಸ' : 'ಸತ್ವ' ಸಾಕ್ಷಾತ್ಕಾರಕ್ಕೇ ಪ್ರೇರಿಸಬಲ್ಲದು. ಈ ಕಾರಣದಿಂದ ಈ 'ಸತ್ವ' ಅ-ಹಿಂಸೆಯ 'ರಸವರ್ಜ್ಯ' ಸ್ತ್ರೀ-ಸಂಬಂಧ ಬೋಧಿಸೀತು. 'ಕಾಮ' ರಹಿತ 'ಕರ್ಮ' (: ನಿಷ್ಕಾಮ ಕರ್ಮ) ಎಂದರೇನಂತೆ, ಮತ್ತೆ?

ಭಾಷೆಯಲ್ಲಿರುವ, ಅಭಿಜಾತ ಅಂತಃಶಕ್ತಿಯಿಂದಾಗಿ, ಬಾಳಿನಲ್ಲಿ ಈ ಬಗೆಯ 'ಕೃತಕ', ಸುಳ್ಳು ಅಡಗಿ ಉಳಿಯಲು ಶಕ್ಯವಿಲ್ಲ. ಈ ಅಮೋಘ ಅಂತಃಶಕ್ತಿಯ ಭಾಷೆ, ಅದರ ಯೋಜಕನ ಸಾಂಸ್ಕೃತಿಕ ಮಟ್ಟವನ್ನು ಸೂಚಿಸುತ್ತಿರುತ್ತದೆ! ಕವಿಯ-ಕಲಾಕಾರನ-ಕೃತಿಯಲ್ಲಿ ಅವನ ಪ್ರತಿಬಿಂಬವೇ ಒಡಮೂಡಿ ನಿಂತಿರುತ್ತದೆ, ಎಂಬ ಸೂತ್ರವು ಅತಿಶಯೋಕ್ತಿಯಲ್ಲ. ಆದರೆ ಈ 'ಕೃತಕ' : ಮಾಯಿಕತನದ ಸ್ವರೂಪ ಬಯಲಿಗೆ ಬರದಂತೆ ನಾಗ-ಸಂಪ್ರದಾಯದ ಸಾಹಿತ್ಯ ದಕ್ಷತೆ ವಹಿಸಿದೆ. ಆಶಯ ಮತ್ತು ಆಕೃತಿ ಇವೆರಡರ ವಿಮರ್ಶೆಯಲ್ಲಿ, 'ಆಶಯ'ದ ವಿಚಾರಕ್ಕೆ ಅವಕಾಶವಿಲ್ಲ! ಭಾಷೆ ಮತ್ತು ಸಂಸ್ಕೃತಿ ಅಭಿಜಾತ ಮಟ್ಟದ್ದಿದ್ದರೂ ಇವುಗಳ ಪ್ರಭಾವ ಇಂದು ತಗ್ಗಿದೆ. ಕೃತಕ ಭಾಷೆಯ ಮೋಕ್ಷಕಾಮೀ ಸಂಪ್ರದಾಯ ಮತ್ತು ಈ ಸಂಪ್ರದಾಯದ 'ಸಂಸ್ಕೃತಿ' ಎಂದರೆ ಮುಕ್ತಸಂಗೀ ವ್ಯಕ್ತಿವಾದವೇ ವಿಜಯಿಯಾಗಿದೆ. ಇದು ಹೇಗೆ? ಒಂದು ವಾಕ್ಯದಲ್ಲಿ ಇದರ ಉತ್ತರವನ್ನು ಹೇಳಬಹುದಾದರೆ 'ಸೂರ್ಯ'ನು 'ಆದಿತ್ಯ'ನಾಗಿ ಮಾರ್ಪಡುವುದರೊಡನೆ, ಬೆಳಕಿನ ಎಂದರೆ ಅರ್ಥ : ಮೂಲ್ಯಗಳ ಬದಲು ಕತ್ತಲೆಯ ಎಂದರೆ ಮೃತ್ಯುತತ್ವದ ಉಪಾಸನೆಯ, ಈ ತಿರುವು ಮುರುವು ಸಂಭವಿಸಿದೆ! ಮಾನವಧರ್ಮ ಸಂಸ್ಕೃತಿಯು ಮೋಕ್ಷಕಾಮಿಗಳ ಸಂಸ್ಕೃತಿಯಾಗಿ ಪರಿಣಮಿಸಿದೆ. 'ಅವರವರ ಅರ್ಥ ಅವರವರ ಪಾಲಿನ ಸತ್ಯ' ಎಂಬ ವೈಯಕ್ತಿಕ ವೈಶಿಷ್ಟ್ಯದ ವಾದವು ಬೆಳೆದು ನಿಂತಾಗ, ಇಂಥ ಸಾಹಿತ್ಯ ಕೃತಿಗಳಿಂದ ಸಮಾಜಶೈಥಿಲ್ಯಕ್ಕೆ ಆಮಂತ್ರಣ ದೊರೆಯಲೇಬೇಕು.

ತಾತ್ತ್ವಿಕ ಪಾತಳಿಯ ಮೇಲೆ, ಈ ಸಂಘರ್ಷದ ಅರ್ಥವು, ಪ್ರಕಾಶ ಮತ್ತು ಕತ್ತಲೆ ಇವೆರಡರೊಳಗಿನ ಹೋರಾಟ ಎನ್ನಬಹುದು. 'ಸೂರ್ಯ'ನು ಪ್ರಕಾಶದ ಪ್ರತೀಕ ಆದರೆ 'ಆದಿತ್ಯ' ಎಂದೊಡನೆ ಈ ಹೆಸರಿನ ಮುಸುಕಿನಿಂದಾಗಿ, ಬರಿಗಣ್ಣಿನ ಶ್ರೀ ಸಾಮಾನ್ಯರ ಪಾಲಿಗೆ ಸೂರ್ಯನು ಇದ್ದೂ ಇಲ್ಲದಂತಾದನು! ಇದು ಕತ್ತಲೆಯ ವಿಜಯ. ಕೃಷ್ಣಶಕ್ತಿ ಪೂಜಕರ ಗೆಲುವು! 'ಸೂರ್ಯ' ಪ್ರಕಾಶದ ಪ್ರತೀಕ; ನಾಗ=ನಾರಾಯಣ=ಕತ್ತಲೆ. ಆದಕಾರಣ ಸೂರ್ಯನಾರಾಯಣ'= ಕತ್ತಲೆಯ ಕೃಷ್ಣಶಕ್ತಿಯ 'ಕೃತಕ' ಇದು ಎಂದು ಸಿದ್ಧಪಡಿಸಬೇಕಾಗಿಲ್ಲ. 'ಅಹಃ ಚ ಕೃಷ್ಣಂ; ಅಹಃ ಅರ್ಜುನಂ ಚ'[೬] ಎಂಬ ವೇದವಾಕ್ಯದಲ್ಲಿ, ಈ ತಿರುವು ಮುರುವು ಎದ್ದು ಕಾಣುತ್ತಿದೆ! ಅಹಸ್=ಕೃಷ್ಣ ಎಂಬಲ್ಲಿ ಅಹಸ್=ಹಗಲನ್ನು 'ಕೃಷ್ಣ'=ಕತ್ತಲೆ, ರಾತ್ರಿಯನ್ನಾಗಿಸುವ ಸಂಕೇತವನ್ನು ಸಾಯಣರೂ ಕಂಡಿದ್ದಾರೆ! ಆದರೆ, ಭಾಷ್ಯಕಾರನಿಗೆ, ಆ ಕವಿಗೆ ಅಭಿಪ್ರೇತ ಅರ್ಥವನ್ನು ಹೇಳಲೇಬೇಕಾಗುತ್ತದೆ. 'ಸಮಾನಾಧಿಕರಣತ್ವಾತ್' ಕೃಷ್ಣ ವಿಶೇಷಣದಿಂದಾಗಿ ಅಹಸ್ಸಿಗೆ 'ರಾತ್ರಿ' 'ಕತ್ತಲು' ಎಂಬ ಅರ್ಥ ಮಾಡಬೇಕಾದುದನ್ನು ಸಾಯಣ ಬಚ್ಚಿಟ್ಟಿಲ್ಲ! 'ಅರ್ಜುನ' ಸಂಕೇತಕ್ಕೆ ಸೌರತೇಜ; ಪ್ರಕಾಶ, ಶುಭ್ರ ಎಂಬ ಅರ್ಥ. ಈ ಅರ್ಥದಂತೆ, ನಿಜವಾಗಿ ಸೌರತೇಜದ ಪ್ರತೀಕವಾದ, ಅರ್ಜುನ್ನು, 'ರಾತ್ರತತ್ತ್ವದ ಪ್ರತೀಕ' 'ಕೃಷ್ಣ'ನು ಹಿಂಬಾಲಿಸಬೇಕಾಗಿತ್ತು! ನಿಸರ್ಗ ಕ್ರಮದಂತೆ, ಸೂರ್ಯನ (ಅರ್ಜುನನ) ಅನುಯಾಯಿ ಇರಬೇಕಿತ್ತು ಈ ರಾತ್ರಿ-ಚಂದ್ರ (ಕೃಷ್ಣ). ಆದರೆ, ಈ ನೈಸರ್ಗಿಕ ಕ್ರಮವನ್ನು ತಿರುವುಮುರುವಾಗಿಸದಿದ್ದರೆ, 'ಭಗವತ್' ಗೀತೆಯ 'ಭಗ-ವಂತ' ಕೃಷ್ಣೋಪಾಸನೆ ಹಗಲಿನಲ್ಲಿಯೂ ಶಿಷ್ಟಮಾನ್ಯ, ಪ್ರತಿಷ್ಠಿತ ಸಂಪ್ರದಾಯವಾಗಲು ಶಕ್ಯವಿತ್ತೇ?

ಟಿಪ್ಪಣಿಗಳು

೧. *ಋಗ್ವೇದ ಸಂಹಿತೆ* I. ೧೬೪-೨೦
೨. *ಅದೇ* X. ೧೩೬
೩. Dr. Kramer S.N. ; ***Mythologies of the Ancient World***, Editor, Anchor Books N. Y. Page 120.
೪. ***Ibid,*** PP. 102-3
೫. *ಋಗ್ವೇದ ಸಂಹಿತೆ* X ೭೨
೬. *ಮುಂಡಕೋಪನಿಷತ್ತು* ೩.೧.೫, ೬
೭. *ಋಗ್ವೇದ ಸಂಹಿತೆ* VI. ೯.೧

ಭಾಷೆ ಸಂಸ್ಕೃತಿಯನ್ನು ರೂಪಿಸಿರುವ ಕಾಲತತ್ತ್ವದ ಸ್ವರೂಪ

ಭಾರತೀಯ ಪುರಾತನ ಪರಂಪರೆಯಲ್ಲಿ 'ನರ' ಮತ್ತು 'ಮಾನವ' ಎಂಬ ಎರಡು ಸಂಕೇತಗಳು ವೇದಕಾಲದಿಂದಲೂ ದೊರೆಯುತ್ತವೆ. ಈ 'ನರ' ವರ್ಗ ಮತ್ತು 'ಮಾನವ' ವರ್ಗವನ್ನು ರೂಪಿಸಿರುವ ರೂಪಿಸುತ್ತಿರುವ - ಕಾಲತತ್ತ್ವ, ಸಮಾನ ಸ್ವರೂಪದ್ದೇ ಇರಲಾರದು. ಭಗವತ್ ಗೀತೆಯಲ್ಲಿ ಬರುವ ನರ-ನು ಭಗವಂತನ ಭಕ್ತನಾಗಿದ್ದಾನೆ. ಈ ಭಗವಂತನೇ, ಗೀತೆಯಲ್ಲಿ, ತಾನು 'ಕಾಲಃ ಅಸ್ಮಿ' ಎಂದು ಹೇಳಿದ್ದಾನೆ. ಆದಕಾರಣ 'ನರ' ಸಂಸ್ಕೃತಿಯನ್ನು ರೂಪಿಸಿರುವ 'ಕಾಲನು' ಕೃಷ್ಣ (ವಿಷ್ಣು, ನಾರಾಯಣ, ವಾಸುದೇವ) ರೂಪನು ಎನ್ನಲು ಯಾರ ಆತಂಕವೂ ಇರಲಾರದು. 'ಮಯಾ ಅಧಿ 'ಅಕ್ಷೇಣ' ಪ್ರಕೃತಿಃ ಸೂಯತೇ ಸಚರಾಚರಂ' ಎಂದಿರುವಲ್ಲಿ ಈ ಭಗವಂತನ ಅಂತರಂಗದ ದರ್ಶನವೂ ಲಭಿಸುತ್ತದೆ. ಮಾನವನು 'ವಿವಸ್ವನ್' (ಸೌರ) ಪರಂಪರೆಯವನೆಂಬುದು ಇಂದಿನ ವೇದದಿಂದಲೂ ಗೊತ್ತಾಗುತ್ತದೆ. 'ಪ್ರಕೃತಿ' ಪ್ರಸವಕ್ಕೆ, ಸೃಜನಕ್ಕೆ ಕಾರಣವಿರುವ ಈ 'ಅಕ್ಷ' : ವೃಕ್ಷ : 'ಸರ್ಪರೂಪ 'ಕಾಲ'ತತ್ತ್ವವು 'Biological Time, : Organic Time', ಹುಟ್ಟುಸಾವಿಗೆ, ಭವಬಂಧನಕ್ಕೆ ಕಾರಣವಾಗುವ ಕಾಲವಾಯಿತು. ಹಾಗಾದರೆ, ಸೌರ ವಿವಸ್ವಂತನಿಗೆ ಯೋಗದೀಕ್ಷೆಯನ್ನು ಕೊಟ್ಟವನು ನಾನು ('ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಂ') ಎಂದು ಭಗವತ್ ಗೀತೆಯ ಭಗ-ವಂತ ಕೃಷ್ಣನು ಹೇಳಿರುವುದರ ಅರ್ಥವೇನು? ವಿವಸ್ವನ್ ಪದಕ್ಕೆ ಸೂರ್ಯ ಎಂಬ ಅರ್ಥವಿರುವುದು ಸರ್ವಸಾಮಾನ್ಯವಿದೆ. 'ಲೋಕಕ್ಷಯಕ್ಕಾಗಿ ಪ್ರವೃದ್ಧ' ಮೃತ್ಯುದೈವತವು ತಾನು, ಎಂದು ಈ 'ಕೃಷ್ಣ' ಹೇಳುತ್ತಾನೆ. ಪ್ರಕಾಶತತ್ತ್ವಕ್ಕೆ ಮೃತ್ಯುತತ್ತ್ವವು ಕೊಟ್ಟ 'ಯೋಗ' ದೀಕ್ಷೆಯ ಈ ವೈಚಿತ್ರ ಹೇಗೆ ಶಕ್ಯ?

ವಿವಸ್ವನ್ : ಸೂರ್ಯನೂ ಕಾಲಗತಿಯ ದೈವತವೇ ಇರುವಾಗ, ಭಗವಂತನೆಂಬ 'ಕೃಷ್ಣರೂಪಿ' ಈ ಕಾಲವು ಯಾವುದು? ಈ ಕೃಷ್ಣನು, ಚಂದ್ರನ ಪರ್ಯಾಯ ಪ್ರತಿಮೆ ಇರಲಾರನೆ? ಕೃಷ್ಣ=ಚಂದ್ರ ಎಂಬುದು ಈ ಮೊದಲೇ ಸ್ಪಷ್ಟತೆ ಪಡೆದಿದೆ. ಚಂದ್ರನು ಸೂರ್ಯನಿಗೆ 'ಯೋಗ' ಕಲಿಸುತ್ತಾನೆ. 'ದೀಕ್ಷೆ' ಕೊಡುತ್ತಾನೆ ಎಂದರೇನರ್ಥ? 'ಆದಿತ್ಯಾನಾಂ ಅಹಂ ವಿಷ್ಣುಃ' ಎಂದು ಒಪ್ಪಿಕೊಳ್ಳುವ ಕೃಷ್ಣನು 'ತಾನು ಚಂದ್ರನು' ಎಂದು ನೇರವಾಗಿ ಎಲ್ಲಿಯೂ ಒಪ್ಪಿಲ್ಲ! ತಾನು-ಸೂರ್ಯ ವಿವಸ್ವಂತನ ಪರ್ಯಾಯ ಎಂದು ಹೇಳಿಲ್ಲ!! ವಿವಸ್ವಂತನಿಗೆ ಯೋಗ ಬೋಧಿಸುವ ಭಗವಂತ ಕೃಷ್ಣನು, ಸೂರ್ಯದೈವತವಾಗಲಾರನು ಎಂಬುದು ನಿಶ್ಚಿತ. ಏಕೆಂದರೆ, 'ಕೃಷ್ಣ' ವರ್ಣಗೆ ತೇಜೋಮೂರ್ತಿ ಸೂರ್ಯನ ಹೆಸರು ಸಲ್ಲದು. ಅಲ್ಲದೆ, ತಾನು ಆದಿತ್ಯಸ್ವರೂಪನು ಎನ್ನುವ ಕೃಷ್ಣ, ಚಂದ್ರ ಸ್ವರೂಪನೇ ಇರುವ ಶಕ್ಯತೆ ಇದೆ. ಅಲ್ಲದೆ ಇದ್ದೇ ಇರುವುದಾಗಿ ೨-೩ ಬಗೆಯಿಂದ ಸಿದ್ಧವಾಗಿದೆ. ಈ ವಿಶ್ವದಲ್ಲಿ ಇರುವ ಕಾಲ - ಶಕ್ತಿ ತತ್ತ್ವಗಳು ಎರಡೇ. ಒಂದು ಸೂರ್ಯ (ವಿವಸ್ವನ್) ತತ್ತ್ವ; ಇನ್ನೊಂದು ಚಂದ್ರ (ರಾತ್ರಿ) ತತ್ತ್ವ. ಈ ವೇದದಲ್ಲಿ ಸೃಷ್ಟಿ

ನಿರ್ಮಾಣದ ಹಲವು (: Cosmology) ಸೂಕ್ತಭಾಗಗಳು ಇವೆ. ಇವೆಲ್ಲವೂ ಆಪಃ ರಸ ಪಂಥೀಯ ಭೂಮಿಕೆಗಳು[೭] ಇದು ಸ್ತಂಭವೃತ್ತಾಕೃತಿಯ ಕಾಲತತ್ತ್ವದ ವಿವರಣೆ. 'ಸೂರ್ಯಾ-ಚಂದ್ರಮಸೌ' ಈ ಉಭಯತತ್ತ್ವಗಳ ಗತಿಯನ್ನು ಆಳುವ ಋತಸ್ವರೂಪೀ 'ಸತ್ಯ' ತತ್ತ್ವದ ವಿಚಾರವೂ ಈ ವೇದದಲ್ಲಿದೆ.[೮] ಆದರೆ, ಆದಿತ್ಯ ಎಂಬ ಹೆಸರಿನ ಅರ್ಥವೇನು? ಕೃಷ್ಣದೈವತವು ಆದಿತ್ಯ ಎಂಬ ಹೊಸ ಹೆಸರನ್ನು ಧರಿಸಿದುದು ಏಕೆ? ಇದರ ವಿವರವನ್ನು ಗ್ರಹಿಸಿಕೊಳ್ಳಲು ನೇರ ವೇದಕಾಲಕ್ಕೇ ಹೋಗುವದು ಅವಶ್ಯ. ಆದಿತ್ಯ(ವಾರ) ಸೂರ್ಯನ (ವಾರ) ಹೆಸರು ತಾನೇ? ಹಾಗಾದರೆ ತಾನು ಆದಿತ್ಯನೆಂಬ ಕೃಷ್ಣನು ಸೂರ್ಯನೋ? 'ಕೃಷ್ಣಕಾರಸ್ಥಾನೀ' 'ಕಪಟ ನಾಟಕ ಸೂತ್ರಧಾರೀ' ಎಂದು ಈ ಕೃಷ್ಣನನ್ನು ಅವನ ಭಕ್ತವರ್ಗವು ಕೌತುಕ ಉಕ್ಕಿ ಅಕ್ಕರೆಯಿಂದ ಹೇಳುವುದು ನಿಜವಿದೆ. ಮೇಲಿನ ಸಂಗತಿಗಳೇ ಇದಕ್ಕೆ ಪ್ರಮಾಣ.

ಭಾರತೀಯ ಪುರಾತನ ಸಂಸ್ಕೃತಿಯನ್ನು ಇಡಿಯಾಗಿ ರೂಪಿಸಿರುವ 'ಕಾಲ' ತತ್ತ್ವವು ಯಾವುದು? ಚಾಂದ್ರ ತತ್ತ್ವವೋ? ಸೌರತತ್ತ್ವವೋ? ಎಂಬ ಪ್ರಶ್ನೆ ಮೌಲಿಕ ಮಹತ್ವದ್ದಾಗಿದೆ. ಈ ವೇದವು ಮೂಲದಲ್ಲಿ ಸೌರ : ಪ್ರಕಾಶ ತತ್ತ್ವದ ಆರಾಧಕರದೇ ಇರಲಿಕ್ಕೆಬೇಕು. ಹೀಗಿದ್ದಿಲ್ಲವಾದರೆ ಸೂರ್ಯನು ಆದಿತ್ಯನಾಗಿ ಮಾರ್ಪಟ್ಟ ಕಾರಣವೇನು? ಎಂಬುದು ಪ್ರಮುಖ ಪ್ರಶ್ನೆ. ಅದಿತಿ, ನಿತ್ಯಕುಮಾರಿ; ಆದಿಶಕ್ತಿ. ಆದಕಾರಣ, ಆದಿಮಾತೆ. ಅದಿತಿಯ ಮಕ್ಕಳೇ ಆದಿತ್ಯರು; ಇದು ಸರ್ವಮಾನ್ಯ ವಿಷಯ. ಆದಿಮಾತೆ=ಜಗದಂಬೆ. ಆದಕಾರಣ, ಎಲ್ಲ ದೇವರು, ಎಲ್ಲ ಜೀವಜಂತುಗಳೂ ಅದಿತಿಯ ಮಕ್ಕಳೇ. ವೇದದಲ್ಲಿ ಎಲ್ಲರಿಗಿಂತಲೂ ಮಿಗಿಲಾದ ಆದಿತ್ಯ ಎಂದರೆ ವರುಣನೇ[೯] ಸಮ್ರಾಟ ವರುಣನಿಂದ ತೊಡಗಿ ಎಲ್ಲ ಸೌರದೇವತೆಗಳೂ ಒಂದೊಂದೇ 'ಆದಿತ್ಯ' ಹೆಸರಿನ ಹಿಂದೆ ಅಡಗುತ್ತವೆ. ಇದರಿಂದಾಗಿ 'ಪ್ರಕಾಶ'ತತ್ತ್ವಪೂಜಕರ ವೇದ, 'ರಾತ್ರ' ಸಮಯಾಚಾರ ಪ್ರೇರಕರ ವೇದವಾಗಿ ಮಾರ್ಪಟ್ಟಿತು.

ಆದಿಶಕ್ತಿ=ಆದಿಮಾತೆಯ ಆರಾಧಕರ-ಶಾಕ್ತರ-ಸಂಪ್ರದಾಯದ ಪ್ರಭಾವವು ಬೆಳೆಯತೊಡಗಿದ್ದು ಇದರಿಂದ ಗೊತ್ತಾಗುತ್ತದೆ. ಮೂಲ ವರುಣನು ಸೌರನು, 'ಆದಿತ್ಯ' ರೂಪನಾದುದು ಇತ್ತೀಚೆಗೆ ವರುಣನಂತೆ, ತರುವಾಯ ಸೂರ್ಯನು ಆದಿತ್ಯನಾಗುತ್ತಾನೆ. ಈ ಸ್ಥಿತ್ಯಂತರಗಳ ಮೂಲಕ ಆದಿತ್ಯ ಸಂಪ್ರದಾಯವು ಹೊಸದಾಗಿ ಪ್ರಾರಂಭವಾಯಿತು. ಆ ಮೊದಲು ಇರಲಿಲ್ಲ ಎಂಬ ನಿಷ್ಕರ್ಷ ಅನಿವಾರ್ಯ. ಈ ಸಂಗತಿಗೆ ಫಾರ್ಶಿಧರ್ಮದಿಂದ ಪುಷ್ಟಿ ದೊರೆತಿದೆ. ಋಗ್ವೇದದ ಭಾಷೆಯೊಡನೆ ತುಂಬಾ ಸಾಮ್ಯವಿರುವ ಫಾರ್ಶಿಗಳ 'ಅವೆಸ್ತ'ದಲ್ಲಿ ಆದಿಮಾತಾ ಸಂಪ್ರದಾಯಕ್ಕೂ ಅದಿತಿ ದೇವಿಗೂ ಸ್ಥಾನವಿಲ್ಲ. ಆದಕಾರಣ, ಆದಿಮಾತೆಯು ಇರುವ ಪ್ರಚಲಿತ ಋಗ್ವೇದವು ಅವೆಸ್ತಾಕ್ಕಿಂತ ಅರ್ವಾಚೀನ ಸಂಹಿತೆ ಎಂದು ಹೊರಪಡುತ್ತದೆ. ಆದಿಮಾತಾ ಸಂಪ್ರದಾಯದ ಸಂಪರ್ಕವಿಲ್ಲದ ಹಾಗೂ ಅವೆಸ್ತಕ್ಕೆ ಹತ್ತಿರದ ದೈವತಗಳನ್ನುಳ್ಳ ಮೂಲ ಋಕ್‌ಸಂಹಿತೆ, ಈಗ ದೊರೆಯುವುದಿಲ್ಲ; ನಷ್ಟವಾಗಿದೆಯೆಂದು ಬಗೆಯಬೇಕಾಗುತ್ತದೆ. 'ಅದಿತಿ'ಯಿಂದ ಇದು ಗೊತ್ತಾಗುತ್ತದೆ.

> "Thus Aditi an entirely Indian goddess is historically yonger than some at least of her sons'

ಎಂದು ಮ್ಯಾಕಡೋನಲ್ ಹೇಳುತ್ತಾರೆ. ಈ ವೇದದಲ್ಲಿ ಮಕ್ಕಳು, ತಾಯಿಗಿಂತ, ವಯಸ್ಸಿನಲ್ಲಿ ಹಿರಿಯರು! ಎಂದರೆ ಇವರು ದತ್ತುಪಡೆದ ಅಥವಾ ಸಾಕಿದ ಮಕ್ಕಳೇ ಇರಬೇಕಾಗುತ್ತದೆ. ಆದುದರಿಂದ ವರುಣ, ವಿವಸ್ವನ್ ಸೂರ್ಯಾದಿ ಮಕ್ಕಳಿಗಿಂತ ಚಿಕ್ಕವಳಾದ ತಾಯಿ 'ಅದಿತಿ' ಸಂಪ್ರದಾಯವು ಹೊಸದಾಗಿ ಬಂದದ್ದು. ಸೌರದೈವತ ಉಪಾಸನಾ ಸಂಪ್ರದಾಯವು ಈ ಅದಿತಿ ಸಂಪ್ರದಾಯದಿಂದ ಭಿನ್ನ. ಸೌರಸಂಪ್ರದಾಯವು ಅದಿತಿ ಸಂಪ್ರದಾಯದಲ್ಲಿ ಸೇರಿಕೊಂಡಿತು. ಅಂದು ಪ್ರಭಾವಶಾಲಿಯಾಗಿದ್ದ ಸೌರಪರಂಪರೆಯನ್ನು ಅದಿತಿ ಆರಾಧಕರ-ಶಾಕ್ತ ಸಂಪ್ರದಾಯವು, ತನ್ನಲ್ಲಿ ಅಳವಡಿಸಿಕೊಂಡಿತು. ಸೂರ್ಯನು ಆದಿತ್ಯನಾಗಿ ಮಾರ್ಪಟ್ಟಂತೆ ವಿವಸ್ವಂತನೂ ಆದಿತ್ಯನಾಗಿದ್ದಾನೆ, ಸೌರರನ್ನೆಲ್ಲ 'ಚಂದ್ರ' ರೂಪಕ್ಕೆ ತಿರುಗಿಸಿದ ಮಾಟ, ಮಂತ್ರ ಚಮತ್ಕಾರ ಇಲ್ಲಿದೆ.

ಹಾಗಾದರೆ, ಸೌರದೈವತಗಳು ಆದಿತ್ಯರೂಪಕ್ಕೆ ಮಾರ್ಪಡುತ್ತವೆ ಎಂಬುದರ ಅರ್ಥವೇನು? ಈ ಆದಿಮಾತಾ ಸಂಪ್ರದಾಯದ ನಡೆವಳಿ ಗೊತ್ತಾಗದೇ, ಸೌರದೈವತ ಆದಿತ್ಯವಾದ ವಿಚಾರವು ಸ್ಪಷ್ಟವಾಗಲಾರದು. 'ಅದಿತಿ' ಮಾತೆಯೇ 'ಏಕಂ ಏವ ಅದ್ವಿತೀಯಳು' ಆಗಿದ್ದಾಳೆ, ಎಂಬ ಮೂಲ ಶಾಕ್ತ ಶ್ರದ್ಧೆಯನ್ನು ಸ್ಮರಿಸಿಕೊಳ್ಳಬೇಕು. ಈ ಪ್ರಪಂಚದಲ್ಲಿ ಅದಿತಿಯನ್ನುಳಿದು ಬೇರೆ ಯಾವ ವಸ್ತುವೂ ಇಲ್ಲ, ಎಲ್ಲವೂ ಅದಿತಿಯೇ! "ಅದಿತಿಃ ದೌಃ ಅದಿತಿಃ ಅಂತರಿಕ್ಷಂ...ಯತ್‌ತ ಜಾತಂ ಜನಿತ್ವಂ' ಅದಿತಿಃ[೪] ವಿಶ್ವದ ಅಡಿಯಲ್ಲಿ, 'ಅ-ದ್ವಿತೀಯ'ಳಾಗಿದ್ದ ಈ 'ಆದಿ ಶಕ್ತಿ'ಯ ಪತಿ ಯಾರು? ಈ 'ಅದಿತಿ' ಯಾರ ಅರ್ಧಾಂಗಿಯೂ ಅಲ್ಲ. ಈಕೆ ನಿತ್ಯಕುಮಾರೀ ಮಾತೆ, ಜಗದಂಬೆ= ಎಲ್ಲ(ರ)ಮ್ಮ ಯಾವ ವ್ಯಕ್ತಿಯ 'ಅರ್ಧಾಂಗಿ' ಆದರೆ ಇವಳಿಗೆ ಗೌಣತ್ವ ಬಂತು! ಏನೆಲ್ಲವನ್ನೂ ವ್ಯಾಪಿಸಿರುವ ಈ ಅದಿತಿಯು, ತತ್ವತಃ ರಾತ್ರಿಯ ಪ್ರತೀಕವಾಗುತ್ತಾಳೆ! ವಿಶ್ವಾರಂಭದಲ್ಲಿ 'ಭಾಷೆ'ಗೂ ಮುನ್ನಿನ ಸ್ಥಿತಿಯನ್ನು ಸಾಂಕೇತಿಕವಾಗಿ ಕತ್ತಲೆಯಿಂದ 'ಅವ್ಯತ ಸೃಷ್ಟಿ' ಎಂದು ಬಗೆಯುವ ವಾಡಿಕೆ ಇನ್ನುಳಿದ ಸಂಸ್ಕೃತಿಗಳಲ್ಲೂ ಇದೆ. ಈ ಕತ್ತಲೆ(ಆದಿಮಾತೆ)ಯ ಶಿಶು ಚಂದ್ರನೆಂದು ಈಜಿಪ್ಟಿನ ಆದಿದೈವತ ಕಥೆಯಲ್ಲಿಯೂ ಉಂಟು...'

> The spirit of Night was great-mother and her first born was the moon child. Life came from death, and light from darkness. Such appears to have been the conception of worshippers of the sky and water goddess and the Lunar God.[೫]

ಅದಿತಿ=ರಾತ್ರಿ ಎಂದಲ್ಲಿ ಈ ಅದಿತಿ ಪುತ್ರ ಆದಿತ್ಯನು ಚಂದ್ರನೆಂಬುದರಲ್ಲಿ ಸಂದೇಹವಿಲ್ಲ. ತಾನು ಆದಿತ್ಯನೆಂದು ಹೇಳುವ ವಿಷ್ಣುರೂಪೀ ಕೃಷ್ಣನು ಚಂದ್ರನ ಪರ್ಯಾಯ ಎಂಬ ಮಾತು ಈ ದಿಕ್ಕಿನಿಂದಲೂ ದೃಢಪಡುತ್ತದೆ. ಆದಕಾರಣ, ಆದಿತ್ಯ ಸಂಪ್ರದಾಯವು ಚಂದ್ರೋಪಸ್ಥಾನ ವ್ರತಿಗಳ ಸಂಪ್ರದಾಯವಾಗಿದ್ದುದು ನಿಶ್ಚಿತ. ಆದುದರಿಂದ, ಇದು ರಾತ್ರ ಸಮಯಾಚಾರಗಳ ಧರ್ಮ. ವೇದಕಾಲದಿಂದಲೇ, ಚಂದ್ರಮಂಡಲದಲ್ಲೇ(೦) ಈ ಅದಿತಿ ತತ್ವವನ್ನು ಕಲ್ಪಿಸಲಾಗಿತ್ತು. 'ಚಮಸ' (ಪಾನ)ಪಾತ್ರವೆಂದು ಇದನ್ನು ಬಗೆಯಲಾಗಿತ್ತು. ಋಗ್ವೇದದಲ್ಲಿ ಮತ್ತು ತೈತ್ತಿರೀಯೋಪನಿಷತ್ತಿನಲ್ಲಿ ಚಂದ್ರನನ್ನು 'ಮಹಾಚಮಸ್ಯ' ಎಂದು ಕರೆದುದುಂಟು. ('ಪಾತ್ರ'ದ ತದ್ಭವವು ಕಂನಾಡ ಜಾನಪದದ [Folk] ಜಾಗ್ರತ ಪ್ರಜ್ಞೆಯನ್ನು ಗಮನಕ್ಕೆ ತಂದು ಕೊಡುತ್ತದೆ).

ಚಂದ್ರಮನು ನಿಜವಾಗಿ ಉಭಯಲಿಂಗಿ. 'Neuter' : 'ಮಿಥುನ' ಸ್ಥಿತಿಯಲ್ಲಿ Neither masculine nor feminine', ಆಗ ಹೆಣ್ಣು ಪುಂ-ಲಿಂಗಿ, ಗಂಡು 'ಸ್ತ್ರೀ'ಲಿಂಗಿಯೆಂಬ ಭ್ರಾಂತಿಗೂ ಇಂಬು ಉಂಟು. ಹೀಗೆ ಅನಿಶ್ಚಿತ ಲಿಂಗೀ ಆದರೂ ಮೊತ್ತಮೊದಲಲ್ಲಿ 'ಸ್ತ್ರೀ' ಲಿಂಗಿಯೇ ಇದ್ದ 'ಚಂದ್ರಾ'ದೇವಿಯನ್ನು 'ಪುಲ್ಲಿಂಗಿ'ಯಾಗಿಸುವ 'ಮಾಟ' ಯಾತು ಕೃತ್ಯ ಇಂದಿನ ಋಗ್ವೇದದಲ್ಲಿದೆ! 'ಮಸ್' ಪದವನ್ನು ಸೇರಿಸುವ ಮೊದಲು 'ಚಂದ್ರ'(ಮಸ್) ಎಂಬುದು ಸಂಸ್ಕೃತದಲ್ಲಿ ವಿಶೇಷಣ ವಾಚಕ. ಆದರೆ, ಸಂಶೋಧಕರ ಮತದಂತೆ 'ಚಂದ್ರಮಸ್' ಇದು ಸಮಾನಾರ್ಥಕ ಜೋಡುನುಡಿ, 'ಕೂಡಲ ಸಂಗಮ'ದಂತೆ! ಮಸ್, ಮಾಸ, Month, Moon ಇವು ಇಂಡೋ-ಯುರೋಪಿಯನ್ ಶಬ್ದಮೂಲದಿಂದ ಬಂದವುಗಳು. ಆದಕಾರಣ, 'ಚಂದ್ರ' ಈ ಮಾತು ಸಂಸ್ಕೃತದಲ್ಲಿ ಬೇರೆ ಭಾಷೆಯಿಂದ ಬಂದು ಸೇರಿದ ಸಂಕೇತವಿರಬೇಕೆಂದು ಬಗೆಯಲಾಗಿದೆ.

ಪಾಶ್ಚಾತ್ಯ ಪರಂಪರೆಯಲ್ಲಿ 'ಚಂದ್ರ', ಇಂದಿಗೂ ಚಂದ್ರಾದೇವಿ! 'She Moon'! ಭಾರತೀಯ ಸಂಪ್ರದಾಯ ಗಳಲ್ಲಿಯೂ ಹುಣ್ಣಿಮೆಯ ಜಾತ್ರೆಗಳೆಲ್ಲ ಹೆಣ್ಣು ದೈವತಗಳೊಡನೆ ಸಂಬಂಧಪಟ್ಟಿವೆ. ಆದರೆ ಆದಿಮಾತಾ ಸಂಪ್ರದಾಯವು ತನ್ನ ಪ್ರತಿಷ್ಠೆಗೆ ಎರವಾದ ಬಳಿಕ 'ಚಂದ್ರ', ಪುಲ್ಲಿಂಗೀ ಚಂದ್ರನಾಗಿ 'ಪ್ರಜಾಪತಿ' ಎನಿಸಿದ್ದಾನೆ! ಆದರೂ 'ತಿಂಗಳ ಮುಟ್ಟು' Menses, Menstrual flow-ಗಳು ಚಂದ್ರನ ಗತಿಯೊಡನೆ ಸಂಬಂಧಿಸಿವೆ. 'ಚಂದ್ರಾ' ಸ್ತ್ರೀಲಿಂಗಿಯೆಂದೇ ಪುರುಷ=ಆದಿತ್ಯ (ಸರ್ಪ-ವೃಕ್ಷ) ಅವಶ್ಯವಾಯಿತು. ಚಂದ್ರಾದಿತ್ಯ ಮಿಥುನಯೋಗ ಸೂಚಕ ಪ್ರತಿಮೆ. ರಾತ್ರಿ ಸಮಯಾಚಾರಗಳಲ್ಲಿ, ಮೈಯಲ್ಲಿ ಆವೇಶವಾಗುವ ಕುಮಾರೀಪೂಜೆ ನಡೆಯುವ

ವಾಡಿಕೆ ಇತ್ತು. ಆದಿಮಾತಾ ಸಂಪ್ರದಾಯದಲ್ಲಿ, ಮಳೆಬೆಳೆ ಬರಲು 'ಸುಫಲೀಕರಣ' ತಂತ್ರವನ್ನು ಆಚರಿಸಲಾಗುತ್ತಿತ್ತು. ಋಗ್ವೇದದಲ್ಲಿ ಇಂಥ ಒಂದು ವರ್ಣನೆಯ ಮಾದರಿ, ಅಭ್ಯಸನೀಯವಿದೆ.[೬] ವೀರನೊಬ್ಬನೊಡನೆ ಈ ವೀರೆಯ ಸಮಾಗಮದ ವಿವರಣೆ ಅಲ್ಲಿದೆ. ಮಾನವಶಾಸ್ತ್ರಜ್ಞರು 'Fertility cult' ಎಂಬ ಹೆಸರಿನಲ್ಲಿ ಇದರ ವಿವರಗಳನ್ನು ಸಂಗ್ರಹಿಸಿದ್ದಾರೆ. ಪ್ರಪಂಚದಲ್ಲಿ ಪುರಾತನ ಏನೆಲ್ಲ ಸಂಸ್ಕೃತಿಗಳಲ್ಲಿಯೂ ಈ ನಡೆವಳಿ ಇತ್ತು.

ಈ ಬಗೆಯ ಅನಿರ್ಬಂಧ ಸ್ತ್ರೀ-ಪುಂ ಯೋಗದ ದುಷ್ಪರಿಣಾಮಗಳು ಕಾಣಿಸಿಕೊಂಡ ಬಳಿಕ ಮುಂಚಿನ ಆತ್ಯಂತಿಕ 'ಭೋಗಿ'(ನಾಗ) ಸಂಪ್ರದಾಯವೇ ಮುಂದೆ ಆತ್ಯಂತಿಕ ವಿರಕ್ತ 'ವಿಯೋಗಿ' : ಸನ್ಯಾಸ ಸಂಪ್ರದಾಯವಾಗಿ ಮಾರ್ಪಡುತ್ತದೆ. ಸೃಜನ-ಜಲ (ವೀರ್ಯ)ದ ಒಂದು ಬಿಂದುವು ಹೊರಬಿದ್ದರೂ ಹಿಂಸೆ! ಸೃಜನ ಜಲದ ರಕ್ಷಣೆಯೇ ಅಹಿಂಸೆ. ಸೃಜನ ಜಲವೇ 'ಸತ್ತ್ವ'. ಈ ಸಂಪ್ರದಾಯಗಳ ಈ 'ಸತ್‌ತ್ವ' ಮತ್ತು ಅಹಿಂಸೆ ಇವು ಒಂದರಿಂದ ಇನ್ನೊಂದು ಬೇರೆಯಲ್ಲ! ಈ 'ಸತ್' ಎಂದರೆ ಸತ್‌ತ್ವ=ಸಾರ=ರಸ=Essence. 'ರಸೋ ವೈ ಸಃ' ಸೃಷ್ಟಿ ನಿರ್ಮಾಣದ ದಿವ್ಯಶಕ್ತಿಯ ಜಲದ 'ಬಿಂದು'ವೂ ಪೂಜ್ಯ! ಇದನ್ನು ಬಿಂದು 'ಮಾ'ಧವ ಎಂಬ ದೇವತಾರೂಪದಲ್ಲಿ ಕಲ್ಪಿಸಲಾಗಿದೆ. 'ಅಮೃತಸ್ಯ ನಾಭಿಃ=ಚಂದ್ರಾ; ಈ 'ನಾಭಿ-ರಾಜ' ಜೈನಪರಂಪರೆಯ ಹೆಸರು. 'ಆದಿತ್ಯ'ನ ಪರ್ಯಾಯ ನಾಮ. 'ರಾ-ಜನ್'=ರಜ=ರೇತ-ಜನಕಶಕ್ತಿ ತತ್ತ್ವದ ಪ್ರತೀಕ. ಈ 'ಸತ್' : ಸಾರ ಇದೇ 'ಸತ್ತ್ವ'; ವಿರಕ್ತ-ಪಂಥೀಯ ಮೋಕ್ಷಕಾಮಿಗಳ ಉಪಾಸನಾ ದೈವತವಿದು. 'ಸತ್ತ್ವವೇ ದೇವರು', 'ದೇವರೇ ಸತ್ತ್ವ'; 'ಏಕಂ ಏವ' ಅದ್ವಿತೀಯ ದೇವರು ಇದು.

ಆದರೆ, ಪ್ರಜ್ಞೋದಯವಾದೊಡನೆ, ಈ ಚಾಂದ್ರ ಸಂಪ್ರದಾಯದ ಸ್ವರೂಪವೇ ಬದಲಾಗತೊಡಗುತ್ತದೆ. 'ಅಂಗಾನಾಂರಸ'ದ ಪಾತಳಿಯ (Biosphere) ನಡೆವಳಿಯು, ಪ್ರಮಾಥೀ ಇಂದ್ರಿಯಗಳ ಪ್ರೇರಣೆಯ ಮೂಲಕ ಪ್ರಚಲಿತವಾದುದು. ಇದು 'ರಾತ್ರ' ಸಮಯಾಚಾರ. ಆದರೆ, 'ಅರಿವಿನ ಅರಿವು' ತಲೆಯೆತ್ತುವಾಗ, ಇದರ ನಿಜಸ್ವರೂಪ ಬಚ್ಚಿಡುವ ಪ್ರಯತ್ನಗಳಿಗೆ ಪ್ರಾರಂಭವಾಗುತ್ತದೆ. ಪ್ರಜ್ಞೆಯ ಪ್ರೇರಕ ಸೌರದೈವತಗಳನ್ನು ಚಾಂದ್ರರೂಪಕ್ಕೆ ತಿರುಗಿಸಲಾಗುತ್ತದೆ! ಮಾನವ ಭಾಷೆ ಹಾಗು ಸಂಸ್ಕೃತಿಯು ಪ್ರಾದುರ್ಭವಿಸಿ, ಪ್ರಜ್ಞಾವಿಕಾಸದೊಡನೆ ಪ್ರಗತಿಪಥದಲ್ಲಿ ಕೆಲದಾರಿ ಸಾಗುವ ವೇಳೆಗೆ, ಚಾಂದ್ರ ಸಮಯಾಚಾರಗಳು ತಮ್ಮ ಪ್ರತಿಷ್ಠೆಗೆ ಎರವಾಗತೊಡಗುವುದು ಸ್ವಾಭಾವಿಕ. ಈ ಮಾತಿಗೆ ಪ್ರಮಾಣವೇನು? ಎಂದು ಶಂಕಿಸಬೇಕಾಗಿಲ್ಲ. 'ಭಗವದ್'-ಗೀತೆಯ 'ಭಗವಂತ'ನೇ ಒಪ್ಪಿಕೊಂಡಿದ್ದಾನೆ: 'ಮಹತಾ ಕಾಲೇನ, ಇಹ ಯೋಗಃ ನಷ್ಟಃ' (ಇಲ್ಲಿ ಬಹುಕಾಲದಿಂದ: ಮಹತಾ ಕಾಲೇನ-ನಷ್ಟವಾದ ಈ ಪುರಾತನ ಸಂಪ್ರದಾಯ), ಇದನ್ನೇ 'ಭಕ್ತನಾದ ನಿನಗೆ' ಹೇ ನರನೇ ಈಗ ಹೇಳಿದ್ದೇನೆ (ಅದ್ಯ ಮಯಾ ಪ್ರೋಕ್ತಃ) ಎಂಬ ಈ ವಿಚಾರವು ಐತಿಹಾಸಿಕ ಮಹತ್ತ್ವದ್ದಾಗಿದೆ.[೭]

ಈ ಚಾಂದ್ರಸಂಪ್ರದಾಯಕ್ಕೆ ಹಗಲಿನಲ್ಲಿಯೂ ಗೌರವ, ಪ್ರತಿಷ್ಠೆ ಉಳಿಸಿಕೊಳ್ಳಲು, ವೇಷಾಂತರ ಅನಿವಾರ್ಯವಿದೆ. ಇಂದಿನ ಋಕ್‌ಸಂಹಿತೆಯಲ್ಲಿ ಈ ಏನೆಲ್ಲ ತಿರುವು-ಮುರುವಿಗೆ ಪ್ರಮಾಣಗಳು ದೊರೆಯುತ್ತವೆ. ರಾತ್ರಿಯ ಪರ್ಯಾಯವಾದ ಅದಿತಿ=ಚಂದ್ರಾದೇವಿ. ಅದಿತಿ ಪುತ್ರ ಆದಿತ್ಯ ಎಂದರೆ ಚಂದ್ರನೇ ಆಗುತ್ತಾನೆ. ಆದಿತ್ಯ=ಸೂರ್ಯ ಎಂದರೆ ಇವನು ರಾತ್ರೀಕಾಲದ ಸೂರ್ಯ! ಸೌರಪರಂಪರೆಯ ವೇದದ ಅಂತ್ಯವಾದ ಬಳಿಕ, 'ಆದಿತ್ಯ'ವ್ರತವು, ಹಗಲಿನ ಸಮಯಾಚಾರವಾಗಿ ಪರಿಣಮಿಸುತ್ತದೆ. ಬ್ರಾಹ್ಮಣ ಉಪನಿಷತ್ಕಾಲದಿಂದ ೧೦ನೆಯ ಶತಕದ ವರೆಗೂ ಕೆಲವೊಂದು ಬಗೆಯಿಂದ ಇದು ಭಾರತದಲ್ಲಿ ಜೀವಂತ ಉಳಿದುಬಂದಿದೆ. ಈ ಆದಿತ್ಯ ಉಪಾಸನೆ ರಸೋ ವೈಸಃ', 'ಆನಂದಂ ಬ್ರಹ್ಮ' ಸಿದ್ಧಿಯ ಅನುಸಂಧಾನ ಅವಶ್ಯವಿರುವ ಸಂಪ್ರದಾಯ. ಭಾರತೀಯ ಇತಿಹಾಸದೊಳಗಿನ ಆದಿತ್ಯ-ಸಂಪ್ರದಾಯಕ್ಕೆ ಪುರಾತನ ರಾಜರ 'ಆದಿತ್ಯ' ಹೆಸರುಗಳೇ ಸಾಕ್ಷಿ. ಏನೆಲ್ಲ ವಿರಕ್ತ ಸಂಪ್ರದಾಯದ ಬೇರುಗಳು ನಾಗವೃಕ್ಷ=ಪುರುಷ (ಆದಿತ್ಯ) ಸಂಪ್ರದಾಯದಲ್ಲಿ ಪೋಷಣೆ ಪಡೆದಿವೆ.

ಋಗ್ವೇದದಲ್ಲಿ ಅದಿತಿಯನ್ನು 'ನೌಕಾ' ರೂಪದಿಂದ ವರ್ಣಿಸಿದೆ.[೮] ಸ್ತ್ರೀಯು ಪುರುಷನಿಗೆ ಸಂಸಾರ 'ಸಾಗರ'ದ ಆಚೆಗೆ ತಲುಪಿಸುವ 'ನೌಕೆ'; ಆಚೆಯ ತೀರಕ್ಕೆ ಮುಟ್ಟಿಸುವ ತೀರ್ಥಿಕೆ : ತಾರಣೆ ಭಗವತಿ; ತಾರಾದೇವಿ

ಮುಂತಾದ ಯೋಗಿನಿಯರ ಸಂಪ್ರದಾಯವೂ ಹಿಂದೊಮ್ಮೆ ಜೀವಂತ ಇತ್ತು. ಪಾರಲೌಕಿಕ ಆನಂದಸಿದ್ಧಿಯ ದೀಕ್ಷಾ ಗುರುವಾಗುವ ಹಕ್ಕು ಮೊತ್ತಮೊದಲಲ್ಲಿ ಯೋಗಿನಿಯರಿಗೇ ಇತ್ತು. ಕೇನೋಪನಿಷತ್ತಿನ ಉಮಾ ಹೈಮವತಿಯು 'ತೀರ್ಥ'ದ (ತದ್ವನಂ) ಉಪಾಸನೆಯನ್ನು ಮಾಡಲು ಹೇಳಿದ್ದಾಳೆ. ನೌಕೆ, ತಾರೆ ಈ ಪರಿಭಾಷೆಯ ಬದಲಾಗಿ, 'ಸೇತು' ಎಂಬ ಹೊಸಪ್ರತಿಮೆ, ಉಪನಿಷತ್ಕಾಲದಲ್ಲಿ ಪ್ರಚಾರಕ್ಕೆ ಬಂದಿತು. ಸಂಸಾರದ ಗೋಳಿನೊಳಗಿಂದ ದಾಟಿ, ಆನಂದಲೋಕದ ಆಚೆಯ ತಡಿಗೆ ಮುಟ್ಟಲು ನೆರವಾಗುವ 'ಸೇತು', ಇದು 'ಸತಿ' - 'ಸತ್ಯವತಿ' ಸಂಪ್ರದಾಯವೆಂಬ ಹೆಸರಿನಲ್ಲಿಯೂ ಕಾಣಿಸಿಕೊಂಡಿದೆ! ವ್ಯಾಸನ ತಾಯಿ ಪರಾಶರನ 'ಸೇತು', ಇವಳಿಗೆ 'ಸತ್ಯವತಿ' ಎಂದೂ ಹೆಸರು. ಎಲ್ಲಮ್ಮನ ಕ್ಷೇತ್ರದಲ್ಲಿ ಸತ್ಯವ್ವನ ಪ್ರತಿಮೆಯೂ ಉಂಟು. ಎಲ್ಲಮ್ಮನೇ ಸತ್ಯವ್ವನೂ ಸರಿ! ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ಸ್ಕಂದ(ಸನತ್ಕುಮಾರ) ಹೆಸರಿನಲ್ಲಿ, ಆದಿತ್ಯ ಸಂಪ್ರದಾಯದ ಇನ್ನೊಂದು ನಡೆವಳಿ ಪ್ರಾರಂಭವಾಗುತ್ತದೆ. ಸಪ್ತಮಾತೃಕೆಯರು ಪೂಜೆಗೊಳ್ಳುತ್ತಾರೆ! ಬೃಹದಾರಣ್ಯಕದ ಯಾಜ್ಞವಲ್ಕ್ಯನು ಈ ಸಂಪ್ರದಾಯಕ್ಕೆ ತಾತ್ವಿಕ ಹಿನ್ನೆಲೆಯನ್ನು ಒದಗಿಸಿದ್ದಾನೆ. ಪಾಣಿನಿಯ ಕಾಲದಲ್ಲಿ ಆದಿತ್ಯವ್ರತ ದೀಕ್ಷೆಯ ಪದ್ಧತಿಯು ಇತ್ತು. 'ಅ-ಕಾಲ' ವ್ಯಾಕರಣ ಬರೆದನೆಂಬ ಖ್ಯಾತಿನಿಯ ಪಾಣಿನಿಯು, 'ಸ್ತಂಭ'ರೂಪ ಕಾಲದ ಉಪಾಸಕನಾಗಿರಬೇಕು. 'ಕಲ್'>ಕಾಲ; ಸ-ಕಲ, ಅಕಲ=ಅಕಾಲ; 'ವೃಕ್ಷ-ಇವ ಸ್ತಬ್ಧ' ಇದು ಸ್ತಂಭಕಾಲದ ಆರಾಧಕರ ಪ್ರತಿಮೆ. 'ತತ್'ಮಯ ಸ್ಥಿತಿಯ ಮೂಲಕ ದಿಕ್ಕಾಲಾತೀತ ಹಂತಕ್ಕೆ ಹೋಗುವ ಸಾಧನ, ಅನುಸ್ಥಾನದಲ್ಲಿ 'ಆದಿತ್ಯ' : 'ವೃಕ್ಷ' ಪೂಜೆ ನಡೆಯುತ್ತಿತ್ತು. ಭಾರತೀಯ ಇತಿಹಾಸದಲ್ಲಿ ಚಂದ್ರಾದಿತ್ಯರು, ಕನಕಾದಿತ್ಯರು, ವಿಕ್ರಮಾದಿತ್ಯರು ಹಲವರಿದ್ದಾರೆ. ಇಷ್ಟ ಅಥವಾ ಆರಾಧ್ಯ ದೈವತದ ಹೆಸರನ್ನು ಮನೆತನದಲ್ಲಿ ಮಕ್ಕಳಿಗೆ ಇಡುವ ವಾಡಿಕೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. 'ಬಸವ-ಕಲ್ಯಾಣ'ದ ಧರ್ಮಕ್ರಾಂತಿಯು ವಿಕ್ರಮ ಆದಿತ್ಯನ ಕಾಲದ ತರುವಾಯ ಕಾಣಿಸಿಕೊಂಡಿದೆ! ಆದಕಾರಣ, ವೀರ-ಶೈವದ ಪೂರ್ವಪೀಠಿಕೆಗಾಗಿ 'ಆದಿತ್ಯ' ಸಂಪ್ರದಾಯದ ಸಂಶೋಧನವು ಅಗತ್ಯವಾಗುತ್ತಿದೆ.

ಆದಿತ್ಯನಂತೆ ಋಗ್ವೇದದಲ್ಲಿಯೇ ಮಾರ್ತಾಂಡ ನಾಮಾನಂ ಸೂರ್ಯಂ' ಹೆಸರಿನ ಇನ್ನೂ ಒಬ್ಬ ರಾತ್ರಿ ಸೂರ್ಯನಿದ್ದಾನೆ. ಈ ವೇದದೊಳಗಿನ 'ಪತಂಗಸೂರ್ಯ'ನು ರಾತ್ರೀ ಸೂರ್ಯನೇ ಸರಿ. ಪ್ರಚಲಿತ ವೇದದ ಪ್ರಾರಂಭ ದಿಂದಲೂ ಆದಿತ್ಯನುಂಟು. ಆದರೆ, 'ಮಾರ್ತಾಂಡ' 'ಪತಂಗ' ಸೂರ್ಯರು ವೇದದ ಅಂತ್ಯದಲ್ಲಿ ಮೈದಾಳಿದ ಪ್ರತಿಮೆಗಳು. ವೇದದ ಅಂತ್ಯದೊಡನೆ, ಪ್ರಕೃತಿ-ಪುರುಷ ಪಾರ್ಶ್ವಭೂಮಿಯ 'ವೇದಾಂತ'ವು ಬೆಳೆಯತೊಡಗಿತು. 'ಪತಂಗ' ಸಂಪ್ರದಾಯ ಬೆಳೆದುಬಂದದ್ದು ಕಾಣುವುದಿಲ್ಲ. ಮಾರ್ತಾಂಡ ಸಂಪ್ರದಾಯವು, ಕಾಶ್ಮೀರದಿಂದ ಕರ್ನಾಟದ ವರೆಗೂ, ಆದಿತ್ಯ ಸಂಪ್ರದಾಯದಂತೆಯೇ ಪ್ರಭಾವಶಾಲಿಯಾಗಿತ್ತು. ಮೈಲಾರ (ಮಾರ್ತಾಂಡ)ನನ್ನು, ಬ್ರಹ್ಮಶಿವ, 'ಸಮಯ ಪರೀಕ್ಷೆ'ಯಲ್ಲಿ ಮೂದಲಿಸಿದ್ದಾನೆ; ನಿಜ ಸ್ವರೂಪವನ್ನು ಬಯಲಿಗೆ ಎಳೆದಿದ್ದಾನೆ. ಆದರೆ ಕುರುಡನು ಮೆಳ್ಳನಿಗೆ ಏಡಿಸಿದಂತಿದೆ!

ಅದಿತಿ ಸಂಪ್ರದಾಯಕ್ಕೂ ಮುಂಚಿನ ಸೌರ-ಋಕ್ ಸಂಹಿತೆ, ಕಾಣೆಯಾಗಿರುವಂತೆ 'ಮಾನವ ಧರ್ಮ'ದ ಸೂತ್ರ ಹಾಗು ಸ್ಮೃತಿ ಸಹ ಆದಿತ್ಯಸಂಪ್ರದಾಯದ ಪ್ರಭಾವದಲ್ಲಿ ನಾಮಶೇಷವಾಗಿದೆ. 'ವೈವಸ್ವತ ಮನ್ವಂತರೇ' 'ಭರತಖಂಡೇ' ಎಂಬ ಮಂತ್ರದಂತೆ ಈಗಿನ ಮನ್ವಂತರವು, ವೈವಸ್ವತನಲ್ಲದಿದ್ದರೂ ಈಗ ಪ್ರಚಲಿತವಿರುವ ಸ್ಮೃತಿ 'ಸ್ವಾಯಂಭುವ ಮನು'ವಿನದು! ಸ್ವಯಂಭೂ (=ಸ್ತಂಭ) ದೇವಪರಂಪರೆಯ ಸ್ಮೃತಿ, ಎಂದರೆ ಹಿರಣ್ಯಗರ್ಭದೇವನ ಈ ಪರಂಪರೆಯ ಸ್ಮೃತಿ. ಆದಿತ್ಯ : ಪುರುಷ 'ಭಗವಂತ' ಕೃಷ್ಣನ ಸಂಪ್ರದಾಯವು, ವಿವಸ್ವಂತನ ಪ್ರೇರಣೆಯ ಮನುಪ್ರಣೀತ ಮಾನವ ಧರ್ಮವನ್ನು ಮರೆಯಿಸಿಬಿಟ್ಟಿದೆ.

ಸ್ವಯಂಭೂ ಮನು ಎಂದರೆ ಸಾಮಾಜಿಕತೆಯ ಸಂಪೂರ್ಣ ಅಭಾವ. ಪ್ರತಿಯೊಬ್ಬರೂ ಸ್ವಯಂ-ಭೂ ಲಿಂಗ ಸ್ವರೂಪರೇ ಅಲ್ಲವೆ? ನಾರ ಅಯನ ಪ್ರೇರಿತ ಇಂದಿನ ನರ(ಳ)ರ ಧರ್ಮ ಇದು. 'ನರ' ಸಂಕೇತವು ಋಗ್ವೇದದಲ್ಲಿ ಮರುತಸೂಕ್ತಗಳಲ್ಲಿ ಮರುತರ ಸಾಹಚರ್ಯದಲ್ಲಿ ವಿಶೇಷಾರ್ಥವನ್ನು ಪಡೆಯುತ್ತದೆ. ಈ ಮರುತರನ್ನು

'ಮರ್ತಾಸಃ' 'ಮರ್ತ್ಯಾಃ' ಎಂದು ವರ್ಣಿಸಿದೆ. 'ನರಾಃ' ಎಂದು ಅಡಿಗಡಿಗೂ ಸಂಬೋಧಿಸಲಾಗಿದೆ. 'ಮಾತಾರುದ್ರಾಣಾಂ' ಎಂಬ ಋಕ್ಕಿನಂತೆ, ಈ ಅದಿತಿಪುತ್ರ ಮರುತರೂ 'ಆದಿತ್ಯರಾಗುತ್ತಾರೆ! 'ರುದ್ರನು' ದಕ್ಷನಾಗುತ್ತಾನೆ! ರುದ್ರಪುತ್ರ ಮರುತರೂ 'ಅದಿತಿ'ಯ ಮಕ್ಕಳು ಎಂದರೆ 'ಆದಿತ್ಯರು' ಎಂದು ಒಮ್ಮೆ ಮಾತ್ರ ಹೇಳಿ, ಕೈಬಿಡಲಾಗಿದೆ!=ಮರುತರನ್ನು 'ಅಹಿ ಭಾನವಃ' (ಸೂರ್ಯಸದೃಶ ಸರ್ಪ) ಎಂದು ಹೇಳಿರುವ ಇವರು ನಾಗ=ನಾಳ=ನಳ ಸ್ವರೂಪರು ಎಂಬ ಧ್ವನಿಯಿದೆ. ಮರುತರನ್ನು 'ಕಬಂಧ' (ಕೊಳವೆ) ಆಕಾರದವರು ಎಂದುದೂ ಉಂಟು!

ವ್ಯಾಸನು, ವಿರಾಟನ ಅಂತಃಪುರದ ನೃತ್ಯ ಶಿಕ್ಷಕ 'ನರ'ನನ್ನು 'ಬೃಹತ್ ನಳ'ನೆಂದಿರುವ ಈ ಸಾಂಕೇತಿಕತೆ, ನರ(ಳ)ನ ನಿಜಸ್ವರೂಪದರ್ಶನ ಮಾಡಿಸುತ್ತದೆ! ಅಂತಃಪುರದ ನೃತ್ಯ ಶಿಕ್ಷಕನ ಬಗೆಗಿನ ಅಶ್ಲೀಲತೆಯ ಸಂದೇಹ ತಪ್ಪಿಸಲು ಈ 'ನಳ'ನಿಗೆ ಊರ್ವಶಿ: ಅಪ್ಸರೆಯ ಶಾಪ ತಟ್ಟಿ, ಒಂದುವರ್ಷದ ಮಟ್ಟಿಗೆ ನಪುಂಸಕತ್ವ ಬಂದಿತೆಂದು ಹುಟ್ಟಿಸಲಾದ ಕಥೆಯ ಪ್ರಯೋಜನವನ್ನು ಪಡೆಯಲಾಗಿದೆ. ಪ್ರಪಂಚದ ಮೇಲಣ ಮೋಕ್ಷಕಾಮೀ ಸಂಪ್ರದಾಯಗಳು ಮಾನವೇತಿಹಾಸದಲ್ಲಿ ಪ್ರಜ್ಞಾ-ಪ್ರಾದುರ್ಭಾವವಾಗುವುದಕ್ಕೂ ಮುಂಚಿನ ಪ್ರಮಾಥೀ ಪ್ರಾಣಚೇತಸತ (Bio-sphere) ಪಾತಳಿಯ ಮೇಲೆ ಮೈತಾಳಿವೆ. ಇದು ಒಂದಕ್ಕಿಂತ ಹೆಚ್ಚು ರೀತಿಗಳಿಂದ ದೃಢಪಡುತ್ತದೆ.

೧. ಮೃತ್ಯುವಿನಿಂದ ಜೀವ ಸೃಷ್ಟಿಯಾಗಿದೆ: ಕತ್ತಲೆಯು ಬೆಳಕನ್ನು ಹಡೆಯುತ್ತದೆ, ಎಂಬ ಈ ಶ್ರದ್ಧೆ, ಇಜಿಪ್ತಿನಿಂದ ಭಾರತ ಜಪಾನಿನ ವರೆಗೂ ಹಬ್ಬಿ ಎಲ್ಲ ಚಾಂದ್ರ ಸಂಪ್ರದಾಯಗಳಲ್ಲೂ ಕಾಣುತ್ತದೆ. 'ಮೃತ್ಯುವಿನಿಂದ ಜೀವಸೃಷ್ಟಿ' ಎಂಬಲ್ಲಿ ಮೊದಲು ಅಮಾವಾಸ್ಯೆ (: ಪ್ರಲಯ); ನಂತರ ಬಾಲಚಂದ್ರನ ಪ್ರಸವ! ಎಂಬ ಗ್ರಹಿಕೆ ಅಭಿಪ್ರೇತವಿದೆ. ಈ ಪ್ರಪಂಚದ 'ದೃಶ್ಯ' (Phenomena), ಸಂಭ್ರಮಾತ್ಮಕವಿದೆ ಎಂಬ ಧ್ವನಿ ಇಲ್ಲಿದೆ. 'ರಾತ್ರೀ ದೇವಿಯು ಸೂರ್ಯನನ್ನು ಹೆತ್ತಳು' ಎಂಬ ಕಾವ್ಯಸತ್ಯದ (Phonomena) ದಿಗ್ಭ್ರಮೆಯನ್ನೇ ನಂಬಿಬಿಟ್ಟರೆ, ನಮ್ಮ ಪ್ರಜ್ಞೆಯ ಮಟ್ಟವೇ ಕೆಳಗೆ ಬರದೆ ಇರದು.

೨. 'ಸಂಸಾರವು ಭವ-ಬಂಧನ; ಹುಟ್ಟಿದ್ದೇ ಪಾಪದಿಂದ'; ಇಂಥ ಗ್ರಹಿಕೆಗಳೇ ಶ್ರದ್ಧಾಸ್ಥಾನದಲ್ಲಿ ಇರುವ ಸಂಪ್ರದಾಯದ ಸನ್ಯಾಸೀ ಮಠಗಳು, ಲೋಕಕಲ್ಯಾಣವನ್ನು ಹಾರೈಸುವುದು ಎಂದರೇನು, ಈ ವಿಪರೀತ? ಒಂದು ಪಿಳ್ಳೆಯೂ ಇಹಲೋಕದಲ್ಲಿ-ಭವ-ಬಂಧನದಲ್ಲಿ-ಇರುವ ವರೆಗೆ ತಾನು ಬೋಧಿಸತ್ವನಾಗಿ ಅವತರಿಸತಕ್ಕವನೇ', ಎಂಬ ಬೌದ್ಧಮತದ 'ಕರುಣೆಯ' ನಿಜವಾದ ಅರ್ಥವೇನು? ಈ ಪ್ರಪಂಚವು ನಿಸ್ಸಂತಾನವಾಗಲೆಂಬ ಅರ್ಥವೇ ಇಲ್ಲಿ ಅಭಿಪ್ರೇತವಿಲ್ಲವೆ? ಶಿಷ್ಯನ 'ಕಲ್ಯಾಣಕ್ಕಾಗಿ' ಗುರುವು ಅವನಿಗೆ ಆಪತ್ತುಗಳು ಎದುರಾಗುವಂತೆ ಮಾಡುತ್ತಾನೆ, ಎಂಬ ಶ್ರದ್ಧೆಯ ಅಸಮರ್ಪಕತೆ ಸ್ಪಷ್ಟವೇ ಇದೆ.

೩. ಒಂದೇ ಮೂಲಬೀಜದಿಂದ ಈ ಪ್ರಪಂಚವಾಗಿದೆ ಎಂಬ ಶ್ರದ್ಧೆ ಅನೈತಿಕ ಜೀವನ ರೀತಿಗೆ ಪ್ರೇರಿಸುವುದು ನಿಶ್ಚಿತ. ಹಿಂದೆ ಹೇಳಿದಂತೆ - ಅದಿತಿ ದಕ್ಷರ ಸಂಬಂಧದಲ್ಲಿ 'ತಾಯ್ಗಂಡತನ', 'ಮಗಳಗಂಡ' ಅಥವಾ 'ಸೋದರೀಪತಿ' ಎಂಬ ಅನೈತಿಕ ಪ್ರೇರಣೆ ತಪ್ಪಿದ್ದಲ್ಲ! 'ಆದಿತ್ಯ' ಸಂಪ್ರದಾಯದ 'ಭಗ-ವತ್' ಗೀತೆಯಿಂದ ಸ್ಫೂರ್ತಿಪಡೆದ ಮೇಧಾವಿಗಳು 'ಅದಿತಿ' ಸಂಪ್ರದಾಯದ ಆಶ್ರಮ ಸ್ಥಾಪಿಸಿದ್ದಾರೆ; ಮಹಾತ್ಮರು ಶಾಕ್ತಾಚಾರಿಗಳಾದರು.

೪. ಆದಿಮಾತಾಪುತ್ರನು ಚಂದ್ರನಾಗುತ್ತಿರುವಾಗ, 'ಆದಿತ್ಯ' ಎಂಬ ಹೆಸರಿನಲ್ಲಿ ಸೂರ್ಯನ ಸಂಭ್ರಮ ನಿರ್ಮಿಸಿರುವ ಈ 'ಆದಿತ್ಯಾನಾಂ ಅಹಂ' ಎಂಬ ವಿಷ್ಣು (ಕೃಷ್ಣ) ಸಂಪ್ರದಾಯ, (ಮಲ್ಲಾರಿ) ಮಾರ್ತಾಂಡನೆಂದು ರವಿವಾರ ಪೂಜೆಗೊಳ್ಳುವ ಶೈವಪಂಥ, Sunday Sabbath ಇರುವ ಕುಮಾರಿ ಮೇರೀಪುತ್ರನ ಕ್ರೈಸ್ತ ಸಂಪ್ರದಾಯ. ಇವೆಲ್ಲ ಮೋಕ್ಷಕಾಮೀ ಪಂಥಗಳಲ್ಲಿ 'ನಿಶ್ಯಬ್ದಂ' ಬ್ರಹ್ಮಉಪಾಸನೆ ಅನಿವಾರ್ಯವಿದೆ. ನಿಜವಾಗಿ, ಚಂದ್ರೋಪಸ್ಥಾನದ 'ತತ್'ಮಯತೆಯಲ್ಲಿ 'ರಸೋ ವೈ ಸಃ' ಎಂಬ ಸುರಸ(ರಾತ್ರ) ಸತ್ಯ-ಸಾಕ್ಷಾತ್ಕಾರವು ಅವಶ್ಯವಾಗುವ ಈ ಸಂಪ್ರದಾಯಗಳು, ಮಾನವ ಸಂಸ್ಕೃತಿಯ ತಾರಕ ಪಂಥಗಳಾಗಲು ಹೇಗೆ ಶಕ್ಯ? 'ಕಾಲೋऽಸ್ಮಿ' ಎಂಬ ಭಗವಂತನ ಪಂಥ ಮಾನವ ಜೀವನ=ಸಂಸ್ಕೃತಿಗೆ ತಾರಕವಾಗದೆ, ಮಾರಕ ಸ್ವರೂಪವಾಗಿ ಪರಿಣಮಿಸುತ್ತ ಬಂದಿದೆ.

೫. ಭೌತಶಾಸ್ತ್ರಗಳ ವಿವಿಧ ಕ್ಷೇತ್ರಗಳಲ್ಲಿ ಪ್ರಗತಿಯು ನಡೆದಿದೆ. ಆದರೆ ಅಭೌತ ತಾತ್ತ್ವಿಕ ಪಾತಳಿಯ ಸಾಂಸ್ಕೃತಿಕ ಕ್ಷೇತ್ರದಲ್ಲಿ ನಿತ್ಯ 'ಕಲಿಯುಗ'-ಕೋಲಾಹಲದ ಜೀವನ ರೀತಿಯೇ ಉಳಿದು ಬರುತ್ತಿರಲು ಮುಖ್ಯ ಕಾರಣವೇನು?

ಕತ್ತಲೆಯಿಂದ ಬೆಳಕು ಹುಟ್ಟಲು ಶಕ್ಯವೋ? ಕತ್ತಲೆಯು ಪ್ರಕಾಶದ ಅಭಾವ. 'ಅಭಾವವನ್ನೇ ಸ್ಥಾಯಿ ಭಾವವನ್ನಾಗಿ ಕಲ್ಪಿಸಿರುವ' ಮೋಕ್ಷಕಾಮೀ ಸಂಪ್ರದಾಯಗಳು ಪ್ರಪಂಚದಲ್ಲಿ ಪ್ರಭಾವಶಾಲಿಗಳಾಗಿರುವ ವರೆಗೆ ಮಾನವ ಸಂಸ್ಕೃತಿಯ ಪ್ರಗತಿಗೆ ಆಶೆ ಎಲ್ಲಿ? ಕೃಷ್ಣ-ರಾತ್ರಿ; ಅರ್ಜುನ : ಪ್ರಕಾಶ-ಎಂಬ ತತ್ತ್ವವು ವೇದದಲ್ಲಿಯೇ ಇದೆ![೯] ವೈಶ್ವಾನರಾಗ್ನಿ ಎಂದರೆ ಸಮಷ್ಟಿ=ಸಮಾಜರೂಪೀ ಶಕ್ತಿ. ಮಾನವ: ಜೀವನ=ಸಂಸ್ಕೃತಿಯ ಮಹಾ ವಸ್ತ್ರವನ್ನು ನೇಯುತ್ತಿದೆ, ಎಂಬ ರೂಪಕವು ಮೂಲದಲ್ಲಿದೆ. ಈ ನೇಯ್ಗೆಯಲ್ಲಿ 'ಹಾಸು' ಎಂದರೆ ಪ್ರಕಾಶ; ಸೂರ್ಯ ಮೊದಲು ಬೇಕು. ಬಳಿಕ ರಾತ್ರಿ=ಚಂದ್ರರೂಪ ಹೊಕ್ಕು, ಈ ಅನುಕ್ರಮವಿದ್ದರೆ ಮಾತ್ರ ಸಂಸ್ಕೃತಿಯ ಮಹಾವಸ್ತ್ರವು ಸಿದ್ಧವಾದೀತು! ಆದರೆ, ದಿಗಂಬರ ಪಂಥೀಯ 'ಕೌಪೀನವಂತ: ಖಲು ಭಾಗ್ಯವಂತಃ' ಎಂಬ ಬಾಳಗುರಿಯ ಅಮಂಗಳ ಸಂಪ್ರದಾಯಗಳು, ಈ ಜೀವನವನ್ನು 'ದಗ್ಧಪಟ' ಎಂದು ನಂಬುವಂತೆ ಮಾಟಮಾಡಿವೆ. ಕೃಷ್ಣ (ರಾತ್ರಿ ಮೃತ್ಯು) ಶಕ್ತಿಗೆ, ಅರ್ಜುನ (ಪ್ರಕಾಶ, ಪ್ರಗತಿಪ್ರೇರಕ) ಶಕ್ತಿ ಬೆಂಬತ್ತಿರುವ ಭಗವತ್ ಗೀತೆಯ ಭಗವಂತನ ಈ ಉಪಾಸನೆಯು, ಮಾನವನನ್ನು ರಾತ್ರಿಯ ಸಮಯಾಚಾರಕ್ಕೆ ಪ್ರೇರಿಸಲೇಬೇಕಷ್ಟೆ? ಚಂದ್ರನ ಅನುಯಾಯಿ ಸೂರ್ಯನು ಆಗುವ ಜೀವನ ರೀತಿಯಲ್ಲಿ, ಅನೈಸರ್ಗಿಕತೆ ಭ್ರಷ್ಟಾಚಾರವೇ ಬೆಳೆಯಬಹುದಷ್ಟೇ? 'ಆರಾಧ್ಯದೈವತ ಮತ್ತು ಆರಾಧಕನ ದೈವ' ಇವೆರಡೂ ಬೇರೆಬೇರೆ ಇರಲು ಸಾಧ್ಯವಿಲ್ಲ. ಭಾರತೀಯ ಭಾಷೆ ಹಾಗು ಸಂಸ್ಕೃತಿಯನ್ನು ಮೂಲದಲ್ಲಿ ರೂಪಿಸಿದ್ದು, ವಿವಸ್ವನ್ (ಸೌರ) ಪ್ರೇರಣೆ, ಈ ವಿವಸ್ವನ್ ಮನುಪ್ರಣೀತ 'ಮಾನವ ಧರ್ಮ'ದ ಆರಾಧ್ಯತತ್ತ್ವವಾದ 'ವೈಶ್ವಾನರಾಗ್ನಿ'ಯಿಂದ ಪ್ರವರ್ತಿತ 'ಸಮಯ' (: ಆಚಾರ) ರೂಪೀ (ಪ್ರಕಾಶದಿಂದ ಪ್ರೇರಿತ) ಕಾಲಗತಿ ಇದು; 'ಚಕ್ರಾಕಾರ'ದ ಕಾಲಗತಿಯಲ್ಲ. ನಿನ್ನೆ ಇಂದುಗಳು 'ಭವ್ಯ' : ಆಗಾಮೀ ನಾಳೆಯತ್ತ ಸಾಗಿರುವ ಈ ಕಾಲಗತಿಯಲ್ಲಿ ಮಾನವೇತಿಹಾಸವು ಸಂಭವಿಸುತ್ತ ಬಂದಿದೆ. 'Emergent Evolution'(ಪ್ರಾದುರ್ಭಾವ ರೂಪೀ ವಿಕಾಸಕ್ರಮ) ಇದು ಸೌರಗತಿಯ ಮೂಲಕ ಗಮನಕ್ಕೆ ಬರಲು ಶಕ್ಯವಾಗಿದೆ. ಈ ಜೀವನ ವಿಶ್ವದಲ್ಲಿ, 'ಅಕ್ಷ'ದ ಸುತ್ತಲೂ ತಿರುಗುವ 'ವೃತ್ತ(: ವೃತ್ರ) ಆಕೃತಿಯ ಕಾಲಗತಿಯೊಂದರ ಅಸ್ತಿತ್ವವೂ ಉಂಟು, ಎಂಬುದು ಸಿದ್ಧವಾಗಿದೆ. ವಿಶ್ವವಿಕಾಸಕ್ಕೆ ಪ್ರೇರಕವಿರುವ ಕಾಲಗತಿ, ಇದು (ನಿನ್ನೆ ಇಂದುಗಳ) ಆಗಾಮೀ ನಾಳೆಯತ್ತಣಗತಿಯ ಕಾಲತತ್ತ್ವ, ಎಂಬುದನ್ನು ಒಪ್ಪಲು ಹಚ್ಚುವ, ವಿಶ್ವದಲ್ಲಿ ಸಂಭವಿಸುತ್ತ ಬಂದಿರುವ, 'ಪ್ರಾದುರ್ಭಾವ' (Emergent, Contingent) ರೂಪೀ ಘಟನೆಗಳನ್ನು ಕಡೆಗಣಿಸಿ ನಡೆಯಲಾರದು. ಖಗೋಲಶಾಸ್ತ್ರಜ್ಞರ ಅರಿಕೆಗೆ ಬಂದಿರುವ 'Expanding Universe'ದ ಕಾರಣವೂ ಸೌರತತ್ತ್ವದ ಕಾಲಗತಿಯ ಪ್ರೇರಣೆಯೇ ಆಗಿದೆ!

ನಿರ್ಜೀವ-ಅಚೇತನ ಜಡಸೃಷ್ಟಿಯ ಮುಂದಿನ ಹಂತವು ಸಚೇತನ ಜೀವ-ಜಂತು, ಸಸ್ಯವೃಕ್ಷಾದಿಗಳ 'ಪ್ರಾದುರ್ಭಾವ; ಈ ಸಚೇತನ ಪಾತಳಿಯಲ್ಲಿ, ಏಕಾಣುಜೀವಿಯಿಂದ, ವಾನರ ನರ ವರ್ಗದ ಜೀವ-ಜಂತುಗಳ ದೈಹಿಕ ಆಕೃತಿ ಸ್ವರೂಪದ ರಚನೆಯಲ್ಲಿ ಆಗಾಗ 'ಪ್ರಾದುರ್ಭಾವ' ರೂಪೀ ಸ್ಥಿತ್ಯಂತರ ಕಾಣಿಸಿಕೊಳ್ಳುತ್ತ ಬಂದಿರುವದನ್ನು ಭೌತಶಾಸ್ತ್ರಜ್ಞರೆಲ್ಲ ಸುಮಾರಾಗಿ, ಮಾನ್ಯಮಾಡಿದ್ದಾರೆ. ಜಡಸೃಷ್ಟಿ ಇನ್ನುಳಿದ ಗ್ರಹಗಳಂತೆ, ತನ್ನ 'ಅಕ್ಷ'ದ (ಮೈ) ಸುತ್ತಲೂ ತಿರುಗಬಲ್ಲದು, ಸಸ್ಯವೃಕ್ಷಾದಿಗಳು, ಜೀವಜಂತುಗಳೂ 'ಜಡಸೃಷ್ಟಿಯ' ಭೌತಕಾಲ-ಗತಿಗೇ ಒಳಗಾಗಿವೆ! ಹುಟ್ಟು-ಸಾವಿನ ಈ ದೃಶ್ಯ (Phenomena) ಇದು, ಭೌತ ಆಪ; ರಸ=ರೇತದ ಅಥವಾ ಉಪನಿಷತ್ತಿನ ಪರಿಭಾಷೆಯ 'ಅಂಗಾನಾಂರಸ'=ಪ್ರಾಣ ಚೇತಸದ, ಇಲ್ಲವೆ 'ಭೌತಶಾಸ್ತ್ರದ ಪರಿಭಾಷೆಯ Biosphere ಪಾತಳಿಯ ಮೇಲಣ - 'ಕಾಲಗತಿ' ತತ್ತ್ವಪ್ರೇರಣೆಯ ಪರಿಣಾಮ, ಇದೂ ಭೌತಕಾಲಗತಿಯೆ! Biologicaltime=organic,='Organ' ಪ್ರೇರಕ ಕಾಲಶಕ್ತಿ; ಪುರಾತನರು ಇದನ್ನು 'ಚಂದ್ರಶಕ್ತಿ' ಎಂದಿದ್ದಾರೆ. 'ಸಂ-ವತ್ಸರ' ನಿರ್ಮಿಸುವ ಈ 'ಕಾಲ'ವನ್ನು, 'ಹಿರಣ್ಯ-ಗರ್ಭ' (Golden Germ) ಪ್ರಜಾಪತಿ (: ಬ್ರಹ್ಮ ಶಕ್ತಿ) ಎಂದು ಇಂದಿನ ವೇದವು ಇದನ್ನು ಗುರುತಿಸಿದೆ.

ಆದರೆ, ಈ ಭೌತಕಾಲತ್ತ್ವವು 'ಅಕ್ಷ'ದ ಸುತ್ತಲೂ ತಿರುಗುವ ಚಕ್ರಾಕಾರದ ಕಾಲ! ಇದು 'ಸ್ತಂಭ' ಕಾಲ. 'ನಾಭಿ-ರಾಜ' ಎಂಬ ಶಬ್ದಪ್ರತಿಮೆಯಲ್ಲಿ 'ಚಕ್ರ' ಮಧ್ಯಸ್ಥ 'ಅಕ್ಷ'ದ, 'Gestalt' (ಸಾಕ್ಷಾತ್ ಆಕೃತಿರೂಪ) ಉಂಟು! ಈ ವಿಶ್ವದಲ್ಲಿ 'ಭಗ-ವಾನ್' : ನಾಭಿ-ರಾಜ=ಕೃಷ್ಣಶಕ್ತಿ ಪ್ರೇರಣೆಯ 'ಕಾಲಗತಿ'. ಇದೇ 'ಸಾರ್ವಭೌಮ' ಶಕ್ತಿ ಆಗಿದ್ದಲ್ಲಿ; ಕಾಲಕಾಲಕ್ಕೆ ಆಗುತ್ತ ಬಂದಿರುವ, ಇನ್ನು ಮುಂದೆಯೂ ಆಗಬಹುದಾದ 'ಪ್ರಾದುರ್ಭಾವ'ಗಳು ಸಂಭವಿಸಲು ಶಕ್ಯವೇ ಇಲ್ಲ. 'ಕೃಷ್ಣ'ಶಕ್ತಿ ಪ್ರೇರಿತ ಕಾಲವು=Chronus ಕಾಲವು ಭೌಮಾಸುರರನ್ನು- Titans- ನಿರ್ಮಿಸುತ್ತದೆ ಎಂದು ಗ್ರೀಕ್ ಪುರಾತನಕಥೆಗಳಿಂದಲೂ ಗೊತ್ತಾಗುತ್ತದೆ! ಈ ಮೊದಲು ವಿವರಿಸಿರುವಂತೆ ಚಕ್ರಾಕೃತಿಯ ಕಾಲಗತಿಯ ಮೂಲಕ, 'ಪಿತಾಸನ್ ಅಭವತ್ ಪುತ್ರಃ' ಎಂದು ಅಥರ್ವವೇದದ ಕಾಲಸೂಕ್ತದ ಕವಿಯು ಹೇಳಿರುವಂತೆ, ತಂದೆಯೇ 'ಮಗ'ನಾಗಿ ಮರುಳುವಲ್ಲಿ, ಏನೆಲ್ಲವೂ 'ನಿನ್ನೆ'ಗಳೇ ಮರಳಿರುವ ಬಾಳು, ಆಗಬಲ್ಲದು. ಅಥವಾ ಋಗ್ವೇದದ ಒಬ್ಬ ಕವಿ ವರ್ಣಿಸಿರುವಂತೆ, 'ಪುತ್ರಃ ಸನ್ ಪಿತಾ ಭುವಃ'[೧೦] 'Child is the father of man', ಎಂದು ವರ್ಡ್ಸ್‌ವರ್ಥ ಹೇಳಿರುವ ದೃಶ್ಯ ಈ ಬಾಳಿನಲ್ಲಿ ಕಾಣಬೇಕಿತ್ತು! ಮೊದಲನೆಯ ಶ್ರದ್ಧೆಯಂತೆ, ಈ ಬಾಳಿನಲ್ಲಿ 'ಏನೆಲ್ಲ ನಿನ್ನೆ'ಗಳೆ ಹೊರತು, ಇಂದು, ನಾಳೆ ಎಂಬ ಮಾತಿಗೆ ಇಂಬಿಲ್ಲ! ಅಥವಾ ಎರಡನೆಯ ಶ್ರದ್ಧೆಯಂತೆ 'ಏನೆಲ್ಲವೂ ನಿತ್ಯ ವರ್ತಮಾನ ಕಾಲ'=ಎಂದರೆ 'ಇಂದು' ಇದೇ ಉಂಟು. ಇದು ಶುದ್ಧ ಕೇವಲಾಸ್ತಿತ್ವವಾದ! (ವಿಶ್ವ)ಗರ್ಭಸ್ಥ 'ಸನಾತನ ಶಿಶು' ಮಾತ್ರ=ಹಿರಣ್ಯ 'ಗರ್ಭ'-ತತ್ತ್ವ ಇದೊಂದೇ (ಏಕಂ ಏವ) 'ಸತ್', 'ನಿತ್ಯ'. ಇನ್ನು ಉಳಿದುದೆಲ್ಲವೂ ಮಾಯೆ=Phenomena! ಆದರೆ, ಇದು 'ಸತ್-ತ್ವ' ರೂಪ 'ಸತ್-ತ್ಯ'; ಇದನ್ನು 'ಸತ್ಯ' ಎಂದು (ಸತ್+ತ್ಯ) ಹೇಳುವ ವಾಡಿಕೆಯಿತ್ತು.

ಈ ಜೀವನದಲ್ಲಿ, 'ಸತ್ತ್ವಂ' ಭೂಮಿಕೆಯ 'ವೃತ್ತಮಧ್ಯ ಅಕ್ಷ' ಪ್ರೇರಿತ ಕಾಲಗತಿಯಲ್ಲದೆ, 'ಋತ' ಸ್ವರೂಪೀ ವಿಶ್ವ-ನಿಯಮಾಧಿಷ್ಠಿತ 'ಸತ್ಯ'ದ ಭೂಮಿಕೆಯ ಇನ್ನೊಂದು ಕಾಲಗತಿಯೂ, ಈ (ಜೀವನ) ವಿಶ್ವದಲ್ಲಿ ಉಂಟು, ಉಭಯ ಕಾಲಗತಿಯನ್ನೂ ಲೆಕ್ಕಿಸಿದ ಶ್ರದ್ಧೆಯ 'ಮಾನವಧರ್ಮ' ಸಂಪ್ರದಾಯವು, ಹಿಂದೊಮ್ಮೆ ಭಾರತದಲ್ಲಿ ಜೀವಂತವಿತ್ತು, ಆದರೆ 'ಭಗ-ವತ್' ರೂಪದ 'ತತ್' ಮಯಾನಂದೀ ಉಪಾಸಕರಿಂದಾಗಿ, ಆ ಮನುಪ್ರಣೀತ 'ಮಾನವಧರ್ಮ'ವು ಇಂದು, ಬೆಲೆಗೇಡಾಗಿ, ಹಿಂದೆ ಬಿದ್ದಿದೆ! ವೇದಕಾಲೀನ 'ಆದಿತ್ಯ' ಸಂಪ್ರದಾಯವು ತಲೆಯೆತ್ತಿ ಪ್ರಭಾವಶಾಲಿಯಾಗುವ ಮುಂಚೆ, ಎಂದರೆ 'ರವಿ'ಯು 'ಆದಿತ್ಯ' ರೂಪನಾಗುವ ಪೂರ್ವದಲ್ಲಿ-'ಹಿಂದೊಮ್ಮೆ ವಿವಸ್ವನ್ ಪ್ರೇರಣೆಯ 'ಮನು'ಪ್ರಚಲಿತವಿತ್ತು' ಎಂದು ಸಿದ್ಧಪಡಿಸಬೇಕಾಗುವ ವಿಚಿತ್ರ ಪರಿಸ್ಥಿತಿಯನ್ನು, ಇಂದು ಎದುರಿಸಬೇಕಾಗಿದೆ!

ಮಂಗನಿಂದ ಮುಂದಿನ ಹಂತದಲ್ಲಿ, 'ನರ(ಳ)' 'ಮನು'-ಜನಾದದ್ದು ನಿಜವಷ್ಟೆ? ಈ 'ಮನು' ಸಂತಾನವು, 'ಪ್ರಜ್ಞಾ'ರೂಪ ಪ್ರಕಾಶತತ್ತ್ವವನ್ನು ಆರಾಧಿಸುವ ಸಂಪ್ರದಾಯವನ್ನು ರೂಢಿಸಿದ್ದಾಯ್ತು'. ಸೂರ್ಯ, ಚಂದ್ರರೂಪ ಪರಿಭಾಷೆ ಇಂದು ಹಿಡಿಸಲಾರದು; ಇದು ನಿಜವಿದ್ದರೂ ಈ ಮಾಧ್ಯಮ ಪ್ರತಿಮೆಯೊಳಗಿನ ಒಂದಕ್ಕಿಂತ ಹೆಚ್ಚು ಪಾತಳಿಗಳ ಮೇಲಣ ಅರ್ಥಸೂಚಕ ಅದ್ಭುತ ಸಾಂಕೇತಿಕಶಕ್ತಿ ಕೇವಲ ಬೌದ್ಧಿಕ ಪಾತಳಿಯ ತರ್ಕಪದ್ಧತಿಯಿಂದ ನಿರ್ಮಿತ ಶಬ್ದಮಾಧ್ಯಮದಲ್ಲಿ ಕಾಣಲು ದೊರೆಯದು. ಶುದ್ಧ ಶಾಸ್ತ್ರೀಯಮಟ್ಟದ ಭೌತಪಾತಳಿಯ ಸತ್ಯಾನ್ವೇಷಣೆಯಲ್ಲಿ, ನಿಶ್ಚಿತ ಅರ್ಥದಾಯಕ ಶಬ್ದ-ಸಂಕೇತಗಳೇ ಬೇಕು. ಇದು ಅನಿವಾರ್ಯ. ಆದರೆ, ಅಭೌತ ಸಾಂಸ್ಕೃತಿಕ ಮಟ್ಟದ ಅಭಿವೃದ್ಧಿಯಲ್ಲಿ, ಒಂದೇ ಕಾಲಕ್ಕೆ ಒಂದಕ್ಕಿಂತ ಹೆಚ್ಚು ಪಾತಳಿಗಳ ಮೇಲಣ ಅರ್ಥವು ಹೊಳೆದು ಹೋಗುತ್ತದೆ! 'ತಿಂಗಳು' ಇಲ್ಲಿ ಚಂದ್ರಸೂಚಕ ಅರ್ಥವಲ್ಲದೆ 'ಮಾಸ' ಸೂಚಕ ಕಾಲಾವಧಿಯೂ ಅರಿಕೆಗೆ ಬರುತ್ತದೆ! ಒಂದು ಪದಕ್ಕೆ, ಒಂದೇ ಅರ್ಥವಿರುವ ಪದವನ್ನು 'ಸಂಕೇತ' ಎಂದು ಹೇಳುವುದು ಅನುಚಿತ. ಸಾಂಕೇತಿಕ ಅರ್ಥಗ್ರಹಣಶಕ್ತಿ, ಬಹುಮುಖ 'ಪ್ರಜ್ಞೆ'ಯಿಂದಾಗಿ ಶಕ್ಯವಾಗಿದೆ! ನರ(ಳ)ನು 'ಮನು'-ಜನಾದದ್ದು, ಇವನಿಗೆ ದ್ವಿ-ಜತ್ವವು ಪ್ರಾಪ್ತವಾದದ್ದು ಪ್ರಜ್ಞೋದಯದಿಂದಾಗಿ! ಡಾ. ಜೂಲಿಯನ್ ಕ್ರೋಬರ್ ಪ್ರಭೃತಿ ಭೌತಶಾಸ್ತ್ರಜ್ಞರು, 'ಪ್ರಜ್ಞೆ' (Consciousness of Consciousness, Conscience) ಇದನ್ನು ನೇರವಾಗಿ ಒಪ್ಪಿದಂತಿಲ್ಲ. ಆದರೂ ಸಂಸ್ಕೃತಿಯು, ಇಂದ್ರಿಯಜನ್ಯ ಪಾತಳಿಗಿಂತ ಮಿಗಿಲಾದ ಹಂತದ್ದು' (Super-organic) ಎಂದು ಒಪ್ಪುತ್ತಿದ್ದಾರೆ. ಡಾ. ಜೂಲಿಯನ್ ಹಕ್ಸ್ಲೆ 'Biospher' ಆಚೆಗಿನ 'Neosphere' ಎಂಬ ಒಂದು ಸಾಂಕೇತಿಕ ಪಾತಳಿಯ ಆವಶ್ಯಕತೆಯನ್ನು ಒಪ್ಪಿದ್ದಾರೆ. ಈ ನೂತನ ಸಂಕೇತ ಸೃಷ್ಟಿಸಿದ ಡಾ. ಪಿ.ಟಿ. ಚಾರ್ಡಿನ್ (Chardin) ಇವರು ಮಾತ್ರ 'ಪ್ರಜ್ಞೆ'ಯ ಅಸ್ತಿತ್ವವನ್ನು ಮನಂಬುಗುವಂತೆ ಪ್ರತಿಪಾದಿಸಿದ್ದಾಗಿದೆ.[೧೧]

'ಪ್ರಜ್ಞಾ' ಶಕ್ತಿಯ ವೈಶಿಷ್ಟ್ಯವು ಯಾವುದು? "To turn upon itself, to take possession of itself as of an object...". ಇದು ಆ ವೈಶಿಷ್ಟ್ಯ : ವ್ಯಕ್ತಿಯ ಪ್ರಜ್ಞೆ, ಆ ವ್ಯಕ್ತಿಯನ್ನು ತ್ರಯಸ್ಥಭಾವದಿಂದ ಸಮೀಕ್ಷಿಸಬಲ್ಲುದು, ವಿಮರ್ಶಿಸಬಲ್ಲುದು. ಈ 'ಪ್ರಜ್ಞಾ' (ಪ್ರಕಾಶ) ಶಕ್ತಿಯನ್ನು ಭಾರತೀಯ ಪುರಾತನರು 'ಜಾತ-ವೇದ' (ಅಗ್ನಿ) ಎಂದು ಹೆಸರಿಸಿದ್ದಾರೆ. ಈ ವೇದದಲ್ಲಿ ಇದಕ್ಕೆ ಪ್ರತಿಯಾಗಿ, 'ನ-ಚಿಕೇತ' ಎಂದರೆ ತನ್ನನ್ನು ತಾನು ಅರಿಯದ್ದು: ಅ-ಸ್ವಯಂ ವೇದ್ಯ! 'ಜಾತವೇದ ಅಗ್ನಿ' ಈ ಪದವನ್ನು, ಸಾಯಣರು 'ಜಾತಪ್ರಜ್ಞ' ಎಂದು ಸ್ಪಷ್ಟೀಕರಿಸಿದ್ದಾರೆ. 'ಜಾತ' (ಹುಟ್ಟಿಕೊಂಡಿರುವ) ಈ 'ಪ್ರಜ್ಞೆ', ಮನು-ಜ ಪೂರ್ವ ಹಂತದ ಜೀವಿಗಳಲ್ಲಿ ಇದ್ದಿಲ್ಲ-ಇಲ್ಲ, ಎಂಬ ಆಶಯವೂ 'ಜಾತವೇದ', 'ಜಾತಪ್ರಜ್ಞ' ಈ ಪದಗಳಲ್ಲಿ ಅಭಿಪ್ರೇತವಿದೆ. 'ನ-ಚಿಕೇತ ಅಗ್ನಿ'=ಅಗ್ನಿ-ನಾರಾಯಣ! ನೀರಿನಲ್ಲಿ=ನಾರ-ಅಯನದಲ್ಲಿ, 'ಇರುವ ಅಗ್ನಿ'! 'ಅಂಗಾನಾಂ ರಸ' ಸ್ವರೂಪ 'ನೀರಿ'ನಲ್ಲಿರುವ ಈ ಅಗ್ನಿಯಲ್ಲಿ, 'ಜಾತವೇದ ಅಗ್ನಿ' (=ಪ್ರಜ್ಞೆ) ವಿಲೀನವಾಯ್ತೆ, ಎಂದು ವರ್ಣಿಸಿರುವ ಇಂದಿನ ಈ ಸಂಹಿತೆಯ ಈ 'ಮಾಟ' ಮೋಸ; ಮೂಲ 'ಮನು' ಪ್ರಣೀತ 'ಮಾನವ ಧರ್ಮ' ಪರಂಪರೆಯು, ವಿಚ್ಛಿನ್ನವಾದ ಕಾರಣವನ್ನು ಬಯಲಿಗೆ ತರುತ್ತಿದೆ![೧೨]

ಪ್ರಜ್ಞಾ: ಪ್ರಾತಿಭದೃಷ್ಟಿ ತಲೆದೋರಿದುದರ 'ಪ್ರಜ್ಞೆ' ಭಾರತೀಯ ಪುರಾತನರಲ್ಲಿ ಒಡಮೂಡಿ, ಸಾವಿರಾರು ವರ್ಷಗಳಾದುವು. ಆದರೆ, ಈ 'ಪ್ರಜ್ಞೆಯ ಅಸ್ತಿತ್ವದ ಬಗೆಗೆ, ಇಂದು, ಪಾಶ್ಚಾತ್ಯ ವಿದ್ವಾಂಸರ ಮೂಲಕ, ಮರಳಿ, ಶ್ರದ್ಧೆಯನ್ನು ತಾಳುವ ಹೊತ್ತು ಬಂದಿದೆ! ಅಂದಿನಿಂದಲೇ ಈ 'ಪ್ರಜ್ಞೆ' ಜಾಗ್ರತವಿದ್ದರೆ, 'ಬೃಹಲ್ಲಾಂಗೂಲ' ವೃಷಾಕಪಿಯ=ಮುಖ್ಯ ಪ್ರಾಣನ ಉಪಾಸಕ ನರ(ಳ)ರಾಗಿ ಬಾಳುವಲ್ಲಿಯೇ, ಕೃತಾರ್ಥತೆ ಯುಂಟೆಂಬ ಇಂದಿನ ಗ್ರಹಿಕೆಗೆ ಆಸ್ಪದ ದೊರೆಯುತ್ತಿದ್ದಿಲ್ಲ. ಪ್ರಾಣಿಗಳಲ್ಲಿ 'ಅರಿವು' ಇರುತ್ತದೆ. ಆದರೆ ತಮ್ಮ ಅರಿವಿನ ಅರಿವು ಅವಕ್ಕಿಲ್ಲ. ಆದರೆ, 'ಜಾತಪ್ರಜ್ಞ' ಮಾನವನು 'ಸ್ವ' ಉಪಜ್ಞನಾಗಿದ್ದಾನೆ. ಡಾ. ಚಾರ್ಡಿನ್ ಹೇಳಿರುವ ಈ ವಿವರಣೆ ಮನನೀಯವಿದೆ.

> "Now the consequences of sudha a transformation... The being who is the object of his own reflection, in consequence of that

> very doubling back upon himself, becomes in a flash able to raise, himself into a new sphere. In reality, another world is born...activities of inner Life, are nothing else than the efferves-cence of the newly-formed centre as it explodes into itself."

ಭಾರತೀಯ ಪುರಾತನರು, ಮಾನವಜೀವನದಲ್ಲಿ ಆಗುವ ಪ್ರಜ್ಞೋದಯದ ಈ ನೂತನ ಪಾತಳಿಯನ್ನು 'ಸ್ವರ್' [ಸ್ವಃ, ಸುವಃ] (: ಪ್ರಕಾಶತತ್ತ್ವದ flash ಹಂತ) ಎಂದು ಹೆಸರಿಸಿದ್ದುದರ ಔಚಿತ್ಯವು, ಡಾ. ಚಾರ್ಡಿನರ ವಿವರಣೆಯಿಂದ ಗಮನಕ್ಕೆ ಬರಬಲ್ಲುದು. ಅಲ್ಲದೆ, ಈ ಅದೃಶ್ಯ ಹಂತವು, ಥಕ್ಕನೆ ಸ್ಫೋಟದಂತೆ ಹೊರಬರುವುದೆಂಬ ಚಾರ್ಡಿನರ ಈ ಜೀವನಾನುಭವವು ಅವರ 'Flash' ಕ್ಕೆ ಸಾಕ್ಷಿ. ಅಲ್ಲದೆ ಭಾರತೀಯ ಪುರಾತನರ 'ವ್ಯಾಹೃತಿ' (ವಿ+ಆ+ಹ) ಎಂಬ ಪರಿಭಾಷೆಯ ಸಮರ್ಪಕತೆಯನ್ನೂ ಇದು ಗಮನಕ್ಕೆ ತಂದುಕೊಡುತ್ತದೆ. 'ರಾ'ಜ ವಿದ್ಯಾ, 'ರಾ'ಜ ಗುಹ್ಯದ ಸಿದ್ಧಿಯ 'ಭಗವಂತ'ರಾಗುವ ಹಂಬಲದವರಿಗೆ,. 'ಪ್ರಜ್ಞಾ'=ವಿವೇಕ (ಪ್ರಕಾಶತತ್ತ್ವ,) ಆತಂಕಕಾರಿಯಾಗುವುದು ನಿಶ್ಚಿತ. ಆದರೆ, 'ಆದಿತ್ಯ' ಪಂಥೀಯ ಇಂದಿನ ಸಂಹಿತೆ, 'ಜಾತವೇದ ಅಗ್ನಿ' (:ಜಾತಪ್ರಜ್ಞೆ) ಇದು 'ನ-ಚಿಕೇತಾಗ್ನಿ' ರೂಪ 'ಬೃಹದುಲ್ಬದಲ್ಲಿ (: Vulva), ಆಪ=ರಸ=ರೇತದಲ್ಲಿ' ಹೋಗಿ ವಿಲೀನವಾಯಿತು. ಎಂದು ಹೇಳಿದ್ದರೂ, ಅಥವಾ ಸಂಪ್ರದಾಯವಾದೀ ಭೌತಶಾಸ್ತ್ರ ವಿಶಾರದರು ಕೆಲರು 'ಪ್ರಜ್ಞೆ' (Conscious-ness of Consciousness, Conscience') ಇದರ ಸ್ವತಂತ್ರ ಅಸ್ತಿತ್ವವನ್ನು ಒಪ್ಪದೆ ಇದ್ದರೂ, ನಿಸರ್ಗಸ್ಥ ವಿಶ್ವದಲ್ಲಿ ಆಗುತ್ತ ಬಂದ ಪ್ರಾದುರ್ಭಾವದಿಂದಾಗಿ, ಈ 'ಪ್ರಜ್ಞೆ' ಮಾನವಜೀವನ ಪಾತಳಿಯಲ್ಲಿ ಕಾಣಿಸಿಕೊಂಡಿದೆ. ಆದಕಾರಣ, 'ಉದಾತ್ತೀಕೃತ' ಕಾಮವೇ ಪ್ರೇಮವಾಗುತ್ತದೆ, ಎಂಬಲ್ಲಿ ಜೀವನ ಮೂಲ್ಯ, ಪಾವಿತ್ರ್ಯಕ್ಕೆ ತಿಲಾಂಜಲಿ ದೊರೆಯುತ್ತ ಬಂದಿದೆ: 'ಆತ್ಮನಸ್ತ ಕಾಮಾಯ ಜಾಯಾ ಪ್ರಿಯಾಭವತಿ' ಎಂಬ ಈ ಯಾಜ್ಞವಲ್ಕ್ಯ-ಈ ವೇದೋಪನಿಷತ್ತು ಕಾಮವೇ ದೇವನೆಂದು ಬೋಧಿಸುತ್ತಿವೆ! ಆದರೆ ಸ್ವ-ಉಪಜ್ಞ ಮನುಜನು, ತತ್ತ್ವತಃ ಪುನರ್‌ಜನ್ಮ ತಾಳಿ ದ್ವಿ-ಜತ್ವದ ಪಾತಳಿಯ ಮೇಲೆ ವ್ಯವಹರಿಸಬಲ್ಲನೆಂದು ಚಾರ್ಡಿನ್‌ರೂ ಹೇಳುತ್ತಿದ್ದಾರೆ. ಡಾ. ಚಾರ್ಡಿನ್, ವಿಖ್ಯಾತ ಫ್ರೆಂಚ್ ಶಾಸ್ತ್ರಜ್ಞ ಹೇಳುವುದು ಮನನಾರ್ಹವಾಗಿದೆ. ಇದೆಲ್ಲ ವಿವರಣೆ ಯಾತಕ್ಕೆ?

ಮೂಲದಲ್ಲಿ ಭಾರತೀಯ ಸಂಸ್ಕೃತಿಯನ್ನು ರೂಪಿಸಿರುವ, ವಿವಸ್ವನ್ (ಪ್ರಕಾಶತತ್ತ್ವ) ಪ್ರೇರಕ ಕಾಲತತ್ತ್ವದ ಸ್ವರೂಪ ವಿವರಣೆಗಾಗಿ, ಇದೆಲ್ಲ, ಸ್ಪಷ್ಟೀಕರಣವು ಅವಶ್ಯವಾಯ್ತು. ಈ ಜೀವಿದಲ್ಲಿ, (ಸಂ-ವತ್ಸರ ಪ್ರೇರಕ) ವೃತ್ತ-ಮಧ್ಯ ಸ್ತಂಭಾ-ಕೃತಿಯ ಕಾಲತತ್ತ್ವವಲ್ಲದೆ, ಮಾನವೇತಿಹಾಸ ನಿರ್ಮಿತಿಗೆ ಪ್ರೇರಿಸುತ್ತಿರುವ, ಭವ್ಯ ನಾಳೆಯತ್ತಣಗತಿ ಪ್ರೇರಕ ಇನ್ನೂ ಒಂದು ಕಾಲತತ್ತ್ವವೂ ಉಂಟು. ಮಾನವಧರ್ಮ : ಸಂಸ್ಕೃತಿಯನ್ನು ರೂಪಿಸುವ ಅಂತಃಶಕ್ತಿಯ ಈ ಕಾಲತತ್ತ್ವವು ಸಮಾಜ : ಸಮಷ್ಟಿಯು ರೂಪಿಸುವ ಆಚಾರ - ವಿಚಾರಗಳ ಮೂಲಕ ಜೀವನದಲ್ಲಿ ಕಾಣಿಸಿಕೊಳ್ಳಬಲ್ಲುದು. ಭಾರತೀಯ ಪುರಾತನರ ಪರಿಭಾಷೆಯಲ್ಲಿ ಹೇಳಬಹುದಾದರೆ, ವೈಶ್ವಾನರಾಗ್ನಿಯು (Folk wisdom) ಈ ಸಾಂಸ್ಕೃತಿಕ ಸಮಾಜ : ಸಮಷ್ಟಿಯು ಕಾಲತತ್ತ್ವವನ್ನು-ಎಂದರೆ ಸಮಯಾಚಾರಗಳನ್ನು-ರೂಪಿಸುವ ಅಭಿಜಾತ ಶಕ್ತಿಯುಳ್ಳದ್ದಾಗಿದೆ. ಜೀವನ : ಸಂಸ್ಕೃತಿ - ರೂಪ ಮಹಾವಸ್ತ್ರಪಟದ ನೇಕಾರನು, ವೈಶ್ವಾನರಾಗ್ನಿ ಎಂಬ ಮೂಲವೇದದ ಮೂಲ ರೂಪಕವನ್ನು, ಭಗವಂತರ ಪಂಥವು ತಿರುವು ಮುರುವಾಗಿಸಿದ್ದೇಕೆ, ಮತ್ತೆ?

ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ವೇದಕಾಲದಲ್ಲಿಯೇ ತಲೆಯೆತ್ತಿದ, ಆದಿತ್ಯ : ಪುರುಷ : ವೃಕ್ಷ : ಸರ್ಪ ಉಪಾಸಕರ, ಆತ್ಯಂತಿಕ ಅಹಿಂಸಾತ್ಮಕ ಭೂಮಿಕೆಯ ಏಕಾಂತಿಕ ಸತ್-ತ್ವದ, ಭಕ್ತಿಯ ಪಾರಲೌಕಿಕಸಿದ್ಧಿಯ ಅಧ್ಯಾತ್ಮವಾದವು, ಸಮಾಜಸಮ್ಮುಖರಾಬಾಳಿ ವೈಶ್ವಾನ ರಾಗ್ನಿ ಉಪಾಸನೆಯಲ್ಲಿಯೇ ಜೀವನಸಾರ್ಥಕ್ಯವಿದೆ, ಎಂಬ ಶ್ರದ್ಧೆಯ, ಹಿಂದಿನ ಮನುಪ್ರಣೀತ ಮಾನವಧರ್ಮವನ್ನು ಶಿಥಿಲಗೊಳಿಸಿದೆ. ಈ ಸಂಗತಿಯು ಇನ್ನೂ ಬಗೆಬಗೆಗಳಿಂದ ದೃಢಪಡುತ್ತದೆ. ಇಂಥ ಒಂದು ಒರೆಗಲ್ಲಿನ ಮಾದರಿ ಈಗ ಇಲ್ಲಿ ಸಾಕು.

ಭಾಷೆಯೊಳಗಿನ, ಸಾಂಸ್ಕೃತಿಕ ಮಹತ್ವದ ಪರಿಭಾಷೆ, ಶಬ್ದ-ಪ್ರತಿಮೆ ತನ್ನ ಮೂಲಾರ್ಥಕ್ಕೆ ಎರವಾಗುವಾಗ, ಆ ಭಾಷಿಕರ ಜೀವನ : ಸಂಸ್ಕೃತಿಯಲ್ಲಿ ಪಲ್ಲಟವಾಯ್ತು; ಕ್ರಾಂತಿಯಾಯ್ತು, ಎಂದು ನಿಶ್ಚಿತವಾಗಿ ಗ್ರಹಿಸಬಹುದು. ಉದಾ : ಗಾಂಧೀ ಟೋಪಿ, ಮಹಾತ್ಮಾಜೀಯವರಿಂದ ಪ್ರಾರಂಭವಾದ, ಆ ನೂತನ ಯುಗಸೂಚಕವಾದ ಗಾಂಧೀಟೋಪಿಯ ಶುಭ್ರತೆ, ಅದನ್ನು ಧರಿಸಿದವರ ಪ್ರಾಮಾಣಿಕ ದೇಶಭಕ್ತಿಯು ಪ್ರತೀಕವಾಗಿತ್ತು. ಆದರೆ, ಈ 'ಗಾಂಧೀಟೋಪಿ' ಭ್ರಷ್ಟಾಚಾರ ಮುಚ್ಚಿಕೊಳ್ಳುವಲ್ಲಿ ಇದರ ಮೂಲಾರ್ಥವೇ ತಿರುವು ಮುರುವು ಆಗುತ್ತದೆ! ಸಂಕೇತಗಳ ಆರ್ತ-ಪಲ್ಲಟವು, ಆ ಭಾಷಿಕರ ಜೀವನದೃಷ್ಟಿಯಲ್ಲಿ ಆದ-ಆಚಾರ-ವಿಚಾರಗಳಲ್ಲಿ ಆದ ಸ್ಥಿತ್ಯಂತರದ ನಿಶ್ಚಿತ ಕುರುಹು.

ಇದೇ ಮೇರೆಗೆ ಭಾರತೀಯ ಸಂಸ್ಕೃತಿಯೊಳಗಿನ 'ಧರ್ಮ' ಈ ಸಂಕೇತದ ವಿಶಾಲ ಮೂಲಾರ್ಥವು, ಸಂಕುಚಿತವಾದುದನ್ನು ಕಾಣುತ್ತಿದ್ದೇವೆ. 'Religion' ಇದು ಚರ್ಚ್, ಮಠಕ್ಕೆ ಮಾತ್ರ ಸೀಮಿತ. ಆದರೆ 'ಧರ್ಮ'ವು ಮಾನವಜೀನವದಷ್ಟು ವಿಶಾಲಾರ್ಥವುಳ್ಳದ್ದಾಗಿದೆ. ಗೃಹಸ್ಥಧರ್ಮ ಸಮಾಜ ಧರ್ಮ ಪತ್ನಿಧರ್ಮ ಪುತ್ರಧರ್ಮ ದೇಹಧರ್ಮ... ಹೀಗೆ ಜೀವನದ ಪ್ರತಿಯೊಂದು ಅಂಗವೂ 'ಧರ್ಮ' (ನಿಯಮ)ಯುಕ್ತವಿದೆ. ಇಲ್ಲಿ 'ಧರ್ಮ' ಎಂದರೆ ಆಯಾ ವಿಭಾಗದ 'ಧಾರಣೆಗೆ'- ಅಸ್ತಿತ್ವಕ್ಕೆ ಭದ್ರತೆಗೆ ಆಧಾರಭೂತ ನಿಯಮ, ವ್ಯವಸ್ಥೆ. ಆದರೆ, ನಾರ-ಅಯನ ಪ್ರೇರಣೆಯ 'ಸ್ವ'ಧರ್ಮೇ ನಿಧನಂ ಶ್ರೇಯಃ ಎಂಬ ಶ್ರದ್ಧೆಯನ್ನು ತಾಳುವ 'ಭಗವಂತ' ಸಂಪ್ರದಾಯದ ಪ್ರಭಾವದಲ್ಲಿ, 'ಧರ್ಮ' ಶಬ್ದವು ತನ್ನ ವಿಶಾಲಾರ್ಥಕ್ಕೆ ಎರವಾಯ್ತು! ಜಾತಿಭೇದ ರಕ್ಷಣೆ, ಮಡಿ-ಮೈಲಿಗೆಯ ಹುಚ್ಚು, ಪಾದೋದಕ-ಪ್ರಸಾದದ ಭಕ್ತಿ ಎಂಬೀ ಬಗೆಯ ಸಂಕುಚಿತ ಹಾಗೂ ವಿಪರೀತ ಅರ್ಥದಲ್ಲಿ, ಧರ್ಮ ಈ ಸಂಕೇತವು, ಇಂದು, ರೂಢಿಯಲ್ಲಿದೆ!

ಸಮಾಜ : ಸಮಷ್ಟಿಯ ಎಂದರೆ ವೈಶ್ವಾನರಾಗ್ನಿಯ ಸ್ಥಾನವನ್ನು ತಾನೇ ಆಕ್ರಮಿಸಿದ ಈ ಮೋಕ್ಷಕಾಮೀ ಸಂಪ್ರದಾಯದ ಮತಗಳ ಪ್ರಭಾವದಲ್ಲಿ, 'ಋತಃ ಸತ್ಯ'ದ ಅರ್ಥವೂ ವಿಪರೀತವಾಗಿದ್ದುಂಟು! 'ಭಗವತ್' ರೂಪದ ಉಪಾಸನೆಯ 'ಸತ್ಯ' (Truth) ಇದು ಯಾವಾಗಲೂ ಸ-ರಸ (Essence) 'ಸತ್‌ತ್ವ(ದ್ರವ್ಯ) ರೂಪದ್ದೇ ಇರಬಲ್ಲದು. ಸಮಾಜ:ಸಮಷ್ಟಿ=ವೈಶ್ವಾನರಾಗ್ನಿ ಉಪಾಸಕ ಧರ್ಮಕ್ಕೆ ಆಧಾರಭೂತ ವೈಶ್ವಕ-ನಿಯಮರೂಪೀ ಋತ : ಸತ್ಯವು, ಇದು 'ಹಶ್ಮೀ' ಸತ್ವವಲ್ಲ! ಈ ಕಾರಣದಿಂದಾಗಿ, 'ಸತ್ಯಮೇವ ಜಯತೇ' ಎಂಬ ಮಾನವ ಧರ್ಮದ ಸೂತ್ರವನ್ನು, 'ಶುಕ್ರ': ಸಂಜೀವನೀ ಸಂಪ್ರದಾಯದ 'ದೇವಯಾನ' ಮಾರ್ಗಕ್ಕೆ ಪೋಷಕವಾಗುವಂತೆ ತಿದ್ದಲಾಗಿದೆ. 'ದೇವಯಾನ' ಮಾರ್ಗದ ಹಿಗ್ಗಿಗೆ ಕಾರಣವಾಗುವ (ವಿತತೋ ದೇವಯಾನಃ) ಸ-ರಸ' 'ಸತ್ವವಾಗಿ ಮಾರ್ಪಟ್ಟಿದೆ! ತತ್ಪೂರ್ವದ ಋತಸ್ವರೂಪೀ (ಒಣ) ಸತ್ಯ ನಮಗೆ ಬೇಡವಾಯ್ತು.[೧೪] 'ಭಗವಂತ' ಸಂಪ್ರದಾಯದ ಸರಸ-ಸತ್ವವು, ವಿವಸ್ವನ್ ಸಂಪ್ರದಾಯದ 'ಒಣ' : ಸತ್ಯವನ್ನು ಸೋಲಿಸಿತು! 'ವೈಶ್ವಾನರಾಗ್ನಿ' ಪ್ರೇರಿತ 'ಸಮಯ' (ಆಚಾರ) ರೂಪೀ-ಸಮಾಜ : ಸಮಷ್ಟಿ ಪ್ರೇರಕ-ಸೌರತತ್ವದ ಕಾಲವು ತಿರಸ್ಕೃತವಾಗಿ, 'ಏಕಂ ಸತ್' ಪಂಥೀಯ ಚಾಂದ್ರಸಮಯಾಚಾರಪ್ರೇರಕ ಕಾಲತತ್ವ-ಪ್ರಬಾವಶಾಲಿಯಾಗುತ್ತದೆ. ಇದರಿಂದಾಗಿ, ಭಾರತೀಯ ಧರ್ಮ : ಸಂಸ್ಕೃತಿಯೊಳಗೆ ಮೊದಲು ಪ್ರಚಲಿತವಿದ್ದ.

೧. 'ಧರ್ಮಃ ಧಾರಯತೇ ಪ್ರಜಾಃ' ಎಂಬ ವಿಶಾಲಾರ್ಥದ 'ಧರ್ಮ'ಪದಕ್ಕೆ, ಮೋಕ್ಷಕಾಮಿಗಳ ಜಾತಿಭೇದ-ಪ್ರೇರಕ ಸಂಕುಚಿತ ಸಂಪ್ರದಾಯವಾಚಕ ಅರ್ಥವು ಬರುತ್ತದೆ!

೨. ಸಮಾಜ=ಸಮಷ್ಟಿ ಎಂಬರ್ಥದ 'ವೈಶ್ವಾನರಾಗ್ನಿ' ಸಂಕೇತವನ್ನು, 'ಲೋಕಕ್ಷಯ ಕೃತ್ ಪ್ರವೃದ್ಧ' ಕಾಲಶಕ್ತಿ (=ಲೋಕದಾಹಕ ಬೆಂಕಿ) ಎಂಬರ್ಥಕ್ಕೆ ತಿರುಗಿಸಿದ್ದಾನೆ, ನಮ್ಮ ಭಗವತ್ ಗೀತೆಯ ಭಗವಂತ!

೩. ಮೂಲ ಮಾನವ ಧರ್ಮದ ತಳಹದಿಯ ಋತಸತ್ಯವು, ಆರ್ತವ ರೇತ, ರಸವಾಗಿ ಮಾರ್ಪಡುತ್ತದೆ - ಈ ಮೋಕ್ಷಕಾಮೀ ಧರ್ಮ ಪಂಥಗಳ ಪ್ರಭಾವದಲ್ಲಿ. ಇದು ನಿಜವಿದ್ದರೆ, ಈ ಕಾರಣದಿಂದಾಗಿ, ವಿವಸ್ವತ್ ಪ್ರೇರಣೆಯ ಮಾನವ ಧರ್ಮ : ಸಂಸ್ಕೃತಿಯನ್ನು ರೂಪಿಸಿದ ಕಾಲತತ್ತ್ವಕ್ಕಿಂತ, 'ಕಾಲೋಽಸ್ಮಿ' ಎಂಬ ಭಗವಂತನಿಂದ ಪ್ರೇರಿತ ಕಾಲತತ್ತ್ವವು ತೀರಭಿನ್ನ ಎಂದು ಬಗೆಯಬೇಕಾಗುತ್ತದೆ. ಪ್ರಚಲಿತ ಧರ್ಮ : ಸಂಸ್ಕೃತಿಯನ್ನು ರೂಪಿಸಿರುವ ಕಾಲಗತಿ 'ಭಗವತ್' ರೂಪರಾಗಲು ಜನಕ್ಕೆ ಪ್ರೇರಿಸುತ್ತಿದೆ. ಸಮಾಜ ಸಮ್ಮುಖರಾಗಿ ಬಾಳಲು ಹೇಳುವುದಿಲ್ಲ. ಇದೆಲ್ಲವೂ ಅರಿಕೆಗೆ ಬರಲು ಭಾಷೆ ಹಾಗು ಸಂಸ್ಕೃತಿ ಇವೆರಡರೊಳಗಿನ ಅನ್ಯೋನ್ಯವೇ ಮುಖ್ಯ ಕಾರಣ.

ಟಿಪ್ಪಣಿಗಳು

೧. *ಋಗ್ವೇದ ಸಂಹಿತೆ* X ೧೨೧; ೯೦, ೭೨ ಮುಂ
೨. *ಅದೇ* X. ೧೯೦
೩. "When one God alone is mentioned as an ಆದಿತ್ಯ, it is genenally Varuna their chief" - ***Vedic Mythology*** P. 44.
೪. *ಋಗ್ವೇದ ಸಂಹಿತೆ* I ೮೯-೧೦
೫. Donald Mackanzie. Egyption Myth-Page 281
೬. *ಋಗ್ವೇದ ಸಂಹಿತೆ* I. ೧೬೧
೭. *ಭಗವದ್ಗೀತೆ* ೪. ೧-೩
೮. *ಋಗ್ವೇದ ಸಂಹಿತೆ* X - ೬೩
೯. *ಅದೇ* VI-೯-೧
೧೦. *ಅದೇ* I-೬೯-೧
೧೧. *ಋಗ್ವೇದ ಸಂಹಿತೆ* Chardin P. T., ***The Phenomenon of Man***; Torch book 1965
೧೨. *ಋಗ್ವೇದ ಸಂಹಿತೆ* X. ೫೧.
೧೩. *ಬೃಹದಾರಣ್ಯಕೋಪನಿಷತ್ತು* ೨-೪-೫.
೧೪. *ಬೃಹದಾರಣ್ಯಕೋಪನಿಷತ್ತು* ೩-೧-೫, ೬

ಸತ್-ತ್ಯ ಮತ್ತು ಸತ್ಯ

ಇವೆರಡರೊಳಗಿನ ತಾರತಮ್ಯ

ಪ್ರಸ್ತಾವನೆ

ನನ್ನಲ್ಲಿಯ ಜ್ಞಾನಜಿಜ್ಞಾಸೆಯನ್ನು ಪ್ರೋತ್ಸಾಹಿಸಿ ಪೋಷಿಸಿರುವ ಪೂಜ್ಯ ಗೋವಿಂದ ಪೈಗಳ ಈ ಸ್ಮಾರಕ ಕೇಂದ್ರದಲ್ಲಿ ನಾನೇ ಬಂದು ನನ್ನ ಇತ್ತೀಚಿನ ಅನ್ವೇಷಣೆಯ ಸಾರಾಂಶದ ವರದಿಯನ್ನು ನಾನೇ ಒಪ್ಪಿಸಬೇಕಿತ್ತು. ಇದು ಶಕ್ಯವಾಗದ್ದಕ್ಕೆ ತುಂಬ ಅಸಮಾಧಾನ. ಇದಕ್ಕಾಗಿ ತಮ್ಮೆಲ್ಲರ ಕ್ಷಮಾಪಣೆ ಕೋರುವುದು ನನ್ನ ಕರ್ತವ್ಯವಾಗಿದೆ.

ನನ್ನ ಹಳೆಯ ಸ್ನೇಹಿತರಾದ ಡಾ. ಕೋ. ಶಿವರಾಮ ಕಾರಂತರ ಪುತ್ತೂರಿನ ನಾಡಹಬ್ಬದ ನೆಪದಿಂದ, ಪೂಜ್ಯ ಪೈಗಳವರನ್ನು ಕಾಣುವುದು ಶಕ್ಯವಾಯಿತು. ಭಾಷೆ, ಸಂಸ್ಕೃತಿಯ ಕ್ಷೇತ್ರದಲ್ಲಿ ಕುತೂಹಲವು ಉಂಟಾಗಿ, ಈ ವಿಚಾರದಲ್ಲಿ ನನಗೆ ಕಂಡ ಕೆಲವು ಮಾತುಗಳನ್ನು ಅದೇ ತಾನೆ ಪ್ರಕಟಿಸಿದ್ದೆ. ನನ್ನ ಇತಿಮಿತಿಗಳನ್ನು ಬಲ್ಲ ನನಗೆ, ಈ ಕ್ಷೇತ್ರದಲ್ಲಿ ತಜ್ಞರ ಸಲಹೆ, ಮಾರ್ಗದರ್ಶನವು ಅತ್ಯವಶ್ಯವೆನಿಸಿತ್ತು. ನನ್ನ ಜ್ಞಾನ-ಜಿಜ್ಞಾಸೆಯ ಸಾಫಲ್ಯದಲ್ಲಿ ಯೋಗಾಯೋಗದ ಭಾಗವೂ ಸಾಕಷ್ಟು ಉಂಟು. ಶ್ರೀ ಗೋವಿಂದ ಪೈಗಳಂತಹ ಪ್ರಗಾಢ ವ್ಯಾಸಂಗೀ ಮೇಧಾವಿಗಳನ್ನು ಹತ್ತಿರದಿಂದ ಕಾಣುವ ಹಾಗೂ ಅವರ ಆತ್ಮೀಯ ಸೌಹಾರ್ದ, ಆಶೀರ್ವಾದ ಲಭಿಸುವ ಸಂಧಿ ದೊರೆತದ್ದು, ನನ್ನ ಜೀವನದೊಳಗಿನ ಮಹತ್ವದ ಯೋಗಾಯೋಗಗಳಲ್ಲಿ ಇದಕ್ಕೆ ಮೌಲಿಕ ಸ್ಥಾನವಿದೆ.

ನನ್ನ ಪ್ರತಿಯೊಂದು ಪ್ರಕಟನೆಯನ್ನು ಶ್ರೀ ಪೈಗಳವರಿಗೆ ಕಳಿಸಿ, ಅದರಲ್ಲಿಯ ತಪ್ಪು ಒಪ್ಪುಗಳ ಬಗೆಗಿನ ಅವರ ವಿಚಾರಗಳನ್ನು ಅರಿತುಕೊಳ್ಳುವುದು ನನ್ನ ವಾಡಿಕೆಯಾಗಿತ್ತು. ಕಣ್ಮರೆಯಾದ ಕಂನಡ ಇದಕ್ಕಿಂತ ಮಹಾರಾಷ್ಟ್ರದ ಮೂಲ ಅಥವಾ ಮೂಲ ಮಹಾರಾಷ್ಟ್ರ ಹೆಚ್ಚು ಲೇಸಾಗಿ ಅಭಿವ್ಯಕ್ತವಾಗಿದೆ, ಎಂದು ಅವರು ಬರೆದದ್ದು ನೆನೆಪಿದೆ. ನಾನು ಕಳಿಸಿದ ಪ್ರಕಟಣೆಯ ಬಗೆಗೆ ತಮಗೆ ಸರಿ ಎನಿಸಿದ್ದನ್ನು ತಿಳಿಸುತ್ತಿದ್ದರು. ಅಲ್ಲದೆ, ನನ್ನ ಬಿಡಿಲೇಖನವು ಅಕಸ್ಮಾತ್ತಾಗಿ ಓದಲು ದೊರೆತರೆ, ಅದರ ಬಗೆಗೆ, ತಾವಾಗಿಯೇ ಕಾಗದ ಬರೆದು ಆಶೀರ್ವದಿಸಿದ್ದರು. ಅಂಥ ಒಂದು ಉದಾಹರಣ: ಮಂಗಳೂರಿನ ಕುಡ್ವಿ ವಾಸುದೇವ ಶೆಣ್ಯಾ ಅವರ ಪ್ರಭಾತ ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಬರೆದ 'ಶ್ರೀದತ್ತ ಮೂರ್ತಿ'ಯ ಸಾಂಕೇತಿಕ ಪ್ರತಿಮೆಯ ವಿವರಣೆ.

ಸಾಂಕೇತಿಕ ಅರ್ಥಗ್ರಹಣದ ಪ್ರಯತ್ನ

ಮೂರು ಮೊಗದ ಈ ಗುರುಮೂರ್ತಿಯ ಸಾಂಕೇತಿಕತೆಯಲ್ಲಿ, ಭಾರತೀಯ ಸಾಂಸ್ಕೃತಿಕ ಸ್ಥಿತ್ಯಂತರದ ಅಸ್ಪಷ್ಟ ಪ್ರತಿಬಿಂಬವು ನನಗೆ ಮೊದಲ ಬಾರಿ ಕಂಡದ್ದು ಇಲ್ಲಿಯೇ. ಮೂರು ಮೊಗದ ಈ ಯತಿಯ ಅನುಯಾಯಿ ನಾಲ್ಕು ನಾಯಿ : ನಾಲ್ಕು ವೇದ ಎಂದು ಬಗೆಯಲಾಗುತ್ತಿರುವಲ್ಲಿ ನನಗೆ ಕಂಡ ವಿಸಂಗತಿ ನನ್ನನ್ನು ಅಸ್ವಸ್ಥನನ್ನಾಗಿಸಿತ್ತು. ಈ ಯತಿಯ ಪಕ್ಕದಲ್ಲಿ ಸುಂದರ ಗೋವು : ಭೂದೇವಿಯ ಪ್ರತೀಕ, ಎಂದು ಹೇಳಲಾಗುತ್ತದೆ. ಬ್ರಹ್ಮ-ವಿಷ್ಣು-ಮಹೇಶ ಈ ಮೂರೂ ಸೃಷ್ಟಿ, ಸಂರಕ್ಷಣ, ಸಂಹಾರ ಶಕ್ತಿಗಳ ಸಂಯುಕ್ತ ದೈವತ ಇದು. ಈ ದೈವತಗಳಲ್ಲಿ ಯಾವುದೊಂದು

ಇಷ್ಟದೈವತ, ಅಥವಾ ಕುಲ ದೈವತವಿಲ್ಲದವರು ದೊರೆಯುವುದು ಹಿಂದೂ ಎಂಬ ಜನದಲ್ಲಂತೂ ಅಶಕ್ಯ. ಅಲ್ಲದೆ, ಈ ಹಿಂದೂ ಎಂಬ ಜನಕ್ಕೆ ವೇದಗಳಲ್ಲಿಯೂ ಆತ್ಯಂತಿಕ ನಿಷ್ಠೆ; ಬ್ರಾಹ್ಮಣರೆಂಬವರಲ್ಲಿಯಂತೂ ಇದ್ದೇ ಇದೆ. ಈ ಗುರುದೇವನ ಅನುಯಾಯಿ ವೇದ ಎಂಬ ಸಾಂಕೇತಿಕ ದೈವತವನ್ನು ಮಹಾರಾಷ್ಟ್ರದಲ್ಲಿ ಕುಲದೈವತವೆಂದು ಆರಾಧಿಸುವುದನ್ನು ಕಂಡಿದ್ದೆ. ಆದಕಾರಣ, ಈ ದೇವತಾ ಪ್ರತಿಮೆಯೊಳಗಿನ ಅಂತರ್-ವಿಸಂಗತಿಯನ್ನು ಪ್ರಾಜ್ಞರ ಗಮನಕ್ಕೆ ತರಬೇಕು; ಇದರ ಇತ್ಯರ್ಥವಾಗಬೇಕೆಂದು ನನಗೆ ಎನಿಸುತ್ತಿತ್ತು.

ಪ್ರಭಾತ ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಈ ಲೇಖನ ಬಂತು. ಆಮೇಲೆ ಪೂಜ್ಯ ಪೈಗಳ ಪತ್ರವೂ ಬಂತು : ಸಾಂಸ್ಕೃತಿಕ ವಿಶ್ಲೇಷಣೆಯ ನಿನ್ನ ರೀತಿ ಯಾವ ಪಾಶ್ಚಾತ್ಯ ಸಂಶೋಧಕನಿಗೂ ಕಡಮೆಯಿಲ್ಲದ್ದು - ಎಂಬ ಆಶಯದ ಅವರ ಆಶೀರ್ವಾದ ನನ್ನ ಸಾಂಸ್ಕೃತಿಕ ಅನ್ವೇಷಣೆಯ ಬೆನ್ನಿಗಿದೆ. ನಮ್ಮ ಸಾಂಸ್ಕೃತಿಕ ವಿಸಂಗತಿಯ ಈ ವೈಶಿಷ್ಟ್ಯವು ನಮ್ಮ ರಕ್ತಗತವಾಗಿದೆ! ಇದರಿಂದಾಗಿ ಸುಸಂಗತಿ ಹಾಗೂ ವಿಸಂಗತಿ ಇವೆರಡರೊಳಗಿನ ತಾರತಮ್ಯವನ್ನು ಗ್ರಹಿಸಿಕೊಳ್ಳುವುದಕ್ಕೂ ಭಾರತೀಯರಾದ ನಾವು ಅನರ್ಹರೂ, ಅಸಮರ್ಥರೂ ಆಗಿರುವುದಂತೂ ನಿಜ. ಪೂಜ್ಯ ಪೈಗಳವರ ಆಶೀರ್ವಾದದ ಬಲದಿಂದ ನಮ್ಮ ಸಾಂಸ್ಕೃತಿಕ ವಿಸಂಗತಿಯ ಈ ಸೂತ್ರ ನನ್ನನ್ನು ಇಂದಿನವರೆಗೂ, ಮುಂದೆ ನಡೆಸಿಕೊಂಡು ಬಂದಿದೆ.

ವೇದದಲ್ಲಿ 'ನಾಗ' ಸಂಪ್ರದಾಯ

ಆಮೇಲೆ ಋಗ್ವೇದದ ಇಂದಿನ ಸಂಹಿತೆಯಲ್ಲಿ ನಾಗ ಸಂಪ್ರದಾಯ ಅನ್ವೇಷಣೆಯಲ್ಲಿ ನಾಗನನ್ನು ಹುಡುಕಿಕೊಂಡು ಹೊರಟೆ. ಆದಕಾರಣ, ಈ ಅನ್ವೇಷಣೆಯ ವಿವರಣೆಯ ಪುಸ್ತಕವು ನಾಗನ ನಡೆಯಷ್ಟೇ ಅಂಕುಡೊಂಕಾಗಿ ತೀರ ಶಿಥಿಲ ಶೈಲಿಯದಾಗಿ ಪರಿಣಮಿಸಿರುವ ಅಸಮಾಧಾನ ನನಗೆ. ಆದರೂ ಸರ್ಪರಾಜ್ಞೀ ಸೂರ್ಯೀ ವಾ[?] ದೈವತ ಸ್ತೋತ್ರವಿರುವ ಈ ಸಂಹಿತೆಯಲ್ಲಿ ನಾಗ ಸಂಪ್ರದಾಯವಿಲ್ಲ, ಎಂದು ನಂಬಿಸಿರುವ ಪ್ರೊ. ಮ್ಯಾಕ್‌ಡೊನೆಲ್, ಡಾ. ಎ. ಬಿ. ಕೀಥ್ ಪ್ರಭೃತಿ ಸಂಶೋಧಕರು ಸತ್ಯಕ್ಕೆ ಅಪಚಾರ ಬಗೆದಿದ್ದಾರೆ. ಋಗ್ವೇದ-ಸಾರ: ನಾಗಪ್ರತಿಮಾ ವಿಚಾರದಲ್ಲಿ ಈ ನಿಷ್ಕರ್ಷೆಗೆ ಬಂದಿದ್ದೇನೆ. ಶ್ರೀ ಪೈಗಳವರಿಂದ ಇದರ ಬಗೆಗಿನ ಪ್ರತಿಕ್ರಿಯೆ ಅರಿಯಲು ಶಕ್ಯವಾಗಲಿಲ್ಲ. ಆದರೂ ಇದರ ಮುಂದಿನ ಹಂತದ, ಸತ್-ತ್ಯ (ಸತ್ತ್ಯ) ಮತ್ತು ಸತ್ಯ ಇವೆರಡರೊಳಗಿನ ಅಂತರವು ನನಗೆ ಸ್ಪಷ್ಟವಾದುದರ ವರದಿಯನ್ನು ಮಂಜೇಶ್ವರದ ಮಂದಿರದಲ್ಲಿ ಬಂದು ಒಪ್ಪಿಸುವ ಈ ಸಂಧಿಯನ್ನು ಸ್ವಾಗತಿಸಿದ್ದೇನೆ. ಈ ಸಾಂಸ್ಕೃತಿಕ ಅನ್ವೇಷಣೆಯಲ್ಲಿ ನನ್ನ ಆತ್ಮವಿಶ್ವಾಸವು ತತ್ತರಿಸದಂತೆ, ಆಗಾಗ ಯೋಗಾಯೋಗದಿಂದ ಲಭಿಸಿದ ತಾಳಮೇಳದ ಒಂದು ಮಾದರಿಯನ್ನು ಹೇಳಿ, ಬಳಿಕ ಸತ್ತ್ಯ ಹಾಗೂ ಸತ್ಯ ಇದರ ತಾರತಮ್ಯವನ್ನು ವಿವರಿಸಬೇಕೆಂದಿದ್ದೇನೆ.

ಋಗ್ವೇದ ಸಾರ : ನಾಗಪ್ರತಿಮಾ ವಿಚಾರವು ಪ್ರಕಟವಾದ ಬಳಿಕ ಡಾ. ಕೆ. ಕೃಷ್ಣಮೂರ್ತಿ, (ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಪ್ರಮುಖರು) ಬೆಂಗಳೂರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ವಿಮರ್ಶಿಸುತ್ತ ಇದೊಂದು ಅಪೂರ್ವ (Unique) ಸಂಶೋಧನ ಗ್ರಂಥ..... ಇಂಗ್ಲಿಷಿನಲ್ಲಿಯೂ ಇದರ ಸಾರಾಂಶ ಪ್ರಕಟವಾಗಬೇಕು..... ಆದರೆ ವೇದದಲ್ಲಿ ನಾಗ ಸಂಪ್ರದಾಯವಿದೆ ಎಂಬ ವಿಚಾರ, ಇದು ಶಂ. ಬಾ. ಜೋಶಿಯ ಕಲ್ಪನೆ ಎಂದು ಬರೆದರು.

ವೇದದಲ್ಲಿಯ ಸಾರ್ಪರಾಜ್ಞೀ ಸೂರ್ಯೋ ವಾ ದೈವತವಿದೆ[?] ಎಂದು ಹೇಳಿರುವ ಈ ಪ್ರಮಾಣವನ್ನು ವಿಮರ್ಶಕರು ಯಾಕೆ ಲೆಕ್ಕಿಸಲಿಲ್ಲವೊ, ತಿಳಿಯದು. ಈ ಸೂತ್ರವೇ ಮೂಲ ವೇದದಲ್ಲಿ ಇಲ್ಲ. ಅಥವಾ ಇರಲಾರದು, ಎಂಬ ಭೂಮಿಕೆಯನ್ನು ಸ್ವೀಕರಿಸಿದ್ದರೆ ಲೇಸಿತ್ತು. ವೇದದಲ್ಲಿ ನಾಗಪೂಜೆ (ಸಂಪ್ರದಾಯ) ಇಲ್ಲವೇ ಇಲ್ಲ; ನಾಗನಿರುವನೆಂಬುದು ಜೋಶಿಯ ಕಲ್ಪನೆ, ಎಂದದ್ದು ಅನ್ಯಾಯವಾಯಿತು ಎಂದು ನನಗೆ ಎನಿಸಿತು. ಯೋಗಾಯೋಗ ಎಂಬುದು ಇಲ್ಲಿದೆ : ನನ್ನ ನೆರೆಮನೆಯ ತರುಣಮಿತ್ರ ಡಾ. ವರದರಾಜ ಹುಯಿಲಗೋಳರು, ತಮ್ಮ ಕಣ್ಣಿಗೆ ಬಿದ್ದ ಹಳೆಯ ಸಂಪುಟವೊಂದರೊಳಗಿನ ನಾಗಾರಾಧನೆಯನ್ನು ಕುರಿತು ಇರುವ ಲೇಖನವನ್ನು, ನನಗೆ ತಂದು ಕೊಟ್ಟರು.

ಇದು Royal Asiatic Societyಯ ಮುಂಬೈ ಶಾಖೆಯ ಪತ್ರಿಕೆಯ ಒಂದು ವರ್ಷದ ಸಂಪುಟ 1869-70 ಸಾಲಿನದು! ಇದರಲ್ಲಿ, ಅಂದಿನ ಅಗ್ರಗಣ್ಯ ಮೇಧಾವಿ ಹಾಗೂ ಸಂಪ್ರದಾಯಜ್ಞರೆಂದು ಹೆಸರಾದ ವಿಶ್ವನಾಥ ನಾರಾಯಣ ಮಂಡಲೀಕರು ಬರೆದ ಲೇಖನ[೩] ಪ್ರಕಟವಾಗಿದೆ. ಸನಾತನ ವೇದಾಭಿಮಾನಿ ಮಂಡಲೀಕರು, ವೇದದೊಳಗಿನ ಮಂತ್ರಗಳ ಆಧಾರದಿಂದ ನಾಗಸಂಪ್ರದಾಯವು ವೇದದಲ್ಲಿದೆ ಎಂದು ನಿಷ್ಕರ್ಷಿಸಿದ್ದಾರೆ.

ಡಾ. ಕೃಷ್ಣಮೂರ್ತಿಯವರ ಆಕ್ಷೇಪಕ್ಕೆ, ೧೧೪ ವರುಷಗಳ ಹಿಂದೆಯೇ ಶ್ರೀ ಮಂಡಲೀಕರಿಂದ ಉತ್ತರ ದೊರೆತದ್ದು ಕಂಡೆ! ಆದರೆ, ನನಗೆ ಆದ ವಿಷಾದ ಹೇಳತೀರದು. ಈ ಮಂಡಲೀಕರ ಲೇಖ, ನನಗೆ ಮೊದಲೇ ನೋಡಲು ದೊರೆತಿದ್ದರೆ, ನನ್ನ ಅವ್ಯವಸ್ಥಿತ ಶೋಧದ ಶ್ರಮ ಉಳಿಯುತ್ತಿತ್ತು. ಆ ಪುಣ್ಯಾತ್ಮರನ್ನು ವಂದಿಸಿ, ನಾನು ಸುವ್ಯವಸ್ಥಿತವಾಗಿ, ಈ ವಿಚಾರ ಬರೆಯಬಹುದಿತ್ತು. ಆ Royal Asiatic ಸಂಪುಟದಲ್ಲಿ ಇನ್ನೂ ಒಂದು ವಿಶೇಷ ವಿಚಾರವುಂಟು. ಶ್ರೀ ಮಂಡಲೀಕರು ತಮ್ಮ ಪ್ರಬಂಧವನ್ನು ಓದಿದ ಚರ್ಚಾಕೂಟದಲ್ಲಿ ಜೇಮ್ಸ್ ಫರ್ಗ್ಯೂಸನ್ ಎಂಬ ಸಂಶೋಧಕರೂ ಹಾಜರಿದ್ದರು. ಆದರೆ, ಇಬ್ಬರ ಸಂಶೋಧನದ ಕ್ಷೇತ್ರವು ಬೇರೆಯಿರಬೇಕು. ಫರ್ಗ್ಯೂಸನ್ನರು, ಶ್ರೀ ಮಂಡಲೀಕರ ನಿಷ್ಕರ್ಷವನ್ನು ವಿರೋಧಿಸಿದರು ಎಂಬ ಸಂಪಾದಕೀಯ ಟಿಪ್ಪಣಿಯೂ ಈ ಪತ್ರಿಕೆಯಲ್ಲಿ ಇದೆ. ಆ ಆಂಗ್ಲ ಸಂಪಾದಕನು ಫರ್ಗ್ಯೂಸನ್ನನಂಥ ಸಂಶೋಧನ ಕ್ಷೇತ್ರದಲ್ಲಿ ಪಳಗಿದವನ Theory (ಸಿದ್ಧಾಂತ) ಶ್ರೀ ಮಂಡಲೀಕರನ್ನು ಒಪ್ಪಲಿಲ್ಲ ಎಂದು ಬರೆದಿದ್ದಾನೆ. ಈ ಟಿಪ್ಪಣಿಯಲ್ಲಿ ಫರ್ಗ್ಯೂಸನ್ನ ತನ್ನ Theory ಆಧಾರದಿಂದ ವಿರೋಧಿಸಿದನು ಎಂಬುದನ್ನು ಸ್ಪಷ್ಟಪಡಿಸಿದ್ದಾಗಿದೆ. ಸಂಶೋಧಕನು, ಯಾವ ಪ್ರಮಾಣಗಳ ಆಧಾರದಿಂದ ನಿರ್ಣಯಕ್ಕೆ ತಲುಪುತ್ತಾನೊ, ಆ ಪ್ರಮಾಣಗಳು ಸುಳ್ಳು ಇವೆ; ವಿಶ್ವಾಸಾರ್ಹವಲ್ಲ; ಅಥವಾ ಇವಕ್ಕೆ ವಿರೋಧೀ ಪ್ರಮಾಣಗಳು ಇವು. ಎಂಬೀ ಬಗೆಯಲ್ಲಿ ವಿರೋಧಿಸುವುದು ಸಮಂಜಸವೆನಿಸುತ್ತದೆ. ಆದರೆ, ಏನೊಂದು ಸಿದ್ಧಾಂತ (Theory) ಹೇಳಿ, ಸಪ್ರಮಾಣ ನಿರ್ಣಯವನ್ನು ಒಪ್ಪದಿರುವ ಫರ್ಗ್ಯೂಸನ್ನನ ಈ ರೀತಿ, ಸಂಶೋಧನ ಪದ್ಧತಿಗೆ ವಿಸಂಗತವಿದೆ.

ಆರ್ಯರೆಂಬುವರು ವೃಕ್ಷ-ನಾಗಪೂಜಕರಲ್ಲ, ಎಂಬ ಸಿದ್ಧಾಂತದಂತೆ ಇಂದಿನ ಸಂಹಿತೆ ಆರ್ಯರದು ಅಲ್ಲ! ಆದರೆ, ಮ್ಯಾಕ್ಸ್‌ಮುಲ್ಲರ ಆಕ್ಸಫೋರ್ಡ ಪರಂಪರಾಭಿಮಾನಿಗಳಿಗೆ, ಈ ಋಗ್ವೇದವು ಆರ್ಯರದು ಎಂದು ಸಿದ್ಧಪಡಿಸಬೇಕಾಗಿದ್ದುದು ಇತ್ತೀಚೆಗೆ ಸ್ಪಷ್ಟವಾಗತೊಡಗಿದೆ. Vedic mythology ಬರೆದ ಪ್ರೊ. ಮ್ಯಾಕ್‌ಡೊನೆಲ್, ಜರ್ಮನಿಯ ಸಂಶೋಧಕ ಓಲ್ಡೆನ್‌ಬರ್ಗನ ನಿಷ್ಕರ್ಷಗಳನ್ನು ಅರಿತೂ, ಅವನ್ನು ಬದಿಗೆ ಸರಿಸಿದ್ದುದು ಈಗ ಸಿದ್ಧವಾಗಿದೆ. ಸೌರ ದೈವತಗಳು ಆದಿತ್ಯರೂಪಕ್ಕೆ ಮಾರ್ಪಡುವ ಮುಂಚಿನ ಸಂಹಿತೆ ಇಂದು ಉಪಲಬ್ಧವಿಲ್ಲ! ಇಂದಿನ ಸಂಹಿತೆಯಲ್ಲಿ ಅದಿತಿ ಹಾಗೂ ಅದಿತಿಪುತ್ರ ಆದಿತ್ಯರ ಮಹಿಮೆಯೇ ಎಲ್ಲೆಲ್ಲೂ ಉಂಟು. ಆದಿತ್ಯಾನಾಂ ಅಹಂ ವಿಷ್ಣುಃ ಎಂಬ ಭಗವತ್‌ಗೀತೆಯೂ ವೇದಕಾಲೀನ ಸೌರ ದೈವತಗಳ ಅವಮೌಲ್ಯನವಾದ ಬಳಿಕ ಆದಿತ್ಯ ಸಂಪ್ರದಾಯವನ್ನೇ ಮುಂದುವರಿಸಿಕೊಂಡು ಬಂದದ್ದು ಸ್ಪಷ್ಟವಿದೆ! ವೇದದ ಇಂದಿನ ಆಕಾರ ನೋಡುವಾಗ ಆರ್ಯ-ಅನಾರ್ಯ, ಆರ್ಯ-ದ್ರಾವಿಡ ಎಂಬ ಭೇದಕ್ಕೆ ತಿಲಮಾತ್ರವೂ ಅವಕಾಶವಿಲ್ಲ! ಆದರೂ Vedism ಈ ವೇದಗಳು ಆರ್ಯರವು ಎಂಬ ಜಗಳಕ್ಕೆ ಯೋಜನಾಪೂರ್ವಕವಾಗಿ ಬ್ರಿಟಿಷ್ ಆಡಳಿತಗಾರರಿಂದ ಪೋಷಿತ ಸಂಶೋಧನವು, ಅವಕಾಶವನ್ನು ಕಲ್ಪಿಸಿಕೊಟ್ಟಿತು.

ಅವಧೂತ ನಿರಂಜನ ಗುರುಪರಂಪರೆಯ ವೇದವಿದು

ನಾಲ್ಕುವೇದಗಳೆಂಬ ನಾಯಿಗಳು ಅನುಯಾಯಿಯಾಗಿರುವ ಗುರು-ದತ್ತಮೂರ್ತಿಯ ಅವಧೂತ ಸಂಪ್ರದಾಯದ ಬೇರುಗಳು ಇಂದಿನ ಸಂಹಿತೆಯಲ್ಲಿವೆ[೪] ಕೇಶಿ ಮೌನೇಯರನ್ನು ಕುರಿತು ಇರುವ ಸೂಕ್ತವೇ ಇದಕ್ಕೆ ಪ್ರಮಾಣ : 'ಪಿಶಂಗಾಃ, ವಸತೇ ಮಲಾಃ'. ಮಲಧಾರಣವ್ರತಿ ಅಹಿಂಸಾ ಧರ್ಮದ ಸೂತ್ರ ಇಲ್ಲಿದೆ! ಈ ಮೌನೇಯರು ಬಂಧಮುಕ್ತರು! ಮುಕ್ತಸಂಗಿಗಳು, 'ನಿಸ್ತ್ರೈಗುಣ್ಯೇ ಪಥಿವಿಚರತಾಂ ಕೋ ವಿಧಿಃ, ಕೋ ನಿಷೇಧಃ?' ಇದರ ಬೇರು ವೇದದಲ್ಲಿದೆ. ಅಪ್ಸರಸಾಣಾಂ, ಗಂಧರ್ವಾಣಾಂ, ಮೃಗಾಣಾಂ ಚರಣೇಚರನ್, ಎಂಬ ಈ ಮುನಿಪೋತ್ತಮ ಒಬ್ಬ ವಿ-ಭಾಂಡಕನಿಂದ ಶೃಂಗಮುನಿ ಹುಟ್ಟಿದ ಕಥೆಯಿದೆ!

ಆದರೆ, ಇದೇ ವೇದದಲ್ಲಿ ಜಾಗತಿಕ ಜ್ಞಾನಭಂಡಾರಕ್ಕೆ ಸತ್ಯವನ್ನು ಗ್ರಹಿಸಿಕೊಳ್ಳುವ ಹದವನ್ನು ಸೂಚಿಸುವ ಕಾಣಿಕೆಯಂತೆ ಇರುವ 'ಋತಂ ಚ ಸತ್ಯಂ ಚ ಅಭೀದ್ಧಾತ್ ತಪಸಃ ಅಜಾಯತ' ಈ ಪ್ರಪಂಚದ ತಳಪಾಯದಲ್ಲಿ ಇರುವ) ಋತದ (ವಿಶ್ವನಿಯಮದ) ಅಧಿಷ್ಠಾನವಿರುವ ಸತ್ಯವನ್ನು ಕುರಿತ ಸಣ್ಣ ಸೂಕ್ತವೂ ಒಂದು ಎಂತೊ, ಅಂತೂ ಉಳಿದಿದೆ! ಇದರ ವಿವರಣೆಯೆ ಇಲ್ಲಿ ಪ್ರಸ್ತುತವಿದೆ. ಈ ಸೂಕ್ತವು ಎಂತೊ ಉಳಿದಿದೆ ಎನ್ನಲು ಕಾರಣವಿದೆ. ಇದು ಪದಪಾಠವಿಲ್ಲದ ಸೂಕ್ತ! ಪದಪಾಠವಿಲ್ಲದ ಋಚೆಗಳಿವೆ. ಕ=ಪ್ರಜಾಪತಿಃ ಹಿರಣ್ಯಗರ್ಭ (=ಸ್ವಯಂ-ಭೂ) ದೈವತದ ಸೂಕ್ತದಲ್ಲಿ ಪ್ರಜಾಪತಿ ಮಾಹಾತ್ಮ್ಯ ಹೇಳುವ ಕೊನೆಯ ಋಚೆಗೆ ಪದಪಾಠವಿಲ್ಲ! ಇಂಥವು ಇನ್ನುಳಿದ ಪದಪಾಠದ ಸೂಕ್ತಗಳ ಸಂಕಲನದ ತರುವಾಯ ಸೇರಿದ ಮಂತ್ರಗಳಿರುವ ಶಕ್ಯತೆಯಿದೆ. ಋಗ್ವೇದ ಸಂಕಲನ ಒಂದೇ ಬಾರಿ ಆಗಿಲ್ಲ. ವೈವಸ್ವತ ಮನ್ವಂತರದಲ್ಲಿ ೨೮ ಬಾರಿ ವೇದ ವಿಭಾಗಿಸಿ ಹೊಂದಿಸುವ ಕಾರ್ಯವಾಗಿದೆ ಎಂದು ವಿಷ್ಣುಪುರಾಣದಿಂದ ಗೊತ್ತಾಗುತ್ತದೆ.[೫] ಹಯಗ್ರೀವ ಅವತಾರದಲ್ಲಿ ಶ್ರೀ ವಿಷ್ಣುವು, ದೈತ್ಯ ಹಯಗ್ರೀವನನ್ನು ಸಂಹರಿಸಿ ಆತನಿಂದ ವೇದ ಕಸಿದು ತಂದನೆಂಬ ಪವಾಡ ಕಥೆ (myth) ಇದೆ. ಇದು ಸ್ಪಷ್ಟೀಕರಣಾತ್ಮಕ (aetiological) ಸ್ವರೂಪದಿಂದಾಗಿ, ವಿಷ್ಣು ಸಂಪ್ರದಾಯದಿಂದ ಇಂದಿನ ಈ ಋಕ್‌ಸಂಹಿತೆ ಆಕಾರ ಪಡೆದಿದೆ, ಎಂಬ ಮಾತು ಬೆಳಕಿಗೆ ಬರುತ್ತದೆ. ಮಹಾಭಾರತವನ್ನು ಪಂಚಮವೇದ ಎಂದಿರುವಲ್ಲಿ ಪ್ರಚಲಿತ (ಹಯಗ್ರೀವಾವತಾರಿ ವಿಷ್ಣು ಉದ್ಧರಿಸಿರುವ) ಈ ವೇದದ ಸ್ಪಷ್ಟೀಕರಣಕ್ಕಾಗಿ ಮಹಾಭಾರತ=ಪಂಚಮ ವೇದ ಅವಶ್ಯವಾಗಿರುವುದಾಗಿಯೂ ಈ ಕಥೆಗಳೊಳಗಿನ ಅಂತಃಸಂಗತಿಯಿಂದ ಹೊರವಡುತ್ತದೆ.

ಆದಿತ್ಯ ಸಂಪ್ರದಾಯದ ವೇದ

ಋತಃಸತ್ಯವನ್ನು ಕುರಿತ ಸೂಕ್ತವು, ಇಂದಿನ ವೇದದಲ್ಲಿ ಎಂತೊ ಎಂತೂ ಉಳಿದಿದೆ ಎನ್ನುವ ಮಾತಿನ ಸ್ಪಷ್ಟೀಕರಣದಲ್ಲಿ ಇದರ ಪಾರ್ಶ್ವಭೂಮಿ ಅದಿತಿಗೆ ಬರುತ್ತದೆ. ಇಂದಿನ ಋಗ್ವೇದವು ಆದಿತ್ಯರ ಮಾಹಾತ್ಮ್ಯದ ವೇದ; ಭಗವದ್ಗೀತೆಯ ಭಗವಂತನು ತಾನು ಆದಿತ್ಯನೆಂದೇ ಹೇಳುತ್ತಾನೆ. ಆದಿತ್ಯ ಸಂಪ್ರದಾಯದ ಶ್ರದ್ಧೆಯು, ಸತ್-ತ್ಯಂ ತತ್ತ್ವದ ಮೇಲೆ ನಿಂತಿದೆ. ಸೌರ:ಪ್ರಕಾಶ ತತ್ತ್ವದ ಶ್ರದ್ಧೆಯ ಸತ್ಯವು. ಅದಿತ್ಯ ಸಂಪ್ರದಾಯದ ಸತ್ತ್ವ (ಸತ್-ತ್ಯ)ಕ್ಕಿಂತ ತೀರ ಬೇರೆಯಿದೆ. ಈ ಕಾರಣದಿಂದಲೇ ಋಗ್ವೇದಸ್ಥ ಮೂಲ ಋತಃಸತ್ಯ ಇದರ ಸ್ವರೂಪವು, ಈ ವೇದದಲ್ಲಿ, ಹಿರಣ್ಯಗರ್ಭಃ ಪ್ರಜಾಪತಿ (=ಸ್ವಯಂಭೂ) ದೈವತವೇ ಏಕಮೇವಾದ್ವಿತೀಯ ದೈವತವಾಗುವುದ ರೊಡನೆ ಮಾರ್ಪಟ್ಟಿದೆ.

ಈ ಮಾರ್ಪಾಟನ್ನು ಪ್ರಾಜ್ಞರ ಗಮನಕ್ಕೆ ತಂದುಕೊಡುವುದೇ ಗುರುಸ್ಥಾನದಲ್ಲಿ ಅರ್ಪಿಸಲಿರುವ ಈ ವರದಿಯ ಮುಖ್ಯ ಉದ್ದೇಶವಾಗಿದೆ. ಋತ:ಸ್ವರೂಪೀ ಸತ್ಯದ ಪರಿಚಯವನ್ನು ವ್ಯಾಹೃತಿತ್ರಯಗಳ ಮೂಲಕವಾಗಿ ಮಾಡಿಕೊಡುವುದು ಲೇಸು, ಎಂದು ಬಗೆದಿದ್ದೇನೆ. ಇದನ್ನು ಇನ್ನೂ ೨-೩ ಬಗೆಗಳಿಂದಲೂ ವಿವರಿಸಬಹುದಾಗಿದೆ. ಆದರೆ ವಿಸ್ತಾರಕ್ಕೆ ಇಲ್ಲಿ ಅವಕಾಶವಿಲ್ಲ.

ವ್ಯಾಹೃತಿಗಳ ವಿಚಾರ

ಮಾನವ ಜೀವನ=ಸಂಸ್ಕೃತಿಯನ್ನು ಗ್ರಹಿಸಿಕೊಳ್ಳಲು ಆದ ಅರ್ವಾಚೀನ ಪ್ರಯತ್ನಗಳಲ್ಲಿ ಜೀವನಸ್ಥ ಪಾತಳಿಗಳ ವಿಚಾರವು ಅನಿವಾರ್ಯವಾಯಿತು. ಫ್ರಾಯ್‌ಡನು ಹಾಗೂ ಇವನ ಮನೋವಿಶ್ಲೇಷಣಶಾಸ್ತ್ರದ ಪರಂಪರೆಯವರು ಮಾನವಜೀವನವು ಒಂದೇ ಪಾತಳಿಯದೆಂದು ಗ್ರಹಿಸಿದ್ದಾರೆ. ಇವರ 'Super Ego' ಇದು ಸ್ವತಂತ್ರ ಪಾತಳಿಯದು ಆಗುವುದಿಲ್ಲ. 'Ego' ಇದರ sublimation ಎಂದರೆ ಇದು ತತ್ತ್ವತಃ ಒಂದೇ ಪಾತಳಿಯಾಯ್ತು. ಡಾ. ಜ್ಯೂಲಿಯನ್ ಹಕ್‌ಸ್ಲೆಯಂಥ ಜೀವಶಾಸ್ತ್ರಜ್ಞರಿಗೆ ಮಾನವಪ್ರಾಣಿಯ ವರೆಗಿನ ಜೀವಿಗಳನ್ನು ಗ್ರಹಿಸಿಕೊಳ್ಳಲು ಪ್ರಾಣ-ಚೇತಸದ ಒಂದೇ ಪಾತಳಿ (biosphere) ಸಾಕಾಗುತ್ತದೆ. ಆದರೆ, ಮಾನವಪ್ರಾಣಿಯ ಜೀವನ ರೀತಿಯಲ್ಲಿ ಕಾಣಿಸಿಕೊಂಡಿರುವ ಭಾಷೆ, ಸಂಸ್ಕೃತಿ, ವಿವಿಧ ಶಾಸ್ತ್ರಾದಿಗಳ ಹಿನ್ನೆಲೆಯನ್ನು ಗ್ರಹಿಸಿಕೊಳ್ಳಲು, ಒಂದೇ ಪಾತಳಿಯ ಮೂಲಕ

ಆತಂಕವುಂಟಾಗುವುದು ಅವರ ಗಮನಕ್ಕೆ ಬಂತು. ತಮ್ಮ ಒಂದು ಗ್ರಂಥದಲ್ಲಿ ಇದನ್ನು ಸೂಚಿಸಿದ್ದಾರೆ; ಮಾನವಜೀವನದಲ್ಲಿ 'Noosphere' ಎಂಬ ಇನ್ನೂ ಒಂದು ಸಾಂಕೇತಿಕ=ತಾತ್ವಿಕ ಪಾತಳಿಯನ್ನು ಗ್ರಹಿಸಿಕೊಳ್ಳುವ ಆವಶ್ಯಕತೆಯನ್ನು ಸ್ವಲ್ಪ ವಿವರಿಸಿದ್ದಾರೆ. ತಾವು ಈ ಪಾರಿಭಾಷಿಕ ಪದವನ್ನು, ತಮ್ಮಂತೆಯೆ ಈ ದಿಕ್ಕಿನಲ್ಲಿ ಮುಂದುವರಿದ ಇಬ್ಬರು ಫ್ರೆಂಚ್ ವಿಜ್ಞಾನಿಗಳಿಂದ ಸ್ವೀಕರಿಸಿದ್ದಾಗಿ ಹೇಳಿದ್ದಾರೆ. (: New Bottles for New Wine).

ಮಾನವಶಾಸ್ತ್ರಜ್ಞರಲ್ಲಿ ಡಾ. ಎ. ಎಲ್. ಕ್ರೋಬರ್ ಮತ್ತು ಇವರ ಸಹಕಾರಿಗಳು ಇದಕ್ಕೂ ಆಳವಾಗಿ, ಬೇರೆ ದಿಕ್ಕಿನಿಂದ ವಿಚಾರಿಸಿದ್ದುಂಟು. ಮಾನವಜೀವನದ ಒಂದು ವ್ಯೂಹ (Configuration) ಕಣ್ಣೆದುರು ಇಲ್ಲದೆ, ಈ ಮಾನವನಿಂದ ಆಕಾರ ಪಡೆದ ಭಾಷೆ ಹಾಗೂ ಸಂಸ್ಕೃತಿಯ ಅರ್ಥವನ್ನು ಗ್ರಹಿಸಿಕೊಳ್ಳುವುದು ಅಶಕ್ಯ. ಇದು ಎಲ್ಲ ಮಾನವಶಾಸ್ತ್ರಜ್ಞರೂ ಒಪ್ಪಿರುವ ಮಾತು. ಆದರೆ, ಈ ಜೀವನದಲ್ಲಿ ಪಾತಳಿಗಳನ್ನು ಕಲ್ಪಿಸುವುದೇ ಅಥವಾ ಇವು ಉಂಟೆ? ಎಂಬ ಬಗೆಗೆ ಇವರಾರೂ ವಿಚಾರಿಸಿದಂತೆ ಇಲ್ಲ! ಜೀವನದಲ್ಲಿ ಅರ್ಥ (: ವಿಚಾರ=ಜ್ಞಾನ) ಇದು ಉಂಟೇ ಅಥವಾ ಇದು ಮಾನವನ ಸಂ-ಕಲ್ಪನೆಯೆ? ಇದರ ಬಗೆಗೆ ಭಾರತೀಯ ಪುರಾತನರು ಮಾತ್ರ ನಿಶ್ಚಿತಮತಿಗಳಾಗಿದ್ದಾರೆ. ಜ್ಞಾನವು ಸ್ವಯಂ ತಾತ್ತ್ವಿಕ ಪ್ರಕಾಶರೂಪ ಸತ್ಯ ಎಂಬಿವೇ ಭಾರತೀಯರ ವೈಖರಿ. ಜರ್ಮನಿಯ ಸಂಶೋಧಕರು ಈ ಸತ್ಯಾರ್ಥಗ್ರಹಣಕ್ಕೆ ಮೂರು ಪಾತಳಿಗಳನ್ನು ಸ್ವೀಕರಿಸಿದ್ದಾಗಿದೆ! ಅಮೇರಿಕೆಯ ಶಾಸ್ತ್ರಜ್ಞರಲ್ಲಿ ಒಮ್ಮತವಿಲ್ಲ. ನನಗೆ ಸೋಜಿಗದ್ದಾಗಿ ಕಂಡದ್ದು : ಕ್ರೀ. ಪೂ. ೨,೦೦೦ ವರುಷಗಳ ಹಿಂದಿನ ಭಾರತೀಯ ಪುರಾತನ ಪರಂಪರೆಯಲ್ಲಿ, ಒಂದರಲ್ಲಿ ವ್ಯಾಹೃತಿತ್ರಯಗಳ ಬಗೆಗಿನ ಶ್ರದ್ಧೆ ಉಂಟು! (ವಿ+ಆ+ಹೃ) ವ್ಯಾಹೃತಿ ಇವು ಅದೃಶ್ಯ ಸ್ವರೂಪದಲ್ಲಿ ಇವೆ. ಇವನ್ನು ಸವಿತೃದೈವತದ ಉಪಾಸನೆಯ ಸಂದರ್ಭದಲ್ಲಿ ಧ್ಯಾನಧಾರಣದ ಸಲುವಾಗಿ, ಹೊರಗೆ ತರಬೇಕಾಗುತ್ತದೆ. (ವಿ+ಆಹೃತಿ).

ವ್ಯಾಹೃತಿತ್ರಯಗಳ ಅನುಕ್ರಮದ ವಿಚಾರ

ವ್ಯಾಹೃತಿಗಳ ವಿಚಾರದಲ್ಲಿ ಇರುವ ಕ್ರಮವು ಸಮರ್ಪಕವಿದೆ. ಆದರೆ, ವೇದಕಾಲೀನ ಮೂಲ ವ್ಯಾಹೃತಿಗಳ ಸಂಖ್ಯೆಯಲ್ಲಿ ವ್ಯತ್ಯಾಸವಾಗತೊಡಗಿದ್ದುದನ್ನು ಇಂದಿನ ಸಂಹಿತೆಯಿಂದಲೂ ಅರಿಯಬಹುದು. ಈ ಸಂಖ್ಯೆ ನಾಲ್ಕು ಆಗುವುದರ ಸ್ಪಷ್ಟ ಉಲ್ಲೇಖನವು ತೈತ್ತಿರೀಯ ಉಪನಿಷತ್ತಿನಲ್ಲಿ ದೊರೆಯುತ್ತದೆ.[೬] ಆದರೆ, ಈ ಸಂಖ್ಯೆ ವ್ಯತ್ಯಾಸ ಹಾಗೂ ಸ್ಥಾನವ್ಯತ್ಯಾಸದ ಚರ್ಚೆಯಲ್ಲಿ ಸೇರಲು ಇಲ್ಲಿ ಅವಕಾಶವಿಲ್ಲ. ಮೂರೇ ವ್ಯಾಹೃತಿಗಳು ಎಂಬ ಶ್ರದ್ಧೆಯನ್ನು ವಿರೋಧಿಸುವ ಇನ್ನೂ ಒಂದು ಸಂಪ್ರದಾಯವು ಅತಿಪುರಾತನ ಕಾಲದಿಂದಲೇ ಉಂಟು. ಆ ಶ್ರದ್ಧೆಯ ಪ್ರಭಾವದಲ್ಲಿ ವ್ಯತ್ಯಸ್ತವಾದ ಸಂಹಿತೆಯು ಇಂದು ಉಪಲಬ್ಧವಿದೆ. ಸೌರ:ಪ್ರಕಾಶ ತತ್ವದ ದೈವತಗಳು ಆದಿತ್ಯರೂಪಕ್ಕೆ ತಿರುಗುವುದೇ ಈ ಸ್ಥಿತ್ಯಂತರಕ್ಕೆ ಪ್ರಮಾಣ. ಮೂಲ ವ್ಯಾಹೃತಿತ್ರಯಗಳ ಅನುಕ್ರಮದಲ್ಲಿ ಭೂಃ ಮತ್ತು ಭುವಃ ಇವರೆಡೂ ಏಕಾತ್ಮಕ ಸಮವಾಯ ಸ್ವರೂಪದಲ್ಲಿ ಉಂಟು. ಭೂಃ ಇದು ಮೂರ್ತ, ರಸ, ರೂಪ, ಗಂಧಾದಿ ಗುಣಯುಕ್ತ ವಸ್ತು; ವಿಷಯಗಳಿಗೆ ಆಧಾರಭೂತ ಪಾತಳಿ. ಈ ಮೂರ್ತದ, ಅ-ಮೂರ್ತ ರೂಪದಲ್ಲಿರುವ ಇನ್ನೊಂದು ಅಂಗವೇ ಭುವಃ ಪಾತಳಿ. ಈ ಬಗೆಯ ಅರ್ಥಕ್ಕೆ ಪ್ರಮಾಣವೇನು? ಉಪನಿಷತ್ತುಗಳಲ್ಲಿ ದೊರೆವ ನಿರ್ದೇಶಗಳ ಬಲದಿಂದ ಈ ಸ್ಪಷ್ಟೀಕರಣವು ಶಕ್ಯವಾಗಿದೆ. ಬೃಹದಾರಣ್ಯಕ ಉಪನಿಷತ್ತಿನ ಈ ನಿರ್ದೇಶ ನೋಡಿ[೭] ಇಲ್ಲ ಅಧಿ-ಅಕ್ಷ ಎಂಬ ಆಶಯವು ಅಭಿಪ್ರೇತವಿದೆ. ಋಗ್ವೇದದ ಪುರುಷಸೂಕ್ತದಲ್ಲಿ ಅತ್ಯತಿಷ್ಠತ್ ದಶಾಂಗುಲಮ್ ಎಂಬ ನಿರ್ದೇಶದಂತೆ, ಈ ಪುರುಷೋತ್ತಮನ ಅಕ್ಷ (ಸಹಸ್ರ)ದ ಗಂಭೀರ ವರ್ಣನೆಯೂ ಅಲ್ಲಿದೆ.[೮]

ವ್ಯಾಹೃತಿ ತ್ರಯಗಳಲ್ಲಿ, ಭೂಃ ಮತ್ತು ಭುವಃ ಇವೆರಡರೊಳಗಿನ ಅನ್ಯೋನ್ಯವನ್ನು ಮನಗಾಣಿಸಿ ಕೊಳ್ಳುವುದಕ್ಕಾಗಿ, ಈ ಮೇಲಣ ವಿವರಣೆ ಅನಿವಾರ್ಯವಾಯ್ತು. ಭೂಃ ಪಾತಳಿಯ ಮೇಲ್ಗಡೆಯಲ್ಲಿ ಭುವಃ ಪಾತಳಿಯು ಇದೆ. ಮೇಲಣ ವಿವರಣೆಯ ಅಭಾವದಲ್ಲಿ, ಈ ಮೇಲೆ-ಕೆಳಗೆ ಎಂದು ಗ್ರಹಿಸಿಕೊಳ್ಳಬೇಕಾಗುವುದರ ಅನಿವಾರ್ಯತೆಯು ಗಮನಕ್ಕೆ ಬರಲು ಶಕ್ಯವಿಲ್ಲ.

'ಜ್ಯೋತಿ' ಸ್ವರೂಪ ಸಾಕ್ಷಾತ್ಕಾರ

ಈ ವ್ಯಾಹೃತಿಗಳೆರಡರ ಸಂಪರ್ಕದಲ್ಲಿ ಲಭಿಸುತ್ತದೆ ಎಂಬ ಜ್ಯೋತಿ: ಸ್ವರೂಪ ಸಾಕ್ಷಾತ್ಕಾರದ ನಿರ್ದೇಶನವು ಔಚಿತ್ಯಯುಕ್ತವಿದೆ. ಸಂಸ್ಕೃತ ಭಾಷೆಯೊಳಗಿನ ಅಭಿಧಾಶಕ್ತಿಯು ಅ-ಪೂರ್ವವಿದೆ . ಈ ಸಾಕ್ಷಾತ್ಕಾರವು ಜ್ಯೋತಿಃ ಸ್ವರೂಪದಲ್ಲಿ ಅಭಿವ್ಯಕ್ತವಾಗುವಲ್ಲಿ ತುಂಬ ಅರ್ಥವಿದೆ. ಜ್ಯೋತಿ ಇದು ಚಂದ್ರನ ಅಥವಾ ದೀಪದ ಸಾಹಚರ್ಯದಲ್ಲಿಯೇ ಕಾಣಿಸಿಕೊಳ್ಳುವ ವಾಡಿಕೆ ನಿಷ್ಕಾರಣವಿಲ್ಲ. ಚಂದ್ರ, ದೀಪ, ಜ್ಯೋತಿ ಎಂಬಲ್ಲಿ ರಾತ್ರಿಯ ಸಮಯವು ಅಭಿಪ್ರೇತವಿದೆ! ಆದುದರಿಂದ ಈ ಭೂಃ → ಭುವಃ ಇವೆರಡರ ಏಕಾತ್ಮಕ ಸಮವಾಯದಲ್ಲಿ ಪ್ರಾಪ್ತವಾದ ಜೀವನಾನುಭವದ ಪಾರ್ಶ್ವಭೂಮಿ, ರಾತ್ರಿಯ ಸಮಯಾಚಾರಗಳ ಹಿನ್ನೆಲೆಯುಳ್ಳದ್ದೇ ಇರಲಿಕ್ಕೆ ಬೇಕಾಯ್ತು! ಡಾ. ಎ. ಎಲ್. ಕ್ರೋಬರ್ ಹೇಳಿರುವ ಒಂದು ಮಾತು ಇಲ್ಲಿ ನೆನಪಿಗೆ ಬರುತ್ತದೆ : Genuine language, genuine culture - these two are gifts'-ಭಾಷಾ-ಮಾಧ್ಯಮವನ್ನು ಇಷ್ಟಬಂದಂತೆ ನಾನು ಸೃಷ್ಟಿಸಬಲ್ಲೆ, ಎಂಬ ಶುದ್ಧ-ಬ್ರಹ್ಮರು, ತಮ್ಮ ಕೃತಿಯ ಸಂಕೇತ ಸೃಷ್ಟಿಯಿಂದ, (test tube) ಸಂತಾನ ನಿರ್ಮಿತಿಯಿಂದ ಇನ್ನು ಮುಂದೆ ಆಗಲಿರುವ ಘೋರ ಪರಿಣಾಮಗಳ ಇನ್ನೊಂದು ಪ್ರಕಾರವು, ಭಾಷೆ ಹಾಗೂ ಸಂಸ್ಕೃತಿಯ ಕ್ಷೇತ್ರದಲ್ಲಿ, ಇಂದಿನ ಋಗ್ವೇದ ಸಂಹಿತೆಯ ಕಾಲದಿಂದಲೇ ಆಗುತ್ತ ಬಂದಿದೆ, ಎಂದು ನನ್ನ ಅಲ್ಪ ಸಮೀಕ್ಷೆಯಲ್ಲಿಯೂ ನನಗೆ ಕಾಣುತ್ತಿದೆ. ಭಾಷೆಯೇ ಮಾನವರ ಕಣ್ಣು. Genuine language ಇದು ಕೃತ್ರಿಮ ಭಾಷೆಯಾಗ ತೊಡಗಿದ್ದಿಲ್ಲವಾದರೆ, ಭಾರತೀಯರು ಹಗಲು=ರಾತ್ರಿ, ಸೂರ್ಯ=ಚಂದ್ರ ಎಂಬೀ ದಿಗ್‌ಭ್ರಾಂತಿಗೆ ಒಳಗಾಗುವ ಸಂಭವವು ಇರಲಿಲ್ಲ! ಸೂರ್ಯ ವಂಶಕುಲ ಲಲಾಮ: ರಾಮಚಂದ್ರ ಸೂರ್ಯ=ನಾರಾಯಣ ಈ ಶಬ್ದಪ್ರತಿಮೆಗಳು ಶಿಷ್ಟಮಾನ್ಯವಾಗಿರುವಲ್ಲಿ, ಈ ಜನದ ಕಣ್ಣು ಸಂಭ್ರಮವನ್ನು ಗ್ರಹಿಸಿಕೊಳ್ಳಲು ಅಸಮರ್ಥ ಇರುವುದೆಂದೇ ಗೊತ್ತಾಗುತ್ತಿಲ್ಲವೆ?

ಜ್ಯೋತಿಯೆಂಬಲ್ಲಿ ಚಾಂದ್ರಸಂಪ್ರದಾಯವು ಅಭಿಪ್ರೇತವಿರುವಂತೆ, ಪ್ರಕಾಶ ಎಂಬಲ್ಲಿ ಸೌರ: ಪ್ರಕಾಶ ಪೂಜಕರ ಸಂಪ್ರದಾಯವೇ ಇರಬಲ್ಲುದು. ಚಾಂದ್ರ ಸಂಪ್ರದಾಯದ ಸಾಕ್ಷಾತ್ಕಾರದ ಜ್ಯೋತಿಃ ಸ್ವರೂಪದ ವಾಸ್ತವ ಸ್ವರೂಪವನ್ನು ಗಮನಕ್ಕೆ ತಂದುಕೊಡುವ ನಿರ್ದೇಶಗಳು ವೇದೋಪನಿಷತ್ತುಗಳಲ್ಲಿ ದೊರೆಯುತ್ತವೆ. ಅವುಗಳನ್ನು ಲೆಕ್ಕಿಸದೆ, ಬರಿ ಜ್ಯೋತಿಸ್ವರೂಪದ ದರ್ಶನ ಎಂದಲ್ಲಿ, ಸತ್-ತ್ವಂ ತತ್ತ್ವವು ತಿಳಿದಂತೆ ಆಗಲಾರದು. ಇದನ್ನು 'ಆಪೋ ಜ್ಯೋತಿಃ ರಸೋಮೃತಂ' ಎಂದು ಹೇಳುವ ವಾಡಿಕೆಯಿದೆ[೯] ಇದನ್ನು ಶಿವತಮೋರಸಃ ಎಂದು ಋಗ್ವೇದ ಹೇಳಿದೆ. ಅಪ್ಸು ಜ್ಯೋತಿಃ ಜ್ಯೋತಿಷಿ ಆಪಃ ಎಂದು ತೈತ್ತಿರೀಯ ಉಪನಿಷತ್ತು ವರ್ಣಿಸಿದೆ.[೧೦] ಆಪದಲ್ಲಿರುವ ಜ್ಯೋತಿ ಎಂದರೆ ಇದು ಸ-ರಸ ಜ್ಯೋತಿಯಿರಲಿಕ್ಕೆ ಬೇಕಾಯಿತು. ರಸೋ ವೈ ಸಃ, ಆನಂದಂ ಬ್ರಹ್ಮಸಿದ್ಧಿಯ ತತ್‌ಮಯತೆಗೆ ಕಾರಣವಾಗುವ ಜ್ಯೋತಿ ಇದಾಯಿತು. ವ್ಯಾಹೃತಿಗಳ ಸ್ವರೂಪ ಗ್ರಹಣಕ್ಕೆ ಜ್ಯೋತಿಯ ಪರಿಚಯವು ಇಷ್ಟೇ ಸಾಕು.

ಈ ಜ್ಯೋತಿಯ ಅನುಭಾವವು ಅಂತರಿಕ್ಷಸ್ಥ ಅವ-ಕಾಶದಲ್ಲಿ ಲಭಿಸುತ್ತದೆ, ಎಂಬ ವಿವರಣೆಯೂ ಮತ್ತು ಅಂತರಿಕ್ಷ ಇವೆರಡರಲ್ಲಿ ಆಕಾಶ ಮತ್ತು ಭೂಮಿ ಇವೆರಡರಲ್ಲಿ ಇರುವ ಅಂತರವು ಅಭಿಪ್ರೇತವಿದೆ. ಅವ-ಕಾಶ (ಅಂತರಿಕ್ಷ) ಈ ಶಬ್ದಪ್ರತಿಮೆಯು ಇದಕ್ಕೆ ಪ್ರಮಾಣ. ಆ-ಕಾಶ ಇದು ಪ್ರಕಾಶ. ಲೋಕದ ಸ್ವರ್ ಪಾತಳಿಯ ಸೂಚಕ ಸಂಕೇತವಾಗಿದೆ. ಆದರೆ, ಔಚಿತ್ಯಭಂಗದಿಂದಾಗಿ ಆಕಾಶ ಮತ್ತು ಅಂತರಿಕ್ಷ ಇವೆರಡರೊಳಗಿನ ಮೌಲಿಕ ತಾರತಮ್ಯವು ವೇದಕಾಲದಿಂದಲೇ ನಷ್ಟವಾಗತೊಡಗಿದ್ದುದನ್ನು ಕಾಣಬಹುದು. 'ಕಂನುಡಿಯ ಜೀವಾಳ' ಪುಸ್ತಕದಲ್ಲಿ ಎತ್ತಿ ಹೇಳಿರುವ ಮಿಲ್ಟನ್ ಮಹಾಕವಿಯ ಒಂದು ಭವಿಷ್ಯವಾಣಿಯ ನೆನಪು ಬರುತ್ತದೆ: ಭಾಷೆಯೊಳಗಿನ ಶಬ್ದಪ್ರತಿಮೆಗಳ ಔಚಿತ್ಯವು ನಷ್ಟವಾಗತೊಡಗುವಾಗ ಆ ಭಾಷಿಕರೊಳಗಿನ ಸೂಕ್ಷ್ಮ ಸಂವೇದನಾ ಕ್ಷಮ ಪ್ರಜ್ಞೆಯು ಬಧಿರವಾಗಹತ್ತಿದ ಲಕ್ಷಣವೆಂದು ಬಗೆಯಬೇಕಾಗಿ ಆ ಮಹಾಕವಿ ಸೂಚಿಸಿದ್ದಾನೆ. ಭಾಷೆಯೊಳಗಿನ ಸೂಕ್ಷ್ಮಾರ್ಥದ ಶಬ್ದಪ್ರತಿಮೆಗಳ ಅವಮೂಲ್ಯನದೊಡನೆ ಆ ಭಾಷಿಕರ ಅಧಃಪತನಕ್ಕೂ ಪ್ರಾರಂಭವಾಗಿರುತ್ತದೆ, ಎಂದು ಬಗೆಯಲಿಕ್ಕೂ

ಅಡ್ಡಿಯಿಲ್ಲ, ಎಂದು ಆ ಮಹಾಕವಿ ಹೇಳಿರುವ ಭವಿಷ್ಯವು, ಭಾರತೀಯರ ಸ್ವಸ್ವರೂಪ ದರ್ಶನಕ್ಕೆ ಒಂದು ಕಂನಡಿಯಂತಿದೆ.

ಸ್ವರ್-ಪಾತಳಿಯ ದೈವತ

ಇಂದಿನ ವೇದದಲ್ಲಿ ಸ್ವರ್ ಪಾತಳಿಯ ದೈವತಗಳೆಲ್ಲ ಭೂಃ (=ಭುವಃ) ಪಾತಳಿಯ ಮೇಲೆ ಬಂದಿವೆ. ಇದನ್ನು ಎರಡು ಬಗೆಯಿಂದ ನಿರ್ದಿಷ್ಟಪಡಿಸಿಕೊಳ್ಳಲು ಶಕ್ಯವಿದೆ : ಸ್ವರ್ ಪಾತಳಿಯ ಜಾತವೇದ ಅಗ್ನಿ, ಭೂಃ-ಭುವಃ ಇದರ ಅಂತರಿಕ್ಷಸ್ಥ ಅವ-ಕಾಶದೊಳಗಿನ ನಚಿಕೇತಾಗ್ನಿಯಲ್ಲಿ ಅಡಗಿರುವನು[೧೧] ಎಂಬುದನ್ನು ಹೇಳುವ - ಇಂದಿನ ವೇದದಲ್ಲಿ ನಿರ್ದಿಷ್ಟವಿರುವ - ಒಂದು ಉದಾಹರಣವೂ, ಮಾದರಿಗಾಗಿ ಸಾಕು. ಆರ್ಯ(?)ರೆಂಬುವರು ಅಗ್ನಿಪೂಜಕರು ಎಂಬ ಸ್ಥೂಲ ಗ್ರಹಿಕೆಯನ್ನೇ ಈವರೆಗಿನ ಏನೆಲ್ಲ ಸಂಶೋಧಕರು ಮುಂದುವರಿಸಿಕೊಂಡು ನಡೆದಿದ್ದಾರೆ. ಆದರೆ, ಈ ಅಗ್ನಿಗಳಲ್ಲಿ ಎರಡು ಪ್ರಕಾರಗಳು ಇವೆ :

೧. ಚಾಂದ್ರ ಭೂಮಿಕೆಯ ಅಗ್ನಿ;

೨. ಸೌರ : ಪ್ರಕಾಶ ತತ್ತ್ವದ ಭೂಮಿಕೆಯ ಅಗ್ನಿ, ಚಾಂದ್ರಅಗ್ನಿಯು ವಿವಿಧ ನಾಮಾಂತರಗಳಿಂದ ಈ ಸಂಹಿತೆಯ ಸ್ತೋತ್ರದ ವಿಷಯನಾಗಿದ್ದಾನೆ. ಉದಾ: ನಚಿಕೇತಾಗ್ನಿ, ಸೂಚಿಕಾಗ್ನಿ ಸಾಚಿಕಾಗ್ನಿ, ದಾವಾಗ್ನಿ, ಇತ್ಯಾದಿ. ಉಪನಿಷತ್ತಿನಲ್ಲಿ, ಗೌತಮಾಗ್ನಿ, ಯೋಷಾವಾವ ಗೌತಮಾಗ್ನಿಃ, ಪುರುಷೋ ವಾವ ಗೌತಮಾಗ್ನಿಃ.[೧೨] ಈ ಗೌತಮಾಗ್ನಿ ಕುಂಡದಲ್ಲಿ, 'ದೇವಾಃ ರೇತೋ ಜುಹ್ವತಿ' ಎಂಬ ಯಜ್ಞ (ಕರ್ಮ)ದ ವರ್ಣನೆಯೂ ಉಂಟು! ಋಗ್ವೇದದಲ್ಲಿ ಬರುವ ಸಹಸ್ರಮುಷ್ಕ ಅಗ್ನಿಯನ್ನು ದ್ರಪ್ಸಃ (ತಟಪಟ ಹನಿಯುವವನು) ಎಂದೂ ವರ್ಣಿಸಿದ್ದಾಗಿದೆ.[೧೩]

ಜಾತವೇದನೆಂಬ ಅಗ್ನಿಯು ಬಂದು, ನಚಿಕೇತಾಗ್ನಿಯಲ್ಲಿ ಅಡಗಿಕೊಂಡನಂತೆ! ಈ ನ-ಚಿಕೇತಾಗ್ನಿ ಎಂದರೆ, ಆಪ : ರಸದೊಳಗಿನ ಅಗ್ನಿ (liquid fire). ಅಗ್ನಿ=ನಾರಾಯಣನೆಂದರೂ ಇವನೇ! ಈ ನಚಿಕೇತಾಗ್ನಿಯ ಸೂಕ್ತವು ಮಹತ್ ಉಲ್ಬಂ... (Vulva) ದಿಂದ ಪ್ರಾರಂಭವಾಗಿದೆ! ಶುಕ್ರನ ಕಥೆಯ ದೇವಯಾನಿಯ ನೆನಪನ್ನು ತರುವ ದೇವಯಾನ ಈ ಶಬ್ದಪ್ರತಿಮೆ ಈ ಸೂಕ್ತದಲ್ಲಿ ಎರಡು ಬಾರಿ ಬಂದಿದೆ.[೧೪] ಜಾತವೇದ ಅಗ್ನಿ ಈ ಪದವನ್ನು ಸಾಯಣರು, ಜಾತಪ್ರಜ್ಞಃ ಎಂದು ಸ್ಪಷ್ಟೀಕರಿಸಿದ್ದಾರೆ. ಜಾತ-ಪ್ರಜ್ಞ ಎಂಬ ಈ ಶಬ್ದಪ್ರತಿಮೆಯ ಮೂಲಕ, ನಚಿಕೇತಾಗ್ನಿಯು ಪ್ರಜ್ಞೋದಯ ಪೂರ್ವಜೀವನ ರೀತಿಯಲ್ಲಿ ಸಾರ್ವಭೌಮನಂತೆ ತಾನೆ ತಾನಾಗಿ, ಪ್ರಾಣಚೇತನದ ಪಾತಳಿಯ ಮೇಲೆ ಏಕಮೇವ ಅಧಿಕಾರಿಯಾಗಿದ್ದುದರ ಸೂಚನೆ ದೊರೆಯುತ್ತದೆ. ಮಾನವೇತಿಹಾಸದೊಳಗಿನ ಮಹತ್ತ್ವದ ಘಟ್ಟವು ಇಲ್ಲಿ ಅರಿಕೆಗೆ ಬರುತ್ತದೆ. ಪ್ರಾಣದೇವರೇ ಸಾರ್ವಭೌಮವಾಗಿದ್ದ ವಾನರ ಪಾತಳಿಯ ವರೆಗಿನ ಜೀವನ ರೀತಿಯಲ್ಲಿ, ಪ್ರಜ್ಞೆ (consciousness of consciousness; conscience) ಇನ್ನೂ ತಲೆದೋರಿದ್ದಿಲ್ಲ. ಪ್ರಜ್ಞಾ-ಪ್ರಾದುರ್ಭಾವದ (emergence) ಹಂತದಿಂದ ಮಾನವೇತಿಹಾಸವು ಪ್ರಾರಂಭವಾಗುತ್ತದೆ. ಈ ಪ್ರಜ್ಞೆ, ಪ್ರಾಣ-ಚೇತಸವನ್ನು - ಪ್ರಮಾಥೀ (primeval and primary) ಇಂದ್ರಿಯ ವೃತ್ತಿಯನ್ನು ಅಂಕೆಯಲ್ಲಿ ಇರಿಸಿಕೊಳ್ಳುವ ಸ್ವ-ಭಾವವುಳ್ಳದ್ದಾಗಿದೆ! ಸ್ವರ್ : ಪ್ರಕಾಶ ಪಾತಳಿಯ ಈ ಅಗ್ನಿಯು, ಭೂಃ-ಭುವಃ ಇದರ ಅಂತರಿಕ್ಷಸ್ಥ ಅವಕಾಶದೊಳಗಿನ (: biosphere) ರಸಸ್ವರೂಪ ಅಗ್ನಿಯಲ್ಲಿ ಬಂದು ವಿಲೀನವಾಗುವಾಗ. ಈ ಮಾನವಜೀವನವು ಒಂದೇ ಪಾತಳಿಯ ಮೇಲಣ ವ್ಯವಹಾರ ವಾಗುತ್ತದೆ! ಈ ಸ್ಥಿತ್ಯಂತರದ ಪರಿಣಾಮವೇನು? ಎಂಬುದು ಈ ವೇದದ ನಾಸದೀಯಸೂಕ್ತದ ಮೂಲಕ ಗೊತ್ತಾಗಬಲ್ಲುದು. 'ತಮಃ ಆಸೀತ್, ತಮಸಾ ಗೂಳ್ಹಂ! ಅಗ್ರೇ ಅಪ್ರಕೇತಂ ಸಲಿಲಂ! ಆಃ ಇದಂ ಸರ್ವಂ' ಕತ್ತಲನ್ನು ಕತ್ತಲು ಆ-ಲಿಂಗಿಸಿದೆ; ಒಂದೂ ಪ್ರಕಾಶ ಕಿರಣ ಕಾಣದು. ಎಲ್ಲೆಲ್ಲೂ ಸಲಿಲ (=ಶರೀರ ಜಲ, ವ್ಯಾಪಿಸಿದೆ....![೧೫]

ಇಂದಿನ ಋಗ್ವೇದದೊಳಗಿನ ಸ್ವರ್ : ಪ್ರಕಾಶತತ್ತ್ವದ ಪಾತಳಿಯು, ಭೂಃ→ಭುವದ - ಅಂತರಿಕ್ಷಸ್ಥ ಅವ-ಕಾಶದಲ್ಲಿಯೇ ಒಳಗೊಳ್ಳುವುದರಿಂದ ಆದ, ಆಗುವ ವ್ಯತ್ಯಾಸವೇನು? ಎಂಬುದನ್ನು ಸತ್-ತ್ಯಂ ಮತ್ತು ಸತ್ಯ ಇವೆರಡರೊಳಗಿನ ಅಂತರವು ನಷ್ಟವಾಗುತ್ತಿರುವುದರ ಮೂಲಕ ಅರಿಯಬಹುದು. ಈ ಪಲ್ಲಟವನ್ನು, ಸಂಕಷ್ಟ, ಪ್ರಳಯ, ಭ್ರಷ್ಟಾಚಾರಾದಿಗಳನ್ನು ಆಮಂತ್ರಿಸಿ, (at our own risk) ದುರ್ಲಕ್ಷಿಸಬಹುದು! ಮೂಲ ಋಗ್ವೇದದೊಳಗಿನ ಋತಸ್ವರೂಪೀ ಸತ್ಯವು ಪ್ರಕಾಶತತ್ತ್ವದ ಪಾತಳಿಯ ಮೇಲಣದು. ಇದಕ್ಕೆ ಪ್ರಮಾಣ ಅವೆಸ್ತದಲ್ಲಿ ಇರುವ ಅಷ ವಹಿಷ್ಠ ಎಂಬ ನಿರ್ದೇಶ. ಅವೆಸ್ತ ಹಾಗೂ ಋಗ್ವೇದದ ಭಾಷೆಯಲ್ಲಿ ೧೦೦% ಸಾಮ್ಯವಿರುವುದಾಗಿ ತಜ್ಞರು ಏಕಾಭಿಪ್ರಾಯವುಳ್ಳವರಾಗಿದ್ದಾರೆ. ಭಾಷೆ ಹಾಗೂ ಸಂಸ್ಕೃತಿ ಇವೆರಡರೊಳಗಿನ ಅನ್ಯೋನ್ಯದ ಮೂಲಕವಾಗಿ ಸಮಾನ ಭಾಷಿಕರ ಸಂಸ್ಕೃತಿಯು ಮೊದಲ ಹಂತದಲ್ಲಿ ಸಮಾನವೇ ಇರಬಲ್ಲುದು. ಆದರೆ, ಡಾ. ಸಪೀರ್ ಹೇಳುವಂತೆ, ಭಾಷಿಕ ಆಕೃತಿ (linguistic form) ಸಮಾನವೇ ಉಳಿದರೂ, ಕಾಲಕ್ರಮದಲ್ಲಿ ಭಾಷಿಕ-ಆಕೃತಿಗಿಂತಲೂ, ಸಾಂಸ್ಕೃತಿಕ ಆಕೃತಿಯು (cultural form) ಬೇಗನೆ ಬದಲಾಗತೊಡಗುತ್ತದೆ. ಇಂದು ಇಂಗ್ಲಿಷ್ ಭಾಷಿಕ ಅಮೇರಿಕೆಯ ಸಾಂಸ್ಕೃತಿಕ ಆಕೃತಿ, ಬ್ರಿಟನ್ನಿನ ಸಾಂಸ್ಕೃತಿಕ ಆಕೃತಿಯಲ್ಲಿ ಕಾಣದೊರೆವ ವ್ಯತ್ಯಾಸವು ಇದೇ ಬಗೆಯದಾಗಿದೆ.

ಅವೆಸ್ತದ ಪ್ರಮುಖ ದೈವತ ಅಹುರಮಜ್ದ ಈತ ಪ್ರಕಾಶಪಾತಳಿಯ ದೈವತ. ಅಷ ಹಾಗೂ ಸೋಮ ಇವೆರಡೂ ಅಹುರಮಜ್ದನ ಪಾತಳಿಯ ಮೇಲಣವು. ಋಗ್ವೇದದ ಅಸುರ (>ಅಹುರ) ವರುಣನು ಮೂಲದಲ್ಲಿ ಪ್ರಕಾಶ ಪಾತಳಿಯ ಸೌರದೈವತ. ಆದರೆ ಚಂದ್ರನನ್ನು ವರುಣನ ಮಟ್ಟಕ್ಕೆ ಏರಿಸಲಾಗಿದೆ, ಎಂಬುದನ್ನು ಓಲ್ಡೆನಬರ್ಗ ಸಪ್ರಮಾಣವಾಗಿ ಸಿದ್ಧಪಡಿಸಿದ್ದಾನೆ.[೧೬]

ವರುಣನು ಚಂದ್ರ-ಆದಿತ್ಯನಾಗಿ ಮಾರ್ಪಟ್ಟಿರುವುದು ಸರ್ವಮಾನ್ಯವಿದೆ; ಋಗ್ವೇದದ ಸೋಮನೂ ಮೆಲ್ಲನೆ ಚಂದ್ರನ ವೇಷದಲ್ಲಿ ಮೆರೆಯತೊಡಗಿದ್ದಾನೆ! ಸೂರ್ಯಾ (ಸೂರ್ಯನ ಸ್ತ್ರೀರೂಪ) ದೇವಿಯೊಡನೆ ಈ ಸೋಮ (=ಚಂದ್ರ) ಮದುವೆಯಾಗುವನೆಂಬ ಗಂಭೀರ ವರ್ಣನೆಯಿದೆ.[೧೭] ಸೂರ್ಯ-ಚಂದ್ರರ ಲಗ್ನವು ಇದು ಅಮಾವಾಸ್ಯೆ ಅಥವಾ ಸೂರ್ಯಗ್ರಹಣದ ಮೃತ್ಯುತಿಥಿ! ಈ ವಿವಾಹಸೂಕ್ತವನ್ನು ನರರ ಮದುವೆಯಲ್ಲಿ ಹೇಳುವ ಹಾರುವರ ಈ ಸಂಪ್ರದಾಯವು ಭಯಾನಕವಿದೆ! ವರುಣನನ್ನು ಋತಃಸತ್ಯದ (=ವಿಶ್ವಕ್ಕೆ ಆಧಾರಭೂತ ನಿಯಮ. ವ್ಯವಸ್ಥೆಯ) ಸಂರಕ್ಷಕನೆಂದು ಬಗೆಯಲಾಗಿದೆ, ಮೂಲ ವೇದದಲ್ಲಿ. ಋತಸ್ಯ ಗೋಪ್ತಾರ ವರುಣನು ಸೌರ ಭೂಮಿಕೆಯವನು ಇರುವಾಗ ಋತ ಎಂಬ ಸಂಕೇತಕ್ಕೆ ಇದ್ದ, ವಿಶ್ವದ ಆಧಾರಭೂತ ತಾತ್ತ್ವಿಕ ಸ್ವರೂಪದ ನಿಯಮಗಳ ಋತ ಸ್ವರೂಪೀ ಸತ್ಯ ಎಂಬ ಅರ್ಥವು, ವರುಣನು ಚಂದ್ರ=ಆದಿತ್ಯನಾಗಿ ಮಾರ್ಪಡುವುದರೊಂದಿಗೆ, ಈ ಋತ : ಸತ್ಯವು, ಚಾಂದ್ರಭೂಮಿಕೆಯ ಆಪ : ರಸ=ರೇತಸ್ವರೂಪೀ ಸಾಂಕೇತಿಕ ಪ್ರತಿಮೆಯಾಯಿತು! ನಚಿಕೇತಾಗ್ನಿಯಲ್ಲಿ ಜಾತವೇದ ಅಗ್ನಿಯು ಹೋಗಿ ಅಡಗಿದನೆಂಬ ಗ್ರಹಿಕೆಯಿಂದಾಗಿ ಆಗುವ ತಿರುವುಮುರುವೇ, ವರುಣನು ಚಂದ್ರಾದಿತ್ಯನಾಗುವ ಮೂಲಕ ಋತ ಆರ್ತವ, ರೇತ, ಉದಕ ಸ್ವರೂಪಿಯಾಗುವ ಸ್ಥಿತ್ಯಂತರದಲ್ಲಿಯೂ ಪ್ರತೀತಿಗೆ ಬರುತ್ತದೆ!

ಭೂಃ→ಭುವಃ ಈ ಏಕಾತ್ಮಕ ಪಾತಳಿಯ ಮೇಲಣ ಜೀವನಾನುಭವದ ಪ್ರಭಾವವು, 'ಸತ್-ತ್ಯಂ'=ಇದರ ಹೊರಗೆ ಪ್ರಪಂಚದಲ್ಲಿ ಬೇರೆ ಏನೂ ಬೆಲೆಯುಳ್ಳದ್ದಿಲ್ಲ ಎಂಬ ಮನೋಭಾವವನ್ನು ಪ್ರೇರೇಪಿಸುತ್ತದೆ. ಪಿಂಡ-ಬ್ರಹ್ಮಾಂಡ ಐಕ್ಯದಲ್ಲಿಯೇ ಧನ್ಯತೆಯನ್ನು ಕಾಣುವ ಜೀವನ ರೀತಿಯಿದು. ಪಾಶ್ಚಾತ್ಯ ಪರಂಪರೆಯ (Religion) ಎಂಬುದರ ಮೂಲಕ ಈ ಜೀವನಾನುಭವದ ಆಕೃತಿಸ್ವರೂಪವನ್ನು ಚೆನ್ನಾಗಿ ಗ್ರಹಿಸಿಕೊಳ್ಳಬಹುದಾಗಿದೆ. Religion ಇದರ ಮೂಲಾರ್ಥವು ಬಂಧನ' : binding ಎಂದು ಉಂಟು. ಆ 'ಭುವಃ' ಪಾತಳಿಯ 'ತತ್' ಮಯತೆಯ ಆ-ಕರ್ಷಣದಿಂದಾಗಿ, ಈ 'ಬಾಳು ಹಾಳು' ಎಂಬ ಭಾವನೆ ತಾನೆ ತಾನಾಗಿ ಆವರಿಸುತ್ತದೆ. ಈ ಉತ್ಕಟ ಭಾವನೆಯ ಪರಿಣಾಮದಿಂದಾಗಿ ಆ-ಮರಣ ಕುಮಾರಿ, ಕುಮಾರವ್ರತಿಯಾಗಿ ಬಾಳುವುದೇ ಜೀವನದ ಆದರ್ಶವಾಗಿ ಬಿಡುತ್ತದೆ'; religion ಇದರ ಅರ್ಥದಿಂದ ಈ ವಿವರಣಕ್ಕೆ ತುಷ್ಟಿ ದೊರೆಯುತ್ತದೆ:

> Religion, monastic condition, being monk or nun a monastic order, human recognition of superhuman controlling power, especially of a personal God entitled to obedience, effect of such recognition on conduct & mental attitude..........

'ಭಗ-ವತ್' ಗೀತೆಯ 'ಭಗ-ವಂತ'ನು ಉಪದೇಶಿಸಿರುವ 'ಸ್ವ-'ಧರ್ಮೇ ನಿಧನಂ ಶ್ರೇಯಃ' ಎಂಬ ಈ ಧರ್ಮ'(?) ವೈಯಕ್ತಿಕ ಸ್ವರೂಪದ್ದು. 'ಮುನಿಃ ಮೋಕ್ಷಪರಾಯಣಃ' ಎಂದು ಗೀತೆಯೇ ಹೇಳಿರುವ ಯತಿ, ಮುನಿಗಳ ಈ ನಡೆವಳಿಯನ್ನು religion ಎಂದು ಹೆಸರಿಸುವಲ್ಲಿ ಇರುವ ಔಚಿತ್ಯವು, ಇದನ್ನು 'ಧರ್ಮ' ಎಂದು ಕರೆಯುವಲ್ಲಿ ತಿಲಮಾತ್ರವೂ ಇಲ್ಲ.

ಪಾಶ್ಚಾತ್ಯ ಪರಂಪರೆಯ religion ಇದರ ಯತಿ-ಮುನಿ ಪಂಥೀಯ ಆಚರಣೆಗೆ ಒತ್ತಾಯಪಡಿಸಿದ ಜೀವನಾನುಭವವನ್ನು truth ಈ ಸಂಕೇತದ ಮೂಲಕ ಸೂಚಿಸಲಾಗುತ್ತಿರುವಲ್ಲಿ ಅಂತಃಸಂಗತಿಯುಂಟು. ಈ truth, essence 'ರಸ' ಸಾರ : ಅರ್ಕದ-ದ್ರವರೂಪ 'ಸತ್-ತ್ವ 'ರೂಪ ಸತ್-ತ್ಯಂ ಆಗಿದೆ. ಇದನ್ನು being in becoming : 'ಅ.ಭು' : ಅ ನಾದರೂಪ ಬೀಜ=ಬಿಂದುವಿನ 'ಜ್ಯೋತಿಃ' ಸ್ವರೂಪದಲ್ಲಿ ಕಂಡುದುಂಟು. ಜರ್ಮನಿಯ ವಿಖ್ಯಾತ ಸಂಶೋಧಕ ಊಸ್ನರ್ ದೈವತವಿಚಾರದ ಅಂತಃಸೂತ್ರವನ್ನು in sight ಪಾಶ್ಚಾತ್ಯ ಜಗತ್ತಿಗೆ ಇತ್ತಿರುವ ಖ್ಯಾತಿಯವನು. candal light 'ಜ್ಯೋತಿರ್ಲಿಂಗ'ದ : ಭೂಃ ಭುವಃ ಪಾತಳಿಯ ದಿವ್ಯಾನುಭೂತಿಯ ಸಂದರ್ಭದ ಸಾಕ್ಷಾತ್ಕಾರದ ಪ್ರತೀಕವಾಗಿದೆ ಎಂದು ಹೇಳಿರುವುದಕ್ಕೆ ಭಾರತೀಯ ದಿವ್ಯಾಧ್ಯಾತ್ಮದ ಪರಂಪರೆಯಿಂದಲೂ ಪುಷ್ಟಿ ದೊರೆಯುತ್ತಿರುವುದನ್ನು ಮರೆಯಲಾಗದು. ಈ ಹಣತೆಯ 'ಕುಡಿ' ದೀಪ ಅಥವಾ ಜ್ಯೋತಿರ್ಲಿಂಗ ರೂಪ ಈ ದಿವ್ಯಾನುಭೂತಿಯು, ಈ ಅನುಭಾವಿಗಳಲ್ಲಿ 'ಏಕಂ ಏವ ಅದ್ವಿತೀಯಂ' one without second ತಾವು, ತಮ್ಮ ಅನುಭಾವ ಎಂಬ ಏಕಾಂತಿಕ ವೈಶಿಷ್ಟ್ಯದ sui generis ಭಾವನೆಯನ್ನು ಪ್ರೇರಿಸುವುದರಿಂದ ಹೆಣ್ಣು ಹೆಚ್ಚೋ, ಗಂಡು ಹೆಚ್ಚೋ ಎಂಬ ಆತ್ಯಂತಿಕ ಕಲಹವು ಈ ದಿವ್ಯಾನುಭೂತಿಯ ತಳಪಾಯದಲ್ಲಿ ಇದೆ! ಆದುದರಿಂದ, ಈ ಅನುಭವವು, true-truce 'ತುರ್ತು ಕಾದಾಟ ಸಾಕು' ಎಂಬ ಭೂಮಿಕೆಯ truthಗೆ ಜನ್ಮವಿತ್ತಿದೆ! ಗ್ರೀಕ್‌ತತ್ತ್ವದ ಹೆರಾಕ್ಲಿಟಸ್ War is father of all and king of all ಎಂಬ ತನ್ನ ದರ್ಶನದ ಸೂತ್ರ ಹೇಳಿದ್ದಾನೆ. 'ಆಪೋವಾ ಇದಂ ಅಗ್ರೇ ಆಸುಃ' : ಆದಿಮಾತೆ ಮೊದಲು, ಈ ಆಪದಲ್ಲಿ ಅಡಗಿದ್ದ ಅಗ್ನಿ : ಸರ್ಪ 'ಕುಮಾರ' ಹೊರಗೆ ಬಂದನು. ಇದು 'ಏಕಂ: ಸತ್' ಭೂಮಿಕೆಯ ಜೀವನದೃಷ್ಟಿ! ತಾಯ್ಗಂಡತನಕ್ಕೆ ಪ್ರೇರಿಸಿತು. 'ಅದಿತೇಃ ದಕ್ಷಃ ಅಜಾಯತ' ಇದರಿಂದ ಸೃಷ್ಟಿ! ಅಥವಾ 'ದಕ್ಷಾತ್ ಅದಿತಿಃ' ಮಗಳ ಗಂಡತನದ ಪ್ರೇರಣೆ! ಇಲ್ಲವೆ ಸೋದರ-ಸೋದರೀ ಸಂಬಂಧದ ಅನಿವಾರ್ಯತೆ, ಕೊನೆಯ ಹಂತದ ಈ ಬಗೆಯ ಸಂಬಂಧ ಆದಂ-ಈವ್ಹ, ಇಜಿಪ್ತಿನ ಇಸಿಸ್-ಹೋರಸ್, ಜಪಾನಿನ ಅರಸುಮನೆತನಗಳಲ್ಲಿ ಈ ನಡೆವಳಿಯ ಅವಶೇಷ ಕಾಣುತ್ತದೆ. 'ಅಂಬಾ ರುದ್ರಸ್ಯ ಸ್ವಸಾ' ಅಥವಾ ಅದಿತಿಪುತ್ರ 'ಆದಿತ್ಯ'ನೆಂಬ ವಿಷ್ಣು, ಯಜುರ್ವೇದದ ಉಲ್ಲೇಖದಂತೆ 'ಆದಿತ್ಯೈ ವಿಷ್ಣುಪತ್ನ್ಯೈ ಚರುಃ ಈ ಬಗೆಯ 'ಬಂಧನಾತೀತ' ಜೀವನ ರೀತಿಯ ಪ್ರವೃತ್ತಿ ಪ್ರೇರಕ ಈ 'ಏಕಂ ಸತ್', ಸ್ವರ್ ಪಾತಳಿಯ ಮೇಲಣ 'ಸತ್ಯ'ದಿಂದ ಭಿನ್ನ ಎಂದು ಗಮನಕ್ಕೆ ಬರಲು ಇದನ್ನು 'ಸತ್ತ್ಯಂ' ಎಂದು ಬರೆವ ವಾಡಿಕೆಯು ತೀರ ಪ್ರಾರಂಭದಲ್ಲಿ ಇರುವ ಶಕ್ಯತೆಯಿದೆ. ಇಲ್ಲವಾದರೆ ಬೃಹದಾರಣ್ಯಕದ ತತ್-'ತ್ಯಂ' ಎಂಬ ಈ ಸಂಕೇತವು ಪ್ರಚಲಿತವಿರಲು ಶಕ್ಯವಿಲ್ಲ. ಆದರೆ, 'ಸತ್ಯ'=ಋತ' ಸಂಪ್ರದಾಯಕ್ಕೆ ಇದ್ದ ಗೌರವ ಪ್ರತಿಷ್ಠೆ ತಮ್ಮ ಸಂಪ್ರದಾಯಕ್ಕೂ ಲಭಿಸಲು. 'ಸತ್ತ್ಯಂ' ಇದನ್ನು 'ಸತ್ಯ' ಎಂಬ ರೂಪದಲ್ಲಿಯೇ ಬರೆಯುವ ರೂಢಿಯು ಯೋಜನಾಪೂರ್ವಕವಾಗಿ ಪ್ರಚಲಿತವಾಗಿರಬಹುದು. ಈಗ ತತ್-ತ್ವ=ತತ್ತ್ವ ಎಂದು ಬರೆಯಬೇಕಾದುದನ್ನು ಕೇವಲ 'ತತ್ವ' ಎಂದು ಮಾತ್ರ ಬರೆವ ಮೈಗಳ್ಳತನದ ಔಚಿತ್ಯದೃಷ್ಟಿಯ ಅಭಾವವೂ ಇದಕ್ಕೆ ಕಾರಣವಿರಬಹುದು.

ಆಪ(=ಸ್ತ್ರೀ), ಅಗ್ನಿ, (=ಪುರುಷ), ಇವೆರಡರಲ್ಲಿ truce (ತುರ್ತು ಕಾಳಗ ಬೇಡ) ಎಂಬುದು ಸ್ಥಾಯೀ ಭಾವವಾಗಲಾರದು. ಇವೆರಡರಲ್ಲಿ ಒಂದಕ್ಕೆ, ಇನ್ನೊಂದನ್ನು ನುಂಗಿ-ನಾಶಪಡಿಸುವ ಪ್ರೇರಣೆ ಈ ಏಕಂ ಸತ್ ಭೂಮಿಕೆಯ 'ಸತ್ಯ'ದ ಅನುಸಂಧಾನದಲ್ಲಿ ಅನಿವಾರ್ಯವಿದೆ, ಎಂದು ಹೆರಾಕ್ಲಿಟಸನ ಸಿದ್ಧಾಂತ. Water is ignoble; 'ಅಗ್ನಿ' ಶುದ್ಧ, ಪವಿತ್ರ. ಆದಕಾರಣ ಆತನು ಏಕಾಕಿಯಾಗಿ ಜೀವಿಸಿ 'ಏಕಂ ಸತ್' ಮಾರ್ಗಿಯಾದನು ಎಂದು ತಿಳಿಯುತ್ತದೆ. ಭಾರತೀಯ ಏಕಂ=ಸತ್ ಪಂಥೀಯ ಜೀವನಾನುಭೂತಿಯ 'ಸತ್ಯಂ' ಬಾಳಗುರಿಯಾಗಿರುವ ಸಂಪ್ರದಾಯಗಳಲ್ಲಿ, 'ಕಾದಲರ ಕಾದಾಟ' ತಪ್ಪಿಸಲು ಆಮರಣ 'ಕು-ಮಾರಿ' ಗಂಡಿನ ಪಾಲಿನ ಹೆಣ್ಣು! ಕು-ಮಾರ ಹೆಣ್ಣಿನ ಪಾಲಿನ ಗಂಡು! ಈ ಜೀವನದೃಷ್ಟಿಯನ್ನು ಸ್ವೀಕರಿಸುವ ಅನಿವಾರ್ಯತೆಯು ಉಂಟಾದ ಕಾರಣವೇನು, ಮತ್ತೆ?

ಭಾರತೀಯ ದಿವ್ಯಾಧ್ಯಾತ್ಮವಾದ ಹಾಗೂ ಪಾಶ್ಚಾತ್ಯ ಪರಂಪರೆಯ religion, gnosticism ಇವುಗಳಲ್ಲಿ ಇರುವ ಸಾಮ್ಯವು, ಇವು 'ಅಂತರಿಕ್ಷಸ್ಥ' ಅವ-ಕಾಶದಲ್ಲಿ ಪ್ರತೀತಿಗೆ ಬಂದ 'ಆ ನಂದ' ಜ್ಯೋತಿಯ ಸಂದರ್ಭದಿಂದ ಆಕಾರ ಪಡೆದಿವೆಯೆಂಬುದು ಒಂದೇ ಅಲ್ಲ; 'ವೃಕ್ಷ'=cross (ಶಿಲುಬೆ) ಈ ಸಮಾನ Symbol 'ಭೂಃ-ಭೂವಃ' ಇವೆರಡನ್ನೂ ಜೋಡಿಸುವ 'ಸೇತು' ರೂಪವಿರುವುದನ್ನೂ ಲೆಕ್ಕಿಸುವ ಆವಶ್ಯಕತೆಯಿದೆ. ಈ ವೃಕ್ಷ cross=wood, ಇದು ನಾಗ=ಸರ್ಪವೂ ಸರಿ. ಕುಮಾರಿ=ಆದಿಮಾತೆ=ಅದಿತಿ; ಅದಿತಿಪುತ್ರ 'ಆದಿತ್ಯ'! 'ಆದಿತ್ಯ' ವ್ರತಿಗಳು ತಮ್ಮ ಉಪಾಸನಾ ದಿನವನ್ನು 'ರವಿ'ವಾರ ಗೊತ್ತುಪಡಿಸಿರುವ ಈ ಭಾರತೀಯ ಪರಂಪರೆಯ ಸಾಮ್ಯವು, ಕುಮಾರೀ (Virgin) ಮಾತಾಪುತ್ರ ಏಸುವಿನ Sabbath (=ಸಪ್ತಮ ದಿನದ) ವ್ರತ Sunday ದಿನವೇ ಇರುವ ಈ ಸಾಮ್ಯ ನಿಷ್ಕಾರಣವಿದ್ದೀತೇ? ಈ ಭೂಃ ಭುವಃ ಪಾತಳಿಗಳ ನಡುವಣ ಅಂತರಿಕ್ಷಸ್ಥ ಅವಕಾಶದ ಹಿನ್ನೆಲೆಯ ಜೀವನಾನುಭವದ ವಿವರಣೆ ಇಷ್ಟು ಸಾಕು. ವ್ಯಾಹೃತಿ-ತ್ರಯಗಳಲ್ಲಿ ಭೂಃ→ಭುವಃ ಇವೆರಡರೊಳಗಿನ ಅನ್ಯೋನ್ಯತೆಯ ವೈಶಿಷ್ಟ್ಯದಿಂದಾಗಿ ಈ ಮೂರ್ತಾಮೂರ್ತ ದೃಶ್ಯಸೃಷ್ಟಿಯ (phenomena) ಮಾಯಿಕ ಸಾಮರ್ಥ್ಯದ ಮೂಲಕ ಲಭಿಸುವ ಜೀವನಾನುಭವದ ಬಂಧು-ರ (Correspondence) ಸ್ವರೂಪದ 'ಸತ್ಯಂ' ಇದರ ಸ್ವರೂಪವನ್ನು ಗ್ರಹಿಸಿಕೊಳ್ಳುವ ಸ್ವಲ್ಪ ಪ್ರಯತ್ನವು ಆಯ್ತು. ಇನ್ನು 'ಆದಿತ್ಯ' ಸಂಪ್ರದಾಯದ ಪ್ರಭಾವದಲ್ಲಿ, ಯಾವುದರ ಅಸ್ತಿತ್ವವು ನಿಷ್ಪ್ರಯೋಜಕವಾಯ್ತೊ - ಅಥವಾ ಆಗಿದೆಯೊ-ಆ 'ಸ್ವರ್' ಭೂಮಿಕೆಯ ಪ್ರಕಾಶ ಪಾತಳಿಯ ಮೇಲಣ 'ಸತ್ಯ'ದ ಸ್ವರೂಪವನ್ನು ಗ್ರಹಿಸಿಕೊಳ್ಳುವ ಅಲ್ಪ-ಸ್ವಲ್ಪ ಪ್ರಯತ್ನವೂ ಇಲ್ಲಿ ಕರ್ತವ್ಯವಾಗುತ್ತದೆ.

ಸ್ವರ್ ಪಾತಳಿಯ-ಈ ವ್ಯಾಹೃತಿಯ ಸ್ವರೂಪವಿಚಾರ

ಭೂಃ ಭುವಃ ಈ ಸಮವಾಯ ರೂಪಪಾತಳಿಯ ಮೇಲಣ ಜ್ಞಾನವು 'ವಿಶಿಷ್ಟ'ಕ್ಕೇ ಸಂಬದ್ಧವಿರಬಲ್ಲುದು. ಇದು ವಿಶಿಷ್ಟದ ಉಪಾಸನೆ; ವೈಯಕ್ತಿಕ ಸ್ವರೂಪದ್ದೇ ಇರಬಲ್ಲದು; ಇಂದ್ರಿಯಗಮ್ಯ. 'ವಿಷಯೇಂದ್ರಿಯ' ಸಂಯೋಗದಲ್ಲಿ ಪ್ರಾಪ್ತವಾಗುವ 'ಅರಿವು', ಇದು 'ಪ್ರಜ್ಞೆ'ಯಿಂದ ತೀರ ಭಿನ್ನ. 'ಪ್ರಜ್ಞೆ' ಅರಿವಿನ ಅರಿವು. gnostic 'ಜ್ಞಾನ' : ಇದು ಫಕ್ತ ಅರಿವು : ಒಂದು ಬಿಂದುವಿನಲ್ಲಿ ಕೇಂದ್ರೀಕೃತವಿದ್ದು, ಈ ಬಿಂದುವಿನಲ್ಲಿಯೇ ಏನೆಲ್ಲ ವಿಶ್ವವನ್ನು ಸಂ-ಕಲ್ಪನಾರೂಪದಲ್ಲಿ ಕಾಣುವ ಹಂಬಲವು ಇದರದು. ಈ ಬಿಂದುರೂಪ ಜ್ಯೋತಿ, ಕತ್ತಲೆಯನ್ನು ತೊಡೆದುಹಾಕಲಾರದು; ಇದಕ್ಕೆ ಪ್ರತಿಯಾಗಿ ಕತ್ತಲು-'ಗುಹೆ'ಯು ಇದಕ್ಕೆ ಅಪೇಕ್ಷಿತ.

ಆದರೆ, ಪ್ರ-ಕಾಶಕ್ಕೆ ಕತ್ತಲೆ ಅಳುಕುತ್ತದೆ. ಅರ್ಥ : ವಿಚಾರರೂಪ 'ಪ್ರಕಾಶ'ವು ವಿವಿಧ ವಿಶಿಷ್ಟಗಳ ಸಾಮಾನ್ಯೀಕರಣದ ಹಿನ್ನೆಲೆಯಲ್ಲಿ ಹೊಳೆಯಬಲ್ಲುದು. ಮೂರ್ತಾಮೂರ್ತ ಪಾತಳಿಯ ಮೇಲಣ ವಸ್ತು, ವಿಷಯಾದಿಗಳ ಬಗೆಗಿನ 'ಬೆಳಕು' ಈ ಬಗೆಯ ಸಾಮಾನ್ಯೀಕರಣದಿಂದಾಗಿ ಲಭಿಸುತ್ತದೆ. 'ನಾಯಿ' ನಾನಾ ವರ್ಣ, ಆಕೃತಿಯ ಒಂದೊಂದು ವಿಶಿಷ್ಟ 'ನಾಯಿ'ಗಳಲ್ಲಿ ಇರುವ ಸಮಾನ ರೂಪ ಆಕೃತಿಯ ಅಂಶಗಳಿಂದ ಆಗುವ ಒಂದು ಸಾಧಾರಣ ಅಥವಾ ಸಾಮಾನ್ಯ ಪ್ರತಿಮೆಯು 'ನಾಯಿ' ಈ ಅರ್ಥ ಅಮೂರ್ತ ಪಾತಳಿಯ ಮೇಲಣ ಒಂದು idea, archetype. ಪ್ಲೇಟೋನು ಹೇಳಿರುವ ಮಾದರಿ ಇದು. ಭೂಮಿಯ ಮೇಲಣ

ಮೂರ್ತ ವಿಶಿಷ್ಟನಾಯಿಗಳ ಆಧಾರದಿಂದಾಗಿ, 'ನಾಯಿ' ಎಂಬ ಅಮೂರ್ತ ಭುವಃ ಪಾತಳಿಯ ಪ್ರತಿಮೆ ಶಕ್ಯವಾಗುತ್ತದೆ.

ಆದರೆ, ನಿಜವಾದ ತೊಡಕು ಇರುವುದು, ಸ್ವರ್ ಪಾತಳಿಯ ವೈಶ್ವಕ ಸ್ವರೂಪದ ವೈಚಾರಿಕ ಆಕೃತಿಗಳ (universals) ಸಂದರ್ಭದಲ್ಲಿ. ಈ ಬಗೆಯ ವೈಶ್ವಕ ಪಾತಳಿಯ ಅರ್ಥದ್ಯೋತಕ ಪಾರಿಭಾಷಿಕ ಪದವನ್ನು ಪುರಾತನ ಭಾರತೀಯರು 'ಸಂ-ಕೇತ' ಎಂದು ಹೆಸರಿಸಿದ್ದಾರೆ. 'ಕೋ ಅಸ್ಯ ಪ್ರತಿಮಾ ಅಸ್ತಿ?' ಎಂಬೀ ಬಗೆಯ ಪ್ರಯೋಗಗಳಲ್ಲಿ 'ಪ್ರತಿ-ಮಾ' (image) ಋಗ್ವೇದದಲ್ಲಿಯೇ ಬಂದಿದೆ. ಚಿತ್>ಕೇತ, ಮಿನುಗಿದಂತಾಗು, ಹೊಳೆ, ಎಂಬ ಕಣ್ಣಿನ ಪಾತಳಿಯ ಅರ್ಥದ ಸೂಚನೆ ಇಲ್ಲಿದೆ. ನ-ಚಿಕೇತ ಅಗ್ನಿ ಈ ಹೆಸರಿನಲ್ಲಿ, ಕಣ್ಣಿಗೆ ಕಾಣದಿರುವ (:ನ) ಚಿಕೇತ ಅಗ್ನಿ ಎಂಬ ಅರ್ಥವಿದೆ. ಸಂ-ಕೇತ, ಪ್ರ-ಕೇತ ಈ ಪದಗಳು ಏನೊಂದು ಆಗುಹೋಗಳನ್ನು ಸೂಚಿಸುವ 'ನೆಪ'. ಆದರೆ, ಇದು ಕಣ್ಣಿನ ಮೂಲಕ ಕಂಡ ಹೊಳೆದಂತೆ ಆದ ಸೂಚನೆ=ನೆಪ. ಪಾಶ್ಚಾತ್ಯ symbol ಇದರಲ್ಲಿ ಎರಡನ್ನು ಜೋಡಿಸು, ಕೂಡಿಸು, ಸೇತುವೆ ಎಂಬ ಅರ್ಥವು ಮಾತ್ರ ಮೂಲದಲ್ಲಿ ಉಂಟು. ಪಾಶ್ಚಾತ್ಯ ಪರಂಪರೆಯ truth=ಸತ್ತ್ವಂ ಇದು 'ಸೇತು'=ಸತಿ: medium=symbol ಮೂಲಕವೇ ಗೊತ್ತಾಗಬಲ್ಲುದು. ಈ ಅರಿಮೆ : ಜ್ಞಾನ-logica continum ಸ್ವರೂಪದ್ದು=ಸ್ಪರ್ಶೇಂದ್ರಿಯ (ಕರ್ಣೇಂದ್ರಿಯ) ಪ್ರಧಾನ.

ಆದರೆ, ಸ್ವರ್ ಪಾತಳಿಯ ಸಂ-ಕೇತದ ಮೂಲಕ ಹೊಳೆದಂತೆ ಎನಿಸಿ, ಅದರ ವಾಸ್ತವತೆಯು ಪ್ರತೀತಿಗೆ ಬರುವ 'ಸತ್ಯ'ವು, ಏನೊಂದು ವೈಶ್ವಕ ಪಾತಳಿಯ ನಿಯಮದ ಆಧಾರವುಳ್ಳದ್ದಾಗಿರುತ್ತದೆ. ಉದಾ : ಮೂರ್ತಾಮೂರ್ತರೂಪ ಎರಡು ಪಾತಳಿಗಳ ನಡುವಣ ಜ್ಞಾನವು

೧. ವಿಶಿಷ್ಟಕ್ಕೆ, ವೈಶಿಷ್ಟ್ಯಕ್ಕೆ ಸಂಬಂಧಿಸಿದ್ದೇ ಇರಬಲ್ಲದು.

೨. ಇದು ಭೌತ ಪಾತಳಿಯದೇ ಇರಬಲ್ಲುದು.

೩. ಇದು ತತ್ತ್ವತಃ essence ಸಾರ, ಅರ್ಕ, ರಸ, ದ್ರವ ರೂಪದ್ದಾಗಿರಬಲ್ಲುದು, ಅಣು-ಪರಮಾಣುಗಳ ಹಂತದವರೆಗೂ ಹೀಗೆಯೇ.

೪. ಈ ಪಾತಳಿಯ ಸತ್ತ್ವಂ, ಇದು phenomena : ಮಾಯಾಪವಾಡ ಚಮತ್ಕಾರ, ಜಾದು ಸ್ವರೂಪದ್ದಾಗಿರುವ ಅನುಭವವು ಇದರ ಜೊತೆಗೇ ಉಂಟು.

ಪಾಶ್ಚಾತ್ಯ ತತ್ತ್ವಜ್ಞರನ್ನು ಚಿಂತೆಗೆ ಒಳಗಾಗಿಸಿರುವ illegitimate abstraction ಕುರಿತು ಒಂದು ಮಾತನ್ನು ಹೇಳುವುದೂ ಕ್ರಮಪ್ರಾಪ್ತವಿದೆ. legitimate=ಸಾಧು ವಿಚಾರ (universals) ಯಾವುವು? ವಿವಿಧ ವಿಶಿಷ್ಟಗಳೂ ಅರ್ಥದ ಕಕ್ಷೆಯಲ್ಲಿ ಬರುವ ವೈಶ್ವಕ ಪಾತಳಿಯ ವಿಚಾರಗಳನ್ನು 'ಸಾಧು' ವಿಚಾರ ಎನ್ನಬಹುದು. Dramatic irony ಮೂಲಕ ಫಕ್ಕನೆ ಹೊಳೆವ ಅರ್ಥ ಇದು ವಿಚಾರದ ಹಿನ್ನೆಲೆಯಲ್ಲಿ ಇರುವ ಸಾಮಾನ್ಯ ನಿಯಮವು ಈ ಬಗೆಯದಾಗಿರುವುದುಂಟು. 'ರವಿ ಕಾಣದ್ದನ್ನು ಕವಿ ಕಾಣುತ್ತಾನೆ' ಎಂಬ ಮಾತಿಗೆ 'ರವಿ ಕಾಣದ್ದನ್ನು ಚಿತ್ರಿಸುವ ಕವಿ ಚಾಂದ್ರ ಸಂಪ್ರದಾಯದ ಶ್ರದ್ಧಾವಂತನೇ ಇರಬಲ್ಲ' ಎಂಬ ಮರುಮಾತು ಫಕ್ಕನೆ ಕೇಳಲು ದೊರೆತಾಗ, ಇದರ ಮೂಲಕ ಅನೇಕ ವಿಶಿಷ್ಟ, ವೈಶಿಷ್ಟ್ಯ ಪೂರ್ಣ ಕವಿಕೃತಿಗಳೂ ಈ ವಿಚಾರದ ಕಕ್ಷೆಯಲ್ಲಿ ಬರುವುದನ್ನು ಕಾಣಬಹುದು. 'ಅ-ಸಾಧು' ಸ್ವರೂಪ ವೈಚಾರಿಕ (illegitimate) ಮಾದರಿಯನ್ನು 'ಅಯೋನಿಸಂಭವಶಿಶು'ವಿನ ಪಾತಳಿಯ ಅವೈಶ್ವಕ ಅರ್ಥದ ಪ್ರತಿಮೆಗಳು ಎಂದು ಭಾಷಾಂತರಿಸಬಹುದು. ಇವು ಮೂರ್ತಾಮೂರ್ತ ಪಾತಳಿಯ ಮೇಲಣ ಒಂದೇ ವಿಶಿಷ್ಟದ-ವೈಶಿಷ್ಟ್ಯದ ಆಧಾರದ ಮೇಲೆ ನಿಂತಿರುತ್ತದೆ. ಸಾಂಕೇತಿಕ ಪ್ರತಿಮೆಗಳು 'ಸಾಹಿತ್ಯಿಕ' ಪಾತಳಿಯ 'ಕಾವ್ಯ' ಸತ್ಯವನ್ನು ಗಮನಕ್ಕೆ ತಂದುಕೊಡುತ್ತಿದ್ದರೂ ಇವು ನಿಜವಾಗಿ 'ಸ್ವರ್' ಪಾತಳಿಯ ಪ್ರಕಾಶ ತತ್ತ್ವದ ಆಧಾರವನ್ನುಳ್ಳ ಸಾರ್ವಕಾಲಿಕ ಸನಾತನ ಪ್ರತಿಮೆಗಳಲ್ಲ. ಇವು, ಅಂತರಿಕ್ಷ 'ಜ್ಯೋತಿ'ಯ ಪಾತಳಿಯವೇ ಆಗಿರಬಲ್ಲವು.

ಭಾರತೀಯ ಪುರಾತನರು, ಸೂರ್ಯ (ಪ್ರಕಾಶತತ್ತ್ವ) ಮತ್ತು ಚಂದ್ರ (ರಾತ್ರ ತತ್ತ್ವ) ಇವೆರಡೂ ವೈಶ್ವಕ ಪಾತಳಿಯ ಜೀವನಗತಿಗೆ ಕಾರಣವಾಗಿರುವ ಶಕ್ತಿ-ತತ್ತ್ವಗಳ ನೆಪದಿಂದ ಮಾನವ ಜೀವನದ ಇಡಿಯಾದ ಅರ್ಥವನ್ನು ಗ್ರಹಿಸಿಕೊಳ್ಳಲು ಪ್ರಯೋಜನ ಪಡೆದ ತಂತ್ರವೇ, ಈ ವ್ಯಾಹೃತಿತ್ರಯಗಳ ವ್ಯೂಹ (Configuration). ಈ ಭೂಮಿಕೆಯ ಜೀವನದೃಷ್ಟಿಯ ಫಲವಾಗಿ, ವಿವಸ್ವನ್ ಪ್ರೇರಣೆಯ 'ಮನು' ಪ್ರಣೀತ 'ಮಾನವಧರ್ಮ' ಪರಂಪರೆಯೊಂದು ಆಕಾರ ಪಡೆಯತೊಡಗಿದ್ದುದನ್ನು ನಿದರ್ಶನಕ್ಕೆ ತಂದುಕೊಡುವ ಸೌರ ಸಂಪ್ರದಾಯದ ಹಲವು ಸಾಂಕೇತಿಕ ಪ್ರತಿಮೆಗಳು, ಇಂದಿಗೂ, ಎಂತೊ ಅಂತೂ ಉಳಿದುಬಂದಿವೆ!

'ಮನು' ಪ್ರಣೀತ ಮಾನವಧರ್ಮ ಪರಂಪರೆ

ವಿವಸ್ವನ್ ಪ್ರೇರಣೆಯ 'ಮನು' ಪ್ರಣೀತ ಮಾನವಧರ್ಮ ಪರಂಪರೆಯ ಅಸ್ತಿತ್ವಸೂಚಕ ಕೆಲವು ಸಾಂಕೇತಿಕ ಪ್ರತಿಮೆಗಳ ಸ್ಥೂಲ ಪರಿಚಯವನ್ನೀಗ ಮಾಡಿಕೊಳ್ಳೋಣ. ವಿವಸ್ವನ್ ಮಾನವಧರ್ಮವು ಕುಸಿದು ಬೀಳಲು, ಅದಿತಿ : ಕುಮಾರೀ ಮಾತೆ : ಆದಿಶಕ್ತಿಯ ಸಂಪ್ರದಾಯದೊಡನೆ, ಬಳಿಕ ಈ ಕುಮಾರೀ ಮಾತಾ ಪುತ್ರ 'ಆದಿತ್ಯ': ಕುಮಾರ=ಪುರುಷ ಪೂಜಾಸಂಪ್ರದಾಯವು ಪ್ರಭಾವಶಾಲಿಯಾಗುತ್ತ ನಡೆದುದೇ ಪ್ರಧಾನ ಕಾರಣ. 'ಆದಿತ್ಯಾನಾಂ ಅಹಂ' ಎಂಬ ವಿಷ್ಣುರೂಪೀ ಕೃಷ್ಣ : ಭಗವಂತನು ತನಗೆ 'ವಿವಸ್ವನ್' ಸಂಪ್ರದಾಯವನ್ನು ನೆಲಕ್ಕೆ ಕೆಡುಹುವ ಅನಿವಾರ್ಯ ಆವಶ್ಯಕತೆ ಉಂಟಾದ ಕಾರಣವನ್ನು ಒಂದೆಡೆಯಲ್ಲಿ, ತಾನೇ ವಿವರಿಸಿ ಹೇಳಿದ್ದಾನೆ. (ಸೌರ) ವಿವಸ್ವಂತನಿಗೆ, ಈ (ಚಾಂದ್ರ) ಕೃಷ್ಣನು ತಾನು 'ಯೋಗದೀಕ್ಷೆಯನ್ನು ಕೊಟ್ಟೆ' ಎಂದು ಹೇಳಿದ್ದಾನೆ; =ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಂ[೧೮] ಋಗ್ವೇದದಲ್ಲಿ ವಿವಸ್ವಂತನೂ ವರುಣ, ಸೂರ್ಯಾದಿಗಳಂತೆ 'ಆದಿತ್ಯ' ರೂಪಕ್ಕೆ ಮಾರ್ಪಟ್ಟಿದ್ದಾನೆ. ಆ ಸಂಗತಿಯೆ, ಇಲ್ಲಿ ಇನ್ನೊಂದು ಬಗೆಯಲ್ಲಿ ವ್ಯಕ್ತವಾಗಿದೆ.

ವಿವಸ್ವಂತ(=ಸೂರ್ಯ)ನನ್ನು ಆದಿತ್ಯರೂಪಕ್ಕೆ ತಿರುಗಿಸಲು ಕಾರಣವೇನು? ಎಂಬ ವಿವರವು ಇದರ ಮುಂದಿನ ಶ್ಲೋಕದಲ್ಲಿಯೇ ಇದೆ: 'ಚಂದ್ರಾದಿತ್ಯ' ಸಂಪ್ರದಾಯದ 'ಯೋಗ'ವು ಮಹತಾ ಕಾಲೇನ ನಷ್ಟಃ' ಬಹಳಕಾಲದಿಂದ ಹೇಳಹೆಸರಿಲ್ಲದಂತಾಯ್ತು! ಆ ನಷ್ಟವಾದ (ಚಂದ್ರೋಪಸ್ಥಾನದ) 'ಯೋಗ'ವನ್ನೇ ಇಂದು, ಹೇ ನರನೇ ನಿನಗೆ ಮರಳಿ ಬೋಧಿಸಿದ್ದೇನೆ ಎಂಬ ಗೀತೆಯೊಳಗಿನ ಈ ಮಾತು, ಭಾರತೀಯ ಸಾಂಸ್ಕೃತಿಕ ಸ್ಥಿತ್ಯಂತರಗಳ ಐತಿಹ್ಯವನ್ನು ಗ್ರಹಿಸಿಕೊಳ್ಳಲು ಅತ್ಯಂತ ಮಹತ್ವದ ಆಂತರಿಕ ಪ್ರಮಾಣವನ್ನು ಒದಗಿಸುತ್ತಿದೆ. ಗೀತೆಯಲ್ಲಿ ದೊರೆಯುವ ಮೇಲಣ ಪ್ರಮಾಣದ ಬೆಳಕಿನಲ್ಲಿ ವಿವಸ್ವನ್ ಮನು : ಮಾನವ ಧರ್ಮ ಪರಂಪರೆಯ ಅಸ್ತಿತ್ವದ ಬಗೆಗಿನ ಸಂದೇಹರೂಪೀ 'ಕತ್ತಲೆ' ಇಲ್ಲವಾಗುತ್ತದೆ.

ದೇಶ-ಕಾಲ ಸ್ಮರಿಸಿಕೊಳ್ಳುವ ಒಂದು ಮಂತ್ರಪಾಠವು ಯಾಂತ್ರಿಕಸ್ವರೂಪದಲ್ಲಿ ಇಂದಿಗೂ ಕೇಳಲು ದೊರೆಯುತ್ತದೆ: '.......ಭರತಖಂಡೇ....... ವೈವಸ್ವತ ಮನ್ವಂತರೇ' ಇವೆರಡೂ ನಿಃಸಂದಿಗ್ಧ ನಿರ್ದೇಶಗಳು ಇರುವಾಗಲೂ ಭರತಖಂಡವು, 'ಹಿಂದೂ' ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆಯುತ್ತದೆ! ಇರಾಣಿನ ಡರಾಯಿಸನಿಗೆ ಸೋತುದರ ಸ್ಮಾರಕ ಶಿಲೆಯಂತಿದೆ, ಈ 'ಹಿಂದೂ' ನಾಮಕರಣ (ಕ್ರಿ.ಪೂ. ಸುಮಾರು ೪೧೬)! ದೇಶ ನಾಮವೇ ಆಗಂತುಕವಿರುವಾಗ, ಈ 'ಹಿಂದೂ' ಎಂಬ ಹೆಸರೇ, ಈ ಜನದ ಪರಂಪರಾಗತ 'ಧರ್ಮ' ಸೂಚಕ ಹೆಸರೂ ಆಗಿಬಿಡುತ್ತದೆ! ಆದರೂ ಇಂದಿಗೂ ವಿವಸ್ವಂತ ಮನುವಿನ ಯುಗ (: ಮನ್ವಂತರ) ಇರುತ್ತದೆ ಎಂಬ ಮಂತ್ರಪಾಠ, ನಮ್ಮ 'ಬ್ರಾಹ್ಮಣ'ರೆಂಬವರ ಬಾಯಲ್ಲಿ! ಇಂದಿಗೂ ವಿವಸ್ವನ್ ಮನುವಿನ ಯುಗವಿದ್ದೂ ವಿವಸ್ವನ್ ಮನುಪ್ರಣೀತ 'ಮಾನವ ಧರ್ಮ' ಪರಂಪರೆಯ ನಡವಳಿ-ನುಡಿವಳಿಯ 'ಸ್ಮೃತಿ' ಗ್ರಂಥವು ಕಾಣೆಯಾಗುತ್ತದೆ! ಇದರ ಬದಲು ಸ್ವಯಂ-ಭೂ (ಹಿರಣ್ಯಗರ್ಭ) ದೇವನ ಪರಂಪರೆಯ ಸ್ವಾಯಂಭುವ ಮನುಪ್ರಣೀತ ಸ್ಮೃತಿಯು ಪ್ರಚಾರದಲ್ಲಿ ಉಂಟು! ವೇದದ ಸಂಹಿತೆಯಲ್ಲಿ ಆಗಿರುವ ತಿರುವು-ಮುರುವೆ ಮನುಪರಂಪರೆಯ ಪಲ್ಲಟದಲ್ಲಿ ಸಂಭವಿಸಿರುವ ಈ ಘಟನಾಸಾಮ್ಯವು ಚಿಂತ್ಯವಾಗಿದೆ!

ವಿವಸ್ವನ್ ಮನುಪ್ರಣೀತ ಪ್ರಕಾಶ ತತ್ತ್ವದ ಭೂಮಿಕೆಯ ಧರ್ಮಪರಂಪರೆಯಲ್ಲಿ ಋತಸ್ವರೂಪೀ ಸತ್ಯಕ್ಕೆ ಪ್ರಾಶಸ್ತ್ಯವಿತ್ತು. 'ಸತ್ಯಾನ್ನಾಸ್ತಿ ಪರೋ ಧರ್ಮಃ' ಎಂಬ ಈ 'ಸತ್ಯ'ವು, ವೈಶ್ವಾನರಾಗ್ನಿ ರೂಪ ಸಮಾಜ=ಸಮಷ್ಟಿಯ ಪಾತಳಿಯ ಮೇಲಣ ಜೀವನ ರೀತಿಯಲ್ಲಿ ಆಕಾರ ಪಡೆದದ್ದು. 'ಆಚಾರ ಪ್ರಭವೋ ಧರ್ಮಃ' ಎಂಬಲ್ಲಿ ವೈಶ್ವಾನರ : ಸಮಾಜ ಸಮಷ್ಟಿಯು ರೂಪಿಸಿದ ಸಮಯ : ಆಚಾರಗಳು 'ಧರ್ಮ' ಎನಿಸಿದ್ದುವು. 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಈ ಮಾನವಧರ್ಮವು. 'ಯೋಗಕ್ಷೇಮಂ ವಹಾಮಿ ಅಹಂ' ಎಂಬ ಉದ್ರೀ ಆಶ್ವಾಸನದ ನರ-ನಾರಾಯಣ ಸಂಪ್ರದಾಯದ ಧರ್ಮವಲ್ಲ. ಧರ್ಮ ಎಂದರೆ ನಿಯಮ. 'ಧರ್ಮಪಾಲನೆ' ಎಂದರೆ ಆಯಾ ಜೀವನ ಕ್ಷೇತ್ರದೊಳಗಿನ ಯುಕ್ತ, ಶಿಷ್ಟಸಮ್ಮತ ನಿಯಮ : ವ್ಯವಸ್ಥೆ (=ಋತ) ಪಾಲಿಸುವುದೇ 'ಧರ್ಮ' ಎನಿಸಿತ್ತು. ಈ ಧರ್ಮವು ಗುಡಿಗೆ, ಮಶೀದಿಗೆ, ಮಠಕ್ಕೆ ಸೀಮಿತವಿಲ್ಲ. ಪುತ್ರಧರ್ಮ, ಪಿತೃಧರ್ಮ, ಮಿತ್ರಧರ್ಮ, ದಾಂಪತ್ಯಧರ್ಮ...... ಜೀವನದಷ್ಟು ವಿಶಾಲವಿರುವ ಈ 'ಧರ್ಮ'ವು ಮೋಕ್ಷಕಾಮೀ ಸಂಪ್ರದಾಯಗಳ religionಗಿಂತ ತೀರ ಭಿನ್ನ ಆಕೃತಿರೂಪದ್ದು.

ಮಾನವಧರ್ಮದ Gestalt=ಆಕೃತಿಯ ಹಿನ್ನೆಲೆಯಲ್ಲಿ ಪ್ರಕಾಶ ತತ್ತ್ವವಿದ್ದರೆ, religion ಸ್ವರೂಪದ ಪರಲೋಕವಾದೀ ಸಂಪ್ರದಾಯಗಳ Gestalt=ಆಕೃತಿಯ ಪಾರ್ಶ್ವಭೂಮಿ ಕತ್ತಲೆ, ರಾತ್ರಿಯ ಸ್ವರೂಪದ್ದಾಗಿದೆ. ಈ ಕಾರಣದಿಂದಾಗಿ 'ಮಾನವಧರ್ಮ'ವನ್ನು ನೆಲಕ್ಕೆ ಉರುಳಿಸಿದ ಬಳಿಕ 'ಸತ್ಯಮೇವ ಜಯತಿ, ನಾನ್ನತಂ' ಎಂಬ ವಿವಸ್ವನ್ (ಸಾರ) ಪರಂಪರೆ 'ಸತ್ಯ'ವನ್ನು ಅದರ ಉನ್ನತ ಪದದಿಂದ-ಸ್ವರ್ ಪಾತಳಿಯಿಂದ ಕೆಳಗೆ ತರುವುದು ಈ ಸಂಪ್ರದಾಯದ (ಕರ್ತವ್ಯ?) ಕರ್ಮವೇ ಆಗಬೇಕಷ್ಟೆ? ಇದನ್ನು ಖಾತ್ರೀ ಮಾಡಿಕೊಳ್ಳಲು ಮುಂಡಕೋಪನಿಷತ್ತಿನ ಈ ಮಂತ್ರವನ್ನು ಸಮೀಕ್ಷಿಸಲು ಪ್ರಾರ್ಥನೆ:

'ಅಂತಃಶರೀರೇ ಜ್ಯೋತಿರ್ಮಯಃ ಶುಭ್ರಃ' ಈ 'ಸತ್-ತ್ಯ'ದ ಸಾಕ್ಷಾತ್ಕಾರವೇ ಗುರಿಯಾಗುವಾಗ 'ಸತ್ಯ' ಇದು ಸತ್-ತ್ಯಂ ಪಾತಳಿಗೆ ಬರಲೇಬೇಕಷ್ಟೆ? 'ಸತ್ಯಮೇವ ಜಯತಿ ನಾನ್ನತಂ; ಸತ್ಯೇನ ಪಂಥಾಃ ವಿತತಃ ದೇವಯಾನಃ'[೧೯] ಈ 'ದೇವಯಾನ' ಪ್ರತಿಮೆ 'ನಚಿಕೇತಾಗ್ನಿ' (ಉಲ್ಬದ ಉಲ್ಲೇಖವಿರುವ) ಸೂಕ್ತದಲ್ಲೂ ಬಂದಿದೆ. 'ದೇವ ಯಾನ ಮಾರ್ಗ'ವು (ಪಂಥಾಃ) ಹಿಗ್ಗುವ-ಹಿಗ್ಗಿಸುವ ಈ 'ಸತ್ಯ'ವು 'ಸತ್-ತ್ಯಂ' ಇರಬೇಕೇ ಹೊರತು, ಅಮೂರ್ತ ತಾತ್ತ್ವಿಕ ಪಾತಳಿಯ ವಿಶ್ವನಿಯಮ ಎಂಬ ಅರ್ಥದ 'ಸತ್ಯ'ವು ಇದು ಇರಲಾರದು.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X. ೧೮೯
೨. ***ಅದೇ*** X. ೧೮೯
೩. Viswanatha Narayana Mandalika, ***Serpent Worship in Western India*** p. 169-200
೪. ***ಋಗ್ವೇದ ಸಂಹಿತೆ*** X. 136
೫. ***ವಿಷ್ಣುಪುರಾಣಂ*** ೩.೩.೯.೧೦
೬. ***ತೈತ್ತಿರೀಯೋಪನಿಷತ್ತು*** ೧.೬
೭. ***ಬೃಹದಾರಣ್ಯಕೋಪನಿಷತ್ತು*** ೨-೩-೧
೮. ***ಋಗ್ವೇದ ಸಂಹಿತೆ*** X- ೯೦
೯. ***ತೈತ್ತಿರೀಯ ಆರಣ್ಯಕ*** ೧೦-೧೫.೧; ೧೦-೨೮.೧
೧೦. ***ತೈತ್ತಿರೀಯೋಪನಿಷತ್ತು*** ೩.೮
೧೧. ***ಋಗ್ವೇದ ಸಂಹಿತೆ*** X-೫೧

೧೨. ***ಛಾಂದೋಗ್ಯೋಪನಿಷತ್ತು*** ೫-೭-೮

೧೩. ***ಋಗ್ವೇದ ಸಂಹಿತೆ*** viii 19-3 I; 32

೧೪. ***ಅದೇ*** ೨; ೫

೧೫. ***ಅದೇ*** X ೨೯-೩

೧೬. "*We do not miss the convincing facts about the understanding of the changes in which the* original moongod is elevated to the heights of Varuna and Ahurmazada..."ಕರ್ನಾಟಕ ವಿಶ್ವವಿದ್ಯಾಲಯದ ಜರ್ಮನ್ ಭಾಷೆಯ ಪ್ರಾಧ್ಯಾಪಕ ಡಾ. ಶ್ರೋತ್ರಿ ಅವರು ಮಾಡುತ್ತಿರುವ ಓಲ್ಡೆನ್ ಬರ್ಗನ ಗ್ರಂಥದ ಭಾಷಾಂತರದಿಂದ; ಈ ಭಾಗವನ್ನು ಕೊಟ್ಟ ಬಗೆಗೆ ಅವರಿಗೆ ಕೃತಜ್ಞ.

೧೭. ***ಋಗ್ವೇದ ಸಂಹಿತೆ*** X-೮೫

೧೮. ***ಶ್ರೀಮದ್ ಭಗವದ್ಗೀತೆ*** ೪.೧

೧೯. ***ಬೃಹದಾರಣ್ಯಕೋಪನಿಷತ್ತು*** ೧, ೩-೧-೬

ಅನುಬಂಧಗಳು

ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ

ಆಕರಗ್ರಂಥಗಳ ಸೂಚಿ

ಶಬ್ದಸೂಚಿ

ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ

ಋಗ್ವೇದಸಾರ ನಾಗಪ್ರತಿಮಾ ವಿಚಾರ

ಇದು ೧೯೭೧ರಲ್ಲಿ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇಲ್ಲಿಂದ ಪ್ರಕಟಿತವಾಯಿತು. 'ಇತರ ಪ್ರಕಟನೆಗಳು-೨೭' ಎಂಬ ಮಾಲಿಕೆಯಲ್ಲಿ ಇದು ಪ್ರಕಾಶಿತವಾಗಿದೆ. ಜಾಗತಿಕ ಪುರಾತನ ಆದಿದೈವತ ಕಥೆಗಳ ಅನುಸಂಧಾನದಲ್ಲಿ 'ಋಗ್ವೇದಸಾರ: ನಾಗಪ್ರತಿಮಾ ವಿಚಾರ' ಎಂದಿದೆ. ಋಗ್ವೇದ ಹತ್ತನೆಯ ಮಂಡಲದ ನೂರ ಎಪ್ಪತ್ತೇಳನೆಯ ಸೂಕ್ತದ ಮೊದಲ ಋಕ್ಕಾದ 'ಪತಂ-ಗಂ ಅಸುರಸ್ಯ ಮಾಯಯಾ ಹೃದಾ ಪಶ್ಯಂತಿ ಮನಸಾ ವಿಪಶ್ಚಿತಃ' ಎಂಬ ಮಂತ್ರವನ್ನು ಹಾಕಿದ್ದಾರೆ. ಈ ಪುಸ್ತಕವು "ನಿನ್ನೆ-ಇಂದು-ನಾಳೆಗಳ ರೂಪದಲ್ಲಿರುವ ಚಿರಂತನ ಜಾತವೇದ ವೈಶ್ವಾನರನಿಗೆ "ನಮೋ ಮಹದ್ಭ್ಯೋ, ನಮೋ ಯುವಭ್ಯೋ ನಮೋ ಅರ್ಭಕೇಭ್ಯಃ" ಎಂದು ಮುಡಿಪು ಆಗಿದೆ. ಆತ್ಮೀಯರಾದ ಡಾ.ವಿ.ಕೆ. ನರೇಗಲ್ಲ ಹಾಗೂ ಡಾ. ಆರ್. ಬಿ. ಪಾಟೀಲ ಇವರ ಸೌಜನ್ಯ, ಔದಾರ್ಯ, ಸ್ನೇಹಭಾವಗಳಿಗೆ ಸವಿನೆನಹನ್ನು ಇರಿಸಿದ್ದಾರೆ.

ಇಡಿಪುಸ್ತಕವು ಮೂರು ಭಾಗಗಳಿಂದ ಕೂಡಿದೆ. ಮೊದಲ ಮೂರುಭಾಗಗಳಲ್ಲಿ ಅಡಕವಾಗಿರುವ ವಿಚಾರಾಂಶಗಳ ಅನುಕ್ರಣಿಕೆಯನ್ನು ನೀಡಿದ್ದಾರೆ. ಆದಾದ ಮೇಲೆ ಭಾಗ-೧ ಜೀವನ ಸಂಸ್ಕೃತಿಯ ಅರ್ಥಗ್ರಹಣ ತಂತ್ರ : ಒಂದು ಹೊಳಹು; ಭಾಗ-೨ ಋಗ್ವೇದದಲ್ಲಿ ನಾಗಪ್ರತಿಮಾ ಪೂಜೆ ಉಂಟೆ? ಇದೇ ಭಾಗದಲ್ಲಿ ಶಬ್ದ ಸಂಕೇತ ಸೂಚಿ ನೀಡಿದ್ದಾರೆ. ಭಾಗ-೩ ಸಾಂಕೇತಿಕ ಚಿತ್ರಸೂಚಿಯುಳ್ಳ 'ನಾಗಪ್ರತಿಮಾ ಆರಾಧನೆಯ ವಿಹಂಗಮಾವಲೋಕನ'ದಲ್ಲಿ ವಿವರಗಳನ್ನು ನೀಡಿದ್ದಾರೆ. ಇದು ಕ್ರೌನ್ ಅಷ್ಟದಳಾಕಾರದಿಂದ ಕೂಡಿದೆ. ಈ ಮಹಾಗ್ರಂಥದ ಒಟ್ಟು ಪುಟಗಳು ೧೦೫೨. ಇದು ಕರ್ನಾಟಕ ಎಜ್ಯುಕೇಶನ್ ಬೋರ್ಡ್ ಪ್ರಿಂಟಿಂಗ್ ಪ್ರೆಸ್, ಧಾರವಾಡ ಇಲ್ಲಿ ಮುದ್ರಿತವಾಗಿದೆ. ಪುಸ್ತಕದ ಬೆಲೆ ೨೦-೦೦.

ಭಾಷೆ ಮತ್ತು ಸಂಸ್ಕೃತಿ

ಇದು ೧೯೭೫ರಲ್ಲಿ ಮೊತ್ತಮೊದಲು ಪ್ರಕಟವಾಯಿತು. ಇದು ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡದ 'ಸಾಹಿತ್ಯ ತರಂಗ-೧'ರ ಪ್ರಕಟಮಾಲೆ. ಪುಸ್ತಿಕೆಯ ಒಳಗಿನ ಪುಟದ ಶೀರ್ಷಿಕೆಯ ಕೆಳಗೆ 'ಪ್ರಜ್ಞಾ ನೇತ್ರೋ ಲೋಕಃ' ಎಂಬ ಶ್ರುತಿವಾಕ್ಯವನ್ನು ನೀಡಿದೆ. ಶಂಬಾ ಜೋಶಿ ಅವರ ಹೆಸರಿನ ಮೇಲೆ ಉಪನ್ಯಾಸಕರು ಎಂದಿದೆ. ಈ ಪುಸ್ತಿಕೆಯನ್ನು "ಕಂನಾಡ ಭಾಷೆ ಮತ್ತು ಸಂಸ್ಕೃತಿಯ ಉನ್ನತಿಗಾಗಿ ಕಂಕಣಬದ್ಧರಾಗಿರುವ ಡಾ. ದೇ.ಜ.ಗೌ. ಇವರಿಗೆ" ಅರ್ಪಣೆ ಮಾಡಿದ್ದಾರೆ. ಪ್ರಕಾಶಕರು ಕಾರ್ಯದರ್ಶಿ, ಕರ್ನಾಟಕ ವಿದ್ಯಾವರ್ಧಕ

ಸಂಘ, ಧಾರವಾಡ. ಅಧಿಕೃತ ಮಾರಾಟಗಾರರು ಸಮಾಜಪುಸ್ತಕಾಲಯ, ಧಾರವಾಡ. ಮುದ್ರಕರು, ಪ್ರತಿಭಾ ಮುದ್ರಣ, ಧಾರವಾಡ. ಒಟ್ಟು ಪುಸ್ತಿಕೆಯ ಪುಟಗಳು ಎಪ್ಪತ್ತೆಂಟು. ಪುಸ್ತಿಕೆಯ ಕೊನೆಗೆ ಶಂಬಾ ಜೋಶಿಯವರ ಕೃತಿಗಳು ಎಂಬ ಹೆಸರಿನಲ್ಲಿ ಕೆಲವು ಪುಸ್ತಕಗಳ ಹೆಸರುಗಳನ್ನು ನೀಡಿದ್ದಾರೆ. ಪುಸ್ತಿಕೆಯ ಬೆಲೆ. ೧.೦೦ ರೂ ಮಾತ್ರ

ಸತ್-ತ್ಯ-ಸತ್ಯ

ಇದು ೧೨.೪.೧೯೭೫ರಂದು ರಾಷ್ಟ್ರಕವಿ ಗೋವಿಂದ ಪೈ. ಸ್ಮಾರಕ ಸಂಶೋಧನ ಕೇಂದ್ರದ ಆಶ್ರಯದಲ್ಲಿ ನಡೆದ ಪಿಎಚ್.ಡಿ. ಅಧ್ಯಯನ ಕಾರ್ಯಕ್ರಮದ ಉದ್ಘಾಟನ ಸಮಾರಂಭದಲ್ಲಿ ಓದಲಾದ ಉಪನ್ಯಾಸದ ಪುಸ್ತಿಕೆ. ಈ ಪುಸ್ತಿಕೆಯ ಪ್ರಕಾಶಕರು ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ ಪ್ರಕಟಿಸಿದ್ದಾರೆ. ಒಟ್ಟು ಹದಿನಾರು ಪುಟಗಳು. ಬೆಲೆ ನಮೂದಿಸಿಲ್ಲ. ಇದು ೧೯೭೫ರಲ್ಲಿ ಪ್ರಕಾಶಿತವಾಯಿತು.

ಆಕರಗ್ರಂಥಗಳ ಸೂಚಿ

ಪುಸ್ತಕಗಳು

Bosch F. D.K.; 1960 ***The Golden Germ : An Introduction to Indian Symbolism***

Kramer S. N. (Ed.); ***Mythologies of the Ancient world,*** Anchor Books, New York

Donald Mckenzie ***Egyptian Myth and Legend***

Mercea Eliade; ***The Myth of Eternal Return;*** Bollingen series X LVI

Mercea Eliade; ***The Myth of Eternal Repetition***

Dodds E. R.; ***Greeks and the Irrational***

Adolf E. Jensen; ***Myth and Cult,*** Chicago University

Rundle Clark R. T.; ***Myth and Symbol in Ancient Egypt***

Robert Graves; (1955) ***Greek Myths,*** 2 Vols; Penguin Books, Middlesex

Gilbert Murray; ***Five Stages of Greek Religion***

Vogel ; ***Indian Serpent Lore***

Yung & Kereney; ***An Introduction to the Science of Mythology***

John Woodroffe; (1928) ***The Serpent Power;*** Ganesh & Co., Madras

Rundolf Clark ; (1910), ***Man and Myth : Myth and Symbolism in Ancient Egypt,*** New York

Gertrude Jobes (Ed); ***Dictionary of Mythology***

Robert Graves; (1966) ***The White Goddess : A Historical Grammar of Poetic Myth,*** Creative Age Press, New York

James E. O.; ***The Ancient Gods,*** London University

Richard Payne Knight and T. Wright; (1962) ***Sexual Symbolism,*** Julian Press, New York

Norman Brown W; ***Indian Mythology***

Wallis Budge E. A.; (1925) ; ***Babylonian Life and History***

Jessie L. Weston; ***From Ritual To Romance,*** Anchor Books, U.S.A.,

Dasgupta S. B.; ***Indian Buddhist Iconography : An Introduction to Tantric Buddhism,*** Calcutta University

Bannerjee J. N. ; (1956) ***The Development of Hindu Iconography***
Bannerjee J. N.; ***The Development of Indian Iconography***
Frazer J. G.; (1957) ***The Golden Bough,*** Vols. I & II Mac Millan & Co., London
Brend W. A.; ***Sacrifice to Attice***
Basham A. L.; (1959) ***The Wonder that was India,*** Grave Press, New York
Bertrand Russell; (1948) ***History of Philosophy;*** George Allen & Unwin, London
Frankfort H.; (1949) ***Before Philosophy;*** Penguin Books, Middlesex
Ernst Heckel; ***The Riddle of the Universe,*** Thinker's Library No. 3
Keith A. B.; ***Religion and Philosophy of Veda***
Banerjee R. D.; (1934) ***Pre-historic Ancient and Hindu India,*** Blackie & Son (India) Ltd., Warwick House, Bombay
Gonda J.; (Ed) ***Early Vishnuism***
Bloomfield; ***Vedic Religion***
Chardin P. T.; (1965) The Phenomenon of Man, Torch Books
Karrell : Man the unknown
Ernst Cassirer; ***Essay on Man : An introduction to a philosophy of Human Culture,*** Yale University Press
Muller H. J. ; ***Scientific Progress and Human Values***
Sharma S. R.; (1963) ***Brief Survey of Human Hisotry***, Hind Kitabs, Bombay
Hadfield J. A.; (1954) ***Dreams and Nightmares***, Penguin Books
De Becker R.; (1968) ***The Under-standing of Dreams or Machinations of Night***, George Allen and Unwin, London
Winternitz M.; (1927-33) ***History of Indian Literature*** Vol. 1 & 2, English translation by S. Kelkar, Calcutta University
Heinrich Zimmer; ***Symbolism in Indian Art and Literature***
Heinrich Zimmer; (1946) ***Myths & Symbols in Indian Art & Civilization***, Bollingen Series
Ernst Cassirer; ***Language and Myth***, Dover Publications
Erich Fromm; ***Forgotten Language***
Karl Popper ; ***The Open Society and its Enemies***
Man and His Future, CIBA Foundation volume, London
Dr. Ulbrikt; ***Molecular Biology and the division in Man*** (Lectures) Elements of Hindu Iconography
(1968) ***Ancient Civilisation***, MacMillan Co. New York

ಲೇಖನಗಳು

A Virility Charm in Rgveda, Journal of Nagpur University
A Folk Custom in the Ashwamedha, Journal of Oriental Institute Baroda, Vol. XVI. 4
Vishwanath Narayan Mandalikar, ***Serpent Worship in Western India***, Journal of the Royal Asiatic Society 1869-70.

ಶಬ್ದಸೂಚಿ

ಡಾ. ಶಂಕರರಾವ್ ಬಾಳದೀಕ್ಷಿತ ಜೋಶಿ ಅವರು ಕರ್ನಾಟಕ ಕಂಡ ಅತ್ಯಂತ ಶ್ರೇಷ್ಠ ಸಾಂಸ್ಕೃತಿಕ ಸಂಶೋಧಕರು. ನಮ್ಮ ಈ ನಾಡಿನ ಪ್ರತಿಭಾಪೂರ್ಣ ವಿದ್ವತ್ ಪರಂಪರೆಯಲ್ಲಿ ಡಾ. ಜೋಶಿ ಅವರದ್ದು ಅಪೂರ್ವವೂ ಮತ್ತು ವಿಶಿಷ್ಟವೂ ಆದ ಮಾರ್ಗ. ಜೋಶಿ ಅವರು ಹಿಡಿದಿರುವ ಮತ್ತು ನಡೆದು ಬಂದಿರುವ ಈ ಮಾರ್ಗ ಅನ್ಯಸುಗಮವಾದುದಲ್ಲ. ಅವರು ಪರಂಪರಾಗತ ಸಂಶೋಧನೆಗೆ ಮತ್ತು ಕರ್ನಾಟಕದ ಸಾಂಸ್ಕೃತಿಕ ಹಾಗೂ ವಿದ್ವತ್ ಕ್ಷೇತ್ರಕ್ಕೆ ವಿನೂತನ ಆಯಾಮವನ್ನು ನೀಡಿದ ಅಪರೂಪದ ಸಂಶೋಧಕರು.

ಡಾ. ಶಂಬಾ ಅವರ ಆಸಕ್ತಿ ಅಧ್ಯಯನ, ಸಂಶೋಧನೆ ಮತ್ತು ಚಿಂತನೆಗಳ ಬೀಸು ತುಂಬಾ ವ್ಯಾಪಕವಾದುದು. ಈ ಕಾರಣ ಅವರು ಇತಿಹಾಸದ ಭಾಷಾ ವಿಶ್ಲೇಷಣಾ ಪದ್ಧತಿಯನ್ನು-ಕರುನಾಡಿನ ಎಡೆಗಳ ಹೆಸರುಗಳ, ದೇವತಾ ಪ್ರತಿರೂಪಗಳ, ಸಾಂಕೇತಿಕ ನೆಲೆಗಳ, ಮನೋವೈಜ್ಞಾನಿಕ ಶೋಧನೆಗಳ, ಧಾರ್ಮಿಕ ಚಿಂತನೆಗಳ ಸಂಕೀರ್ಣ ಪಥವನ್ನು ಹಿಡಿದು ನಡೆದರು. ತಿರುವು ಮುರುವು ಆಗಿರುವ ಸಮಕಾಲೀನ ಮೌಲ್ಯಗಳ ಜೊತೆಗೆ ಪ್ರಾಚೀನ ಸಂಸ್ಕೃತಿಯ ಸಾಧಾರವಿವರಗಳನ್ನು ಇಟ್ಟು ತೌಲನಿಕವಾಗಿ ನೋಡಿದ್ದು ಮತ್ತು ವಿಶ್ಲೇಷಿಸಿದ್ದು ಜಾಗತಿಕ ಸಾಂಸ್ಕೃತಿಕ ಅಧ್ಯಯನದ ಅಖಂಡ ಇತಿಹಾಸದಲ್ಲೇ ಹೊಸಬಗೆಯದು.

ಡಾ. ಶಂಬಾ ಅವರದು ಬಹುಮುಖವಾದ ಮತ್ತು ಬಹುಶ್ರುತವಾದ ಅಪರೂಪದ ವ್ಯಕ್ತಿತ್ವ. ಅವರು ನಮ್ಮ ಸಾಂಸ್ಕೃತಿಕ ಚಿಂತಕರಲ್ಲಿ ಪ್ರಥಮರಲ್ಲಿ ಪ್ರಥಮರು. ಕಲ್ಪನಾಪ್ರಧಾನ ಸಾಂಪ್ರದಾಯಕ ಸಾಂಸ್ಕೃತಿಕ ಇತಿಹಾಸದ ಪರಂಪರೆಯ ಮೃದುಶಯ್ಯೆಯ ಮೇಲೆ ನಿರಾಳವಾಗಿ ಮಲಗಿದ್ದ ವೈದಿಕಶಾಹಿ ಚಿಂತನಕ್ರಮವನ್ನು ತಮ್ಮ ಜಾತ್ಯತೀತ ನಿಲುವಿನ ಸತ್ಯಶೋಧನೆಯ ಅಚ್ಚರಿಗೊಳಿಸುವ ಫಲಿತಗಳ ಮೂಲಕ ತಲ್ಲಣಗೊಳಿಸಿ, ಹೂತುಹೋಗಿದ್ದ ತಥ್ಯಗಳಿಗೆ ಜೀವದಾನ ಮಾಡಿ ಹೊಸಬೆಳಕಿನ ಪಥವನ್ನು ನಿರ್ಮಿಸಿದ ಅಸಾಧಾರಣ ವ್ಯಕ್ತಿ. ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು, ವಿಶಾಲ ನೆಲೆಗಟ್ಟಿನ ಸೂಕ್ಷ್ಮತಮ ಚಿಂತನೆಗಳು, ಅಪ್ರಿಯವಾದರೂ ಕಷ್ಟದ ಕಲ್ಲುಮುಳ್ಳುಗಳನ್ನು ತುಳಿದು ಸತ್ಯಸೂರ್ಯನನ್ನು ದರ್ಶನ ಮಾಡಿಸುವ ವಿದ್ವತ್ ತಪಸ್ಸು-ಇವುಗಳೆಲ್ಲ ಅನ್ಯಾದೃಶ್ಯವಾಗಿ ಮೈತಳೆದು ನಿಂತ ಅವರ ಬರಹಗಳ ಸುಮಾರು ೪೦೦೦ ಪುಟಗಳ ಬೃಹತ್ ರಾಶಿಯೇ ನಮ್ಮ ಮುಂದಿದೆ.

ಡಾ. ಎಚ್. ಜೆ. ಲಕ್ಕಪ್ಪಗೌಡ
ಅಧ್ಯಕ್ಷರು



ISBN 81-7713-009-9